ದೇವರು ಮಾತಾಡಿದ್ದಾನೆ
(ಪೀಠಿಕೆ) (ಸಾರಾಂಶಗಳ ಪಟ್ಟಿ) (ಪಾಠ ೨: ದೇವರು ಯಾವ ರೀತಿ ಇದ್ದಾನೆ?)

ಪಾಠ ೧

# ದೇವರು ಮಾತಾಡಿದ್ದಾನೆ!

## ಪರಿಚಯ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ (ಅರೆಬಿಕ್ ಸ್ವಾಗತ). ಸಮಾಧಾನದ ಕರ್ತನಾಗಿರುವವನು, ತಾನು ಸ್ಥಾಪಿಸಿರುವ ನೀತಿವಂತಿಕೆಯ ರೀತಿಯನ್ನು ಪ್ರತಿಯೊಬ್ಬರೂ ಗ್ರಹಿಸಿಕೊಂಡು ಅದಕ್ಕೆ ಅಧೀನರಾಗಿದ್ದು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನ – ದಲ್ಲಿರಬೇಕೆಂದು ಆತನು ಇಷ್ಟಪಡುವವನಾಗಿದ್ದಾನ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ನಿಮಗೆ ಪ್ರಸ್ತುತಪಡಿಸುವದಕ್ಕೆ ನಾವು ತುಂಬಾ ಸಂತೋಷವುಳ್ಳವರಾಗಿದ್ದೇವೆ. ಅನೀತಿವಂತ ಜನರು ದೇವರೆದುರಿನಲ್ಲಿ ಹೇಗೆ ನೀತಿವಂತರಾಗುತ್ತಾರೆ ಎಂಬುದನ್ನು ಪ್ರಕಟಿಸುವಂತಹ ಪ್ರವಾದಿಗಳ ಬರವಣಿಗೆಗಳನ್ನು ಪರಿಶೋಧಿಸುವದಕ್ಕೆ ನಾವು ಇದರಲ್ಲಿ ಯೋಜನೆ ಮಾಡಿರುವದರಿಂದ ಈ ರೇಡಿಯೋ ಕಾರ್ಯಕ್ರಮವನ್ನು ನೀತಿವಂತಿಕೆಯ ಮಾರ್ಗ ಎಂದು ಕರೆಯುತ್ತೇವೆ.

ನೀವು ಯಾವ ಮಾರ್ಗವನ್ನು ಅನುಸರಿಸುತ್ತಿದ್ದೀರಾ – ನೀತಿವಂತಿಕೆಯ ಮಾರ್ಗವನ್ನೋ ಅಥವಾ ಅನೀತಿವಂತಿಕೆಯ ಮಾರ್ಗವನ್ನೋ? ದೇವರಿಂದ ಬಂದಿರುವ ನೀತಿವಂತಿಕೆಯ ಮಾರ್ಗವನ್ನು ತಿಳಿದುಕೊಳ್ಳಲು ನೀವು ಇಷ್ಟಪಡುತ್ತೀರೋ? ದೇವರ ವಾಕ್ಯವು ಹೀಗೆ ಹೇಳುತ್ತದೆ, "ನೀತಿಗೆ ಹಸಿದು ಬಾಯಾರಿದವರು ಧನ್ಯರು, ಅವರಿಗೆ ತೃಪ್ತಿಯಾಗುವದು" (ಮತ್ತಾಯ–೫:೬).

"ನಾವು ಈಗಾಗಲೇ ನೀತಿವಂತಿಕೆಯ ಮಾರ್ಗವನ್ನು ತಿಳಿದುಕೊಂಡಿದ್ದೇವೆ, ಮೊದಲ ಪ್ರವಾದಿಗಳ ಬರವಣಿಗೆಗಳೊಂದಿಗೆ ಚಿಂತಿಸುವ ಅಗತ್ಯ ನಮಗಿಲ್ಲ, ನಾವು ಏನು ತಿಳಿದಿದ್ದೇವೋ ಅದು ನಮಗೆ ಸಾಕಷ್ಟು ಒಳ್ಳೆಯದಿದೆ" ಎಂದು ಬಹುಶ: ಆಲೋಚಿಸುವವರು ಇದ್ದಾರೆ. ಒಂದು ವೇಳೆ ಇದು ನಿಮ್ಮ ಮನೋಭಾವವಾಗಿದ್ದರೆ, ಸೊಲೊಮೋನನೆಂಬ ದೇವರ ಪ್ರವಾದಿಯು ಏನು ಬರೆದಿದ್ದಾನೆಂಬುದನ್ನು ಕೇಳಿಸಿಕೊಳ್ಳಿರಿ, "ಮನುಷ್ಯ ದೃಷ್ಟಿಗೆ ಸರಳವಾಗಿ ತೋರುವ ಒಂದು ದಾರಿಯುಂಟು, ಅದು ಕಟ್ಟಕಡೆಗೆ ಮರಣ ಮಾರ್ಗವೇ(ಜ್ಞಾನೋಕ್ತಿ–೧೪:೧೨) ಎಂದು ಹೇಳಿದ್ದಾನೆ.

ದೇವರ ಪುಸ್ತಕದಲ್ಲಿ, ಕೀರ್ತನೆಗಳು ಎಂದು ಕರೆಯಲ್ಪಡುವ ಪುಸ್ತಕದಲ್ಲಿ (ಖುರಾನಿನಲ್ಲಿರುವ ಹೆಸರು –ಝಾಬುರ್) ಸೊಲೊಮೋನನ ತಂದೆಯಾದ ಪ್ರವಾದಿಯಾದ ದಾವೀದನು, ದೇವರು ಸ್ಥಾಪಿಸಿರುವ ನೀತಿವಂತಿಕೆಯ ಮಾರ್ಗಗಳನ್ನು ತಿಳಿದುಕೊಳ್ಳುವದಕ್ಕೆ ಬೇಕಾದ ಹೆಚ್ಚಾದ ನಮ್ಮ ಅಗತ್ಯದ ಕುರುತಾಗಿ ಮಾತಾಡುತ್ತಾನೆ. ಆತನು ಬರೆದಿರುವದೇನೆಂದರೆ, "ನೀತಿವಂತನು ಎಲ್ಲ ಒಬ್ಬನೂ ಇಲ್ಲ, ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು, ಒಳ್ಳೆಯದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ" (ಕೀರ್ತನೆ–೧೪:೧, ರೋಮಾ–೩:೧೦,೧೨). ಅದಕ್ಕೋಸ್ಕರವೇ ದಾವೀದನು ಕೀರ್ತನೆಗಳಲ್ಲಿ ಈ ಪ್ರಾರ್ಥನೆಯನ್ನು ಬರೆದಿದ್ದಾನೆ, "ಯೆಹೋವನೇ ನಿನ್ನ ಮಾರ್ಗವನ್ನು ನನಗೆಸಿಳಿಸು, ನೀನು ಒಪ್ಪುವ ದಾರಿಯನ್ನು ತೋರಿಸು, ನಿನ್ನ ಸತ್ಯಾನುಸಾರವಾಗಿ ನನ್ನನ್ನು ನಡಿಸುತ್ತಾ ಉಪದೇಶಿಸು" (ಕೀರ್ತನೆ–೨೫:೪–೫). (ಊಲೂಫ್ ನಲ್ಲಿ ಭಾಷಾಂತರಿಸಲ್ಪಟ್ಟ ವಾಕ್ಯದ ರೀತಿಯನ್ನು ಆವರಣದಲ್ಲಿರುವ ಶಬ್ದಗಳು ಪ್ರತಿಫಲನಗೊಳಿಸುತ್ತವೆ.).

ದೇವರ ಪುಸ್ತಕದಲ್ಲಿ, ಕೀರ್ತನೆಗಳು ಎಂದು ಕರೆಯಲ್ಪಡುವ ಪುಸ್ತಕದಲ್ಲಿ (ಖುರಾನಿನಲ್ಲಿರುವ ಹೆಸರು –ಝಾಬುರ್) ಸೊಲೊಮೋನನ ತಂದೆಯಾದ ಪ್ರವಾದಿಯಾದ ದಾವೀದನು, ದೇವರು ಸ್ಥಾಪಿಸಿರುವ ನೀತಿವಂತಿಕೆಯ ಮಾರ್ಗಗಳನ್ನು ತಿಳಿದುಕೊಳ್ಳುವದಕ್ಕೆ ಬೇಕಾದ ಹೆಚ್ಚಾದ ನಮ್ಮ ಅಗತ್ಯದ ಕುರುತಾಗಿ ಮಾತಾಡುತ್ತಾನೆ. ಆತನು ಬರೆದಿರುವದೇನೆಂದರೆ, "ನೀತಿವಂತನು ಎಲ್ಲ ಒಬ್ಬನೂ ಇಲ್ಲ, ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ, ಎಲ್ಲರೂ ಕೆಲಸಕ್ಕೆ ಬಾರದವರಾದರು, ಒಳ್ಳೆಯದನ್ನು ಮಾಡುವವನು ಇಲ್ಲ, ಒಬ್ಬನಾದರೂ ಇಲ್ಲ" (ಕೀರ್ತನೆ–೧೪:೧, ರೋಮಾ–೩:೧೦,೧೨). ಅದಕ್ಕೋಸ್ಕರವೇ ದಾವೀದನು ಕೀರ್ತನೆಗಳಲ್ಲಿ ಈ ಪ್ರಾರ್ಥನೆಯನ್ನು ಬರೆದಿದ್ದಾನೆ, "ಯೆಹೋವನೇ ನಿನ್ನ ಮಾರ್ಗವನ್ನು ನನಗೆಸಿಳಿಸು, ನೀನು ಒಪ್ಪುವ ದಾರಿಯನ್ನು ತೋರಿಸು, ನಿನ್ನ ಸತ್ಯಾನುಸಾರವಾಗಿ ನನ್ನನ್ನು ನಡಿಸುತ್ತಾ ಉಪದೇಶಿಸು" (ಕೀರ್ತನೆ–೨೫:೪–೫). (ಊಲೂಫ್ ನಲ್ಲಿ ಭಾಷಾಂತರಿಸಲ್ಪಟ್ಟ ವಾಕ್ಯದ ರೀತಿಯನ್ನು ಆವರಣದಲ್ಲಿರುವ ಶಬ್ದಗಳು ಪ್ರತಿಫಲನಗೊಳಿಸುತ್ತವೆ.).

ಸತ್ಯದ ರೀತಿಯಲ್ಲಿ ನಮ್ಮ ಕರ್ತನಾದ ದೇವರು ನಮಗೆ ಮಾರ್ಗದರ್ಶನ ಮಾಡದಿರುತ್ತಿದ್ದರೆ, ನೀತಿವಂತಿಕೆಯ ಮಾರ್ಗವನ್ನು ಎಂದಿಗೂ ತಿಳಿದುಕೊಳ್ಳುತ್ತಿರಲಿಲ್ಲ. ನಾವು ಡಾಕರ್‌ನಲ್ಲಿ (ಸೆನೆಗಲ್‌ನ ರಾಜಧಾನಿ) ಕಳೆದುಹೋದ ಮಗುವಿನ ಹಾಗೆ ಅಥವಾ ಮರುಭೂಮಿಯಲ್ಲಿ ಕಳೆದುಹೋದ ಕುರಿಯ ಹಾಗಿರುತ್ತಿದ್ದೆವು. ಆದರೆ ದೇವರ ವಾಕ್ಯವು ನಮಗೆ ಹೇಳುವದೇನೆಂದರೆ, "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂದು ಇಷ್ಟಪಡುತ್ತಾನೆ"(೨ಪೇತ್ರ–೩:೯, ೧ತಿಮೊಥೆ–೨:೪). ಸ್ನೇಹಿತರೇ, ದೇವರ ಕಡೆಗೆ ನಡೆಸಲ್ಪಡುವಂತಹ ಸತ್ಯದ ಮಾರ್ಗದಲ್ಲಿ ಖಂಡಿತವಾಗಿಯೂ ನೀವು ಇದ್ದೀರೋ ಎನ್ನುವದನ್ನು ತಿಳಿದುಕೊಳ್ಳುವದ – ಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದುದು ಯಾವುದೂ ಇಲ್ಲ.

ಈ ರೀತಿಯ ನೀತಿವಂತಿಕೆಯ ಕಾರ್ಯಕ್ರಮದಲ್ಲಿ ನಾವು ವಾಕ್ಯಗಳನ್ನು ಕಾಲಾನುಸಾರವಾಗಿ ಅಭ್ಯಾಸ ಮಾಡಬೇಕು. ಆರಂಭದಿಂದ ಅಂತ್ಯದವರೆಗಿರುವ ದೇವರ ಪ್ರವಾದಿಗಳ ಒಂದಾದ ಮೇಲೆ ಒಂದು ಕಥೆಗಳನ್ನು ನಾವು ಅನುಸರಿಸೋಣ. ದೇವರ ವಾಕ್ಯವು, ಆರಂಭವನ್ನೂ ಮತ್ತು ಅಂತ್ಯವನ್ನೂ ಹೊಂದಿದೆ. (ವಾಸ್ತವವಾಗಿ ಊಲೂಫ್‌ನಲ್ಲಿ – ಒಂದು ತಲೆ ಮತ್ತು ಒಂದು ಬಾಲ). ಆದುದರಿಂದ ಬಹಳ ಆರಂಭದಲ್ಲಿಯೇ ದೇವರು ತಾನೇ ಪ್ರಾರಂಭಿಸಿರುವ ಆರಂಭದ ವಾಕ್ಯಗಳಲ್ಲಿ ಕಂಡುಬರುವ ಕಥೆಗಳನ್ನು ಪರಿಶೋಧಿಸುವದಕ್ಕೆ ನಾವು ಯೋಜನೆ ಮಾಡಿದ್ದೇವೆ.

ನಾವು ದೇವರ ಮತ್ತು ಪ್ರವಾದಿಗಳ ಕುರಿತಾಗಿ ಅನೇಕ ಪ್ರಾಮುಖ್ಯವಾದ ಸಂಗತಿಗಳನ್ನು ಕಲಿತುಕೊಳ್ಳಲಿದ್ದೇವೆ. ಪರಿಶುದ್ಧವಾದ ವಾಕ್ಯಗಳನ್ನು ಅನೇಕ ಪ್ರವಾದಿಗಳು ಬರೆದಿರುವದನ್ನು ನಾವು ನೋಡಿದಾಗ್ಯೂ ಪ್ರವಾದಿಗಳನ್ನು ಪ್ರೇರೆಪಿಸಿದ ಒಬ್ಬನೇ ಒಬ್ಬ ಬರಹಗಾರನೆಂದರೆ ಆತನು ದೇವರು. ಪ್ರವಾದಿಗಳ ವಾಕ್ಯ ಭಾಗಗಳು ಅನೇಕ ಕಥೆಗಳನ್ನು ಒಳಗೊಂಡಿದೆ, ಆದರೆ ಒಂದೇ ಒಂದು ಕೇಂದ್ರ ಸಂದೇಶವೇನೆಂದರೆ: ದೇವರ ಮುಂದೆ ಜನರು ಹೇಗೆ ನೀತಿವಂತರಾಗಿ ಮಾಡಲ್ಪಡಬೇಕೆಂಬುದರ ಕುರಿತಾದ ಶುಭ ಸಂದೇಶವಾಗಿದೆ.

ಆದುದರಿಂದ, ನೀತಿವಂತಿಕೆಯ ಮಾರ್ಗ ಎಂಬ ಕಾರ್ಯಕ್ರಮವನ್ನು ಆಸಕ್ತಿಯಿಂದ ಮತ್ತು ನಂಬಿಗಸ್ತಿಕೆಯಿಂದ ಆಲಿಸಬೇಕೆಂದು ನಾವು ನಿಮ್ಮನ್ನು ಕೇಳಿಕೊಳ್ಳುತ್ತೇವೆ. ಊಲೂಫ್ ಜ್ಞಾನವು ಹೇಳುವದೇನೆಂದರೆ: "ನಿಧಾನವಾಗಿ, ನಿಧಾನವಾಗಿ ಒಬ್ಬನು ಕಾಡಿನಲ್ಲಿ ಒಂದು ಮಂಗವನ್ನು ಹಿಡಿಯುತ್ತಾನೆ ಮತ್ತು ಬಾವಿಯ ಬಳಿಯಲ್ಲಿ ಜಾಗರೂಕನಾಗಿ ಕಾಯುವಂತಹ ವ್ಯಕ್ತಿಯು ಒಂದು ನೀರಿನ ಗಡಿಗೆಯನ್ನು ಕಂಡುಕೊಳ್ಳುತ್ತಾನೆ". ಹಾಗೆಯೇ, ದೇವರು ತನ್ನ ವಾಕ್ಯದಲ್ಲಿ ಹೇಳುವದೇನೆಂದರೆ, "ಆಸಕ್ತಿಯಿಂದ ಆತನನ್ನು ಹುಡುಕುವವರಿಗೆ ಆತನು ಪ್ರತಿಫಲವನ್ನು ಕೊಡುತ್ತಾನೆ" (ಇಬ್ರಿಯ–೧೧:೬). ನಿಜವಾಗಿಯೂ ಆತನನ್ನು ಹುಡುಕುವವರಿಗೆ ದೇವರು ಈ ವಾಗ್ದಾನವನ್ನು ಮಾಡುತ್ತಾನೆ, "ನೀವು ನನ್ನನ್ನು ಮನ:ಪೂರ್ವಕವಾಗಿ ಹುಡುಕಿದರೆ ನನ್ನನ್ನು ಕಂಡುಕೊಳ್ಳುವಿರಿ!" (ಯೆರೆ. ೨೯:೧೩).

ಇಲ್ಲಿಂದ; ನೀತಿವಂತಿಕೆಯ ಮಾರ್ಗದ ಮೇಲೆ ದೇವರ ಮತ್ತು ಆತನ ವಾಕ್ಯದ ಕುರಿತಾಗಿ ನಮ್ಮ ತಿಳುವಳಿಕೆಯನ್ನು ಜಾಸ್ತಿ ಮಾಡಿಕೊಳ್ಳೋಣ. ದೇವರು ಹೇಗಿದ್ದಾನೆಂದು ನಿಮಗೆ ಗೊತ್ತೋ? ಅಥವಾ ಸೈತಾನನು ಎಲ್ಲಿಂದ ಬಂದನು ಎಂಬುದು ಗೊತ್ತೋ? ದೇವರು ಮನುಷ್ಯನನ್ನು ಯಾಕೆ ಉಂಟುಮಾಡಿದನೆಂದು ಗೊತ್ತೋ? ಅಥವಾ ದೇವರು ಸೃಷ್ಟಿಸಿದ್ದ ಸುಂದವಾದ ಲೋಕದೊಳಗೆ ಪಾಪವು ಹೇಗೆ ಪ್ರವೇಶಿಸಿತು? ದೇವರ ಪ್ರವಾದಿಯಾದ ನೋಹ ಮತ್ತು ಜಲಪ್ರಳಯದ ಕುರಿತಾದ ಆಶ್ಚರ್ಯಕರವಾದ ಕಥೆಯನ್ನು ನೀವು ಎಂದಾದರೂ ಓದಿದ್ದೀರೋ? ದೇವರ ಪ್ರವಾದಿಗಳು ಏನು ಬರೆದಿದ್ದಾರೆಂದು ನೀವು ನಿಜವಾಗಿಯೂ ತಿಳಿದುಕೊಂಡಿದ್ದೀರೋ? ದೇವರ ಸ್ನೇಹಿತನೆಂಬುದಾಗಿ ಅಬ್ರಹಾಮನು ಯಾಕೆ ಕರೆಯಲ್ಪಟ್ಟಿದ್ದಾನೆಂದು ನಿಮಗೆ ಗೊತ್ತೋ? ಪ್ರವಾದಿಗಳ ಸಂದೇಶಗಳನ್ನು ನೀವು ನಿಮ್ಮ ಸ್ನೇಹಿತರಿಗೆ ಅಥವಾ ನಿಮ್ಮ ಮಕ್ಕಳಿಗೆ ಸ್ಪಷ್ಟವಾಗಿ ವಿವರಿಸಿದ್ದೀರೋ?

ಸಾವಿರಾರು ವರ್ಷಗಳ ಹಿಂದೆ, ಪ್ರವಾದಿಯಾದ ಯೋಬನು (ಅರೆಬಿಕ್‌ನಲ್ಲಿ ಅಯ್ಯುಬ್) "ಒಬ್ಬ ಮನುಷ್ಯನು ದೇವರ ಮುಂದೆ ಹೇಗೆ ನೀತಿವಂತನಾಗುತ್ತಾನೆ?" (ಯೋಬ–೯:೨) ಎಂಬ ಪ್ರಶ್ನೆಯನ್ನು ಕೇಳಿದನು. ಯೋಬನ ಈ ಪ್ರಶ್ನೆಗೆ ದೇವರ ಉತ್ತರವೇನೆಂದು ನಿಮಗೆ ಗೊತ್ತಾ? ನೀನು ದೇವರ ಮುಂದೆ ಹೇಗೆ ನೀತಿವಂತನಾಗಿರುತ್ತೀ ಎಂದು ನಿನಗೆ ಗೊತ್ತಾ? ಈ ಪ್ರಶ್ನೆಗೆ ದೇವರ ಉತ್ತರವೇನೆಂದು ನೀವು ಮತ್ತು ಇತರ ಅನೇಕರು ತಿಳಿದುಕೊಳ್ಳಲು ಬಯಸುವಿರಾದರೆ, ನೀತಿವಂತಿಕೆಯ ಮಾರ್ಗ ಎಂಬ ಕಾರ್ಯಕ್ರಮವನ್ನು ಕೇಳಿಸಿಕೊಳ್ಳುವದಕ್ಕೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ. ನಿಜವಾಗಿಯೂ ದೇವರ ವಾಕ್ಯವು ಆಳವಾದುದು, ಅದ್ಭುತವಾದುದು, ಜೀವವುಳ್ಳದ್ದೂ ಮತ್ತು ಬಲವುಳ್ಳದ್ದೂ ಆಗಿದೆ. ಮತ್ತು ಜೊತೆಗೆ ದೇವರ ವಾಕ್ಯವು ಯಾವುದನ್ನೂ ಮುಚ್ಚಿಟ್ಟುಕೊಳ್ಳುವದಿಲ್ಲ. ಮನುಷ್ಯನು ನಿಜವಾಗಿಯೂ ಯಾವ ರೀತಿಯಿದ್ದಾನೆಂಬುದನ್ನು ಇದು ನಮಗೆ ತೋರಿಸುತ್ತದೆ. ಹಾಗಾಗಿ ವಾಕ್ಯವು ಹೀಗೆ ಹೇಳುತ್ತದೆ, "ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವೂ ಮುಚ್ಚು–ಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷಟಿಯು ಒಂದೂ ಇಲ್ಲ". (ಇಬ್ರಿಯ–೪:೧೩).

ಈದಿನದ ಉಳಿದ ಸಮಯದಲ್ಲಿ, ನಾವು ಗ್ರಹಿಸಿಕೊಳ್ಳಲೇಬೇಕಾಗಿರುವ ಒಂದು ಪ್ರಾಮುಖ್ಯವಾದ ಸತ್ಯವಿದೆ. ಅದು, ದೇವರು ಮಾತಾಡಿದ್ದಾನೆ! ಎನ್ನುವುದು. ಮಹೋನ್ನತನಾದ ದೇವರು ಮಾತಾಡಿದ್ದಾನೆ! ದೇವರು ಮನುಷ್ಯನಿಗೆ(ಮಾನವ ಕುಲಕ್ಕೆ) ಮಾತಾಡಿದ್ದಾನೆ ಮತ್ತು ದೇವರು ನಿನಗೂ ಮಾತಾಡುವದಕ್ಕೆ ಬಯಸುತ್ತಾನೆ! ದೂರ ದೇಶದಲ್ಲಿರುವ ಒಬ್ಬ ಬಲಿಷ್ಠ ರಾಜನಿಂದ ನೀವು ಒಂದು ಪತ್ರವನ್ನು ಪಡೆದುಕೊಂಡರೆ ಅದನ್ನು ಓದುವದಿಲ್ಲವೋ? ಪತ್ರದಲ್ಲಿ ಆತನು ಏನು ಬರೆದಿರುವನೆಂಬುದನ್ನು ನೀವು ಆಲೋಚಿಸುವದಿಲ್ಲವೋ? ರಾಜನ ಮಾತುಗಳಿಗೆ ನೀವು ಗಮನಕೊಡುವದಿಲ್ಲವೋ? ಹಾಗಾದರೆ ಮಹೋನ್ನತನಾದ ದೇವರು ನಮ್ಮೊಂದಿಗೆ ಮಾತಾಡುವಾಗ ನಾವು ಇನ್ನೆಷ್ಟು ಹೆಚ್ಚಾಗಿ ಗಮನ ಕೊಡತಕ್ಕದ್ದಾಗಿದೆ!

ದೇವರು ಮನುಷ್ಯನಿಗೆ ಹೇಗೆ ಮಾತಾಡಿದ್ದಾನೆ? ಪರಿಶುದ್ಧ ವಾಕ್ಯಗಳು ನಮಗೆ ಹೇಳುವದೇನೆಂದರೆ, "ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿದವಿಧವಾಗಿಯೂ ಮಾತಾಡಿದ ದೇವರು...."(ಇಬ್ರಿಯ–೧:೧). ಹೌದು, ದೇವರು ಮನುಷ್ಯನಿಗೆ ಮಾತಾಡಿದ ಪ್ರಮುಖವಾದ ರೀತಿಗಳೆಂದರೆ ಅದು ಪ್ರವಾದಿಗಳ ಮೂಲಕವಾದುದಾಗಿದೆ. ಪೂರ್ವದಲ್ಲಿ, ದೇವರು ತನ್ನ ವಾಕ್ಯವನ್ನು ಸಾರುವದಕ್ಕೂ ಮತ್ತು ಪುಸ್ತಕಗಳಲ್ಲಿ (ಸುರುಳಿ) ಬರೆಯುವದಕ್ಕೂ ನಿರ್ಧಿಷ್ಟ ಪುರುಷರನ್ನು ನೇಮಿಸಿದ್ದನು. ದೇವರ ವಾಕ್ಯವು ಹೀಗೆ ಹೇಳುತ್ತದೆ, "ಶಾಸ್ತ್ರದಲ್ಲಿರುವ ಯಾವ ಪ್ರವಾದನವಾಕ್ಯವೂ ಕೇವಲ ಮಾನುಷ ಬುದ್ಧಿಯಿಂದ ವಿವರಿಸತಕ್ಕಂಥದ್ದಲ್ಲವೆಂಬದನ್ನು ಮುಖ್ಯವಾಗಿ ತಿಳಿದುಕೊಳ್ಳಿರಿ. ಯಾಕೆಂದರೆ ಯಾವ ಪ್ರವಾದನೆಯೂ ಎಂದೂ ಮನುಷ್ಯರ ಚಿತ್ತದಿಂದ ಉಂಟಾಗಲಿಲ್ಲ; ಮನುಷ್ಯರು ಪವಿತ್ರಾತ್ಮ ಪ್ರೇರಿತರಾಗಿ ದೇವರಿಂದ ಹೊಂದಿದ್ದನ್ನೇ ಮಾತಾಡಿದರು" (೨ಪೇತ್ರ–೧:೨೦,೨೧).

ದೇವರು ತಾನೇ ವಾಕ್ಯಗಳನ್ನು ಬರೆಯಬಹುದಾಗಿತ್ತು ಅಥವಾ ಇದನ್ನು ಬರೆಯುವದಕ್ಕೆ ತನ್ನ ದೂತರುಗಳನ್ನು ಉಪಯೋಗಿಸಬಹುದಿತ್ತು. ಆದರೆ ಆತನು ಇದನ್ನು ಮಾಡಲಿಲ್ಲ. ತನಗಾಗಿ ಇದನ್ನು ಬರೆಯುವದಕ್ಕೆ ದೇವರು ಸಾಮಾನ್ಯ ವ್ಯಕ್ತಿಗಳನ್ನು ಆರಿಸಿಕೊಂಡನು. ಈ ವ್ಯಕ್ತಿಗಳನ್ನು ನಾವು ಪ್ರವಾದಿಗಳೆಂದು ಕರೆಯುತ್ತೇವೆ. ದೇವರ ಪ್ರವಾದಿಗಳು ಹೆಚ್ಚು ಕಡಿಮೆ ಕಾರ್ಯದರ್ಶಿಗಳ ಹಾಗಿದ್ದರು. ಅವರು ಏನು ಬರೆಯಬೇಕೆಂಬುದನ್ನು ದೇವರು ಅವರ ಮನಸ್ಸಿನಲ್ಲಿ ನೆಟ್ಟಿದ್ದನು ಮತ್ತು ಅವರು ದೇವರಿಗಾಗಿ ಅದನ್ನು ಬರೆದರು. ಹೇಗೂ, ದೇವರು ತನ್ನ ಸ್ವಂತ ಮಾತುಗಳಲ್ಲಿ ವಾಕ್ಯಗಳನ್ನು ಪ್ರವಾದಿಗಳು ಬರೆಯುವಂತೆ ಮಾಡಿದನು. ಪ್ರತಿಯೊಂದು ಶಬ್ದವನ್ನು ದೇವರು ಪ್ರೇರಿಸಿದನು, ಆದಾಗ್ಯೂ ಆತನು ವ್ಯಕ್ತಿಗತವಾಗಿ ಪ್ರವಾದಿಗಳ ವ್ಯಕ್ತಿತ್ವವನ್ನು ಕಡೆಗಣಿಸಲಿಲ್ಲ. ದೇವರ ಪುಸ್ತಕವು ದೇವರ ನೇರವಾದ ಮಾತುಗಳನ್ನು ಮಾತ್ರ ಒಳಗೊಂಡಿಲ್ಲ, ಆದರೆ ನಿಮ್ಮ ಹಾಗೂ

ನನ್ನ ಹಾಗಿರುವ ಜನರ ಆಲೋಚನೆಗಳು, ಪ್ರಾರ್ಥನೆಗಳು ಮತ್ತು ಸಮಸ್ಯೆಗಳನ್ನು ಸಹ ಒಳಗೊಂಡಿದೆ. ಜನರೊಂದಿಗಿನ ದೇವರ ವ್ಯವಹರಿಸುವಿಕೆಯ ಕಥೆಗಳ ಮೂಲಕ ದೇವರು ಹೇಗಿದ್ದಾನೆ ಮತ್ತು ಆತನ ಹತ್ತಿರಕ್ಕೆ ನಾವು ಹೇಗೆ ಎಳೆಯಲ್ಪಡುತ್ತೇವೆಂಬುದನ್ನು ನಮಗೆ ತೋರಿಸುವದಕ್ಕೆ ದೇವರು ಬಯಸುತ್ತಾನೆ.

ಪರಿಶುದ್ಧ ವಾಕ್ಯಗಳನ್ನು ಬರೆಯುವದಕ್ಕೆ ದೇವರು ಪ್ರವಾದಿಗಳನ್ನು ಯಾಕೆ ಪ್ರೇರೇಪಿಸಿದನು? ಅವರು ತಿಳಿದುಕೊಳ್ಳಬೇಕೆಂದು ದೇವರು ಯಾವುದನ್ನು ಬಯಸಿದ್ದಾನೆಂಬುದನ್ನು ಪ್ರತಿಯೊಂದು ಜನಾಂಗದ ಜನರು ತಿಳಿದುಕೊಳ್ಳಬಹುದೆಂಬ ಕಾರಣದಿಂದ ದೇವರು ಪ್ರವಾದಿಗಳನ್ನು ಪ್ರೇರೇಪಿಸಿದನು. ಅವರು ಯಾವುದನ್ನು ಬರೆದರೋ ಅದರ ಮೂಲಕವಾಗಿ ನನ್ನ ಮತ್ತು ನಿಮ್ಮೊಂದಿಗೆ ಆತನು ಮಾತಾಡುವದಕ್ಕೆ ಇಷ್ಟಪಟ್ಟ ಕಾರಣದಿಂದ ದೇವರು ಪ್ರವಾದಿಗಳಿಗೆ ಮಾತಾಡಿದನು! ತನ್ನ ಪ್ರವಾದಿಗಳ ಮೂಲಕವಾಗಿ ದೇವರು ಮಾತಾಡಿದ್ದೆಲ್ಲವೂ ಈದಿನ ಜೀವಿಸುತ್ತಿರುವ ನಮಗೆ ಲಾಭದಾಯಕವಾಗಿದೆ. ಪ್ರವಾದಿಗಳ ಸಂದೇಶಗಳನ್ನು ನಾವು ಪ್ರತಿಯೊಬ್ಬರು ತಿಳಿದುಕೊಳ್ಳಬೇಕೆಂದು ದೇವರು ನಿರೀಕ್ಷಿಸುತ್ತಾನೆ.

"ಹೇ! ಮೊದಲ ಪ್ರವಾದಿಗಳು ಏನು ಬರೆದಿದ್ದಾರೋ ಅದನ್ನು ತಿಳಿದುಕೊಳ್ಳುವ ಅಗತ್ಯ ನನಗಿಲ್ಲ, ಅವರ ಮಾತುಗಳು ನನಗೆ ಪ್ರಾಮುಖ್ಯವಾದುದಲ್ಲ. ನೆರವೇರಿಸುವದಕ್ಕೆ ಪ್ರತಿಯೊಬ್ಬ ಪ್ರವಾದಿಯು ತನ್ನ ಕೆಲಸ(ಸೇವೆ)ವನ್ನು ಹೊಂದಿದ್ದಾನೆ. ಒಬ್ಬ ಪ್ರವಾದಿ ಬಂದು ತನ್ನ ಕೆಲಸವನ್ನು ಪೂರೈಸಿ ಹೊರಟು ಹೋಗುತ್ತಾನೆ. ಇನ್ನೊಬ್ಬನು ಬಂದು ತನ್ನ ಕೆಲಸವನ್ನು ಪೂರೈಸಿ ಹೊರಟುಹೋಗುತ್ತಾನೆ, ಹೀಗೆ ನಡೆಯುತ್ತಿರುತ್ತದೆ. ಈದಿನ ಜೀವಿಸುತ್ತಿರುವ ನಾವು ಮೊದಲ ಪ್ರವಾದಿಗಳು ಏನು ಹೇಳಿದ್ದಾರೋ ಅದನ್ನು ತಿಳಿದುಕೊಳ್ಳುವ ಅಗತ್ಯವಿಲ್ಲ!" ಎಂದು ಕೆಲವರು ಬಹುಮಟ್ಟಿಗೆ ಆಲೋಚಿಸುತ್ತಾರೆ. ಇವು ನಿಮ್ಮ ಆಲೋಚನೆಗಳು ಸಹ ಆಗಿವೆಯೋ? ದೇವರ ಆಲೋಚನೆಗಳು ಈ ಆಲೋಚನೆಗಳೊಂದಿಗೆ ಹೋಲಿಕೆಯಾಗುವದಿಲ್ಲ! ಕರ್ತನಾದ ದೇವರು ಏನು ಹೇಳುತ್ತಾನೋ ಅದನ್ನು ಕೇಳಿಸಿಕೊಳ್ಳಿರಿ,

"ನಿಮಗೆ ಸತ್ಯವಾಗಿ ಹೇಳುತ್ತೇನೆ – ಆಕಾಶವೂ ಭೂಮಿಯೂ ಅಳಿದುಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗಲಾರದು. ಆದುದರಿಂದ ಈ ಸಣ್ಣಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯಬೇಕೆಂದು ಬೋಧಿಸುವವನು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು!"(ಮತ್ತಾಯ–೫:೧೮,೧೯). "ದೈವಪ್ರೇರಿತವಾದ ಪ್ರತಿಯೊಂದು ಶಾಸ್ತ್ರವು ಉಪದೇಶಕ್ಕೂ ಖಂಡನೆಗೂ ತಿದ್ದುಪಾಟಿಗೂ ನೀತಿಶಿಕ್ಷೆಗೂ ಉಪಯುಕ್ತವಾಗಿದೆ" ೨ತಿಮೊಥೆ–೩:೧೬).

ನಿಜವಾಗಿಯೂ, ಪ್ರವಾದಿಗಳು ಬರೆದಿರುವದೆಲ್ಲವೂ ದೊಡ್ಡ ಬೆಲೆಯುಳ್ಳವುಗಳಾಗಿವೆ, ಯಾಕೆಂದರೆ ದೇವರು ಸ್ಥಾಪಿಸಿರುವ ರಕ್ಷಣೆಯ ಮಾರ್ಗವನ್ನು ಪ್ರತಿಯೊಂದು ಯುಗದ ಜನರು ತಿಳಿದುಕೊಳ್ಳುವದಕ್ಕೋಸ್ಕರ ಅವರು ಇದನ್ನು ಬರೆದರು. ದೇವರ ಪ್ರವಾದಿಗಳು ಏನು ಬರೆದಿರುವರೆಂದು ನಿಮಗೆ ತಿಳಿದಿದೆಯೋ? ನಾವು ಆತನ ವಾಕ್ಯವನ್ನು ತಿಳಿದುಕೊಂಡು, ಅದನ್ನು ನಂಬಿ ಅದಕ್ಕೆ ವಿಧೇಯರಾಗಿರಬೇಕೆಂದು ದೇವರು ಇಷ್ಟಪಡುತ್ತಾನೆ! ವಾಕ್ಯಭಾಗ ಹೀಗೆ ಹೇಳುತ್ತದೆ, "ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯಗೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು" ೨ಪೇತ್ರ–೧:೧೯).

ಹೌದು, "ಯಾರೂ ಇದನ್ನು ನಂಬುವದಿಲ್ಲ! ಇದು ತಪ್ಪುಗಳಿಂದ ತುಂಬಿದೆ. ಇದು ಬದಲಾಗಬೇಕಾಗಿದೆ"! ಎಂದು ದೇವರ ಪುಸ್ತಕದ ವಿರುದ್ಧವಾಗಿ ಹೋರಾಡುವವರು ಮಾತಾಡುವದನ್ನು ಕೆಲವು ಸಲ ನಾವು ಕೇಳಿಸಿಕೊಳ್ಳುತ್ತೇವೆ. ಹೇಗೂ, ದೇವರ ವಾಕ್ಯದ ವಿರುದ್ಧವಾಗಿ ಹೋರಾಡುವಂತವನು ದೇವರೊಂದಿಗೆ ಹೋರಾಡುವವನಾಗಿದ್ದಾನೆ. "ಒಂದು ಮೊಟ್ಟೆಯು ಬಂಡೆಯೊಂದಿಗೆ ಕುಸ್ತಿ ಮಾಡುವದಿಲ್ಲ"! (ಊಲೂಫ್ ಜ್ಞಾನೋಕ್ತಿ). ದೇವರ ವಾಕ್ಯವೇ ಬಂಡೆ, ಮನುಷ್ಯನು ಮೊಟ್ಟೆ! ದೇವರ ನಿಜವಾದ ವಾಕ್ಯವನ್ನು ಮನುಷ್ಯನು ಬದಲಾಯಿಸುವದಕ್ಕಾಗುವದಿಲ್ಲ, ಆದರೆ ದೇವರ ನಿಜವಾದ ವಾಕ್ಯವು ಮನುಷ್ಯನನ್ನು ಬದಲಾಯಿಸುತ್ತದೆ! ದೇವರು ದೊಡ್ಡವನೂ ಮತ್ತು ತನ್ನ ನಿತ್ಯತ್ವದ ಲೋಕವನ್ನು ರಕ್ಷಿಸುವದಕ್ಕೆ ಶಕ್ತನಾಗಿದ್ದಾನೆ. ಅದಕ್ಕಾಗಿಯೇ ಇಂಜಿಲ್ ಎಂದು ಕರೆಯಲ್ಪಡುವ ಪುಸ್ತಕದಲ್ಲಿ ದೇವರು ತಾನೇ ಹೀಗೆ ಹೇಳಿದ್ದಾನೆ (ಖುರಾನಿನಲ್ಲಿ ಇಂಜಿಲ್ ಎಂದರೆ ದಾಖಲಿಸಲ್ಪಟ್ಟ ಸುವಾರ್ತೆ ಎಂದು ಕರೆಯಲ್ಪಟ್ಟಿದೆ ಶುಭಸಂದೇಶ ಅಥವಾ ಸುವಾರ್ತೆಗಾಗಿ ಅರೆಬಿಕ್): "ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ!"(ಮತ್ತಾಯ–೨೪:೩೫).

ಅನೇಕ ಜನರು ದೇವರ ವಾಕ್ಯದ ವಿರುದ್ಧವಾಗಿ ಹೋರಾಡುವದಕ್ಕೆ ಪ್ರಯತ್ನಿಸುತ್ತಾರೆ ಯಾಕೆಂದರೆ ಇದು ಅವರ ಹೃದಯಗಳ ನಿಜ ಸ್ಥಿತಿಯನ್ನು ತೆರೆದಿಡುತ್ತದೆ. ದೇವರು ತನ್ನ ಸ್ವಂತ ವಾಕ್ಯದ ಕುರಿತಾಗಿ ಏನು ಹೇಳಿದ್ದಾನೆಂಬುದನ್ನು ಕೇಳಿರಿ, ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿಕತ್ತಿಗಿಂತಲೂ ಹದವಾದದ್ದು, ಪ್ರಾಣ ಆತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಆಗಿದೆ"(ಇಬ್ರಿಯ–೪:೧೨).

ಹೌದು, ದೇವರ ವಾಕ್ಯವು ಸಜೀವವಾದದ್ದು ಮತ್ತು ಕಾರ್ಯಸಾಧಕವಾದದ್ದು ಆಗಿದೆ. ಪರಿಶುದ್ಧವಾದ ವಾಕ್ಯಗಳು ಲೋಕದಲ್ಲಿರುವ ಪುರಾತನ ಬರವಣಿಗೆಗಳ ಸಂಗ್ರಹವಾಗಿದೆ, ಆದಾಗ್ಯೂ ಅವು ಪ್ರತಿಯೊಬ್ಬ ವ್ಯಕ್ತಿಗೆ ಇನ್ನೂ ಸಮಂಜಸವಾದುದಾಗಿದೆ. ದೇವರ ವಾಕ್ಯಕ್ಕಿಂತಲೂ ಯೆಚ್ಚು ಪ್ರಾಮುಖ್ಯವಾದುದು ಯಾವುದೂ ಇಲ್ಲ. ಹೇಗೂ, ದೇವರು ವಾಕ್ಯವು ಅನ್ನ ಮತ್ತು ಮೀನಿನ ಹಾಗಿದೆ(ಸೀಬುಜೆನ್: ಸೆನೆಗಲ್‌ನ ರಾಷ್ಟ್ರೀಯ ಆಹಾರ). ಅನ್ನ ಮತ್ತು ಮೀನು ತಿನ್ನುವದಕ್ಕೆ ರುಚಿಕರವಾದುದು ಮತ್ತು ಶರೀರಕ್ಕೆ ಉತ್ತಮವಾದದು ಎಂದು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ.

ಆದರೆ ನಾನು ಇದನ್ನು ತಿನ್ನದ ಹೊರತು, ಇದು ನನಗೆ ಯಾವ ಲಾಭದಾಯಕವಾಗುವದಿಲ್ಲ. ನಾನು ಇದನ್ನು ತಿನ್ನಲೇಬೇಕು. ಇದೇ ರೀತಿಯಲ್ಲಿ, ನನ್ನ ಹೃದಯಕ್ಕೆ ಪೋಷಣೆಯನ್ನುಂಟುಮಾಡುವಂಥಹ ದೇವರ ವಾಕ್ಯದಿಂದ ಲಾಭವಾಗುತ್ತದೆ ಎಂದು ನಾನು ಇಷ್ಟಪಟ್ಟರೆ, ಇದರಲ್ಲಿ ನಾನು ಪಾಲು ತೆಗೆದುಕೊಳ್ಳಲೇಬೇಕು. ಇದಕ್ಕಗಿಯೇ ದೇವರು ಹೇಳುವದೇನೆಂದರೆ, "ರೊಟ್ಟಿ ತಿಂದ ಮಾತ್ರದಿಂದ ಮನುಷ್ಯನು ಬದುಕುವದಿಲ್ಲ, ಆದರೆ ದೇವರ ಬಾಯಿಂದ ಬರುವ ಪ್ರತಿಯೊಂದು ಮಾತಿನಿಂದ ಬದುಕುತ್ತಾನೆ."(ಮತ್ತಾಯ–೪:೪). ಇದು ಕೇವಲ "ನೀತಿಗೆ ಹಸಿದು ಬಾಯಾರಿದವರಿಗೆ ಮಾತ್ರ" ಅವರಿಗೆ ತೃಪ್ತಿಯಾಗುತ್ತದೆ(ಮತ್ತಾಯ–೫:೬). ದೇವರ ವಾಕ್ಯಕ್ಕಾಗಿ ನೀವು ಹಸಿವೆಗೊಂಡಿದ್ದೀರೋ? ಇದೇ ಆಹಾರ, ರುಚಿಕರವಾದ ಆಹಾರ. ಇದು ನಿಮ್ಮ ಶರೀರವನ್ನು ಪೋಷಿಸುವಂತಹ ಆಹಾರವಲ್ಲ, ಆದರೆ ನಿಮ್ಮ ಹೃದಯ ಮತ್ತು ಆತ್ಮವನ್ನು ಪೋಷಿಸುವಂತಹ ಆಹಾರವಾಗಿದೆ.

ದೇವರಿಗೆ ಭಯಪಟ್ಟು ಆತನ ವಾಕ್ಯದಲ್ಲಿ ಭಯಭಕ್ತಿಯುಳ್ಳಂತಹ ನಿಮಗೆ ನಾವು ಹೇಳುವದೇನೆಂದರೆ, ನೀತಿವಂತಿಕೆಯ ಮಾರ್ಗ ಎಂಬ ಈ ಕಾರ್ಯಕ್ರಮವನ್ನು ಕ್ರಮವಾಗಿ ಅನುಸರಿಸುವದಕ್ಕೆ ಗಂಭೀರವಾದ ಪ್ರಯತ್ನ ಮಾಡಿರಿ. ಹೀಗೆ ಮಾಡಿದರೆ, ಬಹಳ ಹಿಂದೆ ದೇವರು ತನ್ನ ಪ್ರವಾದಿಗಳ ಮೂಲಕ ಏನು ಹೇಳಿದ್ದಾನೋ ಅದನ್ನು ತಿಳಿದುಕೊಳ್ಳುವ ಜ್ಞಾನವನ್ನು ನೀವು ಈ ರೀತಿಯಲ್ಲಿ ಹೆಚ್ಚಿಸಿಕೊಳ್ಳುತ್ತೀರಿ ಮತ್ತು ಪರಿಶುದ್ಧನಾಗಿರುವ ದೇವರ ಮುಂದೆ ನೀವು ಹೇಗೆ ನೀತಿವಂತರಾಗುವದೆಂಬುದನ್ನು ತಿಳಿದುಕೊಳ್ಳುತ್ತೀರಿ. ದೇವರು ಮಾತಾಡಿದ್ದಾನೆ–ಮತ್ತು ದೇವರು ನಿಮ್ಮೊಂದಿಗೆ ಮಾತಾಡುವದಕ್ಕೆ ಇಷ್ಟಪಡುತ್ತಾನೆ!.

ಈದಿನ ನಿಮ್ಮನ್ನು ಬಿಡುವದಕ್ಕಿಂತ ಮೊದಲು, ಇನ್ನೊಂದು ವಿಷಯವನ್ನು ನಾವು ಸ್ಪಷ್ಟಪಡಿಸುವದು ಅಗತ್ಯವಾಗಿದೆ. ದೇವರ ಪ್ರವಾದಿಗಳ ಬರವಣಿಗೆಗಳಲ್ಲಿ ಕಂಡುಬರುವಂತದ್ದನ್ನು ಹೊರತುಪಡಿಸಿ ನಮ್ಮ ಕಾರ್ಯಕ್ರಮಗಳಲ್ಲಿ ಯಾವುದೊಂದರ ಅಥವಾ ಯಾರೊಬ್ಬರ ಮೇಲಾಗಲೀ ಪ್ರಸಾರ ಮಾಡುವದಿಲ್ಲ. ವಾಕ್ಯಗಳಲ್ಲಿ ದೇವರು ತಿಳಿಸಿಕೊಟ್ಟಿರುವದರಿಂದಲ್ಲದೆ ದೇವರ ಸತ್ಯದ ಕುರಿತಾಗಿ ಪ್ರತ್ಯೇಕವಾದ ಯಾವುದನ್ನೂ ಈ ಕಾರ್ಯಕ್ರಮಗಳನ್ನು ಸಿದ್ಧಪಡಿಸುವವರು ತಿಳಿದಿರುವದಿಲ್ಲ. ಸುವಾರ್ತೆಯಲ್ಲಿ(ಇಂಜಿಲ್) ಜಕರೀಯನ ಮಗನಾದ ಪ್ರವಾದಿಯಾದ ಯೋಹಾನನು ಹೇಳಿರುವಂತಾದ್ದು ಸತ್ಯವೇ: "ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನುಷ್ಯನು ಹೆಚ್ಚೇನನ್ನೂ ಹೊಂದಲಾರನು" (ಯೋಹಾನ–೩:೨೭). ನಾವು ನಮ್ಮ ಸ್ವಂತ ಜ್ಞಾನದ ಮೇಲೆ ಪ್ರಸಾರಮಾಡುವದಕ್ಕೆ ಧೈರ್ಯಗೊಳ್ಳುವದಿಲ್ಲ. ನಾವು ದೇವರ ಸ್ವಂತ ವಾಕ್ಯಗಳನ್ನು ಮಾತ್ರ ಪ್ರಸಾರಮಾಡುತ್ತೇವೆ. ದೇವರು ತನ್ನ ಪ್ರವಾದಿಗಳ ಮೂಲಕವಾಗಿ ಯಾವ ವಾಕ್ಯಗಳನ್ನು ಹೇಳಿಸಿದ್ದಾನೋ ಅವುಗಳನ್ನು ನೀವು ತಿಳಿದುಕೊಳ್ಳುವಂತೆ ಮಾಡುವದೇ ನಮ್ಮ ಆಶೆಯಾಗಿದೆ.

ಪ್ರವಾದಿಗಳ ಬರವಣಿಗೆಗಳಲ್ಲಿ ದೇವರು ಏನು ಹೇಳಿದ್ದಾನೆಂದು ನೀವು ತಿಳಿದುಕೊಂಡಿದ್ದೀರೋ? ನಿಜವಾದ ನೀತಿವಂತಿಕೆಗಾಗಿ ಮತ್ತು ದೇವರ ವಾಕ್ಯಕ್ಕಾಗಿ ಹಸಿದು ಬಾಯಾರಿದವರೊಳಗೆ ನೀವು ಒಬ್ಬರಾಗಿದ್ದೀರೋ? ತನ್ನ ಪರಿಶುದ್ಧ ವಾಕ್ಯದಲ್ಲಿ, ದೇವರು ತನ್ನನ್ನು ಮತ್ತು ರಕ್ಷಣೆಯ ತನ್ನ ನೀತಿಯ ಮಾರ್ಗವನ್ನು ಪ್ರಕಟಿಸಿದ್ದಾನೆ. ಇಲ್ಲಿ ನೀತಿವಂತಿಕೆಯ ಮಾರ್ಗ ಎಂಬುದರ ಮೇಲೆ ವಾಕ್ಯಗಳನ್ನು ನಮ್ಮೊಂದಿಗೆ ಪರಿಶೋಧಿಸುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ ಇದರಿಂದ ನೀವು ದೇವರು ಏನು ಹೇಳಿದ್ದಾನೋ ಅದನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಬಹುದು. ದೇವರ ವಾಕ್ಯವು ನಮಗೆ ಹೀಗೆ ಹೇಳುತ್ತದೆ: "ಪೂರ್ವದಲ್ಲಿ ಬರದದ್ದೆಲ್ಲಾ ನಮ್ಮನ್ನು ಪುದೇಶಿಸುವದಕ್ಕೆ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು"(ರೋಮಾ–೧೫:೪).

ಬಹುಶ: ನಾವೆಲ್ಲರೂ ಈ ಒಂದು ವಿಷಯದಲ್ಲಿ ನಿಶ್ಚಯವುಳ್ಳವರಾಗಿರಬೇಕು: ದೇವರು ಮಾತಾಡಿದ್ದಾನೆ ಮತ್ತು ಪ್ರತಿಯೊಬ್ಬರೂ ಕೇಳಿಸಿಕೊಂಡು ಜೀವಿಸುವವರಾಗಿರಬೇಕೆಂದು ಆತನು ಬಯಸುತ್ತಾನೆ! ಹಿರಿಯರೇ ಮತ್ತು ಯೌವನಸ್ಥರೇ, ಪುರುಷರೇ ಮತ್ತು ಸ್ತ್ರೀಯರೇ, ಶ್ರೀಮಂತರೇ ಮತ್ತು ಬಡವರೇ, ದೇವರು ಪ್ರತಿಯೊಬ್ಬರಿಗೂ ಹೀಗೆ ಹೇಳುತ್ತಾನೆ: "ಕೇಳಿರಿ! ಕಿವಿಯನ್ನು ಇತ್ತ ತಿರುಗಿಸಿರಿ, ನನ್ನ ಬಳಿಗೆ ಬನ್ನಿರಿ; ಆಲಿಸಿದರೆ ಬದುಕಿ ಬಾಳುವಿರಿ"(ಯೆಶಾಯ–೫೫:೩).

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ದೇವರ ಚಿತ್ತವಾದರೆ, "ದೇವರು ಯಾವ ರೀತಿ ಇದ್ದಾನೆ?" ಎಂಬ ಹೆಸರಿರುವ ಎರಡನೆಯ ಪಾಠವನ್ನು ನಾವು ಪ್ರಸ್ತುತಪಡಿಸುತ್ತೇವೆ. ಈದಿನ ನೀವು ಕೇಳಿಸಿಕೊಂಡಿದ್ದರ ಕುರಿತಾಗಿ ನಿಮಗೇನಾದರೂ ಪ್ರಶ್ನೆಗಳಿದ್ದರೆ ನೀತಿವಂತಿಕೆಯ ಮಾರ್ಗ ಎಂಬುದಕ್ಕೆ ಬರೆದುಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ (+ಪಿ.ಓ. ಬಾಕ್ಸ್, ಸಿಟಿ, ಇತ್ಯಾದಿ), ನೀತಿವಂತಿಕೆಯ ಮಾರ್ಗ,(+ಪಿ.ಓ. ಬಾಕ್ಸ್, ಸಿಟಿ, ಇತ್ಯಾದಿ) {ಒಂದು ಪಾಠವನ್ನು ಮುಕ್ತಾಯಗೊಳಿಸುವದಕ್ಕಿರುವ ಸಾಧ್ಯವಾದ ಒಂದು ಮಾರ್ಗವೆಂದರೆ, ಇನ್ನೊಂದು ಉದಾಹರಣೆಗಾಗಿ #೨ನೆಯ ಪಾಠವನ್ನು ನೋಡಿರಿ}

ದೇವರಿಂದ ನಿಮಗೆ ಸಿಕ್ಕಿರುವ ಈ ಉನ್ನತವಾದ ಆಮಂತ್ರಣದ ಮೇಲೆ ನೀವು ಧ್ಯಾನಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

"ಕೇಳಿರಿ! ನಿಮ್ಮ ಕಿವಿಯನ್ನು ಇತ್ತ ತಿರುಗಿಸಿರಿ. ನನ್ನ ಬಳಿಗೆ ಬನ್ನಿರಿ; ಆಲಿಸಿದರೆ ಬದುಕಿ ಬಾಳುವಿರಿ" (ಯೆಶಾಯ–೫೫:೩).

[ಪಾಠ ೧: ದೇವರು ಮಾತಾಡಿದ್ದಾನೆ] [ಸಾರಾಂಶಗಳ ಪಟ್ಟಿ] [ಪಾಠ ೩: ಸೈತಾನನು ಮತ್ತು ದೂತರುಗಳು]

ಪಾಠ ೨

# ದೇವರು ಯಾವ ರೀತಿ ಇದ್ದಾನೆ?

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಶಾಂತಿಯು ನಿಮ್ಮೊಂದಿಗಿರಲಿ, ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ಈ ಕಾರ್ಯಕ್ರಮಗಳಲ್ಲಿ ನಾವು ಒಂದರ ನಂತರ ಒಂದು ದೇವರ ಪ್ರವಾದಿಗಳ ಕತೆಗಳನ್ನು ಹೇಳುವವರಾಗಿದ್ದೇವೆ. ಪ್ರವಾದಿಗಳು ಬರೆದಿರುವ ಪರಿಶುದ್ಧ ವಾಕ್ಯಗಳನ್ನು ಪರಶೋಧಿಸುವದಕ್ಕೆ ಸಹ ನಾವು ಯೋಜನೆ ಮಾಡಿಕೊಂಡಿದ್ದೇವೆ; ದೇವರು ವಿಧಿಸಿರುವ ನೀತಿವಂತಿಕೆಯ ಮಾರ್ಗವನ್ನು ಇವು ತಿಳಿಸುತ್ತವೆ ಹಾಗಾಗಿ ಜನರು ಆತನ ಮುಂದೆ ನೀತಿವಂತರಾಗಿ ಎಣಿಸಲ್ಪಡಬಹುದು.

ನಮ್ಮ ಮೊದಲನೆಯ ಕಾರ್ಯಕ್ರಮದಲ್ಲಿ, ಪ್ರವಾದಿಗಳ ಬರವಣಿಗೆಗಳ ಕುರಿತಾಗಿ ಚರ್ಚೆ ಮಾಡಿದೆವು. ಅನೇಕ ಪ್ರವಾದಿಗಳು ಪರಶುದ್ಧ ವಾಕ್ಯಗಳನ್ನು ಬರೆದಿದ್ದಾರೆ ಆದರೆ ಇಲ್ಲಿ ಒಬ್ಬನೇ ಒಬ್ಬ ಗ್ರಂಥಕರ್ತನಿರುವದೆಂಬುದನ್ನು ನಾವು ಕಲಿತುಕೊಂಡಿದ್ದೇವೆ. ಆ ಒಬ್ಬನೇ ಗ್ರಂಥಕರ್ತ ದೇವರು. ನಮ್ಮ ಹಿಂದಿನ ಪಾಠದಲ್ಲಿ, ಒಂದು ಪ್ರಾಮುಖ್ಯವಾದ ಆಲೋಚನೆಯೊಂದಿಗೆ ನಾವು ನಿಮ್ಮನ್ನು ಬಿಟ್ಟಿದ್ದೆವು. ಆ ಆಲೋಚನೆ ಏನೆಂದರೆ, ದೇವರು ಮಾತಾಡಿದ್ದಾನೆ! ಪ್ರವಾದಿಗಳ ಮೂಲಕವಾಗಿ ದೇವರು ಮಾನವ ಜನಾಂಗಕ್ಕೆ ಮಾತಾಡಿದ್ದಾನೆ ಮತ್ತು ಆತನ ಮಾತನ್ನು ನಾವು ಪ್ರತಿಯೊಬ್ಬರು ಕೇಳಿಸಿಕೊಳ್ಳಬೇಕೆಂದು ಆತನು ಬಯಸುತ್ತಾನೆ. ಪ್ರವಾದಿಗಳ ಬರವಣಿಗೆಗಳ ಮೂಲಕವಾಗಿ ದೇವರು ನಮ್ಮೊಂದಿಗೆ ಮಾತಾಡಲು ಇಷ್ಟಪಡುತ್ತಾನೆ. ದೇವರು ಎಂದಿಗೂ ಬದಲಾಗುವದಿಲ್ಲ, ಆತನ ವಾಕ್ಯವೂ ಸಹ ಬದಲಾಗುವದಿಲ್ಲ. ಪ್ರತಿಯೊಂದು ಸಂತತಿಯಲ್ಲಿಯೂ ದೇವರು ತನ್ನ ವಾಕ್ಯವನ್ನು ಕಾಪಾಡಿದ್ದಾನೆ. "ವಾಕ್ಯವು ಸುಳ್ಳಾಗಲಾರದಷ್ಟೆ"(ಯೋಹಾನ-೧೦:೩೫) "ಲೋಕವೂ ಅದರ ಆಶೆಯು ಗತಿಸಿಹೋಗುತ್ತವೆ, ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು"(೧ಯೋಹಾನ-೨:೧೭, ೧ಪೇತ್ರ-೧:೨೫). ಇದನ್ನೇ ದೇವರ ವಾಕ್ಯ ಹೇಳುವದು.

ಪರಿಶುದ್ಧ ಗ್ರಂಥಗಳಲ್ಲಿರುವ ಮೊದಲನೆಯ ಭಾಗದೊಳಕ್ಕೆ ಈದಿನ ನಾವು ಹೋಗುವವರಿದ್ದೇವೆ. ಇದು ತೋರಾ(ಅಥವಾ ಪೆಂಟೆಟೆಕ್) ಎಂದು ಕರೆಯಲ್ಪಡುತ್ತದೆ. ಮೋಶೆ ಎಂದು ಕರೆಯಲ್ಪಡುವ {ಅರೆಬಿಕ್‌ನಲ್ಲಿ ಮೂಸ ಎಂಬುದಾಗಿ} ಒಬ್ಬ ಮನುಷ್ಯನ ಮನಸ್ಸಿನಲ್ಲಿ ದೇವರು ಈ ಪುಸ್ತಕವನ್ನು ಇರಿಸಿದನು. ಏನು ಬರೆಯಬೇಕೆಂದು ದೇವರು ಮೋಶೆಗೆ ಹೇಳಿದನೋ ಅವನು ಅದನ್ನೇ ಬರೆದನು. ಮೋಶೆಯ ಕಾಲದಿಂದ ಈವರೆಗೆ ೩೫೦೦ ವರ್ಷಗಳು ಮುಗಿದುಹೋಗಿವೆ. ತೋರಾ ಐದು ಪುಸ್ತಕಗಳನ್ನು ಅಥವಾ ಐದು ಭಾಗಗಳನ್ನು ಒಳಗೊಂಡಿದೆ. ಮೊದಲನೆಯ ಭಾಗವು ಆದಿಕಾಂಡ ಎಂದು ಕರೆಯಲ್ಪಡುತ್ತದೆ {ಊಲೂಫ್‌ನಲ್ಲಿ: ಆರಂಭ ಎಂದು ಅರ್ಥ} ಆದಿಕಾಂಡದಲ್ಲಿ ೫೦ ಅಧ್ಯಾಯಗಳಿವೆ. ಪ್ರಾರಂಭದಲ್ಲಿ ಏನು ಸಂಭವಿಸಿತೋ ಅದನ್ನೆಲ್ಲಾ ಇದು ಹೇಳುವದರಿಂದ ಮೊದಲನೆಯ ಪುಸ್ತಕವು ಆದಿಕಾಂಡ ಎಂದು ಕರೆಯಲ್ಪಟ್ಟಿದೆ.

ಮೊದಲ ಪುಸ್ತಕವಾಗಿರುವ ತೋರಾವನ್ನು ತುಂಬಾ ಚೆನ್ನಾಗಿ ತಿಳಿದುಕೊಳ್ಳುವದು ನಮಗೆ ಪ್ರಾಮುಖ್ಯವಾದುದಾಗಿದೆ, ಯಾಕೆಂದರೆ ಇದು ದೇವರು ಹಾಕಿರುವ ತಳಹದಿಯಾಗಿದೆ, ಹಾಗಾಗಿ ಅನುಸರಿಸಬೇಕಾಗಿರುವ ಮತ್ತು ಪ್ರವಾದಿಗಳ ಇತರ ಪುಸ್ತಕಗಳಲ್ಲಿ ಆತನು ಏನು ಹೇಳಿದ್ದಾನೋ ಅದನ್ನು ನಾವು ಗ್ರಹಿಸಿಕೊಳ್ಳಬಹುದು. ಈ ಪುಸ್ತಕವನ್ನು ನಾವು ಅಭ್ಯಾಸ ಮಾಡುತ್ತಿದ್ದ ಹಾಗೆಯೇ, ನಾವು ಅನೇಕ ಪ್ರಾಮುಖ್ಯವಾದ ಸತ್ಯಗಳ ನಮ್ಮ ತಿಳುವಳಿಕೆಯನ್ನು ತಿಳಿಯಲು ಸಾಧ್ಯವಾಗುತ್ತದೆ. ದೇವರ ಕುರಿತಾಗಿ ಮತ್ತು ಆತನು ಯಾವ ರೀತಿ ಇದ್ದಾನೆ ಎನ್ನುವದನ್ನು ನಾವು ಕಲಿತುಕೊಳ್ಳುತ್ತೇವೆ. ನಾವು ಸೈತಾನ ಮತ್ತು ದೂತರುಗಳು, ಪರಲೋಕಗಳು ಮತ್ತು ಭೂಮಿ ಹಾಗೂ ಪ್ರಾಣಿಗಳು ಮತ್ತು ಮನುಷ್ಯನ ಕುರಿತಾಗಿ ಅಭ್ಯಾಸ ಮಾಡುವವರಿದ್ದೇವೆ. ಪಾಪವು ಲೋಕದೊಳಕ್ಕೆ ಹೇಗೆ ಪ್ರವೇಶಿಸಿತು ಮತ್ತು ಇದರೊಂದಿಗೆ ದೊಡ್ಡದಾದ ನಾಶವನ್ನೂ ಮತ್ತು ದು:ಖವನ್ನೂ ಹೇಗೆ ತಂದಿತೆಂಬುದನ್ನು ನಾವು ನೋಡುವವರಾಗಿದ್ದೇವೆ. ಹೇಗೂ, ಕರ್ತನಾದ ದೇವರು ಒದಗಿಸಿರುವ ರಕ್ಷಣೆಯ ಮಾರ್ಗವನ್ನು ಸಹ ನಾವು ಜಾಗರೂಕತೆಯಿಂದ ಪರೀಕ್ಷಿಸಬೇಕು, ಇದರಿಂದ ಪಾಪಿಗಳು ದೇವರ ಕಡೆಗೆ ಹಿಂತಿರುಗುತ್ತಾರೆ ಮತ್ತು ಆತನೊಂದಿಗೆ ಒಂದು ಅದ್ಭುತವಾದ ಸಂಬಂಧವನ್ನು ಹೊಂದಿಕೊಳ್ಳುತ್ತೇವೆ. ಮೊದಲನೆಯ ಕತೆಗಳಲ್ಲಿ, ಮೊದಲ ಜನರನ್ನು ಮೊದಲ ಪಾಪವನ್ನೂ ಮತ್ತು ಮೊದಲ ಕೊಲೆಯನ್ನು ನಾವು ನೋಡುತ್ತೇವೆ. ಮೊದಲ ಸುಳ್ಳು ಧರ್ಮಗಳನ್ನು, ಮೊದಲ ಪ್ರವಾದಿಗಳನ್ನು, ಮತ್ತು ಮೊದಲ ರಾಷ್ಟ್ರಗಳ ಕುರಿತಾಗಿ ನಾವು ಓದುತ್ತೇವೆ. ಆದಾಮ ಮತ್ತು ಹವ್ವ, ಕಾಯಿನ ಮತ್ತು ಹೆಬೇಲ, ನೋಹ ಮತ್ತು ಜಲಪ್ರಳಯ, ದೇವರ ಪ್ರವಾದಿಯಾದ ಅಬ್ರಹಾಮ ಮತ್ತು ಅವನು ದೇವರ ಸ್ನೇಹಿತನೆಂದು ಯಾಕೆ ಕರೆಯಲ್ಪಟ್ಟನೆಂಬ ಕತೆಗಳ ಮೇಲೆ ನಾವು ಚಿಂತನೆ ಮಾಡುವವರಾಗಿದ್ದೇವೆ. ನಾವು ಇಷ್ಮಾಯೇಲ ಮತ್ತು ಇಸಾಕ, ಏಸಾವ ಮತ್ತು ಯಾಕೋಬ ಹಾಗೂ ಯೋಸೆಫ ಮತ್ತು ಆತನ ಕೆಟ್ಟ ಸಹೋದರರುಗಳನ್ನು ನಾವು ನೋಡುತ್ತೇವೆ. ತೋರಾದ ಮೊದಲನೆಯ ಪುಸ್ತಕವು ಇದೆಲ್ಲವನ್ನೂ ಮತ್ತು ಇನ್ನೂ ಹೆಚ್ಚಿನದನ್ನೂ ಒಳಗೊಂಡಿದೆ.

ಈಗ ಆದಕಾರಣ ಸ್ನೇಹಿತರೆ, ನೀವು ಜಾಗ್ರತೆಯಿಂದ ಆಲಿಸಬೇಕೆಂದು ನಾವು ಕೇಳಿಕೊಳ್ಳುತ್ತೇವೆ, ಯಾಕೆಂದರೆ ಪ್ರವಾದಿಗಳ ವಾಕ್ಯಗಳ (ಕಾಲಾನುಸಾರವಾದ)ನಮ್ಮ ಅಭ್ಯಾಸವನ್ನು ಆರಂಭಿಸುವದಕ್ಕೆ ನಮಗೆ ಸಮಯವು ಒದಗಿಬಂದಿದೆ. ತೋರಾದ ಮೊದಲ ಪುಸ್ತಕದಲ್ಲಿ, ಮೊದಲ ಅಧ್ಯಾಯ ಮೊದಲನೆ ವಚನದಲ್ಲಿ ನಾವು ಹೀಗೆ ಓದುತ್ತೇವೆ, "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು".

(ಆದಿ–೧:೧). ಇಲ್ಲಿಂದಲೇ ನಾವು ಪರಿಶುದ್ಧಗ್ರಂಥಗಳ ನಮ್ಮ ಪಾಠವನ್ನು ಪ್ರಾರಂಭಿಸಬೇಕು ಯಾಕೆಂದರೆ, "ಆದಿಯಲ್ಲಿ ದೇವರು ಆಕಾಶವನ್ನು ಭೂಮಿಯನ್ನು ಉಂಟುಮಾಡಿದನು" ಎಂಬುದಾಗಿ ದೇವರು ತಾನೇ ಇಲ್ಲಿ ತನ್ನ ಪುಸ್ತಕವನ್ನು ಪ್ರಾರಂಭಿಸಿದ್ದಾನೆ.

ಈ ವಚನದಲ್ಲಿ ನಾವು ಏನೋ ಒಂದನ್ನು ಆಲೋಚಿಸಲೇಬೇಕಾದ ಸಂಗತಿಯಿದೆ. ದೇವರು ಆಕಾಶವನ್ನೂ ಮತ್ತು ಭೂಮಿಯನ್ನು ಉಂಟುಮಾಡುವದಕ್ಕಿಂತ ಮೊದಲು ಯಾವುದು ಅಸ್ತಿತ್ವದಲ್ಲಿತ್ತು? ಪ್ರಪಂಚಕ್ಕಿಂತ ಮೊದಲು ಯಾವುದು ಅಸ್ತಿತ್ವದಲ್ಲಿತ್ತು? ದೇವರ ಹೊರತಾಗಿ ಬೇರೆ ಯಾವುದೂ ಅಸ್ತಿತ್ವದಲ್ಲಿರಲಿಲ್ಲವೆಂದು ವಾಕ್ಯಗಳು ನಮಗೆ ತೋರಿಸುತ್ತವೆ. ಅದಕ್ಕಾಗಿಯೇ "ಆದಿಯಲ್ಲಿ....ದೇವರು" ಎಂದು ಇದು ಹೇಳುತ್ತದೆ. ನಾವು ನೋಡುವ ಮತ್ತು ಮುಟ್ಟುವ ಪ್ರತಿಯೊಂದು ಆರಂಭವನ್ನು ಹೊಂದಿರುತ್ತದೆ. ಹಾಗಾಗಿ, ಬಹಳ ಬಹಳ ಹಿಂದೆ, ಆಕಾಶ ಅಥವಾ ಭೂಮಿಯಾಗಲಿ, ಸಾಗರ ಅಥವಾ ಮರಗಳಾಗಲಿ ಇಲ್ಲದಿರುವಂತಹ ಕಾಲವಿತ್ತು. ದೇವರು ಆಕಾಶಗಳನ್ನು ಮತ್ತು ಭೂಮಿಯನ್ನು ಉಂಟುಮಾಡುವದಕ್ಕಿಂತ ಮೊದಲು, ಪ್ರಾರಂಭದಲ್ಲಿ, ಸೂರ್ಯ, ಚಂದ್ರ, ನಕ್ಷತ್ರ ಯಾವುವು ಇರಲಿಲ್ಲ. ಆರಂಭದಲ್ಲಿ, ಮನುಷ್ಯರಾಗಲೀ ಮತ್ತು ದೇವದೂತರುಗಳಾಗಲೀ ಇರಲಿಲ್ಲ. ಯಾವುದೂ ಇಲ್ಲದಿದ್ದ ಸಮಯವಿತ್ತು ಎಂದು ಈದಿನ ನಾವು ತಿಳಿದುಕೊಂಡಿರುವ ಹಾಗೆ...ದೇವರ ಹೊರತಾಗಿ ಯಾವುದೂ ಇರಲಿಲ್ಲ.

ಹಾಗಾಗಿಯೇ ಪರಿಶುದ್ಧಗ್ರಂಥಗಳ ಮೊದಲ ಪುಸ್ತಕದ ಮೊದಲ ವಚನದಲ್ಲಿ "ಆದಿಯಲ್ಲಿ ದೇವರು ಆಕಾಶಗಳನ್ನೂ ಮತ್ತು ಭೂಮಿಯನ್ನು ಉಂಟುಮಾಡಿದನೆಂದು" ನಾವು ಓದುತ್ತೇವೆ. "ಆದಿಯಲ್ಲಿ ದೇವರು ಮತ್ತು ದೇವ ದೂತರುಗಳು" ಅಥವಾ "ದೇವರು ಮತ್ತು ಮನುಷ್ಯ" ಎಂಬುದಾಗಿ ವಾಕ್ಯಗಳು ಹೇಳುವದಿಲ್ಲ. ವಾಕ್ಯಗಳು ನಮಗೆ "ಆದಿಯಲ್ಲಿ ದೇವರು" ಎಂದು ಹೇಳುತ್ತವೆ. ದೇವದೂತರುಗಳಾಗಲೀ ಅಥವಾ ಮನುಷ್ಯರಾಗಲೀ ಇರುವದಕ್ಕಿಂತ ಮೊದಲು ಯಾವುದೂ ಇನ್ನೂ ಇಲ್ಲದಿದ್ದಾಗ, ಆದಿಯಲ್ಲಿ ಒಬ್ಬನೇ ಒಬ್ಬನು ಜೀವಿಸುತ್ತಿದ್ದನು. ದೇವರೇ ಆ ಒಬ್ಬನಾಗಿದ್ದಾನೆ!.

ನಮ್ಮ ಪ್ರಪಂಚದಲ್ಲಿ ಕೆಲವರು "ನಾನು ದೇವರನ್ನು ನೋಡಿಲ್ಲ, ಆದಕಾರಣ ದೇವರು ಇಲ್ಲ" ಎಂದು ಹೇಳುತ್ತಾರೆ. ದೇವರ ಅಸ್ತತ್ವವನ್ನು ಅಲ್ಲಗಳೆಯುವ ಅಂತಹ ಜನರಿಗೆ ನಾವು ಕೆಲವು ಪ್ರಶ್ನೆಗಳನ್ನು ಕೇಳಲು ಇಷ್ಟಪಡುತ್ತೇವೆ. ನೀವು ಎಂದಾದರೂ ಅಣುವನ್ನು ನೋಡಿದ್ದೀರೋ? ಅಥವಾ ನೀವು ಉಸಿರಾಡುವ ಆಮ್ಲಜನಕವನ್ನು ನೋಡಿದ್ದೀರೋ? ಗಾಳಿಯನ್ನು ನೀವು ಎಂದಾದರೂ ನೋಡಿದ್ದೀರೋ? ನೀವು ಗಾಳಿಯನ್ನು ನೋಡಿಲ್ಲ, ಆದಾಗ್ಯೂ ಗಾಳಿಯಿದೆಯೆಂದು ನೀವು ತಿಳಿದಿದ್ದೀರಿ ಯಾಕೆಂದರೆ ಯಾವುದು ಇದೆಯೋ ಅದನ್ನು ನೀವು ನೋಡುತ್ತೀರಿ. ಗಾಳಿಯಲ್ಲಿ ಅಲ್ಲಾಡುವಂತಹ ಮರಗಳನ್ನು ನೀವು ನೋಡುತ್ತೀರಿ, ಆದರೆ ಸ್ವತ: ಗಾಳಿಯನ್ನು ಯಾರೂ ನೋಡುವದದಕ್ಕಾಗುವದಿಲ್ಲ. ಗಾಳಿಯನ್ನು ನಿಮ್ಮ ಕೈಯಲ್ಲಿ ಹಿಡಿಯುವದಕ್ಕಾಗುವದಿಲ್ಲ, ಆದರೆ ಅದರ ತಣ್ಣಗಾಗಿಸುವ ಮೆಲುಗಾಳಿಯನ್ನು ಅನುಭವಿಸುತ್ತೀರಿ. ದೇವರೊಂದಿಗೂ ಇದು ಹಾಗೆ ಆಗುತ್ತದೆ. ನಾವು ದೇವರನ್ನು ನೋಡುವದಕ್ಕಾಗುವದಿಲ್ಲ, ಯಾಕೆಂದರೆ ಮಾನವನ ಕಣ್ಣುಗಳಿಗೆ ದೇವರು ಅದೃಶ್ಯನಾಗಿರುತ್ತಾನೆ. ಹೇಗೂ, ದೇವರು ಸೃಷ್ಟಿಸಿರುವದನ್ನು ನಾವು ನೋಡುವದರಿಂದ ದೇವರು ಇದ್ದಾನೆಂದು ನಾವು ತಿಳಿದುಕೊಳ್ಳುತ್ತೇವೆ. "ಹೇಗಂದರೆ ಕಣ್ಣಿಗೆ ಕಾಣದಿರುವ ಆತನ ಗುಣಲಕ್ಷಣಗಳು ಅಂದರೆ ಆತನ ನಿತ್ಯಶಕ್ತಿಯೂ ದೇವತ್ವವೂ ಜಗದುತ್ಪತ್ತಿ ಮೊದಲುಗೊಂಡು ಆತನು ಮಾಡಿದ ಸೃಷ್ಟಿಗಳ ಮೂಲಕ ಬುದ್ಧಿಗೆ ಗೊತ್ತಾಗಿ ಕಾಣಬರುತ್ತವೆ. ಹೀಗಿರುವದರಿಂದ ಅವರು ಉತ್ತರವಿಲ್ಲದವರಾಗಿದಾರೆ".(ರೋಮಾ–೧:೨೦). ತೋರಾದ ಮೊದಲನೆಯ ವಚನದಿಂದ ನಾವು ತಿಳಿದುಕೊಳ್ಳುವಂತಹ ಇನ್ನೊಂದು ವಿಷಯವೇನೆಂದರೆ, ದೇವರಿಗೆ ಆರಂಭವೆನ್ನುವದು ಇಲ್ಲ. ದೇವರು ಪ್ರಾರಂಭದಲ್ಲಿ ಸೃಷ್ಟಿಸಲ್ಪಡಲಿಲ್ಲ. ದೇವರು ನಿತ್ಯತ್ವದ ಕರ್ತನಾಗಿದ್ದಾನೆ. ಈ ಲೋಕದಲ್ಲಿ ನಾವು ನೋಡುತ್ತಿರುವ ಮತ್ತು ತಿಳಿದುಕೊಂಡಿರುವ ಪ್ರತಿಯೊಂದು ಆರಂಭವನ್ನು ಹೊಂದಿವೆ. ಆದರೆ ದೇವರು ಆರಂಭವನ್ನು ಹೊಂದಿಲ್ಲ. ಆತನಿಗೆ ಮೂಲವೂ ಇಲ್ಲ. ಆತನಿಗೆ ಸಮಾನವೂ ಯಾವುದೂ ಇಲ್ಲ. ಕೇವಲ ಆತನು ಪ್ರಾರಂಭದಲ್ಲಿ ಅಸ್ತತ್ವದಲ್ಲಿದ್ದನು. ಆತನಿಗೆ ಯಾರು ಜನ್ಮವನ್ನು ಕೊಟ್ಟಿಲ್ಲ. ಯಾರೂ ಆತನನ್ನು ಸೃಷ್ಟಿಸಲಿಲ್ಲ. ಮತ್ತು ಆತನು ತನ್ನನ್ನು ತಾನೆ ಸೃಷ್ಟಿಸಿಕೊಳ್ಳಲಿಲ್ಲ. ಅದಕ್ಕೋಸ್ಕರವೇ ನಾವು "ಆದಿಯಲ್ಲಿ ದೇವರು" ಎಂದು ಪರಿಶುದ್ಧ ವಾಕ್ಯಗಳಲ್ಲಿ ಓದುತ್ತೇವೆ. ಆತನು ಮಾತ್ರ ಆರಂಭವನ್ನು ಹೊಂದಿಲ್ಲ. ಆತನೊಬ್ಬನು ಮಾತ್ರವೇ ಯಾವಾಗಲೂ ಅಸ್ತಿತ್ವದಲ್ಲಿದ್ದು ಎಂದೆಂದಿಗೂ ಜೀವಿಸುವವನಾಗಿದ್ದಾನೆ. ಕರ್ತನು {ಊಲೂಫ್‌ನಲ್ಲಿ – ನಿತ್ಯನಾದವನು} ಎಂಬುದು ಆತನ ಹೆಸರು. ಈದಿನ ಆತನು ಯಾವ ರೀತಿಯಿದ್ದಾನೆ, ನಿನ್ನೆ ಇದ್ದ ಹಾಗೆ ಆತನಿದ್ದಾನೆ. ಆತನು ನಿನ್ನೆ ಇದ್ದ ಹಾಗೆ ಎಂದೆಂದಿಗೂ ಇರುತ್ತಾನೆ. ದೇವರು ಎಂದಿಗೂ ಬದಲಾಗುವದಿಲ್ಲ.

"ಆದಿಯಲ್ಲಿ ದೇವರು ಆಕಾಶಗಳನ್ನೂ ಮತ್ತು ಭೂಮಿಯನ್ನು ಉಂಟುಮಾಡಿದನು" ಎಂದು ಹೇಳುವಂತಹ ವಚನದಿಂದ ನಾವು ಕಲಿತುಕೊಳ್ಳು – –ವಂತಾದ್ದು ಇನ್ನೂ ಸ್ವಲ್ಪವಿದೆ. ಅದೇನೆಂದರೆ, ದೇವರು ದೊಡ್ಡವನು! ಪ್ರತಿಯೊಂದನ್ನು ಉಂಟುಮಾಡಿರುವ ದೇವರು ಪ್ರತಿಯೊಂದಕ್ಕಿಂತಲೂ ಮತ್ತು ಪ್ರತಿಯೊಬ್ಬರಿಗಿಂತಲೂ ದೊಡ್ಡವನಾಗಿದ್ದಾನೆ. ಈತನು ಸೃಷ್ಟಿಯ ಕರ್ತನು. ನಿಜವಾಗಿಯೂ, ನಾವು ಹೃದಯಪೂರ್ವಕವಾಗಿ "ಅಲ್ಲಾಹು ಅಕ್ಬರ್!" {ಅರೆಬಿಕ್‌ನಲಿ: ದೇವರು ದೊಡ್ಡವನು} ಎಂದು ಹೇಳಬಹುದು. ದೇವರು ದೊಡ್ಡವನು. ಆತನಿಗೆ ಸಮಾನರಿಲ್ಲ. ಸಾಗರ, ಗಾಳಿ, ಸೂರ್ಯ, ಚಂದ್ರ ಇತ್ಯಾದಿ.., ಲೋಕದಲ್ಲಿರುವ ಪ್ರತಿಯೊಂದಕ್ಕಿಂತಲೂ ಆತನು ದೊಡ್ಡವನು!. ಆತನು ಎಲ್ಲಾ ಜನರೂ ಮತ್ತು ಆತ್ಮಗಳಿಗಿಂತಲೂ ಹೆಚ್ಚು ಶಕ್ತಿವಂತನೂ ಮತ್ತು ಬುದ್ಧಿವಂತನೂ ಆಗಿದ್ದಾನೆ. ಆತನು ಎಂದೆಂದಿಗೂ ಮಹಿಮೆಯನ್ನು ಹೊಂದಲು ಯೋಗ್ಯನಾಗಿದ್ದಾನೆ! ದೇವರು ದೊಡ್ಡನವು! ಆತನು ತನ್ನ ಸ್ವಂತ ಬಲದಿಂದ ಜೀವಿಸುತ್ತಾನೆ. ಆತನು ಯಾವುದರ ಮೇಲೂ ಅವಲಂಬಿತನಾಗಿಲ್ಲ. ಆತನು ಯಾರನ್ನೂ ಅವಲಂಬಿಸಿಲ್ಲ. ದೇವರು ಪ್ರತಿಯೊಂದಕ್ಕಿಂತಲೂ ದೊಡ್ಡವನಾಗಿದ್ದಾನೆ. ಆತನಿಗೆ ಯಾವುದೂ ಅಗತ್ಯವಿಲ್ಲ, ಯಾರೂ ಅಗತ್ಯವಿಲ್ಲ. ಆತನೇ ದೊಡ್ಡವನಾಗಿದ್ದಾನೆ! ಮಾನವರಾಗಿರುವ ನಾವು ಅನೇಕ ಅಗತ್ಯತೆಗಳನ್ನು ಹೊಂದಿದವರಾಗಿದ್ದೇವೆ. ಪ್ರತಿದಿನ ನಾವು ಉಸಿರಾಡುತ್ತೇವೆ, ನಿದ್ರಿಸುತ್ತೇವೆ, ಕುಡಿಯುತ್ತೇವೆ ಮತ್ತು ತಿನ್ನುತ್ತೇವೆ. ನಮಗೆ ಸೂರ್ಯ, ಮಳೆ, ಆಹಾರ, ನೀರು ಬಟ್ಟೆಗಳು, ಮನೆ, ತಂದೆ, ತಾಯಿ, ಸ್ನೇಹಿತರು, ಹಣ ಹೀಗೆ ಬಹಳಷ್ಟು ಅಗತ್ಯತೆವುಳ್ಳವರಾಗಿದ್ದೇವೆ. ನಮ್ಮ ಅಗತ್ಯತೆಗಳು ಎಷ್ಟೊಂದಿವೆ! ಏನೇ ಆದರೂ, ಪ್ರತಿಯೊಂದನ್ನು ಉಂಟುಮಾಡಿರುವ ಕರ್ತನಿಗೆ ಯಾವ ಅಗತ್ಯತೆಗಳಿಲ್ಲ! ಆತನಿಗೆ ಹಸಿವೆಯಿಲ್ಲ, ಬಾಯಾರಿಕೆಯಿಲ್ಲ, ಆತನಿಗೆ ಎಂದಿಗೂ ಆಯಾಸವಾಗುವದಿಲ್ಲ. ಮನುಷ್ಯನ ಹಾಗೆ ಆತನಿಗೆ ಶರೀರವಿಲ್ಲ. ಆತನಿಗೆ ಯಾವ ಮಿತಿಗಳಿಲ್ಲ. ಆತನಿಗೆ ಅಂತ್ಯವಿಲ್ಲ. ಆತನು ನಿತ್ಯನಾದ ದೇವರು. ಆತನು ಎಲ್ಲಾ ಬಲವುಳ್ಳ ದೇವರಾಗಿದ್ದಾನೆ.

ಈಗ ಇಲ್ಲಿ ಒಂದು ಪ್ರಾಮುಖ್ಯವಾದ ಪ್ರಶ್ನೆಯಿದೆ. ದೇವರು ಮನುಷ್ಯನ ಹಾಗಿಲ್ಲದಿದ್ದರೆ ಮತ್ತು ಮನುಷ್ಯನ ಹಾಗೆ ಶರೀರವನ್ನು ಹೊಂದಿಲ್ಲದಿದ್ದರೆ, ದೇವರು ಯಾವ ರೀತಿ ಇದ್ದಾನೆ? ಈ ಪ್ರಶ್ನೆಗೆ ದೇವರ ವಾಕ್ಯವು ಸ್ಪಷ್ಟವಾದ ಉತ್ತರದೊಂದಿಗೆ ಪ್ರತಿಕ್ರಿಯಿಸುತ್ತದೆ. ಇದು ಹೇಳುವದೇನೆಂದರೆ, "ದೇವರು ಆತ್ಮ ಸ್ವರೂಪನು, ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು"(ಯೋಹಾನ–೪:೨೪). ದೇವರು ಹೇಗಿದ್ದಾನೆ? ದೇವರು ಆತ್ಮಸ್ವರೂಪನಾಗಿದ್ದಾನೆ. ಮನುಷ್ಯನಿಗೆ ಶರೀರ ಮತ್ತು ಆತ್ಮವಿದೆ ಆದರೆ ದೇವರಿಗೆ ಆತ್ಮ ಮಾತ್ರವಿದೆ. ದೇವರ ಆತ್ಮನಿಗೆ ಯಾವ ಮಿತಿಗಳಿಲ್ಲ. ಆತನು ಎಲ್ಲಾ ಕಡೆಯಲ್ಲಿರುತ್ತಾನೆ. ದೇವರು ಪ್ರತಿಯೊಂದರ ಮತ್ತು ಪ್ರತಿಯೊಬ್ಬರ ಮೇಲಿನವನಾಗಿದ್ದಾನೆ. ಆತನು ಪ್ರತಿಯೊಂದನ್ನು ತುಂಬಿದವನೂ ನೋಡುವವನೂ ಆಗಿದ್ದಾನೆ. ದೇವರಿಗೆ ರಾತ್ರಿ ಮತ್ತು ಹಗಲೂ ಎರಡೂ ಒಂದೇ. ನೀವು ನಿಮ್ಮ ಕೋಣೆಯಲ್ಲಿ ಅಡಗಿಕೊಂಡರೆ ಅಲ್ಲಿಯೂ ದೇವರಿದ್ದು ನಿಮ್ಮನ್ನು ನೋಡುತ್ತಾನೆ. ದೇವರು ಪ್ರತಿಯೊಂದನ್ನೂ ಬಲ್ಲವನಾಗಿದ್ದಾನೆ. ಆತನು ನಿಮ್ಮ ಆಲೋಚನೆ – –ಗಳನ್ನು ಮತ್ತು ನಿಮ್ಮ ಹೃದಯದ ಉದ್ದೇಶವನ್ನು ತಿಳಿದವನಾಗಿದ್ದಾನೆ. ದೇವರು ದೊಡ್ಡವನು!

ಹಾಗಾದರೆ ದೇವರು ಹೇಗಿದ್ದಾನೆ? ದೇವರು ಯಾರೊಬ್ಬರ ರೀತಿಯಲ್ಲಿಯೂ ಇಲ್ಲ ಎನ್ನುವದನ್ನು ಈದಿನ ನಾವು ಏನು ಅಭ್ಯಾಸ ಮಾಡಿದ್ದೆವೋ ಅದನ್ನು ಬಹುಮಟ್ಟಿಗೆ ನಾವು ಸಂಕ್ಷಿಪ್ತಗೊಳಿಸಬೇಕು. ದೇವರು ದೇವರೇ ಆಗಿದ್ದಾನೆ, ಆತನಿಗೆ ಸಮಾನತೆ ಯಾವುದೂ ಇಲ್ಲ. ನೀತಿವಮತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮದ ಮುಂದಿನ ಪಾಠಗಳಲ್ಲಿ ದೇವರ ಗುಣಲಕ್ಷಣದ ನಮ್ಮ ತಿಳುವಳಿಕೆಯನ್ನು ನಾವು ಹೆಚ್ಚಿಸಿಕೊಳ್ಳಲಿದ್ದೇವೆ. ಪರಿಶುದ್ಧ ವಾಕ್ಯಗಳಲ್ಲಿ ದೇವರು ಸಾವಿರಾರು ಸಾವಿರಾರು ಹೆಸರುಗಳನ್ನು ಹೊಂದಿದ್ದಾನೆ. ಆತನು ಕರ್ತನೂ, ಉನ್ನತದಲ್ಲಿರುವವನೂ, ಸರ್ವಶಕ್ತನೂ ಮತ್ತು ಸೃಷ್ಟಿಕರ್ತನೂ ಆಗಿದ್ದಾನೆ. ಜೀವನದ ಲೇಖಕನೂ, ಬೆಳಕೂ, ನೀತಿವಂತನೂ, ಕನಿಕರವುಳ್ಳವನೂ, ಪ್ರೀತಿಯುಳ್ಳ ದೇವರು, ಮತ್ತು ಆತನು ಜೀವಿಸುವ ಸತ್ಯ ದೇವರಾಗಿದ್ದಾನೆ!

ಸತ್ಯವಾಗಿ ಆರಂಭದಲ್ಲಿ ಆಕಾಶವನ್ನೂ ಮತ್ತು ಭೂಮಿಯನ್ನೂ ಉಂಟುಮಾಡಿದ ದೇವರು ದೊಡ್ಡವನಾಗಿದ್ದಾನೆ. ಅವನ ಕುರಿತು ವಾಕ್ಯಗಳು ಹೀಗೆ ಹೇಳುತ್ತವೆ:

"ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! ಸಮಸ್ತವೂ ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಅತನಿಗಾಗಿ ಇರುತ್ತದೆ" (ರೋಮಾ–೧೧:೩೩, ೩೬). "ಭಾಗ್ಯವಂತನಾದ ಏಕಾಧಿಪತಿಯು ತನ್ನ ಕ್ಲುಪ್ತ ಸಮಯದಲ್ಲೇ ಆತನನ್ನು ಪ್ರತ್ಯಕ್ಷಪಡಿಸುವನು. ಆ ಏಕಾಧಿಪತಿಯು ರಾಜಾಧಿರಾಜನೂ ಕರ್ತರ ಕರ್ತನೂ ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಕಾಣಲಾರರು; ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ ಆಮೆನ್" (೧ತಿಮೊಥೆ–೬:೧೫,೧೬).

ಇನ್ನೊಂದು ಅಧ್ಯಾಯದಲ್ಲಿ, ದೇವರ ಪ್ರವಾದಿಯಾದ ಮೋಶೆಯು ಸುಂದರವಾದ ಹಾಡಿನಲ್ಲಿ ದೇವರನ್ನು ಸ್ತುತಿಸುತ್ತಾ ಹೀಗೆ ಹೇಳುತ್ತಾನೆ: "ದೇವರಾದ ಕರ್ತನೇ, ಸರ್ವಶಕ್ತನೇ, ನಿನ್ನ ಕೃತ್ಯಗಳು ಮಹತ್ತಾದವುಗಳೂ ಆಶ್ಚರ್ಯಕರವಾದವುಗಳೂ ಆಗಿವೆ; ಸರ್ವಜನಾಂಗಗಳ ಅರಸನೇ, ನಿನ್ನ ಮಾರ್ಗಗಳು ನ್ಯಾಯವೂ ಸತ್ಯವೂ ಆಗಿವೆ. ಕರ್ತನೇ, ನಿನ್ನ ನಾಮಕ್ಕೆ ಭಯಪಡದವರೂ ಅದನ್ನು ಘನವಾದದ್ದೆಂದು ಒಪ್ಪಿಕೊಳ್ಳದವರೂ ಯಾರಾದರೂ ಇದ್ದಾರೋ? ನೀನೊಬ್ಬನೇ ಪರಿಶುದ್ಧನು; ನಿನ್ನ ನೀತಿಯುಳ್ಳ ಕೃತ್ಯಗಳು ಪ್ರಕಾಶಕ್ಕೆ ಬಂದದರಿಂದ ಎಲ್ಲಾ ಜನಾಂಗಗಳು ಬಂದು ನಿನ್ನ ಸನ್ನಿಧಾನದಲ್ಲಿ ನಮಸ್ಕಾರ ಮಾಡುವರು"(ಪ್ರಕ–೧೫:೩,೪). ದೇವರು ಅಪಾರವಾಗಿ ದೊಡ್ಡವನು! ಅದಕ್ಕಾಗಿಯೇ, ದೇವರ ವಾಕ್ಯದ ಮೊದಲನೆಯ ವಚನವು "ಆದಿಯಲ್ಲಿ ದೇವರು" ಎಂದು ಹೇಳುವಾಗ ಇದನ್ನು ನಮಗೆ ಕಲಿಸುತ್ತದೆ.

ಹಾಗಾಗಿ ಸ್ನೇಹಿತರೇ, "ಆದಿಯಲ್ಲಿ ದೇವರು" ಎಂದು ಈದಿನ ನಾವು ಕೇಳಿಸಿಕೊಂಡ ಸತ್ಯವನ್ನು ನಮ್ಮ ಮನಸ್ಸುಗಳಲ್ಲಿ ಇಟ್ಟುಕೊಳ್ಳಬೇಕಾಗಿದೆ. ದೇವರು ಮಾತ್ರವೇ ಆರಂಭದಲ್ಲಿ ಅಸ್ತಿತ್ವದಲ್ಲಿದ್ದನು ಮತ್ತು ಆದಕಾರಣ ಪ್ರಾರಂಭದಲ್ಲಿ ಏನು ಸಂಭವಿಸಿತೋ ಅದರ ಕುರಿತಾದ ಸತ್ಯವನ್ನು ದೇವರು ಮಾತ್ರವೇ ನಮಗೆ ಪ್ರಕಟಿಸುತ್ತಾನೆ. ಇಲ್ಲಿಂದ ಮುಂದೆ ಸಂಭವಿಸುವದರ ಕುರಿತಾದ ಸತ್ಯವನ್ನು ಸಹ ದೇವರು ಮಾತ್ರವೇ ನಮಗೆ ಪ್ರಕಟಿಸುತ್ತಾನೆ. ಮತ್ತು ದೇವರು ಮಾತ್ರವೇ ತನ್ನ ಕುರಿತಾದ ಸತ್ಯವನ್ನು ನಮಗೆ ಪ್ರಕಟಿಸುತ್ತಾನೆ.

ಹೌದು, "ಯಾರೊಬ್ಬರೂ ದೇವರನ್ನು ತಿಳಿದಿಲ್ಲ, ಅಥವಾ ಇಲ್ಲಿಂದ ಮುಂದೆ ಏನು ಸಂಭವಿಸುತ್ತದೆಂಬುದನ್ನು ಯಾರೂ ತಿಳಿದಿಲ್ಲ!" ಎಂದು ಕೆಲವು ಜನರು ಹೇಳುವದು ನಮಗೆ ಗೊತ್ತು. ಆದಾಗ್ಯೂ, ನಾವು ದೇವರನ್ನು ತಿಳಿದಿದ್ದೇವೆ ಮತ್ತು ನಿತ್ಯತ್ವವನ್ನು ನಾವು ಎಲ್ಲಿ ಕಳೆಯುತ್ತೇವೆ ಎಂಬುದನ್ನು ನಾವು ತಿಳಿದಿದ್ದೇವೆ ಎಂದು ಪ್ರವಾದಿಗಳ ಬರವಣಿಗೆಗಳು ನಮಗೆ ಹೇಳುತ್ತವೆ. ಇದಕ್ಕಾಗಿ ದೇವರ ವಾಕ್ಯವು ಹೀಗೆ ಹೇಳುತ್ತದೆ:

"ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ. ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ" (೧ಯೋಹಾನ–೫:೧೩,೨೦). "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದ್ದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ. ನಮಗಾದರೋ ದೇವರು ತನ್ನ ಆತ್ಮನ ಮೂಲಕ ಅದನ್ನು ಪ್ರಕಟಿಸಿದನು. ಆ ಆತ್ಮನು ಎಲ್ಲಾ ವಿಷಯಗಳನ್ನು ದೇವರ ಅಗಾಧವಾದ ವಿಷಯಗಳನ್ನು ಕೂಡ ಪರಿಶೋಧಿಸುವವನಾಗಿದ್ದಾನೆ"(೧ಕೊರಿಂಥ–೨:೯,೧೦).

ಯಾರು ಈದಿನ ನಮ್ಮ ಮಾತುಗಳನ್ನು ಕೇಳಿಸಿಕೊಳ್ಳುತ್ತೀದ್ದೀರೋ, ನೀವು ದೇವರನ್ನು ವ್ಯಯಕ್ತಿಕವಾಗಿ ತಿಳಿದುಕೊಂಡಿದ್ದೀರೋ? ಅಥವಾ ಆತನು ನಿಮಗೆ ತಿಳಿಯದಿರುವಂತಹ ಮತ್ತು ದೂರದಲ್ಲೆಲ್ಲೋ ಇರುವಂತಹ ಸುಮ್ಮನೆ ಒಬ್ಬ ದೊಡ್ಡ ಸೃಷ್ಟಿಗಾರನಾಗಿದ್ದಾನೋ? ಪ್ರಿಯ ಸ್ನೇಹಿತರೇ,

ನೀವು ದೇವರನ್ನು ತಿಳಿದುಕೊಂಡು ಆತನೊಂದಿಗೆ ಎಂದೆಂದಿಗೂ ಜೀವಿಸಬೇಕೆಂದು ದೇವರು ಬಯಸುತ್ತಾನೆ! ದೇವರೊಂದಿಗೆ ನಾವು ಅದ್ಭುತವಾದ ಮತ್ತು ಆಪ್ತವಾದ ಸಂಬಂಧವನ್ನು ಹೇಗೆ ಹೊಂದಿರಬೇಕೆಂಬುದನ್ನು ಪ್ರವಾದಿಗಳ ವಾಕ್ಯಗಳು ನಮಗೆ ಕಲಿಸಿಕೊಡುತ್ತವೆ. ಹೇಗೂ, ದೇವರು ನಮಗೆ ಏನು ಹೇಳುತ್ತಾನೋ ಅದಕ್ಕೆ ನಮ್ಮ ಕಿವಿಗಳನ್ನು, ಮನಸ್ಸುಗಳನ್ನು, ಮತ್ತು ನಮ್ಮ ಹೃದಯಗಳನ್ನು ತೆರೆಯಲೇಬೇಕು. ದೇವರು ತನ್ನ ಪರಿಶುದ್ಧ ವಾಕ್ಯದಲ್ಲಿ ಏನು ಹೇಳಿದ್ದಾನೋ ಅದನ್ನು ಕೇಳಿಸಿಕೊಳ್ಳಿರಿ: "ಎಲ್ಲಾ ದಿಗಂತಗಳವರೇ, ನನ್ನ ಕಡೆಗೆತಿರುಗಿಕೊಳ್ಳಿರಿ, ರಕ್ಷಣೆಯನ್ನು ಹೊಂದಿಕೊಳ್ಳಿರಿ, ನಾನೇ ದೇವರು, ಇನ್ನು ಯಾರೂ ಇಲ್ಲ"(ಯೆಶಾಯ–೪೫:೨೨).

ಸ್ನೇಹಿತರೇ, ಈದಿನ ಇಲ್ಲಿಗೆ ನಾವು ನಿಲ್ಲಿಸುತ್ತೇವೆ. ಹೇಗೂ, ಈ ಕಾಲಾನುಸಾರವಾದ ಪಾಠಗಳು ಆಡಿಯೋ ಕ್ಯಾಸೆಟ್‌ಗಳಲ್ಲಿ ದೊರಕುತ್ತವೆ ಎಂಬುದನ್ನು ನಿಮಗೆ ತಿಳಿಸುವದಕ್ಕೆ ನಾವು ಇಷ್ಟಪಡುತ್ತೇವೆ. ಒಂದು ಪೂರ್ತಿ ಸೆಟ್ ಸ್ವಂತಕ್ಕೆ ತೆಗೆದುಕೊಳ್ಳುವದಕ್ಕೆ ನೀವು ಇಷ್ಟಪಡುವದಾದರೆ, ನಮಗೆ ಬರೆದರೆ ಅವುಗಳನ್ನು ನೀವು ಹೇಗೆ ಪಡೆದುಕೊಳ್ಳಬಹುದೆಂಬುದನ್ನು ನಾವು ನಿಮಗೆ ತಿಳಿಸುತ್ತೇವೆ. ಅಥವಾ, ಪರಿಶುದ್ಧ ವಾಕ್ಯಗಳನ್ನು ಬರವಣಿಗೆಯ ರೀತಿಯಲ್ಲಿ ಪಡೆದುಕೊಳ್ಳುವದಕ್ಕೆ ನೀವು ಪಷ್ಟಪಡುವದಾದರೆ, ನಾವು ನಿಮಗೆ ಕೆಲವು ವಾಕ್ಯದ ಭಾಗಗಳನ್ನು ಕಳಿಸಿಕೊಡುತ್ತೇವೆ. ನಮ್ಮ ವಿಳಾಸ; ನೀತಿವಂತಿಕೆಯ ಮಾರ್ಗ(+ಪಿ.ಓ.ಬಾಕ್ಸ್, ಸಿಟಿ, ಇತ್ಯಾದಿ) {ಪಾಠದ ಕೊನೆಯಲ್ಲಿ ಕೊಡಲ್ಪಟ್ಟಿರುವ ಪ್ರಸ್ತಾಪಗಳ ರೀತಿಯ ಇನ್ನೊಂದು ಉದಾಹರಣೆಯಲ್ಲಿ ನಾವು ಇದನ್ನು ನಿಲ್ಲಿಸುತ್ತಿದ್ದೇವೆ. ನಮ್ಮ ಊಲೂಫ್ ರೇಡಿಯೋ ಕಾರ್ಯಕ್ರಮದಲ್ಲಿ, ಪ್ರತಿಯೊಂದು ನಾಲ್ಕನೆಯ ಕಾರ್ಯಕ್ರಮದಲ್ಲಿ ಕ್ಯಾಸೆಟ್‌ಗಳ ಲಭ್ಯತೆಗಳನ್ನು ನಾವು ತಿಳಿಸುತ್ತೇವೆ. ನಮಗೆ ಬರೆದುಕೊಳ್ಳುವವರಿಗೆಲ್ಲಾ ಉಚಿತವಾಗಿ ಎರಡು ಅಥವಾ ಮೂರು ಕ್ಯಾಸೆಟ್‌ಗಳನ್ನು ಕಳಿಸಿಕೊಡುತ್ತೇವೆ. ಕೆಲವರು ಪೂರ್ತಿ ಇಪ್ಪತ್ತು ಕ್ಯಾಸೆಟ್‌ಗಳ (೧೦೦ ಪಾಠಗಳ) ಸರಣಿಗಳನ್ನು ಖರಿದೀಸಿದ್ದಾರೆ.}

ಈದಿನ ನಮ್ಮೊಂದಿಗೆ ಇದ್ದದ್ದಕ್ಕಾಗಿ ನಿಮಗೆ ವಂದನೆಗಳು. ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ದೇವರ ಚಿತ್ತವಾದರೆ, ದೇವದೂತರುಗಳು ಮತ್ತು ಸೈತಾನ ಎಂಬ ಅತ್ಯಂತ ಮನೋಹರವಾದ ವಿಷಯವನ್ನು ನಾವು ಪರೀಕ್ಷಿಸುವವರಾಗಿದ್ದೇವೆ. ಅವರು ಎಲ್ಲಿಂದ ಬಂದವರೆಂಬುದರ ಕುರಿತಾದ ನಿಜವಾದ ಕತೆಯನ್ನು ನೀವು ತಿಳಿದಿದ್ದೀರೋ?

ಪರಿಶುದ್ಧ ವಾಕ್ಯಗಳಲ್ಲಿ ಹೇಳಿರುವಂತಹ ವಚನಗಳನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

"ದೇವರು ಆತ್ಮಸ್ವರೂಪನು, ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು." (ಯೋಹಾನ–೪:೨೪).

ಪಾಠ ೩

# ಸೈತಾನ ಮತ್ತು ದೇವದೂತರು

ಯೆಶಾಯ ೧೪; ಯೆಹೆಜ್ಕೇಲ ೨೮

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ಪರಿಶುದ್ಧ ವಾಕ್ಯಗಳಲ್ಲಿ ಹೇಳಿರುವಂತ "ಆದಿಯಲ್ಲಿ ದೇವರು ಆಕಾಶವನ್ನೂ ಮತ್ತು ಭೂಮಿಯನ್ನೂ ಉಂಟುಮಾಡಿದನು"(ಆದಿ:೧:೧) ಎಂಬ ಮೊದಲ ವಚನವನ್ನು ನಾವು ಓದಿದ್ದೇವೆ. ದೇವರ ಹೊರತಾಗಿ ಪರತಿಯೊಂದು ಒಂದು ಪ್ರಾರಂಭವನ್ನು ಹೊಂದಿದೆ ಎಂಬುದನ್ನು ನಾವು ನೋಡಿದ್ದೇವೆ. ಆದಿಯಲ್ಲಿ, ಏನೂ ಇಲ್ಲದಿರುವಾಗ ಒಂದೇ ಒಂದು ಮಾತ್ರ ಜೀವಿಸುತ್ತಿತ್ತು. ಆ ಒಂದು ದೇವರೇ ಆಗಿದ್ದನು. ಪ್ರಾರಂಭದಲ್ಲಿ ಆತನು ಮಾತ್ರ ಅಸ್ತಿತ್ವದಲ್ಲಿದ್ದನು. ದೇವರು ನಿತ್ಯತ್ವದ ಕರ್ತನಾಗಿದ್ದಾನೆ. ದೇವರು ದೊಡ್ಡವನೂ ಮತ್ತು ಸರಿಸಮವಿಲ್ಲದವನೂ ಆಗಿದ್ದಾನೆ! ಆತನಿಗೆ ಆರಂಭವೂ ಇಲ್ಲ ಮತ್ತು ಅಂತ್ಯವೂ ಇಲ್ಲ. ಆತನಿಗೆ ಯಾವ ಅಗತ್ಯತೆಗಳಿಲ್ಲ. ಆತನಿಗೆ ಮಿತಿಗಳಿಲ್ಲ. ದೇವರು ಆತ್ಮಸ್ವರೂಪನಾಗಿದ್ದು ಒಂದೇ ಸಲಕ್ಕೆ ಎಲ್ಲಾ ಕಡೆಯೂ ಇರುವವನಾಗಿದ್ದಾನೆ. ಆತನು ಪ್ರತಿಯೊಂದರ ಮತ್ತು ಪ್ರತಿಯೊಬ್ಬರ ಮೇಲಿರುವವನಾಗಿದ್ದಾನೆ. ಆತನು ಪ್ರತಿಯೊಂದನ್ನು ಆವರಿಸುವವನೂ, ಪ್ರತಿಯೊಂದನ್ನು ನೋಡುವವನೂ ಆಗಿದ್ದಾನೆ. ಆತನು ಪ್ರತಿಯೊಂದನ್ನು ತಿಳಿದವನಾಗಿದ್ದಾನೆ. ಆತನು ಅದ್ವಿತೀಯನಾಗಿದ್ದಾನೆ. ದೇವರು ದೊಡ್ಡವನು! ಅದಕ್ಕಾಗಿಯೇ ಪರಿಶುದ್ಧ ವಾಕ್ಯಗಳು ಹೀಗೆ ಹೇಳುತ್ತವೆ: "ತಾನೊಬ್ಬನೇ ಅಮರತ್ವವುಳ್ಳವನೂ ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ. ಮನುಷ್ಯರಲ್ಲಿ ಯಾರೂ ಆತನನ್ನು ಕಾಣಲಿಲ್ಲ, ಯಾರೂ ಕಾಣಲಾರರು; ಆತನಿಗೆ ಮಾನವೂ ನಿತ್ಯಾಧಿಪತ್ಯವೂ ಇರಲಿ! ಆಮೆನ್!" (೧ತಿಮೊಥೆ-೬:೧೬).

ಈದಿನ ನಾವು ಪ್ರವಾದಿಗಳ ವಾಕ್ಯಗಳಲ್ಲಿರುವ ನಮ್ಮ ಮೂರನೆಯ ಪಾಠವನ್ನು ಪ್ರಾರಂಭಿಸುತ್ತೇವೆ. ದೂತರುಗಳು ಮತ್ತು ಸೈತಾನನ ಕುರಿತಾಗಿ ದೇವರ ವಾಕ್ಯಗಳು ಏನು ಕಲಿಸುತ್ತವೆಯೋ ಅದನ್ನು ಆಲೋಚಿಸುವದಕ್ಕೆ ನಾವು ಉದ್ದೇಶಿಸಿದ್ದೇವೆ. ದೂತರುಗಳು ಎಲ್ಲಿಂದ ಬಂದರೆಂದು ನಿಮಗೆ ತಿಳಿದಿದೆಯೋ? ಅಥವಾ ಸೈತಾನನು ಮತ್ತು ದುರಾತ್ಮಗಳು ಎಲ್ಲಿಂದ ಬಂದವೆಂದು ನಿಮಗೆ ಗೊತ್ತಾ? ದೇವರು ನಮಗೆ ಇದನ್ನು ತಿಳಿಸದಿದ್ದರೆ ಇಂತಹ ಸಂಗತಿಗಳನ್ನು ನಾವು ತಿಳಿದುಕೊಳ್ಳುವದಕ್ಕಾಗುವದಿಲ್ಲ. ಆದರೆ ದೇವರು ತನ್ನ ವಾಕ್ಯದಲ್ಲಿ ಅವುಗಳ ಕುರಿತಾಗಿ ನಮಗೆ ತಿಳಿಸಿಕೊಟ್ಟಿದ್ದಾನೆ. ಆದುದರಿಮದ ಪರಿಶುದ್ಧ ವಾಕ್ಯಗಳನ್ನು ಜಾಗರೂಕತೆಯಿಂದ ಪರೀಕ್ಷಿಸೋಣ, ಅದರಿಂದ ದೂತರುಗಳು ಮತ್ತು ಸೈತಾನನಿಗೆ ಸಂಬಂಧಪಟ್ಟ ಸತ್ಯಗಳನ್ನು ನಾವು ತಿಳಿದುಕೊಳ್ಳಬಹುದು.

ನಾವು ನಿಮಗೆ ಜ್ಞಾಪಿಸುವದೇನೆಂದರೆ, ನೀತಿವಂತಿಕೆಯ ಮಾರ್ಗ ಎಂಬ ಕಾರ್ಯಕ್ರಮದಲ್ಲಿ, ಆರಂಭದಿಂದ ಅಂತ್ಯದವರೆಗಿರುವ ಪ್ರವಾದಿಗಳ ಬರವಣಿಗೆಗಳ ಕಾಲಾನುಸಾರವಾದ ಅಭ್ಯಾಸವನ್ನು ನಾವು ಮಾಡಿದ್ದೇವೆ. ಅದಕ್ಕೋಸ್ಕರವೇ, ಹಿಂದಿನ ಪ್ರಸಾರದಲ್ಲಿ, ದೇವರು ಆರಂಭದಲ್ಲಿ ಅಸ್ತಿತ್ವದಲ್ಲಿದ್ದವನಾದ್ದರಿಂದ ಆತನನ್ನೆ ಕುರಿತು ನಾವು ಅಭ್ಯಾಸ ಮಾಡಿದೆವು. ದೇವರ ಚಿತ್ತವಾದರೆ ಮುಂದಿನ ಪಾಠದಲ್ಲಿ, ಲೋಕವನ್ನು ಮತ್ತು ಅದರಲ್ಲಿರುವದೆಲ್ಲವನ್ನು ದೇವರು ಹೇಗೆ ಉಂಟುಮಾಡಿದನೆಂಬ ಕತೆಯನ್ನು ನಾವು ತಿಳಿಸುತ್ತೇವೆ. ಹೇಗೂ, ದೇವರು ಜನರನ್ನು ಮತ್ತು ನಾವು ಜೀವಿಸುತ್ತಿರುವ ಈ ಲೋಕವನ್ನು ಸೃಷ್ಟಿಸುವದಕ್ಕಿಂತ ಮುಂಚೆ, ಯಾವುದೋ ಒಂದನ್ನು ಮೊದಲನೆಯದಾಗಿ ಸೃಷ್ಟಿಸಿದ್ದನು: ಅದೇ ದೂತರುಗಳು.

ದೂತರುಗಳ ಕುರಿತಾಗಿ ದೇವರ ವಾಕ್ಯವು ನಮಗೆ ಹೆಚ್ಚಾಗಿ ತಿಳಿಸುತ್ತದೆ. ಸೃಷ್ಟಿಸಲ್ಪಟ್ಟ ಈ ಜೀವಿಗಳಿಗೆ ಸಂಬಂಧಪಟ್ಟ ಹೆಚ್ಚು ಪ್ರಾಮುಖ್ಯವಾದ ಸತ್ಯವನ್ನು ಸಂಕ್ಷಿಪ್ತಗೊಳಿಸುವದಕ್ಕೆ ಈದನ ನಾವು ಪ್ರಯತ್ನಿಸುತ್ತೇವೆ. ದೇವರ ವಾಕ್ಯ ನಮಗೆ ಹೇಳುವದೇನೆಂದರೆ, ಬಹಳ ಬಹಳ ಹಿಂದೆ ಆತ್ಮ ಸ್ವರೂಪನಾದ ದೇವರು, ದೂತರುಗಳು ಎಂದು ಕರೆಯಲ್ಪಟ್ಟ ಅನೇಕ ಇತರ ಆತ್ಮಗಳನ್ನು ಸೃಷ್ಟಿಸಿದನು. ದೇವರ ವಾಕ್ಯ ಹೀಗೆ ಹೇಳುತ್ತದೆ: "ಎಲ್ಲಾ ದೂತರುಗಳು ಆತ್ಮಗಳೇ"(ಇಬ್ರಿಯ-೧:೧೪). "ದೇವರು ತನ್ನ ದೂತರುಗಳನ್ನು ಗಾಳಿಗಳನ್ನಾಗಿಯೂ ತನ್ನ ಸೇವಕರನ್ನು ಅಗ್ನಿಜ್ವಾಲೆಯನ್ನಾಗಿಯೂ ಮಾಡುತ್ತಾನೆ"(ಇಬ್ರಿಯ-೧:೭). ಹಾಗಾಗಿ, ದೂತರುಗಳು ದೇವರ ಹಾಗೆ ಆತ್ಮಗಳು ಎಂದು ವಾಕ್ಯಗಳು ನಮಗೆ ಕಲಿಸುತ್ತವೆ. ಅವರ ರೀತಿಯು ಗಾಳಿ ಮತ್ತು ಬೆಂಕಿಗೆ ಹೋಲಿಸಲ್ಪಟ್ಟಿದೆ. ನಾವು ಗಾಳಿಯನ್ನು ನೋಡುವದಕ್ಕಾಗುವದಿಲ್ಲ. ಯಾರೊಬ್ಬರು ಬೆಂಕಿಯನ್ನು ಮುಟ್ಟುವದಿಲ್ಲ. ಅದರಂತೆಯೇ ದೇವದೂತರುಗಳೊಂದಿಗೆ ಇದು ಸಂಬಂಧಿಸಿದೆ. ನಾವು ಹೊಂದಿರುವ ಹಾಗೆ ದೇವರು ಶರೀರಗಳೊಂದಿಗೆ ಅವರನ್ನು ಉಂಟು ಮಾಡಿಲ್ಲ. ಮಾನವರಾದ ನಾವು ಶರೀರದಿಂದಲೂ ಮತ್ತು ಆತ್ಮದಿಂದಲೂ ಉಂಟು ಮಾಡಲ್ಪಟ್ಟಿದ್ದೇವೆ. ಹೇಗೂ, ದೂತರುಗಳು ಆತ್ಮಗಳಾಗಿ ಮಾತ್ರ ಇದ್ದಾರೆ. ಅದಕ್ಕಾಗಿಯೇ ನಾವು ಅವರನ್ನು ನೋಡುವದಕ್ಕಾಗುವದಿಲ್ಲ. ದೇವರು ಎಷ್ಟು ಜನ ದೂತರನ್ನು ಸೃಷ್ಟಿಸಿದನು? ಇದರ ಕುರಿತಾಗಿ ವಾಕ್ಯಗಳು ಏನು ಹೇಳುತ್ತವೆ? ಯಾರೊಬ್ಬರು ಎಣಿಸಲಿಕ್ಕಾಗದಷ್ಟು ಹೆಚ್ಚಾದ ಅನೇಕ ಅನೇಕ ಆತ್ಮಗಳನ್ನು ದೇವರು ಸೃಷ್ಟಿಸಿದನೆಂದು ಇದು ಹೇಳುತ್ತದೆ. ಉನ್ನತದ ಮೇಲೆ ದೇವರ ಪ್ರಸನ್ನತೆಯಲ್ಲಿ "ಬಹು ಮಂದಿ ದೂತರುಗಳಿದ್ದರು ಅವರ ಸಂಖ್ಯೆಯು ಕೋಟ್ಯಾನುಕೋಟಿಯಾಗಿಯೂ ಲಕ್ಷೋಪಲಕ್ಷವಾಗಿಯೂ ಇತ್ತು" (ಪ್ರಕ-೫:೧೧). ದೇವರಾದ ನಮ್ಮ ಕರ್ತನು ದೊಡ್ಡವನು! ಮಿತಿಯಿಲ್ಲದ ದೇವರು ತನಗಾಗಿ ಸಾವಿರಾರು ಸಾವಿರಾರು ಸುಂದರವಾದ ಒಳ್ಳೆಯ ಮತ್ತು ಬುದ್ಧಿವಂತ ದೂತರುಗಳನ್ನು ಸೃಷ್ಟಿಸಿದನು. ದೇವರ ದೂತರುಗಳು ಉನ್ನತವಾದ ಶಕ್ತಿಯನ್ನು

ಹೊಂದಿದ್ದರೆಂದು ವಾಕ್ಯಗಳು ನಮಗೆ ಹೇಳುತ್ತವೆ. ನಮಗಿಂತಲೂ ಅವರು ಹೆಚ್ಚು ಬಲಶಾಲಿಗಳು. ಆದಾಗ್ಯೂ ಎಲ್ಲಾ ಜೀವಿಗಳ ಹಾಗೆ ಅವರು ತಮ್ಮದೇ ಆದ ಮಿತಿಗಳನ್ನು ಹೊಂದಿದವರಾಗಿದ್ದರು. ಅವರು ಸರ್ವ ಬಲಶಾಲಿಗಳಾಗಿರಲಿಲ್ಲ. ಅವರು ಎಲ್ಲಾ ಕಡೆಗಳಲ್ಲಿಯೂ ಇರುತ್ತಿರಲಿಲ್ಲ ಮತ್ತು ಪ್ರತಿಯೊಂದನ್ನು ತಿಳಿದವರಾಗಿರಲಿಲ್ಲ. ಅವರು ಕೇವಲ ಸೃಷ್ಟಿಗಳಷ್ಟೇ. ಕೇವಲ ಒಬ್ಬನು ಮಾತ್ರ ಮಿತಿಯಿಲ್ಲದವನು. ಆ ಒಬ್ಬನು ದೇವರಾ–ಗಿದ್ದಾನೆ.

ದೂತರುಗಳ ಕುರಿತಾಗಿ ನಾವು ಇನ್ನೂ ಸ್ವಲ್ಪ ಅರ್ಥಮಾಡಿಕೊಳ್ಳಬೇಕಾಗಿರುವದೇನೆಂದರೆ, ದೇವರು ದೂತರುಗಳನ್ನು ಸೃಷ್ಟಿಸಿದಾಗ ಅವರೆಲ್ಲರೂ ಪರಿಶುದ್ಧ ಜೀವಿಗಳಾಗಿದ್ದರು. ಪ್ರಾರಂಭದಲ್ಲಿ ಇಟ್ಟ ದೂತರುಗಳಿರಲಿಲ್ಲ. ಆದಿಯಲ್ಲಿ ಪಿಶಾಚನು {ಖುರಾನ್/ಅರೆಬಿಕ್: ಇಬ್‌ಲಿಸ್} ಇನ್ನೂ ಅಸ್ತಿತ್ವದಲ್ಲಿರಲಿಲ್ಲ. ಅಲ್ಲಿ ದುಷ್ಟ ಆತ್ಮಗಳಿರಲಿಲ್ಲ. ದೇವರು ಯಾವ ಕೆಟ್ಟ ಆತ್ಮಗಳನ್ನು ಸೃಷ್ಟಿಸಲಿಲ್ಲ. ಈ ಸತ್ಯವನ್ನು ನಾವು ನಮ್ಮ ಮನಸ್ಸುಗಳಲ್ಲಿ ಹಿಡಿದಿಟ್ಟುಕೊಂಡಿರಬೇಕು. ದೇವರು ಒಂದು ಸಂಗತಿಯನ್ನು ಹೊರತುಪಡಿಸಿ ಏನನ್ನಾದರೂ ಮಾಡುತ್ತಾನೆ. ಅದೇನೆಂದರೆ ಯಾವುದು ಕೆಟ್ಟದ್ದೋ ಅದನ್ನು ದೇವರು ಮಾಡುವದಿಲ್ಲ. ಇದನ್ನು ನಾವು ಮರೆಯಬಾರದು. ದೇವರು ಒಳ್ಳೆಯವನಾಗಿರುವದರಿಂದ ಕೆಟ್ಟದ್ದನ್ನು ಅವನು ಸೃಷ್ಟಿಸಲಿಲ್ಲ. ದೇವರು ಸಂಪೂರ್ಣನಾಗಿರುವದರಿಂದ ಆತನು ತಪ್ಪುಗಳನ್ನು ಮಾಡುವದಿಲ್ಲ. ಆತನು ಪವಿತ್ರನೂ ಮತ್ತು ನಿಷ್ಕಳಂಕನೂ ಆಗಿರುವದರಿಂದ ಪಾಪವು ಅವನ ಮುಂದಾಗಿ ಬರಲಿಲ್ಲ. ದೇವರು ಆಲೋಚಿಸಿದ, ಹೇಳಿದ ಮತ್ತು ಮಾಡಿದ ಪ್ರತಿಯೊಂದು ಉತ್ತಮವಾದುದು ಮತ್ತು ಸಂಪೂರ್ಣವಾದದ್ದು ಆಗಿದೆ. ಅದಕ್ಕೋಸ್ಕರವೇ ವಾಕ್ಯಗಳು ಹೀಗೆ ಹೇಳುತ್ತವೆ: "ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ"(ಯಾಕೋಬ–೧:೧೩) . ಸರಿ ಹಾಗಾದರೆ, ಕೆಟ್ಟತನವು ಎಲ್ಲಿಂದ ಬಂದಿತು? ಬಹಳ ಬೇಗ ದೇವರ ಉತ್ತರವನ್ನು ನಾವು ಕಾಣುತ್ತೇವೆ. ಮೊದಲು, ಹೇಗೂ, ದೂತರುಗಳ ಕುರಿತಾಗಿ ಇನ್ನೂ ಸ್ವಲ್ಪ ನಾವು ತಿಳಿದುಕೊಳ್ಳುವದಿದೆ.

ದೇವರು ದೂತರುಗಳನ್ನು ಯಾಕೆ ಸೃಷ್ಟಿಸಿದನು? ಪರಲೋಕದ ಸಂತೋಷದಲ್ಲಿ ಎಂದೆಂದಿಗೂ ದೇವರೊಂದಿಗಿದ್ದುಕೊಂಡು ಆತನನ್ನು ಪ್ರೀತಿಸುವದಕ್ಕೆ ಆತನನ್ನು ಸ್ತುತಿಸುವದಕ್ಕೆ ಮತ್ತು ಆತನ ಸೇವೆ ಮಾಡುವವರಾಗಿರಬೇಕೆಂದು ದೇವರು ಅವರನ್ನು ಸೃಷ್ಟಿಸಿದನೆಂದು ವಾಕ್ಯಗಳು ನಮಗೆ ತಿಳಿಸುತ್ತವೆ. ದೇವರು ಅವರೆಲ್ಲರನ್ನೂ ಸ್ವಂತ ಮಾಡಿಕೊಂಡಿದ್ದನು, ಯಾಕೆಂದರೆ ಆತನು ಅವರನ್ನು ಸೃಷ್ಟಿಸಿದ್ದನು. ಸೂರ್ಯ ಚಂದ್ರ ನಕ್ಷತ್ರಗಳ ಆಚೆಗೆ ದೂರದಲ್ಲಿರುವ ಪರಲೋಕದಲ್ಲಿ ಉನ್ನತದಲ್ಲಿರುವ ದೇವರ "ಮನೆಯಲ್ಲಿ" ಅವರೆಲ್ಲರೂ ವಾಸಿಸುತ್ತಿದ್ದರು. ದೇವರು ವಾಸಿಸುತ್ತಿರುವ ಒಂದು ವಿಶೇಷವಾದ ಸ್ಥಳವಿದೆ ಎಂಬುದು ನಿಮಗೆ ಗೊತ್ತೋ? ನಿಜ, ನಮ್ಮ ಹಿಂದಿನ ಪಾಠದಲ್ಲಿ ದೇವರು ಎಲ್ಲಾ ಕಡೆಯಲ್ಲಿಯೂ ಇದ್ದಾನೆಂದು ಕಲಿತಿದ್ದೇವೆ. ಹೇಗೂ, ಪರಿಶುದ್ಧವಾದ, ಬೆಳಕಿನಿಂದ ತುಂಬಿರುವ ಮತ್ತು ಸುಂದರವಾದ ದೇವರು ಜೀವಿಸುತ್ತಿರುವ ಮತ್ತು ತನ್ನ ಎಲ್ಲಾ ಮಹಿಮೆಯನ್ನು ತೋರ್ಪಡಿಸುತ್ತಿರುವ ಪ್ರಪಂಚದಲ್ಲಿರುವ ಒಂದು ಅದ್ಭುತವಾದ ಸ್ಥಳದ ಕುರಿತಾಗಿ ವಾಕ್ಯಗಳು ಸಹ ನಮಗೆ ಕಲಿಸುತ್ತವೆ. ದೇವರ ಪ್ರಸನ್ನತೆ ಅಥವಾ ಪರಲೋಕ ಅಥವಾ ಪರದೈಸು ಎಂಬುದಾಗಿ ದೇವರ ಪ್ರವಾದಿಗಳು ಕರೆದಿರುವ ಸ್ಥಳ ಇದಾಗಿದೆ. ಇಲ್ಲಿಯೇ ದೇವರು ತನ್ನ ಪರಿಶುದ್ಧ ದೂತರುಗಳೊಂದಿಗೆ ವಾಸಿಸುತ್ತಿದ್ದಾನೆ.

ಇದರ ಜೊತೆಗೆ ದೂತರುಗಳ ಕುರಿತಾಗಿ ನಾವು ಇನ್ನೂ ಸ್ವಲ್ಪ ತಿಳಿದುಕೊಳ್ಳುವ ಅಗತ್ಯವಿದೆ. ಅದೇನೆಂದರೆ: ದೂತರುಗಳು ಎಲ್ಲರೂ ಒಂದೇ ರೀತಿ ಇರಲಿಲ್ಲ. ಕೆಲವು ದೂತರುಗಳು ಇತರರಿಗಿಂತ ಹೆಚ್ಚು ಸುಂದರರೂ ಮತ್ತು ಹೆಚ್ಚು ಬುದ್ಧಿವಂತರೂ ಆಗಿದ್ದರು. ಕೆಲವು ದೂತರು ಪರಲೋಕದಲ್ಲಿ ದೇವರ ಸಿಂಹಾಸನವನ್ನು ಸುತ್ತುವರಿದಿದ್ದರು. ಇತರರು ಜನರಿಗೆ ಸಹಾಯ ಮಾಡುತ್ತಾ ಅವರನ್ನು ರಕ್ಷಿಸುತ್ತಿದ್ದರು. ಗಬ್ರಿಯೇಲ್ ಮತ್ತು ಮಿಕಾಯೇಲರಂತಹ ಇತರ ದೂತರುಗಳು ದೇವರ ಪ್ರಸನ್ನತೆಯಲ್ಲಿ ನಿಂತಿರುತ್ತಿದ್ದು, ಭೂಮಿಯ ಮೇಲಿನ ವಿಶೇಷವಾದ ಕೆಲಸಗಳನ್ನು ನೆರವೇರಿಸುವದಕ್ಕೆ ಕಳುಹಿಸಲ್ಪಡುತ್ತಿದ್ದರು.

ಕೆಲವು ದೂತರುಗಳು ಇತರರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಲೂಸಿಫರ್ ಎಂಬ ಹೆಸರನ್ನು ನೀವು ಎಂದಾದರೂ ಕೇಳಿದ್ದೀರೋ? ಒಂದು ಕಾಲದಲ್ಲಿ ಲೂಸಿಫರ್ ಎಲ್ಲಾ ದೂತರುಗಳ ಮುಖ್ಯಸ್ಥನಾಗಿದ್ದನೆಂದು ದೇವರ ವಾಕ್ಯ ನಮಗೆ ಹೇಳುತ್ತದೆ. ಲೂಸಿಫರನ ಕತೆಯನ್ನು ನೀವು ತಿಳಿದುಕೊಳ್ಳಬೇಕಾದರೆ, ಸೈತಾನನು ತಾನೇ ಎಲ್ಲಿಂದ ಬಂದವನೆಂಬುದನ್ನು ನೀವು ತಿಳಿಯಲೇಬೇಕು.

ದೇವರು ಮೊದಲು ದೂತರುಗಳನ್ನು ಸೃಷ್ಟಿಮಾಡಿದಾಗ ಲೂಸಿಫರನು ಅತೀ ಸುಂದರನೂ, ಅತೀ ಶಕ್ತಿಶಾಲಿಯೂ ಮತ್ತು ಅವರೆಲ್ಲರಿಗಿಂತಲೂ ಬುದ್ಧಿವಂತನೂ ಆಗಿದ್ದನು. ಲೂಸಿಫರ್ ಎಂದರೆ ಹೊಳೆಯುವವನು ಎಂದರ್ಥ. ಲೂಸಿಫರನು ತಿಳುವಳಿಕೆ ಮತ್ತು ಜ್ಞಾನದಲ್ಲಿ ಹಾಗೂ ಬಲ ಮತ್ತು ಅಧಿಕಾರದಲ್ಲಿ ಇತರ ಎಲ್ಲಾ ದೂತರುಗಳಿಗಿಂತ ಶ್ರೇಷ್ಠನಾಗಿದ್ದನು. ದೇವರು ಅವನಿಗೆ ಅಳತೆಗೆ ಮೀರಿ ಸೌಂದರ್ಯವನ್ನೂ ಮತ್ತು ಬುದ್ಧಿವಂತಿಕೆಯನ್ನು ಕೊಟ್ಟಿದ್ದನು. ದೇವರು ಅವನನ್ನು ಸೃಷ್ಟಿಸಿ ಉನ್ನತವಾಗಿ ಆಶೀರ್ವದಿಸಿದ್ದರಿಂದ ಲೂಸಿಫರನು ದೇವರನ್ನು ಆರಾಧಿಸಿ ಆತನನ್ನು ಪ್ರೀತಿಸಿ ಎಂದೆಂದಿಗೂ ಆತನಿಗೆ ವಿಧೇಯನಾಗಿರಬೇಕಾಗಿತ್ತು. ಹೇಗೂ, ಲೂಸಿಫರನು ದೇವರಿಗೆ ತಿರಸ್ಕಾರವನ್ನು ತೋರಿಸಿದನು ಮತ್ತು ಅವನ ಹೃದಯವು ಗರ್ವದಿಂದ ತುಂಬಿತ್ತೆಂಬುದಾಗಿ ಪ್ರವಾದಿಗಳ ಬರವಣಿಗೆಗಳಲ್ಲಿ ನಾವು ಓದುತ್ತೇವೆ. ಲೂಸಿಫರನು ತನ್ನ ಹೃದಯದಲ್ಲಿ ಹೀಗೆ ಅಂದುಕೊಂಡನು: "ನಾನು ಆಕಾಶಕ್ಕೆ ಹತ್ತಿ ಉತ್ತರದಿಕ್ಕಿನ ಕಟ್ಟಕಡೆಯಿರುವ ಸುರಗಣ ಪರ್ವತದಲ್ಲಿ ನನ್ನ ಸಿಂಹಾಸನವನ್ನು ದೇವರ ನಕ್ಷತ್ರಗಳಿಗಿಂತ ಮೇಲೆ ಏರಿಸಿ ಆಸೀನನಾಗುವೆನು; ಉನ್ನತ ಮೇಘಮಂಡಲದ ಮೇಲೆ ಏರಿ ಉನ್ನತೋನ್ನತನಿಗೆ ಸರಿಸಮಾನನಾಗುವೆನು ಅಂದುಕೊಂಡನು" (ಯೆಶಾಯ–೧೪:೧೩,೧೪).

ನಂಬಿಕೆಗೆ ಮೀರಿದ್ದು! ದೇವರು ಅವನಿಗೆ ಕೊಟ್ಟಿದ್ದರ ಹೊರತಾಗಿ ಬೇರೇನೂ ಇಲ್ಲದಿದ್ದ ಲೂಸಿಫರನು ಉನ್ನತನಾದ ದೇವರ ಮಹಿಮೆಯನ್ನು ಕದ್ದುಕೊಳ್ಳುವದಕ್ಕೆ ಬಯಸಿದ! ಲೂಸಿಫರನು ದೇವರ ವಿರುದ್ಧವಾಗಿ ದಂಗೆಯೆದ್ದದ್ದು ಮಾತ್ರವಲ್ಲದೆ, ದೂತರುಗಳಲ್ಲಿ ಮೂರನೆ ಒಂದು ಭಾಗದವರು ಪರಲೋಕದಲ್ಲಿ ಕರ್ತನಾದ ದೇವರಿಗೆ ತಮ್ಮ ಬೆನ್ನು ತಿರುಗಿಸುವದನ್ನು ಆರಿಸಿಕೊಂಡು ಲೂಸಿಫರನ ಪಾಪವನ್ನು ಅನುಸರಿಸಿದರು (ಪ್ರಕ–೨:೪ ನ್ನು ನೋಡಿರಿ).

ಹೇಗಾದರೂ ದೇವರು ದೇವರೇ ಆಗಿದ್ದಾನೆ, ಲೂಸಿಫರನು ಮತ್ತು ಅವನ ದೂತರು ಮಾಡುವದಕ್ಕೆ ಉದ್ದೇಶಿಸಿದ ಪ್ರತಿಯೊಂದನ್ನು ದೇವರು ತಿಳಿದಿದ್ದನು. ದೇವರ ಎದುರು ಯಾರೊಬ್ಬರು ರಹಸ್ಯವಾಗಿ ಏನೊಂದನ್ನು ಮಾಡುವದಕ್ಕಾಗುವದಿಲ್ಲ ಯಾಕೆಂದರೆ ಸಂಭವಿಸುವದಕ್ಕಿಂತ ಮುಂಚಿತವಾಗಿಯೇ ದೇವರು ಪ್ರತಿಯೊಂದನ್ನು ಬಲ್ಲವನಾಗಿರುತ್ತಾನೆ! ಎಂಬುದಾಗಿ ನಮ್ಮ ಹಿಂದಿನ ಅಭ್ಯಾಸದಲ್ಲಿ ಈಗಾಗಲೇ ನಾವು ಕಲಿತಿರುವವ ಹಾಗೆ, ಲೂಸಿಫರನ ಮತ್ತು ಅವನನ್ನು ಹಿಂಬಾಲಿಸುತ್ತಿದ್ದ ದೂತರುಗಳ ಹೃದಯಗಳಲ್ಲಿದ್ದಂತಹ ಪಾಪವನ್ನು ದೇವರು ನೋಡಿದ್ದನು.

ಹಾಗಾಗಿ ಏನು ಸಂಭವಿಸಿತು? ದೇವರು ಏನು ಮಾಡಿದನು? ತನ್ನ ವಿರುದ್ಧವಾಗಿ ದಂಗೆಯೆದ್ದ ಲೂಸಿಫರನನ್ನು ಅವನ ಸ್ಥಾನದಿಂದ ತೆಗೆದು – ಹಾಕುವದಕ್ಕೆ ದೇವರು ಅಪ್ಪಣೆಕೊಟ್ಟನೋ? ದೇವರು ಪಾಪವನ್ನು ಕ್ಷಮಿಸುತ್ತಾನೋ? ದಂಗೆಯೇಳುವದು ಮತ್ತು ಗರ್ವದ ಪಾಪದೊಂದಿಗೆ ದೇವರು ಒಟ್ಟಿಗೆ ಇರುವವನಾಗಿದ್ದಾನೋ? ಎಂದಿಗೂ ಇಲ್ಲ! ನಮ್ಮ ದೇವರು ಪರಿಶುದ್ಧನಾಗಿದ್ದು ಕೆಟ್ಟದ್ದನ್ನು ನೋಡದ ದೇವರಾಗಿದ್ದಾನೆಂದು ಪ್ರವಾದಿಗಳ ಬರವಣಿಗೆಗಳು ನಮಗೆ ಕಲಿಸುತ್ತವೆ. ದೇವರು ಪಾಪವನ್ನು ಸಹಿಸುವವನಲ್ಲ. ಆತನು ತನ್ನ ಮಹಿಮೆಯನ್ನು ಇತರರಿಗೆ ಬಿಟ್ಟುಕೊಡು – ವವನಲ್ಲ. ದೇವರು ಅದ್ವಿತೀಯನಾಗಿದ್ದಾನೆ; ಯಾರೂ ಆತನ ಬದಲಿಗೆ ಯಾರೂ ಬರುವದಕ್ಕಾಗುವದಿಲ್ಲ! ಹಾಗಾಗಿ, ದೇವರು ಲೂಸಿಫರನನ್ನು ಅವನ ದೂತರುಗಳನ್ನು ತನ್ನ ಪರಿಶುದ್ಧ ಸ್ಥಳದಿಂದ ಹೊರಕ್ಕೆ ತಳ್ಳಿಬಿಟ್ಟನು ಎಂಬುದಾಗಿ ವಾಕ್ಯಗಳು ತಿಳಿಸುತ್ತವೆ. ಲೂಸಿಫರನು ಮತ್ತು ಅವನ ಹಿಂಬಾಲಕರು ದೇವರ ಸ್ಥಾನಕ್ಕೆ ಬರುವದಕ್ಕೆ ಬಯಸಿದ್ದರಿಂದ, ದೇವರ ಮನೆಯಲ್ಲಿ ಮತ್ತು ದೇವರ ಪ್ರಸನ್ನತೆಯಲ್ಲಿ ದೀರ್ಘಕಾಲ ಜೀವಿಸುವದಕ್ಕೆ ಸಾಧ್ಯವಾಗಲಿಲ್ಲ. ಅದಕ್ಕೋಸ್ಕರ ದೇವರು ಲೂಸಿಫರನನ್ನೂ ಮತ್ತು ಅವನ ದುಷ್ಟ ದೂತರುಗಳನ್ನು ಹೊರಗೆ ತಳ್ಳಿಬಿಟ್ಟನು. ಪರಿಶುದ್ಧನಾದ ದೇವರು, ತನ್ನ ವಿರುದ್ಧವಾಗಿ ಎದುರುಬೀಳುವ ಪ್ರತಿಯೊಬ್ಬರಿಗೆ ತೀರ್ಪು ನೀಡಿ ಶಿಕ್ಷಿಸುತ್ತಾನೆ.

ಲೂಸಿಫರನು ಪಾಪಮಾಡಿದ ನಂತರ, ಅವನ ಹೆಸರು ಬದಲಾಯಿತು. ಮುಂದೆ ಹೊಳೆಯುವಂತವನು ಎಂಬ ಅರ್ಥವಿರುವ ಲೂಸಿಫರ್ ಎಂದು ಕರೆಯಲ್ಪಡದೆ ಸೈತಾನನೆಂಬುದಾಗಿ ಕರೆಯಲ್ಪಟ್ಟನು. ಸೈತಾನನೆಂದರೆ ವಿರೋಧಿ ಅಥವಾ ವೈರಿ ಎಂದರ್ಥ. ಲೂಸಿಫರನು ದೇವರ ವಿರೋಧಿಯಾದನು. ಮತ್ತು ನೀವು ತಿಳಿದಿರುವ ಹಾಗೆ, ದೇವರನ್ನು ಮತ್ತು ಒಳ್ಳೆಯದಾಗಿರುವ ಪ್ರತಿಯೊಂದನ್ನು ಸೈತಾನನು ಮತ್ತು ಅವನ ದೂತರುಗಳು ಈಗಲೂ ತಿರಸ್ಕರಿಸುತ್ತಾರೆ. ಅವರು ದೇವರ ವಾಕ್ಯವನ್ನು ತಿರಸ್ಕರಿಸಿ ಅದನ್ನು ಅಲ್ಲಗಳೆಯುತ್ತಾರೆ. ಸೈತಾನನು ದೇವರ ವಿರುದ್ಧವಾಗಿ ಹೋರಾಡಿ ಆತನ ಯೋಜನೆಗಳನ್ನು ಅಡ್ಡಪಡಿಸಿ ಹಾಳುಮಾಡುವದಕ್ಕೆ ಪ್ರಯತ್ನಿಸುತ್ತಾನೆ. ಹೇಗೂ, ದೇವರು ದೊಡ್ಡ ನ್ಯಾಯಾಧಿಪತಿಯಾಗಿದ್ದು, ಅತನ ವಿರುದ್ಧವಾಗಿ ಗೆಲ್ಲುವದಕ್ಕೆ ಯಾರಿಂದಲೂ ಆಗುವದಿಲ್ಲ! "ಒಂದು ಮೊಟ್ಟೆಯು ಬಂಡೆಯೊಂದಿಗೆ ಹೋರಾಡುವದಕ್ಕಾಗುವದಿಲ್ಲ!" {ಊಲೂಫ್ ಜ್ಞಾನೋಕ್ತಿ}.

ದೇವರು ಸೈತಾನನ್ನೂ ಮತ್ತು ಅವನ ದೂತರುಗಳನ್ನು ತಳ್ಳಿಬಿಟ್ಟ ನಂತರ ಎಂದಿಗೂ ಆರಿಹೋಗದಂತಹ ನರಕದ ಬೆಂಕಿಗಳನ್ನು ಆತನು ಅವರಿಗಾಗಿ ಉಂಟುಮಾಡಿದನೆಂಬುದಾಗಿ ಪರಿಶುದ್ಧ ವಾಕ್ಯಗಳು ನಮಗೆ ತಿಳಿಸುತ್ತವೆ. ಸೈತಾನ ಅವನ ದೂತರುಗಳು ಮತ್ತು ಅವರುಗಳನ್ನು ಹಿಂಬಾಲಿಸುವ ಪ್ರತಿಯೊಬ್ಬರನ್ನೂ ದೇವರು ಆ ಬೆಂಕಿಯೊಳಗೆ ತಳ್ಳುವಂತಹ ದಿನವು ಬರುತ್ತದೆ. ಹಾಗಾಗಿ, ವಾಕ್ಯದಲ್ಲಿ ಹೀಗೆ ಬರೆದದೆ; "ಅವರು ಹಗಲಿರುಳು ಯುಗಯುಗಾಂತರಗಳಲ್ಲಿಯೂ ಯಾತನೆಪಡುತ್ತಿರುವರು"(ಪ್ರಕ–೨೦:೧೦).

ಹೇಗೂ ವಾಕ್ಯ ನಮಗೆ ಹೇಳುವದೇನೆಂದರೆ, ಸೈತಾನನು ಇನ್ನೂ ನರಕರದ ಬೆಂಕಿಯಲ್ಲಿಲ್ಲ. ಅವನು ಲೋಕದಲ್ಲಿದ್ದು ದೇವರ ವಿರುದ್ಧವಾಗಿ ಹೋರಾಡುತ್ತಿದ್ದಾನೆ. ಅವನು ನಾಶಗೊಳಿಸುವವನಾಗಿದ್ದಾನೆ. ದೇವರ ಕೆಲಸಗಳನ್ನು ಹಾಲುಮಾಡುವದಕ್ಕೆ ಅವನು ಬಯಸುತ್ತಾನೆ. ದೇವರು ಸೃಷ್ಟಿಸಿರುವ ಮನುಷ್ಯನು ನಾಶವಾಗಿ ತನ್ನೊಂದಿಗೆ ನರಕಕ್ಕೆ ಹೋಗಬೇಕೆಂದು ಅವನು ಬಯಸುತ್ತಾನೆ. ಸೈತಾನನು ಮೋಸಗಾರನಾಗಿರುವದರಿಂದ ಹೆಚ್ಚಾದ ಜನರು ಸೈತಾನನ ನಿಯಂತ್ರಣದಲ್ಲಿದ್ದಾರೆ, ಆದರೆ ಇದು ಅವರಿಗೆ ಗೊತ್ತಿಲ್ಲ ಎಂಬುದಾಗಿ ದೇವರ ವಾಕ್ಯ ನಮಗೆ ತಿಳಿಸುತ್ತದೆ. ಹಾಗಾಗಿ ವಾಕ್ಯ ಹೀಗೆ ಹೇಳುತ್ತದೆ; "ಸೈತಾನನು ತಾನೇ ಪ್ರಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕುತ್ತಾನೆ"(೨ಕೊರಿಂಥ–೧೧:೧೪). ಅವನು ಜನರನ್ನು ಮೋಸಗೊಳಿಸುವದಕ್ಕೆ ಪ್ರಯತ್ನಿಸುತ್ತಾನೆ ಆದ್ದರಿಂದ ಅವರು ದೇವರ ವಾಕ್ಯಕ್ಕೆ ಗಮನಕೊಡುವದಿಲ್ಲ. ಅದಕ್ಕೋಸ್ಕರವೇ ದೇವರ ಒಬ್ಬ ಪ್ರವಾದಿಯು ಹೀಗೆ ಬರೆಯುತ್ತಾರೆ, "ಎಚ್ಚರವಾಗಿರಿ, ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಾನೆ"(೧ಪೇತ್ರ–೫:೮). ಎಚ್ಚರ! ಎಂದೆಂದಿಗೂ ನಿಮ್ಮನ್ನು ನಾಶಗೊಳಿಸುವದಕ್ಕೆ ದುರಾತ್ಮನು ಬಯಸುತ್ತಾನೆ!

ಆದರೆ ದೇವರಿಗೆ ಸ್ತೋತ್ರವಾಗಲಿ! ಆತನು ನಮಗೆ ತನ್ನ ವಾಕ್ಯವನ್ನು ಕೊಟ್ಟಿದ್ದಾನೆ ಹಾಗಾಗಿ ನಾವು ಸೈತಾನನ ಬಲದಿಂದ ತಪ್ಪಿಸಿಕೊಂಡಿದ್ದೇವೆ. ವಾಕ್ಯ ಹೀಗೆ ಹೇಳುತ್ತದೆ: "ನೀವು ಸತ್ಯವನ್ನು ತಿಳಿದುಕೊಳ್ಳುವಿರಿ ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು" (ಯೋಹಾನ–೮:೩೨). ಸೈತಾನನ ಭಯಂಕರವಾದ ತಂತ್ರಗಳಿಂದ ನಿಮ್ಮನ್ನು ಬಿಡುಗಡೆಮಾಡಿದ ಆ ಸತ್ಯವನ್ನು ನೀವು ತಿಳಿದಿದ್ದೀರೋ? ನಮಗಿಂತಲೂ ಸೈತಾನನು ಬುದ್ಧಿವಂತನೆಂಬುದನ್ನು ನಾವು ಮರೆಯಬಾರದು. ಆದರೆ ದೇವರು ಸೈತಾನನಿಗಿಂತಲೂ ಬುದ್ಧಿವಂತನು. ಸೈತಾನನು ನಮಗಿಂತಲೂ ಬಲವುಳ್ಳವನು. ಆದರೆ ದೇವರು ಸೈತಾನನಿಗಿಂತಲೂ ಬಲವುಳ್ಳವನು. ಸೈತಾನನ ಬಲದಿಂದ ನಿಮ್ಮನ್ನು ಬಿಡುಗಡೆ ಮಾಡಿದ ಸತ್ಯದ ವಾಕ್ಯವನ್ನು ನೀವು ತಿಳಿದಿದ್ದೀರೋ? ದೇವರ ಸತ್ಯವನ್ನು ಕೇಳಿಸಿಕೊಳ್ಳುವದಕ್ಕೆ ಅನೇಕ ಜನರು ಇಷ್ಟಪಡುವದಿಲ್ಲ. ಸತ್ಯಕ್ಕೆ ಕಿವಿಗೊಡುವದನ್ನು ಜನರು ಯಾಕೆ ತಿರಸ್ಕರಿಸುತ್ತಾರೆ? ಇದು ಯಾಕೆಂದರೆ ದುರಾತ್ಮನು ಅವರನ್ನು ಮೋಸಗೊಳಿಸಿರುತ್ತಾನೆ. ಯಾವುದು ಸತ್ಯವಲ್ಲವೋ ಅದನ್ನು ನಂಬುವಂತೆ ಅವರನ್ನು ಪ್ರೋತ್ಸಾಹಿಸುತ್ತಾನೆ. ಖಂಡಿತವಾಗಿ ಹೇಳುವದಾದರೆ, ಸತ್ಯವು ಕೇಳಿಸಿಕೊಳ್ಳುವದಕ್ಕೆ ಯಾವಾಗಲೂ ಆನಾಮದಕರವಾಗಿರುವದಿಲ್ಲ. "ಸತ್ಯವು ಬಹಳ ಬಿಸಿಯಾದ ಕಾಳುಮೆಣಸಿದ್ದ ಹಾಗೆ"{ಉಲೂಫ್ ಗಾದೆ} ಹೇಗಿದ್ದರೂ, ನೀವು ದೇವರ ವಾಕ್ಯದ ಸತ್ಯವನ್ನು ತಿಳಿದುಕೊಂಡು ಅದನ್ನು ನಂಬಿದ್ದರೆ, ನೀವು ಸೈತಾನನ ಬಲದಿಂದ ಬಿಡುಗಡೆ ಹೊಂದಿದವರಾಗಿರುತ್ತೀರಿ. ದೇವರ ಸತ್ಯವು ಸೈತಾನನ ಸುಳ್ಳುಗಳಿಂದ ಜನರನ್ನು ಬಿಡಿಸುತ್ತದೆ. ಆದರೆ ನೀವು ಸತ್ಯವನ್ನು ತಿಳಿದುಕೊಂಡು ಅದನ್ನು ನಂಬಲೇಬೇಕು!

ದೇವರ ವಾಕ್ಯ ಹೇಳುವದನ್ನು ಕೇಳಿರಿ: "ಪ್ರಿಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು"(೧ಯೋಹಾನ–೪:೧). "ಪ್ರವಾದನೆಗಳನ್ನು ಹೀನೈಸಬೇಡಿರಿ; ಎಲ್ಲವನ್ನೂ ಪರಿಶೋಧಿಸಿ ಒಳ್ಳೇದನ್ನೇ ಭದ್ರವಾಗಿ ಹಿಡಿದುಕೊಳ್ಳಿರಿ; ಸಕಲವಿಧವಾದ ಕೆಟ್ಟತನಕ್ಕೆ ದೂರವಾಗಿರಿ"(೧ಥೆಸ–೫:೨೦–೨೨). ದೇವರ ಪ್ರವಾದಿಗಳು ಏನು ಬರೆದಿದ್ದಾರೋ ಅದನ್ನು ನೀವು ನಿಜವಾಗಿಯೂ ತಿಳಿದುಕೊಂಡಿದ್ದೀರೋ? ನೀವು ವಾಕ್ಯದ ಸತ್ಯವನ್ನು ಗ್ರಹಿಸಿಕೊಂಡಿದ್ದೀರೋ? ಇದನ್ನು ನೀವು ನಿಮ್ಮ ಹೃದಯದಲ್ಲಿ ನಂಬಿದ್ದೀರೋ?

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರು ಹೇಗೆ ಲೋಕವನ್ನು ಸೃಷ್ಟಿಸಿದನೆಂಬುದನ್ನು ನಾವು ಒಟ್ಟಾಗಿ ಅಭ್ಯಾಸ ಮಾಡಿದಾಗ ಮುಂದಿನ ಪ್ರಸಾರದಲ್ಲಿ ನಮ್ಮೊಂದಿಗೆ ಸೇರಿಕೊಳ್ಳುವದಕ್ಕೆ ನಿಮ್ಮನ್ನು ಆಹ್ವಾನಿಸುತ್ತೇವೆ. ಈದಿನ ನಾವು ಅಭ್ಯಾಸ ಮಾಡಿದ ಯಾವುದೊಂದರ ಕುರಿತಾಗಿ ಏನಾದರೂ ಪ್ರಶ್ನೆಗಳು ನಿಮಗಿದ್ದರೆ, ನೀತಿವಂತಿಕೆಯ ಮಾರ್ಗ, ಇತ್ಯಾದಿ....ಇದಕೆಕ ಬರೆದುಕೊಳ್ಳಿರಿ.

ಮುಂದಿನ ಸಲ ನಿಮ್ಮೊಂದಿಗಿರುವದನ್ನು ಎದುರು ನೋಡುತ್ತಿದ್ದೇವೆ. ದೇವರು ತನ್ನ ವಾಕ್ಯದಲ್ಲಿ ಹೇಳಿರುವ ಅದ್ಭುತವಾದ ವಾಗ್ದಾನವನ್ನು ನೀವು ಆಲೋಚಿಸುತ್ತಿರುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

"ನೀವು ಸತ್ಯವನ್ನು ತಿಳಿಯುವಿರಿ, ಮತ್ತು ಸತ್ಯವು ನಿಮ್ಮನ್ನು ಬಿಡುಗಡೆಮಾಡುವದು"! (ಯೋಹಾನ:೮:೩೨).

ಪಾಠ ೪

# ದೇವರು ಲೋಕವನ್ನು ಹೇಗೆ ಉಂಟುಮಾಡಿದನು

ಆದಿಕಾಂಡ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಸೈತಾನ ಮತ್ತು ದೂತರುಗಳಿಗೆ ಸಂಬಂಧಪಟ್ಟಂತೆ ದೇವರ ಪ್ರವಾದಿಗಳು ಬರೆದಿದ್ದನ್ನು ನಾವು ಓದಿಕೊಂಡೆವು. ಆದಿಯಲ್ಲಿ ದೇವರು, ದೂತರುಗಳೆಂಬುದಾಗಿ ಕರೆಯಲ್ಪಡುವ ಮಿಲಿಯನ್‌ಗಟ್ಟಲೆ ಆತ್ಮಗಳನ್ನು ಸೃಷ್ಟಿಸಿದನು. ಆ ದೂತರುಗಳೊಳಗೆ ಇತರರಿಗಿಂತ ಹೆಚ್ಚು ಬುದ್ಧಿವಂತನೂ ಮತ್ತು ಹೆಚ್ಚು ಸುಂದರನೂ ಒಬ್ಬನಿದ್ದನು. ಅವನ ಹೆಸರು ಲೂಸಿಫರ್. ಹೇಗೂ, ಲೂಸಿಫರನು ದೇವರ ಸ್ಥಾನವನ್ನು ತೆಗೆದುಕೊಳ್ಳುವದಕ್ಕೆ ಬಯಸಿ, ತನ್ನ ಹೃದಯದಲ್ಲಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ದೇವರಿಗೆ ಅಗೌರವವನ್ನು ತೋರಿಸಿದ ದಿನವು ಬಂದಿತು. ಇತರ ಅನೇಕ ದೂತರುಗಳು ಸಹ ಲೂಸಿಫರನ ಪಾಪವನ್ನು ಅನುಸರಿಸುವದಕ್ಕೆ ಆರಿಸಿಕೊಂಡರು. ಹಾಗಾಗಿ ದೇವರು, ತನಗೆ ಎದುರುಬಿದ್ದಂತ –ವರನ್ನು ಸಹಿಸಿಕೊಳ್ಳದೆ, ಲೂಸಿಫರನನ್ನು ಮತ್ತು ಕೆಟ್ಟ ದೂತರುಗಳನ್ನು ತನ್ನ ಪರಿಶುದ್ಧ ಪ್ರಸನ್ನತೆಯಿಂದ ಹೊರದೊಬ್ಬಿದನು. ಲೂಸಿಫರನ ಹೆಸರು ವಿರೋಧಿ ಎಂಬ ಅರ್ಥವಿರುವ ಸೈತಾನನೆಂಬುದಾಗಿ ಬದಲಾಯಿಸಲ್ಪಟ್ಟಿತು. ಸೈತಾನನ್ನು ಮತ್ತು ಅವನ ದೂತರುಗಳನ್ನು ಹೊರತಳ್ಳಿದ ನಂತರ ದೇವರು ಅವರಿಗಾಗಿ ಎಂದಿಗೂ ಆರಿಹೋಗದಿರುವ ನರಕದ ಬೆಂಕಿಯನ್ನು ಸೃಷ್ಟಿಸಿದನು. ಸೈತಾನನನ್ನು ಮತ್ತು ಅವನ ಹಿಂಬಾಲಕರುಗಳನ್ನು ದೇವರು ಒಂದು ದಿನ ಆ ಬೆಂಕಿಯೊಳಗೆ ಎಸೆಯುತ್ತಾನೆ. ಹೀಗಿದ್ದರೂ, ಸೈತಾನನು ಇನ್ನೂ ಬೆಂಕಿಯೊಳಗೆ ಹಾಕಲ್ಪಟ್ಟಿಲ್ಲ. ಅವನು ತನಗೆ ಸಾಧ್ಯವಿರುವವರನ್ನು ಮೋಸಗೊಳಿಸುವದಕ್ಕೆ ಹುಡುಕುತ್ತಾ ಲೋಕದಲ್ಲಿದ್ದಾನೆ, ಅದ್ದರಿಂದ ಅವರೂ ಸಹ ನಾಶವಾಗುತ್ತಾರೆ ಎನ್ನುವದನ್ನು ನಾವು ಕಲಿತಿದ್ದೇವೆ.

ಪ್ರವಾದಿಗಳ ಬರವಣಿಗೆಗಳಲ್ಲಿ ಈದಿನ ನಮ್ಮದು ನಾಲ್ಕನೆಯ ಪಾಠ. ಆದಿಕಾಂಡ ಎಂಬುದಾಗಿ ಕರೆಯಲ್ಪಡುವ ತೋರಾದ ಮೊದಲನೆಯ ಪುಸ್ತಕದ ಮೊದಲನೆಯ ಅಧ್ಯಾಯದ ಮೊದಲ ಎರಡು ವಚನಗಳಲ್ಲಿ ವಾಕ್ಯ ಹೀಗೆ ಹೇಳುತ್ತದೆ: "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು, ಭೂಮಿಯು ಕ್ರಮವಿಲ್ಲದೆಯೂ ಬರಿದಾಗಿಯೂ ಇತ್ತು, ಆದಿಸಾಗರದ ಮೇಲೆ ಕತ್ತಲಿತ್ತು." (ಆದಿ–೧:೧,೨).

ಆದಿಯಲ್ಲಿ, ದೇವರು ಆಕಾಶವನ್ನೂ ಮತ್ತು ಭೂಮಿಯನ್ನೂ ಉಂಟುಮಾಡಿದಾಗ, ಭೂಮಿಯ ಮೇಲೆ ಯಾವುದೂ ಜೀವಿಸುತ್ತಿರಲಿಲ್ಲ. ಪ್ರತಿ –ಯೊಂದು ಕ್ರಮವಿಲ್ಲದ್ದಾಗಿದ್ದು ಕತ್ತಲಿಂದ ತುಂಬಿತ್ತು ಕೇವಲ ಸೈತಾನನು ಮತ್ತು ಅವನ ದೂತರುಗಳು ಮಾತ್ರ ಇದ್ದರು. ಹೇಗಿದ್ದರೂ ದೇವರು ತನ್ನನ್ನು ತಿಳಿದುಕೊಳ್ಳುವದಕ್ಕೆ, ಪ್ರೀತಿಸುವದಕ್ಕೆ ಮತ್ತು ಎಂದೆಂದಿಗೂ ತನಗೆ ವಿಧೇಯರಾಗಿರುವದಕ್ಕೆ ಸಾಮರ್ಥ್ಯವಿರುವಂತಹ ಮಾನವರನ್ನು ಸೃಷ್ಟಿಸು –ವದಕ್ಕೆ ಯೋಜನೆ ಮಾಡಿಕೊಂಡನು. ಮನುಷ್ಯನನ್ನು ಸೃಷ್ಟಿಸುವದಕ್ಕೆ ಮೊದಲು ಅವನು ನಿಜವಾದ ಸಮೃದ್ಧಿಯಲ್ಲಿ ಜೀವಿಸುವದಕ್ಕೆ ಬೇಕಾದ ಸುಂದರವಾದ ಒಂದು ಲೋಕವನ್ನು ಉಂಟುಮಾಡುವ ಯೋಜನೆಯನ್ನು ದೇವರು ಹಾಕಿಕೊಂಡನು. ಹಾಗಾದರೆ, ತಾನು ಸೃಷ್ಟಿಸುವದಕ್ಕೆ ಯೋಜನೆ ಹಾಕಿಕೊಂಡ ಜನರಿಗಾಗಿ ದೇವರು ಆ ಲೋಕವನ್ನು ಹೇಗೆ ಸೃಷ್ಟಿಸಿ ಸಿದ್ಧಪಡಿಸಿದನೆಂಬುದನ್ನು ಈದಿನ ನಾವು ನೋಡಲಿದ್ದೇವೆ.

ದೇವರು ಹೇಗೆ ಲೋಕವನ್ನು ಉಂಟುಮಾಡಿದನು ಎಂಬುದರ ಕುರಿತಾಗಿ ವಾಕ್ಯಗಳು ಏನು ಹೇಳುತ್ತವೆ? ಇದು ಹೇಳುವದೇನೆಂದರೆ: "ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣ ಮಾಡಿದನು." (ವಿಮೋ–೨೦:೧೧). ಆ ಆರು ದಿವಸಗಳಲ್ಲಿ ದೇವರು ಯಾವುದನ್ನು ಉಂಟುಮಾಡಿದನೆಂಬುದನ್ನು ನೋಡುವದಕ್ಕೆ ತೋರಾದ ಮೊದಲನೆಯ ಅಧ್ಯಾಯವನ್ನು ಈಗ ನಾವು ಗಮನಿಸೋಣ.

೧) ಮೊದಲನೆಯ ದಿನದ ಕುರಿತಾಗಿ ವಾಕ್ಯವು ಹೀಗೆ ಹೇಳುತ್ತದೆ:
"ದೇವರಾತ್ಮವು ಜಲಸಮೂಹಗಳ ಮೇಲೆ ಚಲಿಸುತ್ತಿತ್ತು. ಆದ ದೇವರು ಬೆಳಕಾಗಲಿ ಅನ್ನಲು ಬೆಳಕಾಯಿತು. ದೇವರು ಆ ಬೆಳಕನ್ನು ಒಳ್ಳೇದೆಂದು ನೋಡಿದನು. ದೇವರು ಬೆಳಕನ್ನೂ ಕತ್ತಲೆಯನ್ನೂ ಬೇರೆ ಬೇರೆ ಮಾಡಿ ಬೆಳಕಿಗೆ ಹಗಲೆಂದೂ ಕತ್ತಲೆಗೆ ಇರುಳೆಂದೂ ಹೆಸರಿಟ್ಟನು. ಹೀಗೆ ಸಾಯಂಕಾಲವು ಪ್ರಾತ:ಕಾಲವೂ ಆಗಿ ಮೊದಲನೆಯ ದಿನವಾಯಿತು."(ಆದಿ–೧:೨–೫).
ಹೀಗೆ ಮೊದಲನೆಯ ದಿನದಲ್ಲಿ ದೇವರು "ಕತ್ತಲೆಯಲ್ಲಿ ಬೆಳಕಾಗಲಿ" ಎಂದು ಆಜ್ಞಾಪಿಸಿದನು. ಪ್ರತಿ ಇಪ್ಪತ್ತನಾಲ್ಕು ಗಂಟೆಗೆ ಒಂದು ಸಾರಿ ಸುತ್ತು ಹಾಕುವಂತೆ ಆಕಾಶದಲ್ಲಿ ಒಂದು ದೊಡ್ಡ ಚೆಂಡಿನ ರೀತಿಯಲ್ಲಿದ್ದ ಭೂಮಿಗೆ ದೇವರು ಆಜ್ಞಾಪಿಸಿದನು. ಹಾಗಾಗಿಯೇ ನಾವು ಹನ್ನೆರಡು ಗಂಟೆ ಹಗಲನ್ನೂ ಮತ್ತು ಹನ್ನೆರಡು ಗಂಟೆ ರಾತ್ರಿಯನ್ನೂ ಹೊಂದಿದ್ದೇವೆ. ಕತ್ತಲೆಯಿಂದ ಬೆಳಕನ್ನು ಬೇರ್ಪಡಿಸಿ ದೇವರು ಮೊದಲನೆಯ ದಿನದಲ್ಲಿ ಎಂತಹ ದೊಡ್ಡ ಕಾರ್ಯವನ್ನು ಮಾಡಿದ್ದಾನೆ!

೨) ಎರಡನೆಯ ದಿನದ ಕುರಿತಾಗಿ ವಾಕ್ಯವು ಹೀಗೆ ಹೇಳುತ್ತದೆ:

"ಬಳಿಕ ದೇವರು ಜಲಸಮೂಹಗಳ ನಡುವೆ ವಿಸ್ತಾರವಾದ ಗುಮಟವು ಉಂಟಾಗಲಿ ಅದು ಕೆಳಗಣ ನೀರುಗಳನ್ನೂ ಮೇಲಣ ನೀರುಗಳನ್ನು ಬೇರೆ ಬೇರೆ ಮಾಡಲಿ ಅಂದನು. ದೇವರು ವಿಸ್ತಾರವಾದ ಗುಮಟವನ್ನು ಮಾಡಿ ಅದರ ಕೆಳಗಿದ್ದ ನೀರುಗಳನ್ನು ಅದರ ಮೇಲಿದ್ದ ನೀರುಗಳಿಂದ ವಿಂಗಡಿಸಿದನು; ಹಾಗೆಯೇ ಆಯಿತು. ದೇವರು ಆ ಗುಮಟಕ್ಕೆ ಆಕಾಶವೆಂದು ಹೆಸರಿಟ್ಟನು."(ಆದಿ-೧:೬-೮).

ಎರಡನೆಯ ದಿನದಲ್ಲಿ ದೇವರು ಭೂಮಿಯ ಸುತ್ತಲೂ ಆಕಾಶವನ್ನು ಸೃಷ್ಟಿಸಿದನು, ಅದನ್ನು ನಾವು ವಾಯುಮಂಡಲ ಎಂದು ಕರೆಯುತ್ತೇವೆ. ನಾವು ಉಸಿರಾಡುವ ಗಾಳಿಯನ್ನು ಒಳಗೊಂಡಿರುವ ಪ್ರಪಂಚವನ್ನು ಆವರಿಸಿರುವ ಆಕಾಶವೇ ವಾಯುಮಂಡಲ. ಇದೇ ವಾಯುಮಂಡಲವು ಸೂರ್ಯನ ತಾಪದಿಂದ ಪ್ರತಿಯೊಂದನ್ನು ಮತ್ತು ಪ್ರತಿಯೊಬ್ಬರನ್ನೂ ಹಾಗೂ ಇತರ ಅನೇಕ ವಿಪತ್ತುಗಳಿಂದ ರಕ್ಷಿಸುವಂತದ್ದಾಗಿದೆ. ಎರಡನೆಯ ದಿನದಲ್ಲಿ ದೇವರು ಸೃಷ್ಟಿಸಿದ ಈ ವಿಶೇಷವಾದ ಆಕಾಶವಿಲ್ಲದೆ ಮನುಷ್ಯನು ಭೂಮಿಯ ಮೇಲೆ ಜೀವಿಸುವದಕ್ಕಾಗಿವದಿಲ್ಲ.

೩) ಮೂರನೆಯ ದಿನದಲ್ಲಿ ದೇವರು ಸಾಗರಗಳನ್ನು, ಒಣಭೂಮಿಯನ್ನೂ ಕಾಯಿಪಲ್ಯಗಳನ್ನು ಸೃಷ್ಟಿಸಿದನು. ವಾಕ್ಯಗಳು ಏನು ಹೇಳುತ್ತವೆನ್ನುವದನ್ನು ಕೇಳಿರಿ:

"ಅನಂತರ ದೇವರು ಆಕಾಶದ ಕೆಳಗಿರುವ ನೀರೆಲ್ಲಾ ಒಂದೇ ಸ್ಥಳದಲ್ಲಿ ಕೂಡಿಕೊಳ್ಳಲಿ, ಒಣನೆಲವು ಕಾಣಿಸಲಿ ಅಂದನು. ಹಾಗೆಯೇ ಆಯಿತು. ದೇವರು ಒಣನೆಲಕ್ಕೆ ಭೂಮಿಯೆಂದೂ ಜಲಸಮೂಹಕ್ಕೆ ಸಮುದ್ರವೆಂದೂ ಹೆಸರಿಟ್ಟನು. ಆತನು ಅದನ್ನು ಒಳ್ಳೇದೆಂದು ನೋಡಿದನು. ತರುವಾಯ ದೇವರು ಭೂಮಿಯು ಹುಲ್ಲನ್ನೂ ಬೀಜಬಿಡುವ ಕಾಯಿಪಲ್ಯದ ಗಿಡಗಳನ್ನೂ ಬೆಳೆಸಲಿ ಮತ್ತು ಬೀಜವುಳ್ಳ ಹಣ್ಣಿನ ಮರಗಳನ್ನು ಅವುಗಳ ಜಾತಿಗನು -ಸಾರವಾಗಿ ಹುಟ್ಟಿಸಲಿ ಎಂದು ಹೇಲಿದನು ಹಾಗೆಯೇ ಆಯಿತು. ದೇವರು ಅದನ್ನು ಒಳ್ಳೇದೆಂದು ನೋಡಿದನು. ಹೀಗೆ ಸಾಯಂಕಾಲವೂ ಪ್ರಾತ:ಕಾಲವೂ ಆಗಿ ಮೂರನೆಯ ದಿನವಾಯಿತು".(ಆದಿ-೧: ೯-೧೧, ೧೩).

ಹೀಗೆ ದೊಡ್ಡ ವಿನ್ಯಾಸಕಾರನಾದ ದೇವರು ಮೂರನೆಯ ದಿನದಲ್ಲಿ, ಸಾಗರಗಳನ್ನು ನದಿಗಳನ್ನೂ ಇದರ ಜೊತೆಗೆ ಪ್ರತಿಯೊಂದು ಹಣ್ಣು ಮತ್ತು ಬೀಜಗಳನ್ನು ಬಿಡುವ ವಿವಿಧ ರೀತಿಯ ಮರಗಳನ್ನೂ ಮತ್ತು ಗಿಡಗಳನ್ನೂ ಸೃಷ್ಟಿಸಿದನು. ಮಾವು, ಬಾಳೆ, ತೆಂಗು, ಕಲ್ಲಂಗಡಿ, ಕರಬೂಜು, ಟೊಮೆಟೊ, ಕ್ಯಾಬೇಜ್, ಕ್ಯಾರೆಟ್, ಅಕ್ಕಿ, ಧಾನ್ಯಗಳು, ಕಡಲೆಬೀಜಗಳು ಮತ್ತು ಇತರ ಸಾವಿರಾರು ಬಗೆಯ ಆಹಾರಗಳು! ದೇವರು ಎಂತಹ ರುಚಿಕರವಾದ ಬಗೆಬಗೆಯ ಆಹಾರಗಳನ್ನು ಉಂಟುಮಾಡಿದ್ದಾನೆ. ಮತ್ತು ದೇವರು ತಾನು ಸೃಷ್ಟಿಸಿದ್ದ ಪ್ರತಿಯೊಂದಕ್ಕೆ ಸಂಬಂಧಿಸಿದ ಹಾಗೆ "ಇದು ಒಳ್ಳೆಯದು"! ಎಂದು ಹೇಳಿದನು. ದೇವರು ಮಾಡಿದ ಮತ್ತು ಮಾಡುವ ಪ್ರತಿಯೊಂದು ಒಳ್ಳೆಯದು ಅದ್ಭುತವಾದದ್ದು ಮತ್ತು ಸಂಪೂರ್ಣ -ವಾದದ್ದು ಆಗಿದೆ.! ದೇವರು ಮಾಡದೇ ಇರುವ ಒಂದೇ ಒಂದು ಸಂಗತಿ ಅಲ್ಲಿತ್ತು ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಅದೇನೆಂದರೆ ಕೆಟ್ಟದ್ದನ್ನು ಮಾತ್ರ ದೇವರು ಉಂಟುಮಾಡಲಿಲ್ಲ, ಯಾಕೆಂದರೆ ದೇವರು ಒಳ್ಳೆಯವನು.!

ದೇವರು ಒಳ್ಳೆಯವನಾಗಿರುವದಾದರೆ, ಲೋಕವೆಲ್ಲವೂ ಕೆಟ್ಟತನ ಮತ್ತು ಕಚ್ಚಾಟಗಳಿಂದ ಯಾಕೆ ತುಂಬಿದೆ? ಎಂದು ಕೆಲವರು ನಿಮ್ಮನ್ನು ಕೇಳ -ಬಹುದು ಈ ವರ್ಷ ನನ್ನ ಹೊಲವು ಯಾಕೆ ಉತ್ತಮವಾದ ಬೆಳೆಯನ್ನು ಕೊಡಲಿಲ್ಲ? ನನ್ನ ಮಗುವು ಯಾಕೆ ಕಾಯಿಲೆ ಬಿದ್ದಿತು? ದೇವರು ಒಳ್ಳೆಯವನಾಗಿದ್ದರೆ ಮನುಷ್ಯನಿಂದ ಕೆಟ್ಟದ್ದು ಯಾಕೆ ಹೊರಬರುತ್ತಿತ್ತು? ಸತ್ಯವಾಗಿಯೂ, ಇವು ಪ್ರಾಮುಖ್ಯವಾದ ಪ್ರಶ್ನೆಗಳು, ಮತ್ತು ಪರಿಶುದ್ಧ ವಾಕ್ಯಗಳು ಕೊಡುವಂತಹ ತೃಪ್ತಿಕರವಾದ ಉತ್ತರಗಳನ್ನು ನಾವು ಮುಂಬರುವ ಪಾಠಗಳಲ್ಲಿ ಕೇಳಿಸಿಕೊಳ್ಳಬಹುದು. ಈಗ ಈ ಪ್ರಾಮುಖ್ಯವಾದ ಸತ್ಯವನ್ನು ಸುಮ್ಮನೆ ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳೋಣ: ಅದೇನೆಂದರೆ ದೇವರು ಒಳ್ಳೆಯವನು, ಇದರ ಫಲವಾಗಿ ದೇವರು ಸೃಷ್ಟಿಸಿದ ಪ್ರತಿಯೊಂದು ಒಳ್ಳೆಯದಾಗಿದೆ.

ದೇವರ ಒಳ್ಳೆಯತನವನ್ನು ಆಲೋಚಿಸುವದಕ್ಕೆ ಒಂದು ಕ್ಷಣವನ್ನು ತೆಗೆದುಕೊಳ್ಳೋಣ. ಮೂರನೆಯ ದಿನದಲ್ಲಿ ಆತನು ಮರಗಳನ್ನು ಹೇಗೆ ಸೃಷ್ಟಿಸಿದನೆಂದು ನಾವು ಕೇವಲ ಕೇಳಿಸಿಕೊಂಡಿದ್ದೇವೆ. ದೇವರು ಮರಗಳನ್ನು ಅವುಗಳ ಹಣ್ಣುಗಳೊಂದಿಗೆ ಯಾಕೆ ಸೃಷ್ಟಿಸಿದನೆಂದು ನಿಮಗೆ ಗೊತ್ತಾ? ದೇವರಿಗೆ ಅದರ ಅಗತ್ಯವಿತ್ತಾ? ತನ್ನ ಹಸಿವನ್ನು ತೃಪ್ತಿಪಡಿಸಿಕೊಳ್ಳಲು ದೇವರು ಹಣ್ಣುಗಳಿಂದ ತುಂಬಿದ ಮರಗಳನ್ನು ಸೃಷ್ಟಿಸಿದನೋ? ಇಲ್ಲ! ಸೃಷ್ಟಿಕರ್ತನಾದ ದೇವರಿಗೆ ಎಂದಿಗೂ ಹಸಿವೆಯಾಗುವದಿಲ್ಲ ಮತ್ತು ಆತನಿಗೆ ಯಾವುದರ ಅಗತ್ಯವೂ ಇಲ್ಲ! ಹಾಗಾದರೆ, ಯಾಕೆ ದೇವರು ಮರಗಳನ್ನು ಸೃಷ್ಟಿಸಿದನು? ವಾಕ್ಯಗಳು ನಮಗೆ ತೋರಿಸುವದೇನೆಂದರೆ, ಆರನೆಯ ದಿನದಲ್ಲಿ ಸೃಷ್ಟಿಸುವದಕ್ಕೆ ತಾನು ಯೋಚಿಸಿಕೊಂಡಿದ್ದ ಮನುಷ್ಯನಿಗಾಗಿ ದೇವರು ತನ್ನ ಒಳ್ಳೆಯತನದಲ್ಲಿ ಪ್ರತಿಯೊಂದನ್ನು ಸೃಷ್ಟಿಸಿದನು.

ದೇವರ ಒಳ್ಳೆಯರತನವನ್ನು ನೀವು ಗುರುತಿಸಿದ್ದೀರೋ? ದೇವರ ಒಳ್ಳೆಯತನವನ್ನು ಗುರುತಿಸದೆ ಮಾವಿನ ಹಣ್ಣನ್ನು ಅದರ ರುಚಿಕರವಾದ ಸುವಾಸನೆಯೊಂದಿಗೆ ನೀವು ರುಚಿ ನೋಡಿದ್ದೀರೋ, ಅಥವಾ ಒಂದು ಹೂವನ್ನು ಅದರ ಸುಂದರವಾದ ಪರಿಮಳದೊಂದಿಗೆ ಮೂಸಿನೋಡಿದ್ದೀರೋ? ನೀವು ಒಂದು ಮರವನ್ನು ನೋಡಿ ಅದನ್ನು ನಿಮಗಾಗಿ ಉಂಟುಮಾಡಿದವನಿಗೆ ಕೃತಜ್ಞತೆ ಸಲ್ಲಿಸದೆ ಇದ್ದೀರೋ? ಮರಗಳಿಲ್ಲದೆ ಜೀವನವು ಭಯಂಕರವಾದುದಾಗಿದೆ! ಯಾವುದೇ ಕಟ್ಟಿಗೆ ಇಲ್ಲದಿದ್ದರೆ ನಾವು ಅಡಿಗೆ ಮಾಡುವದಕ್ಕಾಗುವದಿಲ್ಲ, ಅಥವಾ ಕೆಲಸಕ್ಕೆ ಬಾರದ ವಸ್ತುವಿನೊಂದಿಗೆ ಮನೆಯನ್ನಾಗಲೀ ಇಲ್ಲವೆ ದೋಣಿಯನ್ನಾಗಲೀ ಕಟ್ಟುವದಕ್ಕಾಗುವದಿಲ್ಲ. ಹಗಲಿನ ಬಿಸಿಲಿನ ವೇಳೆಯಲ್ಲಿ ವಿಶ್ರಾಂತಿ ಪಡೆಯುವದಕ್ಕೆ ನೆರಳು ನಮಗಿರುತ್ತಿರಲಿಲ್ಲ, ಅಥವಾ ಔಷದಕ್ಕೆ ಇಲ್ಲವೆ ಚಹಾಕ್ಕೆ ಎಲೆಗಳಿರುತ್ತಿರಲಿಲ್ಲ. ಮರಗಳಿಲ್ಲದೆ ಜೀವನವು ಅಸಾಧ್ಯವಾದುದ -ಗಿದೆ! ನಮ್ಮ ಸಂತೋಷಕ್ಕಾಗಿ ದೇವರು ಉಂಟುಮಾಡಿದ ಸಾವಿರಾರು ಒಳ್ಳೆಯ ಸಂಗತಿಗಳಲ್ಲಿ ಒಂದು ಮಾತ್ರ ದೇವರು ಸೃಷ್ಟಿಸಿದ ಮರಗಳಾಗಿವೆ. ಆತನ ಒಳ್ಳೆಯತನವನ್ನು ನಾವು ಗುರುತಿಸಬೇಕೆಂದು ದೇವರು ಬಯಸುತ್ತಾನೆ. ಅದಕ್ಕಾಗಿಯೇ ಪ್ರವಾದಿಯಾದ ದಾವೀದನು

ಕೀರ್ತನೆಗಳಲ್ಲಿ ಹೇಗಿ ಬರೆಯುತ್ತಾನೆ: "ಕರ್ತನು ಒಳ್ಳೆಯವನೆಂದು ಅನುಭವದಿಂದ ಸವಿದು ನೋಡಿರಿ"(ಕೀರ್ತನೆ-೩೪: ೮). ಆದರೆ ಈಗ ನಮ್ಮ ಸಮಯವು ಮುಗಿಯುವದಕ್ಕಿಂತ ಮೊದಲು ಈದಿನದ ಪಾಠವನ್ನು ಮುಂದುವರಿಸೋಣ.

೪) ನಾಲ್ಕನೆಯ ದಿನದಲ್ಲಿ ದೇವರು, "ಆಕಾಶಮಂಡಲದಲ್ಲಿ ಬೆಳಕುಗಳು ಉಂಟಾಗಲಿ; ಅವು ಹಗಲಿರುಳುಗಳನ್ನು ಬೇರೆ ಬೇರೆ ಮಾಡಲಿ; ಇದಲ್ಲದೆ ಅವು ಗುರುತುಗಳಾಗಿದ್ದು ಸಮಯಗಳನ್ನೂ ದಿನಸಂವತ್ಸರಗಳನ್ನೂ ತೋರಿಸಲಿ ಅಂದನು" (ಆದಿ-೧: ೧೪). ದೇವರು ಸುಮ್ಮನೆ ಆಜ್ಞಾಪಿಸಿದನು, ಸೂರ್ಯ ಚಂದ್ರ ನಕ್ಷತ್ರಗಳು ಆಕಾಶದಲ್ಲಿ ಅಸ್ತಿತ್ವಕ್ಕೆ ಬಂದವು. ದೇವರು ಇನ್ನೊಂದು ಮಾತನ್ನು ಹೇಳಿದನು ಭೂಮಿಯು ಸೂರ್ಯನನ್ನು ಸುತ್ತುವದಕ್ಕೆ ಪ್ರಾರಂಭಿಸಿತು. ಆತನು ಮತ್ತೆ ಮಾತಾಡಿದನು ಆಗ ಚಂದ್ರನು ಭೂಮಿಯನ್ನು ಸುತ್ತುವದಕ್ಕೆ ಆರಂಭಿಸಿದನು.

ಲೋಕದಲ್ಲಿ ಪ್ರತಿಯೊಂದನ್ನು ಸೃಷ್ಟಿಸುವದಕ್ಕೆ ದೇವರು ಯಾವುದನ್ನು ಉಪಯೋಗಿಸಿದನು? ವಾಕ್ಯವು ಏನು ಹೇಳುತ್ತದೆ? ಇದು ಹೇಳುವ -ದೇನೆಂದರೆ:

"ಲೋಕವು ದೇವರ ಮಾತಿನಿಂದ ನಿರ್ಮಿತವಾದವೆಂದು ನಂಬಿಕೆಯಿಂದಲೇ ನಾವು ತಿಳಿದುಕೊಂಡು ಕಾಣಿಸುವ ಈ ಜಗತ್ತು ದೃಶ್ಯ ವಸ್ತುಗಳಿಂದ ಉಂಟಾಗಲಿಲ್ಲವೆಂದು ಗ್ರಹಿಸುತ್ತೇವೆ." (ಇಬ್ರಿಯ-೧೧: ೩). "ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು; ಆ ವಾಕ್ಯವು ದೇವರಾಗಿತ್ತು. ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವೂ ಉಂಟಾಯಿತು, ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗಲಿಲ್ಲ". (ಯೋಹಾನ-೧: ೧-೩).

ಮೊದಲನೆಯ ದಿನದಲ್ಲಿ ದೇವರು ಸರಳವಾಗಿ ಮಾತಾಡಿ "ಬೆಳಕಾಗಲಿ" ಅನ್ನಲು ಬೆಳಕಾಯಿತು ಎಂಬುದಾಗಿ ನಾವು ಈಗಾಗಲೇ ಓದಿದ್ದೇವೆ. ಎರಡನೆಯ ದಿನದಲ್ಲಿ ದೇವರು "ವಿಸ್ತಾರವಾದ ಗುಮ್ಮಟವು ಉಂಟಾಗಲಿ" ಅನ್ನಲು ಗುಮ್ಮಟವು ಉಂಟಾಯಿತು. ಮೂರನೆಯ ದಿನದಲ್ಲಿ ದೇವರು ಮತ್ತೆ ಮಾತಾಡಿದನು ಆತನು ಏನು ಮಾತಾಡಿದನೋ ಅವೆಲ್ಲವೂ ಉಂಟಾದವು. ಆದಕಾರಣ ಈಗ, ಲೋಕದಲ್ಲಿರುವ ಪ್ರತಿಯೊಂದನ್ನು ಸೃಷ್ಟಿಸುವದಕ್ಕೆ ದೇವರು ಯಾವುದನ್ನು ಉಪಯೋಗಿಸಿದನು? ದೇವರು ತನ್ನ ಮಾತನ್ನಲ್ಲದೆ ಬೇರೆ ಯಾವುದನ್ನೂ ಉಪಯೋಗಿಸಲಿಲ್ಲ! ಆತನು ಮಾಡಿದ್ದೆಲ್ಲವೂ ಮಾತಿನಿಂದಲೇ, ಆತನು ಏನು ಮಾತಾಡಿದನೋ ಅದೆಲ್ಲವೂ ಉಂಟಾಯಿತು. ದೇವರು ತನ್ನ ಮಾತಿನಿಂದಲೇ ಪ್ರತಿಯೊಂದನ್ನೂ ಉಂಟುಮಾಡಿದನು. ವಾಕ್ಯಗಳು ಹೇಳುವದೇನೆಂದರೆ, ದೇವರು ತನ್ನ ಮಾತಿನಿಂದ ಮಾತ್ರ ಪ್ರತಿಯೊಂದನ್ನು ಉಂಟುಮಾಡಲಿಲ್ಲ, ಆದರೆ ದೇವರು ತನ್ನ ಶಕ್ತಿಯುತವಾದ ಮಾತಿನಿಂದ ಪ್ರತಿಯೊಂದನ್ನು ಸಹ ನಿರ್ವಹಿಸಿದನು (ಎಲ್ಲಾ ವಿಷಯಗಳನ್ನು ಒಟ್ಟಾಗಿ ಹಿಡಿದುಕೊಂಡನು). ಚಂದ್ರ ಮತ್ತು ನಕ್ಷತ್ರಗಳು ತಮಗೆ ನೇಮಿಸಿದ ಸ್ಥಳಗಳಲ್ಲಿ ಉಳಿದುಕೊಂಡಿದ್ದು ದೇವರ ಶಕ್ತಿಯುತವಾದ ಮಾತಿನಿಂದಲೇ. ದೇವರ ಆಜ್ಞೆಯಿಂದಲೇ ನೇಮಕವಾದ ಸಮಯದಲ್ಲಿ ಸೂರ್ಯನು ಮೂಡುವದೂ ಮತ್ತು ಮುಳುಗುವದು ಆಗುತ್ತಿದೆ. ನಾಳೆ ಸೂರ್ಯನು ಮೂಡುವನೋ ಅಥವಾ ಇಲ್ಲವೋ ಎಂಬುದು ನಮಗೆ ಗೊತ್ತಿಲ್ಲದಿರುತ್ತಿದ್ದರೆ ನಮ್ಮ ಜೀವಿತವು ಎಷ್ಟು ಕಷ್ಟಕರವಾಗಿರುತ್ತಿತ್ತು ಎಂಬುದನ್ನು ಯೋಚಿಸಿರಿ! "ದೇವರು ನಂಬಿಗಸ್ತನು" ಎಂದು ವಾಕ್ಯವು ಹೇಳುತ್ತದೆ. {ಉಲೂಫ್‌ನಲ್ಲಿ: ದೇವರು ತನ್ನ ಒಡಂಬಡಿಕೆಯನ್ನು ಕಾಪಾಡುತ್ತಾನೆ} (೧ಕೊರಿಂಥ-೧:೯) ಆತನು ಅದರ ಮೇಲೆ ಅವಲಂಬಿತನಾಗಿದ್ದಾನೆ. ಆತನು ಎಂದಿಗೂ ತನ್ನ ಮಾತಿನಿಂದ ಹಿಂದಕ್ಕೆ ಹೋಗುವವನಲ್ಲ. ಆತನು ಎಂದಿಗೂ ಬದಲಾಗುವದಿಲ್ಲ. "ಕರ್ತನ ಮಾತೋ ಸದಕಾಲವೂ ಇರುವದು!" (೧ಪೇತ್ರ-೧: ೨೫).

೫) ಐದನೆಯ ದಿನದಲ್ಲಿ ದೇವರು ಸಾವಿರಾರು ಬಗೆಯ ಮೀನುಗಳನ್ನೂ ಮತ್ತು ಪಕ್ಷಿಗಳನ್ನೂ ಉಂಟುಮಾಡಿದನು. ವಾಕ್ಯವು ಹೀಗೆ ಹೇಳುತ್ತದೆ:

"ತರುವಾಯ ದೇವರು ಗುಂಪುಗುಂಪಾಗಿ ಚಲಿಸುವ ಜಲಜಂತುಗಳು ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಅಂತರಿಕ್ಷದೊಳಗೆ ಹಾರಾಡಲಿ ಎಂದು ಹೇಳಿದನು. ಹೀಗೆ ದೇವರು ಮಹಾಜಲಚರಗಳನ್ನೂ ನೀರಿನಲ್ಲಿ ತುಂಬಿರುವ ಸಕಲವಿಧವಾದ ಜೀವಿಗಳನ್ನೂ ರೆಕ್ಕೆಗಳುಳ್ಳ ಸಕಲವಿಧವಾದ ಪಕ್ಷಿಗಳನ್ನೂ ಅವುಗಳ ಜಾತಿಗನುಸಾರವಾಗಿ ಉಂಟುಮಾಡಿದನು. ಆತನು ಅದನ್ನು ಒಳ್ಳೇದೆಂದು ನೋಡಿದನು. ಇದಲ್ಲದೆ ದೇವರು ಅವುಗಳಿಗೆ ನೀವು ಅಭಿವೃದ್ಧಿಯಾಗಿ ಹೆಚ್ಚಿರಿ ಜಲಚರಗಳು ಸಮುದ್ರದ ನೀರಿನಲ್ಲಿ ತುಂಬಿಕೊಳ್ಳಲಿ; ಪಕ್ಷಿಗಳು ಭೂಮಿಯ ಮೇಲೆ ಹೆಚ್ಚಲಿ ಎಂದು ಹೇಳಿ ಆಶೀರ್ವದಿಸಿದನು. ಹೀಗೆ ಸಾಯಂಕಾಲವೂ ಪ್ರಾತ:ಕಾಲವೂ ಆಗಿ ಐದನೆಯ ದಿನವಾಯಿತು". ((ಆದಿ-೧: ೨೦-೨೩)

೬) ಆರನೆಯ ದಿನದ ಕುರಿತಾಗಿ, ದೇವರು ಪ್ರಾಣಿಗಳನ್ನು ಮತ್ತು ಮನುಷ್ಯನನ್ನು ಉಂಟುಮಾಡಿದನೆಂದು ವಾಕ್ಯವು ನಮಗೆ ತಿಳಿಸುತ್ತದೆ. ದುರದೃಷ್ಟವಶಾತ್ ಈ ಪ್ರಾಮುಖ್ಯವಾದ ಘಟನೆಯನ್ನು ವಿವರಿಸುವದಕ್ಕೆ ನಮಗೆ ಸಮಯದ ಅನುಕೂಲವಿಲ್ಲ. ದೇವರ ಚಿತ್ತವಾದರೆ, ಮುಂದಿನ ಕಾರ್ಯಕ್ರಮದಲ್ಲಿ ದೇವರು ಹೇಗೆ ಮನುಷ್ಯನನ್ನು ಉಂಟುಮಾಡಿದನು ಮತ್ತು ಯಾಕೆ ಉಂಟುಮಾಡಿದನೆಂಬುದರ ಕುರಿತಾಗಿ ವಾಕ್ಯವು ಏನು ಹೇಳುತ್ತದೆಂಬುದನ್ನು ಜಾಗ್ರತೆಯಿಂದ ನಾವು ಪರೀಕ್ಷಿಸೋಣ.

ಈದಿನ ನಾವು ದೇವರ ಒಳ್ಳೆಯತನವನ್ನು ಆಲೋಚಿಸಿದೆವು. ಪ್ರವಾದಿಯಾದ ದಾವೀದನು ಬರೆದಿರುವ "ಕರ್ತನು ಒಳ್ಳೆಯವನೆಂದು ಅನುಭವ -'ದಿಂದ ಸವಿದು ನೋಡಿರಿ"! ಸ್ನೇಹಿತರೇ, ನೀವು ದೇವರ ಒಳ್ಳೆಯತನವನ್ನು ರುಚಿ ನೋಡಿದ್ದೀರೋ? ದೇವರು ನಮಗೆ ಒದಗಿಸಿರುವ ವಿವಿಧ ರೀತಿಯ ಆಹಾರಗಳನ್ನು ನಾವು ಪ್ರತಿದಿನವೂ ರುಚಿನೋಡಿ ತಿನ್ನುತ್ತೇವೆ, ಆದರೆ ದೇವರ ಒಳ್ಳೆಯತನವನ್ನು ಗುರುತಿಸಿ ನಿಜವಾಗಿಯೂ ಅದನ್ನು ರುಚಿನೋಡಿದ್ದೇವೋ? ನೀವು ದೇವರ ಒಳ್ಳೆಯತನವನ್ನು ನಿಜವಾಗಿಯೂ ರುಚಿನೋಡಲು ಬಯಸುವಿರಾದರೆ ನೀವು ದೇವರ ವಾಕ್ಯವನ್ನು ನಂಬಿ ಅದಕ್ಕೆ ಕಿವಿಗೊಡಲೇಬೇಕು. ಪರಿಶುದ್ಧ ವಾಕ್ಯಗಳು ಹೀಗೆ ಹೇಳುತ್ತವೆ: "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ಅದರೆ ದೇವರ ಬಾಯಿಂದ ಹೊರಡುವ ಪ್ರತಿಯೊಂದು ಮಾತಿನಿಂದಲೂ ಬದುಕುತ್ತಾನೆ."(ಮತ್ತಾಯ-೪:೪). ನಮ್ಮ ಮುಂದಿನ ಪಾಠದಲ್ಲಿ, ಮನುಷ್ಯನು ಕೇವಲ ಶರೀರ ಮಾತ್ರವಲ್ಲ ಆದರೆ ಆತ್ಮದ ಮಾಲೀಕನೂ ಆಗಿದ್ದಾನೆ ಎಂಬುದನ್ನು ನಾವು ಕಂಡುಕೊಳ್ಳಲಿದ್ದೇವೆ. ನಮ್ಮ ಆತ್ಮವು ದೇವರ ವಾಕ್ಯಗಳಿಂದ

ಪೋಷಿಸಲ್ಪಡಲೇಬೇಕು. ದೇವರ ವಾಕ್ಯವು ಬಹಳ ಒಳ್ಳೆಯದು ಮತ್ತು ಹೋಲಿಸಲಸಾಧ್ಯವಾದ ಅದ್ಭುತವುಳ್ಳದ್ದೂ ಆಗಿದೆ, ಆದರೆ ನಾವು ಇದರ ಹಸಿವುಳ್ಳವರಾಗಿರಬೇಕು. ಆಹಾರಕ್ಕಾಗಿ ನಿಮ್ಮ ಹೊಟ್ಟೆಯು ಎಷ್ಟು ಸಾಧ್ಯವೋ ಅಷ್ಟು ಹಸಿವೆಗೊಳ್ಳುವ ಹಾಗೆಯೇ, ದೇವರ ಮತ್ತು ಆತನ ನಿತ್ಯತ್ವದ ವಾಕ್ಯದ ಜ್ಞಾನಕ್ಕಾಗಿ ನಿಮ್ಮ ಆತ್ಮವು ಹಸಿವೆಗೊಳ್ಳುತ್ತದೋ? ಈ ರೀತಿಯಲ್ಲಿ ನೀವು ದೇವರ ವಾಕ್ಯಕ್ಕಾಗಿ ಹಸಿವೆಗೊಂಡರೆ, ಭೂಲೋಕದಲ್ಲಿ ದೇವರೊಂದಿಗೆ ಒಂದು ಸಂಪೂರ್ಣವಾದ ಸಮಾಧಾನವನ್ನು ನಿಮಗೆ ಕೊಡುವಂತಹ ಸತ್ಯವನ್ನು ಮತ್ತು ಮೇಲೆ ಪರಲೋಕದಲ್ಲಿ ಒಂದು ಶುದ್ಧವಾದ ಪಿತ್ರಾರ್ಜಿತ ಬಾಧ್ಯತೆಯನ್ನು ನೀವು ಕಂಡುಕೊಳ್ಳುತ್ತೀರಿ. ಇದು ಸತ್ಯವೆಂದು ನಮಗೆ ಗೊತ್ತಿದೆ, ಯಾಕೆಂದರೆ "ನೀತಿಗೆ ಹಸಿದು ಬಾಯಾರಿದವರು ಧನ್ಯರು, ಅವರಿಗೆ ತೃಪ್ತಿಯಾಗುವದು!"(ಮತ್ತಾಯ–೫:೬) ಎಂದು ದೇವರು ಹೇಳಿ ತಾನೇ ಇದನ್ನು ವಾಗ್ದಾನ ಮಾಡಿದ್ದಾನೆ ಆಮೆನ್.

ನಿಮ್ಮ ಆಸಕ್ತಿಗಾಗಿ ವಂದನೆಗಳು. ದೇವರು ಮನುಷ್ಯನನ್ನು ಹೇಗೆ ಉಂಟುಮಾಡಿದನು ಮತ್ತು ಇನ್ನೂ ಹೆಚ್ಚು ಪ್ರಾಮುಖ್ಯವಾದ ಅವನನ್ನು ಯಾಕೆ ಉಂಟುಮಾಡಿದನೆಂಬುದನ್ನು ನಾವು ನೋಡಿದ ಹಾಗೆ ಮುಂದಿನ ಸಲ ನಮ್ಮೊಂದಿಗೆ ನೀವು ಸೇರಿಕೊಳ್ಳುವದಕ್ಕೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ.

ದೇವರು ನಿಮ್ಮನ್ನು ಆಶೀರ್ವದಿಸಲಿ ಮತ್ತು ನಿಮಗೆ ನೀಡಿರುವ ಆತನ ಅದ್ಭುತವಾದ ಆಹ್ವಾನವನ್ನು ಎಂದಿಗೂ ಮರೆಯಬೇಡಿರಿ:

"ಕರ್ತನು ಸರ್ವೋತ್ತಮನೆಂದು ಅನುಭವದಿಂದ ಸವಿದು ನೋಡಿರಿ!". (ಕೀರ್ತನೆ–೩೪:೮).

ದೇವರು ಯಾಕೆ ಮನುಷ್ಯನನ್ನು ಸೃಷ್ಟಿಸಿದನು.

[ಪಾಠ ೪:ದೇವರು ಲೋಕವನ್ನು ಹೇಗೆ ಉಂಟುಮಾಡಿದನು] [ಸಾರಾಂಶಗಳ ಪಟ್ಟಿ] [ಪಾಠ ೬: ಆದಾಮ ಮತ್ತು ಹವ್ವ ಹಾಗೂ ಪರದೈಸಿನ ತೋಟ]

ಪಾಠ ೫

# ದೇವರು ಯಾಕೆ ಮನುಷ್ಯನನ್ನು ಸೃಷ್ಟಿಸಿದನು

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯ –ಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ದೇವರು ಆಕಾಶಗಳನ್ನೂ, ಭೂಮಿಯನ್ನೂ, ಸಾಗರಗಳನ್ನೂ ಮತ್ತು ಅಉ ಒಳಗೊಂಡಿರುವ ಎಲ್ಲವನ್ನೂ ಹೇಗೆ ಸೃಷ್ಟಿಸಿದನೆಂಬುದನ್ನು ನಾವು ಓದಿದ್ದೇವೆ. ಕರ್ತನಾದ ದೇವರು ತನ್ನ ಮಾತಿನ ಹೊರತಾಗಿ ಯಾವುದನ್ನೂ ಉಪಯೋಗಿಸದೆ ಆರು ದಿನಗಳಲ್ಲಿ ಪ್ರತಿಯೊಂದನ್ನೂ ಉಂಟುಮಾಡಿದನು. ದೇವರು ಲೋಕವನ್ನು ಯಾಕೆ ಸೃಷ್ಟಿಸಿದನೆಂಬುದನ್ನು ಸಹ ನಾವು ನೋಡಿದೆವು. ತನ್ನ ಸ್ವಂತ ಮಹಿಮೆ –ಗಾಗಿ ಸೃಷ್ಟಿಸುವದಕ್ಕೆ ತಾನು ಯೋಜನೆ ಹಾಕಿಕೊಂಡ ಜನರಿಗಾಗಿ ಆತನು ಇದನ್ನು ಉಂಟುಮಾಡಿದನು. ಮನುಷ್ಯನು ನಿಜವಾದ ಅಭಿವೃದ್ಧಿಯಲ್ಲಿ ಜೀವಿಸುವಂತಹ ಸುಂದರವಾದ ಮತ್ತು ಅದ್ಭುತವಾದ ಸ್ಥಳವನ್ನು ಸೃಷ್ಟಿಸುವದಕ್ಕೆ ದೇವರು ಎಷ್ಟೊಂದು ದಯಾಪರನು!.

ದೇವರು ಮೊದಲನೆಯ ಮನುಷ್ಯನನ್ನು ನಿಖರವಾಗಿ ಹೇಗೆ ಸೃಷ್ಟಿಸಿದನೆಂದು ಕಲಿತುಕೊಳ್ಳಲು ವಾಕ್ಯಗಳನ್ನು ಪರೀಕ್ಷಿಸುವದಕ್ಕೆ ಈದಿನ ನಾವು ಯೋಜನೆ ಮಾಡಿಕೊಂಡಿದ್ದೇವೆ. ಆತನು ಮನುಷ್ಯನನ್ನು ಯಾಕೆ ಸೃಷ್ಟಿಸಿದನೆಂದು ಅರ್ಥಮಾಡಿಕೊಳ್ಳುವದಕ್ಕೆ ಸಹ ನಾವು ದೇವರ ಸಹಾಯ –ದೊಂದಿಗೆ ಅನ್ವೇಷಿಸೋಣ. ತೋರಾದಲ್ಲಿ, ಆದಿಕಾಂಡ ಪುಸ್ತಕದಲ್ಲಿ, ಮೊದಲನೆಯ ಅಧ್ಯಾಯದ ಇಪ್ಪತ್ತಾರನೆಯ ವಚನದಲ್ಲಿ ದೇವರ ವಾಕ್ಯವು ಹೀಗೆ ಹೇಳುತ್ತದೆ:

“ಕರ್ತನು {ಹೀಬ್ರೂವಿನಲ್ಲಿ ಯಾಹ್ವೆ, ಉಲೂಫ್‌ನಲ್ಲಿ ಎಂದೆಂದಿಗೂ ಇರುವವನು} ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯ –ರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನಮಾಡಲಿ ಅಂದನು. ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು; ದೇವಸ್ವರೂಪದಲ್ಲಿ ಅವನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿರ್ಮಿಸಿದನು”. (ಆದಿ–೧: ೨೬–೨೭).

ಅರ್ಥಮಾಡಿಕೊಳ್ಳುವದಕ್ಕೆ ಪ್ರತಿಯೊಬ್ಬರಿಗೂ ಅಗತ್ಯವಾಗಿರುವ ಗಂಭೀರವಾದ ಮತ್ತು ಅಗಾಧವಾದ ಸತ್ಯವು ನಮ್ಮ ಮುಂದೆ ಇದೆ: ದೇವರು ಮೊದಲನೆಯ ಮನುಷ್ಯನನ್ನು ಮತ್ತು ಸ್ತ್ರೀಯನ್ನು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದನು! ಇದನ್ನು ಆಲೋಚಿಸಿರಿ! ಮನುಷ್ಯನು ತನ್ನ ಹಾಗೆ ಇರಬೇಕೆಂದು ದೇವರು ಅವನನ್ನು ಉಂಟುಮಾಡಿದನು! ಸತ್ಯವಾಗಿಯೂ, ದೇವರು ಉಂಟುಮಾಡಿದ ಎಲ್ಲಾ ಜೀವಿಗಳೊಳಗೆ ಮನುಷ್ಯನು ಹೆಚ್ಚು ಪ್ರಾಮುಖ್ಯವಾದ ಜೀವಿಯಾಗಿದ್ದಾನೆ. ಮನುಷ್ಯನು ಮಾತ್ರ ದೇವರ ಸ್ವರೂಪದಲ್ಲಿ ಸೃಷ್ಟಿಸಲ್ಪಟ್ಟಿದ್ದಾನೆ.

ಹಾಗಾದರೆ ಈಗ, “ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು” ಎಂದು ದೇವರ ವಾಕ್ಯ ಹೇಳುವಾಗು ಇದರ ಅರ್ಥ –ವೇನು? ಎರಡನೆಯ ಅಧ್ಯಾಯದ ಏಳನೆಯ ವಚನದಲ್ಲಿ ವಾಕ್ಯಹೀಗೆ ಹೇಳುತ್ತದೆ: “ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು(ಆತ್ಮ)” (ಆದಿ–೨:೭). ಈ ವಚನದಲ್ಲಿ ನಾವು ಗಮನಿಸುವದೇನೆಂದರೆ, ದೇವ್ರು ಮೊದಲನೆಯ ಮನುಷ್ಯನನ್ನು ಉಂಟುಮಾಡಿದಾಗ, ಎರಡು ಮೂಲವಸ್ತುಗಳೊಂದಿಗೆ ಉಂಟುಮಾಡಿದನು: ಒಂದು ಶರೀರ ಮತ್ತು ಒಂದು ಆತ್ಮ. ಮನುಷ್ಯನು ಕೇವಲ ಒಂದು ಪ್ರಾಕೃತಿಕ ಜೀವಿಯಲ್ಲ. ಆತನಿಗೆ ಶರೀರ ಮತ್ತು ಆತ್ಮ ಎರಡೂ ಇತ್ತು. ದೇವರು ಮನುಷ್ಯನನ್ನು ಎರಡು ಹಂತಗಳಲ್ಲಿ ಉಂಟುಮಾಡಿದನು. ವಾಕ್ಯ ಏನು ಹೇಳುತ್ತದೆ ಎಂಬುದನ್ನು ಮತ್ತೆ ಕೇಳಿಸಿಕೊಳ್ಳಿರಿ: ಒಂದು: “ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿದನು. ಎರಡು: ಅವನು ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನು(ಆತ್ಮ)”.

ದೇವರು ಮನುಷ್ಯನನ್ನು ಉಂಟುಮಾಡಿದಾಗ ಆತನು ಮೊದಲು ದೇಹವನ್ನು ರೂಪಿಸಿದನು ಎಂಬುದನ್ನು ಈ ವಾಕ್ಯದಿಂದ ನಾವು ಕಲಿಯುತ್ತೇವೆ. ದೇವರು ಯಾಕೆ ಮೊದಲು ದೇಹವನ್ನು ಮಾಡಿದನು? ಮನುಷ್ಯನ ಆತ್ಮವನ್ನು ಆತನು ಇಡಬೇಕಾಗಿದ್ದಂತಹ ವಾಸಸ್ಥಳ ಇದು ಆಗಬೇಕಾಗಿತ್ತು ಆದುದರಿಂದ ಆತನು ಶರೀರವನ್ನು ಮೊದಲು ರೂಪಿಸಿದನು. ನಿಮ್ಮ ಶರೀರವು ನಿಮ್ಮ ಮನೆಯಾಗಿದೆಯೆಂದು; “ನಿಜವಾದ ನೀವು”(ನಿಮ್ಮ ಆತ್ಮ) ಜೀವಿಸುವಂತಹ ತಾತ್ಕಾಲಿಕ “ಗುಡಾರ” ಇದು ಎಂದು ನಿಮಗೆ ಗೊತ್ತಾ?ಅದನ್ನೇ ವಾಕ್ಯಗಳು ಕಲಿಸಿ ಹೇಳುವದೇನೆಂದರೆ, “ಭೂಮಿಯ ಮೇಲಿರುವ ನಮ್ಮ ಮನೆಯು ಗುಡಾರದ ಹಾಗಿದೆ”(೨ಕೊರಿಂಥ–೫:೧). ಆತ್ಮವು ವಾಸಿಸುವದಕ್ಕಾಗಿ ದೇವರು ಮಾನವನ ಶರೀರವನ್ನು ಸೃಷ್ಟಿಸಿದನು.

ದೇವರು ಯಾವುದರಿಂದ ಮೊದಲು ಮನುಷ್ಯನ ಶರೀರವನ್ನು ಸೃಷ್ಟಿಸಿದನು? ಯೆಹೋವನು ನೆಲದ ಮಣ್ಣಿನಿಂದ ಇದನ್ನು ಮಾಡಿದನೆಂದು ವಾಕ್ಯವು ಹೇಳುತ್ತದೆ. ನಾವು ಜೀವಿಸುತ್ತಿರುವ ಆಧುನಿಕ ಯುಗದಲ್ಲಿ, ಭೂಮಿಯ ಮಣ್ಣು ಸುಮಾರು ಇಪ್ಪತ್ತು ರಾಸಾಯನಿಕಗಳಿಂದ ರಚಿತಗೊಂಡಿದೆ ಎಂದು

ನಾವು ತಿಳಿದುಕೊಂಡಿದ್ದೇವೆ. ಈ ಎಲ್ಲಾ ಇಪ್ಪತ್ತು ರಾಸಾಯನಿಕ ಪದಾರ್ಥಗಳು ಮಾನವನ ಶರೀರದಲ್ಲಿ ಕಂಡುಬರುತ್ತವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಅದಕ್ಕೋಸ್ಕರವೇ ದೇವರ ಪ್ರವಾದಿಯಾಗಿರುವ ದಾವೀದನು ಕೀರ್ತನೆಗಳಲ್ಲಿ ಹೀಗೆ ಬರೆಯುತ್ತಾನೆ: "ಆತನು ನಮ್ಮ ಪ್ರಕೃತಿಯನ್ನು ಬಲ್ಲನು, ನಾವು ಧೂಳಿಯಾಗಿದ್ದೇವೆಂಬುದನ್ನು ನೆನಪು ಮಾಡಿಕೊಳ್ಳುತ್ತಾನೆ" (ಕೀರ್ತನೆ–೧೦೩:೧೪). ಹೌದು, ಶರೀರವು ಮಣ್ಣಿನಿಂದ ಮಾಡಲ್ಪಟ್ಟಿದೆ, ಆದರೆ ಇದು ನಿಷ್ಪ್ರಯೋಜಕವೆಂದು ಇದರ ಅರ್ಥವಲ್ಲ! ಮಾನವನ ಶರೀರದಲ್ಲಿ, ಅಣುಗಳೆಂದು ನಾವು ಕರೆಯುವಂತಹ ಎಪ್ಪತ್ತು ಟ್ರಿಲಿಯನ್ ಗಿಂತಲೂ ಹೆಚ್ಚು ಭಾಗಗಳಿವೆ. ಆ ಎಲ್ಲಾ ಭಾಗಗಳು ಸಂಪೂರ್ಣ ಸಾಮರಸ್ಯದಲ್ಲಿ ಕಾರ್ಯ ಮಾಡುವದಕ್ಕೆ ಒಟ್ಟಾಗಿ ಹೆಣೆಯಲ್ಪಟ್ಟಿವೆ. ಮಾನವನ ಶರೀರವು ಒಂದು ಅದ್ಭುತವಾದುದುದಾಗಿದೆ! ನಮ್ಮ ಶರೀರಗಳಲ್ಲಿ, ದೇವರು ಮೆದುಳು, ಹೃದಯ, ಶ್ವಾಸಕೋಶ, ಪಿತ್ತಜನಕಾಂಗ, ಕರುಳುಗಳು, ಮೂಳೆಗಳು, ಮಾಂಸಖಂಡಗಳು, ಚರ್ಮ, ಕಣ್ಣುಗಳು, ಕಿವಿಗಳು, ಮೂಗು, ಬಾಯಿ ಮತ್ತು ಅನೇಕ ಅನೇಕ ಆಶ್ಚರ್ಯಕರವಾದ ಭಾಗಗಳನ್ನು ಇಟ್ಟಿದ್ದಾನೆ. ಪ್ರತಿಯೊಂದು ಭಾಗವು ತಮ್ಮ ಪಾತ್ರವನ್ನು "ತಿಳಿದಿವೆ". ಕೇವಲ ದೇವರು ಇದನ್ನು ಸೃಷ್ಟಿಮಾಡಿದ್ದಾನೆ! ಅದಕ್ಕಾಗಿಯೇ ಪ್ರವಾದಿ – ಯಾದ ದಾವೀದನು ಸಹ ಹೀಗೆ ಬರೆಯುತ್ತಾನೆ: "ಕರ್ತನೇ ನೀನು ನನ್ನನ್ನು ಅದ್ಭುತವಾಗಿಯೂ ವಿಚಿತ್ರವಾಗಿಯೂ ರಚಿಸಿದ್ದರಿಂದ ನಿನ್ನನ್ನು ಕೊಂಡಾಡುತ್ತೇನೆ. ನಿನ್ನ ಕೃತ್ಯಗಳು ಆಶ್ಚರ್ಯವಾಗಿವೆಯೆಂದು ನನ್ನ ಹೃದಯವು ಚೆನ್ನಾಗಿ ಗ್ರಹಿಸಿಕೊಂಡಿದೆ!" (ಕೀರ್ತನೆ–೧೩೯:೧೪).

ಹೌದು, ಮಾನವನ ಶರೀರವು ಒಂದು ನಂಬಿಕೆಗೆ ಮೀರಿದ ಅದ್ಭುತವಾಗಿದೆ! ಆದಾಗ್ಯೂ ಇದು ದೇವರು ತನ್ನ ಸ್ವಂತ ಸ್ವರೂಪದಲ್ಲಿ ಉಂಟು – ಮಾಡಿದ ಶರೀರವಾಗಿತ್ತಾ? ಇಲ್ಲ! ಇದು ಹಾಗೆ ಮಾಡಲ್ಪಟ್ಟಿಲ್ಲ, ಯಾಕೆಂದರೆ ದೇವರು ಆತ್ಮ ಸ್ವರೂಪನು. ದೇವರು ಮನುಷ್ಯನ ಭೌತಿಕ ರೀತಿಯನ್ನು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಲಿಲ್ಲ. "ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು" ಎಂದು ವಾಕ್ಯವು ನಮಗೆ ಹೇಳುವಾಗ ಹಾಗಾದರೆ ಇದರ ಅರ್ಥವೇನು? ಅಂದರೆ ದೇವರು ಮನುಷ್ಯನ ಆತ್ಮವನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ – ನೆಂದು ಇದರ ಅರ್ಥ. ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿದಾಗ ಅದು ಜೀವವಿಲ್ಲದ್ದಾಗಿತ್ತು ಎಂದು ಈಗಾಗಲೇ ನಾವು ಗಮನಿಸಿದ್ದೇವೆ. ಇದು ಕೇವಲ ಪಾರ್ಥಿವ ದೇಹವಾಗಿತ್ತು. ದೇವರು ಆತ್ಮವನ್ನು ಇಡುವದಕ್ಕಿಂತ ಮುಂಚೆ ಮನುಷ್ಯನ ಶರೀರವನ್ನು ಮೊದಲು ಯಾಕೆ ಸೃಷ್ಟಿಸಿದನು? ಎಲ್ಲಾ ಬಲವುಳ್ಳ ದೇವರು ಇತರ ಎಲ್ಲಾ ಜೀವಿಗಳನ್ನು ಸೃಷ್ಟಿಸಿದ ಹಾಗೆ ಒಂದೇ ಸರಳವಾದ ಹಂತದಲ್ಲಿ ಮನುಷ್ಯನನ್ನು ಯಾಕೆ ಸೃಷ್ಟಿಸಲಿಲ್ಲ? ಮನುಷ್ಯನು ತನ್ನಲ್ಲಿ ತಾನೇ ಜೀವದ ಮೇಲೆ ಬಲವನ್ನು ಹೊಂದಿಲ್ಲ ಎಂಬುದನ್ನು ನಮಗೆ ಈ ರೀತಿಯಲ್ಲಿ ಕಲಿಸುವದಕ್ಕೆ ಬಹುಶ: ಹೀಗೆ ಮಾಡಿರಬಹುದು. ಮನುಷ್ಯನು ತನಗೆ ತಾನೇ ಜೀವವನ್ನು ಕೊಟ್ಟುಕೊಳ್ಳುವದಕ್ಕಾಗುವದಿಲ್ಲ ಮತ್ತು ಜೀವಿಸುವ ಯಾವುದನ್ನೂ ಸೃಷ್ಟಿಸುವದ –ಕ್ಕಾಗುವದಿಲ್ಲ. ದೇವರು ಜೀವದ ಕರ್ತನಾಗಿದ್ದಾನೆ ಮತ್ತು ಆತನಲ್ಲಿ ಮಾತ್ರವೇ ಜೀವವು ಕಂಡುಬರುತ್ತದೆ. ಜೀವವು ಮನುಷ್ಯನಿಂದ ಬರಲಿಲ್ಲ, ಇದು ದೇವರಿಂದ ಬಂದ ಬಹುಮಾನ! ವಾಕ್ಯವು ಹೀಗೆ ಹೇಳುತ್ತದೆ: "ಯೆಹೋವ ದೇವರು ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು, ಅಗ ಮನುಷ್ಯನು ಬದುಕುವ ಪ್ರಾಣಿಯಾದನು". ದೇವರು ಉಂಟುಮಾಡಿದ ಶರೀರವು ಜೀವಿಸುವದಕ್ಕೆ ಪ್ರಾರಂಭಿಸಿತು. ಯಾಕೆ ಇದು ಜೀವಂತವಾಯಿತು? ಯಾಕೆಂದರೆ ಕರ್ತನಾದ ದೇವರು ಅದಕ್ಕೆ ಆತ್ಮವನ್ನು ಕೊಟ್ಟನು! ದೇವರು ತನ್ನ ಜೀವವನ್ನು ಪಾರ್ಥಿವ ದೇಹದೊಳಗೆ ಊದಿದನು. ದೇವರಲ್ಲಿದ್ದ ಜೀವವು ಈಗ ಮನುಷ್ಯನಲ್ಲಿತ್ತು. ಹಾಗಾಗಿ ಮನುಷ್ಯನು ಬದುಕುವ ಜೀವಿಯಾದನು.

ಆದ್ದರಿಂದ ದೇವರು ತನ್ನ ಸ್ವಂತ ಸ್ವರೂಪದಲ್ಲಿ ಯಾವುದನ್ನು ಉಂಟುಮಾಡಿದನು? ಆತ್ಮವನ್ನು. ದೇವರು ಮನುಷ್ಯನ ಆತ್ಮವನ್ನು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದನು. ದೇವರು ಆತ್ಮದಲ್ಲಿ ಕಂಡುಬರುವಂತಹ ಕೆಲವು ಗುಣಲಕ್ಷಣಗಳು ಮನುಷ್ಯನ ಆತ್ಮದಲ್ಲಿಯೂ ಸಹ ಕಂಡುಬರು– ತ್ತವೆಂಬುದು ನಿಮಗೆ ತಿಳಿದಿದೆಯೋ? ಈದಿನದ ಪಾಠವನ್ನು ಮುಗಿಸುವದಕ್ಕಿಂತ ಮುಂಚೆ, ದೇವರಲ್ಲಿ ಕಂಡುಬರುವ ಮೂರು ವಿಶೇಷಗುಣಗಳು ಅಥವಾ ಲಕ್ಷಣಗಳು ಮನುಷ್ಯನಲ್ಲಿಯೂ ಕಂಡುಬಂದಿರುವದನ್ನು ಆಲೋಚಿಸುವದಕ್ಕೆ ನಾವು ಬಯಸುತ್ತೇವೆ. ದೇವರೊಂದಿಗೆ ನಾವು ಹಂಚಿ – ಕೊಂಡಿರುವ ಈ ಮೂರು ಲಕ್ಷಣಗಳ ಕುರಿತಾಗಿ ನಾವು ಆಲೋಚಿಸುತ್ತಿದ್ದ ಹಾಗೆ "ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮನುಷ್ಯನನ್ನು ಉಂಟು – ಮಾಡಿದನು" ಎಂದು ವಾಕ್ಯವು ಹೇಳಿರುವಾಗ ಇದರ ಅರ್ಥವೇನೆಂಬುದನ್ನು ನಾವು ತಿಳಿದುಕೊಳ್ಳುವದು ಒಳ್ಳೆಯದು. ಈ ಕೆಳಗಿರುವವುಗಳು ದೇವರು ಮನುಷ್ಯನಲ್ಲಿ ಇಟ್ಟಂತಹ ಮೂರು ಲಕ್ಷಣಗಳಾಗಿವೆ:

ಒಂದು: ದೇವರು ಮನುಷ್ಯನಿಗೆ ಮನಸ್ಸನ್ನು(ಆತ್ಮ) ಕೊಟ್ಟನು, ಹಾಗಾಗಿ ಅವನು ದೇವರನ್ನು ತಿಳಿದುಕೊಂಡನು.
ಎರಡು: ದೇವರು ಕನುಷ್ಯನಿಗೆ ಹೃದಯವನ್ನು(ಮನೋಭಾವವನ್ನು) ಕೊಟ್ಟನು, ಹಾಗಾಗಿ ಅವನು ದೇವರನ್ನು ಪ್ರೀತಿಸಿದನು.
ಮೂರು: ದೇವರು ಮನುಷ್ಯನಿಗೆ ಇಚ್ಛೆಯನ್ನು(ಆಯ್ಕೆಯ ಸ್ವಾತಂತ್ರ್ಯ) ಕೊಟ್ಟನು, ಹಾಗಾಗಿ ಅವನು ದೇವರಿಗೆ ವಿಧೇಯನಾದನು.

ದೇವರು ಒಂದು ಮನಸ್ಸು, ಒಂದು ಹೃದಯ, ಮತ್ತು ಒಂದು ಚಿತ್ತದ ಒಡೆಯನಾಗಿರುವ ಹಾಗೆಯೇ, ಆತನು ಮನುಷ್ಯನ ಆತ್ಮದಲ್ಲಿ ಒಂದು ಮನಸ್ಸನ್ನು, ಒಂದು ಹೃದಯವನ್ನು, ಮತ್ತು ಒಂದು ಚಿತ್ತವನ್ನು ಇಟ್ಟನು. ಇದರ ಅರ್ಥವೇನೆಂಬುದನ್ನು ಈಗ ಆಲೋಚಿಸೋಣ.

೧) ಮೊದಲು ದೇವರು ಮನುಷ್ಯನಿಗೆ ತನ್ನನ್ನು ತಿಳಿದುಕೊಳ್ಳುವ ಸಾಮರ್ಥ್ಯವಿರುವ ಮತ್ತು ತಾನು ಆಲೋಚಿಸುವ ಹಾಗೆ ಆಲೋಚಿಸುವಂತಹ ಮನಸ್ಸನ್ನು ಕೊಟ್ಟನು. ಮನುಷ್ಯನು ತನ್ನೊಂದಿಗೆ ಆಪ್ತ ಸಂಬಂಧವನ್ನು ಹೊಂದುವದಕ್ಕೆ ದೇವರು ಯೋಜನೆ ಮಾಡಿಕೊಂಡದ್ದರಿಂದ ಅಂತಹ ಶಕ್ತಿಯುತವಾದ ಮನಸ್ಸಿನೊಂದಿಗೆ ಮನುಷ್ಯನನ್ನು ಉಂಟುಮಾಡಿದನು. ದೇವರ ಪ್ರವಾದಿಯಾಗಿರುವ ಅಬ್ರಹಾಮನ ಜೀವಿತದ ಕುರಿತಾಗಿ ನಾವು ಓದುವಾಗ, ಅವನು ದೇವರ ಸ್ನೇಹಿತನೆಂಬುದಾಗಿ ಕರೆಯಲ್ಪಟ್ಟಿರುವದನ್ನು ನಾವು ನೋಡುತ್ತೇವೆ. ಅಬ್ರಹಾಮನು ದೇವನ್ನು ವ್ಯಯಕ್ತಿಕವಾಗಿ ತಿಳಿದುಕೊಂಡಿದ್ದನು ಮತ್ತು ಆತನೊಂದಿಗೆ ಆಪ್ತ ಸಂಬಂಧವನ್ನು ಹೊಂದಿದ್ದನು. ಹೀಗಿದ್ದರೂ, ಅಬ್ರಹಾಮನು ಮಾತ್ರ ದೇವರ ಸ್ನೇಹಿತನಾಗಿರು –ವದಕ್ಕೆ ವಿಶೇಷ ಪ್ರಯೋಜನವನ್ನು ಹೊಂದಿದವನಾಗಿಲ್ಲ. ನಾವು ಸಹ ದೇವರ ಸ್ನೇಹಿತರಾಗಬಹುದು. ಆತನೊಂದಿಗೆ ಆಪ್ತ ಸಂಬಂಧವನ್ನು ನಾವು ಹೊಂದಿಕೊಳ್ಳುವದಕ್ಕೆ ದೇವರು ಇಷ್ಟಪಡುತ್ತಾನೆ. ಅದಕ್ಕೋಸ್ಕರವೇ ಆತನು ಮನುಷ್ಯನ ಆತ್ಮದಲ್ಲಿ ಓಂದು ಮನಸ್ಸನ್ನು(ಆತ್ಮವನ್ನು) ಇಟ್ಟನು, ಅದು ದೇವರ ಮನಸ್ಸಿನೊಂದಿಗೆ(ಆತ್ಮದೊಂದಿಗೆ) ಸಾಮರಸ್ಯವುಳ್ಳದ್ದಾಗಿದೆ.

ಒಂದು ಪ್ರಾಣಿಯಿಂದ ಒಬ್ಬ ಮನುಷ್ಯನನ್ನು ವ್ಯತ್ಯಾಸಗೊಳಿಸುವದು ಯಾವುದು? ಎಂಬ ಒಂದು ಪ್ರಶ್ನೆಯೊಂದಿಗೆ ನಾವು ಏನು ಹೇಳುತ್ತೇವೋ ಅದನ್ನು ಬಹುಮಟ್ಟಿಗೆ ಸ್ಪಷ್ಟಪಡಿಸಬಹುದು. ಇದಕ್ಕೆ ಉತ್ತರ ಮನಸ್ಸು. ಮನುಷ್ಯನ ಮನಸ್ಸು ಮತ್ತು ಆತ್ಮವು ಒಂದು ಪ್ರಾಣಿಯ ಮನಸ್ಸಿಗಿಂತ ತುಂಬಾ ವ್ಯತ್ಯಾಸವುಳ್ಳದ್ದಾಗಿದೆ. ಪ್ರಾಣಿಗಳು ಯಾಕೆ ಈ ರೇಡಿಯೋ ಕಾರ್ಯಕ್ರಮಗಳನ್ನು ಅರ್ಥಮಾಡಿಕೊಳ್ಳುವದಿಲ್ಲ? ಯಾಕೆಂದರೆ ನಾವು ಹೊಂದಿರುವ ಹಾಗೆ ಅದೇ ರೀತಿಯ ಮನಸ್ಸನ್ನು ಪ್ರಾಣಿಗಳು ಹೊಂದಿಲ್ಲ. ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನಮ್ಮ ಮಾತುಗಳನ್ನು ಅರ್ಥಮಾಡಿಕೊಳ್ಳುವದಕ್ಕೆ ನೀವು ಯಾಕೆ ಸಮರ್ಥರಾಗಿದ್ದೀರಿ? ಯಾಕೆಂದರೆ ಮಾನವನ ಮನಸ್ಸಿನ ರೀತಿಯ ಮನಸ್ಸನ್ನು ನೀವು ಹಂಚಿಕೊಂಡಿದ್ದೀರಿ. ಇದೇ ರೀತಿಯಲ್ಲಿ, ಮನುಷ್ಯನ ಆತ್ಮವು ದೇವರ ಆತ್ಮದೊಂದಿಗೆ ಸಾಮರಸ್ಯದಿಂದಿರುವದಕ್ಕೆ(ಅನ್ಯೋನ್ಯತೆ) ರೂಪಿಸಲ್ಪಟ್ಟಿದೆ.

ಖಂಡಿತವಾಗಿ, ಈ ರೀತಿ ಹೇಳುವದರಲ್ಲಿ, ಜ್ಞಾನ ಮತ್ತು ತಿಳುವಳಿಕೆಯಲ್ಲಿ ದೇವರ ಮನಸ್ಸು ಮತ್ತು ನಮ್ಮ ಮನಸ್ಸು ಎರಡೂ ಸಮಾನವಾಗಿವೆ ಎಂದು ನಾವು ಯೋಚಿಸಬಾರದು. ಎಂದಿಗೂ ಇಲ್ಲ! ದೇವರ ಜ್ಞಾನವು ಆಳವಾದದು, ಮತ್ತು ಆತನ ತಿಳುವಳಿಕೆಯು ಮನುಷ್ಯನ ಜ್ಞಾನವನ್ನು ಅಧಿಕ ದೂರದಲ್ಲಿ ಮೀರಿಸುವಂತದ್ದಾಗಿದೆ. ನಾವು ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ; ಜೀವಿಸುವ ದೇವರೊಂದಿಗೆ ಒಂದು ಅರ್ಥಗರ್ಭಿತವಾದ ಸಂಬಂಧವನ್ನು ಆನಂದಿಸುವದಕ್ಕೆ ಸಾಧ್ಯತೆಯಿರುವ ಒಂದು ಆತ್ಮವನ್ನು ದೇವರು ಮನುಷ್ಯನಿಗೆ ಕೊಟ್ಟಿದ್ದಾನೆ. ಆತನನ್ನು ತಿಳಿಯದಿರುವ ಪ್ರಾಣಿಯ ಹಾಗೆ ನೀವಿರುವದಕ್ಕೆ ದೇವರು ಇಷ್ಟಪಡುವದಿಲ್ಲ! ಒಂದು ಪ್ರಾಣಿಯು ಮೆದುಳನ್ನು ಹೊಂದಿದೆ, ಆದರೆ ದೇವರ ಕುರಿತು ಅದು ಯೋಚಿಸುವ – ದಿಲ್ಲ. ಒಂದು ಪ್ರಾಣಿಯು ಬಾಯನ್ನು ಹೊಂದಿದೆ ಆದರೆ ಪ್ರತಿದಿನ ತನಗೆ ಆಹಾರವನ್ನು ಕೊಡುವಂತಹ ದೇವರಿಗೆ ಅದು ಕೃತಜ್ಞತೆಯನ್ನು ಸಲ್ಲಿಸುವದಿಲ್ಲ. ಅದಕ್ಕೆ ಕಣ್ಣುಗಳಿವೆ, ಆದರೆ ಅದು ಪರಿಶುದ್ಧ ವಾಕ್ಯಗಳನ್ನು ಅಭ್ಯಾಸ ಮಾಡುವದಿಲ್ಲ. ಅದಕ್ಕೆ ಕಿವಿಗಳಿವೆ, ಆದರೆ ಅದು ದೇವರ ವಾಕ್ಯವನ್ನು ಕೇಳಿಸಿಕೊಳ್ಳುವದಿಲ್ಲ. ಹೇಗೂ, ದೇವರು ತನ್ನ ಸ್ವರೂಪದಲ್ಲಿ ಸೃಷ್ಟಿಮಾಡಿದ ಮನುಷ್ಯನು, ಕರ್ತನಾದ ದೇವರನ್ನು ತಿಳಿದುಕೊಂಡನು. ಹೌದು, ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು ದೇವರನ್ನು ತಿಳಿದುಕೊಳ್ಳಿರಿ! ಆತನು ಸ್ಥಾಪಿಸಿರುವ ರಕ್ಷಣೆಯ ನೀತಿಯುಳ್ಳ ದಾರಿಯನ್ನು ಪಡೆದುಕೊಂಡು ನಂಬಿದರೆ ನಿಮ್ಮ ಸೃಷ್ಟಿಕರ್ತನೊಂದಿಗೆ ಅದ್ಭುತಕರವಾದ ಸಂಬಂಧವನ್ನು ಹೊಂದಿಕೊಳ್ಳುತ್ತೀರಿ, ಮುಂಬರುವ ಪಾಠಗಳಲ್ಲಿ ಸೃಷ್ಟಿಕರ್ತನೊಂದಿಗಿನ ನಿಮ್ಮ ಅದ್ಭುತಕರವಾದ ಸಂಬಂಧವನ್ನು ನಾವು ವಿವರಿಸುತ್ತೇವೆ, ಆದರೆ ಆತನನ್ನು ತಿಳಿದುಕೊಳ್ಳುವಂತಹ ಸಾಮರ್ಥ್ಯವುಳ್ಳ ಒಂದು ಆತ್ಮವನ್ನು ದೇವರು ಮನುಷ್ಯನಿಗೆ ಕೊಟ್ಟಿರುವದನ್ನು ಈದಿನ ನೀವು ಅರ್ಥಮಾಡಿಕೊಳ್ಳಲೇಬೇಕು.

೨) ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದಾಗ ಅವನ ಆತ್ಮದಲ್ಲಿ ಏನೋ ಒಂದನ್ನು ಇಟ್ಟನು. ಅದು ಹೃದಯ. ದೇವರು ಮನುಷ್ಯನಿಗೆ ಹೃದಯ ಕೊಟ್ಟಿದ್ದರಿಂದ ಅವನು ದೇವರನ್ನು ಪ್ರೀತಿಸಿದನು. ರಕ್ತವನ್ನು ಪಂಪ್ ಮಾಡುವ ಹೃದಯದ ಕುರಿತಾಗಿ ನಾವು ಮಾತಾಡುತ್ತಿಲ್ಲ, ಆದರೆ ನಿಮ್ಮ ಆತ್ಮದಲ್ಲಿ, ನಿಮ್ಮ ಭಾವೋದ್ವೇಗಗಳಲ್ಲಿ, ಮತ್ತು ನಿಮ್ಮ ಆಲೋಚನೆಗಳಲ್ಲಿ ಯಾವುದನ್ನು ಅನುಭವಪಡುತ್ತೀರೋ ಅದರ ಕುರಿತಾಗಿ ಮಾತಾಡುತ್ತಿದ್ದೇವೆ. ನಿಮ್ಮ ಹೃದಯದ ವಾಸ್ತವಿಕ ಅಭಿಪ್ರಾಯಗಳ ಕುರಿತು ನಾವು ಮಾತಾಡುತ್ತಿದ್ದೇವೆ. ದೇವರು ತಾನೇ ಅನುಭವಪಡು– ವಂತಹ ಭಾವೋದ್ವೇಗಗಳನ್ನು ಅನುಭವಪಡುವದಕ್ಕೆ ದೇವರು ಮೊದಲ ಮನುಷ್ಯನಿಗೆ ಸಾಮರ್ಥ್ಯವನ್ನು ಕೊಟ್ಟನು. ದೇವರು ಪ್ರೀತಿಸುತ್ತಾಎನ, ದ್ವೇಷಿಸುತ್ತಾನೆ, ದುಖಿ:ವನ್ನು ಮತ್ತು ಕನಿಕರವನ್ನು ಅನುಭವಪಡುತ್ತನೆ. ಆದುದರಿಂದ ಪ್ರೀತಿ ಮತ್ತು ದ್ವೇಷವೆನ್ನುವಂತಹ ಭಾವೋದ್ವೇಗಗಳನ್ನು ಅನುಭವಪಡುವಂತಹ ಸಾಮರ್ಥ್ಯವಿರುವ ಒಂದು ಹೃದಯವನ್ನು ದೇವರು ಮನುಷ್ಯನ ಆತ್ಮದೊಳಗೆ ಇಟ್ಟನು. ತಾನು ಯಾವುದನ್ನು ದ್ವೇಷಿಸುತ್ತಾನೋ ಅದನ್ನು ಮನುಷ್ಯನು ದ್ವೇಷಿಸುವದಕ್ಕೆ ಮತ್ತು ತಾನು ಯಾವುದನ್ನು ಪ್ರೀತಿಸುತ್ತಾನೋ ಅದನ್ನು ಮನುಷ್ಯನು ಪ್ರೀತಿಸುವದಕ್ಕೆ ದೇವರು ಬಯಸಿದನು. ನಾವು ಹೃದಯಪೂರ್ವಕವಾಗಿ ಆತನನ್ನು ಪ್ರೀತಿಸುವದನ್ನು ದೇವರು ಇಷ್ಟಪಡುತ್ತಾನೆ. ಅದಕ್ಕಾಗಿಯೇ ಆತನು ತನ್ನ ಸ್ವಂತ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿ ಒಂದು ಹೃದಯವನ್ನು ಕೊಟ್ಟನು.

೩) ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದ ಮನುಷ್ಯನಿಗೆ ದೇವರು ಏನೋ ಒಂದನ್ನು ಕೊಟ್ಟನು. ಆತನು ಮನುಷ್ಯನ ಆತ್ಮದಲ್ಲಿ ಒಂದು ಚಿತ್ತವನ್ನಿಟ್ಟನು. ತನ್ನ ಸ್ವಂತ ದಾರಿಯನ್ನು ಆರಿಸಿಕೊಳ್ಳುವದಕ್ಕೆ ಪ್ರತಿಯೊಬ್ಬ ವ್ಯಕ್ತಿಗೂ ದೇವರು ಅನುಮತಿಯನ್ನು ಕೊಟ್ಟಿದ್ದಾನೆ. ಆತನು ಏನಾದರೊಂದನ್ನು ಮಾಡುವದು ಅಥವಾ ಮಾಡದಿರುವದನ್ನು ಆರಿಸಿಕೊಳ್ಳುವದಕ್ಕೆ ದೇವರು ತಾನೇ ಅಧಿಕಾರವನ್ನು ಹೊಂದಿದ್ದನು. ಹಾಗಾಗಿ, ತನಗಾಗಿ ಪ್ರಾಮುಖ್ಯವಾದ ಆಯ್ಕೆಗಳನ್ನು ಮಾಡುವದಕ್ಕೆ ಜವಾಬ್ದಾರಿ ಮತ್ತು ಅಧಿಕಾರದೊಂದಿಗೆ ದೇವರು ಮನುಷ್ಯನನ್ನು ಉಂಟುಮಾಡಿದನು. ದೇವರು ಮನುಷ್ಯನನ್ನು ಸೃಷ್ಟಿಸಿದನು ಹಾಗಾಗಿ ಅವನು (ಯಾಂತ್ರಿಕವಾಗಿ) ಆತನು ಚಿತ್ತವನ್ನು ಮಾಡುವವನಾದನು, ಮತ್ತು ಈ ವಿಷಯದಲ್ಲಿ ಅವನಿಗೆ ಯಾವುದೇ ಆಯ್ಕೆಯನ್ನು ಹೊಂದಿರಲಿಲ್ಲ. ಹೇಗಿದ್ದರೂ, ದೇವರಿಗೆ ವಿಧೇಯನಾಗುವದೋ ಇಲ್ಲವೋ ಎನ್ನುವದನ್ನು ತಾನೇ ಆರಿಸಿ – ಕೊಳ್ಳುವದಕ್ಕೆ ದೇವರು ಮನುಷ್ಯನಿಗೆ ಉಚಿತವಾದ ಚಿತ್ತವನ್ನೂ ಮತ್ತು ಜವಾಬ್ದಾರಿಯನ್ನು ಕೊಟ್ಟನು. ದೇವರು ಕೇವಲ ಒಂದು ಯಂತ್ರವನ್ನು (ರೋಬೋಟ್) ಸೃಷ್ಟಿಸುವದಕ್ಕೆ ದೇವರು ಬಯಸಲಿಲ್ಲ. ಪ್ರತಿದಿನ ಉದಯಿಸುವ ಸೂರ್ಯನ ಸ್ವರೂಪದಲ್ಲಿ ದೇವರು ಮನುಷ್ಯನನ್ನು ಉಂಟು – ಮಾಡಲಿಲ್ಲ, ಆದರೆ ವಿಷಯದಲ್ಲಿ ಆಯ್ಕೆಯನ್ನು ಹೊಂದಿರಲಿಲ್ಲ. ಸೂರ್ಯನು ಪ್ರತಿದಿನ "ಯಾಂತ್ರಿಕವಾಗಿ" ದೇವರ ಚಿತ್ತವನ್ನು ನೆರವೇರಿಸುತ್ತಾನೆ. ಅದು ಮನುಷ್ಯನೊಂದಿಗೆ ಯಾಕೆ ಆಗಲಿಲ್ಲ. ಯಾಕೆಂದರೆ ಮನುಷ್ಯನು ಒಂದು ವಿಶೇಷವಾದ ಸೃಷ್ಟಿಯಾಗಿದ್ದಾನೆ. ದೇವರು ನಮ್ಮನ್ನು ಆತನಿಗಾಗಿ ಉಂಟುಮಾಡಿದನು. ಆತನನ್ನು ಪ್ರೀತಿಸುವದನ್ನು ಮತ್ತು ಆರಾಧಿಸುವದನ್ನು ನಾವು ಆರಿಸಿಕೊಳ್ಳುವದಕ್ಕೆ ದೇವರು ಇಷ್ಟಪಟ್ಟನು. ಒಂದು ದೊಡ್ಡದಾದ ಜವಾಬ್ದಾರಿಯನ್ನು ದೇವರು ಮನುಷ್ಯನ ವಶಕ್ಕೆ ಒಪ್ಪಿಸಿದನು! ದೇವರನ್ನು ಅಥವಾ ಸೈತಾನನನ್ನು ಎರಡರಲ್ಲಿ ಒಂದನ್ನು ಹಿಂಬಾಲಿಸುವದಕ್ಕೆ ಮನುಷ್ಯನು ತಾನೇ ಆರಿಸಿಕೊಳ್ಳಬೇಕು, ಮತ್ತು ದೇವರ ವಾಕ್ಯವನ್ನು ಪ್ರೇಮದಿಂದ ಪಾಲಿಸುವದನ್ನು ಅಥವಾ ಅದನ್ನು ಕಡೆಗಣಿಸುವದನ್ನು ತಾನೇ ಆರಿಸಿಕೊಳ್ಳಬೇಕು. ತನ್ನ ವಾಕ್ಯವನ್ನು ನಂಬುವದಕ್ಕೆ ದೇವರು ಯಾರೊಬ್ಬರನ್ನೂ ಬಲವಂತಪಡಿಸುವದಿಲ್ಲ. ಆತನನ್ನು ಪ್ರೀತಿಸುವದಕ್ಕೂ ಮತ್ತು ವಿಧೇಯವಾಗುವದಕ್ಕೂ ದೇವರು ಎಂದಿಗೂ ಬಲವಂತಪಡಿಸುವದಿಲ್ಲ. ಪ್ರೀತಿಯನ್ನು ಬಲಪ್ರಯೋಗಮಾಡಿದರೆ ಅದು ಪ್ರೀತಿಯಾಗುವದಿಲ್ಲ. ನಾವು ಯಾವ ದಾರಿಯನ್ನು ಅನುಸರಿಸಬೇಕೆನ್ನುವದನ್ನು ನಾವೇ ಆರಿಸಿಕೊಳ್ಳುವದಕ್ಕೆ ದೇವರು ನಮಗೆ ಪ್ರತಿಯೊಬ್ಬರಿಗೆ ಅನುಮತಿಸಿದ್ದಾನೆ. ಆದರೆ, ಕೊನೆಯಲ್ಲಿ, ಆತನ ರಾಜ್ಯವನ್ನು ಯಾರು ತಿರಸ್ಕರಿಸುತ್ತಾರೋ ಅಂತಹ ಪ್ರತಿಯೊಬ್ಬರಿಗೆ ದೇವರು ತೀರ್ಪುಕೊಡುತ್ತಾನೆ, ಯಾಕೆಂದರೆ ದೇವರು ಮನುಷ್ಯನನ್ನು ತನಗಾಗಿ ಸೃಷ್ಟಿಸಿದನು. ಅದಕ್ಕಾಗಿ ವಾಕ್ಯ ಹೀಗೆ ಹೇಳುತ್ತದೆ:

ನಾವು ದೇವರಿಗಾಗಿ ಈ ಭೂಮಿಯ ಮೇಲಿದ್ದೇವೆ. ನಾವು ಇಲ್ಲಿ ನಮಗಾಗಿ, ಹಣಕ್ಕಾಗಿ, ಯಾವುದಕ್ಕಾದರೂ ಅಥವಾ ಯಾರೊಬ್ಬರಿಗಾದರು ಇಲ್ಲ. ದೇವರು ತನಗಾಗಿ ನಮ್ಮನ್ನು ಸೃಷ್ಟಿಸಿದನು; ತನ್ನ ಸಂತೋಷ ಮತ್ತು ಮಹಿಮೆಗಾಗಿ ನಮ್ಮನ್ನು ಉಂಟುಮಾಡಿದನು. ಎಂದೆಂದಿಗೂ ಆತನನ್ನು ತಿಳಿದುಕೊಳ್ಳುವದಕ್ಕಾಗಿ, ಪ್ರೀತಿಸುವದಕ್ಕಾಗಿ, ಮತ್ತು ಆತನಿಗೆ ವಿಧೇಯರಾಗಿರುವದಕ್ಕಾಗಿ ದೇವರು ನಮ್ಮನ್ನು ಉಂಟುಮಾಡಿದನು! ನಿತ್ಯನಾದ ದೇವರು ಪ್ರತಿಯೊಬ್ಬರಿಗೆ ಒಂದು ನಿತ್ಯವಾದ ಆತ್ಮವನ್ನು ಕೊಟ್ಟಿದ್ದಾನೆ. ದೇವರೊಂದಿಗೆ ಇಂದು, ನಾಳೆ ಮತ್ತು ನಿತ್ಯತ್ವದುದ್ದಕ್ಕೂ ಒಂದು ಆಳವಾದ ಮತ್ತು ಅದ್ಭುತವಾದ ಸಂಬಂಧವನ್ನು ನಾವು ಹೊಂದಿರಬೇಕೆಂಬುದು ಆತನ ಚಿತ್ತವಾಗಿದೆ. ಈ ಕಾರಣಕ್ಕಾಗಿ ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು.

ಮನುಷ್ಯನಿಗಾಗಿ ಇರುವಂತ ದೇವರ ಉದ್ದೇಶವನ್ನು ನಮಗೆ ಜ್ಞಾಪಿಸುವಂತಹ ಪರಿಶುದ್ಧ ವಾಕ್ಯಗಳ ಈ ವಚನದಿಂದ ನಿಮಗೆ ನಾವು ಹಾರೈಸಿ ಬೀಳ್ಕೊಡುತ್ತೇವೆ: "ನಮ್ಮ ದೇವರಾದ ಕರ್ತನು ಒಬ್ಬನೇ ದೇವರು; ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯದಿಂದಲೂ ಪೂರ್ಣ ಪ್ರಾಣದಿಂದಲೂ ಪೂರ್ಣಬುದ್ಧಿಯಿಂದಲೂ ಪೂರ್ಣಶಕ್ತಿಯಿಂದಲೂ ಪ್ರೀತಿಸಬೇಕು"(ಮಾರ್ಕ–೧೨:೩೦).

ಕೇಳಿಸಿಕೊಂಡಿದ್ದಕ್ಕಾಗಿ ನಿಮಗೆ ವಂದನೆಗಳು. ದೇವರ ಚಿತ್ತವಾದರೆ, ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ಮೊದಲನೆಯ ಮನುಷ್ಯರಾದ ಆದಾಮ ಮತ್ತು ಹವ್ವ ಇವರುಗಳ ಕುರಿತಾಗಿ ಕಲಿತುಕೊಳ್ಳೋಣ.

ದೇವರು ನಿಮ್ಮ ಆಶೀರ್ವದಿಸಿ, ಎಂದಿಗೂ ಹೇಳಲ್ಪಟ್ಟಿರುವ ದೊಡ್ಡದಾದ ಆಜ್ಞೆಯ ಅರ್ಥ ಮತ್ತು ಪ್ರಾಮುಖ್ಯತೆಯೊಳಗೆ ಸೂಕ್ಷ್ಮ ಪರಿಜ್ಞಾನವನ್ನು ನಿಮಗೆ ದಯಪಾಲಿಸಲಿ:

"ನಿನ್ನ ದೇವರಾದ ಕರ್ತನನ್ನು ಪೂರ್ಣ ಹೃದಯಿಂದಲೂ, ಪೂರ್ಣ ಪ್ರಾಣದಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕು!"(ಮಾರ್ಕ–೧೨:೩೦).

ಪಾಠ ೬

# ಆದಾಮ ಮತ್ತು ಹವ್ವ ಹಾಗು ಪರದೈಸಿನ ಉದ್ಯಾನವನ

ಆದಿಕಾಂಡ ೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯ –ಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ಪ್ರಾರಂಭದಲ್ಲಿ ಏನು ಸಂಭವಿಸಿತೆಂಬುದರ ಕುರಿತಾದ ನಮ್ಮ ಅಧ್ಯಯನವನ್ನು ನಾವು ಮುಂದುವರಿಸುತ್ತಿದ್ದೇವೆ. ಈ ದಿನದ ಪಾಠದಲ್ಲಿ ನಾವು ಆದಾಮ ಮತ್ತು ಹವ್ವರನ್ನು ಸಂಧಿಸಲಿಕ್ಕಿದ್ದೇವೆ, ಮತ್ತು ಭೂಮಿಯ ಮೇಲಿನ ಅವರ ಮೊದಲ ದಿನದ ಕುರಿತಾಗಿ ಕಲಿಯಲಿಕ್ಕಿದ್ದೇವೆ.

"ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣಮಾಡಿದನು"(ವಿಮೋ–೨೦:೧೧). ಎಂಬುದಾಗಿ ತೋರಾದಲ್ಲಿರುವದನ್ನು ನಾವು ಈಗಾಗಲೇ ಓದಿದ್ದೇವೆ. ಆರನೆಯ ದಿನದಲ್ಲಿ ದೇವರು ಮೊದಲನೆಯ ಮನುಷ್ಯನನ್ನು ಹೇಗೆ ಉಂಟುಮಾಡಿದನೆಂಬುದನ್ನು ಸಹ ನಾವು ಗಮನಿಸಿದ್ದೇವೆ. ದೇವರು ಮನುಷ್ಯನನ್ನು ಒಂದು ಶರೀರ ಮತ್ತು ಆತ್ಮದೊಂದಿಗೆ ನಿರ್ಮಾಣ ಮಾಡಿದನು. ದೇವರು ನೆಲದ ಮಣ್ಣಿನಿಂದ ಮನುಷ್ಯನ ಶರೀರವನ್ನು ಮಾಡಿದನು ಮತ್ತು ನಂತರ ಇದರಲ್ಲಿ ನಿತ್ಯವಾದ ಆತ್ಮವನ್ನು ಇಟ್ಟನು. ದೇವರು ಮನುಷ್ಯನ ಆತ್ಮವನ್ನು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದನು. ಇದರ ಅರ್ಥವೇನೆಂದರೆ, ದೇವರು ಮನುಷ್ಯನ ಆತ್ಮದಲ್ಲಿ ಒಂದು ವಿಶೇಷವಾದ ಮನಸ್ಸನ್ನು(ಆತ್ಮ) ಇಟ್ಟನು, ಹಾಗಗಿ ಮನುಷ್ಯನು ದೇವರನ್ನು ತಿಳಿದುಕೊಳ್ಳುವದಕ್ಕಾಯಿತು. ದೇವರು ಮನುಷ್ಯನಿಗೆ ಒಂದು ಹೃದಯವನ್ನು ಸಹ ಕೊಟ್ಟನು, ಇದರೊಂದಿಗೆ ಅವನು ದೇವರನ್ನು ಪ್ರೀತಿಸುವದಕ್ಕಾಯಿತು. ಮತ್ತು ದೇವರು ಒಂದು ಚಿತ್ತವನ್ನು (ಉಚಿತವಾದ ಆಯ್ಕೆ) ಮನುಷ್ಯನಿಗೆ ಒಪ್ಪಿಸಿಕೊಟ್ಟನು, ಇದರಿಂದ ದೇವರಿಗೆ ವಿಧೇಯನಾಗುವದು ಅಥವಾ ಅವಿಧೇಯನಾಗುವದು ಇವೆರಡರಲ್ಲಿ ಒಂದನ್ನು ಮನುಷ್ಯನು ತಾನೇ ಆರಿಸಿಕೊಳ್ಳುವದಕ್ಕಾಯಿತು.

ದೇವರು ಮೊದಲನೆಯ ಮನುಷ್ಯನ ಸೃಷ್ಟಿಯನ್ನು ಮುಗಿಸಿದ ನಂತರ, ತನ್ನ ಸೃಷ್ಟಿಯ ಕಾರ್ಯದಿಂದ ವಿಶ್ರಾಂತಿ ತೆಗೆದುಕೊಳ್ಳುವದಕ್ಕಿಂತ ಮುಂಚೆ ಇತರ ವಿಷಯಗಳನ್ನು ಆತನು ಮಾಡಬೇಕಾಗಿತ್ತು. ಈ ಕೆಲಸಗಳನ್ನೇ ಈದಿನ ನಾವು ಕಲಿಯುವದಕ್ಕೆ ಬಯಸುತ್ತೇವೆ. ತೋರಾದಲ್ಲಿರುವ ಆದಿಕಾಂಡ ಪುಸ್ತಕದ ಎರಡನೆಯ ಅಧ್ಯಾಯದಲ್ಲಿರುವದನ್ನು ಮುಂದುವರಿಸೋಣ. ಏಳನೆಯ ವಚನದಿಂದ ನಾವು ಪ್ರಾರಂಭಿಸೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

"ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು. ಆಗ ಮನುಷ್ಯನು ಬದುಕುವ ಪ್ರಾಣಿಯಾದನು. ಇದಲ್ಲದೆ ಯೆಹೋವ ದೇವರು ಮೂಡಣ ದಿಕ್ಕಿನಲ್ಲಿರುವ ಮೂಡಣ ದಿಕ್ಕಿನಲ್ಲಿ ಒಂದು ಉದ್ಯಾನವನವನ್ನು ಮಾಡಿ ತಾನು ರೂಪಿಸಿದ ಮನುಷ್ಯನನ್ನು ಅದರಲ್ಲಿ ಇರಿಸಿದನು"(ಆದಿ–೨: ೭–೮).

ತಾನು ಸೃಷಇಷ್ಟಿಸಿದ ಮನುಷ್ಯನಿಗಾಗಿ ದೇವರು ಒಂದು ಅತ್ಯಾನಂದಗೊಳಿಸುವ ಉದ್ಯಾನವನವನ್ನು ಹೇಗೆ ಸಿದ್ಧಪಡಿಸಿದನೆಂಬುದನ್ನು ವಾಕ್ಯ ನಮಗೆ ಹೇಳುತ್ತದೆ. ಆ ತೋಟವು ಏದೆನ್(ಅತ್ಯಾನಂದ) ಅಥವಾ ಪರದೈಸಿನ ಉದ್ಯಾನವನ ಎಂಬುದಾಗಿ ಕರೆಯಲ್ಪಟ್ಟಿತ್ತು. ದೇವರು ಮೊದಲ ಮನುಷ್ಯನಿಗಾಗಿ ಇಟ್ಟಂತಹ ಈ ಉದ್ಯಾನವನವು ಪರಲೋಕದಲ್ಲಿತ್ತು ಎಂಬುದಾಗಿ ಕೆಲವರು ಆಲೋಚಿಸುತ್ತಾರೆ. ಹೇಗೂ ಇದು ಪೂರ್ವದಲ್ಲಿರುವ ಏದೆನಿನಲ್ಲಿ ಭೂಮಿಯ ಮೇಲೆಯೆ ಸಿದ್ಧಗೊಂಡಿತ್ತು ಎಂಬುದಾಗಿ ವಾಕ್ಯಗಳು ನಮಗೆ ತೋರಿಸಿಕೊಡುತ್ತವೆ, ಬಹುಮಟ್ಟಿಗೆ ಇದು ಈದಿನ ಇರಾಕ್ ಆಗಿರುವಂತ ದೇಶದಲ್ಲಿತ್ತು. ದೇವರ ಪ್ರವಾದಿಗಳ ಬರವಣಿಗೆಗಳು ಭೂಮಿಯ ಮೇಲಿರುವ ಪರದೈಸಿನ ಉದ್ಯಾನವನ ಮತ್ತು ಮೇಲೆ ದೇವರ ಪ್ರಸನ್ನತೆಯಲ್ಲಿರುವ ಪರಲೋಕದ ಪರದೈಸು ಇವೆರಡನ್ನೂ ಎಂದಿಗೂ ಗಲಿಬಿಲಿಗೊಳಿಸುವದಿಲ್ಲ.

ಮುಂದಿನ ವಚನಗಳಲ್ಲಿ ವಾಕ್ಯವು ಹೀಗೆ ಹೇಳುತ್ತದೆ:
"ಯೆಹೋವ ದೇವರು ನೋಟಕ್ಕೆ ರಮ್ಯವಾಗಿಯೂ ಊಟಕ್ಕೆ ಅನುಕೂಲವಾಗಿಯೂ ಇರುವ ಎಲ್ಲಾ ತರದ ಮರಗಳನ್ನು ಆ ಭೂಮಿಯಲ್ಲಿ ಬೆಳೆಯ ಮಾಡಿದನು. ಅದಲ್ಲದೆ ಆ ವನಮಧ್ಯದಲ್ಲಿ ಜೀವದಾಯಕ ವೃಕ್ಷವನ್ನೂ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ವೃಕ್ಷವನ್ನೂ ಬೆಳೆಯಿಸಿದನು. ಏದೆನ್ ಸೀಮೆಯಲ್ಲಿ ಒಂದು ನದಿ ಹೊಟ್ಟಿ ಆ ವನವನ್ನು ತೋಯಿಸುತ್ತಿತ್ತು. ಅದು ಅಚೇ ಕಡೆಯಲ್ಲಿ ಒಡೆದು ನಾಲ್ಕು ಶಾಖೆಗಳಾಯಿತು. ಯೆಹೋವ ದೇವರು ಆ ಮನುಷ್ಯನನ್ನು ಕರಕೊಂಡು ಹೋಗಿ ಏದೆನ್ ತೋಟವನ್ನು ವ್ಯವಸಾಯ ಮಾಡುವದಕ್ಕೂ ಕಾಯುವದಕ್ಕೂ ಅದರಲ್ಲಿ ಇಟ್ಟನು"(ಆದಿ–೨: ೯,೧೦,೧೫).

ಹೀಗೆ ಮೊದಲನೆಯ ಮನುಷ್ಯನಾದ ಆದಾಮನು ನಿಜವಾದ ಅಭಿವೃದ್ಧಿಯಲ್ಲಿ ವಾಸಿಸುವದಕ್ಕಾಗಿ ದೇವರು ಎಂತಹ ಸುಂದರವಾದ ಸ್ಥಳವನ್ನು ನಿರ್ಮಿಸಿದನೆಂಬುದನ್ನು ನಾವು ನೋಡಿದೆವು. ತಿನ್ನುವದಕ್ಕೆ ರುಚಿಕರವಾದ ಮತ್ತು ನೋಡುವದಕ್ಕೆ ಸುಂದರವಾದ ಹಣ್ಣುಗಳನ್ನು ಬಿಡುವಂತಹ

ಮರಗಳಿಂದ ತುಂಬಿದ ಅತ್ಯಂತ ಮಧುರವಾದ ಉದ್ಯಾನವನದಲ್ಲಿ ದೇವರು ಅವನನ್ನು ಇಟ್ಟನು. ಆನಂದವನ್ನು ಉಂಟುಮಾಡುವಂತಹ ಈ ಸ್ಥಳದಲ್ಲಿ ಪ್ರತಿಯೊಂದು ಪರಿಪೂರ್ಣವಾಗಿಯೂ ಮತ್ತು ಅದ್ಭುತವಾಗಿಯೂ ಇತ್ತು. ಆದಾಮನ ಇಂದ್ರಿಯ ಜ್ಞಾನವು ಚುರುಕಾಗಿತ್ತು; ಅವನ ಕಣ್ಣುಗಳು ಸೌಂದರ್ಯವನ್ನು ಕಂಡವು, ಮರಗಳಲ್ಲಿ ಹಾಡುವ ಪಕ್ಷಿಗಳ ಮಧುರವಾದ ಸ್ವರಗಳನ್ನು ಅವನ ಕಿವಿಗಳು ಕೇಳಿದವು, ತೋಟದಲ್ಲಿ ಹರಡಿದ್ದ ಹೂವುಗಳ ಸುವಾಸನೆಯನ್ನು ಅವನ ಇಂದ್ರಿಯ ಜ್ಞಾನವು ಹೀರಿಕೊಂಡಿತು. ಅವನು ಆನಂದಪಡುವದಕ್ಕಾಗಿ ದೇವರು ಪ್ರತಿಯೊಂದನ್ನು ಆದಾಮನಿಗೆ ಕೊಟ್ಟಿದ್ದನು. ದೇವರು ತನ್ನ ಒಳ್ಳೆಯತನದಲ್ಲಿ ಆದಾಮನೊಂದಿಗೆ ಒಂದು ತೃಪ್ತಿಕರವಾದ ಕೆಲಸವನ್ನು ಅಂದರೆ ತೋಟವನ್ನು ನೋಡಿಕೊಳ್ಳುವಂತಹ ಕೆಲಸವನ್ನು ಹೇಗೆ ವಹಿಸಿದ್ದನೆಂಬುದನ್ನು ಸಹ ನಾವು ಓದಿದ್ದೇವೆ, ಹಾಗಾಗಿ ಅವನು ಸಂತೋಷವಾಗಿ ಅದನ್ನು ಸ್ವಾಧೀನಪಡಿಸಿಕೊಂಡನು.

ಏದೆನಿನಲ್ಲಿ ನಡೆದಂತಹ ಹೆಚ್ಚು ಅದ್ಭುತಕರವಾದ ಸಂಗತಿಯೇನೆಂದರೆ, ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದ ಮನುಷ್ಯನೊಂದಿಗೆ ಮಾತಾಡುವದಕ್ಕಾಗಿ ಸಾಯಂಕಾಲದ ತಂಗಾಳಿಯಲ್ಲಿ ದೇವರು ತಾನೇ ಉದ್ಯಾನವನಕ್ಕೆ ಬರುತ್ತಿದ್ದನು(ಆದಿ-೩:೮ ನ್ನು ನೋಡಿರಿ). ದೇವರು ಯಾಕೆ ಆದಾಮನನ್ನು ಭೇಟಿಯಾಗುವದಕ್ಕೆ ಬಂದನು? ಆತನು ಆದಾಮನನ್ನು ಯಾಕೆ ಭೇಟಿಮಾಡಿದನೆಂದರೆ, ದೇವರು ಮನುಷ್ಯನನ್ನು ಉಂಟುಮಾಡಿದ್ದೇ ತನ್ನೊಂದಿಗಿನ ಅನ್ಯೋನ್ಯತೆಗಾಗಿ ಎಂಬುದನ್ನು ನಾವು ಈಗಾಗಲೇ ಕಲಿತಿದ್ದೇವೆ. ಮಾನವರು ಒಟ್ಟಾಗಿ ಅನ್ಯೋನ್ಯತೆಯಲ್ಲಿರ-ಬೇಕು, ಮಾತಾಡಬೇಕು, ಸಂತೋಷಪಡಬೇಕು, ಮತ್ತು ಏಕರೂಪವಾದ ಮನಸ್ಸುಗಳು ಮತ್ತು ಹೃದಯಗಳೊಂದಿಗೆ ಒಟ್ಟಾಗಿರಬೇಕೆನ್ನುವದು ದೇವರ ಉದ್ದೇಶವಾಗಿತ್ತು. ಹೌದು, ಮನುಷ್ಯನು(ಮಾನವರು) ದೇವರೊಂದಿಗೆ ಎಂದೆಂದಿಗೂ ಆಳವಾದ ಮತ್ತು ಅದ್ಭುತಕರವಾದ ಸಂಬಂಧದಲ್ಲಿ ಬೆಳೆಯಬೇಕೆನ್ನುವದು ದೇವರ ಇಷ್ಟವಾಗಿತ್ತು.

ದೇವರು ಮೊದಲನೆಯ ಮನುಷ್ಯನನ್ನು ಇಟ್ಟಂತಹ ಉದ್ಯಾನವನದ ಕುರಿತಾಗಿ ನಾವು ತಿಳಿದುಕೊಳ್ಳುವ ಅಗತ್ಯ ಈಗ ಇನ್ನೂ ಸ್ವಲ್ಪ ಇದೆ. ಆ ಉದ್ಯಾನವನದ ಮಧ್ಯದಲ್ಲಿ, ದೇವರು ತುಂಬಾ ಪ್ರಾಮುಖ್ಯವಾದ ಎರಡು ಮರಗಳನ್ನು ಬೆಳೆಸಿದ್ದನು. ಒಂದು ಜೀವದಾಯಕ ವೃಕ್ಷವೆಂದು ಮತ್ತು ಇನ್ನೊಂದು ಒಳ್ಳೆದ್ದರ ಮತ್ತು ಕೆಟ್ಟದ್ದರ ಅರುಹನ್ನು ಉಂಟುಮಾಡುವ ಮರವೆಂದು ಕರೆಯಲ್ಪಟ್ಟಿದ್ದವು. ತನ್ನ ನಿತ್ಯತ್ವದ ಜೀವಿತವನ್ನು ಮನುಷ್ಯನೊಂದಿಗೆ ಹಂಚಿಕೊಳ್ಳುವದಕ್ಕೆ ದೇವರು ಉದ್ದೇಶಿಸಿದ್ದನೆಂಬುದನ್ನು ಆದಾಮನಿಗೆ ಜ್ಞಾಪಿಸುವದಕ್ಕಾಗಿ ದೇವರು ಜೀವದಾಯಕ ವೃಕ್ಷವನ್ನು ಆ ಉದ್ಯಾನವನದಲ್ಲಿಟ್ಟಿದ್ದನು. ಆದಾಮನನ್ನು ಪರೀಕ್ಷಿಸುವದಕ್ಕಾಗಿ ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವಂತಹ ಮರವನ್ನು ದೇವರು ಉದ್ಯಾನವನದಲ್ಲಿಟ್ಟಿದ್ದನು. ವಾಕ್ಯಗಲು ಹೇಳುವದನ್ನು ಕೇಳಿರಿ; "ಯೆಹೋವ ದೇವರು ಆ ಮನುಷ್ಯನಿಗೆ, ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣುಗಳನ್ನು ಯಥೇಚ್ಛವಾಗಿ ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವಂತಹ ಮರದ ಹಣ್ಣನ್ನು ಮಾತ್ರ ತಿನ್ನಬಾರದು, ತಿಂದ ದಿನ ಸತ್ತೇಹೋಗುವಿ ಎಂದು ವಿಧಿಸಿದನು"(ಆದಿ-೨: ೧೬, ೧೭). ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವಂತಹ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಆದಾಮನಿಗೆ ಯಾಕೆ ಅಡ್ಡಿಪಡಿಸಿದನು? ದೇವರು ಜಿಪುಣನೋ? ಇಲ್ಲ, ಆತನು ಜಿಪುಣನಲ್ಲ! ನಿಜವಾಗಿ ಹೇಳುವದಾದರೆ, ಆತನ ಹೆಸರುಗಳಲ್ಲಿ ಒಂದು, "ಉದಾರವಂತನು"(ಯಾಕೋಬ-೧:೫ ಉಲೂಫ್‌ನಲ್ಲಿ) "ಒಂದರ ಹೊರತಾಗಿ....ನೀನು ಪ್ರತಿಯೊಂದು ಮರದ ಹಣ್ಣನ್ನು ತಿನ್ನಬಹುದು" ಎಂದು ದೇವರು ಆದಾಮನಿಗೆ ಹೇಳಿದನು. ಅದು ಒಂದು ಕಷ್ಟಕರವಾದ ಆಜ್ಞೆಯಾಗಿತ್ತಾ? ಇಲ್ಲ, ಇದು ಹಾಗಿರಲಿಲ್ಲ. ಆದಾಮನು ಸಂತೋಷವಾಗಿರುವದಕ್ಕೆ ಅಗತ್ಯವಾಗಿರುವ ಪ್ರತಿಯೊಂದನ್ನು ದೇವರು ತನ್ನ ಕೃಪೆಯಿಂದ ಕೊಟ್ಟನು. ಅವನಿಂದ ಯಾವ ಒಳ್ಳೆಯ ಸಂಗತಿಯನ್ನು ದೇವರು ತಡೆದಿರಲಿಲ್ಲ. ಹೇಗೂ, ದೇವರು ತನ್ನ ಸಮಗ್ರ ಯೋಜನೆಯಲ್ಲಿ, ಆದಾಮನ ಮುಂದೆ ಒಂದು ಪರೀಕ್ಷೆಯನ್ನು ಇಟ್ಟನು. ಇದರಿಂದ ಆತನ ಆಜ್ಞೆಗಳಿಗೆ ವಿಧೇಯನಾಗುವದಕ್ಕೆ ಸಾಕಾಗುವಷ್ಟು ಆತನನ್ನು ಪ್ರೀತಿಸುತ್ತಿದ್ದೇನೆಂಬುದನ್ನು ದೇವರಿಗೆ ತೋರಿಸುವದಕ್ಕೆ ಆದಾಮನು ಸದವಕಾಶವನ್ನು ಹೊಂದಿದ್ದನು. ಕರ್ತನಾದ ದೇವರು ತನ್ನ ವಾಕ್ಯದಲ್ಲಿ ಹೇಳಿರುವ ಹಾಗೆ: "ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು......ನನ್ನನ್ನು ಪ್ರೀತಿಸದೇ ಇರುವವನು ನನ್ನ ಮಾತನ್ನು ಕೈಕೊಂಡು ನಡೆಯುವದಿಲ್ಲ" (ಯೋಹಾನ-೧೪: ೨೩,೨೪). ದೇವರು ಆದಾಮನ ಪ್ರೀತಿಯನ್ನೂ ಮತ್ತು ರಾಜನಿಷ್ಠೆಯನ್ನೂ ಪರೀಕ್ಷಿಸುವದಕ್ಕೆ ಬಯಸಿದನು. {ಉಲೂಫ್‌ನಲ್ಲಿ: ಅವನ ಮನಸ್ಸು ಎಲ್ಲಿದೆ ಎಂದು ನೋಡುವದಕ್ಕೆ} ಅದಕ್ಕೋಸ್ಕರವೇ ಈ ಸರಳವಾದ ಆಜ್ಞೆಯನ್ನು ದೇವರು ಅವನಿಗೆ ಕೊಟ್ಟನು. ದೇವರು ಒಬ್ಬ ಯಾಂತ್ರಿಕ ಮನುಷ್ಯನನ್ನು(ರೋಬೋಟ್) ಸೃಷ್ಟಿಸಲಿಲ್ಲ. ಮನುಷ್ಯನು ತಾನೇ ದೇವರನ್ನು ಪ್ರೀತಿಸುವದನ್ನು ಮತ್ತು ವಿಧೇಯನಾಗುವದನ್ನು ತನಗಾಗಿ ಆಯ್ಕೆ ಮಾಡಿಕೊಳ್ಳುವದಕ್ಕಾಗಿಯೇ ದೇವರು ಮನುಷ್ಯನನ್ನು ಒಂದು ಮನಸ್ಸು, ಒಂದು ಹೃದಯ ಮತ್ತು ಒಂದು ಸ್ವತಂತ್ರವಾದ ಚಿತ್ತದೊಂದಿಗೆ ಉಂಟುಮಾಡಿದನು.

ಒಂದು ವೇಳೆ ಆದಾಮನು ತಿನ್ನಬಾರದೆಂದು ಹೇಳಿದ ಮರದ ಹಣ್ಣನ್ನು ತಿಂದರೆ ಅವನಿಗೆ ಏನಾಗುತ್ತದೆಂದು ದೇವರು ಆದಾಮನಿಗೆ ಹೇಳಿದನು? ವಾಕ್ಯಗಳನ್ನು ಮತ್ತೆ ಓದಿಕೊಳ್ಳೋಣ, ದೇವರು ಹೇಳಿದ್ದೇನೆಂದರೆ; "ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೆ ಹೋಗುವಿ ಅಂದನು!" ಹೀಗೆ, ತನ್ನ ಆಜ್ಞೆಗೆ ಅವಿಧೇಯರಾಗುವದು ಮರಣವನ್ನು ಉಂಟುಮಾಡುತ್ತದೆಂದು ದೇವರು ಆದಾಮನಿಗೆ ಹೇಳಿದನು. ತಾನು ಸೃಷ್ಟಿಸಿದ ಮನುಷ್ಯನನ್ನು ದೇವರು ಪ್ರೀತಿಸಿದನು; ಹಾಗಾಗಿ ತಪ್ಪಿಲ್ಲದಂತಹ ಮಾತುಗಳಲ್ಲಿ ಅವನಿಗೆ ಎಚ್ಚರಿಸಿದನು; ಆದಾಮನೇ, ನೀನು ನನಗೆ ಅವಿಧೇಯನಾದರೆ, ನೀನು ಸಾಯುವಿ ಯಾಕೆಂದರೆ ನನ್ನ ಪರಿಶುದ್ಧ ಧರ್ಮಶಾಸ್ತ್ರವು "ಪಾಪ ಮಾಡುವ ಆತ್ಮದ" (ಯೆಹೆ-೧೮:೨೦) ಮರಣವನ್ನು ಅಪೇಕ್ಷಿಸುತ್ತದೆ.

ಬಹುಮಟ್ಟಿಗೆ ಕೆಲವರು ಯಾವುದು ಪಾಪ? ಎಂದು ಕೇಳಬಹುದು. "ಅಧರ್ಮವೇ ಪಾಪ"(ಇಯೋಹಾನ-೩:೪) ಎಂದು ವಾಕ್ಯ ಹೇಳುತ್ತದೆ. "ನೀತಿಗೆ ವಿರುದ್ಧವಾದುದೆಲ್ಲಾ ಪಾಪ"(೧ಯೋಹಾನ-೫:೧೭). "ಒಳ್ಳೇದನ್ನು ಮಾಡಬೇಕೆಂದು ತಿಳಿದು ಅದನ್ನು ಮಾಡದೆ ಇರುವವನು ಪಾಪ -ಕ್ಕೊಳಗಾಗಿದ್ದಾನೆ"(ಯಾಕೋಬ-೫:೧೭) ಪಾಪವು ನಿಮ್ಮ"ಸ್ವಂತ ದಾರಿ"(ಯೆಶಾಯ-೫೩:೬) ಯಲ್ಲಿ ಹೋಗುತ್ತದೆ. ಪಾಪವು ಯಾವುದನ್ನಾದರು ದೇವರೊಂದಿಗೆ ಒಪ್ಪಿಕೊಳ್ಳುವದಿಲ್ಲ. ದೇವರಿಗೆ ವಿರುದ್ಧವಾಗಿ ಪಾಪ ಮಾಡುವವರಿಗೆ ಏನು ಸಂಭವಿಸುತ್ತದೆ? ದೇವರ ವಾಕ್ಯವು ಹೀಗೆ ಹೇಳುತ್ತದೆ: "ಪಾಪ ಮಾಡುವ ಆತ್ಮವೇ ಸಾಯುತ್ತದೆ!"(ಯೆಹೆ-೧೮:೨೦). ಇನ್ನೊಂದು ವಚನದಲ್ಲಿ, "ಪಾಪದ ಸಂಬಳ ಮರಣ"(ರೋಮಾ-೬:೨೩).

ಯಾವುದು ಮರಣ? ಪ್ರತಿಯೊಂದು ಮುಗಿದುಹೋಯಿತು ಮತ್ತು ನೀನು ಇನ್ನೆಂದಿಗೂ ಯಾವುದನ್ನೂ ತಿಳಿಯುವದಿಲ್ಲವೆಂದು ಜೀವವನ್ನು ನಿಲ್ಲಿಸುವದಕ್ಕೆ ಕೆಲವರು ಸಾಯುವದಕ್ಕೆ ಆಲೋಚಿಸುತ್ತಾರೆ. ಆದರೆ ನಾವು ಪ್ರವಾದಿಗಳ ಬರವಣಿಗೆಗಳ ಮೇಲೆ ಆತುಕೊಳ್ಳುವದಾದರೆ, ಇದು ಮರಣವಲ್ಲ ಎಂಬುದನ್ನು ನಾವು ನೋಡುತ್ತೇವೆ. ಪರಿಶುದ್ಧ ವಾಕ್ಯಗಳಲ್ಲಿ ಇಬ್ರಿಯ ಭಾಷೆಯಲ್ಲಿ ಬರೆದಿರುವ ಹಾಗೆ ಬೇರ್ಪಡಿಸುವಿಕೆ ಎನ್ನುವದು ಮರಣವನ್ನು ಸೂಚಿಸುತ್ತದೆ. ಜೀವದಿಂದ ಬೇರೆಯಾಗುವದೇ ಮರಣ.

"ನೀನು ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದರೆ ನಿಜವಾಗಿಯೂ ನೀನು ಸಾಯುವಿ" ದೇವರು ಆದಾಮನಿಗೆ ಹೀಗೆ ಹೇಳಿದಾಗ, ಆತನು ಹೀಗೆ ಹೇಳಿರಬಹುದು, ಆದಾಮನೇ, ನಾನು ತಿನ್ನಬಾರದೆಂದು ಹೇಳಿರುವ ಹಣ್ಣನ್ನು ತಿಂದರೆ ನೀನು ಸಾಯುವಿ, ಅಂದರೆ ನನ್ನಿಂದ ನೀನು ಬೇರ್ಪಡುವಿ. ನೀನು ನನಗೆ ಅವಿಧೇಯನಾದರೆ ದೀರ್ಘಕಾಲದವರೆಗೆ ನನ್ನೊಂದಿಗೆ ಆಪ್ತ ಸಂಬಂಧದಲ್ಲಿ ನೀನಿರುವದಿಲ್ಲ. ನಾನು ಪರಿಶುದ್ಧನು ಮತ್ತು ನಾನು ಪಾಪವನ್ನು ಸಹಿಸುವದಿಲ್ಲ ಅಥವಾ ನನ್ನ ಮಾರ್ಗವನ್ನು ತಿರಸ್ಕರಿಸುವವರನ್ನು ಸಹಿಸುವದಿಲ್ಲ. ಲೂಸಿಫರನು ಮತ್ತು ಅವನ ದೂತರುಗಳು ಪಾಪ ಮಾಡಿದಾಗ ನಾನು ಅವರನ್ನು ಹೊರದೊಬ್ಬಿದೆನು, ಮತ್ತು ನೀನು ಪಾಪ ಮಾಡಿದರೆ ನಿನ್ನನ್ನೂ ಸಹ ತಳ್ಳಿಬಿಡುತ್ತೇನೆ. ನಾನು ತಿನ್ನಬಾರದೆಂದು ಹೇಳಿದ ಮರದ ಹಣ್ಣನ್ನು ನೀನು ತಿಂದರೆ ನಿನ್ನ ಶರೀರವು ವಯಸ್ಸಾಗಿ ಬೆಳೆದು ಕೊನೆಗೆ ನೀನು ಸತ್ತು ಹೋಗುತ್ತಿ, ಅಂದರೆ ನಿನ್ನ ಆತ್ಮವು ನಿನ್ನ ಶರೀರವನ್ನು ಬಿಟ್ಟುಹೋಗುತ್ತದೆ. ಇದಿಷ್ಟೆ ಅಲ್ಲ, ನೀನು ನನಗೆ ಅವಿಧೇಯನಾದರೆ ನಿನ್ನ ದೇಹ ಮಾತ್ರ ಸಾಯುವದಿಲ್ಲ ಆದರೆ ನಿನ್ನ ಆತ್ಮವು ಸಹ, ಸೈತಾನನಿಗೂ ಮತ್ತು ಅವನ ದೂತರುಗಳಿಗೂ ನಿರ್ಮಾಣವಾಗಿರುವ ಸ್ಥಳಕ್ಕೆ ಹೋಗುತ್ತದೆ. ಅಲ್ಲಿ ನೀನು ನನ್ನಿಂದ ನಿತ್ಯ ನಿತ್ಯಕ್ಕೂ ಬೇರ್ಪಟ್ಟಿರುವಿ!.

ಹಾಗಾಗಿ, ಪಾಪವು ಮುರು ಭಯಂಕರವಾದ ಬೇರ್ಪಡುವಿಕೆಗಳನ್ನು ಉಂಟುಮಾಡುತ್ತದೆ. ಮೊದಲನೆಯದಾಗಿ, ನಿಮ್ಮ ಆತ್ಮವು ಈ ಭೂಮಿಯ ಮೇಲೆ ದೇವರಿಂದ ಬೇರ್ಪಡುತ್ತದೆ. ಅದೇನೆಂದರೆ, ನಿಮ್ಮ ಹೃದಯದಲ್ಲಿರುವ ಪಾಪದ ಕಾಣದಿಂದ ಪರಿಶುದ್ಧನಾಗಿರುವ ದೇವರೊಂದಿಗೆ ನೀವು ಸಂಬಂಧವನ್ನು ಹೊಂದಿರುವದಿಲ್ಲ. ಎರಡನೆಯದಾಗಿ, ನೀವು ಸತ್ತ ದಿನದಂದು ನಿಮ್ಮ ದೇಹದಿಂದ ನಿಮ್ಮ ಆತ್ಮವು ಬೇರ್ಪಡುತ್ತದೆ. ಅದೇನೆಂದರೆ, ನಿಮ್ಮ ದೇಹವು ಸತ್ತುಹೋಗುತ್ತದೆ ಮತ್ತು ನಿಮ್ಮ ಆತ್ಮವು ನ್ಯಾಯತೀರ್ಪಿಗಾಗಿ ದೇವರನ್ನು ಸಂಧಿಸುತ್ತದೆ. ಮೂರನೆಯದಾಗಿ, ನಿಮ್ಮ ಆತ್ಮ ಮತ್ತು ನಿಮ್ಮ ದೇಹ ಬೆಂಕಿಯ ಕೆರೆಯಲ್ಲಿ ಎಂದೆಂದಿಗೂ ದೇವರಿಂದ ಬೇರ್ಪಡುತ್ತವೆ.

ದೇವರ ವಾಕ್ಯದ ಅಧಿಕಾರದ ಮೇಲೆ ಆಧಾರಗೊಂಡು, ಯಾವುದು ಮರಣ? ಸಂಕ್ಷಿಪ್ತವಾಗಿ ಹೇಳುವದಾದರೆ ಜೀವವುಳ್ಳ ದೇವರಿಂದ ಬೇರ್ಪಡುವದೇ ಮರಣ. ನಿಜವಾದ ಜೀವಿತದ ಮೂಲನಾದ ದೇವರಿಂದ ಪಾಪವು ಮನುಷ್ಯನನ್ನು ಬೇರ್ಪಡಿಸುತ್ತದೆ. ದೇವರು ಪರಿಶುದ್ಧನು ಆತನು ಪಾಪದೊಂದಿಗೆ ಒಟ್ಟಿಗೆ ಇರುವವನಲ್ಲ. ಪಾಪ ಮಾಡಿದ ಆತ್ಮವು ಮರದಿಂದ ಕತ್ತರಿಸಿ ದೂರ ಎಸೆದಂತಹ ಕೊಂಬೆಯ ಹಾಗಿರುತ್ತದೆ. ಒಂದು ಕೊಂಬೆಯು ಮರದ ಒಂದು ಭಾಗವಾಗಿ ದೀರ್ಘಕಾಲದವರೆಗೆ ಇರದಿದ್ದರೆ ಏನಾಗುತ್ತದೆ? ಕತ್ತರಿಸಿ ಹಾಕಿದ ಒಂದು ಕೊಂಬೆಯು ಜೀವಂತವಾಗಿರುತ್ತದೋ? ಇಲ್ಲ, ಅದು ಸತ್ತುಹೋಗಿರುತ್ತದೆ! ಎಲೆಗಳು ಇದ್ದಕ್ಕಿಂದತೆಯೇ ಒಣಗಿಹೋಗುವದಿಲ್ಲ, ಆದರೆ ಅವು ಸಾಯುವದಕ್ಕೆ ಪ್ರಾರಂಭವಾಗುತ್ತವೆ. ಅದೇ ರೀತಿಯಾಗಿ, ದೇವರು ಒದಗಿಸಿರುವ ಪಾಪದ ಬಿಡುಗಡೆಯ ರೀತಿಯನ್ನು ಹೊಂದಿಗೊಳ್ಳದಿದ್ದರೆ, ನೀವು ಜೀವಂತ – ವಾಗಿರುತ್ತೀರೆಂದು ನೀವು ಆಲೋಚಿಸಬಹುದು, ಆದರೆ ಪ್ರವಾದಿಗಳ ವಾಕ್ಯಗಳು ಹೇಳುವದೇನೆಂದರೆ, ನೀವು ದೇವರ ಮುಂದೆ "ಪಾಪಗಳ ಮತ್ತು ಅಪರಾಧಗಳ ದೆಸೆಯಿಂದ ಸತ್ತವರಾಗುತ್ತೀರಿ"(ಎಫೆಸ_೨:೧). "ಆದರೆ ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ"(ಯೆಶಾಯ–೫೯:೨). "ನೀವು ಆ ಕೊಂಬೆಯಂತೆ ಹೊರಗೆ ಬಿಸಾಡಲ್ಪಟ್ಟು ಒಣಗಿಹೋಗುವಿರಿ; ಅಂಥ ಕೊಂಬೆಗಳನ್ನು ಕೂಡಿಸಿ ಬೆಂಕಿಯಲ್ಲಿ ಹಾಕುತ್ತಾರೆ, ಅವು ಸುಟ್ಟುಹೋಗುತ್ತವೆ"(ಯೋಹಾನ–೧೫:೬).

ಒಂದು ಕೊಂಬೆಯು ಮರದೊಂದಿಗೆ ದೀರ್ಘಕಾಲದವರೆಗೆ ಸಂಪರ್ಕದಲ್ಲಿಲ್ಲದಿದ್ದರೆ ಅದು ಹಣ್ಣನ್ನು ಬಿಡುವದಿಲ್ಲ. ದೇವರೆದುರಿನಲ್ಲಿ ಪಾಪ ಮಾಡಿದವನು ಹೀಗೆಯೇ ಇರುತ್ತಾನೆ. ನಿಜ ಜೀವಿತದ ಮೂಲವೂ "ನಿಜವಾದ ಮರವೂ" ಆಗಿರುವ ದೇವರೊಂದಿಗೆ ಯಾವ ಸಂಬಂಧವನ್ನೂ ಹೊಂದಿಲ್ಲದವನಾದ್ದರಿಂದ ದೇವರಿಗೆ ಮೆಚ್ಚಿಕೆಯಾಗುವಂತಹ ಯಾವುದನ್ನೂ ಅವನು ಉತ್ಪತ್ತಿ ಮಾಡುವದಿಲ್ಲ. ಪಾಪಿಗಳು ಕೇವಲ ದೇವರ ನೀತಿಯ ನ್ಯಾಯತೀರ್ಪನ್ನು ಮಾತ್ರ ನಿರೀಕ್ಷಿಸುವವರಾಗಿರುತ್ತಾರೆ. ಹೇಗೂ, ಪ್ರವಾದಿಗಳ ಬರವಣಿಗೆಗಳಲ್ಲಿ, ದೇವರೆದುರಿನಲ್ಲಿ ನಾವು ಹೇಗೆ ನೀತಿವಂತರಾಗಿ ಮಾಡಲ್ಪಡುತ್ತೇವೆ ಮತ್ತು ನಮ್ಮ ಪಾಪಗಳು ಖಂಡಿತವಾಗಿಯೂ ಹೇಗೆ ತೆಗೆದುಹಾಕಲ್ಪಟ್ಟಿವೆ ಎಂಬುದನ್ನು ತಿಳಿದುಕೊಳ್ಳುತ್ತೇವೆಂದು ದೇವರು ಘೋಷಿಸಿದ್ದಾನೆ. ಇದು ಏನೇಂಬುದನ್ನು ಮುಂಬರುವ ಪಾಠಗಳಲ್ಲಿ ನಾವು ಆಲೋಚಿಸುವವರಾಗಿದ್ದೇವೆ.

ಮುಕ್ತಾಯ ಮಾಡುವದಕ್ಕಿಂತ ಮುಂಚೆ, ಈ ಅಧ್ಯಾಯದ ನೆನಪು ಹುಟ್ಟಿಸುವದರಲ್ಲಿ ಕಂಡುಬಂದಿರುವದನ್ನು ನಾವು ಓದುವದಕ್ಕೆ ಬಯಸುತ್ತೇವೆ. ದೇವರು ಮೊದಲನೆಯ ಸ್ತ್ರೀಯನ್ನು ಹೇಗೆ ಸೃಷ್ಟಿಸಿದನೆಂದು ವಾಕ್ಯವು ಹೇಳವದನ್ನು ಕೇಳಿರಿ:

"ಯೆಹೋವ ದೇವರು– ಮನುಷ್ಯನು ಒಂಟಿಗನಾಗಿರುವದು ಒಳ್ಳೇದಲ್ಲ; ಅವನಿಗೆ ಸರಬೀಳುವ ಸಹಕಾರಿಯನ್ನು ಉಂಟುಮಾಡುವೆನು ಅಂದನು. ಹೀಗಿರವಲ್ಲಿ ಯೆಹೋವದೇವರು ಆ ಮನುಷ್ಯನಿಗ ಗಾಢನಿದ್ರೆಯನ್ನು ಬರಮಾಡಿ ಅವನ ಪಕ್ಕೆಯ ಎಲುಬಿನಿಂದ ಒಂದನ್ನು ತೆಗೆದುಕೊಂಡು ಅದರ ಸ್ಥಳವನ್ನು ಮಾಂಸದಿಂದ ಮುಚ್ಚಿ ತಾನು ಮನುಷ್ಯನಿಂದ ತೆಗೆದ ಎಲುಬನ್ನು ಸ್ತ್ರೀಯಾಗಮಾಡಿ ಆಕೆಯನ್ನು ಅವನ ಬಳಿಗೆ ಕರತಂದನು. ಅವನು ಆಕೆಯನ್ನು ನೋಡಿ– ಈಗ ಸರಿ ಈಕೆಯು ನನ್ನ ಎಲುಬುಗಳಿಂದ ಬಂದ ಎಲುಬೂ ನನ್ನ ಮಾಂಸದಿಂದ ಮಾಂಸವೂ ಆಗಿದ್ದಾಳೆ; ಈಕೆಯು ನರನಿಂದ ಉತ್ಪತ್ತಿಯಾದ ಕಾರಣ ನಾರೀ ಎನ್ನಿಸಿಕೊಳ್ಳುವಳು ಅಂದನು. ಈ ಕಾರಣದಿಂದ ಪುರುಷನು ತಂದೆ ತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರು ಒಂದೇ ಶರೀರವಾಗಿರುವರು. ಆ ಸ್ತ್ರೀಪುರುಷರಿಬ್ಬರೂ ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ." (ಆದಿ–೨: ೧೮, ೨೧–೨೫).

ಹಾಗಾಗಿ, ವಿವಾಹವು ದೇವರಿಂದ ರಚಿತವಾದದ್ದೆಂದು ನಾವು ಕಂಡುಕೊಂಡಿದ್ದೇವೆ. ದೇವರು ಒಬ್ಬ ಪುರುಷನನ್ನು ಮತ್ತು ಒಬ್ಬ ಸ್ತ್ರೀಯನ್ನು ಸೃಷ್ಟಿಸಿದನು ಆದ್ದರಿಂದ ಅವರು ಒಬ್ಬರನ್ನೊಬ್ಬರು ಪ್ರೀತಿಸಿದರು, ತಮ್ಮ ಜೀವಿತಗಳನ್ನು ಒಟ್ಟಾಗಿ ಹಂಚಿಕೊಂಡರು, ಮತ್ತು ದೇವರನ್ನು ಮಹಿಮೆ ಪಡಿಸುವಂತ ಸಂತೋಷಕರವಾದ ಕುಟುಂಬವನ್ನು ಹೊಂದಿದ್ದರು. ಆದಾಮನನ್ನು ಪ್ರೀತಿಮಾಡಿ ಅವನು ಪೂರ್ಣ ಸಂತೋಷದಿಂದ ಇರಬೇಕೆಂದು ಬಯಸಿದ ದೇವರು, ಒಂದು ತುಂಬಾ ಅದ್ಭುತವಾದ ಬಹುಮಾನವನ್ನು ಕೊಟ್ಟನು: ಅದು ಒಬ್ಬ ಹೆಂಡತಿ! ಆದಾಮನು ತನ್ನ ಹೆಂಡತಿಯನ್ನು ಪ್ರೇಮದಿಂದ ನೋಡಿಕೊಳ್ಳುವದು, ಆಕೆಗಾಗಿ ಎಲ್ಲವನ್ನೂ ಒದಗಿಸಿಕೊಡುವದು, ಮತ್ತು ತನ್ನನ್ನು ಪ್ರೀತಿಸಿಕೊಂಡಂತೆ ಅವಳನ್ನೂ ಪ್ರೀತಿಸುವದು, ಇವೆಲ್ಲವನ್ನೂ ಆದಾಮನು ಮಾಡಬೇಕೆಂದು ದೇವರು ಬಯಸಿದನು. ಇದಕ್ಕಿಂತಲೂ ಪ್ರಾಮುಖ್ಯವಾದುದೇನೆಂದರೆ, ತನ್ನನ್ನು ತಿಳಿದುಕೊಳ್ಳುವದಕ್ಕೆ, ಪ್ರೀತಿಸುವದಕ್ಕೆ ಮತ್ತು ಎಂದೆಂದಿಗೂ ತನಗೆ ವಿಧೇಯರಾಗಿರುವದಕ್ಕಾಗಿ ಪುರುಷ ಮತ್ತು ಸ್ತ್ರೀ ಇಬ್ಬರೂ ತನ್ನೊಂದಿಗೆ ಒಂದು ಆಳವಾದ ಸಂಬಂಧ –ವನ್ನು ಆನಂದಿಸಬೇಕೆಂದು ದೇವರು ಬಯಸಿದನು.(ಎಫೆಸ–೫: ೨೧–೩೩; ೬: ೧–೪ ನೋಡಿರಿ)

ಹೀಗೆ ದೇವರು ತನ್ನ ಸೃಷ್ಟಿ ಕಾರ್ಯವನ್ನು ಮುಗಿಸಿದನು. ವಾಕ್ಯ ಹೀಗೆ ಹೇಳುತ್ತದೆ:

"ದೇವರು ತಾನು ಉಂಟುಮಾಡಿದ್ದೆಲ್ಲವನ್ನೂ ನೋಡಲಾಗಿ ಅದು ಬಹು ಒಳ್ಳೇದಾಗಿತ್ತು. ಹೀಗೆ ಭೂಮ್ಯಾಕಾಶಗಳೂ ಅವುಗಳಲ್ಲಿರುವ ಸಮಸ್ತವೂ ನಿರ್ಮಿತವಾದವು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧ ದಿನವಾಗಿರಲಿ ಎಂದು ಆಶೀರ್ವದಿಸಿದನು"(ಆದಿ–೧:೩೧–೨:೩).

ದೇವರು ಏಳನೆಯ ದಿನದಲ್ಲಿ ಯಾಕೆ ವಿಶ್ರಮಿಸಿಕೊಂಡನು? ಆತನಿಗೆ ಆಯಾಸಗೊಂಡದ್ದರಿಂದ ವಿಶ್ರಮಿಸಿಕೊಂಡನೋ? ಇಲ್ಲ, ದೇವರಿಗೆ ಎಂದಿಗೂ ಆಯಾಸವಾಗುವದಿಲ್ಲ! ಆತನು ತನ್ನ "ಕೆಲಸವನ್ನು ಮುಗಿಸಿದನು!" ಅದುದರಿಂದ ದೇವರು ವಿಶ್ರಮಿಸಿದನು ಎಂದು ವಾಕ್ಯವು ಹೇಳುತ್ತದೆ. ಪ್ರತಿಯೊಂದು ಸಂಪೂರ್ಣವಾಗಿತ್ತು. ಅದಕ್ಕಾಗಿಯೇ ದೇವರು ಏಳನೆಯ ದಿನದಲ್ಲಿ ತನ್ನ ಕೆಲಸದಿಂದ ವಿಶ್ರಾಂತಿ ತೆಗೆದುಕೊಂಡನು. ಅದಕ್ಕೋಸರವೇ ವಾರದಲ್ಲಿ ಏಳುದಿನಗಳಿರುವದು.

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ವಂದನೆಗಳು, ಮುಂದಿನ ಸಲ ದೇವರ ಚಿತ್ತವಾದರೆ ಲೋಕದೊಳಗೆ ಪಾಪವು ಹೇಗೆ ಪ್ರವೇಶಿಸಿತು ಎಂಬುದನ್ನು ಕಲಿಯೋಣ. . .

ಆತನ ವಾಕ್ಯದ ಈ ಹೇಳಿಕೆಯನ್ನು ನೀವು ಮನಸ್ಸಿನಲ್ಲಿ ಆಲೋಚಿಸುತ್ತಿರುವಂತೆಯೇ ದೇವರು ನಿಮ್ಮನ್ನು ಆಶೀರ್ವದಿಸಲಿ:

"ಪಾಪವು ಕೊಡುವ ಸಂಬಳ ಮರಣ, ದೇವರ ಉಚಿತಾರ್ಥ ವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ!"(ರೋಮಾ–೬:೨೩).

ಪಾಠ ೭

# ಪಾಪವು ಹೇಗೆ ಲೋಕದೊಳಕ್ಕೆ ಪ್ರವೇಶಿಸಿತು

ಆದಿಕಾಂಡ ೩

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸುವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯ–ಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಎರಡು ಅಧ್ಯಯನಗಳಲ್ಲಿ, ಮೊದಲ ಇಬ್ಬರು ಜನರನ್ನು ದೇವರು ಹೇಗೆ ಸೃಷ್ಟಿಸಿದನೆಂಬುದನ್ನು ನಾವು ಕಲಿತುಕೊಂಡೆವು. ವಾಕ್ಯವು ಹೀಗೆ ಹೇಳುತ್ತದೆ: "ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು; ದೇವ ಸ್ವರೂಪದಲ್ಲಿ ಅವನನ್ನು ಉಂಟುಮಾಡಿದನು; ಅವರನ್ನು ಗಂಡು ಹೆಣ್ಣಾಗಿ ನಿಮಿಸಿದನು"(ಆದಿ–೧:೨೭). ದೇವರು ಪುರುಷ ಮತ್ತು ಸ್ತ್ರೀಯ ಆತ್ಮದೊಳಗೆ ತನ್ನನ್ನು ತಿಳಿದುಕೊಳ್ಳುವದಕ್ಕೆ ಶಕ್ತವಿರುವಂತಹ ಮನಸ್ಸನ್ನು ಮತ್ತು ತನ್ನನ್ನು ಪ್ರೀತಿಮಾಡುವದಕ್ಕೆ ಶಕ್ತವಿರುವಂತಹ ಹೃದಯವನ್ನು ಇಟ್ಟಿದ್ದನು. ಆತನಿಗೆ ವಿಧೇಯವಾಗಿರಬೇಕೋ ಅಥವಾ ಬೇಡವೋ ಎಂಬುದನ್ನು ತಾವೇ ಆರಿಸಿಕೊಳ್ಳುವದಕ್ಕಾಗಿ ದೇವರು ಒಂದು ಉಚಿತವಾದ ಚಿತ್ತವನ್ನು ಅವರಿಗೆ ವಹಿಸಿಕೊಟ್ಟಿದ್ದನು. ಏದೆನ್ ಎಂದು ಕರೆಯಲ್ಪಡುವ ಸ್ಥಳದಲ್ಲಿ ಭೂಮಿಯ ಮೇಲೆ ಆತನು ಸಿದ್ಧಪಡಿಸಿದ ಒಂದು ಮನೋಹರವಾದ ಉದ್ಯಾನವನವಾಗಿದ್ದ ಪರದೈಸಿನ ಉದ್ಯಾನವನದಲ್ಲಿ ದೇವರು ಮನುಷ್ಯನನ್ನು ಇಟ್ಟಿದ್ದನ್ನು ಸಹ ನಾವು ನೋಡಿದೆವು. ಮೊದಲ ಮನುಷ್ಯನಾದ ಆದಾಮ ಮತ್ತು ಮೊದಲ ಸ್ತ್ರೀಯಾದ ಹವ್ವ ಇಬ್ಬರೂ ನಿಜವಾದ ಅಭಿವೃದ್ಧಿಯಲ್ಲಿ ಮತ್ತು ಸಮಾಧಾನದಲ್ಲಿ ಜೀವಿಸುವದಕ್ಕೆ ಅವರಿಗೆ ಅಗತ್ಯವಾಗಿರುವ ಪ್ರತಿಯೊಂದನ್ನೂ ದೇವರು ಕೊಟ್ಟನು. ಜನರು ತನ್ನನ್ನು ತಿಳಿದುಕೊಳ್ಳುವದಕ್ಕೆ, ಪ್ರೀತಿಸುವದಕ್ಕೆ ಮತ್ತು ಎಂದೆಂದಿಗೂ ತನ್ನನ್ನು ಆರಾಧಿಸುವದಕ್ಕೆ ದೇವರು ಇಷ್ಟಪಡುತ್ತಾನೆ.

ಹೀಗೆ, ದೇವರು ತನ್ನ ಸಂಪೂರ್ಣ ಯೋಜನೆಯನ್ನು ಪಾಲನೆ ಮಾಡುವದರಲ್ಲಿ ತಾನು ಉಂಟುಮಾಡಿದ ಮನುಷ್ಯನ ಮುಂದೆ ಒಂದು ಸರಳವಾದ ಪರೀಕ್ಷೆ ಇಟ್ಟಿದ್ದನ್ನು ನಾವು ನೋಡಿದೆವು. ಆ ಉದ್ಯಾನವನದ ಮಧ್ಯದಲ್ಲಿ, ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರವನ್ನು ದೇವರು ಬೆಳೆಯಿಸಿದನು, ಮತ್ತು ನಂತರ ಮನುಷ್ಯನಿಗೆ, 'ತೋಟದಲ್ಲಿರುವ ಯಾವುದೇ ಮರದ ಹಣ್ಣನ್ನು ನೀನು ತಿನ್ನಬಹುದು, ಆದರೆ ಒಳ್ಳೆದರ ಮತ್ತು ಕೆಟ್ಟ–ದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು, ತಿಂದ ದಿನವೇ ನೀನು ಸಾಯುವಿ"(ಆದಿ–೨:೧೬) ಎಂದು ಆಜ್ಞಾಪಿಸಿದನು.

ದೇವರು ಆದಾಮನನ್ನು ಈ ರೀತಿಯಲ್ಲಿ ಯಾಕೆ ಪರೀಕ್ಷಿಸಿದನು? ಆದಾಮನ ಹೃದಯದ ಸ್ಥಿತಿಯನ್ನು ತೋರಿಸುವುದಕ್ಕೆ ದೇವರು ಬಯಸಿದ್ದನು. ಅವನು ಪಾಪ ಮಾಡಬೇಕೆಂಬ ಕಾರಣಕ್ಕೆ ದೇವರು ಆದಾಮನನ್ನು ಪರೀಕ್ಷಿಸಲಿಲ್ಲ, ಆದರೆ ಅವನನ್ನು ಆಶೀರ್ವದಿಸಿ ಬಲಪಡಿಸುವದಕ್ಕಾಗಿ ಪರೀಕ್ಷಿಸಿ–ದನು. ದೇವರು ಉಂಟುಮಾಡಿದ ಮನುಷ್ಯನು ಯಾವ ತಪ್ಪಿಲ್ಲದ ಮತ್ತು ಪಾಪರಹಿತನಾಗಿದ್ದನು, ಆದರೆ ಅವನು ಒಂದು ಸಂಪೂರ್ಣವಾದ ಪ್ರೀತಿಯನ್ನು ಅಥವಾ ಪ್ರಬುದ್ಧ ಗುಣಲಕ್ಷಣವನ್ನು ವಶಪಡಿಸಿಕೊಂಡಿದ್ದನೆಂದು ಇದರ ಅರ್ಥವಲ್ಲ. ಅವನ ಪ್ರೀತಿಯನ್ನು ಪರೀಕ್ಷಿಸುವದಕ್ಕೆ ದೇವರು ಅದಾಮನ ಮುಂದೆ ಒಂದು ಪರೀಕ್ಷೆಯನ್ನಿಟ್ಟನು. ಅದಾಮನು ಈ ಪರೀಕ್ಷೆಯನ್ನು ಸಹಿಸಿಕೊಂಡು ದೇವರಿಗೆ ವಿಧೇಯನಾಗಿದ್ದರೆ, ತನ್ನ ಹೃದಯ–ದಲ್ಲಿ ದೇವರನ್ನು ಪ್ರೀತಿಸುತ್ತಿದ್ದೇನೆಂಬುದನ್ನು ಅವನು ಸಾಬೀತುಪಡಿಸಿದಂತಾಗುತ್ತಿತ್ತು. ಅದೂ ಅಲ್ಲದೆ, ಅದಾಮನು ಪರೀಕ್ಷೆಯನ್ನು ಸಹಿಸಿಕೊಂಡು ಪಾಪವನ್ನು ತಿರಸ್ಕರಿಸಿದ್ದರೆ, ಆ ಪರೀಕ್ಷೆಯು ಅವನನ್ನು ಬಲಗೊಳಿಸುತ್ತಿತ್ತು, ಯಾಕೆಂದರೆ ವಾಕ್ಯವು ಹೀಗೆ ಹೇಳುತ್ತದೆ; "ಉಪದ್ರವದಿಂದ ತಾಳ್ಮೆ ಹುಟ್ಟುತ್ತದೆ, ತಾಳ್ಮೆಯಿಂದ ಅನುಭವಸಿದ್ಧಿ ಹುಟ್ಟುತ್ತದೆ"(ರೋಮಾ–೫:೪).

ಈ ದಿನ ಹಾಗಾದರೆ, ನಾವು ಆದಿಕಾಂಡ ಪುಸ್ತಕದ ಮೂರನೆಯ ಅಧ್ಯಾಯಕ್ಕೆ ಬರುತ್ತೇವೆ. ಪಾಪವು ಲೋಕದೊಳಕ್ಕೆ ಹೇಗೆ ಬಂದಿತು ಎಂಬು–ದನ್ನು ಈ ಅಧ್ಯಾಯವು ನಮಗೆ ತೋರಿಸುತ್ತದೆ. ಈ ಅಧ್ಯಾಯದ ಬೋಧನೆಗಳು ನಮಗೆ ಪರಿಚಯವಿದ್ದರೆ, ಆಗ ಮನುಷ್ಯನ ಹೃದಯವು ಯಾಕೆ ಇಷ್ಟೊಂದು ಕುಟಿಲತನದ್ದೂ ಮತ್ತು ಕೆಟ್ಟತನದ್ದೂ ಆಗಿದೆ ಮತ್ತು ಲೋಕವು ಯಾಕೆ ಸಂಕಟ ಮತ್ತು ನೋವಿನಿಂದ ತುಂಬಿದೆ ಎಂದು ನಾವು ತಿಳಿದುಕೊಳ್ಳಬಹುದು.

ಪ್ರಾರಂಭದಲ್ಲಿ ಆದಾಮ ಮತ್ತು ಹವ್ವ ಇಬ್ಬರೂ ಪರದೈಸಿನ ತೋಟದಲ್ಲಿ ಸಂಪೂರ್ಣವಾದ ತೃಪ್ತಿಯನ್ನೂ ಮತ್ತು ತಮ್ಮ ಸುಖಾನುಭವಕ್ಕೆ ಪ್ರತಿ–ಯೊಂದನ್ನು ಹೊಂದಿದ್ದರು ಎಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಆದಾಮ ಮತ್ತು ಹವ್ವರೊಂದಿಗೆ ಮಾತಡುವದಕ್ಕಾಗಿಯೇ ಸಂಜೆಯ ತಂಗಾಳಿಯಲ್ಲಿ ದೇವರು ಪ್ರತಿದಿನವೂ ತೋಟಕ್ಕೆ ಬರುತ್ತಿದ್ದದ್ದು ಎಲ್ಲಾದಕ್ಕಿಂತಲೂ ಉತ್ತಮವಾದ ಸಂಗತಿಯಾಗಿತ್ತು. ಅವರೊಂದಿಗೆ ಅದ್ಭುತವಾದ ಮತ್ತು ಅರ್ಥಗರ್ಭಿತವಾದ ಸಂಬಂಧವನ್ನು ಇಟ್ಟುಕೊಳ್ಳುವದಕ್ಕೆ ದೇವರು ಇಷ್ಟಪಟ್ಟಿದ್ದರಿಂದ ಅವರನ್ನು ಪ್ರತಿದಿನವೂ ಸಂಧಿಸುತ್ತಿದ್ದನು.

ಏನೇ ಆದರೂ, ಇನ್ನೊಬ್ಬರೂ ಸಹ ಆ ತೋಟದಲ್ಲಿದ್ದರೆಂದು ವಾಕ್ಯವು ನಮಗೆ ತಿಳಿಸುತ್ತದೆ. ನಿಮಗೆ ಗೊತ್ತ ಅದು ಯಾರೆಂದು? ದುರಾತ್ಮನೂ ದೇವರ ವಿರೋಧಿಯೂ ಆಗಿರುವ ಸೈತಾನ. ದೇವರು ಲೋಕವನ್ನು ಮತ್ತು ಅದರಲ್ಲಿರುವದೆಲ್ಲವನ್ನೂ ಉಂಟುಮಾಡಿದಾಗ ಸೈತಾನನು ಗಮನಿಸು–ತ್ತಿದ್ದನು. ಒಳ್ಳೆದ್ದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಅದಾಮನಿಗೆ ಆಜ್ಞಾಪಿಸಿದ್ದನ್ನು ಸೈತಾನನು ಕೇಳಿಸಿಕೊಂಡಿದ್ದನು. ಸುಮ್ಮನೆ ಗಮನಿಸಿ ಕೇಳಿಸಿಕೊಳ್ಳುವದನ್ನು ಅವನು ನಿಲ್ಲಿಸಲಿಲ್ಲ, ಅದರೆ. ದೇವರ ಅದ್ಭುತವಾದ ಕೆಲಸಗಳನ್ನು ಕೆಡಿಸುವದಕ್ಕೆ

ಒಂದು ಯೋಜನೆಯನ್ನು ಸಹ ಹೆಣೆಯುತ್ತಿದ್ದನು. ಮನುಷ್ಯನು ದೇವರಿಗೆ ಅವಿಧೇಯನಾಗಿ ಪಾಪ ಮಾಡಿ ದೇವರಿಂದ ದೂರವಾಗಿ ನಾಶವಾಗಲಿ ಎಂದು ದೇವರು ಸೃಷ್ಟಿಸಿದ ಮನುಷ್ಯನನ್ನು ಶೋಧನೆಗೊಳಪಡಿಸುವದಕ್ಕೆ ಸೈತಾನನು ಯೋಜನೆಯನ್ನು ಮಾಡಿದನು! ಸೈತಾನನು ಮಾಡುವದಕ್ಕೆ ಹಾಕಿಕೊಂಡಿದ್ದ ಎಲ್ಲಾ ಯೋಜನೆಯು ದೇವರಿಗೆ ಗೊತ್ತಿತ್ತು, ಆದರೆ ಇದರ ಕುರಿತಾಗಿ ಆದಾಮ ಹವ್ವರಿಗೆ ಏನೂ ಗೊತ್ತಿರಲಿಲ್ಲ.

ಒಂದು ದಿನ, ಆದಾಮ ಹವ್ವ ನಿಷೇಧಿಸಲ್ಪಟ್ಟ ಮರದ ಹತ್ತಿರ ನಿಂತಿದ್ದಾಗ, ಸೈತಾನನು ಸರ್ಪದ ಹಾಗೆ ಬಂದು ಅವರೊಂದಿಗೆ ಮಾತಾಡುವದಕ್ಕೆ ಪ್ರಾರಂಭಿಸಿದನು. ವಾಕ್ಯ ಹೀಗೆ ಹೇಳುತ್ತದೆ: "ಯೆಹೋವ ದೇವರು ಉಂಟುಮಾಡಿದ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು, ಅದು ಸ್ತ್ರೀಯ ಬಳಿಗೆ ಬಂದು–ಏನವ್ವಾ ತೋಟದಲ್ಲಿರುವ ಯಾವ ಮರದ ಹಣ್ಣನ್ನು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದೋ ನಿಜವೋ? ಎಂದು ಕೇಳಿತು"(ಆದಿ–೩:೧).

ಈಗ ಇಲ್ಲಿ ಸಂಕ್ಷಿಪ್ತವಾಗಿ ನಿಲ್ಲಿಸೋಣ. ಸೈತಾನನು ಸರ್ಪದ ಹಾಗೆ ಯಾಕೆ ಕಾಣಿಸಿಕೊಂಡನು? "ಯೆಹೋವ ದೇವರು ಉಂಟುಮಾಡಿದ್ದ ಎಲಲಾ ಭೂಜಂತುಗಳಲ್ಲಿ ಸರ್ಪವು ಬಹು ಯುಕ್ತಿಯುಳ್ಳದ್ದಾಗಿತ್ತು" ಎಂದು ವಾಕ್ಯ ಹೇಳಿರುವಾಗ ಅದೇ ನಮಗೆ ಉತ್ತರವನ್ನು ಕೊಡುತ್ತದೆ. ಸೈತಾನನು ಒಬ್ಬ ಶೋಧಕನು, ಆದಕಾರಣ ತಾನೊಬ್ಬ ತುಂಬಾ ಬುದ್ಧಿವಂತನೆಂಬುದಾಗಿ ತನ್ನನ್ನು ತೋರಿಸಿಕೊಂಡನು. ಸೈತಾನನು ದೊಡ್ಡದಾದ ಕೆಂಪು ಮಹಾ ಸರ್ಪದ ರಿತಿಯಲ್ಲಿ ಆದಾಮ ಹವ್ವರ ಹತ್ತಿರ ಬಂದು, "ಆದಾಮ ಹವ್ವ ಸಮಾಧಾನವು ನಿಮ್ಮ ಮೇಲಿರಲಿ. ನಾವು ದುರಾತ್ಮನು, ದೇವರ ಶತ್ರು! ಜೀವದ ಕರ್ತನಾಗಿರುವ ದೇವರನ್ನು ತಿರಸ್ಕರಿಸಿ ಎಂದೆಂದಿಗೂ ನೀವು ನಾಶವಾಗಲಿ ಎಂದು ನಿಮ್ಮನ್ನು ಶೋಧನೆಗೊಳಪಡಿಸುವದಕ್ಕೆ ಈದಿನ ನಾನು ನಿಮ್ಮ ಬಳಿಗೆ ಬಂದಿದ್ದೇನೆ!" ಎಂದು ಹೇಳುವದಕ್ಕೆ ಅವನು ಬರಲಿಲ್ಲ. ಸೈತಾನನು ಆ ರೀತಿಯಲ್ಲಿ ಪ್ರಭಾವ ಬೀರಲಿಲ್ಲ! ಹಾಗಾದರೆ ಅವನು ಯಾವ ರೀತಿಯಲ್ಲಿ ಕಾಣಿಸಿಕೊಂಡನು? ಒಂದು ಸುಂದರವಾದ ಮತ್ತು ಬುದ್ಧಿವಂತ ಭೂಜಂತುವಿನ ಹಾಗೆ. ಪಾಪವು ಲೋಕದೊಳಕ್ಕೆ ಪ್ರವೇಶಿಸು–ವದಕ್ಕಿಂತ ಮುಂಚೆ ಎಲ್ಲಾ ಭೂಜಂತುಗಳಲ್ಲಿ ಸರ್ಪವು ಯುಕ್ತಿಯುಳ್ಳದ್ದಾಗಿತ್ತು, ಆದುದರಿಂದ ಅವರೊಂದಿಗೆ ಒಂದು ಸರ್ಪದ ಮೂಲಕ ಮಾತಾಡುವದನ್ನು ಅವನು ಆರಿಸಿಕೊಂಡನು.

ಈಗಲೂ ಸೈತಾನನು ಹಾಗೆಯೇ ಇದ್ದಾನೆ. ಅವನು ಯುಕ್ತಿಯುಳ್ಳವನು. ಒಂದು ಒಳ್ಳೆಯ ಸಂಗತಿಯ ಹಾಗೆ ಅವನು ಯಾವುದನ್ನು ಕೊಡಬೇಕೆಂ–ದಿರುತ್ತಾನೋ ಅದನ್ನು ಸ್ವಭಾವಾನುಸಾರವಾಗಿಯೇ ಸಮರ್ಪಿಸುತ್ತಾನೆ. "ಸೈತಾನನು ತಾನೇ ಪಕಾಶರೂಪವುಳ್ಳ ದೇವದೂತನ ವೇಷವನ್ನು ಹಾಕಿ –ಕೊಳ್ಳುತ್ತಾನೆ."(೨ಕೊರಿಂಥ–೧೧:೧೪). ಎಂದು ವಾಕ್ಯವು ಹೇಳುತ್ತದೆ. ಇದರ ಪರಣಾಮವಾಗಿ ದೇವರು ವಾಕ್ಯದಲ್ಲಿ ಹೀಗೆ ಹೇಳುತ್ತಾ ನಮ್ಮನ್ನು ಎಚ್ಚರಿಸುತ್ತಾನೆ: "ಸುಳ್ಳು ಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ. ಅವರು ಕುರಿವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿದರೆ ಅವರು ಹಿಡುಕೊಂಡು ಹೋಗುವ ತೋಳಗಳೇ."(ಮತ್ತಾಯ–೭:೧೫). **ಸೈತಾನನು ಒಬ್ಬ ಮೋಸಗಾರ**. ಅದಕ್ಕೋಸ್ಕರವೇ ಅವನು ಆದಾಮ ಮತ್ತು ಹವ್ವರ ಮುಂದೆ ಸರ್ಪದ ಹಾಗೆ ಕಾಣಿಸಿಕೊಂಡನು. ಅದೂ ಅಲ್ಲದೆ ಆದಾಮನೊಂದಿಗೆ ಬದಲಾಗಿ ಹವ್ವಳೊಂದಿಗೆ ಮಾತಾಡು–ವದಕ್ಕೆ ಅವನು ಇಷ್ಟಪಟ್ಟನು, ಯಾಕೆಂದರೆ ಅದಾಮನಿಗಿಂತಲೂ ಹವ್ವಳನ್ನು ಶೋಧನೆಗೊಳಪಡಿಸುವದು ಸುಲಭವಾಗುತ್ತದೆಂದು ಅವನು ನಂಬಿ –ದ್ದನು. ದೇವರು ಹವ್ವಳನ್ನು ಉಂಟುಮಾಡುವದಕ್ಕಿಂತ ಮೊದಲೇ ಆದಾಮನಿಗೆ ಮರದ ಕುರಿತಾಗಿ ಆಜ್ಞೆಯನ್ನು ಕೊಟ್ಟಿದ್ದಾನೆಂಬುದು ಸೈತಾನನು ತಿಳಿದಿದ್ದನು. ಹೀಗಿದ್ದರೂ, ದೇವರ ಆಜ್ಞೆಯ ಕುರಿತು ಹವ್ವಳು ಸಹ ತಿಳಿದಿದ್ದಳು. ದುರಾತ್ಮನು ಬಹಳವಾಗಿ ಬುದ್ಧಿವಂತನೂ ಮತ್ತು ತಾನು ಯಾವುದನ್ನು ಸಾಧಿಸಬೇಕೆಂಬುದನ್ನು ಅವನು ಸ್ಪಷ್ಟವಾಗಿ ತಿಳಿದವನಾಗಿದ್ದನು. ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿನ್ನುವದಕ್ಕೆ ಸ್ತ್ರೀಯನ್ನು ಒಪ್ಪಿಸಿದರೆ ಬಹುಮಟ್ಟಿಗೆ, ದೇವರಿಗೆ ಅವಿಧೇಯನಾಗುವದರಲ್ಲಿ ಆದಾಮನು ಆಕೆಯನ್ನು ಅನುಸರಿಸುತ್ತಾನೆಂದು ಸೈತಾನನು ಆಲೋಚಿಸಿದನು.

ಹಾಗಾಗಿ, ವಾಕ್ಯವು ಹೀಗೆ ಹೇಳುತ್ತದೆ; "ಏನವ್ವಾ ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದು ನಿಜವೋ? ಎಂದು ಸೈತಾನನು ಸ್ತ್ರೀಯನ್ನು ಕೇಳಿದನು"(ಆದಿ–೩:೧). ಸೈತಾನನು ಹವ್ವಳಿಗೆ ಏನು ಹೇಳಿದನೆಂದು ನೀವು ಕೇಳಿಸಿಕೊಂಡಿರೋ? "ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದೋ ನಿಜವೋ?" ಎಂದು ಹೇಳಿದನು. ಸೈತಾನನು ಏನು ಮಾಡುವದಕ್ಕೆ ಪ್ರಯತ್ನಿಸುತ್ತಿದ್ದಾನೆಂದು ನೀವು ಗಮನಿಸಿದ್ದೀರೋ? ದೇವರ ನಿಜವಾದ ಮಾತಿನ ಕುರಿತಾಗಿ ಹವ್ವಳ ಮನಸ್ಸಿನಲ್ಲಿ **ಸಂದೇಹ –ವನ್ನು ಹುಟ್ಟಿಸುವದಕ್ಕೆ** ಅವನು ಪ್ರಯತ್ನಿಸುತ್ತಿದ್ದಾನೆ. ಅದಕ್ಕಾಗಿಯೇ ಅವನು "ದೇವರು ಹೀಗೆ ಹೇಳಿದನೋ?" ದೇವರು **ನಿಜವಾಗಿಯೂ** ಹೀಗೆ ಹೇಳಿದನೋ? ಎಂದು ಕೇಳಿದನು. ಈಗಲೂ ಸೈತಾನನು ಇದೇ ವಿಧಾನವನ್ನು ಉಪಯೋಗಿಸುತ್ತಿದ್ದಾನೆ. ಅವನು **ಸತ್ಯದ ವಾಕ್ಯದ ವಿರುದ್ಧವಾಗಿ ಹೋರಾಡುತ್ತಿದ್ದಾನೆ, ಯಾಕೆಂದರೆ** ದೇವರ ವಾಕ್ಯವು ತನ್ನನ್ನು ನಿರಾಯುಧನನ್ನಾಗಿ ಮಾಡುತ್ತದೆ ಮತ್ತು ತನ್ನ ಸುಳ್ಳುಗಳನ್ನು ಅಪಕೀರ್ತಿಗೊಳಿಸುತ್ತದೆ ಎಂದು ಅವನು ತಿಳಿದಿದ್ದನು. ಬೆಳಕು ಕತ್ತಲೆಯನ್ನು ಹೋಗಲಾಡಿಸುವಂತೆ ಸತ್ಯವು ಸುಳ್ಳನ್ನು ಹೋಗಲಾಡಿಸುತ್ತದೆ ಎಂಬುದನ್ನು ಸೈತಾನನು ತಿಳಿದಿದ್ದನು.

ಸ್ತ್ರೀ ಮತ್ತು ದುರಾತ್ಮನ ಮಧ್ಯೆ ನಡೆದಂತಹ ಉಳಿದ ಸಂಭಾಷಣೆಯನ್ನು ಈಗ ಕೇಳೋಣ. ವಾಕ್ಯವು ಹೀಗೆ ಹೇಳುತ್ತದೆ:
"ಸ್ತ್ರೀಯು ಅವನಿಗೆ, ತೋಟದಲ್ಲಿರುವ ಮರದ ಹಣ್ಣುಗಳನ್ನು ನಾವು ತಿನ್ನಬಹುದು; ಅದರೆ ತೋಟದ ಮಧ್ಯದಲ್ಲಿರುವ ಈ ಮರದ ಫಲದ ವಿಷಯ –ವಾಗಿ – ಇದನ್ನು ತಿನ್ನಲೂ ಕೂಡದು ಮುಟ್ಟಲೂ ಕೂಡದು ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ ಅಂದಳು. ಆಗ ಸರ್ಪವು ಸ್ತ್ರೀಗೆ – ನೀವು ಹಾಗೂ ಸಾಯುವದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನೀಮ್ಮ ಕಣ್ಣುಗಳು ತೆರೆಯುವವು, ನೀವು ದೇವರಂತೆ ಆಗಿ ಒಳ್ಳೇದರ ಮತ್ತು ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ, ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು."(ಆದಿ–೩:೨–೫).

ಇದು ಆಶ್ಚರ್ಯಕರವಾದುದು! ನಿಷೇಧಿಸಲ್ಪಟ್ಟ ಮರದ ಹಣ್ಣನು ಆದಾಮ ಹವ್ವರು ತಿಂದಿದ್ದರೆ ಏನಾಗುತ್ತಿತ್ತೆಂದು ದೇವರು ಹೇಳಿದನು? **"ನೀವು ಸಾಯುವಿರಿ!"** ಎಂದು ಹೇಳಿದನು. ಸೈತಾನನು ಏನು ಹೇಳಿದನು? **"ನೀವು ಸಾಯುವದಿಲ್ಲ!"** ದೇವರ ವಾಕ್ಯದ ಮೇಲೆ ಕೇವಲ ಸಂದೇಹ

ಬಿಸಾಡುವದಕ್ಕೆ ಮಾತ್ರ ತನ್ನ ಕುತಂತ್ರವನ್ನು ನಿಲ್ಲಿಸಲಿಲ್ಲ, ಆದರೆ ಅವನು ನೇರವಾಗಿ ಬಂದು ಅದನ್ನು **ಅಲ್ಲಗಳೆದನು!** ಇದರ ಕುರಿತಾಗಿ ನೀವು ಏನು ಆಲೋಚಿಸುತ್ತೀರಿ? ಯಾರು ಸತ್ಯವನ್ನು ಮಾತಾಡುತ್ತಿದ್ದಾರೆ, ದೇವರೋ ಅಥವಾ ಸೈತಾನನೋ? ದೇವರು ಸತ್ಯವಂತನು, ಆತನೆಂದಿಗೂ ಸುಳ್ಳನ್ನು ಹೇಳುವದಿಲ್ಲವೆಂದು ಪರಿಶುದ್ಧ ವಾಕ್ಯಗಳು ಹೇಳುತ್ತವೆ. ಸೈತಾನನ ವಿಷಯದಲ್ಲಿ, ಅವನು ಸತ್ಯಕ್ಕೆ ನಿಲ್ಲುವವನಲ್ಲ, **"**ಅವನಲ್ಲಿ ಸತ್ಯವು ಇಲ್ಲವೇ ಇಲ್ಲ, ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ, ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ**"** (ಯೋಹಾನ–೮:೪೪).

ಹೇಗೂ, ಸೈತಾನನು **ಸುಳ್ಳುಗಾರ** ಮಾತ್ರವಲ್ಲ ಎಂಬುದನ್ನು ಸಹ ನಾವು ನೆನಪಿನಲ್ಲಿಟ್ಟುಕೊಳ್ಳಬೇಕು. ಅವನು ಒಬ್ಬ **ಮೋಸಗಾರನೂ** ಸಹ ಆಗಿದ್ದಾನೆ. ಅವನು ಯುಕ್ತಿಯುಳ್ಳವನು; ಅವನು **ಸತ್ಯವಲ್ಲದ್ದನ್ನು** ತೆಗೆದುಕೊಂಡು ಸತ್ಯದ ಜೊತೆಗೆ **ಸೇರಿಸುತ್ತಾನೆ**. ಸೈತಾನನು ಆದಾಮ ಮತ್ತು ಹವ್ವರಿಗೆ ಏನು ಹೇಳಿದನೆಂದು ನಾವು ನೋಡೋಣ, **"**ನೀವು ಈ ಮರದ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರೆಯುತ್ತವೆ; ನೀವು ದೇವರಂತೆ ಆಗಿ ಒಳ್ಳೇದರ ಮತ್ತು ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ". ಸೈತಾನನು ಅವರಿಗೆ "ನೀವು ದೇವರಂತೆ ಆಗುವಿರಿ**"** ಎಂದು ಹೇಳಿದ್ದು **ಸುಳ್ಳು,** ಯಾಕೆಂದರೆ ಪಾಪ ಮಾಡಿದವರು ದೇವರಂತೆ ಆಗುವದಿಲ್ಲ, ಆದರೆ ಸೈತಾನನಂತೆ ಆಗುತ್ತಾರೆ. ಆದರೆ ಸೈತಾನನು, **"**ನೀವು ಒಳ್ಳೇದರ ಮತ್ತು ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ**"** ಎಂದು ಹೇಳಿದ್ದು **ನಿಜ,** ಯಾಕೆಂದರೆ ಆದಾಮ ಹವ್ವರು ಪಾಪ ಮಾಡಿದ ನಂತರ ಕೆಟ್ಟದ್ದು ಯಾವುದು ಎಂಬುದನ್ನು ತಿಳಿದು –ಕೊಂಡರು. ಹೇಗಿದ್ದರೂ, ಅವರ ಜೀವಿತದೊಳಗೆ ತಂದುಕೊಟ್ಟಂತ ಅಂತಹ ತಿಳುವಳಿಕೆಯ ಕಹಿಯನ್ನು ಸೈತಾನನು ಅವರಿಗೆ ಹೇಳಲಿಲ್ಲ. ದೇವರು ಆದಾಮನಿಗೆ, **"**ನೀನು ಆ ಮರದ ಹಣ್ಣನ್ನು ತಿಂದ ದಿನ ಸತ್ತೇ ಹೋಗುವಿ!**"** ಎಂದು ಹೇಳಿದ್ದನು. ಆದರೆ ಸೈತಾನನು **"**ನೀವು ಆ ಮರದ ಹಣ್ಣನ್ನು ತಿಂದರೆ ಸಾಯುವದಿಲ್ಲ!**"** ಎಂದು ಹೇಳಿದನು. ಸೈತಾನನು ಸುಳ್ಳುಗಾರ. ಅದಕ್ಕಾಗಿಯೇ, ದೇವರು ಅವರಿಗೆ **"**ನೀವು ಸಾಯುತ್ತೀರಿ!**"** ಎಂದು ಹೇಳಿದರೆ ಸೈತಾನನು **"**ನೀವು ಸಾಯುವದಿಲ್ಲ!**"** ಎಂದು ಹೇಳಿದನು.

ಈಗ ಆದಾಮ ಮತ್ತು ಹವ್ವರಿಗೆ ದೇವರ ಮಾತು ಮತ್ತು ಸೈತಾನನ ಮಾತು ಇವೆರಡರ ನಡುವೆ ಆರಿಸಿಕೊಳ್ಳುವಿಕೆಯ ಕ್ಷಣ ಬಂತು. ಅವರ ಮುಂದೆ ಇದ್ದ ಆಯ್ಕೆ ಇದೇ: ಅವರು ದೇವರ ಮಾತನ್ನು ಅಥವಾ ಸೈತಾನನ ಮಾತನ್ನು ಎರಡರಲ್ಲಿ ಯಾವುದನ್ನು ನಂಬಬೇಕು? ಅವರು ಸತ್ಯವನ್ನು ನಂಬಬೇಕೋ ಅಥವಾ ಸುಳ್ಳನ್ನು ನಂಬಬೇಕೋ? ಅವರು ಬೆಳಕಿನ ಕರ್ತನನ್ನು ಅಥವಾ ಕತ್ತಲೆಯ ಕರ್ತನನ್ನು ಅನುಸರಿಸಬೇಕೋ?

ಅವರು ಮಾಡಿದ ಆಯ್ಕೆಯನ್ನು ನೋಡುವದಕ್ಕೆ ಈ ವಾಕ್ಯವನ್ನು ಓದೋಣ: **"**ಆ ಮರದ ಹಣ್ಣು ತಿನ್ನುವದಕ್ಕೆ ಉತ್ತಮವಾಗಿಯೂ ನೋಡುವದಕ್ಕೆ ರಮ್ಯವಾಗಿಯೂ ಜ್ಞಾನೋದಯಕ್ಕೆ ಅಪೇಕ್ಷಿಸತಕ್ಕದ್ದಾಗಿಯೂ ಇದೆ ಎಂದು ತಿಳಿದು **ಅದನ್ನು ತೆಗೆದುಕೊಂಡು ತಿಂದಳು**. ಸಂಗಡ ಇದ್ದ ಗಂಡನಿಗೂ ಕೊಡಲು **ಅವನೂ ತಿಂದನು"**(ಆದಿ–೩:೬).

ಆಶ್ಚರ್ಯ! ತನ್ನನ್ನು ತಿಳಿದುಕೊಳ್ಳುವದಕ್ಕೆ, ಪ್ರೀತಿಸುವದಕ್ಕೆ ಮತ್ತು ಎಂದೆಂದಿಗೂ ತನಗೆ ವಿಧೇಯರಾಗುವದಕ್ಕಾಗಿ ದೇವರು ತನ್ನ ಸ್ವಂತ ಸ್ವರೂಪ –ದಲ್ಲಿ ಮನುಷ್ಯನನ್ನು ಉಂಟುಮಾಡಿದನು. ಆದರೆ ಮನುಷ್ಯನು ಏನು ಮಾಡಿದನು? ಆತನ ಆಜ್ಞೆಗೆ ವಿಧೇಯನಾಗುವದಕ್ಕೆ ಸಾಕಾಗುವಷ್ಟು ದೇವರನ್ನು ಪ್ರೀತಿಸಿದನೋ? ಇಲ್ಲ! ಅವನು ದೇವರ ಪ್ರೀತಿಗೆ ಅವಿಧೇಯನಾಗುವದನ್ನು ಆರಿಸಿಕೊಂಡನು, ಮತ್ತು ದೇವರ ಹಾಗು ಮನುಷ್ಯನ ವೈರಿಯಾದ ಸೈತಾನನನ್ನು ಹಿಂಬಾಲಿಸಿದನು!

ಆ ದಿವಸವು ಎಷ್ಟೊಂದು ದು:ಖಕರವಾದುದಾಗಿತ್ತು! ನಮ್ಮ ಪೂರ್ವಿಕರಾದ ಆದಾಮ ಮತ್ತು ಹವ್ವರು ದೇವರು ನಿಷೇಧಿಸಿದ ಮರದ ಹಣ್ಣನ್ನು ತಿಂದು ಕರ್ತನಾದ ದೇವರಿಗೆ ಬೆನ್ನು ಹಾಕಿದರು. ಊಲೂಫ್ ಹೀಗೆ ಹೇಳುತ್ತದೆ: **"**ಒಂದು ಸೋಂಕು ಯಾರಿಂದ ಉತ್ಪತ್ತಿಯಾಗಿರುತ್ತದೋ ಅವರಿಗೆ ಇದು ನಿರ್ಬಂಧಗೊಳ್ಳುವದಿಲ್ಲ!**"** ಅದೇ ರೀತಿಯಲ್ಲಿ, ದೇವರ ವಾಕ್ಯವು ಹೀಗೆ ಹೇಳುತ್ತದೆ: **"**ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿ ವ್ಯಾಪಿಸಿತು!**"**(ರೋಮರ್ಮ–೫:೧೨) ನಾವು ಇದನ್ನು ಇಷ್ಟಪಡಲಿ ಅಥವಾ ಇಷ್ಟಪಡದಿರಲಿ, ಇದು ಅದೇ ರೀತಿಯಾದುದು!

**"**ಜಿಗಿದಾಡುವ ಜಿಂಕೆಯು ಬಿಲದಲ್ಲಿ ವಾಸಿಸುವಂತಹ ಮರಿಯನ್ನು ಹಾಕುವದಿಲ್ಲ.**"**{ಊಲೂಫ್‌ನ ಗಾದೆ; ಇಂಗ್ಲೀಷ್‌ನ ಸಮಾನಾರ್ಥ: **"**ತಂದೆಯ ಹಾಗೆ ಮಗ**"**} ನೀವು ನಾನು ಮತ್ತು ಎಲ್ಲಾ ಜನರೂ ಆದಾಮನನ್ನು ಹೋಲುವಂತವರು. ನಾವು ಆದಾಮನಿಂದ ಬಂದವರಾದ್ದರಿಂದ ಪಾಪಿ –ಗಳಾಗಿ ಹುಟ್ಟಿ ಸಾಯಲೇಬೇಕು. ದೇವರ ಆಜ್ಞೆಗೆ ಅವಿಧೇಯನಾದ ಮೊದಲ ಮನುಷ್ಯನು ನಮ್ಮ ಪೂರ್ವಿಕನು ಮತ್ತು ನಾವು ಅವನ ಹಾಗೆಯೇ ಇದ್ದೇವೆ. ನಾವು ಎಂದಿಗೂ ದೇವರ ಆಜ್ಞೆಗೆ ಅವಿಧೇಯರಾಗಿಲ್ಲ ಎಂದು ನಮ್ಮೊಳಗೆ ಯಾರು ಹೇಳುವದಕ್ಕಾಗುತ್ತದೆ? ಒಬ್ಬನೇ ಒಬ್ಬನೂ ಇಲ್ಲ. ದೇವರ ಆಜ್ಞೆಗಳಿಗೆ ಅವಿಧೇಯರಾಗುವಂತಹ ಸ್ವಭಾವವನ್ನು ನಾವು ಎಲ್ಲಿಂದ ವಂಶಪಾರಂಪರ್ಯವಾಗಿ ಪಡೆದಿದ್ದೇವೆ? ಆದಾಮನಿಂದ. ಒಂದು ಭಯಂಕರವಾದ ಸಾಂಕ್ರಾಮಿಕ ರೋಗದ ಹಾಗೆ, **ಆದಾಮನಲ್ಲಿದ್ದ ಪಾಪವು ನಮ್ಮೆಲ್ಲರಿಗೂ ಹರಡಿಕೊಂಡಿದೆ**. ಸತ್ಯವಾಗಿಯೂ, **"**ಒಂದು ಸೋಂಕು ಯಾರಿಂದ ಉತ್ಪತ್ತಿಯಾಗಿರುತ್ತದೋ ಅವರಿಗೆ ಇದು ನಿರ್ಬಂಧಗೊಳ್ಳುವದಿಲ್ಲ!**"**

ಹೇಗಿದ್ದರೂ, ಎಲ್ಲಾ ಭರವಸೆಗಳು ಕಳೆದುಹೋಗಿಲ್ಲ, ಯಾಕೆಂದರೆ ದೇವರ ವಾಕ್ಯ ಹೀಗೆ ಹೇಳುತ್ತದೆ: **"ಒಂದೇ ಅಪರಾಧದ** ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ **ಒಂದೇ ಸತ್ಕಾರ್ಯದಿಂದ** ಎಲ್ಲಾ ಮನುಷ್ಯರಿಗೆ **ನೀತಿವಂತರೆಂಬ** ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ.**"**(ರೋಮಾ–೫:೧೮). ಈ ದಿನ ನಾವು ಇದರ ಕುರಿತು ನೋಡಿಕೊಳ್ಳುವದಿಲ್ಲ, ಆದರೆ, ಪಾಪಿಗಳು ದೇವರ ಕಡೆಗೆ ಹಿಂತಿರುಗಿ ಬರುವಂತಹ ಮತ್ತು ದೇವರಿಂದ ಸ್ಥಾಪಿಸಲ್ಪಟ್ಟಂತಹ ರಕ್ಷಣೆಯೆಂಬ ನೀತಿಯ ದಾರಿಯನ್ನು ನಾವು ಮುಂದಿನ ಪಾಠಗಳಲ್ಲಿ ಅಧ್ಯಯನ ಮಾಡುತ್ತೇವೆ.

ಸ್ನೇಹಿತರೇ, ನೀತಿವಂತಿಕೆಯ ಮಾರ್ಗ ಎಂಬುದು ನಿಮ್ಮ ಕಾರ್ಯಕ್ರಮ. ಮುಂದಿನ ಸಲ, ಆದಾಮ ಹವ್ವ ನೀತಿವಂತಿಕೆಯ ಮಾರ್ಗದಿಂದ ದೂರವಾಗಿ ಅನೀತಿವಂತಿಕೆಯ ಮಾರ್ಗವನ್ನು ಹಿಂಬಾಲಿಸಿದ ನಂತರ ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ಇದರ ಪ್ರಮುಖ್ಯವಾದ ಅಧ್ಯಾಯದಲ್ಲಿ ಮುಂದುವರಿಸುವದಕ್ಕೆ ಯೋಜನೆ ಮಾಡಿಕೊಂಡಿದ್ದೇವೆ. . . . ಈ ಮೂಲಭೂತವಾದ ಸತ್ಯವನ್ನು ನೀವು ಜ್ಞಾಪಿಸಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

"ಒಬ್ಬ ಮನುಷ್ಯನಿಂದಲೇ ಪಾಪವು, ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು!" (ರೋಮಾ–೫:೧೨).

[ಪಾಠ ೭:ಪಾಪವು ಹೇಗೆ ಲೋಕದೊಳಕ್ಕೆ ಪ್ರವೇಶಿಸಿತು] [ಸಾರಾಂಶಗಳ ಪಟ್ಟಿ] [ಪಾಠ ೯:ಅದ್ಭುತವಾದ ವಾಗ್ದಾನ]

ಪಾಠ ೮

# ಆದಾಮನ ಪಾಪವು ಯಾವುದನ್ನು ಉತ್ಪತ್ತಿ ಮಾಡಿತು

ಆದಿಕಾಂಡ ೩

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿ –ಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸು – ವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಕರ್ತನಾದ ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮೊದಲ ಮನುಷ್ಯರನ್ನು ಉಂಟುಮಾಡಿದನು. ದೇವರು ಅವರನ್ನು ಯಾಕೆ ಉಂಟುಮಾಡಿದನೆಂಬುದನ್ನೂ ಸಹ ನಾವು ಕಲಿತುಕೊಂಡಿದ್ದೇವೆ. ಅವರು ತನ್ನನ್ನು ಪೂರ್ಣ ಹೃದಯದಿಂದಲೂ ಪೂರ್ಣ – ಮನಸ್ಸಿನಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸಬೇಕೆಂದು ಮತ್ತು ಇದರ ಫಲವಾಗಿ, ಅವರು ಅದ್ಭುತವಾದ ಮತ್ತು ಅಗಾಧವಾದ ಸಂಬಂಧ – ವನ್ನು ತನ್ನೊಂದಿಗೆ ಅವರು ಎಂದೆಂದಿಗೂ ಆನಂದಿಸುವದಕ್ಕೆ ದೇವರು ಬಯಸಿದನು.

ಹಾಗಾಗಿ, ತನಗೆ ವಿಧೇಯನಾಗುವದಕ್ಕೆ ಸಾಕಾಗುವಷ್ಟು ಆದಾಮನು ತನ್ನನ್ನು ಪ್ರೀತಿಸುತ್ತಾನೋ ಇಲ್ಲವೋ ಎಂಬುದನ್ನು ಪರೀಕ್ಷಿಸುವದಕ್ಕಾಗಿ ದೇವರು ಅವನ ಎದುರಿಗೆ ಒಂದು ಸರಳವಾದ ಪರೀಕ್ಷೆಯನ್ನು ಹೇಗೆ ಇಟ್ಟನೆಂಬುದನ್ನು ನಾವು ನೋಡಿದೆವು. ಮೊದಲನೆಯ ಸ್ತ್ರೀ ಉಂಟಾಗುವದಕ್ಕಿಂತ ಮೊದಲು ದೇವರು ಆದಾಮನಿಗೆ ಹೀಗೆ ಆಜ್ಞಾಪಿಸಿದನು: "ನೀನು ತೋಟದಲ್ಲಿರುವ ಎಲ್ಲಾ ಮರಗಳ ಹಣ್ಣನ್ನು ಯಥೇಚ್ಛವಾಗಿ ತಿನ್ನಬಹುದು; ಆದರೆ ಒಳ್ಳೆದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ ದಿನ ಸತ್ತೇ ಹೋಗುವಿ"(ಆದಿ–೨:೧೬–೧೭). ಹೀಗೆ ದೇವರು ಆದಾಮನನ್ನು ಪರೀಕ್ಷೆಗೊಳಪಡಿಸಿ ಮರಣವು ಅವಿಧೇಯತೆಗಾಗಿ ತನ್ನೊಂದಿಗೆ ಬೇರ್ಪಡುವದಕ್ಕೆ ಇರುವ ಶಿಕ್ಷೆ ಎಂದು ಎಚ್ಚರಿ – ಸಿದನು. ದೇವರು ಆದಾಮನನ್ನು ಪ್ರೀತಿಸಿದನು ಮತ್ತು ಎಂದೆಂದಿಗೂ ತನ್ನೊಂದಿಗೆ ಅನ್ಯೋನ್ಯತೆಯನ್ನು ಅವನು ಆನಂದಿಸಬೇಕೆಂದು ಬಯಸಿ – ದನು. ಹೇಗೂ, ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ದೇವರು ನಿಷೇಧಿಸಿದ್ದ ಮರದ ಹಣ್ಣನ್ನು ತಿನ್ನುವದರಿಂದ ಆದಾಮ ಮತ್ತು ಹವ್ವ ಸೈತಾನನಿಗೆ ಕಿವಿಗೊಟ್ಟು ದೇವರಿಗೆ ಅವಿಧೇಯರಾದದ್ದನ್ನು ನಾವು ಓದಿಕೊಂಡಿದ್ದೇವೆ.

ಹಾಗಾದರೆ ಈ ದಿನ, ಆದಾಮ ಮತ್ತು ಹವ್ವ ದೇವರಿಗೆ ವಿರುದ್ಧವಾಗಿ ಪಾಪ ಮಾಡಿದ ನಂತರ ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ತೋರಾದಲ್ಲಿರುವ ಆದಿಕಾಂಡ ಪುಸ್ತಕದ ಮೂರನೆಯ ಅಧ್ಯಾಯದಲ್ಲಿರುವದನ್ನು ಅಭ್ಯಾಸ ಮಾಡುವದಕ್ಕೆ ನಾವು ಮುಂದುವರಿಸೋಣ. ಏಳನೆಯ ವಚನದಲ್ಲಿ, ವಾಕ್ಯ ಹೀಗೆ ಹೇಳುತ್ತದೆ: "ಕೂಡಲೆ ಅವರಿಬ್ಬರ ಕಣ್ಣುಗಳು ತೆರೆದವು; ತಾವು ಬೆತ್ತಲೆಯಾಗಿದ್ದೇವೆಂದು ತಿಳಿದು ಅಂಜೂರದ ಎಲೆಗಳನ್ನು ಹೊಲಿದು ಉಟ್ಟುಕೊಂಡರು." (ಆದಿ–೩:೭).

ದೇವರಿಗೆ ಅವಿಧೇಯರಾದ ನಂತರ ಆದಾಮ ಹವ್ವ ಮಾಡಿದ ಮೊದಲನೆಯ ಸಂಗತಿ ಯಾವುದು? **ಅವರು ತಮ್ಮ ಅಪಮಾನವನ್ನು ಮತ್ತು ಪಾಪವನ್ನು ಮುಚ್ಚಿಕೊಳ್ಳುವದಕ್ಕೆ ಪ್ರಯತ್ನಿಸಿದರು!** ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವಂತಹ ಮರದ ಹಣ್ಣನ್ನು ಆದಾಮ ಮತ್ತು ಹವ್ವ ತಿನ್ನುವದಕ್ಕೆ ಮೊದಲು, "ಅವರಿಬ್ಬರೂ ಬೆತ್ತಲೆಯಾಗಿದ್ದರೂ ನಾಚಿಕೊಳ್ಳಲಿಲ್ಲ"(ಆದಿ–೨:೨೫)ಎಂಬುದನ್ನು ನಾವು ಈಗಾಗಲೇ ಕಲಿತುಕೊಂಡಿದ್ದೇವೆ. ಆದರೆ ಈಗ ಅವರ ಶರೀರದಲ್ಲಾದ ಬದಲಾವಣೆಯ ಕುರಿತು ಅವರ ಅಲೋಚನೆಗಳು ಬದಲಾಯಿತು. ತಮ್ಮನ್ನು ತೀರ್ಪುಮಾಡುವ ಪರಿಶುದ್ಧ – ನಾದವನ ಮುಂದೆ ಅಪಮಾನದ ಮತ್ತು ಪಾಪದ ಅನುಭವಪಟ್ಟರು. ಹಾಗಾಗಿ, ತಮ್ಮ ಅಪಮಾನವನ್ನು ಮುಚ್ಚಿಕೊಳ್ಳುವ ಪ್ರಯತ್ನದಲ್ಲಿ ಅಂಜೂರ ಮರದ ಎಲೆಗಳನ್ನು ಹೊಲಿದು ಉಟ್ಟುಕೊಂಡು ತಮ್ಮ ಬೆತ್ತಲೆ ಶರೀರದನ್ನು ಮುಚ್ಚಿಕೊಂಡರು. ಹೇಗೂ, ಅವರು ಎಲೆಗಳನ್ನು ಹೊಲಿದು ತಮ್ಮ ದೇಹದ ಮೇಲೆ ಉಟ್ಟುಕೊಂಡಿದ್ದು ಅವರ ಹೃದಯಗಳಲ್ಲಿರುವ ಪಾಪವನ್ನು ತೆಗೆದುಹಾಕಲಿಲ್ಲ.

ಮುಂದೆ ವಾಕ್ಯ ಹೀಗೆ ಹೇಳುತ್ತದೆ: "ತರುವಾಯ ಯೆಹೋವ ದೇವರು ಸಂಜೆಯ ತಂಗಾಳಿಯಲ್ಲಿ ತೋಟದೊಳಗೆ ಸಂಚರಿಸುತ್ತಿರುವಾಗ ಆ ಸ್ತ್ರೀ ಪುರುಷರು ಆತನ ಸಪ್ಪಳವನ್ನು ಕೇಳಿ ಆತನಿಗೆ ಕಾಣಿಸಬಾರದೆಂದು ತೊಠದ ಮರಗಳ ಹಿಂದೆ ಅಡಗಿಕೊಂಡರು" (ಆದಿ–೩:೮). ಅವರು ಪಾಪ ಮಾಡಿದ ನಂತರ ಆದಾಮ ಮತ್ತು ಹವ್ವ ಇಬ್ಬರಿಗೆ ವಿಷಯಗಳು ಹೇಗೆ ವ್ಯತ್ಯಾಸವುಳ್ಳವಾದವು! ಅವರು ದೇವರಿಗೆ ಅವಿಧೇಯರಾಗುವದಕ್ಕಿಂತ ಮೊದಲು, ದೇವರು ಅವರೊಂದಿಗೆ ಮಾತಾಡುವದಕ್ಕೆ ಬಂದಾಗಲೆಲ್ಲಾ ಅವರು ಸಂತೋಷಪಡುತ್ತಿದ್ದರು. ಹೇಗೂ, ಈಗ ದೇವರು ತಮ್ಮ ಸಮೀಪಕ್ಕೆ ಬಂದಾಗ ಅವರು ಭಯದಿಂದ ಮತ್ತು ಅಪಮಾನದಿಂದ ನಡುಗುತ್ತಾ ತೋಟದಲ್ಲಿರುವ ಮರಗಳ ಹಿಂದೆ ಬಚ್ಚಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸಿದರು! ಆದಾಮನು ಯಾಕೆ ಭಯದಿಂದ ಬಚ್ಚಿಟ್ಟುಕೊಂಡನು? ಇದನ್ನು ಅರ್ಥಮಾಡಿಕೊಳ್ಳುವದು ಕಷ್ಟವೇನಲ್ಲ. ಒಬ್ಬರು ಇನ್ನೊಬ್ಬರ ಹೊಲದಲ್ಲಿ ಕಳ್ಳತನ ಮಾಡಿದರೆ, ಆ ಹೊಲದ ಯಜಮಾನನ ಸ್ವರವನ್ನು ಕೇಳಿಸಿಕೊಂಡರೆ ಅವನು ಏನು ಮಾಡುತ್ತಾನೆ? ಅವನು ಬಚ್ಚಿಟ್ಟುಕೊಳ್ಳುತ್ತಾನೆ. ಅದೇ ರೀತಿಯಲ್ಲಿ, ದೇವರು ಯಾವುದನ್ನು ನಿಷೇಧಿಸಿದ್ದನೋ ಅದನ್ನು ಮಾಡಿದಾಗ ಬಚ್ಚಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸುತ್ತಾನೆ. ತಾನು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆಂಬುದನ್ನು ಆದಾಮನು ತುಂಬಾ ಚೆನ್ನಾಗಿ ತಿಳಿದಿದ್ದನು.

ದೇವರ ಆಜ್ಞೆಗೆ ಅವಿಧೇಯನಾದ ನಂತರ ಆದಾಮನು ಭಯಗ್ರಸ್ಥನಾದನೋ? ಖಂಡಿತವಾಗಿಯೂ! ಯಾಕೆ? ಯಾಕೆಂದರೆ "ಒಳ್ಳೇದರ ಮತ್ತು

ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದ ದಿನವೇ **ನೀನು ಸಾಯುವಿ!"** ಎಂದು ದೇವರು ಸ್ಪಷ್ಟವಾಗಿ ಹೇಳಿದ್ದನು. ದೇವರು ತನ್ನ ಮಾತನ್ನು ನೆರವೇರಿಸಿದನೋ? ನಿಜವಾಗಿಯೂ ಆದಾಮನು ಸತ್ತುಹೋದನೋ? ನೀವು ಏನು ಆಲೋಚಿಸುತ್ತೀರಿ? **ದೇವರು ತಾನು ಸೃಷ್ಟಿಸಿದ ಜನರನ್ನು ನಿಜವಾಗಿಯೂ ಶಿಕ್ಷಿಸಿದನೋ?** ಊಲೂಫ್ ಹೇಳುವದೇನೆಂದರೆ, ಒಬ್ಬನು ಒಂದು ಪ್ರಶ್ನೆಗೆ ಉತ್ತರವನ್ನು ಇನ್ನೊಂದು ಪ್ರಶ್ನೆಯಿಂದ ಕೊಡು –ವದಿಲ್ಲ, ಆದರೆ ನಾವು ಈ ಪ್ರಶ್ನೆಗೆ ಉತ್ತಮವಾದ ಉತ್ತರವನ್ನು ಇನ್ನೊಂದು ಪ್ರಶ್ನೆಯಿಂದ ಕೊಡುತ್ತೇವೆ. **ದೇವರು ತನ್ನ ಮೇಲೆ ಅಧಿಕಾರ ನಡೆಸು –ವದನ್ನು ತಿರಸ್ಕರಿಸಿದ ನಂತರ ಲೂಸಿಫರನಿಗೆ ಅಂದರೆ ಸೈತಾನನಿಗೆ ಕರ್ತನು ಏನು ಮಾಡಿದನು?** ಪಾಪ ಮಾಡಿದ ಸೈತಾನ ಮತ್ತು ಅವನ ದೂತರು –ಗಳು ತಪ್ಪು ಮಾಡಲಿಲ್ಲವೆಂದು ದೇವರು ತೀರ್ಪು ಕೊಟ್ಟನೋ? ಇಲ್ಲ ದೇವರು ಹಾಗೆ ಮಾಡಲಿಲ್ಲ! ಆದರೆ ಅವರನ್ನು ತನ್ನ ಪ್ರಸನ್ನತೆಯಿಂದ ದೊಬ್ಬಿಬಿಟ್ಟನು. ಅದು ಮಾತ್ರವಲ್ಲದೇ, ಆತನು ಅವರಿಗಾಗಿ ನಿತ್ಯವಾದ ಬೆಂಕಿಯನ್ನು ಸೃಷ್ಟಿಸಿದನು! ಸೈತಾನನ ಹಾಗೆಯೇ, ಆದಾಮನು ಸಹ ತನ್ನ ಮೇಲಿನ ದೇವರು ಆಳ್ವಿಕೆಯನ್ನು ತಿರಸ್ಕರಿಸಿದನು. **"ಇದೇನೂ ದೊಡ್ಡ ವ್ಯವಹಾರವಲ್ಲ!"** ಎಂದು ದೇವರು ಸುಮ್ಮನೆ ಹೇಳಿ ಆದಾಮನಿಗೆ ಯಾವ ತೀರ್ಪನ್ನು ಕೊಡದೇ ಕಳಿಸಿಬಿಟ್ಟನೋ?ಎಂದಿಗೂ ಇಲ್ಲ! **ದೇವರು ಪರಿಶುದ್ಧನು ಮತ್ತು ಆತನು ಪಾಪಕ್ಕೆ ತೀರ್ಪು ಕೊಟ್ಟೇ ಕೊಡುತ್ತಾನೆ!** ಎಂದೆಂದಿಗೂ ಅತೀ ಬುದ್ಧಿವಂತ ವ್ಯಕ್ತಿಯಾಗಿದ್ದ ಲಿಯೋನಾರ್ಡ್ ಡಾ ವಿಂಸಿ ಹೇಳುವದೇನೆಂದರೆ, **"ಕೆಟ್ಟತನವನ್ನು ಶಿಕಿಸದೇ ಇರುವವನು ಅದನ್ನು ಮಾಡುವದಕ್ಕೆ ಆಜ್ಞಾಪಿಸಿದವನಾಗುತ್ತಾನೆ!"** ದೇವರು ಎಂದಿಗೂ ಕೆಟ್ಟತನವನ್ನು ಅನುಮೋದಿಸುವದಿಲ್ಲ. ಆತನು ಅದನ್ನು ಶಿಕ್ಷಿಸುತ್ತಾನೆ. ಪ್ರವಾದಿಯಾದ ಹಬಕ್ಕೂಕನು ಹೀಗೇ ಬರೆಯುತ್ತಾನೆ: "ನನ್ನ ದೇವರಾದ 'ಯೆಹೋವನೇ, ನನ್ನ ಸದಮಲ ಸ್ವಾಮಿಯೇ. . . . .ಕೇಡನ್ನು ನೋಡಲಾರದ ಪವಿತ್ರ ದೃಷ್ಟಿಯುಳ್ಳವನೇ, ಕೆಡುಕನ್ನು ಕಟಾಕ್ಷಿಸಲಾರದವನೇ,!"(ಹಬಕ್ಕೂಕ–೧:೧೨, ೧೩). ಹೌದು, "ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ ಹೇಳಿಯದೇ. ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿಬೀಳುವದು ಭಯಂಕರವಾದದ್ದು!"(ಇಬ್ರಿಯ–೧೦:೩೦,೩೧). ದೇವರು ಪ್ರತಿಯೊಂದು ಪಾಪವನ್ನು ತೀರ್ಪುಮಾಡಿ ಶಿಕ್ಷಿಸುವದಕ್ಕೆ ಆತನ ಪರಿಶುದ್ಧ ಸ್ವಭಾವವು ಅವಶ್ಯಕವಾಗಿದೆ. ಆದುದರಿಂದ, ಆದಾಮ ಹವ್ವ ಪಾಪ ಮಾಡಿದ್ದರಿಂದ ಅವರಿಗೆ ತೀರ್ಪು ಮಾಡುವದು ಅಗತ್ಯವಾಗಿತ್ತು. ಅದಕ್ಕಾಗಿಯೇ ಮುಂದಿನ ವಚನದಲ್ಲಿ ನಾವು ಹೀಗೆ ಓದುತ್ತೇವೆ: **"ಯೆಹೋವ ದೇವರು ಮನುಷ್ಯನನ್ನು** ನೀನು ಎಲ್ಲಿರುತ್ತೀ? ಎಂದು ಕೂಗಿ ಕೇಳಿದನು"(ಆದಿ–೩:೯).

ಆದಾಮನು ಪಾಪ ಮಾಡಿದ ನಂತರ ದೇವರು ಏನು ಮಾಡಿದನು? ದೇವರು ಆದಾಮನನ್ನು ಹುಡುಕುತ್ತಾ ಹೋಗಿ **"ನೀನು ಎಲ್ಲಿರುತ್ತೀ"?** ಎಂದು ಕೂಗಿದನು. ದೇವರು ಕರೆದಾಗ ಆದಾಮನು ಆತನೆದುರಿಗೆ ಬಂದನೋ? ಇಲ್ಲ! ಅವನು ದೇವರಿಂದ ಬಚ್ಚಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸಿದನು! ದೇವರು ಆದಾಮನನ್ನು ಯಾಕೆ ಕರೆದನು? ಆದಾಮನು ಎಲ್ಲಿದ್ದಾನೆಂಬುದು ದೇವರಿಗೆ ಗೊತ್ತಿರಲಿಲ್ಲವೋ? ಪ್ರತಿಯೊಂದನ್ನು ನೋಡುವಂತಹ ಮತ್ತು ತಿಳಿದಿರುವಂತಹ ದೇವರಿಗೆ ಆದಾಮನು ಎಲ್ಲಿ ಬಚ್ಚಿಟ್ಟುಕೊಂಡಿದ್ದಾನೆಂಬುದು ತಿಳಿದಿತ್ತು! ಆದಾಮನು ತಾನು ಮಾಡಿದ ತಪ್ಪನ್ನು ಗುರುತಿಸಿ ಅದನ್ನು ತನ್ನ ಮುಂದೆ ಅರಿಕೆ ಮಾಡಿಕೊಳ್ಳಬೇಕೆಂದು ದೇವರು ಬಯಸಿದ್ದನು ಆದುದರಿಂದ, ಆತನು ಆದಾಮನನ್ನು ಕೂಗಿದನು. ಆದಾಮನು ತನಗೆ ಅವಿಧೇಯನಾದಾಗ್ಯೂ ಸಹ ದೇವರು ಅವನನ್ನು ಇನ್ನೂ ಪ್ರೀತಿಸುತ್ತಿದ್ದನು.

"ನೀನು ಎಲ್ಲಿರುತ್ತೀ?" ಎಂದು ದೇವರು ಕೇಳಿದಾಗ ಆದಾಮನು ಏನೆಂದು ಉತ್ತರಿಸಿದನು? ವಾಕ್ಯ ಹೀಗೆ ಹೇಳುತ್ತದೆ:

"ಆದಾಮನು ದೇವರಿಗೆ, ನೀನು ತೋಟದಲ್ಲಿ ಸಂಚರಿಸುವ ಸಪ್ಪಳವನ್ನು ನಾನು ಕೇಳಿ ಬೆತ್ತಲೆಯಾಗಿದ್ದೇನಲ್ಲ ಎಂದು ಹೆದರಿ ಅಡಗಿಕೊಂಡೆನು ಅಂದನು. ಅದಕ್ಕಾತನು ನೀನು ಬೆತ್ತಲೆಯಾಗಿದ್ದೀ ಎಂದು ನಿನಗೆ ತಿಳಿಸಿದವರಾರು? ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಮರದ ಹಣ್ಣನ್ನು ತಿಂದಿಯಾ ಎಂದು ಕೇಳಲು ಆ ಮನುಷ್ಯನು – ನನ್ನ ಜೊತೆಯಲ್ಲಿರುವದಕ್ಕೆ ನೀನು ಕೊಟ್ಟ ಸ್ತ್ರೀಯು ಅ ಮರದ ಹಣ್ಣನ್ನು ನನಗೆ ಕೊಟ್ಟಳು; ನಾನು ತಿಂದೆನು ಎಂದು ಹೇಳಿದನು. ಯೆಹೋವ ದೇವರು ಸ್ತ್ರೀಯನ್ನು ಎದೇನು ನೀನು ಮಾಡಿದ್ದು ಎಂದು ಕೇಳಲು ಸ್ತ್ರೀಯು ಸರ್ಪವು ನನ್ನನ್ನು ವಂಚಿಸಿತು, ನಾನು ತಿಂದೆನು ಎಂದು ಉತ್ತರ ಕೊಟ್ಟಳು."(ಆದಿ–೩:೧೦–೧೩).

ಆದಾಮ ಮತ್ತು ಹವ್ವ ಇಬ್ಬರೂ ದೇವರಿಗೆ ಹೇಗೆ ಉತ್ತರಿಸಿದರೆಂಬುದನ್ನು ನೀವು ಕೇಳಿದಿರೋ? **ಒಬ್ಬೊಬ್ಬರೂ ಬೇರೊಬ್ಬರ ಮೇಲೆ ದೋಷ ಹೊರಿಸು –ವದಕ್ಕೆ ಪ್ರಯತ್ನಿಸಿದರು.** ಆದಾಮನು, ದೇವರು ಮತ್ತು ಹವ್ವ ಇಬ್ಬರನ್ನು ಆಪಾದಿಸಿ, ಇದು ನನ್ನ ತಪ್ಪಲ್ಲ! ನೀನು ನನಗೆ ಕೊಟ್ಟಿರುವ ಈ ಸ್ತ್ರೀಯ ತಪ್ಪು! ಎಂದು ಹೇಳಿದನು. ಹವ್ವಳು, ಸರ್ಪದ ಮೇಲೆ ದೋಷ ಹೊರಿಸಿ, ನನ್ನ ಮೇಲೆ ತಪ್ಪು ಹೊರಿಸಬೇಡ–ಸರ್ಪವು ನನ್ನನ್ನು ವಂಚಿಸಿತು! ಎಂದು ಹೇಳಿದಳು. ಹೇಗೂ, ಮನುಷ್ಯನ ಹೃದಯವನ್ನು ಬಲ್ಲಂತ ದೇವರು, **ಇಬ್ಬರೂ ಅಪರಾಧಿಗಳೆಂಬುದನ್ನು** ತಿಳಿದಿದ್ದನು. ಮರದ ಹಣ್ಣನ್ನು ಅವರು ತಿನ್ನುವಂತೆ ದೇವರು ಮಾಡಲಿಲ್ಲ. ಸೈತಾನನು ಸಹ ಅವರು ಇದನ್ನು ತಿನ್ನುವಂತೆ ಮಾಡಲಿಲ್ಲ. ಸೈತಾನನು ಜನರನ್ನು ಶೋಧನೆಗೊಳಪಡಿಸಿ ಮೋಸಗೊಳಿಸುತ್ತಾನೆ, ಅದರೆ ಪಾಪಮಾಡುವಂತೆ ಅವರನ್ನು ಬಲವಂತಪಡಿಸುವದಿಲ್ಲ. ಸೈತಾನನು ಹವ್ವಳನ್ನು ಮೋಸಗೊಳಿಸಿದನು, ಅದರೆ ಅವಳು ಮಾಡಿದ್ದೇನೆಂದರೆ ದೇವರ ಮುಂದೆ ಪಾಪ ಮಾಡಿದಳು. ಆದಾಮನ ವಿಷಯದಲ್ಲಿ ವಾಕ್ಯ ನಮಗೆ ಹೇಳುವದೇನೆಂದರೆ ಅವನು ವಂಚನೆಗೊಳ–'ಗಾಗಲಿಲ್ಲ (೧ತಿಮೋಥೆ–೨:೧೪). ಅವನು ಪ್ರಜ್ಞಾಪೂರ್ವಕವಾಗಿ ತನ್ನ ಸ್ವಂತ ದಾರಿಯಲ್ಲಿ ಹೋಗುವದಕ್ಕೆ ಆರಿಸಿಕೊಂಡನು. ದೇವರು ತನಗೆ ಯಾವುದನ್ನು ಅಜ್ಞಾಪಿಸಿದ್ದನೆಂಬುದನ್ನು ಆದಾಮನು ನಿಶ್ಚಿತವಾಗಿ ತಿಳಿದಿದ್ದನು, ಆದರೆ ನೀತಿವಂತಿಕೆಯ ಮಾರ್ಗವನ್ನು ಬಿಟ್ಟು ಅನೀತಿವಂತಿಕೆಯ ಮಾರ್ಗವನ್ನು ಹಿಂಬಾಲಿಸಿದನು. ಮತ್ತು ಅವನು ದೇವರಿಗೆ ಅವಿಧೇಯನಾಗುವದನ್ನು ನಿಲ್ಲಿಸಲಿಲ್ಲ, ಅದರೆ ಬೇರೆಯವರ ಮೇಲೆ ತಪ್ಪು ಹೊರಿಸುವದಕ್ಕೆ ಪ್ರಯತ್ನಿಸಿ ತನ್ನ ಪಾಪಕ್ಕೆ ಮತ್ತೊಂದು ಪಾಪವನ್ನು ಕೂಡಿಸಿಕೊಂಡನು.
ಈ ದಿನದವರೆಗೆ, ಜನರು ತಮ್ಮ ತಪ್ಪುಗಳಿಗಾಗಿ ಬೇರೆಯವರನ್ನು ದೂಷಿಸುವದಕ್ಕೆ ಈಗಲೂ ಪ್ರಯತ್ನಿಸುತ್ತಾರೆ, ಅದರೆ ದೇವರು ಸತ್ಯವನ್ನು ತಿಳಿದವ –ನಾಗಿದ್ದಾನೆ. ಪರಶುದ್ಧ ವಾಕ್ಯಗಳ ಮೂಲಕವಾಗಿ, ದೇವರು ಜನರೊಂದಿಗೆ ಮಾತಾಡುತ್ತಾ, **ನೀನು ಎಲ್ಲಿದ್ದೀ?** ನನಗೆ ಉತ್ತರಿಸು! ಎಂದು ಹೇಳು –ತ್ತಾನೆ. ನೀನು ಏನು ಮಾಡುತ್ತಿದ್ದೀ? ನನ್ನ ವಾಕ್ಯವನ್ನು ನಂಬಿ ವಿಧೇಯನಾಗುವದಕ್ಕೆ ಯಾಕೆ ತಿರಸ್ಕರಿಸಿದ್ದೀ? ನನ್ನ ಒಳ್ಳೆಯತನವನ್ನು ಯಾಕೆ ಕಡೆಗಣಿಸಿದ್ದೀ? ನಿನ್ನ ಸ್ವಂತ ಪಾಪಗಳಿಗಾಗಿ ಬೇರೆಯವರನ್ನು ದೂಷಿಸುವದಕ್ಕೆ ಯಾಕೆ ಪ್ರಯತ್ನಿಸುತ್ತೀ? "ನನ್ನ ಜೀವದಾಣೆ ಎಲ್ಲರೂ ನನಗೆ ಅಡ್ಡಬೀಳುವರು, ಎಲ್ಲರೂ ನನ್ನನ್ನು ದೇವರೆಂದು ಪ್ರತಿಜ್ಞೆ ಮಾಡುವರು ಎಂಬುದಾಗಿ ಕರ್ತನು ಹೇಳಿದ್ದಾನೆ. ಹೀಗಿರಲಾಗಿ ನಮ್ಮಲ್ಲಿ ಪ್ರತಿಯೊಬ್ಬನೂ ತನ್ನ ತನ್ನ ವಿಷಯವಾಗಿ ದೇವರ ಮುಂದೆ ಉತ್ತರ ಕೊಡಬೇಕು" (ರೋಮಾ–೧೪:೧೧, ೧೨).

ದೇವರು, ಆದಾಮ ಹವ್ವ ಸರ್ಪ ಮತ್ತು ಸೈತಾನನಿಗೆ ಹೇಗೆ ನ್ಯಾಯತೀರ್ಪು ಮಾಡಿದ ಎಂಬುದನ್ನು ನೋಡುವದಕ್ಕೆ ಈ ಅಧ್ಯಾಯದಲ್ಲಿ ಈಗ ಮುಂದುವರಿಸೋಣ. ದೇವರ ವಾಕ್ಯ ಹೀಗೆ ಹೇಳುತ್ತದೆ:

**"**ಆಗ ಯೆಹೋವ ದೇವರು ಸರ್ಪಕ್ಕೆ–ನೀನು ಈ ಕಾರ್ಯವನ್ನು ಮಾಡಿದ್ದರಿಂದ ಎಲ್ಲಾ ಪಶುಗಳಲ್ಲಿಯೂ ಅಡವಿಯ ಎಲ್ಲಾ ಮೃಗಗಳಲ್ಲಿಯೂ ಶಾಪಗ್ರಸ್ತವಾದಿ; ನೀನು ಹೊಟ್ಟೆಯಿಂದ ಹರಿದು ಮನಿನ್ನ ಜೀವಮಾನದ ದಿನಗಳಲ್ಲೆಲ್ಲಾ ಮಣ್ಣೇ ತಿನ್ನುವಿ. ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು. ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ. ಎಂದು ಹೇಳಿದನು. ಆ ಮೇಲೆ ಸ್ತ್ರೀಗೆ–ನೀನು ಗರ್ಭಿಣಿಯಾಗಿರುವ ಕಾಲದಲ್ಲಿ ಬಹು ಸಂಕಟಪಡಬೇಕೆಂದು ನಾನು ನೇಮಿಸಿದ್ದೇನೆ; ಕಷ್ಟ–ದಿಂದಲೇ ಮಕ್ಕಳನ್ನು ಹೆರುವಿ; ಗಂಡನ ಮೇಲೆ ನಿನಗೆ ಆಶೆಯಿರುವದು; ಅವನು ನಿನಗೆ ಒಡೆಯನಾಗುವನು. ಎಂದು ಹೇಳಿದನು. ಮತ್ತು ಪುರುಷನಿಗೆ–ತಿನ್ನಬಾರದೆಂದು ನಾನು ನಿನಗೆ ಆಜ್ಞಾಪಿಸಿದ ಫಲವನ್ನು ನೀನು ಹೆಂಡತಿಯ ಮಾತು ಕೇಳಿ ತಿಂದ ಕಾರಣ ನಿನ್ನ ನಿಮಿತ್ತ ಭೂಮಿಗೆ ಶಾಪ ಬಂತು. ನಿನ್ನ ಜೀವಮಾನವೆಲ್ಲಾ ದುಡಿದು ದುಡಿದು ಭೂಮಿಯ ಹುಟ್ಟುವಳಿಯನ್ನು ತಿನ್ನಬೇಕು. ಆ ಭೂಮಿಯಲ್ಲಿ ಮುಳ್ಳಗಿಡಗಳೂ ಕಳೆಗಳೂ ಬಹಳವಾಗಿ ಹುಟ್ಟುವವು. ಹೊಲದ ಬೆಳೆಯನ್ನು ಅನುಭವಿಸುವಿ. ನೀನು ತಿರುಗಿ ಮಣ್ಣಿಗೆ ಸೇರುವ ತನಕ ಬೆವರಿಡುತ್ತಾ ಬೇಕಾದ ಆಹಾರವನ್ನು ಸಂಪಾದಿಸಬೇಕು. ನೀನು ಮಣ್ಣಿನಿಂದ ತೆಗೆಯಲ್ಪಟ್ಟವನಲ್ಲವೋ; ನೀನು ಮಣ್ಣೇ; ಪುನ: ಮಣ್ಣಿಗೆ ಸೇರತಕ್ಕವನಾಗಿದ್ದೀ ಎಂದು ಹೇಳಿದನು**"** (ಆದಿ–೩:೧೪–೧೯).

ಅವರ ಪಾಪವು ಯಾವುದನ್ನು ಉತ್ಪತ್ತಿ ಮಾಡಿತೆಂಬುದನ್ನು ನೀವು ನೋಡಿದಿರಾ? ಇದು ದುಖ:, ನೋವು, ಮುಳ್ಳುಗಳು, ದತ್ತೂರಿಗಳು, ಬೆವರು, ರೋಗ ಮತ್ತು ಮರಣವನ್ನು ಉತ್ಪತ್ತಿ ಮಾಡಿತು. ಹೌದು, **"**ಪಾಪವು ಕೊಡುವ ಸಂಬಳ **ಮರಣ!"** (ರೋಮ್ಸ–೬:೨೩). ಅವರು ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದರೆ ಅವರಿಗೆ ಏನು ಸಂಭವಿಸುತ್ತದೆ ಎಂದು ದೇವರು ಹೇಳಿದ್ದನು?**"**ನೀವು ಆ ಮರದ ಹಣ್ಣನ್ನು ತಿಂದ ದಿನವೇ **ಸಾಯುವಿರಿ"** ಎಂದು ಹೇಳಿದ್ದನು. ಆದಾಮ ಹವ್ವ ಅದನ್ನು ತಿಂದ ದಿನವೇ ಹೂಣಲ್ಪಟ್ಟರಾ? ಇಲ್ಲ. ಆದರೆ ಅದೇ ದಿನ ಅವರು ಸತ್ತು ಹೋದರಾ?ನಿಜವಾಗಿಯೂ ಅವರು ಸತ್ತುಹೋದರು! ಅದೇ ದಿನ ಮೊದಲುಗೊಂಡು, ಆದಾಮ ಮತ್ತು ಹವ್ವ ಆತ್ಮೀಕವಾಗಿ ಸತ್ತುಹೋದರು, ಯಾಕೆಂದರೆ ದೇವರೊಂದಿಗಿನ ಸಂಬಂಧದಲ್ಲಿ ಅವರು ಇರಲಿಲ್ಲ.

**ದೇವರಿಂದ ಬೇರ್ಪಡುವಿಕೆಯೆ ಮರಣವೆಂಬುದನ್ನು** ನಾವು ಈಗಾಗಲೇ ಕಲಿತುಕೊಂಡಿದ್ದೇವೆ. ಆದಾಮ ಹವ್ವ ದೇವರಿಗೆ ಅವಿಧೇಯರಾದಾಗ ಅವರು **ಜೀವದ ಮೂಲವಾದ** ದೇವರಿಂದ ತಮ್ಮನ್ನು ತಾವೇ ಬೇರ್ಪಡಿಸಿಕೊಂಡರು. ಅವರು ಸೈತಾನನನ್ನು ನಂಬಿ ಅವನೊಂದಿಗೆ ಹೋಗುವದನ್ನು ಆರಿಸಿ–ಕೊಂಡಾಗ, ದೇವರೊಂದಿಗಿನ ತಮ್ಮ ಸಂಬಂಧಕ್ಕೆ ದಂಡತೆರುವ ಹಾಗೆ ದೇವರ ಜೀವಿತದಲ್ಲಿನ ತಮ್ಮ ಪಾಲನ್ನು ಕಳೆದುಕೊಂಡರು. ದೇವರು ವಿರೋಧಿಯಾಗಿರುವ ಸೈತಾನನ ಪಕ್ಷವನ್ನು ಅವರು ತೆಗೆದುಕೊಂಡದ್ದರಿಂದ ಅವರು ದೇವರಿಗೆ ವೈರಿಗಳಾದರು. ದೇವರೊಂದಿಗಿನ ಅವರ ಸಂಬಂ–ಧವು ಸತ್ತುಹೋಯಿತು. ಉದಾಹರಣೆಗಾಗಿ, ನಿಮಗೆ ಒಬ್ಬ ವೈರಿಯಿದ್ದರೆ ಮತ್ತು ನಿಮ್ಮ ಸ್ನೇಹಿತನು ಅವನೊಂದಿಗಿನ ಪಕ್ಷವನ್ನು ವಹಿಸಿಕೊಂಡರೆ ಆಗ ನಿಮ್ಮ ಸ್ನೇಹಿತ ನಿಮ್ಮ ವೈರಿ ಎನ್ನುವದು ನಿಜವಲ್ಲವೇ? ನಿಮ್ಮ ಸ್ನೇಹಿತನೊಂದಿಗಿನ ಸಂಬಂಧವು ಸತ್ತ ಹಾಗೆಯೇ. ನಾವು ಹೇಳುವ ಹಾಗೆ: **"**ನಿಮ್ಮ ಸ್ನೇಹಿತನ ವೈರಿ ನಿಮ್ಮ ವೈರಿ**"**.{ಊಲೂಫ್ ಗಾದೆ} ಇದೇ ರೀತಿಯಲ್ಲಿ, ಯಾರು ಸೈತಾನನಿಗೆ ವಿಧೇಯರೋ ಅವರು ದೇವರಿಗೆ ಶತ್ರುಗಳು. ಪಾಪವು ಮನುಷ್ಯನನ್ನು ದೇವರಿಂದ ಬೇರ್ಪಡಿಸುತ್ತದೆ.

ಈ ದಿನ ಮುಕ್ತಾಯಗೊಳಿಸುವದಕ್ಕೆ ಮುಂಚೆ, ನಾವು ಏನೋ ಒಂದನ್ನು ಅರ್ಥಮಾಡಿಕೊಂಡು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಅದೇನೆಂದರೆ: **"**. . ., ಅಪರಾಧಗಳ ಮತ್ತು ಪಾಪಗಳ ದೆಸೆಯಿಂದ **ಸತ್ತವರಾಗಿದ್ದ** .. .**"**(ಎಫೆಸ–೨:೧). ಮತ್ತು **"**ದೇವರಿಂದಾದ ಜೀವಿತದಿಂದ **ದೂರವಾದವರಾಗಿ–ದ್ದಾರೆ"**(ಎಫೆಸ–೪:೧೮) ಇಂತವರ ಹಾಗೆ ನಾವೆಲ್ಲರೂ ಈ ಲೋಕದಲ್ಲಿ ಹುಟ್ಟಿದವರಾಗಿದ್ದೇವೆ. ನಾವು ಈ ರೀತಿಯವರಲ್ಲ, ಆದರೆ ದೇವರ ವಾಕ್ಯವು ಆ ರೀತಿ ಹೇಳುತ್ತದೆ. ಆದಾಮನು ದೇವರಿಗೆ ಅವಿಧೇಯನಾದ ದಿನದಂದೇ ಅವನು **ಪಾಪಿಯಾದನು**. ಪಾಪ ಮಾಡಿದ ಆದಾಮನು, ಮಾನವ ಜನಾಂಗದ ತಂದೆಯಾಗಿದ್ದಾನೆ. ಹಾಗಾಗಿ, ಆದಾಮನ ಪಾಪದ ಫಲಿತಾಂಶವಾಗಿ **ಅವನ ಸಂತಾನದವರೆಲ್ಲರೂ ಪಾಪಿಗಳಾದರು. "**ಒಂದು ಇಲಿಯು ಗುಂಡಿ ತೋಡುವಂತದ್ದಕ್ಕೇ ಜನ್ಮ ಕೊಡುತ್ತದೆ**"**{ಊಲೂಫ್ ಗಾದೆಗೆ ಹೋಲಿಕೆಯಾಗಿ:**"**ಸೇಬಿನ ಹಣ್ಣು ಮರದಿಂದ ದೂರದಲ್ಲಿ ಬೀಳುವದಿಲ್ಲ**"**} ಅದೇ ರೀತಿಯಲ್ಲಿ, ಅದಾಮನ ಪಾಪವು **ದೇವರಿಂದ ಅವನು ಬೇರ್ಪಡುವದಕ್ಕೆ** ಕಾರಣವಾಯಿತು. ತನ್ನ ಮೇಲಿನ ಅಧಿಕಾರವನ್ನು ತಿರಸ್ಕರಿಸಿದ ಆದಾಮನು, ಜೀವಿಸುತ್ತಿರುವವರಿಗೆಲ್ಲಾ ತಂದೆಯಾಗಿದ್ದಾನೆ. ಇದರ ಫಲಿತಾಂಶವೇ **ಅದಾಮನ ಸಂತಾನದವರೆಲ್ಲರೂ ದೇವರಿಂದ ಬೇರ್ಪಟ್ಟವರಾಗಿಯೇ ಹುಟ್ಟಿದವರಾಗಿದ್ದಾರೆ.** {ಊಲೂಫ್}ಗಾದೆ ಹೇಳುವಂತೆ: **"**ಒಂದು ಸೋಂಕು ಯಾರಿಂದ ಉತ್ಪತ್ತಿಯಾಗಿರುತ್ತದೋ ಅದು ಅವರಿಗೆ ನಿರ್ಬಂಧಗೊಳ್ಳುವದಿಲ್ಲ.!**"** ಇದು ನಿಜವಾಗಿಯೂ ದೇವರ ವಾಕ್ಯ ಹೇಳುವಂತೆಯೇ ಇದೆ, ಅದು ಹೇಳುವದೇನೆಂದರೆ, **"**ಒಬ್ಬ ಮನುಷ್ಯನಿಂದಲೇ ಪಾಪವು ಪಾಪದಿಂದ ಮರಣವು ಲೋಕದೊಳಗೆ ಸೇರಿದವು. ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿ ವ್ಯಾಪಿಸಿತು!**"**(ರೋಮಾ–೫:೧೨).

ದೇವರಿಂದ ತನ್ನನ್ನು ಬೇರ್ಪಡಿಸಿಕೊಂಡ ನಮ್ಮ ಮೂಲ ಪಿತೃವಾದ ಆದಾಮನು, ಮರದಿಂದ ಕತ್ತರಿಸಲ್ಪಟ್ಟ ಕೊಂಬೆಯ ಹಾಗಿದ್ದಾನೆ. ಕೊಂಬೆಯು ಮರದೊಂದಿಗೆ ಹೆಚ್ಚು ಕಾಲ ಹೊಂದಿಕೆಯಾಗಿಲ್ಲದಿದ್ದರೆ ಏನಾಗುತ್ರತದೆ? ಅದು ಒಣಗಿ ಹೋಗಿ ಸತ್ತು ಹೋಗುತ್ತದೆ. ಕತ್ತರಿಸಿ ಹಾಕಿದ ಕೊಂಬೆಯ ಭಾಗದ ಕೊಂಬೆಗಳಿಗೆ ಏನಾಗುತ್ತದೆ? ಅವು ಬದುಕಿರುತ್ತವೆಯಾ? ಇಲ್ಲ. ಅವು ಸಹ ಸತ್ತುಹೋಗುತ್ರವೆ, ಯಾಕೆಂದರೆ ಅವು ಒಣಗಿ ಹೋದ ಕೊಂಬೆಗೆ ಸಂಬಂಧಪಟ್ಟಿರುತ್ತವೆ. ಅದೇ ರೀತಿಯಲ್ಲಿ, ಆದಾಮನ ಎಲ್ಲಾ ಮಕ್ಕಳೂ ಕತ್ತರಿಸಿ ಹಾಕಿದ ಕೊಂಬೆಯ ಚಿಕ್ಕಚಿಕ್ಕ ಕೊಂಬೆಗಳ ಹಾಗಿದ್ದಾರೆ. ಪಾಪದ ಕಾರಣದಿಂದ ಆದಾಮನು ಒಣಗಿದ ಕೊಂಬೆಯ ಹಾಗಿದ್ದಾನೆ, ನಾವು ಅವನೊಂದಿಗೆ ಒಬ್ಬರಾಗಿದ್ದೇವೆ. ನಮ್ಮ ಮೂಲ ಪಿತೃವಾದ ಆದಾಮನ ಪಾಪವು ನಮ್ಮೆಲ್ಲರಿಗೂ ಪರಣಾಮವನ್ನುಂಟುಮಾಡಿತು. ಅವನ ಗುಣ ಮತ್ತು ಶಿಕ್ಷೆಯನ್ನು ನಾವು ಹಂಚಿಕೊಂಡಿದ್ದೇವೆ.

ಪ್ರವಾದಿಯಾದ ದಾವೀದನು ಕೀರ್ತನೆಗಳಲ್ಲಿ ಹೀಗೆ ಬರೆಯುತ್ತಾನೆ: **"ಹುಟ್ಟಿದಂದಿನಿಂದ** 'ನಾನು ಪಾಪಿಯೇ, ಮಾತೃ ಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ**"** (ಕೀರ್ತನೆ–೫೧:೫). ಲೋಕದಾದ್ಯಂತ ಹರಡಿಕೊಂಡಿರುವ ಭಯಂಕರವಾದ ರೋಗವಾಗಿರುವ ಏಡ್ಸ್‌ನ ರೀತಿಯಲ್ಲಿ ಪಾಪವಿದೆ. ಒಂದು ಸಲ ಏಡ್ಸ್ ವ್ಯಕ್ತಿಯ ದೇಹದಲ್ಲಿ ಪ್ರವೇಶಿಸಿದರೆ, ಅದು ಎಂದಿಗೂ ಬಿಟ್ಟುಹೋಗುವದಿಲ್ಲ. ಏಡ್ಸ್ ಹೊಂದಿದ ವ್ಯಕ್ತಿಯು ತನ್ನ ಮಕ್ಕಳಿಗೆ ಅದನ್ನು ಹರಡುತ್ತಾನೆ. ಏಡ್ಸ್ ಒಂದು ಹಂತಕನ ಹಾಗೆ ಮತ್ತು ಮನುಷ್ಯನು ಈವರೆಗೆ ಇದರಿಂದ ಸ್ವಸ್ಥತೆಯನ್ನು ಹೊಂದಿಲ್ಲ. ಪಾಪವು ಇದೇ ರೀತಿ ಇದೆ. ಇದು ಭೂಮಿಯಲ್ಲೆಲ್ಲಾ ಹರಡಿಕೊಂಡಿರುವ ಒಂದು ಭಯಂಕರವಾದ ವಿನಾಶವಾಗಿದೆ. **ಪಾಪವು ಒಂದು ಹಂತಕ,** ಮನುಷ್ಯನು ಎಂದೆಂದಿಗೂ ನಾಶವಾಗುವದಕ್ಕೆ ಕಾರಣವಾಗಿದ್ದು, ಮತ್ತು **ಮನುಷ್ಯನು ತಾನೇ ಇದರಿಂದ ಯಾವ ಪರಿಹಾರ ಇಲ್ಲದವನಾಗಿದ್ದಾನೆ.**

ಹೇಗೂ, ಈ ದಿನ ನಾವು ಸಂತೋಷದ ಹೃದಯದಿಂದ ದೇವರನ್ನು ಸ್ತುತಿಸುತ್ತಿದ್ದೇವೆ, ಯಾಕೆಂದರೆ ಪಾಪದ ಶಿಕ್ಷೆಯಿಂದ ಮತ್ತು ಪಾಪದ ಬಲದಿಂದ ನಮ್ಮನ್ನು ರಕ್ಷಿಸುವದಕ್ಕೆ ದೇವರು ತಾನೇ ಒಂದು ಪರಿಹಾರವನ್ನು ಒದಗಿಸಿಕೊಟ್ಟಿದ್ದಾನೆ. ಹೇಗೂ, ನಾವು ದೇವರು ಪರಿಹಾರವನ್ನು ನಂಬಿ ಅದನ್ನು ಹೊಂದಿಕೊಳ್ಳಬೇಕು. ದೇವರ ಚಿತ್ತವಾದರೆ, ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ದೇವರು ಆದಾಮ ಹವ್ವ ಮತ್ತು ಅವರ ಎಲ್ಲಾ ಸಂತಾನದವರಿಗೆ ನರಕ, ಸೈತಾನ ಮತ್ತು ಪಾಪದಿಂದ ಪಾಪಿಗಳೆಲ್ಲರನ್ನೂ ಬಿಡುಗಡೆಮಾಡುವದಕ್ಕೆ ಲೋಕದೊಳಕ್ಕೆ ಬರಲಿಕ್ಕಿರುವ ಒಬ್ಬ ಶಕ್ತನಾದ ರಕ್ಷಕನ ಕುರಿತಾಗಿ ದೇವರು ಹೇಗೆ ಒಂದು ಅದ್ಭುತವಾದ ವಾಗ್ದಾನವನ್ನು ಕೊಟ್ಟನೆಂಬುದನ್ನು ನಾವು ನೋಡುತ್ತೇವೆ.

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . . . .

ಪ್ರವಾದಿಯಾದ ದಾವೀದನು ಬರೆದಿರುವ ಈ ಮಾತುಗಳ ಕುರಿತಾಗಿ ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಹುಟ್ಟಿದಂದಿನಿಂದ ನಾನು ಪಾಪಿಯೇ, ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ".**(ಕೀರ್ತನೆ–೫೧:೫)

ಪಾಠ ೯

# ಅದ್ಭುತವಾದ ವಾಗ್ದಾನ

ಆದಿಕಾಂಡ ೩

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿ –ಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸು – ವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ದೇವರು ನಿಷೇಧಿಸಿದ್ದ ಮರದ ಹಣ್ಣನ್ನು ತಿನ್ನುವದರಿಂದ ಆದಾಮ ಮತ್ತು ಹವ್ವ ದೇವರ ಮಾರ್ಗದಿಂದ ಹೇಗೆ ದೂರವಾದರೆಂಬುದನ್ನು ನಾವು ನೋಡಿದೆವು. ಹೀಗೆ, ದೇವರು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದ ಮನುಷ್ಯನು ಸೈತಾನನನ್ನು ಅಂದರೆ ದೇವರ ವೈರಿಯನ್ನು ಹಿಂಬಾಲಿಸುವದಕ್ಕೆ ಆರಿಸಿಕೊಂಡನು. ಆದಾಮ ಹವ್ವ ಪಾಪ ಮಾಡುವದಕ್ಕೆ ಮೊದಲು ದೇವರು ಅವರೊಂದಿಗೆ ಮಾತಾಡು – ವದಕ್ಕೆ ತೋಟದೊಳಗೆ ಬಂದಾಗಲೆಲ್ಲಾ ಅವರು ಸಂತೋಷಪಡುತ್ತಿದ್ದರು, ಆದರೆ ಈಗ, ಅವರು ಯಾವಾಗ ದೇವರ ಸ್ವರವನ್ನು ಕೇಳಿದರೋ ಅವರು **ಭಯದಿಂದ ನಾಚಿಕೆಗೊಳಗಾಗಿ** ತೋಟದಲ್ಲಿರುವ ಮರದ ಹಿಂದೆ ಹೋಗಿ **ದೇವರಿಂದ ಬಚ್ಚಿಟ್ಟುಕೊಳ್ಳುವದಕ್ಕೆ ಪ್ರಯತ್ನಿಸಿದರು!** ಹೇಗೂ, ದೇವರು ಆದಾಮ ಮತ್ತು ಹವ್ವರನ್ನು ಬೆನ್ನಟ್ಟಿ ಅವರೊಂದಿಗೆ ಮಾತಾಡಿ ಅವರ ಪಾಪವು ಈ ಲೋಕದೊಳಗೆ ಯಾವುದನ್ನು ತರಲಿಕ್ಕಿದೆಯೆಂಬುದನ್ನು ಅವರಿಗೆ ತಿಳಿಸಿದನು: ಅವು ಯಾವುವೆಂದರೆ, ಕಷ್ಟ, ಸಂಕಟ, ಮುಳ್ಳುಗಳು, ದತ್ತೂರಿಗಳು, ರೋಗಗಳು ಮತ್ತು **ಮರಣ**.

ಇದರ ಪರಣಾಮವಾಗಿ, ಆ ದಿನದಿಂದ ಇಂದಿನವರೆಗೆ, ಮರಣದ ನೆರಳು ಆದಾಮನ ಸಂತಾನದವರ ಮೇಲೆ ನೇತಾಡುತ್ತಿದೆ. ಆದಾಮನ ಎಲ್ಲಾ ಮಕ್ಕಳು ಪಾಪದಲ್ಲಿ ಗರ್ಭಧರಿಸಿ ಒಂದು ಕೆಟ್ಟ ಸ್ವಭಾವಟ್ಟಂದಿಗೆ ಹುಟ್ಟುತ್ತಿದ್ದರೆ. ನಾವು ಇದನ್ನು ಇಷ್ಟಪಡಲಿ ಅಥವಾ ಇಷ್ಟಪಡದಿರಲಿ, **ನಮ್ಮ ಮುಲಪಿತೃವಾದ ಆದಾಮನ ಗುಣಲಕ್ಷಣಗಳಲ್ಲಿ ಪಾಲು ಹೊಂದಿದ್ದೇವೆ.** "ಒಂದು ಇಲಿಯು ಗುಂಡಿ ತೋಡುವಂತದ್ದಕ್ಕೆ ಜನ್ಮ ಕೊಡುತ್ತದೆ". ಆದಾಮನ ಪಾಪದ ಕಾರಣದಿಂದ ನಾವೆಲ್ಲರೂ ಹುಟ್ಟು ಪಾಪಿಗಳಾಗಿದ್ದೇವೆ. ನಿಜವಾಗಿಯೂ, "ಒಂದು ಸೋಂಕು ಯಾರಿಂದ ಉತ್ಪತ್ತಿಯಾಗಿ – ರುತ್ತದೋ ಅವರಿಗೆ ಅದು ನಿರ್ಬಂಧಗೊಳ್ಳುವದಿಲ್ಲ!"{ಊಲೂಫ್ ಗಾದೆ} ಹೇಗೆ **ಆದಾಮನ ಪಾಪವು** ಅವನನ್ನು ದೇವರಿಂದ ಬೇರೆ ಮಾಡಿತೋ, ಹಾಗೆಯೇ ನಮ್ಮ ಪಾಪವು ನಮ್ಮನ್ನು ದೇವರಿಂದ ದೂರಮಾಡುತ್ತದೆ. ಅದಕ್ಕೋಸ್ಕರವೇ ವಾಕ್ಯ ಹೀಗೆ ಹೇಳುತ್ತದೆ:

"ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೋಳಗೆ ಸೇರಿದವು; ಎಲ್ಲರೂ ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿ ವ್ಯಾಪಿಸಿತು."(ರೋಮಾ–೫:೧೨). "ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ."(ರೋಮಾ–೩:೨೩). "ನಿಮ್ಮ ಅಪರಾಧಗಳೇ ನಿಮ್ಮ ದೇವರಿಂದ ನಿಮ್ಮನ್ನು ಅಗಲಿಸುತ್ತಾ ಬಂದಿವೆ; ನಿಮ್ಮ ಪಾಪಗಳೇ ಆತನು ಕೇಳಲಾರದಂತೆ ಆತನ ಮುಖಕ್ಕೆ ಅಡ್ಡವಾಗಿವೆ"(ಯೆಶಾಯ–೫೯:೨).

ಈ ಸಂದೇಶವು ಕೇಳಿಸಿಕೊಳ್ಳುವದಕ್ಕೆ ಮಧುರವಾಗಿಲ್ಲ, ಅದರೆ ಅದು ಈ ರೀತಿಯಾಗಿದೆ; "ಸತ್ಯವು ಬಿಸಿ ಮೆಣಸಿನ ಹಾಗೆ" {ಊಲೂಫ್ ಗಾದೆ}

ಹೀಗೆ, **ಆದಾಮನ ಒಂದು ಪಾಪವು ಇಡೀ ಮಾನವ ಜನಾಂಗವನ್ನು ದೇವರಿಂದ ಹೇಗೆ ದೂರಮಾಡಿತೆಂಬುದನ್ನು** ನಾವು ನೋಡಿದೆವು. ಆದಾಮನು ದೇವರಿಗೆ ಅವಿಧೇಯನಾದ ದಿನದಂದು, ಆದಾಮ (ಮತ್ತು ಇನ್ನೂ ಹುಟ್ಟಲಿರುವ ಇಡೀ ಮಾನವ ಜನಾಂಗ) ಬೆಳಕಿನ ರಾಜ್ಯವನ್ನು ಬಿಟ್ಟು ಕತ್ತಲೆಯ ರಾಜ್ಯವನ್ನು ಪ್ರವೇಶಿಸಿತು. ಅವರು ಎಂದಿಗೂ ದೇವರ ರಾಜ್ಯದಲ್ಲಿ ಯಾವುದೇ ಪಾಲನ್ನು ಹೊಂದಿಲ್ಲದವರಾದರು. ಅವರ ಪಾಪದ ಕಾರಣದಿಂದ, ಅವರನ್ನು ತನ್ನ ಸೆರೆಯವರನ್ನಾಗಿ ಮತ್ತು ಗುಲಾಮರನ್ನಾಗಿ ತೆಗೆದುಕೊಂಡ **ಸೈತಾನನೊಂದಿಗೆ** ಅವರ ಪಾಲು ಇತ್ತು, ಈಗ, ಪಾಪದ ಗುಲಾಮತನ ಮತ್ತು ಮರಣದ ಭಯದ ಹೊರತಾಗಿ ಈ ಜೀವಿತದಲ್ಲಿ ಅವರಿಗೆ ಯಾವುದೇ ನಿರೀಕ್ಷೆಗಳಿಲ್ಲ, ಮತ್ತು ಇಲ್ಲಿಂದ ಮುಂದೆ ನಿತ್ಯವಾದ ಬೆಂಕಿಯಲ್ಲಿ ಮುಗಿಯದ ಶಿಕ್ಷೆ!

ವಾಕ್ಯಗಳು ಇಲ್ಲಿಗೆ ಮುಗಿದುಹೋದರೆ, ನಾವು ಕೇವಲ ಪುಸ್ತಕವನ್ನು ಮುಚ್ಚಿ, ಪಾರಾಗುವ ನಿರೀಕ್ಷೆಯಿಲ್ಲದೆ ಸಮುದ್ರದಲ್ಲಿ ಕಳೆದುಹೋಗಿರುವ ಯಾರೋ ಒಬ್ಬರ ಹಾಗೆ ನಾವು ಗಟ್ಟಿಯಾಗಿ ಅಳಬೇಕು. ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ ರಕ್ಷಣೆಯ ಮಾರ್ಗವನ್ನು ದೇವರು ತೆರೆಯದೇ ಹೋಗಿದ್ದರೆ ನಾವು ಎಂದೆಂದಿಗೂ ದಂಡನೆಗೆ ಗುರಿಯಾಗುತ್ತಿದ್ದೆವು! ಆದರೆ ನಮ್ಮ ದೇವರಾದ ಕರ್ತನು ಆಶೀರ್ವಾದದಾಯಕನು, ಆದಾಮನ ಪಾಪದ ಕತೆಯೊಂದಿಗೆ ಪ್ರವಾದಿಗಳ ವಾಕ್ಯಗಳು ಮುಕ್ತಾಯವಾಗುವದಿಲ್ಲ. **ಕರುಣೆಯಲ್ಲಿ ದೊಡ್ಡವನಾಗಿರುವ ದೇವರು ರಕ್ಷಣೆಯ ಬಾಗಿಲನ್ನು ಆದಾಮನ ಮಕ್ಕಳಿಗಾಗಿ ತೆರೆದಿದ್ದಾನೆ!** ಹಾಗಾಗಿ, ದೇವರ ವಾಕ್ಯವು ಹೀಗೆ ಹೇಳುತ್ತದೆ:

"ಪಾಪವು ಹೆಚ್ಚಿದಲ್ಲೇ (ದೇವರ)ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು."(ರೋಮಾ–೫:೨೦). "ಹೆದರಬೇಡಿರಿ ಕೇಳಿರಿ, ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ."(ಲೂಕ–೨:೧೦). "ಎಲ್ಲಾ ಮನುಷ್ಯರಿಗೆ ರಕ್ಷಣೆಯನ್ನುಂಟು ಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು". (ತೀತ_೨:೧೧).

ನಾವು ಈಗಾಗಲೇ ಕಲಿತುಕೊಂಡ ಹಾಗೆ, ದೇವರು ಪರಿಶುದ್ಧನು ಮತ್ತು ಆದಕಾರಣ ಪಾಪಿಗಳಿಗೆ ನ್ಯಾಯತೀರ್ಪು ಕೊಡಲೇಬೇಕು. ದೇವರು ನೀತಿವಂತನು ಮತ್ತು ಪಾಪವನ್ನು ಮಾತ್ರ "ಮರೆಯುವವನಲ್ಲ." ಆತನು ಪ್ರತಿಯೊಂದು ಪಾಪವನ್ನು ಶಿಕ್ಷಿಸುತ್ತಾನೆ. ಪಾಪದ ಶಿಕ್ಷೆ ಮರಣವೂ ಮತ್ತು ದೇವರಿಂದ ನಿತ್ಯವಾದ ಬೇರ್ಪಡುವಿಕೆಯೂ ಆಗಿದೆ. ದೇವರು ಎಂದಿಗೂ ಬದಲಾಗುವವನಲ್ಲ ಮತ್ತು ಪಾಪದ ಶಿಕ್ಷೆಯು ಸಹ ಎಂದಿಗೂ ಬದ – ಲಾಗುವದಿಲ್ಲ. ಹೇಗೂ, ಈದಿನ, ಪರಿಶುದ್ಧನಾದ ದೇವರು ಹೇಗೆ ಪಾಪದ ಶಿಕ್ಷೆಯಿಂದ **ಪಾಪಿಗಳನ್ನು ಬಿಡುಗಡೆ ಮಾಡುವದಕ್ಕೆ ಯೋಜನೆಯನ್ನು** ಹೇಗೆ ರೂಪಿಸಿದನೆಂಬುದನ್ನು ವಾಕ್ಯಗಳಲ್ಲಿ ಓದುವದಕ್ಕೆ ನಾವು ಪ್ರಾರಂಭಿಸೋಣ. ಹೀಗೆ, ದೇವರು ಪರಿಶುದ್ಧನು ಮಾತ್ರವಲ್ಲ ಆದರೆ ಆತನು ಕರುಣೆ– ಯುಳ್ಳವನೂ ಸಹ ಆಗಿದ್ದಾನೆ ಎಂಬುದನ್ನು ನಾವು ಕಲಿತುಕೊಳ್ಳುತ್ತೇವೆ! **ನಮ್ಮ ನ್ಯಾಯಾಧಿಪತಿಯಾಗಿರುವ ದೇವರು ನಮ್ಮ ರಕ್ಷಕನಾಗುವದಕ್ಕೆ ಇಷ್ಟಪಡುತ್ತಾನೆ!**

ಆದಾಮ ಹವ್ವರು ಪಾಪ ಮಾಡಿದ ದಿನದಂದು ದೇವರು ಪಾಪಿಗಳನ್ನು ರಕ್ಷಿಸುವದಕ್ಕೆ ತಾನು ಮಾಡಿದ ಯೋಜನೆಯನ್ನು ತಿಳಿಸುವದಕ್ಕೆ ಹೇಗೆ ಪ್ರಾರಂಬಿಸಿದನು ಎಂಬುದನ್ನು ಈದಿನ ನಾವು ನೋಡುತ್ತೇವೆ. ಆದಿಕಾಂಡ ಪುಸ್ತಕದಲ್ಲಿ, ತೋರಾದಲ್ಲಿರುವದನ್ನು ಈಗ ಮುಂದುವರಿಸೋಣ, ಇದರಿಂದ ನಾವು ಈ ಶುಭ ಸಂದೇಶದ ಕುರಿತಾಗಿ ಕಲಿತುಕೊಳ್ಳಬಹುದು. ಮೂರನೆಯ ಅಧ್ಯಾಯದ ೧೫ ನೆಯ ವಚನದಲ್ಲಿ; ಸರ್ಪವಾಗಿದ್ದ ಸೈತಾನನಿಗೆ ದೇವರು ಹೀಗೆ ಹೇಳಿದನು, **"ನಿನಗೂ ಈ ಸ್ತ್ರೀಗೂ, ನಿನ್ನ ಸಂತಾನಕ್ಕೂ ಈ ಸ್ತ್ರೀಯ ಸಂತಾನಕ್ಕೂ ಹಗೆತನವಿರುವ ಹಾಗೆ ಮಾಡುವೆನು .ಈಕೆಯ ಸಂತಾನವು ನಿನ್ನ ತಲೆಯನ್ನು ಜಜ್ಜುವದು, ನೀನು ಅದರ ಹಿಮ್ಮಡಿಯನ್ನು ಕಚ್ಚುವಿ".**

ದೇವರ ಪ್ರವಾದಿಗಳು ವಿವರವಾಗಿ ನಂತರದಲ್ಲಿ ವಿವರಿಸಿದಂತಹ ಅನೇಕ ಆಳವಾದ ಮತ್ತು ಪ್ರಾಮುಖ್ಯವಾದ ಸತ್ಯಗಳನ್ನು ಈ ಕಷ್ಟಕರವಾದ ವಚನವು ಒಳಗೊಂಡಿದೆ. ಈ ವಚನದ ಸಾರಾಂಶವು ಈ ರೀತಿಯಲ್ಲಿ ಸಂಕ್ಷಿಪ್ತಗೊಳಿಸಲ್ಪಟ್ಟಿದೆ; ಸೈತಾನನ ಆಳ್ವಿಕೆಯಿಂದ ಆದಾಮನ ಮಕ್ಕಳನ್ನು ಬಿಡುಗಡೆಮಾಡುವಂತಹ **ಒಬ್ಬ ರಕ್ಷಕನನ್ನು** {**ಅಥವಾ ವಿಮೋಚಕನನ್ನು**} **ಈ ಲೋಕದೊಳಕ್ಕೆ ತರುವಂತಹ ತನ್ನ ಯೋಜನೆಯನ್ನು ತಿಳಿಸುವದಕ್ಕೆ ದೇವರು ಪ್ರಾರಂಭಿಸಿದನು. ಪರಿಶುದ್ಧ ವಿಮೋಚಕನ(ಅಥವಾ ಮಧ್ಯವರ್ತಿ) ಬರುವಿಕೆಯನ್ನು ತಿಳಿಸುವಂತಹ ಮೊದಲ ವಚನ ಇದಾಗಿದೆ.** ಈ ವಚನದಲ್ಲಿ, ದೇವರು ಕಳಿಸುವದಕ್ಕೆ ವಾಗ್ದಾನ ಮಾಡಿದ ವಿಮೋಚಕನ ಕುರಿತಾದ ನಾಲ್ಕು ಸತ್ಯಗಳನ್ನು ಆಲೋಚಿಸೋಣ.

೧) ಮೊದಲನೆಯ ಸತ್ಯ ಇದು: ಈ ವಿಮೋಚಕನು **ಕೇವಲ ಒಬ್ಬ ಸ್ತ್ರೀಯಲ್ಲಿ** ಅದೂ ಒಬ್ಬ ಕನ್ಯೆಯಲ್ಲಿ ಹೇಗೆ ಹುಟ್ಟಿ ಬರುತ್ತಾನೆ ಎಂಬುದನ್ನು ದೇವರು ಪ್ರಕಟಿಸಿದ್ದನು. ನಮಗೆಲ್ಲರಿಗೂ ಪುರುಷ ಮತ್ತು ಸ್ತ್ರೀ ಪೋಷಕರಿದ್ದಾರೆ. ಹೇಗೂ, ಬರಲಿಕ್ಕಿರುವ ವಿಮೋಚಕನು ಒಬ್ಬ ಸ್ತ್ರೀಯಲ್ಲಿ ಮಾತ್ರ ದೇವರ ಬಲದಿಂದ ಹುಟ್ಟಿ ಬರಲಿದ್ದನು. ಆತನು ಲೋಕದ ತಂದೆಯನ್ನು ಹೊಂದಿರಲಿಲ್ಲ. ಲೋಕದ ರಕ್ಷಕನು ಆದಾಮನಿಂದ ಬಂದವನಲ್ಲ, ಯಾಕೆಂದರೆ ಆದಾಮನ ಸಂತಾನದವರೆಲ್ಲರೂ ಪಾಪದ ಕಲೆ ಹೊಂದಿದವರಾಗಿದ್ದರು. ಪಾಪಿಗಳ ರಕ್ಷಕನು ಪಾಪವಿಲ್ಲದವನಾಗಿರಬೇಕಾಗಿತ್ತು. ಆತನು ಪರಲೋಕದಿಂದ ದೇವರ ಕಡೆಯಿಂದ ಬರಬೇಕಾಗಿತ್ತು. ಹಾಗಾಗಿ, ಈ ವಚನದಿಂದ ನಾವು ಕಲಿಯಬಹುದಾದ ಮೊದಲನೆಯ ಸಂಗತಿಯೆಂದರೆ: ದೇವರು ವಾಗ್ದಾನ ಮಾಡಿದ ವಿಮೋಚಕನು ಒಬ್ಬ ಸ್ತ್ರೀಯ ಸಂತಾನದವನಾಗಿದ್ದನು, ಆದರೆ ಒಬ್ಬ ಪುರುಷನ ಸಂತಾನದವ – ನಾಗಿರಲಿಲ್ಲ.

೨) ಆದಾಮ ಮತ್ತು ಹವ್ವ ಪಾಪ ಮಾಡಿದ ದಿನದಂದು ದೇವರು ಅಲ್ಲಿ ಏನೋ ಒಂದನ್ನು ಪ್ರಕಟಿಸಿದನು. ವಾಗ್ದಾನದ ವಿಮೋಚಕನ ಕುರಿತಾಗಿ, ದೇವರು ಸೈತಾನನಿಗೆ: "ನೀನು ಅದರ ಹಿಮ್ಮಡಿಯನ್ನು ಕಚ್ಚುವಿ!" ಎಂದು ಹೇಳಿದನು. ಹೀಗೆ, ದೇವರು ಪರಲೋಕದಿಂದ ಕಳುಹಿಸುವ ರಕ್ಷಕನನ್ನು **ಸೈತಾನನು ಹೇಗೆ ಬಾಧಿಸುವನೆಂಬುದನ್ನು** ಪ್ರಕಟಿಸುವದಕ್ಕೆ ದೇವರು ಪ್ರಾರಂಭಿಸಿದನು. ಮುಂಬರುವ ಪಾಠಗಳಲ್ಲಿ, ರಕ್ಷಕನನ್ನು ಬಾಧಿಸಿ, ಚಿತ್ರಹಿಂಸೆ ಕೊಟ್ಟು ಕೊಲ್ಲುವದಕ್ಕೆ ವ್ಯಕ್ತಿಗಳನ್ನು ಸೈತಾನನು ಹೇಗೆ ಪ್ರಚೋದಿಸಿದನೆಂಬುದನ್ನು ಪ್ರವಾದಿಗಳು ಮುಂತಿಳಿಸಿರುವದನ್ನು ನಾವು ನೋಡುತ್ತೇವೆ. ಹೊಡೆಯಲ್ಪಟ್ಟ ಒಬ್ಬ ವಿಮೋಚಕನು ದೇವರ ಯೋಜನೆಯ ಒಂದು ಭಾಗವಾಗಿದ್ದನು. ನಮ್ಮನ್ನು ದೇವರ ಕಡೆಗೆ ಮತ್ತೆ ತರುವ ಕ್ರಮದಲ್ಲಿ ಲೋಕದ ರಕ್ಷಕನು ಪಾಪಕ್ಕಾಗಿ ಯಜ್ಞ ಅರ್ಪಿಸುವ ಹಾಗೆ ಮರಣ ಹೊಂದಬೇಕಾಗಿತ್ತು; ಅನೀತಿವಂತರಾದ ನಮಗಾಗಿ ನೀತಿವಂತನೊಬ್ಬನು ಸಾಯ ಬೇಕಾಗಿತ್ತು. ಮರಣವೆಂಬ ಪಾಪದ ಶಿಕ್ಷೆಯನ್ನು ಸಂದಾಯ ಮಾಡುವದಕ್ಕೆ ಆತನು ತನ್ನ ಜೀವಿತವನ್ನು ಇಚ್ಛಾಪೂರ್ವಕವಾಗಿ ಒಪ್ಪಿಸಿಕೊಟ್ಟನು.

೩) ವಿಮೋಚಕನಿಗೆ ಸಂಬಂಧಪಟ್ಟಂತೆ ಇರುವ ಮೂರನೆಯ ಸತ್ಯವೇನೆಂದರೆ, ದೇವರು ಸರ್ಪವಾಗಿದ್ದ ಸೈತಾನನಿಗೆ "ಅವನು(ವಿಮೋಚಕನು)ನಿನ್ನ (ಸೈತಾನನ) ತಲೆಯನ್ನು ಜಜ್ಜುವನು" ಎಂದು ಹೇಳಿದನು. ಅದು ಸೈತಾನನಿಗೆ ಕೆಟ್ಟ ಸುದ್ದಿಯಾಗಿತ್ತು. ಆದರೆ ಸೈತಾನನ ಬಲದಿಂದ, ಪಾಪದಿಂದ ಮತ್ತು ನರಕದಿಂದ ಬಿಡುಗಡೆಯಾಗುವದಕ್ಕೆ ಬಯಸುವವರಿಗೆ ಇದು ಶುಭ ಸಂದೇಶವಾಗಿತ್ತು! ಹೀಗೆ, **ವಿಮೋಚಕನು ಕೊನೆಯಲ್ಲಿ ದುರಾತ್ಮನನ್ನು ಸೋಲಿಸಿ** ಪಾಪದ ಗುಲಾಮರಾಗಿದ್ದ ಆದಾಮನ ಮಕ್ಕಳನ್ನು ಬಿಡುಗಡೆ ಮಾಡುವನು ಎಂಬುದಾಗಿ ದೇವರು ಪ್ರಕಟಿಸುವದಕ್ಕೆ ಪ್ರಾರಂಭಿಸಿದನು.

೪) ಕೊನೆಯದಾಗಿ, ಲೋಕದಲ್ಲಿ **ಎರಡು ಗುಂಪಿನ ಜನರಿದ್ದಾರೆ:** ಸೈತಾನನ ಜನರು ಮತ್ತು ದೇವರ ಜನರು ಎಂದು ದೇವರು ಪ್ರಕಟಿಸುವದಕ್ಕೆ ಪ್ರಾರಂಭಿಸಿದನು. ದೇವರ ವಾಕ್ಯವನ್ನು ನಂಬುವದಕ್ಕೆ ತಿರಸ್ಕಾರ ಮಾಡುವವರು ಸೈತಾನನ ಜನರು. ದೇವರ ವಾಕ್ಯವನ್ನು ನಂಬಿ ವಾಗ್ದಾನದ ವಿಮೋಚಕನಲ್ಲಿ ತಮ್ಮ ಭರವಸೆಯನ್ನು ಇಟ್ಟಿರುವವರು ದೇವರ ಜನರು. (ಯೋಹಾನ–೧: ೯–೧೩).

**ಹಾಗಾಗಿ, ಆದಾಮ ಹವ್ವರು ಪಾಪ ಮಾಡಿದ ದಿನದಂದು ಪಾಪಿಗಳ ಬಿಡುಗಡೆಗಾಗಿ ಮಾಡಿದ ತನ್ನ ಅದ್ಭುತಕರವಾದ ಯೋಜನೆಯನ್ನು ಪ್ರಕಟಿಸು – ವದಕ್ಕೆ ದೇವರು ಪ್ರಾರಂಭಿಸಿದನು.** ಮುಂಬರುವ ಕಾರ್ಯಕ್ರಮಗಳಲ್ಲಿ, ಸ್ವಲ್ಪ ಸ್ವಲ್ಪವಾಗಿ, ದುರಾತ್ಮನ ಕೈಯಿಂದ ಪಾಪಿಗಳನ್ನು ಬಿಡುಗಡೆ ಮಾಡುವ ಪರಿಶುದ್ಧ ರಕ್ಷಕನ ಬರುವಿಕೆಯನ್ನು ದೇವರ ಎಲ್ಲಾ ಪ್ರವಾದಿಗಳು ಹೇಗೆ ಪ್ರಕಟಿಸಿದರೆಂಬುದನ್ನು ನಾವು ನೋಡುತ್ತೇವೆ. ನಾವು ಕೇವಲ ಯಾವುದನ್ನು ನಿಮಗೆ ಕಲಿಸಿದ್ದೇವೋ ಅದು ನಿಮಗೆ ಇನ್ನೂ ಸ್ಪಷ್ಟವಾಗಿ ಅರ್ಥವಾಗಿಲ್ಲದಿದ್ದರೆ ಚಿಂತಿಸಬೇಡಿ,ಯಾಕೆಂದರೆ ನಮ್ಮ ಕಾಲಾನುಕ್ರಮವಾದಕ್ರಮವಾದ ಅಧ್ಯಯನದಲ್ಲಿ ಪ್ರಗತಿ ಹೊಂದಿದ ಹಾಗೆ ವಿಷಯಗಳು ಸ್ಪಷ್ಟವಾಗುತ್ತಾ ಹೋಗುತ್ತವೆ. ಊಲೂಫ್ ಗಾದೆ ಹೇಳುವದನ್ನು ಜ್ಞಾಪಿಸಿಕೊಳ್ಳಿರಿ:

"ಬಾವಿಯ ಬಳಿಯಲ್ಲಿ ತಾಳ್ಮೆಯಿಂದ ಕಾಯುವಂತಹ ವ್ಯಕ್ತಿಯು ನೀರಿನ ಗಡಿಗೆಯನ್ನು ಕಂಡುಕೊಳ್ಳುತ್ತಾನೆ" ದೇವರ ವಾಕ್ಯವೆಂಬ "ಬಾವಿಯ" ಬಳಿಯಲ್ಲಿ ನೀವು ಕಾಯುತ್ತಿದ್ದಿರೋ? ಒಳ್ಳೆಯದು! ದೇವರು ಹೀಗೆ ಹೇಳುತ್ತಾನೆ: "ನೀನು (ಸತ್ಯವನ್ನು) ಬೆಳ್ಳಿಯಂತೆಯೂ ನಿಕ್ಷೇಪದಂತೆಯೂ ಹುಡುಕು. ಆಗ ನೀನು ಯೆಹೋವನ ಭಯವನ್ನು ಅರಿತು ದೈವಜ್ಞಾನವನ್ನು ಪಡೆದುಕೊಳ್ಳುವಿ" (ಜ್ಞಾನೋಕ್ತಿ–೨:೪, ೫).

ನಂತರ ಈಗ, ತೋರಾದ ಮೊದಲನೆಯ ಪುಸ್ತಕದ ಮೂರನೆಯ ಅಧ್ಯಾಯ ಓದುವದನ್ನು ಮುಗಿಸೋಣ. ವಾಕ್ಯ ಹೀಗೆ ಹೇಳುತ್ತದೆ:

"ಯೆಹೋವ ದೇವರು ಆದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು. ಮತ್ತು ಯೆಹೋವ ದೇವರು – ಈ ಮನುಷ್ಯನು ಒಳ್ಳೇದರ ಮತ್ತು ಕೆಟ್ಟದ್ದರ ಭೇದವನ್ನರಿತು ನಮ್ಮಲ್ಲಿ ಒಬ್ಬನಂತಾದನಲ್ಲಾ, ಇದರಿಂದ ಅವನು ಕೈಚಾಚಿ ಜೀವವೃಕ್ಷದ ಫಲನ್ನು ಸಹ ತೆಗೆದು ತಿಂದು ಶಾಶ್ವತವಾಗಿ ಬದುಕುವವನಾಗಬಾರದು ಅಂದುಕೊಂಡು ಅವನು ಉತ್ಪತ್ತಿಯಾದ ಭೂಮಿಯನ್ನೇ ವ್ಯವಸಾಯ ಮಾಡುವದಕ್ಕಾಗಿ ಅವನನ್ನು ಏದೆನ್ ತೋಟದಿಂದ ಹೊರಡಿಸಿಬಿಟ್ಟನು. ಅದಲ್ಲದೆ ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ಆತನು ಏದೆನ್ ವನದ ಪೂರ್ವ ದಿಕ್ಕಿನಲ್ಲಿ ಕೆರೂಬಿಯರನ್ನೂ ಧಗಧಗನೆ ಪ್ರಜ್ವಲಿಸುವ ಸುತ್ತುವ ಕತ್ತಿಯನ್ನೂ ಇರಿಸಿದನು." (ಆದಿ–೩:೨೧–೨೪).

ಇಲ್ಲಿಗೆ ಮೂರನೆಯ ಅಧ್ಯಾಯ ಕೊನೆಗೊಳ್ಳುತ್ತದೆ. ಈದಿನ ಇದನ್ನು ಮುಕ್ತಾಯಗೊಳಿಸುವದಕ್ಕಿಂತ ಮೊದಲು, ಈ ವಚನಗಳು ಒಳಗೊಂಡಿರುವ ಕೆಲವು ಪ್ರಾಮುಖ್ಯವಾದ ಸತ್ಯಗಳನ್ನು ಆಲೋಚಿಸೋಣ.

ವಾಕ್ಯ ಹೀಗೆ ಹೇಳುತ್ತದೆ: "ಯೆಹೋವ ದೇವರು ಆದಾಮನಿಗೂ ಅವನ ಹೆಂಡತಿಗೂ ಚರ್ಮದ ಅಂಗಿಗಳನ್ನು ಮಾಡಿ ತೊಡಿಸಿದನು." ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದ ನಂತರ ಆದಾಮ ಹವ್ವ ಏನು ಮಾಡಿದರೆಂದು ನಿಮಗೆ ನೆನಪಿದೆಯಾ? **ಅವರು ತಾವೇ ಅಂಜೂರದ ಮರದ ಎಲೆಗಳನ್ನು ಹೊಲಿದು** ದೇವರ ಮುಂದೆ ತಮ್ಮ ಅವಮಾನವನ್ನು ಮುಚ್ಚಿಕೊಳ್ಳುವ ಒಂದು ಪ್ರಯತ್ನದಲ್ಲಿ ಅದನ್ನು ತಮ್ಮ ಸೊಂಟದ ಸುತ್ತಲೂ ಸುತ್ತಿಕೊಂಡರು. ಎಲೆಗಳಿಂದ ಅವರು ತಮಗಾಗಿ ಮಾಡಿಕೊಂಡಿದ್ದ ಬಟ್ಟೆಗಳನ್ನು ದೇವರು ಒಪ್ಪಿಕೊಂಡನೋ? ಇಲ್ಲ, ಆತನು ಒಪ್ಪಿಕೊಳ್ಳಲಿಲ್ಲ. ಅವರು ತಮಗಾಗಿ ಮಾಡಿಕೊಂಡಿದ್ದ ಬಟ್ಟೆಗಳನ್ನು ದೇವರು ಯಾಕೆ ಒಪ್ಪಿಕೊಳ್ಳಲಿಲ್ಲ? ಯಾಕೆಂದರೆ ತಾನು **ಪರಿಪೂರ್ಣನಾಗಿದ್ದು** ಮನುಷ್ಯನ **ದೋಷಪೂರ್ಣವಾದ** ಕೆಲಸಗಳನ್ನು ತಾನು ಒಪ್ಪಿಕೊಳ್ಳುವದಿಲ್ಲ ಎಂಬುದನ್ನು ಆದಾಮ ಹವ್ವರಿಗೆ ಕಲಿಸುವದಕ್ಕೆ ದೇವರು ಬಯಸಿದ್ದನು. ಇದಕ್ಕೆ ಸಂಬಂಧಿಸಿದಂತೆ ವಾಕ್ಯಗಳು ಹೇಳುವದೇನೆಂದರೆ: "ನಾವೆಲ್ಲರೂ ಅಶುದ್ಧನ ಹಾಗಿದ್ದೇವೆ, **ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ."**(ಯೆಶಾಯ–೬೪:೬). ದೇವರ ಮುಂದೆ ತನ್ನ ಪಾಪಗಳನ್ನು ಮುಚ್ಚಿಕೊಳ್ಳುವದಕ್ಕೆ ಮನುಷ್ಯನು ಮಾಡುವಂತಾದ್ದು ಯಾವುದೂ ಇಲ್ಲ.

ಹೇಗೂ, ದೇವರು ಮನುಷ್ಯನಿಗಾಗಿ ಏನೋ ಒಂದನ್ನು ಮಾಡಿದನು. **ದೇವರು ಕೆಲವು ಪ್ರಾಣಿಗಳನ್ನು ಕೊಂದು** ಅವುಗಳ **ಚರ್ಮವನ್ನು ತೆಗೆದು ಹೊಲಿದು** ಆದಾಮ ಹವ್ವರಿಗೆ ತೊಡಿಸಿದನು. **ಹೌದು ದೇವರು ಮೊದಲ ಪ್ರಾಣಿ ಬಲಿಯನ್ನು ಮಾಡಿದನು**. ದೇವರು ಕೊಂದಂತಹ ಪ್ರಾಣಿಗಳಿಂದ ಹರಿದುಬಂದ ರಕ್ತವನ್ನು ಆದಾಮ ಹವ್ವ ನೋಡಿದ್ದು ಎಂತಹ ಆಘಾತಕರವಾದ ದೃಶ್ಯವಾಗಿತ್ತು! ಪ್ರಾಣಿಗಳಿಂದ ಸುರಿಯಲ್ಪಟ್ಟ ರಕ್ತದ ಮೂಲಕವಾಗಿ **"ಪಾಪವು ಕೊಡುವ ಸಂಬಳ ಮರಣ"**(ರೋಮಾ–೬:೨೩) ಮತ್ತು **"ರಕ್ತಧಾರೆಯಿಲ್ಲದೆ** ಪಾಪ **ಪರಿಹಾರವಿಲ್ಲ"**(ಇಬ್ರಿಯ–೯:೨೨) ಎಂಬುದನ್ನು ಆದಾಮ ಹವ್ವರಿಗೆ ಕಲಿಸುವದಕ್ಕೆ ದೇವರು ಬಯಸಿದ್ದನು. **"ರಕ್ತಧಾರೆಯಿಲ್ಲದೆ ಪಾಪ ಪರಿಹಾರವಿಲ್ಲ"** ಎಂದು ಹೇಳುವಂತಹ ದೇವರ ಕ್ಷಮಾಪಣೆಯ ಮೂಲ ನಿಯಮದ ಹೊರತಾಗಿ ಇದನ್ನು ವಿವರವಾಗಿ ಈ ದಿನ ನಾವು ವಿವರಿಸುವದಕ್ಕಾಗುವದಿಲ್ಲ, ಪಾಪದ ದಂಡನೆಯು ಸಂದಾಯವಾಗಲೇ – ಬೇಕು. ಪಾಪದ ಶಿಕ್ಷೆ ಮರಣವಾಗಿದೆ. ದಂಡನೆ ಸಂದಾಯವಾಗುವಂತಹ ಪಾಪಗಳನ್ನು ದೇವರು ಮಾತ್ರ ಕ್ಷಮಿಸಬಲ್ಲನು. ಅಪರಾಧಿಯಾದ ಪಾಪಿಯ ಜಾಗದಲ್ಲಿ ಒಂದು ಶುದ್ಧವಾದ ಮತ್ತು ಮುಗ್ದವಾದ ಬಲಿಯು ಸಾಯುಲೇಬೇಕು. ತನ್ನ ನೀತಿವಂತಿಕೆಯ ಸಂಧಾನವಿಲ್ಲದೆ {ಉಲೂಫ್ ನಲ್ಲಿ: ಇನ್ನೂ ತನ್ನ ನೀತಿವಂತಿಕೆಯಲ್ಲಿಯೇ ಉಳಿದುಕೊಂಡು} ದೇವರು ಜನರ ಪಾಪಗಳನ್ನು ಕ್ಷಮಿಸುವದಕ್ಕೆ ಇದು ಮಾತ್ರವೇ ಮಾರ್ಗವಾಗಿತ್ತು.

ಹೀಗೆ ಪಾಪದ ಶಿಕ್ಷೆಯು ಮರಣವೆಂಬುದನ್ನು ಪಾಪಿಗಳಿಗೆ ನೆನಪು ಮಾಡುವದಕ್ಕೆ ದೇವರು ಪ್ರಾಣಿ ಬಲಿಯನ್ನು ಸ್ಥಾಪಿಸಿದನು. ಪಾಪಕ್ಕಾಗಿ ಸಂದಾಯ ಮಾಡುವ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕೆ ಲೋಕದೊಳಕ್ಕೆ ಬರಲಿಕ್ಕಿರುವ ಪರಿಶುದ್ಧ ವಿಮೋಚಕನಿಗೆ ಪ್ರಾಣಿ ಬಲಿಯು ಗುರುತಾ – ಗಿತ್ತು. ಇದರ ಕುರಿತು ನಾವು ಮುಂದೆ ಕಲಿಯಲಿದ್ದೇವೆ. ಹೇಗೂ, ಆದಾಮ ಹವ್ವರ ನಾಚಿಕೆಯನ್ನು ಮುಚ್ಚುವದಕ್ಕೆ ದೇವರು ಪ್ರಾಣಿಗಳ ರಕ್ತವನ್ನು ಸುರಿಸಿದನೆಂಬುದನ್ನು ಈ ದಿನ ನೆನಪು ಮಾಡಿಕೊಳ್ಳೋಣ.

ಇದಾದ ನಂತರ, **ಏದೆನಿನಲ್ಲಿರುವ ಪರದೈಸಿನ ತೋಟದಿಂದ ದೇವರು ಆದಾಮ ಮತ್ತು ಹವ್ವರನ್ನು ತಳ್ಳಿಬಿಟ್ಟನು. ಜೀವವೃಕ್ಷಕ್ಕೆ ಹೋಗುವ ದಾರಿಯನ್ನು ಕಾಯುವದಕ್ಕೆ ದಗದಗನೆ ಪ್ರಜ್ವಲಿಸುತ್ತಾ ಸುತ್ತುವ ಕತ್ತಿಯನ್ನು ಹಿಡಿದಿರುವ ದೂತನನ್ನು ಇರಿಸಿದನು.** ದೇವರು ನಿಷೇಧಿಸಿದ್ದ ಮರದ ಹಣ್ಣನ್ನು ತಿನ್ನುವದರಿಂದ ಆದಾಮ ಹವ್ವ ಮರಣದ ದಾರಿಯನ್ನು ಆರಿಸಿಕೊಂಡರು. ಇದರ ಪರಣಾಮವಾಗಿ, ಅವರು ಅದ್ಭುತವಾದ ಪರದೈಸಿನ ತೋಟದ ಆಶೀರ್ವಾದಗಳನ್ನು ದೀರ್ಘವಾಗಿ ಆನಂದಿಸಲಿಕ್ಕಾಗಲಿಲ್ಲ. ಲೂಸಿಫರನನ್ನು ಅಂದರೆ ಸೈತಾನನನ್ನು ಅವನ ಪಾಪದ ಕಾರಣದಿಂದ ದೇವರು ತನ್ನ ಪ್ರಸನ್ನತೆಯಿಂದ ಹೇಗೆ ತಳ್ಳಿಬಿಟ್ಟನೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಈಗ ಆದಾಮ ಹವ್ವರ ಪಾಪದ ದೆಸೆಯಿಂದ ದೇವರು ಅವರನ್ನು ತಳ್ಳಿಬಿಟ್ಟದ್ದನ್ನು ನೋಡಿದೆವು: ದೇವರು ಪರಿಶುದ್ಧನು, ಮತ್ತು **ಪರಿಶುದ್ಧತೆಯಿಲ್ಲದ ಎಲ್ಲವನ್ನೂ ಆತನು ಖಂಡಿತವಾಗಿಯೂ ಶಿಕ್ಷಿಸುತ್ತಾನೆ.**

ಆದ್ದರಿಂದ ಪ್ರಿಯ ಸ್ನೇಹಿತರೇ, ಎರಡು ಆಲೋಚನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳೋಣ: ಮೊದಲನೆಯದು, **ದೇವರು ನೀತಿವಂತನು**. ದೇವರು ಪಾಪವನ್ನು ಸಹಿಸುವದಿಲ್ಲ. ಅದಕ್ಕಾಗಿಯೇ ಆದಾಮ ಹವ್ವರನ್ನು ತೀರ್ಪಿಗೊಳಪಡಿಸಿ ತೋಟದಿಂದ ಅವರನ್ನು ತಳ್ಳಿಬಿಟ್ಟನು. ಎರಡನೆಯದಾಗಿ, **ದೇವರು ಕನಿಕರವುಳ್ಳವನು.** ಆದಾಮ ಹವ್ವ ದೇವರ ಕರುಣೆಗೆ ಅರ್ಹರಾಗಿರಲಿಲ್ಲ. ಅವರು ದೇವರ ನ್ಯಾಯತೀರ್ಪಿಗೆ ಅರ್ಹರಾಗಿದ್ದರು.

ಹೇಗೂ, ಜನರು ನಾಶವಾಗುವದನ್ನು ದೇವರು ಇಷ್ಟಪಡುವದಿಲ್ಲ. ಅದಕ್ಕೋಸ್ಕರವೇ ಆತನು, ಸೈತಾನನ ರಾಜ್ಯದ ಕತ್ತಲೆಯೊಳಗಿಂದ ಪಾಪಿಗಳನ್ನು ರಕ್ಷಿಸುವಂತಹ ಮತ್ತು ದೇವರ ರಾಜ್ಯದ ಮಹಿಮೆ ಮತ್ತು ಬೆಳಕಿನೊಳಗೆ ಅವರನ್ನು ವರ್ಗಾಯಿಸುವಂತಹ ರಕ್ಷಕನನ್ನು ವಾಗ್ದಾನ ಮಾಡಿದನು.

ಮೋಸಹೋಗಬೇಡಿರಿ: **ದೇವರ ಕನಿಕರವು ಆತನ ನೀತಿವಂತಿಕೆಯನ್ನು ಎಂದಿಗೂ ವಿರೋಧಿಸುವದಿಲ್ಲ**. ದೇವರ ಈ ಎರಡು ಗುಣಲಕ್ಷಣಗಳು ಒಟ್ಟಾಗಿಯೇ ಕೆಲಸಮಾಡುತ್ತವೆ. ಮುಂದಿನ ಪಾಠಗಳಲ್ಲಿ, ದೇವರು ತನ್ನ ನೀತಿವಂತಿಕೆಯನ್ನು ವಿರೋಧಿಸದೇ ಪಾಪಿಗಳಿಗೆ ಹೇಗೆ ತನ್ನ ಕರುಣೆಯನ್ನು ತೋರಿಸಿದನೆಂಬುದನ್ನು ನಾವು ನೋಡುತ್ತೇವೆ.

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀತಿವಂತಿಕೆಯ ಮಾರ್ಗ ಎಂಬುದು ನಿಮ್ಮ ಕಾರ್ಯಕ್ರಮವಾಗಿದೆ. ಅದಾಮ ಹವ್ವ ದೇವರ ಮಾರ್ಗದಿಂದ ದೂರವಾದ ದಿನದಂದು ದೇವರು ಮಾಡಿದ ಅದ್ಭುತವಾದ ವಾಗ್ದಾನದ ಕುರಿತಾಗಿ ನಾವು ನಿಮ್ಮೊಂದಿಗೆ ಮಾತಾಡಿದ್ದೇವೆ. ನಿಮ್ಮ ಪಾಪಗಳಿಂದ ನಿಮ್ಮನ್ನು ರಕ್ಷಿಸುವದಕ್ಕೆ ಆತನು ಕಳಿಸಿದ **ರಕ್ಷಕನ** ಕುರಿತಾದ ದೇವರ ಅದ್ಭುತವಾದ ವಾಗ್ದಾನವನ್ನು ನೀವು ಪೂರ್ತಿಯಾಗಿ ಅರ್ಥಮಾಡಿಕೊಳ್ಳು-ವವರೆಗೆ ಈ ಕಾರ್ಯಕ್ರಮಗಳನ್ನು ಕೇಳಿಸಿಕೊಳ್ಳುತ್ತಿರುತ್ತೀರೆಂದು ನಾವು ನಂಬುತ್ತೇವೆ.

ಕೇಳಿಸಿಕೊಂಡಿದ್ದಕ್ಕಾಗಿ ವಂದನೆಗಳು. ಆದಾಮ ಹವ್ವರ ಇಬ್ಬರು ಮಕ್ಕಳಾದ ಕಾಯಿನ ಮತ್ತು ಹೇಬೇಲರ ಕುರಿತಾಗಿ ಮುಖ್ಯವಾದ ಕೆಲವು ಪಾಠಗಳನ್ನು ಕಲಿಯುವದಕ್ಕೆ ಮುಂದಿನ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಸೇರಿಕೊಳ್ಳುವಂತೆ ನಾವು ನಿಮ್ಮನ್ನು ಅಹ್ವಾನಿಸುತ್ತೇವೆ.

ದೇವರ ವಾಕ್ಯವು ಏನು ಹೇಳುತ್ತದೋ ಅದನ್ನು ಜಾಗ್ರತೆಯಿಂದ ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ, ಅದು ಹೇಳುವದೇನೆಂದರೆ:

**“ಪಾಪವು ಹೆಚ್ಚಿದಲ್ಲೇ, [ದೇವರ] ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು.”** (ರೋಮಾ–೫:೨೦).

ಪಾಠ ೧೦

# ಕಾಯಿನ ಮತ್ತು ಹೇಬೇಲ:
# ಯಜ್ಞ ಸಮರ್ಪಣೆಯ ರೀತಿ

ಆದಿಕಾಂಡ ೪.

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ ಶಾಂತಿಯು ನಿಮ್ಮೊಂದಿಗಿರಲಿ. ಪ್ರತಿಯೊಬ್ಬರೂ ತನ್ನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನವನ್ನು ಹೊಂದಿ –ಕೊಳ್ಳುವಂತೆ, ಆತನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗಕ್ಕೆ ಅಧೀನಪಡಿಸಿಕೊಳ್ಳುವದಕ್ಕೆ ಮತ್ತು ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಬಯಸು – ವಂತಹ ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ಹಿಂದಿರುಗಿ ಬರಲು ಶಕ್ತರಾಗಿರುವದಕ್ಕೆ ನಾವು ಸಂತೋಃಷವುಳ್ಳವರಾಗಿದ್ದೇವೆ.

ಹಿಂದಿನ ಸಲ. ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಆದಾಮ ಹವ್ವ ಪಾಪ ಮಾಡಿದ ನಂತರ ದೇವರು, ನರಕ ಪಾಪ ಮತ್ತು ಸೈತಾನನ §®¢Az ÀDz Áª ÃCÀª ÃPÀ¥ÀÄß©qÀÄUÀqÉª ÀÄq Ãª ÀvÀ ÀM§ÉÆ ÀÄß ¯ÉÃPÀ ÉÆ ÀÄÉvÀgÀª À**ತನ್ನ ಯೋಜನೆಯನ್ನು** ಪ್ರಕಟಿಸುವದಕ್ಕೆ ಆರಂಭಿಸಿ –ದನು ಎಂಬುದನ್ನು ನೋಡಿದ್ದೇವೆ. ಆದಾಮ ಹವ್ವ ತಾವೇ ಎಲೆಗಳಿಂದ ಮಾಡಿಕೊಂಡ ಅಂಗಿಗಳನ್ನು ಒಪ್ಪಿಕೊಳ್ಳುವದಕ್ಕೆ ದೇವರು ನಿರಾಕರಸಿ – ದ್ದನ್ನೂ ಸಹ ನಾವು ನೋಡಿದ್ದೇವೆ. ಅವರಿಗೆ ತೀರ್ಪು ಮಾಡಿದವನಾದ ಪರಿಶುದ್ಧನ ಮುಂದೆ ಅವರು ತಮ್ಮ ಮಾನವನ್ನು ಮುಚ್ಚಿಕೊಳ್ಳುವದಕ್ಕೆ ಪಾಪಿಗಳಿಗೆ ಯಾವ ಮಾರ್ಗವು ಇಲ್ಲ ಎಂಬುದನ್ನು ದೇವರು ಅವರಿಗೆ ಕಲಿಸುವದಕ್ಕೆ ಇಷ್ಟಪಟ್ಟನು. ದೇವರು ಮಾತ್ರ ಪಾಪಿಗಳನ್ನು ಅವರ ಅಪರಾಧದಿಂದ ರಕ್ಷಿಸಬಲ್ಲನು. ಹಾಗಾಗಿ, ದೇವರು ತಾನೇ ಕೆಲವು ಪ್ರಾಣಿಗಳನ್ನು ಬಲಿಕೊಟ್ಟು ಚರ್ಮದ ಅಂಗಿಗಳನ್ನು ಮಾಡಿ ಆದಾಮ ಹವ್ವರಿಗೆ ತೊಡಿಸಿದನು. **ದೇವರು ಮೊದಲ ರಕ್ತ ಬಲಿಯನ್ನು ಅರ್ಪಿಸಿದನು.** ಭೂಮಿಯಲ್ಲಿ ಎರಡು ಗುಂಪಿನ ಜನರಿದ್ದಾರೆ ಎಂಬುದನ್ನು ದೇವರು ಹೇಗೆ ಪ್ರಕಟಿಸಿದನೆಂಬುದನ್ನು ಸಹ ನಾವು ಓದಿದ್ದೇವೆ: ದೇವರ ವಾಕ್ಯವನ್ನು ನಂಬುವದಕ್ಕೆ ತಿರಸ್ಕರಿಸುವವರು, ಮತ್ತು ಅದನ್ನು ನಂಬುವವರು.

ಈ ದಿನ ನಾವು ಆದಾಮ ಹವ್ವರ ಮೊದಲ ಇಬ್ಬರು ಮಕ್ಕಳ ಕುರಿತಾಗಿ ಓದುತ್ತೇವೆ: ದೇವರನ್ನು ನಂಬುವದಕ್ಕೆ ನಿರಾಕರಿಸಿದ **ಕಾಯಿನ,** ಮತ್ತು ದೇವರನ್ನು ನಂಬಿದ **ಹೇಬೇಲ.** ನಾವು ನೋಡಿದ ಹಾಗೆ, ಆದಾಮ ಹವ್ವ ಈಗ (ಏದೆನ್) ಪರದೈಸಿನ ತೋಟದ ಹೊರಗೆ ಜೀವಿಸುತ್ತಿದ್ದಾರೆ. ಅವರು ಪಾಪ ಮಾಡಿದ್ದರಿಂದ ದೇವರು ಅವರನ್ನು ಹೊರತಳ್ಳಿದ್ದನು. ಅವರ ಪಾಪದ ಕಾರಣದಿಂದ ಅವರು ಪರದೈಸಿನ ತೋಟದ ಆಶೀರ್ವಾದ –ಗಳಲ್ಲಿ ದೀರ್ಘಕಾಲದವರೆಗೆ ಜೀವಿಸುವದಕ್ಕಾಗಲಿಲ್ಲ. ಅವರ ಪಾಪವು ದೇವರೊಂದಿಗಿನ ಅವರ ಸಂಬಂಧವನ್ನು ಹಾಳುಮಾಡಿತು. ಹೀಗಿದ್ದರೂ ದೇವರು ಅವರನ್ನು ಇನ್ನೂ ಪ್ರೀತಿಸಿ ಅವರಿಗಾಗಿ ಚಿಂತಿಸಿದನು.

ನಂತರ ಈಗ ತೋರಾದಿಂದ ನಾವು ಒಟ್ಟಾಗಿ ಓದಿಕೊಳ್ಳೋಣ. ಆದಿಕಾಂಡ ಪುಸ್ತಕದ ನಾಲ್ಕನೆಯ ಅಧ್ಯಾಯದಲ್ಲಿ ಹೀಗೆ ಬರೆದದೆ:

"ಆ ಪುರುಷನು ತನ್ನ ಹೆಂಡತಿಯಾದ ಹವ್ವಳನ್ನು ಕೂಡಲು ಆಕೆ ಗರ್ಭಿಣಿಯಾಗಿ **ಕಾಯಿನನನ್ನು** ಹೆತ್ತು, ಯೆಹೋವನ ಅನುಗ್ರಹದಿಂದ ಗಂಡು ಮಗುವನ್ನು ಪಡೆದಿದ್ದೇನೆ ಎಂದು ಹೇಳಿದಳು. ತರುವಾಯ ಅವನ ತಮ್ಮನಾದ **ಹೇಬೆಲನನ್ನು** ಹೆತ್ತಳು. ಹೇಬೆಲನು ಕುರಿ ಕಾಯುವವನಾದನು; ಕಾಯಿನನು ವ್ಯವಸಾಯ ಮಾಡುವವನಾದನು."(ಆದಿ–೪: ೧, ೨).

ಆದಾಮ ಹವ್ವರು, ಕಾಯಿನ ಮತ್ತು ಹೇಬೆಲ ಎಂಬ ಇಬ್ಬರು ಮಕ್ಕಳನ್ನು ಪಡೆದರು. ಅವರು ತಮ್ಮ ತಂದೆ ತಾಯಿಯಂತೆ ಪಾಪಿಗಳಾಗಿದ್ದರು. ಒಂದು ಸಾಂಕ್ರಾಮಿಕ ರೋಗದ ಹಾಗೆ ಆದಾಮನ ಪಾಪವು ಅವನ ಮಕ್ಕಳಿಗೆ ಹರಡಿಕೊಂಡಿತ್ತು. ಕಾಯಿನ ಮತ್ತು ಹೇಬೆಲ ಇಬ್ಬರೂ ಪಾಪದಲ್ಲಿ ಹುಟ್ಟಿದವರಾಗಿದ್ದರು. ಹಾಗಾಗಿ ವಾಕ್ಯವು ಹೀಗೆ ಹೇಳುತ್ತದೆ: "ಆದಾಮನು ತನ್ನ ಹೋಲಿಕೆಗೆ ಸರಿಯಾದ ಮಕ್ಕಳನ್ನು ಪಡೆದನು" (ಆದಿ–೫:೩). "ತಂದೆಯ ಹಾಗೆ ಮಗನು". **ಕಾಯಿನ ಮತ್ತು ಹೇಬೆಲ ಇಬ್ಬರೂ ಪಾಪಭರಿತ ಸ್ವಭಾವದಿಂದ ಹುಟ್ಟಿದರು.** ಮಕ್ಕಳು ಶಾರೀರಿಕವಾಗಿ ಬೆಳೆದು ಜ್ಞಾನದಲ್ಲಿ ವೃದ್ಧಿಯಾದರು. ಕಾಯಿನನು ವ್ಯವಸಾಯಗಾರನಾದನು. ಅವನು ಒಬ್ಬ ಶ್ರದ್ಧೆಯುಳ್ಳ ಕೆಲಸಗಾರನಾಗಿದ್ದು ಕಷ್ಟಕರವಾದ ಕೆಲಸಕ್ಕೆ ಅಂಜುವವನಾಗಿರಲಿಲ್ಲ. ಹೇಬೆಲನು ಕುರಿಕಾಯುವವನಾಗಿದ್ದನು. ಇಬ್ಬರೂ ದೇವರ ಕುರಿತಾಗಿ ತಿಳಿದಿದ್ದರು. ದೇವರು ಇದ್ದಾನೆ ಆತನು ಪರಿಶುದ್ಧನು ಮತ್ತು ಪಾಪವನ್ನು ದ್ವೇಷಿಸುತ್ತಾನೆ ಎಂಬುದನ್ನು ಅವರು ತಿಳಿದಿದ್ದರು. ದೇವರ ಸಮೀಪಕ್ಕೆ ಬರಬೇಕಾದರೆ ದೇವರು ವಿಧಿಸಿದ್ದ ರಕ್ತ ಬಲಿಯ ಮಾರ್ಗದಿಂದ ಬರುವ ಅಗತ್ಯವಿದೆಯೆಂಬುದನ್ನು ಅವರಿಬ್ಬರೂ ತಿಳಿದುಕೊಂಡಿದ್ದರು.

ದೇವರನ್ನು ಆರಾಧಿಸಿ ಆತನಿಗೆ ಯಜ್ಞಸಮರ್ಪಣೆಯನ್ನು ಅರ್ಪಿಸಬೇಕೆಂದು ಅವರು ತೀರ್ಮಾನಿಸಿದಾಗ, ಕಾಯಿನ ಮತ್ತು ಹೇಬೆಲರ ಜೀವಿತದಲ್ಲಿ ಆ ಒಂದು ದಿನವು ಬಂದಿತು. ವಾಕ್ಯವು ಹೀಗೆ ಹೇಳುತ್ತದೆ:

"ಕಾಲಾಂತರದಲ್ಲಿ ಕಾಯಿನನು ಹೊಲದ ಬೆಳೆಯಲ್ಲಿ ಕೆಲವನ್ನು ತಂದು ಯೆಹೋವನಿಗೆ ಕಾಣಿಕೆಯಾಗಿ ಸಮರ್ಪಿಸಿದನು. ಹೇಬೆಲನು ಹಾಗೆಯೇ ತನ್ನ ಹಿಂಡಿನಿಂದ ಚೊಚ್ಚಲ ಕುರಿಗಳನ್ನು ಕಾಣಿಕೆಯಾಗಿ ತಂದು ಅವುಗಳ ಕೊಬ್ಬನ್ನು ಹೋಮ ಮಾಡಿದನು. ಯೆಹೋವನು **ಹೇಬೆಲನನ್ನೂ ಅವನ ಕಾಣಿಕೆಯನ್ನು ಮೆಚ್ಚಿ ಕಾಯಿನನನ್ನೂ ಅವನ ಕಾಣಿಕೆಯನ್ನು ಮೆಚ್ಚಲಿಲ್ಲ.** ಇದರಿಂದ ಕಾಯಿನನು ಬಹು ಕೋಪಗೊಂಡನು; ಅವನ ಮುಖವು ಕಳೆಗುಂದಿತು." (ಆದಿ–೪:೩–೫).

ಏನು ಸಂಭವಿಸಿತೆಂಬುದನ್ನು ಆಲೋಚಿಸೋಣ. ಇಬ್ಬರು ಜನರು ದೇವರನ್ನು ಆರಾಧಿಸುವದಕ್ಕೆ ಇಷ್ಟಪಟ್ಟರು. ಇಬ್ಬರೂ ದೇವರಿಗೆ ಯಜ್ಞಗಳನ್ನು ಸಮರ್ಪಿಸಿದರು. ಆದರೆ ವಾಕ್ಯ ಹೀಗೆ ಹೇಳುತ್ತದೆ: "ದೇವರು ಹೇಬೆಲನನ್ನು ಅವನ ಕಾಣಿಕೆಯನ್ನು ಮೆಚ್ಚಿದನು, ಆದರೆ ಕಾಯಿನನನ್ನು ಅವನ ಕಾಣಿಕೆಯನ್ನು ಮೆಚ್ಚಲಿಲ್ಲ." ದೇವರು ಹೇಬೆಲನ ಕಾಣಿಕೆಯನ್ನು ಮೆಚ್ಚಿ ಕಾಯಿನನ ಕಾಣಿಕೆಯನ್ನು ಯಾಕೆ ಮೆಚ್ಚಲಿಲ್ಲ? ಈ ಎರಡು ಯಜ್ಞಗಳ ನಡುವೆ ಇರುವ ವ್ಯತ್ಯಾಸ ಯಾವುದು?

ನಿಜವಾಗಿಯೂ, ಕಾಯಿನನ ಮತ್ತು ಹೇಬೆಲನ ಯಜ್ಞಗಳು ತುಂಬಾ ವ್ಯತ್ಯಾಸವುಳ್ಳದ್ದಾಗಿತ್ತು. ಕಾಯಿನನು ದೇವರಿಗೆ **ಸುಂದರವಾದ ತರಕಾರಿಗಳನ್ನು ಮತ್ತು ರುಚಿಕರವಾದ ಹಣ್ಣುಗಳನ್ನು** ತಂದನು. ಹೇಬೆಲನು **ಕಳಂಕವಿಲ್ಲದ ಕುರಿಯ ರಕ್ತವನ್ನು** ದೇವರಿಗಾಗಿ ತಂದನು. ದೇವರು ಹೇಬೆಲನ ಪಾಪಗಳನ್ನು ಕ್ಷಮಿಸಿದನು ಆದರೆ ಕಾಯಿನನ ಪಾಪಗಳನ್ನು ಕ್ಷಮಿಸಲಿಲ್ಲ.

ಕುರಿಯ ರಕ್ತವನ್ನು ತಂದಂತಹ ಹೇಬೆಲನ ಪಾಪಗಳನ್ನು ದೇವರು ಯಾಕೆ ಕ್ಷಮಿಸಿದನು, ಮತ್ತು ತರಕಾರಿ ಮತ್ತು ಹಣ್ಣುಗಳನ್ನು ತಂದಂತಹ ಕಾಯಿ–ನನ ಪಾಪಗಳನ್ನು ಯಾಕೆ ಕ್ಷಮಿಸಲಿಲ್ಲ? ಇದು ಯಾಕೆಂದರೆ ದೇವರು ತರಕಾರಿಗಳನ್ನು ಮತ್ತು ಹಣ್ಣುಗಳನ್ನು ಇಷ್ಟಪಡಲಿಲ್ಲವಾ? ಇಲ್ಲ, ಅದು ಕಾರಣವಲ್ಲ! ಹಾಗಾದರೆ ಯಾಕೆ, ದೇವರು ಹೇಬೆಲನನ್ನು ನೀತಿವಂತನೆಂದು ತೀರ್ಪು ಮಾಡಿ ಕಾಯಿನನನ್ನು ಅವನ ಪಾಪದಲ್ಲಿ ಬಿಟ್ಟು –ಬಿಟ್ಟನು? ಇಲ್ಲಿದೆ ಕಾರಣ: **ದೇವರಿಗೆ ಅಗತ್ಯವಾಗಿದ್ದ ಯಜ್ಞವನ್ನು ಹೇಬೆಲನು ತಂದಿದ್ದನು, ಆದರೆ ಕಾಯಿನನು ಏನೋ ಒಂದನ್ನು ತಂದನು.** ತನ್ನ ನೀತಿವಂತಿ – ಕೆಯ ಸಂಧಾನವಿಲ್ಲದೆ ಅವರ ಪಾಪಗಳನ್ನು ಕ್ಷಮಿಸುವದಕ್ಕೆ ದೇವರಿಗೆ ಅಗತ್ಯವಾದದ್ದು ಯಾವುದಾಗಿತ್ತು? ಆತನು ಕಳಂಕವಿಲ್ಲದ ಒಂದು ಪ್ರಾಣಿಯ **ಜೀವವಾಗಿರುವ** ರಕ್ತದ ಅಪೇಕ್ಷೆಯುಳ್ಳವನಾಗಿದ್ದ. ದೇವರ ಅಪೇಕ್ಷೆಯಂತೆ ಹೇಬೆಲನು ರಕ್ತದ ಯಜ್ಞವನ್ನು ತಂದನು. ಹಾಗಾಗಿ, ವಾಕ್ಯವು ಹೀಗೆ ಹೇಳುತ್ತದೆ: "**ನಂಬಿಕೆಯಿಂದಲೇ** ಹೇಬೆಲನು ಕಾಯಿನನ ಯಜ್ಞಕ್ಕಿಂತ ಶ್ರೇಷ್ಠವಾದ ಯಜ್ಞವನ್ನು ದೇವರಿಗೆ ಸಮರ್ಪಿಸಿದನು. ಅದರ ಮೂಲಕ ತಾನು ನೀತವಂತನೆಂದು ಸಾಕ್ಷಿ ಹೊಂದಿದನು. ದೇವರು ಅವನ ಕಾಣಿಕೆಗಳನ್ನು ಅಂಗೀಕಾರ ಮಾಡಿದ್ದೇ ಆ ಸಾಕ್ಷಿ." (ಇಬ್ರಿಯ–೧೧:೪) ಹೇಬೆಲನು ದೇವರನ್ನು ನಂಬಿದನು, ಆದರೆ ಕಾಯಿನನು ಆತನನ್ನು ನಂಬಲಿಲ್ಲ.

**ದೇವರನ್ನು ನಂಬುವದು ಅಂದರೆ ಏನು ಅರ್ಥ?** ದೇವರನ್ನು ನಂಬುವದು ಅಂದರೆ ಆತನ ವಾಕ್ಯಕ್ಕೆ ವಿಧೇಯರಾಗುವ ವಿಷಯಕ್ಕೆ ದೇವರಲ್ಲಿ ಭರವಸವನ್ನು ಹೊಂದುವದೇ ಆಗಿದೆ. ದೇವರನ್ನು ನಂಬುವದು ಅಂದರೆ **ದೇವರು ಏನು ಹೇಳುತ್ತಾನೋ ಅದು ನಿಜವೆಂದು ಒಪ್ಪಿಕೊಳ್ಳುವದು.** "ನಾನು ದೇವರಲ್ಲಿ ನಂಬಿಕೆಯುಳ್ಳವನು' ಎಂದು ನೀವು ಹೇಳುತ್ತೀರಿ, ಆದರೆ ಪರಿಶುದ್ಧ ವಾಕ್ಯಗಳಲ್ಲಿ ದೇವರು ಏನು ಹೇಳಿದ್ದಾನೋ ಅದನ್ನು ನೀವು ನಂಬುವದಿಲ್ಲ, ಆಗ ನೀವು ನಿಜವಾಗಿಯೂ ದೇವರನ್ನು ನಂಬಿದವರಲ್ಲ. **ದೇವರು ಮತ್ತು ಆತನ ವಾಕ್ಯ ಎರಡೂ ಒಂದೇ.** ನೀವು ದೇವರನ್ನು ನಂಬಿದರೆ, ನೀವು ಆತನನ್ನು ನಂಬುತ್ತೀರಿ ಮತ್ತು ಆತನ ವಾಕ್ಯಕ್ಕೆ ವಿಧೇಯರಾಗುತ್ತೀರಿ. ದೇವರು ಹೇಳಿದ್ದನ್ನು ನೀವು ನಂಬದಿದ್ದರೆ, ನೀವು ದೇವರನ್ನೇ ನಿರಾಕರಿಸಿದ ಹಾಗೆ.

ದೇವರು ಹೇಬೆಲನನ್ನು ಒಪ್ಪಿಕೊಂಡನು, ಯಾಕೆಂದರೆ ಅವನು ದೇವರ ವಾಕ್ಯವನ್ನು ನಂಬಿದನು ಮತ್ತು ದೇವರು ಆಜ್ಞಾಪಿಸಿದ ಹಾಗೆ ಕುರಿಯ ರಕ್ತದೊಂದಿಗೆ ಬಂದನು. ದೇವರು ಕಾಯಿನನನ್ನು ಒಪ್ಪಿಕೊಳ್ಳಲಿಲ್ಲ, ಯಾಕೆಂದರೆ ಅವನು ಯಥಾರ್ಥವಾಗಿ ದೇವರ ವಾಕ್ಯವನ್ನು ನಂಬಲಿಲ್ಲ. ಕಾಯಿನನು ದೇವರನ್ನು ನಂಬುತ್ತೇನೆಂದು ಹೇಳಿದನು, ಆದರೆ ಅವನ ಕೃತ್ಯವು ಇದನ್ನು ಅಲ್ಲಗಳೆಯಿತು, ಯಾಕೆಂದರೆ ಅವನು, ದೇವರು ಆಜ್ಞಾಪಿಸಿದಂತೆ ರಕ್ತದ ಯಜ್ಞವನ್ನು ತರಲಿಲ್ಲ.

ಯಾರಾದರೂ ಈ ರೀತಿ ಕೇಳಬಹುದು, ದೇವರು ಯಾಕೆ ಪ್ರಾಣಿ ಯಜ್ಞಗಳನ್ನು ಆಜ್ಞಾಪಿಸಿದನು? "ರಕ್ತಧಾರೆಯಿಲ್ಲದೆ ಪಾಪಪರಿಹಾರವಿಲ್ಲ" ಎಂದು ದೇವರು ಯಾಕೆ ಹೇಳಿದನು? ಕಾರಣ ಇಲ್ಲಿದೆ: ದೇವರ ಪರಿಶುದ್ಧ ಧರ್ಮಶಾಸ್ತ್ರವು **"ಪಾಪದ ಸಂಬಳ ಮರಣ"** ಎಂಬುದಾಗಿ ಹೇಳಿದೆ! ಅದಕ್ಕೋ–ಸ್ಕರವೇ ರಕ್ತವು ಸುರಿಸಲ್ಪಡಬೇಕು."ಪಾಪದ ಶಿಕ್ಷೆಯು ಹಣ್ಣು ತರಕಾರಿಗಳಿಂದ ಸಂದಾಯವಾಗುತ್ತದೆ" ಎಂದು ದೇವರು ಹೇಳಿಲ್ಲ. ಅಥವಾ, "ಪಾಪದ ಸಂಬಳವು ಉಪವಾಸ ಪ್ರಾರ್ಥನೆ ಮತ್ತು ಒಳ್ಳೆಯ ಕೆಲಸಗಳನ್ನು ಮಾಡುವದು" ಎಂದು ದೇವ್ರು ಹೇಳಿಲ್ಲ. ಇಲ್ಲ! ದೇವರು ತನ್ನ ಪರಿಶುದ್ಧತೆಯಲ್ಲಿ ಹೇಳಿರುವದೇನೆಂದರೆ, ಪಾಪಕ್ಕೆ ಅಗತ್ಯವಾಗಿರುವ ಸಂಬಳವೆಂದರೆ ಅದು **ಮರಣ!**

ದೇವರು ಪ್ರವಾದಿಗಳ ಬರವಣಿಗೆಗಳಲ್ಲಿ, ಆದಾಮನ ಪ್ರತಿಯೊಂದು ಮಗುವೂ ಪ್ರತಿಯೊಬ್ಬ ವ್ಯಕ್ತಿಯೂ ಪಾಪಮಾಡಿದ್ದು ಆ ಪ್ರತಿಯೊಬ್ಬ ಪಾಪಿಯು ಪರಿಶುದ್ಧನಾದ ದೇವರ ಮುಂದೆ **ಒಂದು ದೊಡ್ಡ ಸಾಲವನ್ನು** ಹೊಂದಿದ್ದಾನೆ. ಪಾಪಿಯು ಸಾಯಲೇ ಬೇಕು ಮತ್ತು ನಂತರ ಎಂದೆಂದಿಗೂ ನರಕದಲ್ಲಿ ಆ ಪಾಪದ ಸಾಲವನ್ನು ತೀರಿಸಲೇಬೇಕು. ಪಾಪದ ಸಾಲವು ದೊಡ್ಡದಾಗಿದ್ದು ದೇವರ ಮುಂದೆ ಇದನ್ನು ಇಲ್ಲದಂತೆ ಮಾಡುವದಕ್ಕೆ ಸಾಕಷ್ಟು ಉತ್ತಮ ಕಾರ್ಯಗಳನ್ನು ನೀವು ಉತ್ಪತ್ತಿ ಮಾಡುವದಕ್ಕಾಗುವದಿಲ್ಲ. **ಪಾಪದ ಶಿಕ್ಷೆಯು ಮರಣ ಮತ್ತು ನರಕವಾಗಿದ್ದು** ಅದಕ್ಕೋಸ್ಕರವೇ ಒಳ್ಳೆಯ ಕೆಲಸಗಳನ್ನು ಎಂದಿಗೂ ಇದಕ್ಕೆ ಸಂದಾಯ ಮಾಡುವದಕ್ಕಾಗುವದಿಲ್ಲ!

ಇದನ್ನು ಉದಾಹರಿಸುವದಕ್ಕೆ ಪ್ರಯತ್ನಿಸೋಣ. ನಾನು ಒಬ್ಬ ಸಾಲಕೊಟ್ಟವನಿಗೆ ಒಂದು ದೊಡ್ಡ ಮೊತ್ತದ ಹಣದ ಸಾಲಗಾರನಾಗಿದ್ದೇನೆಂದು ಊಹಿಸಿಕೊಳ್ಳೋಣ, ನಾನು ಅವನ ಬಳಿಗೆ ಹೋಗಿ, "ನಾನು ನಿನಗೆ ದೊಡ್ಡ ಮೊತ್ತದ ಸಾಲಗಾರನಾಗಿದ್ದೇನೆಂದು ನನಗೆ ಗೊತ್ತು ಎಂದು ಹೇಳು – ತ್ತೇನೆ. ಹೇಗೂ, ಪೂರ್ತಿ ಕುಗ್ಗಿ ಹೋಗಿದ್ದೇನೆ, ಹಣದ ರೂಪದಲ್ಲಿ ನನ್ನ ಸಾಲವನ್ನು ತೀರಿಸುವದಕ್ಕಾಗುವದಿಲ್ಲ, ಆದರೆ ನಿನ್ನ ಸಾಲ ತೀರಿಸುವದಕ್ಕೆ ನನ್ನ ಬಳಿ ಒಂದು ಯೋಜನೆ ಇದೆ ಅದೇನೆಂದರೆ, ನಾನು ಪ್ರತಿದಿನ ನಿನ್ನ ಮನೆಯ ಮುಂಬಾಗಿಲಿನ ಮುಂದೆ ಒರೆಸುತ್ತೇನೆ, ನಿನ್ನ ಸಾಲ ತೀರುವ -ವರೆಗೂ ಈ ಕೆಲಸ ಮಾಡುತ್ತೇನೆ ಎಂದು ಹೇಳುತ್ತೇನೆ." ಆಗ ನನ್ನ ಈ ಪ್ರಸ್ತಾಪಕ್ಕೆ ಆ ಸಾಲಕೊಟ್ಟವನ ಪ್ರತಿಕ್ರಿಯೆ ಹೇಗಿರುತ್ತದೆ? ಬಹುಶ: ಅವನು ಕೋಪಗೊಳ್ಳಬಹುದು, ಅಥವಾ ನನ್ನನ್ನು ನೋಡಿ ನಗಬಹುದು, ಹೇಗೂ, ನಿಜವೇನೆಂದರೆ ನನ್ನ ಈ ಯೋಜನೆಯನ್ನು ಅವನು ಒಪ್ಪಿಕೊಳ್ಳುವದಿಲ್ಲ! ಸಾಲ ಕೊಟ್ಟವನು ನನ್ನ ಈ ಯೋಜನೆಯನ್ನು ಯಾಕೆ ಒಪ್ಪಿಕೊಳ್ಳುವದಿಲ್ಲ? ಯಾಕೆಂದರೆ ನನ್ನ ದುರ್ಬಲವಾದ ಒಳ್ಳೆಯ ಕೆಲಸಗಳಿಂದ ದೊಡ್ಡ

ಮೊತ್ತದ ಸಾಲವನ್ನು ತೀರಿಸುವದಕ್ಕೆ ದಾರಿಯಾಗುವದಿಲ್ಲ.

ಇದರಂತೆಯೇ, ಯಾರೊಬ್ಬರೂ ತಮ್ಮ ಪಾಪಗಳ ಸಾಲವನ್ನು ಒಳ್ಳೆಯ ಕೆಲಸಗಳಿಂದ ತೀರಿಸುವದಕ್ಕಾಗುವದಿಲ್ಲ. ಪಾಪಕ್ಕಾಗಿ ಸಂದಾಯವಾಗ – ಬೇಕಾಗಿರುವದು ಹಣವಲ್ಲ, ಒಳ್ಳೆಯ ಕೆಲಸಗಳಲ್ಲ ಆದರೆ ಅದು ಮರಣ ಮಾತ್ರ. ಪಾಪದ ಶಿಕ್ಷೆಯು ಮರಣ ಮತ್ತು ನ್ಯಾಯತೀರ್ಪು. ಇದರ ಪರಣಾಮವಾಗಿ, ಕಾಯಿನ ಮತ್ತು ಹೇಬೆಲರ ಸ್ವಂತ ಕೆಲಸಗಳ ಆಧಾರದ ಮೇಲೆ ದೇವರು ಅವರ ಪಾಪದ ಸಾಲವನ್ನು ರದ್ದು ಮಾಡಲಿಲ್ಲ. ರಕ್ತದ ಯಜ್ಞದ ಮೂಲಕವಾಗಿ ಅವರ ಪಾಪದ ಸಾಲವನ್ನು ರದ್ದು ಮಾಡುವದಕ್ಕೆ ದೇವರು ಯೋಜನೆ ಮಾಡಿದ್ದನು. ಅಪರಾಧಿಯ ಸ್ಥಾನದಲ್ಲಿ ಮುಗ್ಧನೊಬ್ಬನು ಸಾಯಲೇಬೇಕಾಗಿತ್ತು.

**ಪಾಪದ ಕ್ಷಮಾಪಣೆಯು ಮನುಷ್ಯನ ಯೋಜನೆಯ ಮೇಲೆ ಆಧಾರಗೊಂಡಿರುವದಿಲ್ಲ ಆದರೆ ದೇವರ ಯೋಜನೆಯ ಮೇಲೆ ಆಧಾರಗೊಂಡಿರುತ್ತದೆ. ಯಜ್ಞದ (ಬದಲಿಗೆ ಕೊಟ್ಟದ್ದು)** ಮೂಲ ತತ್ವದ ಮೇಲೆ ದೇವರು ಆದಾಮನ ಮಕ್ಕಳಿಗಾಗಿ ರಕ್ಷಣೆಯ ಮತ್ತು ಕ್ಷಮಾಪಣೆಯ ಬಾಗಿಲನ್ನು ತೆರೆದನು. ಹಿಂದಿನ ಸಂತತಿಗಳಲ್ಲಿ, ಪ್ರತಿಯೊಬ್ಬ ಪಾಪಿಯು ಕಳಂಕವಿಲ್ಲದ ಒಂದು ಪ್ರಾಣಿಯನ್ನು ತಂದು ಅದನ್ನು ವಧಿಸಿ ಸಮರ್ಪಿಸಲೇಬೇಕೆಂದು ದೇವರು ವಿಧಿಸಿದ್ದನು. ಒಂದು ಮುಗ್ಧವಾದ ಪ್ರಾಣಿಯು ಪಾಪಿಗೆ ಬದಲಾಗಿ ಸಾಯಬೇಕಾಗಿತ್ತು. ಯಾಕೆಂದರೆ ಅಂತಹ ಯಜ್ಞದ ರಕ್ತವನ್ನು ಸುರಿಸಿ ದೇವರು ಆದಾಮನ ಸಂತತಿಯವರೊಂದಿಗೆ ತಾಳ್ಮೆಯುಳ್ಳವನಾಗಿ ಆ ಸಮಯದಲ್ಲಿ ಅವರ ಪಾಪಗಳನ್ನು **ಮುಚ್ಚಿದನು.** ಆದರೆ ಪ್ರಾಣಿಗಳ ರಕ್ತವು ಮನುಷ್ಯನ ಪಾಪದ ಸಾಲವನ್ನು **ರದ್ದುಪಡಿಸಲಿಕ್ಕಾಗಲಿಲ್ಲ,** ಯಾಕೆಂದರೆ ಒಂದು ಪ್ರಾಣಿಯ ಬೆಲೆಯು ಮನುಷ್ಯನ ಬೆಲೆಗೆ ಸಮಾನವಲ್ಲ. ಅದಕ್ಕಾಗಿಯೇ, ವಾಕ್ಯಗಳು ಹೇಳುವದೇನೆಂದರೆ, ಪ್ರಾಣಿ ಯಜ್ಞಗಳು "ಧರ್ಮಶಾಸ್ತ್ರದಲ್ಲಿ ಮುಂದೆ ಬರಬೇಕಾಗಿದ್ದ ಮೇಲುಗಳ **ಛಾಯೆಯೇ** ಹೊರತು **ಅವುಗಳ ನಿಜ ಸ್ವರೂಪವಲ್ಲವಾದುದರಿಂದ . . . . .ಹೋರಿಗಳ ಮತ್ತು ಹೋತಗಳ ರಕ್ತದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆ – 'ಯಲ್ಲಾ"**(ಇಬ್ರಿಯ–೧೦: ೧, ೪).

ಹಾಗಾಗಿ, ಪ್ರಾಣಿ ಯಜ್ಞಗಳ ಕುರಿತಾಗಿ ನೆನಪಿನಲ್ಲಿಟ್ಟುಕೊಳ್ಳಬೇಕಾದ ಹೆಚ್ಚು ಪ್ರಾಮುಖ್ಯವಾದ ಸಂಗತಿಯೆಂದರೆ ಅದು, ಆದಾಮನ ಸಂತಾನದವರಿ –ಗಾಗಿ ಪಾಪದ ಸಾಲವನ್ನು ಸಂದಾಯಮಾಡುವದಕ್ಕಾಗಿ ಲೋಕಕ್ಕೆ ಬಂದಂತಹ **ರಕ್ಷಕನ ನಿಜವಾದ ನಿದರ್ಶನಗಳಾಗಿವೆ.** ದೇವರು ವಾಗ್ದಾನ ಮಾಡಿದ ಈ ರಕ್ಷಕನು ಸಾಯುವದಕ್ಕಿದ್ದನು, "ಕ್ರಿಸ್ತನು ಸಹ ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ ಪ್ರಾಣ ಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವದಕ್ಕಾಗಿ ಒಂದೇ ಸಾರಿ ಪಾಪ ನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು."(೧ಪೇತ್ರ–೩:೧೮). ಸುವಾರ್ತೆಯಲ್ಲಿ ಬರೆದಿರುವ ಹಾಗೆ: "ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು **ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರೂ ಸಾಕ್ಷಿ ಹೇಳಿದ್ದಾರೆ."**(ಅ.ಕೃತ್ಯ–೧೦:೪೩)

ಹೇಗೂ, ಹಿಂದಿನ ಜನಾಂಗಗಳಲ್ಲಿ ರಕ್ಷಣೆಯ ದೇವರ ಯೋಜನೆಯು ಪ್ರಾಣಿ ಯಜ್ಞಗಳ ಅಪೇಕ್ಷೆಯುಳ್ಳದ್ದಾಗಿತ್ತು. ಆದರೆ ಕಾಯಿನನು ದೇವರ ಯೋಜನೆಯನ್ನು ಅಲಕ್ಷ್ಯಮಾಡಿದನು. ಕಾಯಿನನು ತನ್ನ ಸ್ವಂತ ನಿರ್ಮಾಣದ ಒಂದು ಭಕ್ತಿಯೆಂಬ ಇನ್ನೊಂದು ದಾರಿಯಲ್ಲಿ ಬಂದನು. ಕಾಯಿನನು **ಮೊದಲ ಸುಳ್ಳು ಭಕ್ತಿಯನ್ನು** ಸೃಷ್ಟಿಸಿದನು. ತನ್ನ ಸ್ವಂತ ಕೈಗಳ ದುಡಿಮೆಗಳನ್ನು ಅವನು ದೇವರಿಗಾಗಿ ತಂದನು. ಶಾಪಗ್ರಸ್ತ ಭೂಮಿಯಲ್ಲಿ ತಾನು ವ್ಯವಸಾಯ ಮಾಡಿದ ಮತ್ತು ರಕ್ತ ರಹಿತವಾದದ್ದನ್ನು ದೇವರಿಗೆ ಸಮರ್ಪಿಸಿದನು. ಅಂತಹ ರಕ್ತ ರಹಿತವಾದ ಯಜ್ಞವನ್ನು ದೇವರು ಅಂಗೀಕರಿಸುತ್ತಾನೋ? ಇಲ್ಲ, ದೇವರು ಅದನ್ನು ಅಂಗೀಕರಿಸುವದಿಲ್ಲ.

ಹೇಬೆಲನು, ದೇವರಿಗಾಗಿ ಕಳಂಕವಿಲ್ಲದ ಒಂದು ಕುರಿಮರಿಯನ್ನು ತಂದು ಅದನ್ನು ವಧಿಸಿದನು ಇದರಿಂದ ರಕ್ತವು ಸುರಿಸಲ್ಪಟ್ಟಿತು. ಅನಂತರ ಅವನು ಅದನ್ನು ಯಜ್ಞವಾಗಿ ಸಮರ್ಪಿಸಿದನು. ಆ ಯಜ್ಞದ ದೆಸೆಯಿಂದ ಹೇಬೆಲನು ದೇವರ ಮುಂದೆ ಸ್ಪಷ್ಟವಾದ ಆತ್ಮಸಾಕ್ಷಿಯುಳ್ಳವನಾಗಿದ್ದನು. ಸಾಯುವದಕ್ಕೆ ತಾನು ಯೋಗ್ಯನಾಗಿದ್ದೇನೆಂದು ಅವನು ತನ್ನಲ್ಲಿ ತಿಳಿದುಕೊಂಡಿದ್ದನು, ಆದರೆ **ಅವನ ಸ್ಥಾನದಲ್ಲಿ ಮುಗ್ಧವಾದ ಕುರಿಮರಿಯು ಸತ್ತಿತ್ತು.** ಹೀಗೆ, ಪಾಪಿಗಳ ಪಾಪದ ಶಿಕ್ಷೆಯನ್ನು ಹೊತ್ತುಕೊಂಡು ಅವರ ಸ್ಥಾನದಲ್ಲಿ ಸಾಯುವದಕ್ಕೆ ಲೋಕಕ್ಕೆ ಬರಲಿಕ್ಕಿದ್ದ ವಿಮೋಚಕನಲ್ಲಿ ಹೇಬೆಲನು ತನ್ನ ನಂಬಿಕೆಯನ್ನು ಪರೀಕ್ಷಿಸಿಕೊಂಡನು.

ಒಂದು ಪ್ರಾಮುಖ್ಯವಾದ ಪ್ರಶ್ನೆಯನ್ನು ಕೇಳುವದರಿಂದ ಈದಿನದ ಕತೆಯನ್ನು ಸಂಕ್ಷಿಪ್ತಗೊಳಿಸುವದಕ್ಕೆ ನಾವು ಇಷ್ಟಪಡುತ್ತೇವೆ. ದೇವರು ಯಾಕೆ ಕಾಯಿನನ ಯಜ್ಞವನ್ನು ಒಪ್ಪಿಕೊಳ್ಳಲಿಲ್ಲ? ಹೇಬೆಲನಿಗಿಂತಲೂ ಕಾಯಿನನು ದೊಡ್ಡ ಪಾಪಿಯಾಗಿದ್ದನೋ? ಇದು ಕಾರಣವಲ್ಲ. ಅವರಿಬ್ಬರೂ ಪಾಪಿಗಳೇ. ಇಬ್ಬರೂ ದೇವರಿಗೆ ಯಜ್ಞಗಳನ್ನು ಸಮರ್ಪಿಸಿದರು. ಕಾಯಿನನು ಒಬ್ಬ ಧಾರ್ಮಿಕ ವ್ಯಕ್ತಿಯಾಗಿದ್ದನು. ಭೂಮಿಯ ಮೇಲೆ, ಬಹುಶ: ನಾವು ಹೇಳುವದಾದರೆ ಹೇಬೆಲನ ಯಜ್ಞಕ್ಕಿಂತಲೂ ಕಾಯಿನನ ಯಜ್ಞವೇ ಹೆಚ್ಚು ಗೌರವವುಳ್ಳದ್ದಾಗಿತ್ತು. ತರಕಾರಿಗಳು ಮತ್ತು ಹಣ್ಣುಗಳು ತುಂಬಾ ಸುಂದರವಾಗಿದ್ದವು, ಆದರೆ ವಧಿಸಲ್ಪಟ್ಟ ಕುರಿಮರಿ ಮತ್ತು ಅದರ ರಕ್ತ ನೋಡುವದಕ್ಕೆ ಮನೋಹರವಾಗಿರುವದಿಲ್ಲ! ಹೇಗೂ, ಪಾಪ ಎನ್ನುವದು ದೇವರಿಗೆ ಒಂದು ಅಪರಾಧದ ವಿಷಯವಾಗಿದ್ದು ದೇವರು ಸ್ಥಾಪಿಸಿದ್ದ ಕ್ಷಮಾಪಣೆಯ ದಾರಿಯು ಹೇಳಲ್ಪಟ್ಟಿತ್ತು: **"ರಕ್ತಧಾರೆಯಿಲ್ಲದೆ ಪಾಪ ಪರಿಹಾರವಿಲ್ಲ!"** ಹೀಗೆ, ದೇವರು ಕಾಯಿನನನ್ನೂ ಅವನ ಯಜ್ಞವನ್ನು ತಿರಸ್ಕರಿಸಿದನು, ಯಾಕೆಂದರೆ ಕಾಯಿನನು ರಕ್ಷಣೆಯೆಂಬ ದೇವರ ನೀತಿಯ ದಾರಿಯನ್ನು ಗೌರವಿಸಲಿಲ್ಲ.

ದೇವರು ವಿಧಿಸಿರುವ ನೀತಿಯ ದಾರಿಯಿಂದ ಬರದ ಹೊರತು ಯಾರೊಬ್ಬರೂ ದೇವರ ಬಳಿಗೆ ಬರುವದಕ್ಕಾಗುವದಿಲ್ಲ! **ದೇವರ ದಾರಿಯು ಸಂಪೂರ್ಣವಾದದು ಮತ್ತು ಸಮಂಜಸವಾದದು** ಆಗಿದೆ! ಇದು ಗಣಿತಶಾಸ್ತ್ರವಿದ್ದಂತೆ. ಎರಡಕ್ಕೆ ಎರಡು ಕೂಡಿಸಿದರೆ ಎಷ್ಟಾಗುತ್ತದೆ? ಎಂದು ಶಾಲೆಯಲ್ಲಿ ಟೀಚರ್ ವಿದ್ಯಾರ್ಥಿಗೆ ಕೇಳಿದರೆ, ಅದಕ್ಕಿರುವ ಒಂದೇ ಸರಿಯಾದ ಉತ್ತರವೆಂದರೆ ಎರಡಕ್ಕೆ ಎರಡು ಕೂಡಿಸಿದರೆ ನಾಲ್ಕಾಗುತ್ತದೆ. ವಿದ್ಯಾರ್ಥಿ ಮೂರು ಎಂದು ಉತ್ತರಿಸಿದರೆ ಅದು ತಪ್ಪಾಗುತ್ತದೆ. ಒಬ್ಬನು ಐದು ಎಂದರೂ ತಪ್ಪಾಗುತ್ತದೆ. ನಾಲ್ಕೂವರೆ ಎಂದು ಹೇಳಿದ ವ್ಯಕ್ತಿಯ

ಉತ್ತರವೂ ಸಹ ತಪ್ಪಾಗುತ್ತದೆ. ಎರಡು ಮತ್ತು ಎರಡು ನಾಲ್ಕಕ್ಕೆ ಮಾತ್ರ ಸಮವಾದುದಾಗಿದೆ.! ದೇವರು ಸ್ಥಾಪಿಸಿದ ರಕ್ಷಣೆಯ ನೀತಿಯ ದಾರಿಯೊಂದಿಗೆ ಇದೇ ರೀತಿಯಾಗಿರುತ್ತದೆ. ದೇವರೊಂದಿಗೆ ಸಂಧಾನವಾಗುವದಕ್ಕೆ ಪಾಪಿಗಳಿಗೆ ಇರುವದು ಒಬ್ಬನೇ ದೇವರು ಮತ್ತು ಒಂದೇ ದಾರಿ! ಆತನೇ ಪರಿಶುದ್ಧನಾದವನು! ಇದು **ನಿರ್ಬಂಧವಿಲ್ಲದ ಸಂಪೂರ್ಣವಾದ ಯಜ್ಞದ ರೀತಿಯಾಗಿದೆ.**

ಈದಿನ ಕೇಳಿಸಿಕೊಳ್ಳುತ್ತಿರುವ ನೀವು, **ನಿಮ್ಮ ಪಾಪದ ಸಾಲವನ್ನು ಶಾಶ್ವತವಾಗಿ ರದ್ದುಪಡಿಸುವದಕ್ಕೆ** ದೇವರು ಒದಗಿಸಿದ ಪರಿಶುದ್ಧ ಯಜ್ಞಕ್ಕೆ ಸಂಬಂಧಪಟ್ಟಂತೆ ದೇವರ ವಾಕ್ಯವು ಏನು ಹೇಳಿದೆಯೋ ಅದು ನಿಮಗೆ ಗೊತ್ತಾ? ನೀವು ನಿಮ್ಮ ಪಾಪಗಳಿಂದ **ಕ್ಷಮಿಸಲ್ಪಟ್ಟವರಾಗಿ** ದೇವರ ಮುಂದೆ **ಶುದ್ಧ ಹೃದಯವನ್ನು** ಹೊಂದಿಕೊಳ್ಳುವದಕ್ಕಾಗಿ ದೇವರು ತಾನೇ ಒಬ್ಬ ಸರ್ವಶಕ್ತನಾದ ರಕ್ಷಕನನ್ನು ಭೂಲೋಕಕ್ಕೆ ಕಳುಹಿಸಿಕೊಟ್ಟಿರುವದು ನಿಮಗೆ ಗೊತ್ತಾ? ಮುಂಬರುವ ಪಾಠಗಳಲ್ಲಿ, ಈ ಅದ್ಭುತನಾದ ರಕ್ಷಕನ ಕುರಿತಾಗಿ ನಾವು ಹೆಚ್ಚಾಗಿ ಕಲಿತುಕೊಳ್ಳಲಿದ್ದೇವೆ. ಆತನಿಗೆ ಸಂಬಂಧ – ಪಟ್ಟಂತೆ ಪರಿಶುದ್ಧ ವಾಕ್ಯ ಹೀಗೆ ಹೇಳುತ್ತದೆ: **"ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ"** (ಅ.ಕೃತ್ಯ–೪: ೧೨)

ಸ್ನೇಹಿತರೇ, ಈದಿನ ಇಲ್ಲಿಗೆ ನಾವು ನಿಲ್ಲಿಸುತ್ತೇವೆ. ದೇವರ ಚಿತ್ತವಿರುವದಾದರೆ, ಮುಂದಿನ ಸಲ ಕಾಯಿನ ಮತ್ತು ಹೇಬೆಲರ ಕುರಿತಾದ ನಮ್ಮ ಅಧ್ಯಯನವನ್ನು ಪೂರ್ಣಗೊಳಿಸುತ್ತೇವೆ.

ಆತನ ಮೂಲ ನಿಯಮವು ಹೇಳುವದನ್ನು ನೀವು ಅವಲೋಕಿಸುವದಕ್ಕೆ ಸಮಯವನ್ನು ತೆಗೆದುಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ರಕ್ತಧಾರೆಯಿಲ್ಲದೆ ಪಾಪ ಪರಿಹಾರವಿಲ್ಲ."** (ಇಬ್ರಿಯ–೯: ೨೨)

ಪಾಠ ೨೧

# ಅಬ್ರಹಾಮ

## ಸೋದೋಮಿನ ನಾಶ ಮತ್ತು ಇಸಾಕನ ಜನನ

## ಆದಿಕಾಂಡ ೧೮-೨೧

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ -ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು -ವದಕ್ಕೆ ಇಚ್ಚಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ-ರಾಗಿದ್ದೇವೆ.

ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಒಂದು ಹೊಸ ದೇಶದ ತಂದೆಯನ್ನಾಗಿ ಅಬ್ರಹಾಮನನ್ನು ಮಾಡುವದಕ್ಕೆ ದೇವರು ಹೇಗೆ ವಾಗ್ದಾನ ಮಾಡಿದನೆಂಬುದನ್ನು ನಾವು ನೋಡುತ್ತೇವೆ, ಈ ದೇಶದೊಳಗಿಂದಲೇ ಲೋಕದ ರಕ್ಷಕನೂ ಮತ್ತು ಪ್ರವಾದಿಗಳ ದೇವರೂ ಆಗಿದ್ದವನು ಬರಬೇಕಾಗಿದ್ದದ್ದು. ಹೇಗೂ, ಈ ಕಥೆಯಲ್ಲಿ ಈ ಅಂಶದವರೆಗೆ ಅಬ್ರಹಾಮನ ಹೆಂಡತಿಯಾಗಿದ್ದ ಸಾರಳು ಒಬ್ಬ ಮಗನನ್ನೂ ಹಡೆದಿರಲಿಲ್ಲ ಮತ್ತು ಇವರಿಬ್ಬರೂ ತುಂಬಾ ವಯಸ್ಸಾದವರಾಗಿದ್ದರು.

ಈದಿನ ನಮಗೆ ಇನ್ನೊಂದು ಆಶ್ಚರ್ಯಕರವಾದ ಕಥೆಯಿದೆ. ಅಬ್ರಹಾಮನನ್ನು ಭೇಟಿಮಾಡಲು ಬಂದಂತಹ ಮೂರು ಜನರನ್ನು ನಾವು ಕಥೆಯ ಪ್ರಾರಂಭದಲ್ಲಿ ನೋಡುತ್ತೇವೆ. ಹೇಗೂ ಈ ಮೂರು ವ್ಯಕ್ತಿಗಳು ಕೇವಲ ಮಾನವರಿಗಿಂತಲೂ ಹೆಚ್ಚಿನವರಾಗಿದ್ದರು. ಅವರಲ್ಲಿ ಇಬ್ಬರು ದೇವದೂತರುಗಳು ಮತ್ತು ಇನ್ನೊಬ್ಬರು **ಸ್ವತ: ಕರ್ತನಾದ ದೇವರೇ ಆಗಿದ್ದನು!** ದೇವರು ಅಬ್ರಹಾಮನಿಗೆ ಮನು -ಷ್ಯನ ರೂಪದಲ್ಲಿ ಕಾಣಿಸಿಕೊಳ್ಳುವದಕ್ಕಾಗುವದಿಲ್ಲವೆಂದು ಕೆಲವರು ಹೇಳುತ್ತಾರೆ, ಆದರೆ ದೇವರು ದೊಡ್ಡವನೂ ಮತ್ತು ಆತನಿಗೆ ಕಷ್ಟಕರವಾದುದು ಯಾವುದೂ ಇಲ್ಲವೆಂಬುದನ್ನು ಅವರು ಮರೆತುಬಿಟ್ಟಿದ್ದಾರೆ. ಅನೀತಿಯನ್ನು ಹೊರತುಪಡಿಸಿ ದೇವರು ಯಾವುದನ್ನಾದರೂ ಮಾಡುತ್ತಾನೆ.

ಈದಿನ ನಾವು ತೋರಾದ ನಾಲ್ಕು ಅಧ್ಯಾಯಗಳಿಂದ ಓದಿಕೊಳ್ಳಲಿದ್ದೇವೆ. ಆದಿಕಾಂಡ ಪುಸ್ತಕದ ಹದಿನೆಂಟನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**"ಅಬ್ರಹಾಮನು** ಮಧ್ಯಾಹ್ನದಲ್ಲಿ ಮಮ್ರೇತೋಪಿನ ತನ್ನ ಗುಡಾರದ ಬಾಗಲಲ್ಲಿ ಕೂತಿರುವಾಗ **ಯೆಹೋವನು ಅವನಿಗೆ ದರ್ಶನ ಕೊಟ್ಟನು.** ಹೇಗಂದರೆ ಅಬ್ರಹಾಮನು ಕಣ್ಣೆತ್ತಿ ನೋಡಲು ಅವನ ಎದುರಿನಲ್ಲಿ ಯಾರೋ ಮೂರು ಮಂದಿ ಪುರುಷರು ನಿಂತಿದ್ದರು. ಕೂಡಲೆ ಅವರನ್ನು ಎದುರುಗೊಳ್ಳುವದಕ್ಕೆ ಅವನು ಗುಡಾರದ ಬಾಗಲಿನಿಂದ ಓಡಿಹೋಗಿ ಬೊಗ್ಗಿ ನಮಸ್ಕರಿಸಿ ಸ್ವಾಮೀ ದಯವಿರಲಿ; ದಾಸನ ಬಳಿಗೆ ದಯಮಾಡದೆ ಮುಂದೆ ಹೋಗಬೇಡಿರಿ. ನೀವು ದಾಸನಿರುವ ಸ್ಥಳದ ಹತ್ತಿರ ಹಾದುಹೋಗುತ್ತೀರಲ್ಲಾ ನೀರು ತರಿಸಿ ಕೊಡುತ್ತೇನೆ; ನಿಮ್ಮ ಕಾಲುಗಳನ್ನು ತೊಳೆದುಕೊಂಡು ಮರದ ನೆಳಿನಲ್ಲಿ ವಿಶ್ರಮಿಸಿಕೊಳ್ಳಿರಿ. ಸ್ವಲ್ಪ ಆಹಾರ ತರುತ್ತೇನೆ ಊಟವಾದ ಮೇಲೆ ನೀವು ಮುಂದಕ್ಕೆ ಪ್ರಯಾಣ ಬೆಳಿಸಬಹುದು ಎನ್ನಲು ಅವರು ನೀನು ಹೇಳಿದಂತೆ ಮಾಡಬಹುದು ಅಂದರು." (೧೮:೧-೫)

"ಆಗ ಅಬ್ರಹಾಮನು ಗುಡಾರದಲ್ಲಿದ್ದ ಸಾರಳ ಬಳಿಗೆ ಓಡಿಹೋಗಿ ಆಕೆಗೆ ಹಸನಾದ ಮೂರು ಸೇರು ಹಿಟ್ಟನ್ನು ನಾದಿ ಬೇಗ ರೊಟ್ಟಿ -ಗಳನ್ನು ಮಾಡು ಎಂದು ಹೇಳಿದನು. ಆಮೇಲೆ ಅವನು ದನಗಳ ಕಡೆಗೆ ಓಡಿಹೋಗಿ ಕೊಬ್ಬಿದ ಎಳೇ ಕರುವನ್ನು ತೆಗೆದು ಆಳಿನ ಕೈಗೆ ಕೊಟ್ಟನು. ಆಳು ಬೇಗನೇ ಅಡಿಗೆ ಮಾಡಿದನು. ತರುವಾಯ ಅಬ್ರಹಾಮನು ಹಾಲುಮೊಸರನ್ನೂ ಅಟ್ಟ ಮಾಂಸವನ್ನೂ ತೆಗೆದುಕೊಂಡು ಬಂದು ಆ ಮನುಷ್ಯರಿಗೆ ಬಡಿಸಿದನು. ಅವರು ಮರದ ಕೆಳಗೆ ಊಟಮಾಡುವವರೆಗೂ ಅವನು ಹತ್ತಿರ ನಿಂತು - -ಕೊಂಡು ಉಪಚಾರ ಮಾಡಿದನು. ಬಳಿಕ ಅವರು ಅವನನ್ನು ನಿನ್ನ ಪತ್ನಿಯಾದ ಸಾರಳು ಎಲ್ಲಿದ್ದಾಳೆ ಎಂದು ಕೇಳಲು ಅವನು ಅಗೋ ಗುಡಾರದಲ್ಲಿದ್ದಾಳೆ ಅಂದನು. ಅದಕ್ಕಾತನು **ಬರುವ ವರುಷದ ಇದೇ ಕಾಲದಲ್ಲಿ ನಾನು ತಪ್ಪದೆ ತಿರಿಗಿ ನಿನ್ನ ಬಳಿಗೆ ಬರುತ್ತೇನೆ; ಬಂದಾಗ ನಿನ್ನ ಪತ್ನಿಯಾದ ಸಾರಳಿಗೆ ಮಗನಿರುವನು ಅಂದನು.** ಆ ಮಾತು ಹಿಂದೆ ಗುಡಾರದ ಬಾಗಲಲ್ಲಿ ನಿಂತಿದ್ದ ಸಾರಳ ಕಿವಿಗೆ

ಬಿತ್ತು. ಅಬ್ರಹಾಮನೂ ಮತ್ತು ಸಾರಳೂ ಬಹು ವೃದ್ಧರಾಗಿದ್ದರು; ಸಾರಳಿಗೆ ಮುಟ್ಟು ನಿಂತುಹೋಗಿತ್ತು. ಹೀಗಿರಲಾಗಿ ಆಕೆ ನನ್ನಂಥ ಮುದುಕಿಗೆ ಭೋಗವಾದೀತೇ? ನನ್ನ ಯಜಮಾನನೂ ಮುದುಕನಲ್ಲವೇ ಎಂದು ತನ್ನೊಳಗೆ ನಕ್ಕಳು. ಯೆಹೋವನು ಅಬ್ರಹಾಮನಿಗೆ ಸಾರಳು ನಕ್ಕು ಮುದುಕಿಯಾದ ನಾನು ಮಗುವನ್ನು ಹೆರುವದಾದೀತೇ ಎಂದು ಹೇಳಿದ್ದೇನು? ಯೆಹೋವನಿಗೆ ಅಸಾಧ್ಯವಾದದ್ದುಂಟೋ? ನಾನು ಹೇಳಿದಂತೆಯೇ ಬರುವ ವರುಷದ ಇದೇ ಕಾಲದಲ್ಲಿ ನಾನು ನಿನ್ನ ಬಳಿಗೆ ಬಂದಾಗ ಸಾರಳಿಗೆ ಮಗನಿರುವನು ಎಂದು ಹೇಳಿದನು. ಆಗ ಸಾರಳು ಭಯಪಟ್ಟು ನಾನು ನಗಲಿಲ್ಲ ಎಂದು ಬೊಂಕಲು ಆತನು ಹಾಗನ್ನಬೇಡಮ್ಮಾ ನೀನು ನಕ್ಕದ್ದುಂಟು ಅಂದನು." (೧೮:೬-೧೫).

"ಇದಲ್ಲದೆ ಯೆಹೋವನು – **ಸೊದೋಮ್ ಗೊಮೋರಗಳ ವಿಷಯವಾಗಿ ಎಷ್ಟೋ ದೊಡ್ಡ ಮೊರೆ ನನಗೆ ಮುಟ್ಟಿತು;** ಆ ಊರಿನ –ವರ ಮೇಲೆ ಹೊರಿಸಿರುವ ಪಾಪವು ಎಷ್ಟೋ ಘೋರವಾದದ್ದು; ನಾನು ಇಳಿದುಹೋಗಿ ನನಗೆ ಮುಟ್ಟಿದ ಮೊರೆಯಂತೆಯೇ ಅವರು ಮಾಡಿದರೋ ಇಲ್ಲವೋ ಎಂದು ನೋಡಿ ತಿಳುಕೊಳ್ಳುತ್ತೇನೆ ಅಂದನು. ಆ ಮನುಷ್ಯರು (ಇಬ್ಬರು ದೂತರು) ಅಲ್ಲಿಂದ ಸೊದೋಮಿನ ಕಡೆಗೆ ಹೋದರು; **ಆದರೆ ಅಬ್ರಹಾಮನು ಯೆಹೋವನ ಎದುರಾಗಿ ನಿಂತನು."**(೧೮:೨೦-೨೨)

"ಆಗ ಅಬ್ರಹಾಮನು ಹತ್ತಿರಕ್ಕೆ ಬಂದು – ನೀನು ದುಷ್ಟರ ಸಂಗಡ ನೀತಿವಂತರನ್ನೂ ನಾಶಮಾಡುವಿಯಾ? ಒಂದು ವೇಳೆ ಆ ಊರೊಳಗೆ ಐವತ್ತು ಮಂದಿ ನೀತಿವಂತರಿದ್ದಾರು; ಅದರಲ್ಲಿ ಐವತ್ತು ಮಂದಿ ನೀತಿವಂತರಿದ್ದರೂ ಆ ಸ್ಥಳವನ್ನು ಉಳಿಸದೆ ನಾಶ –ಮಾಡುವಿಯಾ? ಆ ರೀತಿಯಾಗಿ ದುಷ್ಟರಿಗೂ ಶಿಷ್ಟರಿಗೂ ಭೇದಮಾಡದೆ ದುಷ್ಟರ ಸಂಗಡ ನೀತಿವಂತರನ್ನೂ ಸಂಹರಿಸುವದು ನಿನ್ನಿಂದ ಎಂದಿಗೂ ಆಗಬಾರದು; **ಸರ್ವಲೋಕಕ್ಕೆ ನ್ಯಾಯತೀರಿಸುವವನು ನ್ಯಾಯವನ್ನೇ ನಡಿಸುವನಲ್ಲವೇ."** (೧೮:೨೩-೨೫)

"ಯೆಹೋವನು – ಸೊದೋಮಿನಲ್ಲಿ **ಐವತ್ತು** ಮಂದಿ ನೀತಿವಂತರು ನನಗೆ ಸಿಕ್ಕಿದರೆ ಅವರ ನಿಮಿತ್ತ ಊರನ್ನೆಲ್ಲಾ ಉಳಿಸುವೆನು ಅಂದನು. ಅದಕ್ಕೆ ಅಬ್ರಹಾಮನು ಇಗೋ ಮಣ್ಣು ಬೂದಿಯೂ ಆಗಿರುವ ನಾನು ಸ್ವಾಮಿಯ ಸಂಗಡ ವಾದಿಸುವದಕ್ಕೆ ಧೈರ್ಯ – –ಗೊಂಡಿದ್ದೇನೆ; ಒಂದು ವೇಳೆ ಐವತ್ತು ಮಂದಿ ನೀತಿವಂತರಿಗೆ ಐದು ಮಂದಿ ಕಡಿಮೆಯಾಗಿದ್ದಾರು; ಐದು ಮಂದಿ ಕಡಿಮೆ – –ಯಾದದ್ದಕ್ಕೆ ಪಟ್ಟಣವನ್ನೆಲ್ಲಾ ನಾಶಮಾಡುವಿಯಾ ಎಂದು ಹೇಳಲು ಯೆಹೋವನು ಅಲ್ಲಿ **ನಾಲ್ವತ್ತೈದು** ಮಂದಿ ಸಿಕ್ಕಿದರೆ ಅದನ್ನು ನಾಶ ಮಾಡುವದಿಲ್ಲ ಅಂದನು." (೧೮:೨೬-೨೮)

"ಅಬ್ರಹಾಮನು ಆತನ ಸಂಗಡ ಇನ್ನೂ ಮಾತಾಡಿ ಒಂದು ವೇಳೆ ಅಲ್ಲಿ ನಾಲ್ವತ್ತು ಮಂದಿ ಸಿಕ್ಕಾರು ಎನ್ನಲು ಆತನು **ನಾಲ್ವತ್ತು** ಮಂದಿ ಸಿಕ್ಕಿದರೆ ಆ ಪಟ್ಟಣವನ್ನು ನಾಶ ಮಾಡುವದಿಲ್ಲ ಅಂದನು. ಅಬ್ರಹಾಮನು ಸ್ವಾಮೀ ಕೋಪಮಾಡಬಾರದು; ಇನ್ನೂ ಮಾತಾಡುತ್ತೇನೆ; ಒಂದು ವೇಳೆ ಮೂವತ್ತು ಮಂದಿ ಅಲ್ಲಿ ಸಿಕ್ಕಾರು ಎನ್ನಲು ಆತನು ಅಲ್ಲಿ **ಮೂವತ್ತು** ಮಂದಿ ಸಿಕ್ಕಿದರೆ ಅದನ್ನು ನಾಶಮಾಡುವದಿಲ್ಲ ಅಂದನು. ಅವನು ಇಗೋ ಸ್ವಾಮಿಯ ಸಂಗಡ ಮಾತಾಡುವದಕ್ಕೆ ಧೈರ್ಯಗೊಂಡಿದ್ದೇನೆ; ಒಂದು ವೇಳೆ ಇಪ್ಪತ್ತು ಮಂದಿ ಅಲ್ಲಿ ಸಿಕ್ಕಾರು ಎನ್ನಲು ಆತನು **ಇಪ್ಪತ್ತು** ಮಂದಿಯಿದ್ದರೆ ಅವರ ನಿಮಿತ್ತ ಅದನ್ನು ಉಳಿಸುವೆನು ನಾಶಮಾಡುವದಿಲ್ಲ ಅಂದನು. ಅಬ್ರಹಾಮನು ಸ್ವಾಮಿ ನಿನಗೆ ಸಿಟ್ಟಾಗಬಾರದು; ಇನ್ನು ಒಂದೇ ಸಾರಿ ಮಾತಾಡುತ್ತೇನೆ; ಒಂದು ವೇಳೆ ಹತ್ತು ಮಂದಿ ಸಿಕ್ಕಾರು ಎನ್ನಲು ಆತನು **ಹತ್ತು** ಮಂದಿಯ ನಿಮಿತ್ತವೂ ಅದನ್ನು ಉಳಿಸುವೆನು, ನಾಶಮಾಡುವದಿಲ್ಲ ಅಂದನು. ಯೆಹೋವನು ಅಬ್ರಹಾಮನ ಸಂಗಡ ಮಾತಾಡುವದನ್ನು ಮುಗಿಸಿ ಹೊರಟುಹೋದನು; ಅಬ್ರಹಾಮನು ತನ್ನ ಸ್ಥಳಕ್ಕೆ ಹಿಂದಿರುಗಿ ಹೋದನು." (೧೮:೨೯-೩೩)

"ಆ ದೂತರಿಬ್ಬರು ಸಾಯಂಕಾಲದಲ್ಲಿ **ಸೊದೋಮಿಗೆ** ಬಂದಾಗ ಲೋಟನು ಸೊದೋಮಿನ ಊರುಬಾಗಲಲ್ಲಿ ಕೂತುಕೊಂಡಿದ್ದನು, ಅವನು ಅವರನ್ನು ಕಂಡಾಗ ಎದ್ದು ಎದುರುಗೊಂಡು ಬೊಗ್ಗಿ ನಮಸ್ಕರಿಸಿ ಸ್ವಾಮಿಗಳೇ ನಿಮ್ಮ ದಾಸನ ಮನೆಗೆ ಬಂದು ಇಳು ಕೊಂಡು ಕಾಲುಗಳನ್ನು ತೊಳಕೊಳ್ಳಿರಿ; ಬೆಳಿಗ್ಗೆ ನಿಮ್ಮ ಮಾರ್ಗ ಹಿಡಿದು ಹೋಗಬಹುದು ಅಂದನು. ಅವರು ಹಾಗಲ್ಲ ಬೀದಿಯಲ್ಲೇ ರಾತ್ರಿ ಕಳೆಯುತ್ತೇವೆ ಅಂದರು." (೧೯:೧-೨)

"ಅವನು ಅವರನ್ನು ಬಹಳ ಬಲವಂತ ಮಾಡಿದ್ದರಿಂದ ಅವರು ಅವನ ಬಳಿಯಲ್ಲಿ ಇಳುಕೊಳ್ಳುವದಕ್ಕೆ ಒಪ್ಪಿದರು. ಅವರು ಮನೆಗೆ ಬಂದಾಗ ಅವನು ಹುಳಿಯಿಲ್ಲದ ರೊಟ್ಟಿಗಳನ್ನು ಸುಡಿಸಿ ಔತಣವನ್ನು ಮಾಡಿಸಲು ಅವರು ಊಟಮಾಡಿದರು. ಅವರು ಮಲಗುವ –ದಕ್ಕಿಂತ ಮುಂಚೆ ಹುಡುಗರು ಮುದುಕರು ಸಹಿತವಾಗಿ ಸೊದೋಮಿನ ಪಟ್ಟಣದವರೆಲ್ಲರೂ ಒಗ್ಗಟ್ಟಾಗಿ ಮನೆಯನ್ನು ಸುತ್ತಿಕೊಂಡು ಲೋಟನಿಗೆ – ಈ ರಾತ್ರಿ ನಿನ್ನ ಬಳಿಗೆ ಬಂದ ಮನುಷ್ಯರು ಎಲ್ಲಿ? ಅವರನ್ನು ಹೊರಕ್ಕೆ ತೆಗೆದುಕೊಂಡು ಬಾ ಅವರೊಡನೆ ನಮಗೆ ಸಂಗಮವಾಗಬೇಕೆಂದು ಕೂಗಿ ಹೇಳಿದರು." (೧೯:೩-೫)

ಸೊದೋಮಿನ ಅನೇಕ ಪುರುಷರು ಸಲಿಂಗಕಾಮಿಗಳಾಗಿದ್ದು ದುರ್ಮಾರ್ಗತನ ಎಂದು ದೇವರು ಕರೆಯುವ ಪಾಪದಲ್ಲಿ ತಮ್ಮನ್ನು ಪ್ರಕಟಪಡಿಸಿಕೊಂಡಿದ್ದರು. (ರೋಮಾ-೧:೨೬,೨೭ ನ್ನು ನೋಡಿರಿ).
ಲೋಟನು ಅವರ ಬಳಿಗೆ ಹೊರಕ್ಕೆ ಬಂದು ತನ್ನ ಹಿಂದೆ ಕದಹಾಕಿ –"ಅಣ್ಣಂದಿರೇ **ಈ ಪಾತಕವನ್ನು ಮಾಡಬೇಡಿರಿ.** ಕೇಳಿರಿ ನನಗೆ

ಪುರುಷನ್ನರಿಯದ ಇಬ್ಬರು  ಹೆಣ್ಣು ಮಕ್ಕಳು ಇದ್ದಾರೆ; ಅವರನ್ನಾದರೂ ನಿಮಗೆ ತಂದು ಒಪ್ಪಿಸೇನು;  ಮನಸ್ಸು ಬಂದಂತೆ  ಮಾಡ
–ಬಹುದು; ಅದರೆ ಆ ಮನುಷ್ಯರು ನನ್ನ ಆಶ್ರಯಕ್ಕೆ ಬಂದವರು ಅವರಿಗೆ ಏನೂ ಮಾಡಕೂಡದು ಎಂದು ಹೇಳಲು ಅವರು ದಾರಿ
–ಬಿಡು ಎಂದು ಹೇಳಿ – ಇವನು ಯಾರೋ ಒಬ್ಬ ಪರದೇಶಿಯಾಗಿ ಬಂದು ಈಗ ನ್ಯಾಯ ಹೇಳುವವನಾಗಬೇಕೋ; ಆ ಮನುಷ್ಯ
–ರಿಗೆ ಕೇಡು ಮಾಡುವದಕ್ಕಿಂತ ಹೆಚ್ಚಾಗಿ ನಿನಗೇ ಕೇಡು ಮಾಡುತ್ತೇವೆ" ಎಂದು ಹೇಳಿ ಲೋಟನ ಮೇಲೆ ಬಿದ್ದು ಬಹಳವಾಗಿ ಇರು
–ಕಿಸಿ ಕದವನ್ನು ಒಡೆದು ಬಿಡಬೇಕೆಂದಿದ್ದರು.  ಆದರೆ ಒಳಗಿದ್ದ ಆ ಮನುಷ್ಯರು ಲೋಟನನ್ನು ತಮ್ಮ ಕಡೆಗೆ ಮನೆಯೊಳಗೆ ಸೇರಿಸಿ
ಕದಮುಚ್ಚಿದರು.  ಇದಲ್ಲದೆ ಅವರು ಮನೆಯ ಹೊರಗಿದ್ದ ಮನುಷ್ಯರಿಗೆ ಚಿಕ್ಕವರಿಗೂ ದೊಡ್ಡವರಿಗೂ ಕೂಡ ಕಣ್ಣು ಮೊಬ್ಬಾಗುವಂತೆ
ಮಾಡಿದ್ದರಿಂದ ಇವರು ಬಾಗಿಲು ಯಾವದೆಂದು ತಿಳಿಯದೆ ಬೇಸರಗೊಂಡರು. (೧೯:೬–೧೧)

ಆಗ ಆ ದೂತರು ಲೋಟನಿಗೆ "ಇಲ್ಲಿ ನಿನಗೆ ಇನ್ನಾರಿದ್ದಾರೆ? ಅಳಿಯಂದಿರನ್ನೂ ಗಂಡು ಹೆಣ್ಣು ಮಕ್ಕಳನ್ನೂ ಪಟ್ಟಣದಲ್ಲಿ ನಿನಗಿರುವ
ಬೇರೆ ಎಲ್ಲರನೂ ಊರಹೊರಕ್ಕೆ ಕರೆದುಕೊಂಡು ಬಾ.  ನಾವು ಈ ಸ್ಥಳವನ್ನು ನಾಮಾಡುವದಕ್ಕೆ ಬಂದವರು.  **ಇಲ್ಲಿಯವರ ವಿಷಯ**
**–ವಾಗಿ ಬಲು ದೊಡ್ಡ ಮೊರೆಯು ಯೆಹೋವನಿಗೆ ಮುಟ್ಟಿದ್ದರಿಂದ ಇವರನ್ನು ನಾಶಮಾಡುವದಕ್ಕಾಗಿ ಆತನು ನಮ್ಮನ್ನು ಕಳಿಹಿಸಿದ್ದಾನೆ**
ಎಂದು ಹೇಳಿದರು."  ಆಗ ಲೋಟನು ಹೊರಕ್ಕೆ ಹೋಗಿ ತನ್ನ ಹೆಣ್ಣು ಮಕ್ಕಳನ್ನು ಗೊತ್ತುಮಾಡಿಕೊಂಡಿದ್ದ ಅಳಿಯಂದಿರಿಗೆ ಈ
ಸಂಗತಿಯನ್ನು ತಿಳಿಸಿ "ನೀವೆದ್ದು ಈ ಸ್ಥಳವನ್ನು ಬಿಟ್ಟು ಹೋಗಿರಿ, ಯೆಹೋವನು ಈ ಊರನ್ನು ನಾಶಮಾಡುತ್ತಾನೆ ಎಂದು ಹೇಳಿ
–ದನು."  ಆದರೆ ಅವನು ಅವರಿಗೆ ಗೇಲಿಮಾಡುವವನಾಗಿ ಕಾನಿಸಿದನು.  ಹೊತ್ತು ಮೂಡುವದಕ್ಕೆ ಮುಂಚೆ ಆ ದೂತರು ಲೋಟ
–ನಿಗೆ "ನೀನೆದ್ದು ಇಲಿರುವ ನಿನ್ನ ಹೆಂಡತಿಯನ್ನೂ ನಿನ್ನ ಇಬ್ಬರು ಹೆಣ್ಣುಮಕ್ಕಳನ್ನು ಬೇಗ ಕರಕೊಂಡು ಹೋಗು; ಊರಿಗೆ ಉಂಟಾ
–ಗುವ ದಂಡನೆಯಿಂದ ನಿನಗೂ ನಾಶವುಂಟಾದೀತು" ಎಂದು ಹೇಳಿ ತ್ವರೆಪಡಿಸಿದರು. ಅವನು ತಡಮಾಡಲು ಯೆಹೋವನು
ಅವನನ್ನು ಕನಿಕರಿಸಿದ್ದರಿಂದ ಆ ಮನುಷ್ಯರು ಅವನ್ನೂ ಅವನ ಹೆಂಡತಿ ಮಕ್ಕಳನ್ನೂ ಕೈಹಿಡಿದು ಹೊರಗೆ ತಂದು ಊರಾಚೆಗೆ
ಬಿಟ್ಟರು.  ಹೊರಗೆ ತಂದ ಮೇಲೆ ಆತನು **"ಓಡಿಹೋಗು ಪ್ರಾಣವನ್ನು ಉಳಿಸಿಕೋ; ಹಿಂದಕ್ಕೆ ನೋಡಬೇಡ; ಈ ಪ್ರದೇಶದೊಳಗೆ**
**ಎಲ್ಲಿಯೂ ನಿಲ್ಲದೆ ಬೆಟ್ಟದ ಸೀಮೆಗೆ ಓಡಿಹೋಗು ನಿನಗೂ ನಾಶವುಂಟಾದೀತು** ಅಂದನು." (೧೯:೧೨–೧೭)

**ಆಗ ಯೆಹೋವನು ಸೊದೋಮ್ ಗೊಮೋರಗಳ ಮೇಲೆ ಆಕಾಶದಿಂದ ಅಗ್ನಿಗಂಧಕಗಳನ್ನು ಸುರಿಸಿ** ಆ ಪಟ್ಟಣಗಳನ್ನೂ ಸುತ್ತಲಿರುವ
ಸೀಮೆಯೆಲ್ಲವನ್ನೂ ಊರುಗಳಲ್ಲಿದ್ದ ಜನರೆಲ್ಲರನ್ನೂ ಭೂಮಿಯ ಮೇಲಣ ಎಲ್ಲಾ ಬೆಳೆಯನ್ನೂ **ಹಾಳುಮಾಡಿದನು.  ಲೋಟನ**
**ಹೆಂಡತಿ ಅವನ ಹಿಂದೆ ಬರುತ್ತಿರುವಾಗ ಹಿಂದಿರುಗಿ ನೋಡಿದ್ದರಿಂದ ಉಪ್ಪಿನ ಕಂಬವಾದಳು.** (೧೯–೨೪–೨೬)

**ಇತ್ತಲಾಗಿ ಅಬ್ರಹಾಮನು ಬೆಳಿಗ್ಗೆ ಎದ್ದು ನಾನು ಯೆಹೋವನ ಸನ್ನಿಧಿಯಲ್ಲಿ ನಿಂತಿದ್ದ ಸ್ಥಳಕ್ಕೆ ತಿರಿಗಿ ಬಂದು** ಸೊದೋಮ್ ಗೊಮೋರಗಳ
ಕಡೆಗೂ ಆ ಎಲ್ಲಾ ಸೀಮೆಯ ಕಡೆಗೂ ನೋಡಿದಾಗ ಅಯ್ಯೋ ಆ ಪ್ರದೇಶದಿಂದ ಹೊಗೆಯು ಆವಿಗೆಯ ಹೊಗೆಯಂತೆ ಏರಿತು.
ದೇವರು ಸೀಮೆಯ ಪಟ್ಟಣಗಳನ್ನು ಮಾಶಮಾಡಿದಾಗ ಲೋಟನು ವಾಸವಾಗಿದ್ದ ಊರುಗಳನ್ನು ಕೆಡವಿದರೂ ಅಬ್ರಹಾಮನನ್ನು
ನೆನಸಿ ಲೋಟನನ್ನು ತಪ್ಪಿಸಿ ಕಾಪಾಡಿದನು. (೧೯:೨೭–೨೯)

ಇದು  ಆಕಾಶದಿಂದ ಬೆಂಕಿ ಗಂಧಕಗಳನ್ನು ಸುರಿಸಿ ಸೊದೋಮ್ ಗೊಮೋರ ಪಟ್ಟಣಗಳಿಗೆ ದೇವರು ಹೇಗೆ ನ್ಯಾಯ ತೀರಿಸಿದ  –
–ನೆಂಬುದರು ವಿಧಿಯುಕ್ತ ಕಥೆಯಾಗಿದೆ.  ಈದಿನ ಪ್ಯಾಲೆಸ್ತೀನ್‌ನಲ್ಲಿರುವ ಮೃತ ಸಮುದ್ರದ ಕೆಳಗೆ ಸೊದೋಮಿನ ಅವಶೇಷಗಳಿವೆ.
ಪಾಪವನ್ನು ಅನುಸರಿಸಿ ಹೋಗುವದು ಎಂದಿಗೂ ಒಂದು ಬುದ್ಧಿವಂತ ಆಯ್ಕೆಯಲ್ಲ.  **ಪಾಪದ ನ್ಯಾಯತೀರ್ವಿಕೆಯ ಕುರಿತು ದೇವರು**
**ಗಂಭೀರನಾಗಿದ್ದಾನೆ!**

ಈ ದಿನ ಸಮಯ ಇನ್ನೂ ಇರುವದರಿಂದ ಈಗ ತೋರಾದಲ್ಲಿರುವದನ್ನು ಮುಂದುವರಿಸುವದಕ್ಕೆ ನಾವು ಇಚ್ಛಿಸುತ್ತೇವೆ,
ಅದೇನೆಂದರೆ, **ಬಹಳ ಹಿಂದೆ ದೇವರು ಅಬ್ರಹಾಮ ಸಾರಳಿಗೆ ಮಾಡಿದ್ದ ವಾಗ್ದಾನವನ್ನು ನೆರವೇರಿಸುವ ಹಾಗೆ ಅವರಿಗೆ ಹೇಗೆ ಒಬ್ಬ**
**ಮಗನನ್ನು ಕೊಟ್ಟನೆಂಬುದನ್ನು ನೋಡೋಣ.**  ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**ಯೆಹೋವನು ತಾನು ಹೇಳಿದ್ದಂತೆಯೇ ಸಾರಳ ಮೇಲೆ ದಯವಿಟ್ಟು ಆಕೆಗೆ ಕೊಟ್ಟ ಮಾತನ್ನು ನೆರವೇರಿಸಿದನು.**  ಹೇಗಂದರೆ ಸಾರಳು
ಬಸುರಾಗಿ **ದೇವರು ಮೊದಲು ಸೂಚಿಸಿದ ಕಾಲದಲ್ಲಿ** ಅಬ್ರಹಾಮ,ನಿಂದ ಅವನ ಮುಪ್ಪಿನಲ್ಲೆ ಮಗನನ್ನು ಹೆತ್ತಳು.  ಅಬ್ರಹಾಮನು
ಸಾರಳಲ್ಲಿ ತನ್ನಿಂದ ಹುಟ್ಟಿದ ಮಗನಿಗೆ ಇಸಾಕನೆಂದು ಹೆಸರಿಟ್ಟು ಎಂಟನೆಯ ದಿನದಲ್ಲಿ ದೇವರ ಅಪ್ಪಣೆಯ ಮೇರೆಗೆ ಸುನ್ನತಿ ಮಾಡಿ
–ದನು.  ಇಸಾಕನು ಹುಟ್ಟಿದಾಗ **ಅಬ್ರಹಾಮನು ನೂರು ವರುಷದವನಾಗಿದ್ದನು.** ಸಾರಳು ದೇವರು ನನ್ನನ್ನು ನಗುವಂತೆ ಮಾಡಿದ್ದಾನೆ;
ಕೇಳುವವರೆಲ್ಲರೂ ನನ್ನೊಡನೆ ನಗುವರು.  ಸಾರಳೂ ಮಕ್ಕಳಿಗೆ ಮೊಲೆ ಕುಡಿಸುವಳೆಂದು ಯಾರಾದೂ ಅಬ್ರಹಾಮನಿಗೆ ಹೇಳುತ್ತಿ –
–ದ್ದರೋ?  ಆದರೂ ಅವನ ಮುಪ್ಪಿನಲ್ಲೇ ಅವನಿಗೆ ಮಗನನ್ನು ಹೆತ್ತಿದ್ದೇನಷ್ಟೆ ಎಂದು ಹೇಳಿಕೊಂಡಳು. (೨೧:೧–೭)

ಹೀಗೆ ದೇವರು ಬಹಳ ಹಿಂದೆ ಅಬ್ರಹಾಮ ಸಾರಳಿಗೆ ಮಾಡಿದ್ದ ವಾಗ್ದಾನವನ್ನು  ನೆರವೇರಿಸಿದನು.  ಮಕ್ಕಳಿಲ್ಲದವಳೆನಿಸಿಕೊಂಡಿದ್ದ
ಸಾರಳು  **ದೇವರು ಹೇಳಿದ ಹಾಗೆಯೇ** ಒಬ್ಬ ಮಗನನ್ನು ಹೆತ್ತಳು.  ಅವರು ಅವನನ್ನು **ಇಸಾಕನೆಂದು** ಕರೆದರು, ಇದರ ಅರ್ಥ

ನಗುವವನು ಎಂಬದು. ಆದರೆ ಇಸಾಕನ ಜನನದಿಂದ ಪ್ರತಿಯೊಬ್ಬರೂ ಸಂತೋಷಪಡಲಿಲ್ಲ. ವಾಕ್ಯವು ಹೇಳುವದೇನೆಂದರೆ:

ಆ ಕೂಸು ಬೆಳೆದು ಮೊಲೆಬಿಟ್ಟಿತು. ಇಸಕನು ಮೊಲೆಬಿಟ್ಟ ದಿನದಲ್ಲಿ ಅಬ್ರಹಾಮನು ದೊಡ್ಡ ಔತಣವನ್ನು ಮಾಡಿಸಿದನು. ಆದರೆ **ಐಗುಪ್ತಳಾದ ಹಾಗರಳಲ್ಲಿ ಅಬ್ರಹಾಮನಿಗೆ ಹುಟ್ಟಿದ್ದ ಮಗನು ನಗುವದನ್ನು ಸಾರಳು ಕಂಡು** ಅಬ್ರಹಾಮನಿಗೆ– ಈ ದಾಸಿಯನ್ನೂ ಅವಳ ಮಗನನ್ನೂ ಹೊರಗೆ ಹಾಕು; ಈ ದಾಸಿಯ ಮಗನು ನನ್ನ ಮಗನಾದ ಇಸಾಕನೊಂದಿಗೆ ಬಾಧ್ಯನಾಗಬಾರದು ಎಂದು ಹೇಳಿದಳು. ಮಗನ ದೆಸೆಯಿಂದ ಈ ಮಾತು ಅಬ್ರಹಾಮನಿಗೆ ಬಹು ದು:ಖವನ್ನು ಹುಟ್ಟಿಸಿತು. ಆದರೆ ದೇವರು ಅನಿಗೆ ಮಗನ ಮತ್ತು ದಾಸಿಯ ದೆಸೆಯಿಂದ ನಿನಗೆ ಕರಕರೆಯಾಗಬಾರದು; ಸಾರಳು ಹೇಳಿದಂತೆಯೇ ಮಾಡು ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರು; ಈ ದಾಸಿಯ ಮಗನು ನಿನ್ನಿಂದ ಹುಟ್ಟಿದವನಾದ್ದರಿಂದ ಅವನಿಂದಲೂ ಜನಾಂಗವಾಗುವಂತೆ ಮಾಡುವೆನು ಎಂದು ಹೇಳಿದನು. ಮಾರಣೇ ದಿನ ಬೆಳಿಗ್ಗೆ ಅಬ್ರಹಾಮನು ಎದ್ದು ಹಾಗರಳಿಗೆ ಬುತ್ತಿಯನ್ನೂ ಒಂದು ತಿತ್ತಿ ತಣ್ಣೀರನ್ನೂ ಕೊಟ್ಟು **ಕಳುಹಿಸಿಬಿಟ್ಟನು.** (೨೧:೮–೧೪)

ಇಷ್ಮಾಯೇಲನ ಹೊರಡುವಿಕೆಯು ಅಬ್ರಹಾಮನಿಗೆ ದು:ಖವನ್ನುಂಟುಮಾಡಿತು, ಆದರೆ ಹೊಸ ಜನಾಂಗವೂ ಮತ್ತು ಲೋಕದ ರಕ್ಷಕನೂ ಇಸಾಕನ ಮೂಲಕವಾಗಿ ಬರಬೇಕಾಗಿದೆ ಆದರೆ ಇಷ್ಮಾಯೇಲನ ಮೂಲಕವಲ್ಲ ಎಂದು ದೇವರು ಪ್ರಕಟಪಡಿಸಿದ್ದರಿಂದ ಇದು ಸಂಬವಿಸಲೇಬೇಕಾಯಿತು. ಇಷ್ಮಾಯೇಲನು ಹದಿನೈದು ವರ್ಷದವನಾಗಿದ್ದಾಗ ಇಸಾಕನನ್ನು ಪರಿಹಾಸ್ಯ ಮಾಡಿದನು ಮತ್ತು ಲೋಕಕ್ಕೆ ರಕ್ಷಣೆಯನ್ನು ಸಮರ್ಪಿಸುವಂತೆ ಇಸಾಕನನ್ನು ಒಂದು ದೊಡ್ಡ ಜನಾಂಗವನ್ನಾಗಿ ಮಾಡುವ **ದೇವರ ಯೋಜನೆಯನ್ನು ಅವನು ಮೆಚ್ಚಿಕೊಳ್ಳಲಿಲ್ಲ.**

ಹಾಗಾದರೆ ಇಷ್ಮಾಯೇಲನಿಗೆ ಏನು ಸಂಭವಿಸಿತು? ಅವನು ಹೇಗೆ ತನ್ನ ತಾಯಿಯೊಂದಿಗೆ ಹೊರಟು ಐಗುಪ್ತದ ಹತ್ತಿರವಿರುವ ಮರುಭೂಮಿಯಲ್ಲಿ ವಾಸಿಸುತ್ತಾ ಅಲ್ಲಿಯ ಹೆಣ್ಣನ್ನು ಮದುವೆ ಮಾಡಿಕೊಂಡನೆಂಬುದನ್ನು ಮುಂದಿನ ವಚನಗಳು ನಮಗೆ ತೋರಿಸಿ ಕೊಡುತ್ತವೆ. ದೇವರು ಅಬ್ರಹಾಮನಿಗೆ ಮುಂತಿಳಿಸಿದಂತೆಯೇ ಇಸಾಕನಿಂದ ಹುಟ್ಟಿದ ಜನಾಂಗದವರಿಗೆ ಶತ್ರುಗಳಾದಂತ ಅರಬ್ಬೀಯ ಕುಲದವರಿಗೆ ಇಷ್ಮಾಯೇಲನು ತಂದೆಯಾದನು. (ಆದಿ–೧೬:೧೨ ನ್ನು ನೋಡಿರಿ). ನಿಮಗೆ ಚೆನ್ನಾಗಿ ಗೊತ್ತಿರುವ ಹಾಗೆ ಈ ದಿನದ –ವರೆಗೂ ಅರಬ್ಬೀಯರ ಮತ್ತು ಯೆಹೂದ್ಯರ ನಡುವೆ ಸಂಘರ್ಷವಿದೆ! ದೇವರು ಅರಬ್ಬರನ್ನೂ ಯೆಹೂದ್ಯರನ್ನೂ ಮತ್ತು ಪ್ರತಿ – –ಯೊಂದು ಜನಾಂಗದ ಜನರನ್ನು ಪ್ರೀತಿಸುತ್ತಾನೆ ಮತ್ತು ಎಲ್ಲರೂ ಆತನ ಕಡೆಗೆ ತಿರುಗಿಕೊಳ್ಳಬೇಕೆಂದು ಇಚ್ಛಿಸುತ್ತಾನೆ.

ಸ್ನೇಹಿತರೇ, ನಮ್ಮ ಸಮಯವು ಮುಗಿಯಿತು. ಕೊಟ್ಟ ಮಾತಿನಿಂದ ಹಿಂದಕ್ಕೆ ಹೋಗದಂತ ನಿಜವಾದ ಮತ್ತು ಜೀವಿಸುವ ದೇವರು ಒಬ್ಬ **ನಂಬಿಗಸ್ತನಾದ ದೇವರಾಗಿದ್ದಾನೆ** ಎಂಬುದನ್ನು ನೀವು ಪ್ರತಿಯೊಬ್ಬರೂ ಮತ್ತೆ ನೋಡುತ್ತೀರೆಂದು ನಾವು ನಂಬತ್ತೇವೆ. ಅದಕ್ಕಾ – –ಗಿಯೇ ಆತನು ತಾನು ಹೇಳಿದ ಹಾಗೆಯೇ ಸೊದೋಮ್ ಗೊಮೋರಗಳಿಗೆ ನ್ಯಾಯತೀರ್ಪು ಕೊಟ್ಟನು. ತಾನು ಅದಕ್ಕಾಗಿಯೇ **ಕೊಡುತ್ತೇನೆಂದು ವಾಗ್ದಾನ ಮಾಡಿದ ಹಾಗೆ** ಆತನು ಅಬ್ರಹಾಮ ಮತ್ತು ಸಾರಳಿಗೆ ಅವರ ಮುಪ್ಪಿನಲ್ಲಿ ಮಗನನ್ನು ಕೊಟ್ಟನು. ಅದಕ್ಕಾ –ಗಿಯೇ ಆತನು ಅಬ್ರಹಾಮನನ್ನು ಮತ್ತು ಇಷ್ಮಾಯೇಲನನ್ನು ದೂರ ಮಾಡಿದನು. ಹೀಗೆ **ತನ್ನ ಬದಲಾಗದ ಉದ್ದೇಶಗಳನ್ನು ಆತನು ಸ್ಥಾಪಿಸಿದನು.**

ನಿಮ್ಮ ಆಸಕ್ತಿಗಾಗಿ ನಿಮಗೆ ವಂದನೆಗಳು. ನೀವು ಮುಂದಿನ ಸಲ ನಮ್ಮೊಂದಿಗೆ ಸೇರಿಕೊಳ್ಳುವಂತೆ ನಿಮ್ಮನ್ನು ಒತ್ತಾಯಿಸುತ್ತೇವೆ, ಯಾಕೆಂದರೆ ದೇವರ ಚಿತ್ತವಾದರೆ ಅಬ್ರಹಾಮನ ಜೀವನದಲ್ಲಿನ ಹೆಚ್ಚು ಪರಿಣಾಮಕಾರಿಯಾದ ಘಟನೆಯನ್ನು ನಾವು ನೋಡಲಿ – –ದ್ದೇವೆ: ಅದೇ ಅಬ್ರಹಾಮನು ತನ್ನ ಮಗನನ್ನು ಬಲಿಯಾಗಿ ಅರ್ಪಿಸುವ ಕಥೆ. . . .

ಮುಂದಿನ ಸಮಯದವರೆಗೆ, ದೇವರ ವಾಕ್ಯದಲ್ಲಿನ ಈ ವಚನದೊಂದಿಗೆ ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇವೆ:

**“ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! (ರೋಮಾ–೧೧:೩೩)**

[ಪಾಠ ೨೧: ಸೊದೋಮಿನ ನಾಶ ಮತ್ತು ಇಸಾಕನ ಜನನ] [ಸಾರಾಂಶಗಳ ಪಟ್ಟಿ] [ಪಾಠ ೨೩: ಏಸಾವ ಮತ್ತು ಯಾಕೋಬ: ಐಹಿಕ ಮತ್ತು ನಿತ್ಯತ್ವ]

ಪಾಠ ೨೨

# ಅಬ್ರಹಾಮನ ತ್ಯಾಗ

ಆದಿಕಾಂಡ ೨೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ ದೇವರ ಪ್ರವಾದಿಯಾದ ಅಬ್ರಹಾಮನ ಕುರಿತಾಗಿ ಅದ್ಭುತವಾದ ಮತ್ತು ಪ್ರಾಮುಖ್ಯವಾದ ಅನೇಕ ಕಥೆಗಳನ್ನು ನಾವು ಪರಿಶೋಧಿಸಿದ್ದೇವೆ. ಈ ದಿನ ನಾವು ಅಬ್ರಹಾಮನ ಜೀವಿತದಿಂದ ಒಂದು ಬಹು ಪರಿಣಾಮಕಾರಿ – –ಯಾದ ಪಾಠಕ್ಕೆ ಬಂದಿದ್ದೇವೆ: **"ತಬಾಸ್ಕಿ"** ಯ ನಿಜವಾದ ಕಥೆ **(ಅಬ್ರಹಾಮನ ತ್ಯಾಗ)** ಮತ್ತು ಇದರ ಅರ್ಥವೇನೆಂದರೆ {ತಬಾಸ್ಕಿ; ಉಲೂಫ್ ಮತ್ತು ಇನ್ನು ಕೆಲವು ಆಫ್ರಿಕಾದ ಭಾಷೆಗಳಲ್ಲಿರುವ ಒಂದು ಪರಿಚಿತ ಶಬ್ದ – ಒಂದು ಕ್ರಿಯಾ ಪದದಂತೆ: ಹಬ್ಬದ ದಿನದಂದು ಒಂದು ಟಗರನ್ನು ಯಜ್ಞ ಅರ್ಪಿಸುವದು; ನಾಮ ಪದದ ಹಾಗೆ: **"ಈದ್ ಅಲ್–ಅಧಾ"** ಎಂಬ ಮುಸಲ್ಮಾನರ ಹಬ್ಬವು ಅಬ್ರಹಾಮನು ತನ್ನ ಮಗನನ್ನು ಯಜ್ಞ ಅರ್ಪಿಸುವದರ ಜ್ಞಾಪಕಾರ್ಥವಾದುದು}.

ನಮ್ಮ ಹಿಂದಿನ ಪಾಠದಲ್ಲಿ, ದೇವರು ಬಹಳ ಹಿಂದೆ ತಾನು ವಾಗ್ದಾನ ಮಾಡಿದ್ದನ್ನು ನೆರವೇರಿಸುವ ಹಾಗೆ ಅಬ್ರಹಾಮ ಮತ್ತು ಸಾರಳ ಮುಪ್ಪಿನ ಪ್ರಾಯದಲ್ಲಿ ಅವರಿಗೆ ಹೇಗೆ ಮಗನನ್ನು ಕೊಟ್ಟನೆಂಬುದನ್ನು ನಾವು ಕಲಿತುಕೊಂಡೆವು. ಅವರ ಮಗನ ಹೆಸರು ಇಸಾಕ. ಇಸಾಕನ ಸಂತತಿಯ ಮೂಲಕವಾಗಿ ತಾನು ಒಂದು ಹೊಸ ಜನಾಂಗವನ್ನು ಹೊರತಂದು ಅದರ ಮೂಲಕವಾಗಿ ಲೋಕದ ಎಲ್ಲಾ ಜನಾಂಗಗಳನ್ನು ಆಶೀರ್ವದಿಸುತ್ತೇನೆಂದು ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದ್ದನು. ಇಷ್ಮಾಯೇಲನು ಮತ್ತು ಅವನ ತಾಯಿಯಾದ ಹಾಗರಳು ಅಬ್ರಹಾಮನ ಮನೆಯನ್ನು ಹೇಗೆ ಬಿಟ್ಟು ಹೋಗಿ ಐಗುಪ್ತ ದೇಶದಲ್ಲಿ ವಾಸಿಸಿದರೆಂಬು – –ದನ್ನೂ ಸಹ ನಾವು ನೋಡಿಕೊಂಡೆವು. ಹಾಗಾಗಿ, ದೇವರ ವಾಗ್ದಾನದ ಪ್ರಕಾರವಾಗಿ ಹುಟ್ಟಿದಂತ ಇಸಾಕನು ಮಾತ್ರ ಮನೆಯಲ್ಲಿ ಉಳಿದುಕೊಂಡನು.

ಒಂದು ದಿನ ದೇವರು ಅಬ್ರಹಾಮನಿಗೆ ಒಂದು ಆಶ್ಚರ್ಯಕರವಾದ ಮತ್ತು ಕಷ್ಟಕರವಾದ ಸಂಗತಿಯನ್ನು ಮಾಡುವಂತೆ ಕೇಳಿದನು. ತೋರಾದಲ್ಲಿರುವ ಆದಿಕಾಂಡ ಪುಸ್ತಕದ ಇಪ್ಪತ್ತೆರಡನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಈ ಸಂಗತಿಗಳು ಆದ ಮೇಲೆ ದೇವರು ಅಬ್ರಹಾಮನನ್ನು ಪರಿಶೋಧಿಸಿದನು. ಹೇಗಂದರೆ ಆತನು ಅವನನ್ನು, "ಅಬ್ರಹಾಮನೇ ಎಂದು ಕರೆಯಲು ಅವನು ಇಗೋ ಇದ್ದೇನೆ ಅಂದನು. ಆಗಲಾತನು – ನಿನಗೆ ಪ್ರಿಯನಾಗಿರುವ ಒಬ್ಬನೇ ಮಗನಾದ ಇಸಾಕನನ್ನು ತೆಗೆದುಕೊಂಡು ಮೊರೀಯ ದೇಶಕ್ಕೆ ಹೋಗಿ ಅಲ್ಲಿ ಅವನನ್ನು **ನಾನು ಹೇಳುವ ಒಂದು ಬೆಟ್ಟದ ಮೇಲೆ ಸರ್ವಾಂಗಹೋಮವಾಗಿ ಅರ್ಪಿಸಬೇಕು ಅಂದನು."** (೨೨:೧–೨)

ಏನು!? ಅಬ್ರಹಾಮನು ಏನು ಮಾಡಬೇಕೆಂದು ದೇವರು ಕೇಳುತ್ತಿದ್ದಾನೆ? ಅವನ ಪ್ರೀತಿಯ ಮಗನನ್ನು ಬಹು ದೂರದಲ್ಲಿರುವ ಬೆಟ್ಟಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಅವನನ್ನು ಸರ್ವಾಂಗಹೋಮವಾಗಿ ಅರ್ಪಿಸುವಂತೆ ದೇವರು ಅಬ್ರಹಾಮನಿಗೆ ಆಜ್ಞಾಪಿಸುತ್ತಿ–ದ್ದಾನೆ! ಇದು ಹೇಗೆ ಸಾಧ್ಯ? ದೇವರು ತನಗೆ ವಾಗ್ದಾನ ಮಾಡಿದ ಮಗನನ್ನು ಪಡೆದುಕೊಳ್ಳುವದಕ್ಕೆ ಅಬ್ರಹಾಮನು ಇಪ್ಪತ್ತೈದು ವರ್ಷಗಳ ದೀರ್ಘ ಅವಧಿಯವರೆಗೆ ಕಾದಿದ್ದನು, ಈಗ ಅವನನ್ನು ಬಲಿಯಾಗಿ ಅರ್ಪಿಸುವಂತೆ ದೇವರು ಹೇಳುತ್ತಿದ್ದಾನೆ! ಅಬ್ರಹಾ–ಮನು ದೇವರಿಗೆ ಹೇಗೆ ಉತ್ತರಿಸಿದನು? ದೇವರ ಮಾತುಗಳು ಒಪ್ಪಿಕೊಳ್ಳುವದಕ್ಕೆ ಕಷ್ಟವಾಗಿರುವದರಿಂದ ಅವನು ದೇವರೊಂದಿಗೆ ವಾದ ಮಾಡಿದನೋ? ವಾಕ್ಯವು ಹೀಗೆ ಹೇಳುತ್ತದೆ:

**ಬೆಳಿಗ್ಗೆ ಅಬ್ರಹಾಮನು ಎದ್ದು** ಕತ್ತೆಗೆ ತಡಿ ಹಾಕಿಸಿ ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ಒಡಿಸಿ ತನ್ನ ಸೇವಕರಲ್ಲಿ ಇಬ್ಬರನ್ನೂ ತನ್ನ ಮಗ – –ನಾದ ಇಸಾಕನನ್ನು ಕರೆದುಕೊಂಡು **ದೇವರು ಹೇಳಿದ ಸ್ಥಳಕ್ಕೆ ಹೋದನು.** (೨೨:೩)

ಮೂರು ದಿನಗಳವರೆಗೆ ಅಬ್ರಹಾಮನು ಅವನ ಮಗನು ಮತ್ತು ಇಬ್ಬರೂ ಸೇವಕರುಗಳು ನಡೆದು ನಡೆದು ದೇವರು ಹೇಳಿದ ಬೆಟ್ಟದ ಸಮೀಪಕ್ಕೆ ಬಂದರು. ತನ್ನ ಪ್ರೀತಿಯ ಮಗನನ್ನು ಕೊಂದು ಸಮಾಧಿ ಮಾಡಬೇಕಾದ ಭಯಾನಕ ಸ್ಥಳಕ್ಕೆ ಹತ್ತಿರವಾಗುತ್ತಿದ್ದಂತೆಯೇ ಅಬ್ರಹಾಮನ ಹೃದಯವು ಒಡೆದುಹೋಗುವದಕ್ಕೆ ಸಿದ್ಧವಾಗಿತ್ತು! ಖಂಡಿತವಾಗಿ, ದೇವರು ಅಬ್ರಹಾಮನ ನಂಬಿಕೆಯನ್ನು ಮಾತ್ರ ಪರೀಕ್ಷಿಸುತ್ತಿದ್ದನೆ, ಆದರೆ ಅಬ್ರಹಾಮನಿಗೆ ಇದು ಗೊತ್ತಿರಲಿಲ್ಲ ಎಂಬುದನ್ನು ಈದಿನ ಈ ಕಥೆಯನ್ನು ಓದುತ್ತಿರುವ ನಾವುಗಳು ತಿಳಿದಿದ್ದೇವೆ. ಯಾವುದನ್ನು ಮಾಡಬೇಕೆಂದು ದೇವರು ಅಬ್ರಹಾಮನಿಗೆ ಕೇಳಿದ್ದಾನೋ ಅದು ಭಯಂಕರವೂ ಮತ್ತು ನೋವಿನ ಪರೀಕ್ಷೆಯಾಗಿತ್ತು!

ಮುಂದಿನ ವಚನಗಳು ಹೇಳುವದೇನೆಂದರೆ:

ಮೂರನೆಯ ದಿನದಲ್ಲಿ ಅಬ್ರಹಾಮನು ಕಣ್ಣೆತ್ತಿ ನೋಡುವಾಗ ಆ ಸ್ಥಳವು ದೂರದಲ್ಲಿ ಕಾಣಿಸಲು ಅವನು ತನ್ನ ಸೇವಕರಿಗೆ "ನೀವು ಇಲ್ಲೇ ಕತ್ತೆಯ ಬಳಿಯಲ್ಲಿರ್ರಿ; ನಾನೂ ನನ್ನ ಮಗನೂ ಅಲ್ಲಿಗೆ ಹೋಗಿ ದೇವಾರಾಧನೆ ಮಾಡಿಕೊಂಡು ನಿಮ್ಮ ಬಳಿಗೆ ತಿರಿಗಿ ಬರು –ತ್ತೇವೆ ಎಂದು ಹೇಳಿದನು." ಆಗ ಅಬ್ರಹಾಮನು ಯಜ್ಞಕ್ಕೆ ಬೇಕಾದ ಕಟ್ಟಿಗೆಯನ್ನು ತನ್ನ ಗಮನಾದ ಇಸಾಕನ ಮೇಲೆ ಹೊರಿಸಿ ತನ್ನ ಕೈಯಲ್ಲೇ ಬೆಂಕಿಯನ್ನೂ ಕತ್ತಿಯನ್ನೂ ತೆಗೆದುಕೊಂಡ ನಂತರ ಅವರಿಬ್ಬರೂ ಹೊರಟು ಹೋದರು. ಹೋಗುವಾಗ ಇಸಾಕನು ತನ್ನ ತಂದೆಯಾದ ಅಬ್ರಹಾಮನಿಗೆ – "ಅಪ್ಪಾ ಎಂದು ಕರೆಯಲು ಅಬ್ರಹಾಮನು ಏನು ಮಗನೇ ಅಂದನು. ಇಸಾಕನು – ಇಗೋ ಬೆಂಕಿಯೂ ಕಟ್ಟಿಗೆಯೂ ಉಂಟು ಆದರೆ **ಹೋಮಕ್ಕೆ ಬೇಕಾದ ಕುರಿ ಎಲ್ಲಿ"** ಎಂದು ಕೇಳಿದ್ದಕ್ಕೆ ಅಬ್ರಹಾಮನು – **"ಮಗನೇ ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು** ಅಂದನು" (೨೨:೪–೮). ಮತ್ತು ಇಬ್ಬರೂ ಒಟ್ಟಾಗಿ ಹೊರಟರು.

ದೇವರು ಹೇಳಿದ ಸ್ಥಳಕ್ಕೆ ಅವರಿಬ್ಬರೂ ಸೇರಿದಾಗ ಅಬ್ರಹಾಮನು ಯಜ್ಞವೇದಿಯನ್ನು ಕಟ್ಟಿ ಕಟ್ಟಿಗೆಯನ್ನು ಒಟ್ಟಿ ತನ್ನ ಮಗನಾದ ಇಸಾಕನ ಕೈಕಾಲುಗಳನ್ನು ಬಿಗಿದು ಅವನನ್ನು ವೇದಿಯಲ್ಲಿ ಕಟ್ಟಿಗೆಯ ಮೇಲೆ ಇಟ್ಟನು. ಆದರೆ ತನ್ನ ಮಗನನ್ನು ವಧಿಸುವದಕ್ಕೆ ಅವನು ಕೈಚಾಚಿ ಕತ್ತಿಯನ್ನು ಹಿಡಿದುಕೊಳ್ಳಲು ಯೆಹೋವನ ದೂತನು ಅಕಾಶದೊಳಗಿಂದ –"ಅಬ್ರಹಾಮನೇ ಅಬ್ರಹಾಮನೇ ಎಂದು ಅವನನ್ನು ಕರೆದನು. ಅದಕ್ಕೆ ಅಬ್ರಹಾಮನು – ಇಗೋ ಇದ್ದೇನೆ ಅಂದನು. ಆ ದೂತನು ಅವನಿಗೆ – ನಿನ್ನ ಹುಡುಗನ ಮೇಲೆ ಕೈಹಾಕಬೇಡ, ಅವನಿಗೆ ಏನೂ ಮಾಡಬೇಡ. ನೀನು ನಿನ್ನ ಒಬ್ಬನೇ ಮಗನನ್ನಾದರೂ ನನಗೆ ಸಮರ್ಪಿಸುವದಕ್ಕೆ ಹಿಂದೆಗೆಯ –ಲಿಲ್ಲವಾದ್ದರಿಂದ ನೀನು ದೇವರಲ್ಲಿ ಭಯಭಕ್ತಿಯುಳ್ಳವನೆಂಬದು ಈಗ ತೋರಬಂತು ಎಂದು ಹೇಳಿದನು". ಅಬ್ರಹಾಮನು ಕಣ್ಣೆತ್ತಿ ನೋಡುವಾಗ ತನ್ನ ಹಿಂದಗಡೆ ಒಂದು ಟಗರು ಪೊದೆಯಲ್ಲಿ ಕೊಂಬುಗಳಿಂದ ಸಿಕ್ಕಿಕೊಂಡಿತ್ತು. ಅವನು ಹೋಗಿ ಅದನ್ನು ಹಿಡಿದುತಂದು ತನ್ನ ಮಗನಿಗೆ ಬದಲಾಗಿ ಹೋಮಮಾಡಿದನು. **ಆ ಸ್ಥಳಕ್ಕೆ ಯೆಹೋವ ಯೀರೆ ಎಂದು ಹೆಸರಿಟ್ಟನು. ಯೆಹೋವನ ಬೆಟ್ಟದಲ್ಲಿ ಒದಗುವದು ಎಂಬದಾಗಿ ಇಂದಿನವರೆಗೂ ಹೇಳುವದುಂಟಲ್ಲಾ.**

ಈ ಕಥೆಯು ತುಂಬಾ ಪ್ರಾಮುಖ್ಯವಾದುದು ಮತ್ತು ಸ್ಪಷ್ಟಗೊಳಿಸುವಿಕೆಗೆ ತಕ್ಕದ್ದಾಗಿದೆ. ಅಬ್ರಹಾಮನ ಕಥೆಯು ಮೂರು ಪಾರ್ಶ್ವ – –ಗಳನ್ನು ಹೊಂದಿದೆ: **ಒಂದು ಚಾರಿತ್ರಿಕ ಪಾರ್ಶ್ವ, ಒಂದು ಸಾಂಕೇತಿಕ ಪಾರ್ಶ್ವ, ಮತ್ತು ಒಂದು ಪ್ರವಾದನೆಯ ಪಾರ್ಶ್ವ.** ಬೇರೊಂದು ಮಾತಿನಲ್ಲಿ ಹೇಳುವದಾದರೆ, ಅಬ್ರಹಾಮನ ತ್ಯಾಗವನ್ನು ಅರ್ಥಮಾಡಿಕೊಳ್ಳುವದಕ್ಕೆ ಮೂರು ಸಂಗತಿಗಳನ್ನು ಗ್ರಹಿಸಿಕೊಳ್ಳುವದು ನಮಗೆ ಅಗತ್ಯ: ೧) ಏನು ಸಂಭವಿಸಿತು, ೨) ಬಲಿಸಮರ್ಪಣೆಯು ಯಾವುದಕ್ಕೆ ಸಂಕೇತವಾಗಿದೆ, ೩) ಇನ್ನೂ ಸಂಭವಿಸಬೇಕಾಗಿದ್ದ ಒಂದು ಘಟನೆಯ ಕುರಿತಾಗಿ ಅಬ್ರಹಾಮನು ಏನು ಪ್ರವಾದಿಸಿದನು.

**ಚಾರಿತ್ರಿಕ ಪಾರ್ಶ್ವಕ್ಕೆ** ಸಂಬಂಧಿಸಿದಂತೆ, ದೇವರು ಹೇಗೆ **ಅಬ್ರಹಾಮನ ನಂಬಿಕೆಯನ್ನು ಪರೀಕ್ಷಿಸಿದನು** ಮತ್ತು ಒಂದು ಬಲಿಪಶು ಟಗರಿನ ಸಾಧನದ ಮೂಲಕ **ಅವನ ಮಗನನ್ನು ಮರಣದಿಂದ ಹೇಗೆ ರಕ್ಷಿಸಿದನೆಂಬುದನ್ನು** ಈದಿನ ನಾವು ಓದಲಿದ್ದೇವೆ. ಈದಿನ ಯೆರೂಸಲೇಮ್ ಇರುವ ಸ್ಥಳದಲ್ಲಿ ಸುಮಾರು ನಾಲ್ಕು ಸಾವಿರ ವರ್ಷಗಳ ಹಿಂದೆ ಇದು ಸಂಭವಿಸಿತ್ತು. ಚಿಕ್ಕದಾಗಿ ಹೇಳುವದಾದರೆ, ಇದು ಅಬ್ರಹಾಮನ ತ್ಯಾಗದ ಕಥೆಯ **"ಚಾರಿತ್ರಿಕ"** ಪಾರ್ಶ್ವವಾಗಿದೆ.

ಕಥೆಯ **ಸಾಂಕೇತಿಕ ಪಾರ್ಶ್ವಕ್ಕೆ** ಸಂಬಂಧಿಸಿದಂತೆ ದೇವರ ವಾಕ್ಯ ನಮಗೆ ಹೇಳುವದೇನೆಂದರೆ, **ನಾವೆಲ್ಲರೂ ಅಬ್ರಹಾಮನ ಮಗನ ಹಾಗೆಯೇ ಇದ್ದೇವೆ.** ದೇವರು ತನ್ನ ನ್ಯಾಯದಲ್ಲಿ **ಅಬ್ರಹಾಮನ ಮಗನನ್ನು ಮರಣದ ಶಿಕ್ಷೆಗೆ ಗುರಿಪಡಿಸುತ್ತಾನೆಂ**ಬುದನ್ನು ನಾವು ಓದುತ್ತೇವೆ. ನಾವೆಲ್ಲರೂ ಸಹ ಪಾಪದ ಶಿಕ್ಷೆಗೆ ಗುರಿಯಾಗಿದ್ದು ದೇವರ ನ್ಯಾಯತೀರ್ಪಿಗೆ ಅರ್ಹರಾಗಿದ್ದೇವೆ. ಆದರೆ ದೇವರು ಹೇಗೆ ತನ್ನ ಕೃಪೆಯಲ್ಲಿ **ಅಬ್ರಹಾಮನ ಮಗನನ್ನು ಮರಣದಿಂದ ರಕ್ಷಿಸಿದನೆಂಬುದನ್ನೂ** ಸಹ ನಾವು ಓದುತ್ತೇವೆ. ಅದೇ ರೀತಿಯಲ್ಲಿ, ನಾವು ರಕ್ಷಿಸಲ್ಪಡುವಂತ ಒಂದು ಸಾಧನವನ್ನು ಒದಗಿಸುವದರಲ್ಲಿ ದೇವರು ತನ್ನ ಕೃಪೆಯಲ್ಲಿ ನಮ್ಮನ್ನು ರಕ್ಷಿಸುವದಕ್ಕೆ ಬಂದನು. ಆ ರಕ್ಷಣೆಯ ಮಾರ್ಗ ಯಾವುದು? ಅಬ್ರಹಾಮನ ತ್ಯಾಗದ ಕಥೆಯು ನಮಗೆ ಕಲಿಸುವದೇನೆಂದರೆ ದೇವರಿಂದ ಸ್ಥಾಪಿಸಲ್ಪಟ್ಟ **ರಕ್ಷಣೆಯ ಮಾರ್ಗವೇ ಸಂಪೂರ್ಣವಾದ ಯಜ್ಞಸಮರ್ಪಣೆಯ ಮಾರ್ಗವಾಗಿದೆ.**

ಈ ದಿನದ ಕಥೆಯಲ್ಲಿ ಅಬ್ರಹಾಮನ ಮಗನ ಸ್ಥಾನದಲ್ಲಿ ಸಾಯುವದಕ್ಕಾಗಿ ದೇವರು ಒಂದು ಟಗರನ್ನು ಹೇಗೆ ಒದಗಿಸಿದನೆಂಬುದನ್ನು

ನಾವು ನೋಡಿದ್ದೇವೆ. ಆ ಕುರಿಯ ಕೊಂಬುಗಳು ಮಾತ್ರ ಮುಳ್ಳಿನ ಪೊದೆಯಲ್ಲಿ ಸಿಕ್ಕಿಕೊಂಡಿತ್ತು; ಅದರ ಚರ್ಮವು ಕಿತ್ತುಹೋಗಿರ –ಲಿಲ್ಲ. ಒಂದು ವೇಳೆ ಕುರಿಯು ಒಂದೇ ಒಂದು ನ್ಯೂನತೆಯನ್ನು ಹೊಂದಿದ್ದರೂ ಅದನ್ನು ಅಬ್ರಹಾಮನ ಮಗನ ಬದಲಿಗೆ ವೇದಿಯ ಮೇಲೆ ಇಡಲ್ಪಡುವದಕ್ಕಾಗುತ್ತಿರಲಿಲ್ಲ. ಆದರೆ ದೇವರು ಒದಗಿಸಿದ ಆ ಯಜ್ಞಪಶುವು ಕಳಂಕವಿಲ್ಲದ **ಪೂರ್ಣವಾದ ಕುರಿಯಾಗಿತ್ತು.** ತೋರಾದ ಮೊದಲನೆಯ ಅಧ್ಯಾಯದಲ್ಲಿನ ನಮ್ಮ ಅಧ್ಯಯನದಲ್ಲಿ, ದೇವರು ಸ್ಥಾಪಿಸಿದ ರಕ್ಷಣೆಯ ಮಾರ್ಗದ ಕುರಿತು ನಾವು ಕಲಿತುಕೊಂಡಿದ್ದೇವೆ. ಆ ಮಾರ್ಗ ಯಾವುದು ಎಂದು ನಿಮಗೆ ನೆನಪಿದೆಯಾ? ಆದಾಮ ಮತ್ತು ಹವ್ವ ಪಾಪ ಮಾಡಿದ ಮೇಲೆ, ಪಾಪದ ಸಂಬಳ ಮರಣ ಎಂಬುದಾಗಿ ದೇವರು ವಿಧಿಸಿದಂದಿನಿಂದಲೂ ರಕ್ತಧಾರೆಯಿಲ್ಲದೆ ಪಾಪಕ್ಕೆ ಕ್ಷಮಾಪಣೆ –ಯಿರಲಿಲ್ಲ. ಹಾಗಾಗಿ ತಮ್ಮ ಪಾಪಗಳೆಲ್ಲಾ ಕ್ಷಮಿಸಲ್ಪಡಬೇಕೆಂದು ಇಷ್ಟಪಡುವವರೆಲ್ಲರೂ **ಕಳಂಕವಿಲ್ಲದ ಒಂದು ಪ್ರಾಣಿಯನ್ನು** ತೆಗೆದುಕೊಂಡು ದೇವರಿಗೆ ಸರ್ವಾಂಗ ಹೋಮವಾಗಿ ಅರ್ಪಿಸುವದು ಅಗತ್ಯವಾಗಿತ್ತು. ಅಪರಾಧಿ ಮನುಷ್ಯನ ಸ್ಥಾನದಲ್ಲಿ ಮುಗ್ಧ ಪ್ರಾಣಿಯು ಬಲಿಯಾಗಬೇಕಾಗುತ್ತಿತ್ತು. ದೇವರು ತನ್ನ ನ್ಯಾಯವನ್ನು ರಾಜಿ ಮಾಡಿಕೊಳ್ಳದೇ ಆದಾಮನ ಮಕ್ಕಳ ಪಾಪಗಳನ್ನು ಕ್ಷಮಿಸುವಂತ ಮಾರ್ಗ ಇದೊಂದೇ ಆಗಿತ್ತು.

ನಾವು ನೆನಪಿನಲ್ಲಿಡಬೇಕಾದ ಇನ್ನೊಂದು ವಿಷಯವೇನೆಂದರೆ: ಸಂಭವಿಸಬೇಕಾಗಿರುವದಕ್ಕೆ ಕೇವಲ ಒಂದು "ಸಂಕೇತವಾಗಿ ಯಜ್ಞ –ಪಶುಗಳಿದ್ದವು; ಅವು **ತಾವೇ ವಾಸ್ತವಿಕತೆಯುಳ್ಳವುಗಳಲ್ಲ** ಆದರೆ ಬರಬೇಕಾಗಿದ್ದ ಒಳ್ಳೆಯ ಸಂಗತಿಗಳ ಛಾಯೆಗಳಾಗಿದ್ದವು. ಯಾಕೆಂದರೆ ಪಾಪಗಳನ್ನು ತೆಗೆದು ಹಾಕುವದಕ್ಕೆ (ಪ್ರಾಣಿಗಳ) ರಕ್ತಕ್ಕೆ ಸಾಧ್ಯವಿರಲಿಲ್ಲ". (ಇಬ್ರಿಯ–೧೦:೧,೪) ಪಾಪಕ್ಕಾಗಿ ಪ್ರಾಣಿ –ಗಳ ರಕ್ತವು ಕ್ರಯವಾಗಿ ಕೊಡಲ್ಪಡುವದಿಲ್ಲ ಯಾಕೆಂದರೆ ಮನುಷ್ಯರ ಮತ್ತು ಪ್ರಾಣಿಗಳ ಮೌಲ್ಯವು ಸಮಾನವಾದುದಲ್ಲ. ಹಾಗಾಗಿ, ಅಬ್ರಹಾಮನ ಮಗನ ಬದಲಿಗೆ ವೇದಿಯ ಮೇಲೆ ಇಡಲ್ಪಟ್ಟ ಕುರಿಯು **ಒಂದು ದೊಡ್ಡದಾದ ಮತ್ತು ಹೆಚ್ಚು ಸಂಪೂರ್ಣವಾದ ಯಜ್ಞಸಮರ್ಪಣೆಯ ಒಂದು ನಿದರ್ಶನವಾಗಿದೆ** ಎಂಬುದನ್ನು ನಾವು ಕಲಿತುಕೊಂಡಿದ್ದೇವೆ. ತನ್ನನ್ನು ನಂಬುವ ಪ್ರತಿಯೊಬ್ಬರನ್ನೂ ದೇವರು ಕ್ಷಮಿಸುತ್ತಾನೆ ಎಂಬುದಕ್ಕೆ ಈ ಲೋಕಕ್ಕೆ ಒಂದು **ಎಲ್ಲಾ ಪಾಪಿಗಳಿಗಾಗಿ ಸಾಯುವದಕ್ಕಿದ್ದ ಪರಿಶುದ್ಧ ವಿಮೋಚಕನ ಒಂದು ಗುರುತಿನ** ಹಾಗೆ ಅಬ್ರಹಾಮನ ಮಗನ ಸ್ಥಾನದಲ್ಲಿ ಇಡಲ್ಪಟ್ಟ ಕುರಿಯು ಇತ್ತು. ಸಂಕ್ಷಿಪ್ತವಾಗಿ ಹೇಳುವದಾದರೆ, ಇದನ್ನೇ ಅಬ್ರ – –ಹಾಮನ ಯಜ್ಞಪಶುವು ಸೂಚಿಸುತ್ತದೆ. ಇದು ದೇವರ ನೀತಿಯುಳ್ಳ ನ್ಯಾಯತೀರ್ಪಿನಿಂದ ಪಾಪಿಗಳನ್ನು ರಕ್ಷಿಸುವದಕ್ಕೆ ಈ ಲೋಕಕ್ಕೆ ಕಳುಹಿಸುತ್ತೇನೆಂದು ದೇವರು ವಾಗ್ದಾನ ಮಾಡಿದ್ದ ರಕ್ಷಕನ ಒಂದು ನಿದರ್ಶನವಾಗಿದೆ!

ಕಥೆಯ **ಪ್ರವಾದನೆಯ ಪಾರ್ಶ್ವಕ್ಕೆ** ಸಂಬಂಧಿಸಿದಂತೆ, ಬೆಟ್ಟವನ್ನು ಹತ್ತುತ್ತಿರುವಾಗ ಅಬ್ರಹಾಮನು ತನ್ನ ಮಗನಿಗೆ ಏನು ಹೇಳಿದನೆಂದು ನಿಮಗೆ ನೆನಪಿದೆಯಾ? "ಯಜ್ಞಕ್ಕೆ ಬೇಕಾದ **ಕುರಿಯನ್ನು ದೇವರೇ ಒದಗಿಸುವನು"** ಎಂದು ಹೇಳಿದನು. ಟಗರನ್ನು ವಧಿಸಿ ಅದನ್ನು ತನ್ನ ಮಗನ ಸ್ಥಾನದಲ್ಲಿ ಸರ್ವಾಂಗ ಹೋಮವಾಗಿ ಅರ್ಪಿಸಿದ ನಂತರ ಅಬ್ರಹಾಮನು ಏನು ಪ್ರಕಟಿಸಿದನೆಂದು ನಿಮಗೆ ನೆನಪಿ – –ದೆಯಾ? ಅವನು ಯಜ್ಞಸಮರ್ಪಿಸಿದ ಸ್ಥಳವನ್ನು "ಯೆಹೋವನು ಒದಗಿಸುವನು" ಎಂದು ಕರೆದನು. ತೋರಾವನ್ನು ಬರೆದಿ – –ರುವ ಪ್ರವಾದಿಯಾದ ಮೋಶೆಯು ಇದಕ್ಕೆ ಕೂಡಿಸುತ್ತಾ: "ಯೆಹೋವನ ಬೆಟ್ಟದಲ್ಲಿ ಒದಗುವದು ಎಂದು ಇಂದಿನವರೆಗೂ ಹೇಳು –ವದುಂಟಲ್ಲಾ!" ಇದಕ್ಕೆ ಕಾರಣವೇನು? "ಯೆಹೋವನು ಒದಗಿಸುವನು" ಎಂಬುದಾಗಿ ಪ್ರವಾದಿಯಾದ ಅಬ್ರಹಾಮನು ಯಾಕೆ ಹೇಳಿದನು? "ದೇವರಿಗೆ ಸ್ತೋತ್ರ! ಕರ್ತನು ಒಂದು ಯಜ್ಞಪಶುವನ್ನು ಒದಗಿಸಿದನು!" ಎಂದು ಯಾಕೆ ಅವನು ಹೇಳಲಿಲ್ಲ? ಸ್ನೇಹಿತರೇ, ಇದು ಒಂದು **ಭಯಂಕರವಾದ ಮುಖ್ಯ** ಪ್ರಶ್ನೆಯಾಗಿದೆ, ಯಾಕೆಂದರೆ ಇದು ಒಳಗೊಂಡಿರುವ ಉತ್ತರವು ನಾವು ಪ್ರತಿ – ಯೊಬ್ಬರೂ ಅರ್ಥಮಾಡಿಕೊಂಡು ನಂಬಲೇಬೇಕಾದಂತ ದೇವರ ವಾಕ್ಯದ ಶುಭ ಸಂದೇಶವಾಗಿದೆ.!

ಅಬ್ರಹಾಮನು ಆ ಸ್ಥಳವನ್ನು "ಯೆಹೋವನು ಒದಗಿಸುವನು" ಎಂದು ಯಾಕೆ ಕರೆದನು? ಯಾಕೆಂದರೆ: ಯಜ್ಞವೇದಿಯ ಮೇಲೆ ತನ್ನ ಮಗನಿಗೆ ಬದಲಾಗಿ ಕುರಿಯು ಇಡಲ್ಪಟ್ಟ **ಅದೇ ಬೆಟ್ಟದ ಮೇಲೆ ಒಂದು ಸಂಗತಿಯು ಸಂಭವಿಸಲಿಕ್ಕಿದೆಯೆಂದು ಅಬ್ರಹಾಮನು ಪ್ರಕಟಿಸಿದ್ದನು.** ಸಂಕ್ಷಿಪ್ತವಾಗಿ ಹೇಳುವದಾದರೆ, ಅಬ್ರಹಾಮನು, "ನಾನು ದೇವರನ್ನು ಸ್ತುತಿಸುತ್ತೇನೆ, ಯಾಕೆಂದರೆ ಯಜ್ಞವೇದಿಯ ಮೇಲೆ ನನ್ನ ಮಗನಿಗೆ ಬದಲಾಗಿ ಅರ್ಪಿಸುವದಕ್ಕೆ ದೇವರು ಒಂದು ಕುರಿಯನ್ನು ಒದಗಿಸಿದನು. ಹೇಗೂ, ನಾನು ನಿಮಗೆ ಹೇಳುವ –ದೇನೆಂದರೆ, ಬೆಂಕಿ ಮತ್ತು ಕತ್ತಿಯಿಂದ ನನ್ನ ಮಗನನ್ನು ರಕ್ಷಿಸಿದಂತ ಟಗರಿಗಿಂತಲೂ ತುಂಬಾ ದೊಡ್ಡದಾದ **ಇನ್ನೊಂದು ಯಜ್ಞ – –ಪಶುವನ್ನು ದೇವರು ಒಂದು ದಿನ ಇದೇ ಬೆಟ್ಟದ ಮೇಲೆ ಒದಗಿಸುತ್ತಾನೆ.** ಹೌದು, ಎಂದಿಗೂ ಕಡಿಮೆಯಾಗದಿರುವ ಬೆಂಕಿಯ – ಲ್ಲಿನ ನಿತ್ಯವಾದ ಮರಣದಿಂದ ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ ಶಕ್ತಿಯನ್ನು ಹೊಂದಿರುವಂತ ಯಜ್ಞಪಶುವನ್ನು ದೇವರು ಒದ –ಗಿಸುತ್ತಾನೆ! ಅಪರಾಧಿಗಾಗಿ ನಿರಪರಾಧಿಯು ಯಜ್ಞಪಶುವಿನ ಹಾಗೆ ಸಾಯುವಂತ ಪರಿಶುದ್ಧ ವಿಮೋಚಕನನ್ನು ದೇವರು ಕಳುಹಿಸ –ಲಿದ್ದಾನೆ, ಹಾಗಾಗಿ ಯಾರ್ಯಾರು ಆತನನ್ನು ನಂಬುತ್ತಾರೋ ಅವರು ನಾಶವಾಗುವದಿಲ್ಲ!" ಎಂದು ದೃಢವಾಗಿ ಹೇಳಿದನು. "ಯಜ್ಞ –ಕ್ಕಾಗಿ **ಕುರಿಯನ್ನು** ಯೆಹೋವನೇ ಒದಗಿಸುವನು!" ಎಂದು ಅಬ್ರಹಾಮನು ಹೇಳಿರುವಂತ ಈ ಮಾತೇ ಎಲ್ಲಾ ಜನರಿಗೆ ದೇವರ ಶುಭ ಸಂದೇಶವಾಗಿದೆ.

ಈ ದಿನ "ಅಬ್ರಹಾಮನ ತ್ಯಾಗ" ಎಂಬ ಕಥೆಯನ್ನು ಮುಗಿಸುವದಕ್ಕಿಂತ ಮುಂಚೆ, ನಾವು ಪ್ರತಿಯೊಬ್ಬರೂ ಅಗತ್ಯವಾಗಿ ತಿಳಿದುಕೊಳ್ಳ ಬೇಕಾಗಿರುವದೇನೆಂದರೆ, ದೇವರು ಪಾಪಿಗಳಿಗಾಗಿ ಒಂದು ಯಜ್ಞಪಶುವನ್ನು ಒದಗಿಸುತ್ತಾನೆ ಎಂದು ಅಬ್ರಹಾಮನು ಪ್ರವಾದಿಸಿದ್ದನ್ನು ಅಂದಾಜು ಎರಡು ಸಾವಿರ ವರ್ಷಗಳ ನಂತರ **ದೇವರು ಅಬ್ರಹಾಮನ ಪ್ರವಾದನೆಯನ್ನು ನೆರವೇರಿಸಿದನು.** ಈ ದಿನ ಇದರ

ಕುರಿತು ಹೆಚ್ಚಾಗಿ ನಾವು ಹೇಳುವದಿಲ್ಲ, ಆದರೆ ಸುವಾರ್ತೆ{ಇಂಜಿಲ್} ಯನ್ನು ತಿಳಿದುಕೊಂಡಿರುವ ನೀವು ವಿಮೋಚಕನ ಕಥೆಯನ್ನು ತಿಳಿದುಕೊಳ್ಳಿರಿ. ದೇವರು ವಾಗ್ದಾನ ಮಾಡಿದ ಹಾಗೆಯೇ ಅಬ್ರಹಾಮ ಮತ್ತು ಇಸಾಕನ ಸಂತತಿಯ ಕುಟುಂಬಕ್ಕೆ ಸೇರಿದವಳಾದ ಒಬ್ಬ ಕನ್ಯಾ ಸ್ತ್ರೀಯಲ್ಲಿ ಆತನು ಹುಟ್ಟಿದ್ದಾನೆಂದು ನಿಮಗೆ ತಿಳಿದದೆ. ಪಾಪಿಗಳ ಸ್ಥಾನದಲ್ಲಿ ಮರಣ ಹೊಂದಿದಂತ ವಿಮೋಚಕನು ಲೌಕಿಕ ತಂದೆಯನ್ನು ಹೊಂದಿದವನಲ್ಲ. ಆತನು ಪರಲೋಕದಿಂದ ಬಂದವನು ಹಾಗಾಗಿ ಆದಾಮನ ಪಾಪದ ಸ್ವಭಾವವನ್ನು ಪೂರ್ವಜರಿಂದ ಪಡೆದುಕೊಳ್ಳಲಿಲ್ಲ. ಅವನು ಪಾಪರಹಿತನೂ ಮತ್ತು ನಿಷ್ಕಳಂಕನೂ ಅಗಿದ್ದನು. ಅದಕ್ಕೋಸ್ಕರವೇ ಆತನು ಆದಾ –ಮನ ಮಕ್ಕಳ ಅಪರಾಧಕ್ಕಾಗಿ ಒಬ್ಬ ಬದಲಿಯವನ ಹಾಗೆ ಮತ್ತು **ಸಂಪೂರ್ಣ ಸಮರ್ಪಣೆಯ** ಹಾಗೆ ಸಾಯುವದಕ್ಕೆ ಅರ್ಹ – –ನಾಗಿದ್ದನು. ನಾವು ಸುವಾರ್ತೆಗೆ ಬಂದಾಗ ಈ ರಕ್ಷಕನ ಹೆಸರು **ಯೇಸು** ಎಂಬುದಾಗಿ ತಿಳಿದುಕೊಳ್ಳುತ್ತೇವೆ. ಯೇಸು ಎಂಬ ಹೆಸರಿನ ಅರ್ಥವೇನೆಂದರೆ **ದೇವರು ರಕ್ಷಿಸುತ್ತಾನೆ** ಎಂಬುದು. ಕೆಲವರು ಯೇಸುವನ್ನು **"ಈಸಾ"** ಎಂದು ಕರೆಯುತ್ತಾರೆ. {ಇದರ ಮೇಲಿನ ಹೆಚ್ಚಿನದಕ್ಕೆ ೬೧ನೆಯ ಪಾಠವನ್ನು ನೋಡಿರಿ}

ನಾವು ಸುವಾರ್ತಾ ಬರವಣಿಗೆಗಳಿಗೆ ಬಂದಾಗ{ಇಂಜಿಲ್} ವಿಮೋಚಕನಾದ ಯೇಸುವಿನ ಮುಂದೆ ದಾರಿಯನ್ನು ಸಿದ್ಧಪಡಿಸುವದಕ್ಕೆ ದೇವರು ಕಳುಹಿಸಿದ ಯೋಹಾನನೆಂಬ{ಕುರಾನಿನ ಹೆಸರು: ಯಾಹ್ಯಾ} ಹೆಸರಿನ ಒಬ್ಬ ಪ್ರವಾದಿಯು ಹೇಗಿದ್ದನೆಂಬುದನ್ನು ನಾವು ಓದುತ್ತೇವೆ. ಒಂದು ದಿನ ತನ್ನ ಕಡೆಗೆ ಬರುತ್ತಿರುವ ಯೇಸುವನ್ನು ನೋಡಿದ ಯೋಹಾನನು, **"ಇಗೋ ದೇವರ ಕುರಿಮರಿ,** ಲೋಕದ ಪಾಪವನ್ನು ನಿವಾರಣೆ ಮಾಡುವವನು!" ಎಂದು ಹೇಳಿದನು (ಯೋಹಾನ–೧:೨೯). ಯೋಹಾನನು ಯೇಸುವನ್ನು **"ದೇವರ ಕುರಿಮರಿ"** ಎಂದು ಯಾಕೆ ಕರೆದನು? ಯಾಕೆಂದರೆ ಪಾಪವನ್ನು ತೆಗೆದು ಹಾಕುವಂತಹ ಯಜ್ಞಪಶುವಿನ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕೆ ಯೇಸು ಹುಟ್ಟಿದ್ದು. **ಅಬ್ರಹಾಮನ ಮಗನ ಬದಲಿಗೆ ಸತ್ತಂತ ಕುರಿಯ ಹಾಗೆ ಅದಾಮನ ಎಲ್ಲಾ ಸಂತತಿ – –ಯವರಿಗಾಗಿ ಸಾಯುವದಕ್ಕೆ ವಿಮೋಚಕನು ಬಂದನು. "ದೇವರು ತಾನೇ ಯಜ್ಞಕ್ಕಾಗಿ ಕುರಿಯನ್ನು ಒದಗಿಸುತ್ತಾನೆ"** ಎಂದು ಅಬ್ರಹಾಮನು ಪ್ರವಾದಿಸಿ ಹೇಳಿದಂತ ಸಂಪೂರ್ಣವಾದ ಮತ್ತು ಅಂತಿಮ ಯಜ್ಞವು ಯೇಸುವೇ ಆಗಿದ್ದನು.

ಯೇಸು ಸ್ವಇಚ್ಛೆಯಿಂದ ಹೇಗೆ ತನ್ನ ಶತ್ರುಗಳಿಗೆ ತನ್ನನ್ನೇ ತಲುಪಿಸಿಕೊಂಡ ಮತ್ತು ಅವರು ಆತನನ್ನು ಹೇಗೆ ಶಿಲುಬೆಗೆ ಜಡಿದ – –ರೆಂಬುದನ್ನು ನಾವು ಸುವಾರ್ತೆಯಲ್ಲಿ ಓದುತ್ತೇವೆ. **ದೇವರು ಒದಗಿಸಿದ ವಿಮೋಚಕನಾದ ಯೇಸುವು ಅಬ್ರಹಾಮನ ಸಮರ್ಪಣೆಯ ಕುರಿಯ ಸಾಂಕೇತಿಕ ಮತ್ತು ಪ್ರವಾದನೆಯ ಅರ್ಥವನ್ನು ನೆರವೇರಿಸಿದನು.** ಅದಕ್ಕಾಗಿಯೇ, ಯೇಸು ಸಾಯುವದಕ್ಕಿಂತ ಮುಂಚೆ **"ತೀರಿತು!"** ಎಂಬುದಾಗಿ ಕೂಗಿದನು (ಯೋಹಾನ–೧೯:೩೦). {ಉಲೂಫ್: "ಎಲ್ಲವೂ ಸಮಾಪ್ತವಾಯಿತು/ಸಂಪೂರ್ಣವಾಯಿತು"). ಮೂರು ದಿವಸಗಳಾದ ನಂತರ ಮರಣದಿಂದ ಆತನನ್ನು ಎಬ್ಬಿಸುವದರ ಮೂಲಕ ವಿಮೋಚಕನ ಸಮರ್ಪಣೆಯ ಬಲವನ್ನೂ ಮತ್ತು ಸಂಪೂರ್ಣತೆಯನ್ನೂ ದೇವರು ದೃಢಪಡಿಸಿದನು! **ಯೇಸು ಅಬ್ರಹಾಮನ ಯಜ್ಞಸಮರ್ಪಣೆಯ ಅರ್ಥವನ್ನು ಸಂಪೂರ್ಣ – –ವಾಗಿ ನೆರವೇರಿಸಿದನು.** ಅಬ್ರಹಾಮನು ತನ್ನ ಮಗನ ಸ್ಥಾನದಲ್ಲಿ ವಧಿಸಿದಂತ ಅದೇ ಬೆಟ್ಟದಲ್ಲಿಯೇ ಯೇಸು ಪಾಪಿಗಳ ಬದಲಿಗೆ ಮರಣ ಹೊಂದಿದ್ದ ಸ್ಥಳವಾಗಿದೆ ಎಂಬುದು ನಿಮಗೆ ತಿಳಿದಿದೆಯಾ? ಆ ಎರಡು ಯಜ್ಞಗಳು ಸಮರ್ಪಣೆಯಾಗಲು ನೇಮಿಸಲ್ಪಟ್ಟ ಸ್ಥಳ ನಿಮಗೆ ಗೊತ್ತಾ? ಹೌದು ಅದು ಯೆರೂಸಲೇಮ್.

ಪ್ರೀತಿಯ ಸ್ನೇಹಿತರೇ, ನೀವು ಯಾರೇ ಆಗಿರಲಿ, ಎಲ್ಲಿಯೇ ಇರಲಿ, ನಿಮ್ಮ ತಪ್ಪಾದ ಕಲ್ಪನೆಗಳು ಮತ್ತು ವ್ಯರ್ಥ ಕೆಲಸಗಳಿಂದ ತಿರುಗಿಕೊಳ್ಳಿರಿ ಎಂದು ಮತ್ತು ದೇವರು ಒದಗಿಸಿದ ಸಂಪೂರ್ಣವಾದ ಮತ್ತು ಅಂತಿಮವಾದ ಯಜ್ಞದಲ್ಲಿ ನಿಮ್ಮ ಸಮಗ್ರವಾದ ನಂಬಿಕೆಯನ್ನಿಡಿರಿ ಎಂದು ದೇವರು ಆಜ್ಞಾಪಿಸುತ್ತಿದ್ದಾನೆ. ವಾಕ್ಯಗಳು ಹೇಳುವದೇನೆಂದರೆ: "ನಾವು ಪಾಪದ ಪಾಲಿಗೆ ಸತ್ತು ನೀತಿ ವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು." (೧ಪೇತ್ರ–೨:೨೪). ದೇವರು ತನಗಾಗಿ ಒದಗಿಸಿದ ಯಜ್ಞವನ್ನು ಅಬ್ರಹಾಮನ ಮಗನು ಒಪ್ಪಿಕೊಂಡನು ಎಂಬುದನ್ನು ಈದಿನ ನಾವು ನೋಡಿಕೊಂಡೆವು. ನಿಮ್ಮ ಕುರಿತು ಏನು? **ನಿಮಗಾಗಿ ದೇವರು ಒದಗಿಸಿ – ರುವ ಯಜ್ಞವನ್ನು ನೀವು ಒಪ್ಪಿಕೊಂಡಿದ್ದೀರಾ?**

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .ಮೋರಿಯ ಬೆಟ್ಟದ ಮೇಲಿಂದ ಅಬ್ರಹಾಮನು ಹೇಳಿದ ಮಾತಿನ ಅರ್ಥವನ್ನು ನೀವು ಜಾಗರೂಕತೆಯಿಂದ ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಹೋಮಕ್ಕೆ ಬೇಕಾದ ಕುರಿಯನ್ನು ದೇವರೇ ಒದಗಿಸುವನು. . . .ಯೆಹೋವನ ಬೆಟ್ಟದಲ್ಲಿ ಒದಗುವದು!"** (ಆದಿ–೨೨:೮,೧೪).

ಪಾಠ ೨೩

# ಏಸಾವ ಮತ್ತು ಯಾಕೋಬ:
# ಐಹಿಕ ಮತ್ತು ನಿತ್ಯತ್ವ

ಆದಿಕಾಂಡ ೨೫

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, **ಅಬ್ರಹಾಮನ ತ್ಯಾಗದ{"ಈದ್ ಅಲ್–ಆಧಾ"}** ಕಥೆಯನ್ನು ನೋಡಿಕೊಂಡೆವು. ಸುವಾರ್ತೆಯು {ಇಂಜಿಲ್} ಈ ರೀತಿಯಲ್ಲಿ ಹೇಳುವಾಗ ಈ ಪ್ರಾಮುಖ್ಯವಾದ ಕಥೆಯ ಒಂದು ಆಸಕ್ತಿ ಹುಟ್ಟಿಸುವಂತ ಸಾರಾಂಶವನ್ನು ನಮಗೆ ಕೊಡುತ್ತದೆ.

"ಅಬ್ರಹಾಮನು ಪರಿಶೋಧಿತನಾಗಿ ನಂಬಿಕೆಯಿಂದಲೇ ಇಸಾಕನನ್ನು ಸಮರ್ಪಿಸಿದನು. ಇಸಾಕನು ಅವನ ಏಕಪುತ್ರನಾಗಿದ್ದರೂ ಮತ್ತು ಇಸಾಕನಿಂದ ಹುಟ್ಟುವವರೇ ನಿನ್ನ ಸಂತತಿ ಅನ್ನಿಸಿಕೊಳ್ಳುವರೆಂದು ದೇವರು ಅವನಿಗೆ ಹೇಳಿದ್ದರೂ ಆ ವಾಗ್ದಾನಗಳನ್ನು ಹೊಂದಿದ ಅವನು ಒಬ್ಬನೇ ಮಗನನ್ನು ಸಮರ್ಪಿಸುವದಕ್ಕಿದ್ದನು. ತನ್ನ ಮಗನು ಸತ್ತರೂ ದೇವರು ಅವನನ್ನು ಬದುಕಿಸ ಸಮರ್ಥ–ನಾಗಿದ್ದಾನೆಂದು ತಿಳುಕೊಂಡನು. ಮತ್ತು ಸತ್ತವರೊಳಗಿಂದಲೇ ಜೀವಿತನಾಗಿ ಬಂದವನಂತೆ ಅವನನ್ನು ಹೊಂದಿದನು."
(ಇಬ್ರಿಯ–೧೧:೧೭–೧೯) .

ನಮ್ಮ ಹಿಂದಿನ ಐದು ಪಾಠಗಳಲ್ಲಿ ಪ್ರವಾದಿಯಾದ ಅಬ್ರಹಾಮನ ಜೀವನದಿಂದ ಕಥೆಗಳು ತೆಗೆದುಕೊಳ್ಳಲ್ಪಟ್ಟಿದ್ದವು. ಅಬ್ರಹಾಮನ ಕುರಿತಾಗಿ ನಾವು ಪರಿಶೋಧಿಸದಿರುವಂತ ಇನ್ನೂ ಅನೇಕ ಕಥೆಗಳು ತೋರಾದಲ್ಲಿವೆ. ದುರದೃಷ್ಟವಶಾತ್ ಅವೆಲ್ಲವನ್ನೂ ಓದುವದಕ್ಕೆ ಈದಿನ ನಮಗೆ ಸಮಯವಿಲ್ಲ. ಹೇಗೂ, ನಾವು ಅಬ್ರಹಾಮನನ್ನು ಬಿಟ್ಟು ಅವನ ಸಂತತಿಗಳ ವಿಷಯಕ್ಕೆ ಹೋಗುವದಕ್ಕಿಂತ ಮೊದಲು ದೇವರು ಅಬ್ರಹಾಮನಿಗೆ ಹೇಳಿರುವಂತ ಒಂದು ವಿಷಯದ ಕುರಿತು ನಾವು ತಿಳಿದುಕೊಳ್ಳಬೇಕಾಗಿದೆ. ಅವನ ಸಂತಾನಕ್ಕೆ ಏನಾಗುತ್ತದೆಂದು ಒಂದು ದಿನ ದೇವರು ಅಬ್ರಹಾಮನಿಗೆ ಹೀಗೆ ಹೇಳಿದನು:

"ನೀನು ಚೆನ್ನಾಗಿ ತಿಳಿಯತಕ್ಕದ್ದೇನೆಂದರೆ – **ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗವನ್ನು ನಾನು ಶಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು."** (ಆದಿ–೧೫:೧೩,೧೪)

ಅಬ್ರಹಾಮನ ಸಂತತಿಯವರು ಐಗುಪ್ತ ದೇಶದಲ್ಲಿ ಗುಲಾಮರಾಗಿರುವರು ಎಂಬುದನ್ನು ಆ ಮಾತುಗಳಿಂದ ದೇವರು ಪ್ರಕಟಿಸಿದ್ದನು. ನಾನೂರು ವರ್ಷಗಳ ನಂತರ ಐಗುಪ್ತ ಜನರ ಆಳ್ವಿಕೆಯಿಂದ ಅವರನ್ನು ಬಿಡಿಸುತ್ತೇನೆನ್ನುವದನ್ನೂ ಸಹ ದೇವರು ವಾಗ್ದಾನ ಮಾಡಿ–ದ್ದನು. ಇಲ್ಲಿಯವರೆಗೆ ನಾಲ್ಕು ಪಾಠಗಳಿಂದ ದೇವರ ಚಿತ್ತದಲ್ಲಿ ದೇವರು ಅಬ್ರಹಾಮನಿಗೆ ಹೇಳಿದ ಹಾಗೆ ಈ ಸಮಂಜಸವಾದ ಪ್ರವಾದನೆಗಳು ಹೇಗೆ ನೆರವೇರಿಸಲ್ಪಟ್ಟವು ಎನ್ನುವದನ್ನು ನಾವು ನೋಡುವದಕ್ಕೆ ಆರಂಭಿಸಿದ್ದೇವೆ.

ನಂತರ ಇಪ್ಪತ್ತೈದನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"**ಅಬ್ರಹಾಮನು ತನಗಿದ್ದ ಆಸ್ತಿಯನ್ನೆಲ್ಲಾ ಇಸಾಕನಿಗೆ ಕೊಟ್ಟನು.** ಅಬ್ರಹಾಮನು ನೂರಪ್ಪತ್ತೈದು ವರುಷ ಬದುಕಿದನು. ಅವನು ಪೂರ್ಣಾಯುಷ್ಯದಿಂದ ದಿನತುಂಬಿದ ಮುದುಕನಾಗಿ ಪ್ರಾಣಬಿಟ್ಟು ತನ್ನ ಪಿತೃಗಳ ಬಳಿಗೆ ಸೇರಿದನು. ಅವನ ಮಕ್ಕಳಾದ ಇಸಾಕ್

ಇಷ್ಮಾಯೇಲರು ಹಿತ್ತಿಯನಾದ ಚೋಹರನ ಮಗ ಎಫ್ರೋನನ ಭೂಮಿಯಲ್ಲಿರುವ ಮಕ್ಪೇಲದ ಗವಿಯಲ್ಲಿ ಅವನಿಗೆ ಸಮಾಧಿ ಮಾಡಿ –ದರು. ಅದು ಮಮ್ರೆಗೆ ಪೂರ್ವದಿಕ್ಕಿನಲ್ಲಿರುವದು; ಅಬ್ರಹಾಮನು ಅದನ್ನು ಹಿತ್ತಿಯರಿಂದ ಕೊಂಡುಕೊಂಡಿದ್ದನು; ಅದರಲ್ಲಿ ಅಬ್ರಹಾಮನಿಗೂ ಅವನು ಹೆಂಡತಿಯಾದ ಸಾರಳಿಗೂ ಸಮಾಧಿ ಆಯಿತು." (ಆದಿ–೨೫:೫, ೭–೧೦)

**ಹೀಗೆ, ದೇವರ ಸ್ನೇಹಿತನಾದ ಅಬ್ರಹಾಮನು ತಾನು ತಿಳಿದುಕೊಂಡು ಪ್ರೀತಿಸಿದಂತ ಕರ್ತನ ಪ್ರಸನ್ನತೆಯನ್ನು ಪ್ರವೇಶಿಸಿದನು.**

ದೇವರ ಪ್ರವಾದಿಯಾದ ಅಬ್ರಹಾಮನಿಗೆ ಸಂಬಂಧಪಟ್ಟ ನಮ್ಮ ಪಾಠವನ್ನು ನಾವು ಹೇಗೆ ಸಂಕ್ಷಿಪ್ತಗೊಳಿಸಿ ಮುಗಿಸುತ್ತೇವೆ? ಬಹು ಮಟ್ಟಿಗೆ ಎರಡು ಪ್ರಶ್ನೆಗಳು ಮತ್ತು ಅವುಗಳ ಉತ್ತರಗಳೊಂದಿಗೆ ಮುಗಿಸಬಹುದು. ಮೊದಲನೆಯ ಪ್ರಶ್ನೆ: **ಸ್ವದೇಶವನ್ನು ಬಿಟ್ಟು ಇನ್ನೊಂದು ದೇಶಕ್ಕೆ ಹೋಗುವಂತೆ ದೇವರು ಅಬ್ರಹಾಮನಿಗೆ ಯಾಕೆ ಕೇಳಿದನು?** ಉತ್ತರ: ಯಾಕೆಂದರೆ ಲೋಕದೊಳಕ್ಕೆ ವಿಮೋಚಕನು ಬರಬೇಕಾಗಿದ್ದ ಒಂದು ಹೊಸ ಜನಾಂಗವನ್ನಾಗಿ ಅಬ್ರಹಾಮನನ್ನು ಮಾಡಬೇಕೆಂದು ದೇವರು ಯೋಜನೆ ಮಾಡಿ – –ಕೊಂಡಿದ್ದನು. ಎರಡನೆಯ ಪ್ರಶ್ನೆ: **ದೇವರು ಅಬ್ರಹಾನನ್ನು ಒಬ್ಬ ನೀತಿವಂತನೆಂಬುದಾಗಿ ತೀರ್ಮಾನಿಸಿ ತನ್ನ ಪರಿಶುದ್ಧ ಪ್ರಸನ್ನತೆ –ಯೊಳಗೆ ಎಂದೆಂದಿಗೂ ಇರುವಂತೆ ಯಾಕೆ ಅಂಗೀಕರಿಸಿಕೊಂಡನು?** ಉತ್ತರ: ಯಾಕೆಂದರೆ ಸುಲಭವಾದದ್ದಲ್ಲದಿದ್ದಾಗ್ಯೂ ಸಹ ಅಬ್ರಹಾಮನು ದೇವರು ಹೇಳಿದ್ದನ್ನು ನಂಬಿದನು. ದೇವರ ವಾಗ್ದಾನಗಳಲ್ಲಿನ ನಂಬಿಕೆಯಿಂದ ಅಬ್ರಹಾಮನು ರಕ್ಷಿಸಲ್ಪಟ್ಟನೇ ಹೊರತು ತನ್ನ ಸ್ವಂತ ಕೆಲಸಗಳಿಂದಲ್ಲ. ಇದಕ್ಕಾಗಿಯೇ ವಾಕ್ಯವು ಹೇಳುವದೇನೆಂದರೆ: **"ಅಬ್ರಹಾಮನು ದೇವರನ್ನು ನಂಬಿದನು;** ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು. ಮತ್ತು ದೇವರ ಸ್ನೇಹಿತನೆಂಬ ಹೆಸರು ಅವನಿಗೆ ಉಂಟಾಯಿತು." (ಯಾಕೋಬ– ೨:೨೩).

ಆದಿಕಾಂಡ ಪುಸ್ತಕದ ಇಪ್ಪತ್ತೈದನೆಯ ಅಧ್ಯಾಯದಲ್ಲಿ, ಅಬ್ರಹಾಮನ ಸಂತತಿಯವರ ಚರಿತ್ರೆಯೊಂದಿಗೆ ವಾಕ್ಯಗಳು ಮುಂದುವರಿಯು –ತ್ತವೆ. ಈಗ ತೋರಾದಲ್ಲಿರುವದನ್ನು ಮುಂದುವರಿಸಿ **ಇಸಾಕ ಮತ್ತು ಅವನ ಅವಳಿ ಮಕ್ಕಳ** ಕಥೆಯನ್ನು ಕಲಿತುಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

ಅಬ್ರಹಾಮನ ಮಗನಾದ ಇಸಾಕನ ಚರಿತ್ರೆ. **ಅಬ್ರಹಾಮನು** ಇಸಾಕನನ್ನು ಪಡೆದನು. **ಇಸಾಕನು** ನಾಲ್ವತ್ತು ವರುಷದವನಾದಾಗ ಅರಾಮ್ಯನಾದ ಬೆತೂವೇಲನ ಮಗಳಾಗಿಯೂ ಅರಾಮ್ಯನಾದ ಲಾಬಾನನ ತಂಗಿಯಾಗಿಯೂ ಇದ್ದ ರೆಬೆಕ್ಕಳನ್ನು ಪದ್ದನ್ ಅರಾಮಿ –ನಿಂದ ತರಿಸಿ ಹೆಂಡತಿಯಾಗಿ ಮಾಡಿಕೊಂಡನು. ಆಕೆ ಬಂಜೆಯಾಗಿರಲಾಗಿ ಅವನು ಆಕೆಗೋಸ್ಕರ ಯೆಹೋವನನ್ನು ಬೇಡಿ –ಕೊಂಡನು. ಯೆಹೋವನು ಅವನ ವಿಜ್ಞಾಪನೆಯನ್ನು ಲಾಲಿಸಿದ್ದರಿಂದ ರೆಬೆಕ್ಕಳು ಬಸುರಾದಳು. ಆಕೆಯ ಗರ್ಭದಲ್ಲಿ ಶಿಶುಗಳು ಒಂದನ್ನೊಂದು ನೂಕಿಕೊಂಡಾಗ ಆಕೆಯು – ಹೀಗಾದರೆ ನಾನು ಯಾಕೆ ಬದುಕಬೇಕು ಎಂದು ಹೇಳಿ ಇದರ ವಿಷಯದಲ್ಲಿ ಯೆಹೋವನ ಸನ್ನಿಧಿಯಲ್ಲಿ ವಿಚಾರಿಸುವದಕ್ಕೆ ಹೋದಳು. ಯೆಹೋವನು ಆಕೆಗೆ – "ನಿನ್ನ ಗರ್ಭದಲ್ಲಿ **ಎರಡು ಜನಾಂಗಗಳು** ಅವೆ; ಆ ಎರಡು ಜನಾಂಗಗಳು ಜನ್ಮಾರಭ್ಯ ವಿರೋಧದಿಂದ ಭೇದವಾಗುವವು; ಅವುಗಳಲ್ಲಿ ಒಂದು ಮತ್ತೊಂದಕ್ಕಿಂತ ಬಲಿಷ್ಠ – –ವಾಗುವದು; **ಹಿರಿಯದು ಕಿರಿಯದಕ್ಕೆ ಸೇವೆ ಮಾಡುವದು** ಎಂದು ಹೇಳಿದನು." (ಆದಿ–೨೫:೧೯–೨೩)

ಆಕೆ ದಿನತುಂಬಿದಾಗ **ಅವಳಿ** ಮಕ್ಕಳನ್ನು ಹೆತ್ತಳು. ಮೊದಲು ಹುಟ್ಟಿದ್ದು ಕೆಂಪಾಗಿಯೂ ಮೈಮೇಲೆಲ್ಲಾ ಕೂದಲಿನ ವಸ್ತ್ರದಂತೆ ರೋಮವುಳ್ಳದ್ದಾಗಿಯೂ ಇತ್ತು; ಅದಕ್ಕೆ **ಏಸಾವ** ಎಂದು ಹೆಸರಿಟ್ಟರು. ಎರಡನೆಯ ಶಿಶುವು ಏಸಾವನ ಹಿಮ್ಮಡಿಯನ್ನು ಕೈಯಿಂದ ಹಿಡುಕೊಂಡು ಹುಟ್ಟಿದ್ದರಿಂದ ಅದಕ್ಕೆ **ಯಾಕೋಬ** ಎಂದು ಹೆಸರಿಟ್ಟರು. ಇವರು ಹುಟ್ಟಿದಾಗ ಇಸಾಕನು ಅರವತ್ತು ವರುಷದವ – –ನಾಗಿದ್ದನು. ಆ ಹುಡುಗರಿಬ್ಬರೂ ಬೆಳೆದಾಗ ಅವರಲ್ಲಿ ಏಸಾವನೆಂಬವನು ಬೇಟೆಯಾಡುವದರಲ್ಲಿ ಜಾಣನಾದನು; ಅವನು ಅರಣ್ಯವಾಸಿ. ಯಾಕೋಬನು ಸಾಧು ಮನುಷ್ಯನಾಗಿ ಗುಡಾರಗಳಲ್ಲೇ ವಾಸಿಸಿದನು. (೨೫:೨೪–೨೭)

ಹೀಗೆ, ಇಸಾಕ ಮತ್ತು ರೆಬೆಕ್ಕರು ಅವಳಿ ಮಕ್ಕಳನ್ನು ಪಡೆದರು ಮತ್ತು ಅವರಿಗೆ **ಏಸಾವ** ಮತ್ತು **ಯಾಕೋಬ** {ಅರೆಬಿಕ್‌ನಲ್ಲಿ ಯಾಖೂಬ್} ಎಂದು ಹೆಸರಿಟ್ಟರು ಎಂಬುದನ್ನು ನಾವು ನೋಡುತ್ತೇವೆ. ಅವರು ಅವಳಿ ಮಕ್ಕಳು ಆದರೆ ಅವರು ಒಂದೇ ರೀತಿ –ಯಾಗಿದ್ದರು ಎಂದು ಇದರ ಅರ್ಥವಲ್ಲ! ಏಸಾವನು ಬೆಳೆದು ದೊಡ್ಡವನಾದಂತೆ ತಾತ್ಕಾಲಿಕವಾದಂತ **ಪ್ರಾಪಂಚಿಕ ಸಂಗತಿಗಳ** ಮೇಲೆ ಮಾತ್ರ ತನ್ನ ಒಲುಮೆಗಳನ್ನು ಇಟ್ಟುಕೊಂಡನು, ಆದರೆ ಯಾಕೋಬನು ಎಂದೆಂದಿಗೂ ಇರುವಂತಹ **ದೇವರ ಸಂಗತಿಗಳ** ಮೌಲ್ಯವನ್ನು ಕಂಡುಕೊಂಡನು. ಏಸಾವನು ತನ್ನ ತಂದೆಯಾದ ಇಸಾಕ ಮತ್ತು ಅಜ್ಜನಾದ ಅಬ್ರಹಾಮನಿಂದ ಉದಯವಾಗಲಿದ್ದ ಹೊಸ ಜನಾಂಗದ ಕುರಿತಾಗಿ ದೇವರು ಅವರಿಗೆ ಮಾಡಿದ ವಾಗ್ದಾನಗಳ ವಿಷಯದಲ್ಲಿ ಲಕ್ಷ್ಯವಿಲ್ಲದವನಾಗಿದ್ದ. ಹೇಗೂ ಯಾಕೋಬನು ದೇವರ ವಾಗ್ದಾನಗಳ ಕುರಿತು ಗಮನವುಳ್ಳವನಾಗಿದ್ದ.

ಏಸಾವನು ಚೊಚ್ಚಲ ಮಗನಾಗಿದ್ದನು. ಆದುದರಿಂದ, ಮನುಷ್ಯರ ರೀತಿ ಮಾತಾಡುವದಾದರೆ. ಇವನು ಚೊಚ್ಚಲುತನದ ಪಿತ್ರಾರ್ಜಿತ ಸ್ವಾಸ್ಥ್ಯವನ್ನು ಪಡೆದುಕೊಂಡವನಾಗಿ ಅಬ್ರಹಾಮ ಮತ್ತು ಇಸಾಕರಿಗೆ ದೇವರು ವಾಗ್ದಾನ ಮಾಡಿದಂತ ದೊಡ್ಡ ಜನಾಂಗದ ತಂದೆ – –ಯಾಗಬೇಕು. ಹೇಗೂ, ಅವಳಿ ಮಕ್ಕಳು ಹುಟ್ಟುವದಕ್ಕಿಂತ ಮೊದಲೇ ದೇವರು ಇವನ ತಾಯಿಯಾದ ರೆಬೆಕ್ಕಳಿಗೆ, "ಹಿರಿಯದು

**ಕಿರಿಯದಕ್ಕೆ ಸೇವೆ ಮಾಡುವದು"** ಎಂದು ಹೇಳಿದ್ದನು. (ಆದಿ–೨೫:೨೩). ಚೊಚ್ಚಲುತನದ ಪಿತ್ರಾರ್ಜಿತ ಸ್ವಾಸ್ಥ್ಯವು ಮತ್ತು ಸಂತತಿ – ಗಳ ಹೊಸ ಜನಾಂಗವು **ಯಾಕೋಬನ ಮುಖಾಂತರವಾಗಿ** ಬರುತ್ತದೆಯೇ ಹೊರತು ಏಸಾವನ ಮುಖಾಂತರವಲ್ಲ ಎಂಬುದಾಗಿ ದೇವರು ತಾನು ಮೊದಲೇ ತಿಳಿದದ್ದನ್ನು ಪ್ರಕಟಿಸಿದ್ದನು. ಯಾಕೋಬನಿಗೆ ಸಂಬಂಧಿಸಿದಂತೆ, ಅವನು ದೇವರು ನೇಮಕ ಮಾಡಿದ ಸಮಯದಲ್ಲಿ ಪಿತ್ರಾರ್ಜಿತ ಸ್ವಾಸ್ಥ್ಯವನ್ನು ತನಗೆ ಕೊಡಲು ಶಕ್ತನಿರುವ ಆ ಒಬ್ಬನ ಕೈಯಲ್ಲಿ ಎಲ್ಲವನ್ನೂ ಬಿಟ್ಟು ದೇವರಿಗಾಗಿ ನಿರೀಕ್ಷಿ – –ಸುವವನಾಗಿದ್ದನು. ಹೇಗೂ **ಯಾಕೋಬನು ದೇವರ ಸಮಯಕ್ಕಾಗಿ ಕಾಯಲಿಲ್ಲ**. ಯಾಕೋಬನು ತನ್ನ ಅಣ್ಣನಾದ ಏಸಾವ – – ನಿಂದ ಪಿತ್ರಾರ್ಜಿತ ಬಾಧ್ಯತೆಯನ್ನು ಪಡೆದುಕೊಳ್ಳುವ ಕ್ರಮದಲ್ಲಿ ಹೇಗೆ ಕ್ರಿಯೆ ಮಾಡಿದನೆಂಬುದನ್ನು ನೋಡುವದಕ್ಕೆ ಈಗ ಮುಂದಿನ ವಾಕ್ಯಗಳನ್ನು ಓದಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

ಒಂದು ದಿನ ಯಾಕೋಬನು ಅಡಿಗೆ ಮಾಡುತ್ತಿರುವಾಗ ಏಸಾವನು ಕಾಡಿನಿಂದ ದಣಿದು ಬಂದು ಅವನಿಗೆ– "ನಾನು ಬಹು ದಣಿದು ಬಂದಿದ್ದೇನೆ; ಆ ಕೆಂಪಾದ ರುಚಿ ಪದಾರ್ಥವನ್ನು ಈಗಲೇ ತಿನ್ನುವದಕ್ಕೆ ಕೊಡಪ್ಪಾ ಎಂದು ಹೇಳಿದನು"(ಈ ಸಂಗತಿಯಿಂದ ಏಸಾವನಿಗೆ ಎದೋಮ್ ಎಂದು ಹೆಸರಾಯಿತು). ಯಾಕೋಬನು ಅವನಿಗೆ– "ನೀನು ಮೊದಲು ನಿನ್ನ ಚೊಚ್ಚಲುತನದ ಹಕ್ಕನ್ನು ನನಗೆ ಮಾರಿಬಿಡು" ಅನ್ನಲು ಏಸಾವನು **"ಆಗಲಿ ನನ್ನಂಥ ಸಾಯುವವನಿಗೆ ಚೊಚ್ಚಲುತನದಿಂದ ಪ್ರಯೋಜನವೇನು"** ಅಂದನು. ಯಾಕೋಬನು "ಮೊದಲು ಪ್ರಮಾಣ ಮಾಡು" ಅಂದಾಗ ಏಸಾವನು ಪ್ರಮಾಣ ಮಾಡಿ ಅವನಿಗೆ ತನ್ನ ಚೊಚ್ಚಲತನದ ಹಕ್ಕನ್ನು ಕೊಟ್ಟುಬಿಟ್ಟನು. ಆಗ ಯಾಕೋಬನು ಏಸಾವನಿಗೆ ರೊಟ್ಟಿಯನ್ನೂ ಅಲಸಂದಿ ಗುಗ್ಗರಿಯನ್ನೂ ಕೊಟ್ಟನು. ಏಸಾವನು ತಿಂದು ಕುಡಿದು ಎದ್ದು ಹೋದನು. ಹೀಗೆ ಅವನು ತನ್ನ ಚೊಚ್ಚಲುತನದ ಹಕ್ಕನ್ನು ತಾತ್ಸಾರ ಮಾಡಿದನು. (ಆದಿ–೨೫:೨೯–೩೪)

ಏಸಾವನು ಏನು ಮಾಡಿದನೆಂದು ನಿಮಗೆ ಅರ್ಥವಾಯಿತಾ? ಒಂದು ಸ್ವಲ್ಪ ಆಹಾರಕ್ಕಾಗಿ ಅವನು ತನ್ನ ಚೊಚ್ಚಲುತನದ ಹಕ್ಕನ್ನು ಬದಲುಮಾಡಿಕೊಂಡನು! ಇಬ್ಬರು ಗಂಡು ಮಕ್ಕಳನ್ನು ಹೊಂದಿರುವ ಒಬ್ಬ ಶ್ರೀಮಂತ ವ್ಯಕ್ತಿಯನ್ನು ಊಹಿಸಿಕೊಳ್ಳಿರಿ. ಇವನಿಗೆ ಹೊಲಗದ್ದೆಗಳು ಮನೆಗಳು ಬೇಕಾದಷ್ಟು ಹಣ ಮತ್ತು ಎಲ್ಲಾ ಶ್ರೀಮಂತಿಕೆಗಳಿದ್ದವು. ಅವನ ಹೆಚ್ಚಿನ ಆಸ್ತಿಯ ಬಾಧ್ಯತೆಯು ಮೊದಲ ಮಗನಿಗಿತ್ತು. ಹೇಗೂ ಒಂದು ದಿನ, ಅರಣ್ಯದಿಂದ ಬರುತ್ತಿದ್ದ ಹಿರಿಯವನು ತನ್ನ ತಮ್ಮನು ದಾರಿಯ ಬದಿಯಲ್ಲಿ ಮೀನಿನ ಅಡಿಗೆ {ಸೆನೆಗಲ್‌ನ ರಾಷ್ಟ್ರೀಯ ಆಹಾರ} ತಯಾರು ಮಾಡುತ್ತಿರುವದನ್ನು ನೋಡಿದನು. ಅವನು ತನ್ನ ತಮ್ಮನಿಗೆ, "ನನಗೆ ಹಸಿವಾಗಿದೆ, ತಿನ್ನುವದಕ್ಕೆ ಸ್ವಲ್ಪ ಆಹಾರವನ್ನು ಕೊಡು ಎಂದು ಕೇಳಿದನು, ಅದಕ್ಕೆ ತಮ್ಮನು ನಾನು ಇದನ್ನು ನಿನಗೆ ಕೊಡುವದಿಲ್ಲ ಆದರೆ ನಾನು ಇದನ್ನು ನಿನಗೆ ಮಾರುತ್ತೇನೆ ಅಂದನು. ಅದಕ್ಕೆ ಹಿರಿಯವನು, ನೀನು ಇದನ್ನು ಎಷ್ಟು ಹಣಕ್ಕೆ ನನಗೆ ಮಾರುತ್ತೀ ಎಂದು ಕೇಳಿದ್ದಕ್ಕೆ, ಅವನು, ನಿನ್ನ ಚೊಚ್ಚಲುತನದ ಹಕ್ಕಿಗೆ ಇದನ್ನು ಮಾರುತ್ತೇನೆ ಎಂದು ಹೇಳಿದನು. ಇದಕ್ಕೆ ಉತ್ತರಿಸುತ್ತಾ ಹಿರಿಯವನು, ಮಾರಿ ಬಿಡು! ನನಗೆ ಸಾಯುವಷ್ಟು ಹಸಿವಾಗಿದೆ. ಈ ಚೊಚ್ಚಲುತನದಿಂದ ನನಗೇನು ಪ್ರಯೋಜನ?" ಎಂದು ಹೇಳಿದನು. ಹೀಗೆ ಅಣ್ಣನು ತನ್ನ ಇಡೀ ಚೊಚ್ಚಲುತನದ ಹಕ್ಕನ್ನು ತಮ್ಮನಿಗೆ ಕೊಡುತ್ತೇನೆಂದು ಪ್ರಮಾಣಮಾಡಿದನು! ನಂತರ ಮೊದಲನೆಯವನು ಕೆಳಗೆ ಕುಳಿತು ಊಟಮಾಡಿ ಎದ್ದು ತನ್ನ ದಾರಿ ಹಿಡಿದು ಹೋದನು.

ಒಂದು ಬಟ್ಟಲು ಅನ್ನ ಮತ್ತು ಮೀನಿಗಾಗಿ ತನ್ನ ಹೊಲಗದ್ದೆಗಳನ್ನೂ ಮನೆಗಳನ್ನೂ ಮತ್ತು ಆಸ್ತಿಗಳನ್ನು ಹಾಗೂ ಎಲ್ಲಾ ಅಧಿಕಾರ – –ವನ್ನೂ ವಿನಿಮಯ ಮಾಡಿಕೊಂಡ ಈ ಚೊಚ್ಚಲು ಮಗನ ಕುರಿತಾಗಿ ನಾವು ಏನು ಹೇಳುತ್ತೇವೆ? **"ಎಷ್ಟು ಮೂರ್ಖ!"** ಎಂದು ಮಾತ್ರ ನಾವು ಹೇಳುತ್ತೇವೆ. ಈ ಹಿರಿಯ ಮಗನು ತನ್ನ ತಂದೆಯ ಆಶೀರ್ವಾದಗಳನ್ನೂ ಮತ್ತು ಪ್ರಪಂಚದ ಶ್ರೀಮಂತಿಕೆಗಳನ್ನೂ ತಾತ್ಸಾರ ಮಾಡಿದ ಹಾಗೆಯೇ **ಏಸಾವನೂ ಸಹ ದೇವರ ಆಶೀರ್ವಾದಗಳ್ನೂ ಮತ್ತು ನಿತ್ಯತ್ವದ ಸಂಪತ್ತನ್ನೂ ತಾತ್ಸಾರ ಮಾಡಿದನು.** ಏಸಾವನು ತಾತ್ಸಾರ ಮಾಡಿದಂತ ಸಂಗತಿಗಳು ಲೋಕದ ಶ್ರೀಮಂತಿಕೆಗಿಂತಲೂ ಹೆಚ್ಚು ಅಪಾರವಾದ ಮೌಲ್ಯವುಳ್ಳದ್ದಾಗಿತ್ತು. ಯಾಕೆಂ –ದರೆ ಏಸಾವನು ತಾತ್ಸಾರ ಮಾಡಿದಂತಾದ್ದು ಯಾವುದೆಂದರೆ ಅದು ಲೋಕದ ರಕ್ಷಕನು ಬರಬೇಕಾಗಿದ್ದಂತ ಒಂದು ಹೊಸ ಜನಾಂಗದ ಒಂದು ಭಾಗವಾಗಿತ್ತು.

ಏಸಾವ ಮತ್ತು ಯಾಕೋಬನ ಕಥೆಯ ಮುಖಾಂತರವಾಗಿ ದೇವರು ನಮಗೆ ಈ ದಿನ ಏನು ಕಲಿಸುವದಕ್ಕೆ ಬಯಸುತ್ತಾನೆ? ನಾಶ –ವಾಗಿ ಹೋಗುವಂತ ಲೋಕದ ಆಶೆಗಳಿಗಾಗಿ ನಿತ್ಯತ್ವದ ಸಂಪತ್ತುಗಳನ್ನು ವ್ಯಾಪಾರಮಾಡುವದರ ಮುಖಾಂತರ ಏಸಾವನ ಹೆಜ್ಜೆ – –ಜಾಡುಗಳನ್ನು ಅನುಸರಿಸಬೇಡಿರಿ ಎಂದು ನಮ್ಮನ್ನು ಎಚ್ಚರಿಸುವದಕ್ಕೆ ದೇವರು ಇಷ್ಟಪಡುತ್ತಾನೆ. ಇದರ ಕುರಿತಾಗಿ ಕರ್ತನ ಮಾತು ಏನೆಂದು ಹೇಳುತ್ತದೆಂಬುದನ್ನು ಕೇಳಿಸಿಕೊಳ್ಳಿರಿ. ಇದು ಹೇಳುವದೇನೆಂದರೆ:

"ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ–೧೬:೨೬). "ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ಹಿಂಜರಿಯದಂತೆ ಯಾವ ವಿಷವುಳ್ಳ ಬೇರೂ ನಿಮ್ಮಲ್ಲಿ ಚಿಗುರಿ ಅಸಮಾಧಾನವನು ಹುಟ್ಟಿಸಿ ಸಭೆಯವರನ್ನು ಕೆಡಿಸದಂತೆ ಯಾವ ಜಾರನಾಗಲಿ ಏಸಾವನಂತ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಿಂದ ನೋಡಿಕೊಳ್ಳಿರಿ, **ಆ ಏಸಾವನು ಒಂದೇ ಒಂದು ಊಟಕ್ಕೋಸ್ಕರ ತನ್ನ ಚೊಚ್ಚತನದ ಹಕ್ಕನ್ನು ಕೊಟ್ಟುಬಿಟ್ಟನು."** (ಇಬ್ರಿಯ–೧೨:೧೫,೧೬).

ಏಸಾವನು ದೇವರ ಕೃಪೆಯನ್ನು ಕಳೆದುಕೊಂಡನು, ಯಾಕೆಂದರೆ ಅವನು ದೇವರ ಸಂಗತಿಗಳ ಮೌಲ್ಯಗಳನ್ನು ಪರಿಗಣಿಸಲಿಲ್ಲ. ಹಾಗಾಗಿ ದೇವರು ನಮಗೆ ಏಸಾವನ ಹೆಜ್ಜೆಜಾಡಿನಲ್ಲಿ ನಡೆಯಬೇಡಿರಿ ಎಂಬುದಾಗಿ ಎಚ್ಚರಿಸುತ್ತಿದ್ದಾನೆ! ನಾನು ನಿಮಗೆ ಕೊಡ – –ಬೇಕೆಂದು ಇಷ್ಟಪಟ್ಟಿರುವ ಆಶೀರ್ವಾದಗಳನ್ನು ತಾತ್ಸಾರ ಮಾಡಬೇಡಿರಿ ಎಂದು ದೇವರು ನಮಗೆ ಹೇಳುತ್ತಿದ್ದಾನೆ!

ನೀವು ಹೇಗೆ ಆಲೋಚಿಸುತ್ತಿದ್ದೀರಿ? ನಿಮಗೆ ದೇವರ ಆಶೀರ್ವಾದ ಬೇಕಾ? ದೇವರು ನಿಮ್ಮನ್ನು ಪ್ರೀತಿಸಿ ಹೆಚ್ಚಾಗಿ ನಿಮ್ಮನ್ನು ಆಶೀರ್ವದಿಸುವದಕ್ಕೆ ಬಯಸುತ್ತಾನೆ, ಆದರೆ ನೀವು ನಿಮ್ಮ ಜೀವಿತದಲ್ಲಿ ಆತನಿಗೆ ಮೊದಲ ಸ್ಥಾನವನ್ನು ಕೊಡಲೇಬೇಕು. ಹಣ ಮತ್ತು ಆಹಾರಕ್ಕಿಂತಲೂ ಮಿಗಿಲಾಗಿ ನೀವು ದೇವರ ವಾಕ್ಯಕ್ಕೆ ಬೆಲೆ ಕೊಡಲೇಬೇಕು. ಆಗ ನೀವು ವಾಕ್ಯ ಏನು ಹೇಳುತ್ತದೆ ಎನ್ನುವ –ದನ್ನು ಅರ್ಥಮಾಡಿಕೊಳ್ಳುವದಕ್ಕೆ ಆರಂಭಿಸುತ್ತೀರಿ. ಅದು ಹೇಳುವದೇನೆಂದರೆ: "ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧ – –ಮಾಡಿರುವಂಥದ್ದೆಲ್ಲವನ್ನು **ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನುಷ್ಯರ ಹೃದಯದಲ್ಲಿ ಹುಟ್ಟಲಿಲ್ಲ."** (೧ಕೊರಿಂಥ–೨:೯). ದೇವರು ನಮ್ಮನ್ನು ಹೆಚ್ಚಾಗಿ ಆಶೀರ್ವದಿಸುವದಕ್ಕೆ ಇಷ್ಟಪಡುತ್ತಾನೆ. ನಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸಿ, ನಮ್ಮ ಕೆಟ್ಟ ಹೃದಯವನ್ನು ಬದಲಾಯಿಸಿ, ನಮ್ಮನ್ನು ಶುದ್ಧಿಪಡಿಸಿ ತನ್ನ ಪ್ರೀತಿ ಸಂತೋಷ, ಸಮಾಧಾನ ಮತ್ತು ಭರವಸೆಯನ್ನು ನಮ್ಮಲ್ಲಿ ತುಂಬುವದಕ್ಕೆ ಆತನು ಬಯಸುತ್ತಾನೆ. ಈ ಎಲ್ಲಾ ಆಶೀರ್ವಾದಗಳು ಆದಾಮನ ಪ್ರತಿಯೊಂದು ಸಂತತಿಗೆ ಕೊಡುವದಕ್ಕೆ ದೇವರು ಇಷ್ಟಪಟ್ಟಂತ ಪಿತ್ರಾರ್ಜಿತ ಸ್ವಾಸ್ಥ್ಯದ ಒಂದು ಭಾಗ ಮಾತ್ರ ಆಗಿದೆ! ಹೇಗೂ, **ನೀವು ಹೃದಯಪೂರ್ವಕವಾಗಿ** ನಿತ್ಯತ್ವದ ಸಂಗತಿಗಳನ್ನು ಹುಡುಕಬೇಕು. ಪೂರ್ಣ ಭರವಸೆಯಿಲ್ಲದೆ ದೇವರ ಆಶೀರ್ವಾದಗಳನ್ನು ಬಯಸುವವರು ಎಂದಿಗೂ ಅವುಗಳನ್ನು ಹೊಂದಿಕೊಳ್ಳುವದಿಲ್ಲ. ಕೆಲವು ಸಲ ನಾವು ಇದನ್ನು ಕೇಳಿದ್ದೇವೆ: "ಜೇನುತುಪ್ಪವನ್ನು ಇಷ್ಟಪಡುವ ಯಾರಾದರೂ ದುಂಬಿಗಳ ಧೈರ್ಯವುಳ್ಳವರಾಗಿರಬೇಕು." {ಉಲೂಫ್ ಗಾದೆ}.

ದೇವರ ಆಶೀರ್ವಾದಗಳನ್ನು ಪಡೆದುಕೊಳ್ಳುವದಕ್ಕೆ ನೀವು ಇಷ್ಟಪಡುತ್ತೀರೋ? ಹಾಗಾದರೆ ನೀವು ದೇವರು ತನ್ನ ವಾಕ್ಯದಲ್ಲಿ ಏನು ವಾಗ್ದಾನ ಮಾಡಿದ್ದಾನೆಂಬುದನ್ನು ಅರ್ಥಮಾಡಿಕೊಳ್ಳುವದಕ್ಕೆ ಅನ್ವೇಷಿಸಲೇಬೇಕು. ಮಾನವ ತಿಳುವಳಿಕೆಯನ್ನು ಮೀರಿದ ತುಂಬಾ ದೊಡ್ಡದಾದಂತಹ ಆತನ ಅದ್ಭುತಕರವಾದ ವಾಗ್ದಾನಗಳನ್ನು ನೀವು ತಿಳಿದಿದ್ದೀರೋ? ನೀವು ಅವುಗಳನ್ನು ಪ್ರೀತಿಯಿಂದ ಹೃದಯ –ದಲ್ಲಿಟ್ಟುಕೊಂಡಿದ್ದೀರೋ? ಅಥವಾ ನೀವು ಕೇವಲ ಲೋಕದ ಸಂಗತಿಗಳನ್ನು ಹುಡುಕುವವರಾಗಿದ್ದೀರೋ? ಲೋಕದಲ್ಲಿ ಕೇವಲ ಎರಡು ರೀತಿಯ ಜನರು ಇದ್ದಾರೆ ಎಂಬುದಾಗಿ ದೇವರ ವಾಕ್ಯವು ನಮಗೆ ತೋರಿಸುತ್ತದೆ: ಲೋಕಕ್ಕೆ ಮಹತ್ವ ಕೊಡುತ್ತಾ ಭೂಲೋಕದ ಸಂಗತಿಗಳನ್ನು ಹುಡುಕುವವರು ಮತ್ತು **ನಿತ್ಯತ್ವಕ್ಕೆ ಮಹತ್ವ** ಕೊಡುತ್ತಾ ಮೇಲಿನ ಸಂಗತಿಗಳನ್ನು ಹುಡುಕುವಂತವರು. ನೀವು ಯಾವ ರೀತಿಯ ವ್ಯಕ್ತಿಯಾಗಿದ್ದೀರೀ? ಕೀರ್ತನೆಗಳು ಒಂದನೆಯ ಅಧ್ಯಾಯದಲ್ಲಿ ಏನು ಬರೆದದೆ ಎಂಬುದನ್ನು ಕೇಳಿರಿ:

"ಯಾವನು ದುಷ್ಟರ ಆಲೋಚನೆಯಂತೆ ನಡೆಯದೆ ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತುಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ **ಅವನು ಎಷ್ಟೋ ಧನ್ಯನು.** ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಆಂಥ ಮರವು ತಕ್ಕ ಕಾಲದಲ್ಲಿ ಫಲಗೊಡುತ್ತದಲ್ಲಾ; ಅದರ ಎಲೆ ಬಾಡುವದೇ ಎಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು. **ದುಷ್ಟರೋ ಹಾಗಲ್ಲ** ಗಾಳಿ ಬಡು – –ಕೊಂಡು ಹೋಗುವ ಹೊಟ್ಟಿನಂತಿದ್ದಾರೆ. ಅದದರಿಂದ ದುಷ್ಟರು ನ್ಯಾಯವಿಚಾರಣೆಯಲ್ಲೂ ಪಾಪಾತ್ಮರು ನೀತಿವಂತರ ಸಭೆಯಲ್ಲೂ ನಿಲ್ಲುವದಿಲ್ಲ. ಯೆಹೋವನು ನೀತಿವಂತರ ಮಾರ್ಗವನ್ನು ಲಕ್ಷಿಸುವನು; ದುಷ್ಟರ ಮಾರ್ಗವೋ ನಾಶವಾಗುವದು." (ಕೀರ್ತನೆ–೧:೧–೬).

ನಿಮ್ಮ ವಿಷಯ ಏನು? ಯಾವ ಮಾರ್ಗದಲ್ಲಿ ನೀವು ನಡೆಯುತ್ತೀರಿ? **ದೇವರ ವಾಗ್ದಾನಗಳ ಐಶ್ವರ್ಯವುಳ್ಳವರ** ಮಾರ್ಗದಲ್ಲಿ ನಡೆಯುತ್ತೀರೋ? ಅಥವಾ ಲೋಕದ ನಶಿಸಿಹೋಗುವ ಸಂಗತಿಗಳಿಗಾಗಿ **ದೇವರ ವಾಗ್ದಾನಗಳನ್ನು ವ್ಯಾಪಾರ** ಮಾಡಿದ ಏಸಾವನ ಹಾಗಿರುತ್ತೀರೋ? ದೇವರ ವಾಕ್ಯವು ಹೀಗೆ ಹೇಳುತ್ತಾ ನಮ್ಮನ್ನು ಎಚ್ಚರಿಸುವದೇನೆಂದರೆ: "ಒಬ್ಬ ಮನುಷ್ಯನು **ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣನಷ್ಟಪಟ್ಟರೆ ಅವನಿಗೆ ಪ್ರಯೋಜನವೇನು**? ಅಥವಾ ಒಬ್ಬನು ತನ್ನ ಪ್ರಾಣಕ್ಕೆ ಏನು ಈಡು ಕೊಟ್ಟಾನು?" (ಮತ್ತಾಯ–೧೬:೨೬). "ದುಡಿಯಿರಿ; **ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ;** ಇಂಥ ಆಹಾರವನ್ನು ಮನುಷ್ಯಕುಮಾರನು ನಿಮಗೆ ಕೊಡುವನು; ಇದಕ್ಕಾಗಿ ತಂದೆಯಾದ ದೇವರು ಆತನನ್ನು ನೇಮಿಸಿ ಮುದ್ರೆ ಹಾಗಿದ್ದಾನೆ." (ಯೋಹಾನ–೬:೨೭). "ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ. . . ಏಸಾವನಂಥ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಿಂದ ನೋಡಿಕೊಳ್ಳಿರಿ. ಆ ಏಸಾವನು ಒಂದೇ ಒಂದು ಊಟಕ್ಕಾಗಿ ತನ್ನ ಚೊಚ್ಚಲುತನದ ಹಕ್ಕನ್ನು ಕೊಟ್ಟುಬಿಟ್ಟನು." (ಇಬ್ರಿಯ–೧೨:೧೫,೧೬)

ಜೊತೆ ಕೇಳುಗರೇ, ಈದಿನ ಇಲ್ಲಿಗೆ ನಾವು ನಿಲ್ಲಿಸುತ್ತೇವೆ. ಮುಂದಿನ ಸಲ ದೇವರ ಚಿತ್ತವಾದರೆ ತೋರಾದಲ್ಲಿರುವ ಯಾಕೋಬನ ಕಥೆಯೊಂದಿಗೆ ನಾವು ಮುಂದುವರಿಸುತ್ತೇವೆ. ಆತನ ವಾಕ್ಯದಲ್ಲಿರುವ ಈ ಎಚ್ಚರಿಕೆಯನ್ನು ನೀವು ಜಾಗ್ರತೆಯಿಂದ ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನಿಮ್ಮಲ್ಲಿ ಯಾವನಾದರೂ ದೇವರ ಕೃಪೆಗೆ ತಪ್ಪಿ. . .ಏಸಾವನಂಥ ಪ್ರಾಪಂಚಿಕನಾಗಲಿ ನಿಮ್ಮಲ್ಲಿ ಇರದಂತೆ ಜಾಗ್ರತೆಯಿಂದ ನೋಡಿಕೊಳ್ಳಿರಿ. ಆ ಏಸಾವನು ಒಂದೇ ಒಂದು ಊಟಕ್ಕಾಗಿ ತನ್ನ ಚೊಚ್ಚಲುತನದ ಹಕ್ಕನ್ನು ಕೊಟ್ಟುಬಿಟ್ಟನು."** (ಇಬ್ರಿಯ–೧೨:೧೫,೧೬)

ಪಾಠ ೨೪

# ಯಾಕೋಬನು ಇಸ್ರಾಯೇಲನಾದದ್ದು

ಆದಿಕಾಂಡ ೨೮-೩೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ-ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು-ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ-ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ ಇಸಾಕನಿಗೆ ಹುಟ್ಟಿದಂತ **ಏಸಾವ ಮತ್ತು ಯಾಕೋಬ** ಎಂಬ ಅವಳಿ ಮಕ್ಕಳ ಕಥೆಯ ಕುರಿತು ನಾವು ಓದಿಕೊಂಡೆವು. ದೇವರು ತನ್ನ ಅಜ್ಜನಾದ ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವನ್ನು ಏಸಾವನು ತಾತ್ಸಾರ ಮಾಡಿ ಒಂದು ಬಟ್ಟಲು ಅಹಾರಕ್ಕಾಗಿ ತನ್ನ ಚೊಚ್ಚಲುತನದ ಹಕ್ಕನ್ನು ವಿನಿಮಯ ಮಾಡಿಕೊಂಡನು! ಯಾಕೋಬನಾದರೋ ದೇವರ ವಾಗ್ದಾನಗಳನ್ನು ಗೌರವಿಸಿದನು. ಹೇಗೂ, ಯಾಕೋಬನು ತಪ್ಪಿಲ್ಲದವನಾಗಿದ್ದ ಎಂದು ಇದರ ಅರ್ಥವಲ್ಲ! ಯಾಕೋಬ ಎಂಬ ಹೆಸರಿನ ಅರ್ಥವೇ ಮೋಸಗಾರ ಎಂದು. ಹಾಗಾದರೆ ಈದಿನ ನಾವು ತೋರಾದಲ್ಲಿರುವದನ್ನು ಮುಂದುವರಿಸಿ **ಮೋಸಗಾರನಾದ ಯಾಕೋಬನನ್ನು ದೇವರ ಮನುಷ್ಯನಾದ ಯಾಕೋಬನನ್ನಾಗಿ ದೇವರು ಹೇಗೆ ಬದಲಾಯಿಸಿದನೆಂಬುದನ್ನು** ನೊಡೋಣ.

ಯಾಕೋಬನು ನಿಜವಾಗಿಯೂ ಒಬ್ಬ ಕುಯುಕ್ತಿಯುಳ್ಳವನಾಗಿದ್ದ {ಮೋಸಗಾರ}. ವಾಕ್ಯಗಳು ಪ್ರವಾದಿಗಳ ನ್ಯೂನ್ಯತೆಗಳನ್ನು ಮುಚ್ಚಿಡದೇ, ಚೊಚ್ಚಲುತನದ ಹಕ್ಕನ್ನು ತೆಗೆದುಕೊಳ್ಳುವ ಕ್ರಮದಲ್ಲಿ ಎರಡು ಸಾರಿ ಯಾಕೋಬನು ತನ್ನ ಅಣ್ಣನಾದ ಏಸಾವನನ್ನು ಹೇಗೆ ಮೋಸಗೊಳಿಸಿದನೆಂಬುದನ್ನು ನಮಗಾಗಿ ದಾಖಲಿಸಿವೆ. ಈ ಕಾರಣಕ್ಕಾಗಿಯೇ ಏಸಾವನು ಕೋಪದಲ್ಲಿ ತನ್ನ ತಮ್ಮನನ್ನು ಕೊಲ್ಲುವ ಉದ್ದೇಶವನ್ನಿಟ್ಟುಕೊಂಡಿದ್ದನು. ಇದರ ಪರಿಣಾಮವಾಗಿ ಅವರ ತಾಯಿಯಾದ ರೆಬೆಕ್ಕಳು ರಹಸ್ಯವಾಗಿ ಯಾಕೋಬನನ್ನು ಕರೆದು ಹಾರಾನಿನಲ್ಲಿರುವ ತನ್ನ ಅಣ್ಣನಾದ ಲಾಬಾನನ ಬಳಿಗೆ ಓಡಿಹೋಗಿ ಏಸಾವನ ಕೋಪವು ಶಮನವಾಗುವವರೆಗೆ ಅಲ್ಲಿಯೇ ಇರುವಂತೆ ಸಲಹೆ ಕೊಟ್ಟಳು.

ಈಗ ಆದಿಕಾಂಡ ಪುಸ್ತಕದ ಇಪ್ಪತ್ತೆಂಟನೆಯ ಅಧ್ಯಾಯದಲ್ಲಿರುವದನ್ನೂ ಓದಿಕೊಂಡು ಯಾಕೋಬನು ತನ್ನ ತಂದೆಯ ಮನೆಯನ್ನು ಬಿಟ್ಟು ತನ್ನ ಸೋದರ ಮಾವನಾದ ಲಾಬಾನನ ಮನೆಗೆ ಓಡಿಹೋದ ನಂತರ ಏನಾಯಿತೆಂಬುದನ್ನು ನೋಡೋಣ. ವಾಕ್ಯವು ಹೇಳುವದೇನೆಂದರೆ:

ಯಾಕೋಬನು ಖಾರಾನಿಗೆ ಹೋಗಬೇಕೆಂದು ಬೇರ್ಷೆಬದಿಂದ ಹೊರಟನು. ಅವನು ಹೋಗುತ್ತಿರಲು ಒಂದು ಸ್ಥಳಕ್ಕೆ ಸೇರಿದಾಗ ಹೊತ್ತು ಮುಣುಗಿದ್ದರಿಂದ ಆ ರಾತ್ರಿ ಅಲ್ಲಿಯೇ ಇಳಿದುಕೊಂಡನು. ಅವನು ಅಲ್ಲಿದ್ದ ಕಲ್ಲುಗಳಲ್ಲಿ ಒಂದು ಕಲ್ಲನ್ನು ತಲೆಗಿಂಬಾಗಿ ಇಟ್ಟುಕೊಂಡು ಆ ಸ್ಥಳದಲ್ಲಿ ಮಲಗಿಕೊಂಡನು. (ಆದಿ-೨೮:೧೦-೧೧)

ಆ ರಾತ್ರಿ ಅವನು **ಕನಸು ಕಂಡನು.** ಆ ಕನಸಿನಲ್ಲಿ ಒಂದು **ನಿಚ್ಚಣಿಗೆ ನೆಲದ ಮೇಲೆ ನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು;** ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇದ್ದರು. ಇದಲ್ಲದೆ ಯೆಹೋವನು ಅವನ ಬಳಿಯಲ್ಲಿ ನಿಂತು-**"ನಾನು ನಿನ್ನ ತಂದೆಯಾದ ಅಬ್ರಹಾಮನ ದೇವರೂ ಇಸಾಕನ ದೇವರೂ ಆಗಿರುವ ಯೆಹೋವನು. ನೀನು ಮಲಗಿಕೊಂಡಿರುವ ಈ ದೇಶವನ್ನು ನಿನಗೂ ನಿನ್ನ ಸಂತತಿಗೂ ಕೊಡುತ್ತೇನೆ.** ನಿನ್ನ ಸಂತತಿಯು ಭೂಮಿಯ ಧೂಳಿನಂತೆ ಅಸಂಖ್ಯವಾಗುವದು; ನೀನು ಪೂರ್ವಪಶ್ಚಿಮ ದಕ್ಷಿಣೋತ್ತರದಿಕ್ಕುಗಳಿಗೆ ಹರಡಿಕೊಳ್ಳುವಿ. ನಿನ್ನ ಮೂಲಕವೂ ನಿನ್ನ ಸಂತತಿಯ ಮೂಲಕವೂ ಭೂಮಿಯ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು. ಇದಲ್ಲದೆ ನಾನು ನಿನ್ನ ಸಂಗಡ ನೀನು ಹೋಗುವ ಎಲ್ಲಾ ಸ್ಥಳದಳಲ್ಲಿ ನಿನ್ನನ್ನು ಕಾಪಾಡಿ ತಿರಿಗಿ ಈ ದೇಶಕ್ಕೆ ಬರಮಾಡುತ್ತೇನೆ. **ನಾನು ನಿನಗೆ ಹೇಳಿದ್ದನ್ನೆಲ್ಲಾ ನೆರವೇರಿಸಿದ ಹೊರತು ಬಿಡುವದಿಲ್ಲ ಅಂದನು."** ಯಾಕೋಬನು ನಿದ್ದೆ --ಯಿಂದ ಎಚ್ಚತ್ತು - "ನಿಜವಾಗಿ ಯೆಹೋವನು ಈ ಸ್ಥಳದಲ್ಲಿ ಇದ್ದಾನೆ; ಅದು ನನಗೆ ತಿಳಿಯದೆ ಹೋಯಿತು ಅಂದುಕೊಂಡು ಭಯಪಟ್ಟವನಾಗಿ - ಈ ಸ್ಥಳವು ಎಷ್ಟೋ ಭಯಂಕರವಾದದ್ದು; ಇದು ದೇವರ ಮನೆಯೇ ಹೊರತು ಬೇರೆಯಲ್ಲ; ಇದು ಪರ --ಲೋಕದ ಬಾಗಿಲು" ಎಂದು ಹೇಳಿದನು. ಹೊತ್ತಾರೆ ಅವನು ಎದ್ದಾಗ ತಾನು ತಲೆಗಿಂಬಿಗೆ ಇಟ್ಟುಕೊಂಡಿದ್ದ ಕಲ್ಲನ್ನು ಕಂಬವಾಗಿ

ನಿಲ್ಲಿಸಿ ಅದರ ತುದಿಯಲ್ಲಿ ಎಣ್ಣೇ ಹೊಯಿದನು. ಆ ಸ್ಥಳಕ್ಕೆ ಬೇತೇಲ್ ಎಂದು ಹೆಸರಿಟ್ಟನು. (ಆದಿ–೨೮:೧೨–೧೯). ["ದೇವರ ಮನೆ" ಎಂದು ಇದರ ಅರ್ಥ].

ಹೀಗೆ **ದೇವರು ಯಾಕೋಬನಿಗೆ** ಕನಸಿನಲ್ಲಿ ಕಾಣಿಸಿಕೊಂಡು **ಅಬ್ರಹಾಮನಿಗೂ ಮತ್ತು ಇಸಾಕನಿಗೂ** ತಾನು ವಾಗ್ದಾನ ಮಾಡಿದ್ದ ಅಂದರೆ ಅವರ ಸಂತಾನವನ್ನು ಒಂದು **ದೊಡ್ಡ ಜನಾಂಗವಾಗುಂತೆ** ಮಾಡುತ್ತೇನೆಂದು ಹೇಳಿದ್ದ **ಅದೇ ವಿಷಯದ ವಾಗ್ದಾನವನ್ನು** ಯಾಕೋಬನಿಗೂ ಮಾಡಿದನು. ಆದುದರಿಂದ, ಯಾಕೋಬನು ತನ್ನ ಅಣ್ಣನಿಂದ ಕದ್ದುಕೊಂಡಿದ್ದ ಚೊಚ್ಚಲುತನದ ಹಕ್ಕು ಕೊನೆ ––ಯಲ್ಲಿ ದೇವರಿಂದಲೇ ಅವನಿಗೆ ಕೊಡಲ್ಪಟ್ಟಿತೆಂಬುದನ್ನು ನಾವು ನೋಡುತ್ತೇವೆ. ಲೋಕಕ್ಕೆ ವಿಮೋಚಕನನ್ನು ತರುವಂತಹ ಹೊಸ ಜನಾಂಗದ ತಂದೆಯಾಗುವದಕ್ಕೆ ಯಾಕೋಬನು ಅರ್ಹನಾಗಿರಲಿಲ್ಲ. ಹೇಗೂ ದೇವರು ಕನಿಕರದ ಮತ್ತು ಕೃಪೆಯ ಒಬ್ಬ ದೇವರಾ ––ಗಿದ್ದು ಪಡೆದುಕೊಳ್ಳುವದಕ್ಕೆ ಅರ್ಹರಲ್ಲದವರಿಗೂ ಒಳ್ಳೆಯ ಸಂಗತಿಗಳನ್ನು ಕೊಡುವಂತವನಾಗಿದ್ದಾನೆ.

ಯಾಕೋಬನು ತನ್ನ ಕನಸಿನಲ್ಲಿ ಏನು ಕಂಡನು? ವಾಕ್ಯವು ಹೀಗೆ ಹೇಳುತ್ತದೆ: **"ಒಂದು ನಿಚ್ಚಣಿಗೆ** ನೆಲದ ಮೇಲೆ ನಿಂತಿತ್ತು; ಅದರ ತುದಿ ಆಕಾಶವನ್ನು ಮುಟ್ಟಿತ್ತು; ಅದರ ಮೇಲೆ ದೇವದೂತರು ಹತ್ತುತ್ತಾ ಇಳಿಯುತ್ತಾ ಇರುವದನ್ನು ಅವನು ಕಂಡನು." ಯಾಕೋಬನು ತನ್ನ ಕನಸಿನಲ್ಲಿ **ಒಂದು ಏಣಿಯನ್ನು** ಕಂಡನು. ಯಾಕೋಬನು ಕಂಡಂತ ಏಣಿಯು ಒಂದು ಅಸಾಮಾನ್ಯವಾದ ಏಣಿಯಾಗಿತ್ತು, ಒಂದು ತುಂಬಾ ಎತ್ತರವಾದ ಏಣಿ, ಅದು **ಭೂಮಿಯಿಂದ ಆಕಾಶವನ್ನು** ಮುಟ್ಟಿ ದೇವರ ಪ್ರಸನ್ನತೆಯನ್ನು ಪ್ರವೇಶಿಸಿತ್ತು!

ತಾನು ಯಾಕೋಬನೊಂದಿಗೆ ಅದ್ಭುತವಾದ ಮತ್ತು ಆಪ್ತವಾದ ಸಂಬಂಧವನ್ನು ಇಟ್ಟುಕೊಳ್ಳುವದಕ್ಕೆ ಇಚ್ಛೆಸಿದ್ದೇನೆಂಬುದನ್ನು ಎತ್ತರ ––ವಾದ ಏಣಿಯ ಕನಸಿನ ಮೂಲಕ ದೇವರು ಯಾಕೋಬನಿಗೆ ತೋರಿಸಿಕೊಟ್ಟನು. ಮತ್ತು ಭೂಮಿಗೂ ಆಕಾಶಕ್ಕೂ ಮಧ್ಯೆಯಿದ್ದ **ಏಣಿಯ ಹಾಗೆ** ಲೋಕಕ್ಕೆ ಬರಬೇಕಾಗಿರುವ **ವಿಮೋಚಕನು** ಇರುತ್ತಾನೆ ಅಂದರೆ **ದೇವರಿಗೂ ಮತ್ತು ಮನುಷ್ಯರಿಗೂ ನಡುವೆ ಮಧ್ಯ ––ವರ್ತಿಯಾಗಿರುತ್ತಾನೆಂಬುದನ್ನೂ** ಸಹ ಅವನಿಗೆ ತೋರಿಸುವದಕ್ಕೆ ದೇವರು ಇಷ್ಟಪಟ್ಟನು.

ಒಬ್ಬ ಮನುಷ್ಯನು ತನ್ನ ಸ್ವಂತ ಒಳ್ಳೆಯ ಕೆಲಸಗಳ ಆಧಾರದ ಮೇಲೆ ಹತ್ತಿ ಪರದೈಸನ್ನು ಪ್ರವೇಶಿಸುತ್ತಾನೆ ಎಂಬುದಾಗಿ ಈ ದಿನದ ––ವರೆಗೂ ಅನೇಕರು ಆಲೋಚಿಸುವವರಾಗಿದ್ದಾರೆ. ಹೇಗೂ ದೇವರ ವಾಕ್ಯ ನಮಗೆ ಹೇಳುವದೇನೆಂದರೆ **ದೇವರಿಗೂ ಮನುಷ್ಯ ––ರಿಗೂ ಮಧ್ಯೆ ಕೇವಲ ಒಂದೇ ಒಂದು "ಏಣಿ"ಯಿದೆ,** ಆ ಏಣಿಯು ಮನುಷ್ಯರಿಂದ ಬಂದ್ದದ್ದಲ್ಲ ಆದರೆ ದೇವರಿಂದ ಬಂದದ್ದು. ಆದಾಮನ ಮಕ್ಕಳಾಗಿರುವ ನಾವು ನಮ್ಮ ಸ್ವಂತ ಬಲದಲ್ಲಿ ಮೇಲೆ ಹತ್ತಿ ದೇವರ ಪ್ರಸನ್ನತೆಯನ್ನು ಪ್ರವೇಶಿಸುವದಕ್ಕೆ ಯಾವ ಸಾಧನ ––ಗಳನ್ನು ಹೊಂದಿಲ್ಲ. ಇದಕ್ಕೆ ಕಾರಣವೇನೆಂದರೆ, ನಮ್ಮ ಪಾಪ ಮತ್ತು ಪರಿಶುದ್ಧನಾಗಿರುವ ದೇವರನ್ನು ಮೆಚ್ಚಿಸುವದಕ್ಕೆ ಪೂರ್ತಿ ಬಲದ ಕೊರತೆ. ಆದರೆ ದೇವರು ಕನಿಕರದಿಂದ ತುಂಬಿದವನಾಗಿದ್ದಾನೆ, ಜನರಿಗಾಗಿ ಆತನಲ್ಲಿರುವ ದೊಡ್ಡದಾದ ಪ್ರೀತಿಯ ಕಾರಣದಿಂದ ಆದಾಮನ ಸಂತಾನದವರಿಗಾಗಿ ಒಂದು ರಕ್ಷಣೆಯ ಮಾರ್ಗವನ್ನು ಆತನು ತೆರೆದನು.

ಆದುದರಿಂದ, ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕದೊಳಕ್ಕೆ ಕಳುಹಿಸುತ್ತೇನೆಂದು ದೇವರು ವಾಗ್ದಾನಮಾಡಿದ್ದ ಮಧ್ಯವರ್ತಿಯನ್ನು ಯಾಕೋಬನು ತನ್ನ ಕನಸಿನಲ್ಲಿ ಕಂಡಂತ ಏಣಿಯು ಸೂಚಿಸುತ್ತದೆ. ಯಾಕೋಬನು ನೋಡಿದ ಭೂಮಿಗೂ ಮತ್ತು ಆಕಾಶಕ್ಕೂ ಮಧ್ಯೆ ಇರುವಂತ ಏಣಿಯ ಹಾಗೆಯೇ ಮಧ್ಯವರ್ತಿಯಿದ್ದಾನೆ. ವಾಕ್ಯವು ಇದನ್ನು ಹೇಳುತ್ತಾ ನಮಗೆ ಕಲಿಸುವದೇನೆಂದರೆ: "ದೇವರು ಒಬ್ಬನೇ; **ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ;** ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ. ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. . . .ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." (೧ತಿಮೊಥೆ–೨:೫, ೬; ಯೋಹಾನ–೩:೧೬). ಈ ವಿಷಯದಲ್ಲಿ ದೇವರ ವಾಕ್ಯವು ಸ್ಪಷ್ಟವಾಗಿದೆ. ಪರಲೋಕದಿಂದ ದೇವರು ಕಳಿಸಲ್ಪಟ್ಟಿರುವ ಪರಿಶುದ್ಧ ಮಧ್ಯವರ್ತಿಯ ಮೂಲಕವೇ ಹೊರತು ದೇವರ ಬಳಿಗೆ ಯಾರೂ ಬರುವದಕ್ಕಾಗುವದಿಲ್ಲ.

ಯಾಕೋಬನು ತನ್ನ ಸೋದರ ಮಾವನ ಮನೆಗೆ ಬಂದ ಮೇಲೆ ಏನಾಯಿತೆಂಬುದನ್ನು ಈಗ ನೋಡಿಕೊಳ್ಳೋಣ. ದೇವರ ವಾಕ್ಯವು ಹೇಳುವದೇನೆಂದರೆ; "ಮನುಷ್ಯನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುತ್ತಾನೆ" (ಗಲಾತ್ಯ–೬:೭). ಯಾಕೋಬನು ತನ್ನ ಅಣ್ಣನ್ನು ಹೇಗೆ ಮೋಸಮಾಡಿದನೆಂಬುದನ್ನು ನಾವು ಈಗಾಗಲೇ ನೋಡಿಕೊಂಡಿದ್ದೇವೆ. ಈಗ ಯಾಕೋಬನ ಮಾವ ಅವನನ್ನು ಹೇಗೆ ಮೋಸ ಮಾಡಿದನೆಂಬುದನ್ನು ನೋಡೋಣ. ಇವನ ಮಾವನ ಹೆಸರು ಲಾಬಾನ ಮತ್ತು ಅವನು ಕುಟಿಲ ಸ್ವಭಾವದವ ––ನಾಗಿದ್ದನು.

ಇಪ್ಪತ್ತೊಂಬತ್ತನೆಯ ಅಧ್ಯಾಯವನ್ನು ನಾವು ಈಗ ಓದುತ್ತಿದ್ದೇವೆ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಯಾಕೋಬನು ಲಾಬಾನನ ಬಳಿಯಲ್ಲಿ ಒಂದು ತಿಂಗಳಿನವರೆಗೂ ವಾಸಮಾಡಿದನು. ಆಮೇಲೆ ಲಾಬಾನನು ಅವನನ್ನು ನೀನು

ನನ್ನನ್ನು ಸಂಬಂಧಿಯೆಂದು ಸುಮ್ಮನೆ ಸೇವಿಸುವದು ನ್ಯಾಯವೋ? ನಿನ್ನ ಕೆಲಸಕ್ಕಾಗಿ ನಾನು ನಿನಗೆ ಏನು ಕೊಡಲಿ ಎಂದು ಕೇಳಿ –ದನು." ಲಾಬನನಿಗೆ ಇಬ್ಬರು ಹೆಣ್ಣು ಮಕ್ಕಳಿದ್ದರು; ದೊಡ್ಡವಳ ಹೆಸರು ಲೇಯಾ ಚಿಕ್ಕವಳ ಹೆಸರು ರಾಹೇಲ್. ಲೇಯಾ ಎಂಬಾಕೆಯ ಕಣ್ಣುಗಳು ಕಾಂತಿಹೀನವಾಗಿದ್ದವು; ರಾಹೇಲಳು ರೂಪವತಿಯೂ ಲಾವಣ್ಯವತಿಯೂ ಆಗಿದ್ದಳು. ಯಾಕೋಬನು **ರಾಹೇಲಳನ್ನು** ಮೆಚ್ಚಿಕೊಂಡು – "ನಿನ್ನ ಕಿರೀ ಮಗಳಾದ ರಾಹೇಲಳಿಗೋಸ್ಕರ ಏಳು ವರುಷ ಸೇವೆ ಮಾಡುವೆನು ಎಂದು ಹೇಳಲು ಲಾಬಾನನು ಆಕೆಯನ್ನು ಬೇರೊಬ್ಬನಿಗೆ ಕೊಡುವದಕ್ಕಿಂತ ನಿನಗೆ ಕೊಡುವದೇ ಉಚಿತ; ನನ್ನ ಬಳಿಯಲ್ಲಿರು ಅಂದನು". ಆದದ – –ರಿಂದ ಯಾಕೋಬನು ರಾಹೇಲಳಿಗೋಸ್ಕರ ಏಳು ವರುಷ ಸೇವೆ ಮಾಡಿದನು. ಆದರೂ ಆಕೆಯಲ್ಲಿ ಬಹಳ ಪ್ರೀತಿಯನ್ನು ಇಟ್ಟಿದ್ದ –ದರಿಂದ ಅದು ಅವನಿಗೆ ಸ್ವಲ್ಪ ದಿವಸದಂತೆ ಕಾಣಿಸಿತು. ತರುವಾಯ ಯಾಕೋಬನು ಲಾಬಾನನಿಗೆ "ಗೊತ್ತುಮಾಡಿದ ಕಾಲವು ಮುಗಿದುಹೋಯಿತು; ಆಕೆಯನ್ನು ನನ್ನ ಹೆಂಡತಿಯಾಗುವಂತೆ ನನ್ನ ಸ್ವಾಧೀನಕ್ಕೆ ಕೊಡು ಎಂದು ಹೇಳಿದನು." ಆಗ ಲಾಬಾನನು ಆ ಸ್ಥಳದವರೆಲ್ಲರನ್ನೂ ಕರೆಸಿ ಔತಣವನ್ನು ಮಾಡಿಸಿದನು. ಸಾಯಂಕಾಲದಲ್ಲಿ ತನ್ನ ಹಿರೀ ಮಗಳಾದ **ಲೇಯಳನ್ನೇ** ಯಾಕೋಬ – ನಿಗೆ ಒಪ್ಪಿಸಿಬಿಟ್ಟನು. ಅವನು ಆಕೆಯನ್ನು ಕೂಡಿದನು.. . .ಬೆಳಿಗ್ಗೆ ಆಕೆ ಲೇಯಳೆಂದು ಯಾಕೋಬನಿಗೆ ತಿಳಿದುಬರಲು ಅವನು ಲಾಬಾನನಿಗೆ – "ಇದೇನು ನೀನು ನನಗೆ ಮಾಡಿದ್ದು? ರಾಹೇಲಳಿಗೋಸ್ಕರ ನಿನಗೆ ಸೇವೆ ಮಾಡಿದೆನಲ್ಲಾ; ಯಾಕೆ ನನಗೆ ಮೋಸ –ಮಾಡಿದಿ" ಎಂದು ಕೇಳಿದ್ದಕ್ಕೆ ಲಾಬಾನನು – "ಹಿರೀ ಮಗಳಿಗಿಂತ ಮೊದಲು ಕಿರೀ ಮಗಳನ್ನು ಮದುವೆ ಮಾಡಿಸಿಕೊಡುವದು ನಮ್ಮ ದೇಶದ ಪದ್ಧತಿಯಲ್ಲ. ಆಕೆಯ ಮದುವೆಯ ವಾರವನ್ನು ಪೂರೈಸು; ಅನಂತರ ಈ ನನ್ನ ಕಿರೀ ಮಗಳನ್ನೂ ನಿನಗೆ ಕೊಡುತ್ತೇವೆ; ಈಕೆಗೋಸ್ಕರ ನೀನು ಇನ್ನೂ ಏಳು ವರುಷ ಸೇವೆಮಾಡು" ಅಂದನು. ಯಾಕೋಬನು ಅದಕ್ಕೆ ಒಪ್ಪಿ ಹಿರಿಯವಳ ಮದುವೆಯ ವಾರವನ್ನು ತೀರಿಸಿದನು. ಆಗ ಲಾಬಾನನು ತನ್ನ ಮಗಳಾದ ರಾಹೇಲಳನ್ನು ಯಾಕೋಬನಿಗೆ ಹೆಂಡತಿಯಾಗಿ ಕೊಟ್ಟನು. ಯಾಕೋಬನು ರಾಹೇಲಳನ್ನೂ ಕೂಡಿ ಆಕೆಯನ್ನು ಲೇಯಳಿಗಿಂತ ಹೆಚ್ಚಾಗಿ ಪ್ರೀತಿಸಿದನು. ಆಕೆಗೊಸ್ಕರ ಲಾಬಾನನ ಬಳಿಯಲ್ಲಿ ಇನ್ನೂ ಏಳು ವರುಷ ಸೇವೆ ಮಾಡಿದನು." (ಆದಿ–೨೯:೧೪–೩೦)

ಹೀಗೆ ಲಾಬಾನನು ತನ್ನ ಸೋದರಳಿಯನನ್ನು ಹೇಗೆ ಮೋಸಗೊಳಿಸಿದನೆಂಬುದನ್ನು ನಾವು ನೋಡುತ್ತೇವೆ. ಏನು ಸಂಭವಿಸಿತ್ತೋ ಅದು ಒಂದು ಒಳ್ಳೆಯ ಸಂಗತಿಯಲ್ಲ, ಆದರೆ ಯಾಕೋಬನ ಜೀವಿತದಲ್ಲಿ ಸಂಭವಿಸಿದ ಸಂಗತಿಗಳ ಮೇಲೆ ದೇವರು ತನ್ನ ಹಸ್ತ – –ವನ್ನು ಇಟ್ಟಿದ್ದಾನೆಂಬುದು ಮತ್ತು ಅವುಗಳನ್ನು ಯಾಕೋಬನ ಒಳ್ಳೆಯದಕ್ಕೆ ತಿರುಗಿಸಿದನೆಂಬುದನ್ನು ನೀವು ಮನಗಂಡವರಾಗಿರ ಬೇಕು. ಕೊನೆಗೆ ಯಾಕೋಬನು **ಹನ್ನೆರಡು ಗಂಡು ಮಕ್ಕಳ** ತಂದೆಯಾದನು. ಯಾಕೋಬನು ತನ್ನ ಮಾವನ ಮನೆಯಲ್ಲಿ ಇಪ್ಪತ್ತು ವರ್ಷಗಳವರೆಗೆ ಇದ್ದನು. ಆ ಇಪ್ಪತ್ತು ವರ್ಷಗಳಲ್ಲಿ ಯಾಕೋಬನು ಕೆಲವು ತುಂಬಾ ನೋವಿನ ಪರೀಕ್ಷೆಗಳ ಮೂಲಕ ಹಾದು ಹೋಗುವಂತೆ ದೇವರು ತನ್ನ ಪ್ರೀತಿಯಲ್ಲಿ ಅಪ್ಪಣೆ ಕೊಟ್ಟನು, ಬೆಂಕಿಯು ಬಂಗಾರವನ್ನು ಶುದ್ಧಗೊಳಿಸುವಂತೆ ದೇವರು ಇವುಗಳಿಂದ ಅವನಿಗೆ ಶಿಸ್ತು ಕಲಿಸಿದನು ಮತ್ತು ಅವನ ನಂಬಿಕೆಯನ್ನು ಶುದ್ಧಗೊಳಿಸಿದನು.

ಹೇಗೂ, ಒಂದು ದಿನ ಬಂತು ಆಗ ದೇವರು ಯಾಕೋಬನಿಗೆ ಕಾಣಿಸಿಕೊಂಡು ಹೀಗೆ ಹೇಳಿದನು: "ನಿನ್ನ ತಂದೆತಾತಂದಿರ ದೇಶಕ್ಕೂ ನಿನ್ನ ಬಂಧುಗಳ ಬಳಿಗೂ ತಿರಿಗಿಹೋಗು; ನಾನು ನಿನ್ನೊಂದಿಗೆ ಇರುವೆನು." (ಆದಿ–೩೧:೩). ಹಾಗಾಗಿ ಯಾಕೋಬನು ಎದ್ದು ಎಲ್ಲವನ್ನೂ ತೆಗೆದುಕೊಂಡು ಅವನು ಮತ್ತು ಅವನ ಕುಟುಂಬದವರೂ ಅಲ್ಲಿಂದ ಹೊರಟರು. ದೇವರು ಅಬ್ರಹಾಮ ಇಸಾಕ ಯಾಕೋಬ ಮತ್ತು ಅವರ ಸಂತತಿಗಳಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ **ಕಾನಾನ್** ದೇಶದ ದಿಕ್ಕಿನಲ್ಲಿ ಅವರು ಪ್ರಯಾಣಿಸಿ – –ದರು.

ಯಾಕೋಬ ಮತ್ತು ಅವನ ಕುಟುಂಬದವರು ಕಾನಾನಿನ ಮಾರ್ಗದಲ್ಲಿರುವಾಗ ದೇವರು ಒಂದು ವಿಶೇಷವಾದ ರೀತಿಯಲ್ಲಿ ಯಾಕೋಬನಿಗೆ ಕಾಣಿಸಿಕೊಂಡು ಅವನ ಹೆಸರನ್ನು ಬದಲಾಯಿಸಿದನು. ಮೂವತ್ತ ಮೂರನೆಯ ಅಧ್ಯಾಯದಲ್ಲಿ ವಾಕ್ಯವು ಏನು ಹೇಳುತ್ತದೆಂಬುದನ್ನು ಕೇಳಿಸಿಕೊಳ್ಳಿರಿ:

"ಯಾಕೋಬನು ಒಂಟಿಗನಾಗಿ ಹಿಂದೆ ನಿಂತಿರಲು ಯಾರೋ ಒಬ್ಬ ಪುರುಷನು ಬೆಳಗಾಗುವ ತನಕ ಅವನ ಸಂಗಡ ಹೋರಾಡಿ – –ದನು. ಆ ಪುರುಷನು ತಾನು ಗೆಲ್ಲದೆ ಇರುವದನ್ನು ಕಂಡು ಯಾಕೋಬನ ತೊಡೆಯ ಕೀಲನ್ನು ಮುಟ್ಟಿದ್ದರಿಂದ ಯಾಕೋಬನು ಅವನ ಸಂಗಡ ಹೋರಾಡುತ್ತಿರುವಾಗಲೇ ಅವನ ತೊಡೆಯ ಕೀಲು ತಪ್ಪಿತು. ಆ ಪುರುಷನು ನನ್ನನ್ನು ಬಿಡು ಬೆಳಗಾಗುತ್ತದೆ ಅನ್ನಲು ಯಾಕೋಬನು ನೀನು ನನ್ನನ್ನು ಆಶೀರ್ವದಿಸಿದ ಹೊರತು ನಿನ್ನನ್ನು ಬಿಡುವದಿಲ್ಲ ಅಂದನು. ಆ ಪುರುಷನು ನಿನ್ನ ಹೆಸರೇನು ಎಂದು ಕೇಳಿದ್ದಕ್ಕೆ ಅವನು ಯಾಕೋಬನು ಅಂದಾಗ, ಅವನು ಯಾಕೋಬನಿಗೆ ಇನ್ನು ಮೇಲೆ ನೀನು ಯಾಕೋಬನೆನ್ನಿಸಿಕೊಳ್ಳುವ –ದಿಲ್ಲ; ದೇವರ ಸಂಗಡಲೂ ಮನುಷ್ಯರ ಸಂಗಡಲೂ ಹೋರಾಡಿ ಗೆದ್ದವನಾದ್ದರಿಂದ ನಿನಗೆ **ಇಸ್ರಾಯೇಲೆಂದು** ಹೆಸರುಂಟಾಗುವದು ಎಂದು ಹೇಳಿದನು. ಯಾಕೋಬನು ನಿನ್ನ ಹೆಸರನ್ನು ನನಗೆ ತಿಳಿಸಬೇಕು ಸ್ವಾಮೀ ಅಂದಾಗ ಆ ಪುರುಷನು ನನ್ನ ಹೆಸರನ್ನು ವಿಚಾರಿಸುವದೇಕೆ ಎಂದು ಹೇಳಿ ಅಲ್ಲಿ ಅವನನ್ನು ಆಶೀರ್ವದಿಸಿದನು. ಯಾಕೋಬನು ನಾನು ದೇವರನ್ನೇ ಪ್ರತ್ಯಕ್ಷವಾಗಿ ನೋಡಿದ್ದೇ –ನಲ್ಲಾ; ಆದರೂ ನನ್ನ ಪ್ರಾಣ ಉಳಿದದೆ ಅಂದುಕೊಂಡು ಆ ಸ್ಥಳಕ್ಕೆ ಪೆನೀಯೇಲ್ ಎಂದು ಹೆಸರಿಟ್ಟನು." (ಆದಿ–೩೨:೨೪–೩೦).

ಇದು ಪ್ರಾಮುಖ್ಯವಾದ ಪಾಠಗಳಿಂದ ತುಂಬಿರುವ ಒಂದು ಆಶ್ಚರ್ಯಕರವಾದ ಕಥೆಯಾಗಿದೆ. ದೇವರು ಒಬ್ಬ ಮನುಷ್ಯನಂತೆ

ಯಾಕೋಬನಿಗೆ ಕಾಣಿಸಿಕೊಂಡು ಅವನೊಂದಿಗೆ ಹೋರಾಡಿದನು. ಆತನು ಯಾಕೋಬನೊಂದಿಗೆ ಯಾಕೆ ಹೋರಾಡಿದನು? ಯಾಕೆಂದರೆ ತನ್ನ ಮುಂದೆ ಯಾಕೋಬನು ಅವನ ಬಲಹೀನತೆಯನ್ನು ಗುರುತಿಸಿಕೊಳ್ಳಬೇಕೆಂದು ದೇವರು ಬಯಸಿದನು. ಎಲ್ಲಾ ನಿಜವಾದ ಬಲವೂ ಮತ್ತು ಜ್ಞಾನವೂ ದೇವರೊಬ್ಬನಿಂದಲೇ ಬರುತ್ತವೆ ಎಂಬುದನ್ನು ಯಾಕೋಬನು ತಿಳಿದುಕೊಳ್ಳಬೇಕೆಂದು ದೇವರು ಇಷ್ಟಪಟ್ಟನು! ದೇವರು ಯಾಕೋಬನಿಗಾಗಿ ಅದ್ಭುತಕರವಾದ ಯೋಜನೆಗಳನ್ನು ಹೊಂದಿದ್ದನು, ಆದರೆ **ತಮ್ಮ ಸ್ವಂತ ಬಲಗಳಿಂದ ದೇವರನ್ನು ಮೆಚ್ಚಿಸುವದಕ್ಕೆ ಆಗುವದಿಲ್ಲ ಎಂದು ಯಾರು ತಿಳಿದಿರುತ್ತಾರೋ ಅವರಿಗೆ ಮಾತ್ರ ದೇವರ ಉತ್ತಮವಾದ ಆಶೀರ್ವಾದಗಳು ಒದಗಿಬರುತ್ತವೆ.** ದೇವರ ಮುಂದೆ ತಾನು ಎಷ್ಟು ಬಲಹೀನನೆಂಬುದನ್ನು ಯಾಕೋಬನು ತಿಳಿದುಕೊಳ್ಳುವದಕ್ಕೆ ಪ್ರಾರಂಭಿಸಿದನು. ಆ ರಾತ್ರಿಯಲ್ಲಿ, ದೇವರು ಯಾಕೋಬನಿಗೆ ಒಂದು ಹೊಸ ಹೆಸರನ್ನು ಕೊಟ್ಟನು, ಅದು **ಇಸ್ರಾಯೇಲ್** ಎಂಬುದು. ಯಾಕೋಬನೆಂದರೆ ಮೋಸಗಾರ ಎಂದು ಅರ್ಥ. ಆದರೆ ಇಸ್ರಾಯೇಲ್ ಎಂದರೆ **ದೇವರೊಂದಿಗೆ ಆಳುವವನು** ಎಂದು ಅರ್ಥ. ಇಸ್ರಾಯೇಲ್ ಎಂಬುದು ದೇವರು ಅಬ್ರಹಾಮ ಇಸಾಕ ಮತ್ತು ಯಾಕೋಬನ ಸಂತತಿಗಳಿಂದ ಹೊರತರುತ್ತೇನೆಂದು ವಾಗ್ದಾನ ಮಾಡಿದ ಒಂದು ಹೊಸ ಜನಾಂಗದ ಹೆಸರಾಗಿತ್ತು. ನೀವು ತಿಳಿದಿರುವ ಹಾಗೆ ಯಾಕೋಬನ ಹನ್ನೆರಡು ಜನ ಗಂಡು ಮಕ್ಕಳಿಂದ ಇಸ್ರಾಯೇಲ್ ಜನಾಂಗವು ಉದಯವಾಯಿತು. ಇದೇ ಇಸ್ರಾಯೇಲ್ ಜನರ ಮುಖಾಂತರವಾಗಿ ವಿಮೋಚಕನು ಲೋಕಕ್ಕೆ ಬಂದನು.

ಯಾಕೋಬನಂತ ಮೋಸಗಾರನನ್ನು ದೇವರು ಆರಿಸಿಕೊಂಡು ಲೋಕಕ್ಕೆ ವಿಮೋಚಕನನ್ನು ತರುವಂತ ಜನಾಂಗಕ್ಕೆ ಅವನನ್ನು ತಂದೆ –ಯನ್ನಾಗಿ ಯಾಕೆ ಮಾಡಿದನು? ಎಂದು ಕೆಲವರು ಬಹುಶ: ಕೇಳಬಹುದು. ಇದಕ್ಕೆ ಪರಿಶುದ್ಧ ವಾಕ್ಯಗಳ ಉತ್ತರವನ್ನು ಕೇಳಿಸಿ – –ಕೊಳ್ಳಿರಿ:

"ದೇವರು ಜ್ಞಾನಿಗಳನ್ನು ನಾಚಿಕೆಪಡಿಸುವದಕ್ಕಾಗಿ ಈ ಲೋಕದ ಬುದ್ಧಿಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಬಲಿಷ್ಠರನ್ನು ನಾಚಿಕೆ –ಪಡಿಸುವದಕ್ಕಾಗಿ ಈ ಲೋಕದ ಬಲಹೀನರನ್ನು ಆರಿಸಿಕೊಂಡಿದ್ದಾನೆ; ದೇವರು ಈ ಲೋಕದ ಕುಲಹೀನರನ್ನೂ ಅಸಡ್ಡೆಯಾದವ – –ರನ್ನೂ ಆರಿಸಿಕೊಂಡದ್ದಲ್ಲದೆ ಗಣ್ಯರನ್ನು ಇಲ್ಲದಂತೆ ಮಾಡುವದಕ್ಕಾಗಿ ಗಣನೆಗೆ ಬಾರದವರನ್ನು ಆರಿಸಿಕೊಂಡಿದ್ದಾನೆ. ಹೀಗಿರಲು **ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ."** (೧ಕೊರಿಂಥ–೧:೨೭–೨೯)

ಯಾಕೋಬನು ಒಬ್ಬ ಮೋಸಗಾರ. ಅವನು ತನ್ನ ಸ್ವಂತ ಬಲದಲ್ಲಿ ದೇವರನ್ನು ಮೆಚ್ಚಿಸುವದಕ್ಕೆ ಮಾರ್ಗವಿಲ್ಲದವನಾಗಿದ್ದ. **ಯಾಕೋಬನು ದೇವರ ವಾಕ್ಯವನ್ನು ನಂಬಿದ್ದನು** ಎಂಬ ಒಂದು ವಿಷಯದ ಹೊರತಾಗಿ ಅವನಲ್ಲಿ ಒಳ್ಳೆಯದೇನೂ ಇರಲಿಲ್ಲ. ಯಾಕೋಬನು ದೇವರ ವಾಗ್ದಾನಗಳ ಶ್ರೀಮಂತನಾಗಿದ್ದನು. ದೇವರ ಆಶೀರ್ವಾದಗಳನ್ನು ಪಡೆದುಕೊಳ್ಳುವದಕ್ಕಿಂತ ಈ ಲೋಕದಲ್ಲಿ ಯಾಕೋಬನಿಗೆ ಹೆಚ್ಚು ಪ್ರಾಮುಖ್ಯವಾದುದು ಯಾವುದೂ ಇರಲಿಲ್ಲ. ಹಾಗಾಗಿ ದೇವರು ತಾನೇ ಯಾಕೋಬನಿಗೆ ಎಲ್ಲವನ್ನೂ ತಿಳಿಯುವಂತೆ ಮಾಡಿ ಅವನನ್ನು ಆಶೀರ್ವದಿಸಿದನು. ದೇವರು ತನ್ನ ನಿತ್ಯವಾದ ಉದ್ದೇಶದಲ್ಲಿ **ಮೋಸಗಾರನಾದ ಯಾಕೋಬನ ಹೃದಯವನ್ನು ದೇವರ ಮನುಷ್ಯನೆಂಬ ಇಸ್ರಾಯೇಲನನ್ನಾಗಿ ಬದಲಾಯಿಸಿದನು.**

ನಿಮ್ಮ ಆಲೋಚನೆಗಳು ಹೇಗಿವೆ? ಯಾಕೋಬನ ಹಾಗೆ ನೀವು ಸಹ ದೇವರನ್ನು ಮೆಚ್ಚಿಸುವದಕ್ಕೆ ನಿಮ್ಮ ಅಸಮರ್ಥತೆಯನ್ನು ಗುರುತಿಸಿಕೊಳ್ಳುತ್ತೀರೋ? ಇದರ ಕುರಿತು ದೇವರ ವಾಕ್ಯ ಹೇಳುವದನ್ನು ಕೇಳಿಸಿಕೊಳ್ಳಿರಿ:

"ಆತ್ಮದಲ್ಲಿ ಬಡವರಾಗಿರುವವರು ಧನ್ಯರು, ಪರಲೋಕ ರಾಜ್ಯವು ಅವರದು" (ಮತ್ತಾಯ–೫:೩) {ಉಲೂಫ್‌ನಲ್ಲಿ, "ಆತ್ಮದಲ್ಲಿ ಬಡವರು" ಎಂಬುದು ಹೀಗೆ ಭಾಷಾಂತರಗೊಂಡಿದೆ: ದೇವರನ್ನು ಮೆಚ್ಚಿಸುವದಕ್ಕೆ ತಮ್ಮ ಸಮರ್ಥತೆಯ ಕೊರತೆಯನ್ನು ತಿಳಿದು – –ಕೊಂಡಿರುವವರು} "ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ, ದೀನರಿಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ. ಹೀಗಿರುವದರಿಂದ **ದೇವರ ತ್ರಾಣವುಳ್ಳ ಹಸ್ತದ ಕೆಳಗೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಅತನು ತಕ್ಕ ಕಾಲದಲ್ಲಿ ನಿಮ್ಮನ್ನು ಮೇಲಕ್ಕೆ ತರುವನು."** (೧ಪೇತ್ರ–೫:೫, ೬).

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ನಮ್ಮ ಮುಂದಿನ ಅಧ್ಯಯನದಲ್ಲಿ, ದೇವರ ಚಿತ್ತವಾದರೆ ಯಾಕೋಬನ ಮಕ್ಕಳಲ್ಲಿ ಒಬ್ಬನಾಗಿರುವ ಯೋಸೇಫನ ಆಶ್ಚರ್ಯಕರವಾದ ಕಥೆಯನ್ನು ನೋಡಿಕೊಳ್ಳೋಣ.

ದೇವರು ನಿಮ್ಮನ್ನು ಆಶೀರ್ವದಿಸಲಿ. ದೇವರ ವಾಕ್ಯದ ಈ ವಚನದೊಂದಿಗೆ ನಾವು ನಿಮ್ಮನ್ನು ಬಿಟ್ಟು ಹೋಗುತ್ತೇವೆ:

**"ಹೀಗಿರಲು ಯೆಹೋವನು ನಿಮಗೆ ಕೃಪೆತೋರಿಸಬೇಕೆಂದು ಕಾದಿರುವನು; ನಿಮ್ಮನ್ನು ಕರುಣಿಸಬೇಕೆಂದು ಉನ್ನತೋನ್ನತನಾಗಿ ಕಾಣಿಸಿ – –ಕೊಳ್ಳುವನು; ಯೆಹೋವನು ನ್ಯಾಯಸ್ವರೂಪನಾದ ದೇವರು; ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು."**
(ಯೆಶಾಯ–೩೦:೧೮)

[ಪಾಠ ೨೪: ಯಾಕೋಬನು ಇಸ್ರಾಯೇಲನಾದದ್ದು] [ಸಾರಾಂಶಗಳ ಪಟ್ಟಿ] [ಪಾಠ ೨೬: ಯೋಸೇಫನ ಘನತೆ]

ಪಾಠ ೨೫

# ಯೋಸೇಫನ ಅಪಮಾನಿಸುವಿಕೆ

ಆದಿಕಾಂಡ ೩೭–೩೯

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ. ಇದರಲ್ಲಿ ನಾವು ಒಂದಾದ ಮೇಲೆ ಒಂದರಂತೆ ದೇವರ ಪ್ರವಾದಿಗಳ ಕಥೆಗಳನ್ನು ವಿವರಿಸುತ್ತೇವೆ. ತೋರಾ ಎಂಬುದಾಗಿ ಕರೆಯುವಂತ ದೇವರ ವಾಕ್ಯದ ಮೊದಲನೆಯ ಭಾಗದಲ್ಲಿ ಓದುವದನ್ನು ನಾವು ಮುಂದುವರಿಸುತ್ತೇವೆ.

ನಮ್ಮ ಹಿಂದಿನ ಪಾಠದಲ್ಲಿ, ಅಬ್ರಹಾಮನ ಮೊಮ್ಮಗನಾದ ಯಾಕೋಬನೆಂಬ ದೇವರ ಪ್ರವಾದಿಯ ಕುರಿತು ಕಲಿತುಕೊಂಡೆವು. ದೇವರು ಯಾಕೋಬನಿಗೆ ಇಸ್ರಾಯೇಲ್ ಎಂಬ ಹೊಸ ಹೆಸರನ್ನು ಹೇಗೆ ಕೊಟ್ಟನೆಂಬುದನ್ನೂ ನಾವು ನೋಡಿಕೊಂಡೆವು. ಯಾಕೋಬನೆಂದರೆ ಮೋಸಗಾರ ಎಂದು ಅರ್ಥ, ಆದರೆ ಇಸ್ರಾಯೇಲನೆಂದರೆ ದೇವರೊಂದಿಗೆ ಆಳುವವನು ಎಂದು ಅರ್ಥ ಈಗ ಯಾಕೋಬ ಮತ್ತು ಇಸ್ರಾಯೇಲ್ ಎಂಬ ಎರಡು ಹೆಸರುಗಳನ್ನು ಯಾಕೋಬನು ಹೊಂದಿದ್ದ. ಅಬ್ರಹಾಮ ಇಸಾಕ ಮತ್ತು ಯಾಕೋಬನ ಸಂತಾನದವರಿಂದ ಉಂಟುಮಾಡುತ್ತೇನೆಂದು ದೇವರು ವಾಗ್ದಾನಮಾಡಿದ್ದ ಹೊಸ ಜನಾಂಗದ ಹೆಸರೂ ಸಹ ಇಸ್ರಾಯೇಲ್ ಎಂಬುದಾಗಿತ್ತು. ಯಾಕೋಬನು ಹನ್ನೆರಡು ಜನ ಗಂಡು ಮಕ್ಕಳನ್ನು ಪಡೆದನು. ಈ ಹನ್ನೆರಡು ಗಂಡುಮಕ್ಕಳಿಂದ ಇಸ್ರಾಯೇಲ್ ಜನರು ಅಂದರೆ ವಿಮೋಚಕನು ಬರಬೇಕಾಗಿದ್ದಂತ ಜನಾಂಗವು ಉದಯಿಸಿತು.

**ಯಾಕೋಬನ ಹನ್ನೆರಡು ಜನ ಗಂಡು ಮಕ್ಕಳ** ಹೆಸರುಗಳು ನಿಮಗೆ ಗೊತ್ತಾ? ಅವರು ರೂಬೇನ್, ಸಿಮೆಯೋನ್, ಲೇವಿ, ಯೆಹೂದ, ಜೆಬುಲೋನ್, ಇಸ್ಸಾಕಾರ್, ದಾನ್, ಗಾದ್, ಅಶೇರ್, ನಫ್ತಾಲಿ, ಯೋಸೇಫ, ಮತ್ತು ಬೆನ್ಯಾಮೀನ್. ಈದಿನ ನಾವು ಯಾಕೋಬನ ಮಕ್ಕಳ ಕುರಿತಾದ ಮನಮೋಹಕವಾದ ಕಥೆಯನ್ನು ಅದರಲ್ಲೂ ವಿಶೇಷವಾಗಿ ಹನ್ನೊಂದನೆಯ ಮಗನಾದ **ಯೋಸೇಫನ** ಕಥೆಯನ್ನು ಪ್ರಾರಂಭಿಸುತ್ತಿದ್ದೇವೆ. ಈಗ ಅದ್ಭುತಕರವಾದ ಯೋಸೇಫನ ಕಥೆಯೊಳಗೆ ಹೋಗೋಣ!

ನಾವು ತೋರಾದಲ್ಲಿನ ಆದಿಕಾಂಡ ಪುಸ್ತಕದ ಮೂವತ್ತೇಳನೇ ಅಧ್ಯಾಯವನ್ನು ಓದುತ್ತಿದ್ದೇವೆ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಯಾಕೋಬನ ಮಕ್ಕಳ ಚರಿತ್ರೆ. **ಯೋಸೇಫನು ಹದಿನೇಳು ವರುಷದವನಾಗಿ ಇನ್ನೂ ಹುಡುಗನಾಗಿದ್ದು** ತನ್ನ ಅಣ್ಣಂದಿರ ಜೊತೆ –ಯಲ್ಲಿ ಅಂದರೆ ತನ್ನ ಮಲತಾಯಿಗಳಾದ ಬಿಲ್ಹಾ ಮತ್ತು ಜಿಲ್ಪಾ ಎಂಬವರ ಮಕ್ಕಳ ಜೊತೆಯಲ್ಲಿ ಆಡುಕುರಿಗಳನ್ನು ಮೇಯಿಸುತ್ತಿ–ದ್ದನು. ಅವರು ಏನಾದರೂ ಕೆಟ್ಟ ಕೆಲಸ ಮಾಡುವಾಗ ಅವನು ತಂದೆಗೆ ತಿಳಿಸುತ್ತಿದ್ದನು. ಯೋಸೇಫನು ಇಸ್ರಾಯೇಲನಿಗೆ ಮುಪ್ಪಿ–ನಲ್ಲಿ ಹುಟ್ಟಿದವನಾದ್ದರಿಂದ ಇಸ್ರಾಯೇಲನು ಅವನನ್ನು ತನ್ನ ಎಲ್ಲಾ ಮಕ್ಕಳಿಗಿಂತ ಹೆಚ್ಚಾಗಿ ಪ್ರೀತಿಸಿ ಅವನಿಗೆ ನಿಲುವಂಗಿಯನ್ನು ಮಾಡಿಸಿಕೊಟ್ಟಿದ್ದನು. ಅವನ **ಅಣ್ಣ ತಮ್ಮಂದಿರು** – ನಮ್ಮ ತಂದೆ ತನ್ನ ಎಲ್ಲಾ ಮಕ್ಕಳಿಗಿಂತಲೂ ಇವನನ್ನೇ ಹೆಚ್ಚಾಗಿ ಪ್ರೀತಿಸುತ್ತಾ–ನೆಂದು ನೋಡಿ ಯೋಸೇಫನನ್ನು **ಹಗೆಮಾಡಿ** ಅವನೊಡನೆ ಸ್ನೇಹಭಾವದಿಂದ ಮಾತಾಡಲಾರದೆ ಹೋದರು." (ಆದಿ–೩೭:೨–೪)

"ಒಂದು ದಿನ ಯೋಸೇಫನು **ಕನಸುಕಂಡು** ಅದನ್ನು ತನ್ನ ಅಣ್ಣಂದಿರಿಗೆ ತಿಳಿಸಲು ಅವರು ಅವನನ್ನು ಇನ್ನೂ ಹೆಚ್ಚಾಗಿ ದ್ವೇಷಿಸಿದರು. ಅವನು ಅವರಿಗೆ – ನಾನು ಕನಸಿನಲ್ಲಿ ಕಂಡದ್ದನ್ನು ಹೇಳುತ್ತೇನೆ, ಕೇಳಿರಿ. ಆ ಕನಸಿನಲ್ಲಿ ನಾವು ಹೊಲದಲ್ಲಿ ಸಿವುಡುಗಳನ್ನು ಕಟ್ಟುತ್ತಾ ಇದ್ದೆವು; ಆಗ ನನ್ನ ಸಿವುಡು ಎದ್ದು ನಿಲ್ಲಲು ನಿಮ್ಮ ಸಿವುಡುಗಳು ಸುತ್ತಲೂ ಬಂದು ನನ್ನ ಸಿವುಡಿಗೆ ಅಡ್ಡ ಬಿದ್ದದ್ದನ್ನು ಕಂಡೆನು ಎಂದು ಹೇಳಿದನು. ಅದಕ್ಕೆ ಅವನ ಅಣ್ಣಂದಿರು – ನೀನು ನಿಜವಾಗಿ ನಮ್ಮನ್ನು ಆಳುವಿಯಾ? ನೀನು ನಮ್ಮ ಮೇಲೆ ದೊರೆತನ ಮಾಡುವಿಯಾ ಎಂದು ಅವನಿಗೆ ಹೇಳಿ ಅವನ ಕನಸುಗಳಿಗಾಗಿಯೂ ಮಾತುಗಳಿಗಾಗಿಯೂ ಮತ್ತಷ್ಟು ಹಗೆಮಾಡಿದರು. ಅವನು ಇನ್ನೊಂದು ಕನಸನ್ನು ಕಂಡು ಅದನ್ನೂ ತನ್ನ ಅಣ್ಣಂದಿರಿಗೆ ತಿಳಿಸಿದನು. ಅವನು ಅವರಿಗೆ – ಇನ್ನೊಂದು ಕನಸು ಕಂಡಿದ್ದೇನೆ; ಅದರಲ್ಲಿ ಸೂರ್ಯಚಂದ್ರರೂ ಹನ್ನೊಂದು ನಕ್ಷತ್ರಗಳೂ ನನಗೆ ಅಡ್ಡಬಿದ್ದವು ಎಂದು ಹೇಳಿದನು. ಅವನು ಈ ಕನಸನ್ನು ತನ್ನ ತಂದೆಗೂ ಅಣ್ಣಂದಿರಿಗೂ ತಿಳಿಸಿದಾಗ ತಂದೆಯು ಅವನಿಗೆ – ಇದು ಎಂಥಾ ಕನಸು ನೀನು ಕಂಡದ್ದು? **ನಾನೂ ನಿನ್ನ ತಾಯಿಯೂ ಅಣ್ಣತಮ್ಮಂದಿರೂ ನಿನ್ನ ಮುಂದೆ ಅಡ್ಡ ಬೀಳುವದಕ್ಕೆ ಬಂದೆವೋ** ಎಂದು ಹೇಳಿ ಗದರಿಸಿದನು. ಯೋಸೇಫನ ಅಣ್ಣಂದಿರು ಅವನ ಮೇಲೆ ಹೊಟ್ಟೆಕಿಚ್ಚುಪಟ್ಟರು; ಆದರೆ ಅವನ ತಂದೆಯು ಅವನ ಮಾತನ್ನು ಮನಸ್ಸಿನಲ್ಲಿಟ್ಟುಕೊಂಡನು." (ಆದಿ–೩೭:೫–೧೧)

“ಒಂದಾನೊಂದು ಕಾಲದಲ್ಲಿ ಅವನ ಅಣ್ಣಂದಿರು ತಂದೆಯ ಆಡುಕುರಿಗಳನ್ನು ಶೆಕೆಮಿನಲ್ಲಿ ಮೇಯಿಸುವದಕ್ಕೆ ಹೋಗಿದ್ದಾಗ ಇಸ್ರಾ –
–ಯೇಲನು ಯೋಸೇಫನಿಗೆ – ನಿನ್ನ ಅಣ್ಣಂದಿರು ಶೆಕೆಮಿನಲ್ಲಿ ಆಡುಕುರಿಗಳನ್ನು ಮೇಯಿಸುತ್ತಿದ್ದಾರಲ್ಲಾ; **ಅವರ ಬಳಿಗೆ ನಿನ್ನನ್ನು ಕಳುಹಿಸುತ್ತೇನೆ ಬಾ** ಎಂದು ಹೇಳಲು ಅವನು– ಇಗೋ ಇದ್ದೇನೆ ಅಂದನು. ಇಸ್ರಾಯೇಲನು ಅವನಿಗೆ – ನೀನು ಹೋಗಿ ನಿನ್ನ ಅಣ್ಣಂದಿರ ಯೋಗಕ್ಷೇಮವನ್ನೂ ಆಡುಕುರಿಗಳ ಯೋಗಕ್ಷೇಮವನ್ನೂ ವಿಚಾರಿಸಿಕೊಂಡು ಬಾ ಎಂದು ಅಪ್ಪಣೆ ಕೊಟ್ಟು ಅವನನ್ನು ಹೆಬ್ರೋನಿರುವ ತಗ್ಗಿನಿಂದ ಕಳುಹಿಸಲು ಯೋಸೇಫನು ಹೊರಟನು.” (ಆದಿ–೩೭:೧೨–೧೪)

“ಯೋಸೇಫನು ಅವರನ್ನು ಹುಡುಕುತ್ತಾ ಹೋಗಿ ದೋತಾನಿನಲ್ಲಿ ಅವರನ್ನು ಕಂಡನು. ಅವರು ಅವನನ್ನು ದೂರದಿಂದ ನೋಡಿ ಅವನು ತಮ್ಮ ಬಳಿಗೆ ಬರುವಷ್ಟರೊಳಗೆ **ಅವನನ್ನು ಕೊಲ್ಲುವದಕ್ಕೆ ಒಳಸಂಚುಮಾಡಿಕೊಂಡರು.** ಅವರು ಒಬ್ಬರಿಗೊಬ್ಬರು – ಅಗೋ ಆ ಕನಸಿನವನು ಬರುತ್ತಾನೆ; ನಾವು ಅವನನ್ನು ಕೊಂದು ಈ ಗುಂಡಿಗಳಲ್ಲಿ ಒಂದರೊಳಗೆ ಹಾಕಿ ದುಷ್ಟಮೃಗವು ಅವನನ್ನು ತಿಂದು –ಬಿಟ್ಟಿತೆಂದು ಹೇಳೋಣ ಬನ್ನಿ. ಆಗ ಅವನ ಕನಸುಗಳು ಏನಾಗುವವೋ ನೋಡೋಣ ಎಂದು ಮಾತಾಡಿಕೊಂಡರು. ರೂಬೇನನು ಈ ಮಾತನ್ನು ಕೇಳಿ ನಾವು ಅವನ ಪ್ರಾಣವನ್ನು ತೆಗೆಯಬಾರದು ಎಂದು ಹೇಳಿ ಅವನನ್ನು ಅವರ ಕೈಗೆ ತಪ್ಪಿಸಿದನು. ರೂಬೇನನು ಅವನನ್ನು ಅವರ ಕೈಯಿಂದ ತಪ್ಪಿಸಿ ತಂದೆಗೆ ತಿರಿಗಿ ಒಪ್ಪಿಸಬೇಕೆಂದು ಅವರಿಗೆ ಪ್ರಾಣಹತ್ಯ ಮಾಡಬೇಡಿರಿ; ಅವನನ್ನು ಕಾಡಿನಲ್ಲಿರುವ ಈ ಗುಂಡಿಯೊಳಗೆ ಹಾಕಬಹುದು ಅವನ ಮೇಲೆ ಕೈ ಹಾಕಬೇಡಿರಿ ಎಂದು ಹೇಳಿದನು.” (೩೭:೧೭–೨೨).

“ಯೋಸೇಫನು ತನ್ನ ಅಣ್ಣಂದಿರ ಹತ್ತಿರಕ್ಕೆ ಬಂದಾಗ **ಅವರು ಅವನ ಮೇಲಿದ್ದ ನಿಲುವಂಗಿಯನ್ನು ತೆಗೆದುಬಿಟ್ಟು ಅವನನ್ನು ಹಿಡಿದು** ಆ ಗುಂಡಿಯೊಳಗೆ ಹಾಕಿದರು. ಆ ಗುಂಡಿ ನೀರಿಲ್ಲದೆ ಬರಿದಾಗಿತ್ತು. ಆಮೇಲೆ ಅವರು ಊಟಕ್ಕೆ ಕೂತುಕೊಂಡರು. ಅಷ್ಟರಲ್ಲಿ ಅವರು ಕಣ್ಣೆತ್ತಿ ನೋಡಿ ಇಷ್ಮಾಯೇಲ್ಯರ ಗುಂಪು ಒಂಟೆಗಳ ಮೇಲೆ ಹಾಲುಮಡ್ಡಿ ಸುಗಂಧತೈಲ ರಕ್ತಬೋಳ ಇವುಗಳನ್ನು ಹೇರಿ –
–ಕೊಂಡು ಗಿಲ್ಯಾದಿನಿಂದ ಐಗುಪ್ತ ದೇಶಕ್ಕೆ ಪ್ರಯಾಣಮಾಡುತ್ತಾ ಬರುವದನ್ನು ಕಂಡರು. ಯೆಹೂದನು ತನ್ನ ಅಣ್ಣತಮ್ಮಂದಿರಿಗೆ ನಾವು ನಮ್ಮ ತಮ್ಮನನ್ನು ಕೊಂದು ಆ ಕೊಲೆಯನ್ನು ಮರೆ ಮಾಡಿದರೆ ಪ್ರಯೋಜನವೇನು? ಅವನನ್ನು ಆ ಇಷ್ಮಾಯೇಲ್ಯರಿಗೆ ಮಾರಿಬಿಡೋಣ ಬನ್ನಿ; ನಾವು ಅವನ ಮೇಲೆ ಕೈಹಾಕಬಾರದು; ಅವನು ನಮ್ಮ ಒಡಹುಟ್ಟಿದ ತಮ್ಮನಲ್ಲವೇ ಎಂದು ಹೇಳಿದನು. ಆ ಮಾತಿಗೆ ಅವನ ಅಣ್ಣಂದಿರು ಒಪ್ಪಿದರು. ಅವರು ಯೋಸೇಫನನ್ನು ಗುಂಡಿಯೊಳಗಿಂದ ಎತ್ತಿ ಆ ಇಷ್ಮಾಯೇಲ್ಯರಿಗೆ ಇಪ್ಪತ್ತು ರೂಪಾಯಿಗಳಿಗೆ **ಮಾರಿಬಿಟ್ಟರು.** ಇವರು ಅವನನ್ನು ಐಗುಪ್ತ ದೇಶಕ್ಕೆ ತೆಗೆದುಕೊಂಡು ಹೋದರು.” (೩೭:೨೩–೨೮)

“ರೂಬೇನನು ತಿರಿಗಿ ಆ ಗುಂಡಿಯ ಹತ್ತಿರಕ್ಕೆ ಬಂದು ಅದರಲ್ಲಿ ಯೋಸೇಫನಿಲ್ಲದ್ದನ್ನು ಕಂಡು ತನ್ನ ಬಟ್ಟೆಗಳನ್ನು ಹರಿದುಕೊಂಡು ತನ್ನ ತಮ್ಮಂದಿರ ಬಳಿಗೆ ಬಂದು – ಆ ಹುಡುಗನು ಇಲ್ಲವಲ್ಲಾ; ಅಯ್ಯೋ ನಾನೆಲ್ಲಿಗೆ ಹೋಗಲಿ ಎಂದು ಗೋಳಾಡಿದನು. ಆಮೇಲೆ ಅವರು ಒಂದು ಹೋತವನ್ನು ಕೊಯಿದು ಅದರ ರಕ್ತದಲ್ಲಿ ಯೋಸೇಫನ ಅಂಗಿಯನ್ನು ಅದ್ದಿ ಆ ನಿಲುವಂಗಿಯನ್ನು ತಮ್ಮ ತಂದೆಗೆ ಕಳುಹಿಸಿದರು; ತಂದವರು – ಇದು ನಮಗೆ ಸಿಕ್ಕಿತು; ಇದು ನಿನ್ನ ಮಗನ ಅಂಗಿ ಹೌದೋ ಅಲ್ಲವೋ ನೋಡು ಎಂದು ಅವನಿಗೆ ಹೇಳಲು ಅವನು ಅದರ ಗುರುತನ್ನು ಹಿಡಿದು – ಈ ಅಂಗಿ ನನ್ನ ಮಗನದೇ ಹೌದು; ದುಷ್ಟ ಮೃಗವು ಅವನನ್ನು ಕೊಂದು ತಿಂದಿರಬೇಕು; ಯೊಸೇಫನು ಸಂದೇಹವಿಲ್ಲದೆ ಸೀಳಿ ಹಾಕಲ್ಪಟ್ಟಿರಬೇಕು ಎಂದು ಹೇಳಿ ತನ್ನ ಬಟ್ಟೆಗಳನ್ನು ಹರಿದುಕೊಂಡು ನಡುವಿನ ಮೇಲೆ ಗೋಣಿತಟ್ಟು ಸುತ್ತಿಕೊಂಡು ತನ್ನ ಮಗನಿಗಾಗಿ ಬಹುದಿನಗಳವರೆಗೂ ಹಂಬಲಿಸುತ್ತಿದ್ದನು. ಅವನ ಗಂಡುಮಕ್ಕಳೂ ಹೆಣ್ಣು ಮಕ್ಕಳೂ ಎಲ್ಲರೂ ದು:ಖಶಮನ ಮಾಡುವದಕ್ಕೆ ಪ್ರಯತ್ನಿಸಿದಾಗ್ಯೂ ಅವನು ಶಾಂತಿಯನ್ನು ಹೊಂದಲೊಲ್ಲದೆ ನಾನು ಹೀಗೆ ಹಂಬಲಿಸುತ್ತಾ ನನ್ನ ಮಗನಿರುವ ಪಾತಾಳವನ್ನು ಸೇರುವೆನು ಅಂದನು. ಹೀಗೆ ತಂದೆಯು ಮಗನಿಗೋಸ್ಕರ ಅಳುತ್ತಿದ್ದನು.” (೩೭:೨೯–೩೫)

“ಯೋಸೇಫನನ್ನು ತೆಗೆದುಕೊಂಡು ಹೋದ ಇಷ್ಮಾಯೇಲ್ಯರು ಐಗಪ್ತದೇಶಕ್ಕೆ ಸೇರಿದಾಗ ಒಬ್ಬ ಐಗುಪ್ತದವನು ಅವನನ್ನು ಅವರಿಂದ ಕ್ರಯಕ್ಕೆ ತೆಗೆದುಕೊಂಡನು; ಇವನು ಯಾರೆಂದರೆ ಫರೋಹನ ಉದ್ಯೋಗಸ್ಥನೂ ಮೈಗಾವಲಿನವರ ದಳವಾಯಿಯೂ ಆಗಿದ್ದ ಪೋಟೀಫರನು. ಯೆಹೋವನು ಯೋಸೇಫನ ಸಂಗಡ ಇದ್ದದರಿಂದ ಅವನು ಏಳಿಗೆಯಾಗಿ ಐಗುಪ್ತ್ಯನಾದ ತನ್ನ ದಣಿಯ ಮನೆ
–ಯೊಳಗೆ ಸೇವಕನಾದನು. ಯೆಹೋವನು ಯೋಸೇಫನ ಸಂಗಡವಿದ್ದು ಅವನು ಮಾಡುವ ಕೆಲಸವನ್ನೆಲ್ಲಾ ಸಫಲವಾಗುವಂತೆ ಮಾಡುತ್ತಾನೆಂದು ಅವನ ದಣಿಯು ತಿಳಿದು ಅವನ ಮೇಲೆ ದಯೆ ಇಟ್ಟು ಅವನನ್ನು ಸ್ವಂತ ಸೇವಕನನ್ನಾಗಿ ನೇಮಿಸಿಕೊಂಡನು. ಇದಲ್ಲದೆ ಆ ದಣಿಯು ಅವನಿಗೆ ತನ್ನ ಮನೆಯಲ್ಲಿ ಪಾರುಪತ್ಯವನ್ನು ಕೊಟ್ಟು ತನ್ನ ಆಸ್ತಿಯನ್ನೆಲ್ಲಾ ಅವನ ವಶಕ್ಕೆ ಒಪ್ಪಿಸಿದನು. ಅವನು ಯೋಸೇಫನನ್ನು ತನ್ನ ಮನೆಯ ಮೇಲೆಯೂ ಆಸ್ತಿಯ ಮೇಲೆಯೂ ಅಧ್ಯಕ್ಷನಾಗಿ ಇಟ್ಟಂದಿನಿಂದ ಯೆಹೋವನು ಯೋಸೇ
–ಫನ ನಿಮಿತ್ತವಾಗಿ ಆ ಐಗುಪ್ತನ ಮನೆಯನ್ನು ಅಭಿವೃದ್ಧಿಗೆ ತಂದನು. ಮನೆಯಲ್ಲಾಗಲಿ ಹೊಲದಲ್ಲಾಗಲಿ ಅವನಿಗಿದ್ದ ಎಲ್ಲಾದರ ಮೇಲೆ ಯೆಹೋವನ ಆಶೀರ್ವಾದವುಂಟಾಯಿತು. ಅವನು ತನ್ನ ಆಸ್ತಿಯನ್ನೆಲ್ಲಾ ಯೋಸೇಫನ ವಶಕ್ಕೆ ಒಪ್ಪಿಸಿದನು; ಇವನು ತನ್ನ ಬಳಿಯಲ್ಲೇ ಇದ್ದದರಿಂದ ತಾನು ತಿನ್ನುವ ಆಹಾರ ಒಂದನ್ನೇ ಹೊರತು ಬೇರೆ ಯಾವುದನ್ನೂ ಚಿಂತಿಸಲಿಲ್ಲ. ಇದಲ್ಲದೆ ಯೋಸೇ–
–ಫನು ರೂಪದಲ್ಲಿಯೂ ಮುಖಭಾವದಲ್ಲಿಯೂ ಸುಂದರನಾಗಿದ್ದನು. ಹೀಗಿರುವಲ್ಲಿ ಅವನ ದಣಿಯ ಹೆಂಡತಿಯು ಅವನ ಮೇಲೆ ಕಣ್ಣು ಹಾಕಿ ತನ್ನೊಡನೆ ಸಂಗಮಕ್ಕೆ ಕರೆದಳು. ಆದರೆ ಅವನು ಒಪ್ಪದೆ – ನನ್ನ ದಣಿಯು ತನ್ನ ಆಸ್ತಿಯನ್ನೆಲ್ಲಾ ನನ್ನ ವಶಕ್ಕೆ ಒಪ್ಪಿಸಿ ನಾನು ಇರುವದರಿಂದ ಮನೆಯೊಳಗೆ ನಡೆಯುವ ಯಾವ ಕೆಲಸವನ್ನೂ ಚಿಂತಿಸದೆ ಇದ್ದಾನೆ. ಈ ಮನೆಯಲ್ಲಿ ಅವನೂ ನನಗಿಂತ

ದೊಡ್ಡವನಲ್ಲ; ನೀನು ಅವನ ಧರ್ಮಪತ್ನಿಯಾದದರಿಂದ ನಿನ್ನನ್ನು ಮಾತ್ರ ನನಗೆ ಅಧೀನ ಮಾಡಲಿಲ್ಲ; ಹೀಗಿರುವಲ್ಲಿ ನಾನು ಇಂಥಾ ಮಹಾದುಷ್ಕೃತ್ಯವನ್ನು ನಡಿಸಿ ದೇವರಿಗೆ ವಿರುದ್ಧವಾಗಿ ಹೇಗೆ ಪಾಪಮಾಡಲಿ ಎಂದು ತನ್ನ ದಣಿಯ ಹೆಂಡತಿಗೆ ಉತ್ತರ ಕೊಟ್ಟನು. ಆಕೆ ಯೋಸೇಫನ ಸಂಗಡ ಪ್ರತಿದಿನವೂ ಈ ಮಾತನ್ನು ಆಡಿದಾಗ್ಯೂ ಅವನು ಅದಕ್ಕೆ ಕಿವಿಗೊಡದೆ ಆಕೆಯಲ್ಲಿ ಸಂಗಮ ಮಾಡುವದಕ್ಕಾಗಲೀ ಆಕೆಯ ಬಳಿಯಲ್ಲಿರುವದಕ್ಕಾಗಲೀ ಒಪ್ಪಿಕೊಳ್ಳಲೇ ಇಲ್ಲ." (೩೯: ೧–೧೦)

"ಹೀಗಿರಲು ಒಂದು ದಿನ ಅವನು ತನ್ನ ಕೆಲಸದ ಮೇಲೆ ಮನೆಗೆ ಬಂದಾಗ ಮನೆಯವರಲ್ಲಿ ಯಾರೂ ಒಳಗೆ ಇಲ್ಲದಿರುವಲ್ಲಿ ಆಕೆ ಅವನ ಬಟ್ಟೆಯನ್ನು ಹಿಡಿದುಕೊಂಡು ನನ್ನ ಸಂಗಮಕ್ಕೆ ಬಾ ಅನ್ನಲು ಅವನು ತನ್ನ ಬಟ್ಟೆಯನ್ನು ಆಕೆಯ ಕೈಯಲ್ಲೇ ಬಿಟ್ಟು ತಪ್ಪಿಸಿ – –ಕೊಂಡು ಓಡಿಹೋದನು. ಅವನು ತನ್ನ ಬಟ್ಟೆಯನ್ನು ನನ್ನ ಕೈಯಲ್ಲಿ ಬಿಟ್ಟು ತಪ್ಪಿಸಿಕೊಂಡು ಹೋದನಲ್ಲಾ ಎಂದು ಆಕೆ ನೋಡಿ ಮನೆಯ ಸೇವಕರನ್ನು ಕರೆದು ಅವರಿಗೆ ನೋಡಿರಿ ನನ್ನ ಯಜಮಾನರು ಒಬ್ಬ ಇಬ್ರಿಯನನ್ನು ನಮ್ಮೊಳಗೆ ಸೇರಿಸಿ ನಮ್ಮನ್ನು ಅವ – –ಮಾನಕ್ಕೆ ಗುರಿಮಾಡಿದ್ದಾರೆ. ಅವನು ನನ್ನನ್ನು ಮಾನಭಂಗಮಾಡವದಕ್ಕೆ ನನ್ನ ಹತ್ತಿರ ಬಂದೆನು. ನಾನು ಗಟ್ಟಿಯಾಗಿ ಕೂಗಿ – –ಕೊಂಡೆನು. ನಾನು ಕೂಗುವದನ್ನು ಕೇಳಿ ಅವನು ತನ್ನ ಬಟ್ಟೆಯನ್ನು ನನ್ನ ಬಳಿಯಲ್ಲೇ ಬಿಟ್ಟು ತಪ್ಪಿಸಿಕೊಂಡು ಓಡಿಹೋದನು ಎಂದು ಹೇಳಿದಳು." (೩೭:೧೧–೧೫)

"ಅವಳು, ಅವನ ದಣಿಯು ಮನೆಗೆ ಬರುವ ತನಕ ಆ ಬಟ್ಟೆಯನ್ನು ತನ್ನ ಬಳಿಯಲ್ಲೇ ಇಟ್ಟುಕೊಂಡಳು. ಪತಿಯು ಬಂದಾಗ ಆಕೆ ಅದೇ ಮಾತನ್ನು ಹೇಳಿ ಅವನಿಗೆ – ನೀನು ನಮ್ಮಲ್ಲಿ ಸೇರಿಸಿಕೊಂಡ ಆ ಇಬ್ರಿಯ ಸೇವಕನು ನನ್ನನ್ನು ಮಾನಭಂಗಪಡಿಸುವದಕ್ಕೆ ನನ್ನ ಬಳಿಗೆ ಬಂದನು. ನಾನು ಕೂಗಿಕೊಂಡೆನು. ಕೂಗುತ್ತಲೇ ಅವನು ತನ್ನ ಬಟ್ಟೆಯನ್ನು ಬಿಟ್ಟು ತಪ್ಪಿಸಿಕೊಂಡು ಓಡಿಹೊದನು ಎಂದು ಹೇಳಿದಳು. ನಿನ್ನ ಸೇವಕನು ಈ ಮೇರೆಗೆ ನನಗೆ ಮಾಡಿದನೆಂಬದಾಗಿ ಆಕೆಯು ಹೇಳಿದ ಮಾತುಗಳನ್ನು ಯೋಸೇಫನ ದಣಿಯು ಕೇಳಿ ಬಹಳ ಸಿಟ್ಟುಗೊಂಡು ಅವನನ್ನು ಹಿಡಿಸಿ ಅರಸನು ಸೆರೆಯವರನ್ನು ಕಟ್ಟಿಹಾಕಿಸುತ್ತಿದ್ದ ಸೆರೆಮನೆಯಲ್ಲಿ ಹಾಕಿಸಿದನು. ಅಲ್ಲಿ ಯೋಸೇಫನು ಸೆರೆಯಲ್ಲಿ ಇರಬೇಕಾಯಿತು. ಆದರೂ ಯೆಹೋವನು ಯೋಸೇಫನ ಸಂಗಡ ಇದ್ದು ಅವನ ಮೇಲೆ ಕೃಪೆ – –ಯನ್ನಿಟ್ಟು ಅವನಿಗೆ ಸೆರೆಯಜಮಾನನ ಬಳಿಯಲ್ಲಿ ದಯೆದೊರಕುವಂತೆ ಮಾಡಿದನು. ಸೆರೆಮನೆಯ ಯಜಮಾನನು ಸೆರೆಯಲ್ಲಿದ್ದ –ವರೆಲ್ಲರನ್ನೂ ಯೋಸೇಫನ ವಶಕ್ಕೆ ಕೊಟ್ಟುಬಿಟ್ಟನು. ಅಲ್ಲಿ ಮಾಡಬೇಕಾದದ್ದನ್ನೆಲ್ಲಾ ಯೋಸೇಫನೇ ಮಾಡಿಸಿದನು. ಯೆಹೋವನು ಅವನ ಸಂಗಡ ಇದ್ದು ಅವನು ನಡಿಸಿದ್ದೆಲ್ಲವನ್ನೂ ಕೈಗೂಡಿಸಿದ್ದರಿಂದ ಅವನ ವಶದಲ್ಲಿದ್ದ ಯಾವದೊಂದರ ವಿಷಯದಲ್ಲಿಯೂ ಸೆರೆಯ ಯಜಮಾನನು ಏನೂ ಚಿಂತಿಸಲಿಲ್ಲ." (೩೭:೧೬–೨೩)

ಹೀಗೆ ಯಾಕೋಬನ ಮಗನಾದ ಯೋಸೇಫನ ಕಥೆಯು ಪ್ರಾರಂಭವಾಗುತ್ತದೆ. ಈ ದಿನ ನಾವು ನೋಡಿರುವದನ್ನು ಈ ಹೇಳಿಕೆ – –ಯೊಂದಿಗೆ ಸಂಕ್ಷಿಪ್ತಗೊಳಿಸಬಹುದು: **ಯೋಸೇಫನು ನೀತಿಯನ್ನು ಪ್ರೀತಿಸಿದನು ಮತ್ತು ಕೆಟ್ಟತನವನ್ನು ದ್ವೇಷಿಸಿದನು**. ನಿಜವಾಗಿ ಹೇಳುವದಾದರೆ ಅವನು ನಶಿಸಿಹೋಗುವ ಪಾಪದ ಸಂತೋಷಕ್ಕಿಂತಲೂ ಸೆರೆಮನೆಯಲ್ಲಿ ಕಷ್ಟವನ್ನು ಅನುಭವಿಸುವವನಾದನು. ಅದಕ್ಕಾಗಿಯೇ ಅವನು ತನ್ನ ಧಣಿಯ ಹೆಂಡತಿಯು ತನ್ನೊಂದಿಗೆ ಸೇರಿ ವ್ಯಭಿಚಾರ ಮಾಡುವದಕ್ಕೆ ಆಹ್ವಾನಿಸಿದಾಗ, ಯೋಸೇಫನು ಅದನ್ನು ತಿರಸ್ಕರಿಸಿ ಆಕೆಗೆ, "ನಾನು ಇಂಥಾ ಮಹಾದುಷ್ಕೃತ್ಯವನ್ನು ನಡಿಸಿ ದೇವರಿಗೆ ವಿರುದ್ಧವಾಗಿ ಹೇಗೆ ಪಾಪಮಾಡಲಿ?" ಎಂದು ಹೇಳಿದನು.

**ದೇವರ ಸೇವೆ ಮತ್ತು ಪಾಪದ ಸೇವೆ ಮಾಡುವದು** ಎರಡೂ ಒಟ್ಟಾಗಿ ಹೋಗುವದಕ್ಕಾಗುವದಿಲ್ಲ ಎಂಬುದನ್ನು ಯೋಸೇಫನು ತಿಳಿದಿದ್ದನು! ಯೋಸೇಫನು ತನ್ನ ಹೃದಯವನ್ನು ದೇವರಿಗೆ ಸಮರ್ಪಿಸಿದ್ದನು. ಅದಕ್ಕೋಸ್ಕರವೇ ಅವನು ನೀತಿಯನ್ನು ಪ್ರೀತಿಸಿ ಕೆಟ್ಟತನವನ್ನು ದ್ವೇಷಿಸಿದನು. ಆದಾಮನ ಸಂತತಿಗಳ ಪಾಪಕ್ಕಾಗಿ ಸಾಯುವದಕ್ಕೆ ಭೂಲೋಕಕ್ಕೆ ಬರಬೇಕಾಗಿದ್ದ **ರಕ್ಷಕನ ಕುರಿತಾಗಿ ಇದ್ದಂತಹ ವಾಗ್ದಾನವನ್ನು** ಅವನ ಮುತ್ತಾತನಾದ ಅಬ್ರಹಾಮನ ಹಾಗೆಯೇ **ಯೋಸೇಫನು ಸಹ ನಂಬಿದ್ದನು**. ಯೊಸೇಫನು ದೇವರ ವಾಕ್ಯವನ್ನು ನಂಬಿದ್ದರಿಂದ ದೇವರು ಅವನನ್ನು ನೀತಿವಂತನೆಂದು ನಿರ್ಣಯಿಸಿದನು. ಅವನ ನಂಬಿಕೆಯ ಕಾರಣದಿಂದ ದೇವರು ಯೋಸೇಫನ ಪಾಪಗಳನ್ನು ಕ್ಷಮಿಸಿದನು ಮತ್ತು ಒಂದು ದುಷ್ಟ ಲೋಕದಲ್ಲಿ ಅವನು ನೀತಿವಂತನಾಗಿ ಜೀವಿಸುವದಕ್ಕಾಗಿ ಪಾಪವನ್ನು ಜಯಿಸುವದಕ್ಕೆ ಶಕ್ತಿಯನ್ನೂ ಮತ್ತು ಆಶೆಯನ್ನೂ ಅವನ ಹೃದಯದಲ್ಲಿ ತುಂಬಿದನು.

ಯೋಸೇಫನು ದೇವರೊಂದಿಗೆ "ನಡೆದನು" ಆದ್ದರಿಂದ ದೇವರೂ ಯೋಸೇಫನೊಂದಿಗೆ "ನಡೆದನು." ಅವನ ಹೃದಯವು ದೇವರಿಗೆ ಸಂಬಂಧಪಟ್ಟದ್ದರಿಂದ ಯೋಸೇಫನು ಪಾಪವನ್ನು ಆನಂದಿಸಲಿಲ್ಲ. ಹೃದಯದಿಂದ ದೇವರನ್ನು ನಂಬಿ ಆತನನ್ನು ಆರಾಧಿಸುವಂತವನು **ದೇವರು ಪ್ರೀತಿಸಿದ್ದನ್ನು ಅವನೂ ಪ್ರೀತಿಸುತ್ತಾನೆ ಮತ್ತು ದೇವರು ದ್ವೇಷಿಸಿದ್ದನ್ನು ಅವನೂ ದ್ವೇಷಿಸುತ್ತಾನೆ**. ವಾಕ್ಯವು ಹೀಗೆ ಹೇಳುವಾಗ ಯಾವುದನ್ನು ತಿಳಿಸುತ್ತದೆಂದರೆ:

"**ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು**. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರಮಾಡುವನು." (ಮತ್ತಾಯ–೬:೨೪). "ನೀವು ಕ್ರಿಸ್ತನಂಬಿಕೆಯಿಲ್ಲದವರೊಂದಿಗೆ

ಸೇರಿ ಇಜ್ಜೋಡಾಗಬೇಡಿರಿ. **ಧರ್ಮಕ್ಕೂ ಅಧರ್ಮಕ್ಕೂ** ಜೊತೆಯೇನು? **ಬೆಳಕಿಗೂ ಕತ್ತಲೆಗೂ** ಐಕ್ಯವೇನು?" (೨ಕೊರಿಂಥ–೬:೧೪). "ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆ ಯಾವದೆಂದರೆ ದೇವರು **ಬೆಳಕಾಗಿದ್ದಾನೆ;** ಮತ್ತು ಆತನಲ್ಲಿ ಎಷ್ಟು ಮಾತ್ರವೂ **ಕತ್ತಲೆಯಿಲ್ಲ** ಎಂಬದೇ. ನಾವು ದೇವರ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡು– –ವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ." (೧ಯೋಹಾನ–೧:೫,೬).

ನಿಜವಾಗಿಯೂ ದೇವರಿಗೆ ಸಂಬಂಧಿಸಿರುವಂತವರು ದೇವರ ವಾಕ್ಯವನ್ನು ನಂಬಿ ಅದಕ್ಕೆ ವಿಧೇಯರಾಗುವದಕ್ಕೆ ಹುಡುಕುತ್ತಾರೆ. ಆದರೆ ದೇವರಿಗೆ ಸಂಬಧಪಡದವರು ಪಾಪದಿಂದ ನಿಯಂತ್ರಿಸಲ್ಪಡುತ್ತಾರೆ. ಅವರು ಧರ್ಮದ ಹೊರಗಿನ ತೋರಿಕೆಯನ್ನು ಹೊಂದಿ –ರುತ್ತಾರೆ ಆದರೆ ಅವರ ಆಲೋಚನೆಗಳನ್ನು, ಅವರ ಹೃದಯದ ಅಭಿಪ್ರಾಯಗಳನ್ನು, ಅವರ ಮಾತುಗಳನ್ನು ಮತ್ತು ಅವರ ಕೃತ್ಯ –ಗಳನ್ನು **ಪಾಪವು ಇನ್ನೂ ನಿಯಂತ್ರಿಸುತ್ತಿರುತ್ತದೆ.** ಅವರು ಪಾಪವನ್ನು ಜಯಿಸುವ ಉದ್ದೇಶವುಳ್ಳವರಾಗಿರುತ್ತಾರೆ ಆದರೆ ಅವರಿ –ಗಿಂತಲೂ ಪಾಪವು ಬಲವುಳ್ಳದ್ದಾಗಿರುವದರಿಂದ ಅವರಿಗೆ ಪಾಪವನ್ನು ಜಯಿಸುವದಕ್ಕಾಗುವದಿಲ್ಲ. ಯಾರು ದೇವರ ವಾಕ್ಯವನ್ನು ನಂಬಿ ದೇವರು ಸ್ಥಾಪಿಸಿರುವಂತ ರಕ್ಷಣೆಯ ಮಾರ್ಗವನ್ನು ಒಪ್ಪಿಕೊಂಡಿರುತ್ತಾರೋ ಅವರೆಲ್ಲರಿಗೆ ದೇವರು ಕೊಟ್ಟಿರುವಂತ **ದೇವರ ಪರಿಶುದ್ಧ ಆತ್ಮನ ಬಲವನ್ನು** ಅವರು ತಮ್ಮ ಹೃದಯಗಳಲ್ಲಿ ಹೊಂದಿರುವದಿಲ್ಲ,

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನಿಮ್ಮ ಹೃದಯವನ್ನು ದೇವರು ತನ್ನ ಬಲದಿಂದ ನವೀಕರಿಸಿದ್ದಾನೋ? ಎಲ್ಲಾ ಪಾಪದಿಂದ ನಿಮ್ಮ ಹೃದಯವನ್ನು ತೊಳೆಯುವದಕ್ಕೆ ಅಧಿಕಾರವಿರುವಂತ ರಕ್ಷಕನ ಕುರಿತಾದ **ಶುಭಸಂದೇಶವನ್ನು** ನೀವು ಸ್ವೀಕರಿಸಿದ್ದೀರೋ? ಅಥವಾ ನೀವು ಇನ್ನೂ ಪಾಪದ ಆಳ್ವಿಕೆಯಲ್ಲಿ ಜೀವಿಸುತ್ತೀದ್ದೀರೋ? ವಾಕ್ಯವು ಹೇಳುವದೇನೆಂದರೆ: **"ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು.** ಪಾಪಿಗಳೇ ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ; ಎರಡು ಮನಸ್ಸುಳ್ಳವರೇ ನಿಮ್ಮ ಹೃದಯಗಳನ್ನು ನಿರ್ಮಲಮಾಡಿಕೊಳ್ಳಿರಿ. . . .ಕರ್ತನ ಮುಂದೆ ನಿಮ್ಮನ್ನು ತಗ್ಗಿಸಿಕೊಳ್ಳಿರಿ; ಆಗಲಾತನು ನಿಮ್ಮನ್ನು ಮೇಲಕ್ಕೆ ತರುವನು." (ಯಾಕೋಬ–೪:೮, ೧೦).

ಸ್ನೇಹಿತರೇ ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ನಮ್ಮ ಮುಂದಿನ ಅಧ್ಯಯನದಲ್ಲಿ ಕರ್ತನ ಚಿತ್ತದಂತೆ ಯೋಸೇಫನ ಕಥೆಯನ್ನು ಮುಂದುವರಿಸುತ್ತೇವೆ ಮತ್ತು ಅವನು ಸೆರೆಮನೆಯಿಂದ ಹೊರಬಂದು ಐಗುಪ್ತ ದೇಶದ ಮೇಲೆಲ್ಲಾ ಅಧಿಕಾರಿಯ ಸ್ಥಾನಕ್ಕೆ ಹೇಗೆ ಬಂದನೆಂಬುದನ್ನು ನೋಡುತ್ತೇವೆ.

ವಾಕ್ಯದಲ್ಲಿ ಕಂಡುಬರುವ ಈ ವಚನವನ್ನು ನೀವು ಧ್ಯಾನಿಸುವಂತೆ ದೇವರು ನಿಮ್ಮನ್ನು ಆಸೀರ್ವದಿಸಲಿ:

**"ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ."** (೧ಯೋಹಾ–೧:೫,೬)

ಪಾಠ ೨೬

# ಯೋಸೇಫನ ಘನತೆ

ಆದಿಕಾಂಡ ೪೦-೪೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ -ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು -ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ -ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ ಯಾಕೋಬನ ಹನ್ನೆರಡು ಗಂಡು ಮಕ್ಕಳಲ್ಲಿ ಹನ್ನೊಂದನೆಯವನಾದ ಯೋಸೇಫನ ಕುರಿತಾಗಿ ಕಲಿತು - -ಕೊಳ್ಳುವದಕ್ಕೆ ಪ್ರಾರಂಭಿಸಿದ್ದೇವೆ. ಒಂದು ದಿನ ತನ್ನ ಸಹೋದರರುಗಳು ತನ್ನ ಮುಂದೆ ತಲೆಬಾಗುತ್ತಾರೆಂಬುದನ್ನು ಯೋಸೇಫನು ಹೇಗೆ ಕನಸು ಕಂಡನೆಂದು ನಾವು ಓದಿದೆವು. ಯೋಸೇಫನ ಸಹೋದರರು ಅವನನ್ನು ನಂಬಲಿಲ್ಲ. ಹೇಗೂ ಅವನ ಸಹೋದರರು -ಗಳು ಬಂದು ಅವನ ಮುಂದೆ ಮೊಣಕಾಲೂರುವಂತೆ ಮಾಡಿ **ದೇವರು** ಹೇಗೆ **ಯೋಸೇಫನ ಕನಸನ್ನು ನೆರವೇರಿಸಿದನೆಂಬುದನ್ನು** ಈ ದಿನ ನಾವು ನೋಡಿಕೋಳ್ಳೋಣ.

ನಾವು ಕಲಿತುಕೊಂಡ ಹಾಗೆ, ಯೋಸೇಫನ ಅಣ್ಣಂದಿರು ಅವನ ಕನಸಿನ ನಿಮಿತ್ತವಾಗಿ ಅವನನ್ನು ದ್ವೇಷಿಸಿ ಅವನನ್ನು ಹಿಂಸಿಸುವವ -ರಾದರು. ಅವರ ಕೋಪ ಮತ್ತು ಮತ್ಸರದಲ್ಲಿ ಅವರು ತುಂಬಾ ದೂರ ಹೋಗಿ ಇಷ್ಮಾಯೇಲ್ ವರ್ತಕರಿಗೆ ಅವನನ್ನು ಗುಲಾಮ -ನನ್ನಾಗಿ ಮಾರಿದರು. ಆ ಇಷ್ಮಾಯೇಲ್ಯರು ಇವನನ್ನು ಐಗುಪ್ತಕ್ಕೆ ತೆಗೆದುಕೊಂಡು ಹೋಗಿ ಐಗುಪ್ತದ ಅರಸನಾದ ಫರೋಹನ ಒಬ್ಬ ಅಧಿಕಾರಿಗೆ ಮಾರಿಬಿಟ್ಟರು. ಯೋಸೇಫನಾದರೋ **ದೇವರೊಂದಿಗೆ ನಡೆಯುವವನಾದ್ದರಿಂದ** ಅವನು ಒಬ್ಬ ನಂಬಿಗಸ್ತ ಸೇವಕ -ನಾಗಿದ್ದು ತನ್ನ ಕೆಲಸದಲ್ಲಿ ಪ್ರಾಮಾಣಿಕನಾಗಿದ್ದನು. ಯೋಸೇಫನು ತುಂಬಾ ಸುಂದರನಾಗಿದ್ದನು, ಇದು ಅವನ ಧಣಿಯ ಹೆಂಡ -ತಿಯು ದುರಾಶೆಯುಳ್ಳವಳಾಗಿ ಅವನೊಂದಿಗೆ ಮಲಗುವದಕ್ಕೆ ಬಯಸಲು ಕಾರಣವಾಯಿತು. ಆದರೆ ಯೋಸೇಫನು ಇದನ್ನು ತಿರಸ್ಕರಿಸುತ್ತಾ ಆಕೆಗೆ, **"ನಾನು ಇಂಥಾ ಮಹಾದುಷ್ಕೃತ್ಯವನ್ನು ನಡಿಸಿ ದೇವರಿಗೆ ವಿರುದ್ಧವಾಗಿ ಹೇಗೆ ಪಾಪ ಮಾಡಲಿ?"** ಎಂದು ಉತ್ತರಿಸಿದನು. ಯೋಸೇಫನು ಆಕೆಯೊಂದಿಗೆ ವ್ಯಭಿಚಾರ ಮಾಡುವದಕ್ಕೆ ನಿರಾಕರಿಸಿದಾಗ ಆ ಸ್ತ್ರೀಯು ಅವನ ವಿರುದ್ಧವಾಗಿ ಮಾತಾಡಿ ಅವನು ಸೆರೆಗೆ ಹೋಗುವಂತೆ ಮಾಡಿದಳು. ಹೇಗೂ, ಸ್ವಲ್ಪ ಸಮಯ ಪಾಪದ ಸಂತೋಷಪಡುವದಕ್ಕಿತಂಲೂ ಸೆರೆ - -ಮನೆಗೆ ಹೋಗುವದನ್ನೇ ಯೋಸೇಫನು ಆರಿಸಿಕೊಂಡನು. ಯೋಸೇಫನು ತನ್ನ ಜೀವಿತದಲ್ಲಿ ದೇವರನ್ನು ಮೊದಲು ಇಟ್ಟಿದ್ದನು. ಎರಡು ವರ್ಷಗಳವರೆಗೆ ಯೋಸೇಫನು ಸೆರೆಮನೆಯ ಕೋಣೆಯಲ್ಲಿದ್ದನು, ಆದರೆ ದೇವರು ಅವನನ್ನು ಮರೆಯಲಿಲ್ಲ.

ಹಾಗಾದರೆ ಈಗ ತೋರಾದಲ್ಲಿರುವದನ್ನು ಮುಂದುವರಿಸೋಣ ಮತ್ತು ದೇವರು ಯೋಸೇಫನ ಸನ್ನಿವೇಶಗಳನ್ನು ಹೇಗೆ ಬದಲಾಯಿಸಿದನೆಂಬುದನ್ನು ನೋಡೋಣ. ನಾವು ಆದಿಕಾಂಡ ಪುಸ್ತಕದ ನಲವತ್ತೊಂದನೆಯ ಅಧ್ಯಾಯವನ್ನು ಓದುತ್ತಿದ್ದೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

"[ಯೋಸೇಫನು ಸೆರೆಮನೆಯಲ್ಲಿದ್ದು ಪೂರ್ತಿ ಎರಡು ವರ್ಷಗಳಾದ ನಂತರ ಐಗುಪ್ತದ ಅರಸನಾದ] **ಪರೋಹನಿಗೆ ಕನಸು ಬಿತ್ತು.** ಆ ಕನಸು ಏನೆಂದರೆ - ಅವನು ನೈಲ್ ನದೀ ತೀರದಲ್ಲಿ ನಿಂತಿದ್ದನು. ಅಷ್ಟರಲ್ಲಿ ಲಕ್ಷಣವಾದ ಏಳು ಕೊಬ್ಬಿದ ಆಕಳುಗಳು ಆ ನದಿಯೊಳಗಿಂದ ಬಂದು ಆಪುಹುಲ್ಲಿನಲ್ಲಿ ಮೇಯುತ್ತಿದ್ದವು. ಅವುಗಳ ಹಿಂದೆ ಮೈಯೊಣಗಿ ಬಡವಾದ ಏಳು ಆಕಳುಗಳು ನದಿ - -ಯೊಳಗಣಿಂದ ಬಂದು ಮೊದಲು ಕಾಣಿಸಿದ ಆಕಳುಗಳ ಹತ್ತಿರ ನದೀತೀರದಲ್ಲಿ ನಿಂತವು ಮೈಯೊಣಗಿದ ಈ ಬಡ ಆಕಳುಗಳು ಲಕ್ಷಣವಾದ ಆ ಕೊಬ್ಬಿದ ಆಕಳುಗಳನ್ನು ತಿಂದುಬಿಟ್ಟವು. ಹೀಗೆ ಕಾಣಿಸುವಷ್ಟರಲ್ಲಿ ಫರೋಹನಿಗೆ ಎಚ್ಚರವಾಯಿತು. ಅವನು ತಿರಿಗಿ ನಿದ್ರೆ ಮಾಡಿದಾಗ ಮತ್ತೊಂದು ಕನಸುಬಿತ್ತು. ಅದೇನಂದರೆ - ಒಳ್ಳೇ ಪುಷ್ಟಿಯುಳ್ಳ ಏಳು ತೆನೆಗಳು ಒಂದೇ ದಂಟಿನಲ್ಲಿ ಹುಟ್ಟಿದವು. ಅವುಗಳ ಹಿಂದೆ ಮೂಡಣ ಗಾಳಿಯಿಂದ ಕೆಟ್ಟು ಬತ್ತಿಹೋಗಿದ್ದ ಬೇರೆ ಏಳು ತೆನೆಗಳು ಮೊಳೆತು ಬಂದವು; ಬತ್ತಿಹೋಗಿದ್ದ ಈ ತೆನೆಗಳು ಆ ಏಳು ಒಳ್ಳೇ ಪುಷ್ಟಿಯುಳ್ಳ ತೆನೆಗಳನ್ನು ನುಂಗಿಬಿಟ್ಟವು. ಹೀಗೆ ಕಾಣಿಸುವಷ್ಟರಲ್ಲಿ ಫರೋಹನು ಎಚ್ಚತ್ತು ಅದನ್ನು ಕನಸೆಂದು ತಿಳುಕೊಂಡನು. ಬೆಳಿಗ್ಗೆ ಅವನು ಮನದಲ್ಲಿ ಕಳವಳಗೊಂಡು ಐಗುಪ್ತದೇಶದಲ್ಲಿದ್ದ ಎಲ್ಲಾ ಜೋಯಿಸರನ್ನೂ ವಿದ್ವಾಂಸ -ರನ್ನೂ ಕರೆಸಿ ಅವರಿಗೆ ತನ್ನ ಕನಸನ್ನು ತಿಳಿಸಲಾಗಿ ಅದರ ಅರ್ಥವನ್ನು ಅವನಿಗೆ ಹೇಳಬಲ್ಲವರು ಅವರಲ್ಲಿ ಒಬ್ಬರೂ ಸಿಕ್ಕಲಿಲ್ಲ." (ಆದಿ-೪೧:೧-೮)

"ಹೀಗಿರುವಾಗ ಪಾನದಾಯಕರಲ್ಲಿ ಮುಖ್ಯಸ್ಥನು ಫರೋಹನಿಗೆ – ಅರಸನೇ, ಈ ಹೊತ್ತು ನನ್ನ ತಪ್ಪುಗಳನ್ನು ನೆನಸಿ ಸನ್ನಿಧಿಯಲ್ಲಿ ಅರಿಕೆ ಮಾಡುತ್ತೇನೆ. ತಾವು ತಮ್ಮ ಸೇವಕರ ಮೇಲೆ ಸಿಟ್ಟುಗೊಂಡು ನನ್ನನ್ನೂ ಭಕ್ಷ್ಯಕಾರರಲ್ಲಿ ಮುಖ್ಯಸ್ಥನನ್ನೂ ದಳವಾಯಿಯ ಮನೆಯೊಳಗೆ ಕಾವಲಲ್ಲಿರಿಸಿದಾಗ ನಮವಮಿಬ್ಬರಿಗೂ ಒಂದೇ ರಾತ್ರಿಯಲ್ಲಿ ಕನಸುಬಿತ್ತು; ಒಬ್ಬೊಬ್ಬನ ಕನಸಿಗೆ ಬೇರೆ ಬೇರೆ ಅರ್ಥ –ವಿತ್ತು. ಅಲ್ಲಿ ನಮ್ಮ ಸಂಗಡ ಇಬ್ರಿಯನಾದ ಒಬ್ಬ ಪ್ರಾಯಸ್ಥನಿದ್ದನು; ಅವನು ದಳವಾಯಿಯ ದಾಸನು. ನಾವು ಅವನಿಗೆ ನಮ್ಮ ಕನಸುಗಳನ್ನು ತಿಳಿಸಿದಾಗ ಅವನು ಅವುಗಳ ಅರ್ಥವನ್ನು ನಮಗೆ ಹೇಳಿದನು; ನಮ್ಮ ನಮ್ಮ ಕನಸಿನ ಪ್ರಕಾರ ಅರ್ಥವನ್ನು ಹೇಳಿ – –ದನು. ಮಾತ್ರವಲ್ಲದೆ ಅವನು ನಮಗೆ ಹೇಳಿದ ಅರ್ಥಕ್ಕೆ ಸರಿಯಾಗಿ ಕಾರ್ಯವು ನಡೆಯಿತು; ಅವನು ಹೇಳಿದಂತೆಯೇ ನನ್ನ ಉದ್ಯೋಗವು ತಿರಿಗಿ ನನಗೆ ದೊರಕಿತು; ಭಕ್ಷ್ಯಕಾರರಲ್ಲಿ ಮುಖ್ಯಸ್ಥನೋ ಗಲ್ಲಿಗೆ ಹಾಕಲ್ಪಟ್ಟನು ಅಂದನು." (೪೧:೯–೧೩)

"**ಫರೋಹನು ಇದನ್ನು ಕೇಳಿ ಯೋಸೇಫನನ್ನು ಕರೇ ಕಳುಹಿಸಿದನು.** ಯೋಸೇಫನು ಬೇಗನೇ ಸೆರೆಮನೆಯಿಂದ ಬಿಡಿಸಲ್ಪಟ್ಟವನಾಗಿ ಕ್ಷೌರಮಾಡಿಸಿಕೊಂಡು ಬೇರೆ ವಸ್ತ್ರಗಳನ್ನು ಹಾಕಿಕೊಂಡು ಫರೋಹನ ಸನ್ನಿಧಿಗೆ ಬಂದನು. ಆಗ ಫರೋಹನು ಯೋಸೇಫನಿಗೆ – ನಾನು ಒಂದು ಕನಸು ಕಂಡಿದ್ದೇನೆ; ಅದರ ಅರ್ಥವನ್ನು ಹೇಳಬಲ್ಲವರು ಯಾರೂ ಇಲ್ಲ. ಆದರೆ ನೀನು ಕನಸನ್ನು ಕೇಳುತ್ತಲೇ ಅದರ ಅರ್ಥವನ್ನು ಹೇಳಬಲ್ಲವನೆಂದು ವರ್ತಮಾನ ಕೇಳಿದ್ದೇನೆ ಎಂದು ಹೇಳಲು ಯೋಸೇಫನು – **ನನ್ನಲ್ಲಿ ಅಂಥ ಸಾಮರ್ಥ್ಯ – –ವೇನೂ ಇಲ್ಲ ಆದರೆ ದೇವರು ಫರೋಹನಿಗೆ ಶುಭಕರವಾದ ಉತ್ತರವನ್ನು ಕೊಡಬಲ್ಲನೆಂದು ಹೇಳಿದನು."** (೪೧:೧೪–೧೬)

ಅನಂತ್ರ ಫರೋಹನು ತನ್ನ ಕನಸನ್ನು ಯೋಸೇಫನಿಗೆ ವಿವರಿಸಿದನು. ಇದನ್ನು ಹೇಳಿದ ನಂತರ ಅವನು ಯೋಸೇಫನಿಗೆ ಹೀಗೆ ಹೇಳಿದನು:

"ಈ ಕನಸುಗಳನ್ನು ಜೋಯಿಸರಿಗೆ ತಿಳಿಸಿದೆನು. ಆದರೆ ಅವುಗಳ ಅರ್ಥವನ್ನು ಬಿಚ್ಚಿ ಹೇಳುವದಕ್ಕೆ ಅವರಲ್ಲಿ ಯಾರಿಂದಲೂ ಆಗ –ಲಿಲ್ಲ ಅಂದನು. ಯೋಸೇಫನು ಫರೋಹನಿಗೆ – ತಾವು ಕಂಡ ಎರಡು ಕನಸುಗಳೂ ಒಂದೇ ವಿಷಯವಾದವುಗಳು. ದೇವರು ತಾನು ಮಾಡೇಕೆಂದಿರುವದನ್ನು ಇವುಗಳ ಮೂಲಕ ತಮಗೆ ತಿಳಿಸಿದ್ದಾನೆ. ಆ ಏಳು ಒಳ್ಳೆಯ ಆಕಳುಗಳೇ ಏಳು ವರುಷಗಳು; ಆ ಏಳು ಒಳ್ಳೆಯ ತೆನೆಗಳೂ ಏಳು ವರುಷಗಳು; ಎರಡು ಕನಸುಗಳ ಅರ್ಥವೊಂದೇ. ಒಳ್ಳೇ ಆಕಳುಗಳ ಹಿಂದೆ ಬಂದ ಅವಲಕ್ಷಣ – –ವಾದ ಆ ಬಡ ಆಕಳುಗಳೂ ಮೂಡಣ ಗಾಳಿಯಿಂದ ಕೆಟ್ಟುಹೋಗಿದ್ದ ಆ ಏಳು ಕಾಳಿಲ್ಲದ ತೆನೆಗಳೂ ಬರವುಂಟಾಗುವ ಏಳು ವರುಷಗಳನ್ನು ಸೂಚಿಸುತ್ತವೆ. ದೇವರು ತಾನು ಮಾಡಬೇಕೆಂದಿರುವದನ್ನು ತಮಗೆ ತಿಳಿಸಿದ್ದಾನೆಂಬದಾಗಿ ನಾನು ಅರಿಕೆ ಮಾಡಿದೆ –ನಷ್ಟೆ. ಕೇಳಯ್ಯಾ ಐಗುಪ್ತ ದೇಶದಲ್ಲೆಲ್ಲಾ **ಬಹುವಿಶೇಷವಾದ ಏಳು ಸುಭಿಕ್ಷ ವರುಷಗಳು** ಅವುಗಳ ತರುವಾಯ **ಏಳು ದುರ್ಭಿಕ್ಷ ವರುಷಗಳೂ ಬರುವವು.** ಆಗ ಐಗುಪ್ತ ದೇಶದವರು ಮೊದಲಿದ್ದ ಸುಭಿಕ್ಷವನ್ನು ಮರೆತುಬಿಡುವರು; ಆ ಬರದಿಂದ ದೇಶವು ಹಾಳಾಗಿ ಹೋಗುವದು. ಮುಂದೆ ಬರುವ ಕ್ಷಾಮವು ಅತ್ಯಂತ ಘೋರವಾಗಿರುವದರಿಂದ ಮೊದಲಿದ್ದ ಸಮೃದ್ಧಿಯ ಗುರುತೇ ಕಾಣಿಸದೆ ಹೋಗುವದು. ಫರೋಹನಿಗೆ ಕನಸು ಎರಡು ವಿಧವಾಗಿ ಬಿದ್ದದ್ದರಿಂದ ದೇವರು ಈ ಕಾರ್ಯವನ್ನು ನಿಶ್ಚಯಿಸಿ ಇದನ್ನು ಬೇಗ ಮಾಡುವನೆಂಬದಾಗಿ ತಿಳುಕೊಳ್ಳಬೇಕು. ಆದದರಿಂದ ತಾವು ವಿವೇಕಿಯೂ ಬುದ್ಧಿವಂತನೂ ಆಗಿರುವ ಪುರುಷನನ್ನು ಆರಿಸಿ –ಕೊಂಡು ಅವನನ್ನು ಐಗುಪ್ತ ದೇಶದ ಮೇಲೆ ಅಧಿಕಾರಿಯಾಗಿ ನೇಮಿಸಬೇಕು. ಮತ್ತು ತಾವು ಒಂದು ಕೆಲಸ ಮಾಡಬೇಕು; ದೇಶದ ಎಲ್ಲಾ ಭಾಗಗಳಲ್ಲಿಯೂ ಕರಣೀಕರನ್ನು ನೇಮಿಸಿ ಅವರ ಕೈಯಿಂದ ಸುಭಿಕ್ಷವಾದ ಏಳು ವರುಷಗಳಲ್ಲಿ ದೇಶದ ಬೆಳೆಯೊಳಗೆ ಐದನೆಯ ಪಾಲನ್ನು ಕಂದಾಯವಾಗಿ ಎತ್ತಿಸಬೇಕು. ಅವರು ಮುಂದಣ ಒಳ್ಳೇ ವರುಷಗಳಲ್ಲಿ ಆಹಾರ ಪದಾರ್ಥಗಳನ್ನೂ ದವಸ ಧಾನ್ಯಗಳನ್ನೂ ಕೂಡಿಸಿ ಫರೋಹನ ವಶದೊಳಗೆ ಪಟ್ಟಣಗಳಲ್ಲಿಟ್ಟು ಜೋಪಾನ ಮಾಡಲಿ. ಆ ಆಹಾರ ಪದಾರ್ಥಗಳನ್ನು ಇಟ್ಟು ಕೂಡಿಸಿಕೊಳ್ಳುವದರಿಂದ ಐಗುಪ್ತ ದೇಶದಲ್ಲಿ ದುರ್ಭಿಕ್ಷವುಂಟಾಗುವ ಏಳು ವರುಷಗಳಲ್ಲಿ ಜನರು ಕ್ಷಾಮದಿಂದ ಸಾಯುವದಿಲ್ಲ ಎಂದು ಹೇಳಿದನು." (೪೧:೨೪–೩೬)

"ಆ ಮಾತು ಫರೋಹನಿಗೂ ಅವನ ಪರಿವಾರದವರಿಗೂ ಒಳ್ಳೇದಾಗಿ ತೋಚಿದ್ದರಿಂದ ಫರೋಹನು ತನ್ನ ಪರಿವಾರದವರಿಗೆ – ಈತನಲ್ಲಿ ದೇವರ ಆತ್ಮ ಉಂಟಲ್ಲಾ; **ಈತನಿಗಿಂತ ಯೋಗ್ಯನಾದ ಪುರುಷನು ನಮಗೆ ಸಿಕ್ಕಾನೇ** ಎಂದು ಹೇಳಿ ಯೋಸೇಫನಿಗೆ – ದೇವರು ಇದನ್ನೆಲ್ಲಾ ನಿನಗೇ ತಿಳಿಸಿರುವದರಿಂದ ನಿನಗೆ ಸಮಾನನಾದ ಬುದ್ಧಿ ವಿವೇಕಗಳುಳ್ಳ ಪುರುಷನು ಯಾವನೂ ಇಲ್ಲ; ನೀನೇ ಅರಮನೆಯಲ್ಲಿ ಸರ್ವಾಧಿಕಾರಿಯಾಗಿರಬೇಕು; ನಿನ್ನ ಅಪ್ಪಣೆಯ ಮೇರೆಗೆ ಪ್ರಜೆಗಳೆಲ್ಲರೂ ನಡೆದುಕೊಳ್ಳಬೇಕು; ಸಿಂಹಾಸನದ ವಿಷಯದಲ್ಲಿ ಮಾತ್ರ ನಾನು ನಿನಗಿಂತ ದೊಡ್ಡವನಾಗಿರುವೆನು ಎಂದು ಹೇಳಿದನು." (೪೧:೩೭–೪೦)

"**ಫರೋಹನು ಯೋಸೇಫನಿಗೆ – ನೋಡು ಐಗುಪ್ತ ದೇಶದ ಮೇಲೆಲ್ಲಾ ನಿನ್ನನ್ನು ಅಧಿಕಾರಿಯನ್ನಾಗಿ ಇಟ್ಟಿದ್ದೇನೆ** ಎಂದು ಹೇಳಿ ತನ್ನ ಕೈಯಿಂದ ಮುದ್ರಿಕೆಯನ್ನು ತೆಗೆದು ಯೋಸೇಫನ ಕೈಗೆ ಇಟ್ಟು ಅವನಿಗೆ ನಾರುಮಡಿಯನ್ನು ಹೊದಿಸಿ ಅವನ ಕೊರಳಿಗೆ ಚಿನ್ನದ ಸರ –ವನ್ನು ಹಾಕಿಸಿ ತನಗಿದ್ದ ಎರಡನೆಯ ರಥದಲ್ಲಿ ಕುಳ್ಳಿರಿಸಿ ಅವನ ಮುಂದೆ ಅಡ್ಡಬೀಳಿರಿ ಎಂದು ಪ್ರಟಣೆ ಮಾಡಿಸಿ ಅವನನ್ನು ಐಗುಪ್ತ ದೇಶಕ್ಕೆ ಸರ್ವಾಧಿಕಾರಿಯನ್ನಾಗಿ ಇಟ್ಟನು. ಇನ್ನೂ ಫರೋಹನು ಅವನಿಗೆ – ನಾನು ಫರೋಹನು; ನಿನ್ನ ಅಪ್ಪಣೆಯಿಲ್ಲದೆ ಐಗುಪ್ತ ದೇಶದಲೆಲ್ಲಾ ಒಬ್ಬನೂ ಕೈಯನ್ನಾಗಲೀ ಕಾಲನ್ನಾಗಲೀ ಕದಲಿಸಕೂಡದು ಎಂದು ಹೇಳಿದನು. ಮತು ಫರೋಹನು ಯೋಸೇಫನಿಗೆ **ಸಾಫ್ನತ್ಪನ್ನೇಹ** [ಜೀವಿತವನ್ನು ಸಂರಕ್ಷಿಸುವವನು] ಎಂದು ಹೆಸರಿಟ್ಟು ಓನ್ ಎಂಬ ಗುರುಪೀಠದ ಆಚಾರ್ಯನಾಗಿದ್ದ

ಪೋಟೀಫೆರನ  ಮಗಳಾದ ಅಸನತ್ ಎಂಬಾಕೆಯನ್ನು ಅವನಿಗೆ ಮದುವೆ ಮಾಡಿಸಿದನು.  ಯೋಸೇಫನು ಐಗುಪ್ತ ದೇಶದ ಮೇಲೆ ಅಧಿಕಾರಿಯಾಗಿ ಹೊರಟನು.  ಯೋಸೇಫನು ಐಗುಪ್ತದೇಶದ ಅರಸನಾದ ಫರೋಹನ ಸನ್ನಿಧಿಯಲ್ಲಿ ನಿಂತಗ ಮೂವತ್ತು ವರುಷ –ದವನಾಗಿದ್ದನು.  ಅವನು ಫರೋಹನ ಸನ್ನಿಧಿಯಿಂದ ಹೊರಟು ಐಗುಪ್ತ ದೇಶದಲ್ಲೆಲ್ಲಾ ಸಂಚಾರ ಮಾಡಿದನು.  ಸುಭಿಕ್ಷದ ಏಳು ವರುಷಗಳಲ್ಲಿ ಭೂಮಿಯು ಹೇರಳವಾಗಿ ಫಲಕೊಟ್ಟಿತು.  ಐಗುಪ್ತ ದೇಶದಲ್ಲಿ ಸುಭಿಕ್ಷವಾದ ಆ ಏಳು ವರುಷಗಳ ಬೆಳೆಯನ್ನು ಯೋಸೇಫನು ಕೂಡಿಸಿ ಪಟ್ಟಣಗಳಲ್ಲಿ ಇರಿಸಿದನು;  ಒಂದೊಂದು ಪಟ್ಟಣದ ಸುತ್ತಲಿದ್ದ ಹೊಲಗಳ ಬೆಳೆಯನ್ನು ಆಯಾ ಪಟ್ಟಣ – –ದಲ್ಲಿಯೇ ಕೂಡಿಸಿಟ್ಟನು.  ಅವನು ದವಸ ಧಾನ್ಯವನ್ನು ಸಮುದ್ರದ ಉಸುಬಿನಷ್ಟು ರಾಶಿರಾಶಿಯಾಗಿ ಕೂಡಿಸಿ ಲೆಕ್ಕ ಮಾಡುವದನ್ನು ಬಿಟ್ಟುಬಿಟ್ಟನು;  ಅದನ್ನು ಲೆಕ್ಕ ಮಾಡುವದಕ್ಕೆ ಆಗದೇ ಹೋಯಿತು." (೪೧:೪೧–೪೯)

"ಐಗುಪ್ತದೇಶದಲ್ಲಿ ಸುಭಿಕ್ಷದ ಏಳು ವರುಷಗಳು ಮುಗಿದ ಮೇಲೆ ಯೋಸೇಫನು ಹೇಳಿದ್ದ ಪ್ರಕಾರ ಕ್ಷಾಮದ ಏಳು ವರುಷಗಳಿಗೆ ಪ್ರಾರಂಭವಾಯಿತು.  ಬರವು  ಸುತ್ತಲಿದ್ದ ಎಲ್ಲಾ ದೇಶಗಳಲ್ಲಿಯೂ  ಹಬ್ಬಿತು; ಐಗುಪ್ತದೇಶದಲ್ಲಿ  ಮಾತ್ರ ಆಹಾರ ದೊರಕುವದು. ಐಗುಪ್ತದೇಶಕ್ಕೆಲ್ಲಾ  ಬರಬಂದಾಗ ಪ್ರಜೆಗಳು ಆಹಾರ  ಬೇಕೆಂದು  ಫರೋಹನಿಗೆ ಮೊರೆಯಿಟ್ಟುಕೊಂಡರು.  ಅವನು ಅವರಿಗೆ – ಯೋಸೇಫನ ಬಳಿಗೆ ಹೋಗಿರಿ, ಅವನ ಮಾತಿನ ಮೇರೆಗೆ ಮಾಡಿರಿ ಎಂದು ಹೇಳಿದನು.  ಬವು ಲೋಕದಲ್ಲೆಲ್ಲಾ ಹರಡಿಕೊಂಡಿರು –ವಾಗ ಯೋಸೇಫನು ಕಣಜಗಳನ್ನೆಲ್ಲಾ ತೆಗಿಸಿ ಐಗುಪ್ತ್ಯರಿಗೆ ಧಾನ್ಯವನ್ನು ಮಾರಿಸಿದನು.  ಐಗುಪ್ತ ದೇಶದಲ್ಲಿ ಬರವು ಬಹು ಘೋರ –ವಾಗಿತ್ತು.  ಇದಲ್ಲದೆ ಭೂಲೋಕದಲ್ಲೆಲ್ಲಾ ಬರವು ಭಯಂಕರವಾಗಿದ್ದದರಿಂದ **ಎಲ್ಲಾ ದೇಶದವರೂ ಧಾನ್ಯವನ್ನು ಕೊಂಡುಕೊಳ್ಳುವದ –ಕ್ಕಾಗಿ ಐಗುಪ್ತಕ್ಕೆ ಯೋಸೇಫನ ಬಳಿಗೆ ಬಂದರು."** (೪೧:೫೩–೫೭)

"ಐಗುಪ್ತದೇಶದಲ್ಲಿ ದವಸಧಾನ್ಯವುಂಟೆಂದು ಯಾಕೋಬನು ಕೇಳಿ ತನ್ನ ಮಕ್ಕಳಿಗೆ – ನೀವು ಒಬ್ಬರನ್ನೊಬ್ಬರು ನೋಡುತ್ತಿರುವದೇಕೆ? ಐಗುಪ್ತದೇಶದಲ್ಲಿ ದವಸಧಾನ್ಯ ಉಂಟೆಂಬುದನ್ನು ಕೇಳಿದ್ದೇನೆ;  ನಾವು ಸಾಯದೆ ಬದುಕುವಂತೆ ನೀವು ಅಲ್ಲಿಗೆ ಹೋಗಿ ಬೇಕಾದ ದವಸವನ್ನು ಕೊಂಡುಕೊಂಡು ಬನ್ನಿರಿ ಎಂದು ಹೇಳಿದ್ದರಿಂದ **ಯೋಸೇಫನ ಹತ್ತು ಮಂದಿ ಅಣ್ಣಂದಿರು ಧಾನ್ಯವನ್ನು ತರುವದಕ್ಕೋಸ್ಕರ ಐಗುಪ್ತದೇಶಕ್ಕೆ ಹೊರಟರು.**  ಆದರೆ ಯಾಕೋಬನು ಯೋಸೇಫನ ಒಡಹುಟ್ಟಿದ ತಮ್ಮನಾದ ಬೆನ್ಯಾಮೀನನನ್ನು ಅವನಿಗೆ ಕೇಡುಕುಂ– –ಟಾದೀತೆಂದು ಹೇಳಿ ಅಣ್ಣಂದಿರ ಜೊತೆಯಲ್ಲಿ ಕಳುಹಿಸಲಿಲ್ಲ.  ಧಾನ್ಯವನ್ನು ಕೊಂಡುಕೊಳ್ಳುವದಕ್ಕೋಸ್ಕರ ಐಗುಪ್ತದೇಶಕ್ಕೆ ಬಂದವ –ರಲ್ಲಿ ಇಸ್ರಾಯೇಲನ ಮಕ್ಕಳೂ ಇದ್ದರು;  ಕಾನಾನ್ ದೇಶದಲ್ಲಿಯೂ ಬರವಿತ್ತಷ್ಟೆ." (೪೨: ೧–೫)

"ಐಗುಪ್ತದೇಶದ ಮೇಲೆ ಅಧಿಕಾರವನ್ನು ನಡಿಸಿ ಜನರಿಗೆ ಧಾನ್ಯವನ್ನು ಮಾರಿಸುವವನು ಯೋಸೇಫನೇ.  ಹೀಗಿರುವದರಿಂದ ಅವನ ಅಣ್ಣಂದಿರು ಬಂದು **ಅವನ ಮುಂದೆಯೇ ಅಡ್ಡಬಿದ್ದರು.**  ಯೋಸೇಫನು ಅವರನ್ನು ಕಂಡಾಗ ಅವರ ಗುರುತು ಹಿಡಿದು ತನ್ನ ಅಣ್ಣಂದಿರೆಂದು ತಿಳಿದಾಗ್ಯೂ ಅವರಿಗೆ ಅನ್ಯನಂತೆ ತೋರ್ಪಡಿಸಿಕೊಂಡು ಬಿರುನುಡಿಯಿಂದ – ನೀವು ಎಲ್ಲಿಂದ ಬಂದವರು ಎಂದು ಕೇಳಿದನು.  ಅವರು – ಧಾನ್ಯವನ್ನು ಕೊಂಡುಕೊಳ್ಳುವದಕ್ಕೋಸ್ಕರ ಕಾನಾನ್ ದೇಶದಿಂದ ಬಂದಿದ್ದೇವೆ ಅಂದರು.  **ಅಣ್ಣಂದಿರ ಗುರುತು ಯೋಸೇಫನಿಗೆ ತಿಳಿದಾಗ್ಯೂ ಅವನ ಗುರುತು ಅವರಿಗೆ ತಿಳಿಯಲಿಲ್ಲ.  ಅವನು ಅವರ ವಿಷಯದಲ್ಲಿ ತನಗೆ ಬಿದ್ದ ಕನಸುಗಳನ್ನು ನೆನಪಿಗೆ ತಂದುಕೊಂಡನು."** (೪೨:೬–೯)

ಏನು ಸಂಭವಿಸಿತೆಂಬುದು ನಿಮಗೆ ಅರ್ಥವಾಯಿತಾ?  ಬಹಳ ಹಿಂದೆ ಅವನು ಕನಸು ಕಂಡಂತೆ ಯೋಸೇಫನ ಅಣ್ಣಂದಿರು ಅವರ ತಮ್ಮನಾದ ಯೋಸೇಫನ ಮುಂದೆ ಅಡ್ಡ ಬಿದ್ದರು!  ಅವರು ದ್ವೇಷಿಸುತ್ತಿದ್ದ, ನಿರಾಕರಿಸಿದ್ದ ಮತ್ತು ಕೊನೆಗೆ ಕೊಲ್ಲುವದಕ್ಕೂ ಇಚ್ಛಿಸಿದ್ದ ಅದೇ ಯೋಸೇಫನ ಮುಂದೆ  ಅವರು ಅಡ್ಡಬಿದ್ದಿದ್ದರು!  ಯೋಸೇಫನು ತಕ್ಷಣವೇ ತನ್ನ ಅಣ್ಣಂದಿರನ್ನು ಗುರುತು ಹಿಡಿದನು, ಆದರೆ ಅವರು ಅವನ ಗುರುತು ಹಿಡಿಯಲಿಲ್ಲ, ಯಾಕೆಂದರೆ ಅವರು ಅವನನ್ನು ನೋಡದೇ ಇಪ್ಪತ್ತು ವರ್ಷಕ್ಕಿಂತಲೂ ಹೆಚ್ಚಾಗಿತ್ತು! ನಮ್ಮ ಮುಂದಿನ ಪಾಠದಲ್ಲಿ ದೇವರ ಚಿತ್ತವಾದರೆ ಯೋಸೇಫನ ಕಥೆಯನ್ನು ಮುಗಿಸುತ್ತೇವೆ ಮತ್ತು ಅವನು ತನ್ನ ಅಣ್ಣಂದಿರು ಹೇಗೆ ತನ್ನನ್ನು ತಿಳಿದುಕೊಳ್ಳುವಂತೆ ಮಾಡಿದನೆಂಬುದನ್ನು ನೋಡೋಣ.

ಆದರೆ  ಈ  ದಿನದ ನಮ್ಮ ಪಾಠದ  ವಿಷಯವೇನು?  ಯೋಸೇಫ ಮತ್ತು  ಅವನ ಅಣ್ಣಂದಿರ ಕಥೆಯ ಮೂಲಕವಾಗಿ ದೇವರು ನಮಗೆ ಏನು  ಕಲಿಸುವದಕ್ಕೆ ಇಷ್ಟಪಟ್ಟಿದ್ದಾನೆ?  ಆದಾಮನ ಸಂತತಿಯವರಿಗೂ ಮತ್ತು  ಲೋಕದ  ರಕ್ಷಕನಿಗೂ ನಡುವೆ  ಏನು ಸಂಭವಿಸುದಕ್ಕಿತ್ತೋ ಅದನ್ನು ಯೋಸೇಫನು ಮತ್ತು ಅವನ ಅಣ್ಣಂದಿರ ನಡುವೆ ನಡೆದದ್ದು **ಒಂದು ನಿದರ್ಶನವಾಗಿದೆ** ಎಂಬುದನ್ನು ನಾವು ತಿಳಿದುಕೊಳ್ಳುವಂತೆ ಮಾಡುವದಕ್ಕೆ ದೇವರು ಇಷ್ಟಪಟ್ಟನು.  ಸ್ನೇಹಿತರೇ,  ಈದಿನದ ನಮ್ಮ ಪಾಠದಲ್ಲಿ ನಾವು ನೆನಪಿನಲ್ಲಿಡ – –ಬೇಕಾದ ಒಂದೇ ಒಂದು ವಿಷಯವೆಂದರೆ ಅದು:  ಲೋಕಕ್ಕೆ ಕಳುಹಿಸುತ್ತೇನೆಂದು ದೇವರು ವಾಗ್ದಾನ ಮಾಡಿದ್ದ **ರಕ್ಷಕನ ಒಂದು ಛಾಯೆ** (ಒಂದು ಚಿತ್ರ) **ಯೋಸೇಫನಾಗಿದ್ದನು.**  ಹದಿನೆಂಟು ನೂರು ವರ್ಷಗಳ ನಂತರ ಲೋಕಕ್ಕೆ ಬರಬೇಕಾಗಿದ್ದ ವಿಮೋಚಕನ ಕಥೆಯ ಮುನ್ಸೂಚನೆಯಂತೆ (ಮುಂಗುರುತು, ದೃಷ್ಟಾಂತ) ಯೋಸೇಫನ ಕಥೆಯಲ್ಲಿ ಕಡೇಪಕ್ಷ ನೂರು ಮೂಲಪಾಠಗಳು (ಘಟನೆ –ಗಳು, ಹೋಲಿಕೆಗಳು) ಇವೆ.  ಸ್ಪಷ್ಟವಾಗಿ ಹೇಳುವದಾದರೆ, ಈ ಎಲ್ಲಾ ನೂರು  ಹೋಲಿಕೆಗಳನ್ನು ತಿಳಿಸುವದಕ್ಕೆ ಈ ಕಾರ್ಯಕ್ರಮ –ದಲ್ಲಿ ನಮಗೆ ಸಮಯವಿಲ್ಲ, ಆದರೆ ಮೂರನ್ನು ಮಾತ್ರ ನಾವು ತಿಳಿಸುತ್ತಿದ್ದೇವೆ.

೧)  ಮೊದಲನೆಯದು; ಯೋಸೇಫನ ಅಣ್ಣಂದಿರು ಅವನನ್ನೂ ಮತ್ತು ಅವನ ಕನಸುಗಳನ್ನು ಹೇಗೆ **ತಿರಸ್ಕರಿಸಿದರೆಂಬುದನ್ನು** ನಾವು ಮೊದಲು ನೋಡಿಕೊಂಡಿದ್ದೇವೆ.  ಅವರು ಅವನನ್ನು ದ್ವೇಷಿಸಿದರು, ಅವಮಾನಿಸಿದರು ಮತ್ತು ಕೊನೆಗೆ ಅವನನ್ನು ಮಾರಿಬಿಟ್ಟರು. ಇದೇ ರೀತಿಯ ಸಂಗತಿಗಳು ದೇವರು ಲೋಕಕ್ಕೆ ಕಳುಹಿಸಿದ ರಕ್ಷಕನಿಗೂ ಸಂಭವಿಸಿತು.  ಲೋಕದ ಜನರು ವಿಮೋಚಕನನ್ನೂ ಮತ್ತು ಆತನ ಸಂದೇಶವನ್ನೂ ತಿರಸ್ಕರಿಸಿದರು, ಆತನನ್ನು ಅವಮಾನಿಸಿದರು, ಆತನನ್ನು ಹಿಂಸಿಸಿದರು, ಆತನನ್ನು ಮಾರಿದರು, ಮತ್ತು ಕೊನೆಯಲ್ಲಿ ಆತನನ್ನು ಶಿಲುಬೆಗೆ ಮೊಳೆಯಿಂದ ಜಡಿದರು.

೨) ಎರಡನೆಯ ಚಿತ್ರಣ; ಮೊದಲನೆಯದಾಗಿ ಜನರು ಯೋಸೇಫನನ್ನು ಹೀನೈಸಿದರು, ನಿರ್ಲಕ್ಷಿಸಿದರು, ಕೆಟ್ಟದಾಗಿ ನಡೆಸಿಕೊಂಡರು, ಮತ್ತು ಸೆರೆಮನೆಗೆ ಹಾಕಿದರು.  ಆದಾಗ್ಯೂ ದೇವರು ನೇಮಿಸಿದ ಸಮಯದಲ್ಲಿ ಐಗುಪ್ತ ದೇಶದ ಅರಸನು ಯೋಸೇಫನನ್ನು ಇಡೀ ದೇಶದ ಮೇಲೆಲ್ಲಾ ಸರ್ವಾಧಿಕಾರಿಯನ್ನಾಗಿ **ನೇಮಿಸಿದನು.**  ಯಾರ್‍ಯಾರು ಹಸಿವೆಯಿಂದ ಮತ್ತು ಮರಣದಿಂದ ರಕ್ಷಿಸಲ್ಪಡುವದಕ್ಕೆ ಇಷ್ಟಪಡುತ್ತೀರೋ ಅವರೆಲ್ಲರೂ: "ಜೀವನದ ಸಂರಕ್ಷಕನಾಗಿರುವ ಯೋಸೇಫನ ಬಳಿಗೆ ಹೋಗಿರಿ!" ಎಂದು ಘೋಷಿಸಿದನು.  ಇದೇ ರೀತಿಯಲ್ಲಿ,  ದೇವರು ಕಳುಹಿಸಿದಂತ ಲೋಕದ ರಕ್ಷಕನಿಗೆ ಸಂಬಂಧಿಸಿದಂತೆ, ದೇವರಾದ ಕರ್ತನು ಹೇಳಿದ್ದೇನೆಂದರೆ: ನಾನು ನೇಮಿಸಿದಂತ ರಕ್ಷಕನ ಬಳಿಗೆ ಹೋಗಿರಿ!  ಆತನು ಜೀವನದ ಸಂರಕ್ಷಕನಾಗಿದ್ದಾನೆ;  ಆತನು ಜೀವನದ ಮೂಲವಾಗಿದ್ದಾನೆ!  ನೀವು ಆತನಿಗೆ ನಿಮ್ಮನ್ನು ಅಧೀನಪಡಿಸಿಕೊಂಡರೆ ಇನ್ನೆಂದಿಗೂ ನೀವು ನಿಮ್ಮ ಹೃದಯದಲ್ಲಿ ಹಸಿವನ್ನು ಅನುಭವಿಸುವದಿಲ್ಲ ಮತ್ತು ನಿಮ್ಮ ಆತ್ಮವು ಎಂದೆಂದಿಗೂ ಜೀವಂತವಾಗಿರುತ್ತದೆ.

೩)  ಮೂರನೆಯದು, ಯೋಸೇಫ ಮತ್ತು ವಿಮೋಚಕನ ನಡುವಿನ ಮೂರನೆಯ ಹೋಲಿಕೆಯು ಒಂದು ಗಂಭೀರವುಳ್ಳದ್ದು. ಅಂತ್ಯದಲ್ಲಿ ಯೋಸೇಫನ ಅಣ್ಣಂದಿರು ಅವನ ಅಧಿಕಾರಕ್ಕೆ **ತಲೆಬಾಗಿಸಿದರು.**  ತಾವು ನಿರಾಕರಿಸಿದ್ದ ಮತ್ತು ಅಪಮಾನಪಡಿಸಿದ್ದ ಅದೇ ವ್ಯಕ್ತಿಯ ಮುಂದೆ ತಾವೇ ಅಡ್ಡಬೀಳದ ಹೊರತು ಅವರಿಗೆ ಬೇರೆ ಆಯ್ಕೆಯಿರಲಿಲ್ಲ.  ಇದೇ ರೀತಿಯಲ್ಲಿ ದೇವರ ವಾಕ್ಯವು ಆ ವಿಮೋಚಕನ ಕುರಿತಾಗಿ ಹೇಳುವದೇನೆಂದರೆ, ಈ ದಿನ ಅನೇಕರಿಂದ ನಿರಾಕರಿಸಲ್ಪಟ್ಟು ಅಪಮಾನಕ್ಕೊಳಗಾದವನು ನೀತಿವಂತಿಕೆ – –ಯಲ್ಲಿ ಲೋಕಕ್ಕೆ ನ್ಯಾಯತೀರಿಸುವದಕ್ಕೆ ಒಂದು ದಿನ ಹಿಂತಿರುಗಿ ಬರುತ್ತಾನೆ.  ಆ ದಿನದಲ್ಲಿ ಲೋಕದ ಜನರೆಲ್ಲರೂ ಆತನ ಮುಂದೆ ಅಡ್ಡ ಬೀಳುತ್ತಾರೆ; ಲೋಕದ ರಕ್ಷಕನನ್ನಾಗಿ ಮತ್ತು ನ್ಯಾಯಾಧಿಪತಿಯನ್ನಾಗಿ ದೇವರು ನೇಮಿಸಿದವನು ಈತನೇ ಎಂದು ಎಲ್ಲರೂ ತಿಳಿದುಕೊಳ್ಳುವರು!

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನಿಮ್ಮ ವಿಷಯವೇನು?  ನಿತ್ಯವಾದ ನ್ಯಾಯತೀರ್ಪಿನಿಂದ ನಿಮ್ಮನ್ನು ಸಂರಕ್ಷಿಸುವದಕ್ಕೆ ದೇವರು ನೇಮಿಸಿದಂತ **ರಕ್ಷಕನಿಗೆ ನಿಮ್ಮನ್ನು ಅಧೀನಪಡಿಸಿಕೊಂಡಿದ್ದೀರಾ?**  ಅಥವಾ ಆತನ ಮುಂದೆ ಅಡ್ಡಬೀಳುವದಕ್ಕೆ ನೀವು ಒತ್ತಾಯ – –ಕ್ಕೊಳಗಾಗಬೇಕಾಗುತ್ತದೆಂದು ನ್ಯಾಯತೀರ್ಪಿನ ದಿನದ ತನಕ ಇನ್ನೂ ತಡವಾಗುವವರೆಗೆ ಕಾಯುತ್ತೀರೋ?

ಈ ದಿನ ಇಲ್ಲಿಗೆ ಇದನ್ನು ನಾವು ಮುಗಿಸಬೇಕಾಗುತ್ತದೆ, ಆದರೆ ಈ ದಿನದ ಪಾಠದ ಕುರಿತಾಗಿ ಅಲೋಚಿಸುವದನ್ನು ನೀವು ನಿಲ್ಲಿಸಬೇಕೆಂದು ಇದರ ಅರ್ಥವಲ್ಲ!. . . .

ದೇವರು ನಿಮ್ಮನ್ನು ಆಶೀರ್ವದಿಸಿ ಈ ದಿನ ನೀವು ಕೇಳಿಸಿಕೊಂಡ ಎಲ್ಲವುಗಳೊಳಗೆ ಸೂಕ್ಷ್ಮ ಪರಿಜ್ಞಾನವನ್ನು ನಿಮಗೆ ಕೊಡಲಿ. ದೇವರ ವಾಕ್ಯ ಹೀಗೆ ಹೇಳುತ್ತದೆ:

**"ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ.  ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯ ಕೊಡುವದೇ ಒಳ್ಳೇದು."**
(೨ಪೇತ್ರ–೧:೧೯)

ಪಾಠ ೨೭

# ಯೋಸೇಫ
# ಕಥೆಯ ಉಳಿದ ಭಾಗ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ಹಿಂದಿನ ಎರಡು ಕಾರ್ಯಕ್ರಮಗಳಲ್ಲಿ ಯಾಕೋಬನ ಮಗನಾದ ಯೋಸೇಫನ ಕುರಿತಾಗಿ ನಾವು ಓದಿಕೊಂಡೆವು. ಈ ದಿನ **ಯೋಸೇಫನ ಕಥೆಯ ಉಳಿದ ಭಾಗವನ್ನು** ಕೇಳಿಸಿಕೊಳ್ಳುವದಕ್ಕೆ ನಾವು ಯೋಜನೆ ಹಾಕಿಕೊಂಡಿದ್ದೇವೆ. ಹೀಗೆ ಮಾಡುವದರಲ್ಲಿ ಆದಿ–ಕಾಂಡ ಪುಸ್ತಕ **ತೋರಾದ ಮೊದಲನೆಯ ಭಾಗದ ಕೊನೆಗೆ ಬರುತ್ತೇವೆ.** ಅಬ್ರಹಾಮನ ಮೊಮ್ಮಗನಾದ ಯಾಕೋಬನು ಹನ್ನೆ–ರಡು ಗಂಡು ಮಕ್ಕಳನ್ನು ಪಡೆದನು ಅವರಲ್ಲಿ ಯೋಸೇಫನು ಹನ್ನೊಂದನೆಯವನು ಎಂಬುದಾಗಿ ಈಗಾಗಲೇ ನಾವು ನೋಡಿ–ಕೊಂಡಿದ್ದೇವೆ. ನಾವು ತಿಳಿದಿರುವ ಹಾಗೆ ದೇವರು ಅಬ್ರಹಾಮ ಯಾಕೋಬ ಮತ್ತು ಇಸಾಕನ ಸಂತಾನದವರಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ್ದ ಪ್ರದೇಶವಾಗಿದ್ದ ಕಾನಾನ್ ದೇಶದಲ್ಲಿ ಅವರೆಲ್ಲರೂ ವಾಸವಾಗಿದ್ದರು. ಯೋಸೇಫನು ಒಬ್ಬ ಯೌವನಸ್ಥನಾಗಿ–ದ್ದಾಗ ತನ್ನ ಅಣ್ಣಂದಿರು ಒಂದು ದಿನ ತನ್ನ ಮುಂದೆ ಅಡ್ಡಬೀಳುತ್ತಾರೆ ಎನ್ನುವ ಕನಸನ್ನು ಕಂಡನು. ಆದರೆ ಅವನ ಅಣ್ಣಂದಿರು ಅವನನ್ನೂ ಮತ್ತು ಅವನ ಕನಸನ್ನೂ ಕಡೆಗಣಿಸಿ ಅವನನ್ನು ಒಬ್ಬ ಗುಲಾಮನನ್ನಾಗಿ ಐಗುಪ್ತದವರಿಗೆ ಮಾರಿದರು. ಹೇಗೂ, ದೇವರು ಯೋಸೇಫನನ್ನು ಅವನ ಎಲ್ಲಾ ಕಷ್ಟಗಳಿಂದ ಅವನನ್ನು ಬಿಡಿಸಿ ಐಗುಪ್ತ ದೇಶದ ಅರಸನಾದ ಫರೋಹನ ಕನಸನ್ನು ಭಾಷಾಂತರ ಮಾಡುವ ಜ್ಞಾನವನ್ನು ಅವನಿಗೆ ಕೊಟ್ಟನು. ದೇವರ ಸಹಾಯದಿಂದ ಯೋಸೇಫನು ದೇಶದಲ್ಲೆಲ್ಲಾ ಸಂಭವಿಸಲಿದ್ದಂತಹ ಏಳು ವರ್ಷದ ಬರವನ್ನು ಮುಂದಾಗಿ ತಿಳಿಸಿದನು. ಹಾಗಾಗಿ, ಫರೋಹನು ಯೋಸೇಫನನ್ನು ಐಗುಪ್ತದೇಶದ ಮೇಲೆಲ್ಲಾ ಸರ್ವಾಧಿಕಾರಿ–ಯನ್ನಾಗಿ ನೇಮಿಸಿದನು.

ಏಳು ವರ್ಷದ ಸುಭಿಕ್ಷವು ಮುಗಿದ ನಂತರ, ಯೋಸೇಫನು ಮೊದಲೇ ತಿಳಿಸಿದ್ದ ಬರವು ಐಗುಪ್ತ ಮತ್ತು ಕಾನಾನ್ ದೇಶದ ಮೇಲೆ ಬಂತು. ಹೇಗೂ ದೇವರು ಯೋಸೇಫನಿಗೆ ಕೃಪೆ ಮತ್ತು ಜ್ಞಾನವನ್ನು ಕೊಟ್ಟಿದ್ದರಿಂದ ಐಗುಪ್ತ ದೇಶದಲ್ಲಿ ದವಸಧಾನ್ಯವು ಹೇರಳ–ವಾಗಿ ಶೇಖರಿಸಲ್ಪಟ್ಟಿದ್ದವು.

ಐಗುಪ್ತದಲ್ಲಿ ದವಸಧಾನ್ಯ ಉಂಟೆಂದು ಯಾಕೋಬನು ಕೇಳಿ {ಉಲೂಫ್‌ನಲ್ಲಿ: ಮಿಲ್ಲೆಟ್–ಸೆನೆಗಲ್‌ನ ಮೂಲ ಆಹಾರ}ಯೋಸೇಫನ ಅಣ್ಣಂದಿರನ್ನು ದವಸಧಾನ್ಯ ಕೊಂಡುಕೊಂಡು ಬರಲು ಕಳಿಸಿದನು. ಆದರೆ ಅವನು ಯೋಸೇಫನ ಚಿಕ್ಕ ತಮ್ಮನಾದ ಬೆನ್ಯಾಮೀನ–ನನ್ನು ಅವರ ಜೊತೆಯಲ್ಲಿ ಕಳಿಸಲಿಲ್ಲ ಯಾಕೆಂದರೆ ಅವನಿಗೆ ಏನಾದರೂ ಅಪಾಯ ಸಂಭವಿಸಬಹುದೆಂದು ಅವನನ್ನು ಕಳಿಸಲಿಲ್ಲ. ಮುಂದೆ ಹತ್ತು ಜನ ಅಣ್ಣಂದಿರು ಐಗುಪ್ತಕ್ಕೆ ಬಂದು ತಮ್ಮ ತಮ್ಮನಾದ ಯೋಸೇಫನ ಮುಂದೆ ತ್ರಾಣಗುಂದಿದವರಾಗಿ ಅಡ್ಡಬಿದ್ದದ್ದನ್ನು ಮತ್ತು ಯೋಸೇಫನು ಬಹಳ ಹಿಂದೆ ಕಂಡ ಕನಸು ಹೀಗೆ ನೆರವೇರಿದ್ದನ್ನು ನಾವು ನೋಡಿದ್ದೇವೆ, ಯೋಸೇಫನು ತನ್ನ ಅಣ್ಣಂದಿ–ರನ್ನು ಗುರುತು ಹಿಡಿದನು ಆದರೆ ಅವರು ಇವನನ್ನು ಗುರುತು ಹಿಡಿಯಲಿಲ್ಲ, ಯಾಕೆಂದರೆ ಅವರು ಯೋಸೇಫನನ್ನು ನೋಡದೇ ಆಗಲೇ ಇಪ್ಪತ್ತು ವರ್ಷಕ್ಕಿಂತ ಹೆಚ್ಚಾಗಿತ್ತು ಮತ್ತು ಯೋಸೇಫನು ಸತ್ತು ಹೋಗಿದ್ದಾನೆಂದು ಅವರ ಮನಸ್ಸಿನಲ್ಲಿತ್ತು.

**ಯೋಸೇಫನು ತನ್ನ ಅಣ್ಣಂದಿರಿಗೆ ತನ್ನ ಗುರುತು ಸಿಗುವಂತೆ ಏನು ಮಾಡಿದನೆಂಬುದನ್ನು** ನೋಡಿ ಈ ದಿನ ನಾವು ಕಥೆಯನ್ನು ಮುಕ್ತಾಯಗೊಳಿಸುತ್ತೇವೆ. ಯೋಸೇಫನು ತಕ್ಷಣವೇ ತನ್ನನ್ನು ಅಣ್ಣಂದಿರಿ ಮುಂದೆ ಪ್ರಕಟಪಡಿಸಿಕೊಳ್ಳಲಿಲ್ಲ ಯಾಕೆಂದರೆ ಅವರ ಮೋಸದ ಮತ್ತು ಕೆಟ್ಟ ಹೃದಯಗಳು ಬದಲಾಗಿವೆಯೋ ಇಲ್ಲವೋ ಎನ್ನುವದನ್ನು ತಿಳಿದುಕೊಳ್ಳುವದಕ್ಕೆ ಅವರನ್ನು ಪರೀಕ್ಷಿಸಲು ಅವನು ಬಯಸಿದನು. ಹಾಗಾಗಿ ವಾಕ್ಯವು ಹೀಗೆ ಹೇಳುತ್ತದೆ: "ಯೋಸೇಫನು ಅವರನ್ನು ಕಂಡಾಗ ಅವರ ಗುರುತು ಹಿಡಿದು ತನ್ನ ಅಣ್ಣಂದಿರೆಂದು ತಿಳಿದಾಗ್ಯೂ ಅವರಿಗೆ ಅನ್ಯನಂತೆ ತೋರ್ಪಡಿಸಿಕೊಂಡು ಬಿರುನುಡಿಯಿಂದ – ನೀವು ಎಲ್ಲಿಂದ ಬಂದವರು ಎಂದು ಕೇಳಿದನು. ಅವರು – ಧಾನ್ಯವನ್ನು ಕೊಂಡುಕೊಳ್ಳುವದಕ್ಕೋಸ್ಕರ ಕಾನಾನ್ ದೇಶದಿಂದ ಬಂದಿದ್ದೇವೆ ಅಂದರು."

ಯೋಸೇಫನು ಅವರಿಗೆ ಅನೇಕ ಪ್ರಶ್ನೆಗಳನ್ನು ಕೇಳಿದನು, ಗೂಢಚಾರರೆಂದು ಅವರ ಮೇಲೆ ದೂರು ಹೊರಿಸಿ ಅವರನ್ನು ಸೆರೆಯಲ್ಲಿ ಹಾಕಿಸಿದನು. **ದೇವರ ಮುಂದೆ ಅವರು ತಮ್ಮ ಹೃದಯಗಳ ಸ್ಥಿತಿಯನ್ನೂ ಮತ್ತು ತಮ್ಮ ಜೀವಿತಗಳ ಕುರಿತಾಗಿ ಆಲೋಚಿಸುವಂತೆ**

**ಮಾಡುವದಕ್ಕೆ ಯೋಸೇಫನು ಇಷ್ಟಪಟ್ಟನು.** ಮೂರು ದಿವಸಗಳ ನಂತರ ಯೋಸೇಫನು ಅವರಿಗೆ ಹೋಗುವದಕ್ಕೆ ಅನುಮತಿ ಕೊಟ್ಟನು, ಆದರೆ ಅವರಲ್ಲಿ ಒಬ್ಬರನ್ನು ಸೆರೆಯಲ್ಲಿಯೇ ಇರಿಸಿದನು, ಮತ್ತು ಅವರು ಹಿಂತಿರುಗಿ ಬರುವಾಗ ಅವರ ತಮ್ಮನೂ ಮತ್ತು ಅವರ ತಂದೆಯ ಕೊನೆಯ ಮಗನಾಗಿರುವ ಬೆನ್ಯಾಮೀನನನ್ನು ಕರೆದುಕೊಂಡು ಬರುವಂತೆ ಹೇಳಿದನು.

ಅನೇಕ ತಿಂಗಳುಗಳಾದ ನಂತರ ಅವನ ಅಣ್ಣಂದಿರು ಹೆಚ್ಚು ಧಾನ್ಯವನ್ನು ಕೊಂಡುಕೊಳ್ಳಲು ಬೆನ್ಯಾಮೀನನನ್ನು ತಮ್ಮ ಜೊತೆಯಲ್ಲಿ ಕರೆದುಕೊಂಡು ಐಗುಪ್ತಕ್ಕೆ ಬಂದರು. ಅವರು ಅಲ್ಲಿಗೆ ಬಂದಾಗ ದೇಶವನ್ನು ಆಳುತ್ತಿದ್ದ ಯೋಸೇಫನನ್ನು ತಿರಿಗಿ ಭೇಟಿಯಾದರು. ಆದರೆ ಈಗಲೂ ಅವರು ಅವನನ್ನು ಗುರುತು ಹಿಡಿಯಲಿಲ್ಲ. ಯೋಸೇಫನು ಅವರನ್ನು ತನ್ನ ಮನೆಯೊಳಗೆ ಕರೆದುಕೊಂಡು ಹೋದನು. ಇದು ಅವರಿಗೆ ತುಂಬಾ ಹೆದರಿಕೆಯನ್ನುಂಟು ಮಾಡಿತು. ನಂತರ ಅವನು ಅವರಿಗೆಲ್ಲಾ ದೊಡ್ಡ ಔತಣವನ್ನು ಸಿದ್ಧಪಡಿಸಿ ಹಿರಿಯವನಿಂದ ಹಿಡಿದು ಕಿರಿಯವನವರೆಗೆ ಅವರ ವಯಸ್ಸಿಗನುಗುಣವಾಗಿ ಮೇಜಿನ ಸುತ್ತಲೂ ಕೂರಿಸಿದನು, ಮತ್ತು ತನ್ನ ಮೇಜಿ –ನಿಂದ ಅವರಿಗೆಲ್ಲಾ ಆಹಾರವನ್ನು ನೀಡಿದನು. ಬೆನ್ಯಾಮೀನನು ಎಲ್ಲರಿಗಿಂತ ಐದು ಪಟ್ಟು ಹೆಚ್ಚು ಆಹಾರವನ್ನು ಪಡೆದಿದ್ದನು. ಹಿಂದೆ ತನ್ನ ಮೇಲೆ ಹೊಟ್ಟೇಕಿಚ್ಚುಪಟ್ಟಂತ ತನ್ನ ಅಣ್ಣಂದಿರು ಈಗ ಬೆನ್ಯಾಮೀನನ ಮೇಲೆಯೂ ಹೊಟ್ಟೇಕಿಚ್ಚುಪಡುತ್ತಾರೋ ಇಲ್ಲವೋ ಎನ್ನು –ವದನ್ನು ಪರೀಕ್ಷಿಸುವದಕ್ಕೆ ಬಹುಶ: ಯೋಸೇಫನು ಹೀಗೆ ಮಾಡಿರಬಹುದು. ಹೇಗೂ ಅವರಲ್ಲಿ ಯಾರೊಬ್ಬರೂ ಬೆನ್ಯಾಮೀನನ ಮೇಲೆ ಹೊಟ್ಟೆಕಿಚ್ಚುಪಡಲಿಲ್ಲ.

ಔತಣವಾದನಂತರ, ಯೋಸೇಫನು ಒಬ್ಬ ಸೇವಕನನ್ನು ಕರೆದು ಅವರೆಲ್ಲರ ಚೀಲಗಳಲ್ಲಿ ಧಾನ್ಯವನ್ನು ತುಂಬುವಂತೆಯೂ ಬೆನ್ಯಾ – –ಮೀನನ ಚೀಲದಲ್ಲಿ ತನ್ನ ವಿಶೇಷವಾದ ಬೆಳ್ಳಿಯ ಬಟ್ಟಲನ್ನು ಬಚ್ಚಿಡುವಂತೆಯೂ ಆಜ್ಞಾಪಿಸಿದನು. ಯೋಸೇಫನ ಅಣ್ಣಂದಿರು ಅಲ್ಲಿಂದ ಹೊರಟ ನಂತರ, ಅವರನ್ನು ಬೆನ್ನಟ್ಟಿ ಹೋಗಿ ಕಳ್ಳತನದ ಆರೋಪವನ್ನು ಅವರ ಮೇಲೆ ಹೊರಿಸುವಂತೆ ಯೋಸೇಫನು ತನ್ನ ಮನೆವಾರ್ತೆಯವನನ್ನು ಕಳಿಸಿದನು. ಮನೆವಾರ್ತೆಯ ಮುಖ್ಯಸ್ಥನು ಅವರನ್ನು ಹಿಂದಟ್ಟಿ ಸಂಧಿಸಿ ಅವರಿಗೆ, "ನೀವು ಉಪ – –ಕಾರಕ್ಕೆ ಪ್ರತಿಯಾಗಿ ಯಾಕೆ ಅಪಕಾರ ಮಾಡಿದಿರಿ? ನನ್ನ ಧಣಿಯು ಪಾನಮಾಡುವಂತ ಬಟ್ಟಲನ್ನು ನೀವು ಯಾಕೆ ತೆಗೆದು – –ಕೊಂಡಿರಿ?" ಎಂದು ಹೇಳಿದನು. ಅದಕ್ಕೆ ಅವರು "ಇದನ್ನು ನಾವು ತೆಗೆದುಕೊಂಡಿಲ್ಲ. ಈ ಬಟ್ಟಲು ಯಾರಲ್ಲಿ ಸಿಕ್ಕುತ್ತದೋ ಅವರು ಮರಣ ದಂಡನೆಯನ್ನು ಹೊಂದಲಿ; ನಾವೆಲ್ಲರೂ ನಮ್ಮ ಸ್ವಾಮಿಗೆ ದಾಸರಾಗುವೆವು ಅಂದರು." ಆಗ ಮನೆವಾರ್ತೆಯವನು ಅವರಿಗೆ ಉತ್ತರಿಸುತ್ತಾ, "ಆ ಬಟ್ಟಲು ಯಾರ ಬಳಿಯಲ್ಲಿ ಸಿಕ್ಕುತ್ತದೋ ಅವನು ನನಗೆ ದಾಸನಾಗಬೇಕು; ಉಳಿದವರು ನಿಮ್ಮ ದಾರಿ ಹಿಡಿದು ಹೋಗಬಹುದು ಅಂದನು."

ಮನೆವಾರ್ತೆಯ ಮುಖ್ಯಸ್ಥನು ಎಲ್ಲರ ಚೀಲಗಳನ್ನು ಹುಡುಕಿದನು, ಹಿರಿಯವನ ಚೀಲದಿಂದ ಹಿಡಿದು ಕಿರಿಯವನ ಚೀಲದ ತನಕ ಹುಡುಕಿದನು, ಕೊನೆಯಲ್ಲಿ ಬೆನ್ಯಾಮೀನನ ಚೀಲದಲ್ಲಿ ಬಟ್ಟಲು ಇರುವದನ್ನು ಕಂಡನು! ಇದನ್ನು ಕಂಡು ಯೋಸೇಫನ ಅಣ್ಣಂದಿರು ತಮ್ಮ ಬಟ್ಟೆಗಳನ್ನು ಹರಿದುಕೊಂಡು ಪಟ್ಟಣಕ್ಕೆ ಹಿಂತಿರುಗಿ ಬಂದು ಯೋಸೇಫನ ಮುಂದೆ ನೆಲದ ಮೇಲೆ ಬಿದ್ದರು. ಆಗ ಯೋಸೇಫನು ಅವರಿಗೆ, ನೀವು ಮಾಡಿದ್ದು ಏನು? ನೀವು ನನ್ನನ್ನು ಮೋಸಗೊಳಿಸಬಹುದೆಂದು ಅಂದುಕೊಂಡಿರೋ? ಎಂದು ಕೇಳಲು ಯಾಕೋಬನ ನಾಲ್ಕನೆಯ ಮಗನಾದ ಯೆಹೂದನು ಅವನಿಗೆ, "ನಾವು ಏನು ಹೇಳೋಣ? ನಾವು ನಿರ್ದೋಷಿಗಳಾಗಿ ತೋರುವಂತೆ ಏನು ಮಾಡಬೇಕು? ನಿನ್ನ ಸೇವಕರ ಪಾಪಕೃತ್ಯವನ್ನು ದೇವರು ಹೊರಪಡಿಸಿದ್ದಾನೆ. ಈ ಬಟ್ಟಲು ಯಾರ ಬಳಿ – –ಯಲ್ಲಿ ಸಿಕ್ಕಿತೋ ಅವನು ಮಾತ್ರವಲ್ಲದೆ ನಾವೆಲ್ಲರೂ ನಮ್ಮ ಸ್ವಾಮಿಗೆ ಗುಲಾಮರಾದೆವು!" ಎಂದು ಹೇಳಿದನು.

ಯೋಸೇಫನು ಉತ್ತರವಾಗಿ, "ಯಾರ ಬಳಿಯಲ್ಲಿ ಬಟ್ಟಲು ಸಿಕ್ಕಿತೋ ಅವನು ಮಾತ್ರ ನನ್ನ ಗುಲಾಮನಾಗಿರಲಿ. ಉಳಿದವರು ಸಮಾ –ಧಾನದಿಂದ ನಿಮ್ಮ ತಂದೆಯ ಬಳಿಗೆ ಹೋಗಿರಿ" ಅಂದನು. ಆಗ ಯೆಹೂದನು ಯೋಸೇಫನ ಹತ್ತಿರ ಬಂದು, ಬೆನ್ಯಾಮೀನ – ನನ್ನು ತಮ್ಮ ಜೊತೆಯಲ್ಲಿ ಐಗುಪ್ತಕ್ಕೆ ಕಳಿಸುವ ವಿಷಯದಲ್ಲಿ ತನ್ನ ತಂದೆಗಿದ್ದ ಸಂಕಟವನ್ನು ಮತ್ತೆ ಅವನಿಗೆ ಹೇಳಿದನು. ಇದಾದ ನಂತರ, ಯೆಹೂದನು ಯೋಸೇಫನಿಗೆ ತಮ್ಮ ಮೇಲೆ ಕರುಣೆ ತೋರಿಸಿ ಬೆನ್ಯಾಮೀನನನ್ನು ಅವನ ತಂದೆಯ ಬಳಿಗೆ ಕರೆದು –ಕೊಂಡು ಹೋಗುವದಕ್ಕೆ ಅಪ್ಪಣೆಕೊಡುವಂತೆ ಅಂಗಲಾಚಿ ಬೇಡಿಕೊಂಡನು. ಬೆನ್ಯಾಮೀನನ ಬದಲಿಗೆ ತಾನು ಯೋಸೇಫನ ಗುಲಾಮನಾಗಿರುವೆನೆಂದು ಸಹ ಯೆಹೂದನು ಕೇಳಿಕೊಂಡನು. ತಮ್ಮ ಹಿಂದಿನ ಪಾಪಗಳ ಕಾರಣದಿಂದ ತನ್ನ ಅಣ್ಣಂದಿರು ಪಡು –ತ್ತಿದ್ದ ಸಂಕಟವನ್ನು ಮತ್ತು ಅವರ ತಂದೆ ಮತ್ತು ಚಿಕ್ಕ ತಮ್ಮನ ಸಲುವಾಗಿ ಅವರಲ್ಲಿದ್ದ ಅನುಕಂಪವನ್ನು ಯೋಸೇಫನು ನೋಡಿ – –ದಾಗ **ತನ್ನ ಅಣ್ಣಂದಿರು ನಿಜವಾಗಿಯೂ ಪಶ್ಚಾತ್ತಾಪಪಟ್ಟಿದ್ದಾರೆಂಬುದನ್ನು** ಅವನು ತಿಳಿದುಕೊಂಡನು. **ತನ್ನ ಅಣ್ಣಂದಿರಿಗೆ ತನ್ನನ್ನು ತೋರಿಸಿಕೊಳ್ಳುವ ಸಮಯವು ಬಂದಿತೆಂದು** ಅವನು ಅಂದುಕೊಂಡನು.

ಹಾಗಾಗಿ ವಾಕ್ಯವು ಹೀಗೆ ಹೇಳುತ್ತದೆ:

"ಯೋಸೇಫನು ಇದನ್ನು ಕೇಳಿ ತನ್ನ ಎದುರಿನಲ್ಲಿದ್ದವರ ಮುಂದೆ ತಾಳಲಾರದೆ ನನ್ನ ಬಳಿಯಿಂದ ಎಲ್ಲರನ್ನೂ ಆಚೆಗೆ ಕಳುಹಿಸಿರಿ ಎಂದು ಬಾಯಿಬಿಟ್ಟು ಹೇಳಿದನು. ಯೋಸೇಫನು ಅಣ್ಣ ತಮ್ಮಂದಿರಿಗೆ ತನ್ನ ಗುರುತು ಸಿಕ್ಕುವಂತೆ ಮಾಡುವ ವೇಳೆಯಲ್ಲಿ ಇತರರು ಯಾರೂ ಹತ್ತಿರ ಇರಲಿಲ್ಲ. ಅವನು ಗಟ್ಟಿಯಾಗಿ ಅತ್ತದ್ದರಿಂದ ಐಗುಪ್ತ್ಯರಿಗೂ ಫರೋಹನ ಮನೆಯವರಿಗೂ ಆ ಶಬ್ದವು ಕೇಳಿಸಿತು.

ಅವನು ತನ್ನ ಅಣ್ಣಂದಿರಿಗೆ – **ನಾನು ಯೋಸೇಫನು;** ನನ್ನ ತಂದೆ ಇನ್ನೂ ಇದ್ದಾನೋ ಎಂದು ಹೇಳಲು ಅವರು ಅವನ ಮುಂದೆ ತತ್ತರಗೊಂಡು ಉತ್ತರ ಕೊಡಲಾರದೆ ಹೋದರು. (ಆದಿ–೪೫:೧–೩)

**"**ಯೋಸೇಫನು ನನ್ನ ಹತ್ತರಕ್ಕೆ ಬನ್ನಿರಿ ಎಂದು ತನ್ನಣ್ಣಂದಿರಿಗೆ ಹೇಳಲು ಅವರು ಹತ್ತರಕ್ಕೆ ಬಂದರು. ಅವನು ಅವರಿಗೆ **ಐಗುಪ್ತ ––ದೇಶಕ್ಕೆ ಸೇರುವಂತೆ ನೀವು ಮಾರಿಬಿಟ್ಟ ನಿಮ್ಮ ತಮ್ಮನಾದ ಯೋಸೇಫನೇ ನಾನು.** ನೀವು ನನ್ನನ್ನು ಮಾರಿದ್ದಕ್ಕಾಗಿ ವ್ಯಸನಪಟ್ಟು ದು:ಖೀಸಬೇಡಿರಿ. **ಪ್ರಾಣ ಸಂರಕ್ಷಣೆಗಾಗಿ ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು.** ದೇಶಕ್ಕೆ ಬರಬಂದು ಎರಡು ವರುಷ ––ವಾಗಿದೆಯಷ್ಟೆ; ಇನ್ನೂ ಐದು ವರುಷಗಳ ಪರ್ಯಂತರ ಬಿತ್ತುವದಕ್ಕಾಗಲಿ ಕೊಯ್ಯುವದಕ್ಕಾಗಲಿ ಅವಕಾಶವಿಲ್ಲ. ನಿಮ್ಮ ಜನವು ಭೂಮಿಯ ಮೇಲೆ ಉಳಿಯುವಂತೆಯೂ ನೀವು ಈ ವಿಪತ್ತಿಗೆ ಸಿಕ್ಕದೆ **ಬಹುಜನವಾಗುವಂತೆಯೂ** ದೇವರು ನನ್ನನ್ನು ನಿಮ್ಮ ಮುಂದೆ ಕಳುಹಿಸಿದನು. **ದೇವರೇ ನನ್ನನ್ನು ಇಲ್ಲಿಗೆ ಕಳುಹಿಸಿದನಲ್ಲದೆ ನೀವು ಕಳುಹಿಸಲಿಲ್ಲ;** ಆತನು ನನ್ನನ್ನು ಫರೋಹನ ಮಂತ್ರಿ ––ಯನ್ನಾಗಿಯೂ ಫರೋಹನ ಅರಮನೆಯಲ್ಲಿ ಅಧಿಪತಿಯನ್ನಾಗಿಯೂ ಐಗುಪ್ತದೇಶಕ್ಕೆ ಸರ್ವಾಧಿಕಾರಿಯನ್ನಾಗಿಯೂ ಮಾಡಿದ್ದಾನೆ. ನೀವು ಬೇಗ ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ – ನಿನ್ನ ಮಗನಾದ ಯೋಸೇಫನು ಹೀಗನ್ನುತ್ತಾನೆ – ದೇವರು ನನ್ನನ್ನು ಐಗುಪ್ತದೇಶಕ್ಕೆ ಸರ್ವಾಧಿಕಾರಿಯನ್ನಾಗಿ ನೇಮಿಸಿದ್ದಾನೆ; ನೀನು ತಡಮಾಡದೆ ನನ್ನ ಬಳಿಗೆ ಬಾ; ಗೋಷೇನ್ ಸೀಮೆಯಲ್ಲಿ ನೀನು ವಾಸಮಾಡಬಹುದು; ನೀನೂ ನಿನ್ನ ಮಕ್ಕಳೂ ಕುರಿ ದನ ಮೊದಲಾದ ಸ್ವಾಸ್ತ್ಯಸಹಿತರಾಗಿ ನನ್ನ ಬಳಿಯಲ್ಲೇ ಇರಬಹುದು; ಈ ಬರಗಾಲ ತೀರುವದಕ್ಕೆ ಇನ್ನೂ ಐದು ವರುಷ ಹೋಗಬೇಕು; ಆದದರಿಂದ ನಿನಗೂ ನಿನ್ನ ಮನೆಯವರಿಗೂ ನಿನಗಿರುವ ಎಲ್ಲವು ––ಗಳಿಗೂ ಬಡತನವುಂಟಾಗದಂತೆ ಇಲ್ಲಿ ನಿನ್ನನ್ನು ಪೋಷಿಸುವೆನೆಂದು ಹೇಳುತ್ತಾನೆಂಬದಾಗಿ ತಿಳಿಸಿರಿ. ನಾನು ಸ್ವತ: ನಿಮ್ಮ ಸಂಗಡ ಮಾತಾಡಿದ್ದೇನಲ್ಲಾ; ಅದಕ್ಕೆ ನೀವೇ ಸಾಕ್ಷಿ. ನನ್ನ ಒಡಹುಟ್ಟಿದವನಾದ ಬೆನ್ಯಾಮೀನನೂ ಸಾಕ್ಷಿ. ಐಗುಪ್ತದೇಶದಲ್ಲಿ ನನಗಿರುವ ಎಲ್ಲಾ ವೈಭವವನ್ನೂ ನೀವು ಕಂಡದ್ದೆಲ್ಲವನ್ನೂ ತಂದೆಗೆ ತಿಳಿಸಿ ಬೇಗನೆ ಅವನನ್ನು ಇಲ್ಲಿಗೆ ಕರಕೊಂಡು ಬರಬೇಕೆಂದು ಹೇಳಿ ತನ್ನ ತಮ್ಮ ––ನಾದ ಬೆನ್ಯಾಮೀನನ ಕೊರಳನ್ನು ಅಪ್ಪಿಕೊಂಡು ಅತ್ತನು. ಬೆನ್ಯಾಮೀನನು ಅವನ ಕೊರಳನ್ನು ಅಪ್ಪಿಕೊಂಡು ಅತ್ತನು. ಇದಲ್ಲದೆ ಅವನು ತನ್ನ ಅಣ್ಣಂದಿರಲ್ಲಿ ಪ್ರತಿಯೊಬ್ಬನಿಗೂ ಮುದ್ದಿಟ್ಟು ಅವರನ್ನು ಅಪ್ಪಿಕೊಂಡು ಅತ್ತನು. ತರುವಾಯ ಅವರು ಅವನ ಸಂಗಡ ಮಾತಾಡಿದರು.**"** (ಆದಿ–೪೫:೪–೧೫)

ಇದಾದ ನಂತರ, ಯೋಸೇಫನ ಅಣ್ಣಂದಿರು ತಮ್ಮ ತಂದೆಯ ಮನೆಗೆ ಹಿಂತಿರುಗಿ ಹೋಗುವದಕ್ಕೆ ಸಿದ್ಧರಾದರು. ಫರೋಹನು ಆಜ್ಞಾಪಿಸಿದಂತೆ ಯೋಸೇಫನು ಅವರಿಗೆ ರಥಗಳನ್ನು ಮತ್ತು ಅವರ ಪ್ರಯಾಣಕ್ಕೆ ಬೇಕಾದ ಆಹಾರವನ್ನೂ ಸಹ ಕೊಟ್ಟನು.

**"**ಅವರು ಐಗುಪ್ತದೇಶವನ್ನು ಬಿಟ್ಟು ಕಾನಾನ್ ದೇಶಕ್ಕೆ ಸೇರಿ ತಂದೆಯಾದ ಯಾಕೋಬನ ಬಳಿಗೆ ಬಂದು ಅವರಿಗೆ– **ಯೋಸೇಫನು ಇನ್ನೂ ಜೀವದಿಂದಿದ್ದಾನೆ;** ಅವನು ಐಗುಪ್ತದೇಶದ ಸರ್ವಾಧಿಕಾರಿಯಾಗಿದ್ದಾನೆ ಎಂದು ತಿಳಿಸಲು ಅವನು ಸ್ತಬ್ದನಾಗಿ ನಂಬಲಿಲ್ಲ. ತರುವಾಯ ಯೊಸೇಫನು ಹೇಳಿಕಳುಹಿಸಿದ್ದ ಎಲ್ಲಾ ಮಾತುಗಳನ್ನು ಕೇಳಿ ತನ್ನ ಪ್ರಯಾಣಕ್ಕೋಸ್ಕರ ಯೋಸೇಫನ ಕಡೆಯಿಂದ ಬಂದ ರಥಗಳನ್ನು ನೋಡಿ ಇಸ್ರಾಯೇಲನೆನಿಸಿಕೊಳ್ಳುವ ಅವರ ತಂದೆ ಯಾಕೋಬನು ಚೇತರಿಸಿಕೊಂಡು – ಸಾಕು, ನನ್ನ ಮಗನಾದ ಯೋಸೇಫನು ಸಜೀವನಾಗಿದ್ದಾನೆ; ನಾನು ಸಾಯುವದಕ್ಕಿಂತ ಮುಂಚೆ ಹೋಗಿ ಅವನನ್ನು ನೋಡುವೆನು ಅಂದನು.**"** (೪೫:೨೫–೨೮)

ಇದಾದ ನಂತರ, ಯಾಕೋಬನು ಮತ್ತು ಅವನ ಕುಟುಂಬದವರೆಲ್ಲರೂ ಹೇಗೆ ಕಾನಾನ್ ದೇಶವನ್ನು ಬಿಟ್ಟು ಐಗುಪ್ತದ ಕಡೆಗೆ ಪ್ರಯಾಣಿಸಿದರೆಂಬುದನ್ನು ವಾಕ್ಯವು ನಮಗೆ ತಿಳಿಸುತ್ತದೆ. ಯಾಕೋಬನು ದಾರಿಯಲ್ಲಿ ಯಜ್ಞವನ್ನು ಸಮರ್ಪಿಸಿದನು, ಅಲ್ಲಿ ದೇವರು ಅವನೊಂದಿಗೆ ಮಾತಾಡಿ ಹೀಗೆಂದನು:

**"**ನಾನು ದೇವರು, ನಿನ್ನ ತಂದೆ ಆರಾಧಿಸಿದ ದೇವರು; ನೀನು ಗಟ್ಟಾ ಇಳಿದು ಹೆದರದೆ ಐಗುಪ್ತದೇಶಕ್ಕೆ ಹೋಗು; **ಅಲ್ಲಿ ನಿನ್ನಿಂದ ಮಹಾಜನಾಂಗವುಂಟಾಗುವಂತೆ ಮಾಡುವೆನು.** ನಾನೇ ನಿನ್ನೊಂದಿಗೆ ಐಗುಪ್ತಕ್ಕೆ ಬರುವೆನು; **ಅಲ್ಲಿಂದ ನಿಶ್ಚಯವಾಗಿ ನಿನ್ನನ್ನು ಕರೆದು ––ಕೊಂಡು ಬರುವೆನು;** ನಿನ್ನ ಅವಸಾನ ಕಾಲದಲ್ಲಿ ಯೋಸೇಫನು ನಿನ್ನ ಕಣ್ಣುಗಳ ಮೇಲೆ ಕೈಯಿಡುವನು ಅಂದನು.**"**

ದೀರ್ಘ ಪ್ರಯಾಣದ ನಂತರ ಯಾಕೋಬನು ಮತ್ತು ಅವನ ಕುಟುಂಬದವರು ಐಗುಪ್ತ ದೇಶಕ್ಕೆ ಬಂದರು. ಅನೇಕ ವರ್ಷಗಳ ನಂತರ ತನ್ನ ಪ್ರೀತಿಯ ಮಗನಾದ ಯೋಸೇಫನನ್ನು ನೋಡುವದು ಯಾಕೋಬನಿಗೆ ಎಷ್ಟೊಂದು ಸಂತೋಷ! ಹೀಗೆ ಇಸ್ರಾಯೇಲ ––ನೆಂದೂ ಸಹ ಕರೆಯಲ್ಪಟ್ಟಿದ್ದ ಯಾಕೋಬನು ಮತ್ತು ಅವನ ಕುಟುಂಬವು ಐಗುಪ್ತದ ಗೋಷೇನ್ ಸೀಮೆಯಲ್ಲಿ ನೆಲೆಗೊಂಡರು. ಅಲ್ಲಿ ಅವರು ಸಂಖ್ಯೆಯಲ್ಲಿ ಬಹಳವಾಗಿ ವೃದ್ಧಿಯಾದರು ಮತ್ತು ಒಂದು ತುಂಬಾ ದೊಡ್ಡ ಜನಾಂಗವಾದರು. ಯಾಕೋಬನು ಐಗುಪ್ತದಲ್ಲಿ ಹದಿನೇಳು ವರ್ಷಗಳವರೆಗೆ ಜೀವಿಸಿದನು. ಒಟ್ಟು ಅವನು ೧೪೭ ವರ್ಷಗಳವರೆಗೆ ಬದುಕಿದ್ದನು. ಹೀಗೆ ಇಸ್ರಾಯೇಲ್ ಜನಾಂಗದ ತಂದೆಯಾಗಿದ್ದ ಯಾಕೋಬನು ಮರಣ ಹೊಂದಿ ಉನ್ನತದಲ್ಲಿರುವ ದೇವರೊಂದಿಗೆ ಹೊರಟು ಹೋದನು. ಯೋಸೇ ––ಫನು ಮತ್ತು ಅವನ ಅಣ್ಣತಮ್ಮಂದಿರು ಹಾಗೂ ಐಗುಪ್ತದ ಎಲ್ಲಾ ಜನರು ಅವನಿಗಾಗಿ ಎಪ್ಪತ್ತು ದಿವಸಗಳವರೆಗೆ ಗೋಳಾಡಿದರು. ಯಾಕೋಬನ ಮಕ್ಕಳು ಅವನನ್ನು ಕಾನಾನ್ ದೇಶದಲ್ಲಿ ಅಬ್ರಹಾಮನ ಸಮಾಧಿ ಸ್ಥಳದಲ್ಲಿಯೇ ಇವನಿಗೂ ಸಮಾಧಿ ಮಾಡಿದರು.

ಆದಿಕಾಂಡ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಅಂದರೆ ಐವತ್ತನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಯೋಸೇಫನ ಅಣ್ಣತಮ್ಮಂದಿರು ತಂದೆ ಸತ್ತದ್ದನ್ನು ಕಂಡು – ಒಂದು ವೇಳೆ ಯೋಸೇಫನು ನಮ್ಮನ್ನು ದ್ವೇಷಿಸಿ ನಾವು ಅವನಿಗೆ ಮಾಡಿದ ಎಲ್ಲಾ ಕೇಡಿಗೆ ಪ್ರತಿಯಾಗಿ ಪೂರಾ ಶಿಕ್ಷೆಯನ್ನು ಕೊಟ್ಟಾನು ಎಂದು ತಮ್ಮತಮೊಳಗೆ ಮಾತಾಡಿಕೊಂಡು. . .ಯೋಸೇಫನು ಅವರಿಗೆ ಹೆದರಬೇಡಿರಿ; ನಾನೇನು ದೇವರ ಪ್ರತಿನಿಧಿಯೇ? **ನೀವಂತೂ ನನಗೆ ಕೇಡಾಗಬೇಕೆಂದು ಎಣಿಸಿದ್ದೀರಿ; ಆದರೆ ದೇವರು ಮೇಲಾಗಬೇಕೆಂದು ಸಂಕಲ್ಪಿಸಿದನು. ಈಗ ಅನುಭವಕ್ಕೆ ಬಂದ ಪ್ರಕಾರವೇ ಅನೇಕ ಪ್ರಾಣಿಗಳಿಗೆ ಸಂರಕ್ಷಣೆ ಉಂಟಾಗುವಂತೆ ಮಾಡಿದನು.** ಆದದರಿಂದ ನೀವು ಸ್ವಲ್ಪವೂ ಭಯಪಡಬೇಡಿರಿ; ನಾನು ನಿಮ್ಮನ್ನೂ ನಿಮಗೆ ಸೇರಿದವರೆಲ್ಲರನ್ನೂ ಪೋಷಿಸುವೆನು ಎಂದು ಹೇಳಿ ಅವರನ್ನು ಸಂತೈಸಿ ಅವರ ಸಂಗಡ ಪ್ರೀತಿಯಿಂದ ಮಾತಾಡಿದನು. ಹೀಗೆ ಯೋಸೇಫನೂ ಅವನ ತಂದೆಯ ಮನೆಯವರೂ ಐಗುಪ್ತದೇಶದಲ್ಲಿ ವಾಸಮಾಡಿದರು. ಯೋಸೇಫನು ನೂರಹತ್ತು ವರುಷ ಬದುಕಿದನು. ಅವನು ಎಫ್ರಾಯಿಮನ ಮಕ್ಕಳ ಮೊಮ್ಮಕ್ಕಳನ್ನು ನೋಡಿದನು; ಮತ್ತು ಮನಸ್ಸೆಯ ಮಗನಾದ ಮಾಕೀರನಿಗೂ ಮಕ್ಕಳು ಹುಟ್ಟಿದಾಗ ಯೋಸೇಫನು ಅವರನ್ನು ತನ್ನ ತೊಡೆಯ ಮೇಲೆ ಮಲಗಿಸಿಕೊಂಡನು. ಯೋಸೇಫನು ತನ್ನ ಅಣ್ಣತಮ್ಮಂದಿರಿಗೆ – ನನಗೆ ಅವಸಾನಕಾಲ ಸಮೀಪಿಸಿತು. ಆದರೆ ದೇವರು ನಿಶ್ಚಯವಾಗಿ ನಿಮ್ಮನ್ನು ಪರಾಂಬರಿಸಿ ಈ ದೇಶದಿಂದ ತಾನು ಅಬ್ರಹಾಮ್ ಇಸಾಕ್ ಯಾಕೋಬರಿಗೆ ಕೊಡು –ತ್ತೇನೆಂದು ಪ್ರಮಾಣವಾಗಿ ಹೇಳಿದ ದೇಶಕ್ಕೆ ನೀವು ಹೋಗಿ ಸೇರುವಂತೆ ಮಾಡುವನೆಂದು ತಿಳಿದುಕೊಳ್ಳಿರಿ ಎಂದು ಹೇಳಿದನು. ಇದಲ್ಲದೆ ಯೋಸೇಫನು ಇಸ್ರಾಯೇಲನ ಮಕ್ಕಳಿಗೆ – ದೇವರು ನಿಸ್ಸಂದೇಹವಾಗಿ ನಿಮ್ಮನ್ನು ಪರಾಂಬರಿಸುವನು; ಆಗ ನೀವು ನನ್ನ ಶವವನ್ನು ನಿಮ್ಮ ಸಂಗಡ ಹೊತ್ತುಕೊಂಡು ಹೋಗಬೇಕೆಂದು ಹೇಳಿ, ಹಾಗೆಯೇ ಮಾಡುತ್ತೇವೆಂಬದಾಗಿ ಅವರಿಂದ ಪ್ರಮಾಣ ಮಾಡಿಸಿದನು. ಯೋಸೇಫನು ನೂರಹತ್ತು ವರುಷದವನಾಗಿ ಸತ್ತನು. ಅವನ ಶವಕ್ಕೆ ಸುಗಂಧದ್ರವ್ಯಗಳನ್ನು ತುಂಬಿ ಐಗುಪ್ತ – –ದೇಶದೊಳಗೆ ಅದನ್ನು ಪೆಟ್ಟಿಗೆಯಲ್ಲಿ ಇರಿಸಿದರು." (ಆದಿ–೫೦:೧೫, ೧೯–೨೬)

ಹೀಗೆ ಆದಿಕಾಂಡ ಪುಸ್ತಕವು ಕೊನೆಗೊಳ್ಳುತ್ತದೆ. "ಯೋಸೇಫನು ಸತ್ತು ಹೋದನು. . .ಮತ್ತು. . .ಐಗುಪ್ತದೇಶದಲ್ಲಿ ಅದನ್ನು **ಪೆಟ್ಟಿಗೆಯಲ್ಲಿ** ಇಟ್ಟರು." ದೇವರು ಜೀವವನ್ನು ಹೇಗೆ ಸೃಷ್ಟಿಮಾಡಿದನೆಂಬ ಕಥೆಯೊಂದಿಗೆ ಪ್ರಾರಂಭವಾಗುವಂತಹ ಈ ಪುಸ್ತಕವು ಮರಣದ ಕಥೆಯೊಂದಿಗೆ ಮುಕ್ತಾಯವಾಗುತ್ತದೆ. ಆದಾಮನ ಪಾಪದ ನಿಮಿತ್ತವಾಗಿ ಮರಣವು ಎಲ್ಲಾ ಮನುಷ್ಯರಿಗೆ ಬಂತು. ಇದು ಇಷ್ಟವಿರಲಿ ಅಥವಾ ಇಲ್ಲದಿರಲಿ, **"ಪಾಪದ ಸಂಬಳ ಮರಣ!"** (ರೋಮಾ–೬:೨೩). ಜೀವದ ಸಂರಕ್ಷಕನೆಂಬ ಬಿರುದನ್ನು ಪಡೆದಿದ್ದ ಯೋಸೇಫನಂತ ಒಳ್ಳೆಯ ಮನುಷ್ಯನು ಸಹ ಸತ್ತು ಹೋಗಬೇಕಾಯಿತು, ಇವನೂ ಸಹ ಆದಾಮನ ಸಂತಾನದವನಾದ ಕಾರಣದಿಂದ ಪಾಪದ ಬೇರು ಅವನ ಹೃದಯದಲ್ಲಿತ್ತು. ಯೋಸೇಫನು ದೇವರ ಸಹಾಯದೊಂದಿಗೆ ಐಗುಪ್ತದ ಜನರನ್ನೂ ತನ್ನ ಕುಟುಂಬವನ್ನೂ ಹಸಿವೆಯಿಂದ ಸಾಯದ ಹಾಗೆ **ಸಂರಕ್ಷಿಸುವದಕ್ಕೆ** ಶಕ್ತನಾದನು. ಆದರೆ ಅವರನ್ನು **ಮರಣದಿಂದ ಸಂರಕ್ಷಿಸುವದಕ್ಕೆ** ಅವನಿಗೆ ಆಗಲಿಲ್ಲ. ಆದಾಗ್ಯೂ ಸಂತೋಷದ ಹೃದಯಗಳೊಂದಿಗೆ ನಾವು ದೇವರಿಗೆ ಸ್ತೋತ್ರ ಸಲ್ಲಿಸುತ್ತೇವೆ. {ಉಲೂಫ್‌ನಲ್ಲಿ: ಶೀತಲ ಹೃದಯ} ಯಾಕೆಂದರೆ **ಮರಣವನ್ನು ಜಯಿಸುವದಕ್ಕೆ** ಸಂಪೂರ್ಣನಾದ ಒಬ್ಬ ರಕ್ಷಕನನ್ನು ಕಳಿಸುವದಕ್ಕೆ **ದೇವರ ಅದ್ಭುತ –ವಾದ ವಾಗ್ದಾನದ** ಕುರಿತು ಸಹ ನಾವು ಆದಿಕಾಂಡ ಪುಸ್ತಕದಲ್ಲಿ ಓದುತ್ತೇವೆ. ಮರಣವು **ಪಾಪದ** ಫಲಿತಾಂಶವಾಗಿದೆ. ರಕ್ಷಕನಾದ ದೇವರು ಕಳಿಸುತ್ತೇನೆಂದು ವಾಗ್ದಾನ ಮಾಡಿದವನು ಆದಾಮನ ಸಂತಾನದವರನ್ನು **ಪಾಪದ ದಂಡನೆಯಿಂದ ಮತ್ತು ಪಾಪದ ಬೇರಿ – –ನಿಂದ** ಬಿಡುಗಡೆ ಮಾಡುವವನಾಗಿದ್ದನು. ಪಾಪದ ಬೇರು, ದುರಾತ್ಮನೂ ಮತ್ತು ಮಾನವನ ಕೆಟ್ಟ ಹೃದಯವೂ ಆಗಿದೆ. ಪಾಪದ ದಂಡನೆಯು ಮರಣ ಮತ್ತು ನರಕವಾಗಿದೆ. ಕಳಿಸುತ್ತೇನೆಂದು ದೇವರು ವಾಗ್ದಾನ ಮಾಡಿದ್ದ ರಕ್ಷಕನು ಅವುಗಳನ್ನೆಲ್ಲಾ ಜಯಿಸಿ ತನ್ನಲ್ಲಿ ನಂಬಿಕೆಯಿಡುವವರ ಜೀವಿತಗಳನ್ನು ಪರಿವರ್ತಿಸಿದನು.

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು ಪಾಪವನ್ನೂ ಸೈತಾನನನ್ನೂ ಮರಣವನ್ನೂ ಮತ್ತು ನರಕವನ್ನು ಸೋಲಿಸಿದಂತ – –ವನೂ ಮತ್ತು ತನ್ನ ಹೆಸರಿನಲ್ಲಿ ನಂಬಿಕೆಯನ್ನಿಡುವವರೆಲ್ಲರಿಗೂ ನಿತ್ಯಜೀವವನ್ನು ಕೊಡುವಂತವನೂ ಆದ ಈ ಸಂಪೂರ್ಣನಾದ ರಕ್ಷಕನನ್ನು ನೀವು ತಿಳಿದಿದ್ದೀರೋ? ಈ ರಕ್ಷಕನ ಕುರಿತಾಗಿ ಪರಿಶುದ್ಧ ಸುವಾರ್ತೆಯು{ಇಂಜಿಲ್} ಹೀಗೆ ಹೇಳುತ್ತದೆ: "ಇಸ್ರಾಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿದ್ದ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿದಂತೆಯೇ ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟು ಮಾಡಿದ್ದಾನೆ; **ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮ –ಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ!"** (ಲೂಕ್–೧:೬೮–೭೦) ಆಮೆನ್!

ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ದೇವರ ಚಿತ್ತವಾದರೆ, ತೋರಾ ಒಳಗೊಂಡಿರುವ ವಿಮೋಚನ ಕಾಂಡ ಎಂಬಂತ ಎರಡನೆಯ ಪುಸ್ತಕವನ್ನು ನಾವು ಪ್ರಾರಂಭಿಸುತ್ತೇವೆ.

ಆದಿಕಾಂಡ ಪುಸ್ತಕವನ್ನು ಸಂಕ್ಷಿಪ್ತಗೊಳಿಸುವ ಸತ್ಯವೇದದ ಈ ವಚನವನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಪಾಪವು ಹೆಚ್ಚಾದಲ್ಲೇ [ದೇವರ] ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು!"** (ರೋಮಾ–೫:೨೦)

ಪಾಠ ೨೮

# ತೋರಾದ ಮೊದಲನೆಯ ಪುಸ್ತಕದ ಪುನರಾವಲೋಕನ

ಆದಿಕಾಂಡ ೧ ವಿಮೋಚನಕಾಂಡ ೧

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ನಾವು ಇನ್ನೂ ತೋರಾದಲ್ಲಿಯೇ ಅಧ್ಯಯನ ಮಾಡುತ್ತಿದ್ದೇವೆ. ನೀವು ತಿಳಿದಿರುವಂತೆ, ಪ್ರವಾದಿಗಳ ಬರವಣಿಗೆಗಳಲ್ಲಿ ತೋರಾವು ಮೊದಲನೆಯ ಪುಸ್ತಕವಾಗಿದೆ ಮತ್ತು ಇದು ಐದು ವಿಭಾಗಗಳಾಗಿ ಅಥವಾ ಪುಸ್ತಕಗಳಾಗಿ ವಿಭಾಗಿಸಲ್ಪಟ್ಟಿದೆ. ಮೊದಲನೆಯ ವಿಭಾಗವು ಆದಿಕಾಂಡ (ಆರಂಭ) ಎಂದು ಕರೆಯಲ್ಪಟ್ಟಿದೆ. ನಮ್ಮ ಹಿಂದಿನ ಬಾನುಲಿ ಪ್ರಸಾರದಲ್ಲಿ, ಆದಿಕಾಂಡದಲ್ಲಿನ ನಮ್ಮ ಅಧ್ಯಯನಗಳನ್ನು ನಾವು ಪೂರ್ತಿಗೊಳಿಸಿದ್ದೇವೆ. ಅನಂತರ ಈ ದಿನ **ವಿಮೋಚನಕಾಂಡ** ಎಂದು ಕರೆಯಲ್ಪಡುವ ತೋರಾದ ಎರಡನೆಯ ವಿಭಾಗವನ್ನು ನಾವು ಪ್ರಾರಂಭಿಸುತ್ತೇವೆ. ಐಗುಪ್ತದೇಶದಲ್ಲಿ ತಮ್ಮ ಗುಲಾಮತನದ ಬಂಧನದಲ್ಲಿದ್ದ ಇಸ್ರಾಯೇಲ್ ಜನರನ್ನು ದೇವರು ಹೇಗೆ ಬಿಡುಗಡೆಗೊಳಿಸಿದನೆಂಬುದರ ಆಶ್ಚರ್ಯಕರವಾದ ಮತ್ತು ಅದ್ಭುತಕರವಾದ ಸಂಗತಿಗಳನ್ನು ವಿಮೋಚನಕಾಂಡ ಪುಸ್ತಕವು ಒಳಗೊಂಡಿದೆ.

ನಾವು ವಿಮೋಚನಕಾಂಡ ಪುಸ್ತಕಕ್ಕೆ ಹೋಗುವದಕ್ಕಿಂತ ಮುಂಚಿತವಾಗಿ, ಪರಿಶುದ್ಧ ಸತ್ಯವೇದದ ಮೊದಲನೆಯ ಪುಸ್ತಕದಲ್ಲಿ ಯಾವುದನ್ನು ನಾವು ಅಧ್ಯಯನ ಮಾಡಿದ್ದೇವೋ ಅದನ್ನು **ಪುನರಾವಲೋಕನ** ಮಾಡಿಕೊಳ್ಳೋಣ. ನಾವು ಹೊಂದಿರುವ ಆದಿ – –ಕಾಂಡ ಪುಸ್ತಕದ ಪೂರ್ಣ ತಿಳುವಳಿಕೆಯು ನಿರ್ಣಾಯಕವಾದುದಾಗಿದೆ, ಯಾಕೆಂದರೆ ಇದು ದೇವರು ಹಾಕಿರುವಂತ ತಳಹದಿ – –ಯಾಗಿದೆ, ಆದ್ದರಿಂದ ಮುಂದಿರುವ ಪ್ರವಾದಿಗಳ ಇತರ ಪುಸ್ತಕಗಳಲ್ಲಿ ಬರೆದಿರುವದನ್ನೆಲ್ಲಾ ಅರ್ಥಮಾಡಿಕೊಳ್ಳುವದಕ್ಕೆ ಮತ್ತು ನಂಬುವದಕ್ಕೆ ನಾವು ಸಾಮರ್ಥ್ಯವುಳ್ಳವರಾಗುತ್ತೇವೆ.

ಆದಿಕಾಂಡ ಪುಸ್ತಕದ ಮೊದಲನೆಯ ವಚನವು ನಿಮಗೆ ನೆನಪಿದೆಯಾ? ಅದು ಹೇಳುವದೇನೆಂದರೆ: **"**ಆದಿಯಲ್ಲಿ ದೇವರು ಆಕಾಶ –ವನ್ನೂ ಮತ್ತು ಭೂಮಿಯನ್ನೂ ಉಂಟುಮಾಡಿದನು.**"** **"**ಆದಿಯಲ್ಲಿ **ದೇವರು!"** ಎನ್ನುವಂತಾದ್ದು ಪ್ರಾಮುಖ್ಯವಾದುದು. ಯಾವುದೂ ಇನ್ನೂ ಅಸ್ತಿತ್ವದಲ್ಲಿಲ್ಲದಿದ್ದಾಗ – ಒಬ್ಬನು ಮಾತ್ರ ಅಸ್ತಿತ್ವದಲ್ಲಿದ್ದನು. ಆ ಒಬ್ಬನೇ ದೇವರು! ಮುಂದೆ, ದೇವರು ತನ್ನ ನಿತ್ಯವಾದ ವಾಕ್ಯದಿಂದ ಮತ್ತು ತನ್ನ ಪರಿಶುದ್ಧ ಆತ್ಮನಿಂದ ಮಿಲಿಯಾಂತರ ಪರಿಶುದ್ಧ **ದೂತರುಗಳನ್ನು** ಸೃಷ್ಟಿಸಿದನು. ದೂತರುಗಳು ತನ್ನ ಸೇವೆ ಮಾಡುತ್ತಾ ಎಂದೆಂದಿಗೂ ತನ್ನನ್ನು ಸ್ತೋತ್ರ ಮಾಡಲು ಸಮರ್ಥರಾಗಿರುವಂತೆ ದೇವರು ಅವರನ್ನು ಸೃಷ್ಟಿಮಾಡಿದನು. ಆ ದೂತರುಗಳಲ್ಲಿ ಒಬ್ಬನು ಶ್ರೇಷ್ಠ ಜ್ಞಾನವನ್ನೂ ಮತ್ತು ಸೌಂದರ್ಯವನ್ನೂ ಹೊಂದಿದ್ದನು. ಅವನೇ ದೂತರುಗಳ ಮುಖ್ಯಸ್ಥನಾಗಿದ್ದ **ಲೂಸಿಫರ್**. ಹೇಗೂ ಒಂದು ದಿನ ಲೂಸಿಫರನು ತನ್ನ ಹೃದಯದಲ್ಲಿ ದೇವರನ್ನು ಕಡೆಗಣಿಸಿ ಅಹಂಕಾರಪಟ್ಟನು ಎಂದು ವಾಕ್ಯವು ನಮಗೆ ತಿಳಿಸುತ್ತದೆ. ಲೂಸಿಫರನು ಮತ್ತು ಇತರ ದೂತರುಗಳು ದೇವರನ್ನು ಸೋಲಿಸುವದಕ್ಕೆ ಸಂಚು ರೂಪಿಸಿದರು. ಆದರೆ ಯಾರೊಬ್ಬರೂ ದೇವರನ್ನು ಸೋಲಿಸುವದಕ್ಕಾಗಲಿಲ್ಲ. ತನ್ನ ವಿರುದ್ಧವಾಗಿ ದಂಗೆಯೆದ್ದವರನ್ನು (ತನ್ನ ಆಳ್ವಿಕೆಯ ತಿರಸ್ಕಾರವನ್ನು) ದೇವರು ಸಹಿಸಿಕೊಳ್ಳಲಿಲ್ಲ. ಇದರ ಪರಿಣಾಮವಾಗಿ ದೇವರು ಲೂಸಿಫರನನ್ನು ಮತ್ತು ಇತರ ದೂತರುಗಳನ್ನು ಹೊರಕ್ಕೆ ದೊಬ್ಬಿ ಲೂಸಿಫರನ ಹೆಸರನ್ನು ವಿರೋಧಿ ಎಂಬ ಅರ್ಥವಿರುವ **ಸೈತಾನ** ಎಂಬುದಾಗಿ ಬದಲಾಯಿಸಿದನು. ದೇವರು ಸೈತಾನನನ್ನೂ ಮತ್ತು ಅವನ ದೂತರುಗಳನ್ನು ಹೊರದೊಬ್ಬಿದ ನಂತರ ಆತನು ಅವರಿಗಾಗಿ **ನರಕದ** ಬೆಂಕಿಯನ್ನೂ ಸೃಷ್ಟಿಸಿದನು. ನ್ಯಾಯತೀರ್ಪಿನ ದಿನ –ದಲ್ಲಿ ನೀತಿವಂತನಾದ ದೇವರು ಸೈತಾನನನ್ನೂ ಮತ್ತು ಅವನನ್ನು ಹಿಂಬಾಲಿಸುವವರೆಲ್ಲರನ್ನೂ ಆ ಬೆಂಕಿಯಲ್ಲಿ ಹಾಕುತ್ತಾನೆ ಎಂದು ವಾಕ್ಯವು ತಿಳಿಸುತ್ತದೆ.

ನಂತರದಲ್ಲಿ, ತಾನು ಸೃಷ್ಟಿಸುವದಕ್ಕೆ ಯೋಜನೆ ಹಾಕಿಕೊಂಡಿದ್ದ ಜನರಿಗಾಗಿ ಕರ್ತನು ಹೇಗೆ **ಲೋಕವನ್ನು** ಸೃಷ್ಟಿಸಿದನೆಂಬುದನ್ನು ನಾವು ಓದುತ್ತೇವೆ. ದೇವರು ಸೃಷ್ಟಿಸಿದ ಎಲ್ಲಾದರಲ್ಲಿ ಮನುಷ್ಯನು {ಒಬ್ಬ ಮಾನವ} ತುಂಬಾ ಪ್ರಾಮುಖ್ಯವುಳ್ಳವನಾಗಿದ್ದನು, ಯಾಕೆಂದರೆ ಮನುಷ್ಯನು ದೇವರ ಸ್ವರೂಪದಲ್ಲಿ ಉಂಟುಮಾಡಲ್ಪಟ್ಟಿದ್ದನು! ದೇವರು ಮನುಷ್ಯನೊಂದಿಗೆ ಆಳವಾದ ಮತ್ತು ಅದ್ಭುತ –ವಾದ ಸಂಬಂಧವನ್ನು ಹೊಂದುವದಕ್ಕೆ ಬಯಸಿದ್ದನು. ಅದಕ್ಕಾಗಿಯೇ ದೇವರನ್ನು ತಿಳಿದುಕೊಳ್ಳುವ ಸಾಮರ್ಥ್ಯವುಳ್ಳ ಒಂದು

ಮನಸ್ಸನ್ನು ಮನುಷ್ಯನ ಆತ್ಮದಲ್ಲಿ ಇರಿಸಿದನು, ದೇವರನ್ನು ಪ್ರೀತಿಸುವದಕ್ಕೆ ಸಾಮರ್ಥ್ಯವುಳ್ಳ ಒಂದು ಹೃದಯವನ್ನು ಅವನಿಗೆ ಕೊಟ್ಟನು, ಮತ್ತು ದೇವರಿಗೆ ವಿಧೇಯವಾಗುವದಕ್ಕೆ ಸಾಮರ್ಥ್ಯವುಳ್ಳ ಒಂದು ಚಿತ್ತವನ್ನು ಅವನಿಗೆ ನಂಬಿ ಒಪ್ಪಿಸಿಕೊಟ್ಟನು.

ಅನಂತರ, ದೇವರು ತಾನು ಸೃಷ್ಟಿಸಿದ ಪುರುಷ ಮತ್ತು ಸ್ತ್ರೀಯ ಮುಂದೆ ಒಂದು **ಪರೀಕ್ಷೆಯನ್ನು** ಇರಿಸಿದನು ಎಂಬುದನ್ನು ನಾವು ನೋಡಿದ್ದೇವೆ. ದೇವರು ಆದಾಮನನ್ನು ಎಚ್ಚರಿಸುತ್ತಾ ಹೇಳಿದ್ದೇನೆಂದರೆ, **"**ತೋಟದಲ್ಲಿರುವ ಯಾವುದೇ ಮರದ ಹಣ್ಣನ್ನು ನೀನು ತಿನ್ನಬಹುದು; ಆದರೆ ಒಳ್ಳೇದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು, ತಿಂದ ದಿನವೇ ನೀನು ಸಾಯುವಿ!" ಅಂದರೆ ನೀನು ಎಂದೆಂದಿಗೂ ನನ್ನಿಂದ ಬೇರ್ಪಡುತ್ತೀ!

ಹೇಗೂ, ನಮ್ಮ ಪೂರ್ವಿಕರಾದ ಆದಾಮ ಮತ್ತು ಹವ್ವರು ದೇವರು ನಿಷೇಧಿಸಿದ್ದ ಮರದ ಹಣ್ಣನ್ನು ತಿನ್ನುವದರಿಂದ ಸೈತಾನನಿಗೆ ವಿಧೇಯರಾಗುವದನ್ನು ಹೇಗೆ ಆರಿಸಿಕೊಂಡರೆಂಬುದನ್ನು ನಾವು ನೋಡಿದ್ದೇವೆ. ಇದರ ಪರಿಣಾಮವಾಗಿ, **"**ಒಬ್ಬ ಮನುಷ್ಯನಿಂದಲೇ **ಪಾಪವೂ** ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪಮಾಡಿದ್ದರಿಂದ **ಮರಣವು ಹೀಗೆ ಎಲ್ಲರಲ್ಲಿ ವ್ಯಾಪಿ –ಸಿತು."** (ರೋಮಾ–೫:೧೨) ಎಂದು ದೇವರ ವಾಕ್ಯವು ಹೇಳುತ್ತದೆ. **"**ಒಂದು ಸಾಂಕ್ರಾಮಿಕವು ಯಾರಿಂದ ಉತ್ಪತ್ತಿಯಾಗಿರುತ್ತದೋ ಅವರಿಗೆ ಪ್ರತಿಬಂಧಮಾಡಲ್ಪಡುವದಿಲ್ಲ!" {ಉಲೂಫ್ ಗಾದೆ} ಎನ್ನುವದು ಎಷ್ಟೊಂದು ನಿಜ. ಆದಾಮನ ಪಾಪದ ನಿಮಿತ್ತವಾಗಿ, ನಾವೆಲ್ಲರೂ ಪಾಪಿಗಳಾದೆವು. ಆದಾಮನ ಪಾಪದ ನಿಮಿತ್ತವಾಗಿ ನಾವೆಲ್ಲರೂ ದೇವರ ತೀರ್ಪನ್ನು ಎದುರಿಸುವದಕ್ಕೆ ಮತ್ತು ಸಾಯುವದಕ್ಕೆ ಅರ್ಹರಾದೆವು.

ಮುಂದೆ, ಆದಾಮ ಹವ್ವರ ಪಾಪದ ಕಾರಣದಿಂದ ದೇವರು ಅವರನ್ನು ಪರದೈಸಿನ ತೋಟದಿಂದ ಹೇಗೆ ಹೊರದೊಬ್ಬಿದನೆಂಬು – –ದನ್ನು ನಾವು ಕಲಿತುಕೊಂಡೆವು. ಹೇಗೂ, ಆತನು ಅವರನ್ನು ಹೊರದಬ್ಬುವದಕ್ಕಿಂತ ಮುಂಚೆ, ಪಾಪದ ದಂಡನೆಯಿಂದ ಮತ್ತು ಸೈತಾನನ ಶಕ್ತಿಯಿಂದ ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ **ಒಬ್ಬ ವಿಮೋಚಕನನ್ನು** ಲೋಕಕ್ಕೆ ಕಳಿಸುವದಕ್ಕೆ ತಾನು ಹೇಗೆ ಯೋಜನೆ ಮಾಡಿಕೊಂಡಿದ್ದೇನೆಂಬುದನ್ನು ದೇವರು ಪ್ರಕಟಿಸಿದನು. ದೇವರು ತನ್ನ ಅದ್ಭುತವಾದ ವಿನ್ಯಾಸದಲ್ಲಿ ಪಾಪಿಗಳನ್ನು ಬಿಡುಗಡೆ ಮಾಡುವದಕ್ಕೆ ಒಂದು ಯೋಜನೆಯನ್ನು ಹೊಂದಿದ್ದನು. ಆದಾಮನ ಪಾಪದಿಂದ ಮಲಿನಗೊಳ್ಳದಿರುವ ಒಬ್ಬ ಪೂರ್ಣ ಮನುಷ್ಯ –ನನ್ನು ಲೋಕದೊಳಕ್ಕೆ ಕಳಿಸುವದಕ್ಕೆ ಆತನು ಯೋಜನೆ ಮಾಡಿಕೊಂಡಿದ್ದನು. ಈ ನೀತಿವಂತ ಮನುಷ್ಯನು ಆದಾಮನ ಮಕ್ಕಳಿ – –ಗಾಗಿ ಪಾಪದ ಸಾಲವನ್ನು ಸಂದಾಯ ಮಾಡುವದಕ್ಕೆ ತನ್ನ ರಕ್ತವನ್ನು ಸುರಿಸಿದನು. ಹೀಗೆ, ದೇವರು ತನ್ನ ನೀತಿಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಜನರ ಪಾಪಗಳನ್ನು ಕ್ಷಮಿಸಿದನು. ನಿಜವಾಗಿಯೂ, ಬರಲಿರುವ ವಿಮೋಚಕನಿಗೆ ಸಂಬಂಧಪಟ್ಟಂತೆ ದೇವರು ಏನು ವಾಗ್ದಾನ ಮಾಡಿದ್ದನೋ ಅದು ಒಂದು ಆಶ್ಚರ್ಯಕರವಾದ ವಾಗ್ದಾನವಾಗಿತ್ತು!

ಮುಂದೆ, ಆದಾಮ ಹವ್ವರಿಗೆ ಚರ್ಮದ ಅಂಗಿಗಳನ್ನು ಮಾಡುವದಕ್ಕಾಗಿ ದೇವರು ಕೆಲವು ಪ್ರಾಣಿಗಳನ್ನು ಸಮರ್ಪಿಸುವದರಿಂದ ತನ್ನ ಅದ್ಭುತವಾದ ವಾಗ್ದಾನವನ್ನು ಹೇಗೆ ದೃಢಪಡಿಸಿದನೆಂಬುದನ್ನು ನಾವು ನೋಡಿದೆವು. ದೇವರು ಆದಾಮ ಹವ್ವರಿಗೆ, **"**ಪಾಪದ ಸಂಬಳ ಮರಣ**"** ಮತ್ತು **"**ರಕ್ತಧಾರೆಯಿಲ್ಲದೆ ಪಾಪಪರಿಹಾರವಿಲ್ಲ**"** ಎಂಬುದನ್ನು ಕಲಿಸಿದನು.

ಇದಾದ ನಂತರ, ಆದಾಮನ ಇಬ್ಬರು ಮಕ್ಕಳಾದ ಕಾಯಿನ ಮತ್ತು ಹೇಬೇಲ ಇವರುಗಳ ವಿಷಯವನ್ನು ಕಲಿತೆವು. ಪಾಪಿಗಳಿಗಾಗಿ ಸಾಯುವದಕ್ಕೆ ಲೋಕಕ್ಕೆ ಬರಬೇಕಾಗಿದ್ದ **ವಿಮೋಚಕನ** ಗುರುತಿಗಾಗಿ ಹೇಬೇಲನು ಕಳಂಕವಿಲ್ಲದ **ಒಂದು ಕುರಿಮರಿಯನ್ನು** ವಧಿಸಿ ದೇವರಿಗೆ ಹೇಗೆ ಸಮರ್ಪಿಸಿದನೆಂಬುದನ್ನು ನಾವು ನೋಡಿಕೊಂಡೆವು. ಕಾಯನನಾದರೋ ತಾನು ಬೆಳೆದಿದ್ದನ್ನು ದೇವರಿಗೆ ಸಮ – –ರ್ಪಿಸುತ್ತಾ ತನ್ನ ಸ್ವಂತ ಶ್ರಮಗಳ ಮೂಲಕವಾಗಿ ದೇವರ ಸಮೀಪಕ್ಕೆ ಬರಲು ಪ್ರಯತ್ನಿಸಿದನು. ಇದರ ಫಲವಾಗಿ ವಾಕ್ಯವು ಹೇಳು –ವದೇನೆಂದರೆ: **"**ಕರ್ತನು ಹೇಬೇಲನನ್ನು ಒಪ್ಪಿಕೊಂಡನು ಆದರೆ ಕಾಯಿನನನ್ನು ಒಪ್ಪಿಕೊಳ್ಳಲಿಲ್ಲ." ದೇವರು ಕಾಯಿನನ ಯಜ್ಞ – –ವನ್ನು ಯಾಕೆ ಒಪ್ಪಿಕೊಳ್ಳಲಿಲ್ಲ? ಯಾಕೆಂದರೆ ದೇವರ ಧರ್ಮಶಾಸ್ತ್ರವು **"ಒಳ್ಳೆಯ ಕೆಲಸಗಳು** ಪಾಪದ ಸಂಬಳ!**"** ಎಂಬುದಾಗಿ **ಹೇಳುವದಿಲ್ಲ**. ನಿಜವಾಗಿಯೂ ಇದು **"**ಪಾಪದ ಸಂಬಳ **ಮರಣ!"** ಮತ್ತು **"ರಕ್ತಧಾರೆಯಿಲ್ಲದೆ** ಪಾಪಪರಿಹಾರವಿಲ್ಲ**"** ಎಂದು ಹೇಳುತ್ತದೆ. ಪಶ್ಚಾತ್ತಾಪಪಟ್ಟು ತಾನು ಮೊದಲೇ ಗೊತ್ತುಮಾಡಿರುವ ನೀತಿಯ ಮಾರ್ಗವನ್ನು ಒಪ್ಪಿಕೊಳ್ಳುವಂತೆ ದೇವರು ಕಾಯಿನ –ನನ್ನು ಬೇಡಿಕೊಂಡನು, ಆದರೆ ಕಾಯಿನನು ಅತ್ಯುಗ್ರನಾಗಿ ತನ್ನ ತಮ್ಮನಾದ ಹೇಬೇಲನನ್ನು ಕೊಂದುಹಾಕಿದನು.

ಆದಾಮನ ಹೆಚ್ಚಿನ ಸಂತಾನಗಳು ಕಾಯಿನನ ಹೆಜ್ಜೆಜಾಡನ್ನೇ ಅನುಸರಿಸಿದವು, ಹಾಗಾಗಿ ನೋಹನ ಕಾಲದಲ್ಲಿ ದೇವರು **"**ಭೂಲೋಕದಲ್ಲಿ ಮನುಷ್ಯನ ಕೆಟ್ಟತನವು ಎಷ್ಟೊಂದು ಕೆಟ್ಟದಾಗಿದೆ ಮತ್ತು ಅವನು ಹೃದಯದಲ್ಲಿ ಯೋಚಿಸುವದೆಲ್ಲವೂ **ಯಾವಾಗಲೂ ಕೆಟ್ಟದ್ದೇ** ಎನ್ನುವದನ್ನು ನೋಡಿದನು.**"** ಮನುಷ್ಯನ ಕೆಟ್ಟ ಹೃದಯದ ಕಾರಣದಿಂದ, ದಂಗೆಯೆದ್ದ ಪಾಪಿಗಳನ್ನು ಅಳಿಸಿ ಹಾಕುವದಕ್ಕೆ ದೇವರು ಒಂದು ಜಲಪ್ರಳಯವನ್ನು ಕಳಿಸಿದನು. ಆ ಭ್ರಷ್ಟ ಸಮಯದಲ್ಲಿ ನೋಹನು ಮಾತ್ರ ದೇವರನ್ನು ನಂಬಿದವನಾಗಿದ್ದನು, ಅದಕ್ಕಾಗಿಯೇ ದೇವರು ಅವನಿಗೆ ಒಂದು ದೊಡ್ಡ ನಾವೆಯನ್ನು ಕಟ್ಟುವಂತೆ ಹೇಳಿದನು. ಆ ನಾವೆಯನ್ನು ಪ್ರವೇಶಿಸಿದವರೆಲ್ಲರಿಗೆ ಅದು ಒಂದು ಆಶ್ರಯಸ್ಥಾನವಾಗಿತ್ತು. ನೋಹನು ನಾವೆಯನ್ನು ಕಟ್ಟುವ ಸಮಯದಲ್ಲಿ ದೇವರು ದೀರ್ಘ ಕಾಲದವರೆಗೆ ಪಾಪಿಗಳನ್ನು ಸಹಿಸಿಕೊಂಡನು. ಹೇಗೂ ನೋಹ ಮತ್ತು ಅವನ ಕುಟುಂಬದವರ

ಹೊರತಾಗಿ ಯಾರೊಬ್ಬರೂ ಪಶ್ಚಾತ್ತಾಪಪಟ್ಟು ನಾವೆಯೊಳಗೆ ಪ್ರವೇಶಿಸಲಿಲ್ಲ.

ನೋಹನಿಗೆ ಶೇಮ್ ಹಾಮ್ ಮತ್ತು ಯೆಫೆತ್ ಎಂಬ ಮೂರು ಮಂದಿ ಗಂಡು ಮಕ್ಕಳಿದ್ದರು. ಪ್ರವಾದಿಯಾದ ಅಬ್ರಹಾಮನು ಶೇಮನ ಸಂತಾನದವನಾಗಿದ್ದನು. ಅಬ್ರಹಾಮನು ತನ್ನ ತಂದೆಯ ಮನೆಯನ್ನು ಬಿಟ್ಟು ಕಾನಾನ್ ದೇಶಕ್ಕೆ (ಪ್ಯಾಲೆಸ್ತೀನ್) ಹೋಗು –ವಂತೆ ದೇವರು ಅವನಿಗೆ ಹೇಗೆ ಅಪ್ಪಣೆ ಕೊಟ್ಟನೆಂಬುದನ್ನು ನಾವು ಓದಿಕೊಂಡಿದ್ದೇವೆ. ಅಬ್ರಹಾಮನನ್ನು, ದೇವರ ಪ್ರವಾದಿ – –ಗಳೂ ಮತ್ತು **ಲೋಕದ ರಕ್ಷಕನೂ** ಬರಬೇಕಾಗಿದ್ದ **ಒಂದು ಹೊಸ ಜನಾಂಗವನ್ನಾಗಿ** ಮಾಡುವದಕ್ಕೆ ದೇವರು ಯೋಜನೆ ಮಾಡಿ – –ಕೊಂಡಿದ್ದನು. ಅದಕ್ಕಾಗಿಯೇ ದೇವರು ಅಬ್ರಹಾಮನಿಗೆ, "ನೀನು ಆಶೀರ್ವಾಧನಿಧಿಯಾಗುವಿ. . . . .ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು" ಎಂದು ಹೇಳಿದನು (ಆದಿ–೧೨:೨,೩).

ಹೀಗೆ ದೇವರು ವಾಗ್ದಾನ ಮಾಡಿದ ಹಾಗೆಯೇ ಅಬ್ರಹಾಮನು ತನ್ನ ವಯಸ್ಸಾದ ಕಾಲದಲ್ಲಿ ಇಸಾಕನಿಗೆ ತಂದೆಯಾದನು. ನಂತರ ಇಸಾಕನು ಯಾಕೋಬನಿಗೆ ತಂದೆಯಾದನು ಮತ್ತು ದೇವರು ಇಸ್ರಾಯೇಲನೆಂದು ಹೆಸರು ಬದಲಾಯಿಸಿದ ಯಾಕೋಬನು ಹನ್ನೆ – –ರಡು ಗಂಡು ಮಕ್ಕಳಿಗೆ ತಂದೆಯಾದನು, ಯಾಕೋಬನ ಹನ್ನೆರಡು ಗಂಡುಮಕ್ಕಳಿಂದ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿದಂತ ಹೊಸ ಜನಾಂಗವು ಉತ್ಪತ್ತಿಯಾಯಿತು, ಅದೇ ಇಸ್ರಾಯೇಲ್ ಜನಾಂಗ.

ಕಳೆದ ಮೂರು ಕಾರ್ಯಕ್ರಮಗಳಲ್ಲಿ ಯಾಕೋಬನ ಮಕ್ಕಳ ಮನಮೋಹಕವಾದ ಕಥೆಯನ್ನು ನೋಡಿಕೊಂಡೆವು, ಅದರಲ್ಲೂ ವಿಶೇಷವಾಗಿ ಹನ್ನೊಂದನೆಯ ಮಗನಾದ ಯೋಸೇಫನ ಕಥೆಯನ್ನು ನೋಡಿಕೊಂಡೆವು. ಯೋಸೇಫನ ಅಣ್ಣಂದಿರು ಅವನನ್ನು ದ್ವೇಷಿಸುತ್ತಿದ್ದರು, ಆದರೆ ದೇವರು ಅವನನ್ನು ಆಶೀರ್ವದಿಸಿ ಐಗುಪ್ತ ದೇಶದ ಮೇಲೆಲ್ಲಾ ಅಧಿಕಾರಿಯನ್ನಾಗಿ ಮಾಡಿದನು. ಅದಾದ ನಂತರ, ಐಗುಪ್ತದಲ್ಲಿ ಮತ್ತು ಇಡೀ ಕಾನಾನ್ ದೇಶದಲ್ಲೆಲ್ಲಾ ಬರವು ಬಂದಿತು. ಇದು ದೊಡ್ಡ ವಿಪತ್ತಿಗೆ ಕಾರಣವಾಯಿತು. ಇದರ ಫಲವಾಗಿ, ಯಾಕೋಬನಿಗೂ ಅವನ ಮಕ್ಕಳಿಗೂ ತಿನ್ನುವದಕ್ಕೆ ಏನೂ ಇಲ್ಲದಾಯಿತು. ಐಗುಪ್ತದಲ್ಲಿ ಧವಸಧಾನ್ಯಗಳು ಸಿಗುತ್ತವೆ ಎಂಬುದನ್ನು ಕೇಳಿದ ಯಾಕೋಬನು ತನ್ನ ಮಕ್ಕಳನ್ನು ಅಲ್ಲಿಗೆ ಕಳಿಸಿದನು. ನಂತರ ಯೋಸೇಫನು ಹೇಗೆ ತನ್ನ ಅಣ್ಣಂದಿರಿಗೆ ತನ್ನನ್ನು ತೋರ್ಪಡಿಸಿಕೊಂಡು ಅವರನ್ನು ಕ್ಷಮಿಸಿದನೆಂಬುದನ್ನು ಮತ್ತು ಅವನ ತಂದೆ ಮತ್ತು ಕುಟುಂಬದವರೆಲ್ಲರನ್ನೂ ಕರೆದು ಐಗುಪ್ತದಲ್ಲಿ ನೆಲೆಸುವಂತೆ ಮಾಡಿದನೆಂಬುದನ್ನು ನಾವು ನೋಡಿದ್ದೇವೆ. ಹೀಗೆ **ಆದಿಕಾಂಡ ಪುಸ್ತಕದ ಕೊನೆಯಲ್ಲಿ ಇಸ್ರಾಯೇಲನ ಮಕ್ಕಳು** ಅಬ್ರಹಾಮನಿಗೆ ವಾಗ್ದಾನ ಮಾಡಿದ ಕಾನಾನ್ ದೇಶದಲ್ಲಿ ದೀರ್ಘಕಾಲ ಇರಲಿಲ್ಲ ಆದರೆ ಐಗುಪ್ತದಲ್ಲಿ ಇದ್ದರು. ಹೇಗೂ ಬಹಳ ಸಮಯದ ಹಿಂದೆಯೇ ದೇವರು ಅಬ್ರಹಾಮನಿಗೆ ಹೇಳಿದ್ದು ನೆರವೇರುವ ಹಾಗೆ ಇದೆಲ್ಲವೂ ಸಂಭವಿಸಿತು. ಆತನು ಹೇಳಿದ್ದೇನೆಂದರೆ:

"ನೀನು ಚೆನ್ನಾಗಿ ತಿಳಿಯತಕ್ಕದ್ದೇನೆಂದರೆ – ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗ – –ವನ್ನು ನಾನು ಸಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು." (ಆದಿ–೧೫:೧೩,೧೪).

ಇಸ್ರಾಯೇಲ್ ಜನಾಂಗದವರಿಗೆ ಸಂಭವಿಸಿದ್ದ ಎಲ್ಲವುಗಳಲ್ಲಿ ದೇವರು ತನ್ನ ಹಸ್ತವನ್ನಿಟ್ಟಿದ್ದನು. ದೇವರು ಅಬ್ರಹಾಮನ ಮೊಮ್ಮಕ್ಕಳು ಮತ್ತು ಮರಿಮಕ್ಕಳಿಗೆ ಹಾಗೂ ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ವಾಗ್ದಾನಮಾಡಿದ್ದಾಗ್ಯೂ ಅವರು ಐಗುಪ್ತದಲ್ಲಿ ನೆಲೆಸುವಂತೆ ಯಾಕೆ ಮಾಡಿದನು? ಯಾಕೆಂದರೆ ಐಗುಪ್ತದ ದೇಶದಲ್ಲಿ ಇಸ್ರಾಯೇಲ್ಯರಿಗೆ ಏನು ಸಂಭವಿಸುದಕ್ಕಿದೆ ಎಂಬುದನ್ನು ತನ್ನ ಮಹಿಮೆ ಮತ್ತು ಶಕ್ತಿಯ ಮೂಲಕವಾಗಿ ತೋರಿಸುವದಕ್ಕೆ ದೇವರು ಉದ್ದೇಶಿಸಿದ್ದನು. ತನ್ನ ಭಯಾನಕ ಶ್ತಕಿಯಿಂದ ಇಸ್ರಾಯೇಲ್ಯರನ್ನು ಬಿಡು –ಗಡೆ ಮಾಡುವದಕ್ಕೆ ದೇವರು ಯೋಜನೆ ಮಾಡಿಕೊಂಡಿದ್ದನು, ಇದರಿಂದ ಆತನು ಸರ್ವಶಕ್ತನಾಗಿರುವ ರಾಜಾಧಿ ರಾಜನೂ ಕರ್ತರ ಕರ್ತನೂ ಆಗಿದ್ದಾನೆಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲು ಸಮರ್ಥರಾದರು!

ಈಗ, ಇದನ್ನು ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಈ ದಿನ ಇನ್ನು ಕೆಲವು ನಿಮಿಷಗಳಲ್ಲಿ ನಾವು ಹೊರಡುತ್ತೇವೆ. ವಿಮೋಚನ ಕಾಂಡ ಪುಸ್ತಕದ ಮೊದಲನೆಯ ಅಧ್ಯಾಯದಿಂದ ನಾವು ಓದಿಕೊಳ್ಳೋಣ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಬಳಿಕ ಯೋಸೇಫನೂ ಅವನ ಅಣ್ಣತಮ್ಮಂದಿರೂ ಮತ್ತು ಆ ಕಾಲದಲ್ಲಿದ್ದವರೆಲ್ಲರೂ ಗತಿಸಿ ಹೋದರು. ಆದರೆ ಇಸ್ರಾಯೇಲ್ಯರು ಅಭಿವೃದ್ಧಿಯಾಗಿ ಅತ್ಯಧಿಕವಾಗಿ ಹೆಚ್ಚಿ ಬಹಳ ಬಲಗೊಂಡರು; ಆ ದೇಶದಲ್ಲೆಲ್ಲಾ ತುಂಬಿಕೊಂಡರು. ತರುವಾಯ ಯೋಸೇಫನನ್ನು ಅರಿಯದ ಬೇರೊಬ್ಬ ಅರಸನು ಐಗುಪ್ತದೇಶದ ಆಳಿಕೆಗೆ ಬಂದನು. ಅವನು ತನ್ನ ಜನರಿಗೆ – ಇಸ್ರಾಯೇಲ್ಯರು ನಮ್ಮ ಅಧೀನ – –ದಲ್ಲಿರದಷ್ಟು ಬಹಳವಾಗಿಯೂ ಬಲವಾಗಿಯೂ ಇದ್ದಾರೆ ನೋಡಿರಿ. ನಮಗೆ ಯುದ್ಧವೇನಾದರೂ ಸಂಭವಿಸಿದರೆ ಅವರು ನಮ್ಮ ಶತ್ರುಗಳೊಂದಿಗೆ ಕೂಡಿಕೊಂಡು ನಮಗೆ ವಿರೋಧವಾಗಿ ಕಾದಾಡಿ ದೇಶವನ್ನು ಬಿಟ್ಟು ಹೋದಾರು. ಅವರು ವೃದ್ಧಿಯಾಗದಂತೆ ನಾವು ಉಪಾಯ ಮಾಡೋಣ ಎಂದು ಹೇಳಿದನು." (ವಿಮೋ–೧:೬–೧೦)

“ಆದಕಾರಣ ಅವನ ಜನರು ಇಸ್ರಾಯೇಲ್ಯರನ್ನು ಬಿಟ್ಟೀ ಕೆಲಸದಿಂದ ಉಪದ್ರವಪಡಿಸುವದಕ್ಕಾಗಿ ಬಿಟ್ಟೀ ಮಾಡಿಸುವ ಅಧಿಕಾರಿಗಳನ್ನು ಅವರ ಮೇಲೆ ಇಟ್ಟು ಫರೋಹನಿಗೆ ಪಿತೋಮ್ ರಾಮ್ಸೇಸ್ ಎಂಬ ಉಗ್ರಾಣ ಪಟ್ಟಣಗಳನ್ನು ಕಟ್ಟಿಸಿದರು. ಐಗುಪ್ತರು ಅವರನ್ನು ಎಷ್ಟು ಉಪದ್ರವಪಡಿಸಿದರೂ ಅವರು ಅತ್ಯಧಿಕವಾಗಿ ಹೆಚ್ಚಿ ಹರಡಿಕೊಂಡದ್ದರಿಂದ ಐಗುಪ್ತರು ಇಸ್ರಾಯೇಲ್ಯರ ವಿಷಯದಲ್ಲಿ ಸಹಿಸ – –ಲಾರದಷ್ಟು ಹೆದರಿಕೆಯುಳ್ಳವರಾದರು. ಐಗುಪ್ತರು ಇಸ್ರಾಯೇಲ್ಯರ ಕೈಯಿಂದ ಕ್ರೂರವಾಗಿ ಸೇವೆಮಾಡಿಸಿಕೊಂಡು ಮಣ್ಣಿನ ಕೆಲಸ –ದಲ್ಲಿಯೂ ಇಟ್ಟಿಗೆಮಾಡುವ ಕೆಲಸದಲ್ಲಿಯೂ ವ್ಯವಸಾಯದ ಎಲ್ಲಾ ವಿಧವಾದ ಕೆಲಸಗಳಲ್ಲಯೂ ಕಠಿಣವಾಗಿ ದುಡಿಸಿಕೊಂಡು ಅವರ ಜೀವಗಳನ್ನು ಬೇಸರಪಡಿಸಿದರು. ಅವರು ಅವರಿಂದ ಮಾಡಿಸಿದ ಎಲ್ಲಾ ಸೇವೆಯೂ ಬಹುಕಠೋರವಾಗಿತ್ತು.” ೧:೧೧–೧೪).

“ಇದಲ್ಲದೆ ಐಗುಪ್ತ ದೇಶದ ಅರಸನು ಶಿಪ್ರಾ ಪೂಗಾ ಎಂಬ ಇಬ್ಬರು ಸೂಲಗಿತ್ತಿಯರ ಸಂಗಡ ಮಾತಾಡಿ ಅವರಿಗೆ – ನೀವು ಇಬ್ರಿಯ ಹೆಂಗಸರಿಗೆ ಹೆರಿಗೆ ಮಾಡಿಸುವಾಗ ಅವರು ಹೆರುವದು ಗಂಡುಮಗುವಾಗಿದ್ದರೆ ಕೊಲ್ಲಬೇಕು. ಹೆಣ್ಣಾಗಿದ್ದರೆ ಉಳಿಸಬೇಕು ಎಂದು ಹೇಳಿದನು. ಆದರೆ ಸೂಲಗಿತ್ತಿಯರು ದೇವರಿಗೆ ಭಯಪಡುವವರಾದದರಿಂದ ಐಗುಪ್ತ್ಯರ ಅರಸನ ಮಾತಿನಂತೆ ಮಾಡದೆ ಗಂಡುಮಕ್ಕಳನ್ನೂ ಉಳಿಸಿದರು. ಆಗ ಐಗುಪ್ತರ ಅರಸನು ಅವರನ್ನು ಕರಸಿ – ನೀವು ಅವರ ಗಂಡುಮಕ್ಕಳನ್ನು ಉಳಿಸಿದ್ದೇನು? ಹೀಗೆ ಯಾಕೆ ಮಾಡಿದಿರಿ ಎಂದು ಕೇಳಲು ಸೂಲಗಿತ್ತಿಯರು ಫರೋಹನಿಗೆ – ಇಬ್ರಿಯರ ಸ್ತ್ರೀಯರು ಐಗುಪ್ತ ಸ್ತ್ರೀಯರಂತಲ್ಲ; ಅವರು ಚುರುಕಾಗಿದ್ದಾರೆ; ಅವರು ಸೂಲಗಿತ್ತಿಯು ತಮ್ಮ ಹತ್ತಿರ ಬರುವದಕ್ಕೆ ಮುಂಚೆಯೇ ಹೆರುವರು ಎಂದು ಹೇಳದರು.” (೧:೧೫–೧೯)

“ದೇವರು ಆ ಸೂಲಗಿತ್ತಿಯರಿಗೆ ಹಿತವನ್ನು ಮಾಡಿದನು. ಅವರು ದೇವರಿಗೆ ಭಯಪಟ್ಟದ್ದರಿಂದ ಆತನು ಅವರಿಗೆ ವಂಶಾಭಿವೃದ್ಧಿ –ಯನ್ನುಂಟು ಮಾಡಿದನು. ಇದಲ್ಲದೆ ಇಸ್ರಾಯೇಲ್ಯರು ಹೆಚ್ಚಿ ಬಲಗೊಂಡರು. ತರುವಾಯ ಫರೋಹನು ತನ್ನ ಜನರಿಗೆಲ್ಲಾ – ಇಬ್ರಿಯರ ಗಂಡುಕೂಸುಗಳನ್ನೆಲ್ಲಾ ನೈಲ್ ನದಿಯಲ್ಲಿ ಹಾಕಬೇಕು; ಹೆಣ್ಣು ಕೂಸುಗಳನ್ನೆಲ್ಲಾ ಉಳಿಸಬೇಕು ಎಂದು ಆಜ್ಞೆ ಮಾಡಿದನು.” (೧:೨೦–೨೨).

ಇಲ್ಲಿಗೆ ವಿಮೋಚನಕಾಂಡ ಪುಸ್ತಕದ ಮೊದಲನೆಯ ಅಧ್ಯಾಯವು ಮುಗಿಯುತ್ತದೆ. ದೇವರ ಚಿತ್ತದಂತೆ ಮುಂದಿನ ಬಾನುಲಿ ಪ್ರಸಾರದಲ್ಲಿ ಒಂದು ಅಸಾಧಾರಣವಾದ ಕಥೆಯೊಳಗೆ ಹೋಗಿ ಐಗುಪ್ತದ ಕೆಟ್ಟ ಅರಸನಾದ ಫರೋಹನ ಕೈಯಿಂದ ಇಸ್ರಾಯೇಲ್ಯ – –ರನ್ನು ಬಿಡುಗಡೆಗೊಳಿಸುವದಕ್ಕೆ ದೇವರು ಒಬ್ಬ ಮನುಷ್ಯನನ್ನು ಕರೆದು ಅವನನ್ನು ಹೇಗೆ ಸಿದ್ಧಪಡಿಸಿದನೆಂಬುದನ್ನು ನೋಡುತ್ತೇವೆ. ಈ ಮನುಷ್ಯನ ಹೆಸರು ನಿಮಗೆ ಗೊತ್ತಾ? ಹೌದು ಇವನೇ ಮೋಶೆ – ದೇವರ ಪ್ರವಾದಿಯಾದ ಮೋಶೆ.

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . .ದೇವರು ನಿಮ್ಮನ್ನು ಆಶೀರ್ವದಿಸಲಿ. ಈ ವಾಕ್ಯವನ್ನು ನೆನಪಿನಲ್ಲಿಟ್ಟುಕೊಳ್ಳಿರಿ:

“ಪೂರ್ವದಲ್ಲಿ ಬರೆದದ್ದೆಲ್ಲಾ ನಮ್ಮನ್ನು ಉಪದೇಶಿಸುವದಕ್ಕಾಗಿ ಬರೆಯಲ್ಪಟ್ಟಿತು. ನಾವು ಓದಿ ಸ್ಥಿರಚಿತ್ತವನ್ನೂ ಆದರಣೆಯನ್ನೂ ಹೊಂದಿ ರಕ್ಷಣೆಯ ನಿರೀಕ್ಷೆಯುಳ್ಳವರಾಗಿರುವಂತೆ ಆ ಗ್ರಂಥಗಳು ಬರೆಯಲ್ಪಟ್ಟವು.” (ರೋಮಾ–೧೫:೪)

[ಪಾಠ ೨೮: ತೋರಾದ ಮೊದಲನೆಯ ಪುಸ್ತಕದ ಪುನರಾವಲೋಕನ] [ಸಾರಾಂಶಗಳ ಪಟ್ಟಿ] [ಪಾಠ ೩೦: ಮೋಶೆಯು ದೇವರನ್ನು ಸಂಧಿಸಿದ್ದು]

ಪಾಠ ೨೯

# ಪ್ರವಾದಿಯಾದ ಮೋಶೆ

ವಿಮೋಚನಕಾಂಡ ೧, ೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ನೀವು ತಿಳಿದುಕೊಂಡಿರುವಂತೆ ದೇವರ ಪ್ರವಾದಿಯಾದ ಮೋಶೆಯು ಬರೆದಿರುವಂತ ಐದು ಪುಸ್ತಕಗಳು ತೋರಾದಲ್ಲಿವೆ. ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ಆದಿಕಾಂಡ ಪುಸ್ತಕವನ್ನು ನಾವು ಮುಗಿಸಿದ್ದೇವೆ ಮತ್ತು ವಿಮೋಚನಕಾಂಡ ಎಂದು ಕರೆಯಲ್ಪಡುವ ಎರಡನೆಯ ಪುಸ್ತಕದೊಳಗೆ ಹಾದು ಹೋಗುತ್ತಿದ್ದೇವೆ. ಬೆಲೆಯುಳ್ಳ ಸೂಚನೆಗಳಿಂದ ತುಂಬಿಹೋಗಿರುವ ಈ ಅಗಾಧವಾದ ಪುಸ್ತಕವನ್ನು ನಾವು ಓದುವದರಲ್ಲಿ ದೇವರು ನಮ್ಮ ಹೃದಯಗಳನ್ನು ಮತ್ತು ಮನಸ್ಸುಗಳನ್ನು ಪ್ರಕಾಶಗೊಳಿಸಲಿ ಎಂಬುದು ನಮ್ಮ ಪ್ರಾರ್ಥನೆಯಾಗಿದೆ.

ತೋರಾದ ಮೊದಲನೆಯ ಪುಸ್ತಕವು ಮುಗಿಯುವಲ್ಲಿಯೇ ಹೇಗೆ ಎರಡನೆಯ ಪುಸ್ತಕವು ಪ್ರಾರಂಭವಾಗುತ್ತದೆ ಎಂಬುದನ್ನು ನಾವು ಈಗಾಗಲೇ ನೋಡಿಕೊಂಡಿದ್ದೇವೆ. ಹೀಗೆ ಅಬ್ರಹಾಮ ಇಸಾಕ ಮತ್ತು ಯಾಕೋಬರ ಸಂತಾನದವರಿಗೆ ಅಂದರೆ ಇಸ್ರಾಯೇಲ್ಯರಿಗೆ ಕೊಡುತ್ತೇನೆಂದು ವಾಗ್ದಾನ ಮಾಡಿದ್ದ ಕಾನಾನ್ ದೇಶದಿಂದ ದೂರದಲ್ಲಿದ್ದ **ಐಗುಪ್ತದಲ್ಲಿ ಅವರು ಹೇಗೆ ನೆಲೆಸಿದರು** ಎನ್ನುವದನ್ನು ನಾವು ನೋಡಿದ್ದೇವೆ.

ವಿಮೋಚನಕಾಂಡದ ಮೊದಲನೆಯ ಅಧ್ಯಾಯದಲ್ಲಿ ನಾವು ಓದುವದೇನೆಂದರೆ:

**"**ಐಗುಪ್ತದೇಶಕ್ಕೆ ಬಂದ **ಇಸ್ರಾಯೇಲನ ಮಕ್ಕಳ** ಹೆಸರುಗಳು – ರೂಬೇನ್, ಸಿಮೆಯೋನ್, ಲೇವಿ, ಯೆಹೂದ, ಇಸ್ಸಾಕಾರ್, ಜೆಬುಲೂನ್, ಬೆನ್ಯಾಮೀನ್, ದಾನ್, ಸಫ್ತಾಲಿ, ಗಾದ್, ಆಶೇರ್ ಎಂಬಿವುಗಳೇ. ಇವರೆಲ್ಲರೂ ತಮ್ಮ ತಮ್ಮ ಮನೆಯವರ ಕೂಡ ಯಾಕೋಬನ ಜೊತೆಯಲ್ಲಿ ಬಂದರು. ಯಾಕೋಬನಿಂದ ಹುಟ್ಟಿದವರೆಲ್ಲರು ಎಪ್ಪತ್ತು ಮಂದಿ. ಯೊಸೇಫನು ಮೊದಲೇ ಐಗುಪ್ತ ದೇಶದಲ್ಲಿದ್ದನು. ಬಳಿಕ ಯೋಸೇಫನೂ ಅವನ ಅಣ್ಣತಮ್ಮಂದಿರೂ ಆ ಕಾಲದಲ್ಲಿದ್ದವರೆಲ್ಲರೂ ಗತಿಸಿಹೋದರು. ಆದರೆ ಇಸ್ರಾಯೇಲ್ಯರು ಅಭಿವೃದ್ಧಿಯಾಗಿ **ಅತ್ಯಧಿಕವಾಗಿ ಹೆಚ್ಚಿ** ಬಹಳ ಬಲಗೊಂಡರು; ಆ ದೇಶದಲ್ಲೆಲ್ಲಾ ತುಂಬಿಕೊಂಡರು.**"** (೧:೧–೭).

**"**ತರುವಾಯ ಯೋಸೇಫನನ್ನು ಅರಿಯದ ಬೇರೊಬ್ಬ **ಹೊಸ ಅರಸನು** ಐಗುಪ್ತದೇಶದ ಆಳಿಕೆಗೆ ಬಂದನು. ಅವನು ತನ್ನ ಜನರಿಗೆ – ಇಸ್ರಾಯೇಲ್ಯರು ನಮ್ಮ ಅಧೀನದಲ್ಲಿರದಷ್ಟು ಬಹಳವಾಗಿಯೂ ಬಲವಾಗಿಯೂ ಇದ್ದಾರೆ ನೋಡಿರಿ. ನಮಗೆ ಯುದ್ಧವೇನಾದರೂ ಸಂಭವಿಸಿದರೆ ಅವರು ನಮ್ಮ ಶತ್ರುಗಳೊಂದಿಗೆ ಕೂಡಿಕೊಂಡು ನಮಗೆ ವಿರೋಧವಾಗಿ ಕಾದಾಡಿ ದೇಶವನ್ನು ಬಿಟ್ಟುಹೋದಾರು. ಅವರು ವೃದ್ಧಿಯಾಗದಂತೆ ನಾವು ಉಪಾಯ ಮಾಡೋಣ ಎಂದು ಹೇಳಿದನು. ಆದಕಾರಣ ಅವನ ಜನರು ಇಸ್ರಾಯೇಲ್ಯರನ್ನು **ಬಿಟ್ಟೀಕೆಲಸದಿಂದ** ಉಪದ್ರವಪಡಿಸುವದಕ್ಕಾಗಿ ಬಿಟ್ಟೀಮಾಡಿಸುವ ಅಧಿಕಾರಿಗಳನ್ನು ಅವರ ಮೇಲೆ ಇಟ್ಟು ಫರೋಹನಿಗೆ ಪಿತೋಮ್ ರಾಮ್ಸೇಸ್ ಎಂಬ ಉಗ್ರಾಣ ಪಟ್ಟಣಗಳನ್ನು ಕಟ್ಟಿಸಿದರು. ಐಗುಪ್ತರು ಅವರನ್ನು ಎಷ್ಟು ಉಪದ್ರವಪಡಿಸಿದರೂ ಅವರು ಅತ್ಯಧಿಕವಾಗಿ ಹೆಚ್ಚಿ ಹರಡಿಕೊಂಡದ್ದರಿಂದ ಐಗುಪ್ತ್ಯರು ಇಸ್ರಾಯೇಲ್ಯರ ವಿಷಯದಲ್ಲಿ ಸಹಿಸಲಾರದಷ್ಟು ಹೆದರಿಕೆಯುಳ್ಳವರಾದರು. ಐಗುಪ್ತ್ಯರು ಇಸ್ರಾಯೇಲ್ಯರ ಕೈಯಿಂದ ಕ್ರೂರವಾಗಿ ಸೇವೆಮಾಡಿಸಿಕೊಂಡು ಮಣ್ಣಿನ ಕೆಲಸದಲ್ಲಿಯೂ ಇಟ್ಟಿಗೆಮಾಡುವ ಕೆಲಸದಲ್ಲಿಯೂ ವ್ಯವ – –ಸಾಯದ ಎಲ್ಲಾ ವಿಧವಾದ ಕೆಲಸಗಳಲ್ಲಿಯೂ ಕಠಿಣವಾಗಿ ದುಡಿಸಿಕೊಂಡು ಅವರ ಜೀವಗಳನ್ನು ಬೇಸರಪಡಿಸಿದರು. ಅವರು ಅವರಿಂದ ಮಾಡಿಸಿದ ಎಲ್ಲಾ ಸೇವೆಯೂ ಬಹು ಕಠೋರವಾಗಿತ್ತು.**"** (೧:೮–೧೪).

ಇಲ್ಲಿಗೆ ನಿಲ್ಲಿಸೋಣ. ಯೋಸೇಫನು ಮರಣ ಹೊಂದಿ **ಮುನ್ನೂರಕ್ಕಿಂತಲೂ ಹೆಚ್ಚು ವರ್ಷಗಳು** ಗತಿಸಿಹೋಗಿದ್ದವು. ಐಗುಪ್ತ್ಯರಿಗೆ ಯೋಸೇಫನು ಮಾಡಿದ್ದ ಎಲ್ಲವನ್ನೂ ಮರೆತುಬಿಟ್ಟಿದ್ದ ಇನ್ನೊಬ್ಬ ಫರೋಹನು ಐಗುಪ್ತದ ಆಳಿಕೆಗೆ ಬಂದನು. ಈ ಫರೋಹನು ಇಸ್ರಾಯೇಲ್ಯರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಅವರನ್ನು ಭಯಂಕರವಾಗಿ ಹಿಂಸಿಸಿದನು. ಅವರು ಎಷ್ಟೊಂದು

ಕಠಿಣವಾಗಿ ಕೆಲಸಮಾಡುವಂತೆ ಅವನು ಮಾಡಿದನು! ತಾವು ಒಂದು ಶಕ್ತಿಯುತವಾದ ಜನಾಂಗದವರಾಗುತ್ತೇವೆ ಎಂದು ತಮ್ಮ ಕುರಿತಾಗಿ ತಮ್ಮ ಪೂರ್ವಿಕನಾದ ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ದೇವರು ಅದನ್ನು ಮರೆತುಬಿಟ್ಟಿದ್ದಾನೆಂದು ಬಹುಶ: ಇಸ್ರಾಯೇಲ್ಯರು ಆಲೋಚಿಸಿದ್ದರು. ಹೇಗೂ, ದೇವರು ಸಂಗತಿಯನ್ನು ಮರೆಯುವವನಲ್ಲ! ನಿಜ ಹೇಳಬೇಕೆಂದರೆ, ಬಹಳ ಹಿಂದೆ ದೇವರು ಏನು ವಾಗ್ದಾನ ಮಾಡಿದ್ದನೋ ಅದನ್ನು ನೆರವೇರಿಸುವ ಪ್ರಕ್ರಿಯೆಯಲ್ಲಿದ್ದನು.

ನಿಜವಾಗಿಯೂ, **ದೇವರು ನಂಬಿಗಸ್ತನು!** ಆತನು ತನ್ನ ಒಡಂಬಡಿಕೆಗಳನ್ನು ಕಾಪಾಡಿಕೊಳ್ಳುತ್ತಾನೆ! ಆತನು ತಡಮಾಡುತ್ತಾನೆಂದು ಮನುಷ್ಯನು ಅಂದುಕೊಂಡರೂ ಸಹ ಆತನು ಮಾಡುತ್ತೇನೆಂದು ವಾಗ್ದಾನ ಮಾಡಿದ್ದನ್ನು ಆತನು ನೆರವೇರಿಸುತ್ತಾನೆ! **ಪ್ರವಾದಿಗಳೂ ಮತ್ತು ವಿಮೋಚಕನೂ ಬರಬೇಕಾಗಿದ್ದ ಒಂದು ಹೊಸ ಜನಾಂಗವನ್ನು ಸೃಷ್ಟಿಸುವದಕ್ಕೆ ಯೋಜನೆಯನ್ನು ದೇವರು ಮನಸ್ಸಿನಲ್ಲಿ ಕಲ್ಪಿಸಿ –**
**–ಕೊಂಡವನಾಗಿದ್ದನು – ಆತನ ಯೋಜನೆಯ ನೆರವೇರುವಿಕೆಯನ್ನು ಯಾವುದೂ ತಡೆಹಿಡಿಯಲಾಗಲಿಲ್ಲ!**

ದೇವರು ಹೊಸದಾದ ಜನಾಂಗವನ್ನು ಸೃಷ್ಟಿಸುವದಕ್ಕೆ ತನ್ನ ಯೋಜನೆಯನ್ನು ಪ್ರಕಟಪಡಿಸಿದಾಗ, ಆತನು ಇದನ್ನು ಅಬ್ರಹಾಮ ಸಾರಾ ಎಂಬ ಹಿರಿಯ ದಂಪತಿಗಳೊಂದಿಗೆ ಪ್ರಾರಂಭಿಸಿದನೆಂಬುದನ್ನು ನೀವು ಜ್ಞಾಪಿಸಿಕೊಳ್ಳಿರಿ. ಅಬ್ರಹಾಮನು ನೂರು ವರುಷ –
–ದವನಾದಾಗ ಇಸಾಕನನ್ನು ಪಡೆದನು; ಇಸಾಕನು ಯಾಕೋಬನನ್ನು ಪಡೆದನು; ಮತ್ತು ಯಾಕೋಬನು ಇಸ್ರಾಯೇಲ್ ಕುಲಗಳನ್ನು ಉತ್ಪತ್ತಿಮಾಡಿದ ಹನ್ನೆರಡು ಗಂಡು ಮಕ್ಕಳನ್ನು ಪಡೆದನು. ಅವರು ಐಗುಪ್ತ ದೇಶಕ್ಕೆ ಹೊರಟಾಗ ಎಪ್ಪತ್ತು ಜನರಿದ್ದರು. ಆದರೆ ಈಗ ಮೂನ್ನೂರು ವರುಷಗಳಾದ ತರುವಾಯ ಅವರು ಸಂಖ್ಯೆಯಲ್ಲಿ ಬಹಳ ಹೆಚ್ಚಾದರು ಅಂದರೆ ಒಂದು ಮಿಲಿಯನ್‌ಗಿಂತಲೂ ಹೆಚ್ಚು ಜನರಾದರು! **ಬಹಳ ಹಿಂದೆ ದೇವರು ಏನು ವಾಗ್ದಾನ ಮಾಡಿದ್ದನೋ ಅದನ್ನು ನೆರವೇರಿಸಿದನೋ**? ದೇವರು ಅಬ್ರಹಾಮನನ್ನು ಒಂದು ಹೊಸದಾದ ಮತ್ತು ವಿಸ್ತಾರವಾದ ಜನಾಂಗವನ್ನಾಗಿ ಮಾಡಿದನೋ? ಹೌದು, ಆತನು ಹಾಗೆಯೇ ಮಾಡಿದನು! ದೇವರು ನಂಬಿಗಸ್ತನು, ಆತನು ತನ್ನ ಮಾತನಿಂದ ಹಿಂದೆ ಹೋಗುವವನಲ್ಲ. ಆತನು ಎಂದೆಂದಿಗೂ ಮಹಿಮೆಗೆ ಯೋಗ್ಯನಾಗಿದ್ದಾನೆ!

ಈ ದಿವಸದ ಓದುವಿಕೆಯಲ್ಲಿ, **ಫರೋಹನು** ಇಸ್ರಾಯೇಲ್ ಜನಾಂಗದವರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಹೇಗೆ ಹಿಂಸಿಸಿದನೆಂಬುದನ್ನು ನಾವು ನೋಡುತ್ತೇವೆ. ಹೇಗೂ, ಫರೋಹನು ಪ್ರತಿಸಲವೂ ಇಸ್ರಾಯೇಲ್ ಜನಾಂಗದವರನ್ನು ಆಳುವದಕ್ಕೂ ಮತ್ತು ಕುಂದಿಸುವದಕ್ಕೂ ಪ್ರಯತ್ನಿಸಿದನು, ಆದರೆ ಅವರು ಸಂಖ್ಯೆಯಲ್ಲಿ ಹೆಚ್ಚಳವಾಗಿ ಅಭಿವೃದ್ಧಿಯಾಗುವದಕ್ಕೆ ದೇವರು ಕಾರಣ –
–ನಾದನು. ಹಾಗಾಗಿ, ವಾಕ್ಯವು ಹೇಳುವದೇನೆಂದರೆ ಫರೋಹನು ಬಹಳ ಕೋಪವುಳ್ಳವನಾಗಿ **"ಹುಟ್ಟುವ ಪ್ರತಿಯೊಂದು ಗಂಡು ಕೂಸನ್ನು ನೀವು ನೈಲ್ ನದಿಯಲ್ಲಿ ಎಸೆಯಬೇಕು!"** (ವಿಮೋ–೧:೨೨) ಎಂಬ ಆಜ್ಞೆಯನ್ನು ಇಸ್ರಾಯೇಲ್ಯರಿಗೆ ಕೊಟ್ಟನು: ಇದರ ಕುರಿತಾಗಿ ನೀವು ಏನು ಆಲೋಚಿಸುತ್ತೀರಿ? ಈ ಕೆಟ್ಟ ಆಲೋಚನೆಯಲ್ಲಿ ಫರೋಹನನ್ನು ಮುನ್ನಡೆಸಿದವರು ಯಾರು? ಅವನು **ಸೈತಾನನು!** ಇಸ್ರಾಯೇಲ್ ಜನರನ್ನು ಹಿಂಸಿಸಿ ನಾಶಪಡಿಸುವದಕ್ಕೆ ಸೈತಾನನು ಯಾಕೆ ಇಚ್ಛಿಸಿದನು? ಯಾಕೆಂದರೆ ನರಕ ಮತ್ತು ಪಾಪದ ಬಲದಿಂದ ಆದಾಮನ ಮಕ್ಕಳನ್ನು ಬಿಡಿಸುವದಕ್ಕೆ ಒಬ್ಬ ವಿಮೋಚಕನನ್ನು ಲೋಕಕ್ಕೆ ಕಳಿಸುತ್ತೇನೆಂದು ದೇವರು ಮಾಡಿದ್ದ ವಾಗ್ದಾನವನ್ನು ಸೈತಾನನು ತಿಳಿದಿದ್ದನು. ಬರಲಿಕ್ಕಿರುವ ಈ ವಿಮೋಚಕನು **ಇಸ್ರಾಯೇಲ್ ಜನಾಂಗದ** ಮೂಲಕವಾಗಿ ಬರುತ್ತಾನೆಂಬು
–ದನ್ನೂ ಸಹ ಸೈತಾನನು ತಿಳಿದಿದ್ದನು! ಈ ಕಾರಣದಿಂದ ಸೈತಾನನು ಇಸ್ರಾಯೇಲ್ ಜನರನ್ನು ಹಿಂಸಿಸುವದಕ್ಕೂ ಮತ್ತು ಅವರ ಗಂಡು ಕೂಸುಗಳನ್ನು ನೈಲ್ ನದಿಯಲ್ಲಿ ಎಸೆಯುವದರ ಮೂಲಕ ಅವರನ್ನು ನಾಶಗೊಳಿಸುವದಕ್ಕೂ ಸಹ ಫರೋಹನನ್ನು ಪ್ರಚೋದಿಸಿದನು.

ಆದರೆ ಸೈತಾನನಿಗಿಂತಲೂ ಬಲಶಾಲಿಯಾದ ದೇವರು, ತಾನು ಆರಿಸಿಕೊಂಡ ಜನರನ್ನು ಫರೋಹನ ಕೈಯಿಂದ ಬಿಡಿಸುವದಕ್ಕೆ ಇಸ್ರಾಯೇಲ್ ಜನಾಂಗದವರೊಳಗೆ ಒಬ್ಬ ಮನುಷ್ಯನನ್ನು ಉಪಯೋಗಿಸುವದಕ್ಕೆ ಯೋಜನೆ ಮಾಡಿಕೊಂಡನು. ಈ ನಾಯಕನ ಹೆಸರು ನಿಮಗೆ ಗೊತ್ತಾ? ಹೌದು ಇವನೇ ಪ್ರಸಿದ್ಧನಾದ ದೇವರ ಪ್ರವಾದಿಯಾದ **ಮೋಶೆ** {ಅರೆಬಿಕ್‌ನಲ್ಲಿ ಮೂಸ}. ಆದರೆ ಮೋಶೆಯ ತಂದೆತಾಯಿಯಾದ ಅಮ್ರಾಮ್ ಮತ್ತು ಯೋಕೆಬೆದಳು ಸಹ ನಾಯಕರೇ ಯಾಕೆಂದರೆ, **"**ಅವರು ಅರಸನ ಅಪ್ಪಣೆಗೆ ಭಯಪಡಲಿಲ್ಲ.**"** (ಇಬ್ರಿಯ–೧೧:೨೩; ವಿಮೋ–೬:೨೦). ವಿಮೋಚನಕಾಂಡ ಪುಸ್ತಕದ ಎರಡನೆ ಅಧ್ಯಾಯದಲ್ಲಿ **ಮೋಶೆಯ ಜೀವಿತದ ಪ್ರಾರಂಭದ ವರ್ಷಗಳ** ಕುರಿತಾಗಿ ಓದುತ್ತೇವೆ.

ವಾಕ್ಯವು ಹೀಗೆ ಹೇಳುತ್ತದೆ:

**"**ಹೀಗಿರುವಲ್ಲಿ ಲೇವಿಯ ವಂಶಸ್ಥನಾದ **ಒಬ್ಬ ಮನುಷ್ಯನು** ಲೇವಿಯ ಕುಲದ **ಕನ್ನಿಕೆಯನ್ನು** ಮದುವೆ ಮಾಡಿಕೊಂಡನು. ಆಕೆ ಗರ್ಭಿಣಿಯಾಗಿ **ಗಂಡು ಮಗುವನ್ನು** ಹೆತ್ತು ಅದು ಚೆಲುವಾದ ಕೂಸೆಂದು ತಿಳಿದು ಮೂರು ತಿಂಗಳು ಬಚ್ಚಿಟ್ಟಳು. ಆಕೆ ಅದನ್ನು ಹೆಚ್ಚು ಕಾಲ ಮರೆಮಾಡಲಾರದೆ ಆಪಿನ **ಪೆಟ್ಟಿಗೆಯನ್ನು** ತೆಗೆದುಕೊಂಡು ಜೇಡಿಮಣ್ಣನ್ನೂ ರಾಳವನ್ನೂ ಹಚ್ಚಿ ಕೂಸನ್ನು ಅದರಲ್ಲಿ ಮಲಗಿಸಿ ನೈಲ್ ನದಿಯ ಅಂಚಿನಲ್ಲಿರುವ ಜಂಬುಹುಲ್ಲಿನಲ್ಲಿಟ್ಟಳು. ಕೂಸಿಗೆ ಏನಾಗುವದೆಂದು ತಿಳುಕೊಳ್ಳುವದಕ್ಕೆ ಅದರ **ಅಕ್ಕನು** ಸ್ವಲ್ಪದೂರದಲ್ಲಿ ನಿಂತುಕೊಂಡಳು.**"** (ವಿಮೋ–೨:೧–೪)

“ಅಷ್ಟರಲ್ಲಿ ಫರೋಹನ ಕುಮಾರ್ತೆಯು ಸ್ನಾನಕ್ಕಾಗಿ ಆ ನದಿಯ ಬಳಿಗೆ ಇಳಿದು ಬಂದಳು; ಆಕೆಯ ಗೆಳತಿಯರು ನದಿಯ ದಡದಲ್ಲಿ ತಿರುಗಾಡುತ್ತಿದ್ದರು. ಆಕೆ ಜಂಬುಹುಲ್ಲಿನಲ್ಲಿ ಪೆಟ್ಟಿಗೆಯನ್ನು ಕಂಡು ದಾಸಿಯನ್ನು ಕಳುಹಿಸಿ ತರಿಸಿದಳು. ಅದನ್ನು ತೆರೆದು ನೋಡುವಾಗ ಅಹಾ, ಅಳುವ ಕೂಸು. ಆಕೆ ಅದರ ಮೇಲೆ ಕನಿಕರಪಟ್ಟು – ಇದು ಇಬ್ರಿಯರ ಮಕ್ಕಳಲ್ಲಿ ಒಂದಾಗಿರಬಹುದೆಂದು ಹೇಳಿದಳು.” (೨:೫–೬)

“ಆಗಲೇ ಅದರ ಅಕ್ಕ ಬಂದು ಫರೋಹನ ಕುಮಾರ್ತೆಗೆ – ನಿನಗೋಸ್ಕರ ಈ ಕೂಸನ್ನು ಮೊಲೆಕೊಟ್ಟು ಸಾಕುವದಕ್ಕೆ ಇಬ್ರಿಯ ಸ್ತ್ರೀಯರಲ್ಲಿ ಒಬ್ಬ ದಾದಿಯನ್ನು ನಾನು ಕರೆದುಕೊಂಡು ಬರಲೋ ಎಂದು ಕೇಳಲು ಫರೋಹನ ಕುಮಾರ್ತೆ – ಹಾಗೇ ಮಾಡು ಅಂದಳು. ಆ ಹುಡುಗಿ ಹೋಗಿ ಕೂಸಿನ ತಾಯಿಯನ್ನೇ ಕರತಂದಳು. ಫರೋಹನ ಕುಮಾರ್ತೆ ಅವಳಿಗೆ – ನೀನು ಈ ಮಗು –ವನ್ನು ತೆಗೆದುಕೊಂಡು ಹೋಗಿ ನನಗೋಸ್ಕರ ಸಾಕಮ್ಮಾ; ನಾನೇ ನಿನಗೆ ಸಂಬಳವನ್ನು ಕೊಡುವೆನು ಎಂದು ಹೇಳಲಾಗಿ ಆ ಸ್ತ್ರೀಯು ಕೂಸನ್ನು ತೆಗೆದುಕೊಂಡು ಸಾಕಿದಳು. ಆ ಹುಡುಗನು ಬೆಳೆದಾಗ ಅವನನ್ನು ಫರೋಹನ ಕುಮಾರ್ತೆಯ ಬಳಿಗೆ ತೆಗೆದು –ಕೊಂಡು ಬಂದಳು; ಅವನು ಆಕೆಗೆ ಮಗನಾದನು. ಇವನನ್ನು ನೀರಿನಿಂದ ಎಳೆದಿದ್ದೇನೆಂದು ಹೇಳಿ ಆಕೆ ಅವನಿಗೆ ಮೋಶೆ ಎಂದು ಹೆಸರಿಟ್ಟಳು.” (೨: ೭–೧೦)

ಇದು ಮೋಶೆಯ ಜನನದ ಕಥೆ. ಇದರ ಕುರಿತು ಆಲೋಚಿಸಿರಿ! ಇತರ ಗಂಡುಕೂಸುಗಳು ಕೊಲ್ಲಲ್ಪಡುವ ವೇಳೆಯಲ್ಲಿ, ಮಗು –ವಾದ ಮೋಶೆ ತನ್ನ ಸ್ವಂತ ತಾಯಿಯಿಂದ ಪೋಷಿಸಲ್ಪಡುತ್ತ ಕೆಟ್ಟ ಅರಸನಾಗಿದ್ದ ಫರೋಹನಿಂದ ರಕ್ಷಿಸಲ್ಪಟ್ಟನು! ಮೋಶೆಯ ಜೀವನದಲ್ಲಿ ಸಂಭವಿಸಿದ ಎಲ್ಲವುಗಳ ಮೇಲೆ ದೇವರು ತನ್ನ ಹಸ್ತವನ್ನಿಟ್ಟಿದ್ದನು. ಇಸ್ರಾಯೇಲ್ ಜನರನ್ನು ಅವರ ಗುಲಾಮತನ –ದಿಂದ ಬಿಡಿಸುದಕ್ಕೆ ದೇವರು ಮೋಶೆಯನ್ನು ಉಪಯೋಗಿಸುವದಕ್ಕೆ ಯೋಜನೆ ಮಾಡಿಕೊಂಡನು. ಮನುಷ್ಯನ ಅಥವಾ ಸೈತಾನನ ಜ್ಞಾನವನ್ನು ಬಹುದೂರ ಮೀರಿಸುವಷ್ಟು ದೇವರ ಜ್ಞಾನವು ಎಷ್ಟೊಂದು ಆಳವಾದುದಾಗಿದೆ. ಮೋಶೆಯು ತಾಯಿಯ ಹಾಲು ಕುಡಿ –ಯುವದನ್ನು ಬಿಟ್ಟ ನಂತರ ಎಲ್ಲಿ ಬೆಳೆದನೆಂಬುದು ನಿಮಗೆ ಗೊತ್ತಾ? ನಿಮಗೆ ಗೊತ್ತಿರುವಂತೆ ಇಸ್ರಾಯೇಲ್ಯರನ್ನು ಹಿಂಸಿಸಿದಂತ ಫರೋಹನ ಮನೆಯಲ್ಲಿ ಅವನು ಬೆಳೆದನು! ಆದಾಗ್ಯೂ, ದೇವರು ಫರೋಹನ ಕೈಯಿಂದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಮೋಶೆಯನ್ನು ಉಪಯೋಗಿಸಲು ಸಂಕಲ್ಪಿಸಿದನು. ದೇವರು ತನ್ನ ಯೋಜನೆಯಲ್ಲಿ ಮೋಶೆಯನ್ನು ರಕ್ಷಿಸುವದಕ್ಕೆ ಕ್ರೂರ ಅರಸನ ಮಗಳನ್ನು ಉಪಯೋಗಿಸುವದಕ್ಕೆ ಆರಿಸಿಕೊಂಡನು. ಅರಸನ ಮನೆಯು ಮೋಶೆಗೆ ಸುರಕ್ಷಿತವಾದ ಮತ್ತು ಉತ್ತಮವಾದ ಸ್ಥಳವೆಂದು ದೇವರು ತಿಳಿದಿದ್ದನು. ಇಸ್ರಾಯೇಲ್ ಜನರನ್ನು ಮುನ್ನಡೆಸುವದಕ್ಕೆ ಮೋಶೆಯು ಸಮಂಜಸವಾಗಿ ಸಿದ್ಧವಾಗಬೇಕಾಗಿತ್ತು ಅದಕ್ಕಾಗಿ ಅವನು ಅನೇಕ ಸಂಗತಿಗಳನ್ನು ಕಲಿತುಕೊಂಡು ಅರ್ಥಮಾಡಿಕೊಳ್ಳುವದು ಅಗತ್ಯವೆಂಬುದನ್ನೂ ಸಹ ದೇವರು ತಿಳಿದಿದ್ದನು. ಹಾಗಾಗಿ ವಾಕ್ಯವು ಹೇಳುವದೇನೆಂದರೆ; “ಮೋಶೆಯು ಐಗುಪ್ತದೇಶದವರ ಸರ್ವವಿದ್ಯೆಗಳಲ್ಲಿಯೂ ಉಪದೇಶಹೊಂದಿ ಮಾತುಗಳ –ಲ್ಲಿಯೂ ಕಾರ್ಯಗಳಲ್ಲಿಯೂ ಸಮರ್ಥನಾದನು.”(ಅ.ಕೃತ್ಯ–೭:೨೨). ಆದರೆ ಮೋಶೆಯು ಇನ್ನೂ ಬಹಳಷ್ಟು ಕಲಿಯಬೇಕಾಗಿತ್ತು.

ವಾಕ್ಯ ಹೇಳುವದೇನೆಂದರೆ:

“ಮೋಶೆ ದೊಡ್ಡವನಾದ ಮೇಲೆ ಸ್ವಜನರ ಬಳಿಗೆ ಹೋಗಿ ಇವರ ಬಿಟ್ಟೀಕೆಲಸಗಳನ್ನು ನೋಡುತ್ತಿದ್ದನು; ಒಂದು ದಿವಸ ಅವನು ತನ್ನ ಜನರಾದ ಇಬ್ರಿಯರೊಳಗೆ ಒಬ್ಬನನ್ನು ಐಗುಪ್ತ್ಯನೊಬ್ಬನು ಹೊಡೆಯುವದನ್ನು ಕಂಡು ಮೋಶೆ ಅತಿತ್ತ ನೋಡಿ ಯಾರೂ ಇಲ್ಲ –ವೆಂದು ತಿಳಿದು ಆ ಐಗುಪ್ತ್ಯನನ್ನು ಹೊಡೆದು ಹಾಕಿ ಅವನ ಶವವನ್ನು ಮರಳಿನಲ್ಲಿ ಮುಚ್ಚಿಟ್ಟನು. ಮರುದಿವಸ ಅವನು ಹೊರಟು ಹೋಗಿ ನೊಡಿದಾಗ ಇಬ್ಬರು ಇಬ್ರಿಯರೇ ಜಗಳವಾಡುತ್ತಿದ್ದರು. ಅನ್ಯಾಯ ಮಾಡುತ್ತಿದ್ದವನಿಗೆ ಅವನು – ಏನಯ್ಯಾ ನೀನು ಯಾಕೆ ಸ್ವಕುಲದವನನ್ನು ಹೊಡೆಯುತ್ತೀ ಎಂದು ಕೇಳಿದಾಗ ಆ ಮನುಷ್ಯನು – ನಿನ್ನನ್ನು ನಮ್ಮ ಮೇಲೆ ಅಧಿಕಾರಿಯನ್ನಾಗಿಯೂ ನ್ಯಾಯಾಧಿ –ಪತಿಯನ್ನಾಗಿಯೂ ಇಟ್ಟವರು ಯಾರು? ಆ ಐಗುಪ್ತನನ್ನು ಕೊಂದು ಹಾಕಿದಂತೆ ನನ್ನನ್ನೂ ಕೊಂದು ಹಾಕಬೇಕೆಂದಿದ್ದೀಯೋ ಅಂದನು. ಈ ಮಾತನ್ನು ಕೇಳಿ ಮೋಶೆ – ಆ ಕಾರ್ಯವು ಬೈಲಿಗೆ ಬಂತಲ್ಲಾ ಅಂದುಕೊಂಡು ಅಂಜಿದನು. ನಡೆದ ಸಂಗತಿಯು ಫರೋಹನಿಗೆ ತಿಳಿದುಬಂದಾಗ ಅವನು ಮೋಶೆಯನ್ನು ಕೊಲ್ಲಿಸಬೇಕೆಂದು ಆಲೋಚಿಸಿದ್ದರಿಂದ ಮೋಶೆ ಫರೋಹನ ಬಳಿಯಿಂದ ಓಡಿಹೋಗಿ ಮಿದ್ಯಾನ್ ದೇಶವನ್ನು ಸೇರಿದನು.” (೨:೧೧–೧೫).

ಹೀಗೆ, ಮೋಶೆಯು ಮೊದಲು ತನ್ನ ಸ್ವಂತ ಶಕ್ತಿಯಿಂದ ಹೇಗೆ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಪ್ರಯತ್ನಿಸಿದನೆಂಬುದನ್ನು ನಾವು ನೋಡುತ್ತೇವೆ. ಹೇಗೂ ಈ ರೀತಿಯಲ್ಲಿ ಆಗುವದನ್ನು ದೇವರು ಬಯಸಿರಲಿಲ್ಲ. ಇಸ್ರಾಯೇಲ್ಯರನ್ನು ಸ್ವತಂತ್ರರನ್ನಾಗಿ ಮಾಡುವದಕ್ಕೆ ಮೋಶೆಯನ್ನು ಒಂದು ಸಾಧನವನ್ನಾಗಿ ಮಾಡಲು ದೇವರು ಇಷ್ಟಪಟ್ಟಿದ್ದನು. ಇಸ್ರಾಯೇಲ್ಯರ ಬಿಡುಗಡೆಯು ಮೋಶೆಯಿಂದ ಬರುವಂತದ್ದಾಗಿರಲಿಲ್ಲ ಆದರೆ ದೇವರಿಂದ ಬರುವಂತದ್ದಾಗಿತ್ತು. ಮೋಶೆಯು ತಾನೇ ಒಬ್ಬ ಮನುಷ್ಯನಾಗಿದ್ದು, ದೇವರಿಂದ ಕೊಡಲ್ಪಡದ ಹೊರತು ಫರೋಹನ ಕೈಯಿಂದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಅಧಿಕಾರವಿಲ್ಲದವನಾಗಿದ್ದನು.

ಹಾಗಾಗಿ ವಾಕ್ಯವು ನಮಗೆ ಹೇಳುವದೇನೆಂದರೆ, ನಲವತ್ತು ವರ್ಷಗಳವರೆಗೆ, ಮೋಶೆಯು ಮಿದ್ಯಾನ್ ದೇಶದ ಮರಳುಗಾಡಿನಲ್ಲಿ –ದ್ದನು. ಆ ಸುಡುವ ಮತ್ತು ಒಣಗಿದ ಮರುಭೂಮಿಯಲ್ಲಿ ಮೋಶೆಗೆ ಕಲಿಸುವದಕ್ಕೆ ದೇವರು ಅನೇಕ ಪ್ರಾಮುಖ್ಯವಾದ

ಪಾಠಗಳನ್ನು ಹೊಂದಿದ್ದನು. ದೇವರ ವಾಕ್ಯದಲ್ಲಿ ಒಂದು ವಚನವು ಈ ರೀತಿ ಹೇಳುತ್ತದೆ: **"ಸ್ವಲ್ಪವಾದದ್ದರಲ್ಲಿ ನಂಬಿಗಸ್ತನಾದವನು** ಬಹಳವಾದದ್ದರಲ್ಲಿಯೂ ನಂಬಿಗಸ್ತನಾಗುವನು; ಸ್ವಲ್ಪವಾದದ್ದರಲ್ಲಿ ಅನ್ಯಾಯಗಾರನಾದವನು ಬಹಳವಾದದ್ದರಲ್ಲಿಯೂ ಅನ್ಯಾಯ – –ಗಾರನಾಗುವನು." (ಲೂಕ–೧೬:೧೦). ದೇವರು ಇಸ್ರಾಯೇಲಿನ ಇಡೀ ಸಮೂಹವನ್ನು ಕಾಯುವಂತಹ ಭಾರವಾದ ಕೆಲಸವನ್ನು ಮೋಶೆಯ ವಶಕ್ಕೆ ಒಪ್ಪಿಸುವದಕ್ಕಿಂತ ಮೊದಲು, ಚಿಕ್ಕ ಕೆಲಸಗಳಲ್ಲಿ ತಾನು ನಂಬಿಗಸ್ತನೆಂಬುದನ್ನು ಮೊದಲು ತೋರಿಸುವದು ಮೋಶೆಗೆ ಅಗತ್ಯವಾದುದಾಗಿತ್ತು. ಹಾಗಾಗಿ, ವಾಕ್ಯಗಳು ನಮಗೆ ಹೇಳುವದೇನೆಂದರೆ, ಐಗುಪ್ತದಿಂದ ಬಹಳ ದೂರದ ದೇಶದಲ್ಲಿ ಮೋಶೆಯು ಒಬ್ಬ ಕುರುಬನಾದನು, ವಿವಾಹವಾಗಿ ಎರಡು ಮಕ್ಕಳನ್ನು ಪಡೆದನು. ನಲವತ್ತು ವರುಷಗಳವರೆಗೆ, ಮೋಶೆಯು ಒಬ್ಬ ನಂಬಿಗಸ್ತ ಕುರುಬನಾಗಿದ್ದ. ಆ ಮರಳುಗಾಡಿನಲ್ಲಿ ತನ್ನ ಮಾವನ ಕುರಿಮಂದೆಯನ್ನು ಮೋಶೆಯು ಕಾಯುತ್ತಿರುವಾಗ ಇಸ್ರಾಯೇಲ್ ಜನಾಂಗವನ್ನು ಕಾಯುವಂತ ದಿನಕ್ಕಾಗಿ **ದೇವರು ಅವನನ್ನು ಸಿದ್ಧಪಡಿಸುತ್ತಿದ್ದನು.** ದೇವರು ಮೋಶೆ ಮತ್ತು ತನ್ನ ಜನರಾದ ಇಸ್ರಾ – –ಯೇಲ್ಯರಿಗಾಗಿ ದೊಡ್ಡ ಯೋಜನೆಯನ್ನು ಹೊಂದಿದ್ದನು!

ಮುಂದೆ ವಾಕ್ಯವು ಹೀಗೆ ಹೇಳುತ್ತದೆ:

"ಈ ಮೇರೆಗೆ ಬಹಳ ದಿನಗಳು ಕಳೆದ ಮೇಲೆ ಐಗುಪ್ತ ದೇಶದ ಅರಸನು ಸತ್ತನು. ಇಸ್ರಾಯೇಲ್ಯರು ತಾವು ಮಾಡಬೇಕಾದ ಬಿಟ್ಟೀ ಕೆಲಸಕ್ಕಾಗಿ ನಿಟ್ಟುಸುರು ಬಿಟ್ಟು ಗೋಳಾಡುತ್ತಾ ಇದ್ದರು. ಆ ಗೋಳು ದೇವರಿಗೆ ಮುಟ್ಟಿತು. **ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು** ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು." (೨:೨೩–೨೫).

ಬಹಳ ದೀರ್ಘ ಕಾಲದವರೆಗೆ ಇಸ್ರಾಯೇಲ್ ಜನರು ಗುಲಾಮರಾಗಿಯೇ ಉಳಿದುಕೊಂಡರು. ಓಹ್ ಅವರು ಪಟ್ಟ ಹಿಂಸೆಯು ಎಷ್ಟೊಂದು ದೊಡ್ಡದು! ಆದರೆ ದೇವರು ಅವರನ್ನು ಮರೆತಿರಲಿಲ್ಲ. ಇಸ್ರಾಯೇಲ್ ಜನರನ್ನು ಅವರ ಗುಲಾಮತನದಿಂದ ಬಿಡು –ಗಡೆಮಾಡುವದಕ್ಕೆ ದೇವರು ಯೋಜನೆಯುಳ್ಳವನಾಗಿದ್ದನು. ಫರೋಹನ ಕೈಯಿಂದ ಇಸ್ರಾಯೇಲ್ ಜನರನ್ನು ಬಿಡಿಸುವದಕ್ಕೆ ದೇವರು ಯಾಕೆ ಯೋಜನೆಮಾಡಿಕೊಂಡಿದ್ದನು? ಎಂದು ನಾವು ಕೇಳಬಹುದು. ಅವರು ಇತರರಿಗಿಂತ ಒಳ್ಳೆಯವರಾಗಿದ್ದರೆಂಬ ಕಾರಣಕ್ಕೋ? ಇಲ್ಲ! ಇಸ್ರಯೇಲ್ಯರೂ ಐಗುಪ್ತರಂತೆ ಮತ್ತು ಇತರ ಜನರಂತೆ ಪಾಪಿಗಳಾಗಿದ್ದರು. **ಹಾಗಾದರೆ ಅವರಿಗಾಗಿ ದೇವರು ಯಾಕೆ ಅಂಥಾ ವಿಶೇಷವಾದ ಯೋಜನೆಯನ್ನು ಹೊಂದಿದ್ದನು?** ಸರಳವಾಗಿ **ಆತನ ನಂಬಿಗಸ್ತಿಕೆ ಮತ್ತು ಕನಿಕರದ** ನಿಮಿತ್ತವಾಗಿ ಈ ಯೋಜನೆಯನ್ನು ಹೊಂದಿದ್ದನು. ಕೊನೆಯ ವಚನವನ್ನು ಓದಿಕೊಳ್ಳೋಣ: "ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಮತ್ತು ಯಾಕೋಬರಿಗೆ ಮಾಡಿದ **ವಾಗ್ದಾನವನ್ನು ನೆನಪಿಗೆ ತಂದುಕೊಂಡು (ದೇವರ ನಂಬಿಗಸ್ತಿಕೆ – –ಯನ್ನು ಗಮನಿಸಿರಿ)** ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು **(ದೇವರ ಕನಿಕರವನ್ನು ಗಮನಿಸಿರಿ!)."** (೨: ೨೪–೨೫)

ಹೌದು, ದೇವರು ತನ್ನ ನಂಬಿಗಸ್ತಿಕೆ ಮತ್ತು ಕನಿಕರದಲ್ಲಿ ತಾನು ಅಬ್ರಹಾಮನೊಂದಿಗೆ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ನೆನಪುಮಾಡಿಕೊಂಡನು. ಆತನು ಅಬ್ರಹಾಮನಿಗೆ:

**"ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುತ್ತೇನೆ. ನೀನು ಆಶೀರ್ವಾದನಿಧಿಯಾಗುವಿ. . . .ನಿನ್ನ ಮೂಲಕವಾಗಿ ಭೂಲೋ –ಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು."** (ಆದಿ–೧೨:೨, ೩). "ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗವನ್ನು ನಾನು ಶಿಕ್ಷಿಸಿದ ನಂತರ ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆ – –ಯಾಗಿ ಬರುವರು." (ಆದಿ–೧೫:೧೩,೧೪)

ಮುಂದಿನ ಪಾಠದಲ್ಲಿ, ಕರ್ತನ ಚಿತ್ತವಾದರೆ, ದೇವರು ಅಬ್ರಹಾಮನಿಗೆ ಬಹಳ ಮೊದಲೇ ವಾಗ್ದಾನ ಮಾಡಿದ ಹಾಗೆಯೇ ಇಸ್ರಾ –ಯೇಲ್ಯರನ್ನು ಅವರ ದಾಸತ್ವದಿಂದ ಬಿಡುಗಡೆ ಮಾಡುವದಕ್ಕೆ ಐಗುಪ್ತಕ್ಕೆ ಹೋಗುವಂತೆ ಮೋಶೆಗೆ ಒಂದು ಬಹಳ ಅಸಾಧಾರಣ ರೀತಿಯಲ್ಲಿ ಕಾಣಿಸಿಕೊಂಡು ಅವನನ್ನು ಹೇಗೆ ಕರೆದನೆಂಬುದನ್ನು ನಾವು ನೋಡಲಿದ್ದೇವೆ.

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .

ದೇವರು ನಿಮ್ಮನ್ನು ಆಶೀರ್ವದಿಸಲಿ. ಕೀರ್ತನೆಗಳಲ್ಲಿರುವ ಈ ವಾಕ್ಯದೊಂದಿಗೆ ನಾವು ನಿಮಗೆ ವಿದಾಯವನ್ನು ಹೇಳುತ್ತೇವೆ:

**"ಯೆಹೋವನಿಗೆ ಕೃತಜ್ಞತಾಸ್ತುತಿ ಮಾಡಿರಿ; ಆತನ ನಾಮದ ಮಹತ್ವವನ್ನು ವರ್ಣಿಸಿರಿ; ಜನಾಂಗಗಳಲ್ಲಿ ಆತನ ಕೃತ್ಯಗಳನ್ನು ಪ್ರಸಿದ್ಧ – ಪಡಿಸಿರಿ. ಆತನು ತನ್ನ ವಾಗ್ದಾನವನ್ನು ಸಾವಿರ ತಲೆಗಳವರೆಗೂ ತನ್ನ ಒಡಂಬಡಿಕೆಯನ್ನು ನಿತ್ಯವೂ ನೆನಪಿನಲ್ಲಿಟ್ಟುಕೊಳ್ಳುತ್ತಾನೆ. ಆತನು ಆ ಒಡಂಬಡಿಕೆಯನ್ನು ಅಬ್ರಹಾಮನ ಸಂಗಡ ಮಾಡಿಕೊಂಡನು; ಇಸಾಕನಿಗೆ ಆಣೆಯಿಟ್ಟನು."** (ಕೀರ್ತನೆ–೧೦೫: ೧, ೮, ೯)

ಪಾಠ ೩೦

# ಮೋಶೆ ದೇವರನ್ನು ಸಂಧಿಸಿದ್ದು!

ವಿಮೋಚನಕಾಂಡ ೩, ೪

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಐಗುಪ್ತದ ಅರಸನಾದ ಫರೋಹನು ಅಬ್ರಹಾಮನ ಸಂತತಿಯವರಾದ ಇಸ್ರಾಯೇಲ್ಯರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಅವರನ್ನು ಹೇಗೆ ಕ್ರೂರವಾಗಿ ದುಡಿಸಿಕೊಂಡನೆಂಬುದನ್ನು ನಾವು ನೋಡಿದ್ದೇವೆ. ಹೇಗೂ "ಐಗುಪ್ತ್ಯರು ಅವರನ್ನು ಎಷ್ಟು ಉಪದ್ರವಪಡಿಸಿದರೂ ಅವರು ಅತ್ಯಧಿಕವಾಗಿ ಹೆಚ್ಚಿ ಹರಡಿಕೊಂಡದ್ದರಿಂದ ಐಗುಪ್ತರು ಇಸ್ರಾಯೇಲ್ಯರ ವಿಷಯದಲ್ಲಿ ಸಹಿಸಲಾರದಷ್ಟು ಹೆದರಿಕೆಯುಳ್ಳವರಾದರು." (ವಿಮೋ–೧:೧೨) ಎನ್ನುವದನ್ನೂ ಸಹ ನಾವು ಓದಿದ್ದೇವೆ. ಕೊನೆಗೆ, ಫರೋಹನು ಇಸ್ರಾಯೇಲ್ಯರಿಗೆ ಹುಟ್ಟಿದ ಪ್ರತಿಯೊಂದು ಗಂಡುಕೂಸನ್ನು ನದಿಗೆ ಎಸೆದು ಸಾಯಿಸುವಂತೆ ಒಂದು ಆಜ್ಞೆ ಹೊರಡಿಸಿ ––ದ್ದನ್ನು ನೋಡಿಕೊಂಡೆವು.

ಹೇಗೂ, ಸೈತಾನನಿಗಿಂತಲೂ ಹೆಚ್ಚು ಬಲವುಳ್ಳವನಾಗಿದ್ದ ದೇವರು, ಫರೋಹನು ಮಾಡಿದ್ದಂತ ಕೆಟ್ಟದನ್ನು ತಲೆಕೆಳಗು ಮಾಡುವದಕ್ಕೆ ಒಂದು ಯೋಜನೆಯನ್ನು ಹೊಂದಿದ್ದನು. ಹಾಗಾಗಿ, ನದಿಯಲ್ಲಿ ಒಂದು ಬುಟ್ಟಿಯಲ್ಲಿ ಸಿಕ್ಕಂತ ಇಸ್ರಾಯೇಲ್ಯರ ಮಗುವನ್ನು ಫರೋ–ಹನ ಮಗಳು ಹೇಗೆ ತೆಗೆದುಕೊಂಡಳೆಂಬುದನ್ನು ನಾವು ಓದುತ್ತೇವೆ. ಫರೋಹನ ಮಗಳು ಆ ಮಗುವಿನ ಮೇಲೆ ಕನಿಕರಗೊಂಡು ಅದನ್ನು ದತ್ತುತೆಗೆದುಕೊಂಡು ಅದಕ್ಕೆ **ಮೋಶೆ** ಎಂದು ಹೆಸರಿಟ್ಟಳು. ಹೀಗೆ, ಇಸ್ರಾಯೇಲ್ಯರನ್ನು ನಾಶಗೊಳಿಸುವದಕ್ಕೆ ಹುಡುಕುತ್ತಿದ್ದ ಅದೇ ಫರೋಹನ ಮನೆಯಲ್ಲಿ ಮೋಶೆಯು ಬೆಳೆದುಬಂದನು! ದೇವರು ತನ್ನ ಜ್ಞಾನದಲ್ಲಿ, ದುಷ್ಟ ಅರಸನ ಕೈಯಿಂದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಮೋಶೆಯನ್ನು ಉಪಯೋಗಿಸುವದಕ್ಕೆ ಯೋಜನೆ ಮಾಡಿಕೊಂಡನು. ಮೋಶೆಯು ನಲವತ್ತು ವರುಷದವನಾದಾಗ, ತನ್ನನ್ನು ಕೊಲ್ಲುವದಕ್ಕೆ ಬಯಸಿದ್ದ ಫರೋಹನಿಂದ ಓಡಿಹೋದನು. ನಲವತ್ತು ವರುಷಗಳವರೆಗೆ ಮೋಶೆಯು ಮರುಭೂಮಿಯಲ್ಲಿದ್ದು ಅಲ್ಲಿಯೇ ವಿವಾಹವಾಗಿ ತನ್ನ ಮಾವನ ಕುರಿಮಂದೆಯನ್ನು ಕಾಯುವವನಾದನು.

**ದೇವರು ಮೋಶೆಗೆ ತನ್ನನ್ನು ಪ್ರಕಟಿಸಿಕೊಂಡು** ಇಸ್ರಾಯೇಲ್ಯರನ್ನು ಐಗುಪ್ತದಿಂದ ಹೊರಗೆ ಮುನ್ನಡೆಸುವದಕ್ಕೆ ಫರೋಹನ ಬಳಿಗೆ ಅವನನ್ನು ಹೇಗೆ ಕಳಿಸಿದನೆಂಬುದನ್ನು ನೋಡುವದಕ್ಕೆ ನಾವು ಈ ಕಥೆಯೊಂದಿಗೆ ಮುಂದುವರಿಯೋಣ. ಈಗ ತೋರಾದಲ್ಲಿರುವ ವಿಮೋಚನಕಾಂಡ ಪುಸ್ತಕದ ಮೂನೆಯ ಅಧ್ಯಾಯದಲ್ಲಿರುವದನ್ನು ನಾವು ಓದುತ್ತಿದ್ದೇವೆ:

"ಮೋಶೆ ತನ್ನ ಮಾವನಾಗಿರುವ ಮಿದ್ಯಾನ್ಯರ ಆಚಾರ್ಯನಾದ ಇತ್ರೋನನ ಮಂದೆಯನ್ನು ಮೇಯಿಸುತ್ತಿರುವಾಗ ಆ ಮಂದೆಯನ್ನು ಕಾಡಿನ ಹಿಂಬಾಗಕ್ಕೆ ನಡಿಸಿಕೊಂಡು ಹೋರೇಬ್ ಎಂಬ ದೇವರ ಬೆಟ್ಟಕ್ಕೆ ಬಂದನು. ಅಲ್ಲಿ **ಮುಳ್ಳಿನ ಪೊದೆಯೊಳಗೆ ಉರಿಯುವ ಬೆಂಕಿಯಲ್ಲಿ ಯೆಹೋವನ ದೂತನು ಅವನಿಗೆ ಕಾಣಿಸಿಕೊಂಡನು**. ಹೇಗಂದರೆ ಅವನು ಒಂದು ಮುಳ್ಳಿನ ಪೊದೆಯನ್ನು ಕಂಡನು. ಆ ಪೊದೆಯು ಬೆಂಕಿಯಿಂದ ಉರಿಯುತ್ತಿದ್ದರೂ ಅದು ಸುಟ್ಟುಹೋಗದೆ ಇತ್ತು. ಆಗ ಮೋಶೆ – ನಾನು ದಾರಿಬಿಟ್ಟು ಈ ಆಶ್ಚರ್ಯ ––ವನ್ನು ನೋಡಿ ಪೊದೆಯು ಸುಟ್ಟುಹೋಗದೆ ಇರುವದಕ್ಕೆ ಕಾರಣವನ್ನು ತಿಳುಕೊಳ್ಳುವೆನು ಅಂದುಕೊಂಡನು." (೩:೧–೩)

"ನೋಡುವದಕ್ಕೆ ಅವನು ದಾರಿಬಿಟ್ಟದ್ದನ್ನು ಯೆಹೋವನು ಕಂಡನು. ದೇವರು ಆ ಪೊದೆಯೊಳಗಿಂದ – ಮೋಶೆಯೇ, ಮೋಶೆಯೇ ಎಂದು ಕರೆದನು. ಅದಕ್ಕವನು – ಇಗೋ ಇದ್ದೇನೆ ಅಂದನು. ದೇವರು ಅವನಿಗೆ – ನೀನು ಹತ್ತಿರ ಬರಬೇಡ; ನಿನ್ನ ಕಾಲಿನ ಕೆರಗಳನ್ನು ತೆಗೆದುಹಾಕು; ನೀವು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ ಎಂದು ಹೇಳಿದನು. ಅದಲ್ಲದೆ ಆತನು – **ನಾನು ನಿನ್ನ ತಂದೆಯ ದೇವರು, ಅಬ್ರಹಾಮನ ದೇವರು, ಇಸಾಕನ ದೇವರು, ಯಕೋಬನ ದೇವರು** ಅಂದಾಗ ಮೋಶೆ ದೇವರನ್ನು ನೋಡುವ –ದಕ್ಕೆ ಭಯಪಟ್ಟು ಮುಖವನ್ನು ಮುಚ್ಚಿಕೊಂಡನು. ಆಗ ಯೆಹೋವನು – **ಐಗುಪ್ತ ದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿದ್ದೇನೆ.** ಬಿಟ್ಟೀಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ ಕೇಳಿಸಿತು; ಅವರ ದು:ಖವನ್ನೆಲ್ಲಾ ನಾನು ಬಲ್ಲೆನು. ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳಗಿಂದ ತಪ್ಪಿಸುವದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ

ಹರಿಯುವ ವಿಸ್ತಾರವಾದ ಒಳ್ಳೇ ದೇಶಕ್ಕೆ ಅಂದರೆ ಕಾನಾನ್ಯರೂ ಹಿತ್ತಿಯರೂ ಅಮೋರಿಯರೂ ಪೆರಿಜೀಯರೂ ಹಿವ್ವಿಯರೂ ಯೆಬೂಸಿಯರೂ ವಾಸವಾಗಿರುವ ದೇಶಕ್ಕೆ ನಡಿಸಿಕೊಂಡು ಹೋಗುವದಕ್ಕೂ ಇಳಿದುಬಂದಿದ್ದೇನೆ. ಈಗ ಕೇಳು ಇಸ್ರಾಯೇಲ್ಯರ ಕೂಗು ನನಗೆ ಮುಟ್ಟಿತು; ಐಗುಪ್ತ್ಯರು ಅವರಿಗೆ ಕೊಡುವ ಉಪದ್ರವವನ್ನು ನಾನು ನೋಡಿದ್ದೇನೆ. ಆದದರಿಂದ ನನ್ನ ಜನರಾಗಿರುವ ಇಸ್ರಾಯೇಲ್ಯರನ್ನು ಐಗುಪ್ತದೇಶದಿಂದ ಹೊರಗೆ ಬರಮಾಡುವದಕ್ಕೆ ನಿನ್ನನ್ನು ಫರೋಹನ ಬಳಿಗೆ ಕಳುಹಿಸುತ್ತೇನೆ ಬಾ ಅಂದನು." (೩:೪–೧೦).

"ಮೋಶೆ ದೇವರಿಗೆ–ಫರೋಹನ ಸನ್ನಿಧಾನಕ್ಕೆ ಹೋಗುವದಕ್ಕೂ ಇಸ್ರಾಯೇಲ್ಯರನ್ನು ಐಗುಪ್ತದೇಶದಿಂದ ಕರೆದುಕೊಂಡು ಬರುವದಕ್ಕೂ ನಾನು ಎಷ್ಟರವನು ಎಂದು ಹೇಳಿದನು. ಅದಕ್ಕೆ ದೇವರು – ನಾನೇ ನಿನ್ನ ಸಂಗಡ ಇರುವೆನು; ಮತ್ತು **ನೀನು ನನ್ನ ಜನರನ್ನು ಐಗುಪ್ತದೇಶದಿಂದ ಹೊರಗೆ ತಂದಾಗ ನೀವು ಈ ಬೆಟ್ಟದಲ್ಲೇ ದೇವರನ್ನು ಆರಾಧಿಸುವಿರಿ;** ನಿನ್ನನ್ನು ಕಳುಹಿಸಿದವನು ನಾನೇ ಎಂಬದಕ್ಕೆ ಇದೇ ನಿನಗೆ ಗುರುತಾಗಿರುವದು ಅಂದನು. ಮೋಶೆ ದೇವರಿಗೆ – ನಾನು ಇಸ್ರಾಯೇಲ್ಯರ ಬಳಿಗೆ ಬಂದು ನಿಮ್ಮ ಪಿತೃಗಳ ದೇವರು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆಂದು ಹೇಳಿದಾಗ ಒಂದು ವೇಳೆ ಅವರು– ಆತನ ಹೆಸರೇನೆಂದು ನನ್ನನ್ನು ಕೇಳಿದರೆ ನಾನೇನು ಉತ್ತರಕೊಡಬೇಕು ಎನ್ನಲು ದೇವರು ಅವನಿಗೆ–**ಇರುವಾತನೇ ಆಗಿದ್ದೇನೆ.** ನೀನು ಇಸ್ರಾಯೇಲ್ಯರಿಗೆ– ಇರುವಾತನೆಂಬುವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳಬೇಕು. ದೇವರು ಮೋಶೆಗೆ ಮತ್ತೂ ಹೇಳಿದ್ದೆನೆಂದರೆ – ನೀನು ಇಸ್ರಾಯೇಲ್ಯರಿಗೆ ನಿಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರಾಗಿರುವ ಯೆಹೋವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ ಎಂದ ಹೇಳಬೇಕು. ಇದು ಸದಾಕಾಲಕ್ಕೂ ನನ್ನ ಹೆಸರು; **ಇದು ತಲತಲಾಂತರಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ!"** (೩:೧೧–೧೫).

ಸೀನಾಯಿ ಬೆಟ್ಟದ ಮೇಲೆ ಉರಿಯುವ ಪೊದೆಯೊಳಗಿಂದ ದೇವರು ಮೋಶೆಗೆ ಏನು ಹೇಳಿದನೋ ಅದರಿಂದ ದೇವರ ಗುಣ – –ಲಕ್ಷಣಗಳ ಕುರಿತಾಗಿ **ಕಡೇಪಕ್ಷ ನಾಲ್ಕು ಸಂಗತಿಗಳನ್ನು ನಾವು ತಿಳಿದುಕೊಳ್ಳುತ್ತೇವೆ.**

೧) ಮೊದಲನೆಯದು, ದೇವರು **ಪರಿಶುದ್ಧನೆಂಬುದನ್ನು** ನಾವು ಕಲಿತುಕೊಳ್ಳುತ್ತೇವೆ! ಉರಿಯುವ ಪೊದೆಯ ಜ್ವಾಲೆಗಳನ್ನು ಮೋಶೆಯು ನೋಡಿದಾಗ, ಅವನಿಗೆ ಆಶ್ಚರ್ಯವಾಯಿತು, ಅದನ್ನು ಪರೀಕ್ಷಿಸುವದಕ್ಕೆ ಅವನು ಹತ್ತಿರ ಹೋದನು, ಅದರೊಳಗಿಂದ ದೇವರು ತನ್ನನ್ನು ಕರೆಯುವ ಧ್ವನಿಯನ್ನು ಅವನು ಕೇಳಿಸಿಕೊಂಡನು. ಮೋಶೆಯು ಭಯದಿಂದ ನಡುಗಿದನು, ಮತ್ತು ಅದನ್ನು ನೋಡುವದಕ್ಕೆ ಧೈರ್ಯಗೊಳ್ಳಲಿಲ್ಲ. ಮೋಶೆ ಯಾಕೆ ಹೆದರಿದನು? ಯಾಕೆಂದರೆ ಅವನು ಪರಿಶುದ್ಧನಾದ ದೇವರ ಪ್ರಸನ್ನತೆಯಲ್ಲಿ ನಿಂತಿದ್ದನು! ದೇವರು ತನ್ನ ಪರಿಶುದ್ಧತೆಯನ್ನು ತಿಳಿಸುತ್ತಾ ಮೋಶೆಗೆ ಹೀಗೆ ಹೇಳಿದನು: "ನೀನು ಹತ್ತಿರ ಬರಬೇಡ; ನಿನ್ನ ಕಾಲಿನ ಕೆರಗಳನ್ನು ತೆಗೆದುಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ!"

ಉರಿಯುವ ಜ್ವಾಲೆಯೊಳಗೆ ಮೋಶೆಗೆ ಕಾಣಿಸಿಕೊಂಡ ದೇವರು ನಿಜವಾಗಿಯೂ **ಪರಿಶುದ್ಧನಾಗಿದ್ದನು.** ತನ್ನ ಪರಿಶುದ್ಧತೆಯನ್ನು ಪ್ರತಿ –ಯೊಬ್ಬರೂ ಗ್ರಹಿಸಿಕೊಳ್ಳಬೇಕೆಂದು ದೇವರು ಇಚ್ಛೆಸುತ್ತಾನೆ. ದೇವರ ಪ್ರಸನ್ನತೆಯಲ್ಲಿ ನಿಂತಿರುವ ದೂತರುಗಳ ಕುರಿತಾಗಿ ವಾಕ್ಯವು ಹೀಗೆ ಹೇಳುತ್ತದೆ: "ಹಗಲಿರುಳು ವಿಶ್ರಮಿಸಿಕೊಳ್ಳದೆ ಅವರು–ದೇವರಾದ ಕರ್ತನು ಪರಿಶುದ್ಧನು ಪರಿಶುದ್ಧನು ಪರಿಶುದ್ಧನು; ಆತನು ಸರ್ವಶಕ್ತನು, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಂಥವನು ಎಂದು ಹೇಳುತ್ತಿರುತ್ತಾರೆ."(ಪ್ರಕ–೪:೮). ದೂತರುಗಳು ದೇವರ ಪರಿಶುದ್ಧತೆಯನ್ನು ಗ್ರಹಿಸಿಕೊಂಡಿದ್ದಾರೆ. ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು ದೇವರ ಪರಿಶುದ್ಧತೆಯನ್ನು ಗ್ರಹಿಸಿಕೊಂಡಿರಾ?

ಇದರ ಅರ್ಥವೇನೆಂಬುದರ ಕುರಿತು ಒಂದು ಸ್ವಲ್ಪ ಆಲೋಚಿಸೋಣ. ಹಿಂದಿನ ಪಾಠಗಳಲ್ಲಿ ನಾವು ಈಗಾಗಲೇ ನೋಡಿಕೊಂಡಂತೆ ಆದಾಮ ಹವ್ವರು ಪಾಪ ಮಾಡಿದ ನಂತರ ಅವರನ್ನು ಪರದೈಸಿನ ತೋಟದಿಂದ ಹೊರದೊಬ್ಬುವದಕ್ಕೆ ದೇವರ ಪರಿಶುದ್ಧತೆಯು ಕಾರಣವಾಯಿತು. ಕಾಯಿನನ ಯಜ್ಞವನ್ನು ತಿರಸ್ಕರಿಸುವದಕ್ಕೆ ದೇವರ ಪರಿಶುದ್ಧತೆಯೇ ಕಾರಣ. ಜಲಪ್ರಳಯದಿಂದ ನೋಹನ ಕಾಲದ ಜನರನ್ನು ಅಳಿಸಿಹಾಕುವದಕ್ಕೂ ಸಹ ದೇವರ ಪರಿಶುದ್ಧತೆಯೇ ಕಾರಣವಾಗಿತ್ತು. ಇದರ ಮುಂದಿನ ಅವಧಿಯಲ್ಲಿ ದೇವರು ತನಗೆ ವಿರುದ್ಧವಾಗಿ ದಂಗೆಯೇಳುವದಕ್ಕೆ ಪ್ರಯತ್ನಿಸಿದ ಬಾಬೆಲಿನ ಜನರನ್ನು ಚದುರಿಸಿಬಿಟ್ಟು ಲೋಕದ ಭಾಷೆಯನ್ನು ಗಲಿಬಿಲಿ – –ಗೊಳಿಸಿದನು, ಮತ್ತು ಅಬ್ರಹಾಮನ ಕಾಲದಲ್ಲಿ ದುಷ್ಟತನದಲ್ಲಿ ತಮ್ಮ ಸಂತೋಷವನ್ನು ಪಡೆದುಕೊಳ್ಳುತ್ತಿದ್ದ ಸೊದೋಮಿನ ಜನರ ಮೇಲೆ ಆಕಾಶದಿಂದ ಬೆಂಕಿಯ ಮಳೆಯನ್ನು ಸುರಿಸುವದಕ್ಕೆ ದೇವರ ಪರಿಶುದ್ಧತೆಯೇ ಕಾರಣ.

ದುರಂತವೆಂದರೆ, ವಾಸ್ತವಿಕವಾಗಿ ಈ ದಿನದಲ್ಲೂ ಹೆಚ್ಚಿನ ಜನರು ದೇವರ ಪರಿಶುದ್ಧತೆಗೆ ಗೌರವವನ್ನು ಕೊಡುವದಿಲ್ಲ. ದೇವರು ಯಾರೆಂಬುದಾಗಿ ಅವರು ತಿಳಿದುಕೊಂಡಿಲ್ಲ. ಆತನ ಪೂರ್ಣ ನಿರ್ಮಲತ್ವವನ್ನು ಅವರು ಗ್ರಹಿಸಿಕೊಂಡಿಲ್ಲ. ಜನರು ಪಾಪವನ್ನು ಅಭ್ಯಾಸಮಾಡಿಕೊಂಡು ಅದರಲ್ಲಿ ಸಂತೋಷವನ್ನು ಪಡೆಯುವ ರೀತಿಯಲ್ಲಿ ನಾವು ಇದನ್ನು ಕಾಣುತ್ತೇವೆ. ಜನರು ದೇವರ ಸತ್ಯ – –ವನ್ನು ತಿಳಿದುಕೊಳ್ಳುವ ಕ್ರಮದಲ್ಲಿ ಪರಿಶುದ್ಧ ವಾಕ್ಯಗಳನ್ನು ಪರೀಕ್ಷಿಸದೇ ಧಾರ್ಮಿಕ ರೀತಿಯ ವೇಷವನ್ನು ಧರಿಸಿಕೊಂಡಾಗ ದೇವರ ಪರಿಶುದ್ಧತೆಗೆ ತಾವು ಅಂಟಿಕೊಳ್ಳುವ ಪ್ರಾಮುಖ್ಯತೆಯ ಕೊರತೆಯನ್ನು ಸಹ ನಾವು ಕಾಣುತ್ತೇವೆ. ಅನೇಕರು ವಂಚನೆಯ ಮಾತುಗಳಲ್ಲಿ ದೇವರ ಹೆಸರನ್ನು ಸಂಪ್ರದಾಯವಾಗಿ ಉಪಯೋಗಿಸುತ್ತಾರೆ. ಕೇವಲ ತೋರಿಕೆಯಲ್ಲಿ ದೇವರ ಹೆಸರಿನಲ್ಲಿ ಬೇಡಿ – –ಕೊಳ್ಳುತ್ತಾ ಹೀಗೆ ಹೇಳುತ್ತಾರೆ: ಅರೆಬಿಕ್‌ನಲ್ಲಿ "ಬಿನ್ ಇಸಮ್ ಅಲ್ಲಾಹ್"– {ದೇವರ ಹೆಸರಿನಲ್ಲಿ} ಅಥವಾ "ಇನ್‌ಶಾ ಅಲ್ಲಾಹ್"

{ದೇವರ ಚಿತ್ತವಾದರೆ} ಆದರೆ ವಾಸ್ತವಿಕತೆಯಲ್ಲಿ ದೇವರ ಚಿತ್ತವು ಅವರ ಮನಸ್ಸುಗಳಿಂದ ಬಹಳ ದೂರದಲ್ಲಿರುತ್ತದೆ. ದೇವರು ಸ್ಥಾಪಿಸಿರುವ ನೀತಿವಂತಿಕೆಯ ಮಾರ್ಗವನ್ನು ಒಪ್ಪಿಕೊಳ್ಳುವದಕ್ಕೆ ನಿರಾಕರಿಸಿ ದೇವರ ಮುಂದೆ ತಮ್ಮ ಸ್ವಂತ ನೀತಿಯನ್ನು ಸ್ಥಾಪಿಸು –
–ವದಕ್ಕೆ ದಾರಿಯನ್ನು ಹುಡುಕುವದರಿಂದ ಜನರು ದೇವರ ಪರಿಶುದ್ಧತೆಯನ್ನು ಅರ್ಥಮಾಡಿಕೊಳ್ಳುವದಕ್ಕೆ ಸೋತುಹೋಗಿರುವದನ್ನು ನಾವು ಗಮನಿಸುತ್ತೇವೆ. ಮುಂದುವರಿಸಿದ ಉಪವಾಸ, ಪುನರಾವೃತ್ತಿ ಪ್ರಾರ್ಥನೆ, ಅಥವಾ ತೊಳೆಯುವದು ಮತ್ತು ಶುದ್ಧೀಕರಣದ {ಮಜ್ಜನ} ವ್ರತಾಚರಣೆಗಳನ್ನು ಮಾಡುವದರಿಂದ ದೇವರ ಮುಂದೆ ತಮ್ಮನ್ನು ನಿರ್ಮಲರನ್ನಾಗಿ ಮಾಡಿಕೊಳ್ಳಬಹುದೆಂದು ಕೆಲವರು ಆಲೋಚಿಸುತ್ತಾರೆ. ಆದರೆ ಪ್ರವಾದಿಗಳ ಬರವಣಿಗೆಗಳಲ್ಲಿ ನಾವು ಸ್ಪಷ್ಟವಾಗಿ ನೋಡುವ ಹಾಗೆ, ಒಬ್ಬ ವ್ಯಕ್ತಿಯು ಒಳಗೆ ಶುದ್ಧನಾಗಿರು
–ವದನ್ನು ಅಪೇಕ್ಷಿಸುವ **ಪರಿಶುದ್ಧನಾಗಿರುವ ದೇವರಿಗೆ** ಹೊರತೋರಿಕೆಯ ಕ್ರಿಯೆಗಳು ತೃಪ್ತಿಯನ್ನುಂಟುಮಾಡುವದಿಲ್ಲ. ಪ್ರಿಯ ಸ್ನೇಹಿತರೇ, ದೇವರು ಪರಿಶುದ್ಧನು! ಅದಕ್ಕೋಸ್ಕರವೇ ಆತನು ಮೋಶೆಗೆ, **"**ನಿನ್ನ ಕೆರಗಳನ್ನು ತೆಗೆದುಹಾಕು, ನೀನು ನಿಂತಿರುವ ಸ್ಥಳವು **ಪರಿಶುದ್ಧ ಭೂಮಿ"** ಎಂದು ಹೇಳಿದನು.

೨) ಎರಡನೆಯದು, ಉರಿಯುವ ಪೊದೆಯಲ್ಲಿ ದೇವರು ಮೋಶೆಗೆ ಏನು ಹೇಳಿದನೋ ಅದರ ಆಧಾರದ ಮೇಲೆ, ದೇವರು ಪರಿಶುದ್ಧನು ಮಾತ್ರವಲ್ಲ ಆದರೆ ಆತನು **ಒಬ್ಬ ನಂಬಿಗಸ್ತನೂ** ಸಹ ಆಗಿದ್ದಾನೆ ಎಂಬುದನ್ನು ನಾವು ಕಂಡುಕೊಳ್ಳುತ್ತೇವೆ! {ತನ್ನ ಒಡಂಬಡಿಕೆಯನ್ನು ಕಾಪಾಡುವವನು} ದೇವರು ಮೊದಲು ಮೋಶೆಗೆ ಏನು ಹೇಳಿದನೆಂಬುದನ್ನು ನೀವು ಕೇಳಿಸಿಕೊಂಡಿರಾ? ಆತನು ಹೇಳಿದ್ದೇನೆಂದರೆ, **"**ನಾನು ನಿನ್ನ ತಂದೆಯ ದೇವರು, ಅಬ್ರಹಾಮನ ದೇವರು ಇಸಾಕನ ದೇವರು ಮತ್ತು ಯಾಕೋಬನ ದೇವರು.**"** (ವಿಮೋ–೩:೬). ದೇವರ ಸಮೀಪಕ್ಕೆ ಬಂದು ಆತನೊಂದಿಗೆ ಒಂದು ಸಂಬಂಧವನ್ನು ಆನಂದಿಸುವದಕ್ಕೆ ಬಯಸು –
–ವಂತವರ ಹೃದಯಕ್ಕೆ ಈ ಮಾತುಗಳು ಸಂತೋಷವನ್ನುಂಟುಮಾಡುತ್ತವೆ. ಪರಿಶುದ್ಧನಾದ ದೇವರು ಅಬ್ರಹಾಮ ಇಸಾಕ ಮತ್ತು ಯಾಕೋಬರೊಂದಿಗೆ ಒಂದು ಒಡಂಬಡಿಕೆಯನ್ನು ಸ್ಥಾಪಿಸಿದವನಾಗಿದ್ದಾನೆ. ದೇವರು ಒಬ್ಬ ನಂಬಿಗಸ್ತನು; ಆತನು ಎಂದಿಗೂ ತನ್ನ ಸ್ನೇಹಿತರನ್ನು ಬಿಟ್ಟುಬಿಡುವವನಲ್ಲ ಅಥವಾ ಅವರಿಗೆ ದ್ರೋಹ ಮಾಡುವವನಲ್ಲ! ತಾನು ಅಬ್ರಹಾಮ ಇಸಾಕ ಮತ್ತು ಯಾಕೋಬ –
–ರಿಗೆ ಹಾಗೂ ಅವರ ಸಂತಿಯವರಿಗೆ ಮಾಡಿದ ವಾಗ್ದಾನಗಳನ್ನು ನೂರಾರು ವರ್ಷಗಳ ನಂತರವೂ ಸಹ ಆತನು ಮರೆತುಬಿಡಲಿಲ್ಲ.

ನಿಮ್ಮ ವಿಷಯವೇನು? ನೀವು ದೇವರ ನಂಬಿಗಸ್ತಿಕೆಯನ್ನು ಮೆಚ್ಚಿಕೊಳ್ಳುತ್ತೀರಾ? ಅಬ್ರಹಾಮ ಇಸಾಕ ಮತ್ತು ಯಾಕೋಬ ಇವರು
–ಗಳ ಜೊತೆಯಲ್ಲಿ ಮಾತಾಡಿದ ದೇವರೊಂದಿಗೆ ನೀವು ಒಂದು ಆಪ್ತ ಸಂಬಂಧವನ್ನು ಆನಂದಿಸುತ್ತೀರಾ? ಈ ಜೀವಿತದಲ್ಲಿ ಮತ್ತು ಬರಲಿರುವ ಜೀವಿತದಲ್ಲಿ ನಿಜವಾಗಿಯೂ ಸಂತೋಷವಾಗಿರುವದಕ್ಕೆ ಇಚ್ಛಿಸುವಂತ ಯಾರಿಗಾದರೂ ಇದು ಒಂದು ಮುಖ್ಯವಾದ ಪ್ರಶ್ನೆಯಾಗಿದೆ. ನೀವು ಮತಶ್ರದ್ಧೆಯುಳ್ಳವರಾ? ಎಂದು ನಾವು ಕೇಳುವದಿಲ್ಲ. ಯಾಕೆಂದರೆ ಧರ್ಮದ ನಿಯಮಗಳನ್ನು ಅನುಸರಿಸು
–ವಂತಾದ್ದು ಯಾರೊಬ್ಬರನ್ನೂ ಎಂದಿಗೂ ದೇವರ ಮುಂದೆ ನೀತಿವಂತರನ್ನಾಗಿ ಮಾಡುವದಿಲ್ಲ. ನಾವು ನಿಮಗೆ ಕೇಳುವದೇನೆಂದರೆ: ನೀವು ದೇವರೊಂದಿಗೆ ಸರಿಯಾದ ಸಂಬಂಧವನ್ನು ಹೊಂದಿದ್ದೀರಾ? ದೇವರು ಸ್ಥಾಪಿಸಿರುವ ರಕ್ಷಣೆಯ ಮಾರ್ಗದ ಸಂದೇಶವನ್ನು ನೀವು ನಂಬಿದ್ದೀರಾ? **ಒಂದು ಧರ್ಮವನ್ನು ಅನುಸರಿಸುವದು** ಮತ್ತು **ದೇವರೊಂದಿಗೆ ಒಂದು ಸಂಬಂಧವನ್ನು** ಹೊಂದಿಕೊಳ್ಳುವದು ಎರಡೂ ಬೇರೆ ಬೇರೆ ಸಂಗತಿಗಳೆಂಬುದನ್ನು ನೀವು ಕಂಡುಕೊಂಡಿದ್ದೀರಾ?

ಈ ದಿನ ಪ್ರಪಂಚದಲ್ಲಿ ಸಾವಿರಾರು ಧರ್ಮಗಳಿವೆ. ಉದಾಹರಣೆಗೆ; ಬ್ರೆಜಿಲ್ ದೇಶ ಒಂದರಲ್ಲಿಯೇ ನಾಲ್ಕು ಸಾವಿರ ವಿವಿಧ ಧರ್ಮ
–ಗಳು ಮತ್ತು ಪಂಥಗಳಿವೆ! ಎಂದು ಅನುಭವಶಾಲಿಗಳು ನಮಗೆ ತಿಳಿಸುತ್ತಾರೆ. ನಾಲ್ಕು ಸಾವಿರ ಧರ್ಮಗಳು!?! ಆಶ್ಚರ್ಯ! ಅಲ್ಲಿ ನಾಲ್ಕು ಸಾವಿರ ದೇವರುಗಳಿದ್ದಾರಾ? ಅಥವಾ ದೇವರ ಕಡೆಗೆ ನಡೆಸುವಂತ ನಾಲ್ಕು ಸಾವಿರ ದಾರಿಗಳಿವೆಯಾ? ಇಲ್ಲ! ವಾಕ್ಯ ಹೇಳುವದೇನೆಂದರೆ: **"**ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ.**"** (೧ತಿಮೊಥೆ–೨:೫). ಹಾಗಾದರೆ ಈ ದಿನ ಪ್ರಪಂಚದಲ್ಲಿ ಸಾವಿರಾರು ವಿವಿಧ ಧರ್ಮಗಳು ಮತ್ತು ಸಾವಿರಾರು ವಿವಿಧ ಪಂಥಗಳು ಯಾಕಿವೆ? ಇದು ಯಾಕೆಂದರೆ ದೇವರು ಅಬ್ರಹಾಮ ಇಸಾಕ ಮತ್ತು ಯಾಕೋಬರೊಂದಿಗೆ ಸ್ಥಾಪಿಸಿರುವ ಸತ್ಯದ ತಳಹದಿಯನ್ನು ಆದಾಮನ ಸಂತತಿಯವರಲ್ಲಿ ಹೆಚ್ಚಿನವರು ಅಲಕ್ಷಿಸಿದ್ದರು. ಪಾಪದ ಬಲ ಮತ್ತು ದಂಡನೆಯಿಂದ ಆದಾಮನ ಮಕ್ಕಳನ್ನು ಬಿಡುಗಡೆ ಮಾಡುವದಕ್ಕೆ ಲೋಕಕ್ಕೆ ಬರಲಿಕ್ಕಿದ್ದ ಮಧ್ಯವರ್ತಿಯ ಕುರಿತಾಗಿ ದೇವರು ಅಬ್ರಹಾಮ ಮತ್ತು ಅವನ ಸಂತತಿಯವರೊಂದಿಗೆ ಮಾಡಿದಂತ ವಾಗ್ದಾನಗಳ ಕುರಿತು ಅವರು ತಿಳಿದುಕೊಂಡಿರಲಿಲ್ಲ. ಎಂದಿಗೂ ಬದಲಾಗದಿರುವ ದೇವರ ವಾಕ್ಯವನ್ನು ಅವರು ತಿಳಿದಿರಲಿಲ್ಲ. ಅವರು **ಒಬ್ಬ ನಂಬಿಗಸ್ತನನ್ನು** ತಿಳಿದುಕೊಂಡಿರಲಿಲ್ಲ!

೩) ಮೂರನೆಯದಾಗಿ, ದೇವರು ಉರಿಯುವ ಪೊದೆಯ ಬೆಂಕಿಯಲ್ಲಿ ಮೋಶೆಗೆ ಕಾಣಿಸಿಕೊಂಡಾಗ ಇನ್ನೊಂದು ವಿಶೇಷಗುಣ
–ವನ್ನು ಪ್ರದರ್ಶಿಸಿದನು. ಆ ವಿಶೇಷಗುಣವೇ **ಕರುಣೆ**. ದೇವರು ಕೇವಲ ಪರಿಶುದ್ಧನು ಮತ್ತು ಒಬ್ಬ ನಂಬಿಗಸ್ತನು ಮಾತ್ರವಲ್ಲ ಆದರೆ ಆತನು ಒಬ್ಬ **ಕರುಣೆಯುಳ್ಳವನೂ** ಸಹ ಆಗಿದ್ದಾನೆ. ಅದಕ್ಕೋಸ್ಕರವೇ ದೇವರು ಮೋಶೆಗೆ ಇಸ್ರಾಯೇಲ್ ಜನರ ಕುರಿತಾಗಿ ಹೀಗೆ ಹೇಳಿದನು:

**"**ಐಗುಪ್ತದೇಶದಲ್ಲಿರುವ ಜನ್ನ ಜನರ ದುರವಸ್ಥೆಯನ್ನು **ನೋಡೇ ನೋಡಿದ್ದೇನೆ.** ಬಿಟ್ಟೀಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ **ಕೇಳಿಸಿತು;** ಅವರ ದು:ಖವನ್ನೆಲ್ಲಾ **ನಾನು ಬಲ್ಲೆನು.** ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳಗಿಂದ

ತಪ್ಪಿಸುವದಕ್ಕೂ ಆ ದೇಶದಿಂದ ಬಿಡಿಸಿ ಹಾಲೂ ಜೇನೂ ಹರಿಯುವ ವಿಸ್ತಾರವಾದ ಒಳ್ಳೇ ದೇಶಕ್ಕೆ ಅಂದರೆ ಕಾನಾನ್ಯರೂ ಹಿತ್ತಿಯರೂ ಅಮೋರಿಯರೂ ಪೆರಿಜೀಯರೂ ಹಿವ್ವಿಯರೂ ಯೆಬೂಸಿಯರೂ ವಾಸವಾಗಿರುವ ದೇಶಕ್ಕೆ ನಡೆಸಿಕೊಂಡು ಹೋಗುವದಕ್ಕೂ ಇಳಿದುಬಂದಿದ್ದೇನೆ." (ವಿಮೋ–೩:೭,೮).

ಇಸ್ರಾಯೇಲ್ ಜನರನ್ನು ಬಿಡುಗಡೆಮಾಡಿ ಉತ್ತಮವಾದ ದೇಶಕ್ಕೆ ಅವರನ್ನು ಮುನ್ನಡೆಸುವದಕ್ಕೆ ದೇವರು ಯಾಕೆ ಯೋಜನೆ ಮಾಡಿಕೊಂಡಿದ್ದನು? ಇಸ್ರಾಯೇಲ್ಯರು ದೇವರ ಕರುಣೆಗೆ ಅರ್ಹರಾಗಿದ್ದರೋ? ಇತರ ಜನಾಂಗಗಳಿಗಿಂತ ಅವರು ಉತ್ತಮರೋ? ಇಲ್ಲ, ಅವರು ಹಾಗಿರಲಿಲ್ಲ! ಹಾಗಾದರೆ ದೇವರು ಅವರನ್ನು ಬಿಡುಗಡೆಮಾಡಿ ಈ ರೀತಿಯಲ್ಲಿ ಆಶೀರ್ವದಿಸುವದಕ್ಕೆ ಯಾಕೆ ಉದ್ದೇಶಿಸಿದನು? ಯಾಕೆಂದರೆ ಇದು ಕೇವಲ ಆತನ ನಂಬಿಗಸ್ತಿಕೆ ಮತ್ತು ಕರುಣೆ ಮಾತ್ರ. ವಾಕ್ಯವು ಹೇಳುವಂತೆ: "ದೇವರು ಅವರ ನರಳಾಟವನ್ನು ಕೇಳಿ ತಾನು ಅಬ್ರಹಾಮ ಇಸಾಕ ಯಾಕೋಬರಿಗೆ ಮಾಡಿದ ವಾಗ್ದಾನವನ್ನು ನೆನಪಿಗೆ ತಂದುಕೊಂಡು ಇಸ್ರಾಯೇಲ್ಯರನ್ನು ನೋಡಿ ಅವರಲ್ಲಿ ಲಕ್ಷ್ಯವಿಟ್ಟನು." (ವಿಮೋ–೨:೨೪,೨೫). ಹೌದು, **ದೇವರು ಕರುಣೆಯುಳ್ಳವನು!**

೪) ಕೊನೆಯಲ್ಲಿ, ಉರಿಯುವ ಪೊದೆಯ ಕಥೆಯಲ್ಲಿ ನಾವು ಗಮನಿಸಬೇಕಾದ ದೇವರ ಇನ್ನೊಂದು ಅಂಶವು ಇದೆ. ಮೋಶೆಯು ದೇವರಿಗೆ ಆತನ ಹೆಸರೇನೆಂದು ಕೇಳಿರುವದನ್ನು ನಾವು ಆಲಿಸಿದ್ದೇವೆ. ನಿತ್ಯನಾದ ದೇವರ ಸ್ವಭಾವವು ಒಂದು ಏಕ ಹೆಸರಿನಲ್ಲಿ ವಿವ–ರಿಸಲ್ಪಡುವದಕ್ಕಾಗುತ್ತದೋ? ಈ ದೇವರು ತುಂಬಾ ದೊಡ್ಡವನೂ ಪರಿಶುದ್ಧನೂ ನಂಬಿಗಸ್ತನೂ ಮತ್ತು ಕರುಣೆಯುಳ್ಳವನೂ ಆಗಿ–ದ್ದಾನೆ; ಮನುಷ್ಯನು ತನ್ನ ಕಣ್ಣುಗಳಿಂದ ನೋಡುವದಕ್ಕಾಗದಿರುವಂತ ದೇವರಾಗಿದ್ದಾನೆ; ಪ್ರತಿಯೊಂದನ್ನೂ ಸೃಷ್ಟಿಸಿರುವ ಈದೇವರು, ಪ್ರತಿಯೊಂದನ್ನೂ ನೋಡುತ್ತಾನೆ, ಪ್ರತಿಯೊಂದನ್ನೂ ತಿಳಿದಿರುತ್ತಾನೆ, ಮತ್ತು ಏನನ್ನಾದರೂ ಮಾಡುವವನಾಗಿದ್ದಾನೆ. **ಈತನ ಹೆಸ–ರೇನು**? ದೇವರ ಹೆಸರು ಸರಳವಾಗಿ **"ದೇವರು"** {ಅಲ್ಲಾಹ್} ಎಂದು ಕೆಲವರು ಅಂದುಕೊಳ್ಳುತ್ತಾರೆ. ನಿಜವಾಗಿಯೂ ದೇವರು ದೇವರೇ ಆಗಿದ್ದಾನೆ. ಹೇಗೂ, ದೇವರು ಎಂಬುದು ಆತನ **ಹೆಸರಲ್ಲ**. ದೇವರೆಂದರೆ ಆತನೇ ಆಗಿದ್ದಾನೆ. ನಾನೊಬ್ಬ ಮನುಷ್ಯ, ಆದರೆ ಮನುಷ್ಯ ಎನ್ನುವದು ನನ್ನ ಹೆಸರಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ ಎಲ್ಲರಿಗೂ ಗೊತ್ತಿರುವ ಒಂದು ಹೆಸರನ್ನು ಹೊಂದಿದ್ದೇವೆ. **ದೇವರ ಹೆಸರೇನು**? ಮೋಶೆಗೆ ದೇವರು ಏನು ಉತ್ತರ ಕೊಟ್ಟನು? ಇದನ್ನು ಮತ್ತೆ ಓದೋಣ. ದೇವರು ಮೋಶೆಗೆ ಹೀಗೆ ಹೇಳಿದನು:

**"ಇರುವಾತನೇ ಆಗಿದ್ದೇನೆ.** ನೀನು ಇಸ್ರಾಯೇಲ್ಯರಿಗೆ – **ಇರುವಾತನೆಂಬವನು** ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದನು ಎಂದು ಹೇಳ–ಬೇಕು. ದೇವರು ಮೋಶೆಗೆ ಮತ್ತೂ ಹೇಳಿದ್ದೇನಂದರೆ – ನೀನು ಇಸ್ರಾಯೇಲ್ಯರಿಗೆ ನಿಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಮತ್ತು ಯಾಕೋಬರ ದೇವರಾಗಿರುವ ಯೆಹೋವನು ನನ್ನನ್ನು ನಿಮ್ಮ ಬಳಿಗೆ ಕಳುಹಿಸಿದ್ದಾನೆ ಎಂದು ಹೇಳಬೇಕು. **ಇದು ಸದಾಕಾಲಕ್ಕೂ ನನ್ನ ಹೆಸರು;** ಇದು ತಲತಲಾಂತರಕ್ಕೂ ನನ್ನನ್ನು ಸ್ಮರಿಸಬೇಕಾದ ನಾಮ." (ವಿಮೋ–೩:೧೪–೧೫) {ಟಿಪ್ಪಣಿ: ಹೀಬ್ರೂವಿನಲ್ಲಿ **"ಯಾಹ್ವೆ"** ಇಂಗ್ಲೀಷ್‌ನಲ್ಲಿ **"ಲಾರ್ಡ್"** ಉಲೂಫ್‌ನಲ್ಲಿ ಇದರ ಭಾಷಾಂತರ ನಿತ್ಯನಾದವನು}.

ಆತನ ನಿತ್ಯತ್ವದ ಸ್ವಭಾವವನ್ನು ವಿವರಿಸುವಂತ ದೇವರ ಹೆಸರೇನು? ನೀವು ಇದನ್ನು ಕೇಳಿಸಿಕೊಂಡಿರಾ?: **ಕರ್ತನು** {**ನಿತ್ಯನಾದವನು**} ಪರಿಶುದ್ಧ ವಾಕ್ಯಗಳಲ್ಲಿ ಪವ್ರವಾದಿಗಳು ದೇವರ ಗುಣಧರ್ಮಗಳ ನೂರಾರು ಹೆಸರುಗಳನ್ನು ಮತ್ತು ಬಿರುದುಗಳನ್ನು ಸೂಚಿಸಿದ್ದಾರೆ. ಆದರೆ ಕರ್ತನು ಎನ್ನುವ ಈ ಹೆಸರು ಬೇರೆ ಯಾವುದೇ ಹೆಸರಿಗಿಂತಲೂ ಹೆಚ್ಚಾಗಿ ಆರುಸಾವಿರದ ಏನೂರು ಸಲ ಉಪಯೋಗಿಸಲ್ಪ–ಟ್ಟಿದೆ. **"ನಾನೇ"** ದೇವರು ಎಂಬ ಕರ್ತನು ನಿತ್ಯನಾಗಿದ್ದಾನೆ, ಇದ್ದವನು, ಇರುವವನು ಮತ್ತು ಎಂದೆಂದಿಗೂ ಇರುವವನು ಆಗಿ ––ದ್ದಾನೆ! ಆತನು ನಿತ್ಯನಾದವನಾಗಿದ್ದಾನೆ! ಆತನಿಗೆ ಆರಂಭವು ಮತ್ತು ಅಂತ್ಯವು ಇಲ್ಲ. ಆತನಿಗೆ ಮಿತಿಯಿಲ್ಲ. ಆತನಿಗೆ ಸಮಾನ–ರಾದವರಿಲ್ಲ. ಆತನು ತನ್ನ ಸ್ವಂತ ಶಕ್ತಿಯಿಂದ ಅಸ್ತಿತ್ವದಲ್ಲಿರುವವನಾಗಿದ್ದಾನೆ! ಆತನು ನಿನ್ನೆ ಏನಾಗಿದ್ದನೋ ಈ ದಿನವೂ ಅದೇ ಆಗಿದ್ದಾನೆ. ಮತ್ತು ಎಂದೆಂದಿಗೂ ಆತನು ಅದೇ ಆಗಿರುತ್ತಾನೆ. ಆತನು ಎಂದಿಗೂ ಬದಲಾಗುವವನಲ್ಲ. ಕರ್ತನು {ನಿತ್ಯನಾದವನು} ಎಂಬುದು ಆತನ ಹೆಸರು!

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು **ಕರ್ತನನ್ನು** ತಿಳಿದಿದ್ದೀರೋ? **ಆತನ ಪರಿಶುದ್ಧತೆಯನ್ನು** ನೀವು ಗ್ರಹಿಸಿಕೊಂಡಿದ್ದೀರೋ? ಆತನ ನಂಬಿಗಸ್ತಿಕೆಯಲ್ಲಿ {ಸಂಬಂಧಗಳಲ್ಲಿ; ಆತನ ಒಡಂಬಡಿಕೆಗಳನ್ನು ಕಾಪಾಡಿಕೊಳ್ಳುವದರಲ್ಲಿ} ನೀವು ಆನಂದಿಸುತ್ತಿದ್ದೀರೋ? ಆತನ ಕರುಣೆಯನ್ನು ನೀವು ಪಡೆದುಕೊಂಡಿದ್ದೀರೋ? ಆತನ ವಾಕ್ಯವನ್ನು ನೀವು ನಂಬುತ್ತೀರೋ? ಅಬ್ರಹಾಮ ಇಸಾಕ ಮತ್ತು ಯಾಕೋಬನ ದೇವರೊಂದಿಗಿನ ಒಂದು ಆಪ್ತ ಸಂಬಂಧದಲ್ಲಿ ನೀವು ಪ್ರವೇಶಿಸಿದ್ದೀರೋ? ಉರಿಯುವ ಪೊದೆಯಲ್ಲಿ ಮೋಶೆ ––ಯೊಂದಿಗೆ ಮಾತಾಡಿದ ಯೆಹೋವನನ್ನು ನೀವು ತಿಳಿದಿದ್ದೀರೋ?

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು, ದೇವರ ಚಿತ್ತವಾದರೆ ಮುಂದಿನ ಸಲ ಮೋಶೆಯ ಕಥೆಯನ್ನು ಮುಂದುವರಿಸಿ ಐಗುಪ್ತದ ದುಷ್ಟ ಅರಸನಾದ ಫರೋಹನ ಬಳಿಗೆ ಇವನನ್ನು ದೇವರು ಹೇಗೆ ಕಳಿಸಿದನೆಂಬುದನ್ನು ನೋಡೋಣ. ದೇವರು ಮೋಶೆಯೊಂದಿಗೆ ಮಾತಾಡಿದ ಈ ಮಾತುಗಳನ್ನು ವಿಚಾರಮಾಡುವದನ್ನು ಮುಂದುವರಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:
**"ನಾನು ಇರುವಾತನೇ ಆಗಿದ್ದೇನೆ. . .ಇರುವಾತನೆಂಬವನು. . .ಇದು ಸದಾಕಾಲಕ್ಕೂ ನನ್ನ ಹೆಸರು!"** (ವಿಮೋ–೩: ೧೪, ೧೫)

ಪಾಠ ೩೧

# ಫರೋಹ – ಯೆಹೋವನೆಂಬವನು ಯಾರು?

ವಿಮೋಚನಕಾಂಡ ೪–೭

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ತೋರಾದಲ್ಲಿನ ಎರಡನೆಯ ಪುಸ್ತಕದಲ್ಲಿರುವದನ್ನು ಈ ದಿನ ನಾವು ಮುಂದುವರಿಸುತ್ತಿದ್ದೇವೆ, ಅದು **ದೇವರ ಪ್ರವಾದಿಗಳು, ಮೋಶೆ, ಮತ್ತು ಐಗುಪ್ತದಲ್ಲಿನ ಇಸ್ರಾಯೇಲ್ ಜನರ** ಕಥೆಯನ್ನು ನಮಗೆ ತಿಳಿಸುತ್ತದೆ. ಹಿಂದಿನ ಪಾಠಗಳಲ್ಲಿ, ಐಗುಪ್ತದ ಅರಸನಾದ ಫರೋ –ಹನು ಇಸ್ರಾಯೇಲ್ಯರನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡು ಹೇಗೆ ಹಿಂಸಿಸಿದನೆಂಬುದನ್ನು ನಾವು ನೋಡುತ್ತೇವೆ. ಹೇಗೂ, ಫರೋಹನು ಮಾಡುತ್ತಿದ್ದ ದುಷ್ಟತನವನ್ನು ಬುಡಮೇಲು ಮಾಡುವದಕ್ಕೆ ದೇವರು ಒಂದು ಯೋಜನೆಯನ್ನು ಮಾಡಿಕೊಂಡನು. ಫರೋಹನ ಕೈಯೊಳಗಿಂದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಅವರೊಳಗಿಂದಲೇ ಮೋಶೆ ಎಂಬ ಒಬ್ಬ ಮನುಷ್ಯನನ್ನು ಉಪ –ಯೋಗಿಸುವದಕ್ಕೆ ದೇವರು ಉಪಾಯ ಮಾಡಿದನು.

ಐಗುಪ್ತದ ಎಲ್ಲಾ ತಿಳುವಳಿಕೆಯಲ್ಲಿ ಮೋಶೆಯು ಶಿಕ್ಷಿತನಾದನೆಂಬುದನ್ನು ನಾವು ಕಲಿತುಕೊಂಡಿದ್ದೇವೆ. ಮೋಶೆಯು ನಲವತ್ತು ವರುಷದವನಾದಾಗ ತನ್ನ ಸ್ವಂತ ವಿಧಾನಗಳಿಂದ ತನ್ನ ಜನರನ್ನು ಬಿಡಿಸುವದಕ್ಕೆ ಅವನು ಪ್ರಯತ್ನಿಸಿದನು. ಹೇಗೂ ಮೋಶೇಯ ಪರಿಶ್ರಮಗಳು ಸಮಸ್ಯೆಗಳನ್ನು ಮಾತ್ರ ಉಂಟುಮಾಡಿದವು. ಫರೋಹನಿಂದ ತಪ್ಪಿಸಿಕೊಂಡು ಓಡಿಹೋಗಿ ಅರಣ್ಯದಲ್ಲಿ ಬಚ್ಚಿಟ್ಟು –ಕೊಳ್ಳುವಂತೆ ಇವು ಅವನನ್ನು ಬಲವಂತಗೊಳಿಸಿದವು. ದೇವರು ತನಗೆ ಬಲವನ್ನು ಕೊಡದ ಹೊರತು ಇಸ್ರಯೇಲ್ ಜನರನ್ನು ಬಿಡುಗಡೆಗೊಳಿಸುವದಕ್ಕೆ ತನಗೆ ಶಕ್ತಿಯಿಲ್ಲ ಮತ್ತು ತಾನೊಬ್ಬ ಕೇವಲ ಮನುಷ್ಯ ಮಾತ್ರದವನು ಎನ್ನುವದನ್ನು ಮೋಶೆಯು ತನ್ನಲ್ಲಿ ತಿಳಿದುಕೊಳ್ಳಬೇಕಾಗಿತ್ತು. ಹಾಗಾಗಿ, ಮೋಶೆಯು ನಲವತ್ತು ವರುಷಗಳವರೆಗೆ ಅರಣ್ಯದಲ್ಲಿ ವಾಸಿಸುತ್ತಾ ತನ್ನ ಮಾವನ ಕುರಿಮಂದೆ –ಯನ್ನು ಕಾಯಬೇಕಾಯಿತು.

**ಮೋಶೆಯು ಎಂಭತ್ತು ವರುಷದವನಾಗಿದ್ದಾಗ ಒಂದು ದಿನ ದೇವರು ಸೀನಾಯಿ ಬೆಟ್ಟದ ಮೇಲೆ ಉರಿಯುಬ ಪೊದೆಯೊಳಗೆ ಅವನಿಗೆ ಕಾಣಿಸಿಕೊಂಡನು.** ಪೊದೆಯು ಉರಿಯುತ್ತಿತ್ತು ಆದರೆ ಅದು ಸುಟ್ಟುಹೋಗಲಿಲ್ಲ. ಮೋಶೆಯು ಇದನ್ನು ನೋಡಿದಾಗ ಆಶ್ಚರ್ಯ –ಗೊಂಡನು. ಇದನ್ನು ಪರೀಕ್ಷಿಸುವದಕ್ಕೆ ಅವನು ಅದರ ಹತ್ತಿರ ಹೋಗುತ್ತಿದ್ದಂತೆಯೇ, **"**ನಾನು ನಿನ್ನ ತಂದೆಯ ದೇವರು, ಅಬ್ರ – –ಹಾಮ ಇಸಾಕ ಮತ್ತು ಯಾಕೋಬರ ದೇವರು**"** ಎಂಬ ದೇವರ ಧ್ವನಿಯನ್ನು ಕೇಳಿಸಿಕೊಂಡನು. ಮೋಶೆಯು ಹೆದರಿಕೆಯಿಂದ ನಡುಗುತ್ತಾ ಅದನ್ನು ನೋಡುವದಕ್ಕೆ ಧೈರ್ಯವಿಲ್ಲದವನಾದನು. ಅನಂತರ ದೇವರು ಅವನಿಗೆ, **"**ನಿನ್ನ ಕಾಲಿನ ಕೆರಗಳನ್ನು ತೆಗೆದು –ಹಾಕು; ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ. ಐಗುಪ್ತದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇ ನೋಡಿ – –ದ್ದೇನೆ. ಬಿಟ್ಟೀಮಾಡಿಸುವವರ ವಿಷಯದಲ್ಲಿ ಅವರು ಇಟ್ಟ ಮೊರೆಯು ನನಗೆ ಕೇಳಿಸಿತು; ಅವರ ದು:ಖವನ್ನೆಲ್ಲಾ ನಾನು ಬಲ್ಲೆನು. ಆದ್ದರಿಂದ ಅವರನ್ನು ರಕ್ಷಿಸುವದಕ್ಕೆ ನಾನು ಇಳಿದುಬಂದಿದ್ದೇನೆ. ಈಗ ನೀನು ಹೋಗು, **ನಾನು ನಿನ್ನನ್ನು ಐಗುಪ್ತಕ್ಕೆ ಕಳಿಸುತ್ತಿದ್ದೇನೆ."**

ಈಗ ತೋರಾದಲ್ಲಿರುವದನ್ನು ಮುಂದುವರಿಸಿ ಐಗುಪ್ತದ ಅರಸನ ಬಳಿಗೆ ಮೋಶೆಯನ್ನು ಕಳಿಸುವದರೊಂದಿಗೆ ದೇವರು ತನ್ನ ಕೆಲಸ –ವನ್ನು ಹೇಗೆ ಮುಕ್ತಾಯಗೊಳಿಸಿದನೆಂಬುದನ್ನು ನೋಡೋಣ. ಫರೋಹ ಮತ್ತು ಐಗುಪ್ತ ಜನರ ಮುಂದೆ ಮಾತಾಡುವದಕ್ಕೆ ಮೋಶೆಗೆ ಜ್ಞಾನವನ್ನೂ ಮತ್ತು ಅಧಿಕಾರವನ್ನು ಕೊಡುವದಕ್ಕೆ ದೇವರು ಮೋಶೆಯೊಂದಿಗೆ ಹೇಗೆ ವಾಗ್ದಾನ ಮಾಡಿದನೆಂಬುದನ್ನು ಮೂರನೆಯ ಅಧ್ಯಾಯದಲ್ಲಿ ನಾವು ಕೇಳಿಸಿಕೊಂಡಿದ್ದೇವೆ. ಆದಾಗ್ಯೂ ಹೋಗುವದಕ್ಕೆ ಮೋಶೆಯು ಹೆದರಿಕೊಂಡಿದ್ದನ್ನು ನಾಲ್ಕನೆಯ ಅಧ್ಯಾಯದಲ್ಲಿ ನಾವು ನೋಡುತ್ತೇವೆ.

ವಿಮೋಚನಕಾಂಡ ಪುಸ್ತಕದ ನಾಲ್ಕನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**"**ಅದಕ್ಕೆ ಮೋಶೆ – ಚಿತ್ತೈಸು; ಅವರು ನನ್ನನ್ನು ನಂಬದೆ ನನ್ನ ಮಾತಿಗೆ ಕಿವಿಗೊಡದೆ ಹೋದಾರು; ಯೆಹೋವನು ನಿನಗೆ

ಕಾಣಿಸಿಕೊಂಡೇ ಇಲ್ಲವೆಂದು ಹೇಳಾರು ಎನ್ನಲು, ಯೆಹೋವನು ಅವನನ್ನು **ಅದೇನು ನಿನ್ನ ಕೈಯಲ್ಲಿರುವದು** ಎಂದು ಕೇಳಿದನು. ಅವನು – ಇದು ಕೋಲು ಅಂದನು. ಯೆಹೋವನು ಅವನಿಗೆ – ಅದನ್ನು ನೆಲದಲ್ಲಿ ಬಿಸಾಡು ಎಂದು ಹೇಳಿದನು. ನೆಲದಲ್ಲಿ ಬಿಸಾಡುತ್ತಲೇ ಅದು ಹಾವಾಯಿತು; ಮೋಶೆ ಅದಕ್ಕೆ ಭಯಪಟ್ಟು ಓಡಿಹೋದನು. ಯೆಹೋವನು ಅವನಿಗೆ – ನಿನ್ನ ಕೈಚಾಚಿ ಅದರ ಬಾಲವನ್ನು ಹಿಡಿ ಎಂದು ಹೇಳಿದನು. ಹಿಡಿದಾಗ ಅದು ಕೋಲಾಯಿತು. ಆಗ ಯೆಹೋವನು ಅವನಿಗೆ – **ಇದರಿಂದ ಅವರು ತಮ್ಮ ಪಿತೃಗಳಾದ ಅಬ್ರಹಾಮ ಇಸಾಕ ಯಾಕೋಬರ ದೇವರಾಗಿರುವ ಯೆಹೋವನು ನಿನಗೆ ಕಾಣಿಸಿದ್ದು ನಿಜ ಎಂಬದನ್ನು ನಂಬುವರು** ಎಂದು ಹೇಳಿದನು." (ವಿಮೋ–೪:೧–೫).

"ಆದರೆ ಮೋಶೆ ಯೆಹೋವನಿಗೆ – ಸ್ವಾಮೀ ನಾನು ಮೊದಲಿನಿಂದಲೂ ನೀನು ದಾಸನ ಸಂಗಡ ಮಾತಾಡಿದ ಮೇಲೆಯೂ ವಾಕ್ಚಾತುರ್ಯವಿಲ್ಲವದನು; ನನ್ನ ಮಾತೂ ನಾಲಿಗೆಯೂ ಮಂದವಾಗಿವೆ ಎಂದು ಹೇಳಲು ಯೆಹೋವನು ಅವನಿಗೆ– **ಮನುಷ್ಯರಿಗೆ ಬಾಯಿಕೊಟ್ಟವರಾರು**? ಒಬ್ಬನು ಮೂಕನಾಗಿ ಮತ್ತೊಬ್ಬನು ಕಿವುಡನಾಗಿ ಒಬ್ಬನು ಕಣ್ಣುಳ್ಳವನಾಗಿ ಮತ್ತೊಬ್ಬನು ಕಣ್ಣಿಲ್ಲದವನಾಗಿ ಇರ –ಬೇಕೆಂದು ನೇಮಿಸಿದವರಾರು? ಯೆಹೋವನಾಗಿರುವ ನಾನಲ್ಲವೇ. ಹೀಗಿರುವದರಿಂದ ನೀನು ಹೊರಟಹೋಗು; ನಾನು ನಿನ್ನ ಬಾಯಿಗೆ ಸಹಾಯವಾಗಿದ್ದು ನೀನು ಮಾತಾಡಬೇಕಾದದ್ದನ್ನು ಬೋಧಿಸುವೆನು ಎಂದು ಹೇಳಿದನು. ಅದಕ್ಕೆ ಮೋಶೆ – ಸ್ವಾಮಿ ಈ ಕಾರ್ಯಕ್ಕೆ ಬೇರೊಬ್ಬನನ್ನು ನೇಮಿಸಬೇಕು ಎನ್ನಲು ಯೆಹೋವನು ಅವನ ಮೇಲೆ ಕೋಪಗೊಂಡು – ನಿನ್ನ ಅಣ್ಣನಾಗಿರುವ ಲೇವಿ –ಯನಾದ **ಆರೋನನಿದ್ದಾನಲ್ಲಾ,** ಅವನು ಚೆನ್ನಾಗಿ ಮಾತಾಡಬಲ್ಲವನೆಂದು ನನಗೆ ಗೊತ್ತದೆ; ಅವನೇ ನಿನ್ನನ್ನು ಎದುರಗೊಳ್ಳುವದಕ್ಕೆ ಬರುತ್ತಾನೆ; ನಿನ್ನನ್ನು ಕಂಡು ಸಂತೋಷಿಸುವನು. ನೀನು ಅವನ ಸಂಗಡ ಮಾತಾಡಿ ಹೇಳಬೇಕಾದ ಮಾತುಗಳನ್ನು ಅವನಿಗೆ ತಿಳಿಸ –ಬೇಕು. **ನಾನು ನಿನ್ನ ಬಾಯಿಗೂ ಅವನ ಬಾಯಿಗೂ ಸಹಾಯವಾಗಿದ್ದು ನೀವು ಮಾಡಬೇಕಾದದ್ದನ್ನು ಬೋಧಿಸುವೆನು**. ಅವನೇ ನಿನಗೋಸ್ಕರ ಜನರ ಸಂಗಡ ಮಾತಾಡುವನು. ಅವನು ನಿನಗೆ ಬಾಯಂತಿರುವನು; ನೀನು ಅವನಿಗೆ ದೇವರಂತಿರುವಿ. ಇದಲ್ಲದೆ ಈ ಕೋಲನ್ನು ಕೈಯಲ್ಲಿ ತೆಗೆದುಕೊಂಡು ಹೋಗಬೇಕು; ಇದರಿಂದಲೇ ಆ ಮಹತ್ಕಾರ್ಯಗಳನ್ನು ಮಾಡುವಿ ಅಂದನು." (ವಿಮೋ–೪:೧೦–೧೭).

"ಆಮೇಲೆ ಮೋಶೆ ತನ್ನ ಮಾವನಾದ ಇತ್ರೋನನ ಬಳಿಗೆ ಹಿಂದಿರುಗಿ ಬಂದು – ಅಪ್ಪಣೆಯಾದರೆ ನಾನು ಐಗುಪ್ತದೇಶದಲ್ಲಿರುವ ಸ್ವಜನರ ಬಳಿಗೆ ಹೋಗಿ ಅವರು ಜೀವದಿಂದಿದ್ದಾರೋ ಏನೋ ನೋಡುವೆನು ಎಂಬದಾಗಿ ಅವನಿಗೆ ಹೇಳಲು ಇತ್ರೋನನು – ನೀನು ಹೋಗಿ ಬರಬಹುದು ಅಂದನು. ಮಿದ್ಯಾನ್ ದೇಶದಲ್ಲಿ ಯೆಹೋವನು ಮೋಶೆಗೆ – ನೀನು ಐಗುಪ್ತದೇಶಕ್ಕೆ ತಿರಿಗಿ ಹೋಗು ನಿನ್ನ ಪ್ರಾಣವನ್ನು ತೆಗೆಯಬೇಕೆಂದಿದ್ದವರೆಲ್ಲರೂ ಸತ್ತುಹೋದರು ಎಂದು ಹೇಳಿದ್ದರಿಂದ ಮೋಶೆ ತನ್ನ ಹೆಂಡತಿಯನ್ನೂ ಮಕ್ಕಳನ್ನೂ ಕತ್ತೆಯ ಮೇಲೆ ಹತ್ತಿಸಿ ಕರೆದುಕೊಂಡು **ಐಗುಪ್ತದೇಶಕ್ಕೆ ಹೊರಟುಹೋದನು**. ಅವನು ದೇವದಂಡವನ್ನು ಕೈಯಲ್ಲಿ ತೆಗೆದುಕೊಂಡನು. ಯೆಹೋವನು ಮೋಶೆಗೆ ಇಂತೆಂದನು – ನೀನು ಐಗುಪ್ತದೇಶಕ್ಕೆ ತಿರಿಗಿ ಬಂದಾಗ ನಾನು ನಿನಗೆ ತೋರಿಸಿಕೊಟ್ಟ ಮಹತ್ಕಾರ್ಯಗಳ –ನ್ನೆಲ್ಲಾ ಫರೋಹನ ಮುಂದೆ ಮಾಡಬೇಕು. ಆದರೂ ನಾನು ಅವನ ಹೃದಯವನ್ನು ಕಠಿಣಪಡಿಸುವೆನಾದದರಿಂದ ಅವನು ಜನ –ರನ್ನು ಹೋಗಗೊಡಿಸುವದಿಲ್ಲ. ಆದಕಾರಣ ನೀನು ಫರೋಹನಿಗೆ –ಇಸ್ರಾಯೇಲ್ ಜನವು ನನಗೆ ಚೊಚ್ಚಲಮಗನಂತೆ ಇದೆ ಎಂದು ತಿಳಿದುಕೋ; ನನ್ನ ಮಗನು ನಿನ್ನ ದೇಶದಿಂದ ಹೊರಟು ನನ್ನನ್ನು ಆರಾಧಿಸುವದಕ್ಕೆ ಅವನಿಗೆ ಅಪ್ಪಣೆಕೊಡಬೇಕು; ಅದಕ್ಕೆ ನೀನು ಒಪ್ಪದೆ ಹೋದರೆ ನಾನು ನಿನಗಿರುವ ಚೊಚ್ಚಲಮಗನನ್ನು ಸಾಯಿಸುವೆನೆಂದು ಯೆಹೋವನು ಹೇಳುತ್ತಾನೆಂದು ತಿಳಿಸಬೇಕು." (ವಿಮೋ–೪:೧೮–೨೩)

"ಇದಲ್ಲದೆ ಯೆಹೋವನು ಆರೋನನಿಗೆ – ನೀನು ಮೋಶೆಯನ್ನು ಎದುರುಗೊಳ್ಳುವದಕ್ಕೆ ಅರಣ್ಯಕ್ಕೆ ಹೊರಟುಹೋಗು ಎಂದು ಹೇಳಲಾಗಿ ಅವನು ಹೋಗಿ ದೇವರ ಬೆಟ್ಟದಲ್ಲೇ ಅವನನ್ನು ಎದುರುಗೊಂಡು ಮುದ್ದಿಟ್ಟನು. ಆಗ ಮೋಶೆ ತನ್ನನ್ನು ಯೆಹೋವನು ಯಾವ ಮಾತುಗಳನ್ನು ಹೇಳುವದಕ್ಕೆ ಕಳುಹಿಸಿದನೋ ಯಾವ ಮಹತ್ಕಾರ್ಯಗಳನ್ನು ಮಾಡುವದನ್ನು ಆಜ್ಞಾಪಿಸಿದನೋ ಅವುಗಳ –ನ್ನೆಲ್ಲಾ ಆರೋನನಿಗೆ ತಿಳಿಸಿದನು. ತರುವಾಯ **ಮೋಶೆ ಆರೋನರು ಹೋಗಿ ಇಸ್ರಾಯೇಲ್ಯರ ಹಿರಿಯರನ್ನೆಲ್ಲಾ ಕೂಡಿಸಿದರು.** ಯೆಹೋವನು ಮೋಶೆಗೆ ಹೇಳಿದ ಮಾತುಗಳನ್ನೆಲ್ಲಾ ಆರೋನನು ಅವರಿಗೆ ತಿಳಿಸಿ ಜನರ ಮುಂದೆ ಆ ಮಹತ್ಕಾರ್ಯಗಳನ್ನು ಮಾಡಲು ಜನರು ನಂಬಿದರು. **ಯೆಹೋವನು ತಮ್ಮನ್ನು ಕಟಾಕ್ಷಿಸಿ ತಮ್ಮ ದುರವಸ್ಥೆಯನ್ನು ಮನಸ್ಸಿಗೆ ತೆಗೆದುಕೊಂಡನೆಂಬದನ್ನು ಇಸ್ರಾಯೇಲ್ಯರು ಕೇಳಿದಾಗ ತಲೆಬಾಗಿ ನಮಸ್ಕರಿಸಿದರು."** (ವಿಮೋ–೪:೨೭–೩೧).

"ಬಳಿಕ ಮೋಶೆ ಆರೋನರು ಫರೋಹನ ಸನ್ನಿಧಿಗೆ ಹೋಗಿ–ಇಸ್ರಾಯೇಲ್ಯರ ದೇವರಾದ ಯೆಹೋವನು– ನನ್ನ ಜನರು ನನಗಾಗಿ 'ಅರಣ್ಯದೊಳಗೆ ಜಾತ್ರೆ ನಡಿಸುವಂತೆ **ಅವರಿಗೆ ಅಪ್ಪಣೆ ಕೊಡಬೇಕೆಂದು** ಹೇಳಿದ್ದಾನೆ ಅಂದರು. ಅದಕ್ಕೆ ಫರೋಹನು – **ಯೆಹೋವ –ನೆಂಬವನು ಯಾರು**? ನಾನು ಅವನ ಮಾತನ್ನು ಕೇಳಿ ಇಸ್ರಾಯೇಲ್ಯರನ್ನು ಹೋಗಗೊಡಿಸುವದೇಕೆ**? ಯೆಹೋವನು ಯಾರೋ ನನಗೆ ಗೊತ್ತಿಲ್ಲ. ಇದು ಮಾತ್ರವಲ್ಲದೆ ಇಸ್ರಾಯೇಲ್ಯರು ಹೊರಟುಹೋಗುವದಕ್ಕೆ ನಾನು ಒಪ್ಪುವದೇ ಇಲ್ಲ ಅಂದನು."** (ವಿಮೋ–೫:೧–೨).

ಸಂಕ್ಷಿಪ್ತವಾಗಿ ಇಲ್ಲಿಗೆ ಮುಗಿಸೋಣ. ದೇವರು ಮೋಶೆ ಮತ್ತು ಆರೋನರ (ಅರೆಬಿಕ್‌ನಲ್ಲಿ ಹಾರುನ್) ಮೂಲಕವಾಗಿ ಹೇಗೆ

ಮಾತಾಡಿದನೆಂಬುದನ್ನು ನಾವು ನೋಡುತ್ತೇವೆ. ಫರೋಹನು ದೇವರ ಮಾತನ್ನು ನಂಬಿದನೋ? ಇಲ್ಲ, ಅವನು ನಂಬಲಿಲ್ಲ! ಅವನು ಮೋಶೆ ಆರೋನರಿಗೆ ಹೇಗೆ ಉತ್ತರ ಕೊಟ್ಟನೆಂಬುದನ್ನು ನೀವು ಕೇಳಿಸಿಕೊಂಡಿರಾ? ಆತನು ಹೇಳಿದ್ದೇನೆಂದರೆ, **"ಯೆಹೋವನು ಯಾರು,** ನಾನು ಅವನ ಮಾತನ್ನು ಕೇಳಿ ಇಸ್ರಾಯೇಲ್ಯರನ್ನು ಹೋಗಗೊಡಿಸುವದೇಕೆ? ಯೆಹೋವನು ಯಾರೋ ನನಗೆ ಗೊತ್ತಿಲ್ಲ ಮತ್ತು ಇಸ್ರಾಯೇಲ್ಯರು ಹೊರಟುಹೋಗುವದಕ್ಕೆ ನಾನು ಒಪ್ಪುವದೇ ಇಲ್ಲ!."

ಫರೋಹನು ಯೆಹೋವನನ್ನು (ನಿತ್ಯನಾದವನನ್ನು) ತಿಳಿದಿರಲಿಲ್ಲ. ಫರೋಹನು ಮತ್ತು ಐಗುಪ್ತದ ಎಲ್ಲಾ ಜನರು **ಒಂದು ಧರ್ಮವನ್ನು ಹೊಂದಿದ್ದರು,** ಆದರೆ **ಅವರು ದೇವರನ್ನು ತಿಳಿದಿರಲಿಲ್ಲ.** ಅವರು ತಮ್ಮ ಪೂರ್ವಿಕರ ಧರ್ಮವನ್ನು ಅನುಸರಿಸುವದರ ಕುರಿತು ಮಾತ್ರ ಆಸಕ್ತಿ ಹೊಂದಿದವರಾಗಿದ್ದರು. ಅವರು ಅಬ್ರಹಾಮ ಇಸಾಕ ಮತ್ತು ಯಾಕೋಬರ ದೇವರಾದ ನಿಜ ದೇವರನ್ನು ತಿಳಿದುಕೊಂಡು ಜೀವಿಸುವದರ ಕುರಿತಾಗಿ ಆಸಕ್ತಿ ಹೊಂದಿದವರಾಗಿರಲಿಲ್ಲ. ಫರೋಹನು ಮತ್ತು ಐಗುಪ್ತ್ಯರು ತಮ್ಮ ಸಂಪ್ರದಾಯ –ಗಳಲ್ಲಿ ತಮ್ಮ ವಿಗ್ರಹಗಳಲ್ಲಿ ತಮ್ಮ ಪೂಜಾ ಕಲ್ಲು ಮರಗಳಲ್ಲಿ ಮತ್ತು ತಮ್ಮ ಧಾರ್ಮಿಕ ನಾಯಕರುಗಳಲ್ಲಿ ತಮ್ಮ ಭರವಸೆಯನ್ನು ಇಟ್ಟವರಾಗಿದ್ದರು, ಆದರೆ ಅವರು **ಯೆಹೋವನಲ್ಲಿ ಮತ್ತು ಆತನ ನಿತ್ಯತ್ವದ ವಾಕ್ಯದಲ್ಲಿ ಭರವಸೆಯನ್ನಿಟ್ಟಿರಲಿಲ್ಲ.**

ಹಾಗಾಗಿ ಆರನೆಯ ಅಧ್ಯಾಯದಲ್ಲಿ ನಾವು ಹೀಗೆ ಓದುತ್ತೇವೆ:

"ಅದಕ್ಕೆ ಯೆಹೋವನು – **ನಾನು ಫರೋಹನಿಗೆ ಮಾಡುವದನ್ನು ನೀನು ಈಗ ನೋಡುವಿ.** ಅವನು ನನ್ನ ಭುಜಬಲದಿಂದ ಅವರನ್ನು ಹೋಗಗೊಡಿಸುವನು; ನನ್ನ ಭುಜಬಲದಿಂದ ಪೀಡಿತನಾಗಿ ಅವರನ್ನು ತನ್ನ ದೇಶದಿಂದ ಹೊರಡಿಸುವನು ಅಂದನು. ಇದಲ್ಲದೆ ದೇವರು ಮೊಶೆಯ ಸಂಗಡ ಮಾತಾಡಿ ಇಂತೆಂದನು – **ನಾನು ಯೆಹೋವನು;** ಅಬ್ರಹಾಮ ಇಸಾಕ ಯಾಕೋಬರಿಗೆ ನಾನು ಸರ್ವಶಕ್ತನಾದ ದೇವರೆಂಬ ಹೆಸರುಳ್ಳವನಾಗಿ ಕಾಣಿಸಿಕೊಂಡನೇ ಹೊರತು ಯೆಹೋವನು ಎಂಬ ನನ್ನ ಹೆಸರಿನಿಂದ ಅವರಿಗೆ ಗೋಚರವಾಗಲಿಲ್ಲ. ನಾನು ಅವರಿಗೆ – ನೀವು ಪ್ರವಾಸವಾಗಿರುವ ಕಾನಾನ್ ದೇಶವನ್ನು ನಿಮಗೇ ಕೊಡುವೆನೆಂಬದಾಗಿ ದೃಢವಾಗಿ ವಾಗ್ದಾನ ಮಾಡಿದೆನಷ್ಟೆ. ಐಗುಪ್ತರು ದಾಸರನ್ನಾಗಿ ಮಾಡಿಕೊಂಡಿರುವ ಇಸ್ರಾಯೇಲ್ಯರ ಗೋಳು ಈಗ ನನಗೆ ಕೇಳಿಸಿತು. ನಾನು ಮಾಡಿದ ವಾಗ್ದಾನವನ್ನು ನೆನಸಿಕೊಂಡೆನು. ಆದದರಿಂದ ನೀನು ಇಸ್ರಾಯೇಲ್ಯರಿಗೆ ನನ್ನ ಹೆಸರಿನಲ್ಲಿ ಹೇಳಬೇಕಾದದ್ದೇನೆಂದರೆ – **ನಾನು ಯೆಹೋವನು;** ಐಗುಪ್ತ್ಯರು ನಿಮ್ಮಿಂದ ಮಾಡಿಸುವ ಬಿಟ್ಟೀಕೆಲಸಗಳನ್ನು ನಾನು ತಪ್ಪಿಸಿ ಅವರಲ್ಲಿ ನಿಮಗಿರುವ ದಾಸತ್ವವನ್ನು ತೊಲಗಿಸಿ ನನ್ನ ಕೈಚಾಚಿ ಅವರಿಗೆ ಮಹಾಶಿಕ್ಷೆಗಳನ್ನು ವಿಧಿಸಿ ನಿಮ್ಮನ್ನು ರಕ್ಷಿಸುವೆನು. ನಾನು ನಿಮ್ಮನ್ನು ನನ್ನ ಪ್ರಜೆಯೆಂದು ಆರಿಸಿ –ಕೊಂಡು ನಿಮಗೆ ದೇವರಾಗಿರುವೆನು. ಐಗುಪ್ತ್ಯರು ಮಾಡಿಸುವ ಬಿಟ್ಟೀಸೇವೆಯನ್ನು ನಾನು ನಿಮಗೆ ತಪ್ಪಿಸಿದಾಗ **ಯೆಹೋವನು ಎಂಬ ನಾನೇ** ನಿಮ್ಮ ದೇವರಾಗಿದ್ದೇನೆಂಬದು ನಿಮಗೆ ತಿಳಿದುಬರುವದು. ಇದಲ್ಲದೆ ಅಬ್ರಹಾಮ ಇಸಾಕ ಯಾಕೋಬರಿಗೆ ಕೊಡು – ವೆನೆಂದು ನಾನು ಪ್ರಮಾಣವಾಗಿ ಹೇಳಿದ ದೇಶಕ್ಕೆ ನಿಮ್ಮನ್ನು ಸೇರಿಸಿ ಅದನ್ನು ನಿಮಗೆ ಸ್ವದೇಶವನ್ನಾಗಿ ಕೊಡುವೆನು; **ಯೆಹೋವನೇ ನಾನು;** ಹೀಗೆ ಅವರಿಗೆ ಹೇಳು ಅಂದನು." (ವಿಮೋ–೬:೧–೮).

**"ಫರೋಹನು ನಿಮ್ಮ ಮಾತನ್ನು ಕೇಳುವದಿಲ್ಲ;** ಆಗ ನಾನು ಐಗುಪ್ತದೇಶದವರನ್ನು ಬಾಧಿಸಿ ಅವರಿಬೆ ಮಹಾ ಶಿಕ್ಷೆಗಳನ್ನು ವಿಧಿಸಿ ನನ್ನ ಜನರಾಗಿರುವ ಇಸ್ರಾಯೇಲ್ಯರ ಸೈನ್ಯವನ್ನೆಲ್ಲಾ ಐಗುಪ್ತದೇಶದಿಂದ ಹೊರತರುವೆನು. ನಾನು ಐಗುಪ್ತ್ಯರಿಗೆ ವಿರೋಧವಾಗಿ ಕೈಚಾಚಿ ಅವರ ಮಧ್ಯದಿಂದ ಇಸ್ರಾಯೇಲ್ಯರನ್ನು ಹೊರತಂದಾಗ **ನಾನು ಯೆಹೋವನೆಂಬದನ್ನು** ಐಗುಪ್ತ್ಯರು ತಿಳಿದುಕೊಳ್ಳುವರು ಅಂದನು. ಯೆಹೋವನ ಆಜ್ಞೆಯಂತೆಯೇ ಮೋಶೆ ಆರೋನರು ಮಾಡಿದರು. ಅವರು ಫರೋಹನ ಹತ್ತಿರ ಮಾತಾಡಿದ ಕಾಲದಲ್ಲಿ ಮೋಶೆ ಎಂಭತ್ತು ವರುಷದವನೂ ಆರೋನನು ಎಂಭತ್ತುಮೂರು ವರುಷದವನೂ ಆಗಿದ್ದರು." (ವಿಮೋ–೭:೪–೭)

ಹೀಗೆ, ದೇವರು ಫರೋಹನನ್ನೂ ಮತ್ತು ಐಗುಪ್ತದ ಜನರನ್ನೂ ನ್ಯಾಯತೀರ್ಪಿನ ಬಲವಾದ ಕ್ರಿಯೆಗಳೊಂದಿಗೆ ತೀರ್ಪುಕೊಡುವದಕ್ಕೆ ಹೇಗೆ ಉಪಾಯ ಮಾಡಿದನೆಂಬುದನ್ನು ನಾವು ನೋಡಿದೆವು. ದೇವರು ತನ್ನ ನೀತಿವಂತಿಕೆಯಲ್ಲಿ, ಐಗುಪ್ತ್ಯರು ಇಸ್ರಾಯೇಲ್ಯರ ಮೇಲೆ ಬರಮಾಡಿದ ನೂರಾರು ವರ್ಷಗಳ ಸಂಕಟಗಳಿಗಾಗಿ ಅವರು ಹಿಂದಿರುಗಿಸಿ ಸಂದಾಯ ಮಾಡುವದಕ್ಕೆ ಉದ್ದೇಶಿಸಿದ್ದನು. ಮೋಶೆಯ ಮೂಲಕವಾಗಿ ಅದ್ಭುತಗಳನ್ನು ಮಾಡುವದಕ್ಕೆ ದೇವರು ಮಾಡಿದ್ದ ಉಪಾಯದ ಮೂಲಕವಾಗಿಯೂ ಸಹ ಯೆಹೋವನು ತನ್ನ ಬಲವನ್ನೂ ಮತ್ತು ಮಹಿಮೆಯನ್ನೂ ಪ್ರದರ್ಶಿಸುವದಕ್ಕೆ ಇಚ್ಚಿಸಿದ್ದನು. ಹಾಗಾಗಿ, **ಅಬ್ರಹಾಮ ಇಸಾಕ ಮತ್ತು ಯಾಕೋಬರೊಂದಿಗೆ ಮಾತಾಡಿದ ದೇವರಾದ ಯೆಹೋವನು ಜೀವಿಸುವವನೂ ಮತ್ತು ನಿಜವಾದ ದೇವರೂ** ಆಗಿದ್ದಾನೆಂಬುದನ್ನು ಐಗುಪ್ತದ ಜನರಿಗೂ ಮತ್ತು ಇಡೀ ಲೋಕಕ್ಕೆಲ್ಲಾ ತೋರಿಸಿದನು.

ನಾವು ಈಗಾಗಲೇ ಕಲಿತುಕೊಂಡಿರುವಂತೆ, ದೇವರು ಕರುಣೆಯುಳ್ಳವನೂ ಮತ್ತು ಯಾರೊಬ್ಬರೂ ನಾಶವಾಗುವದನ್ನು ಇಷ್ಟಪಡದ –ವನು ಆದರೆ ಪ್ರತಿಯೊಬ್ಬರೂ ಪಶ್ಚಾತ್ತಾಪಪಟ್ಟು ಸತ್ಯವನ್ನು ತಿಳಿದುಕೊಂಡು ಸ್ವೀಕರಿಸಿಕೊಳ್ಳುವದನ್ನು ಬಯಸುವವನೂ ಆಗಿದ್ದಾನೆ. ಅದಕ್ಕಾಗಿಯೇ ಮೋಶೆಯ ಮೂಲಕವಾಗಿ ತಾನು ಮಾತಾಡಿದ್ದನ್ನು ದೃಢಪಡಿಸುವದಕ್ಕೆ ಅದ್ಭುತಗಳನ್ನು ಮಾಡುವದಕ್ಕೆ ಆತನು ಯೋಜನೆ ಮಾಡಿಕೊಂಡನು. ಮೋಶೆಯ ಮೂಲಕವಾಗಿ ಮಾತಾಡಿದ **ದೇವರು ಒಬ್ಬನೇ ನಿಜ ದೇವರಾಗಿದ್ದಾನೆಂಬುದನ್ನು ಯಾವುದೇ ಅನುಮಾನವಿಲ್ಲದೇ** ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕೆಂದು ಕರ್ತನು ಇಷ್ಟಪಟ್ಟನು!.

ಐಗುಪ್ತ್ಯರು ದೇವರುಗಳೆಂದು ಆಲೋಚಿಸಿಕೊಂಡಿದ್ದ ನೂರಾರು ವಿಗ್ರಹಗಳು ಐಗುಪ್ತದಲ್ಲಿದ್ದದ್ದನ್ನು ನಾವು ಜ್ಞಾಪಿಸಿಕೊಳ್ಳುವದು ಅಗತ್ಯ. ಹೇಗೂ, ಕೇವಲ ಒಬ್ಬನೇ ನಿಜವಾದ ದೇವರಿದ್ದಾನೆ ಎಂಬುದನ್ನು ಅವರು ತಿಳಿದುಕೊಳ್ಳಬೇಕೆಂದು ದೇವರು ಬಯಸಿದ್ದನು. **ಆ ಒಬ್ಬನೇ ನಿಜವಾದ ದೇವರು** ಪ್ರವಾದಿಗಳನ್ನು ವಾಕ್ಯಗಳನ್ನು ಮತ್ತು ಲೋಕದ ರಕ್ಷಕನನ್ನು ಸಾಧನಗಳನ್ನಾಗಿ ಮಾಡುವ –ದರ ಮೂಲಕ **ಅಬ್ರಹಾಮ ಇಸಾಕ ಮತ್ತು ಯಾಕೋಬರನ್ನು** ಒಂದು ಜನಾಂಗವನ್ನಾಗಿ ಮಾಡುತ್ತೇನೆಂದು ವಾಗ್ದಾನ ಮಾಡಿ ತನ್ನ **ಒಡಂಬಡಿಕೆಯನ್ನು ಸ್ಥಾಪಿಸಿದವನೆಂಬುದನ್ನು** ಅವರು ತಿಳಿದುಕೊಳ್ಳಬೇಕೆಂದು ದೇವರು ಬಯಸಿದ್ದನು.

ಹೇಗೂ, ಒಬ್ಬನೇ ನಿಜ ದೇವರನ್ನು ತಿಳಿದುಕೊಳ್ಳುವದರಲ್ಲಿ ಫರೋಹನು ಆಸಕ್ತಿಯುಳ್ಳವನಾಗಿರಲಿಲ್ಲ. ಅದಕ್ಕಾಗಿಯೇ, ದೇವರು ತನ್ನ ಪ್ರವಾದಿಗಳಾದ ಮೋಶೆ ಮತ್ತು ಆರೋನರ ಮೂಲಕವಾಗಿ ಮಾತಾಡುವದಕ್ಕೆ ಪ್ರಯತ್ನಿಸಿದಾಗ, ಫರೋಹನು ಉತ್ತರವಾಗಿ ಅವರಿಗೆ, **ಯೆಹೋವನೆಂಬವನು ಯಾರು,** ಅವನಿಗೆ ವಿಧೇಯನಾಗಿ ಇಸ್ರಾಯೇಲ್ಯರನ್ನು ಹೋಗಗೊಡಿಸಬೇಕೋ? ಯೆಹೋವನೆಂಬವನು ಯಾರೋ ನನಗೆ ಗೊತ್ತಿಲ್ಲ ಮತ್ತು ನಾನು ಇಸ್ರಾಯೇಲ್ಯರನ್ನು ಹೋಗಗೊಡಿಸುವದಿಲ್ಲ!" (ವಿಮೋ–೫:೨) ಎಂದು ಹೇಳಿದನು.

ಯೆಹೋವನೆಂಬವನು ನನಗೆ ಗೊತ್ತಿಲ್ಲ ಎಂದು ಹೇಳಿದಾಗ ಫರೋಹನು ನಿಜವನ್ನೇ ಹೇಳಿದ್ದನು! ಅಬ್ರಹಾಮ ಇಸಾಕ ಮತ್ತು ಯಾಕೋಬರೊಂದಿಗೆ ಒಂದು ನಿತ್ಯವಾದ ಒಡಂಬಡಿಕೆಯನ್ನು ಸ್ಥಾಪಿಸಿದ್ದ ದೇವರನ್ನು ಅವನು ತಿಳಿದವನಾಗಿರಲಿಲ್ಲ. ಫರೊಹನು **ಒಂದು ಧರ್ಮವನ್ನು** ಹೊಂದಿದ್ದನು ಆದರೆ ದೇವರೊಂದಿಗೆ **ಒಂದು ಸಂಬಂಧವನ್ನು** ಹೊಂದಿರಲಿಲ್ಲ. ಒಬ್ಬನೇ ನಿಜ ದೇವರಿಂದ ಬಂದಂತಹ ಸತ್ಯಕ್ಕೆ ಫರೋಹನ ಹೃದಯವು ಮುಚ್ಚಿತ್ತು. ಹಾಗಾಗಿ, ಮೋಶೆ ಮತ್ತು ಆರೋನರ ಮೂಲಕ ದೇವರು ಮಾತಾಡಿದ ಸಂದೇಶವನ್ನು ಅವನು ತಿರಸ್ಕರಿಸಿದನು.

ಪ್ರಸ್ತುತ ಈ ದಿನದಲ್ಲಿ ಲೋಕದಲ್ಲಿ ಅನೇಕ ಜನರು ಫರೋಹನ ದಾರಿಯನ್ನು ಅನುಸರಿಸುತ್ತಿದ್ದಾರೆ. ಅವರು ದೇವರ ಕುರಿತು ಮಾತಾಡುತ್ತಾರೆ, ಆದರೆ ಯೆಹೋವನ ಮಾತಿಗೆ ಅವರು ಗಮನಕೊಡುವದಿಲ್ಲ. ಇದರ ಫಲವಾಗಿ **ಅವರು ದೇವರನ್ನು ತಿಳಿದುಕೊ–ಳ್ಳಲಿಲ್ಲ**. ದೇವರ ಕುರಿತಾದ ಕೆಲವು ಸಂಗತಿಗಳನ್ನು ಅವರು ತಿಳಿದಿದ್ದಾರೆ ಆದರೆ **ಸ್ವತ: ದೇವರನ್ನು** ತಿಳಿದುಕೊಂಡಿಲ್ಲ. ತಮ್ಮ ಪೂರ್ವಿ–ಕರಿಂದ ತಮಗೆ ಕೊಡಲ್ಪಟ್ಟಿರುವ ಒಂದು ಧರ್ಮವನ್ನು ಅವರು ಹೊಂದಿದ್ದಾರೆ ಆದರೆ ಮೋಶೆಗೆ ತನ್ನನ್ನೇ ಪ್ರಕಟಿಸಿಕೊಂಡ ಜೀವಿ–ಸುವ ದೇವರೊಂದಿಗೆ ಒಂದು ನಿಜವಾದ ಸಂಬಂಧವನ್ನು ಅವರು ಹೊಂದಿಕೊಂಡಿಲ್ಲ.

ನಿಮ್ಮ ವಿಷಯವೇನು? **ನೀವು ಕರ್ತನನ್ನು ತಿಳಿದಿದ್ದೀರಾ?** ಆತನು ತನ್ನ ಪ್ರವಾದಿಗಳ ಮೂಲಕವಾಗಿ ಏನು ಹೇಳಿದ್ದಾನೆಂಬುದನ್ನು ನೀವು ನಿಜವಾಗಿಯೂ ತಿಳಿದಿದ್ದೀರೋ? ನೀವು ಎಂದಾದರೂ ದೇವರ ಪ್ರವಾದಿಗಳ ಬರವಣಿಗೆಗಳನ್ನು ಪ್ರಾಮಾಣಿಕವಾಗಿ ಗಮನಿಸಿ–ದ್ದೀರೋ? ನೀವು ನಿಜವಾಗಿಯೂ ದೇವರಾದ ಕರ್ತನನ್ನು ತಿಳಿದುಕೊಂಡಿದ್ದೀರೋ? ನಿಮ್ಮ ಹೃದಯಪೂರಕವಾಗಿ ಆತನನ್ನು ಪ್ರೀತಿಸಿದ್ದೀರೋ? ಆತನಿಗೆ ವಿಧೇಯರಾಗುವದಕ್ಕೆ ನೀವು ಇಚ್ಛಿಸುತ್ತೀರೋ? ಅಥವಾ ನೀವೂ ಫರೋಹನ ಹಾಗೆ ಕೇವಲ ನಿಮ್ಮ ಪೂರ್ವಿಕರ ಧರ್ಮವನ್ನು ಅನುಸರಿಸುವವರಾಗಿರುತ್ತೀರೋ?

ಓಹ್ ಪ್ರೀತಿಯ ಸ್ನೇಹಿತರೇ, ನಮ್ಮಲ್ಲಿ ಯಾರೊಬ್ಬರೂ ನಿತ್ಯನಾದ ದೇವರ ವಾಕ್ಯ ಕೇಳುವದನ್ನು ಮತ್ತು ನಂಬುವದನ್ನು ತಿರಸ್ಕರಿಸಿದ ಫರೋಹನ ಹಾಗಿರುವದು ಬೇಡ. ದೇವರ ಎಚ್ಚರಿಕೆಯ ಈ ವಾಕ್ಯವನ್ನು ಕೇಳಿಸಿಕೊಳ್ಳಿರಿ: **"ಸಹೋದರರೇ ನೋಡಿಕೊಳ್ಳಿರಿ, ಜೀವ – ಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು!"** (ಇಬ್ರಿಯ–೩:೧೨). ಈ ದಿನ ನೀವು ಆತನ ಶಬ್ದಕ್ಕೆ ಕಿವಿಗೊಟ್ಟರೆ, **"ಯೆಹೋವನು ಯಾರು ನಾನು ಆತನ ಮಾತು ಕೇಳಬೇಕೋ?"** ಎಂದು ಫರೋಹನು ಹೇಳಿದಂತೆ ನಿಮ್ಮ ಹೃದಯಗಳನ್ನು ಕಠಿಣಪಡಿಸಿಕೊಳ್ಳಬೇಡಿರಿ.

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಾದರೆ ನಮ್ಮ ಮುಂದಿನ ಅಧ್ಯಯನದಲ್ಲಿ ಈ ಮನೋಹರವಾದ ಕಥೆ – –ಯನ್ನು ಮುಂದುವರಿಸುತ್ತೇವೆ ಮತ್ತು ದೇವರೇ ಕರ್ತನೆಂದು ಫರೋಹನು ಮತ್ತು ಐಗುಪ್ತ್ಯರು ತಿಳಿದುಕೊಳ್ಳುವಂತೆ ದೇವರು ಅವರ ಮೇಲೆ ಹತ್ತು ಉಪದ್ರವಗಳನ್ನು ಹೇಗೆ ತಂದನೆಂಬುದನ್ನು ನಾವು ನೋಡೋಣ.

ಆತನ ಪರಿಶುದ್ಧ ವಾಕ್ಯದಿಂದ ಈ ಗಂಭೀರವಾದ ಎಚ್ಚರಿಕೆಗೆ ನೀವು ಗಮನ ಕೊಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಈ ದಿನ ನೀವು ಆತನ ಶಬ್ದಕ್ಕೆ ಕಿವಿಗೊಟ್ಟರೆ, ನಿಮ್ಮ ಹೃದಯಗಳನ್ನು ಕಠಿಣಪಡಿಸಿಕೊಳ್ಳಬೇಡಿರಿ!"** (ಇಬ್ರಿಯ–೩:೧೫)

ಪಾಠ ೩೨

# ಉಪದ್ರವಗಳು

ವಿಮೋಚನಕಾಂಡ ೭–೧೦

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

**"ಒಂದು ಮೊಟ್ಟೆಯು ಬಂಡೆಯೊಂದಿಗೆ ಕುಸ್ತಿಯಾಡುವದಿಲ್ಲ!"** ಈ ದಿನ ನಾವು ಪರಿಶುದ್ಧ ವಾಕ್ಯಗಳಲ್ಲಿ ಯಾವುದನ್ನು ಅಧ್ಯಯನ ಮಾಡುತ್ತೇವೋ ಅದರ ಸಾರಾಂಶವನ್ನು (ಉಲೂಫ್‌ನ) ಈ ಗಾದೆಯು ತಿಳಿಸುತ್ತದೆ. ಒಂದು ಮೊಟ್ಟೆ ಮತ್ತು ಒಂದು ಬಂಡೆ ಒಂದ –ಕ್ಕೊಂದು ತಗಲಿದಾಗ ಏನಾಗುತ್ತದೆ? ಮೊಟ್ಟೆ ಒಡೆದುಹೋಗುತ್ತದೆ; ಬಂಡೆಯು ಬದಲಾಗದೇ ಹಾಗೆ ಉಳಿದುಕೊಳ್ಳುತ್ತದೆ. "ಆತನು ಬಂಡೆಯು; ಆತನ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡೆಸುವದೆಲ್ಲಾ ನ್ಯಾಯ." (ಧರ್ಮೋ–೩೨:೪) ಎಂಬುದಾಗಿ ಪ್ರವಾದಿಯಾದ ಮೋಶೆಯು ಯಾರ ವಿಷಯದಲ್ಲಿ ಬರೆದಿದ್ದಾನೋ ಆಂತಹ ದೇವರಾದ ಕರ್ತನ ವಿರುದ್ಧವಾಗಿ ಹೋರಾಡುವದಕ್ಕೆ ಐಗುಪ್ತದ ಅರಸನಾದ ಫರೋಹನು ಪ್ರಯತ್ನಿಸಿದಾಗ ಏನಾಯಿತೆಂಬುದನ್ನು ಈ ದಿನ ನಾವು ನೋಡುತ್ತೇವೆ.

ಹಿಂದಿನ ಅಧ್ಯಯನದಲ್ಲಿ, ಐಗುಪ್ತದಲ್ಲಿನ ಅವರ ಗುಲಾಮತನದಿಂದ ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ಫರೋಹನ ಬಳಿಗೆ ಮೋಶೆ ಆರೋನರನ್ನು ದೇವರು ಹೇಗೆ ಕಳಿಸಿದನೆಂಬುದನ್ನು ನಾವು ನೋಡಿದ್ದೇವೆ. ಅವರು ಫರೋಹನಿಗೆ: "ನನ್ನ ಜನರು ಅರಣ್ಯದೊಳಗೆ ನನ್ನನ್ನು ಆರಾಧಿಸುವದಕ್ಕೆ ಹೋಗುವದಕ್ಕೆ ಅವರಿಗೆ ಅಪ್ಪಣೆಕೊಡು ಎಂದು ಇಸ್ರಾಯೇಲ್ಯರ ದೇವರಾದ ಕರ್ತನು ಹೇಳುತ್ತಾನೆ" ಎಂಬುದಾಗಿ ಹೇಳಿದರು. ಇದಕ್ಕೆ ಉತ್ತರವಾಗಿ ಫರೋಹನು ಅವರಿಗೆ: "ಯೆಹೋವನು ಯಾರು, ಆತನ ಮಾತನ್ನು ಕೇಳಿ ಇಸ್ರಾ – –ಯೆಲ್ಯರನ್ನು ನಾನು ಹೋಗಗೊಡಿಸಬೇಕೋ? ಯೆಹೋವನೆಂಬವನು ಯಾರೋ ನನಗೆ ಗೊತ್ತಿಲ್ಲ ಮತ್ತು ನಾನು ಇಸ್ರಾಯೇಲ್ಯ – –ರನ್ನು ಹೋಗಗೊಡಿಸುವದಿಲ್ಲ!" ಎಂದನು (ವಿಮೋ–೫:೨). ಸಂಕ್ಷಿಪ್ತವಾಗಿ ಹೇಳುವದಾದರೆ, ಇಸ್ರಾಯೇಲ್ ಜನರನ್ನು ಬಿಡು – –ಗಡೆಗೊಳಿಸುವದಕ್ಕೆ ದೇವರು ನಿಶ್ಚಯಿಸಿಕೊಂಡಿದ್ದನು, ಈ ಕಾರಣದಿಂದ ಫರೋಹನು ಅವರನ್ನು ತನ್ನ ಗುಲಾಮರನ್ನಾಗಿ ಇಟ್ಟು – –ಕೊಳ್ಳುವದಕ್ಕೆ ನಿಶ್ಚಯಿಸಿಕೊಂಡನು. "ಒಂದು ಮೊಟ್ಟೆಯು ಒಂದು ಬಂಡೆಯೊಂದಿಗೆ ಕುಸ್ತಿಯಾಡುವದಕ್ಕಾಗುವದಿಲ್ಲ!"

ಈಗ ತೋರಾದ ಎರಡನೆಯ ಭಾಗವಾದ ವಿಮೋಚನಕಾಂಡ ಪುಸ್ತಕದ ಏಳನೆಯ ಅಧ್ಯಾಯಕ್ಕೆ ಹೋಗಿ ಫರೋಹನು ದೇವರೊಂ –ದಿಗೆ ಹೇಗೆ "ಹೋರಾಡಿದನೆಂಬುದನ್ನು" ನೋಡೋಣ. ವಾಕ್ಯವು ಹೀಗೆ ಹೇಳುತ್ತದೆ:

"ಮೋಶೆ ಆರೋನರು ಫರೋಹನ ಬಳಿಗೆ ಹೋಗಿ ಯೆಹೋವನು ತಮಗೆ ಆಜ್ಞಾಪಿಸಿದಂತೆಯೇ ಮಾಡಿದರು. ಆರೋನನು ತನ್ನ ಕೋಲನ್ನು ಫರೋಹನ ಮತ್ತು ಅವನ ಪರಿವಾರದವರ ಮುಂದೆ ನೆಲದಲ್ಲಿ ಬಿಸಾಡಿದಾಗ ಅದು ಸರ್ಪವಾಯಿತು. ಫರೋಹನು ಐಗುಪ್ತದೇಶದ ವಿದ್ವಾಂಸರನ್ನೂ ಮಂತ್ರಗಾರರನ್ನೂ ಕರಿಸಿದಾಗ ಆ ಜೋಯಿಸರೂ ತಮ್ಮ ಗುಪ್ತವಿದ್ಯೆಗಳಿಂದ ಅದೇ ರೀತಿಯಾಗಿ ಮಾಡಿದರು. ಅವರು ತಮ್ಮ ತಮ್ಮ ಕೋಲುಗಳನ್ನು ನೆಲಕ್ಕೆ ಬಿಸಾಡಲು ಅವು ಸರ್ಪಗಳಾದವು ಆದರೆ ಆರೋನನ ಕೋಲು ಅವರ ಕೋಲುಗಳನ್ನು ನುಂಗಿಬಿಟ್ಟಿತು." (ವಿಮೋ–೭:೧೦–೧೨)

**ಫರೋಹ ಮತ್ತು ದೇವರ ನಡುವಿನ "ಕುಸ್ತಿ ಪಂದ್ಯದ"** ಆರಂಭವನ್ನು ಗಮನಿಸಿರಿ {ಟಿಪ್ಪಣಿ: ಕುಸ್ತಿಯು ಸೆನೆಗಲ್‌ನ ಸಾಂಪ್ರದಾಯಿಕ ಆಟ}. **ಒಂದು ಕಡೆಯಲ್ಲಿ ತನ್ನ ವಿದ್ವಾಂಸರೂ ಮತ್ತು ಮಂತ್ರಗಾರರೊಂದಿಗಿರುವ ಫರೋಹ.** {ಉಲೂಫ್‌ನಲ್ಲಿ: ಮಾರಾಬೌಟ್ಸ್, ಆತ್ಮೀಕ ಮಾರ್ಗದರ್ಶಿಗಳು} **ಇನ್ನೊಂದು ಕಡೆಯಲ್ಲಿ ಮೋಶೆ ಆರೋನರಿರುವದನ್ನು ನಾವು ನೋಡುತ್ತೇವೆ.** ಆರೋನನ ಕೋಲು ಅದ್ಭುತ – –ಕರವಾಗಿ ಹಾವಾದ ನಂತರ ಫರೋಹನ ಮಂತ್ರಗಾರರು {ಮಾರಾಬೌಟ್ಸ್} ತಮ್ಮ ಮೋಡಿಗಳಿಂದ ಅದ್ಭುತವನ್ನು ಅನುಕರಣ ಮಾಡಿದರು. "ಪ್ರತಿಯೊಬ್ಬರೂ ತಮ್ಮ ಕೋಲನ್ನು ಬಿಸಾಡಿದರು, ಅದು ಹಾವಾಯಿತು. **ಆದರೆ ಆರೋನನ ಕೋಲು ಅವರ ಕೋಲುಗಳನ್ನು ನುಂಗಿಬಿಟ್ಟಿತು."**

ಇದೆಲ್ಲಾದರ ಕುರಿತು ನಾವು ಏನು ಹೇಳುತ್ತೇವೆ? ಮೋಶೆ ಮತ್ತು ಆರೋನರು ಮಾಡಿದ ಅದ್ಭುತಗಳು ದೇವರಿಂದ ಬಂದವುಗಳೆಂದು

ನಾವು ತಿಳಿದಿದ್ದೇವೆ. ಹೇಗೂ, ಫರೋಹನ ಮಾರಾಬೌಟ್ಸ್ ಸಹ ಅದ್ಭುತಗಳನ್ನು ಮಾಡಿದರು. ಅವರು ಆ ಶಕ್ತಿಯನ್ನು ಎಲ್ಲಿಂದ ಪಡೆದುಕೊಂಡರು? ಅವರು ಇದನ್ನು ದೇವರಿಂದ ಪಡೆದುಕೊಂಡರೋ? ಇಲ್ಲ! ದೇವರು ತನ್ನ ವಿರುದ್ಧವಾಗಿ ಹೋರಾಡುವದಿಲ್ಲ. ಹಾಗಾಗಿ ಅವರಿಗೆ ಶಕ್ತಿ ಎಲ್ಲಿಂದ ಬಂತು? ಫರೋಹನ ಮಾರಾಬೌಟ್ಸ್ ಮೋಸದ ಕಲೆಯ ಮೇಲೆ ಮತ್ತು **ಸೈತಾನನಿಂದ ಬಂದಂತ** ಶಕ್ತಿಯ ಮೇಲೆ ಆತುಕೊಂಡಿದ್ದರು.

ಸೈತಾನನು ತುಂಬಾ ವಂಚಕನೂ ಮತ್ತು ಜನರನ್ನು ಮೋಸಗೊಳಿಸುವದನ್ನು ಪ್ರೀತಿಸುವವನೂ ಆಗಿದ್ದಾನೆ; ಮತ್ತು ಅವನು ತುಂಬಾ ಶಕ್ತಿವಂತನೂ ಮತ್ತು ಅದ್ಭುತಗಳನ್ನೂ ಸಹ ಮಾಡುವವನೆಂಬುದನ್ನು ಪರಿಶುದ್ಧ ವಾಕ್ಯಗಳು ನಮಗೆ ತೋರಿಸುತ್ತವೆ. ಹೇಗೂ, ಸೈತಾನ –ನಿಗಿಂತಲೂ ದೇವರು ಹೆಚ್ಚು ಶಕ್ತಿವಂತನೆಂಬುದಕ್ಕೆ ಯಾವುದು ನಿಶ್ಚಿತವೆಂದರೆ, ಆರೋನನ ಕೋಲು ಫರೋಹನ ಮಾರಾಬೌಟ್ಸ್‌ಗಳ ಕೋಲುಗಳನ್ನು ನುಂಗಿಬಿಟ್ಟದ್ದು. ಹೇಗೂ, ಫರೋಹನು ಪಶ್ಚಾತ್ತಾಪಪಟ್ಟು ದೇವರ ಮಾತನ್ನು ಕೇಳುವದಕ್ಕೆ ಇದ್ಯಾವುದೂ ಕಾರಣ – –ವಾಗಲಿಲ್ಲ.

ವಾಕ್ಯವು ಏನು ಹೇಳುತ್ತದೆಂಬುದನ್ನು ಕೇಳಿಸಿಕೊಳ್ಳಿರಿ:

"ತರುವಾಯ ಯೆಹೋವನು ಮೋಶೆಗೆ, ಫರೋಹನ ಹೃದಯವು ಮೊಂಡಾಗಿದೆ; ತಾನು ಜನರಿಗೆ ಅಪ್ಪಣೆ ಕೊಡುವದಿಲ್ಲವೆನ್ನುತ್ತಾನೆ. ಬೆಳಿಗ್ಗೆ ಫರೋಹನ ಬಳಿಗೆ ಹೋಗು; ಅವನು ನದಿಗೆ ಹೋಗುತ್ತನಲ್ಲಾ. ಸರ್ಪವಾಗಿ ಮಾಡಲ್ಪಟ್ಟ ಆ ಕೋಲನ್ನು ನೀನು ಕೈಯಲ್ಲಿ ಹಿಡಿದುಕೊಂಡು ಅವನನ್ನು ಎದುರುಗೊಳ್ಳುವದಕ್ಕೆ ನೈಲ್ ನದೀತೀರಲ್ಲಿ ನಿಂತುಕೊಂಡು ಹೀಗನ್ನಬೇಕು – ಇಬ್ರಿಯರ ದೇವರಾದ ಯೆಹೋವನು ನನ್ನನ್ನು ನಿನ್ನ ಬಳಿಗೆ ಕಳುಹಿಸಿ ಅರಣ್ಯದಲ್ಲಿ ತನ್ನನ್ನು ಆರಾಧಿಸುವಂತೆ ತನ್ನ ಜನರಿಗೆ ಅಪ್ಪಣೆ ಕೊಡಬೇಕೆಂದು ನಿನಗೆ ಆಜ್ಞಾಪಿಸಿದನಷ್ಟೆ; ಈವರೆಗೂ ನೀನು ಲಕ್ಷ್ಯಕ್ಕೆ ತರಲಿಲ್ಲ. ಆದದರಿಂದ ಯೆಹೋವನು ಮತ್ತೆ ಹೇಳುವದೇನೆಂದರೆ – **ನೀನು ನನ್ನನ್ನು ಯೆಹೋವನೆಂದು ತಿಳಿದುಕೊಳ್ಳುವದಕ್ಕಾಗಿ** ನನ್ನ ಸೇವಕನ ಕೈಯಲ್ಲಿರುವ ಕೋಲಿನಿಂದ ನೈಲ್ ನದಿಯ ನೀರನ್ನು ಹೊಡಿಸುವೆನು; ಆಗ ಅದು ರಕ್ತವಾಗುವದು. ಯೆಹೋವನು ಮೋಶೆಯ ಸಂಗಡ ಮಾತಾಡಿ – ನೀನು ಆರೋನನಿಗೆ – ನಿನ್ನ ಕೋಲನ್ನು ತೆಗೆದು – ಕೊಂಡು ಐಗುಪ್ತದೇಶದಲ್ಲಿರುವ ಹೊಳೆ ಕಾಲಿವೆ ಕೆರೆ ಕೊಳ ಮೊದಲಾದ ನೀರಿರುವ ಎಲ್ಲಾ ಸ್ಥಳಗಳ ಮೇಲೆ ಅದನ್ನು ಚಾಚು ಎಂದು ಹೇಳಬೇಕು; ಅವನು ಚಾಚುವಾಗ **ಆ ನೀರೆಲ್ಲಾ ರಕ್ತವಾಗುವದು;** ಐಗುಪ್ತದೇಶದಲ್ಲೆಲ್ಲಾ ಮರದ ಪಾತ್ರೆಗಳಲ್ಲಿಯೂ ಕಲ್ಲಿನ ಪಾತ್ರೆಗಳಲ್ಲಿಯೂ ಇರುವ ನೀರೂ ರಕ್ತವಾಗುವದು ಅಂದನು. ಮೋಶೆ ಆರೋನರು ಯೆಹೋವನು ತಮಗೆ ಆಜ್ಞಾಪಿಸಿದಂತೆಯೇ ಮಾಡಿದರು. ಆರೋನನು ಫರೋಹನ ಮತ್ತು ಅವನ ಪರಿವಾರದ ಮುಂದೆ ಕೋಲನ್ನು ಎತ್ತಿ ನದಿಯಲ್ಲಿರುವ ನೀರನ್ನು ಹೊಡೆ – –ಯಲು ಅದೆಲ್ಲಾ ರಕ್ತವಾಯಿತು. ಅದರಲ್ಲಿದ್ದ ಮೀನುಗಳು ಸತ್ತುಹೋದವು; ನದಿಯು ಹೊಲಸು ನಾರಿದ್ದರಿಂದ ಐಗುಪ್ತ್ಯರು ಅದರಲ್ಲಿ ಕುಡಿಯಲಾರದೆ ಹೋದರು. ಐಗುಪ್ತದೇಶದಲ್ಲೆಲ್ಲಾ ರಕ್ತವೇ ಆಗಿತ್ತು. **ಆದರೆ ಐಗುಪ್ತದೇಶದ ಜೋಯಿಸರು ತಮ್ಮ ಗುಪ್ತ ವಿದ್ಯೆಗಳಿಂದ ಅದೇ ರೀತಿಯಾಗಿ ಮಾಡಿದ್ದರಿಂದ ಫರೋಹನ ಹೃದಯವು ಕಠಿಣವಾಯಿತು.** ಯೆಹೋವನು ಹೇಳಿದ್ದಂತೆಯೇ ಅವನು ಮೋಶೆ ಆರೋನರ ಮಾತನ್ನು ಕೇಳದೆ ಹೋದನು. ಫರೋಹನು ಆ ಮಹತ್ಕಾರ್ಯವನ್ನಾದರೂ ಲಕ್ಷ್ಯಕ್ಕೆ ತೆಗೆದುಕೊಳ್ಳದೆ ತನ್ನ ಮನೆಗೆ ಹೊರಟುಹೋದನು. ಐಗುಪ್ತ್ಯರೆಲ್ಲರೂ ನದಿಯ ನೀರನ್ನು ಕುಡಿಯಲಾರದೆ ಕುಡಿಯುವ ನೀರಿಗೋಸ್ಕರ ನದಿಯ ಸುತ್ತಲು ಅಗಿದರು." (ವಿಮೋ–೭:೧೪–೨೪).

"ಯೆಹೋವನು ನೈಲ್ ನದಿಯನ್ನು ಹೊಡೆದ ಮೇಲೆ ಏಳು ದಿನಗಳು ತುಂಬಿದವು. ತರುವಾಯ ಯೆಹೋವನು ಮೋಶೆಗೆ ಇಂತೆಂದನು – ನೀನು ಫರೋಹನ ಬಳಿಗೆ ಹೋಗಿ ಹೀಗನ್ನಬೇಕು – ಯೆಹೋವನು ಆಜ್ಞಾಪಿಸುವದೇನೆಂದರೆ – ನನ್ನನ್ನು ಆರಾ –ಧಿಸುವದಕ್ಕೆ ನನ್ನ ಜನರಿಗೆ ಅಪ್ಪಣೆಕೊಡಬೇಕು. ಅಪ್ಪಣೆಕೊಡದೆ ಹೋದರೆ ನಾನು ನಿನ್ನ ದೇಶಕ್ಕೆಲ್ಲಾ ಕಪ್ಪೆಗಳಿಂದ ಉಪದ್ರವ ಕೊಡುವೆನು. ನೈಲ್ ನದಿಯಲ್ಲಿ ಕಪ್ಪೆಗಳು ಅಸಂಖ್ಯವಾಗಿ ಹುಟ್ಟುವವು; ಅವು ಹೊರಟುಬಂದು ನಿನ್ನ ಅರಮನೆಯಲ್ಲಿಯೂ ಮಲ –ಗುವ ಕೋಣೆಯಲ್ಲಿಯೂ ಮಂಚದ ಮೇಲೆಯೂ ಬರುವದಲ್ಲದೆ ನಿನ್ನ ಪರಿವಾರದವರ ಮನೆಗಳಲ್ಲಿಯೂ ನಿನ್ನ ಪ್ರಜೆಗಳ ಮೇಲೆಯೂ ಒಲೆಗಳಲ್ಲಿಯೂ ಹಿಟ್ಟುನಾದುವ ಕೊಣವಿಗೆಗಳಲ್ಲಿಯೂ ಬರುವವು." (ವಿಮೋ–೭:೨೫, ೮:೧–೩)

ಹೇಗೂ ಫರೋಹನು ಮೋಶೆಯಿಂದ ಬಂದ ಎಚ್ಚರಿಕೆಗಳನ್ನು ಕೇಳಲಿಲ್ಲ. "ಯೆಹೋವನು ಮೋಶೆಯ ಸಂಗಡ ಮಾತಾಡಿ – ನೀನು ಆರೋನನಿಗೆ – ನೀನು ಕೋಲನ್ನು ಹಿಡಿದುಕೊಂಡು ಹೊಳೆ ಕಾಲಿವೆ ಕೆರೆ ಇವುಗಳ ಮೇಲೆ ಕೈಚಾಚು; ಆಗ ಐಗುಪ್ತದೇಶದ ಮೇಲೆಲ್ಲಾ ಕಪ್ಪೆಗಳು ಬರುವವು ಎಂದು ಹೇಳಬೇಕು ಅಂದನು. ಆರೋನನು ಐಗುಪ್ತದೇಶದಲ್ಲಿ ನೀರಿರುವ ಎಲ್ಲಾ ಸ್ಥಳಗಳ ಮೇಲೆ ಕೈಚಾಚಲು **ಕಪ್ಪೆಗಳು ಹೊರಟು ಬಂದು ದೇಶವನ್ನೆಲ್ಲಾ ಮುಚ್ಚಿಕೊಂಡವು. ಜೋಯಿಸರು ತಮ್ಮ ಗುಪ್ತ ವಿದ್ಯೆಗಳಿಂದ ಹಾಗೆಯೇ ಮಾಡಿ ಐಗುಪ್ತದೇಶದ ಮೇಲೆ ಕಪ್ಪೆಗಳನ್ನು ಬರಮಾಡಿದರು.** ಆಗ ಫರೋಹನು ಮೋಶೆ ಆರೋನರನ್ನು ಕರಿಸಿ – ನೀವು ಯೆಹೋವನನ್ನು ಬೇಡಿಕೊಂಡು ಈ ಕಪ್ಪೆಗಳನ್ನು ನನ್ನ ಬಳಿಯಿಂದಲೂ ನನ್ನ ಪ್ರಜೆಗಳ ಬಳಿಯಿಂದಲೂ ತೊಲಗಿಸಬೇಕು. ಹಾಗೆ ಮಾಡಿದರೆ ನಿಮ್ಮ ಜನರು ಯೆಹೋವನಿಗೋಸ್ಕರ ಯಜ್ಞಮಾಡುವಂತೆ ಅವರಿಗೆ ನಾನು ಅಪ್ಪಣೆಕೊಡುವೆನು ಅಂದನು. ಮೋಶೆ – ಘನಚಿತ್ತಕ್ಕೆ ತೋರಿ –ದಂತೆ ನೀನೇ ಅದಕ್ಕೊಂದು ಕಾಲವನ್ನು ನೇಮಿಸಬೇಕು. ಈ ಕಪ್ಪೆಗಳು ಯಾವಾಗ ನಿನ್ನ ಬಳಿಯಿಂದಲೂ ನಿನ್ನ ಮನೆಗಳಿಂದಲೂ ತೊಲಗಿ ನದಿಯಲ್ಲಿ ಮಾತ್ರ ಉಳಿಯುವಂತೆ ನಾನು ನಿನಗೋಸ್ಕರವೂ ನಿನ್ನ ಪ್ರಜಾಪರಿವಾರದವರಿಗೋಸ್ಕರವೂ ಬೇಡಿಕೊಳ್ಳಲಿ ಎಂದು

ಫರೋಹನನ್ನು ಕೇಳಲು ಅವನು – ನಾಳೆ ಅಂದನು. ಅದಕ್ಕೆ ಮೋಶೆ – ನಿನ್ನ ಮಾತಿನ ಪ್ರಕಾರವೇ ಆಗುವದು; ಕಪ್ಪೆಗಳು ನಿನ್ನನ್ನೂ ನಿನ್ನ ಮನೆಗಳನ್ನೂ ನಿನ್ನ ಪ್ರಜಾಪರಿವಾರದವರನ್ನೂ ಬಿಟ್ಟು ನದಿಯಲ್ಲಿ ಮಾತ್ರ ಇರುವವು; ಇದರಿಂದ ನಮ್ಮ ದೇವರಾಗಿರುವ ಯೆಹೋವನಿಗೆ ಸಮಾನರು ಬೇರೆ ಯಾರೂ ಇಲ್ಲವೆಂದು ತಿಳಿದುಕೊಳ್ಳುವಿ ಅಂದನು. ಮೋಶೆ ಆರೋನರು ಫರೋಹನ ಬಳಿ – –ಯಿಂದ ಹೊರಟು ಹೋದಾಗ ಮೋಶೆ ಯೆಹೋವನಿಗೆ ನೀನು ಫರೋಹನ ಮೇಲೆ ಬರಮಾಡಿರುವ ಕಪ್ಪೆಗಳನ್ನು ತೊಲಗಿಸ – –ಬೇಕೆಂದು ಪ್ರಾರ್ಥನೆ ಮಾಡಿಕೊಂಡನು. ಯೆಹೋವನು ಮೋಶೆಯ ಮಾತಿನ ಪ್ರಕಾರ ಮಾಡಿದನು; ಮನೆಗಳಲ್ಲಿಯೂ ಅಂಗಳ –ಗಳಲ್ಲಿಯೂ ಬೈಲಿನಲ್ಲಿಯೂ ಇದ್ದ ಕಪ್ಪೆಗಳು ಸತ್ತು ಹೋದವು. ಜನರು ಅವುಗಳನ್ನು ರಾಶಿರಾಶಿಯಾಗಿ ಕೂಡಿಸಲು ದೇಶದಲ್ಲೆಲ್ಲಾ ದುರ್ವಾಸನೆ ತುಂಬಿತು. ಆದರೆ ಫರೋಹನು ಉಪಶಮನವಾಯಿತೆಂದು ತಿಳಿದಾಗ **ತನ್ನ ಹೃದಯವನ್ನು ಮೊಂಡುಮಾಡಿಕೊಂಡನು.** ಯೆಹೋವನು ಹೇಳಿದ್ದಂತೆಯೇ ಅವನು ಅವರ ಮಾತನ್ನು ಕೇಳದೆ ಹೋದನು." (ವಿಮೋ–೮:೫–೧೫)

"ತರುವಾಯ ಯೆಹೋವನು ಮೋಶೆಯ ಸಂಗಡ ಮಾತಾಡಿ – ನೀನು ಆರೋನನಿಗೆ – ನಿನ್ನ ಕೋಲನ್ನು ಚಾಚಿ ಭೂಮಿಯ ಧೂಳನ್ನು ಹೊಡೆ; ಹೊಡೆಯಲು ಐಗುಪ್ತದೇಶದಲ್ಲೆಲ್ಲಾ ಧೂಳು ಹೇನುಗಳಾಗುವದು ಎಂದು ಹೇಳು ಅಂದನು. ಅವರು ಹಾಗೆಯೇ ಮಾಡಿದರು; ಆರೋನನು ಕೋಲನ್ನು ಹಿಡುಕೊಂಡು ಕೈಚಾಚಿ ಭೂಮಿಯ ಧೂಳನ್ನು ಹೊಡೆಯಲು **ಮನುಷ್ಯರ ಮೇಲೆಯೂ ಪಶುಗಳ ಮೇಲೆಯೂ ಹೇನುಗಳು ಬಂದವು;** ಐಗುಪ್ತದೇಶದಲ್ಲೆಲ್ಲಾ ಭೂಮಿಯಲ್ಲಿರುವ ಧೂಳು ಹೇನುಗಳಾಯಿತು. **ಜೋಯಿಸರು ತಮ್ಮ ಗುಪ್ತವಿದ್ಯೆಯಿಂದ ಹಾಗೆಯೇ ಹೇನುಗಳನ್ನು ಉಂಟುಮಾಡುವದಕ್ಕೆ ಪ್ರಯತ್ನ ಮಾಡಿದಾಗ್ಯೂ ಆಗದೆ ಹೋಯಿತು.** ಆ ಹೇನು –ಗಳು ಮನುಷ್ಯರ ಮೇಲೆಯೂ ಪಶುಗಳ ಮೇಲೆಯೂ ಇದ್ದವು. ಆಗ ಆ ಜೋಯಿಸರು – ಇದು ದೇವರ ಕೈಕೆಲಸವೇ ಸರಿ ಎಂದು ಫರೋಹನಿಗೆ ಹೇಳಿದರು. ಆದರೂ **ಫರೋಹನ ಹೃದಯವು ಕಠಿಣವಾಗಿತ್ತು;** ಯೆಹೋವನು ಮೋಶೆಗೆ ಮುಂತಿಳಿಸಿ – –ದಂತೆಯೇ ಅವನು ಅವರ ಮಾತನ್ನು ಕೇಳದೆ ಹೋದನು." (ವಿಮೋ–೮:೧೬–೧೯).

ಫರೋಹನ ಮಾರಾಬೌಟ್ಸ್, ಮಂತ್ರಗಾರರುಗಳಿಗೆ ಏನಾಯಿತೆಂದು ನೀವು ನೋಡಿದಿರಲ್ಲಾ? ಅವರು ಸೈತಾನನಿಂದ ಪಡೆದುಕೊಂಡಿದ್ದ ಒಂದು ಖಚಿತವಾದ ಶಕ್ತಿಯನ್ನು ಅವರು ಹೊಂದಿದ್ದರೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಅದಕ್ಕಾಗಿಯೇ ತಮ್ಮ ರಹಸ್ಯ ವಾದ ಕಲೆಗಳಿಂದ ಅವರು ದೇವರ ಶಕ್ತಿಯನ್ನು ಅನುಕರಣೆ ಮಾಡಿ ಒಂದು ಸ್ವಲ್ಪ ನೀರನ್ನು ರಕ್ತವನ್ನಾಗಿ ಕೆಲವು ಕಪ್ಪೆಗಳು ಮಾತ್ರ ಕಾಣಿಸುವಂತೆ ಮಾಡಿದರು (ಐಗುಪ್ತರಿಗೆ ತಮ್ಮ ನೀರಿನಲ್ಲಿ ಹೆಚ್ಚು ರಕ್ತವು ತಮ್ಮ ಹಾಸಿಗೆಗಳಲ್ಲಿ ಕಪ್ಪೆಗಳು ಅಗತ್ಯವಿರುವಂತೆ ಮಾಡಿದ್ದರೆ!) ಹೇಗೂ, **ಅವರ ಬಲವು ಮಿತಿಯುಳ್ಳದ್ದಾಗಿತ್ತು.** ಐಗುಪ್ತದೇಶದ ಮೇಲೆ ಸರ್ವಶಕ್ತನಾದ ದೇವರು ಬರಮಾಡಿದ್ದ ಉಪದ್ರವಗಳನ್ನು ತೆಗೆದುಹಾಕುವದಕ್ಕೆ ಫರೋಹನ ಮಾರಾಬೌಟ್ಸ್ ಅಸಮರ್ಥರಾಗಿದ್ದರು. ಆರೋನನು ತನ್ನ ಕೋಲಿನಿಂದ ಭೂಮಿಯನ್ನು ಹೊಡೆ – –ದಾಗ ಭೂಮಿಯ ಧೂಳು ಹೇನುಗಳಾದವು, ಮಂತ್ರಗಾರರು ತಮ್ಮ ರಹಸ್ಯ ವಿದ್ಯೆಗಳಿಂದ ಧೂಳು ಹೇನುಗಳಾಗುವಂತೆ ಮಾಡಲು ಪ್ರಯತ್ನಿಸಿದರು ಆದರೆ ಅವರಿಗೆ ಅದನ್ನು ಮಾಡಲಾಗಲಿಲ್ಲ. ಹಾಗಾಗಿ ಅವರು ಫರೋಹನಿಗೆ, **"ಇದು ದೇವರ ಕೈಕಲಸವೇ!"** ಎಂದು ಹೇಳಿದರು.

ಸ್ಪಷ್ಟವಾಗಿ ಮಂತ್ರಗಾರರ ಶಕ್ತಿಯು ಮಿತಿಯುಳ್ಳದ್ದಾಗಿತ್ತು. ಖಂಡಿತವಾಗಿ ಸೈತಾನನು ಶಕ್ತಿಯನ್ನು ಹೊಂದಿದ್ದಾನೆ ಮತ್ತು ಮನುಷ್ಯನಿಗೆ ನಿಯಮಿತವಾದ ಶಕ್ತಿಗಳನ್ನು ಕೊಡುತ್ತಾನೆ ಆದರೆ ಆ ಶಕ್ತಿಗಳು ದೇವರು ಸ್ಥಿರಪಡಿಸಿರುವದರ ಮಿತಿಗಳನ್ನು ಎಂದಿಗೂ ಮೀರುವದಕ್ಕಾ –ಗುವದಿಲ್ಲ. ದೇವರೊಬ್ಬನು ಮಾತ್ರವೇ ಸರ್ವಶಕ್ತನಾದವನಾಗಿದ್ದಾನೆ. ಆತನು ಮಾತ್ರವೇ ಎಲ್ಲಾ ಸಂಗತಿಗಳನ್ನು ಮಾಡುವವನಾಗಿ –ದ್ದಾನೆ! ಆತನೊಬ್ಬನು ಮಾತ್ರವೇ ಮಿತಿಗಳಿಲ್ಲದವನಾಗಿದ್ದಾನೆ! ಫರೋಹನ ಮಾರಾಬೌಟ್ಸ್ ದೇವರ ಮಿತಿಯಿಲ್ಲದ ಶ್ರೇಷ್ಠತೆಯನ್ನು ಕಲಿತುಕೊಳ್ಳುವದಕ್ಕೆ ಪ್ರಾರಂಭಿಸಿದರು ಆದರೆ **ಫರೋಹನು ದೇವರಿಗೆ ಅಧೀನನಾಗುವದಕ್ಕೆ ಇನ್ನೂ ನಿರಾಕರಿಸಿದನು.** ಫರೋಹನು ತನ್ನ ಹೃದಯ ಕಠಿಣಪಡಿಸಿಕೊಳ್ಳುದನ್ನು ಮುಂದುವರಿಸಿದನು ಮತ್ತು ಇಸ್ರಾಯೇಲ್ಯರ ದೇವರೊಂದಿಗೆ ಕುಸ್ತಿಯಾಡಿ ತಾನು ಗೆಲ್ಲುತ್ತೇನೆಂದು ಅಂದುಕೊಂಡನು!

ಹಾಗಾಗಿ, ದೇವರು ಫರೋಹನ ಮತ್ತು ಐಗುಪ್ತದೇಶದವರ ಮೇಲೆ ಇನ್ನೂ ಏಳು ಉಪದ್ರವಗಳನ್ನು ಮೋಶೆ ಮತ್ತು ಆರೋನರ ಕೈ –ಗಳಿಂದ ಹೇಗೆ ಬರಮಾಡಿದನೆಂಬುದನ್ನು ವಾಕ್ಯಗಳು ಹೇಳುತ್ತವೆ. ನಿರ್ಭಾಗ್ಯವೆಂದರೆ ಪ್ರತಿಯೊಂದು ಉಪದ್ರವವನ್ನೂ ಓದುವದಕ್ಕೆ ನಮಗೆ ಸಮಯವಿಲ್ಲ. ಅವುಗಳ ಹೆಸರುಗಳನ್ನು ಮಾತ್ರ ನಾವು ತಿಳಿಸುತ್ತೇವೆ.

**ನಾಲ್ಕನೆಯ ಉಪದ್ರವವು ವಿಷದ ಹುಳುಗಳ ಮೋಡಗಳು** ತುಂಬಿಕೊಂಡಿರುವದನ್ನು ಒಳಗೊಂಡಿದೆ, ಜನರ ಮನೆಗಳಲ್ಲಿಯೂ ಇವು ತುಂಬಿಕೊಂಡು ಹೆಚ್ಚು ವಿನಾಶಕ್ಕೆ ಕಾರಣವಾಯಿತು. **ಐದನೆಯ ಉಪದ್ರವವು,** ಒಂದು **ಭಯಂಕರವಾದ ರೋಗವು ವ್ಯವಸಾಯ ಮಾಡುವ ಪಶುಗಳ ಮೇಲೆ ಬಿದ್ದಿತು** ಇದರಿಂದ ಅನೇಕ ಪಶುಗಳು ಸತ್ತುಹೋದವು. ಹೇಗೂ, ಇಸ್ರಾಯೇಲ್ಯರ ಪಶುಗಳಲ್ಲಿ ಯಾವುವು ಸತ್ತುಹೋಗಲಿಲ್ಲ. ಆದಾಗ್ಯೂ, ಫರೋಹನು ತನ್ನ ಹೃದಯವನ್ನು ಕಠಿಣಪಡಿಸಿಕೊಂಡು ಇಸ್ರಾಯೇಲ್ಯರು ಹೊರಡುವದಕ್ಕೆ ಅಪ್ಪಣೆ – –ಕೊಡುವದನ್ನು ನಿರಾಕರಿಸಿದನು. **ಮುಂದೆ** ಭಯಂಕರವಾದ **ಹುಣ್ಣುಗಳು** ಮನುಷ್ಯರ ಮತ್ತು ಪಶುಗಳ ಮೇಲೆ ಕಂಡುಬಂದವು. ವಾಕ್ಯವು ಹೇಳುವ – –ದೇನೆಂದರೆ: **"**ಆ ಹುಣ್ಣುಗಳು ಜೋಯಿಸರಲ್ಲಿಯೂ ಐಗುಪ್ತರೆಲ್ಲರಲ್ಲಿಯೂ ಇದ್ದದರಿಂದ ಆ ಜೋಯಿಸರು ಹುಣ್ಣುಗಳ ದೆಸೆಯಿಂದ ಮೋಶೆಯ ಮುಂದೆ ನಿಲ್ಲಲಾರದೆ ಹೋದರು." (ವಿಮೋ–೯:೧೧). ಏಳನೆಯ ಉಪದ್ರವದಲ್ಲಿ ಒಂದು

ಭಯಂಕರವಾದ ಆನೆಕಲ್ಲಿನ ಮಳೆ, ಈ ಮೊದಲು ಎಂದಿಗೂ ಐಗುಪ್ತದಲ್ಲಿ ಇದರ ಒಂದು ಭಾಗವೂ ಸಹ ಬರದಂತ ಆನೆಕಲ್ಲಿನ ಮಳೆ ಸುರಿದು ಎಲ್ಲಾ ಹೊಲಗದ್ದೆಗಳನ್ನು ನಾಶಗೊಳಿಸಿತು. **ಇದಾದ ನಂತರ,** ಪ್ರದೇಶವೆಲ್ಲವೂ **ಮಿಡತೆಗಳಿಂದ** ತುಂಬಿಹೋಯಿತು, ಆನೆಕಲ್ಲಿನ ಮಳೆ ಉಳಿಸಿದ್ದನ್ನು ಮಿಡತೆಗಳು ತಿಂದುಬಿಟ್ಟವು. ಇದು ಎಂಟನೆಯ ಉಪದ್ರವ.

**ಒಂಭತ್ತನೆಯ ಉಪದ್ರವದಲ್ಲಿ,** ದೇವರು ಮೋಶೆಗೆ, **"**ಆಕಾಶಕ್ಕೆ ನಿನ್ನ ಕೈಚಾಚು; ಆಗ ಐಗುಪ್ತದೇಶದಲ್ಲೆಲ್ಲಾ **ಕತ್ತಲುಂಟಾಗುವದು;** ಆ ಕತ್ತಲಿನಿಂದ ಜನರು ತಡವರಿಸುತ್ತಾ ನಡೆಯವರೆಂದು ಹೇಳಿದನು.**"** (ವಿಮೋ–೧೦:೨೧). ಹಾಗಾಗಿ ಮೂರು ದಿವಸಗಳವರೆಗೆ ಯಾರಿಗೂ ಏನೂ ಕಾಣಿಸಲಿಲ್ಲ. ಹೇಗೂ, ಇಸ್ರಾಯೇಲ್ಯರು ಇದ್ದಂತ ಸ್ಥಳದಲ್ಲಿ ಬೆಳಕು ಇತ್ತು. ಯಾವೊಂದು ಉಪದ್ರವವೂ ಅವರ ಮೇಲೆ ಬೀಳಲಿಲ್ಲ. ಆದಾಗ್ಯೂ ಫರೋಹನು ಪಶ್ಚಾತ್ತಾಪಪಟ್ಟು ಇಸ್ರಾಯೇಲ್ಯರನ್ನು ಹೋಗಗೊಡಿಸುವದಕ್ಕೆ ಇದ್ಯಾವುದೂ ಕಾರಣವಾಗ–ಲಿಲ್ಲ. ವಾಕ್ಯವು ಹೀಗೆ ಹೇಳುತ್ತದೆ: **"**ಫರೋಹನು ಮೋಶೆಗೆ, ನನ್ನ ಬಳಿಯಿಂದ ಹೋಗು; ಇನ್ನು ಮುಂದೆ ನನ್ನ ಮುಖದೆದುರಿಗೆ ಬರಲೇ ಕೂಡದು; ಎಚ್ಚರ ತಿರಿಗಿ ಬಂದರೆ ಮರಣದಂಡನೆ ಆಗುವದು ಎಂದು ಹೇಳಿದನು.**"** (ವಿಮೋ–೧೦:೨೮)

ದೇವರು ಫರೋಹನ ಮತ್ತು ಐಗುಪ್ತದವರ ಮೇಲೆ ಬರಮಾಡಿದ **ಇನ್ನೊಂದು ಉಪದ್ರವವಿದೆ,** ಆದರೆ ನಮ್ಮ ಸಮಯವು ಮುಗಿ–ದಿರುವದರಿಂದ ಇದರ ಕಡೆಗೆ ನೋಡಿಕೊಳ್ಳುವದಕ್ಕೆ ಮುಂದಿನ ಸಲದವರೆಗೂ ನಾವು ಕಾಯಬೇಕು.

ಈ ದಿನದ ನಮ್ಮ ಪಾಠವನ್ನು ನಾವು ಹೇಗೆ ಸಂಕ್ಷಿಪ್ತಗೊಳಿಸುವದು? ಬಹುಶ: ಈ ರೀತಿಯಲ್ಲಿ: ಫರೋಹನು ದೇವರಾದ ಕರ್ತನೊಂ–ದಿಗೆ ಹೋರಾಡುವದಕ್ಕೆ ಪ್ರಯತ್ನಿಸಿದನು. ಫರೋಹನು ಮತ್ತು ಅವನ ಮಾರಾಬೌಟ್ಸ್ ಸರ್ವಶಕ್ತನನ್ನು ಜಯಿಸಿದರೋ? ಆತನನ್ನು ಅವರು ವಶಪಡಿಸಿಕೊಂಡರೋ? ಇಲ್ಲ! ಯಾರೊಬ್ಬರೂ ದೇವರೊಂದಿಗೆ ಮುಷ್ಟಿ ಕಾಳಗ ಮಾಡಿ ಆತನನ್ನು ವಶಪಡಿಸಿಕೊಳ್ಳುವದ–ಕ್ಕಾಗುವದಿಲ್ಲ! ಒಂದು ಮೊಟ್ಟೆಯು ಬಂಡೆಯೊಂದಿಗೆ ಹೋರಾಡಿ ಗೆಲ್ಲುವದಕ್ಕಾಗುವದಿಲ್ಲ!

ಈ ದಿನ ನಾವು ಓದಿಕೊಂಡದ್ದರ ಮೂಲಕವಾಗಿ ದೇವರು ನಮಗೆ ಏನು ಹೇಳುವದಕ್ಕೆ ಬಯಸಿದ್ದಾನೆ? ವಾಕ್ಯವು ಹೀಗೆ ಹೇಳುತ್ತದೆ: **"**ಅವರಿಗೆ ಸಂಭವಿಸಿದ ಈ ಸಂಗತಿಗಳು **ನಿದರ್ಶನರೂಪವಾಗಿವೆ;** ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ **ಬುದ್ಧಿವಾದ–ಗಳಾಗಿ** ಬರೆದವೆ.**"** (೧ಕೊರಿಂಥ–೧೦:೧೧). ದೇವರು ನಮನ್ನು ಎಚ್ಚರಿಸುವದಕ್ಕೆ ಇಚ್ಛಿಸುತ್ತಾನೆ. ನಾವೇ ಉತ್ತಮವಾಗಿ ಪರೀಕ್ಷಿಸಿ–ಕೊಂಡು ಆತನ ಎಚ್ಚರಿಕೆಗಳಿಗೆ ಗಮನಕೊಡುವದನ್ನು ದೇವರು ಬಯಸುತ್ತಾನೆ.

ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ **ನೀವು ದೇವರ ವಾಕ್ಯಕ್ಕೆ ಗಮನ ಕೊಡುತ್ತಿದ್ದೀರೋ?** ನೀವು ಇದಕ್ಕೆ ವಿಧೇಯರಾಗಿದ್ದೀರೋ? ಅಥವಾ ಫರೋಹನ ಹಾಗೆ ನೀವೂ ದೇವರೊಂದಿಗೆ ಹೋರಾಡುತ್ತಿದ್ದೀರೋ? ನಿಮ್ಮ ಹೃದಯವು ಉತ್ತರ ಕೊಡುವದಕ್ಕೆ ಬಿಡಿರಿ. ನೀವು ದೇವರ ವಾಕ್ಯಕ್ಕೆ ನಿಮ್ಮನ್ನು ಅಧೀನಪಡಿಸಿಕೊಂಡಿದ್ದೀರೋ? ಅಂದರೆ ನೀವು ನಿಮ್ಮ ಪೂರ್ವಿಕರ ಸಂಪ್ರದಾಯಗಳಿಗೆ ಮತ್ತು ಅವರ ಧರ್ಮಕ್ಕೆ ನಿಮ್ಮನ್ನು ಅಧೀನಪಡಿಸಿಕೊಂಡಿದ್ದೀರೆಂಬುದು ಇದರ ಅರ್ಥವಲ್ಲ – ಆದರೆ ನೀವು ದೇವರಾದ ಕರ್ತನ ವಾಕ್ಯದ ನಮ್ರತೆಯನ್ನು ಪಡೆದುಕೊಂಡಿದ್ದೀರೋ? ಅಥವಾ ನೀವು ದೇವರೊಂದಿಗೆ ಹೋರಾಡುವದಕ್ಕೆ ಪ್ರಯತ್ನಿಸುತ್ತಿದ್ದೀರೋ?

"ಒಂದು ಮೊಟ್ಟೆಯು ಒಂದು ಬಂಡೆಯೊಂದಿಗೆ ಕುಸ್ತಿಯಾಡುವದಿಲ್ಲ!" **ಮನುಷ್ಯನು** ಒಂದು **ನಾಜೂಕಿನ ಮೊಟ್ಟೆಯ** ಹಾಗೆ ಮತ್ತು **ದೇವರ ವಾಕ್ಯವು ಒಂದು ಗಟ್ಟಿಯಾದ ಬಂಡೆಯಂತೆ.** ವಾಕ್ಯವು ಹೀಗೆ ಹೇಳುತ್ತದೆ: **"ನರಜಾತಿಯೆಲ್ಲಾ** ಹುಲ್ಲಿನ ಹಾಗಿದೆ, ಅದರ ಪ್ರಭಾವವೆಲ್ಲಾ ಹುಲ್ಲಿನ ಹೂವಿನಂತಿದೆ. ಹುಲ್ಲು ಒಣಗಿಹೋಗುವದು ಹೂವು ಉದುರಿಹೋಗುವದು; **ಕರ್ತನ ಮಾತೋ** ಸದಾ–ಕಾಲವೂ ಇರುವದು ಎಂದು ಹೇಳಿದೆಯಷ್ಟೆ. ಆ ಮಾತು ಯಾವುದೆಂದರೆ ನಿಮಗೆ ಸಾರಲ್ಪಟ್ಟ ಸುವಾರ್ತಾವಾಕ್ಯವೇ.**"** (೧ಪೇತ್ರ–೧:೨೪–೨೫) ದೇವರ ನಿತ್ಯವಾದ ವಾಕ್ಯವು ಒಂದು ಗಟ್ಟಿಯಾದ ಬಂಡೆಯಾಗಿದೆ ಮತ್ತು ಈ ಬಂಡೆಯ ಮೇಲೆ ತಮ್ಮ ಜೀವಿತವನ್ನು ಕಟ್ಟಿಕೊಳ್ಳುವ ಪ್ರತಿಯೊಬ್ಬರೂ ಗಟ್ಟಿಯಾದ ತಳಹದಿಯ ಮೇಲೆ ತಮ್ಮ ಜೀವಿತವನ್ನು ಇಟ್ಟುಕೊಂಡವರಾಗಿರುತ್ತಾರೆ. ಹೇಗೂ, ಒಂದು–ವೇಳೆ ನೀವು ನಿಮ್ಮ ಜೀವಿತವನ್ನು ಬಂಡೆಯ ಮೇಲೆ ಕಟ್ಟಿಕೊಳ್ಳುವದಕ್ಕೆ ನಿರಾಕರಿಸಿದರೆ – ಒಂದು ದಿನ ದೇವರ ವಾಕ್ಯವೆಂಬ ಬಂಡೆಯು ನಿಮ್ಮ ಮೇಲೆ ಬಿದ್ದು ನಿಮ್ಮನ್ನು ಪುಡಿ ಮಾಡುತ್ತದೆ. ಒಂದು ಮೊಟ್ಟೆಯು ಒಂದು ಬಂಡೆಯೊಂದಿಗೆ ಹೋರಾಡಿ ಗೆಲ್ಲು–ವದಕ್ಕಾಗುವದಿಲ್ಲ. ಮನುಷ್ಯನು ದೇವರ ನಿತ್ಯವಾದ ವಾಕ್ಯದೊಂದಿಗೆ ಕಾದಾಡುವದಕ್ಕೂ ಮತ್ತು ಶಿಕ್ಷೆಯಿಂದ ತಪ್ಪಿಸಿಕೊಳ್ಳುವದಕ್ಕೂ ಇವೆರಡರಲ್ಲಿ ಯಾವುದೊಂದು ಅವನಿಗೆ ಆಗುವದಿಲ್ಲ.

ಇಲ್ಲಿಗೆ ನಾವು ನಿಲ್ಲಿಸಲೇಬೇಕು. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಾದರೆ, ನಮ್ಮ ಮುಂದಿನ ಅಧ್ಯಯನದಲ್ಲಿ ಇಸ್ರಾಯೇಲ್ ಜನರು ಐಗುಪ್ತವನ್ನು ಬಿಟ್ಟುಹೋಗುವದಕ್ಕೆ ಫರೋಹನು ಅಪ್ಪಣೆಕೊಡುವದಕ್ಕೆ ಕಾರಣವಾಗುವಂತೆ ಕರ್ತನು ಏನು ಮಾಡಿದನೆಂಬದನ್ನು ನಾವು ನೋಡುತ್ತೇವೆ. ಪ್ರವಾದಿಯಾದ ಮೋಶೆಯು ತೋರಾದಲ್ಲಿ ಏನು ಬರೆದಿದ್ದಾನೋ ಅದರ ಕುರಿತು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:
**"ನಮ್ಮ ಕರ್ತನಾದ ದೇವರು ಬಂಡೆಯೊ, ಆಗತನು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡಿಸುವದೆಲ್ಲಾ ನ್ಯಾಯ; ಆತನು ನಿರ್ವಂಚಕನಾದ ನಂಬಿಗಸ್ತ ದೇವರು, ನೀತಿಯುಳ್ಳ ಯಥಾರ್ಥನೂ ಆಗಿದ್ದಾನೆ."** (ಧರ್ಮೋ–೩೨:೪)

ಪಾಠ ೩೩

# ಪಸ್ಕದ ಕುರಿಮರಿ

ವಿಮೋಚನಕಾಂಡ ೧೧, ೧೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ ಹೇಗೆ ಫರೋಹನು ದೇವರ ವಿರುದ್ಧವಾಗಿ ಹೋರಾಡುವದಕ್ಕೆ ಪ್ರಯತ್ನಿಸಿದನೆಂಬುದನ್ನು ನಾವು ನೋಡಿ–ಕೊಂಡೆವು. ಐಗುಪ್ತದಲ್ಲಿ ಗುಲಾಮರಾಗಿದ್ದ ಇಸ್ರಾಯೇಲ್ ಜನರನ್ನು ಬಿಡುಗಡೆಮಾಡುವದಕ್ಕೆ ದೇವರು ಉದ್ದೇಶಿಸಿದ್ದನು ಆದರೆ ಐಗುಪ್ತದ ಅರಸನು ಅವರನ್ನು ತನ್ನ ಗುಲಾಮರನ್ನಾಗಿ ಇಟ್ಟುಕೊಳ್ಳುವದಕ್ಕೆ ನಿಶ್ಚಯಪಡಿಸಿಕೊಂಡಿದ್ದನು. ಹೇಗೂ, "ಒಂದು ಮೊಟ್ಟೆಯು ಒಂದು ಬಂಡೆಯೊಂದಿಗೆ ಹೋರಾಡುವದಕ್ಕಾಗುವದಿಲ್ಲ!"{ಉಲೂಫ್‌ನ ಗಾದೆ}. ಹಾಗಾಗಿ, ಮೋಶೆ ಮತ್ತು ಆರೋನರ ಮೂಲಕವಾಗಿ ದೇವರು ಹೇಗೆ ಐಗುಪ್ತದ ಮೇಲೆ **ಒಂಭತ್ತು ಭಯಂಕರವಾದ ಉಪದ್ರವಗಳನ್ನು** ತಂದನೆಂಬುದನ್ನು ನಾವು ನೋಡಿ––ದ್ದೇವೆ. ಆದಾಗ್ಯೂ ಫರೋಹನು ದೇವರ ಮಾತಿಗೆ ವಿಧೇಯನಾಗಿ ಇಸ್ರಾಯೇಲ್ಯರು ತನ್ನ ದೇಶವನ್ನು ಬಿಟ್ಟು ಹೋಗುವಂತೆ ಅಪ್ಪಣೆ ಕೊಡುವದಕ್ಕೆ ಈ ಎಲ್ಲಾ ಅದ್ಭುತ ಕಾರ್ಯಗಳು ಮತ್ತು ಸೂಚಕ ಕಾರ್ಯಗಳು ಕಾರಣವಾಗಲಿಲ್ಲ.

ಈ ದಿನ ನಾವು ಕಥೆಯನ್ನು ಮುಂದುವರೆಸಿ ದೇವರು ಫರೋಹನ ಮೇಲೆ **ಕೊನೆಯ** ಅಂದರೆ ಹತ್ತನೆಯ **ಉಪದ್ರವವನ್ನು** ಹೇಗೆ ತಂದನು ಮತ್ತು ಅದರಿಂದ ಇಸ್ರಾಯೇಲ್ಯರು ಐಗುಪ್ತದಿಂದ ಹೊರಡುವದಕ್ಕೆ ಫರೋಹನು ಅಪ್ಪಣೆ ಕೊಟ್ಟದ್ದನ್ನು ನಾವು ನೋಡಿ––ಕೋಳ್ಳೋಣ. ನಮ್ಮ ಹಿಂದಿನ ಪಾಠದಲ್ಲಿ ಒಂಭತ್ತನೆಯ ಉಪದ್ರವದ ನಂತರ ಫರೋಹನು, ಮೋಶೆ ಆರೋನರಿಗೆ, "ನನ್ನ ಬಳಿ–ಯಿಂದ ಹೊರಟು ಹೋಗು; ಇನ್ನು ಮುಂದೆ ನನ್ನ ಮುಖದೆದುರಿಗೆ ಬರಲೇ ಕೂಡದು; ಎಚ್ಚರ; ತಿರಿಗಿ ಸನ್ನಿಧಿಗೆ ಬಂದರೆ ಮರಣದಂಡನೆ ಆಗುವದು" (ವಿಮೋ–೧೦:೨೮) ಎಂದು ಹೇಳಿದ್ದನ್ನು ನಾವು ಕೇಳಿಸಿಕೊಂಡಿದ್ದೇವೆ. ಈಗ ನಾವು ಹನ್ನೊಂದನೆಯ ಅಧ್ಯಾಯವನ್ನು ಓದಿಕೊಳ್ಳೋಣ ಮತ್ತು ಮೋಶೆಯ ಬಾಯಿಯ ಮೂಲಕವಾಗಿ ದೇವರು ತಾನೇ ಹೇಗೆ ಫರೋಹನಿಗೆ ಉತ್ತರ ಕೊಟ್ಟನೆಂಬುದನ್ನು ಕೇಳಿಸಿಕೊಳ್ಳೋಣ.

ವಾಕ್ಯವು ಹೀಗೆ ಹೇಳುತ್ತದೆ:

ಮೋಶೇ ಫರೋಹನಿಗೆ – ಯೆಹೋವನು ಅಪ್ಪಣೆ ಮಾಡುವದೇನೆಂದರೆ – ನಾನು ಮಧ್ಯರಾತ್ರಿಯಲ್ಲಿ ಐಗುಪ್ತ್ಯರ ನಡುವೆ ಹಾದು––ಹೋಗುವೆನು; ಆಗ ಸಿಂಹಾಸನದ ಮೇಲೆ ಕೂತಿರುವ ಫರೋಹನ ಚೊಚ್ಚಲು ಮಗನು ಮೊದಲುಗೊಂಡು ಬೀಸುವ ಕಲ್ಲಿನ ಹಿಂದೆ ಕೂತಿರುವ ದಾಸಿಯ ಚೊಚ್ಚಲು ಮಗನವರೆಗೂ **ಐಗುಪ್ತದೇಶದಲ್ಲಿ ಚೊಚ್ಚಲು ಮಕ್ಕಳೆಲ್ಲರೂ ಸಾಯುವರು;** ಪಶುಗಳಲ್ಲೂ ಚೊಚ್ಚಲಾದವುಗಳೆಲ್ಲಾ ಸಾಯುವವು. ಆಗ ಐಗುಪ್ತದೇಶದಲ್ಲೆಲ್ಲಾ ದೊಡ್ಡ ಗೋಳಾಟವುಂಟಾಗುವದು; ಅಂಥ ಗೋಳಾಟ ಈ ವರೆಗೆ ಎಂದಿಗೂ ಆಗಿಲ್ಲ ಮುಂದೆಯೂ ಆಗುವದಿಲ್ಲ. ಆದರೆ ಐಗುಪ್ತ್ಯರಿಗೂ ಇಸ್ರಾಯೇಲ್ಯರಿಗೂ ಯೆಹೋವನು ವ್ಯತ್ಯಾಸ ಮಾಡಿದ್ದಾನೆಂ–ಬುದು ನಿಮಗೆ ತಿಳಿಯುವಂತೆ ಇಸ್ರಾಯೇಲ್ಯರಲ್ಲಿರುವ ಮನುಷ್ಯರ ಮೇಲಾಗಲಿ ಪಶುಗಳ ಮೆಲಾಗಲಿ ಒಂದು ನಾಯಿಯಾದರೂ ಬೊಗಳುವದಿಲ್ಲ. ಆಗ ನಿನ್ನ ಪರಿವಾರದವರಾದ ಇವರೆಲ್ಲರೂ ನನ್ನ ಬಳಿಗೆ ಬಂದು ಅಡ್ಡಬಿದ್ದು – ನೀನೂ ನಿನ್ನ ಅಧೀನದಲ್ಲಿರುವ ಜನರೆಲ್ಲರೂ ನಮ್ಮನ್ನು ಬಿಟ್ಟು ಹೋಗಬೇಕೆಂದು ಬೇಡುವರು; ಆ ಮೇಲೆ ನಾನು ಹೊರಟುಹೋಗುವೆನು ಎಂದು ಹೇಳಿದನು. ಮೋಶೆ ಈ ಮಾತನ್ನು ಹೇಳಿ ಕಿಡಿಕಿಡಿಯಾಗಿ ಫರೋಹನನ್ನು ಬಿಟ್ಟು ಹೊರಟುಹೋದನು." (ವಿಮೋ–೧೧:೪–೮)

ಹೀಗೆ, ಈಗಾಗಲೇ ಸಂಭವಿಸಿದ್ದ ಇತರ ಎಲ್ಲಾ ಉಪದ್ರವಗಳಿಗಿಂತಲೂ ಕೆಟ್ಟದಾದ ಉಪದ್ರವವನ್ನು ಐಗುಪ್ತದೇಶದ ಮೇಲೆ ತರುವದಕ್ಕೆ ದೇವರು ಹೇಗೆ ಯೋಜನೆ ಮಾಡಿಕೊಂಡನೆಂಬುದನ್ನು ನಾವು ನೋಡುತ್ತೇವೆ. ಐಗುಪ್ತದಲ್ಲಿರುವ ಪ್ರತಿಯೊಂದು ಚೊಚ್ಚಲು ಮಕ್ಕಳ ಸಾವಿನ ಅಪಾಯವನ್ನು ದೇವರು ಪ್ರಕಟಿಸಿದ್ದನು. ಎಂತಹ ಭಯಂಕರವಾದ ಉಪದ್ರವ! ಇಸ್ರಾಯೇಲ್ಯರ ಚೊಚ್ಚಲುಗಳಿಗೆ ಏನಾಗು––ತ್ತದೆ? ಅವೂ ಸಹ ಐಗುಪ್ತ್ಯರ ಚೊಚ್ಚಲುಗಳೊಂದಿಗೆ ಸಾಯುತ್ತವೋ? ಖಂಡಿತವಾಗಿ ಅವು ದೇವರ ನ್ಯಾಯತೀರ್ಪಿನಿಂದ ತಪ್ಪಿಸಿ–ಕೊಳ್ಳುವದಕ್ಕೆ ಅರ್ಹವಾಗಿರಲಿಲ್ಲ ಯಾಕೆಂದರೆ ಅವೂ ಸಹ ಐಗುಪ್ತದ ಜನರೆಲ್ಲರಂತೆ ಪಾಪಿಗಳೇ, ಹೇಗೂ ನಂಬಿಗಸ್ತನೂ ಮತ್ತು ಕನಿಕರವುಳ್ಳ ದೇವರು ಆ ಉಪದ್ರವದಿಂದ ಇಸ್ರಾಯೇಲ್ ಜನರನ್ನು ರಕ್ಷಿಸುವದಕ್ಕೆ ಒಂದು ಯೋಜನೆಯನ್ನು ರಚಿಸಿದ್ದನು.

ಹನ್ನೆರಡನೆಯ ಅಧ್ಯಾಯವನ್ನು ಮುಂದುವರೆಸಿ, ಇಸ್ರಾಯೇಲ್ಯರು ತಮ್ಮ ಚೊಚ್ಚಲು ಮಕ್ಕಳನ್ನು ಮರಣದಿಂದ ತಪ್ಪಿಸುವದಕ್ಕೆ ಏನು

ಮಾಡಬೇಕೆಂಬುದನ್ನು ದೇವರು ಮೋಶೆಗೆ ಸೂಚಿಸಿದ್ದನ್ನು ಕೇಳಿಸಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

"ಯೆಹೋವನು ಮೋಶೆ ಆರೋನರಿಗೆ – ಎಲ್ಲಾ ಮಾಸಗಳಲ್ಲಿ ಇದೇ ನಿಮಗೆ ಆದಿಮಾಸವಾಗಿರಬೇಕು, ಇದೇ ನಿಮಗೆ ಪ್ರತಿ ವರು –ಷದ ಮೊದಲನೆಯ ತಿಂಗಳಾಗಿರಬೇಕು. ಇದರ ವಿಷಯದಲ್ಲಿ ನೀವು ಇಸ್ರಾಯೇಲ್ಯರ ಸಮೂಹಕ್ಕೆಲ್ಲಾ ಅಪ್ಪಣೆ ಮಾಡಬೇಕಾದ್ದೇ –ನೆಂದರೆ – ಈ ತಿಂಗಳಿನ ಹತ್ತನೆಯ ದಿನದಲ್ಲಿ ನಿಮ್ಮ ನಿಮ್ಮ ಗೋತ್ರಗಳ ಪ್ರತಿಯೊಂದು ಮನೆಯವರು ಒಂದೊಂದು **ಕುರಿಮರಿ** – –ಯನ್ನಾಗಲಿ ಆಡುಮರಿಯನ್ನಾಗಲಿ ತೆಗೆದುಕೊಳ್ಳಬೇಕು. . ..ಆ ಮರಿಯು **ಪೂರ್ಣಾಂಗವಾದ** ಒಂದು ವರುಷದ ಗಂಡಾಗಿರಬೇಕು ಕುರಿಗಳಿಂದಾಗಲಿ ಆಡುಗಳಿಂದಾಗಲಿ ಅದನ್ನು ತೆಗೆದುಕೊಳ್ಳಬಹುದು. ಈ ತಿಂಗಳಿನ ಹದಿನಾಲ್ಕನೆಯ ದಿನದವರೆಗೆ ಅವುಗಳನ್ನು ಇಟ್ಟುಕೊಂಡಿದ್ದು ಆ ದಿನದ ಸಂಜೇ ವೇಳೆಯಲ್ಲಿ ಇಸ್ರಾಯೇಲ್ಯರ ಸಮೂಹದವರೆಲ್ಲರು ತಮ್ಮ ತಮ್ಮ ಕೂಟಗಳಲ್ಲಿ ಕೊಯ್ಯಬೇಕು. ಅವರು ಅವುಗಳ **ರಕ್ತದಲ್ಲಿ ಸ್ವಲ್ಪ ತೆಗೆದು** ತಾವು ಆ ಭೋಜನವನ್ನು ಮಾಡುವ ಮನೇ **ಬಾಗಲಿನ ಎರಡು ನಿಲುವು ಕಂಬಗಳಿಗೂ ಮೇಲಿನ ಪಟ್ಟಿಗೂ ಹಚ್ಚಬೇಕು.** ಆ ರಾತ್ರಿಯಲ್ಲಿಯೇ ಆ ಮಾಂಸವನ್ನು ಭೋಜನಮಾಡಬೇಕು; ಅದನ್ನು ಬೆಂಕಿಯಲ್ಲಿ ಸುಟ್ಟು ಹುಳಿ –ಯಿಲ್ಲದ ರೊಟ್ಟಿಗಳ ಮತ್ತು ಕಹಿಯಾದ ಪಲ್ಯಗಳ ಸಂಗಡ ಊಟಮಾಡಬೇಕು. ಅದನ್ನು ಹಸಿಯಾಗಿಯೂ ನೀರಿನಲ್ಲಿ ಬೇಯಿ – –ಸಿಯೂ ತಿನ್ನಕೂಡದು; ಅದನ್ನೆಲ್ಲಾ ತಲೆ ತೊಡೆ ಹೊಟ್ಟೆಯೊಳಗಣವುಗಳು ಸಹಿತವಾಗಿ ಬೆಂಕಿಯಲ್ಲಿ ಸುಟ್ಟೇ ತಿನ್ನಬೇಕು. . .ಒಂದೇ ಮನೆಯಲ್ಲಿ ಅದನ್ನು ಊಟಮಾಡಬೇಕು; ಅದರಲ್ಲಿ ಸ್ವಲ್ಪವನ್ನಾದರೂ ಮನೆಯಿಂದ ಹೊರಗೆ ತೆಗೆದುಕೊಂಡು ಹೋಗ ಕೂಡದು. ಆ ಪಶುವಿನ ಒಂದು ಎಲುಬನ್ನಾದರೂ ಮುರಿಯಕೂಡದು." (ವಿಮೋ–೧೨:೧–೯,೪೬)

"ಆ ಭೋಜನವನ್ನು ಮಾಡಬೇಕಾದ ಕ್ರಮ ಹೇಗಂದರೆ – ನೀವು ನಡುವನ್ನು ಕಟ್ಟಿ ಕೆರವನ್ನು ಮೆಟ್ಟಿಕೊಂಡು ಕೋಲುಹಿಡಿದು ತ್ವರೆ –ಯಾಗಿ ಮಾಡಬೇಕು. ಇದು ಯೆಹೋವನಿಗೆ ಆಚರಿಸತಕ್ಕ **ಪಸ್ಕಹಬ್ಬವು.** ಆ ರಾತ್ರಿ ನಾನು ಐಗುಪ್ತ ದೇಶದ ನಡುವೆ ಹಾದು ಹೋಗಿ ಮನುಷ್ಯರಲ್ಲಾಗಲೀ ಪಶುಗಳಲ್ಲಾಗಲಿ ಚೊಚ್ಚಲಾಗಿರುದನ್ನೆಲ್ಲಾ ಸಂಹರಿಸುವೆನು; ಐಗುಪ್ತದೇಶದ ಸಮಸ್ತ ದೇವತೆಗಳಿಗೂ ಶಿಕ್ಷೆಮಾಡುವೆನು; **ನಾನು ಯೆಹೋವನು.** ನೀವು ಬಾಗಲಿಗೆ ಹಚ್ಚಿದ **ಆ ರಕ್ತವು ನೀವಿರುವ ಮನೆಗಳನ್ನು ಸೂಚಿಸುವದಾದ ಕಾರಣ ನಾನು ಅದನ್ನು ಕಂಡು ನಿಮಗೆ ಯಾವ ನಷ್ಟವನ್ನೂ ಮಾಡದೆ ಮುಂದಕ್ಕೆ ದಾಟಿ ಹೋಗುವೆನು.** ನಾನು ಐಗುಪ್ತದವರನ್ನು ಸಂಹರಿಸು –ವಾಗ ನಿಮಗೆ ಯಾವ ಹಾನಿಯೂ ಉಂಟಾಗುವದಿಲ್ಲ." (ವಿಮೋ–೧೨:೧೧–೧೩)

ಇಲ್ಲಿಗೆ ನಿಲ್ಲಿಸೋಣ. ಮರಣದಿಂದ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳನ್ನು ರಕ್ಷಿಸುವದಕ್ಕೆ ಮತ್ತು ಐಗುಪ್ತದಲ್ಲಿನ ಗುಲಾಮತನದ ಅವರ ಬಂಧನದಿಂದ ಇಸ್ರಾಯೇಲ್ ಜನರೆಲ್ಲರನ್ನೂ ಬಿಡಿಸುವದಕ್ಕೆ ದೇವರ ನಿರ್ಣಯದ ಯೋಜನೆಯನ್ನು ನೀವು ಗಮನಿಸಿದಿರೋ? ಇದು ಒಂದು ಆಶ್ಚರ್ಯಕರವಾದ ಯೋಜನೆ; ಮನುಷ್ಯನ ರೀತಿಯ ಅಲೋಚನೆಯು ಸಂಪೂರ್ಣವಾಗಿ ಹಾಸ್ಯಾಸ್ಪದವಾದುದು ಎನ್ನುವಂತ ಯೋಜನೆ ಇದು. ಒಂದು ಕುರಿಮರಿಯ ರಕ್ತದಿಂದ – ನಿಷ್ಕಳಂಕ ಕುರಿಮರಿಯ ರಕ್ತದಿಂದ – ತಮ್ಮ ಮನೆಗಳ ನಿಲುವುಪಟ್ಟಿಗಳಿಗೆ ಹಚ್ಚಿದಂತ ರಕ್ತದಿಂದ ಅವರನ್ನು ಬಿಡಿಸುವದಕ್ಕೆ ಆತನು ಉದ್ದೇಶಿಸಿದ್ದನು. ಕೇವಲ ಕುರಿಮರಿಯ ರಕ್ತ ಮಾತ್ರ ಅವರ ಚೊಚ್ಚಲುಮಕ್ಕಳನ್ನು ಮರಣದಿಂದ ರಕ್ಷಿಸುವಂತದ್ದಾಗಿತ್ತು.

ದೇವರು, ಮೋಶೆ ಆರೋನರೊಂದಿಗೆ ಮಾತಾಡುವದನ್ನು ಮುಗಿಸಿದ ನಂತರ, ಅವರು ಇಸ್ರಾಯೇಲ್ಯರ ಎಲ್ಲಾ ಹಿರಿಯರನ್ನು ಒಟ್ಟು –ಗೂಡಿಸಿ ಯಜ್ಞದ ಕುರಿಮರಿಯ ಕುರಿತಾಗಿ ದೇವರು ತಮಗೆ ತಿಳಿಸಿದ ಎಲ್ಲಾ ಸಂಗತಿಗಳನ್ನು ಅವರಿಗೆ ತಿಳಿಸಿದರು. ಮರಣದ ಉಪದ್ರವದಿಂದ ತಮ್ಮ ಚೊಚ್ಚಲುಮಕ್ಕಳನ್ನು ರಕ್ಷಿಸುವದಕ್ಕೆ ದೇವರು ಹೇಗೆ ಯೋಜನೆ ಮಾಡಿಕೊಂಡಿದ್ದಾನೆಂಬುದನ್ನು ಇಸ್ರಾಯೇಲ್ಯರ ಹಿರಿಯರು ಕೇಳಿಸಿಕೊಂಡಾಗ ಅವರು ಅಡ್ಡಬಿದ್ದು ಕರ್ತನನ್ನು ಆರಾಧಿಸಿದರು. ಇದಾದ ನಂತರ, ದೇವರು ಮೋಶೆಗೆ ಏನು ಆಜ್ಞಾ –ಪಿಸಿದ್ದನೋ ಅದೇ ರೀತಿಯಾಗಿ ಹಿರಿಯರೂ ಮತ್ತು ಇಸ್ರಾಯೇಲಿನ ಜನರೆಲ್ಲರೂ ಮಾಡಿದರು.

ಹಾಗಾಗಿ ವಾಕ್ಯವು ಹೇಳುವದೇನೆಂದರೆ:

"**ಅರ್ಧರಾತ್ರಿಯಲ್ಲಿ ಯೆಹೋವನು** ಸಿಂಹಾಸನದಲ್ಲಿರುವ ಫರೋಹನ ಚೊಚ್ಚಲು ಮಗನು ಮೊದಲುಗೊಂಡು ಸೆರೆಯಲ್ಲಿದ್ದ ಬಂದಿ – –ವಾನನ ಚೊಚ್ಚಲು ಮಗನವರೆಗೂ **ಐಗುಪ್ತದೇಶದಲ್ಲಿದ್ದ ಎಲ್ಲಾ ಚೊಚ್ಚಲು ಮಕ್ಕಳನ್ನೂ** ಪಶುಗಳ ಚೊಚ್ಚಲು ಮರಿಗಳನ್ನೂ **ಸಂಹಾರ ಮಾಡಿದನು.** ಆ ರಾತ್ರಿಯಲ್ಲಿ ಫರೋಹನೂ ಅವನ ಪರಿವಾರದವರೂ ಐಗುಪ್ತರೆಲ್ಲರೂ ಎದ್ದು ನೋಡಲಾಗಿ **ಶವವಿಲ್ಲದ ಮನೆ ಒಂದೂ ಇರಲಿಲ್ಲವಾದದರಿಂದ** ಐಗುಪ್ತದೇಶದಲ್ಲಿ ದೊಡ್ಡ ಗೋಳಾಟವುಂಟಾಯಿತು." (ವಿಮೋ–೧೨:೨೯–೩೦).

ಆ ಭಯಂಕರವಾದ ರಾತ್ರಿಯಲ್ಲಿ ಏನಾಯಿತೆಂಬುದನ್ನು ನೀವು ಕೇಳಿಸಿಕೊಂಡಿರಾ? ತಾನು ಮಾಡುತ್ತೇನೆಂದು ಹೇಳಿದಂತೆಯೇ ದೇವರು ಐಗುಪ್ತದೇಶದ ಮೇಲೆ ನ್ಯಾಯ ತೀರಿಸಿದನೋ? ಹೌದು ಆತನು ಹಾಗೆ ಮಾಡಿದನು! ಮಧ್ಯರಾತ್ರಿಯಲ್ಲಿ, ಸಂಹಾರಕ ದೂತನು ಐಗುಪ್ತದೇಶದಲ್ಲೆಲ್ಲಾ ಹಾದುಹೋಗಿ ಫರೋಹನ ಚೊಚ್ಚಲುಮಗನಿಂದ ಹಿಡಿದು ಬಂದಿವಾನನ ಚೊಚ್ಚಲುಮಗನವರೆಗೂ ಎಲ್ಲರನ್ನೂ ಸಂಹಾರ ಮಾಡಿದನು. ಆ ರಾತ್ರಿಯಲ್ಲಿ ಶವವಿಲ್ಲದ ಮನೆ ಒಂದೂ ಇರಲಿಲ್ಲವಾದದರಿಂದ ಐಗುಪ್ತದೇಶದಲ್ಲೆಲ್ಲಾ ದೊಡ್ಡ ಗೋಳಾಟವುಂಟಾಯಿತು!

ಆದರೆ ಇಸ್ರಾಯೇಲ್ಯರ ಮನೆಗಳಲ್ಲಿ ಏನಾಯಿತು? ಮರಣದ ಉಪದ್ರವದಿಂದ ಅವರ ಚೊಚ್ಚಲು ಮಕ್ಕಳನ್ನು ದೇವರು ರಕ್ಷಿಸಿದನೋ? ನೀವು ಏನು ಅಂದುಕೊಂಡಿದ್ದೀರೀ? **"ನಾನು ರಕ್ತವನ್ನು ನೋಡಿದಾಗ ನಿಮ್ಮನ್ನು ದಾಟಿಹೋಗುವೆನು"** ಎಂದು ದೇವರು ಅವರಿಗೆ ವಾಗ್ದಾನ ಮಾಡಿದ್ದನು. ದೇವರು ತಮಗೆ ಆಜ್ಞಾಪಿಸಿದಂತೆ ಇಸ್ರಾಯೇಲ್ಯರು ತಮ್ಮ ಮನೆಯ ಬಾಗಿಲಿಗೆ ಕುರಿಮರಿಯ ರಕ್ತವನ್ನು ಹಚ್ಚಿದ್ದರು. ಇದರ ಪರಿಣಾಮವಾಗಿ, ಅವರ ಚೊಚ್ಚಲುಗಳಲ್ಲಿ **ಯಾವುದೂ ಮರಣ ಹೊಂದಲಿಲ್ಲ**. ಹೇಗೂ, ಐಗುಪ್ತರ ಮನೆಗಳಲ್ಲಿ **ಪ್ರತಿಯೊಂದು ಚೊಚ್ಚಲುಗಳು** ಸತ್ತುಹೋದವು ಯಾಕೆಂದರೆ ಅವರು ಕುರಿಮರಿಯ ರಕ್ತದ ದಾರಿಯಾಗಿರುವ ಬಿಡುಗಡೆಯ ದೇವರ ದಾರಿಯಲ್ಲಿ ಪಾಲನ್ನು ತೆಗೆದುಕೊಳ್ಳಲಿಲ್ಲ.

ಹಾಗಾಗಿ ವಾಕ್ಯವು ಹೀಗೆ ಹೇಳುತ್ತದೆ:
**"ಫರೋಹನು** ಆ ರಾತ್ರಿಯಲ್ಲಿ ಮೋಶೆ ಆರೋನರನ್ನು ಕರೆಸಿ – **ನೀವೂ ಇಸ್ರಾಯೇಲ್ಯರೆಲ್ಲರೂ ನನ್ನ ಜನರ ಮಧ್ಯದಿಂದ ಹೊರಟು ಹೋಗಿರಿ;** ನೀವು ಕೇಳಿಕೊಂಡ ಮೇರೆಗೆ ಯೆಹೋವನನ್ನು ಆರಾಧಿಸಿರಿ. ನೀವು ಕೇಳಿಕೊಂಡಂತೆ ನಿಮ್ಮ ಕುರಿದನಗಳನ್ನೂ ತೆಗೆದು –ಕೊಂಡು ಹೋಗಬಹುದು; ಅದಲ್ಲದೆ ನನ್ನ ಹಿತಕ್ಕಾಗಿಯೂ ಪ್ರಾರ್ಥಿಸಿರಿ ಅಂದನು. ಐಗುಪ್ತ್ಯರು – ನಾವೆಲ್ಲರು ಸಾಯುತ್ತೇವಲ್ಲಾ ಅಂದುಕೊಂಡು ಇಸ್ರಾಯೇಲ್ಯರನ್ನು **ತಮ್ಮ ದೇಶದಿಂದ ತ್ವರೆಯಾಗಿ ಕಳುಹಿಸಿಬಿಡುವದಕ್ಕೆ ಅಪೇಕ್ಷೆಪಟ್ಟು ಅವರನ್ನು ಬಲವಂತಪಡಿಸಿದರು."** (ವಿಮೋ–೧೨:೩೧–೩೩).

ಕೊನೆಗೆ, ಫರೋಹನು ಬೇರೆ ಆಯ್ಕೆಯಿಲ್ಲದೆ ಶರಣಾಗತನಾಗಿ ಇಸ್ರಾಯೇಲ್ಯರನ್ನು ಹೋಗುವದಕ್ಕೆ ಬಿಟ್ಟನು. ಈ ಮೊದಲು ಫರೋ –ಹನು ಹೇಗೆ ಮೋಶೆ ಆರೋನರಿಗೆ, "ಯೆಹೋವನೆಂಬವನು ಯಾರು, ನಾನು ಅವನಿಗೆ ವಿಧೇಯನಾಗಿ ಇಸ್ರಾಯೇಲ್ಯರನ್ನು ಹೋಗಗೊಡಿಸಬೇಕೋ? ಯೆಹೋವನೆಂಬವನು ಯಾರೋ ನನಗೆ ಗೊತ್ತಿಲ್ಲ, ನಾನು ಇಸ್ರಾಯೇಲ್ಯರನ್ನು ಹೋಗಗೊಡಿಸುವ – –ದಿಲ್ಲ" ಎಂಬದಾಗಿ ಹೇಳಿದ್ದನ್ನು ನಾವು ಈಗಾಗಲೇ ನೋಡಿದ್ದೇವೆ. ಆದರೆ ಕೊನೆಗೆ, ಫರೋಹನು ಮತ್ತು ಎಲ್ಲಾ ಐಗುಪ್ತ್ಯರು ಅಬ್ರಹಾಮ ಇಸಾಕ ಮತ್ತು ಯಾಕೋಬರ ದೇವರು ಸರ್ವಶಕ್ತನಾದ ದೇವರೆಂಬುದಾಗಿ ಮತ್ತು ತಮ್ಮ ವಿಗ್ರಹಗಳು, ಕಲ್ಲು ಮರದ ದೇವರುಗಳು ಮತ್ತು ಮಾರಾಬೌಟ್ಸ್‌ಗಳಿಗಿಂತಲೂ ಹೆಚ್ಚು ಶಕ್ತಿವಂತನೆಂಬುದನ್ನು ಕಡ್ಡಾಯವಾಗಿ ಒಪ್ಪಿಕೊಳ್ಳಬೇಕಾಯಿತು! "ಒಂದು ಮೊಟ್ಟೆಯು ಒಂದು ಬಂಡೆಯೊಂದಿಗೆ ಹೋರಾಡುವದಕ್ಕಾಗುವದಿಲ್ಲ!" ಯಾರೊಬ್ಬರೂ ದೇವರೊಂದಿಗೆ ಹೋರಾಡಿ ಗೆಲ್ಲುವದ – –ಕ್ಕಾಗುವದಿಲ್ಲ!

ಆ ರಾತ್ರಿಯಲ್ಲಿ ಇಸ್ರಾಯೇಲ್ಯರು ಐಗುಪ್ತದಿಂದ ತಮ್ಮ ನಿರ್ಗಮನವನ್ನು ಪ್ರಾರಂಭಿಸಿ, ಐಗುಪ್ತ್ಯರು ತಮಗೆ ಕೊಟ್ಟ ಅಪಾರ ಸಂಪತ್ತಿ – –ನೊಂದಿಗೆ ಹೊರಟರು. ವಾಕ್ಯವು ಹೇಳುವದೇನೆಂದರೆ:

"ಇಸ್ರಾಯೇಲ್ಯರು ಮೋಶೆಯ ಮಾತಿನ ಮೇರೆಗೆ ಐಗುಪ್ತ್ಯರಿಂದ ಬೆಳ್ಳಿಬಂಗಾರದ ಒಡವೆಗಳನ್ನೂ ಬಟ್ಟೆಗಳನ್ನೂ ಕೇಳಿಕೊಂಡರು. ಯೆಹೋವನು ಅವರ ಮೇಲೆ ಐಗುಪ್ತ್ಯರಲ್ಲಿ ದಯೆಯನ್ನು ಹುಟ್ಟಿಸಿದ್ದರಿಂದ ಅವರು ಕೇಳಿಕೊಂಡದ್ದನ್ನು ಕೊಟ್ಟರು. ಹೀಗೆ ಇಸ್ರಾ – –ಯೇಲ್ಯರು ಐಗುಪ್ತ್ಯರ ಸೊತ್ತನ್ನು ಸುಲುಕೊಂಡರು.. . .ಇಸ್ರಾಯೇಲ್ಯರು ಐಗುಪ್ತದೇಶದಲ್ಲಿ ವಾಸವಾಗಿದ್ದದ್ದು ನಾನೂರಮೂವತ್ತು ವರುಷ." (ವಿಮೋ– ೧೨:೩೫,೩೬,೪೦)

ನೂರು ವರ್ಷಗಳ ಹಿಂದೆ ದೇವರು ಅಬ್ರಹಾಮನಿಗೆ ವಾಗ್ದಾನಮಾಡಿದ್ದು ನೆರವೇರುವದಕ್ಕೆ ಇದೆಲ್ಲವೂ ಸಂಭವಿಸಿತು. ಅದೇನೆಂದರೆ: "ನೀನು ಚೆನ್ನಾಗಿ ತಿಳಿಯತಕ್ಕದ್ದೇನೆಂದರೆ – ನಿನ್ನ ಸಂತತಿಯವರು ಅನ್ಯದೇಶದಲ್ಲಿ ಕೆಲವು ಕಾಲ ವಾಸವಾಗಿದ್ದು ಆ ದೇಶದವರಿಗೆ ದಾಸರಾಗುವರು. ನಾನೂರು ವರುಷ ಆ ದೇಶದವರಿಂದ ಬಾಧೆಪಡುವರು. ಅವರಿಂದ ಬಿಟ್ಟೀಕೆಲಸ ಮಾಡಿಸಿಕೊಂಡ ಜನಾಂಗ – –ವನ್ನು ನಾನು ಶಿಕ್ಷಿಸಿದ ನಂತರ **ಅವರು ಬಹಳ ಆಸ್ತಿವಂತರಾಗಿ ಆ ದೇಶದಿಂದ ಬಿಡುಗಡೆಯಾಗಿ ಬರುವರು."**
(ಆದಿ–೧೫:೧೩,೧೪)

ಈ ದಿನ ನಾವು ನೋಡಿದ ಕಥೆಯು, ಪಸ್ಕ ಎಂದು ಕರೆಯಲ್ಪಡುತ್ತದೆ. ಇದು ಬಚ್ಚಿಟ್ಟ ಸಂಪತ್ತಿನಿಂದ ತುಂಬಿರುವಂತ ಆಳವಾದ ಮತ್ತು ಅಗಲವಾದ ಒಂದು ಸಾಗರದಂತಿರುವದು. ಪಸ್ಕದ ಕಥೆಯ ಕುರಿತಾಗಿ ನಾವು ಹೇಳಬೇಕಾದುದು ಇನ್ನೂ ಬಹಳವಿದೆ. ನಿಜ –ವಾಗಿಯೂ ಈ ಕಥೆಯಲ್ಲಿ ಒಳಗೊಂಡಿರುವ ಎಲ್ಲಾ ಸತ್ಯಗಳನ್ನು ಹೇಳುವದಕ್ಕೆ ನಮಗೆ ಸಮಯವಿಲ್ಲ. ಹೇಗೂ, ನಾವು ಮನಸ್ಸಿ – –ನಲ್ಲಿ ಇಟ್ಟುಕೊಳ್ಳಲೇಬೇಕಾದಂತ ತುಂಬಾ ಪ್ರಾಮುಖ್ಯವಾದ ಸತ್ಯ ಒಂದಿದೆ. ಇದು ದೇವರು ಇಸ್ರಾಯೇಲ್ಯರಿಗೆ ಮಾಡಿದ ವಾಗ್ದಾನ:
**"ನಾನು ರಕ್ತವನ್ನು ನೋಡಿದಾಗ ಮುಂದಕ್ಕೆ ದಾಟಿ ಹೋಗುವೆನು!"**

ಐಗುಪ್ತ ಜನರೊಂದಿಗೆ ಇಸ್ರಾಯೇಲ್ಯರ ಚೊಚ್ಚಲು ಮಕ್ಕಳು ಯಾಕೆ ಸತ್ತುಹೋಗಲಿಲ್ಲ? ಅವರು ಸತ್ತು ಹೋಗಲಿಲ್ಲ ಯಾಕೆಂದರೆ, ದೇವರು **ಒಂದು ಕುರಿಮರಿಯ ರಕ್ತದ ಮೂಲಕವಾಗಿ ಅವರಿಗಾಗಿ ರಕ್ಷಣೆಯ ಮಾರ್ಗವನ್ನು ತೆರೆದಿದ್ದನು**. ಕುರಿಮರಿಯ ರಕ್ತದಿಂದ ಹಚ್ಚಲ್ಪಟ್ಟಂತ ಬಾಗಿಲುಗಳ ಪ್ರತಿಯೊಂದು ಮನೆಯ ಚೊಚ್ಚಲುಗಳು **ಮರಣದಿಂದ ರಕ್ಷಿಸಲ್ಪಡುತ್ತವೆ** ಆದರೆ ಬಾಗಿಲಿಗೆ ರಕ್ತ **ಹಚ್ಚ – –ಲ್ಪಡದಿರುವ** ಮನೆಯಲ್ಲಿರುವ ಚೊಚ್ಚಲುಗಳು **ಸಾಯುತ್ತವೆಂದು** ದೇವರು ವಿಧಿಸಿದ್ದನು!

ಒಂದು ವೇಳೆ ಇಸ್ರಾಯೇಲ್ಯರ ಚೊಚ್ಚಲುಗಳೊಳಗೆ ಒಬ್ಬ ಯೌವನಸ್ಥನು ತನ್ನ ತಂದೆಗೆ ಪ್ರಶ್ನೆ ಮಾಡುತ್ತಾ **"**ಅಪ್ಪಾ, ನಮ್ಮ ಮುಗ್ಧ ಕುರಿಮರಿಯು ಯಾಕೆ ಸಾಯಬೇಕು?**"** ಎಂದು ಕೇಳಿದರೆ. ಆ ತಂದೆಯು ಈ ರೀತಿಯಾಗಿ ಹೇಳಬಹುದು; **"**ನನ್ನ ಮಗನೇ, ನಿನಗೆ ಗೊತ್ತಿರುವಂತೆ, ದೇಶದಲ್ಲಿರುವ ಪ್ರತಿಯೊಬ್ಬ ಚೊಚ್ಚಲು ಮಗನು ದೋಷಿಯಾಗಿದ್ದಾನೆ. ನಮ್ಮ ಪಾಪಗಳ ಕಾರಣದಿಂದ ನಾವು ದೇವರ ನ್ಯಾಯತೀರ್ಪಿಗೆ ಅರ್ಹರಾಗಿದ್ದೇವೆ. ಹೇಗೂ ದೇವರು ತನ್ನ ಕರುಣೆಯಲ್ಲಿ, ನಾವು ಒಂದು ನಿಷ್ಕಳಂಕವಾದ ಕುರಿಮರಿ –ಯನ್ನು ಯಜ್ಞವಾಗಿ ಸಮರ್ಪಿಸಿ ಅದರ ರಕ್ತವನ್ನು ಬಾಗಿಲಿಗೆ ಹಚ್ಚಿದರೆ {ಉಲೂಫ್ ನಲ್ಲಿ: ಕಲೆ} ಉಪದ್ರವವು ನಮ್ಮನ್ನು ಹೊಡೆ –ಯುವದಿಲ್ಲ ಎಂದು ಹೇಳಿದ್ದಾನೆ. ಕುರಿಮರಿಯು ಸಾಯಲೇಬೇಕು, ಯಾಕೆಂದರೆ ಪಾಪದ ಸಂಬಳ ಮರಣ. ದೇವರು ನೀತಿ –ವಂತನು ಮತ್ತು ನಮ್ಮ ಪಾಪವನ್ನು ಆತನು ಸುಮ್ಮನೆ ಉದಾಸೀನ ಮಾಡುವದಿಲ್ಲ. ಕುರಿಮರಿಯು ನಿನಗೆ ಬದಲಾಗಿ ಕೊಡಲ್ಪ –ಡುತ್ತದೆ. ನಮ್ಮ ಪೂರ್ವಿಕನಾದ ಅಬ್ರಹಾಮನು ತನ್ನ ಮಗನಿಗೆ ಬದಲಾಗಿ ಟಗರನ್ನು ಸಮರ್ಪಿಸಿದಂತೆ, ನಾವು ನಿನ್ನ ಜಾಗದಲ್ಲಿ ಅದನ್ನು ಯಜ್ಞಮಾಡುತ್ತೇವೆ. ನಮ್ಮ ದೇವರು ನೀತಿವಂತನು ಮತ್ತು ಪಾಪವನ್ನು ಹಗುರವಾಗಿ ತೆಗೆದುಕೊಳ್ಳುವವನಲ್ಲ! ನಮಗೆ ಆತನು ಹೇಳಿದ ಮಾತು ಸ್ಪಷ್ಟವಾಗಿದೆ. ನಮ್ಮ ಮನೆಬಾಗಿಲುಗಳ ನಿಲುವುಪಟ್ಟಿಗಳ ಮೇಲೆ **ರಕ್ತವು** ಹಚ್ಚಲ್ಪಟ್ಟಿದ್ದರೆ ಮಾತ್ರ ಆತನು ನಮ್ಮ ಮನೆಯನ್ನು ದಾಟಿ ಮುಂದಕ್ಕೆ ಹೋಗುತ್ತಾನೆ!**"**

ಪ್ರಿಯ ಸ್ನೇಹಿತರೇ, ಈ ದಿನ ನಾವು ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ, ಐಗುಪ್ತ್ಯರ ಮತ್ತು ಇಸ್ರಾಯೇಲ್ಯರ ಚೊಚ್ಚಲು ಮಕ್ಕಳ ಹಾಗೆ ದೇವರ ಮುಂದೆ ಆದಾಮನ ಎಲ್ಲಾ ಸಂತತಿಯವರು ಇದ್ದಾರೆ. **ನಾವು ಪ್ರತಿಯೊಬ್ಬರೂ** ಮರಣಹೊಂದಿ ದೇವರ ನೀತಿಯುಳ್ಳ ನ್ಯಾಯತೀರ್ಪನ್ನು ಎದುರಿಸುವಂತೆ **ದೇವರ ಪರಿಶುದ್ಧ ಧರ್ಮಶಾಸ್ತ್ರವು ನಮಗೆ ಶಿಕ್ಷೆ ವಿಧಿಸುತ್ತದೆ.** ಅದಕ್ಕಾಗಿಯೇ ವಾಕ್ಯವು ಹೇಳುವ –ದೇನೆಂದರೆ: **"**ಹೆಚ್ಚು ಕಡಿಮೆ ಏನು ಇಲ್ಲ. **ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ."** (ರೋಮಾ–೩:೨೨,೨೩). ಪಾಪದ ಸಂಬಳವು ನಿತ್ಯವಾದ ಶಿಕ್ಷೆಯಾಗಿದೆ. **"**ಕರ್ತನ ಸಮ್ಮುಖಕ್ಕೂ ಆತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು.**"** (೨ಥೆಸ–೧:೯)

ಹಾಗಾದರೆ ರಕ್ಷಿಸಲ್ಪಡುವದಕ್ಕೆ ನಾವು ಏನು ಮಾಡಬೇಕು? ಆತನ ನೀತಿವಂತಿಕೆಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಪಾಪಿಗಳನ್ನು ಅವರ ಪಾಪಗಳಿಂದ ದೇವರು ಹೇಗೆ ರಕ್ಷಿಸುತ್ತಾನೆ? ಈ ದಿನ ನಾವು ಇದನ್ನು ತುಂಬಾ ದೀರ್ಘವಾಗಿ ತೆಗೆದುಕೊಂಡು ಹೋಗುವ –ದಿಲ್ಲ, ಆದರೆ ನಾವು ತಿಳಿದುಕೊಳ್ಳಬೇಕಾದ ಅಗತ್ಯ ಇದಾಗಿದೆ, ಏನೆಂದರೆ: ಮರಣದ ಉಪದ್ರವದಿಂದ ತಪ್ಪಿಸಿಕೊಳ್ಳುವದಕ್ಕೆ ಇಸ್ರಾ –ಯೇಲ್ಯರು ಯಜ್ಞಮಾಡಿದಂತ **ಕುರಿಮರಿಗಳು,** ಆದಾಮನ ಸಂತತಿಯವರೆಲ್ಲರಿಗಾಗಿ ಪಾಪದ ಸಾಲವನ್ನು ಸಂದಾಯಮಾಡುವ ದಕ್ಕೆ ತನ್ನ ರಕ್ತವನ್ನು ಸುರಿಸಲು ಬರುವದಕ್ಕಿದ್ದ **ವಿಮೋಚಕನ ಸಂಕೇತವಾಗಿದ್ದವು.** ಆ ವಿಮೋಚಕನಿಗೆ ಸಂಬಂಧಿಸಿದಂತೆ ವಾಕ್ಯವು ಹೇಳುವದೇನೆಂದರೆ: **"**ಕ್ರಿಸ್ತನು ಸಹ **ನೀತಿವಂತನಾಗಿದ್ದು ಅನೀತಿವಂತರಿಗೋಸ್ಕರ** ಪ್ರಾಣಕೊಟ್ಟು ನಮ್ಮನ್ನು ದೇವರ ಬಳಿಗೆ ಸೇರಿಸುವ –ದಕ್ಕಾಗಿ ಒಂದೇ ಸಾರಿ ಪಾಪನಿವಾರಣಕ್ಕೋಸ್ಕರ ಬಾಧೆಪಟ್ಟು ಸತ್ತನು.. . .ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವ –ದೆಂದರೆ ಕ್ರಿಸ್ತನೇ.**"** (೧ಪೇತ್ರ–೩:೧೮; ೧ಕೊರಿಂಥ–೫:೭). ಈ ಪ್ರಕಾರ, ಮರಣದಿಂದ ತಮ್ಮ ಚೊಚ್ಚಲು ಮಕ್ಕಳನ್ನು ರಕ್ಷಿಸುವದಕ್ಕೆ ಇಸ್ರಾಯೇಲ್ಯರು ತಮ್ಮ ಮನೆ ಬಾಗಿಲುಗಳಿಗೆ ಹಚ್ಚಿದ ಕುರಿಮರಿಯ ರಕ್ತವು ಒಂದು ನಿದರ್ಶನವಾಗಿದೆ. ಇದು ಶಿಲುಬೆಯ ಮೇಲೆ ಲೋಕದ ರಕ್ಷಕನು ಸುರಿಸಿದಂತ ರಕ್ತದ ಚಿತ್ರಣವನ್ನು ಕೊಡುತ್ತದೆ, ಆದ್ದರಿಂದ ಆತನನ್ನು ನಂಬುವ ಯಾವನಾದರೂ ದೇವರ ಶಾಶ್ವತವಾದ ಶಿಕ್ಷೆಯಿಂದ ತಪ್ಪಿಸಿಕೊಳ್ಳುವದಕ್ಕೆ ಶಕ್ತನಾಗುತ್ತಾನೆ.

ನಿಮ್ಮ ವಿಷಯವೇನು? ವಿಮೋಚಕನ ರಕ್ತದ ಕುರಿತಾಗಿ ಪ್ರವಾದಿಗಳು ಏನು ಬರೆದಿದ್ದಾರೆಂಬುದು **ನಿಮಗೆ ಗೊತ್ತಾ**? ವಿಮೋಚಕನು ತನ್ನ ರಕ್ತವನ್ನು ಸುರಿಸಿದ್ದರಿಂದ ದೇವರು ತನ್ನ ನೀತಿವಂತಿಕೆಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ನಿನ್ನನ್ನು ಮತ್ತು ನಿನ್ನ ಪಾಪಗ –ಳನ್ನು ಕ್ಷಮಿಸುವದಕ್ಕೆ ಆತನು ಶಕ್ತನಾದನು. ನರಕದ ಶಿಕ್ಷೆಯಿಂದ ನಿನ್ನನ್ನು ತಪ್ಪಿಸಿ ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ನಿನಗೆ ಒಂದು ಸ್ಥಳದ ಖಾತರಿಯನ್ನು ಕೊಡುವದಕ್ಕೆ ಶಕ್ತವಾಗಿರುವಂತ ರಕ್ತದ ಕುರಿತಾಗಿ ಏನು ಬರೆಯಲ್ಪಟ್ಟಿದೆಯೋ ಅದನ್ನು ನೀವು ನಂಬುತ್ತೀರೋ? ನ್ಯಾಯತೀರ್ಪಿನ ದಿನದಲ್ಲಿ, ದೇವರ ಭಯಂಕರವಾದ ತೀರ್ಪು ನಿಮ್ಮನ್ನು ದಾಟಿ ಹೋಗುತ್ತದೋ? ಅಥವಾ ಐಗುಪ್ತ್ಯರ ಮೇಲೆ ಬಿದ್ದ ಹಾಗೆ ನಿಮ್ಮ ಮೇಲೆಯೂ ಇದು ಬೀಳುತ್ತದೋ?

ಸ್ನೇಹಿತರೇ ನಮ್ಮ ಸಮಯವು ಮುಗಿಯಿತು. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು, ಮುಂದಿನ ಕಾರ್ಯಕ್ರಮದಲ್ಲಿ ದೇವರ ಚಿತ್ತವಾದರೆ, ನಾವು ಇಸ್ರಾಯೇಲ್ಯರ ಕಥೆಯನ್ನು ಮುಂದುವರೆಸಿ ದೇವರು ಸಮುದ್ರದ ಮಧ್ಯದಲ್ಲಿ ಹೇಗೆ ದಾರಿಯನ್ನು ತೆರೆದನೆಂಬು –ದನ್ನು ನೋಡುತ್ತೇವೆ.

ದೇವರು ನಿಮ್ಮನ್ನು ಆಶೀರ್ವದಿಸಿ ಆತನು ಇಸ್ರಾಯೇಲ್ಯರಿಗೆ ಮಾತಾಡಿದಂತ ಮಾತುಗಳ ಆಳವಾದ ಅರ್ಥವನ್ನು ನಿಮ್ಮ ಹೃದಯ –ಗಳಲ್ಲಿ ಪ್ರಕಟಪಡಿಸಲಿ, ಆ ಮಾತೇನೆಂದರೆ;

**"ನಾನು ರಕ್ತವನ್ನು ನೋಡಿದಾಗ ನಿಮ್ಮ ಮನೆಯನ್ನು ನಾನು ದಾಟಿಹೋಗುತ್ತೇನೆ."** (ವಿಮೋ–೧೨:೧೩)

[ಪಾಠ ೩೩: ಪಸ್ಕದ ಕುರಿಮರಿ] [ಸಾರಾಂಶಗಳ ಪಟ್ಟಿ] [ಪಾಠ ೩೫: ಮರುಭೂಮಿಯಲ್ಲಿ ಆಹಾರ]

ಪಾಠ ೩೪

# ಸಮುದ್ರದ ಮುಖಾಂತರ ಒಂದು ಮಾರ್ಗ

ವಿಮೋಚನಕಾಂಡ ೧೩–೧೫

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ
–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು
–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ
ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ
–ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಐಗುಪ್ತ್ಯರ ಎಲ್ಲಾ ಚೊಚ್ಚಲು ಮಕ್ಕಳನ್ನು ಸಂಹರಿಸುವದರಿಂದ ಇಸ್ರಾಯೇಲ್ ಜನರನ್ನು ಅವರ ಗುಲಾಮ
–ತನದಿಂದ ದೇವರು ಹೇಗೆ ಬಿಡುಗಡೆ ಮಾಡಿದನೆಂಬುದನ್ನು ನಾವು ನೋಡಿಕೊಂಡೆವು. ಹೇಗೂ, ಆತನು ಇಸ್ರಾಯೇಲ್ಯರ
ಚೊಚ್ಚಲು ಮಕ್ಕಳನ್ನು ಮರಣದಿಂದ ಬಿಡಿಸಿದನು ಯಾಕೆಂದರೆ ಅವರು ತಮ್ಮ ಮನೆಗಳ ಬಾಗಿಲುಗಳ ಮೇಲೆ ಕುರಿಮರಿಯ ರಕ್ತ –
–ವನ್ನು ಹಚ್ಚಿದ್ದರು. ದೇವರು ತಾನೇ ಹೀಗೆ ಹೇಳಿದ್ದನು: "ನೀವು ಬಾಗಿಲಿಗೆ ಹಚ್ಚಿದ ಆ ರಕ್ತವು ನೀವಿರುವ ಮನೆಗಳನ್ನು **ಸೂಚಿಸು**
**–ವದಾದ** ಕಾರಣ **ನಾನು ಅದನ್ನು ಕಂಡು ನಿಮಗೆ ಯಾವ ನಷ್ಟವನ್ನೂ ಮಾಡದೆ ಮುಂದಕ್ಕೆ ದಾಟಿ ಹೋಗುವೆನು."**
(ವಿಮೋ–೧೨:೧೩)

ಈ ಪ್ರಕಾರ ಆ ರಾತ್ರಿ ಇಸ್ರಾಯೇಲ್ಯರ ಎಲ್ಲಾ ಕುಲಗಳವರು ಐಗುಪ್ತದಿಂದ ತಮ್ಮ ನಿರ್ಗಮನವನ್ನು ಕೈಕೊಂಡರು. ಪಸ್ಕದ ಆ ರಾತ್ರಿ
ಅವರಿಗೆ ದೊಡ್ಡ ಸಂತೋಷದ ಒಂದು ರಾತ್ರಿಯಾಗಿತ್ತು. ಇದರ ಕುರಿತಾಗಿ ಆಲೋಚಿಸಿರಿ! ನೂರಾರು ವರ್ಷಗಳವರೆಗೆ ಐಗುಪ್ತದ
ಜನರು ಅವರನ್ನು ತಪ್ಪಾಗಿ ನಡೆಸಿಕೊಂಡು ಕಠಿಣವಾದ ಕೆಲಸದಿಂದ ಅವರನ್ನು ಹಿಂಸಿಸಿ ಅವರ ಜೀವಿತಗಳಲ್ಲಿ ಸಂತೋಷವೇ
ಇಲ್ಲದಂತೆ ಮಾಡಿದ್ದರು. ಆದರೆ ಈಗ. . . ಈಗ ಅವರು ಸ್ವತಂತ್ರರಾಗಿದ್ದಾರೆ! ಫಸ್ಕದ ಆ ರಾತ್ರಿಯಲ್ಲಿ ದೇವರಾದ ಯೆಹೋವನು
ಅವರನ್ನು ಬಿಡುಗಡೆಗೊಳಿಸಿದ್ದಾನೆ! ದಾಸತ್ವದ ಅವರ ನೊಗವು ಮುರಿದುಹಾಕಲ್ಪಟ್ಟಿದೆ! ಅಬ್ರಹಾಮ ಇಸಾಕ ಮತ್ತು ಯಾಕೋಬರ
ಸಂತತಿಯವರಿಗೆ ಕೊಡುತ್ತೇನೆಂಬುದಾಗಿ ತುಂಬಾ ಹಿಂದೆಯೇ ದೇವರು ಮಾಡಿದ್ದ ವಾಗ್ದಾನದ ದೇಶವಾಗಿರುವ **ಕಾನಾನ್ ದೇಶಕ್ಕೆ**
**ಮತ್ತೆ ಅವರನ್ನು ಹಿಂದಕ್ಕೆ** ಕರೆದುಕೊಂಡು ಬರುವದಕ್ಕಾಗಿ ಅರಣ್ಯದ ಮೂಲಕವಾಗಿ ಅವರನ್ನು ನಡೆಸಿಕೊಂಡು ಹೋಗುತ್ತೇನೆಂದು
**ಈಗ ದೇವರು ಅವರಿಗೆ ವಾಗ್ದಾನ ಮಾಡಿದ್ದಾನೆ.** ಯಾಕೋಬನು ಮತ್ತು ಅವನ ಮಕ್ಕಳು ಐಗುಪ್ತಕ್ಕೆ ಬರುವದಕ್ಕಿಂತ ಮುಂಚೆ
ಯೋಸೇಫನೊಂದಿಗೆ ಜೀವಿಸಿದ್ದ ಪ್ರದೇಶವೇ ಕಾನಾನ್ ದೇಶವಾಗಿತ್ತು. ಈ ದಿನ ಈ ಪ್ರದೇಶವು ಪ್ಯಾಲೆಸ್ತೀನ್ ಅಥವಾ ಇಸ್ರೇಲ್
ಎಂಬುದಾಗಿ ಕರೆಯಲ್ಪಡುತ್ತಿದೆ.

**ಫರೋಹನ ಸೈನ್ಯದಿಂದ ಇಸ್ರಾಯೇಲ್ಯರನ್ನು ದೇವರು ಹೇಗೆ ಬಿಡಿಸಿದನೆಂಬುದರ** ಕುರಿತಾದ ಆಶ್ಚರ್ಯಕರವಾದ ಕಥೆಯು ಈ ದಿನ
ನಮ್ಮ ಮುಂದಿದೆ. ವಿಮೋಚನಕಾಂಡದ ಹದಿನಾಲ್ಕನೆಯ ಅಧ್ಯಾಯದಲ್ಲಿ ಹೆಚ್ಚಿನ ನಮ್ಮ ಓದುವಿಕೆಯು ಕಂಡುಬರುತ್ತದೆ. ಪ್ರವಾದಿ
–ಯಾದ ಮೋಶೆಯು ತೋರಾದಲ್ಲಿ ಬರೆದಿರುವ ಕಥೆಯನ್ನು ಕೇಳಿಸಿಕೊಳ್ಳಿರಿ.

"ಇಸ್ರಾಯೇಲ್ಯರು ರಮ್ಸೇಸ್ ಪಟ್ಟಣದಿಂದ ಹೊರಟು ಸುಕ್ಕೋತಿಗೆ ಬಂದರು. **ಹೆಂಗಸರೂ ಮಕ್ಕಳೂ ಅಲ್ಲದೆ ಅವರ ಕಾಲ್ಬಲವೇ**
**ಸುಮಾರು ಆರು ಲಕ್ಷ ಗಂಡಸರು.** ಅವರೊಂದಿಗೆ ಬಹು ಮಂದಿ ಅನ್ಯರೂ ಹೊರಟುಹೋದರು; ಕುರಿ ದನ ಮೊದಲಾದ ಪಶು –
–ಗಳೂ ಬಹಳವಾಗಿದ್ದವು. ಅವರು ಐಗುಪ್ತದೇಶದಿಂದ ತಂದ ಕಣಕದ ಮುದ್ದೆಯಿಂದ ಹುಳಿಯಿಲ್ಲದ ರೊಟ್ಟಿಗಳನ್ನು ಮಾಡಿ
ಸುಟ್ಟರು. ಇದಲ್ಲದೆ ಯೋಸೇಫನು ಇಸ್ರಾಯೇಲ್ಯರಿಗೆ – ದೇವರು ನಿಸ್ಸಂದೇಹವಾಗಿ ನಿಮ್ಮನ್ನು ಪರಾಂಬರಿಸಿ ತನ್ನ ವಾಗ್ದಾನವನ್ನು
ನೆರವೇರಿಸುವನಾದದರಿಂದ ನೀವು ಹೋಗುವಾಗ ನನ್ನ ಶವವನ್ನು ನಿಮ್ಮ ಸಂಗಡ ತೆಗೆದುಕೊಂಡು ಹೋಗಬೇಕೆಂದು ಹೇಳಿ ಖಂಡಿ
–ತವಾದ ಪ್ರಮಾಣವನ್ನು ಮಾಡಿಸಿದ್ದರಿಂದ ಮೋಶೆಯು **ಅವನ ಶವವನ್ನು ಸಂಗಡ ತೆಗೆದುಕೊಂಡು ಹೋದನು.** ಯೆಹೋವನು
ಹಗಲು ಹೊತ್ತಿನಲ್ಲಿ ದಾರಿತೋರಿಸುವದಕ್ಕೆ ಮೇಘಸ್ತಂಭದಲ್ಲಿಯೂ ರಾತ್ರಿವೇಳೆಯಲ್ಲಿ ಬೆಳಕು ಕೊಡುವದಕ್ಕೆ **ಅಗ್ನಿಸ್ತಂಭದಲ್ಲಿಯೂ**
ಇದ್ದು ಅವರ ಮುಂಭಾಗದಲ್ಲಿ ಹೋದನು. ಈ ರೀತಿಯಲ್ಲಿ ಅವರು ಹಗಲಿರುಳು ಪ್ರಯಾಣ ಮಾಡಿದರು. ಹಗಲಲ್ಲಿ ಮೇಘ –
–ಸ್ತಂಭವೂ ರಾತ್ರಿಯಲ್ಲಿ ಅಗ್ನಿಸ್ತಂಭವೂ ಜನರ ಮುಂದೆ ತಪ್ಪದೆ ಕಾಣಿಸಿದವು." (ವಿಮೋ–೧೨:೩೭,೩೮; ೧೩:೧೯, ೨೧, ೨೨)

"ಯೆಹೋವನು ಮೋಶೆಗೆ – ಇಸ್ರಾಯೇಲ್ಯರು ಅಡ್ಡತಿರುಗಿ ಪೀಹಹೀರೋತಿನ ಪೂರ್ವಕಡೆಯಲ್ಲಿ ಮಿಗ್ದೋಲಿಗೂ ಸಮುದ್ರಕ್ಕೂ
ನಡುವೆ ಬಾಳ್ಚೆಫೋನಿಗೆ ಎದುರಾಗಿ ಇಳುಕೊಳ್ಳಬೇಕೆಂದು ಅವರಿಗೆ ಆಜ್ಞಾಪಿಸು; ಅದರ ಎದುರಾಗಿಯೇ ಸಮುದ್ರದ ಬಳಿಯಲ್ಲಿ
ಅವರು ಇಳಿದುಕೊಳ್ಳಬೇಕು. ಫರೋಹನು ಅದನ್ನು ಕಂಡು – ಇಸ್ರಾಯೇಲ್ಯರಿಗೆ ದಾರಿ ತಪ್ಪಿತು, ಎಲ್ಲಾ ಕಡೆಯಲ್ಲಿಯೂ ಅರಣ್ಯವು
ಅವರ್ನು ಸುತ್ತಿಕೊಂಡದೆ ಅಂದುಕೊಳ್ಳುವನು. ನಾನು ಫರೋಹನ ಹೃದಯವನ್ನು ಕಠಿಣಪಡಿಸುವೆನಾದದರಿಂದ ಅವನು ಅವರನ್ನು

ಬೆನ್ನಟ್ಟಿ ಬರುವನು; **ಆಗ ನಾನು ಫರೋಹನಲ್ಲಿಯೂ ಅವನ ಸೈನ್ಯದಲ್ಲಿಯೂ ಪ್ರಖ್ಯಾತಿಗೊಳ್ಳುವೆನು. ನಾನೇ ಯೆಹೋವನೆಂಬದು ಐಗುಪ್ತ್ಯರಿಗೆ ತಿಳಿದುಬರುವದು ಎಂದು ಹೇಳಿದನು. ಯೆಹೋವನು ಆಜ್ಞಾಪಿಸಿದಂತೆಯೇ ಇಸ್ರಾಯೇಲ್ಯರು ನಡೆದರು."** (ವಿಮೋ–೧೪:೧–೪).

"ಇಸ್ರಾಯೇಲ್ಯರು ಓಡಿಹೋದರೆಂಬ ವರ್ತಮಾನವು ಫರೋಹನಿಗೆ ತಿಳಿದು ಬಂದಾಗ ಅವರ ವಿಷಯದಲ್ಲಿ **ಫರೋಹನ ಮನಸ್ಸೂ ಅವನ ಪರಿವಾರದವರ ಮನಸ್ಸೂ ಬೇರೆಯಾಯಿತು.** ಅವರು – ಇದೇನು ನಾವು ಮಾಡಿದ್ದು? ನಮಗೆ ದಾಸರಾಗಿದ್ದ ಇಸ್ರಾಯೇಲ್ಯ–ರನ್ನು ಯಾತಕ್ಕೆ ಹೋಗಗೊಡಿಸಿದೆವು ಅಂದುಕೊಂಡರು. ಆಗ ಫರೋಹನು ತನ್ನ ರಥಬಲವನ್ನು ಸಿದ್ಧಪಡಿಸಿಕೊಂಡು ತನ್ನ ಭಟ–ರೊಡನೆ ಹೊರಟನು. ಶ್ರೇಷ್ಠವಾದ ಆರುನೂರು ರಥಗಳನ್ನೂ ಐಗುಪ್ತ ದೇಶದ ಎಲ್ಲಾ ರಥಗಳನ್ನೂ ತೆಗೆದುಕೊಂಡು ಹೋದನು. ಆ ಎಲ್ಲಾ ರಥಗಳಲ್ಲಿ ಭಟರಿದ್ದರು." (ವಿಮೋ–೧೪:೫–೭)

**"ಐಗುಪ್ತ್ಯರು ಅಂದರೆ ಫರೋಹನ ಕುದುರೆಗಳೂ ರಥಗಳೂ ಅವರ ರಾಹುತರೂ ಸೈನ್ಯದವರೆಲ್ಲರೂ ಅವರ ಹಿಂದೆ ಹೊರಟು ಇಸ್ರಾಯೇಲ್ಯರು.** . . .ಸಮುದ್ರತೀರದಲ್ಲಿ ಇಳಿದುಕೊಳ್ಳುವಾಗಲೇ ಅವರ ಹತ್ತಿರಕ್ಕೆ ಬಂದರು. ಫರೋಹನು ಸಮೀಪಿಸುತ್ತಿರುವಾಗ ಇಸ್ರಾಯೇಲ್ಯರು ಕಣ್ಣೆತ್ತಿ ತಮ್ಮ ಹಿಂದೆ ಹೊರಟುಬಂದಿದ್ದ ಐಗುಪ್ತ್ಯರನ್ನು ಕಂಡು ಬಹಳ **ಭಯಪಟ್ಟವರಾಗಿ** ಯೆಹೋವನಿಗೆ ಮೊರೆ ––ಯಿಟ್ಟರು. ಅವರು ಮೋಶೆಗೆ – ಐಗುಪ್ತದೇಶದಲ್ಲಿ ಸಮಾಧಿಗಳಿಲ್ಲವಾದದರಿಂದ ಅರಣ್ಯದಲ್ಲಿ ಸಾಯಲಿ ಎಂಬದಾಗಿ ನಮ್ಮನ್ನು ಇಲ್ಲಿಗೆ ಕರಕೊಂಡು ಬಂದಿಯೇನು? ಯಾಕೆ ನಮಗೆ ಈ ಪ್ರಕಾರ ಮಾಡಿ ಐಗುಪ್ತದೇಶದಿಂದ ಕರಕೊಂಡು ಬಂದಿ? ನಾವು ಐಗುಪ್ತ ದೇಶದಲ್ಲಿದ್ದಾಗಲೇ – ನೀನು ನಮ್ಮ ಗೊಡವೆಗೆ ಬರಬೇಡ; ನಾವು ಐಗುಪ್ತ್ಯರಿಗೆ ದಾಸರಾಗಿಯೇ ಇರುವೆವು ಎಂಬದಾಗಿ ನಿನಗೆ ಹೇಳಲಿಲ್ಲವೇ? ನಾವು ಅರಣ್ಯದಲ್ಲಿ ಸಾಯುವದಕ್ಕಿಂತ ಐಗುಪ್ತ್ಯರಿಗೆ ದಾಸರಾಗಿರುವದೇ ವಾಸಿಯಲ್ಲವೇ ಎಂದು ಹೇಳಿದರು." (ವಿಮೋ–೧೪:೯–೧೨).

ಇಸ್ರಾಯೇಲ್ಯರು ಏನು ಹೇಳುತ್ತಿದ್ದಾರೆ? ಅವರು ದೇವರನ್ನು ಯಾಕೆ ನಂಬುತ್ತಿಲ್ಲ? ದಾಸತ್ವದ ಬಂಧನದಿಂದ ಅವರನ್ನು ಬಿಡಿಸಿದ ದೇವರು ಮತ್ತೆ ಫರೋಹನ ಸೈನ್ಯದಿಂದ ಅವರನ್ನು ಬಿಡಿಸುವದಿಲ್ಲವೋ? ಖಂಡಿವಾಗಿ ಆತನು ಬಿಡಿಸುತ್ತಾನೆ! ಹೇಗೂ ಇಸ್ರಾಯೇ–ಲ್ಯರು ಇದರ ಕುರಿತಾಗಿ ಆಲೋಚಿಸುತ್ತಿಲ್ಲ ಯಾಕೆಂದರೆ ಅವರು ತುಂಬಾ ಭಯಗ್ರಸ್ಥರಾಗಿದ್ದರು. ಅವರ ಮುಂದೆ **ಸಮುದ್ರವಿತ್ತು.** ಅವರ ಎಡಬಲಗಡೆಗಳಲ್ಲಿ **ಪರ್ವತಗಳಿದ್ದವು.** ಅವರನ್ನು ಮತ್ತೆ ವಶಪಡಿಸಿಕೊಳ್ಳುವದಕ್ಕೆ ಅಥವಾ ಅವರನ್ನು ಕೊಲ್ಲುವದಕ್ಕೂ ಸಹ ಅವರ ಹಿಂದೆ ಫರೋಹನ **ಸೈನ್ಯವು** ಮುಂದೆ ಬರುತ್ತಿತ್ತು! ಅವರು ಏನು ಮಾಡಬೇಕು? ಅವರು ಹೇಗೆ ರಕ್ಷಿಸಲ್ಪಡಬೇಕು? ಈಗ ಮೋಶೆ ಏನು ಹೇಳಿದನು ಮತ್ತು ದೇವರು ಏನು ಮಾಡಿದನೆಂಬುದನ್ನು ನೋಡೋಣ.

"ಮೋಶೆ ಆ ಜನರಿಗೆ – **ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ;** ನೀವು ಈ ಹೊತ್ತು ನೋಡುವ ಐಗುಪ್ತ್ಯರನ್ನು ಇನ್ನು ಮುಂದೆ ಎಂದಿಗೂ ನೋಡುವದಿಲ್ಲ. ಯಹೋವನೇ ನಿಮಗಾಗಿ ಯುದ್ಧ ಮಾಡುವನು; ನೀವಂತೂ ಸುಮ್ಮನೇ ಇರ್ರಿ ಎಂದು ಹೇಳಿದನು. ಆಗ ಯೆಹೋವನು ಮೋಶೆಗೆ ಹೇಳಿದ್ದೇನಂದರೆ ನೀನು ನನಗೆ ಮೊರೆಯಿಡುವದೇನು? ಮುಂದಕ್ಕೆ ಹೊರಡಬೇಕೆಂದು ಇಸ್ರಾಯೇಲ್ಯರಿಗೆ ಹೇಳು. ಮತ್ತು ನೀನು ನಿನ್ನ ಕೋಲನ್ನು ಎತ್ತಿ ಸಮುದ್ರದ ಮೇಲೆ ಕೈಚಾಚಿ ಅದನ್ನು ವಿಭಾಗಿಸು; ಆಗ ಇಸ್ರಾಯೇಲ್ಯರು ಸಮುದ್ರದ ಮಧ್ಯದಲ್ಲಿ ಒಣಗಿದ ನೆಲದ ಮೇಲೆ ನಡೆದು–ಹೋಗುವರು. ನಾನಂತೂ ಐಗುಪ್ತ್ಯರ ಹೃದಯಗಳನ್ನು ಕಠಿಣಪಡಿಸುವೆನಾದದರಿಂದ ಅವರು ಇವರ ಹಿಂದೆ ಸಮುದ್ರದೊಳಗೆ ಹೋಗುವರು; ಆಗ ನಾನು ಫರೋಹನಲ್ಲಿಯೂ ಅವನ ಸಮಸ್ತ ಸೈನ್ಯದಲ್ಲಿಯೂ ರಥಗಳಲ್ಲಿಯೂ ಕುದುರೆಗಳಲ್ಲಿಯೂ ಪ್ರಖ್ಯಾತಿ ––ಗೊಳ್ಳುವೆನು. . . .**ನಾನು ಯೆಹೋವನು ಎಂಬುದನ್ನು ಐಗುಪ್ತ್ಯರು ತಿಳುಕೊಳ್ಳುವರು** ಅಂದನು. ಆಗ ಇಸ್ರಾಯೇಲ್ಯರ ದಂಡಿನ ಮುಂದೆ ಹೋಗುತ್ತಿದ್ದ ದೇವದೂತನು ತನ್ನ ಸ್ಥಳವನ್ನು ಬಿಟ್ಟು ಅವರ ಹಿಂದಕ್ಕೆ ಬಂದನು; ಅವರ ಮುಂದಾಗಿದ್ದ ಮೇಘಸ್ತಂಭವು ಅಲ್ಲಿಂದ ಬಂದು ಅವರ ಹಿಂದೆ ನಿಂತುಕೊಂಡಿತು. ಆ ಮೇಘಸ್ತಂಭವು ಐಗುಪ್ತ್ಯರ ಪಾಳೆಯಕ್ಕೂ ಇಸ್ರಾಯೇಲ್ಯರ ಪಾಳೆಯಕ್ಕೂ ನಡುವೆ ಬಂದು ಐಗುಪ್ತ್ಯರಿಗೆ ಕತ್ತಲನ್ನು ಉಂಟುಮಾಡಿದರೂ ಇಸ್ರಾಯೇಲ್ಯರಿಗೋಸ್ಕರ ರಾತ್ರಿಯನ್ನು ಬೆಳಕು ಮಾಡಿತು; ಆ ರಾತ್ರಿ ––ಯೆಲ್ಲಾ ಒಬ್ಬರ ಹತ್ತಿರಕ್ಕೆ ಒಬ್ಬರು ಬರಲಿಲ್ಲ." (ವಿಮೋ–೧೪:೧೩–೨೦)

ಮೋಶೆ ಸಮುದ್ರದ ಮೇಲೆ ಕೈಚಾಚಿದಾಗ ಯೆಹೋವನು ಆ ರಾತ್ರಿಯೆಲ್ಲಾ ಮೂಡಣ ದಿಕ್ಕಿನಿಂದ ಬಲವಾದ ಬಿರುಗಾಳಿಯನ್ನು ಬೀಸುವಂತೆ ಮಾಡಿ ಸಮುದ್ರದ **ನೀರನ್ನು ಒಂದು ಕಡೆಗೆ ನೂಕಿ** ಅದರ ಸ್ಥಳದಲ್ಲಿ **ಒಣನೆಲವು** ಕಾಣಿಸುವಂತೆ ಮಾಡಿದನು. ನೀರು ವಿಭಾಗವಾಯಿತು. ಇಸ್ರಾಯೇಲ್ಯರು ಸಮುದ್ರದ ಮಧ್ಯದಲ್ಲಿ ಒಣನೆಲದಲ್ಲೇ ನಡೆದುಹೋದರು. ನೀರು ಅವರ ಎಡಗಡೆ ಬಲಗಡೆ–ಗಳಲ್ಲಿ ಗೋಡೆಯಂತೆ ನಿಂತಿತು. ಐಗುಪ್ತ್ಯರೂ ಅಂದರೆ ಫರೋಹನ ಕುದುರೆಗಳೂ ರಥಗಳೂ ರಾಹುತರೂ ಅವರನ್ನು ಬೆನ್ನಟ್ಟು––ವವರಾಗಿ ಅವರ ಹಿಂದೆಯೇ ಸಮುದ್ರದೊಳಗೆ ಹೋದರು. ಬೆಳಗಿನ ಜಾವದಲ್ಲಿ ಯೆಹೋವನು ಆ ಅಗ್ನಿಮೇಘಸ್ತಂಭದೊಳಗಿಂದ ಐಗುಪ್ತ್ಯರ ದಂಡಿನ ಕಡೆಗೆ ನೋಡಿ ಅದನ್ನು ಗಲಿಬಿಲಿ ಮಾಡಿದನು. ಆತನು ಅವರ ರಥಗಳ ಚಕ್ರಗಳನ್ನು ತೆಗೆದುಬಿಟ್ಟದ್ದರಿಂದ ಐಗುಪ್ತ್ಯರು ಬಹುಕಷ್ಟದಿಂದ ಹೊಡಕೊಂಡು ಹೋದರು. ಆಗ ಐಗುಪ್ತ್ಯರು – ನಾವು ಇಸ್ರಾಯೇಲ್ಯರ ಮುಂದೆ ನಿಲ್ಲಲಾರೆವು, ಓಡಿ–ಹೋಗೋಣ; ಯೆಹೋವನು ಅವರಿಗೋಸ್ಕರ ನಮಗೆ ವಿರೋಧವಾಗಿ ಯುದ್ದ ಮಾಡುತ್ತಾನೆ ಎಂದು ಹೇಳಿಕೊಂಡರು.

ಅಷ್ಟರಲ್ಲಿ ಯೆಹೋವನು ಮೋಶೆಗೆ – ಸಮುದ್ರದ ಮೇಲೆ ನಿನ್ನ ಕೈಚಾಚು; ಆಗ ಅದರ ನೀರು ಮೊದಲಿನಂತೆ ಬಂದು ಐಗುಪ್ತ್ಯ – –ರನ್ನೂ ಅವರ ರಥಗಳನ್ನೂ ರಾಹುತರನ್ನು ಮುಣುಗಿಸುವದೆಂದು ಹೇಳಿದನು. ಮೋಶೆ ಸಮುದ್ರದ ಮೇಲೆ ಕೈಚಾಚಿದನು. ಬೆಳಗಾಗುವಾಗಲೇ ಸಮುದ್ರದ ನೀರು ಮೊದಲಿದ್ದಂತೆಯೇ ತುಂಬಿಕೊಳ್ಳಲು ಐಗುಪ್ತ್ಯರು ಓಡಿಹೋಗುತ್ತಾ ಅದರ ಎದುರಾಗಿಯೇ ಬಂದರು. ಹೀಗೆ ಯೆಹೋವನು ಐಗುಪ್ತ್ಯರನ್ನು ಸಮುದ್ರದೊಳಗೆ ಕೆಡವಿಬಿಟ್ಟನು. ನೀರು ಮೊದಲಿನಂತೆ ಬಂದು ಆ ರಥಗಳನ್ನೂ ರಾಹುತರನ್ನೂ ಅವರ ಹಿಂದೆ ಸಮುದ್ರದೊಳಗೆ ಹೋಗಿದ್ದ **ಫರೋಹನ ಸೈನ್ಯದವರೆಲ್ಲರನ್ನೂ ಮುಣುಗಿಸಿತು. ಅವರಲ್ಲಿ ಒಬ್ಬರಾದರೂ ಉಳಿಯಲಿಲ್ಲ.** ಇಸ್ರಾಯೇಲ್ಯರೋ ಸಮುದ್ರದೊಳಗೆ ಒಣನೆಲದಲ್ಲೇ ನಡೆದುಹೋದರು; ನೀರು ಅವರ ಎಡಗಡೆ ಬಲಗಡೆಗಳಲ್ಲಿ ಗೋಡೆಯಂತೆ ನಿಂತಿತ್ತು; ಆ ದಿನದಲ್ಲಿ ಯೆಹೋವನು ಇಸ್ರಾಯೇಲ್ಯರನ್ನು ಐಗುಪ್ತ್ಯರ ಕೈಗೆ ತಪ್ಪಿಸಿದನು. ಐಗುಪ್ತ್ಯರು ಸತ್ತು ಸಮುದ್ರ ತೀರದಲ್ಲಿ ಬಿದ್ದಿರುವದನ್ನು ಇಸ್ರಾಯೇಲ್ಯರು ಕಂಡರು. ಯೆಹೋವನು ಐಗುಪ್ತ್ಯರಲ್ಲಿ ಮಾಡಿದ **ಈ ಪರಾಕ್ರಮ ಕಾರ್ಯವನ್ನು ಇಸ್ರಾ – ಯೇಲ್ಯರು ನೋಡಿ ಯೆಹೋನಿಗೆ ಭಯಪಟ್ಟು ಆತನಲ್ಲಿಯೂ ಆತನ ಸೇವಕನಾದ ಮೋಶೆಯಲ್ಲಿಯೂ ನಂಬಿಕೆಯಿಟ್ಟರು."** (ವಿಮೋ– ೧೪:೨೧–೩೧)

ಅನಂತರ ಮೋಶೆ ಮತ್ತು ಇಸ್ರಾಯೇಲ್ಯರು ಯೆಹೋವನಿಗೆ ಈ ಕೀರ್ತನೆಯನ್ನು ಹಾಡಿದರು: **"**ಯೆಹೋವನ ಸ್ತೋತ್ರವನ್ನು ಗಾನ – –ಮಾಡೋಣ; ಆತನು ಮಹಾಜಯಶಾಲಿಯಾದನು; ಕುದುರೆಗಳನ್ನೂ ರಾಹುತರನ್ನೂ ಸಮುದ್ರದಲ್ಲಿ ಕೆಡವಿ ನಾಶಮಾಡಿದ್ದಾನೆ. ನನ್ನ ಬಲವೂ ಕೀರ್ತನೆಯೂ ಯಾಹುವೇ, ಆತನಿಂದ ನನಗೆ ರಕ್ಷಣೆಯುಂಟಾಯಿತು. ನಮ್ಮ ದೇವರು ಆತನೇ, ಆತನನ್ನು ವರ್ಣಿಸು – ವೆವು; ನಮ್ಮ ಪಿತೃಗಳ ದೇವರು ಆತನೇ, ಆತನ ಮಹಿಮೆಯನ್ನು ಪ್ರಖ್ಯಾತಿಪಡಿಸುವೆವು." (ವಿಮೋ–೧೫:೧,೨). ಹೀಗೆ ಅವರು ಹಾಡುವದಕ್ಕೆ ಆರಂಭಿಸಿ, ತಮಗಾಗಿ ದೇವರು ನೆರವೇರಿಸಿದಂತ **ದೊಡ್ಡ ರಕ್ಷಣೆಗಾಗಿ** ದೇವರಿಗೆ ಸ್ತೋತ್ರ ಸಲ್ಲಿಸಿದರು. ಮೋಶೆ ಆರೋನರ ಅಕ್ಕನಾದ ಮಿರ್ಯಾಮಳು ದಮ್ಮಡಿಯನ್ನು ತೆಗೆದುಕೊಂಡಳು, ಸ್ತ್ರೀಯರೆಲ್ಲರೂ ದಮ್ಮಡಿಗಳನ್ನು ಹಿಡಿದು ನಾಟ್ಯವಾಡುತ್ತಾ ಆಕೆಯ ಹಿಂದೆ ಹೋಗುತ್ತಿರಲು ಮಿರ್ಯಾಮಳು ಅವರ ಹಾಡಿಗೆ ಹೀಗೆ ಪಲ್ಲವಿ ಹಾಡಿದಳು – **ಯೆಹೋವನನ್ನು ಗಾನಮಾಡಿರಿ; ಆತನು ಮಹಾ ಜಯಶಾಲಿಯಾದನು;** ಕುದುರೆಗಳನ್ನೂ ರಾಹುತರನ್ನೂ ಸಮುದ್ರದಲ್ಲಿ ಕೆಡವಿ ನಾಶಮಾಡಿದ್ದಾನೆ!" (ವಿಮೋ–೧೫– ೨೦,೨೧).

ಸ್ನೇಹಿತರೇ, ದೇವರು ಇಸ್ರಾಯೇಲ್ ಜನರಿಗಾಗಿ ಸಮುದ್ರದ ಮೂಲಕವಾಗಿ ಮಾರ್ಗ ಮಾಡಿದ್ದರ ನಿಜವಾದ ಮತ್ತು ಅದ್ಭುತವಾದ ಕಥೆ ಇದಾಗಿದೆ. ನಂತರ ಈಗ, ಈ ದಿನ ನಾವು ನಮ್ಮ ಪಾಠವನ್ನು ಹೇಗೆ ಮುಕ್ತಾಯಗೊಳಿಸುವದು? ಬಹುಶ: ಒಂದು ಸರಳ – –ವಾದ ಪ್ರಶ್ನೆಯೊಂದಿಗೆ ನಾವು ಮುಕ್ತಾಯಮಾಡುತ್ತೇವೆ. ಆ ಪ್ರಶ್ನೆ ಏನೆಂದರೆ: **ಫರೋಹನ ಸೈನ್ಯದವರಿಂದ ಇಸ್ರಾಯೇಲ್ಯರನ್ನು ರಕ್ಷಿಸಿದವರು ಯಾರು**? ಅವರು ತಮ್ಮನ್ನು ತಾವೇ ರಕ್ಷಿಸಿಕೊಂಡರೋ? ಅವರ ಮುಂದಿದ್ದ ಸಮುದ್ರವು ಹೇಗಿತ್ತೆಂಬುದನ್ನು ನಾವು ನೋಡಿದ್ದೇವೆ. **ಪರ್ವತಗಳು** ಅವರ ಎಡಬಲಗಡೆಗಳಲ್ಲಿದ್ದವು. ಮತ್ತು **ಫರೋಹನ ಸೈನ್ಯವು** ಅವರ ಹಿಂದೆ ಇತ್ತು. ಹೀಗಿರುವಾಗ ಇಸ್ರಾಯೇಲ್ಯರು ತಮ್ಮನ್ನು ತಾವೇ ರಕ್ಷಿಸಿಕೊಂಡರೋ? ಸಮುದ್ರವು ಒಣಗಿಹೋಗುವದಕ್ಕೆ ಅವರು ಕಾರಣರಾದರೋ? ಅಥವಾ ಪರ್ವತಗಳನ್ನು ಸಮಗೊಳಿಸಿದರೋ? ಅಥವಾ ಫರೋಹನ ಸೈನ್ಯದೊಂದಿಗೆ ಯುದ್ಧ ಮಾಡಿದರೋ? ಇಲ್ಲ ಅವರು ಹಾಗೆ ಮಾಡಲಿಲ್ಲ! ಹಾಗಾದರೆ ಅವರನ್ನು ರಕ್ಷಿಸಿದವರು ಯಾರು? **ದೇವರು ಒಬ್ಬನೇ!** ಕೇವಲ ದೇವರಾದ ಯೆಹೋವನು ಮಾತ್ರ ಅವರನ್ನು ಬಿಡುಗಡೆಗೊಳಿಸಲು ಶಕ್ತನಾಗಿದ್ದನು! ಅದಕ್ಕಾಗಿಯೇ ಮೋಶೆಯು ಅವರಿಗೆ; **"**ಅಂಜಬೇಡಿರಿ, ಸುಮ್ಮನೆ ನಿಂತುಕೊಂಡಿದ್ದು **ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ!"** ಎಂದು ಹೇಳಿದನು. ಯೆಹೋವನು ಮಾತ್ರ ಅವರನ್ನು ರಕ್ಷಿಸುವದಕ್ಕೆ ಶಕ್ತನಾಗಿದ್ದನು! ಮತ್ತು ಆತನು ಅವರನ್ನು ರಕ್ಷಿಸಿದನು. ಅದಕ್ಕಾಗಿಯೇ, ಅವರು ಸಮುದ್ರದ ಇನ್ನೊಂದು ಕಡೆಗೆ ಬಂದು ಸೇರಿದಾಗ, **"**ಯೆಹೋವನು ನನ್ನ ಬಲವೂ ನನ್ನ ಕೀರ್ತನೆಯೂ ಆಗಿದ್ದಾನೆ; **ಆತನಿಂದ ನನಗೆ ರಕ್ಷಣೆಯುಂಟಾಯಿತು."** ಎಂದು ಹಾಡಿದರು.

**ದೇವರು ತಾನೇ ಅವರ ರಕ್ಷಣೆಯಾದನು.** ಫರೋಹನ ಸೈನ್ಯದವರಿಂದ ಇಸ್ರಾಯೇಲ್ಯರು ತಾವೇ ರಕ್ಷಿಸಿಕೊಳ್ಳಲು ಸಮರ್ಥರಾಗುವ –ದಕ್ಕೆ ಅಲ್ಲಿ ಯಾವುದೂ ಇರಲಿಲ್ಲ –ಸಮುದ್ರದ ಮಧ್ಯದಲ್ಲಿ ಅವರಿಗಾಗಿ ದೇವರು ತೆರೆದಂತ ಮಾರ್ಗವನ್ನು ಅನುಸರಿಸಿ ನಿಶ್ಚಿತವಾದ ಮರಣದಿಂದ ಅವರನ್ನು ಬಿಡುಗಡೆ ಮಾಡಿದ್ದಕ್ಕಾಗಿ ಆತನನ್ನು ವಂದಿಸಿ ಆರಾಧಿಸುವದರ ಹೊರತಾಗಿ ಅವರಿಗೆ ಅಲ್ಲಿ ಬೇರೆ ಏನೂ ಇರಲಿಲ್ಲ.

ಪ್ರೀತಿಯ ಸ್ನೇಹಿತರೇ, ಆದಾಮನ ಎಲ್ಲಾ ಮಕ್ಕಳೂ ಇಸ್ರಾಯೇಲ್ಯರ ಹಾಗೆಯೇ ಇದ್ದರೆಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳ– –ಬೇಕೆಂದು ದೇವರು ಇಚ್ಚಿಸಿದ್ದನು. ಅವರ ಹಾಗೆಯೇ, ದೇವರು ನಮ್ಮನ್ನು ರಕ್ಷಿಸದ ಹೊರತು ಬಹಳ ಬೇಗನೇ ನಮ್ಮ ಮೇಲೆ ಬೀಳ –ಲಿರುವ ವಿನಾಶದಿಂದ ತಪ್ಪಿಸಿಕೊಳ್ಳುವದಕ್ಕೆ ನಮಗೂ ಸಹ ಯಾವುದೇ ನಿರೀಕ್ಷೆಯಿಲ್ಲ! ಬಹುಶ: ಸಮುದ್ರವು ನಮ್ಮ ಮುಂದೆ ಇಲ್ಲ –ದಿರಬಹುದು ಆದರೆ ಮರಣ ಮತ್ತು ನರಕ ನಮಗಾಗಿ ಕಾಯುತ್ತಿವೆ. ಬಹುಶ: ಪರ್ವತಗಳು ನಮ್ಮ ಪಕ್ಕದಲ್ಲಿಲ್ಲದಿರಬಹುದು, ಆದರೆ ದೇವರ ಪರಿಶುದ್ಧತೆಯು ನಮಗೆ ಬೇಲಿಹಾಕಲ್ಪಟ್ಟು ನಮ್ಮನ್ನು ಖಂಡಿಸುತ್ತದೆ. ಫರೋಹನು ಮತ್ತು ಅವನ ಸೈನ್ಯಗಳು ನಮ್ಮ ಹಿಂದೆ ಇಲ್ಲ, ಆದರೆ ಸೈತಾನನು ಮತ್ತು ನಮ್ಮ ಪಾಪಗಳು ನಮ್ಮ ಮೇಲಿದ್ದು ನಮ್ಮನ್ನು ಎಂದೆಂದಿಗೂ ನಾಶಗೊಳಿಸುವದಕ್ಕೆ ಹೆದರಿಸುತ್ತಿವೆ!

ದೇವರ ನೀತಿಯುಳ್ಳ ನ್ಯಾಯತೀರ್ಪಿನಿಂದ ಆದಾಮನ ಮಕ್ಕಳನ್ನು ರಕ್ಷಿಸಲು ಯಾರು ಶಕ್ತರು? ಎಂದಿಗೂ ನಿವಾರಣೆಯಾಗದಿರುವ ಬೆಂಕಿಯಿಂದ ಪಾಪಿಯನ್ನು ರಕ್ಷಿಸಲು ಯಾರು ಶಕ್ತರು? ಸೈತಾನನ ಬಲದಿಂದ ಮನುಷ್ಯನನ್ನು ರಕ್ಷಿಸಲು ಯಾರು ಶಕ್ತರು? ಇದೆಲ್ಲಾ –ದರಿಂದ ನಮ್ಮನ್ನು ರಕ್ಷಿಸಲು ಶಕ್ತರಾದವರು ಯಾರು? ಪಾಪದ ಸಮುದ್ರದ ಮತ್ತೊಂದು ಪಕ್ಕದಿಂದ ನಮ್ಮನ್ನು ತೆಗೆದುಕೊಂಡು ಪರದೈಸು ಎಂದು ಕರೆಯಲ್ಪಡುವ ಪರಿಶುದ್ಧ ಸ್ಥಳದೊಳಗೆ ನಮ್ಮನ್ನು ಕರೆತಂದವರು ಯಾರು? ದೇವರು ಒಬ್ಬನೇ! ದೇವರು ಮಾತ್ರವೇ ನಮ್ಮನ್ನು ರಕ್ಷಿಸಲು ಸಮರ್ಥನು! ಮನುಷ್ಯನು ತನ್ನನ್ನು ತಾನೇ ರಕ್ಷಿಸಿಕೊಳ್ಳಲು ಇಲ್ಲವೇ ಬೇರೆ ವ್ಯಕ್ತಿಯನ್ನು ರಕ್ಷಿಸಲು ಅವನು ಯಾವುದೇ ಸಾಧ್ಯತೆಗಳನ್ನು ಹೊಂದಿಲ್ಲ. ಇದನ್ನೇ ವಾಕ್ಯವು ಹೀಗೆ ಹೇಳುತ್ತದೆ: **"ನಂಬಿಕೆಯ ಮೂಲಕ ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ.** ಆ ರಕ್ಷಣೆಯು **ನಿಮ್ಮಿಂದುಟಾದ್ದಲ್ಲ.** ಅದು ದೇವರ ವರವೇ. ಅದು ಪುಣ್ಯಕ್ರಿಯೆಗಳಿಂದುಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ." (ಎಫೆಸ–೨:೮,೯)

ಕರುಣೆಯಲ್ಲಿ ದೊಡ್ಡವನಾಗಿರುವ ದೇವರು, ನರಕ ಮತ್ತು ಪಾಪದ ಸೈತಾನನ ಬಲದಿಂದ ನಮ್ಮನ್ನು ಬಿಡುಗಡೆ ಮಾಡುವದಕ್ಕೆ ಆದಾಮನ ಮಕ್ಕಳೆಲ್ಲರಿಗೂ ರಕ್ಷಣೆಯ ಒಂದು ಮಾರ್ಗವನ್ನು ತೆರೆದನು. ತಮ್ಮ ಪಾಪಗಳಲ್ಲಿ ಸಾಯುವಂತವರೆಲ್ಲರಿಗಾಗಿ ಕಾಯುತ್ತಿ – –ರುವ ಉಗ್ರ ಬೆಂಕಿಯ ನ್ಯಾಯತೀರ್ಪಿನಿಂದ ನಾವು ತಪ್ಪಿಸಿಕೊಳ್ಳುವಂತೆ ದೇವರು ಇಷ್ಟಪಟ್ಟನು, ಆದರೆ **ನಮಗಾಗಿ ಆತನು ತೆರೆದಿ – –ರುವ ರಕ್ಷಣೆಯ ಮಾರ್ಗದ ಮೂಲಕವೇ ನಾವು ಬರಬೇಕು! ಸೈತಾನನ** ಬಲವಾಗಿರುವ **ನರಕದ** ಶಿಕ್ಷೆ ಮತ್ತು **ಪಾಪದ** ಭಯಂಕರ –ವಾದ ಪರಿಣಾಮಗಳನ್ನು ನಾವು **ತಪ್ಪಿಸಿಕೊಳ್ಳುವದಕ್ಕೆ** ದೇವರು ನಮಗಾಗಿ ತೆರೆದಿರುವ ರಕ್ಷಣೆಯ ಮಾರ್ಗವನ್ನು ನೀವು ತಿಳಿದಿ – –ದ್ದೀರೋ? ಎಂದೆಂದಿಗೂ ಆತನ ಪರಿಶುದ್ಧ ಪ್ರಸನ್ನತೆಯಲ್ಲಿ ಆಶೀರ್ವದಿಸಲ್ಪಡುವಂತೆ ದೇವರು ಸ್ಥಾಪಿಸಿರುವ ನೀತಿಯ ಮಾರ್ಗದಲ್ಲಿ ನೀವಿದ್ದೀರೋ?

ಆದಾಮನ ಮಕ್ಕಳಿಗಾಗಿ ದೇವರು ತೆರೆದಿರುವಂತ ರಕ್ಷಣೆಯ ಮಾರ್ಗವು ಮನುಷ್ಯನು ಮಾಡುವಂತ ಒಳ್ಳೆಯ ಕಾರ್ಯಗಳ ಇಲ್ಲವೇ ಒಂದು ಧರ್ಮದ ಅಗತ್ಯತೆಗಳನ್ನು ಅನುಸರಿಸುವದರ ಮೇಲೆ ಆಧಾರಗೊಂಡಿಲ್ಲ, ದೇವರು ಹೇಳುವದೇನೆಂದರೆ; "ಇದು ಪುಣ್ಯ – –ಕ್ರಿಯೆಗಳಿಂದುಟಾದದ್ದಲ್ಲ, ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ." ದೇವರು ನಮಗಾಗಿ ಸ್ಥಾಪಿಸಿರುವ ರಕ್ಷ – –ಣೆಯ ಮಾರ್ಗ ಯಾವುದು? ಇದು ಮರಣದ ಭಯ ಮತ್ತು ಪಾಪದ ಬಲದ ಕಾರಣದಿಂದ **ದಾಸರ ರೀತಿಯಲ್ಲಿದ್ದ** ನಮ್ಮನ್ನು ಮತ್ತು ಆತನನ್ನು ನಂಬುವವರೆಲ್ಲರನ್ನೂ ಬಿಡಿಸುವದಕ್ಕೆ ಪರಲೋಕದಿಂದ ಬಂದು ಸತ್ತು ತಿರುಗಿ ಎದ್ದು ಬಂದಂತ **ವಿಮೋಚಕನ ಮಾರ್ಗವಾಗಿದೆ.** ಸಮರ್ಥನಾದ ಈ ವಿಮೋಚಕನ ಕುರಿತಾಗಿ ಪರಿಶುದ್ಧ ವಾಕ್ಯಗಳು ಹೀಗೆ ಹೇಳುತ್ತವೆ: "ಬರಬೇಕಾದ ರಕ್ಷಣೆಯು **ಇನ್ನಾರಲ್ಲಿಯೂ** ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ **ಬೇರೆ ಯಾವ ಹೆಸರಿ –ನಿಂದಲೂ** ನಮಗೆ ರಕ್ಷಣೆಯಾಗುವದಿಲ್ಲ." (ಅ.ಕೃತ್ಯ–೪:೧೨)

ಹೌದು, **"**ಪಾಪದ ಸಮುದ್ರ**"** ದಲ್ಲಿ ದೇವರು ನಮಗಾಗಿ ಒಂದು ಮಾರ್ಗವನ್ನು ತೆರೆದನು, ಅದರಿಂದ ನಾವು ಪಾಪದ ಶಿಕ್ಷೆಯಿಂದ ತಪ್ಪಿಸಿಕೊಂಡು ಇನ್ನೊಂದು ಪಾರ್ಶ್ವವನ್ನು ಪಡೆದು ದೇವರ ಪರಿಶುದ್ಧವಾದ ಮತ್ತು ಸುರಕ್ಷಿತವಾದ ಪ್ರಸನ್ನತೆಯೊಳಗೆ ಸೇರಿಕೊಳ್ಳು – –ತ್ತೇವೆ. ಆದರೆ ದೇವರು ನಿಮಗಾಗಿ ತೆರೆದಿರುವ ಮಾರ್ಗದ ಮೇಲಿಂದ ನೀವು ದಾಟಿ ಬರಲೇಬೇಕು. ರಕ್ಷಣೆಯ ಈ ಮಾರ್ಗದ ಕುರಿತಾಗಿ ವಿಮೋಚಕನು ಹೇಳುವದೇನೆಂದರೆ;

**"ನಾನೇ ಮಾರ್ಗವೂ** ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು **ಕೇಳಿ** ನನ್ನನ್ನು ಕಳುಹಿಸಿದಾತನನ್ನು **ನಂಬುವವನು** ನಿತ್ಯಜೀವವನ್ನು ಹೊಂದಿ – ದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; **ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ."** (ಯೋಹಾನ–೧೪:೬; ೫:೨೪)

ಪ್ರಿಯ ಸ್ನೇಹಿತರೇ, ನೀವು **"ಮರಣದಿಂದ** ಪಾರಾಗಿ **ಜೀವಕ್ಕೆ** ಸೇರಿದ್ದೀರೋ**"**?

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಮುಂದಿನ ಸಲ ದೇವರ ಚಿತ್ತವಾದರೆ, ಮರುಭೂಮಿಯಲ್ಲಿ ದೇವರು ಇಸ್ರಾಯೇಲ್ಯರಿಗೆ ಹೇಗೆ ಆಹಾರ ಕೊಟ್ಟನೆಂಬುದನ್ನು ನಾವು ನೋಡುತ್ತೇವೆ. ಇಸ್ರಾಯೇಲ್ಯರಿಗೆ ಮೋಶೆ ಹೇಳಿದ ಮಾತುಗಳನ್ನು ನೀವು ಚಿಂತನೆ ಮಾಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ,

**"ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ."**
(ವಿಮೋ–೧೪:೧೩)

ಪಾಠ ೩೫

# ಮರುಭೂಮಿಯಲ್ಲಿ ಆಹಾರ

ವಿಮೋಚನಕಾಂಡ ೧೬, ೧೭

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ
–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು
–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ
ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ
–ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಇಸ್ರಾಯೇಲ್ಯರನ್ನು ಫರೋಹನ ಮತ್ತು ಅವನ ಸೈನ್ಯದವರ ಕೈಯಿಂದ **ದೇವರು ಹೇಗೆ ರಕ್ಷಿಸಿದನೆಂಬು –
–ದನ್ನು** ನಾವು ನೋಡಿದೆವು. ಇಸ್ರಾಯೇಲ್ಯರು ಕೆಂಪು ಸಮುದ್ರದ ತೀರಕ್ಕೆ ಬಂದಾಗ, ಫರೋಹನ ಸೈನ್ಯದವರಿಂದ ತಪ್ಪಿಸಿಕೊಳ್ಳುವ
ಯಾವ ಸಾಧ್ಯತೆಗಳೂ ಅವರಿಗಿರಲಿಲ್ಲ. ಹೇಗೂ, ದೇವರು ಅವರಿಗಾಗಿ ನೀರನ್ನು ಹೇಗೆ ಪಕ್ಕಕ್ಕೆ ತಳ್ಳಿದನು, ಅದರಿಂದ ಅವರು ಸಮು
–ದ್ರದ ಮಧ್ಯದಲ್ಲಿ ಒಣನೆಲದಲ್ಲಿ ಹೇಗೆ ನಡೆದುಕೊಂಡು ಹೋದರೆಂಬುದನ್ನು ನಾವು ನೋಡಿಕೊಂಡೆವು. ಆದರೆ ಐಗುಪ್ತದ ಸೈನ್ಯವು
ಅದೇ ನೆಲದಲ್ಲಿ ದಾಟುವದಕ್ಕೆ ಪ್ರಯತ್ನಿಸಿದಾಗ ಅವರೆಲ್ಲರೂ ಮುಳುಗಿಹೋದರು. ಹೀಗೆ ಆ ದಿನದಲ್ಲಿ ದೇವರಾದ ಕರ್ತನು ಐಗು
–ಪ್ತ್ಯರ ಕೈಯಿಂದ ಇಸ್ರಾಯೇಲ್ಯರನ್ನು ರಕ್ಷಿಸಿದನು. ಕರ್ತನ ದೊಡ್ಡ ಶಕ್ತಿಯನ್ನು ಅವರು ನೋಡಿದಾಗ, ಭಯಗ್ರಸ್ಥರಾಗಿ ಆತನಿಗೆ ಈ
ಕೀರ್ತನೆಯನ್ನು ಹಾಡಿದರು, **"**ನನ್ನ ಬಲವೂ ಕೀರ್ತನೆಯೂ ಯಾಹುವೇ, ಆತನಿಂದ ನನಗೆ ರಕ್ಷಣೆಯುಂಟಾಯಿತು. ನಮ್ಮ
ಕರ್ತನು ದೊಡ್ಡವನು!**"**

ಪ್ರಸ್ತುತ ನಾವು, ವಿಮೋಚನಕಾಂಡ ಪುಸ್ತಕದಲ್ಲಿ ಇಸ್ರಾಯೇಲ್ಯರು **ಕಾನಾನ್ ಮತ್ತು ಐಗುಪ್ತದ ನಡುವೆ** ಅರಣ್ಯದಲ್ಲಿ ಇರುವಂತ ಭಾಗ
–ವನ್ನು ಅವಲೋಕಿಸುತ್ತಿದ್ದೇವೆ, ಕಾನಾನ್ ದೇಶವು ಅಬ್ರಹಾಮ ಮತ್ತು ಅವನ ಸಂತತಿಯವರಿಗೆ ಕೊಡುತ್ತೇನೆಂದು ದೇವರು
ವಾಗ್ದಾನ ಮಾಡಿದ್ದ ದೇಶವಾಗಿತ್ತು ಹಾಗಾಗಿ ಅವರು ಅದನ್ನು ಸ್ವಂತದ್ದೆಂದು ಪಡೆದುಕೊಳ್ಳಲು ಸಮರ್ಥರಾಗಿದ್ದರು. **ದೇವರು ಇಸ್ರಾ
–ಯೇಲ್ಯರಿಗೆ ಅರಣ್ಯದಲ್ಲಿ ಹೇಗೆ ಆಹಾರ ಒದಗಿಸಿದನೆಂಬುದನ್ನು** ಈ ದಿನ ನಾವು ನೋಡಲಿದ್ದೇವೆ. ದೇವರು ತಾನೇ ಹೇಗೆ ಹಗಲಿ
–ನಲ್ಲಿ ಮೇಘಸ್ತಂಭದಲ್ಲಿಯೂ ರಾತ್ರಿಯಲ್ಲಿ ಅಗ್ನಿಸ್ತಂಭದಲ್ಲಿಯೂ ಅವರ ಮುಂದೆ **"**ನಡೆದು**"** ಹೋದನೆಂಬುದನ್ನು ವಾಕ್ಯವು ನಮಗೆ
ತೋರಿಸಿಕೊಡುತ್ತದೆ. ಒಂದು ಸಂಗತಿಯು ನಿಶ್ಚಿತವಾಗಿದೆ ಏನೆಂದರೆ, ಒಂದು ವೇಳೆ ದೇವರು ಅವರಿಗೆ ಮಾರ್ಗದರ್ಶನ ಮಾಡದೇ
ಅವರನ್ನು ಲಕ್ಷಿಸದಿದ್ದಿದ್ದರೆ ಅವರು ಅರಣ್ಯದಲ್ಲಿಯೇ ನಾಶವಾಗಿ ಹೋಗುತ್ತಿದ್ದರು.

ಇಸ್ರಾಯೇಲ್ಯರು ತಾವೇ ಏರ್ಪಡಿಸಿಕೊಂಡ ಸನ್ನಿವೇಶಗಳನ್ನು ಒಂದು ಕ್ಷಣ ಊಹಿಸಿಕೊಳ್ಳುವದಕ್ಕೆ ನಾವು ಪ್ರಯತ್ನಿಸೋಣ. ಅವರು
ತುಂಬಾ ದೊಡ್ಡ ಗುಂಪಾಗಿದ್ದರು– ಇಡೀ ಡಾಕರ್‌ನ ಜನಸಂಖ್ಯೆಗಿಂತಲೂ ಒಂದು ದೊಡ್ಡ ಸಮೂಹ (ಎರಡು ಮಿಲಿಯನ್‌ಗಿಂತಲೂ
ಹೆಚ್ಚು ಜನರು). ಮೂಳೆಯು ಸಹ ಒಣಗಿಹೋಗುವಂತ ಮರುಭೂಮಿ – ಆಹಾರ ಮತ್ತು ನೀರು ಯಾವುದೂ ಇರದಂತಹ ಮರು
–ಭೂಮಿಯ ಮೂಲಕವಾಗಿ ಅವರು ಹಾದುಹೋಗುತ್ತಿದ್ದಾರೆ. ಇದರ ಕುರಿತು ಆಲೋಚಿಸಿರಿ! ಒಂದು ದೊಡ್ಡದಾದ ಜನ ಸಮೂ
–ಹವು ಮರಳು ಮತ್ತು ಮುಳ್ಳಿನ ಗಿಡಗಳಿರುವ ಒಂದು ಬರಡು ಅರಣ್ಯದ ಮೂಲಕವಾಗಿ ನಡೆದು ಹೋಗುತ್ತಿದೆ.! ಇಸ್ರಾಯೇಲ್
ಕುಲಗಳು ಹೇಗೆ ಜೀವಂತವಾಗಿದ್ದರು? ಹಸಿವು ಮತ್ತು ಬಾಯಾರಿಕೆಗಳ ಭಯದಿಂದ ರಕ್ಷಿಸಿಕೊಳ್ಳಲು ಅವರು ಹೇಗೆ ಸಮರ್ಥ–
–ರಾದರು? ಅರಣ್ಯದಲ್ಲಿ ಜೀವಂತವಾಗಿ ವಾಸಿಸುವದಕ್ಕೆ ಸಾಕಷ್ಟು ಆಹಾರ ಮತ್ತು ನೀರನ್ನು ತಮ್ಮ ಅನೇಕ ಹಿಂಡುಗಳಿಗೆ ಒದಗಿಸಲು
ಆ ಮಹಾಸಮೂಹವು ಹೇಗೆ ಸಮರ್ಥರಾದರು? ಅವರು ತಾವೇ ಆಹಾರ ಒದಗಿಸಿಕೊಳ್ಳುವದಕ್ಕಾಯಿತಾ? ಇಲ್ಲ! ಹಾಗಾದರೆ ಅವ –
–ರಿಗೆ ಆಹಾರ ಕೊಟ್ಟವರು ಯಾರು? ಅಲ್ಲಿರುವದು ಒಂದೇ ಒಂದು ಉತ್ತರ. ಅದು **ದೇವರು ಒಬ್ಬನೇ** ಅವರಿಗೆ ಆಹಾರ ಒದಗಿಸಿ
ಅವರನ್ನು ಸಂರಕ್ಷಿಸಿದನು!

ಇಸ್ರಾಯೇಲ್ಯರು ದೇವರನ್ನು ನಂಬಿದರೋ? ಅಥವಾ ನಾವು ಏನು ಊಟಮಾಡಬೇಕು ಮತ್ತು ಏನು ಕುಡಿಯಬೇಕು ಎಂಬುದರ
ಕುರಿತಾಗಿ ಅವರು ಯೋಚಿಸುತ್ತಿದ್ದರೋ? ಖಂಡಿತವಾಗಿಯೂ ಇಸ್ರಾಯೇಲ್ಯರು ದೇವರಾದ ಕರ್ತನನ್ನು ನಂಬಿದವರಾಗಿದ್ದರು.
ದೇವರು ಅವರಿಗಾಗಿ ಅನೇಕ ದೊಡ್ಡ ಸಂಗತಿಗಳನ್ನು ಮಾಡಿದ್ದನು. ಆತನು ಹತ್ತು ಉಪದ್ರವಗಳ ಸಾಧನಗಳಿಂದ ಅವರ ದಾಸತ್ವದ
ಬಂಧನಗಳಿಂದ ಅವರನ್ನು ಬಿಡುಗಡೆಮಾಡಿದ್ದನು. ಕುರಿಮರಿಯ ರಕ್ತದ ಮೂಲಕವಾಗಿ ಮರಣದಿಂದ ಅವರ ಚೊಚ್ಚಲು ಮಕ್ಕಳು
–ಗಳನ್ನು ಬಿಡುಗಡೆಗೊಳಿಸಿದ್ದನು. ಸಮುದ್ರದ ಮಧ್ಯದಲ್ಲಿ ಒಣಗಿದ ದಾರಿಯನ್ನು ಆತನು ತೆರೆದಿದ್ದನು. ಈಗ ಬಹಳ ಹಿಂದೆಯೇ
ಅವರ ಮೂಲಪಿತೃವಾದ ಅಬ್ರಹಾಮನಿಗೆ ಆತನು ವಾಗ್ದಾನಮಾಡಿದಂತೆ ಕಾನಾನ್ ದೇಶಕ್ಕೆ ಅವರನ್ನು ಹಿಂದಿರುಗಿ ಕರೆದುಕೊಂಡು
ಬರುವದಕ್ಕೆ ಅವರಿಗೆ ಮಾರ್ಗದರ್ಶನ ಮಾಡಲು ಮೇಘಸ್ತಂಭದಲ್ಲಿ ಅವರ ಮುಂದೆ ಹೋಗುತ್ತಿದ್ದಾನೆ. ನೀವು ಏನು ಆಲೋಚಿಸು
–ತ್ತೀರಿ? ಇಸ್ರಾಯೇಲ್ಯರು ತನ್ನ ದೇವರಲ್ಲಿ ಭರವಸೆಯುಳ್ಳವರಾಗಿದ್ದರೋ? ಆತನು ವಾಗ್ದಾನ ಮಾಡಿದ್ದನ್ನು ನೆರವೇರಿಸಲು

ಶಕ್ತನಾಗಿದ್ದಾನೆಂಬುದನ್ನು ಅವರು ನಂಬಿದ್ದರೋ? ಈಗ ನಾವು ವಾಕ್ಯಕ್ಕೆ ಹಿಂದಿರುಗಿ ಉತ್ತರವನ್ನು ಕಂಡುಕೊಳ್ಳೋಣ.

ಮೋಶೆಯ ತೊರಾದಲ್ಲಿರುವ ವಿಮೋಚನಕಾಂಡ ಪುಸ್ತಕದಲ್ಲಿ ಹದಿನಾಲ್ಕನೆಯ ಅಧ್ಯಾಯದಲ್ಲಿ ನಾವು ಓದುತ್ತಿದ್ದೇವೆ:

"ಇಸ್ರಾಯೇಲಿನ ಸಮೂಹವೆಲ್ಲಾ ಏಲೀಮಿನಿಂದ ಹೊರಟ ಮೇಲೆ ಅವರು ಐಗುಪ್ತದೇಶವನ್ನು ಬಿಟ್ಟ ಎರಡನೆಯ ತಿಂಗಳಿನ ಹದಿ – –ನೈದನೆಯ ದಿನದಲ್ಲಿ ಏಲೀಮಿಗೂ ಸೀನಾಯಿಬೆಟ್ಟಕ್ಕೂ ನಡುವೆಯಿರುವ ಸೀನೆಂಬ ಅರಣ್ಯಕ್ಕೆ ಬಂದರು. ಅರಣ್ಯದಲ್ಲಿ ಇಸ್ರಾಯೇಲ್ಯರ ಸಮೂಹವೆಲ್ಲಾ ಮೋಶೆ ಆರೋನರ ಮೇಲೆ **ಗುಣುಗುಟ್ಟಿ** ಅವರಿಗೆ ಈ ಸಮೂಹವನ್ನೆಲ್ಲ **ಹಸಿವೆಯಿಂದ ಸಾಯಿಸಬೇಕೆಂದು ನೀವು ಈ ಅರಣ್ಯದೊಳಕ್ಕೆ ನಮ್ಮನ್ನು ಕರಕೊಂಡು ಬಂದಿರಷ್ಟೆ.** ನಾವು ಐಗುಪ್ತದೇಶದಲ್ಲಿದ್ದಾಗ ಯೆಹೋವನ ಕೈಯಿಂದ ಸತ್ತಿದ್ದರೆ ಎಷ್ಟೋ ಮೇಲಾಗಿತ್ತು; ಆಗ ಮಾಂಸಪಾತ್ರೆಗಳ ಬಳಿಯಲ್ಲಿ ಕೂತು ಹೊಟ್ಟೇ ತುಂಬ ಊಟಮಾಡುತ್ತಿದ್ದೆವಲ್ಲಾ ಎಂದು ಹೇಳಿದರು." (ವಿಮೋ–೧೬:೧–೩)

ಒಳ್ಳೇದು, ಇಸ್ರಾಯೇಲ್ ಕುಲಗಳವರು ದೇವರಲ್ಲಿ ಭರವಸವುಳ್ಳವರಾಗಿದ್ದರೋ? ಇಲ್ಲ, ಅವರು ಭರವಸವುಳ್ಳವರಾಗಿರಲಿಲ್ಲ! ಅವರು ಆತನ ಮತ್ತು ಮೋಶೆಯ ವಿರುದ್ಧವಾಗಿ ಗೊಣಗಾಡಿದರು. ದೇವರು ಅವರಿಗೆ ಹೇಗೆ ಉತ್ತರ ಕೊಟ್ಟನೆಂಬುದನ್ನು ಕೇಳಿಸಿಕೊಳ್ಳಿರಿ.

"ಯೆಹೋವನು ಮೋಶೆಯ ಸಂಗಡ ಮಾತಾಡಿ ಹೇಳಿದ್ದೇನೆಂದರೆ – ಇಸ್ರಾಯೇಲ್ಯರ ಗುಣುಗುಟ್ಟುವಿಕೆಯು ನನಗೆ ಕೇಳಿಸಿತು. ನೀನು ಅವರಿಗೆ – ಸಾಯಂಕಾಲದಲ್ಲಿ ಮಾಂಸವನ್ನೂ ಹೊತ್ತಾರೆಯಲ್ಲಿ ಬೇಕಾದಷ್ಟು ರೊಟ್ಟಿಯನ್ನೂ ತಿನ್ನುವಿರಿ; **ಇದರಿಂದ ನಾನು ನಿಮ್ಮ ದೇವರಾದ ಯೆಹೋವನೆಂಬದು ನಿಮಗೆ ಗೊತ್ತಾಗುವದೆಂದು** ಹೇಳಬೇಕು. ಆಗ ಯೆಹೋವನು ಮೋಶೆಗೆ– ಇಗೋ ನಾನು ಆಕಾಶ –ದಿಂದ ನಿಮಗೋಸ್ಕರ ಆಹಾರವನ್ನು ಸುರಿಸುವೆನು. ಈ ಜನರು ಪ್ರತಿದಿನವೂ ಹೊರಗೆ ಹೋಗಿ ಆಯಾ ದಿನಕ್ಕೆ ಬೇಕಾದಷ್ಟನ್ನು ಮಾತ್ರ ಕೂಡಿಸಿಕೊಳ್ಳಬೇಕು. ಇದರಿಂದ ಇವರು ನನ್ನ ಬೋಧನೆಯನ್ನು ಅನುಸರಿಸಿ ನಡೆಯುವವರೋ ಅಲ್ಲವೋ ಎಂದು ಪರೀಕ್ಷಿಸಿ ತಿಳಿಯುತ್ತೇನೆ." (ವಿಮೋ–೧೬:೧೧,೧೨, ೪)

"ಸಾಯಂಕಾಲವಾಗುತ್ತಲೇ ಲಾವಕ್ಕಿಗಳು ಬಂದು ಅವರ ಪಾಳೆಯವನ್ನು ಮುಚ್ಚಿಕೊಂಡವು. ಅದಲ್ಲದೆ ಹೊತ್ತಾರೆಯಲ್ಲಿ ಮಂಜು ಪಾಳೆಯದ ಸುತ್ತಲೂ ಬಿದ್ದಿತು; ಆ ಮಂಜು ಆರಿಹೋದನಂತರ ಅರಣ್ಯದ ನೆಲದಲ್ಲಿ ಮಂಜಿನ ಹನಿಗಳಂತೆ ಏನೋ ಸಣ್ಣಸಣ್ಣ ರವೆಗಳು ಕಾಣಿಸಿದವು. ಇಸ್ರಾಯೇಲ್ಯರು ಅದನ್ನು ಕಂಡು ಇಂಥದೆಂದು ತಿಳಿಯದೆ ಒಬ್ಬರಿಗೊಬ್ಬರು **ಇದೇನಿರಬಹುದು** ಎಂದು ಹೇಳಿಕೊಂಡರು. ಮೋಶೆ ಅವರಿಗೆ – ಇದು ಯೆಹೋವನು ನಿಮಗೋಸ್ಕರ ಕೊಟ್ಟ ಆಹಾರವು ಎಂದು ಹೇಳಿದನು. ಇಸ್ರಾಯೇ –ಲ್ಯರು ಆ ಆಹಾರಕ್ಕೆ **ಮನ್ನ** ಎಂದು ಹೆಸರಿಟ್ಟರು. ಅದು ಬಿಳೀ ಕೊತ್ತಂಬರಿ ಕಾಳಿನಂತಿದ್ದು ರುಚಿಯಲ್ಲಿ ಜೇನುತುಪ್ಪ ಕಲಸಿದ ದೋಸೆಗಳ ಹಾಗಿತ್ತು." (ವಿಮೋ–೧೬:೧೩–೧೫, ೩೧).

ಅವರು ಕಾನಾನ್ ದೇಶಕ್ಕೆ ಬಂದು ಸೇರುವ ದಿನದವರೆಗೂ ಅರಣ್ಯದಲ್ಲಿ ಇಸ್ರಾಯೇಲ್ ಕುಲಗಳಿಗೆ ದೇವರು ಈ ರೀತಿಯಾಗಿ ಆಹಾರ ಒದಗಿಸಿದನು. ಆ ಆಹಾರವು ಎಲ್ಲಿಂದ ಬಂತು ಎಂಬುದನ್ನು ನೀವು ಕೇಳಿಸಿಕೊಂಡಿರೋ? ಇದು **ಪರಲೋಕದಿಂದ ಬಂದದ್ದು.** ಇದು **ದೇವರಿಂದ ಬಂದದ್ದು.** ದೇವರು ಅವರಿಗಾಗಿ ಕಳಿಸಿದ ಆಹಾರವನ್ನು ಇಸ್ರಯೇಲ್ಯರು ಅರ್ಹರಾಗಿದ್ದರೋ? ಇಲ್ಲ! ಅವರ ಎಲ್ಲಾ ಕೃತಘ್ನತೆಗಾಗಿ ಮತ್ತು ಅಪನಂಬಿಕೆಗಾಗಿ ದೇವರ ಶಿಕ್ಷೆಯ ಹೊರತಾಗಿ ಬೇರೆ ಯಾವುದಕ್ಕೂ ಅವರು ಅರ್ಹ – –ರಾಗಿರಲಿಲ್ಲ. ಅವರು ಮರುಭೂಮಿಯಲ್ಲಿ ಹಸಿವೆಯಿಂದ ಸಾಯಬಾರದೆಂಬ ದೇವರ ಕರುಣೆಯ ಕಾರಣದಿಂದ ಮಾತ್ರ ಇದು ಸಾಧ್ಯವಾಯಿತು.

ಇಸ್ರಾಯೇಲ್ಯರು **ನೀರಿನ ವಿಷಯದಲ್ಲಿ ಬಳಲಿದಾಗ** ಇನ್ನೊಂದು ಸಲ ಏನಾಯಿತೆಂಬುದನ್ನು ನೋಡುವದಕ್ಕೆ ಓದುವದನ್ನು ಮುಂದು –ವರಿಸೋಣ. ಹದಿನೇಳನೆಯ ಅಧ್ಯಾಯದಲ್ಲಿ ನಾವು ಓದುತ್ತಿದ್ದೇವೆ. ವಾಕ್ಯವು ಹೀಗೆ ಹೇಳುತ್ತದೆ:

"ಇಸ್ರಾಯೇಲ್ಯರ ಸಮೂಹವೆಲ್ಲಾ ಯೆಹೋವನ ಅಪ್ಪಣೆಯ ಪ್ರಕಾರ ಸೀನ್ ಎಂಬ ಅರಣ್ಯದಿಂದ ಹೊರಟು ಮುಂದೆ ಪ್ರಯಾಣ ಮಾಡಿ ರೆಫೀದೀಮಿನಲ್ಲಿ ಇಳುಕೊಂಡರು. ಕುಡಿಯುವದಕ್ಕೆ **ನೀರಿಲ್ಲದ** ಕಾರಣ ಜನರು ಮೊಶೆಯ ಸಂಗಡ **ವಾದಿಸುತ್ತಾ** – ನಮಗೆ ಕುಡಿಯುವದಕ್ಕೆ ನೀರು ದೊರಕಿಸಿಕೊಡಬೇಕು ಎಂದು ಹೇಳಿದಾಗ ಮೋಶೆ – ನೀವು ನನ್ನ ಸಂಗಡ ವಾದಿಸುವದೇನು? ಯೆಹೋವ –ನನ್ನು ಯಾಕೆ ಪರೀಕ್ಷಿಸುತ್ತೀರಿ ಎಂದು ಅವರಿಗೆ ಹೇಳಿದನು. ಅಲ್ಲಿ ಜನರು ನೀರಿಲ್ಲದೆ ಬಾಯಾರಿಕೆಯ ಸಂಕಟದಿಂದ ಮೋಶೆಯ ಮೇಲೆ ಗುಣುಗುಟ್ಟುತ್ತಾ – ನೀವು ನಮ್ಮನ್ನೂ ನಮ್ಮ ಮಕ್ಕಳನ್ನೂ ದನಗಳನ್ನೂ ಐಗುಪ್ತ ದೇಶದಿಂದ ಕರತಂದು ಈಗ ನೀರಿಲ್ಲದೆ ಸಾಯುವ ಹಾಗೆ ಮಾಡಿದ್ದೇಕೆ ಎಂದರು. ಆಗ ಮೋಶೇಯು ಯೆಹೋವನಿಗೆ ಮೊರೆಯಿಟ್ಟು – ಈ ಜನರಿಗೋಸ್ಕರ ನಾನೇನು ಮಾಡಲಿ? ಅವರು ನನ್ನನ್ನು ಕಲ್ಲೆಸೆದು ಕೊಲ್ಲುವ ಹಾಗಿದ್ದಾರಲ್ಲಾ ಅಂದನು ಅದಕ್ಕೆ ಯೆಹೋವನು – ನೀನು ನೈಲ್ ನದಿಯನ್ನು ಹೊಡೆದ ಕೋಲನ್ನು ಕೈಯಲ್ಲಿ ಹಿಡಿದುಕೊಂಡು ಇಸ್ರಾಯೇಲ್ಯರ ಹಿರಿಯರಲ್ಲಿ ಕೆಲವರನ್ನು ಕರಕೊಂಡು ಜನರ ಮುಂದೆ ಹೊರಟು ನಾನು ತೋರಿಸುವ ಸ್ಥಳಕ್ಕೆ ಹೋಗು. ಅಲ್ಲಿ ಹೋರೇಬಿನಲ್ಲಿರುವ ಬಂಡೆಯ ಮೇಲೆ ನಾನೇ ನಿನ್ನೆದುರಾಗಿ ನಿಲ್ಲುವೆನು. ನೀನು

ನೀನು ಬಂಡೆಯನ್ನು ಹೊಡೆದಾಗ ಅದರಿಂದ ನೀರು ಹೊರಡುವದು, ಜನರು ಕುಡಿಯುವರು ಎಂದು ಮೋಶೆಗೆ ಅಪ್ಪಣೆ ಕೊಡ –
–ಲಾಗಿ ಮೋಶೆ ಇಸ್ರಾಯೇಲ್ಯರ ಹಿರಿಯರ ಎದುರಿನಲ್ಲಿ ಹಾಗೆಯೇ ಮಾಡಿದನು." (ವಿಮೋ–೧೭:೧–೬)

ಹೀಗೆ, ಬಂಡೆಯೊಳಗಿಂದ ರಭಸವಾಗಿ ಒಂದು ದೊಡ್ಡ ನೀರಿನ ಹರಿವು ಬಂದು ಮರುಭೂಮಿಯಲ್ಲಿ ಹರಿಯಿತು ಮತ್ತು ಅದನ್ನು ಎಲ್ಲಾ ಜನರು ಮತ್ತು ಅವರ ಸಮೂಹಗಳು ಕುಡಿದರು.

ಇಲ್ಲಿಗೆ ಇದನ್ನು ನಿಲ್ಲಿಸಿ ಈ ದಿನ ನಾವು ಓದಿದ ಕಥೆಯ ಕುರಿತಾಗಿ ಸ್ವಲ್ಪ ಆಲೋಚಿಸೋಣ. ದೇವರು ಇಸ್ರಾಯೇಲ್ಯರಿಗೆ ಮಾಡಿದ್ದೆಲ್ಲ ಆದ ನಂತರವೂ, ಅವರು ಆತನಲ್ಲಿ ನಂಬಿಕೆಯಿಟ್ಟರೋ? ದೇವರು ಅವರಿಗಾಗಿ ಮಾಡಿದ್ದೆಲ್ಲದಕ್ಕಾಗಿ ಅವರ ಹೃದಯಗಳು ಸ್ತೋತ್ರ ಮತ್ತು ಕೃತಜ್ಞತೆಯಿಂದ ತುಂಬಿತ್ತೋ? ಇಲ್ಲ! ಅವರು ದೇವರನ್ನು ನಂಬಲಿಲ್ಲ. ಬದಲಾಗಿ ತಮ್ಮನ್ನು ಈಗಾಗಲೇ ಅನೇಕ ಕಷ್ಟಗಳಿಂದ ರಕ್ಷಿಸಿದ ದೇವರ ವಿರುದ್ಧವಾಗಿ ಅವರು ಮಾತಾಡುತ್ತಾ ದೂರುತ್ತಿದ್ದರು.

ದೇವರು ಏನು ಮಾಡಿದನು? ದೇವರಾದ ಕರ್ತನು, ತನ್ನ ತಾಳ್ಮೆ ಮತ್ತು ಒಳ್ಳೆಯತನದಲ್ಲಿ ಅವರಿಗೆ ಆಹಾರವನ್ನೂ ಮತ್ತು ನೀರನ್ನು ಮರುಭೂಮಿಯಲ್ಲಿ ಕೊಟ್ಟನು. ದೇವರ ಒಳ್ಳೆಯತನಕ್ಕೆ ಇಸ್ರಾಯೇಲ್ಯರು ಅರ್ಹರಾಗಿದ್ದರೋ? ಇಲ್ಲ! ಅವರು ಕೇವಲ ದೇವರ ನ್ಯಾಯತೀರ್ಪಿಗೆ ಮಾತ್ರ ಅರ್ಹರಾಗಿದ್ದರು. ದೇವರು ಅವರಿಗೆ ಯಾಕೆ ತನ್ನ ಒಳ್ಳೆಯತನವನ್ನು ತೋರಿಸಿದನು? ಯಾಕೆಂದರೆ ದೇವರು **ನಂಬಿಗಸ್ತನೂ ಮತ್ತು ಕರುಣೆಯುಳ್ಳವನೂ** ಆಗಿದ್ದನು. ಆತನು ಒಬ್ಬ ನಂಬಿಗಸ್ತನೂ ಮತ್ತು ಒಬ್ಬ ಕರುಣೆಯುಳ್ಳ ದೇವರೂ ಆಗಿದ್ದನು. ಯಾಕೆಂದರೆ ಇಸ್ರಾಯೇಲ್ಯರು ಕೃತಘ್ನರಾದ ಪಾಪಿಗಳಾಗಿದ್ದಾಗ್ಯೂ ಸಹ ದೇವರು **ತನ್ನ ಕರುಣೆಯಲ್ಲಿ** ಅವರಿಗೆ ಆಹಾರ –
ವನ್ನೂ ಮತ್ತು ನೀರನ್ನು ಒದಗಿಸಿದನು. ಒಂದುವೇಳೆ ಹಸಿವು ಮತ್ತು ಬಾಯಾರಿಕೆಗಳಿಂದ ರಕ್ಷಣೆಯು ಜನರ ಒಳ್ಳೆಯತನ ಮತ್ತು ಅರ್ಹತೆಯ ಮೇಲೆ ಆಧಾರಗೊಂಡಿದ್ದರೆ, ಖಂಡಿತವಾಗಿಯೂ ದೇವರು ಅವರನ್ನು ಮರುಭೂಮಿಯಲ್ಲಿ ಸಾಯುವದಕ್ಕೆ ಬಿಟ್ಟುಬಿಡು
–ತ್ತಿದ್ದನು.

ದೇವರು ಸುಮ್ಮನೆ ತನ್ನ ಕರುಣೆಯ ಕಾರಣದಿಂದ ಅವರನ್ನು ರಕ್ಷಿಸಲಿಲ್ಲ ಆದರೆ **ತನ್ನ ವಾಕ್ಯವನ್ನು ಕಾಪಾಡಿಕೊಳ್ಳುವದಕ್ಕೆ** ಸಹ ಆತನು ಅವರನ್ನು ರಕ್ಷಿಸಿದನು ಎನ್ನುವದನ್ನು ಸಹ ನಾವು ಗ್ರಹಿಸಿಕೊಳ್ಳಬೇಕು. ದೇವರು ತನ್ನ ವಾಗ್ದಾನಗಳನ್ನು ಕಾಪಾಡಿಕೊಳ್ಳುವದ
–ರಲ್ಲಿ ನಂಬಿಗಸ್ತನಾಗಿದ್ದಾನೆ – ಮತ್ತು ಇಸ್ರಾಯೇಲ್ ದೇಶಕ್ಕೆ ಸಂಬಂಧಿಸಿದಂತೆ ಆತನು ಒಂದು ಪ್ರಾಮುಖ್ಯವಾದ ವಾಗ್ದಾನವನ್ನು ಮಾಡಿದ್ದನು. ನಾವು ಈಗಾಗಲೇ ಕಲಿತಿರುವಂತೆ, **ಇಸ್ರಾಯೇಲ್ ದೇಶದ ಮೂಲಕವಾಗಿ ಲೋಕದ ಎಲ್ಲಾ ದೇಶಗಳನ್ನೂ ಆಶೀರ್ವ –
–ದಿಸು ವದಕ್ಕೆ ದೇವರು ವಾಗ್ದಾನವನ್ನು ಮಾಡಿದ್ದಾನೆ,** ಯಾಕೆಂದರೆ ಅವರ ಮೂಲಕವಾಗಿಯೇ ಪ್ರವಾದಿಗಳು, ಪರಿಶುದ್ಧ ವಾಕ್ಯಗಳು ಮತ್ತು ಲೋಕದ ರಕ್ಷಕನೂ ಬರಬೇಕಾಗಿತ್ತು. ಹೌದು, ದೇವರು ನಂಬಿಗಸ್ತನೂ ಮತ್ತು ಕರುಣೆಯಿಂದ ತುಂಬಿದವನೂ ಆಗಿದ್ದಾನೆ! ಆತನು **ಸತ್ಯದ ಮತ್ತು ಪ್ರೀತಿಯ ದೇವರಾಗಿದ್ದಾನೆ.** ಖಂಡಿತವಾಗಿಯೂ ಇಸ್ರಾಯೇಲ್ ಜನಾಂಗದವರು ದೇವರ ಪ್ರೀತಿಗೆ ಅರ್ಹರಾಗಿ
–ರಲಿಲ್ಲ. ಅವರು ದೇವರಿಗೆ ಅವಿಧೇಯರಾಗಿ ಆತನ ವಿರುದ್ಧವಾಗಿ ಮಾತಾಡಿದಾಗ್ಯೂ ಸಹ ದೇವರು ತನ್ನ ನಂಬಿಗಸ್ತಿಕೆ ಮತ್ತು ತನ್ನ ಪ್ರೀತಿಯಲ್ಲಿ ಪರಲೋಕದಿಂದ ಅವರಿಗೆ ಆಹಾರವನ್ನು ಕೊಟ್ಟನು.

ಬಹುಶ: ಯಾರಾದರೂ, "ಇಸ್ರಾಯೇಲ್ಯರ ಕಥೆಗಳು ಈ ದಿನ ನಮಗೆ ಯಾವ ರೀತಿಯ ಮೌಲ್ಯವುಳ್ಳವುಗಳಾಗಿವೆ?" ಎಂದು ಕೇಳಿ –
–ದರೆ, ಇದಕ್ಕೆ ದೇವರ ವಾಕ್ಯ ಹೀಗೆ ಹೇಳುತ್ತದೆ: "ಅವರಿಗೆ ಸಂಭವಿಸಿದ ಈ ಸಂಗತಿಗಳು **ನಿದರ್ಶನರೂಪವಾಗಿವೆ;** ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ **ನಮಗೆ** ಬುದ್ಧಿವಾದಗಳಾಗಿ ಬರೆದವೆ." (೧ಕೊರಿಂಥ–೧೦:೧೧). ಮರುಭೂಮಿಯ ಬಲದಿಂದ ದೇವರು ಇಸ್ರಾಯೇಲ್ಯರನ್ನು ಬಿಡಿಸಿದಂತೆ ಅದೇ ರೀತಿಯಲ್ಲಿಯೇ, **ಪಾಪದ ಬಲದಿಂದ** ಆದಾಮನ ಪ್ರತಿಯೊಂದು ಮಗುವನ್ನೂ ಬಿಡಿಸುವದಕ್ಕೆ ದೇವರು ಬಯಸುತ್ತಾನೆ.

ನಾವು ನಿಮಗೆ ಕೇಳುವದೇನೆಂದರೆ: ಇಸ್ರಾಯೇಲ್ಯರು ಮರುಭೂಮಿಯಲ್ಲಿ ನಾಶವಾಗದಿರುವದಕ್ಕೆ ಅವರು ಏನು ಮಾಡಬೇಕಾಗಿತ್ತು? ಅವರು ಸರಳವಾಗಿ **ದೇವರು ಆಕಾಶದಿಂದ ಕಳಿಸಿದ ಆಹಾರವನ್ನು ಒಟ್ಟುಗೂಡಿಸಿ ಊಟಮಾಡಬೇಕಾಗಿತ್ತು.** ಅವರ ಬಿಡುಗಡೆಯು ಎಲ್ಲಿಂದ ಬಂತು? ಇದು ಅವರ ಸ್ವಂತ ಶ್ರಮಗಳಿಂದ ಬಂತೋ? ಇಲ್ಲ, ಅವರ ಬಿಡುಗಡೆಯು ದೇವರಿಂದ ಬಂದಿತು. ಹಸಿವು ಮತ್ತು ಬಾಯಾರಿಕೆಗಳಿಂದ ತಾವೇ ರಕ್ಷಿಸಿಕೊಳ್ಳುವದಕ್ಕೆ ಅವರು ಬಲವನ್ನು ಹೊಂದಿರಲಿಲ್ಲ. **ತಮಗೆ ದೇವರು ಕಳಿಸಿದ ಆಹಾರವನ್ನು ಒಟ್ಟುಗೂಡಿಸಿ ಊಟಮಾಡುವದನ್ನು ಬಿಟ್ಟು ಅವರು ಬೇರೇನೂ ಮಾಡಲಿಲ್ಲ.**

ಇಸ್ರಾಯೇಲ್ ಜನರ ಹಾಗೆ ನಾವೆಲ್ಲರೂ ಪಾಪಿಗಳೆಂಬುದನ್ನು ಮತ್ತು ನಮ್ಮನ್ನು ನಾವೇ ಪಾಪದ ಬಲದಿಂದ ಅಥವಾ ದೇವರ ನೀತಿಯುಳ್ಳ ನ್ಯಾಯತೀರ್ಪಿನಿಂದ ರಕ್ಷಿಸಿಕೊಳ್ಳುವ **ಯಾವ ಸಾಧನಗಳನ್ನು ನಾವು ಹೊಂದಿಲ್ಲ** ಎನ್ನುವದನ್ನು ಪರಿಶುದ್ಧ ವಾಕ್ಯಗಳು ನಮಗೆ ತೋರಿಸುತ್ತವೆ. ಇಸ್ರಾಯೇಲ್ಯರು ನಡೆದು ಹೋದಂತೆ ಬಹುಶ: ನಾವು ಒಣ ಮರುಭೂಮಿಯಲ್ಲಿ ನಡೆದುಹೋಗಿಲ್ಲ, ಆದರೆ ಅವರ ಮೇಲೆ ತೂಗಾಡಿದಂತೆಯೇ ಮರಣದ ನೆರಳು ನಮ್ಮ ಮೇಲೆ ಇನ್ನೂ ತೂಗಾಡುತ್ತಿದೆ. ಕರ್ತನ ವಾಕ್ಯವು ಸ್ಪಷ್ಟವಾಗಿದೆ:ದೇವರು ಒದಗಿಸಿರುವ ರಕ್ಷಣೆಯ ಸಾಧನಗಳನ್ನು ಹೊಂದಿಕೊಳ್ಳುವದಕ್ಕೆ ತಿರಸ್ಕರಿಸುವ ಯಾವನಾದರೂ ತನ್ನ ಪಾಪದಲ್ಲಿ ಸಾಯುತ್ತಾನೆ ಮತ್ತು

ನಿತ್ಯವಾದ ನರಕದ ಬೆಂಕಿಯೊಳಗೆ ಬೀಳುತ್ತಾರೆ. ಇವು ಆನಂದದಾಯಕ ಆಲೋಚನೆಗಳಲ್ಲ.  ಪಾಪದಲ್ಲಿ ಸಾಯುವದು! ನ್ಯಾಯ – –ತೀರ್ಪಿನೊಳಗೆ ಬರುವದು! ನರಕದೊಳಗೆ ಬೀಳುವದು! ಇವೆಲ್ಲವೂ **ಭಯಂಕರವಾದ ಅನಾಹುತಗಳು!**  ಹೇಗೂ ಯಾರೊಬ್ಬರೂ ತಮ್ಮ ಪಾಪದಲ್ಲಿ ಸಾಯುವದು ಅಗತ್ಯವಿಲ್ಲ ಎನ್ನುವದೇ **ಶುಭ ಸಂದೇಶವಾಗಿದೆ.**  ಕೇವಲ ದೇವರು ಇಸ್ರಾಯೇಲ್ಯರಿಗೆ  ಅಹಾರ ಕೊಟ್ಟದ್ದರಿಂದ ಅವರು ಮರುಭೂಮಿಯಲ್ಲಿ ಹಸಿವೆಯಿಂದ ಸಾಯದೆ ಜೀವಂತವಾಗಿರುವದಕ್ಕೆ ಸಾಧ್ಯವಾಯಿತು, ಅದೇ ರೀತಿಯಲ್ಲಿ ದೇವರು ನಮಗೂ "ಆಹಾರವನ್ನು" ಕೊಟ್ಟಿದ್ದಾನೆ ಅದರಿಂದ ನಾವು ಈ ಜೀವಿತದಲ್ಲಿ ಮತ್ತು ಮುಂದೆ ಬರಲಿಕ್ಕಿರುವ ಜೀವಿತದಲ್ಲಿ ಎಂದೆಂದಿಗೂ ಆಶೀರ್ವದಿಸಲ್ಪಡುತ್ತೇವೆ!

ನಿತ್ಯಜೀವವನ್ನು ಕೊಡುವಂತ ಆ **"**ಆಹಾರ**"** ಯಾವುದು?  ಮಾರುಕಟ್ಟೆಯಲ್ಲಿ ನಾವು ಕೊಂಡುಕೊಳ್ಳುವಂತ ಆಹಾರವು ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ಜೀವಿಸುವದಕ್ಕೆ ನಮಗೆ ಬಲವನ್ನು ಕೊಡುತ್ತದೋ?  ಇಲ್ಲ, ಅಂತಹ ಯಾವ ಆಹಾರವೂ ಮಾರು – –ಕಟ್ಟೆಯಲ್ಲಿ ನಮಗೆ ಸಿಗುವದಿಲ್ಲ.  ಸರಿ ಹಾಗಾದರೆ, ನಿತ್ಯಜೀವವನ್ನು ಕೊಡುವಂತ ಈ ಆಹಾರ ಯಾವುದು ಮತ್ತು ಎಲ್ಲಿ ಸಿಗುತ್ತದೆ?

ಸ್ನೇಹಿತರೇ, ಇಸ್ರಾಯೇಲ್ಯರು ಅರಣ್ಯದಲ್ಲಿ ಮನ್ನವನ್ನು ಊಟಮಾಡಿದ ಸುಮಾರು ಸಾವಿರದ ಐನೂರು ವರ್ಷಗಳ ನಂತರ ದೇವರು **ವಿಮೋಚಕನನ್ನು** ಅಂದರೆ ಲೋಕದ ರಕ್ಷಕನನ್ನು ಕಳಿಸಿಕೊಟ್ಟನು ಎಂಬುದು ನಿಮಗೆ ಗೊತ್ತಿರಲೇಬೇಕು. ಈತನೇ ಲೋಕದ ಜನರನ್ನು ಪಾಪದ ಬಲ, ನ್ಯಾಯತೀರ್ಪು ಮತ್ತು ನರಕದಿಂದ ರಕ್ಷಿಸುವದಕ್ಕೆ ದೇವರು ಒದಗಿಸಿದಂತಹ ಆಹಾರವಾಗಿದ್ದಾನೆ.  ವಿಮೋಚಕನು ಈ ಲೋಕದಲ್ಲಿದ್ದಾಗ ತಾನೇ ಹೇಳಿದಂತಹ ಮಾತನ್ನು ಜಾಗ್ರತೆಯಿಂದ ಕೇಳಿಸಿಕೊಂಡು ಆಲೋಚಿಸಿರಿ.  ಆತನು ಹೇಳಿದ್ದೇನೆಂದರೆ:

"ನಂಬಿರುವವನು ನಿತ್ಯಜೀವವನ್ನು ಹೊಂದಿದ್ದಾನೆಂದು ನಿಮಗೆ ನಿಜನಿಜವಾಗಿ ಹೇಳುತ್ತೇನೆ.  ಜೀವಕೊಡುವ ರೊಟ್ಟಿ ನಾನೇ.  ನಿಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರೂ ಸತ್ತುಹೋದರು;  ಪರಲೋಕದಿಂದ ಇಳಿದುಬರುವ ರೊಟ್ಟಿ ಎಂಥದೆಂದರೆ ಅದನ್ನು ತಿಂದವನು ಸಾಯುವದಿಲ್ಲ.  **ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ; ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು, ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು. ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ. ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ."** (ಯೋಹಾನ–೬:೪೭–೫೧, ೩೫)

ಪ್ರೀತಿಯ ಸ್ನೇಹಿತರೇ, ಈ ದಿನ ಇಲ್ಲಿಗೆ ನಾವು ನಿಲ್ಲಿಸುತ್ತಿದ್ದೇವೆ.  ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ದೇವರ ಚಿತ್ತದಂತೆ ದೇವರು ಇಸ್ರಾಯೇಲ್ಯರಿಗೆ ಹತ್ತು ಆಜ್ಞೆಗಳನ್ನು ಹೇಗೆ ಕೊಟ್ಟನೆಂಬುದನ್ನು ನಾವು ನೋಡಲಿದ್ದೇವೆ.

ವಿಮೋಚಕನು ಏನು ಹೇಳಿದ್ದಾನೋ ಅದನ್ನು ಮನಸ್ಸಿನಲ್ಲಿ ಆಲೋಚಿಸಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ.

**"ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ.  ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ."** (ಯೋಹಾನ–೬:೩೫).

ಪಾಠ ೩೬

# ಬೆಂಕಿಯ ಪರ್ವತ ಸೀನಾಯಿ!

ವಿಮೋಚನಕಾಂಡ ೧೯, ೨೦

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ದೇವರು ಇಸ್ರಾಯೇಲ್ ಕುಲಗಳನ್ನು ನೀರಸವಾದ ಮರುಭೂಮಿಯಲ್ಲಿ ಆಕಾಶದಿಂದ ಆಹಾರವನ್ನು ಕೊಡುವದರಿಂದ ಅವರು ಹಸಿವೆಯಿಂದ ಸಾಯದ ಹಾಗೆ ಅವರನ್ನು ಹೇಗೆ ಲಕ್ಷಿಸಿದನೆಂಬುದನ್ನು ನಾವು ನೋಡಿಕೊಂಡೆವು. ಅವರ ನಂಬಿಗಸ್ತಿಕೆಯ ಮತ್ತು ವಿಶ್ವಾಸದ ಕೊರತೆಯ ಕಾರಣದಿಂದ ಅವರು ಆಗಾಗ್ಗೆ ದೇವರನ್ನು ಹೇಗೆ ರೇಗಿಸುತ್ತಿದ್ದರೆಂಬುದನ್ನೂ ಸಹ ನಾವು ನೋಡಿಕೊಂಡೆವು.

ದೇವರು ಇಸ್ರಾಯೇಲ್ಯರಿಗೆ ಮರುಭೂಮಿಯಲ್ಲಿ ಕಾಣಿಸಿಕೊಂಡು ಅವರಿಗೆ ಹೇಗೆ ತನ್ನ **ಪರಿಶುದ್ಧವಾದ ಧರ್ಮಶಾಸ್ತ್ರವನ್ನು ಕೊಟ್ಟ –** ನೆಂಬುದನ್ನು ಈ ದಿನ ನಾವು ನೋಡಲಿದ್ದೇವೆ. ತೋರಾದಲ್ಲಿನ ವಿಮೋಚನಕಾಂಡ ಪುಸ್ತಕದ ಹತ್ತೊಂಭತ್ತನೆಯ ಅಧ್ಯಾಯದಲ್ಲಿ ನಾವು ಓದುತ್ತಿದ್ದೇವೆ. ಅದು ಹೀಗೆ ಪ್ರಾರಂಭವಾಗುತ್ತದೆ: "ಇಸ್ರಾಯೇಲ್ಯರು ಐಗುಪ್ತದಿಂದ ಹೊರಟ ಮೂರನೆಯ ತಿಂಗಳಿನ ಅದೇ ದಿವಸದಲ್ಲಿ ಸೀನಾಯಿ ಅರಣ್ಯಕ್ಕೆ ಬಂದರು." (ವಿಮೋ–೧೯:೧). ಮೋಶೇ ಮತ್ತು ಇಸ್ರಾಯೇಲ್ಯರೆಲ್ಲರೂ ಮರುಭೂಮಿಯ ಮೂಲ–ಕವಾದ ತಮ್ಮ ಪ್ರಯಾಣದಲ್ಲಿ ಈಗ ಎಲ್ಲಿದ್ದಾರೆ? ಅವರು ಈಗ **ಸೀನಾಯಿ ಪರ್ವತಕ್ಕೆ** ಬಂದಿದ್ದಾರೆ. ಉರಿಯುತ್ತಿದ್ದರೂ ಸುಟ್ಟು ಹೋಗದಿದ್ದಂತಹ ಪೊದೆಯಿಂದ ದೇವರು ಮೋಶೆಯನ್ನು ಮೊದಲು ಕರೆದು ಮಾತಾಡಿದ್ದು ಎಲ್ಲಿ ಎಂಬುದು ನಿಮಗೆ ಜ್ಞಾಪಕ – –ವಿದೆಯೋ? ಇದು ಅದೇ ಸೀನಾಯಿ ಪರ್ವತವಾಗಿತ್ತು. ನಿಮಗೆ ಆ ಕಥೆಯು ನೆನಪಿದೆಯಾ? ಸೀನಾಯಿ ಬೆಟ್ಟದ ಮೇಲೆ ದೇವರು ಮೋಶೆಯೊಂದಿಗೆ ಹೇಗೆ ಮಾತಾಡಿದನೆಂಬುದನ್ನು ಕೇಳಿಸಿಕೊಂಡಿದ್ದೇವೆ. ಆತನು ಹೇಳಿದ್ದೇನೆಂದರೆ;

"ಐಗುಪ್ತದೇಶದಲ್ಲಿರುವ ನನ್ನ ಜನರ ದುರವಸ್ಥೆಯನ್ನು ನೋಡೇನೋಡಿದ್ದೇನೆ. . . .ಆದಕಾರಣ ಅವರನ್ನು ಐಗುಪ್ತ್ಯರ ಕೈಯೊಳ – –ಗಿಂದ ತಪ್ಪಿಸುವದಕ್ಕೆ ಇಳಿದುಬಂದಿದ್ದೇನೆ. . . . .ಆದದರಿಂದ ಈಗ ನೀನು ಹೋಗು ನಾನು ನಿನ್ನನ್ನು ಕಳಿಸುತ್ತೇನೆ. **ನಾನೇ ನಿನ್ನ ಸಂಗಡ ಇರುವೆನು; ಮತ್ತು ನೀನು ನನ್ನ ಜನರನ್ನು ಐಗುಪ್ತದೇಶದಿಂದ ಹೊರಗೆ ತಂದಾಗ ನೀವು ಈ ಬೆಟ್ಟದಲ್ಲೇ ದೇವರನ್ನು ಆರಾಧಿಸುವಿರಿ; ನಿನ್ನನ್ನು ಕಳುಹಿಸಿದವನು ನಾನೇ ಎಂಬದಕ್ಕೆ ಇದೇ ನಿನಗೆ ಗುರುತಾಗಿರುವದು."** (ವಿಮೋ–೩:೭,೮,೧೦,೧೨).

ದೇವರು ಮೋಶೆಗೆ ವಾಗ್ದಾನಮಾಡಿದ್ದನ್ನು ನೆರವೇರಿಸಿದನೋ? ಖಂಡಿತವಾಗಿಯೂ ಆತನು ನೆರವೇರಿಸಿದನು! ಈ ದಿನ ತೋರಾ–ದಲ್ಲಿನ ನಮ್ಮ ಓದುವಿಕೆಯಲ್ಲಿ ಮೋಶೆ ಎಲ್ಲಿದ್ದಾನೆ? "ನೀನು ನನ್ನ ಜನರನ್ನು ಐಗುಪ್ತದೇಶದಿಂದ ಹೊರಗೆ ತಂದಾಗ ನೀವು ಈ ಬೆಟ್ಟದಲ್ಲೇ ದೇವರನ್ನು ಆರಾಧಿಸುವಿರಿ!" ಎಂದು ದೇವರು ಮೋಶೆಗೆ ಹೇಳುತ್ತಾ ಉರಿಯುವ ಪೊದೆಯಲ್ಲಿ **ನಲವತ್ತು ವರುಷಗಳ ಮೊದಲೇ ವಾಗ್ದಾನ ಮಾಡಿದ ಹಾಗೆಯೇ ಮೋಶೆ ಮತ್ತು ಇಸ್ರಾಯೇಲ್ಯರ ಜನರ ಸಮೂಹವು ಸೀನಾಯಿ ಪರ್ವತದ ಎದುರಿನಲ್ಲಿ** ಇರುವದನ್ನು ನಾವು ನೋಡುತ್ತೇವೆ.

ದೇವರು ಮೋಶೆಗೆ ಸೀನಾಯಿ ಪರ್ವತದಲ್ಲಿ ಮತ್ತೆ ಕಾಣಿಸಿಕೊಂಡು ಇಸ್ರಾಯೇಲ್ಯರೆಲ್ಲರೊಂದಿಗೆ ಹೇಗೆ ಮಾತಾಡಿದನೆಂಬುದನ್ನು ಈಗ ನೋಡಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

"ಮೋಶೆ ಬೆಟ್ಟವನ್ನೇರಿ ಮೇಲಕ್ಕೆ ಹೋದಾಗ ಯೆಹೋವನು ಅವನಿಗೆ ಬೆಟ್ಟದ ಮೇಲಿನಿಂದ ಕೂಗಿ – ನೀನು ಯಾಕೋಬನ ಮನೆ–ತನದವರಾದ ಇಸ್ರಾಯೇಲ್ಯರಿಗೆ ಈ ಮಾತುಗಳನ್ನು ಹೇಳಬೇಕು; ಏನೆಂದರೆ – ನಾನು ಐಗುಪ್ತ್ಯರಿಗೆ ಏನು ಮಾಡಿದೆನೋ, ಹದ್ದು ತನ್ನ ಮರಿಗಳನ್ನು ರೆಕ್ಕೆಗಳ ಮೇಲೆ ಹೊತ್ತುಕೊಳ್ಳುವಂತೆ ನಾನು ನಿಮ್ಮನ್ನು ಹೊತ್ತುಕೊಂಡು ನನ್ನ ಸ್ಥಳಕ್ಕೆ ಹೇಗೆ ಸೇರಿಸಿದೆನೋ ಇದ–ನ್ನೆಲ್ಲಾ ನೀವು ನೋಡಿದ್ದೀರಷ್ಟೆ. **ಹೀಗಿರಲಾಗಿ ನೀವು ನನ್ನ ಮಾತನ್ನು ಶ್ರದ್ಧೆಯಿಂದ ಕೇಳಿ ನಾನು ಮಾಡುವ ನಿಬಂಧನೆಯನ್ನು ಅನುಸರಿಸಿ ನಡೆದರೆ ನೀವು ಎಲ್ಲಾ ಜನಾಂಗಗಳಲ್ಲಿ ನನಗೆ ಸ್ವಕೀಯ ಜನರಾಗುವಿರಿ;** ಸಮಸ್ತ ಭೂಮಿಯೂ ನನ್ನದಷ್ಟೆ. ನೀವು ನನಗೆ ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರುವಿರಿ. ಇವೇ ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದ ಮಾತುಗಳು ಅಂದನು. ಆಗ ಮೋಶೆ ಬಂದು ಜನರ ಹಿರಿಯರನ್ನು ಕೂಡಿಸಿ ಯೆಹೋವನು ಆಜ್ಞಾಪಿಸಿದ್ದ ಈ ಮಾತುಗಳನ್ನೆಲ್ಲಾ ಅವರಿಗೆ ತಿಳಿಸಿದನು. ಜನರೆಲ್ಲರೂ

– **ಯೆಹೋವನು ಹೇಳಿದಂತೆಯೇ ಮಾಡುವೆವು ಎಂದು ಒಗ್ಗಟ್ಟಾಗಿ ಪ್ರತ್ಯುತ್ತರ ಕೊಡಲಾಗಿ** ಮೋಶೆ ಯೆಹೋವನ ಬಳಿಗೆ ಹೋಗಿ ಅವರ ಮಾತುಗಳನ್ನು ಆತನಿಗೆ ಅರಿಕೆಮಾಡಿದನು." (ವಿಮೋ–೧೯:೩–೮)

ಇಸ್ರಾಯೇಲ್ಯರು ದೇವರಿಗೆ ಹೇಗೆ ಉತ್ತರಿಸಿದರೆಂಬುದನ್ನು ನೀವು ಕೇಳಿಸಿಕೊಂಡಿರಾ? ಅವರು, "ಯೆಹೋವನು **ಹೇಳಿದಂತೆಯೇ** ನಾವು ಮಾಡುತ್ತೇವೆ!" ಎಂದು ಹೇಳಿದರು. ಅವರು ಹೇಳಿದ್ದು ಸತ್ಯವೋ? ದೇವರ **ಆಜ್ಞೆಗಳನ್ನೆಲ್ಲಾ** ಅವರು ಕಾಪಾಡಿಕೊಂಡರಾ? ತಾನು ಅವರಿಗೆ ಆಜ್ಞಾಪಿಸಿದ ಪ್ರತಿಯೊಂದನ್ನೂ ಮಾಡುವದಕ್ಕೆ ಅವರು ಶಕ್ತರಲ್ಲವೆಂಬುದನ್ನು ದೇವರು ತುಂಬಾ ಚೆನ್ನಾಗಿ ತಿಳಿದಿ – –ದ್ದನು. ಪಾಪಿಗಳ ವಿಮೋಚನೆಗಾಗಿ ಈ ಲೋಕಕ್ಕೆ ಬರಬೇಕಾಗಿದ್ದ ವಿಮೋಚಕನಿಗೆ ಸಂಬಂಧಿಸಿದ ಶುಭ ಸಂದೇಶವನ್ನು ನಂಬಿ ಆತನ ಮುಂದೆ ತಮ್ಮ ಪಾಪಭರಿತ ಸ್ಥಿತಿಯನ್ನು ಒಪ್ಪಿಕೊಂಡು ದೇವರನ್ನು ಮೆಚ್ಚಿಸುವದಕ್ಕೆ ತಮಗಿರುವ ಅಸಮರ್ಥತೆಯನ್ನು ಅವರು ಗ್ರಹಿಸಿಕೊಳ್ಳಬೇಕೆಂದು ದೇವರು ಅವರಿಂದ ಬಯಸಿದ್ದನು. **ದೇವರ ವಾಗ್ದಾನಗಳಲ್ಲಿ** ಅವರ ಪೂರ್ವಿಕರಾದ ಅಬ್ರಹಾಮ ಇಸಾಕ ಮತ್ತು ಯಾಕೋಬರಿಗಿದ್ದ **ನಂಬಿಕೆಯ** ಆಧಾರದ ಮೇಲೆ ದೇವರು ಅವರ ಪಾಪಗಳನ್ನು ಕ್ಷಮಿಸಿದ್ದನು. ನಂಬಿಕೆಯ ಮೂಲಕ ಮಾತ್ರವೇ ಇಸ್ರಾಯೇಲ್ಯರನ್ನೂ ಸಹ ಕ್ಷಮಿಸುವದಕ್ಕೆ ದೇವರು ಇಷ್ಟಪಟ್ಟಿದ್ದನು. ನಂಬಿಕೆ ಒಂದರಿಂದ ಮಾತ್ರವೇ ದೇವರ ರಕ್ಷಣೆಯ ಮಾರ್ಗವು ಯಾವಾಗಲೂ ಉಂಟಾಗುತ್ತದೆ – ಅಂದರೆ ದೇವರಲ್ಲಿ ಮತ್ತು ಆತನ ರಕ್ಷಣೆಯ ಯೋಜನೆಯಲ್ಲಿ ನಂಬಿಕೆಯಿಡುವದು. ವಾಕ್ಯವು ಹೀಗೆ ಹೇಳುತ್ತದೆ: **"ಕರ್ಮಮಾರ್ಗದಿಂದ** ಯಾವನೂ ದೇವರ ಸನ್ನಿಧಿಯಲ್ಲಿ ನೀತಿವಂತನಾಗುವದಿಲ್ಲವೆಂಬದು ಸ್ಪಷ್ಟ – –ವಾಗಿದೆ. ಯಾಕಂದರೆ ನೀತಿವಂತನು **ನಂಬಿಕೆಯಿಂದಲೇ** ಬದುಕುವನು." (ಗಲಾತ್ಯ–೩:೧೧)

ಹೇಗೂ, ಈ ವಿಷಯಕ್ಕೆ ಸಂಬಂದಿಸಿದಂತೆ, ಇಸ್ರಾಯೇಲ್ ಜನರು **ತಮ್ಮ ಸ್ವಂತ ಶ್ರಮಗಳ** ಮುಖಾಂತರ ದೇವರ ಮುಂದೆ ನೀತಿ – –ವಂತರಾಗುವದನ್ನು ತಾವು ಸಾಧಿಸಲು ಶಕ್ತರಾಗುತ್ತೇವೆಂದು ನಿರೀಕ್ಷಿಸಿದ್ದರು. ಅವರು ಎಷ್ಟೊಂದು ಮೂರ್ಖರು! {ಜ್ಞಾನದಲ್ಲಿ ಎಷ್ಟೊಂದು ಚಿಕ್ಕವರು} ತಾವು ಎಷ್ಟೊಂದು ಸಲ ದೇವರನ್ನು ನೋಯಿಸಿದ್ದೇವೆಂಬುದನ್ನು ಅವರು ಮರೆತುಬಿಟ್ಟಿದ್ದಾರೆ. ದೇವರ ಮುಂದೆ ತಮ್ಮ ಪಾಪ ಎಷ್ಟೊಂದು ದೊಡ್ಡದೆಂಬುದನ್ನು ಇನ್ನೂ ಅವರು ಗ್ರಹಿಸಿಕೊಳ್ಳಲಿಲ್ಲ. ಅವರ ಅನಿಸಿಕೆಯಲ್ಲಿ, ಪಾಪವು ಅಂತಹ ಗಂಭೀರವಾದ ವಿಷಯವಾಗಿರಲಿಲ್ಲ, ಅದರೆ ಅವರಿಗೆ ನ್ಯಾಯತೀರಿಸುವದಕ್ಕಿದ್ದ ದೇವರ ದೃಷ್ಟಿಯಲ್ಲಿ **ಪಾಪವು ಒಂದು ಭಯಂಕರವಾದ ವಿಷಯವಾಗಿತ್ತು!** {ಹಾನಿಕರವಾದದ್ದು}. **ದೇವರು ಪರಿಶುದ್ಧನೂ ಮತ್ತು ಸಂಪೂರ್ಣನೂ ಆಗಿದ್ದಾನೆ;** ಸಂಪೂರ್ಣತೆ– –ಗಿಂತಲೂ ಕಡಿಮೆಯಾಗಿರುವ ಯಾವುದೇ ಕೆಲಸವನ್ನೂ ಆತನು ಸಮ್ಮತಿಸುವದಿಲ್ಲ! ಹೇಗೂ ಈ ವಿಷಯಕ್ಕೆ ಸಂಬಂಧಿಸಿದಂತೆ ಇಸ್ರಾಯೇಲ್ಯರು ಇದನ್ನು ಇನ್ನೂ ಗ್ರಹಿಸಿಕೊಳ್ಳಲಿಲ್ಲ. ಅದಕ್ಕಾಗಿಯೇ ಅವರು {ಮಿತಿಮೀರಿದ ಭರವಸೆಯುಳ್ಳವರಾಗಿ}, **"**ಯೆಹೋವನು ಹೇಳಿದಂತೆಯೇ ನಾವು ಮಾಡುತ್ತೇವೆ**"** ಎಂದು ಹೇಳಿದರು. ಹೇಗೂ, **"**ಯೆಹೋವನು ಹೇಳಿದಂತೆಯೇ ನಾವು ಮಾಡುತ್ತೇವೆ**"** ಎಂದು ಹೇಳಿರುವದನ್ನು ಅವರು **ಮಾಡುವದಿಲ್ಲ** ಎಂಬುದನ್ನು ಅವರಿಗೆ ತೋರಿಸುವದಕ್ಕೆ ಆತನು ಒಂದು ಯೋಜನೆಯನ್ನು ಮಾಡಿಕೊಂಡಿದ್ದನು. ದೇವರು ಹೇಗೆ ಸೀನಾಯಿ ಬೆಟ್ಟದ ಮೇಲೆ ಇಳಿದುಬಂದು ತನ್ನ ಮಹಿಮೆಯನ್ನೂ ಮತ್ತು ಪರಿಶುದ್ಧತೆಯನ್ನೂ ಪ್ರಕಟಿಸಿಕೊಂಡು ಇಸ್ರಾಯೇಲ್ಯರಿಗೆ **ಹತ್ತು ಆಜ್ಞೆಗಳನ್ನು** ಕೊಟ್ಟನೆಂಬುದನ್ನು ನೊಡುವದಕ್ಕೆ ವಾಕ್ಯಗಳಲ್ಲಿರುವದನ್ನು ಈಗ ಮುಂದುವರಿ –ಸೋಣ.

ವಾಕ್ಯವು ಹೀಗೆ ಹೇಳುತ್ತದೆ:

**"**ಮೋಶೆ ಜನರ ಮಾತುಗಳನ್ನು ಯೆಹೋವನಿಗೆ ಅರಿಕೆ ಮಾಡಲಾಗಿ ಯೆಹೋವನು ಅವನಿಗೆ ನೀನು ಜನರ ಬಳಿಗೆ ಹೋಗಿ ಮೂರನೆಯ ದಿನದಲ್ಲಿ ಯೆಹೋವನು ಸಮಸ್ತ ಜನರಿಗೂ ಪ್ರತ್ಯಕ್ಷನಾಗಿ ಸೀನಾಯಿಬೆಟ್ಟದ ಮೇಲೆ ಇಳಿದುಬರುವನು ಎಂದು ಹೇಳು ಅಂದನು. ಜನರು ಹತ್ತಿರ ಬಾರದಂತೆ ನೀನು ಬೆಟ್ಟದ ಸುತ್ತಲೂ **ಮೇರೆಯನ್ನು** ಮಾಡಿಸಿ ಜನರಿಗೆ – ಎಚ್ಚರಿಕೆಯಾಗಿರ್ರಿ, ನೀವು ಈ ಬೆಟ್ಟವನ್ನು ಏರಲೂ ಕೂಡದು ಅದರ ಅಂಚನ್ನು ಮುಟ್ಟಲೂ ಕೂಡದು. ಮುಟ್ಟಿದವನಿಗೆ ಅಗತ್ಯವಾಗಿ **ಪ್ರಾಣಶಿಕ್ಷೆಯಾಗಬೇಕು.** ಅಂಥವನನ್ನು ಯಾರೂ ಮುಟ್ಟಕೂಡದು; ಕಲ್ಲುಗಳನ್ನಾದರೂ ಬಾಣಗಳನ್ನಾದರೂ ಎಸೆದು ಅವನನ್ನು ಕೊಲ್ಲಬೇಕು. ಮನುಷ್ಯನಾಗಲಿ ಪಶುವಾಗಲಿ ಬೆಟ್ಟವನ್ನು ಮುಟ್ಟಿದರೆ ಉಳಿಯಬಾರದು. . . . . ಮೂರನೆಯ ದಿನದಲ್ಲಿ ಸೂರ್ಯೋದಯವಾಗುವಾಗ ಆ ಬೆಟ್ಟದ ಮೇಲೆ **ಗುಡುಗೂ ಮಿಂಚೂ ಕಾರ್ಮುಗಿಲೂ ತುತೂರಿಯ ಮಹಾಧ್ವನಿಯೂ** ಉಂಟಾಗಲು ಪಾಳೆಯದಲ್ಲಿದ್ದ ಜನರೆಲ್ಲರೂ ನಡುಗಿ – ದರು. ದೇವದರ್ಶನಕ್ಕಾಗಿ ಮೋಶೆ ಜನರನ್ನು ಪಾಳೆಯದ ಹೊರಕ್ಕೆ ಬರಮಾಡಲು ಅವರು ಬೆಟ್ಟದ ಬುಡದಲ್ಲಿ ನಿಂತುಕೊಂಡರು. ಯೆಹೋವನು **ಬೆಂಕಿಯೊಳಗೆ** ಸೀನಾಯಿ ಬೆಟ್ಟದ ಮೇಲಕ್ಕೆ ಇಳಿದು ಬಂದದರಿಂದ **ಆ ಬೆಟ್ಟವೆಲ್ಲಾ ಹೊಗೆಯಿಂದ ಆವರಿಸಿ – ಕೊಂಡಿತು. ಆ ಹೊಗೆ ಆವಿಗೆಯ ಹೊಗೆಯಂತೆ ಏರಿತು; ಅದಲ್ಲದೆ ಬೆಟ್ಟವೆಲ್ಲಾ ಬಹಳವಾಗಿ ಕಂಪಿಸಿತು. ತುತೂರಿಯ ಧ್ವನಿ ಹೆಚ್ಚಾಗುತ್ತಾ ಬಂತು.** . . .**ಯೆಹೋವನು** ಸೀನಾಯಿ ಬೆಟ್ಟದ ಶಿಖರಕ್ಕೆ **ಇಳಿದುಬಂದನು."** (ವಿಮೋ–೧೯:೧೦–೨೦)

**"**ದೇವರು ಮುಂದಣ ಆಜ್ಞೆಗಳನ್ನೆಲ್ಲಾ ಕೊಟ್ಟನು: ನೀನು ದಾಸತ್ವದಲ್ಲಿದ್ದ ಐಗುಪ್ತದೇಶದೊಳಗಿಂದ ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ **ನಿನ್ನ ದೇವರು ನಾನೇ.** (ವಿಮೋ–೨೦:೧,೨)

೧) ನಾನಲ್ಲದೆ ನಿನಗೆ **ಬೇರೆ ದೇವರುಗಳು** ಇರಬಾರದು. (ವಚನ ೩)

೨) **ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು**. . . .ನಾನು ನಿನ್ನ ದೇವರಾದ ಯೆಹೋವನು. (ವಚನ ೪,೫)
೩) ನಿನ್ನ ದೇವರಾದ **ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ** ಎತ್ತಬಾರದು. ಯೆಹೊವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುವವನನ್ನು ಶಿಕ್ಷಿಸದೆ ಬಿಡುವದಿಲ್ಲ. (ವಚನ ೭)
೪) **ಸಬ್ಬತ್ ದಿನವನ್ನು ದೇವರ ದಿನವೆಂದು** ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. (ವಚನ ೮)
೫) **ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.** (ವಚನ ೧೨)
೬) **ನರಹತ್ಯ ಮಾಡಬಾರದು.** (ವಚನ ೧೩)
೭) **ವ್ಯಭಿಚಾರ ಮಾಡಬಾರದು.** (ವಚನ ೧೪)
೮) **ಕದಿಯಬಾರದು.** (ವಚನ ೧೫)
೯) ಮತ್ತೊಬ್ಬನ ಮೇಲೆ **ಸುಳ್ಳುಸಾಕ್ಷಿ ಹೇಳಬಾರದು.** (ವಚನ ೧೬)
೧೦) ಮತ್ತೊಬ್ಬನ ಮನೆಯನ್ನು **ಆಶಿಸಬಾರದು.** ಮತ್ತೊಬ್ಬನ ಹೆಂಡತಿ ಹೆಣ್ಣಾಳು ಗಂಡಾಳು ಎತ್ತು ಕತ್ತೆ ಮುಂತಾದ ಯಾವುದನ್ನೂ ಆಶಿಸಬಾರದು. (ವಚನ ೧೭)

**"**ಆ ಗುಡುಗು ಮಿಂಚುಗಳನ್ನೂ ತುತೂರಿ ಧ್ವನಿಯಾಗುತ್ತಿರುವದನ್ನೂ ಬೆಟ್ಟದಿಂದ ಹೊಗೆ ಹೊರಡುವದನ್ನೂ ಜನರೆಲ್ಲರು ನೋಡಿ **ನಡುಗುತ್ತಾ ದೂರದಲ್ಲಿ ನಿಂತುಕೊಂಡರು.** ಅವರು ಮೋಶೆಗೆ – "ನೀನೇ ನಮ್ಮ ಸಂಗಡ ಮಾತಾಡು; ನಾವು ಕೇಳುವೆವು. ದೇವರು ನಮ್ಮ ಸಂಗಡ ಮಾತಾಡಿದರೆ ನಾವು ಸತ್ತೇವು**"** ಎಂದು ಹೇಳಿದರು. ಅದಕ್ಕೆ ಮೋಶೆ – ಭಯಪಡಬೇಡಿರಿ. ದೇವರು ನಿಮ್ಮನ್ನು ಪರೀಕ್ಷಿಸಬೇಕೆಂತಲೂ **ತನಗೆ ಭಯಪಟ್ಟು** ನೀವು ಪಾಪವನ್ನು ಮಾಡದೆ ಇರಬೇಕೆಂತಲೂ ಬಂದಿದ್ದಾನೆ ಅಂದನು. **ಜನರು ದೂರ – ದಲ್ಲಿ ನಿಂತಿದ್ದರು.** . . .(ವಿಮೋ–೨೦:೧೮–೨೧).

ಈ ದಿನ ವಾಕ್ಯದಲ್ಲಿರುವದನ್ನು ಇಲ್ಲಿಗೆ ನಿಲ್ಲಿಸುತ್ತೇವೆ. ದೇವರ ಚಿತ್ತದಂತೆ ಮುಂದಿನ ಕಾರ್ಯಕ್ರಮದಲ್ಲಿ ಸೀನಾಯಿ ಬೆಟ್ಟದ ಮೇಲೆ ದೇವರು ಇಸ್ರಾಯೇಲ್ಯರಿಗೆ ಕೊಟ್ಟಂತ ಹತ್ತು ಆಜ್ಞೆಗಳಲ್ಲಿ ಪ್ರತಿಯೊಂದನ್ನೂ ನಾವು ನೋಡಿಕೊಳ್ಳಲಿದ್ದೇವೆ. ಆದರೆ ಈ ದಿನ ನಿಮಗೆ ವಿದಾಯ ಹೇಳುವದಕ್ಕಿಂತ ಮುಂಚೆ, ಈಗ ತಾನೇ ನಾವು ಓದಿದ್ದರ ಮೂಲಕವಾಗಿ ಏನೋ ಒಂದನ್ನು ಕಲಿಸುವದಕ್ಕೆ ದೇವರು ಇಚ್ಛೆಸಿದ್ದಾನೆ. ನಾವು ಇದನ್ನು ಅರ್ಥಮಾಡಿಕೊಳ್ಳಲೇಬೇಕು ಏನೆಂದರೆ: **ದೇವರು ಪರಿಶುದ್ಧನು ಮತ್ತು ನಾವು ನಮ್ಮ ಸ್ವಂತ ಪರಿಶ್ರಮಗಳ ಮೂಲಕವಾಗಿ ಎಂದಿಗೂ ಆತನ ಸಮೀಪಕ್ಕೆ ಹೋಗುವದಕ್ಕಾಗುವದಿಲ್ಲ.** ವಾಕ್ಯವು ನಮಗೆ ಕಲಿಸುವದೇನೆಂದರೆ: **"**ನರಜಾತಿಯೆಲ್ಲಾ **ಹುಲ್ಲಿನ** ಹಾಗಿದೆ**"** (೧ಪೇತ್ರ–೧:೨೪) ಮತ್ತು **"**ದೇವರು ದಹಿಸುವ ಅಗ್ನಿಯಾಗಿದ್ದಾನೆ**"** (ಇಬ್ರಿಯ–೧೨:೨೯). ಅರಣ್ಯದ ಬೆಂಕಿಯ ದಾರಿಯಲ್ಲಿರುವ ಹುಲ್ಲಿಗೆ ಏನಾಗುತ್ತದೆ ಎಂಬುದು ನಮಗೆಲ್ಲರಿಗೂ ಗೊತ್ತು!

ಈ ದಿನದ ನಮ್ಮ ಪಾಠದ ಪ್ರಾರಂಭದಲ್ಲಿ, ಇಸ್ರಾಯೇಲ್ಯರು ಮೋಶೆಗೆ **"**ಯೆಹೋವನು ಹೇಳಿದ್ದೆಲ್ಲವನ್ನೂ ನಾವು ಮಾಡುತ್ತೇವೆ**"** ಎಂದು ಹೇಗೆ ಉತ್ತರಿಸಿದರೆಂಬುದನ್ನು ನಾವು ಕೇಳಿಸಿಕೊಂಡಿದ್ದೇವೆ, **ಅವರು ದೇವರ ಪರಿಶುದ್ಧತೆಯನ್ನು ಗ್ರಹಿಸಿದವರಾಗಿರಲಿಲ್ಲ** ಆದ್ದರಿಂದ ಅವರು ಹೀಗೆ ಹೇಳಿದ್ದಾರೆ. ಹೇಗಾದರೂ ತಮ್ಮ ಸ್ವಂತ ಪರಿಶ್ರಮಗಳ ಮೂಲಕವಾಗಿ ದೇವರನ್ನು ಮೆಚ್ಚಿಸುವದಕ್ಕೆ ನಾವು ಶಕ್ತರಾಗುತ್ತೇವೆಂದು ಅವರು ಅಂದುಕೊಂಡಿದ್ದರು. ಹೇಗೂ, ಸೀನಾಯಿ ಬೆಟ್ಟದ ಮೇಲೆ ದೇವರು ಅವರಿಗೆ ಕಾಣಿಸಿಕೊಂಡ ನಂತರ, ಅವರ ಆಲೋಚನೆಗಳು ಪರಿಣಾಮಕಾರಕವಾಗಿ ಬದಲಾಗಿ ಹೋದವು! ಇಸ್ರಾಯೇಲ್ಯರು ಗುಡುಗು ಮಿಂಚುಗಳನ್ನೂ ಮತ್ತು ಬೆಟ್ಟ –ದಿಂದ ಹೊರಸೂಸುತ್ತಿದ್ದ ಹೊಗೆಯನ್ನೂ ಪ್ರತ್ಯಕ್ಷವಾಗಿ ಕಂಡು ಮತ್ತು ಹತ್ತು ಆಜ್ಞೆಗಳೊಂದಿಗೆ ಯೆಹೋವನ ಧ್ವನಿಯ ಪ್ರತಿಧ್ವನಿ –ಯನ್ನು ಕೇಳಿಸಿಕೊಂಡ **"ಅವರು ಭಯದಿಂದ ನಡುಗಿದರು."** ಅವರು ದೂರದಲ್ಲಿ ನಿಂತು ಮೋಶೆಗೆ, "ನೀನೇ ನಮ್ಮೊಂದಿಗೆ ಮಾತಾಡು ನಾವು ಕೇಳುತ್ತೇವೆ. ಆದರೆ ದೇವರು ನಮ್ಮೊಂದಿಗೆ ಮಾತಾಡಿದರೆ ನಾವು **ಸತ್ತೇ ಹೋಗುತ್ತೇವೆ!'** ಅಂದರು.

ಹೀಗೆ ಇಸ್ರಾಯೇಲ್ಯರು ದೇವರ ಪೂರ್ಣ ಪರಿಶುದ್ಧತೆಯನ್ನು ಮತ್ತು ಆತನನ್ನು ಸಮೀಪಿಸುವದಕ್ಕೆ ತಮ್ಮ ಪೂರ್ತಿ ಅಸಮರ್ಥತೆ – –ಯನ್ನು ಗ್ರಹಿಸಿಕೊಳ್ಳುವದಕ್ಕೆ ಆರಂಭಿಸಿದರು. ಸೀನಾಯಿ ಬೆಟ್ಟದ ಬುಡದಲ್ಲಿ ಅವರು ವಾಕ್ಯದ ಸತ್ಯವನ್ನು ಅರಿತುಕೊಂಡರು, ಏನೆಂದರೆ; **"**ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ**"** ಮತ್ತು **"**ದೇವರು ದಹಿಸುವ ಅಗ್ನಿಯಾಗಿದ್ದಾನೆ**"** (೧ಪೇತ್ರ–೧:೨೪; ಇಬ್ರಿಯ–೧೨:೨೯) ಒಬ್ಬ ಪರಿಶುದ್ಧನಾದ ದೇವರ ಪ್ರಸನ್ನತೆಯಲ್ಲಿ, ಇಸ್ರಾಯೇಲ್ಯರು ಪ್ರಾಮಾಣಿಕವಾಗಿ **"**ಏನೂ ತೊಂದರೆಯಿಲ್ಲ! ಯೆಹೋವನು ಹೇಳಿದ್ದನ್ನೆಲ್ಲಾ ನಾವು ಮಾಡುತ್ತೇವೆ!**"** ಎಂದು ಹೇಳುವದಕ್ಕೆ ಶಕ್ತರಾಗಿದ್ದರೋ? ಇಲ್ಲ ಅವರು ಶಕ್ತರಿರಲಿಲ್ಲ! ಈಗ ಇಸ್ರಾಯೇಲ್ಯರು ತಾವು **ಒಂದು ಸಮಸ್ಯೆಯಲ್ಲಿದ್ದೇವೆ; ತುಂಬಾ ಗಂಭೀರವಾದ ಸಮಸ್ಯೆ** ಎನ್ನುವದನ್ನು ಗ್ರಹಿಸಿಕೊಂಡರು. ಅವರು ದೇವರ ಪರಿಶುದ್ಧತೆಯನ್ನು ಮತ್ತು ಆತನ ಆಜ್ಞೆಗಳ ಕಟ್ಟುನಿಟ್ಟನ್ನು ಅರ್ಥಮಾಡಿಕೊಂಡರು; ಅವರು ದೇವರ ಸಂಪೂರ್ಣ ಧರ್ಮ ಶಾಸ್ತ್ರವನ್ನು ಕಾಪಾಡಿಕೊಳ್ಳುವದಕ್ಕೆ ತಮಗಿರುವ ಅಸಮರ್ಥತೆಯನ್ನೂ ಮತ್ತು ಅಪರಿಶುದ್ಧತೆಯನ್ನು ಅರ್ಥಮಾಡಿಕೊಂಡರು. ತಾವು **ಬೆಂಕಿಯ ದಾರಿಯಲ್ಲಿರುವ ಒಣಗಿದ ಹುಲ್ಲಿನ ಹಾಗಿದ್ದೇವೆ** ಎಂಬುದನ್ನು ಅವರು ತಿಳುಕೊಂಡರು!

ನಿಮ್ಮ ವಿಷಯವೇನು? ನೀವು ಕರ್ತನ ಪರಿಶುದ್ಧತೆಯನ್ನು ಗ್ರಹಿಸಿಕೊಂಡಿದ್ದೀರೋ? ದೇವರು ಮತ್ತು ಆತನ ಧರ್ಮಶಾಸ್ತ್ರವು ನೀತಿಯುಳ್ಳದ್ದೂ ಮತ್ತು ಸಂಪೂರ್ಣವಾದದ್ದು ಎಂಬುದನ್ನು ನೀವು ನೋಡಿದ್ದೀರೋ? ನಿಮ್ಮ ಹೃದಯ ಮತ್ತು ನಿಮ್ಮ ಕೆಲಸಗಳು

ದೇವರ ಮುಂದೆ ಅನೀತಿಯುಳ್ಳದ್ದೂ ಮತ್ತು ಅಸಂಪೂರ್ಣವುಳ್ಳದ್ದೆಂಬುದನ್ನು ನೀವು ಗ್ರಹಿಸಿದ್ದೀರೋ? ಇಲ್ಲವೇ ಇಸ್ರಾಯೇಲ್ಯರು ಅಂದುಕೊಂಡಂತೆ, **"ಏನೂ ತೊಂದರೆಯಿಲ್ಲ! ಯೆಹೋವನು ಹೇಳಿದ್ದೆಲ್ಲವನ್ನೂ ನಾವು ಮಾಡುತ್ತೇವೆ! ನಮ್ಮ ಒಳ್ಳೆಯ ಕೆಲಸಗಳಿಂದ ದೇವರ ಸಮೀಪಕ್ಕೆ ನಾವು ಎಳೆಯಲ್ಪಡುತ್ತೇವೆ!"** ಎಂದು ನೀವೂ ಅಂದುಕೊಳ್ಳುತ್ತೀರೋ? ನಿಜವಾಗಿಯೂ ಅಂತಹ ಆಲೋಚನೆಗಳು ದೇವರ ಆಲೋಚನೆಗಳೊಂದಿಗೆ ಹೋಲಿಕೆಯಾಗುವದಿಲ್ಲ. ಶುದ್ಧನೂ ಮತ್ತು ಪರಿಶುದ್ಧನೂ ಆಗಿರುವ ಒಬ್ಬನೊಂದಿಗೆ ಪಾಪದ ಹೊಲಸು ಮತ್ತು ಕಲೆಯೊಂದಿಗಿರುವವರು ವಾಸಮಾಡುವದಕ್ಕಾಗುತ್ತದೋ? ಇಲ್ಲ, ಹಾಗೆ ಆಗುವದಿಲ್ಲ. ಯಾವುದನ್ನಾದರೂ ಅರ್ಧ ಒಳ್ಳೆಯದು ಮತ್ತು ಅರ್ಧ ಕೆಟ್ಟದ್ದು ಎಂಬುದಾಗಿ ದೇವರು ಒಪ್ಪಿಕೊಳ್ಳುತ್ತಾನೋ? ಇಲ್ಲ, ಆತನು ಒಪ್ಪಿಕೊಳ್ಳಲಾರ ಮತ್ತು ಒಪ್ಪಿಕೊಳ್ಳು –ವದೂ ಇಲ್ಲ! ದೇವರು ಪರಿಶುದ್ಧನು ಮತ್ತು ಅಪವಿತ್ರವಾದದ್ದನ್ನು ಆತನು ಸಹಿಸಿಕೊಳ್ಳುವದಿಲ್ಲ! ಆತನು ಸಂಪೂರ್ಣತೆಯನ್ನು ಹಕ್ಕಿನಿಂದ ಕೇಳುತ್ತಾನೆ! **ನೀವು ಇದನ್ನು ಅರ್ಥಮಾಡಿಕೊಂಡಿದ್ದೀರೋ?** ಅಥವಾ ನ್ಯಾಯತೀರ್ಪಿನ ದಿನದಂದು ನಿಮ್ಮ ಒಳ್ಳೆಯ ಕೆಲಸಗಳು **ನಿಮ್ಮ ಕೆಟ್ಟ ಕೆಲಸಗಳನ್ನು** ಹೇಗಾದರೂ ತೊಳೆದು ಹಾಕುತ್ತವೆ ಎಂದು ನೀವು ನಿರೀಕ್ಷಿಸುತ್ತೀರೋ? ಒಂದು ವೇಳೆ ಹಾಗಾ –ಗುವದಾಗಿದ್ದರೆ **ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿಯಾಗಿರುತ್ತಿರಲಿಲ್ಲ!** ಉದಾಹರಣೆಗೆ, ಒಬ್ಬ ಕೊಲೆಗಾರನಿಗೆ, **"**ನೀನು ಕೊಲೆಮಾಡಿದ ಅಪರಾಧಿಯಾಗಿದ್ದೀ, ಹೇಗೂ ನೀನು ಈ ಹಿಂದೆ ಮಾಡಿರುವ ಒಳ್ಳೆಯ ಕೆಲಸಗಳ ಕಾರಣದಿಂದ ನಾನು ನಿನಗೆ ಶಿಕ್ಷೆ ವಿಧಿಸುವದಿಲ್ಲ. ನೀನು ಬಿಡುಗಡೆಯಾಗಿ ಹೋಗು**"** ಎಂದು ಹೇಳುವ ಒಬ್ಬ ನ್ಯಾಯಾಧೀಶನ ಕುರಿತಾಗಿ ಆಲೋಚಿಸೋಣ. ಇದನ್ನು ಮಾಡಿದ ನ್ಯಾಯಾಧೀಶನಿಗೆ ನಾವು ಏನು ಹೇಳಬಹುದು? ಈತನೊಬ್ಬ ಅನೀತಿವಂತ ಮತ್ತು ಅನ್ಯಾಯವುಳ್ಳ ನ್ಯಾಯಾಧೀಶ ಎಂದು ನಾವು ಹೇಳುತ್ತೇವೆ.

ಸ್ನೇಹಿತರೇ, **ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿ!** ಆತನು ಪಾಪವನ್ನು ಉದಾಸೀನ ಮಾಡುವದಿಲ್ಲ! ಲೋಕಕ್ಕೆ ನ್ಯಾಯ – ತೀರಿಸುವವನಾಗಿದ್ದ ದೇವರಾದ ಕರ್ತನು ಕೇವಲ ಯಾವುದು ನೀತಿಯುಳ್ಳದ್ದೋ ಅದನ್ನು ಮಾತ್ರ ಮಾಡುತ್ತಾನೆ! **ದೇವರ ನೀತಿವಂತಿ –ಕೆಯು ಪಾಪಕ್ಕಾಗಿ ಸಂಬಳವನ್ನು ಹಕ್ಕಿನಿಂದ ಕೇಳುತ್ತದೆ.** ಆ ಸಂಬಳವೇ **ಮರಣ** ಮತ್ತು **ದೇವರಿಂದ ನಿತ್ಯವಾದ ಬೇರ್ಪಡುವಿಕೆ!** ನಾವು ಮಾಡುವಂತಹ ಒಳ್ಳೆಯ ಕೆಲಸಗಳು ಪಾಪದ ನಮ್ಮ ಸಾಲವನ್ನು ಇಲ್ಲದಂತೆ ಮಾಡುವದಿಲ್ಲ. ನಮ್ಮ ಒಳ್ಳೆಯ ಕೆಲಸ – –ಗಳ ಕುರಿತಾಗಿ ವಾಕ್ಯವು ಹೀಗೆ ಹೇಳುತ್ತದೆ: **"**ನಾವೆಲ್ಲರೂ ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ; ನಾವೆಲ್ಲರೂ ತರಗೆಲೆಯೋಪಾದಿಯಲ್ಲಿ ಒಣಗಿ ಹೋಗಿದ್ದೇವೆ; ನಮ್ಮ ಅಪರಾಧಗಳು ಬಿರುಗಾಳಿಯ ಪ್ರಕಾರ ನಮ್ಮನ್ನು ಬಡಿದುಕೊಂಡು ಹೋಗಿವೆ.**"** (ಯೆಶಾಯ–೬೪:೬) **ದೇವರು ದಹಿಸುವ ಅಗ್ನಿಯಂತಿದ್ದಾನೆ** ಮತ್ತು ಆದಾಮನ ಮಕ್ಕಳ **ಒಳ್ಳೆಯ ಕಾರ್ಯಗಳು ಒಣಗಿದ ಹುಲ್ಲಿನ** ಹಾಗಿವೆ. ನಮ್ಮ ಸ್ವಂತ ನೀತಿವಂತಿಕೆಯಲ್ಲಿ, ದೇವರ ಪರಿಶುದ್ಧ ನ್ಯಾಯತೀರ್ಪಿನ ಬೆಂಕಿಯ ಮುಂದೆ ನಮಗೆ ನಿಲ್ಲುವದಕ್ಕಾಗುವದಿಲ್ಲ!

ಸೀನಾಯಿ ಬೆಟ್ಟದ ಮೇಲೆ ಇಳಿದು ಬಂದಂತ ದೇವರ ಬೆಂಕಿಯ ಸಮೀಪ ಹೋಗುವದಕ್ಕೆ ಇಸ್ರಾಯೇಲ್ಯರು ಧೈರ್ಯಗೊಂಡರೋ? ದೇವರು ಇದ್ದ ಬೆಟ್ಟದ ಮೇಲೆ ಹತ್ತುವದಕ್ಕೆ ಅವರು ಪ್ರಯತ್ನಿಸಿದರೋ? ಕುಲುಮೆಯಿಂದ ಬರುವ ಹೊಗೆಯಂತೆ ಹೊಗೆಯ ಅಲೆಯು ಬರುತ್ತಿದ್ದ ಬೆಟ್ಟದ ಸಮೀಪಕ್ಕೆ ಹಾಗೂ ಗುಡುಗು ಮತ್ತು ಮಿಂಚುಗಳೊಂದಿಗೆ ಕಂಪನಗೊಂಡು ಘರ್ಜಿಸುತ್ತಿದ್ದ ಬೆಟ್ಟದ ಸಮೀಪಕ್ಕೆ ಹೋಗುವದಕ್ಕೆ ಅವರು ಸಾಕಷ್ಟು ಧೈರ್ಯವುಳ್ಳವರಾಗಿದ್ದರೋ? ಇಲ್ಲ! ಅವರು ಅದರ ಹತ್ತಿರ ಹೋಗಲಿಲ್ಲ! ಅವರು **ಬಹು ದೂರದಲ್ಲಿ ನಿಂತುಕೊಂಡು ಭಯದಿಂದ ನಡುಗುತ್ತಿದ್ದರು!** ದೇವರಾದ ಕರ್ತನ ಪರಿಶುದ್ಧತೆ ಮತ್ತು ಆತನ ಗಂಭೀರವಾದ ಶಕ್ತಿಯ ಮುಂದೆ ಅವರು ಅನುಭವಿಸಿದ ಭಯದ ಕಾರಣದಿಂದ ಅವರಲ್ಲಿ ಯಾವನೊಬ್ಬನೂ ಬೆಟ್ಟದ ಹತ್ತಿರ ಹೋಗುವದಕ್ಕೆ ಧೈರ್ಯಗೊಳ್ಳ –ಲಿಲ್ಲ. ಆದರೆ ಆ ಭಯವು ಅವರಿಗೆ ತುಂಬಾ ಒಳ್ಳೆದಾಗಿತ್ತು ಯಾಕೆಂದರೆ ದೇವರ ವಾಕ್ಯವು ಹೀಗೆ ಹೇಳುತ್ತದೆ: **"ದೇವರ ಭಯವೇ ಜ್ಞಾನದ ಮೂಲ!"** (ಜ್ಞಾನೋಕ್ತಿ–೧:೭)

ಸ್ನೇಹಿತರೇ, ಈ ದಿನ ನಮ್ಮ ಸಮಯವು ಮುಗಿಯಿತು, ನಾವು ಈಗತಾನೇ ಕೇಳಿಸಿಕೊಂಡು ನೋಡಿದ್ದನ್ನು ನೀವು ಜ್ಞಾಪಿಸಿಕೊಳ್ಳು – –ವದಕ್ಕೆ ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ: ಅದೇನೆಂದರೆ, **ದೇವರು ಪರಿಶುದ್ಧನು** ಮತ್ತು ಪರಿಶುದ್ಧತೆಯ **ತನ್ನ ಮಟ್ಟಕ್ಕನುಸಾರ –ವಾಗಿ ಜನರಿಗೆ ತೀರ್ಪು ಮಾಡುತ್ತಾನೆ. ದೇವರು ಪರಿಶುದ್ಧನು** ಮತ್ತು ಆತನು ಪಾಪವನ್ನು ನಿರ್ಲಕ್ಷಿಸುವದಿಲ್ಲ. **ದೇವರು ಪರಿಶುದ್ಧನು** ಮತ್ತು ನಾವು ನಮ್ಮ ಸ್ವಂತ ಪರಿಶ್ರಮಗಳ ಅರ್ಹತೆಯ ಮೇಲೆ ಆತನ ಸಮೀಪಕ್ಕೆ ಹೋಗುವದಕ್ಕಾಗುವದಿಲ್ಲ!

ಮುಂದಿನ ಪಾಠದಲ್ಲಿ, ದೇವರ ಚಿತ್ತದಲ್ಲಿ, ಸೀನಾಯಿ ಬೆಟ್ಟದ ಮೇಲೆ ಇಸ್ರಾಯೇಲ್ಯರಿಗೆ ದೇವರು ಕೊಟ್ಟಂತ ಹತ್ತು ಆಜ್ಞೆಗಳನ್ನು ಪರೀಕ್ಷಿಸಿ ಅನುವಾದಿಸಿಕೊಳ್ಳಲಿದ್ದೇವೆ. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .

ಆತನ ವಾಕ್ಯದಿಂದ ಸತ್ಯದ ಈ ತಳಹದಿಯ ಕುರಿತಾಗಿ ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಿ ನಿಮಗೆ ತಿಳಿಹೇಳಲಿ:

**"ಯೆಹೋವನ ಭಯವೇ ಜ್ಞಾನದ ಮೂಲ!"** (ಜ್ಞಾನೋಕ್ತಿ–೧:೭)

[ಪಾಠ ೩೬: ಬೆಂಕಿಯ ಪರ್ವತ ಸೀನಾಯಿ] [ಸಾರಾಂಶಗಳ ಪಟ್ಟಿ] [ಪಾಠ ೩೮: ಆಜ್ಞೆಗಳ ಉದ್ದೇಶ]

ಪಾಠ ೩೭

# ಹತ್ತು ಪರಿಶುದ್ಧ ಆಜ್ಞೆಗಳು

ವಿಮೋಚನಕಾಂಡ ೨೦

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ಇಸ್ರಾಯೇಲ್ಯರಿಗೆ ತನ್ನ ಹತ್ತು ಆಜ್ಞೆಗಳನ್ನು ಕೊಡುವ ಕ್ರಮದಲ್ಲಿ ಗುಡುಗು ಮಿಂಚು ಮತ್ತು ಬೆಂಕಿಯೊಡನೆ ದೇವರಾದ ಕರ್ತನು ಸೀನಾಯಿ ಬೆಟ್ಟದ ಮೇಲೆ ಇಳಿದು ಬಂದದ್ದರಿಂದ **ಇಡೀ ಬೆಟ್ಟವು ಹೊಗೆಯ ದೊಡ್ಡ ಅಲೆಯಂತೆ** ಹೇಗೆ ತುಂಬಿಕೊಂಡಿತ್ತೆಂಬುದನ್ನು ನಮ್ಮ ಹಿಂದಿನ ಪಾಠದಲ್ಲಿ ನಾವು ನೋಡಿದ್ದೇವೆ. ಬೆಟ್ಟವನ್ನು ಮುಟ್ಟಬಾರದೆಂದು ಇಸ್ರಾಯೇಲ್ಯರನ್ನು ದೇವರು ಎಚ್ಚರಿಸಿದ್ದನು ಯಾಕೆಂದರೆ ಅವರು ಸಾಯಬಾರದೆಂದು ಆತನು ಅಂದುಕೊಂಡಿದ್ದನು. ಕೇವಲ ತಾನು ಎಷ್ಟು **ಪರಿಶುದ್ಧನೆಂಬುದನ್ನು** ಅವರಿಗೆ ಕಲಿಸುವದಕ್ಕೆ ದೇವರು ಬಯಸಿದ್ದನು!

ಈ ದಿನ ನಾವು ಹತ್ತು ಆಜ್ಞೆಗಳಲ್ಲಿ ಪ್ರತಿಯೊಂದನ್ನೂ ಹೆಚ್ಚು ಹತ್ತಿರದಿಂದ ನೋಡಿಕೊಳ್ಳುವದಕ್ಕೆ ಮತ್ತು ಅವುಗಳನ್ನು ನಮ್ಮ ಜೀವಿತ–ದೊಂದಿಗೆ ಹೋಲಿಸಿಕೊಂಡು ಒಬ್ಬ ಪರಿಶುದ್ಧನಾದ ದೇವರ ಮುಂದೆ ನಾವು ನಿಂತುಕೊಳ್ಳುವದು ಹೇಗೆ ಎಂಬುದನ್ನು ತಿಳಿದು ––ಕೊಳ್ಳುವದಕ್ಕೆ ಆಲೋಚಿಸಿದ್ದೇವೆ. ತೋರಾದಲ್ಲಿರುವ ವಿಮೋಚನಕಾಂಡ ಪುಸ್ತಕದ ಇಪ್ಪತ್ತನೆಯ ಅಧ್ಯಾಯವನ್ನು ನಾವು ಓದುತ್ತಿ–ದ್ದೇವೆ. ಬೆಂಕಿ ಮತ್ತು ಹೊಗೆಯ ಮಧ್ಯದಲ್ಲಿ ದೇವರು ಸೀನಾಯಿ ಬೆಟ್ಟದ ಮೇಲೆ ಇಳಿದು ಬಂದ ನಂತರ, ಈ ಮಾತುಗಳನ್ನು ಹೇಳಿದನು: **"**ನೀನು ದಾಸತ್ವದಲ್ಲಿದ್ದ ಐಗುಪ್ತದೊಳಗಿಂದ ' ನಿನ್ನನ್ನು ಬಿಡುಗಡೆ ಮಾಡಿದ ಯೆಹೋವನು ಎಂಬ ನಿನ್ನ ದೇವರು ನಾನೇ**"** (ವಿಮೋ–೨೦:೧,೨)

೧) **"ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು"** (ವಿಮೋ–೨೦:೩). ಇದು ಮೊದಲನೆಯ ಆಜ್ಞೆ. ದೇವರಾದ ಕರ್ತನು ಹೇಳಿದ್ದೇನೆಂದರೆ, **"**ನಾನಲ್ಲದೆ ನಿನಗೆ ಬೇರೆ ದೇವರುಗಳಿರಬಾರದು.**"** ಆತನೊಬ್ಬನೇ ನಮಗೆ ದೇವರಾಗಿರಬೇಕು. ಆತನು ತನ್ನ ಮಹಿಮೆಯನ್ನು ಬೇರೆಯದರೊಂದಿಗೆ ಹಂಚಿಕೊಳ್ಳುವದಿಲ್ಲ. ಸೃಷ್ಟಿಕರ್ತನಾದ ದೇವರೊಬ್ಬನನ್ನು ಮಾತ್ರ ನಾವು ಆರಾಧಿಸಬೇಕು. ಹೇಗೂ, ಈ ದೇಶದಲ್ಲಿ ಮತ್ತು ಇಡೀ ಪ್ರಪಂಚದಾದ್ಯಂತ ತೀರಾ ಇನ್ನೊಂದು ಸಂಗತಿಯನ್ನು ನಾವು ನೋಡುತ್ತಿದ್ದೇವೆ. ದೇವರೊ–ಬ್ಬನೇ ಯೋಗ್ಯನಾಗಿರತಕ್ಕ ಒಂದು ಸ್ಥಳದಲ್ಲಿ ಜನರು ಬೇರೆ ವ್ಯಕ್ತಿಯನ್ನು ಹೊಗಳುತ್ತಿರುತ್ತಾರೆ. ಕೇವಲ ಆತನ ಹೆಸರು ಮಾತ್ರವೇ ಪರಿಶುದ್ಧವೂ ಮತ್ತು ಗಂಭೀರವಾದದ್ದು ಆಗಿದೆ. ನಮ್ಮ ಪೂರ್ಣ ಭಕ್ತಿ ಮತ್ತು ಭರವಸಕ್ಕೆ ಆತನೊಬ್ಬನೇ ಅರ್ಹನಾಗಿದ್ದಾನೆ. ಅದಾಗ್ಯೂ, ಜನರು ಒಂದು ಸಮಸ್ಯೆ ಅಥವಾ ಒಂದು ತಡೆಯನ್ನು ಎದುರಿಸಿದಾಗ ಪ್ರತಿಯೊಂದನ್ನೂ ಸೃಷ್ಟಿಸಿ ಏನನ್ನಾದರೂ ಮಾಡಲು ಶಕ್ತನಾಗಿರುವ ದೇವರ ಕಡೆಗೆ ತಿರುಗಿಕೊಂಡು ಆತನನ್ನು ಬೇಡಿಕೊಳ್ಳಬೇಕೆನ್ನುವದು ಅವರ ಮೊದಲ ಆಲೋಚನೆ ಆಗಿರು–ವದಿಲ್ಲ ಬದಲಿಗೆ, ತಮ್ಮ ಹಾಗಿರುವ ಇತರ ಮಾನವರಲ್ಲಿ ತಮ್ಮ ಭರವಸೆಯನ್ನಿಟ್ಟು ದೇವರೊಬ್ಬನಿಗೆ ಸಂಬಂಧಪಟ್ಟ ಸ್ಥಾನವನ್ನು ಅವರಿಗೆ ಕೊಡುತ್ತಾರೆ. ಅದನ್ನು ಮಾಡಿದವರು ತಮ್ಮ ಮುಂದೆ ಇನ್ನೊಂದು ದೇವರನ್ನು ಹೊಂದಿರುತ್ತಾರೆ. ಇನ್ನೊಂದು ದೇವರನ್ನು ಹೊಂದಿರುವದು ಪಾಪ!

೨) ಎರಡನೆಯ ಆಜ್ಞೆಯಲ್ಲಿ ದೇವರು ಹೇಳಿದ್ದೇನೆಂದರೆ: **"ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. . .ಅವುಗಳಿಗೆ ಅಡ್ಡ – ಬೀಳಲೂಬಾರದು ಪೂಜೆ ಮಾಡಲೂಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬ–ನಿಗೆ ಸಲ್ಲಗೊಡಿಸುವದಿಲ್ಲ!"** (ವಿಮೋ–೨೦–೪,೫). ಈ ಆಜ್ಞೆಯಲ್ಲಿ, ನಾವು ವಿಗ್ರಹಗಳಿಂದ ದೂರವಿರಬೇಕೆಂದು ದೇವರು ನಮಗೆ ಹೇಳುತ್ತಿದ್ದಾನೆ. ಮನೆಗಳ ಗೂಡುಗಳಲ್ಲಿ ಅಥವಾ ಕೆಲವೊಂದು ಸ್ಥಳಗಳಲ್ಲಿ ಆರಾಧಿಸುವಂತಹ ಪ್ರತಿಮೆಯ ಮೂರ್ತಿಗಳಾಗುವದಕ್ಕೆ ವಿಗ್ರಹಗಳಿಗೆ ಮಿತಿಯಿರುವದಿಲ್ಲ. ಯಾವುದಾದರೂ ಒಂದು, ವಿಗ್ರಹವಾಗಿ ದೇವರಿಗೂ ಮತ್ತು ನಮಗೂ ಮಧ್ಯ ಬರುವಂತದ್ದಾಗಿರು–ತ್ತದೆ. ಕೆಲವು ಜನರಿಗೆ, ಫುಟ್ಬಾಲ್ ಸಂಸ್ಥೆಯೇ ಅವರ ದೇವರಾಗಿರುತ್ತದೆ, ಯಾಕೆಂದರೆ ದೇವರಿಗಿಂತಲೂ ಅವರಿಗೆ ಅದೇ ಹೆಚ್ಚು ಪ್ರಾಮುಖ್ಯವಾಗಿರುತ್ತದೆ, ಇನ್ನು ಕೆಲವರಿಗೆ ದೂರದರ್ಶನ ದೇವರಿಗೂ ಅವರಿಗೂ ಮಧ್ಯದಲ್ಲಿರುತ್ತದೆ. ದೇವರ ವಾಕ್ಯವನ್ನು ನೋಡಿ ಅದನ್ನು ಅರ್ಥಮಾಡಿಕೊಳ್ಳಬೇಕೆಂಬುದರ ವಿಷಯದಲ್ಲಿ ಅವರಿಗೆ ಚಿಂತನೆ ಇರುವದಿಲ್ಲ; ದೂರದರ್ಶನ ನೋಡುವದರ ಹೊರತಾಗಿ ಬೇರೆ ಯಾವುದನ್ನು ಮಾಡುವದಕ್ಕೂ ಅವರಿಗೆ ಸಮಯವಿರುವದಿಲ್ಲ. ನಂತರ ಇನ್ನು ಕೆಲವರಿದ್ದಾರೆ, ನಿಮಗೆ ಗೊತ್ತಿರುವಂತೆ, ದೇವರು ತಾನೇ ಅವರಿಗೆ ಸಾಕಾಗದೇ ಆಕರ್ಷಿಸುವಂತದ್ದನ್ನು ಧರಿಸಿಕೊಳ್ಳುತ್ತಾರೆ. ಇತರರಿಗೆ ಅವರ ಸಂಪತ್ತು ದೇವರನ್ನು ದೂರ–ವಿಟ್ಟಿರುತ್ತದೆ. ಅವರ ಜೀವಿತಗಳಲ್ಲಿ ಹಣಕ್ಕಿರುವಂತ ಮೊದಲ ಸ್ಥಾನ ದೇವರಿಗಿರುವದಿಲ್ಲ. ಹೆಚ್ಚು ಹಣವನ್ನು ಪಡೆಯುವದಕ್ಕೆ

ದೇವರನ್ನು ಮೆಚ್ಚಿಸುವಂತದ್ದರೊಂದಿಗೆ ಸಹ ಅವರು ಒಳಪಟ್ಟಿರುತ್ತಾರೆ. ಅಂತಹ ಜನರಿಗೆ ಹಣವೇ ದೇವರು. ದೇವರಿಗೆ ಬದಲಾಗಿ ಬರುವಂತಾದ್ದು ಯಾವುದಾದರೂ ಸರಿಯೇ ಅದು ಒಂದು ವಿಗ್ರಹವಾಗಿರುತ್ತದೆ.

೩) ಮೂರನೆಯ ಆಜ್ಞೆಯಲ್ಲಿ ದೇವರು ಹೇಳಿದ್ದೇನೆಂದರೆ: **"ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು. ಯೆಹೋವನು ತನ್ನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತುವವನನ್ನು ಶಿಕ್ಷಿಸದೇ ಬಿಡುವದಿಲ್ಲ."** (೨೦:೭) ನಿಜ –ವಾಗಿಯೂ, ತನ್ನ ಪರಿಶುದ್ಧವಾದ ಹೆಸರನ್ನು ವ್ಯರ್ಥವಾಗಿ ಉಪಯೋಗಿಸುವದನ್ನು ದೇವರು ಇಷ್ಟಪಡುವದಿಲ್ಲ. ಹೇಗೂ, ಬಹು –ಮಟ್ಟಿಗೆ ಪ್ರತಿದಿನ ನಾವು ಕೇಳಿಸಿಕೊಳ್ಳುವದೇನೆಂದರೆ, ಯಾರೋ ಒಬ್ಬರು ತಮ್ಮ ನೆರೆಯವರೊಂದಿಗೆ "ಇನ್ಶಾ ಅಲ್ಲಾ {ದೇವರ ಚಿತ್ತವಿದ್ದರೆ} ನಾನು ಇದನ್ನು ಅಥವಾ ಅದನ್ನು ಮಾಡುತ್ತೇನೆ, ಇಲ್ಲವೇ ನಾನು ಇಂತಿಂಥ ಸ್ಥಳಕ್ಕೆ ಹೋಗುತ್ತೇನೆ" ಎಂದು ಹೇಳು –ತ್ತಾರೆ, ಅದೇ ಸಮಯದಲ್ಲಿ ಅದನ್ನು ಮಾಡುವಂತ ಉದ್ದೇಶ ಅವರ ಹೃದಯದಲ್ಲಿರುವದಿಲ್ಲ. ದೇವರ ಚಿತ್ತವು ಅವರ ಮನಸ್ಸಿ –ನಿಂದ ಬಹಳ ದೂರದಲ್ಲಿರುತ್ತದೆ. ತನ್ನ ಸುಳ್ಳುಗಳನ್ನು ತನ್ನ ನೆರೆಯವರು ನಂಬುವದಕ್ಕೆ ಮಾತ್ರ ದೇವರ ಹೆಸರನ್ನು ಉಪಯೋಗಿ –ಸುತ್ತಾರೆ. ಇದು ಪಾಪ. ಇನ್ನು ಬೇರೆಯವರು ಹೇಳುವದೇನೆಂದರೆ, "ಬಿಲೇ {ದೇವರ ಮುಖಾಂತರ} ನಾನು ಇಂತಿಂಥದ್ದನ್ನು ಮಾಡುವದಿಲ್ಲ!" ಆ ಕೆಲಸವನ್ನು ತಾವು ಮಾಡಿದ್ದೇವೆಂಬುದನ್ನು ಅವರು ಸಂಪೂರ್ಣವಾಗಿ ತಿಳಿದಿರುತ್ತಾರೆ! ಇನ್ನು ಕೆಲವರು, "ನಾನು ಇದನ್ನಾಗಲೀ ಅದನ್ನಾಗಲೀ ಮಾಡುವದಿಲ್ಲವೆಂಬುದು ದೇವರಿಗೆ ಗೊತ್ತು" ಎಂದು ಹೇಳುತ್ತಾರೆ, ಆದರೆ ಅವರು ಬರೀ ಸುಳ್ಳುಗಾರರು. ಇವು ದೇವರ ಹೆಸರನ್ನು ತಪ್ಪಾಗಿ ಉಪಯೋಗಿಸುವಂತವುಗಳು. ದೇವರ ವಾಕ್ಯ ಹೇಳುವದೇನೆಂದರೆ: "ನಿಮ್ಮ ಮಾತು ಹೌದಾದರೆ ಹೌದು ಅಲ್ಲವಾದರೆ ಅಲ್ಲ ಎಂದಿರಲಿ. ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು." (ಮತ್ತಾಯ–೫:೩೭).

೪) ನಾಲ್ಕನೆಯ ಆಜ್ಞೆಯಲ್ಲಿ ದೇವರು ಇಸ್ರಾಯೇಲ್ಯರಿಗೆ ಹೇಳಿದ್ದೇನೆಂದರೆ: **"ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಆರು ದಿವಸಗಳಲ್ಲಿ ನೀನು ದುಡಿದು ನಿನ್ನ ಕೆಲಸವನ್ನೆಲ್ಲಾ ಮಾಡಬೇಕು. . . .ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ ಅವುಗಳಲ್ಲಿರುವ ಸಮಸ್ತವನ್ನೂ ನಿರ್ಮಾಣ ಮಾಡಿ ಏಳನೆಯ ದಿನದಲ್ಲಿ ವಿಶ್ರಮಿಸಿ –ಕೊಂಡನು."** (೨೦:೮–೧೧). ಆತನನ್ನು ಗೌರವಿಸುವದಕ್ಕಾಗಿ ಪ್ರತಿ ಏಳನೆಯ ದಿನದಲ್ಲಿ ಇಸ್ರಾಯೇಲ್ಯರು ವಿಶ್ರಮಿಸಿಕೊಳ್ಳಬೇಕೆಂದು ದೇವರು ಬಯಸಿದನು ಎಂಬುದನ್ನು ನಾವು ಇಲ್ಲಿ ನೋಡುತ್ತೇವೆ.

೫) ದೇವರು ಕೊಟ್ಟಂತ ಐದನೆಯ ಆಜ್ಞೆಯಲ್ಲಿ ಆತನು ಹೀಗೆ ಹೇಳಿದನು: **"ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು; ಸನ್ಮಾನಿಸಿ –ದರೆ ನಿನ್ನ ದೇವರಾದ ಯೆಹೋವನು ನಿನಗೆ ಅನುಗ್ರಹಿಸುವ ದೇಶದಲ್ಲಿ ನೀನು ಬಹುಕಾಲ ಇರುವಿ."** (೨೦:೧೨). ನಮ್ಮ ತಂದೆ ತಾಯಿಗಳು ತುಂಬಾ ವಿಶೇಷತೆಯುಳ್ಳವರಾಗಿದ್ದು ಗೌರವಕ್ಕೆ ಯೋಗ್ಯರಾಗಿದ್ದಾರೆಂಬುದನ್ನು ನಾವು ಇಲ್ಲಿ ಕಾಣುತ್ತೇವೆ. ಮತ್ತು ಅವರು ಅರ್ಹರಾಗಿರುವದರಿಂದ ನಾವು ಅವರಿಗೆ **ಗೌರವ** ಕೊಡಲೇಬೇಕು. ಹೇಗೂ, ಈಗಿನ ಜನಾಂಗದವರಲ್ಲಿ ನಾವು ಇದನ್ನು ಕಾಣುವ –ದಿಲ್ಲ. ತಂದೆ ತಾಯಿಗಳು ತಮ್ಮ ಮಕ್ಕಳಿಗೆ ಏನಾದರೂ ಹೇಳಿದರೆ ಹಿಂತಿರುಗಿಸಿ ಮಾತಾಡುವಂತ ಮಕ್ಕಳನ್ನು ನಾವು ಕಾಣುತ್ತೇವೆ. ಮತ್ತು ತಾತ್ಸಾರದಿಂದ ತಮ್ಮ ದಾರಿಯಲ್ಲಿಯೇ ಹೊರಟುಹೋಗುತ್ತಾರೆ. ಅವರು ತಮ್ಮ ತಂದೆ ತಾಯಿಗಳನ್ನು ಗೌರವಿಸುವದಿಲ್ಲ. ಕೇವಲ ಅವರನ್ನು ಸಿಟ್ಟಿಗೆಬ್ಬಿಸುತ್ತಾರೆ. ಹೇಗೂ, ಈ ರೀತಿಯಲ್ಲಿ ನಾವು ಜೀವಿಸಬೇಕೆಂದು ಐದನೆಯ ಆಜ್ಞೆಯಿಂದ ನಾವು ಕಲಿಯು –ವದಿಲ್ಲ. ದೇವರನ್ನು ಮೆಚ್ಚಿಸುವಂತೆ ಮತ್ತು ಆತನ ಚಿತ್ತವನ್ನು ಒಪ್ಪಿಕೊಳ್ಳುವಂತೆ ಪ್ರತಿಯೊಂದರಲ್ಲಿ ತಂದೆ ತಾಯಿಗಳಿಗೆ ವಿಧೇಯ –ರಾಗಿ ಅವರನ್ನು ಪ್ರೀತಿಸಿ ಗೌರವಿಸಬೇಕೆಂಬುದು ಮಕ್ಕಳ ವಿಷಯದಲ್ಲಿ ದೇವರಿಗಿರುವ ಚಿತ್ತವಾಗಿದೆ.

೬) ಆರನೆಯ ಆಜ್ಞೆಯಲ್ಲಿ ದೇವರು ಹೇಳಿದ್ದೇನೆಂದರೆ:**"ನರಹತ್ಯ ಮಾಡಬಾರದು"** (೨೦:೧೩). ಇಲ್ಲಿ ದೇವರು ಹೇಳುವದೇನೆಂದರೆ: ಒಬ್ಬ ಮನುಷ್ಯನನ್ನು ಕೊಂದವನು ದೇವರಿಗೆ ವಿರುದ್ಧವಾಗಿ ಪಾಪಮಾಡಿದವನಾಗಿದ್ದಾನೆ. ಯಾಕೆಂದರೆ ದೇವರು ಪ್ರತಿ ವ್ಯಕ್ತಿಗೆ ತನ್ನ ಜೀವ ಮತ್ತು ಆತ್ಮವನ್ನು ಕೊಟ್ಟವನಾಗಿದ್ದಾನೆ. ಒಬ್ಬ ಮನುಷ್ಯನನ್ನು ಕೊಲ್ಲುವದು ಅಂದರೆ ದೇವರನ್ನು ದ್ವೇಷಿಸಿದಂತೆ, ಯಾಕೆಂದರೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದ್ದಾನೆ. ಕೊಲೆಯು ಒಬ್ಬ ವ್ಯಕ್ತಿಯನ್ನು ಕೊಲ್ಲುವದಕ್ಕೆ ಮಾತ್ರ ಸೀಮಿತ –ವಾಗಿಲ್ಲ ಎಂಬುದನ್ನೂ ಸಹ ದೇವರ ವಾಕ್ಯ ನಮಗೆ ತೋರಿಸುತ್ತದೆ, ಯಾಕೆಂದರೆ ದೇವರ ವಾಕ್ಯ ಹೀಗೆ ಹೇಳುತ್ತದೆ: "ತನ್ನ ಸಹೋದರನನ್ನು ದ್ವೇಷಿಸುವವನು ಕೊಲೆಗಾರನಾಗಿದ್ದಾನೆ." (೧ಯೋಹಾನ–೩:೧೫). ಒಬ್ಬ ವ್ಯಕ್ತಿ ಏನು ಮಾಡಿದ್ದಾನೋ ಕೇವಲ ಅದಕ್ಕನುಸಾರವಾಗಿ ಮಾತ್ರ ದೇವರು ಅವನಿಗೆ ತೀರ್ಪುಮಾಡುವದಿಲ್ಲ ಆದರೆ ಅವನು ತನ್ನ ಉದ್ದೇಶಗಳಿಗನುಸಾರವಾಗಿ ಏನು ಮಾಡಬೇಕೆಂದು ಇಷ್ಟಪಟ್ಟಿದ್ದನೋ ಅದಕ್ಕನುಸಾರವಾಗಿ ಸಹ ತೀರ್ಪು ಮಾಡುತ್ತಾನೆಂಬುದನ್ನು ಅನೇಕರು ನಿರ್ಲಕ್ಷಿಸುತ್ತಾರೆ. ಅಂದಿ –ನಿಂದಲೂ ದೇವರು ಹೃದಯವನ್ನು ನೋಡುವವನಾಗಿದ್ದಾನೆ, ದ್ವೇಷ ಮತ್ತು ಕೊಲೆ ಎರಡೂ ಸಮಾನವಾಗಿ ಆತನ ದೃಷ್ಟಿಯಲ್ಲಿ ಪಾಪವಾಗಿದೆ.

೭) ಏಳನೆಯ ಆಜ್ಞೆಯಲ್ಲಿ ದೇವರು ಹೇಳುವದೇನೆಂದರೆ: **"ವ್ಯಭಿಚಾರ ಮಾಡಬಾರದು"** (೨೦:೧೪). ಮದುವೆ ಎಂಬುದು ಕರ್ತ –ನಿಂದ ಬಂದಿರುವ ವರ. ನಮಗೆ ಯಾವುದು ಉತ್ತಮವೆನ್ನುವದನ್ನು ದೇವರು ತಿಳಿದಿದ್ದಾನೆ. ಅದಕ್ಕಾಗಿಯೇ ಆತನು ಮನುಷ್ಯ –ನಿಗೆ ಒಬ್ಬ ಹೆಂಡತಿಯನ್ನು ಮದುವೆಯಾಗುವದಕ್ಕೆ ಕೊಟ್ಟ ನಂತರ, ಅವನು ತನ್ನ ಹೆಂಡತಿಗೆ ತಾನೇ ಸೀಮಿತವಾಗಿದ್ದು ಇತರ

ಯಾವುದೇ ಸ್ತ್ರೀಗಾಗಿ ಒಂದೇ ಒಂದು ಭೋಗದ ಆಶೆ ಹೊಂದುವದನ್ನು ತಿರಸ್ಕರಿಸಬೇಕೆಂದು ದೇವರು ಬಯಸುತ್ತಾನೆ. ದೇವರ ವಾಕ್ಯವು ಹೇಳುವದೇನೆಂದರೆ, "ಪುರುಷರು ಸಹ ಸ್ವಂತ ಶರೀರವನ್ನು ಪ್ರೀತಿಸಿಕೊಳ್ಳುವ ಪ್ರಕಾರ ತಮ್ಮ ಹೆಂಡತಿಯರನ್ನು ಪ್ರೀತಿಸ – –ಬೇಕು." (ಎಫೆಸ–೫:೨೮) ಮತ್ತು "ಹಾದರದ ಕಾರಣದಿಂದಲ್ಲದೆ ತನ್ನ ಹೆಂಡತಿಯನ್ನು ಬಿಟ್ಟು ಮತ್ತೊಬ್ಬಳನ್ನು ಮದುವೆಮಾಡಿ – –ಕೊಳ್ಳುವವನು ವ್ಯಭಿಚಾರ ಮಾಡುವವನಾಗುತ್ತಾನೆ." (ಮತ್ತಾಯ–೧೯:೯). ಜನರು ದೇವರ ಧರ್ಮಶಾಸ್ತ್ರಕ್ಕೆ ಅವಿಧೇಯರಾದಾಗ ಮತ್ತು ಅವರಿಗೆ ನಿಷೇಧಿಸಲ್ಪಟ್ಟಿದ್ದನ್ನು ಮಾಡಿದಾಗ ಅವರ ಕೆಲಸಗಳ ಪರಿಣಾಮಗಳನ್ನು ಅವರ ದೇಹಗಳಲ್ಲಿ ಅಗಾಗ್ಗೆ ಪಡೆದುಕೊಳ್ಳು –ತ್ತಾರೆ. ಅದಕ್ಕಾಗಿಯೇ ದೇವರಿಂದ ವಿಧಿಸಲ್ಪಟ್ಟ ವಿವಾಹದ ಮಿತಿಗಳ ಹೊರಗೆ ಲೈಂಗಿಕ ಸಂಬಂಧಗಳನ್ನು ಹೊಂದಿರುವಂತವರ ಮೇಲೆ ಅನೇಕ ಮರಣಕರವಾದ ರೋಗಗಳು ಬೀಳುತ್ತವೆ. ನೀವು ಇನ್ನೊಂದು ಸಂಗತಿಯನ್ನೂ ತಿಳಿದಿರಬೇಕು: ನಮ್ಮ ಶರೀರ – –ಗಳೊಂದಿಗೆ ನಾವು ಮಾಡುವಂತದ್ದಕ್ಕೆ ಮಾತ್ರ ವ್ಯಭಿಚಾರವು ಸೀಮಿತವಾಗಿಲ್ಲ, ಆದರೆ ನಮ್ಮ ಮನಸ್ಸಿನಲ್ಲಿರುವದನ್ನು ಸಹ ಇದು ಒಳಗೊಂಡಿದೆ. ಇದಕ್ಕೆ ಸಂಬಂಧಿಸಿದಂತೆ, ವಾಕ್ಯವು ಹೀಗೆ ಹೇಳುತ್ತದೆ: "ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿ ಮನುಷ್ಯನು ಆಗಲೇ ತನ್ನ ಮನಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು." (ಮತ್ತಾಯ–೫:೨೮).

೮) ಎಂಟನೆಯ ಆಜ್ಞೆಯಲ್ಲಿ ದೇವರು ಹೇಳಿದ್ದೇನೆಂದರೆ: **"ಕಳ್ಳತನ ಮಾಡಬಾರದು"** (೨೦:೧೫). ಈ ಆಜ್ಞೆಯು ಸ್ಪಷ್ಟವಾಗಿದೆ. ಹೇಗೂ ನೀವು ಇದನ್ನೂ ಸಹ ತಿಳಿದುಕೊಳ್ಳಬೇಕಾಗಿದೆ ಏನೆಂದರೆ, ದೇವರ ದೃಷ್ಟಿಯಲ್ಲಿ ನಮ್ಮನ್ನು ಯಾರು ತೀರ್ಪು ಮಾಡುತ್ತಾರೆ, ನಿಮಗೆ ಸಂಬಂಧಪಡದಿರುವ ಯಾವುದೋ ವಸ್ತುವನ್ನು ಅಥವಾ ಹಣವನ್ನು ತೆಗೆದುಕೊಳ್ಳುವದಕ್ಕೆ ಕಳ್ಳತನವು ಸೀಮಿತವಾಗಿಲ್ಲ. ಒಂದು ವೇಳೆ ನೀವು ಸುಮ್ಮನೆ ಇನ್ನೊಬ್ಬರ ವಸ್ತುವನ್ನು ತೆಗೆದುಕೊಳ್ಳುವದಕ್ಕೆ ಇಷ್ಟಪಟ್ಟು ಅದನ್ನು ತೆಗೆದುಕೊಳ್ಳದಿದ್ದಾಗ್ಯೂ ನಿಮ್ಮ ಹೃದಯದಲ್ಲಿ ನೀವು ಕಳ್ಳರೇ ಆಗಿರುತ್ತೀರಿ! ದೇವರು ಹೃದಯಗಳನ್ನು ನೋಡುವವನಾಗಿದ್ದಾನೆ. ಕಳ್ಳತನವು ಅದರ ಅನೇಕ ಪಕ್ಕ – –ಗಳನ್ನು ಹೊಂದಿದೆ. ಉದಾಹರಣೆಗೆ, ನಿಮ್ಮ ಯಜಮಾನನು ನಿಮಗೊಂದು ಕೆಲಸವನ್ನು ಕೊಟ್ಟು ಆ ಕೆಲಸಕ್ಕಾಗಿ ನಿಮಗೆ ಸಂಬಳ ಕೊಡುತ್ತೇನೆಂದು ಒಪ್ಪಂದ ಮಾಡಿಕೊಂಡಿರುತ್ತಾನೆ, ಆದರೆ ವಾಸ್ತವದಲ್ಲಿ ನೀವು ಕೇವಲ ಸಮಯವನ್ನು ವ್ಯರ್ಥಮಾಡಿರುತ್ತೀರಿ, ಹಾಗಾದರೆ ನೀವು ಕಳ್ಳತನ ಮಾಡಿದ್ದೀರಿ ಎಂದು ಇದರ ಅರ್ಥ! ಹೌದು, ನೀವು ನಿಮ್ಮ ಯಜಮಾನನ ಲಾಭವನ್ನು ಕದ್ದಿರುತ್ತೀರಿ. ಕಳ್ಳತನಕ್ಕಾಗಿ ಮತ್ತು ಇತರ ಪ್ರತಿಯೊಂದು ಪಾಪಕ್ಕೂ ಶಿಕ್ಷೆ ಏನು? ಸಾಯುವದು ಮತ್ತು ಎಂದಿಗೂ ಆರದ ನರಕದ ಬೆಂಕಿಯೊಳಗೆ ಹೋಗುವದು!

೯) ಒಂಭತ್ತನೆಯ ಆಜ್ಞೆಯು ಹೀಗೆ ಹೇಳುತ್ತದೆ: **"ಮತ್ತೊಬ್ಬನ ಮೇಲೆ ಸುಳ್ಳುಸಾಕ್ಷಿ ಹೇಳಬಾರದು."** (೨೦:೧೬). ಇದೂ ಸಹ ಸಂಪೂರ್ಣವಾಗಿ ಸ್ಪಷ್ಟವಾಗಿದೆ. ದೇವರಾದ ಕರ್ತನು ಸತ್ಯದ ದೇವರಾಗಿದ್ದಾನೆ ಮತ್ತು ಸುಳ್ಳಿನ ಜೊತೆಯಲ್ಲಿ ಯಾವುದನ್ನೂ ಮಾಡು –ವದಿಲ್ಲ! ಸಮಸ್ಯೆಗಳನ್ನು ತಡೆದು ಸಮಾಧಾನವನ್ನು ಕಾಪಾಡಿಕೊಳ್ಳುವದಕ್ಕೆ ಒಂದು ಚಿಕ್ಕ ಸುಳ್ಳನ್ನು ಹೇಳುವದು ಒಪ್ಪಬಹುದಾದದ್ದು ಎಂದು ಮನುಷ್ಯನು ಅಂದುಕೊಳ್ಳುತ್ತಾನೆ. ಆದರೆ ಸತ್ಯದ ದೇವರೊಂದಿಗೆ "ಚಿಕ್ಕ ಸುಳ್ಳು" ಎನ್ನುವಂತಾದ್ದು ಇಲ್ಲ! ದೇವರು ಹೀಗೆ ಹೇಳುತ್ತಾನೆ: ಸುಳ್ಳು ಹೇಳುವ ಪ್ರತಿಯೊಬ್ಬನು ಸೈತಾನನ ಸ್ವಭಾವವನ್ನು ಅನುಸರಿಸುತ್ತಾನೆ ಯಾಕೆಂದರೆ "ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ." (ಯೋಹಾನ–೮:೪೪). ನಮ್ಮ ಪೂರ್ವಿಕರಾದ ಆದಾಮ ಹವ್ವರಿಗೆ ಸೈತಾನನು ಸುಳ್ಳು ಹೇಳಿದನು ಮತ್ತು ತನ್ನ ಸುಳ್ಳುಗಳೊಂದಿಗೆ ಜನರನ್ನು ಮೋಸಗೊಳಿಸುವದನ್ನು ಅವನು ಮುಂದುವರಿಸಿದ್ದಾನೆ! ಸುಳ್ಳು ಹೇಳುವ ಯಾರಾದರೂ ಸೈತಾನನ ಹಾಗಿದ್ದಾರೆ.

೧೦) ಹತ್ತನೆಯ ಆಜ್ಞೆಯಲ್ಲಿ ದೇವರು ಹೀಗೆ ಹೇಳುತ್ತಾನೆ: **"ಮತ್ತೊಬ್ಬನ ಮನೆಯನ್ನು ಆಶಿಸಬಾರದು; ಮತ್ತೊಬ್ಬನ ಹೆಂಡತಿ ಗಂಡಾಳು ಹೆಣ್ಣಾಳು ಎತ್ತು ಕತ್ತೆ ಮುಂತಾದ ಯಾವುದನ್ನೂ ಆಶಿಸಬಾರದು."** (ವಿಮೋ–೨೦:೧೭). ಈ ಆಜ್ಞೆಯು ನಮಗೆ ಸ್ಪಷ್ಟವಾಗಿ ತೋರಿಸುವದೇನೆಂದರೆ, ಮನುಷ್ಯನ ಹೃದಯವು ಎಷ್ಟೊಂದು ಕೆಟ್ಟದ್ದು ಮತ್ತು ಕುಟಿಲವಾದದ್ದು ಎಂಬುದನ್ನು ದೇವರು ತಿಳಿದಿ – –ದ್ದಾನೆ. ಆದಾಮನ ಮಕ್ಕಳ ಹೃದಯಗಳಲ್ಲಿ ದುರಾಶೆ ಮತ್ತು ಲೋಭವು ಕಂಡುಬಂದಿತು. ನಮ್ಮ ಕೆಟ್ಟ ಹೃದಯಗಳು ಮತ್ತೊಬ್ಬ ವ್ಯಕ್ತಿಯ ಹೆಂಡತಿಯನ್ನು ಭೋಗಿಸುವದಕ್ಕೆ ಅಥವಾ ನಮ್ಮ ಬಳಿ ಇಲ್ಲದಿರುವ ಯಾವುದೋ ಒಂದನ್ನು ಬೇರೆಯವರು ಹೊಂದಿದ್ದರೆ ಅದರ ಮೇಲೆ ಕಣ್ಣು ಹಾಕುವದಕ್ಕೆ ಕಾರಣವಾಗುತ್ತದೆ. ಇದು ಪಾಪ, ಯಾಕೆಂದರೆ ದೇವರ ವಾಕ್ಯವು ಹೇಳುವ – –ದೇನೆಂದರೆ: "ನಾವು ಲೋಕದೊಳಕ್ಕೆ ಏನೂ ತಕ್ಕೊಂಡು ಬರಲಿಲ್ಲವಷ್ಟೆ; ಅದರೊಳಗಿಂದ ಏನೂ ತಕ್ಕೊಂಡು ಹೋಗಲಾರೆವು. ನಮಗೆ ಅನ್ನ ವಸ್ತ್ರಗಳಿದ್ದರೆ ಸಾಕು ಅದರಿಂದ ನಾವು ತೃಪ್ತರಾಗುತ್ತೇವೆ." (೧ತಿಮೊಥೆ–೬: ೭,೮).

ದೇವರು ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಒಪ್ಪಿಸಿಕೊಟ್ಟ ಹತ್ತು ಆಜ್ಞೆಗಳು ಇವೆ.

ಈ ದಿನ ನಾವು ನಮ್ಮ ಪಾಠವನ್ನು ಹೇಗೆ ಮುಕ್ತಾಯಗೊಳಿಸುವದು? ಬಹುಶ: ಒಂದು ಪ್ರಶ್ನೆಯೊಂದಿಗೆ. ನಾವು ಪ್ರತಿಯೊಬ್ಬರೂ ಉತ್ತರ ಕೊಡಲೇಬೇಕಾದ ಪ್ರಶ್ನೆ ಇಲ್ಲಿದೆ. "ನಾನು ಈ ಎಲ್ಲಾ ಹತ್ತು ಆಜ್ಞೆಗಳಿಗೆ ವಿಧೇಯನಾಗಿದ್ದೇನೋ?" ಪರಿಶುದ್ಧ ವಿಮೋಚಕನು ಲೋಕಕ್ಕೆ ಬಂದಾಗ ಈ ಹತ್ತು ಆಜ್ಞೆಗಳನ್ನು ಎರಡು ಭಾಗಗಳನ್ನಾಗಿ ಸಂಕ್ಷಿಪ್ತಗೊಳಿಸಿದನೆಂಬುದನ್ನು ನೀವು ಈಗಾಗಲೇ ತಿಳಿದಿದ್ದೀರಿ. ಆತನು ಹೇಳಿರುವದೇನೆಂದರೆ:

೧) **"ನಿನ್ನ ದೇವರಾದ ಕರ್ತನನ್ನು ನಿನ್ನ ಪೂರ್ಣಹೃದಯದಿಂದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಬುದ್ಧಿ –ಯಿಂದಲೂ ಪ್ರೀತಿಸಬೇಕು!** ಮತ್ತು

೨) **"ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಮತ್ತು ಪ್ರವಾದನಾ ಗ್ರಂಥಕ್ಕೂ ಆಧಾರವಾಗಿವೆ."** (ಮತ್ತಾಯ–೨೨: ೩೭, ೩೯, ೪೦)

ಈಗ, ದೇವರು ಮೋಶೆಗೆ ಕೊಟ್ಟಂತ ಹತ್ತು ಆಜ್ಞೆಗಳನ್ನು ನೀವು ಕಾಪಾಡಿಕೊಂಡಿದ್ದಿರೋ ಎನ್ನುವದನ್ನು ತಿಳಿದುಕೊಂಡು ನಿಮ್ಮನ್ನು ಪರೀಕ್ಷಿಸಿಕೊಳ್ಳುವದಕ್ಕೆ ನೀವು ಬಯಸಿದರೆ ನಿಮಗೆ ನೀವೇ ಎರಡು ಪ್ರಶ್ನೆಗಳನ್ನು ಕೇಳಿಕೊಳ್ಳಿರಿ:

**ಮೊದಲನೆಯದು: ದೇವರು ಇಷ್ಟಪಡುವದರೊಂದಿಗೆ** ನನ್ನ ಸಂಬಂಧವೇನು? **ನಾನು ದೇವರನ್ನು ನನ್ನ ಪೂರ್ಣಹೃದಯದಿಂದ ಪ್ರೀತಿಸುತ್ತಿದ್ದೇನೋ?**

**ಎರಡನೆಯದು: ಮನುಷ್ಯರು ಇಷ್ಟಪಡುವದರೊಂದಿಗೆ** ನನ್ನ ಸಂಬಂಧವೇನು? **ನಾನು ನನ್ನ ನೆರೆಯವನನ್ನು ನನ್ನಂತೆಯೇ ಪ್ರೀತಿಸುತ್ತಿದ್ದೇನೋ?**

**ದೇವರು ಇಷ್ಟಪಡುವದರೊಂದಿಗೆ** ನಿನ್ನ ಸಂಬಂಧವೇನು? ಇದಕ್ಕೆ ನಿನ್ನ ಹೃದಯವು ಪ್ರಾಮಾಣಿಕವಾಗಿ ಉತ್ತರಕೊಡಲಿ. ನಿನ್ನ ಪೂರ್ಣಬುದ್ಧಿಯಿಂದ ದೇವರನ್ನು ಪ್ರೀತಿಸುತ್ತಿದ್ದೀಯಾ? ನಿನ್ನ ಪೂರ್ಣಹೃದಯದಿಂದ ಆತನನ್ನು ಪ್ರೀತಿಸುತ್ತಿದ್ದೀಯಾ? ನಿನ್ನ ಜೀವಿತದಲ್ಲಿ ದೇವರೂ ಮತ್ತು ಆತನ ವಾಕ್ಯವು ಮೊದಲನೆಯ ಸ್ಥಾನವನ್ನು ಪಡೆದುಕೊಂಡಿವೆಯೋ?

**ಜನರೊಂದಿಗೆ** ನಿನ್ನ ಸಂಬಂಧ ಹೇಗಿದೆ? ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸುತ್ತಿದ್ದೀಯಾ? ಪ್ರತಿಯೊಂದರಲ್ಲಿಯೂ ನೀನೇ ಇತರರನ್ನು ಮುಂದಿಡುತ್ತಿದ್ದೀಯಾ? ನಿನ್ನ ಕುರಿತು ನೀನು ಚಿಂತಿಸಿಕೊಳ್ಳುವಂತೆ ನಿನ್ನ ಜೊತೆ ಮಾನವನ ಕುರಿತು ಚಿಂತಿಸು –ತ್ತಿದ್ದೀಯಾ? ಅವರು ನಿನಗೆ ಏನು ಮಾಡಬೇಕೆಂದು ಇಷ್ಟಪಡುತ್ತೀಯೋ ಅದನ್ನು ನೀನು ಅವರಿಗೆ ಮಾಡುತ್ತಿದ್ದೀಯಾ?

ಒಂದುವೇಳೆ ಈ ಎಲ್ಲಾ ಪ್ರಶ್ನೆಗಳಿಗೆ ನೀವು **"ಹೌದು"** ಎಂದು ಉತ್ತರಿಸದಿದ್ದರೆ, ದೇವರ ಮುಂದೆ ನೀವು ಒಬ್ಬ **ಅತಿಕ್ರಮಿಯಾಗಿರು –ತ್ತೀರಿ** ಎಂಬದನ್ನು ತಿಳಿದುಕೊಳ್ಳಿರಿ. ದೇವರ ನೀತಿಯ ನ್ಯಾಯತೀರ್ಪಿನ ನರಕ ಶಿಕ್ಷೆಯ ಹೊರತಾಗಿ ನಿಮ್ಮ ಸ್ವಂತ ಶ್ರಮಗಳಿಂದ ನೀವು ಯಾವುದನ್ನೂ ನಿರೀಕ್ಷಿಸುವದಕ್ಕಾಗುವದಿಲ್ಲ! ವಾಕ್ಯವು ಹೇಳುವದೇನೆಂದರೆ: "ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯ –ವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ" (ಪ್ರಕಟನೆ–೨೧:೮)

ದೇವರು ಪರಿಶುದ್ಧನು ಮತ್ತು ಅಪರಿಶುದ್ಧತೆಯನ್ನು ಸಹಿಸಿಕೊಳ್ಳದವನು ಆಗಿದ್ದಾನೆ. ದೇವರು ಸಂಪೂರ್ಣನು ಮತ್ತು ಸಂಪೂರ್ಣ –ತೆಯಿಲ್ಲದಿರುವ ಯಾವ ಕೆಲಸಗಳನ್ನು ಒಪ್ಪಿಕೊಳ್ಳದವನು ಆಗಿದ್ದಾನೆ. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: **"ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ."** (ಯಾಕೋಬ–೨:೧೦). "ಯಾವನಾದರೂ ಹತ್ತು ಆಜ್ಞೆಗಳನ್ನು ಕೈಕೊಳ್ಳುವದಕ್ಕೆ ಪ್ರಯತ್ನಿಸಿ ದೇವರ ದೃಷ್ಟಿಯಲ್ಲಿ "ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ!" "ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ!" (ರೋಮಾ–೩:೨೦,೨೩). ಹೌದು, ಪ್ರಿಯ ಸ್ನೇಹಿತರೇ, ದೇವರ ವಾಕ್ಯವು ಸ್ಪಷ್ಟವಾಗಿದೆ: **"ಎಲ್ಲರೂ** ಪಾಪ ಮಾಡಿದ್ದೇವೆ!" "ಧರ್ಮಗ್ರಂಥದೊಳಗೆ ಬರೆದಿರು –ವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ **ಪ್ರತಿಯೊಬ್ಬನು** ಶಾಪಗ್ರಸ್ಥನು." (ಗಲಾತ್ಯ–೩:೧೦)

ಬಹುಶ: ಯಾರಾದರೂ ಹೀಗೆ ಕೇಳಬಹುದು, ಸರಿ ಹಾಗಾದರೆ, ನಮ್ಮಲ್ಲಿ ಯಾರೊಬ್ಬರೂ ಇವುಗಳನ್ನು ಕೈಕೊಳ್ಳದಿದ್ದರೆ **ಈ ಹತ್ತು ಆಜ್ಞೆಗಳನ್ನು ದೇವರು ನಮಗೆ ಯಾಕೆ ಕೊಟ್ಟನು?** ಇದು ಒಂದು ಬಹಳ ಪ್ರಾಮುಖ್ಯವಾದ ಪ್ರಶ್ನೆ, ಇದಕ್ಕೆ ದೇವರು ಹೇಗೆ ಉತ್ತರಿಸಿದ್ದಾನೆಂಬುದನ್ನು ದೇವರ ಚಿತ್ತದಂತೆ ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ನಾವು ಕೇಳಿಸಿಕೊಳ್ಳಲಿದ್ದೇವೆ.

ದೇವರು ನಿಮ್ಮನ್ನು ಆಶೀರ್ವದಿಸಿ ಆತನ ವಾಕ್ಯದಲ್ಲಿರುವ ಈ ಹೇಳಿಕೆಯಲ್ಲಿ ಒಳಗೊಂಡಿರುವ ಪ್ರಾಮುಖ್ಯವಾದ ಸತ್ಯವನ್ನು ನಿಮಗೆ ಪ್ರಕಟಿಸಲಿ:

**"ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ."** (ಯಾಕೋಬ–೨:೧೦)

ಪಾಠ ೩೮

# ಆಜ್ಞೆಗಳ ಉದ್ದೇಶಗಳು

ವಿಮೋಚನ ಕಾಂಡ ೨೦

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಇಸ್ರಾಯೇಲ್ ಜನಾಂಗದವರಿಗೆ ತನ್ನ ಹತ್ತು ಪರಿಶುದ್ಧವಾದ ಆಜ್ಞೆಗಳನ್ನು ಕೊಡುವದಕ್ಕೆ ದೇವರು ಬೆಂಕಿ ಗುಡುಗು ಮತ್ತು ಮಿಂಚು –ಗಳಲ್ಲಿ ಸೀನಾಯಿ ಪರ್ವತದ ಮೇಲೆ ಹೇಗೆ ಇಳಿದು ಬಂದನು ಎಂಬುದನ್ನು ನಮ್ಮ ಹಿಂದಿನ ಎರಡು ಪಾಠಗಳಲ್ಲಿ ನಾವು ನೋಡಿ –ಕೊಂಡೆವು. ಮೊದಲನೆಯ ಆಜ್ಞೆಯಲ್ಲಿ ದೇವರು ಅವರಿಗೆ ಹೇಳಿದ್ದೇನೆಂದರೆ: **ನಾನಲ್ಲದೆ ನಿಮಗೆ ಬೇರೆ ದೇವರುಗಳು ಇರಬಾರದು.** ಎರಡನೆಯದರಲ್ಲಿ: **ನೀವು ವಿಗ್ರಹಗಳನ್ನು ಮಾಡಿಕೊಳ್ಳಬಾರದು.** ಮೂರನೆಯದು: **ನಿಮ್ಮ ದೇವರಾದ ಕರ್ತನ ಹೆಸರನ್ನು ಅಯೋಗ್ಯ –ಕಾರ್ಯಕ್ಕಾಗಿ ಎತ್ತಬಾರದು.** ನಾಲ್ಕನೆಯದು: **ಸಬ್ಬತ್ ದಿನವನ್ನು ದೇವರ ದಿನವೆಂದು ಆಚಣೆಗೆ ತರುವದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು.** ಐದನೆಯದು: **ನಿನ್ನ ತಂದೆ ತಾಯಿಗಳನ್ನು ಸನ್ಮಾನಿಸಬೇಕು.** ಆರನೆಯದು: **ನರಹತ್ಯ ಮಾಡಬಾರದು.** ಏಳನೆಯದು: **ವ್ಯಭಿಚಾರ ಮಾಡಬಾರದು.** ಎಂಟನೆಯದು: **ಕಳ್ಳತನ ಮಾಡಬಾರದು.** ಒಂಭತ್ತನೆಯದು: **ಸುಳ್ಳು ಹೇಳಬಾರದು.** ಹತ್ತನೆಯದು: **ಮತ್ತೊಬ್ಬನ ಮನೆಯನ್ನು ಆಶಿಸಬಾರದು.**

ದೇವರು ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಕೊಟ್ಟಂತ ಹತ್ತು ಆಜ್ಞೆಗಳು ಇವೇ. ದೇವರು ಅವರ ಮೇಲೆ ಭಾರವಾದ ಹೊರೆ –ಯನ್ನು ಹಾಕಿ ಅವರಿಗೆ ಹೇಳಿದ್ದೇನೆಂದರೆ: ಈ ಹತ್ತು ಆಜ್ಞೆಗಳಲ್ಲಿ **ಪ್ರತಿಯೊಂದನ್ನೂ ಸಂಪೂರ್ಣವಾಗಿ** ಕೈಕೊಳ್ಳುವಂತ ಯಾರೇ ಆಗಲೀ ಅವರು ಎಂದೆಂದಿಗೂ ನನ್ನೊಂದಿಗೆ ಜೀವಿಸುವದಕ್ಕೆ ಯೋಗ್ಯರಾಗಿರುತ್ತಾರೆ. ಹೇಗೂ, ಧರ್ಮಶಾಸ್ತ್ರವನ್ನು ಪೂರ್ತಿಯಾಗಿ ಕೈಕೊಂಡು ಕೇವಲ **ಒಂದು ವಿಷಯದಲ್ಲಿ** ತಪ್ಪಿತಸ್ಥರಾದವರು **ಎಲ್ಲವನ್ನೂ** ಮುರಿದವರಾಗಿದ್ದು **ಎಂದೆಂದಿಗೂ** ನನ್ನಿಂದ ಬೇರ್ಪಟ್ಟವ –ರಾಗುತ್ತಾರೆ!

ಸೀನಾಯಿ ಪರ್ವತದ ಮೇಲೆ ಇಸ್ರಾಯೇಲ್ ಜನರಿಗೆ ಬಿಡುಗಡೆ ಮಾಡಿದಂತಹ ದೇವರ ಪರಿಶುದ್ಧತೆಯ ಮಾರ್ಗವು ಇದೇ ಆಗಿತ್ತು. ಪ್ರತಿಯೊಂದರಲ್ಲಿ ಅವರು ತನಗೆ ವಿಧೇಯರಾಗಿರಬೇಕೆಂದು ದೇವರು ಅವರಿಗೆ ಆಜ್ಞಾಪಿಸಿದ್ದನು! ಹೌದು, **ಪ್ರತಿಯೊಂದರಲ್ಲಿ!** ಪಾಪಿ –ಗಳು ದೇವರ ಈ ಎಲ್ಲಾ ಆಜ್ಞೆಗಳನ್ನು ಕೈಕೊಳ್ಳುವದಕ್ಕೆ ಶಕ್ತರಾದರೋ? ಇಲ್ಲ, ಅವರು ಶಕ್ತರಾಗಿರಲಿಲ್ಲ! ಹಾಗಿದ್ದರೂ, ಪರಿಶುದ್ಧನಾದ ದೇವರು ನಿಶ್ಚಿತವಾಗಿ ಇದನ್ನೇ ಅಪೇಕ್ಷಿಸಿದ್ದನು! ಆದುದರಿಂದ ಈದಿನ ನಮ್ಮ ಮುಂದಿರುವ ಒಂದು **ದೊಡ್ಡ ಪ್ರಶ್ನೆ** ಯಾವುದೆಂದರೆ: **ತನ್ನ ಆಜ್ಞೆಗಳನ್ನು ಯಾರೊಬ್ಬರೂ ಕೈಕೊಳ್ಳುವದಿಲ್ಲವೆಂಬುದನ್ನು ತಿಳಿದಿದ್ದಾಗ್ಯೂ ದೇವರು ಇಸ್ರಾಯೇಲ್ಯರಿಗೆ ಯಾಕೆ ತನ್ನ ಹತ್ತು ಆಜ್ಞೆಗಳನ್ನು ಕೊಟ್ಟನು**? ಆದಾಮನ ಸಂತತಿಯವರ ಮೇಲೆ ದೇವರು ಯಾಕೆ ಅಂತಹ ಭಾರವಾದ ಹೊರೆಯನ್ನು ಹಾಕಿದನು?

**“**ಯೆಹೋವನು ಹೇಳಿದ್ದೆಲ್ಲವನ್ನೂ ನಾವು ಮಾಡುತ್ತೇವೆ!**”** ಎಂದು ಇಸ್ರಾಯೇಲ್ಯರು ಹೇಳಿದ್ದನ್ನು ಈಗಾಗಲೇ ನಾವು ನೋಡಿದ್ದೇವೆ. ಹೇಗೂ, ತಾನು ಅಪೇಕ್ಷಿಸಿದ್ದೆಲ್ಲವನ್ನೂ ಅವರು ಮಾಡುವದಿಲ್ಲವೆಂದು ದೇವರು ತಿಳಿದಿದ್ದನು. ದೇವರ ಚಿತ್ತವನ್ನು ಪೂರ್ಣವಾಗಿ ನೆರವೇರಿಸುವದಕ್ಕೆ ಬೇಕಾದ ಶಕ್ತಿಯ ಕೊರತೆ ತಮಗಿದೆ ಎಂಬುದನ್ನು ಇಸ್ರಾಯೇಲ್ಯರು ಅರ್ಥಮಾಡಿಕೊಂಡಿರಲಿಲ್ಲ. ದೇವರಿಂದ ಮತ್ತು ಆತನ ದೊಡ್ಡದಾದ ಮಹಿಮೆಯಿಂದ ತಾವು ಎಷ್ಟು ದೂರವಾಗಿದ್ದೇವೆಂಬುದನ್ನು ಅವರು ಗ್ರಹಿಸಿಕೊಂಡಿರಲಿಲ್ಲ. ಅದಕ್ಕಾಗಿಯೇ ದೇವರು ಅವರಿಗೆ ಸಂಪೂರ್ಣವಾದ ಹತ್ತು ಆಜ್ಞೆಗಳನ್ನು ಕೊಟ್ಟು: **ನಿಮಗೆ ಸಾಧ್ಯವಾದರೆ ಇವೆಲ್ಲವುಗಳನ್ನೂ ಕೈಕೊಳ್ಳಿರಿ! ಆದರೆ ಯಾರಾದರೂ ಒಂದು ವಿಷಯದಲ್ಲಿ ಸೋತು ಹೋದರೂ ನನ್ನಿಂದ ಎಂದೆಂದಿಗೂ ಬೇರ್ಪಡುತ್ತೀರಿ!** ಎಂದು ಹೇಳಿದನು.

**ತನ್ನನ್ನು ಮೆಚ್ಚಿಸುವದಕ್ಕೆ ಅವರಿಗಿದ್ದ ಅರ್ಹತೆಯ ಕೊರತೆಯನ್ನು ಇಸ್ರಾಯೇಲ್ ಜನಾಂಗದವರಿಗೆ ಈ ಕಷ್ಟಕರವಾದ ಆಜ್ಞೆಗಳ ಮೂಲಕ ವಾಗಿ ಪ್ರಕಟಪಡಿಸುವದಕ್ಕೆ ದೇವರು ಉದ್ದೇಶಿಸಿದ್ದನು.** ಇಸ್ರಾಯೇಲ್ಯರು ತನ್ನ ಎಲ್ಲಾ ಆಜ್ಞೆಗಳನ್ನು ಅನುಸರಿಸುವದಿಲ್ಲವೆಂಬುದನ್ನು ದೇವರು ತಿಳಿದಿದ್ದನು, ಆದರೆ ಅವರು ತಾವೇ ಇದನ್ನು ಇನ್ನೂ ಗ್ರಹಿಸಿಕೊಂಡಿರಲಿಲ್ಲ. ನಮ್ಮ ದಿನದಲ್ಲಿರುವ ಹಾಗೆ ಇಸ್ರಾಯೇಲ್ಯರು ಧಾರ್ಮಿಕ ರೀತಿಯ ಜನರಾಗಿದ್ದು, ನಾವು ಒಳ್ಳೆಯದನ್ನು ಮಾಡುವದಕ್ಕೆ ದೇವರು ಸುಮ್ಮನೆ ಇಷ್ಟಪಡುತ್ತಾನೆ ಮತ್ತು ನ್ಯಾಯತೀರ್ಪಿನ

ದಿನದಂದು ಒಂದುವೇಳೆ ನಮ್ಮ "ಒಳ್ಳೆಯ ಕೆಲಸಗಳು" ನಮ್ಮ "ಕೆಟ್ಟ ಕೆಲಸಗಳನ್ನು" ಮೀರಿಸಿದರೆ ಆಗ ದೇವರು ನಮಗೆ "ಬನ್ನಿ, ನನ್ನ ಪ್ರಸನ್ನತೆಯಲ್ಲಿ ಎಂದೆಂದಿಗೂ ವಾಸಿಸಿರಿ!" ಎಂದು ಹೇಳುತ್ತಾನೆ, ಎಂಬುದಾಗಿ ತಪ್ಪಾಗಿ ಆಲೋಚಿಸುವವರಾಗಿದ್ದರು. ಹೇಗೂ, ಹೀಗೆ ಆಲೋಚಿಸುವವರು ತಪ್ಪಾಗಿ ತಿಳಿದುಕೊಂಡು ವಾಕ್ಯಗಳನ್ನು ಅಥವಾ ದೇವರ ಪರಿಶುದ್ಧತೆಯನ್ನು ತಿಳಿಯದವರಾಗಿರುತ್ತಾರೆ. ದೇವರು ಸಂಪೂರ್ಣನು ಮತ್ತು ಒಂದು ತಪ್ಪನ್ನೂ ಸಹ ಉದಾಸೀನ ಮಾಡುವವನಲ್ಲ!

ಉದಾಹರಣೆಗಾಗಿ, ನಮ್ಮ ಪೂರ್ವಿಕನಾದ ಆದಾಮನು ದೇವರೆದುರಿನಲ್ಲಿ ಎಷ್ಟು ಪಾಪಗಳನ್ನು ಮಾಡಿ ಪರದೈಸಿನ ತೋಟದಿಂದ ಹೊರಹಾಕಲ್ಪಟ್ಟನು? ಹತ್ತು ಪಾಪಗಳಾ? ಅಥವಾ ನೂರು ಪಾಪಗಳಾ? ಬಹುಶ: ಸಾವಿರ ಇರಬಹುದು? ಇಲ್ಲ! ಕೇವಲ **ಒಂದು ಪಾಪದಿಂದ** ಆದಾಮನು ಹೊರಹಾಕಲ್ಪಟ್ಟನು!

ಒಂದು ಪಾಪದಿಂದ ಆದಾಮನು ದೇವರ ಮುಂದೆ ದೀರ್ಘಕಾಲದವರೆಗೆ ಸಂಪೂರ್ಣನಾಗಿರಲಿಲ್ಲ!

ಒಂದು ಪಾಪದಿಂದ ಅವನು ದೀರ್ಘಕಾಲದವರೆಗೆ ದೇವರ ಸಮೀಪಕ್ಕೆ ಬರಲಾಗಲಿಲ್ಲ!

ಒಂದು ಪಾಪದಿಂದ ಅವನು ಸಾಯಬೇಕಾಯಿತು!

ಒಂದು ಪಾಪದಿಂದ ಅವನು ತಾನೇ ನಿತ್ಯವಾದ ಬೆಂಕಿಯಲ್ಲಿ ಇರುವದನ್ನು ಸಂಪಾದಿಸಿಕೊಂಡನು!

ಹೌದು, ದೇವರು ಪರಿಶುದ್ಧನು ಮತ್ತು ಆತನು ಪಾಪವನ್ನು ಹಗುರವಾಗಿ ತೆಗೆದುಕೊಳ್ಳುವದಿಲ್ಲ! ಅದಕ್ಕೋಸ್ಕರವೇ ಆತನು ಇಸ್ರಾ – –ಯೇಲ್ಯರಿಗೆ ಹೀಗೆ ಹೇಳಿದ್ದಾನೆ: "ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು **ಎಲ್ಲಾ ವಿಷಯದಲ್ಲಿಯೂ** ಅಪರಾಧಿಯಾಗುತ್ತಾನೆ." (ಯಾಕೋಬ–೨:೧೦)

ಆದಕಾರಣ, ಒಂದು ವೇಳೆ ದೇವರ ಪರಿಶುದ್ಧತೆಯು ಈ ರೀತಿಯಾಗಿದ್ದರೆ, ನಾವು ತಿಳಿದುಕೊಳ್ಳಬೇಕಾದದ್ದೇನೆಂದರೆ: **"ಒಬ್ಬನೂ ಅವುಗಳನ್ನು ಸಂಪೂರ್ಣವಾಗಿ ಕೈಕೊಳ್ಳುವದಿಲ್ಲವೆಂದು ಆತನು ತಿಳಿದಿದ್ದರೂ ದೇವರು ಇಸ್ರಾಯೇಲ್ಯರಿಗೆ ಹತ್ತು ಆಜ್ಞೆಗಳನ್ನು ಯಾಕೆ ಕೊಟ್ಟನು**? ದೇವರ ಉತ್ತರವನ್ನು ಕೇಳಿಸಿಕೊಳ್ಳಿರಿ: "ಯಾಕಂದರೆ ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. [**ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ.**!]" (ರೋಮಾ–೩:೨೦) ಹಾಗಾದರೆ ಹತ್ತು ಆಜ್ಞೆಗಳ ಉದ್ದೇಶವೇನು? ಪಾಪವನ್ನು ಅಳಿಸಿಹಾಕುವದಾ? "ಇಲ್ಲ" ದೇವರು ಹೇಳುವದೇನೆಂದರೆ, **"ಪಾಪವನ್ನು ಪ್ರಕಟಪಡಿಸುವದೇ** ಆಜ್ಞೆಗಳ ಉದ್ದೇಶ!" {ಅಥವಾ ಇನ್ಐವಿ ಭಾಷಾಂತರದಲ್ಲಿ ಇದು; ನಮಗೆ "ಪಾಪದ ಪ್ರಜ್ಞೆಯನ್ನು" ಉಂಟು –ಮಾಡುವದಕ್ಕೆ}

ನಿಮಗೆ ಅರ್ಥವಾಯಿತಾ? ದೇವರು ತನ್ನ ಹತ್ತು ಆಜ್ಞೆಗಳನ್ನು ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಯಾಕೆ ಕೊಟ್ಟನು? ಅವರು ಪರದೈಸನ್ನು ಪ್ರವೇಶಿಸುವ ಹಕ್ಕನ್ನು ಸಂಪಾದಿಸಿಕೊಳ್ಳಲು ಶಕ್ತರಾಗುವಂತೆ ಅವರನ್ನು ಪೋಷಣೆ ಮಾಡುವದಕ್ಕೆ ಆ ಆಜ್ಞೆಗಳನ್ನು ಆತನು ಅವರಿಗೆ ಕೊಟ್ಟನೋ? ಇಲ್ಲ! ಅದು ಕಾರಣವಲ್ಲ ಯಾಕೆಂದರೆ ದೇವರು ಅವರಿಗೆ, "ನೀವು **ಇವೆಲ್ಲವನ್ನೂ** ಕಾಪಾಡಿಕೊಳ್ಳು –ವದಕ್ಕೆ ಸೋತು ಹೋದರೆ ನೀವು ಅಪರಾಧಿಗಳಾಗುತ್ತೀರಿ!" ಎಂದು ಹೇಳಿದ್ದಾನೆ. ಆದಾಮನ ಮಕ್ಕಳು ಆತನು **ಆಜ್ಞಾಪಿಸಿ – ದ್ದರಲ್ಲೆಲ್ಲಾ** ದೇವರಿಗೆ ವಿಧೇಯರಾಗಿದ್ದರೋ? ಕೊಳೆಯಾದ ಅಶುದ್ಧವಾದ ಮಡಿಕೆಯಿಂದ ಸ್ವಚ್ಛವಾದ ಮತ್ತು ಶುದ್ಧವಾದ ನೀರನ್ನು ಪಡೆಯುವದಕ್ಕಾಗುತ್ತದೋ? ಇದು ಅಸಾಧ್ಯ!.

ಹತ್ತು ಆಜ್ಞೆಗಳ ಉದ್ದೇಶಗಳೇನು? ವಾಕ್ಯವು ಹೇಳುವದೇನೆಂದರೆ: **"ಪಾಪವನ್ನು ಪ್ರಕಟಗೊಳಿಸುವದೇ** ಹತ್ತು ಆಜ್ಞೆಗಳ ಉದ್ದೇಶ!" ಆತನ ನ್ಯಾಯತೀರ್ಪಿನಿಂದ ನಮ್ಮನ್ನು ರಕ್ಷಿಸುವದಕ್ಕೆ ದೇವರು ಹತ್ತು ಆಜ್ಞೆಗಳನ್ನು ಕೊಡಲಿಲ್ಲ. ನಾವು **ಶಿಕ್ಷೆಗೊಳಗಾಗಿರುವ ಪಾಪಿಗಳು** ಮತ್ತು **ನಮಗೆ ಒಬ್ಬ ರಕ್ಷಕನ ಅಗತ್ಯವಿದೆ** ಎಂಬುದನ್ನು ನಮಗೆ ತೋರಿಸುವದಕ್ಕೆ ದೇವರು ಅವುಗಳನ್ನು ಕೊಟ್ಟಿದ್ದಾನೆ. ಈಗ ನಿಮ್ಮ ಮನಸ್ಸಿನಲ್ಲಿ ಇದು ಸ್ಪಷ್ಟವಾಯಿತೋ?

ಆಸ್ಪತ್ರೆಯಲ್ಲಿರುವ ಒಂದು ಎಕ್ಸ್‌ರೇ ಯಂತ್ರದ ಹಾಗೆ ಹತ್ತು ಆಜ್ಞೆಗಳು ಇವೆ. ಒಂದುವೇಳೆ ನನಗೆ ಕಾಯಿಲೆ ಬಂದರೆ ಅದು ಯಾಕೆ ಬಂತು ಎಂಬುದು ನನಗೆ ಗೊತ್ತಾಗುವದಿಲ್ಲ, ಬಹುಶ: ವೈದ್ಯರು ಕೆಲವು ಎಕ್ಸ್‌ರೇಗಳನ್ನು ತೆಗೆಯುವದರಿಂದ ಅದನ್ನು ಪರೀಕ್ಷಿಸುತ್ತಾರೆ. ಒಂದು ಎಕ್ಸ್‌ರೇ ಫೋಟೋದ ಉದ್ದೇಶವೇನು? **ನನ್ನ ದೇಹದ ಒಳಗೆ ಏನು ತೊಂದರೆಯಾಗಿದೆ ಎಂಬುದನ್ನು ಪ್ರಕಟಪಡಿಸುವದು** ಮಾತ್ರ ಇದರ ಉದ್ದೇವಾಗಿರುತ್ತದೆ. ಹಾಗೆಯೇ, ದೇವರು ಮೋಶೆಗೆ ಕೊಟ್ಟಂತಹ ಪರಿಶುದ್ಧವಾದ ಆಜ್ಞೆಗಳು ಸಹ ಆಸ್ಪತ್ರೆಯಲ್ಲಿರುವ ಎಕ್ಸ್‌ರೇ ಯಂತ್ರದ ರೀತಿಯಲ್ಲಿವೆ. **ನನ್ನ ಹೃದಯ ಮತ್ತು ಆತ್ಮದಲ್ಲಿರುವ ಪಾಪ ಅಂದರೆ ನನ್ನೊಳಗೆ ಯಾವುದು ತಪ್ಪಾಗಿದೆ ಎಂಬುದನ್ನು ಪ್ರಕಟಪಡಿಸುವದೇ** ಅವುಗಳ ಉದ್ದೇಶವಾಗಿದೆ. ನನ್ನೊಳಗಿರುವ ಪಾಪವನ್ನು ಈ ಹತ್ತು ಆಜ್ಞೆಗಳು ಹೇಗೆ ಪ್ರಕಟಪಡಿಸುತ್ತವೆ?

ಅವು ನನ್ನ ಪಾಪವನ್ನು ಹೀಗೆ ಪ್ರಕಟಪಡಿಸುತ್ತವೆ: ಒಂದು ವೇಳೆ ನಾನು ನನ್ನ ಸ್ವಭಾವವನ್ನು ದೇವರ ಪರಿಶುದ್ಧ ಧರ್ಮಶಾಸ್ತ್ರದೊಂದಿಗೆ ಹೋಲಿಸಿಕೊಂಡರೆ ನನ್ನ ಆಲೋಚನೆಗಳಲ್ಲಿ, ನನ್ನ ಮಾತುಗಳಲ್ಲಿ ಮತ್ತು ನನ್ನ ಕ್ರಿಯೆಗಳಲ್ಲಿ ನಾನು ದೇವರಿಂದ ಎಷ್ಟು ದೂರದಲ್ಲಿದ್ದೇನೆಂಬುದನ್ನು ನಾನು ನೋಡಿಕೊಳ್ಳಬಹುದು. **ನಾನು ದೇವರ ಧರ್ಮಶಾಸ್ತ್ರದ ಕಡೆಗೆ ನೋಡಿದ** ನಂತರ **ನನ್ನನ್ನೇ ನೋಡಿಕೊಂಡಾಗ** ನಾನು ದೇವರಿಗೆ ಮತ್ತು ಮನುಷ್ಯರಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆ ಮತ್ತು **ಒಬ್ಬ ಪರಿಶುದ್ಧ ದೇವರ ಶುದ್ಧವಾದ ಮತ್ತು ಮಲಿನಗೊಳ್ಳದಿರುವ ಪ್ರಸನ್ನತೆಯೊಳಗೆ ನಾನು ಸ್ವೀಕರಿಸಲ್ಪಡುವದಿಲ್ಲ ಎಂಬುದನ್ನು ನಾನು ತಿಳಿದುಕೊಳ್ಳುತ್ತೇನೆ.**

ಒಬ್ಬ ವ್ಯಕ್ತಿಯ ದೇಹದಲ್ಲಿ ಯಾವುದು ಸರಿಯಿಲ್ಲ ಎನ್ನುವದನ್ನು **ತೋರಿಸುವ** ಆಸ್ಪತ್ರೆಯಲ್ಲಿರುವ ಎಕ್ಸ್‌ರೇ ಯಂತ್ರದ ಹಾಗೆಯೇ ಒಬ್ಬ ವ್ಯಕ್ತಿಯ ಹೃದಯದಲ್ಲಿ ಯಾವುದು ಸರಿಯಿಲ್ಲ ಎನ್ನುವದನ್ನು **ತೋರಿಸುವದಕ್ಕೆ** ಹತ್ತು ಆಜ್ಞೆಗಳು ಉಪಯುಕ್ತವಾಗಿವೆ. ರೋಗದಲ್ಲಿರುವ ಒಬ್ಬ ವ್ಯಕ್ತಿಯನ್ನು ಎಕ್ಸ್‌ರೇ ಯಂತ್ರವು ಹೇಗೆ **ಗುಣಪಡಿಸುವದಕ್ಕಾಗುವದಿಲ್ಲವೋ** ಹಾಗೆಯೇ ಹತ್ತು ಅಜ್ಞೆಗಳು ಸಹ ಪಾಪದಿಂದ ತುಂಬಿರುವ ನನ್ನ ಹೃದಯವನ್ನು **ಗುಣಪಡಿಸುವದಿಲ್ಲ.** ಅದು ಆಗಬೇಕೆಂದರೆ ನಾನು ದೊಡ್ಡ ವೈದ್ಯನಾಗಿರುವ ದೇವರ ಬಳಿಗೆ ಹಿಂತಿರುಗಿ ಹೋಗಲೇಬೇಕು. ನನ್ನೊಳಗಿರುವ ಪಾಪದ ನಿಮಿತ್ತವಾಗಿ ಕಾಯುತ್ತಿರುವ ಶಿಕ್ಷೆ ಮತ್ತು ಮರಣದಿಂದ ನನ್ನನ್ನು ರಕ್ಷಿಸುವದಕ್ಕೆ ದೇವರು ಮಾತ್ರವೇ ಒಂದು ಯೋಜನೆಯನ್ನು ಹೊಂದಿದ್ದಾನೆ.

ಬಹುಶ; ಯಾರಾದರೊಬ್ಬರು, "ಒಂದು ನಿಮಿಷ ತಡೆಯಿರಿ! ನಾನು ಒಳ್ಳೆಯ ಮನುಷ್ಯ! ಕಳ್ಳತನ ಮೋಸ ಮತ್ತು ವ್ಯಭಿಚಾರ ಮಾಡುವವರಂತೆ ನಾನಲ್ಲ!" ಎಂದು ಹೇಳಬಹುದು. ಒಂದು ವೇಳೆ ಇದು ನಿಮ್ಮ ಮನೋಭಾವವಾಗಿದ್ದರೆ, ನೀವು ಇನ್ನೂ ದೇವರ ಪರಿಶುದ್ಧತೆಯ ಆಳವನ್ನು ನೋಡಿಲ್ಲ ಎನ್ನುವದು ಸ್ಪಷ್ಟವಾಗುತ್ತದೆ! ನೀವು ತಿಳಿಯಬೇಕಾದದ್ದೇನೆಂದರೆ, ನ್ಯಾಯತೀರ್ಪಿನ ದಿನದಂದು, **ಪಾಪಭರಿತ ನಿಮ್ಮ ನೆರೆಯವರೊಂದಿಗೆ ದೇವರು ನಿಮ್ಮನ್ನು ಹೋಲಿಸುವದಿಲ್ಲ.** "ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು **ಒಂದೇ ಒಂದರಲ್ಲಿ** ತಪ್ಪಿದರೆ ಅವನು **ಎಲ್ಲಾ ವಿಷಯದಲ್ಲಿಯೂ** ಅಪರಾಧಿಯಾಗುತ್ತಾನೆ" (ಯಾಕೋಬ–೨:೧೦) ಎಂದು ಹೇಳುವಂತಹ ತನ್ನ ಪರಿಶುದ್ಧವಾದ ಮತ್ತು **ಸಂಪೂರ್ಣವಾದ ಧರ್ಮಶಾಸ್ತ್ರದೊಂದಿಗೆ ಆತನು ನಿಮ್ಮನ್ನು ಹೋಲಿಸುತ್ತಾನೆ,** "ವ್ಯಭಿಚಾರ ಮಾಡಬಾರದು" "ಸುಳ್ಳು ಹೇಳಬಾರದು" ಎಂದು ದೇವರು ಹೇಳುತ್ತಾನೆ. ಹಾಗಾಗಿ, ನೀವು ವ್ಯಭಿಚಾರ ಮಾಡದಿದ್ದರೂ ಕೇವಲ ಒಂದು ಸುಳ್ಳು ಹೇಳಿದರೆ ಆಗ ನೀವು ಧರ್ಮಶಾಸ್ತ್ರವನ್ನೆಲ್ಲಾ ಉಲ್ಲಂಘಿಸಿದವರಾಗುತ್ತೀರಿ (ಯಾಕೋಬ–೨:೧೧ನ್ನು ನೋಡಿರಿ). ಮತ್ತು ಪರದೈಸಿನಲ್ಲಿರುವ ದೇವರ ಪ್ರಸನ್ನತೆಯೊಳಗೆ ನೀವು ಪ್ರವೇಶಿಸುವದಕ್ಕಾಗುವದಿಲ್ಲ, ಯಾಕೆಂದರೆ ವಾಕ್ಯವು ಹೀಗೆ ಹೇಳುತ್ತದೆ: **"ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ,** ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ." (ಪ್ರಕ–೨೧:೨೭). ನಮ್ಮ ಸ್ವಂತ ಶ್ರಮಗಳ ಮೂಲಕವಾಗಿ ನಾವು ದೇವರನ್ನು ಎಂದಿಗೂ ಮೆಚ್ಚಿಸುವದಕ್ಕಾಗುವದಿಲ್ಲ ಎನ್ನುವದೇ ಖಚಿತವಾದುದಾಗಿದೆ! ಅದಕ್ಕಾಗಿಯೇ ದೇವರ ವಾಕ್ಯವು ಹೇಳುವದೇನೆಂದರೆ:

"ನಾವೆಲ್ಲರೂ **ಅಶುದ್ಧನ** ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ **ಹೊಲೆಯ ಬಟ್ಟೆಯಂತಿವೆ."** (ಯೆಶಾಯ–೬೪:೬) "ಲೋಕವೆಲ್ಲಾ ದೇವರ ಮುಂದೆ ಅಪರಾಧಿಯಾಗಿ ನಿಲ್ಲುವದು. ನೀತಿವಂತನು ಇಲ್ಲ ಒಬ್ಬನಾದರೂ ಇಲ್ಲ. ಎಲ್ಲರೂ ದಾರಿ ತಪ್ಪಿ ನಡೆಯುತ್ತಾರೆ. ಒಳ್ಳೆಯದನ್ನು ಮಾಡುವವನು ಇಲ್ಲ ಒಬ್ಬನಾದರೂ ಇಲ್ಲ. ಹೆಚ್ಚು ಕಡಿಮೆ ಏನೂ ಇಲ್ಲ, ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ." (ರೋಮಾ–೩:೧೯,೧೦,೧೨,೨೨,೨೩).

ಈಗ ಹಾಗಾದರೆ, ಒಂದು ವೇಳೆ ಅದು ನಮ್ಮನ್ನು ತೀರ್ಪುಮಾಡುವ ಒಬ್ಬನ ಮುಂದೆ ನಾವು ಹೇಗಿದ್ದೇವೆ ಎನ್ನುವದಾದರೆ ಆತನ ಶಿಕ್ಷೆಯಿಂದ ನಾವು ಹೇಗೆ ತಪ್ಪಿಸಿಕೊಳ್ಳುತ್ತೇವೆ? ರಕ್ಷಿಸಲ್ಪಡುವದಕ್ಕೆ ನಾವು ಏನು ಮಾಡಬೇಕು? ನಾವು ನಿರೀಕ್ಷೆಯಿಲ್ಲದವರಾಗಿದ್ದೇವೋ? ನಮ್ಮ ಸ್ವಂತ ಶ್ರಮಗಳ ಆಧಾರದ ಮೇಲೆ ನಾವು ನಿರೀಕ್ಷೆಯಿಲ್ಲದವರಾಗಿದ್ದೇವೆ. ಆದರೆ ದೇವರಿಗೆ ಕೃತಜ್ಞತೆಗಳು, ಪಾಪದ ಶಿಕ್ಷೆಯಿಂದ ಆದಾಮನ ಮಕ್ಕಳನ್ನು **ರಕ್ಷಿಸುವದಕ್ಕೆ** ಆತನು ಒಂದು **ಯೋಜನೆಯನ್ನು** ರಚಿಸಿದ್ದಾನೆ!

ತೋರಾದಲ್ಲಿರುವ ವಿಮೋಚನಕಾಂಡ ಪುಸ್ತಕದ ಇಪ್ಪತ್ತನೆಯ ಅಧ್ಯಾಯದಲ್ಲಿರುವದನ್ನು ಈಗ ಮುಂದುವರಿಸಿ, ಪರಿಶುದ್ಧವಾದ ಧರ್ಮಶಾಸ್ತ್ರವು ಇಸ್ರಾಯೇಲ್ಯರ ಮೇಲೆ ತಂದಿದ್ದಂತಹ ಶಾಪದಿಂದ ಅವರನ್ನು ಬಿಡುಗಡೆ ಮಾಡುವದಕ್ಕೆ ದೇವರು ಒದಗಿಸಿರುವ ದಾರಿಯನ್ನು ನೋಡಿಕೊಳ್ಳೋಣ. ದೇವರು ಇಸ್ರಾಯೇಲ್ಯರಿಗೆ ಹತ್ತು ಆಜ್ಞೆಗಳನ್ನು ಕೊಟ್ಟ ನಂತರ, ವಾಕ್ಯವು ಹೀಗೆ ಹೇಳುತ್ತದೆ:

"ಆ ಗುಡುಗು ಮಿಂಚುಗಳನ್ನೂ ತುತ್ತೂರಿ ಧ್ವನಿಯಾಗುತ್ತಿರುವದನ್ನೂ ಬೆಟ್ಟದಿಂದ ಹೊಗೆ ಹೊರಡುವದನ್ನೂ ಜನರೆಲ್ಲರು ನೋಡಿ ನಡುಗುತ್ತಾ ದೂರದಲ್ಲಿ ನಿಂತುಕೊಂಡರು. ಮೋಶೆಯೋ ದೇವರಿರುವ ಆ ಕಾರ್ಗತ್ತಲಿನ ಸಮೀಪಕ್ಕೆ ಸೇರಿದನು. ಯೆಹೋವನು ಮೋಶೆಗೆ ಹೀಗಂದನು – ನೀನು ಇಸ್ರಾಯೇಲ್ಯರಿಗೆ ಹೇಳಬೇಕಾದದ್ದೇನೆಂದರೆ –ನಾನು ಆಕಾಶದಿಂದ ನಿಮ್ಮ ಸಂಗಡ ಮಾತಾಡಿದ್ದನ್ನು ನೋಡಿದ್ದೀರಷ್ಟೆ. ಆದುದರಿಂದ ನೀವು ನನ್ನ **ಯಜ್ಞವೇದಿಯನ್ನು** ಮಣ್ಣಿನಿಂದ ಮಾಡಬೇಕು. ನೀವು ಸರ್ವಾಂಗ ಹೋಮಮಾಡುವಾಗಲೂ ಸಮಾಧಾನ ಯಜ್ಞಮಾಡುವಾಗಲೂ ನಿಮ್ಮ ಕುರಿದನಗಳನ್ನು ಅಂಥ ವೇದಿಯಲ್ಲಿಯೇ **ಸಮರ್ಪಿಸಬೇಕು. ನಾನು ನನ್ನ ಹೆಸರನ್ನು ನಿಮ್ಮ ನೆನಪಿಗೆ ಬರಮಾಡುವ ಎಲ್ಲಾ ಸ್ಥಳಗಳಲ್ಲಿಯೂ ನಿಮ್ಮ ಬಳಿಗೆ ಬಂದು ನಿಮ್ಮನ್ನು ಆಶೀರ್ವದಿಸುವೆನು."** (ವಿಮೋ–೨೦:೧೮, ೨೧,೨೨,೨೪).

ಹಾಗಾಗಿ, ದೇವರು ತನಗೆ ಸೂಚಿಸಿದ ಪ್ರತಿಯೊಂದನ್ನೂ ಮೋಶೆಯು ಒಂದು ಪುಸ್ತಕದಲ್ಲಿ ಬರೆದನು. ಅನಂತರ ಬೆಳಿಗ್ಗೆ ಮೋಶೆಯು ಎದ್ದು ದೇವರು ಆಜ್ಞಾಪಿಸಿದ್ದ ಹಾಗೆಯೇ ಸೀನಾಯಿ ಪರ್ವತದ ಬುಡದಲ್ಲಿ ಒಂದು ಯಜ್ಞವೇದಿಯನ್ನು ಕಟ್ಟಿದನು. ಮೋಶೆಯು ಇದನ್ನು ಕಟ್ಟಿ ಮುಗಿಸಿದಾಗ, ಕೆಲವು ಹೋರಿಗಳನ್ನು ಸರ್ವಾಂಗ ಯಜ್ಞಮಾಡಿ ಅದರ ರಕ್ತವನ್ನು ಬಟ್ಟಲುಗಳಲ್ಲಿ ಶೇಖ –ರಿಸಿ ಮಾಂಸವನ್ನು ವೇದಿಯ ಮೇಲೆ ಸಮರ್ಪಿಸಿರಿ ಎಂಬುದಾಗಿ ಕೆಲವು ಯೌವನಸ್ಥರಿಗೆ ಅಪ್ಪಣೆಕೊಟ್ಟನು. ನಂತರ ಮೋಶೆಯು ಹೋರಿಗಳ ರಕ್ತವನ್ನು ತೆಗೆದುಕೊಂಡು ವೇದಿಯ ಮೇಲೆ, ಹತ್ತು ಆಜ್ಞೆಗಳು ಬರೆಯಲ್ಪಟ್ಟಿದ್ದ ಪುಸ್ತಕದ ಮೇಲೆ ಮತ್ತು ಎಲ್ಲಾ ಗುಂಪಿನ ಮೇಲೆ ಚಿಮುಕಿಸಿದನು. ಮತ್ತು "ಈ ಗ್ರಂಥದಲ್ಲಿ ಹೇಳಿರುವ ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ ಸಂಗಡ ಮಾಡಿಕೊಂಡ **ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು** ಇದೇ ಅಂದನು." (ವಿಮೋ–೨೪:೪–೭)

ಹೀಗೆ ಮೋಶೆಯು ದೇವರು ಆಜ್ಞಾಪಿಸಿದ್ದ ಹಾಗೆಯೇ ವೇದಿಯನ್ನು ಕಟ್ಟಿ ಅದರ ಮೇಲೆ ಕೆಲವು ಪಶುಗಳನ್ನು ಯಜ್ಞಮಾಡಿ ರಕ್ತ – –ವನ್ನು ಇಸ್ರಾಯೇಲ್ ಜನರೆಲ್ಲರ ಮೇಲೆ ಚಿಮುಕಿಸಿದ್ದನ್ನು ನಾವು ನೋಡಿದೆವು. ಇದೆಲ್ಲವನ್ನು ಮಾಡಲು ಕಾರಣವೇನು? **"ರಕ್ತ –ಧಾರೆಯಿಲ್ಲದೆ ಪಾಪಪರಿಹಾರವಿಲ್ಲ"** (ಇಬ್ರಿಯ–೯:೨೨) ಎಂಬುದಾಗಿ ದೇವರು ಇಸ್ರಾಯೇಲ್ಯರ ಪೂರ್ವಜರಾದ ಆದಾಮ, ಹೇಬೇಲ, ನೋಹ, ಅಬ್ರಹಾಮ, ಇಸಾಕ ಮತ್ತು ಯಾಕೋಬರಿಗೆ ಕಲಿಸಿದ್ದನ್ನು ಇಸ್ರಾಯೇಲ್ಯರಿಗೆ ಜ್ಞಾಪಿಸುವದಕ್ಕೆ ದೇವರು ಇಚ್ಛಿಸಿ – –ದನು. ದೇವರ ಸಮೀಪಕ್ಕೆ ಬರುವದಕ್ಕೆ ಇಷ್ಟಪಡುವ ಪ್ರತಿಯೊಬ್ಬರೂ ನಿಷ್ಕಳಂಕವಾದ ಯಜ್ಞಗಳ ಸಂಪೂರ್ಣತೆಯಲ್ಲಿ ಆತನ ಸಮೀಪಕ್ಕೆ ಬರಬೇಕಾಗಿತ್ತು.

ದೇವರು ಯಾಕೆ ಆ ಪಶುಗಳ ಯಜ್ಞವನ್ನು ಮಾಡುವಂತೆ ಆಜ್ಞಾಪಿಸಿದನು? ಯಾಕೆಂದರೆ ಆತನು ನೀತಿವಂತನು, ಮತ್ತು ಒಂದು ಚಿಕ್ಕದಾದ ಪಾಪಗಳ **ದಂಡನೆಯು** ಸಹ ಮರಣ ಮತ್ತು ನಿತ್ಯವಾದ ಶಿಕ್ಷೆಯಾಗಿರುವ ದೇವರಿಂದ ಮತ್ತು ಆತನ ಮಹಿಮೆಯಿಂದ ದೂರವಾಗುವಿಕೆ ಎಂದು ಆತನ ಪರಿಶುದ್ಧ ಧರ್ಮಶಾಸ್ತ್ರ ತಿಳಿಸುತ್ತದೆ. ಎಲ್ಲಿಯವರೆಗೆ ಇಸ್ರಾಯೇಲ್ಯರು ಆತನ ಪರಿಶುದ್ಧವಾದ ಆಜ್ಞೆ – –ಗಳನ್ನೆಲ್ಲಾ ಕಾಪಾಡಿಕೊಳ್ಳುವದಿಲ್ಲವೋ ಅಲ್ಲಿಯವರೆಗೆ ಅವರು ನಿಷ್ಕಳಂಕವಾದ ಯಜ್ಞವನ್ನು ದೇವರ ಬಳಿಗೆ ತರಬೇಕಾಗಿತ್ತು ಹೀಗೆ **ಕಳಂಕವಿಲ್ಲದ** ಬಲಿಯು **ಅಪರಾಧಿಗೆ** ಬದಲಾಗಿ ಕೊಡಲ್ಪಡುತ್ತಿತ್ತು. ಹೇಗೂ, ನಾವು ಈಗಾಗಲೇ ಕಲಿತಿರುವ ಹಾಗೆ, ಪಶುವಿನ ಯಜ್ಞಗಳು ಪಾಪವನ್ನು **ತೆಗೆದು** ಹಾಕುವಂತದ್ದಲ್ಲ, ದೇವರು ಈ ಲೋಕಕ್ಕೆ ಪರಿಶುದ್ಧ ವಿಮೋಚಕನನ್ನು ಕಳಿಸಿಕೊಡುವವರೆಗೆ ಅವು ಕೇವಲ ಮನುಷ್ಯನ ಪಾಪವನ್ನು ಮುಚ್ಚುತ್ತಿದ್ದವು ಅಷ್ಟೇ. ಪಾಪದ ಅಂತಿಮ ಯಜ್ಞದ ಹಾಗೆ ವಿಮೋಚಕನು ತನ್ನನ್ನೇ ಇಚ್ಛಾ – –ಪೂರ್ವಕವಾಗಿ ಸಮರ್ಪಿಸಿಕೊಳ್ಳುವದಕ್ಕಿದ್ದನು.

ಈ ರಕ್ಷಕನು ಬಂದು ನಮ್ಮ ಪಾಪಗಳಿಗಾಗಿ ಒಂದೇ ಸಾರಿ ತನ್ನನ್ನು ಸಮರ್ಪಿಸಿಕೊಂಡಿರುವದನ್ನು ತಿಳಿದುಕೊಂಡಿರುವದಕ್ಕೆ ನಮಗೆ ಈವದಿನ ಎಷ್ಟೊಂದು ಸಂತೋಷವಾಗುತ್ತದೆ. ಆತನ ಹೆಸರು ನಿಮಗೆ ಗೊತ್ತಾ? ಹೌದು, ಅದು **ಯೇಸು**. ಯೇಸು ಎಂಬ ಹೆಸರಿನ ಅರ್ಥವೇನೆಂದರೆ, **ಕರ್ತನು ರಕ್ಷಿಸುತ್ತಾನೆ.** ಯೇಸುವಿಗೆ ಭೂಲೋಕದ ತಂದೆ ಇಲ್ಲ. ಆತನು ಪರಲೋಕದಿಂದ ಬಂದವನು. ಆದಾಮನ ಸಂತಾನದವರಲ್ಲೆಲ್ಲಾ ಕಂಡುಬರುವ ಪಾಪದ ಸ್ವಭಾವವನ್ನು ಆತನು ಸ್ವಾಸ್ಥ್ಯವಾಗಿ ಹೊಂದಿದವನಲ್ಲ. ಯೇಸು ಸಂಪೂ – –ರ್ಣವಾಗಿ ಹತ್ತು ಆಜ್ಞೆಗಳಿಗೆ ವಿಧೇಯನಾಗಿದ್ದು ದೇವರ ನೀತಿಯ ಅವಶ್ಯಕತೆಗಳನ್ನು ನೆರವೇರಿಸಿದನು. ಯಾಕಂದರೆ ಆತನು ಪಾಪ –ವಿಲ್ಲದವನಾಗಿದ್ದನು, ಆತನನ್ನು ನಂಬುವ ಎಲ್ಲರ ಪಾಪವನ್ನು ತೆಗೆದುಹಾಕುವಂತಹ ಒಂದು ಯಜ್ಞದ ಹಾಗೆ ತನ್ನ ಜೀವಿತವನ್ನು ಕೊಡುವದಕ್ಕೆ ಆತನು ಅರ್ಹತೆಯುಳ್ಳವನಾಗಿದ್ದನು. ವಿಮೋಚಕನ ಸಂಪೂರ್ಣವಾದ ಯಜ್ಞದ ಆಧಾರದ ಮೇಲೆ ದೇವರು ನಿಮ್ಮನ್ನೂ ಮತ್ತು ನನ್ನನ್ನೂ ನೀತಿವಂತರೆಂದು ನಿರ್ಣಯಿಸುತ್ತಾನೆ. ಯಾಕೆಂದರೆ ಪಾಪವಿಲ್ಲದ ಒಬ್ಬನು ನಿಮ್ಮ ಮತ್ತು ನನ್ನ ಪಾಪ –ಕ್ಕಾಗಿ ದಂಡನೆಯನ್ನು ಅನುಭವಿಸಿದನು.

ಪ್ರಿಯ ಸ್ನೇಹಿತರೇ, ಈದಿನ ನಾವು ಯಾವುದನ್ನು ಅಧ್ಯಯನ ಮಾಡಿದೆವೋ ಅದರ ಆಧಾರದ ಮೇಲೆ ಎರಡು ಪ್ರಾಮುಖ್ಯವಾದ ಆಲೋಚನೆಗಳನ್ನು ನೆನಪು ಮಾಡಿಕೊಳ್ಳೋಣ.

೧) **ಹತ್ತು ಆಜ್ಞೆಗಳನ್ನು ಕೈಕೊಳ್ಳುವದರಿಂದ ಮಾತ್ರ ಯಾರೊಬ್ಬರೂ ತಮ್ಮನ್ನು ರಕ್ಷಿಸಿಕೊಳ್ಳುವದಕ್ಕಾಗುವದಿಲ್ಲ** ಎಂಬುದನ್ನು ಖಂಡಿತ – ವಾಗಿ ತಿಳಿದುಕೊಳ್ಳಬೇಕು. ಇದರ ಕುರಿತಾಗಿ ವಾಕ್ಯವು ಹೇಳುವದನ್ನು ಮತ್ತೆ ಕೇಳಿಸಿಕೊಳ್ಳಿರಿ: "ನೇಮನಿಷ್ಠೆಗಳನ್ನು ಆಧಾರ ಮಾಡಿ – ಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ!" (ಗಲಾತ್ಯ–೩:೧೦). "ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ." (ಯಾಕೋಬ–೨:೧೦). ಯಾರೊಬ್ಬನೂ ಹತ್ತು ಆಜ್ಞೆಗಳನ್ನು ಕೈಕೊಳ್ಳುವದಕ್ಕೆ ಪ್ರಯತ್ನಿಸುವದರಿಂದ ರಕ್ಷಿಸಲ್ಪಡುವದಿಲ್ಲ! ಆಜ್ಞೆಗಳ ಉದ್ದೇಶವೇನೆಂದರೆ ಪಾಪ –ವನ್ನು ಪ್ರಕಟಪಡಿಸುವದು.

೨) ನಮ್ಮ ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾದ ಎರಡನೆಯ ಆಲೋಚನೆ ಯಾವುದೆಂದರೆ, **ಪಾಪಿಗಳನ್ನು ರಕ್ಷಿಸುವದಕ್ಕೆ ದೇವರು ಒಬ್ಬನೇ ಒಂದು ಯೋಜನೆಯನ್ನು ಹೊಂದಿದವನಾಗಿದ್ದಾನೆ!** ವಾಕ್ಯವು ಹೇಳುವದನ್ನು ಕೇಳಿಸಿಕೊಳ್ಳಿರಿ: **"**ದೇವರು ಒಬ್ಬನೇ, ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ, ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ, ಆತನು ಎಲ್ಲರ ವಿಮೋಚನಾರ್ಥ – –ವಾಗಿ ತನ್ನನ್ನು ಒಪ್ಪಿಸಿಬಿಟ್ಟನು!**"** (೧ತಿಮೊಥೆ–೨: ೫, ೬). ನಿಜವಾಗಿಯೂ ಪಾಪಿಗಳನ್ನು ರಕ್ಷಿಸುವದಕ್ಕೆ ದೇವರು ಮಾತ್ರವೇ ಒಂದು ಯೋಜನೆಯನ್ನು ಹೊಂದಿದ್ದಾನೆ.

ಆದ್ದರಿಂದ ಸ್ನೇಹಿತರೇ ಕೇಳಿಸಿಕೊಳ್ಳಿರಿ, ಈ ಎರಡು ಆಲೋಚನೆಗಳೊಂದಿಗೆ ನಾವು ನಿಮ್ಮ ಬಿಟ್ಟು ಹೋಗುತ್ತಿದ್ದೇವೆ, ಏನೆಂದರೆ: ಹತ್ತು ಆಜ್ಞೆಗಳನ್ನು ಕೈಕೊಳ್ಳುವದಕ್ಕೆ ಪ್ರಯತ್ನಿಸುವದರಿಂದ **ಯಾರೊಬ್ಬರೂ** ರಕ್ಷಿಸಲ್ಪಡುವದಿಲ್ಲ! ಮತ್ತು ಪಾಪಿಗಳನ್ನು ರಕ್ಷಿಸುವದಕ್ಕೆ **ದೇವರು ಮಾತ್ರವೇ** ಒಂದು ಯೋಜನೆಯನ್ನು ಹೊಂದಿದವನಾಗಿದ್ದಾನೆ!

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . . .

ಈದಿನ ನಾವು ಯಾವುದನ್ನು ಅಧ್ಯಯನ ಮಾಡಿದೆವೋ ಅದರೊಳಗಿನ ಪರಿಜ್ಞಾನವನ್ನು ದೇವರು ನಿಮಗೆ ಕೊಟ್ಟು ನಿಮ್ಮನ್ನು ಆಶೀರ್ವದಿಸಲಿ, ಅದಕ್ಕಾಗಿ ಆತನ ವಾಕ್ಯ ಹೇಳುವದೇನೆಂದರೆ:

**"ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲ್ಲಿ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ."** (ರೋಮಾ–೩:೨೦).

[ಪಾಠ ೩೮: ಆಜ್ಞೆಗಳ ಉದ್ದೇಶ] [ಸಾರಾಂಶಗಳ ಪಟ್ಟಿ] [ಪಾಠ ೪೦: ದೇದರ್ಶನದ ಗುಡಾರ]

ಪಾಠ ೩೯

# ಒಡೆಯಲ್ಪಟ್ಟ ಆಜ್ಞೆಗಳು

ವಿಮೋಚನಕಾಂಡ ೩೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಮೂರು ಪಾಠಗಳಲ್ಲಿ, ದೇವರು ಬೆಂಕಿ ಗುಡುಗು ಮತ್ತು ಮಿಂಚುಗಳ ಮಧ್ಯದಲ್ಲಿ ಸೀನಾಯಿ ಪರ್ವತದಿಂದ ಇಸ್ರಾ–ಯೇಲ್ಯರೊಂದಿಗೆ ಹೇಗೆ ಮಾತಾಡಿದನೆಂಬುದನ್ನು ಮತ್ತು ಅವರಿಗೆ ತನ್ನ ಹತ್ತು **ಪವಿತ್ರ** ಆಜ್ಞೆಗಳನ್ನು ಕೊಟ್ಟಿದ್ದನ್ನು ನಾವು ನೋಡಿ ––ಕೊಂಡೆವು. ಸೀನಾಯಿ ಬೆಟ್ಟದ ತಳದಲ್ಲಿ ಒಂದು **ಯಜ್ಞವೇದಿಯನ್ನು** ಕಟ್ಟಿ ಅದರ ಮೇಲೆ ಕೆಲವು ಕಳಂಕವಿಲ್ಲದ ಪ್ರಾಣಿಗಳನ್ನು ಯಜ್ಞವಾಗಿ ಸಮರ್ಪಿಸಿರಿ ಎಂದು ದೇವರು ಇಸ್ರಾಯೇಲ್ ಜನರಿಗೆ ಆಜ್ಞಾಪಿಸಿದ್ದನ್ನು ಸಹ ನಾವು ನೋಡಿಕೊಂಡಿದ್ದೇವೆ.

ದೇವರು ಯಾಕೆ ಆ ಪ್ರಾಣಿಗಳ ಯಜ್ಞವನ್ನು ಸಮರ್ಪಿಸುವಂತೆ ಅಪ್ಪಣೆ ಕೊಟ್ಟನು? ದೇವರು ಅವುಗಳನ್ನು ಸಮರ್ಪಿಸುವಂತೆ ಯಾಕೆ ಹೇಳಿದನೆಂದರೆ ಆತನು ನೀತಿವಂತನು ಮತ್ತು ಆತನ ಪರಿಶುದ್ಧ ಧರ್ಮಶಾಸ್ತ್ರವು ಹೇಳುವದೇನೆಂದರೆ: **"**ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿದರೆ ಅವನು ಎಲ್ಲಾ ವಿಷಯದಲ್ಲಿಯೂ **ಅಪರಾಧಿಯಾಗುತ್ತಾನೆ."** **"**ಪಾಪ ಮಾಡುವ ಪ್ರತಿಯೊಬ್ಬನೂ ಅಧರ್ಮವನ್ನು ಮಾಡುವವನಾಗಿದ್ದಾನೆ. . . .ಪಾಪವು ಕೊಡುವ ಸಂಬಳ ಮರಣ.**"** (ಯಾಕೋಬ–೨:೧೦; ೧ಯೋಹಾನ–೩:೪; ರೋಮಾ–೬:೨೩). ಇಸ್ರಾಯೇಲ್ಯರು ದೇವರ ಎಲ್ಲಾ ಆಜ್ಞೆಗಳನ್ನು ಕೈಕೊಳ್ಳದಿರುವ ––ವರೆಗೂ ಅವರು ನಿಷ್ಕಳಂಕವಾದ ಯಜ್ಞಗಳನ್ನು ಸಮರ್ಪಿಸಬೇಕಾಗಿತ್ತು. ಅದಕ್ಕಾಗಿ ಕಳಂಕವಿಲ್ಲದ ಪಶುವು ಅಪರಾಧಿ ವ್ಯಕ್ತಿಯ ಒಂದು **ಬದಲಿಯಾಗಿ** ಸಾಯಬೇಕಾಗಿತ್ತು. ಪ್ರಾಣಿಯು ತನ್ನ ಜೀವವನ್ನು ದಂಡವಾಗಿ ಕೊಡುತ್ತಿತ್ತು ಆದ್ದರಿಂದ ಪಾಪಿಯು ಅದನ್ನು ಕೊಡಬೇಕಾಗಿರುತ್ತಿರಲಿಲ್ಲ. ಈ ರೀತಿಯಲ್ಲಿ ದೇವರು ತಾನು ನೀತಿವಂತನೂ ಮತ್ತು ಮನುಷ್ಯನ ಶ್ರಮಗಳ ಆಧಾರದ ಮೇಲೆ ತಾನು ಪಾಪವನ್ನು ಕ್ಷಮಿಸುವವನಲ್ಲ ಎಂಬುದನ್ನು ರುಜುವಾತುಪಡಿಸಿದನು. ಒಂದು ಸಂಪೂರ್ಣವಾದ ಯಜ್ಞದ ರಕ್ತದ ಆಧಾರದ ಮೇಲೆ ಮಾತ್ರವೇ ದೇವರು ಪಾಪವನ್ನು ಕ್ಷಮಿಸುವವನಾಗಿದ್ದನು.

ಈ ದಿನದ ನಮ್ಮ ಪಾಠವು **"ಒಡೆಯಲ್ಪಟ್ಟ ಆಜ್ಞೆಗಳು"** ಎಂಬುದಾಗಿ ಕರೆಯಲ್ಪಡುತ್ತದೆ. ಈ ವಿಷಯದಲ್ಲಿ ಪ್ರವಾದಿಯಾದ ಮೋಶೆ ಮತ್ತು ಇಸ್ರಾಯೇಲ್ ಜನಾಂಗದವರ ಕಥೆಯಲ್ಲಿ ಅವರು ಇನ್ನೂ ಮರುಭೂಮಿಯಲ್ಲಿ ಸೀನಾಯಿ ಪರ್ವತದ ಎದುರಿನಲ್ಲಿಯೇ ಬೀಡುಬಿಟ್ಟಿದ್ದಾರೆ. ಈಗ ನಾವು ತೋರಾಕ್ಕೆ ಹಿಂದಿರುಗಿ ಹೋಗಿ ದೇವರು ಅವರಿಗೆ ಹತ್ತು ಆಜ್ಞೆಗಳನ್ನು ಕೊಟ್ಟ ನಂತರ ಏನು ಸಂಭ–ವಿಸಿತೆಂಬುದನ್ನು ನೋಡಿಕೊಳ್ಳೋಣ. ವಿಮೋಚನಕಾಂಡ ಪುಸ್ತಕದ ಇಪ್ಪತ್ನಾಲ್ಕನೆಯ ಅಧ್ಯಾಯದಲ್ಲಿರುವದನ್ನು ನಾವು ಓದುತ್ತಿ ––ದ್ದೇವೆ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**"**ಯೆಹೋವನು ಮೋಶೆಗೆ – ನೀನು ಬೆಟ್ಟವನ್ನು ಹತ್ತಿ ಬಂದು **ನನ್ನ ಹತ್ತಿರದಲ್ಲೇ ಇರು;** ನೀನು ಆ ಧರ್ಮಶಾಸ್ತ್ರವನ್ನೂ ಆಜ್ಞೆಗಳನ್ನೂ ಜನರಿಗೆ ಬೋಧಿಸುವಂತೆ ನಾನು ಅವುಗಳನ್ನು ಬರೆದಿರುವ ಶಿಲಾಶಾಸನಗಳನ್ನು ನಿನಗೆ ಕೊಡುತ್ತೇನೆ ಎಂದು ಹೇಳಲಾಗಿ **ಮೋಶೆ ತನ್ನ ಶಿಷ್ಯನಾದ ಯೆಹೋಶುವನ ಸಮೇತ ಎದ್ದು ದೇವರ ಬೆಟ್ಟದ ಮೇಲಕ್ಕೆ ಹೋದನು.** ಮೊದಲು ಅವನು ಹಿರಿಯರಿಗೆ – ನಾವು ತಿರಿಗಿ ನಿಮ್ಮ ಬಳಿಗೆ ಬರುವ ತನಕ ಇಲ್ಲೇ ಕಾದುಕೊಂಡಿರ್ರಿ; ಆರೋನನೂ ಹೂರನೂ ನಿಮ್ಮ ಬಳಿಯಲ್ಲಿದ್ದಾರಷ್ಟೆ; ಯಾವನಿ––ಗಾದರೂ ವ್ಯಾಜ್ಯವಿದ್ದ ಪಕ್ಷಕ್ಕೆ ಅವರ ಹತ್ತಿರಕ್ಕೆ ಹೋಗಲಿ ಎಂದು ಹೇಳಿದನು. ಮೋಶೆ ಬೆಟ್ಟವನ್ನು ಹತ್ತಿದಾಗ ಮೇಘವು ಅದನ್ನು ಮುಚ್ಚಿಕೊಂಡಿತು. ಯೆಹೋವನ ತೇಜಸ್ಸು ಸೀನಾಯಿ ಬೆಟ್ಟದ ಮೇಲೆ ನಿಂತಿತು ಮತ್ತು ಆ ಮೇಘವು ಆರು ದಿನಗಳ ವರೆಗೂ ಬೆಟ್ಟವನ್ನು ಮುಚ್ಚಿಕೊಂಡಿತ್ತು. ಏಳನೆಯ ದಿನದಲ್ಲಿ ಯೆಹೋವನು ಮೇಘದೊಳಗಿಂದ ಕೂಗಿ ಮೋಶೆಯನ್ನು ಕರೆದನು. ಯೆಹೋ–ವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು. ಮೋಶೆ ಆ ಮೇಘ–ದೊಳಗೆ ಪ್ರವೇಶಿಸಿ ಬೆಟ್ಟವನ್ನೇರಿದನು. ಅವನು ಆ ಬೆಟ್ಟದಲ್ಲಿ **ನಾಲ್ವತ್ತು ದಿವಸ** ಇದ್ದನು.**"** (ವಿಮೋ–೨೪:೧೨–೧೮)

ಇಲ್ಲಿಗೆ ನಿಲ್ಲಿಸೋಣ. ಮುಂದಿನ ಅಧ್ಯಯನದಲ್ಲಿ ಕರ್ತನ ಚಿತ್ತವಿದ್ದರೆ, ದೇವರು ಸೀನಾಯಿ ಬೆಟ್ಟದ ಮೇಲೆ ಆ ನಾಲ್ವತ್ತು ದಿವಸಗಳ ಅವಧಿಯಲ್ಲಿ ಮೋಶೆಗೆ ಏನು ಹೇಳಿದನೆಂಬುದನ್ನು ನಾವು ಕಲಿತುಕೊಳ್ಳಲಿದ್ದೇವೆ. ಹೇಗೂ, ಮೋಶೆ ಹಿಂತಿರುಗಿ ಬರುವದನ್ನು ಕಾಯುತ್ತಾ ಬೆಟ್ಟದ ಬುಡದಲ್ಲಿ ಪಾಳೆಯದಲ್ಲಿದ್ದ ಇಸ್ರಾಯೇಲ್ಯರಿಗೆ ಏನಾಯಿತೆಂಬುದನ್ನು ಈ ದಿನ ನಾವು ನೋಡುವದಕ್ಕಿದ್ದೇವೆ.

ದೇವರಿಗಾಗಿ ತಾಳ್ಮೆಯಿಂದ ಕಾಯುವದು ಆದಾಮನ ಮಕ್ಕಳಿಗೆ ಸುಲಭದ ಕೆಲಸವಾಗಿರಲಿಲ್ಲ ಎಂಬುದು ನಮಗೆಲ್ಲರಿಗೂ ಗೊತ್ತು. ಬಿಟ್ಟುಕೊಡುವದು ನಮಗೆ ಹೆಚ್ಚು ಸುಲಭ; ಅಂದರೆ ದೇವರ ವಾಕ್ಯವನ್ನು ಮರೆತು ನಮ್ಮದೇ ಸ್ವಂತ ದಾರಿಯಲ್ಲಿ ಹೋಗುವದು. ಹಾಗಾಗಿ, ಇಸ್ರಾಯೇಲ್ಯರ ಕುರಿತಾಗಿ ಈ ದಿನ ನಾವು ಓದುವದಕ್ಕಿರುವಂತಾದ್ದು ನಮಗೆ ತುಂಬಾ ಪ್ರಾಮುಖ್ಯವಾದುದಾಗಿದೆ. ಈ ಭಯಂಕರವಾದ ಕಥೆಯ ಮೂಲಕ ನಮ್ಮನ್ನು **ಎಚ್ಚರಿಸುವದಕ್ಕೆ** ದೇವರು ಇಷ್ಟಪಡುತ್ತಾನೆ.

ಮೂವತ್ತೆರಡನೆಯ ಅಧ್ಯಾಯದಲ್ಲಿ ನಾವು ಹೀಗೆ ಓದುತ್ತೇವೆ:

"ಮೋಶೆ ಬೆಟ್ಟದಿಂದ ಇಳೀಯದೇ ತಡಮಾಡಿದ್ದನ್ನು ಇಸ್ರಾಯೇಲ್ಯರು ನೋಡಿ ಆರೋನನ ಬಳಿಗೆ ಕೂಡಿಬಂದು – ಏಳು; **ನಮ್ಮ ಮುಂದುಗಡೆಯಲ್ಲಿ ಹೋಗುವದಕ್ಕೆ ನಮಗೆ ದೇವರುಗಳನ್ನು ಮಾಡಿಕೊಡು;** ಐಗುಪ್ತದೇಶದಿಂದ ನಮ್ಮನ್ನು ಕರಕೊಂಡು ಬಂದ ಆ ಮೋಶೆಯು ಏನಾದನೋ ಗೊತ್ತಿಲ್ಲ ಎಂದು ಹೇಳಿದರು. ಅದಕ್ಕೆ ಆರೋನನು – ನಿಮ್ಮ ಹೆಂಗಸರೂ ಗಂಡು ಮಕ್ಕಳೂ ಹೆಣ್ಣು ಮಕ್ಕಳೂ ಕಿವಿಗೆ ಹಾಕಿಕೊಂಡಿರುವ ಚಿನ್ನದ ಮುರುವುಗಳನ್ನು ನೀವು ಕಿತ್ತು ನನಗೆ ಒಪ್ಪಿಸಿರಿ ಎಂದು ಹೇಳಲಾಗಿ ಜನರೆಲ್ಲರು ತಮ್ಮ ಕಿವಿಗಳಲ್ಲಿದ್ದ ಚಿನ್ನದ ಮುರುವುಗಳನ್ನು ಕಿತ್ತು ಆರೋನನ ಬಳಿಗೆ ತಂದುಕೊಟ್ಟರು. ಅವನು ಆ ಚಿನ್ನವನ್ನು ತನ್ನ ವಶಕ್ಕೆ ತೆಗೆದು –ಕೊಂಡು ಬಸವನ ಆಕಾರವನ್ನು ರೂಪಿಸಿ ಎರಕ ಹೊಯಿಸಲಾಗಿ ಅವರು – ಇಸ್ರಾಯೇಲ್ಯರೇ ನೋಡಿರಿ ಇದೇ ನಿಮ್ಮನ್ನು ಐಗುಪ್ತ ದೇಶದಿಂದ ಕರಕೊಂಡು ಬಂದ ದೇವರು ಎಂದು ಹೇಳಿದರು." (ವಿಮೋ–೩೨:೧–೪)

ಇಸ್ರಾಯೇಲ್ಯರು ಏನು ಮಾಡುತ್ತಿದ್ದಾರೆ ಎಂಬುದನ್ನು ನೀವು ನೋಡಿದಿರಾ? "ಯೆಹೋವನು ಹೇಳಿದ್ದೆಲ್ಲವನ್ನೂ ನಾವು ಮಾಡು – –ತ್ತೇವೆ" ಎಂದು ಅವರು ಹೇಳಿ ತುಂಬಾ ದಿವಸಗಳಾಗಿಲ್ಲ. ಸೀನಾಯಿ ಬೆಟ್ಟದ ಮೇಲೆ ಆಗತಾನೇ ದೇವರು ಅವರಿಗೆ ಕೊಟ್ಟಂತ ಮೊದಲನೆಯ ಮತ್ತು ಎರಡನೆಯ ಆಜ್ಞೆಗಳನ್ನು ಅವರು ಮುರಿದುಹಾಕುವದನ್ನು ನಾವು ನೋಡುತ್ತೇವೆ. ದೇವರು ಅವರಿಗೆ ಹೇಳಿದ್ದೇನೆಂದರೆ: "ನಾನಲ್ಲದೆ ನಿಮಗೆ ಬೇರೆ ದೇವರುಗಳು ಇರಬಾರದು!" "ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು!" ಆದರೆ ಇಸ್ರಾಯೇಲ್ಯರು ಏನು ಮಾಡಿದರು? ಅವರು ದೇವರನ್ನು ತಿರಸ್ಕರಿಸಿ ಐಗುಪ್ತದಲ್ಲಿ ತಾವು ನೋಡಿದ ವಿಗ್ರಹಗಳ ರೀತಿಯಲ್ಲಿ 'ಬಸವನ ರೂಪದಲ್ಲಿ ತಮಗಾಗಿ ಒಂದು ಮೂರ್ತಿಯನ್ನು ಮಾಡಿಕೊಂಡಿದ್ದಾರೆ.

ಇಸ್ರಾಯೇಲ್ಯರು ಅಷ್ಟು ಬೇಗ ದೇವರನ್ನು ಮತ್ತು ಆತನ ವಾಕ್ಯವನ್ನು ಯಾಕೆ ತಿರಸ್ಕರಿಸಿದರು? ಯಾಕೆಂದರೆ ಅವರು ತಮಗೆ **ನೋಡುವದಕ್ಕೆ ಮತ್ತು ಮುಟ್ಟುವದಕ್ಕೆ ಆಗುವಂತ ದೇವರನ್ನು** ಬಯಸಿದರು. ದೇವರ ವಾಕ್ಯವನ್ನು ಅಲಕ್ಷಿಸಿ ಮನುಷ್ಯರ ಸಂಪ್ರದಾಯ –ಗಳನ್ನು ಅನುಸರಿಸುವಂತ ಈ ದಿನದ ಜನರ ರೀತಿಯಲ್ಲಿ ಅವರಿದ್ದರು. ಯಾರೊಬ್ಬರೂ ನೋಡುವದಕ್ಕಾಗದಿರುವ **ದೇವರನ್ನು** ಅನುಸರಿಸುವದಕ್ಕಿಂತಲೂ ಕಣ್ಣಿಂದ ನೋಡುವಂತ **ಮನುಷ್ಯನನ್ನು** ಅನುಸರಿಸುವದು ಅವರಿಗೆ ಸುಲಭವೆನ್ನಿಸಿತ್ತು. ಅದಕ್ಕಾಗಿಯೇ ಆದಾಮನ ಮಕ್ಕಳಲ್ಲಿ ಹೆಚ್ಚಿನವರು **ದೇವರ ನಿಜವಾದ ವಾಕ್ಯಕ್ಕೆ** ಬದಲಿಯಾಗಿ ಬಲವಾದ ತಳಹದಿ ಇಲ್ಲದಿರುವಂತ **ಮನುಷ್ಯನ ಆಲೋಚನೆಗಳನ್ನು** ತೆಗೆದುಕೊಂಡರು.

ಬಂಗಾರದ ಬಸವನನ್ನು ಮಾಡಿಕೊಂಡ ನಂತರ ಇಸ್ರಾಯೇಲ್ಯರಿಗೆ ಏನಾಯಿತೆಂಬುದನ್ನು ಈಗ ನಾವು ನೋಡಿಕೊಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

"ಆರೋನನು ಅದನ್ನು ನೋಡಿ ಬಸವನಿಗೆ ಎದುರಾಗಿ ಯಜ್ಞವೇದಿಯನ್ನು ಕಟ್ಟಿಸಿ – ನಾಳೆ ಯೆಹೋವನಿಗೆ ಉತ್ಸವವಾಗಬೇಕು ಎಂದು ಪ್ರಕಟಿಸಿದನು. ಆದದರಿಂದ ಮರುದಿನದಲ್ಲಿ ಜನರು ಬೆಳಿಗ್ಗೆ ಎದ್ದು ಸರ್ವಾಂಗ ಹೋಮಗಳನ್ನೂ ಸಮಾಧಾನ ಯಜ್ಞ – –ಗಳನ್ನೂ ಸಮರ್ಪಿಸಿದರು. ಜನರು ಉಣ್ಣುವದಕ್ಕೂ ಕುಡಿಯುವದಕ್ಕೂ ಕೂತಕೊಂಡರು. ಆ ಮೇಲೆ ಎದ್ದು ಕುಣಿದಾಡಿದರು." (ವಿಮೋ–೩೨:೫, ೬)

ಆರೋನನು ಏನು ಮಾಡಿದನೆಂಬುದನ್ನು ಕೇಳಿಸಿಕೊಂಡಿರಾ? ವಾಕ್ಯಗಳು ನಮಗೆ ಹೇಳುವದೇನೆಂದರೆ: "ಅವನು ಬಸವನಿಗೆ ಎದು –ರಾಗಿ ಯಜ್ಞವೇದಿಯನ್ನು ಕಟ್ಟಿಸಿ, ನಾಳೆ ಯೆಹೋವನಿಗೆ ಉತ್ಸವವಾಗಬೇಕು ಎಂದು ಪ್ರಕಟಿಸಿದನು!" ಅದು ಸತ್ಯವೋ? ಈ ರೀತಿಯಲ್ಲಿ ಇಸ್ರಾಯೇಲ್ಯರು ಕರ್ತನನ್ನು ಆರಾಧಿಸುತ್ತಿದ್ದರೋ? ಖಂಡಿತವಾಗಿಯೂ ಇಲ್ಲ! **ಅವರು ಸಂಘಟಿಸಿದ ಹಾಗೆ ಆರಾಧ– –ನೆಯ ಉತ್ಸವದ ಯಾವುದೇ ಭಾಗವನ್ನು ದೇವರು ಹೊಂದಿರಲಿಲ್ಲ.** ಈಗ ಅವರು ಮೊದಲನೆಯ ಮತ್ತು ಎರಡನೆಯ ಆಜ್ಞೆ – – ಯನ್ನು ಉಲ್ಲಂಘಿಸಿದ್ದು ಮಾತ್ರವಲ್ಲ ಆದರೆ "ನಿನ್ನ ದೇವರಾದ ಕರ್ತನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು" ಎಂಬ ಮೂರನೆಯ ಆಜ್ಞೆಯನ್ನೂ ಸಹ ಉಲ್ಲಂಘಿಸಿದರು. "ಕರ್ತನಾದ ದೇವರು! ದೇವರು, ದೇವರು, ದೇವರು!" ಎನ್ನುವದು ಮಾತ್ರ ಅವರ ಬಾಯಲ್ಲಿತ್ತು, ಆದರೆ ಅವರ ಹೃದಯಗಳು ಆತನಿಂದ ದೂರದಲ್ಲಿದ್ದವು. ಅವರ ಆರಾದನೆಯು ವ್ಯರ್ಥವಾಗಿತ್ತು. ದೇವರ ಕುರಿತಾದ ಅವರ ಮಾತುಗಳು ನಿಷ್ಪ್ರಯೋಜಕವಾಗಿದ್ದವು. ಅವರ ಪ್ರಾರ್ಥನೆಗಳು ಕೇವಲ ಬಹಳವಾಗಿ ಅರ್ಥವಿಲ್ಲದ ತಲೆಬಾಗು – –ವಂತದ್ದಾಗಿದ್ದು ದೇವರಿಗೆ ಕೋಪವನ್ನುಂಟುಮಾಡುವಂತಾದ್ದು ಮಾತ್ರವಾಗಿತ್ತು!
ಈಗ ಕಥೆಯನ್ನು ಮುಗಿಸೋಣ:

“ಹೀಗಿರಲಾಗಿ ಯೆಹೋವನು ಮೋಶೆಗೆ – ನೀನು ಬೆಟ್ಟದಿಂದ ಇಳಿದುಹೋಗು; ಐಗುಪ್ತದೇಶದಿಂದ ನೀನು ಕರಕೊಂಡುಬಂದ ನಿನ್ನ ಜನರು ಕೆಟ್ಟು ಹೋದರು. ನಾನು ಅವರಿಗೆ ಆಜ್ಞಾಪಿಸಿದ ಮಾರ್ಗವನ್ನು **ಅವರು ಬೇಗನೇ ಬಿಟ್ಟುಹೋಗಿ** ತಮಗೆ ಲೋಹದ ಬಸವನನ್ನು ಮಾಡಿಸಿಕೊಂಡು ಅದಕ್ಕೆ ಅಡ್ಡಬಿದ್ದು ಯಜ್ಞಗಳನ್ನು ಅರ್ಪಿಸಿ – ಇಸ್ರಾಯೇಲ್ಯರೇ, ನೋಡಿರಿ; ಇದೇ ನಿಮ್ಮನ್ನು ಐಗುಪ್ತದೇಶದಿಂದ ಕರಕೊಂಡು ಬಂದ ದೇವರು ಎಂದು ಹೇಳಿಕೊಳ್ಳುತ್ತಿದ್ದಾರೆ ಎಂದು ಹೇಳಿದನು. ಅದಲ್ಲದೆ ಯೆಹೋವನು ಮೋಶೆಗೆ – ಈ ಜನರ ಸ್ವಭಾವವನ್ನು ನಾನು ನೋಡಿದ್ದೇನೆ; ಇವರು ನನ್ನ ಆಜ್ಞೆಗೆ ಬೊಗ್ಗದವರಾಗಿದ್ದಾರೆ; ಆದಕಾರಣ ನೀನು ನನ್ನನ್ನು ತಡೆಯಬೇಡ; ನನ್ನ ಕೋಪಾಗ್ನಿ ಉರಿಯಲಿ, ಅವರನ್ನು ಭಸ್ಮಮಾಡುವೆನು. ತರುವಾಯ ನಿನ್ನಿಂದಲೇ ಬೇರೆ ಒಂದು ದೊಡ್ಡ ಜನಾಂಗವುಂಟಾಗುವಂತೆ ಮಾಡುವೆನು ಎಂದು ಹೇಳಿದನು.” (ವಿಮೋ–೩೨:೭–೧೦)

“ಆಗ ಮೋಶೆ ತನ್ನ ದೇವರಾದ ಯೆಹೋವನನ್ನು ಬೇಡಿಕೊಂಡು – ಯೆಹೋವನೇ ನೀನು ಮಹಾಶಕ್ತಿಯಿಂದಲೂ ಭುಜಬಲ – –ದಿಂದಲೂ ಐಗುಪ್ತದೇಶದಿಂದ ಬಿಡಿಸಿದ ನಿನ್ನ ಪ್ರಜೆಗಳ ಮೇಲೆ ಕೋಪದಿಂದುರಿಯುವದೇಕೆ? ಐಗುಪ್ತ್ಯರು ನಿನ್ನ ವಿಷಯದಲ್ಲಿ – ಯೆಹೋವನು ಕೇಡುಮಾಡಬೇಕೆಂಬ ಅಭಿಪ್ರಾಯದಿಂದಲೇ ಇಸ್ರಾಯೇಲ್ಯರನ್ನು ಇಲ್ಲಿಂದ ಕರಕೊಂಡು ಹೋದನಲ್ಲಾ; ಅವರನ್ನು ಬೆಟ್ಟಗಳಲ್ಲಿ ಸಾಯಿಸಿ ಭೂಮಿಯಲ್ಲಿ ಉಳಿಯದಂತೆ ನಿರ್ಮೂಲ ಮಾಡುವದಕ್ಕೇನೇ ಅವರನ್ನು ಕರಕೊಂಡು ಹೋದನೆಂದು ಹೇಳು –ವದಕ್ಕೆ ಆಸ್ಪದವಾಗಬೇಕೇ? ನೀನು ರೋಷಾಗ್ನಿಯನ್ನು ಬಿಟ್ಟು ನಿನ್ನ ಪ್ರಜೆಗಳಿಗೆ ಕೇಡುಕನ್ನು ಮಾಡದೆ ಮನಸ್ಸನ್ನು ಬೇರೆ ಮಾಡಿಕೋ. ನಿನ್ನ ಸೇವಕರಾದ ಅಬ್ರಹಾಮ್ ಇಸಾಕ್ ಯಾಕೋಬರನ್ನು ನೆನಪಿಗೆ ತಂದುಕೋ. ನೀನು ನಿನ್ನ ಜೀವದಾಣೆ ಪ್ರಮಾಣಮಾಡಿ ಅವರಿಗೆ – ನಾನು ನಿಮ್ಮ ಸಂತತಿಯನ್ನು ಹೆಚ್ಚಿಸಿ ಆಕಾಶದ ನಕ್ಷತ್ರಗಳಷ್ಟು ಅಸಂಖ್ಯವಾಗಿ ಮಾಡುವೆನೆಂದೂ ನಾನು ಸೂಚಿಸಿರುವ ಈ ಪ್ರದೇಶಗಳನ್ನೆಲ್ಲಾ ನಿಮ್ಮ ಸಂತತಿಯವರಿಗೆ ಕೊಡುವೆನೆಂದೂ ಅವರು ಈ ದೇಶವನ್ನು ಶಾಶ್ವತವಾಗಿ ಸ್ವಾಧೀನದಲ್ಲಿಟ್ಟುಕೊಳ್ಳುವ – –ರೆಂದೂ ಮಾತುಕೊಡಲಿಲ್ಲವೇ ಅಂದನು. ಆಗ ಯೆಹೋವನು ತನ್ನ ಪ್ರಜೆಗಳಿಗೆ ಮಾಡುವೆನೆಂದು ತಾನು ಹೇಳಿದ ಕೇಡಿನ ವಿಷಯದಲ್ಲಿ ಮನಸ್ಸನ್ನು ಬೇರೆ ಮಾಡಿಕೊಂಡನು. ಆಜ್ಞಾಶಾಸನಗಳಾದ ಆ ಎರಡು ಕಲ್ಲಿನ ಹಲಿಗೆಗಳನ್ನು ಮೋಶೆಯು ಕೈಯಲ್ಲಿ ಹಿಡಿದುಕೊಂಡು ಬೆಟ್ಟದಿಂದ ಇಳಿದುಬಂದನು. ಆ ಹಲಿಗೆಗಳ ಎರಡು ಪಕ್ಕಗಳಲ್ಲಿಯೂ ಅಕ್ಷರಗಳು ಬರೆದಿದ್ದವು. ಈ ಕಡೆಯೂ ಆ ಕಡೆಯೂ ಬರಹವಿತ್ತು. ಆ ಶಿಲಾಶಾಸನಗಳು ದೇವರ ಕೆಲಸವೇ; ಅವುಗಳಲ್ಲಿ ಬರೆದದ್ದು ದೇವರು ಕೆತ್ತಿದ ಅಕ್ಷರಗಳೇ. ಇಸ್ರಾ –ಯೇಲ್ಯರು ಉತ್ಸಾಹದಿಂದ ಕೂಗಾಡುತ್ತಾ ಇರಲಾಗಿ ಯೆಹೋಶುವನು ಆ ಶಬ್ದವನ್ನು ಕೇಳಿ – ಪಾಳೆಯದ ಕಡೆಯಿಂದ ಯುದ್ಧ – –ಧ್ವನಿ ಕೇಳಿಸುತ್ತದೆ ಎಂದು ಮೋಶೆಗೆ ಹೇಳಿದನು. ಅದಕ್ಕವನು – ನನಗೆ ಕೇಳಿಸುವದು ಜಯಧ್ವನಿಯೂ ಅಲ್ಲ, ಅಪಜಯ ಧ್ವನಿಯೂ ಅಲ್ಲ, ಉತ್ಸವಧ್ವನಿಯೇ ಅಂದನು.” (ವಿಮೋ–೩೨:೧೧–೧೮)

“ಅವನು ಪಾಳಯದ ಹತ್ತಿರಕ್ಕೆ ಬಂದು ಆ ಬಸವನನ್ನೂ ಜನರು ಕುಣಿದಾಡುವದನ್ನೂ ಕಂಡಾಗ ಬಹು ಕೋಪಗೊಂಡು ಕೈಯಲ್ಲಿದ್ದ ಶಿಲಾಶಾಸನಗಳನ್ನು ಬೆಟ್ಟದ ಬುಡದಲ್ಲಿ ನೆಲಕ್ಕೆ ಹಾಕಿ **ಒಡೆದುಬಿಟ್ಟನು**. ಜನರು ಮಾಡಿಸಿಕೊಂಡಿದ್ದ ಬಸವನನ್ನು ಅವನು ಹಿಡಿದು ಬೆಂಕಿಯಿಂದ ಸುಟ್ಟು ಅರೆದು ಪುಡುಪುಡಿಮಾಡಿ ನೀರಿನ ಮೇಲೆ ಚೆಲ್ಲಿ ಇಸ್ರಾಯೇಲ್ಯರಿಗೆ ಆ ನೀರನ್ನು ಕುಡಿಸಿದನು. ಆಗ ಅವನು ಆರೋನನನ್ನು – ನೀನು ಈ ಜನರಿಂದ ಮಹಾಪರಾಧವನ್ನು ಮಾಡಿಸಿದಿಯಲ್ಲಾ; ಹೀಗೆ ಮಾಡಿಸುವದಕ್ಕೆ ಅವರು ನಿನಗೇನು ಮಾಡಿದರು ಎಂದು ವಿಚಾರಿಸಲು ಆರೋನನು – ಸ್ವಾಮಿಯವರು ರೋಷಗೊಳ್ಳಬಾರದು; ಈ ಜನರು ದುಷ್ಟ ಸ್ವಭಾವಿಗಳೆಂಬು – –ದನ್ನು ಬಲ್ಲಿರಷ್ಟೆ. ಅವರು ನನ್ನ ಬಳಿಗೆ ಬಂದು – ನಮ್ಮ ಮುಂದುಗಡೆಯಲ್ಲಿ ಹೋಗುವದಕ್ಕೆ ದೇವರುಗಳನ್ನು ಮಾಡಿಸಿಕೊಡು; ಐಗುಪ್ತದೇಶದಿಂದ ನಮ್ಮನ್ನು ಕರಕೊಂಡುಬಂದ ಮೋಶೆಯು ಏನಾದನೋ ಗೊತ್ತಿಲ್ಲ ಅಂದರು. ಅದಕ್ಕೆ ನಾನು – ಯಾರಲ್ಲಿ ಚಿನ್ನದ ಒಡವೆಯಿದೆಯೋ ಅವರೆಲ್ಲರು ಅದನ್ನು ತೆಗೆದು ನನಗೆ ಕೊಡಬೇಕು ಅಂದೆನು. ಅವರು ಹಾಗೆ ಕೊಡಲಾಗಿ ನಾನು ಆ ಚಿನ್ನವನ್ನು ಬೆಂಕಿಯಲ್ಲಿ ಹಾಕಿದಾಗ ಈ ಬಸವ ಉಂಟಾಯಿತು ಅಂದನು. ಜನರು ಅಂಕೆತಪ್ಪಿ ತಮ್ಮ ಇಷ್ಟ ಬಂದಂತೆ ಮಾಡುವ –ದಕ್ಕೆ ಆರೋನನು ಅವರನ್ನು ಬಿಟ್ಟದ್ದರಿಂದ ಅವರ ವಿರೋಧಿಗಳು ಅಪಹಾಸ್ಯ ಮಾಡುವದಕ್ಕೆ ಆಸ್ಪದವಾಯಿತು. ಅವರು ಕ್ರಮ – –ವಿಲ್ಲದೆ ಸ್ವೇಚ್ಛೆಯಾಗಿ ನಡೆದುಕೊಳ್ಳುವದನ್ನು ಮೋಶೆ ನೋಡಿ ಪಾಳೆಯದ ಬಾಗಲಲ್ಲಿ ನಿಂತುಕೊಂಡು – ಯೆಹೋವನ ಪಕ್ಷ – –ದವರೆಲ್ಲರು ನನ್ನ ಬಳಿಗೆ ಬರಬೇಕು ಎಂದು ಹೇಳಿದನು. ಆಗ ಲೇವಿಯ ಕುಲದವರೆಲ್ಲರು ಅವನ ಬಳಿಗೆ ಕೂಡಿ ಬಂದರು. ಮೋಶೆ ಅವರಿಗೆ – ಇಸ್ರಾಯೇಲ್ಯರ ದೇವರಾದ ಯೆಹೋವನು ಅಪ್ಪಣೆ ಮಾಡುವದೇನೆಂದರೆ – ನಿಮ್ಮಲ್ಲಿ ಪ್ರತಿಯೊಬ್ಬನು ಕತ್ತಿ – –ಯನ್ನು ಸೊಂಟಕ್ಕೆ ಕಟ್ಟಿಕೊಂಡು ಪಾಳೆಯದ ಮಧ್ಯದಲ್ಲಿ ಒಂದು ಬಾಗಲಿನಿಂದ ಮತ್ತೊಂದು ಬಾಗಲಿನವರೆಗೂ ಹೋಗುತ್ತಾ ಬರುತ್ತಾ ಅಣ್ಣ ತಮ್ಮ ಗೆಳೆಯ ನೆರೆಯವ ಎಂದು ಲಕ್ಷಿಸದೆ ಜನರನ್ನು ಸಂಹರಿಸಬೇಕು ಎಂದು ಹೇಳಿದನು. ಲೇವಿಯ ಕುಲದವರು ಮೋಶೆಯ ಆಜ್ಞೆಯ ಮೇರೆಗೆ ಮಾಡಿದರು. ಆ ದಿನದಲ್ಲಿ ಹೆಚ್ಚುಕಡಿಮೆ ಮೂರು ಸಾವಿರ ಮಂದಿ ಕೊಲ್ಲಲ್ಪಟ್ಟರು. ಇಸ್ರಾಯೇಲ್ಯರು ಆರೋನನ ಕೈಯಿಂದ ಆ ಬಸವನನ್ನು ಮಾಡಿಸಿಕೊಂಡದ್ದರಿಂದ ಯೆಹೋವನು ಅವರನ್ನು ದಂಡಿಸಿದನು.” (ವಿಮೋ–೩೨:೧೯–೨೮, ೩೫)

ಇದಾದ ನಂತರ, ಕರ್ತನು ಮೋಶೆಗೆ ಅವನು ಒಡೆದು ಹಾಕಿದ ಮೊದಲಿನ ಹಲಿಗೆಗಳಿಗೆ ಬದಲಾಗಿ ಎರಡು ಕಲ್ಲಿನ ಹಲಿಗೆಗಳನ್ನು ಕೆತ್ತುವಂತೆ ಹೇಳಿದನು. ಇಸ್ರಾಯೇಲ್ಯ ಜನರು ಈಗಾಗಲೇ ಒಡೆದು ಹಾಕಿದ ಆಜ್ಞೆಗಳನ್ನು ಕರ್ತನು ಅವುಗಳ ಮೇಲೆ ಮತ್ತೆ ಬರೆ – –ದನು. ಇಸ್ರಾಯೇಲ್ಯರು ಎಂತಹ ದೊಡ್ಡ ಪಾಪವನ್ನು ಮಾಡಿದರು! ಅವರು ದೇವರ ಪವಿತ್ರ ಧರ್ಮಶಾಸ್ತ್ರವನ್ನು ಒಡೆದು ಹಾಕಿ –ದ್ದರು. ಮನುಷ್ಯನ ದುಷ್ಟ ಹೃದಯವು ಇದನ್ನು ಮತ್ತೆ ತೋರಿಸಿಕೊಂಡಿತು. ದೇವರು ಇಸ್ರಾಯೆಲ್ ಜನರಿಗೆ ಮಾಡಿದ್ದ ಎಲ್ಲಾದರ

ಹೊರತಾಗಿಯೂ ದೇವರು ಸ್ಥಾಪಿಸಿದ್ದ ನೀತಿಯ ಮಾರ್ಗವನ್ನು ಅವರು ಎಷ್ಟು ಬೇಗನೇ ಬಿಟ್ಟುಬಿಟ್ಟರು. ಅವರು **ತಮ್ಮದೆ ಸ್ವಂತ ಧರ್ಮವನ್ನು** ತಮಗಾಗಿ ಸೃಷ್ಟಿಸಿಕೊಳ್ಳುವದಕ್ಕೆ ಇನ್ನೊಂದು ಮಾರ್ಗವನ್ನು ಅನುಸರಿಸಲು ಆರಿಸಿಕೊಂಡರು. ಅವರು ತಮ್ಮ ಕೈಗಳ ಕೆಲಸದ ದಾರಿಯನ್ನು ಆರಿಸಿಕೊಂಡರು. ಅವರು ದೇವರು ಸ್ಥಾಪಿಸಿದ್ದ ಮಾರ್ಗವನ್ನು ತಿರಸ್ಕರಿಸಿ ತಮಗಾಗಿ ಆರಿಸಿಕೊಂಡ ಧರ್ಮ–ದಲ್ಲಿ ಸಂತೋಷಿಸಿದರು. ದೇವರ ಹೆಸರು ಅವರ ತುಟಿಗಳ ಮೇಲೆ ಮಾತ್ರ ಇತ್ತು, ಆದರೆ ಅವರ ಹೃದಯಗಳು ಆತನಿಂದ ದೂರವಾಗಿದ್ದವು! ಅದಕ್ಕೋಸ್ಕರವೇ ಅವರು ಬಸವನ ಮೂರ್ತಿಯನ್ನು ಹೊಂದಿಕೊಳ್ಳುವಷ್ಟು ದೂರ ಹೋಗಿ ತಮ್ಮ ಕೈ ಕೆಲಸ––ಗಳಲ್ಲಿ ಆನಂದಿಸುತ್ತಾ ಜೀವಿಸುವ ನಿಜ ದೇವರನ್ನು ತಿರಸ್ಕರಿಸಿದರು.

ಈ ಭಯಂಕರವಾದ ಕಥೆಯ ಮುಖಾಂತರ ದೇವರು ನಮಗೆ ಏನು ಕಲಿಸುವದಕ್ಕಿದ್ದಾನೆ? ಆತನೊಂದಿಗಿನ ನಮ್ಮ ಸಂಬಂಧದಲ್ಲಿ ನಾವು ಎಲ್ಲಿ ನಿಂತಿದ್ದೇವೆಂಬುದರ ಕುರಿತಾಗಿ ನಾವು ಆಲೋಚಿಸುವದಕ್ಕೆ ದೇವರು ಇಷ್ಟಪಡುತ್ತಾನೆ. ಬಹುಶ: ಈ ರೀತಿಯಾಗಿ ಆಲೋಚಿಸುವ ಜನರಿದ್ದಾರೆ, ಏನೆಂದರೆ: **"**ನಾನು ಇಸ್ರಾಯೇಲ್ಯರ ಹಾಗಿಲ್ಲ. ನಾನು ಎಂದಿಗೂ ದೇವರನ್ನು ತಿರಸ್ಕರಿಸಿ ವಿಗ್ರಹವನ್ನು ಆರಾಧಿಸುವದಿಲ್ಲ.**"** ಈ ರೀತಿಯಾಗಿ ಅಂದುಕೊಳ್ಳುವವರಿದ್ದೀರಿ, ನೀವು ಎಂದಿಗೂ ಒಂದು ವಿಗ್ರಹವನ್ನೂ ಆರಾಧಿಸಿಲ್ಲ ಎಂದು ನಿಮಗೆ ಸ್ಪಷ್ಟವಾಗಿ ನಿಶ್ಚಿತವಿದೆಯೋ? ಬಹುಮಟ್ಟಿಗೆ ನೀವು ನಿಮಗಾಗಿ ಒಂದು ವಿಗ್ರಹವನ್ನು ತಯಾರಿಸಿಕೊಂಡಿಲ್ಲ. ಹೇಗೂ, ಆರಾಧಿಸುವದಕ್ಕಾಗಿ ಕೆತ್ತಲ್ಪಟ್ಟ ಒಂದು ರೂಪಕ್ಕೆ ಮಾತ್ರ ವಿಗ್ರಹವು ಮಿತಿಗೊಂಡಿಲ್ಲ. ದೇವರಿಗೂ ಮತ್ತು ನಮಗೂ ಮಧ್ಯೆ ಬರುವಂತ ಯಾವುದೇ ಆಗಲೀ ಅದು ವಿಗ್ರಹವಾಗಿದೆ. ಹಣ, ಬಟ್ಟೆಗಳು, ಲೈಂಗಿಕತೆ, ಆಟ, ದೂರದರ್ಶನ, ಸ್ವಾರ್ಥ, ನಿಮ್ಮ ರೀತಿಯಲ್ಲಿರುವ ಇನ್ನೊಬ್ಬ ವ್ಯಕ್ತಿ, ಅಥವಾ ನಿಮ್ಮ ಪೂರ್ವಿಕರ ಸಂಪ್ರದಾಯಗಳು ಇವೆಲ್ಲವೂ ವಿಗ್ರಹಗಳಾಗಿವೆ. ಕೆಲವರು ಕಲ್ಲು ಮರ ಮತ್ತು ತಾಯಿತ–ಗಳ ವಿಗ್ರಹಗಳಿಗೆ ಅಂಟಿಕೊಂಡಿರುತ್ತಾರೆ. ಇತರರಿಗೆ, ಅವರ ಧಾರ್ಮಿಕ ಸೇವೆಗಳೇ ಅವರ ವಿಗ್ರಹಗಳಾಗಿರುತ್ತವೆ; ಅವರು ದೇವರ ವಾಕ್ಯವನ್ನು ಕೇಳುವದಕ್ಕಿಂತಲೂ ಪ್ರಾರ್ಥನೆ ಮತ್ತು ಉಪವಾಸಗಳಿಗೆ ಹೆಚ್ಚು ಪ್ರಾಮುಖ್ಯತೆಯನ್ನು ಕೊಡುವವರಾಗಿರುತ್ತಾರೆ! **ದೇವರು ಮತ್ತು ಆತನ ಸತ್ಯಕ್ಕೆ ಬದಲಾಗಿ ಬರುವಂತ ಯಾವುದೇ ಆಗಲೀ ಅದು ವಿಗ್ರಹವಾಗಿದೆ.**

**ನಿಮ್ಮ ದೇವರು ಯಾರು**? ನಿಜವಾಗಿಯೂ ನೀವು ಯಾರನ್ನು ಆರಾಧಿಸುತ್ತೀರಿ, ದೇವರಾದ ಕರ್ತನನ್ನೋ ಅಥವಾ ವಿಗ್ರಹವನ್ನೋ? ದೇವರ ಹೆಸರು ಕೇವಲ ನಿಮ್ಮ ತುಟಿಗಳ ಮೇಲಿದೆಯೋ ಅಥವಾ ನಿಮ್ಮ ಹೃದಯದೊಳಗೆ ಆತನ ಹೆಸರಿದೆಯೋ? ವಿಗ್ರಹಗಳನ್ನು ಆರಾಧಿಸುವವರಿಂದ ದೇವರನ್ನು ನಿಜವಾಗಿಯೂ ಆರಾಧಿಸುವವರನ್ನು ಗುರುತಿಸುವಂತಾದ್ದು ಒಂದು ಇದೆ. **ಅದು ದೇವರ ವಾಕ್ಯ.** ದೇವರ ನಿಜ ವಾಕ್ಯದ ಕಡೆಗೆ ನಿಮ್ಮ ಮನೋಭಾವವೇನು? ನೀವು ದೇವರ ವಾಕ್ಯವನ್ನು ತಿಳಿದಿದ್ದೀರೋ? ನೀವು ಅದನ್ನು ನಂಬುತ್ತೀರೋ? ಹೃದಯಪೂರ್ವಕವಾಗಿ ನೀವು ಅದನ್ನು ಪ್ರೀತಿಸುತ್ತೀರೋ? ಅಥವಾ **"**ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ. ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ.**"** (ಮತ್ತಾಯ–೧೫:೮, ೯) ಎಂಬುದಾಗಿ ದೇವರು ಹೇಳಿದ ಇಸ್ರಾಯೇಲ್ಯರ ಹಾಗಿದ್ದೀರೋ?

ನಿಮ್ಮ ವಿಷಯವೇನು? ನೀವು ನಿಜವಾಗಿಯೂ ಯಾರನ್ನು ಆರಾಧಿಸುತ್ತೀರಿ, ಮೋಶೆಗೆ ತನ್ನ ನೀತಿಯ ಧರ್ಮಶಾಸ್ತ್ರವನ್ನು ಕೊಟ್ಟಂತ ದೇವರಾದ ಕರ್ತನನ್ನು ಆರಾಧಿಸುತ್ತಿದ್ದೀರೋ? ನೀವು ಆತನ ವಾಕ್ಯವನ್ನು ನಂಬುತ್ತೀರೋ? ಅಥವಾ ಇಸ್ರಾಯೇಲ್ಯರು ಮಾಡಿದ ಹಾಗೆ ನಿಮ್ಮ ಸ್ವಂತ ಧಾರ್ಮಿಕ ಕಾರ್ಯಗಳ ಮಾರ್ಗದಲ್ಲಿ ನಿಮ್ಮ ನಂಬಿಕೆಯನ್ನಿಟ್ಟಿದ್ದೀರೋ? ವಿಷಯ ಏನೇ ಆಗಲೀ, ವಾಕ್ಯ ಹೇಳುವದೇನೆಂದರೆ: **"**ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ. ಆದದರಿಂದ ಪ್ರಿಯ ಸಹೋದರರೇ, **ವಿಗ್ರಹಾರಾಧನೆಯ ಗೊಡವೆಯನ್ನು ಸಂಪೂರ್ಣವಾಗಿ ತೊರೆದು ಬಿಡಿರಿ**. ನೀವು ವಿವೇಕಿಗಳೆಂದು ಇದನ್ನು ಹೇಳುತ್ತೇನೆ.**"** (೧ಕೊರಿಂಥ–೧೦:೧೧, ೧೪,೧೫). **"**ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು. . .ಮಾಟಗಾರರು, ವಿಗ್ರಹಾರಾಧಕರು. . .ಇವರಿಗೆ ಸಿಕ್ಕುವ ಪಾಲು ಬೆಂಕಿ ಗಂಧಕಗಳುರಿಯುವ ಕೆರೆಯೇ.**"** (ಪ್ರಕ–೨೧:೮). **"**ನಾವು ಮನುಷ್ಯರ ಸಾಕ್ಷಿಯನ್ನು ತೆಗೆದುಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನೆಂದರೆ ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ. ದೇವರ ಮಗನು ಬಂದು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ. . .ಪ್ರಿಯರಾದ ಮಕ್ಕಳೇ **ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ."** (೧ಯೋಹಾನ–೫:೯, ೨೦,೨೧)

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .

ಮುಂದಿನ ಸಲ ದೇವರ ಚಿತ್ತವಾದರೆ, ದೇವರು ಸಂಕಲ್ಪಸಿರುವ ಅಸಾಮಾನ್ಯವಾದ ಯೋಜನೆಯಿಂದ ಆತನು ತನ್ನ ನೀತಿವಂತಿಕೆ ––ಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಪಾಪಿಗಳಾದ ಇಸ್ರಾಯೇಲ್ಯರ ಮಧ್ಯದಲ್ಲಿ ವಾಸಿಸಲು ಶಕ್ತನಾಗಿದ್ದನು ಎಂಬುದರ ಕಡೆಗೆ ನೋಡಲಿದ್ದೇವೆ,
ಆತನ ವಾಕ್ಯದಿಂದ ಈ ಪ್ರಾಮುಖ್ಯವಾದ ಎಚ್ಚರಿಕೆಯನ್ನು ನೆನಪುಮಾಡಿಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"**ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ.**"** (೧ಯೋಹಾನ–೫:೨೧)

[ಪಾಠ ೩೯: ಒಡೆಯಲ್ಪಟ್ಟ ಆಜ್ಞೆಗಳು] [ಸಾರಾಂಶಗಳ ಪಟ್ಟಿ] [ಪಾಠ ೪೧: ಇಸ್ರಾಯೇಲ್ಯರ ಅಪನಂಬಿಕೆ]

ಪಾಠ ೪೦

# ದೇವದರ್ಶನದ ಗುಡಾರ

ವಿಮೋಚನಕಾಂಡ ೨೪–೪೦, ಯಾಜಕಕಾಂಡ ೧೬

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಐಗುಪ್ತದಲ್ಲಿನ ತಮ್ಮ ಗುಲಾಮತನದಿಂದ ತಮ್ಮನ್ನು ಬಿಡುಗಡೆ ಮಾಡಿದ ಕರ್ತನಿಂದ ಇಸ್ರಾಯೇಲ್ಯರು ಹೇಗೆ ವಿಮುಖರಾದರೆಂಬುದನ್ನು ನಾವು ನೋಡಿಕೊಂಡೆವು. ಸೀನಾಯಿ ಬೆಟ್ಟದ ಮೇಲೆ ಮೋಶೆಯು ದೇವರ ವಾಕ್ಯಗಳನ್ನು ಪಡೆದುಕೊಳ್ಳುವ ವೇಳೆಯಲ್ಲಿ, ಇಸ್ರಾಯೇಲ್ಯರು ಆರಾಧನೆ ಮಾಡುವದಕ್ಕಾಗಿ ಒಂದು ಬಂಗಾರದ ಬಸವನ ವಿಗ್ರಹವನ್ನು ಮಾಡಿ – –ಕೊಂಡರು. ಈ ದಿನ ಹೇಗೂ ಇನ್ನೂ ಹೆಚ್ಚು ಸುಂದರವಾದ ಕಥೆಯನ್ನು ನಾವು ಕೇಳುವದಕ್ಕಿದ್ದೇವೆ. ಆದರೆ ಇದು ತುಂಬಾ ಅಗಾಧವಾದುದರಿಂದ ಇದನ್ನು ತುಂಬಾ ಜಾಗ್ರತೆಯಿಂದ ನಾವು ಕೇಳಿಸಿಕೊಳ್ಳಬೇಕು. ತನ್ನ ಬಳಿಗೆ ಹೇಗೆ ಬರಬೇಕು, ತನ್ನನ್ನು ಹೇಗೆ ಭೇಟಿ ಮಾಡಬೇಕು ಮತ್ತು ಹೇಗೆ ಆರಾಧಿಸಬೇಕು ಎಂಬುದನ್ನು ಕಲಿಸುವದಕ್ಕಾಗಿ ಒಂದು ತುಂಬಾ ವಿಶೇಷವಾದ ಗುಡಾರ – –ವನ್ನು ಕಟ್ಟಬೇಕೆಂದು ದೇವರು ಮೋಶೆಗೆ ಮತ್ತು ಇಸ್ರಾಯೇಲ್ಯರಿಗೆ ಹೇಗೆ ಹೇಳಿದನೆಂಬುದನ್ನು ನಾವು ನೋಡುವದಕ್ಕಿದ್ದೇವೆ. ಈದಿನದ ನಮ್ಮ ಪಾಠವು **“ದೇವದರ್ಶನದ ಗುಡಾರ”** ಎಂದು ಕರೆಯಲ್ಪಡುತ್ತದೆ.

ತೋರಾದಲ್ಲಿನ ವಿಮೋಚನಕಾಂಡ ಪುಸ್ತಕದ ಇಪ್ಪತ್ನಾಲ್ಕನೆಯ ಅಧ್ಯಾಯದಲ್ಲಿ ಓದುವಾಗ ವಾಕ್ಯ ಹೀಗೆ ಹೇಳುತ್ತದೆ:

**“ಯೆಹೋವನ ತೇಜಸ್ಸು ಸೀನಾಯಿ ಬೆಟ್ಟದ ಮೇಲೆ ನಿಂತಿತು,** ಮತ್ತು ಆ ಮೇಘವು ಆರು ದಿನಗಳವರೆಗೂ ಬೆಟ್ಟವನ್ನು ಮುಚ್ಚಿ– –ಕೊಂಡಿತ್ತು. ಏಳನೆಯ ದಿನದಲ್ಲಿ ಯೆಹೋವನು ಮೇಘದೊಳಗಿಂದ ಕೂಗಿ ಮೋಶೆಯನ್ನು ಕರೆದನು. ಯೆಹೋವನ ತೇಜಸ್ಸು ಬೆಟ್ಟದ ಶಿಖರದ ಮೇಲೆ ಪ್ರಜ್ವಲಿಸುವ ಬೆಂಕಿಯೋಪಾದಿಯಲ್ಲಿ ಇಸ್ರಾಯೇಲ್ಯರಿಗೆ ಕಾಣಿಸಿತು. ಮೋಶೆ ಆ ಮೇಘದೊಳಗೆ ಪ್ರವೇಶಿಸಿ ಬೆಟ್ಟವನ್ನೇರಿದನು. ಅವನು ಅ ಬೆಟ್ಟದಲ್ಲಿ ಹಗಲಿರುಳು ನಾಲ್ವತ್ತು ದಿವಸ ಇದ್ದನು.” (ವಿಮೋ–೨೪:೧೬–೧೮)

“ಯೆಹೋವನು ಮೋಶೆಗೆ ಹೇಳಿದ್ದೇನೆಂದರೆ –ಇಸ್ರಾಯೇಲ್ಯರು ನನಗೋಸ್ಕರ ಕಾಣಿಕೆಯನ್ನು ಮೀಸಲಿಡಬೇಕೆಂದು ಅವರಿಗೆ ಹೇಳು. ಮನ:ಪೂರ್ವಕವಾಗಿ ಕೊಡುವವರಿಂದಲೇ ಆ ಕಾಣಿಕೆಯನ್ನು ತೆಗೆದುಕೊಳ್ಳಬೇಕು. ನೀನು ಅವರಿಂದ ತೆಗೆದುಕೊಳ್ಳಬೇಕಾದ ಕಾಣಿಕೆ –ಗಳು ಯಾವವೆಂದರೆ – ಚಿನ್ನ ಬೆಳ್ಳಿ ತಾಮ್ರ ಎಂಬ ಲೋಹಗಳೂ ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರಗಳೂ ನಾರುಬಟ್ಟೆಗಳೂ ಆಡುಕೂದಲಿನ ಬಟ್ಟೆಗಳೂ ಹದಮಾಡಿರುವ ಕೆಂಪುಬಣ್ಣದ ಕುರಿದೊಗಲುಗಳೂ ಕಡಲು ಹಂದಿಯ ತೊಗಲುಗಳೂ ಜಾಲೀಮರವೂ ದೀಪಕ್ಕೆ ಬೇಕಾದ ಎಣ್ಣೆಯೂ ಅಭಿಷೇಕತೈಲಕ್ಕೆ ಮತ್ತು ಪರಿಮಳಧೂಪಕ್ಕೆ ಬೇಕಾದ ಸುವಾಸನಾದ್ರವ್ಯಗಳೂ ಮಹಾಯಾಜಕನ ಕವಚಕ್ಕೆ ಬೇಕಾಗಿರುವ ಗೋಮೇಧಿಕರತ್ನಗಳೂ ಪದಕದ ಚೀಲದಲ್ಲಿ ಕೆತ್ತಬೇಕಾದ ನಾನಾ ರತ್ನಗಳೂ ಇವೆ. ನಾನು ಅವರ ಮಧ್ಯದಲ್ಲಿ ವಾಸಿಸುವದಕ್ಕೆ **ನನಗೆ ಒಂದು ದೇವಸ್ಥಾನವನ್ನು ಕಟ್ಟಿಸಬೇಕು. ನಾನು ನಿನಗೆ ತೋರಿಸುವ ಮಾದರಿಯ ಪ್ರಕಾರವೇ ಗುಡಾರವನ್ನು ಅದರಲ್ಲಿರುವ ಎಲ್ಲಾ ಸಾಮಾನುಗಳನ್ನೂ ಮಾಡಿಸಬೇಕು.”** (ವಿಮೋ–೨೫:೧–೯)

ದೇವರು ಮೋಶೆಗೆ ಹೇಳಿದ್ದನ್ನು ನೀವು ಕೇಳಿಸಿಕೊಂಡಿರೋ? ಆತನು ಮೋಶೆಗೆ ಹೇಳಿದ್ದು ತುಂಬಾ ಆಶ್ಚರ್ಯಕರವಾದದ್ದು ಮತ್ತು ಅದ್ಭುತಕರವಾದದ್ದು ಆಗಿದೆ! ತನಗೆ ವಿರುದ್ಧವಾಗಿ ಅನೇಕಾನೇಕ ಸಲ ಪಾಪ ಮಾಡಿದವರಾಗಿದ್ದ ಇಸ್ರಾಯೇಲ್ಯರ ಮಧ್ಯದಲ್ಲಿ ವಾಸಿ –ಸುವದಕ್ಕೆ ದೇವರು ಯೋಜನೆ ಮಾಡಿಕೊಂಡನು. ದೊಡ್ಡವನೂ ಮತ್ತು ಪರಿಶುದ್ಧನೂ ಆಗಿದ್ದ ದೇವರು ಅಂತಹ ಪಾಪಿಗಳ ಜೊತೆಯಲ್ಲಿ ವಾಸಿಸುವದಕ್ಕೆ ಯಾಕೆ ಬಯಸಿದನು? ಆತ್ಮನಾಗಿದ್ದವನೂ ಮತ್ತು ಯಾವ ಅಗತ್ಯತೆಯಲ್ಲದವನಾಗಿದ್ದ ದೇವರು ತನ್ನನ್ನು ತಿರಸ್ಕರಿಸಿ ದೂರವಾಗಿದ್ದ ಆದಾಮನ ಸಂತತಿಯವರಿಗೆ ಮಾತಾಡುವದಕ್ಕೆ ಯಾಕೆ ಚಿಂತಿತನಾಗಿದ್ದ? ನಾವು ಈಗಾಗಲೇ ನೋಡಿ – –ಕೊಂಡಂತೆ ದೇವರು ತನ್ನ ಸ್ವರೂಪದಲ್ಲಿ ಮನುಷ್ಯನನ್ನು ಉಂಟುಮಾಡಿದನು ಯಾಕೆಂದರೆ ಆತನು ಮನುಷ್ಯನೊಂದಿಗೆ ಅನ್ಯೋನ್ಯ –ತೆಯನ್ನು ಹೊಂದಿಕೊಳ್ಳುವದಕ್ಕೆ ಬಯಸಿದ್ದನು. ಮನುಷ್ಯನ ಪಾಪವು ಆ ಅನ್ಯೋನ್ಯತೆಯನ್ನು ಹಾಳುಮಾಡಿತು, ಆದರೆ ಮನುಷ್ಯನು ಮತ್ತೆ ತನ್ನ ಕಡೆಗೆ ಹಿಂತಿರುಗಿ ಬರುವದಕ್ಕಾಗಿ ದೇವರು ಒಂದು ನೀತಿಯ ಮಾರ್ಗವನ್ನು ಸ್ಥಾಪಿಸಿದನು. ಇದು ಪಾಪಿಗಳಿಗಾಗಿ ಆತನಿಗಿದ್ದ ದೊಡ್ಡ ಕನಿಕರ ಮತ್ತು ಆತನ ನಿತ್ಯವಾದ ಉದ್ದೇಶಗಳ ಕಾರಣವಾಗಿದ್ದದರಿಂದ ಇಸ್ರಾಯೇಲ್ಯರ ಮಧ್ಯದಲ್ಲಿ ದೇವರಾದ ಕರ್ತನು ತನ್ನ ಮಹಿಮೆಯುಳ್ಳ ಪ್ರಸನ್ನತೆಯನ್ನು ಇರಿಸುವದಕ್ಕೆ ಯೋಜನೆ ಮಾಡಿಕೊಂಡಿದ್ದನು. **ಒಂದು ತುಂಬಾ ವಿಶೇಷವಾದ ಗುಡಾರದ** (ದೇವದರ್ಶನದ ಗುಡಾರ) ಮತ್ತು **ತುಂಬಾ ವಿಶೇಷವಾದ ಧರ್ಮಶಾಸ್ತ್ರದ** ಉದ್ದೇಶದಿಂದ ಆದಾಮನ ಮಕ್ಕಳು ದೇವರ

ಹೇಗೆ ಎಳೆಯಲ್ಪಟ್ಟರೆಂಬುದನ್ನು ನಿರ್ದರ್ಶಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡನು. ನಾವು ಈಗಾಗಲೇ ಕಲಿತಿರುವ ಹಾಗೆ ದೇವರು ಪರಿಶುದ್ಧನಾಗಿರುವದರಿಂದ ಕೇವಲ ಯಾವುದೇ ಮಾರ್ಗದಿಂದಲೂ ಪಾಪಿಗಳು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದಿಕೊಳ್ಳುವದಕ್ಕಾಗುವದಿಲ್ಲ. ಈ ಕಾರಣಕ್ಕಾಗಿ, ದೇವರು ತನ್ನ ಪವಿತ್ರತೆಯ ಮತ್ತು ಮಹಿಮೆಯ ಅರ್ಹತೆಯ ರೀತಿಯಲ್ಲಿ ಅವರ ಮಧ್ಯದಲ್ಲಿ ಇರುವದಕ್ಕಾಗಿ ತನಗಾಗಿ ಒಂದು ವಿಶೇಷವಾದ ಗುಡಾರವನ್ನು ತಯಾರಿಸುವಂತೆ ಆತನು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು. ಹಾಗೂ, ಈ ವಿಶೇಷ ಗುಡಾರದ ಉದ್ದೇಶದಿಂದ ಮುಂದಿನ ಸಂತತಿಗಳಿಗೆ ತನ್ನ ಕುರಿತಾಗಿ ಮತ್ತು ತಾನು ಈ ಲೋಕಕ್ಕೆ ಕಳುಹಿಸಲು ಯೋಜನೆ ಹಾಕಿಕೊಂಡಿರುವ ರಕ್ಷಕನ ಕುರಿತಾಗಿ ಅನೇಕ ಪ್ರಾಮುಖ್ಯವಾದ ಪಾಠಗಳನ್ನು ಕಲಿಸುವದಕ್ಕೆ ದೇವರು ಏರ್ಪಾಟು ಮಾಡಿಕೊಂಡಿದ್ದನು.

ಇಸ್ರಾಯೇಲ್ಯರು ತನಗಾಗಿ ಕಟ್ಟುವಂತ ನಿವಾಸದ ಸ್ಥಳಕ್ಕೆ ಸಂಬಂಧಪಟ್ಟಂತೆ ದೇವರು ಮೋಶೆಗೆ ಹೇಳಿದ್ದನ್ನು ಪರೀಕ್ಷಿಸುವದಕ್ಕೆ ಮುಂಚೆ ನಾವು ಮೊದಲು ತಿಳಿದುಕೊಳ್ಳಬೇಕಾದದ್ದೇನೆಂದರೆ ವಾಸಿಸುವದಕ್ಕೆ ತನಗೆ ಒಂದು ಸ್ಥಳದ ಅಗತ್ಯವಿರುವದರಿಂದ ತನಗಾಗಿ ಒಂದು ಗುಡಾರವನ್ನು ಕಟ್ಟಿರಿ ಎಂಬುದಾಗಿ ದೇವರು ಅವರಿಗೆ ಹೇಳಲಿಲ್ಲ! ಇಲ್ಲ! ಅತೀ ಉನ್ನತನಾದ ದೇವರು ಲೋಕವನ್ನೂ ಮತ್ತು ಅದರಲ್ಲಿರುವ ಸಮಸ್ತವನ್ನೂ ಉಂಟುಮಾಡಿದವನು ಮನುಷ್ಯ ನಿರ್ಮಿತ ಮನೆಗಳಲ್ಲಿ ವಾಸಿಸುವವನಲ್ಲ! ಪ್ರವಾದಿಗಳ ಬರ –ವಣಿಗೆಗಳಲ್ಲಿ ಕರ್ತನು ತಾನೇ ಹೇಳಿರುವದೇನೆಂದರೆ; "ಆಕಾಶವು ನನಗೆ ಸಿಂಹಾಸನ ಭೂಮಿಯು ನನಗೆ ಪಾದಪೀಠ. ನೀವು ನನಗೆ ಇನ್ನೆಂಥಾ ಮನೆಯನ್ನು ಕಟ್ಟಿಕೊಡುವಿರಿ? ನನ್ನ ವಿಶ್ರಾಂತಿಗೆ ತಕ್ಕ ಸ್ಥಳವು ಎಂಥದು? ಇವುಗಳನ್ನೆಲ್ಲಾ ನನ್ನ ಕೈಯೇ ನಿರ್ಮಿಸಿತು, ಹೌದು ನನ್ನ ಕೈಯಿಂದಲೇ ಇವುಗಳೆಲ್ಲಾ ಉಂಟಾದವು." (ಯೆಶಾಯ–೬೬:೧, ೨: ಅ.ಕೃತ್ಯ–೭:೪೯, ೫೦).

ಹಾಗಾದರೆ, ತನ್ನ ಆತ್ಮ ಮತ್ತು ಮಹಿಮೆ ಇಳುಕೊಳ್ಳುವದಕ್ಕಾಗಿ ಒಂದು ಗುಡಾರವನ್ನು ಕಟ್ಟುವಂತೆ ದೇವರು ಯಾಕೆ ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು? ನಾವು ಮೊದಲೇ ಹೇಳಿದಂತೆ, ಇಸ್ರಾಯೇಲ್ಯರು ಮತ್ತು ಆದಾಮನ ಮಕ್ಕಳೊಂದಿಗೆ ಅನ್ಯೋನ್ಯತೆಯನ್ನು ಹೊಂದು –ವದಕ್ಕೆ ಆತನು ಎಷ್ಟೊಂದು ಹಂಬಲಿಸಿದ್ದನೆಂಬುದನ್ನು ಅವರಿಗೆ ಕಲಿಸುವದಕ್ಕೆ ದೇವರು ಬಯಸಿದ್ದನು. ಜನರು ತಮ್ಮ ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಂಡು ಎಂದೆಂದಿಗೂ ಪರಲೋಕದಲ್ಲಿ ದೇವರೊಂದಿಗೆ ಜೀವಿಸುವ ಹಕ್ಕನ್ನು ಹೇಗೆ ಪಡೆದುಕೊಳ್ಳುತ್ತಾ –ರೆಂಬ ಮಾರ್ಗದ **ಒಂದು ನಿದರ್ಶನವನ್ನು** ಅವರ ಮುಂದೆ ಇಡುವದಕ್ಕೆ ಸಹ ದೇವರು ಬಯಸಿದ್ದನು!

ಹಾಗಾಗಿ, ತಾನು ಅವರ ಮಧ್ಯದಲ್ಲಿ ಇಳುಕೊಳ್ಳುವದಕ್ಕೆ ಸಾಧ್ಯವಾಗುವಂತೆ ತನಗಾಗಿ ಒಂದು ಗುಡಾರವನ್ನು ನಿರ್ಮಿಸಲು ದೇವರು ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಆಜ್ಞಾಪಿಸಿದನು. ಹೇಗೂ, ದೇವದರ್ಶನದ ಗುಡಾರವು ಒಂದು ಸಾಮಾನ್ಯವಾದ ಗುಡಾರ –ದಂತಿರಲಿಲ್ಲ. ನಿಜ ಹೇಳಬೇಕೆಂದರೆ, ದೇವದರ್ಶನದ ಗುಡಾರದ ಕೆಲಸವು ಹೇಗಿರಬೇಕೆಂಬ ವಿವರಣೆಯು ಐವತ್ತು ಅಧ್ಯಾಯ – –ಗಳನ್ನು ಒಳಗೊಂಡು ಮುಂದುವರಿದಿತ್ತು! ಅವು ಅಗಾಧವಾದ ಅಧ್ಯಾಯಗಳಾಗಿದ್ದು ಅವು ಒಳಗೊಂಡಿರುವದನ್ನೆಲ್ಲಾ ಮಾತಾಡು –ವದಕ್ಕೆ ನಮಗೆ ಸಮಯವಿಲ್ಲ. ತುಂಬಾ ಮುಖ್ಯವಾದ ಸಂಗತಿಗಳನ್ನು ಸಂಕ್ಷಿಪ್ತಗೊಳಿಸುವದಕ್ಕೆ ಮಾತ್ರ ನಾವು ಪ್ರಯತ್ನಿಸುತ್ತೇವೆ.

ನೀವು ಈ ಗುಡಾರದ ಕುರಿತಾಗಿ ಮೊದಲು ತಿಳಿದುಕೊಳ್ಳಬೇಕಾದದ್ದೇನೆಂದರೆ ಇದರಲ್ಲಿ **ಎರಡು ಕೋಣೆಗಳಿರಬೇಕೆಂದು** ದೇವರು ಮೋಶೆಗೆ ಹೇಳಿದ್ದನು. ದೇವದರ್ಶನದ ಗುಡಾರವು ಒಂದೇ ಆದರೆ ಒಂದು ಸುಂದರವಾದ ಪರದೆಯು ಅದನ್ನು ಎರಡು ಕೋಣೆ –ಗಳನ್ನಾಗಿ ವಿಭಾಗಿಸುವಂತದ್ದಾಗಿತ್ತು.

ಮೊದಲನೆಯ ಕೋಣೆಯು **ಪರಿಶುದ್ಧ ಸ್ಥಳವೆಂದು** ಕರೆಯಲ್ಪಟ್ಟಿತ್ತು. ಯಾಜಕರುಗಳ {ಉಲೂಫ್‌ನಲ್ಲಿ: ಯಾಜಕ, ಮಾರಬೌಟ್, ಆತ್ಮೀಕ ನಾಯಕ} ಹೊರತಾಗಿ ಯಾರೊಬ್ಬರೂ ಅದರೊಳಕ್ಕೆ ಹೋಗುವಂತಿರಲಿಲ್ಲ. ಈ ಯಾಜಕರುಗಳು ಪಾಪವನ್ನು ಮುಚ್ಚುವದ –ಕ್ಕಾಗಿ ಪ್ರಾಣಿಗಳನ್ನು ವಧಿಸಿ ಯಜ್ಞವರ್ಪಿಸುವದಕ್ಕೆ ಆರೋನನ ಸಂತಾನದವರಿಂದ ದೇವರು ಆರಿಸಿಕೊಂಡಂತವರು. ಆ ಕೋಣೆ –ಯಲ್ಲಿ ಮೂರು ವಸ್ತುಗಳಿದ್ದವು. ಧೂಪ ಸುಡುವಂತಹ ಬಂಗಾರದ ಒಂದು ಮೇಜು, ಒಂದು ಎಣ್ಣೆಯ ದೀಪ, ಮತ್ತು ಆರಾಧನೆ –ಯಲ್ಲಿ ದೇವರಿಗೆ ಸಮರ್ಪಿಸುವಂತಹ ವಿಶೇಷವಾದ ರೊಟ್ಟಿಗಳನ್ನಿಡುವ ಒಂದು ಮೇಜು.

ಗುಡಾರದ ಎರಡನೆಯ ಕೋಣೆಯು **ಅತೀ ಪರಿಶುದ್ಧ ಸ್ಥಳವೆಂದು** ಕರೆಯಲ್ಪಟ್ಟಿತ್ತು. ಇದು ಅತೀ ಪರಿಶುದ್ಧ ಸ್ಥಳವೆಂದು ಕರೆಯಲ್ಪ –ಟ್ಟಿತ್ತು ಯಾಕೆಂದರೆ ಗುಡಾರವನ್ನು ಕಟ್ಟಿ ಮುಗಿಸಿದ ನಂತರ ದೇವರು ಇಳಿದು ಬಂದು ತನ್ನ ಗಂಭೀರವಾದ ಮಹಿಮೆಯೊಂದಿಗೆ ಆ ಕೋಣೆಯನ್ನು ತುಂಬಿಕೊಳ್ಳಬೇಕೆಂದು ಏರ್ಪಾಟು ಮಾಡಿಕೊಂಡಿದ್ದನು. ಅತೀ ಪರಿಶುದ್ಧ ಸ್ಥಳವು ಪರಲೋಕದ (ಪರದೈಸಿನ) ಒಂದು ನಿದರ್ಶನವಾಗಿತ್ತು. ಇದರ ಪರಿಣಾಮವಾಗಿ, ಆ ಕೋಣೆಯು ದೇವರೊಬ್ಬನಿಗೆ ಸಂಬಂಧಿಸಿತ್ತು! ಅದಕ್ಕಾಗಿಯೇ ದೇವರು ಮೋಶೆಗೆ, ಅತೀ ಪರಿಶುದ್ಧ ಸ್ಥಳವನ್ನು ಪ್ರವೇಶಿಸುವದಕ್ಕೆ ಯಾವನಾದರೂ ಪ್ರಯತ್ನಿಸಿದರೆ ಅವನು ಮರಣ ಹೊಂದುತ್ತಾನೆ ಎಂದು ಹೇಳಿದ್ದನು. ವರ್ಷಕ್ಕೆ ಒಂದು ಸಲ ಮಾತ್ರ ಮಹಾಯಾಜಕನು ಅತೀ ಪರಿಶುದ್ಧ ಸ್ಥಳಕ್ಕೆ ಪ್ರವೇಶಿಸುತ್ತಿದ್ದನು ಮತ್ತು ಅವನ ಹೊರತಾಗಿ ಯಾರೊಬ್ಬರು ಅದರೊಳಕ್ಕೆ ಹೋಗುವಂತಿರಲಿಲ್ಲ. ಅದೂ ಅಲ್ಲದೆ, ಅವನು ದೇವರ ನಿಯಮದ ಪ್ರಕಾರ ಜನರ ಪಾಪಗಳಿಗಾಗಿ ಮತ್ತು ತನ್ನ ಸ್ವಂತ ಪಾಪಗಳಿಗಾಗಿಯೂ ಯಜ್ಞದ ರಕ್ತದೊಂದಿಗೆ ಅತೀ ಪರಿಶುದ್ಧ ಸ್ಥಳಕ್ಕೆ ಹೋಗಬೇಕಾಗಿತ್ತು.

ಅತೀ ಪರಿಶುದ್ಧ ಸ್ಥಳದ ಒಳಗಡೆಯಲ್ಲಿ, ಜಾಲಿಗಿಡದಿಂದ ಮಾಡಿದ ಶುದ್ಧ ಬಂಗಾರದಿಂದ ಸುತ್ತಲೂ ಮುಚ್ಚಿರುವ ಒಂದು ಪೆಟ್ಟಿಗೆ –ಯನ್ನು ಇಡುವಂತೆ ದೇವರು ಮೊಶೆಗೆ ಆಜ್ಞಾಪಿಸಿದನು. ಆ ಪೆಟ್ಟಿಗೆಯು **ಒಡಂಬಡಿಕೆಯ ಮಂಜೂಷವೆಂದು** ಕರೆಯಲ್ಪಟ್ಟಿತ್ತು. ಒಡಂಬಡಿಕೆಯ ಮಂಜೂಷದ ಒಳಗಡೆ ಹತ್ತು ಆಜ್ಞೆಗಳು ಬರೆದಿದ್ದ ಕಲ್ಲಿನ ಹಲಿಗೆಗಳು ಇಡಲ್ಪಟ್ಟಿದ್ದವು. ದೇವರು ಇಸ್ರಾಯೇಲ್ಯರ ಪಾಪಗಳನ್ನು ಕ್ಷಮಿಸುವದಕ್ಕಾಗಿ ಮಹಾಯಾಜಕನು ಪ್ರತಿವರ್ಷವೂ ಜನರ ಮೇಲೆ ಚಿಮುಕಿಸುತ್ತಿದ್ದ ಒಂದು ಪ್ರಾಣಿಯ ರಕ್ತವು ಇದ್ದ ಬಂಗಾರದ ಒಂದು ಮುಚ್ಚಿಗೆ ಮಂಜೂಷದ ಮೇಲೆ ಇಡಲ್ಪಟ್ಟಿತ್ತು. ಅದಕ್ಕಾಗಿಯೇ ಆ ಮುಚ್ಚಿಗೆಯನ್ನು ದೇವರು **ಪ್ರಾಯಶ್ಚಿತ್ತ ಮುಚ್ಚಿಗೆ** (ಅಥವಾ ಕೃಪಾಸನ) ಎಂದು ಕರೆದನು. {ಉಲೂಫ್‌ನಲ್ಲಿ: ಕ್ಷಮಾಪಣೆಯ ಉಪಕರಣ ಅಥವಾ ಸ್ಥಳ ಎಂದು ಇದರ ಅರ್ಥ}.

ಇದಾದ ನಂತರ, ದೇವದರ್ಶನದ ಗುಡಾರವನ್ನು ಸುತ್ತುವರಿದಿರುವಂತೆ ಒಂದು ಎತ್ತರವಾದ ಪರದೆಯನ್ನು ಹೇಗೆ ಸಿದ್ಧಪಡಿಸ –ಬೇಕೆಂದು ದೇವರು ಮೋಶೆಗೆ ತೋರಿಸಿದನು. **ಅಂಗಳದ ಗೋಡೆಯು** ಒಂದು ಬಿಳಿಯ ಪರದೆಯಿಂದ ಮಾಡಲ್ಪಡಬೇಕಾಗಿತ್ತು. ಗುಡಾರವನ್ನು ಸುತ್ತುವರಿದಿದ್ದ ಪರದೆಯಲ್ಲಿ ಅವರು **ಒಂದು ಬಾಗಿಲನ್ನು** ಮಾಡಬೇಕಾಗಿತ್ತು. ಯಾವನಾದರೂ ಅಂಗಳದ ಬಾಗಿಲಿನ ಮೂಲಕವಾಗಿ ಒಳಕ್ಕೆ ಹೋಗದ ಹೊರತು ದೇವದರ್ಶನದ ಗುಡಾರದ ಅಂಗಳದೊಳಕ್ಕೆ ಪ್ರವೇಶಿಸುವದಕ್ಕಾಗುತ್ತಿರಲಿಲ್ಲ. ಅಂಗಳದ ಒಳಗಡೆ, ಅಂಗಳದ ಬಾಗಿಲಿನ ಮುಂದುಗಡೆಯಲ್ಲಿ ತಾಮ್ರದಿಂದ ಮಾಡಿದ **ಒಂದು ಯಜ್ಞವೇದಿಯನ್ನು** ಇಡುವಂತೆ ದೇವರು ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಆಜ್ಞಾಪಿಸಿದನು. ಅಂಗಳದ ಬಾಗಿಲಿನ ಮೂಲಕವಾಗಿ ಹಾದುಹೋಗುವಂತ ಪ್ರತಿಯೊಬ್ಬರೂ ಮೊದಲು ಯಜ್ಞವೇದಿಯನ್ನು ಹಾದುಹೋಗಬೇಕಾಗಿತ್ತು. ಇಸ್ರಾಯೇಲ್ಯರೂ ಮತ್ತು ಆದಾಮನ ಸಂತಾನದವರೂ ದೇವರ ಸಮೀ – ಪಕ್ಕೆ ಹೇಗೆ ಬರಬೇಕೆಂಬ ರೀತಿಯನ್ನು ಅವರಿಗೆ ಕಲಿಸುವದಕ್ಕೆ ದೇವರು ಬಯಸಿದನು. ಇಸ್ರಾಯೇಲ್ಯರು ದೇವರ ಸಮೀಪಕ್ಕೆ ಹೇಗೆ ಬಂದರು? ಯಜ್ಞ ರಕ್ತದ ರೀತಿಯಿಂದ.

"ದೇವರ ನಿವಾಸದ ಸ್ಥಳದ" ಅಂಗಳವನ್ನು ಪ್ರವೇಶಿಸುವದಕ್ಕೆ ಇಷ್ಟಪಡುವ ಪ್ರತಿಯೊಬ್ಬರೂ ಪಾಪದ ಸಂದಾಯದ ಹಾಗೆ ಒಂದು ಪ್ರಾಣಿಯ ಯಜ್ಞದೊಂದಿಗೆ ಬರಬೇಕಾಗಿತ್ತು. **ಯಜ್ಞಪಶುವಿನ ರಕ್ತದ ಆಧಾರದ ಮೇಲೆ ಹೊರತುಪಡಿಸಿ ಯಾವನೂ ತನ್ನ ಸಮೀಪಕ್ಕೆ ಎಂದಿಗೂ ಬರಬಾರದೆಂದು** ದೇವರು ಇಸ್ರಾಯೇಲ್ಯರಿಗೆ ಕಲಿಸಿದ್ದನು. ಅದಕ್ಕಾಗಿಯೇ ದೇವರು ಮೋಶೆಗೆ, "ಪ್ರತಿದೇಹಿಗೂ ರಕ್ತವೇ ಪ್ರಾಣಾಧಾರ. ಅಂಥ ರಕ್ತವನ್ನು ನೀವು ಯಜ್ಞವೇದಿಗೆ ಎರಚಿ ನಿಮಗೋಸ್ಕರ ದೋಷಪರಿಹಾರ ಮಾಡಿಕೊಳ್ಳಬೇಕೆಂದು ನಿಮಗೆ ಅನುಗ್ರಹ ಮಾಡಿದ್ದೇನೆ. **ರಕ್ತವು ಪ್ರಾಣಾಧಾರವಾಗಿರುವ ಕಾರಣ ಅದರಿಂದ ದೋಷಪರಿಹಾರವಾಗುತ್ತದಷ್ಟೆ."** (ಯಾಜಕ–೧೭:೧೧) {ಉಲೂಫ್‌ನಲ್ಲಿ "ದೋಷಪರಿಹಾರ" ಎಂದರೆ: "ಪಾಪಗಳ ಸಂದಾಯಕ್ಕಾಗಿ ಇರುವ ಸಾಧನ" ಎಂದು ಅರ್ಥ} ಎಂದು ಹೇಳಿದ್ದನು.

ಆದುದರಿಂದ, ಒಂದುವೇಳೆ ಯಾವನಾದರೂ ದೇವರನ್ನು ಆರಾಧಿಸುವದಕ್ಕೆ ಬಯಸಿದರೆ, ಮೊದಲು ಅವನು ತನ್ನ ಪಾಪಕ್ಕಾಗಿ ಒಂದು ಪ್ರಾಣಿಯನ್ನು ಸಮರ್ಪಿಸಬೇಕು. ಆರಾಧಿಸುವವನು ಒಂದು ಹೋರಿ, ಒಂದು ಕುರಿ ಅಥವಾ ಒಂದು ಪಕ್ಷಿಯನ್ನು ದೇವ – –ದರ್ಶನದ ಗುಡಾರದ ಅಂಗಳಕ್ಕೆ ತರಬೇಕು. ಯಜ್ಞವೇದಿಯ ಮುಂದೆ ತಾನು ತಂದ ಯಜ್ಞಪಶುವಿನ ತಲೆಯ ಮೇಲೆ ಅವನು ಅವಶ್ಯವಾಗಿ ತನ್ನ ಕೈಗಳನ್ನಿಟ್ಟು ತಾನು ಪಾಪಿ ಮತ್ತು ತನ್ನ ಪಾಪಗಳಿಗಾಗಿ ಸಾಯುವದಕ್ಕೆ ತಾನು ಅರ್ಹನೆಂಬುದಾಗಿ ದೇವರ ಮುಂದೆ ಅರಿಕೆಮಾಡಬೇಕಾಗಿತ್ತು. ಮುಂದೆ, ಅವನು ಆ ಪ್ರಾಣಿಯನ್ನು ವಧಿಸಬೇಕು. ಇದಾದ ನಂತರ ಯಾಜಕನು ಆ ಯಜ್ಞ – –ಪಶುವಿನ ರಕ್ತವನ್ನು ತೆಗೆದುಕೊಂಡು ವೇದಿಯ ಮೇಲೆ ಮತ್ತು ವೇದಿಯ ಸುತ್ತಲಿನ ನೆಲದ ಮೇಲೆ ಚಿಮುಕಿಸಿ ಮತ್ತು ಪ್ರಾಣಿಯನ್ನು ವೇದಿಯ ಮೇಲೆ ಸುಡುತ್ತಿದ್ದನು. ಈ ರೀತಿಯಲ್ಲಿ ನಿಷ್ಕಳಂಕ ಪ್ರಾಣಿಯು ವ್ಯಕ್ತಿಯ ಸ್ಥಾನದಲ್ಲಿ ಸಾಯುವದರಿಂದ ಅಪರಾಧಿ ವ್ಯಕ್ತಿಗಳ ಪಾಪಗಳನ್ನು ದೇವರು ಕ್ಷಮಿಸುತ್ತಿದ್ದನು.

ಇಸ್ರಾಯೇಲ್ಯರು ಪ್ರತಿವರ್ಷವೂ ಮತ್ತೆ ಮತ್ತೆ ಈ ಪಶುಯಜ್ಞವನ್ನು ಪುನರಾವರ್ತಿಸುತ್ತಿದ್ದರು. **ಪ್ರಾಣಿಯ ಯಜ್ಞಗಳು ದೇವರ ಪರಿಶು –ದ್ಧತೆಯನ್ನು ಎಂದೆಂದಿಗೂ ತೃಪ್ತಿಪಡಿಸುತ್ತಿರಲಿಲ್ಲ.** ಇವು ಈ ಲೋಕಕ್ಕೆ ಬಂದು ಪಾಪಿಗಳ ಸ್ಥಾನದಲ್ಲಿ ಸಾಯುವದಕ್ಕಿದ್ದ **ವಿಮೋ – –ಚಕನ ಒಂದು ತಾತ್ಕಾಲಿಕ ನಿದರ್ಶನಗಳಾಗಿದ್ದವು.** ಇದರಿಂದ ದೇವರು ತನ್ನ ನೀತಿಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಆದಾಮನ ಸಂತಾನದವರನ್ನು ಕ್ಷಮಿಸಿ ಅವರ ಪಾಪದ ಸಾಲವನ್ನು ಶಾಶ್ವತವಾಗಿ ತೀರಿಸುವದಕ್ಕೆ ಸಾಧ್ಯವಾಯಿತು.

ವಿಮೋಚಕನು ಪಾಪಿಗಳಿಗಾಗಿ ಏನು ಮಾಡುವದಕ್ಕಿದ್ದನೆಂಬುದನ್ನು ಉದಾಹರಿಸುವದಕ್ಕೆ, ಇಸ್ರಾಯೇಲ್ಯರಿಗಾಗಿ ಪ್ರತಿವರ್ಷದ ಒಂದು ದಿನ ಮಹಾಯಾಜಕನು ದೇವದರ್ಶನ ಗುಡಾರದ ಅತೀ ಪರಿಶುದ್ಧ ಸ್ಥಳವಾದ ಎರಡನೆಯ ಕೋಣೆಯೊಳಕ್ಕೆ ಪ್ರವೇಶಿಸುವದನ್ನು ದೇವರು ಸ್ಥಾಪಿಸಿದನು. ಆ ದಿನವು **ದೋಷಪರಿಹಾರಕ ದಿನ** {ಉಲೂಫ್‌ನಲ್ಲಿ: ದೇವರು ಪಾಪಗಳನ್ನು ಮುಚ್ಚಿದ ದಿನ} ಎಂದು ಕರೆಯಲ್ಪಟ್ಟಿತ್ತು. ಆ ಒಂದು ದಿನದಂದು (ಅಕ್ಟೋಬರ್‌ನಲ್ಲಿ) ಮಹಾಯಾಜಕನು ಆ ಅತೀ ಪರಿಶುದ್ಧ ಸ್ಥಳದೊಳಕ್ಕೆ ಹೋಗಿ ಒಡಂ –ಬಡಿಕೆಯ ಮಂಜೂಷದ ದೋಷಪರಿಹಾರಕ ತೆರೆಯ ಮೇಲೆ ರಕ್ತವನ್ನು ಚಿಮುಕಿಸುವ ಅಧಿಕಾರವನ್ನು ಹೊಂದಿದ್ದನು. ಜನರ ಮತ್ತು ತನ್ನ ಸ್ವಂತ ಪಾಪಗಳಿಗಾಗಿ ದೇವರಿಗೆ ಸಮರ್ಪಿಸಿದ ನಿಷ್ಕಳಂಕ ಪ್ರಾಣಿಯ ರಕ್ತವನ್ನು ತನ್ನೊಂದಿಗೆ ತೆಗೆದುಕೊಂಡು ಬರದ ಹೊರತು ಅವನು ಎಂದಿಗೂ ಅತೀ ಪರಿಶುದ್ಧ ಸ್ಥಳದೊಳಕ್ಕೆ ಪ್ರವೇಶಿಸುವಂತಿರಲಿಲ್ಲ. ಈ ರೀತಿಯಾಗಿ, ವಿಮೋಚಕನು ಈ ಲೋಕಕ್ಕೆ ಬಂದು ತನ್ನ ರಕ್ತವನ್ನು ಸುರಿಸುವದರಿಂದ ದೇವರು ಪಾಪಿಗಳನ್ನು ಕ್ಷಮಿಸಿ ತನ್ನ ಪ್ರಸನ್ನತೆಯೊಳಗೆ ಎಂದೆಂದಿಗೂ ಇರುವಂತೆ ಅವರನ್ನು ಹೇಗೆ ಸ್ವಾಗತಿಸುತ್ತಾನೆಂಬುದನ್ನು ತೋರಿಸುವದಕ್ಕೆ ದೇವರು ಇಚ್ಛಿಸಿದ್ದನು!

ಅಹ್, ಜೊತೆ ಕೇಳುಗರೇ, ಈ ದಿನದ ನಮ್ಮ ಪಾಠವು ನಂಬಲಾಗದಷ್ಟು ಆಳವೂ ಮತ್ತು ಅದ್ಭುತವಾದದ್ದು ಆಗಿದೆ. ನಾವು ಹೇಳಬೇಕೆಂದು ಇಷ್ಟಪಡುವ ಇನ್ನೂ ಹೆಚ್ಚು ಸಂಗತಿಗಳಿವೆ ಆದರೆ ನಮ್ಮ ಸಮಯವು ಮುಗಿದುಹೋಗಿದೆ. ಹೇಗೂ, ನಾವು ನಿಮಗೆ ವಿದಾಯ ಹೇಳುವದಕ್ಕಿಂತ ಮೊದಲು, ದೇವದರ್ಶನ ಗುಡಾರದ ಕುರಿತಾಗಿ ನೀವು ತಿಳಿದುಕೊಳ್ಳಬೇಕಾದಂತ ಇನ್ನು ಸ್ವಲ್ಪ ವಿಷಯ –ವಿದೆ. ವಿಮೋಚನಕಾಂಡ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಯೆಹೋವನು ಮೋಶೆಗೆ ಆಜ್ಞಾಪಿಸಿದ್ದಂತೆಯೇ ಇಸ್ರಾಯೇಲ್ಯರು ಆ ಕೆಲಸವನ್ನೆಲ್ಲಾ ಮಾಡಿದ್ದರು. ಅವರು ಮಾಡಿದ್ದ ಕೆಲಸವನ್ನು ಮೋಶೆ ಪರೀಕ್ಷಿಸಲಾಗಿ ಯೆಹೋವನ ಅಪ್ಪಣೆಯಂತೆಯೇ ಅವರು ಎಲ್ಲವನ್ನು ಮಾಡಿ ಮುಗಿಸಿದರೆಂದು ತಿಳುಕೊಂಡು ಅವರನ್ನು ಆಶೀರ್ವದಿಸಿದನು.. . . . ಆಗ ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; **ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು**. ಮೇಘವು ದೇವದರ್ಶನದ ಗುಡಾರದ ಮೇಲೆ ನೆಲೆಯಾಗಿರುವದರಿಂದಲೂ ಯೆಹೋವನ ತೇಜಸ್ಸು ಗುಡಾರದೊಳಗೆ ತುಂಬಿರುವದರಿಂದಲೂ ಮೋಶೆ ಗುಡಾರದಲ್ಲಿ ಹೋಗಲಾರದೆ ಇದ್ದನು." (ವಿಮೋ–೩೯:೪೨,೪೩; ೪೦:೩೪,೩೫)

ಏನು ಸಂಭಸಿತೆಂಬುದನ್ನು ನೀವು ನೋಡಿದಿರಾ? ದೇವದರ್ಶನದ ಗುಡಾರವು ಸಿದ್ಧವಾದ ನಂತರ, ದೇವರ ಮಹಿಮೆಯು ಗುಡಾ–ರದ ಮೇಲೆ ಇಳಿದು ಬಂದು ಅತೀ ಪರಶುದ್ಧ ಸ್ಥಳವನ್ನು ತುಂಬಿಕೊಂಡಿತು, ಮತ್ತು ಸೂರ್ಯನ ಬೆಳಕನ್ನೂ ಸಹ ಮೀರಿಸುವಂತೆ ದೇವರ ಮಹಿಮೆಯ ಬೆಳಕು ಮುಂದಾಗಿ ಹೊಳೆಯುತ್ತಿತ್ತು! ನಾವು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದು ಏನೆಂದರೆ, ಲೋಕದ ವಿಮೋ––ಚಕನು ಪರಲೋಕದಿಂದ ಇಳಿದುಬಂದು ಆದಾಮನ ಮಕ್ಕಳ ಮಧ್ಯದಲ್ಲಿ ವಾಸಿಸಿದಾಗ ಬರುವಂತಹ ದೊಡ್ಡದಾದ ಆಶೀರ್ವಾದ ––ಗಳನ್ನು ದೇವರು ಇದೆಲ್ಲಾದರಲ್ಲಿ ಉದಾಹರಿಸುತ್ತಿದ್ದಾನೆ. **ವಿಮೋಚಕನು ತಾನೇ ದೇವರು ಕೊಟ್ಟಂತಹ ನಿಜವಾದ ದೇವದರ್ಶನದ ಗುಡಾರವಾಗಿದ್ದಾನೆ.** ಆದ್ದರಿಂದ ಒಂದು ಆಪ್ತವಾದ ಮತ್ತು ಅದ್ಭುತವಾದ ಸಂಬಂಧವನ್ನು ಎಂದೆಂದಿಗೂ ಆತನೊಂದಿಗೆ ಹೊಂದಿ–ಕೊಳ್ಳುವದಕ್ಕೆ ನಾವು ಶಕ್ತರಾಗಿದ್ದೇವೆ! ಪರಿಶುದ್ಧ ಸುವಾರ್ತೆ {ಇಂಜಿಲ್} ಯಲ್ಲಿ ಬರೆದಿರುವಂತೆ:

"ಆದಿಯಲ್ಲಿ ವಾಕ್ಯವಿತ್ತು, ಆ ವಾಕ್ಯವು ದೇವರ ಬಳಿಯಲ್ಲಿತ್ತು, ಆ ವಾಕ್ಯವು ದೇವರಾಗಿತ್ತು. . . .**ಆ ವಾಕ್ಯವೆಂಬವನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು!** ನಾವು ಆತನ ಮಹಿಮೆಯನ್ನು ನೋಡಿದೆವು. . . ಆತನು ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು." (ಯೋಹಾನ–೧:೧,೧೪,೨೯)

ಹೌದು, ವಿಮೋಚಕನು ದೇವದರ್ಶನದ ಗುಡಾರದ ಮತ್ತು ಪ್ರಾಣಿಯ ಯಜ್ಞಗಳ ಮುಖಾಂತರ ಚಿಹ್ನೆಯಾಗಿದ್ದ **ಪ್ರತಿಯೊಂದನ್ನು ನೆರವೇರಿಸಿದನು.** ಆತನು ಈ ಲೋಕಕ್ಕೆ ಬಂದು ಮನುಷ್ಯರೊಳಗೆ ಜೀವಿಸಿದ್ದು ಮಾತ್ರವಲ್ಲ ಆದರೆ ಪಾಪಿಗಳಿಗಾಗಿ ಸಂಪೂರ್ಣವಾದ ಯಜ್ಞದ ಹಾಗೆ ತನ್ನ ರಕ್ತವನ್ನೂ ಸಹ ಸುರಿಸಿದನು ಇದರಿಂದ ನಾವು ದೇವರೊಂದಿಗೆ ಎಂದೆಂದಿಗೂ ಆಪ್ತ ಸಂಬಂಧವನ್ನು ಹೊಂದಿಕೊಳ್ಳುವದಕ್ಕೆ ಶಕ್ತರಾಗಿದ್ದೇವೆ!

ಈದಿನ ನಾವು ಯಾವುದನ್ನು ಆಧ್ಯಯನ ಮಾಡಿದೆವೋ ಅದನ್ನು ಅರ್ಥಮಾಡಿಕೊಳ್ಳುವದಕ್ಕೆ ಕಷ್ಟವಾಗುತ್ತಿದೆಯಾ? ಹಾಗಾದರೆ ಕೆಲವೊಂದು ಸಲ ಅರ್ಥಮಾಡಿಕೊಳ್ಳುವದಕ್ಕೆ ಕಷ್ಟವಾಗಿರುವಂತ ಸಂಗತಿಗಳು ದೇವರ ವಾಕ್ಯದಲ್ಲಿರುತ್ತವೆ ಆದರೆ ಅವುಗಳನ್ನು ಸತ್ಯ ––ದಿಂದ ದೂರ ಇಡುವದಕ್ಕಾಗುವದಿಲ್ಲ! ಕರ್ತನು ತಾನೇ ಹೇಳಿರುವದನ್ನು ನಾವು ಎಂದಿಗೂ ಮರೆಯಬಾರದು, ಅದೇನೆಂದರೆ: "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ!. . . .ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ **ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ."** (ಯೆಶಾಯ–೫೫: ೮, ೯)

ಈ ದಿನ ನಮ್ಮ ಸಮಯವು ಮುಗಿಯಿತು. . . .

ದೇವರು ನಿಮ್ಮನ್ನು ಆಶೀರ್ವದಿಸಲಿ. ಪರಿಶುದ್ಧ ವಾಕ್ಯಗಳಲ್ಲಿರುವ ಈ ವಚನಗಳೊಂದಿಗೆ ನಾವು ನಿಮಗೆ ವಿದಾಯ ಹೇಳುತ್ತೇವೆ:

**"ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! ಕರ್ತನ ಮನಸ್ಸನ್ನು ತಿಳುಕೊಂಡವನಾರು? ಆತನಿಗೆ ಆಲೋಚನಾ ಕರ್ತನು ಯಾರು? ಮೊದಲು ಆತನಿಗೆ ಕೊಟ್ಟು ಪ್ರತಿಫಲವನ್ನು ತೆಗೆದುಕೊಳ್ಳುವವನು ಯಾರು? ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೇ ಸದಾಕಾಲವೂ ಸ್ತೋತ್ರ. ಆಮೆನ್."**
(ರೋಮಾ–೧೧:೩೩–೩೬)

[ಪಾಠ ೪೦: ದೇವದರ್ಶನದ ಗುಡಾರ] [ಸಾರಾಂಶಗಳ ಪಟ್ಟಿ] [ಪಾಠ ೪೨: ತಾಮ್ರದ ಸರ್ಪ]

ಪಾಠ ೪೧

# ಇಸ್ರಾಯೇಲ್ಯರ ಅಪನಂಬಿಕೆ

ಅರಣ್ಯಕಾಂಡ ೧೩, ೧೪

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ತೋರಾದ ಪರಿಶೋಧನೆಯನ್ನು ನಾವು ಮುಂದುವರಿಸೋಣ. ನಿಮಗೆ ಗೊತ್ತಿರುವ ಹಾಗೆ, ತೋರಾವು ಪ್ರವಾದಿಗಳ ಬರವಣಿಗೆಯ ಮೊದಲ ಭಾಗವಾಗಿದ್ದು ಐದು ವಿಭಾಗಗಳನ್ನು ಅಥವಾ ಪುಸ್ತಕಗಳನ್ನು ಒಳಗೊಂಡಿದೆ. **ಆದಿಕಾಂಡ** ಎಂದು ಕರೆಯಲ್ಪಡುವ ಮೊದಲ ಪುಸ್ತಕದಲ್ಲಿ ಪಾಪವು ಲೋಕದೊಳಕ್ಕೆ ಹೇಗೆ ಪ್ರವೇಶಿಸಿತು ಮತ್ತು ಇದು ತನ್ನೊಂದಿಗೆ ವೇದನೆ ಮರಣ ಮತ್ತು ದಂಡನೆ –ಯನ್ನು ಹೇಗೆ ತಂದಿತೆಂಬುದನ್ನು ನಾವು ಕಲಿತುಕೊಂಡೆವು. ಹೇಗೂ, ಪಾಪದ ದಂಡನೆಯಾಗಿರುವ ನಿತ್ಯವಾದ ನರಕದ ಬೆಂಕಿ – –ಯಿಂದ ಆದಾಮನನ್ನು ಮತ್ತು ಅವನ ಸಂತಾನದವರನ್ನು ರಕ್ಷಿಸುವದಕ್ಕೆ ದೇವರು ಹೇಗೆ ಒಂದು ಯೋಜನೆಯನ್ನು ಸಂಕಲ್ಪಿಸಿದ –ನೆಂಬುದನ್ನೂ ಸಹ ನಾವು ನೋಡಿಕೊಂಡೆವು. ಪಾಪಿಗಳಿಗಾಗಿ ಮರಣ ಹೊಂದುವದಕ್ಕೆ ಒಬ್ಬ ವಿಮೋಚಕನನ್ನು ಕಳಿಸುವ ವಾಗ್ದಾನ –ವನ್ನು ದೇವರು ಹೇಗೆ ಮಾಡಿದನು ಮತ್ತು ಇದರಿಂದ ಆತನು ತನ್ನ ಸ್ವಂತ ನೀತಿಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಅವರ ಪಾಪಗಳನ್ನು ದೇವರು ಹೇಗೆ ಕ್ಷಮಿಸಿದನೆಂಬುದನ್ನು ನಾವು ಕಲಿತುಕೊಂಡೆವು. ಈ ಲೋಕಕ್ಕೆ ಪ್ರವಾದಿಗಳು ಮತ್ತು ಕೊನೆಯಲ್ಲಿ ಲೋಕದ ವಿಮೋಚಕನು ಬರುವಂತಹ ಒಂದು ದೊಡ್ಡ ಜನಾಂಗವನ್ನಾಗಿ ಮಾಡುತ್ತೇನೆಂಬುದಾಗಿ ದೇವರು ಅಬ್ರಹಾಮನಿಗೆ ಹೇಗೆ ವಾಗ್ದಾನ ಮಾಡಿದನೆಂಬುದನ್ನೂ ಸಹ ಆದಿಕಾಂಡ ಪುಸ್ತಕವು ನಮಗೆ ಕಲಿಸಿತು.

**ವಿಮೋಚನಕಾಂಡ** ಎಂಬ ತೋರಾದ ಎರಡನೆಯ ಪುಸ್ತಕದಲ್ಲಿ, ದೇವರು ತನ್ನ ಪ್ರವಾದಿಯಾದ ಮೋಶೆಯ ಮುಖಾಂತರ ಅಬ್ರ – –ಹಾಮನ ಸಂತಾನದವರಾದ ಇಸ್ರಾಯೇಲ್ಯರನ್ನು ಐಗುಪ್ತದೇಶದಲ್ಲಿನ ದಾಸತ್ವದ ಅವರ ಬಂಧನಗಳಿಂದ ಅವರನ್ನು ಹೇಗೆ ಬಿಡುಗಡೆ ಮಾಡಿದನೆಂಬುದನ್ನು ನಾವು ನೋಡಿದೆವು. ದೇವರು ಇಸ್ರಾಯೇಲ್ ಜನಾಂಗದವರನ್ನು ಐಗುಪ್ತದಿಂದ ಹೊರಗೆ ತಂದು ಮರು – –ಭೂಮಿಯೊಳಗೆ ನಡೆಸಿ ಸೀನಾಯಿ ಪರ್ವತದ ಬಳಿಗೆ ತಂದು ಅಲ್ಲಿ ಅವರಿಗೆ ಹತ್ತು ಆಜ್ಞೆಗಳನ್ನು ಕೊಟ್ಟು ತಾನು ಅವರ ಪಾಪ – –ಗಳನ್ನು ಕ್ಷಮಿಸುವಂತಹ ರಕ್ತ ಯಜ್ಞದ ರೀತಿಯ ಕುರಿತು ಅವರಿಗೆ ಕಲಿಸಿದನು.

ಕೊನೆಯ ಪಾಠದಲ್ಲಿ, ದೇವರು ಅವರ ಮಧ್ಯದಲ್ಲಿ ವಾಸಿಸುವದಕ್ಕೆ ಶಕ್ತನಾಗುವಂತೆ ತನಗಾಗಿ ಒಂದು ಸುಂದರವಾದ ಮತ್ತು ಆಶ್ಚರ್ಯಕರವಾದ **ದೇವದರ್ಶನದ ಗುಡಾರವನ್ನು** ಕಟ್ಟುವಂತೆ ಮೋಶೆಗೂ ಮತ್ತು ಇಸ್ರಾಯೇಲ್ಯರಿಗೂ ಆಜ್ಞಾಪಿಸಿದನು. ಒಂದು ಸಲ ಎಲ್ಲವೂ ಸಿದ್ಧವಾದ ನಂತರ: **"**ಮೇಘವು ದೇವದರ್ಶನದ ಗುಡಾರವನ್ನು ಮುಚ್ಚಿತು; ಯೆಹೋವನ ತೇಜಸ್ಸು ಗುಡಾರವನ್ನು ತುಂಬಿತು.**"** (ವಿಮೋ–೪೦:೩೪) ದೇವರು ಅವರೊಂದಿಗೆ ಒಂದು ಅದ್ಭುತವಾದ ಸಂಬಂಧವನ್ನು ಹೊಂದಿಕೊಳ್ಳಲು ಹೇಗೆ ಇಷ್ಟ –ಪಟ್ಟಿದ್ದಾನೆಂಬುದನ್ನು ಇಸ್ರಾಯೇಲ್ಯರಿಗೆ ತೋರಿಸಿದ್ದನು, ಆದರೆ ದೇವದರ್ಶನ ಗುಡಾರದ ಯಜ್ಞವೇದಿಯ ಮೇಲೆ ಸಮರ್ಪಿಸಿದ ಯಜ್ಞದ ರಕ್ತದ ಮುಖಾಂತರವೇ ಹೊರತು ಯಾವನೂ ಆತನ ಸಮೀಪಕ್ಕೆ ಬರುವಂತಿರಲಿಲ್ಲ. ಅದರ ಪ್ರಾಣಿ ಯಜ್ಞಗಳೊಂದಿಗೆ ದೇವದರ್ಶನದ ಗುಡಾರವು, ಪರಲೋಕದಿಂದ ಬಂದು ಭೂಲೋಕದಲ್ಲಿ ವಾಸಿಸಿ ಪಾಪವನ್ನು ನಿವಾರಣೆ ಮಾಡುವದಕ್ಕೆ ಒಂದು ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸುವಂತ ವಿಮೋಚಕನ ಕೇವಲ ಒಂದು ನಿದರ್ಶನಗಳು ಮತ್ತು ಛಾಯೆಗಳಾಗಿವೆ.

**ಯಾಜಕಕಾಂಡ ಎಂದು ಕರೆಯಲ್ಪಡುವ ತೋರದ ಮೂರನೆಯ ವಿಭಾಗ**ದಲ್ಲಿ, {ಲೇವಿ ಕುಲದ ನಿಮಯಗಳು) ಪಾಪವನ್ನು ಮುಚ್ಚು – ವಂತಹ ಯಜ್ಞಗಳನ್ನು ಇಸ್ರಾಯೇಲ್ಯರು ದೇವರಿಗೆ ಹೇಗೆ ಸಮರ್ಪಿಸಬೇಕೆಂಬುದನ್ನು ವಿವರಿಸುವಂತ ನಿಯಮಗಳನ್ನು ಬರೆಯು – –ವಂತೆ ದೇವರು ಮೋಶೆಯನ್ನು ಪ್ರೇರೇಪಿಸಿದನು. ಈ ಪುಸ್ತಕವು ತುಂಬಾ ಅಗಾಧವಾಗಿದ್ದು ಇದು ಒಳಗೊಂಡಿರುವದನ್ನೆಲ್ಲಾ ಗಮ –ನಿಸುವದಕ್ಕೆ ನಮಗೆ ಸಮಯವಿಲ್ಲ. ಒಂದುವೇಳೆ ನೀವು ನಿಮಗಾಗಿ ಇದನ್ನು ಅಧ್ಯಯನ ಮಾಡಿದರೆ, ಸುಮಾರು ಇನ್ನೂರು ಸಲ ಕಾಣಿಸಿಕೊಂಡಿರುವ ಎರಡು ಶಬ್ದಗಳನ್ನು ನೀವು ಗಮನಿಸಲೇಬೇಕು. ಈ ಎರಡು ಶಬ್ದಗಳು ಇಡೀ ಪುಸ್ತಕದ ಸಂದೇಶವನ್ನು ಸಂಕ್ಷಿಪ್ತಗೊಳಿಸುತ್ತವೆ. ಈ ಎರಡು ಪ್ರಾಮುಖ್ಯವಾದ ಶಬ್ದಗಳು ಯಾವುವೆಂದರೆ, **"**ಪರಿಶುದ್ಧ**"** ಮತ್ತು **"**ರಕ್ತ.**"** ಈ ಎರಡು ಶಬ್ದಗಳು

ಈ ಪುಸ್ತಕದಲ್ಲಿ ಯಾಕೆ ಪದೇ ಪದೇ ಕಾಣಿಸಿಕೊಂಡಿವೆ? ಯಾಕೆಂದರೆ ಒಬ್ಬ ವ್ಯಕ್ತಿ ಎಂದಿಗೂ ಗಟ್ಟಿಯಾಗಿ ಹಿಡಿದುಕೊಳ್ಳುವ ಒಂದು ಹೆಚ್ಚು ಪ್ರಾಮುಖ್ಯವಾದ ಸಂದೇಶವೆಂದರೆ ಅದು ದೇವರು ಪರಿಶುದ್ಧನು ಮತ್ತು **"ರಕ್ತಧಾರೆಯಿಲ್ಲದೆ ಪಾಪಪರಿಹಾರವಿಲ್ಲ!"** (ಇಬ್ರಿಯ–೯:೨೨) ಎಂಬದು. ಒಬ್ಬ ಅಶುದ್ಧ ಪಾಪಿಯು ಪಾಪದ ಕಲೆಯೊಂದಿಗೆ ಶುದ್ಧನು ಮತ್ತು ಪವಿತ್ರನೂ ಆಗಿರುವ ದೇವರ ಸಮೀಪಕ್ಕೆ ಹೇಗೆ ಬರುತ್ತಾನೆ ಎಂಬುದನ್ನು ಇಸ್ರಾಯೇಲ್ಯರಿಗೆ ತೋರಾದ ಮೂರನೆಯ ಪುಸ್ತಕದ ಮೌಲ್ಯವು ಕಲಿಸಿಕೊಡುತ್ತದೆ. ಒಂದು ಯಜ್ಞದ ರಕ್ತದ ಹೊರತಾಗಿ ಅಂದರೆ ಈ ಲೋಕಕ್ಕೆ ಬಂದು ಪಾಪಿಗಳಿಗಾಗಿ ಸತ್ತು ಅವರ ಪಾಪದ ಸಾಲವನ್ನು ಸಂದಾಯ ಮಾಡಲಿರುವ ಪರಿಶುದ್ಧ ವಿಮೋಚಕನ ಮುನ್ಸೂಚನೆಯಾಗಿರುವ ಒಂದು ಯಜ್ಞದ ರಕ್ತದ ಹೊರತಾಗಿ ಆತನ ಸಮೀಪಕ್ಕೆ ಯಾವನೂ ಬರಲಾಗುವ –ದಿಲ್ಲ ಎನ್ನುವದನ್ನು ದೇವರು ಸ್ಪಷ್ಟವಾಗಿ ತೋರಿಸಿದ್ದಾನೆ.

ಈ ದಿನ ಉಳಿದಿರುವ ಸಮಯದಲ್ಲಿ, ಮೋಶೆಯ ತೋರಾದ **ನಾಲ್ಕನೆಯ ವಿಭಾಗವಾಗಿರುವ ಅರಣ್ಯಕಾಂಡ** ಎಂಬ ಪುಸ್ತಕದೊಳಕ್ಕೆ ಈಗ ಹಾದು ಹೋಗೋಣ. ಈ ಪುಸ್ತಕದಲ್ಲಿ, ಇಸ್ರಾಯೇಲ್ಯರು ಸೀನಾಯಿ ಪರ್ವತದ ತಳದಲ್ಲಿ ಒಂದು ವರ್ಷದವರೆಗೆ ಹೇಗೆ ಜೀವಿಸಿದ್ದರು ಎಂಬುದನ್ನು ನಾವು ಓದುತ್ತೇವೆ. ಆ ವರ್ಷದಲ್ಲಿ ದೇವರು ಅವರಿಗೆ ಅನೇಕ ಸಂಗತಿಗಳನ್ನು ಕಲಿಸಿದನು ಮತ್ತು ಈ ದಿನ ನಾವು ಓದುತ್ತಿರುವ ಪುಸ್ತಕದಿಂದ ಪರಿಶುದ್ಧ ತೋರಾದ ಹೆಚ್ಚು ಸಂಗತಿಗಳನ್ನು ಬರೆಯುವದಕ್ಕೆ ದೇವರು ಮೋಶೆಯನ್ನು ಪ್ರೇರೇಪಿಸಿದನು.

ಹೇಗೂ, ಇಸ್ರಾಯೇಲ್ಯರು ಮರುಭೂಮಿಯಲ್ಲಿ ಎಂದೆಂದಿಗೂ ಇರಬೇಕೆಂಬುದು ದೇವರ ಉದ್ದೇಶವಾಗಿರಲಿಲ್ಲ. ಅದಕ್ಕಾಗಿಯೇ, ಒಂದು ದಿನ ದೇವರು ಅವರಿಗೆ ಎದ್ದು ಹೊರಟು ತಾನು ಅವರಿಗೆ ವಾಗ್ದಾನ ಮಾಡಿದ್ದ ಸಮೃದ್ಧ ದೇಶವಾದ ಕಾನಾನ್ ದೇಶದ ಕಡೆಗೆ ಪ್ರಯಾಣವನ್ನು ಮುಂದುವರಿಸುವಂತೆ ಹೇಳಿದನು. ಆ ದಿನದಲ್ಲಿ ಅವರು ಸೀನಾಯ್ ಪ್ರದೇಶದಿಂದ ಹೊರಟಾಗ ದೇವ –
–ದರ್ಶನದ ಗುಡಾರವನ್ನು ಆವರಿಸಿಕೊಂಡಿದ್ದ ದೇವರ ಮಹಿಮೆಯ ಮೇಘವು ಮೇಲೆದ್ದು ಅವರ ಮುಂದುಗಡೆಯಲ್ಲಿ ಚಲಿಸುವ –ದಕ್ಕೆ ಪ್ರಾರಂಭವಾಯಿತು. **ಯೆಹೋವನು ತಾನೇ** ಹಗಲಿನಲ್ಲಿ **ಮೇಘಸ್ತಂಭದಲ್ಲಿಯೂ** ಮತ್ತು ರಾತ್ರಿಯಲ್ಲಿ **ಅಗ್ನಿಸ್ತಂಭದಲ್ಲಿಯೂ** ಅವರನ್ನು ಮುನ್ನಡೆಸಿದನು.

ಹಾಗಾಗಿ, ದೇವರು ಅಬ್ರಹಾಮನಿಗೂ ಮತ್ತು ಅವನ ಸಂತತಿಯವರಿಗೂ ಬಹಳ ಹಿಂದೆಯೇ ವಾಗ್ದಾನ ಮಾಡಿದ್ದ ಕಾನಾನ್ ದೇಶದ ಅಂಚನ್ನು ತಲುಪುವವರೆಗೂ ಇಸ್ರಾಯೇಲ್ಯರು ಹಗಲಿನಲ್ಲಿ ಮೇಘಸ್ತಂಭವನ್ನೂ ಮತ್ತು ಇರುಳಿನಲ್ಲಿ ಅಗ್ನಿಸ್ತಂಭವನ್ನೂ ಹಿಂಬಾಲಿಸಿ –
–ದರು. ದೇವರು ತನ್ನ ವಾಗ್ದಾನಗಳನ್ನು ಮರೆತಿರಲಿಲ್ಲ. **ದೇವರ ನಂಬಿಗಸ್ತಿಕೆ ಮತ್ತು ಬಲದ ನಿಮಿತ್ತವಾಗಿ,** ಈ ದಿನ ನಾವು ಕರೆಯು –ವಂತ ಪ್ಯಾಲೆಸ್ತೀನ್ ಅಥವಾ ಇಸ್ರೇಲ್ ಎಂಬ **ಕಾನಾನ್ ದೇಶದ ಅಂಚಿಗೆ ಇಸ್ರಾಯೇಲ್ಯರು ಬಂದು ತಲುಪಿದರು.**

ಹೇಗೂ, ಕಾನಾನ್ ದೇಶವು ನಿವಾಸಿಗಳಿಂದ ತುಂಬಿತು. ಕಾನಾನಿನ ಜನರು ಬಹಳವಾಗಿದ್ದರು ಮತ್ತು ಬಲಿಷ್ಠರಾಗಿದ್ದರು. ಹಾಗಾ –ದರೆ ಇಸ್ರಾಯೇಲ್ಯರು ಹೇಗೆ ಇದನ್ನು ವಶಪಡಿಸಿಕೊಂಡರು? ಕೇವಲ ಒಂದೇ ಮಾರ್ಗದಿಂದ: **ದೇವರು ಅವರಿಗೆ ಆ ದೇಶವನ್ನು ಕೊಡುವದಕ್ಕಿದ್ದನು.** ದೇವರಿಗೆ ಅಸಾಧ್ಯವಾದದ್ದು ಒಂದೂ ಇಲ್ಲ! ದೇವರು ಅಬ್ರಹಾಮನಿಗೆ, **"ಕಾನಾನ್ ದೇಶವನ್ನು ನಿನ್ನ ಸಂತಾನ –ದವರಿಗೆ ಕೊಡುತ್ತೇನೆ!"** ಎಂದು ವಾಗ್ದಾನ ಮಾಡಿದ್ದನು. ಕಾನಾನಿನ ಜನರನ್ನು ನಿರ್ಮೂಲಮಾಡಿ ಅಬ್ರಹಾಮನ ಸಂತಾನದವರಿಗೆ ಅಂದರೆ ಇಸ್ರಾಯೇಲ್ಯರಿಗೆ ಅದನ್ನು ಕೊಡುವದಕ್ಕೆ ದೇವರು ಸಂಕಲ್ಪಿಸಿದ್ದನು. ಕಾನಾನ್ ದೇಶದ ಜನರ ಪಾಪಗಳು ತುಂಬಾ ದೊಡ್ಡ –ದಾಗಿದ್ದವು ಎನ್ನುವದನ್ನು ತಿಳಿದುಕೊಳ್ಳುವದು ಮುಖ್ಯವಾದುದಾಗಿದೆ. ಅವರು ತಮ್ಮ ಮಕ್ಕಳನ್ನು ಸುಳ್ಳು ದೇವರುಗಳಿಗೆ ಯಜ್ಞ –
–ಮಾಡುತ್ತಿದ್ದಾಗ್ಯೂ ಅಶ್ಲೀಲ ಅನೀತಿವಂತಿಕೆಗಳ ದೋಷಿಗಳಾಗಿದ್ದರು. ದೇವರು ಕಾನಾನ್ ದೇಶದ ಜನರ ವಿಷಯದಲ್ಲಿ ತುಂಬಾ ತಾಳ್ಮೆಯುಳ್ಳವನಾಗಿದ್ದನು, ಆದರೆ ಅವರು ತಮ್ಮ ನಾಚಿಗೆಟ್ಟ ಆಶೆಗಳಲ್ಲಿ ಮತ್ತು ಪಾಪದ ಮಾರ್ಗಗಳಲ್ಲಿ ಮುಂದುವರೆದರು. ಆದ –
–ಕಾರಣ, ದೇವರು ಅವರ ದೇಶವನ್ನು ಇಸ್ರಾಯೇಲ್ ಜನಾಂಗದವರಿಗೆ ಕೊಡುವದಕ್ಕೆ ಉದ್ದೇಶಿಸಿದನು.

ಹಾಗಾದರೆ ಈಗ, ಇಸ್ರಾಯೇಲ್ಯರು ಕಾನಾನ್ ದೇಶದ ಅಂಚಿಗೆ ಬಂದಾಗ ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ತೋರಾದ ನಾಲ್ಕನೆಯ ವಿಭಾಗದಲ್ಲಿರುವದನ್ನು ಓದಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

**"**ಯೆಹೋವನು ಮೋಶೆಗೆ – ನಾನು **ಇಸ್ರಾಯೇಲ್ಯರಿಗೆ ಕೊಡುವ** ಕಾನಾನ್ ದೇಶವನ್ನು ಸಂಚರಿಸಿ ನೋಡುವದಕ್ಕೆ ನೀನು ಒಂದೊಂದು ಕುಲದಿಂದ ಒಬ್ಬೊಬ್ಬ ಮುಖ್ಯಸ್ಥನನ್ನು ಕಳುಹಿಸಬೇಕೆಂದು ಆಜ್ಞಾಪಿಸಿದನು. ಯೆಹೋವನ ಅಪ್ಪಣೆಯ ಮೇರೆಗೆ ಮೋಶೆ ಪಾರಾನ್ ಅರಣ್ಯದಿಂದ ಇಸ್ರಾಯೇಲ್ಯರ ಮುಖ್ಯಸ್ಥರನ್ನು ಕಳುಹಿಸಿದನು. . . .ಅವರು ಬೆಟ್ಟವನ್ನು ಹತ್ತಿ ಆ ದೇಶವನ್ನು ಸಂಚರಿಸಿ ನೋಡಿದರು.**"** (ಅರಣ್ಯ–೧೩:೧–೩, ೨೧)

**"**ಅವರು ನಾಲ್ವತ್ತು ದಿವಸಗಳು ಆ ದೇಶವನ್ನು ಸಂಚರಿಸಿ ನೋಡಿದ ಮೇಲೆ ಪಾರಾನ್ ಅರಣ್ಯದಲ್ಲಿದ್ದ ಮೋಶೆ ಆರೋನರ ಮತ್ತು ಇಸ್ರಾಯೇಲ್ಯರ ಸರ್ವಸಮೂಹದವರ ಬಳಿಗೆ ಕಾದೇಶಿಗೆ ಬಂದು ಅವರಿಗೆ ಸಮಾಚಾರವನ್ನು ತಿಳಿಸಿ ಆ ದೇಶದ ಹಣ್ಣುಗಳನ್ನು ತೋರಿಸಿದರು. ಅವರು ಮೊಶೆಗೆ – ನೀನು ನಮ್ಮನ್ನು ಕಳುಹಿಸಿದ ದೇಶಕ್ಕೆ ಹೋದೆವು; ಅದು ಹಾಲೂ ಜೇನೂ ಹರಿಯುವ

ದೇಶವೇ; ಅಲ್ಲಿಯ ಹಣ್ಣುಗಳು ಇಂಥವು. ಆದರೆ ಆ ದೇಶದ ನಿವಾಸಿಗಳು ಬಲಿಷ್ಠರು; ಅವರಿರುವ ಪಟ್ಟಣಗಳು ದೊಡ್ಡವಾಗಿಯೂ ಕೋಟೆ ಕೊತ್ತಲುಗಳುಳ್ಳವಾಗಿಯೂ ಅವೆ; ಅದಲ್ಲದೆ ಅಲ್ಲಿ ಅನಾಕ್ಯರೆಂದು ಕರೆಯಲ್ಪಡುವ ಉನ್ನತರಾದ ಪುರುಷರನ್ನು ನೋಡಿದೆವು." (ಅರಣ್ಯ–೧೩:೨೭–೨೮).

"ಇಸ್ರಾಯೇಲ್ಯರು ಮೋಶೆಗೆ ವಿರೋಧವಾಗಿ ಗುಣಗುಟ್ಟಲಾಗಿ **ಕಾಲೇಬನು** ಅವರನ್ನು ಸುಮ್ಮನಿರಿಸಿ – ನಾವು ನಿರ್ಭಯವಾಗಿ ಆ ಬೆಟ್ಟದ ಸೀಮೆಗೆ ಹತ್ತಿಹೋಗಿ ಅದನ್ನು ಸ್ವಾಧೀನಪಡಿಸಿಕೊಳ್ಳೋಣ; ಅದನ್ನು ಜಯಿಸಬಲ್ಲೆವು ಎಂದು ಹೇಳಿದನು. **ಆದರೆ ಅವನ ಜೊತೆಯಲ್ಲಿ ಹೋದವರು** – ಆ ಜನರು ನಮಗಿಂತ ಬಲಿಷ್ಠರು; ಅವರ ಮೇಲೆ ಹೋಗುವದಕ್ಕೆ ನಮಗೆ ಶಕ್ತಿಸಾಲದು ಅಂದರು. ಅದಲ್ಲದೆ ಇವರು ತಾವು ಸಂಚರಿಸಿ ನೋಡಿದ ದೇಶದ ವಿಷಯವಾಗಿ ಇಸ್ರಾಯೇಲ್ಯರಿಗೆ ಅಶುಭಸಮಾಚಾರವನ್ನು ಹೇಳುವವರಾಗಿ – ನಾವು ಸಂಚರಿಸಿ ನೋಡಿದ ದೇಶವು ತನ್ನಲ್ಲಿ ವಾಸಿಸುವವರನ್ನು ನುಂಗಿಬಿಡುತ್ತದೆ; ಅದಲ್ಲದೆ ನಾವು ಅದರಲ್ಲಿ ನೋಡಿದ ಜನರೆ –ಲ್ಲರೂ ಬಹಳ ಎತ್ತರವಾದವರು; ಅಲ್ಲಿ ನೆಫೀಲಿಯರನ್ನು ಅಂದರೆ ನೆಫೀಲಿಯ ವಂಶದವರಾದ ಉನ್ನತಪುರುಷರನ್ನು ನೋಡಿದೆವು. ನಾವು ಅವರ ಮುಂದೆ ಮಿಡತೆಗಳಂತೆ ಇದ್ದೇವೆಂದು ತಿಳಿದುಕೊಂಡೆವು; ಅವರಿಗೆ ನಾವು ಹಾಗೆಯೇ ತೋರಿದೆವು ಅಂದರು." (ಅರಣ್ಯ–೧೩:೩೦–೩೩)

"ಅದನ್ನು ಕೇಳಿ ಜನಸಮೂಹದವರೆಲ್ಲರೂ ಗುಲ್ಲುಮಾಡಿ ಬಹಳ ಕೂಗಿಕೊಂಡರು; ಆ ರಾತ್ರಿಯೆಲ್ಲಾ ಜನರು **ಅಳುತ್ತಿದ್ದರು**. ಇಸ್ರಾ –ಯೇಲ್ಯರೆಲ್ಲರೂ ಮೋಶೆ ಆರೋನರ ವಿರೋಧವಾಗಿ **ಗುಣುಗುಟ್ಟಿ** – ನಾವು ಐಗುಪ್ತದೇಶದಲ್ಲಿಯೇ ಸತ್ತಿದ್ದರೆ ಎಷ್ಟೋ ಮೇಲಾಗಿತ್ತು; ಈ ಅರಣ್ಯದಲ್ಲಿಯಾದರೂ ಸತ್ತಿದ್ದರೆ ಮೇಲಾಗಿತ್ತು. ಯೆಹೋವನು ನಮ್ಮನ್ನು ಯಾಕೆ ಕತ್ತಿಯ ಬಾಯಿಂದ ಸಾಯಿಸುವದಕ್ಕೆ ಈ ದೇಶಕ್ಕೆ ಬರಮಾಡುತ್ತಾನೆ; ನಮ್ಮ ಹೆಂಡರೂ ಮಕ್ಕಳೂ ಪರರ ಪಾಲಾಗುವರಲ್ಲಾ; ನಾವು ಐಗುಪ್ತದೇಶಕ್ಕೆ ತಿರಿಗಿ ಹೋಗುವದು ಒಳ್ಳೇದಲ್ಲವೇ ಎಂದು ಹೇಳಿಕೊಳ್ಳುತ್ತಾ ಒಬ್ಬರ ಸಂಗಡಲೊಬ್ಬರು – ನಾವು ನಾಯಕನನ್ನು ನೇಮಿಸಿಕೊಂಡು ಐಗುಪ್ತದೇಶಕ್ಕೆ ತಿರಿಗಿ ಹೋಗೋಣ ಎಂದು ಮಾತಾಡಿಕೊಳ್ಳುತ್ತಿದ್ದರು. ಆಗ ಮೋಶೆ ಆರೋನರು ಇಸ್ರಾಯೇಲ್ಯರ ಸರ್ವಸಮೂಹದವರ ಮುಂದೆ ಬೋರಲಬಿದ್ದರು. ಮತ್ತು ದೇಶವನ್ನು ಸಂಚರಿಸಿ ನೋಡಿದವರಲ್ಲಿದ್ದ ನೂನನ ಮಗನಾದ **ಯೆಹೋಶುವನೂ** ಯೆಫುನ್ನೆಯ ಮಗ –ನಾದ **ಕಾಲೇಬನೂ** ತಮ್ಮ ಬಟ್ಟೆಗಳನ್ನು ಹರಿದುಕೊಂಡು ಇಸ್ರಾಯೇಲ್ಯರ ಸರ್ವಸಮೂಹದವರಿಗೆ ಹೀಗಂದರು – ನಾವು ಸಂಚರಿಸಿ ನೋಡಿದ ದೇಶವು ಅತ್ಯುತ್ತಮವಾದದ್ದು; ಅದು ಹಾಲೂ ಜೇನೂ ಹರಿಯುವ ದೇಶ; ಯೆಹೋವನು ನಮ್ಮನ್ನು ಮೆಚ್ಚಿಕೊಂಡರೆ ಅದ –ರಲ್ಲಿ ನಮ್ಮನ್ನು ಸೇರಿಸಿ ಅದನ್ನು ನಮ್ಮ ಸ್ವಾಧೀನಕ್ಕೆ ಕೊಡುವನು; ಹೀಗಿರುವದರಿಂದ ಯೆಹೋವನಿಗೆ ತಿರುಗಿಬೀಳಬೇಡಿರಿ. ಅದ –ಲ್ಲದೆ ಆ ದೇಶದ ಜನರಿಗೆ ದಿಗಿಲುಪಡಬೇಡಿರಿ; ನಾವು ಅವರನ್ನು ನುಂಗಿ ಪುಷ್ಟಿಯಾಗುವೆವು. ಅವರಿಗೆ ನೆರಳಾಗಿದ್ದ ದೇವರು ಅವರನ್ನು ಕೈಬಿಟ್ಟನು; **ನಮ್ಮ ಕಡೆ ಯೆಹೋವನು ಇದ್ದಾನೆ**. ಅವರಿಗೆ ಭಯಪಡಬೇಡಿರಿ ಅಂದರು." (ಅರಣ್ಯ–೧೪:೧–೯)

"**ಆದರೆ ಜನಸಮೂಹದವರೆಲ್ಲರೂ ಕೇಳಲೊಲ್ಲದೆ ಅವರನ್ನು ಕಲ್ಲೆಸೆದು ಕೊಲ್ಲಬೇಕೆಂದು** ಹೇಳಿಕೊಳ್ಳುತ್ತಿರಲಾಗಿ ಯೆಹೋವನ ತೇಜಸ್ಸು ದೇವದರ್ಶನದ ಗುಡಾರದಲ್ಲಿ ಹೊಳೆದು ಇಸ್ರಾಯೇಲ್ಯರೆಲ್ಲರಿಗೂ ಕಾಣಿಸಿಕೊಂಡಿತು. ಯೆಹೋವನು ಮೋಶೆಗೆ – ಈ ಜನರು ಇನ್ನು ಎಷ್ಟರ ಮಟ್ಟಿಗೆ ನನ್ನನ್ನು ಅಲಕ್ಷ್ಯ ಮಾಡುವರೋ; ನಾನು ನಡಿಸಿದ ಎಲ್ಲಾ ಮಹತ್ಕಾರ್ಯಗಳನ್ನು **ಇವರು ಪ್ರತ್ಯಕ್ಷವಾಗಿ ನೋಡಿದಾಗ್ಯೂ ಇನ್ನು ಎಷ್ಟು ದಿನ ನನ್ನನ್ನು ನಂಬದೆ ಇರುವರೋ?"** (ಅರಣ್ಯ–೧೪:೧೦,೧೧)

ಇಲ್ಲಿಗೆ ನಿಲ್ಲಿಸೋಣ. ಇಸ್ರಾಯೇಲ್ಯರು ಹೇಗೆ ದೇವರನ್ನು ಉಲ್ಲಂಘಿಸಿ ನೋಯಿಸಿದರೆಂಬುದನ್ನು ನೀವು ಕೇಳಿಸಿಕೊಂಡಿರಾ? ಅವರ ಅಪನಂಬಿಕೆಯನ್ನು ನೀವು ಕಂಡಿರಾ? ದೇವರ ವಾಕ್ಯವನ್ನು ಗಮನಿಸದೆ ಹೋಗಿ ಅವರು ದೇವರಿಗೆ ಹೇಗೆ ದೋಷಿಗಳಾದರೆಂಬು –ದನ್ನು ನೀವು ಗಮನಿಸಿದಿರೋ? ಹೌದು, ಆ ದಿನದಂದು, ಕಾನಾನ್ ದೇಶವನ್ನು ಅವರಿಗೆ ಕೊಡುತ್ತೇನೆಂಬ ದೇವರ ವಾಗ್ದಾನ – –ವನ್ನು ಅವರು ನಂಬದಿರುವ ಕಾರಣದಿಂದ ಅವರು ಬಹಳವಾಗಿ ಪಾಪ ಮಾಡಿದವರಾದರು. ದೇವರು ಅಬ್ರಹಾಮ, ಇಸಾಕ, ಯಾಕೋಬ, ಯೋಸೇಫ ಮತ್ತು ಮೋಶೆಗೆ ಮಾಡಿದ್ದ ವಾಗ್ದಾನವನ್ನು **ಅವರು ನಂಬಲಿಲ್ಲ**. ಪರಿಶುದ್ಧ ವಾಕ್ಯಗಳಲ್ಲಿ ತನ್ನ ಪ್ರವಾದಿ –ಗಳ ಮೂಲಕ ದೇವರು ವಾಗ್ದಾನ ಮಾಡಿರುವದನ್ನು ನಂಬದಿರುವ ಕಾರಣದಿಂದ ನಿಜವಾಗಿಯೂ ದೇವರನ್ನೂ ಮತ್ತು ಪ್ರವಾದಿ – –ಗಳನ್ನೂ ನಂಬದಿದ್ದಾಗ್ಯೂ **"ನಾವು ದೇವರನ್ನೂ ಮತ್ತು ಪ್ರವಾದಿಗಳನ್ನೂ ನಂಬುತ್ತೇವೆ"** ಎಂದು ಈ ದಿನದಲ್ಲಿ ಹೇಳುವಂತ ಅನೇಕರ ಹಾಗೆ ಅವರಿದ್ದರು! ಅಪನಂಬಿಕೆಯು ದೇವರ ಮುಂದೆ ಭಯಂಕರವಾದ ಪಾಪವಾಗಿದೆ.

ಹೇಳಿದ್ದು ಸಾಕು. ಈಗ ಕಥೆಯನ್ನು ಮುಂದುವರಿಸೋಣ.

"ಯೆಹೋವನು ಮೋಶೆ ಆರೋನರಿಗೆ – ನನಗೆ ವಿರೋಧವಾಗಿ ಗುಣುಗುಟ್ಟುವ ಈ ದುಷ್ಟ ಸಮೂಹದವರನ್ನು ನಾನು ಎಷ್ಟು ದಿನ ಸಹಿಸಲಿ. ಇಸ್ರಾಯೇಲ್ಯರು ನನಗೆ ವಿರೋಧವಾಗಿ ಗುಣುಗುಟ್ಟುವ ಮಾತುಗಳು ನನಗೆ ಕೇಳಿಸಿದವು. ನೀನು ಅವರಿಗೆ ಹೀಗೆ ಹೇಳ –ಬೇಕು ಯೆಹೋವನು ಹೇಳುವದೇನೆಂದರೆ – ನನ್ನ ಜೀವದಾಣೆ, ನೀವು ನನಗೆ ಕೇಳಿಸುವಂತೆ ಅಂದುಕೊಂಡ ಪ್ರಕಾರವೇ ನಾನು ಮಾಡುತ್ತೇನೆ; **ನಿಮ್ಮ ಶವಗಳು ಈ ಅರಣ್ಯದಲ್ಲಿಯೇ ಬೀಳುವವು**. ನೀವು ನನಗೆ ವಿರೋಧವಾಗಿ ಗುಣುಗುಟ್ಟಿದದರಿಂದ ನಿಮ್ಮಲ್ಲಿ ಲೆಕ್ಕಿಸಲ್ಪಟ್ಟವರೆಲ್ಲರೂ ಅಂದರೆ ಇಪ್ಪತ್ತು ವರುಷ ಮೊದಲುಗೊಂಡು ಹೆಚ್ಚಾದ ವಯಸ್ಸುಳ್ಳವರೆಲ್ಲರೂ ಅರಣ್ಯದಲ್ಲೇ ಸಾಯುವರು.

ಯೆಫುನ್ನೆಯ ಮಗನಾದ **ಕಾಲೇಬ್** ಮತ್ತು ನೂನನ ಮಗನಾದ **ಯೆಹೋಶುವ** ಇವರಿಬ್ಬರೇ ಹೊರತು ನಿಮ್ಮಲ್ಲಿ ಯಾರೂ ನಿಮ್ಮ ನಿವಾಸಕ್ಕಾಗಿ ನಾನು ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಸೇರುವದಿಲ್ಲ. ಆದರೆ ಪರರಪಾಲಾಗುವರೆಂದು ನೀವು ಹೇಳಿದ **ನಿಮ್ಮ ಚಿಕ್ಕ ಮಕ್ಕಳನ್ನು** ಅಲ್ಲಿಗೆ ಸೇರಿಸುವೆನು; ನೀವು ಬೇಡವೆಂದು ಹೇಳಿದ ದೇಶವನ್ನು ಅವರು ಅನುಭೋಗಿಸುವರು. ನಿಮ್ಮೆಲ್ಲರ ಶವಗಳು ಈ ಅರಣ್ಯದಲ್ಲಿ ಬೀಳುವವು. . . .ಇದು ಯೆಹೋವನೆಂಬ ನಾನೇ ಹೇಳಿದ ಮಾತು; **ನನಗೆ ವಿರೋಧವಾಗಿ ಕೂಡಿಕೊಂಡಿರುವ** ಈ ದುಷ್ಟಸಮೂಹದವರೆಲ್ಲರಗೆ ಈ ಮಾತಿನ ಮೇರೆಗೆ ಮಾಡಲೇ ಮಾಡುತ್ತೇನೆ; ಈ ಅರಣ್ಯದಲ್ಲಿಯೇ ಅವರೆಲ್ಲರೂ ಸಾಯಬೇಕು ಎಂದು ಹೇಳಿದನು.**"** (ಅರಣ್ಯ-೧೪:೨೬-೩೨, ೩೪,೩೫)

**"**ಆ ದೇಶವನ್ನು ಸಂಚರಿಸಿ ನೋಡುವದಕ್ಕೆ ಮೋಶೆಯಿಂದ ಕಳುಹಿಸಲ್ಪಟ್ಟು ಹಿಂದಿರುಗಿ ಬಂದು ಆ ದೇಶದ ವಿಷಯದಲ್ಲಿ ಅಶುಭ ಸಮಾಚಾರವನ್ನು ಹೇಳಿ ಸರ್ವಸಮೂಹದವರನ್ನು ಅವರಿಗೆ ವಿರೋಧವಾಗಿ ಗುಣುಗುಟ್ಟುವಂತೆ ಮಾಡಿದ ಮನುಷ್ಯರು ಯೆಹೋವನ ಸನ್ನಿಧಿಯಲ್ಲಿ ವ್ಯಾಧಿಯಿಂದ ಸತ್ತರು. ಅವರಲ್ಲಿ ನೂನನ ಮಗನಾದ ಯೆಹೋಶುವನೂ ಯೆಫುನ್ನೆಯ ಮಗನಾದ ಕಾಲೇಬನೂ ಉಳಿದರು.**"** (ಅರಣ್ಯ-೧೪:೩೬-೩೮)

ಹೀಗೆ, ಯೆಹೋವನು ತಮ್ಮನ್ನು ಫರೋಹನ ಕೈಯಿಂದ ಬಿಡುಗಡೆಮಾಡಿ ಕಾನಾನ್ ದೇಶದ ಅಂಚಿಗೆ ತಂದು ಮುಟ್ಟಿಸಿದ್ದಾಗ್ಯೂ ಸಹ ಇಸ್ರಾಯೇಲ್ಯರು ಕರ್ತನನ್ನು ಹೇಗೆ ತಿರಸ್ಕರಿಸಿದರೆಂಬುದನ್ನು ನಾವು ನೋಡುತ್ತೇವೆ. ತನ್ನ ಮಾತನ್ನು ನಂಬದೇ ಹೋದಂತ ಆ ಜನರಿಗೆ ದೇವರು ಏನು ಮಾಡಿದನು? ಅವರು ಅರಣ್ಯದಲ್ಲಿ ಸಾಯುವಂತ ದಂಡನೆಯನ್ನು ಕೊಟ್ಟನು! ಇಸ್ರಾಯೇಲ್ಯರ ಈ ತಲೆಮಾರಿನವರು ಕಾನಾನ್ ದೇಶವನ್ನು ಯಾಕೆ ಪ್ರವೇಶಿಸಲಿಲ್ಲ? **ಯಾಕೆಂದರೆ ಅವರು ದೇವರ ಮಾತನ್ನು ನಂಬುವವರಾಗಿರಲಿಲ್ಲ!**

ಸ್ನೇಹಿತರೇ, ದೇವರ ಮಾತು ನಂಬುವದನ್ನು ತಿರಸ್ಕರಿಸುವಂತಾದ್ದು ಒಂದು ಭಯಂಕರವಾದ ದುರಂತವಾಗಿದೆ. ತನ್ನನ್ನು ನಂಬುವ -ದಕ್ಕೆ ತಿರಸ್ಕರಿಸುವ ಪ್ರತಿಯೊಬ್ಬರನ್ನೂ ದೇವರು ಶಿಕ್ಷಿಸುತ್ತಾನೆ! ಯಾರಾದರೂ, ದೇವರು ತನ್ನ ಪರಿಶುದ್ಧ ವಾಕ್ಯದಲ್ಲಿ ಹೇಳಿರುವ -ದನ್ನು ನಿರ್ಲಕ್ಷಿಸಿ ಅದನ್ನು ಉದಾಸೀನತೆಯೊಂದಿಗೆ ಪ್ರತಿಪಾದಿಸಿದರೆ ಅಂತವರು ದೇವರನ್ನು ಸುಳ್ಳುಗಾರನೆಂದು ಕರೆಯುತ್ತಾರೆ ಮತ್ತು ಆತನ ನಿತ್ಯ ರಾಜ್ಯದಲ್ಲಿ ಅವರಿಗೆ ಪಾಲಿರುವದಿಲ್ಲ! ಅಪನಂಬಿಕೆಯಲ್ಲಿ ಯಾವನಾದರೂ ನಾಶವಾಗುವದು ದೇವರ ಚಿತ್ತವಲ್ಲ. ತಾನು ಸ್ಥಾಪಿಸಿರುವ ರಕ್ಷಣೆಯ ಮಾರ್ಗದ ಕುರಿತಾದ ಶುಭ ಸಂದೇಶವನ್ನು ಎಲ್ಲರೂ ನಂಬಬೇಕೆಂದು ದೇವರು ಬಯಸುತ್ತಾನೆ. ಆದರೆ ಪ್ರತಿಯೊಬ್ಬ ವ್ಯಕ್ತಿಯೂ ತಾನೇ ಇದನ್ನು ತೀರ್ಮಾನಿಸಬೇಕು. ದೇವರ ವಾಕ್ಯವನ್ನು ನಂಬುವದಕ್ಕೆ ತಿರಸ್ಕರಿಸುವವರೆಲ್ಲರೂ ನಾಶವಾಗುತ್ತಾರೆ. ಪ್ರವಾದಿಗಳ ಮೂಲಕ ದೇವರ ಪವಿತ್ರಾತ್ಮನಿಂದ ಬಂದಿರುವ ಈ ಎಚ್ಚರಿಕೆಯನ್ನು ಕೇಳಿಸಿಕೊಳ್ಳಿರಿ:

**"**ನೀವು ಈ ಹೊತ್ತು ದೇವರ ಶಬ್ದಕ್ಕೆ ಕಿವಿಗೊಟ್ಟರೆ ನಿಮ್ಮ ಹಿರಿಯರು ದೇವರ ಕೋಪವನ್ನೆಬ್ಬಿಸಿದ ಸ್ಥಳದಲ್ಲಿ ಅರಣ್ಯದೊಳಗೆ ದೇವರನ್ನು ಪರೀಕ್ಷಿಸಿದ ದಿನದಲ್ಲಿ ಮಾಡಿದಂತೆ ನಿಮ್ಮ ಹೃದಯಗಳನ್ನು ಕಠಿಣಪಡಿಸಿಕೊಳ್ಳಬೇಡಿರಿ. . . .ಸಹೋದರರೇ ನೋಡಿ - -ಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ **ಅಪನಂಬಿಕೆಯುಳ್ಳ ಕೆಟ್ಟ ಹೃದಯವು** ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು.**"** (ಇಬ್ರಿಯ-೩:೭,೮,೧೨; ಕೀರ್ತನೆ-೯೫:೭-೧೧)

ಜೊತೆ ಕೇಳುಗರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಮುಂದಿನ ಸಲ, ದೇವರ ಚಿತ್ತವಾದರೆ, ದೇವರನ್ನು ನಂಬುವದಕ್ಕೆ ತಿರಸ್ಕರಿಸಿದವರೆಲ್ಲರೂ ದೇವರು ಹೇಳಿದ ಹಾಗೆ ಅರಣ್ಯದಲ್ಲಿ ಹೇಗೆ ನಾಶವಾದರೆಂಬುದನ್ನು ನಾವು ನೋಡಲಿದ್ದೇವೆ. ಪರಿಶುದ್ಧ ವಾಕ್ಯ -ಗಳಲ್ಲಿರುವ ಈ ಎಚ್ಚರಿಕೆಯನ್ನು ನೀವು ಗಮನಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಸಹೋದರರೇ ನೋಡಿಕೊಳ್ಳಿರಿ, ಜೀವಸ್ವರೂಪನಾದ ದೇವರನ್ನು ಬಿಟ್ಟುಹೋಗುವ ಅಪನಂಬಿಕೆಯುಳ್ಳ ಕೆಟ್ಟ ಹೃದಯವು ನಿಮ್ಮೊಳಗೆ ಯಾವನಲ್ಲಿಯೂ ಇರಬಾರದು."** (ಇಬ್ರಿಯ-೩:೧೨)

[ಪಾಠ ೪೧: ಇಸ್ರಾಯೇಲ್ಯರ ಅಪನಂಬಿಕೆ] [ಸಾರಾಂಶಗಳ ಪಟ್ಟಿ] [ಪಾಠ ೪೩: ಮೋಶೆಯ ಅಂತಿಮ ಸಂದೇಶ]

ಪಾಠ ೪೨

# ತಾಮ್ರದ ಸರ್ಪ

ಅರಣ್ಯಕಾಂಡ ೨೦, ೨೧

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಕಳೆದ ಸಲ, ತೋರಾದ ನಾಲ್ಕನೆಯ ವಿಭಾಗದಲ್ಲಿರುವ ಅರಣ್ಯಕಾಂಡ ಪುಸ್ತಕದಲ್ಲಿ, ದೇವರು ಅಬ್ರಹಾಮ, ಇಸಾಕ, ಯಾಕೋಬ, ಮತ್ತು ಅವರ ಸಂತಾನದವರಿಗೆ ವಾಗ್ದಾನಮಾಡಿದ್ದ ಕಾನಾನ್ ದೇಶದ ಅಂಚಿಗೆ ಇಸ್ರಾಯೇಲ್ಯರು ಹೇಗೆ ಬಂದರು ಎಂಬುದನ್ನು ನಾವು ನೋಡಿಕೊಂಡೆವು. ಆ ದೇಶದಲ್ಲಿ ವಾಸಿಸಿದ್ದ ಬಲಿಷ್ಠರಾದ ದುಷ್ಟ ಜನರನ್ನು ಹೊರಗೆ ತಳ್ಳಿ ಅಲ್ಲಿರುವ ಪ್ರತಿಯೊಂದನ್ನೂ ಇಸ್ರಾಯೇಲ್ಯರಿಗೆ ಕೊಡುವದಕ್ಕೆ ದೇವರು ಉದ್ದೇಶಿಸಿದ್ದನು. ಹೇಗೂ, ಇಸ್ರಾಯೇಲ್ ಜನರಲ್ಲಿ ಅನೇಕರು ಆ ಬಲಿಷ್ಠರನ್ನು ಕಂಡು ಹೆದರಿದರು ಮತ್ತು ಕಾನಾನ್ ದೇಶವನ್ನು ತಮಗೆ ಕೊಡುತ್ತೇನೆಂಬ **ದೇವರ ವಾಗ್ದಾನವನ್ನು ನಂಬದೇ ಹೋದರು.**

ಹಾಗಾಗಿ, ಇಸ್ರಾಯೇಲ್ಯರ ಅಪನಂಬಿಕೆಯ ನಿಮಿತ್ತವಾಗಿ ದೇವರು ಅವರಿಗೆ ಹೇಗೆ ತೀರ್ಪು ಮಾಡಿದನೆಂಬುದನ್ನು ನಾವು ಓದಿ – –ಕೊಳ್ಳೋಣ. ಆತನು ಅವರಿಗೆ ಹೇಳಿದ್ದೇನೆಂದರೆ,

**"ಯೆಫುನ್ನೆಯ ಮಗನಾದ ಕಾಲೇಬ್ ಮತ್ತು ನೂನನ ಮಗನಾದ ಯೆಹೋಶುವ ಇವರಿಬ್ಬರೇ ಹೊರತು ನಿಮ್ಮಲ್ಲಿ ಯಾರೂ ನಿಮ್ಮ ನಿವಾಸಕ್ಕಾಗಿ ನಾನು ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಸೇರುವದಿಲ್ಲ.** ಆದರೆ ಪರರ ಪಾಲಾಗುವರೆಂದು ನೀವು ಹೇಳುವ ನಿಮ್ಮ ಚಿಕ್ಕ ಮಕ್ಕಳನ್ನು ಅಲ್ಲಿಗೆ ಸೇರಿಸುವೆನು; ನೀವು ಬೇಡವೆಂದು ಹೇಳಿದ ದೇಶವನ್ನು ಅವರು ಅನುಭೋಗಿಸುವರು. ನೀವಂತೂ ಈ ಅರಣ್ಯದಲ್ಲಿ ಸಾಯುವಿರಿ; ನಿಮ್ಮೆಲ್ಲರ ಶವಗಳು ಈ ಅರಣ್ಯದಲ್ಲಿ ಬೀಳುವವು." (ಅರಣ್ಯ–೧೪:೩೦–೩೨)

ನಾವು ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ ದೇವರು ಇಸ್ರಾಯೇಲ್ಯರನ್ನು ಅಧಿಕವಾಗಿ ಆಶೀರ್ವದಿಸಬೇಕೆಂದು ಇಚ್ಛಿಸಿದ್ದನು, **ಆದರೆ ಅವರ ಅಪನಂಬಿಕೆಯ ನಿಮಿತ್ತವಾಗಿ ದೇವರು ಅವರನ್ನು ಆಶೀರ್ವದಿಸಲಿಲ್ಲ.** ದೇವರು ಅವರಿಗೆ ವಾಗ್ದಾನ ಮಾಡಿದ್ದನ್ನು ನಂಬುವದಕ್ಕೆ ಅವರು ತಿರಸ್ಕರಿಸಿದಂದಿನಿಂದ ಇಸ್ರಾಯೇಲ್ಯರು ಮರುಭೂಮಿಯಲ್ಲಿ ನಲವತ್ತು ವರ್ಷಗಳವರೆಗೆ ಅಲೆಯುವ ಹಾಗೆ ದೇವರು ಅವರನ್ನು ಶಿಕ್ಷಿಸಿದನು, ಇಪ್ಪತ್ತು ವರ್ಷ ಮೇಲ್ಪಟ್ಟವರೆಲ್ಲರೂ ಯಾರು ಆತನನ್ನು ನಂಬಲಿಲ್ಲವೋ ಅವರೆಲ್ಲರೂ ಸತ್ತು ಹೋದರು.

ಇಸ್ರಾಯೇಲ್ಯರು ತಮ್ಮ ಅಪನಂಬಿಕೆಯ ನಿಮಿತ್ತ ಅವರು ಅರಣ್ಯದಲ್ಲಿ ವ್ಯರ್ಥಗೊಳಿಸಿದ ನಲವತ್ತು ವರ್ಷಗಳ ಅಂತ್ಯದಲ್ಲಿ ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ಅರಣ್ಯಕಾಂಡ ಪುಸ್ತಕವನ್ನು ಈಗ ಮುಂದುವರಿಸೋಣ. ಇಪ್ಪತ್ತನೆಯ ಅಧ್ಯಾಯದಲ್ಲಿ ನಾವು ಹೀಗೆ ಓದುತ್ತೇವೆ:

"ಮೊದಲನೆಯ ತಿಂಗಳಲ್ಲಿ ಇಸ್ರಾಯೇಲ್ಯರ ಸರ್ವಸಮೂಹದವರು ಚಿನ್ ಎಂಬ ಅರಣ್ಯಕ್ಕೆ ಬಂದು ಕಾದೇಶಿನಲ್ಲಿ ಇಳಿದುಕೊಂಡರು. ಅಲ್ಲಿ ಮಿರ್ಯಾಮಳು ತೀರಿ ಹೋದಳು; ಆಕೆಯ ಶವವನ್ನು ಸಮಾಧಿ ಮಾಡಿದರು." (ಅರಣ್ಯ–೨೦:೧)

"ಸಮೂಹದವರಿಗೆ ನೀರು ಇಲ್ಲದ ಕಾರಣ ಅವರು ಮೋಶೆ ಆರೋನರಿಗೆ ವಿರೋಧವಾಗಿ ಕೂಡಿಕೊಂಡು ಮೋಶೆಯ ಸಂಗಡ **ವಿವಾದಿಸುವವರಾಗಿ** – ನಮ್ಮ ಜನರು ಯೆಹೋವನ ಸನ್ನಿದಿಯಲ್ಲಿ ಸತ್ತಾಗ ನಾವೂ ಸತ್ತುಹೋಗಿದ್ದರೆ ಎಷ್ಟೋ ಮೇಲಾಗಿತ್ತು ಎಂದೂ ನೀವು ಯೆಹೋವನ ಸಭೆಯವರಾದ ನಮ್ಮನ್ನೂ ನಮ್ಮ ಪಶುಗಳನ್ನೂ ಈ ಮರಳು ಕಾಡಿಗೆ ಕರಕೊಂಡು ಬಂದು ಯಾಕೆ ಸಾಯಿಸು –ತ್ತೀರಿ? ನಮ್ಮನ್ನು ಐಗುಪ್ತದೇಶದಿಂದ ಬರಮಾಡಿ ಈ ಕೆಟ್ಟ ಸ್ಥಳಕ್ಕೆ ಯಾಕೆ ಕರಕೊಂಡು ಬಂದಿರಿ? ಈ ನೆಲದಲ್ಲಿ ಯಾವ ಧಾನ್ಯವೂ ಬೆಳೆಯುವದಿಲ್ಲ, ಮತ್ತು ಅಂಜೂರವಿಲ್ಲ, ದ್ರಾಕ್ಷೆಯಿಲ್ಲ, ದಾಳಿಂಬವಿಲ್ಲ, ಕುಡಿಯುವದಕ್ಕೆ ನೀರಾದರೂ ಇಲ್ಲ ಎಂದೂ ಹೇಳುತ್ತಿದ್ದರು.!" (ಅರಣ್ಯ–೨೦:೨–೫)

ಇಸ್ರಾಯೇಲ್ಯರು ಏನು ಹೇಳುತ್ತಿದ್ದಾರೆಂಬುದನ್ನು ನೀವು ಕೇಳಿಸಿಕೊಂಡಿರಾ? ಐಗುಪ್ತದಲ್ಲಿ ಮತ್ತು ಅರಣ್ಯದಲ್ಲಿ ದೇವರು ಅವರಿಗೆ ಮಾಡಿದ್ದೆಲ್ಲವುಗಳ ನಂತರ ಅವರ ಹೃದಯಗಳು ಕೃತಜ್ಞತೆ ಮತ್ತು ಭರವಸೆಯಿಂದ ತುಂಬಿತ್ತೋ? ಇಲ್ಲ! ಅವರು ತಮ್ಮ ಪೂರ್ವ –ಜರು ಮಾಡಿದ ಹಾಗೆಯೇ ಮಾಡುತ್ತಿದ್ದಾರೆ. ಅವರು ಗುಣುಗುಟ್ಟುತ್ತಿದ್ದಾರೆ! ಖಂಡಿತವಾಗಿ ಅವರು ಅರಣ್ಯದಲ್ಲಿ ಆಯಾಸಗೊಂಡಿರ –ಬಹುದು, ಆದರೆ ತಮ್ಮ ಅಪನಂಬಿಕೆಯ ಕಾರಣದಿಂದ ' ತಾವು ಇನ್ನೂ ಕಾನಾನ್ ದೇಶವನ್ನು ಮುಟ್ಟಿಲ್ಲ ಎಂಬುದನ್ನು ಅವರು ಜ್ಞಾಪಿಸಿಕೊಳ್ಳಬೇಕಾಗಿತ್ತು. ನಿಜ, ಇಸ್ರಾಯೇಲ್ಯರಿಗೆ ಕುಡಿಯುವದಕ್ಕೆ ನೀರಿರಲಿಲ್ಲ. ಹಾಗಾದರೆ ಅವರು ಯಾಕೆ ದೇವರನ್ನು ಪ್ರಾರ್ಥಿಸ –ಲಿಲ್ಲ? ಕರಕಾಗಿಸುವಂತ ಅರಣ್ಯದಲ್ಲಿ ನಲವತ್ತು ವರ್ಷಗಳವರೆಗೆ ಅವರನ್ನು ನೋಡಿಕೊಂಡಂತವನು ಅವರಿಗೆ ಕುಡಿಯುವದಕ್ಕೆ ನೀರನ್ನು ಕೊಡುತ್ತಿರಲಿಲ್ಲವೇ? ಖಂಡಿತವಾಗಿ ಆತನು ಕೊಡುತ್ತಿದ್ದನು! ದೇವರು ಅವರ ' ಎಲ್ಲಾ ಅಗತ್ಯತೆಗಳನ್ನು ಪೂರೈಸುವದಕ್ಕೆ ಬಯಸಿದ್ದನು! ಹಾಗಿದ್ದರೂ ಇಸ್ರಾಯೇಲ್ಯರು ತಮ್ಮ ದೇವರಾದ ಕರ್ತನನ್ನು ಪೂರ್ತಿಯಾಗಿ ನಂಬಲಿಲ್ಲ.

ಮುಂದೆ ಏನಾಯಿತೆಂಬುದನ್ನು ನೋಡುವದಕ್ಕೆ ಅಧ್ಯಾಯವನ್ನು ಮುಂದುವರಿಸೋಣ. ವಾಕ್ಯವು ಹೀಗೆ ಹೇಳುತ್ತದೆ:

"ಮೋಶೆ ಆರೋನರು ಜನಸಮೂಹದ ಎದುರಿನಿಂದ ದೇವದರ್ಶನದ ಗುಡಾರದ ಬಾಗಿಲಿಗೆ ಅಡ್ಡಬೀಳಲಾಗಿ ಯೆಹೋವನ ತೇಜಸ್ಸು ಅವರಿಗೆ ಕಾಣಿಸಿತು. ಆಗ ಯೆಹೋವನು ಮೋಶೆಗೆ – ನೀನು ಕೋಲನ್ನು ಕೈಯಲ್ಲಿ ಹಿಡಿದು ನಿನ್ನ ಅಣ್ಣನಾದ ಆರೋನನ ಜೊತೆ –ಯಲ್ಲಿ ಸಮೂಹದವರನ್ನು ಕೂಡಿಸಿಕೊಂಡು ಅವರ ಎದುರಿನಲ್ಲೇ ಆ ಕಡಿದಾದ ಬಂಡೆಗೆ ನೀರು ಕೊಡಬೇಕೆಂದು **ಆಜ್ಞಾಪಿಸು**. ಅದರೊಳಗಿಂದ ನೀರು ಹೊರಟುಬರುವದು; ನೀನು ಸಮೂಹದವರಿಗೂ ಅವರ ಪಶುಗಳಿಗೂ ನೀರನ್ನು ಕುಡಿಯ ಕೊಡಬಹುದು ಎಂದು ಹೇಳಿದನು." (ಅರಣ್ಯ–೨೦:೬–೮)

"ಯೆಹೋವನು ಆಜ್ಞಾಪಿಸಿದಂತೆಯೇ ಮೋಶೆಯು ಆ ಕೋಲನ್ನು ಸನ್ನಿಧಿಯಿಂದ ತೆಗೆದುಕೊಂಡುಹೋಗಿ ಆರೋನನ ಜೊತೆಯಲ್ಲಿ ಸಮೂಹದವರನ್ನು ಆ ಕಡಿದಾದ ಬಂಡೆಗೆದುರಾಗಿ ಕೂಡಿಸಿ ಅವರಿಗೆ – ದ್ರೋಹಿಗಳೇ, ಕೇಳಿರಿ, ನಾವು ಈ ಬಂಡೆಯೊಳಗಿಂದಲೇ ನಿಮಗೋಸ್ಕರ ನೀರನ್ನು ಬರಮಾಡಬೇಕೋ ಎಂದು ಹೇಳಿ ಕೈಯೆತ್ತಿ ತನ್ನ ಕೈಯಲ್ಲಿರುವ ಕೋಲಿನಿಂದ ಎರಡು ಸಾರಿ **ಹೊಡೆದನು**. ಆಗ ನೀರು ಪ್ರವಾಹವಾಗಿ ಹೊರಟಿತು; ಸಮೂಹದವರೂ ಅವರ ಪಶುಗಳು ಕುಡಿದರು. ಆಗ ಯೆಹೋವನು ಮೋಶೆ ಆರೋ – –ನರಿಗೆ – ನೀವು ನನ್ನನ್ನು ನಂಬದವರಾಗಿ ಇಸ್ರಾಯೇಲ್ಯರ ಎದುರಿನಲ್ಲಿ ನನ್ನ ಗೌರವವನ್ನು ಕಾಪಾಡದೇ ಹೋದದರಿಂದ ಈ ಸಮೂಹದವರನ್ನು ನಾನು ಅವರಿಗೆ ವಾಗ್ದಾನ ಮಾಡಿದ ದೇಶದೊಳಕ್ಕೆ ನೀವು ಕರಕೊಂಡು ಹೋಗಕೂಡದು ಎಂದು ಹೇಳಿದನು." (ಅರಣ್ಯ–೨೦:೯–೧೨)

ಏನಾಯಿತೆಂಬುದು ನಿಮಗೆ ಚೆನ್ನಾಗಿ ಅರ್ಥವಾಯಿತಾ? ಇಸ್ರಾಯೇಲ್ಯ ಸಮೂಹದವರಿಗೆ ಕುಡಿಯುವದಕ್ಕೆ ನೀರು ಸಿಗಲು ಏನು ಮಾಡಬೇಕೆಂದು ಯೆಹೋವನು ಮೋಶೆಗೆ ಆಜ್ಞಾಪಿಸಿದ್ದನು? ಆತನು ಹೇಳಿದ್ದೇನೆಂದರೆ; "ಆ ಬಂಡೆಗೆ ಮಾತಾಡು!" ಮೋಶೆಯು ಬಂಡೆಗೆ ಮಾತಾಡುವದರ ಮೂಲಕ ದೇವರಿಗೆ ವಿಧೇಯನಾದನೋ? ಇಲ್ಲ! ಮೋಶೆ ತನ್ನ ಕೋಪದಲ್ಲಿ ಅದನ್ನು ಎರಡು ಸಾರಿ ಹೊಡೆದನು. ದೇವರು ತನ್ನ ಒಳ್ಳೆಯತನದಲ್ಲಿ ಬಂಡೆ ನೀರು ಕೊಡುವದನ್ನು ತಡೆಯಲಿಲ್ಲ ಆದರೆ ಮೋಶೆ ಮಾಡಿದ್ದು ದೇವರ ಮನಸ್ಸನ್ನು ನೋಯಿಸಿತು. ಅದಕ್ಕಾಗಿಯೇ ದೇವರು ಅವನನ್ನು ಶಿಕ್ಷಿಸುತ್ತಾ, "ನೀನು ನನ್ನನ್ನು ನಂಬದೇ ಇಸ್ರಾಯೇಲ್ಯರ ಎದುರಿನಲ್ಲಿ ನನ್ನ **ಗೌರವವನ್ನು** ಕಾಪಾಡದೇ ಹೋದದರಿಂದ ಈ ಸಮೂಹದವನರನ್ನು ನಾನು ಅವರಿಗೆ ವಾಗ್ದಾನ ಮಾಡಿದ ದೇಶದೊಳಕ್ಕೆ **ನೀನು ಕರಕೊಂಡು ಹೋಗಕೂಡದು** ಎಂದು ಹೇಳಿದನು."

ಬಹುಶ:, ದೇವರು ಮೋಶೆಯ ಮೇಲೆ ಹೊರಿಸಿದ ಶಿಕ್ಷೆಯು ತುಂಬಾ ಕಠಿಣವಾದುದು ಎಂದು ನಾವು ಅಂದುಕೊಳ್ಳಬಹುದು. ಹಾಗಿದ್ದರೂ, ದೇವರ ವಾಕ್ಯದಲ್ಲಿ ನಂಬಿಕೆ ಮತ್ತು ವಿಧೇಯತೆಯು ಆತನನ್ನು ಮೆಚ್ಚಿಸುವಂತದ್ದಾಗಿದೆ ಎಂಬುದನ್ನು ನಾವು ನೆನಪಿ – –ನಲ್ಲಿಟ್ಟುಕೊಳ್ಳಬೇಕು. ಪ್ರವಾದಿಯಾದ ಮೋಶೆಯ ಮುಖಾಂತರ ಬಂದಿದ್ದಾಗಿದ್ದರೂ ಸಹ ಆತನ ವಾಕ್ಯಕ್ಕೆ ವಿರುದ್ಧವಾದ ಯಾವು –ದನ್ನೇ ಆಗಲೀ ಆತನು ಒಪ್ಪಿಕೊಳ್ಳುವದಿಲ್ಲ!

ದೇವರು ಪಕ್ಷಪಾತವನ್ನು ತೋರಿಸುವದಿಲ್ಲ. ಮೋಶೆಯು ಒಬ್ಬ ದೊಡ್ಡ ಪ್ರವಾದಿ, ಆದರೆ ಅವನು ನಮ್ಮ ಹಾಗೆ ಒಬ್ಬ ಮನುಷ್ಯ. ಆದುದರಿಂದ, ಅವನೂ ಆದಾಮನ ಸಂತಾನದವರಂತೆ ಒಬ್ಬ ಪಾಪಿಯಾಗಿದ್ದ. ದೇವರ ಪ್ರವಾದಿಯಾಗಿದ್ದಾಗ್ಯೂ ಸಹ **ಮೋಶೆಯು** ತನ್ನ ಒಳ್ಳೆಯ ಕಾರ್ಯಗಳ ನಿಮಿತ್ತವಾಗಿ **ತನ್ನನ್ನು ರಕ್ಷಿಸಿಕೊಳ್ಳುವದಕ್ಕಾಗಲಿಲ್ಲ**. ಆದಾಮನ ಎಲ್ಲಾ ಸಂತಾನದವರ ಹಾಗೆ ಅವನೂ ತಪ್ಪುಗಳನ್ನು ಮಾಡಿ ನೀತಿಯುಳ್ಳ ಎಲ್ಲವುಗಳನ್ನು ನೆರವೇರಿಸದವನಾದ. ಎಲ್ಲಾ ಇಸ್ರಾಯೇಲ್ಯರ ಹಾಗೆಯೇ ಪ್ರವಾದಿಯಾದ ಮೋಶೆ ದೇವರು ಸ್ಥಾಪಿಸಿದ್ದ ರಕ್ಷಣೆಯ ಮಾರ್ಗದ ಮೂಲಕವಾಗಿಯೇ ಅಂದರೆ ರಕ್ತ ಯಜ್ಞದ ಮೂಲಕವಾಗಿಯೇ ದೇವರ ಬಳಿಗೆ ಬರ – –ಬೇಕಾಗಿತ್ತು. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ ಎಂಬುದನ್ನು ಮೋಶೆಯ ಪಾಪಗಳ ಮುಖಾಂತರ ದೇವರು ನಮಗೆ ಜ್ಞಾಪಿಸುವದಕ್ಕೆ ಬಯಸಿದ್ದಾನೆ. ದೇವರ ಮುಂದೆ ಎಲ್ಲರೂ ಅಪರಾಧಿಗಳೇ. ಪ್ರತಿಯೊಬ್ಬರೂ ಪಾಪಮಾಡಿದವರೇ. ನೀತಿವಂತನೂ ಒಬ್ಬನೂ ಇಲ್ಲ! ಪಾಪಿಗಳನ್ನು ರಕ್ಷಿಸುವದಕ್ಕಾಗಿ ಪರಲೋಕದಿಂದ ಬಂದಂತಹ ಸಂಪೂರ್ಣ ನೀತಿವಂತನಾದ ವಿಮೋಚಕನ ಹೊರತಾಗಿ ದೇವರ ಮಾರ್ಗವನ್ನು ಬಿಟ್ಟು ಹೋಗುವವನೂ ಒಬ್ಬನೂ ಇಲ್ಲ!

ಇಸ್ರಾಯೇಲ್ಯರ ಕಥೆಯನ್ನು ಮುಂದುವರಿಸುತ್ತಾ, ಇಪ್ಪತ್ತನೆಯ ಅಧ್ಯಾಯದ ಕೊನೆಯಲ್ಲಿ ಮೋಶೆಯ ಅಣ್ಣನಾದ ಆರೋನನು ಹೋರ್ ಬೆಟ್ಟದ ಮೇಲೆ ಹೇಗೆ ಮರಣ ಹೊಂದಿದನೆಂಬುದನ್ನೂ ಮತ್ತು ಅವನಿಗಾಗಿ ಇಸ್ರಾಯೇಲ್ ಜನಾಂಗದವರು ಮೂವತ್ತು ದಿನಗಳವರೆಗೆ ಗೋಳಾಡಿದರೆಂಬುದನ್ನೂ ನಾವು ಓದುತ್ತೇವೆ.

ಅದಾದ ನಂತರ, ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಇಸ್ರಾಯೇಲ್ಯರು ಹೋರ್ ಬೆಟ್ಟದಿಂದ ಹೊರಟು ಎದೋಮ್ಯರ ದೇಶವನ್ನು ಸುತ್ತಿಕೊಂಡು ಹೋಗುವದಕ್ಕೆ ಕೆಂಪು ಸಮುದ್ರದ ಮಾರ್ಗವಾಗಿ ಪ್ರಯಾಣ ಮಾಡುತ್ತಿರಲು ಮಾರ್ಗಾಯಾಸದಿಂದ ಅವರಿಗೆ **ಬೇಸರವಾಯಿತು**. ಆಗ ಅವರು ದೇವರಿಗೂ ಮೋಶೆಗೂ ವಿರೋಧವಾಗಿ ಮಾತಾಡುತ್ತಾ – ನೀವು ನಮ್ಮನ್ನು ಈ ಮರಳುಕಾಡಿನಲ್ಲಿ ಕೊಲ್ಲಬೇಕೆಂದು ಐಗುಪ್ತ ದೇಶದಿಂದ ಕರೆದುಕೊಂಡು ಬಂದಿರೋ? ಇಲ್ಲಿ ಆಹಾರವೂ ಇಲ್ಲ, ನೀರೂ ಇಲ್ಲ; ಈ ನಿಸ್ಸಾರವಾದ ಆಹಾರವನ್ನು ತಿಂದು ತಂದು ನಮಗೆ ಬೇಸರವಾಯಿತೆಂದು ಹೇಳುವವರಾದರು." (ಅರಣ್ಯ–೨೧:೪,೫)

"ಅದಕ್ಕೆ ಯೆಹೋವನು **ಉರಿಮಂಡಲಗಳನ್ನು** ಜನರೊಳಗೆ ಬರಮಾಡಿದನು; ಅವು ಜನರನ್ನು ಕಚ್ಚಿದ್ದರಿಂದ ಬಹುಜನ ಸತ್ತು ಹೋದರು. ಆದದರಿಂದ ಜನರು ಮೋಶೆಯ ಬಳಿಗೆ ಬಂದು – ನಾವು ನಿನಗೂ ಯೆಹೋವನಿಗೂ ವಿರೋಧವಾಗಿ ಮಾತಾಡಿ ದೋಷಿಗಳಾದೆವು. ಈ ಸರ್ಪಗಳು ನಮ್ಮ ಬಳಿಯಿಂದ ತೊಲಗಿಹೋಗುವಂತೆ ನೀನು ಯೆಹೋವನಿಗೆ ಪ್ರಾರ್ಥನೆ ಮಾಡಬೇಕೆಂದು ಬೇಡಿಕೊಂಡರು. ಮೋಶೆ ಜನರಿಗೋಸ್ಕರ ಪ್ರಾರ್ಥಿಸಲಾಗಿ ಯೆಹೋವನು ಅವನಿಗೆ – ನೀನು ತಾಮ್ರದಿಂದ ವಿಷಸರ್ಪದ ಆಕಾರ –ವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಎತ್ತಿ ನಿಲ್ಲಿಸಬೇಕು; ಸರ್ಪಗಳಿಂದ ಗಾಯಪಟ್ಟವರು ಅದನ್ನು ನೋಡಿ ಬದುಕಿಕೊಳ್ಳುವರು ಎಂದು ಆಜ್ಞಾಪಿಸಿದನು. ಆದಕಾರಣ ಮೋಶೆ ತಾಮ್ರದಿಂದ ಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ತಂಭದ ಮೇಲೆ ಇಡಿಸಿದನು. ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರು ಆ ತಾಮ್ರದ ಸರ್ಪವನ್ನು ಲಕ್ಷ್ಯವಿಟ್ಟು **ನೋಡಿದರೋ** ಅವರೆಲ್ಲರೂ **ಬದುಕಿಕೊಂಡರು."** (ಅರಣ್ಯ–೨೧:೬–೯)

ಈ ಆಶ್ಚರ್ಯಕರವಾದ ಕಥೆಯ ಕುರಿತು ಆಲೋಚಿಸಿಕೊಳ್ಳೋಣ. ದೇವರು ಇಸ್ರಾಯೇಲ್ಯರ ಮಧ್ಯದೊಳಗೆ ಉರಿಮಂಡಲಗಳನ್ನು ಯಾಕೆ ಕಳುಹಿಸಿದನು? ಅವರ ಪಾಪದ ನಿಮಿತ್ತವಾಗಿ ದೇವರು ಹಾವುಗಳನ್ನು ಕಳುಹಿಸಿದನು. ಅವರು ದೇವರಿಗೂ ಮತ್ತು ಮೋಶೆಗೂ ವಿರೋಧವಾಗಿ ಹೇಗೆ ಮಾತಾಡಿದರು ಮತ್ತು ದೇವರು ಅವರಿಗೆ ಕಳುಹಿಸಿಕೊಟ್ಟ ಆಹಾರವನ್ನು ಅವರು ಹೇಗೆ ಕಡೆ – –ಗಣಿಸಿದರೆಂಬುದನ್ನು ನಾವು ಕೇಳಿಸಿಕೊಂಡಿದ್ದೇವೆ. ಅದಕ್ಕಾಗಿಯೇ ದೇವರು ಉರಿಮಂಡಲಗಳನ್ನು ಬರಮಾಡಿದನು, ಅವು ಜನ –ರನ್ನು ಕಚ್ಚಿದ್ದರಿಂದ ಅನೇಕರು **ಸತ್ತುಹೋದರು**.

**ಮರಣವನ್ನು ತಪ್ಪಿಸಿಕೊಳ್ಳುವದಕ್ಕೆ ಇಸ್ರಾಯೇಲ್ಯರು ಏನು ಮಾಡುವದಕ್ಕೆ ಸಾಧ್ಯವಾಯಿತು?** ಹಾವುಗಳ ಹಿಡುಗಿನಿಂದ ಅವರು ತಮ್ಮನ್ನು ರಕ್ಷಿಸಿಕೊಳ್ಳುವದಕ್ಕೆ ಶಕ್ತರಾದರೋ? ಮರಣಕರವಾದ ವಿಷದಿಂದ ಅವರು ತಮ್ಮನ್ನು ಗುಣಪಡಿಸಿಕೊಳ್ಳಲು ಸಾಧ್ಯವಾಯಿತಾ? ಇದು ಅಸಾಧ್ಯ! ಹಾಗಾದರೆ ಅವರು ಏನು ಮಾಡಿದರು? ಅವರು ದೇವರಿಗೆ ಮೊರೆಯಿಟ್ಟರು! ಅದನ್ನು ಮಾತ್ರ ಅವರು ಮಾಡು –ವದಕ್ಕಾಯಿತು. ಇಸ್ರಾಯೇಲ್ಯರು ಹೇಗೆ ಪಶ್ಚಾತ್ತಾಪಪಟ್ಟು ಮೋಶೆಯ ಬಳಿಗೆ ಹೋಗಿ ಅವನಿಗೆ, "ನಾವು ಪಾಪಮಾಡಿದೆವು! ನಾವು ದೇವರಿಗೂ ಮತ್ತು ನಿನಗೂ ವಿರೋಧವಾಗಿ ಮಾತಾಡಿ ದೋಷಿಗಳಾಗಿದ್ದೇವೆ! ನಮಗಾಗಿ ದೇವರನ್ನು ಪ್ರಾರ್ಥಿಸು, ಬಹುಶ: ಆತನು ನಮ್ಮ ಮೇಲೆ ಕರುಣೆಯಿಟ್ಟು ಈ ಹಾವುಗಳನ್ನು ದೂರಮಾಡುತ್ತಾನೆ!" ಎಂದು ಹೇಳುವದನ್ನು ನಾವು ಕೇಳಿಸಿಕೊಂಡಿದ್ದೇವೆ.

ದೇವರು ಅವರಿಂದ ಹಾವುಗಳನ್ನು ದೂರಮಾಡಿದನೋ? ಇದಕ್ಕಿಂತಲೂ ಉತ್ತಮವಾದುದನ್ನು ಆತನು ಮಾಡಿದನು! ಆತನು ಮೋಶೆಗೆ ಒಂದು ತಾಮ್ರದ ಸರ್ಪವನ್ನು ಮಾಡಿ ಧ್ವಜಸ್ತಂಭದ ಮೇಲೆ ನಿಲ್ಲಿಸು. "ಗಾಯಪಟ್ಟವರು ಅದನ್ನು ನೋಡಿ ಬದುಕಿ ಕೊಳ್ಳುವರು" ಎಂದು ಹೇಳಿದನು. ಇದು **ದೇವರ ಪರಿಹಾರವಾಗಿತ್ತು**. ಒಂದುವೇಳೆ ಹಾವು ಯಾರನ್ನಾದರೂ ಕಚ್ಚಿದರೆ, ಆ ವ್ಯಕ್ತಿಯು ಧ್ವಜಸ್ತಂಭದ ಮೇಲಿರುವ ತಾಮ್ರದ ಸರ್ಪವನ್ನು ನೋಡಿದರೆ ಅವರು ಗುಣವಾಗುವರು! **ನೋಡಿರಿ ಮತ್ತು ಬದುಕಿಕೊಳ್ಳಿರಿ** ಎಂಬ ರೀತಿಯಲ್ಲಿ ದೇವರು ಬಿಡುಗಡೆಯ ಒಂದು ಮಾರ್ಗವನ್ನು ಸಿದ್ಧಪಡಿಸಿದನು.

ಮೋಶೆಯು ಧ್ವಜಸ್ತಂಭದ ಮೇಲೆ ನಿಲ್ಲಿಸಿದ್ದ ತಾಮ್ರದ ಸರ್ಪವನ್ನು **ನೋಡಿದವರು** ಗುಣಹೊಂದುತ್ತಾರೆ ಎಂದು ದೇವರು ವಾಗ್ದಾನ ಮಾಡಿದ್ದನು. ಹಾಗಾದರೆ **ನೋಡುವದನ್ನು ಅಲಕ್ಷ್ಯ ಮಾಡಿದವರಿಗೆ** ಏನಾಯಿತು? ಅವರು ನೋವಿನಿಂದ ಸತ್ತುಹೋದರು. ಆದರೆ ಯಾರು ದೇವರನ್ನು ನಂಬಿ ತಾಮ್ರದ ಸರ್ಪವನ್ನು ನೊಡಿದರೋ ಅವರು ಮರಣದಿಂದ ಬಿಡುಗಡೆ ಹೊಂದಿಕೊಂಡರು, ಯಾಕೆಂದರೆ "ಯಾವನಾದರೂ ಸರ್ಪದಿಂದ ಗಾಯಪಟ್ಟವನು ಇದನ್ನು **ನೋಡಿದರೆ ಬದುಕಿಕೊಳ್ಳುವನು"** ಎಂದು ದೇವರು ಅವರಿಗೆ ವಾಗ್ದಾನ ಮಾಡಿದ್ದನು.

ನಿಜವಾಗಿಯೂ, ಇದೊಂದು ಅತ್ಯಂತ ಮನೋಹರವಾದ ಕಥೆ, ಆದರೆ ಇದು ಅತ್ಯಂತ ಮನೋಹರಕ್ಕಿಂತಲೂ ಹೆಚ್ಚಿನದಾಗಿದೆ.

ನಮಗೆ ಕಲಿಸುವದಕ್ಕೆ ಇದು ಬರೆಯಲ್ಪಟ್ಟಿದೆ. **ನಾವೆಲ್ಲರೂ** ಇಸ್ರಾಯೇಲ್ಯರ ಹಾಗಿದ್ದೇವೆ ಎನ್ನುವದನ್ನು ನಮಗೆ ತೋರಿಸುವದಕ್ಕೆ ದೇವರು ಬಯಸಿದನು. ನಾವು ದೇವರಿಗೂ ಮತ್ತು ಮನುಷ್ಯರಿಗೂ ವಿರೋಧವಾಗಿ ಆಗಾಗ್ಗೆ ಗುಣುಗುಟ್ಟಿದವರೂ ನಮ್ಮ ಆಲೋ – –ಚನೆಗಳಲ್ಲಿ ನಮ್ಮ ಮಾತುಗಳಲ್ಲಿ ಮತ್ತು ನಮ್ಮ ಕಾರ್ಯಗಳಲ್ಲಿ ದೇವರನ್ನು ರೇಗಿಸಿದವರೂ ಆಗಿರುವದರಿಂದ ನಾವೂ ಸಹ ಪಾಪಿ –ಗಳೇ, ಇಸ್ರಾಯೇಲ್ಯರನ್ನು ಕಚ್ಚಿದ ವಿಷಸರ್ಪಗಳಂತೆ ಸೈತಾನನಿದ್ದಾನೆ. ಅವರನ್ನು ಕೊಂದಂತ ವಿಷದ ಹಾಗೆ **ಪಾಪವಿದೆ.** ಸೈತಾ –ನನು ಆದಾಮನ ಮಕ್ಕಳೆಲ್ಲರನ್ನೂ ಕಚ್ಚಿದನು ಮತ್ತು ದೇವರು ನಮಗಾಗಿ **ಒಂದು ಪರಿಹಾರವನ್ನು** ಒದಗಿಸುವವರೆಗೆ ಪಾಪವೆಂಬ ವಿಷವು ಎಂದೆಂದಿಗೂ ನಾವು ನಾಶವಾಗುವದಕ್ಕೆ ಕಾರಣವಾಗುತ್ತದೆ. ನಮ್ಮಲ್ಲಿ ನಾವೇ ತಪ್ಪಿಸಿಕೊಳ್ಳುವ ಯಾವ ಮಾರ್ಗವಿಲ್ಲದೆ ನಿತ್ಯ –ವಾದ ಬೆಂಕಿಯಲ್ಲಿ ನಾಶವಾಗುವದೇ ಪಾಪದ ಸಂಬಳವಾಗಿದೆ! ಹೇಗೂ, ದೇವರನ್ನು ನಾವು ಸ್ತುತಿಸುತ್ತೇವೆ, ಯಾಕೆಂದರೆ **ಹಾವು –ಗಳ ವಿಷದಿಂದ** ಇಸ್ರಾಯೇಲ್ಯರನ್ನು ರಕ್ಷಿಸುವದಕ್ಕೆ ಆತನು ಒಂದು ಯೋಜನೆಯನ್ನು ರಚಿಸಿದ್ದ ಹಾಗೆಯೇ **ಪಾಪದ ವಿಷದಿಂದ** ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ ಸಹ ಆತನು ಒಂದು ಯೋಜನೆಯನ್ನು ರಚಿಸಿದ್ದಾನೆ!

ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ಪಾಪವು ತಂದಿದ್ದಂತಹ ಶಾಪದಿಂದ ನಿಮ್ಮನ್ನು ರಕ್ಷಿಸುವದಕ್ಕೆ ದೇವರು ಏನು ಮಾಡಿದ –ನೆಂಬುದು ನಿಮಗೆ ಗೊತ್ತಾ? ಅರಣ್ಯದಲ್ಲಿ ಮೋಶೆಯು ತಾಮ್ರದ ಸರ್ಪವನ್ನು ಮೇಲಿಟ್ಟು ಸುಮಾರು ಸಾವಿರದ ಐನೂರು ವರ್ಷ –ಗಳ ನಂತರ **ಪರಿಶುದ್ಧ ವಿಮೋಚಕನು ಹೇಳಿರುವದನ್ನು ಕೇಳಿಸಿಕೊಳ್ಳಿರಿ.** ಆತನು ಹೇಳಿರುವದೇನೆಂದರೆ, "ಇದಲ್ಲದೆ ಜನರು ನೋಡಿ ಜೀವದಿಂದುಳಿಯಬೇಕೆಂದು ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು ಎತ್ತರದಲ್ಲಿಡಲ್ಪಡಬೇಕು. . . .ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತ –ನನ್ನು ಕೊಟ್ಟನು!" (ಯೋಹಾನ–೩:೧೪,೧೬)

ಪರಿಶುದ್ಧ ಸುವಾರ್ತೆಯಲ್ಲಿರುವ {ಇಂಜಿಲ್} ಈ ವಚನದಿಂದ, ನಾವು ಕಲಿಯುವದೇನೆಂದರೆ, ಈ ಲೋಕಕ್ಕೆ ಬಂದಂತ ವಿಮೋ – –ಚಕನು ಶಿಲುಬೆಯ ಮೇಲೆ ಮರಣ ಹೊಂದಿದನು, ಇದರಿಂದ ಆತನು ಮರಣದ ಬಲವನ್ನು ಹಿಡಿದುಕೊಂಡಿದ್ದ ದುರಾತ್ಮನನ್ನು ಸೋಲಿಸುವದಕ್ಕೆ ಶಕ್ತನಾದನು ಎನ್ನುವದಕ್ಕೆ ಅರಣ್ಯದಲ್ಲಿ ಮೋಶೆಯು ಎತ್ತರದಲ್ಲಿಟ್ಟ ಆ ತಾಮ್ರದ ಸರ್ಪವು **ಒಂದು ನಿದರ್ಶನ**(ನೆರಳು, ಚಿತ್ರ, ಗುರುತು) ಆಗಿದೆ. ಓಹ್, ಈ ಸಂದೇಶವು ಎಷ್ಟೊಂದು ಅದ್ಭುತವಾದುದಾಗಿದೆ! ಮುಂಬರುವ ಪಾಠಗಳಲ್ಲಿ ನಾವು ಕಂಡು – –ಕೊಳ್ಳುವ ಹಾಗೆ ವಿಮೋಚಕನ ಮರಣ ಮತ್ತು ಪುರುತ್ಥಾನದ ಮುಖಾಂತರ ದೇವರು ಆದಾಮನ ಮಕ್ಕಳಿಗೆ ಎಂದೆಂದಿಗೂ ರಕ್ಷಣೆಯ ಸಮಾಧಾನದ ಮತ್ತು ಸಂತೋಷದ ಒಂದು ಬಾಗಿಲನ್ನು ತೆರೆದಿದ್ದಾನೆ! ಪಾಪದ ಬಲದಿಂದ ನಿಮ್ಮನ್ನು ನೀವೇ ರಕ್ಷಿಸಿ – –ಕೊಳ್ಳುವದಕ್ಕಾಗುವದಿಲ್ಲ ಮತ್ತು ಪಾಪದ ನಿಮ್ಮ ಸಾಲವನ್ನು ನಿಮಗಾಗಿ ಸಂದಾಯ ಮಾಡುವದಕ್ಕೆ ಶಿಲುಬೆಯ ಮೇಲೆ ಮರಣ – –ಹೊಂದಿದ ರಕ್ಷಕನಿಗೆ ಸಂಬಂಧಿಸಿದಂತೆ ದೇವರು ಕೊಟ್ಟಿರುವ ಸಾಕ್ಷಿಯನ್ನು ನಿಮ್ಮ ಹೃದಯಗಳಲ್ಲಿ ನಂಬಬೇಕು ಎಂಬುದನ್ನು ನೀವು ಸ್ವೀಕರಿಸಬೇಕೆನ್ನುವದೇ ನಿಮಗಾಗಿ ದೇವರು ಬಯಸುವ ಎಲ್ಲವೂ ಆಗಿದೆ. **ವಿಮೋಚಕನನ್ನು ನೋಡಿರಿ ಆಗ ನೀವು ಜೀವಿಸುವಿರಿ!** ಎಂದು ದೇವರು ಹೇಳುತ್ತಾನೆ! ಆತನ ಮೇಲೆ ನಂಬಿಕೆಯಿಡಿರಿ ದೇವರು ನಿಮ್ಮನ್ನು ಸ್ವಸ್ಥಮಾಡುವನು, ಪಾಪದ ವಿಷ –ದಿಂದ ನಿಮ್ಮನ್ನು ರಕ್ಷಿಸುವನು ಮತ್ತು ಪರಲೋಕದಲ್ಲಿ ತನ್ನ ಪ್ರಸನ್ನತೆಯಲ್ಲಿ ನಿತ್ಯವಾದ ಒಂದು ಸ್ಥಳವನ್ನು ನಿಮಗಾಗಿ ಕಾದಿರಿಸುತ್ತಾನೆ!

ಹಿರಿಯರೆ ಮತ್ತು ಕಿರಿಯರೆ, ಪುರುಷರೆ ಮತ್ತು ಸ್ತ್ರೀಯರೆ, ಶ್ರೀಮಂತರೆ ಮತ್ತು ಬಡವರೆ, ಪ್ರತಿಯೊಬ್ಬರಿಗೂ ದೇವರು ಹೇಳುವದೇ – –ನೆಂದರೆ **ನೋಡಿರಿ ಮತ್ತು ಬದುಕಿಕೊಳ್ಳಿರಿ!** ದೇವರು ಕಳುಹಿಸಿದ ಶಕ್ತನಾದ ವಿಮೋಚಕನ ಕಡೆಗೆ ನೋಡಿರಿ ಆಗ ನೀವು **ರಕ್ಷಿಸ –ಲ್ಪಡುವಿರಿ!** ಅದರೆ ಆತನು ಮತ್ತೂ ಸಹ ಹೀಗೆ ಹೇಳುತ್ತಾನೆ: **ಒಂದುವೇಳೆ ನೋಡುವದಕ್ಕೆ ನೀವು ಅಲಕ್ಷ್ಯ ಮಾಡಿದರೆ,** ದೇವರು ಯಾರ ಮೂಲಕ ಪಾಪಕ್ಕಾಗಿ ಸ್ವಸ್ಥತೆಯನ್ನು ಮಾತ್ರ ಒದಗಿಸಿದನೋ ಆ ರಕ್ಷಕನನ್ನು ನೀವು ನಂಬದಿದ್ದರೆ, ಆಗ "ನೀವು ನಿಮ್ಮ ಪಾಪ –ಗಳಲ್ಲಿಯೇ ಸಾಯುವಿರಿ!" (ಯೋಹಾನ–೮:೨೪) ದೇವರು ಒದಗಿಸಿದ ಪರಿಹಾರವನ್ನು ಒಪ್ಪಿಕೊಳ್ಳದಿರುವ ಯಾರೇ ಆಗಲೀ ಅವರು **ನಾಶವಾಗುತ್ತಾರೆ** ಎಂದು ದೇವರ ನೀತಿಯ ಧರ್ಮಶಾಸ್ತ್ರವು ಹೇಳುತ್ತದೆ. ಪಾಪದ ವಿಷದಿಂದ ಆದಾಮನ ಮಕ್ಕಳು ಸ್ವಸ್ಥ – –ವಾಗುವದಕ್ಕೆ ದೇವರು ಬೇರೆ ಯಾವ ಪರಿಹಾರವನ್ನು ಹೊಂದಿರಲಿಲ್ಲ. ಎಲ್ಲಾ ಪ್ರವಾದಿಗಳು ಬರೆದಿರುವಂತ ವಿಮೋಚಕನ ಕಡೆಗೆ ನೀವು ನೋಡಿದ್ದೀರೋ? ಆತನೊಬ್ಬನಲ್ಲಿಯೇ ನೀವು ಸುಮ್ಮನೆ ನಿಮ್ಮ ನಂಬಿಕೆಯನ್ನಿಟ್ಟರೆ ಆತನು ನಿಮ್ಮನ್ನು ಶುದ್ಧಪಡಿಸಿ ನಿಮಗೆ ನಿತ್ಯಜೀವವನ್ನು ಕೊಡುತ್ತಾನೆ. ವಾಕ್ಯ ಹೇಳುವದನ್ನು ಮತ್ತೆ ಕೇಳಿಸಿಕೊಳ್ಳಿರಿ: **"ಜನರು ನೋಡಿ ಜೀವದಿಂದುಳಿಯಬೇಕೆಂದು ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು ಸಹ ಎತ್ತರದಲ್ಲಿಡಲ್ಪಡಬೇಕು. . . . ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕು."** (ಯೋಹಾನ–೩:೧೪,೧೬)

ಜೊತೆ ಕೇಳುಗರೇ, ಈದಿನ ನಮ್ಮ ಸಮಯವು ಮುಗಿಯಿತು. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಾದರೆ, ಪ್ರವಾದಿಯಾದ ಮೋಶೆಯ ಅಂತಿಮ ಮಾತುಗಳನ್ನು ನಾವು ಆಲೋಚಿಸೋಣ, ಮತ್ತು ಹೀಗೆ ಪರಿಶುದ್ಧ ತೋರಾದಲ್ಲಿ ನಮ್ಮ ಅಧ್ಯ –ಯನವನ್ನು ಮುಗಿಸೋಣ. . .ಆತನ ಈ ವಾಗ್ದಾನವನ್ನು ನೀವು ವಿಚಾರಮಾಡುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನನ್ನ ಕಡೆಗೆ ತಿರುಗಿಕೊಳ್ಳಿರಿ, ಮತ್ತು ರಕ್ಷಣೆಯನ್ನು ಹೊಂದಿಕೊಳ್ಳಿರಿ."** (ಯೆಶಾಯ–೪೫:೨೨)

ಪಾಠ ೪೩

# ಮೋಶೆಯ ಅಂತಿಮ ಸಂದೇಶ

ಧರ್ಮೋಪದೇಶಕಾಂಡ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಹಿಂದಿನ ನಲವತ್ತೆರಡು ಪಾಠಗಳಲ್ಲಿ, ತೋರಾ ಎಂಬುದಾಗಿ ನಾವು ಕರೆಯುವ ಪರಿಶುದ್ಧ ವಾಕ್ಯಗಳ ಮೊದಲನೆಯ ಪುಸ್ತಕವನ್ನು ನಾವು ಗಮನಿಸುತ್ತಾ ಬಂದಿದ್ದೇವೆ. ನಿಮಗೆ ಗೊತ್ತಿರುವ ಹಾಗೆ, ದೇವರು ತನ್ನ ಮಾತುಗಳನ್ನು ಪ್ರವಾದಿಯಾದ ಮೋಶೆಯ ಮನಸ್ಸಿ –ನಲ್ಲಿ ನೆಟ್ಟು ಅವುಗಳನ್ನು ಒಂದು ಪುಸ್ತಕದಲ್ಲಿ ಬರೆಯುವದಕ್ಕೆ ಅವನನ್ನು ಪ್ರೇರೆಪಿಸಿದನು. ಮೋಶೆಯು ತೋರಾವನ್ನು ಬರೆದು ಸುಮಾರು ಮೂರು ಸಾವಿರದ ಐನೂರು ವರ್ಷಗಳು ಗತಿಸಿ ಹೋದವು, ಆದಾಗ್ಯೂ ಇದು ಈದಿನ ನಮಗೆ ಇನ್ನೂ ಅಳೆಯುವದ –ಕ್ಕಾಗದಿರುವಷ್ಟು ಮೌಲ್ಯವುಳ್ಳದ್ದಾಗಿದೆ. ತೋರಾವು ದೇವರು ತಾನೇ ಹಾಕಿರುವಂತ **ಬುನಾದಿಯಾಗಿದೆ,** ಇದರಿಂದ **ಇದು ದೇವ –ರಿಂದ ಬಂದದ್ದೋ ಅಥವಾ ಇಲ್ಲವೋ ಎಂಬುದನ್ನು ನಾವು ಕೇಳಿ ಗ್ರಹಿಸಿಕೊಂಡ** ಪ್ರತಿಯೊಂದನ್ನೂ ಪರೀಕ್ಷಿಸುವದಕ್ಕೆ ಸಾಧ್ಯವಾಗಿದೆ. ತೋರಾವು ಒಳಗೊಂಡಿರುವ ಬೋಧನೆಯು ದೇವರಿಂದ ಬಂದ **ಶುದ್ಧವಾದ ಸತ್ಯವಾಗಿದೆ.** ಇದಕ್ಕೆ ವಿರುದ್ಧವಾದ ಯಾವುದೇ ಬೋಧನೆಯು **ಸುಳ್ಳಾದದ್ದಾಗಿದೆ.** ತೋರಾದಲ್ಲಿ ಬರೆದಿರುವದೆಲ್ಲವೂ ಸಂಪೂರ್ಣವಾದ ಐಕ್ಯತೆಯಲ್ಲಿರುವ ದೇವರ ಸತ್ಯವಾಗಿದೆ. ಸರ್ವಶಕ್ತನಾದ ದೇವರು ಮಾಡದಿರುವ ಒಂದು ಕೆಲಸವಿದೆ. ಅದು ಏನೆಂದು ನಿಮಗೆ ಗೊತ್ತಾ? ಅದೇ ಸರಿಯಾದದ್ದು, ಅದೇನೆಂದರೆ **ದೇವರು ತಾನೇ ವಿರೋಧಿಸುವದಿಲ್ಲ!** ತೋರಾದಲ್ಲಿ ಮೋಶೆಯು ಹೀಗೆ ಬರೆದಿದ್ದಾನೆ, **"ದೇವರು ಮನುಷ್ಯನಂತೆ ಎರಡು ಮಾತಿನವನಲ್ಲ; ಮಾನವನಂತೆ ಮನಸ್ಸನ್ನು ಬೇರೆಮಾಡಿಕೊಳ್ಳುವವನಲ್ಲ. ತಾನು ಹೇಳಿದ ಮೇರೆಗೆ ನಡೆಯುವದಿಲ್ಲವೋ; ಮಾತು ಕೊಟ್ಟ ನಂತರ ನೆರವೇರಿಸುವದಿಲ್ಲವೋ?"** (ಅರಣ್ಯ–೨೩:೧೯)

ಮೋಶೇಯ ತೋರಾದಲ್ಲಿನ ನಮ್ಮ ಅಧ್ಯಯನದ ಮೂಲಕವಾಗಿ, ಅನೇಕ ಅಗಾಧವಾದ ರಹಸ್ಯಗಳನ್ನು ದೇವರು ನಮಗೆ ಪ್ರಕಟ – –ಪಡಿಸಿದ್ದಾನೆ. ಈ ದಿನ ನಾವು **ಪರಿಶುದ್ಧ ತೋರಾದ ಮುಖಾಂತರ ನಮ್ಮ ಪ್ರಯಾಣವನ್ನು ಮುಗಿಸುವದಕ್ಕೆ ಉದ್ದೇಶಿಸಿದ್ದೇವೆ.** ಆದರೆ ಕೊನೆಯ ಅಧ್ಯಾಯಗಳ ಕಡೆಗೆ ನಾವು ನೋಡುವದಕ್ಕಿಂತ ಮುಂಚೆ, ಆರಂಭದಿಂದ ಈ ದಿನದವರೆಗೂ ನಾವು ಏನು ನೋಡಿ – –ಕೊಂಡು ಬಂದಿದ್ದೇವೆಂಬುದನ್ನು ಪುನರಾವರ್ತಿಸಿಕೊಳ್ಳೋಣ.

ತೋರಾದಲ್ಲಿನ ಮೊದಲನೆಯ ಅಧ್ಯಾಯದಲ್ಲಿ, ದೇವರು ತನ್ನ ಸ್ವಂತ ಸ್ವರೂಪದಲ್ಲಿ ಮೊದಲನೆಯ ಮನುಷ್ಯನನ್ನು ಹೇಗೆ ಉಂಟು –ಮಾಡಿದನೆಂಬುದನ್ನು ನಾವು ನೋಡಿದೆವು. ತಾನು ಉಂಟುಮಾಡಿದ ಮನುಷ್ಯನೊಂದಿಗೆ ದೇವರು ಒಂದು ಅದ್ಭುತವಾದ ಮತ್ತು ಮಹತ್ವವುಳ್ಳ **ಸಂಬಂಧವನ್ನು** ಹೊಂದಿಕೊಳ್ಳುವದಕ್ಕೆ ಇಚ್ಛಿಸಿದ್ದನು. ಅದಕ್ಕೋಸ್ಕರವೇ ಆತನು ಮನುಷ್ಯನಲ್ಲಿ ಒಂದು ಆತ್ಮವನ್ನು ಇರಿಸಿ –ದನು, ಇದರಿಂದ ಮನುಷ್ಯನು ದೇವರನ್ನು ತಿಳಿದುಕೊಳ್ಳಲು ಶಕ್ತನಾದನು, ಅವನಿಗೆ ಹೃದಯವನ್ನು ಕೊಟ್ಟನು ಇದರಿಂದ ಅವನು ದೇವರನ್ನು ಪ್ರೀತಿಸಿದನು ಮತ್ತು ದೇವರು ಅವನಿಗೆ ಒಂದು ಮನಸ್ಸನ್ನು ಕೊಟ್ಟನು ಇದರಿಂದ ಅವನು ದೇವರಿಗೆ ವಿಧೇಯನಾಗ – –ಬೇಕೋ ಅಥವಾ ಅವಿಧೇಯನಾಗಬೇಕೋ ಎನ್ನುವದನ್ನು ತಾನೇ ಆರಿಸಿಕೊಳ್ಳುವದಕ್ಕೆ ಶಕ್ತನಾದನು.

ಮೂರನೆಯ ಅಧ್ಯಾಯದಲ್ಲಿ, ಮೊದಲನೆಯ ಮನುಷ್ಯನಾದ ಆದಾಮನು ಸೈತಾನನಿಗೆ ವಿಧೆಯಾಗುವದನ್ನು ಆರಿಸಿಕೊಂಡು ದೇವರು ನಿಷೇಧಿಸಿದ್ದ ಮರದ ಹಣ್ಣನ್ನು ತಿಂದನು. ಹಾಗಾಗಿ, ವಾಕ್ಯ ಹೇಳುವದೇನೆಂದರೆ: "ಒಬ್ಬ ಮನುಷ್ಯನಿಂದಲೇ **ಪಾಪವು** ಪಾಪದಿಂದ **ಮರಣವೂ** ಲೋಕದೊಳಗೆ ಸೇರಿದವು. ಎಲ್ಲರು ಪಾಪಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿ ವ್ಯಾಪಿಸಿತು." (ರೋಮಾ–೫:೧೨). ಪಾಪದ ಸಂಬಳವು ಮರಣ ಮತ್ತು ದೇವರಿಂದ ನಿತ್ಯವಾದ ಬೇರ್ಪಡುವಿಕೆಯಾಗಿದೆ.

ಹೀಗೆ, ಆದಾಮ ಹವ್ವರ ಪಾಪದ ನಿಮಿತ್ತವಾಗಿ ದೇವರು ಅವರನ್ನು ಪರದೈಸಿನಿಂದ ಹೇಗೆ ಹೊರದೊಬ್ಬಿದನೆಂಬುದನ್ನು ನಾವು ನೋಡಿಕೊಂಡೆವು. ಆದರೆ ಅವರನ್ನು ಹೊರಗಿಡುವದಕ್ಕಿಂತ ಮೊದಲು, ಆದಾಮನ ಸಂತಾನದವರನ್ನು ಪಾಪದ ದಂಡನೆಯಿಂದ ಮತ್ತು ಸೈತಾನನ ಆಳ್ವಿಕೆಯಿಂದ ಬಿಡಿಸುವದಕ್ಕೆ ಅವರಿಗಾಗಿ ರಕ್ಷಣೆಯ ಬಾಗಿಲನ್ನು ತೆರೆಯುವದಕ್ಕೆ, ತಾನು ಒಂದು ದಿನ ಈ

ಲೋಕಕ್ಕೆ ಒಬ್ಬ **ವಿಮೋಚಕನನ್ನು** ಕಳಿಸುವದಕ್ಕೆ ಹೇಗೆ ಯೋಜನೆ ಮಾಡಿಕೊಂಡಿದ್ದೇನೆ ಎಂಬುದನ್ನು ದೇವರು ಪ್ರಕಟಿಸಿದನು.

ಮುಂದೆ, ಪ್ರವಾದಿಗಳು ಮತ್ತು ವಿಮೋಚಕನು ಇಳಿದುಬರುವಂತಹ **ಒಂದು ವಿಶೇಷವಾದ ಜನಾಂಗವನ್ನಾಗಿ** ಮಾಡುತ್ತೇನೆಂದು ದೇವರು ಅಬ್ರಹಾಮನಿಗೆ ಹೇಗೆ ವಾಗ್ದಾನ ಮಾಡಿದನೆಂಬುದನ್ನು ನಾವು ಕಲಿತುಕೊಂಡೆವು. ಹೀಗೆ, ಅಬ್ರಹಾಮನು ಇಸಾಕನನ್ನು ಪಡೆದನು; ಇಸಾಕನು ಯಾಕೋಬನನ್ನು ಪಡೆದನು; ಯಾಕೋಬನು ಹನ್ನೆರಡು ಜನ ಗಂಡು ಮಕ್ಕಳನ್ನು ಪಡೆದನು. ನಂತರದಲ್ಲಿ, ದೇವರು ಯಾಕೋಬನ ಹೆಸರನ್ನು **ಇಸ್ರಾಯೇಲನೆಂಬುದಾಗಿ** ಬದಲಾಯಿಸಿದನು. ದೇವರು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನ –ದಂತೆ ಯಾಕೋಬನ ಹನ್ನೆರಡು ಜನ ಗಂಡುಮಕ್ಕಳು ಹೊಸ ಜನಾಂಗವಾಗಿ ರೂಪಿಸಲ್ಪಟ್ಟರು. ಹತ್ತು ಜನ ಹಿರಿಯ ಮಕ್ಕಳು ತಮ್ಮ ತಮ್ಮನಾದ ಯೋಸೇಫನನ್ನು ಐಗುಪ್ತರಿಗೆ ಗುಲಾಮನನ್ನಾಗಿ ಮಾರಿಬಿಟ್ಟರು. ಹೇಗೂ, **"ಒಬ್ಬ ಮನುಷ್ಯನು ಏನು ಬಿತ್ತುತ್ತಾನೋ ಅದನ್ನೇ ಕೊಯ್ಯುತ್ತಾನೆ"** (ಗಲಾತ್ಯ–೬:೭) ಇದರ ಪರಿಣಾಮವಾಗಿ, ಇಸ್ರಾಯೇಲನ ಮಕ್ಕಳೆಲ್ಲರೂ ಐಗುಪ್ತದಲ್ಲಿ ಹೇಗೆ ಗುಲಾಮರಾ –ದರೆಂಬುದನ್ನು ನಾವು ನೋಡಿದ್ದೇವೆ. ಅದೂ ಅಲ್ಲದೇ, ದೇವರು ಅಬ್ರಹಾಮನಿಗೆ ಮತ್ತು ಅವನ ಸಂತಾದವರಿಗೆ ಮಾಡಿದ್ದ ವಾಗ್ದಾನವನ್ನು ಮರೆತಿರಲಿಲ್ಲ. ವಿಮೋಚನಕಾಂಡ ಪುಸ್ತಕದಲ್ಲಿ ಇಸ್ರಾಯೇಲ್ಯರನ್ನು ಅವರ ಗುಲಾಮತನದ ಬಂಧನದಿಂದ ಬಿಡಿಸು –ವದಕ್ಕೆ ಮೋಶೆಯನ್ನು ಕರೆಯುವದರಿಂದ ತಾನು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವನ್ನು ದೇವರು ಹೇಗೆ ನೆರವೇರಿಸಿದನೆಂಬು –ದನ್ನು ನಾವು ಕಲಿತುಕೊಂಡೆವು.

ಮೋಶೆಯ ಕಥೆಯನ್ನು ಅಧ್ಯಯನ ಮಾಡುವದರಿಂದ, ಫರೋಹ ಮತ್ತು ಐಗುಪ್ತ ಜನರ ದಬ್ಬಾಳಿಕೆಯಿಂದ ಇಸ್ರಾಯೇಲ್ ಜನ – –ಸಮೂಹವನ್ನು ದೇವರು ಹೇಗೆ ಬಿಡುಗಡೆ ಮಾಡಿದನೆಂಬುದರ ಅದ್ಭುತವಾದ ಮತ್ತು ಆಶ್ಚರ್ಯಕರವಾದ ವಿವರಗಳನ್ನು ನಾವು ಓದಿಕೊಂಡೆವು. ದೇವರು ಅವರನ್ನು ಅರಣ್ಯದಲ್ಲಿ ರಕ್ಷಿಸಿ, ಬಹಳ ಹಿಂದೆಯೇ ಅವರ ಪೂರ್ವಿಕನಾದ ಅಬ್ರಹಾಮನಿಗೆ ವಾಗ್ದಾನ ಮಾಡಿದ್ದ ಕಾನಾನ್ ದೇಶದ ಅಂಚಿಗೆ ಹೇಗೆ ಕರೆತಂದನೆಂಬುದನ್ನೂ ಸಹ ನಾವು ಓದಿದೆವು. ಹಾಗಿದ್ದರೂ, ಕಾನಾನ್ ದೇಶದ ಬಲಿಷ್ಠ –ರನ್ನು ಕಂಡು ಇಸ್ರಾಯೇಲ್ಯರಲ್ಲಿ ಹೆಚ್ಚಿನವರು ಹೆದರಿಕೊಂಡು ದೇವರು ತಮಗೆ ಮಾಡಿದ್ದ ವಾಗ್ದಾನವನ್ನು ನೆರವೇರಿಸುತ್ತಾನೆಂಬು – –ದನ್ನು ನಂಬಲಿಲ್ಲ. ಆದ್ದರಿಂದ ಸಮೃದ್ಧಿಕರವಾದ ಕಾನಾನ್ ದೇಶವನ್ನು ಆ ಸಮಯದಲ್ಲಿ ಅವರು ಪ್ರವೇಶಿಸುವದಕ್ಕಾಗಲಿಲ್ಲ.

ಅವರ ಅಪನಂಬಿಕೆಯ ನಿಮಿತ್ತವಾಗಿ, ಇಸ್ರಾಯೇಲ್ಯರು ಅರಣ್ಯದಲ್ಲಿ ನಲವತ್ತು ವರ್ಷಗಳವರೆಗೆ ಅಲೆದಾಡಬೇಕಾಯಿತು, ಅಲ್ಲಿಯ –ವರೆಗೆ ಕಾನಾನ್ ದೇಶಕ್ಕೆ ಸಂಬಂಧಿಸಿದಂತೆ ದೇವರು ಮಾಡಿದ್ದ ವಾಗ್ದಾನವನ್ನು ನಂಬದಿದ್ದವರೆಲ್ಲರೂ ಸತ್ತುಹೋದರು. ಅವರ ಅಪನಂಬಿಕೆಯ ಕಾರಣದಿಂದ ದೇವರು ಅವರ ಮೇಲೆ ತಂದಂತಹ ಶಿಕ್ಷೆಯು ಇದೇ ಆಗಿತ್ತು. ನಿಜವಾಗಿಯೂ **"ನಮ್ಮ** ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡಿಸುವದೆಲ್ಲಾ ನ್ಯಾಯ; ಆತನು ನಿರ್ವಂಚಕನಾದ ನಂಬಿಗಸ್ತ ದೇವರು; ನೀತಿಯುಳ್ಳವನೂ ಯಥಾರ್ಥನೂ ಆಗಿದ್ದಾನೆ!" (ಧರ್ಮೋ–೩೨:೪).

ಈಗ, **ತೋರಾದಲ್ಲಿನ ನಮ್ಮ ಪ್ರಯಾಣವನ್ನು ಮುಕ್ತಾಯಗೊಳಿಸೋಣ**. ಇಸ್ರಾಯೇಲ್ಯರ ಅಪನಂಬಿಕೆಯ ನಿಮಿತ್ತವಾಗಿ ದೇವರು ಅವರನ್ನು ಶಿಕ್ಷಿಸಿದ್ದರಿಂದ ಅವರು ಅರಣ್ಯದಲ್ಲಿರಬೇಕಾಯಿತು ಎಂಬುದನ್ನು ಜ್ಞಾಪಿಸಿಕೊಳ್ಳಿರಿ. ಕಾನಾನ್ ದೇಶದ ಕುರಿತಾಗಿ ದೇವರು ಮಾಡಿದ್ದ ವಾಗ್ದಾನ ನಂಬುವದನ್ನು ತಿರಸ್ಕರಿಸಿದ್ದ ಇಪ್ಪತ್ತು ವರ್ಷಕ್ಕಿಂತ ಮೇಲ್ಪಟ್ಟವರೆಲ್ಲರೂ ಸತ್ತುಹೋದರು. ಯಾರೊಬ್ಬರೂ ಜೀವಂತವಾಗಿ ಉಳಿಯಲಿಲ್ಲ. ಈಗ ಅವರ ಮಕ್ಕಳು ಕಾನಾನ್ ದೇಶದ ಅಂಚಿನಲ್ಲಿದ್ದರು. ಅರಣ್ಯದಲ್ಲಿನ ದೀರ್ಘವಾದ ನಲವತ್ತು ವರ್ಷಗಳ ನಂತರ, ಇಸ್ರಾಯೇಲಿನ ಮಕ್ಕಳು ತಮ್ಮ ತಂದೆತಾಯಿಗಳು ಪ್ರವೇಶಿಸುವದಕ್ಕೆ ಸೋತು ಹೋದಂತ ದೇಶದಲ್ಲಿ ನೆಲೆಗೊಳ್ಳು –ವದಕ್ಕೆ ತುಂಬಾ ಕುತೂಹಲವುಳ್ಳವರಾಗಿದ್ದರು!

ತೋರಾದಲ್ಲಿನ ಐದನೆಯ ವಿಭಾಗವಾಗಿರುವ **ಧರ್ಮೋಪದೇಶಕಾಂಡ** ಪುಸ್ತಕದಿಂದ (ಎರಡನೆಯ ಧರ್ಮಶಾಸ್ತ್ರ) ಈ ದಿವಸದ ನಮ್ಮ ಅಧ್ಯಯನವಿದೆ. ಈ ಕೊನೆಯ ವಿಭಾಗದಲ್ಲಿ ಮೋಶೆಯು ದೇವರ ಪರಿಶುದ್ಧ ಧರ್ಮಶಾಸ್ತ್ರವನ್ನು ಪುನರಾವರ್ತಿಸಿ ಅದನ್ನು ಇಸ್ರಾ –ಯೇಲ್ ಜನಾಂಗದವರಿಗೆ ಬೋಧಿಸಿದನು. ದೇವರು ವಾಗ್ದಾನ ಮಾಡಿರುವ ದೇಶವನ್ನು ಪ್ರವೇಶಿಸುವದಕ್ಕೆ ಜನರನ್ನು ಸಿದ್ಧಪಡಿ –ಸಲು ಮೋಶೆಯು ಬೋಧಿಸಿದ ಅಂತಿಮ ಸಂದೇಶವನ್ನು ಈ ಅಗಾಧವಾದ ಪುಸ್ತಕವು ಒಳಗೊಂಡಿದೆ. ಮೋಶೆಯ ಪೂರ್ತಿ ಸಂದೇಶವನ್ನು ಓದುವದಕ್ಕೆ ಈದಿನ ನಮಗೆ ಸಮಯವಿಲ್ಲ, ಆದರೆ **"ಮರೆಯಬೇಡಿರಿ!"** ಎಂಬ ಈ ಕೆಲವೇ ಶಬ್ದಗಳಲ್ಲಿ ಮೋಶೆಯ ಮಾತುಗಳನ್ನು ಸಂಕ್ಷಿಪ್ತಗೊಳಿಸಬಹುದು.

ಸಂಕ್ಷಿಪ್ತವಾಗಿ, ಮೋಶೆಯು ಇಸ್ರಾಯೇಲ್ಯರಿಗೆ ಈ ರೀತಿಯಾಗಿ ಹೇಳಿದನು: ಎಚ್ಚರವಾಗಿರ್ರಿ, ಐಗುಪ್ತದಲ್ಲಿ ನೀವು ದಾಸತ್ವದಲ್ಲಿದ್ದದ್ದನ್ನು ಮರೆಯಬೇಡಿರಿ! ಮಾರ್ಗದಲ್ಲಿ ಅಂದರೆ ನೀವು ಪ್ರವೇಶಿಸಬೇಕಾಗಿದ್ದ ಹೊಸ ದೇಶ ಮತ್ತು ಐಗುಪ್ತದ ನಡುವೆ ದೇವರು ನಿಮಗೆ ಮಾಡಿದ್ದೆಲ್ಲವನ್ನೂ ಮರೆತುಹೋಗಬೇಡಿರಿ! ದೇವರಾದ ಯೆಹೋವನಿಗೆ ವಿರುದ್ಧವಾಗಿ ನೀವು ಮಾಡಿದ ಪಾಪಗಳನ್ನು ಮರೆಯ – –ಬೇಡಿರಿ! ನಿಮ್ಮ ತಂದೆತಾಯಿಗಳ ಅಪನಂಬಿಕೆಯ ನಿಮಿತ್ತವಾಗಿ ಯೆಹೋವನು ಅವರನ್ನು ಹೇಗೆ ತೀರ್ಪುಗೊಳಪಡಿಸಿದನೆಂಬುದನ್ನು ಇದರಿಂದ ಅವರ ಶವಗಳು ಮರುಭೂಮಿಯಲ್ಲಿಯೇ ಉಳಿದುಕೊಂಡದ್ದನ್ನು ಮರೆಯಬೇಡಿರಿ, ದೇವರು ನಿಮ್ಮ ತಂದೆತಾಯಿಗಳಿಗೆ ಒಳ್ಳೆಯವನಾಗಿದ್ದನೆಂಬುದನ್ನು ಮರೆಯಬೇಡಿರಿ, ಆದರೆ ಅವರು ತಮ್ಮನ್ನು ಕಠಿಣಪಡಿಸಿಕೊಂಡು ಆತನನ್ನು ನಂಬುವದಕ್ಕೆ ಅಲಕ್ಷ್ಯ ಮಾಡಿದರು. **ಇದನ್ನು ಮರೆಯಬೇಡಿರಿ!**

ಈ ಹೊತ್ತು ನೀವು ದೇವರ ಶಬ್ದಕ್ಕೆ ಕಿವಿಗೊಟ್ಟರೆ, ನಿಮ್ಮ ಹಿರಿಯರು ಅರಣ್ಯದಲ್ಲಿ ಮಾಡಿದಂತೆ ನಿಮ್ಮ ಹೃದಯಗಳನ್ನು ಕಠಿಣಪಡಿಸಿ –ಕೊಳ್ಳಬೇಡಿರಿ, ನೀವು ನಿಮ್ಮ ದೇವರಾದ ಯೆಹೋವನನ್ನು ನಂಬುತ್ತೀರೋ ಅಥವಾ ದೇವರ ವಾಕ್ಯವನ್ನು ನಂಬುವದಕ್ಕೆ ತಿರಸ್ಕಾರ ಮಾಡಿದ ನಿಮ್ಮ ಪೂರ್ವಿಕರಂತೆ ನೀವು ಇದ್ದೀರೋ? ನಿಮ್ಮ ಹಿರಿಯರು ಮಾಡಿದಂತೆ ನೀವೂ ದೇವರ ವಾಕ್ಯವನ್ನು ನಂಬುವದಕ್ಕೆ ಅಲಕ್ಷ್ಯ ಮಾಡಿದರೆ, ಅವರನ್ನು ಶಿಕ್ಷಿಸಿದಂತೆಯೇ ದೇವರು ನಿಮ್ಮನ್ನೂ ಸಹ ಶಿಕ್ಷಿಸುತ್ತಾನೆ. **ಇದನ್ನು ಮರೆಯಬೇಡಿರಿ!**

ಹಾಲೂ ಜೇನೂ ಹರಿಯುವ ದೇಶಕ್ಕೆ ಅಂದರೆ ನಿಮ್ಮ ಪೂರ್ವಿಕರಿಗೆ ಆತನು ವಾಗ್ದಾನ ಮಾಡಿದ ದೇಶಕ್ಕೆ ದೇವರಾದ ಯೆಹೋ – –ವನು ನಿಮ್ಮನ್ನು ಕರೆತರುತ್ತಾನೆ. ಆ ದೇಶವನ್ನು ನಿಮಗೆ ಕೊಡುವ ನಿಮ್ಮ ದೇವರನ್ನು ಮರೆಯಬೇಡಿರಿ, ಯಾಕೆಂದರೆ ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ಆದರೆ ದೇವರ ಬಾಯಿಂದ ಬರುವ ಪ್ರತಿಯೊಂದು ಮಾತಿನಿಂದ ಬದುಕುತ್ತಾನೆ! **ಇದನ್ನು ಮರೆಯಬೇಡಿರಿ!**

ಮೋಶೆಯು ತನ್ನ ಪ್ರಸಂಗವನ್ನು ಮುಗಿಸಿದ ನಂತರ, ಯೆಹೋವನು ಮೋಶೆಗೆ ಹೀಗೆ ಹೇಳಿದನು:

"ನೀನು ಈ ಅಬಾರೀಮ್ ಬೆಟ್ಟಗಳನ್ನು ಅಂದರೆ ಮೋವಾಬ್ಯರ ದೇಶದಲ್ಲಿ ಯೆರಿಕೋ ಪಟ್ಟಣಕ್ಕೆ ಎದುರಾಗಿರುವ ನೆಬೋ ಬೆಟ್ಟವನ್ನು ಹತ್ತಿ ನಾನು ಇಸ್ರಾಯೇಲ್ಯರಿಗೆ ಸ್ವದೇಶವಾಗುವದಕ್ಕೆ ಕೊಡುವ ಕಾನಾನ್ ದೇಶವನ್ನು ನೋಡು. ಅನಂತರ ನಿನ್ನ ಅಣ್ಣನಾದ ಆರೋ –ನನು ಹೇಗೆ ಹೋರೆಂಬ ಬೆಟ್ಟದಲ್ಲಿ ದೇಹವನ್ನು ಬಿಟ್ಟು ತನ್ನ ಪಿತೃಗಳಲ್ಲಿ ಸೇರಿದನೋ ಹಾಗೆಯೇ ನೀನೂ ಈ ಬೆಟ್ಟದಲ್ಲಿ ದೇಹ –ವನ್ನು ಬಿಟ್ಟು ಪಿತೃಗಳಲ್ಲಿ ಸೇರಬೇಕು. ನೀವಿಬ್ಬರೂ ಚೀನ್ ಅರಣ್ಯದಲ್ಲಿನ ಮೆರೀಬಾ ಕಾದೇಶಿನಲ್ಲಿ ನೀರು ಹೊರಟ ಸ್ಥಳದ ಬಳಿ – –ಯಲ್ಲಿ ಇಸ್ರಾಯೇಲ್ಯರ ಮಧ್ಯದಲ್ಲಿ ನನಗೆ ವಿರೋಧವಾಗಿ ದ್ರೋಹಮಾಡಿ ಅವರ ಮುಂದೆ ನನ್ನ ಗೌರವವನ್ನು ಕಾಪಾಡದೆ ಹೋದ –ದರಿಂದ ಹೀಗೆ ಆಗಬೇಕು. ನಾನು ಇಸ್ರಾಯೇಲ್ಯರಿಗೆ ಕೊಡುವ ದೇಶವನ್ನು ನೀನು ದೂರದಿಂದ ನೋಡಬಹುದೇ ಹೊರತು ಅದರಲ್ಲಿ ಪ್ರವೇಶಿಸಕೂಡದು ಎಂದು ಆಜ್ಞಾಪಿಸಿದನು." (ಧರ್ಮೋ–೩೨:೪೯–೫೨)

"ಮೋಶೆಯು ಮೋವಾಬ್ಯರ ಮೈದಾನದಿಂದ ಯೆರಿಕೋ ಪಟ್ಟಣಕ್ಕೆ ಎದುರಾಗಿರುವ ನೆಬೋ ಪರ್ವತಕ್ಕೆ ಹೋಗಿ ಪಿಸ್ಗಾ ಎಂಬ ಬೆಟ್ಟದ ಶಿಖರವನ್ನು ಹತ್ತಿದನು. ಆಗ ಯೆಹೋವನು ಕಾನಾನ್ ದೇಶವನ್ನೆಲ್ಲಾ ಅಂದರೆ ಯೆಹೂದ ಸೀಮೆಯಿಂದ ಹಿಡಿದು ಪಶ್ಚಿಮ ಸಮುದ್ರದವರೆಗಿರುವ ಪ್ರದೇಶವನ್ನೆಲ್ಲಾ ಅವನಿಗೆ ತೋರಿಸಿ – ನಾನು ಅಬ್ರಹಾಮ್ ಇಸಾಕ್ ಯಾಕೋಬರಿಗೆ ಕೊಡುವೆನೆಂದು ವಾಗ್ದಾನ ಮಾಡಿದ ದೇಶವು ಇದೇ; ನಿನಗೆ ಪ್ರತ್ಯಕ್ಷವಾಗಿ ತೋರಿಸಿದ್ದೇನೆ. ಆದರೆ ನೀನು ಹೊಳೆದಾಟಿ ಅಲ್ಲಿಗೆ ಹೋಗಕೂಡದೆಂದು ಹೇಳಿದನು. ಯೆಹೋವನ ಮಾತಿನಂತೆ **ಆತನ ಸೇವಕನಾದ ಮೋಶೆ ಅಲ್ಲೇ ಮೋವಾಬ್ಯರ ದೇಶದಲ್ಲಿ ದೇಹಬಿಟ್ಟನು.** ಮೋವಾಬ್ಯರ ದೇಶದಲ್ಲಿ ಬೇತ್ಪೆಗೋರಿಗೆ ಎದುರಾಗಿರುವ ಕಣಿವೆಯಲ್ಲಿ ಯೆಹೋವನು ಅವನ ದೇಹವನ್ನು ಸಮಾಧಿಮಾಡಿದನು; ಅವನ ಸಮಾಧಿ ಎಲ್ಲಿದೆಯೋ ಯಾರಿಗೂ ತಿಳಿಯದು. ಮೋಶೆ ಸಾಯುವಾಗ ನೂರಿಪ್ಪತ್ತು ವರುಷದವನಾಗಿದ್ದನು. ಅವರ ಕಣ್ಣು ಮೊಬ್ಬಾಗಲಿಲ್ಲ, ಅವನ ಜೀವಕಳೆ ಕುಂದಿಹೋಗಿರಲಿಲ್ಲ. ಮೋವಾಬ್ಯರ ಮೈದಾನದಲ್ಲಿ ಇಸ್ರಾಯೇಲ್ಯರು ಮೋಶೆಗೋಸ್ಕರ ಮೂವತ್ತು ದಿನ ದು:ಖಿಸಿ –ದರು, ಅಲ್ಲಿಗೆ ಮೋಶೆಯ ಪ್ರಲಾಪದ ದಿನಗಳು ಮುಗಿದವು. ಮೋಶೆಯು ನೂನನ ಮಗನಾದ ಯೆಹೋಶುವನ ಮೇಲೆ ಕೈ – –ಯಿಟ್ಟದರಿಂದ ಅವನು ಜ್ಞಾನವರಸಂಪನ್ನನಾದನು. ಯೆಹೋವನು ಮೋಶೆಗೆ ಕೊಟ್ಟ ಆಜ್ಞೆಗೆ ಅನುಸಾರವಾಗಿ ಇಸ್ರಾಯೇಲ್ಯರು ಯೆಹೋಶುವನ ಮಾತಿನ ಪ್ರಕಾರ ನಡೆದರು." (ಧರ್ಮೋ–೩೪:೧–೯)

"ಯೆಹೋವನು ಮೋಶೆಯ ಸಂಗಡ ಮುಖಾಮುಖಿಯಾಗಿ ಬಳಿಕೆಯಾಗಿದ್ದನು. ಆತನು ಐಗುಪ್ತದೇಶದಲ್ಲಿ ಫರೋಹನ ಮುಂದೆಯೂ ಅವನ ಪ್ರಜಾಪರಿವಾರದವರ ಮುಂದೆಯೂ ವಿಧವಿಧವಾದ ಅದ್ಭುತ ಮಹತ್ಕಾರ್ಯಗಳನ್ನು ನಡಿಸುವದಕ್ಕೆ ಯೆಹೋ –ವನು ಅವನನ್ನು ಕಳುಹಿಸಿದನು. ಇಸ್ರಾಯೇಲ್ಯರ ಮುಂದೆ ವಿಶೇಷವಾದ ಭುಜಪರಾಕ್ರಮವನ್ನೂ ಭಯಂಕರ ಕಾರ್ಯಗಳನ್ನೂ ನಡಿಸಿದನು. ಇಂಥವನಿಗೆ ಸಮಾನನಾದ ಮತ್ತೊಬ್ಬ ಪ್ರವಾದಿ ಈಚೆಗೆ ಇಸ್ರಾಯೇಲ್ಯರಲ್ಲಿ ಹುಟ್ಟಲೇ ಇಲ್ಲ."(ಧರ್ಮೋ–೩೪:೧೦–೧೨)

ಪ್ರಿಯ ಸ್ನೇಹಿತರುಗಳೇ, ಹೀಗೆ ತೋರಾವು ಇಲ್ಲಿಗೆ ಕೊನೆಗೊಳ್ಳುತ್ತದೆ. ತೋರಾದಲ್ಲಿ ಬರೆಯಲ್ಪಟ್ಟಿರುವ ಪ್ರತಿಯೊಂದು ದಾಖಲಿಸ – –ಲ್ಪಟ್ಟಿದೆ ಇದರಿಂದ ನಾವು ರಕ್ಷಣೆಯ ದೇವರ ಮಾರ್ಗವನ್ನು ನಂಬುವದಕ್ಕೆ ನಮ್ಮನ್ನು ನಡೆಸುವಂತ ತಿಳುವಳಿಕೆಯನ್ನು ಪಡೆದು – –ಕೊಳ್ಳಲು ಶಕ್ತರಾಗುತ್ತೇವೆ. ನಿಜವಾಗಿಯೂ, ಮೋಶೆಯು **ಒಬ್ಬ ದೊಡ್ಡ ಪ್ರವಾದಿಯಾಗಿದ್ದನು.** ಅವರು ದೇವರಾದ ಯೆಹೋವನನ್ನು ಮುಖಾಮುಖಿಯಾಗಿ ತಿಳಿದಿದ್ದನು. ಅವನು ದೇವರಿಂದ ಅದ್ಭುತಕರವಾದ ಸೂಚಕಕಾರ್ಯಗಳನ್ನು ಮಾಡಿದನು. ಮೋಶೆಯ ಕೈಯಿಂದ ದೇವರು ಇಸ್ರಾಯೇಲ್ಯರನ್ನು ಫರೋಹನ ದಬ್ಬಾಳಿಕೆಯಿಂದ ಬಿಡಿಸಿದನು. ಮತ್ತು ಅವನ ಕೈಯಿಂದ ಪರಿಶುದ್ಧ ವಾಕ್ಯಗಳ– –ಲ್ಲಿರುವ ಮೊದಲನೆಯ ಪುಸ್ತಕವಾಗಿರುವ ತೋರಾವನ್ನು ಸಹ ದೇವರು ನಮಗೆ ಕೊಟಿದ್ದಾನೆ. ಪ್ರವಾದಿಯಾದ ಮೋಶೆಯು ಬರೆ– –ದಿರುವದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಲೇಬೇಕು. ಯಾರಾದರೂ ಮೋಶೆಯ ತೋರಾವನ್ನು ತಿಳಿದುಕೊಳ್ಳದೇ ಹೋದರೆ ಬಹಳವಾಗಿ ತಪ್ಪು ಮಾಡಿದವರಾಗುತ್ತಾರೆ ಮತ್ತು ಅನೀತಿವಂತಿಕೆಯಲ್ಲಿ ನಾಶವಾಗುವಂತಹ ದೊಡ್ಡ ಅಪಾಯದಲ್ಲಿ ಇರುವವರಾಗಿ –ರುತ್ತಾರೆ. ತೋರಾವು ದೇವರು ತಾನೇ ಹಾಕಿರುವಂತ ಬುನಾದಿಯಾಗಿದೆ, ಈ ಬುನಾದಿಯ ಮೇಲೆ ದೇವರು ಇತರ ಎಲ್ಲಾ ಪ್ರವಾದಿಗಳ ಮುಖಾಂತರ ತನ್ನ ಉಳಿದ ಪರಿಶುದ್ಧ ಪುಸ್ತಕವನ್ನು ರಚನೆ ಮಾಡಿದ್ದಾನೆ.

ನಿಜವಾಗಿಯೂ ಪ್ರವಾದಿಯಾದ ಮೋಶೆಯು ಆಶ್ಚರ್ಯಕರವಾದ, ಅಗಾಧವಾದ ಮತ್ತು ಅದ್ಭುತಕರವಾದ ಶಬ್ದಗಳನ್ನು ಬರೆದಿದ್ದಾನೆ. ಮೋಶೆ ಇದೆಲ್ಲವನ್ನೂ ಮಾಡಿ ಬರೆದಿದ್ದಾಗ್ಯೂ, ಹದಿನೆಂಟನೆಯ ಅಧ್ಯಾಯದಲ್ಲಿ ತೋರಾದ ಐದನೆಯ ವಿಭಾಗದಲ್ಲಿ ಅವನು ಪ್ರಕಟಿ –ಸಿರುವದಕ್ಕಿಂತಲೂ ಯಾವುದೂ ಹೆಚ್ಚು ಪ್ರಾಮುಖ್ಯವಾದುದಲ್ಲ. ಈ ಅಧ್ಯಾಯದಲ್ಲಿ ಮೋಶೆ ಇಸ್ರಾಯೇಲ್ಯರಿಗೆ, **ದೇವರಿಗಾಗಿ ನೇರ –ವಾಗಿ ಮಾತಾಡುವಂತ ಇನ್ನೂ ಹೆಚ್ಚು ದೊಡ್ಡವನಾದ ಇನ್ನೊಬ್ಬ ಪ್ರವಾದಿಯನ್ನು** ಎಬ್ಬಿಸುವದಕ್ಕೆ ದೇವರು ಹೇಗೆ ಯೋಜನೆ ಮಾಡಿ –ಕೊಂಡಿದ್ದಾನೆಂಬುದನ್ನು ತಿಳಿಸಿದನು. ಮೋಶೆಯು ಇಸ್ರಾಯೇಲ್ ಜನರಿಗೆ ಹೇಳಿರುವದನ್ನು ಕೇಳಿಸಿಕೊಳ್ಳಿರಿ:

**"ನಿಮ್ಮ ದೇವರಾದ ಯೆಹೋವನು ನಿಮ್ಮ ಸಹೋದರರಲ್ಲಿ ನನ್ನಂಥ ಪ್ರವಾದಿಯನ್ನು ನಿಮಗೆ ಏರ್ಪಡಿಸುವನು; ಅವನಿಗೆ ನೀವು ಕಿವಿ – –ಗೊಡಬೇಕು.** ಹೋರೇಬಿನಲ್ಲಿ ನೀವು ಸಭೆಕೂಡಿದ ದಿನದಲ್ಲಿ ಹಾಗೆಯೇ ಕೋರಿಕೊಂಡು – ನಮ್ಮ ದೇವರಾದ ಯೆಹೋವನ ಸ್ವರವನ್ನು ಇನ್ನು ಕೇಳಲೂ ಈ ಘೋರವಾದ ಅಗ್ನಜ್ವಾಲೆಯನ್ನು ಇನ್ನು ನೋಡಲೂ ನಮಗೆ ಮನಸ್ಸಿಲ್ಲ; ಕೇಳಿ ನೋಡಿದರೆ ಸತ್ತೇವು ಎಂದು ನೀವು ಹೇಳಿದಿರಷ್ಟೆ. ಆಗ ಯೆಹೋವನು ನನಗೆ – **ಇವರು ಹೇಳಿದ ಮಾತು ಒಳ್ಳೇದೇ; ಇವರ ಸ್ವದೇಶದವರಲ್ಲಿ ನಿನ್ನಂಥ ಪ್ರವಾದಿಯನ್ನು ಅವರಿಗೋಸ್ಕರ ಏರ್ಪಡಿಸುವೆನು; ಅವನ ಬಾಯಿಂದ ನನ್ನ ಮಾತುಗಳನ್ನು ನುಡಿಸುವೆನು; ನಾನು ಅವನಿಗೆ ಆಜ್ಞಾಪಿಸಿ – –ದ್ದನ್ನೆಲ್ಲಾ ಅವನು ಅವರಿಗೆ ತಿಳಿಸುವನು. ಅವನು ನನ್ನ ಹೆಸರಿನಲ್ಲಿ ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವದಿಲ್ಲವೋ ಅಂಥವ – –ರನ್ನು ನಾನು ಶಿಕ್ಷಿಸುವೆನು."** (ಧರ್ಮೋ–೧೮:೧೫–೧೯)

ಮೋಶೆಯ ಬಾಯಿಂದ ಬಂದ ಈ ಹೇಳಿಕೆಯಿಂದ, ಇಬ್ರಿಯ ಜನಾಂಗದಿಂದ ಬರಲಿಕ್ಕಿರುವ ಇನ್ನೊಬ್ಬ ಪ್ರವಾದಿಯ ಬರುವಿಕೆಯನ್ನು ದೇವರು ಪ್ರಕಟಿಸಿದ್ದನು (೧೫, ೧೮ನೇ ವಚನ), ಪರಿಪೂರ್ಣತೆಯಲ್ಲಿ ಮತ್ತು ಶುದ್ಧತೆಯಲ್ಲಿ ದೇವರ ವಾಕ್ಯವನ್ನು ಮುಂದಾಗಿ ಮಾತಾಡುವಂತ ಒಬ್ಬ ಮನುಷ್ಯ (೧೮,೧೯), ಮನುಷ್ಯನಿಗೂ ಮತ್ತು ದೇವರಿಗೂ ಒಬ್ಬ ಮಧ್ಯಸ್ಥನಾಗುವಂತ ಒಬ್ಬ ಪ್ರವಾದಿ (೧೬, ೧೭). ಆ ಪ್ರವಾದಿ ಯಾರಾಗಿದ್ದನೆಂಬುದು ನಿಮಗೆ ಗೊತ್ತಾ? ಮೋಶೆಗಿಂತಲೂ ಇನ್ನೂ ದೊಡ್ಡದಾದ ಅಧಿಕಾರದಿಂದ ಮಾತಾಡು –ವಂತ ಪ್ರವಾದಿ ಯಾರು ಎಂದು ನಿಮಗೆ ಗೊತ್ತಾ? ಮೋಶೆಯಿಂದ ಜರುಗಿದ ಅದ್ಭುತಗಳಿಗಿಂತಲೂ ಹೆಚ್ಚಿನ ಕಾರ್ಯಗಳನ್ನು ಪ್ರದರ್ಶಿಸಿದಂತ ಆ ಪ್ರವಾದಿ ಯಾರೆಂಬುದು ನಿಮಗೆ ಗೊತ್ತಾ? ಹೌದು, ಮೋಶೆ ಮಾತಾಡಿದಂತ ಆ ಪ್ರವಾದಿ ಯಾರೆಂದರೆ ಯೆಹೂದ್ಯ ಕನ್ಯೆಯಲ್ಲಿ ಜನಿಸಿದ್ದ **ನೀತಿಯ ವಿಮೋಚಕ.** ಆತನಿಗೆ ಸಂಬಂಧಿಸಿದಂತೆ, ಮೋಶೆಯು ಇಸ್ರಾಯೇಲ್ ಜನಾಂಗದವರಿಗೆ, **"ನೀವು ಅವನಿಗೆ ಕಿವಿಗೊಡಬೇಕು!. . . .ನನ್ನ ಹೆಸರಿನಲ್ಲಿ ಪ್ರವಾದಿಯು ಹೇಳಿದ ಮಾತುಗಳಿಗೆ ಯಾರು ಕಿವಿಗೊಡುವದಿಲ್ಲವೋ ಅಂಥವರನ್ನು ನಾನು ಶಿಕ್ಷಿಸುವೆನು." ಎಂಬುದಾಗಿ ಒಂದು ಮುಂಚಿತವಾದ ಎಚ್ಚರಿಕೆಯನ್ನು ನೀಡಿದ್ದನು.**

ಸ್ನೇಹಿತರೇ, ಇಲ್ಲಿಗೆ ತೋರಾದಲ್ಲಿನ ನಮ್ಮ ಅಧ್ಯಯನವು ಮುಗಿಯುತ್ತದೆ. ಈ ವಿಸ್ತಾರವಾದ ಮತ್ತು ಅದ್ಭುತವಾದ ಪುಸ್ತಕದಲ್ಲಿ ನಮ್ಮ ಪ್ರಯಾಣವನ್ನು ನಾವು ಹೇಗೆ ಮುಗಿಸುವದಕ್ಕಾಗುತ್ತದೆ? ಮೋಶೆ ತಾನು ಸಾಯುವಂತ ದಿನದಲ್ಲಿ ಇಸ್ರಾಯೇಲ್ಯರಿಗೆ ತಾನೇ ಹೇಳಿ –ದಂತ ಮಾತುಗಳೊಂದಿಗೆ ನಾವು ಮುಗಿಸೋಣ. ಮೂವತ್ತೆರಡನೆಯ ಅಧ್ಯಾಯದಲ್ಲಿ ಮೋಶೆ ಹೇಳಿರುವದೇನೆಂದರೆ:

**"ಆಕಾಶಮಂಡಲವೇ ನಾನು ಹೇಳುವದನ್ನು ಕೇಳು; ಭೂಮಂಡಲವೇ ನನ್ನ ಮಾತುಗಳಿಗೆ ಕಿವಿಕೊಡು. . . . ಯೆಹೋವನ ನಾಮಮಹತ್ವ –ವನ್ನು ಪ್ರಕಟಿಸುವೆನು; ನಮ್ಮ ದೇವರನ್ನು ಮಹಾಮಹಿಮೆಯುಳ್ಳವನೆಂದು ಕೊಂಡಾಡಿರಿ. ನಮಗೆ ಶರಣನಾದ ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡಿಸುವದೆಲ್ಲಾ ನ್ಯಾಯ; ಆತನು ನಿರ್ವಂಚಕನಾದ ನಂಬಿಗಸ್ತ ದೇವರು, ನೀತಿಯುಳ್ಳವನೂ ಯಥಾರ್ಥನೂ ಆಗಿದ್ದಾನೆ!"** (ಧರ್ಮೋ–೩೨:೧,೩,೪)

ಮೋಶೆಯ ಬಾಯಿಂದ ಬಂದ ದೇವರ ಮಾತುಗಳೊಂದಿಗೆ ಈ ದಿನ ನಾವು ನಿಮಗೆ ವಿದಾಯ ಹೇಳುತ್ತಿದ್ದೇವೆ. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಮುಂದಿನ ಸಲ ದೇವರ ಚಿತ್ತವಾದರೆ, ಮೋಶೆಯ ತೋರಾದ ನಂತರ ಬರುವಂತ ಪರಿಶುದ್ಧ ಪುಸ್ತಕವನ್ನು ನಾವು ಪ್ರಾರಂಭಿಸುತ್ತೇವೆ ಮತ್ತು ಬಹಳ ಹಿಂದೆಯೇ ದೇವರು ವಾಗ್ದಾನ ಮಾಡಿದಂತೆ ಹಾಲೂ ಜೇನೂ ಹರಿಯುವ ದೇಶದೊಳಕ್ಕೆ ಇಸ್ರಾಯೇಲ್ಯರನ್ನು ಆತನು ಹೇಗೆ ಕರತಂದನೆಂಬುದನ್ನು ನೋಡಿಕೊಳ್ಳಲಿದ್ದೇವೆ.

ಎಂದೆಂದಿಗೂ ಮಹಿಮೆಗೆ ಮತ್ತು ಪ್ರಭಾವಕ್ಕೆ ಯೋಗ್ಯನಾಗಿರುವ ಒಬ್ಬನೇ ದೇವರು ನಿಮ್ಮನ್ನು ಆಶೀರ್ವದಿಸಲಿ! ಪ್ರವಾದಿಯಾದ ಮೋಶೆಯು ಇದನ್ನು ಸಮಗ್ರವಾಗಿ ಹೇಳಿದ್ದಾನೆ:

**"ನಮ್ಮ ಶರಣನಾದ ದೇವರು ಮಾಡುವ ಕಾರ್ಯದಲ್ಲಿ ಯಾವ ಕುಂದೂ ಇಲ್ಲ; ಆತನು ನಡಿಸುವದೆಲ್ಲಾ ನ್ಯಾಯ; ಆತನು ನಿರ್ವಂಚಕನಾದ ನಂಬಿಗಸ್ತ ದೇವರು; ನೀತಿಯುಳ್ಳವನೂ ಯಥಾರ್ಥನೂ ಆಗಿದ್ದಾನೆ."** (ಧರ್ಮೋ–೩೨:೪) ಆಮೆನ್!

ಪಾಠ ೪೪

# ಯೆಹೋಶುವ ಮತ್ತು ಕಾನಾನ್ ದೇಶ

## ಯೆಹೋಶುವ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ–ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು–ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ–ರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ಪ್ರವಾದಿಗಳ ಬರವಣಿಗೆಗಳಲ್ಲಿ ಮೊದಲನೆಯ ಪುಸ್ತಕವಾಗಿರುವ ಮೋಶೆಯ ತೋರಾದ ನಮ್ಮ ಅಧ್ಯಯನವನ್ನು ನಾವು ಮುಕ್ತಾಯಗೊಳಿಸಿದ್ದೇವೆ. ಪರಿಶುದ್ಧ ತೋರಾದಲ್ಲಿ, ಪಾಪವು ಹೇಗೆ ಲೋಕವನ್ನು ಪ್ರವೇಶಿಸಿತು ಮತ್ತು ಜೊತೆಯಲ್ಲಿ ಒಂದು ಶಾಪವನ್ನು ಹೇಗೆ ತಂದಿತೆಂಬುದನ್ನು ನಾವು ಕಲಿತುಕೊಂಡಿದ್ದೇವೆ. ಹೇಗೂ, ಪಾಪವು ತಂದಿದ್ದಂತ ಶಾಪದಿಂದ ಆದಾಮನ ಮಕ್ಕಳನ್ನು ಬಿಡುಗಡೆ ಮಾಡುವದಕ್ಕಾಗಿ ದೇವರಾದ ಯೆಹೋವನು ತನ್ನ ಅದ್ಭುತವಾದ ಯೋಜನೆಯಲ್ಲಿ ಒಬ್ಬ ರಕ್ಷಕ–ನನ್ನು ಈ ಲೋಕಕ್ಕೆ ಹೇಗೆ ಕಳಿಸಿದನೆಂಬುದನ್ನು ಸಹ ನಾವು ನೋಡಿಕೊಂಡೆವು. ಲೋಕಕ್ಕೆ ರಕ್ಷಕನನ್ನು ಕಳಿಸುವ ತನ್ನ ಯೋಜನೆ–ಯೊಂದಿಗೆ ಮುಂದುವರಿಯುವದಕ್ಕೆ, ದೇವರು ಅಬ್ರಹಾಮನನ್ನು ಕರೆದು ಅವನ ತಂದೆಯ ಮನೆಯನ್ನೂ, ದೇಶವನ್ನೂ ಬಿಟ್ಟು ದೂರದಲ್ಲಿರುವ ಕಾನಾನ್ ದೇಶಕ್ಕೆ ಹೋಗುವಂತೆ ಹೇಳಿದನು. ಯಾವ ಜನಾಂಗದ ಮುಖಾಂತರ ವಿಮೋಚಕನು ಇಳಿದು ಬರ–ಬೇಕಾಗಿತ್ತೋ ಅಂತಹ ಒಂದು ಹೊಸ ಜನಾಂಗವನ್ನಾಗಿ ಅಬ್ರಹಾಮನನ್ನು ಮಾಡುವದಕ್ಕೆ ದೇವರು ಸಂಕಲ್ಪಿಸಿದ್ದನು. ಅಬ್ರ–ಹಾಮನು ಕಾನಾನ್ ದೇಶಕ್ಕೆ ಬಂದ ನಂತರ ದೇವರು ಅವನಿಗೆ ಮತ್ತೆ ಕಾಣಿಸಿಕೊಂಡು, "ನೀನು ಈಗ ಅಪರಿಚಿತನಾಗಿರುವ ಈ ಕಾನಾನ್ ದೇಶವನ್ನು ನಿನ್ನ ಸಂತಾನದವರಿಗೆ ಎಂದೆಂದಿಗೂ ಸ್ವಾಸ್ತ್ಯವಾಗಿರುವಂತೆ ಕೊಡುತ್ತೇನೆ!" ಎಂದು ಹೇಳುತ್ತಾ ವಾಗ್ದಾನಮಾಡಿದನು. **ಬಹಳ ಹಿಂದೆಯೇ ದೇವರು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವನ್ನು ಹೇಗೆ ನೆರವೇರಿಸಿದನೆಂಬುದನ್ನು** ಮತ್ತು **ಅಬ್ರಹಾಮನ ಸಂತಾನದವರಾದ ಇಸ್ರಾಯೇಲ್ಯರಿಗೆ ಕಾನಾನ್ ದೇಶವನ್ನು ಹೇಗೆ ಕೊಟ್ಟನೆಂಬುದನ್ನು** ಈ ದಿನ ನಾವು ನೋಡಲಿದ್ದೇವೆ. ಕಾನಾನ್ ಈ ದಿನ **ಇಸ್ರೇಲ್** ಎಂದು ಕರೆಯಲ್ಪಡುವ ದೇಶವಾಗಿದೆ.

ಹಿಂದಿನ ಸಲ, ತೋರಾದ ಕೊನೆಯ ಅಧ್ಯಾಯದಲ್ಲಿ, **ಮೋಶೆಯು** ಬೆಟ್ಟದ ಮೇಲಿಂದ ಕಾನಾನ್ ದೇಶವನ್ನು ಕಣ್ಣೆತ್ತಿ ನೋಡುತ್ತಾ ಹೇಗೆ ಮರಣ ಹೊಂದಿದನೆಂಬುದನ್ನು ನಾವು ಕೇಳಿಸಿಕೊಂಡೆವು. ಮೋಶೆಯು ಮರಣ ಹೊಂದಿದ ನಂತರ, ಅವನ ಸೇವಕನಾದ ಯೆಹೋಶುವನು ಹೊಸ ನಾಯಕನಾದನು. {ಉಲೂಫ್‌ನಲ್ಲಿ: ಹೊರೆಯನ್ನು ಸ್ವಾಸ್ಥ್ಯವಾಗಿ ಹೊಂದಿದ್ದು} ಯೆಹೋಶುವನು ಮೋಶೆಗೆ ಬದಲಾಗಿ ದೇವರಿಂದ ಗೊತ್ತುಮಾಡಲ್ಪಟ್ಟವನು. ಈಗಾಗಲೇ ಯೆಹೋಶುವನನ್ನು ಅನೇಕ ಸಲ ನೋಡಿದ್ದೇವೆ. ದೇವರು ವಾಗ್ದಾನ ಮಾಡಿದ್ದೆಲ್ಲವನ್ನು ಇಸ್ರಾಯೇಲ್ಯರಲ್ಲಿ ಅನೇಕರು ನಂಬದಿದ್ದಾಗ್ಯೂ ಸಹ ಯೆಹೋಶುವನು ಅದೆಲ್ಲವನ್ನೂ ನಂಬಿದ್ದು ಅವನ ಪ್ರಾಮುಖ್ಯವಾದ ಗುಣಲಕ್ಷಣವಾಗಿತ್ತು. ಕಾನಾನ್ ದೇಶದ ಅಂಚಿಗೆ ಇಸ್ರಾಯೇಲ್ಯರು ಬಂದು ಮುಟ್ಟಿದಾಗ ದೇವರನ್ನು ನಂಬಿದ್ದ ಇಬ್ಬರು ಗೂಢಚಾರರಲ್ಲಿ ಯೆಹೋಶುವನು ಒಬ್ಬನಾಗಿದ್ದನು. ಯೆಹೋವನನ್ನು ನಂಬಿ ಕಾನಾನ್ ದೇಶವನ್ನು ವಶಪಡಿಸಿಕೊಳ್ಳುವಂತೆ ಯೆಹೋಶುವನು ಇಸ್ರಾಯೇಲ್ಯರನ್ನು ಉತ್ತೇಜಿಸಿದ್ದದರಿಂದ ಅವರು ಅವನನ್ನು ಕಲ್ಲೆಸೆದು ಕೊಲ್ಲುವದಕ್ಕೆ ಸಿದ್ಧರಾಗಿದ್ದರು. ನಲವತ್ತು ವರ್ಷಗಳವರೆಗೆ ಇಸ್ರಾಯೇಲ್ಯರು ತಿರಸ್ಕರಿಸಿದ್ದ ಅದೇ ಯೆಹೋಶುವನು ದೇವರಿಂದ ನಾಯಕನಾಗಿ ಆರಿಸಲ್ಪಟ್ಟು ಇಸ್ರಾಯೇಲ್ಯ–ರನ್ನು ಕಾನಾನ್ ದೇಶಕ್ಕೆ ಕರೆದುಕೊಂಡು ಬಂದಿದ್ದಾನೆಂಬುದನ್ನು ಈ ದಿನ ನಾವು ನೋಡಲಿದ್ದೇವೆ!

ಈ ದಿನ ನಾವು ಓದಲಿರುವ ಯೆಹೋಶುವನ ಪುಸ್ತಕವು, ಪರಿಶುದ್ಧ ವಾಕ್ಯಗಳಲ್ಲಿ ತೋರಾ{ತೌರತ್}ಮತ್ತು ಕೀರ್ತನೆಗಳ{ಝಾಬುರ್} ಮಧ್ಯದಲ್ಲಿ ಬರುತ್ತದೆ. "ನೀನು ಪ್ರವಾಸವಾಗಿರುವ ಕಾನಾನ್ ದೇಶವನ್ನೆಲ್ಲಾ ನಿನಗೂ ನಿನ್ನ ಸಂತತಿಗೂ ಶಾಶ್ವತ ಸ್ವಾಸ್ಥ್ಯವನ್ನಾಗಿ ಕೊಡು–ವೆನು" (ಆದಿ–೧೭:೮) ಎಂದು ದೇವರು ಬಹಳ ಹಿಂದೆ ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವನ್ನು ಹೇಗೆ ನೆರವೇರಿಸಿದನೆಂಬು–ದನ್ನು ಯೆಹೋಶುವನ ಪುಸ್ತಕವು ವಿವರಿಸುತ್ತದೆ.

ಕಾಲಾನುಕ್ರಮದ ನಮ್ಮ ಅಧ್ಯಯನದಲ್ಲಿನ ಈ ವಿಷಯದಲ್ಲಿ, ಇಸ್ರಾಯೇಲ್ಯರು ಇನ್ನೂ ತಮ್ಮ ಸ್ವಂತದಾದ ದೇಶವನ್ನು ಹೊಂದಿರಲಿಲ್ಲ. ಅವರು ಇನ್ನೂ ಮರುಭೂಮಿಯಲ್ಲಿ ಅಲೆದಾಡುತ್ತಿದ್ದರು. ಅದೂ ಅಲ್ಲದೆ ಅವರು ವಾಸಿಸಬೇಕಾಗಿದ್ದ ಕಾನಾನ್ ದೇಶವು ಬಲಿಷ್ಠ ಯುದ್ಧವೀರರಾಗಿದ್ದ ದೈತ್ಯರಿಂದ ತುಂಬಿತ್ತು. ಹೇಗೂ, ಸರ್ವಶಕ್ತನಾದ ದೇವರು ಕಾನಾನಿನ ಈ ನಿವಾಸಿಗಳನ್ನು ಹೊರಹಾಕುವದಕ್ಕೆ

ಉದ್ದೇಶಿಸಿ ಅವರ ಅನೇಕ ಹೇಸಿಕೆಯ ಪಾಪಗಳ ನಿಮಿತ್ತವಾಗಿ ಅವರನ್ನು ನಿರ್ಮೂಲಮಾಡಿ ಸಮೃದ್ಧಿಕರವಾದ ದೇಶವನ್ನು ಇಸ್ರಾ –
–ಯೇಲ್ಯರಿಗೆ ಕೊಡುವದಕ್ಕೆ ಸಂಕಲ್ಪಿಸಿದನು.

ಯೆಹೋಶುವನು ಮತ್ತು ಇಸ್ರಾಯೇಲ್ಯರು ಆ ದೇಶವನ್ನು ಪ್ರವೇಶಿಸಿ ಅದನ್ನು ಜಯಿಸಿ ಹೇಗೆ ವಶಪಡಿಸಿಕೊಂಡರೆಂಬುದನ್ನು ಈಗ ನಾವು ನೋಡಿಕೊಳ್ಳೋಣ. ಮೊದಲನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ;

"ಯೆಹೋವನ ಸೇವಕನಾದ ಮೋಶೆಯು ಸತ್ತ ಮೇಲೆ ಯೆಹೋವನು ಅವನ ಶಿಷ್ಯನಾದ ನೂನನ ಮಗ ಯೆಹೋಶುವನಿಗೆ – ನನ್ನ ಸೇವಕನಾದ ಮೋಶೆ ಸತ್ತನು; ನೀನು ಈಗ ಎದ್ದು ಸಮಸ್ತ ಪ್ರಜಾಸಹಿತವಾಗಿ ಈ ಯೋರ್ದನ್ ಹೊಳೆಯನ್ನು ದಾಟಿ ನಾನು ಇಸ್ರಾಯೇಲ್ಯರಿಗೆ ಕೊಡುವ ದೇಶಕ್ಕೆ ಹೋಗು. ನಾನು ಮೋಶೆಗೆ ಹೇಳಿದಂತೆ **ನೀವು ಕಾಲಿಡುವ ಸ್ಥಳವನ್ನೆಲ್ಲಾ ನಿಮಗೆ ಕೊಟ್ಟಿದ್ದೇನೆ.** ಅರಣ್ಯವೂ ಈ ಲೆಬನೋನ್ ಪರ್ವತವೂ ಮೊದಲುಗೊಂಡು ಯೂಫ್ರೇಟೀಸ್ ಮಹಾನದಿಯವರೆಗಿನ ಹಿತ್ತಿಯರ ದೇಶವೆಲ್ಲಾ ನಿಮ್ಮದಾಗುವದು; ನಿಮ್ಮ ಸೀಮೆಯು ಪಶ್ಚಿಮ ದಿಕ್ಕಿನ ಮಹಾಸಾಗರದವರೆಗೆ ವಿಸ್ತರಿಸಿಕೊಳ್ಳುವದು. ನಿನ್ನ ಜೀವಮಾನದಲ್ಲೆಲ್ಲಾ ಒಬ್ಬನೂ ನಿನ್ನ ಮುಂದೆ ನಿಲ್ಲನು; ನಾನು ಮೋಶೆಯ ಸಂಗಡ ಇದ್ದ ಹಾಗೆ ನಿನ್ನ ಸಂಗಡಲೂ ಇರುವೆನು. ನಿನ್ನನ್ನು ಕೈಬಿಡುವದಿಲ್ಲ, ತೊರೆಯುವದಿಲ್ಲ." ಎಂದು ಹೇಳಿದನು. (ಯೆಹೋ–೧:೧–೫)

"ಸ್ಥಿರಚಿತ್ತನಾಗಿರು ಧೈರ್ಯದಿಂದಿರು. ಯಾಕಂದರೆ ನಾನು ಈ ಜನರ ಪಿತೃಗಳಿಗೆ ಪ್ರಮಾಣಮಾಡಿ ಕೊಟ್ಟ ದೇಶವನ್ನು ಇವರಿಗೆ ನೀನೇ ಸ್ವಾಧೀನಪಡಿಸಬೇಕು. **ನಾನು ನಿನಗೆ ಆಜ್ಞಾಪಿಸಿದ್ದೇನಲ್ಲಾ; ಸ್ಥಿರಚಿತ್ತನಾಗಿರು, ಧೈರ್ಯದಿಂದಿರು. ಅಂಜಬೇಡ ಕಳವಳಗೊಳ್ಳಬೇಡ. ನೀನು ಹೋಗುವಲ್ಲೆಲ್ಲಾ ನಿನ್ನ ದೇವರಾದ ಯೆಹೋವನು ನಿನ್ನ ಸಂಗಡ ಇರುತ್ತಾನೆ** ಎಂದು ಹೇಳಿದನು. ಆಗ ಯೆಹೋಶುವನು ಜನಾಧಿಪತಿಗಳಿಗೆ – ನೀವು ಪಾಳೆಯದ ಎಲ್ಲಾ ಕಡೆಗೂ ಹೋಗಿ ಜನರಿಗೆ – ನೀವು ಇನ್ನು ಮೂರು ದಿವಸಗಳಲ್ಲಿ ಈ ಯೋರ್ದನ್ ಹೊಳೆಯನ್ನು ದಾಟಿ ನಿಮ್ಮ ದೇವರಾದ ಯೆಹೋವನು ನಿಮಗೆ ಸ್ವಾಸ್ತ್ಯವಾಗಿ ಕೊಡುವ ದೇಶವನ್ನು ಸ್ವತಂತ್ರಿಸಿಕೊಳ್ಳುವದಕ್ಕೆ ಹೋಗ –ಬೇಕು. ಆದದರಿಂದ ನಿಮಗೋಸ್ಕರ ಆಹಾರವನ್ನು ಸಿದ್ಧಮಾಡಿಕೊಳ್ಳಿರಿ ಎಂದು ಹೇಳಬೇಕು ಅಂದನು."(ಯೆಹೋ–೧:೬,೯–೧೧)

ಇದಾದ ನಂತರ, ಯೆಹೋಶುವನು ಹೇಗೆ **ಇಬ್ಬರು ಗೂಢಚಾರರನ್ನು** ಕರೆದು ಅವರಿಗೆ "ಹೋಗಿ ದೇಶವನ್ನೆಲ್ಲಾ ವಿಶೇಷವಾಗಿ ಯೆರಿ –ಕೋವನ್ನು ಸಂಚರಿಸಿ ನೋಡಿಕೊಂಡು ಬನ್ನಿರಿ" ಎಂದು ಹೇಳಿ ಕಳಿಸಿದನೆಂಬುದನ್ನು ವಾಕ್ಯವು ತಿಳಿಸುತ್ತದೆ. ಆ ಇಬ್ಬರು ಗೂಢ – –ಚಾರರು ಯೆರಿಕೋ ಪಟ್ಟಣವನ್ನೆಲ್ಲಾ ಮತ್ತು ಪಟ್ಟಣವನ್ನು ಸುತ್ತುವರಿದಿದ್ದ ಎತ್ತರವಾದ ಬಲವಾದ ಗೋಡೆಗಳನ್ನು ಪರೀಕ್ಷಿಸಿದರು. ಆ ರಾತ್ರಿ ಇಬ್ಬರು ಗೂಢಚಾರರು **ರಾಹಾಬಳೆಂಬ** ಸೂಳೆಯ ಮನೆಯಲ್ಲಿ ಬಚ್ಚಿಟ್ಟುಕೊಂಡರು. ಹೇಗೂ, ರಾಹಾಬಳ ಮನೆಯೊಳಕ್ಕೆ ಹೋಗಿದ್ದ ಇಸ್ರಾಯೇಲ್ ಗೂಢಚಾರರನ್ನು ಯೆರಿಕೋವಿನ ಕೆಲವು ಜನರು ನೋಡಿದ್ದರು. ತಕ್ಷಣವೇ ಅವರು ಅರಸನಿಗೆ, "ಪಟ್ಟಣ –ವನ್ನು ಸಂಚರಿಸಿ ನೋಡುವದಕ್ಕೆ ಕೆಲವು ಇಸ್ರಾಯೇಲ್ಯರು ಬಂದಿದ್ದಾರೆ" ಎಂದು ತಿಳಿಸಿದರು. ಅವರನ್ನು ಸೆರೆಹಿಡಿಯುವದಕ್ಕೆ ಅರಸನು ಸೈನಿಕರನ್ನು ರಾಹಾಬಳ ಮನೆಗೆ ಕಳುಹಿಸಿದನು ಆದರೆ ಅವಳು ಅವರನ್ನು ಮಾಳಿಗೆಯ ಮೇಲೆ ಬಚ್ಚಿಟ್ಟಳು.

ಸೈನಿಕರು ಹೊರಟುಹೋದ ನಂತರ, ರಾಹಾಬಳು ಅವರನ್ನು ಕರೆದು, ಅವರಿಗೆ, "ನಿಮ್ಮ ದೇವರಾದ ಯೆಹೋವನು ನಿಜವಾದ ದೇವರೆಂಬುದು ನನಗೆ ಗೊತ್ತು. ಯೆಹೋವನು ಈ ದೇಶವನ್ನು ನಿಮಗೆ ಕೊಟ್ಟಿರುವದನ್ನೂ ನಾನು ಬಲ್ಲೆನು. ನಿಮ್ಮ ನಿಮಿತ್ತ ಮನಗೆ ಮಹಾಭೀತಿಯುಂಟಾಗಿದೆ; ದೇಶದ ನಿವಾಸಿಗಳೆಲ್ಲರು ಕಂಗೆಟ್ಟು ಹೋಗಿದ್ದಾರೆ. ನೀವು ಐಗುಪ್ತದಿಂದ ಹೊರಟು ಬಂದ ಮೇಲೆ ಯೆಹೋವನು ನಿಮ್ಮ ಮುಂದೆ ಕೆಂಪು ಸಮುದ್ರವನ್ನು ಬತ್ತಿಸಿಬಿಟ್ಟದ್ದನ್ನೂ ನಿಮ್ಮ ಶತ್ರುಗಳೆಲ್ಲರನ್ನು ನಿರ್ಮೂಲ ಮಾಡಿದ್ದನ್ನು ಕೇಲಿ ನಮ್ಮ ಎದೆಯೊಡೆದು ಹೋಯಿತು. ನಿಮ್ಮ ದೇವರಾದ ಯೆಹೋವನೊಬ್ಬನೇ ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ದೇವರು. ಆದದರಿಂದ ಈಗ ನೀವು ನನಗೆ ಒಂದು ಗುರುತುಕೊಟ್ಟು ನಾನು ನಿಮಗೆ ದಯೆತೋರಿಸಿದಂತೆ ನೀವು ಈ ಪಟ್ಟಣವನ್ನು ಜಯಿಸಿ ವಶಪಡಿಸಿಕೊಂಡಾಗ ನನಗೂ ನನ್ನ ಮನೆಯವರಿಗೂ ದಯೆತೋರಿಸಿ ನಾಶಮಾಡದೆ ಉಳಿಸುವದಾಗಿ ಯೆಹೋವನ ಹೆಸರಿನಲ್ಲಿ ಪ್ರಮಾಣಮಾಡಬೇಕೆಂದು ಕೇಳಿಕೊಂಡಳು." ಆಗ ಇಬ್ಬರು ಗೂಢಚಾರರು ಅವಳಿಗೆ, "ಯೆಹೋವನು ನಿಮ್ಮ ಪಟ್ಟಣ – –ವನ್ನು ನಮಗೆ ಅನುಗ್ರಹಿಸಿದಾಗ ನಾವು ನಿನ್ನನ್ನೂ ಮತ್ತು ನಿನ್ನ ಮನೆಯಲ್ಲಿರುವ ಎಲ್ಲರನ್ನೂ ರಕ್ಷಿಸುವೆವು" ಎಂದು ಹೇಳಿದರು.

ಮೂರನೆಯ ಅಧ್ಯಾಯದಲ್ಲಿ, ಇಸ್ರಾಯೇಲ್ಯರು ಕಾನಾನ್ ದೇಶವನ್ನು ಪ್ರವೇಶಿಸುವದಕ್ಕೆ ಆಳವಾದ ಮತ್ತು ವಿಸ್ತಾರವಾದ ಯೋರ್ದನ್ ನದಿಯನ್ನು ದಾಟುವದು ಹೇಗೆ ಅಗತ್ಯವಾಗಿತ್ತೆಂಬುದನ್ನು ವಾಕ್ಯಗಳು ವಿವರಿಸುತ್ತವೆ. ಎರಡು ಮೂರು ಮಿಲಿಯನ್ ಜನಸಮೂಹವು ಆ ವಿಸ್ತಾರವಾದ ನದಿಯನ್ನು ಹೇಗೆ ದಾಟುವದಕ್ಕಾಗುತ್ತದೆ? ಆಹ್, ಇದಕ್ಕೆ ಉತ್ತರ ಬಹಳ ಸುಲಭ, ಯಾಕಂದರೆ ಕೆಂಪುಸಮುದ್ರದ ಮೂಲಕವಾಗಿ ಅವರಿಗೆ ದಾರಿಯನ್ನು ತೆರೆದಾತನಾದ ಸರ್ವಶಕ್ತ ದೇವರಾದ ಕರ್ತನು ಬದಲಾಗಿರಲಿಲ್ಲ! ಈ ಸಲ ಯೋರ್ದನ್ ನದಿಯ ಮೂಲಕವಾಗಿ ದೇವರು ಮತ್ತೆ ಇಸ್ರಾಯೇಲ್ಯರಿಗೆ ದಾರಿಯನ್ನು ತೆರೆದಿದ್ದಾನೆ. ಈ ಪ್ರಕಾರ, ಅವರು ನೀರಿನ ಮಧ್ಯದಲ್ಲಿ ಒಣ ನೆಲದ ಮುಖಾಂತರ ಹಾದು ಹೋದರು. ಇಸ್ರಾಯೇಲ್ಯರೆಲ್ಲರೂ ನದಿಯನ್ನು ದಾಟಿ ಯೆರಿಕೋ ಎಂಬ ದೊಡ್ಡ ಪಟ್ಟಣದ ಮುಂಭಾಗಕ್ಕೆ ಬಂದರು. ಯೆರಿಕೋವಿನ ಜನರು ಪಟ್ಟಣದ ಬಾಗಿಲನ್ನು ಮುಚ್ಚಿಕೊಂಡರು. ಯಾರೂ ಒಳಗೆ ಹೋಗಲಿಲ್ಲ; ಹೊರಗೆ ಬರಲಿಲ್ಲ.

ಐದನೆಯ ಅಧ್ಯಾಯದಲ್ಲಿ, ಯೆಹೋಶುವನು ಯೆರಿಕೋವಿನ ಹತ್ತಿರದಲ್ಲಿದ್ದಾಗ ಒಂದಾನೊಂದು ದಿನ ಕಣ್ಣೆತ್ತಿ ನೋಡಲು ಒಬ್ಬ ಮನುಷ್ಯನು ಹಿರಿದಕತ್ತಿಯನ್ನು ಕೈಯಲ್ಲಿ ಹಿಡಿದು ತನ್ನ ಮುಂದೆ ನಿಂತಿರುವದನ್ನು ಕಂಡನು ಎಂಬುದಾಗಿ ವಾಕ್ಯವು ನಮಗೆ ತಿಳಿಸು –ತ್ತದೆ. ಯೆಹೋಶುವನು ಅವನಿಗೆ "ನೀನು ನಮ್ಮವನೋ ಅಥವಾ ಶತೃಪಕ್ಷದವನೋ?" ಎಂದು ಕೇಳಲು ಆ ಮನುಷ್ಯನು ಉತ್ತರ –ವಾಗಿ, **"ನಾನು ಯೆಹೋವನ ಸೇನಾಪತಿ!"** ಎಂದು ಹೇಳಿದನು. ಯೆಹೋಶುವನು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದನು. ನಂತರ ತನ್ನನ್ನು ಯೆಹೋವನ ಸೇನಾಪತಿ ಎಂಬುದಾಗಿ ಹೇಳಿಕೊಂಡ ಮನುಷ್ಯನು ಯೆಹೋಶುವನಿಗೆ, "ನಿನ್ನ ಕಾಲಿನ ಕೆರಗಳನ್ನು ತೆಗೆದುಹಾಕು, ನೀನು ನಿಂತಿರುವ ಸ್ಥಳವು ಪರಿಶುದ್ಧ ಭೂಮಿ" ಎಂದು ಹೇಳಿದನು. ಅವನು ಹೇಳಿದ ಹಾಗೆಯೇ ಯೆಹೋಶುವನು ಮಾಡಿದನು.

ಸ್ನೇಹಿತರೇ, ಯೆಹೋಶುವನೊಂದಿಗೆ ಯಾರು ಮಾತನಾಡುತ್ತಿದ್ದಾರೆ ಎಂದು ನಿಮಗೆ ಗೊತ್ತಾಯಿತಾ? ಅದು ಕರ್ತನು ತಾನೇ ಅಲ್ಪ –ಕಾಲಿಕವಾಗಿ ಕಾಣಿಸಿಕೊಂಡಿದ್ದನು! ದೇವರು ಅಬ್ರಹಾಮನಿಗೆ ಒಬ್ಬ ಮನುಷ್ಯನ ಹಾಗೆ ಕಾಣಿಸಿಕೊಂಡು ಮಾತಾಡಿದ್ದನ್ನು ನಾವು ಈಗಾಗಲೇ ನೋಡಿದ್ದೇವೆ, ಮತ್ತು ಮೋಶೆಗೆ ಆತನು ಮುಳ್ಳಿನ ಪೊದೆಯಲ್ಲಿ ಬೆಂಕಿಯ ಜ್ವಾಲೆಯಲ್ಲಿ ಕಾಣಿಸಿಕೊಂಡದ್ದನ್ನೂ ನೋಡಿ –ದ್ದೇವೆ. ಈಗ ಕೈಯಲ್ಲಿ ಕತ್ತಿ ಹಿಡಿದ ಒಬ್ಬ ಶೂರ ಸೇನಾಪತಿಯ ಹಾಗೆ ಯೆಹೋಶುವನಿಗೆ ದೇವರು ಕಾಣಿಸಿಕೊಂಡಿದ್ದಾನೆ!

ದೇವರಾದ ಕರ್ತನು ಈ ಪ್ರಕಾರ ಯೆಹೋಶುವನಿಗೆ ಹೇಳಿದನು,

"ನೋಡು, ನಾನು ಯೆರಿಕೋವನ್ನೂ ಮತ್ತು ಅದರ ಅರಸನನ್ನೂ ಯುದ್ಧವೀರರನ್ನೂ ನಿನ್ನ ಕೈಗೆ ಒಪ್ಪಿಸಿದ್ದೇನೆ. ನಿಮ್ಮ ಭಟರೆಲ್ಲಾ ಆರು ದಿವಸಗಳವರೆಗೆ ದಿನಕ್ಕೆ ಒಂದು ಸಾರಿ ಪಟ್ಟಣವನ್ನು ಸುತ್ತಲಿ, ಏಳು ಮಂದಿ ಯಾಜಕರು ಕೊಂಬುಗಳನ್ನು ಹಿಡಿದುಕೊಂಡು ಮಂಜೂಷದ ಮುಂದೆ ನಡೆಯಲಿ. ಏಳನೆಯ ದಿವಸ ನೀವು ಪಟ್ಟಣವನ್ನು ಏಳು ಸಾರಿ ಸುತ್ತಬೇಕು; ಯಾಜಕರು ಕೊಂಬುಗಳನ್ನು ಊದಬೇಕು, ಅವರು ದೀರ್ಘವಾಗಿ ಊದುವ ಕೊಂಬಿನ ಧ್ವನಿಯು ಕೇಳಿಸುತ್ತಲೇ ನೀವೆಲ್ಲರೂ ಮಹತ್ತರವಾಗಿ ಆರ್ಭಟಿಸಿರಿ. ಆಗ ಪಟ್ಟಣದ ಗೋಡೆಯು ತಾನೇ ಬಿದ್ದುಹೋಗುವದು; ಪ್ರತಿಯೊಬ್ಬನೂ ನೆಟ್ಟಗೆ ಒಳಗೆ ನುಗ್ಗಬಹುದು ಎಂದು ಹೇಳಿದನು."
(ಯೆಹೋಶುವ–೬:೨–೫)

ನಂತರ ದೇವರು ಯೆಹೋಶುವನೊಂದಿಗೆ ಮಾತಾಡುವದನ್ನು ಮುಗಿಸಿ ಹೊರಟುಹೋದನು.

ಯೆಹೋಶುವನು ತಕ್ಷಣವೇ ಇಸ್ರಾಯೇಲ್ಯರ ಬಳಿಗೆ ಹೋಗಿ ಕರ್ತನು ತನಗೆ ಆಜ್ಞಾಪಿಸಿದ್ದನ್ನೆಲ್ಲಾ ಅವರಿಗೆ ತಿಳಿಸಿದನು. ನಂತರ ಯೆಹೋಶುವನು ಅವರಿಗೆ ಒಡಂಬಡಿಕೆಯ ಮಂಜೂಷವನ್ನು ತೆಗೆದುಕೊಂಡು ಒಂದು ಸಲ ಪಟ್ಟಣವನ್ನು ಸುತ್ತುವಂತೆ ಅಪ್ಪಣೆ ಕೊಟ್ಟನು. ಆದರೆ ಅವನು ಅವರಿಗೆ, "ನಾನು ಆಜ್ಞಾಪಿಸುವವರೆಗೆ ದಿನವೆಲ್ಲಾ ಒಂದು ಮಾತನ್ನು ಆಡಬಾರದೆಂದು, ನಾನು ಆರ್ಭ –ಟಿಸಿರಿ ಎಂದು ಹೇಳಿದ ನಂತರ ನೀವು ಆರ್ಭಟಿಸಬೇಕು" ಎಂದು ಹೇಳಿದನು. ಅವರು ಪಟ್ಟಣವನ್ನು ಒಂದು ಸಾರಿ ಸುತ್ತಿದ ನಂತರ ಪಾಳೆಯಕ್ಕೆ ಹಿಂತಿರುಗಿ ಬಂದು ರಾತ್ರಿಯನ್ನು ಕಳೆದರು. ಎರಡನೆಯ ದಿನವೂ ಅವರು ಪಟ್ಟಣವನ್ನು ಸುತ್ತಿ ಹಿಂತಿರುಗಿ ಪಾಳೆಯಕ್ಕೆ ಬಂದರು. ಈ ರೀತಿಯಾಗಿ ಅವರು ಮೊದಲ ಆರು ದಿವಸಗಳವರೆಗೆ ಮಾಡಿದರು.

ಆದರೆ ಏಳನೆಯ ದಿನದಂದು, ಅವರು ಬೆಳಿಗ್ಗೆ ಎದ್ದು ಏಳು ಸಾರಿ ಪಟ್ಟಣವನ್ನು ಸುತ್ತಿದರು. ಏಳನೆಯ ಸಾರಿ ಅವರು ಪಟ್ಟಣ – –ವನ್ನು ಸುತ್ತುವರಿದ ನಂತರ ಯಾಜಕರು ತುತ್ತೂರಿಯನ್ನು ಊದಿದರು. ಆಗ ಯೆಹೋಶುವನು ಜನರಿಗೆ, "ಆರ್ಭಟಿಸಿರಿ, ಯೆಹೋ –ವನು ನಿಮಗೆ ಈ ಪಟ್ಟಣವನ್ನು ಕೊಟ್ಟಿದ್ದಾನೆ!" (ಯೆಹೋ–೬:೧೬) ಎಂದು ಆಜ್ಞಾಪಿಸಿದನು.

ಇಸ್ರಾಯೇಲ್ಯರು ತುತ್ತೂರಿಯ ಶಬ್ದವನ್ನು ಕೇಳಿದಾಗ, ಮಹತ್ತರವಾಗಿ ಆರ್ಭಟಿಸಿದರು, ಆಗ ಪಟ್ಟಣದ ಗೋಡೆಯು ಬಿದ್ದುಹೊಯಿತು! ನಂತರ ಇಸ್ರಾಯೇಲ್ಯರು ಪಟ್ಟಣದೊಳಕ್ಕೆ ಹೋದರು, ಪ್ರತಿಯೊಬ್ಬರೂ ನೆಟ್ಟಗೆ ಒಳಕ್ಕೆ ಹೋದರು. ಈ ಪ್ರಕಾರ ಯೆಹೋಶುವನೂ ಮತ್ತು ಇಸ್ರಾಯೇಲ್ಯರು ಕಾನಾನ್ ದೇಶದಲ್ಲಿನ ಮೊದಲ ಪಟ್ಟಣವನ್ನು ಜಯಿಸಿದರು. ಆ ದಿನದಂದು ಗೂಢಚಾರರು ವಾಗ್ದಾನ ಮಾಡಿದಂತೆ ರಾಹಾಬಳೂ ಮತ್ತು ಆಕೆಯ ಮನೆಯವರು ಹೊರತುಪಡಿಸಿ ಯೆರಿಕೋವಿನ ಜನರೆಲ್ಲರೂ ಸತ್ತುಹೋದರು. ರಾಹಾ –ಬಳು ವಿಗ್ರಹಗಳಿಂದ ದೂರವಾಗಿ ಇಸ್ರಾಯೇಲ್ಯರ ದೇವರಲ್ಲಿ ತನ್ನ ನಂಬಿಕೆಯನ್ನಿಟ್ಟದ್ದರಿಂದ ರಾಹಾಬಳ ಮನೆಯು ನಾಶವಾಗಲಿಲ್ಲ.

ಭದ್ರವಾದ ಕೋಟೆಯಿಂದ ಸುತ್ತುವರಿದಿದ್ದ ಪಟ್ಟಣವನ್ನು ಜಯಿಸುವದಕ್ಕೆ ಯೆಹೋಶುವನು ಮತ್ತು ಇಸ್ರಾಯೇಲ್ಯರು ಶಕ್ತರಾಗಿ ದೇವರು ತಮಗೆ ವಾಗ್ದಾನ ಮಾಡಿದ್ದ ದೇಶವನ್ನು ಯಾಕೆ ಪ್ರವೇಶಿಸಿದರು? ಅವರು ದೇವರ ಮಾತನ್ನು **ನಂಬಿದ್ದರಿಂದ** ಆ ಪಟ್ಟಣ –ವನ್ನು ಜಯಿಸಿದರು. ತನ್ನ ವಾಕ್ಯವನ್ನು ನಂಬುವವರೊಂದಿಗೆ ದೇವರು ಇರುತ್ತಾನೆ. ಪಟ್ಟಣವು ನಾಶವಾಗುವಾಗ ಯೆರಿಕೋ ಜನರೊಂದಿಗೆ ರಾಹಾಬಳು ಯಾಕೆ ಸತ್ತುಹೋಗಲಿಲ್ಲ? ಆಕೆ ಬದುಕಿಕೊಂಡದ್ದು ಯಾಕಂದರೆ ಆಕೆ ಕೇವಲ ದೇವರ ಬಲದ ನಿಮಿತ್ತ –ವಾಗಿ ಆಶ್ಚರ್ಯಪಡುವದರಲ್ಲಿಯೇ ನಿಲ್ಲಲಿಲ್ಲ; ಆದರೆ ಆಕೆ ದೇವರ ಜನರೊಂದಿಗೆ ದೇವರ ಇತರ ವಿಷಯಗಳನ್ನು ಸಹ ನಂಬಿ – –ದಳು. ಅದನ್ನೇ ದೇವರ ವಾಕ್ಯವು ಹೀಗೆ ಹೇಳುತ್ತದೆ:

"ನಂಬಿಕೆಯಿಂದಲೇ ಅವರು ಏಳು ದಿವಸಗಳ ತನಕ ಎರಿಕೋ ಪಟ್ಟಣದ ಗೋಡೆಗಳನ್ನು ಸುತ್ತಿದ ಮೇಲೆ ಅವು ಬಿದ್ದವು. ನಂಬಿಕೆ –ಯಿಂದಲೆ ರಾಹಾಬಳೆಂಬ ಸೂಳೆಯು ಗೂಢಚಾರರನ್ನು ಸಮಾಧಾನವಾಗಿ ಸೇರಿಸಿಕೊಂಡು ನಂಬದವರೊಂದಿಗೆ ನಾಶವಾಗಲಿಲ್ಲ. ಆದರೆ ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವದು ಅಸಾಧ್ಯ; ದೇವರ ಬಳಿಗೆ ಬರುವವನು ದೇವರು ಇದ್ದಾನೆ, ಮತ್ತು ತನ್ನನ್ನು ಹುಡುಕುವವರಿಗೆ ಪ್ರತಿಫಲವನ್ನು ಕೊಡುತ್ತಾನೆ ಎಂದು ನಂಬುವದು ಅವಶ್ಯ." (ಇಬ್ರಿಯ–೧೧:೩೦,೩೧,೬)

ಯೆಹೋಶುವನ ಪುಸ್ತಕದಲ್ಲಿರುವ ಇನ್ನೂ ಅನೇಕ ಕಥೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆಂದು ನಾವು ಆಶಿಸುತ್ತೇವೆ, ಆದರೆ ಹಾಗೆ ಮಾಡುವದಕ್ಕೆ ಸಮಯವು ನಮಗೆ ಅವಕಾಶ ಕೊಡುತ್ತಿಲ್ಲ. ಸಂಕ್ಷಿಪ್ತವಾಗಿ, ದೇವರು ಯೆಹೋಶುವ ಮತ್ತು ಇಸ್ರಾಯೇಲ್ಯ – –ರೊಂದಿಗೆ ಹೇಗೆ ಇದ್ದನೆಂಬುದನ್ನು ಈ ಪುಸ್ತಕವು ವಿವರವಾಗಿ ತಿಳಿಸುವದನ್ನು ನೀವು ತಿಳಿದುಕೊಳ್ಳಲೇಬೇಕು, ಮತ್ತು ಆತನು ವಾಗ್ದಾನ ಮಾಡಿದ ಹಾಗೆಯೇ ಅವರನ್ನು ಪಟ್ಟಣದಿಂದ ಪಟ್ಟಣಕ್ಕೆ ನಡೆಸಿ ಕೊನೆಗೆ ಕಾನಾನ್ ದೇಶವನ್ನು ಅವರಿಗೆ ಹೇಗೆ ಕೊಟ್ಟ – –ನೆಂಬುದನ್ನೂ ಸಹ ನೀವು ತಿಳಿದುಕೊಳ್ಳಲೇಬೇಕು. ಹಾಗಾಗಿ, ಇಪ್ಪತ್ತೊಂದನೆಯ ಅಧ್ಯಾಯದಲ್ಲಿ ವಾಕ್ಯವು ಹೇಳುವದೇನೆಂದರೆ: **"ಯೆಹೋವನು ಇಸ್ರಾಯೇಲ್ಯರ ಪೂರ್ವಿಕರಿಗೆ ಪ್ರಮಾಣಪೂರ್ವಕವಾಗಿ ವಾಗ್ದಾನ ಮಾಡಿದ ದೇಶವನ್ನು ಇಸ್ರಾಯೇಲ್ಯರಿಗೆ ಕೊಟ್ಟನು. ಅವರು ಅದನ್ನು ಸ್ವತಂತ್ರಿಸಿಕೊಂಡು ಅದರಲ್ಲಿ ವಾಸಮಾಡಿದರು. ಯೆಹೋವನು ಅವರ ಪೂರ್ವಿಕರಿಗೆ ಆಣೆಯಿಟ್ಟು ಹೇಳಿದಂತೆ ಅವರಿಗೆ ಎಲ್ಲಾ ಕಡೆಯಲ್ಲಿಯೂ ಸಮಾಧಾನ ಕೊಟ್ಟನು. ವೈರಿಗಳಲ್ಲಿ ಒಬ್ಬನೂ ಅವರ ಮುಂದೆ ನಿಲ್ಲಲಿಲ್ಲ. ಆತನು ಎಲ್ಲರನ್ನೂ ಅವರ ಕೈಗೆ ಒಪ್ಪಿಸಿದನು!"** (ಯೆಹೋ–೨೧:೪೩,೪೪)

ಸ್ನೇಹಿತರೇ, ಬಹಳ ಹಿಂದೆ ದೇವರು ಅಬ್ರಹಾಮ ಮತ್ತು ಅವನ ಸಂತತಿಗೆ ಮಾಡಿದ್ದ ವಾಗ್ದಾನವನ್ನು ನೆರವೇರಿಸಿದನೋ? ತಾನು ಮಾಡುತ್ತೇನೆಂದು ಹೇಳಿದ ಹಾಗೆಯೇ ದೇವರು ಕಾನಾನ್ ದೇಶವನ್ನು ಇಸ್ರಾಯೇಲ್ಯರಿಗೆ ಒಪ್ಪಿಸಿದನೋ? ಹೌದು ಆತನು ಹಾಗೆ ಮಾಡಿದನು! ದೇವರು ನಂಬಿಗಸ್ತನು (ತನ್ನ ಒಡಂಬಡಿಕೆಯನ್ನು ಕಾಪಾಡಿಕೊಳ್ಳುವದರಲ್ಲಿ)! ಆತನು ವಾಗ್ದಾನಗಳನ್ನು ನೆರವೇರಿಸು –ವದರಲ್ಲಿ ನಿಧಾನಸ್ಥನು ಎಂದು ಒಂದುವೇಳೆ ಮನುಷ್ಯನು ಅಂದುಕೊಂಡರೂ, ಆತನು ತಾನು ವಾಗ್ದಾನ ಮಾಡಿದ ಪ್ರತಿಯೊಂ – –ದನ್ನೂ ನೆರವೇರಿಸುತ್ತಾನೆ. ದೇವರಾದ ಕರ್ತನು ಇಸ್ರಾಯೇಲ್ಯರಿಗೆ ದಯೆಯುಳ್ಳವನಾಗಿರುವದಕ್ಕೆ ಹಾರೈಸಿ ಸಮೃದ್ಧಿಕರವಾದ ಕಾನಾನ್ ದೇಶವನ್ನು ಅವರಿಗೆ ಕೊಟ್ಟನು, ಆದರೆ ಅವರು ತನ್ನನ್ನು ನಂಬುವವರಾಗಿರಬೇಕೆಂದು ಆತನು ಕಾಯುತ್ತಿದ್ದನು. ನಾವು ನೋಡಿಕೊಂಡ ಹಾಗೆ, ದೇವರು ತಮಗೆ ಮಾಡಿದ್ದ ವಾಗ್ದಾನವನ್ನು ನಂಬುವದಕ್ಕೆ ಪ್ರಾರಂಭಿಸುವದಕ್ಕಿಂತ ಮುಂಚೆ ಇಸ್ರಾಯೇಲ್ಯರು **ಅನೇಕ ವರ್ಷಗಳನ್ನು ವ್ಯರ್ಥಗೊಳಿಸಿದ್ದರು.** ಅವರ ತಂದೆ ತಾಯಿಯರು ದೇವರ ವಾಗ್ದಾನಗಳನ್ನು ನರಬದೇ ಹೋದದರಿಂದ, ಕಾನಾನ್ ದೇಶದ ಆಶೀರ್ವಾದಗಳನ್ನು ಅವರು ಸ್ವಾಸ್ಥ್ಯವಾಗಿ ಹೊಂದಿಕೊಳ್ಳಲಿಲ್ಲ.

ನಿಮ್ಮ ವಿಷಯವೇನು? ನೀವು ದೇವರನ್ನು ನಂಬುತ್ತೀರೋ? ಒಂದು ವೇಳೆ ನೀವು ಅಸ್ತಿತ್ವದಲ್ಲಿರುವ ದೇವರಲ್ಲಿ ಅಥವಾ ದೇವರ ಏಕತೆಯಲ್ಲಿ ನಂಬಿಕೆಯಿಟ್ಟಿದ್ದೀರೋ ಎಂದು ನಾವು ಕೇಳುತ್ತಿಲ್ಲ. ದೇವರು ಅಸ್ತಿತ್ವದಲ್ಲಿದ್ದಾನೆ ಮತ್ತು ಆತನು ಏಕ ದೇವರಾಗಿದ್ದಾನೆಂಬು –ದನ್ನು ಸೈತಾನನು ತಾನೇ ತಿಳಿದುಕೊಂಡಿದ್ದಾನೆ! ಈ ದಿನ ನೀವು ಉತ್ತರಿಸಬೇಕಾದ ಪ್ರಶ್ನೆಯೇನೆಂದರೆ: **ನೀವು ದೇವರನ್ನು ನಂಬು –ತ್ತೀರೋ?** ನೀವು ಆತನನ್ನು ಪ್ರೀತಿಸುತ್ತೀರೋ? ಹೃದಯಪೂರ್ವಕವಾಗಿ **ದೇವರ ವಾಕ್ಯವನ್ನು** ನಂಬುತ್ತೀರೋ? ತನ್ನನ್ನು ನಂಬು –ವವರಿಗೋಸ್ಕರ ದೇವರು ಏನು ಕಾದಿರಿಸಿದ್ದಾನೋ ಅದನ್ನು ನೀವು **ತಿಳಿದಿದ್ದೀರೋ?** ತನ್ನ ಶುಭ ಸಂದೇಶವನ್ನು ನಂಬುವ ಪ್ರತಿ –ಯೊಬ್ಬ ವ್ಯಕ್ತಿಗೂ ದೇವರು ಕೊಡುವಂತ ಪರಿಶುದ್ಧಾತ್ಮನನ್ನು ಮತ್ತು ನಿತ್ಯಜೀವವನ್ನು ನೀವು ಸ್ವಾಸ್ಥ್ಯವಾಗಿ ಹೊಂದಿದ್ದೀರೋ? ದೇವರು ಇದ್ದಾನೆ ಎಂದು ಆದಾಮನ ಮಕ್ಕಳಲ್ಲಿ ಹೆಚ್ಚಿನವರು ನಂಬಿದ್ದರು. ಆದಾಗ್ಯೂ, ಬೇಸರವೇನೆಂದರೆ, ದೇವರ ಅಮೂಲ್ಯವಾದ ಮತ್ತು ಉನ್ನತವಾದ ವಾಗ್ದಾನಗಳನ್ನು **ತಿಳಿದುಕೊಂಡು ನಂಬಿದವರು** ಕೆಲವರು ಮಾತ್ರ. ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು ಊಹಿಸಿಕೊಳ್ಳುವದಕ್ಕಿಂತಲೂ ಹೆಚ್ಚಾಗಿ ದೇವರು ನಿಮ್ಮನ್ನು ಪ್ರೀತಿಸಿ ಆಶೀರ್ವದಿಸುವದಕ್ಕೆ ಬಯಸುತ್ತಾನೆ, ಆದರೆ ನೀವು ಆತನ ವಾಕ್ಯವನ್ನು **ತಿಳಿದು** ಅದನ್ನು **ನಂಬಿ** ಅಂಗೀಕರಿಸಿಕೊಳ್ಳಬೇಕು! ಇದಕ್ಕೆ ಸಂಬಂಧಿಸಿದಂತೆ, ಪರಿಶುದ್ಧ ವಾಕ್ಯಗಳು ಹೇಳುವದೇನೆಂದರೆ:

"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ, ಅದರ ಭಾವನೆಯು ಮನು –ಷ್ಯನ ಹೃದಯದಲ್ಲಿ ಹುಟ್ಟಲಿಲ್ಲ." (೧ಕೊರಿಂಥ–೨:೯). "ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು **ನಂಬಿ** ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ **ಕಾದಿದ್ದು** ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ!" (ಇಬ್ರಿಯ–೬:೧೨)

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .ದೇವರ ವಾಕ್ಯದ ಈ ಎಚ್ಚರಿಕೆಯನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನೀವು ಮಂದಮತಿಗಳಾಗಿರದೆ ಯಾರು ವಾಗ್ದಾನಗಳನ್ನು ನಂಬಿ ಅವುಗಳ ಫಲಕ್ಕೋಸ್ಕರ ಬಹು ದಿವಸಗಳವರೆಗೂ ಕಾದಿದ್ದು ಆ ಫಲವನ್ನು ಹೊಂದುತ್ತಾರೋ ಅವರನ್ನು ಅನುಸರಿಸುವವರಾಗಬೇಕೆಂದು ಕೋರುತ್ತೇನೆ!"** (ಇಬ್ರಿಯ–೬:೧೨)

ಪಾಠ ೪೫

# ನ್ಯಾಯಸ್ಥಾಪಕರು ಮತ್ತು ರೂತಳು

ನ್ಯಾಯಸ್ಥಾಪಕರು ಮತ್ತು ರೂತಳು

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಈ ದಿನ ನಮ್ಮ ಕಾರ್ಯಕ್ರಮದ ಕೊನೆಯ ಅರ್ಧಭಾಗದಲ್ಲಿ, ಪರಿಶುದ್ಧ ವಾಕ್ಯಗಳಲ್ಲಿ ಬರೆಯಲ್ಪಟ್ಟಿರುವ ಒಂದು ಹೃದಯಸ್ಪರ್ಶಿ **"ಪ್ರೇಮ ಕಥೆ"** ಯ ಕಡೆಗೆ ನೋಡುವದಕ್ಕೆ ನಾವು ಉದ್ದೇಶಿಸಿದ್ದೇವೆ – ಹಾಗಾಗಿ ಎಲ್ಲೂ ಹೋಗಬೇಡಿ! ನಮ್ಮ ಹಿಂದಿನ ಕಾರ್ಯ –ಕ್ರಮದಲ್ಲಿ ಮೋಶೆಯ ಸೇವಕನಾದ ಯೆಹೋಶುವನು ಇಸ್ರಾಯೇಲ್ಯರನ್ನು ಹೇಗೆ ಕಾನಾನ್ ದೇಶಕ್ಕೆ ನಡಿಸಿದನೆಂಬುದನ್ನು ನಾವು ನೋಡಿಕೊಂಡಿದ್ದೇವೆ. ಬಹಳ ಹಿಂದೆ ಅಬ್ರಹಾಮನಿಗೆ ವಾಗ್ದಾನ ಮಾಡಿದ ಹಾಗೆ ಯೆಹೋಶುವ ಮತ್ತು ಇಸ್ರಾಯೇಲ್ಯರ ಶತೃಗಳನ್ನು ನಾಶಮಾಡಿ ಸಮೃದ್ಧಿಕರವಾದ ಕಾನಾನ್ ದೇಶದೊಳಕ್ಕೆ ಅವರನ್ನು ಕರೆತರುವದಕ್ಕೆ ದೇವರು ಹೇಗೆ ಅವರ ಮುಂದೆ ಹೋದನೆಂಬು –ದನ್ನು ನಾವು ಓದಿಕೊಂಡಿದ್ದೇವೆ. ಯೆಹೋಶುವನ ಪುಸ್ತಕವನ್ನು ಅನುಸರಿಸಿರುವ ಎರಡು ಪರಿಶುದ್ಧ ಪುಸ್ತಕಗಳ ಕಡೆಗೆ ಈ ದಿನ ಗಮನ ಹರಿಸುವದಕ್ಕೆ ನಾವು ಉದ್ದೇಶಿಸಿದ್ದೇವೆ. ಅವು **ನ್ಯಾಯಸ್ಥಾಪಕರು** ಮತ್ತು **ರೂತಳ** ಪುಸ್ತಕಗಳು. **ಪ್ರವಾದಿಯಾದ ಯೆಹೋ – ಶುವನ** ಕಾಲ ಮತ್ತು **ಪ್ರವಾದಿಯಾದ ದಾವೀದನ** ಕಾಲದ **ನಡುವೆ** ಏನು ಸಂಭವಿಸಿತೆಂಬುದನ್ನು ಈ ಎರಡು ಪುಸ್ತಕಗಳು ನಮಗೆ ತೋರಿಸಿಕೊಡುತ್ತವೆ.

ನ್ಯಾಯಸ್ಥಾಪಕರ ಪುಸ್ತಕವನ್ನು ನಾವು ನೋಡಿಕೊಳ್ಳುವದಕ್ಕಿಂತ ಮೊದಲು, ಯೆಹೋಶುವನು ತಾನು ಸಾಯುವದಕ್ಕಿಂತ ಮುಂಚೆ ಇಸ್ರಾಯೇಲ್ಯರಿಗೆ ಹೇಳಿದಂತ ಸಂದೇಶವನ್ನು ನಾವು ಓದಿಕೊಳ್ಳಬೇಕು. ಯೆಹೋಶುವನ ಪುಸ್ತಕದ ಕೊನೆಯ ಅಧ್ಯಾಯದಲ್ಲಿ, ಐಗುಪ್ತದವರಿಂದ ಅವರನ್ನು ಬಿಡುಗಡೆ ಮಾಡಿ ಈಗ ಅವರು ವಾಸಿಸಿರುವ ಸುಂದರವಾದ ದೇಶವನ್ನು ಅವರಿಗೆ ಕೊಟ್ಟಂತ ಅವರ ದೇವರಾದ ಕರ್ತನನ್ನು ಪ್ರೀತಿಸಿ ಆತನಿಗೆ ವಿಧೇಯರಾಗಿರಬೇಕೆಂದು ಯೆಹೋಶುವನು ಇಸ್ರಾಯೇಲ್ಯರ ಎಲ್ಲಾ ನಾಯಕರುಗಳನ್ನು ಭೇಟಿಯಾಗಿ ಅವರನ್ನು ಎಚ್ಚರಿಸಿದನು. ಯೆಹೋಶುವನು ತನ್ನ ಕೊನೆಯ ಸಂದೇಶದಲ್ಲಿ ಅವರಿಗೆ ಹೀಗೆ ಹೇಳಿದನು:

"ಯೆಹೋವನನ್ನು ಸೇವಿಸುವದು ನಿಮಗೆ ಸರಿಕಾಣದಿದ್ದರೆ **ಯಾರನ್ನು ಸೇವಿಸಬೇಕೆಂದಿದ್ದೀರಿ? ಈ ಹೊತ್ತೇ ಆರಿಸಿಕೊಳ್ಳಿರಿ.** ನಿಮ್ಮ ಪೂರ್ವಿಕರು[ಯೂಫ್ರೇಟಿಸ್] ನದಿಯ ಆಚೆಯಲ್ಲಿ ಸೇವಿಸುತ್ತಿದ್ದ ದೇವತೆಗಳೋ ಈ ದೇಶದ ಮೂಲ ನಿವಾಸಿಗಳಾದ ಅಮೋರಿಯರ ದೇವತೆಗಳೋ ಹೇಳಿರಿ. **ನಾನೂ ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು** ಅಂದನು. ಆಗ ಇಸ್ರಾಯೇಲ್ ಜನ ಸಮೂಹದವರು ಯೆಹೋಶುವನಿಗೆ ನಾವೂ ಯೆಹೋವನನ್ನೇ ಸೇವಿಸುವೆವು; ಆತನೇ ನಮ್ಮ ದೇವರು ಎಂದು ಉತ್ತರ ಕೊಟ್ಟರು." (ಯೆಹೋ–೨೪:೧೫, ೧೮)

ನಿಜವಾಗಿಯೂ ಏನು ಸಂಭವಿಸಿತೆಂಬುದನ್ನು ಈಗ ನೋಡೋಣ. ನ್ಯಾಯಸ್ಥಾಪಕರ ಪುಸ್ತಕದ ಎರಡನೆಯ ಅಧ್ಯಾಯದಲ್ಲಿ ವಾಕ್ಯವು ಹೇಳುವದೇನೆಂದರೆ:

"**ಯೆಹೋಶುವನ ದಿನಗಳಲ್ಲಿಯೂ ಅವನ ಕಾಲದಿಂದ** ಇನ್ನೂ ಜೀವಿಸುತ್ತಾ ಯೆಹೋವನು ಇಸ್ರಾಯೇಲ್ಯರಿಗೋಸ್ಕರ ನಡಿಸಿದ ಮಹ –ತ್ಕಾರ್ಯಗಳಿಗೆ ಸಾಕ್ಷಿಗಳಾಗಿದ್ದ ಹಿರಿಯರ ದಿನಗಳಲ್ಲಿಯೂ **ಇಸ್ರಾಯೇಲ್ಯರು ಯೆಹೋವನನ್ನು ಸೇವಿಸುತ್ತಿದ್ದರು.** ಯೆಹೋವನ ಸೇವಕನಾದ ನೂನನ ಮಗ ಯೆಹೋಶುವನು ನೂರಹತ್ತು ವರುಷದವನಾಗಿ ಮರಣಹೊಂದಿದನು. ಅವನನ್ನು ಅವನ ಸ್ವಾಸ್ತ್ಯ – –ಭೂಮಿಯಾದ ತಿಮ್ನತ್‌ಹೆರೆಸ್ ಎಂಬಲ್ಲಿ ಸಮಾಧಿ ಮಾಡಿದರು; ಅದು ಎಫ್ರಾಯಿಮ್ ಪರ್ವತಪ್ರದೇಶದಲ್ಲಿರುವ ಗಾಷ್ ಬೆಟ್ಟದ ಉತ್ತರ ದಿಕ್ಕಿನಲ್ಲಿರುತ್ತದೆ. ಅವನ ಕಾಲದವರೆಲ್ಲರೂ ಪಿತೃಗಳ ಬಳಿಗೆ ಸೇರಿದ ಮೇಲೆ ಯೆಹೋವನನ್ನೂ ಆತನು ಇಸ್ರಾಯೇಲ್ಯರಿ – –ಗೋಸ್ಕರ ಮಾಡಿದ ಮಹತ್ಕಾರ್ಯಗಳನ್ನೂ ಅರಿಯದಿದ್ದ ಬೇರೊಂದು ಸಂತಾನವು ಹುಟ್ಟಿತು. **ಈ ಇಸ್ರಾಯೇಲ್ಯರು** ಬಾಳನ ಪ್ರತಿಮೆಗಳನ್ನು ಪೂಜಿಸಿ **ಯೆಹೋವನ ದೃಷ್ಟಿಯಲ್ಲಿ ದ್ರೋಹಿಗಳಾದರು.** ತಮ್ಮ ಪಿತೃಗಳನ್ನು ಐಗುಪ್ತದಿಂದ ಕರತಂದ ದೇವರಾದ ಯೆಹೋವನನ್ನು ಬಿಟ್ಟು ಅನ್ಯ ದೇವತೆಗಳನ್ನು ಅವಲಂಬಿಸಿ ಅವುಗಳಿಗೆ ಅಡ್ಡಬಿದ್ದು ಯೆಹೋವನನ್ನು ರೇಗಿಸಿದರು. ಅವರು

ಯೆಹೋವನನ್ನು ಬಿಟ್ಟು ಬಾಳ್ ಅಷ್ಟೋರೆತ್ ಎಂಬ ದೇವತೆಗಳನ್ನು ಪೂಜಿಸುವವರಾದದರಿಂದ ಯೆಹೋವನ ಕೋಪವು ಅವರ ಮೇಲೆ ಉರಿಯಹತ್ತಿತು." (ನ್ಯಾಯ–೨:೭–೧೩)

ಹೀಗೆ ಇಸ್ರಾಯೇಲ್ಯರು ತಮ್ಮ ದೇವರಾದ ಯೆಹೋವನನ್ನು ಮರೆತುಬಿಟ್ಟರು. ಆತನನ್ನು ತಿರಸ್ಕರಿಸಿ ತಮ್ಮ ಸುತ್ತಲಿದ್ದ ಜನಾಂಗದವ –ರುಗಳ ಧರ್ಮಗಳನ್ನು ಅನುಸರಿಸುವದಕ್ಕೆ ಪ್ರಾರಂಭಿಸಿದರು. ಹೇಗೂ, ಆ ಜನಾಂಗದವರು ನಿಜ ದೇವರನ್ನು ತಿಳಿದವರಾಗಿರಲಿಲ್ಲ ಮತ್ತು ಆತನ ವಾಕ್ಯವನ್ನು ಹೊಂದಿದವರಾಗಿರಲಿಲ್ಲ. ಅವರು ಬಾಳನನ್ನು ಪೂಜಿಸುವವರಾಗಿದ್ದರು. ಬಾಳ್ ಎಂಬುದು ಕಾನಾನ್ ದೇಶದ ಜನರು ದೇವರೆಂಬುದಾಗಿ ಹೇಳಿಕೊಂಡಿದ್ದ ಒಂದು ವಿಗ್ರಹವಾಗಿತ್ತು. ಬಾಳನನ್ನು ಪ್ರತಿನಿಧಿಸುತ್ತಿದ್ದ ವಿಗ್ರಹಗಳನ್ನು ಅವರು ತಮಗಾಗಿ ಮಾಡಿಕೊಂಡು ಅವುಗಳನ್ನು ಪೂಜಿಸುತ್ತಿದ್ದರು. ಬಾಳನನ್ನು ಸ್ತುತಿಸುತ್ತಿದ್ದ ಜನಾಂಗಗಳು **ತಾವು ದೇವರನ್ನು ಆರಾಧಿಸು –ತ್ತಿದ್ದೇವೆಂದು ಅಂದುಕೊಂಡಿದ್ದರು**. ಆದರೆ ವಾಸ್ತವದಲ್ಲಿ, ಅವರು ತಮ್ಮ ಸ್ವಂತ ಆಶೆಗಳನ್ನು ಮತ್ತು ಸೈತಾನನನ್ನು ಆರಾಧಿಸುತ್ತಿದ್ದರು; ಹಾಗಿದ್ದರೂ ಅವರು ಸೈತಾನನು ತಮ್ಮನ್ನು ಮೋಸಗೊಳಿಸುತ್ತಿದ್ದಾನೆಂದು ತಿಳಿದಿರಲಿಲ್ಲ. ಅವರು ತಮ್ಮ ಸುತ್ತಲಿದ್ದ ಜನಾಂಗದವರು ಮಾಡಿದ ಹಾಗೆ ದೇವರಾದ ಯೆಹೋವನನ್ನು ತಿರಸ್ಕರಿಸಿ ಬಾಳನನ್ನು ಪೂಜಿಸುವದಕ್ಕೆ ಪ್ರಾರಂಭಿಸಿದ್ದು ಯಾಕೆಂದರೆ ಸೈತಾನನು ಅನೇಕ ಇಸ್ರಾಯೇಲ್ಯರನ್ನು ಮೋಸಗೊಳಿಸಿದ್ದನು.

ಹಾಗಾಗಿ, ದೇವರು ಸ್ಥಾಪಿಸಿದ್ದ ಮಾರ್ಗವನ್ನು ಅಂದರೆ ಮೋಶೆಯ ಧರ್ಮಶಾಸ್ತ್ರದ ಮಾರ್ಗವನ್ನೂ ಮತ್ತು ಪಾಪವನ್ನು ಮುಚ್ಚುವ– –ದಕ್ಕೆ ಯಜ್ಞವೇದಿಯ ಮೇಲಿನ ಪ್ರಾಣಿ ಸಮರ್ಪಣೆಯ ಮಾರ್ಗವನ್ನೂ ಇಸ್ರಾಯೇಲ್ಯರಲ್ಲಿ ಹೆಚ್ಚಿನವರು ಹೇಗೆ ತಿರಸ್ಕರಿಸಿದರೆಂಬು – –ದನ್ನು ನಾವು ನೋಡುತ್ತೇವೆ. ದೇವರ ನೀತಿಯುಳ್ಳ ಮಾರ್ಗವನ್ನು ಅನುಸರಿಸುವದರ ಬದಲಾಗಿ, ಅವರು ಸುಳ್ಳಾದ ಅಂದರೆ ಬಾಳನ ಜನಾಂಗದವರ ಮಾರ್ಗವನ್ನು ಅನುಸರಿಸಿದರು. ಸೀನಾಯಿ ಬೆಟ್ಟದ ಮೇಲೆ ದೇವರು ಮೋಶೆಗೆ ಹೇಳಿದಂತ ಹತ್ತು ಆಜ್ಞೆಗಳಲ್ಲಿ ಮೊದಲನೆಯ ಆಜ್ಞೆ ಯಾವುದೆಂದರೆ:

"ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು. . . ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳವರೆಗೆ ಬರಮಾಡುವವನಾಗಿಯೂ ನನ್ನನ್ನು ಪ್ರೀತಿಸಿ ನನ್ನ ಆಜ್ಞೆಗಳನ್ನು ಕೈಕೊಳ್ಳುವವರಿಗೋ ಸಾವಿರ ತಲೆ –ಗಳವರೆಗೆ ದಯೆ ತೋರಿಸುವವನಾಗಿಯೂ ಇದ್ದೇನೆ." (ವಿಮೋ–೨೦:೩,೫,೬)

ಆದರೆ ಇಸ್ರಾಯೇಲ್ಯರಲ್ಲಿ ಹೆಚ್ಚಿನವರು ದೇವರಾದ ಯೆಹೋವನನ್ನು ಗೌರವಿಸಲಿಲ್ಲ, ಅದಕ್ಕಾಗಿಯೇ ದೇವರು ಅವರನ್ನು ಶಿಕ್ಷೆಗೊಳ –ಪಡಿಸಿದನು. ನ್ಯಾಯಸ್ಥಾಪಕರ ಪುಸ್ತಕದ ಎರಡನೆಯ ಅಧ್ಯಾಯವನ್ನು ಮುಂದುವರಿಸುತ್ತಿದ್ದೇವೆ, ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

"**ಇಸ್ರಾಯೇಲ್ಯರು** ಬಾಳನ ಪ್ರತಿಮೆಗಳನ್ನು ಪೂಜಿಸಿ ಯೆಹೋವನ ದೃಷ್ಟಿಯಲ್ಲಿ **ದ್ರೋಹಿಗಳಾದರು**. ಇದರಿಂದ ಯೆಹೋವನ ಕೋಪವು ಅವರ ಮೇಲೆ ಉರಿಯಹತ್ತಿತು. ಆತನು ಅವರನ್ನು ಸೂರೆಮಾಡುವವರ ಕೈಗೆ ಒಪ್ಪಿಸಲು ಅವರು ಅವರನ್ನು ಸೂರೆ – –ಮಾಡಿದರು. ಆತನು ಅವರನ್ನು ಸುತ್ತಣ ವೈರಿಗಳಿಗೆ ಮಾರಿಬಿಟ್ಟನು; ಅವರು ಆ ಶತ್ರುಗಳ ಮುಂದೆ ನಿಲ್ಲಲಾರದವರಾದರು. ಯೆಹೋವನು ತಾನು ಮೊದಲೇ ಆಣೆಯಿಟ್ಟು ಹೇಳಿದಂತೆ ಎಲ್ಲಿ ಹೋದರೂ ಆತನ ಕೈ ಅವರಿಗೆ ವಿರೋಧವಾಗಿಯೇ ಇತ್ತು; ಅವರಿಗೆ ಬಹು ಸಂಕಟವಾಯಿತು." (ನ್ಯಾ–೨:೧೧,೧೪,೧೫)

ಹೀಗೆ, ಇಸ್ರಾಯೇಲ್ಯರು ತಮ್ಮ ಹೃದಯಗಳನ್ನು ಕಠಿಣಪಡಿಸಿಕೊಂಡು ಯೆಹೋವನನ್ನು ಹೇಗೆ ಪದೇ ಪದೇ ತಿರಸ್ಕರಿಸಿದರೆಂಬುದನ್ನು ನ್ಯಾಯಸ್ಥಾಪಕರ ಪುಸ್ತಕವು ವಿವರಿಸುತ್ತದೆ. ಅವರು ತಮ್ಮ ಪಾಪವನ್ನು ಒಪ್ಪಿಕೊಂಡು ಪಶ್ಚಾತ್ತಾಪಪಟ್ಟು ನಾಶನದಿಂದ ತಪ್ಪಿಸಿಕೊಳ್ಳಲಿ ಎನ್ನುವದಕ್ಕೋಸ್ಕರವೇ ದೇವರು ಅವರನ್ನು ಶಿಕ್ಷಿಸಿ ಅವರ ಶತ್ರುಗಳ ಕೈಗೆ ಆಗಿಂದಾಗ್ಗೆ ಒಪ್ಪಿಸುತ್ತಿದ್ದನು, ಪ್ರತಿಸಲವೂ ಇಸ್ರಾಯೇಲ್ಯರು ನಿಜವಾಗಿಯೂ ಪಶ್ಚಾತ್ತಾಪಪಡುತ್ತಿದ್ದರು, ಇದರಿಂದ ಅವರ ಶತ್ರುಗಳಿಂದ ಅವರನ್ನು ರಕ್ಷಿಸುವದಕ್ಕಾಗಿ ದೇವರು ಅವರಿಗಾಗಿ ನಾಯಕ –ರುಗಳನ್ನು (ನ್ಯಾಯಸ್ಥಾಪಕರನ್ನು) ಎಬ್ಬಿಸಿದನು. ಕೇವಲ ಮುನ್ನೂರು ಜನರಿಂದ ಒಂದು ದೊಡ್ಡದಾದ ಮತ್ತು ಶಕ್ತಿಯುತ ಸೈನ್ಯ – –ವನ್ನು ಸೋಲಿಸಿದ ಗಿಡಿಯೋನನಂತಹ ಅಥವಾ ಒಂಟಿಯಾಗಿ ಸಾವಿರ ಸೈನಿಕರುಗಳನ್ನು ಜಯಿಸಿದ ಸಂಸೋನನಂತಹ ನಾಯಕ –ರುಗಳ ಕುರಿತಾಗಿ ನಿಮಗೆ ತಿಳಿಸುವದಕ್ಕೆ ನಮಗೆ ಇಷ್ಟವುಂಟು, ಆದರೆ ಹೀಗೆ ಮಾಡುವದಕ್ಕೆ ಸಮಯವು ನಮಗೆ ಅವಕಾಶ – –ಕೊಡುತ್ತಿಲ್ಲ. ಬಹುಶ: ಅಂತವರ ಮನೋಹರವಾದ ಕಥೆಗಳನ್ನು ನ್ಯಾಯಸ್ಥಾಪಕರ ಪುಸ್ತಕದಲ್ಲಿ ನೀವೇ ಓದಿಕೊಳ್ಳಬಹುದು.

ಸಂಕ್ಷಿಪ್ತವಾಗಿ ಹೇಳುವದಾದರೆ, ಪ್ರತಿಸಲವೂ ಇಸ್ರಾಯೇಲ್ಯರು ದೇವರಿಂದ ಮತ್ತು ಆತನ ವಾಕ್ಯದಿಂದ ದೂರವಾಗುತ್ತಿದ್ದರು, ಅವರು ತಮ್ಮ ಪಾಪಕ್ಕೆ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ಹಿಂತಿರುಗಲಿ ಎನ್ನುವದಕ್ಕಾಗಿ ದೇವರು ಅವರನ್ನು ಶಿಕ್ಷಿಸುತ್ತಿದ್ದನು ಎನ್ನುವದನ್ನು ನ್ಯಾಯಸ್ಥಾಪಕರ ಪುಸ್ತಕವು ನಮಗೆ ತೋರಿಸಿಕೊಡುತ್ತದೆ. ಅವರು ಪಶ್ಚಾತ್ತಾಪಪಟ್ಟಾಗ, ಅವರ ಶತ್ರುಗಳಿಂದ ಅವರನ್ನು ರಕ್ಷಿಸುವದ ಕ್ಕಾಗಿ ದೇವರು ಅವರಿಗಾಗಿ ನಾಯಕರುಗಳನ್ನು ಒದಗಿಸಿಕೊಡುತ್ತಿದ್ದನು. ಸಂಕ್ಷಿಪ್ತದಲ್ಲಿ ಇದೇ **ನ್ಯಾಯಸ್ಥಾಪಕರ ಪುಸ್ತಕದ** ಕಥೆ.

ಹೌದು ಇಸ್ರಾಯೇಲ್ಯರು ಮತ್ತೆ ಮತ್ತೆ ದೇವರಿಗೆ ವಿರೋಧವಾಗಿ ಪಾಪಮಾಡುತ್ತಿದ್ದರು. ಆದರೆ ಅವರ ಅಪನಂಬಿಕೆಯು ದೇವರ ನಂಬಿಗಸ್ತಿಕೆಯನ್ನು ತಡೆಹಿಡಿದಿತ್ತೋ? ಎಂದಿಗೂ ಇಲ್ಲ! ನಿಜವಾಗಿಯೂ ದೇವರು ಪಾಪ ಮಾಡುವ ಪ್ರತಿಯೊಬ್ಬ ವ್ಯಕ್ತಿಯನ್ನೂ ಶಿಕ್ಷಿಸುತ್ತಾನೆ, ಆದರೆ ಆತನು ಇಸ್ರಾಯೇಲ್ ಜನಾಂಗವನ್ನು ಸಂಪೂರ್ಣವಾಗಿ ಸಂರಕ್ಷಿಸಿದ್ದನು, ಯಾಕಂದರೆ "ನಿನ್ನ ಸಂತಾನದವರ ಮೂಲಕ ಭೂಲೋಕದ ಎಲ್ಲಾ ಜನರಿಗೆ ಆಶೀರ್ವಾದವುಂಟಾಗುವದು" ಎಂಬುದಾಗಿ ಬಹಳ ಹಿಂದೆ ದೇವರು ಅಬ್ರಹಾಮನಿಗೆ ಮಾಡಿದ್ದ ವಾಗ್ದಾನವನ್ನು ಆತನು ಮರೆತಿರಲಿಲ್ಲ. ಅಬ್ರಹಾಮನ ಸಂತತಿಯವರನ್ನು **ಲೋಕದ ರಕ್ಷಕನನ್ನು** ತರುವಂತಹ ಒಂದು ಜನಾಂಗವನ್ನಾಗಿ ಮಾಡುವದಕ್ಕೆ ದೇವರು ಸಂಕಲ್ಪ ಮಾಡಿಕೊಂಡಿದ್ದನು. ಇಸ್ರಾಯೇಲ್ಯರ ಪಾಪವಾಗಲೀ, ಫರೋಹನಾಗಲೀ, ಐಗುಪ್ತದ ಜನರಾಗಲೀ, ಕಾನಾನ್ ದೇಶದ ಜನರಾಗಲೀ. ಬಾಳನ ರೀತಿಯ ಸುಳ್ಳು ಧರ್ಮವಾಗಲೀ, ಕೊನೆಗೆ ಸೈತಾನನಾಗಲೀ ಯಾವುದೂ ದೇವರ ಅದ್ಭುತವಾದ ರಚನೆಯನ್ನು ತಡೆಹಿಡಿಯುವದಕ್ಕಾಗಲಿಲ್ಲ. **ಇಸ್ರಾಯೇಲ್ ಜನಾಂಗದ ಮೂಲಕವಾಗಿ ಲೋಕಕ್ಕೆ ರಕ್ಷಕನನ್ನು ಕಳಿಸುವಂತಹ ದೇವರ ಯೋಜನೆಯನ್ನು ಯಾವುದೂ ತಡೆಹಿಡಿಯುವದಕ್ಕಾಗಲಿಲ್ಲ!**

ನ್ಯಾಯಸ್ಥಾಪಕವನ್ನು ಪುಸ್ತಕವನ್ನು ಅನುಸರಿಸಿ ಬಂದಿರುವ **ರೂತಳ ಪುಸ್ತಕ**ವೆಂಬ ಒಂದು ಚಿಕ್ಕ ಪುಸ್ತಕದ ಕಡೆಗೆ ಈಗ ನಾವು ನೋಡಲೇಬೇಕು. ಈ ಪುಸ್ತಕದ ಕಥೆಯು ಒಂದು ಅದ್ಭುತವಾದ ಕಥೆಯಾಗಿದೆ. ಎಸೆದಿರುವ ವಾಸನೆಯ ಕಸದ ಮಧ್ಯದಲ್ಲಿ ಬೆಳೆದಿ –
–ರುವ ಒಂದು ಸುಂದರವಾದ ಹೂವಿನ ಹಾಗೆ ಈ ಕಥೆಯಿದೆ, ಯಾಕಂದರೆ **ಕೆಟ್ಟದಾದ ಮತ್ತು ನೀತಿಭ್ರಷ್ಟತೆಯ ಒಂದು ಜನಾಂಗದ ಮಧ್ಯದಲ್ಲಿ ದೇವರನ್ನು ಪ್ರೀತಿಸಿದ ಒಬ್ಬ ಸ್ತ್ರೀಯ ಕಥೆಯನ್ನು** ಇದು ತಿಳಿಸುತ್ತದೆ.

ಈ ದಿನ ನಾವು ನಿಮಗಾಗಿ ರೂತಳ ಪುಸ್ತಕವನ್ನು ಪೂರ್ತಿಯಾಗಿ ಓದುವದಿಲ್ಲ, ಆದರೆ ನಿಮಗಾಗಿ ಇದನ್ನು ಸಂಕ್ಷಿಪ್ತವಾಗಿ ತಿಳಿಸು
–ತ್ತೇವೆ. ನೀವು ಮೊದಲು ತಿಳಿಯಬೇಕಾದದ್ದೇನೆಂದರೆ, **ರೂತಳು** ಒಬ್ಬ ವಿಧವೆ ಮತ್ತು ಅವಳು ಇಸ್ರಾಯೇಲ್ ಜನಾಂಗಕ್ಕೆ ಸೇರಿದವ
–ಳಲ್ಲ. ಅವಳು **ಮೋವಾಬ್** ಜನರಿಗೆ ಸೇರಿದವಳಾಗಿದ್ದು ಇಸ್ರಾಯೇಲ್ ದೇಶದ ದಕ್ಷಿಣದಲ್ಲಿರುವ ಮೋವಾಬ್ ದೇಶದಲ್ಲಿಯೇ ವಾಸವಾಗಿದ್ದಳು. ಮೋವಾಬಿನ ಜನರು ವಿಗ್ರಹಾರಾಧಕರಾಗಿದ್ದು ಇಸ್ರಾಯೇಲ್ಯರ ಮತ್ತು ಇಸ್ರಾಯೇಲಿನ ದೇವರು ಇಬ್ಬರನ್ನೂ ನಿರ್ಲ
–ಕ್ಷಿಸಿದವರಾಗಿದ್ದರು.

ರೂತಳು ಮೋವಾಬ್ ಜನಾಂಗಕ್ಕೆ ಸೇರಿದವಳಾಗಿದ್ದಳು, ಆದರೆ ಇದು ಅವಳಿಗೆ ಇಸ್ರಾಯೇಲ್ ದೇವರನ್ನು ನಿರ್ಲಕ್ಷಿಸುವದಕ್ಕೆ ಕಾರಣ
–ವಾಗಲಿಲ್ಲ. ಇಲ್ಲ, ನಿಜ ಹೇಳಬೇಕೆಂದರೆ, **ರೂತಳು ತನ್ನ ಹೃದಯಪೂರ್ವಕವಾಗಿ ಇಸ್ರಾಯೇಲಿನ ದೇವರಲ್ಲಿ ನಂಬಿಕೆಯನ್ನಿಟ್ಟಿದ್ದಳು.** ಐಗುಪ್ತ್ಯರ ಕೈಗಳಿಂದ ಇಸ್ರಾಯೇಲ್ ಜನಸಮೂಹದವರನ್ನು ಬಿಡುಗಡೆಮಾಡುವದಕ್ಕೆ ದೇವರಾದ ಕರ್ತನು ನಂಬಲಾಗದಂತ ಅದ್ಭುತಗಳನ್ನು ಹೇಗೆ ಮಾಡಿದನೆಂಬುದನ್ನು ರೂತಳು ಕೇಳಿದ್ದಳು. ಮತ್ತು ದೇವರು ಸ್ಥಾಪಿಸಿದಂತಹ ರಕ್ಷಣೆಯ ಮಾರ್ಗಕ್ಕೆ ಸಂಬಂ
–ಧಿಸಿದಂತೆ ತೋರಾದಲ್ಲಿ ಬರೆಯಲ್ಪಟ್ಟಿರುವ ಪ್ರವಾದಿಯಾದ ಮೋಶೆಯ ಭರವಸೆಯುಳ್ಳ ಮಾತುಗಳನ್ನು ಸಹ ರೂತಳು ಕೇಳಿಸಿ
–ಕೊಂಡಿದ್ದಳು. ರೂತಳು ಹೃದಯ ಪೂರ್ವಕವಾಗಿ ಕರ್ತನಲ್ಲಿ ನಂಬಿಕೆಯಿಟ್ಟಿದ್ದಳು, ಮತ್ತು ಇಸ್ರಾಯೇಲ್ಯರಿಗೆ ಆತನು ಕಳುಹಿಸಿದ್ದ ಸಂದೇಶವನ್ನು ಒಪ್ಪಿಕೊಂಡಿದ್ದಳು.

ಹಾಗಾಗಿ, ರೂತಳಿಗೆ ಸಂಬಂಧಿಸಿದಂತೆ ನಾವು ಗಮನಿಸಬೇಕಾದದ್ದೇನೆಂದರೆ; ಅವಳು ವಿಗ್ರಹಾರಾಧಕರ ಮಧ್ಯದಲ್ಲಿ ವಾಸಿಸಿದ್ದಳು. ರೂತಳ ತಂದೆತಾಯಿಯರು ವಿಗ್ರಹಾರಾಧಕರಾಗಿದ್ದರು. ರೂತಳು ಅವರ ಧರ್ಮದಲ್ಲಿ ಹುಟ್ಟಿದವಳಾಗಿದ್ದಳು. ಆದರೆ ಈಗ **ರೂತಳು ತನ್ನ ತಂದೆಯ ಧರ್ಮವನ್ನು ನಂಬುವದಕ್ಕೆ ಹಂಬಲಿಸುವವಳಾಗಿರಲಿಲ್ಲ.** ಇಸ್ರಾಯೇಲ್ಯರ ಒಬ್ಬನೇ ದೇವರಲ್ಲಿ ರೂತಳು ನಂಬಿಕೆ
–ಯಿಟ್ಟಿದ್ದಳು. ಈ ಪ್ರಕಾರ ರೂತಳು ಒಂದು ಆಯ್ಕೆಯನ್ನು ಮಾಡಬೇಕಾಗಿತ್ತು ಮತ್ತು ಇದು ಸುಲಭವಾದದ್ದಾಗಿರಲಿಲ್ಲ! ರೂತಳು ತನ್ನ ತಂದೆಯ ಮನೆಯಲ್ಲಿಯೇ ಉಳಿದುಕೊಂಡು, ಅದೇ ಧರ್ಮದಲ್ಲಿ ಮುಂದುವರೆದು ಇಸ್ರಾಯೇಲ್ಯರ ದೇವರನ್ನು ಅರಿಯದಿದ್ದ ಒಬ್ಬ ಮನುಷ್ಯನನ್ನು ಮದುವೆಯಾಗಬೇಕೋ? ಅಥವಾ ಅವಳು ತನ್ನ ತಂದೆಯನ್ನು ಮತ್ತು ಅವರ ಧರ್ಮವನ್ನು ತಿರಸ್ಕರಿಸಿ ಇಸ್ರಾಯೇಲ್ಯರ ಕಡೆಗೆ ಬರಬೇಕೋ? ಇದು ರೂತಳು ಮಾಡಬೇಕಾಗಿದ್ದ ಕಷ್ಟಕರವಾದ ಆಯ್ಕೆಯಾಗಿತ್ತು!

ರೂತಳು ಯಾವ ದಾರಿಯನ್ನು ಆರಿಸಿಕೊಂಡಳೆಂಬುದನ್ನು ಕಂಡುಕೊಳ್ಳುವದಕ್ಕಿಂತ ಮೊದಲು, ರೂತಳಿಗೆ **ಓರ್ಫಾ** ಎಂಬ ನಾದಿನಿ ಇದ್ದಳೆಂಬುದನ್ನು ಸಹ ನೀವು ತಿಳಿದುಕೊಳ್ಳಬೇಕು. ರೂತಳ ಹಾಗೆ ಓರ್ಫಳು ಸಹ ಇಸ್ರಾಯೇಲ್ಯರ ದೇವರನ್ನು ತಿಳಿದಿದ್ದಳು. ಹಾಗಾಗಿ ರೂತಳ ನಾದಿನಿಯು ಸಹ ತನ್ನ ತಂದೆಯ ಧರ್ಮದಲ್ಲಿ ಮುಂದುವರಿಯಬೇಕೋ ಅಥವಾ ಅಬ್ರಹಾಮ್ ಇಸಾಕ ಮತ್ತು ಯಾಕೋಬರ ದೇವರಾದ ಕರ್ತನನ್ನು ಅನುಸರಿಸಬೇಕೋ ಎಂಬ **ಆಯ್ಕೆಯನ್ನು** ಮಾಡಬೇಕಾಗಿತ್ತು.

ರೂತಳು ಮತ್ತು ಓರ್ಫಳು ಯಾವ ದಾರಿಯನ್ನು ಆರಿಸಿಕೊಂಡರು? ಓರ್ಫಳು ತನ್ನ ತಂದೆಯ ಮನೆಯಲ್ಲಿಯೇ ಉಳಿದುಕೊಂಡು ತನ್ನ ತಂದೆಯ ಧರ್ಮವನ್ನೇ ಹಂಚಿಕೊಂಡಿರುವ ಒಬ್ಬ ಮನುಷ್ಯನನ್ನು ಮದುವೆಯಾಗುವಂತ **ಸುಲಭವಾದ ದಾರಿಯನ್ನು** ಆರಿಸಿ –
–ಕೊಂಡಳು. ಆದರೆ ರೂತಳು ತನ್ನ ತಂದೆಯ ಮನೆಯನ್ನು ಬಿಟ್ಟು ಇಸ್ರಾಯೇಲ್ ದೇಶದಕ್ಕೆ ಹೋಗುವಂತಹ **ಕಷ್ಟಕರವಾದ ದಾರಿ**
–ಯನ್ನು ಆರಿಸಿಕೊಂಡಳು. ಯಾರೊಬ್ಬರೂ ಎರಡು ದೇವರುಗಳನ್ನು ಆರಾಧಿಸುವದಿಲ್ಲವೆಂಬುದನ್ನು ರೂತಳು ತಿಳಿದಿದ್ದಳು. ಒಬ್ಬನು ಇಸ್ರಾಯೇಲ್ ದೇವರನ್ನು ಮತ್ತು ಮೋವಾಬ್ಯರ ವಿಗ್ರಹಗಳನ್ನು ಒಟ್ಟಿಗೆ ಆರಾಧಿಸುವದಕ್ಕಾಗುವದಿಲ್ಲ. ಅದಕ್ಕೋಸ್ಕರವೇ ರೂತಳು ತನ್ನ

ತಂದೆಯ ಧರ್ಮವನ್ನು ತಿರಸ್ಕರಿಸಿದಳು. **ಮನುಷ್ಯನಿಗೆ ವಿಧೇಯವಾಗುವದಕ್ಕಿಂತಲೂ ದೇವರಿಗೆ ವಿಧೇಯವಾಗುವದು ಉತ್ತಮವೆಂದು** ರೂತಳು ತೀರ್ಮಾನಿಸಿದಳು. ನಿಜವಾದ ಜೀವಿಸುವ ದೇವರನ್ನು ಅನುಸರಿಸುವ ಕ್ರಮದಲ್ಲಿ ರೂತಳು ತನ್ನ ಕುಟುಂಬ ಮತ್ತು ಸ್ನೇಹಿತರಿಂದ ತಪ್ಪಾಗಿ ತಿಳಿಯಲ್ಪಡುವದಕ್ಕೆ ಸಮ್ಮತಿಯುಳ್ಳವಳಾಗಿದ್ದಳು. ಉಲೂಫ್ ಹೇಳುವ ಹಾಗೆ, **"**ಜೇನುತುಪ್ಪವನ್ನು ಇಷ್ಟಪಡುವವರು ಜೇನುನೊಣಗಳ ಧೈರ್ಯವುಳ್ಳವರಾಗಿರಬೇಕು.**"** ಹಾಗಾಗಿ ರೂತಳು ತನ್ನ ತಂದೆಯ ಮನೆಯನ್ನು ಬಿಟ್ಟು ಇಸ್ರಾಯೇಲ್ ದೇಶದ ಕಡೆಗೆ ಪ್ರಯಾಣಿಸಿ **ಬೆತ್ಲೆಹೇಮ್** ಎಂದು ಕರೆಯಲ್ಪಡುವ ಒಂದು ಚಿಕ್ಕ ಪಟ್ಟಣಕ್ಕೆ ಬಂದಳು.

**ಬೋವಜ್** ಎಂದು ಕರೆಯಲ್ಪಡುವ ವ್ಯಕ್ತಿಯೊಬ್ಬ ಬೆತ್ಲೆಹೇಮಿನಲ್ಲಿ ವಾಸವಾಗಿದ್ದನು. ಈ ಬೋವಜನು (ನಮ್ಮ ಹಿಂದಿನ ಪಾಠದಲ್ಲಿ ನೋಡಿದಂತೆ) ಯೆರಿಕೋ ಪಟ್ಟಣದ ಗೋಡೆಯ ನಾಶನದಿಂದ ತಪ್ಪಿಸಿಕೊಂಡ ಸ್ತ್ರೀಯಾದ **ರಾಹಾಬಳ ಮಗ.** ಬೋವಜನು ಒಬ್ಬ ನೀತಿವಂತ ಮನುಷ್ಯನಾಗಿದ್ದು, ದೇವರ ವಾಕ್ಯದ ಹೇರಳವಾದ ಸಂಪತ್ತುಳ್ಳವನಾಗಿದ್ದನು. ಬೋವಜನು ಬೆಳೆಯನ್ನು ಬೆಳೆಯುವಂತ ಅನೇಕ ಭೂಮಿಗಳನ್ನು ಹೊಂದಿದ್ದ ಶ್ರೀಮಂತನೂ ಸಹ ಆಗಿದ್ದನು, ಆದರೆ ಅವನಿಗೆ ಹೆಂಡತಿಯಿರಲಿಲ್ಲ.

ಈಗ ಬೆತ್ಲೆಹೇಮಿನಲ್ಲಿ ವಾಸವಾಗಿದ್ದ ರೂತಳು ಹೇಗೆ ಪ್ರತಿದಿನ ನಸುಕಿನಲ್ಲಿಯೇ ಎದ್ದು ಹೊಲಕ್ಕೆ ಹೋಗಿ ಕೊಯ್ಯುವವರು ಬಿಟ್ಟಿರುವ ಗೋದಿಯನ್ನು ಹಕ್ಕಲಾಯುವ ಅಭ್ಯಾಸವನ್ನು ಮಾಡಿಕೊಂಡಿದ್ದಳೆಂಬುದನ್ನು ವಾಕ್ಯವು ವಿವರಿಸುತ್ತದೆ. ರೂತಳು ಒಬ್ಬ ಬಡ ಬೇಸಾಯಗಾರಳು ಮತ್ತು ಇಸ್ರಾಯೇಲ್ಯರಿಗಾಗಿ ದೇವರು ಮೋಶೆಗೆ ಕೊಟ್ಟಂತಹ ಧರ್ಮಶಾಸ್ತ್ರಕ್ಕನುಸಾರವಾಗಿ ಬಡವರು ಈ ರೀತಿಯಲ್ಲಿ ಹಕ್ಕಲಾಯುವದಕ್ಕೆ ಅವಕಾಶವಿತ್ತು ಇದರಿಂದ ಅವರು ತಮ್ಮ ಹಸಿವನ್ನು ನೀಗಿಸಿಕೊಳ್ಳಬಹುದಿತ್ತು. ಈ ಪ್ರಕಾರ ರಾಹಾಬಳ ಮಗನಾದ ಬೋವಜನ ಹೊಲಕ್ಕೆ ಹೋಗಿ ಹಕ್ಕಲಾಯುವಂತೆ ದೇವರು ರೂತಳನ್ನು ಹೇಗೆ ನಡಿಸಿದನೆಂಬುದನ್ನು ವಾಕ್ಯವು ನಮಗೆ ತಿಳಿಸುತ್ತದೆ.

ರೂತಳು ತನ್ನ ಹೊಲದಲ್ಲಿ ಹಕ್ಕಲಾಯುವದನ್ನು ಕಂಡ ಬೋವಜನು ಆಕೆಯನ್ನು ಮಾತಾಡಿಸಿದನು. ಬೋವಜನು ರೂತಳ ಗುಣಲಕ್ಷಣದ ಸೌಂದರ್ಯವನ್ನು ಬಹಳ ಬೇಗನೇ ಗುರುತಿಸಿದನು. ಬೋವಜನು ನೀತಿಯುಳ್ಳವನಾಗಿದ್ದು ರೂತಳು ಒಬ್ಬ ಸದ್ಗುಣವುಳ್ಳ ಸ್ತ್ರೀಯೆಂಬುದನ್ನು ಕಂಡನು. ಏನು ಸಂಭವಿಸಿತೆಂಬುದನ್ನು ನೀವು ಊಹಿಸುತ್ತೀರೋ? ಊಹಿಸುವದಕ್ಕೆ ಇದು ಅಷ್ಟೇನೂ ಕಷ್ಟವಲ್ಲ! ಹೌದು ಬೋವಜ ಮತ್ತು ರೂತಳು ಇಬ್ಬರೂ **ಪ್ರೀತಿಯಲ್ಲಿ ಬಿದ್ದುಹೋಗಿದ್ದರು** ಮತ್ತು ಕೊನೆಗೆ ವಿವಾಹವಾದರು. ರೂತಳು ತನ್ನ ಜೀವಿತದಲ್ಲಿ ದೇವರನ್ನು ಮತ್ತು ಆತನ ವಾಕ್ಯವನ್ನು ಮೊದಲ ಸ್ಥಾನದಲ್ಲಿಟ್ಟಿದ್ದಳು, ಇದಕ್ಕಾಗಿ ದೇವರು ಅವಳನ್ನು ಆಶೀರ್ವದಿಸಿದನು. ಹಾಗಾಗಿ ವಾಕ್ಯವು ಹೇಳುವದೇನೆಂದರೆ: ಬೋವಜನು ರೂತಳು ಒಬ್ಬ ಮಗನನ್ನು ಪಡೆದು ಅದಕ್ಕೆ **ಓಬೇದ್** ಎಂದು ಹೆಸರಿಟ್ಟರು. ಓಬೇದನು **ಇಷಯನಿಗೆ** ತಂದೆಯಾದನು ಮತ್ತು ಇಷಯನು ಇಸ್ರಾಯೆಲ್ ಜನಾಂಗದವರ ದೊಡ್ಡ ಅರಸನೂ ಮತ್ತು ಅನೇಕ **ಕೀರ್ತನೆಗಳನ್ನು** ಬರೆದ ಪ್ರವಾದಿಯಾದ **ದಾವೀದನಿಗೆ** ತಂದೆಯಾದನು. ದಾವೀದನ ಸಂತಾನದಿಂದ ಲೋಕದ ರಕ್ಷಕನೂ ಮತ್ತು ಎಲ್ಲಾ ಪ್ರವಾದಿಗಳು ಪ್ರವಾದಿಸಿದ್ದ ವಿಮೋಚಕನು ಎಬ್ಬಿಸಲ್ಪಟ್ಟನು.

ಈ ಪ್ರಕಾರ ಇಸ್ರಾಯೇಲ್ ಜನಾಂಗದವಳಲ್ಲದ ಒಬ್ಬ ಸ್ತ್ರೀಯಾಗಿದ್ದ ರೂತಳ ಜೀವಿತದಲ್ಲಿ ದೇವರು ಹೇಗೆ ಕಾರ್ಯಮಾಡಿದನೆಂಬುದನ್ನು ಈ ದಿನ ನಾವು ನೋಡಿಕೊಂಡೆವು. **ತಮ್ಮ ಸುತ್ತಲಿರುವ ಜನಾಂಗಗಳ ಧರ್ಮಗಳನ್ನು ಅನುಸರಿಸುವದಕ್ಕೆ ಇಸ್ರಾಯೇಲ್ಯರು ತಮ್ಮ ದೇವರನ್ನು ತಿರಸ್ಕರಿಸಿದ ವೇಳೆಯಲ್ಲಿ, ರೂತಳು ಇಸ್ರಾಯೇಲ್ ದೇವರನ್ನು ಹಿಂಬಾಲಿಸುವದಕ್ಕೆ ತನ್ನ ತಂದೆಯ ಧರ್ಮವನ್ನು ತಿರಸ್ಕರಿಸಿದ್ದಳು!** ಹಾಗಾಗಿ, ರೂತಳು ಬೆತ್ಲೆಹೇಮಿನಲ್ಲಿ ವಾಸಿಸುವಂತೆ ಮತ್ತು ಬೋವಜನನ್ನು ಮದುವೆಯಾಗಿ ಇಸ್ರಾಯೇಲ್ಯರ ಅರಸನಾದ ದಾವೀದನಿಗೆ ಮುತ್ತಜ್ಜಿಯಾಗುವಂತೆ ದೇವರು ಅವಳನ್ನು ನಡೆಸಿದನು. ಇದೆಲ್ಲಾದರಲ್ಲಿ, ಈ ಮೊದಲೇ ಗೊತ್ತುಮಾಡಲ್ಪಟ್ಟು ಹುಟ್ಟಬೇಕಾಗಿದ್ದ ಲೋಕದ ರಕ್ಷಕನು **ಬೆತ್ಲೆಹೇಮ್ ಪಟ್ಟಣದಲ್ಲಿ ದಾವೀದನ ಸಂತತಿಯವರಿಂದ** ಬರಬೇಕಾಗಿದ್ದದರಿಂದ ಈ ಲೋಕಕ್ಕೆ **ವಿಮೋಚಕನನ್ನು** ತರುವದಕ್ಕೆ ದೇವರು ತನ್ನ ಯೋಜನೆಯನ್ನು ಹೇಗೆ ಮುಂದುವರಿಸಿದನೆಂಬುದನ್ನು ನಾವು ನೋಡುತ್ತೇವೆ.

ಇಲ್ಲಿಗೆ ನಾವು ನಿಲ್ಲಿಸಲೇಬೇಕು. ಮುಂದಿನ ಸಲ ದೇವರ ಚಿತ್ತವಾದರೆ, ಬೋವಜ ಮತ್ತು ರೂತಳ ಸಂತತಿಯವರಿಂದ ಬೆತ್ಲೆಹೇಮಿನಲ್ಲಿ ಹುಟ್ಟಿದ್ದ ಪ್ರವಾದಿಯಾದ ದಾವೀದನ ಜೀವಿತವನ್ನು ವಿವರಿಸುವಂತ ಪುಸ್ತಕವನ್ನು ನಾವು ನೋಡಿಕೊಳ್ಳೋಣ. **ನೀವು ಯಾರನ್ನು ಹೆಚ್ಚಾಗಿ ಇಷ್ಟಪಡುತ್ತೀರಿ?** ಎನ್ನುವ ಪ್ರಶ್ನೆಯೊಂದಿಗೆ ಈ ದಿನ ನಾವು ನಿಮಗೆ ವಿದಾಯ ಹೇಳುತ್ತಿದ್ದೇವೆ. **ಸುಲಭವಾದ ದಾರಿಯನ್ನು** ಆರಿಸಿಕೊಂಡ ಓರ್ಫಳನ್ನು ನೀವು ಹೆಚ್ಚು ಇಷ್ಟಪಡುತ್ತೀರೋ? ಅಥವಾ **ಒಬ್ಬನೇ ನಿಜ ದೇವರನ್ನು** ಹಿಂಬಾಲಿಸುವದಕ್ಕಾಗಿ ತನ್ನ ತಂದೆಯ ಧರ್ಮವನ್ನು ತಿರಸ್ಕರಿಸಿದ ಧೈರ್ಯವಂತೆ ರೂತಳನ್ನು ಇಷ್ಟಪಡುತ್ತೀರೋ?

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. . . .ಪ್ರವಾದಿಯಾದ ಯೆಹೋಶುವನು ತಾನು ಸಾಯುವದಕ್ಕಿಂತ ಮೊದಲು ಇಸ್ರಾಯೇಲ್ಯರಿಗೆ ಹೇಳಿರುವದನ್ನು ಜ್ಞಾಪಿಸಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಯಾರನ್ನು ಸೇವಿಸಬೇಕೆಂದಿದ್ದೀರಿ, ಈ ಹೊತ್ತೇ ಆರಿಸಿಕೊಳ್ಳಿರಿ. . . .ನಾನು ನನ್ನ ಮನೆಯವರೂ ಯೆಹೋವನನ್ನೇ ಸೇವಿಸುವೆವು!"**
(ಯೆಹೋ–೨೪:೧೫).

[ಪಾಠ ೪೫: ನ್ಯಾಯಸ್ಥಾಪಕರು ಮತ್ತು ರೂತಳು] [ಸಾರಾಂಶಗಳ ಪಟ್ಟಿ] [ ಪಾಠ ೪೭: ದಾವೀದ ಮತ್ತು ಗೊಲ್ಯಾತ]

ಪಾಠ ೪೬

# ಸಮುವೇಲ, ಸೌಲ ಮತ್ತು ದಾವೀದ

೧ ಸಮುವೇಲ ೧-೧೬; ಕೀರ್ತನೆಗಳು ೮, ೨೩

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ -ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು -ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ -ರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಇಸ್ರಾಯೇಲ್ ದೇಶದ ಇತಿಹಾಸದಲ್ಲಿ ಪ್ರವಾದಿಯಾದ ಯೆಹೋಶುವನ ಕಾಲವನ್ನು ಅನುಸರಿಸಿದ ಸಮಯವು **ಒಂದು ಕಪ್ಪು ಮತ್ತು ಭ್ರಷ್ಟಾಚಾರದ ಅವಧಿಯಾಗಿತ್ತು** ಎಂಬುದನ್ನು ನಾವು ನೋಡಿಕೊಂಡೆವು. ಆದರೆ ಆ ಕಪ್ಪು ಯುಗ -ದಲ್ಲಿಯೂ ಸಹ ದೇವರ ನಂಬಿಗಸ್ತಿಕೆಯ ಬೆಳಕನ್ನು ನಾವು ಗಮನಿಸಿದ್ದೇವೆ. ಇಸ್ರಾಯೇಲ್ ಜನಾಂಗದ ಮೂಲಕವಾಗಿ ಒಬ್ಬ ವಿಮೋಚಕನು ಬರುತ್ತಾನೆಂಬುದಾಗಿ ಅಬ್ರಹಾಮನಿಗೂ ಮತ್ತು ಅವನ ಸಂತತಿಯವರಿಗೂ ತಾನು ಮಾಡಿದ್ದ ವಾಗ್ದಾನವನ್ನು ಕರ್ತನು ಮರೆತಿರಲಿಲ್ಲ.

ಹಾಗಾಗಿ **ರೂತಳೆಂಬ** ಒಬ್ಬ ಸ್ತ್ರೀಯ ಜೀವಿತದಲ್ಲಿ ದೇವರು ಹೇಗೆ ತನ್ನ ಕಾರ್ಯವನ್ನು ಮಾಡಿದನೆಂಬುದನ್ನು ನಾವು ನೋಡಿದ್ದೇವೆ. ರೂತಳು ಇಸ್ರಾಯೇಲ್ಯಳಲ್ಲ, ಆದರೆ ಅವಳು ತನ್ನ ಹೃದಯದಿಂದ ಇಸ್ರಾಯೇಲ್ ದೇವರನ್ನು ನಂಬಿದ್ದಳು. ಇಸ್ರಾಯೇಲ್ಯರಲ್ಲಿ ಅನೇ -ಕರು ತಮ್ಮ ಸುತ್ತಲಿರುವ ಜನಾಂಗಗಳ ದೇವರನ್ನು ಅನುಸರಿಸುವದಕ್ಕೆ ತಮ್ಮ ದೇವರಾದ ಕರ್ತನನ್ನು ತಿರಸ್ಕರಿಸಿದ ವೇಳೆಯಲ್ಲಿ, ರೂತಳು ಇಸ್ರಾಯೇಲ್ ದೇವರನ್ನು ಹಿಂಬಾಲಿಸುವದಕ್ಕಾಗಿ ತನ್ನ ತಂದೆಯ ಜನಾಂಗವನ್ನು ತಿರಸ್ಕರಿಸಿದಳು. ರೂತಳು ಇಸ್ರಾಯೇಲ್ ದೇಶಕ್ಕೆ ಬಂದು ಬೆತ್ಲೆಹೇಮ್ ಎಂಬ ಪಟ್ಟಣದಲ್ಲಿ ನೆಲೆಗೊಂಡಳು, ಮತ್ತು ಅಲ್ಲಿ ಅವಳು ಬೋವಜ್ ಎಂಬ ಹೆಸರುಳ್ಳ ಒಬ್ಬ ಇಸ್ರಾ - -ಯೇಲ್ಯನನ್ನು ಮದುವೆ ಮಾಡಿಕೊಂಡಳು. ಬೋವಜ್ ಮತ್ತು ರೂತಳು ಓಬೇದ್ ಎಂಬ ಮಗನನ್ನು ಪಡೆದರು; ಓಬೇದನು ಪ್ರವಾದಿಯಾದ **ದಾವೀದನ** ತಂದೆಯಾದ ಇಷಯನನ್ನು ಪಡೆದನು. ಈ ಪ್ರಕಾರ ಆದಾಮನ ಮಕ್ಕಳನ್ನು ಅವರ ಪಾಪಗಳಿಂದ ವಿಮೋಚಿಸುವ ದೇವರ ಯೋಜನೆಯು ಮುಂದುವರಿದಿತ್ತು, ಯಾಕಂದರೆ **ದಾವೀದನ ಸಂತತಿಯ ಮುಖಾಂತರವೇ ವಿಮೋಚಕನು** ಲೋಕಕ್ಕೆ ಬರಬೇಕಾಗಿತ್ತು. ದಾವೀದನ ಸ್ವಂತಪಟ್ಟಣವಾದ **ಬೆತ್ಲೆಹೇಮಿನಲ್ಲಿ** ರಕ್ಷಕನು ಹುಟ್ಟಬೇಕಾಗಿತ್ತು. ಮುಂಬರುವ ಪಾಠಗಳಲ್ಲಿ, ಈ ಎಲ್ಲಾ ಸಂಗತಿಗಳನ್ನು ದೇವರ ಪ್ರವಾದಿಗಳು ಹೇಗೆ ಪ್ರವಾದಿಸಿದರು ಮತ್ತು ನೂರು ವರ್ಷಗಳ ನಂತರ ವಿಮೋಚಕನು ಹೇಗೆ ಇವುಗಳನ್ನು ನೆರವೇರಿಸಿದನೆಂಬುದನ್ನು ನಾವು ಕೇಳಿಸಿಕೊಳ್ಳಲಿದ್ದೇವೆ. ಇಂತಹ ಸಂಗತಿಗಳನ್ನು ದೇವರು ಮಾತ್ರವೇ ಮಾಡುವದಕ್ಕೆ ಸಾಧ್ಯ!

**ಪ್ರವಾದಿಯಾದ ದಾವೀದನು** [ಅರೆಬಿಕ್‌ನಲ್ಲಿ ದಾವೂದ್} ಪರಿಶುದ್ಧ ವಾಕ್ಯಗಳಲ್ಲಿ ತುಂಬಾ ಪ್ರಾಮುಖ್ಯನಾದವನು. ಅವನ ಹೆಸರು ಸುಮಾರು ಒಂದು ಸಾವಿರಕ್ಕಿಂತಲೂ ಹೆಚ್ಚು ಸಲ ಕಾಣಿಸಿಕೊಂಡಿದೆ. ಪ್ರವಾದಿಯಾದ ದಾವೀದನ ಕುರಿತು ನಿಮಗೆ ಏನು ಗೊತ್ತು? ಬಹುಶ:, ಕೇವಲ ಒಂದು ಕವಣೆ ಮತ್ತು ಕಲ್ಲಿನಿಂದ ದೈತ್ಯನಾದ ಗೊಲ್ಯಾತನನ್ನು ಕೊಂದಂತ ಒಬ್ಬ ಯೌವಸ್ಥನ ವಿಷಯ ಮಾತ್ರ ನಿಮಗೆ ಗೊತ್ತಿರಬಹುದು. ದಾವೀದನು ಇಸ್ರಾಯೇಲ್ಯರ ಒಬ್ಬ ದೊಡ್ಡ ಅರಸ ಮತ್ತು ಅವನು ಒಬ್ಬ ಪ್ರವಾದಿಯೂ ಆಗಿದ್ದು ಕೀರ್ತನೆ -ಗಳ {ಝಾಬುರ್} ಪುಸ್ತಕದಲ್ಲಿ ಹೆಚ್ಚಿನವುಗಳನ್ನು ಬರೆದವನು ಈತನೇ ಎಂಬುದನ್ನೂ ಸಹ ನೀವು ಬಹುಮಟ್ಟಿಗೆ ತಿಳಿದಿರಬಹುದು. ಒಂದುವೇಳೆ ನೀವು ಇವುಗಳನ್ನು ತಿಳಿದಿದ್ದರೆ, ಅದು ದೊಡ್ಡದೇ, ಆದರೆ ದಾವೀದನ ಕುರಿತಾದ ನಿಮ್ಮ ತಿಳುವಳಿಕೆಯು ಇಲ್ಲಿಗೆ ಮುಗಿ -ಯಬಾರದು. ದಾವೀದನು ಒಬ್ಬ ದೊಡ್ಡ ಅರಸನೆಂದು ನಾವು ತಿಳಿದುಕೊಂಡು, ಆದರೆ **ಯಾವುದು ಅವನನ್ನು ದೊಡ್ಡವನನ್ನಾಗಿ ಮಾಡಿತು** ಎಂಬುದನ್ನು ನಾವು ತಿಳಿಯದಿದ್ದರೆ - ಅಂತಹ ತಿಳುವಳಿಕೆಯಿಂದ ನಮಗೇನು ಪ್ರಯೋಜನ? ಅಥವಾ ಕೀರ್ತನೆಗಳಲ್ಲಿ -ರುವ ದೇವರ ವಾಕ್ಯವನ್ನು ದಾವೀದನು ಬರೆದಿದ್ದಾನೆಂದು ತಿಳಿದುಕೊಂಡು, ಆದರೆ ಅವನು **ಏನು ಬರೆದಿದ್ದಾನೆಂಬುದನ್ನು** ತಿಳಿದು - -ಕೊಳ್ಳದಿದ್ದರೆ - ಅಂತಹ ತಿಳುವಳಿಕೆಯಿಂದ ನಮಗೇನು ಪ್ರಯೋಜನ?

ಸ್ನೇಹಿತರೇ, ಪ್ರವಾದಿಯಾದ ದಾವೀದನ ಕುರಿತಾಗಿ ನಿಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವದಕ್ಕೆ ಮತ್ತು ಕೀರ್ತನೆಗಳಲ್ಲಿ ಅವನು ಬರೆದಿರುವ ಕೆಲವು ಅದ್ಭುತವಾದ ಮತ್ತು ಶಕ್ತಿಯುತವಾದ ಮಾತುಗಳನ್ನು ಕೇಳಿಸಿಕೊಳ್ಳುವದಕ್ಕೆ ನೀವು ಬಯಸುವದಾದರೆ, ಈ ದಿವಸದ ಮತ್ತು ಮುಂದಿನ ಐದು ಪಾಠಗಳ ಅಧ್ಯಯನಕ್ಕಾಗಿ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ.

ಪ್ರವಾದಿಯಾದ ದಾವೀದನಿಗಿಂತ ಮೊದಲು ಬಂದಂತ ದೇವರ ಪ್ರವಾದಿಯ ಹೆಸರು ನಿಮಗೆ ಗೊತ್ತಾ? ಅವನು ಪ್ರವಾದಿಯಾದ **ಸಮುವೇಲನು**. ಇಸ್ರಾಯೇಲ್ ಜನರ ಹೃದಯವು ದೇವರಿಂದ ಬಹಳ ದೂರವಾಗಿದ್ದದರಿಂದ, ದೇವರಾದ ಕರ್ತನ ಕಡೆಗೆ ಅವರನ್ನು ಹಿಂತಿರುಗಿಸುವದಕ್ಕೆ ದೇವರು ಸಮುವೇಲನನ್ನು ಆರಿಸಿಕೊಂಡನು. ಈ ದಿನ ನಾವು **ಸಮುವೇಲನ ಪುಸ್ತಕದಿಂದ** ಓದಿ –ಕೊಳ್ಳೋಣ. ಪ್ರವಾದಿಗಳ ಬರವಣಿಗೆಗಳಲ್ಲಿ ಈ ಪರಿಶುದ್ಧ ಪುಸ್ತಕವು ಪ್ರಾಮುಖ್ಯವಾದುದಾಗಿದೆ, ಯಾಕಂದರೆ ಇದು ಸಮುವೇಲನ ಮತ್ತು ಇಸ್ರಾಯೇಲ್ಯರ ಮೊದಲ ಮೂರು ಜನ ಅರಸರುಗಳಾದ ಸೌಲ, ದಾವೀದ, ಮತ್ತು ಸೊಲೊಮೋನನ ಜೀವಿತದಿಂದ ಅಮೂಲ್ಯವಾದ ಕಥೆಗಳನ್ನು ಒಳಗೊಂಡಿದೆ.

ನಾವು ನೋಡಿಕೊಂಡ ಹಾಗೆ, ದೇವರು ಇಸ್ರಾಯೇಲ್ಯರಿಗೆ ಮಾರ್ಗದರ್ಶನ ಮಾಡುವದಕ್ಕೆ ಮತ್ತು ಅವರಿಗೆ ನ್ಯಾಯತೀರಿಸುವದಕ್ಕೆ ಮೋಶೆ, ಯೆಹೋಶುವ ಮತ್ತು ಸಮುವೇಲನೆಂಬ **ನಾಯಕರುಗಳನ್ನು** ಕೊಟ್ಟಿದ್ದನು. ಹೇಗೂ, ಐಗುಪ್ತದಲ್ಲಿನ ಅವರ ದಾಸತ್ವದ ಬಂಧನಗಳಿಂದ ಅವರನ್ನು ಬಿಡುಗಡೆ ಮಾಡಿದ ದೇವರಾದ ಕರ್ತನು ಅವರ **ನ್ಯಾಯವಾದ ಅರಸನಾಗಿದ್ದ**. ಅವರ ಮಧ್ಯದಲ್ಲಿ ತನ್ನ ಮಹಿಮೆಯನ್ನು ಇಡುವದಕ್ಕಾಗಿ ಒಂದು ವಿಶೇಷವಾದ ಗುಡಾರವನ್ನು ಮಾಡುವದಕ್ಕೆ ಅವರಿಗೆ ಆಜ್ಞಾಪಿಸಿದ್ದ ದೇವರು ಅವರ ಪ್ರಭು –ವಾಗಿರುವದಕ್ಕೆ ಇಚ್ಛೆಸಿದ್ದನು. ಅವರು ಆತನೊಬ್ಬನನ್ನೇ ಅನುಸರಿಸಿ ವಿಧೇಯರಾಗಿರಬೇಕಾಗಿತ್ತು. ಹೇಗೂ ಇಸ್ರಾಯೇಲ್ಯರಲ್ಲಿ ಹೆಚ್ಚಿ – –ನವರು ಕರ್ತನನ್ನು ಕೇವಲ ತಮ್ಮ ಅರಸನನ್ನಾಗಿ ಹೊಂದಿಕೊಳ್ಳುವದಕ್ಕೆ ತೃಪ್ತರಾಗಿರಲಿಲ್ಲ. **ಪ್ರಪಂಚದ ಎಲ್ಲಾ ದೇಶಗಳವರ ಹಾಗೆ** ಆದಾಮನ ಒಬ್ಬ ಮಗನು ಅರಸನಾಗಿ ತಮ್ಮನ್ನು ಆಳುವದಕ್ಕೆ ಅವರು **ಇಷ್ಟಪಟ್ಟರು!**

ಸಮುವೇಲನ ಮೊದಲನೆಯ ಪುಸ್ತಕದ ಎಂಟನೆಯ ಅದ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಇಸ್ರಾಯೇಲ್ಯರ ಹಿರಿಯರೆಲ್ಲರೂ ಕೂಡಿಕೊಂಡು ರಾಮದಲ್ಲಿದ್ದ ಸಮುವೇಲನ ಬಳಿಗೆ ಬಂದು ಅವನಿಗೆ – ನೀನಂತೂ ಮುದುಕ – –ನಾದಿ; ನಿನ್ನ ಮಕ್ಕಳು ನಿನ್ನ ಮಾರ್ಗದಲ್ಲಿ ನಡೆಯುವದಿಲ್ಲ. ಆದದರಿಂದ **ಬೇರೆ ಎಲ್ಲಾ ಜನಾಂಗಗಳಿಗಿರುವಂತೆ** ನಮಗೂ ಒಬ್ಬ **ಅರಸನನ್ನು** ನೇಮಿಸು; ಅವನೇ ನಮ್ಮ ನ್ಯಾಯಸ್ಥಾಪಕನಾಗಿರಲಿ ಅಂದರು. ನ್ಯಾಯಸ್ಥಾಪನೆಗೋಸ್ಕರ ನಮಗೊಬ್ಬ ಅರಸನನ್ನು ನೇಮಿಸಿಕೊಡು ಎಂಬ ಮಾತಿಗೆ ಸಮುವೇಲನು ದು:ಖಪಟ್ಟು ಯೆಹೋವನನ್ನು ಪ್ರಾರ್ಥಿಸಲು ಆತನು ಅವನಿಗೆ – ಜನರು ಹೇಳಿ – –ದಂತೆಯೇ ಮಾಡು; ಅವರು ನಿನ್ನನ್ನಲ್ಲ, ನನ್ನನ್ನು ತಿರಸ್ಕರಿಸಿದ್ದಾರೆ. ನನ್ನ ಆಳಿಕೆಗೆ ಬೇಡವೆನ್ನುತ್ತಾರೆ. ನಾನು ಅವರನ್ನು ಐಗುಪ್ತ – –ದಿಂದ ಬಿಡಿಸಿದಂದಿನಿಂದ ಇಂದಿನವರೆಗೂ ಅವರು ನನ್ನನ್ನು ಬಿಟ್ಟು ಅನ್ಯದೇವತೆಗಳನ್ನು ಸೇವಿಸಿದರು. ನನಗೆ ಹೇಗೆ ಮಾಡಿದರೋ ಹಾಗೆಯೇ ನಿನಗೂ ಮಾಡುತ್ತಾರೆ. ನೀನು ಈಗ ಅವರು ಕೇಳಿಕೊಂಡಂತೆ ಮಾಡು; ಆದರೆ ಅವರ ಮೇಲೆ ರಾಜಗಿರುವ ಅಧಿಕಾರ –ವೆಷ್ಟೆಂಬುದನ್ನು ಅವರಿಗೆ ತಿಳಿಸಿ ಎಚ್ಚರಿಸದೆ ಇರಬೇಡ ಎಂದು ಹೇಳಿದನು." (೧ಸಮು–೮:೪–೯)

ಈ ಪ್ರಕಾರ, ದೇವರು ಸಮುವೇಲನಿಗೆ ಜನರು ಯಾವುದನ್ನು ಇಷ್ಟಪಟ್ಟಿದ್ದಾರೋ ಅದನ್ನು ಕೊಡುವ ಹಾಗೆ ಅವರಿಗೆ ಒಬ್ಬ ಅರಸ – –ನನ್ನು ನೇಮಿಸಿಕೊಡುವಂತೆ ಹೇಳಿದನು. ತನ್ನ ಜೊತೆಯಲ್ಲಿ ಇನ್ನೊಬ್ಬ ಅರಸನನ್ನು ಇಸ್ರಾಯೇಲ್ಯರು ಪಡೆದುಕೊಳ್ಳುವದು ದೇವರಿಗೆ ಇಷ್ಟವಿರಲಿಲ್ಲ, ಆದರೆ ಅವರು ದೇವರ ಆಳ್ವಿಕೆಯನ್ನು ತಿರಸ್ಕರಿಸಿದಂದಿನಿಂದಲೂ ದೇವರು ಅವರ ಮೇಲೆ ಬಲವಂತವಾಗಿ ಆಳ್ವಿಕೆ ನಡೆಸುವ ಉದ್ದೇಶವನ್ನು ಹೊಂದಿದವನಾಗಿರಲಿಲ್ಲ. ಮುಂದಿನ ಅಧ್ಯಾಯದಲ್ಲಿ, ಸಮುವೇಲನು **ಸೌಲನೆಂಬ** ಹೆಸರುಳ್ಳ ಒಬ್ಬ ಮನುಷ್ಯ –ನನ್ನು ಇಸ್ರಾಯೇಲ್ಯರಿಗಾಗಿ ನೇಮಿಸಿದನು. ವಾಕ್ಯವು ಹೇಳುವದೇನೆಂದರೆ: ಸಮುವೇಲನು ಎಣ್ಣೇ ಕುಪ್ಪಿಯಿಂದ ತೈಲವನ್ನು ಸೌಲನ ತಲೆಯ ಮೇಲೆ ಹೊಯ್ದನು" (೧ಸಮು–೧೦:೧). ಇಸ್ರಾಯೇಲ್ಯರು ಯಾರನ್ನಾದರೂ ನೇಮಕಗೊಳಿಸುವಾಗ ಇದೇ ರೀತಿ ಮಾಡು –ತ್ತಿದ್ದರು. ಅವರು ಪ್ರವಾದಿಯನ್ನು, ಯಾಜಕರನ್ನು ಅಥವಾ ಅರಸನನ್ನು ಪ್ರತ್ಯೇಕಿಸುವದಕ್ಕೆ ಅವರ ತಲೆಯ ಮೇಲೆ ಎಣ್ಣೆಯನ್ನು ಹಾಕುತ್ತಿದ್ದರು. ಸಮುವೇಲನು ಸೌಲನ ತಲೆಯ ಮೇಲೆ ಎಣ್ಣೆಯನ್ನು ಹೊಯ್ದ ನಂತರ ಜನರೆಲ್ಲರಿಗೆ, ನೋಡಿದಿರಾ, ಯೆಹೋವ – –ನಿಂದ ಆರಿಸಲ್ಪಟ್ಟವನು ಇವನೇ; ಸರ್ವಜನರಲ್ಲಿ ಇವನಿಗೆ ಸಮಾನರು ಇಲ್ಲವೇ ಇಲ್ಲ ಎನ್ನಲು ಜನರೆಲ್ಲರೂ ಅರಸನು ಚಿರಂಜೀವಿ –ಯಾಗಿರಲಿ ಎಂದು ಆರ್ಭಟಿಸಿದರು!" (೧ಸಮು–೧೦:೨೪)

ಪ್ರಾರಂಭದಲ್ಲಿ ಇಸ್ರಾಯೇಲ್ಯರು ತಮ್ಮ ಅರಸನಾದ ಸೌಲನಲ್ಲಿ ಬಹಳವಾಗಿ ಸಂತೋಷಿಸಿದರು. ಅವನು ಬಲಶಾಲಿಯೂ, ಧೈರ್ಯ –ವಂತನೂ, ಯೌವನ ಪ್ರಾಯದವನೂ, ಸುಂದರನೂ, ಇಸ್ರಾಯೇಲ್ಯರೆಲ್ಲರ ಇತರ ಮಕ್ಕಳಿಗಿಂತ ಎತ್ತರವಾದವನೂ ಆಗಿದ್ದನು. ಹೊರಗಿನ ತೋರಿಕೆಯಲ್ಲಿ, ಸೌಲನು ಅತ್ಯುತ್ತಮನಾದ ಅರಸನಾಗಿರಬೇಕಾಗಿತ್ತು. ಆದರೆ ಮನುಷ್ಯನು ವಿಷಯಗಳಿಗೆ ಮೌಲ್ಯವನ್ನು ಕೊಡುವ ಹಾಗೆ ದೇವರು ಕೊಡುವದಿಲ್ಲ. ಮನುಷ್ಯನು **ಹೊರಗಿನ ತೋರಿಕೆಯನ್ನು** ನೋಡುತ್ತಾನೆ ಆದರೆ ದೇವರು **ಹೃದಯವನ್ನು** ನೋಡುವವನಾಗಿದ್ದಾನೆ. ಅರಸನಾದ ಸೌಲನು ಚೆನ್ನಾಗಿ ಕೆಲಸ ಪ್ರಾರಂಭಿಸಿದನು, ಆದರೆ ಸಮಯ ಕಳೆದ ಹಾಗೆ ಅವನು ಗರ್ವಿ – –ಷ್ಠನೂ, ಹೊಟ್ಟೇಕಿಚ್ಚುಳ್ಳವನೂ ಮತ್ತು ಸ್ವಯಂ–ತೃಪ್ತಿಯುಳ್ಳವನೂ ಆದನು. ಸೌಲನು ದೇವರನ್ನು ತನ್ನ ತುಟಿಗಳಿಂದ ಸನ್ಮಾನಿಸುತ್ತಿ –ದ್ದನು, ಆದರೆ ಅವನ ಹೃದಯ ದೇವರಿಂದ ದೂರವಾಗಿತ್ತು. ಸೌಲನು ದೇವರ ವಾಕ್ಯಕ್ಕೆ ಗೌರವ ಕೊಡದೇ ಅವಿಧೇಯನಾಗಿ – –ದ್ದನು. ಅವನು ಏನು ಮಾಡಬೇಕೆಂದು ದೇವರು ಇಷ್ಟಪಡುತ್ತಿದ್ದನೋ ಹಾಗೆ ಮಾಡದೇ ತನಗೆ ಇಷ್ಟಬಂದ ರೀತಿಯಲ್ಲಿ ಸೌಲನು ಕೆಲಸಗಳನ್ನು ಮಾಡುತ್ತಿದ್ದನು.

ಹಾಗಾಗಿ, ಸೌಲನು ಅರಸನಾದ ಕೆಲವು ವರ್ಷಗಳ ನಂತರ, ಅರಸನೊಬ್ಬನು ನೇಮಕಗೊಂಡನೆಂದು ವಾಕ್ಯವು ನಮಗೆ ತಿಳಿಸುತ್ತದೆ,

"ಯೆಹೋವನು ಸಮುವೇಲನಿಗೆ – ಸೌಲನನ್ನು ಅರಸನನ್ನಾಗಿ ಮಾಡಿದ್ದಕ್ಕೆ ಈಗ ಪಶ್ಚಾತ್ತಾಪಪಡುತ್ತೇನೆ. **ಅವನು ನನ್ನನ್ನು ಬಿಟ್ಟು – ಬಿಟ್ಟನು; ನನ್ನ ಆಜ್ಞೆಗಳನ್ನು ನೆರವೇರಿಸುವದಿಲ್ಲ** ಎಂದು ಹೇಳಲು ಸಮುವೇಲನು ಕೋಪಗೊಂಡು ರಾತ್ರಿಯೆಲ್ಲಾ ಆತನಿಗೆ ಮೊರೆಯಿ –ಟ್ಟನು. ಅವನು ಬೆಳಿಗ್ಗೆ ಎದ್ದು ಸೌಲನನ್ನು ನೋಡುವದಕ್ಕೆ ಹೊರಟಾಗ ಅವನಿಗೆ – ಸೌಲನು ಕರ್ಮೆಲಿಗೆ ಹೋಗಿ ಅಲ್ಲಿ ತನ– –ಗೋಸ್ಕರ ಒಂದು ಜ್ಞಾಪಕಸ್ತಂಭವನ್ನು ನಿಲ್ಲಿಸಿ ಅಲ್ಲಿಂದ ಗಟ್ಟಾ ಇಳಿದು ಗಿಲ್ಗಾಲಿಗೆ ಹೋದನೆಂಬ ವರ್ತಮಾನವು ಬಂದದರಿಂದ ಸಮುವೇಲನು ಅಲ್ಲಿಗೆ ಹೋದನು. ಸೌಲನು ಅವನನ್ನು ಕಂಡು – ಯೆಹೋವನು ನಿನ್ನನ್ನು ಆಶೀರ್ವದಿಸಲಿ; ನಾನು ಆತನ ಅಪ್ಪಣೆಯನ್ನು ನೆರವೇರಿಸಿದೆನು ಅಂದನು. ಅದಕ್ಕೆ ಸಮುವೇಲನು –ಯೆಹೋವನು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೋಮಗಳಿಗೆ ಮೆಚ್ಚುತ್ತಾನೋ? ಯಜ್ಞವನ್ನರ್ಪಿಸುವದಕ್ಕಿಂತ ಮಾತು ಕೇಳುವದು ಉತ್ತಮವಾಗಿದೆ; ಟಗರುಗಳ ಕೊಬ್ಬಿಗಿಂತ ವಿಧೇಯತ್ವವು ವಿಶೇಷ –ವಾಗಿದೆ. ಅವಿಧೇಯತ್ವವು ಮಂತ್ರತಂತ್ರಗಳಷ್ಟೇ ಕೆಟ್ಟದ್ದಾಗಿರುವದು; ಹಟವು ಮಿಥ್ಯಾಭಕ್ತಿಗೂ ವಿಗ್ರಹಾರಾಧನೆಗೂ ಸಮಾನವಾಗಿರು –ವದು. **ನೀನು ಯೆಹೋವನ ಮಾತನ್ನು ತಳ್ಳಿಬಿಟ್ಟದ್ದರಿಂದ ಆತನು ನಿನ್ನನ್ನು ಅರಸುತನದಿಂದ ತಳ್ಳಿಬಿಟ್ಟಿದ್ದಾನೆ.!** ಎಂದು ಹೇಳಿದನು. (೧ಸಮು–೧೫:೧೦–೧೩; ೨೨,೨೩)

ಹೀಗೆ, ರಾಜ್ಯವು ನಿನ್ನಿಂದ ತೆಗೆದುಕೊಂಡು ಇನ್ನೊಬ್ಬನಿಗೆ ಕೊಡಲ್ಪಡುವದು ಎಂಬುದಾಗಿ ಸಮುವೇಲನು ಸೌಲನಿಗೆ ಹೇಳಿದನು. ಮುಂದಿನ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಯೆಹೋವನು ಸಮುವೇಲನಿಗೆ – ನಾನು ಸೌಲನನ್ನು ಇಸ್ರಾಯೇಲ್ಯರ ಅರಸನಾಗಿರುವದಕ್ಕೆ ಅಯೋಗ್ಯನೆಂದು ತಳ್ಳಿಬಿಟ್ಟೆನಲ್ಲಾ; ನೀನು ಅವನಿಗೋಸ್ಕರ ಎಷ್ಟರವರೆಗೆ ದು:ಖಿಸುತ್ತಿರುವಿ? ಕೊಂಬನ್ನು ಎಣ್ಣೆಯಿಂದ ತುಂಬಿಸಿಕೊಂಡು ಬಾ; ನಾನು ನಿನ್ನನ್ನು **ಬೆತ್ಲೆ –ಹೇಮಿನವನಾದ** ಇಷಯನ ಬಳಿಗೆ ಕಳುಹಿಸುತ್ತೇನೆ; **ಅವನ ಮಕ್ಕಳಲ್ಲೊಬ್ಬನನ್ನು** ಅರಸನನ್ನಾಗಿ ಆರಿಸಿಕೊಂಡಿದ್ದೇನೆ ಎಂದು ಹೇಳಿ – ದನು. ಅದಕ್ಕೆ ಸಮುವೇಲನು – ನಾನು ಹೋಗುವದು ಹೇಗೆ? ಇದು ಸೌಲನಿಗೆ ಗೊತ್ತಾದರೆ ಅವನು ನನ್ನನ್ನು ಕೊಂದುಹಾಕು – ವನಲ್ಲವೇ ಅನ್ನಲು ಆತನು – ನೀನು ಒಂದು ಕಡಸನ್ನು ತೆಗೆದುಕೊಂಡು ಹೋಗಿ ಯೆಹೋವನಿಗೋಸ್ಕರ ಯಜ್ಞಮಾಡುವದಕ್ಕೆ ಬಂದಿದ್ದೇನೆಂದು ಹೇಳಿ ಇಷಯನನ್ನು ಅದಕ್ಕೆ ಕರೆ, ಆಮೇಲೆ ನೀನು ಮಾಡಬೇಕಾದದ್ದನ್ನು ನಾನೇ ತಿಳಿಸುತ್ತೇನೆ; ನಾನು ಯಾವ – –ನನ್ನು ತೋರಿಸುತ್ತೇನೋ ಅವನನ್ನು ನೀನು ಅಭಿಷೇಕಿಸಬೇಕು ಎಂದನು. ಯೆಹೋವನು ಹೇಳಿದಂತೆಯೇ ಸಮುವೇಲನು ಬೆತ್ಲೆ –ಹೇಮಿಗೆ ಹೋದನು. ಆ ಊರಿನ ಹಿರಿಯರು ನಡುಗುತ್ತಾ ಬಂದು ಅವನನ್ನು ಎದುರುಗೊಂಡು ನಿನ್ನ ಆಗಮನವು ನಮಗೆ ಶುಭಕರವಾಗಿದೆಯೇ ಎಂದು ಕೇಳಲು ಅವನು – ಹೌದು ಶುಭಕರವಾಗಿದೆ ಯೆಹೋವನಿಗೆ ಯಜ್ಞವನ್ನರ್ಪಿಸುವದಕ್ಕೆ ಬಂದಿದ್ದೇನೆ. ನೀವು ನಿಮ್ಮನ್ನು ಶುದ್ಧಪಡಿಸಿಕೊಂಡು ನನ್ನ ಜೊತೆಯಲ್ಲಿ ಯಜ್ಞಕ್ಕೆ ಬನ್ನಿರಿ ಎಂದು ಹೇಳಿ ಇಷಯನನ್ನೂ ಅವನ ಮಕ್ಕಳನ್ನೂ ಶುದ್ಧೀ –ಕರಿಸಿ ಅವರನ್ನೂ ಯಜ್ಞಕ್ಕೆ ಕರೆದನು. ಅವರು ಬರಲು ಅವನು ಎಲೀಯಾಬನನ್ನು ನೋಡಿ – ನಿಶ್ಚಯವಾಗಿ ಯೆಹೋವನು ಅಭಿಷೇಕ್ಕೆ ಆರಿಸಿಕೊಂಡವನು ಆತನ ಮುಂದೆ ಇದ್ದಾನೆ ಎಂದುಕೊಂಡನು. ಆದರೆ ಯೆಹೋವನು ಸಮುವೇಲನಿಗೆ – ನೀನು ಅವನ ಚೆಲುವಿಕೆಯನ್ನೂ ನೀಳವನ್ನೂ ನೋಡಬೇಡ; ನಾನು ಅವನನ್ನು ತಳ್ಳಿಬಿಟ್ಟಿದ್ದೇನೆ. **ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ ಅಂದನು."** (೧ಸಮು–೧೬:೧–೭)

"ನಂತರ ಇಷಯನು ಅಬೀನಾದಾಬನನ್ನು ಸಮುವೇಲನ ಬಳಿಗೆ ಬರಮಾಡಲು ಸಮುವೇಲನು – ಯೆಹೋವನು ಅವನನ್ನು ಆರಿಸಿ ಕೊಳ್ಳಲಿಲ್ಲ ಎಂದನು. ತರುವಾಯ ಇಷಯನು ಶಮ್ಮ ಎಂಬವನನ್ನು ಬರಮಾಡಲು ಸಮುವೇಲನು – ಯೆಹೋವನು ಇವನನ್ನು ಆರಿಸಿಕೊಳ್ಳಲಿಲ್ಲ ಎಂದು ಹೇಳಿದನು. ಹೀಗೆ ಇಷಯನು ತನ್ನ ಮಕ್ಕಳಲ್ಲಿ ಏಳು ಮಂದಿಯನ್ನು ಅವನ ಬಳಿಗೆ ಬರಮಾಡಿದರೂ ಅವನು – ಯೆಹೋವನು ಇವರನ್ನು ಆರಿಸಿಕೊಳ್ಳಲಿಲ್ಲ ಎಂದು ನುಡಿದನು. ಅನಂತರ ಸಮುವೇಲನು ಇಷಯನನ್ನು – ನಿನ್ನ ಮಕ್ಕಳೆಲ್ಲಾ ಇಷ್ಟೇ ಮಂದಿಯೋ ಎಂದು ಕೇಳಲು ಅವನು – ಇವೆಲ್ಲರಿಗಿತಂಲೂ **ಚಿಕ್ಕವನು** ಒಬ್ಬನಿರುತ್ತಾನೆ; ಅವನು ಕುರಿಮೇಯಿ – –ಸುವದಕ್ಕೆ ಹೋಗಿದ್ದಾನೆ ಎಂದು ಉತ್ತರ ಕೊಟ್ಟನು. ಆಗ ಸಮುವೇಲನು – ಅವನನ್ನು ಕರೇಕಳುಹಿಸು; ಅವನು ಬರುವವರೆಗೂ ನಾವು ಊಟಕ್ಕೆ ಕೂತುಕೊಳ್ಳಬಾರದು ಎಂದು ಹೇಳಲು ಇಷಯನು ಅವನನ್ನು ಕರತರಿಸಿದನು. ಅವನು ಕೆಂಬಣ್ಣದವನೂ ಸುಂದರ –ನೇತ್ರನೂ ನೋಟಕ್ಕೆ ರಮಣೀಯನೂ ಆಗಿದ್ದನು. ಯೆಹೋವನು ಸಮುವೇಲನಿಗೆ – ಎದ್ದು ಇವನನ್ನು ಅಭಿಷೇಕಿಸು; ನಾನು ಆರಿಸಿಕೊಂಡವನು ಇವನೇ ಎಂದು ಆಜ್ಞಾಪಿಸಿಲು ಸಮುವೇಲನು ಎಣ್ಣೆಯ ಕೊಂಬನ್ನು ತೆಗೆದುಕೊಂಡು ಅವನನ್ನು ಅವನ ಸಹೋ –ದರರ ಮಧ್ಯದಲ್ಲೇ ಅಭಿಷೇಕಿಸಿದನು. ಕೂಡಲೆ ಯೆಹೋವನ ಆತ್ಮವು **ದಾವೀದನ** ಮೇಲೆ ಬಂದು ನೆಲೆಗೊಂಡಿತು." (೧ಸಮು– ೧೬:೮–೧೩)

ಈ ಪ್ರಕಾರ ಸೌಲನ ನಂತರ ಇಸ್ರಾಯೇಲಿನ ಅರಸನಾಗುವದಕ್ಕೆ ದೇವರು ಹೇಗೆ ದಾವೀದನನ್ನು ನೇಮಿಸಿದನೆಂಬುದನ್ನು ನಾವು ನೋಡಿದೆವು. ಆದರೆ ಆ ದಿನದಂದೇ ದಾವೀದನು ಇಸ್ರಾಯೇಲಿನ ಅರಸನಾಲಿಲ್ಲ ಎಂಬುದನ್ನು ನಾವು ಅರ್ಥಮಾಡಿಕೊಳ್ಳಲೇಬೇಕು. ದಾವೀದನು ಕೇವಲ ಒಬ್ಬ ಹುಡುಗನಾಗಿದ್ದನು ಮತ್ತು ಇಸ್ರಾಯೇಲ್ ದೇಶವನ್ನು ಆಳುವದಕ್ಕೆ ದೇವರು ಅವನನ್ನು ಅಭಿಷೇಕಿಸುವ ಸಮಯವು ಇನ್ನೂ ಬಂದಿರಲಿಲ್ಲ. ನಿಜಹೇಳಬೇಕೆಂದರೆ, ದಾವೀದನು ಇಸ್ರಾಯೇಲಿನ ಸಿಂಹಾಸನದ ಮೇಲೆ ಕುಳಿತುಕೊಳ್ಳುವದಕ್ಕಿಂತ

ಮೊದಲು ಹತ್ತು ವರ್ಷಗಳವರೆಗೆ ಕಾಯಬೇಕಾಗಿತ್ತು.

ಆದ್ದರಿಂದ ದಾವೀದನು ತನ್ನ ತಂದೆಯ ಕುರಿಮಂದೆಯನ್ನು ಕಾಯುವದಕ್ಕಾಗಿ ಬೆತ್ಲೆಹೇಮಿನ ಸುತ್ತಲಿರುವ ಹೊಲಗಳಿಗೆ ಹಿಂತಿರುಗಿ ಬಂದನು. ದಾವೀದನು ಒಳ್ಳೆಯವನೂ ಮತ್ತು ನಂಬಿಗಸ್ತನಾದ ಕುರುಬನಾಗಿದ್ದನು. ಅವನು **ಕರ್ತನಲ್ಲಿ ನಂಬಿಕೆಯುಳ್ಳವನಾಗಿದ್ದರಿಂದ** ಯಾವುದಕ್ಕೂ ಹೆದರುತ್ತಿರಲಿಲ್ಲ. ಉದಾಹರಣೆಗೆ, ಒಂದುದಿನ ದಾವೀದನು ತನ್ನ ತಂದೆಯ ಕುರಿಗಳನ್ನು ಮೇಯಿಸುತ್ತಿರುವಾಗ ಒಂದು ಸಿಂಹವು ಅವುಗಳಲ್ಲಿ ಒಂದನ್ನು ಎತ್ತಿಕೊಂಡು ಹೋಗಲು, ದಾವೀದನು ಅದನ್ನು ಹಿಮ್ಮೆಟ್ಟಿ ಕೊಂಡು ಹೋಗಿ ಹೊಡೆದು ಕುರಿಯನ್ನು ಅದರ ಬಾಯೊಳಗಿಂದ ರಕ್ಷಿಸಿದನು. ಸಿಂಹವು ಅವನ ಕಡೆಗೆ ತಿರುಗಿದಾಗ, ದಾವೀದನು ಅದರ ಕೂದಲನ್ನು ಹಿಡಿದು ಬಡಿದು ಅದನ್ನು ಕೊಂದು ಹಾಕಿದನು. (೧ಸಮು–೧೭:೩೫)

ದಾವೀದನು ಒಬ್ಬ ಉತ್ತಮ ಕುರುಬನು ಮಾತ್ರ ಆಗಿರಲಿಲ್ಲ; ಅವನು ಕಿನ್ನರಿ ಬಾರಿಸಿಕೊಂಡು ಹಾಡನ್ನೂ ಸಹ ಹಾಡುತ್ತಿದ್ದನು. ದಾವೀದನು ಅನೇಕ ಹಾಡುಗಳನ್ನು ರಚಿಸಿ ಅವುಗಳನ್ನು **ಕೀರ್ತನೆಗಳ** {ಝಾಬುರ್} ಪುಸ್ತಕದಲ್ಲಿ ಬರೆಯುವಂತೆ ದೇವರಾತ್ಮನು ಅವನನ್ನು ಪ್ರೇರೇಪಿಸಿದ್ದನು. ಓಹ್, ದಾವೀದನು ದೇವರಾದ ಕರ್ತನನ್ನೂ ಮತ್ತು ಆತನ ವಾಕ್ಯವನ್ನೂ ಎಷ್ಟೊಂದು ಪ್ರೀತಿಸುತ್ತಿದ್ದನು!

ದಾವೀದನ ಕೀರ್ತನೆಗಳಿಂದ ಆಯ್ದು ತೆಗೆದ ಕೆಲವು ಭಾಗಗಳೊಂದಿಗೆ ಈ ದಿನದ ಕಾರ್ಯಕ್ರಮವನ್ನು ನಾವು ಮುಗಿಸುವದಕ್ಕೆ ಇಷ್ಟಪಡುತ್ತೇವೆ. ದಾವೀದನು ಕುರಿಗಳೊಂದಿಗೆ ಹುಲುಸಾಗಿ ಬೆಳೆದಿರುವ ಹೊಲಗಳಲ್ಲಿದ್ದು, ಕಿನ್ನರಿಯನ್ನು ಬಾರಿಸುತ್ತಾ ದೇವರಾತ್ಮ –
–ನಿಂದ ರಚಿಸಲ್ಪಟ್ಟ ಕೃತಜ್ಞತಾಸ್ತುತಿಗಳು ಮತ್ತು ಹಾಡುಗಳೊಂದಿಗೆ ದೇವರನ್ನು ಕೊಂಡಾಡುತ್ತಿದ್ದಾನೆಂಬುದಾಗಿ ಊಹಿಸಿಕೊಳ್ಳುವದಕ್ಕೆ ಪ್ರಯತ್ನಿಸಿರಿ. ಈಗ ಅದನ್ನು ಕೇಳಿಸಿಕೊಳ್ಳಿರಿ:

**"ನಮ್ಮ ಕರ್ತನಾದ ಯೆಹೋವನೇ ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು.** ನಿನ್ನ ಕೈಕೆಲಸವಾಗಿರುವ ಆಕಾಶ
–ಮಂಡಲವನ್ನೂ ನೀವು ಉಂಟುಮಾಡಿದ ಚಂದ್ರನಕ್ಷತ್ರಗಳನ್ನೂ ನಾನು ನೋಡುವಾಗ – ಮನುಷ್ಯನು ಎಷ್ಟು ಮಾತ್ರದವನು, ಅವ
–ನನ್ನು ನೀನು ಯಾಕೆ ನೆನಸಬೇಕು? ಮಾನವನು ಎಷ್ಟರವನು, ಅವನಲ್ಲಿ ಯಾಕೆ ಲಕ್ಷ್ಯವಿಡಬೇಕು? ಅವನನ್ನು ದೇವದೂತರಿಗಿಂತ ಸ್ವಲ್ಪವೇ ಕಡಿಮೆಯಾಗಿ ಮಾಡಿದಿಯಲ್ಲಾ; ಪ್ರಭಾವವನ್ನೂ ಮಾನವನ್ನೂ ಅವನಿಗೆ ಕಿರೀಟವಾಗಿ ಇಟ್ಟಿ, ನಮ್ಮ ಕರ್ತನಾದ ಯೆಹೋ
–ವನೇ, ನಿನ್ನ ನಾಮವು ಭೂಲೋಕದಲ್ಲೆಲ್ಲಾ ಎಷ್ಟೋ ಮಹಿಮೆಯುಳ್ಳದ್ದು." (ಕೀರ್ತನೆಗಳು–೮:೧, ೩–೫, ೯)

**"ನಿನ್ನ ವಾಕ್ಯವು** ನನ್ನ ಕಾಲಿಗೆ **ದೀಪವೂ** ನನ್ನ ದಾರಿಗೆ ಬೆಳಕೂ ಆಗಿದೆ! ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗ –
–ಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ." (ಕೀರ್ತನೆಗಳು–೧೧೯:೧೦೫, ೧೧). "ಯೆಹೋವನ ಧರ್ಮಶಾಸ್ತ್ರವು ಲೋಪವಿ –
–ಲ್ಲದ್ದು; ಅದು ಪ್ರಾಣವನ್ನು ಉಜ್ಜೀವಿಸಮಾಡುವಂಥದ್ದು. ಯೆಹೋವನ ಕಟ್ಟಳೆ ನಂಬಿಕೆಗೆ ಯೋಗ್ಯವಾದದ್ದು; ಬುದ್ಧಿಹೀನರಿಗೆ ವಿವೇಕಪ್ರದವಾಗಿದೆ. ಯೆಹೋವನು ನಿಯಮಗಳು ನೀತಿಯುಳ್ಳವುಗಳಾಗಿವೆ; ಮನಸ್ಸನ್ನು ಹರ್ಷಪಡಿಸುತ್ತವೆ. ಯೆಹೋವನ ಆಜ್ಞೆ ಪವಿತ್ರವಾದದ್ದು; ಕಣ್ಣುಗಳನ್ನು ಕಳೆಗೊಳಿಸುತ್ತದೆ. ಅವು ಬಂಗಾರಕ್ಕಿಂತಲೂ ಅಪರಂಜಿರಾಶಿಗಿಂತಲೂ ಅಪೇಕ್ಷಿಸತಕ್ಕವುಗಳು. ಅವು ಜೇನಿ
–ಗಿಂತಲೂ ಶೋಧಿಸಿದ ಜೇನು ತುಪ್ಪಕ್ಕಿಂತಲೂ ಸಿಹಿಯಾಗಿವೆ. ಅವುಗಳ ಮೂಲಕ ನಿನ್ನ ದಾಸನಿಗೆ ಎಚ್ಚರಿಕೆಯಾಗುತ್ತದೆ; ಅವುಗ
–ಳನ್ನು ಕೈಕೊಳ್ಳುವದರಿಂದ ಬಹಳ ಫಲ ಉಂಟಾಗುತ್ತದೆ." (ಕೀರ್ತನೆಗಳು–೧೯:೭, ೮, ೧೦, ೧೧)

**"ಯೆಹೋವನು ನನಗೆ ಕುರುಬನು ಕೊರತೆಪಡೆನು.** ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರು
–ಗಳ ಬಳಿಗೆ ಬರಮಾಡುತ್ತನೆ. ನನ್ನ ಪ್ರಾಣವನ್ನು ಉಜ್ಜೀವಿಸಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸು –
–ತ್ತಾನೆ. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ. ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ಧಪಡಿಸುತ್ತೀ; ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ. ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ. ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು. ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು." (ಕೀರ್ತನೆಗಳು–೨೩)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಮುಂದಿನ ಪಾಠದಲ್ಲಿ ದಾವೀದನ ಕಥೆಯನ್ನು ಮುಂದುವರೆಸುವದಕ್ಕೆ ಉದ್ದೇಶಿಸಿದ್ದೇವೆ ಮತ್ತು ದಾವೀದನು ದೈತ್ಯನಾದ ಗೊಲ್ಯಾತನನ್ನು ಎದುರಿಸುವ ಹಾಗೆ ದೇವರು ಅವನೊಂದಿಗೆ ಹೇಗೆ ಇದ್ದನೆಂಬು –
–ದನ್ನು ನೋಡೋಣ.

ದೇವರು ಸಮುವೇಲನಿಗೆ ಹೇಳಿದ್ದರ ಕುರಿತಾಗಿ ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ.

**"ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೇ ಹೃದಯವನ್ನೇ ನೋಡುವವನಾಗಿದ್ದಾನೆ."**(೧ಸಮು–೧೬:೭)

ಪಾಠ ೪೭

# ದಾವೀದ ಗೊಲ್ಯಾತ

೧ಸಮುವೇಲ ೧೭; ಕೀರ್ತನೆ ೨೭

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರುವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ಪ್ರವಾದಿಯಾದ ದಾವೀದನ ವಿಷಯವನ್ನು ನೋಡಿಕೊಂಡೆವು. ಅವನನ್ನು ಕುರಿತಂತೆ ದೇವರು ಏನು ಸಾಕ್ಷಿಕೊಟ್ಟಿರುವನೆಂಬುದನ್ನು ಕೇಳಿಸಿಕೊಳ್ಳಿರಿ: “ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನುಷ್ಯನು, ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವನು.” (ಅಪೊ.ಕೃತ್ಯ–೧೩:೨೨) ಇಸ್ರಾಯೇಲ್ಯರ ಮೊದಲನೆಯ ಅರಸನಾದ ಸೌಲನು ದೇವರ ವಾಕ್ಯಕ್ಕೆ ವಿಧೇಯನಾಗದ್ದದರಿಂದ ದೇವರು ದಾವೀದನನ್ನು ಹೇಗೆ ಇಸ್ರಾಯೇಲಿನ ಎರಡನೆಯ ಅರಸನ್ನಾಗಿ ನೇಮಿಸಿದನೆಂಬುದನ್ನು ನಾವು ನೋಡಿಕೊಂಡೆವು. ಹೇಗೂ, ದೇವರು ಅವನನ್ನು ಅರಸನನ್ನಾಗಿ ನೇಮಿಸಿದ ದಿನದಂದೇ ದಾವೀದನು ಇಸ್ರಾಯೇಲಿನ ಅರಸನಾಗಲಿಲ್ಲ. ಅವನು ಇನ್ನೂ ಹುಡುಗನಾಗಿದ್ದನು ಮತ್ತು ಅವನು ರಾಜ್ಯವನ್ನು ಪಡೆದುಕೊಳ್ಳುವದಕ್ಕೆ ಅವನಿಗೆ ಇನ್ನು ಸಮಯವು ಬಂದಿರಲಿಲ್ಲ. ದಾವೀದನು ಅರಸನಾಗಿ ಅಭಿಷೇಕಿಸಲ್ಪಟ್ಟ ನಂತರ ಅವನು ತನ್ನ ತಂದೆಯ ಕುರಿಮಂದೆಯನ್ನು ಕಾಯುವದಕ್ಕಾಗಿ ಬೆತ್ಲೆಹೇಮ್ ಪಟ್ಟಣದ ಹೊರಗಿರುವ ಹೊಲಗಳಿಗೆ ಹಿಂದಿರುಗಿದನು.

ದಾವೀದನು ದೇವರೊಂದಿಗೆ ನಡೆದಾಡುವವನಾದ್ದರಿಂದ ದೇವರು ಅವನೊಂದಿಗೆ ಹೇಗಿದ್ದನೆಂಬುದನ್ನು ತೋರಿಸುವಂತಹ ಒಂದು ಅದ್ಬುತಕರವಾದ ಕಥೆಯನ್ನು ನಾವು ಈ ದಿನ ಓದಲಿದ್ದೇವೆ. ನಮ್ಮ ಪಾಠವು **“ದಾವೀದ ಮತ್ತು ಗೊಲ್ಯಾತ”** ಎಂದು ಕರೆಯಲ್ಪಡುತ್ತದೆ. ಮೊದಲನೆಯ ಸಮುವೇಲನ ಪುಸ್ತಕದ ಹದಿನೇಳನೆಯ ಅಧ್ಯಾಯದಲ್ಲಿರುವದನ್ನು ಈಗ ಮುಂದುವರಿಸೋಣ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**“ಫಿಲಿಷ್ಟಿಯರು** ಯುದ್ಧಮಾಡುವದಕ್ಕೋಸ್ಕರ ಯೆಹೂದದೇಶದ ಸೋಕೋವಿನಲ್ಲಿ ಸೈನ್ಯವನ್ನು ಕೂಡಿಸಿಕೊಂಡು ಬಂದು ಸೋಕೋವಿಗೂ ಅಜೇಕಕ್ಕೂ ಮಧ್ಯದಲ್ಲಿರುವ ಎಫೆಸ್ದಮ್ಮೀಮಿನಲ್ಲಿ ಪಾಳೆಯ ಮಾಡಿಕೊಂಡರು. **ಸೌಲನೂ ಇಸ್ರಾಯೇಲ್ಯರೂ** ಫಿಲಿಷ್ಟಿಯರೊಡನೆ ಯುದ್ಧಮಾಡುವದಕ್ಕಾಗಿ ಸೈನ್ಯವನ್ನು ಕೂಡಿಸಿ ಏಲಾ ತಗ್ಗಿನಲ್ಲಿ ಪಾಳೆಯ ಮಾಡಿಕೊಂಡು ವ್ಯೂಹಕಟ್ಟಿದರು. ಫಿಲಿಷ್ಟಿಯರು ಒಂದು ಗುಡ್ಡದ ಪಕ್ಕದಲ್ಲಿಯೂ ಇಸ್ರಾಯೇಲ್ಯರು ಇನ್ನೊಂದು ಗುಡ್ಡದ ಪಕ್ಕದಲ್ಲಿಯೂ ನಿಂತರು.” (೧ಸಮು–೧೭:೧–೩)

“ಉಭಯತರ ಮಧ್ಯದಲ್ಲಿ ಒಂದು ತಗ್ಗು ಇತ್ತು. ಫಿಲಿಷ್ಟಿಯರ ಪಾಳೆಯದಿಂದ ಗತ್ ಊರಿನವನಾದ **ಗೊಲ್ಯಾತನೆಂಬ** ಒಬ್ಬ ರಣಶೂರನು ಹೊರಟುಬಂದನು; ಅವನು ಆರುವರೆ ಮೊಳ ಎತ್ತರವಾಗಿದ್ದನು. ಅವನ ಶಿಸಸ್ತ್ರಾಣವು ತಾಮ್ರದ್ದು; ಅದೇ ಲೋಹದ ಬಿಲ್ಲೆಗಳಿಂದ ಪರೆಪರೆಯಾಗಿ ಜೋಡಿಸಲ್ಪಟ್ಟ ಅವನ ಕವಚವು ಐದುಸಾವಿರ ರೂಪಾಯಿ ತೂಕವಾಗಿತ್ತು. ಅವನ ಪಾದರಕ್ಷೆಗಳೂ ಎದೆಯ ಮೇಲಣ ಈಟಿಯೂ ತಾಮ್ರದವು. ಅವನ ಬರ್ಜಿಯ ಹಿಡಿಕೆಯು ನೇಯಿಗಾರರ ಕುಂಟೆಯಷ್ಟು ಗಾತ್ರವಾಗಿತ್ತು. ಅದರ ಅಲಗು ಆರುನೂರು ತೊಲೆ ಕಬ್ಬಿಣದಿಂದ ಮಾಡಿದ್ದು. ಅವನ ಗುರಾಣಿಯನ್ನು ಹೊರುವವನು ಅವನ ಮುಂದೆ ಮುಂದೆ ಹೋಗುತ್ತಿದ್ದನು.” (೧ಸಮು–೧೭:೪–೭)

“ಅವನು ನಿಂತು ಇಸ್ರಾಯೇಲ್ ಸೈನ್ಯದವರನ್ನು ಕೂಗಿ ಅವರಿಗೆ – ನೀವು ಯುದ್ಧಮಾಡಬಂದದ್ದೇಕೆ? ನಾನು ಫಿಲಿಷ್ಟಿಯನು, ನೀವು ಸೌಲನ ಸೇವಕರು. ನಿಮ್ಮಲ್ಲಿ ಒಬ್ಬನನ್ನು ಆರಿಸಿಕೊಂಡು ನನ್ನ ಬಳಿಗೆ ಕಳುಹಿಸಿರಿ; ಅವನು ನನ್ನೊಡನೆ ಯುದ್ಧಮಾಡಿ ನನ್ನನ್ನು ಸೋಲಿಸಿ ಕೊಂದರೆ ನಮ್ಮವರು ನಿಮ್ಮ ಸೇವಕರಾಗುವರು; ನಾನು ಅವನನ್ನು ಸೋಲಿಸಿ ಕೊಂದರೆ ನೀವು ನಮ್ಮ ದಾಸರಾಗಿ ನಮ್ಮನ್ನು ಸೇವಿಸಬೇಕು ಎಂದು ಹೇಳಿದನು. ಮತ್ತು ಅವನು – ಈ ಹೊತ್ತು ಇಸ್ರಾಯೇಲ್ ಸೈನ್ಯದವರನ್ನು ಹೀಯಾಳಿಸುತ್ತೇನೆ; ನನ್ನೊಡನೆ ಕಾಳಗಕ್ಕೆ ನಿಮ್ಮಲ್ಲಿಂದ ಒಬ್ಬ ಮನುಷ್ಯನನ್ನು ಕಳುಹಿಸಿರಿ ನೋಡೋಣ ಎಂದು ಕೊಚ್ಚಿಕೊಂಡನು. ಸೌಲನೂ ಎಲ್ಲಾ ಇಸ್ರಾಯೇಲ್ಯರೂ ಆ ಫಿಲಿಷ್ಟಿಯನ ಮಾತುಗಳನ್ನು ಕೇಳಿ ಬಹಳವಾಗಿ ಭಯಪಟ್ಟರು; ಅವರ ಎದೆಯೊಡೆದು ಹೋಯಿತು.”
(೧ಸಮು–೧೭:೮–೧೧)

ಗೊಲ್ಯಾತನು ಇಸ್ರಾಯೇಲ್ಯರನ್ನು ಹೀಯಾಳೀಸುವ ವೇಳೆಯಲ್ಲಿ, **ದಾವೀದನು** ಯುದ್ಧಭೂಮಿಯಿಂದ ಬಹಳ ದೂರದಲ್ಲಿ ದೇವರ ವಾಕ್ಯವನ್ನು ಧ್ಯಾನಿಸುತ್ತಾ, ತನ್ನ ಕಿನ್ನರಿಯನ್ನು ಬಾರಿಸುತ್ತಾ ಹಾಡುತ್ತಾ ಕರ್ತನನ್ನು ಸ್ತುತಿಸುತ್ತಾ ತನ್ನ ತಂದೆಯ ಕುರಿಮಂದೆಯನ್ನು ಮೇಯಿಸುತ್ತಿದ್ದನು. ಇಸ್ರಾಯೇಲ್ ಸೈನ್ಯದಲ್ಲಿ ಸೈನಿಕರಾಗಿದ್ದ ಮೂವರು ಅಣ್ಣಂದಿರು ದಾವೀದನಿಗಿದ್ದರು. ಒಂದು ದಿನ ದಾವೀದನ ತಂದೆಯು ಅವನ ಬಳಿಗೆ ಬಂದು, "ಯುದ್ಧಪಾಳೆಯಕ್ಕೆ **ಹೋಗಿ ನಿನ್ನ ಅಣ್ಣಂದಿರನ್ನು ಭೇಟಿಯಾಗಿ** ಅವರ ಕ್ಷೇಮಸಮಾಚಾರವನ್ನು ತಿಳಿದುಕೊಂಡು ಬಾ" ಎಂದು ಹೇಳಿದನು. ಆದ್ದರಿಂದ ದಾವೀದನು ತನ್ನ ಕುರಿಗಳನ್ನು ಇನ್ನೊಬ್ಬ ಕುರುಬನ ಬಳಿಯಲ್ಲಿ ಬಿಟ್ಟು ಮರುದಿನ ಬೆಳಗಿನ ಜಾವದಲ್ಲಿಯೇ ಎದ್ದು ಪಾಳೆಯದ ಕಡೆಗೆ ಹೊರಟನು.

ದಾವೀದನು ತನ್ನ ಅಣ್ಣಂದಿರನ್ನು ವಂದಿಸಿ ಅವರೊಂದಿಗೆ ಮಾತಾಡುವ ವೇಳೆಯಲ್ಲಿ, ಫಿಲಿಷ್ಟಿಯರ ಶೂರನಾದ ಗೊಲ್ಯಾತನು ತನ್ನ ಸೈನ್ಯದಿಂದ ಹೊರಗೆ ಬಂದು ಇಸ್ರಾಯೇಲ್ ಸೈನ್ಯದವರ ಎದುರಿನಲ್ಲಿ ನಿಂತು ಕಳೆದ ನಲವತ್ತು ದಿವಸಗಳಿಂದ ಇಸ್ರಾಯೇಲ್ಯರನ್ನು ಹೆದರಿಸುತ್ತಿದ್ದಂತೆಯೇ ಈ ದಿನವೂ ಹಾಗೆಯೇ ಮಾಡುತ್ತಿದ್ದನು. ಇಸ್ರಾಯೇಲ್ ಸೈನಿಕರು ಅವನನ್ನು ನೋಡುತ್ತಿದ್ದಂತೆಯೇ ಭಯ –ದಿಂದ ದೂರ ಓಡಿಹೋದರು. ಆಗ ಕೆಲವರು ದಾವೀದನಿಗೆ, "ನೀನು ಈ ಮನುಷ್ಯನನ್ನು ನೋಡಿದಿಯಾ? ಅವನು ನಮ್ಮನ್ನು ಹೀಯಾಳಿಸುತ್ತಲೇ ಇದ್ದಾನೆ. ಇವನನ್ನು ಯಾರು ಕೊಲ್ಲುತ್ತಾರೋ ಅವರಿಗೆ ಅರಸನಾದ ಸೌಲನು ತನ್ನ ಅಪಾರದ್ರವ್ಯದೊಡನೆ ತನ್ನ ಮಗಳನ್ನೂ ಕೊಟ್ಟು ಮದುವೆ ಮಾಡುವನು ಮತ್ತು ಅವನ ತಂದೆಯ ಮನೆಯವರು ತೆರಿಗೆಯನ್ನು ಕಟ್ಟಬೇಕಾಗಿರುವದಿಲ್ಲ" ಎಂದು ಹೇಳಿದರು.

ಆಗ ದಾವೀದನು, "ಜೀವಸ್ವರೂಪನಾದ ದೇವರ ಸೈನ್ಯವನ್ನು ಹೀಯಾಳಿಸುವದಕ್ಕೆ ಸುನ್ನತಿಯಿಲ್ಲದ ಈ ಫಿಲಿಷ್ಟಿಯನು ಎಷ್ಟರವನು?" ಎಂದು ಹೇಳಿದನು. ಅವನು ಹೀಗೆ ಹೇಳಿದಾಗ ಅವನ ಅಣ್ಣ ಕೋಪದಿಂದ ಅವನಿಗೆ, "ನೀನು ಇಲ್ಲಿಗೆ ಯಾಕೆ ಬಂದೆ? ಅಡವಿ – –ಯಲ್ಲಿರುವ ನಾಲ್ಕಾರು ಕುರಿಗಳನ್ನು ಯಾರಿಗೆ ಒಪ್ಪಿಸಿ ಬಂದೆ? ನೀನು ಇಲ್ಲಿಗೆ ಯಾಕೆ ಬಂದಿದ್ದೀ ಎಂಬುದು ನನಗೆ ಗೊತ್ತು. ನೀನು ಯುದ್ಧವನ್ನು ನೋಡುವದಕ್ಕೆ ಬಂದಿದ್ದೀ!" ಎಂದು ಹೇಳಿದನು. ಏನೇ ಆದರೂ, ದಾವೀದನು ಗೊಲ್ಯಾತನ ವಿಷಯದಲ್ಲಿ ಮಾತಾಡಿದ ಧೈರ್ಯದ ಮಾತುಗಳನ್ನು ಇಸ್ರಾಯೇಲ್ಯರ ಒಬ್ಬ ಸೈನಿಕನು ಕೇಳಿಸಿಕೊಂಡು ಹೋಗಿ ಅರಸನಾದ ಸೌಲನಿಗೆ ತಿಳಿಸಿದನು. ಆಗ ಸೌಲನು ದಾವೀದನ್ನು ಕರೆಕಳುಹಿಸಿ ಅವನನ್ನು ಪ್ರಶ್ನೆಮಾಡಿದನು.

ಹಾಗಾಗಿ ವಾಕ್ಯವು ಹೇಳುವದೇನೆಂದರೆ:

"**ದಾವೀದನು ಸೌಲನಿಗೆ – ಆ ಫಿಲಿಷ್ಟಿಯನ ನಿಮಿತ್ತವಾಗಿ ಯಾವನೂ ಎದೆಗೆಡಬಾರದು;** ನಿನ್ನ ಸೇವಕನಾದ ನಾನು ಹೋಗಿ ಅವನೊ –ಡನೆ ಯುದ್ಧ ಮಾಡುವೆನು ಅನ್ನಲು ಸೌಲನು ಅವನಿಗೆ – ನೀನು ಅವನೊಡನೆ ಕಾದಾಡಲಾರಿ; ನೀನು ಇನ್ನೂ ಹುಡುಗನು. ಅವನಾದರೋ ಚಿಕ್ಕಂದಿನಿಂದಲೇ ಯುದ್ಧವೀರನು ಎಂದು ಹೇಳಿದನು. ಆಗ ದಾವೀದನು ಅವನಿಗೆ – ನಿನ್ನ ಸೇವಕನಾದ ನಾನು ನನ್ನ ತಂದೆಯ ಕುರಿಗಳನ್ನು ಕಾಯುತ್ತಿದ್ದಾಗ ಸಿಂಹವಾಗಲಿ ಕರಡಿಯಾಗಲಿ ಬಂದು ಹಿಂಡಿನಲ್ಲಿನ ಕುರಿಮರಿಯನ್ನು ಹಿಡಿದುಕೊಂಡು ಹೋಗಲು ನಾನು ಒಡನೆ ಅದನ್ನು ಬೆನ್ನಟ್ಟಿ ಹೊಡೆದು ಕುರಿಮರಿಯನ್ನು ಕಿತ್ತುಕೊಳ್ಳುತ್ತಿದ್ದೆನು. ಅದು ಹಿಂದಿರುಗಿ ನನ್ನ ಮೇಲೆ ಬಿದ್ದರೆ ಅದನ್ನು ಗದ್ದ ಹಿಡಿದು ಬಡಿದು ಕೊಂದುಹಾಕುತ್ತಿದ್ದೆನು. ನಿನ್ನ ಸೇವಕನಿಂದ ಕೊಲ್ಲಲ್ಪಟ್ಟ ಸಿಂಹಕ್ಕೂ ಕರಡಿಗೂ ಆದ ಗತಿಯೇ ಜೀವ –ಸ್ವರೂಪನಾದ ದೇವರ ಸೈನ್ಯವನ್ನು ನಿಂದಿಸುವಂಥ ಈ ಸುನ್ನತಿಯಿಲ್ಲದ ಫಿಲಿಷ್ಟಿಯನಿಗೂ ಆಗಬೇಕು. ನನ್ನನ್ನು ಅಂಥ ಸಿಂಹದ ಮತ್ತು ಕರಡಿಯ ಉಗುರುಗಳಿಗೆ ತಪ್ಪಿಸಿದ ಯೆಹೋವನು ಈ ಫಿಲಿಷ್ಟಿಯನ ಕೈಗೂ ತಪ್ಪಿಸುವನು ಎನ್ನಲು ಸೌಲನು ದಾವೀದನಿಗೆ – ಹೋಗು; ಯೆಹೋವನು ನಿನ್ನ ಸಂಗಡ ಇರಲಿ ಎಂದು ಹೇಳಿ ಅವನಿಗೆ ತನ್ನ ಯುದ್ಧ ವಸ್ತ್ರಗಳನ್ನೂ ಕವಚವನ್ನೂ ತೊಡಿಸಿ ತಲೆ – –ಗೊಂದು ತಾಮ್ರದ ಶಿರಸ್ತ್ರಾಣವನ್ನಿಟ್ಟು; ದಾವೀದನು ಯುದ್ಧ ವಸ್ತ್ರದ ಮೇಲೆ ಕತ್ತಿಯನ್ನು ಬಿಗಿದುಕೊಂಡ ನಂತರ ನಡೆಯ – –ಬಹುದೋ ಎಂದು ಪರಿಕ್ಷೀಸಿದ ಮೇಲೆ ಸೌಲನಿಗೆ – ನನಗೆ ಅಭ್ಯಾಸವಿಲ್ಲದರಿಂದ ಇವುಗಳನ್ನು ಧರಿಸಿಕೊಡು ನಡೆಯಲಾರೆ ಎಂದು ಹೇಳಿ ಅವುಗಳನ್ನು ತೆಗೆದಿಟ್ಟನು." (೧ಸಮು–೧೭:೩೨–೩೯)

"ನಂತರ ದಾವೀದನು ತನ್ನ ಕೋಲನ್ನು ತೆಗೆದುಕೊಂಡು ಹೊರಟು ಹಳ್ಳದಲ್ಲಿ **ಐದು ನುಣುಪುಕಲ್ಲುಗಳನ್ನು** ಆರಿಸಿಕೊಂಡು ಅವು – –ಗಳನ್ನು ಕುರುಬರ ಪದ್ಧತಿಯಂತೆ ತನಗಿರುವ ಸೊಂಟಚೀಲದಲ್ಲಿ ಹಾಕಿ ಕೈಯಲ್ಲಿ ಕವಣೆಯನ್ನು ಹಿಡಿದು ಫಿಲಿಷ್ಟಿಯನ ಬಳಿಗೆ ಹೋದನು. ಇತ್ತ ಫಿಲಿಷ್ಟಿಯನೂ ದಾವೀದನ ಸಮೀಪಕ್ಕೆ ಬಂದನು. ಗುರಾಣಿಹೊರುವವನು ಅವನ ಮುಂದೆ ಇದ್ದನು. ಫಿಲಿಷ್ಟಿ – –ಯನು ಕೆಂಬಣ್ಣದವನೂ ಸುಂದರನೂ ಯೌವನಸ್ಥನೂ ಆದ ದಾವೀದನನ್ನು ನೋಡಿ ತಿರಸ್ಕಾರದಿಂದ ಅವನಿಗೆ – ನೀನು ಕೋಲುಹಿಡಿದು ನನ್ನ ಬಳಿಗೆ ಬರುವದೇನು? ನಾನು ನಾಯಿಯೋ ಎಂದು ಹೇಳಿ ಅವನನ್ನು ತನ್ನ ದೇವರ ಹೆಸರಿನಲ್ಲಿ ಶಪಿಸಿ – ಇಲ್ಲಿ ಬಾ: ನಿನ್ನ ಮಾಂಸವನ್ನು ಮೃಗಪಕ್ಷಿಗಳಿಗೆ ಹಂಚಿಕೊಡುತ್ತೇನೆ ಅಂದನು." (೧ಸಮು–೧೭:೪೦–೪೪)

"ಆಗ ದಾವೀದನು ಅವನಿಗೆ– ನೀನು ಈ ಈಟಿ ಕತ್ತಿ ಬರ್ಜಿಗಳೊಡನೆ ನನ್ನ ಬಳಿಗೆ ಬರುತ್ತೀ; ನಾನಾದರೋ ನೀನು ಹೀಯಾಳಿಸಿ ದಂಥ **ಸೇನಾಧೀಶ್ವರನೂ ಇಸ್ರಾಯೇಲ್ಯರ ಯುದ್ಧಭಟರ ದೇವರೂ ಆಗಿರುವ ಯೆಹೋವನ ನಾಮದೊಡನೆ ನಿನ್ನ ಬಳಿಗೆ ಬರುತ್ತೇನೆ.** ಆತನು ಈ ಹೊತ್ತು ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಡುವನು; ನಾನು ನಿನ್ನನ್ನು ಕೊಂದು ನಿನ್ನ ತಲೆಯನ್ನು ಕಡಿದುಹಾಕಿ ಫಿಲಿಷ್ಟಿಯ

ಸೈನ್ಯದ ಶವಗಳನ್ನು ಮೃಗಪಕ್ಷಿಗಳಿಗೆ ಹಂಚಿಕೊಡುವೆನು. ಇದರಿಂದ ಇಸ್ರಾಯೇಲ್ಯರೊಳಗೆ ದೇವರಿರುತ್ತಾನೆಂಬದು ಭೂಲೋಕದವರಿ–ಗೆಲ್ಲಾ ತಿಳಿದು ಬರುವದು; ಯೆಹೋವನು ಈಟಿ ಕತ್ತಿಗಳಿಲ್ಲದೆ ರಕ್ಷಿಸಬಲ್ಲನೆಂಬದು ಇಲ್ಲಿ ಕೂಡಿರುವವರಿಗೆಲ್ಲಾ ಗೊತ್ತಾಗುವದು; ಯಾಕಂದರೆ **ಯುದ್ಧಫಲವು ಯೆಹೋವನ ಕೈಯಲ್ಲಿದೆ;** ಆತನು ನಿಮ್ಮನ್ನು ನಮ್ಮ ಕೈಗೆ ಒಪ್ಪಿಸಿಕೊಡುವನು ಅಂದನು." (೧ಸಮು–೧೭:೪೫–೪೭)

"ಕೂಡಲೆ ಆ ಫಿಲಿಷ್ಟಿಯನು ಹೊರಟು ದಾವೀದನೊಡನೆ ಯುದ್ಧಮಾಡುವದಕ್ಕೆ ಸಮೀಪಿಸಿದಾಗ ದಾವೀದನು ಫಿಲಿಷ್ಟಿಯ ಸೈನ್ಯದ ಕಡೆಗೆ ಓಡಿಹೋಗಿ ಆ ಫಿಲಿಷ್ಟಿಯನನ್ನು ಸಂಧಿಸಿ ಕೈಯನ್ನು ಚೀಲದಲ್ಲಿ ಹಾಕಿ ಒಂದು ಕಲ್ಲನ್ನು ತೆಗೆದು ಅವನ ಹಣೆಗೆ ಗುರಿಯಿಟ್ಟು ಕವಣೆಯನ್ನು ಬೀಸಿ ಹೊಡೆಯಲು ಕಲ್ಲು ಅವನ ಹಣೆಯೊಳಗೆ ಹೊಕ್ಕಿತು. ಅವನು ಬೋರಲ ಬಿದ್ದನು. ಕೂಡಲೆ ಅವನು ಹೋಗಿ ಅ ಫಿಲಿಷ್ಟಿಯನ ಮೇಲೆ ನಿಂತು ಅವನ ಕತ್ತಿಯನ್ನು ಹಿರಿದು ಅದರಿಂದಲೇ ಅವನ ತಲೆಯನ್ನು ಕಡಿದು ಅವನನ್ನು ಸಾಯಿಸಿದನು. ಈ ಪ್ರಕಾರ **ದಾವೀದನು** ಕತ್ತಿಯಿಂದಲ್ಲ, ಬರೀ ಒಂದು ಕವಣೆಯ ಕಲ್ಲಿನಿಂದ ಫಿಲಿಷ್ಟಿಯನನ್ನು **ಸೋಲಿಸಿ** ಕೊಂದುಹಾಕಿದನು. ಫಿಲಿ–ಷ್ಟಿಯರು ತಮ್ಮ ರಣವೀರನು ಸತ್ತು ಹೋದದ್ದನ್ನು ಕಂಡು ಓಡಿಹೋದರು. ಇಸ್ರಾಯೇಲ್ಯರೂ ಯೆಹೂದ್ಯರೂ ಎದ್ದು ಆರ್ಭಟಿಸಿ ಫಿಲಿಷ್ಟಿಯರನ್ನು ತಗ್ಗಿನ ದಾರಿಯವರೆಗೂ ಎಕ್ರೋನಿನ ಬಾಗಲುಗಳವರೆಗೂ ಹಿಂದಟ್ಟಿದರು. ಫಿಲಿಷ್ಟಿಯರ ಹೆಣಗಳು ಶಾರಯಿಮಿ – –ನಿಂದ ಗತ್ ಎಕ್ರೋನ್ ಪಟ್ಟಣಗಳವರೆಗೂ ಬಿದ್ದಿದ್ದವು." (೧ಸಮು–೧೭:೪೮–೫೨)

ಈ ಪ್ರಕಾರ ಯೌವನಸ್ಥನಾದ ದಾವೀದನು **ಒಂದು ಕವಣೆ ಒಂದು ಕಲ್ಲು ಮತ್ತು ಜೀವಿಸುವ ದೇವರಲ್ಲಿನ ಬಲವಾದ ನಂಬಿಕೆಯಿಂದ** ತಮ್ಮ ಶತೃಗಳಿಂದ ತನ್ನ ದೇಶವನ್ನು ಹೇಗೆ ರಕ್ಷಿಸಿದನೆಂಬುದನ್ನು ಈ ದಿನ ನಾವು ನೋಡಿದೆವು. ನಿಜವಾಗಿಯೂ, ದಾವೀದ ಮತ್ತು ಗೊಲ್ಯಾತನ ಕಥೆಯು ಅನೇಕ ಪ್ರಾಮುಖ್ಯವಾದ ಪಾಠಗಳನ್ನೊಳಗೊಂಡ ಒಂದು ಆಶ್ಚರ್ಯಕರವಾದ ಕಥೆಯಾಗಿದೆ.

ಸೌಲನೂ ಮತ್ತು ಇಸ್ರಾಯೇಲ್ ಸೈನಿಕರೂ ಗೊಲ್ಯಾತನಿಗೆ ಹೇಗೆ ಬಹಳವಾಗಿ ಹೆದರಿಕೊಂಡಿದ್ದರೆಂಬುದನ್ನು ನಾವು ನೋಡಿದೆವು. ಅವರಲ್ಲಿ ಯಾರೊಬ್ಬನೂ ಅವನೊಂದಿಗೆ ಕಾದಾಡುವದಕ್ಕೆ ಧೈರ್ಯವುಳ್ಳವನಾಗಿರಲಿಲ್ಲ, ಆದರೆ ದಾವೀದನು ಆ ದೈತ್ಯನಿಗೆ ಹೆದರಲಿಲ್ಲ; ಅವನನ್ನು ನೆಲದ ಮೇಲೆ ಕೆಡವಿ ಕೊಂದುಹಾಕಿದನು! ಸೌಲನೂ ಮತ್ತು ಅವನ ಸೈನಿಕರೂ ಯಾಕೆ ಹೆದರಿಕೊಂಡರು, ಆದರೆ ದಾವೀದನು ಹೆದರಿಕೊಳ್ಳಲಿಲ್ಲ? ದಾವೀದ ಮತ್ತು ಇಸ್ರಾಯೇಲ್ ಸೈನಿಕರ ಮಧ್ಯದಲ್ಲಿದ್ದ ವ್ಯತ್ಯಾಸವೇನು? ಅವರ ನಡುವೆಯಿದ್ದ ವ್ಯತ್ಯಾಸವನ್ನು ನಾವು ಈ ರೀತಿಯಲ್ಲಿ ವಿವರಿಸಬಹುದು: ದಾವೀದನು ಆ ದೈತ್ಯನಿಗೆ ಹೆದರಲಿಲ್ಲ, ಯಾಕಂದರೆ ಅವನಿಗೆ ದೇವರಾದ ಯೆಹೋವನಲ್ಲಿ ಭರವಸೆಯಿತ್ತು. ಸೌಲನೂ ಮತ್ತು ಇಸ್ರಾಯೇಲ್ ಸೈನಿಕರೂ ದೇವರಲ್ಲಿ ಭರವಸೆಯುಳ್ಳವರಾಗಿರಲಿಲ್ಲ. ಆದಕಾರಣ, ಅವರು ಆ ದೈತ್ಯನಿಗೆ ಹೆದರಿಕೊಂಡಿದ್ದರು.

ಸೌಲನೂ ಮತ್ತು ಅವನ ಸೈನಿಕರೂ **ಶಕ್ತಿವಂತನಾದ ದೈತ್ಯನನ್ನು** ಮಾತ್ರ ನೋಡುವವರಾಗಿದ್ದರು. ಆದರೆ ದಾವೀದನು **ಸರ್ವಶಕ್ತ–ನಾದ ದೇವರನ್ನು** ನೋಡುವವನಾಗಿದ್ದನು! ಸೌಲನೂ ಮತ್ತು ಇಸ್ರಾಯೇಲ್ ಸೈನಿಕರು ಧರ್ಮದ ಒಂದು ವಿಧಾನವನ್ನು ಹೊಂದಿ–ದ್ದರು, ಆದರೆ ದೇವರೊಂದಿಗೆ ಒಂದು ನಿಜವಾದ ಸಂಬಂಧವನ್ನು ಹೊಂದುವದಕ್ಕೆ ಅದು ಅವರಿಗೆ ಕಾರಣವಾಗಲಿಲ್ಲ. ಒಂದು ಧರ್ಮಕ್ಕೆ ಒಳಪಟ್ಟಿರುವದು ದೇವರಿಗೆ ಒಳಪಟ್ಟಿರುವದಕ್ಕೆ ಕಾರಣವಾಗುವದಿಲ್ಲ. ದೇವರು ಇದ್ದಾನೆ, ಆತನು ಒಬ್ಬನೇ ದೇವರು, ಮತ್ತು ಆತನು ದೊಡ್ಡವನು ಮತ್ತು ಶಕ್ತಿವಂತನೂ ಆಗಿದ್ದಾನೆಂದು ಸೌಲನೂ ಮತ್ತು ಅವನ ಸೈನಿಕರೂ ಚೆನ್ನಾಗಿ ತಿಳಿದಿದ್ದರು. ಆದರೆ ಅವರ ಆ ತಿಳುವಳಿಕೆಯು ಗೊಲ್ಯಾತನಿಂದ ಅವರನ್ನು ಕಾಪಾಡಲಿಲ್ಲ. ಏನೇ ಆದರೂ, ದಾವೀದನು ಸರ್ವಶಕ್ತನಾದ ಜೀವಿಸುವ ದೇವರೊಂ–ದಿಗೆ ಒಂದು ಯಥಾರ್ಥವಾದ ಸಂಬಂಧವನ್ನಿಟ್ಟುಕೊಂಡಿದ್ದನು! ದಾವೀದನು ದೇವರನ್ನು ತಿಳಿದಿದ್ದನು ಮತ್ತು ಆತನೊಂದಿಗೆ ನಡೆಯುತ್ತಿದ್ದನು. ದಾವೀದನು ದೇವರ ವಾಗ್ದಾನಗಳನ್ನು ನಂಬಿದ್ದನು. ಅದಕ್ಕಾಗಿಯೇ ಅವನು ಗೊಲ್ಯಾತನಿಗೆ ಹೆದರಲಿಲ್ಲ.

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ಯಾರನ್ನು ಹೆಚ್ಚು ಇಷ್ಟಪಡುತ್ತೀರಿ? ದಾವೀದನನ್ನೋ? ಅಥವಾ ಸೌಲನೂ ಮತ್ತು ಅವನ ಸೈನಿಕರನ್ನೋ? ನೀವು ವ್ಯಯಕ್ತಿಕವಾಗಿ ದೇವರನ್ನು ತಿಳಿದುಕೊಂಡಿದ್ದೀರೋ? ಅಥವಾ ಆತನ ಕುರಿತಾಗಿ ಕೇವಲ ಕೆಲವು ಸಂಗತಿಗಳನ್ನು ಮಾತ್ರ ಕೇಳಿದ್ದೀರೋ? ನಿಮ್ಮ ಹೃದಯವು ಸಂತೋಷದಿಂದ ತುಂಬಿಕೊಳ್ಳುವ ಹಾಗೆ ತುಂಬಾ ಚೆನ್ನಾಗಿ ದೇವರ ವಾಕ್ಯವನ್ನು ನೀವು ತಿಳಿದುಕೊಂಡಿದ್ದೀರೋ? ಅಥವಾ ನೀವು ನಿಮ್ಮ ಧಾರ್ಮಿಕ ಒಪ್ಪಂದಗಳನ್ನು ಮಾತ್ರ ನೆರವೇರಿಸುವದಕ್ಕೆ ಪ್ರಯತ್ನಿ–ಸುತ್ತಿದ್ದೀರೋ? ನೀವು ಜೀವಿಸುವ ದೇವರೊಂದಿಗೆ ಒಂದು ಬಲವಾದ ಮತ್ತು ಸಂತೋಷದ ಸಂಬಂಧವನ್ನು ಹೊಂದಿದ್ದೀರೋ? ಅಥವಾ ನೀವು ಕೇವಲ ನೀರಸವಾದ ಧರ್ಮವನ್ನು ಮಾತ್ರ ಹೊಂದಿದ್ದೀರೋ?

ಪ್ರವಾದಿಯಾದ ದಾವೀದನು ದೇವರೊಂದಿಗಿನ ತನ್ನ ಸಂಬಂಧದ ಕುರಿತಾಗಿ ಕೀರ್ತನೆಗಳಲ್ಲಿ ಏನು ಬರೆದಿದ್ದಾನೆಂಬುದನ್ನು ಕೇಳಿಸಿ – –ಕೊಳ್ಳಿರಿ. ಆತನು ಹೇಳಿರುವದೇನೆಂದರೆ:
"**ಯೆಹೋವನು ನನಗೆ ಕುರುಬನು** ಕೊರತೆ ಪಡೆನು. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವ – ದರಿಂದ ಕೇಡಿಗೆ ಹೆದರೆನು. ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು. ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು." (ಕೀರ್ತನೆ–೨೩:೧, ೪, ೬)

ನಿಮ್ಮ ವಿಷಯವೇನು? ದೇವರಾದ ಕರ್ತನೊಂದಿಗೆ ಒಂದು ಆಪ್ತ ಸಂಬಂಧವನ್ನು ನೀವು ಹೊಂದಿದ್ದೀರೋ? ಆತನನ್ನು ನಿಮ್ಮ ಕುರುಬನನ್ನಾಗಿ ನೀವು ತಿಳಿದುಕೊಂಡಿದ್ದೀರೋ? ಎಂದೆಂದಿಗೂ ಪರಲೋಕದಲ್ಲಿ ಆತನ ಮನೆಯಲ್ಲಿ ನೀವು ವಾಸಿಸುತ್ತೀರೆಂಬುದು ನಿಮಗೆ ನಿಶ್ಚಿತವಿದೆಯೋ? ದಾವೀದನಿಗೆ ಆ ಭರವಸೆಯಿತ್ತು, ಯಾಕಂದರೆ ಅವನು ದೇವರಾದ ಕರ್ತನ ಅದ್ಭುತವಾದ ಮತ್ತು ಅಮೂಲ್ಯವಾದ ವಾಗ್ದಾನಗಳನ್ನು ತಿಳಿದಿದ್ದನು. ಅವನು ಅವುಗಳನ್ನು ಕೇವಲ **ತನ್ನ ತಲೆಯಲ್ಲಿ** ಮಾತ್ರ ತಿಳಿದವನಾಗಿರಲಿಲ್ಲ; ಆದರೆ ಅವನು ಅವುಗಳನ್ನು **ತನ್ನ ಹೃದಯದಲ್ಲಿ** ನಂಬಿದ್ದನು.

ದಾವೀದನಿಗೆ ಒಂದು ಯಥಾರ್ಥವಾದ ನಂಬಿಕೆಯಿತ್ತು. ಅವನ ನಂಬಿಕೆಯು ಮನುಷ್ಯನ ನಂಬಲರ್ಹವಲ್ಲದ ಮಾತುಗಳ ಮೇಲೆ ಆಧಾರಗೊಂಡಿರಲಿಲ್ಲ. ತನ್ನ ಜನರನ್ನು ಎಂದಿಗೂ ತೊರೆಯದಿರುವ ದೇವರಾದ ಕರ್ತನ ವಿಶ್ವಾಸಾರ್ಹವಾದ ಮಾತುಗಳ ಮೇಲೆ ಅವನ ನಂಬಿಕೆಯು ಆಧಾರಗೊಂಡಿತ್ತು! ದಾವೀದನು ಕೀರ್ತನೆಗಳಲ್ಲಿ ಏನು ಬರೆದಿದ್ದಾನೆಂದು ಕೇಳಿಸಿಕೊಳ್ಳಿರಿ.

**"ಯೆಹೋವನು ನನಗೆ ಬೆಳಕೂ ರಕ್ಷಕನೂ ಆಗಿದ್ದಾನೆ; ನಾನು ಯಾರಿಗೆ ಭಯಪಟ್ಟೇನು?** ಯೆಹೋವನು ನನ್ನ ಪ್ರಾಣದ ಆಧಾರವು; ನಾನು ಯಾರಿಗೆ ಹೆದರೇನು? ನನಗೆ ವಿರೋಧವಾಗಿ ದಂಡು ಬಂದಿಳಿದರೂ ನನಗೇನೂ ಭಯವಿಲ್ಲ; ಚತುರಂಗಬಲವು ಯುದ್ಧ –ಸನ್ನದ್ಧವಾಗಿ ನಿಂತರೂ ಭರವಸವುಳ್ಳವನಾಗಿಯೇ ಇರುವೆನು. ನನ್ನ ಜೀವಮಾನದಲ್ಲೆಲ್ಲಾ ಯೆಹೋವನ ಮನೆಯಲ್ಲಿ ವಾಸ ಮಾಡುತ್ತಾ ಆತನ ಪ್ರಸನ್ನತೆಯನ್ನು ನೋಡುವದಕ್ಕೂ ಆತನ ಮಂದಿರದಲ್ಲಿ ಧ್ಯಾನ ಮಾಡುವದಕ್ಕೂ ನನಗೆ ಅಪ್ಪಣೆಯಾಗಬೇಕೆಂಬ ಒಂದೇ ವರವನ್ನು ಯೆಹೋವನಿಂದ ಕೇಳಿಕೊಂಡು ಅದನ್ನೇ ಎದುರುನೋಡುತ್ತಿರುವೆನು. ಯೆಹೋವನೇ ನಿನಗೆ ಗಟ್ಟಿಯಾಗಿ ಮೊರೆ –ಯಿಡುತ್ತೇನೆ; ನನ್ನನ್ನು ಕರುಣಿಸಿ ಸದುತ್ತರವನ್ನು ದಯಪಾಲಿಸು. ನನ್ನ ಸಾನಿಧ್ಯಕ್ಕೆ ಬಾ ನಿನ್ನ ಮಾತಿಗೆ ನಾನು – **ಯೆಹೋವನೇ ನಿನ್ನ ಸಾನಿಧ್ಯಕ್ಕೆ ಬರಲೇ ಬರುವೆನು** ಎಂದು ಉತ್ತರ ಕೊಟ್ಟೆನು." (ಕೀರ್ತನೆ–೨೭:೧, ೩, ೪, ೭, ೮)

**"ನನ್ನ ಬಲವಾಗಿರುವ ಯೆಹೋವನೇ ನಿನ್ನಲ್ಲಿಯೇ ಮಮತೆಯಿಡುತ್ತೇನೆ.** ಯೆಹೋವನು ನನ್ನ ಬಂಡೆಯೂ, ನನ್ನ ಕೋಟೆಯೂ ನನ್ನ ವಿಮೋಚಕನೂ ನನ್ನ ದೇವರೂ ನನ್ನ ಆಶ್ರಯಗಿರಿಯೂ ನನ್ನ ಗುರಾಣಿಯೂ ನನ್ನ ರಕ್ಷಣೆಯ ಕೊಂಬೂ ನನ್ನ ದುರ್ಗವೂ ಆಗಿ – –ದ್ದಾನೆ. ನಿನ್ನ ಬಲದಿಂದ ದಂಡಿನ ಮೇಲೆ ಬೀಳುವೆನು; ನನ್ನ ದೇವರ ಸಹಾಯದಿಂದ ಪ್ರಾಕಾರವನ್ನು ಹಾರುವೆನು. **ದೇವರ ಮಾರ್ಗವು ಯಾವ ದೋಷವಿಲ್ಲದ್ದು; ಯೆಹೋವನ ವಚನವು ಶುದ್ಧವಾದದ್ದು. ಆತನು ಆಶ್ರಿತರೆಲ್ಲರಿಗೆ ಗುರಾಣಿಯಾಗಿದ್ದಾನೆ."** (ಕೀರ್ತನೆ–೧೮:೧, ೨, ೨೯, ೩೦)

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ನಮ್ಮ ಮುಂದಿನ ಪಾಠದಲ್ಲಿ, ದೇವರ ಚಿತ್ತವಾದರೆ, ಪ್ರವಾದಿಯಾದ ದಾವೀದನ ಕಥೆ – –ಯನ್ನು ಮುಂದುವರಿಸೋಣ ಮತ್ತು ಅವನು ಹೇಗೆ ಇಸ್ರಾಯೇಲಿನ ಅರಸನಾಗಿ ಆಳ್ವಿಕೆ ನಡೆಸಿದನೆಂಬುದನ್ನು ನೋಡಿಕೊಳ್ಳೋಣ. ದೇವರು ನಿಮ್ಮನ್ನು ಆಶೀರ್ವದಿಸಲಿ. ಕೀರ್ತನೆಗಳಲ್ಲಿರುವ ದಾವೀದನ ಮಾತುಗಳೊಂದಿಗೆ ನಾವು ನಿಮಗೆ ವಿದಾಯ ಹೇಳುತ್ತಿದ್ದೇವೆ:

**"ಯೆಹೋವನು ಸರ್ವೋತ್ತಮನೆಂದು ಅನುಭವದಿಂದ ತಿಳಿದುಕೊಳ್ಳಿರಿ; ಆತನನ್ನು ಆಶ್ರಯಿಸಿಕೊಂಡವರು ಎಷ್ಟೋ ಧನ್ಯರು!"** (ಕೀರ್ತನೆ–೩೪:೮)

ಪಾಠ ೪೮

# ಅರಸನಾದ ದಾವೀದ ಮತ್ತು ದೇವರ ವಾಗ್ದಾನ

೧ಸಮುವೇಲ ೧೮ ೨ಸಮುವೇಲ ೭

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಈ ದಿನ ನಾವು **ಪ್ರವಾದಿಯಾದ ದಾವೀದನ** ಕಥೆಯನ್ನು ಮುಂದುವರಿಸುತ್ತಿದ್ದೇವೆ. ಎರಡು ಪಾಠಗಳ ಹಿಂದೆ, ದೇವರು ಅವನನ್ನು ನೇಮಕಮಾಡಿದ ದಿನದಂದು ಅವನು ಆಳ್ವಿಕೆಯನ್ನು ಪ್ರಾರಂಭಿಸುವದಕ್ಕೆ ಆಗದಿದ್ದಾಗ್ಯೂ ದೇವರು ಯೌವನಸ್ಥನಾದ ದಾವೀದನನ್ನು ಹೇಗೆ ಇಸ್ರಾಯೇಲ್ಯರ ಎರಡನೆಯ ಅರಸನನ್ನಾಗಿ ಆರಿಸಿಕೊಂಡನು ಎಂಬುದನ್ನು ನಾವು ನೋಡಿಕೊಂಡೆವು. ದೇವರು ಮೊದಲ – –ನೆಯ ಅರಸನಾದ ಸೌಲನನ್ನು ತಿರಸ್ಕರಿಸಿದನು, ಯಾಕಂದರೆ ಅವನು ದೇವರ ಚಿತ್ತದ ಕುರಿತು ಆಸಕ್ತಿಯಿಲ್ಲದವನಾಗಿದ್ದನು. ಏನೇ ಆದರೂ, ದೇವರು ದಾವೀದನ ಕುರಿತಾಗಿ, **"**ಇಷಯನ ಮಗನಾದ ದಾವೀದನು ನನಗೆ ಸಿಕ್ಕಿದನು, ಅವನು ನನಗೆ ಒಪ್ಪುವ ಮನು –ಷ್ಯನು, ಅವನು ನನ್ನ ಇಷ್ಟವನ್ನೆಲ್ಲಾ ನೆರವೇರಿಸುವವನು.**"** (ಅಪೊ.ಕೃತ್ಯ–೧೩:೨೨) ಎಂದು ಹೇಳಿದನು. ನಮ್ಮ ಹಿಂದಿನ ಪಾಠದಲ್ಲಿ, **ಜೀವಿಸುವ ದೇವರಲ್ಲಿನ ಬಲವಾದ ನಂಬಿಕೆ,** ಒಂದು ಕವಣೆ ಮತ್ತು ಒಂದು ಕಲ್ಲಿನಿಂದ ದಾವೀದನು ದೈತ್ಯನಾದ ಗೊಲ್ಯಾತನನ್ನು ಸೋಲಿಸಿ ಕೊಂದುಹಾಕಿದ್ದನ್ನು ನಾವು ನೊಡಿಕೊಂಡೆವು. ಈಗ ನಾವು ದಾವೀದನ ಕಥೆಯನ್ನು ಮುಂದುವರಿಸೋಣ ಮತ್ತು ದಾವೀ –ದನು ಸೌಲನಿಗೆ ಬದಲಾಗಿ ಇಸ್ರಾಯೇಲ್ಯರ ಅರಸನಾಗಿ ಹೇಗೆ ನೇಮಕಗೊಂಡನೆಂಬುದನ್ನು ನೋಡೋಣ.

ಮೊದಲನೆಯ ಸಮುವೇಲನ ಪುಸ್ತಕವನ್ನು ಮುಂದುವರಿಸೋಣ, ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**"**ದಾವೀದನು ಫಿಲಿಷ್ಟಿಯನನ್ನು ಸಂಹರಿಸಿ ಸರ್ವಜನರೊಡನೆ ಹಿಂದಿರುಗಿ ಬರುವಾಗ ಇಸ್ರಾಯೇಲ್ಯರ ಎಲ್ಲಾ ಪಟ್ಟಣಗಳಿಂದ ಸ್ತ್ರೀ – –ಯರು ಹೊರಗೆ ಬಂದು ದಮ್ಮಡಿತಾಳಗಳನ್ನು ಹಿಡಿದು ಸಂತೋಷದಿಂದ ಹಾಡುತ್ತಾ ಕುಣಿಯುತ್ತಾ ಅರಸನಾದ ಸೌಲನನ್ನು ಎದುರುಗೊಂಡರು. ಅವರು ಪರಸ್ಪರವಾಗಿ – ಸೌಲನು **ಸಾವಿರಗಟ್ಟಳೆಯಾಗಿ** ಕೊಂದನು; ದಾವೀದನು **ಹತ್ತುಸಾವಿರಗಟ್ಟಳೆಯಾಗಿ** ಕೊಂದನು ಎಂದು ಹಾಡಿದರು. ಈ ಮಾತುಗಳ ದೆಸೆಯಿಂದ ಸೌಲನಿಗೆ ಬಹುವ್ಯಸನವೂ ಕೋಪವೂ ಉಂಟಾಗಿ ಅವನು– ದಾವೀ –ದನು ಹತ್ತು ಸಾವಿರಗಟ್ಟಳೆಯಾಗಿ ಕೊಂದನೆಂದೂ ನಾನು ಸಾವಿರ ಗಟ್ಟಳೆಯಾಗಿ ಕೊಂದೆನೆಂದೂ ಹಾಡುತ್ತಾರಲ್ಲಾ! ರಾಜತ್ವದ ಹೊರತು ಅವನಿಗೆ ಇನ್ನೇನು ಕಡಿಮೆಯಾದ ಹಾಗಾಯಿತು ಅಂದುಕೊಂಡು ಅಂದಿನಿಂದ ಅವನ ಮೇಲೆ ಕಣ್ಣಿಟ್ಟನು.**"** (೧ಸಮು– ೧೮:೬–೯)

ಹೀಗೆ ಇಸ್ರಾಯೇಲ್ಯರು ದಾವೀದನನ್ನು ಎಷ್ಟೊಂದು ಅಕ್ಕರೆಯಿಂದ ಪ್ರೀತಿಸುತ್ತಿದ್ದರೆಂಬುದನ್ನು ವಾಕ್ಯವು ಹೇಳುತ್ತದೆ. ಆದರೆ ಅವರು ದಾವೀದನನ್ನು ಹೆಚ್ಚಾಗಿ ಪ್ರೀತಿಸುತ್ತಿರುವಲ್ಲಿ, ಸೌಲನು ಅವನನ್ನು ಹೆಚ್ಚಾಗಿ ದ್ವೇಷಿಸಿದನು. **ಮತ್ಸರವು ಸೌಲನ ಹೃದಯವನ್ನು** ತುಂಬಿ – ಕೊಂಡಿತ್ತು ಮತ್ತು ಅವನನ್ನು ನಿಯಂತ್ರಿಸುತ್ತಿತ್ತು ಆದ್ದರಿಂದ ದಾವೀದನನ್ನು ದೂರಮಾಡುವದಕ್ಕೆ ತಾನು ಏನಾದರೂ ಮಾಡಲೇ – –ಬೇಕೆಂದು ಅವನು ಯಾವಾಗಲೂ ಯೋಚಿಸುತ್ತಿದ್ದನು. ಇದರ ಪರಿಣಾಮವಾಗಿ, ದಾವೀದನು ಓಡಿಹೋಗಿ ಅರಣ್ಯದಲ್ಲಿ ಬಚ್ಚಿಟ್ಟು ಕೊಂಡನು ಅವನ ಜೊತೆಯಲ್ಲಿ ನಾನೂರು ಜನ ಇಸ್ರಾಯೇಲ್ಯರು ಇದ್ದರು. ಸೌಲನೂ ಮತ್ತು ಅವನ ಸೈನಿಕರೂ ಅರಣ್ಯದಲ್ಲಿದ್ದ ದಾವೀದನನ್ನು ಅವನ ಜೊತೆಯವರನ್ನೂ ಹುಡುಕುತ್ತಿದ್ದರು. ದಾವೀದನನ್ನು ಹಿಡಿದು ಅವನನ್ನು ಕೊಂದುಹಾಕುವದಕ್ಕೆ ಸೌಲನು ತನ್ನ ಅಧಿಕಾರದಲ್ಲಿ ಪ್ರತಿಯೊಂದು ಪ್ರಯತ್ನವನ್ನೂ ಮಾಡಿದನು. ಏನೇ ಆದರೂ, ಅವನಿಗೆ ಹಾಗೆ ಮಾಡುವದಕ್ಕೆ ಆಗಲಿಲ್ಲ, ಯಾಕಂ –ದರೆ ಕರ್ತನು ದಾವೀದನೊಂದಿಗಿದ್ದನು. ಆದರೆ ಸೌಲನು ದಾವೀದನ ಅನೇಕ ತೊಂದರೆಗಳಿಗೆ ಕಾರಣನಾದನು. ದಾವೀದನೂ ಮತ್ತು ಅವನ ಜೊತೆಯವರೂ ಕೋಪಿಷ್ಠ ಅರಸನಾದ ಸೌಲನಿಂದ ದೂರಹೋಗಿ ಎಂಟು ದೀರ್ಘ ವರ್ಷಗಳಾಗಿತ್ತು.

ಏನೇ ಆದರೂ, ದಾವೀದನ ಕಡೆಗೆ ಸೌಲನಿಗಿದ್ದ ಹೊಟ್ಟೇಕಿಚ್ಚು ಮತ್ತು ಕೋಪವು ದಾವೀದನು ಸೌಲನನ್ನು ದ್ವೇಷಿಸುವದಕ್ಕೆ ಕಾರಣ – –ವಾಗಿರಲಿಲ್ಲ. ತನ್ನನ್ನು ಕೊಲ್ಲುವದಕ್ಕೆ ಪ್ರಯತ್ನಿಸುತ್ತಿದ್ದ ವ್ಯಕ್ತಿಯಾಗಿದ್ದ ಸೌಲನನ್ನು ದಾವೀದನು ಯಾಕೆ ದ್ವೇಷಿಸಲಿಲ್ಲ? **ದಾವೀದನು ಸೌಲನನ್ನು ದ್ವೇಷಿಸುವದಕ್ಕೆ ಆಗಲಿಲ್ಲ ಯಾಕೆಂದರೆ ನೀತಿವಂತರ ಮೇಲೂ ಮತ್ತು ಅನೀತವಂತರ ಮೇಲೂ ತನ್ನ ಸೂರ್ಯನು**

**ಉದಯಿಸುವದಕ್ಕೆ ಕಾರಣನಾಗಿರುವ ದೇವರೊಂದಿಗೆ ದಾವೀದನು ನಡೆದಾಡುತ್ತಿದ್ದನು.** ವಾಕ್ಯವು ಹೇಳುವ ಹಾಗೆ:

"ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯು ದೇವರಿಂದಾಗಿದೆ, ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವ – –ರಿಂದ ಹುಟ್ಟಿದವನೂ ದೇವರನ್ನು ಬಲ್ಲವನು ಆಗಿದ್ದಾನೆ. ಪ್ರೀತಿಯಿಲ್ಲದವನು ದೇವರನ್ನು ಬಲ್ಲವನಲ್ಲ; ಯಾಕೆಂದರೆ ದೇವರು ಪ್ರೀತಿಸ್ವರೂಪಿಯು. ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ. ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇ –ನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು." (೧ಯೋಹಾನ–೪:೭, ೮, ೧೯,೨೦)

ಸೌಲನ ಮತ್ತು ದಾವೀದನ ಮಧ್ಯೆ ಸಂಭವಿಸಿದ ಎಲ್ಲವನ್ನೂ ಓದುವದಕ್ಕೆ ನಮಗೆ ಸಮಯವಿಲ್ಲ, ಆದರೆ ಒಂದು ಕಥೆಯನ್ನು ನೋಡಿಕೊಂಡು **ದಾವೀದನ ನಮ್ರತೆ ಮತ್ತು ಪ್ರೀತಿಯನ್ನು** ಗಮನಿಸುವದಕ್ಕೆ ಬಯಸುತ್ತೇವೆ. ಮೊದಲನೆಯ ಸಮುವೇಲನ ಪುಸ್ತಕದ ಇಪ್ಪತ್ನಾಲ್ಕನೆಯ ಅಧ್ಯಾಯದಲ್ಲಿರುವದನ್ನು ಓದಿಕೊಳ್ಳೋಣ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"**ಸೌಲನು** ಫಿಲಿಷ್ಟಿಯರನ್ನು ಓಡಿಸಿ ಹಿಂದಿರುಗಿದಾಗ ದಾವೀದನು ಏಂಗೆದಿಯ ಅರಣ್ಯದಲ್ಲಿದ್ದಾನೆಂದು ಅವನಿಗೆ ತಿಳಿದುಬಂದಿತು. ಆಗ ಅವನು ಎಲ್ಲಾ ಇಸ್ರಾಯೇಲ್ಯರಲ್ಲಿ ಶ್ರೇಷ್ಠರಾದ ಮೂರು ಸಾವಿರ ಮಂದಿ ಸೈನಿಕರನ್ನು ಆರಿಸಿಕೊಂಡು ಕಾಡು ಗುರಿಬಂಡೆಗಳಲ್ಲಿದ್ದ **ದಾವೀದನನ್ನೂ ಅವನ ಜನರನ್ನೂ ಹುಡುಕುವದಕ್ಕೋಸ್ಕರ** ಹೊರಟನು. ಅವನು ಮಾರ್ಗದಲ್ಲಿ ಕುರಿಹಟ್ಟಿಗಳ ಬಳಿಯಲ್ಲಿ ಒಂದು ಗವಿಯನ್ನು ಕಂಡು ಶೌಚಕ್ಕೋಸ್ಕರ ಅದರೊಳಗೆ ಪ್ರವೇಶಿಸಿದನು. ದಾವೀದನೂ ಅವನ ಜನರೂ ಅದೇ ಗವಿಯ ಹಿಂಗಡೆಯಲ್ಲಿ ಅಡಗಿಕೊಂಡಿದ್ದರು." (೧ಸಮು–೨೪:೧–೩)

"ಜನರು ದಾವೀದನಿಗೆ – ನಿನ್ನ ಶತ್ರುವನ್ನು ನಿನ್ನ ಕೈಗೆ ಒಪ್ಪಿಸಿಕೊಡುವೆನು; ಆಗ ನೀನು ಅವನನ್ನು ಮನಸ್ಸಿಗೆ ಬಂದಂತೆ ನಡಿಸ – –ಬಹುದು ಎಂದು ಯೆಹೋವನು ನಿನಗೆ ಹೇಳಿದ ಮಾತು ನೆರವೇರುವ ದಿವಸ ಇದೇ ಅಂದಾಗ ಅವನೆದ್ದು ಮೆಲ್ಲಗೆ ಹೋಗಿ **ಸೌಲನ ನಿಲುವಂಗಿಯ ಮೂಲೆಯನ್ನು ಕತ್ತರಿಸಿಕೊಂಡನು.** ಅನಂತರದಲ್ಲಿ, ಸೌಲನ ನಿಲುವಂಗಿಯ ಮೂಲೆಯನ್ನು ಕತ್ತರಿಸಿದ್ದಕ್ಕಾಗಿ ಅವನ ಮನಸ್ಸಾಕ್ಷಿಯು ಅವನನ್ನು ಹಂಗಿಸತೊಡಗಿತು. ಅವನು ತನ್ನ ಜನರಿಗೆ – ಅವನು ಯೆಹೋವನಿಂದ ಅಭಿಷೇಕಿಸಲ್ಪಟ್ಟವನೂ ನನ್ನ ಒಡೆಯನೂ ಆಗಿದ್ದಾನೆ; ನಾನು ನಿಮ್ಮ ಮಾತು ಕೇಳಿ ಯೆಹೋವನ ಅಭಿಷಿಕ್ತನಿಗೆ ವಿರೋಧವಾಗಿ ಕೈಯೆತ್ತದಂತೆ ಯೆಹೋ – –ವನೇ ನನಗೆ ಅಡ್ಡಿಮಾಡಲಿ ಎಂದು ಹೇಳಿದನು. ಈ ಮಾತುಗಳಿಂದ ಸೌಲನಿಗೆ ವಿರೋಧವಾಗಿ ಏಳದಂತೆ ತನ್ನ ಜನರನ್ನು ತಡೆ –ದನು. ಸೌಲನು ಗವಿಯಿಂದ ಹೊರಗೆ ಬಂದು ಸ್ವಲ್ಪ ಮುಂದೆ ಹೋದನು." (೧ಸಮು–೨೪:೪–೭)

"ದಾವೀದನೂ ಗವಿಯಿಂದ ಹೊರಗೆ ಬಂದು – ಅರಸನೇ, ನನ್ನ ಒಡೆಯನೇ ಎಂದು ಅವನನ್ನು ಕೂಗಿದನು. ಸೌಲನು ಹಿಂದಿರುಗಿ ನೋಡಲು ಅವನಿಗೆ ಸಾಷ್ಟಾಂಗ ನಮಸ್ಕಾರ ಮಾಡಿ–ದಾವೀದನು ನಿನಗೆ ಕೇಡು ಮಾಡಬೇಕೆಂದಿರುತ್ತಾನೆಂದು ಹೇಳುವವರ ಮಾತಿಗೆ ನೀನೇಕೆ ಕಿವಿಗೊಡುತ್ತೀ? ಈ ಹೊತ್ತು ಯೆಹೋವನು ಗವಿಯಲ್ಲಿ ನಿನ್ನನ್ನು ನನ್ನ ಕೈಗೆ ಒಪ್ಪಿಸಿಕೊಟ್ಟಿದ್ದನೆಂಬುದು ಈಗ ನಿನಗೆ ಗೊತ್ತಾಯಿತಲ್ಲವೋ? ನಿನ್ನನ್ನು ಕೊಂದುಬಿಡಬೇಕೆಂದು ಕೆಲವರು ನನಗೆ ಹೇಳಿದರು; ಆದರೆ ನಾನು ಅವರಿಗೆ – ಯೆಹೋವನ ಅಭಿ –ಷಿಕ್ತನಾದ ನನ್ನ ಒಡೆಯನ ಮೇಲೆ ಕೈಹಾಕವದಿಲ್ಲ ಎಂದು ಹೇಳಿ ನಿನ್ನನ್ನು ಉಳಿಸಿದೆನು. ನನ್ನ ತಂದೆಯೇ, ಇಗೋ ನೋಡು, ನನ್ನ ಕೈಯಲ್ಲಿ ನಿನ್ನ ನಿಲುವಂಗಿಯ ತುಂಡು ಇದೆ; ನಾನು ನಿನ್ನನ್ನು ಕೊಲ್ಲದೆ ನಿನ್ನ ನಿಲುವಂಗಿಯ ಮೂಲೆಯನ್ನು ಕತ್ತರಿಸಿಕೊಂಡೆ –ನಷ್ಟೆ. ಇದರಿಂದ ನನ್ನಲ್ಲಿ ಯಾವ ದೋಷವೂ ಅಪರಾಧವೂ ಇರುವದಿಲ್ಲ. ನಾನು ನಿನಗೆ ವಿರೋಧವಾಗಿ ದ್ರೋಹಮಾಡಲಿಲ್ಲ ಎಂದು ತಿಳಿದುಕೋ. ಆದರೂ ನೀನು ನನ್ನ ಪ್ರಾಣಕ್ಕೆ ಹೊಂಚುಹಾಕುತ್ತಿರುವಿಯಲ್ಲಾ. ಯೆಹೋವನೇ ನಮ್ಮ ಉಭಯತರ ವ್ಯಾಜ್ಯ –ವನ್ನು ತೀರಿಸಲಿ; ಆತನೇ ನನಗೋಸ್ಕರ ನಿನಗೆ ಮುಯ್ಯಿ ಸಲ್ಲಿಸಲಿ; ನಾನಂತೂ ನಿನಗೆ ವಿರೋಧವಾಗಿ ಕೈಯೆತ್ತುವದಿಲ್ಲ. ಕೆಟ್ಟವ – –ರಿಂದಲೇ ಕೇಡು ಎಂಬದಾಗಿ ಹಿರಿಯರ ಗಾದೆಯುಂಟಷ್ಟೆ; ನಾನು ನಿನಗೆ ವಿರೋಧವಾಗಿ ಕೈಯೆತ್ತುವದಿಲ್ಲ." (೨೪:೮–೧೩)

"ದಾವೀದನ ಮಾತುಗಳು ಮುಗಿದ ನಂತರ ಸೌಲನು – ದಾವೀದನೇ, ನನ್ನ ಮಗನೇ, ಇದು ನಿನ್ನ ಸ್ವರವೋ ಅಂದು ಗಟ್ಟಿಯಾಗಿ ಅತ್ತನು. ಇದಲ್ಲದೆ ಅವನು ದಾವೀದನಿಗೆ – ನೀನು ನನಗಿಂತ ನೀತಿವಂತನು; ನಾನು ನಿನಗೆ ಕೇಡುಮಾಡಿದರೂ ನೀನು ನನಗೆ ಒಳ್ಳೇದನ್ನೇ ಮಾಡಿದಿ. ಯೆಹೋವನು ನನ್ನನ್ನು ನಿನ್ನ ಕೈಗೆ ಒಪ್ಪಿಸಿಕೊಟ್ಟರೂ ನೀನು ನನ್ನನ್ನು ಕೊಲ್ಲಲಿಲ್ಲ; ಇದರಿಂದ ನೀನು ನನಗೆ ಹಿತವನ್ನೇ ಮಾಡುವಂಥವನೆಂಬದು ಈ ಹೊತ್ತು ಪ್ರಕಟವಾಯಿತು. ಯಾವನಾದರೂ ತನ್ನ ಕೈಗೆ ಸಿಕ್ಕಿದ ವೈರಿಯನ್ನು ಸುಕ್ಷೇಮದಿಂದ ಕಳುಹಿಸಿಬಿಡುವನೋ? ನೀನು ಈ ಹೊತ್ತು ನನಗೆ ಉಪಕಾರ ಮಾಡಿದ್ದಕ್ಕಾಗಿ ಯೆಹೋವನು ನಿನಗೆ ಉಪಕಾರ ಮಾಡಲಿ, ಕೇಳು ನೀನು ಹೇಗೂ ಅರಸನಾಗುವಿಯೆಂದೂ ಇಸ್ರಾಯೇಲ್ ರಾಜ್ಯವು ನಿನ್ನಲ್ಲಿ ಸ್ಥಿರವಾಗುವದೆಂದೂ ಬಲ್ಲೆನು." ಅಂದನು.
(೨೪: ೧೬–೨೦)

ಇದಾದ ನಂತರ, ಸೌಲನು ಮನೆಗೆ ಹಿಂದಿರುಗಿದನು, ಆದರೆ ಮೊದಲು ದೀರ್ಘವಾಗಿ ಅವನ ಹೃದಯವನ್ನು ಹಿಡಿದುಕೊಂಡಿದ್ದ ಮತ್ಸರವು ಮತ್ತೆ ಅರಣ್ಯಕ್ಕೆ ಹಿಂದಿರುಗಿ ಹೋಗಿ ದಾವೀದನನ್ನು ಬೇಟೆಯಾಡುವದಕ್ಕೆ ಪ್ರಯತ್ನಿಸುವಂತೆ ಅವನನ್ನು ಒತ್ತಾಯಪಡಿಸಿತು.

ಸೌಲನು ತನ್ನಲ್ಲಿರುವ **ಹೊಟ್ಟೇಕಿಚ್ಚಿನ** ನಿಮಿತ್ತವಾಗಿ ಎಂಟು ವರ್ಷಗಳವರೆಗೆ ಹೀಗೆಯೇ ಮಾಡಿದನು! ಆದಾಗ್ಯೂ, ಪ್ರತಿಸಲವೂ,
ದೇವರು ಸೌಲನ ಕೈಯಿಂದ ದಾವೀದನನ್ನು ರಕ್ಷಿಸಿದನು. ಕೊನೆಯಲ್ಲಿ, ಸೌಲನು ತಾನು ಬಿತ್ತಿದ್ದನ್ನು ಕೊಯ್ದನು. ಮೂವತ್ತೊಂದನೆಯ
ಅಧ್ಯಾಯದಲ್ಲಿ ಬರೆದಿರುವದನ್ನು ಕೇಳಿಸಿಕೊಳ್ಳಿರಿ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

"ಫಿಲಿಷ್ಟಿಯರು ಇಸ್ರಾಯೇಲ್ಯರೊಡನೆ ಯುದ್ಧಮಾಡಿದರು. ಇಸ್ರಾಯೇಲ್ಯರು ಅವರಿಂದ ಅಪಜಯಹೊಂದಿ ಗಿಲ್ಬೋವಬೆಟ್ಟದಲ್ಲಿ ಹತ
–ರಾದರು. ಫಿಲಿಷ್ಟಿಯರು ಸೌಲನನ್ನೂ ಅವನ ಮಕ್ಕಳನ್ನೂ ಬಿಡದೆ ಹಿಂದಟ್ಟಿ ಅವನ ಮಕ್ಕಳಾದ ಯೋನಾತಾನನನ್ನೂ ಅಬೀನಾದಾ
–ಬನನ್ನೂ ಮಲ್ಕೀಷೂವನನ್ನೂ ಕೊಂದರು. ಸೌಲನಿದ್ದ ಕಡೆಯಲ್ಲಿ ಯುದ್ಧವು ಬಹುಘೋರವಾಗಿತ್ತು. ಬಿಲ್ಲುಗಾರರು ಅವನಿಗೆ ಗುರಿ
–ಯಿಟ್ಟರು. ಆದದರಿಂದ ಸೌಲನು ಬಹುಭೀತನಾಗಿ ತನ್ನ ಆಯುಧವಾಹಕನಿಗೆ – ನಿನ್ನ ಕತ್ತಿಯನ್ನು ಹಿರಿದು ನನ್ನನ್ನು ತಿವಿದು
ಕೊಲ್ಲು; ಇಲ್ಲವಾದರೆ ಸುನ್ನತಿಯಿಲ್ಲದ ಈ ಜನರು ಬಂದು ನನ್ನನ್ನು ತಿವಿದು ಅಪಕೀರ್ತಿಯನ್ನುಂಟುಮಾಡಾರು ಎಂದು ಹೇಳಲು
ಅವನು ಹೆದರಿ ಒಲ್ಲೆನು ಅಂದನು. ಆದದರಿಂದ **ಸೌಲನು ತಾನೇ ಕತ್ತಿಯನ್ನು ಹಿರಿದು ಅದರ ಮೇಲೆ ಬಿದ್ದನು."** (೧ಸಮು–೩೧:೧–
೪)

ಆ ದಿನದಲ್ಲಿ ಸೌಲನೂ ಅವನ ಮೂರು ಜನ ಗಂಡುಮಕ್ಕಳೂ ಸತ್ತರು. ಈ ಪ್ರಕಾರ ದೇವರು ಹೇಳಿದಂತೆಯೇ ಸೌಲನ ಸಂತಾನ –
–ದವರು ಸಂಪೂರ್ಣವಾಗಿ ನಿರ್ನಾಮಮಾಡಲ್ಪಟ್ಟರು, ಮುಂದುವರಿದ ಅಧ್ಯಾಯಗಳಲ್ಲಿ, **ದೇವರು ಇಸ್ರಾಯೇಲ್ ರಾಜ್ಯವನ್ನು ದಾವೀ
–ದನ ಕಡೆಗೆ ಹೇಗೆ ತಿರುಗಿಸಿದನೆಂಬುದನ್ನು** ವಾಕ್ಯಗಳು ತಿಳಿಸುತ್ತವೆ. ದಾವೀದನು ನೀತಿಯನ್ನು ಪ್ರೀತಿಸಿ ಅನ್ಯಾಯವನ್ನು ದ್ವೇಷಿಸುತ್ತಿದ್ದ
ಕೇವಲ ಒಬ್ಬ ಅರಸನಾಗಿದ್ದ. ದಾವೀದನು ತನ್ನ ಹೃದಯಪೂರ್ವಕವಾಗಿ ದೇವರಾದ ಕರ್ತನನ್ನು ಪ್ರೀತಿಸುತ್ತಿದ್ದನು. ದೇವರ ವಾಕ್ಯ
ಮತ್ತು ದೇವರ ಮಹಿಮೆ ಇವೆರಡೂ ದಾವೀದನ ಆಲೋಚನೆಗಳಲ್ಲಿ ಮೊದಲ ಸ್ಥಾನವನ್ನು ಆಕ್ರಮಿಸಿಕೊಂಡಿದ್ದವು. ಆದುದರಿಂದ,
ದಾವೀದನು ಇಸ್ರಾಯೇಲಿನ ಮೇಲೆ ಆಳ್ವಿಕೆಯನ್ನು ಪ್ರಾರಂಭಿಸಿದಾಗ, ಅವನು ಮಾಡುವದಕ್ಕೆ ಇಷ್ಟಪಟ್ಟಂತಹ ಮೊದಲ ಕೆಲಸವೆಂದರೆ
ಅದು ದೇವದರ್ಶನದ ಗುಡಾರವನ್ನೂ ಮತ್ತು ಒಡಂಬಡಿಕೆಯ ಮಂಜೂಷವನ್ನೂ ಯೆರೂಸಲೇಮಿಗೆ ತರುವಂಥದ್ದು. ಯೆರೂಸ –
–ಲೇಮು ಇಸ್ರಾಯೇಲಿನ ಮುಖ್ಯಪಟ್ಟಣವಾಯಿತು, ಅದಕ್ಕಾಗಿಯೇ ದಾವೀದನು ದೇವದರ್ಶನದ ಗುಡಾರವನ್ನೂ ಮತ್ತು ಯಜ್ಞವೇದಿ
–ಯನ್ನೂ ಅಲ್ಲಿಯೇ ಸ್ಥಾಪಿಸುವದಕ್ಕೆ ಬಯಸಿದನು.

ಆರಾಧನೆಯ ಗುಡಾರವನ್ನು ದಾವೀದನು ಯೆರೂಸಲೇಮಿಗೆ ತಂದ ನಂತರ, ಕರ್ತನ ಹೆಸರನ್ನು ಗೌರವಿಸುವದಕ್ಕಾಗಿ ಒಂದು
ಸುಂದರವಾದ ದೇವಾಲಯವನ್ನು ಕಟ್ಟುವದಕ್ಕೆ ಅವನು ಹೇಗೆ ಯೋಜನೆ ಮಾಡಿಕೊಂಡನೆಂಬುದನ್ನು ವಾಕ್ಯವು ನಮಗೆ ತಿಳಿಸುತ್ತದೆ.
ಒಡಂಬಡಿಕೆಯ ಮಂಜೂಷವು ಇಡಲ್ಪಡುವದಕ್ಕೂ ಮತ್ತು ಪಾಪಿಗಳು ತಮ್ಮ ಪಾಪವನ್ನು ಮರೆಮಾಡಿಕೊಳ್ಳುವದಕ್ಕೆ ದೇವರಿಗೆ ಯಜ್ಞ
–ಗಳನ್ನು ಸಮರ್ಪಿಸುವದಕ್ಕೂ ಒಂದು ದೇವಾಲಯವನ್ನು ಕಟ್ಟುವದಕ್ಕೆ ದಾವೀದನು ಇಷ್ಟಪಟ್ಟನು. ಹೀಗಿದ್ದರೂ, ದೇವರಿಗಾಗಿ
ದಾವೀದನು ಮನೆಯನ್ನು ಕಟ್ಟುವದಿಲ್ಲ ಆದರೆ ದೇವರು ಅವನಿಗಾಗಿ ಮುಂದಿನ ಪೀಳಿಗೆಗೆ ಎಂದೆಂದಿಗೂ ಇರುವಂತಹ ಒಂದು
ಮನೆಯನ್ನು ಕಟ್ಟುತ್ತಾನೆಂದು ಕರ್ತನು ದಾವೀದನಿಗೆ ಹೇಳಿದ್ದನು! ದೇವರು ದಾವೀದನೊಂದಿಗೆ ಮಾಡಿಕೊಂಡ ಒಡಂಬಡಿಕೆಯನ್ನು
ಕೇಳಿಸಿಕೊಳ್ಳಿರಿ. ಆತನು ಅವನಿಗೆ ಹೇಳಿದ್ದೇನೆಂದರೆ;

"ನಿನ್ನ ಆಯುಷ್ಕಾಲವು ಮುಗಿದು ನೀನು ಪಿತೃಗಳ ಬಳಿಗೆ ಸೇರಿದ ಮೇಲೆ ನಿನ್ನಿಂದ ಹುಟ್ಟುವವನನ್ನು ನೆಲೆಗೊಳಿಸಿ ಅವನ ರಾಜ್ಯ –
–ವನ್ನು ಸ್ಥಿರಪಡಿಸುವೆನು. ಅವನು ನನ್ನ ಹೆಸರಿಗಾಗಿ ಒಂದು ಮನೆಯನ್ನು ಕಟ್ಟುವನು; ನಾನು ಅವನ ರಾಜ್ಯಸಿಂಹಾಸನವನ್ನು
ನಿರಂತರವಾಗಿ ಸ್ಥಿರಪಡಿಸುವೆನು. ನಾನು ಅವನಿಗೆ ತಂದೆಯಾಗಿರುವೆನು, ಅವನು ನನಗೆ ಮಗನಾಗಿರುವನು; ಅವನು ತಪ್ಪು ಮಾಡಿ
–ದರೆ ಅವನಿಗೆ ಮನುಷ್ಯ ಶಿಕ್ಷೆಯನ್ನು ಕೊಡುವೆನು, ನರಪುತ್ರರಂತೆ ಅವನನ್ನು ದಂಡಿಸುವೆನು. **ನಿನ್ನ ಮನೆಯೂ ಅರಸುತನವೂ
ಸದಾಕಾಲ ಸ್ಥಿರವಾಗಿರುವವು; ನಿನ್ನ ಸಿಂಹಾಸನವು ಶಾಶ್ವತವಾಗಿರುವದು** ಎಂಬದೇ." (೨ಸಮು–೭:೧೨–೧೪, ೧೬)

ಆ ದಿನದಲ್ಲಿ ದೇವರು ದಾವೀದನೊಂದಿಗೆ ಮಾಡಿಕೊಂಡ ಒಡಂಬಡಿಕೆಯು ನಿಮಗೆ ಅರ್ಥವಾಯಿತಾ? ಮಾನವನ ಗ್ರಹಿಕೆಯನ್ನು
ಮೀರಿಸುವಂಹ ಭಯಂಕರವಾದ ಒಡಂಬಡಿಕೆ ಇದಾಗಿತ್ತು! ದೇವರು ದಾವೀದನಿಗೆ, "ನಿನ್ನ ಮನೆಯೂ ಅರಸುತನವೂ ಸದಾಕಾಲ
ಸ್ಥಿರವಾಗಿರುವವು; **ನಿನ್ನ ಸಿಂಹಾಸನವು ಶಾಶ್ವತವಾಗಿರುವದು!"** ಎಂದು ವಾಗ್ದಾನ ಮಾಡಿದ್ದನು.

ಏನು? ದಾವೀದನ ರಾಜ್ಯವು ಎಂದೆಂದಿಗೂ ಸ್ಥಿರವಾಗಿರುತ್ತದೋ? ಇದು ಹೇಗೆ ಸಾಧ್ಯವಾಗುತ್ತದೆ? ಕೇವಲ ಒಬ್ಬ ಮನುಷ್ಯನಾಗಿರುವ
ದಾವೀದನು ಎಂದೆಂದಿಗೂ ಸ್ಥಿರವಾಗಿರುವಂತ ಸಿಂಹಾಸನವನ್ನು ಪಡೆಯುವದಕ್ಕೆ ಹೇಗೆ ಸಾಧ್ಯ? ಇಲ್ಲಿ ಇದಕ್ಕೆ ಉತ್ತರವಿದೆ: ಎಂದೆಂ
–ದಿಗೂ ಸ್ಥಿರವಾಗಿರುವಂತ ಸಿಂಹಾಸನವನ್ನು ದಾವೀದನ ಸಂತಾನದವರು ಸ್ಥಾಪಿಸುತ್ತಾರೆಂದು ದೇವರು ದಾವೀದನಿಗೆ ವಾಗ್ದಾನ–
–ಮಾಡಿದ್ದನು. ಪರಲೋಕದಲ್ಲಿಯೂ ಮತ್ತು ಭೂಲೋಕದಲ್ಲಿಯೂ ಎಂದೆಂದಿಗೂ ಆಳ್ವಿಕೆ ನಡೆಸುವ ಅಧಿಕಾರವನ್ನು ಪಡೆದುಕೊಳ್ಳು
–ವದಕ್ಕಾಗಿ ದಾವೀದನ ರಾಜಮನೆತನದಲ್ಲಿ ಒಬ್ಬ ಮನುಷ್ಯನು ಹುಟ್ಟುವವನಿದ್ದನು. ಅವನು ರಾಜಾಧಿರಾಜನೂ, ಕರ್ತರ ಕರ್ತನೂ
ಮತ್ತು ಸಮಾಧಾನದ ಪ್ರಭುವೂ ಎಂಬುದಾಗಿ ಕರೆಯಲ್ಪಡುವವನಾಗಿದ್ದನು. ದಾವೀದನ ಕಾಲದ ನೂರಾರು ವರ್ಷಗಳ ನಂತರ
ಸುಮಾರು ಏಳುನೂರು ವರ್ಷಗಳ ಮೊದಲೇ ಈ ರಾಜಧಿರಾಜನು ಹುಟ್ಟಿದ್ದನು, ಪ್ರವಾದಿಯಾದ ಯೆಶಾಯನು ಹೀಗೆ ಬರೆದಿದ್ದಾನೆ:

“ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; **ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತಸ್ವರೂಪನು, ಆಲೋಚನಾಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು** ಎಂಬವು ಅವನ ಹೆಸರು. ಅವನ ಮುಖಾಂತರ ದಾವೀದನ ಸಿಂಹಾಸನದ ಆಡಳಿತವು ಅಭಿವೃದ್ಧಿಯಾಗುವದು, ದಾವೀದನ ರಾಜ್ಯದಲ್ಲಿ ನಿತ್ಯ ಸಮಾ –
–ಧಾನವಿರುವದು, ಆ ರಾಜ್ಯವು ಇಂದಿನಿಂದ **ಯಾವಾಗಲೂ** ನೀತಿನ್ಯಾಯಗಳ ಮೂಲಕ ಸ್ಥಾಪಿತವಾಗಿ ಸ್ಥಿರಗೊಳ್ಳುವದು; ಸೇನಾ –
–ಧೀಶ್ವರನಾದ ಯೆಹೋವನ ಆಗ್ರಹವು ಇದನ್ನು ನೆರವೇರಿಸುವದು.” (ಯೆಶಾಯ–೯: ೬, ೭)

ಒಂದು ನಿತ್ಯವಾದ ಸಿಂಹಾಸನವನ್ನು ಸ್ಥಾಪಿಸುವದಕ್ಕೆ ದಾವೀದನ ಸಂತಾನದವರೊಳಗೆ ಯಾರಿಗೆ ಅಧಿಕಾರವು ಕೊಡಲ್ಪಟ್ಟಿತೆಂದು ಎಂದು ನಿಮಗೆ ಗೊತ್ತಾ? ನ್ಯಾಯತೀರ್ಪಿನ ದಿನದಂದು ಆದಾಮನ ಮಕ್ಕಳಿಗೆ ನ್ಯಾಯತೀರಿಸಿ ನಿತ್ಯತ್ವದುದ್ದಕ್ಕೂ ಯಾರು ಆಳ್ವಿಕೆ ನಡೆಸುತ್ತಾರೆಂಬುದು ನಿಮಗೆ ತಿಳಿದಿದೆಯಾ? ಹೌದು, **ಅದು ವಿಮೋಚಕನು, ಪರಲೋಕದಿಂದ ಬಂದ ಅರಸನು,** ದಾವೀದನ ಸಂತತಿ
–ಯವರಿಗೆ ಸಂಬಂಧಪಟ್ಟ ಒಬ್ಬ ಕನ್ಯೆಯಲ್ಲಿ ಜನಿಸಿ ಬಂದವನು. ಈ ಅರಸನಿಗೆ ಸಂಬಂಧಪಟ್ಟಂತೆ ವಾಕ್ಯವು ಹೀಗೆ ಹೇಳುತ್ತದೆ: “ಈ ಕಾರಣದಿಂದ **ದೇವರು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ.**” (ಫಿಲಿಪ್ಪಿ–೨: ೯)

ನಂತರ ದಾವೀದನು ತನ್ನ ಸಂತತಿಯವರೊಳಗಿಂದ ವಿಮೊಚಕನನ್ನು ಕಳಿಸುವ ದೇವರ ಯೋಜನೆಯನ್ನು ಗ್ರಹಿಸಿಕೊಂಡವನಾಗಿ ಕರ್ತನ ಮುಂದೆ ಮೊಣಕಾಲೂರಿ ಆರಾಧಿಸುತ್ತಾ ಹೀಗೆ ಹೇಳಿದನು:

“**ಕರ್ತನೇ, ಯೆಹೋವನೇ, ನಾನೆಷ್ಟರವನು**? **ನನ್ನ ಮನೆ ಎಷ್ಟರದು**? **ನೀನು ನನ್ನನ್ನು ಇಲ್ಲಿಯವರೆಗೂ ತಂದಿದ್ದೀಯಲ್ಲಾ;** ಕರ್ತನೇ ಯೆಹೋವನೇ ಇದು ಸಾಲದೆಂದೆಣಿಸಿ ನಿನ್ನ ಸೇವಕನ ಬಹುದೂರದ ಸಂತಾನದ ವಿಷಯದಲ್ಲಿಯೂ ವಾಗ್ದಾನ ಮಾಡಿದಿ. ಕರ್ತನೇ, ಯೆಹೋವನೇ, ನೀನು ನರಪ್ರಾಣಿಯನ್ನು ಹೀಗೆ ನಡಿಸಿದ್ದು ಆಶ್ಚರ್ಯ. **ದೇವರೇ ಯೆಹೋವನೇ ನೀನೇ ದೊಡ್ಡವನು; ನಿನ್ನ ಸಮಾ –**
**ನರು ಯಾರೂ ಇಲ್ಲ**. ನಾವು ಕೇಳಿದವುಗಳನ್ನೆಲ್ಲಾ ಆಲೋಚಿಸಿ ನೋಡಿದರೆ ನಿನ್ನ ಹೊರತು ದೇವರೇ ಇಲ್ಲವೆಂಬದು ನಿಶ್ಚಯ. ಕರ್ತನೇ ಯೆಹೋವನೇ ನಿನ್ನ ಸೇವಕನಿಗೆ **ಈ ಶ್ರೇಷ್ಠ ವಾಗ್ದಾನಗಳನ್ನು** ಮಾಡಿದ ನೀನು ದೇವರಾಗಿರುತ್ತೀ; ನಿನ್ನ ವಾಕ್ಯವು ಸತ್ಯ –
–ವಾದದ್ದು. ಆದದರಿಂದ ನೀನು ನಿನ್ನ ಸೇವಕನ ಮನೆಯನ್ನು ಆಶೀರ್ವದಿಸು; **ಸದಾಕಾಲವೂ** ಅದರ ಮೇಲೆ ನಿನ್ನ ಕಟಾಕ್ಷವಿರಲಿ. ಕರ್ತನೇ ಯೆಹೋವನೇ ವಾಗ್ದಾನ ಮಾಡಿದವನು ನೀನೇ. ನಿನ್ನ ಆಶೀರ್ವಾದದಿಂದ ನಿನ್ನ ಸೇವಕನ ಮನೆಯಲ್ಲಿ **ನಿತ್ಯ** ಸೌಭಾಗ್ಯ –
–ವಿರಲಿ.” (೨ಸಮು–೭:೧೮, ೧೯, ೨೨, ೨೮, ೨೯)

ತನ್ನ ಸಂತತಿಯವರೊಳಗಿಂದ ಬರುವವನಾಗಿದ್ದ **ಅರಸನ** ಕುರಿತಾಗಿ ದೇವರು ಮಾಡಿದ್ದ ವಾಗ್ದಾನಕ್ಕಾಗಿ ದಾವೀದನು ಆತನಿಗೆ ಈ ರೀತಿಯಾಗಿ ಕೃತಜ್ಞತೆಗಳನ್ನು ಸಲ್ಲಿಸಿದನು. ಪರಿಶುದ್ಧ ವಾಕ್ಯಗಳನ್ನು ತಿಳಿದಿರುವಂತ ನೀವು, ಈ ವಾಗ್ದಾನದ ಒಂದು ಭಾಗವನ್ನು ದೇವರು ಈಗಾಗಲೇ ನೆರವೇರಿಸಿದ್ದಾನೆಂಬುದನ್ನೂ ಸಹ ತಿಳಿದುಕೊಳ್ಳಬೇಕಾಗಿದೆ. ಸುವಾರ್ತೆಯಲ್ಲಿ {ಇಂಜಿಲ್} ನಾವು ಓದುವದೇ –
–ನೆಂದರೆ, ದಾವೀದನ ಕಾಲವಾಗಿ ಒಂದು ಸಾವಿರ ವರ್ಷಗಳ ನಂತರ, ದಾವೀದನು ತನ್ನ ತಂದೆಯ ಕುರಿಮಂದೆಯನ್ನು ಕಾಯು
–ತ್ತಿದ್ದ ಅದೇ ಬೆತ್ಲೆಹೇಮಿನ ಬೆಟ್ಟಗಳಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿದ್ದ ಕೆಲವು ಕುರುಬರ ಬಳಿಗೆ ದೇವರು ಒಬ್ಬ ದೂತನನ್ನು ಕಳಿಸಿದನು. ಕರ್ತನ ದೂತನು ಆ ಕುರುಬರಿಗೆ, “ಹೆದರಬೇಡಿರಿ, ಕೇಳಿರಿ; **ಜನರಿಗೆಲ್ಲಾ** ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ, ಈ ಹೊತ್ತು ನಿಮಗೋಸ್ಕರ **ದಾವೀದನೂರಲ್ಲಿ** ಒಬ್ಬ ರಕ್ಷಕನು ಹುಟ್ಟಿ –
ದ್ದಾನೆ. ಆತನು **ಕರ್ತನಾಗಿರುವ ಕ್ರಿಸ್ತನೇ.**” (ಲೂಕ–೨:೧೦, ೧೧) ಹೌದು ದಾವೀದನ ಪೀಳಿಗೆಯ ಮೂಲಕವಾಗಿ ಹುಟ್ಟುತ್ತಾನೆಂದು ದೇವರು ವಾಗ್ದಾನ ಮಾಡಿದ್ದ **ಅರಸನು** ಹುಟ್ಟಿದನು. ಆತನು ಪರಲೋಕಕ್ಕೆ ಹೋಗಿದ್ದಾನೆ, ನೀತಿವಂತಿಕೆಯಲ್ಲಿ ಲೋಕಕ್ಕೆ ನ್ಯಾಯ –
–ತೀರಿಸುವದಕ್ಕೆ ಆತನು ಹಿಂತಿರುಗಿ ಬರುವಂತ ಆ ಭಯಂಕರವಾದ ಮತ್ತು ಮಹಿಮೆಯುಳ್ಳ ದಿನಕ್ಕಾಗಿ ಕಾಯುತ್ತಿದ್ದಾನೆ. ಆ ದಿನ
–ದಲ್ಲಿ, ದಾವೀದನ **ನಿತ್ಯವಾದ ರಾಜ್ಯವು** ನಿಜವಾದದ್ದು ಎಂಬುದರ ಕುರಿತಾಗಿ ದೇವರು ಮಾಡಿದ್ದ ವಾಗ್ದಾನವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುತ್ತಾರೆ. ಆ ದಿನದಲ್ಲಿ ಹೀಗೆ ಹೇಳಲ್ಪಡುತ್ತದೆ: “ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಮತ್ತು ಆತನು ಅಭಿ –
–ಷೇಕಿಸಿದವನಿಗೂ ಉಂಟಾಯಿತು; ಆತನು **ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು!**” (ಪ್ರಕ–೧೧:೧೫)

ಈ ದಿನ ನಾವು ಇಲ್ಲಿಗೆ ಮುಗಿಸಲೇಬೇಕು. ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮುಂದಿನ ಸಲ ದೇವರ ಚಿತ್ತವಾದರೆ, ಅರಸನಾದ ದಾವೀದನ ಕಥೆಯನ್ನು ನಾವು ಮುಂದುವರಿಸೋಣ ಮತ್ತು ನಿಮ್ಮ ಕಿವಿಯ ನರಗಳು ಹಾರುವಂತೆ ಮಾಡುವ ಒಂದು ಘಟನೆಯ ಕುರಿತು ನಾವು ಕೇಳಿಸಿಕೊಳ್ಳೋಣ. ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು.

ದೇವರು ನಿಮ್ಮನ್ನು ಆಶೀರ್ವದಿಸಲಿ. ಪರಿಶುದ್ಧ ವಾಕ್ಯಗಳಲ್ಲಿನ ಈ ವಚನದೊಂದಿಗೆ ನಾವು ನಿಮಗೆ ವಿದಾಯ ಹೇಳುತ್ತೇವೆ: “ಆಹಾ, ದೇವರ ಐಶ್ವರ್ಯವೂ ಜ್ಞಾನವೂ ವಿವೇಕವೂ ಎಷ್ಟೋ ಅಗಾಧ! ಆತನ ತೀರ್ಮಾನಗಳು ಪರಿಶೋಧನೆಗೆ ಎಷ್ಟೋ ಅಗಮ್ಯ! ಆತನ ಮಾರ್ಗಗಳು ಕಂಡುಹಿಡಿಯುವದಕ್ಕೆ ಎಷ್ಟೋ ಅಸಾಧ್ಯ! ಸಮಸ್ತವು ಆತನಿಂದ ಉತ್ಪತ್ತಿಯಾಗಿ ಆತನಿಂದ ನಡೆಯುತ್ತಾ ಆತನಿಗಾಗಿ ಇರುತ್ತದೆ; ಆತನಿಗೆ ಸದಾಕಾಲವೂ ಸ್ತೋತ್ರ, ಆಮೆನ್.” (ರೋಮಾ–೧೧:೩೩, ೩೬)

ಪಾಠ ೪೯

# ದಾವೀದ ಮತ್ತು ಬತ್ಷೆಬ

೨ಸಮುವೇಲ ೧೧, ೧೨; ಕೀರ್ತನೆ ೫೧, ೩೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ದಾವೀದನು ಹೇಗೆ ಇಸ್ರಾಯೇಲಿನ ಅರಸನಾದನು ಎಂಬುದನ್ನು ನಾವು ನೋಡಿಕೊಂಡೆವು. ದಾವೀದನು ದೇವರ ವಾಕ್ಯವನ್ನು ಯಥಾರ್ಥವಾಗಿ ಹೃದಯದಲ್ಲಿಟ್ಟುಕೊಂಡಿದ್ದ ಒಬ್ಬ ಪ್ರಾಮಾಣಿಕವಾದ ಮತ್ತು ಕರುಣೆಯುಳ್ಳ ಅರಸ –ನಾಗಿದ್ದ. ಹೀಗಿದ್ದರೂ ಈ ದಿನ, **ಕೇಳಿಸಿಕೊಳ್ಳುವದಕ್ಕೆ ಸಂತೋಷಕರವಲ್ಲದ ದಾವೀದನ ಒಂದು ಸಂಗತಿಯನ್ನು** ನಾವು ಓದುವದ – ಕ್ಕಿದ್ದೇವೆ. ದೇವರ ದೃಷ್ಟಿಯಲ್ಲಿ ಅಸಹ್ಯವಾಗಿದ್ದ ಯಾವುದೋ ಒಂದನ್ನು ದಾವೀದನು ಮಾಡಿದ್ದನು; ಅವನು ತನ್ನ ನೆರೆಯವನ ಹೆಂಡತಿಯನ್ನು ಬಯಸಿ, ಅವಳೊಂದಿಗೆ ವ್ಯಭಿಚಾರ ಮಾಡಿ, ಅದನ್ನು ಮುಚ್ಚುವದಕ್ಕೆ ಪ್ರಯತ್ನಿಸುವಲ್ಲಿ ಪಾಪದ ಮೇಲೆ ಪಾಪ –ವನ್ನು ಕೂಡಿಸಿ ಕೊಂಡನು. **"**ಇಂತಹ ಘೋರವಾದ ಕಥೆಯು ಪರಿಶುದ್ಧ ಗ್ರಂಥದಲ್ಲಿ ಯಾಕೆ ಕಂಡುಬಂದಿದೆ**?"** ಎಂದು ಕೆಲ – –ವರು ಕೇಳಬಹುದು. ವಾಕ್ಯವು ಹೀಗೆ ಹೇಳುತ್ತಾ ಈ ಪ್ರಶ್ನೆಗೆ ಉತ್ತರ ಕೊಡುತ್ತದೆ: **"**ಪೂರ್ವದಲ್ಲಿ ಬರೆದದ್ದೆಲ್ಲಾ **ನಮ್ಮನ್ನು ಉಪದೇಶಿ –ಸುವದಕ್ಕಾಗಿ** ಬರೆಯಲ್ಪಟ್ಟಿತು!**"** (ರೋಮಾ–೧೫:೪). **"**ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶರೂಪವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ. ಆದಕಾರಣ ನಿಂತಿದ್ದೇನೆಂದು ನೆನಸುವವನು ಬೀಳದಂತೆ ಎಚ್ಚರಿಕೆಯಾಗಿರಲಿ!**"** (೧ಕೊರಿಂಥ–೧೦:೧೧, ೧೨). ಪರಿಶುದ್ಧ ವಾಕ್ಯಗಳಲ್ಲಿ, ದೇವರು ಪ್ರವಾದಿಗಳ ಪಾಪಗಳನ್ನು ಮುಚ್ಚಿಡಲಿಲ್ಲ ಯಾಕಂದರೆ ದೇವರು ನಮಗೆ ಮೌಲ್ಯಾಧಾರಿತ ಪಾಠಗಳನ್ನು ಕಲಿಸುವದಕ್ಕೆ ಬಯಸಿದನು.

ಹಾಗಾದರೆ ಈಗ, ಸಮುವೇಲನ ಎರಡನೆಯ ಪುಸ್ತಕಕ್ಕೆ ಹಿಂತಿರುಗೋಣ ಮತ್ತು ದಾವೀದನು ಹೇಗೆ ಪಾಪದಲ್ಲಿ ಬಿದ್ದನೆಂಬುದನ್ನು ನೋಡಿಕೊಳ್ಳೋಣ. ಹನ್ನೊಂದನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**"**ಮರುವರುಷ ಅರಸರು ಯುದ್ಧಕ್ಕೆ ಹೊರಡುವ ಸಮಯದಲ್ಲಿ **ದಾವೀದನು, ಯೋವಾಬನನ್ನೂ** ತನ್ನ ಸೇವಕರನ್ನೂ ಎಲ್ಲಾ ಇಸ್ರಾ – –ಯೇಲ್ಯರನ್ನೂ ಯುದ್ಧಕ್ಕೆ ಕಳುಹಿಸಿದನು. ಇವರು ಹೋಗಿ ಅಮ್ಮೋನಿಯರ ಪ್ರಾಂತಗಳನ್ನು ಹಾಳುಮಾಡಿ ರಬ್ಬಕ್ಕೆ ಮುತ್ತಿಗೆಹಾಕಿದರು. ದಾವೀದನು ಯೆರೂಸಲೇಮಿನಲ್ಲಿಯೇ ಇದ್ದನು. ಅವನು ಒಂದು ದಿವಸ ಸಂಜೇ ಹೊತ್ತಿನಲ್ಲಿ ಮಂಚದಿಂದೆದ್ದು ಅರಮನೆಯ ಮಾಳಿ –ಗೆಯ ಮೇಲೆ ತಿರುಗಾಡುತ್ತಿರುವಾಗ ಅಲ್ಲಿಂದ ಬಹುಸುಂದರಿಯಾದ ಒಬ್ಬ ಸ್ತ್ರೀ ಸ್ನಾನಮಾಡುವದನ್ನು ಕಂಡನು. ಕೂಡಲೆ ದಾವೀ –ದನು ಒಬ್ಬನನ್ನು ಕರೆದು ಆ ಸ್ತ್ರೀ ಯಾರೆಂದು ಕೇಳಲು ಅವನು – ಆಕೆಯು ಎಲೀಯಾಮನ ಮಗಳೂ ಹಿತ್ತೀಯನಾದ **ಊರೀ –ಯನ** ಹೆಂಡತಿಯೂ ಆಗಿರುವ **ಬತ್ಷೆಬೆಯಲ್ಲವೋ** ಎಂದು ಉತ್ತರ ಕೊಟ್ಟನು. ಆಗ ದಾವೀದನು ಆಗಲೇ ಋತುಸ್ನಾನ ಮಾಡಿ –ಕೊಂಡಿದ್ದ ಆಕೆಯನ್ನು ದೂತರ ಮುಖಾಂತರವಾಗಿ ಕರೇಕಳುಹಿಸಿದನು; ಆಕೆಯು ಬರಲು ಆಕೆಯನ್ನು ಕೂಡಿದನು. ಅನಂತರ ಆಕೆಯು ತನ್ನ ಮನೆಗೆ ಹೋದಳು. ಆಕೆಯು ತಾನು ಗರ್ಭ ಧರಿಸಿದ್ದು ಗೊತ್ತಾದಾಗ ದಾವೀದನಿಗೆ ವರ್ತಮಾನ ಕಳುಹಿಸಿದಳು.**"** (೨ಸಮು–೧೧:೧–೫)

ಮುಂದೆ, ದಾವೀದನು ತನ್ನ ಪಾಪವನ್ನು ಮುಚ್ಚುವದಕ್ಕೆ ಹೇಗೆ ಪ್ರಯತ್ನಿಸಿದನೆಂಬುದನ್ನು ವಾಕ್ಯವು ವಿವರಿಸುತ್ತದೆ. ಬತ್ಷೆಬಳು ಗರ್ಭ ಧರಿಸಿರುವದನ್ನು ಕೇಳಿದ ದಾವೀದನು ತನ್ನ ಸೇನಾಪತಿಯಾದ ಯೋವಾಬನಿಗೆ, ಬತ್ಷೆಬಳ ಗಂಡನಾದ ಊರೀಯನನ್ನು ತನ್ನ ಬಳಿಗೆ ಕಳಿಸುವಂತೆ ಆಜ್ಞಾಪಿಸಿದನು. ಊರೀಯನು ಇಸ್ರಾಯೇಲ್ ಸೈನ್ಯದಲ್ಲಿ ಒಬ್ಬ ಪರಾಕ್ರಮಿ ಮನುಷ್ಯನಾಗಿದ್ದನು. ಯೋವಾಬನು ಊರೀಯನನ್ನು ದಾವೀದನ ಬಳಿಗೆ ಕಳುಹಿಸಿದನು.

**"**ಊರೀಯನು ಬಂದಾಗ ದಾವೀದನು – ಯೋವಾಬನೂ ಸೈನ್ಯದವರೂ ಹೇಗಿರುತ್ತಾರೆ**?** ಯುದ್ಧವು ಹೇಗೆ ನಡೆದದೆ ಎಂದು ವಿಚಾರಿಸಿದ ನಂತರ ಅವನಿಗೆ – ಮನೆಗೆ ಹೋಗಿ ಕೈಕಾಲು ತೊಳೆದುಕೋ ಎಂದು ಹೇಳಿದನು. ಊರೀಯನು ಅರಮನೆಯಿಂದ ಹೊರಟ ಕೂಡಲೆ ಅವನ ಹಿಂದೆಯೇ ಅರಸನ ಭೋಜನ ಪದಾರ್ಥಗಳೂ ಹೋದವು. ಆದರೆ ಊರೀಯನು ತನ್ನ ಮನೆಗೆ

ಹೋಗದೆ ಅರಸನ ಸೇವಕರೊಡನೆ ಅರಮನೆಯ ಬಾಗಿಲಲ್ಲೇ ಮಲಗಿಕೊಂಡನು. ಊರೀಯನು ತನ್ನ ಮನೆಗೆ ಹೋಗಲಿಲ್ಲ ಎಂಬ ವರ್ತಮಾನವು ದಾವೀದನಿಗೆ ಮುಟ್ಟಿದಾಗ ಇವನು ಅವನಿಗೆ – ನೀನು ಪ್ರಯಾಣಮಾಡಿಕೊಂಡು ಬಂದಿಯಲ್ಲಾ; ಯಾಕೆ ಮನೆಗೆ ಹೋಗಲಿಲ್ಲ ಅಂದನು. ಅದಕ್ಕೆ ಊರೀಯನು – ಒಡಂಬಡಿಕೆಯ ಮಂಜೂಷವೂ ಇಸ್ರಾಯೇಲ್ಯರೂ ಯೆಹೂದ್ಯರೂ ಗುಡಾರಗಲ್ಲಿ ವಾಸವಾಗಿದ್ದಾರೆ. ನನ್ನ ಒಡೆಯನಾದ ಯೋವಾಬನೂ ಅವನ ಸೇವಕರೂ ಬೈಲಿನಲ್ಲಿ ಪಾಳೆಯ ಮಾಡಿಕೊಂಡಿದ್ದಾರೆ. ಹೀಗಿರು – –ವಲ್ಲಿ ನಾನು ನನ್ನ ಮನೆಗೆ ಹೋಗಿ ಉಂಡು ಕುಡಿದು ಹೆಂಡತಿಯೊಡನೆ ಮಲಗಿಕೊಳ್ಳುವದು ಹೇಗೆ? ನಿನ್ನಾಣೆ, ನಿನ್ನ ಜೀವದಾಣೆ, ನಾನು ಇಂಥದನ್ನು ಮಾಡುವದೇ ಇಲ್ಲ ಎಂದು ಉತ್ತರಕೊಟ್ಟನು!" (೧೧:೭–೧೧)

"ಆಗ ದಾವೀದನು ಅವನಿಗೆ – ನೀನು ಈ ಹೊತ್ತು ಇಲ್ಲೇ ಇರು, ನಾಳೆ ನಿನ್ನನ್ನು ಕಳುಹಿಸುತ್ತೇನೆ ಎಂದು ಆಜ್ಞಾಪಿಸಿದನು. ಆದದ –ರಿಂದ ಊರೀಯನು ಆ ದಿನ ಯೆರೂಸಲೇಮಿನಲ್ಲೇ ಇದ್ದನು. ಮರುದಿನ ಬೆಳಿಗ್ಗೆ ದಾವೀದನು ಯೋವಾಬನಿಗೆ ಒಂದು ಪತ್ರವನ್ನು ಬರೆದು ಅದನ್ನು ಊರೀಯನ ಕೈಯಲ್ಲಿ ಕಳುಹಿಸಿದನು. ಅದರಲ್ಲಿದ್ದದ್ದೇನೆಂದರೆ – ಊರೀಯನು ಗಾಯಹೊಂದಿ ಸಾಯುವಂತೆ ಅವನನ್ನು ಘೋರಯುದ್ಧ ನಡೆಯುತ್ತಿರುವ ಕಡೆಗೆ ಮುಂಭಾಗದಲ್ಲಿ ನಿಲ್ಲಿಸಿ ನೀವು ಹಿಂದಕ್ಕೆ ಸರಿದುಕೊಳ್ಳಿರಿ ಎಂಬದೇ. ಯೋವಾ –ಬನು ಪಟ್ಟಣಕ್ಕೆ ಮುತ್ತಿಗೆಹಾಕುವಾಗ ಶೂರರಾದ ಶತ್ರುಸೈನಿಕರೆಲ್ಲಿರುತ್ತಾರೆಂದು ಗೊತ್ತುಮಾಡಿಕೊಂಡು ಊರೀಯನನ್ನು ಅಲ್ಲಿ ನಿಲ್ಲಿಸಿ –ದನು. ಆ ಊರಿನ ಜನರು ಹೊರಗೆ ಬಂದು ಯೋವಾಬನೊಡನೆ ಕಾದಿದಾಗ ದಾವೀದನ ಸೇವಕರಲ್ಲಿ ಕೆಲವರು ಸತ್ತರು. ಹಿತ್ತಿಯ –ನಾದ ಊರೀಯನೂ ಮಡಿದನು. ಅನಂತರ ಯೋವಾಬನು ಒಬ್ಬ ದೂತನನ್ನು ಕರೆದು ಅವನಿಗೆ – ನೀನು ಹೋಗಿ ದಾವೀದ –ನಿಗೆ ಯುದ್ಧ ವರ್ತಮಾನವನ್ನೆಲ್ಲಾ ತಿಳಿಸು ಮತ್ತು ಹಿತ್ತಿಯನಾದ ನಿನ್ನ ಸೇವಕ ಊರೀಯನೂ ಮೃತಿಹೊಂದಿದನೆಂದು ಹೇಳು ಅಂದನು." (೧೧:೧೨–೧೮, ೨೧)

"ಊರೀಯನ ಮರಣವಾರ್ತೆಯನ್ನು ಅವನ ಹೆಂಡತಿಯು ಕೇಳಿ ಗಂಡನಿಗೋಸ್ಕರ ಗೋಳಾಡಿದಳು. ದು:ಖಕಾಲ ತೀರಿದ ನಂತರ ದಾವೀದನು ಆಕೆಯನ್ನು ತನ್ನ ಮನೆಗೆ ಕರತರಿಸಿ ತನ್ನ ಹೆಂಡತಿಯನ್ನಾಗಿ ಮಾಡಿಕೊಂಡನು; ಅಕೆಯು ಅವನಿಂದ ಒಬ್ಬ ಮಗನನ್ನು ಹೆತ್ತಳು. **ದಾವೀದನ ಈ ಕೃತ್ಯವು ಯೆಹೋವನ ದೃಷ್ಟಿಯಲ್ಲಿ ಕೆಟ್ಟದ್ದಾಗಿತ್ತು.**" (೧೧:೨೬, ೨೭)

"ಯೆಹೋವನು **ನಾತಾನನನ್ನು** ದಾವೀದನ ಬಳಿಗೆ ಕಳುಹಿಸಿದನು. ಅವನು ಇವನ ಹತ್ತಿರ ಬಂದು ಹೇಳಿದ್ದೇನೆಂದರೆ – ಒಂದು ಊರಲ್ಲಿ ಇಬ್ಬರು ಮನುಷ್ಯರಿದ್ದರು; ಒಬ್ಬನು ಐಶ್ವರ್ಯವಂತನು, ಇನ್ನೊಬ್ಬನು ಬಡವನು. ಐಶ್ವರ್ಯವಂತನಿಗೆ ಬಹಳ ಕುರಿದನ – –ಗಳಿದ್ದವು. ಬಡವನಿಗೆ ಒಂದು ಕುರಿಮರಿಯ ಹೊರತು ಬೇರೇನೂ ಇರಲಿಲ್ಲ. ಅವನು ಅದನ್ನು ಕೊಂಡುಕೊಂಡು ಸಾಕುತ್ತಿದ್ದನು. ಅದು ದೊಡ್ಡದಾಗುವವರೆಗೆ ಮಗಳಂತೆ ಅವನ ಸಂಗಡಲೂ ಅವನ ಮಕ್ಕಳ ಸಂಗಡಲೂ ಇದ್ದುಕೊಂಡು ಅವನೊಡನೆ ರೊಟ್ಟಿ ತಿನ್ನುತ್ತಾ ಅವನ ಪಾತ್ರೆಯಲ್ಲೇ ನೀರು ಕುಡಿಯುತ್ತಾ ಇತ್ತು; ಅವನ ಎದೆಯ ಮೇಲೆಯೇ ಒರಗಿಕೊಂಡು ನಿದ್ರೆಮಾಡುತ್ತಿತ್ತು. ಒಂದು ದಿವಸ ಐಶ್ವರ್ಯವಂತನ ಮನೆಗೆ ಒಬ್ಬ ಪ್ರಯಾಣಿಕನು ಬಂದನು. ಆಗ ಐಶ್ವರ್ಯವಂತನು ತನ್ನ ಕುರಿದನಗಳಿಂದ ಏನೂ ತೆಗೆದು –ಕೊಳ್ಳ ಮನಸ್ಸಿಲ್ಲದೆ ಆ ಬಡವನ ಕುರಿಮರಿಯನ್ನು ಹಿಡಿದು ಅತಿಥಿಗೋಸ್ಕರ ಅಡಿಗೆ ಮಾಡಿಸಿದನು." (೧೨:೧–೪)

"ಇದನ್ನು ಕೇಳಿ ದಾವೀದನು ಆ ಮನುಷ್ಯನ ಮೇಲೆ ಕೋಪಗೊಂಡು ನಾತಾನನಿಗೆ – ಯೆಹೋವನಾಣೆ, **ಆ ಮನುಷ್ಯನು ಸಾಯಲೇ –ಬೇಕು.** ಅವನು ಕರುಣೆಯಿಲ್ಲದೆ ಹೀಗೆ ಮಾಡಿದ್ದರಿಂದ ಆ ಕುರಿಮರಿಗಾಗಿ ನಾಲ್ಕರಷ್ಟು ಹಿಂದಕ್ಕೆ ಕೊಡಬೇಕು ಅಂದನು. ಆಗ ನಾತಾನನು ದಾವೀದನನ್ನು ನೋಡಿ – ಆ ಮನುಷ್ಯನು ನೀನೇ. ಇಸ್ರಾಯೇಲ್ ದೇವರಾದ ಯೆಹೋವನು ನಿನಗೆ ಹೇಳುವದೇ – –ನೆಂದರೆ – ನಿನ್ನನ್ನು ಅಭಿಷೇಕಿಸಿ ಇಸ್ರಾಯೇಲ್ಯರ ಅರಸನನ್ನಾಗಿ ಮಾಡಿದವನೂ ಸೌಲನ ಕೈಗೆ ಸಿಕ್ಕದಂತೆ ತಪ್ಪಿಸಿದವನೂ ನಾನೇ. ಇದಲ್ಲದೆ ನಾನು ನಿನಗೆ ನಿನ್ನ ಯಜಮಾನನ ಮನೆಯನ್ನು ಒಪ್ಪಿಸಿದೆನು; ಅವನ ಹೆಂಡತಿಯರನ್ನು ನಿನ್ನ ಮಗ್ಗಲಿಗೆ ಕೊಟ್ಟೆನು. ಇಸ್ರಾಯೇಲ್ ಮತ್ತು ಯೆಹೂದ ಕುಲಗಳನ್ನು ನಿನಗೆ ವಶಪಡಿಸಿದೆನು. ಇದು ಸಾಕಾಗಿರದಿದ್ದರೆ ನಾನು ನಿನಗೆ ಇನ್ನೂ ಬೇಕಾದದ್ದನ್ನು ಕೊಡುತ್ತಿದ್ದೆನು. ಹೀಗಿರಲು ನೀನು ಯೆಹೊವನಾದ ನನ್ನ ಆಜ್ಞೆಯನ್ನು ತಿರಸ್ಕರಿಸಿ ನನ್ನ ದೃಷ್ಟಿಯಲ್ಲಿ ಕೆಟ್ಟದ್ದಾಗಿರುವದನ್ನು ಮಾಡಿ – –ದ್ದೇನು? ನೀನು ಹಿತ್ತಿಯನಾದ ಊರೀಯನನ್ನು ಕತ್ತಿಯಿಂದ ಕೊಲ್ಲಿಸಿ ಅವನ ಹೆಂಡತಿಯನ್ನು ನಿನ್ನ ಹೆಂಡತಿಯನ್ನಾಗಿ ತೆಗೆದು – –ಕೊಂಡಿ. ನೀನು ನನ್ನ ಆಜ್ಞೆಯನ್ನು ತಿರಸ್ಕರಿಸಿದದರಿಂದಲೂ ಕತ್ತಿಯು ನಿನ್ನ ಮನೆಯನ್ನು ಬಿಟ್ಟು ಹೋಗುವದಿಲ್ಲ ಯೆಹೋವ – –ನಾದ ನನ್ನ ಮಾತನ್ನು ಕೇಳು – ನಾನು ನಿನ್ನ ಮನೆಯವರಿಂದಲೇ ನಿನಗೆ ಕೇಡು ಉಂಟಾಗುವಂತೆ ಮಾಡುವೆನು. ನಿನ್ನ ಹೆಂಡತಿ –ಯರನ್ನು ತೆಗೆದು ನಿನ್ನೆದುರಿನಲ್ಲಿಯೇ ಇನ್ನೊಬ್ಬನಿಗೆ ಕೊಡುವೆನು. ಅವನು ಹಗಲಿನಲ್ಲಿಯೇ ಅವರ ಕೂಡ ಮಲಗುವನು. ನೀನು ಅದನ್ನು ಗುಪ್ತವಾಗಿ ಮಾಡಿದಿ; ನಾನು ಹೇಳುವ ಮಾತಾದರೋ ಎಲ್ಲಾ ಇಸ್ರಾಯೇಲ್ಯರ ಮುಂದೆ ಪ್ರಕಟವಾಗಿ ನೆರವೇರುವದು ಎಂಬದೇ ಅಂದನು. ಆಗ ದಾವೀದನು ನಾತಾನನಿಗೆ – ನಾನು ಯೆಹೋವನಿಗೆ ವಿರುದ್ಧವಾಗಿ ಪಾಪಮಾಡಿದ್ದೇನೆ ಎಂದು ಹೇಳಿ –ದನು. ನಾತಾನನು ಅವನಿಗೆ – ಯೆಹೋವನು ನಿನ್ನ ಪಾಪವನ್ನು ಕ್ಷಮಿಸಿದ್ದಾನೆ, ನೀನು ಸಾಯುವದಿಲ್ಲ; ಆದರೂ ನೀನು ಈ ಕೃತ್ಯದಿಂದ ಯೆಹೋವನ ವೈರಿಗಳು ಆತನನ್ನು ಬಹಳವಾಗಿ ನಿಂದಿಸುವದಕ್ಕೆ ಆಸ್ಪದ ಕೊಟ್ಟದ್ದರಿಂದ ನಿನ್ನಿಂದ ಹುಟ್ಟಿರುವ ಮಗುವು ಸತ್ತೇ ಹೋಗುವದು ಎಂದು ಹೇಳಿ ಮನೆಗೆ ಹೊರಟುಹೋದನು." (೧೨:೫–೧೫)

ಮುಂಬರುವ ಅಧ್ಯಾಯಗಳಲ್ಲಿ ದಾವೀದನ ಪಾಪವು ಅವನ ಕುಟುಂಬದೊಳಗೆ ಅನೇಕ ದುರಂತಗಳನ್ನು ಮತ್ತು ದೊಡ್ಡ ಸಮಸ್ಯೆ

–ಗಳನ್ನು ಹೇಗೆ ಉಂಟುಮಾಡಿತು ಎಂಬುದನ್ನು ವಾಕ್ಯಗಳು ನಮಗೆ ತೋರಿಸಿಕೊಡುತ್ತವೆ. ಆದರೆ ದೇವರ ವಾಕ್ಯವು: **“ಪಾಪವು** ಹೆಚ್ಚಿದಲ್ಲೇ **ಕೃಪೆಯು** ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು.” (ರೋಮಾ–೫:೨೦) ಎಂದೂ ಸಹ ಹೇಳುತ್ತದೆ. ಹಾಗಾಗಿ ಈ ದಿನದ ಉಳಿದಿರುವ ಸಮಯದಲ್ಲಿ, ದೇವರು ದಾವೀದನಿಗೆ ತನ್ನ **ಕೃಪೆಯನ್ನು** ತೋರಿಸಿ ಅವನ **ಪಾಪಗಳನ್ನೆಲ್ಲಾ** ಹೇಗೆ ಕ್ಷಮಿಸಿದನೆಂಬು –
–ದನ್ನು ನಾವು ನೋಡುತ್ತೇವೆ.

**ದಾವೀದನ ಪಾಪಗಳನ್ನು ದೇವರು ಯಾಕೆ ಕ್ಷಮಿಸಿದನು**? “ಆ ಮನುಷ್ಯನು ನೀನೇ” ಎಂದು ನಾತಾನನು ದಾವೀದನಿಗೆ ಹೇಳಿದಾಗ ದಾವೀದನು ಹೇಗೆ ಪ್ರತಿಕ್ರಿಯಿಸಿದನೆಂಬುದನ್ನು ನೀವು ಕೇಳಿಸಿಕೊಂಡಿರೋ? ದೇವರ ಪ್ರವಾದಿಯಾದ ನಾತಾನನು ಇಸ್ರಾಯೇಲಿನ ದೊಡ್ಡ ಅರಸನಿಗೆ ಅಂತಹ ಸಂಗತಿಯನ್ನು ಹೇಳುವದಕ್ಕೆ ಬಹಳ ಧೈರ್ಯವುಳ್ಳವನಾಗಿದ್ದನು. ದಾವೀದನು ನಾತಾನನಿಗೆ ಹೇಗೆ ಉತ್ತರಿಸಿದನು? ಅವನು ನಾತಾನನನ್ನು ಸೆರೆಮನೆಯಲ್ಲಿ ಕೂಡಿಹಾಕಿದನೋ ಅಥವಾ ಅನೇಕ ರಾಜರುಗಳು ಮಾಡುವ ಹಾಗೆ ಅವ –
–ನನ್ನು ಗಲ್ಲಿಗೇರಿಸಿದನೋ? ಇಲ್ಲ, ಅವನು ಹಾಗೆ ಮಾಡಲಿಲ್ಲ. ದಾವೀದನು “ಇದು ದೇವರ ಚಿತ್ತದಿಂದಾಯಿತು!” ಎಂದು ಹೇಳುತ್ತಾ ತನ್ನ ಪಾಪಗಳನ್ನು ಸಮರ್ಥಿಸಿಕೊಳ್ಳುವದಕ್ಕೆ ಪ್ರಯತ್ನಿಸಿದನೋ? ಅಥವಾ ದೇವರು ಒಳ್ಳೆಯವನು, ನನ್ನ ಒಳ್ಳೆಯ ಕಾರ್ಯಗಳ ನಿಮಿತ್ತದಿಂದ ನನ್ನ ಕೆಟ್ಟ ಕೆಲಸಗಳನ್ನು ಅಳಿಸಿಹಾಕಿರಬಹುದು? ಈ ರೀತಿಯಲ್ಲಿ ದಾವೀದನು ನಾತಾನನಿಗೆ ಉತ್ತರಿಸಿ –
–ದನೋ? ಇಲ್ಲ, ದಾವೀದನು ಹಾಗೆ ಮಾಡಲಿಲ್ಲ! ಹಾಗಾದರೆ ದಾವೀದನು ಹೇಗೆ ಪ್ರತಿಕ್ರಿಯಿಸಿದನು? ದಾವೀದನು, “ನಾನು ಪಾಪ ಮಾಡಿದ್ದೇನೆ!” **“ನಾನು ದೇವರಿಗೆ ವಿರುದ್ಧವಾಗಿ ಪಾಪ ಮಾಡಿದ್ದೇನೆ!”** ಎಂದು ಹೇಳಿದನು.

ದಾವೀದನು ದೇವರ ಮುಂದೆ ತನ್ನ ಪಾಪವನ್ನು ಹೇಗೆ ಅರಿಕೆ ಮಾಡಿಕೊಂಡನೆಂಬುದನ್ನು ಚೆನ್ನಾಗಿ ತಿಳಿದುಕೊಳ್ಳಬೇಕಾದರೆ, ದಾವೀದನು ಬತ್ಷೆಬಳೊಂದಿಗೆ ಮಾಡಿದ ಪಾಪಕ್ಕಾಗಿ ಪ್ರವಾದಿಯಾದ ನಾತಾನನು ಗದರಿಸಿದ ನಂತರ ದಾವೀದನು ಕೀರ್ತನೆಗಳಲ್ಲಿ ಬರೆದಿರುವದನ್ನು ನಾವು ಓದಬೇಕು. ಐವತ್ತೊಂದನೆಯ ಕೀರ್ತನೆಯಲ್ಲಿ ದಾವೀದನು ಹೀಗೆ ಹೇಳಿದ್ದಾನೆ:

**“ಪ್ರೀತಿಸ್ವರೂಪನಾದ ದೇವರೇ, ನನ್ನನ್ನು ಕರುಣಿಸು; ಕರುಣಾನಿಧಿಯೇ ನನ್ನ ದ್ರೋಹವನ್ನೆಲ್ಲಾ ಅಳಿಸಿಬಿಡು.** ನನ್ನ ಪಾಪವನ್ನು ಸಂಪೂ –
–ರ್ಣವಾಗಿ ತೊಳೆದುಬಿಡು; ನನ್ನ ದೋಷವನ್ನು ಪರಿಹರಿಸಿ ನನ್ನನ್ನು ಶುದ್ಧಿಗೊಳಿಸು. ನಾನು ದ್ರೋಹಿ ಎಂದು ನಾನೇ ಒಪ್ಪಿಕೊಂಡಿ –
–ದ್ದೇನೆ; ನನ್ನ ಪಾಪವು ಯಾವಾಗಲೂ ನನ್ನ ಮುಂದೆ ಇದೆ. ನಿನಗೇ ಕೇವಲ ನಿನಗೇ ತಪ್ಪುಮಾಡಿದ್ದೇನೆ; ನಿನ್ನ ದೃಷ್ಟಿಗೆ ಕೆಟ್ಟದ್ದಾಗಿ –
–ರುವದನ್ನೇ ಮಾಡಿದ್ದೇನೆ. ನಿನ್ನ ನಿರ್ಣಯ ನ್ಯಾಯವಾಗಿಯೂ ನಿನ್ನ ತೀರ್ಪು ನಿಷ್ಕಳಂಕವಾಗಿಯೂ ಇರುತ್ತದಲ್ಲಾ. ಹುಟ್ಟಿದಂದಿ –
–ನಿಂದ ನಾನು ಪಾಪಿಯೇ; ಮಾತೃಗರ್ಭವನ್ನು ಹೊಂದಿದ ದಿನದಿಂದ ದ್ರೋಹಿಯೇ. ಯಥಾರ್ಥಚಿತ್ತವೇ ನಿನಗೆ ಸಂತೋಷ; ಸುಜ್ಞಾನದ ರಹಸ್ಯಗಳನ್ನು ನನಗೆ ತಿಳಿಯಪಡಿಸು. **ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮಕಿಸಿಯೋ ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದಬಿಡು, ಆಗ ಶುದ್ಧನಾಗಿರುವೆನು; ನನ್ನನ್ನು ತೊಳೆ ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು**. ದೇವರೇ ನನ್ನಲ್ಲಿ ಶುದ್ಧ –
ಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು ನೂತನಪಡಿಸು. **ಕುಗ್ಗಿದ ಮನಸ್ಸೇ ದೇವರಿಗೆ ಇಷ್ಟಯಜ್ಞ; ದೇವರೇ ಪಶ್ಚಾತ್ತಾಪದಿಂದ ಜಜ್ಜಿಹೋದ ಮನಸ್ಸನ್ನು ನೀನು ತಿರಸ್ಕರಿಸುವದಿಲ್ಲ.”** (ಕೀರ್ತನೆ–೫೧:೧–೭, ೧೦, ೧೭)

ಈ ರೀತಿಯಲ್ಲಿ ದಾವೀದನು ಪಶ್ಚಾತ್ತಾಪಪಟ್ಟನು. ತನ್ನ ಪಾಪದ ನಿಮಿತ್ತವಾಗಿ ದಾವೀದನು ಬಹಳವಾಗಿ ಗೋಳಾಡಿದನು. ಅವನು ದೇವರ ಮುಂದೆ ಒಡೆದುಹೋದ ಮತ್ತು ಜಜ್ಜಿಹೋದ ಹೃದಯವುಳ್ಳವನಾಗಿದ್ದನು. **ಧಾರ್ಮಿಕ ವ್ಯಕ್ತಿಗಳು ಆದರೆ ಪ್ರತಿದಿನ ಪಾಪವನ್ನು ಮುಂದುವರಿಸುವಂತ ಜನರ ಹಾಗೆ ದಾವೀದನಿರಲಿಲ್ಲ**. ನಿಜವಾಗಿಯೂ ದಾವೀದನು ಪಾಪದ ಗುಂಡಿಯಲ್ಲಿ ಬಿದ್ದಿದ್ದನು, ಆದರೆ ಅವನು ಅದರಲ್ಲಿಯೇ ವಾಸಿಸಲಿಲ್ಲ, ಯಾಕೆಂದರೆ ದಾವೀದನು ದೇವರನ್ನು ಪ್ರೀತಿಸಿದ್ದನು, ಮತ್ತು “ದೇವರು ಬೆಳಕಾಗಿದ್ದಾನೆ ಮತ್ತು ಅತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ” (೧ಯೋಹಾನ–೧:೫) ಎನ್ನುವದನ್ನು ಅವನು ತಿಳಿದಿದ್ದನು.

ಹಾಗಾದರೆ, ದಾವೀದನು ಪಶ್ಚಾತ್ತಾಪಪಟ್ಟ ನಂತರ, ಪ್ರವಾದಿಯಾದ ನಾತಾನನ ಬಾಯಿಂದ ದೇವರು ಅವನಿಗೆ ಏನೆಂದು ಹೇಳಿ –
–ದನು? “ಹೋಗಿ ಕೆಲವು ಒಳ್ಳೆಯ ಕೆಲಸಗಳನ್ನು ಮಾಡು ಆಗ ನಾನು ನಿನ್ನ ಪಾಪಗಳನ್ನು ಅಳಿಸಿಹಾಕುತ್ತೇನೆ” ಎಂದು ದೇವರು ಹೇಳಿದನೋ? ಇಲ್ಲ, ದೇವರು ಹಾಗೆ ಹೇಳಲಿಲ್ಲ! ನಾತಾನನು ಅವನಿಗೆ, “ಕರ್ತನು ನಿನ್ನ ಪಾಪವನ್ನು ತೆಗೆದುಹಾಕಿದ್ದಾನೆ. ನೀನು ಸಾಯುವದಿಲ್ಲ!” ಎಂದು ಹೇಳಿದನು.

ಇದಾದ ನಂತರ, ದಾವೀದನು ಕೀರ್ತನೆಗಳಲ್ಲಿ, **ತನ್ನ ಸ್ವಂತ ಕಾರ್ಯಗಳ ಹೊರತಾಗಿ ದೇವರಿಂದ ಕ್ಷಮಾಪಣೆಯನ್ನು ಹೊಂದಿಕೊಂಡ** ಮನುಷ್ಯನ ಧನ್ಯತೆಯನ್ನು ವಿವರಿಸುತ್ತಾ ದಾವೀದನು ಹೀಗೆ ಹೇಳುತ್ತಾನೆ: “ಯಾವನ ದ್ರೋಹವು **ಪರಿಹಾರವಾಗಿದೆಯೋ** ಯಾವನ ಪಾಪವು **ಕ್ಷಮಿಸಲ್ಪಟ್ಟಿದೆಯೋ** ಅವನೇ ಧನ್ಯನು. ಯೆಹೋವನು ಯಾವನ **ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ** ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ ಅವನು ಧನ್ಯನು.” (ಕೀರ್ತನೆ–೩೨:೧, ೨; ರೋಮಾ–೪:೭, ೮) ಹೌದು, ದೇವರು ದಾವೀದ –
–ನನ್ನು ಕ್ಷಮಿಸಿದನು ಮತ್ತು ಅವನನ್ನು ನೀತಿವಂತನೆಂದು ತೀರ್ಪುಮಾಡಿದನು! ಆದರೆ ದಾವೀದನ ಪಾಪವು ಉಂಟುಮಾಡಿದ್ದ ದುರಂತಗಳನ್ನು ದೇವರು ನಿವಾರಿಸಿದನು ಎಂದು ಇದರ ಅರ್ಥವಲ್ಲ. ಆದರೆ ನ್ಯಾಯತೀರ್ಪಿನ ದಿನದಲ್ಲಿ ದಾವೀದನ ಪಾಪಗಳನ್ನು ದೇವರು ನೆನಪುಮಾಡಿಕೊಳ್ಳುವದಿಲ್ಲ ಎಂದು ಇದರ ಅರ್ಥ. ಆತನು ತನ್ನ ಪುಸ್ತಕದಿಂದ ಅವುಗಳನ್ನು **ಅಳಿಸಿಹಾಕಿದ್ದಾನೆ!**

**ಅದನ್ನು ಮಾಡುವದಕ್ಕೆ ದೇವರಿಗೆ ಹೇಗೆ ಸಾಧ್ಯ?** ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿಯಾಗಿದ್ದಾಗ್ಯೂ ದಾವೀದನ ಪಾಪ –ಗಳನ್ನೆಲ್ಲಾ ಆತನು ಹೇಗೆ ಕ್ಷಮಿಸುವದಕ್ಕೆ ಸಾಧ್ಯವಾಯಿತು? ದಾವೀದನು ಮಾಡಿದ್ದ ಎಲ್ಲಾ ಕೆಟ್ಟ ಕೆಲಸಗಳ ಹಾಗೆ ದೇವರು ಇದನ್ನೂ ಸುಮ್ಮನೆ ಮರೆತುಬಿಟ್ಟನೋ? ಇಲ್ಲ! ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿ ಮತ್ತು ಆತನು ಆದಾಮನ ಮಕ್ಕಳ ಪಾಪಗಳಿಗೆ ಸುಮ್ಮನೆ ತನ್ನ ಕಣ್ಣುಗಳನ್ನು ಮುಚ್ಚಿಕೊಳ್ಳುವವನಲ್ಲ. ಸರಿ ಹಾಗಾದರೆ, ದೇವರು ತನ್ನ ನೀತಿಯನ್ನು ಇನ್ನೂ ನಿಭಾಯಿ –ಸುತ್ತಾ ದಾವೀದನನ್ನು ಹೇಗೆ ಕ್ಷಮಿಸಿದನು?

ದಾವೀದನು ತನ್ನ ಪಾಪವನ್ನು ಗುರುತಿಸಿಕೊಂಡ ನಂತರ ಅವನು ದೇವರಿಗೆ ಏನೆಂದು ಪ್ರಾರ್ಥಿಸಿದನೆಂಬುದು ನಿಮಗೆ ಜ್ಞಾಪಕವಿ–ದೆಯಾ? "ನನ್ನ ಪಾಪವನ್ನು ಸಂಪೂರ್ಣವಾಗಿ ತೊಳೆದುಬಿಡು. . . .**ಹಿಸ್ಸೋಪ್** ಗಿಡದ ಬರಲಿನಿಂದ ನೀರನ್ನು ಚಿಮಕಿಸಿಯೋ ಎಂಬಂತೆ ನನ್ನ ಅಶುದ್ಧತ್ವನ್ನು ತೆಗೆದುಬಿಡು ಆಗ ಶುದ್ಧನಾಗಿರುವೆನು; ನನ್ನನ್ನು ತೊಳೆ ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು." (ಕೀರ್ತನೆ–೫೧:೨, ೭) ಎಂದು ಪ್ರಾರ್ಥಿಸಿದನು. ಯಜ್ಞಪಶುವಿನ ರಕ್ತವನ್ನು ಚಿಮಕಿಸುವದಕ್ಕೆ ಹಿಸ್ಸೋಪ್ ಗಿಡದ ಕೊಂಬೆಯನ್ನು ಉಪಯೋಗಿಸುವಂತೆ ದೇವರು ಇಸ್ರಾಯೇಲ್ಯರಿಗೆ ಆಜ್ಞಾಪಿಸಿದ್ದನು. ಚಿಮಕಿಸಲ್ಪಟ್ಟ ರಕ್ತವು, ಸ್ವಇಚ್ಛೆಯಿಂದ ಮರಣಹೊಂದಿ **ಪಾಪ –ಗಳ ಸಂಬಳದ** ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕೆ **ಬರಲಿರುವ ವಿಮೋಚಕನ** ಮಹತ್ವದ ತ್ಯಾಗದ ನಿದರ್ಶನವಾಗಿದೆ.

ದಾವೀದನು ಬರಲಿರುವ ವಿಮೋಚಕನ ಕಾರ್ಯದಿಂದ ತನ್ನನ್ನು ಶುದ್ಧಗೊಳಿಸುವದಕ್ಕೆ ದೇವರಲ್ಲಿದ್ದ ಶಕ್ತಿಯನ್ನು **ನಂಬಿ** (ಪಾಪದಿಂದ ದೇವರ ಕಡೆಗೆ ತಿರುಗಿಕೊಂಡು) **ಪಶ್ಚಾತ್ತಾಪಪಟ್ಟಿದ್ದರಿಂದ** ದೇವರು ಅವನನ್ನು ಕ್ಷಮಿಸುವದಕ್ಕೆ ಸಾಧ್ಯವಾಯಿತು. ದಾವೀದನು ಈ ರೀತಿಯ ಒಂದು ಪ್ರಾರ್ಥನೆಯನ್ನು ದೇವರಿಗೆ ಸಮರ್ಪಿಸುವದಕ್ಕೆ ಶಕ್ತನಾದನು: **"**ಓ ದೇವರೇ, ನನ್ನ ಪಾಪದ ಸಂಬಂಧವಾಗಿ ನಾನು ದು:ಖಿಸುತ್ತಿದ್ದೇನೆ ಮತ್ತು ನನ್ನನ್ನು ಕ್ಷಮಿಸು ಎಂದು ನಿನ್ನನ್ನು ಕೇಳುತ್ತಿದ್ದೇನೆ! ನನ್ನ ಪಾಪಗಳನ್ನು ನೀನು ಕ್ಷಮಿಸುತ್ತೀ ಎಂದು ನನಗೆ ಗೊತ್ತು. ಯಾಕಂದರೆ ಒಂದು ದಿನ ಪಾಪವಿಲ್ಲದ ಒಬ್ಬನನ್ನು ಅಂದರೆ ವಿಮೋಚಕನನ್ನು ಕಳಿಸುತ್ತೀ ಆತನು ತಾನೇ ಒಂದೇ ಸಲ ಎಂದೆಂದಿಗೂ ನನ್ನ ಪಾಪಕ್ಕಾಗಿ ಶಿಕ್ಷೆಯನ್ನು ತಾಳಿಕೊಳ್ಳುವವನಾಗಿದ್ದಾನೆ. ಆದುದರಿಂದ, ಕರ್ತನೇ, ಪಾಪಿಯಾದ ನನ್ನನ್ನು ಕರುಣಿಸು! ಪರಿಶುದ್ಧ ವಿಮೋಚಕನ ರಕ್ತದಿಂದ ನನ್ನನ್ನು ತೊಳೆ, ಆಗ ನಾನು ಸಂಪೂರ್ಣವಾಗಿ ಶುದ್ಧನಾಗುತ್ತೇನೆ!**"**

ದೇವರು ತನ್ನ ಕೃಪೆಯಲ್ಲಿ ದಾವೀದನ ಎಲ್ಲಾ ಪಾಪಗಳನ್ನು ಕ್ಷಮಿಸಿದನೋ? ದೇವರು ದಾವೀದನ ಹೃದಯವನ್ನು ಶುದ್ಧಪಡಿಸಿ ಅವನನ್ನು ನೀತಿವಂತನೆಂದು ತೀರ್ಪುಮಾಡಿದನೋ? ಹೌದು, ಆತನು ಹಾಗೆ ಮಾಡಿದನು! ಯಾವ ಆಧಾರದ ಮೇಲೆ ದೇವರು ಇದನ್ನು ಮಾಡಿದನು? ದೇವರು ದಾವೀದನನ್ನು ಕ್ಷಮಿಸಿದ್ದೇಕೆಂದರೆ, ದಾವೀದನು ದೇವರ ಮುಂದೆ ತನ್ನ ಪಾಪದ ಸ್ಥಿತಿಯನ್ನು **ಅರಿಕೆಮಾಡಿಕೊಂಡು,** ಪಾಪದ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕೆ ಬರಲಿಕ್ಕಿದ್ದ ವಿಮೋಚಕನಿಗೆ ಸಂಬಂಧಿಸಿ ದೇವರು ಮಾಡಿದ್ದ ವಾಗ್ದನವನ್ನು ನಂಬಿದ್ದನು. ದೇವರ ವಾಗ್ದಾನಗಳಲ್ಲಿ ಆತನು ಹೊಂದಿದ್ದ ನಂಬಿಕೆಯು ಅವನು ಉಲ್ಲಾಸದಿಂದ ಅದನ್ನು ಕೀರ್ತನೆ –ಯಲ್ಲಿ ಬರೆಯುವದಕ್ಕೆ ಕಾರಣವಾಯಿತು: **"ಯಾವನ ದ್ರೋಹವು ಪರಿಹಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋ ಅವನೇ ಧನ್ಯನು. ಯೆಹೋವನು ಯಾವ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ ಅವನು ಧನ್ಯನು!"** (ಕೀರ್ತನೆ–೩೨: ೧, ೨)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ನಮ್ಮ ಮುಂದಿನ ಎರಡು ಪಾಠಗಳಲ್ಲಿ, ದೇವರ ಚಿತ್ತವಿದ್ದರೆ, ದೇವರು ನಮ್ಮ ಪಾಪಗಳನ್ನು ಎಂದೆಂದಿಗೂ ಕ್ಷಮಿಸುವದಕ್ಕಾಗಿ ನಮ್ಮ ಪಾಪಗಳನ್ನು ಹೊತ್ತುಕೊಳ್ಳುವಂತಹ ವಿಮೋಚಕನನ್ನು ಕುರಿತು ಪ್ರವಾದಿಯಾದ ದಾವೀದನು ಏನು ಸಾಕ್ಷಿ ಹೇಳಿದ್ದನೆಂಬುದನ್ನು ನೋಡುವದಕ್ಕೆ ಕೀರ್ತನೆಗಳ ಪುಸ್ತಕವನ್ನು ನಾವು ನೋಡಿಕೊಳ್ಳಲಿದ್ದೇವೆ.

ದೇವರ ಆಶೀರ್ವಾದಗಳಲ್ಲಿ ಒಂದು ಮಹತ್ವವುಳ್ಳ ಆಶೀರ್ವಾದದ ಕುರಿತು ದಾವೀದನು ಕೀರ್ತನೆಗಳಲ್ಲಿ ಬರೆದಿರುವಂತ ಈ ವಚನದ ಕುರಿತು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಯಾವನ ದ್ರೋಹವೂ ಪರಿಯಾರವಾಗಿದೆಯೋ ಯಾವನ ಪಾಪವು ಕ್ಷಮಿಸಲ್ಪಟ್ಟಿದೆಯೋಅವನೇ ಧನ್ಯನು. ಯೆಹೋವನು ಯಾವನ ಲೆಕ್ಕಕ್ಕೆ ಅಪರಾಧವನ್ನು ಎಣಿಸುವದಿಲ್ಲವೋ ಯಾವನ ಹೃದಯದಲ್ಲಿ ಕಪಟವಿರುವದಿಲ್ಲವೋ ಅವನು ಧನ್ಯನು!"** (ಕೀರ್ತನೆ–೩೨: ೧, ೨)

ಪಾಠ ೫೦

# ಪ್ರವಾದಿಯಾದ ದಾವೀದ ಮತ್ತು ಮೆಸ್ಸೀಯ

ಕೀರ್ತನೆ ೧, ೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಹಿಂದಿನ ನಾಲ್ಕು ಪಾಠಗಳಲ್ಲಿ **ಪ್ರವಾದಿಯಾದ ದಾವೀದನ** ಕಥೆಯನ್ನು ನಾವು ಪರೀಕ್ಷಿಸಿಕೊಂಡಿದ್ದೇವೆ. ದಾವೀದನು ಹೇಗೆ ಒಬ್ಬ ಕುರುಬನು, ಕಿನ್ನರಿ ಬಾರಿಸುವವನೂ, ಸಂಗೀತ ಬರೆಯುವವನು, ದೇವರ ವಾಕ್ಯದ ವಿದ್ಯಾರ್ಥಿ, ಯುದ್ಧದಲ್ಲಿ ನಾಯಕ, ಇಸ್ರಾ – –ಯೇಲಿನ ಅರಸ, ಮತ್ತು ದೇವರ ಪ್ರವಾದಿಯಾಗಿದ್ದನು ಎಂಬುದನ್ನು ನಾವು ನೋಡಿಕೊಂಡೆವು. ನಮ್ಮ ಹಿಂದಿನ ಪಾಠದಲ್ಲಿ ದಾವೀದನು ಒಬ್ಬ ಪಾಪಿಯೂ ಸಹ ಆಗಿದ್ದು ದೇವರನ್ನು ಬಹಳವಾಗಿ ಮನನೋಯಿಸಿದ ಕೆಲಸ ಮಾಡಿದ್ದನ್ನು ನಾವು ನೋಡಿ – –ಕೊಂಡೆವು. ಏನೇ ಆದರೂ, ದಾವೀದನ ಪಾಪಗಳನ್ನು ದೇವರು ಹೇಗೆ ಕ್ಷಮಿಸಿದನೆಂಬುದನ್ನೂ ಸಹ ನಾವು ನೋಡಿದೆವು ಯಾಕೆಂದರೆ ದಾವೀದನು ಪಶ್ಚಾತ್ತಾಪದ ಹೃದಯದಿಂದ ನಿಜವಾಗಿಯೂ ದೇವರ ಕಡೆಗೆ ತಿರುಗಿಕೊಂಡು, ಲೋಕದ ಜನರ ಪಾಪ –ಗಳಿಗಾಗಿ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕೆ ಈ ಲೋಕಕ್ಕೆ ಬರಲಿದ್ದ ವಿಮೋಚಕನ ಕುರಿತಾಗಿ ದೇವರು ಮಾಡಿದ್ದ ವಾಗ್ದಾನವನ್ನು ನಂಬಿದ್ದನು.

ಈ ದಿನ ನಾವು ಪರಿಶುದ್ಧ ವಾಕ್ಯಗಳ ಮಧ್ಯದಲ್ಲಿ ಕಂಡುಬರುವ ಅದ್ಭುತವಾದ ಪುಸ್ತಕದ ಮೇಲೆ ಧ್ಯಾನಮಾಡುವದಕ್ಕೆ ಉದ್ದೇಶಿಸಿ – –ದ್ದೇವೆ. ಈ ಪುಸ್ತಕದ ಹೆಸರು ನಿಮಗೆ ಗೊತ್ತಾ? ಹೌದು, ಇದು **ಕೀರ್ತನೆಗಳು** {ಝಾಬುರ್}. ಕೀರ್ತನೆಗಳ ಪುಸ್ತಕವು ನೂರಾ ಐವತ್ತು ಅಧ್ಯಾಯಗಳನ್ನು ಅಥವಾ ಕೀರ್ತನೆಗಳನ್ನು ಒಳಗೊಂಡಿದೆ. ನೂರಾರು ವರ್ಷಗಳ ಅವಧಿಯಲ್ಲಿ ಮೋಶೆ, ಸೊಲೊಮೋನ, ಆಸಾಫ ಮತ್ತು ಕೋರಹನ ಮಕ್ಕಳನ್ನೊಳಗೊಂಡು ಕೀರ್ತನೆಗಳನ್ನು ಬರೆಯುವದಕ್ಕೆ ದೇವರು ಅನೇಕ ಪ್ರವಾದಿಗಳನ್ನು ಉಪಯೋಗಿ –ಸಿದನು. ಹೀಗಿದ್ದರೂ, ದಾವೀದನು ಇತರ ಪ್ರವಾದಿಗಳಿಗಿಂತಲೂ ಹೆಚ್ಚು ಕೀರ್ತನೆಗಳನ್ನು ಬರೆದಿದ್ದಾನೆ. ಈ ದಿನ ಕೀರ್ತನೆಗಳ ಮೊದಲ ಎರಡು ಸಂಗೀತಗಳಲ್ಲಿ (ಅಥವಾ ಅಧ್ಯಾಯಗಳಲ್ಲಿ) ನಾವುಗಳು ಮಗ್ನರಾಗುವದಕ್ಕೆ ಇಷ್ಟಪಡುತ್ತೇವೆ.

ಮೊದಲನೆಯ ಕೀರ್ತನೆಯು ಲೋಕದಲ್ಲಿರುವ ಎರಡು ರೀತಿಯ ಜನರನ್ನು ನಮಗೆ ತೋರಿಸಿಕೊಡುತ್ತದೆ: **ನೀತಿಯ ಮಾರ್ಗದಲ್ಲಿ** ನಡೆಯುವವರು ಮತ್ತು **ಅನೀತಿಯ ಮಾರ್ಗದಲ್ಲಿ** ನಡೆಯುವವರು. ಮೊದಲನೆಯ ಕೀರ್ತನೆಯಲ್ಲಿ ಹೀಗೆ ಬರೆದದೆ:

**"ಯಾವನು ದುಷ್ಟರ ಆಲೋಚನೆಯಂತೆ ನಡೆಯದೇ** ಪಾಪಾತ್ಮರ ಮಾರ್ಗದಲ್ಲಿ ನಿಂತುಕೊಳ್ಳದೆ ಧರ್ಮನಿಂದಕರೊಡನೆ ಕೂತು – ಕೊಳ್ಳದೆ ಯೆಹೋವನ ಧರ್ಮಶಾಸ್ತ್ರದಲ್ಲಿ ಆನಂದಪಡುವವನಾಗಿ ಅದನ್ನೇ ಹಗಲಿರುಳು ಧ್ಯಾನಿಸುತ್ತಿರುವನೋ **ಅವನು ಎಷ್ಟೋ ಧನ್ಯನು.** ಅವನು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದಿರುವ ಮರದ ಹಾಗಿರುವನು. ಅಂಥ ಮರವು ತಕ್ಕ ಕಾಲದಲ್ಲಿ ಫಲ ಕೊಡುತ್ತದಲ್ಲಾ; ಅದರ ಎಲೆ ಬಾಡುವದೇ ಇಲ್ಲ. ಅದರಂತೆ ಅವನ ಕಾರ್ಯವೆಲ್ಲವೂ ಸಫಲವಾಗುವದು. **ದುಷ್ಟರೋ ಹಾಗಲ್ಲ;** ಗಾಳಿ ಬಡುಕೊಂಡು ಹೋಗುವ ಹೊಟ್ಟಿನಂತಿದ್ದಾರೆ. ಆದದರಿಂದ ದುಷ್ಟರು ನ್ಯಾಯವಿಚಾರಣೆಯಲ್ಲೂ ಪಾಪಾತ್ಮರು ನೀತಿವಂತರ ಸಭೆಯಲ್ಲೂ ನಿಲ್ಲುವದಿಲ್ಲ. **ಯೆಹೋವನು ನೀತಿವಂತರ ಮಾರ್ಗವನ್ನು ಲಕ್ಷಿಸುವನು; ದುಷ್ಟರ ಮಾರ್ಗವೋ ನಾಶವಾಗುವದು.:** (ಕೀರ್ತನೆಗಳು–೧:೧–೬)

ಇಲ್ಲಿ ನಾವು **ಧನ್ಯರಾದವರ ಮಾರ್ಗವನ್ನೂ ಮತ್ತು ನಾಶವಾಗುವವರ ಮಾರ್ಗವನ್ನು ನೋಡುತ್ತೇವೆ.** ಪ್ರತಿಯೊಬ್ಬರೂ ಧನ್ಯರೆನಿಸಿಕೊಳ್ಳ –ಬೇಕೆಂದು ಇಷ್ಟಪಡುತ್ತಾರೆ. ಯಾರೊಬ್ಬರೂ ನಾಶವಾಗುವದಕ್ಕೆ ಇಷ್ಟಪಡುವದಿಲ್ಲ. ಪ್ರತಿಯೊಬ್ಬರೂ ಆಶೀರ್ವದಿಸಲ್ಪಡಬೇಕೆಂದು ದೇವರೂ ಇಷ್ಟಪಡುತ್ತಾನೆ. ಆದರೆ ನೀವು ದೇವರು ಗೊತ್ತುಪಡಿಸಿರುವ ಆಶೀರ್ವಾದದ ಮಾರ್ಗದಿಂದ ಬರಲೇಬೇಕು. ಆಶೀರ್ವಾ –ದದ ಆ ಮಾರ್ಗ ಯಾವುದು? ಕೀರ್ತನೆಗಳ ಮೊದಲನೆಯ ಸಂಗೀತವು ಇದನ್ನು ಎರಡು ಆಲೋಚನೆಗಳಲ್ಲಿ ವಿವರಿಸುತ್ತದೆ. **ಮೊದಲನೆಯದು:** ದೇವರ ವಾಕ್ಯವನ್ನು ಪರಿಹಾಸ್ಯ ಮಾಡುವವರ ಮಾರ್ಗವನ್ನು ಅನುಸರಿಸಬಾರದು. **ಎರಡನೆಯದು:** ಗ್ರಹಿಸಿ – –ಕೊಳ್ಳುವ ಗುರಿಯೊಂದಿಗೆ ದೇವರ ವಾಕ್ಯವನ್ನು ಧ್ಯಾನಮಾಡಬೇಕು, ದೇವರು ಸ್ಥಾಪಿಸಿರುವ ರಕ್ಷಣೆಯ ಮಾರ್ಗವನ್ನು

ನಂಬಬೇಕು ಮತ್ತು ಹೊಂದಿಕೊಳ್ಳಬೇಕು. ಒಂದುವೇಳೆ ನೀವು ದೇವರ ನೀತಿಯ ಮಾರ್ಗವನ್ನು ನಂಬಿ ಅದನ್ನು ಹಿಂಬಾಲಿಸಿದರೆ, "ನೀವು ನೀರಿನ ಕಾಲಿವೆಗಳ ಬಳಿಯಲ್ಲಿ ಬೆಳೆದ ಮರದ ಹಾಗಿರುವಿರಿ"; ಎಂದು ದೇವರ ವಾಕ್ಯ ಹೇಳುತ್ತದೆ. ನಿಮ್ಮ ಜೀವವು ದೇವರಲ್ಲಿಯೇ ಸ್ಥಾಪಿಸಲ್ಪಟ್ಟು, ಪ್ರೀತಿ ಸಂತೋಷ ಮತ್ತು ಸಮಾಧಾನ ಎನ್ನುವಂತಹ "ತಕ್ಕ ಕಾಲದ ಫಲ" ವನ್ನು ಕೊಡುತ್ತದೆ. ಒಂದು ವೇಳೆ ನೀವು ದೇವರ ನೀತಿಯ ಮಾರ್ಗವನ್ನು ಅನುಸರಿಸದಿದ್ದರೆ, "ಗಾಳಿಯು ಬಡಕೊಂಡು ಹೋಗುವ ಹೊಟ್ಟಿನ ಹಾಗೆ" ನೀವು ನಾಶವಾಗುತ್ತೀರಿ.

ಈಗ ಕೀರ್ತನೆಗಳ ಎರಡನೆಯ ಸಂಗೀತಕ್ಕೆ ಹೋಗೋಣ. ಈ ಅಧ್ಯಾಯದಲ್ಲಿ, ದೇವರು ಈ ಲೋಕಕ್ಕೆ ಬರಬೇಕಾಗಿದ್ದ **ವಿಮೋಚ –ಕನ** ಕುರಿತಾಗಿ ಬರೆಯುವದಕ್ಕೆ ದಾವೀದನನ್ನು ಪ್ರೇರೇಪಿಸಿದ್ದಾನೆ. ದೇವರು ತನ್ನ ಪ್ರವಾದಿಯಾದ ದಾವೀದನ ಬರವಣಿಗೆಯ ಮೂಲಕ ನಮ್ಮೊಂದಿಗೆ ಮಾತಾಡಿರುವ ಸಂದೇಶವನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

"ಅನ್ಯಜನಗಳು ದೊಂಬಿ ಮಾಡುವದೂ ಜನಾಂಗಗಳವರು ವ್ಯರ್ಥಕಾರ್ಯಗಳನ್ನು ಯೋಚಿಸುವದು ಯಾಕೆ? ಯೆಹೋವನಿಗೂ **ಆತನು ಅಭಿಷೇಕಿಸಿದವನಿಗೂ** (ಮೆಸ್ಸೀಯ) ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ, ಅಧಿಕಾರಿಗಳು ಒಟ್ಟಾಗಿ ಸೇರಿ ಆಲೋಚಿಸುತ್ತಿದ್ದಾರೆ. ನಮಗೆ ಅವರು ಹಾಕಿದ ಬಂಧನಗಳನ್ನು ಕಿತ್ತು ಬೇಡಿಗಳನ್ನು ಮುರಿದು ಬಿಸಾಡೋಣ ಎಂದು ಮಾತಾಡಿ –ಕೊಳ್ಳುತ್ತಾರಲ್ಲಾ. ಪರಲೋಕದಲ್ಲಿ ಆಸನಾರೂಢನಾಗಿರುವಾತನು ಅದಕ್ಕೆ ನಗುವನು. ಕರ್ತನು ಅವರನ್ನು ಪರಿಹಾಸ್ಯಮಾಡುವನು. ಅನಂತರ ಆತನು ಸಿಟ್ಟಾಗಿ –ನಾನು ನೇಮಿಸಿದ **ಅರಸನನ್ನು** ಚೀಯೋನೆಂಬ ನನ್ನ ಪರಿಶುದ್ದ ಪರ್ವತದಲ್ಲಿಯೇ ಸ್ಥಾಪಿಸಿದ್ದಾಯಿತು ಎಂದು ಹೇಳಿ ಕೊಪಾವೇಶದಿಂದ ಅವರನ್ನು ಕಳವಳಗೊಳಿಸುವನು. ನಾನು ಯೆಹೋವನ ಆಜ್ಞೆಯನ್ನು ತಿಳಿಸುತ್ತೇನೆ, ಕೇಳಿರಿ; ಆತನು ನನಗೆ – **ನನಗೆ ನೀನು ಮಗನು;** ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ, ನೀನು ಕೇಳಿಕೊಂಡರೆ ಅನ್ಯಜನಗಳನ್ನೆಲ್ಲಾ ನಿನಗೆ ಅಧೀನ ಮಾಡುವೆನು; ಭೂಮಿಯ ಕಟ್ಟಕಡೆಯವರೆಗೂ ಇರುವ ಎಲ್ಲಾ ದೇಶಗಳನ್ನೂ ನಿನಗೆ ಸ್ವಾಸ್ಥ್ಯವಾಗಿ ಕೊಡುವೆನು. ಕಬ್ಬಿಣದ ಗದೆಯಿಂದ ಅವರನ್ನು ನಾಶಮಾಡುವಿ; ಮಣ್ಣಿನ ಮಡಿಕೆಗಳನ್ನೋ ಎಂಬಂತೆ ಅವರನ್ನು ಒಡೆದುಹಾಕುವಿ ಎಂದು ಹೇಳಿ –ದನು. ಆದದರಿಂದ ಅರಸರುಗಳಿರಾ. ವಿವೇಕಿಗಳಾಗಿರ್ರಿ; ದೇಶಾಧೀಪತಿಗಳಿರಾ ಬುದ್ಧಿಮಾತುಗಳಿಗೆ ಕಿವಿಗೊಡಿರಿ. ಯೆಹೋವನನ್ನು ಭಯಭಕ್ತಿಯಿಂದ ಸೇವಿಸಿರಿ; ನಡುಗುತ್ತಾ ಉಲ್ಲಾಸಪಡಿರಿ. **ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೋಪವು ಬೇಗನೇ ಪ್ರಜ್ವಲಿಸಲು ನೀವು ದಾರಿಯಲ್ಲೇ ನಾಶವಾದೀರಿ. ಆತನ ಮರೆಹೊಕ್ಕವರೆಲ್ಲರು ಧನ್ಯರು."** (ಕೀರ್ತನೆಗಳು–೨:೧೦೧೨)

ಕೀರ್ತನೆಗಳ ಎರಡನೆಯ ಅಧ್ಯಾಯದಲ್ಲಿ ದೇವರಾದ ಕರ್ತನು ಏನು ಹೇಳಿದ್ದಾನೆಂಬುದು ನಿಮಗೆ ಅರ್ಥವಾಯಿತಾ? ಇದು ಅತ್ಯಂತ ಪ್ರಾಮುಖ್ಯವಾದುದಾಗಿದೆ! ಈ ಸಂಗೀತದಲ್ಲಿ, ಆದಾಮನ ಮಕ್ಕಳಿಗೆ ರಕ್ಷಣೆಯನ್ನು ತರುವದಕ್ಕೆ ಲೋಕದೊಳಕ್ಕೆ ಬರಲಿಕ್ಕಿದ್ದ **ವಿಮೋಚಕನ ಮೂರು ಅದ್ಭುತವಾದ ಹೆಸರುಗಳನ್ನು** ದೇವರು ತಿಳಿಯಪಡಿಸಿದ್ದಾನೆ. ನೀವು ಆ ಮೂರು ಹೆಸರುಗಳನ್ನು ಕೇಳಿಸಿ – –ಕೊಂಡಿರಾ? ಅವು; **ಮೆಸ್ಸೀಯನು, ಅರಸನು, ಮತ್ತು ಮಗನು**. ಲೋಕದ ರಕ್ಷಕನಿಗೆ ದೇವರು ಸೂಚಿಸಿರುವ ಈ ಮೂರು ಹೆಸರುಗಳ ಕುರಿತಾಗಿ ಸ್ವಲ್ಪ ಆಲೋಚಿಸಿಕೊಳ್ಳೋಣ.

೧) ಮೊದಲನೆಯದಾಗಿ, ದೇವರು ವಿಮೋಚಕನನ್ನು **ಮೆಸ್ಸೀಯನೆಂಬುದಾಗಿ** ಕರೆದಿದ್ದಾನೆ. ಮೆಸ್ಸೀಯ ಎಂಬುದು ಒಂದು ಗ್ರೀಕ್ ಶಬ್ದವಾಗಿದ್ದು ದೇವರು ಆರಿಸಿಕೊಂಡವನು {ಅಭಿಷೇಕಿಸಲ್ಪಟ್ಟವನು} ಎಂಬ ಅರ್ಥವುಳ್ಳದ್ದಾಗಿದೆ. ಲೋಕದ ರಕ್ಷಕನನ್ನಾಗಿ ಮತ್ತು ನ್ಯಾಯಾಧಿಪತಿಯನ್ನಾಗಿ ದೇವರು ತಾನೇ ಈತನನ್ನು ಆರಿಸಿಕೊಂಡದ್ದರಿಂದ, ಈ ಲೋಕಕ್ಕೆ ಬರಬೇಕಾಗಿದ್ದ ವಿಮೋಚಕನನ್ನು ಪ್ರತಿ –ಯೊಬ್ಬರೂ ನಂಬಿ ಅಂಗೀಕರಿಸಿಕೊಳ್ಳಬೇಕೆಂದು ಮೆಸ್ಸೀಯ ಎಂಬ ಹೆಸರಿನೊಂದಿಗೆ ದೇವರು ಆದಾಮನ ಮಕ್ಕಳಿಗೆ ತಿಳಿಸಿದನು. ಹೀಗಿದ್ದರೂ, ದೇವರು ಈ ಲೋಕಕ್ಕೆ ಕಳುಹಿಸಲಿಕ್ಕಿದ್ದ ಮೆಸ್ಸೀಯನನ್ನು ಆದಾಮನ ಮಕ್ಕಳಲ್ಲಿ ಹೆಚ್ಚಿನವರು ತಿರಸ್ಕರಿಸುತ್ತಾರೆ ಎಂದು ದೇವರು ಈ ಸಂಗೀತದ ಮೊದಲ ಮೂರು ವಚನಗಳಲ್ಲಿ ಮೊದಲೇ ತಿಳಿಸಿದ್ದಾನೆ. ಆ ವಚನಗಳನ್ನು ಮತ್ತೆ ಓದಿಕೊಳ್ಳೋಣ:

"ಅನ್ಯಜನಗಳು ದೊಂಬಿಮಾಡುವದೂ ಜನಾಂಗಗಳವರು ವ್ಯರ್ಥಕಾರ್ಯಗಳನ್ನು ಯೋಚಿಸುವದು ಯಾಕೆ? ಯೆಹೋವನಿಗೂ ಆತನು ಅಭಿಷೇಕಿಸಿದವನಿಗೂ ವಿರೋಧವಾಗಿ ಭೂಪತಿಗಳು ಸನ್ನದ್ಧರಾಗಿ ನಿಂತಿದ್ದಾರೆ, ಅಧಿಕಾರಿಗಳು ಒಟ್ಟಾಗಿ ಸೇರಿ ಆಲೋಚಿಸು –ತ್ತಿದ್ದಾರೆ. ನಮಗೆ ಅವರು ಹಾಕಿದ ಬಂಧನಗಳನ್ನು ಕಿತ್ತು ಬೇಡಿಗಳನ್ನು ಮುರಿದು ಬಿಸಾಡೋಣ ಎಂದು ಮಾತಾಡಿಕೊಳ್ಳುತ್ತಾ – ರಲ್ಲಾ." (ಕೀರ್ತನೆ–೨:೧–೩)

ದೇವರು ಕಳಿಸಿದ ಮೆಸ್ಸೀಯನನ್ನು ಲೋಕದ ಜನರು ಯಾಕೆ ತಿರಸ್ಕರಿಸುತ್ತಿದ್ದರು? ಯಾಕಂದರೆ ಆತನು ಒಬ್ಬ ಪರಿಶುದ್ಧ ವ್ಯಕ್ತಿಯಾ –ಗಿದ್ದ, ಪಾಪದ ಕಲೆಯಿಲ್ಲದವನಾಗಿದ್ದ, ಮತ್ತು ವಾಕ್ಯವು ನಮಗೆ ಹೇಳುವದೇನೆಂದರೆ, "ಕೆಟ್ಟದ್ದನ್ನು ಮಾಡುವವರು ಬೆಳಕನ್ನು ಸಹಿ –ಸುವದಿಲ್ಲ. **ತಮ್ಮ ಕೃತ್ಯಗಳು ದುಷ್ಕೃತ್ಯಗಳಾಗಿ ತೋರಿಬಂದಾವೆಂದು ಬೆಳಕಿಗೆ ಬರುವದಿಲ್ಲ."** (ಯೋಹಾನ–೩:೨೦) ಹಾಗಾಗಿ ಈ ಲೋಕದ ರಕ್ಷಕನನ್ನಾಗಿ ಮತ್ತು ನ್ಯಾಯಾಧಿಪತಿಯನ್ನಾಗಿ ದೇವರು ಆರಿಸಿದ ಪರಿಶುದ್ಧ ಮನುಷ್ಯನನ್ನು ನಾಶಪಡಿಸುವದಕ್ಕೆ ಹೇಗೆ ಯೆಹೂದ್ಯರೂ ಮತ್ತು ಲೋಕದ ಜನಾಂಗಗಳವರೂ ಒಟ್ಟಾಗಿ ಸೇರಿ ಆಲೋಚಿಸುತ್ತಿದ್ದಾರೆ ಎಂಬುದನ್ನು ದೇವರು ಮೊದಲೇ ತಿಳಿ –ಸುತ್ತಿದ್ದಾನೆ. ಆದರೆ ದುಷ್ಟ ಮನುಷ್ಯರು ಮಾಡುವದಕ್ಕೆ ಪ್ರಯತ್ನಿಸುತ್ತಿರುವ ಪ್ರತಿಯೊಂದನ್ನೂ ದೇವರು ತಿಳಿದಿದ್ದನು. ದೇವರು

ಪಾಪಿಗಳನ್ನು ವಿಮೋಚಿಸುವದಕ್ಕೆ ತನ್ನ ನೀತಿಯ ಯೋಜನೆಯನ್ನು ನೆರವೇರಿಸುವದಕ್ಕೆ ಮನುಷ್ಯರ ಕೆಟ್ಟ ಯೋಜನೆಗಳನ್ನು ಉಪ –ಯೋಗಿಸಿದನು. ಅದಕ್ಕಾಗಿಯೇ ನಾವು: **"ಪರಲೋಕದಲ್ಲಿ ಆಸನಾರೂಢನಾಗಿರುವಾತನು ಅದಕ್ಕೆ ನಗುವನು; ಕರ್ತನು ಅವರನ್ನು ಪರಿಹಾಸ್ಯಮಾಡುವನು."** (ಕೀರ್ತನೆ–೨:೪) ಎಂದು ಓದುತ್ತೇವೆ. ಹಾಗಾಗಿ, ಈ ಮೊದಲನೆಯ ಅಧ್ಯಾಯದಲ್ಲಿ ದೇವರು ವಿಮೋಚಕನಿಗೆ ಮೆಸ್ಸೀಯನೆಂಬ ಹೆಸರನ್ನು ಕೊಟ್ಟಿದ್ದಾನೆ. ಇಬ್ರಿಯ ಶಬ್ದವಾಗಿರುವ ಮೆಸ್ಸೀಯ ಎನ್ನುವದು ಕ್ರಿಸ್ತನು ಎಂಬ ಗ್ರೀಕ್ ಶಬ್ದಕ್ಕೆ ಸಮಾನವಾಗಿದೆ ಎಂಬುದನ್ನು ತಿಳಿದುಕೊಳ್ಳುವದಕ್ಕೆ ನೀವು ಆಸಕ್ತರಾಗುವದಕ್ಕೆ ಶಕ್ತರಾಗುತ್ತೀರಿ. **"ದೇವರು ಆರಿಸಿಕೊಂಡವನು"** ಎಂಬುದು ಎರಡೂ ಶಬ್ದದ ಅರ್ಥವಾಗಿದೆ.

೨) ಎರಡನೆಯ ಹೆಸರು **"ಅರಸನು."** ಮೆಸ್ಸೀಯನು ಅರಸನೂ ಸಹ ಆಗಿದ್ದಾನೆ. ಹೆಚ್ಚಿನ ಜನರು ಆತನನ್ನು ತಿರಸ್ಕರಿಸಿದ್ದಾಗ್ಯೂ ಅಂತ್ಯದಲ್ಲಿ ಈ ಮೆಸ್ಸೀಯನು ಲೋಕವನ್ನು ಆಳುವವನೂ ಮತ್ತು ನ್ಯಾಯಾಧಿಪತಿಯೂ ಆಗಿರುತ್ತಾನೆಂಬುದನ್ನು ಪ್ರತಿಯೊಬ್ಬರೂ ಆ ಹೆಸರಿನ ಮೂಲಕ ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಾನೆ. ನ್ಯಾಯತೀರ್ಪಿನ ಮಹಾ ದಿನದಂದು ಪ್ರತಿಯೊಬ್ಬರೂ ಆತನ ಮುಂದೆ ಮೊಣಕಾಲೂರಬೇಕು, ಯಾಕಂದರೆ ದೇವರು ಈತನನ್ನು ರಾಜಾಧಿ ರಾಜನನ್ನಾಗಿಯೂ ಕರ್ತಾಧಿ ಕರ್ತನನ್ನಾಗಿಯೂ ಆರಿಸಿಕೊಂಡಿದ್ದಾನೆ. ಇದರ ಪರಿಣಾಮವಾಗಿ, **ಮೆಸ್ಸೀಯನು ನಿಮ್ಮ ರಕ್ಷಕನು ಇಲ್ಲವೇ ನಿನ್ನ ನ್ಯಾಯಾಧಿಪತಿಯೂ** ಆಗಿರುತ್ತಾನೆ – ಯಾಕೆಂದರೆ ನೀವು ಇದನ್ನು ಇಷ್ಟಪಡಿರಿ ಅಥವಾ ಪಡದಿರಿ ಆತನು ಎಂದೆಂದಿಗೂ ಆಳ್ವಿಕೆ ನಡೆಸುವದಕ್ಕೆ ದೇವರು ಆರಿಸಿಕೊಂಡಿ – –ರುವ **ಅರಸನಾಗಿದ್ದಾನೆ!**

೩) ಮೂರನೆಯದಾಗಿ, ಈ ಅಧ್ಯಾಯದಲ್ಲಿ ನಾವು ಕೇಳಿಸಿಕೊಂಡಿರುವ, ದೇವರು ಮೆಸ್ಸೀಯನಿಗೆ ಕೊಟ್ಟಿರುವ ಇನ್ನೊಂದು ಹೆಸರು, **"ಮಗನು"** ಎಂಬುದು, ಇದನ್ನು ನಾವು ತುಂಬಾ ಜಾಗರೂಕತೆಯಿಂದ ಆಲೋಚಿಸಬೇಕು. ಈ ಹೆಸರಿನ ಅರ್ಥವೇನೆಂಬುದನ್ನು ನಾವು ವಿವರಿಸುವದಕ್ಕಿಂತ ಮೊದಲು, ದೇವರು ತನಗೆ ಕೊಟ್ಟಂತಹ ಜ್ಞಾನದಿಂದ ದಾವೀದನು ಕೀರ್ತನೆಗಳಲ್ಲಿ ಬರೆದಿರುವ ಪ್ರತಿ – –ಯೊಂದನ್ನೂ ಬಹುಶ: ನಾವು ಜ್ಞಾಪಿಸಿಕೊಳ್ಳಬೇಕು. ಪ್ರವಾದಿಗಳ ಬರವಣಿಗೆಗಳಲ್ಲಿ ನಮಗೆ ಅರ್ಥಮಾಡಿಕೊಳ್ಳುವದಕ್ಕೆ ಕಷ್ಟವಾಗು –ವಂತಹ ಸಂಗತಿಗಳನ್ನು ಸಹ ನಾವು ಜ್ಞಾಪಿಸಿಕೊಳ್ಳಬೇಕು, ಆದರೆ ಸತ್ಯದಿಂದ ಅವುಗಳನ್ನು ತಡೆಯುವದಕ್ಕಾಗುವದಿಲ್ಲ! ದೇವರು ತನ್ನ ವಾಕ್ಯದಲ್ಲಿ ಹೀಗೆ ಹೇಳುತ್ತಾ ನಮ್ಮನ್ನು ಎಚ್ಚರಿಸುತ್ತಾನೆ: **"**ಅವನು ತನ್ನ ಎಲ್ಲಾ ಪತ್ರಿಕೆಗಳಲ್ಲಿಯೂ ಈ ವಿಷಯಗಳನ್ನು ಕುರಿತು ಬರೆಯುವಾಗ ಹೀಗೆ ಬೋಧಿಸಿದ್ದಾನೆ. ಆ ಪತ್ರಿಕೆಗಳಲ್ಲಿರುವ ಕೆಲವು ಮಾತುಗಳು ತಿಳಿಯುವದಕ್ಕೆ ಕಷ್ಟವಾಗಿವೆ. ವಿದ್ಯಾಹೀನರೂ ಚಪಲಚಿತ್ತರೂ ಹೇಗೆ ನಮಗಿರುವ ಮಿಕ್ಕಾದ ಗ್ರಂಥಗಳಿಗೆ ತಪ್ಪಾದ ಅರ್ಥಮಾಡಿಕೊಂಡಿದ್ದಾರೋ ಹಾಗೆಯೇ ಇವುಗಳಿಗೂ ತಪ್ಪಾದ ಅರ್ಥಮಾಡಿಕೊಂಡು ತಮಗೆ ನಾಶವನ್ನುಂಟು ಮಾಡಿಕೊಳ್ಳುತ್ತಾರೆ." (೨ಪೇತ್ರ–೩:೧೬) ಅಜ್ಞಾನವು ಒಂದು ಭಯಂಕರವಾದ ಸಂಗತಿ, ವಿಶೇಷವಾಗಿ ನಿತ್ಯವಾದ ನಾಶನದಿಂದ ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ ದೇವರು ಆರಿಸಿಕೊಂಡ ಮೆಸ್ಸೀಯನಿಗೆ ಸಂಬಂ –ಧಪಟ್ಟಾಗ ಇದು ಭಯಂಕರವಾದ ವಿಷಯವಾಗುತ್ತದೆ! (ಉಲೂಫ್) ಗಾದೆಯು ಇದನ್ನು ಚೆನ್ನಾಗಿ ತಿಳಿಸುತ್ತದೆ: **"ನೀವು ಇದನ್ನು ತಿಳಿದುಕೊಳ್ಳುವದಕ್ಕಿಂತ ಮೊದಲೇ ಅಜ್ಞಾನವು ನಿಮ್ಮನ್ನು ಕೊಲ್ಲುತ್ತದೆ!"** ಮೆಸ್ಸೀಯನಿಗೆ ದೇವರು ತಾನೇ ಕೊಟ್ಟಿರುವ ಮೂರನೆಯ ಹೆಸರಿನ ಕುರಿತಾಗಿ ನಾವು ಆಲೋಚಿಸುವ ಹಾಗೆ ಆ ಆಲೋಚನೆಯನ್ನು ನಮ್ಮ ಮನಸ್ಸಿನಲ್ಲಿಟ್ಟುಕೊಳ್ಳೋಣ.

ಈಗ ಎರಡನೆಯ ಕೀರ್ತನೆಗೆ ಹಿಂದಕ್ಕೆ ಬರೋಣ. ಏಳನೆಯ ವಚನದಲ್ಲಿ ನಾವು ಓದಿದಂತೆ, ಮೆಸ್ಸೀಯನು ಹೀಗೆ ಹೇಳುತ್ತಾನೆ: **"**ನಾನು ಯೆಹೋವನ ಆಜ್ಞೆಯನ್ನು ತಿಳಿಸುತ್ತೇನೆ ಕೇಳಿರಿ; ಆತನು ನನಗೆ – **ನನಗೆ ನೀನು ಮಗನು, ನಾನೇ ಈ ಹೊತ್ತು ನಿನ್ನನ್ನು ಪಡೆದಿದ್ದೇನೆ."**(ಕೀರ್ತನೆ–೨:೭) ಕರ್ತನು ಮೆಸ್ಸೀಯನಿಗೆ ಹೇಳಿರುವದನ್ನು ನೀವು ಕೇಳಿಸಿಕೊಂಡಿರಾ? **"ನೀನು ನನ್ನ ಮಗನು.** . . . ನಾನು ನಿನಗೆ **ತಂದೆಯಾಗಿರುವೆನು"**ಎಂದು ಹೇಳಿದ್ದಾನೆ. ದೇವರು ಮೆಸ್ಸೀಯನನ್ನು **ತನ್ನ ಮಗನೆಂಬುದಾಗಿ** ಯಾಕೆ ಕರೆದನೆಂಬುದು ನಿಮಗೆ ಗೊತ್ತಾ? ಈ ಹೆಸರಿನ ಅರ್ಥ **ಏನೆಂದು** ನಿಮಗೆ ತಿಳಿದಿದೆಯಾ? ಈ ಹೆಸರಿಗೆ **ಅರ್ಥ ಇಲ್ಲವೆಂದು** ಎಲ್ಲರಿಗೂ ಗೊತ್ತು ಎಂದು ನಮಗೆ ನಂಬಿಕೆಯುಂಟು. ದೇವರು ಒಬ್ಬ ಹೆಂಡತಿಯನ್ನು ತೆಗೆದುಕೊಂಡು ಆಕೆಯಿಂದ ಒಬ್ಬ ಮಗನನ್ನು ಪಡೆದುಕೊಂಡ –ನೆಂದು ಇದರ ಅರ್ಥವಲ್ಲ! ಎಂದಿಗೂ ಅಲ್ಲ! ಅಂತಹ ಒಂದು ಆಲೋಚನೆಯು ದೇವದೂಷಣೆಯಾಗುತ್ತದೆ! ದೇವರು ಆತ್ಮನಾಗಿ –ದ್ದಾನೆ ಮತ್ತು ಮನುಷ್ಯನು ಒಬ್ಬನಿಗೆ ಜನ್ಮಕೊಡುವ ಹಾಗೆ ದೇವರು ಜನ್ಮಕೊಡುವದಿಲ್ಲ.

ಹಾಗಾದರೆ, ದೇವರು ಮೆಸ್ಸೀಯನಿಗೆ **"ನೀನು ನನಗೆ ಮಗನು!"** ಎಂದು ಯಾಕೆ ಹೇಳಿದನು? ತಾನು ಯಾಕೆ ಹೀಗೆ ಹೇಳಿದನೆಂಬು –ದನ್ನು ದೇವರಾದ ಕರ್ತನು ತಾನೇ ನಮಗೆ ತಿಳಿಸಿರುವದರಿಂದ ನಾವು ದೇವರಿಗೆ ವಂದನೆಗಳನ್ನು ಸಲ್ಲಿಸಬೇಕು. ಈ ದಿನ ಈ ವಿಷಯದ ಕುರಿತು ತುಂಬಾ ಆಳವಾಗಿ ಹೋಗುವದಕ್ಕೆ ನಮಗೆ ಸಮಯವಿಲ್ಲ, ಆದರೆ ದೇವರು ಮೆಸ್ಸೀಯನನ್ನು **ತನ್ನ ಮಗನೆಂಬು –ದಾಗಿ ಯಾಕೆ** ಕರೆದನೆಂಬುದಕ್ಕೆ ಪ್ರವಾದಿಗಳ ಬರವಣಿಗೆಗಳಿಂದ **ಮೂರು ಕಾರಣಗಳನ್ನು** {ಆಲೋಚನೆಗಳನ್ನು} ನಾವು ನಿಮಗೆ ಕೊಡುವದಕ್ಕೆ ಇಷ್ಟಪಡುತ್ತೇವೆ.

**ಮೊದಲನೆಯದಾಗಿ, ಮೆಸ್ಸೀಯನು ಮೇಲಿನಿಂದ ಅಂದರೆ ಪರಲೋಕದಿಂದ ಬಂದವನಾಗಿದ್ದದರಿಂದ** ದೇವರು ಮೆಸ್ಸೀಯನನ್ನು ತನ್ನ ಮಗನೆಂಬುದಾಗಿ ಕರೆದನೆಂಬುದನ್ನು ನಾವು ತಿಳಿದುಕೊಳ್ಳಬೇಕು. ಮೆಸ್ಸೀಯನು ಒಬ್ಬ ಮನುಷ್ಯನಿಂದ ಬಂದವನಲ್ಲ ಆದರೆ ದೇವರ ಪ್ರಸನ್ನತೆಯಿಂದ ಬಂದವನೆಂದು ಪ್ರವಾದಿಗಳ ಬರವಣಿಗೆಗಳನ್ನು ನಂಬಿರುವ ಪ್ರತಿಯೊಬ್ಬ ವಿಶ್ವಾಸಿಯು ತಿಳಿದುಕೊಳ್ಳಬೇಕು. ನೀವು

ತಿಳಿದಿರುವ ಹಾಗೆ **ಮೆಸ್ಸೀಯನು ಭೂಲೋಕದ ತಂದೆಯನ್ನು ಹೊಂದಿದವನಾಗಿರಲಿಲ್ಲ.** ಆತನ ಭೂಲೋಕದ ಅಸ್ತಿತ್ವಕ್ಕೆ ಸಂಬಂಧ –ಪಟ್ಟಂತೆ, ಆತನು ದಾವೀದನ ಸಂತತಿಯಿಂದ ಬಂದವನು, ಯಾಕೆಂದರೆ ಅರಸನಾದ ದಾವೀದನ ಸಂಬಂಧಿಯಾದ ಒಬ್ಬ ಕನ್ನಿಕೆ –ಯಲ್ಲಿ ಮೆಸ್ಸೀಯನು ಹುಟ್ಟಿದ್ದನು. ಆದರೆ ಆತನು ತಂದೆಯ ಕಡೆಯಿಂದ, ಮೆಸ್ಸೀಯನು ದೇವರ ಆತ್ಮನಿಂದ ಅದ್ವಿತೀಯನಾಗಿ ಹುಟ್ಟಿದ್ದನು. ಅದಕ್ಕಾಗಿಯೇ ದೇವರು ಆತನಿಗೆ, **"ನೀನು ನನಗೆ ಮಗನು;** ಇಂದಿನಿಂದ ನಾನು ನಿನಗೆ ತಂದೆಯಾಗಿರುವೆನು!**"** ಎಂದು ಹೇಳುವದಕ್ಕೆ ಶಕ್ತನಾದನು;

**ಎರಡನೆಯದಾಗಿ,** ದೇವರು ತನ್ನ ಮಗನನ್ನು ಮೆಸ್ಸೀಯನೆಂದು ಕರೆದದ್ದು ಯಾಕಂದರೆ ವಾಕ್ಯವು ಹೇಳುವದೇನೆಂದರೆ, **ದೇವರು ಮತ್ತು ಮೆಸ್ಸೀಯನು ಇಬ್ಬರೂ ಒಂದೇ ರೀತಿಯ ಪವಿತ್ರ ಗುಣಲಕ್ಷಣಗಳನ್ನು ಹಂಚಿಕೊಂಡಿದ್ದಾರೆ.** ತಂದೆಯು ಹೇಗೋ ಹಾಗೆಯೇ ಮಗನೂ ಇದ್ದಾನೆ. ದೇವರು ಶುದ್ಧನೂ ಹಾಗೂ ಪವಿತ್ರನೂ ಆಗಿರುವ ಹಾಗೆಯೇ ವಾಗ್ದಾನದ ವಿಮೋಚಕನು ಇದ್ದನು. ನಾವು ಈಗ ಇದರಿಂದ ದೂರ ಹೋಗುವದಕ್ಕಾಗುವದಿಲ್ಲ, ಆದರೆ ನಾವು ಸುವಾರ್ತೆಯ {ಇಂಜಿಲ್} ಹೇಳಿಕೆಗೆ ಬಂದಾಗ, ಪಾಪದ ಕಲೆಯೊಂದಿಗಿದ್ದ ಆದಾಮನ ಮಕ್ಕಳ ಹಾಗೆ ಮೆಸ್ಸೀಯನು ಇರಲಿಲ್ಲ ಎಂಬುದನ್ನು ನಾವು ನೋಡುತ್ತೇವೆ! ನಾವು ನೋಡಿರುವ ಹಾಗೆ, ದೊಡ್ಡ ಪ್ರವಾದಿಗಳು ಸಹ ಪಾಪವನ್ನು ಮಾಡಿದ್ದಾರೆ. ಹೀಗಿದ್ದರೂ, ಮೆಸ್ಸಿಯನು ಎಂದಿಗೂ ಪಾಪಮಾಡಲಿಲ್ಲ. ಆತನು ಯಾವಾಗಲೂ ದೇವರ ಚಿತ್ತವನ್ನೇ ಮಾಡಿದನು. ಪಾಪಿಗಳನ್ನು ಅವರ ಪಾಪಗಳಿಂದ ರಕ್ಷಿಸುವದಕ್ಕಾಗಿ ಆತನು ಲೋಕದೊಳಕ್ಕೆ ಬರಬೇಕಾಗಿತ್ತು ಅದಕ್ಕಾಗಿ ವಮೆಸ್ಸೀಯನು ವಪಾಪವಿಲ್ಲದವನಾಗಿರುವದು ಅಗತ್ಯವಾಗಿತ್ತು! ದೊಡ್ಡ ಸಾಲಗಳಲ್ಲಿರುವವರು ಇತರರ ಸಾಲಗಳನ್ನು ಸಂದಾಯಮಾಡುವದಕ್ಕಾಗುತ್ತದೋ? ಇಲ್ಲ, ಅದು ಆಗುವದಿಲ್ಲ! ಮೆಸ್ಸೀಯನು ಪಾಪದ ಸಾಲವಿಲ್ಲದವನಾಗಿದ್ದನು. ವಾಕ್ಯವು ಅವನನ್ನು "ಈತನು ಪರಿಶುದ್ಧವೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶ ಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು." (ಇಬ್ರಿಯ–೭:೨೬) ಎಂದು ಕರೆಯುತ್ತದೆ. **ಹೌದು, ತನ್ನನ್ನು ಪರಿಶುದ್ಧ ––ನನ್ನಾಗಿ ಕಳುಹಿಸಿಕೊಟ್ಟ ದೇವರ ಹಾಗೆಯೇ ವಿಮೋಚಕನು ಪರಿಶುದ್ಧನಾಗಿದ್ದನು!** ಅದಕ್ಕೋಸ್ಕರವೇ ಅತನನ್ನು ತನ್ನ ಮಗನೆಂಬುದಾಗಿ ಕರೆಯುವದಕ್ಕೆ ದೇವರು ನಾಚಿಕೊಳ್ಳಲಿಲ್ಲ.

**ಮೂರನೆಯದಾಗಿ** ನೀವು ತಿಳಿದುಕೊಳ್ಳಬೇಕಾದದ್ದೇನೆಂದರೆ, **ಇತರ ಎಲ್ಲಾ ಪ್ರವಾದಿಗಳಿಂದ ಆತನನ್ನು ಪ್ರತ್ಯೇಕಿಸುವದಕ್ಕಾಗಿ** ದೇವರು ಮೆಸ್ಸೀಯನನ್ನು ತನ್ನ ಮಗನೆಂಬುದಾಗಿ ಕರೆದನು. ಅಬ್ರಹಾಮನು "ದೇವರ ಸ್ನೇಹಿತ" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ಪವ್ರಾದಿ –ಯಾದ ಮೋಶೆಯು "ದೇವರ ಮನುಷ್ಯ" ಎಂಬುದಾಗಿ ಕರೆಯಲ್ಪಟ್ಟಿದ್ದಾನೆ. ದಾವೀದನು ವಿಷಯದಲ್ಲಿ ದೇವರು, "ನನಗೆ ಒಪ್ಪುವ ಮನುಷ್ಯನು ನನಗೆ ಸಿಕ್ಕಿದನು" ಎಂದು ಹೇಳಿದ್ದಾನೆ. ಆದರೆ ಯಾವ ಪ್ರವಾದಿಗೆ ದೇವರು, "ನೀನು ನನ್ನ ಮಗನು" ಇಂದಿನಿಂದ ನಾನು ನಿನ್ನ ತಂದೆಯಾಗಿದ್ದೇನೆ ಎಂದು ಹೇಳಿದ್ದಾನೆ? ಇದು ಮೆಸ್ಸೀಯನಿಗೆ ಮಾತ್ರ ಹೇಳಲ್ಪಟ್ಟತು, ಯಾಕೆಂದರೆ ಆತನು ಮಾತ್ರವೇ ಮೇಲಿನಿಂದ ಬಂದವನು, ಒಬ್ಬ ಕನ್ನಿಕೆಯಲ್ಲಿ ಜನಿಸಿದವನು ಮತ್ತು ಪಾಪದ ಕಲೆಯಿಲ್ಲದವನೂ ಆಗಿದ್ದಾನೆ.

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ದೇವರು ತನ್ನ ಮಗನೆಂಬುದಾಗಿ ಕರೆದರುವ **ಅರಸನಾದ ಮೆಸ್ಸೀಯನನ್ನು** ನೀವು ತಿಳಿದಿದ್ದೀರಾ? ಪ್ರತಿಯೊಬ್ಬರು ಆತನನ್ನು ತಿಳಿದಿರಬೇಕೆಂದು ದೇವರು ಇಷ್ಟಪಡುತ್ತಾನೆ. ಆತನು ಹೇಳುವದನ್ನು ಕೇಳಿರಿ, ಆತನನ್ನು ನಂಬಿರಿ ಮತ್ತು ಆತನನ್ನು ಅಂಗೀಕರಿಸಿಕೊಳ್ಳಿರಿ. ಅದಕ್ಕಾಗಿಯೇ ಪ್ರವಾದಿಯಾದ ದಾವೀದನು ಈ ಮಾತುಗಳಿಂದ ಈ ಅಧ್ಯಾಯ ––ವನ್ನು ಮುಗಿಸುತ್ತಾನೆ:

"ಆದದರಿಂದ ಅರಸುಗಳಿರಾ **ವಿವೇಕಿಗಳಾಗಿರ್ರಿ;** ದೇಶಾಧಿಪತಿಗಳಿರಾ, ಬುದ್ಧಿ ಮಾತುಗಳಿಗೆ **ಕಿವಿಗೊಡಿರಿ.** ಯೆಹೋವನನ್ನು ;ಭಯ –ಭಕ್ತಿಯಿಂದ ಸೇವಿಸಿರಿ; ನಡುಗುತ್ತ ಉಲ್ಲಾಸಪಡಿರಿ. ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೊಪವು ಬೇಗನೇ ಪ್ರಜ್ವಲಿ –ಸಲು ನೀವು ದಾರಿಯಲ್ಲೆ ನಾಶವಾದೀರಿ. **ಆತನ ಮರೆಹೊಕ್ಕವರೆಲ್ಲರು ಧನ್ಯರು."** (ಕೀರ್ತನೆಗಳು–೨:೧೦–೧೨)

ಈದಿನ ಇಲ್ಲಿಗೆ ನಾವು ಮುಗಿಸಲೇ ಬೇಕು. ಮುಂದಿನ ಸಲ ದೇವರ ಚಿತ್ತವಾದರೆ, ಕೀರ್ತನೆಗಳ ಪುಸ್ತಕದಲ್ಲಿ ಪ್ರವಾದಿಯಾದ ದಾವೀದನು ಬರೆದಿರುವ ಇನ್ನೊಂದು ಮಹತ್ವದ ಕೀರ್ತನೆಯ ಮೇಲೆ ಅಧ್ಯಯನ ಮಾಡೋಣ.

ಹೀಗೆ ಹೇಳುತ್ತಾ ಪ್ರವಾದಿಯಾದ ದಾವೀದನು ಕೀರ್ತನೆಗಳಲ್ಲಿ ಏನು ಹೇಳಿದ್ದಾನೋ ಅದನ್ನು ನೀವು ಗಂಭೀರವಾಗಿ ಆಲೋಚಿಸು ––ವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಆದದರಿಂದ ಅರಸುಗಳಿರಾ ವಿವೇಕಿಗಳಾಗಿರ್ರಿ; ದೇಶಾಧಿಪತಿಗಳಿರಾ, ಬುದ್ಧಿ ಮಾತುಗಳಿಗೆ ಕಿವಿಗೊಡಿರಿ. ಯೆಹೋವನನ್ನು; ಭಯಭಕ್ತಿ ––ಯಿಂದ ಸೇವಿಸಿರಿ; ನಡುಗುತ್ತ ಉಲ್ಲಾಸಪಡಿರಿ. ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೊಪವು ಬೇಗನೇ ಪ್ರಜ್ವಲಿಸಿಲು ನೀವು ದಾರಿಯಲ್ಲೆ ನಾಶವಾದೀರಿ. ಆತನ ಮರೆಹೊಕ್ಕವರೆಲ್ಲರು ಧನ್ಯರು."** (ಕೀರ್ತನೆಗಳು–೨:೧೦–೧೨)

ಪಾಠ ೫೧

# ಕೀರ್ತನೆಗಳಿಂದ ಇನ್ನೂ ಅಧಿಕವಾಗಿ

ಕೀರ್ತನೆಗಳು ೨೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ –ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು –ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ –ರಾಗಿದ್ದೇವೆ.

ಕಳೆದ ಸಲ **ಕೀರ್ತನೆಗಳ** {ಝಾಬುರ್} **ಪುಸ್ತಕದಲ್ಲಿನ** ಮೊದಲಿನ ಎರಡು ಅಧ್ಯಾಯಗಳನ್ನು ನಾವು ಪರೀಕ್ಷಿಸಿಕೊಂಡೆವು. ಕೀರ್ತನೆ –ಗಳಲ್ಲಿರುವ ಪ್ರತಿಯೊಂದು ಅಧ್ಯಾಯಗಳನ್ನು ಓದುವದಕ್ಕೂ ಮತ್ತು ಚರ್ಚಿಸುವದಕ್ಕೂ ನಮ್ಮ ಪ್ರಸಾರದಲ್ಲಿ ನಮಗೆ ಸಮಯವಿದ್ದಿ –ದ್ದರೆ ಅದೊಂದು ತುಂಬಾ ಮಹತ್ವದ್ದಾಗಿರುತ್ತಿತ್ತು, ಆದರೆ ಕೀರ್ತನೆಗಳ ಪುಸ್ತಕವು ೧೫೦ ಅಧ್ಯಾಯಗಳನ್ನು ಹೊಂದಿರುವದರಿಂದ ಅದು ಸಾಧ್ಯವಾಗುತ್ತಿರಲಿಲ್ಲ.

ಹೀಗಿದ್ದರೂ, ಕೀರ್ತನೆಗಳ ಪುಸ್ತಕವನ್ನು ನಾವು ಮುಗಿಸುವದಕ್ಕಿಂತ ಮೊದಲು, ದಾವೀದನ ಮನಸ್ಸಿನಲ್ಲಿ ಇಡಲ್ಪಟ್ಟಿದ್ದ ಇನ್ನೊಂದು ಕೀರ್ತನೆಯನ್ನು ನಿಮ್ಮೊಂದಿಗೆ ಅಧ್ಯಯನ ಮಾಡುವದಕ್ಕೆ ನಾವು ಇಷ್ಟಪಡುತ್ತೇವೆ. **ಅದು ಇಪ್ಪತ್ತೆರಡನೆಯ ಅಧ್ಯಾಯ**. ಈ ಅಧ್ಯಾಯವು ತುಂಬಾ ಪ್ರಾಮುಖ್ಯವಾದುದು, ಯಾಕೆಂದರೆ ಆದಾಮನ ಎಲ್ಲಾ ಮಕ್ಕಳಿಗಾಗಿ **ಪಾಪದ ಸಾಲವನ್ನು ಸಂದಾಯಮಾಡುವದಕ್ಕೆ ಮೆಸ್ಸೀ –ಯನು ಯಾತನಾಮಯವಾದ ನೋವಿನಿಂದ ಹೇಗೆ ಸಾಯುತ್ತಾನೆಂಬುದನ್ನು ಇದು ಪ್ರವಾದಿಸಿದೆ.** ಈ ಅಧ್ಯಾಯದಲ್ಲಿ, ಮೆಸ್ಸೀಯನಿಗಿಂತ ಒಂದು ಸಾವಿರ ವರ್ಷಗಳ ಮೊದಲು ಬಂದಿರುವ ದಾವೀದನು, ಮೆಸ್ಸೀಯನು ಮರಣ ಹೊಂದುವ ದಿನದಂದು ಸಂಭವಿಸಲಿಕ್ಕಿರುವ ಕೆಲವು ಮೂವತ್ತು ಘಟನೆಗಳನ್ನು ಪ್ರವಾದಿಸಿದ್ದಾನೆ. ಮೆಸ್ಸೀಯನ ಕಥೆಯನ್ನು ಒಳಗೊಂಡಿರುವ ಸುವಾರ್ತೆಯನ್ನು {ಇಂಜಿಲ್} ನಾವು ಓದಿದಾಗ, ದೇವರ ಪ್ರವಾದಿಯಾದ **ದಾವೀದನು ಪ್ರವಾದಿಸಿದಂತೆಯೇ ಪ್ರತಿಯೊಂದು ಹಾಗೆಯೇ ಸಂಭವಿಸಿರುವದನ್ನು** ನಾವು ನೋಡು –ತ್ತೇವೆ. ಈ ಪ್ರಕಾರ, ಈ ಕೀರ್ತನೆಯು ಮನುಷ್ಯನ ಮನಸ್ಸಿನಿಂದ ಬಂದದ್ದಲ್ಲ ಆದರೆ ಇದು ದೇವರ ಮನಸ್ಸಿನಿಂದ ಬಂದದ್ದು ಎಂಬುದು ನಮಗೆ ನಿಶ್ಚಿತವಾಗುತ್ತದೆ. ಇಷ್ಟೊಂದು ನಿಖರವಾದ ಖಚಿತತೆಯೊಂದಿಗೆ ಮುಂದಿನದನ್ನು **ದೇವರು ಮಾತ್ರ** ಪ್ರವಾದಿಸ – –ಬಲ್ಲನು.

ಇಪ್ಪತ್ತೆರಡನೆಯ ಕೀರ್ತನೆಯಲ್ಲಿ ಪ್ರವಾದಿಯಾದ ದಾವೀದನು ಏನು ಬರೆದಿದ್ದಾನೆಂಬುದನ್ನು ಈಗ ಕೇಳಿಸಿಕೊಳ್ಳೋಣ. ಈ ಅಧ್ಯಾಯದಲ್ಲಿ, ಪಾಪಕ್ಕಾಗಿ ಒಂದು ಸಂಬಳದಂತೆ ತನ್ನ ರಕ್ತವನ್ನು ಸುರಿಸುವಂತ ದಿನದಂದು ಮೆಸ್ಸೀಯನ ಮನಸ್ಸಿನಲ್ಲಿ ಇದ್ದಂತಹ ಆಲೋಚನೆಗಳನ್ನು ದಾವೀದನು ಬರೆದಿದ್ದಾನೆ. ಅವನು ಹೇಳಿರುವದೇನೆಂದರೆ:

**"**ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ**?** ನೀನು ಯಾಕೆ ನನಗೆ ಸಹಾಯ ಮಾಡದೆಯೂ ನನ್ನ ಕೂಗನ್ನು ಕೇಳದೆಯೂ ದೂರವಾಗಿದ್ದೀ**?** ಇಸ್ರಾಯೇಲ್ಯರ ಸ್ತೋತ್ರಸಿಂಹಾಸನದಲ್ಲಿರುವಾತನೇ ನೀನು ಪವಿತ್ರ ಸ್ವರೂಪನು. ನಾನಾದರೋ ಹುಳ –ದಂಥವನೇ ಹೊರತು ಮನುಷ್ಯನಲ್ಲ; ಮನುಷ್ಯರಿಂದ ನಿಂದಿಸಲ್ಪಟ್ಟು ಜನರಿಂದ ತಿರಸ್ಕಾರ ಹೊಂದಿದ್ದೇನೆ. ನಾನು ಹೊಯ್ಯಲ್ಪಟ್ಟ ನೀರಿನಂತಿದ್ದೇನೆ; ನನ್ನ ಎಲುಬುಗಳೆಲ್ಲಾ ಸಡಲಿಹೋಗಿವೆ. ನನ್ನ ಗುಂಡಿಗೆ ಮೇಣದಂತೆ ನನ್ನಲ್ಲಿ ಕರಗಿಹೋಗಿದೆ. ನನ್ನ ಶಕ್ತಿಯು ಬೋಕಿಯ ಹಾಗೆ ಒಣಗಿಹೋಗಿದೆ. ನನ್ನ ನಾಲಿಗೆಯು ಅಂಗಳಕ್ಕೆ ಹತ್ತಿಹೋಗಿದೆ. ನೀನು ನನ್ನನ್ನು ಮಣ್ಣಿಗೆ ಸೇರಿಸುತ್ತೀ. ನಾಯಿ –ಗಳು ನನ್ನನ್ನು ಸುತ್ತಿಕೊಂಡಿವೆ; ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. **ನನ್ನ ಕೈಕಾಲುಗಳನ್ನು ತಿವಿದಿದ್ದಾರೆ."** (ಕೀರ್ತನೆ– ೨೨:೧ ,೩, ೬, ೧೪–೧೬)

ಇಲ್ಲಿ ಸ್ವಲ್ಪ ನಿಲ್ಲಿಸೋಣ. ಮೆಸ್ಸೀಯನ ಕುರಿತಾಗಿ ಪ್ರವಾದಿಯಾದ ದಾವೀದನು ಬರೆದಿರುವದನ್ನು ನೀವು ಗ್ರಹಿಸಿಕೊಂಡಿದ್ದೀರೋ**?** ಮೆಸ್ಸೀಯನು ಈ ಲೋಕಕ್ಕೆ ಬರುವದಕ್ಕೆ ಒಂದು ಸಾವಿರ ವರ್ಷಗಳಿಗಿಂತ ಮೊದಲೇ ದಾವೀದನು, **"**ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. **ಅವರು ನನ್ನ ಕೈಕಾಲುಗಳನ್ನು ತಿವಿದಿದ್ದಾರೆ!"** ಎಂದು ಬರೆದಿದ್ದಾನೆ. ಈ ಮಾತುಗಳಿಂದ ಶಿಲುಬೆಯ ಮೇಲೆ ಮೊಳೆಗಳನ್ನು ಹೊಡೆಯುವದರಿಂದ ಆದಾಮನ ಮಕ್ಕಳು ಮೆಸ್ಸೀಯನ ಕೈ ಕಾಲುಗಳನ್ನು ಹೇಗೆ ತಿವಿದ್ದಿದಾರೆ ಎಂಬುದನ್ನು ದಾವೀ –ದನು ಪ್ರವಾದಿಸಿದ್ದಾನೆ. ಮೆಸ್ಸೀಯನ ಕೈ ಕಾಲುಗಳನ್ನು ದುಷ್ಟರು ತಿವಿದಿದ್ದಾರೆ ಎಂಬುದಾಗಿ ದಾವೀದನು ಕೀರ್ತನೆಗಳಲ್ಲಿ ಯಾಕೆ

ಬರೆದನು? ಮೆಸ್ಸೀಯನು ಯಾಕೆ ಅಂತಹ ನೋವಿನಿಂದ ಕೂಡಿದ ಮರಣವನ್ನು ಹೊಂದಬೇಕಾಗಿತ್ತು? ಆತನು ಕಳಿಸಿದ ಪವಿತ್ರ ವಿಮೋಚಕನನ್ನು ಕೊಲ್ಲುವದಕ್ಕೆ ದೇವರು ಮನುಷ್ಯರಿಗೆ ಯಾಕೆ ಅನುಮತಿಕೊಟ್ಟನು?

ದೇವರ ವಾಕ್ಯವು ನಮಗೆ ಉತ್ತರ ಕೊಡುತ್ತದೆ. ಅತ್ಯಂತ ಯಾತನೆಯನ್ನುಂಟುಮಾಡುವ ನೋವನ್ನು ಅನುಭವಿಸಿ ಅಂತಹ ಭಯಂ–ಕರವಾದ ಮರಣವನ್ನು ಹೊಂದುವದು ವಿಮೋಚಕನಿಗೆ ಅಗತ್ಯವಾಗಿತ್ತು, ಅದರಿಂದ ಆತನು **ನಮ್ಮ ಸ್ಥಾನವನ್ನು ತೆಗೆದುಕೊಂಡು** ದೇವರ ಶಿಕ್ಷೆಯನ್ನು ನಮಗಾಗಿ ಹೊತ್ತುಕೊಂಡನು. ಪಾಪದ ಸಂಬಳವು ಮರಣವಾಗಿದ್ದು ನಿತ್ಯವಾದ ದಂಡನೆಯು ನರಕದಲ್ಲಿರುವ ತನಕ, ನಮ್ಮ ಪಾಪಗಳ ನಿಮಿತ್ತವಾಗಿ ನಾವು ಅರ್ಹರಾಗಿದ್ದಂತ ನರಕದ ಶಿಕ್ಷೆಯನ್ನು ಮೆಸ್ಸೀಯನು ಅನುಭವಿಸುವದು ಅಗತ್ಯವಾಗಿತ್ತು. ಪಾಪದ ಕಲೆಯಲ್ಲದವನಾಗಿದ್ದ ವಿಮೋಚಕನನ್ನು ಕಳುಹಿಸುವದಕ್ಕೆ ದೇವರು ತನ್ನ ಕೃಪೆಯಲ್ಲಿ, ಯೋಜನೆ ಮಾಡಿಕೊಂಡನು, ಅದ–ರಿಂದ ಆತನು ತನ್ನ ಸ್ವಂತ ಚಿತ್ತದಂತೆ, "ಎಲ್ಲರಿಗೋಸ್ಕರ ಮರಣವನ್ನು ಅನುಭವಿಸಿದನು." (ಇಬ್ರಿಯ–೨:೯). ಈ ರೀತಿಯಾಗಿ ದೇವರು ತನ್ನ ನೀತಿಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ಆದಾಮನ ಮಕ್ಕಳಿಗಾಗಿ ಪಾಪದ ಕ್ಷಮಾಪಣೆಯ ಒಂದು ಮಾರ್ಗವನ್ನು ಮತ್ತು ನಿತ್ಯಜೀವಕ್ಕೆ ಒಂದು ಬಾಗಿಲನ್ನು ತೆರೆದನು! ಮೆಸ್ಸೀಯನು ನಮ್ಮ ಪಾಪಗಳ ದಂಡನೆಯನ್ನು ಸಂದಾಯ ಮಾಡಬೇಕಾಗಿತ್ತು. ನೀತಿವಂತನಾದ **ದೇವರು ತನ್ನನ್ನು ನಂಬುವ ಪ್ರತಿಯೊಬ್ಬರನ್ನು ನೀತಿವಂತರೆಂಬುದಾಗಿ ನ್ಯಾಯತೀರ್ಪು ಮಾಡುವದಕ್ಕೆ ನೀತಿವಂತ –ನಾದ ಮೆಸ್ಸೀಯನ ಮರಣವು** ಕಾರಣವಾಗಿದೆ.

ಮೆಸ್ಸೀಯನ ಮರಣದ ಕುರಿತಾಗಿ ಪ್ರವಾದಿಯಾದ ದಾವೀದನು ಬರೆದಿರುವಂತಾದ್ದು ನಿಜವಾಗಿಯೂ ಆಶ್ಚರ್ಯಕರವಾದುದಾಗಿದೆ. ಇದನ್ನು ಆಲೋಚಿಸಿ! ಮೆಸ್ಸೀಯನ ಜನನಕ್ಕಿಂತ ಒಂದು ಸಾವಿರ ವರ್ಷಗಳ ಮೊದಲು, ಅವನು ಮೊಳೆಗಳಿಂದ ಹೊಡೆಯಲ್ಪಟ್ಟವ–ನಾಗಿ ಶಿಲುಬೆಯ ಮೇಲೆ ಹೇಗೆ ನೋವನ್ನು ಅನುಭವಿಸುತ್ತಾನೆಂಬುದನ್ನು ವಿವರವಾಗಿ ದಾವೀದನು ಬರೆದಿದ್ದಾನೆ. ಬಹುಶಃ ನಾವು ಅರ್ಥಮಾಡಿಕೊಂಡು ನೆನಪಿನಲ್ಲಿಟ್ಟುಕೊಳ್ಳಬೇಕಾದದ್ದೇನೆಂದರೆ: ಶಿಲುಬೆಗೇರಿಸುವಿಕೆ ಎಂದು ಕರೆಯಲ್ಪಡುವ ನೋವಿನ ಒಂದು ಮರಣವಾಗಿರುವ ಇದು ಒಬ್ಬ ವ್ಯಕ್ತಿಯನ್ನು ಒಂದು ಶಿಲುಬೆಗೆ ಮೊಳೆಗಳಿಂದ ಹೊಡೆಯುವದು ರೋಮನ್ನರ ಹಂಚಿಕೆಯಾಗಿದೆ. ದಾವೀದನು ಇದನ್ನು ಕೀರ್ತನೆಗಳಲ್ಲಿ ಬರೆದಿದ್ದಾಗ್ಯೂ, ರೋಮ್ ದೇಶವು ಇನ್ನೂ ಅಸ್ತಿತ್ವದಲ್ಲಿರಲಿಲ್ಲ ಮತ್ತು ಈ ರೀತಿಯಲ್ಲಿ ಒಬ್ಬ ವ್ಯಕ್ತಿಯನ್ನು ಮರಣಕ್ಕೆ ಗುರಿಪಡಿಸುವದರ ಕುರಿತಾಗಿ ಯಾರಿಗೂ ಗೊತ್ತಿರಲಿಲ್ಲ ಅಂದರೆ ಒಬ್ಬ ವ್ಯಕ್ತಿಯನ್ನು ಮೊಳೆಗಳಿಂದ ಶಿಲುಬೆಗೆ ಜಡಿದು ಸಾಯಿಸುವಂತಾದ್ದು. ಹೇಗೂ, ದೇವರು ದಾವೀದನ ಮನಸ್ಸಿನಲ್ಲಿ ಮೆಸ್ಸೀಯನ ಶಿಲುಬೆಯ ಮೇಲಿನ ಮರಣದ ಸಂದೇಶ–ವನ್ನು ಇಟ್ಟು, ಕೀರ್ತನೆಗಳಲ್ಲಿ ಇದನ್ನು ಬರೆಯುವಂತೆ ಪ್ರೇರೇಪಿಸಿದನು, ಹಾಗಾಗಿ, ನಮ್ಮ ಪಾಪದ ದಂಡನೆಯಿಂದ ನಮ್ಮನ್ನು ರಕ್ಷಿಸುವದಕ್ಕೆ ಶಿಲುಬೆಯ ಮೇಲಿನ ಮೆಸ್ಸೀಯನ ಮರಣವು **ದೇವರ ಯೋಜನೆಯಾಗಿತ್ತು** ಎಂಬುದನ್ನು **ನಾವು ನಿಶ್ಚಿತವಾಗಿ ತಿಳಿದು –**
**–ಕೊಳ್ಳುವದಕ್ಕೆ ಶಕ್ತರಾದೆವು.**

ಈ ಅಧ್ಯಾಯವು ಒಳಗೊಮಡಿರುವ ಸತ್ಯವು ಸಂಪೂರ್ಣವಾಗಿ ಸ್ಪಷ್ಟವಾಯಿತು, ಮತ್ತು ನಾವು ಇದಕ್ಕೆ ಗಮನಕೊಡಬೇಕು. ಹೀಗಿ–ದ್ದರೂ **ಪ್ರತಿಯೊಬ್ಬರೂ ದೇವರಿಂದ ಬಂದ ಈ ಸಂದೇಶವನ್ನು ಒಪ್ಪಿಕೊಳ್ಳುತ್ತಿಲ್ಲ**. ಶಿಲುಬೆಯ ಮೇಲಿನ ಮೆಸ್ಸೀಯನ ಮರಣದ ಕುರಿ–ತಾಗಿ ಕೀರ್ತನೆಗಳಲ್ಲಿ ದೇವರ ಪ್ರವಾದಿಯದ ದಾವೀದನು ಬರೆದಿರುವದಕ್ಕೆ ಈ ದಿನದವರೆಗೂ ಕೆಲವು ವಿರೋಧಗಳಿವೆ. "ಮೇಸ್ಸೀ–ಯನು ಅಂತಹ ಒಂದು ನಾಚಿಕೆಯುಳ್ಳ ಮತ್ತು ನೋವಿನ ಮರಣವನ್ನು ಹೊಂದುವದಕ್ಕೆ ದೇವರು ಅನುಮತಿಕೊಡುವದಿಲ್ಲ" ಎಂದು ಅವರು ಹೇಳುತ್ತಾರೆ. ಆದರೆ ಹೀಗೆ ಹೇಳುವವರು, ಪಾಪಿಗಳನ್ನು ರಕ್ಷಿಸುವ ದೇವರ ಯೋಜನೆಯನ್ನು ಮತ್ತು ಪ್ರವಾದಿ –ಗಳ ವಾಕ್ಯಗಳನ್ನು ಅಲಕ್ಷ್ಯಮಾಡುವವರಾಗಿದ್ದಾರೆ. ಕೇಳಿಸಿಕೊಳ್ಳುತ್ತಿರುವ ಪ್ರಿಯ ಸ್ನೇಹಿತರೇ, ಎಚ್ಚರವಾಗಿರ್ರಿ, ದೇವರ ರಕ್ಷಣೆಯ ಮಾರ್ಗವನ್ನು ಅಲಕ್ಷ್ಯ ಮಾಡಬೇಡಿರಿ! ಉಲೂಫ್ ಜ್ಞಾನವು ಹೇಳುವದೇನೆಂದರೆ, "ನೀವು ತಿಳಿದುಕೊಳ್ಳುವದಕ್ಕಿಂತ ಮೊದಲೇ, **ಅಲಕ್ಷ್ಯತನವು ನಿಮ್ಮನ್ನು ಕೊಲ್ಲುತ್ತದೆ!"** ದೇವರ ವಾಕ್ಯವು ಹೇಳುವದೇನೆಂದರೆ, "ನಮ್ಮ ಮುಂದಿಟ್ಟಿರುವ ಈ ಅತ್ಯಂತ ವಿಶೇಷ ರಕ್ಷಣೆಯನ್ನು **ನಾವು ಅಲಕ್ಷ್ಯ ಮಾಡಿದರೆ** ತಪ್ಪಿಸಿಕೊಳ್ಳುವದು ಹೇಗೆ?" (ಇಬ್ರಿಯ–೨:೩). "ಶಿಲುಬೆಯ ವಿಷಯವಾದ ಮಾತು ನಾಶನದ ಮಾರ್ಗದಲ್ಲಿರುವವರಿಗೆ ಹುಚ್ಚು ಮಾತಾಗಿದೆ, ರಕ್ಷಣೆಯ ಮಾರ್ಗದಲ್ಲಿರುವ ನಮಗಾದರೋ ದೇವರ ಶಕ್ತಿಯಾಗಿದೆ." (೧ಕೊರಿಂಥ–೧:೧೮)

ಶಿಲುಬೆಯ ಮೇಲಿನ ಮೆಸ್ಸೀಯನ ಮರಣದ ಸನ್ನಿವೇಶಗಳಿಗೆ ಸಂಬಂಧಿಸಿದಂತೆ ದಾವೀದನು ಬರೆದಿರುವದರ ಕಡೆಗೆ ಮುಂದು –
–ವರಿದು ಈಗ ನೋಡಿಕೊಳ್ಳೋಣ. ಮೆಸ್ಸೀಯನು ಹೇಗೆ ಹೇಳಿದ್ದಾನೆಂಬುದನ್ನು ನಾವು ಕೇಳಿಸಿಕೊಳ್ಳೋಣ:

**"ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ? ನೀನು ಯಾಕೆ ನನಗೆ ಸಹಾಯ ಮಾಡದೆಯೂ ನನ್ನ ಕೂಗನ್ನು ಕೇಳದೆಯೂ ದೂರವಾಗಿದ್ದೀ? ನನ್ನನ್ನು ನೋಡುವವರೆಲ್ಲರೂ ಹಾಸ್ಯ ಮಾಡುತ್ತಾರೆ; ಅವರು ಓರೆ ತುಟಿ ಮಾಡಿ ತಲೆ ಆಡಿಸುತ್ತಾ –ಯೆಹೋವನು ತನ್ನನ್ನು ರಕ್ಷಿಸುವನೆಂದು ಆತನಲ್ಲಿ ಭರವಸವಿಟ್ಟಿದ್ದನಲ್ಲಾ; ಆತನು ಇವನನ್ನು ಮೆಚ್ಚಿದ್ದಾದರೆ ರಕ್ಷಿಸಲಿ ಎಂದು ಹೇಳುತ್ತಾರೆ.** ನಾನು ಹೊಯ್ಯಲ್ಪಟ್ಟ ನೀರಿನಂತಿದ್ದೇನೆ; ನನ್ನ ಎಲುಬುಗಳೆಲ್ಲಾ ಸಡಲಿ ಹೋಗಿವೆ. ನನ್ನ ಗುಂಡಿಗೆ ಮೇಣದಂತೆ ನನ್ನಲ್ಲಿ ಕರಗಿ ಹೋಗಿದೆ; ನನ್ನ ನಾಲಿಗೆಯು ಅಂಗಳಕ್ಕೆ ಹತ್ತಿಹೋಗಿದೆ. ನೀನು ನನ್ನನ್ನು ಮಣ್ಣಿಗೆ ಸೇರಿಸುತ್ತೀ. ನಾಯಿಗಳು ನನ್ನನ್ನು ಸುತ್ತಿಕೊಂಡಿವೆ; ದುಷ್ಟರ ಗುಂಪು ನನ್ನನ್ನು ಆವರಿಸಿಕೊಂಡಿದೆ. **ನನ್ನ ಕೈಕಾಲುಗಳನ್ನು ತಿವಿದಿದ್ದಾರೆ**. ನನ್ನ ಎಲುಬುಗಳನ್ನೆಲ್ಲಾ ಎಣಿಸುವದಕ್ಕಾಗುವದು;

**ಅವರೋ ನನ್ನನ್ನು ನೋಡಿ ನೋಡಿ ಹಿಗ್ಗುತ್ತಾರೆ. ನನ್ನ ಮೇಲ್ಹೊದಿಕೆಯನ್ನು ತಮ್ಮಲ್ಲಿ ಪಾಲುಮಾಡಿಕೊಳ್ಳುತ್ತಾರೆ; ನನ್ನ ಅಂಗಿ –**
**–ಗೋಸ್ಕರ ಚೀಟುಹಾಕುತ್ತಾರೆ."** (ಕೀರ್ತನೆ–೨೨:೧, ೭, ೮,೧೪–೧೮)

ಈ ಮಾತುಗಳಿಂದ, ಮೆಸ್ಸೀಯನ ಜೊತೆಯಲ್ಲಿ ಶಿಲುಬೆಗೆ ಏರಿಸಲ್ಪಟ್ಟಿದ್ದ ಮನುಷ್ಯರು ಆತನನ್ನು ಅವಮಾನಿಸಿ, ಹಾಸ್ಯಮಾಡಿ, ದಿಟ್ಟಿಸಿ ನೋಡುತ್ತಾ, ಅವನ ಮೇಲಂಗಿಯನ್ನು ತಮ್ಮಲ್ಲಿ ಪಾಲುಮಾಡಿಕೊಂಡು ಆತನ ಬಟ್ಟೆಗಳಿಗಾಗಿ ಚೀಟುಹಾಕಿದರು ಎಂಬುದಾಗಿ ದಾವೀ –ದನು ಪ್ರವಾದಿಸಿದ್ದಾನೆ. ದಾವೀದನು ಇದನ್ನು ಬರೆದು ಒಂದು ಸಾವಿರ ವರ್ಷಗಳ ನಂತರ ಇದೆಲ್ಲವೂ ನಿಶ್ಚಿತವಾಗಿ ಹಾಗೆಯೇ ಸಂಭವಿಸಿತು. ಮೆಸ್ಸೀಯನ ಮರಣಕ್ಕೆ ಸಂಬಂಧಿಸಿದಂತೆ ಸುವಾರ್ತೆಯಲ್ಲಿ {ಇಂಜಿಲ್} ಬರೆದಿರುವದನ್ನು ಕೇಳಿಸಿಕೊಳ್ಳಿರಿ. ವಾಕ್ಯವು ಹೀಗೆ ಹೇಳುತ್ತದೆ:

"ಬಳಿಕ ಅವರು ಆತನನ್ನು ಶಿಲುಬೆಗೆ ಹಾಕಿ ಆತನ ಬಟ್ಟೆಗಳಿಗಾಗಿ ಚೀಟು ಹಾಕಿ ಪಾಲುಮಾಡಿಕೊಂಡರು; ಮತ್ತು ಅಲ್ಲಿ ಕೂತು – –ಕೊಂಡು ಆತನನ್ನು ಕಾಯುತ್ತಾ ಇದ್ದರು. ಅಲ್ಲಿ ಹಾದು ಹೋಗುವವರು ತಲೇ ಆಡಿಸಿ – ದೇವಾಲಯವನ್ನು ಕೆಡವಿ ಮೂರು ದಿನದಲ್ಲಿ ಕಟ್ಟುವವನೇ, ನಿನ್ನನ್ನು ರಕ್ಷಿಸಿಕೋ; ದೇವರ ಮಗನು ಆಗಿದ್ದರೆ ಶಿಲುಬೆಯಿಂದ ಇಳಿದು ಬಾ ಎಂದು ಆತನನ್ನು ಹಂಗಿಸು –ತ್ತಿದ್ದರು." (ಮತ್ತಾಯ–೨೭:೩೫, ೩೬, ೩೯, ೪೦)

ಈ ಪ್ರಕಾರ ದೇವರ ಪ್ರವಾದಿಯಾದ ದಾವೀದನ ಮಾತುಗಳು ಹೇಗೆ ನೆರವೇರಿದವೆಂಬುದನ್ನು ಸುವಾರ್ತೆಯು ತಿಳಿಸುತ್ತದೆ.

ಮೆಸ್ಸೀಯನು ಬಾಯಾರಿದವನಾಗಿ ತನ್ನ ಶರೀರದಲ್ಲಿ ಮತ್ತು ಪ್ರಾಣ ಆತ್ಮದ ಆಳದಲ್ಲಿ ದೊಡ್ಡದಾಗಿ ಸಂಕಟಪಡುತ್ತಾನೆಂಬುದಾಗಿ ದಾವೀದನು ಪ್ರವಾದಿಸಿರುವದನ್ನೂ ಸಹ ಈ ದಿನ ನಾವು ಓದುತ್ತೇವೆ. ಅದಕ್ಕಾಗಿಯೇ ಮೊದಲನೆಯ ವಚನದಲ್ಲಿ ಮೆಸ್ಸೀಯನು, ಕೂಗುತ್ತಾ, **"**ನನ್ನ ದೇವರೇ ನನ್ನ ದೇವರೇ ನನ್ನನ್ನು ಯಾಕೆ ಕೈಬಿಟ್ಟಿದ್ದೀ?**"** ಎಂದು ಹೇಳುತ್ತಾನೆ. ನಾವು ಸುವಾರ್ತೆಯನ್ನು ಅಧ್ಯ –ಯನ ಮಾಡಿದಾಗ, ಕೀರ್ತನೆಗಳಲ್ಲಿ ದಾವೀದನು ಪ್ರವಾದಿಸಿದ ಹಾಗೆಯೇ ಪ್ರತಿಯೊಂದು ಸಂಭವಿಸಿರುವದನ್ನು ನಾವು ನೋಡು – –ತ್ತೇವೆ. "ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ?" ಎಂದು ಹೇಳುತ್ತಾ ಮೆಸ್ಸೀಯನು ಶಿಲುಬೆಯ ಮೇಲೆ ಯಾಕೆ ಕೂಗಿದನು? ಯಾಕೆಂದರೆ ದೇವರು "ಪವಿತ್ರ ಸ್ವರೂಪನು" (ಕೀರ್ತನೆ–೨೨:೩) ಮತ್ತು ಪಾಪವನ್ನು ಸಹಿಸುವವನಲ್ಲ. ಶಿಲು –ಬೆಯ ಮೇಲೆ ಜಡಿಯಲ್ಪಟ್ಟಿದ್ದ ಮೆಸ್ಸೀಯನನ್ನು ದೇವರು ತಾನೇ ತಿರಸ್ಕರಿಸಿ, ಆತನಿಂದ ತನ್ನನ್ನು ಬೇರ್ಪಡಿಸಿಕೊಂಡನು, ಯಾಕೆಂ –ದರೆ **ದೇವರು ಆತನ ಮೇಲೆ ನಮ್ಮ ಎಲ್ಲಾ ಪಾಪಗಳ ಶಿಕ್ಷೆಯನ್ನು ಹೊರಿಸಿದ್ದನು**. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು." (೨ಕೊರಿಂಥ–೫:೨೧)

ದೇವರಿಗೆ ಸ್ತೋತ್ರವಾಗಲಿ, ಪ್ರವಾದಿಯಾದ ದಾವೀದನು ಕೀರ್ತನೆಗಳಲ್ಲಿ ಪ್ರವಾದಿಸಿರುವ ಇನ್ನೂ ಸ್ವಲ್ಪವಿದೆ – ಕೆಲವು ತುಂಬಾ ಉತ್ತಮವಾದ ಸಂದೇಶಗಳು! ಹದಿನಾರನೆಯ ಅಧ್ಯಾಯದಲ್ಲಿ, ದಾವೀದನು ಮೆಸ್ಸೀಯನ ಕುರಿತಾಗಿ ಬರೆಯುತ್ತಾ ಹೀಗೆ ಹೇಳು –ತ್ತಾನೆ: "ನೀನು **ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ; ನಿನ್ನ ಪ್ರಿಯನಿಗೆ ಅಧೋಲೋಕವನ್ನು ನೋಡಗೊಡಿಸುವದಿಲ್ಲ**. ನೀನು ನನಗೆ ಜೀವಮಾರ್ಗವನ್ನು ತಿಳಿಯಪಡಿಸುವಿ; ನಿನ್ನ ಸಮ್ಮುಖದಲ್ಲಿ ಪರಿಪೂರ್ಣ ಸಂತೋಷವಿದೆ; ನಿನ್ನ ಬಲಗೈಯಲ್ಲಿ ಶಾಶ್ವತ ಭಾಗ್ಯ –ವಿದೆ." (ಕೀರ್ತನೆ–೧೬:೧೦, ೧೧). ಈ ರೀತಿಯಾಗಿ, ದೇವರು ಮೆಸ್ಸೀಯನನ್ನು ಸಮಾಧಿಯಿಂದ ಎಬ್ಬಿಸುವದಕ್ಕೆ ಹೇಗೆ ಯೋಜನೆ ಮಾಡಿಕೊಂಡಿದ್ದನೆಂಬುದನ್ನು ದಾವೀದನು ಪ್ರವಾದಿಸಿದ್ದಾನೆ, ಆದ್ದರಿಂದ ಆತನನ್ನು ನಂಬುವ ಯಾವನಾದರೂ ಎಂದೆಂ –ದಿಗೂ ದೇವರ ಪರಿಶುದ್ಧ ಪ್ರಸನ್ನತೆಯಲ್ಲಿ ಆತನೊಂದಿಗೆ ಜೀವಿಸುವವನಾಗುತ್ತಾನೆ! ಹೀಗೆ, ಸುವಾರ್ತೆ{ಇಂಜಿಲ್} ಹೇಳುವದೇನೆಂ –ದರೆ: "ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು **ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು;** ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ **ಎಬ್ಬಿಸಲ್ಪಟ್ಟನು."** (೧ಕೊರಿಂಥ–೧೫: ೩,೪)

ಮೆಸ್ಸೀಯನು ಮರಣದಿಂದ ಎದ್ದ ನಂತರ ದೇವರು ಅವನನ್ನು ಪರಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ ಮತ್ತು ಭೂಲೋಕದ ಜನರಿಗೆ ನ್ಯಾಯತೀರಿಸುವದಕ್ಕೆ ಆತನು ಹಿಂದಿರುಗಿ ಬರುವವರೆಗೂ ತನ್ನ ಬಲಗಡೆಯಲ್ಲಿ ಕೂತುಕೊಂಡಿರುವಂತೆ ಆತನಿಗೆ ಹೇಳು – –ತ್ತಾನೆ ಎಂಬುದಾಗಿ ಸಹ ದಾವೀದನು ಪ್ರವಾದಿಸಿದ್ದಾನೆ. ಅದಕ್ಕಾಗಿಯೇ ದಾವೀದನು ಕೀರ್ತನೆ ನೂರಾಹತ್ತನೆಯ ಅಧ್ಯಾಯದಲ್ಲಿ ಹೀಗೆ ಹೇಳುತ್ತಾನೆ: "ಯೆಹೋವನು ನನ್ನ ಒಡೆಯನಿಗೆ – ನಾನು ನಿನ್ನ ವಿರೋಧಿಗಳನ್ನು ನಿನಗೆ ಪಾದಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ನುಡಿದನು." (ಕೀರ್ತನೆ–೧೧೦:೧)

ಇಪ್ಪತ್ತೆರಡನೆಯ ಅಧ್ಯಾಯದ ಕೊನೆಯಲ್ಲಿ ದಾವೀದನು ಹೀಗೆ ಬರೆಯುತ್ತಾನೆ:

"ಭೂಮಂಡಲದವರೆಲ್ಲರೂ ಎಚ್ಚರಗೊಂಡು ಯೆಹೋವನ ಕಡೆಗೆ ತಿರುಗಿಕೊಳ್ಳುವರು; ಯೆಹೋವನೇ, ಎಲ್ಲಾ ಜನಾಂಗಗಳವರು ನಿನಗೆ ಅಡ್ಡಬೀಳುವರು. ಆತನನ್ನು ಸೇವಿಸುವವರ ಸಂತಾನದವರು ಯೆಹೋವನ ಸಂತಾನದವರೆಂದು ಎಣಿಸಲ್ಪಡುವರು. ಅವರು

ಬಂದು ಆತನ ನೀತಿಯನ್ನೂ **ಆತನು ನಡಿಸಿದ ಕಾರ್ಯಗಳನ್ನೂ** ಮುಂದೆ ಹುಟ್ಟುವ ಜನಕ್ಕೆ ತಿಳಿಸುವರು." (ಕೀರ್ತನೆ–೨೨:೨೭, ೩೦,೩೧).

**"ಆತನು ನಡಿಸಿದನು!"** ಎಂಬ ಮಾತುಗಳಿಂದ ಈ ಕೀರ್ತನೆಯು ಮುಕ್ತಾಯವಾಗುತ್ತದೆ. ಮೆಸ್ಸೀಯನು ಯಾವುದನ್ನು ಮುಗಿಸುವವ –ನಾಗಿದ್ದನು? ಆತನು ಪಾಪಿಗಳೆಲ್ಲರ ಸ್ಥಾನದಲ್ಲಿ ಸಾಯುವವನಾಗಿದ್ದನು! ಆದಾಮ ಹವ್ವರ ಪಾಪದ ದಂಡನೆಯಿಂದ ಅವರನ್ನೂ ಮತ್ತು ಅವರ ಸಂತಾನದವರನ್ನೂ ರಕ್ಷಿಸುವವನಾಗಿರುವ ವಿಮೋಚಕನಿಗೆ ಸಂಬಂಧಪಟ್ಟಂತೆ ದೇವರು ಮಾಡಿದ್ದ ವಾಗ್ದಾನಗಳೆಲ್ಲ – –ವನ್ನೂ ಆತನು ನೆರವೇರಿಸುವವನಾಗಿದ್ದನು. ಮೆಸ್ಸೀಯನು ಕೊನೆಯ ಯಜ್ಞದ ಹಾಗೆ ಸಾಯುವವನಾಗಿದ್ದನು. ಆತನ ಮರಣವು ಶಿಲುಬೆಯ ಮೇಲಿದ್ದಾಗ್ಯೂ, ಹಿಂದಿನ ಕಾಲಗಳಲ್ಲಿ ಪಾಪಿಗಳಿಂದ ದೇವರಿಗೆ ಅಗತ್ಯವಾಗಿದ್ದ ಪಶು ಯಜ್ಞಗಳ ಚಿಹ್ನೆಗಳನ್ನು ನೆರವೇ –ರಿಸಿ ಅದನ್ನು ರದ್ದುಮಾಡುವವನಾಗಿದ್ದನು. ಅಬ್ರಹಾಮನ ಮಗನಿಗೆ ಬದಲಾಗಿ ಬಲಿಯಾದ ಟಗರಿನ ಹಾಗೆ ಎಲ್ಲರಿಗಾಗಿ ಎಂದೆಂ –ದಿಗೂ ಒಂದು ಸಂಪೂರ್ಣವಾದ ಮತ್ತು ಕೊನೆಯ ಯಜ್ಞದ ಹಾಗೆ ಪಾಪಿಗಳ ಸ್ಥಾನದಲ್ಲಿ ವಿಮೋಚಕನು ಸಾಯುವವನಿದ್ದನು. ಇದು ಲೋಕಕ್ಕೆ ದೇವರ ಶುಭ ಸಂದೇಶವಾಗಿದೆ: ಮೆಸ್ಸೀಯನು ನಿಮ್ಮ ಸ್ಥಾನದಲ್ಲಿ ಮರಣ ಹೊಂದಿದನು! ಆತನನ್ನು ನಂಬಿರಿ ಆಗ ನೀವು ದೇವರ ನ್ಯಾಯತೀರ್ಪಿನಿಂದ ರಕ್ಷಿಸಲ್ಪಡುತ್ತೀರಿ! ನಂಬುವವರೆಲ್ಲರಿಗೆ ರಕ್ಷಣೆಯ ಮಾರ್ಗವು ಅಗಲವಾಗಿ ತೆರೆಯಲ್ಪಟ್ಟಿರುತ್ತದೆ. ಅದಕ್ಕಾಗಿಯೇ, ಮೆಸ್ಸೀಯನು ತಾನು ಸಾಯುವದಕ್ಕಿಂತ ಸ್ವಲ್ಪ ಮೊದಲು, **"ತೀರಿತು!"** ಎಂದು ಕೂಗಿದನು (ಯೋಹಾನ–೧೯:೩೦). **"ಆತನು ನಡಿಸಿದನು"** (ಕೀರ್ತನೆ–೨೨:೩೧). ಮೂರನೆಯ ದಿನದಲ್ಲಿ ದೇವರು ಆತನನ್ನು ಎಬ್ಬಿಸುವದರಿಂದ ಮೆಸ್ಸೀಯನ ಸಂಪೂ –ರ್ಣವಾದ ಯಜ್ಞವನ್ನು ದೃಢಪಡಿಸಿದನು! ನಾವು ಸುವಾರ್ತೆಯ ಪುಸ್ತಕವನ್ನು ಅಧ್ಯಯನ ಮಾಡಿದಾಗ ಇದೆಲ್ಲವನ್ನೂ ವಿವರವಾಗಿ ಕಾಣುತ್ತೇವೆ.

ಅದೇವೇಳೆಯಲ್ಲಿ, **ಪಾಪಿಗಳು ಮೆಸ್ಸೀಯನ ಕೈಕಾಲುಗಳನ್ನು ತಿವಿಯುತ್ತಾರೆ ಎಂದು ಯೇಸು ಕ್ರಿಸ್ತನ ಜನನದ ಒಂದು ಸಾವಿರ ವರ್ಷಗಳ ಮೊದಲೇ ದಾವೀದನು ಪ್ರವಾದಿಸಿರುವದನ್ನೂ ಸಹ ನಾವು ಜ್ಞಾಪಿಸಿಕೊಳ್ಳಬಹುದು!** ಮೆಸ್ಸೀಯನ ಯಾತನೆಯ ಮರಣದ ಕಾರಣವನ್ನು ನಾವು ಮರೆಯಬಾರದು. ಆತನು ನಿನಗಾಗಿ, ನನಗಾಗಿ ಮತ್ತು ಎಲ್ಲಾ ಪಾಪಿಗಳಿಗಾಗಿ ಸತ್ತಿದ್ದಾನೆ, ಅದರಿಂದ ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ನಿತ್ಯಜೀವವನ್ನು ಹೊಂದಿಕೊಳ್ಳುತ್ತಾನೆ! ದೇವರ ಚಿತ್ತವನ್ನು ನೆರವೇರಿಸುವದಕ್ಕಾಗಿ ಮತ್ತು ನನ್ನ ಮೇಲೆ ಮತ್ತು ನಿನ್ನ ಮೇಲಿದ್ದ ಮಹತ್ತಾದ ತನ್ನ ಪ್ರೀತಿಯ ನಿಮಿತ್ತವಾಗಿ ದುಷ್ಟ ಜನರು ತನ್ನ ಕೈಕಾಲುಗಳನ್ನು ತಿವಿಯುವದಕ್ಕೆ ಮೆಸ್ಸೀಯನು ಅವಕಾಶ ಕೊಟ್ಟನು! ಮೆಸ್ಸೀಯನಾದ ಯೇಸು ಸುವಾರ್ತೆಯಲ್ಲಿ {ಇಂಜಿಲ್} ಏನು ಹೇಳಿದ್ದಾನೋ ಅದನ್ನು ಕೇಳಿಸಿಕೊಳ್ಳಿರಿ:

**"ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೇ ನಾನೇ ಅದನ್ನು ಕೊಡುತ್ತೇನೆ;** ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು; ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ."
(ಯೋಹಾನ–೧೦:೧೭, ೧೮)

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನಿಮ್ಮ ಪಾಪಗಳಿಂದ ನಿಮ್ಮನ್ನು ರಕ್ಷಿಸುವದಕ್ಕೆ ಮೆಸ್ಸೀಯನನ್ನು ಕಳಿಸಿದ್ದಕ್ಕಾಗಿ ನೀವು ದೇವರಿಗೆ ಕೃತಜ್ಞತೆ ಸಲ್ಲಿಸಿ ಆತನನ್ನು ಸ್ತುತಿಸಿದ್ದೀರೋ? ಪರಿಶುದ್ಧ ವಾಕ್ಯವು ಹೇಳುವದೇನೆಂದರೆ, **"ಕ್ರಿಸ್ತನು ಸಹ ನಿಮಗೋಸ್ಕರ ಬಾಧೆಯನ್ನನು** –ಭವಿಸಿ ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. ನಾವು ಪಾಪದ ಪಾಲಿಗೆ ಸತ್ತು ನೀತಿವಂತರಾಗಿ ಜೀವಿಸುವಂತೆ ಆತನು ನಮ್ಮ ಪಾಪಗಳನ್ನು ತಾನೇ ತನ್ನ ದೇಹದಲ್ಲಿ ಹೊತ್ತುಕೊಂಡು ಮರಣದ ಕಂಬವನ್ನು ಏರಿದನು; ಆತನ ಬಾಸುಂಡೆಗಳಿಂದ ನಿಮಗೆ ಗುಣವಾಯಿತು. ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿ –ಕೊಟ್ಟು ನಮಗೆ ನೀತಿವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು. **ಆತನನ್ನು ನಂಬುವ ಒಬ್ಬನಾ – –ದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."** (೧ಪೇತ್ರ–೨:೨೧, ೨೪; ರೋಮಾ– ೪:೨೫; ಯೋಹಾನ–೩:೧೬)

ಈ ದಿನ ನಾವು ಓದಿದ ಪ್ರತಿಯೊಂದನ್ನೂ ದೇವರು ನಿಮಗೆ ಸ್ಪಷ್ಟಪಡಿಸಲಿ. ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ದೇವರ ಚಿತ್ತವಾ – –ದರೆ ನಮ್ಮ ಮುಂದಿನ ಕಾರ್ಯಕ್ರಮದಲ್ಲಿ ಪ್ರವಾದಿಗಳ ಬರವಣಿಗೆಗಳಲ್ಲಿ ಮುಂದುವರಿದು ದಾವೀದನ ಮಗನಾದ ಸೊಲೊಮೋ –ನನ ಕಥೆಗೆ ಹೋಗುತ್ತೇವೆ.

ದೇವರು ಪ್ರವಾದಿಯಾದ ದಾವೀದನಿಗೆ ಇದನ್ನು ಬರೆಯುವದಕ್ಕೆ ಯಾಕೆ ಪ್ರೇರೇಪಿಸಿದನೆಂಬುದನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಅವರು ನನ್ನ ಕೈ ಕಾಲುಗಳನ್ನು ತಿವಿದಿದ್ದಾರೆ!"** (ಕೀರ್ತನೆ–೨೨:೧೬)

ಪಾಠ ೫೨

# ಪ್ರವಾದಿಯಾದ ಸೊಲೊಮೋನ

೧ಅರಸುಗಳು ೨-೧೦; ಕೀರ್ತನೆ ೭೨

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ಆತನು ಸ್ಥಾಪನೆ ಮಾಡಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿ -ಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗುವದಕ್ಕೆ ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರು -ವದಕ್ಕೆ ಇಚ್ಛಿಸುವ ಸಮಾಧಾನ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ನಾವು ಹಿಂತಿರುಗಿ ಬರಲು ಶಕ್ತರಾಗಿದ್ದಕ್ಕೆ ನಾವು ಸಂತೋಷವುಳ್ಳವ -ರಾಗಿದ್ದೇವೆ.

ಒಂದುವೇಳೆ ದೇವರು ಪ್ರತ್ಯಕ್ಷನಾಗಿ ನಿಮಗೆ, "ನಿನಗೆ ಏನು ಬೇಕೋ ಅದನ್ನು ಕೇಳಿಕೋ, ನಾನು ನಿನಗೆ ಕೊಡುತ್ತೇನೆ" ಎಂದು ಹೇಳಿದರೆ, ನೀವು ಯಾವುದನ್ನು ಆಯ್ಕೆ ಮಾಡಿಕೊಳ್ಳುತ್ತೀರಿ? ದೀರ್ಘ ಆಯುಸ್ಸನ್ನೋ? ದೊಡ್ಡ ಶ್ರೀಮಂತಿಕೆಯನ್ನೋ? ಪ್ರಸಿದ್ಧಿ - -ಯನ್ನೋ? ಅಥವಾ ಇನ್ನೇನಾದರೋ? ಒಂದು ದಿನ ದೇವರು ಸೊಲೊಮೋನನಿಗೆ ಕನಸಿನಲ್ಲಿ ಕಾಣಿಸಿಕೊಂಡು, **"ನಾನು ನಿನಗೆ ಏನು ಕೊಡಬೇಕೆಂದು ನೀನು ಇಷ್ಟಪಡುತ್ತೀಯೋ ಅದನ್ನು ಕೇಳಿಕೋ"** ಎಂದು ಹೇಳಿದನು. ಸೊಲೊಮೋನನು ಏನು ಕೇಳಿಕೊಂಡ -ನೆಂದು ನಿಮಗೆ ಗೊತ್ತಾ? ಅವನು ದೇವರಿಗೆ ಏನು ಉತ್ತರ ಕೊಟ್ಟನೆಂಬುದನ್ನು ನಾವು ಈದಿನ ಕೇಳೋಣ.

ಹಿಂದಿನ ಆರು ಪಾಠಗಳಲ್ಲಿ ದೇವರ ಪ್ರವಾದಿಯಾದ **ದಾವೀದನ** ಕಥೆಯನ್ನು ನೋಡಿಕೊಂಡಿದ್ದೇವೆ. **ಕೀರ್ತನೆಗಳ** ಪುಸ್ತಕದಲ್ಲಿ ಅವನು ಬರೆದಂತ ಕೆಲವು ಸಂಗೀತಗಳನ್ನು ನಾವು ಓದಿಕೊಂಡೆವು. ನಮ್ಮ ಹಿಂದಿನ ಪಾಠದಲ್ಲಿ ಆದಾಮನ ಮಕ್ಕಳು ಮೆಸ್ಸೀಯನ ಕೈ ಕಾಲುಗಳನ್ನು ತಿವಿದು ಅವನನ್ನು ಹೇಗೆ ಕೊಲ್ಲುತ್ತಾರೆಂಬುದಾಗಿ ದಾವೀದನು ಪ್ರವಾದಿಸಿರುವದನ್ನು ನಾವು ನೋಡಿಕೊಂಡೆವು. ದೇವರು ಮೆಸ್ಸೀಯನನ್ನು ಸತ್ತವರೊಳಗಿಂದ ಎಬ್ಬಿಸುತ್ತಾನೆಂಬುದನ್ನೂ ಸಹ ದಾವೀದನು ಪ್ರವಾದಿಸಿದ್ದಾನೆ. ಈ ದಿನ ನಾವು ದಾವೀ -ದನ ಕಥೆಯನ್ನು ಬಿಟ್ಟು ಅವನ ಮಗನಾದ ಸೊಲೊಮೋನನ {ಅರಬಿಕ್‌ನಲ್ಲಿ ಸುಲೈಮಾನ್} ಕಥೆಗೆ ಹೋಗುವದಕ್ಕೆ ಆಲೋಚಿಸಿ ದ್ದೇವೆ.

ಒಂದು ಅರಸುಗಳ ಪುಸ್ತಕದ ಎರಡನೆಯ ಅಧ್ಯಾಯದಲ್ಲಿ ಪರಿಶುದ್ಧ ವಾಕ್ಯವು ಹೀಗೆ ಹೇಳುತ್ತದೆ:

"ದಾವೀದನ ಅವಸನ ಕಾಲವು ಸಮೀಪಿಸಿದಾಗ ಅವನು ತನ್ನ ಮಗನಾದ ಸೊಲೊಮೋನನಿಗೆ ಆಜ್ಞಾಪಿಸಿದ್ದೇನೆಂದರೆ - ಭೂಲೋ -ಕದವರೆಲ್ಲರೂ ಹೋಗುವ ದಾರಿಯನ್ನು ನಾನೂ ಈಗ ಹಿಡಿಯಬೇಕು; ನೀನು ಧೈರ್ಯದಿಂದಿರು, ನಿನ್ನ ಪೌರುಷವನ್ನು ತೋರಿಸು. ನಿನ್ನ ದೇವರಾದ ಯೆಹೋವನ ಕಟ್ಟಳೆಯನ್ನು ಕೈಕೊಂಡು ಆತನ ಮಾರ್ಗದಲ್ಲೇ ನಡೆದುಕೋ; **ಮೋಶೆಯ ಧರ್ಮ ಶಾಸ್ತ್ರದಲ್ಲಿ ಬರೆ - -ದಿರುವ ಆತನ ಆಜ್ಞಾನಿಯಮ ವಿಧಿನಿರ್ಣಯಗಳನ್ನು ಪಾಲಿಸು. ಹೀಗೆ ಮಾಡುವದಾದರೆ ನೀನು ಯಾವದನ್ನು ಮಾಡಿದರೂ ಎಲ್ಲಿಗೆ ಹೋದರೂ ಕೃತಾರ್ಥನಾಗುವಿ**. ಅನಂತರ ದಾವೀದನು ಪಿತೃಗಳ ಬಳಿಗೆ ಸೇರಿದನು. ಅವನ ಶವವನ್ನು ದಾವೀದ ನಗರದಲ್ಲಿ ಸಮಾಧಿ -ಮಾಡಿದರು. ದಾವೀದನು ಇಸ್ರಾಯೇಲ್ಯರನ್ನು ಆಳಿದ್ದು ನಾಲ್ವತ್ತು ವರುಷ. ಸೊಲೊಮೋನನು ತನ್ನ ತಂದೆಯಾದ ದಾವೀದನ ಸಿಂಹಾಸನವನ್ನು ಏರಿದನು. ಅವನ ರಾಜ್ಯವು ಬಹಳವಾಗಿ ಬಲಗೊಂಡಿತು." (೧ಅರಸುಗಳು-೨:೧-೩, ೧೦-೧೨)

"ಸೊಲೊಮೋನನು ಯೆಹೋವನನನ್ನು ಪ್ರೀತಿಸಿ ತನ್ನ ತಂದೆಯಾದ ದಾವೀದನ ವಿಧಿಗಳನ್ನು ಕೈಕೊಳ್ಳುವವನಾಗಿದ್ದನು. ದೇವರಾದ ಯೆಹೋವನು ರಾತ್ರಿ ಕನಸಿನಲ್ಲಿ ಅವನಿಗೆ ಕಾಣಿಸಿಕೊಂಡು - **ನಿನಗೆ ಯಾವ ವರ ಬೇಕು ಕೇಳಿಕೋ** ಎಂದು ಹೇಳಲು ಸೊಲೊಮೋ -ನನು - ನಿನಗೆ ನಂಬಿಗಸ್ತನಾಗಿ ನೀತಿಯಿಂದಲೂ ಯಥಾರ್ಥಚಿತ್ತದಿಂದಲೂ ನಡೆದುಕೊಂಡ ನಿನ್ನ ಸೇವಕನೂ ನನ್ನ ತಂದೆಯೂ ಆದ ದಾವೀದನಿಗೆ ನೀನು ಮಹಾಕೃಪೆಯನ್ನು ತೋರಿಸಿದಿ; ಅವನ ಮೇಲೆ ಬಹಳವಾಗಿ ಕೃಪೆಮಾಡಿ ಈಗಿರುವಂತೆ ಅವನ ಸಿಂಹಾ -ಸನಕ್ಕೆ ಒಬ್ಬ ಮಗನನ್ನು ಅನುಗ್ರಹಿಸಿದ್ದರಲ್ಲಿ ಅದನ್ನು ಪೂರ್ತಿಗೊಳಿಸಿದಿ. ಆದದರಿಂದ ಅದನ್ನು ಆಳುವದಕ್ಕೂ ನ್ಯಾಯಾನ್ಯಾಯ - -ಗಳನ್ನು ಕಂಡುಹಿಡಿಯುವದಕ್ಕೂ **ನನಗೆ ವಿವೇಕವನ್ನು ದಯಪಾಲಿಸು**. ಈ ಮಹಾ ಜನಾಂಗವನ್ನು ಆಳಲು ಸಮರ್ಥರು ಯಾರು ಎಂದು ಬೇಡಿಕೊಂಡನು. ಸೊಲೊಮೋನನ ಈ ಬಿನ್ನಹವನ್ನು **ಕರ್ತನಾದ ದೇವರು ಮೆಚ್ಚಿದನು**. ಆತನು ಅವನಿಗೆ - ನೀನು ನಿನಗೋಸ್ಕರ ದೀರ್ಘಾಯುಷ್ಯವನ್ನಾಗಲಿ, ಐಶ್ವರ್ಯವನ್ನಾಗಲಿ, ವೈರಿಗಳ ಪ್ರಾಣವನ್ನಾಗಲಿ ಕೇಳಿಕೊಳ್ಳದೆ ನ್ಯಾಯ ನಿರ್ಣಯಿಸುವದ - ಕ್ಕೋಸ್ಕರ ವಿವೇಕವನ್ನು ಬೇಡಿಕೊಂಡದರಿಂದ ನಿನ್ನ ಬಿನ್ನಹವನ್ನು ನೆರವೇರಿಸಿದ್ದೇನೆ. ನೋಡು, ನಿನಗೆ ಜ್ಞಾನವನ್ನೂ ವಿವೇಕವನ್ನೂ ಅನುಗ್ರಹಿಸಿದ್ದೇನೆ; ನಿನ್ನಂಥ ಜ್ಞಾನಿಯು ಮುಂಚೆ ಇರಲಿಲ್ಲ; ಮುಂದೆಯೂ ಇರುವದಿಲ್ಲ. ಇದಲ್ಲದೆ ನೀನು ಕೇಳದಂಥದನ್ನೂ

ನಿನಗೆ ಅನುಗ್ರಹಿಸಿದ್ದೇನೆ. ನಿನ್ನ ಜೀವಮಾನದಲ್ಲೆಲ್ಲಾ ಐಶ್ವರ್ಯದಲ್ಲಿಯೂ ಘನದಲ್ಲಿಯೂ ನನಗೆ ಸಮಾನನಾದ ಅರಸನು ಇನ್ನೊಬ್ಬ –ನಿರುವದಿಲ್ಲ. ನೀನು ನಿನ್ನ ತಂದೆಯಾದ ದಾವೀದನಂತೆ ನನ್ನ ಮಾರ್ಗದಲ್ಲಿ ನಡೆದು ನನ್ನ ಆಜ್ಞಾವಿಧಿಗಳನ್ನು ಕೈಕೊಳ್ಳುವದಾದರೆ ನಿನ್ನ ಆಯುಷ್ಯವನ್ನು ಹೆಚ್ಚಿಸುವೆನು ಅಂದನು. ಸೊಲೊಮೋನನು ನಿದ್ರೆಯಿಂದ ಎಚ್ಚತ್ತಾಗ ಅದು ಕನಸೆಂದು ತಿಳಿದುಕೊಂಡನು. ಅವನು ಯೆರೂಸಲೇಮಿಗೆ ಬಂದ ನಂತರ ಯೆಹೋವನ ಒಡಂಬಡಿಕೆಯ ಮಂಜೂಷದ ಮುಂದೆ ನಿಂತು ಸರ್ವಾಂಗ ಹೋಮ – –ಗಳನ್ನೂ ಸಮಾಧಾನ ಯಜ್ಞಗಳನ್ನೂ ಸಮರ್ಪಿಸಿ ತನ್ನ ಎಲ್ಲ ಸೇವಕರಿಗೋಸ್ಕರ ಔತಣಮಾಡಿಸಿದನು." (೧ಅರಸು–೩: ೩, ೬, ೯–೧೫).

"ಅದೇ ಕಾಲದಲ್ಲಿ ಇಬ್ಬರು ಸೂಳೆಯರು ಅರಸನ ಸನ್ನಿಧಿಗೆ ಬಂದರು. ಅವರಲ್ಲಿ ಒಬ್ಬಳು ಅರಸನಿಗೆ – ನನ್ನ ಒಡೆಯಾ ಕೇಳು; ನಾನೂ ಈ ಹೆಂಗಸೂ ಒಂದೇ ಮನೆಯಲ್ಲಿ ವಾಸಿಸುತ್ತೇವೆ. ಇವಳು ಮನೆಯಲ್ಲಿದ್ದಾಗಲೇ ನಾನು ಮಗುವನ್ನು ಹೆತ್ತೆನು. ಮೂರ –ನೆಯ ದಿನದಲ್ಲಿ ಇವಳೂ ಹೆತ್ತಳು. ನಾವಿಬ್ಬರೂ ಒಟ್ಟಿಗೇ ಇದ್ದೆವು; ನಮ್ಮಿಬ್ಬರ ಹೊರತು ಆ ಮನೆಯಲ್ಲಿ ಯಾರೂ ಇರಲಿಲ್ಲ. ಇವಳು ರಾತ್ರಿಯಲ್ಲಿ ತನ್ನ ಕೂಸಿನ ಮೇಲೆ ಹೊರಳಿದ್ದರಿಂದ ಅದು ಸತ್ತಿತು. ಮಧ್ಯರಾತ್ರಿಯಲ್ಲಿ ಇವಳೆದ್ದು ನಿನ್ನ ದಾಸಿಯಾದ ನಾನು ಗಾಢ ನಿದ್ರೆಯಲ್ಲಿದ್ದಾಗ ನನ್ನ ಮಗುವನ್ನು ನನ್ನ ಬಳಿಯಿಂದ ತೆಗೆದು ತನ್ನ ಮಗ್ಗುಲಲ್ಲಿಟ್ಟುಕೊಂಡಳು. ಸತ್ತು ಹೋದ ತನ್ನ ಮಗು – –ವನ್ನು ನನ್ನ ಮಗ್ಗುಲಲ್ಲಿಟ್ಟಳು. ನಾನು ಹೊತ್ತಾರೆ ಎದ್ದು ಮಗುವಿಗೆ ಮೊಲೆ ಕುಡಿಸಬೇಕೆಂದಿರುವಾಗ ಅದು ಸತ್ತಿತ್ತು. ಆದರೆ ಅದನ್ನು ಬೆಳಕಿನಲ್ಲಿ ನೋಡಿದಾಗ ಅದು ನಾನು ಹೆತ್ತ ಕೂಸಾಗಿರಲಿಲ್ಲ ಎಂದು ಹೇಳಿದಳು. ಆಗ ಎರಡನೆಯವಳು – ಹಾಗಲ್ಲ, ಬದುಕಿರು – –ವವನು ನನ್ನ ಮಗನು; ಸತ್ತಿರುವವನು ನಿನ್ನ ಮಗನು ಎಂದು ನುಡಿದಳು. ಮೊದಲನೆಯವಳು ತಿರಿಗಿ – ಅಲ್ಲ, ಸತ್ತಿರುವವನು ನಿನ್ನ ಮಗನು; ಬದುಕಿರುವವನು ನನ್ನ ಮಗನು ಅಂದಳು. ಹೀಗೆ ಅವರು ಅರಸನ ಮುಂದೆ ವಾದಿಸುತ್ತಾ ಇದ್ದರು."(೧ಅರಸು–೩:೧೬–೨೨)

"ಆಗ ಅರಸನು – ಜೀವದಿಂದಿರುವ ಕೂಸು ನನ್ನದು, ಸತ್ತಿರುವದು ನಿನ್ನದು ಎಂದು ಒಬ್ಬಳು ಹೇಳುತ್ತಾಳೆ. ಇನ್ನೊಬ್ಬಳು – ಅಲ್ಲ ಸತ್ತಿರುವದು ನಿನ್ನದು, ಜೀವದಿಂದಿರುವದು ನನ್ನದು ಅನ್ನುತ್ತಾಳೆ. ನನಗೊಂದು ಕತ್ತಿಯನ್ನು ತಂದುಕೊಡಿರಿ ಎಂದು ಸೇವಕರಿಗೆ ಹೇಳಿ –ದನು. ಅವರು ತರಲು ಅರಸನು ಅವರಿಗೆ – ಜೀವಿದಿಂದಿರುವ ಕೂಸನ್ನು ಕಡಿದು ಎರಡು ಭಾಗಮಾಡಿ ಅರ್ಧವನ್ನು ಇವಳಿಗೂ ಅರ್ಧವನ್ನು ಅವಳಿಗೂ ಕೊಡಿರಿ ಎಂದು ಅಪ್ಪಣೆ ಮಾಡಿದನು." (೧ಅರಸು–೩:೨೩–೨೫)

"ಆಗ ಜೀವದಿಂದಿದ್ದ ಕೂಸಿನ ನಿಜವಾದ ತಾಯಿ ಕೂಸಿನ ವಿಷಯದಲ್ಲಿ ಕರುಳುಮುರುಗಿ – ನನ್ನ ಒಡೆಯಾ, ಬೇಡ; ಬದುಕಿರುವ ಕೂಸನ್ನು ಅವಳಿಗೆ ಕೊಟ್ಟುಬಿಡು; ಅದನ್ನು ಕೊಲ್ಲಿಸಬೇಡ ಎಂದು ಬೇಡಿಕೊಳ್ಳುವಲ್ಲಿ ಎರಡನೆಯವಳು – ಅದು ನನಗೂ ಬೇಡ, ನಿನಗೂ ಬೇಡ, ಕಡಿಯಲಿ ಎಂದು ಕೂಗಿದಳು. ಕೂಡಲೆ ಅರಸನು – ಬದುಕಿರುವ ಕೂಸನ್ನು ಕೊಲ್ಲಬೇಡಿರಿ, ಆ ಸ್ತ್ರೀಗೆ ಕೊಡಿರಿ; ಅವಳೇ ಅದರ ತಾಯಿ ಎಂದು ಆಜ್ಞಾಪಿಸಿದನು. **ಇಸ್ರಾಯೇಲ್ಯರೆಲ್ಲರೂ ಅರಸನ ಈ ತೀರ್ಪನ್ನು ಕೇಳಿ ನ್ಯಾಯನಿರ್ಣಯಿಸುವದಕ್ಕೆ ಈತನಲ್ಲಿ ದೇವಜ್ಞಾನವಿದೆ ಎಂದು ತಿಳಿದು ಅವನಿಗೆ ಬಹಳವಾಗಿ ಭಯಪಟ್ಟರು."** (೧ಅರಸು–೩:೨೬–೨೮)

"ದೇವರು ಸೊಲೊಮೋನನಿಗೆ ಸಮುದ್ರ ತೀರದ ಉಸುಬಿನಷ್ಟು ಅಪರಿಮಿತವಾದ ಜ್ಞಾನವಿವೇಕಗಳನ್ನೂ ಮನೋವಿಶಾಲತೆಯನ್ನೂ ಅನುಗ್ರಹಿಸಿದನು. **ಅವನ ಜ್ಞಾನವು** ಮೂಡಣದೇಶದವರೆಲ್ಲರ ಜ್ಞಾನಕ್ಕಿಂತಲೂ ಐಗುಪ್ತ್ಯರ ಜ್ಞಾನಕ್ಕಿಂತಲೂ **ಮಿಗಿಲಾದದ್ದು.** ಅವನು ಎಲ್ಲರಿಗಿಂತಲೂ ಜ್ಞಾನಿಯಾಗಿದ್ದನು. ಸುತ್ತಣ ಎಲ್ಲಾ ಜನಾಂಗಗಳಲ್ಲಿ ಅವನ ಹೆಸರು ಪ್ರಸಿದ್ಧವಾಯಿತು. ಅವನ ಜ್ಞಾನೋಕ್ತಿಗಳು ಮುರು ಸಾವಿರ; ಗೀತಗಳು ಸಾವಿರದ ಐದು. ಎಲ್ಲಾ ಜನಾಂಗಗಳಲ್ಲಿಯೂ ಸೊಲೊಮೋನನ ಜ್ಞಾನವಿಶೇಷವನ್ನು ಕುರಿತು ಹೇಳಿದ ಭೂಪಾಲರಲ್ಲಿಯೂ ಅನೇಕರು ಅವನ ಜ್ಞಾನವಾಕ್ಯಗಳನ್ನು ಕೇಳುವದಕ್ಕೋಸ್ಕರ ಬಂದರು." (೧ಅರಸು–೪:೨೯–೩೨, ೩೪)

ಮುಂದೆ ವಾಕ್ಯದಲ್ಲಿ ಬರೆದಿರುವದೇನೆಂದರೆ, ಸೊಲೊಮೋನನ ಅಗಾಧವಾದ ಜ್ಞಾನವನ್ನೂ ಮತ್ತು ದೊಡ್ಡದಾದ ಘನತೆಯನ್ನೂ ಕೇಳಿಸಿಕೊಂಡಿದ್ದ ಒಬ್ಬ ರಾಣಿಯು ಆ ಕಾಲದಲ್ಲಿದ್ದಳು **ಅವಳು ಶೆಬಾ ದೇಶದ ರಾಣಿ.** ತಾನು ಸೊಲೊಮೋನನ ವಿಷಯವಾಗಿ ಕೇಳಿದ ಸಂಗತಿಗಳು ಸತ್ಯವೋ ಅಥವಾ ಇಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕಾಗಿ ರಾಣಿಯು ಸೊಲೊಮೋನನನ್ನು ಭೇಟಿ – –ಯಾಗುವದಕ್ಕೆ ಯೆರೂಸಲೇಮಿಗೆ ಹೋಗುವ ಯೋಜನೆ ಹಾಕಿಕೊಂಡಳು. ಈ ರಾಣಿಯು ವಾಸಿಸುತ್ತಿದ್ದ ಶೆಬಾ ದೇಶವು ಯೆರೂ –ಸಲೇಮಿನಿಂದ ತುಂಬಾ ದೂರದಲ್ಲಿದ್ದು ಸೌದಿ ಅರೇಬಿಯಾದ ದಕ್ಷಿಣದಲ್ಲಿರುವ ದೇಶವಾಗಿತ್ತು. ಶೆಬಾ ದೇಶವು ಈಗ ಯೆಮೆನ್ ಎಂದು ಕರೆಯಲ್ಪಡುತ್ತಿದೆ. ಈ ದೇಶ ಮತ್ತು ಯೆರೂಸಲೇಮಿನ ನಡುವೆ ಸುಮಾರು ಎರಡು ಸಾವಿರ ಕಿಲೋಮೀಟರ್ ದೂರವಿತ್ತು. ಹೀಗಿದ್ದರೂ, ಸೊಲೊಮೋನನನ್ನು ಸಂಧಿಸುವ ಪ್ರಯಾಣದಿಂದ ಈ ದೂರವು ಶೆಬದ ರಾಣಿಯನ್ನು ನಿರುತ್ಸಾಹಗೊಳಿಸಲಿಲ್ಲ.

ಹತ್ತನೆಯ ಅಧ್ಯಾಯದಲ್ಲಿ, ವಾಕ್ಯವು ಹೀಗೆ ಹೇಳುತ್ತದೆ:

"ಯೆಹೋವನಾಮ ಮಹತ್ತಿನಿಂದ ಸೊಲೊಮೋನನಿಗುಂಟಾದ ಕೀರ್ತಿಯನ್ನು ಕುರಿತು ಶೆಬದ ರಾಣಿಯು ಕೇಳಿ **ಅವನನ್ನು ಒಗಟು ಗಳಿಂದ ಪರೀಕ್ಷಿಸುವದಕ್ಕೆ ಬಂದಳು.** ಆಕೆಯು ಸುಗಂಧದ್ರವ್ಯ, ಅಪರಿಮಿತವಾದ ಬಂಗಾರ, ರತ್ನ ಇವುಗಳನ್ನು ಒಂಟೆಗಳ ಮೇಲೆ

ಹೇರಿಸಿಕೊಂಡು ಮಹಾ ಪರಿವಾರದೊಡನೆ ಯೆರೂಸಲೇಮಿಗೆ ಬಂದು ತನ್ನ ಮನಸ್ಸಿನಲ್ಲಿ ಗೊತ್ತು ಮಾಡಿಕೊಂಡಿದ್ದ ಎಲ್ಲಾ ವಿಷಯ ಗಳನ್ನು ಕುರಿತು ಸೊಲೊಮೋನನೊಡನೆ ಸಂಭಾಷಿಸಿದಳು. ಸೊಲೊಮೋನನು ಆಕೆಯ ಎಲ್ಲಾ ಪ್ರಶ್ನೆಗಳಿಗೆ ಉತ್ತರಕೊಟ್ಟನು. ಅರಸ –ನಾದ ಅವನಿಗೆ ತಿಳಿಯದಂಥದು ಅವುಗಳಲ್ಲಿ ಒಂದೂ ಇರಲಿಲ್ಲವಾದದರಿಂದ ಎಲ್ಲವುಗಳಿಗೂ ಅವನು ಉತ್ತರ ಕೊಟ್ಟನು. ಶೆಬದ ರಾಣಿಯು ಸೊಲೊಮೋನನ ಎಲ್ಲಾ ಜ್ಞಾನ, ಅವನು ಕಟ್ಟಿಸಿದ ಅರಮನೆ, ಅವನ ಭೋಜನಪೀಠದ ಆಹಾರ, ಆ ಪೀಠದ ಸುತ್ತಲಿ – –ರುವ ಉದ್ಯೋಗಸ್ಥರ ಆಸನಗಳು, ಅವನ ಪರಿಚಾರಕರ ಸೇವಾಕ್ರಮ, ಅ ಉಡುಪುಗಳು, ಅವನ ಪಾನಕಗಳು ಇವುಗಳನ್ನೂ ಅವನು ಯೆಹೋವನ ಆಲಯದಲ್ಲಿ ಸಮರ್ಪಿಸುತ್ತಿದ್ದ ಸರ್ವಾಂಗಹೋಮಗಳನ್ನೂ ನೋಡಿ ವಿಸ್ಮಿತಳಾದಳು."(೧ಅರಸು–೧೦:೧–೫)

"ಅವಳು ಅರಸನಿಗೆ – ನಾನು ನನ್ನ ದೇಶದಲ್ಲಿ ನಿನ್ನ ಜ್ಞಾನವನ್ನೂ ಕೃತ್ಯಗಳನ್ನೂ ಕುರಿತು ಕೇಳಿದ್ದು ಸತ್ಯವಾಗಿದೆ. ನಾನಾಗಿ ಇಲ್ಲಿಗೆ ಬಂದು ಕಣ್ಣಾರೆ ನೋಡುವದಕ್ಕಿಂತ ಮೊದಲು ಜನರು ಹೇಳಿದ ಸುದ್ದಿಯನ್ನು ನಂಬಲಿಲ್ಲ; **ಈಗ ನೋಡಿದರೆ ನಿನ್ನ ಜ್ಞಾನ ವೈಭವಗಳು ನಾನು ಕೇಳಿದ್ದಕ್ಕಿಂತ ಹೆಚ್ಚಾಗಿವೆ; ಜನರು ನನಗೆ ಇದರಲ್ಲಿ ಅರ್ಧವನ್ನಾದರೂ ಹೇಳಲಿಲ್ಲ**. ನಿನ್ನ ಪ್ರಜೆಗಳೂ ಸದಾ ನಿನ್ನ ಮುಂದೆ ನಿಂತುಕೊಂಡು ನಿನ್ನ ಜ್ಞಾನವಾಕ್ಯಗಳನ್ನು ಕೇಳುವ ನಿನ್ನ ಸೇವಕರೂ ಧನ್ಯರು. ನಿನ್ನನ್ನು ಮೆಚ್ಚಿ ಇಸ್ರಾಯೇಲ್ ಸಿಂಹಾಸನದ ಮೇಲೆ ಕುಳ್ಳಿರಿಸಿದ ನಿನ್ನ ದೇವರಾದ ಯೆಹೋವನಿಗೆ ಸ್ತೋತ್ರವಾಗಲಿ; ಆತನು ಇಸ್ರಾಯೇಲ್ಯರನ್ನು ಸದಾ ಪ್ರೀತಿಸುವವನಾಗಿರುವದರಿಂದ ಅವರ ನೀತಿನ್ಯಾಯಗಳನ್ನು ಸ್ಥಾಪಿಸುವದಕ್ಕೋಸ್ಕರ ನಿನ್ನನ್ನೇ ಅರಸನನ್ನಾಗಿ ನೇಮಿಸಿದ್ದಾನೆ ಎಂದು ಹೇಳಿದಳು."
(೧ಅರಸು–೧೦:೬–೯)

ಈ ದಿನ ನಮ್ಮ ಓದುವಿಕೆಯನ್ನು ಇಲ್ಲಿಗೆ ನಿಲ್ಲಿಸಬೇಕು. ಹೇಗಾದರೂ, ಶೆಬಾದ ರಾಣಿಯ ಕುರಿತಾಗಿ ದೇವರ ವಾಕ್ಯ ಹೇಳುವದು ಇಲ್ಲಿಗೆ ಮುಗಿಯುವದಿಲ್ಲ. ಆ ಸಮಯದ ನಂತರ ಒಂದು ಸಾವಿರ ವರ್ಷಗಳಿಗಿಂತಲೂ ಕಡಿಮೆಯಾಗಿ, ಅರಸನಾದ ಸೊಲೊ – –ಮೋನ ಮತ್ತು ಶೆಬಾದ ರಾಣಿಯನ್ನು ಕುರಿತು ಮೆಸ್ಸೀಯನು ಸ್ವಲ್ಪ ಹೇಳುತ್ತಾನೆ. ಆತನು ಹೇಳುವದೇನೆಂದರೆ, "ದಕ್ಷಿಣ ದೇಶದ ರಾಣಿಯು ನ್ಯಾಯವಿಚಾರಣೆಯಲ್ಲಿ ಈ ಸಂತತಿಯವರೊಂದಿಗೆ ಎದ್ದುನಿಂತು ಇವರನ್ನು ಅಪರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; **ಆದರೆ ಇಲ್ಲಿ ಸೊಲೊಮೋನನಿಗಿಂತಲೂ ಹೆಚ್ಚಿನವನಿದ್ದಾನೆ."** (ಮತ್ತಾಯ–೧೨:೪೨)

ಮೆಸ್ಸೀಯನು ಹೇಳಿರುವದನ್ನು ನೀವು ಕೇಳಿಸಿಕೊಂಡಿರೋ? **ಸೊಲೊಮೋನನ ಮಹಿಮೆಯನ್ನು ಪರೀಕ್ಷಿಸುವದಕ್ಕೆ ಬಂದಂತಹ ಶೆಬಾದ ರಾಣಿಯು ಮೆಸ್ಸೀಯನ ಮಹಿಮೆಯನ್ನು ಪರೀಕ್ಷಿಸುವದಕ್ಕೆ ನಿರಾಕರಿಸುವಂತವರೆಲ್ಲರನ್ನೂ ಅಪರಾಧಿಗಳೆಂದು ಹೇಳುವಳು.** ಶೆಬಾದ ರಾಣಿಯು ಸೊಲೊಮೋನನ ಮಹಿಮೆಯನ್ನು ಕಂಡುಹಿಡಿಯುವದಕ್ಕೆ ಮತ್ತು ಅವನ ಜ್ಞಾನವನ್ನು ಕೇಳಿಸಿಕೊಳ್ಳುವದಕ್ಕೆ ತನ್ನ ಅಧಿಕಾರದಲ್ಲಿ ಪ್ರತಿಯೊಂದನ್ನೂ ಮಾಡಿದಳು. ತಾನು ಕೇಳಿದ್ದು ಸತ್ಯವೋ ಅಲ್ಲವೋ ಎಂಬುದನ್ನು ತಿಳಿದುಕೊಳ್ಳುವದಕ್ಕೆ ಅವಳು ನಾಲ್ಕು ಸಾವಿರ ಕಿಲೋಮೀಟರ್ ಸುತ್ತು ಹಾಕಿ ಪ್ರಯಾಣಿಸಿದಳು! ಇಲ್ಲಿ ನಮಗೊಂದು ಮುಖ್ಯವಾದ ಪಾಠವಿದೆ. ಪರಲೋಕದಿಂದ ಬಂದಂತಹ **ಮೆಸ್ಸೀಯನು,** ಸೊಲೊಮೋನನ ಮಹಿಮೆಯಲ್ಲಿ, ಜ್ಞಾನದಲ್ಲಿ, ತಿಳುವಳಿಕೆಯಲ್ಲಿ ಮತ್ತು ಅಧಿಕಾರದಲ್ಲಿ, ಅಧಿಕ ಮಿತಿ – –ಮೀರಿದವನಾಗಿದ್ದನು, ಆದಾಗ್ಯೂ ಆದಾಮನ ಮಕ್ಕಳಲ್ಲಿ ಹೆಚ್ಚಿನವರು **ಆತನ ಮಹಿಮೆಯನ್ನು ಗುರುತಿಸಲಿಲ್ಲ, ಇಲ್ಲವೆ ಸತ್ಯವನ್ನು ತಿಳಿದುಕೊಳ್ಳುವ ಸಂಗತಿಯನ್ನು ಪರೀಕ್ಷಿಸುವದಕ್ಕೆ ಅವರು ಮನಸ್ಸುಮಾಡಲಿಲ್ಲ!** ಅದಕ್ಕಾಗಿಯೇ ಮೆಸ್ಸಿಯನು: "ದಕ್ಷಿಣ ದೇಶದ ರಾಣಿಯು ನ್ಯಾಯವಿಚಾರಣೆಯಲ್ಲಿ ಈ ಸಂತತಿಯವರೊಂದಿಗೆ ಎದ್ದುನಿಂತು ಇವರನ್ನು ಅಪರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; ಆದರೆ ಇಲ್ಲಿ ಸೊಲೊಮೋನನಿಗಿಂತಲೂ ಹೆಚ್ಚಿನವನಿದ್ದಾನೆ!" ಹೇಳಿದ್ದಾನೆ. (ಮತ್ತಾಯ–೧೨:೪೨)

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ದೇವರು ಕಳಿಸಿದ ಮೆಸ್ಸೀಯನ ಮಹಿಮೆಯನ್ನು ಗ್ರಹಿಸಿಕೊಂಡಿದ್ದೀರೋ? ಅಥವಾ ಪ್ರವಾದಿಗಳಂತೆ ಅದೇ ಮಟ್ಟದಲ್ಲಿ ಆತನನ್ನು ನೀವು ಇಟ್ಟಿದ್ದೀರೋ? ಮೆಸ್ಸೀಯ ಎಂಬ ಬಿರುದಿನ ಅರ್ಥವೇನೆಂಬುದು ನಿಮಗೆ ನೆನ –ಪಿದೆಯಾ? ಹೌದು, ದೇವರು ಆರಿಸಿಕೊಂಡವನು ಎಂದು ಇದರ ಅರ್ಥ. ದೇವರು ಮೆಸ್ಸೀಯನನ್ನು ಲೋಕದ ರಕ್ಷಕನನ್ನಾಗಿಯೂ ಮತ್ತು ನ್ಯಾಯಾಧಿಪತಿಯನ್ನಾಗಿಯೂ ಆರಿಸಿಕೊಂಡಿದ್ದಾನೆ. ಆದಾಗ್ಯೂ ಈ ದಿನದವರೆಗೂ, ಹೆಚ್ಚಿನ ಜನರು ಮೆಸ್ಸೀಯನನ್ನು ಅಲಕ್ಷಿ –ಸಿದ್ದಾರೆ. ಆತನು ಯಾರೆಂದು ಅವರಿಗೆ ಗೊತ್ತಿಲ್ಲ ಯಾಕಂದರೆ ಅವರು ಪ್ರವಾದಿಗಳ ಬರವಣಿಗೆಗಳಲ್ಲಿ ಆತನಿಗಾಗಿ ಎಂದಿಗೂ ಹುಡುಕಲಿಲ್ಲ.

ನಮ್ಮ ಸಮಯ ಬಹುಮಟ್ಟಿಗೆ ಮುಗಿಯಿತು, ಆದರೆ ನಾವು ನಿಮಗೆ ವಿದಾಯ ಹೇಳುವದಕ್ಕಿಂತ ಮುಂಚೆ, ಪರಿಶುದ್ಧ ವಾಕ್ಯಗಳ ಒಂದು ಭಾಗವಾಗಿರುವ ಅರಸನಾದ ಸೊಲೊಮೋನನು ಬರೆದಿರುವ ಮೂರು ಅದ್ಭುತವಾದ ಮತ್ತು ಅಗಾಧವಾದ ಪುಸ್ತಕಗಳನ್ನು ನೀವು ತಿಳಿದುಕೊಳ್ಳಬೇಕು. ಆ ಪುಸ್ತಕಗಳು ಯಾವುವೆಂದರೆ: ಜ್ಞಾನೋಕ್ತಿಗಳು, ಪ್ರಸಂಗಿಗಳು ಮತ್ತು ಪರಮಗೀತ. ತನ್ನ ತಂದೆಯಾದ ದಾವೀದನಂತೆ ಸೊಲೊಮೋನನು ಕೀರ್ತನೆಗಳ ಪುಸ್ತಕದ ಭಾಗವಾಗಿರುವಂತ ಕೆಲವು ಗೀತಗಳನ್ನು ಬರೆದಿದ್ದಾನೆ. ಈ ದಿನದ ಕಾರ್ಯಕ್ರಮವನ್ನು ಮುಗಿಸುವದಕ್ಕೆ, ಕೀರ್ತನೆಗಳಲ್ಲಿ ಪ್ರವಾದಿಯಾದ ಸೊಲೊಮೋನನು ಬರೆದಿರುವ ಎಪ್ಪತ್ತೆರಡನೆಯ ಅಧ್ಯಾಯ – –ವನ್ನು ಓದುವದಕ್ಕೆ ನಾವು ಇಷ್ಟಪಡುತ್ತೇವೆ. ಈ ಕೀರ್ತನೆಯಲ್ಲಿ, **ಮಾನವಜನಾಂಗಕ್ಕೆ ನೀತಿವಂತಿಕೆಯಲ್ಲಿ ತೀರ್ಪುಮಾಡುವದಕ್ಕೆ**

**ಮೆಸ್ಸೀಯನು ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆಂಬುದಾಗಿ ಸೊಲೊಮೋನನು ಪ್ರವಾದಿಸಿದ್ದಾನೆ.** ತನ್ನನ್ನು ಮಹಿಮೆ ಮತ್ತು ಜ್ಞಾನದಲ್ಲಿ ಮೀರಿಸಿದವನಾದ ಸಂಪೂರ್ಣನಾದ ಅರಸನ ಕುರಿತಾಗಿ ಅರಸನಾದ ಸೊಲೊಮೋನನು ಬರೆದಿರುವದನ್ನು ಕೇಳಿಸಿಕೊಳ್ಳೋಣ.

"ಅವನು ನಿನ್ನ ಜನರಿಗೆ ನೀತಿಯಿಂದಲೂ ಕುಗ್ಗಿಹೋದ ನಿನ್ನವರಿಗೆ ನ್ಯಾಯವಾಗಿಯೂ ತೀರ್ಪುಕೊಡಲಿ. ಅವನು ಸಮುದ್ರದಿಂದ ಸಮುದ್ರದವರೆಗೂ ಯೂಫ್ರೇಟಿಸ್ ನದಿಯಿಂದ ಭೂಮಿಯ ಕಟ್ಟಕಡೆಯವರೆಗೂ ಆಳಲಿ. ಅರಣ್ಯವಾಸಿಗಳು ಅವನಿಗೆ ಅಡ್ಡ ಬೀಳಲಿ; ಅವನ ವೈರಿಗಳು ಮಣ್ಣುಮುಕ್ಕಲಿ. ತಾರ್ಷೀಷ್ ಪ್ರಾಂತದ ಮತ್ತು ಸಮುದ್ರದ ಕರಾವಳಿಯ ಅರಸರು ಕಪ್ಪಗಳನ್ನು ಸಲ್ಲಿಸಲಿ; ಶೆಬಾ ಮತ್ತು ಸೆಬಾ ಪ್ರದೇಶಗಳ ರಾಜರೂ ಕಾಣಿಕೆಗಳನ್ನು ತಂದೊಪ್ಪಿಸಲಿ. **ಎಲ್ಲಾ ಅರಸರೂ ಅವನಿಗೆ ಸಾಷ್ಟಾಂಗವೆರಗಲಿ;** ಸರ್ವಜನಾಂಗ–ಗಳು ಅವನನ್ನು ಸೇವಿಸಲಿ. ಅವನು ಬಾಳಲಿ. . . .ಅವನ ನಾಮವು ಸ್ಥಿರವಾಗಿರಲಿ; ಅವನ ಹೆಸರು ಸೂರ್ಯನಿರುವವರೆಗೆ ಇರಲಿ. ಎಲ್ಲಾ ಜನಾಂಗಗಳವರು ಅವನನ್ನು ಧನ್ಯನೆಂದು ಹೇಳಿ ಅವನಿಗಿದ್ದ ಆಶೀರ್ವಾದವು ತಮಗೂ ಆಗಬೇಕೆಂದು ಕೋರು–ವವರಾಗಲಿ. ಮಹತ್ಕಾರ್ಯಗಳನ್ನು ನಡಿಸುವದರಲ್ಲಿ ಅದ್ವಿತೀಯನೂ ಇಸ್ರಾಯೇಲ್ಯರ ದೇವರೂ ಆದ ಯೆಹೋವ ದೇವರಿಗೆ ಸ್ತೋತ್ರವು. ಆತನ ಪ್ರಭಾವವುಳ್ಳ ನಾಮಕ್ಕೆ ಸದಾಕಾಲವೂ ಪ್ರಣಾಮವಿರಲಿ. ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿರಲಿ! ಆಮೆನ್, ಅಮೆನ್." (ಕೀರ್ತನೆ–೭೨: ೨, ೮–೧೧, ೧೫, ೧೭–೧೯)

ಹೀಗೆ ಅರಸನಾದ ಸೊಲೊಮೋನನು, ಒಂದು ದಿನ ಲೋಕದ ಎಲ್ಲಾ ಜನರೂ ರಾಜರುಗಳ ರಾಜನೂ, ಲೋಕದ ನ್ಯಾಯಾಧಿ–ಪತಿಯೂ ಆಗಿರುವ ಮೆಸ್ಸೀಯನಿಗೆ ಅಧೀನರಾಗುತ್ತಾರೆ ಎಂದು ಪ್ರವಾದಿಸಿದನು. ಖಂಡಿತವಾಗಿಯೂ, ನಾವು ಪ್ರತಿಯೊಬ್ಬರೂ ಈ ದಿನ ಆತನಿಗೆ ಅಧೀನರಾಗಬೇಕೆಂದು ದೇವರು ಬಯಸುತ್ತಾನೆ! ನಿಮ್ಮ ವಿಷಯವೇನು? ನೀವು ನಿಜವಾಗಿಯೂ ದೇವರಿಗೆ ಅಧೀನ–ರಾಗಿದ್ದೀರೋ? ದೇವರು ಕಳುಹಿಸಿದಂತ ಮತ್ತು ತಿರಿಗಿ ಕಳುಹಿಸಲಿಕ್ಕಿರುವ ಮೆಸ್ಸೀಯನ ಅಧಿಕಾರವನ್ನು ಮತ್ತು ಮಹಿಮೆಯನ್ನು ನೀವು ಗ್ರಹಿಸಿದ್ದೀರೋ? ಅಥವಾ ಪ್ರವಾದಿಗಳ ಹಾಗೆ ಅದೇ ಮಟ್ಟದಲ್ಲಿ ಆತನನ್ನು ಸುಮ್ಮನೆ ಇಟ್ಟುಬಿಟ್ಟಿದ್ದೀರೋ? ಒಂದು ವೇಳೆ ನೀವು ಪ್ರವಾದಿಗಳು ಬರೆದಿರುವದನ್ನು ಪರೀಕ್ಷಿಸುವದಕ್ಕೆ ಸಮಯವನ್ನು ತೆಗೆದುಕೊಂಡರೆ, ಮೆಸ್ಸೀಯನು, ಎಲ್ಲಾ ಪ್ರವಾದಿಗಳು ಸಾಕ್ಷಿಕೊಟ್ಟಿರುವಂತವನೂ, ಲೋಕದ ನ್ಯಾಯಾಧಿಪತಿಯೂ ಮತ್ತು ರಕ್ಷಕನೂ ಆಗಿದ್ದಾನೆಂಬುದನ್ನು ಕಂಡುಕೊಳ್ಳುತ್ತೀರಿ. ಹಾಗಾ–ಗಿಯೇ ಪರಿಶುದ್ಧ ವಾಕ್ಯಗಳು ಹೇಳಿರುವದೇನೆಂದರೆ: **"**ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ. **ಪ್ರವಾದಿಗಳಲ್ಲಿ ನಿನಗೆ ನಂಬಿಕೆ –ಯುಂಟೋ?"** (ಅಪೊ.ಕೃತ್ಯ–೧೦:೪೩; ೨೬:೨೭)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಾದರೆ ಮುಂದಿನ ಸಲ, ಪರಲೋಕದಿಂದ ಬೆಂಕಿಯನ್ನು ಕೆಳಗೆ ಕರೆದಂತ ದೇವರ ಪ್ರವಾದಿಯಾದ ಎಲೀಯನ ಕುರಿತಾಗಿ ಆಧ್ಯಯನ ಮಾಡುತ್ತೇವೆ,

ಮೆಸ್ಸೀಯನು ಹೇಳಿರುವದನ್ನು ನೀವು ಜಾಗ್ರತೆಯಿಂದ ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಸೀರ್ವದಿಸಲಿ,

**"ದಕ್ಷಿಣ ದೇಶದ ರಾಣಿಯು ನ್ಯಾಯವಿಚಾರಣೆಯಲ್ಲಿ ಈ ಸಂತತಿಯರೊಂದಿಗೆ ಎದ್ದುನಿಂತು ಇವರನ್ನು ಅಪ್ರಾಧಿಗಳೆಂದು ಹೇಳುವಳು; ಆಕೆಯು ಸೊಲೊಮೋನನ ಜ್ಞಾನವನ್ನು ತಿಳುಕೊಳ್ಳುವದಕ್ಕೆ ಭೂಮಿಯ ಕಟ್ಟಕಡೆಯಿಂದ ಬಂದಳು; ಆದರೆ ಇಲ್ಲಿ ಸೊಲೊಮೋನನಿ–ಗಿಂತಲೂ ಹೆಚ್ಚಿನವನಿದ್ದಾನೆ."** (ಮತ್ತಾಯ–೧೨:೪೨)

[ಪಾಠ 52: ಪ್ರವಾದಿಯಾದ ಸೊಲೊಮೋನ] [ಸಾರಾಂಶಗಳ ಪಟ್ಟಿ] [ಪಾಠ 54: ಪ್ರವಾದಿಯಾದ ಯೋನ]

ಪಾಠ 53

## ಪ್ರವಾದಿಯಾದ ಎಲೀಯ

1ಅರಸು 6–18

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಪಾಠದಲ್ಲಿ, ಪ್ರವಾದಿಯಾದ ದಾವೀದನ ಮಗನಾದ ಸೊಲೊಮೋನನ ಕಥೆಯನ್ನು ಅಧ್ಯಯನ ಮಾಡಿದ್ದೇವೆ. ದೇವರು ಸೊಲೊಮೋನನಿಗೆ ಅಸಾಧಾರಣವಾದ ಜ್ಞಾನವನ್ನೂ ಮತ್ತು ವಿವೇಕವನ್ನೂ ಹೇಗೆ ಕೊಟ್ಟಿದ್ದನೆಂಬುದನ್ನು ನಾವು ನೋಡಿಕೊಂಡೆವು. ಅರಸನಾದ ಸೊಲೊಮೋನನ ಕಾಲದಲ್ಲಿ, ಯೆರೂಸಲೇಮು ಪ್ರಪಂಚದಲೆಲ್ಲಾ ಅತೀ ಸುಂದರವಾದ ಪಟ್ಟಣವಾಗಿತ್ತು. ಆದರೆ ಸೊಲೊಮೋನನು ಯೆರೂಸಲೇಮಿನಲ್ಲಿ ಕಟ್ಟಿಸಿದ್ದ ಎಲ್ಲವುಗಳು, ಕರ್ತನಾದ ದೇವರ ಆಲಯದ ಸೌಂದರ್ಯವನ್ನು ಮೀರಿಸುವಂತವುಗಳಾಗಿರಲಿಲ್ಲ. ಅರಣ್ಯದಲ್ಲಿ ಮೋಶೆಯೂ ಮತ್ತು ಇಸ್ರಾಯೇಲ್ಯರೂ ಕಟ್ಟಿದ್ದಂತ ಆರಾಧನೆಯ ವಿಶೇಷವಾದ ಗುಡಾರವಾಗಿದ್ದ ದೇವ ದರ್ಶನದ ಗುಡಾರದ ಬದಲಿಗೆ ಅರಸನಾದ ಸೊಲೊಮೋನನು ಆಲಯವನ್ನು ಕಟ್ಟಿದನು. ಈ ಸುಂದರವಾದ ಆರಾಧನೆಯ ಸ್ಥಳವನ್ನು ಕಟ್ಟುವದಕ್ಕೆ ಸೊಲೊಮೋನನು ಏಳು ವರ್ಷಗಳವರೆಗೆ ಎರಡು ಲಕ್ಷ ಕೆಲಸಗಾರರನ್ನು ಕೆಲಸಕ್ಕಿಟ್ಟುಕೊಂಡಿದ್ದನು. ಸೊಲೊಮೋನನು ಕಟ್ಟಿಸಿದ ಆ ಆಲಯದ ಬೃಹತ್ತಾದ ಕಲ್ಲುಗಳ ಬುನಾದಿಯನ್ನು ಈಗಲೂ ಸಹ ನಾವು ಯೆರೂಸಲೇಮಿನಲ್ಲಿ ಕಾಣಬಹುದು.

ಆಲಯದ ಕೆಲಸ ಮುಗಿದಾಗ ಯಾಜಕರುಗಳು, ಪಾಪಿಗಳಿಗಾಗಿ ತನ್ನ ಅಮೂಲ್ಯವಾದ ರಕ್ತವನ್ನು ಸುರಿಸುವದಕ್ಕೆ ಬರಲಿರುವ ವಿಮೋಚಕನ ಗುರುತಾಗಿ ಸಾವಿರಾರು ಕುರಿಗಳನ್ನೂ ಮತ್ತು ಹೋರಿಗಳನ್ನೂ ಯಜ್ಞ ಅರ್ಪಿಸಿದರು. ಆತನ ಹೆಸರಿಗಾಗಿ ಅವರು ಕಟ್ಟಿದ್ದಂತಹ ಆಲಯವನ್ನು ಈ ರೀತಿಯಾಗಿ ಅವರು ದೇವರಿಗೆ ಸಮರ್ಪಿಸಿದರು. ಅವರು ಆ ಪಶುಗಳನ್ನು ಯಜ್ಞಮಾಡಿ ತಾಮ್ರದ ವೇದಿಯ ಮೇಲೆ ಹೋಮವಾಗಿ ಅರ್ಪಿಸಿದರು, ಯಾಜಕರುಗಳು ಒಡಂಬಡಿಕೆಯ ಮಂಜೂಷವನ್ನು(ದೇವದರ್ಶನದ ಗುಡಾರದಲ್ಲಿದ್ದದ್ದು) ತೆಗೆದುಕೊಂಡು ಹೊಸ ಆಲಯದ ಅತೀ ಪರಿಶುದ್ದ ಸ್ಥಳದಲ್ಲಿಟ್ಟರು. ಯಾಜಕರುಗಳು ಅತೀ ಪರಿಶುದ್ದ ಸ್ಥಳವನ್ನು ಬಿಟ್ಟು ಹೊರಟ ನಂತರ, ತಕ್ಷಣವೇ ಕರ್ತನ ಮಹಿಮೆಯು ಕೋಣೆಯನ್ನೆಲ್ಲಾ ತುಂಬಿಕೊಂಡಿತು. ಅರಣ್ಯದಲ್ಲಿ ಮೋಶೆ ಮತ್ತು ಇಸ್ರಾಯೇಲ್ಯರು ಕಟ್ಟಿದ್ದ ಆರಾಧನೆಯ ಗುಡಾರದಲ್ಲಿ ಅತೀ ಪರಿಶುದ್ದ ಸ್ಥಳವನ್ನು ದೇವರ ಮಹಿಮೆಯು ತುಂಬಿಕೊಂಡಿದ್ದ ಹಾಗೆಯೇ, ಯೆರೂಸಲೇಮಿನಲ್ಲಿ ಸೊಲೊಮೋನನು ಕಟ್ಟಿದ್ದ ಆಲಯದಲ್ಲಿ ದೇವರ ಮಹಿಮೆಯು ಅತೀ ಪರಿಶುದ್ದ ಸ್ಥಳದಲ್ಲಿಯೂ ತುಂಬಿಕೊಂಡಿತು.

ಸೊಲೊಮೋನನ ಉಳಿದ ಜೀವಿತಕ್ಕೆ ಸಂಬಂಧಿಸಿದಂತೆ, ಅವನ ಪ್ರಾರಂಭದ ಆಳ್ವಿಕೆಯ ಹಾಗೆ ಅವನ ನಂತರದ ಆಳ್ವಿಕೆಯಿರಲಿಲ್ಲ ಎಂಬುದಾಗಿ ವಾಕ್ಯಗಳು ನಮಗೆ ತಿಳಿಸುತ್ತವೆ. 1ಅರಸುಗಳ ಪುಸ್ತಕ 11ನೆಯ ಅಧ್ಯಾಯದಲ್ಲಿ ಏನು ಬರೆದದೆ ಎಂಬುದನ್ನು ಕೇಳಿಸಿಕೊಳ್ಳಿರಿ. ಪ್ರವಾದಿಗಳ ಪಾಪಗಳನ್ನು ದೇವರ ವಾಕ್ಯವು ಮುಚ್ಚಿಡುವದಿಲ್ಲ ಎಂಬುದನ್ನು ನಾವು ಮತ್ತೆ ಗಮನಿಸಬೇಕಾಗಿದೆ. ವಾಕ್ಯ ಹೀಗೆ ಹೇಳುತ್ತದೆ: "ಅರಸನಾದ ಸೊಲೊಮೋನನು ಫರೋಹನ ಮಗಳಲ್ಲದೆ ಮೋವಾಬ್ಯರು, ಅಮ್ಮೋನಿಯರು, ಎದೋಮ್ಯರು, ಚೀದೋ –ನ್ಯರು, ಹಿತ್ತಿಯರು ಎಂಬೀ ಜನಾಂಗಗಳ ಸ್ತ್ರೀಯರನ್ನೂ ಮೋಹಿಸಿದನು. ಅವನು ವೃದ್ಧನಾದಾಗ ಇವರು ಅವನ ಹೃದಯವನ್ನು ಅನ್ಯ ದೇವತೆಗಳ ಕಡೆಗೆ ತಿರುಗಿಸಿದರು. **ಈ ಕಾರಣದಿಂದ ಅವನು ತನ್ನ ದೇವರಾದ ಯೆಹೋವನಲ್ಲಿಟ್ಟಿದ್ದ ಯಥಾರ್ಥಭಕ್ತಿಯನ್ನು ಕಳೆದು ಕೊಂಡನು. ತನ್ನ ತಂದೆಯಾದ ದಾವೀದನಂತೆ ನಡೆಯಲಿಲ್ಲ."** **(1ಅರಸು–11:1,4)**.

ಅನಂತರ ಸೊಲೊಮೋನನು ಅನ್ಯ ಜನಾಂಗದ ತನ್ನ ಹೆಂಡತಿಯರಿಗಾಗಿ ಯೆರೂಸಲೇಮಿನ ಮೂಡಲಲ್ಲಿರುವ ಗುಡ್ಡದಲ್ಲಿ ಪೂಜಾ ಸ್ಥಳಗಳನ್ನು ಏರ್ಪಡಿಸಿ ಅಲ್ಲಿ ಅವರು ಧೂಪಸುಡುವದಕ್ಕೂ ಮತ್ತು ಯಜ್ಞವರ್ಪಿಸುವದಕ್ಕೂ ಅನುಕೂಲ ಮಾಡಿಕೊಟ್ಟನು. ಅವನು ಇದನ್ನು ಮಾಡಿದಾಗ, ದೇವರು ಸೊಲೊಮೋನನ ವಿಷಯದಲ್ಲಿ ಕೋಪಗೊಂಡನು, ಯಾಕೆಂದರೆ

ಅವನು ಜೀವಿಸುವ ಮತ್ತು ಸತ್ಯ ದೇವರ  ವಾಕ್ಯವನ್ನು ಮೀರಿದವನಾಗಿದ್ದನು.  ಆಗ ದೇವರು ಸೊಲೊಮೋನನಿಗೆ ಹೀಗೆ ಹೇಳಿದನು:

**"ನೀನು ಈ ಪ್ರಕಾರ ಮಾಡಿ** ನನ್ನ ವಿಧಿನಿಬಂಧನೆಗಳನ್ನು ಮೀರಿದ್ದರಿಂದ **ನಿನ್ನ ರಾಜ್ಯವನ್ನು ನಿನ್ನಿಂದ ಕಿತ್ತುಕೊಂಡು** ನಿನ್ನ ಸೇವಕನಿಗೆ ಕೊಡುವೆನು.  ಆದರೂ ನಾನು ನಿನ್ನ ತಂದೆಯಾದ ದಾವೀದನನ್ನು ನೆನಸಿ ನಿನ್ನ ಕಾಲದಲ್ಲಿ ಇದನ್ನು ಮಾಡುವದಿಲ್ಲ,  ನಿನ್ನ ಮಗನ ಕೈಯಿಂದ ಅದನ್ನು ಕಿತ್ತುಕೊಳ್ಳುವೆನು.  ಆದರೆ ರಾಜ್ಯವನ್ನೆಲ್ಲಾ ಕಿತ್ತುಕೊಳ್ಳುವದಿಲ್ಲ; ನನ್ನ ಸೇವಕನಾದ ದಾವೀದನಿಗೋಸ್ಕರವೂ ನಾನು ಆರಿಸಿಕೊಂಡ ಯೆರೂಸಲೇಮ್ ಪಟ್ಟಣಕ್ಕೋಸ್ಕರವೂ ನಿನ್ನ ಮಗನಿಗೆ ಒಂದು ಕುಲವನ್ನು ಉಳಿಸುವೆನು ಎಂದು ಹೇಳಿದನು." (1ಅರಸು–11:11–13).

ಈ ಪ್ರಕಾರ ಸೊಲೊಮೋನನು ಮರಣ ಹೊಂದಿದ ನಂತರ, ಇಸ್ರಾಯೇಲ್ ದೇಶದೊಳಗೆ ಕಾದಾಟಗಳೂ ಮತ್ತು ಜಗಳಗಳೂ ಇದ್ದವು ಎಂಬುದನ್ನು ವಾಕ್ಯವು ನಮಗೆ ತಿಳಿಸುತ್ತದೆ.  ದೇವರು ಸೊಲೊಮೋನನಿಗೆ ಹೇಳಿದ ಹಾಗೆ ಯಾಕೋಬನ ಮಕ್ಕಳಿಂದ ಬಂದಿದ್ದ ಇಸ್ರಾಯೇಲಿನ ಹನ್ನೆರಡು ಕುಲಗಳು **ಎರಡು ಭಾಗಗಳಾದವು.**  ಅವು ಬಹಳ ಸಮಯವದವರೆಗೆ ಒಂದೇ ದೇಶವಾಗಿ ಉಳಿದುಕೊಳ್ಳಲಿಲ್ಲ; ಅವು **ಇಸ್ರಾಯೇಲ್** ಮತ್ತು **ಯೆಹೂದ** ಎಂಬುದಾಗಿ ಎರಡು ದೇಶಗಳಾದವು.  ಇಸ್ರಾಯೇಲಿನ ಹತ್ತು ಕುಲಗಳು ದೇಶದ ಉತ್ತರ ಭಾಗ –ದಲ್ಲಿ ಇಸ್ರಾಯೇಲ್ ರಾಜ್ಯವನ್ನು ರಚಿಸಿಕೊಂಡವು. ಯೆಹೂದ ಕುಲವು ಬೆನ್ಯಾಮೀನ್ ಎಂಬ ಚಿಕ್ಕ ಕುಲದೊಂದಿಗೆ ಸೇರಿಕೊಂಡು ಯೆಹೂದದ ದಕ್ಷಿಣ ರಾಜ್ಯವನ್ನು ರಚಿಸಿಕೊಂಡಿತು.  **ಯೆಹೂದವು** ಅರಸನಾದ ದಾವೀದನ ಕುಲವೂ ಮತ್ತು ಲೋಕಕ್ಕೆ **ಮೆಸ್ಸೀಯನನ್ನು** ತರುತ್ತೇನೆಂದು ದೇವರು ವಾಗ್ದಾನ ಮಾಡಿದ್ದ ಸಂತತಿಯೂ ಆಗಿತ್ತು.

ಆ ಎರಡು ದೇಶಗಳು ಹೇಗೆ ಅನೇಕ ಅರಸರುಗಳನ್ನು ಹೊಂದಿದ್ದವು ಎಂಬುದನ್ನು ವಾಕ್ಯವು ತಿಳಿಸುತ್ತದೆ.  ಇಸ್ರಾಯೇಲ್ ಮತ್ತು ಯೆಹೂದದ ಅನೇಕ ರಾಜರುಗಳು ದುಷ್ಟ ನಾಯಕರುಗಳಾಗಿದ್ದರು; ಅವರು ಕರ್ತನನ್ನು ತಿರಸ್ಕ'ರಿಸಿ ತಮ್ಮ ಸುತ್ತಲಿರುವ ದೇಶಗಳ ಧರ್ಮಗಳನ್ನು ಅನುಸರಿಸಿದರು.  ಇಸ್ರಾಯೇಲ್ಯರ ಆ ಎಲ್ಲಾ ಅರಸರುಗಳಲ್ಲಿ, ಒಬ್ಬನು ಮಾತ್ರ ಎಲ್ಲರಿಗಿಂತ ಹೆಚ್ಚು ಕೆಟ್ಟವನೂ ಮತ್ತು ದುಷ್ಟನೂ ಆಗಿದ್ದನು. ಅವನು ಯಾರೆಂದು ನಿಮಗೆ ಗೊತ್ತಾ? ಅವನೇ **ಅರಸನಾದ ಅಹಾಬ.** ಸೊಲೊಮೋನನು ನಂತರ ಆಹಾಬನು ಎಂಟನೆಯ ಅರಸನಾಗಿದ್ದನು.

ಅಹಾಬನಿಗೆ ಸಂಬಂಧಿಸಿದಂತೆ, ವಾಕ್ಯವು ಹೀಗೆ ಹೇಳುತ್ತದೆ: "ಇವನು ತನ್ನ ಪೂರ್ವಾಧಿಕಾರಿಗಳೆಲ್ಲರಿಗಿಂತಲೂ ದುಷ್ಟನಾಗಿ ಯೆಹೋವನ ದೃಷ್ಟಿಯಲ್ಲಿ ದ್ರೋಹಿಯಾದನು." (1ಅರಸು–16:30).  ಕರ್ತನ ವಾಕ್ಯವನ್ನು ತಿರಸ್ಕರಿಸಿದ್ದ ದುಷ್ಟ ಸ್ತ್ರೀಯಾದ ಈಜೆಬೆಲಳನ್ನು ಇವನು ಮದುವೆಯಾಗಿದ್ದನು.  ಅದೂ ಅಲ್ಲದೆ, ಅಹಾಬನು ತನ್ನ ಸುತ್ತಲಿರುವ ದೇಶಗಳವರು ದೇವರೆಂಬುದಾಗಿ ಕರೆಯುತ್ತಿದ್ದ ಬಾಳನಿಗೆ ಒಂದು ಆಲಯವನ್ನು ಇಸ್ರಾಯೇಲ್ ದೇಶದಲ್ಲಿ ಕಟ್ಟಿಸಿದನು.  ಹೀಗೆ ಅಹಾಬನು ಇಸ್ರಾಯೇಲ್ಯರನ್ನು ಅರ್ಥವಿಲ್ಲದ, ಸುಳ್ಳು ಧರ್ಮಕ್ಕೆ ಮತ್ತು ಅದರ ಸುಳ್ಳು ಪ್ರವಾದಿಗಳ ಕಡೆಗೆ ನಡೆಸಿ ಕರ್ತನನ್ನು ಬಹಳವಾಗಿ ಕೋಪಗೊಳಿಸಿದನು.

ಹೇಗಿದ್ದರೂ, ಆ ಕಾಲದಲ್ಲಿ ದೇವರೊಂದಿಗೆ ನಡೆದುಕೊಳ್ಳುತ್ತಿದ್ದ ಒಬ್ಬ ಮನುಷ್ಯನು ಇಸ್ರಾಯೇಲಿನಲ್ಲಿದ್ದನು.  ಅವನ ಹೆಸರು ಎಲೀಯ.  ಒಂದು ದಿನ ದೇವರು ಎಲೀಯನನ್ನು ಅರಸನಾದ ಅಹಾಬನ ಬಳಿಗೆ ಕಳುಹಿಸಿದನು.  "ಎಲೀಯನು ಅಹಾಬನಿಗೆ, ನಾನು ಸನ್ನಿಧಿ ಸೇವೆ ಮಾಡುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಾಣೆ, ನಾನು ಸೂಚಿಸಿದ ಹೊರತು ಇಂದಿನಿಂದ ಕೆಲವು ವರುಷಗಳ –ವರೆಗೆ ಮಳೆಯಾಗಲಿ ಮಂಜಾಗಲಿ ಬೀಳುವದಿಲ್ಲ ಅಂದನು."(1ಅರಸು–17:1)

ಹೀಗೆ, ಮೂರು ವರುಷ ಆರು ತಿಂಗಳುಗಳವರೆಗೆ ಇಸ್ರಾಯೇಲ್ ದೇಶದಲ್ಲಿ ಮಳೆಯಾಗಲಿಲ್ಲ.  ದೇಶದಲ್ಲೆಲ್ಲಾ ಬರವು ಬಹು ಘೋರ –ವಾಗಿತ್ತು.  ಹದಿನೆಂಟನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಅನೇಕ ದಿವಸಗಳಾದ ನಂತರ ಎಲೀಯನಿಗೆ ಯೆಹೋವನ ವಾಕ್ಯವುಂಟಾಯಿತು.  ಬರಗಾಲದ ಮೂರನೆಯ ವರುಷದಲ್ಲಿ ಆತನು ಅವನಿಗೆ, "ನೀನು ಹೋಗಿ ಅಹಾಬನನ್ನು ಕಾಣು; ನಾನು ದೇಶಕ್ಕೆ ಮಳೆ ಕೊಡುತ್ತೇನೆ ಅಂದನು. ಎಲೀಯನು ಅಹಾಬನನ್ನು ನೋಡುವದಕ್ಕೆ ಹೊರಟನು. . . . . ಅಹಾಬನು ಎಲೀಯನನ್ನು ಕಂಡ ಕೂಡಲೆ, "ಇಸ್ರಾಯೇಲ್ಯರಿಗೆ ಆಪತ್ತನ್ನು ಬರಮಾಡಿದವನೇ, ನೀನು ಬಂದಿಯಾ ಅಂದನು. ಅದಕ್ಕೆ ಅವನು, ಅವರಿಗೆ ಆಪತ್ತನ್ನು ಬರಮಾಡಿದವನು ನಾನಲ್ಲ; ಯೆಹೋವನ ಆಜ್ಞೆಗಳನ್ನು ಉಲ್ಲಂಘಿಸಿ ಬಾಳನ ವಿಗ್ರಹಗಳನ್ನು ಪೂಜಿಸಿದ ನೀನೂ ನಿನ್ನ ಮನೆಯವರೂ ಅದಕ್ಕೆ ಕಾರಣರು. **ನೀನು ಈಗ ಎಲ್ಲಾ ಇಸ್ರಾಯೇಲ್ಯರನ್ನೂ** ಈಜೆ –ಬೆಲಳಿಂದ ಪೋಷಣೆ ಹೊಂದುವ ಬಾಳನ ನಾನೂರೈವತ್ತು ಮಂದಿ

ಪ್ರವಾದಿಗಳನ್ನೂ ಅಶೇರ ದೇವತೆಯ ನಾನೂರು ಮಂದಿ ಪ್ರವಾದಿಗಳನ್ನೂ **ಕರ್ಮೆಲ್ ಬೆಟ್ಟಕ್ಕೆ ಕರಿಸು** ಎಂದು ಹೇಳಿದನು." (1ಅರಸು–18:1,2,17–19)

ಅಹಾಬನು ಎಲ್ಲಾ ಇಸ್ರಾಯೇಲ್ಯರನ್ನೂ ಎಲ್ಲಾ ಪ್ರವಾದಿಗಳನ್ನೂ ಅಲ್ಲಿಗೆ ಕರಿಸಿದನು. ಎಲೀಯನು ಎಲ್ಲಾ ಜನರ ಹತ್ತಿರ ಹೋಗಿ ಅವರಿಗೆ, "ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ? ಯೆಹೋವನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸಿರಿ; ಬಾಳನು ದೇವರಾಗಿದ್ದರೆ ಅವನನ್ನೇ ಹಿಂಬಾಲಿಸಿರಿ ಎಂದು ಹೇಳಿದನು." ಜನರು ಇದಕ್ಕೆ ಏನೂ ಉತ್ತರಕೊಡದೆ ಸುಮ್ಮನಿದ್ದರು. (1ಅರಸು 18:20–21)

ಅವನು ತಿರಿಗಿ ಅವರಿಗೆ, "ಯೆಹೋವನ ಪ್ರವಾದಿಗಳಲ್ಲಿ ನಾನೊಬ್ಬನೇ ಉಳಿದಿದ್ದೇನೆ; ಬಾಳನ ಪ್ರವಾದಿಗಳಲ್ಲಿ ನಾನೂರೈವತ್ತು ಮಂದಿ ಇದ್ದಾರೆ. ಅವರು ಎರಡು ಹೋರಿಗಳನ್ನು ನಮ್ಮ ಬಳಿಗೆ ತರಲಿ, ಅವುಗಳಲ್ಲೊಂದನ್ನು ಆರಿಸಿಕೊಂಡು ಕಡಿದು ತುಂಡುಮಾಡಿ ಕಟ್ಟಿಗೆಯ ಮೇಲಿಡಲಿ; ಆದರೆ ಬೆಂಕಿಹೊತ್ತಿಸಬಾರದು. ನಾನೂ ಇನ್ನೊಂದನ್ನು ಹಾಗೆಯೇ ಮಾಡಿ ಬೆಂಕಿ ಹೊತ್ತಿಸದೆ ಕಟ್ಟಿಗೆಯ ಮೇಲಿಡು –ವೆನು. ನೀವು ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ; ಅನಂತರ ನಾನು ಯೆಹೋವನ ಹೆಸರು ಹೇಳಿ ಪ್ರಾರ್ಥಿಸುವೆನು. ಆ **ಇಬ್ಬರಲ್ಲಿ ಯಾವನು ಲಾಲಿಸಿ ಬೆಂಕಿಯನ್ನು ಕಳುಹಿಸುವನೋ ಅವನೇ ದೇವರೆಂದು ನಿಶ್ಚಯಿಸೋಣ** ಅಂದನು. ಎಲ್ಲಾ ಜನರೂ, ಸರಿ, ನೀನು ಹೇಳಿದಂತೆಯೇ ಆಗಲಿ ಎಂದು ಉತ್ತರ ಕೊಟ್ಟರು. (1ಅರಸು–18:22–24)

ಆಗ ಅವನು **ಬಾಳನ ಪ್ರವಾದಿಗಳಿಗೆ,** "ನೀವು ಹೆಚ್ಚು ಮಂದಿ ಇರುವದರಿಂದ ಮೊದಲು ನೀವೇ ಒಂದು ಹೋರಿಯನ್ನು ಆರಿಸಿ ಕೊಂಡು ಅದನ್ನು ಸಿದ್ಧಪಡಿಸಿ ನಿಮ್ಮ ದೇವರ ಹೆಸರು ಹೇಳಿ ಪ್ರಾರ್ಥಿಸಿರಿ; ಆದರೆ ಬೆಂಕಿಯನ್ನು ಹೊತ್ತಿಸಕೂಡದು ಅಂದನು." ಅವರು ತರಲ್ಪಟ್ಟ ಹೋರಿಗಳಲ್ಲೊಂದನ್ನು ತೆಗೆದುಕೊಂಡು ಸಿದ್ಧಪಡಿಸಿ ತಮ್ಮ ದೇವರಾದ ಬಾಳನ ಹೆಸರು ಹೇಳಿ, "ಬಾಳನೇ ನಮಗೆ ಕಿವಿಗೊಡು" ಎಂದು ಹೊತ್ತಾರೆಯಿಂದ ಮಧ್ಯಾಹ್ನದವರೆಗೆ ಕೂಗಿದರೂ ಆಕಾಶವಾಣಿಯಾಗಲಿಲ್ಲ; ಅವರು ವೇದಿಯ ಸುತ್ತಲು ಕುಣಿದಾಡಿದರೂ ಯಾರೂ ಉತ್ತರ ದಯಪಾಲಿಸಲಿಲ್ಲ. ಮಧ್ಯಾಹ್ನವಾದ ನಂತರ ಎಲೀಯನು ಅವರನ್ನು ಪರಿಹಾಸ್ಯಮಾಡಿ, "ಗಟ್ಟಿಯಾಗಿ ಕೂಗಿರಿ; ಅವನು ದೇವರಾಗಿರುತ್ತಾನಲ್ಲಾ! ಈಗ ಒಂದು ವೇಳೆ ಅವನು ಧ್ಯಾನದಲ್ಲಿರಬಹುದು; ಇಲ್ಲವೆ ಯಾವುದೋ ಕೆಲಸದಲ್ಲಿ ಅಥವಾ ಪ್ರಯಾಣದಲ್ಲಿ ಇರಬೇಕು. ಅದೂ ಇಲ್ಲದಿದ್ದರೆ ನಿದ್ರೆ ಮಾಡುತ್ತಿದ್ದಾನು, ಎಚ್ಚರವಾಗಬೇಕು" ಎಂದು ಹೇಳಿದನು. ಅವರು ಗಟ್ಟಿಯಾಗಿ ಕೂಗಿ ತಮ್ಮ ಪದ್ಧತಿಯ ಪ್ರಕಾರ ಈಟಿಕತ್ತಿಗಳಿಂದ ರಕ್ತಸೋರುವಷ್ಟು ಗಾಯ ಮಾಡಿಕೊಂಡರು. ಮಧ್ಯಾಹ್ನದಿಂದ ನೈವೇದ್ಯ ಸಮರ್ಪಣೆಯ ಹೊತ್ತಿವರೆಗೂ ಪರವಶರಾಗಿ ಕೂಗುತ್ತಾ ಇದ್ದರು. ಆದರೂ ಆಕಾಶವಾಣಿಯಾಗಲಿಲ್ಲ; ಯಾವನೂ ಅವರಿಗೆ ಉತ್ತರ ಕೊಡಲಿಲ್ಲ, ಅವರನ್ನು ಲಕ್ಷಿಸಲಿಲ್ಲ. (18:25–29)

**ಅನಂತರ ಎಲೀಯನು** ಎಲ್ಲಾ ಜನರನ್ನು ಹತ್ತಿರಕ್ಕೆ ಕರೆಯಲು ಅವರು ಬಂದರು. ಅವನು ಹಾಳಾಗಿದ್ದ ಅಲ್ಲಿನ ಯೆಹೋವ ವೇದಿಯನ್ನು ತಿರಿಗಿ ಕಟ್ಟಿಸಿದನು. ಯೆಹೋವನಿಂದ ಇಸ್ರಾಯೇಲನೆಂಬ ಹೆಸರು ಹೊಂದಿದ ಯಾಕೋಬನ ಮಕ್ಕಳಿಂದ ಉತ್ಪತ್ತಿಯಾದ ಕುಲಗಳ ಸಂಖ್ಯೆಗೆ ಸರಿಯಾಗಿ ಹನ್ನೆರಡು ಕಲ್ಲುಗಳನ್ನು ತೆಗೆದುಕೊಂಡು ಯೆಹೋವನ ಹೆಸರಿಗೋಸ್ಕರ ಒಂದು ವೇದಿಯನ್ನು ಕಟ್ಟಿಸಿ ಅದರ ಸುತ್ತಲೂ ಇಪ್ಪತ್ತು ಸೇರು ಬೀಜವರೀ ನೆಲವನ್ನು ಅಗಿಸಿ ಕಾಲಿವೆ ಮಾಡಿಸಿದನು. ಇದಲ್ಲದೆ ಕಟ್ಟಿಗೆಯನ್ನು ವೇದಿಯ ಮೇಲೆ ಕ್ರಮಪಡಿಸಿ ಹೋರಿಯನ್ನು ವಧಿಸಿ ತುಂಡು ಮಾಡಿ ಅದರ ಮೇಲಿಟ್ಟನು. ಅನಂತರ ಅವರಿಗೆ, "ನಾಲ್ಕು ಕೊಡ ನೀರು ತಂದು ಯಜ್ಞ –ಮಾಂಸದ ಮೇಲೆಯೂ ಕಟ್ಟಿಗೆಯ ಮೇಲ'ಯೂ ಹೊಯ್ಯಿರಿ" ಎಂದು ಆಜ್ಞಾಪಿಸಿದನು. (18:30–33)

ಅವರು ತೆಗೆದುಕೊಂಡು ಬರಲು ಇನ್ನೊಂದು ಸಾರಿ ತನ್ನಿರಿ ಎಂದು ಹೇಳಿದನು. ತಿರಿಗಿ ತಂದರು. ಅವನು ಮೂರನೆಯ ಸಾರಿ ಅದೇ ಪ್ರಕಾರವಾಗಿ ಆಜ್ಞಾಪಿಸಿಲು ಅವರು ಮತ್ತೊಮ್ಮೆ ತಂದು ಸುರಿದರು. ನೀರು ವೇದಿಯ ಸುತ್ತಲೂ ಹರಿಯಿತು; ಇದಲ್ಲದೆ ಅವನು ಕಾಲಿವೆಯನ್ನು ನೀರಿನಿಂದ ತುಂಬಿಸಿದನು. (18:34–35)

ಸಂಧ್ಯಾನೈವೇದ್ಯದ ಹೊತ್ತಿಗೆ ಪ್ರವಾದಿಯಾದ ಎಲೀಯನು ವೇದಿಯ ಹತ್ತಿರ ಬಂದು, "ಅಬ್ರಹಾಮ್ ಇಸಾಕ್ ಇಸ್ರಾಯೇಲ್ಯರ ದೇವರೇ, ಯೆಹೋವನೇ, ನೀನೊಬ್ಬನೇ ಇಸ್ರಾಯೇಲ್ಯರ ದೇವರಾಗಿರುತ್ತೀ ಎಂಬದನ್ನೂ ನಾನು ನಿನ್ನ ಸೇವಕನಾಗಿರುತ್ತೇನೆಂಬದನ್ನೂ ಇದನ್ನೆಲ್ಲಾ ನಿನ್ನ ಅಪ್ಪಣೆಯ ಮೇರೆಗೆ ಮಾಡಿದೆನೆಂಬದನ್ನೂ ಈ ಹೊತ್ತು ತೋರಿಸಿ ಕೊಡು.

ಕಿವಿಗೊಡು; ಯೆಹೋವನೇ ಕಿವಿಗೊಡು; **ಯೆಹೋವನಾದ ನೀನೊಬ್ಬನೇ ದೇವರೂ ಈ ಜನರ ಮನಸ್ಸನ್ನು ನಿನ್ನ ಕಡೆಗೆ ತಿರುಗಿಸಿಕೊಳ್ಳುವವನೂ ಆಗಿರುತ್ತೀ ಎಂಬದನ್ನು ಇವರಿಗೆ ತಿಳಿಯಪಡಿಸು"** ಎಂದು ಪ್ರಾರ್ಥಿಸಿದನು. (18:36–37)

ಕೂಡಲೆ ಯೆಹೋವನ ಕಡೆಯಿಂದ ಬೆಂಕಿಬಿದ್ದು ಯಜ್ಞ ಮಾಂಸವನ್ನೂ ಕಟ್ಟಿಗೆ ಕಲ್ಲು ಮಣ್ಣುಗಳನ್ನು ದಹಿಸಿಬಿಟ್ಟು ಕಾಲಿವೆಯಲ್ಲಿದ್ದ ನೀರನ್ನೆಲ್ಲಾ ಹೀರಿ ಬಿಟ್ಟಿತು. ಜನರೆಲ್ಲರೂ ಅದನ್ನು ಕಂಡು ಬೋರ್ಲಬಿದ್ದು, **"ಯೆಹೋವನೇ ದೇವರು! ಯೆಹೋವನೇ ದೇವರು!"** ಎಂದು ಕೂಗಿದರು. (18:38–39)

ಆಗ ಎಲೀಯನು ಅವರಿಗೆ, **"ಬಾಳನ ಪ್ರವಾದಿಗಳೆಲ್ಲರನ್ನೂ ಹಿಡಿಯಿರಿ; ಅವರಲ್ಲಿ ಒಬ್ಬನೂ ತಪ್ಪಿಸಿಕೊಳ್ಳಬಾರದು"** ಎಂದು ಆಜ್ಞಾಪಿ –ಸಲು ಅವರು ಹಿಡಿದರು. ಅವನು ಅವರನ್ನು ಕೀಷೋನ್ ಹಳ್ಳಕ್ಕೆ ಒಯ್ದು ಅಲ್ಲಿ ಕೊಲ್ಲಿಸಿದನು. ಅನಂತರ ಅವರು ಅಹಾಬನಿಗೆ, **"ನೀನು ಮೇಲೆ ಹೋಗಿ ಅನ್ನ ಪಾನಗಳನ್ನು ತೆಗೆದುಕೋ; ದೊಡ್ಡ ಮಳೆಯ ಶಬ್ದವು ಕೇಳಿಸುತ್ತದೆ""** ಅಂದನು. ಅಹಾಬನು ಅನ್ನ ಪಾನ –ಗಳನ್ನು ತೆಗೆದುಕೊಳ್ಳಲು ಹೋದಾಗ ಎಲೀಯನು ಕರ್ಮೆಲಿನ ತುದಿಗೆ ಹೋಗಿ ಅಲ್ಲಿ ನೆಲದ ಮೇಲೆ ಬಿದ್ದುಕೊಂಡು ಮೊಣಕಾಲಿನ ಮೇಲೆ ತಲೆಯನ್ನಿಟ್ಟನು. ತುಸು ಹೊತ್ತಿನಲ್ಲಿಯೇ ಆಕಾಶವು ಮೋಡ ಗಾಳಿಗಳಿಂದ ಕಪ್ಪಾಗಿ ದೊಡ್ಡ ಮಳೆಯು ಪ್ರಾರಂಭವಾಯಿತು. (18:40–42, 45).

ಈ ಅದ್ಭುತವಾದ ಕತೆಯು ದೇವರ ಬಲ ಮತ್ತು ಮಹಿಮೆಯಿಂದ ತುಂಬಿದ್ದು, ನಿಜವಾಗಿಯೂ ನಮ್ಮ ಟೀಕೆಗಳ ಅವಶ್ಯಕತೆಯಿಲ್ಲದಿರುವಂತದ್ದಾಗಿದೆ. ಹೇಗಿದ್ದರೂ, ನಾವು ನಿಮಗೆ ವಿದಾಯವನ್ನು ಹೇಳುವದಕ್ಕಿಂತ ಮುಂಚೆ, ಪ್ರವಾದಿಯಾದ ಎಲೀಯನು ಇಸ್ರಾಯೇಲ್ ಜನರಿಗೆ ಏನು ಹೇಳಿದ್ದಾನೆಂಬುದರ ಟಿಪ್ಪಣಿಯನ್ನು ನಾವು ತೆಗೆದುಕೊಳ್ಳಬೇಕು. ಅವನು ಬಾಳನ ನಾನೂರೈವತ್ತು ಸುಳ್ಳು ಪ್ರವಾದಿಗಳಿಗೆ ಸವಾಲು ಹಾಕುವದಕ್ಕಿಂತ ಮೊದಲು, ಎಲೀಯನು ಜನರಿಗೆ, **"ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ? ಯೆಹೋವನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸಿರಿ; ಬಾಳನು ದೇವರಾಗಿದ್ದರೆ ಅವನನ್ನೇ ಹಿಂಬಾಲಿಸಿರಿ"** ಎಂದು ಹೇಳಿದನು.

ಮೊದಲಿಗೆ, ಇಸ್ರಾಯೇಲ್ಯರು ಉತ್ತರ ಕೊಡಲಿಲ್ಲ. ಹೇಗಿದ್ದರೂ, ಕರ್ತನಾದ ದೇವರು ಎಲೀಯನ ಪ್ರಾರ್ಥನೆಗೆ ಹೇಗೆ ಉತ್ತರ ಕೊಟ್ಟು ಅವನು ಕಟ್ಟಿದ್ದ ಯಜ್ಞವೇದಿಯ ಮೇಲೆ ಪರಲೋಕದಿಂದ ಬೆಂಕಿ ಕಳಿಸಿದ್ದನ್ನು ನೋಡಿದಾಗ ಇಡೀ ಜನ ಸಮೂಹವು ಬೋರ್ಲಬಿದ್ದು, **"ಯೆಹೋವನೇ ದೇವರು! ಯೆಹೋವನೇ ದೇವರು!"** ಎಂದು ಕೂಗಿದರು. ಈ ಪ್ರಕಾರ, ಒಂದೇ ದಿನದಲ್ಲಿ, ದೇವರ ಪ್ರವಾದಿಯಾದ ಎಲೀಯನು ಪ್ರತಿಯೊಬ್ಬರ ಮುಂದೆ ಬಾಳನ ಸುಳ್ಳು ಪ್ರವಾದಿಗಳನ್ನು ಬಹಿರಂಗಗೊಳಿಸಿ ಅಪಖ್ಯಾತಿಗೊಳಿಸಿದನು ಮತ್ತು ಇಸ್ರಾಯೇಲ್ಯರ ಹೃದಯಗಳನ್ನು ಅವರ ಕರ್ತನಾದ ದೇವರ ಕಡೆಗೆ ತಿರುಗಿಸಿದನು!

**ದೇವರು ಎಲೀಯನ ಪ್ರಾರ್ಥನೆಗೆ ಯಾಕೆ ಉತ್ತರಿಸಿದನು**? ಯಾಕೆಂದರೆ ಎಲೀಯನು ಕರ್ತನಾದ ದೇವರನ್ನು ಪ್ರೀತಿಸಿ ಆತನ ವಾಕ್ಯವನ್ನು
ನಂಬಿದ್ದನು. **ದೇವರು ಬಾಳನ ಪ್ರವಾದಿಗಳ ಪ್ರಾರ್ಥನೆಯನ್ನು ಯಾಕೆ ಅಲಕ್ಷಿಸಿದನು**? ಯಾಕೆಂದರೆ ಅವರು ಅಬ್ರಹಾಮ, ಇಸಾಕ ಮತ್ತು ಇಸ್ರಾಯೇಲ್ಯ ಜನಾಂಗಕ್ಕೆ ತನ್ನನ್ನು ಪ್ರಕಟಪಡಿಸಿಕೊಂಡಿದ್ದ ನಿಜವಾದ ಒಬ್ಬನೇ ದೇವರಿಗೆ ಪ್ರಾರ್ಥಿಸಲಿಲ್ಲ. ಬಾಳನ ಪ್ರವಾದಿಗಳು ದೇವರ ವಾಕ್ಯವನ್ನು ಅಲಕ್ಷಿಸಿ ತನ್ನ ಸ್ವಂತ ಧಾರ್ಮಿಕ ಸಂಪ್ರದಾಯಗಳನ್ನು ಅನುಸರಿಸಿದರು. ಅವರು ತಮ್ಮ ಶಾಸ್ತ್ರವಿಧಿಗಳ ಆಚರಣೆ –ಯಲ್ಲಿ ಆಸಕ್ತಿಯುಳ್ಳವರಾಗಿದ್ದರು, ಆದರೆ ಅವರು ಜೀವಿಸುವ ದೇವರನ್ನು ಸೇವಿಸಲಿಲ್ಲ, ಆದಕಾಣ ಅವರ ಎಲ್ಲಾ ಧಾರ್ಮಿಕ ಆಸಕ್ತಿಯು ಅರ್ಥವಿಲ್ಲದ್ದಾಗಿತ್ತು. ಅವರು ಒಂದು ಗಾದೆಯಲ್ಲಿರುವ ಮನುಷ್ಯರ ಹಾಗಿದ್ದಾರೆ: "ಹತ್ತು ಜನರು ಒಂದು ಆಳವಾದ ಗುಂಡಿಯನ್ನು ತೋಡಿದರು, ಹತ್ತು ಜನರು ಅದನ್ನು ತುಂಬಿಸಿದರು ಅಲ್ಲಿ ಬೇಕಾದಷ್ಟು ಮಣ್ಣಿತ್ತು, ಆದರೆ ಗುಂಡಿಯೇ ಇರಲಿಲ್ಲ!" ಅದೇ ರೀತಿಯಲ್ಲಿ, ಬಾಳನ ಪ್ರವಾದಿಗಳು ತುಂಬಾ ಮತಶ್ರದ್ಧೆಯನ್ನು ಹೊಂದಿದ್ದರು, ಅವರು ತಮ್ಮ ಪ್ರಾರ್ಥನೆಗಳು ಮತ್ತು ಯಜ್ಞಗಳೊಂದಿಗೆ ಬಹಳಷ್ಟು ಕೂಗಿದರು, ಆದರೆ ಅದೆಲ್ಲವೂ ವ್ಯರ್ಥವಾಯಿತು ಯಾಕೆಂದರೆ ಇದು ಜೀವಿಸುವ ದೇವರ ವಾಕ್ಯದ ಮೇಲೆ ಆಧಾರಗೊಂಡಿರಲಿಲ್ಲ. "ಬೇಕಾದಷ್ಟು ಮಣ್ಣಿದೆ, ಆದರೆ ಗುಂಡಿಯಿಲ್ಲ!"

ಹೀಗೆ, ವಿಶೇಷವಾದ ದಿನದಂದು, ಪ್ರವಾದಿಯಾದ ಎಲೀಯನು ಎರಡರಲ್ಲಿ ಯಾವುದನ್ನಾದರೂ ಆರಿಸಿಕೊಳ್ಳುವದಕ್ಕೆ ಇಸ್ರಾಯೇಲ್ಯರಿಗೆ ಆಜ್ಞಾಪಿಸಿದನು:

**ಅಬ್ರಹಾಮ, ಇಸಾಕ ಮತ್ತು ಯಾಕೋಬರ ದೇವರಾದ ಕರ್ತನನ್ನು** ಅಥವಾ **ಬಾಳನ ಶೂನ್ಯ ಮತಶ್ರದ್ಧೆಯನ್ನು;**

**ಸತ್ಯವನ್ನು** ಅಥವಾ **ಒಂದು ಸುಳ್ಳನ್ನು;**

**ನೀತಿವಂತಿಕೆಯ ಮಾರ್ಗವನ್ನು** ಅಥವಾ **ಅನೀತಿವಂತಿಕೆಯ ಮಾರ್ಗವನ್ನು;**

**ನಂಬಲರ್ಹವಾದ ದೇವರ ವಾಕ್ಯವನ್ನು** ಅಥವಾ **ಮನುಷ್ಯನ ಮತಶ್ರದ್ಧೆಯ ನಂಬಲರ್ಹವಲ್ಲದ ಮಾತುಗಳನ್ನು.**

**"ನೀವು ಇನ್ನೆಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ?"** ಎಂಬ ಎಲೀಯಯನ ಪ್ರಶ್ನೆಗೆ ನಿಮ್ಮ ಉತ್ತರವೇನು. ನೀವು ಎಲ್ಲಿಯವರೆಗೆ ದೇವರ ನಿಜವಾದ ವಾಕ್ಯ ಮತ್ತು ಮನುಷ್ಯನಿಂದ ಸ್ಥಾಪಿಸಲ್ಪಟ್ಟಿರುವ ನಿಷ್ಪ್ರಯೋಜಕವಾದ ಸಂಪ್ರದಾಯಗಳ ನಡುವೆ ಹೊಯ್ದಾಡುತ್ತೀರಿ? ಪರಿಶುದ್ದ ವಾಕ್ಯಗಳು ಹೀಗೆ ಹೇಳುತ್ತವೆ: **"ಯಾವನೂ ಇಬ್ಬರು ಯಜಮಾನರಿಗೆ ಸೇವೆ ಮಾಡಲಾರನು".** ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು. ನೀವು ದೇವರನ್ನೂ ಧನವನ್ನೂ ಕೂಡ ಸೇವಿಸಲಾರಿರಿ."(ಮತ್ತಾಯ–6:24). ನೀವು ದೇವರಾದ ಕರ್ತನನ್ನು ಸೇವಿಸುವದು ಮತ್ತು ಒಂದು ಶೂನ್ಯವಾದ ಧರ್ಮವನ್ನು ಸೇವಿಸುವದು ಎರಡನ್ನೂ ಒಟ್ಟಿಗೆ ಮಾಡುವದಕ್ಕಾಗುವದಿಲ್ಲ. **"ನೀವು ಇನ್ನೆಷ್ಟರವರೆಗೆ ಎರಡು ಮನಸ್ಸುಳ್ಳವ –ರಾಗಿರುತ್ತೀರಿ?"**

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಒಂದು ದೊಡ್ಡ ಮೀನಿನೊಳಗಡೆ ಮೂರು ದಿವಸಗಳನ್ನು ಕಳೆದಂತ ಒಬ್ಬ ಪ್ರವಾದಿಯ ಕತೆಯ ಕಡೆಗೆ ನೋಡಿಕೊಳ್ಳುವದಕ್ಕೆ ಮುಂದಿನ ಸಲ ಆಲೋಚಿಸೋಣ. ಈ ಪ್ರವಾದಿಯ ಹೆಸರು ನಿಮಗೆ ಗೊತ್ತಾ? ಇವನ ಅದ್ಭುತವಾದ ಕತೆಗಾಗಿ ಮುಂದಿನ ಸಲಕ್ಕೆ ನಮ್ಮೊಂದಿಗೆ ಸೇರಿಕೊಳ್ಳಿರಿ.

ಎಲೀಯನು ಇಸ್ರಾಯೇಲ್ಯರಿಗೆ ಹೇಳಿರುವದನ್ನು ನೀವು ಮನಸ್ಸಿನಲ್ಲಿಯೇ ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ,

**"ನೀವು ಎಷ್ಟರವರೆಗೆ ಎರಡು ಮನಸ್ಸುಳ್ಳವರಾಗಿರುವಿರಿ? ಯೆಹೋವನು ದೇವರಾಗಿದ್ದರೆ ಆತನನ್ನೇ ಹಿಂಬಾಲಿಸಿರಿ."**
**(1ಅರಸು–18:21).**

[ಪಾಠ 53: ಪ್ರವಾದಿಯಾದ ಎಲೀಯ] [ಸಾರಾಂಶಗಳ ಪಟ್ಟಿ] [ಪಾಠ 55: ಪ್ರವಾದಿಯಾದ ಯೆಶಾಯ]

ಪಾಠ 54

## ಪ್ರವಾದಿಯಾದ ಯೋನ

ಯೋನ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ನಾವು ದೇವರ ಪ್ರವಾದಿಯಾದ **ಎಲೀಯನ** ಕುರಿತಾಗಿ ನೋಡಿಕೊಂಡೆವು. ದೇವರಾತ್ಮನ ಬಲವು ಅವನ ಮೇಲೆ ಇದ್ದುದರಿಂದ ಅವನು ಒಬ್ಬ ವಿಶೇಷವಾದ ಪ್ರವಾದಿಯಾಗಿದ್ದನು. ಅವನು ಮಳೆ ಬರಬಾರದೆಂದು ದೇವರಲ್ಲಿ ಪ್ರಾರ್ಥಿಸಿ –ದಾಗ ಮೂರೂವರೆ ವರ್ಷಗಳವರೆಗೆ ಇಸ್ರಾಯೇಲ್ ದೇಶದಲ್ಲಿ ಮಳೆ ಬರಲಿಲ್ಲ. ಎಲೀಯನು ಬಾಳನ ಪ್ರವಾದಿಗಳ ಎದುರು ನಿಂತನು ಮತ್ತು ಎಲ್ಲಾ ಇಸ್ರಾಯೇಲ್ಯರ ಮುಂದೆ ಅವರ ಸುಳ್ಳು ಮತಶ್ರದ್ಧೆಯನ್ನು ಸಹ ಹೊರಗೆಡವಿದನು. ಈ ಪ್ರಕಾರ, ಅನೇಕ ಇಸ್ರಾಯೇಲ್ಯರ
ಹೃದಯಗಳನ್ನು ಅವರ ದೇವರಾದ ಕರ್ತನ ಕಡೆಗೆ ಮತ್ತೆ ತಿರುಗಿಸುವದಕ್ಕೆ ದೇವರು ಎಲೀಯನನ್ನು ಉಪಯೋಗಿಸಿದನು.

ಹಾಗಾದರೆ ಈ ದಿನ, ಎಲೀಯನ ನಂತರ ಬಂದ'ಂತ ಇನ್ನೊಬ್ಬ ಪ್ರವಾದಿಯ ಕತೆಯನ್ನು ಗಮನಿಸುವದಕ್ಕೆ ನಾವು ಇಷ್ಟಪಡುತ್ತೇವೆ. ದೇವರು, **ಯೋನ** {ಅರೇಬಿಕ್‌ನಲ್ಲಿ ಯೂನುಸ್} ಎಂಬ ಹೆಸರಿನಿಂದ' ಕರೆಯಲ್ಪಡುವ ಒಬ್ಬ ಇಸ್ರಾಯೇಲ್ಯನನ್ನು ಆರಿಸಿಕೊಂಡು, ಇಸ್ರಾ –ಯೇಲ್ಯರ ವೈರಿಗಳಾಗಿದ್ದ **ಪರದೇಶದವರಿಗೆ ಸುವಾರ್ತೆಯನ್ನು ಸಾರುವದಕ್ಕೆ ಹೋಗು** ಎಂದು ಅವನಿಗೆ ಹೇಗೆ ಆಜ್ಞಾಪಿಸಿದನೆಂಬುದನ್ನು ನಾವು ನೋಡಲಿದ್ದೇವೆ.

ಯೋನನ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿರುವದನ್ನು ನಾವು ಓದುತ್ತಿದ್ದೇವೆ. ಅಲ್ಲಿ ಹೀಗೆ ಬರೆದದೆ: **"**ಯೆಹೋವನು ಅಮಿತ್ತೈಯ ಮಗನಾದ ಯೋನನಿಗೆ, **"**ನೀನೆದ್ದು ಆ ದೊಡ್ಡ ಪಟ್ಟಣವಾದ ನಿನವೆಗೆ ಹೋಗಿ ಗಟ್ಟಿಯಾಗಿ ಕೂಗುತ್ತಾ ಅದನ್ನು ಖಂಡಿಸು; ಅದರ ನಿವಾಸಿಗಳ ದುಷ್ಟತನವು ನನ್ನ ಸನ್ನಿಧಿಗೆ ಮುಟ್ಟಿದೆ**"** ಎಂದು ಅಪ್ಪಣೆ ಮಾಡಿದನು. (ಯೋನ–1:1–2)

ದೇವರು ಯೋನನಿಗೆ ಏನೆಂದು ಅಪ್ಪಣೆ ಕೊಟ್ಟನೆಂಬುದನ್ನು ನೀವು ಕೇಳಿಸಿಕೊಂಡಿರಾ? ನಿನವೆಯು ಅಸ್ಸೀರಿಯ ದೇಶದ ರಾಜಧಾನಿ –ಯಾಗಿದ್ದು ಅಲ್ಲಿನ ಜನರು ತುಂಬಾ ದುಷ್ಟರು ಮತ್ತು ಇಸ್ರಾಯೇಲ್ಯರನ್ನು ನಾಶಪಡಿಸುವದಕ್ಕೆ ಬಯಸುವವರೂ ಆಗಿದ್ದಾಗ್ಯೂ ಸಹ, ಅಲ್ಲಿನ ಜನರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡುವಂತೆ ಎಚ್ಚರಿಸುವದಕ್ಕೆ ದೇವರು ಯೋನನಿಗೆ ಅಲ್ಲಿಗೆ ಹೋಗುವಂತೆ ಹೇಳುತ್ತಿ –ದ್ದಾನೆ.

ಇಸ್ರಾಯೇಲ್ಯರನ್ನು ಕಡೆಗಣಿಸಿ ಅವರನ್ನು ದ್ವೇಷಿಸುತ್ತಿದ್ದ ಆ ಪರದೇಶದವರ ಕಡೆಗೆ ಯೋನನನ್ನು ಕಳಿಸುವದಕ್ಕೆ ದೇವರು ಯಾಕೆ ಬಯಸಿದನು? ದೇವರು ಇಸ್ರಾಯೇಲ್ಯರ ವೈರಿಗಳ ಕುರಿತಾಗಿ ಸಹ ಚಿಂತಿಸುತ್ತಿದ್ದನೋ? ಹೌದು, ಆತನು ಚಿಂತಿಸುತ್ತಿದ್ದನು! ನಿನವೆ –ಯವರ ಪಾಪವು ಪರಲೋಕವನ್ನು ತಲುಪಿದ್ದ ಕಾರಣದಿಂದ ದೇವರು ಅಲ್ಲಿನ ಜನರಿಗೆ ನ್ಯಾಯತೀರಿಸುವದಕ್ಕಿದ್ದನು. ಹೀಗಿದ್ದರೂ, **ದೇವರು ಪಾಪಿಗಳನ್ನು ನಾಶಪಡಿಸುವದರಲ್ಲಿ ಸಂತೋಷಪಡುವವನಾಗಿರಲಿಲ್ಲ.** ಪ್ರತಿಯೊಬ್ಬರೂ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು, ದೇವರ ವಾಕ್ಯವನ್ನು ನಂಬಿ ರಕ್ಷಿಸಲ್ಪಡುವದನ್ನು ದೇವರು ಇಷ್ಟಪಡುತ್ತಾನೆ. **ಅದಕ್ಕಾಗಿಯೇ** ದೇವರು **ಯೋನನಿಗೆ** ನಿನವೆಗೆ ಹೋಗಿ ಅವರನ್ನು ಎಚ್ಚರಿಸು, ಅದರಿಂದ ಅವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ರಕ್ಷಿಸಲ್ಪಡುವದಕ್ಕೆ ಸಾಧ್ಯವಾಗುತ್ತದೆ ಎಂದು **ಆಜ್ಞಾಪಿಸಿದನು.**

ಏನೇ ಆದರೂ, **ಯೋನನು ಅಲ್ಲಿಗೆ ಹೋಗಿ ತನ್ನ ವೈರಿಗಳನ್ನು ಎಚ್ಚರಿಸುವದಕ್ಕೆ ಇಷ್ಟಪಡಲಿಲ್ಲ!** ನಿನವೆ ಪಟ್ಟಣಕ್ಕೆ ಯೋನನು ಒಬ್ಬ ಪ್ರವಾದಿಯಾಗುವದಕ್ಕೆ ಇಷ್ಟಪಡಲಿಲ್ಲ! ನಿನವೆಯ ಜನರು ಪಶ್ಚತ್ತಾಪಪಡಬೇಕೆಂದು ಅದರಿಂದ ತಾನು ಅವರ ಮೇಲೆ ಕನಿಕರ ತೋರಿ –ಸಲು ಸಾಧ್ಯವಾಗುತ್ತದೆ ಎಂದು ದೇವರು ಬಯಸಿದ್ದನು, ಆದರೆ ದೇವರು ಅವರನ್ನು ಶಿಕ್ಷಿಸಬೇಕೆಂದು ಯೋನನು ಇಷ್ಟಪಟ್ಟಿದ್ದನು! ಹಾಗಾಗಿ, ಯೋನನು ಅವನ ನಿಯೋಜನೆಯನ್ನು ತಿರಸ್ಕರಿಸಿ ದೇವರಾದ ಕರ್ತನಿಂದ ದೂರ ಓಡಿಹೋದನು. ಆದರೆ ದೇವರ ಸನ್ನಿಧಿಯಿಂದ ದೂರ ಓಡಹೋಗುವದಕ್ಕೆ ಅವನಿಗೆ ಹೇಗೆ ಸಾಧ್ಯವಾಗುತ್ತದೆ?

ಯೋನ ಏನು ಮಾಡಿದನೆಂಬುದರ ಕತೆಯನ್ನು ಮುಂದುವರಿಸೋಣ: ವಾಕ್ಯವು ಹೀಗೆ ಹೇಳುತ್ತದೆ:

**ಆದರೆ ಯೋನನು** ಯೆಹೋವನ ಸನ್ನಿಧಿಗೆ ತಪ್ಪಿಸಿಕೊಳ್ಳುವ ಹಾಗೆ ತಾರ್ಷೀಷಿಗೆ **ಓಡಿಹೋಗಬೇಕೆಂದು** ಹೊರಟು ಯೊಪ್ಪಕ್ಕೆ ಇಳಿದು ಅಲ್ಲಿ ತಾರ್ಷೀಷಿಗೆ ತೆರಳುವ ಹಡಗನ್ನು ಕಂಡು ಬಾಡಿಗೆಕೊಟ್ಟು ಯೆಹೋವನ ಸನ್ನಿಧಿಯಿಂದ ತಾರ್ಷೀಷಿಗೆ ಪ್ರಯಾಣ ಮಾಡಬೇಕೆಂದು
ಹಡಗಿನವರೊಡನೆ ಅದನ್ನು ಹತ್ತಿದನು. **ಬಳಿಕ ಯೆಹೋವನು ಬಿರುಗಾಳಿಯನ್ನು ಸಮುದ್ರದ ಮೇಲೆ ಬಲವಾಗಿ ಬೀಸಲು** ಸಮುದ್ರದಲ್ಲಿ ದೊಡ್ಡ ತುಫಾನು ಎದ್ದು ಹಡಗು ಒಡೆದು ಹೋಗುವ ಹಾಗಾಯಿತು. ಆಗ ನಾವಿಕರು ಹೆದರಿ ತಮ್ಮ ತಮ್ಮ ದೇವರುಗಳಿಗೆ ಮೊರೆ –ಯಿಟ್ಟು ತಮ್ಮ ಕಷ್ಟವು ಕಡಿಮೆಯಾಗುವ ಹಾಗೆ ಹಡಗಿನ ಸಾಮಾನುಗಳನ್ನು ಸಮುದ್ರಕ್ಕೆ ಬಿಸಾಟುಬಿಟ್ಟರು. ಇಷ್ಟರೊಳಗೆ ಯೋನನು ಹಡಗಿನ ಒಳಭಾಗಕ್ಕೆ ಇಳಿದು ಮಲಗಿಕೊಂಡಿದ್ದನು; ಗಾಢನಿದ್ರೆ ಹತ್ತಿತ್ತು. ಹೀಗಿರಲು ಹಡಗಿನ ಯಜಮಾನನು ಅವನ ಬಳಿಗೆ ಬಂದು, **"**ಇದೇನು, ನಿದ್ದೆ ಮಾಡುತ್ತೀ! ಎದ್ದು ನಿನ್ನ ದೇವರಿಗೆ ಮೊರೆಯಿಡು; ಒಂದು ವೇಳೆ ನಿನ್ನ ದೇವರು ನಮ್ಮನ್ನು ರಕ್ಷಿಸಾನು, ನಾಶವಾಗದೆ ಉಳಿದೇವು**"** ಎಂದು ಹೇಳಿದನು. ಅನಂತರ ನಾವಿಕರೆಲ್ಲರು, **"**:ಈ ಕೇಡು ನಮಗೆ ಸಂಭವಿಸಿದ್ದಕ್ಕೆ ಯಾರು ಕಾರಣವೆಂದು ನಮಗೆ ತಿಳಿಯುವ ಹಾಗೆ ಚೀಟು ಹಾಕೋಣ ಬನ್ನಿರಿ**"** ಎಂಬದಾಗಿ ಮಾತಾಡಿಕೊಂಡು ಚೀಟು ಹಾಕಲು ಚೀಟು ಯೋನನಿಗೆ ಬಂತು. (ಯೋನ–1:3–7)

ಅದನ್ನು ನೋಡಿ ಅವರು, **"**ಅಯ್ಯಾ, ಈ ಕೇಡು ನಮಗೆ ಸಂಭವಿಸಿದ್ದಕ್ಕೆ ಯಾರು ಕಾರಣ ಎಂಬದನ್ನು ನೀನೇ ನಮಗೆ ತಿಳಿಸು; ನೀನು ಎಲ್ಲಿಂದ ಯಾವ ಕೆಲಸದ ಮೇಲೆ ಬಂದಿ, ನೀನು ಯಾವ ದೇಶದವನು, ಯಾವ ಜನಾಂಗದನು**"** ಎಂದು ಅವನನ್ನು ಕೇಳಲು ಅವನು ಅವರಿಗೆ, **"**ನಾನು ಇಬ್ರಿಯನು; ಕಡಲನ್ನೂ ಒಣನೆಲವನ್ನೂ ಸೃಷ್ಟಿಸಿದ ಪರಲೋಕ ದೇವರಾದ ಯೆಹೋವನ ಭಕ್ತನು**"** ಎಂದು ಹೇಳಿದನು. ಇವನು ಯೆಹೋವನ ಸನ್ನಿಧಿಯಿಂದ ಓಡಿಬಂದವನು ಎಂಬದನ್ನು ಅವನು ಮೊದಲು ಹೇಳಿದ ಒಂದು ಮಾತಿನಿಂದ ಜನರು ತಿಳುಕೊಂಡಿದ್ದರು. ಈಗ ಇದನ್ನೂ ಕೇಳಿ ಬಹಳವಾಗಿ ಹೆದರಿ, **"**ಇದೇನು ನೀನು ಮಾಡಿದ್ದು**"** ಅಂದರು. ಬಳಿಕ ಸಮುದ್ರವು ಹೆಚ್ಚೆಚ್ಚಾಗಿ ಅಲ್ಲಕಲ್ಲೋಲವಾದ ಕಾರಣ ಅವರು, **"**ನಮ್ಮ ಮೇಲೆ ಎದ್ದಿರುವ ಸಮುದ್ರವು ಶಾಂತವಾಗುವ' ಹಾಗೆ ನಿನ್ನನ್ನು ಏನು ಮಾಡೋಣ**"** ಎಂದು ಪ್ರಶ್ನೆ ಮಾಡಲು ಅವನು ಅವರಿಗೆ, **"**ನನ್ನನ್ನೆತ್ತಿ ಸಮುದ್ರದಲ್ಲಿ ಹಾಕಿರಿ; ನಿಮ್ಮ ಮೇಲೆ ಎದ್ದಿರುವ ಸಮುದ್ರವು ಶಾಂತವಾಗುವದು; ಈ ದೊಡ್ಡ ತುಫಾನು ನಿಮಗೆ ಸಂಭವಿಸಿದ್ದು ನನ್ನ ನಿಮಿತ್ತವೇ ಎಂಬದು ನನಗೆ ಗೊತ್ತು**"** ಎಂದುತ್ತರ ಕೊಟ್ಟನು. ನಾವಿಕರು ಒಪ್ಪದೆ ದಡಕ್ಕೆ ಹಿಂದಿರುಗಬೇಕೆಂದು ಹುಟ್ಟು ಹಾಕುತ್ತಾ ಬಂದರೂ ಸೇರಲು ಆಗಲಿಲ್ಲ; ಸಮುದ್ರವು ಇನ್ನೂ ಅಲ್ಲಕಲ್ಲೋಲ –ವಾಗಿ ಅವರನ್ನು ಎದುರಿಸಿತು.(1:8–13)

ಹೀಗಿರಲು ಅವರು ಯೆಹೋವನಿಗೆ ಮೊರೆಯಿಟ್ಟು, **"**ಯೆಹೋವನೇ ಲಾಲಿಸು, ಲಾಲಿಸು; ಈ ಮನುಷ್ಯನ ಪ್ರಾಣ ನಷ್ಟಕ್ಕಾಗಿ ನಾಶನವು ನಮಗೆ ಬಾರದಿರಲಿ; ನಿರಪರಾಧಿಯನ್ನು ಕೊಲ್ಲುವ ದೋಷಕ್ಕೆ ನಮ್ಮನ್ನು ಗುರಿಮಾಡಬೇಡ; ಯೆಹೋವನೇ, ನಿನ್ನ ಚಿತ್ತಾನುಸಾರ ಮಾಡಿದಿಯಲ್ಲಾ**"** ಎಂದು ಬಿನ್ನವಿಸಿ ಯೋನನನ್ನು ಎತ್ತಿ ಸಮುದ್ರದಲ್ಲಿ ಹಾಕಿದರು; ಕೂಡಲೆ ಸಮುದ್ರವು ತನ್ನ ರೌದ್ರವನ್ನು ನಿಲ್ಲಿಸಿ ಬಿಟ್ಟಿತು. ಇದನ್ನು ನೋಡಿ ಆ ಜನರು ಯೆಹೋವನಿಗೆ ಬಹಳ ಭಯಪಟ್ಟು ಆತನಿಗೆ ಯಜ್ಞವನ್ನರ್ಪಿಸಿ ಹರಕೆಗಳನ್ನು ಮಾಡಿ ಕೊಂಡರು. **ಇತ್ತ ಯೋನನನ್ನು ನುಂಗಲು ಯೆಹೋವನು ಒಂದು ದೊಡ್ಡ ಮೀನಿಗೆ ಅಪ್ಪಣೆ ಮಾಡಿದನು;** ಯೋನನು ಮೂರು ದಿನ ಹಗಲಿರುಳು ಆ ಮೀನಿನ ಹೊಟ್ಟೆಯೊಳಗೆ ಇದ್ದನು. (1:14–17)

ಇಲ್ಲಿಗೆ ನಿಲ್ಲಿಸೋಣ, ಈ ಅಂಶದವರೆಗೆ, ದೇವರು ಓಡಿಹೋದ ತನ್ನ ಪ್ರವಾದಿಯಾದ ಯೋನನನ್ನು ಹೇಗೆ ಬೆನ್ನಟ್ಟಿದನು ಎಂಬುದನ್ನು ನಾವು ನೋಡಿದೆವು! ಯೋನನು ಓಡಿಹೋಗಲು ಸಾಧ್ಯವಿತ್ತು, ಆದರೆ ಅವನು ದೇವರ ಕೈಯಿಂದ ತಪ್ಪಿಸಿಕೊಳ್ಳುವದಕ್ಕೆ ಸಾಧ್ಯವಿರಲಿಲ್ಲ. ದೇವರು ಯೋನನನ್ನು ಯಾಕೆ ಬೆನ್ನಟ್ಟಿದನು? ಯಾಕೆಂದರೆ ದೇವರು ಅವನನ್ನು ಪ್ರೀತಿಸುತ್ತಿದ್ದನು ಮತ್ತು ತನ್ನ ಚಿತ್ತವನ್ನು ಅವನು ಮಾಡಬೇಕೆಂದು ಇಷ್ಟಪಟ್ಟಿದ್ದನು. ಅದಕ್ಕಾಗಿಯೇ ದೇವರು ಅವನನ್ನು ನುಂಗುವದಕ್ಕೆ ಒಂದು ದೊಡ್ಡ ಮೀನನ್ನು ಕಳಿಸಿದನು ಆದರೆ ಅವನನ್ನು ಕೊಲ್ಲುವದಕ್ಕಲ್ಲ.

ಪಾಪ ಯೋನ! ಈಗ ಅವನು ಒಂದು ದೊಡ್ಡ ಮೀನಿನ ಹೊಟ್ಟೆಯೊಳಗೆ ತನ್ನನ್ನು ಕಂಡುಕೊಳ್ಳುತ್ತಿದ್ದಾನೆ! ಯೋನನು ತನ್ನನ್ನು ರಕ್ಷಿಸಿಕೊಳ್ಳುವದಕ್ಕೆ ಏನು ಮಾಡಲು ಸಾಧ್ಯವಿತ್ತು? ಏನೂ ಇಲ್ಲ! ದೇವರಿಗೆ ಮೊರೆಯಿಡುವದರ ಹೊರತಾಗಿ ಅವನು ಬೇರೇನೂ ಮಾಡುವಂತಿರಲಿಲ್ಲ. ದೇವರು ಮಾತ್ರವೇ ಅವನನ್ನು ಕಾಪಾಡುವವನಾಗಿದ್ದನು. ಎರಡನೆಯ ಅಧ್ಯಾಯದಲ್ಲಿ, ತಾನು ದೇವರಿಗೆ ವಿಧೇ –ಯನಾಗುವದನ್ನು ತಿರಸ್ಕರಿಸಿದ್ದ ತನ್ನ ಪಾಪವನ್ನು ಯೋನನು ಮೀನಿನ ಹೊಟ್ಟೆಯೊಳಗಿಂದ ಅರಿಕೆ ಮಾಡಿಕೊಂಡು ಪ್ರಾರ್ಥಿಸಿದ್ದನ್ನು ವಾಕ್ಯವು ನಮಗೆ ತಿಳಿಸುತ್ತದೆ. ಮೂರು ದಿವಸಗಳವರೆಗೆ ದೇವರು ಸಮುದ್ರ ಜೀವಿಯ ಹೊಟ್ಟೆಯೊಳಗೆ ಯೋನನನ್ನು ಕಾಪಾಡಿದನು. ಯೋನನು ಎಂತಹ ಒಂದು ಮುಖ್ಯವಾದ ಪಾಠವನ್ನು ಕಲಿತುಕೊಂಡನು! ಮೂರನೆಯ ದಿನದಲ್ಲಿ, ಯೋನನು **"ರಕ್ಷಣೆಯು ಯೆಹೋ –ವನಿಂದಲೇ ಉಂಟಾಗುವದು"** ಎಂದು

ಕೂಗಿದನು(2:9). "ರಕ್ಷಣೆಯು ಯೆಹೋವನಿಂದಲೇ ಉಂಟಾಗುವದು" ಎಂದು ಯೋನನು ಹೇಳಿದಾಗ, "ದೇವರು ಮೀನಿಗೆ ಅಪ್ಪಣೆ ಕೊಡಲು ಅದು ಯೋನನನ್ನು ಒಣನೆಲದಲ್ಲಿ ಕಾರಿಬಿಟ್ಟಿತು" (2:10) ಎಂದು ವಾಕ್ಯವು ತಿಳಿಸುತ್ತದೆ.

ಮೂರನೆಯ ಅಧ್ಯಾಯದಲ್ಲಿ, ವಾಕ್ಯವು ಮುಂದುವರಿದು ಹೇಳುವದೇನೆಂದರೆ;

ಅನಂತರ ಯೆಹೋನು ಯೋನನಿಗೆ, "ನೀನೆದ್ದು ಆ ದೊಡ್ಡ ಪಟ್ಟಣವಾದ ನಿನೆವೆಗೆ **ಹೋಗಿ** ನಾನು ನಿನಗೆ ಪ್ರಕಟಿಸುವದನ್ನು ಅಲ್ಲಿ ಸಾರು" ಎಂದು ಎರಡನೆಯ ಸಲ ಅಪ್ಪಣೆ ಮಾಡಿದನು. ಆಗ ಯೋನನು ಎದ್ದು ಯೆಹೋವನ ಅಪ್ಪಣೆಯಂತೆ ನಿನೆವೆಗೆ ಹೋದನು. ನಿನೆವೆಯು ಮೂರು ದಿನದ ಪ್ರಯಾಣದಷ್ಟು ಅತೀ ವಿಸ್ತಾರವಾದ ಮಹಾ ಪಟ್ಟಣವಾಗಿತ್ತು. ಯೋನನು ಪಟ್ಟಣದಲ್ಲಿ ಸೇರಿ ಮೊದಲು ಒಂದು ದಿವಸದ ಪ್ರಯಾಣದಷ್ಟು ದೂರ ನಡೆದು, ನಾಲ್ವತ್ತು ದಿನಗಳಾದ ಮೇಲೆ ನಿನೆವೆಯು ಕೆಡವಲ್ಪಡುವದು ಎಂದು ಸಾರ ತೊಡಗಿ –ದನು.(3:1–4)
ಇದನ್ನು ಕೇಳಿ **ನಿನೆವೆಯವರು ದೇವರಲ್ಲಿ ನಂಬಿಕೆಯಿಟ್ಟು** ಉಪವಾಸವನ್ನು ಗೊತ್ತು ಮಾಡಿ ಸಾರಿದರು; ದೊಡ್ಡವರು ಮೊದಲುಗೊಂಡು ಚಿಕ್ಕವರ ತನಕ ಎಲ್ಲರೂ ಗೋಣಿತಟ್ಟನ್ನು ಸುತ್ತಿಕೊಂಡರು. ಯೋನನ ಪ್ರಕಟನೆಯು ನಿನೆವೆಯ ಅರಸನಿಗೆ ಮುಟ್ಟಲು ಅವನು ಸಿಂಹಾ –ಸನದಿಂದ ಎದ್ದು ತನ್ನ ನಿಲುವಂಗಿಯನ್ನು ತೆಗೆದುಬಿಟ್ಟು ಗೋಣಿತಟ್ಟನ್ನು ಸುತ್ತಿಕೊಂಡು ಬೂದಿಯಲ್ಲಿ ಕೂತನು. ಇದಲ್ಲದೆ ಅವನು ತನ್ನ ಮತ್ತು ರಾಜ್ಯಾಧಿಕಾರಿಗಳ ಆಜ್ಞೆಯನ್ನಾಗಿ, ಜನ ಪಶು ಮಂದೆ ಹಿಂಡು ಇವುಗಳು ಏನೂ ರುಚಿ ನೋಡದಿರಲಿ; ತಿನ್ನದಿರಲಿ, ಕುಡಿಯದಿರಲಿ; ಜನರಿಗೂ ಪಶುಗಳಿಗೂ ಗೋಣಿತಟ್ಟು ಹೊದಿಕೆಯಾಗಲಿ; ಎಲ್ಲರು ದೇವರಿಗೆ ಬಲವಾಗಿ ಮೊರೆಯಿಡಲಿ; ಒಬ್ಬೊಬ್ಬನು ತನ್ನ ತನ್ನ ದುರ್ಮಾರ್ಗವನ್ನೂ ತಾನು ನಡಿಸುತ್ತಿದ್ದ ಹಿಂಸೆಯನ್ನೂ ತೊರೆದುಬಿಡಲಿ. ದೇವರು ಒಂದು ವೇಳೆ ಮನಮರುಗಿ ಹಿಂದಿ –ರುಗಿ ತನ್ನ ಉಗ್ರ ಕೋಪವನ್ನು ತೊಲಗಿಸಾನು, ನಾವು ನಾಶವಾಗದೆ ಉಳಿದೇವು ಎಂಬದನ್ನು ನಿನವೆಯಲ್ಲೆಲ್ಲಾ ಸಾರಿಸಿದನು. **ದೇವರು ನಿನೆವೆಯವರ ಕಾರ್ಯಗಳನ್ನು ನೋಡಿ ಅವರು ತಮ್ಮ ದುರ್ಮಾರ್ಗದಿಂದ ತಿರುಗಿಕೊಂಡರೆಂದು ತಿಳಿದು ಮನಮರುಗಿ ತಾನು ಅವರಿಗೆ ಮಾಡುವೆನೆಂದು ಪ್ರಕಟಿಸಿದ್ದ ಕೇಡನ್ನು ಮಾಡದೆ ಬಿಟ್ಟನು.** (3:5–10)

ಹಾಗಾಗಿ, ದೇವರು ತಮಗೆ ಕಳಿಸಿದ ಮಾತನ್ನು ನಂಬಿದ್ದರಿಂದ ನಿನವೆಯ ಜನರ ಮೇಲೆ **ದೇವರು ಕನಿಕರಪಟ್ಟನೆಂಬುದನ್ನು** ನಾವು ನೋಡುತ್ತೇವೆ. ನಿನವೆಯವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಮುರಿದ ಹೃದಯವುಳ್ಳವರಾಗಿ ದೇವರ ಕಡೆಗೆ ತಿರುಗಿಕೊಂಡರು. ಏನೇ ಆದರೂ, ದೇವರು ನಿನವೆಯ ಜನರ ಮೇಲೆ ಕನಿಕರಗೊಂಡಿದ್ದು ಯೋನನಿಗೆ ಸಂತೋಷವನ್ನುಂಟುಮಾಡಲಿಲ್ಲ. ಯೋನನ ಪುಸ್ತಕದ ಕೊನೆಯ ಅಧ್ಯಾಯದಲ್ಲಿ ಅಂದರೆ ನಾಲ್ಕನೆಯ ಅಧ್ಯಾಯದಲ್ಲಿ ಬರೆದಿರುವದನ್ನು ಕೇಳಿಸಿಕೊಳ್ಳಿರಿ.

ವಾಕ್ಯ ಹೀಗೆ ಹೇಳುತ್ತದೆ:

ಇದರಿಂದ **ಯೋನನಿಗೆ ಬಹು ಕರಕರೆಯಾಯಿತು.** ಅವನು ಸಿಟ್ಟುಗೊಂಡು, "ಯೆಹೋವಾ, ಲಾಲಿಸು, ನಾನು ಸ್ವದೇಶದಲ್ಲಿರುವಾಗಲೇ ಹೀಗಾಗುವದೆಂದು ಹೇಳಿದೆನಷ್ಟೆ; ನೀನು ದಯೆಯೂ ಕನಿಕರವೂ ದೀರ್ಘಶಾಂತಿಯೂ ಮಹಾಕೃಪೆಯೂ ಉಳ್ಳ ದೇವರು, ಮಾಡ –ಬೇಕೆಂದಿದ್ದ ಕೇಡಿಗೆ ಮನಮರುಗುವವನು ಎಂದು ನಾನು ತಿಳಿದೇ ತಾರ್ಷೀಷಿಗೆ ಓಡಿಹೋಗಲು ತ್ವರೆಪಟ್ಟೆನು. ಈಗ ಯೆಹೋವನೇ, ನನ್ನ ಪ್ರಾಣವನ್ನು ತೆಗೆ; ನಾನು ಬದುಕುವದಕ್ಕಿಂತ ಸಾಯುವದೇ ಲೇಸು" ಎಂದು ವಿಜ್ಞಾಪಿಸಿಕೊಂಡನು. ಅದಕ್ಕೆ ಯೆಹೋವನು, "ನೀನು ಸಿಟ್ಟುಗೊಳ್ಳುವದು ಸರಿಯೋ" ಎಂದು ಕೇಳಿದನು. ಅನಂತರ ಯೋನನು ಪಟ್ಟಣವನ್ನು ಬಿಟ್ಟು ಅದರ ಮೂಡಲಲ್ಲಿ ಒಂದು ಗುಡಿಸಲನ್ನು ಮಾಡಿಕೊಂಡು ಪಟ್ಟಣವು ಏನಾಗುವದೋ ಎಂದು ನೋಡುತ್ತ ಅದರ ನೆರಳಿನಲ್ಲಿ ಕೂತುಕೊಂಡಿದ್ದನು. ಆಗ ದೇವ –ರಾದ ಯೆಹೋವನು ಯೋನನ ಮೇಲ್ಗಡೆ ಒಂದು ಸೋರೆಗಿಡವು ಹಬ್ಬಿ ಅವನ ತಲೆಗೆ ನೆರಳಾಗಿ ಅವನ ಕರಕರೆಯನ್ನು ತಪ್ಪಿಸುವಂತೆ ಏರ್ಪಡಿಸಿದನು. ಆ ಸೋರೆಗಿಡದಿಂದ ಯೋನನಿಗೆ ಬಹು ಸಂತೋಷವಾಯಿತು.(4:1–6)

ಮಾರಣೆಯ ಅರುಣೋದಯದಲ್ಲಿ ದೇವರು ಒಂದು ಹುಳಕ್ಕೆ ಅಪ್ಪಣೆ ಮಾಡಿದನು; ಅದು ಸೋರೆ ಗಿಡವನ್ನು ಹೊಡೆಯಲು ಒಣಗಿ ಹೋಯಿತು. ಸೂರ್ಯನು ಹುಟ್ಟಿದಾಗ ದೇವರು ಬಿಸಿಯಾದ ಮೂಡಣ ಗಾಳಿಯನ್ನು ಏರ್ಪಡಿಸಿದನು; ಬಿಸಿಲು ಯೋನನ ತಲೆಗೆ ಹೊಡೆಯಲು ಅವನು ಮೂರ್ಛೆ ಹೋಗುವವನಾಗಿ "ನಾನು ಬದುಕುವದಕ್ಕಿಂತ ಸಾಯುವದೇ ಲೇಸು" ಎಂದು ಮರಣವನ್ನು ಕೇಳಿ –ಕೊಂಡನು. ಆಗ ದೇವರು ಯೋನನನ್ನು, "ನೀನು ಸೋರೆ ಗಿಡಕ್ಕಾಗಿ ಸಿಟ್ಟುಗೊಳ್ಳುವದು ಸರಿಯೋ" ಎಂದು ಕೇಳಲು ಯೋನನು "ಮರಣವಾಗುವಷ್ಟು ಸಿಟ್ಟುಗೊಳ್ಳುವದು ಸರಿಯೇ" ಎಂದು ಉತ್ತರ ಕೊಟ್ಟನು.

ಅದಕ್ಕೆ ಯೆಹೋವನು, "ನೀನು ಆ ಸೋರೆಗಿಡಕ್ಕಾಗಿ ಕಷ್ಟಪಡಲಿಲ್ಲ. ಬೆಳೆಯಿಸಲಿಲ್ಲ; ಅದು ಒಂದು ರಾತ್ರಿಯಲ್ಲಿ ಹುಟ್ಟಿ ಒಂದು ರಾತ್ರಿಯಲ್ಲಿ ನಾಶವಾಯಿತು; ಇಂಥ ಗಿಡಕ್ಕಾಗಿ ನೀನು ಕನಿಕರ –ಪಟ್ಟಿರುವಲ್ಲಿ ಎಡಗೈ ಬಲಗೈ ತಿಳಿಯದ ಒಂದು ಲಕ್ಷ ಇಪ್ಪತ್ತು ಸಾವಿರ ನರಪ್ರಾಣಿಗಳೂ ಬಹು ಪಶುಗಳೂ ಉಳ್ಳ ಆ ದೊಡ್ಡ ಪಟ್ಟಣ –ವಾದ ನಿನವೆಗಾಗಿ ನಾನು ಕನಿಕರಪಡಬಾರದೋ" ಅಂದನು.(4:7–11). ಈ ರೀತಿಯಾಗಿ ಯೋನನ ಪುಸ್ತಕವು ಕೊನೆಗೊಳ್ಳುತ್ತದೆ.

ಜೊತೆ ಕೇಳುಗರೇ, ಪ್ರವಾದಿಯಾದ ಯೋನನ ಕತೆಯಲ್ಲಿ ದೇವರ ಸ್ವಭಾವ ಮತ್ತು ಮನುಷ್ಯನ ಸ್ವಭಾವದ ಕುರಿತಾಗಿ ನಾವು ಹೆಚ್ಚಾಗಿ ಕಲಿತುಕೊಳ್ಳಬಹುದು. **ದೇವರು ವ್ಯಕ್ತಿಗಳನ್ನು ಮಾನ್ಯ ಮಾಡುವವನಲ್ಲ** {ದೇವರು ಏಕಪಕ್ಷವನ್ನು, ಪಕ್ಷಪಾತವನ್ನು ತೋರಿಸುವವನಲ್ಲ} ಎನ್ನುವುದನ್ನು ನಾವು ನೋಡುತ್ತೇವೆ. ಯೋನನು ಪಕ್ಷಪಾತ ತೋರಿಸಿದನು, ಆದರೆ ದೇವರು ಪಕ್ಷಪಾತ ತೋರಿಸಲಿಲ್ಲ. **ದೇವರ ಹೃದಯವು ಯೋನನ ಹೃದಯಕ್ಕಿಂತ ಭಿನ್ನವಾದುದಾಗಿತ್ತು.**

**ಯೋನನ ಹೃದಯವು** ಪಕ್ಷಪಾತದಿಂದ ತುಂಬಿತ್ತು, ಆದರೆ **ದೇವರ ಹೃದಯವು** ಎಲ್ಲಾ ಜನರಿಗಾಗಿ ಕನಿಕರದಿಂದ ತುಂಬಿತ್ತು. ಯೋನನು ತನ್ನ ಸ್ವಂತ ಜನರನ್ನು ಪ್ರೀತಿಸಿದನು ಮತ್ತು ತನ್ನ ವೈರಿಗಳನ್ನು ದ್ವೇಷಿಸಿದನು, ಆದರೆ ದೇವರು ಇಸ್ರಾಯೇಲ್ ಜನರನ್ನೂ ಮತ್ತು ನಿನವೆಯ ಜನರನ್ನೂ ಪ್ರೀತಿಸಿದನು. ನಿನವೆಯ ಜನರು ಇಸ್ರಾಯೇಲ್ಯರ ಶತೃಗಳಾಗಿದ್ದುದರಿಂದ ಅವರು **ನಾಶವಾಗಲಿ** ಎಂದು ಯೋನನು ಬಯಸಿದನು, ಆದರೆ ಅವರು ತಮ್ಮ ಪಾಪಗಳಿಗಾಗಿ **ಪಶ್ಚಾತ್ತಾಪಪಟ್ಟು,** ತನ್ನ ವಾಕ್ಯವನ್ನು ಅಂಗೀಕರಿಸಿ ರಕ್ಷಿಸಲ್ಪಡಲಿ ಎಂದು ದೇವರು ಬಯಸಿದನು. **ದೇವರು ಪಕ್ಷಪಾತವನ್ನು ತೋರಿಸಲಿಲ್ಲ.** ನೀವು ಯಾರೇ ಆದರೂ, ನೀವು ಹೇಗೆ ಇದ್ದರೂ, **ದೇವರು ನಿಮ್ಮನ್ನು ಪ್ರೀತಿಸುತ್ತಾನೆ.** ಆತನು ನಿಮ್ಮ ಪಾಪವನ್ನು ಮತ್ತು ಬಂಡಾಯವನ್ನು ಪ್ರೀತಿಸುವದಿಲ್ಲ, ಆದರೆ ನಿಮ್ಮನ್ನು ಪ್ರೀತಿಸುತ್ತಾನೆ. **ದೇವರು ಪ್ರತಿಯೊಂದು ದೇಶದಲ್ಲಿನ ಪ್ರತಿಯೊಬ್ಬ ವ್ಯಕ್ತಿಯನ್ನೂ ಪ್ರೀತಿಸುತ್ತಾನೆ** ಮತ್ತು ಪ್ರತಿಯೊಬ್ಬರೂ ಅವರ ಪಾಪಗಳನ್ನು ಆತನಿಗೆ ಅರಿಕೆ ಮಾಡಿ, ಸತ್ಯಕ್ಕೆ ಕಿವಿಗೊಟ್ಟು, ಅದನ್ನು ಗ್ರಹಿಸಿಕೊಂಡು, ನಂಬಿ ರಕ್ಷಿಸಲ್ಪಡಬೇಕೆಂದು ಇಷ್ಟಪಡುತ್ತಾನೆ.

ದೇವರು ಭೂಮಿಯ ಮೇಲಿರುವ ಪ್ರತಿಯೊಬ್ಬ ವ್ಯಕ್ತಿಯ ಕುರಿತು ಚಿಂತಿಸುವದಿಲ್ಲ ಎಂಬುದಾಗಿ ಕೆಲವು ಜನರು ಅಂದುಕೊಳ್ಳುತ್ತಾರೆ; ಅಂದರೆ ಆತನು(ಇಚ್ಛಾನುಸಾರಿಯಾಗಿ) ಕೆಲವರನ್ನು ನರಕದಲ್ಲಿ ಸುಡುವದಕ್ಕೆ ಮತ್ತು ಇತರರನ್ನು ಪರದೈಸಿನಲ್ಲಿ ಬಿಸಿಲು ಕಾಯಿಸುವದಕ್ಕೆ
ಆರಿಸಿಕೊಳ್ಳುತ್ತಾನೆ ಎಂದು ಅಂದುಕೊಳ್ಳುತ್ತಾರೆ. ಇದು ನಿಜವಾಗಿದ್ದ ಪಕ್ಷದಲ್ಲಿ ಹೆಚ್ಚಿನ ಜನರು ತಮ್ಮ ಪಾಪಗಳಲ್ಲಿ ಸತ್ತು ದೇವರ ನೀತಿಯ ಕೋಪವನ್ನು ಎದುರಿಸಬೇಕಾಗುತ್ತಿತ್ತು, ಅಜ್ಞಾನದಲ್ಲಿ ನಾಶವಾಗುವವರ ಕುರಿತು ದೇವರು ಚಿಂತಿಸುವದಿಲ್ಲ ಎಂದು ಅಂದು –ಕೊಳ್ಳುವದು ತಪ್ಪಾದುದಾಗಿದೆ. ಪರಿಶುದ್ಧ ವಾಕ್ಯಗಳು ನಮಗೆ ಹೇಳುವದೇನೆಂದರೆ, "ಎಲ್ಲಾ ಮನುಷ್ಯರೂ ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ದೇವರ ಚಿತ್ತವಾಗಿದೆ." (1ತಿಮೊಥೆ–2:4). "ಯಾವನಾದರೂ ನಾಶವಾಗುವದರಲ್ಲಿ ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪೇಕ್ಷಿಸುವವನಾಗಿದ್ದಾನೆ."(2ಪೇತ್ರ–3:9). ಹೇಗಿದ್ದರೂ, ಪಶ್ಚಾತ್ತಾಪಪಡುವದಕ್ಕೆ ತಿರಸ್ಕರಿ –ಸುವವರಿಗೆ ದೇವರು ನ್ಯಾಯತೀರಿಸುತ್ತಾನೆ, ಯಾಕೆಂದರೆ "ಅವರು ಸತ್ಯದ ಮೇಲೆ ಪ್ರೀತಿಯನ್ನಿಡದ ಕಾರಣದಿಂದ ರಕ್ಷಣೆಯನ್ನು ಹೊಂದದೆ ನಾಶವಾಗುತ್ತಾರೆ. ಸತ್ಯವನ್ನು ನಂಬದೆ ಅನೀತಿಯಲ್ಲಿ ಆನಂದಪಡುವವರೆಲ್ಲರೂ ಈ ಪ್ರಕಾರ ನ್ಯಾಯತೀರ್ಪಿಗೆ ಒಳಗಾಗು –ವರು." (2ಥೆಸ–2:10,12). ಅದಕ್ಕಾಗಿಯೇ ದೇವರಾದ ಕರ್ತನ ವಾಕ್ಯವು ದೃಢವಾಗಿ ಹೇಳುತ್ತದೆ. ದೇವರು ಒಳ್ಳೆಯವನೂ ಮತ್ತು ಕನಿಕರವುಳ್ಳವನೂ ಆಗಿದ್ದು ಪ್ರತಿಯೊಬ್ಬ ವ್ಯಕ್ತಿಗಾಗಿ ರಕ್ಷಣೆಯ ಮಾರ್ಗವನ್ನು ಒದಗಿಸಿಕೊಟ್ಟಿದ್ದಾನೆ. ಆದರೆ ದೇವರು ಪರಿಶುದ್ಧನೂ ಮತ್ತು ನೀತಿವಂತನೂ ಸಹ ಆಗಿದ್ದಾನೆ ಹಾಗೂ ರಕ್ಷಣೆಯ ತನ್ನ ನೀತಿಯ ಮಾರ್ಗವನ್ನು ಅಂಗೀಕರಿಸದ ಪ್ರತಿಯೊಬ್ಬ ವ್ಯಕ್ತಿಗೂ ನ್ಯಾಯತೀರಿಸುವವನಾಗಿದ್ದಾನೆ.

ಸ್ನೇಹಿತರೇ, ಯಾರೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ. ದೇವರು ಎಂದಿಗೂ ಪಕ್ಷಪಾತವನ್ನು ತೋರಿಸುವದಿಲ್ಲ, ಇಲ್ಲವೆ ಪಾಪಿಗಳ ನಾಶನದಲ್ಲಿ ಸಂತೋಷಿಸುವವನಲ್ಲ. ಭೂಲೋಕದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯೂ ಸತ್ಯವನ್ನು ತಿಳಿದು ಅದನ್ನು ನಂಬಿ ರಕ್ಷಿಸಲ್ಪಡಬೇಕೆಂದು ದೇವರು ಬಯಸುತ್ತಾನೆ! ಅದಕ್ಕಾಗಿಯೇ ದೇವರು ಹಿಂದಿನ ಕಾಲದಲ್ಲಿ, ತನ್ನ ವಾಕ್ಯವನ್ನು ಬರೆಯುವಂತೆ ಪ್ರವಾದಿಗಳನ್ನು ಪ್ರೇರಿಸಿದನು, ಅದರಿಂದ ನಾವು ದೇವರು ಗೊತ್ತು ಮಾಡಿದ ರಕ್ಷಣೆಯ ಮಾರ್ಗವನ್ನು ತಿಳಿದುಕೊಂಡು ಅದನ್ನು ಅಂಗೀಕರಿಸಿ ರಕ್ಷಿಸಲ್ಪಡುವದಕ್ಕೆ ಶಕ್ತರಾದೆವು! ಯಾರಾದರೂ ದೇವರ ರಕ್ಷಣೆಯ ಮಾರ್ಗವನ್ನು ಅಂಗೀಕರಿಸುತ್ತಾರೋ ಅವರು ಪರ –ಲೋಕಕ್ಕೆ ಹೋಗುತ್ತಾರೆ. ಇದನ್ನು ತಿರಸ್ಕರಿಸುವವರು ಅಥವಾ ಅಲಕ್ಷ್ಯಮಾಡುವವರು ನಾಶವಾಗುತ್ತಾರೆ! ದೇವರು ವ್ಯಕ್ತಿಗಳನ್ನು ಮಾನ್ಯ ಮಾಡುವವನಲ್ಲ. ವಾಕ್ಯದಲ್ಲಿ ಬರೆದಿರುವ ಹಾಗೆ: "ಎಲ್ಲಾ ಮನುಷ್ಯರು ರಕ್ಷಣೆಯನ್ನು ಹೊಂದಿ ಸತ್ಯದ ಜ್ಞಾನಕ್ಕೆ ಸೇರಬೇಕೆಂಬುದು ಆತನ ಚಿತ್ತವಾಗಿದೆ. ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ ನೀವೆಲ್ಲರೂ ಹಾಗೆಯೆ ಹಾಳಾಗಿ ಹೋಗುವಿರಿ."(1ತಿಮೊಥೆ–2:4; ಲೂಕ–13:3).

ಮುಂದಿನ ಕಾರ್ಯಕ್ರಮದಲ್ಲಿ, ದೇವರ ಚಿತ್ತವಾದರೆ, ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬರಬೇಕಾಗಿದ್ದ ವಿಮೋಚಕನ ಕುರಿತಾಗಿ ಅನೇಕಾನೇಕ ಪ್ರವಾದನೆಗಳನ್ನು ಹೇಳಿದಂತ ಒಬ್ಬ ದೊಡ್ಡ ಪ್ರವಾದಿಯ ಕುರಿತಾಗಿ ನಾವು ಕಲಿತುಕೊಳ್ಳಲಿಕ್ಕಿದ್ದೇವೆ. ಆ ದೊಡ್ಡ ಪ್ರವಾದಿಯೇ ಯೆಶಾಯನು, ಇವನು, ಮೆಸ್ಸೀಯನು ಈ ಲೋಕಕ್ಕೆ ಬರುವದಕ್ಕಿಂತ ಏಳು ನೂರು ವರ್ಷಗಳ ಮೊದಲು ಇದ್ದಂತ ಒಬ್ಬ ದೇವರ ಪ್ರವಾದಿ.

ತನ್ನ ಅಪನಂಬಿಕಗಸ್ತ ಪ್ರವಾದಿಯಾಗಿದ್ದ ಯೋನನಿಗೆ ಕಲಿಸುವದಕ್ಕೆ ದೇವರು ಇಚ್ಛಿಸಿದ್ದ ಈ ಎರಡು ಪಾಠಗಳನ್ನು ನೀವು ನೆನಪು ಮಾಡಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ.

[ಒಂದು] **"ರಕ್ಷಣೆಯು ಯೆಹೋವನಿಂದಲೇ ಉಂಟಾಗುತ್ತದೆ!"**(ಯೋನ–2:10) [ಎರಡು] **"ದೇವರು ಪಕ್ಷಪಾತಿಯಲ್ಲ."** (ಅಪೊ.ಕೃತ್ಯ–10:34).

[ಪಾಠ 54: ಪ್ರವಾದಿಯಾದ ಯೋನ] [ಸಾರಾಂಶಗಳ ಪಟ್ಟಿ] [ಪಾಠ 56: ಪ್ರವಾದಿಯಾದ ಯೆರೆಮೀಯ]

ಪಾಠ 55

## ಪ್ರವಾದಿಯಾದ ಯೆಶಾಯ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಿಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಕರ್ತನಿಂದ ದೂರ ಓಡಿಹೋಗುವದಕ್ಕೆ ಪ್ರಯತ್ನಿಸಿದ್ದ ಪ್ರವಾದಿಯಾದ **ಯೋನನ** ಕತೆಯನ್ನು ಅಧ್ಯ –ಯನ ಮಾಡಿದ್ದೇವೆ. ಏನೇ ಆದರೂ, ದೇವರ ಪ್ರಸನ್ನತೆಯಿಂದ ಓಡಿಹೋಗುವದಕ್ಕೆ ಪ್ರಯತ್ನಿಸುವದು, ನಿಮ್ಮ ನೆರಳಿನಿಂದ ದೂರ ಓಡಿಹೋಗುವದಕ್ಕೆ ಪ್ರಯತ್ನಿಸುವಂತದ್ದಾಗಿದೆ. ದೊಡ್ಡ ಮೀನಿನ ಒಳಗಡೆಯು ಸಹ ದೇವರು ಯೋನನ ಸಂಗಡ ಇದ್ದನು!

ಯೋನನ ನಂತರ ಬಂದಂತಹ ಒಬ್ಬ ಪ್ರವಾದಿ ಮತ್ತು ಪರಿಶುದ್ಧ ವಾಕ್ಯಗಳಲ್ಲಿ ಯಾರ ಹೆಸರು ತುಂಬಾ ಚೆನ್ನಾಗಿ ತಿಳಿದಿದೆಯೋ ಆ ಪ್ರವಾದಿಯ ಕುರಿತಾಗಿ ಓದಿಕೊಳ್ಳುವದಕ್ಕೆ ನಾವು ಈ ದಿನ ಏರ್ಪಾಟು ಮಾಡಿಕೊಂಡಿದ್ದೇವೆ. ಮೆಸ್ಸೀಯನು ಹುಟ್ಟುವದಕ್ಕಿಂತ ಏಳು ನೂರು ವರ್ಷಗಳಿಗಿಂತ ಮುಂಚೆ ಇದ್ದಂತಹ ಇವನೇ **ಪ್ರವಾದಿಯಾದ ಯೆಶಾಯ**. ಈ ಯೆಶಾಯನು ಯೆರೂಸಲೇಮಿನಲ್ಲಿ ಸೊಲೊ –ಮೋನನು ಕಟ್ಟಿದ್ದಂತ ಆಲಯದಲ್ಲಿ ದೇವರಿಗಾಗಿ ಕೆಲಸ ಮಾಡಿದಂತಹ ಒಬ್ಬ ಯಾಜಕನಾಗಿದ್ದನು. ಪ್ರತಿದಿನ ಯೆಶಾಯನು ಮತ್ತು ಉಳಿದ ಯಾಜಕರುಗಳು ಯಜ್ಞವೇದಿಯ ಮೇಲೆ ದೇವರಿಗಾಗಿ ಪಶುಗಳನ್ನು ಯಜ್ಞ ಅರ್ಪಿಸುತ್ತಿದ್ದರು. ಲೋಕದ ಪಾಪಕ್ಕಾಗಿ ತನ್ನ ರಕ್ತವನ್ನು ಸುರಿಸುವದಕ್ಕಿದ್ದ ಮೆಸ್ಸೀಯನಿಗೆ ಈ ಯಜ್ಞ ಸಮರ್ಪಣೆಗಳು ಗುರುತಾಗಿದ್ದವು.

ಒಂದು ದಿನ ಯೆಶಾಯನು ಕರ್ತನ ಆಲಯದಲ್ಲಿ ಯಜ್ಞಗಳನ್ನು ಸಮರ್ಪಿಸುತ್ತಿದ್ದಾಗ ಏನಾಯಿತೆಂಬುದನ್ನು ಕೇಳಿಸಿಕೊಳ್ಳಿರಿ. ಯೆಶಾಯನ ಪುಸ್ತಕದ ಆರನೆಯ ಅಧ್ಯಾಯದಲ್ಲಿ, ಯೆಶಾಯನು ಹೀಗೆ ಬರೆಯುತ್ತಾನೆ:

ಅರಸನಾದ ಉಜ್ಜೀಯನು ಕಾಲವಾದ ವರುಷದಲ್ಲಿ **ಕರ್ತನು ಉನ್ನತೋನ್ನತ ಸಿಂಹಾಸನಾರೂಢನಾಗಿರುವದನ್ನು ಕಂಡೆನು.** ಆತನ ವಸ್ತ್ರದ ನೆರಿಗೆಯು ಮಂದಿರದಲ್ಲೆಲ್ಲಾ ಹರಡಿತ್ತು. ಆತನ ಸುತ್ತ ಸೆರಾಫಿಯರು ಇದ್ದರು; ಪ್ರತಿಯೊಬ್ಬನು ಆರಾರು ರೆಕ್ಕೆಯುಳ್ಳವನಾಗಿ ಎರಡರಿಂದ ತನ್ನ ಮುಖವನ್ನು, ಎರಡರಿಂದ ತನ್ನ ಕಾಲುಗಳನ್ನು ಮುಚ್ಚಿಕೊಂಡು ಎರಡನ್ನು ಬಡಿಯುತ್ತಾ ನೆಲಸೋಕದೆ ನಿಂತಿದ್ದನು. ಆಗ ಒಬ್ಬನು ಮತ್ತೊಬ್ಬನಿಗೆ, **"ಸೇನಾಧೀಶ್ವರನಾದ ಯೆಹೋವನು ಪರಿಶುದ್ಧನು, ಪರಿಶುದ್ಧನು, ಪರಿಶುದ್ಧನು; ಭೂಮಂಡಲವೆಲ್ಲಾ ಆತನ ಪ್ರಭಾವದಿಂದ ತುಂಬಿದೆ"** ಎಂದು ಕೂಗಿ ಹೇಳಿದನು. ಕೂಗುವವನ ಶಬ್ದಕ್ಕೆ ದ್ವಾರದ ಅಸ್ತಿವಾರವು ಕದಲಿತು; ಧೂಮವು ಮಂದಿರದಲ್ಲೆಲ್ಲಾ ತುಂಬಿತು. ಆಗ ನಾನು, **"ಅಯ್ಯೋ ನನ್ನ ಗತಿಯನ್ನು ಏನು ಹೇಳಲಿ! ನಾಶವಾದೆನಲ್ಲಾ; ನಾನು ಹೊಲಸು ತುಟಿ –ಯವನು, ಹೊಲಸು ತುಟಿಯವರ ಮಧ್ಯದಲ್ಲಿ ವಾಸಿಸುವವನು; ಇಂಥ ನನ್ನ ಕಣ್ಣುಗಳು ರಾಜಾಧಿರಾಜನನ್ನು, ಸೇನಾಧೀಶ್ವರನಾದ ಯೆಹೋವನನ್ನು ಕಂಡವು"** ಎಂದು ಕೂಗಿಕೊಳ್ಳಲು ಸೆರಾಫಿಯರಲ್ಲಿ ಒಬ್ಬನು ಕೆಂಡವನ್ನು ಕೈಯಲ್ಲಿ ಹಿಡಿದುಕೊಂಡು ನನ್ನ ಬಳಿಗೆ ಹಾರಿ ಬಂದು ನನ್ನ ಬಾಯಿಗೆ ಮುಟ್ಟಿಸಿ, "ಇಗೋ, ಇದು ನಿನ್ನ ತುಟಿಗಳಿಗೆ ತಗಲಿತು; ನಿನ್ನ ದೋಷವು ನೀಗಿತು, ನಿನ್ನ ಪಾಪಕ್ಕೆ ಪ್ರಾಯಶ್ಚಿತ್ತವಾಯಿತು" ಅಂದನು. ಆಗ, "ಯಾವನನ್ನು ಕಳಹಿಸಲಿ, ಯಾವನು ನನಗೋಸ್ಕರ ಹೋಗುವನು" ಎಂಬ ಕರ್ತನ ನುಡಿ –ಯನ್ನು ಕೇಳಿ, "ಇಗೋ, ನಾನಿದ್ದೇನೆ ನನ್ನನ್ನು ಕಳಿಹಿಸು!" ಅಂದೆನು.(ಯೆಶಾಯ–6:1–8)

ಈ ಪ್ರಕಾರ ದೇವರಾದ ಕರ್ತನು ತನ್ನ ಮಹಿಮೆಯನ್ನು ಮತ್ತು ಪರಿಶುದ್ಧತೆಯನ್ನು ಯೆಶಾಯನಿಗೆ ಪ್ರಕಟಿಸಿಕೊಂಡು ಇಸ್ರಾಯೇಲ್ಯರಿಗೆ ಅಂದರೆ ಯೆಹೂದ್ಯರಿಗೆ ತನ್ನ ವಾಕ್ಯವನ್ನು ತಿಳಿಸುವದಕ್ಕೂ ಮತ್ತು ಬರಲಿರುವ ಜನಾಂಗಗಳ ಪ್ರಯೋಜನಕ್ಕಾಗಿ ಒಂದು ಪುಸ್ತಕದಲ್ಲಿ ಇದನ್ನು ಬರೆಯುವದಕ್ಕೂ ಅವನನ್ನು ಕರೆದನು. ಯೆಶಾಯನ ಪುಸ್ತಕವು ಉದ್ದವಾದುದು ಮತ್ತು ಅಗಾಧವಾದುದು ಆಗಿದ್ದು, ಇದು ಒಳಗೊಂಡಿರುವದನ್ನೆಲ್ಲಾ ನೋಡಿಕೊಳ್ಳುವದಕ್ಕೆ ನಮಗೆ ಸಮಯವಿಲ್ಲ. ಹೇಗಾದರೂ, ಪ್ರವಾದಿಯಾದ ಯೆಶಾಯನ ಎರಡು ಪ್ರಾಮುಖ್ಯವಾದ ಆಲೋಚನೆಗಳೊಂದಿಗೆ ನಾವು ಸಂಕ್ಷಿಪ್ತಗೊಳಿಸುತ್ತೇವೆ.

**ಮೊದಲನೆಯದು,** ಯೆಶಾಯನು ಯೆಹೂದ್ಯರಿಗೆ ಅವರ ಪಾಪದ ಕುರಿತಾಗಿ ಮತ್ತು ಅವರು ಹೊಂದಲಿರುವ ಶಿಕ್ಷೆಯ ಕುರಿತಾಗಿ **ಕೆಟ್ಟ ಸುದ್ಧಿಯನ್ನು** ತಿಳಿಸಿದ್ದಾನೆ.

**ಎರಡನೆಯದು,** ಅವರ ಪಾಪಗಳಿಗಾಗಿ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕೆ ಲೋಕಕ್ಕೆ ಬರಲಿಕ್ಕಿರುವ ಮೆಸ್ಸೀಯನಿಗೆ ಸಂಬಂಧಿಸಿದಂತೆ **ಒಳ್ಳೆ ಸುದ್ಧಿಯನ್ನು** ಯೆಶಾಯನು ಅವರಿಗೆ ತಿಳಿಸಿದ್ದಾನೆ.

ಆದಕಾರಣ, ಸಂಕ್ಷಿಪ್ತವಾಗಿ, ಪ್ರವಾದಿಯಾದ ಯೆಶಾಯನ ಸಂದೇಶವೇನೆಂದರೆ:

1) **ಪಾಪ ಮತ್ತು ಅದರ ದಂಡನೆಯ ಕುರಿತಾದ ಕೆಟ್ಟ ಸುದ್ಧಿ;** ಮತ್ತು

2) **ಪಾಪಿಗಳಿಗಾಗಿ ದಂಡನೆಯ ಕ್ರಯ ಕೊಡುವದಕ್ಕಿದ್ದ ಒಬ್ಬ ರಕ್ಷಕನ ಕುರಿತಾದ ಒಳ್ಳೇಯ ಸುದ್ಧಿ.**

ಯೆಶಾಯನು, ಯೆಹೂದ್ಯರಿಗೂ ಮತ್ತು ಕೇಳುವದಕ್ಕೆ ಕಿವಿಯುಳ್ಳ ಪ್ರತಿಯೊಬ್ಬರಿಗೂ ಇದನ್ನು ತಿಳಿಸಿರಬಹುದು ಆದ್ದರಿಂದ, ದೇವರು ಯೆಶಾಯನಿಗೆ ತಿಳಿಸಿದಂತ ಕೆಟ್ಟ ಸುದ್ದಿಯನ್ನು ತೋರಿಸುವಂತಹ ಕೆಲವು ವಚನಗಳನ್ನು ಮೊದಲು ಉದಾಹರಿಸೋಣ. ಮೊದಲ –ನೆಯ ಅಧ್ಯಾಯದಲ್ಲಿ ಪ್ರವಾದಿಯಾದ ಯೆಶಾಯನು ಹೀಗೆ ಬರೆದಿದ್ದಾನೆ:

**"ಆಕಾಶಮಂಡಲವೇ, ಆಲಿಸು! ಭೂಮಂಡಲವೇ, ಕೇಳು! ಯೆಹೋವನು ಮಾತಾಡುತ್ತಿದ್ದಾನೆ;** ನಾನು ಸಾಕಿ ಸಲಹಿದ ಮಕ್ಕಳೇ ನನಗೆ ದ್ರೋಹ ಮಾಡಿದ್ದಾರೆ. ಎತ್ತು ಯಜಮಾನನನ್ನು, ಕತ್ತೆ ಒಡೆಯನ [ಕೊಟ್ಟಿಗೆಯ] ಗೋದಲಿಯನ್ನು ತಿಳಿದಿರುವವು; ಇಸ್ರಾಯೇಲ್ ಜನರಿಗೋ ತಿಳುವಳಿಕೆಯಿಲ್ಲ, ನನ್ನ ಪ್ರಜೆಯು ಆಲೋಚಿಸುವದಿಲ್ಲ. ಪಾಪಿಷ್ಠ ಜನವೇ, ಅಧರ್ಮಭಾರ ಹೊತ್ತಿರುವ ಪ್ರಜೆಯೇ, ದುಷ್ಟ –ಜಾತಿಯೇ, ದ್ರೋಹಿಗಳಾದ ಮಕ್ಕಳೇ, ನಿಮ್ಮ ಗತಿಯನ್ನು ಏನು ಹೇಳಲಿ! ಯೆಹೋವನನ್ನು ತೊರೆದಿದ್ದಾರೆ, ಇಸ್ರಾಯೇಲ್ಯರ ಸದಮಲ ಸ್ವಾಮಿಯನ್ನು ಧಿಕ್ಕರಿಸಿದ್ದಾರೆ, ಆತನಿಗೆ ಬೆನ್ನು ಮಾಡಿ ಬೇರೆಯಾಗಿದ್ದಾರೆ. ವ್ಯರ್ಥನೈವೇದ್ಯವನ್ನು ಇನ್ನು ತಾರದಿರಿ. ಧೂಪವು ನನಗೆ ಅಸಹ್ಯ; ಅಮಾವಾಸ್ಯೆ, ಸಬ್ಬತ್ ದಿನ, ಕೂಟಪ್ರಕಟನೆ, ಇವು ಬೇಡ; ಅಧರ್ಮದಿಂದ ಕೂಡಿದ ಸಂಘವನ್ನು ನಾನು ಸಹಿಸಲಾರೆನು. ನಿಮ್ಮ ಅಮಾವಾಸ್ಯೆಗಳನ್ನೂ ಉತ್ಸವದಿನಗಳನ್ನೂ ಹಗೆಮಾಡುತ್ತೇನೆ; ಇವು ನನಗೆ ಭಾರ; ಸಹಿಸಲು ಬೇಸರ. ನೀವು ನನ್ನ ಕಡೆಗೆ ಕೈ –ಯೆತ್ತುವಾಗ ನಿಮ್ಮನ್ನು ನೋಡದಂತೆ ನನ್ನ ಕಣ್ಣುಗಳನ್ನು ಮರೆಮಾಡಿಕೊಳ್ಳುವೆನು; ಹೌದು, ನೀವು ಬಹು ಪ್ರಾರ್ಥನೆಗಳನ್ನು ಮಾಡಿ –ದರೂ ನಾನು ಕೇಳೆನು!(ಯೆಶಾಯ–1:2–4, 12–15)

ಅದಕ್ಕಾಗಿಯೇ, ಪ್ರವಾದಿಯಾದ ಯೆಶಾಯನು ಯೆಹೂದ್ಯರ ಕಪಟತನದ ಕಾರಣದಿಂದ ಅವರನ್ನು ಹೀಗೆ ಗದರಿಸಿದನು. ಅವರ ಪಾಪವನ್ನು ಅವನು ಹೀಗೆ ಸಂಕ್ಷಿಪ್ತಗೊಳಿಸಿದ್ದಾನೆ: **"ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದ್ದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ."** (ಮತ್ತಾಯ–15:8; ಯೆಶಾಯ–29:13)

ಯೆಹೂದ್ಯರ ಮೊಂಡುತನ ಮತ್ತು ಪಾಪಗಳಿಗಾಗಿ ಅವರನ್ನು ಗದರಿಸಿದ ನಂತರ ಯೆಶಾಯನು, ನಂಬುವಂತ ಎಲ್ಲರ ಹೃದಯಗಳನ್ನು ಶುದ್ಧೀಕರಿಸುವಂತ ಶಕ್ತಿಯನ್ನು ಹೊಂದಿದ್ದ **ಶುಭ ಸಂದೇಶವನ್ನು** ಅವರಿಗೆ ತಿಳಿಸುವದಕ್ಕೆ ಆರಂಭಿಸಿದನು. ಪಾಪಿಗಳನ್ನು ರಕ್ಷಿಸುವದಕ್ಕೆ ಲೋಕಕ್ಕೆ ಬರಬೇಕಾಗಿದ್ದ ಮೆಸ್ಸೀಯನ ಕುರಿತಾಗಿ ಯೆಶಾಯನು ಬರೆದಿರುವಂತಹ ಅದ್ಭುತವಾದ ಕೆಲವೊಂದು ಮಾತುಗಳನ್ನು ಉಳಿದಿ –ರುವ ಸಮಯದಲ್ಲಿ ಕೇಳಿಸಿಕೊಳ್ಳೋಣ.

**"ಬನ್ನಿರಿ ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು; ಕಿರುಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು."** (ಯೆಶಾಯ–1:18)

ನನ್ನ ಜನರನ್ನು ಸಂತೈಸಿರಿ, ಸಂತೈಸಿರಿ, ಎಂದು ನಿಮ್ಮ ದೇವರು ಹೇಳುತ್ತಾನೆ. ಇಗೋ ಒಂದು ವಾಣಿ: **"ಅರಣ್ಯದಲ್ಲಿ ಯೆಹೋವನಿಗೆ ದಾರಿಯನ್ನು ಸಿದ್ಧಪಡಿಸಿರಿ,** ಅಡವಿಯಲ್ಲಿ ನಮ್ಮ ದೇವರಿಗೆ ರಾಜಮಾರ್ಗವನ್ನು ನೆಟ್ಟಗೆ ಮಾಡಿರಿ; ಎಲ್ಲಾ ಹಳ್ಳಕೊಳ್ಳಗಳು ಮುಚ್ಚಲ್ಪಡು –ವವು, ಎಲ್ಲಾ ಬೆಟ್ಟಗುಡ್ಡಗಳು ತಗ್ಗಿಸಲ್ಪಡುವವು, ಮಲೆನಾಡು ಬೈಲುಸೀಮೆಯಾಗುವದು, ಕೊರಕಲ ನೆಲವು ಸಮವಾಗುವದು. ಯೆಹೋ –ವನ ಮಹಿಮೆಯು ಗೋಚರವಾಗುವದು, ಎಲ್ಲಾ ಮನುಷ್ಯರೂ ಒಟ್ಟಿಗೆ ಅದನ್ನು ಕಾಣುವರು. ಯೆಹೋವನ ಬಾಯೇ ಇದನ್ನು ನುಡಿದಿದೆ**"** ಶುಭಸಮಾಚಾರವನ್ನು ತಿಳಿಸಬಲ್ಲ ಚೀಯೋನೇ, ಉನ್ನತ ಪರ್ವತವನ್ನು ಹತ್ತಿಕೋ; ಸುವರ್ತಮಾನವನ್ನು ಪ್ರಕಟಿಸಬಲ್ಲ ಯೆರೂಸಲೇಮೇ, ನಿನ್ನ ಧ್ವನಿಯನ್ನು ಗಟ್ಟಿಯಾಗಿ ಎತ್ತು, ನಿರ್ಭಯವಾಗಿ ಎತ್ತಿ, ಯೆಹೂದದ ಪಟ್ಟಣಗಳಿಗೆ, **"ಇಗೋ ನಿಮ್ಮ ದೇವರು! ಆಹಾ ಕರ್ತನಾದ ಯೆಹೋವನು ಶೂರನಾಗಿ ಬರುವನು!** ಎಂದು ಸಾರು. (ಯೆಶಾಯ–40:1–5, 9–10)

ಇದರಿಂದ ಕರ್ತನು ತಾನೇ ನಿಮಗೊಂದು ಗುರುತನ್ನು ಕೊಡುವನು: **"ಇಗೋ ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು** ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು. **ದೇವರು ನಮ್ಮ ಕೂಡ ಇದ್ದಾನೆಂದು** ಈ ಹೆಸರಿನ ಅರ್ಥ!**"** (ಯೆಶಾಯ–7:14; ಮತ್ತಾಯ–1:23).

ಪ್ರವಾದಿಯಾದ ಯೆಶಾಯನ ಮೂಲಕವಾಗಿ ದೇವರು ಒಂದು **ದೊಡ್ಡದಾದ ರಹಸ್ಯವನ್ನು** ಪ್ರಕಟಪಡಿಸುತ್ತಿದ್ದಾನೆ! ಒಬ್ಬ ಕನ್ನಿಕೆ ಅಂದರೆ ಎಂದಿಗೂ ಪುರುಷನನ್ನು ಅರಿಯದಿದ್ದ ಒಬ್ಬ ಸ್ತ್ರೀಯ ಗರ್ಭದಲ್ಲಿ **ತನ್ನ ಆತ್ಮವನ್ನು** ಕಳಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡಿ –ದ್ದನು! ಈ ರೀತಿಯಾಗಿ ಮೆಸ್ಸೀಯನು ಲೋಕದೊಳಕ್ಕೆ ಹುಟ್ಟಿ ಬರುವದಕ್ಕಿದ್ದನು. ನೀವು ತಿಳಿದಿರುವಂತೆ, ಮೆಸ್ಸೀಯನಿಗೆ ಭೂಲೋ –ಕದ ತಂದೆಯಿರಲಿಲ್ಲ. ಆತನು ಹುಟ್ಟುವದಕ್ಕಿಂತ ಮೊದಲೇ ಪರಲೋಕದಲ್ಲಿದ್ದನು, ಯಾಕೆಂದರೆ ಆತನು **ವಾಕ್ಯವಾಗಿದ್ದನು,** ಆ ವಾಕ್ಯವು ಆದಿಯ'ಲ್ಲಿ ದೇವರ ಬಳಿಯಲ್ಲಿತ್ತು. ಯೆಶಾಯನ ಪ್ರವಾದನೆಯ ಪ್ರಕಾರ, ಮೆಸ್ಸೀಯನು **ಮನುಷ್ಯ ದೇಹದಲ್ಲಿದ್ದ ದೇವರಾಗಿದ್ದನು.** ಎಂತಹ ಒಂದು ಗಂಭೀರವಾದ ಸತ್ಯ! ಆತ್ಮನಾದ ದೇವರು, ತನ್ನ ಸ್ವಂತ ಆತ್ಮವನ್ನು ಮತ್ತು ವಾಕ್ಯವನ್ನು ಒಬ್ಬ ಕನ್ನಿಕೆಯ ಗರ್ಭದಲ್ಲಿ
ಇಟ್ಟನು ಮತ್ತು ನಂತರ ಅದು ಒಂದು ಮಗುವಾಗಿ ಈ ಲೋಕದಲ್ಲಿ ಹುಟ್ಟುವಂತೆ ಮಾಡಿದನು! ಅದನ್ನೇ ಯೆಶಾಯನು ಪ್ರವಾದಿಸುತ್ತಾ ಹೀಗೆ ಹೇಳುತ್ತಾನೆ: "ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು. **ದೇವರು ನಮ್ಮ ಕೂಡ ಇದ್ದಾನೆಂದು** ಈ ಹೆಸರಿನ ಅರ್ಥ!**"**

ಮುಂದಿನ ಅಧ್ಯಾಯಗಳಲ್ಲಿ, ಮೆಸ್ಸೀಯನ ಬರುವಿಕೆಯ ಕುರಿತಾಗಿ ಯೆಶಾಯನು ಬರೆಯುತ್ತಾನೆ. ಒಂದು ಸ್ಥಳದಲ್ಲಿ ಅವನು ಹೀಗೆ ಹೇಳುತ್ತಾನೆ:

**"**ಕತ್ತಲಲ್ಲಿ ಸಂಚರಿಸಿದ ಜನರಿಗೆ **ದೊಡ್ಡ ಬೆಳಕು** ಕಾಣಿಸಿತು; ಕಾರ್ಗತ್ತಲಾದ ದೇಶದಲ್ಲಿದ್ದವರಿಗೆ ಪ್ರಕಾಶವು ಹೊಳೆಯಿತು. **ಒಂದು ಮಗು ನಮಗಾಗಿ ಹುಟ್ಟಿದೆಯಷ್ಟೆ, ವರದ ಮಗನು ನಮಗೆ ದೊರೆತನು; ಆಡಳಿತವು ಅವನ ಬಾಹುವಿನ ಮೇಲಿರುವದು; ಅದ್ಭುತ ಸ್ವರೂಪನು,** ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು ಎಂಬವು ಅವನ

ಹೆಸರು" (ಯೆಶಾಯ–9:2,6). "ಆಗ ಕುರುಡರ ಕಣ್ಣು ಕಾಣುವದು, ಕಿವುಡರ ಕಿವಿ ಕೇಳುವದು, ಕುಂಟನು ಜಿಂಕೆಯಂತೆ ಹಾರುವನು, ಮೂಕನ ನಾಲಿ –ಗೆಯು ಹರ್ಷಧ್ವನಿಗೈಯುವದು; ಅರಣ್ಯದಲ್ಲಿ ಒರತೆಗಳು ಒಡೆಯುವವು, ಒಣನೆಲದಲ್ಲಿ ನದಿಗಳು ಹುಟ್ಟಿ ಹರಿಯುವವು." (ಯೆಶಾಯ–35:5,6)

ಈ ವಚನಗಳಲ್ಲಿ, ಮೆಸ್ಸೀಯನು ಭೂಮಿಗೆ ದೇವರ ಪರಿಶುದ್ಧತೆಯನ್ನು ಮತ್ತು ಕನಿಕರವನ್ನೂ ತರುತ್ತಾನೆಂದು ಯೆಶಾಯನು ಪ್ರವಾದಿ –ಸುತ್ತಾನೆ. ಯಾರೊಬ್ಬರೂ ಎಂದೂ ಮಾಡದಿರುವ ಬಲವಾದ ಕಾರ್ಯಗಳನ್ನು ಮೆಸ್ಸೀಯನು ಹೇಗೆ ಮಾಡುತ್ತಾನೆಂಬುದನ್ನು ಸಹ ಯೆಶಾಯನು ಪ್ರವಾದಿಸಿದ್ದಾನೆ, ಆದ್ದರಿಂದ ಈತನು ದೇವರ ಪ್ರಸನ್ನತೆಯಿಂದ ಬಂದಂತಹ ಪರಿಶುದ್ಧ ಮೆಸ್ಸೀಯನಾಗಿದ್ದಾನೆಂಬುದನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳುವದಕ್ಕೆ ಸಾಧ್ಯವಾಯಿತು. ಅದಕ್ಕಾಗಿಯೇ ಪ್ರವಾದಿಯಾದ ಯೆಶಾಯನು, ಮೆಸ್ಸೀಯನು ಈ ರೀತಿಯಾಗಿ ಕರೆಯಲ್ಪಡುತ್ತಾನೆಂಬುದನ್ನು ಬರೆದಿದ್ದಾನೆ: **"ಅದ್ಭುತ ಸ್ವರೂಪನು, ಆಲೋಚನಾ ಕರ್ತನು, ಪರಾಕ್ರಮಿಯಾದ ದೇವರು, ನಿತ್ಯನಾದ ತಂದೆ, ಸಮಾಧಾನದ ಪ್ರಭು!"** ಸ್ಪಷ್ಟವಾಗಿ ಹೇಳುವದಾದರೆ, ಪ್ರವಾದಿಗಳ ಹಾಗೆ ಅದೇ ರೀತಿಯ ಮಟ್ಟದಲ್ಲಿ ಮೆಸ್ಸಿಯನನ್ನು ಇಡುವದಕ್ಕೆ ಪ್ರಯತ್ನಿಸುವಂತಹ ಈ ದಿನದ ಜನರ ಹಾಗೆ ಯೆಶಾಯನಿರಲಿಲ್ಲ. ಪ್ರವಾದಿಯಾದ ಯೆಶಾಯನು ದೇವರ ಪ್ರಸನ್ನತೆಯಿಂದ ಬರಲಿ –ಕ್ಕಿದ್ದ ವಿಮೋಚಕನ ಮಹಿಮೆಯನ್ನು ಗ್ರಹಿಸಿಕೊಂಡಿದ್ದನು.

ಈ ದಿನ ನಾವು ನಿಮಗೆ ವಿದಾಯ ಹೇಳುವದಕ್ಕಿಂತ ಮೊದಲು, ನಾವು ಇನ್ನೊಂದು ಅಧ್ಯಾಯವನ್ನೂ ಓದಲೇಬೇಕು: ಅದು **ಐವತ್ತ ಮೂರನೆಯ ಅಧ್ಯಾಯ. ಪ್ರವಾದಿಯಾದ ಯೆಶಾಯನು ಬರೆದಿರುವ ಎಲ್ಲಾ ಅಧ್ಯಾಯಗಳಲ್ಲಿ ಇದು ಹೆಚ್ಚು ಅದ್ಭುತವಾದ ಅಧ್ಯಾಯ –ವಾಗಿದೆ,** ಯಾಕೆಂದರೆ ಲೋಕದ ಪಾಪದ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕೆ ಒಂದು ಯಜ್ಞದ ಕುರಿಯ ರೀತಿಯಲ್ಲಿ ಮೆಸ್ಸೀಯನು ಹೇಗೆ ತನ್ನ ರಕ್ತವನ್ನು ಸುರಿಸುತ್ತಾನೆಂಬುದನ್ನು ಅವನು ಇದರಲ್ಲಿ ಪ್ರವಾದಿಸಿದ್ದಾನೆ. ಮೆಸ್ಸೀಯನ ಕಾಲಕ್ಕಿಂತ ಏಳು ನೂರು ವರ್ಷಗಳಿ –ಗಿಂತ ಮೊದಲು, ದೇವರು ತನ್ನ ಪ್ರವಾದಿಯಾದ ಯೆಶಾಯನಿಗೆ ಕೊಟ್ಟಿರುವ ಶುಭ ಸಂದೇಶವನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳಿರಿ.

ಪರಿಶುದ್ಧ ವಾಕ್ಯಗಳು ಹೀಗೆ ಹೇಳುತ್ತವೆ:

**ನಾವು ಕೇಳಿದ ಸಂಗತಿಯನ್ನು ನಮ್ಮಲ್ಲಿ ಯಾರು ನಂಬಿದ್ದರು? ಯೆಹೋವನ ಬಾಹುವು ಯಾರಿಗೆ ಗೋಚರವಾಗಿತ್ತು? ಒಣನೆಲದೊಳಗೆ ಬೇರಿನಿಂದ ಹೊರಡುವ ಅಂಕುರದಂತೆಯೂ ಬುಡದಿಂದ ಒಡೆಯುವ ಚಿಗುರಿನ ಹಾಗೂ ಅವನು ಯೆಹೋವನ ದೃಷ್ಟಿಯಲ್ಲಿ ಬೆಳೆದನು. ಅವನಲ್ಲಿ ಯಾವ ಅಂದಚಂದಗಳೂ ಇರಲಿಲ್ಲ; ನಾವು ಅವನನ್ನು ನೋಡಿದಾಗ ನೋಡತಕ್ಕ ಯಾವ ಲಕ್ಷಣವೂ ಕಾಣಲಿಲ್ಲ. ಅವನು ಧಿಕ್ಕರಿಸಲ್ಪಟ್ಟವನು, ಮನುಷ್ಯರು ಸೇರಿಸಿಕೊಳ್ಳದವನು, ಸಂಕಷ್ಟಕ್ಕೊಳಗಾದವನು, ವ್ಯಾಧಿಪೀಡಿತನು, ಜನರು ಮುಖವನ್ನು ಓರೆಮಾಡಿಕೊಳ್ಳುವ ಧಿಕ್ಕಾರಕ್ಕೆ ಒಳಗಾದವನೂ ಆಗಿದ್ದನು. ನಾವು ಅವನನ್ನು ಲಕ್ಷ್ಯಕ್ಕೇ ತರಲಿಲ್ಲ. ನಿಜವಾಗಿಯೂ ನಮ್ಮ ಸಂಕಷ್ಟಗಳನ್ನು ಅನುಭವಿಸಿದನು. ಅವನು ಹೊತ್ತ ಹೊರೆಯು ನಮ್ಮ ಸಂಕಟವೇ ಹೌದು; ನಾವಾದರೋ ಅವನು ದೇವರಿಂದ ಬಾಧಿತನು, ಪೆಟ್ಟು ತಿಂದವನು, ಕುಗ್ಗಿಸಲ್ಪಟ್ಟವನು ಎಂದು ಭಾವಿಸಿಕೊಂಡೆವು. ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆಲ್ಲರ ದೋಷ ಫಲ –ವನ್ನೂ ಯೆಹೋವನು ಅವನ ಮೇಲೆ ಹಾಕಿದನು. (ಯೆಶಾಯ–53:1–6)**

**ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸು –ವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ. ಹಿಂಸೆಯ ನ್ಯಾಯದಿಂದ ಕೊಲ್ಲಲ್ಪಟ್ಟನು, ಅಹಾ, ಇವನು ಜೀವಲೋಕದಿಂದ ಕೀಳಲ್ಪಟ್ಟಿದ್ದಾನೆ, ನಮ್ಮ ಜನಗಳ ದ್ರೋಹಗಳ ದೆಸೆಯಿಂದ ಈ ಪೆಟ್ಟು ಅವನ ಮೇಲೆ ಬಿತ್ತಲ್ಲಾ ಎಂದು ಅವನ ಕಾಲದವರಲ್ಲಿ ಯಾರು ಮನಮುಟ್ಟಿ ಮರುಗಿದರು? ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು. ಅವನನ್ನು ಜಜ್ಜುವದು ಯೆಹೋವನ ಸಂಕಲ್ಪ –ವಾಗಿತ್ತು. ಆತನು ಅವನನ್ನು ವ್ಯಾಧಿಯಿಂದ ಬಾಧಿಸಿ ಹೀಗೆಂದುಕೊಂಡನು; ಅವನು ತನ್ನ ಆತ್ಮವನ್ನು ಪ್ರಾಯಶ್ಚಿತ್ತ ಯಜ್ಞಕ್ಕಾಗಿ ಒಪ್ಪಿಸಿದ ಮೇಲೆ ತನ್ನ ಸಂತಾನವನ್ನು ನೋಡುವನು, ಚಿರಂಜೀವಿಯಾಗುವನು, ನನ್ನ ಸಂಕಲ್ಪವು ಇವನ ಕೈಯಿಂದ ನೆರವೇರುವದು; ತನ್ನ ಆತ್ಮವು ಅನುಭವಿಸಿದ ಶ್ರಮೆಯ ಫಲವನ್ನು ಕಂಡು ತೃಪ್ತನಾಗುವನು;**

**ಧರ್ಮಾತ್ಮನಾದ ನನ್ನ ಸೇವಕನು ತನ್ನ ಜ್ಞಾನದ ಮೂಲಕ ಬಹು ಜನರನ್ನು ಧರ್ಮಮಾರ್ಗಕ್ಕೆ ತರುವನು; ಅವರ ಅಪರಾಧಗಳನ್ನು ಹೊತ್ತುಕೊಂಡು ಹೋಗುವನು. ಇವನು ಇಂಥವನಾಗಿರುವದರಿಂದ ನಾನು ಇವನಿಗೆ**
**ದೊಡ್ಡವರ ಸಂಗಡ ಪಾಲು ಕೊಡುವೆನು, ಇವನು ಬಲಿಷ್ಠರೊಡನೆ ಸೂರೆಯನ್ನು ಹಂಚಿಕೊಳ್ಳುವನು; ತನ್ನ ಪ್ರಾಣವನ್ನು ಧರೆಯೆರೆದು ಮರಣ ಹೊಂದಿ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹುಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆ ಮಾಡಿದನಲ್ಲಾ. (ಯೆಶಾಯ–53:7–12).**

ನಮ್ಮ ಪಾಪಗಳಿಗಾಗಿ ಕ್ರಯ ತೆರುವದಕ್ಕೆ ಮೆಸ್ಸೀಯನು ಸಹಿಸಿಕೊಳ್ಳುವಂತಹ, ಸಂಕಟಕ್ಕೆ ಸಂಬಂಧಿಸಿದ ವಿಷಯವನ್ನೇ ಯೆಶಾಯನು ಬರೆದಿದ್ದಾನೆ. ಹೌದು, ವಿಮೋಚಕನು ಸಂಕಟವನ್ನು ಅನುಭವಿಸಿ ತನ್ನ ರಕ್ತವನ್ನು ಸುರಿಸಬೇಕಾಗಿತ್ತು, ಅದರಿಂದ ದೇವರು ತನ್ನ ನೀತಿ –ಯನ್ನು ರಾಜಿ ಮಾಡಿಕೊಳ್ಳದೇ ನಮ್ಮ ಪಾಪವನ್ನು ಕ್ಷಮಿಸುವದಕ್ಕೆ ಸಾಧ್ಯವಾಯಿತು. ಅದಕ್ಕೋಸ್ಕರವೇ ಯೆಶಾಯನು ಹೀಗೆ ಬರೆದಿ –ದ್ದಾನೆ: **"ನಮ್ಮ ದ್ರೋಹಗಳ ದೆಸೆಯಿಂದ** ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆ –ಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; **ನಮ್ಮೆಲ್ಲರ ದೋಷಫಲ– ವನ್ನೂ ಯೆಹೋವನು ಅವನ ಮೇಲೆ ಹಾಕಿದನು."** (ಯೆಶಾಯ–53:5,6). ಈ ಗಂಭೀರವಾದ ವಚನವು ಯೆಶಾಯನ ಪುಸ್ತಕದ ಸಂದೇಶವನ್ನು ಸಂಕ್ಷಿಪ್ತಗೊಳಿಸುತ್ತದೆ: **ಕೆಟ್ಟ ಸುದ್ಧಿ** ಮತ್ತು **ಒಳ್ಳೇ ಸುದ್ಧಿ.**

1)ಮೊದಲನೆಯದಾಗಿ, **ಕೆಟ್ಟ ಸುದ್ಧಿ ಏನೆಂದರೆ,** ನಾವೆಲ್ಲರೂ ಪಾಪಿಗಳು ಮತ್ತು ನಮ್ಮನ್ನು ನಾವು ರಕ್ಷಿಸಿಕೊಳ್ಳುವಂತಹ ಯಾವ ಮಾರ್ಗವೂ ನಮಗಿರಲಿಲ್ಲ! ಅದಕ್ಕಾಗಿಯೇ ಯೆಶಾಯನು ಹೀಗೆ ಬರೆಯುತ್ತಾನೆ: **"ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು!"**

2)ಎರಡನೆಯದಾಗಿ, **ಒಳ್ಳೇ ಸುದ್ಧಿ ಏನೆಂದರೆ,** ಪಾಪಿಗಳನ್ನು ರಕ್ಷಿಸುವದಕ್ಕೆ ದೇವರು ಒಂದು ಯೋಜನೆಯನ್ನು ರಚನೆ ಮಾಡಿದನು, ಮತ್ತು ಆ ಯೋಜನೆಯು ಮೆಸ್ಸೀಯನ ಮರಣ ಮತ್ತು ಪುನರುತ್ಥಾನದ ಮೂಲಕವಾದ ಯೋಜನೆಯಾಗಿತ್ತು. ಅದಕ್ಕಾಗಿಯೇ ಯೆಶಾ –ಯನು ಹೀಗೆ ಬರೆದಿದ್ದಾನೆ: **"ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಆತನು ಜಜ್ಜಲ್ಪ –ಟ್ಟನು. . . .ನಮ್ಮೆಲ್ಲರ ದೋಷಫಲವನ್ನೂ ಯೆಹೋವನು ಅವನ ಮೇಲೆ ಹಾಕಿದನು."**

ಸ್ನೇಹಿತರೇ, ನಿಮ್ಮ ಪಾಪವು ಪರಿಶುದ್ಧನಾದ ದೇವರ ಮುಂದೆ ಎಷ್ಟು ದೊಡ್ಡದಾಗಿದೆ ಎಂದು ನೀವು **ತಿಳಿದುಕೊಂಡಿರಾ?** ಕನ್ಯೆಯಲ್ಲಿ ಹುಟ್ಟಿದವನು, "ದೇವರು ನಮ್ಮ ಕೂಡ ಇದ್ದಾನೆ" ಎಂಬವನೇ ಮೆಸ್ಸೀಯನು ಎನ್ನುವದನ್ನು ನೀವು **ನಂಬುತ್ತೀರಾ?** ಒಂದು ಯಜ್ಞದ ಕುರಿಯ ಹಾಗೆ ಮೆಸ್ಸೀಯನು ಯಾಕೆ ತನ್ನ ರಕ್ತವನ್ನು ಸುರಿಸಿದನೆಂಬುದು ನಿಮಗೆ **ಗೊತ್ತಾ?**

ಪ್ರವಾದಿಯಾದ ಯೆಶಾಯನ ಈ ಜೀವಕೊಡುವ ಮಾತುಗಳನ್ನು ಧ್ಯಾನಿಸಿರಿ. ಐವತ್ತ ಮೂರನೆಯ ಅಧ್ಯಾಯದಲ್ಲಿ ಯೆಶಾಯನು ಬರೆ –ದಿರುವದೆಲ್ಲವನ್ನೂ ಅರ್ಥಮಾಡಿಕೊಳ್ಳುವದಕ್ಕೆ ದೇವರು ನಿಮಗೆ ಸಹಾಯ ಮಾಡುವದಕ್ಕೆ ಬಯಸುತ್ತಾನೆ. ಈ ಈದಿನ ನಾವು ಅಧ್ಯ –ಯನ ಮಾಡಿದ್ದರಲ್ಲಿ ನಿಮಗೆ ಯಾವುದಾದರೂ ಸ್ಪಷ್ಟವಾಗಿಲ್ಲದಿದ್ದರೆ, ನಮಗೆ ಬರೆಯಿರಿ. . . .

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು, ಪ್ರವಾದಿಯಾದ ಯೆಶಾಯನ ಮೂಲಕವಾಗಿ ಕರ್ತನು ನಿಮಗೆ ಕೊಟ್ಟಿರುವ ಈ ಸಂದೇಶದ ಕುರಿತು ನೀವು ಆಳವಾಗಿ ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಬನ್ನಿರಿ, ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು; ಕಿರುಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು."** (ಯೆಶಾಯ–1:18).

[ಪಾಠ 55: ಪ್ರವಾದಿಯಾದ ಯೆಶಾಯನು] [ಸಾರಾಂಶಗಳ ಪಟ್ಟಿ] [ಪಾಠ 57: ಪ್ರವಾದಿಯಾದ ದಾನಿಯೇಲನು]

ಪಾಠ 56

## ಪ್ರವಾದಿಯಾದ ಯೆರೆಮೀಯ

ಯೆರೆಮೀಯ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಕಾರ್ಯಕ್ರಮದಲ್ಲಿ, ಬರಲಿಕ್ಕಿದ್ದ ಮೆಸ್ಸೀಯನ ಕುರಿತಾಗಿ ಪ್ರವಾದಿಯಾದ **ಯೆಶಾಯನು** ಹೆಚ್ಚಾಗಿ ಬರೆದಿರುವದನ್ನು ನಾವು ಕೇಳಿಸಿಕೊಂಡಿದ್ದೇವೆ. ಪಾಪಿಗಳ ಈ ರಕ್ಷಕನು ಹೇಗೆ ದೇವರ ಸನ್ನಿಧಿಯಿಂದ ಬಂದು ಒಬ್ಬ ಕನ್ಯೆಯಲ್ಲಿ ಜನಿಸಿ, ಪರಿಶುದ್ಧ ಜೀವಿತವನ್ನು ಜೀವಿಸಿ, ಯಾರೂ ಮಾಡದಿರುವ ಅದ್ಬುತ ಕಾರ್ಯಗಳನ್ನು ಮಾಡುತ್ತಾನೆ ಎನ್ನುವದನ್ನು ಮೆಸ್ಸೀಯನು ಹುಟ್ಟುವದಕ್ಕಿಂತ ಏಳುನೂರು ವರುಷಗಳ ಮೊದಲೇ ದೇವರು ಯೆಶಾಯನ ಮನಸ್ಸಿನಲ್ಲಿ ಇಟ್ಟಿದ್ದನು. ಹೇಗಿದ್ದರೂ, ಮೆಸ್ಸೀಯನು ಲೋಕದ ಪಾಪಗಳಿಗಾಗಿ ದಂಡ ತೆರುವದಕ್ಕೆ ಒಂದು ಯಜ್ಞದ' ಕುರಿಯ ಹಾಗೆ ತನ್ನ ರಕ್ತವನ್ನು ಸುರಿಸುತ್ತಾನೆ ಎಂದು ಯೆಶಾಯನೂ ಸಹ ಪ್ರವಾದಿಸಿದ್ದನು. ಒಂದುಸಲ ಆತನ ಯಜ್ಞವು ಪೂರ್ಣಗೊಂಡಾಗ, ಆತನು ಮರಣವನ್ನು ಜಯಿಸಿ ಸಮಾಧಿಯಿಂದ ಎದ್ದು ಬಂದು, ಆತನಲ್ಲಿ ನಂಬಿಕೆಯಿಡುವ ಪ್ರತಿ –ಯೊಬ್ಬರಿಗೂ ನಿತ್ಯಜೀವವನ್ನು ಒದಗಿಸಿಕೊಡುವವನಾಗಿದ್ದನು. ಈ ದಿನ ನಾವು ಇನ್ನೊಬ್ಬ ದೊಡ್ಡ ಪ್ರವಾದಿಯ ಕುರಿತಾಗಿ ಅಧ್ಯಯನ ಮಾಡುವದಕ್ಕೆ ಯೋಜನೆ ಮಾಡಿಕೊಂಡಿದ್ದೇವೆ – **ಅವನು ಪ್ರವಾದಿಯಾದ ಯೆರೆಮೀಯನು**.

ಪ್ರವಾದಿಯಾದ ಯೆಶಾಯನ ನಂತರ ಸುಮಾರು ನೂರು ವರ್ಷಗಳವರೆಗೆ ಯೆರೆಮೀಯನು ಜೀವಿಸಿದ್ದನು. ನಾವು ಈಗಾಗಲೇ ನೋಡಿಕೊಂಡಿರುವ ಹಾಗೆ, **ಇಸ್ರಾಯೇಲ್** ದೇಶವು ದೀರ್ಘಕಾಲದವರೆಗೆ ಏಕೀಕರಣಗೊಂಡ ದೇಶವಾಗಿರಲಿಲ್ಲ. ಇದು ಇಸ್ರಾಯೇಲ್ ಮತ್ತು ಯೆಹೂದ ಎಂಬುದಾಗಿ ಎರಡು ಭಾಗವಾಯಿತು. ಯೆರೆಮೀಯನ ದಿವಸಗಳಲ್ಲಿ, **ಯೆಹೂದ ಮಾತ್ರ ಉಳಿದುಕೊಂಡಿತ್ತು**. ಯೆಹೂದವು ದಕ್ಷಿಣದ ದೇಶವಾಗಿತ್ತು; ಸೊಲೊಮೋನನು ಕಟ್ಟಿಸಿದ್ದ ಆಲಯವು ಇದ್ದಂತಹ ಯೆರೂಸಲೇಮ್ ಇದರ ಮುಖ್ಯ ಪಟ್ಟಣ –ವಾಗಿತ್ತು. ನಾವು ಈಗಾಗಲೆ ಕಲಿತುಕೊಂಡ ಹಾಗೆ, ಈ ಯೆಹೂದವು, ಲೋಕಕ್ಕೆ ಮೆಸ್ಸೀಯನನ್ನು ಕಳುಹಿಸುತ್ತೇನೆ ಎಂದು ದೇವರು ವಾಗ್ದಾನ ಮಾಡಿದಂತಹ ಕುಲವಾಗಿತ್ತು.

ಯೆರೆಮೀಯನು ಒಬ್ಬ ಯೆಹೂದ್ಯನಾಗಿದ್ದನು. ಯೆರೂಸಲೇಮಿನಿಂದ ಕೇವಲ ಕೆಲವು ಕಿಲೋಮೀಟರ್ ದೂರದಲ್ಲಿದ್ದ ಒಂದು ಚಿಕ್ಕ ಊರಿನಲ್ಲಿ ಇವನು ಹುಟ್ಟಿದ್ದನು. ಯೆರೂಸಲೇಮಿನಲ್ಲಿರುವ ದೇವಾಲಯದಲ್ಲಿ ಯೆರೆಮೀಯನ ತಂದೆ ಒಬ್ಬ ಯಾಜಕನಾಗಿದ್ದನು. ಆ ಕಾಲದಲ್ಲಿ, ಯೆರೂಸಲೇಮಿನಲ್ಲಿರುವ ಹೆಚ್ಚಿನ ಯೆಹೂದ್ಯರು ತಮ್ಮ ಪೂರ್ವಿಕರ ಸಂಪ್ರದಾಯಗಳನ್ನು ಅನುಸರಿಸುತ್ತಾ ಇನ್ನೂ **ತುಂಬಾ ಧರ್ಮಶ್ರದ್ಧೆಯುಳ್ಳವರಾಗಿದ್ದರು**, ಆದರೆ **ಅವರು ದೇವರಾದ ಕರ್ತನ ವಾಕ್ಯಕ್ಕೆ ಗಮನ ಕೊಟ್ಟಿರಲಿಲ್ಲ**. ಹೀಗಿದ್ದರೂ, ಯೆರೆಮೀಯನು, ದೇವರ ವಾಕ್ಯವನ್ನು ಪ್ರೀತಿಸಿ ಅದಕ್ಕೆ ವಿಧೇಯನಾಗಿದ್ದ ಒಬ್ಬ ವ್ಯಕ್ತಿಯಾಗಿದ್ದನು; ದೇವರು ಲೋಕಕ್ಕೆ ಮೆಸ್ಸೀಯನನ್ನು ಕಳಿಸಿಕೊಡುವ ದಿನಕ್ಕಾಗಿ ಇವನು ಎದುರು ನೋಡುವವನಾಗಿದ್ದನು.

ಯೆರೆಮೀಯನನ್ನು ಒಬ್ಬ ಪ್ರವಾದಿಯನ್ನಾಗಿ ದೇವರು ಹೇಗೆ ಕರೆದನೆಂಬುದನ್ನು ಈಗ ಕೇಳಿಸಿಕೊಳ್ಳೋಣ. ಯೆರೆಮೀಯನ ಪುಸ್ತಕ ಒಂದನೇ ಅಧ್ಯಾಯದಲ್ಲಿ, ಯೆರೆಮೀಯನು ಹೀಗೆ ಬರೆಯುತ್ತಾನೆ:

ಯೆಹೋವನು ಈ ವಾಕ್ಯವನ್ನು ನನಗೆ ದಯಪಾಲಿಸಿದನು, **"ನಾನು ನಿನ್ನನ್ನು ಗರ್ಭದಲ್ಲಿ ರೂಪಿಸುವದಕ್ಕೆ ಮುಂಚೆ ನಿನ್ನನ್ನು ತಿಳಿದಿದ್ದೆನು; ನೀನು ಉದರದಿಂದ ಬರುವದಕ್ಕೆ ಮೊದಲೇ ನಿನ್ನನ್ನು ಪ್ರತಿಷ್ಠಿಸಿದ್ದೆನು; ಜನಾಂಗಗಳಿಗೆ ಪ್ರವಾದಿಯನ್ನಾಗಿ ನಿನ್ನನ್ನು ನೇಮಿಸಿದ್ದೇನೆ."** ಅದಕ್ಕೆ ನಾನು, "ಅಯ್ಯೋ, ಕರ್ತನಾದ ಯೆಹೋವನೇ, ನಾನು ಮಾತು ಬಲ್ಲವನಲ್ಲ, ಬಾಲಕನು" ಎಂದು ಬಿನ್ನವಿಸಿದೆನು. ಆಗ ಯೆಹೋನು ನನಗೆ, "ಬಾಲಕನೆನ್ನಬೇಡ; ಯಾರ ಬಳಿಗೆ ನಿನ್ನನ್ನು ಕಳಿಸುತ್ತೇನೋ ಅವರೆಲ್ಲರ ಬಳಿಗೆ ನೀನು ಹೋಗೇ ಹೋಗುವಿ; ನಾನು ಆಜ್ಞಾ –ಪಿಸುವದನ್ನೆಲ್ಲಾ ನುಡಿಯಲೇ ನುಡಿಯುವಿ. ಅವರಿಗೆ ಅಂಜಬೇಡ';

ನಿನ್ನನ್ನುದ್ಧರಿಸಸಲು ನಾನೇ ನಿನ್ನೊಂದಿಗಿರುವೆನು, ಇದು ಯೆಹೋ –ವನಾದ ನನ್ನ ಮಾತು" ಎಂದು ಹೇಳಿದನು. ಆಗ ಯೆಹೋವನು ಕೈಚಾಚಿ ನನ್ನ ಬಾಯನ್ನು ಮುಟ್ಟಿ, "ಇಗೋ, ನಿನ್ನ ಬಾಯಲ್ಲಿ ನನ್ನ ಮಾತುಗಳನ್ನು ಇಟ್ಟಿದ್ದೇನೆ; ಕಿತ್ತುಹಾಕುವದು, ಕೆಡುವುವದು, ನಾಶಪಡಿಸುವದು, ಹಾಳು ಮಾಡುವದು, ಕಟ್ಟುವದು, ನೆಡುವದು, ಈ ಕಾರ್ಯಗಳನ್ನು ಮಾಡುವದಕ್ಕೋಸ್ಕರ ಜನಾಂಗಗಳ ಮೇಲೂ ರಾಜ್ಯಗಳ ಮೇಲೂ ನಿನ್ನನ್ನು ಈ ದಿನ ನೇಮಿಸಿದ್ದೇನೆ" ಅಂದನು. (ಯೆರೆ–1:4–10)

ಈಪ್ರಕಾರ ದೇವರು ಯೆರೆಮೀಯನನ್ನು ತನ್ನ ಪ್ರವಾದಿಯಾಗುವದಕ್ಕೆ ಕರೆದನು. ಅವನು ಜೊತೆ ಯೆಹೂದ್ಯರ ಬಳಿಗೆ ಹೋಗಿ, ಅವರು
ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಡದೇ, ಕರ್ತನ ಕಡೆಗೂ ಮತ್ತು ಆತನ ಪರಿಶುದ್ಧ ವಾಕ್ಯದ ಕಡೆಗೂ ತಿರುಗಿಕೊಳ್ಳದಿದ್ದರೆ ದೇವರು ಅವರಿಗೆ ನ್ಯಾಯತೀರಿಸುವನೆಂಬುದನ್ನು ಅವರಿಗೆ ತಿಳಿಸುವದಕ್ಕೆ ದೇವರು ಅವನನ್ನು ನೇಮಿಸಿದನು. ಯೆರೆಮೀಯನ ಕೆಲಸವು ಕಠಿಣ –ವಾದುದು ಮತ್ತು ಕಷ್ಟಕರವಾದುದು ಆಗಿತ್ತು, ಯಾಕೆಂದರೆ **ಅವರ ಧಾರ್ಮಿಕ ಕಾರ್ಯಗಳು ದೇವರನ್ನು ಮೆಚ್ಚಿಸುವದಿಲ್ಲ ಎಂದು ಯಾರೊಬ್ಬರೂ ಅವರಿಗೆ ಹೇಳುವದನ್ನು ಯೆಹೂದ್ಯರು ಇಷ್ಟಪಡುತ್ತಿರಲಿಲ್ಲ**. ಹೇಗಿದ್ದರೂ, ಪ್ರವಾದಿಯಾದ ಯೆರೆಮೀಯನು ಮನುಷ್ಯ –ರನ್ನು ಮೆಚ್ಚಿಸುವವನಾಗಿರಲಿಲ್ಲ. ಹಾಗಾಗಿ, ಇಪ್ಪತ್ನಾಲ್ಕು ವರ್ಷಗಳವರೆಗೆ ಯೆರೆಮೀಯನು ಯೆರೂಸಲೇಮಿನಲ್ಲಿ ಯೆಹೂದ ದೇಶ –
–ದುದ್ದಕ್ಕೂ ಪ್ರಸಂಗಿಸುತ್ತಾ, ಹೀಗೆ ಹೇಳಿದನು: "ನೀವು ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಕರ್ತನ ವಾಕ್ಯಕ್ಕೆ ವಿಧೇಯರಾಗದಿದ್ದರೆ, ಬ್ಯಾಬಿಲೋನ್ ದೇಶದ ಸೈನ್ಯದವರು ಬಂದು ಯೆರೂಸಲೇಮನ್ನು ಮುತ್ತಿ, ಪಟ್ಟಣವನ್ನೂ ಮತ್ತು ದೇವಾಲಯವನ್ನೂ ಸುಟ್ಟು ನಾಶ –
–ಪಡಿಸುತ್ತಾರೆ! ಮತ್ತು ಅವರು ನಿಮ್ಮನ್ನು ದೂರದೇಶಕ್ಕೆ ಸೆರೆಯಾಳುಗಳನ್ನಾಗಿ ತೆಗೆದುಕೊಂಡು ಹೋಗುವದಕ್ಕೆ ದೇವರು ಅವರಿಗೆ ಅಪ್ಪಣೆ ಕೊಡುತ್ತಾನೆ ಎಂಬುದಾಗಿ ನಾನು ನಿಮಗೆ ಎಚ್ಚರಿಕೆ ಕೊಡುವಂತೆ ದೇವರು ಇಚ್ಛಿಸಿದ್ದಾನೆ." ಯೆಹೂದದಲ್ಲಿ ವಾಸವಾಗಿದ್ದ ಯೆಹೂದ್ಯರಿಗೆ ಯೆರೆಮೀಯನು ತಿಳಿಸಿದ ಸಂದೇಶ ಇದಾಗಿತ್ತು.

ಯೆರೆಮೀಯನು ತನ್ನ ಜೊತೆ ಯೆಹೂದ್ಯರನ್ನು ಎಚ್ಚರಿಸಿರುವದನ್ನು ಯೆರೆಮೀಯನ ಬರವಣಿಗೆಗಳಿಂದ ಕೆಲವು ಪರಿಚ್ಛೇದಗಳನ್ನು ಓದಿಕೊಳ್ಳೋಣ. ಯೆರೆಮೀಯನ ಪುಸ್ತಕದಲ್ಲಿನ ಏಳನೆಯ ಅಧ್ಯಾಯವನ್ನು ನಾವು ಓದುತ್ತಿದ್ದೇವೆ:

ಯೆಹೋವನು ಯೆರೆಮೀಯನಿಗೆ ಈ ಮಾತನ್ನು ದಯಪಾಲಿಸಿದನು, **"ನೀನು ಯೆಹೋವನ ಆಲಯದ ಬಾಗಿಲಿನಲ್ಲಿ ನಿಂತು ಈ ವಾಕ್ಯ –ವನ್ನು ಅಲ್ಲಿ ಸಾರು,** ಯೆಹೋವನಿಗೆ ಅಡ್ಡಬೀಳುವದಕ್ಕೆ ಪ್ರವೇಶಿಸುವ ಸಕಲ ಯೆಹೂದ್ಯರೇ, ಯೆಹೋವನ ನುಡಿಯನ್ನು ಕೇಳಿರಿ. ಇಸ್ರಾಯೇಲಿನ ದೇವರೂ ಸೇನಾಧೀಶ್ವರನೂ ಆದ ಯೆಹೋವನು ಹೀಗನ್ನುತ್ತಾನೆ, ನೀವು ನಿಮ್ಮ ನಡತೆಯನ್ನೂ, ಕೃತ್ಯಗಳನ್ನೂ ತಿದ್ದಿ –ಕೊಳ್ಳಿರಿ; ಹೀಗೆ ಮಾಡಿದರೆ ನಾನು ನಿಮ್ಮನ್ನು ಈ ಸ್ಥಳದಲ್ಲಿ ನೆಲೆಗೊಳಿಸುವೆನು. ಈ ಕಟ್ಟಡಗಳೇ ಯೆಹೋವನ ಆಲಯ, ಯೆಹೋ ––ವನ ಆಲಯ, ಯೆಹೋವನ ಆಲಯ ಎಂಬುವ ಸುಳ್ಳು ಮಾತುಗಳ ಮೇಲೆ ಭರವಸವಿಡಬೇಡಿರಿ. ನೀವು ನಿಮ್ಮ ನಡತೆಯನ್ನೂ ಕೃತ್ಯಗಳನ್ನೂ ಸಂಪೂರ್ಣವಾಗಿ ತಿದ್ದಿಕೊಂಡು ಕಕ್ಷಿಪ್ರತಿಕಕ್ಷಿಗಳಿಗೆ ಕೇವಲ ನ್ಯಾಯವನ್ನೇ ತೀರಿಸಿ ಪರದೇಶಿಯನ್ನಾಗಲಿ ಅನಾಥನನ್ನಾಗಲೀ ವಿಧವೆಯನ್ನಾಗಲೀ ಹಿಂಸಿಸದೆ ಈ ಸ್ಥಳದಲ್ಲಿ ನಿರ್ದೋಷಿಗಳ ರಕ್ತವನ್ನು ಸುರಿಸದೆ ನಿಮಗೆ ಹಾನಿಕರವಾದ ಅನ್ಯದೇವತಾಭಕ್ತಿಯನ್ನು ಮಾಡದೆ ಇದ್ದರೆ ನಾನು ನಿಮ್ಮನ್ನು ಈ ಸ್ಥಳದಲ್ಲಿ ನಾನೇ ನಿಮ್ಮ ಪಿತೃಗಳಿಗೆ ಶಾಶ್ವತವಾಗಿ ದಯಪಾಲಿಸಿದ ಈ ದೇಶದಲ್ಲಿ ನೆಲೆಗೊಳಿಸು –ವೆನು. ಆಹಾ, ನೀವು ನಿಷ್ಪ್ರಯೋಜನವಾದ ಸುಳ್ಳುಮಾತುಗಳಲ್ಲಿ ಭರವಸವಿಟ್ಟಿದ್ದೀರಿ. ನೀವು ಕಳುವು ಕೊಲೆ ಹಾದರಗಳನ್ನು ಮಾಡಿ ಸುಳ್ಳುಸಾಕ್ಷಿ ಹೇಳಿ ಬಾಳನಿಗೆ ಹೋಮವನ್ನರ್ಪಿಸಿ ಕಂಡುಕೇಳದ ಅನ್ಯದೇವತೆಗಳನ್ನು ಹಿಂಬಾಲಿಸಿದ ಮೇಲೆ ನನ್ನ ಹೆಸರುಗೊಂಡಿರುವ ಈ ಆಲಯಕ್ಕೆ ಬಂದು ನನ್ನ ಸನ್ನಿಧಿಯಲ್ಲಿ ನಿಂತು ನಮಗೆ ಪರಿಹಾರವಾಯಿತು ಎಂದು ಹೇಳಿ ಈ ಎಲ್ಲಾ ಅಸಹ್ಯ ಕಾರ್ಯಗಳನ್ನು ಇನ್ನೂ ನಡಿಸುವದಕ್ಕೆ ಅವಕಾಶ ಮಾಡಿಕೊಳ್ಳುವಿರೋ?" (ಯೆರೆ–7:1–10)

ಈ ಪ್ರಕಾರ ಯೆರೆಮೀಯನು, **ದೇವರನ್ನು ಅರಿತಿದ್ದೇವೆಂದು ಸೋಗುಹಾಕಿ** ತಮ್ಮ ಕ್ರಿಯೆಗಳಿಂದ ಅಲ್ಲಗಳೆಯುತ್ತಿದ್ದ ಯೆಹೂದ್ಯರನ್ನು ಗದರಿಸಿದನು, ಯೆರೆಮೀಯನು ಇನ್ನೂ ಕೂಡಿಸಿ ಹೇಳಿರುವದೇನೆಂದರೆ:

ಯೆಹೋವನು ಹೀಗನ್ನುತ್ತಾನೆ, "ಮಾನವಮಾತ್ರದವರಲ್ಲಿ ಭರವಸವಿಟ್ಟು ನರಜನ್ಮದವರನ್ನು ತನ್ನ ಭುಜಬಲವೆಂದು ತಿಳಿದು ಯೆಹೋವ –ನನ್ನು ತೊರೆಯುವ ಮನಸ್ಸುಳ್ಳವನು ಶಾಪಗ್ರಸ್ತನು. **ಹೃದಯವು ಎಲ್ಲಕ್ಕಿಂತಲೂ ವಂಚಕ; ಗುಣವಾಗದ ರೋಗಕ್ಕೆ ಒಳಗಾಗಿದೆ**; ಅದನ್ನು ಯಾರು ತಿಳಿದಾರು? ಯೆಹೋವನಾದ ನಾನು ಪ್ರತಿಯೊಬ್ಬನಿಗೂ ಕರ್ಮಫಲವನ್ನು ಅವನವನ ನಡತೆಗೆ

ತಕ್ಕ ಹಾಗೆ ಕೊಡಬೇಕೆಂದು ಹೃದಯವನ್ನು ಪರೀಕ್ಷಿಸುವವನೂ ಅಂತರಿಂದ್ರಿಯವನ್ನು ಶೋಧಿಸುವವನೂ ಆಗಿದ್ದೇನೆ." (ಯೆರೆ–17:5, 9–10)

ಹೀಗೆ ಯೆರೆಮೀಯನು ಯೆಹೂದದ ಜನರನ್ನು ಎಚ್ಚರಿಸಿದನು, ಅವನು ಅವರಿಗೆ: "ನೀವು ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ, ಬ್ಯಾಬಿಲೋನಿನ ಸೈನ್ಯದವರು ಯೆರೂಸಲೇಮ್ ಪಟ್ಟಣವನ್ನೂ ಮತ್ತು ಆಲಯವನ್ನೂ ನಾಶಪಡಿಸು –ತ್ತಾರೆ ಮತ್ತು ನೀವು ಅವರ ಗುಲಾಮರಾಗುತ್ತಿರಿ!" ಎಂದು ತಿಳಿಸಿದನು.

ಇದರ ಕುರಿತು ನೀವು ಏನು ಆಲೋಚಿಸುತ್ತೀರಿ? ದೇವರು ಯೆರೆಮೀಯನ ಮೂಲಕವಾಗಿ ಅವರಿಗೆ ಹೇಳಿದಂತಹ ಮಾತಿಗೆ ಯೆಹೂದದ ಜನರು ಗಮನಕೊಟ್ಟು ಗೌರವಿಸಿದರೆಂದು ನೀವು ಅಂದುಕೊಳ್ಳುತ್ತೀರೋ? **ಅವರಲ್ಲಿ ಅನೇಕರು ಈ ಎಚ್ಚರಿಕೆಗೆ ಗಮನ ಕೊಡಲಿಲ್ಲ!** ಯಾಜಕರುಗಳೂ ಸಹ ಯೆರೆಮೀಯನ ಮಾತುಗಳನ್ನು ನಂಬಲಿಲ್ಲ. ನಿಜ ಹೇಳಬೇಕೆಂದರೆ, ಅವನು ಹೇಳಿದ್ದನ್ನು ಯಾಜಕರುಗಳು ಕೇಳಿದಾಗ, ಅವರು ಅವನನ್ನು ಸೆರೆಹಿಡಿದು, ಚಾಟಿಯಿಂದ ಹೊಡೆಸಿ ಒಂದು ದಿನದ ಮಟ್ಟಿಗೆ ಅವನ ಕಾಲುಗಳಿಗೆ ಕೋಳ ತೊಡಿಸಿದರು. ತಮ್ಮ ಶತೃಗಳಾದ ಬಾಬೆಲಿನವರು ಯೆರೂಸಲೇಮನ್ನು ಮುತ್ತಿಗೆ ಹಾಕಿ ಪಟ್ಟಣವನ್ನು ಮತ್ತು ಸೊಲೊ –ಮೋನನು ಕಟ್ಟಿದ ಆಲಯವನ್ನು ನಾಶಗೊಳಿಸುವದಕ್ಕೆ ದೇವರು ಅಪ್ಪಣೆ ಕೊಡುತ್ತಾನೆ ಎನ್ನುವದನ್ನು ಯಾಜಕರುಗಳು ನಂಬುವದು ಸಾಧ್ಯವಿರಲಿಲ್ಲ. ಅವರ ಅನಿಸಿಕೆಯಲ್ಲಿ, ಇದು ಎಂದಿಗೂ ಸಂಭವಿಸುವದಿಲ್ಲ! ಅವರು ಯೆರೆಮೀಯನ ಮೇಲೆ ಕೋಪಗೊಂಡಿದ್ದರು ಯಾಕೆಂದರೆ ಯೆರೆಮೀಯನು ಯೆರೂಸಲೇಮಿನ ನಾಶನವನ್ನು ಮುಂದಾಗಿ ತಿಳಿಸಿದ್ದನು ಮತ್ತು ದೇವರ ಮಾತುಗಳನ್ನು ಒಂದು ಪುಸ್ತಕದಲ್ಲಿ ಬರೆದಿದ್ದನು.

ದೇವರ ಪ್ರವಾದಿಯಾಗಿದ್ದ ಯೆರೆಮೀಯನ ಮಾತುಗಳನ್ನು ಒಪ್ಪಿಕೊಳ್ಳುವದಕ್ಕೆ ಯಾಜಕರುಗಳು ಮತ್ತು ಜನರು ಮಾತ್ರ ತಿರಸ್ಕರಿಸಲಿಲ್ಲ. ಯೆಹೂದದ ಅರಸನು ಸಹ ಅವುಗಳನ್ನು ತಿರಸ್ಕರಿಸಿದನು. ನಿಜ ಹೇಳಬೇಕೆಂದರೆ, ಯೆರೆಮೀಯನು ಬರೆದಿದ್ದ ಪುಸ್ತಕವನ್ನು ಅರಸನು
ಓದಿದಾಗ, ಅವನು ಒಂದು ಕತ್ತಿಯಿಂದ **ಆ ಪುಸ್ತಕವನ್ನು ಕತ್ತರಿಸಿ** ಅಂಗಳದಲ್ಲಿದ್ದ ಬೆಂಕಿಯ ಕುಂಡದೊಳಕ್ಕೆ ಅದನ್ನು ಎಸೆದನು ಅದು ಸಂಪೂರ್ಣವಾಗಿ ಸುಟ್ಟು ಹೋಯಿತು! ಈ ರೀತಿಯಾಗಿ ಯೆಹೂದದ ಅರಸನು ಮಾಡಿದನು. ಅವನು ತನ್ನ ಪಾಪಕ್ಕಾಗಿ ಪಶ್ಚಾತ್ತಾಪ –ಪಡಲಿಲ್ಲ, ಮತ್ತು ಕರ್ತನ ವಾಕ್ಯವನ್ನು ಅವನು ಅಂಗೀಕರಿಸಲಿಲ್ಲ. ಹೌದು, ಅರಸನು ಯೆರೆಮೀಯನ ಪುಸ್ತಕವನ್ನು ಸುಟ್ಟು ಹಾಕಿ –ದನು, **ಆದರೆ ಅವನು ದೇವರ ನಿಯಮವನ್ನು ಬದಲಾಯಿಸುವದಕ್ಕಾಗಲಿಲ್ಲ**. ಯೆರೆಮೀಯನು ಇನ್ನೊಂದು ಪುಸ್ತಕದಲ್ಲಿ ಅದೆಲ್ಲವನ್ನೂ ಬರೆಯುವಂತೆ ದೇವರು ಸರಳವಾಗಿ ಅವನನ್ನು ನಿರ್ದೇಶಿಸಿದನು.

ನೀವು ಯೆರೆಮೀಯನ ಪುಸ್ತಕವನ್ನು ಅಧ್ಯಯನ ಮಾಡಿದರೆ, **ಯೆಹೂದದ ಅರಸನು, ಯಾಜಕರುಗಳು ಮತ್ತು ಜನರು ಯೆರೆಮೀಯ ನನ್ನು** ಅಗಾಗ್ಗೆ ಸೆರೆಯಲ್ಲಿ ಹಾಕಿ **ಎಷ್ಟೊಂದು ಹಿಂಸಿಸಿದರೆಂಬುದನ್ನು** ನೀವು ನೋಡುತ್ತೀರಿ. ಒಂದು ಸಲ ಅವರು ಯೆರೆಮೀಯನನ್ನು ಒಂದು ಆಳವಾದ ಕೆಸರಿನ ಗುಂಡಿಯೊಳಕ್ಕೆ ಹಾಕಿದರು. ಆದರೆ ದೇವರು ಅವನ' ರಕ್ಷಣೆಗೆ ಬಂದನು, ಆಫ್ರಿಕಾ ದೇಶದ ಒಬ್ಬ ಮನುಷ್ಯ –ನನ್ನು ದೇವರು ಅವನ ಬಳಿಗೆ ಕಳಿಸಿದನು, ಅವನು ಯೆರೆಮೀಯನನ್ನು ಆ ಗುಂಡಿಯೊಳಗಿಂದ ಮೇಲಕ್ಕೆತ್ತಿದನು.

ಆಲೋಚಿಸುವದಕ್ಕೆ ಸ್ವಲ್ಪ ಪ್ರಾಮುಖ್ಯವಾದುದೇನೆಂದರೆ, ಯೆಹೂದ್ಯರಲ್ಲಿ ಹೆಚ್ಚಿನವರು ಪ್ರವಾದಿಯಾದ ಯೆರೆಮೀಯನ ಮಾತುಗಳನ್ನು **ಕೇಳಿಸಿಕೊಳ್ಳುವದಕ್ಕೆ ತಿರಸ್ಕರಿಸಿದಾಗ್ಯೂ,** ಅವರು ಯಾರಿಗೂ ಕಿವಿಗೊಡುತ್ತಿರಲಿಲ್ಲ ಎಂದು ಇದರ ಅರ್ಥವಲ್ಲ! ಯಾರು ತಮ್ಮನ್ನು ತಾವೇ ಪ್ರವಾದಿಗಳೆಂದು ಕರೆದುಕೊಳ್ಳುತ್ತಿದ್ದರೋ ಅಂತವರ ಮಾತುಗಳನ್ನು **ಅವರು ಕೇಳುತ್ತಿದ್ದರು,** ಆದರೆ ಅವರು **ಸುಳ್ಳು ಪ್ರವಾದಿಗಳಾಗಿದ್ದರು!** ಅನೇಕ'ರು ತಮ್ಮನ್ನು ತಾವೇ ದೇವರ ಪ್ರವಾದಿಗಳನ್ನಾಗಿ ಮಾಡಿಕೊಂಡಿದ್ದರೆಂದು ವಾಕ್ಯಗಳು ನಮಗೆ ತಿಳಿಸುತ್ತವೆ, ಆದರೆ **ಅವರ ಸಂದೇಶಗಳು ದೇವರಿಂದ ಬಂದವುಗಳಾಗಿರುತ್ತಿರಲಿಲ್ಲ,** ಈ ಕಾರಣದಿಂದ ಅವರು ವಾಸ್ತವಿಕವಾಗಿ ಕಪಟಿಗಳು ಮತ್ತು ಮೋಸಗಾರರು ಆಗಿದ್ದರು. ಇದರ ಪರಿಣಾಮವಾಗಿ, ಯೆರೂಸಲೇಮಿನ ಮೇಲೆ ಬೀಳಲಿಕ್ಕಿದ್ದ ದೇವರ ನ್ಯಾಯತೀರ್ಪಿನ ವಿಷಯವನ್ನು ಯೆರೆಮೀ –ಯನು ಸಾರಿದ ವೇಳೆಯಲ್ಲಿ, ಸುಳ್ಳು ಪ್ರವಾದಿಗಳು ಯೆಹೂದದ ಜನರೊಂದಿಗೆ ಮಾತಾಡುತ್ತಾ, "ಇಲ್ಲ, ಇಲ್ಲ! ಯೆರೆಮೀಯನು ಪ್ರವಾದಿಸುತ್ತಿರುವ ನಾಶನವು ಸಂಭವಿಸುವದಿಲ್ಲ! ಬಾಬೆಲಿನವರು ಯೆರೂಸಲೇಮನ್ನು ನಾಶಗೊಳಿಸುವದಿಲ್ಲ! ದೇವರ ಆಲಯವನ್ನು ಯಾರೂ ನಾಶಮಾಡುವದಕ್ಕಾಗುವದಿಲ್ಲ! ನೀವು ನಾಶನವನ್ನು ನೋಡುವದಿಲ್ಲ! ನೀವು ಸಮಾಧಾನವನ್ನು ಮಾತ್ರ ಹೊಂದಿರುತ್ತೀರಿ! ಸಮಾಧಾನವಲ್ಲದೆ ಬೇರೊಂದಿರುವದಿಲ್ಲ!" ಎಂದು ಹೇಳಿದರು. {ಟಿಪ್ಪಣಿ: ಊಲೂಫ್ ಸಂಸ್ಕೃತಿಯಲ್ಲಿ, ಪ್ರತಿಯೊಂದು "ಸಮಾಧಾನ" ವಾಗಿದೆ.

"ನೀವು ಹೇಗಿದ್ದೀರಿ?" ಎಂದು ಕೇಳುವದಕ್ಕೆ ಅವರ ಉತ್ತರದ ನಿರ್ಧಿಷ್ಟ ಮಾನವೆಂದರೆ ಅದು, "ಸಮಾಧಾನವಲ್ಲದೆ ಬೇರೊಂದಲ್ಲ"}

ಆದರೆ ಯೆರೆಮೀಯನು ಎಲ್ಲಾ ಯೆಹೂದ್ಯರಿಗೆ ಮಾತಾಡುತ್ತಾ ಹೀಗೆ ಹೇಳುತ್ತಾನೆ:

ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ, **"ನಿಮಗೆ ಪ್ರವಾದಿಸುವ ಪ್ರವಾದಿಗಳ ಮಾತುಗಳನ್ನು ಕೇಳಬೇಡಿರಿ; ನಿಮ್ಮಲ್ಲಿ ವ್ಯರ್ಥ ನಿರೀಕ್ಷೆಯನ್ನು ಹುಟ್ಟಿಸುತ್ತಾರೆ;** ಯೆಹೋವನ ಬಾಯಿಂದ ಹೊರಟಿದ್ದನ್ನು ನುಡಿಯದೆ ಸ್ವಂತ ಹೃದಯಕ್ಕೆ ಹೊಳೆದದ್ದನ್ನೇ ಹೇಳುತ್ತಾರೆ. **ನಾನು ಈ ಪ್ರವಾದಿಗಳನ್ನು ಕಳುಹಿಸಲಿಲ್ಲ, ತಾವೇ ಆತುರಗೊಂಡರು; ನಾನು ಇವರಿಗೆ ಏನೂ ಹೇಳಲಿಲ್ಲ, ತಾವೇ ಪ್ರವಾದಿಸಿದರು.** ಇವರು ನನ್ನ ಆಲೋಚನಾಸಭೆಯಲ್ಲಿ ನಿಂತಿದ್ದರೆ ನನ್ನ ಮಾತುಗಳನ್ನು ನನ್ನ ಜನರ ಕಿವಿಗೆ ಮುಟ್ಟಿಸಿ ಅವರನ್ನು ಅವರ ದುರ್ಮಾರ್ಗದಿಂದಲೂ ದುಷ್ಕೃತ್ಯಗಳಿಂದಲೂ ತಪ್ಪಿಸುತ್ತಿದ್ದರು!" (ಯೆರೆ–23:16, 21,22).

ಈ ಪ್ರಕಾರ ಯೆರೆಮೀಯನು ಅಸತ್ಯವನ್ನು ಬೋಧಿಸುವವರ ಮಾತುಗಳ ವಿಷಯದಲ್ಲಿ ಎಚ್ಚರದಿಂದಿರುವಂತೆ ಯೆಹೂದ್ಯರಿಗೆ ಎಚ್ಚರಿಕೆ ಕೊಟ್ಟನು. ಹೇಗಿದ್ದರೂ, ದುರದೃಷ್ಟವಶಾತ್, ಯೆಹೂದದ ಹೆಚ್ಚಿನ ಜನರು ದೇವರ ಪ್ರವಾದಿಯಾದ ಯೆರೆಮೀಯನ ಎಚ್ಚರಿಕೆಯನ್ನು ಗಮನಿಸಲಿಲ್ಲ. ಬದಲಾಗಿ **ಅವರು ಸುಳ್ಳು ಪ್ರವಾದಿಗಳ ಮಾತುಗಳನ್ನು ನಂಬಿದರು.** ಅದೂ ಅಲ್ಲದೆ, ಕೊನೆಯಲ್ಲಿ, **ತುಂಬಾ ತಡವಾದ ನಂತರ,** ಅರಸನು, ಯಾಜಕರುಗಳು, ಜನರು ಮತ್ತು ಸುಳ್ಳು ಪ್ರವಾದಿಗಳು **ದೇವರ ನಿಜವಾದ ಮಾತುಗಳನ್ನು** ಸಾರಿದವರು ಯಾರು ಎನ್ನುವದನ್ನು ತಿಳುಕೊಂಡರು! ಯೆರೂಸಲೇಮಿನ ನಾಶ'ನಕ್ಕೆ ಸಂಬಂಧಿಸಿದಂತೆ ಯೆರೆಮೀಯನು ಹೇಳಿದ' ಪ್ರತಿಯೊಂದೂ ನೆರವೇ'ರಿ –ದ್ದರಿಂದ ಅವರು ಇದನ್ನು ತಿಳುಕೊಳ್ಳುವದಕ್ಕಾಯಿತು. ದೇವರ ಮಾತುಗಳು ಯಾವಾಗಲೂ ನಿಜವಾಗಿಯೇ ಬರುತ್ತವೆ.

ವಾಕ್ಯ ಏನು ಹೇಳುತ್ತದೆಂಬುದನ್ನು ಆಲಿಸಿರಿ:

ಬಾಬೆಲಿನ ಅರಸನಾದ **ನೆಬೂಕದ್ನೆಚ್ಚರನು,** ಚಿದ್ಕೀಯನ[ಯೆಹೂದದ ಅರಸ] ಆಳಿಕೆಯ ಒಂಭತ್ತನೆಯ ವರುಷ ಹತ್ತನೆಯ ತಿಂಗಳಿನ ಹತ್ತನೆಯ ದಿನದಲ್ಲಿ ಸರ್ವಸೈನ್ಯ ಸಹಿತನಾಗಿ ಯೆರೂಸಲೇಮಿಗೆ ಬಂದು ಅಲ್ಲಿ ಪಾಳೆಯ ಮಾಡಿಕೊಂಡು ಅದರ ಸುತ್ತಲು ಮಣ್ಣಿನ ದಿಬ್ಬವನ್ನು ಮಾಡಿ ಚಿದ್ಕೀಯನ ಆಳಿಕೆಯ ಹನ್ನೊಂದನೆಯ ವರುಷದವರೆಗೆ ಅದಕ್ಕೆ ಮುತ್ತಿಗೆ ಹಾಕಿದನು. ಘೋರಕ್ಷಾಮದ ದೆಸೆಯಿಂದ ಪಟ್ಟಣದಲ್ಲಿರುವವರಿಗೆ ಆಹಾರ ಸಿಕ್ಕದೆ ಹೋಯಿತು. ಪಟ್ಟಣಕ್ಕೆ ಮುತ್ತಿಗೆ ಹಾಕಿದ್ದ ಕಸ್ದೀಯರು ಹನ್ನೊಂದನೆಯ ವರುಷದ ನಾಲ್ಕನೆಯ ತಿಂಗಳಿನ ಒಂಭತ್ತನೆಯ ದಿವಸ **ಪೌಳಿಗೋಡೆಯಲ್ಲಿ ಒಂದು ದ್ವಾರವನ್ನು ಮಾಡಿದ್ದರಿಂದ** ಒಳಗಿದ್ದ ಎಲ್ಲಾ ಸೈನಿಕರು ಅದೇ ರಾತ್ರಿ ಅರ –ಸನ ತೋಟದ ಬಳಿಯಲ್ಲಿರುವ ಬಾಗಿಲಿನ ಮೂಲಕ ಪಟ್ಟಣದೊಳಗಿಂದ ಹೊರಟು ಓಡಿಹೋಗಿ ಯೆಹೂದದ ಅರಸನನ್ನು ಸೆರೆ ಹಿಡಿ –ದರು. ಅನಂತರ ಕಸ್ದೀಯರು ಅವನನ್ನು ಹಮಾತ್ ಪ್ರದೇಶದ ರಿಬ್ಲದಲ್ಲಿದ್ದ ತಮ್ಮ ಅರಸನ ಬಳಿಗೆ ತೆಗೆದುಕೊಂಡು ಬರಲು ಆ ಅರಸ'ನು ಅವನಿಗೆ ಶಿಕ್ಷೆಯನ್ನು ವಿಧಿಸಿ ಅವನ ಮಕ್ಕಳನ್ನು ಅವನ ಎದುರಿನಲ್ಲಿಯೇ ವಧಿಸಿ ಯೆಹೂದದ ಸಕಲ ಸರದಾರರನ್ನು ರಿಬ್ಲ –ದಲ್ಲಿ ಕೊಲ್ಲಿಸಿದನು. ಇದಲ್ಲದೆ ಬಾಬೆಲಿನ ಅರಸನು ಚಿದ್ಕೀಯನ ಎರಡು ಕಣ್ಣುಗಳನ್ನು ಕಿತ್ತು ಅವನಿಗೆ ಬೇಡಿ ಹಾಕಿ ಬಾಬೆಲಿಗೆ ತೆಗೆದು ಕೊಂಡು ಹೋಗಿ ಅವನು ಜೀವದಿಂದಿರುವವರೆಗೆ ಸೆರೆಯಲ್ಲಿ ಇಟ್ಟನು. ಯೆಹೋವನ ಆಲಯವನ್ನೂ ಅರಮನೆಯನ್ನೂ ಯೆರೂಸ– –ಲೇಮಿನ ಎಲ್ಲಾ ದೊಡ್ಡ ಮನೆಗಳನ್ನೂ ಸುಟ್ಟುಬಿಟ್ಟನು. ಅವನ ಜೊತೆಯಲ್ಲಿ ಬಂದಿದ್ದ ಕಸ್ದೀಯ ಸೈನ್ಯದವರು ಯೆರೂಸಲೇಮಿನ ಸುತ್ತು ಗೋಡೆಗಳನ್ನೆಲ್ಲಾ ಕೆಡವಿದರು. ಕಾವಲು ದಂಡಿನ ಅಧಿಪತಿಯಾದ ನೆಬೂಜರದಾನನು ಕೇವಲ ದರಿದ್ರರಲ್ಲಿ ಅನೇಕರನ್ನೂ ಪಟ್ಟಣದಲ್ಲಿ ಉಳಿದವರನ್ನೂ ಮೊದಲೇ ಬಾಬೆಲಿನ ಅರಸನ ಮರೆಹೊಕ್ಕವರನ್ನೂ ಬೇರೆ ಎಲ್ಲಾ ಜನರನ್ನೂ ಸೆರೆಯೊಯ್ದನು. ಹೊಲ ಗಳನ್ನೂ ದ್ರಾಕ್ಷೆಯ ತೋಟಗಳನ್ನೂ ವ್ಯವಸಾಯ ಮಾಡುವದಕ್ಕಾಗಿ ದೇಶದ ಜನರಲ್ಲಿ ಕೇವಲ ದರಿದ್ರರನ್ನು ಮಾತ್ರ ಬಿಟ್ಟುಹೋದನು. **ಹೀಗೆ ಯೆಹೂದ್ಯರು ಸೆರೆಯವರಾಗಿ ತಮ್ಮ ದೇಶವನ್ನು ಬಿಟ್ಟು ಹೋಗಬೇಕಾಯಿತು!** (ಯೆರೆ–52:4–16, 27)

ಹೀಗೆ ದೇವರು ತನ್ನ ಪ್ರವಾದಿಯಾದ ಯೆರೆಮೀಯನ ಬಾಯಿಂದ ನುಡಿಸಿದ ಪ್ರವಾದನೆಯ ಮಾತುಗಳು **ಪ್ರತಿಯೊಂದನ್ನೂ ಆತನು ಹೇಗೆ ನೆರವೇರಿಸಿದನೆಂಬುದನ್ನು** ನಾವು ನೋಡುತ್ತೇವೆ. ಯೆರೆಮೀಯನ ಮಾತುಗಳು **ಸತ್ಯದ ಮಾತುಗಳಾಗಿದ್ದವೆಂಬುದನ್ನು** ಯೆಹೂದ್ಯ –ರೆಲ್ಲರೂ ತಿಳಿದುಕೊಂಡರು. ಏನೇ ಆದರೂ, ಈ ತಿಳುವಳಿಕೆಯು ಅವರಿಗೆ ಸ್ವಲ್ಪ ಒಳಿತು ಮಾಡಿತ್ತು, ಯಾಕೆಂದರೆ ಈಗ ಅವರು ಬಾಬೆಲಿನ ಸೈನಿಕರ ಕೈಗಳಲ್ಲಿ ಸೆರೆಯಾಳುಗಳಾಗಿದ್ದರು!

ಈದಿನ ನಾವು ನಮ್ಮ ಪಾಠವನ್ನು ಮುಕ್ತಾಯ ಮಾಡುವದು ಹೇಗೆ? ಬಹುಮಟ್ಟಿಗೆ ಈ ಆಲೋಚನೆಯೊಂದಿಗೆ ನಾವು ಇದನ್ನು ಮುಗಿ –ಸಬಹದು: ನ್ಯಾಯತೀರ್ಪಿನ ದಿನದಂದು, ಆದಾಮನ ಪ್ರತಿ ಸಂತಾನದವರೂ ಕೊನೆಯಲ್ಲಿ ಸತ್ಯ ಯಾವುದು ಮತ್ತು ಸುಳ್ಳು ಯಾವುದು ಎನ್ನುವದನ್ನು ತಿಳಿದುಕೊಳ್ಳುತ್ತಾರೆ. ಹೇಗಿದ್ದರೂ, ಯಾವುದು ಸತ್ಯ ಮತ್ತು ಯಾವುದು ಸುಳ್ಳು ಎನ್ನುವದನ್ನು ಈಗ ನೀವು ಗ್ರಹಿಸಿಕೊಳ್ಳುವಂತೆ ದೇವರು ಇಚ್ಛಿಸುತ್ತಾನೆ, ಯಾಕೆಂದರೆ **ಭೂಮಿಯ ಮೇಲಿನ ನಿಮ್ಮ ಜೀವಿತ ಕಾಲದ ವೇಳೆಯಲ್ಲಿ ನೀವು ಕಡೆಗಣಿಸಿದ ಸತ್ಯವನ್ನು ತಿಳಿದುಕೊಳ್ಳುವದಕ್ಕೆ ನ್ಯಾಯ ತೀರ್ಪಿನ ದಿನದಂದು ಇದು ನಿಮಗೆ ಯಾವ ಒಳ್ಳೆಯದನ್ನು ಮಾಡುವದಿಲ್ಲ!** ನ್ಯಾಯ ತೀರ್ಪಿನ ದಿನದಂದು ಪಶ್ಚಾತ್ತಾಪಪಡುವದಕ್ಕೆ ಅದು ತುಂಬಾ ತಡವಾದುದಾಗಿರುತ್ತದೆ, ಯಾಕೆಂದರೆ ನೀವು ನಿಮ್ಮ ಪಾಪಗಳಲ್ಲಿ ನಾಶವಾಗುತ್ತೀರಿ! ಅದಕ್ಕಾಗಿಯೇ ದೇವರ ವಾಕ್ಯವು ಹೀಗೆ ಹೇಳುತ್ತದೆ: **"ಈಗಲೇ** ಆ ಸುಪ್ರಸನ್ನತೆಯ ಕಾಲ, **ಇದೇ** ಆ ರಕ್ಷಣೆ ದಿನ!" (2ಕೊರಿಂಥ–6:2)

**"ಪ್ರಿಯರೇ, ಅನೇಕ ಮಂದಿ ಸುಳ್ಳು ಪ್ರವಾದಿಗಳು ಲೋಕದೊಳಗೆ ಬಂದಿರುವದರಿಂದ ನೀವು ಆತ್ಮದ ಎಲ್ಲಾ ನುಡಿಗಳನ್ನು ನಂಬದೆ ಆಯಾ ನುಡಿಗಳು ದೇವರಿಂದ ಪ್ರೇರಿತವಾದವುಗಳೋ ಅಲ್ಲವೋ ಎಂದು ಅವುಗಳನ್ನು ಪರೀಕ್ಷಿಸಬೇಕು."** (1ಯೋಹಾನ–4:1)

ಬಾಬೆಲಿಗೆ ಸೆರೆಹೋದ ಯೆಹೂದ್ಯರಿಗೆ ಏನು ಸಂಭವಿಸಿತೆಂಬುದನ್ನು ಮುಂದಿನ ಪಾಠದಲ್ಲಿ, ನಾವು ನೋಡಿಕೊಳ್ಳಲಿದ್ದೇವೆ.

ಪ್ರವಾದಿಯಾದ ಯೆರೆಮೀಯನಿಂದ ಬರೆಯಲ್ಪಟ್ಟ ಕರ್ತನ ಈ ವಾಗ್ದಾನವನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ. ದೇವರಾದ ಕರ್ತನು ಹೀಗೆ ಹೇಳುತ್ತಾನೆ:

**"ನೀವು ನನ್ನನ್ನು ಹುಡುಕುವಿರಿ, ಮನಃಪೂರ್ವಕವಾ'ಗಿ ಹುಡುಕಿದಾಗ ನನ್ನನ್ನು ಕಂಡುಕೊಳ್ಳುವಿರಿ."** (ಯೆರೆ–29:13).

[ಪಾಠ 56: ಪ್ರವಾದಿಯಾದ ಯೆರೆಮೀಯ] [ಸಾರಾಂಶಗಳ ಪಟ್ಟಿ] [ಪಾಠ 58: ಪ್ರವಾದಿಯಾದ ಜೆಕರ್ಯ]

ಪಾಠ 57

## ಪ್ರವಾದಿಯಾದ ದಾನಿಯೇಲ

ದಾನಿಯೇಲ 1,6

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಕಾರ್ಯಕ್ರಮದಲ್ಲಿ, ನಾವು **ಯೆರೆಮೀಯನ** ಪುಸ್ತಕವನ್ನು ಪರೀಕ್ಷಿಸಿಕೊಂಡೆವು. ಮೆಸ್ಸೀಯನು ಬರುವದಕ್ಕಿಂತ ಆರುನೂರು ವರ್ಷಗಳ ಮೊದಲು ಪ್ರವಾದಿಯಾದ ಯೆರೆಮೀಯನು ಜೀವಿಸಿದ್ದನು. ಯೆಹೂದ್ಯರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡದೇ, ದೇವರ ಕಡೆಗೆ ತಿರುಗಿಕೊಳ್ಳದಿದ್ದರೆ, ಬಾಬೆಲ್ ದೇಶದ ಸೈನ್ಯವು ಯೆರೂಸಲೇಮನ್ನು ನಾಶಗೊಳಿಸಿ

ಅವರನ್ನು ಸೆರೆಹಿಡುಕೊಂಡು ಹೋಗುತ್ತಾರೆ ಎಂದು ಯೆರೆಮೀಯನು ಹೇಗೆ ತನ್ನ ಜೊತೆ ಯೆಹೂದ್ಯರನ್ನು ಎಚ್ಚರಿಸಿದನು ಎಂಬುದನ್ನು ನಾವು ನೋಡಿದೆವು. ಬೇಸರವೇನೆಂದರೆ, ಯೆಹೂದ್ಯರಲ್ಲಿ ಅನೇಕರು **ಸುಳ್ಳು ಪ್ರವಾದಿಗಳ** ಮಾತನ್ನು ಕೇಳುತ್ತಾ ಯೆರೆಮೀಯನ ಸಂದೇಶಕ್ಕೆ ಗಮನಕೊಡುವ– ದನ್ನು ತಿರಸ್ಕರಿಸಿದರು. ಹೀಗೆ ಬಾಬೆಲಿನ ಸೈನ್ಯವು ಬಂದು ಹೇಗೆ ಯೆರೂಸಲೇಮನ್ನು ನಾಶಗೊಳಿಸಿ ಯೆಹೂದ್ಯರನ್ನು ಸೆರೆಹಿಡು –ಕೊಂಡು ಹೋಯಿತೆಂಬುದನ್ನು ನಾವು ಓದಿಕೊಳ್ಳುತ್ತೇವೆ. ದೇವರು ತನ್ನ ಪ್ರವಾದಿಯಾದ ಯೆರೆಮೀಯನ ಬಾಯಿಂದ ಮುಂದಾಗಿ ತಿಳಿಸಿದ್ದ ಪ್ರತಿಯೊಂದು ಹಾಗೆಯೇ ಸಂಭವಿಸಿತು.

ಆದರೆ ಯೆರೂಸಲೇಮಿನ ನಾಶವೆಂದರೆ, ಅದು ಬಹಳ ಮುಂಚಿತವಾಗಿಯೇ ತಾನು ಆರಿಸಿಕೊಂಡ ಜನರಾದ ಯೆಹೂದ್ಯರನ್ನು ದೇವರು ತೊರೆದುಬಿಟ್ಟನು ಎಂದು ಅರ್ಥವಲ್ಲ. **"ಭೂಲೋಕದ ಜನರೆಲ್ಲರು ನಿಮ್ಮಿಂದ ಆಶೀರ್ವದಿಸಲ್ಪಡುವರು"** ಎಂದು ದೇವರು ಅಬ್ರಹಾಮ್, ಇಸಾಕ್ ಮತ್ತು ಯಾಕೋಬರಿಗೆ ಹೇಳಿ ಅವರೊಂದಿಗೆ ಮಾಡಿಕೊಂಡಿದ್ದ **ಒಡಂಬಡಿಕೆಯನ್ನು** ಮರೆಯುವದಕ್ಕೆ ಸಾಧ್ಯ –ವಿರಲಿಲ್ಲ. ಅಬ್ರಹಾಮನ ಸಂತತಿಯಾದ ಯೆಹೂದ್ಯ ಜನಾಂಗದ ಮೂಲಕವಾಗಿ ಲೋಕಕ್ಕೆ ವಿಮೋಚಕನನ್ನು ಕಳಿಸುವದಕ್ಕೆ ದೇವರು ಮಾಡಿಕೊಂಡಿದ್ದ **ತನ್ನ ಯೋಜನೆಯನ್ನು** ಆತನು ಮರೆತಿರಲಿಲ್ಲ. ಹಾಗಾಗಿ, ಆತನು ವಾಗ್ದಾನಮಾಡಿದ ಹಾಗೆ ಯೆಹೂದ್ಯರನ್ನು ಮತ್ತೆ ಯೆರೂಸಲೇಮಿಗೆ ಹಿಂದಕ್ಕೆ ಕರೆತರುವವರೆಗೆ **ಎಪ್ಪತ್ತು ವರ್ಷಗಳತನಕ** ಬಾಬೆಲ್ ದೇಶದಲ್ಲಿ ದೇವರು ಹೇಗೆ ಯೆಹೂದ್ಯರನ್ನು ನೋಡಿ –ಕೊಂಡನೆಂಬುದನ್ನು ವಾಕ್ಯವು ಸಂಬಂಧಿಸುತ್ತದೆ. ಹೇಗೂ, ಆ ಕತೆಯನ್ನು ಕೇಳಿಸಿಕೊಳ್ಳುವದಕ್ಕೆ, ನೀವು ನಮ್ಮ ಮುಂದಿನ ಕಾರ್ಯಕ್ರಮ – ದವರೆಗೆ ಕಾಯಬೇಕು.

ಈ ದಿನ ನಾವು ಬಾಬೆಲಿಗೆ ಸೆರೆಯಾಗಿ ಹೋಗಿದ್ದ ಒಬ್ಬ ಯೌವನಸ್ಥ ಯೆಹೂದ್ಯನ ಕುರಿತಾಗಿ ಓದಿಕೊಳ್ಳುವದಕ್ಕೆ ಏರ್ಪಾಟು ಮಾಡಿ –ಕೊಂಡಿದ್ದೇವೆ. ಆ ಯೌವನಸ್ಥ ಮನುಷ್ಯನೇ **ದಾನಿಯೇಲನು**, ಅಂದರೆ ದೇವರ ಪ್ರವಾದಿಯಾದ ದಾನಿಯೇಲನು. ದಾನಿಯೇಲ ಎಂಬ ಹೆಸರಿನ ಅರ್ಥ **ದೇವರು ನನ್ನ ನ್ಯಾಯಾಧಿಪತಿ** ಎಂಬದು. ಅದು ದಾನಿಯೇಲನ ಒಂದು ಚಿಕ್ಕದಾದ ಸಾಕ್ಷಿಯಾಗಿತ್ತು. ಒಂದು ದಿನ ಪ್ರತಿಯೊಬ್ಬರೂ ಯಾರ ಮುಂದೆ ಲೆಕ್ಕ ಕೊಡಲೇಬೇಕಾಗಿದೆಯೋ ಆ ಸರ್ವಶಕ್ತನಾದ ದೇವರಿಗೆ ಹೊರತಾಗಿ ದಾನಿಯೇಲನು ಯಾರಿಗೂ ಭಯಪಡುತ್ತಿರಲಿಲ್ಲ. ಜನರು ತನ್ನ ಕುರಿತಾಗಿ ಏನು ಯೋಚಿಸುತ್ತಾರೆ ಎಂಬುದರ ಕುರಿತು ದಾನಿಯೇಲನು ಆಲೋಚಿಸು –ತ್ತಿರಲಿಲ್ಲ. ಕೇವಲ ದೇವರ ಆಲೋಚನೆಗಳು ಮಾತ್ರ ಅವನಿಗೆ ಸಂಗತಿಯಾಗಿದ್ದವು. ದೇವರು ದಾನಿಯೇಲನ ನ್ಯಾಯಾಧಿಪತಿಯಾಗಿ –ದ್ದನು. **"ಮನುಷ್ಯನ ಭಯ ಉರುಲು; ಯೆಹೋವನ ಭರವಸ ಉದ್ಧಾರ."** (ಜ್ಞಾನೋಕ್ತಿ–29:25) ಎಂದು ಬಹಳ ಹಿಂದೆಯೇ ಪ್ರವಾದಿ –ಯಾದ ಸೊಲೊಮೋನನು ಬರೆದಿರುವದನ್ನು ದಾನಿಯೇಲನು ನಂಬಿದ್ದನು.

ಒಂದು ತುಂಬಾ ಅಗಾಧವಾದ ಪುಸ್ತಕವನ್ನು ಬರೆಯುವಂತೆ ದೇವರು ದಾನಿಯೇಲನನ್ನು ಪ್ರೇರಿಸಿದ್ದನು. **ದಾನಿಯೇಲನ ಪುಸ್ತಕವು,** ಮಾನವನ' ಮನಸ್ಸು ಕಂಡುಹಿಡಿಯಲಾಗದಂತಹ ಅನೇಕ ಪ್ರಕಟನೆಗಳನ್ನು (ಪ್ರವಾದನೆಗಳನ್ನು) ಒಳಗೊಂಡಿದೆ. ಭವಿಷ್ಯದಲ್ಲಿ ಏನಾಗುತ್ತ –ದೆಂಬುದನ್ನು ದೇವರು ಮಾತ್ರ ಬಲ್ಲವನಾಗಿದ್ದನು. ಆದಾಗ್ಯೂ ದಾನಿಯೇಲನು **ಲೋಕದ ಅನೇಕ ದೇಶಗಳ ಚರಿತ್ರೆಯ** ಕುರಿತು ಬರೆ –ದಿದ್ದಾನೆ, ಆ ದೇಶಗಳು ಇನ್ನೂ ಅಸ್ತಿತ್ವದಲ್ಲಿರುವದಕ್ಕಿಂತ ಮೊದಲೇ ಅವನು ಅವುಗಳ ಚರಿತ್ರೆಯನ್ನು ಬರೆದಿದ್ದನು! ಉದಾಹರಣೆಗೆ, ಪರ್ಷಿಯಾ, ಗ್ರೀಸ್ ಮತ್ತು ರೋಮ್ ಸಾಮ್ರಾಜ್ಯಗಳು ಹೇಗೆ ಅಸ್ತಿತ್ವಕ್ಕೆ ಬರುತ್ತವೆ ಮತ್ತು ಅವುಗಳ ಅರಸರುಗಳು ಏನು ಮಾಡುತ್ತಾರೆ ಎನ್ನುವದನ್ನು ದಾನಿಯೇಲನು ಬರೆದಿದ್ದಾನೆ. ಇವುಗಳಲ್ಲಿ ಹೆಚ್ಚಿನ ದೇಶಗಳು ಇನ್ನೂ ಅಸ್ತಿತ್ವದಲ್ಲಿ ಬರುವದಕ್ಕಿಂತ ನೂರಾರು ವರ್ಷಗಳ ಮೊದಲೇ ದಾನಿಯೇಲನು ಇದನ್ನು ಬರೆದಿದ್ದನು! ಅನೇಕ ದೇವರ ಪ್ರವಾದಿಗಳ ಹಾಗೆ ದಾನಿಯೇಲನು ಸಹ **ಮೆಸ್ಸೀಯನ ಮೊದಲ ಮತ್ತು ಎರಡನೆಯ ಬರೋಣದ ಕುರಿತಾಗಿ ಬರೆದಿದ್ದಾನೆ.** ಮೆಸ್ಸೀಯನ ಮೊದಲನೆಯ ಬರೋಣದಲ್ಲಿ ಆತನು **"ಕತ್ತರಿಸಲ್ಪಡುತ್ತಾನೆ"** ಎಂದು ದಾನಿಯೇಲನು ಪ್ರವಾದಿಸಿದ್ದಾನೆ –ಅಂದರೆ, ಪಾಪಕ್ಕಾಗಿ ಒಂದು ಯಜ್ಞದ ಹಾಗೆ ಕೊಲ್ಲಲ್ಪಡುತ್ತಾನೆ (ದಾನಿ–9:26), ಆದರೆ ಮೆಸ್ಸೀಯನು ಭೂಲೋಕಕ್ಕೆ ಹಿಂದಿರುಗಿದಾಗ ನೀತಿಯಲ್ಲಿ ಲೋಕಕ್ಕೆ ನ್ಯಾಯತೀರಿಸುತ್ತಾನೆ ಎಂಬದು. ಮೆಸ್ಸೀಯನ ಎರಡನೆಯ ಬರೋಣದ ಕುರಿತಾಗಿ ದಾನಿಯೇಲನು ಹೊಂದಿದ ದರ್ಶನದ ವಿಷಯವನ್ನು ಕೇಳಿಸಿಕೊಳ್ಳಿರಿ:

ನಾನು ನೋಡುತಿದ್ದ ಹಾಗೆ ನ್ಯಾಯಾಸನಗಳು ಹಾಕಲ್ಪಟ್ಟವು, **ಮಹಾವೃದ್ಧನೊಬ್ಬನು** ಆಸೀನನಾದನು; ಆತನ ಉಡುಪು ಹಿಮದಂತೆ ಶುಭ್ರವಾಗಿತ್ತು, ಆತನ ತಲೆಯ ಕೂದಲು ನಿರ್ಮಲವಾದ ಬಿಳಿಯ ಉಣ್ಣೆಯಂತಿತ್ತು; ಆತನ ನ್ಯಾಯಾಸನವು ಅಗ್ನಿಜ್ವಾಲೆಗಳು, ಅದರ ಚಕ್ರಗಳು ಧಗಧಗಿಸುವ ಬೆಂಕಿಯೇ. ನ್ಯಾಯಾಸನದ ಮುಂದೆ ಉರಿಯ ಪ್ರವಾಹವು ಉಕ್ಕಿ ಹರಿದುಬಂತು; ಲಕ್ಷೋಪಲಕ್ಷ ದೂತರು ಆತನನ್ನು ಸೇವಿಸುತ್ತಿದ್ದರು, ಕೋಟ್ಯನುಕೋಟಿ ಕಿಂಕರರು ಆತನ ಮುಂದೆ ನಿಂತುಕೊಂಡಿದ್ದರು; ನ್ಯಾಯಸಭೆಯವರು ಕೂತುಕೊಂಡರು, ಪುಸ್ತಕಗಳು ತೆರೆಯಲ್ಪಟ್ಟವು! (ದಾನಿ–7:9–10)

ನಾನು ಕಂಡ ರಾತ್ರಿಯ ಕನಸಿನಲ್ಲಿ ಇಗೋ, **ಮನುಷ್ಯಕುಮಾರನಂತಿರುವವನು** ಆಕಾಶದ ಮೇಘಗಳೊಂದಿಗೆ ಬಂದು ಆ ಮಹಾವೃದ್ಧ –ನನ್ನು ಸಮೀಪಿಸಿದನು, ಅವನನ್ನು ಆತನ ಸನ್ನಿಧಿಗೆ ತಂದರು. ಸಕಲ ಜನಾಂಗ ಕುಲಭಾಷೆಗಳವರು ಅವನನ್ನು ಸೇವಿಸಲೆಂದು ಅವ –ನಿಗೆ ದೊರೆತನವೂ ಘನತೆಯೂ ರಾಜ್ಯವೂ ಕೊಡೋಣವಾದವು; ಅವನ ಆಳ್ವಿಕೆಯು ಅಂತ್ಯವಿಲ್ಲದ್ದು, ಶಾಶ್ವತವಾದದ್ದು; ಅವನ ರಾಜ್ಯವು ಎಂದಿಗೂ ಅಳಿಯದು.(ದಾನಿ–7:13,14)

ಈಗ, ದಾನಿಯೇಲನ ಪುಸ್ತಕದಲ್ಲಿ ಒಳಗೊಂಡಿರುವ ದೇವರ ಆಳವಾದ ಆಲೋಚನೆಗಳೊಳಗೆ ಅಗಿಯುವದಕ್ಕೆ ಸಮಯವು ನಮಗೆ ಅವಕಾಶ ಕೊಡುವದಿಲ್ಲ, ಹಾಗಾಗಿ ನಾವು **ಪ್ರವಾದಿಯಾದ ದಾನಿಯೇಲನ ಕತೆಯ** ಕಡೆಗೆ ನೋಡುವದಕ್ಕೆ ಈ ದಿವಸದ ಉಳಿದ ನಮ್ಮ ಸಮಯವನ್ನು ಕಳೆಯೋಣ.

ದಾನಿಯೇಲನ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ, ಬಾಬೆಲಿನ ಅರಸನಾದ ನೆಬೂಕದ್ನೆಚ್ಚರನು ತನ್ನ ರಾಜಾಲಯದಲ್ಲಿ ಸೇವೆ ಮಾಡುವದಕ್ಕೆ ತರಬೇತಿ ಕೊಡುವ ಕ್ರಮದಲ್ಲಿ ಕೆಲವು ಯೆಹೂದ್ಯ ಯೌವನಸ್ಥರನ್ನು ಹೇಗೆ ಆಯ್ಕೆ ಮಾಡಿಕೊಂಡನೆಂಬುದನ್ನು ನಾವು ನೋಡುತ್ತೇವೆ. ಬಾಬೆಲಿನ ಭಾಷೆಯನ್ನೂ, ಕಷ್ಟಕರವಾದ ಅಕ್ಷರಗಳನ್ನು ಕಲಿಯುವ ಸಾಮರ್ಥ್ಯವುಳ್ಳವರೂ ಮತ್ತು ಪ್ರತಿಯೊಂದನ್ನೂ ಕಲಿಯುವದಕ್ಕಾಗಿ ಒಂದು ಯೋಗ್ಯತೆಯೊಂದಿಗೆ ಬುದ್ಧಿವಂತರೂ ಮತ್ತು ಅತೀ ಸುಂದರರೂ ಆಗಿರುವಂತವರನ್ನು ಅವನು ಆರಿಸಿ –ಕೊಂಡನು. ಅರಸನು ಆರಿಸಿಕೊಂಡವರಲ್ಲಿ ದಾನಿಯೇಲನೂ ಒಬ್ಬನಾಗಿದ್ದನು.

ಈ ಪ್ರಕಾರ, ದಾನಿಯೇಲನು ಬಾಬೆಲಿನ ಶಾಲೆಗಳಲ್ಲಿ ಕಲಿಯುವದಕ್ಕೆ ಪ್ರಾರಂಭಿಸಿದನು. ಹೇಗಿದ್ದರೂ, ಮೊದಲ ದಿನವೇ ದಾನಿಯೇಲನು ಒಂದು **ಇಕ್ಕಟ್ಟನ್ನು** ಎದುರಿಸಬೇಕಾಯಿತು. ಬಾಬೆಲಿನ ಮಹಾರಾಜನು ತನ್ನ ಶಾಲೆಯ ಭಾಗಗಳಾಗಿರುವ ಈ ಯುವಕರು ಉತ್ತಮವಾದ ದ್ರಾಕ್ಷಾರಸವನ್ನು ಕುಡಿದು ಉತ್ತಮವಾದ ಆಹಾರವನ್ನು ಸೇವಿಸಬೇಕೆಂದು ತೀರ್ಮಾನಿಸಿದನು. ಈ ದ್ರಾಕ್ಷಾರಸ ಮತ್ತು ಆಹಾರವು ವಿಗ್ರಹ –ಗಳಿಗೆ ನೈವೇದ್ಯ ಮಾಡಿದವುಗಳಾಗಿದ್ದವು. ದಾನೀಯೇಲನು ವಿಗ್ರಹಗಳ ಆರಾಧನೆಯಲ್ಲಿ ಭಾಗವಹಿಸುವದಕ್ಕೆ ಸಾಧ್ಯವೋ? ಖಂಡಿತ– ವಾಗಿಯೂ ಇಲ್ಲ! ಯಾಕೆ? ಯಾಕೆಂದರೆ ದಾನಿಯೇಲನು **ದೇವರಿಗೆ** ಭಯಪಡುವವನಾಗಿದ್ದನು. ತನ್ನ ದೇವರಾದ ಕರ್ತನಿಗೆ ಮೆಚ್ಚಿಕೆ –ಯಾಗಿಲ್ಲದಿರುವ ಏನನ್ನಾದರೂ ಮಾಡುವದಕ್ಕಿಂತ ದಾನಿಯೇಲನು ಮರಣ ಹೊಂದುವದಕ್ಕೆ ಆಧ್ಯತೆಕೊಟ್ಟಿದ್ದನು. ಹಾಗಾಗಿ ವಾಕ್ಯವು ಹೇಳುವದೇನೆಂದರೆ: **"**ದಾನಿಯೇಲನು ತಾನು ರಾಜನ ಭೋಜನ ಪದಾರ್ಥಗಳನ್ನು ತಿಂದು ರಾಜನು ಕುಡಿಯುವ ದ್ರಾಕ್ಷಾರಸವನ್ನು ಕುಡಿದು **ತನ್ನನ್ನು ಅಶುದ್ಧ ಮಾಡಿಕೊಳ್ಳಬಾರದೆಂದು** ನಿಶ್ಚಯಿಸಿ ಕಂಚುಕಿಯರ ಅಧ್ಯಕ್ಷನಿಗೆ, ನಾನು ಅಶುದ್ಧನಾಗಲಾರೆ, ಕ್ಷಮಿಸು ಎಂದು ವಿಜ್ಞಾಪಿಸಿಕೊಂಡನು.**"** (ದಾನಿ–1:8)

ದಾನಿಯೇಲನನ್ನು ಈ ಇಕ್ಕಟ್ಟಿನಿಂದ ದೇವರು ಕಾಪಾಡಿ, ಅವನನ್ನು ಆಶೀರ್ವದಿಸಿ ಅವನಿಗೆ ಆಳವಾದ ಜ್ಞಾನವನ್ನೂ ಮತ್ತು ತಿಳುವಳಿಕೆ –ಯನ್ನೂ ಹೇಗೆ ಕೊಟ್ಟನೆಂಬುದನ್ನು ವಾಕ್ಯಗಳು ತಿಳಿಸುತ್ತವೆ. **"**ದಾನಿಯೇಲನು ಅರಸನ ಸನ್ನಿಧಿ ಸೇವಕನಾದನು. ಬಳಿಕ ರಾಜನು **ಶಾಸ್ತ್ರೀಯ ವಿದ್ಯೆಯ ಸರ್ವವಿಷಯಗಳಲ್ಲಿ** ಅವರನ್ನು ವಿಚಾರಮಾಡಲು ಅವನ ಪೂರ್ಣ ರಾಜ್ಯದಲ್ಲಿನ ಎಲ್ಲಾ ಜೋಯಿಸರಿಗಿಂತಲೂ ಮಂತ್ರವಾದಿಗಳಿಗಿಂತಲೂ **ಹತ್ತರಷ್ಟು ನಿಪುಣರಾಗಿ** ಕಂಡಬಂದರು.**"** (ದಾನಿ–1:20). ಈ ಪ್ರಕಾರ, ಸುಮಾರು ಎಪ್ಪತ್ತು ವರ್ಷಗಳ –ವರೆಗೆ, ದಾನಿಯೇಲನು ನಾಲ್ಕು ಬೇರೆ ಬೇರೆ ರಾಜರುಗಳ ಸೇವಕನಾಗಿದ್ದನು, ದೇವರು ಅವನೊಂದಿಗಿದ್ದನು.

ಈದಿನಾ' ಉಳಿದ ಸಮಯದಲ್ಲಿ, **ದಾನಿಯೇಲನ ಜೀವಿತದ ಒಂದು ಕತೆಯ ಕಡೆಗೆ** ನೋಡಿಕೊಳ್ಳುವದಕ್ಕೆ ನಾವು ಇಚ್ಛಿಸುತ್ತೇವೆ – ಅದು ದಾನಿಯೇಲನು ಯಾರಿಗೂ ಹೆದರದೇ ದೇವರಿಗೆ ಮಾತ್ರ ಹೇಗೆ ಹೆದರುತ್ತಿದ್ದನು ಎನ್ನುವಂತದ್ದು. ರಾಜನ ಸನ್ನಿಧಿಯಲ್ಲಿ ಸೇವೆ ಮಾಡು –ತ್ತಿದ್ದ ಇತರ ಅಧಿಕಾರಿಗಳಿಗಿಂತ ದಾನಿಯೇಲನು ಹೇಗೆ ತುಂಬಾ ವ್ಯತ್ಯಾಸವುಳ್ಳವನಾಗಿ'ದ್ದನೆಂಬುದನ್ನು ನಾವು ನೊಡುತ್ತೇವೆ. ಆ ಅಧಿ –ಕಾರಿಗಳ ಹೃದಯವು ದೇವರ ಭಯದಿಂದ ದೂರವಾಗಿದ್ದುದರಿಂದ ಅವರು ಸತ್ಯವನ್ನು ಸಂಪ್ರದಾಯಬದ್ಧವಾಗಿ ತಿರುಚಿ ಲಂಚವನ್ನು ತೆಗೆದುಕೊಳ್ಳುವಂತ ಒಂದು ರೀತಿಯ ಮನುಷ್ಯರಾಗಿದ್ದರು. ಹೇಗಿದ್ದರೂ, ದಾನಿಯೇಲನು ಎಲ್ಲಾ ಅನೀತಿಯನ್ನೂ ಮತ್ತು ಸುಳ್ಳನ್ನೂ ತಿರಸ್ಕರಿಸುವವನಾಗಿದ್ದನು, ಯಾಕೆಂದರೆ ದೇವರ ಭಯವು ಅವನ ಹೃದಯದಲ್ಲಿ ತುಂಬಿತ್ತು. ಅವನು ದೇವರನ್ನು ದೂಷಿಸುವದ –ಕ್ಕಿಂತಲೂ ಸಿಂಹಗಳ ಗವಿಯಲ್ಲಿ ಎಸೆಯಲ್ಪಡುವದಕ್ಕೆ ಆಧ್ಯತೆ ಕೊಟ್ಟಿದ್ದನು.

ಈಗ ದಾನಿಯೇಲನು ಒಬ್ಬ ವೃದ್ಧನಾಗಿದ್ದು ಅವನ ನಾಲ್ಕನೆಯ ರಾಜನ ಸನ್ನಿಧಿಯಲ್ಲಿ ನಂಬಿಗಸ್ತನಾಗಿ ಸೇವೆ ಮಾಡುತ್ತಿರುವ ನಮ್ಮ ಕತೆ –ಯನ್ನು ಪ್ರಾರಂಭಿಸುತ್ತಿದ್ದೇವೆ. ಬಾಬೆಲ್ ರಾಜ್ಯವು ದೀರ್ಘಕಾಲದವರೆಗೆ ಬಾಬೆಲ್ ಎಂದು ಕರೆಯಡಲಿಲ್ಲ, ಆದರೆ ಪರ್ಷಿಯಾ ಎಂದು ಕರೆಯಲ್ಪಟ್ಟಿತು, ಯಾಕೆಂದರೆ ದಾನಿಯೇಲನು ಪ್ರವಾದಿಸಿರುವ ಹಾಗೆ, ಎರಡು ದೇಶಗಳು, ಅಂದರೆ ಮೇದ್ಯರು ಮತ್ತು ಪರ್ಷಿ –ಯನ್ನರು ಬಾಬೆಲನ್ನು ಜಯಿಸಿ ಅದನ್ನು ಎರಡು ದೇಶಗಳನ್ನಾಗಿ ಮಾಡಿದರು.

ಆರನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ದಾರ್ಯಾವೆಷನು ತನ್ನ ರಾಜ್ಯಭಾರವನ್ನು ನಿರ್ವಹಿಸುವದಕ್ಕೋಸ್ಕರ ರಾಜ್ಯದ ಆಯಾ ಭಾಗಗಳ ಮೇಲೆ ನೂರಿಪ್ಪತ್ತು ಮಂದಿ ದೇಶಾಧಿ –ಪತಿಗಳನ್ನೂ ರಾಜನಿಗೆ ನಷ್ಟವಾಗದಂತೆ ಆ ದೇಶಾಧಿಪತಿಗಳ ಮೇಲೆ ಅವರಿಂದ ಲೆಕ್ಕ ತೆಗೆದುಕೊಳ್ಳುವ ಮೂವರು ಮುಖ್ಯಾಧಿಕಾರಿ –ಗಳನ್ನೂ ನೇಮಿಸಬೇಕೆಂದು ನಿಶ್ಚಯಿಸಿಕೊಂಡನು; ಆ ಮುಖ್ಯಾಧಿಕಾರಿಗಳಲ್ಲಿ ದಾನಿಯೇಲನು ಒಬ್ಬನು. ಈ ದಾನಿಯೇಲನಲ್ಲಿ ಪರಮ –ಬುದ್ಧಿ ಇದ್ದದರಿಂದ ಅವನು ಮಿಕ್ಕ ಮುಖ್ಯಾಧಿಕಾರಿಗಳಿಗಿಂತಲೂ ದೇಶಾಧಿಪತಿಗಳಿಗಿಂತಲೂ ಅಧಿಕ ಸಮರ್ಥನೆನಿಸಿಕೊಂಡಿದ್ದನು; ಅವನನ್ನು ರಾಜನು ಪೂರ್ಣರಾಜ್ಯದ ಮೇಲೆ ನೇಮಿಸಲು ಉದ್ದೇಶಿಸಿದನು.(ದಾನಿ–6:1–3)

ಹೀಗಿರಲು ಮುಖ್ಯಾಧಿಕಾರಿಗಳೂ ದೇಶಾಧಿಪತಿಗಳೂ ರಾಜ್ಯಭಾರದ ವಿಷಯವಾಗಿ ದಾನಿಯೇಲನ ಮೇಲೆ ತಪ್ಪುಹೊರಿಸುವದಕ್ಕೆ ಸಂದರ್ಭ ಹುಡುಕುತ್ತಿದ್ದರು; ಆದರೆ ತಪ್ಪು ಹೊರಿಸುವ ಯಾವ ಸಂದರ್ಭವನ್ನೂ ಯಾವ ತಪ್ಪನ್ನೂ ಕಾಣಲಾರದೆ ಹೋದರು; ಅವನು ನಂಬಿಗಸ್ತನೇ ಆಗಿದ್ದನು, ಅವನಲ್ಲಿ ಆಲಸ್ಯವಾಗಲಿ ಅಕ್ರಮವಾಗಲಿ ಸಿಕ್ಕಲಿಲ್ಲ. ಆಗ ಆ ಮನುಷ್ಯರು, **ಈ ದಾನಿಯೇಲನ ಮೇಲೆ ತಪ್ಪು –ಹೊರಿಸಲು ಇವನ ದೇವಧರ್ಮದ ಮೂಲಕವೇ ಹೊರತು ಇನ್ನಾವದರಲ್ಲಿಯೂ ನಮಗೆ ಅವಕಾಶ ದೊರೆಯದು ಅಂದುಕೊಂಡರು**. (ದಾನಿ–6:4,5)

ಹೀಗೆ ಆ ಮುಖ್ಯಾಧಿಕಾರಿಗಳು ದೇಶಾಧಿಪತಿಗಳೂ ರಾಜನ ಸಮ್ಮುಖದಲ್ಲಿ ನೆರೆದುಬಂದು ಅವನಿಗೆ, "ಅರಸನಾದ ದಾರ್ಯಾವೇಷನೇ, ಚಿರಂಜೀವಿಯಾಗಿರು! **ಯಾವನಾದರೂ ಮೂವತ್ತು ದಿನಗಳ ತನಕ ರಾಜನಾದ ನಿನಗೆ ಹೊರತುಬೇರೆ ಯಾವ ದೇವರಿಗಾಗಲಿ ಮನುಷ್ಯನಿ –ಗಾಗಲಿ ವಿಜ್ಞಾಪನೆಮಾಡಿಕೊಂಡರೆ ಅವನು ಸಿಂಹಗಳ ಗವಿಯಲ್ಲಿ ಹಾಕಲ್ಪಡಬೇಕು** ಎಂಬ ಖಂಡಿತ ನಿಂಬಂಧನೆಯನ್ನು ರಾಜಾಜ್ಞಾ ರೂಪವಾಗಿ ವಿಧಿಸುವದು ಒಳ್ಳೇದೆಂದು ರಾಜ್ಯದ ಸಕಲ ಮುಖ್ಯಾಧಿಕಾರಿ ನಾಯಕ ದೇಶಾಧಿಪತಿ ಮಂತ್ರಿ ಸಂಸ್ಥಾನಾಧ್ಯಕ್ಷರೂ ಆಲೋ –ಚನೆ ಮಾಡಿಕೊಂಡಿದ್ದಾರೆ. ರಾಜನೇ, ಈಗ ನೀನು ಈ ನಿಬಂಧನೆಯನ್ನು ವಿಧಿಸಿ ಇದು ನಿಂತುಹೋಗದೆ ಮೇದ್ಯಯರ ಮತ್ತು ಪಾರಸಿ –ಯರ ಎಂದಿಗೂ ರದ್ದಾಗದ ಧರ್ಮವಿಧಿಗಳ ಪ್ರಕಾರ ಊರ್ಜಿತವಾಗುವಂತೆ ಶಾಸನಕ್ಕೆ ಹಸ್ತಾಕ್ಷರ ಮಾಡು" ಎಂದು ಬಿನ್ನವಿಸಲು ರಾಜನಾದ ದಾರ್ಯಾವೆಷನು ಆ ನಿಬಂಧನ ಶಾಸನಕ್ಕೆ ರುಜು ಹಾಕಿದನು. (6:6–9)

**ಶಾಸನಕ್ಕೆ ರುಜುವಾದದ್ದು ದಾನಿಯೇಲನಿಗೆ ತಿಳಿದಾಗ ಅವನು ತನ್ನ ಮನೆಗೆ ಹೋಗಿ ಯೆರೂಸಲೇಮಿನ ಕಡೆಗೆ ಕದವಿಲ್ಲದ ಕಿಟಕಿಗಳುಳ್ಳ ತನ್ನ ಮಹಡಿಯ ಕೋಣೆಯಲ್ಲಿ ಯಥಾಪ್ರಕಾರ ದಿನಕ್ಕೆ ಮೂರಾವರ್ತಿ ಮೊಣಕಾಲೂರಿ ತನ್ನ ದೇವರಿಗೆ ಪ್ರಾರ್ಥನೆ ಮಾಡಿ ಸ್ತೋತ್ರ ಸಲ್ಲಿಸಿದನು.** ಆಗ ಆ ಜನರು ಗುಂಪಾಗಿ ಕೂಡಿ ದಾನಿಯೇಲನು ತನ್ನ ದೇವರ ಸಮ್ಮುಖದಲ್ಲಿ ಪ್ರಾರ್ಥಿಸಿ ವಿಜ್ಞಾಪಿಸುವದನ್ನು ಕಂಡು ಸನ್ನಿಧಿಗೆ ಬಂದು ರಾಜಾಜ್ಞೆಯ ಪ್ರಸ್ತಾಪವನ್ನೆತ್ತಿ, "ರಾಜನೇ, ಯಾವನಾದರೂ ಮೂವತ್ತು ದಿನಗಳ ತನಕ ನಿನಗೆ ಹೊರತು ಬೇರೆ ಯಾವ ದೇವರಿಗಾಗಲಿ ಮನುಷ್ಯನಿಗಾಗಲಿ ವಿಜ್ಞಾಪನೆ ಮಾಡಿದರೆ ಅವನು ಸಿಂಹಗಳ ಗವಿಯಲ್ಲಿ ಹಾಕಲ್ಪಡಬೇಕು ಎಂಬ ನಿಬಂಧನೆಗೆ ರುಜು ಹಾಕಿದಿಯಲ್ಲಾ" ಎಂದು ಕೇಳಲು ರಾಜನು, "ಹೌದು, ಮೇದ್ಯಯರ ಮತ್ತು ಪಾರಸಿಯರ ರದ್ದಾಗದ ಧರ್ಮವಿಧಿಗಳಂತೆ ಇದು ಸ್ಥಿರ" ಎಂದು ಉತ್ತರಕೊಟ್ಟನು. ಇದಕ್ಕವರು ಸನ್ನಿಧಿಯಲ್ಲಿ, "ರಾಜನೇ, ಯೆಹೂದದಿಂದ ಸೆರೆಯಾಗಿ ತಂದವರಲ್ಲಿ ಒಬ್ಬನಾದ ಅ ದಾನಿಯೇಲನು ನಿನ್ನನ್ನಾಗಲಿ ನಿನ್ನ ಹಸ್ತಾಕ್ಷರದ ನಿಬಂಧನೆಯನ್ನಾಗಲಿ ಲಕ್ಷ್ಯಕ್ಕೆ ತಾರದೆ ದಿನಕ್ಕೆ ಮೂರಾವರ್ತಿ ಪ್ರಾರ್ಥಿಸಿಕೊಳ್ಳುತ್ತಾನೆ" ಎಂದು ಅರಿಕೆ ಮಾಡಿದರು. (6:10–13)

ರಾಜನು ಈ ಮಾತುಗಳನ್ನು ಕೇಳಿ ಬಹಳ ವ್ಯಸನಗೊಂಡು ದಾನಿಯೇಲನನ್ನು ತಪ್ಪಿಸಬೇಕೆಂದು ಮನಸ್ಸುಮಾಡಿ ಇವನನ್ನು ಹೇಗೆ ರಕ್ಷಿ –ಸಲಿ ಎಂದು ಸೂರ್ಯಾಸ್ತಮಾನದ ತನಕ ಪ್ರಯಾಸಪಟ್ಟನು. ಇದನ್ನು ತಿಳಿದು ಆ ಜನರು ಸನ್ನಿಧಿಗೆ ಕೂಡಿಬಂದು, "ಪ್ರಭುವೇ, ರಾಜನು ವಿಧಿಸಿದ ಯಾವ ನಿಬಂಧನೆಯಾಗಲಿ ನಿಯಮವಾಗಲಿ ರದ್ದಾಗಬಾರದು ಎಂಬ ಧರ್ಮಸೂತ್ರವು ಮೇದ್ಯಯರಲ್ಲಿಯೂ ಪಾರ –ಸಿಯರಲ್ಲಿಯೂ ಉಂಟೆಂಬದು ನಿನಗೆ ಗೊತ್ತಿರಲಿ" ಎಂದು ಹೇಳಲು ರಾಜನ ಅಪ್ಪಣೆಯಾಯಿತು; **ದಾನಿಯೇಲನನ್ನು ತಂದು ಸಿಂಹ –ಗಳ ಗವಿಯಲ್ಲಿ ಹಾಕಿಬಿಟ್ಟರು.** ಆಗ ರಾಜನು ದಾನಿಯೇಲನಿಗೆ, "ನೀನು ನಿತ್ಯವೂ ಭಜಿಸುವ ದೇವರು ನಿನ್ನನ್ನುದ್ಧರಿಸಲಿ" ಎಂದು ಹರ –ಸಿದನು. ಕೂಡಲೆ ಬಂಡೆಯನ್ನು ತಂದು ಗವಿಯ ಬಾಯನ್ನು ಮುಚ್ಚಿದರು;

ದಾನಿಯೇಲನ ಗತಿಯು ಬೇರೆಯಾಗದಂತೆ ರಾಜನು ತನ್ನ ಮುದ್ರೆಯಿಂದಲೂ ತನ್ನ ಮುಖಂಡರ ಮುದ್ರೆಯಿಂದಲೂ ಅದಕ್ಕೆ ಮೊಹರು ಮಾಡಿದನು. ಅನಂತರ ರಾಜನು ಅರಮನೆಗೆ ಹೋಗಿ ವಿನೋದ ವಾದ್ಯಗಳನ್ನು ತನ್ನ ಮುಂದೆ ತರಿಸದೆ ಉಪವಾಸವಾಗಿ ರಾತ್ರಿಯನ್ನು ಕಳೆದನು; ಅವನಿಗೆ ನಿದ್ರೆ ತಪ್ಪಿತು.(6:14–18)

ಮಾರಣೆಯ ಬೆಳಿಗ್ಗೆ ರಾಜನು ಉದಯದಲ್ಲೇ ಎದ್ದು ಸಿಂಹಗಳ ಗವಿಯ ಬಳಿಗೆ ತ್ವರೆಯಾಗಿ ಹೋದನು. ದಾನಿಯೇಲನ ಗವಿಯ ಸಮೀಪಕ್ಕೆ ಬಂದು ಅವನು ದು:ಖಧ್ವನಿಯಿಂದ ದಾನಿಯೇಲನನ್ನು ಕೂಗಿ, "ದಾನಿಯೇಲನೇ, ಜೀವಸ್ವರೂಪನಾದ ದೇವರ ಸೇವಕನೇ, ನೀನು ನಿತ್ಯವೂ ಭಜಿಸುವ ನಿನ್ನ ದೇವರು ನಿನ್ನನ್ನು ಸಿಂಹಗಳಿಂದ ಉದ್ಧರಿಸ ಶಕ್ತನಾದನೋ" ಎಂದು ಕೇಳಲು ದಾನಿಯೇಲನು ರಾಜ –ನಿಗೆ **"ಅರಸೇ, ಚಿರಂಜೀವಿಯಾಗಿರು! ನನ್ನ ದೇವರು ತನ್ನ ದೂತನನ್ನು ಕಳುಹಿಸಿ ಸಿಂಹಗಳ ಬಾಯಿಗಳನ್ನು ಬಂಧಿಸಿದನು; ಅವುಗಳಿಂದ ನನಗೆ ಯಾವ ಹಾನಿಯೂ ಆಗಲಿಲ್ಲ; ಏಕೆಂದರೆ ಆತನ ದೃಷ್ಟಿಗೆ ನಾನು ನಿರ್ಮಲನಾಗಿ ಕಂಡುಬಂದೆನು, ರಾಜನಾದ ನಿನಗೂ ಯಾವ ದ್ರೋಹವನ್ನೂ ಮಾಡಲಿಲ್ಲ"** ಎಂದು ಹೇಳಿದನು. ಅದನ್ನು ಕೇಳಿ ರಾಜನು ಬಹು ಸಂತೋಷಪಟ್ಟು ದಾನಿಯೇಲನನ್ನು ಗವಿಯೊಳ –ಗಿಂದ ಮೇಲಕ್ಕೆತ್ತಬೇಕೆಂದು ಅಪ್ಪಣೆ ಮಾಡಲು ಅವನನ್ನು ಅಲ್ಲಿಂದ ಮೇಲಕ್ಕೆತ್ತಿದರು. ಅವನು ತನ್ನ ದೇವರಲ್ಲಿ ಭರವಸವಿಟ್ಟ ಕಾರಣ ಅವನಿಗೆ ಯಾವ ಹಾನಿಯೂ ಆಗಿರಲಿಲ್ಲ. ಅನಂತರ ರಾಜನು ಆಜ್ಞಾಪಿಸಲು ದಾನಿಯೇಲನ ಮೇಲೆ ದೂರು ಹೊರಿಸಿದವರನ್ನು ತಂದು ಅವರನ್ನೂ ಅವರ ಹೆಂಡತಿ ಮಕ್ಕಳನ್ನೂ ಸಿಂಹಗಳ ಗವಿಯಲ್ಲಿ ಹಾಕಿಬಿಟ್ಟರು; ಅವರು ಗವಿಯ ಅಡಿಯನ್ನು ಮುಟ್ಟುವದ –ರೊಳಗೆ **ಸಿಂಹಗಳು ಅವರ ಮೇಲೆ ಹಾರಿ** ಅವರ ಎಲ್ಲಾ ಎಲುಬುಗಳನ್ನು ಚೂರುಚೂರು ಮಾಡಿದವು. (6:19–24)

ಆಗ ರಾಜನಾದ ದಾರ್ಯಾವೆಷನು ಲೋಕದಲ್ಲೆಲ್ಲಾ ವಾಸಿಸುವ ಸಕಲ ಜನಾಂಗಕುಲಭಾಷೆಗಳವರಿಗೆ ಈ ಪ್ರಸಿದ್ಧ ಪತ್ರವನ್ನು ಬರೆಯಿಸಿ –ದನು, "ನಿಮಗೆ ಸುಖವು ಹೆಚ್ಚೆಚ್ಚಾಗಲಿ! ನಾನಾಳುವ ರಾಜ್ಯದವರೆಲ್ಲರೂ ದಾನಿಯೇಲನ ದೇವರಿಗೆ ಭಯಭಕ್ತಿಯಿಂದ ನಡೆದುಕೊಳ್ಳ – ಬೇಕೆಂದು ಆಜ್ಞಾಪಿಸುತ್ತೇನೆ; ಆತನೇ ಜೀವಸ್ವರೂಪನಾದ ಸನಾತನ ದೇವರು, ಆತನ ರಾಜ್ಯವು ಎಂದಿಗೂ ಅಳಿಯದು, ಆತನ ಆಳ್ವಿಕೆಯು ಶಾಶ್ವತವಾಗಿರುವದು; **ಆತನು ಉದ್ಧರಿಸುವವನೂ ರಕ್ಷಿಸುವವನೂ ಭೂಮ್ಯಾಕಾಶಗಳಲ್ಲಿ ಅದ್ಭುತ ಮಹತ್ವಗಳನ್ನು ನಡಿಸುವವನೂ ಆಗಿದ್ದಾನೆ; ಆತನೇ ದಾನಿಯೇಲನನ್ನು ಸಿಂಹಗಳ ಕೈಯಿಂದ ತಪ್ಪಿಸಿದನು!"** (6:25–27) ಆಮೆನ್.

ದೇವರು ಸಿಂಹಗಳಿಂದ ದಾನಿಯೇಲನನ್ನು ಹೇಗೆ ರಕ್ಷಿಸಿದನೆಂಬುದನ್ನು ನೋಡಿದ ನಂತರ ಅನ್ಯ ದೇಶದ ರಾಜನು ಏನು ಹೇಳಿದ –ನೆಂಬುದನ್ನು ನೀವು ಕೇಳಿದಿರಲ್ಲವೋ? ಅವನು ಹೇಳಿದ್ದೇನೆಂದರೆ: "ನಾನಾಳುವ ರಾಜ್ಯದವರೆಲ್ಲರೂ **ದಾನಿಯೇಲನ ದೇವರಿಗೆ ಭಯ ಭಕ್ತಿಯಿಂದ** ನಡೆದುಕೊಳ್ಳಬೇಕೆಂದು ಆಜ್ಞಾಪಿಸುತ್ತೇನೆ. ಆತನೇ ಜೀವಸ್ವರೂಪನಾದ ಸನಾತನ ದೇವರು, ಆತನ ರಾಜ್ಯವು ಎಂದಿಗೂ ಅಳಿಯದು!"

ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು ದಾನಿಯೇಲನ ದೇವರಿಗೆ ಭಯಪಡುವವರಾಗಿದ್ದೀರೋ? ಬಹುಶ: ನೀವು **"ದಾನಿಯೇ –ಲನ ದೇವರು ಯಾರು**? ಎಂದ ಕೇಳಬಹುದು. ದಾನಿಯೇಲನ ದೇವರು ಯಾರೆಂದರೆ, ಅಬ್ರಹಾಮ, ಇಸಾಕ ಮತ್ತು ಯಾಕೋ –ಬರ ದೇವರು. ದಾನಿಯೇಲನ ದೇವರು, ಪ್ರವಾದಿಗಳಾದ ಮೋಶೆ ಮತ್ತು ದಾವೀದನ ದೇವರು. ದಾನಿಯೇಲನ ದೇವರು ನಮಗೆ ಪರಿಶುದ್ದ ವಾಕ್ಯಗಳನ್ನು ಕೊಟ್ಟಂತ ದೇವರಾಗಿದ್ದಾನೆ. ಈತನು ಸಿಂಹಗಳ ಅಂದರೆ ಸೈತಾನ, ಪಾಪ' ಮತ್ತು ನರಕದ ಶಕ್ತಿಗಿಂತಲೂ ಬಲ –ವಾದ ಶ್ತಕಿಯಿಂದ ಪಾಪಿಗಳನ್ನು ರಕ್ಷಿಸುವವನಾದ ಒಬ್ಬ ವಿಮೋಚಕನನ್ನು ಕಳುಹಿಸಿಕೊಡುತ್ತೇನೆ ಎಂದು ವಾಗ್ದಾನ ಮಾಡಿದ ದೇವರಾ –ಗಿದ್ದಾನೆ! ದಾನಿಯೇಲನ ದೇವರು, ಒಬ್ಬನೇ ಸತ್ಯ **ದೇವರಾಗಿದ್ದಾನೆ!**

**ನೀವು ದಾನಿಯೇಲನ ದೇವರಿಗೆ ಭಯಪಡುತ್ತೀರೋ?** ನೀವು ನಿಮ್ಮ ಸ್ನೇಹಿತರಿಗೆ ಮತ್ತು ಅವರ ಆಲೋಚನೆಗಳಿಗೆ ಹೆದರುತ್ತೀರೋ, ಅಥವಾ ನಿಮ್ಮ ಪೂರ್ವಿಕರಿಗೆ ಮತ್ತು ಅವರ ಸಂಪ್ರದಾಯಗಳಿಗೆ ಹೆದರುತ್ತೀರೋ, ಅಥವಾ ನಿಮ್ಮ ಪವಿತ್ರಗೋರಿಗಳಿಗೆ ಮತ್ತು ಅವುಗಳ ಬೇಡಿಕೆಗಳಿಗೆ ಹೆದರುತ್ತಿರೋ ಎಂದು ನಾವು ಕೇಳುತ್ತಿಲ್ಲ. ನಾವು ನಿಮ್ಮನ್ನು ಕೇಳುತ್ತಿರುವದೇನೆಂದರೆ, ನೀವು **ದೇವರಿಗೆ** ಭಯಪಡು – ತ್ತೀರೋ? ನೀವು ದೇವರಾದ ಕರ್ತನನ್ನು ಮೆಚ್ಚಿಸಿ ಆತನ ಪರಿಶುದ್ದ ವಾಕ್ಯಗಳಿಗೆ ವಿಧೇಯರಾಗುವದಕ್ಕೆ ಇಷ್ಟಪಡುತ್ತೀರೋ? ದಾನಿಯೇ –ಲನು **ದೇವರಿಗೆ** ಹೆದರುತ್ತಿದ್ದನು, ಅದಕ್ಕಾಗಿಯೇ ಅವನು ಮನುಷ್ಯರಿಗೆ ಭಯಪಡುತ್ತಿರಲಿಲ್ಲ. ದಾನಿಯೇಲನು ದೇವರಾದ ಕರ್ತನಿಗೆ ಮನನೋಯಿಸುವದಕ್ಕಿಂತಲೂ ಸಿಂಹಗಳ ಗವಿಯಲ್ಲಿ ಒಂದು ರಾತ್ರಿ ಕಳೆಯುವದಕ್ಕೆ ಆದ್ಯತೆ ಕೊಟ್ಟನು! ನಿಮ್ಮ ವಿಷ'ಯವೇನು? ದಾನಿ –ಯೇಲನು ದೇವರಿಗೆ ಭಯಪಟ್ಟಂತೆ ನೀವೂ ಆತನಿಗೆ ಭಯಪಡುತ್ತೀರೋ? ದಾನಿಯೇಲನು ಅನೀತಿಯನ್ನು ದ್ವೇಷಿಸಿದಂತೆ ನೀವೂ ಅದನ್ನು

ದ್ವೇಷಿಸುತ್ತೀರೋ? ದಾನಿಯೇಲನು ದೇವರ ವಾಕ್ಯವನ್ನು ಪ್ರೀತಿಯಿಂದ ಪಾಲಿಸಿದಂತೆ ನೀವು ಅದನ್ನು ಪಾಲಿಸುತ್ತೀರೋ? ಅಥವಾ ಆದಾಮನ ಮಕ್ಕಳಲ್ಲಿ ಹೆಚ್ಚಿನವರು ಸತ್ಯವನ್ನು ತಿರುಚಿ, ಹಣವನ್ನು ಪ್ರೀತಿಸಿ, ಪರಿಶುದ್ಧ ವಾಕ್ಯಗಳನ್ನು ಅಲಕ್ಷಿಸಿದಂತೆ ನೀವೂ ಇದ್ದೀರೋ? **ನೀವು ದೇವರಿಗೆ ಭಯಪಡುತ್ತೀರೋ?**

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ನಮ್ಮ ಮುಂದಿನ ಪಾಠದಲ್ಲಿ, ದಾನಿಯೇಲನ ನಂತರದಲ್ಲಿ ಬಂದ ಪ್ರವಾದಿಯಾದ ಜೆಕರ್ಯನಿಂದ ಬರೆಯಲ್ಪಟ್ಟ ಕೆಲವು ಅದ್ಭುತಕರವಾದ ಪ್ರವಾದನೆಗಳ ಕಡೆಗೆ ನೋಡಿಕೊಳ್ಳುವದಕ್ಕೆ ನಾವು ಯೋಜನೆ ಹಾಕಿಕೊಂಡಿ –ದ್ದೇವೆ. . . .

ಈ ಪ್ರಾಮುಖ್ಯವಾದ ಸತ್ಯವನ್ನು ನೀವು ಧ್ಯಾನ ಮಾಡುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಮನುಷ್ಯನ ಭಯ ಉರುಲು; ಯೆಹೋವನ ಭರವಸ ಉದ್ಧಾರ!"** (ಜ್ಞಾನೋಕ್ತಿ–29:25)

[ಪಾಠ 57: ಪ್ರವಾದಿಯದ ದಾನಿಯೇಲ] [ಸಾರಾಂಶಗಳ ಪಟ್ಟಿ] [ಪಾಠ 59: ಪ್ರವಾದಿಗಳ ಸಂಕ್ಷಿಪ್ತಗೊಳಿಸಲ್ಪಟ್ಟ ಸಂದೇಶ]

ಪಾಠ 58

# ಪ್ರವಾದಿಯಾದ ಜೆಕರ್ಯ

ಜೆಕರ್ಯ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ

ಎರಡು ಕಾರ್ಯಕ್ರಮಗಳ ಹಿಂದೆ, ದೇವರ ಪ್ರವಾದಿಯಾದ ಯೆರೆಮೀಯನು ತನ್ನ ಜೊತೆ ಯೆಹೂದ್ಯರಿಗೆ, ಅವರು ದೇವರ ವಾಕ್ಯಕ್ಕೆ ಗಮನಕೊಡದೆ ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡದಿದ್ದರೆ, ಬಾಬೆಲ್ ದೇಶದ ಸೈನಿಕರು ಅವರ ದೇಶವನ್ನು ನಾಶಮಾಡಿ ಅವರನ್ನು ದೂರ ದೇಶಕ್ಕೆ ಸೆರೆಹಿಡುಕೊಂಡು ಹೋಗುವದಕ್ಕೆ ದೇವರು ಅಪ್ಪಣೆ ಕೊಡುತ್ತಾನೆ ಎಂದು ಹೇಗೆ ಅವರನ್ನು ಎಚ್ಚರಿಸಿದನೆಂಬುದನ್ನು ನಾವು ಕಲಿತುಕೊಂಡೆವು. ಯೆಹೂದ್ಯರಲ್ಲಿ ಅನೇಕರು ಯೆರೆಮೀಯನ ಎಚ್ಚರಿಕೆಗಳಿಗೆ ಗಮನಕೊಡಲೇ ಇಲ್ಲ. ಇದರ ಪರಿಣಾಮವಾಗಿ, ಯೆರೆಮೀಯನು ಪ್ರವಾದಿಸಿದ ಹಾಗೆಯೇ, ಬಾಬೆಲ್ ದೇಶದ ಸೈನ್ಯದವರು ಪೂರ್ವದಿಂದ ಬಂದು ಯೆರೂಸಲೇಮನ್ನು ನಾಶಪಡಿಸಿ, ಆಲಯವನ್ನು ಕೆಡವಿ ಯೆಹೂದ್ಯರನ್ನು ಸೆರೆಹಿಡುಕೊಂಡು ಹೋದರು. **ಈ ಪ್ರಕಾರ, ಯೆಹೂದ್ಯರು ದೇವರ ಪ್ರವಾದಿಗಳ ಮಾತಿಗೆ ವಿಧೇಯರಾಗುವದನ್ನು ತಿರಸ್ಕರಿಸಿದ್ದರಿಂದ, ಅವರು ಚದುರಿ ಹೋದರು.**

ಆದರೆ ಯೆಹೂದ್ಯರ ಅಪನಂಬಿಗಸ್ತಿಕೆಯು ದೇವರ ನಂಬಿಗಸ್ತಿಕೆಯನ್ನು ನಿಷ್ಫಲಗೊಳಿಸಿತಾ? ಎಂದಿಗೂ ಇಲ್ಲ! ತಮ್ಮ ಪಾಪಗಳ ಕಾರಣ –ದಿಂದ ಈಗ ಬಾಬೆಲಿನಲ್ಲಿ ಸೆರೆಯಾಳುಗಳಾಗಿರುವ ಯೆಹೂದ್ಯರಿಗೆ ಪ್ರವಾದಿಯಾದ ಯೆರೆಮೀಯನು ಏನು ಹೇಳಿದನೆಂಬುದನ್ನು ಕೇಳಿಸಿಕೊಳ್ಳಿರಿ. ಅವನು ಅವರಿಗೆ:

ಇಸ್ರಾಯೇಲ್ಯರ ದೇವರೂ ಸೇನಾಧೀಶ್ವರನಾದ ಯೆಹೋವನು ತಾನು ಯೆರೂಸಲೇಮಿನಿಂದ ಬಾಬೆಲಿಗೆ ಸಾಗಿಸಿದ ಸೆರೆಯವರೆಲ್ಲರಿಗೂ ಹೀಗೆ ಹೇಳುತ್ತಾನೆ, **"**ಬಾಬೆಲ್ ರಾಜ್ಯವು ಎಪ್ಪತ್ತು ವರುಷ ಪ್ರಬಲಿಸಿದ ಮೇಲೆ ನಾನು ನಿಮ್ಮನ್ನು ಕಟಾಕ್ಷಿಸಿ ಈ ಸ್ಥಳಕ್ಕೆ (ಯೆರೂಸ –ಲೇಮಿಗೆ) ತಿರಿಗಿ ಬರಮಾಡುವೆನೆಂಬ ನನ್ನ ಶುಭವಾಕ್ಯವನ್ನು ನಿಮಗಾಗಿ ನೆರವೇರಿಸುವೆನು. ಇವರಿಗೆ ಗತಿಯಾಗಲಿ, ನಿರೀಕ್ಷೆಯಿರಲಿ ಎಂದು **ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ."** (ಯೆರೆ–29:4, 10,11)

ಈ ವಿವರಣೆಯೊಂದಿಗೆ, ಪ್ರವಾದಿಯಾದ ಯೆರೆಮೀಯನು ಯೆಹೂದ್ಯರಿಗೆ, ಅವರು ತಮ್ಮ ದೇವರನ್ನು ಮರೆತುಬಿಟ್ಟರೂ ಸಹ **ದೇವರು ಅವರನ್ನು ಮರೆತಿಲ್ಲವೆಂಬುದನ್ನು** ತಿಳಿಸುತ್ತಿದ್ದಾನೆ! ದೇವರು ಅವರನ್ನು ಅವರ ಪೂರ್ವಿಕರ ದೇಶಕ್ಕೆ ತಿರಿಗಿ ಕರೆದುಕೊಂಡು ಬರುವ ಯೋಜನೆ ಮಾಡಿಕೊಂಡಿದ್ದನು. ಅದನ್ನೇ ಯೆರೆಮೀಯನು ಬಾಬೆಲಿನಲ್ಲಿ ಸೆರೆಯಾಗಿರುವ ಯೆಹೂದ್ಯರಿಗೆ ತಿಳಿಸಿದ್ದನು. ನಿಜವಾ –ಗಿಯೂ, **ದೇವರು ನಂಬಿಗಸ್ತನು** {ಒಡಂಬಡಿಕೆಗಳನ್ನು ಕಾಪಾಡುವವನು}. ಅಬ್ರಹಾಮ, ಇಸಾಕ ಮತ್ತು ಯಾಕೋಬರ ಸಂತತಿಗಳ ಮೂಲಕವಾಗಿ ಈ ಲೋಕದ ಜನಾಂಗಗಳನ್ನೆಲ್ಲಾ ಆಶೀರ್ವದಿಸುತ್ತೇನೆಂದು ದೇವರು ಮಾಡಿದ್ದ ವಾಗ್ದಾನವನ್ನು ಆತನು ಮರೆತಿರಲಿಲ್ಲ. ತನ್ನ ವಾಕ್ಯವನ್ನು ಇಸ್ರಾಯೇಲ್ಯರಿಗೆ ಒಪ್ಪಿಸಿಕೊಟ್ಟು ಅದನ್ನು ಅವರು ಆದಾಮನ ಎಲ್ಲಾ ಸಂತತಿಯವರಿಗೆ ಸಾಗಿಸಬಹುದು ಎನ್ನುವ ತನ್ನ ಉದ್ದೇಶವನ್ನು ದೇವರು ಮರೆತಿರಲಿಲ್ಲ. ದೇವರು ಯೆಹೂದ್ಯರೊಳಗಿಂದ ತನ್ನ ಪ್ರವಾದಿಗಳನ್ನು ಹೇಗೆ ಆರಿಸಿಕೊಂಡನು, ತಮ್ಮ ಪರಿಶುದ್ಧ ವಾಕ್ಯಗಳನ್ನು ಸಾರುವದಕ್ಕೂ ಮತ್ತು ಮುಂದಿನ ಜನಾಂಗಗಳಿಗಾಗಿ ಮುಂದಿನ ಜನಾಂಗಗಳಿಗಾಗಿ ಅವುಗಳನ್ನು ಬರೆದಿಡುವ –ದಕ್ಕೆ ಅವರನ್ನು ಹೇಗೆ ಪ್ರೇರೇಪಿಸಿದನು ಎನ್ನುವದನ್ನು ನಾವು ನಮ್ಮ ಅಧ್ಯಯನದಲ್ಲಿ ನೋಡಿಕೊಂಡೆವು. ಮೋಶೆಯ ಮನಸ್ಸಿನಲ್ಲಿ ದೇವರು ತೋರಾ ಪುಸ್ತಕವನ್ನು ಮತ್ತು ದಾವೀದನ ಹೃದಯದಲ್ಲಿ ಸಂಗೀತ ಮತ್ತು ಕೀರ್ತನೆಗಳನ್ನು ಹೇಗೆ ಇಟ್ಟನೆಂಬುದನ್ನು ನಾವು ತಿಳಿದಿದ್ದೇವೆ. ಹಾಗೆಯೇ ನಾವು ಇತರ ಯೆಹೂದ್ಯರುಗಳಾದ ಯೆಹೋಶುವ, ಸೊಲೊಮೋನ, ಯೆಶಾಯ, ಯೆರೆಮೀಯ, ಮತ್ತು ದಾನಿಯೇಲ ಇವರುಗಳನ್ನೂ ಸಹ ದೇವರ ವಾಕ್ಯಗಳನ್ನು ಬರೆಯುವದಕ್ಕೆ ದೇವರು ಹೇಗೆ ಪ್ರೇರೇಪಿಸಿದನೆಂಬುದನ್ನು ನಾವು ನೋಡಿ – ದ್ದೇವೆ. ಇಸ್ರಾಯೇಲ್ ಜನಾಂಗದ ಮೂಲಕ ಲೋಕಕ್ಕೆ ರಕ್ಷಕನನ್ನು ಕಳಿಸುವದಕ್ಕೆ ದೇವರು ರೂಪಿಸಿದ ಅದ್ಭುತವಾದ ಯೋಜನೆ –ಯನ್ನು ದೇವರ ಎಲ್ಲಾ ಪ್ರವಾದಿಗಳ ಬರವಣಿಗೆಗಳು ಪ್ರಕಟಿಸುತ್ತವೆ ಎಂಬುದನ್ನು ನಾವು ಗಮನಿಸಬೇಕು.

ಮೆಸ್ಸೀಯನು ಹುಟ್ಟಬೇಕಾಗಿದ್ದ ಯೆಹೂದ ದೇಶಕ್ಕೆ **ತಿರಿಗಿ ಯೆಹೂದ್ಯರನ್ನು ಕರತಂದು,** ಈ ಪ್ರಕಾರ ಲೋಕಕ್ಕೆ ಮೆಸ್ಸೀಯನನ್ನು ತರು –ವಂತ ತನ್ನ ಯೋಜನೆಯನ್ನು ದೇವರು ಹೇಗೆ ಮುಂದೆ ಸಾಗಿಸಿದನು ಎಂಬುದನ್ನು ಈದಿನ ನಾವು ನೋಡಲಿದ್ದೇವೆ. ಯೆರೆಮೀ –ಯನು ಪ್ರವಾದಿಸಿದ ಹಾಗೆಯೇ, ಎಪ್ಪತ್ತು ವರ್ಷಗಳ ಸೆರೆಯ ನಂತರ ಯೆಹೂದ್ಯರು ಯೆರೂಸಲೇಮಿಗೆ ಹೇಗೆ ಹಿಂತಿರುಗಿದರು ಎನ್ನುವದನ್ನು ನಾವು ಕಲಿಯಲಿದ್ದೇವೆ.
ನಾವು ಓದುವದನ್ನು ಆರಂಭಿಸುವ ಹಾಗೆ, ಬಾಬೆಲ್ ದೇಶವು ಈಗ ಪರ್ಷಿಯ ಎಂದು ಕರೆಯಲ್ಪಡುತ್ತಿದೆ, ಯಾಕೆಂದರೆ ಪರ್ಷಿಯ ಬಾಬೆಲನ್ನು ಗೆದ್ದುಕೊಂಡಿತ್ತು ಎನ್ನುವದನ್ನು ಜ್ಞಾಪಿಸಿಕೊಳ್ಳೋಣ. ಈಗ ನಾವು ಎಜ್ರನ ಪುಸ್ತಕ ಮೊದಲನೆಯ ಅಧ್ಯಾಯದಲ್ಲಿ ಓದುತ್ತಿ –ದ್ದೇವೆ, ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಪಾರಸಿಯ ಅರಸನಾದ ಕೋರೆಷನ ಮೊದಲನೆಯ ವರುಷದಲ್ಲಿ **ಯೆಹೋವನು ತಾನು ಯೆರೆಮೀಯನ ಮುಖಾಂತರ ಹೇಳಿಸಿದ ವಾಕ್ಯವನ್ನು ನೆರವೇರಿಸುವದಕ್ಕಾಗಿ ಆ ಪಾರಸಿಯ ರಾಜನಾದ ಕೋರೆಷನ ಮನಸ್ಸನ್ನು ಪ್ರೇರಿಸಿದ್ದರಿಂದ** ಅವನು ತನ್ನ ರಾಜ್ಯದಲ್ಲೆಲ್ಲಾ ಡಂಗುರದಿಂದಲೂ ಪತ್ರಗಳಿಂದಲೂ ಪಾರಸಿಯ ರಾಜನಾದ ಕೋರೆಷನೆಂಬ ನನ್ನ ಮಾತನ್ನು ಕೇಳಿರಿ, **"**ಪರಲೋಕ ದೇವರಾದ ಯೆಹೋವನು ನನಗೆ ಭೂಲೋಕದ ಎಲ್ಲಾ ರಾಜ್ಯಗಳನ್ನೂ ಕೊಟ್ಟು ತನಗೋಸ್ಕರ ಯೆಹೂದ ದೇಶದ **ಯೆರೂಸಲೇಮಿನಲ್ಲಿ ಆಲಯ –ವನ್ನು ಕಟ್ಟಿಸಬೇಕು** ಎಂದು ಆಜ್ಞಾಪಿಸಿದ್ದಾನೆ. ನಿಮ್ಮಲ್ಲಿ ಯಾರು ಆತನ ಪ್ರಜೆಗಳಾಗಿರುತ್ತಾರೋ ಅವರು ಯೆಹೂದ ದೇಶದ ಯೆರೂಸ –ಲೇಮಿಗೆ ಹೋಗಿ ಅಲ್ಲಿ ವಾಸಿಸುತ್ತಿರುವ ಇಸ್ರಾಯೇಲ್ ದೇವರಾದ ಯೆಹೋವನಿಗೋಸ್ಕರ ಆಲಯವನ್ನು ಕಟ್ಟಲಿ ಅವರ ದೇವರು ಅವರ ಸಂಗಡ ಇರಲಿ.**"** ಆಗ ಯೆಹೂದ ಮತ್ತು ಬೆನ್ಯಾಮೀನ್ ಗೋತ್ರಪ್ರಧಾನರಲ್ಲಿಯೂ ಯಾಜಕರಲ್ಲಿಯೂ ಲೇವಿಯರಲ್ಲಿಯೂ ದೇವಪ್ರೇರಣೆಗೆ ಒಳಗಾದವರೆಲ್ಲರೂ ಯೆರೂಸಲೇಮಿನಲ್ಲಿ ಯೆಹೋವನಿಗೋಸ್ಕರ ಆಲಯ ಕಟ್ಟುವದಕ್ಕಾಗಿ ಹೊರಟು ಹೋದರು. ಅವರ ನೆರೆಯವರೆಲ್ಲರೂ ಕಾಣಿಕೆಗಳನ್ನು ಕೊಟ್ಟದ್ದಲ್ಲದೆ ಅವರಿಗೆ ಬೆಳ್ಳಿಯ ಸಾಮಾನು ಬಂಗಾರ, ಸರಕು, ಪಶು, ಶ್ರೇಷ್ಠ ವಸ್ತು ಇವು –ಗಳನ್ನೂ ಕೊಟ್ಟು ಸಹಾಯ ಮಾಡಿದರು. ನೆಬೂಕದ್ನೆಚ್ಚರನು ಯೆರುಸಲೇಮಿನಿಂದ ಕೊಳ್ಳೆಯಾಗಿ ತಂದು ತನ್ನ ದೇವರ ಗುಡಿಯಲ್ಲಿ –ಟ್ಟಿದ್ದ ಯೆಹೋವನ ಆಲಯದ ಸಾಮಾನುಗಳನ್ನು ಪಾರಸಿಯ ರಾಜನಾದ ಕೋರೆ'ಷನು ಅಲ್ಲಿಂದ ತೆಗಿಸಿ ತನ್ನ ದೇವರ ಆಲಯದಲ್ಲಿ ಇಡಿಸಿದನು. (ಎಜ್ರನು–1:1–3, 5–7)

ದೇವರು ತನ್ನ ಪ್ರವಾದಿಯಾದ ಯೆರೆಮೀಯನ ಮೂಲಕವಾಗಿ ಬಹಳ ಹಿಂದೆ'ಯೇ ವಾಗ್ದಾನ ಮಾಡಿದ ಹಾಗೆಯೇ ಅದನ್ನು ನೆರವೇರಿ –ಸಿದನೋ? ಖಂಡಿತವಾಗಿಯೂ ಆತನು ನೆರವೇರಿಸಿದನು! **ಯೆರೆಮೀಯನು ಪ್ರವಾದಿಸಿದ ಹಾಗೆಯೇ,** ಯೆರೂಸಲೇಮನ್ನು ನಾಶಪಡಿಸಿ ಆಲಯವನ್ನು ಕೆಡವಿಹಾಕುವದಕ್ಕೆ ಬಾಬೆಲಿನ ರಾಜನಿಗೆ ದೇವರು ಹೇಗೆ ಅನುಮತಿಸಿದ್ದನು ಎಂಬುದನ್ನು ನಾವು ಈಗಾಗಲೇ ನೋಡಿ ಕೊಂಡಿದ್ದೇವೆ. ಯೆಹೂದ್ಯರಲ್ಲಿ ಯಾರಾದರೂ ತಮ್ಮ ಪಟ್ಟಣವನ್ನೂ ಮತ್ತು ಆಲಯವನ್ನು ಪುನ:ಕಟ್ಟುವದಕ್ಕೆ ಬಯಸುವದಾದರೆ ಅವರು ತಮ್ಮ ದೇಶಕ್ಕೆ ಹಿಂದಿರುಗಿ ಹೋಗಬಹುದು ಎಂದು ಪರ್ಷಿಯ ದೇಶದ ರಾಜನಾದ ಕೋರೆಷನು ಆಜ್ಞಾಪಿಸುವದನ್ನು ಈಗ ನಾವು ನೋಡುತ್ತಿದ್ದೇವೆ, **ಮತ್ತೆ ಇದೂ ಸಹ ಪ್ರವಾದಿಯಾದ ಯೆರೆಮೀಯನು ಪ್ರವಾದಿಸಿದ ಹಾಗೆಯೇ ಇತ್ತು.** ನಿಜವಾಗಿಯೂ ಕರ್ತನು, ರಾಜಾಧಿರಾಜನಾಗಿದ್ದಾನೆ. ಆತನು ಕಾಲಗಳನ್ನೂ ಮತ್ತು ಸಮಯಗಳನ್ನೂ ನಿಯಂತ್ರಿಸುವವನಾಗಿದ್ದಾನೆ. ಆತನು ಹೇಳಿರುವದೆಲ್ಲವೂ ನೆರವೇರುತ್ತವೆ! ಪ್ರವಾದಿಯಾದ ಸೊಲೊಮೋನನು ಹೀಗೆ ಬರೆಯುತ್ತಾನೆ: "ರಾಜನ ಸಂಕಲ್ಪಗಳು ಯೆಹೋವನ ಕೈಯಲ್ಲಿ ನೀರಿನ ಕಾಲಿವೆಗಳಂತೆ ಇವೆ; ಆತನು ಅದನ್ನು ತನಗೆ ಬೇಕಾದ ಕಡೆಗೆ ತಿರುಗಿಸುತ್ತಾನೆ." (ಜ್ಞಾನೋಕ್ತಿ–21:1)

ಮುಂದೆ, ಯೆಹೂದ್ಯರ ಒಂದು ಗುಂಪು ಹೇಗೆ ಪರ್ಷಿಯ ದೇಶವನ್ನು ಬಿಟ್ಟು ಯೆರೂಸಲೇಮಿನ ಪಟ್ಟಣವಾದ ಯೆಹೂದಕ್ಕೆ ಹಿಂದಿ –ರುಗಿ ಪ್ರಯಾಣಿಸಿದರು ಎಂಬುದನ್ನು ವಾಕ್ಯಗಳು ವಿವರಿಸುತ್ತವೆ. **ಜೆರುಬ್ಬಾಬೆಲ್** ಎಂಬ ಹೆಸರಿನ ಒಬ್ಬ ಯೆಹೂದ್ಯನು ಅವರ ನಾಯಕ –ನಾಗಿದ್ದನು. ಅವರು ಯೆರೂಸಲೇಮಿಗೆ ಬಂದಾಗ, ಪೂರ್ತಿ ಪಟ್ಟಣವು ಹಾಳಾಗಿದ್ದು, ಸೊಲೊಮೋನನು ಕಟ್ಟಿಸಿದ್ದ ಆಲಯವು ಧ್ವಂಸ –ಗೊಂಡದ್ದರಿಂದ ಅವರು ಬಹಳವಾಗಿ ಕಳವಳಗೊಂಡರು. ಬೂದಿ ಮತ್ತು ಕಲ್ಲುಗಳ ಒಡೆದ ಚೂರುಗಳ ಹೊರತಾಗಿ ಅಲ್ಲಿ ಏನೂ ಇರಲಿಲ್ಲ.

ಹಾಗಾಗಿ, ಕರ್ತನ ಅಲಯವಿದ್ದಂತ ಸ್ಥಳದಲ್ಲಿ ಯೆಹೂದ್ಯರು ಮೊದಲು ಹೇಗೆ ಒಂದು ಸಭೆಯಾಗಿ ಸೇರಿಬಂದರು ಎನ್ನುವದನ್ನು ವಾಕ್ಯವು ತಿಳಿಸುತ್ತದೆ. ಅಲ್ಲಿ ಅವರು ಒಂದು ಯಜ್ಞವೇದಿಯನ್ನು ಮತ್ತೆ ಕಟ್ಟಿ ಕೆಲವು ಪಶುಗಳನ್ನು ಯಜ್ಞವಾಗಿ ಸಮರ್ಪಿಸಿದರು. ಬಾಬೆಲಿನಲ್ಲಿಯೂ ಮತ್ತು ಪರ್ಷಿಯಾದಲ್ಲಿಯೂ ಎಪ್ಪತ್ತು ವರ್ಷಗಳವರೆಗೆ ಕರ್ತನು ತಮ್ಮನ್ನು ರಕ್ಷಿಸಿ ಮತ್ತೆ ತಮ್ಮ ಸ್ವಂತ ದೇಶಕ್ಕೆ ಹಿಂದಿರುಗಿ ಕರೆತಂದದ್ದಕ್ಕಾಗಿ ಅವರು ಒಟ್ಟಾಗಿ ಸೇರಿ ಕರ್ತನಿಗೆ ವಂದಿಸಿ ಸ್ತುತಿಸಿದರು. ಅವರಿಗೆ ಸಹಾಯ ಮಾಡಿ ಅವರನ್ನು ಬಲಪಡಿಸುವದಕ್ಕೆ ದೇವರು ಅವರೊಂದಿಗಿದ್ದ'ನು, ಅದರಿಂದ ಅನೇಕ ಶೋಧನೆಗಳು ಮತ್ತು ಅನೇಕ ವರ್ಷಗಳ ಕಠಿಣ ಪರಿಶ್ರಮದ ನಂತರ ಅವರು **ಕರ್ತನ ಆಲಯವನ್ನು, ಯೆರೂಸಲೇಮ್ ಪಟ್ಟಣವನ್ನೂ ಮತ್ತು ಅದರ ಸುತ್ತಲಿದ್ದ ಗೋಡೆಯನ್ನೂ ಪುನ:ಕಟ್ಟುವದಕ್ಕೆ ಶಕ್ತರಾದರು.**

ಬಹುಶ: ನಿಮ್ಮಲ್ಲಿ ಕೆಲವರು, "ಯೆಹೂದ್ಯರು ಯೆರುಸಲೇಮಿಗೆ ಹಿಂದಿರುಗಿ ಬಂದ ಕತೆಯು ನಮಗೆ ಯಾವ ರೀತಿಯಲ್ಲಿ ಸಮಂಜಸ –ವಾದುದಾಗಿದೆ?" ಎಂದು ಕೇಳಬಹುದು. ಸ್ನೇಹಿತರೇ, ಯೆಹೂದ್ಯರು ತಮ್ಮ ದೇಶಕ್ಕೆ ಹಿಂದಿರುಗಿ ಬಂದಿರುವ ವಿಷಯವು ತುಂಬ ಪ್ರಾಮುಖ್ಯವಾದುದಾಗಿದೆ, ಯಾಕೆಂದರೆ **ಯೆಹೂದ** ದೇಶದ ದಕ್ಷಿಣ ಭಾಗದಲ್ಲಿರುವ ಪ್ಯಾಲೆಸ್ತೀನ್ ಎಂಬಲ್ಲಿ **ಮೆಸ್ಸೀಯನು** ಹುಟ್ಟಿ ಬರುವವನಿದ್ದನು. ಯೆಹೂದ್ಯರು ತಮ್ಮ ದೇಶಕ್ಕೆ ಹಿಂದಿರುಗಿ ಬರುವದು ಅವಶ್ಯಕವಾದುದಾಗಿತ್ತು, ಇದರಿಂದ ಲೋಕದ ವಿಮೋಚಕನೂ, **ನಿಮ್ಮ ವಿಮೋಚಕನು** ಅಲ್ಲಿ ಹುಟ್ಟುವದಕ್ಕೆ ಸಾಧ್ಯವಾಯಿತು!

ಯೆಹೂದ್ಯರು ಯೆರೂಸಲೇಮಿಗೆ ಹಿಂದಿರುಗಿ ಬಂದ ಸಮಯದಲ್ಲಿ, ದೇವರು **ಜೆಕರ್ಯ**(ಅರೆಬಿಕ್‌ನಲ್ಲಿ ಜೆಕರೀಯ) ಎಂಬ ಒಬ್ಬ ಪ್ರವಾದಿಯನ್ನು ಒದಗಿಸಿದನು. ಈ ಜೆಕರ್ಯನು ಪ್ರವಾದಿಯಾದ ಯೋಹಾನನ (ಖುರಾನ್‌ನಲ್ಲಿ ಯಾಹ್ಯಾ) ತಂದೆಯಾದ ಜೆಕರೀಯ –ನಿಗಿಂತ ವ್ಯತ್ಯಾಸವುಳ್ಳವನು. ದೇವರು ಮತ್ತು ಆತನ ವಾಗ್ದಾನಗಳಲ್ಲಿ ಯೆಹೂದ್ಯರನ್ನು ಬಲಪಡಿಸುವದಕ್ಕಾಗಿ ದೇವರು ಜೆಕರ್ಯನನ್ನು ಕಳಿಸಿದನು. ತಿಳಿಸುವದಕ್ಕೆ ಜೆಕರ್ಯನು ಒಂದು ಮುಖ್ಯವಾದ ಸಂದೇಶವನ್ನು ಹೊಂದಿದ್ದನು. ಮೆಸ್ಸೀಯನನ್ನು ಕಳಿಸುವ ದೇವರ
ಸಮಯವು ಹತ್ತಿರಕ್ಕೆ ಬಂದಿತ್ತು! ವಿಮೋಚಕನು ಲೋಕಕ್ಕೆ ಬರುವದಕ್ಕೆ ಕೇವಲ ಐನೂರು ವರ್ಷಗಳು ಮಾತ್ರ ಉಳಿದಿದ್ದವು.

ದೇವರು ಜೆಕರ್ಯನ ಮನಸ್ಸಿನಲ್ಲಿ ಇಟ್ಟಂತಹ ಕೆಲವು ಮಾತುಗಳನ್ನು ಪರೀಕ್ಷಿಸಿಕೊಳ್ಳೋಣ. ಜೆಕರ್ಯನ ಪುಸ್ತಕದ ಮೊದಲನೆಯ ಅಧ್ಯಾಯದಲ್ಲಿ ಓದಿಕೋಳ್ಳೋಣ, ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಯೆಹೋವನು ಇದ್ದೋವಿನ ಮೊಮ್ಮಗನೂ ಬೆರೆಕ್ಯನ ಮಗನೂ ಆದ ಜೆಕರ್ಯನೆಂಬ ಪ್ರವಾದಿಗೆ ಈ ವಾಕ್ಯವನ್ನು ದಯಪಾಲಿಸಿದನು, "ಯೆಹೋವನು ನಿಮ್ಮ ಪಿತೃಗಳ ಮೇಲೆ ಬಹು ಕೋಪಗೊಂಡಿದ್ದಾನೆ. ಆದಕಾರಣ ನೀನು ನಿನ್ನ ಜನರಿಗೆ ಹೀಗೆ ಹೇಳು, ಸೇನಾಧೀಶ್ವರ ಯೆಹೋವನು ಇಂತೆನ್ನುತ್ತಾನೆ, ನನ್ನ ಕಡೆಗೆ ಪುನ: ತಿರುಗಿರಿ; ಇದು ಸೇನಾಧೀಶ್ವರ ಯೆಹೋವನ

ನುಡಿ; ನಾನು ನಿಮ್ಮ ಕಡೆಗೆ ಪುನ: ತಿರುಗುವೆನು; ಇದು ಸೇನಾಧೀಶ್ವರ ಯೆಹೋವನ ನುಡಿ. **ನಿಮ್ಮ ಪಿತೃಗಳಂತಿರಬೇಡಿರಿ;** ಪೂರ್ವ ಕಾಲದ ಪ್ರವಾದಿಗಳು ಅವರಿಗೆ ಸೇನಾ –ಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ, ನಿಮ್ಮ ದುರ್ಮಾರ್ಗ ದುಷ್ಕೃತ್ಯಗಳಿಂದ ಹಿಂದಿರುಗಿರಿ ಎಂದು ಸಾರಿದರೂ ಅವರು ನನ್ನ ಮಾತನ್ನು ಕಿವಿಗೊಟ್ಟು ಕೇಳಲಿಲ್ಲ; ಇದು ಯೆಹೋವನ ನುಡಿ. ನಿಮ್ಮ ಪಿತೃಗಳು ಎಲ್ಲಿ? ಪ್ರವಾದಿಗಳು ನಿತ್ಯಜೀವಿಗಳೋ? ಆದರೆ ನನ್ನ ಸೇವಕರಾದ ಪ್ರವಾದಿಗಳಿಗೆ ಆಜ್ಞಾಪಿಸಿದ ನನ್ನ ವಾಕ್ಯಗಳೂ ವಿಧಿಗಳೂ ನಿಮ್ಮ ಪಿತೃಗಳನ್ನು ಹಿಂದಟ್ಟಿ ಹಿಡಿದು ನಿತ್ಯವಾಗಿವೆಯಷ್ಟೆ; ಅವರು ತಿರುಗಿಕೊಂಡು ಸೇನಾಧೀಶ್ವರ ಯೆಹೋವನು ನಮ್ಮ ದುರ್ಮಾರ್ಗ ದುಷ್ಕೃತ್ಯಗಳಿಗೆ ತಕ್ಕ ಹಾಗೆ ನಮಗೆ ಏನು ಮಾಡಬೇಕೆಂದು ಸಂಕಲ್ಪಿಸಿದನೋ ಅದನ್ನು ನಮಗೆ ಮಾಡಿದ್ದಾನಲ್ಲಾ ಅಂದುಕೊಂಡರು." (ಜೆಕರ್ಯ–1:1–6)

ಪ್ರವಾದಿಯಾದ ಜೆಕರ್ಯನು ಯೆಹೂದ್ಯರಿಗೆ ಕೊಟ್ಟ **ಎಚ್ಚರಿಕೆಯನ್ನು** ನೀವು ಕೇಳಿಸಿಕೊಂಡಿರಾ? ಅವನು ಅವರಿಗೆ, **"ಯೆಹೋವನು ನಿಮ್ಮ ಪಿತೃಗಳ ಮೇಲೆ ಬಹು ಕೋಪಗೊಂಡಿದ್ದಾನೆ! ನೀವು ನಿಮ್ಮ ಪಿತೃಗಳಂತಿರಬೇಡಿರಿ!"** ದೇವರು ಯೆಹೂದ್ಯರ ಪಿತೃಗಳ ಮೇಲೆ ಯಾಕೆ ಕೋಪಗೊಂಡಿದ್ದಾನೆ? ದೇವರು ಅವರ ಮೇಲೆ ಕೋಪಗೊಂಡಿರುವದು ಯಾಕೆಂದರೆ, ಆತನು ಅವರ ಬಳಿಗೆ ಕಳಿಸಿದ **ಪ್ರವಾದಿ –ಗಳ ಮಾತುಗಳಿಗೆ ಅವರು ಗಮನ ಕೊಡಲಿಲ್ಲ**. ಅದಕ್ಕಾಗಿಯೇ ಅವರು ಕೊನೆಗೆ ಬಾಬೆಲಿನಲ್ಲಿ ಸೆರೆಯಲ್ಲಿರಬೇಕಾಯಿತು. ಅವರ ಪೂರ್ವಿಕರು ಧರ್ಮಶ್ರದ್ಧೆಯುಳ್ಳವರು, ಆದರೆ ಅವರು ಪ್ರವಾದಿಗಳ ಮಾತುಗಳನ್ನು ಅಲಕ್ಷ್ಯ ಮಾಡಿದ್ದರಿಂದ ದೇವರು ಅವರ ವಿಷಯ –ದಲ್ಲಿ ಸಂತೋಷವುಳ್ಳವನಾಗಿರಲಿಲ್ಲ. "ಖಂಡಿತವಾಗಿಯೂ ನಾವು ಎಲ್ಲಾ ಪ್ರವಾದಿಗಳನ್ನು ನಂಬುತ್ತೇವೆ!" ಎಂದು ಹೇಳುವಂತಹ ಈ ದಿನದ ಜನರ ಹಾಗೆ ಆ ಕಾಲದ ಯೆಹೂದ್ಯರಿದ್ದರು. ಹೇಗಿದ್ದರೂ, **ಪರಿಶುದ್ಧ ವಾಕ್ಯಗಳಲ್ಲಿ ಪ್ರವಾದಿಗಳು ಬರೆದಿರುವಂತದ್ದಕ್ಕೆ** ಅವರು ಗಮನ ಕೊಡದಿದ್ದುದರಿಂದ, ಅವರು ನಿಜವಾಗಿಯೂ ದೇವರ ಪ್ರವಾದಿಗಳನ್ನು ನಂಬಲಿಲ್ಲ ಎನ್ನುವದು ಸ್ಪಷ್ಟವಾದುದಾಗಿದೆ. ಅವರು ಒಂದು **ಧರ್ಮವನ್ನು** ಹೊಂದಿದ್ದರು, ಆದರೆ ದೇವರೊಂದಿಗೆ ಒಂದು ವ್ಯಯಕ್ತಿಕ **ಸಂಬಂಧವನ್ನು** ಅವರು ಹೊಂದಿರಲಿಲ್ಲ. ಅದಕ್ಕಾ –ಗಿಯೇ ಯೆಹೂದ್ಯ ಪೂರ್ವಿಕರಲ್ಲಿ ಅನೇಕರು ಹಾಗೆಯೇ ಇದ್ದರು. ಅವರು ಪ್ರವಾದಿಗಳ ಮಾತುಗಳನ್ನು ಮೆಚ್ಚಿಕೊಳ್ಳಲಿಲ್ಲ. ಅವರು ತಮ್ಮ **ತುಟಿಗಳಿಂದ** ಮಾತ್ರ ದೇವರನ್ನು ಗೌರವಿಸುತ್ತಿದ್ದರು, ಆದರೆ ಆತನ ವಾಕ್ಯವನ್ನು ಅವರು ತಮ್ಮ **ಹೃದಯದೊಳಗೆ** ಸ್ವೀಕರಿಸಿಕೊಂಡಿ –ರಲಿಲ್ಲ. ಆದಕಾರಣ, **"ದೇವರು, ದೇವರು, ದೇವರು"** ಎಂದು ತುಟಿಗಳಿಂದ ಮಾತ್ರ ಹೇಳುತ್ತಾ ದೇವರು ಅವರ ಬಳಿಗೆ ಕಳಿಸಿದ ಪ್ರವಾದಿಗಳ ಮಾತುಗಳನ್ನು ಅಲಕ್ಷ್ಯ ಮಾಡಿದ್ದ ಅವರ ಪೂರ್ವಿಕರ ಮಾದರಿಯನ್ನು ಅನುಸರಿಸದಿರುವಂತೆ ಅವರನ್ನು ಎಚ್ಚರಿಸುವದಕ್ಕೆ ದೇವರು ತನ್ನ ಸೇವಕನಾದ ಜೆಕರ್ಯನನ್ನು ಯೆಹೂದ್ಯರ ಬಳಿಗೆ ಕಳಿಸಿದನು.

ಜೆಕರ್ಯನು ಯೆಹೂದ್ಯರನ್ನು ಎಚ್ಚರಿಸಿದ ನಂತರ, ಬರಲಿಕ್ಕಿದ್ದ **ವಿಮೋಚಕನ** ಕುರಿತಾಗಿಯೂ ಸಹ ಅವರಿಗೆ ತಿಳಿಸುವದಕ್ಕೆ ಪ್ರಾರಂಭಿ –ಸಿದನು. ಮೆಸ್ಸೀಯನ ಕುರಿತಾಗಿ ಪ್ರವಾದಿಯಾದ ಜೆಕರ್ಯನು ಬರೆದಿರುವ ಪ್ರತಿಯೊಂದನ್ನೂ ಓದುವದಕ್ಕೆ ಈದಿನ ನಮಗೆ ಸಮ –ಯವಿಲ್ಲ, ಆದರೆ ಕೆಲವೊಂದು ಪರಿಚ್ಛೇದಗಳನ್ನು ಓದಿಕೊಳ್ಳೋಣ.

ಜೆಕರ್ಯನ ಪುಸ್ತಕದ ಒಂಭತ್ತನೆಯ ಅಧ್ಯಾಯದಲ್ಲಿ ಪ್ರವಾದಿಯಾದ ಜೆಕರ್ಯನು, **ಮೆಸ್ಸೀಯನು ಕತ್ತೆಯ ಮರಿಯ ಮೇಲೆ ಕೂತು ಯೆರೂಸಲೇಮನ್ನು ಪ್ರವೇಶಿಸುತ್ತಾನೆ** ಎಂದು ಪ್ರವಾದಿಸಿದ್ದಾನೆ. "ಚಿಯೋನ್ ನಗರಿಯೇ, ಬಹು ಸಂತೋಷಪಡು. ಯೆರೂಸಲೇಮ್ ಪುರಿಯೇ, ಹರ್ಷಧ್ವನಿಗೈ! ನೋಡು, ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ನ್ಯಾಯವಂತನು, ಸುರಕ್ಷಿತನು, ಶಾಂತಗುಣವುಳ್ಳ –ವನಾಗಿಯೂ ಕತ್ತೆಯನ್ನು, ಹೌದು, ಪ್ರಾಯದ **ಕತ್ತೆಮರಿಯನ್ನು ಹತ್ತಿದವನಾಗಿಯೂ** ಬರುತ್ತಾನೆ."(ಜೆಕರ್ಯ–9:9)

ಹನ್ನೊಂದನೆಯ ಅಧ್ಯಾಯದಲ್ಲಿ, ಸವಿಸ್ತಾರವಾಗಿ ವಿವರಿಸುವದಕ್ಕೆ ನಮಗೆ ಸಾಧ್ಯವಿಲ್ಲದಿರುವಂತಹ ಒಂದು ಗಮನಾರ್ಹವಾದ ಪ್ರವಾದ –ನೆಯನ್ನು ಜೆಕರ್ಯನು ಬರೆದಿದ್ದಾನೆ. **ಮೆಸ್ಸೀಯನು ಮೂವತ್ತು ಬೆಳ್ಳಿಯ ನಾಣ್ಯಗಳಿಗೆ ಮಾರಲ್ಪಡುತ್ತಾನೆ** ಎನ್ನುವ ಒಂದು ಘಟನೆ –ಯನ್ನು ಜೆಕರ್ಯನು ಪ್ರವಾದಿಸಿದ್ದಾನೆ. ಪ್ರವಾದಿಯಾದ ಜೆಕರ್ಯನು ಹೀಗೆ ಬರೆದಿದ್ದಾನೆ: "ನಿಮಗೆ ಸರಿಯಾಗಿ ತೋರಿದರೆ ನನಗೆ ಸಂಬಳವನ್ನು ಕೊಡಿರಿ, ಇಲ್ಲವಾದರೆ ಬಿಡಿರಿ ಅನ್ನಲು ಅವರು ಮೂವತ್ತು ತೊಲ ಬೆಳ್ಳಿಯನ್ನು ತೂಗಿ ನನ್ನ ಸಂಬಳಕ್ಕಾಗಿ ಕೊಟ್ಟರು. ಅವರು ಇವನ ಯೋಗ್ಯತೆ ಇಷ್ಟೇ ಎಂದುಕೊಂಡು ನನಗೆ ಕೊಟ್ಟ ಆ ಭಾರೀ ಸಂಬಳವನ್ನು ಯೆಹೋವನು ನೋಡಿ ಅದನ್ನು ಡಬ್ಬಿಗೆ ಹಾಕು ಎಂದು ಅಪ್ಪಣೆ ಮಾಡಿದಾಗ ನಾನು ಆ ಮೂವತ್ತು ತೊಲ ಬೆಳ್ಳಿಯನ್ನು ತೆಗೆದು ಯೆಹೋವನ ಆಲಯದ ಡಬ್ಬಿಗೆ ಹಾಕಿದೆನು." (ಜೆಕರ್ಯ–11:12,13)

ಹನ್ನೆರಡನೆಯ ಅಧ್ಯಾಯದಲ್ಲಿ, ಯೆಹೂದ್ಯರು ಮೆಸ್ಸೀಯನನ್ನು ಕೇವಲ ಮಾರಲಿಲ್ಲ, ಆದರೆ ಆತನನ್ನು ಕೊಂದು ಹಾಕಿದರು! ಎನ್ನುವ –ದನ್ನು ಜೆಕರ್ಯನು ಪ್ರವಾದಿಸಿದನು. ಆತನು ಹೇಳಿದ್ದೇನೆಂದರೆ:

ಯೆಹೋವನು ಇಂತೆನ್ನುತ್ತಾನೆ, "ದಾವೀದನ ವಂಶದವರಲ್ಲಿಯೂ ಯೆರೂಸಲೇಮಿನವರಲ್ಲಿಯೂ ದೇವರ ದಯೆಯನ್ನು ಹಂಬಲಿಸಿ
ಬೇಡುವ ಭಾವವನ್ನು ಸುರಿಸುವೆನು; **ತಾವು ಇರಿದವನನ್ನು ದಿಟ್ಟಿಸಿ ನೋಡುವರು;** ಇದ್ದೊಬ್ಬ ಮಗನನ್ನು ಕಳಿದುಕೊಂಡಂತೆ ಅವನಿಗಾಗಿ ಗೋಳಾಡುವರು. ಚೊಚ್ಚಲಮಗನ ವಿಯೋಗಕ್ಕೋಸ್ಕರ ದು:ಖಪಟ್ಟಂತೆ ಅವನಿನಾಗಿ ದು:ಖಿಸುವರು." ಮತ್ತೊಬ್ಬನು ಅವನನ್ನು, **"ನಿನ್ನ ಎದೆಯ ಮೇಲಿನ ಈ ಗಾಯಗಳೇನು"** ಎಂದು ಕೇಳಿದರೆ, ಅವನು, **"ಮಿತ್ರರ ಮನೆಯಲ್ಲಿ ನನಗಾದ ಗಾಯಗಳು"** ಎಂದುತ್ತರ ಕೊಡುವನು. (ಜೆಕರ್ಯ–12:10, 13:6)

ಮೆಸ್ಸೀಯನು ತನ್ನ ಕೈಗಳಲ್ಲಿ ಗಾಯಗಳನ್ನು ಹೊಂದುತ್ತಾನೆ ಎನ್ನುವದನ್ನು ಆ ಮಾತುಗಳೊಂದಿಗೆ ಜೆಕರ್ಯನು ಪ್ರವಾದಿಸಿದ್ದಾನೆ. ಆತನು ಈ ಗಾಯಗಳನ್ನು ಎಲ್ಲಿ ಪಡೆಯುತ್ತಾನೆ? ಆತನನ್ನು ಶಿಲುಬೆಗೆ ಹಾಕುವದಕ್ಕೆ ಆತನ ಜೊತೆ ಯೆಹೂದ್ಯರೇ ರೋಮನ್ನರನ್ನು ಒಪ್ಪಿಸಿದರು. ಆಗ ರೋಮನ್ನರು ಆತನ ಕೈ ಮತ್ತು ಕಾಲುಗಳಿಗೆ ಮೊಳೆಗಳಿಂದ ಶಿಲುಬೆಗೆ ಜಡಿದರು ಮತ್ತು ಈಟಿಯಿಂದ ಆತನ ಪಕ್ಕೆಯನ್ನು ತಿವಿದರು. ಜೆಕರ್ಯನು ಪ್ರವಾದಿಸಿದ ಹಾಗೆಯೇ ಪ್ರತಿಯೊಂದು ಸಂಭವಿಸಿತು. "ಅವರು ನನ್ನ ಕೈಕಾಲುಗಳನ್ನು ತಿವಿದಿ –ದ್ದಾರೆ." (ಕೀರ್ತನೆ–22:16) ಎಂದು ಮೆಸೀಯನ ಕುರಿತಾಗಿ ಪ್ರವಾದಿಯಾದ ದಾವೀದನು ನೂರು ವರ್ಷಗಳ ಮೊದಲೇ ಕೀರ್ತನೆ –ಗಳಲ್ಲಿ ಬರೆದಿರುವದರೊಂದಿಗೆ ಪ್ರವಾದಿಯಾದ ಜೆಕರ್ಯನು ಬರೆದಿರುವದು **ಸಂಪೂರ್ಣವಾದ ಹೊಂದಿಕೆಯಲ್ಲಿದೆ.**

ಸ್ನೇಹಿತರೇ, ಆದಾಮನ ಸಂತತಿಯನ್ನು ಅವರ ಪಾಪದ ದಂಡನೆಯಿಂದ ರಕ್ಷಿಸುವದಕ್ಕೆ ಬಹಳ ಹಿಂದೆ ದೇವರು ರಚಿಸಿದ ಯೋಜ –ನೆಯ ಒಂದು **ಪ್ರಾಮುಖ್ಯವಾದ ಭಾಗವೆಂದರೆ** ಅದು **ಶಿಲುಬೆಯ ಮೇಲಿನ ಮೆಸ್ಸೀಯನ ಮರಣ** ಎನ್ನುವದನ್ನು ನಾವು ತಿಳಿದುಕೊಳ್ಳ –ಬೇಕೆಂದು ದೇವರು ಬಯಸಿದನು. **ನೀತಿವಂತನಾದ ಮೆಸ್ಸೀಯನು ಅನೀತಿವಂತರಿಗಾಗಿ ಸಂಕಟಕ್ಕೊಳಗಾಗಿ ಸಾಯಬೇಕಾಗಿತ್ತು!** ಅದೇ ದೇವರ ಎಲ್ಲಾ ಪ್ರವಾದಿಗಳ ಸಂದೇಶವಾಗಿತ್ತು. ಈಗ ಇದೆಲ್ಲವೂ ನಿಮಗೆ ಸ್ಪಷ್ಟವಾಯಿತಾ? ಮೆಸ್ಸೀಯನು ಹುಟ್ಟುವದಕ್ಕಿಂತ ಐನೂರು ವರ್ಷಗಳಿಗಿಂತ ಮೊದಲೇ ಪ್ರವಾದಿಯಾದ ಜೆಕರ್ಯನು ಮೆಸ್ಸೀಯನ ಕುರಿತಾಗಿ ಪ್ರವಾದಿಸಿದ್ದು ನಿಮಗೆ ಅರ್ಥವಾಯಿತಾ? ಮೆಸ್ಸೀ –ಯನು ಸಂಕಟಕ್ಕೊಳಗಾಗಿ ಮರಣ ಹೊಂದಿ, ಸತ್ತವರೊಳಗಿಂದ ಮೊದಲಿಗನಾಗಿ ಎದ್ದುಬಂದು, ಪಾಪಗಳ ಕ್ಷಮಾಪಣೆಯನ್ನು ಮತ್ತು ಆತನ ಹೆಸರಿನಲ್ಲಿ ನಂಬಿಕೆಯಿಡುವವರೆಲ್ಲರಿಗೆ ಪರದೈಸಿನಲ್ಲಿ ಸ್ಥಳವನ್ನು ಘೋಷಿಸುತ್ತಾನೆ ಎಂಬ ಪ್ರವಾದಿಗಳ **ಸಂದೇಶವನ್ನು** ನೀವು ನಂಬುತ್ತೀರೋ? **ನೀವು ಪ್ರವಾದಿಗಳನ್ನು ನಂಬುತ್ತೀರೋ?** (ಅಪೊ.ಕೃತ್ಯ–26:18–27ನ್ನು ನೋಡಿರಿ) ಅಥವಾ ದೇವರ ಪ್ರವಾದಿಗಳನ್ನು ತಮ್ಮ ತುಟಿಗಳಿಂದ ಮಾತ್ರ ಗೌರವಿಸಿ ಅವರ ಸಂದೇಶಗಳನ್ನು ನಂಬದಿದ್ದ ಯೆಹೂದ್ಯರನ್ನು ಇಷ್ಟಪಡುತ್ತೀರೋ?

ಪ್ರವಾದಿಗಳ ಸಂದೇಶಕ್ಕೆ ಸಂಬಂಧಿಸಿದಂತೆ ವಾಕ್ಯಗಳು ಹೀಗೆ ಹೇಳುತ್ತವೆ:

**"ಪ್ರವಾದನೆಗಳನ್ನು ಹೀನೈಸಬೇಡಿರಿ."** (1ಥೆಸ–5:20). "ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದ –ಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆ– –ಣಿಸಿ **ಅದಕ್ಕೆ ಲಕ್ಷ್ಯ ಕೊಡುವದೇ ಒಳ್ಳೇದು."** (2ಪೇತ್ರ–1:19). **"ಪ್ರವಾದಿಗಳಲ್ಲಿ ನಿಮಗೆ ನಂಬಿಕೆಯುಂಟೋ?"** (ಅಪೊ.ಕೃತ್ಯ–26:27)

ಜೊತೆ ಕೇಳುಗರೇ, ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಾದರೆ ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ಮೆಸ್ಸೀಯನು ಈ ಲೋಕಕ್ಕೆ ಬರುವದಕ್ಕಿಂತ ಮುಂಚೆ ಪರಿಶುದ್ಧ ವಾಕ್ಯವನ್ನು ಬರೆದಂತಹ ಕೊನೆಯ ಪ್ರವಾದಿಯ ಮಾತನ್ನು ನಾವು ಕೇಳಿಸಿಕೊಳ್ಳು ತ್ತೇವೆ.

ದೇವರ ವಾಕ್ಯದಲ್ಲಿರುವ ಈ ಮುಖ್ಯವಾದ ಪ್ರಶ್ನೆಗೆ ಒಂದು ಯಥಾರ್ಥವಾದ ಉತ್ತರವನ್ನು ಕೊಡುವದಕ್ಕೆ ನೀವು ಹುಡುಕುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಪ್ರವಾದಿಗಳಲ್ಲಿ ನಿಮಗೆ ನಂಬಿಕೆಯುಂಟೋ?"** (ಅಪೊ.ಕೃತ್ಯ–26:27)

## ಪಾಠ 59

## ಪ್ರವಾದಿಗಳ ಸಂಕ್ಷಿಪ್ತಗೊಳಿಸಲ್ಪಟ್ಟ ಸಂದೇಶ

### ಮಲಾಕಿ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಒಂದು ದೀರ್ಘ ಸಮಯದ ನಂತರ ಈಗ ನಾವು ಪರಿಶುದ್ಧ ವಾಕ್ಯಗಳ ಮೊದಲ ಭಾಗವನ್ನು ಅಧ್ಯಯನ ಮಾಡುತ್ತಿದ್ದೇವೆ. ಈ ಭಾಗವು **ಮೊದಲ ಒಡಂಬಡಿಕೆ** ಎಂದು ಕರೆಯಲ್ಪಡುತ್ತದೆ. ಇದು ಹಳೆ ಒಡಂಬಡಿಕೆ ಎಂಬುದಾಗಿ ಸಹ ಕರೆಯಲ್ಪಡುತ್ತದೆ. ಈ ಮೊದಲನೆಯ ಭಾಗವು ತೋರಾ, ಕೀರ್ತನೆಗಳು, ಪ್ರವಾದಿಗಳ ಇತರ ಬರವಣಿಗೆಗಳನ್ನು ಒಳಗೊಂಡಿದೆ. ನಾವು ನೋಡಿರುವ ಹಾಗೆ, ಮೊದಲ ಒಡಂಬಡಿಕೆಯ ಪುಸ್ತಕವನ್ನು ಬರೆಯುವದಕ್ಕೆ ದೇವರು ಒಂದು ಸಾವಿರದ ಐದುನೂರು ವರ್ಷಗಳ ಅವಧಿಯಲ್ಲಿ ಮೂವತ್ತ –ಕ್ಕಿಂತಲೂ ಹೆಚ್ಚು ಜನ ಪ್ರವಾದಿಗಳನ್ನು ಉಪಯೋಗಿಸಿದ್ದಾನೆ.

ಈ ದಿನ ನಾವು ಪರಿಶುದ್ಧ ಗ್ರಂಥಗಳ ಮೊದಲನೆಯ ಭಾಗದಲ್ಲಿ ನಮ್ಮ ಪ್ರಯಾಣವನ್ನು ಮುಗಿಸುತ್ತೇವೆ. ಹೇಗಿದ್ದರೂ, ಮೊದಲ ಒಡಂಬಡಿಕೆ ಪುಸ್ತಕದ ಕೊನೆಯ ಅಧ್ಯಾಯಗಳನ್ನು ನಾವು ನೋಡಿಕೊಳ್ಳುವದಕ್ಕಿಂತ ಮೊದಲು, ಮೊದಲ ದಿನದಿಂದ ಇಲ್ಲಿಯವರೆಗೆ ಈ ಪರಿಶುದ್ಧ ಪುಸ್ತಕದಿಂದ ಯಾವುದನ್ನು ಸಂಗ್ರಹಿಸಿಕೊಂಡಿದ್ದೇವೆ ಎನ್ನುವದರ ಕುರಿತಾಗಿ ಸ್ವಲ್ಪ ಮಾತಾಡುವದಕ್ಕೆ ನಾವು ಇಷ್ಟಪಡು –ತ್ತೇವೆ. **ಮೂರು ಮಹತ್ವದ ಆಲೋಚನೆಗಳೊಂದಿಗೆ ಎಲ್ಲಾ ಪ್ರವಾದಿಗಳ ಸಂದೇಶವನ್ನು ನಾವು ಸಂಕ್ಷಿಪ್ತಗೊಳಿಸಬಹುದು:**

**ಒಂದು**: ದೇವರು **ಪರಿಶುದ್ಧನೂ** ಮತ್ತು ಪ್ರತಿಯೊಂದು ಪಾಪಕ್ಕೂ ನ್ಯಾಯತೀರಿಸಬೇಕು.

**ಎರಡು:** ಆದಾಮನ ಎಲ್ಲಾ ಮಕ್ಕಳೂ **ಪಾಪದಲ್ಲಿ** ಹುಟ್ಟಿದ್ದಾರೆ ಮತ್ತು ದೇವರ ನ್ಯಾಯತೀರ್ವಿಕೆಯನ್ನು ಎದುರಿಸಬೇಕು.

**ಮೂರು**: ಆದಾಮನ ಮಕ್ಕಳಿಗಾಗಿ ಪಾಪದ ಶಿಕ್ಷೆಯನ್ನು ಹೊತ್ತುಕೊಳ್ಳುವಂತ ಒಬ್ಬ ಪರಿಶುದ್ಧ **ವಿಮೋಚಕನನ್ನು** ಲೋಕಕ್ಕೆ ಕಳಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡಿದ್ದನು.

ಈ ಮೂರು ಸತ್ಯಗಳನ್ನು ಎಲ್ಲಾ ಪ್ರವಾದಿಗಳೂ ಪ್ರಸಂಗಿಸಿದ್ದರು. ಈ ಮೂರು ಅಂಶಗಳನ್ನು ಮತ್ತೆ ಹೇಳೋಣ.

**ಮೊದಲನೆಯದು: ದೇವರು ಪರಿಶುದ್ಧನು,** ಪಾಪವನ್ನು ಉದಾಸೀನ ಮಾಡಲು ಸಾಧ್ಯವಿಲ್ಲ.

**ಎರಡನೆಯದು: ಮನುಷ್ಯನು ಅಪವಿತ್ರನು,** ಪಾಪದಿಂದ ತುಂಬಿದ್ದು, ಪಾಪದ ದಂಡನೆಯಿಂದ ತಾನೇ ರಕ್ಷಿಸಿಕೊಳ್ಳುವ ಯಾವ ದಾರಿಯಿಲ್ಲದವನು.

**ಮೂರನೆಯದು**: ಪಾಪಿಗಳನ್ನು ಶುದ್ಧಪಡಿಸಿ ನ್ಯಾಯತೀರ್ಪಿನಿಂದ ಅವರನ್ನು ರಕ್ಷಿಸುವದಕ್ಕೆ **ದೇವರು ಒಂದು ಯೋಜನೆ ಹೊಂದಿದ್ದನು.**

ನೀವು ಈ ಮೂರು ಸತ್ಯಗಳನ್ನು ಗ್ರಹಿಸಿಕೊಂಡಿರಾ? ಈ ಮೂರು ಸತ್ಯಗಳು ನಿಮ್ಮನ್ನು ಬಿಗಿಯಾಗಿ ಹಿಡಿದುಕೊಂಡಿವೆಯಾ? ದೇವರು ಎಷ್ಟು ಪರಿಶುದ್ಧನೆಂಬುದನ್ನು ನೀವು ತಿಳಿದುಕೊಂಡಿರಾ? ನಿಮಗೆ ನ್ಯಾಯತೀರಿಸುವವನ ಕಣ್ಣುಗಳಲ್ಲಿ ನಿಮ್ಮ ಪಾಪಗಳು ಎಷ್ಟೊಂದು ದೊಡ್ಡದಾಗಿವೆ ಎಂಬುದನ್ನು ನೀವು ತಿಳಿದಿದ್ದೀರಾ? ನಿಮ್ಮನ್ನು ನಿಮ್ಮ ಪಾಪಗಳಿಂದ ಶುದ್ಧಿಗೊಳಿಸುವದಕ್ಕೆ ದೇವರು ಒಂದು ಯೋಜನೆ –ಯನ್ನು ಹೊಂದಿದ್ದಾನೆಂಬುದನ್ನು ನೀವು ತಿಳಿದಿದ್ದೀರಾ?

ಖಂಡಿತವಾಗಿಯೂ, ದೇವರು **ಪವಿತ್ರನೂ** ಮತ್ತು ಮನುಷ್ಯನು **ಅಪವಿತ್ರನು**. ಪರಿಶುದ್ಧ ವಾಕ್ಯಗಳಲ್ಲಿನ ನಮ್ಮ ಅಧ್ಯಯನಗಳಲ್ಲಿ ಆ **ಎರಡು ಸತ್ಯಗಳನ್ನು** ನಾವು ಆಗಾಗ್ಗೆ ನೋಡಿಕೊಂಡಿದ್ದೇವೆ. ದೇವರ ಪರಿಶುದ್ಧತೆಗೆ ಕಾರಣವೇನೆಂದರೆ, ಆತನು ಸೈತಾನನಿಗೂ ಮತ್ತು ಅವನನ್ನು ಹಿಂಬಾಲಿಸುವವರಿಗೂ ಆರದ ಬೆಂಕಿಯನ್ನು ಸೃಷ್ಟಿಸಿದ್ದಾನೆ. ದೇವರ ಪರಿಶುದ್ಧತೆಗೆ ಕಾರಣವೆಂದರೆ, ಅದು ಆದಾಮ ಮತ್ತು ಹವ್ವರು ಆ ದಿನದಲ್ಲಿ ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿಂದದ್ದರಿಂದ ದೇವರು ಅವರನ್ನು ಏದೇನ್ ತೋಟದಿಂದ ಹೊರದೊಬ್ಬಿದನು. ಪಾಪವನ್ನು ಮುಚ್ಚುವದಕ್ಕಾಗಿ ಪಶುಗಳನ್ನು ಸರ್ವಾಂಗ ಹೋಮವಾಗಿ ಸಮರ್ಪಿಸುವಂತೆ ದೇವರು ಆದಾಮನ ಮಕ್ಕಳಿಗೆ ಆಜ್ಞಾಪಿಸಿದ್ದು ಆತನ ಪರಿಶುದ್ಧತೆಗೆ ಕಾರಣವಾಗಿದೆ. ದೇವರು ಕಾಯಿನನ ಕಾಣಿಕೆಯನ್ನು ಒಪ್ಪದಿರುವದು ಸಹ ಆತನ ಪರಿಶುದ್ಧತೆಗೆ ಕಾರಣವಾಗಿದೆ.
ಯಾಕೆಂದರೆ, ದೇವರು ಪರಿಶುದ್ಧನು, ಆತನು ನೋಹನ ಕಾಲದಲ್ಲಿ ಪ್ರಳಯದ ನೀರಿನಿಂದ ಪಾಪಿಗಳನ್ನು ನಾಶಗೊಳಿಸಿದನು ಮತ್ತು ಅಬ್ರಹಾಮನ ಕಾಲದಲ್ಲಿ ಸೊದೋಮ್ ಮತ್ತು ಗೊಮೋರದ ಜನರ ಮೇಲೆ ಬೆಂಕಿಯ ಮಳೆಯನ್ನು ಸುರಿಸಿದನು. ದೇವರ ಪರಿಶುದ್ಧ –ತೆಗೆ ಕಾರಣವೇನೆಂದರೆ, ನೀತಿಯಲ್ಲಿ ಲೋಕಕ್ಕೆ ನ್ಯಾಯತೀರಿಸುವ ದಿನವನ್ನು ಆತನು ಸಿದ್ಧಪಡಿಸಿದ್ದಾನೆ.

ದೇವರ ಪವಿತ್ರತೆ ಮತ್ತು ಮನುಷ್ಯನ ಅಪವಿತ್ರತೆಯ ಕುರಿತಾಗಿ ದೇವರ ಪ್ರವಾದಿಗಳು ಬರೆದಿರುವದನ್ನು ಕೇಳಿಸಿಕೊಳ್ಳಿರಿ. ಅವರು ಹೇಳಿರುವದೇನೆಂದರೆ: **"**ನನ್ನ ದೇವರಾದ ಯೆಹೋವನೇ, ನೀನು ಅನಾದಿಯಿಂದಿದ್ದೀಯಲ್ಲಾ; ನಾವು ಸಾಯೆವು. . . . .ಕೇಡನ್ನು ನೋಡಲಾರದ ಅತಿಪವಿತ್ರ ದೃಷ್ಟಿಯುಳ್ಳವನೇ, ಕೆಡುಕನ್ನು ಕಟಾಕ್ಷಿಸಲಾರದವನೇ. . .!**"** (ಹಬಕ್ಕೂಕ–1:12–13). **"**ನಾವೆಲ್ಲರು ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ; ನಾವೆಲ್ಲರೂ ತರಗೆಲೆಯೋಪಾದಿಯಲ್ಲಿ ಒಣಗಿ ಹೋಗಿದ್ದೇವೆ; ನಮ್ಮ ಅಪರಾಧಗಳು ಬಿರುಗಾಳಿಯ ಪ್ರಕಾರ ನಮ್ಮನ್ನು ಬಡಿದುಕೊಂಡು ಹೋಗಿವೆ.**"** (ಯೆಶಾಯ–64:6). ಒಂದುವೇಳೆ ದೇವರು ಪವಿತ್ರನು ಮತ್ತು ಮನುಷ್ಯನು ತುಂಬಾ ಅಪವಿತ್ರನು ಆಗಿದ್ದರೆ, ಹಾಗಾದರೆ ಯಾರು ರಕ್ಷಿಸಲ್ಪಡುವದಕ್ಕೆ ಸಾಧ್ಯ? ನರಕದ ನಿತ್ಯವಾದ ಬೆಂಕಿಯಿಂದ ನಾವು ರಕ್ಷಿಸಲ್ಪಡುವದಕ್ಕೆ ಹೇಗೆ ಸಾಧ್ಯ? ಪವಿತ್ರನೂ ಮತ್ತು ಶುದ್ಧನೂ ಆಗಿರುವ ದೇವರ ಪ್ರಸನ್ನತೆ –ಯಲ್ಲಿ ಆದಾಮನ ಮಕ್ಕಳು ನಿತ್ಯತ್ವವನ್ನು ಕಳೆಯುವದಕ್ಕೆ ಹೇಗೆ ಸಾಧ್ಯವಾಗುತ್ತದೆ?

ಆ ಪ್ರಶ್ನೆಗೆ ಉತ್ತರ ಪ್ರವಾದಿಗಳ ಸಂದೇಶದಲ್ಲಿರುವ **ಮೂರನೆಯ ಅಂಶವಾಗಿದೆ**. ದೇವರು **ಪವಿತ್ರನೂ** ಮತ್ತು ಆದಾಮನ ಮಕ್ಕಳು **ಅಪವಿತ್ರರು** ಎಂದು ಪ್ರವಾದಿಗಳು ಬೋಧಿಸಿದ ನಂತರ, ಆದಾಮನ ಮಕ್ಕಳ ಪಾಪಗಳನ್ನು ತೊಳೆಯುವದಕ್ಕೆ ದೇವರು ತಾನೇ ಒಂದು **ಯೋಜನೆಯನ್ನು** ಹೊಂದಿದ್ದಾನೆ ಎಂದು ಅವರು ಹೇಳುವದಕ್ಕೆ ತೊಡಗಿದರು.

ಮೊದಲನೆಯ ಒಡಂಬಡಿಕೆಯ (ಹಳೆ ಒಡಂಬಡಿಕೆ) ಪುಸ್ತಕದ ಬಹು ಮುಖ್ಯವಾದ ಸಂದೇಶವೇನೆಂದರೆ, ತನ್ನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರನ್ನೂ ವಿಮೋಚಿಸುವದಕ್ಕೆ ಆದಾಮನ ಅನೀತಿವಂತ ಮಕ್ಕಳ ಸ್ಥಳದಲ್ಲಿ ಸಾಯುವ **ಒಬ್ಬ ನೀತಿವಂತ ವಿಮೋಚಕನನ್ನು ಲೋಕಕ್ಕೆ ಕಳಿಸುವದಕ್ಕೆ ದೇವರು ವಾಗ್ದಾನ ಮಾಡಿದ್ದಾನೆ** ಎನ್ನುವದೇ. ಪಾಪಿಗಳನ್ನು ರಕ್ಷಿಸುವದಕ್ಕೆ ಇದು ದೇವರ ಯೋಜನೆಯಾಗಿತ್ತು ಮತ್ತು ಯೋಜನೆಯಾಗಿದೆ. ಕೇವಲ ವಿಮೋಚಕನು ಸುರಿಸುವ ರಕ್ತದ ಮೂಲಕ ಮಾತ್ರವೇ, ದೇವರು ಪಾಪವನ್ನು ಕ್ಷಮಿಸಿ, ತನ್ನ ಪರಿಶುದ್ಧತೆಯ ಹೊಂದಾಣಿಕೆ ಮಾಡಿಕೊಳ್ಳದೇ ತಾನೇ ಪಾಪಿಗಳನ್ನು ಸಂಧಾನಮಾಡಿಕೊಳ್ಳುತ್ತಾನೆ.

ಲೋಕಕ್ಕೆ ರಕ್ಷಕನನ್ನು ಕಳಿಸುವ ಆತನ ಯೋಜನೆಗೆ ಮುನ್ನಡೆಯಾಗಿ, ಯಾರ ಮೂಲಕವಾಗಿ ದೇವರ ಪ್ರವಾದಿಗಳು ಮತ್ತು ಮೆಸ್ಸೀ –ಯನು ಬರಬೇಕಾಗಿತ್ತೋ ಆ ಅಬ್ರಹಾಮನನ್ನು ಒಂದು ಹೊಸ ಜನಾಂಗವನ್ನಾಗಿ ಮಾಡುವದಕ್ಕೆ ದೇವರು **ಅಬ್ರಹಾಮನನ್ನು** ಕರೆದನು. ದೇವರು ಅಬ್ರಹಾಮನೊಂದಿಗೆ ಮಾತಾಡುತ್ತಾ ಹೀಗೆ ಹೇಳುತ್ತಾನೆ: **"**ನೀನು ಆಶೀರ್ವಾದನಿಧಿಯಾಗುವಿ ಮತ್ತು **ಭೂಲೋಕದ ಎಲ್ಲಾ ಕುಲದವರಿಗೂ** ನಿನ್ನ ಮೂಲಕ ಆಶೀರ್ವಾದವುಂಟಾಗುದು.**"** ಅಬ್ರಹಾಮನು ತನ್ನ ವಯಸ್ಸಾದ ಕಾಲದಲ್ಲಿ **ಇಸಾಕನನ್ನು** ಪಡೆದನು, ಇಸಾಕನು **ಯಾಕೋಬನನ್ನು** ಪಡೆದನು, ಯಾಕೋಬನು **ಹನ್ನೆರಡು ಗಂಡುಮಕ್ಕಳನ್ನು** ಪಡೆದನು, ಇವರು **ಇಸ್ರಾಯೇಲಿನ** ಕುಲಗಳ ಉತ್ಪಾದಕರು. ಈ ಪ್ರಕಾರ, ದೇವರು ಅಬ್ರಹಾಮನನ್ನು ಕರೆದಾಗ, ಆತನು ಲೋಕಕ್ಕೆ ರಕ್ಷಕನನ್ನು ಕಳಿಸುವ ತನ್ನ ಯೋಜನೆಯೊಂದಿಗೆ ಸತತವಾಗಿ ಮುಂದುವರಿದನು,

ಯಾಕೆಂದರೆ ಇದು ಅಬ್ರಹಾಮನ ವಂಶಾವಳಿಯಿಂದ ನಡೆಯುವದಾಗಿತ್ತು, ಇಸ್ರಾಯೇಲ್ ಜನಾಂಗದ ಮೂಲಕ ಮೆಸ್ಸೀಯನು ಹುಟ್ಟಿಬರಬೇಕಾಗಿತ್ತು ಎನ್ನುವದನ್ನು ನಾವು ಕಲಿತುಕೊಂಡೆವು.

ಇಸ್ರಾಯೇಲ್ ಜನಾಂಗದವರು ಹೇಗೆ ಕಾನಾನ್ ದೇಶದಿಂದ ಹೊರಟು ಐಗುಪ್ತದಲ್ಲಿ ನೆಲೆಗೊಂಡು ಐಗುಪ್ತ್ಯರ ಗುಲಾಮರಾಗಿದ್ದರು ಎನ್ನುವದನ್ನು ಮುಂದೆ ನಾವು ನೋಡಿಕೊಂಡೆವು. ಆದರೆ ದೇವರು ಅಬ್ರಹಾಮನ ಸಂತತಿಯವರಾದ ಇಸ್ರಾಯೇಲ್ಯರನ್ನು ಮರೆಯ –ಲಿಲ್ಲ. ಇಸ್ರಾಯೇಲ್ಯರನ್ನು ಬಿಡಿಸುವದಕ್ಕೆ ದೇವರು **ಮೋಶೆಯನ್ನು** ಕರೆದನು ಮತ್ತು ಬಹಳ ಹಿಂದೆ ಅವರ ಪೂರ್ವಿಕನಾದ ಅಬ್ರಹಾಮ –ನಿಗೆ ವಾಗ್ದಾನ ಮಾಡಿದಂತಹ ದೇಶಕ್ಕೆ ಅವರನ್ನು ನಡಿಸಿದನು. ಅಂದಿನಿಂದ ದೇವರನ್ನು ತಿಳಿದುಕೊಳ್ಳುವಂತೆ ಮಾಡುವ ಪ್ರತಿಯೊಂ –ದರ ತಳಹದಿಯಾಗಿದ್ದ **ತೋರಾ** ಎಂದು ಕರೆಯಲ್ಪಡುವ ಪುಸ್ತಕವನ್ನು ನಮಗೆ ಕೊಡುವದಕ್ಕೆ ಸಹ ದೇವರು ಪ್ರವಾದಿಯಾದ ಮೋಶೆ –ಯನ್ನು ಉಪಯೋಗಿಸಿದನು.

ಮೋಶೆಯ ಕಾಲವಾದ ನಂತರ, ದೇವರು ಹೇಗೆ ಇಸ್ರಾಯೇಲ್ಯರಿಗಾಗಿ ಅನೇಕ ಪ್ರವಾದಿಗಳನ್ನು ಕಳಿಸಿದನೆಂಬುದನ್ನು, ಆದರೆ ಹೆಚ್ಚಿನ ಜನರು ಪ್ರವಾದಿಗಳ ಮಾತಿಗೆ ಗಮನಕೊಡಲಿಲ್ಲ ಎಂಬುದನ್ನು ನಾವು ನೋಡಿಕೊಂಡೆವು. ಹೀಗಿದ್ದರೂ, ದೇವರ ನಂಬಿಗಸ್ತಿಕೆಯನ್ನು ಮತ್ತು ಲೋಕಕ್ಕೆ ಮೆಸ್ಸೀಯನನ್ನು ಕಳಿಸುವದಕ್ಕೆ ಆತನು ಸಂಕಲ್ಪಸಿದ್ದ ಯೋಜನೆಯನ್ನು ಇಸ್ರಾಯೇಲ್ಯರ ಅಪನಂಬಿಗಸ್ತಿಕೆಯು ತಡೆಯು –ವದಕ್ಕಾಗಲಿಲ್ಲ! ಹೀಗೆ **ಕೀರ್ತನೆಗಳ** ಪುಸ್ತಕದಲ್ಲಿ ಕಂಡುಬರುವ ಅಗಾಧವಾದ ಮತ್ತು ಅತಿಸುಂದರವಾದ ಹೆಚ್ಚಿನ ಸಂಗೀತಗಳನ್ನು ಬರೆದಂತಹ **ದಾವೀದನನ್ನು** ದೇವರು ಇಸ್ರಾಯೇಲ್ಯರ ಅರಸನನ್ನಾಗಿಯೂ ಮತ್ತು ಪ್ರವಾದಿಯನ್ನಾಗಿಯೂ ಹೇಗೆ ಆರಿಸಿಕೊಂಡನೆಂಬು –ದನ್ನು ನಾವು ನೋಡಿಕೊಂಡೆವು. ಪ್ರವಾದಿಯಾದ ದಾವೀದನು ಮೆಸ್ಸೀಯನ ಕುರಿತಾಗಿ ಮತ್ತು ಆದಾಮನ ಸಂತತಿಯವರು ಹೇಗೆ ಆತನನ್ನು ಹಿಂಸಿಸುವರು ಮತ್ತು ಆತನ ಕೈಕಾಲುಗಳನ್ನು ಸಹ ತಿವಿಯುವರು ಎನ್ನುವದರ ಕುರಿತಾಗಿಯೂ ಹೆಚ್ಚಾಗಿ ಬರೆದಿದ್ದಾನೆ. ಆದರೆ ಪಾಪವನ್ನು ನಿವಾರಿಸುವ ಯಜ್ಞದ ಹಾಗೆ ಮೆಸ್ಸೀಯನು ತನ್ನ ರಕ್ತವನ್ನು ಸುರಿಸಿದ ನಂತರ, ಆತನು ಮರಣವನ್ನು ಜಯಿಸಿ ಸಮಾಧಿಯಿಂದ ಎದ್ದು ಬರುತ್ತಾನೆ ಎನ್ನುವದನ್ನು ಸಹ ದಾವೀದನು ಪ್ರವಾದಿಸಿದ್ದಾನೆ!

ವಾಕ್ಯಗಳ ಮೂಲಕವಾದ ನಮ್ಮ ಪ್ರಯಾಣದಲ್ಲಿ, ಮೆಸ್ಸೀಯನ ಕುರಿತಾಗಿ ಮೋಶೆ ಮತ್ತು ದಾವೀದನು ಮಾತ್ರ ಬರೆದಿಲ್ಲವೆನ್ನುವದನ್ನು ಸಹ ನಾವು ಕಂಡುಕೊಳ್ಳಬೇಕು. **ದೇವರ ಪ್ರವಾದಿಗಳೆಲ್ಲರೂ ಮೆಸ್ಸೀಯನ ಕುರಿತಾಗಿ ಪ್ರಕಟಿಸಿದ್ದಾರೆ.** ಉದಾಹರಣೆಗೆ, ನಿಮಗೆ ತಿಳಿದಿರುವ
ಹಾಗೆ, ಯಾರೂ ಎಂದೂ ಹುಟ್ಟಿರದಂತಹ ರೀತಿಯಲ್ಲಿ ಮೆಸ್ಸೀಯನು ಹುಟ್ಟಿ ಬರುತ್ತಾನೆ ಎಂದು **ಯೆಶಾಯನು** ಪ್ರಕಟಿಸಿದ್ದನು. ಅವನು ಹೇಳಿರುವದೇನೆಂದರೆ: "ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆದು ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು. ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ." (ಯೆಶಾಯ–7:14; ಮತ್ತಾಯ–1:23). ಮೆಸ್ಸೀಯನು ಹುಟ್ಟುವದಕ್ಕಿಂತ ಏಳು ನೂರು ವರ್ಷಗಳಿಗಿಂತ ಮೊದಲೇ ಪ್ರವಾದಿಯಾದ ಯೆಶಾಯನು ಬರೆದಿದ್ದನು.

ಯೆಶಾಯನಂತೆಯೇ ಇನ್ನೊಬ್ಬ ಪ್ರವಾದಿಯು ಆ ಸಮಯದಲ್ಲಿದ್ದನು. ಅವನ ಹೆಸರು **ಮೀಕ**. ಮೆಸ್ಸೀಯನು ಹುಟ್ಟಬೇಕಾಗಿದ್ದ ಪಟ್ಟಣದ ಹೆಸರನ್ನು ಯೆಹೋವನು ಮೀಕನಿಗೆ ಪ್ರಕಟಪಡಿಸಿದ್ದನು. ಪ್ರವಾದಿಯಾದ ಮೀಕನು ಬರೆದಿರುವದನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳಿರಿ. ಮೀಕನ ಪುಸ್ತಕ ಐದನೆಯ ಅಧ್ಯಾಯದಲ್ಲಿ, ನಾವು ಓದುವದೇನೆಂದರೆ: "ಎಫ್ರಾತದ **ಬೆತ್ಲೆಹೇಮೇ**, ನೀನು ಯೆಹೂದದ ಗ್ರಾಮಗಳಲ್ಲಿ ಚಿಕ್ಕದಾಗಿದ್ದರೂ ಇಸ್ರಾಯೇಲನ್ನು ಆಳತಕ್ಕವನು ನಿನ್ನೊಳಗಿಂದ ನನಗಾಗಿ ಹೊರಡುವನು; ಆತನ ಹೊರಡೋಣದ ಮೂಲವು ಪುರಾ –ತನವೂ ಅನಾದಿಯೂ ಆದದ್ದು." (ಮೀಕ–5:2). ಈ ಪ್ರಕಾರ, ದಾವೀದನ ಪಟ್ಟಣವಾದ ಬೆತ್ಲೆಹೇಮಿನಲ್ಲಿ ಮೆಸ್ಸೀಯನು ಹುಟ್ಟುತ್ತಾ –ನೆಂದು ಮೀಕನು ಪ್ರಕಟಿಸಿದನು! ಮೆಸ್ಸೀಯನು ಹುಟ್ಟುವದಕ್ಕಿಂತ ನೂರು ವರ್ಷಗಳ ಮೊದಲೇ ದೇವರು ಪ್ರವಾದಿಯಾದ ಮೀಕನು ತಿಳಿಸಿರುವಂತೆ ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಹುಟ್ಟುತ್ತಾನೆ ಎನ್ನುವ ಈ ಪ್ರವಾದನೆಯನ್ನು ದೇವರು ಹೇಗೆ ನೆರವೇರಿಸಿದನೆಂಬುದನ್ನು ಈಗಿನಿಂದ ಮೂರು ಕಾರ್ಯಕ್ರಮಗಳಲ್ಲಿ ನಾವು ಕಲಿತುಕೊಳ್ಳುತ್ತೇವೆ.

ನಿಜವಾಗಿಯೂ, ಲೋಕಕ್ಕೆ ರಕ್ಷಕನ ಆಗಮನವನ್ನು ಯೆಹೋವನು ತುಂಬಾ ಜಾಗರೂಕತೆಯಿಂದ ಸಿದ್ಧಪಡಿಸಿದ್ದನು! **ಮೆಸ್ಸೀಯನ ಬರು –ವಿಕೆಯ ಕುರಿತಾಗಿ ಪ್ರವಾದಿಗಳ ನೂರಾರು ಉಲ್ಲೇಖಗಳನ್ನು ದೇವರ ಪರಿಶುದ್ಧ ಪುಸ್ತಕವು ಒಳಗೊಂಡಿದೆ.** ಬಹುಶ: ನೀವು, ಮೆಸ್ಸೀಯನು ಈ ಲೋಕಕ್ಕೆ **ಬರುವದಕ್ಕಿಂತ** ಮೊದಲೇ ಆತನ ಕುರಿತಾದ ಈ ಎಲ್ಲಾ ಆಲೋಚನೆಗಳನ್ನು ಪ್ರವಾದಿಗಳ ಮನಸ್ಸಿನಲ್ಲಿ ಯೆಹೋವನು ಯಾಕೆ ಇಟ್ಟನು? ಎಂದು ಕೇಳಬಹುದು. ಇದಕ್ಕೆ ಒಂದು ಮುಖ್ಯವಾದ ಕಾರಣವಿದೆ. ಮೆಸ್ಸೀಯನು ಬರುವದಕ್ಕಿಂತ ಮೊದಲೇ ಆತನ ಕುರಿತು ಹೆಚ್ಚಾಗಿ ಬರೆಯುವಂತೆ ದೇವರು ಪ್ರವಾದಿಗಳನ್ನು ಪ್ರೇರೇಪಿಸಿದನು,

ಇದರಿಂದ ಆತನು ಬಂದು ತನ್ನ ಕುರಿತಾಗಿ ಪ್ರವಾದಿಗಳು ಬರೆದಿದ್ದನ್ನೆಲ್ಲಾ ನೆರವೇರಿಸಿದನೆಂದು ಮತ್ತು ಆತನೇ ಮತ್ತು ಆತನೊಬ್ಬನೇ ದೇವರು ಕಳಿಸಿದ ರಕ್ಷಕನು ಎಂದು **ಯಾವುದೇ ಸಂದೇಹ –ವಿಲ್ಲದೆ** ನಾವು ತಿಳಿದುಕೊಳ್ಳುವದಕ್ಕೆ ಸಾಧ್ಯವಾಯಿತು. ನಿಮ್ಮನ್ನು ಯಾರಾದರೂ ಮೋಸಗೊಳಿಸುವದು ದೇವರಿಗೆ ಇಷ್ಟವಿಲ್ಲ! ಪಾಪಿಗಳ ರಕ್ಷಕನೂ, ಮೆಸ್ಸೀಯನು ಯಾರೆಂಬುದನ್ನು ನೀವು ತಿಳಿದುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆ, ಇದರಿಂದ ನೀವು ಆತನನ್ನು ನಂಬುವದಕ್ಕೆ ಮತ್ತು ಆತನನ್ನು ಹಿಂಬಾಲಿಸುವದಕ್ಕೆ ಸಾಧ್ಯವಾಗುತ್ತದೆ ಹಾಗೂ ನಿಮ್ಮ ಪಾಪಗಳಿಂದ ರಕ್ಷಿಸಲ್ಪಡುತ್ತೀರಿ. ಆತನು ಈ ಅದ್ಭುತವಾದ ಸಮಂಜಸವಾದ ಮೊದಲ ಒಡಂಬಡಿಕೆ ಎಂದು ಕರೆಯಲ್ಪಡುವ ಈ ಪುಸ್ತಕವನ್ನು ನಮಗೆ ಕೊಡುವದಕ್ಕೆ ಇದು ಒಂದು ಕಾರಣವಾಯಿತು – ಆದ್ದರಿಂದ ನಾವು ತಪ್ಪಿನಿಂದ ಸತ್ಯದ ವ್ಯತ್ಯಾಸ ತಿಳಿಯುವದಕ್ಕೆ ಸಾಧ್ಯವಾಯಿತು.

ಮೊದಲನೆಯ ಒಡಂಬಡಿಕೆಯಲ್ಲಿನ ನಮ್ಮ ಪ್ರಯಾಣವನ್ನು ಮುಗಿಸುವದಕ್ಕೆ ಈಗ, ಈ ಒಡಂಬಡಿಕೆಯ ಕೊನೆಯ ಪುಸ್ತಕವಾಗಿರುವ **ಮಲಾಕಿಯನ** ಪುಸ್ತಕದಿಂದ ಓದುವದಕ್ಕೆ ನಾವು ಇಷ್ಟಪಡುತ್ತೇವೆ. ಪ್ರವಾದಿಯಾದ ಮಲಾಕಿಯನ ಮಾತುಗಳು ನಮಗೆ ಪ್ರಾಮುಖ್ಯ –ವಾದವುಗಳಾಗಿವೆ, ಯಾಕೆಂದರೆ ಅವು, ಮೆಸ್ಸೀಯನು ಭೂಲೋಕಕ್ಕೆ ಭೇಟಿಕೊಡುವದಕ್ಕಿಂತ ಮೊದಲು ಆದಾಮನ ಮಕ್ಕಳಿಗೆ ದೇವರು ಕಳಿಸಿದ ಕೊನೆಯ ಮಾತುಗಳಾಗಿವೆ. ವಿಮೋಚಕನು ಹುಟ್ಟುವದಕ್ಕೆ ಕೇವಲ ನಾನೂರು ವರ್ಷಗಳು ಮಾತ್ರ ಉಳಿದಿತ್ತು.

ಮೊದಲನೆಯ ಒಡಂಬಡಿಕೆಯ ಕೊನೆಯ ಅಧ್ಯಾಯದಲ್ಲಿ ಪ್ರವಾದಿಯಾದ ಮಲಾಕಿಯನು ಬರೆದಿರುವದನ್ನು ಕೇಳಿರಿ:

**"**ಇಗೋ, ನನ್ನ ದೂತನನ್ನು ಕಳಿಸುತ್ತೇನೆ, **ಆತನು ನನ್ನ ಮುಂದೆ ದಾರಿಯನ್ನು ಸರಿಮಾಡುವನು;** ನೀವು ಹಂಬಲಿಸುವ ಕರ್ತನು ತನ್ನ ಆಲಯಕ್ಕೆ ಫಕ್ಕನೆ ಬರುವನು; ಆಹಾ, ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಐತರುತ್ತಾನೆ; ಇದು ಸೇನಾಧೀಶ್ವರ ಯೆಹೋವನ ನುಡಿ. ಆದರೂ ಯೆಹೋವನಾದ ನಾನು ಮಾರ್ಪಟ್ಟಿಲ್ಲ. ಆದದುಂದ ಯಾಕೋಬ ಸಂತತಿಯವರೇ ನೀವು ನಾಶವಾಗಲಿಲ್ಲ. ನನ್ನ ನಾಮದಲ್ಲಿ ಭಯಭಕ್ತಿಯಿಟ್ಟಿರುವ ನಿಮಗೋ ದೇವರ **ಧರ್ಮವೆಂಬ ಸೂರ್ಯನು** ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ ಮೂಡುವನು; ಕೊಟ್ಟಿಗೆಯಿಂದ ಬಿಟ್ಟ ಕರುಗಳಂತೆ ನೀವು ಹೊರಟು ಬಂದು ಕುಣಿದಾಡುವಿರಿ.**"** (ಮಲಾಕಿ–3:1,6; 4:2)

ಹೀಗೆ, ಮೆಸ್ಸೀಯನಿಗೆ ದಾರಿಯನ್ನು ಸಿದ್ಧಪಡಿಸುವದಕ್ಕೆ ಆತನ ಮುಂದೆ ಒಬ್ಬ ಪ್ರವಾದಿಯನ್ನು ಕಳಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡಿರುವದನ್ನು ಪ್ರವಾದಿಯಾದ ಮಲಾಕಿಯನು ಪ್ರವಾದಿಸಿದನು. ಆ ಪ್ರವಾದಿ ಯಾರೆಂದು ನಿಮಗೆ ಗೊತ್ತಾ? ನಮ್ಮ ಮುಂದಿನ ಪಾಠದಲ್ಲಿ, ಮೆಸ್ಸೀಯನ ಮುಂದೆ ದಾರಿಯನ್ನು ಸಿದ್ಧಪಡಿಸಲಿಕ್ಕಿದ್ದವನು ಪ್ರವಾದಿಯಾದ **ಯೋಹಾನನು** {ಯಾಹ್ಯಾ} ಎನ್ನುವದನ್ನು ನಾವು ನೋಡಲಿದ್ದೇವೆ.

ಹೇಗಿದ್ದರೂ, ಮಲಾಕಿಯನು ಸಹ ಹೀಗೆ ಬರೆದಿದ್ದಾನೆ: **"ನಿಮಗೆ ಇಷ್ಟನಾದ ಒಡಂಬಡಿಕೆಯ ದೂತನು ಬರುತ್ತಾನೆ. . . ಯೆಹೋವ –ನಾದ ನಾನು ಮಾರ್ಪಟ್ಟಿಲ್ಲ."** (ಮಲಾಕಿ–3:1) ಸುಮಾರು ಇನ್ನೂರು ವರ್ಷಗಳ ಮೊದಲು ಪ್ರವಾದಿಯಾದ ಯೆರೆಮೀಯನು ಹೀಗೆ ಪ್ರವಾದಿಸಿದ್ದನು:

ಯೆಹೋವನು ಇಂತೆನ್ನುತ್ತಾನೆ, **"**ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ **ಹೊಸದಾಗಿ –ರುವ ಒಂದು ಒಡಂಬಡಿಕೆಯನ್ನು** ಮಾಡಿಕೊಳ್ಳುವ ದಿನಗಳು ಬರುವವು; ಈ ಒಡಂಬಡಿಕೆಯು ನಾನು ಇವರ ಪಿತೃಗಳನ್ನು ಕೈಹಿಡಿದು
ಐಗುಪ್ತದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ, ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು, ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡು –ವೆನು; ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು, ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸ –ಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪ –ರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ.**"** (ಯೆರೆ–31:31–34)

ಈ ಮಾತುಗಳೊಂದಿಗೆ, ಮೊದಲನೆಯ ಒಡಂಬಡಿಕೆಯ ಸ್ಥಿತಿಗಳನ್ನು ಮತ್ತು ವಾಗ್ದಾನಗಳನ್ನು ನೆರವೇರಿಸುವಂತಹ ಒಂದು ಹೊಸ ಒಡಂಬಡಿಕೆಯನ್ನು ಮೆಸ್ಸೀಯನು ತರುತ್ತಾನೆ ಎಂದು ಯೆಹೋವನು ಪ್ರಕಟಿಸಿದ್ದಾನೆ. ದೇವರ ಒಡಂಬಡಿಕೆಗೆ ಗೌರವ ಕೊಡುವದರಲ್ಲಿ ಸೋತುಹೋಗಿದ್ದ ಮನುಷ್ಯನ ಮೇಲೆ ಹೊಸ ಒಡಂಬಡಿಕೆಯು ಅವಲಂಬಿತವಾಗಿರಲು ಸಾಧ್ಯವಿಲ್ಲ; ಇದು ಒಡಂಬಡಿಕೆಯ ದೂತ –ನನ್ನು ಅಂದರೆ ಮೆಸ್ಸೀಯನನ್ನು ತನ್ನ ನಂಬಿಗಸ್ತಿಕೆಯಲ್ಲಿ, ಮತ್ತು ಕರುಣೆಯಲ್ಲಿ ಕಳಿಸುವದಕ್ಕಿದ್ದ ದೇವರ ಮೇಲೆ ಅವಲಂಬಿತವಾಗಿರಲು ಸಾಧ್ಯ.

ಸಾವಿರ ವರ್ಷಗಳವರೆಗೆ, ದೇವರು ಪ್ರಾಣಿಗಳ ಯಜ್ಞವನ್ನು ಕೋರುವವನಾಗಿದ್ದ, ಅದರಿಂದ ಆತನು ಆದಾಮನ ಮಕ್ಕಳ ಪಾಪಗಳನ್ನು ಕ್ಷಮಿಸುವದಕ್ಕೆ ಶಕ್ತನಾದನು. **ಪ್ರಾಣಿಯ ಯಜ್ಞಗಳು,** ದೇವರು **ತನ್ನ ಪ್ರವಾದಿಗಳ** ಮೂಲಕ ಮಾನವ ಜನಾಂಗಕ್ಕೆ ಕಳಿಸಿಕೊಡುವಂತಹ **ಮೊದಲ ಒಡಂಬಡಿಕೆಯ** ಒಂದು ಮುಖ್ಯವಾದ ಭಾಗವಾಗಿದ್ದವು. ಹೇಗಿದ್ದರೂ, **ಮೆಸ್ಸೀಯನು** ಲೋಕಕ್ಕೆ **ಹೊಸ ಒಡಂಬಡಿಕೆಯನ್ನು** ತರುವಂತವನಾಗಿದ್ದನು, ಯಾಕೆಂದರೆ ಎಲ್ಲಾ ಪ್ರಾಣಿ ಯಜ್ಞಗಳ ಸಂಕೇತವನ್ನು ಆತನು ನೆರವೇರಿಸುವವನಾಗಿದ್ದನು.

ಮೆಸ್ಸೀಯನು ಪ್ರವಾದಿಗಳ ಮಾತುಗಳನ್ನು **ಅಳಿಸಿಹಾಕುವದಕ್ಕೆ** ಬರುವಂತವನಾಗಿರಲಿಲ್ಲ, ಆದರೆ ಅವುಗಳನ್ನು **ನೆರವೇರಿಸುವದಕ್ಕೆ** ಬರು –ವವನಿದ್ದನು. ಅದಕ್ಕಾಗಿಯೇ ಪ್ರವಾದಿಯಾದ ಮಲಾಕಿಯನು ಮೆಸ್ಸೀಯನನ್ನು, **"ಧರ್ಮವೆಂಬ ಸೂರ್ಯನು"** ಎಂದು ಕರೆದನು. ಮೆಸ್ಸೀಯನು ಸೂರ್ಯನ ರೀತಿಯಿರುವದಕ್ಕೆ ಹೇಗೆ ಸಾಧ್ಯವಾಗುತ್ತದೆ? ಪ್ರವಾದಿಗಳು ಚಂದ್ರನ ಹಾಗೆ ಅಥವಾ ಕಪ್ಪಾದ ಲೋಕದಲ್ಲಿ ಒಂದು ಚಿಕ್ಕದಾದ ಬೆಳಕನ್ನು ಹರಡುವಂತಹ ಒಂದು ಮೋಂಬತ್ತಿಯ ಹಾಗಿರುತ್ತಾರೆ. ಹೇಗೂ, ಮೆಸ್ಸೀಯನು ಉದಯಿಸುತ್ತಿರುವ ಸೂರ್ಯನು. ಆತನು ನಮ್ಮ ಪಾಪದ ಕತ್ತಲೆಯನ್ನು ಹೊರದೂಡುವದಕ್ಕೆ ಬಂದನು ಮತ್ತು ಎಂದೆಂದಿಗೂ ನೀತಿಯ ಮಾರ್ಗವನ್ನು ನಮಗೆ ಸ್ಥಾಪಿಸಿದನು! ಒಂದುಸಲ ಸೂರ್ಯನು ಉದಯಿಸಿರುವಾಗ ಚಂದ್ರನ ಅಥವಾ ಒಂದು ಮೋಂಬತ್ತಿಯ ಬೆಳಕು ಯಾರಿಗೆ ಅಗತ್ಯವಾಗಿರುತ್ತದೆ? ಮೆಸ್ಸೀಯನು ಧರ್ಮವೆಂಬ ಸೂರ್ಯನಾಗಿದ್ದಾನೆ! ನಮ್ಮ ಮುಂದಿನ ಪಾಠದಲ್ಲಿ, ಯೋಹಾನನ ತಂದೆಯಾದ ಜಕರೀಯನು ಇದೇ ರೀತಿಯಲ್ಲಿ ಮೆಸ್ಸೀಯನ ಕುರಿತು ಮಾತಾಡಿರುವದನ್ನು ನಾವು ಕೇಳಿಸಿಕೊಳ್ಳೋಣ, ಆತನು ಹೇಳಿರುವದೇನೆಂದರೆ: "ನಮ್ಮ ದೇವರು ಅತ್ಯಂತ ಕರುಣೆಯಿಂದ ದಯಪಾಲಿಸುವ ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡು –ವವನಾಗಿಯೂ ಇರುವಿ. ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯವು ಉಂಟಾಗಿ ಕತ್ತಲಲ್ಲಿಯೂ ಮರಣಾಂಧ –ಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶ ಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸಿ ನಡಿಸುವದು." (ಲೂಕ–1:78,79) ಆಮೆನ್!

ಆದದರಿಂದ, ಸ್ನೇಹಿತರೇ, ನಾವು ಮೊದಲ ಒಡಂಬಡಿಕೆಯ ಪುಸ್ತಕಗಳಲ್ಲಿನ ನಮ್ಮ ಪ್ರಯಾಣದ ಕೊನೆಗೆ ಬಂದಿದ್ದೇವೆ. ಮುಂದಿನ ಸಲ, ದೇವರ ಚಿತ್ತವಾದರೆ, ಸುವಾರ್ತೆಯ {ಇಂಜೀಲ್} ಪುಸ್ತಕವಾಗಿರುವ ಹೊಸ ಒಡಂಬಡಿಕೆಯನ್ನು ಅನುಸರಿಸುವಂತಹ ಅದ್ಭುತ –ವಾದ ಭಾಗವನ್ನು ನಾವು ಆರಂಭಿಸುತ್ತೇವೆ. ಮೆಸ್ಸೀಯನು ಪ್ರವಾದಿಗಳ ಮಾತುಗಳನ್ನು ಹೇಗೆ ನೆರವೇರಿಸಿದನೆಂಬುದನ್ನು ನಾವು ಸುವಾರ್ತೆಯಲ್ಲಿ ಕಂಡುಹಿಡಿಯುತ್ತೇವೆ.. . . .ನೀವು ಈ ಎಚ್ಚರಿಕೆಯನ್ನು ಗಮನಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಇದಲ್ಲದೆ ಪ್ರವಾದನಾ ವಾಕ್ಯವು ನಮಗೆ ಮತ್ತೂ ದೃಢವಾಗಿದೆ. ನಿಮ್ಮ ಹೃದಯದೊಳಗೆ ಬೆಳ್ಳಿಯು ಮೂಡಿ ಅರುಣೋದಯವಾಗುವ ಪರ್ಯಂತರ ಅದನ್ನು ಕತ್ತಲೆಯಾದ ಸ್ಥಳದಲ್ಲಿ ಪ್ರಕಾಶಿಸುವ ದೀಪವೆಂದೆಣಿಸಿ ಅದಕ್ಕೆ ಲಕ್ಷ್ಯಕೊಡುವದೇ ಒಳ್ಳೇದು."** (2ಪೇತ್ರ–1:19)

ಪಾಠ 60

# ಪ್ರವಾದಿಯಾದ ಯೋಹಾನ

ಲೂಕ 1

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಸಲ, ತೋರಾ {ತೌರತ್}, ಕೀರ್ತನೆಗಳು {ಝಾಬುರ್}, ಮತ್ತು ಪ್ರವಾದಿಗಳ ಬರವಣಿಗೆಗಳನ್ನು ಒಳಗೊಂಡ ಭಾಗವಾಗಿರುವ, ಪರಿಶುದ್ಧ ವಾಕ್ಯಗಳ ಮೊದಲ ಭಾಗದ ಮೂಲಕವಾದ ನಮ್ಮ ಪ್ರಯಾಣವನ್ನು ನಾವು ಮುಗಿಸಿಕೊಂಡೆವು. ಮೊದಲ ಭಾಗವು, **ಮೊದಲ –ನೆಯ ಒಡಂಬಡಿಕೆ** ಎಂದು ಹಾಗೂ ಹಳೆ ಒಡಂಬಡಿಕೆ ಎಂದೂ ಸಹ ಕರೆಯಲ್ಪಡುತ್ತದೆ. ಈ ದಿನ ನಾವು **ಹೊಸ ಒಡಂಬಡಿಕೆ** ಎಂದು ಕರೆಯಲ್ಪಡುವ ದೇವರ ವಾಕ್ಯದ ನಮ್ಮ ಅಧ್ಯಯನದ ಎರಡನೆಯ ಭಾಗವನ್ನು ಆರಂಭಿಸುತ್ತೇವೆ.

**ದೇವರು ತನ್ನ ಪರಿಶುದ್ಧ ಪುಸ್ತಕವನ್ನು** ಒಂದು ಮೊದಲನೆಯ ಒಡಂಬಡಿಕೆ (ಹಳೆ ಒಡಂಬಡಿಕೆ) ಮತ್ತು ಒಂದು ಹೊಸ ಒಡಂಬಡಿಕೆ (ಹೊಸ ಒಡಂಬಡಿಕೆ) ಎಂದು **ಎರಡು ಭಾಗವಾಗಿ ಯಾಕೆ ಬೇರ್ಪಡಿಸಿದನು**? ಇದನ್ನು ಮಾಡುವದಕ್ಕೆ ದೇವರಿಗೆ ಅನೇಕ ಕಾರಣಗಳಿ –ದ್ದವು. ಬಹುಶ: ತಿಳಿದುಕೊಳ್ಳುವದಕ್ಕೆ ನಮಗೆ ಅವಶ್ಯವಿರುವ ಮೊದಲ ಸಂಗತಿಯೆಂದರೆ ಅದು, **ಮೊದಲನೆಯ ಒಡಂಬಡಿಕೆಯ** ಎಲ್ಲಾ ಮಾತುಗಳು **ಮೆಸ್ಸೀಯನು ಹುಟ್ಟುವದಕ್ಕಿಂತ ಮೊದಲು** ಬರೆಯಲ್ಪಟ್ಟವುಗಳು ಮತ್ತು ಅದೇ ವೇಳೆಯಲ್ಲಿ **ಹೊಸ ಒಡಂಬಡಿಕೆಯ** ಎಲ್ಲಾ ಮಾತುಗಳು **ಮೆಸ್ಸೀಯನು ಹುಟ್ಟಿದ ನಂತರ** ಬರೆಯಲ್ಪಟ್ಟವುಗಳಾಗಿವೆ. ಹೀಗೆ, ಮೊದಲನೆಯ ಒಡಂಬಡಿಕೆಯ ದೇವರ ಪ್ರವಾದಿಗಳ ಸಂದೇಶವೇನೆಂದರೆ: **"**ದೇವರು ಮೆಸ್ಸೀಯನನ್ನು **ಕಳುಹಿಸುತ್ತಾನೆ!"** ಆದರೆ ಹೊಸ ಒಡಂಬಡಿಕೆಯ ಸಂದೇಶ: ಆತನು ಮೊದಲ –ನೆಯ ಒಡಂಬಡಿಕೆಯಲ್ಲಿ ತನ್ನ ಪ್ರವಾದಿಗಳ ಮೂಲಕವಾಗಿ ವಾಗ್ದಾನ ಮಾಡಿದ ಹಾಗೆ **"**ದೇವರು ಮೆಸ್ಸೀಯನನ್ನು ಕಳುಹಿಸಿದ್ದಾನೆ!**"**

ಮೊದಲ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯ ನಡುವಿನ ಈ ಮುಖ್ಯವಾದ ವ್ಯತ್ಯಾಸ ನಿಮಗೆ ಸ್ಪಷ್ಟವಾಯಿತಾ? ಪರಿಶುದ್ಧ ವಾಕ್ಯಗಳು **ಹಳೆ** ಒಡಂಬಡಿಕೆ ಮತ್ತು **ಹೊಸ** ಒಡಂಬಡಿಕೆಯನ್ನು ಹೊಂದಿರುವದರಿಂದ ಕೆಲವು ಜನರು ಇದನ್ನು ಟೀಕಿಸುತ್ತಾರೆ. ಹೊಸ ಒಡಂಬಡಿಕೆ ಎಂದರೆ, ಯಾರಾದರು ಪ್ರವಾದಿಗಳ ಮೂಲ ಬರವಣಿಗೆಗಳನ್ನು ಇನ್ನೊಂದು ಪುಸ್ತಕದೊಂದಿಗೆ ಸ್ಥಳಾಂತರಿಸಿ ಅದನ್ನು ರದ್ದುಗೊಳಿಸುವದಕ್ಕೆ ಪ್ರಯತ್ನಿಸಿದ್ದಾರೆ ಎಂದು ಅವರು ಅಂದುಕೊಳ್ಳುತ್ತಾರೆ! ಆದರೆ ಅದು ಇರುವದು ಆ ರೀತಿಯಲ್ಲ. ಪ್ರವಾ –ದಿಗಳು ಮೊದಲನೆಯ ಒಡಂಬಡಿಕೆಯಲ್ಲಿ ಬರೆದಿರುವದನ್ನು ಹೊಸ ಒಡಂಬಡಿಕೆಯು **ರದ್ದುಗೊಳಿಸಿಲ್ಲ,** ಆದರೆ ಅವರು ಬರೆದಿರು –ವದನ್ನು ಇದು **ದೃಢಪಡಿಸಿದೆ!** ಮೊದಲನೆಯ ಒಡಂಬಡಿಕೆಯ ಗುರುತುಗಳನ್ನು, ಪ್ರವಾದನೆಗಳನ್ನು ಮತ್ತು ವಾಗ್ದಾನಗಳನ್ನು ದೇವರು ಹೇಗೆ ನೆರವೇರಿಸಿದನೆಂಬುದನ್ನು ಹೊಸ ಒಡಂಬಡಿಕೆಯು ತೋರಿಸಿಕೊಡುತ್ತದೆ. ಮೊದಲನೆಯ ಒಡಂಬಡಿಕೆಯಲ್ಲಿ, ಎಲ್ಲಾ ಪ್ರವಾದಿ –ಗಳು ಪ್ರಕಟಿಸಿರುವದೇನೆಂದರೆ: **"**ಮೆಸ್ಸೀಯನು **ಬರುತ್ತಾನೆ! ಆತನು ಬರುತ್ತಾನೆ! ಆತನು ಬರುತ್ತಾನೆ!"** ಆದರೆ ಹೊಸ ಒಡಂಬಡಿಕೆಯ ಪುಸ್ತಕದ ಸಂದೇಶವೇನೆಂದರೆ: **"**ಮೆಸ್ಸೀಯನು **ಬಂದೇ ಇದ್ದಾನೆ! ಎಲ್ಲಾ ಪ್ರವಾದಿಗಳೂ ಮಾತಾಡಿ ಬರೆದಿರುವ ಮೆಸ್ಸೀಯನು ಬಂದೇ ಇದ್ದಾನೆ! ಆತನು ಬಂದೇ ಇದ್ದಾನೆ!"**

ಹೌದು, ಪರಿಶುದ್ದ ವಾಕ್ಯಗಳು ಒಂದು ಮೊದಲನೆಯ ಒಡಂಬಡಿಕೆಯನ್ನು **ಮತ್ತು** ಒಂದು ಹೊಸ ಒಡಂಬಡಿಕೆಯನ್ನು ಒಳಗೊಂಡಿರು –ವದಕ್ಕೆ ಒಂದು ಸಂತೋಷದ ಹೃದಯದಿಂದ ನಾವು **ದೇವರಿಗೆ ವಂದಿಸಬೇಕು.** ಯಾಕೆಂದರೆ ದೇವರು ಬಹಳ ಹಿಂದೆಯೇ ಏನು ವಾಗ್ದಾನ ಮಾಡಿದ್ದನೋ ಆತನು ಅದನ್ನು ನೆರವೇರಿಸಿದನು ಎನ್ನುವದನ್ನು ಆ ಎರಡೂ ಭಾಗಗಳಲ್ಲಿ ನಾವು ನೋಡುವದಕ್ಕೆ ಸಾಧ್ಯ. **ತೋರಾ, ಕೀರ್ತನೆಗಳು ಮತ್ತು ಪ್ರವಾದಿಗಳ ಪುಸ್ತಕಗಳಲ್ಲಿ ನಮ್ಮ ಪೂರ್ವಿಕರು ವಾಗ್ದಾನ ಮಾಡಿದ ಹಾಗೆ** ದೇವರು ಒಬ್ಬ ರಕ್ಷಕನನ್ನು ನಮಗಾಗಿ ಕಳಿಸಿದ್ದಾನೆ. ಬೇಯೋಬಾಬ್‌ನ {ಸೆನೆಗಲ್‌ನ ಒಂದು ಹೆಚ್ಚು ಸಾಮಾನ್ಯವಾದ ಮರ} ಬೀಜವು ಒಂದು ಬಲವಾದ ಮರ –ವಾಗಿ ಬೆಳೆಯುವಂತೆ, ಇದೇ ರೀತಿಯಲ್ಲಿ ಮೊದಲನೆಯ ಒಡಂಬಡಿಕೆಯು, ಹೊಸ ಒಡಂಬಡಿಕೆಯಲ್ಲಿ ಪರಿಪಕ್ವತೆಗೆ ಬರುತ್ತದೆ.

ನೀವು ತಿಳಿದಿರುವ ಹಾಗೆ, ಪರಿಶುದ್ಧ ವಾಕ್ಯಗಳ ಎರಡನೆಯ ಭಾಗವು ಅಂದರೆ **ಹೊಸ ಒಡಂಬಡಿಕೆಯು** ಇನ್ನೊಂದು ಹೆಸರನ್ನು ಹೊಂದಿದೆ. ಆ ಹೆಸರು **"ಇಂಜಿಲ್"** ಎಂದು. ಇಂಜಿಲ್ ಎನ್ನುವದು ಒಂದು ಅರೆಬಿಕ್ ಶಬ್ದವಾಗಿದ್ದು **ಶುಭ ಸಂದೇಶ**{ಸುವಾರ್ತೆ} ಎಂದು ಇದರ ಅರ್ಥ. ನಿಜವಾಗಿಯೂ, ಸುವಾರ್ತಾ ಪುಸ್ತಕದ ಸಂದೇಶವು **ಉತ್ಕಟವಾದ ಶುಭ ಸಂದೇಶವಾಗಿದೆ,** ಯಾಕೆಂದರೆ ಪ್ರವಾದಿಗಳು ಪ್ರಕಟಿರುವದನ್ನು ಮೆಸ್ಸೀಯನು ಹೇಗೆ ನೆರವೇರಿಸಿದನು, ಇದು ತಿಳಿಸುತ್ತದೆ, ಹೀಗೆ ದೇವರೊಂದಿಗೆ ಎಂದೆಂದಿಗೂ ಆದಾಮನ ಮಕ್ಕಳಿಗಾಗಿ ಸಮಾಧಾನದ ಒಂದು ಬಾಗಿಲನ್ನು ತೆರೆದನೆಂಬುದನ್ನು ಇದು ತಿಳಿಸುತ್ತದೆ.!

ಸುವಾರ್ತೆಯ ಪುಸ್ತಕಕ್ಕೆ ಸಂಬಂಧಿಸಿದಂತೆ, ಮೆಸ್ಸೀಯನು ತಾನೇ ಇದನ್ನು ಬರೆದಿಲ್ಲ ಎನ್ನುವದನ್ನು ನೀವು ತಿಳಿದುಕೊಳ್ಳುವದು ಅಗತ್ಯ. ಮೊದಲನೆಯ ಒಡಂಬಡಿಕೆಯ ಪುಸ್ತಕವನ್ನು ಬರೆಯುವದಕ್ಕೆ ದೇವರು ಅನೇಕ ವ್ಯಕ್ತಿಗಳನ್ನು ಉಪಯೋಗಿಸಿದ ಹಾಗೆಯೇ ಹೊಸ ಒಡಂಬಡಿಕೆಯ ಪುಸ್ತಕವನ್ನು ಬರೆಯುವದಕ್ಕೆ ಆತನು ಅನೇಕರನ್ನು ಉಪಯೋಗಿಸಿದನು. ಮೆಸ್ಸೀಯನು ಭೂಲೋಕಕ್ಕೆ ಬರುವ ಕತೆಯನ್ನು ಬರೆಯುವದಕ್ಕೆ ದೇವರು **ನಾಲ್ಕು ಪುರುಷರನ್ನು** ಉಪಯೋಗಿಸಿದನು. ಆ ನಾಲ್ಕು ಜನರೇ, ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನ. **ಮೆಸ್ಸೀಯನ ಕತೆಯನ್ನು ಬರೆಯುವದಕ್ಕೆ ದೇವರು ಈ ನಾಲ್ಕು ಜನರನ್ನು ಯಾಕೆ ಪ್ರೇರಿಸಿದನು**? ಸುವಾರ್ತೆಯ ಪುಸ್ತಕವನ್ನು ಬರೆಯುವದಕ್ಕೆ ಕೇವಲ ಒಬ್ಬ ವ್ಯಕ್ತಿಯನ್ನು ಆತನು ಯಾಕೆ ಉಪಯೋಗಿಸಲಿಲ್ಲ? ಅದಕ್ಕೆ ಇಲ್ಲಿದೆ ಕಾರಣ: ಸಂದೇಹಕ್ಕೆ ಮೀರಿದ ಮತ್ತು ಪೂರಾ ಭರವಸೆಗೆ ತಕ್ಕುದಾದ ಒಂದು ಸಂದೇಶಕ್ಕೆ ನಮ್ಮನ್ನು ಸಂಪರ್ಕಿಸುವದಕ್ಕೆ ದೇವರು ಇಚ್ಛಿಸುವವನಾಗಿದ್ದನು. **ತನ್ನ ಮಾತನ್ನು ದೃಢಪಡಿಸುವ** ಕ್ರಮದಲ್ಲಿ ಆತನು ನಾಲ್ಕು ಬರಹಗಾರರನ್ನು ಉಪಯೋಗಿಸಿದ್ದಾನೆ. ನಾಲ್ಕು ಕಾಲುಗಳಿರುವ ಒಂದು ಮೇಜು ಒಂದು ಕಾಲಿರುವ ಮೇಜಿಗಿಂತಲೂ ಹೆಚ್ಚು ದೃಢವಾಗಿರುವ ಹಾಗೆ, ನಾಲ್ಕು ಸಾಕ್ಷಿಗಳು ಒಂದು ಸಾಕ್ಷಿಗಿಂತ ಹೆಚ್ಚು ಭರವಸೆ ಇಡತಕ್ಕದ್ದಾಗಿರುತ್ತದೆ. ದೇವರು ನಾಲ್ಕು ಸಾಕ್ಷಿಗಳನ್ನು ಉಪಯೋಗಿಸಿದನು, ಅದರಿಂದ ನಾವು ಮೆಸ್ಸಿಯನ ಕುರಿತಾಗಿ ಸುವಾರ್ತೆಯ ಪುಸ್ತಕದಲ್ಲಿ ಬರೆಯಲ್ಪಟ್ಟಿರುವ ಪ್ರತಿಯೊಂದು ಖಂಡಿತವಾಗಿಯೂ ಸತ್ಯವೆಂದು ತಿಳಿದುಕೊಳ್ಳುವದಕ್ಕೆ ಶಕ್ತರಾದೆವು! ದೇವರು ತನ್ನ ಮಾತುಗಳನ್ನು ಪ್ರವಾದಿಗಳ ಮನಸ್ಸಿನಲ್ಲಿಟ್ಟ ಹಾಗೆಯೇ, ಮೆಸ್ಸೀಯನು ಇದ್ದ ಅದೇ ಕಾಲದಲ್ಲಿ ಜೀವಿಸಿದ್ದ ಆ ಮನುಷ್ಯರು ಲೋಕದ ರಕ್ಷಕನ ಕುರಿತಾಗಿ ಏನು ನೋಡಿದ್ದರೋ ಮತ್ತು ಕೇಳಿದ್ದರೋ ಅದನ್ನು ಬರೆಯುವದಕ್ಕೆ ದೇವರು ಆ ನಾಲ್ಕು ಜನರಿಗೆ ಮಾರ್ಗದರ್ಶನ ಮಾಡಿದನು. {ಟಿಪ್ಪಣಿ: ನಿಜವಾಗಿಯೂ, ದೇವರು ಮೆಸ್ಸೀಯನ ಕುರಿತಾಗಿ ಬರೆಯುವದಕ್ಕೆ ಎಂಟು ಜನರನ್ನು ಪ್ರೇರೇಪಿಸಿದ್ದನು. ಅಪೊಸ್ತಲನಾದ ಪೌಲ, ಪೇತ್ರ, ಯಾಕೋಬ ಮತ್ತು ಯೂದನ ಪತ್ರಿಕೆಗಳೂ ಸಹ ಇಂಜಿಲ್‌ನ ಭಾಗವಾಗಿವೆ ಅಂದರೆ ಸುವಾರ್ತೆಯ ಬರವಣಿಗೆಗಳಾಗಿವೆ ಮತ್ತು ಅವರು ಬರೆದಿರುವ ಪ್ರತಿಯೊಂದು ಪೂರ್ಣವಾದುದು ಮತ್ತು ಮಹಿಮೆಯುಳ್ಳ ಸಾಮರಸ್ಯವುಳ್ಳದ್ದೂ ಆಗಿದೆ!}

ಸುವಾರ್ತೆಯ ಪರಿಶುದ್ಧ ಪುಸ್ತಕವನ್ನು ಮತ್ತಾಯ, ಮಾರ್ಕ ಲೂಕ ಮತ್ತು ಯೋಹಾನರು ಯಾವ ಭಾಷೆಯಲ್ಲಿ ಬರೆದಿದ್ದರೆಂದು ನಿಮಗೆ ಗೊತ್ತಾ? ಅವರು ಇದನ್ನು ಗ್ರೀಕ್ ಭಾಷೆಯಲ್ಲಿ ಬರೆದಿದ್ದಾರೆ. ಹೀಗಿದ್ದರೂ, ನಮ್ಮಲ್ಲಿ ಹೆಚ್ಚಿನವರು ಗ್ರೀಕ್ ಭಾಷೆಯನ್ನು ಅರ್ಥಮಾಡಿಕೊಂಡಿಲ್ಲದ್ದರಿಂದ ನಾವು ಇದನ್ನು ಆಂಗ್ಲ ಭಾಷೆಯಲ್ಲಿ ಓದುತ್ತಿದ್ದೇವೆ {ಊಲೂಫ್}. ಸುವಾರ್ತೆಯನ್ನು ಗ್ರೀಕ್ ಭಾಷೆ – ಯಿಂದ ಆಂಗ್ಲ ಭಾಷೆಗೂ ಅದೇ ರೀತಿಯಲ್ಲಿ ಪ್ರಪಂಚದಲ್ಲಿರುವ ಇತರ ಸುಮಾರು ಎರಡು ಸಾವಿರ ಭಾಷೆಗಳಿಗೆ ಭಾಷಾಂತರ ಮಾಡುವ ಆಲೋಚನೆಯನ್ನು ದೇವರು ಪಂಡಿತರ ಹೃದಯಗಳಲ್ಲಿ ಇಟ್ಟಿದ್ದಕ್ಕೆ ನಾವು ದೇವರಿಗೆ ವಂದಿಸುತ್ತೇವೆ.

ಹೌದು, ಸುವಾರ್ತೆಯ ಪುಸ್ತಕದ ವಿರುದ್ಧವಾಗಿ ಹೋರಾಡುವದಕ್ಕೆ ಪ್ರಯತ್ನಿಸುವವರು, "ಯಾರೂ ಇದನ್ನು ನಂಬುವದಿಲ್ಲ. ಇದು ಗುಪ್ತ ಪ್ರಭಾವ ಬೀರುವದರೊಂದಿಗಿದೆ! ಇದು ತಪ್ಪುಗಳನ್ನು ಮತ್ತು ಖಂಡನೆಗಳನ್ನು ಒಳಗೊಂಡಿದೆ!" ಎಂದು ಹೇಳುವದನ್ನು ಕೆಲವು ಸಲ ನಾವು ಕೇಳಿಸಿಕೊಂಡಿದ್ದೇವೆ. ಸ್ನೇಹಿತರೇ, ಪರಿಶುದ್ಧ ಸುವಾರ್ತೆಯ ವಿರುದ್ಧವಾಗಿ ಹೋರಾಡುವವರು ದೇವರೊಂದಿಗೇ ಹೋರಾ –ಡುವವರಾಗಿದ್ದಾರೆ. "ಒಂದು ಮೊಟ್ಟೆಯು ಬಂಡೆಯೊಂದಿಗೆ ಹೋರಾಡಬಾರದು!" {ಉಲೂಫ್ ಗಾದೆ}. ಪರಿಶುದ್ಧ ವಾಕ್ಯಗಳು ನಮ್ಮ ಪೂರ್ತಿ ಭರವಸೆ ಮತ್ತು ವಿಧೇಯತೆಯ ಅರ್ಹತೆಯುಳ್ಳದ್ದಾಗಿವೆ. ತೋರಾ ಮತ್ತು ಕೀರ್ತನೆಗಳಲ್ಲಿ ದೇವರ ವಾಕ್ಯವು ಸಂಪೂರ್ಣವಾ –ಗಿದ್ದ ಹಾಗೆಯೇ, ಸುವಾರ್ತೆಯಲ್ಲಿಯೂ ಇದು ಸಂಪೂರ್ಣವಾದುದಾಗಿದೆ. ಪರಿಶುದ್ಧ ವಾಕ್ಯಗಳು ಅಪೂರ್ಣವಾಗಿರುವದಕ್ಕೆ ಸಾಧ್ಯ –ವಿಲ್ಲ. ದೇವರು ದೊಡ್ಡವನೂ ಮತ್ತು ತನ್ನ ನಿತ್ಯವಾದ ವಾಕ್ಯಗಳನ್ನು ಕಾಪಾಡುವದಕ್ಕೆ ಶಕ್ತನೂ ಅಗಿದ್ದಾನೆ! ಮನಃಪೂರ್ವಕವಾಗಿ ಇದನ್ನು ಹುಡುಕುವವರೆಲ್ಲರಿಗಾಗಿ ಆತನು ತನ್ನ ಸತ್ಯವನ್ನು ಸಂರಕ್ಷಿಸಿಟ್ಟಿದ್ದಾನೆ. ಜೀವಿಸುವ ಮತ್ತು ನಿರಂತರವಾದ ದೇವರ ವಾಕ್ಯವನ್ನು ನಿಜವಾಗಿ ಯಾರೂ ಬದಲಾಯಿಸಲು ಸಾಧ್ಯವಿಲ್ಲ! ಅದನ್ನೇ ಕರ್ತನು ತಾನೇ ಸುವಾರ್ತೆಯಲ್ಲಿ ಹೀಗೆ ತಿಳಿಸುತ್ತಾನೆ: "ಭೂಮ್ಯಾಕಾಶ – ಗಳು ಅಳಿದು ಹೋಗುತ್ತವೆ, ಆದರೆ ನನ್ನ ವಾಕ್ಯವು ಅಳಿದು ಹೋಗುವದೇ ಇಲ್ಲ!" (ಮತ್ತಾಯ–24:35)

ಹಾಗಾದರೆ ಈಗ, **ಹೊಸ ಒಡಂಬಡಿಕೆ ಎಂಬ ಸುವಾರ್ತೆಯ ಪುಸ್ತಕದ ಮೂಲಕ ನಮ್ಮ ಪ್ರಯಾಣವನ್ನು ಆರಂಭಿಸುವ ನಮ್ಮ ಕ್ಷಣವು ಬಂದಿದೆ.** ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಮೆಸ್ಸೀಯನಿಗಿಂತ ನಾನೂರು ವರ್ಷಗಳ ಹಿಂದೆ ಜೀವಿಸಿದ್ದ ಪ್ರವಾದಿಯಾದ ಮಲಾಕಿ – ಯನ ಕುರಿತಾಗಿ ಓದಿಕೊಂಡೆವು. ಮಲಾಕಿಯನ ಕಾಲವನ್ನು ಅನುಸರಿಸಿ ಆ ನಾನೂರು ವರ್ಷಗಳ ವೇಳೆಯಲ್ಲಿ, ದೇವರ ವಾಕ್ಯವನ್ನು ಬರೆಯುವದಕ್ಕೆ ಇನ್ನಾವ ಪ್ರವಾದಿಗಳನ್ನೂ ದೇವರು ಯೆಹೂದ್ಯರಿಗಾಗಿ ಕಳಿಸಿಕೊಡಲಿಲ್ಲ. ಯಾಕೆ ದೇವರು ಇನ್ನಾವ ಪ್ರವಾದಿಗಳನ್ನು ಕಳಿಸಿಲಿಲ್ಲ? ಯಾಕೆಂದರೆ ಮೊದಲನೆಯ ಒಡಂಬಡಿಕೆಯ ಪುಸ್ತಕವು ಸಂಪೂರ್ಣಗೊಂಡಿತ್ತು. **ತಾನು ಬಯಸಿದ್ದ ಪ್ರತಿಯೊಂದನ್ನೂ ದೇವರು ಪ್ರವಾದಿಗಳ ಮೂಲಕ ಮಾತಾಡಿದ್ದನು.** ಈಗ ಹೊಸ ಒಡಂಬಡಿಕೆಯನ್ನು ಸ್ಥಾಪಿಸುವದಕ್ಕೆ ತಾನು ಶಕ್ತನಾದ್ದರಿಂದ ಲೋಕಕ್ಕೆ ಮೆಸ್ಸೀಯನನ್ನು ತರುವ ನೇಮಕವಾದ ಸಮಯಕ್ಕಾಗಿ ದೇವರು ಕಾಯುತ್ತಿದ್ದನು.

ಈಗ ನಾವು ಪರಿಶುದ್ಧ ಸುವಾರ್ತೆಯನ್ನು{ಇಂಜಿಲ್} ತೆರೆಯೋಣ ಮತ್ತು ಲೂಕನು ಪ್ರವಾದಿಯಾದ ಯೋಹಾನನ ಕುರಿತು ಬರೆದಿರು –ವದನ್ನು ಕೇಳಿಸಿಕೊಳ್ಳೋಣ. ಒಂದನೆಯ ಅಧ್ಯಾಯದಲ್ಲಿ ಓದುತ್ತಿದ್ದೇವೆ, ಅಲ್ಲಿ ವಾಕ್ಯ ಹೀಗೆ ಬರೆದದೆ:

ಯೂದಾಯದ ಅರಸನಾದ ಹೆರೋದನ ಕಾಲದಲ್ಲಿ ಅಬೀಯನ ವರ್ಗಕ್ಕೆ ಸೇರಿದ ಜಕರೀಯನೆಂಬ ಒಬ್ಬ ಯಾಜಕನಿದ್ದನು. ಅವನ ಹೆಂಡತಿ ಆರೋನನ ವಂಶದವಳು. ಆಕೆಯ ಹೆಸರು ಎಲಿಸಬೇತ್. ಅವರಿಬ್ಬರೂ ಕರ್ತನ ಎಲ್ಲಾ ಆಜ್ಞೆಗಳನ್ನೂ ನೇಮನಿಷ್ಠೆಗಳನ್ನೂ ಕೈಕೊಂಡು ತಪ್ಪಿಲ್ಲದೆ ನಡಕೊಳ್ಳುತ್ತಾ ದೇವರ ದೃಷ್ಟಿಯಲ್ಲಿ ನೀತಿವಂತರಾಗಿದ್ದರು. ಆದರೆ ಎಲಿಸಬೇತಳು ಬಂಜೆಯಾದದರಿಂದ ಅವರಿಗೆ ಮಕ್ಕಳಿರಲಿಲ್ಲ; ಇದಲ್ಲದೆ ಅವರಿಬ್ಬರೂ ದಿನಹೋದವರಾಗಿದ್ದರು. (ಲೂಕ–1:5-7)

ಹೀಗಿರಲಾಗಿ ಜಕರೀಯನ ವರ್ಗದ ಸರತಿ ಬಂದಾಗ ಅವನು ದೇವರ ಸನ್ನಿಧಿಯಲ್ಲಿ ಯಾಜಕ ಧರ್ಮವನ್ನು ನಡಿಸುತ್ತಿದ್ದನು. ಧೂಪ –ವನ್ನು ಅರ್ಪಿಸುವ ಹೊತ್ತಿನಲ್ಲಿ ಜನರ ಗುಂಪೆಲ್ಲಾ ಹೊರಗೆ ನಿಂತು ದೇವರನ್ನು ಪ್ರಾರ್ಥಿಸುತ್ತಿರಲಾಗಿ **ಕರ್ತನ ದೂತನು ಧೂಪಪೀಠದ ಬಲಗಡೆಯಲ್ಲಿ ನಿಂತುಕೊಂಡವನಾಗಿ ಅವನಿಗೆ ಕಾಣಿಸಿಕೊಂಡನು.** ಜಕರೀಯನು ಅವನನ್ನು ಕಂಡು ತತ್ತರಗೊಂಡು ಭಯ ಹಿಡಿದವ – –ನಾದನು. ಆದರೆ ಆ ದೂತನು ಅವನಿಗೆ, **"**ಜಕರೀಯಾ ಭಯಪಡಬೇಡ; ನಿನ್ನ ವಿಜ್ಞಾಪನೆ ದೇವರಿಗೆ ಮುಟ್ಟಿತು. ನಿನ್ನ ಹೆಂಡತಿ – –ಯಾದ ಎಲಿಸಬೇತಳು ನಿನಗೆ ಒಬ್ಬ ಮಗನನ್ನು ಹೆರುವಳು. ನೀನು ಅವನಿಗೆ ಯೋಹಾನನೆಂದು ಹೆಸರಿಡಬೇಕು. ನಿನಗೆ ಸಂತೋ –ಷವೂ ಉಲ್ಲಾಸವೂ ಉಂಟಾಗುವದು; ಮತ್ತು ಅವನು ಹುಟ್ಟಿದ್ದಕ್ಕೆ ಬಹು ಜನರು ಸಂತೋಷಪಡುವರು. ಅವನು ಕರ್ತನ ದೃಷ್ಟಿ – ಯಲ್ಲಿ ಮಹಾಪುರುಷನಾಗಿರುವನು; ದ್ರಾಕ್ಷಾರಸವನ್ನಾಗಲಿ ಯಾವ ಮದ್ಯವನ್ನಾಗಲಿ ಕುಡಿಯದವನಾಗಿರುವನು; ಅವನು ಹುಟ್ಟಿದಂದಿ – ನಿಂದಲೂ ಪವಿತ್ರಾತ್ಮಭರಿತನಾಗಿರುವನು. ಇಸ್ರಾಯೇಲ್ಯರಲ್ಲಿ ಅನೇಕರನ್ನು ಅವರ ದೇವರಾಗಿರುವ ಕರ್ತನ ಕಡೆಗೆ ತಿರುಗಿಸುವನು. ಅವನು ಆತನ ಮುಂದೆ ಹೋಗಿ ಎಲೀಯನ ಗುಣಶಕ್ತಿಗಳಿಂದ ಕೂಡಿದವನಾಗಿ ತಂದೆಗಳ ಹೃದಯವನ್ನು ಮಕ್ಕಳ ಕಡೆಗೂ ಹಟಹಿಡಿ –ದವರನ್ನು ನೀತಿವಂತರ ಜ್ಞಾನದ ಕಡೆಗೂ ತಿರುಗಿಸಿ ಸಿದ್ಧವಾದ ಜನವನ್ನು ಕರ್ತನಿಗೆ ಒದಗಿಸುವನು**"** ಎಂದು ಹೇಳಿದನು. ಜಕರೀ –ಯನು ಆ ದೂತನಿಗೆ, **"**ಇದನ್ನು ನಾನು ಯಾತರಿಂದ ತಿಳುಕೊಳ್ಳಲಿ? ನಾನು ಮುದುಕನು; ನನ್ನ ಹೆಂಡತಿಯೂ ದಿನಹೋದವಳು**"** ಎಂದು ಹೇಳಿದ್ದಕ್ಕೆ ಆ ದೂತನು, **"**ನಾನು ದೇವರ ಸನ್ನಿಧಿಯಲ್ಲಿ ನಿಲ್ಲುವ **ಗಬ್ರಿಯೇಲನು**; ನಿನ್ನ ಕೂಡ ಮಾತಾಡಿ ಈ ಶುಭವರ್ತಮಾನ –ವನ್ನು ನಿನಗೆ ತಿಳಿಸುವದಕ್ಕಾಗಿ ನಾನು ಕಳಿಹಿಸಲ್ಪಟ್ಟಿದ್ದೇನೆ. ಈ ನನ್ನ ಮಾತು ತಕ್ಕ ಸಮಯದಲ್ಲಿ ನೆರವೇರುವದು; ಆದರೆ **ನೀನು ಅದನ್ನು ನಂಬದೆ ಹೋದದ್ದರಿಂದ ಅದೆಲ್ಲಾ ಸಂಭವಿಸುವ ದಿನದವರೆಗೂ ಮಾತನಾಡಲಾರದೆ ಮೂಕನಾಗಿರುವಿ"** ಎಂದು ಅವನಿಗೆ ಉತ್ತರ ಕೊಟ್ಟನು. (ಲೂಕ–1:8-20)

ಇಷ್ಟರೊಳಗೆ ಜನರು ಜಕರೀಯನನ್ನು ಕಾದುಕೊಂಡಿದ್ದು ಅವನು ದೇವಾಲಯದೊಳಗೆ ತಡಮಾಡಿದ್ದಕ್ಕೆ ಆಶ್ಚರ್ಯಪಟ್ಟರು. ಅವನು ಹೊರಗೆ ಬಂದಾಗ ಅವರ ಕೂಡ ಏನೂ ಮಾತಾಡಲಾರದೆ ಇರಲು ಅವರು, **"**ಇವನಿಗೆ ದೇವಾಲಯದಲ್ಲಿ ಏನೋ ದಿವ್ಯದರ್ಶನ – ವಾಗಿರಬೇಕು**"** ಎಂದು ತಿಳುಕೊಂಡರು. ಅವನು ಅವರಿಗೆ ಕೈಸನ್ನೆ ಮಾಡುತ್ತಾ ಮೂಕನಾಗಿಯೇ ಇದ್ದನು. ಅವನ ಯಾಜಕವರ್ಗದ ದಿನಗಳು ತೀರಿದ ನಂತರ ಅವನು ತನ್ನ ಮನೆಗೆ ಹೋದನು. ಆ ದಿವಸಗಳಾದ ಮೇಲೆ ಅವನ ಹೆಂಡತಿಯಾದ ಎಲಿಸಬೇತಳು ಬಸುರಾಗಿ ಐದು ತಿಂಗಳು ಮನೆಯಲ್ಲೇ ಮರೆಯಾಗಿದ್ದು, **"**ಕರ್ತನು ಈ ಕಾಲದಲ್ಲಿ ನನ್ನನ್ನು ಪರಾಮರಿಸಿ ನನಗೆ ಈ ರೀತಿಯಾಗಿ ಮಾಡಿ ಜನರಲ್ಲಿ ನನಗಿದ್ದ ಅವಮಾನವನ್ನು ಪರಿಹರಿಸಿದ್ದಾನಲ್ಲಾ**"** ಅನ್ನುತ್ತಿದ್ದಳು.(1:21-25)

ಜಕರೀಯನ ಹೆಂಡತಿಯಾದ ಎಲಿಸಬೇತಳು ಒಬ್ಬ ಮಗನನ್ನು ಹೆರುವಳು ಎಂಬುದನ್ನು ತಿಳಿಸುವದಕ್ಕೆ ಹೇಗೆ ದೇವರು ಜಕರೀಯನ ಬಳಿಗೆ ಗಬ್ರಿಯೇಲ್ ದೂತನನ್ನು ಕಳಿಸಿದನೆಂಬುದನ್ನು ನಾವು ನೋಡಿದೆವು. ಈ ಮಗನು ಮೆಸ್ಸೀಯನಿಗೆ ದಾರಿಯನ್ನು ಸಿದ್ಧಪಡಿಸುವ ಒಬ್ಬ ದೊಡ್ಡ ಪ್ರವಾದಿಯಾಗುವವನಿದ್ದನು. ಹೀಗೆ ಅಧ್ಯಾಯದ ಕೊನೆಯಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಎಲಿಸಬೇತಳು ದಿನತುಂಬಿ ಗಂಡು ಮಗುವನ್ನು ಹೆತ್ತಳು. ಆಕೆಯ ನೆರೆಹೊರೆಯವರೂ ಬಂಧುಬಾಂಧವರೂ ಆಕೆಯ ಮೇಲೆ ಕರ್ತನು ತನ್ನ ದಯವನ್ನು ವಿಶೇಷವಾಗಿ ತೋರಿಸಿದ್ದಾನೆಂಬುದನ್ನು ಕೇಳಿ ಆಕೆಯ ಕೂಡ ಸಂತೋಷಪಟ್ಟರು. ಎಂಟನೆಯ ದಿನದಲ್ಲಿ ಅವರು ಆ ಮಗುವಿಗೆ ಸುನ್ನತಿ ಮಾಡುವದಕ್ಕಾಗಿ ಬಂದು ಅದಕ್ಕೆ ಜಕರೀಯೆಂದು ತಂದೆಯ ಹೆಸರನ್ನು ಇಡಬೇಕೆಂದಿದ್ದರು. ಈ ವಿಷಯದಲ್ಲಿ ಅದರ ತಾಯಿಯು, **"**ಅದು ಬೇಡ, **ಯೋಹಾನನೆಂದು** ಹೆಸರಿಡಬೇಕು**"** ಅನ್ನಲು ಅವರು, **"**ನಿನ್ನ ಬಂಧುಬಾಂಧವರಲ್ಲಿ ಈ ಹೆಸರಿನ – ವರು ಒಬ್ಬರಾದರೂ ಇಲ್ಲವಲ್ಲ**"** ಎಂದು ಆಕೆಗೆ ಹೇಳಿ ಇದಕ್ಕೆ ಏನು ಹೆಸರಿಡಬೇಕೆಂದಿರುತ್ತೀ ಎಂಬದಾಗಿ ತಂದೆಗೆ ಸನ್ನೆ ಮಾಡಿದರು. ಅವನು ಒಂದು ಹಲಿಗೆಯನ್ನು ತರಿಸಿಕೊಂಡು, **"**ಯೋಹಾನನೆಂತಲೇ ಅದರ ಹೆಸರು**"** ಎಂದು ಬರೆದನು. ಅದಕ್ಕೆ ಎಲ್ಲರೂ ಆಶ್ಚರ್ಯ –ಪಟ್ಟರು. ಕೂಡಲೆ ಅವನಿಗೆ ಬಾಯಿ ಬಂತು ನಾಲಿಗೆ ಸಡಿಲವಾಯಿತು, ಅವನು ಮಾತಾಡುವದಕ್ಕೆ ಶಕ್ತಿಯುಳ್ಳವನಾಗಿ ದೇವರನ್ನು ಕೊಂಡಾಡಿದನು. ಇದನ್ನು ಕೇಳಿದ ನೆರೆಹೊರೆಯವರಿಗೆಲ್ಲಾ ಹೆದರಿಕೆಯುಂಟಾಯಿತು; ಮತ್ತು ಈ ಎಲ್ಲಾ ಸಂಗತಿಗಳನ್ನು ಕುರಿತು ಯೂದಾಯದ ಮಲೆನಾಡಿನಲ್ಲೆಲ್ಲಾ ಮಾತಾಡಿಕೊಳ್ಳುತ್ತಿದ್ದರು. ಕೇಳಿದವರೆಲ್ಲರೂ, **"**ಆಹಾ, ಈ ಕೂಸು ಎಂಥವನಾಗುವನೋ**"** ಎಂದು ಈ ಸಂಗತಿಗಳನ್ನು ಮನಸ್ಸಿನಲ್ಲಿಟ್ಟುಕೊಂಡರು. ಮತ್ತು ಕರ್ತನ ಹಸ್ತವು ಅದರ ಮೇಲೆ ಇತ್ತು. (1:57-66)

ಇದಲ್ಲದೆ ಆ ಮಗುವಿನ ತಂದೆಯಾದ ಜಕರೀಯನು ಪವಿತ್ರಾತ್ಮಭರಿತನಾಗಿ ಪ್ರವಾದನಾ ವಚನವನ್ನು ನುಡಿದದ್ದೇನೆಂದರೆ, **"**ಇಸ್ರಾ – ಯೇಲ್ ಜನರ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿದ್ದ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿ – ದಂತೆಯೇ **ತನ್ನ ಪ್ರಜೆಯನ್ನು ಪರಾಮರಿಸಿ ಅವರಿಗೆ ಬಿಡುಗಡೆಯನ್ನುಂಟುಮಾಡಿದ್ದಾನೆ; ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮ –ಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ.** ಆತನು ನಮ್ಮ ಪಿತೃಗಳಿಗೆ ದಯೆಯನ್ನು ತೋರಿಸುವವನಾಗಿಯೂ ನಮ್ಮ ಮೂಲ ಪಿತೃವಾದ ಅಬ್ರಹಾಮನಿಗೆ ಪ್ರಮಾಣ ಮಾಡಿಕೊಟ್ಟ ತನ್ನ ಪರಿಶುದ್ಧವಾದ ಒಡಂಬಡಿಕೆಯನ್ನು ನೆನಸಿಕೊಳ್ಳುವವನಾಗಿಯೂ ಇದ್ದು ನಮ್ಮ ವೈರಿಗಳಿಂದಲೂ ನಮ್ಮನ್ನು ದ್ವೇಷಿಸುವವರೆಲ್ಲರ ಕೈಯಿಂದ ಬಿಡುಗಡೆಹೊಂದಿ ಭಯವಿಲ್ಲದವರಾಗಿದ್ದು ನಮ್ಮ ಜೀವಮಾನದಲ್ಲೆಲ್ಲಾ ನಿರ್ಮಲಚಿತ್ತದಿಂದಲೂ ನೀತಿಯಿಂದಲೂ ತನ್ನ ಸನ್ನಿಧಿಯಲ್ಲಿ ಸೇವೆಮಾಡುವಂತೆ ನಮಗೆ ಅನುಕೂಲಮಾಡಿದ್ದಾನೆ. ಮಗುವೇ, ನೀನಾ –ದರೋ ಪರಾತ್ಪರನ ಪ್ರವಾದಿಯೆನಿಸಿಕೊಳ್ಳುವಿ. **ನೀನು ಕರ್ತನ ಮುಂದೆ ಹೋಗಿ ಆತನ ಹಾದಿಗಳನ್ನು ಸಿದ್ಧಮಾಡುವವನಾಗಿಯೂ** ನಮ್ಮ ದೇವರು ಅತ್ಯಂತ ಕರುಣೆಯಿಂದ ದಯಪಾಲಿಸುವ ಪಾಪಪರಿಹಾರವೆಂಬ ರಕ್ಷಣೆಯ ತಿಳುವಳಿಕೆಯನ್ನು ಆತನ ಪ್ರಜೆಗೆ ಕೊಡು –ವವನಾಗಿಯೂ ಇರುವಿ. **ಆ ಕರುಣೆಯಿಂದಲೇ ನಮಗೆ ಮೇಲಿನಿಂದ ಅರುಣೋದಯವು ಉಂಟಾಗಿ** ಕತ್ತಲಲ್ಲಿಯೂ ಮರಣಾಂಧ – ಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶ ಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ ಮಾರ್ಗದಲ್ಲಿ ಸೇರಿಸಿ ನಡಿಸು – ವದು.**"** (1:67-79)

ಹೀಗೆ ಜಕರೀಯನು ಯೋಹಾನನ ಜನನದ ನಂತರ ದೇವರನ್ನು ಸ್ತುತಿಸಿದನು ಯಾಕೆಂದರೆ **ಮೆಸ್ಸೀಯನು ಹುಟ್ಟಿಬರುವ ಸಮಯವು ಬಂದಿದೆ ಎನ್ನುವದು ಅವನಿಗೆ ಗೊತ್ತಿತ್ತು!** ಜಕರೀಯನ ಮಗನಾದ ಯೋಹಾನನು ಮೆಸ್ಸೀಯನಲ್ಲ, ಆದರೆ ಮೆಸ್ಸೀಯನ ಬರುವಿಕೆ –ಯನ್ನು ಪ್ರಕಟಿಸುವದಕ್ಕೂ ಮತ್ತು ಆತನ ಮುಂದೆ ದಾರಿಯನ್ನು ಸಿದ್ಧಪಡಿಸುವದಕ್ಕೂ ಮೆಸ್ಸೀಯನ ಮುಂದೆ ಬರುವವನಾಗಿದ್ದ.

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು, ಒಂದು ತುಂಬಾ ಪ್ರಾಮುಖ್ಯವಾದ ವಿಷಯವನ್ನು ತಿಳಿಸುವದಕ್ಕೆ ಕನ್ಯೆಯಾದ ಮರಿಯಳ ಬಳಿಗೆ ತನ್ನ ದೂತನಾದ ಗಬ್ರಿಯೇಲನನ್ನು ದೇವರು ಹೇಗೆ ಕಳಿಸಿದನೆಂಬುದರ ಕುರಿತಾದ ಕತೆಯನ್ನು ನಾವು ಓದುವ ಹಾಗೆ ಮುಂದಿನ ಸಲ ನೀವು ಒಳಗೊಳ್ಳುವದಕ್ಕೆ ನಾವು ನಿಮ್ಮನ್ನು ಒತ್ತಾಯಿಸುತ್ತೇವೆ. ಮುಂದಿನ ಪಾಠವು ಮೌಲ್ಯಯುತವಾದ ಸತ್ಯದೊಂದಿಗೆ ತುಂಬಿದೆ. ಇದನ್ನು ಕಳಕೊಳ್ಳಬೇಡಿರಿ. . . . .

ಜಕರೀಯನ ಈ ಮಾತುಗಳ ಮೇಲೆ ನೀವು ಆಲೋಚನೆ ಮಾಡುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಇಸ್ರಾಯೇಲ್ ದೇವರಾಗಿರುವ ಕರ್ತನಿಗೆ ಸ್ತೋತ್ರವು; ಆತನು ಪೂರ್ವದಲ್ಲಿದ್ದ ತನ್ನ ಶ್ರೀಪ್ರವಾದಿಗಳ ಬಾಯಿಂದ ತಾನು ಹೇಳಿದಂತೆಯೇ. . . . ತನ್ನ ಸೇವಕನಾದ ದಾವೀದನ ಮನೆತನದಲ್ಲಿ ನಮಗೋಸ್ಕರ ಒಬ್ಬ ರಕ್ಷಣವೀರನನ್ನು ಎಬ್ಬಿಸಿದ್ದಾನೆ." (ಲೂಕ–1:68-70)**

ಪಾಠ 61

# ಪ್ರಕಟಣೆ

ಲೂಕ 1; ಮತ್ತಾಯ 1

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಕಳೆದ ಅರವತ್ತು ಪಾಠಗಳಿಂದಲೂ ನಾವು ವಾಕ್ಯಗಳ ಮೊದಲ ಒಡಂಬಡಿಕೆಯಾಗಿರುವ ಮೋಶೆಯ ತೋರಾ {ತೌರತ್}, ದಾವೀದನ ಕೀರ್ತನೆಗಳು{ಝಾಬುರ್}ಮತ್ತು ಇತರ ಪ್ರವಾದಿಗಳ ಬವಣಿಗೆಗಳನ್ನು ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಹಿಂದಿನ ಬಾನುಲಿ ಪ್ರಸಾ –ರದಲ್ಲಿ **"ಇಂಜಿಲ್"** ಎಂದು ಕರೆಯಲ್ಪಡುವ **ಹೊಸ ಒಡಂಬಡಿಕೆಯ** ವಾಕ್ಯಗಳನ್ನು ಅಧ್ಯಯನ ಮಾಡುವದಕ್ಕೆ ಆರಂಭಿಸಿದ್ದೇವೆ. **"ಇಂಜಿಲ್"** ಎನ್ನುವದು ಒಂದು ಅರೇಬಿಕ್ ಶಬ್ದವಾಗಿದ್ದು ಇದರ ಅರ್ಥ **ಶುಭ ಸಂದೇಶ** ಎಂಬುದು. ನಿಜವಾಗಿಯೂ, ಸುವಾರ್ತೆಯ ಸಂದೇಶವು ಇದನ್ನು ನಂಬುವವರೆಲ್ಲರಿಗೂ ಒಂದು ಶುಭ ಸಂದೇಶವಾಗಿದೆ, ಯಾಕೆಂದರೆ ಇದು ನಮಗೆ ಹೇಳುವದೇನೆಂದರೆ, **ಬಹಳ ಹಿಂದೆಯೇ ದೇವರು ತನ್ನ ಪ್ರವಾದಿಗಳ ಮೂಲಕ ವಾಗ್ದಾನ ಮಾಡಿದ ಹಾಗೆ ದೇವರು ಒಬ್ಬ ಶಕ್ತನಾದ ರಕ್ಷಕನನ್ನು ಕಳುಹಿಸಿಕೊಟ್ಟಿದ್ದಾನೆ.**

ಸುವಾರ್ತೆಯಲ್ಲಿನ ನಮ್ಮ ಅಧ್ಯಯನವನ್ನು ನಾವು ಆರಂಭಿಸುವದಕ್ಕಿಂತ ಮುಂಚೆ, ಆದಾಮನ ಸಂತಿಯವರಿಗಾಗಿ **ಒಬ್ಬ ರಕ್ಷಕನನ್ನು ಕಳಿಸುವದಕ್ಕೆ ದೇವರು ಯಾಕೆ ಸಂಕಲ್ಪಿಸಿದ್ದನು** ಎಂಬುದನ್ನು ನಾವು ನೆನಪಿಗೆ ತಂದುಕೊಳ್ಳುವದು ಒಳ್ಳೆಯದು. ಆದಾಮ ಮತ್ತು ಹವ್ವ ದೇವರಿಗೆ ಅವಿಧೇಯರಾದಾಗ ಏನಾಯಿತೆಂಬುದನ್ನು ನೀವು ನೆನಪಿಗೆ ತಂದುಕೊಳ್ಳಬಹುದಾ? ತೋರಾದಲ್ಲಿ, ಆದಾಮನ ಅವಿಧೇಯ –ತೆಯು ಇಡೀ ಮಾನವ ಜನಾಂಗವನ್ನು ಹೇಗೆ ದೇವರ ರಾಜ್ಯದೊಳಗಿಂದ ದೂರಮಾಡಿ ಸೈತಾನನ ರಾಜ್ಯದೊಳಗೆ ನಡೆಸಿತೆಂಬುದನ್ನು ನಾವು ನೋಡಿದ್ದೇವೆ. ನಾವು ಪ್ರತಿಯೊಬ್ಬರೂ ಕುಟಿಲತೆಯಲ್ಲಿ ಹುಟ್ಟುವದಕ್ಕೆ ಆದಾಮನ ಪಾಪವು ಕಾರಣವಾಗಿದೆ. **"**ಒಂದು ಇಲಿಯು, ಗುಂಡಿ ತೋಡುವಂತದ್ದನ್ನು ಮಾತ್ರ ಹುಟ್ಟಿಸುತ್ತದೆ**"** ಎನ್ನುವ ಹಾಗೆ {ಉಲೂಫ್ ಗಾದೆ}, ಇದೇ ರೀತಿಯಲ್ಲಿ ಆದಾಮನು ಮತ್ತು ಅವನ ಸಂತಾನದವರು ಪಾಪದ ಮಕ್ಕಳನ್ನು ಮಾತ್ರ ಪಡೆದರು! ಪಾಪಿಗಳು ಪಾಪಿಗಳನ್ನು ಉತ್ಪತ್ತಿ ಮಾಡುತ್ತಾರೆ. ನಮ್ಮ ಪಾಪವು ನಮ್ಮನ್ನು ದಂಡನೆಗೆ ಗುರಿಮಾಡಿದೆ ಆದ್ದರಿಂದ ನಮಗೆ ನ್ಯಾಯ ತೀರಿಸುವವನ ಮುಂದೆ ನಮ್ಮನ್ನು ನಾವು ಸರಿಪಡಿಸಿಕೊಳ್ಳುವದಕ್ಕೆ ಸಾಧ್ಯವಾದ ಮಾರ್ಗವು ನಮಗಿರಲಿಲ್ಲ!

ಹೀಗಿದ್ದರೂ, ಆದಾಮನ ಅತಿಕ್ರಮಿಸುವಿಕೆಯ ಕತೆಯೊಂದಿಗೆ ಪ್ರವಾದಿಗಳ ವಾಕ್ಯಗಳು ಮುಕ್ತಾಯವಾಗಿಲ್ಲ, ಅದಕ್ಕಾಗಿ ನಾವು ದೇವರನ್ನು ಸ್ತುತಿಸುತ್ತೇವೆ! ನಾವು ಈಗಾಗಲೇ ನೋಡಿಕೊಂಡ ಹಾಗೆ, ಆದಾಮ ಹವ್ವರು ಪಾಪ ಮಾಡಿದ ದಿನದಂದೇ, ಪಾಪದ ಮತ್ತು ಸೈತಾನನ ಆಳ್ವಿಕೆಯಿಂದ ಆದಾಮನ ಸಂತಾನದವರನ್ನು ಬಿಡುಗಡೆಮಾಡಲು ಶಕ್ತನಾಗಿರುವ **ಒಬ್ಬ ವಿಮೋಚಕನನ್ನು ಲೋಕಕ್ಕೆ ಕಳುಹಿಸುವ ತನ್ನ ಅದ್ಭುತವಾದ ಯೋಜನೆಯನ್ನು** ತಿಳಿಯುವಂತೆ ಮಾಡುವದಕ್ಕೆ ದೇವರು ಆರಂಭಿಸಿದನು. ಪಾಪವು ಲೋಕದೊಳಕ್ಕೆ ಪ್ರವೇಶಿಸಿದ ಆ ಕತ್ತಲೆಯ ದಿನದಂದು, ಈ ಪರಿಶುದ್ದ ವಿಮೋಚಕನು ಪ್ರತ್ಯೇಕವಾಗಿ **"**ಒಬ್ಬ ಸ್ತ್ರೀಯಲ್ಲಿ**"** ಹುಟ್ಟಿಬರುತ್ತಾನೆ ಎಂಬುದನ್ನು ದೇವರು ಪ್ರಕಟಿಸಿ –ದನು (ಆದಿ–3:15; ಗಲಾತ್ಯ–4:4). ಪಾಪಿಗಳಿಗಾಗಿ ಸಂಪೂರ್ಣವಾದ ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕಿದ್ದ ಮೆಸ್ಸೀ – ಯನು, ಪಾಪದೊಂದಿಗೆ ಕಳಂಕಿತನಾದ ಒಬ್ಬ ಭೂಲೋಕದ ತಂದೆಯಿಂದ ಹುಟ್ಟಿ ಬರುವದು ಸಾಧ್ಯವಿರಲಿಲ್ಲ. ದೇವರು ಸಂಪೂ – ರ್ಣನೂ ಮತ್ತು ಪರಿಶುದ್ಧನೂ ಆಗಿರುವಂತೆಯೇ ಈತನೂ ಸಹ ಸಂಪೂರ್ಣನೂ ಮತ್ತು ಪರಿಶುದ್ಧನೂ ಆಗಿರಬೇಕಾಗಿತ್ತು. ಅದಕ್ಕಾ –ಗಿಯೇ ಪ್ರವಾದಿಯಾದ ಯೆಶಾಯನು (ಮೆಸ್ಸೀಯನು ಬರುವದಕ್ಕಿಂತ ಏಳುನೂರು ವರ್ಷಗಳ ಹಿಂದೆ ಇದ್ದವನು) ಹೀಗೆ ಬರೆದಿ – ದ್ದಾನೆ: **"ಇಗೋ ಒಬ್ಬ ಕನ್ನಿಕೆಯು ಮಗನನ್ನು ಹಡೆದು** ಅವನಿಗೆ ಇಮ್ಮಾನುವೇಲ್ ಎಂದು ಹೆಸರಿಡುವಳು. **"**ದೇವರು ನಮ್ಮ ಕೂಡ ಇದ್ದಾನೆ**"** ಎಂಬುದು ಈ ಹೆಸರಿನ ಅರ್ಥ!" (ಯೆಶಾಯ–7:14; ಮತ್ತಾಯ–1:23)

ನಾವು ಈಗ ಸುವಾರ್ತೆಯ ಪುಸ್ತಕಕ್ಕೆ ಹಿಂದಿರುಗೋಣ, ಒಬ್ಬ ಪುರುಷನೊಂದಿಗೆ ಎಂದಿಗೂ ಸಂಬಂಧವಿರದ ಒಬ್ಬ ಯೌವನಸ್ಥ ಸ್ತ್ರೀ – ಯಲ್ಲಿ ಅಂದರೆ ಒಬ್ಬ ಕನ್ಯೆಯಲ್ಲಿ ಹುಟ್ಟಬೇಕಾಗಿದ್ದ **ಈ ಸಂಪೂರ್ಣನೂ ಮತ್ತು ಪರಿಶುದ್ಧನೂ ಆಗಿರುವ ವಿಮೋಚಕನನ್ನು ಕುರಿತು ದೇವರು ಏನು ವಾಗ್ದಾನಮಾಡಿದ್ದನೋ ಅದನ್ನು ಆತನು ಹೇಗೆ ನೆರವೇರಿಸಿದನೆಂಬುದನ್ನು** ನಾವು ಅಲ್ಲಿ ನೋಡಬಹುದು. ನಮ್ಮ ಹಿಂದಿನ ಪಾಠದಲ್ಲಿ, ದೇವರ ದೂತನಾಗಿದ್ದ ಗಬ್ರಿಯೇಲನು, ಜಕರೀಯನೆಂಬ ಒಬ್ಬ ಯೆಹೂದ್ಯನಿಗೆ ಹೇಗೆ ಕಾಣಿಸಿಕೊಂಡನೆಂಬುದನ್ನು ನಾವು ನೋಡಿದ್ದೇವೆ. ಗಬ್ರಿಯೇಲನು, ಜಕರೀಯನಿಗೆ ನೀನೂ ಮತ್ತು ನಿನ್ನ ಹೆಂಡತಿ ಒಬ್ಬ ಮಗನನ್ನು ಪಡೆದು ಅವನಿಗೆ ಯೋಹಾನನೆಂದು ಹೆಸರಿಡುವಿರಿ, ಆತನು ವಿಮೋಚಕನ ಮುಂದೆ ದಾರಿಯನ್ನು ಸಿದ್ದಪಡಿಸುತ್ತಾನೆ ಎಂದು ಹೇಳಿದನು.

ಈಗ ನಾವು ಲೂಕನ ಸುವಾರ್ತೆಯನ್ನು{ಇಂಜಿಲ್} ಮುಂದುವರಿಸೋಣ, ಮತ್ತು ದೇವರು, ಮರಿಯಳೆಂಬ ಹೆಸರಿನ ಒಬ್ಬ ಕನ್ನಿಕೆಯ
ಬಳಿಗೆ ತನ್ನ ದೂತನನು ಹೇಗೆ ಕಳಿಸುತ್ತಾನೆಂಬುದನ್ನು ನೋಡೋಣ. ವಾಕ್ಯವು ಹೀಗೆ ಹೇಳುತ್ತದೆ:

ಆರನೆಯ ತಿಂಗಳಲ್ಲಿ ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತೆಂಬ ಊರಿಗೆ **ಒಬ್ಬ ಕನ್ಯೆಯ**
ಬಳಿಗೆ ಕಳಿಹಿಸಿದನು; ಆ ಕನ್ಯೆಯ ಹೆಸರು **ಮರಿಯಳು;** ಆಕೆಯು **ದಾವೀದನ ಮನೆತನದ** ಯೋಸೇಫನೆಂಬ ಪುರುಷನಿಗೆ ನಿಶ್ಚಿತಾರ್ಥ
–ವಾಗಿದ್ದಳು. ಆ ದೂತನು ಆಕೆಯ ಬಳಿಗೆ ಬಂದು, "ದೇವರ ದಯೆ ಹೊಂದಿದವಳೇ, ನಿನಗೆ ಶುಭವಾಗಲಿ; ಕರ್ತನು ನಿನ್ನ ಸಂಗಡ
ಇದ್ದಾನೆ" ಅಂದನು. ಆಕೆಯು ಆ ಮಾತಿಗೆ ತತ್ತರಿಸಿ, ಇದೆಂಥ ಆಶೀರ್ವಾದ ಎಂದು ಯೋಚನೆ ಮಾಡುತ್ತಿರಲಾಗಿ ಆ ದೂತನು
ಆಕೆಗೆ, "ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ;
ಆತನಿಗೆ **ಯೇಸುವೆಂದು** ಹೆಸರಿಡಬೇಕು. ಆತನು ಮಹಾಪುರುಷನಾಗಿ **ಪರಾತ್ಪರನ ಕುಮಾರನೆನಿಸಿಕೊಳ್ಳುವನು;** ಇದಲ್ಲದೆ ದೇವರಾಗಿರುವ
ಕರ್ತನು ಆತನ ಮೂಲಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು. ಆತನು ಯಾಕೋಬನ ವಂಶವನ್ನು ಸದಾ –
ಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ" ಎಂದು ಹೇಳಿದನು. ಮರಿಯಳು ಆ ದೂತನನ್ನು, "ಇದು ಹೇಗಾದೀತು? ನಾನು
ಪುರುಷನನ್ನು ಅರಿತವಳಲ್ಲವಲ್ಲಾ" ಎಂದು ಕೇಳಿದ್ದಕ್ಕೆ ದೂತನು, "ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು
ನಿನ್ನ ಮೇಲೆ ಬೀಳುವದು; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು. ಮತ್ತು ನಿನ್ನ ಬಂಧುವಾದ
ಎಲಿಸಬೇತಳಿದ್ದಾಳಲ್ಲಾ, ಆಕೆ ಸಹ ಮುಪ್ಪಿನವಳಾದರೂ ಗರ್ಭಿಣಿಯಾಗಿದ್ದಾಳೆ; ಆಕೆಯ ಗರ್ಭದಲ್ಲಿ ಗಂಡುಮಗುವದೆ; ಬಂಜೆಯೆನಿಸಿ
ಕೊಂಡಿದ್ದ ಆಕೆಗೆ ಇದೇ ಆರನೆಯ ತಿಂಗಳು. ದೇವರಿಂದ ಬರುವ ಯಾವ ಮಾತಾದರೂ ನಿಷ್ಫಲವಾಗುವದಿಲ್ಲ" ಅಂದನು. ಆಗ
ಮರಿಯಳು, "ಇಗೋ, ನಾನು ಕರ್ತನ ದಾಸಿ ನಿನ್ನ ಮಾತಿನಂತೆ ನನಗಾಗಲಿ" ಅಂದಳು. ಆಮೇಲೆ ದೂತನು ಆಕೆಯ ಬಳಿಯಿಂದ
ಹೊರಟು ಹೋದನು. (ಲೂಕ–1:26-38)

ಇಲ್ಲಿಗೆ ನಿಲ್ಲಿಸೋಣ ಮತ್ತು ದೇವದೂತನಾದ ಗಬ್ರಿಯೇಲನು, ಮರಿಯಳಿಗೆ ಕಾಣಿಸಿಕೊಂಡಾಗ ಏನು ಸಂಭವಿಸಿತೆಂಬುದರ ಕುರಿತು
ಸ್ವಲ್ಪ ಮಾತಾಡೋಣ. ಮರಿಯಳು ಒಬ್ಬ ಯೌವನಸ್ಥ ಸ್ತ್ರೀಯಾಗಿದ್ದು ದೇವರ ವಾಕ್ಯವನ್ನು ಗೌರವದಿಂದ ಕಾಣುವವಳಾಗಿದ್ದಳು.
ಅವಳು ಯೋಸೇಫನೆಂಬ ಒಬ್ಬ ಪುರುಷನೊಂದಿಗೆ ಮದುವೆಗೆ ನಿಶ್ಚಿತಾರ್ಥವಾಗಿದ್ದಳು, ಆದರೆ ಅವರು ಇನ್ನೂ ಒಟ್ಟಿಗೆ ವಾಸಿಸುತ್ತಿರ –
ಲಿಲ್ಲ. ಯೋಸೇಫ ಮತ್ತು ಮರಿಯಳಿಬ್ಬರೂ ಅರಸನಾದ ದಾವೀದನ ವಂಶದವರಾಗಿದ್ದರು. ಮೆಸ್ಸೀಯನು **ಒಬ್ಬ ಕನ್ಯೆಯಲ್ಲಿ ಹುಟ್ಟಿ
ಬರುತ್ತಾನೆ** ಎಂಬುದಾಗಿ ಮಾತ್ರ ಪ್ರವಾದಿಗಳು ಪ್ರವಾದಿಸಿರಲಿಲ್ಲ, ಆದರೆ ಆತನು **ಅರಸನಾದ ದಾವೀದನ ವಂಶಾವಳಿಗೆ ಸಂಬಂಧಪಟ್ಟವ–
ನೆಂಬುದನ್ನೂ** ಸಹ ಅವರು ಪ್ರವಾದಿಸಿದ್ದಾರೆ ಎನ್ನುವದನ್ನು ನೀವು ನೆನಪಿಗೆ ತಂದುಕೊಳ್ಳಬೇಕು.

ಆದ್ದರಿಂದ, ಮರಿಯಳ ಕುರಿತಾಗಿ ನೀವು ತಿಳಿದುಕೊಳ್ಳಬೇಕಾದ ಇನ್ನೂ ಸ್ವಲ್ಪ ಇದೆ ಎಂದು ಯಾರೂ ತಪ್ಪಾಗಿ ತಿಳುಕೊಳ್ಳಬಾರದು
ಅದೇನೆಂದರೆ, ಮರಿಯಳು ಆದಾಮನ ಸಂತತಿಯವಳು. ನಮ್ಮೆಲ್ಲರ ಹಾಗೆ, ಅವಳೂ ಸಹ ಪಾಪದ ಸ್ವಭಾವದೊಂದಿಗೆ ಹುಟ್ಟಿದವ –
ಳಾಗಿದ್ದಳು. ಇದನ್ನು ಹೇಳುವದು ನಮಗೆ ಅಗತ್ಯ, ಯಾಕೆಂದರೆ ಅನೇಕರು ಮರಿಯಳನ್ನು ದೇವರ ಸ್ಥಾನಕ್ಕೆ ಮೇಲೆತ್ತಿ ಅವಳನ್ನು
ಆರಾಧಿಸಿ ಪ್ರಾರ್ಥಿಸುತ್ತಿದ್ದಾರೆ. ಹೀಗೆ ಮಾಡುವದು **ವಿಗ್ರಹಾರಾಧನೆ!** ಖಂಡಿತವಾಗಿಯೂ, ಈಕೆಯ ಮೂಲಕ ಲೋಕಕ್ಕೆ ಮೆಸ್ಸೀಯ –
ನನ್ನು ತರುವದಕ್ಕೆ ದೇವರು ಆರಿಸಿಕೊಂಡ ಸ್ತ್ರೀ ಮರಿಯಳಾಗಿರುವದರಿಂದ ಈಕೆ **ಗೌರವಕ್ಕೆ ಅರ್ಹಳಾಗಿದ್ದಾಳೆ**. ಆದರೆ ದೇವರು ಆಕೆಗೆ
ದಯಪಾಲಿಸಿದ ಈ ದಯೆಯು ಅವಳನ್ನು **ಆರಾಧನೆಯ ಅರ್ಹಳನ್ನಾಗಿ ಮಾಡುವದಕ್ಕಲ್ಲ,** ಯಾಕೆಂದರೆ ವಾಕ್ಯವು ಹೀಗೆ ಹೇಳುತ್ತದೆ:
"ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು **ಆತನೊಬ್ಬನನ್ನೇ** ಆರಾಧಿಸಬೇಕು!" (ಮತ್ತಾಯ–4:10)

ಈಗ ಹಾಗಾದರೆ, ನಾವು ಈಗ ತಾನೇ ಓದಿದ ವಾಕ್ಯದಲ್ಲಿ, ದೇವರು ಪಾಪಿಗಳ ರಕ್ಷಕನನ್ನು ಒಬ್ಬ ಕನ್ಯೆಯ ಮೂಲಕ ಲೋಕಕ್ಕೆ ತರು –
ವದಕ್ಕಾಗಿ ಉದ್ದೇಶಿಸಿದ್ದಾನೆ ಎಂಬುದನ್ನು ಅವಳಿಗೆ ತಿಳಿಸುವದಕ್ಕೆ ದೇವರು ಹೇಗೆ ಗಬ್ರಿಯೇಲನನ್ನು ಮರಿಯಳ ಬಳಿಗೆ ಕಳಿಸಿದನೆಂಬು
–ದನ್ನು ನಾವು ನೋಡುತ್ತೇವೆ. ಮರಿಯಳು ತಾನು ಹೆರುವ ಮಗುವಿಗೆ ಯಾವ ಹೆಸರಿಡಬೇಕೆಂಬುದನ್ನೂ ಸಹ ಗಬ್ರಿಯೇಲನು ಅವ
–ಳಿಗೆ ತಿಳಿಸಿದನು. ಅವನು ಆಕೆಗೆ ಹೇಳಿದ್ದೇನೆಂದರೆ, "ನೀನು ಆತನಿಗೆ **ಯೇಸುವೆಂದು** ಹೆಸರಿಡಬೇಕು." ಯೇಸು ಎಂಬ ಹೆಸರಿನ
ಅರ್ಥವೇನೆಂದರೆ, **ಕರ್ತನು ಕಾಪಾಡುವನು** ಎಂಬದೇ. {ಟಿಪ್ಪಣಿ: ಕುರಾನ್ ಯೇಸುವನ್ನು ಈಸಾ ಎಂದು ಕರೆಯುತ್ತದೆ. ಅರೇಬಿಕ್‌ನ
ಹೊಸ ಒಡಂಬಡಿಕೆಯು ಆತನನ್ನು ಯಾಸು ಎಂದು ಕರೆಯುತ್ತದೆ, ಇದು ಆತನ ಸರಿಯಾದ ಹೆಸರಿನೊಂದಿಗೆ ಸೇರುತ್ತದೆ. ಕರ್ತನು
ಕಾಪಾಡುವನು ಎಂಬ ಅರ್ಥವಿರುವ ಯೆಹೋಶುವ ಎಂಬ ಹೀಬ್ರೂವಿನ ಗ್ರೀಕ್ ಭಾಷಾಂತರವೇ ಯೇಸು ಎನ್ನುವಂತಾದ್ದು.} ಹೇಗಾ
–ದರೂ, ಗಬ್ರಿಯೇಲನು ಮೆಸ್ಸೀಯನಿಗೆ ಇನ್ನೊಂದು ಹೆಸರನ್ನು ಸೂಚಿಸಿದನು. ನೀವು ಇದನ್ನು ಕೇಳಿಸಿಕೊಂಡಿರಾ? ಅವನು ಆತನನ್ನು
**"ಪರಾತ್ಪರನ ಕುಮಾರನು"** ಎಂದು ಕರೆದನು. ಇದನ್ನು ಇಷ್ಟಪಡಿರಿ ಅಥವಾ ಇಷ್ಟಪಡದಿರಿ, ಗಬ್ರಿಯೇಲನು ಅದನ್ನೇ ಹೇಳಿದ್ದಾನೆ.
ದಾವೀದನ ಕೀರ್ತನೆಗಳಲ್ಲಿ ನಾವು ಈಗಾಗಲೇ ಓದಿರುವಂತೆ ದೇವರು ಮೆಸ್ಸೀಯನನ್ನು ತನ್ನ ಮಗನೆಂಬುದಾಗಿ ಕರೆದಿದ್ದಾನೆ. ದೇವರ
ದೂತನಾದ ಗಬ್ರಿಯೇಲನು ಸಹ ಮೆಸ್ಸೀಯನನ್ನು "ದೇವರ ಮಗನೆಂಬುದಾಗಿ" ಹೇಗೆ ಕರೆದಿದ್ದಾನೆಂಬುದನ್ನು ಈಗ ನಾವು ಕೇಳಿದೆವು.

ಸ್ನೇಹಿತರೇ, **"ದೇವರ ಮಗ"**ಎಂಬ ಹೆಸರನ್ನು ಕೇಳಿಸಿಕೊಂಡಿರುವ ಅನೇಕರು,"ಅದು ಅಸಾಧ್ಯ! ಅಸ್ತಾಘ್‌ಫೆರುಲ್ಲಾಹ್! ಎಂದು ಹೇಳು–
ವದು ನಮಗೆ ಗೊತ್ತು. {ಇಸ್ಲಾಮಿಕ್ ನಿಯಮವು ಈ ಕಲ್ಪನೆಯನ್ನು ಹೀಗೆ ತಿಳಿಸುತ್ತದೆ: ಇಂತಹ ದೇವದೂಷಣೆಯನ್ನು ಮಾತಾಡಿದ್ದ–
ಕ್ಕಾಗಿ ದೇವರು ನಿಮ್ಮನ್ನು ಕ್ಷಮಿಸಲಿ!} ಆದರೆ ಹಳೆಯ {ಉಲೂಫ್} ಗಾದೆಯು ಹೇಳುವ ಹಾಗೆ: "ಕುರುಬನ ಬಾಯಿಗೆ ನೀವು ಹೊಡೆ
–ಯುವದಕ್ಕಿಂತ ಮೊದಲು, ಅವನು ಯಾತಕ್ಕಾಗಿ ಸಿಳ್ಳೇ ಹಾಕುತ್ತಿದ್ದಾನೆ ಎಂಬುದನ್ನು ನೀವು ಕಂಡುಕೊಳ್ಳಬೇಕು." ಇದರಂತೆಯೇ,
"ದೇವರ ಮಗ"ಎಂಬ ಹೆಸರನ್ನು ನೀವು ಹೀನೈಸುವದಕ್ಕಿಂತ ಮೊದಲು, ದೇವರ ಮಗ ಎಂಬ ಹೆಸರಿನ ಅರ್ಥ ಏನೆಂಬುದನ್ನು ಕಂಡು
–ಹಿಡಿಯುವದಕ್ಕೆ ನೀವು ಶ್ರಮಪಡಬೇಕು! ಪರಿಶುದ್ಧ ವಾಕ್ಯಗಳಲ್ಲಿ, ಮೆಸ್ಸೀಯನು **ದೇವರ ಮಗನೆಂಬುದಾಗಿ** ನೂರಿಪ್ಪತ್ತು ಸಲಕ್ಕಿಂತಲೂ

ಹೆಚ್ಚಾಗಿ ಕರೆಯಲ್ಪಟ್ಟಿದೆ. ಈ ಪ್ರಕಾರ, ಪ್ರವಾದಿಗಳ ಬರವಣಿಗೆಗಳನ್ನು ನಂಬುವ ನಾವು, ದೇವರು ಮೆಸ್ಸೀಯನನ್ನು ತನ್ನ ಮಗನೆಂಬು –ದಾಗಿ ಕರೆದಿರುವದನ್ನು ಅಲ್ಲಗಳೆಯುವ ಧೈರ್ಯವನ್ನು ಮಾಡಬಾರದು. ದೇವರು ಯೇಸುವನ್ನು **ತನ್ನ ಮಗನೆಂಬುದಾಗಿ ಯಾಕೆ** ಕರೆ –ದಿದ್ದಾನೆಂಬುದನ್ನು ತಿಳಿದುಕೊಳ್ಳುವದಕ್ಕೆ ನಾವು ಇಚ್ಛೆಯುಳ್ಳವರಾಗಿರಬೇಕು.

ಮೊದಲನೆಯದಾಗಿ, ದೇವರ ಮಗ ಎನ್ನುವ ಹೆಸರು ಯಾವ **ಅರ್ಥವಲ್ಲದ್ದು** ಎನ್ನುವದನ್ನು ನಾವು ತಿಳಿಯಬೇಕು. **ದೇವರು ಒಬ್ಬ ಹೆಂಡತಿಯನ್ನು ತೆಗೆದುಕೊಂಡು ಒಬ್ಬ ಮಗನನ್ನು ಪಡೆದನು ಎಂಬುದು ಇದರ ಅರ್ಥವಲ್ಲ!** ಈ ರೀತಿಯಾಗಿ ಯಾರಾದರೂ ಯೋಚಿಸಿ –ದರೆ ಅದು ದೇವದೂಷಣೆಯಾಗುತ್ತದೆ! ದೇವರು ಉನ್ನತನೂ ಮತ್ತು ಮನುಷ್ಯನು ಮಕ್ಕಳನ್ನು ಪಡೆಯುವ ಹಾಗೆ ಆತನು ಮಕ್ಕಳನ್ನು ಪಡೆಯುವದಿಲ್ಲ. ಎಂದಿಗೂ ಇಲ್ಲ! ಅದು ನಮ್ಮ ಮನಸ್ಸಿನಲ್ಲಿ ಪೂರ್ಣ ಸ್ಪಷ್ಟವಾಗಿರಬೇಕು. ದೇವರ ಮಗ ಎಂಬ ಹೆಸರಿನ ಎಲ್ಲಾ ಅರ್ಥವನ್ನೂ ವಿವರಿಸುವದಕ್ಕೆ ಈದಿನ ನಮಗೆ ಸಮಯವಿಲ್ಲ, ಆದರೆ ನೀವು ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ ದೇವರು ಒಬ್ಬ ಹೆಂಡತಿಯನ್ನು ತೆಗೆದುಕೊಂಡು ಆಕೆಯಿಂದ ಒಬ್ಬ ಮಗನನ್ನು ಪಡೆದನು ಎಂದು ಇದರ **ಅರ್ಥವಲ್ಲ!** ಅರ್ಥಮಾಡಿಕೊಳ್ಳುವದಕ್ಕೆ ಇದು ಕಷ್ಟಕರವಾದುದೇನೂ ಅಲ್ಲ, ಯಾಕೆಂದರೆ ಸೆನೆಗಲ್‌ನಲ್ಲಿ ಹೆಂಡತಿಯನ್ನು ಹೊಂದಿಲ್ಲದೆ ಒಬ್ಬ ಮಗನನ್ನು ಪಡೆಯದಿದ್ದಾಗ್ಯೂ, ಈ ದೇಶದಲ್ಲಿ ತುಂಬಾ ದೀರ್ಘ ಸಮಯದವರೆಗೆ ವಾಸಿಸಿದ ಯಾರನ್ನಾದರೂ ಇಲ್ಲಿ ಸೆನೆಗಲ್‌ನಲ್ಲಿ **"**ಸೆನೆಗಲ್‌ನ ಒಬ್ಬ ಮಗ**"** ಎಂದು ಆಗಾಗ್ಗೆ ನಾವು ಕರೆಯುತ್ತೇವೆ. ನೀವು ದೇಶದ ಹೊರಗೆ ಪ್ರಯಾಣಿಸಿದರೂ ಸಹ, ಜನರು ನಿಮ್ಮನ್ನು **"**ಸೆನೆಗಲ್‌ನ ಒಬ್ಬ ಮಗ**"** ಎಂದು ಕರೆಯುತ್ತಾರೆ, ಆದರೆ ಸೆನೆಗಲ್ ನಿಮ್ಮ ತಂದೆ ಎಂಬುದು ಅದರ ಅರ್ಥವಲ್ಲ! ನಿಮ್ಮ ಮೂಲ ಸ್ಥಳವಾಗಿರುವ ಸೆನೆಗಲ್‌ನಿಂದ ನೀವು ಬಂದಿದ್ದೀರಿ ಎಂದು ಇದರ ಸರಳವಾದ ಅರ್ಥ.

ಹೀಗೆ ಮೆಸ್ಸೀಯನಾದ ಯೇಸುವಿನೊಂದಿಗೂ ಇದು ಹೀಗೆ ಅರ್ಥಕೊಡುತ್ತದೆ. ದೇವರು ಆತನನ್ನು ತನ್ನ ಮಗನೆಂದು ಕರೆದನು **ಯಾಕೆಂದರೆ ಆತನು ದೇವರಿಂದ ಮುಂದಾಗಿ ಬಂದವನಾಗಿದ್ದನು.** ಮೆಸ್ಸೀಯನು ಪರಲೋಕದಿಂದ ಬಂದವನು. ಆತನು ಹುಟ್ಟುವದ –ಕ್ಕಿಂತ ಮುಂಚೆ ಆತನು ದೇವರೊಂದಿಗಿದ್ದನು; ಆತನು ದೇವರಲ್ಲಿದ್ದನು. ಆತನು **"**ರೂಹ್ ಅಲ್ಲಾಹ್**"**, ಅಂದರೆ ದೇವರಾತ್ಮನು. {**"**ರೂಹ್ ಅಲ್ಲಾಹ್**"** ಎಂಬ ಅರೇಬಿಕ್ ಶಬ್ದದ ಅರ್ಥ ದೇವರ ಆತ್ಮ/ಪ್ರಾಣ ಎಂದು; ಹೀಬ್ರೂವಿನ **"**ರೂವಾ**"** ದ ಹಾಗೆ. ಮೆಸ್ಸೀಯ –ನೊಂದಿಗೆ ಅನುರೂಪವಾಗಿರುವ ಯೇಸುವಿಗೆ ಇದು ಕುರಾನಿನ ಒಂದು ಬಿರುದಾಗಿದೆ: ದೇವರ ನಿತ್ಯಾತ್ಮನ ಮಗನು: ಒಬ್ಬನೇ ತ್ರಯ್ಯೇಕ ದೇವರಲ್ಲಿ ಎರಡನೆಯ ಆತ್ಮನು.} ಮೆಸ್ಸೀಯನು **"ಕಾಲಿಮತ್"** ಸಹ ಆಗಿದ್ದಾನೆ; ಆದಿಯಲ್ಲಿ ದೇವರೊಂದಿಗಿದ್ದ ವಾಕ್ಯ. {**"**ಕಾಲಿಮತ್ ಅಲ್ಲಾಹ್**"** ಎಂಬ ಅರೇಬಿಕ್ ಶಬ್ದದ ಅರ್ಥ, ವಾಕ್ಯ/ದೇವರ ಕ್ರಿಯೆ: ಸತ್ಯವೇದ ಮತ್ತು ಕುರಾನ್ ಎರಡರಲ್ಲಿಯೂ ಮೆಸ್ಸೀಯನಿಗೆ ಅದ್ವಿತೀಯವಾಗಿ ಹೊರಿಸಲ್ಪಟ್ಟಿರುವ ಒಂದು ಬಿರುದಾಗಿದೆ.} ಅದಕ್ಕಾಗಿಯೇ ವಾಕ್ಯವು ಹೇಳಿರುವದೇನೆಂದರೆ:

**"**ಆದಿಯಲ್ಲಿ **ವಾಕ್ಯವಿತ್ತು;** ಆ **ವಾಕ್ಯವು ದೇವರ ಬಳಿಯಲ್ಲಿತ್ತು;** ಆ **ವಾಕ್ಯವು ದೇವರಾಗಿತ್ತು.** ಆ ವಾಕ್ಯವೆಂಬಾತನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. ಆತನ ಮೂಲಕವಾಗಿ ಸಮಸ್ತವು ಉಂಟಾಯಿತು; ಉಂಟಾಗಿರುವ ವಸ್ತುಗಳಲ್ಲಿ ಆತನಿಲ್ಲದೆ ಒಂದಾದರೂ ಉಂಟಾಗ –ಲಿಲ್ಲ. **ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು."** (ಯೋಹಾನ–1:1-3, 14)

ಹೌದು, ಮೆಸ್ಸೀಯನು ಪರಲೋಕದಿಂದ ಬಂದಂತಹ **ದೇವರ ವಾಕ್ಯವಾಗಿದ್ದು**, ಮನುಷ್ಯನಾಗಿ ಹುಟ್ಟಿದ್ದನು. ಮೆಸ್ಸೀಯನಿಗೆ ಭೂಲೋ –ಕದ ತಂದೆಯಿಲ್ಲ ಎನ್ನುವದು ನಮಗೆಲ್ಲರಿಗೂ ಗೊತ್ತಿದೆ. ಒಳ್ಳೇದು ಈಗ, ಒಂದುವೇಳೆ ಆತನು ಒಬ್ಬ ಭೂಲೋಕದ ತಂದೆಯನ್ನು ಹೊಂದಿಲ್ಲದಿದ್ದರೆ. ಹಾಗಾದರೆ ಆತನು ಎಲ್ಲಿಂದ ಬಂದ? ಆತನು ಯಾರ ಮಗನು? ಗಬ್ರಿಯೇಲನು ಮರಿಯಳಿಗೆ ಹೇಳಿರುವದನ್ನು ಮತ್ತೊಮ್ಮೆ ಕೇಳಿಸಿಕೊಳ್ಳಿರಿ: **"ನಿನ್ನ ಮೇಲೆ ಪವಿತ್ರಾತ್ಮ ಬರುವದು; ಪರಾತ್ಪರನ ಶಕ್ತಿಯ ನೆರಳು ನಿನ್ನ ಮೇಲೆ ಬೀಳುವದು; ಆದದರಿಂದ ಹುಟ್ಟುವ ಆ ಪವಿತ್ರ ಶಿಶು ದೇವರ ಮಗನೆನಿಸಿಕೊಳ್ಳುವದು."** ಅಂದನು (ಲೂಕ–1:35)

ಬಹುಶ: ಕೆಲವರು, **"**ಓಹ್ ಹೌದು, ಯೇಸುವಿಗೆ ಭೂಲೋಕದ ತಂದೆಯಿಲ್ಲ ಎನ್ನುವದು ನಮಗೆ ಗೊತ್ತು, ಆದರೆ ಕನ್ಯೆಯಲ್ಲಿನ ಯೇಸುವಿನ ಜನನವು ತುಂಬಾ ಪ್ರಾಮುಖ್ಯವಾದುದೇನಲ್ಲ. ದೇವರು ಕೇವಲ ತನ್ನ ಶಕ್ತಿಯನ್ನು ತೋರಿಸುವದಕ್ಕೆ ಇಷ್ಟಪಟ್ಟನು. ದೇವರು ಆದಾಮನನ್ನು ತಂದೆ ಅಥವಾ ತಾಯಿ ಇಲ್ಲದೆ ಸೃಷ್ಟಿಸಿದನು. ಮುಂದೆ, ಆತನು ಹವ್ವಳನ್ನು ಒಬ್ಬ ತಂದೆಯಿಂದ ಮಾತ್ರ ಸೃಷ್ಟಿಸಿದನು, ಅಂದರೆ ಆದಾಮನ ಪಕ್ಕೆಯ ಎಲುಬನ್ನು ತೆಗೆದು ಅವಳನ್ನು ಉಂಟುಮಾಡಿದನು. ನಂತರ ಮುಂದೆ ತನ್ನ ಶಕ್ತಿಯನ್ನು ತೋರಿಸು –ವದಕ್ಕೆ, ದೇವರು ಒಬ್ಬ ಸ್ತ್ರೀಯನ್ನು ಮಾತ್ರ ಉಪಯೋಗಿಸಿ ಒಬ್ಬ ಮನುಷ್ಯನನ್ನು ಸೃಷ್ಟಿಸಿದನು. ಯೇಸು ಭೂಲೋಕದ ತಂದೆಯಿಲ್ಲದೆ ಹುಟ್ಟಿದನೆಂಬುದಕ್ಕೆ ಇದೊಂದು ಮಾತ್ರವೇ ಕಾರಣವಾಗಿದೆ.**"** ಎಂದು ಹೇಳುವದನ್ನು ನೀವು ಕೇಳಿದ್ದೀರಿ.

ಪ್ರೀತಿಯ ಸ್ನೇಹಿತರೇ, ದೇವರು ಸರ್ವಶಕ್ತನೂ ಮತ್ತು ಆತನಿಗೆ ಅಸಾಧ್ಯವಾದುದು ಯಾವುದೂ ಇಲ್ಲ ಎಂಬುದು ಸತ್ಯ! ಆದರೆ ಒಬ್ಬ ಕನ್ಯೆಯಲ್ಲಿನ ಯೇಸುವಿನ ಜನನದ ಕುರಿತಾಗಿ ನೀವು ತಿಳಿದುಕೊಳ್ಳಬೇಕಾದದ್ದೇನೆಂದರೆ, ಕೇವಲ ದೇವರ ಶಕ್ತಿಯನ್ನು ಪ್ರದರ್ಶಿಸುವದ –ಕ್ಕಿಂತ ಇದರ ಕಾರಣವು ಹೆಚ್ಚು ಅಪರಿಮಿತವಾಗಿ ಪ್ರಾಮುಖ್ಯವಾದುದಾಗಿದೆ! ನಿಮ್ಮನ್ನು ಮೋಸಗೊಳಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ! ದೇವರು ಆದಾಮ ಮತ್ತು ಹವ್ವರನ್ನು ಸೃಷ್ಟಿಮಾಡಿದ ಸಾವಿರಾರು ವರ್ಷಗಳ ನಂತರ ಯೇಸು ಒಬ್ಬ ಕನ್ಯೆಯಲ್ಲಿ ಹುಟ್ಟಿ –ದ್ದಕ್ಕೆ ತುಂಬಾ ತುಂಬಾ ಪ್ರಾಮುಖ್ಯವಾದ ಕಾರಣವಿದೆ! ಆ ಕಾರಣ ನಿಮಗೆ ಗೊತ್ತಾ? ಪರಿಶುದ್ಧ ವಾಕ್ಯಗಳು ಆ ಕಾರಣವನ್ನು ತಿಳಿಸು –ತ್ತದೆ ಅದು ಏನೆಂದರೇ, **"**ಮೆಸ್ಸೀಯನಾದ ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು.**"**(1ತಿಮೊಥೆ–1:15). **ಯೇಸು ಈ ಲೋಕದಲ್ಲಿ ಹುಟ್ಟಿದ್ದು, ಕಳೆದುಹೋದ, ಪಾಪದ, ಭ್ರಷ್ಟಗೊಂಡ, ದಂಡನೆಗೊಳಗಾದ ಆದಾಮನ ಸಂತಾನದವರನ್ನು ವಿಮೋಚಿ –ಸುವದಕ್ಕಾಗಿ. ಆದಕಾರಣ ಆತನು ಪಾಪದೊಂದಿಗೆ ಕಳಂಕಿತ ಮನುಷ್ಯನಿಂದ ಹುಟ್ಟಿ ಬರುವದು ಸಾಧ್ಯವಿರಲಿಲ್ಲ!** ನಾವು ಈಗಾಗಲೇ ನೋಡಿರುವಂತೆ, ದೇವರ ಯೋಜನೆಯ ಪ್ರಕಾರ, ಮೆಸ್ಸೀಯನು ಪಾಪದ ಕ್ರಯಕ್ಕೆ ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸಬೇಕಾಗಿತ್ತು.

**ಸಂಪೂರ್ಣವಾದ ಯಜ್ಞವಾಗುವದಕ್ಕಾಗಿ,** ಪ್ರತಿವರ್ಷ ಯಜ್ಞದ ಹಬ್ಬದಲ್ಲಿ ಯಜ್ಞವಾಗುವ ಆರೋಗ್ಯವಂತ ಮತ್ತು ನಿಷ್ಕಳಂಕ ಕುರಿಯ ರೀತಿಯಲ್ಲಿ, ವಿಮೋಚಕನು ಒಂದೇ ಒಂದು ಪಾಪ ಅಥವಾ ತಪ್ಪಿಲ್ಲದವನೂ ಆಗಿರಬೇಕಾಗಿತ್ತು {ಇದ್ ಅಲ್–ಅದ್‌ಹಾ}.

ಇದರ ಕುರಿತು ಆಲೋಚಿಸಿರಿ! ಒಂದು ದೊಡ್ಡ ಸಾಲದಲ್ಲಿರುವ ಒಬ್ಬ ವ್ಯಕ್ತಿ ಬೇರೆಯವರ ಸಾಲವನ್ನು ತೀರಿಸುವದಕ್ಕೆ ಸಾಧ್ಯವೋ? ಇಲ್ಲ! ಕೇವಲ ಯಾವ ಸಾಲವಿಲ್ಲದವನು ಮಾತ್ರ ಬೇರೆಯವರ ಸಾಲಗಳನ್ನು ತೆರುವದಕ್ಕೆ ಅರ್ಹನಾಗಿರುತ್ತಾನೆ. ಹಾಗೆಯೇ, ಮೆಸ್ಸೀ –ಯನು ಪಾಪದ ಯಾವ ಸಾಲವಿಲ್ಲದ ಒಬ್ಬ ಮನುಷ್ಯನಾಗಿದ್ದನು, ಆದ್ದರಿಂದ ಆತನು ಆದಾಮನ ಮಕ್ಕಳಿಗಾಗಿ ಪಾಪದ ಸಾಲವನ್ನು ತೆರುವದಕ್ಕೆ ಶಕ್ತನಾದನು. ಮೆಸ್ಸೀಯನಿಗೂ ಮತ್ತು ಆದಾಮನ ಮಕ್ಕಳಿಗೂ ತುಂಬಾ ವ್ಯತ್ಯಾಸವಿದೆಯೆಂಬುದನ್ನು ನಮಗೆ ತಿಳಿಸುವದಕ್ಕೆ ದೇವರು ಇಚ್ಛಿಸುತ್ತಾನೆ. ನಾವು **ಆದಾಮನ ಮಕ್ಕಳು,** ಆದರೆ ಯೇಸು ದೇವರ ಮಗನು! ನಾವು, ಆದಾಮನ ಮಕ್ಕಳಂತೆ, ನಮ್ಮ ಪಾಪದ ಕಾರಣದಿಂದ **ಮಲಿನವಾದ ಭೂಮಿಯ ಹಾಗಿದ್ದೇವೆ.** ಆದಾಗ್ಯೂ, ಯೇಸು **ಪರಲೋಕದಿಂದ ಬರುವ ಮಳೆಯ ಹಾಗಿದ್ದಾನೆ.** ದೇವರು ಶುದ್ಧನೂ ಮತ್ತು ಪವಿತ್ರನೂ ಆಗಿರುವಂತೆ, ಯೇಸುವು ಶುದ್ಧನೂ ಮತ್ತು ಪವಿತ್ರನೂ ಆಗಿದ್ದಾನೆ. ಅದಕ್ಕಾಗಿಯೇ ಆತನನ್ನು ತನ್ನ ಮಗನೆಂಬುದಾಗಿ ಕರೆಯುವದಕ್ಕೆ ದೇವರು ನಾಚಿಕೆಪಡಲಿಲ್ಲ! ಆದ್ದರಿಂದ ಸ್ನೇಹಿತರೇ, ಈದಿನ ನೀವು ಇಲ್ಲಿಂದ ಹೊರಡುವಾಗ, ಮೆಸ್ಸೀಯನಾದ ಯೇಸು ಒಬ್ಬ ಕನ್ಯೆಯಲ್ಲಿ ಯಾಕೆ ಹುಟ್ಟಿದನು ಮತ್ತು **"ದೇವರ ಮಗ" ಎಂಬ ಹೆಸರಿನ ಅರ್ಥವೇನು ಮತ್ತು ಅರ್ಥ –ವೇನಲ್ಲ** ಎಂದು ನೀವು ಚೆನ್ನಾಗಿ ಗ್ರಹಿಸಿಕೊಳ್ಳುವಂತೆ ನಿಮ್ಮ ಆಲೋಚನೆಗಳು ಸ್ಪಷ್ಟವಾಗಿವೆ ಎಂದು ನಾವು ನಂಬುತ್ತೇವೆ.

ಮೆಸ್ಸೀಯನ ಕುರಿತಾಗಿ ಮತ್ತಾಯನ ಸುವಾರ್ತೆಯಲ್ಲಿರುವದನ್ನು ಓದುವದರಿಂದ ನಾವು ಈದಿನದ ಪ್ರಸಾರವನ್ನು ಮುಗಿಸುತ್ತಿದ್ದೇವೆ. ದೇವರಾತ್ಮನ ಬಲದಿಂದ ಮರಿಯಳು ಗರ್ಭಿಣಿಯಾಗಿ ಕೆಲವು ತಿಂಗಳುಗಳಾದ ನಂತರ, ಮರಿಯಳ ಗಂಡನಾಗಬೇಕಾಗಿದ್ದ ಯೋಸೇ –ಫನ ಬಳಿಗೆ ದೇವರು ತನ್ನ ದೂತನನ್ನು ಕಳಿಸಿದನು. ವಾಕ್ಯವು ಹೀಗೆ ಹೇಳುತ್ತದೆ:

ಯೇಸುಕ್ರಿಸ್ತನ ಜನನವು ಹೇಗಾಯಿತೆಂದರೆ, ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯ ಮಾಡಿರಲಾಗಿ ಅವರು ಕೂಡುವದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದದ್ದದ್ದು ತಿಳಿದುಬಂತು. ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವದಕ್ಕೆ ಮನಸ್ಸಿಲ್ಲದೆ ಯಾರಿಗೂ ತಿಳಿಯದೆ ಆಕೆಯನ್ನು ಬಿಟ್ಟು ಬಿಡಬೇಕೆಂದಿದ್ದನು. ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು, "ಎಲೈ ಯೋಸೇಫನೇ, ದಾವೀದನ ವಂಶದ ವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು **ಪವಿತ್ರಾತ್ಮದಿಂದಲೇ ಆದದ್ದು.** ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ **ಯೇಸು** ಎಂದು ಹೆಸರಿಡಬೇಕು; ಯಾಕಂದರೆ **ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು"** ಅಂದನು. **ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೆರವೇರುವಂತೆ ಇದೆಲ್ಲಾ ನಡೆಯಿತು;** ಆ ಮಾತು ಏನಂದರೆ, "ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ಎಂಬದು. **ದೇವರು ನಮ್ಮ ಕೂಡ ಇದ್ದಾನೆಂದು** ಈ ಹೆಸರಿನ ಅರ್ಥ." ಆಗ ಯೊಸೇಫನು ನಿದ್ದೆ ತಿಳಿದೆದ್ದು ಕರ್ತನ ದೂತನು ಅಪ್ಪಣೆ ಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು. ಆದರೆ ಆಕೆಯು ಗಂಡುಮಗನನ್ನು ಹಡೆಯುವ ತನಕ ಆಕೆಯನ್ನು ಅರಿಯಲಿಲ್ಲ. ಮಗುವಿಗೆ **ಯೇಸುವೆಂದು** ಹೆಸರಿಟ್ಟರು. (ಮತ್ತಾಯ–1:18-25).

ಈದಿನ ನಾವು ಇಲ್ಲಿಗೆ ನಿಲ್ಲಿಸುತ್ತೇವೆ. ದೇವರ ಚಿತ್ತವಿರುವದಾದರೆ, ಮುಂದಿನ ಸಲ ಮೆಸ್ಸೀಯನಾದ ಯೇಸುವಿನ ಜನನದ ಕುರಿತಾಗಿ ಸುವಾರ್ತೆಯಲ್ಲಿರುವ ಅದ್ಭುತವಾದ ಕತೆ ಓದುವದನ್ನು ಮುಂದುವರಿಸುತ್ತೇವೆ. . . . .

ಮೆಸ್ಸೀಯನ ಕುರಿತಾಗಿ ದೂತನು ಯೋಸೇಫನಿಗೆ ಹೇಳಿರುವದನ್ನು ನೀವು ನೆನಪಿಸಿಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು, ಯಾಕಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವನು!"** (ಮತ್ತಾಯ–1:21).

[ಪಾಠ 61: ಪ್ರಕಟಣೆ] [ಸಾರಾಂಶಗಳ ಪಟ್ಟಿ] [ಪಾಠ 63: ಪವಿತ್ರ ಮಗನು]

ಪಾಠ 62

# ಮೆಸ್ಸೀಯನು ಜನಿಸಿದನು

ಲೂಕ 2; ಮತ್ತಾಯ 2

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಪಾಠದಲ್ಲಿ, ಸುವಾರ್ತೆಯಲ್ಲಿನ{ಇಂಜಿಲ್}ನಮ್ಮ ಅಧ್ಯಯನದಲ್ಲಿ, ದೇವರು ತನ್ನ ದೂತನಾದ ಗಬ್ರಿಯೇಲನನ್ನು ಪ್ಯಾಲೇಸ್ತೀನ್ ನಲ್ಲಿರುವ ನಜರೇತೆಂಬ ಊರಿನ ಮರಿಯಳೆಂಬ ಒಬ್ಬ ಕನ್ಯೆಯ ಬಳಿಗೆ ಹೇಗೆ ಕಳಿಸಿದನೆಂಬುದನ್ನು ನಾವು ನೋಡಿಕೊಂಡೆವು. ದೂತನು ಆ ಕನ್ಯೆಗೆ, ಪವಿತ್ರಾತ್ಮನ ಶಕ್ತಿಯಿಂದ ಅವಳು ಗರ್ಭಿಣಿಯಾಗಿ ಒಬ್ಬ ಮಗನನ್ನು ಹಡೆದು ಆತನಿಗೆ ಯೇಸುವೆಂದು ಹೆಸರಿಡು –ತ್ತಾಳೆ ಎಂಬುದನ್ನು ತಿಳಿಸುವದಕ್ಕೆ ಅವಳಿಗೆ ಕಾಣಿಸಿಕೊಂಡನು. ಯೇಸು ಎಂದರೆ, **ಕರ್ತನು ಕಾಪಾಡುವನು** ಎಂದು ಅರ್ಥ. ಹೀಗೆ, ದೇವರ ಜನರು ಬಹಳ ದೀರ್ಘವಾಗಿ ಕಾಯುತ್ತಿದ್ದ ಸಮಯವು ಬಂದಿರುವದನ್ನು ನಾವು ನೋಡಿದೆವು! ಅದಾಮ ಹವ್ವರು ಪಾಪ ಮಾಡಿದ ದಿನದಂದು ದೇವರು ವಾಗ್ದಾನ ಮಾಡಿದ್ದ **ವಿಮೋಚಕನು** ಈ ಲೋಕಕ್ಕೆ ಬರುವದಕ್ಕಾಗಿ **ಒಬ್ಬ ಕನ್ಯೆಯ ಗರ್ಭದಲ್ಲಿದ್ದನು!**

ಈ ದಿನದ ನಮ್ಮ ಕಾರ್ಯಕ್ರಮವು **"ಮೆಸ್ಸೀಯನು ಜನಿಸಿದನು"** ಎಂದು ಕರೆಯಲ್ಪಡುತ್ತದೆ! ಮೆಸ್ಸೀಯನಾದ ಯೇಸು ಹೇಗೆ ಜನಿಸಿ – ದನು ಎಂಬುದನ್ನು ನೋಡುವದಕ್ಕೆ ಸುವಾರ್ತೆಗೆ ಹಿಂದಿರುಗುವದಕ್ಕಿಂತ ಮೊದಲು, ಆತನು ಹುಟ್ಟಿದ್ದಂತಹ ಸಮಯವನ್ನು ವಿವರಿ – ಸೋಣ. ರೋಮ್‌ನ ಚಕ್ರಾಧಿಪತಿಯಾದ ಔಗುಸ್ತನು ಯೆಹೂದ್ಯರ ಪ್ರದೇಶವನ್ನೊಳಗೊಂಡು ಅನೇಕ ದೇಶಗಳನ್ನು ಆಳುತ್ತಿದ್ದನು. ಆದಾಗ್ಯೂ, ರೋಮ್ ಸಾಮ್ರಾಜ್ಯವು, ಲೋಕಕ್ಕೆ ವಿಮೋಚಕನನ್ನು ಕಳಿಸುವ ದೇವರ ಯೋಜನೆಯನ್ನು ತಡೆಯುವದು ಸಾಧ್ಯವಿರ – ಲಿಲ್ಲ. ನಿಜ ಹೇಳಬೇಕೆಂದರೆ, ಪ್ರವಾದಿಗಳ ಮಾತುಗಳನ್ನು ನೆರವೇರಿಸುವದಕ್ಕೆ ರೋಮನ್ನರನ್ನು ಉಪಯೋಗಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡಿದ್ದನು.

ಮೆಸ್ಸೀಯನಿಗಿಂತ ಏಳುನೂರು ವರ್ಷ ಮುಂಚೆ ಇದ್ದ ಮೀಕನೆಂಬ ಪ್ರವಾದಿಯ ಮಾತುಗಳು ನಿಮಗೆ ನೆನಪಿದೆಯಾ? ಮೆಸ್ಸೀ – ಯನು ದಾವೀದನ ಪಟ್ಟಣವಾದ **ಬೆತ್ಲೆಹೇಮಿನಲ್ಲಿ** ಹುಟ್ಟುತ್ತಾನೆಂದು ಮೀಕನು ತಿಳಿಸಿದ್ದನು. ಆದಾಗ್ಯೂ, ಯೇಸುವಿಗೆ ಜನ್ಮ ಕೊಡ – ಬೇಕಾಗಿದ್ದ ಮರಿಯಳು ಬೆತ್ಲೆಹೇಮಿನಲ್ಲಿ ವಾಸಿಸುತ್ತಿರಲಿಲ್ಲ, ಆದರೆ ಬೆತ್ಲೆಹೇಮಿನ ಉತ್ತರಕ್ಕೆ ಸುಮಾರು ನೂರೈವತ್ತು ಕಿ.ಮೀ ದೂರದಲ್ಲಿದ್ದ **ನಜರೇತೆಂಬ** ಒಂದು ಪಟ್ಟಣದಲ್ಲಿ ಅವಳು ವಾಸಿಸುತ್ತಿದ್ದಳು. ಹಾಗಾದರೆ ಮೆಸ್ಸೀಯನು ಬೆತ್ಲೆಹೇಮಿನಲ್ಲಿ ಹೇಗೆ ಹುಟ್ಟಿದನು?

ಅಹ್, ಸ್ನೇಹಿತರೇ, ನೀವು ತಿಳಿದಿರುವಂತೆ, ದೇವರಾದ ಕರ್ತನಿಗೆ ಅಸಾಧ್ಯವಾದುದು ಯಾವುದೂ ಇಲ್ಲ! ಆತನು ದೇವರು, ಭೂಮಿಯ ಮೇಲೆ ನಡೆಯವಂತ ಪ್ರತಿಯೊಂದರ ಕುರಿತೂ ಆತನ ಮಾತೇ ಕೊನೆಯದಾಗಿರುತ್ತದೆ. ಈ ದಿನ ನಾವು ಓದುವದೇನೆಂದರೆ, ಮರಿ– ಯಳಿಗೆ ಹೆರಿಗೆಯ ಸಮಯವು ಹತ್ತಿರವಾಗಿರುವಂತೆಯೇ, ರೋಮ್‌ನ ಚಕ್ರಾಧಿಪತಿಯು ಒಂದು ಕಟ್ಟಳೆಯನ್ನು ಹೊರಡಿಸಿದನು, ಅದೇ –ನೆಂದರೆ, **"**ಪ್ರತೀ ಪುರುಷನೂ ಮತ್ತು ಸ್ತ್ರೀಯೂ ಹೆಸರು ಬರೆಸಿಕೊಳ್ಳುವದಕ್ಕೆ ಮತ್ತು ತೆರಿಗೆ ಕಟ್ಟುವದಕ್ಕೆ ತಮ್ಮ ಪೂರ್ವಿಕರ ಪಟ್ಟಣಕ್ಕೆ ಹೋಗಬೇಕು!**"** ಎಂಬದು. ಇದರಿಂದ ಮರಿಯಳು ಮತ್ತು ಯೋಸೇಫನೂ ದಾವೀದನ ಮನೆತನದವರಾದದರಿಂದ ದಾವೀದ ಅರಸನ ಪಟ್ಟಣವಾಗಿರುವ ಬೆತ್ಲೆಹೇಮಿಗೆ ಹೋಗಬೇಕಾಯಿತು. ಈಗ ನಾವು ಲೂಕನ ಸುವಾರ್ತೆಯ ಎರಡನೆಯ ಅಧ್ಯಾಯಕ್ಕೆ ಹೋಗೋಣ, ಮತ್ತು ಬಹಳ ಹಿಂದೆ ದೇವರು ವಾಗ್ದಾನ ಮಾಡಿದ್ದ ಹಾಗೆಯೇ ಮೆಸ್ಸೀಯನಾದ ಯೇಸು **ಬೆತ್ಲೆಹೇಮಿನಲ್ಲಿ** ಹೇಗೆ ಹುಟ್ಟಿದನೆಂಬುದನ್ನು ಕೇಳಿಸಿಕೊಳ್ಳೋಣ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಆ ಕಾಲದಲ್ಲಿ ರಾಜ್ಯವೆಲ್ಲಾ ಖಾನೆಷುಮಾರಿ ಬರೆಸಿಕೊಳ್ಳಬೇಕೆಂಬ **ಆಜ್ಞೆಯು ಚಕ್ರವರ್ತಿಯಾದ ಔಗುಸ್ತನಿಂದ ಹೊರಟಿತು.** ಆಗ ಎಲ್ಲರೂ ಖಾನೆಷುಮಾರಿ ಬರೆಸಿಕೊಳ್ಳುವದಕ್ಕಾಗಿ ತಮ್ಮ ತಮ್ಮ ಊರುಗಳಿಗೆ ಹೊರಟರು. ಯೋಸೇಫನು ಸಹ ತಾನು ದಾವೀದನ ಮನೆತನ – ದವನೂ ಗೋತ್ರದವನೂ ಆಗಿದ್ದದರಿಂದ ಹೆಸರು ಬರೆಸಿಕೊಳ್ಳುವದಕ್ಕಾಗಿ ತನಗೆ ನಿಶ್ಚಿತಾರ್ಥವಾಗಿದ್ದ ಮರಿಯಳ ಸಂಗಡ ಗಲಿಲಾಯ ಸೀಮೆಯ ನಜರೇತ್ ಎಂಬ ಊರಿನಿಂದ ಹೊರಟು ಯೂದಾಯದಲ್ಲಿರುವ ಬೆತ್ಲೆಹೇಮೆಂಬ ದಾವೀದನೂರಿಗೆ ಹೋದನು. ಆಗ ಮರಿಯಳು ಪೂರ್ಣ ಗರ್ಭಿಣಿಯಗಿದ್ದಳು. ಅವರು ಅಲ್ಲಿದ್ದಾಗ ಆಕೆಗೆ ದಿನತುಂಬಿತು. ಆಕೆಯು ತನ್ನ ಚೊಚ್ಚಲು ಮಗನನ್ನು ಹೆತ್ತು ಬಟ್ಟೆಯಲ್ಲಿ ಸುತ್ತಿ ಚತ್ರದಲ್ಲಿ ಅವರಿಗೆ ಸ್ಥಳವಿಲ್ಲದ ಕಾರಣ ಅವನನ್ನು ಗೋದಲಿಯಲ್ಲಿ ಮಲಗಿಸಿದಳು.(ಲೂಕ–2:1-7)

ಇಲ್ಲಿಗೆ ನಾವು ನಿಲ್ಲಿಸುತ್ತೇವೆ. ಮೆಸ್ಸೀಯನು ಎಂತಹ ಸನ್ನಿವೇಶಗಳಲ್ಲಿ ಹುಟ್ಟಿದನೆಂಬುದನ್ನು ನೀವು ಗಮನಿಸಿದಿರಾ? ಮೆಸ್ಸೀಯನು ತುಂಬಾ ಬಡತನದ ಸನ್ನಿವೇಶಗಳಲ್ಲಿರುವ ಒಬ್ಬ **ರೈತನ** ಹಾಗೆ ಹುಟ್ಟಿದನು. ಬೆತ್ಲೆಹೇಮಿನಲ್ಲಿದ್ದ ಛತ್ರವು ತುಂಬಿಹೋಗಿದ್ದದರಿಂದ ಆತನು

ಪಶುವಿನ ಒಂದು ಕೊಟ್ಟಿಗೆಯಲ್ಲಿ ಹುಟ್ಟಿದನು. ರಕ್ಷಕನೂ ಮತ್ತು ಲೋಕದ ನ್ಯಾಯಾಧಿಪತಿಯೂ ಆಗಬೇಕಾಗಿದ್ದ ಒಬ್ಬನು ವಾಸನೆ –ಯುಳ್ಳ ಕೊಟ್ಟಿಗೆಯಲ್ಲಿ ಹುಟ್ಟಿದ್ದಾನೆ! ಬಹುಶ: ಕೆಲವರು; "ಇದು ನಂಬಲಾಗದಿರುವಂತಾದ್ದು! ಯೇಸು ಲೋಕದ ರಕ್ಷಕನಾಗಿದ್ದರೆ ಮತ್ತು ಮಹಿಮೆಯ ಕರ್ತನಾಗಿದ್ದರೆ, ಆದಾಮನ ಸಂತಾನದವರಿಗೆಲ್ಲಾ ತೀರ್ಪು ಮಾಡುವವನಾಗಿದ್ದರೆ, ಒಂದು ದೊಡ್ಡದಾದ ಮಹಿ ಮೆಯ ಸ್ಥಳದಲ್ಲಿ ಆತನು ಯಾಕೆ ಹುಟ್ಟಲಿಲ್ಲ, ಇದರಿಂದ ಪ್ರತಿಯೊಬ್ಬರೂ ಆತನು ರಾಜಾಧಿರಾಜನೂ ಮತ್ತು ಕರ್ತರ ಕರ್ತನೂ ಎಂದು ತಿಳಿದುಕೊಳ್ಳಲು ಶಕ್ತರಾಗಬಹುದಿತ್ತಲ್ಲಾ?" ಎಂದು ಅಂದುಕೊಳ್ಳಬಹುದು.

ಸ್ನೇಹಿತರೇ, ನಾವು ಜ್ಞಾಪಕದಲ್ಲಿಡಲೇಬೇಕಾದದ್ದೇನೆಂದರೆ: **ದೇವರ ಆಲೋಚನೆಗಳು ಮನುಷ್ಯರ ಆಲೋಚನೆಗಳಿಗಿಂತ ವ್ಯತ್ಯಾಸವುಳ್ಳವುಗಳಾಗಿವೆ,** ದೇವರ ಮಹಿಮೆಯು ಲೋಕದ ಮಹಿಮೆಗಿಂತ ವ್ಯತ್ಯಾಸವುಳ್ಳದ್ದಾಗಿದೆ. ಖಂಡಿತವಾಗಿಯೂ, ಯೇಸುವಿನ ಜನನವು ದೊಡ್ಡ ಮಹಿಮೆಯೊಂದಿಗೆ ಜೊತೆಗೂಡಿದ್ದಾಗಿತ್ತು, ಆದರೆ ಅದಾಮನ ಸಂತಾನದವರಲ್ಲಿ ಹೆಚ್ಚಿನವರು ಇದನ್ನು ಗ್ರಹಿಸಿಲಿಲ್ಲ, ಯಾಕೆಂದರೆ **ದೇವರ ಮಹಿಮೆ** ಮತ್ತು **ಲೋಕದ ಮಹಿಮೆ** ತುಂಬಾ ವ್ಯತ್ಯಾಸುವುಳ್ಳದ್ದು.

ಉದಾಹರಣೆಗಾಗಿ, ಬಹುಶ: ನೀವು ಶ್ರೀಮಂತ ಜನರನ್ನು ನೋಡಿರಬಹುದು, ಅವರು ದೊಡ್ಡದಾದ ಸುಂದರವಾದ ಮನೆಗಳಲ್ಲಿ ವಾಸಿ –ಸುತ್ತಾ, ದುಬಾರಿ ಬೆಲೆಯ ಉಡುಪುಗಳನ್ನು ಧರಿಸಿಕೊಂಡು, ತಮ್ಮ ಪ್ರತಿಯೊಂದು ಆಶೆಗಳಿಗೆ ಗಮನಕೊಡುವ ಆಳುಗಳೊಂದಿಗೆ ವಿಲಾಸಿ ಜೀವನವನ್ನು ನಡೆಸುತ್ತಿರುತ್ತಾರೆ. ಅದು ಲೋಕದ ಮಹಿಮೆ. ಆದಾಗ್ಯೂ, **ದೇವರ ಮಹಿಮೆಯು ಲೋಕದ ಮಹಿಮೆಗಿಂತ** ವ್ಯತ್ಯಾಸವುಳ್ಳದ್ದು. ಅದಕ್ಕಾಗಿಯೇ ದೇವರ ಸನ್ನಿಧಿಯಿಂದ ಬಂದಂತ ಮೆಸ್ಸೀಯನು, ಸುಖದಲ್ಲಿ ಮತ್ತು ವಿಲಾಸಿತನದಲ್ಲಿ ಜನಿಸಲಿಲ್ಲ. ಬಡವರ ತೊಂದರೆಗಳನ್ನೂ ಮತ್ತು ಕಡುಬಡತನವನ್ನು ಅರ್ಥಮಾಡಿಕೊಳ್ಳದಂತ ಅನೇಕ ಶ್ರೀಮಂತ ಜನರ ಹಾಗೆ ಆತನಿರಲಿಲ್ಲ. ಪಾಪದ ಮತ್ತು ಸೈತಾನನ ಬಲದಿಂದ ಆದಾಮನ ಸಂತಾನದವರನ್ನು ರಕ್ಷಿಸುವದಕ್ಕೆ ದೇವರು ಕಳಿಸಿದವನು ಬಡತನದ ಸನ್ನಿವೇಶ –ಗಳಲ್ಲಿ ಅದರಲ್ಲೂ ಗೋದಲಿಯಲ್ಲಿ ಜನಿಸಿದನು! ಹೀಗೆ, ಮೆಸ್ಸೀಯನು ಕೇವಲ ಸಿರಿವಂತರನ್ನು ಮಾತ್ರ ರಕ್ಷಿಸುವದಕ್ಕೆ ಬಂದವನು ಅಥವಾ ಆತನು ಬಡವರ ಮನೋಭಾವಗಳನ್ನು ಅರ್ಥಮಾಡಿಕೊಂಡಿಲ್ಲ ಎಂದು ಯಾರೊಬ್ಬರೂ ಹೇಳುವದಕ್ಕೆ ಸಾಧ್ಯವಿಲ್ಲ. ಗುಲಾ –ಮರು, ಸ್ವತಂತ್ರರು, ಬಡವ, ಶ್ರೀಮಂತ, ಪುರುಷ, ಮಹಿಳೆ, ಹಿರಿಯ, ಯೌವನಸ್ಥ ಹೀಗೆ ಆತನನ್ನು ನಂಬುವ **ಪ್ರತಿಯೊಬ್ಬರನ್ನೂ** ಬಿಡುಗಡೆ ಮಾಡುವದಕ್ಕೆ ಈ ಲೋಕಕ್ಕೆ ಬಂದಂತ ಮತ್ತು ತಾನು ಕಳಿಸಿದ ವಿಮೋಚಕನನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕೆಂದು ದೇವರು ಇಚ್ಛಿಸಿದನು. ಹಾಗಾಗಿ ವಾಕ್ಯವು ಹೇಳುವದೇನೆಂದರೆ: "ನಮ್ಮ ಕರ್ತನಾದ ಯೇಸುಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆ –ಯಲ್ಲಾ; ಆತನು ಐಶ್ವರ್ಯವಂತನಾಗಿದ್ದು **ತಾನು ಬಡತನದಲ್ಲಿ** ಸೇರುವದರಿಂದ **ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು."** (2ಕೊರಿಂಥ–8:9). ಮೆಸ್ಸೀಯನು ಮಾತ್ರವೇ ಜನಿಸುವದಕ್ಕೆ ಎಂದಿಗೂ **ಆರಿಸಲ್ಪಟ್ಟವನಾಗಿದ್ದನು.** ಆತನು ಒಬ್ಬ ಬಡ ಮನುಷ್ಯನಾಗಿ ಹುಟ್ಟುವದಕ್ಕೆ ಆರಿಸಲ್ಪಟ್ಟಿದ್ದನು! {ಟಿಪ್ಪಣಿ: ಯೇಸು ಗೋದಲಿಯಲ್ಲಿ ಹುಟ್ಟಿರುವದಕ್ಕೆ ಇನ್ನೊಂದು ಕಾರಣ, ಬಹುಶ: ಆತನು "ದೇವರ ಕುರಿಮರಿ"ಎಂಬುದನ್ನು ನಮಗೆ ನೆನಪಿಸುವದಕ್ಕಿರಬಹುದು. ಕುರಿಗಳು ಗೋದಲಿಯಲ್ಲಿ ಜನಿಸುತ್ತವೆ. "ದೇವರ ಕುರಿ" ಎಂದು ಯೇಸುವಿಗಿರುವ ಬಿರುದಿನ ಕುರಿತು ಪಾಠ 64ರಲ್ಲಿ ನಾವು ಹೆಚ್ಚಾಗಿ ಕಲಿಯುತ್ತೇವೆ.}

ಈಗ ಮೆಸ್ಸೀಯನ ಜನನದ ಕತೆಯನ್ನು ಮುಂದುವರಿಸೋಣ ಮತ್ತು ಹೆಚ್ಚು ಅದ್ಭುತವಾದ ಭಾಗವನ್ನು ಓದೋಣ. ಯೇಸು ಗೋದಲಿಯಲ್ಲಿ ಹುಟ್ಟಿದ ರಾತ್ರಿಯಂದು, ಬೆತ್ಲೆಹೇಮಿನ ಸುತ್ತಲಿನ ಹೊಲಗಳಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿದ್ದ ಕುರುಬರ ಬಳಿಗೆ ದೇವರು ಕೆಲವು ದೂತರುಗಳನ್ನು ಕಳಿಸಿದನು. ಮೆಸ್ಸೀಯನ ಜನನದ ಕುರಿತಾದ ಶುಭ ಸಂದೇಶವು ಹೇಗೆ ಅವರಿಗೆ ತಿಳಿಯುವಂತೆ ದೇವರು ಮಾಡಿದನೆಂಬುದನ್ನು ಕೇಳಿಸಿಕೊಳ್ಳಿರಿ. ವಾಕ್ಯವು ಹೀಗೆ ಹೇಳುತ್ತದೆ:

ಆ ಸೀಮೆಯಲ್ಲಿ ಕುರುಬರು ಹೊಲದಲ್ಲಿದ್ದುಕೊಂಡು ರಾತ್ರಿಯಲ್ಲಿ ತಮ್ಮ ಕುರಿಹಿಂಡನ್ನು ಕಾಯುತ್ತಿರಲಾಗಿ **ಕರ್ತನ ದೂತನೊಬ್ಬನು** ಬಂದು ಅವರ ಎದುರಿನಲ್ಲಿ ನಿಂತನು. ಕರ್ತನ ಪ್ರಭೆಯು ಅವರ ಸುತ್ತಲು ಪ್ರಕಾಶಿಸಿತು; ಅವರು ಬಹಳವಾಗಿ ಹೆದರಿದರು. ಆ ದೂತನು ಅವರಿಗೆ, "ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟುಮಾಡುವ ಶುಭಸಮಾಚವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ, **ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ.** ಆತನು ನಿಮಗೆ ಗೊತ್ತಾಗುವದಕ್ಕೆ ಗುರುತೇನೆಂದರೆ, ಬಟ್ಟೆಯಿಂದ ಸುತ್ತಿರುವ ಒಂದು ಕೂಸು ಗೋದಲಿಯಲ್ಲಿ ಮಲಗಿರುವದನ್ನು ಕಾಣುವಿರಿ" ಎಂದು ಹೇಳಿದನು. ಫಕ್ಕನೆ ಆ ದೂತನ ಸಂಗಡ ಪರಲೋಕಸೈನ್ಯದವರ ಒಂದು ದೊಡ್ಡ ಗುಂಪು ಕಾಣಿಸಿಕೊಂಡು, **"ಮೇಲಣಲೋಕಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ" ಎಂದು ದೇವರನ್ನು ಕೊಂಡಾಡುತ್ತಾ ಹೇಳಿದರು.** (ಲೂಕ–2:8-14)

ದೇವದೂತರು ಅವರ ಬಳಿಯಿಂದ ಪರಲೋಕಕ್ಕೆ ಹೊರಟುಹೋದ ಮೇಲೆ ಆ ಕುರುಬರು, "ನಾವು ಈಗಲೇ ಬೆತ್ಲೆಹೇಮಿಗೆ ಹೋಗಿ ಕರ್ತನು ನಮಗೆ ತಿಳಿಯಪಡಿಸಿದ ಈ ಸಂಗತಿಯನ್ನು ನೋಡೋಣ ನಡೆಯಿರಿ" ಎಂದು ತಮ್ಮತಮ್ಮೊಳಗೆ ಮಾತಾಡಿಕೊಂಡು ತಟ್ಟನೆ ಹೋಗಿ ಮರಿಯಳನ್ನೂ ಯೋಸೇಫನನ್ನೂ ಗೋದಲಿಯಲ್ಲಿ ಮಲಗಿರುವ ಆ ಕೂಸನ್ನೂ ಕಂಡುಕೊಂಡರು. ಅದನ್ನು ನೋಡಿದಾಗ ಅವರು ಆ ಮಗುವಿನ ವಿಷಯದಲ್ಲಿ ತಮಗೆ ಹೇಳಿದ್ದ ಮಾತನ್ನು ತಿಳಿಯಪಡಿಸಿದರು. ಅದನ್ನು ಕೇಳಿದವರೆಲ್ಲರೂ ತಮಗೆ ಕುರುಬರು ಹೇಳಿದ ಮಾತುಗಳಿಗೆ ಆಶ್ಚರ್ಯಪಟ್ಟರು. . . .**ಕುರುಬರು ತಮಗೆ ದೂತರಿಂದ ಹೇಳಲ್ಪಟ್ಟಂತೆಯೇ ಎಲ್ಲಾ ಸಂಗತಿಗಳನ್ನು ನೋಡಿ ಅವುಗಳಿಗೋಸ್ಕರ ದೇವರನ್ನು ಕೊಂಡಾಡುತ್ತಾ ಸ್ತುತಿಸುತ್ತಾ ಹಿಂತಿರುಗಿ ಹೋದರು.** ಆಮೆನ್.(2:15_20)

ಮೆಸ್ಸೀಯನ ಜನನದ ಶುಭಸಂದೇಶವನ್ನು ದೇವರು ಮೊದಲು ಯಾರಿಗೆ ತಿಳಿಯುವಂತೆ ಮಾಡಿದನು? ಆತನು ಈ ಶುಭಸಂದೇಶ –ವನ್ನು ರೋಮ್ ಚಕ್ರಾಧಿಪತಿಗೆ, ಶ್ರೀಮಂತರಿಗೆ ಅಥವಾ ಧಾರ್ಮಿಕ ನಾಯಕರುಗಳಿಗೆ ತಿಳಿಸಿದನೋ? ಇಲ್ಲ. ಆತನ ಬರುವಿಕೆಗಾಗಿ ಕಾಯುತ್ತಿದ್ದ ದೀನರಾದ ಕುರುಬರಿಗೆ ಮೆಸ್ಸೀಯನ ಜನನದ ಈ ಸಂದೇಶವನ್ನು ದೇವರು ಮೊದಲು ತಿಳಿಸಿದನು! ಮಗುವಾದ ಯೇಸುವನ್ನು ನೋಡಿ ಕುರುಬರು ಎಷ್ಟೊಂದು ರೋಮಾಂಚನಗೊಂಡರು! ಎಂತಹ ಒಂದು ಅದ್ಭುತವಾದ ಭಾಗ್ಯ! **ಮೆಸ್ಸೀಯನು, ಲೋಕದ ರಕ್ಷಕನೂ, ನಿತ್ಯವಾದ ದೇವರ ವಾಕ್ಯವೂ, ಒಂದು ಮಗುವಿನ ಚಿಕ್ಕದಾದ ಶರೀರದಲ್ಲಿ ಸುತ್ತಲ್ಪಟ್ಟವನು ಎಂದು ಯಾರ ಕುರಿತು ಎಲ್ಲಾ ಪ್ರವಾದಿಗಳು ಬರೆದಿದ್ದರೋ ಅಂತಹ ಒಬ್ಬನನ್ನು ಅವರು ನೋಡಿದರು!**

ಸುವಾರ್ತೆಯಲ್ಲಿರುವದನ್ನು ಮುಂದುವರಿಸುತ್ತಾ, ಯೇಸು ಹುಟ್ಟಿದ ಒಂದು ವರ್ಷದ ನಂತರ ಏನಾಯಿತೆಂಬುದನ್ನು ನೋಡೋಣ. ಆಕಾಶದಲ್ಲಿ ಕಾಣಿಸಿಕೊಂಡ **ತನ್ನ ದೂತರುಗಳಿಂದ ಕೆಲವು ಕುರುಬರಿಗೆ** ಯೇಸುವಿನ ಜನನವನ್ನು ದೇವರು ಹೇಗೆ ತಿಳಿಸಿದನೆಂಬು –ದನ್ನು ಈಗ ತಾನೇ ನಾವು ಕೇಳಿಸಿಕೊಂಡೆವು. ಈಗ ದೇವರು ಯೇಸುವಿನ ಜನನವನ್ನು ಅಕಾಶದಲ್ಲಿ ಕಾಣಿಸಿಕೊಂಡ ಒಂದು ದೊಡ್ಡ –ದಾದ ಸುಂದರವಾದ **ನಕ್ಷತ್ರದಿಂದ** ಕೆಲವು **ಜೋಯಿಸರಿಗೆ** {ಅಥವಾ ಪಂಡಿತರಿಗೆ/ ಉಲೂಫ್‌ನಲ್ಲಿ: ತಿಳುವಳಿಕೆಯ ಒಡೆಯರಿಗೆ} ಹೇಗೆ ತಿಳಿಸಿದನೆಂಬುದನ್ನು ನಾವು ಕೇಳಿಸಿಕೊಳ್ಳಲಿದ್ದೇವೆ. ಮತ್ತಾಯನ ಸುವಾರ್ತೆಯ ಎರಡನೆಯ ಅಧ್ಯಾಯದಲ್ಲಿ ಬರೆದಿರುವದನ್ನು ಕೇಳಿಸಿಕೊಳ್ಳಿರಿ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಅರಸನಾದ ಹೆರೋದನ ದಿನಗಳಲ್ಲಿ ಯೂದಾಯ ಸೀಮೆಯ ಬೆತ್ಲೆಹೇಮ್ ಎಂಬ ಊರಲ್ಲಿ ಯೇಸು ಹುಟ್ಟಿದಾಗ ಮೂಡಣ ದೇಶದ ಜೋಯಿಸರು ಯೆರೂಸಲೇಮಿಗೆ ಬಂದು, **"**ಯೆಹೂದ್ಯರ ಅರಸನಾಗಿ ಹುಟ್ಟಿದವನು ಎಲ್ಲಿದ್ದಾನೆ? **ಆತನನ್ನು ಸೂಚಿಸುವ ನಕ್ಷತ್ರವನ್ನು ನಾವು ಮೂಡಣ ದೇಶದಲ್ಲಿ ಕಂಡು ಆತನಿಗೆ ಅಡ್ಡಬೀಳುವದಕ್ಕೆ ಬಂದೆವು"** ಅಂದರು. ಇದನ್ನು ಕೇಳಿ ಅರಸನಾದ ಹೆರೋದನೂ ಅವನ ಕೂಡ ಯೆರೂಸಲೇಮಿನವರೆಲ್ಲರೂ ಕಳವಳಪಟ್ಟರು. ಅವನು ಯೆಹೂದ್ಯರ ಎಲ್ಲಾ ಮಹಾಯಾಜಕರನ್ನೂ ಶಾಸ್ತ್ರಿಗಳನ್ನೂ ಕೂಡಿಸಿ, ಕ್ರಿಸ್ತನು ಹುಟ್ಟಬೇಕಾದದ್ದು ಎಲ್ಲಿ ಎಂದು ಅವರನ್ನು ಕೇಳಿದನು. ಅವರು ಅವನಿಗೆ, **"**ಯೂದಾಯದ ಬೆತ್ಲೆಹೇಮಿನಲ್ಲಿಯೇ; ಯಾಕೆಂದರೆ, ಯೆಹೂದ ಸೀಮೆಯ ಬೆತ್ಲೆಹೇಮೇ ಯೆಹೂದದ ಮುಖ್ಯ ಪಟ್ಟಣಗಳಲ್ಲಿ ನೀನು ಎಷ್ಟು ಮಾತ್ರವೂ ಸಣ್ಣದಲ್ಲ. ಒಬ್ಬ ಅಧಿಪತಿ ನಿನ್ನೊಳ –ಗಿಂದಲೇ ಹೊರಡುವನು, ಆತನು ತನ್ನ ಪ್ರಜೆಯಾದ ಇಸ್ರಾಯೇಲನ್ನು ಆಳತಕ್ಕವನು**"** ಎಂಬದಾಗಿ **ಪ್ರವಾದಿಯ ಮುಖಾಂತರ ಬರೆ –ದದೆ** ಎಂದು ಹೇಳಿದರು. ಆಗ ಹೆರೋದನು ಯಾರಿಗೂ ತಿಳಿಯದಂತೆ ಆ ಜೋಯಿಸರನ್ನು ಕರೆಸಿ ಆ ನಕ್ಷತ್ರವು ಕಾಣಿಸಿದ ಕಾಲ –ವನ್ನು ಅವರ ಕಡೆಯಿಂದ ಚೆನ್ನಾಗಿ ತಿಳುಕೊಂಡು, **"**ನೀವು ಹೋಗಿ ಆ ಕೂಸಿನ ವಿಷಯದಲ್ಲಿ ಚೆನ್ನಾಗಿ ವಿಚಾರಣೆ ಮಾಡಿರಿ; ಅದು ಸಿಕ್ಕಿದ ಮೇಲೆ ನನಗೆ ತಿಳಿಸಿರಿ; ನಾನೂ ಬಂದು ಅದಕ್ಕೆ ಅಡ್ಡಬೀಳಬೇಕು**"** ಎಂದು ಹೇಳಿ ಅವರನ್ನು ಬೆತ್ಲೆಹೇಮಿಗೆ ಕಳುಹಿಸಿದನು. (ಮತ್ತಾಯ–2:1-8) (ಆದಾಗ್ಯೂ, ಅರಸನಾದ ಹೆರೋದನಿಗೆ ತನ್ನ ಹೊರತಾಗಿ ಬೇರೆ ಯಾರೂ ಅರಸನಾಗುವದು ಇಷ್ಟವಿರದ ಕಾರಣದಿಂದ ಅವನು ತನ್ನ ಹೃದಯದಲ್ಲಿ ಆ ಮಗುವನ್ನು ಕೊಲ್ಲುವ ಯೋಜನೆಯನ್ನು ಮಾಡಿಕೊಂಡಿದ್ದನು).

ಅವರು ಅರಸನ ಮಾತನ್ನು ಕೇಳಿ ಹೊರಟಾಗ ಮೂಡಣದೇಶದಲ್ಲಿ ಕಂಡ ನಕ್ಷತ್ರವು ಅವರ ಮುಂದೆ ಮುಂದೆ ನಡೆದು ಕೂಸು ಇದ್ದ ಸ್ಥಳದ ಮೇಲೆ ಬಂದು ನಿಂತಿತು. ಅವರು ನಕ್ಷತ್ರವನ್ನು ಕಂಡು ಅತ್ಯಂತ ಸಂತೋಷಪಟ್ಟರು. ಮತ್ತು ಆ ಮನೆಯೊಳಕ್ಕೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಳ ಬಳಿಯಲ್ಲಿ ಕಂಡು ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಗಂಟುಗಳನ್ನು ಬಿಚ್ಚಿ ಅದಕ್ಕೆ ಚಿನ್ನ ಧೂಪ ರಕ್ತಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು. ಆ ಮೇಲೆ ದೇವರು ಕನಸಿನಲ್ಲಿ ಅವರಿಗೆ, ನೀವು ಹೆರೋದನ ಬಳಿಗೆ ತಿರಿಗಿ ಹೋಗಬಾರದೆಂದು ಅಪ್ಪಣೆ ಕೊಟ್ಟದ್ದರಿಂದ ಅವರು ಮತ್ತೊಂದು ದಾರಿಯಿಂದ ತಮ್ಮ ದೇಶಕ್ಕೆ ಹೊರಟು ಹೋದರು. (2:9-12)

ಇದು ಸಂಕ್ಷಿಪ್ತವಾದ, ಮೆಸ್ಸೀಯನ ಜನನದ ಕತೆ. ಈದಿನ ನಾವು ಕೇಳಿಸಿಕೊಂಡ ಎಲ್ಲಾದರ ಕುರಿತು ನಾವು ಏನು ಹೇಳಬಹುದು? ನಿಶ್ಚಿತವಾಗಿ ಒಂದು ಸಂಗತಿಯನ್ನು ನಾವು ಹೇಳಬಹುದು, ಏನೆಂದರೆ, ಮೆಸ್ಸೀಯನಾದ ಯೇಸುವಿನ ಜನನವು ಲೋಕದ ಇತಿಹಾಸ –ದಲ್ಲಿ **ಅಸಮವಾದುದಾಗಿದೆ!** ಯೇಸು ಹುಟ್ಟಿದಂತೆ ಎಲ್ಲಾ ಪ್ರವಾದಿಗಳು, ಅರಸರುಗಳು ಮತ್ತು ಲೋಕದ ಜನರೊಳಗೆ, ಬೇರೆ ಯಾರೂ ಎಂದಿಗೂ ಹುಟ್ಟಿಲ್ಲ!

**ದೇವರ ಪ್ರವಾದಿಗಳು ಪ್ರವಾದಿಸಿದಂತೆ ನಿಜವಾಗಿ ಹಾಗೆಯೇ, ದೇವರ ಶಕ್ತಿಯಿಂದ ಮೆಸ್ಸೀಯನು ಒಬ್ಬ ಕನ್ಯೆಯಲ್ಲಿ ಹುಟ್ಟಿದನೆಂಬುದನ್ನು** ನಾವು ಈದಿನ ನೋಡಿಕೊಂಡೆವು. ಏಳುನೂರು ವರ್ಷಗಳ ಮೊದಲೇ ಪ್ರವಾದಿಯಾದ ಮೀಕನು ಹೇಳಿದ ಹಾಗೆ, ಯೇಸು **ಬೆತ್ಲೆಹೇಮಿ –**ನಲ್ಲಿ ಹುಟ್ಟಿದನು ಎಂಬುದನ್ನು ನಾವು ಕೇಳಿಸಿಕೊಂಡೆವು. ಹೇಗೆ **ದೇವರು ತನ್ನ ದೂತರನ್ನು ಮತ್ತು ಪರಲೋಕದಿಂದ ಒಂದು ಮಹಿ –ಮೆಯ ಬೆಳಕನ್ನು** ಕೆಲವು ಕುರುಬರ ಬಳಿಗೆ ಕಳಿಸಿ, **"**ಜನರಿಗೆಲ್ಲ ಮಹಾಸಂತೋಷವನ್ನುಂಟು ಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ, ಅದೇನೆಂದರೆ ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ, ಆತನು ಕರ್ತನಾಗಿರುವ ಕ್ರಿಸ್ತನೇ**"** ಎಂಬ ಶುಭಸಂದೇಶವು ಅವರಿಗೆ ತಿಳಿಯುವಂತೆ ಮಾಡಿದನೆಂಬುದನ್ನೂ ಸಹ ನಾವು ನೋಡಿಕೊಂಡೆವು. ಅನಂತರ ಹೇಗೆ **ದೂತರುಗಳ ಒಂದು ದೊಡ್ಡ ಗುಂಪು ಮೊದಲನೆಯ ದೂತನೊಂದಿಗೆ ಕಾಣಿಸಿಕೊಂಡು ದೇವರನ್ನು ಸ್ತುತಿಸುತ್ತಾ, "**ಮೇಲಣ ಲೋಕ –ಗಳಲ್ಲಿ ದೇವರಿಗೆ ಮಹಿಮೆ, ಭೂಲೋಕದಲ್ಲಿ ಮನುಷ್ಯರೊಳಗೆ ಸಮಾಧಾನ, ದೇವರು ಅವರಿಗೆ ಒಲಿಯುತ್ತಾನೆ!**"** ಎಂದು ಹೇಳುವ –ದನ್ನು ಕಂಡೆವು. ಹೇಗೆ **ದೇವರು ಆಕಾಶದಲ್ಲಿ ಒಂದು ದೊಡ್ಡ ನಕ್ಷತ್ರವನ್ನು ಇಟ್ಟು**, ರಾಜಾಧಿರಾಜನೂ, ಪಾಪಿಗಳ ರಕ್ಷಕನೂ ಆದ ಮೆಸ್ಸೀ –ಯನು ಹುಟ್ಟಿದ್ದಾನೆ ಎಂಬುದನ್ನು ದೂರ ದೇಶದಲ್ಲಿದ್ದ ಕೆಲವು ಪಂಡಿತರಿಗೆ ತಿಳಿಯುವಂತೆ ಮಾಡಿದನೆಂಬುದನ್ನೂ ಸಹ ನಾವು ನೋಡಿಕೊಂಡೆವು.

ಸ್ನೇಹಿತರೇ, ಹಾಗಾದರೆ ಇದೆಲ್ಲಾದರ ಕುರಿತು ನಾವು ಇನ್ನೇನು ಹೇಳುವದಕ್ಕಿದೆ? ಈ ಮನುಷ್ಯನ ಹಾಗೆ ಬೇರೆ ಯಾವ ಮನುಷ್ಯನೂ ಎಂದೂ ಹುಟ್ಟಿಲ್ಲ ಎಂದು ನಾವು ಹೇಳಬಹುದು. ಯೇಸುವಿನ ಜನನವು **ಸರಿಸಾಟಿಯಿಲ್ಲದ್ದು.** ಆತನ ಜನನಕ್ಕೆ ಸಂಬಂಧಿಸಿದಂತೆ, ಯೇಸು ಅದ್ವಿತೀಯನು! ನಾವು ಆತನನ್ನು ಬೇರೆಯವರೊಂದಿಗೆ ಹೋಲಿಸುವದಕ್ಕೆ ಸಾಧ್ಯವಿಲ್ಲ. ಯೇಸು ಪ್ರವಾದಿಗಿಂತಲೂ ಹೆಚ್ಚಿನವ–ನಾಗಿದ್ದಾನೆ. **ಪ್ರವಾದಿಗಳೆಲ್ಲರೂ ಮಾತಾಡಿರುವಂತಾದ್ದು ಈತನೊಬ್ಬನ ಕುರಿತಾಗಿಯೇ. ಈತನು ಪರಲೋಕದಿಂದ ಬಂದ ಮೆಸ್ಸೀಯನು!**

ಸ್ನೇಹಿತರೇ, ಒಂದುವೇಳೆ ಯೇಸು ಅನೇಕ ಪ್ರವಾದಿಗಳಲ್ಲಿ ಒಬ್ಬ ಸರಳ ಪ್ರವಾದಿಯಾಗಿದ್ದಿದ್ದರೆ, ಆತನು ಹುಟ್ಟುವದಕ್ಕಿಂತ ಮೊದಲೇ ಆತನ ಬರುವಿಕೆಯನ್ನು ದೇವರ ಪ್ರವಾದಿಗಳೆಲ್ಲರೂ **ಯಾಕೆ** ಪ್ರಕಟಿಸುತ್ತಿದ್ದರು? ಆತನ ಜನನವನ್ನು ಆಚರಿಸುವದಕ್ಕೆ ದೂತರುಗಳು ಪರಲೋಕದಿಂದ ಯಾಕೆ ಇಳಿದು ಬಂದರು? ಒಂದುವೇಳೆ ಯೇಸು ಅನೇಕ ಪ್ರವಾದಿಗಳಲ್ಲಿ ಕೇವಲ ಒಬ್ಬ ಪ್ರವಾದಿಯಾಗಿದ್ದಿದ್ದರೆ, ಆತನ ಜನನವನ್ನು ತಿಳಿಸುವದಕ್ಕೆ ದೇವರು **ಯಾಕೆ** ಒಂದು ದೊಡ್ಡ ನಕ್ಷತ್ರವನ್ನು ಆಕಾಶದಲ್ಲಿಟ್ಟನು? **ಯಾವ ಕಾರಣಕ್ಕಾಗಿ** ಆತನು ಒಬ್ಬ ಕನ್ಯೆಯಲ್ಲಿ ಹುಟ್ಟಿದನು? **ಪ್ರಾಮುಖ್ಯವಾದ ಈ ಪ್ರಶ್ನೆಗಳನ್ನು ನೀವು ಜಾಗ್ರತೆಯಿಂದ ಆಲೋಚಿಸಿರಿ.**

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ಮುಂದಿನ ಪಾಠದಲ್ಲಿ, ದೇವರ ಚಿತ್ತವಿದ್ದರೆ, ಮೆಸ್ಸೀಯನಾದ ಯೇಸು ಭೂಮಿಯ ಮೇಲೆ ಹೇಗೆ ತನ್ನ ಸೇವೆಯನ್ನು ಆರಂಭಿಸಿದನು ಎನ್ನುವದನ್ನು ನಾವು ನೋಡುತ್ತೇವೆ. . . . .

ಕುರುಬರಿಗೆ ದೂತರುಗಳ ತಿಳಿಸಿದ ಸಂದೇಶದ ಮೇಲೆ ಚಿಂತನೆ ಮಾಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಹೆದರಬೇಡಿರಿ, ಕೇಳಿರಿ ಜನರಿಗೆಲ್ಲಾ ಮಹಾಸಂತೋಷವನ್ನುಂಟುಮಾಡುವ ಶುಭಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನೆಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ!"** (ಲೂಕ–2:10,11)

ಪಾಠ 63

# ಪವಿತ್ರ ಮಗನು

ಲೂಕ 2; ಮತ್ತಾಯ 3,4

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಸುವಾರ್ತೆಯಲ್ಲಿನ {ಇಂಜಿಲ್} ಹಿಂದಿನ ನಮ್ಮ ಪಾಠದಲ್ಲಿ, ಮೆಸ್ಸೀಯನ ಜನನದ ರೋಮಾಂಚನದ ಕತೆಯನ್ನು ಕೇಳಿಸಿಕೊಂಡೆವು. **ಯೇಸು ಜನಿಸಿದಂತೆ ಬೇರೆ ಯಾರೂ ಎಂದಿಗೂ ಜನಿಸಲಿಲ್ಲ.** ಪ್ರವಾದಿಸಲ್ಪಟ್ಟಂತೆಯೇ ಆತನು ದೇವರ ಶಕ್ತಿಯಿಂದ ಒಬ್ಬ ಕನ್ಯೆಯಲ್ಲಿ, ಬೆತ್ಲಹೇಮಿನಲ್ಲಿ ಹುಟ್ಟಿದನು. ಯೇಸು ಹುಟ್ಟಿದ ಆ ರಾತ್ರಿಯಲ್ಲಿ, ಬೆತ್ಲೆಹೇಮಿನ ಸುತ್ತಲಿರುವ ಹೊಲಗಳಲ್ಲಿ ಕೆಲವು ಕುರುಬರು ತಮ್ಮ ಕುರಿಹಿಂಡನ್ನು ಕಾಯುತ್ತಿರುವಾಗ ದೇವರು ಪ್ರಕಾಶಮಾನ ದೂತರುಗಳ ಒಂದು ಗುಂಪನ್ನು ಅವರ ಬಳಿಗೆ ಕಳಿಸಿದನು. ಆ ದೂತರು –ಗಳಲ್ಲಿ ಒಬ್ಬನು ಆ ಕುರುಬರಿಗೆ: **"ಜನರಿಗೆಲ್ಲಾ** ಮಹಾಸಂತೋಷವನ್ನುಂಟುಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ! ಅದೇನೆಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. ಆತನು ಕರ್ತನಾಗಿರುವ ಕ್ರಿಸ್ತನೇ!" ಎಂದು ಹೇಳಿದನು. (ಲೂಕ–2:10,11)

**ಯೇಸು ಮಗುವಿದ್ದಾಗ ಹೇಗಿದ್ದನು ಮತ್ತು ಪ್ರಾಯಸ್ಥನಾದ ಹಾಗೆ ಹೇಗಿದ್ದನೆಂಬುದನ್ನು** ಅಧ್ಯಯನಮಾಡುವದಕ್ಕೆ ನಾವು ಈದಿನ ಆಲೋ –ಚಿಸಿದ್ದೇವೆ. ಸುವಾರ್ತೆಯ ಪುಸ್ತಕಗಳು ನಮಗೆ ಯೇಸುವಿನ ಜನನ, ಯೋಸೇಫ ಮತ್ತು ಮರಿಯಳು ನಾಲ್ಕು ಜನ ಗಂಡು ಮಕ್ಕಳನ್ನೂ ಮತ್ತು ಕೆಲವು ಹೆಣ್ಣು ಮಕ್ಕಳನ್ನು ಪಡೆದಿದ್ದರು ಎನ್ನುವದನ್ನು ತೋರಿಸಿಕೊಡುತ್ತವೆ. ನಜರೇತಿನಲ್ಲಿರುವ ಪ್ಯಾಲೆಸ್ತೀನಿನ ಉತ್ತರದಲ್ಲಿದ್ದ ಜನರಿಂದ ತುಂಬಿದ್ದ ಒಂದು ಮನೆಯಲ್ಲಿ ಯೇಸು ತನ್ನ ಚಿಕ್ಕ ತಮ್ಮ ತಂಗಿಯರ ಜೊತೆಯಲ್ಲಿ ಬೆಳೆದನು. ನಿಮಗೆ ಗೊತ್ತಿರುವಂತೆ, ಯೋಸೇಫನು ಯೇಸುವಿಗೆ ಜನ್ಮ ಕೊಟ್ಟವನಲ್ಲ, ಆದರೆ ಮನುಷ್ಯರ ದೃಷ್ಟಿಯಲ್ಲಿ ಯೇಸು ಯೋಸೇಫನ ಮಗನಾಗಿದ್ದನು. ಯೋಸೇ –ಫನು ಒಬ್ಬ ಬಡಗಿಯಾಗಿದ್ದ ಕಾರಣದಿಂದ, ಯೇಸು ಮನೆಯಲ್ಲಿದ್ದಾಗ ತಾನೂ ಸಹ ಬಡಗಿಯ ಕೆಲಸವನ್ನು ಮಾಡುತ್ತಿದ್ದನು, ಇದರ ಪರಿಣಾಮವಾಗಿ, ಯೇಸು ಕಠಿಣವಾದ ಕೆಲಸಗಳಿಗೆ ಒಗ್ಗಿಕೊಂಡಿದ್ದನು. ಹಾಗಾಗಿ ವಾಕ್ಯ ಹೇಳುವದೇನೆಂದರೆ: "ಯೇಸು ಜ್ಞಾನದಲ್ಲಿಯೂ ದೇಹಬಲದಲ್ಲಿಯೂ ವೃದ್ಧಿಯಾಗುತ್ತಾ ಬಂದನು. ಇದಲ್ಲದೆ ದೇವರ ಮತ್ತು ಮನುಷ್ಯರ ದಯೆಯು ಆತನ ಮೇಲೆ ಹೆಚ್ಚಾಗುತ್ತಾ ಬಂತು." (ಲೂಕ–2:52)

ಎಲ್ಲಾ ಮಕ್ಕಳ ರೀತಿಯಲ್ಲಿ, ಯೇಸು ಊಟಮಾಡುತ್ತಿದ್ದನು, ಮಲಗುತ್ತಿದ್ದನು, ಆಟವಾಡುತ್ತಿದ್ದನು ಮತ್ತು ಓದುತ್ತಿದ್ದನು. ಹೀಗಿದ್ದರೂ, ಇತರ ಮಕ್ಕಳಿಂದ ಆತನನ್ನು ವ್ಯತ್ಯಾಸವುಳ್ಳವನನ್ನಾಗಿ ಮಾಡಿದ್ದ ಆತನ ಕುರಿತಾದ ಏನೋ ಒಂದು ಸಂಗತಿಯಿತ್ತು. ಅದು ಏನೆಂಬುದು ನಿಮಗೆ ಗೊತ್ತಾ? ಅದೇನೆಂದರೆ: **ಯೇಸು ಎಂದೂ ಪಾಪ ಮಾಡಲಿಲ್ಲ!** ಆತನ ಬಾಯಿಂದ ಯಾವ ಕೆಟ್ಟ ಮಾತೂ ಎಂದಿಗೂ ಬಂದಿರ –ಲಿಲ್ಲ.(1ಪೇತ್ರ–2:22). "ನನ್ನ ತಪ್ಪನ್ನು ಕ್ಷಮಿಸಿರಿ" ಎಂದು ಆತನು ಎಂದೂ ಯಾರಿಗೂ ಹೇಳಿರಲಿಲ್ಲ {ಕ್ಷಮಾಪಣೆಯನ್ನು ಕೇಳು –ವಂತ ಉಲೂಫ್ ಸೂತ್ರ/ಸವಕಲು ನುಡಿ}, ಯಾಕೆಂದರೆ ಆತನು ಯಾರಿಗೂ ಎಂದೂ ತಪ್ಪು ಮಾಡಲಿಲ್ಲ. ಆತನು ಪಾಪ ಮಾಡುವ –ದಕ್ಕೆ ಸಾಧ್ಯವಿರಲಿಲ್ಲ, ಯಾಕೆಂದರೆ ಆತನಲ್ಲಿ **ಪಾಪದ ಯಾವ ಬೇರೂ ಇರಲಿಲ್ಲ!** ಆತನು ಒಂದು ಪವಿತ್ರವಾದ ಸ್ವಭಾವವನ್ನು (ಗುಣ –ಲಕ್ಷಣವನ್ನು) ಹೊಂದಿದ್ದನು. ಕೆಟ್ಟತನವು ಆತನ ಒಂದು ಭಾಗವಾಗಿರಲಿಲ್ಲ. ದೇವರಿಗೆ ಯಾವುದು ಮೆಚ್ಚಿಕೆಯಾಗಿದೆಯೋ ಅದನ್ನು ಮಾತ್ರ ಆತನು ಮಾಡುತ್ತಿದ್ದನು. **ಆತನು ನಮ್ಮ ಹಾಗೆ ಭೌತಿಕ ಶರಿರವನ್ನು ಹೊಂದಿದ್ದನು, ಆದರೆ ನಮ್ಮ ಹಾಗೆ ಕೆಟ್ಟ ಸ್ವಭಾವವನ್ನು ಆತನು ಹೊಂದಿರಲಿಲ್ಲ!** ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: "ಆಕಾಶ ಮಂಡಲಗಳನ್ನು ದಾಟಿಹೋದ ದೇವಕುಮಾರನಾದ ಯೇಸು –ವೆಂಬ ಶ್ರೇಷ್ಠ ಮಹಾಯಾಜಕನು ನಮಗಿರುವದರಿಂದ ನಾವು ಮಾಡಿರುವ ಪ್ರತಿಜ್ಞೆಯನ್ನು ಬಿಡದೆ ಹಿಡಿಯೋಣ. ಯಾಕಂದರೆ ನಮ –ಗಿರುವ ಮಹಾಯಾಜಕನು ನಮ್ಮ ನಿರ್ಬಲಾವಸ್ಥೆಯನು ಕುರಿತು ಅನುತಾಪವಿಲ್ಲದವನಲ್ಲ; ಆತನು ಸರ್ವ ವಿಷಯಗಳಲ್ಲಿ ನಮ್ಮ ಹಾಗೆ ಶೋಧನೆಗೆ ಗುರಿಯಾದನು, ಪಾಪ ಮಾತ್ರ ಮಾಡಲಿಲ್ಲ." (ಇಬ್ರಿಯ–4:14,15)

ಯೇಸು ಮೂವತ್ತು ವರ್ಷದವನಾದಾಗ, ಲೋಕದ ರಕ್ಷಕನು ಬಂದಿರುವ ಹಾಗೆ **ತನ್ನ ಕೆಲಸವನ್ನು** (ಸುವಾರ್ತೆಯ ಸೇವೆ) **ಆರಂಭಿ –ಸುವದಕ್ಕೆ ಆತನ ಸಮಯವು ಬಂದಿತ್ತು.** ಒಂದು ದಿನ ಆತನು ತನ್ನ ಕುಟುಂಬದವರಿಗೆ ವಿದಾಯ ಹೇಳಿ ನಜರೇತನ್ನು ಬಿಟ್ಟು, ಪ್ರವಾದಿಯಾದ ಯೋಹಾನನು(ಯಾಹ್ಯಾ) ಜನರಿಗೆ ಬೋಧಿಸುತ್ತ ಅವರಿಗೆ ನೀರಿನ ದೀಕ್ಷಾಸ್ನಾನ ಮಾಡಿಸುತ್ತಿದ್ದ ಯೋರ್ಧನ್ ನದಿಯ ಕಡೆಗೆ ಬಂದನು.

ಯೋಹಾನನು ನಿಮಗೆ ಜ್ಞಾಪಕವಿದ್ದಾನಾ? ಅವನು ಯೇಸುವಿಗಿಂತ ಆರು ತಿಂಗಳು ಮೊದಲು ಹುಟ್ಟಿದವನು. ಜನರು ತಮ್ಮ ಪಾಪ –ಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರು ಕಳಿಸಿದ ಮೆಸ್ಸೀಯನನ್ನು ಸ್ವಾಗತಿಸುವದಕ್ಕೆ ಸಿದ್ಧರಾಗಲು ಶಕ್ತರಾಗುವಂತೆ ಯೋಹಾನನು ಜನರ ಹೃದಯವನ್ನು ಸಿದ್ಧಗೊಳಿಸುವದಕ್ಕೆ ದೇವರು ಕಳಿಸಿದ ಪ್ರವಾದಿಯಾಗಿದ್ದನು. ಪ್ರವಾದಿಯಾದ ಯೋಹಾನನ ಕುರಿತಾಗಿ ಸುವಾರ್ತೆ –ಯಲ್ಲಿ ಬರೆದಿರುವದನ್ನು ಮತ್ತು ಆತನು ಮೆಸ್ಸೀಯನಿಗೆ ಮಾರ್ಗವನ್ನು ಹೇಗೆ ಸಿದ್ಧಪಡಿಸಿದನೆಂಬುದನ್ನು ಕೇಳಿಸಿಕೊಳ್ಳಿರಿ.

ಮತ್ತಾಯನ ಸುವಾರ್ತೆ ಮೂರನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಆ ದಿನಗಳಲ್ಲಿ ಸ್ನಾನಿಕನಾದ ಯೋಹಾನನು, **"ಪರಲೋಕರಾಜ್ಯವು ಸಮೀಪವಾಯಿತು; ದೇವರ ಕಡೆಗೆ ತಿರುಗಿಕೊಳ್ಳಿರಿ"** ಎಂದು ಯೂದಾ –ಯದ ಅಡವಿಯಲ್ಲಿ ಸಾರಿ ಹೇಳುತ್ತಾ ಬಂದನು. **"ಕರ್ತನ ದಾರಿಯನ್ನು ಸಿದ್ಧಮಾಡಿರಿ; ಆತನ ಹಾದಿಗಳನ್ನು ನೆಟ್ಟಗೆ ಮಾಡಿರಿ"** ಎಂದು ಅಡವಿಯಲ್ಲಿ ಕೂಗುವವನ ಶಬ್ದವದೆ ಎಂಬುದಾಗಿ ಪ್ರವಾದಿಯಾದ ಯೆಶಾಯನಿಂದ ಸೂಚಿತನಾದವನು ಇವನೇ. ಈ ಯೋಹಾನ –ನಿಗೆ ಒಂಟೇ ಕೂದಲಿನ ಹೊದಿಕೆಯೂ ಸೊಂಟದಲ್ಲಿ ತೊಗಲಿನ ನಡುಕಟ್ಟೂ ಇದ್ದವು. ಅವನಿಗೆ ಮಿಡಿತೆ ಮತ್ತು ಕಾಡುಜೇನು ಆಹಾರವಾಗಿದ್ದವು. ಆಗ ಯೆರೂಸಲೇಮೂ ಎಲ್ಲಾ ಯೂದಾಯವೂ ಯೋರ್ದನ್ ಹೊಳೆಯ ಸುತ್ತಲಿರುವ ಎಲ್ಲಾ ಸೀಮೆಯೂ ಅವನ ಬಳಿಗೆ ಬಂದು ತಮ್ಮ ತಮ್ಮ ಪಾಪಗಳನ್ನು ಹೇಳಿಕೊಂಡು ಯೋರ್ದನ್ ಹೊಳೆಯಲ್ಲಿ ಅವನಿಂದ ದೀಕ್ಷಸ್ನಾನ ಮಾಡಿಸಿಕೊಳ್ಳು –ತ್ತಿದ್ದರು. (ಮತ್ತಾಯ–3:1-6)

ನಾವು ಓದಿರುವದರ ಕುರಿತು ಆಲೋಚಿಸುವದಕ್ಕೆ ಇಲ್ಲಿಗೆ ನಿಲ್ಲಿಸೋಣ. ನೀವು ಯೋಹಾನನ ಸಂದೇಶವನ್ನು ಕೇಳಿಸಿಕೊಂಡಿರಾ? ಸಂಕ್ಷಿಪ್ತವಾಗಿ. ಯೋಹಾನನು ಪ್ರಸಂಗಿಸಿದ್ದೇನೆಂದರೆ: "ನಿಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಡಿರಿ! ನಿಮ್ಮ ಕೆಟ್ಟ ಕೆಲಸಗಳಿಂದ ತಿರುಗಿ ಕೊಳ್ಳಿರಿ, ಮತ್ತು ಪರಲೋಕದಿಂದ ನಿಮಗೋಸ್ಕರ ಬಂದಿರುವ ಪವಿತ್ರ ಮೆಸ್ಸೀಯನನ್ನು ಸಂಧಿಸುವದಕ್ಕೆ ಸಿದ್ಧಪಡಿಸಿಕೊಳ್ಳಿರಿ!" ಎಂಬದು. ದೇವರ ಮುಂದೆ ತಮ್ಮ ಪಾಪಗಳನ್ನು ಅರಿಕೆ ಮಾಡಿಕೊಂಡವರು ಯೋಹಾನನಿಂದ ದೀಕ್ಷಾಸ್ನಾನ ಮಾಡಿಸಿಕೊಂಡರು. ಹೀಗೆ, ಪ್ರವಾದಿಯಾದ ಯೋಹಾನನು ಸ್ನಾನಿಕನಾದ ಯೋಹಾನನೆಂದು ಕರೆಯಲ್ಪಟ್ಟನು. ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸುವದರಿಂದ ಜನರ ಪಾಪಗಳನ್ನು ತೊಳೆದು ಹಾಕುವದಕ್ಕೆ ಸಾಧ್ಯವಿಲ್ಲ. ಅವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಮೆಸ್ಸೀಯನನ್ನು ತಮ್ಮ ರಕ್ಷಕನನ್ನಾಗಿ ಸ್ವೀಕರಿಸಿಕೊಂಡಿದ್ದಾರೆ ಎಂಬುದಕ್ಕೆ ಇದು ಒಂದು ಗುರುತು {ಚಿಹ್ನೆ, ಪ್ರದರ್ಶನ} ಮಾತ್ರವಾಗಿದೆ.

ಸದ್ದುಕಾಯರು ಮತ್ತು ಫರಿಸಾಯರು ಎಂಬ ಎರಡು ತುಂಬಾ ಪ್ರಸಿದ್ಧವಾದ ಯೆಹೂದ್ಯ ಕುಲಗಳಿಗೆ ಸೇರಿದ ಕೆಲವರು ಯೋಹಾನನ ಮಾತಿಗೆ ಪ್ರತಿಕ್ರಿಯಿಸಿದರು ಆದದರಿಂದ ಅವನು ಅವರಿಗೆ ದೀಕ್ಷಾಸ್ನಾನ ಮಾಡಿಸಿದನು. **ಸದ್ದುಕಾಯರು** ಶ್ರೀಮಂತ ಯೆಹೂದ್ಯರಾಗಿದ್ದು ರೋಮ್ ಸರಕಾರದಲ್ಲಿ ಪ್ರಾಬಲ್ಯವುಳ್ಳವರಾಗಿದ್ದರು. ಆದರೆ ಇವರು ತಮ್ಮ ಹೃದಯಗಳಲ್ಲಿ ಪ್ರವಾದಿಗಳ ಬರವಣಿಗೆಗಳ ಕುರಿತು ಗಮನ –ವಿಲ್ಲದವರಾಗಿದ್ದರು. **ಫರಿಸಾಯರು** ಧಾರ್ಮಿಕ ನಿಪುಣರಾಗಿದ್ದು, ಪ್ರಾರ್ಥಿಸುವದರಲ್ಲಿ, ಉಪವಾಸ ಮಾಡುವದರಲ್ಲಿ, ದಾನಧರ್ಮ ಕೊಡುವದರಲ್ಲಿ ಮತ್ತು ದಶಮಾಶ ಕೊಡುವದರಲ್ಲಿ ತುಂಬಾ ಆಸಕ್ತಿಯುಳ್ಳವರಾಗಿದ್ದರು. ಹೀಗಿದ್ದರೂ, ಅವರ ಆರಾಧನೆಗಳು ನಿಷ್ಪ್ರ –ಯೋಜಕವಾಗಿದ್ದವು, ಯಾಕೆಂದರೆ ಅವರು ತಮ್ಮ ಸ್ವಂತ ಶ್ರಮಗಳಿಂದ ದೇವರ ಮುಂದೆ ನೀತಿವಂತರಾಗಿರುವದಕ್ಕೆ ಪ್ರಯತ್ನಿಸುತ್ತಿದ್ದರು. ಹಾಗೂ, ಫರಿಸಾಯರು ತಮ್ಮ ಸಂಪ್ರದಾಯಗಳನ್ನು ನಿಜವಾದ ದೇವರ ವಾಕ್ಯದೊಂದಿಗೆ ಮಿಶ್ರಣ ಮಾಡುತ್ತಿದ್ದರು. ಇದರ ಪರಿಣಾಮ –ವಾಗಿ, ದೇವರಿಗೆ ಅವರು ಮಾಡುತ್ತಿದ್ದ ಆರಾಧನೆಯು, ಅವರ ಗುಂಪಿಗೆ ಒಳಪಡದವರಿಗಾಗಿ ಅಗೌರವದೊಂದಿಗೆ ಜೊತೆಗೂಡಿದ ಒಂದು ಹೊರಥಳುಕಿನ ಪ್ರದರ್ಶಿಸುವಿಕೆಗಿಂತಲೂ ಹೆಚ್ಚಲ್ಲದೆ ಮತ್ತೇನೂ ಆಗಿರಲಿಲ್ಲ. ಸಂಕ್ಷಿಪ್ತವಾಗಿ, ಫರಿಸಾಯರು ಮತ್ತು ಸದ್ದು –ಕಾಯರು ತಮ್ಮ **ತುಟಿಗಳಿಂದ** ದೇವರನ್ನು ಸನ್ಮಾನಿಸುತ್ತಿದ್ದರು, ಆದರೆ ಅವರ **ಹೃದಯಗಳು** ಆತನಿಂದ ದೂರವಾಗಿದ್ದವು.

ಹಾಗಾದರೆ ಈಗ, ಸುವಾರ್ತೆಯಲ್ಲಿರುವದನ್ನು ಓದುವದಕ್ಕೆ ಮುಂದುವರಿಸೋಣ ಮತ್ತು ಈ ಧಾರ್ಮಿಕ ನಿಪುಣರ ಕಪಟತನವನ್ನು ಯೋಹಾನನು ಹೇಗೆ ಗದರಿಸಿದನೆಂಬುದನ್ನು ಕೇಳಿಸಿಕೊಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

ಆದರೆ ಅವನು ಫರಿಸಾಯರಲ್ಲಿಯೂ ಮತ್ತು ಸದ್ದುಕಾಯರಲ್ಲಿಯೂ ಅನೇಕರು ತನ್ನಿಂದ ದೀಕ್ಷಾಸ್ನಾನ ಮಾಡಿಕೊಳ್ಳುವದಕ್ಕೆ ಬರುವ –ದನ್ನು ಕಂಡು ಅವರಿಗೆ, "ಎಲೈ ಸರ್ಪಜಾತಿಯವರೇ, ಮುಂದೆ ಕಾಣಬರುವ ದೈವಕೋಪದಿಂದ ತಪ್ಪಿಸಿಕೊಳ್ಳುವದಕ್ಕೆ ನಿಮಗೆ ಉಪ –ದೇಶ ಮಾಡಿದವರಾರು? ಹಾಗಾದರೆ ನಿಮ್ಮ ಮನಸ್ಸು ದೇವರ ಕಡೆಗೆ ತಿರುಗಿತೆಂಬುದನ್ನು ತಕ್ಕ ಫಲದಿಂದ ತೋರಿಸಿರಿ. ಅಬ್ರಹಾಮನು ನಮಗೆ ಮೂಲಪುರಷನಲ್ಲವೆ ಎಂಬುವ ಆಲೋಚನೆಯನ್ನು ಬಿಡಿರಿ. ದೇವರು ಅಬ್ರಹಾಮನಿಗೆ ಈ ಕಲ್ಲುಗಳಿಂದಲೂ ಮಕ್ಕಳನ್ನು ಹುಟ್ಟಿಸಬಲ್ಲನೆಂದು ನಿಮಗೆ ಹೇಳುತ್ತೇನೆ. ಈಗಲೇ ಮರಗಳ ಬೇರಿಗೆ ಕೊಡಲಿ ಹಾಕಿದೆ; ಒಳ್ಳೇ ಫಲವನ್ನು ಕೊಡದ ಪ್ರತಿಯೊಂದು ಮರವನ್ನು ಕಡಿದು ಬೆಂಕಿಯಲ್ಲಿ ಹಾಕುವರು. ನಾನಂತೂ ನಿಮ್ಮ ಮನಸ್ಸು ತಿರುಗಿಕೊಳ್ಳಬೇಕೆಂಬುದಕ್ಕೆ ನಿಮಗೆ ನೀರಿನಲ್ಲಿ ಸ್ನಾನ ಮಾಡಿ –ಸುತ್ತೇನೆ. **ಆದರೆ ನನ್ನ ಹಿಂದೆ ಬರುವವನು ನನಗಿಂತ ಶಕ್ತನು; ಆತನ ಕೆರಗಳನ್ನು ಹೊರಲಿಕ್ಕೂ ನಾನು ಯೋಗ್ಯನಲ್ಲ; ಆತನು ಪವಿತ್ರಾತ್ಮ–ನಲ್ಲಿಯೂ ಬೆಂಕಿಯಲ್ಲಿಯೂ ನಿಮಗೆ ಸ್ನಾನ ಮಾಡಿಸುವನು.** ಆತನು ಮೊರವನ್ನು ಕೈಯಲ್ಲಿ ಹಿಡಿದಿದ್ದಾನೆ; ತನ್ನ ಕಣದಲ್ಲಿಯ ರಾಶಿಯನ್ನು ತೂರಿ ಹಸನುಮಾಡಿ ತನ್ನ ಗೋದಿಯನ್ನು ಕಣಜದಲ್ಲಿ ತುಂಬಿಕೊಂಡು ಹೊಟ್ಟನ್ನು ಆರದ ಬೆಂಕಿಯಲ್ಲಿ ಸುಟ್ಟುಬಿಡುವನು!" ಎಂದು ಹೇಳಿದನು. (ಮತ್ತಾಯ–3:7-12)

ಆ ಕಾಲದಲ್ಲಿ **ಯೇಸು** ಯೋಹಾನನಿಂದ ಸ್ನಾನ ಮಾಡಿಸಿಕೊಳ್ಳಬೇಕೆಂದು ಗಲಿಲಾಯದಿಂದ ಯೋರ್ದನ್ ಹೊಳೆಗೆ ಬಂದನು. ಆಗ ಯೋಹಾನನು, "ನಾನು ನಿನ್ನಿಂದ ಸ್ನಾನ ಮಾಡಿಸಿಕೊಳ್ಳತಕ್ಕವನಾಗಿರುವಲ್ಲಿ ನೀನು ನನ್ನ ಬಳಿಗೆ ಬರುವದೇನು" ಎಂದು ಹೇಳಿ

ಆತನನ್ನು ತಡೆಯುತ್ತಾ ಇದ್ದನು. ಆದರೆ ಯೇಸು ಅವನಿಗೆ, "ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು **ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ** ಎಂದು ಹೇಳಿದಾಗ ಅವನು ಒಪ್ಪಿಕೊಂಡನು. (ಮತ್ತಾಯ–3:13-15)

ಹೀಗೆ ಯೋಹಾನನು ಕರ್ತನಾದ ಯೇಸುವಿಗೆ ಯೋರ್ದನ್ ನದಿಯಲ್ಲಿ ದೀಕ್ಷಾಸ್ನಾನ ಮಾಡಿಸಿದನು. ಬಹುಶ: ಕೆಲವರು ಹೀಗೆ ಕೇಳ –ಬಹುದು, "ಪಾಪವಿಲ್ಲದವನಾದ ಯೇಸು ತನಗೆ ದೀಕ್ಷಾಸ್ನಾನ ಮಾಡಿಸುವಂತೆ ಯೋಹಾನನನ್ನು ಯಾಕೆ ಕೇಳಿದನು?" ಇದು ನಿಜ, ಕರ್ತನಾದ ಯೇಸುವಿಗೆ ಪಶ್ಚಾತ್ತಾಪಪಡುವದಕ್ಕೆ ಯಾವ ಅಗತ್ಯವಿರಲಿಲ್ಲ, ಯಾಕೆಂದರೆ ಆತನು ಎಂದೂ ಪಾಪ ಮಾಡಿರಲಿಲ್ಲ. ಹಾಗಾ –ದರೆ ಯೋಹಾನನು ಪಾಪಿಗಳಿಗೆ ದೀಕ್ಷಾಸ್ನಾನ ಮಾಡಿಸುತ್ತಿದ್ದ ಹಾಗೆ ಆತನು ತನಗೂ ದೀಕ್ಷಾಸ್ನಾನ ಮಾಡಿಸಬಹುದು ಎಂದು ಯೇಸು ಯಾಕೆ ಯೋಹಾನನ ಬಳಿಗೆ ಬಂದನು? ಇದರ ಕುರಿತು ಯೇಸು ಏನು ಹೇಳಿದನು? ಯೇಸು ಯೋಹಾನನಿಗೆ, "ಸಧ್ಯಕ್ಕೆ ಒಪ್ಪಿಕೋ; ಹೀಗೆ ನಾವು ಎಲ್ಲಾ ಧರ್ಮವನ್ನು ನೆರವೇರಿಸತಕ್ಕದ್ದಾಗಿದೆ" ಎಂದು ಹೇಳಿದನು. ದೀಕ್ಷಾಸ್ನಾನ ಮಾಡಿಸಿಕೊಂಡದ್ದರಿಂದ, ಅನುಸರಿಸುವದಕ್ಕೆ ಒಂದು ಮಾದರಿಯನ್ನು ಯೇಸು ನಮ್ಮ ಮುಂದೆ ಇಟ್ಟಿರುವದು ಮಾತ್ರವಲ್ಲ, ಆದರೆ ಆತನು ನಮ್ಮಲ್ಲಿ ಒಬ್ಬನಂತೆ ಜೀವಿಸುವದಕ್ಕೆ ಮತ್ತು ನಮಗಾಗಿ ಸಾಯುವದಕ್ಕೆ ಬಂದನು ಎಂಬುದನ್ನೂ ಸಹ ನಮಗೆ ತೋರಿಸಿದ್ದಾನೆ.

ಅಧ್ಯಾಯದ ಕೊನೆಯಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

**ಯೇಸು** ಸ್ನಾನ ಮಾಡಿಸಿಕೊಂಡ ಕೂಡಲೆ ನೀರಿನಿಂದ ಮೇಲಕ್ಕೆ ಬರಲು ಇಗೋ, ಆತನಿಗೆ ಆಕಾಶವು ತೆರೆಯಿತು; ಮತ್ತು **ದೇವರ ಆತ್ಮ** ಪಾರಿವಾಳದ ಹಾಗೆ ಇಳಿದು ತನ್ನ ಮೇಲೆ ಬರುವದನ್ನು ಕಂಡನು. ಆಗ, "ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ" ಎಂದು **ಆಕಾಶವಾಣಿ ಆಯಿತು**. (ಮತ್ತಾಯ–3:16,17)

ಸ್ನೇಹಿತರೇ, ಆಕಾಶದಿಂದ ಯಾರ ಸ್ವರ ಪ್ರತಿಧ್ವನಿಸಿತು? ಇದು ಕರ್ತನಾದ ದೇವರ ಧ್ವನಿ! ದೇವರು ಏನು ಹೇಳಿದನು? ದೇವರು ಯೇಸುವಿಗೆ, **"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ!"** ಎಂದು ಹೇಳಿದನು. ಪ್ರವಾದಿಯದ ದಾವೀ –ದನೂ ಮತ್ತು ಗಬ್ರಿಯೇಲ್ ದೂತನು ಮೆಸ್ಸೀಯನನ್ನು ಹೇಗೆ "ದೇವರ ಮಗನು" ಎಂದು ಕರೆದಿದ್ದಾರೆಂಬುದನ್ನು ನಾವು ಪರಿಶುದ್ಧ ವಾಕ್ಯಗಳಲ್ಲಿ ಈಗಾಗಲೇ ಓದಿಕೊಂಡಿದ್ದೇವೆ. ಈಗ ದೇವರು ತಾನೇ ಯೇಸುವನ್ನು "ಈತನು ಪ್ರಿಯನಾಗಿರುವ ನನ್ನ ಮಗನು" ಎಂದು ಹೇಗೆ ಕರೆದನೆಂಬುದನ್ನು ನಾವು ಕೇಳಿದೆವು. ದೇವರು ಯೇಸುವನ್ನು ತನ್ನ ಮಗನೆಂದು ಯಾಕೆ ಕರೆದನು? ನಾವು ಈಗಾಗಲೇ ನೋಡಿ ಕೊಂಡಿರುವಂತೆ, ಯೇಸು ಪರಲೋಕದಿಂದ ನೇರವಾಗಿ ಬಂದವನಾದದರಿಂದ ಆತನು ದೇವರ ಮಗನೆಂಬುದಾಗಿ ಕರೆಯಲ್ಪಟ್ಟನು. ಯೇಸು ಭೂಲೋಕದ ತಂದೆಯನ್ನು ಹೊಂದಿದವನಲ್ಲ. ದೇವರು ತನ್ನ ನಿತ್ಯವಾದ ವಾಕ್ಯವನ್ನು ಒಬ್ಬ ಕನ್ಯೆಯ ಗರ್ಭದಲ್ಲಿಟ್ಟನು. ಯೇಸು ದೇವರ ಮಗನೆಂದು ಕರೆಯಲ್ಪಟಿದ್ದಕ್ಕೆ ಇಲ್ಲಿ ಇನ್ನೊಂದು ಕಾರಣವನ್ನು ನಾವು ನೋಡುತ್ತೇವೆ. ಅದೇನೆಂದರೆ, **ಆತನನ್ನು ಎಲ್ಲರಿಂದ ಪ್ರತ್ಯೇಕವಾಗಿ ಇಡುವದಕ್ಕೆ ದೇವರು ಯೇಸುವನ್ನು ತನ್ನ ಮಗನೆಂಬುದಾಗಿ ಕರೆದನು.**

ಯೇಸು ಹೇಗೆ ಆದಾಮನ ಮಕ್ಕಳಿಂದ ವ್ಯತ್ಯಾಸವುಳ್ಳವನಾಗಿದ್ದಾನೆ? ಆದಾಮನ ಸಂತತಿಯ ಪ್ರತಿಯೊಬ್ಬನೂ ಪಾಪದ ಕಳಂಕಿತ ಸ್ವಭಾವವನ್ನು ಹೊಂದಿದ್ದರು, ಆದರೆ **ಯೇಸುವಿನ ಸ್ವಭಾವವು ಪಾಪದ ಕಳಂಕವಿಲ್ಲದ್ದಾಗಿತ್ತು**. ಆತನು ದೇವರ ಪವಿತ್ರಾತ್ಮನಿಂದ ಬಂದವ –ನಾಗಿದ್ದದರಿಂದ ಆತನು ಒಂದೇ ಒಂದು ಪಾಪವನ್ನೂ ಹೊಂದಿರಲಿಲ್ಲ. ಮೆಸ್ಸೀಯನು ನಮ್ಮ ಹಾಗೆ **ಭೌತಿಕ ರೂಪವನ್ನು** ಪಡೆದು – ಕೊಂಡನು, ಆದರೆ ನಮ್ಮ **ಪಾಪದ ಸ್ವಭಾವವನ್ನು** ಆತನು ಪಡೆದುಕೊಳ್ಳಲಿಲ್ಲ. ಆತನು ಒಂದು ಪವಿತ್ರವಾದ ಮತ್ತು ಸಂಪೂರ್ಣವಾದ ಸ್ವಭಾವವನ್ನು ಹೊಂದಿದ್ದನು! ಅದಕ್ಕೋಸ್ಕರವೇ ಒಬ್ಬ ವಿಧೇಯತೆಯ ಮತ್ತು ನಂಬಿಗಸ್ತ ಮಗನಲ್ಲಿ ಒಬ್ಬ ತಂದೆಯು ಆನಂದಪಡು – ವಂತೆ ಪರಿಶುದ್ಧನಾದ ದೇವರು, ಯೇಸುವಿನಲ್ಲಿ ಆನಂದಗೊಳ್ಳುವದಕ್ಕೆ ಸಾಧ್ಯವಾಯಿತು. ಮಗನು ತಂದೆಯ ಛಾಯೆ ಎಂದು ಹೇಳು –ವುದುಂಟು. ಮಗನನ್ನು ನೋಡುವವರೆಲ್ಲರೂ ಅವನ ತಂದೆ ಹೇಗಿದ್ದಾನೆಂಬುದನ್ನು ತಿಳಿದುಕೊಳ್ಳುತ್ತಾರೆ. ಹಾಗೆಯೇ, ಯೇಸುವನ್ನು ಯಾರು ತಿಳಿದುಕೊಳ್ಳುತ್ತಾರೋ, ಅವರು ದೇವರು ಹೇಗಿದ್ದಾನೆಂಬದನ್ನು ತಿಳಿಯುತ್ತಾರೆ. ಯಾಕೆಂದರೆ **ದೇವರ ಸ್ವಭಾವವನ್ನು ತೋರಿಸಿ –ಕೊಡುವದಕ್ಕೆ** ಯೇಸು ದೇವರಿಂದ ಬಂದವನಾಗಿದ್ದಾನೆ. ದೇವರನ್ನು ಯಾರೂ ಎಂದೂ ನೋಡಿಲ್ಲ, ಆದರೆ ಆತನನ್ನು ತಿಳಿದು – ಕೊಳ್ಳುವಂತೆ ಮೆಸ್ಸೀಯನು ಮಾಡಿದ್ದಾನೆ! ಯೇಸು ಮಾತ್ರವೇ ಒಂದು ಪವಿತ್ರವಾದ ಸ್ವಭಾವವನ್ನು ಹೊಂದಿದ್ದ ಮನುಷ್ಯನಾಗಿದ್ದಾನೆ, ಯಾಕೆಂದರೆ ಆತನೊಬ್ಬನು ಮಾತ್ರವೇ ದೇವರ ಪವಿತ್ರಾತ್ಮನಿಂದ ಬಂದವನಾಗಿದ್ದಾನೆ! ಅದಕ್ಕಾಗಿಯೇ ದೇವರು ಆಕಾಶದಿಂದ, "ಈತನು ಪ್ರಿಯನಾಗಿರುವ ನನ್ನ ಮಗನು, **ಈತನನ್ನು ನಾನು ಮೆಚ್ಚಿದ್ದೇನೆ"** ಎಂದು ತನ್ನ ಸ್ವರವನ್ನು ಪ್ರತಿಧ್ವನಿಸುವದಕ್ಕೆ ನಾಚಿಕೆಪಡಲಿಲ್ಲ.

ಈದಿನದ ಉಳಿದ ಸಮಯದಲ್ಲಿ, ನಾಲ್ಕನೆಯ ಅಧ್ಯಾಯದಲ್ಲಿರುವದನ್ನು ಓದಿಕೊಂಡು, ಅಲ್ಲಿ ಯೋಹಾನನು ಯೇಸುವಿಗೆ ದೀಕ್ಷಾ – ಸ್ನಾನ ಮಾಡಿಸಿದ ಮೇಲೆ ಏನಾಯಿತೆಂಬದನ್ನು ಕೇಳಿಸಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ:

ಆಗ ಯೇಸು ಸೈತಾನನಿಂದ ಶೋಧಿಸಲ್ಪಡುವದಕ್ಕಾಗಿ ಆತ್ಮನು ಆತನನ್ನು ಅಡವಿಗೆ ಒಯ್ದನು. **ಆತನು ನಾಲ್ವತ್ತು ದಿವಸ ಹಗಲಿರುಳು ಉಪವಾಸವಿದ್ದ ತರುವಾಯ ಆತನಿಗೆ ಹಸಿವಾಯಿತು.** ಆಗ ಆ ಶೋಧಕನು ಆತನು ಬಳಿಗೆ ಬಂದು, **"ನೀನು ದೇವರ ಮಗನಾಗಿದ್ದರೆ** ಈ ಕಲ್ಲುಗಳು ರೊಟ್ಟಿಯಾಗುವಂತೆ ಅಪ್ಪಣೆ ಕೊಡು" ಎಂದು ಹೇಳಲು ಆತನು, "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕು – ವದಿಲ್ಲ, ದೇವರ ಬಾಯಿಂದ ಬರುವ ಪ್ರತಿಯೊಂದು ಮಾತನಿಂದಲೂ ಬದುಕುವನು" **ಎಂದು ಬರೆದದೆ** ಅಂದನು. ಆಗ ಸೈತಾನನು ಆತನನ್ನು ಪರಿಶುದ್ಧ ಪಟ್ಟಣಕ್ಕೆ ಕರಕೊಂಡು ಹೋಗಿ ದೇವಾಲಯದ ಶಿಖರದ ಮೇಲೆ ನಿಲ್ಲಿಸಿ ಆತನಿಗೆ, **"ನೀನು ದೇವರ ಮಗನಾಗಿ –ದ್ದರೆ** ಕೆಳಕ್ಕೆ ದುಮುಕು; ಆತನು ನಿನ್ನ ವಿಷಯವಾಗಿ ತನ್ನ ದೂತರಿಗೆ ಅಪ್ಪಣೆ ಕೊಡುವನು; ನಿನ್ನ ಕಾಲು ಕಲ್ಲಿಗೆ ತಗಲೀತೆಂದು ಅವರು ನಿನ್ನನ್ನು ಕೈಗಳಲ್ಲಿ ಎತ್ತಿಕೊಳ್ಳುವರು ಎಂಬದಾಗಿ ಬರೆದದೆಯಲ್ಲಾ ಎಂದು ಹೇಳಿದನು. ಅದಕ್ಕೆ ಯೇಸು, "ನಿನ್ನ ದೇವರಾಗಿರುವ

ಕರ್ತನನ್ನು ಪರೀಕ್ಷಿಸಬಾರದು **ಎಂಬದಾಗಿ ಸಹ ಬರೆದದೆ** ಅಂದನು. ಮತ್ತೆ ಸೈತಾನನು ಆತನನ್ನು ಬಹಳ ಎತ್ತರವಾದ ಬೆಟ್ಟಕ್ಕೆ ಕರ –ಕೊಂಡು ಹೋಗಿ ಪ್ರಪಂಚದ ಎಲ್ಲಾ ರಾಜ್ಯಗಳನ್ನೂ ಅವುಗಳ ವೈಭವವನ್ನೂ ಆತನಿಗೆ ತೋರಿಸಿ, "ನೀನು ನನಗೆ ಸಾಷ್ಟಾಂಗ ನಮ –ಸ್ಕಾರ ಮಾಡಿದರೆ ಇವುಗಳನ್ನೆಲ್ಲಾ ನಿನಗೆ ಕೊಡುವೆನು" ಅಂದನು. ಯೇಸು ಅವನಿಗೆ, "ಸೈತಾನನೇ, ನೀನು ತೊಲಗಿ ಹೋಗು. ನಿನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು" **ಎಂಬದಾಗಿ ಬರೆದದೆ** ಎಂದು ಹೇಳಿದನು. ಆಗ ಸೈತಾನನು ಆತನನ್ನು ಬಿಟ್ಟುಬಿಟ್ಟನು, ಮತ್ತು ದೇವದೂತರು ಬಂದು ಆತನಿಗೆ ಉಪಚಾರ ಮಾಡಿದರು. (ಮತ್ತಾಯ–4:1-11)

ಯೇಸು ತನಗೆ ವಿಧೇಯನಾಗಿ ಪಾಪಮಾಡುವಂತೆ ಸೈತಾನನು ಆತನನನ್ನು ಮೂರು ಸಾರಿ ಮರಳುಮಾಡಿದನು. ಎಲ್ಲಾ ಮೂರು ಸಲವೂ ಯೇಸು ದೇವರ ವಾಕ್ಯವನ್ನು ಹೇಳುವದರಿಂದ ಸೈತಾನನಿಗೆ ಉತ್ತರ ಕೊಟ್ಟನು. ಪರದೈಸಿನ(ಏದೆನ್)ತೋಟದಲ್ಲಿ ಸೈತಾನನು ಆದಾಮ ಹವ್ವರನ್ನು ಶೋಧನೆಗೊಳಪಡಿಸಿದಂತೆ, ಅದೇ ರೀತಿಯಲ್ಲಿ ಪಾಪ ಮಾಡುವಂತೆ ಕರ್ತನಾದ ಯೇಸುವನ್ನೂ ಸಹ ಸೈತಾನನು ಅರಣ್ಯದಲ್ಲಿ ಶೋಧನೆಪಡಿಸಿದನು. **ಆದರೆ ಯೇಸು ಪಾಪ ಮಾಡಲಿಲ್ಲ.**

ಸೈತಾನನು ಯಾಕೆ ಯೇಸುವನ್ನು ಶೋಧನೆಪಡಿಸಿದನು? ಯಾಕೆಂದರೆ ಅವನ ಆಳ್ವಿಕೆಯಿಂದ ಆದಾಮನ ಸಂತಾನದವರನ್ನು ರಕ್ಷಿಸುವ –ದಕ್ಕೆ ಯೇಸು ಪರಲೋಕದಿಂದ ಬಂದಂತ ಪರಿಶುದ್ಧ ವಿಮೋಚಕನಾಗಿದ್ದಾನೆಂಬುದನ್ನು ಸೈತಾನನು ತಿಳಿದಿದ್ದನು. ಯೇಸು ಒಂದೇ ಒಂದು ಪಾಪ ಮಾಡಿದರೂ ಆತನು ಪಾಪದ ಆಳ್ವಿಕೆಯಿಂದ ಆದಾಮನ ಸಂತಾನದವರನ್ನು ರಕ್ಷಿಸುದಕ್ಕಾಗುವದಿಲ್ಲ ಎಂಬುದನ್ನೂ ಸಹ ಸೈತಾನನು ತಿಳಿದಿದ್ದನು. ಹಾಗಾಗಿ ಸೈತಾನನು ಯೇಸುವನ್ನು ತೊಂದರೆಗೊಳಿಸಿದನು, ಆತನನ್ನು ಮೋಸಗೊಳಿಸುವದಕ್ಕೆ ಪ್ರಯತ್ನಿಸಿ –ದನು. ಆದರೆ ಯೇಸು ಸೈತಾನನ ಬಲೆಯಲ್ಲಿ ಬೀಳಲಿಲ್ಲ.

ಹೌದು, ಸೈತಾನನು ನಮ್ಮ ಪೂರ್ವಿಕರಾದ ಆದಾಮ ಮತ್ತು ಹವ್ವರನ್ನು ಭ್ರಷ್ಟಗೊಳಿಸಿ ಜಯಿಸಿದನು, ಆದರೆ ಪವಿತ್ರ ದೇವರ ಮಗನನ್ನು ಆತನು ಜಯಿಸುವದಕ್ಕೆ ಸಾಧ್ಯವಾಗಲಿಲ್ಲ. **ದೇವರು ಪಾಪ ಮಾಡುವದಕ್ಕೆ ಸಾಧ್ಯವಿಲ್ಲ ಆದದರಿಂದ ಕರ್ತನಾದ ಯೇಸು ಪಾಪ ಮಾಡು –ವದಕ್ಕೆ ಸಾಧ್ಯವಿರಲಿಲ್ಲ.** ತಂದೆ ಹೇಗೋ ಮಗನು ಹಾಗೆಯೇ. ಯೇಸು ಮಾನವ ಶರೀರದಲ್ಲಿದ್ದ ಜೀವಿಸುವ ಮತ್ತು ಶಕ್ತಿಯುತವಾದ ದೇವರ ವಾಕ್ಯವಾಗಿದ್ದನು. ಆದಾಮನ ಮಕ್ಕಳನ್ನು ಸೈತಾನನ ಬಲದಿಂದಲೂ ಮತ್ತು ಪಾಪದ ದಂಡನೆಯಿಂದಲೂ ಬಿಡಿಸುವದಕ್ಕೆ ದೇವರು ಆತನನ್ನು ಲೋಕಕ್ಕೆ ಕಳುಹಿಸಿದನು. ಕರ್ತನಾದ ಯೇಸು ಮಾತ್ರವೇ ನಮ್ಮನ್ನು ಸೈತಾನನಿಂದಲೂ ಮತ್ತು ಪಾಪದಿಂದಲೂ ಬಿಡಿಸುವದಕ್ಕೆ ಸಾಧ್ಯ, ಯಾಕೆಂದರೆ ಆತನು ಮಾತ್ರ ಸೈತಾನನನ್ನು ಮತ್ತು ಪಾಪವನ್ನು ಜಯಿಸಿದ್ದನು. ಅದಕ್ಕಾಗಿಯೇ ವಾಕ್ಯವು ಮೆಸ್ಸೀ –ಯನ ಕುರಿತು ಹೀಗೆ ಹೇಳುತ್ತದೆ:

**ಇಂಥವನೇ ನಮಗೆ ಬೇಕಾದ ಮಹಾಯಾಜಕನು. ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶ ಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು.** ಮೊದಲು ತಮ್ಮ ಪಾಪಪರಿಹಾರಕ್ಕಾಗಿ ಸಮರ್ಪಣೆ ಮಾಡುವ ಲೇವಿಕ ಮಹಾಯಾಜಕರಂತೆ ಈತನು ಪ್ರತಿನಿತ್ಯವೂ ಸಮರ್ಪಿಸಬೇಕಾದ ಅವಶ್ಯವಿಲ್ಲ. ಈತನು ತನ್ನನ್ನೇ ಸಮರ್ಪಿಸಿಕೊಂಡು ಒಂದೇ ಸಾರಿ ಆ ಕೆಲಸವನ್ನು ಮಾಡಿ ಮುಗಿಸಿದನು. (ಇಬ್ರಿಯ–7:26,27)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ನಾವು ನಿಮಗೆ ವಂದಿಸುತ್ತೇವೆ. ಪ್ರವಾದಿಯಾದ ಯೋಹಾನನ ಶಿಷ್ಯರು ಹೇಗೆ ಅವನನ್ನು ಬಿಟ್ಟು ಯೇಸುವನ್ನು ಹಿಂಬಾಲಿಸಿದರು ಎನ್ನುವದನ್ನು ಕೇಳಿಸಿಕೊಳ್ಳುವದಕ್ಕೆ ನಮ್ಮ ಮುಂದಿನ ಅಧ್ಯಯನದಲ್ಲಿ ನಮ್ಮೊಂದಿಗೆ ಭೇಟಿಯಾಗುವದಕ್ಕೆ ಯೋಜನೆ ಮಾಡಿರಿ. . . .

ಈದಿನ ನಾವು ಓದಿದ ವಿಷಯದಲ್ಲಿ ದೇವರು ನಿಮಗೆ ಪರಿಜ್ಞಾನವನ್ನು ಕೊಡಲಿ. ಪವಿತ್ರ ವಾಕ್ಯದೊಂದಿಗೆ ನಿಮ್ಮನ್ನು ಬಿಡುತ್ತಿದ್ದೇವೆ:

**"ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ."**
(1ಯೋಹಾನ–3:5)

ಪಾಠ 64

# ದೇವರ ಕುರಿಮರಿ

ಯೋಹಾನ 1, 3

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಎರಡು ಕಾರ್ಯಕ್ರಮಗಳಲ್ಲಿ, ಮೆಸ್ಸೀಯನಾದ ಯೇಸು ತನ್ನ ಜನನದಲ್ಲಿ ಮತ್ತು ತನ್ನ ಗುಣಲಕ್ಷಣದಲ್ಲಿ (ಸ್ವಭಾವದಲ್ಲಿ) ಅದ್ವಿತೀಯನಾಗಿದ್ದನು ಎನ್ನುವದನ್ನು ನಾವು ನೋಡಿದ್ದೇವೆ. ಆತನ ಜನನಕ್ಕೆ ಸಂಬಂಧಿಸಿದಂತೆ, ಯೇಸುವಿನ ಹಾಗೆ ಜನ್ಮ ತಾಳಿದವರು ಯಾರೂ ಇಲ್ಲ ಯಾಕೆಂದರೆ ಆತನು ಭೂಲೋಕದ ತಂದೆಯನ್ನು ಹೊಂದಿರಲಿಲ್ಲ ಎನ್ನುವದನ್ನು ನಾವು ಕಂಡುಕೊಂಡಿದ್ದೇವೆ. ಆತನು ದೇವರಾತ್ಮನ ಬಲದಿಂದ ಒಬ್ಬ ಕನ್ಯೆಯಲ್ಲಿ ಹುಟ್ಟಿದನು. ಆತನ **ಗುಣಲಕ್ಷಣಗಳಿಗೆ** ಸಂಬಂಧಿಸಿದಂತೆ, ಯೇಸು ಅದ್ವಿತೀಯನಾಗಿದ್ದನು. ಆತನ ಹಾಗೆ ಒಂದು ಪವಿತ್ರ ಸ್ವಭಾವದೊಂದಿಗೆ ಇನ್ನೊಬ್ಬರು ಎಂದೂ ಹುಟ್ಟಿಲ್ಲ. ಆತನು ನಮ್ಮ ಹಾಗೆ ಶರೀರವನ್ನು ಹೊಂದಿದ್ದನು, ಆದರೆ ಆತನು ನಮ್ಮ ಕೆಟ್ಟ ಸ್ವಭಾವವನ್ನು ಹೊಂದಿರಲಿಲ್ಲ. ಯೇಸು ಪಾಪದ ಕಳಂಕವಿಲ್ಲದವನಾಗಿದ್ದನು, ಯಾಕೆಂದರೆ ಆತನು ನಮ್ಮ ಪಾಪಗಳಿಗಾಗಿ ನಮ್ಮ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕೆ ಲೋಕಕ್ಕೆ ದೇವರು ಕಳಿಸಿದ ರಕ್ಷಕನಾಗಿದ್ದನು.

ಈದಿನ ಸುವಾರ್ತೆಯಲ್ಲಿ(ಇಂಜಿಲ್) ಓದುವದನ್ನು ಮುಂದುವರಿಸುವದಕ್ಕೆ, ಮತ್ತು **ಯೇಸುವಿನ ಕುರಿತು ಪ್ರವಾದಿಯಾದ ಯೋಹಾನನು** (ಯಾಹ್ಯಾ)**ಏನು ಸಾಕ್ಷಿಕೊಟ್ಟಿದ್ದಾನೆ** ಎನ್ನುವದನ್ನು ಕೇಳಿಸಿಕೊಳ್ಳುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ಯೋಹಾನನು ಮೆಸ್ಸೀಯನ ಮುಂದೆ ಮಾರ್ಗವನ್ನು ಸಿದ್ಧಪಡಿಸುವದಕ್ಕೆ ದೇವರು ಕಳಿಸಿದ ಒಬ್ಬ ಪ್ರವಾದಿಯಾಗಿದ್ದನು.

ಯೋಹಾನನ ಸುವಾರ್ತೆ ಒಂದನೇ ಅಧ್ಯಾಯದಲ್ಲಿರುವದನ್ನು ಓದುತ್ತಿದ್ದೇವೆ {ಟಿಪ್ಪಣಿ: ಉಲೂಫ್ ಹೊಸ ಒಡಂಬಡಿಕೆಯಲ್ಲಿ, ಪ್ರವಾದಿ –ಯಾದ(ಸ್ನಾನಿಕನಾದ)ಯೋಹಾನನು ಯಾಹ್ಯಾ ಎಂದು ಕರೆಯಲ್ಪಟ್ಟಿದ್ದಾನೆ, ಮತ್ತು ಅಪೊಸ್ತಲನಾದ ಯೋಹಾನನು, ಯೋವಾನ್ನ ಎಂದು ಕರೆಯಲ್ಪಟ್ಟಿದ್ದಾನೆ, ಹಾಗಾಗಿ, ಈ ಇಬ್ಬರು ಮನುಷ್ಯರ ನಡುವೆ ಯಾವ ಗೊಂದಲಗಳಿಲ್ಲ}, ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

**ಯೋಹಾನನು ಕೊಟ್ಟ ಸಾಕ್ಷಿ ಏನೆಂದರೆ,** ಯೆಹೂದ್ಯರು ಯೆರೂಸಲೇಮಿನಿಂದ ಯಾಜಕರನ್ನೂ ಲೇವಿಯರನ್ನೂ ಅವನ ಬಳಿಗೆ ಕಳುಹಿಸಿ ನೀನು ಯಾರೆಂದು ಕೇಳಿದ್ದಕ್ಕೆ ಅವನು ಮರೆಮಾಜದೆ, "ನಾನು ಕ್ರಿಸ್ತನಲ್ಲವೆಂದು" ಎಲ್ಲರ ಮುಂದೆ ಹೇಳಿದನು. . . .ಆಗ ಅವರು "ನೀನು ಯಾರು?" ನಮ್ಮನ್ನು ಕಳಹಿಸಿದವರಿಗೆ ನಾವು ಉತ್ತರ ಹೇಳಬೇಕಲ್ಲಾ; ನಿನ್ನ ವಿಷಯವಾಗಿ ಏನು ಹೇಳುತ್ತೀ? ಎಂದು ಕೇಳಲು ಅವನು, "ಕರ್ತನ ದಾರಿಯನ್ನು ನೆಟ್ಟಗೆ ಮಾಡಿರಿ ಎಂದು ಅಡವಿಯಲ್ಲಿ ಕೂಗುವವನ ಶಬ್ದವದೆ ಎಂಬದಾಗಿ ಯೆಶಾಯ ಪ್ರವಾದಿಯು ಹೇಳಿದನಷ್ಟೆ; ಆ ಶಬ್ದವೇ ನಾನು" ಎಂದು ಉತ್ತರಕೊಟ್ಟನು." ಅದಕ್ಕೆ ಯೋಹಾನನು, "ನಾನು ನೀರಿನಿಂದ ಸ್ನಾನಮಾಡಿಸುವವನು; ಆದರೆ ನೀವು ಅರಿಯದೆ ಇರುವ ಒಬ್ಬಾತನು ನಿಮ್ಮ ಮಧ್ಯದಲ್ಲಿ ನಿಂತಿದ್ದಾನೆ; **ಆತನೇ ನನ್ನ ಹಿಂದೆ ಬರತಕ್ಕವನು; ಆತನ ಕೆರದ ಬಾರನ್ನು ಬಿಚ್ಚುವದಕ್ಕೂ ನಾನು ಯೋಗ್ಯನಲ್ಲ"** ಅಂದನು. ಇದೆಲ್ಲಾ ಯೋರ್ದನ್ ಹೊಳೆಯ ಆಚೇಕಡೆಯಲ್ಲಿರುವ ಬೇಥಾನ್ಯದಲ್ಲಿ ನಡೆಯಿತು. ಅಲ್ಲಿ ಯೋಹಾನನು ಸ್ನಾನ ಕೊಡುತ್ತಿದ್ದನು. ಮರುದಿನ ಯೋಹಾನನು ತನ್ನ ಕಡೆಗೆ ಬರುವ **ಯೇಸುವನ್ನು** ನೋಡಿ, **"ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು. ನನ್ನ ಹಿಂದೆ ಬರುವವನು ನನಗಿಂತ ಮೊದಲೇ ಇದ್ದದರಿಂದ ನನಗೆ ಮುಂದಿನವನಾದನು" ಎಂದು ನಾನು ಹೇಳಿದ ಮಾತು ಈತನ ವಿಷಯವಾಗಿಯೇ,** ಅಂದನು.(ಯೋಹಾನ – 1:19,20,22,23, 26-30)

ಇಲ್ಲಿಗೆ ನಿಲ್ಲಿಸಿ, ಪ್ರವಾದಿಯಾದ ಯೋಹಾನನ ಸಾಕ್ಷಿಯ ಕುರಿತಾಗಿ ಆಲೋಚಿಸೋಣ. ಅವನು ಮೆಸ್ಸೀಯನನ್ನು ಹೇಗೆ ಉಲ್ಲೇಖಿಸಿದ –ನೆಂಬುದನ್ನು ನೀವು ಕೇಳಿಸಿಕೊಂಡಿರಾ? ಈಗ ಮತ್ತೆ ವಾಕ್ಯದಲ್ಲಿರುವದನ್ನು ಕೇಳೋಣ: "ತನ್ನ ಕಡೆಗೆ ಬರುವ ಯೇಸುವನ್ನು ನೋಡಿ ಯೊಹಾನನು, ಅಗೋ, ಯಜ್ಞಕ್ಕೆ **ದೇವರು ನೇಮಿಸಿದ ಕುರಿ**, ಲೋಕದ ಪಾಪವನ್ನು ನಿವಾರಣೆ ಮಾಡುವವನು." ಅಂದನು. ದೇವರ ಪ್ರವಾದಿಗಳು ಮೆಸ್ಸೀಯನನ್ನು, ವಿಮೋಚಕನು, ರಕ್ಷಕನು, ಅರಸನು, ಕರ್ತನು, ದೇವರ ವಾಕ್ಯ, ಮತ್ತು ದೇವರ ಮಗನು ಎಂಬುದಾಗಿ ಅನೇಕ ಹೆಸರುಗಳಿಂದ ಕರೆದಿರುವದನ್ನು ನಾವು ಈಗಾಗಲೇ ಓದಿಕೊಂಡಿದ್ದೇವೆ. ಯೋಹಾನನು ಆತನನ್ನು **"ದೇವರ ಕುರಿ"** ಎಂದು ಕರೆಯುವದನ್ನು ಈಗ ಕೇಳಿಸಿಕೊಳ್ಳುತ್ತಿದ್ದೇವೆ. ಇದು, ಸ್ಪಷ್ಟಗೊಳಿಸಲು ಅರ್ಹವಾಗಿರುವಂತಹ ತುಂಬಾ ಮುಖ್ಯವಾದ ಬಿರುದಾಗಿದೆ.

ಯೋಹಾನನು ಯೇಸುವನ್ನು ದೇವರ ಕುರಿ ಎಂದು ಯಾಕೆ ಕರೆದನು? ಯೇಸು ಒಂದು ಕುರಿಮರಿಯಾಗಿದ್ದನೋ? ಇಲ್ಲ, ಯೇಸು

ನಿಜವಾದ ಒಂದು ಕುರಿಮರಿಯಾಗಿರಲಿಲ್ಲ, ಕೇವಲ ಹೇಗೆ, ನಾವು ಸೆನೆಗಲ್‌ನವರು ನಿಜವಾದ ಸಿಂಹಗಳಲ್ಲದಿದ್ದಾಗ್ಯೂ, ಕೆಲವು ಸಲ ನಾವು ನಮ್ಮನ್ನು ಹಾಗೆ ಕರೆದುಕೊಳ್ಳುತ್ತೇವೆ. {ಸಿಂಹವು ಸೆನೆಗಲ್‌ನ ಮಂಗಳಕರವಾದ ಪ್ರಾಣಿ}. ಇದು ಕೇವಲ ಮಾತಿನ ಒಂದು ವಿಧಾನ ಎನ್ನುವದನ್ನು ನಾವೆಲ್ಲರೂ ತಿಳಿದುಕೊಳ್ಳಬೇಕು, ಯಾಕೆಂದರೆ ನಾವು ಸಿಂಹದ ಶಕ್ತಿ ಮತ್ತು ಧೈರ್ಯವನ್ನು ಹೊಂದಿಕೊಳ್ಳು –ವದಕ್ಕೆ ಇಷ್ಟಪಡುತ್ತೇವೆ. ಆದರೆ ಪ್ರವಾದಿಯಾದ ಯೋಹಾನನು ಯೇಸುವನ್ನು **ದೇವರ ಕುರಿಮರಿ** ಎಂದು ಯಾಕೆ ಕರೆದನು? ಬೇರೆ ಯಾರಾದರೂ ಯಾಕೆ ಒಂದು ಕುರಿಮರಿಯಾಗುವದಕ್ಕೆ ಇಷ್ಟಪಡಲಿಲ್ಲ? ಯೇಸುವನ್ನು ತೋರಿಸಿ ಯೋಹಾನನು ತನ್ನ ಶಿಷ್ಯರಿಗೆ, "ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪಗಳನ್ನು ನಿವಾರಣೆ ಮಾಡುವವನು" ಎಂದು ಯಾಕೆ ಹೇಳಿದನು?

"ದೇವರ ಕುರಿಮರಿ" ಎಂಬ ಬಿರುದು ಏನೆಂದು ಅರ್ಥಮಾಡಿಕೊಳ್ಳುವದಕ್ಕೆ, ಆದಾಮ ಹವ್ವರು ಪಾಪ ಮಾಡಿದ ನಂತರ ದೇವರು ಯಾವ ತೀರ್ಪನ್ನು ಕೊಟ್ಟನೆಂಬುದನ್ನು ನಾವು ಜ್ಞಾಪಿಸಿಕೊಳ್ಳಬೇಕು. ಪಾಪದ ಸಂಬಳವು ಮರಣ ಮತ್ತು ನರಕ ಹಾಗೂ ಕಳಂಕ –ವಿಲ್ಲದ ಒಂದು ಯಜ್ಞದ ರಕ್ತವು ಸುರಿಸಲ್ಪಡದಿದ್ದರೆ ಪಾಪದ ಕ್ಷಮಾಪಣೆ ಇರುವದಿಲ್ಲ ಎಂಬ ತೀರ್ಪನ್ನು ದೇವರು ಕೊಟ್ಟನು. ಹಾಗಾಗಿ, ಆದಾಮನ ಎರಡನೆಯ ಮಗನಾದ ಹೇಬೇಲನು ದೇವರನ್ನು ನಂಬಿದವನಾಗಿದ್ದು, ತನ್ನ ಪಾಪವನ್ನು ಮುಚ್ಚುವದಕ್ಕೆ ಒಂದು **ಕುರಿಮರಿಯನ್ನು** ಅದನ್ನು ಒಂದು ಯಜ್ಞವೇದಿಯ ಮೇಲೆ ದೇವರಿಗೆ ಯಜ್ಞವಾಗಿ ಸಮರ್ಪಿಸಿದನು. ದೇವರು ಕುರಿಯ ರಕ್ತವನ್ನು ನೋಡಿದಾಗ, ಆತನು ಹೇಬೇಲನ ಪಾಪದ ಶಿಕ್ಷೆಯನ್ನು ರದ್ದುಗೊಳಿಸಿದನು, ಮತ್ತು ಆತನನ್ನು ನೀತಿವಂತನೆಂದು ನಿರ್ಣಯಿಸಿದನು, ಯಾಕೆಂದರೆ **ಅವನ ಸ್ಥಾನದಲ್ಲಿ ಒಂದು ನಿಷ್ಕಳಂಕ ಕುರಿಯು ಸತ್ತಿತ್ತು.** ಆದಾಗ್ಯೂ, ಒಂದು ಕುರಿಯ ರಕ್ತವು ಎಂದೆಂದಿಗೂ ಪಾಪಕ್ಕಾಗಿ ಒಂದು ತಕ್ಕಷ್ಟು ದಂಡನೆಯ ಹಾಗೆ ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನೂ ಸಹ ದೇವರು ಹೇಳಿದನು, ಯಾಕೆಂದರೆ ಒಂದು ಪಶು –ವಿನ ಮೌಲ್ಯವು ಮತ್ತು ಒಬ್ಬ ಮನುಷ್ಯನ ಮೌಲ್ಯವು ಸಮಾನವಾದುದಲ್ಲ. **ಈ ಕುರಿಮರಿಯು, ದೇವರ ನೀತಿಯುಳ್ಳ ನ್ಯಾಯ ತೀರ್ಪಿ –ನಿಂದ ಪಾಪಿಗಳನ್ನು ಬಿಡಿಸುವದಕ್ಕೆ ಲೋಕಕ್ಕೆ ಬಂದು ತನ್ನ ರಕ್ತವನ್ನು ಸುರಿಸುವದಕ್ಕಿದ್ದ ಪರಿಶುದ್ಧ ವಿಮೋಚಕನ ಒಂದು ಛಾಯೆಯೂ ಮತ್ತು ಒಂದು ನಿದರ್ಶನವೂ ಆಗಿತ್ತು.**

ಯೇಸುವಿನ ಜನನಕ್ಕಿಂತ ಏಳುನೂರು ವರ್ಷಗಳ ಮೊದಲು, ಪ್ರವಾದಿಯಾದ ಯೆಶಾಯನು, ಮೆಸ್ಸೀಯನು ಹೇಗಿರುತ್ತಾನೆಂದು ಬರೆ –ದಿರುವದೇನೆಂದರೆ, "ಆತನು ನಮ್ಮ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ಒಂದು ಯಜ್ಞದ ಹಾಗೆ ವಧ್ಯಸ್ಥಾನಕ್ಕೆ ಒಯ್ಯಲ್ಪಡುವ **ಕುರಿಯ** ಹಾಗಿದ್ದನು" (ಯೆಶಾಯ–53:7). ಹಾಗಾಗಿ, ಹೇಬೆಲನ ಮತ್ತು ಮೆಸ್ಸೀಯನ ಕಾಲದ ನಡುವೆ, ದೇವರನ್ನು ನಂಬಿದವರೆಲ್ಲರೂ ಕುರಿ –ಗಳ ಯಜ್ಞಗಳನ್ನು ಗೌರವಿಸಿ ಅದರಲ್ಲಿ ಭಾಗವಹಿಸುತ್ತಿದ್ದರು. ನೋಹ, ಅಬ್ರಹಾಮ, ಮೋಶೆ, ದಾವೀದ ಮತ್ತು ಎಲ್ಲಾ ಪ್ರವಾದಿಗಳೂ ಹಾಗೂ ದೇವರ ವಾಕ್ಯವನ್ನು ನಂಬಿದವರೆಲ್ಲರೂ ನಿಷ್ಕಳಂಕವಾದ ಕುರಿಮರಿಗಳನ್ನು ದೇವರಿಗೆ ಯಜ್ಞವಾಗಿ ಸಮರ್ಪಿಸುವ ರೂಢಿಯುಳ್ಳ –ವರಾಗಿದ್ದರು. ಈ ರೀತಿಯಲ್ಲಿ, ಪಾಪವನ್ನು ಎಂದೆಂದಿಗೂ ತೆಗೆದು ಹಾಕುವದಕ್ಕೆ ಒಂದು ಯಜ್ಞದಂತೆ ತನ್ನ ರಕ್ತವನ್ನು ಸುರಿಸುವದ –ಕ್ಕಿದ್ದ ಕೊನೆಯ ಯಜ್ಞವನ್ನು ಅಂದರೆ ಪವಿತ್ರ ವಿಮೋಚಕನನ್ನು ದೇವರು ಲೋಕಕ್ಕೆ ಕಳುಹಿಸುವ ದಿನಕ್ಕಾಗಿ ಅವರೆಲ್ಲರೂ ಮುಂದಾ –ಗಿಯೇ ಎದುರುನೋಡುತ್ತಿದ್ದರು.

ಅದಕ್ಕಾಗಿಯೇ ಪ್ರೀತಿಯ ಸ್ನೇಹಿತರೇ, ಪ್ರವಾದಿಯಾದ ಯೋಹಾನನು ತನ್ನ ಕಡೆಗೆ ಬರುತ್ತಿರುವ ಯೇಸುವನ್ನು ನೋಡಿ, ಆತನನ್ನು ತೋರಿಸುತ್ತಾ ತನ್ನ ಶಿಷ್ಯರಿಗೆ, **"ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು!"** ಅಂದನು. ಹೀಗೆ ಯೋಹಾನನು ತನ್ನ ಶಿಷ್ಯರಿಗೆ, ತಮ್ಮ ಮುಂದೆ ನೀತಿರುವ ಈ ಯೇಸುವೇ ಎಲ್ಲಾ ಪ್ರವಾದಿಗಳೂ ಪ್ರವಾದಿಸಿರುವಂತ ಮೆಸ್ಸೀ –ಯನು, ದೇವರು ಪರಲೋಕದಿಂದ ಕಳುಹಿಸಿದ ಸಂಪೂರ್ಣವಾದ ಯಜ್ಞದ "ಕುರಿಮರಿ" ಎಂಬುದನ್ನು ತಿಳಿಸಿಕೊಟ್ಟನು. ಆದಾಮನ ಮಕ್ಕಳ ಸ್ಥಾನದಲ್ಲಿ ಸಾಯುವದಕ್ಕೆ ಯೇಸು ಲೋಕಕ್ಕೆ ಬಂದಂತಹ ಪರಿಶುದ್ದ ಯಜ್ಞವಾಗಿದ್ದನು, ಆದದರಿಂದ ದೇವರು ನಮ್ಮ ಪಾಪ –ಗಳನ್ನು ಎಂದೆಂದಿಗೂ ಕ್ಷಮಿಸುವದಕ್ಕೆ ಸಾಧ್ಯವಾಯಿತು!

ಇದಾದ ನಂತರ, ವಾಕ್ಯವು ಹೀಗೆ ಹೇಳುತ್ತದೆ:

ಮರುದಿನ ತಿರಿಗಿ ಯೋಹಾನನೂ ಅವನ ಶಿಷ್ಯರಲ್ಲಿ ಇಬ್ಬರೂ ನಿಂತುಕೊಂಡಿದ್ದಾಗ ಯೋಹಾನನು ಅಲ್ಲಿ ತಿರುಗಾಡುತ್ತಿರುವ ಯೇಸು –ವನ್ನು ನೋಡಿ, **"ಅಗೋ ಯಜ್ಞಕ್ಕೆ ದೇವರು ನೇಮಿಸಿದ ಕುರಿ"** ಅಂದನು. ಆ ಇಬ್ಬರು ಶಿಷ್ಯರು ಅದನ್ನು ಕೇಳಿ ಯೇಸುವಿನ ಹಿಂದೆ ಹೋದರು. ಯೇಸು ಹಿಂತಿರುಗಿ ನೋಡಿ ಅವರು ತನ್ನ ಹಿಂದೆ ಬರುವದನ್ನು ಕಂಡು, "ನಿಮಗೆ ಏನು ಬೇಕಾಗಿದೆ' ಎಂದು ಕೇಳಲು ಅವರು, "ರಬ್ಬಿಯೇ ನೀನು ಇಳುಕೊಂಡಿರುವದು ಎಲ್ಲಿ?" ಅಂದರು. "ಆತನು ಬಂದು ನೋಡಿರಿ" ಅಂದಾಗ ಅವರು ಬಂದು ಆತನು ಇಳುಕೊಂಡಿದ್ದ ಸ್ಥಳವನ್ನು ನೋಡಿ ಆ ದಿವಸ ಆತನ ಸಂಗಡ ಇದ್ದರು. ಆಗ ಹೆಚ್ಚು ಕಡಿಮೆ ಸಾಯಂಕಾಲ ನಾಲ್ಕು ಘಂಟೆಯಾಗಿತ್ತು. ಯೋಹಾನನ ಮಾತನ್ನು ಕೇಳಿ ಯೇಸುವನ್ನು ಹಿಂಬಾಲಿಸಿದ ಆ ಇಬ್ಬರಲ್ಲಿ ಸೀಮೋನ್ ಪೇತ್ರನ ತಮ್ಮನಾದ ಅಂದ್ರೆಯನು ಒಬ್ಬನು. ಇವನು ಮೊದಲು ತನ್ನ ಅಣ್ಣನಾದ ಸೀಮೋನನನ್ನು ಕಂಡುಕೊಂಡು ಅವನಿಗೆ, **"ಮೆಸ್ಸೀಯನು ನಮಗೆ ಸಿಕ್ಕಿದನು"** ಎಂದು ಹೇಳಿ ಅವ –ನನ್ನು ಯೇಸುವಿನ ಬಳಿಗೆ ಕರಕೊಂಡು ಬಂದನು. ಯೇಸು ಅವನನ್ನು ನೋಡಿ, "ನೀನು ಯೋಹಾನನ ಮಗನಾದ ಸೀಮೋನನು; ಇನ್ನು ಮೇಲೆ ಕೇಫನೆನಿಸಿಕೊಳ್ಳುವಿ" ಅಂದನು. ಮರುದಿನ ಯೇಸು ಗಲಿಲಾಯಕ್ಕೆ ಹೊರಟುಹೋಗಬೇಕೆಂದಿರುವಾಗ ಫಿಲಿಪ್ಪನನ್ನು ಕಂಡುಕೊಂಡು, "ನನ್ನನ್ನು ಹಿಂಬಾಲಿಸು" ಅಂದನು. ಈ ಫಿಲಿಪ್ಪನು ಬೇತ್ಸಾಯಿದದವನು, ಅಂದರೆ ಅಂದ್ರೆಯ ಪೇತ್ರರ ಊರಿನವನು. ಫಿಲಿಪ್ಪನು ನತಾನಯೇಲನನ್ನು ಕಂಡುಕೊಂಡು ಅವನಿಗೆ, **"ಯಾವನ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿದನು; ಆತನು ಯಾರಂದರೆ ಯೋಸೇಫನ ಮಗನಾದ ನಜರೇತಿನ ಯೇಸು"** ಎಂದು ಹೇಳಿ –ದನು. ನತಾನಯೇಲನು, "ಒಳ್ಳೇದೇನಾದರೂ ನಜರೇತಿನಿಂದ ಬರುವದುಂಟೇ?" ಅಂದಾಗ ಫಿಲಿಪ್ಪನು, ಬಂದು ನೋಡು ಅಂದನು. (ಯೋಹಾನ–1:35-46)

ಹೀಗೆ, ಯೋಹಾನನ ಶಿಷ್ಯರು ಯೇಸುವನ್ನು ಹಿಂಬಾಲಿಸುವದಕ್ಕೆ ಪ್ರಾರಂಭಿಸಿದರು. ಯೇಸುವನ್ನು ಹಿಂಬಾಲಿಸುವದಕ್ಕೆ ಯೋಹಾನನ ಶಿಷ್ಯರು ಅವನನ್ನು ಯಾಕೆ ಬಿಟ್ಟುಬಿಟ್ಟರು? ಅವರು ಯೇಸುವನ್ನು ಹಿಂಬಾಲಿಸುವದಕ್ಕೆ ಕಾರಣವೇನೆಂದರೆ, **ದೇವರ ಎಲ್ಲಾ ಪ್ರವಾದಿಗಳು ಪ್ರವಾದಿಸಿರುವಂತಹ ದೇವರ ಕುರಿಮರಿಯೂ ಮತ್ತು ಮೆಸ್ಸೀಯನೂ ಆಗಿರುವವನೇ ಈ ಯೇಸು** ಎಂದು ಯೋಹಾನನು ತನ್ನ ಶಿಷ್ಯರಿಗೆ ಹೇಳಿದ್ದನ್ನು ಅವರು ನಂಬಿದ್ದರು. ಹಾಗಾಗಿ, ಯೋಹಾನನ ಶಿಷ್ಯರಲ್ಲಿ ಒಬ್ಬನಾದ ಅಂದ್ರೆಯನು, ಯೇಸುವೇ ಮೆಸ್ಸೀಯನು ಎಂಬು – ದನ್ನು ಗುರುತಿಸಿದನು, ಅವನು ತನ್ನ ಸಹೋದರನಾದ ಪೇತ್ರನನ್ನು ಕಂಡು ಅವನಿಗೆ, **"ಮೆಸ್ಸೀಯನು ನಮಗೆ ಸಿಕ್ಕಿದನು!!!"** ಎಂದು ಹೇಳಿ –ದನು. ಫಿಲಿಪ್ಪನೆಂಬ ಇನ್ನೊಬ್ಬ ಶಿಷ್ಯನು ಯೇಸು ಯಾರೆಂಬುದನ್ನು ಗುರುತುಹಿಡಿದಾಗ, ಅತೀ ಸಂತೋಷವುಳ್ಳವನಾಗಿ ತನ್ನ ಸ್ನೇಹಿತ –ನಾದ ನತಾನಯೇಲನಿಗೆ, **"ಯಾವನ ವಿಷಯವಾಗಿ ಮೋಶೆಯು ಬರೆದನೋ ಮತ್ತು ಪ್ರವಾದಿಗಳು ಬರೆದರೋ, ಆತನು ನಮಗೆ ಸಿಕ್ಕಿ – ದನು, ಆತನೇ ನಜರೇತಿನ ಯೇಸು!"** ಎಂದು ಹೇಳಿದನು.

ಹೌದು, ಅಂದ್ರೆಯ ಮತ್ತು ಪೇತ್ರ, ಫಿಲಿಪ್ಪ ಮತ್ತು ನತಾನಯೇಲ ಎಲ್ಲರೂ ಯೇಸುವನ್ನು ನೋಡಿದಾಗ ಬಹಳವಾಗಿ ಸಂತೋಷಪಟ್ಟರು ಯಾಕೆಂದರೆ **ಮೆಸ್ಸೀಯನು ಬರುತ್ತಾನೆಂದು ಪ್ರವಾದಿಗಳು ಸಾವಿರಾರು ವರ್ಷಗಳಿಂದಲೂ ಪ್ರವಾದಿಸುತ್ತಿದ್ದರು ಎಂಬುದನ್ನು ಅವರು ತಿಳಿದಿ – ದ್ದರು. ಈಗ ಅವರು ತಮ್ಮ ಸ್ವಂತ ಕಣ್ಣುಗಳಿಂದ ಮೆಸ್ಸೀಯನನ್ನು ನೋಡುತ್ತಿದ್ದರು!** ದೇವರಿಗೆ ಸ್ತೋತ್ರವಾಗಲಿ! ದೇವರ ಪ್ರವಾದಿಗಳೆಲ್ಲರೂ ಪ್ರವಾದಿಸಿದ ಪರಾಕ್ರಮಿಯಾದ ವಿಮೋಚಕನು ಅವರ ಮಧ್ಯದಲ್ಲಿದ್ದನು! ದೇವರಿಗೆ ಸ್ತೋತ್ರ, ಕೊನೆಗೂ ಮೆಸ್ಸೀಯನು ಬಂದಿದ್ದನು! ಹೀಗೆ, ಯೋಹಾನನ ಈ ನಾಲ್ಕು ಶಿಷ್ಯರು ಯೇಸುವನ್ನು ಹಿಂಬಾಲಿಸುವದಕ್ಕೆ ಆರಂಭಿಸಿದರು ಮತ್ತು ಆತನ ಮೊದಲ ಶಿಷ್ಯರಾದರು.

ನಂತರ, ವಾಕ್ಯವು ಹೀಗೆ ಹೇಳುತ್ತದೆ:

ಯೇಸು ಅಲ್ಲಿಂದ ಮುಂದೆ ಹೋಗಿ ಇನ್ನಿಬ್ಬರು ಅಣ್ಣ ತಮ್ಮಂದಿರನ್ನು ಅಂದರೆ ಜೆಬೆದಾಯನ ಮಗನಾದ ಯಾಕೋಬನನ್ನೂ ಅವರ ತಮ್ಮನಾದ ಯೋಹಾನನನ್ನೂ ಕಂಡನು; ಇವರು ತಮ್ಮ ತಂದೆಯಾದ ಜೆಬೆದಾಯನ ಕೂಡ ದೋಣಿಯಲ್ಲಿ ತಮ್ಮ ಬಲೆಗಳನ್ನು ಸರಿ – ಮಾಡುತ್ತಿದ್ದರು. ಆತನು ಇವರನ್ನೂ ಕರೆದನು.[ನನ್ನ ಹಿಂದೆ ಬನ್ನಿರಿ; ಮನುಷ್ಯರನ್ನು ಹಿಡಿಯುವ ಬೆಸ್ತರನ್ನಾಗಿ ನಿಮ್ಮನ್ನು ಮಾಡುವೆನು ಅಂದನು]ಕೂಡಲೆ ಅವರು ದೋಣಿಯನ್ನೂ ತಮ್ಮ ತಂದೆಯನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು. ಬಳಿಕ ಯೇಸು ಗಲಿಲಾಯದ –ಲ್ಲೆಲ್ಲಾ ತಿರುಗಾಡಿ ಅಲ್ಲಿಯವರ ಸಭಾಮಂದಿರಗಳಲ್ಲಿ ಉಪದೇಶ ಮಾಡುತ್ತಾ, ಪರಲೋಕ ರಾಜ್ಯದ ಸುವಾರ್ತೆಯನ್ನು ಸಾರಿಹೇಳುತ್ತಾ ಜನರ ಎಲ್ಲಾ ತರದ ರೋಗಗಳನ್ನೂ ಎಲ್ಲಾ ತರದ ಬೇನೆಗಳನ್ನೂ ವಾಸಿಮಾಡುತ್ತಾ ಬಂದನು. ಆತನ ಸುದ್ದಿಯು ಸಿರಿಯ ದೇಶದ – ಲ್ಲೆಲ್ಲಾ ಹಬ್ಬಿದ್ದರಿಂದ ಮೈಯಲ್ಲಿ ನೆಟ್ಟಗಿಲ್ಲದವರನ್ನು, ಅಂದರೆ ತರತರದ ರೋಗಬಾಧೆಗಳಿಂದ ಕಷ್ಟಪಡುವವರನ್ನೂ ದೆವ್ವಹಿಡಿದವರನ್ನೂ ಮೂರ್ಛಾರೋಗಿಗಳನ್ನೂ ಪಾರ್ಶ್ವವಾಯುವಿನವರನ್ನೂ ಆತನ ಬಳಿಗೆ ಕರತಂದರು; ಆತನು ಅವರನ್ನು ಸ್ವಸ್ಥಮಾಡಿದನು. ಮತ್ತು ಗಲಿಲಾಯ ದೆಕಪೊಲಿ ಯೆರೂಸಲೇಮ್ ಯೂದಾಯ ಎಂಬೀ ಸ್ಥಳಗಳಿಂದಲೂ ಯೋರ್ದನ್ ಹೊಳೆಯ ಆಚೇಕಡೆಯಿಂದಲೂ ಜನರು ಗುಂಪುಗುಂಪಾಗಿ ಆತನ ಹಿಂದೆ ಹೋದರು. (ಮತ್ತಾಯ–4:21-25)

ದೇವರ ಚಿತ್ತವಾದರೆ, ಮುಂದಿನ ಪಾಠದಲ್ಲಿ, ಕರ್ತನಾದ ಯೇಸು ಜನರ ಗುಂಪುಗಳಿಗೆ ಹೇಗೆ ಬೋಧಿಸಿದನು ಮತ್ತು ದೊಡ್ಡ ಅದ್ಭುತ –ಗಳನ್ನು ಹೇಗೆ ಮಾಡಿದನೆಂಬುದನ್ನು ತೋರಿಸುವಂತ ಕತೆಗಳೊಳಗೆ ಮುಂದೆ ಹೋಗುವ ಸಾಹಸಮಾಡುತ್ತೇವೆ. ಎಲ್ಲಾ ಪ್ರವಾದಿಗಳು ಯಾರ ಕುರಿತಾಗಿ ಬರೆದಿದ್ದರೋ **ಆ ಮೆಸ್ಸೀಯನು ತಾನೇ ಎಂಬುದನ್ನು** ಯೇಸು ತನ್ನ ಮಾತುಗಳು ಮತ್ತು ಕೆಲಸಗಳಿಂದ ಸಾಬೀತು – ಪಡಿಸಿದನು ಎನ್ನುವದನ್ನು ನಾವು ನೋಡುತ್ತೇವೆ! ಹೇಗಾದರೂ ಈದಿನದ ಉಳಿದಿರುವ ಸಮಯದಲ್ಲಿ, **ಪ್ರವಾದಿಯಾದ ಯೋಹಾನ – ನಿಗೆ** ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ಮುಂದೆ ಓದುತ್ತೇವೆ. ನಾವು ಈಗತಾನೇ ನೋಡಿದಂತೆ, ಯೋಹಾನನು, ಯೇಸು – ವನ್ನು ಮೆಸ್ಸೀಯನೆಂಬುದಾಗಿ ಹೇಳಿದ ನಂತರ, ಯೋಹಾನನ ಶಿಷ್ಯರು ಒಬ್ಬರ ನಂತರ ಒಬ್ಬರು ಅವನನ್ನು ಬಿಟ್ಟುಹೋಗುವದಕ್ಕೆ ಆರಂ –ಭಿಸಿದರು, ಈ ಕಾರಣದಿಂದ ಅವರು **ಕರ್ತನಾದ ಯೇಸುವನ್ನು** ಹಿಂಬಾಲಿಸುವದಕ್ಕೆ ಶಕ್ತರಾದರು. ಅದು ಯೋಹಾನನಿಗೆ ಸಂತೋಷ –ವನ್ನುಂಟುಮಾಡಿತ್ತಾ? **ಯೇಸುವನ್ನು ಹಿಂಬಾಲಿಸುವದಕ್ಕೆ ತನ್ನ ಶಿಷ್ಯರು ತನ್ನನ್ನು ಬಿಟ್ಟು ಹೋದದ್ದು ಯೋಹಾನನಿಗೆ ಸಂತೋಷವಾಗಿತ್ತಾ?** ನೀವು ಏನು ಆಲೋಚಿಸುತ್ತೀರಿ?

ಯೋಹಾನನ ಸುವಾರ್ತೆಯ ಮೂರನೆಯ ಅಧ್ಯಾಯದಲ್ಲಿ ವಾಕ್ಯ ಏನು ಬರೆದದೆ ಎಂಬುದನ್ನು ಕೇಳಿಸಿಕೊಳ್ಳಿರಿ:

ಆಗ ಅವರು ಯೋಹಾನನ ಬಳಿಗೆ ಬಂದು, "ಗುರುವೇ, ಯೋರ್ದನ್ ಹೊಳೆಯ ಆಚೆ ನಿನ್ನ ಬಳಿಯಲ್ಲಿದ್ದ ಒಬ್ಬನ ವಿಷಯದಲ್ಲಿ ನೀನು ಸಾಕ್ಷಿಕೊಟ್ಟಿಯಲ್ಲಾ; ಅವನೂ ಸ್ನಾನ ಮಾಡಿಸುತ್ತಾನೆ, ಅವನ ಬಳಿಗೆ ಎಲ್ಲರೂ ಹೋಗುತ್ತಾರೆ" ಎಂದು ಹೇಳಲು ಯೋಹಾನನು, "ಪರಲೋಕದಿಂದ ಅನುಗ್ರಹಿಸೋಣವಾದದ್ದನ್ನೇ ಹೊರತು ಮನಷ್ಯನು ಹೆಚ್ಚೇನೂ ಹೊಂದಲಾರನು. ನಾನು ಕ್ರಿಸ್ತನಲ್ಲ. ಆತನ ಮುಂದೆ ಕಳುಹಿಸಲ್ಪಟ್ಟವನಾಗಿದ್ದೇನೆ ಎಂದು ನಾನು ಹೇಳಿದ್ದಕ್ಕೆ ನೀವೇ ಸಾಕ್ಷಿ. ಮದಲಗಿತ್ತಿಯುಳ್ಳವನೇ ಮದಲಿಂಗನು; ಆದರೂ ಮದಲಿಂಗನ ಗೆಳೆಯನು ಅವನ ಹತ್ತರ ನಿಂತುಕೊಂಡು ಅವನ ಮಾತುಗಳನ್ನು ಕೇಳಿ ಮದಲಿಂಗನ ಧ್ವನಿಗೆ ಬಹು ಸಂತೋಷಪಡುತ್ತಾನಲ್ಲವೇ. **ಇದರಂತೆ ನನಗಿರುವ ಸಂತೋಷ; ಅದು ನೆರವೇರಿತು. ಆತನು ವೃದ್ಧಿಯಾಗಬೇಕು; ನಾನು ಕಡಿಮೆಯಾಗಬೇಕು"** ಅಂದನು. (ಯೋಹಾನ–3:26-30)

ನೀವು ಇದರ ಕುರಿತು ಏನು ಆಲೋಚಿಸುತ್ತೀರಿ? ಮೆಸ್ಸೀಯನನ್ನು ಹಿಂಬಾಲಿಸುವದಕ್ಕೆ ತನ್ನ ಶಿಷ್ಯರು ತನ್ನನ್ನು ಬಿಟ್ಟು ಹೋದಾಗ ತನಗೆ **ತುಂಬಾ ಸಂತೋಷವಾಯಿತೆಂದು** ಯೋಹಾನನು ಹೇಳುತ್ತಿದ್ದಾನೆ! ಯೋಹಾನನ ಸಂತೋಷವು ಪೂರ್ಣವಾಯಿತು, ಯಾಕೆಂದರೆ ಅವನು ತನ್ನ ಕೆಲಸವನ್ನು ನೆರವೇರಿಸಿದ್ದನು; ಅವನು ಮೆಸ್ಸೀಯನ ಮುಂದೆ ದಾರಿಯನ್ನು ಸಿದ್ಧಪಡಿಸಿದ್ದನು. ಒಬ್ಬ **ದೇವರ ನಿಜವಾದ**

**ಪ್ರವಾದಿಯ** ಹಾಗೆ, ಜನರನ್ನು **ಮೆಸ್ಸೀಯನ ಕಡೆಗೆ** ನಡಿಸುವದು ಯೋಹಾನನ ಆಶೆಯಾಗಿತ್ತು. ಈದಿನದ ಅನೇಕ ಧಾರ್ಮಿಕ ನಾಯಕ –ರುಗಳಿಗಿಂತ ಪ್ರವಾದಿಯಾದ ಯೋಹಾನನು ಎಷ್ಟು ವ್ಯತ್ಯಾಸವುಳ್ಳವನಾಗಿದ್ದಾನೆ! **ಒಬ್ಬ ನಿಜವಾದ ಆತ್ಮೀಕ ನಾಯಕನು ಯಾವಾಗಲೂ ಕರ್ತನಾದ ಯೇಸುವನ್ನು ತೋರಿಸುವವನಾಗಿರುತ್ತಾನೆ, ಯಾಕೆಂದರೆ ಯೇಸು ಒಬ್ಬನು ಮಾತ್ರವೇ ನಿಮ್ಮನ್ನು ಪರದೈಸಿನಲ್ಲಿರುವ ದೇವರ ಪ್ರಸನ್ನತೆಯೊಳಗೆ ತೆಗೆದುಕೊಂಡು ಹೋಗುವವನಾಗಿದ್ದಾನೆ**. ಯೋಹಾನನು ಅನೇಕ **ದೇವರ ಪ್ರವಾದಿಗಳನ್ನು** ತಿಳಿದಿದ್ದನು, ಆದರೆ **ಒಬ್ಬನೇ ರಕ್ಷಕನನ್ನು** ತಿಳಿದವನಾಗಿದ್ದನು! ಅದಕ್ಕಾಗಿಯೇ ಯೋಹಾನನು, **"**ಆತನ ಮಗನನ್ನು (ಮೆಸ್ಸೀಯನಾದ ಯೇಸು) ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿ –ರುವದು!**"** ಎಂದು ಹೇಳಿದ್ದಾನೆ. (ಯೋಹಾನ–3:36)

ಯೋಹಾನನ ಜೀವಿತದ ಅಂತ್ಯಕ್ಕೆ ಸಂಬಂಧಿಸಿದಂತೆ ವಾಕ್ಯವು ಹೀಗೆ ಹೇಳುತ್ತದೆ:

**"**ಇನ್ನು ಬೇರೆ ಅನೇಕ ಮಾತುಗಳಿಂದ ಅವನು ಇಸ್ರಾಯೇಲ್ ಜನರಿಗೆ ಬುದ್ಧಿ ಹೇಳಿ ಸುವಾರ್ತೆಯನ್ನು ಸಾರುತ್ತಿದ್ದನು. ಆದರೆ ಉಪರಾಜನಾದ ಹೆರೋದನು ತನ್ನ ಅಣ್ಣನ ಹೆಂಡತಿಯಾದ ಹೆರೋದ್ಯಳ ನಿಮಿತ್ತವಾಗಿಯೂ ತಾನು ಮಾಡಿದ್ದ ಎಲ್ಲಾ ದುಷ್ಕೃತ್ಯಗಳ ನಿಮಿತ್ತವಾಗಿಯೂ ಯೋಹಾನನಿಂದ ಗದರಿಸಲ್ಪಟ್ಟನು. . .**"** (ಲೂಕ–3:18,19)

ಅದಕ್ಕೋಸ್ಕರ ಹೆರೋದನು, ಯೋಹಾನನನ್ನು ಹಿಡಿದು ಕಟ್ಟಿ ಸೆರೆಮನೆಯಲ್ಲಿ ಹಾಕುವಂತೆ ಆಜ್ಞಾಪಿಸಿದನು. ಕೊನೆಯಲ್ಲಿ, ಹೆರೋದನು ತನ್ನ ಹೆಂಡತಿಯನ್ನು ಸಂತೋಷಪಡಿಸುವದಕ್ಕೆ ಯೋಹಾನನ ತಲೆಯನ್ನು ಕಡಿಸಿದನು. (ಮಾರ್ಕ–6:17,27 ನ್ನು ನೋಡಿರಿ). ಹೀಗೆ, ಯೋಹಾನನು ಪರಲೋಕದಲ್ಲಿರುವ ದೇವರ ಪ್ರಸನ್ನತೆಯ ಮಹಿಮೆಯೊಳಗೆ ಸೇರಿದನು.

ಯೋಹಾನನು ಒಬ್ಬ ದೊಡ್ಡ ಪ್ರವಾದಿಯಾಗಿದ್ದನೆಂದು ವಾಕ್ಯಗಳು ನಮಗೆ ತಿಳಿಸುತ್ತವೆ, ತನಗಿಂತ ಮೊದಲಿದ್ದ ಪ್ರವಾದಿಗಳಿಗಿಂತಲೂ ಸಹ ಇವನು ದೊಡ್ಡವನಾಗಿದ್ದನೆಂದೂ ತಿಳಿಸುತ್ತವೆ. ಇತರ ಪ್ರವಾದಿಗಳಿಗಿಂತ ಯೋಹಾನನನ್ನು ಯಾವುದು ದೊಡ್ಡವನನ್ನಾಗಿ ಮಾಡಿತ್ತು**?** ಇದಕ್ಕೆ ಉತ್ತರ ಇಲ್ಲಿದೆ: **ಇತರ ಎಲ್ಲಾ ಪ್ರವಾದಿಗಳು** ಸಾರಿದ್ದೇನೆಂದರೆ: **"**ಮೆಸ್ಸೀಯನು ಬರಲಿಕ್ಕಿದ್ದಾನೆ! ಆತನು ಬರುತ್ತಾನೆ! ಆತನು ಬರುತ್ತಾನೆ!**"** ಎಂಬದು. ಆದಾಗ್ಯೂ, **ಪ್ರವಾದಿಯಾದ ಯೋಹಾನನ** ಪ್ರಕಟನೆಯೇನೆಂದರೆ: **"ಮೆಸ್ಸಿಯನು ಇಲ್ಲಿದ್ದಾನೆ!** ಆತನ ಹೆಸರು ಯೇಸು**!** ನೋಡಿರಿ**!** ಲೋಕದ ಪಾಪವನ್ನು ನಿವಾರಣೆ ಮಾಡುವದಕ್ಕೆ ವಧಿಸಲ್ಪಡುವ ದೇವರ ಕುರಿಮರಿ**!** ಆತನನ್ನು ಹಿಂಬಾಲಿ –ಸಿರಿ!**"** ಎಂಬುದಾಗಿತ್ತು. ಹೀಗೆ ಮೆಸ್ಸೀಯನಿಗಾಗಿ ದಾರಿಯನ್ನು ಸಿದ್ಧಪಡಿಸಿದ ಒಬ್ಬ ಸುಪ್ರಸಿದ್ಧ ಪ್ರವಾದಿಯ ಹಾಗೆ ಯೋಹಾನನು ತನ್ನ ಕೆಲಸವನ್ನು ನೆರವೇರಿಸಿದನು.

ಕೇಳಿಸಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ಚಿತ್ತವಿದ್ದರೆ, ಮುಂದಿನ ನಮ್ಮ ಕಾರ್ಯಕ್ರಮದಲ್ಲಿ, ಪವಿತ್ರ ಸುವಾರ್ತೆಯಲ್ಲಿರುವ –ದನ್ನು ನಾವು ಮುಂದುವರಿಸುತ್ತೇವೆ ಮತ್ತು ಯೇಸು ಪ್ರಸಿದ್ಧ ವೈದ್ಯನೆಂಬುದಾಗಿ ಯಾಕೆ ಕರೆಯಲ್ಪಟ್ಟನೆಂಬುದನ್ನು ಕಂಡುಕೊಳ್ಳುತ್ತೇವೆ.

ಈದಿನ ನಾವು ಓದಿದ ವಿಷಯದಲ್ಲಿ ದೇವರು ನಿಮಗೆ ತಿಳುವಳಿಕೆಯನ್ನು ಕೊಡಲಿ. ಮೆಸ್ಸೀಯನಾದ ಯೇಸುವಿಗೆ ಸಂಬಂಧಿಸಿದಂತೆ ಪ್ರವಾದಿಯಾದ ಯೋಹಾನನು ಏನು ಸಾರಿದ್ದಾನೋ ಅದಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದುದು ಯಾವುದೂ ಇಲ್ಲ. ಅದೇನೆಂದರೆ,

**"ಅಗೋ, ಯಜ್ಞಕ್ಕೆ ದೇವರ ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು!"** (ಯೋಹಾನ–1:29)

ಪಾಠ 65

# ಶ್ರೇಷ್ಠ ವೈದ್ಯ

ಮಾರ್ಕ 1, 2

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ

ನಿಮ್ಮಲ್ಲಿ ಹೆಚ್ಚಿನವರು ತಿಳಿದಿರುವಂತೆ, ಪರಿಶುದ್ಧ ವಾಕ್ಯಗಳ ಮೂಲಕವಾದ ನಿಮ್ಮ ಪ್ರಯಾಣದಲ್ಲಿ, ಈಗ ನಾವು ಸುವಾರ್ತೆ(ಇಂಜಿಲ್) ಯಲ್ಲಿರುವದನ್ನು ಅಧ್ಯಯನ ಮಾಡುತ್ತಿದ್ದೇವೆ. ಇದು ಪರಿಶುದ್ಧ ಪುಸ್ತಕವಾಗಿದ್ದು, ಪಾಪ ಮತ್ತು ಸೈತಾನನ ಆಳ್ವಿಕೆಯಿಂದ ಆದಾಮನ ಸಂತಾನವನ್ನು ಬಿಡುಗಡೆ ಮಾಡುವದಕ್ಕೆ ಲೋಕಕ್ಕೆ ಬಂದಂತ ಮೆಸ್ಸೀಯನ ಕುರಿತಾದ ಶುಭಸಂದೇಶಕ್ಕೆ ಸಂಬಂಧಿಸಿದ್ದಾಗಿದೆ. ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಮೆಸ್ಸೀಯನಾದ ಯೇಸು ಪಟ್ಟಣಗಳಿಗೆ ಹೋಗಿ, ಜನರ ಗುಂಪಿಗೆ **ಬೋಧಿಸಿ,** ಪ್ರತಿಯೊಂದು ರೋಗಗ –ಳನ್ನೂ ಮತ್ತು ಬೇನೆಗಳನ್ನೂ **ಗುಣಪಡಿಸಿದನು** ಎಂಬುದನ್ನು ಓದಿಕೊಂಡೆವು. ಆ ಪ್ರದೇಶದಲ್ಲೆಲ್ಲಾ ಆತನ ಹೆಸರು ಪ್ರಸಿದ್ಧವಾಯಿತು.

**ಯೇಸುವಿನ ಬೋಧನೆಗಳು ಮತ್ತು ಆತನ ಕೆಲಸಗಳು** ಆತನಿಗಿಂತ ಮೊದಲಿದ್ದವರೆಲ್ಲರಿಗಿಂತ ಹೇಗೆ ತುಂಬಾ ವ್ಯತ್ಯಾಸವುಳ್ಳದ್ದಾಗಿತ್ತೆಂಬು – ದನ್ನು ನೋಡುವದಕ್ಕೆ ನಾವು ಈದಿನ ಮೆಸ್ಸೀಯನಾದ ಯೇಸುವಿನ ವೃತ್ತಾಂತವನ್ನು ಮುಂದುವರಿಸುತ್ತೇವೆ. ಯೇಸು, ಒಬ್ಬ ಹೆಂಡತಿ, ಒಂದು ಮನೆ, ಅಥವಾ ಪ್ರಾಪಂಚಿಕ ಸಂಪತ್ತುಗಳು ಇದ್ಯಾವುದನ್ನೂ ಹೊಂದಿರಲಿಲ್ಲ. ಆತನು ಮನುಷ್ಯರೊಳಗೆ ಒಬ್ಬ ಅದ್ವಿತೀಯನಾಗಿ –ದ್ದನು. ಕೇವಲ ಒಂದು ವಿಷಯ ಮಾತ್ರ ಆತನಿಗೆ ಮುಖ್ಯವಾದುದಾಗಿತ್ತು, ಅದೇನೆಂದರೆ, ತನ್ನನ್ನು ಕಳಿಸಿಕೊಟ್ಟವನ ಚಿತ್ತವನ್ನು ನೆರ –ವೇರಿಸುವದು, ಅಂದರೆ ಮಾಡುವದಕ್ಕೆ ದೇವರು ತನಗೆ ಕೊಟ್ಟ ಕೆಲಸವನ್ನು ಪೂರೈಸುವದು.

ಮಾರ್ಕನ ಸುವಾರ್ತೆಯ ಒಂದನೇ ಅಧ್ಯಾಯದಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಬಳಿಕ ಅವರು ಕಪೆರ್ನೌಮೆಂಬ ಊರಿಗೆ ಸೇರಿದರು. ಕೂಡಲೆ ಸಬ್ಬತ್ ದಿನದಲ್ಲಿ ಯೇಸು ಸಭಾಮಂದಿರಕ್ಕೆ ಹೋಗಿ ಉಪದೇಶ ಮಾಡಿದನು. ಜನರು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟರು; ಯಾಕೆಂದರೆ **ಆತನು ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರ – ವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು.** ಆಗ ಅವರ ಸಭಾಮಂದಿರದಲ್ಲಿ ದೆವ್ವಹಿಡಿದ ಒಬ್ಬ ಮನುಷ್ಯನಿದ್ದನು. ಆ ದೆವ್ವವು, **"**ನಜರೇತಿನ ಯೇಸುವೇ, ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವದಕ್ಕೆ ಬಂದಿಯಾ? ನಿನ್ನನ್ನು ಬಲ್ಲೆವು; ನೀನು ದೇವರು ಪ್ರತಿಷ್ಠಿಸಿದವನೇ**"** ಎಂದು ಕೂಗಿ ಹೇಳಿತು. ಯೇಸು ಅದನ್ನು ಗದರಿಸಿ, **"**ಸುಮ್ಮನಿರು, **ಇವನನ್ನು ಬಿಟ್ಟು ಹೋಗು"** ಎನ್ನಲಾಗಿ ಆ ದೆವ್ವವು ಅವನನ್ನು ಒದ್ದಾಡಿಸಿ ಅಬ್ಬರಿಸಿ ಕೂಗಿ ಬಿಟ್ಟು ಹೋಯಿತು. ಅದಕ್ಕೆ ಎಲ್ಲರು ಬೆರಗಾಗಿ, **"**ಇದೇನಿರಬಹುದು? ಇದು ಹೊಸ ಉಪದೇಶ. ಈತನು ಅಧಿಕಾರದಿಂದ ದೆವ್ವಗಳಿಗೂ ಅಪ್ಪಣೆ ಕೊಡುತ್ತಾನೆ; ಅವು ಆತನ ಮಾತನ್ನು ಕೇಳುತ್ತವೆ**"** ಎಂದು ತಮ್ಮ ತಮ್ಮೊ –ಳಗೆ ವಿಚಾರಮಾಡಿಕೊಂಡರು. ಕೂಡಲೆ ಆತನ ಸುದ್ದಿಯು ಗಲಿಲಾಯ ಸೀಮೆಯಲ್ಲಿ ಎಲ್ಲೆಲ್ಲಿಯೂ ಹಬ್ಬಿತು. (ಮಾರ್ಕ–1:21-28)

ಧರ್ಮಶಾಸ್ತ್ರದ ಬೋಧಕರುಗಳ (ಬರಹಗಾರರು, ಧರ್ಮ ಬೋಧಕರುಗಳು) ಬೋಧನೆಗಳಿಗಿಂತ ಯೇಸುವಿನ ಬೋಧನೆಯು ತುಂಬಾ ವ್ಯತ್ಯಾಸವುಳ್ಳದ್ದಾಗಿತ್ತು. ಸಭಾಮಂದಿರದಲ್ಲಿದ್ದವರೆಲ್ಲರೂ ಯೇಸುವಿನ ಬೋಧನೆಯನ್ನು ಕೇಳಿ {ಆರಾಧನೆಗಾಗಿ ವಿಶೇಷವಾದ ಕಟ್ಟುವಿಕೆ ಮತ್ತು ವಾಕ್ಯಗಳಲ್ಲಿನ ಬೋಧನೆ} ಆತನ ಮಾತುಗಳಿಗೆ ಆಶ್ಚರ್ಯಪಟ್ಟರು ಯಾಕೆಂದರೆ ಆತನು ಅವರ ಶಾಸ್ತ್ರಿಗಳಂತೆ ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಉಪದೇಶ ಮಾಡುತ್ತಿದ್ದನು.

**ಧರ್ಮಶಾಸ್ತ್ರದ ಬೋಧಕರುಗಳ** ಕುರಿತು ನಿಮಗೆ ಗೊತ್ತಿದೆ. ಅವರು ಬಹುಮಟ್ಟಿಗೆ ತೋರಾ,{ತೌರತ್}, ಕೀರ್ತನೆ {ಝಾಬುರ್}, ಮತ್ತು ಪ್ರವಾದಿಗಳ ಇತರ ಪುಸ್ತಕಗಳನ್ನು ವಿವರಿಸುತ್ತಾರೆ. ಆದಾಗ್ಯೂ, ಅವರಲ್ಲಿ ಹೆಚ್ಚಿನವರು ಪ್ರವಾದಿಗಳ ಬರಹಗಳನ್ನು ಸರಿಯಾಗಿ ವಿವರಿ – ಸಲು ಸಾಧ್ಯವಿರಲಿಲ್ಲ, ಯಾಕೆಂದರೆ ಅವರು ಅವುಗಳನ್ನು ನಿಜವಾಗಿ ಅರ್ಥಮಾಡಿಕೊಂಡಿರಲಿಲ್ಲ! ಅವರು ತಮ್ಮ ಧಾರ್ಮಿಕ ಕರ್ತವ್ಯ – ಗಳನ್ನು ಮತ್ತು ತಮ್ಮ ಪೂರ್ವಿಕರ ಸಂಪ್ರದಾಯಗಳೆಲ್ಲಾದರ ಕುರಿತು ತಿಳಿದವರಾಗಿದ್ದರು, ಆದರೆ ಅವರು ಕರ್ತನ ವಾಕ್ಯವನ್ನು ತಿಳಿದಿರ –ಲಿಲ್ಲ. ಈ ಧಾರ್ಮಿಕ **"**ನಿಪುಣರು**"** ತಮ್ಮ ತುಟಿಗಳಿಂದ ದೇವರನ್ನು ಸನ್ಮಾನಿಸುತ್ತಿದ್ದರು, ಆದರೆ ಆತನ ವಾಕ್ಯವನ್ನು ಪ್ರೀತಿಸುತ್ತಿರಲಿಲ್ಲ. ಹಾಗಾಗಿ, ಯೇಸು(ಅವರ ಧಾರ್ಮಿಕ ತರಬೇತಿಯ ಶಾಲೆಗಳಲ್ಲಿ ಎಂದಿಗೂ ವಿದ್ಯಾಭ್ಯಾಸ ಮಾಡದವನು) ಅವರ ಸಭಾ ಮಂದಿರವನ್ನು ಪ್ರವೇಶಿಸಿ, ಅಧಿಕಾರದಿಂದ ಮತ್ತು ಸ್ಪಷ್ಟತೆಯೊಂದಿಗೆ ಶಾಸ್ತ್ರಗ್ರಂಥಗಳನ್ನು ವಿವರಿಸುವದಕ್ಕೆ ಪ್ರಾರಂಭಿಸಿದ್ದನ್ನು ಕಂಡು ಈ ಬೋಧಕರುಗಳು ಬಹಳವಾಗಿ ಪೇಚಾಡಿಕೊಂಡರು. ಅವರ ಅವಮಾನಕ್ಕೆ ಕೂಡಿಸಲ್ಪಟ್ಟು, ಸಭಾಮಂದಿರದಲ್ಲಿದ್ದ ಜನರು ಯೇಸುವಿನ ಮಾತಿನಿಂದ ಮತ್ತು ಆತನ ಕಾರ್ಯಗಳಿಂದ ಪೂರ್ತಿ ಚಕಿತರಾಗಿದ್ದರು ಮತ್ತು ಅವರು ಪರಸ್ಪರ ಮಾತಾಡಿಕೊಳ್ಳುತ್ತಾ, **"ಈತನು ಯಾರು? ಈ ಹೊಸ**

ಉಪದೇಶವನ್ನು ಎಲ್ಲಿಂದ ಪಡಕೊಂಡನು? ಇಂತಹ ಅಧಿಕಾರದಿಂದ ಆತನು ಹೇಗೆ ಬೋಧಿಸುವದಕ್ಕೆ ಸಾಧ್ಯ? ದೆವ್ವಗಳಿಗೂ ಸಹ ಆತನು ಅಪ್ಪಣೆ ಕೊಡುತ್ತಾನೆ, ಅವು ಆತನ ಮಾತನ್ನು ಕೇಳುತ್ತವೆ! ನಾವು ಎಂದೂ ಈ ರೀತಿ ಆಗಿದ್ದನ್ನು ನೋಡಲಿಲ್ಲ! ಈ ಮನುಷ್ಯನ ಹಾಗೆ ಬೇರೆ ಯಾರೂ ಎಂದೂ ಬೋಧಿಸಿಲ್ಲ! ಆತನು ಮಾಡಿದ ಹಾಗೆ ಯಾರೂ ಎಂದೂ ಇಂತಹ ಕಾರ್ಯಗಳನ್ನು ಮಾಡಿಲ್ಲ!"

ನಿಜವಾಗಿಯೂ, ಆದಾಮನು ಪಾಪ ಮಾಡಿದ ದಿನದಿಂದ, ಯೇಸು ಅದ್ಭುತಗಳನ್ನು ಮಾಡುವದಕ್ಕೆ ಆರಂಭಿಸಿದ ದಿನದವರೆಗೆ, ಇಷ್ಟೊಂದು ಸಾಮರ್ಥ್ಯವುಳ್ಳ ಯಾರನ್ನೂ ಜನರು ಎಂದೂ ನೋಡಿರಲಿಲ್ಲ. ಆದರೆ ಈಗ ಒಬ್ಬನು ಒಂದೇ ಮಾತಿನಿಂದ ಸೈತಾನನನ್ನು ಮತ್ತು ದೆವ್ವಗಳನ್ನು ಓಡಿಹೋಗುವಂತೆ ಮಾಡಲು ಸಾಧ್ಯವಾಗಿರುವದನ್ನು ಅವರು ನೋಡುತ್ತಿದ್ದಾರೆ! ಪರಲೋಕದಿಂದ ಬಂದಿರುವ ಮೆಸ್ಸೀಯನು ಮಾತ್ರ ಇದನ್ನು ಮಾಡುವದಕ್ಕೆ ಸಾಧ್ಯ! ದೆವ್ವ ಹಿಡಿದಿದ್ದ ಮನುಷ್ಯನು ಯೇಸುವಿಗೆ ಏನು ಹೇಳಿದನೆಂದು ನೀವು ಕೇಳಿಸಿ –ಕೊಂಡಿರಾ? ಅವನು ಕೂಗುತ್ತಾ, "ನಜರೇತಿನ ಯೇಸುವೇ, ನಮ್ಮ ಗೊಡವೆ ನಿನಗೇಕೆ? ನಮ್ಮನ್ನು ನಾಶಮಾಡುವದಕ್ಕೆ ಬಂದಿಯಾ? **ನಿನ್ನನ್ನು ಬಲ್ಲೆವು; ನೀನು ದೇವರು ಪ್ರತಿಷ್ಠಿಸಿದವನೇ"** ಎಂದು ಹೇಳಿದನು. ಯೇಸು ಯಾರು ಮತ್ತು ಎಲ್ಲಿಂದ ಬಂದವನು ಎಂಬುದನ್ನು ದೆವ್ವಗಳು ನಿಶ್ಚಯವಾಗಿ ತಿಳಿದಿದ್ದವು. ಆದಾಗ್ಯೂ, ಯೇಸು ನಿಜವಾಗಿಯೂ ಯಾರಾಗಿದ್ದನು ಎಂಬುದನ್ನು ಹೆಚ್ಚಿನ ಜನರು ತಿಳಿದಿರಲಿಲ್ಲ. ಸೈತಾನನು ಮತ್ತು ಅವನ ದುಷ್ಟ ದೂತರುಗಳು ಕರ್ತನಾದ ಯೇಸುವಿಗೆ ಹೆಚ್ಚಾಗಿ ಹೆದರುತ್ತಿದ್ದರು, ಯಾಕಂದರೆ ಆದಿಯಲ್ಲಿ ಆಕಾಶ – ವನ್ನೂ ಭೂಮಿಯನ್ನೂ ಸೃಷ್ಟಿಸಿದ ದೇವರಿಂದ ಬಂದಂತ ವಾಕ್ಯವೇ ಯೇಸು ಎನ್ನುವದನ್ನು ಅವರು ಖಚಿತವಾಗಿ ತಿಳಿದಿದ್ದರು. ಯೇಸುವು ತಮ್ಮನ್ನು ನಿತ್ಯವಾದ ಬೆಂಕಿಯಲ್ಲಿ ಎಸೆಯುವದಕ್ಕೆ ಅಧಿಕಾರವುಳ್ಳ ಒಬ್ಬ ಪರಿಶುದ್ಧನಾಗಿದ್ದಾನೆ ಎನ್ನುವದನ್ನೂ ಅವರು ತಿಳಿದಿ –ದ್ದರು! ಅದಕ್ಕೋಸ್ಕರವೇ ಅವರು ಯೇಸುವಿನ ಹೆಸರಿನಲ್ಲಿ ಭಯದಿಂದ ನಡುಗುತ್ತಿದ್ದರು.

ಈಗ ಹಾಗಾದರೆ, ಒಂದನೇ ಅಧ್ಯಾಯವನ್ನು ಮುಂದುವರಿಸೋಣ. ಅಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಆಮೇಲೆ ಅವರು ಸಭಾಮಂದಿರದಿಂದ ಹೊರಟು ಯಾಕೋಬ ಯೋಹಾನರ ಸಂಗಡ ಸೀಮೋನ ಅಂದ್ರೆಯರ ಮನೆಗೆ ಬಂದರು. ಅಲ್ಲಿ ಸೀಮೋನನ ಅತ್ತೆ ಜ್ವರ ಬಂದು ಮಲಗಿರಲಾಗಿ ಅವರು ಆಕೆಯ ಸಂಗತಿಯನ್ನು ಆತನಿಗೆ ತಿಳಿಸಿದರು. ಆತನು ಹತ್ತಿರಕ್ಕೆ ಬಂದು ಆಕೆಯ ಕೈಹಿಡಿದು ಎಬ್ಬಿಸಲು **ಜ್ವರವು ಆಕೆಯನ್ನು ಬಿಟ್ಟು ಹೋಯಿತು**; ಆಕೆಯು ಅವರಿಗೆ ಉಪಚಾರ ಮಾಡಿದಳು. ಸಂಜೆಯಾಗಿ ಹೊತ್ತು ಮುಣುಗಿದ ಮೇಲೆ ಜನರು ಮೈಯಲ್ಲಿ ನೆಟ್ಟಗಿಲ್ಲದವರೆಲ್ಲರನ್ನೂ ದೆವ್ವಹಿಡಿದವರನ್ನೂ ಆತ ಬಳಿಗೆ ಕರತಂದರು. ಊರೆಲ್ಲಾ ಬಾಗಲಿನ ಮುಂದೆ ಒಟ್ಟುಗೂಡಿತ್ತು. ಆಗ ಆತನು ತರತರವಾದ ರೋಗಗಳಿಂದ ಮೈಯಲ್ಲಿ ನೆಟ್ಟಗಿಲ್ಲದ ಬಹುಜನರನ್ನು ವಾಸಿಮಾಡಿ ಅನೇಕ ದೆವ್ವಗಳನ್ನು ಬಿಡಿಸಿದನು. ಮತ್ತು ತಾನು ಇಂಥವನೆಂದು ಅವುಗಳಿಗೆ ತಿಳಿದಿದ್ದರಿಂದ ಆತನು ಅವುಗಳನ್ನು ಮಾತಾಡಗೊಡಿಸ –ಲಿಲ್ಲ. ಮುಂಜಾನೆ ಇನ್ನೂ ಮೊಬ್ಬಿರುವಾಗ ಆತನು ಎದ್ದು ಹೊರಟು ಅಡವಿಯ ಸ್ಥಳಕ್ಕೆ ಹೋಗಿ ದೇವರನ್ನು ಪ್ರಾರ್ಥಿಸುತ್ತಿದ್ದನು. ಸೀಮೋನನೂ ಅವನ ಸಂಗಡ ಇದ್ದವರೂ ಆತನನ್ನು ಹಿಂದಟ್ಟಿ ಕಂಡು, "ಎಲ್ಲರು ನಿನ್ನನ್ನು 'ಹುಡುಕುತ್ತಾರೆ" ಅನ್ನಲಾಗಿ ಆತನು ಅವ –ರಿಗೆ, "ನಾವು ಸಮೀಪದಲ್ಲಿರುವ ಬೇರೆ ಊರುಗಳಿಗೆ ಹೋಗೋಣ; ಅಲ್ಲಿಯೂ ನಾನು ಸುವಾರ್ತೆಯನ್ನು ಸಾರಬೇಕು; ಇದಕ್ಕಾ – ಗಿಯೇ ನಾನು ಹೊರಟು ಬಂದಿದ್ದೇನೆ" ಎಂದು ಹೇಳಿದನು. ಬಳಿಕ ಆತನು ಗಲಿಲಾಯದಲ್ಲೆಲ್ಲಾ ಹೋಗಿ ಅವರ ಸಭಾಮಂದಿರ – ಗಳಲ್ಲಿ ಸುವಾರ್ತೆಯನ್ನು ಸಾರುತ್ತಾ ದೆವ್ವಗಳನ್ನು ಬಿಡಿಸುತ್ತಾ ಇದ್ದನು. ಒಬ್ಬ ಕುಷ್ಠರೋಗಿಯು ಯೇಸುವಿನ ಬಳಿಗೆ ಬಂದು ಆತನ ಮುಂದೆ ಮೊಣಕಾಲೂರಿಕೊಂಡು, "ನಿನಗೆ ಮನಸ್ಸಿದ್ದರೆ ನನ್ನನ್ನು ಶುದ್ಧ ಮಾಡಬಲ್ಲೆ" ಎಂದು ಬೇಡಿಕೊಳ್ಳಲು ಆತನು ಕನಿಕರಪಟ್ಟು ಕೈನೀಡಿ ಅವನನ್ನು ಮುಟ್ಟಿ, "ನನಗೆ ಮನಸ್ಸುಂಟು; ಶುದ್ಧನಾಗು" ಅಂದನು. ಕೂಡಲೆ ಅವನ ಕುಷ್ಠವು ಹೋಗಿ **ಅವನು ಶುದ್ಧವಾದನು.**

ಹೀಗೆ ಯೇಸು, ಆದಾಮನ ಸಂತತಿಯವರಿಗೆ **ಕನಿಕರವನ್ನು** ತೋರಿಸುತ್ತಾ ಜನರ ಪ್ರತಿಯೊಂದು ರೋಗಗಳನ್ನೂ ಮತ್ತು ಬೇನೆಗಳನ್ನೂ ವಾಸಿಮಾಡಿದನು, ಯಾಕಂದರೆ ಅವರು ಕುರುಬನಿಲ್ಲದ ಕುರಿಯ ಹಾಗೆ ಬಳಲಿದವರೂ ಮತ್ತು ಅಸಹಾಯಕರೂ ಆಗಿದ್ದರು. ಆದರೆ ಯೇಸು ಅನೇಕ ಮಹತ್ವದ ಅದ್ಭುತಗಳನ್ನು ಮಾಡಿದ್ದಕ್ಕೆ ಇನ್ನೊಂದು ಕಾರಣವೂ ಸಹ ಇದೆ. ಅದೇನೆಂದರೆ, ಪ್ರವಾದಿಗಳ ಮೂಲಕ – ವಾಗಿ ಬಹಳ ಹಿಂದೆಯೇ ದೇವರು ವಾಗ್ದಾನ ಮಾಡಿದ್ದ ಮೆಸ್ಸೀಯನು ತಾನಾಗಿದ್ದೇನೆ ಎನ್ನುವದನ್ನು ಆದಾಮನ ಸಂತತಿಯವರಿಗೆ **ಸಾಬೀತುಪಡಿಸುವದಕ್ಕಾಗಿ** ಯೇಸು ಪ್ರತಿಯೊಂದು ರೀತಿಯ ರೋಗಗಳನ್ನು ವಾಸಿಮಾಡಿ ದೆವ್ವಗಳನ್ನು ಓಡಿಸಿದನು. ಉದಾಹರಣೆಗೆ, ಯೇಸು ಹುಟ್ಟುವದಕ್ಕಿಂತ ನೂರಾರು ವರ್ಷಗಳ ಹಿಂದೆಯೇ ಪ್ರವಾದಿಯಾದ ಯೆಶಾಯನು ಬರೆದಿರುವದನ್ನು ನಾವು ಈಗಾಗಲೇ ಓದಿ –ದ್ದೇವೆ, ಅದೇನೆಂದರೆ, ಮೆಸ್ಸೀಯನು ಬಂದಾಗ, "ಕುರುಡರ ಕಣ್ಣು ಕಾಣುವದು, ಕಿವುಡರ ಕಿವಿ ಕೇಳುವದು, ಕುಂಟನು ಜಿಂಕೆಯಂತೆ ಹಾರುವನು, ಮೂಕನ ನಾಲಿಗೆಯು ಹರ್ಷಧ್ವನಿಗೈಯುವದು; ಅರಣ್ಯದಲ್ಲಿ ಒರತೆಗಳು ಒಡೆಯುವವು, ಒಣನೆಲದಲ್ಲಿ ನದಿಗಳು ಹುಟ್ಟಿ ಹರಿಯುವವು."(ಯೆಶಾಯ–35:5,6) ಈ ಮಾತುಗಳಿಂದ ಯೆಶಾಯನು ಪ್ರಕಟಿಸಿದ್ದೇನೆಂದರೆ, ಎಂದೂ ಯಾರೂ ಮಾಡದಿದ್ದ ಅದ್ಭುತಗಳನ್ನು ಮೆಸ್ಸಿಯನು ಮಾಡುತ್ತಾನೆ ಎಂಬದು. ಮಹತ್ವದ ಅದ್ಭುತಗಳನ್ನು ಮಾಡುವದಕ್ಕೆ ದೇವರು ಮೋಶೆಗೆ ಮತ್ತು ಎಲೀಯ –ನಿಗೆ ಹೇಗೆ ಸಾಮರ್ಥ್ಯವನ್ನು ಕೊಟ್ಟಿದ್ದಾನೆಂಬುದನ್ನು ನಾವು ಈಗಾಗಲೇ ಓದಿಕೊಂಡಿದ್ದೇವೆ. ಆದರೆ ಮೆಸ್ಸೀಯನು ಮಾಡಿದ ಅದ್ಭುತ –ಗಳಿಗೆ ಹೋಲಿಸಿದರೆ ಆ ಇಬ್ಬರು ಪ್ರವಾದಿಗಳು ಮಾಡಿದ ಅದ್ಭುತಗಳು ಕೆಲವು ಮಾತ್ರ. ಅದೂ ಅಲ್ಲದೇ, ಮೋಶೆ ಮತ್ತು ಎಲೀಯ ಇಬ್ಬರೂ ಅದ್ಭುತಗಳನ್ನು ಮಾಡುವದಕ್ಕೆ ತಮ್ಮ ಸ್ವಂತ ಶಕ್ತಿಯನ್ನು ಹೊಂದಿರಲಿಲ್ಲ. ಏನೇ ಆದರೂ, ಯೇಸು ದೇವರ ಶಕ್ತಿಯೊಂದಿಗೆ ತುಂಬಲ್ಪಟ್ಟವನಾಗಿದ್ದನು, ಯಾಕಂದರೆ ಆತನು ತಾನೇ ದೇವರ ನಿಜ ಶಕ್ತಿಯಾಗಿದ್ದಾನೆ!

ಮಾರ್ಕನ ಸುವಾರ್ತೆಯ ಎರಡನೆಯ ಅಧ್ಯಾಯವನ್ನು ಮುಂದುವರಿಸುತ್ತಿದ್ದೇವೆ, ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಕೆಲವು ದಿನಗಳಾದ ಮೇಲೆ ಆತನು ಕಪೆರ್ನೌಮಿಗೆ ತಿರಿಗಿ ಬಂದನು. ಮನೆಯಲ್ಲಿದ್ದಾನೆಂಬ ವರ್ತಮಾನವು ಹಬ್ಬಿದಾಗ ಬಹುಜನರು ಕೂಡಿಬಂದದ್ದರಿಂದ ಬಾಗಿಲಿನ ಬಳಿಯಲ್ಲಾದರೂ ಸ್ಥಳವಿರಲಿಲ್ಲ. ಆತನು ಅವರಿಗೆ ದೇವರ ವಾಕ್ಯವನ್ನು ಹೇಳುತ್ತಿದ್ದನು. ಅಷ್ಟರಲ್ಲಿ

ಕೆಲವರು ಒಬ್ಬ ಪಾರ್ಶ್ವವಾಯು ರೋಗಿಯನ್ನು ನಾಲ್ಕು ಮಂದಿಯಿಂದ ಹೊರಿಸಿಕೊಂಡು ಆತನ ಬಳಿಗೆ ತಂದರು. ಜನರು ಗುಂಪಾ –ಗಿದ್ದದರಿಂದ ಅವರು ಆತನ ಹತ್ತಿರಕ್ಕೆ ಸೇರಲಾರದೆ ಆತನಿದ್ದ ಮನೆಯ ಮೇಲ್ಛಾವಣಿಯನ್ನು ಬಿಚ್ಚಿ ದ್ವಾರಮಾಡಿ ಪಾರ್ಶ್ವವಾಯು ರೋಗಿಯು ಮಲಗಿದ್ದ ಹಾಸಿಗೆಯನ್ನು ಇಳಿಸಿದರು. ಯೇಸು ಅವರ ನಂಬಿಕೆಯನ್ನು ನೋಡಿ ಆ ಪಾರ್ಶ್ವವಾಯು ರೋಗಿಗೆ, **ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ"** ಎಂದು ಹೇಳಿದನು. ಆದರೆ ಶಾಸ್ತ್ರಿಗಳಲ್ಲಿ ಕೆಲವರು ಅಲ್ಲಿ ಕೂತುಕೊಂಡಿದ್ದು, "ಅವನು ಯಾಕೆ ಹೀಗೆ ಮಾತಾಡುತ್ತಾನೆ? ಇದು ದೇವದೂಷಣೆ. ದೇವರೊಬ್ಬನೇ ಹೊರತು ಮತ್ತಾರು ಪಾಪಗಳನ್ನು ಕ್ಷಮಿಸಬಲ್ಲರು?" ಎಂದು ತಮ್ಮ ತಮ್ಮ ಮನಸ್ಸಿನಲ್ಲಿ ಅಂದುಕೊಂಡರು. ಹೀಗೆ ಅಂದುಕೊಳ್ಳುವದನ್ನು ಕೂಡಲೆ ಯೇಸು ತನ್ನ ಆತ್ಮದಲ್ಲಿ ತಿಳಿದುಕೊಂಡು ಅವರಿಗೆ, "ನೀವು ನಿಮ್ಮ ಮನಸ್ಸಿನಲ್ಲಿ ಯಾಕೆ ಹೀಗೆ ಅಂದುಕೊಳ್ಳುತ್ತೀರಿ? ಯಾವದು ಸುಲಭ? ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ ಅನ್ನುವದೋ? ಎದ್ದು ನಿನ್ನ ಹಾಸಿಗೆಯನ್ನು ತೆಗೆದುಕೊಂಡು ನಡೆ ಅನ್ನುವದೋ? ಆದರೆ ಪಾಪಗಳನ್ನು ಕ್ಷಮಿಸಿಬಿಡುವದಕ್ಕೆ ಮನುಷ್ಯ ಕುಮಾರನಿಗೆ ಭೂ –ಲೋಕದಲ್ಲಿ ಅಧಿಕಾರ ಉಂಟೆಂಬದು ನಿಮಗೆ ತಿಳಿಯಬೇಕು" ಎಂದು ಹೇಳಿ ಪಾರ್ಶ್ವವಾಯು ರೋಗಿಯನ್ನು ನೋಡಿ, **"ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ"** ಅಂದನು. ಅವನು ಎದ್ದು ಕೂಡಲೆ ತನ್ನ ಹಾಸಿಗೆಯನ್ನು ತೆಗೆದುಕೊಂಡು ಎಲ್ಲರ ಮುಂದೆ ಹೊರಟು ಹೊದನು. ಅದಕ್ಕೆ ಎಲ್ಲರು ಬೆರಗಾಗಿ, "ಇದುವರೆಗೆ ನಾವು ಇಂಥದನ್ನು ಎಂದಿಗೂ ನೋಡಿದ್ದೇ ಇಲ್ಲ" ಎಂದು ಹೇಳುತ್ತಾ ದೇವರನ್ನು ಕೊಂಡಾಡಿದರು. (ಮಾರ್ಕ–2:1-12)

ಈ ವೃತ್ತಾಂತದಲ್ಲಿ, ಒಬ್ಬ ವ್ಯಕ್ತಿಯ **ರೋಗಗ್ರಸ್ಥ ದೇಹದ** ಅದ್ಭುತಕ್ಕಾಗಿ ಮಾತ್ರ ಯೇಸುವಿನ ಶಕ್ತಿಯು ಸೀಮಿತವಾಗಿರಲಿಲ್ಲ, ಆದರೆ ಒಬ್ಬ ವ್ಯಕ್ತಿಯ **ಪಾಪದ ಹೃದಯವನ್ನೂ** ಸಹ ಸ್ವಸ್ಥಪಡಿಸುವದಕ್ಕೆ ಆತನು ಶಕ್ತಿಯನ್ನು ಹೊಂದಿದ್ದನು ಎನ್ನುವದನ್ನು ನಾವು ನೋಡುತ್ತೇವೆ! ಒಬ್ಬ ಶ್ರೇಷ್ಠ ವೈದ್ಯನಾಗಿದ್ದ (ಗುಣಪಡಿಸುವವನು) ಯೇಸು, ಒಬ್ಬ ಕುಂಟನು **ಹೆಚ್ಚು ಸಂದಿಗ್ಧ ಸಮಸ್ಯೆಯನ್ನು** ತನ್ನ ದುರ್ಬಲ ಕಾಲು –ಗಳಲ್ಲಿ ಹೊಂದಿರಲಿಲ್ಲ, ಆದರೆ ಅವನ ಹೃದಯಲ್ಲಿದ್ದ **ಪಾಪದಿಂದ** ಆ ಸಮಸ್ಯೆಯನ್ನು ಹೊಂದಿದ್ದನು ಎನ್ನುವದನ್ನು ತಿಳಿದಿದ್ದನು. ಅದಕ್ಕಾಗಿಯೇ ಯೇಸು ಮೊದಲು ಅವನಿಗೆ, "ಮಗನೇ, ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ." ಎಂದು ಹೇಳಿದನು.

ಯೇಸು ಇದನ್ನು ಹೇಳಿದಾಗ ಶಾಸ್ತ್ರಿಗಳ ಆಲೋಚನೆ ಏನಾಗಿತ್ತು? ಅವರು ತಮ್ಮೊಳಗೆ, "ಯೇಸು ದೇವದೂಷಣೆ ಮಾಡುತ್ತಿದ್ದಾನೆ! ದೇವರ ಹೊರತಾಗಿ ಯಾರೂ ಪಾಪವನ್ನು ಕ್ಷಮಿಸುವದಕ್ಕಾಗುವದಿಲ್ಲ!" ಎಂದು ಅಂದುಕೊಂಡರು. ಅವರ ಆಲೋಚನೆಗಳು ಸ್ವಲ್ಪ ಮಟ್ಟಿಗೆ **ಸತ್ಯ** ಮತ್ತು ಸ್ವಲ್ಪಮಟ್ಟಿಗೆ **ಸುಳ್ಳು** ಆಗಿದ್ದವು. **ದೇವರೊಬ್ಬನ ಹೊರತಾಗಿ ಬೇರೆ ಯಾರೂ ಪಾಪಗಳನ್ನು ಕ್ಷಮಿಸುವದಕ್ಕಾಗುವದಿಲ್ಲ** ಎನ್ನುವದು ಸತ್ಯವೇ. ಹೀಗಿದ್ದರೂ, ಯೇಸು ದೇವದೂಷಣೆ ಮಾಡುತ್ತಿದ್ದಾನೆ ಎಂದು ಶಾಸ್ತ್ರಿಗಳು ಅಂದುಕೊಂಡಾಗ, ಅವರು ತಪ್ಪಾಗಿ ತಿಳಿದುಕೊಂಡಿದ್ದರು, ಯಾಕೆಂದರೆ **ಯೇಸು ಪಾಪಿಗಳನ್ನು ದೇವರೊಂದಿಗೆ ಯೋಗ್ಯರನ್ನಾಗಿ ಮಾಡುವದಕ್ಕೆ ದೇವರು ಕಳಿಸಿದ ಮಧ್ಯವರ್ತಿ –ಯಾಗಿದ್ದಾನೆಂಬುದನ್ನು** ಅವರು ಗ್ರಹಿಸಿರಲಿಲ್ಲ. ಯೇಸು ದೇವರ ವಾಕ್ಯವಾಗಿದ್ದನು; ಹಾಗಾಗಿ **ಯೇಸು,** "ನಿನ್ನ ಪಾಪಗಳು ಕ್ಷಮಿಸಲ್ಪ –ಟ್ಟಿವೆ" ಎಂದು ಹೇಳಿದಾಗ, ಇದು **ದೇವರು** ತಾನೇ, **"ನಿನ್ನ ಪಾಪಗಳು ಕ್ಷಮಿಸಲ್ಪಟ್ಟಿವೆ"** ಎಂದು ಹೇಳಿದ್ದಾಗಿತ್ತು. ಕರ್ತನಾದ ಯೇಸು ಭೂಮಿಯ ಮೇಲೆ ದೇವರ ಧ್ವನಿಯಾಗಿದ್ದನು! ಅದು ಮಾತ್ರವಲ್ಲದೆ, ಪಾಪವನ್ನು ಎಂದೆಂದಿಗೂ ನಿವಾರಣೆ ಮಾಡುವಂತಹ **ಸಂಪೂ –ರ್ಣವಾದ ಯಜ್ಞದಂತೆ** ತನ್ನ ಜೀವವನ್ನು ಕೊಡುವದಕ್ಕೆ ಸಹ ಯೇಸು ಹುಟ್ಟಿದವನಾಗಿದ್ದನು. ತಂದೆಯು ತನಗಾಗಿ ಕೆಲಸ ಮಾಡುವ –ದಕ್ಕೆ ಮತ್ತು ತನಗಾಗಿ ಮಾತಾಡುವದಕ್ಕೆ ತನ್ನ ಮಗನಿಗೆ ಅಧಿಕಾರ ಕೊಡುವ ಹಾಗೆ, ಪಾಪಗಳನ್ನು ಕ್ಷಮಿಸುವದಕ್ಕೆ ದೇವರು ಯೇಸು –ವಿಗೆ ಅಧಿಕಾರ ಕೊಟ್ಟಿದ್ದಾನೆ. ಪಾಪದ ಕ್ಷಮಿಸುವಿಕೆಯು ಕರ್ತನಾದ ಯೇಸುವಿನಲ್ಲಿ ಮಾತ್ರ ಕಂಡುಬರುತ್ತದೆ. ಆದರೆ ಶಾಸ್ತ್ರಿಗಳು ಇದನ್ನು ನಂಬಲಿಲ್ಲ.

ನಮಗೆ ಸ್ವಲ್ಪ ಸಮಯ ಮಾತ್ರ ಉಳಿದಿದೆ. ಆದುದರಿಂದ, ಮುಂದಿರುವ ವಚನಗಳನ್ನು ಇನ್ನೂ ಸ್ವಲ್ಪ ಮುಂದಕ್ಕೆ ಓದೋಣ.

ಆತನು ಹೊರಟು ತಿರಿಗಿ ಸಮುದ್ರದ ಬಳಿಗೆ ಹೋದನು. ಜನರ ಗುಂಪೆಲ್ಲಾ ಆತನ ಬಳಿಗೆ ಬಂದಾಗ ಆತನು ಅವರಿಗೆ ಉಪದೇಶ ಮಾಡಿದನು. ಆತನು ಅಲ್ಲಿಂದ ಹೋಗುತ್ತಿರುವಾಗ ಸುಂಕಕ್ಕೆ ಕೂತಿದ್ದ ಅಲ್ಫಾಯನ ಮಗನಾದ ಲೇವಿಯನ್ನು ನೋಡಿ, "ನನ್ನನ್ನು ಹಿಂಬಾಲಿಸು" ಎಂದು ಅವನನ್ನು ಕರೆಯಲು ಅವನು ಎದ್ದು ಆತನ ಹಿಂದೆ ಹೋದನು. ಅನಂತರ ಆತನು ಅವನ ಮನೆಯೊಳಗೆ ಊಟಕ್ಕೆ ಕೂತಿರುವಲ್ಲಿ, ಬಹುಮಂದಿ ಸುಂಕದವರೂ ಪಾಪಿಗಳೂ ಯೇಸುವಿನ ಮತ್ತು ಆತನ ಶಿಷ್ಯರ ಪಂಕ್ತಿಯಲ್ಲೇ ಕೂತುಕೊಂಡರು, ಅಂಥವರು ಬಹುಮಂದಿ ಇದ್ದರು. ಫರಿಸಾಯರಾದ ಶಾಸ್ತ್ರಿಗಳು ಆತನ ಹಿಂದೆ ಹೋಗಿ ಆತನು ಪಾಪಿಗಳ ಮತ್ತು ಸುಂಕದವರ ಸಂಗಡ ಊಟಮಾಡುವದನ್ನು ಕಂಡು ಆತನ ಶಿಷ್ಯರಿಗೆ, "ಈತನು ಸುಂಕದವರ ಮತ್ತು ಪಾಪಿಗಳ ಸಂಗಡ ಊಟಮಾಡುತ್ತಾನೆ ನೋಡಿರಿ" ಎಂದು ಹೇಳಿದರು. ಯೇಸು ಅದನ್ನು ಕೇಳಿ, **"ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು"** ಅಂದನು. (ಮಾರ್ಕ–2:13-17)

ಆ ಮಾತುಗಳೊಂದಿಗೆ, ಶ್ರೇಷ್ಠ ವೈದ್ಯನಾದ ಯೇಸು, ಶಾಸ್ತ್ರಿಗಳು ತಮ್ಮ ಪಾಪದ ಕಾರಣದಿಂದ ದೇವರ ಮುಂದೆ **ರೋಗಿಗಳಾಗಿದ್ದಾರೆ** ಎಂಬುದನ್ನು ಅವರಿಗೆ ತೋರಿಸುವದಕ್ಕೆ ಇಚ್ಛೈಸಿದನು. ಆದರೆ ಈ ಧಾರ್ಮಿಕ ಬೋಧಕರುಗಳು ತಮ್ಮ ಪಾಪವನ್ನು ಗ್ರಹಿಸಿಕೊಳ್ಳಲಿಲ್ಲ. ನಿಜವಾಗಿಯೂ, ಅವರು ಯೇಸುವನ್ನು ಟೀಕಿಸುತ್ತಿದ್ದರು ಯಾಕಂದರೆ ಪಾಪಿಗಳೆಂದು ಕರೆಯಲ್ಪಡುವ ಸುಂಕದವರೊಂದಿಗೆ ಆತನು ಊಟಮಾಡುತ್ತಿದ್ದನು. ಏನೇ ಆದರೂ, **ಪಾಪಿಗಳೊಂದಿಗಿರುವದು** ಮತ್ತು ಅವರ **ಪಾಪಗಳಿಂದ** ಅವರನ್ನು ಗುಣಪಡಿಸುವದೇ ಯೇಸು ಜನಿಸಿ ಬಂದದ್ದರ ನಿಜವಾದ ಕಾರಣವಾಗಿತ್ತು!

ನಿಮಗೆ ಏನನ್ನಿಸುತ್ತದೆ, ಪಾಪ ಎನ್ನುವಂತಹ ಭಯಂಕರವಾದ ರೋಗದೊಂದಿಗೆ ನೀವು ಹುಟ್ಟಿದವರೆಂಬುದನ್ನು ನೀವು ಗ್ರಹಿಸಿಕೊಂಡಿದ್ದಿರೋ? ನಿಮ್ಮೊಳಗೆ ಪಾಪ ಯಾಕೆ ಇರಬೇಕು, ನೀವು ಸತ್ತು ಪರಿಶುದ್ಧನಾಗಿರುವ ದೇವರ ನ್ಯಾಯತೀರ್ಪಿನ ಮುಂದೆ ಬರಲೇಬೇಕು.

ಆದರೆ ದೇವರಿಗೆ ಸ್ತೋತ್ರ, **ನಿಮ್ಮ ಹೃದಯದಲ್ಲಿರುವ ಪಾಪದಿಂದ ನಿಮ್ಮನ್ನು ಗುಣಪಡಿಸುವವ ಒಬ್ಬನಿದ್ದಾನೆ!** ಆ ಒಬ್ಬನು ಯಾರೆಂಬುದು ನಿಮಗೆ ಗೊತ್ತಾ? ಹೌದು, ಆತನೇ ಯೇಸು ಎಂಬ ಮೆಸ್ಸೀಯನು, ಆತನು ಪಾಪವಿಲ್ಲದವನು ಮತ್ತು ಆದಾಮನ ಸಂತಾನದವರನ್ನು ಅವರ ಪಾಪದಿಂದ ರಕ್ಷಿಸುವದಕ್ಕೆ ಲೋಕಕ್ಕೆ ಬಂದಂತವನು ಆಗಿದ್ದನು. ಏನೇ ಆದರೂ, ನೀವು ಪಾಪದಿಂದ ರೋಗಗ್ರಸ್ಥರಾಗಿದ್ದೀ –ರೆಂಬುದನ್ನು ನೀವು ಮೊದಲು ಗುರುತಿಸಿಕೊಳ್ಳಬೇಕು, ಆಗ ಕರ್ತನಾದ ಯೇಸುವಿನ ಮುಂದೆ ನಿಮ್ಮ ಪಾಪದ ಹೃದಯವು ಗುಣ –ವಾಗಲು ಸಾಧ್ಯ. ತಮಗೆ ಕಾಯಿಲೆ ಬಂದಿದೆ ಎಂದು ತಿಳಿದುಕೊಂಡವರು ಮಾತ್ರ ವೈದ್ಯರ ಬಳಿಗೆ ಹೋಗುತ್ತಾರೆ. ಅದೇ ರೀತಿ, ತಾವು ಪಾಪಿಗಳೆಂದು ತಿಳಿದುಕೊಂಡವರು ಮಾತ್ರ ಪಾಪಿಗಳ ರಕ್ಷಕನಾದ ಯೇಸುವಿನ ಕಡೆಗೆ ತಿರುಗಿಕೊಳ್ಳುತ್ತಾರೆ. **ತಾವು ನೀತಿವಂತ –ರೆಂದು ಕಲ್ಪನೆ ಮಾಡಿಕೊಂಡವರಿಗಾಗಿ ಯೇಸು ಬಂದಿಲ್ಲ, ಆದರೆ ತಾವು ಪಾಪಿಗಳೆಂದು ತಿಳಿದುಕೊಂಡವರಿಗಾಗಿ ಆತನು ಬಂದವನಾಗಿದ್ದಾನೆ.** ಅದಕ್ಕಾಗಿಯೇ ಆತನು ಶಾಸ್ತ್ರಿಗಳಿಗೆ, **"**ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿಗಳನ್ನು ಕರೆಯುವದಕ್ಕೆ ಬಂದವನು**"** ಅಂದನು.

ಸ್ನೇಹಿತರೇ, ಈದಿನ ಇಲ್ಲಿಗೆ ನಾವು ನಿಲ್ಲಿಸುತ್ತೇವೆ. ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ದೇವರ ಚಿತ್ತದಂತೆ, ಸುವಾರ್ತೆಯಲ್ಲಿರುವದನ್ನು ನಾವು ಮುಂದುವರಿಸುತ್ತೇವೆ ಮತ್ತು ಪಾಪಿಗಳ ರಕ್ಷಕನಾಗಿರುವ ಯೇಸುವಿನ ಬಾಯಿಂದ ಬಂದಿರುವ ಕೆಲವು ಅದ್ಭುತವಾದ ಮತ್ತು ಅಗಾಧವಾದ ಮಾತುಗಳನ್ನು ಕೇಳೋಣ. . . .

ಶಾಸ್ತ್ರಿಗಳಿಗೆ ಕರ್ತನು ಹೇಳಿದ ಮಾತುಗಳನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಕ್ಷೇಮದಿಂದಿರುವವರಿಗೆ ವೈದ್ಯನು ಬೇಕಾಗಿಲ್ಲ; ಕ್ಷೇಮವಿಲ್ಲದವರಿಗೆ ಬೇಕು. ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ, ಪಾಪಿ –ಗಳನ್ನು ಕರೆಯುವದಕ್ಕೆ ಬಂದವನು"** (ಮಾರ್ಕ–2:17)

ಪಾಠ 66

# ಶ್ರೇಷ್ಠ ಬೋಧಕ

ಮತ್ತಾಯ 5-7

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ

ಹಿಂದಿನ ಕಾರ್ಯಕ್ರಮದಲ್ಲಿ, ಮೆಸ್ಸೀಯನಾದ ಯೇಸು ಪ್ಯಾಲೆಸ್ತೀನಿನಲ್ಲಿನ ಪಟ್ಟಣಗಳನ್ನು ಭೇಟಿಮಾಡಿ, ಜನರ ಗುಂಪುಗಳಿಗೆ ಬೋಧಿ – ಸುತ್ತಾ, ರೋಗಿಗಳನ್ನು ಗುಣಪಡಿಸಿ, ದೆವ್ವಗಳನ್ನು ಓಡಿಸಿದನು ಎಂಬುದನ್ನು ನಾವು ನೋಡಿಕೊಂಡೆವು. ಜನರು ಬೆರಗಾಗಿ, **"ಇದೇನಿರ –ಬಹುದು?"** ಇದು ಹೊಸ ಉಪದೇಶ. ಈತನು ಅಧಿಕಾರದಿಂದ ದೆವ್ವಗಳಿಗೂ ಅಪ್ಪಣೆ ಕೊಡುತ್ತಾನೆ; ಅವು ಆತನ ಮಾತನ್ನು ಕೇಳು – ತ್ತವೆ!" ಎಂದು ತಮ್ಮ ತಮ್ಮೊಳಗೆ ವಿಚಾರ ಮಾಡಿಕೊಂಡರು. (ಮಾರ್ಕ–1:27)

ಈದಿನ ನಾವು ಸುವಾರ್ತೆಯಲ್ಲಿರುವದನ್ನು(ಇಂಜಿಲ್)ಮುಂದುವರಿಸಿ, ಒಂದು ದಿನ ಕರ್ತನಾದ ಯೇಸು ತನ್ನ ಶಿಷ್ಯರೊಂದಿಗೆ ಮತ್ತು ಜನರ ಒಂದು ದೊಡ್ಡ ಗುಂಪಿನೊಂದಿಗೆ ಪರ್ವತದ ಮೇಲಿದ್ದಾಗ **ಆತನ ಬಾಯಿಂದ ಬಂದಂತ ಅದ್ಬುತವಾದ ಮಾತುಗಳನ್ನು** ಕೇಳಿಸಿ ಕೊಳ್ಳುವದಕ್ಕೆ ಏರ್ಪಾಟು ಮಾಡಿಕೊಂಡಿದ್ದೇವೆ. ಆ ದಿನ ಯೇಸು ತನ್ನ ಶಿಷ್ಯರಿಗೆ ಬೋಧಿಸಿದ ಪ್ರತಿಯೊಂದನ್ನು ಓದುವದಕ್ಕೆ ನಮಗೆ ಸಮಯವಿಲ್ಲ; ಏನೇ ಆದರೂ, ಯಾರಿಗಾದರೂ ಪೂರ್ತಿ ಓದಬೇಕೆಂದು ಇಷ್ಟವಿದ್ದರೆ, ಅಂತವರು ಮತ್ತಾಯನ ಸುವಾರ್ತೆಯ ಐದರಿಂದ ಏಳನೆಯ ಅಧ್ಯಾಯದಲ್ಲಿರುವ ಪೂರ್ತಿ ಸಂದೇಶವನ್ನು ಓದಿಕೊಳ್ಳಬಹುದು.

ಸ್ನೇಹಿತರೇ, ಈಗ ಸಧ್ಯಕ್ಕೆ ನೀವು ಎಲ್ಲೇ ಇದ್ದರೂ, **"**ಪರ್ವತ ಪ್ರಸಂಗ**"** ವನ್ನು ಕೇಳಿಸಿಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ – ಇದು ಬಹಳ ಮಟ್ಟಿಗೆ ಎರಡು ಸಾವಿರ ವರ್ಷಗಳ ಹಿಂದೆ ಕರ್ತನಾದ ಯೇಸು ಮಾಡಿದ ಪ್ರಸಂಗವಾಗಿದೆ. ವಾಕ್ಯ ಹೀಗೆ ಹೇಳುತ್ತದೆ:

ಆತನು ಆ ಜನರ ಗುಂಪುಗಳನ್ನು ಕಂಡು ಬೆಟ್ಟವನ್ನೇರಿ ಕೂತುಕೊಂಡ ತರುವಾಯ ಆತನ ಶಿಷ್ಯರು ಆತನ ಬಳಿಗೆ ಬಂದರು. ಆತನು ಅವರಿಗೆ ಉಪದೇಶ ಮಾಡಿ ಹೇಳಿದ್ದೇನೆಂದರೆ:

ಆತ್ಮದಲ್ಲಿ ಬಡವರಾಗಿರುವವರು **ಧನ್ಯರು**; ಪರಲೋಕ ರಾಜ್ಯವು ಅವರದು.
ದುಖಃಪಡುವವರು **ಧನ್ಯರು**; ಅವರು ಸಮಾಧಾನ ಹೊಂದುವರು.
ಶಾಂತರು **ಧನ್ಯರು**; ಅವರು ಭೂಮಿಗೆ ಬಾಧ್ಯರಾಗುವರು.
ನೀತಿಗೆ ಹಸಿದು ಬಾಯಾರಿದವರು **ಧನ್ಯರು**; ಅವರಿಗೆ ತೃಪ್ತಿಯಾಗುವದು.
ಕರುಣೆಯುಳ್ಳವರು **ಧನ್ಯರು**; ಅವರು ಕರುಣೆ ಹೊಂದುವರು.
ನಿರ್ಮಲಚಿತ್ತರು **ಧನ್ಯರು**; ಅವರು ದೇವರನ್ನು ನೋಡುವರು.
ಸಮಾಧಾನಪಡಿಸುವವರು **ಧನ್ಯರು**; ಅವರು ದೇವರ ಮಕ್ಕಳು ಅನ್ನಿಸಿಕೊಳ್ಳುವರು.
ನೀತಿಯ ನಿಮಿತ್ತವಾಗಿ ಹಿಂಸೆಯನ್ನು ತಾಳಿಕೊಳ್ಳುವವರು **ಧನ್ಯರು**; ಪರಲೋಕ ರಾಜ್ಯವು ಅವರದು.
ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ ಕೆಟ್ಟ ಮಾತುಗಳನ್ನು ಸುಳ್ಳಾಗಿ ಹೊರಿಸಿದರೆ ನೀವು **ಧನ್ಯರು**. ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ. (ಮತ್ತಾಯ–5:1-12)

ಮೋಶೆಯ ಧರ್ಮಶಾಸ್ತ್ರವನ್ನಾಗಲೀ ಪ್ರವಾದಿಗಳ ವಚನಗಳನ್ನಾಗಲೀ **ತೆಗೆದು ಹಾಕುವದಕ್ಕೆ** ನಾನು ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವದಕ್ಕೆ ಬಂದಿಲ್ಲ; **ನೆರವೇರಿಸುವದಕ್ಕೆ** ಬಂದಿದ್ದೇನೆ. ನಿಮಗೆ ಸತ್ಯವಾಗಿ ಹೇಳುತ್ತೇನೆ, ಆಕಾಶವೂ, ಭೂಮಿಯೂ **ಅಳಿದುಹೋಗುವ ತನಕ** ಧರ್ಮಶಾಸ್ತ್ರವೆಲ್ಲಾ ನೆರವೇರಿದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗುಡುಸಾದರೂ ಅಳಿದುಹೋಗ –ಲಾರದು. ಆದದರಿಂದ ಈ ಸಣ್ಣ ಸಣ್ಣ ಆಜ್ಞೆಗಳಲ್ಲಿಯಾದರೂ ಒಂದನ್ನು ಮೀರಿ ಜನರಿಗೂ ಹಾಗೆ ಮೀರುವದಕ್ಕೆ ಬೋಧಿಸುವವನು ಪರಲೋಕರಾಜ್ಯದಲ್ಲಿ ಬಹಳ ಚಿಕ್ಕವನೆನಿಸಿಕೊಳ್ಳುವನು; ಆದರೆ ತಾನೇ ಆ ಆಜ್ಞೆಗಳಂತೆ ನಡೆದುಕೊಂಡು ಜನರಿಗೂ ಹಾಗೆ ನಡೆಯ – ಬೇಕೆಂದು ಬೋಧಿಸುವವನು ಪರಲೋಕರಾಜ್ಯದಲ್ಲಿ ದೊಡ್ಡವನೆನಿಸಿಕೊಳ್ಳುವನು. **ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರಲೋಕರಾಜ್ಯದಲ್ಲಿ ಸೇರಲಾರಿರಿ** ಎಂದು ನಿಮಗೆ ಹೇಳುತ್ತೇನೆ. (5: 17-20)

'ನರಹತ್ಯ ಮಾಡಬಾರದು; ನರಹತ್ಯ ಮಾಡುವವನು ನ್ಯಾಯವಿಚಾರಣೆಗೆ ಗುರಿಯಾಗುವನೆಂದು' ಹಿರಿಯರಿಗೆ ಹೇಳಿಯದೆ ಎಂದು **ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ,** ತನ್ನ ಸಹೋದರನ ಮೇಲೆ ಸಿಟ್ಟುಗೊಳ್ಳುವ ಪ್ರತಿ ಮನುಷ್ಯನು ನ್ಯಾಯ ವಿಚಾರಣೆಗೆ ಗುರಿಯಾಗುವನು; ತನ್ನ ಸಹೋದರನನ್ನು ನೋಡಿ, ಛೀ ನೀಚಾ ಅನ್ನುವವನು ನ್ಯಾಯಸಭೆಯ ವಿಚಾರಣೆಗೆ ಒಳಗಾಗು –ವನು; ಮೂರ್ಖಾ ಅನ್ನುವವನು ಅಗ್ನಿನರಕಕ್ಕೆ ಗುರಿಯಾಗುವನು. 'ವ್ಯಭಿಚಾರ ಮಾಡಬಾರದೆಂದು' ಹೇಳಿಯದೆ ಎಂಬದಾಗಿ ನೀವು ಕೇಳಿದ್ದೀರಷ್ಟೆ. **ಆದರೆ ನಾನು ನಿಮಗೆ ಹೇಳುವದೇನೆಂದರೆ,** ಪರಸ್ತ್ರೀಯನ್ನು ನೋಡಿ ಮೋಹಿಸುವ ಪ್ರತಿಯೊಬ್ಬನು ಆಗಲೇ ತನ್ನ ಮನ –ಸ್ಸಿನಲ್ಲಿ ಆಕೆಯ ಕೂಡ ವ್ಯಭಿಚಾರ ಮಾಡಿದವನಾದನು. ಮತ್ತು ಸುಳ್ಳಾಣೆಯಿಡಬಾರದು; ನೀನು ಇಟ್ಟುಕೊಂಡ ಆಣೆಗಳನ್ನು ಕರ್ತನಿಗೆ ಸಲ್ಲಿಸಬೇಕೆಂದು ಹಿರಿಯರಿಗೆ ಹೇಳಿಯದೆ ಎಂದು **ನೀವು ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ,** ಆಣೆಯನ್ನೇ ಇಡಬೇಡ. ಆಕಾಶದ ಮೇಲೆ ಆಣೆ ಇಡಬೇಡ; ಅದು ದೇವರ ಸಿಂಹಾಸನವು. ಭೂಮಿಯ ಮೇಲೆ ಆಣೆ ಇಡಬೇಡ; ಅದು ಆತನ ಪಾದಪೀಠವು. ಯೆರೂಸಲೇಮಿನ ಮೇಲೆ ಆಣೆ ಇಡಬೇಡ; ಅದು ಆ ದೊಡ್ಡ ಅರಸನ ಪಟ್ಟಣವಾಗಿದೆ. . . .ಆದರೆ ನಿಮ್ಮ ಮಾತು ಹೌದಾದರೆ ಹೌದು, ಅಲ್ಲವಾದರೆ ಅಲ್ಲ ಎಂದಿರಲಿ; ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು.(5:21,22,27,28, 33-35,37)

'ಕಣ್ಣಿಗೆ ಪ್ರತಿಯಾಗಿ ಕಣ್ಣನ್ನು ಹಲ್ಲಿಗೆ ಪ್ರತಿಯಾಗಿ ಹಲ್ಲನ್ನು ತೆಗಿಸು' ಅಂತ ಹೇಳಯದೆ ಎಂದು **ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ,** ಕೆಡುಕನನ್ನು ಎದುರಿಸಬೇಡ. ಒಬ್ಬನು ನಿನ್ನ ಬಲಗೆನ್ನೆಯ ಮೇಲೆ ಹೊಡೆದರೆ ಅವನಿಗೆ ಮತ್ತೊಂದು ಕೆನ್ನೆ –ಯನ್ನೂ ಒಡ್ಡು. ನಿನ್ನ ಸಂಗಡ ವ್ಯಾಜ್ಯವಾಡಿ ನಿನ್ನ ಒಳಂಗಿಯನ್ನು ತಕ್ಕೊಳ್ಳಬೇಕೆಂದಿರುವವನಿಗೆ ಮೇಲಂಗಿಯನ್ನೂ ಬಿಡು. ಒಬ್ಬನು, ಒಂದು ಮೈಲು ದೂರ ಬಾ ಎಂದು ನಿನ್ನನ್ನು ಬಿಟ್ಟೀಹಿಡಿದರೆ ಅವನ ಸಂಗಡ ಎರಡು ಮೈಲು ಹೋಗು. 'ನಿನ್ನ ನೆರೆಯವನನ್ನು ಪ್ರೀತಿಸಿ ನಿನ್ನ ವೈರಿಯನ್ನು ಹಗೆಮಾಡಬೇಕೆಂದು' ಹೇಳಿಯದೆ ಎಂದು **ಕೇಳಿದ್ದೀರಷ್ಟೆ. ಆದರೆ ನಾನು ನಿಮಗೆ ಹೇಳುವದೇನೆಂದರೆ,** ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆಪಡಿಸುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ. ಹೀಗೆ ಮಾಡಿದರೆ ನೀವು ಪರಲೋಕ –ದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. ಆತನು ಕೆಟ್ಟವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ; ನೀತಿ –ವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆ ಸುರಿಸುತ್ತಾನೆ. ನಿಮಗೆ ಪ್ರೀತಿ ತೋರಿಸುವವರನ್ನೇ ನೀವು ಪ್ರೀತಿಸಿದರೆ ಫಲವೇನು? ಭ್ರಷ್ಟರೂ ಹಾಗೆ ಮಾಡುವದಿಲ್ಲವೇ. ನಿಮ್ಮ ಸಹೋದರರಿಗೆ ಮಾತ್ರ ನೀವು ಮರ್ಯಾದೆ ಕೊಟ್ಟರೆ ಏನು ಹೆಚ್ಚು ಮಾಡಿದ ಹಾಗಾಯಿತು? ಅನ್ಯ ಜನಗಳು ಸಹ ಹಾಗೆ ಮಾಡುವದಿಲ್ಲವೇ. **ಆದದರಿಂದ ಪರಲೋಕದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರುವಂತೆ ನೀವೂ ದೋಷವಿಲ್ಲದವರಾಗಿರ್ರಿ.** (5: 38-41, 433-48)

**ಜನರು ನೋಡಲಿ ಎಂದು ನಿಮ್ಮ ಧರ್ಮಕಾರ್ಯಗಳನ್ನು ಅವರ ಮುಂದೆ ಮಾಡಬಾರದು, ನೋಡಿರಿ**; ಹಾಗೆ ಮಾಡಿದರೆ ಪರಲೋಕ –ದಲ್ಲಿರುವ ನಿಮ್ಮ ತಂದೆಯ ಹತ್ತರ ನಿಮಗೆ ಫಲದೊರೆಯದು. (ಮತ್ತಾಯ–6:1)

ಆದದರಿಂದ **ನೀನು ಧರ್ಮಕೊಡುವಾಗ** ನಿನ್ನ ಮುಂದೆ ಕೊಂಬೂದಿಸಬೇಡ; ಜನರಿಂದ ಹೊಗಳಿಸಿಕೊಳ್ಳಬೇಕೆಂದು **ಕಪಟಿಗಳು** ಸಭಾ ಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ನೀವಾದರೆ ಧರ್ಮಕೊಡುವಾಗ ನೀನು ಕೊಟ್ಟದ್ದು ಅಂತರಂಗವಾಗುವ ಹಾಗೆ ನಿನ್ನ ಬಲಗೈ ಕೊಟ್ಟದ್ದು ಎಡ –ಗೈಗೂ ತಿಳಿಯದಿರಲಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. (6:2-4)

ಮತ್ತು **ನೀವು ಪ್ರಾರ್ಥನೆ ಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ**. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದಿಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾ –ಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆಮಾಡು; ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು. ಆದರೆ ಪ್ರಾರ್ಥನೆ ಮಾಡುವಾಗ ಅಜ್ಞಾನಿಗಳ ಹಾಗೆ ಹೇಳಿದ್ದನ್ನೇ ಸುಮ್ಮಸುಮ್ಮನೆ ಹೇಳಬೇಡ; ಅವರು ಬಹಳ ಮಾತುಗಳನ್ನಾಡಿದರೆ ತಮ್ಮ ಪ್ರಾರ್ಥನೆಯನ್ನು ದೇವರು ಕೇಳುತ್ತಾನೆಂದು ನೆನಸುತ್ತಾರೆ. ಆದದರಿಂದ ನೀವು ಅವರ ಹಾಗೆ ಆಗಬೇಡಿರಿ. ನೀವು ನಿಮ್ಮ ತಂದೆಯನ್ನು ಬೇಡಿಕೊಳ್ಳುವದಕ್ಕಿಂತ ಮುಂಚೆಯೇ ನಿಮಗೆ ಏನೇನು ಅಗತ್ಯವೆಂಬದು ಆತನಿಗೆ ತಿಳಿದದೆ. (6:5-8)

ಆದದರಿಂದ ನೀವು ಹೀಗೆ ಪ್ರಾರ್ಥನೆ ಮಾಡತಕ್ಕದ್ದು: **ಪರಲೋಕದಲ್ಲಿರುವ ನಮ್ಮ ತಂದೆಯೇ,** ನಿನ್ನ ನಾಮವು ಪರಿಶುದ್ಧವೆಂದು ಎಣಿಸ –ಲ್ಪಡಲಿ. ನಿನ್ನ ರಾಜ್ಯವು ಬರಲಿ. ನಿನ್ನ ಚಿತ್ತವು ಪರಲೋಕದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿಯೂ ನೆರವೇರಲಿ. ನಮ್ಮ ಅನುದಿನದ ಆಹಾರವನ್ನು ಈ ಹೊತ್ತೂ ದಯಪಾಲಿಸು. ನಮಗೆ ತಪ್ಪು ಮಾಡಿದವರನ್ನು ನಾವು ಕ್ಷಮಿಸಿದಂತೆ ನಮ್ಮ ತಪ್ಪುಗಳನ್ನು ಕ್ಷಮಿಸು. ನಮ್ಮನ್ನು ಶೋಧನೆಯೊಳಗೆ ಸೇರಿಸದೆ ಕೇಡಿನಿಂದ ನಮ್ಮನ್ನು ತಪ್ಪಿಸು. ರಾಜ್ಯವೂ ಬಲವೂ ಮಹಿಮೆಯೂ ಸದಾಕಾಲವೂ ನಿನ್ನವೇ, ಆಮೆನ್! (6:9-13)

ಇದಲ್ಲದೆ **ನೀವು ಉಪವಾಸ ಮಾಡುವಾಗ ಕಪಟಿಗಳಂತೆ** ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿ –ಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರ ಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿ –ದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ. ಆದರೆ ನೀನು ಉಪವಾಸ ಮಾಡುವಾಗ ತಲೆಗೆ ಎಣ್ಣೆ ಹಚ್ಚಿಕೊಂಡು ಮುಖವನ್ನು ತೊಳಕೋ. ಹೀಗೆ ಮಾಡಿದರೆ ನೀನು ಉಪವಾಸಿಯೆಂದು ಜನರಿಗೆ ಕಾಣದೆ ಹೋದಾಗ್ಯೂ ಅಂತರಂಗದಲ್ಲಿರುವ ನಿನ್ನ ತಂದೆಗೆ

ಉಪವಾಸಿಯೆಂದು  ಕಾಣಿಸಿಕೊಳ್ಳುವಿ. ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು.
(6:16-18)

ಭೂಲೋಕದಲ್ಲಿ **ಗಂಟು ಮಾಡಿ ಇಟ್ಟುಕೊಳ್ಳಬೇಡಿರಿ**; ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟುಹೋಗುವದು; ಇಲ್ಲಿ ಕಳ್ಳರು
ಕನ್ನಾ ಕೊರೆದು ಕದಿಯುವರು.  ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಿರಿ; ಅಲ್ಲಿ ಅದು ನುಸಿಹಿಡಿದು ಕಿಲುಬುಹತ್ತಿ ಕೆಟ್ಟು
ಹೋಗುವದಿಲ್ಲ; ಅಲ್ಲಿ ಕಳ್ಳರು ಕನ್ನಾ ಕೊರೆಯುವದೂ ಇಲ್ಲ, ಕದಿಯುವದೂ ಇಲ್ಲ.  ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ
ಇರುವದಷ್ಟೆ. (6:19-21)

ಕಣ್ಣು ದೇಹಕ್ಕೆ ದೀಪವಾಗಿದೆ; ಹೀಗಿರುವಲ್ಲಿ ನಿನ್ನ ಕಣ್ಣು ನೆಟಗಿದ್ದರೆ ನಿನ್ನ ದೇಹವೆಲ್ಲಾ ಬೆಳಕಾಗಿರುವದು.  ನಿನ್ನ ಕಣ್ಣು ಕೆಟ್ಟದ್ದಾಗಿದ್ದರೆ
ನಿನ್ನ ದೇಹವೆಲ್ಲಾ ಕತ್ತಲಾಗಿರುವದು.  ಹಾಗಾದರೆ ನಿನ್ನೊಳಗಿರುವ ಬೆಳಕೇ ಕತ್ತಲಾದರೆ ಆ ಕತ್ತಲು ಎಷ್ಟೆನ್ನಬೇಕು! **ಯಾವನೂ ಇಬ್ಬರು
ಯಜಮಾನರಿಗೆ ಸೇವೆ ಮಾಡಲಾರನು**. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು; ಇಲ್ಲವೆ ಒಬ್ಬನನ್ನು ಹೊಂದಿ
ಕೊಂಡು ಮತ್ತೊಬ್ಬನನ್ನು ತಾತ್ಸಾರ ಮಾಡುವನು.  ನೀವು ದೇವರನ್ನು ಧನವನ್ನೂ ಕೂಡ ಸೇವಿಸಲಾರಿರಿ. (6:22-24)

ಈ ಕಾರಣದಿಂದ, **ನಮ್ಮ ಪ್ರಾಣಧಾರಣೆಗೆ** ಏನು ಊಟಮಾಡಬೇಕು, ಏನು ಕುಡಿಯಬೇಕು, ನಮ್ಮ ದೇಹರಕ್ಷಣೆಗೆ ಏನು ಹೊದ್ದುಕೊಳ್ಳ
–ಬೇಕು ಎಂದು **ಚಿಂತೆಮಾಡಬೇಡಿರಿ** ಎಂಬದಾಗಿ ನಿಮಗೆ ಹೇಳುತ್ತೇನೆ.  ಊಟಕ್ಕಿಂತ ಪ್ರಾಣವು ಉಡುಪಿಗಿಂತ ದೇಹವು ಮೇಲಾದ –
ದ್ದಲ್ಲವೇ.  ಆಕಾಶದಲ್ಲಿ ಹಾರಾಡುವ ಹಕ್ಕಿಗಳನ್ನು ನೋಡಿರಿ; ಅವು ಬಿತ್ತುವದಿಲ್ಲ, ಕೊಯ್ಯುವದಿಲ್ಲ, ಕಣಜಗಳಲ್ಲಿ ತುಂಬಿಟ್ಟುಕೊಳ್ಳುವದಿಲ್ಲ;
ಆದಾಗ್ಯೂ ಪರಲೋಕದಲ್ಲಿರುವ ನಿಮ್ಮ ತಂದೆಯು ಅವುಗಳನ್ನು ಸಾಕಿ ಸಲಹುತ್ತಾನೆ; ಅವುಗಳಿಗಿಂತ ನೀವು ಹೆಚ್ಚಿನವರಲ್ಲವೋ? ಚಿಂತೆ
ಮಾಡಿಮಾಡಿ ಒಂದು ಮೊಳ ಉದ್ದ ಬೆಳೆಯುವದು ನಿಮ್ಮಲ್ಲಿ ಯಾರಿಂದಾದೀತು? (6:25-27)

ಇದಲ್ಲದೆ ನೀವು ಉಡುಪಿನ ವಿಷಯದಲ್ಲಿ ಚಿಂತೆಮಾಡುವದೇಕೆ? ಅಡವಿಯ ಹೂವುಗಳು ಬೆಳೆಯುವ ರೀತಿಯನ್ನು ಯೋಚಿಸಿ ತಿಳಿ –
ಯಿರಿ; ಅವು ದುಡಿಯುವದಿಲ್ಲ, ನೂಲುವದಿಲ್ಲ; ಆದಾಗ್ಯೂ ಈ ಹೂವುಗಳಲ್ಲಿ ಒಂದಕ್ಕಿರುವಷ್ಟು ಅಲಂಕಾರವು ಅರಸನಾದ ಸೊಲೊ –
–ಮೋನನಿಗೆ ಸಹ ಅವನು ತನ್ನ ಸಕಲ ವೈಭವದಿಂದಿರುವಾಗಲೂ ಇರಲಿಲ್ಲವೆಂದು ನಿಮಗೆ ಹೇಳುತ್ತೇನೆ.  ಎಲೈ ಅಲ್ಪ ವಿಶ್ವಾಸಿಗಳೇ,
ಈ ಹೊತ್ತು ಇದ್ದು ನಾಳೆ ಒಲೆಯ ಪಾಲಾಗುವ ಅಡವಿಯ ಹುಲ್ಲಿಗೆ ದೇವರು ಹೀಗೆ ಉಡಿಸಿ ತೊಡಿಸಿದರೆ ಅದಕ್ಕಿಂತ ಎಷ್ಟೋ ಹೆಚ್ಚಾಗಿ
ನಿಮಗೆ ಉಡಿಸಿ ತೊಡಿಸುವನಲ್ಲವೇ.  ಹೀಗಿರುವದರಿಂದ, ಏನು ಊಟಮಾಡಬೇಕು, ಏನು ಕುಡಿಯಬೇಕು, ಏನು ಹೊದ್ದುಕೊಳ್ಳಬೇಕು
ಎಂದು ಚಿಂತೆ ಮಾಡಬೇಡಿರಿ.  ಇವೆಲ್ಲವುಗಳಿಗಾಗಿ ಅಜ್ಞಾನಿಗಳು ತವಕಪಡುತ್ತಾರೆ.  ಇದೆಲ್ಲಾ ನಿಮಗೆ ಬೇಕಾಗಿದೆ ಎಂದು ಪರಲೋಕ
–ದಲ್ಲಿರುವ ನಿಮ್ಮ ತಂದೆಗೆ ತಿಳಿದದೆಯಷ್ಟೆ.  ಹೀಗಿರುವದರಿಂದ, **ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ –
ಪಡಿರಿ.  ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು**. (6:28-33)

**ತೀರ್ಪು ಮಾಡಬೇಡಿರಿ; ಹಾಗೆ ನಿಮಗೂ ತೀರ್ಪಾಗುವದಿಲ್ಲ**.  ನೀವು ಮಾಡುವ ತೀರ್ಪಿಗೆ ಸರಿಯಾಗಿ ನಿಮಗೂ ತೀರ್ಪಾಗುವದು;
ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು.  ನೀನು ನಿನ್ನ ಕಣ್ಣಿನಲ್ಲಿರುವ ತೊಲೆಯನ್ನು ಯೋಚಿಸದೆ ನಿನ್ನ ಸಹೋ
–ದರನ ಕಣ್ಣಿನಲ್ಲಿರುವ ರವೆಯನ್ನು ಯೋಚಿಸುವದೇಕೆ?  ನೀನು ನಿನ್ನ ಸಹೋದರನಿಗೆ, ನಿನ್ನ ಕಣ್ಣಿನೊಳಗಿಂದ ರವೆಯನ್ನು ತೆಗೆಯು
–ತ್ತೇನೆ  ಬಾ ಎಂದು ಹೇಳುವದು ಹೇಗೆ? ನಿನ್ನ ಕಣ್ಣಿನಲ್ಲಿ ತೊಲೆಯದೆಯಲ್ಲಾ, ಕಪಟಿಯೇ, ಮೊದಲು ನಿನ್ನ ಕಣ್ಣಿನೊಳಗಿಂದ ತೊಲೆ
–ಯನ್ನು ತೆಗೆದುಹಾಕಿಕೋ; ಆಮೇಲೆ ನಿನ್ನ ಸಹೋದರನ ಕಣ್ಣಿನೊಳಗಿಂದ ರವೆಯನ್ನು ತೆಗೆಯುವದಕ್ಕೆ ಚೆನ್ನಾಗಿ ಕಾಣಿಸುವದು.
(ಅಂತು **ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ**.  ಇದೇ ಧರ್ಮಶಾಸ್ತ್ರದ
ಮತ್ತು ಪ್ರವಾದಿಗಳ ತಾತ್ಪರ್ಯ.) (7:1-5,12)

ಬೇಡಿಕೊಳ್ಳಿರಿ, ನಿಮಗೆ ದೊರೆಯುವದು; **ಹುಡುಕಿರಿ ನಿಮಗೆ ಸಿಕ್ಕುವದು**; ತಟ್ಟಿರಿ, ನಿಮಗೆ ತೆರೆಯುವದು; ಯಾಕಂದರೆ ಬೇಡಿಕೊಳ್ಳುವ
ಪ್ರತಿಯೊಬ್ಬನು ಹೊಂದುವನು, ಹುಡುಕುವವನಿಗೆ ಸಿಕ್ಕುವದು, ತಟ್ಟುವವನಿಗೆ ತೆರೆಯುವದು. (7:7,8)

**ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ**.  ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು
ಬಹುಜನ. ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪಜನ. (7:13,14)

**ಸುಳ್ಳುಪ್ರವಾದಿಗಳ ವಿಷಯದಲ್ಲಿ ಎಚ್ಚರವಾಗಿರ್ರಿ**.  ಅವರು ಕುರಿವೇಷ ಹಾಕಿಕೊಂಡು ನಿಮ್ಮ ಬಳಿಗೆ ಬರುತ್ತಾರೆ; ಆದರೆ ಒಳಗೆ ನೋಡಿ –
ದರೆ ಅವರು ಹಿಡುಕೊಂಡು ಹೋಗುವ ತೋಳಗಳೇ.  ಅವರ ಫಲಗಳಿಂದ ಅವರನ್ನು ತಿಳುಕೊಳ್ಳುವಿರಿ.  ಮುಳ್ಳುಗಿಡಗಳಲ್ಲಿ ದ್ರಾಕ್ಷೇ –
ಹಣ್ಣುಗಳನ್ನೂ ಮದ್ದುಗುಣಿಕೇಗಿಡಗಳಲ್ಲಿ ಅಂಜೂರಗಳನ್ನೂ ಕೊಯ್ಯುವದುಂಟೇ?  ಹಾಗೆಯೇ ಒಳ್ಳೇ ಮರಗಳೆಲ್ಲಾ ಒಳ್ಳೇಫಲವನ್ನು
ಕೊಡುವವು; ಹುಳುಕು ಮರವು ಕೆಟ್ಟ ಫಲವನ್ನು ಕೊಡುವದು.  ಒಳ್ಳೇ ಮರವು ಕೆಟ್ಟ ಫಲವನ್ನು ಕೊಡಲಾರದು; ಹುಳುಕು ಮರವು
ಒಳ್ಳೇ ಫಲವನ್ನು ಕೊಡಲಾರದು.  ಒಳ್ಳೇ ಫಲವನ್ನು ಕೊಡದ ಎಲ್ಲಾ ಮರಗಳನ್ನು ಕಡಿದು ಬೆಂಕಿಯಲ್ಲಿ ಹಾಕುತ್ತಾರೆ.  ಹೀಗಿರಲಾಗಿ
**ಅವರ ಫಲಗಳಿಂದ ಅವರನ್ನು ತಿಳಿದುಕೊಳ್ಳುವಿರಿ**. (7:15-20)

**ನನ್ನನ್ನು ಸ್ವಾಮೀ, ಸ್ವಾಮೀ ಅನ್ನುವವರೆಲ್ಲರು ಪರಲೋಕರಾಜ್ಯದಲ್ಲಿ ಸೇರುವರೆಂದು ನೆನಸಬೇಡಿರಿ;** ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ಪರಲೋಕ ರಾಜ್ಯಕ್ಕೆ ಸೇರುವನು. ಸ್ವಾಮಿ, ಸ್ವಾಮೀ, ನಿನ್ನ ಹೆಸರಿನ ಮೇಲೆ ನಾವು ಬೋಧನೆ ಹೇಳಲಿಲ್ಲವೇ? ನಿನ್ನ ಹೆಸರಿನ ಮೇಲೆ ದೆವ್ವಗಳನ್ನು ಬಿಡಿಸಲಿಲ್ಲವೇ? ನಿನ್ನ ಹೆಸರಿನ ಅನೇಕ ಮಹತ್ಕಾರ್ಯಗಳನ್ನು ಮಾಡಲಿಲ್ಲವೇ ಎಂದು ಆ ದಿನದಲ್ಲಿ ಎಷ್ಟೋ ಜನರು ನಗೆ ಹೇಳುವರು. ಆಗ ಆನು ಅವರಿಗೆ, ನಾನೆಂದೂ ನಿಮ್ಮ ಗುರುತು ಕಾಣೆನು; ಧರ್ಮವನ್ನು ಮೀರಿ ನಡೆಯುವವರೇ, ನನ್ನಿಂದ ತೊಲಗಿ ಹೋಗಿರ ಎಂದು ಎಲ್ಲರ ಮುಂದೆ ಹೇಳಿಬಿಡುವೆನು. (7:21-23)

ಆದದರಿಂದ, **ಈ ನನ್ನ ಮಾತುಗಳನ್ನು ಕೇಳಿ ಅವುಗಳಂತೆ ನಡೆಯುವವನು ಬಂಡೆಯ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಯುಳ್ಳ ಮನುಷ್ಯನನ್ನು ಹೋಲುವನು.** ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಬಡೆಯಿತು. ಆದಾಗ್ಯೂ ಅದರ ಅಸ್ತಿವಾರವು ಬಂಡೆಯ ಮೇಲಿದ್ದದರಿಂದ ಅದು ಬೀಳಲಿಲ್ಲ. **ಆದರೆ ಈ ನನ್ನ ಮಾತುಗಳನ್ನು ಕೇಳಿಯೂ ಅವುಗಳಂತೆ ನಡೆಯದ ಪ್ರತಿಯೊಬ್ಬನು ಉಸುಬಿನ ಮೇಲೆ ಮನೆಯನ್ನು ಕಟ್ಟಿಕೊಂಡ ಬುದ್ಧಿಹೀನ ಮನುಷ್ಯನನ್ನು ಹೋಲುವನು.** ಕಟ್ಟಿದ ಮೇಲೆ ಮಳೆ ಸುರಿಯಿತು; ಹಳ್ಳಗಳು ಬಂದವು; ನಾಲ್ಕು ಕಡೆಯಿಂದ ಗಾಳಿ ಬೀಸಿ ಆ ಮನೆಗೆ ಹೊಡೆಯಿತು. ಆಗ ಅದು ಧಡಮ್ಮನೆ ಕಡುಕೊಂಡು ಬಿತ್ತು. (7:24-27)

ಯೇಸು ಈ ಮಾತುಗಳನ್ನು ಹೇಳಿ ಮುಗಿಸಿದ ಮೇಲೆ ಆ **ಜನರ ಗುಂಪುಗಳು ಆತನ ಉಪದೇಶಕ್ಕೆ ಅತ್ಯಾಶ್ಚರ್ಯಪಟ್ಟವು**. ಯಾಕಂದರೆ **ಆತನು ಅವರ ಶಾಸ್ತ್ರಿಗಳಂತೆ ಉಪದೇಸ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು.** (7:28,29)

ಸ್ನೇಹಿತರೇ, ನಾವು ಈದಿನ ಇಲ್ಲಿಗೆ ಮುಗಿಸಬೇಕು, ಯಾಕಂದರೆ ನಮ್ಮ ಸಮಯವು ಮುಗಿಯಿತು. ನೀವು ಮುಂದಿನ ಪಾಠದಲ್ಲಿ ನಮ್ಮನ್ನು ಸೇರಿಕೊಳ್ಳುತ್ತೀರೆಂದು ನಾವು ನಂಬುತ್ತೇವೆ, ಅದರಿಂದ ನಾವು ಈದಿನ ಕೇಳಿಸಿಕೊಂಡಂತ ಪರಲೋಕದಿಂದ ಬಂದ ಶ್ರೇಷ್ಠ ಬೋಧಕನಾದ ಯೇಸುವಿನ ಅದ್ಭುತವಾದ ಮತ್ತು ಅಗಾಧವಾದ ಮಾತುಗಳ ಕುರಿತು ಒಟ್ಟಾಗಿ ಆಲೋಚಿಸುವದಕ್ಕೆ ನಾವು ಶಕ್ತರಾಗುತ್ತೇವೆ. ನೀವು ಈದಿನ ಕೇಳಿಸಿಕೊಂಡ ಕ್ಯಾಸೆಟ್ ನಿಮಗೆ ಬೇಕೆನಿಸಿದರೆ, ನೀವು ನಮಗೆ ಬರೆದುಕೊಳ್ಳಿರಿ, ನಾವು ಅದನ್ನು ಉಚಿತವಾಗಿ ನಿಮಗೆ ಕಳಿಸಿಕೊಡುತ್ತೇವೆ.

ನೀವು ಈದಿನ ಕೇಳಿಸಿಕೊಂಡ ವಿಷಯದ ಮೇಲೆ ದೇವರು ನಿಮಗೆ ತಿಳುವಳಿಕೆಯನ್ನು ಕೊಡಲಿ. ಪರ್ವತದ ಮೇಲೆ ಕರ್ತನಾದ ಯೇಸು ಮಾತಾಡಿದ ಅದ್ಭುತವಾದ ಮಾತಿನೊಂದಿಗೆ ನಾವು ನಿಮ್ಮನ್ನು ಬಿಟ್ಟು ಹೋಗುತ್ತೇವೆ:

**"ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ಅದರ ನೀತಿಗಾಗಿಯೂ ತವಕಪಡಿರಿ, ಇವುಗಳ ಕೂಡ ಅವೆಲ್ಲವು ನಿಮಗೆ ದೊರಕುವವು."**
(ಮತ್ತಾಯ–6:33)

ಪಾಠ 67

# ನೀವು ಹೊಸದಾಗಿ ಹುಟ್ಟಬೇಕು!

ಯೋಹಾನ 3

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪವಿತ್ರ ಸುವಾರ್ತೆಯಲ್ಲಿನ(ಇಂಜಿಲ್)ನಮ್ಮ ಅಧ್ಯಯನದಲ್ಲಿ, ಮೆಸ್ಸೀಯನಾದ ಯೇಸು ತನ್ನ ಜನನ, ತನ್ನ ಗುಣಲಕ್ಷಣ, ತನ್ನ ಕೆಲಸ –ಗಳಲ್ಲಿ ಅದ್ವಿತೀಯನಾಗಿದ್ದನು ಎನ್ನುವದನ್ನು ನಾವು ನೋಡಿದೆವು. ಮತ್ತು ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಯೇಸು ತನ್ನ ಬೋಧನೆ –ಯಲ್ಲಿ ಅದ್ವಿತೀಯನಾಗಿದ್ದನು ಎನ್ನುವದನ್ನು ನಾವು ಗುರುತಿಸಿದೆವು. ಆತನು ಮಾತಾಡಿದ ಹಾಗೆ ಸ್ಪಷ್ಟವಾಗಿ ಮತ್ತು ಅಗಾಧವಾಗಿ ಮಾತಾಡಿದವರು ಬೇರೆ ಯಾರೂ ಎಂದೂ ಅಲ್ಲಿರಲಿಲ್ಲ. ಆತನ ಮಾತನ್ನು ಕೇಳಿದವರು ಬೆರಗಾಗಿದ್ದರು, ಯಾಕಂದರೆ ಆತನು ಅವರ ಶಾಸ್ತ್ರಿಗಳು(ಇಮಾಮ್ಸ್) ಮತ್ತು ಯಾಜಕರುಗಳಂತೆ(ಮ್ಯಾರಬೌಟ್ಸ್) ಉಪದೇಶ ಮಾಡದೆ ಅಧಿಕಾರವಿದ್ದವನಂತೆ ಅವರಿಗೆ ಉಪದೇಶ ಮಾಡುತ್ತಿದ್ದನು. ಅವರ ಶಾಸ್ತ್ರಿಗಳ ಬಾಯಿಂದ ಬರುವ ಬಹಳ ಮಾತುಗಳಿಗಿಂತ ಯೇಸುವಿನಿಂದ ಬರುವ ಕೆಲವೇ ಮಾತುಗಳು ತುಂಬಾ ಬೆಲೆಯುಳ್ಳವುಗಳಾಗಿದ್ದವು. ಈ ಕಾರಣದಿಂದ, ಯೆಹೂದ್ಯರ ಅನೇಕ ನಾಯಕರುಗಳು ಯೇಸುವಿನ ವಿಷಯದಲ್ಲಿ ಸಂತೋಷ –ವುಳ್ಳವರಾಗಿರಲಿಲ್ಲ. ಆತನು ಅವರ ಸಂಪ್ರದಾಯಗಳಿಗೆ ವಿರುದ್ಧವಾಗಿರುವಂತದ್ದನ್ನು ಮಾತ್ರ ಉಪದೇಶಿಸುತ್ತಿರಲಿಲ್ಲ, ಆದರೆ ಅವರ ಕಪಟತನವನ್ನು ಎಲ್ಲರ ಮುಂದೆ ತೋರಿಸಿಕೊಡುತ್ತಿದ್ದನು!

ನಮ್ಮ ಹಿಂದಿನ ಪಾಠದಲ್ಲಿ ಯೇಸು ತನ್ನ ಶಿಷ್ಯರೊಂದಿಗೆ ಪರ್ವತದ ಮೇಲೆ ಆತನು ಮಾಡಿದ ಉಪದೇಶವನ್ನು ನಾವು ಕೇಳಿಸಿಕೊಂಡಿ –ದ್ದೇವೆ. ಆತನ ಪ್ರಸಂಗವನ್ನು ಆರು ಶಬ್ದಗಳಿಂದ(ಆಂಗ್ಲ ಭಾಷೆಯ) ಸಂಕ್ಷಿಪ್ತಗೊಳಿಸಬಹುದು. ಆ ಶಬ್ದ ಯಾವುದೆಂದರೆ: "ಕಪಟಿಗಳ ಹಾಗೆ ಮಾಡಬೇಡಿರಿ!" ಕಪಟತನವು ದೇವರಿಗೆ ಅಪ್ರಿಯವಾದುದು ಮತ್ತು ಮನುಷ್ಯನಿಗೆ ಹಾನಿಕಾರಕವು ಆಗಿದೆ. ಅದಕ್ಕಾಗಿಯೇ ಯೇಸು ಜನರ ಗುಂಪಿಗೆ, "ಕಪಟಿಗಳಂತೆ ಮಾಡಬೇಡಿರಿ" ಎಂದು ಹೇಳಿದನು. ಕಪಟಿಗಳಂತೆ ಮಾಡುವದು ಅಂದರೆ ಏನೆಂದು ನಿಮಗೆ ಗೊತ್ತಾ? ಯಾರಾದರೂ ತಮ್ಮ ಹೃದಯದಲ್ಲಿರುವದರೊಂದಿಗೆ ಸಮಂಜಸವಲ್ಲದಂತ ಒಂದು ನಡತೆಯ ಲಕ್ಷಣವನ್ನು ಹೊಂದಿರುವಂತೆ ಸೋಗು ಹಾಕುವದೇ ಕಪಟತನ. ಯೇಸು ಹೇಳಿರುವದೇನೆಂದರೆ, ಕಪಟಿಗಳು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದಾರೆ; ಇವು ಹೊರಗೆ ಚಂದವಾಗಿ ಕಾಣುತ್ತವೆ, ಒಳಗೆ ನೋಡಿದರೆ ಎಲ್ಲಾ ಹೊಲಸಿನಿಂದ ತುಂಬಿರುತ್ತವೆ ಎಂಬದು. (ಮತ್ತಾಯ–23:27)

ಯಾರೊಬ್ಬರೂ ದೇವರನ್ನು ಮೋಸಗೊಳಿಸುವದಕ್ಕಾಗುವದಿಲ್ಲ. ದೇವರ ವಾಕ್ಯ ಹೇಳುವದೇನೆಂದರೆ: "ನಾವು ಯಾವಾತನಿಗೆ ಲೆಕ್ಕ ಒಪ್ಪಿಸಬೇಕಾಗಿದೆಯೋ ಆತನ ದೃಷ್ಟಿಗೆ ಸಮಸ್ತವು ಮುಚ್ಚುಮರೆಯಿಲ್ಲದ್ದಾಗಿಯೂ ಬೈಲಾದದ್ದಾಗಿಯೂ ಅದೆ. ಆತನ ಸನ್ನಿಧಿಯಲ್ಲಿ ಅಗೋಚರವಾಗಿರುವ ಸೃಷ್ಟಿಯು ಒಂದೂ ಇಲ್ಲ." (ಇಬ್ರಿಯ–4:13) ಮನುಷ್ಯನ ಹೃದಯವನ್ನು ತಿಳಿದಿರುವಂತ ಯೇಸು, ಧಾರ್ಮಿಕ ನಾಯಕರುಗಳಾಗಿದ್ದ ಶಾಸ್ತ್ರಿಗಳು ಮತ್ತು ಫರಿಸಾಯರಲ್ಲಿದ್ದ ಕಪಟತನವನ್ನು ನೋಡಿದನು. ಇವರು ಪ್ರಾರ್ಥಿಸುವದರಲ್ಲಿ, ಉಪವಾಸ ಮಾಡುವದರಲ್ಲಿ, ಧರ್ಮಕೊಡುವದರಲ್ಲಿ ಆಸಕ್ತಿಯುಳ್ಳವರಂತೆ ಹೊರತೋರಿಕೆಯಲ್ಲಿ ಕಾಣಿಸುತ್ತಾರೆ, ಆದರೆ ಅವರು ತಮ್ಮ ಹೃದಯ –ದಲ್ಲಿ ನಿಜವಾಗಿಯೂ ದೇವರನ್ನು ಮತ್ತು ಆತನ ವಾಕ್ಯವನ್ನು ಪ್ರೀತಿಸುತ್ತಿರಲಿಲ್ಲ. ಇದರ ಪರಿಣಾಮವಾಗಿ, ಅವರ ಎಲ್ಲಾ "ಧಾರ್ಮಿಕ" ಕಾರ್ಯಗಳು ಮತ್ತು ಶಾಸ್ತ್ರವಿಧಿಗಳು ನಿಷ್ಪ್ರಯೋಜಕವಾದವುಗಳಾಗಿದ್ದವು. ಹಾಗಾಗಿ, ಯೇಸು ತನ್ನ ಶಿಷ್ಯರಿಗೆ ಹೀಗೆ ಹೇಳಿದನು:

"ನೀವು ಪ್ರಾರ್ಥನೆ ಮಾಡುವಾಗ ಕಪಟಿಗಳ ಹಾಗೆ ಮಾಡಬೇಡಿರಿ. ಜನರು ನೋಡಬೇಕೆಂದು ಅವರು ಸಭಾಮಂದಿರಗಳಲ್ಲಿಯೂ ಬೀದೀಚೌಕಗಳಲ್ಲಿಯೂ ನಿಂತುಕೊಂಡು ಪ್ರಾರ್ಥನೆ ಮಾಡುವದಕ್ಕೆ ಇಷ್ಟಪಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾ –ಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." (ಮತ್ತಾಯ–6:5). "ನೀನು ಧರ್ಮಕೊಡುವಾಗ ನಿನ್ನ ಮುಂದೆ ಕೊಂಬೂದಿಸಬೇಡ. ಜನರಿಂದ ಹೊಗಳಿಸಿಕೊಳ್ಳಬೇಕೆಂದು ಕಪಟಿಗಳು ಸಭಾಮಂದಿರಗಳಲ್ಲಿಯೂ ಬೀದಿಗಳಲ್ಲಿಯೂ ಹಾಗೆ ಮಾಡುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ."(ಮತ್ತಾಯ–6:2). "ಇದಲ್ಲದೆ ನೀವು ಉಪವಾಸ ಮಾಡು –ವಾಗ ಕಪಟಿಗಳಂತೆ ಮುಖವನ್ನು ಸಪ್ಪಗೆ ಮಾಡಿಕೊಳ್ಳಬೇಡಿರಿ. ಅವರು ತಾವು ಉಪವಾಸಿಗಳೆಂದು ಜನರಿಗೆ ತೋರುವದಕ್ಕಾಗಿ ತಮ್ಮ ಮುಖವನ್ನು ವಿಕಾರ ಮಾಡಿಕೊಳ್ಳುತ್ತಾರೆ. ಅವರು ತಮಗೆ ಬರತಕ್ಕ ಫಲವನ್ನು ಹೊಂದಿದ್ದಾಯಿತೆಂದು ನಿಮಗೆ ಸತ್ಯವಾಗಿ ಹೇಳುತ್ತೇನೆ." (ಮತ್ತಾಯ–6:16).

**"ಕಪಟಿಗಳ ಹಾಗೆ ಮಾಡಬೇಡಿರಿ"**. ನಿಮ್ಮ ನೀತಿಯು ಶಾಸ್ತ್ರಿಗಳ ಮತ್ತು ಫರಿಸಾಯರ ನೀತಿಗಿಂತಲೂ ಹೆಚ್ಚಿನದಾಗದಿದ್ದರೆ ನೀವು ಪರ – ಲೋಕರಾಜ್ಯದಲ್ಲಿ ಸೇರಲಾರಿರಿ ಎಂದು ನಿಮಗೆ ಹೇಳುತ್ತೇನೆ." (ಮತ್ತಾಯ–6:5; 5:20). **"ಆತ್ಮದಲ್ಲಿ ಬಡವರಾಗಿರುವವರು** ಧನ್ಯರು; ಪರಲೋಕರಾಜ್ಯವು ಅವರದು. **ನೀತಿಗೆ ಹಸಿದು ಬಾಯಾರಿದವರು** ಧನ್ಯರು. ಅವರಿಗೆ ತೃಪ್ತಿಯಾಗುವದು. **ನಿರ್ಮಲಚಿತ್ತರು ಧನ್ಯರು;** ಅವರು ದೇವರನ್ನು ನೋಡುವರು. ಆದದರಿಂದ ಪರಲೋಕರಾಜ್ಯದಲ್ಲಿರುವ ನಿಮ್ಮ ತಂದೆಯು ಯಾವ ದೋಷವೂ ಇಲ್ಲದವನಾಗಿರು –ವಂತೆ **ನೀವೂ ದೋಷವಿಲ್ಲದವರಾಗಿರ್ರಿ."**(ಮತ್ತಾಯ–5:3,6,8, 48). ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಲು ದೊಡ್ಡದು, ದಾರಿ ಅಗಲವು; ಅದರಲ್ಲಿ ಹೋಗುವವರು **ಬಹುಜನ**. ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು **ಸ್ವಲ್ಪಜನ."** (ಮತ್ತಾಯ–7:13,14).

ಹೀಗೆ ಕರ್ತನಾದ ಯೇಸು ನಿತ್ಯಜೀವಕ್ಕೆ ಹೋಗುವಂತ ಇಕ್ಕಟ್ಟಾದ ದಾರಿಯನ್ನು ಆರಿಸಿಕೊಳ್ಳುವಂತೆ ಜನರಿಗೆ ಬೋಧಿಸಿದನು. ರಕ್ಷ –ಣೆಯ ದಾರಿಗೆ ಸಂಬಂಧಿಸಿದಂತೆ ಯೇಸು ಏನು ಹೇಳಿದನೆಂಬುದನ್ನು ನೀವು ಗ್ರಹಿಸಿಕೊಂಡಿದ್ದೀರೋ? ಇದು ವಿಪರೀತ ಪ್ರಾಮುಖ್ಯ –ವಾದುದು! ಒಬ್ಬ ವ್ಯಕ್ತಿ, ಅವನು ಅಥವಾ ಅವಳು ಎಂದಾದರೂ ದೇವರನ್ನು ನೋಡಿ ಆತನ ಪ್ರಸನ್ನತೆಯಲ್ಲಿ ಎಂದೆಂದಿಗೂ ಇರುವ –ದಕ್ಕೆ ಅವರು ಹೇಗಿರಬೇಕು? ಇದರ ಕುರಿತು ಯೇಸು ಏನು ಹೇಳುತ್ತಾನೆ? ಸಂಕ್ಷಿಪ್ತವಾಗಿ ಆತನು ಹೇಳಿರುವದೇನೆಂದರೆ: **"ನೀವು ಒಂದು ಶುದ್ದವಾದ ಮತ್ತು ಪೂರ್ಣವಾದ ಹೃದಯವನ್ನು ಹೊಂದಿರಬೇಕು!"**

ಆದರೆ ಪಾಪದಲ್ಲಿ ಹುಟ್ಟಿರುವ ಆದಾಮನ ಒಂದು ಮಗುವು ಹೇಗೆ ಶುದ್ಧವಾದ ಮತ್ತು ಪೂರ್ಣವಾದ ಹೃದಯವನ್ನು ಹೊಂದಿರುವ –ದಕ್ಕೆ ಸಾಧ್ಯ? ದೇವರಿಗೆ ಅಗತ್ಯವಾಗಿರುವ ಶುದ್ಧವಾದ ಹೃದಯದೊಳಕ್ಕೆ ತನ್ನ ಕೆಟ್ಟ ಹೃದಯವು ಬದಲಾಗುವದಕ್ಕೆ ಕಾರಣವಾಗಿರು – ವಂತ ಯಾವುದನ್ನಾದರೂ ಅವನು ಮಾಡಲು ಸಾಧ್ಯವಿದೆಯೋ? ಇಲ್ಲ! ಮನುಷ್ಯನು ತಾನೇ, ತನ್ನ ಹೃದಯವನ್ನು ಶುದ್ಧಪಡಿಸಿ – ಕೊಳ್ಳುವ ಯಾವ ಸಾಧನವನ್ನು ಹೊಂದಿಲ್ಲ. "ಒಂದುವೇಳೆ ಒಂದು ಮರದ ದಿಮ್ಮಿ ಬಹಳ ಸಮಯದವರೆಗೆ ನೀರಿನಲ್ಲೇ ಇದ್ದರೆ ಅದು ಸಹ ಒಂದು ಮೊಸಳೆಯಾಗಿ ಬದಲಾಗುತ್ತದೆ." {ಉಲೂಫ್‌ನ ಗಾದೆ}. ಅದೇರೀತಿ, ದೇವರ ಮುಂದೆ ನಮ್ಮನ್ನು ನಾವೇ ಶುದ್ಧರನ್ನಾಗಿ ಮಾಡಿಕೊಳ್ಳುವದಕ್ಕೆ ಪಾಪಿಗಳಾದ ನಾವು ಏನೂ ಮಾಡುವದಕ್ಕಾಗುವದಿಲ್ಲ. ಹೀಗಿದ್ದರೂ, ಈದಿನ ಉಳಿದ ಸಮಯದಲ್ಲಿ, **ಮನುಷ್ಯನಿಗೆ ಯಾವುದು ಅಸಾಧ್ಯವೋ ಅದು ದೇವರಿಗೆ ಸಾಧ್ಯ!** ಎನ್ನುವದನ್ನು ನಾವು ನೋಡಿಕೊಳ್ಳೋಣ.

ಈಗ ಸುವಾರ್ತೆಯಲ್ಲಿ ಓದುವದನ್ನು ಮುಂದುವರಿಸಿ, ರಾತ್ರಿಯಲ್ಲಿ ಯೇಸುವಿನೊಂದಿಗೆ ಮಾತಾಡುವದಕ್ಕಾಗಿ ಯೆರೂಸಲೇಮಿನಿಂದ ಬಂದಿದ್ದ **ನಿಕೊದೇಮನೆಂಬ** ಒಬ್ಬ ಧಾರ್ಮಿಕ ನಾಯಕನ ಕುರಿತು ನೋಡಿಕೊಳ್ಳೋಣ. ಒಬ್ಬ ಪಾಪಿಯು ಒಂದು ಶುದ್ಧವಾದ ಹೃದಯವನ್ನು ಮತ್ತು ನಿತ್ಯಜೀವವೆಂಬ ದೇವರ ವರವನ್ನು ಹೇಗೆ ಪಡೆದುಕೊಳ್ಳಲು ಸಾಧ್ಯ ಎನ್ನುವದನ್ನು ಯೇಸು ಅವನಿಗೆ ತೋರಿಸಿ ಕೊಟ್ಟನು. ನಾವು ಯೋಹಾನನ ಸುವಾರ್ತೆ, ಮೂರನೆಯ ಅಧ್ಯಾಯದಲ್ಲಿರುವದನ್ನು ಓದುತ್ತಿದ್ದೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಫರಿಸಾಯರಲ್ಲಿ ಯೆಹೂದ್ಯರ ಹಿರೀಸಭೆಯವನಾದ ನಿಕೊದೇಮನೆಂಬ ಒಬ್ಬ ಮನುಷ್ಯನಿದ್ದನು. ಅವನು ರಾತ್ರಿಯಲ್ಲಿ ಯೇಸುವಿನ ಬಳಿಗೆ ಬಂದು ಆತನಿಗೆ, "ಗುರುವೇ, ನೀನು ದೇವರ ಕಡೆಯಿಂದ ಬಂದ ಬೋಧಕನೆಂದು ಬಲ್ಲೆವು. ನೀನು ಮಾಡುವಂತ ಈ ಸೂಚಕ ಕಾರ್ಯಗಳನ್ನು ದೇವರ ಸಹಾಯವಿಲ್ಲದೆ ಮಾಡುವದು ಯಾರಿಂದಲೂ ಆಗದು" ಎಂದು ಹೇಳಿದನು. ಅದಕ್ಕೆ ಯೇಸು, **"ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು"** ಅಂದನು. ನಿಕೊದೇಮನು ಆತನನ್ನು, "ಮನುಷ್ಯನು ಮುದುಕನಾದ ಮೇಲೆ ಹುಟ್ಟುವದು ಹೇಗೆ? ಅವನು ತನ್ನ ತಾಯಿಯ ಗರ್ಭದಲ್ಲಿ ತಿರಿಗಿ ಸೇರಿ ಹುಟ್ಟುವದಾದೀತೇ?" ಎಂದು ಕೇಳಿದನು. ಅದಕ್ಕೆ ಯೇಸು, "ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬನು ನೀರಿನಿಂದಲೂ ಆತ್ಮನಿಂದಲೂ ಹುಟ್ಟದಿದ್ದರೆ ಅವನು ದೇವರ ರಾಜ್ಯಕ್ಕೆ ಸೇರಲಾರನು. **ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ, ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ಹೇಳಿದ್ದರಿಂದ ಆಶ್ಚರ್ಯಪಡಬೇಡ.** ಗಾಳಿಯು ಮನಸ್ಸು ಬಂದ ಕಡೆಗೆ ಬೀಸುತ್ತದೆ; ಅದರ ಸಪ್ಪಳವನ್ನು ಕೇಳುತ್ತೀ; ಆದರೆ ಅದು ಎಲ್ಲಿಂದ ಬರುತ್ತದೋ ಎಲ್ಲಿಗೆ ಹೋಗುತ್ತದೋ ನಿನಗೆ ತಿಳಿಯದು; ಆತ್ಮನಿಂದ ಹುಟ್ಟಿದವ –ರೆಲ್ಲರೂ ಅದರಂತೆಯೇ" ಅಂದನು. (ಯೋಹಾನ–3:1-8)

ಅದಕ್ಕೆ ನಿಕೊದೇಮನು, "ಇದು ಆಗುವದು ಹೇಗೆ?" ಅಂದಾಗ ಯೇಸು ಅವನಿಗೆ ಹೇಳಿದ್ದೇನೆಂದರೆ, "ಇಸ್ರಾಯೇಲ್ ಜನಕ್ಕೆ ಬೋಧಕ –ನಾಗಿರುವ ನಿನಗೆ ಇದು ತಿಳಿಯುವದಿಲ್ಲವೋ? ನಿನಗೆ ನಿಜನಿಜವಾಗಿ ಹೇಳುತ್ತೇನೆ, ತಿಳಿದದ್ದನ್ನು ಹೇಳುತ್ತೇವೆ, ನೋಡಿದ್ದಕ್ಕೆ ಸಾಕ್ಷಿ – ಕೊಡುತ್ತೇವೆ; ನೀವು ನಮ್ಮ ಸಾಕ್ಷಿಯನ್ನು ಒಪ್ಪುವದಿಲ್ಲ. ನಾನು ಭೂಲೋಕದಲ್ಲಿ ನಡೆಯುವ ಕಾರ್ಯಗಳನ್ನು ಕುರಿತು ನಿಮಗೆ ಹೇಳು –ವಾಗ ನೀವು ನಂಬದೆ ಹೋದರೆ ಪರಲೋಕದ ಕಾರ್ಯಗಳನ್ನು ಕುರಿತು ನಿಮಗೆ ಹೇಳಿದರೆ ಹೇಗೆ ನಂಬೀರಿ? ಪರಲೋಕದಿಂದ ಇಳಿದು ಬಂದವನೇ ಅಂದರೆ ಮನುಷ್ಯಕುಮಾರನೇ ಹೊರತು ಮತ್ತಾರೂ ಪರಲೋಕಕ್ಕೆ ಏರಿಹೋದವನಲ್ಲ. ಇದಲ್ಲದೆ ಜನರು ನೋಡಿ ಜೀವದಿಂದುಳಿಯಬೇಕೆಂದು **ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯಕುಮಾರನು ತನ್ನನ್ನು ನಂಬುವವ –ರೆಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಎತ್ತರದಲ್ಲಿಡಲ್ಪಡಬೇಕು. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು."** ಆಮೆನ್.(ಯೋಹಾನ–3:9-16)

ಕರ್ತನಾದ ಯೇಸು ಧಾರ್ಮಿಕ ನಾಯಕನಾದ ನಿಕೊದೇಮನಿಗೆ ಹೇಳಿದ್ದರ ಕುರಿತಾಗಿ ನಾವು ಸ್ವಲ್ಪ ಆಲೋಚಿಸೋಣ. **ಯೇಸು ನಿಕೊದೇಮನಿಗೆ ಏನು ಹೇಳಿದನೋ ಅದು, ಅವನು ನಿತ್ಯಜೀವವನ್ನೂ ಮತ್ತು ದೇವರೊಂದಿಗೆ ಎಂದೆಂದಿಗೂ ಜೀವಿಸುವಂತ ಹಕ್ಕನ್ನು ಹೊಂದಿಕೊಳ್ಳುವದಕ್ಕಿಂತ ಮುಂಚೆ ಸಂಭವಿಸುವಂತದ್ದಾಗಿದೆಯಲ್ಲವೋ**? ಆತನು ಹೇಳಿದ್ದೇನೆಂದರೆ, "ನಾನು ನಿನಗೆ ನಿಜನಿಜವಾಗಿ ಹೇಳುತ್ತೇನೆ, ಒಬ್ಬ ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು. ನೀನು ಹೊಸದಾಗಿ ಹುಟ್ಟಬೇಕು!" ಹೊಸದಾಗಿ ಹುಟ್ಟುವದು ಏನೆಂಬುದನ್ನು ನಿಕೊದೇಮನು ತಿಳಿದಿದ್ದನೋ? ಇಲ್ಲ! ಅದಕ್ಕಾಗಿಯೇ ಯೇಸು ಅವನಿಗೆ, "ಇಸ್ರಾಯೇಲ್ ಜನಕ್ಕೆ ಬೋಧಕನಾಗಿರುವ ನಿನಗೆ ಇದು ತಿಳಿಯುವದಿಲ್ಲವೋ? ದೇಹದಿಂದ ಹುಟ್ಟಿದ್ದು ದೇಹವೇ; ಆತ್ಮನಿಂದ ಹುಟ್ಟಿದ್ದು ಆತ್ಮವೇ, **ನೀವು ಹೊಸದಾಗಿ ಹುಟ್ಟಬೇಕು** ಎಂದು ನಾನು ಹೇಳಿದ್ದರಿಂದ ಆಶ್ಚರ್ಯಪಡಬೇಡ!" ಅಂದನು. (ಯೋಹಾನ–3:10, 6,7)

ಸಂಕ್ಷಿಪ್ತವಾಗಿ ಹೇಳುವದಾದರೆ, ಯೇಸು ನಿಕೊದೇಮನಿಗೆ ಹೇಳಿದ್ದೇನೆಂದರೆ, ದೇವರನ್ನು ನೋಡಿ ಆತನ ಪವಿತ್ರ ಸನ್ನಿಧಾನದಲ್ಲಿ ನಿತ್ಯತ್ವದುದ್ದಕ್ಕೂ ಜೀವಿಸುವದಕ್ಕೆ ಇಷ್ಟಪಡುವ ಯಾರಾದರೂ **ಎರಡು ಸಲ ಹುಟ್ಟಬೇಕು!** ಎಂಬದು. ನೀನು ಎರಡನೆಯ ಸಲ ನಿನ್ನ ತಾಯಿಯ ಗರ್ಭದೊಳಕ್ಕೆ ಹೋಗಿ ಹುಟ್ಟಬೇಕೆಂದು(ಶರೀರಿಕವಾಗಿ) ಇದರ ಅರ್ಥವಲ್ಲ. ಹೊಸದಾಗಿ ಹುಟ್ಟುವದೆಂದರೆ, **ದೇವರಾತ್ಮನು** ನಿಮ್ಮ ಹೃದಯವನ್ನು ತೊಳೆದು ತನ್ನ ಬಲದಿಂದ ನಿಮ್ಮಲ್ಲಿ ನೂತನ ಮನಸ್ಸನ್ನು ಉಂಟುಮಾಡಿ **ನಿಮ್ಮನ್ನು ಪುನ:ರಚಿಸುತ್ತಾನೆ** ಎಂದು ಅರ್ಥ. (ತೀತ–3:5). **ಧರ್ಮದ ಹೊರತೋರಿಕೆಯ ರೀತಿಯಿಂದ ಸಂಪೂರ್ಣವಾಗಿ ವ್ಯತ್ಯಾಸವುಳ್ಳಂತ** ಮತ್ತು **ಪರಲೋಕದಿಂದ ಬಂದಂತ ಬಲದಿಂದ** ನೀವು ಹುಟ್ಟಬೇಕು. ನೀವು **ಒಳಗೆ** ನಿಮ್ಮ **ಹೃದಯದಲ್ಲಿ** ಬದಲಾಗಬೇಕು! ಆದಾಮನಿಂದ ಹುಟ್ಟಿದವರೆಲ್ಲರೂ ಪಾಪದ ಕಲೆಯುಳ್ಳವರಾಗಿದ್ದರು ಮತ್ತು ದೇವರ ರಾಜ್ಯದಲ್ಲಿ ಪಾಲು ಹೊಂದಿದವರಾಗಿರಲಿಲ್ಲ. ಆದಾಮನ ಸಂತಾನದವರು ತಮ್ಮ ಹೃದಯದಲ್ಲಿ ಬೆಳೆದಿದ್ದ ಪಾಪದ ಬೇರನ್ನು ತೆಗೆದುಹಾಕುವದಕ್ಕೆ ಶಕ್ತಿಯಿಲ್ಲದವರಾಗಿದ್ದರು. ಕೇವಲ ಬಹಳ ಸಮಯ ನೀರಿನಲ್ಲಿದ್ದ ಮಾತ್ರಕ್ಕೆ ಮರದ ದಿಮ್ಮಿಯು ಮೊಸಳೆಯಾಗಿ ಬದಲಾಗುವದಕ್ಕಾಗುವದಿಲ್ಲವೋ ಹಾಗೆಯೇ ಧಾರ್ಮಿಕ ವಿಧಿ ವಿಧಾನಗಳನ್ನು ನಡಿಸುತ್ತಾ ಒಳ್ಳೆಯ ಕೆಲಸ –ಗಳನ್ನು ಮಾಡುವಂತಾದ್ದು ಎಂದಿಗೂ ಕೆಟ್ಟ ಹೃದಯವನ್ನು ಶುದ್ಧ ಹೃದಯವನ್ನಾಗಿ ಮಾಡುವದಕ್ಕೆ ಸಾಧ್ಯವಿಲ್ಲ. ದೇವರು ತಾನೇ ನಿಮ್ಮ ಹೃದಯದಲ್ಲಿ ಒಂದು ಅದ್ಭುತವನ್ನು ಮಾಡಿ ಅದನ್ನು ಹೊಸದನ್ನಾಗಿ ಮಾಡಬೇಕು, ಯಾಕೆಂದರೆ ಲಯವಾಗುವ ವಸ್ತು ನಿರ್ಲಯ ಪದವಿಗೆ ಬಾಧ್ಯವಾಗುವದಿಲ್ಲ!(1ಕೊರಿಂಥ–15:50ನ್ನು ನೋಡಿರಿ). ಸಂಕ್ಷಿಪ್ತವಾಗಿ ಹೇಳುವದಾದರೆ, "ನೀವು ಹೊಸದಾಗಿ ಹುಟ್ಟಬೇಕು!"

ಅದನ್ನೇ ಯೇಸು ಧಾರ್ಮಿಕ ನಾಯಕನಾದ ನಿಕೋದೇಮನಿಗೆ ಬೋಧಿಸಿದ್ದು, ಆದರೆ ಇದನ್ನು ಅರ್ಥಮಾಡಿಕೊಳ್ಳುವದಕ್ಕೆ ನಿಕೊದೇಮ –ನಿಗೆ ಕಷ್ಟವಾಯಿತು. ಹಾಗಾಗಿ, ಅವನು ಯೇಸುವನ್ನು, ಇದು ಹೇಗೆ ಸಾಧ್ಯ? ನಾನು ಹೇಗೆ ಹೊಸದಾಗಿ ಹುಟ್ಟಿ ಹೊಸದಾದ ಮತ್ತು ಶುದ್ಧವಾದ ಹೃದಯವನ್ನು ಪಡೆಯುವದಕ್ಕೆ ಸಾಧ್ಯ? ಎಂದು ಕೇಳಿದನು.

ಯೇಸು ಅವನಿಗೆ ಉತ್ತರಿಸುತ್ತಾ ಹೀಗೆ ಹೇಳಿದನು:

"ಜನರು ನೋಡಿ ಜೀವದಿಂದುಳಿಯಬೇಕೆಂದು ಮೋಶೆಯು ಅಡವಿಯಲ್ಲಿ ಆ ಸರ್ಪವನ್ನು ಎತ್ತರದಲ್ಲಿಟ್ಟ ಹಾಗೆಯೇ ಮನುಷ್ಯ ಕುಮಾ –ರನು **ತನ್ನನ್ನು ನಂಬುವವರೆಲ್ಲರೂ** ನಿತ್ಯಜೀವವನ್ನು ಪಡೆಯಬೇಕೆಂದು ಎತ್ತರದಲ್ಲಿಡಲ್ಪಡಬೇಕು. ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." (ಯೋಹಾನ–3:14-16)

ನರಕದ ನ್ಯಾಯತೀರ್ಪನ್ನು ತಪ್ಪಿಸಿಕೊಂಡು ನಿತ್ಯಜೀವವನ್ನು ಅವನು ಹೇಗೆ ಪಡೆಯುವದಕ್ಕೆ ಸಾಧ್ಯ ಎಂಬುದನ್ನು ನಿಕೊದೇಮನಿಗೆ ತೋರಿಸುವದಕ್ಕೆ, ಪ್ರವಾದಿಯಾದ ಮೋಶೆಯ ಕಾಲದಲ್ಲಿ ಅರಣ್ಯದಲ್ಲಿ ಅವನ ಪೂರ್ವಿಕರಿಗೆ ಏನಾಯಿತೆಂಬುದನ್ನು ಯೇಸು ಜ್ಞಾಪಕ –ಪಡಿಸಿದನು. ನಾವು ತೋರದಲ್ಲಿ ನೋಡಿದ ಹಾಗೆ, ಇಸ್ರಾಯೇಲ್ಯರು ದೇವರ ಮತ್ತು ಮೋಶೆಯ ವಿರುದ್ಧವಾಗಿ ಗುಣುಗುಟ್ಟಿದಾಗ, ದೇವರು ಅವರ ಮಧ್ಯದಲ್ಲಿ ವಿಷದ ಸರ್ಪಗಳನ್ನು ಕಳಿಸಿದಾಗ, ಅವು ಕಚ್ಚಿದ್ದರಿಂದ ಅನೇಕರು ಸತ್ತುಹೋದರು. ಆದಾಗ್ಯೂ, ಇಸ್ರಾ –ಯೇಲ್ಯರು ಪಶ್ಚಾತ್ತಪಪಟ್ಟ ನಂತರ, ದೇವರು ಮೋಶೆಗೆ, **ಒಂದು ತಾಮ್ರದ ಸರ್ಪವನ್ನು ಮಾಡಿ ಧ್ವಜಸ್ತಂಭದ ಮೇಲೆ ಎತ್ತಿ ನಿಲ್ಲಿಸು,** ಅದರಿಂದ **ಅದನ್ನು ನೋಡುವ ಪ್ರತಿಯೊಬ್ಬರು ಸ್ವಸ್ಥಗೊಳ್ಳುತ್ತಾರೆ ಮತ್ತು ಸಾಯುವದಿಲ್ಲ ಎಂದು ಆಜ್ಞಾಪಿಸಿದನು.**

ಹೀಗೆ, ಇಸ್ರಾಯೇಲ್ಯರು ಕೇವಲ ಧ್ವಜಸ್ಥಂಭದ ಮೇಲಿದ್ದ ಸರ್ಪವನ್ನು ನಂಬಿಕೆಯಿಂದ ನೋಡಿ ಮರಣದಿಂದ ರಕ್ಷಿಸಲ್ಪಟ್ಟ ಹಾಗೆಯೇ ನಿತ್ಯವಾದ ಶಿಕ್ಷೆಯಿಂದ ರಕ್ಷಿಸಿಕೊಳ್ಳುವದಕ್ಕೆ ದೇವರು ಒದಗಿಸಿರುವ ಪರಿಹಾರದಲ್ಲಿ ಆದಾಮನ ಮಕ್ಕಳು **ಕೇವಲ ನಂಬಿಕೆಯಿಡಬೇಕು** ಎಂದು ಯೇಸು ನಿಕೊದೇಮನಿಗೆ ಹೇಳಿದನು. ಸರ್ಪಗಳಿಂದ ಕಚ್ಚಿಸಿಕೊಂಡ ಇಸ್ರಾಯೇಲ್ಯರ ಹಾಗೆ ನಾವೆಲ್ಲರೂ ಇದ್ದೇವೆ. **ಸೈತಾನನು** ಒಂದು ವಿಷಸರ್ಪದ ಹಾಗೆ ಮತ್ತು **ಪಾಪವು,** ಮನುಷ್ಯನು ನಾಶವಾಗುವದಕ್ಕೆ ಕಾರಣವಾಗಿರುವಂತ ವಿಷದ ಹಾಗೆ. ಸೈತಾನನು ಆದಾ –ಮನ ಸಂತಾನದವರನ್ನೆಲ್ಲಾ ಕಚ್ಚಿದ್ದಾನೆ, ಮತ್ತು ಒಂದುವೇಳೆ ದೇವರು ನಮಗೆ ಒಂದು ಪರಿಹಾರವನ್ನು ಕೊಡದೇ ಹೋಗಿದ್ದರೆ ನಾವು ಎಂದೆಂದಿಗೂ ನರಕದಲ್ಲಿ ನಾಶವಾಗುವದಕ್ಕೆ ಪಾಪ ಎಂಬ ವಿಷವು ಕಾರಣವಾಗಿರುತ್ತಿತ್ತು! ದೇವರ ನ್ಯಾಯತೀರ್ಪಿನಿಂದ ನಮ್ಮನ್ನು ರಕ್ಷಿಸಿಕೊಳ್ಳುವ ಸಾಧ್ಯವಾದ ಯಾವ ಸಾಧನವೂ ನಮಗಿಲ್ಲ, ಯಾಕೆಂದರೆ ಪಾಪದ ಸಂಬಳವು ಮರಣ ಮತ್ತು ನರಕವಾಗಿದೆ. ಆದರೆ ಸರ್ಪಗಳ ವಿಷದಿಂದ ಇಸ್ರಾಯೇಲ್ ಮಕ್ಕಳನ್ನು ರಕ್ಷಿಸುವದಕ್ಕೆ ಆತನು ಒಂದು ಪರಿಹಾರವನ್ನು ಒದಗಿಸಿಕೊಟ್ಟಿರುವದಕ್ಕಾಗಿ ಹಾಗೆಯೇ ಪಾಪದ "ವಿಷದಿಂದ" ಆದಾಮನ ಸಂತಾನದವರನ್ನು ರಕ್ಷಿಸುವದಕ್ಕೆ ಸಹ ಆತನು ಒಂದು **ಪರಿಹಾರವನ್ನು** ಒದಗಿಸಿದ್ದಾನೆ ಅದಕ್ಕಾಗಿ ದೇವರಾದ ಕರ್ತನಿಗೆ ಸ್ತೋತ್ರ.

ಪಾಪದಿಂದ ತುಂಬಿದ್ದ ಆದಾಮನ ಮಕ್ಕಳ ಹೃದಯವನ್ನು ನವೀಕರಿಸುವದಕ್ಕೆ ಮತ್ತು ಪುನ:ಸ್ಥಾಪಿಸುವದಕ್ಕೆ ದೇವರು ಮಾಡಿಕೊಂಡಿದ್ದ ಯೋಜನೆಯು ನಿಮಗೆ ಗೊತ್ತಾ? ಇದರ ಕುರಿತು ಕರ್ತನಾದ ಯೇಸು ಏನು ಹೇಳುತ್ತಾನೆ? ಆತನು ಹೇಳಿದ್ದೇನೆಂದರೆ, ಪಾಪಿಗಳಿಗಾಗಿ ಪಾಪದ ದಂಡನೆಯನ್ನು ತಾಳಿಕೊಳ್ಳುವ ಕ್ರಮಕ್ಕಾಗಿ ಪರಿಶುದ್ಧ ವಿಮೋಚಕನು ಎತ್ತರದಲ್ಲಿ (ಶಿಲುಬೆ) ಇಡಲ್ಪಡಬೇಕು ಎಂಬದು. **"ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು!"**

ಹಾಗಾದರೆ ಯಾರು ರಕ್ಷಿಸಲ್ಪಡುತ್ತಾರೆ? ವಾಕ್ಯ ಏನು ಹೇಳುತ್ತದೆ? **"ಆತನನ್ನು ನಂಬುವ ಒಬ್ಬನಾದರೂ** ನಾಶವಾಗದೇ ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು!" ಎಂದು ಹೇಳುತ್ತದೆ. ನಾವು ಯಾರನ್ನು ನಂಬಬೇಕು? ದೇವರು ಕಳಿಸಿದ ವಿಮೋಚಕನನ್ನು ನಾವು ನಂಬಬೇಕು. ನೀವು ಆತನನ್ನು ನಂಬಿದ್ದೀರೋ? ನಿಮ್ಮ ಪಾಪದ ಸಾಲವನ್ನು **ನಿಮಗಾಗಿ** ಹೊತ್ತುಕೊಳ್ಳುವ –ದಕ್ಕೆ, **ನಿಮಗಾಗಿ** ಭೂಲೋಕಕ್ಕೆ ರಕ್ಷಕನಾದ ಯೇಸುವನ್ನು ಕಳಿಸಿದ, ಮತ್ತು ಒಬ್ಬನಾದರೂ ನಾಶವಾಗಬಾರದು ಎಂದು ಇಷ್ಟಪಟ್ಟ ದೇವರನ್ನು ನಿಮ್ಮ ಹೃದಯದಲ್ಲಿ ನಂಬುತ್ತೀರೋ? ನಮ್ಮ ಪಾಪದ ಸಮಸ್ಯೆಗಾಗಿ ದೇವರ ನೀತಿಯ ಪರಿಹಾರವೆಂದರೆ ಅದು ಶಿಲುಬೆಯ ಮೇಲಿನ ಯೇಸುವಿನ ಮರಣ. ವಾಕ್ಯ ಹೀಗೆ ಹೇಳುತ್ತದೆ: **"ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿ –ಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು."** (2ಕೊರಿಂಥ–5:21)

ಸ್ನೇಹಿತರೇ, ದೇವರು ಬದಲಾಗಿಲ್ಲ. ಎರಡು ಸಾವಿರ ವರ್ಷಗಳ ಹಿಂದೆ ಕರ್ತನಾದ ಯೇಸು ನಿಕೊದೇಮನಿಗೆ ಏನು ಹೇಳಿದ್ದನೋ, ಅದನ್ನೇ ಈದಿನವೂ ಸಹ ಆತನು ನಿಮಗೆ ಹೇಳುತ್ತಾನೆ: **"ನೀವು ಹೊಸದಾಗಿ ಹುಟ್ಟಬೇಕು!"** ಎಂದು. ದೇವರು ತನ್ನ ಬಲದಿಂದ ನಿಮ್ಮನ್ನು ಶುದ್ಧಪಡಿಸಿ ನಿಮ್ಮ ಹೃದಯವನ್ನು ಪುನ:ರಚಿಸಿ ನಿಮ್ಮನ್ನು ನವೀಕರಿಸಲು ಇಷ್ಟಪಡುತ್ತಾನೆ. ಹೀಗಿದ್ದರೂ ನೀವು ಆತನ ಶುಭ ಸಂದೇಶವನ್ನು ನಂಬಬೇಕು. ಆತನು ಕಳಿಸಿದ ಮೆಸ್ಸೀಯನಲ್ಲಿ ನೀವು ನಂಬಿಕೆಯಿಡಬೇಕು. ಎಂದೂ ಪಾಪ ಮಾಡದಿದ್ದ ಮತ್ತು ನಿಮ್ಮ ಪಾಪದ ಸಾಲಕ್ಕಾಗಿ ದಂಡತೆತ್ತ ಯೇಸುವನ್ನು ನೀವು ನಂಬಬೇಕು, ಅದರಿಂದ ನೀವು ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ಜೀವಿಸು –ವದಕ್ಕೆ ಸಾಧ್ಯವಾಗುತ್ತದೆ. **"ನೀವು ಹೊಸದಾಗಿ ಹುಟ್ಟಬೇಕು!. . . .ಒಬ್ಬನು ಹೊಸದಾಗಿ ಹುಟ್ಟದಿದ್ದರೆ ಅವನು ದೇವರ ರಾಜ್ಯವನ್ನು ಕಾಣಲಾರನು!"** ಆಮೆನ್.

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮುಂದಿನ ಅಧ್ಯಯನದಲ್ಲಿ, ದೇವರ ಚಿತ್ತವಿದ್ದರೆ, ಸುವಾರ್ತೆಯಲ್ಲಿರುವದನ್ನು ನಾವು ಮುಂದುವರಿಸಿ ಐದು ಜನ ಗಂಡಂದಿರಿದ್ದ ಒಬ್ಬ ಸ್ತ್ರೀಯೊಂದಿಗಿನ ಯೇಸುವಿನ ಸಂಭಾಷಣೆಯನ್ನು ಕೇಳಿಸಿಕೊಳ್ಳಲಿದ್ದೇವೆ. . . . .

ಮೆಸ್ಸೀಯನಾದ ಯೇಸು ದೃಢವಾಗಿ ಹೇಳಿರುವದನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ.

**"ನೀವು ಹೊಸದಾಗಿ ಹುಟ್ಟಬೇಕು ಎಂದು ನಾನು ಹೇಳಿದ್ದರಿಂದ ಆಶ್ಚರ್ಯಪಡಬೇಡ!"** (ಯೋಹಾನ–3:7). **"ನಿರ್ಮಲ ಚಿತ್ತರು ಧನ್ಯರು, ಅವರು ದೇವರನ್ನು ನೊಡುವರು!"** (ಮತ್ತಾಯ–5:8)

[ಪಾಠ 67: ನೀವು ಹೊಸದಾಗಿ ಹುಟ್ಟಬೇಕು] [ಸಾರಾಂಶಗಳ ಪಟ್ಟಿ] [ಪಾಠ 69: ಯೇಸುವಿನ ಅಧಿಕಾರ]

ಪಾಠ 68

# ಲೋಕದ ರಕ್ಷಕನು

ಯೋಹಾನ 4, ಲೂಕ 4

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹೀಗೆ ಸುವಾರ್ತೆಯಲ್ಲಿನ ನಮ್ಮ ಅಧ್ಯಯನದಲ್ಲಿ, ಮೆಸ್ಸೀಯನಾದ ಯೇಸು **ತನ್ನ ಜನನದಲ್ಲಿ, ತನ್ನ ಗುಣಲಕ್ಷಣದಲ್ಲಿ, ತನ್ನ ಕೆಲಸಗಳಲ್ಲಿ, ತನ್ನ ಬೋಧನೆಗಳಲ್ಲಿ** ಅದ್ವಿತೀಯನಾಗಿದ್ದನೆಂಬುದನ್ನು ನಾವು ನೋಡಿದೆವು. **ಆತನ ಜನನಕ್ಕೆ** ಸಂಬಂಧಿಸಿದಂತೆ, ಯೇಸುವಿನ ಹಾಗೆ ಎಂದೂ ಯಾರೂ ಜನಿಸಿಲ್ಲ, ಯಾಕೆಂದರೆ ಆತನು ದೇವರಾತ್ಮನ ಬಲದಿಂದ ಒಬ್ಬ ಕನ್ಯೆಯಲ್ಲಿ ಜನಿಸಿದ್ದನು. ಯೇಸು **ತನ್ನ ಗುಣಲಕ್ಷಣ –ದಲ್ಲಿಯೂ** ಸಹ ಅದ್ವಿತೀಯನಾಗಿದ್ದನೆಂಬುದನ್ನು ನಾವು ನೋಡಿದ್ದೇವೆ, ಯಾಕಂದರೆ ಆತನ ಹಾಗೆ ಒಂದು ಪವಿತ್ರ ಸ್ವಭಾವದೊಂದಿಗೆ ಯಾರೂ ಎಂದೂ ಜನಿಸಿಲ್ಲ. ಯೇಸು **ತನ್ನ ಕೆಲಸದಲ್ಲಿಯೂ** ಸಹ ಎಣೆಯಿಲ್ಲದವನಾಗಿದ್ದಾನೆ, ಯಾಕಂದರೆ ಆತನು ಮಾಡಿದ ಹಾಗೆ ಯಾರೂ ಎಂದೂ ಅದ್ಭುತಗಳನ್ನು ಮಾಡಿಲ್ಲ. ಆತನು ಸುಮ್ಮನೆ ಒಂದು ಮಾತು ಹೇಳಿದರೆ ಸಾಕು, ರೋಗಿಗಳು ಗುಣವಾಗುತ್ತಿದ್ದರು, ಸೈತಾನನು ಮತ್ತು ಅವನ ಗುಂಪು ಓಡಿಹೋಗುತ್ತಿತ್ತು, ಹಾಗೂ ಪಾಪವು ನಿವಾರಣೆಯಾಗುತ್ತಿತ್ತು.

ಯೇಸು **ತನ್ನ ಬೋಧನೆಯಲ್ಲಿಯೂ** ಅದ್ವಿತೀಯನಾಗಿದ್ದನೆಂಬುದನ್ನು ಸಹ ನಾವು ಕಂಡುಕೊಂಡೆವು. ನಮ್ಮ ಹಿಂದಿನ ಕಾರ್ಯಕ್ರಮ –ದಲ್ಲಿ, ಯೇಸು ಮತ್ತು ಧಾರ್ಮಿಕ ನಾಯಕನಾಗಿದ್ದ ನಿಕೊದೇಮನ ನಡುವೆ ನಡೆದ ಸಂಭಾಷಣೆಯಲ್ಲಿ ನಾವು ಇದನ್ನು ಗಮನಿಸಿದ್ದೇವೆ. ದೇವರಾತ್ಮನು ಅವನ ಹೃದಯವನ್ನು ನವೀಕರಿಸದ ಹೊರತು ಅವನು ದೇವರ ಸನ್ನಿಧಿಗೆ ಎಂದಿಗೂ ಪ್ರವೇಶಿಸುವದಕ್ಕಾಗುವದಿಲ್ಲ ಎಂಬುದನ್ನು ಯೇಸು ನಿಕೊದೇಮನಿಗೆ ತೋರಿಸಿಕೊಟ್ಟನು. ಅದಕ್ಕಾಗಿಯೇ ಕರ್ತನಾದ ಯೇಸು ಅವನಿಗೆ, **"ನೀನು ಹೊಸದಾಗಿ ಹುಟ್ಟ –ಬೇಕು!"** ಎಂದು ಹೇಳಿದನು.

ನಿಕೊದೇಮನಿಗಿಂತ **ತುಂಬಾ ವ್ಯತ್ಯಾಸವುಳ್ಳ ಒಬ್ಬರೊಂದಿಗೆ** ಮೆಸ್ಸೀಯನಾದ ಯೇಸು ಹೇಗೆ ಮಾತಾಡಿದ್ದಾನೆ ಎನ್ನುವದನ್ನು ಈದಿನ ನಾವು ಕೇಳಲಿದ್ದೇವೆ. ನಿಕೊದೇಮನು ಒಬ್ಬ ಯೆಹೂದ್ಯನು; ಆದಾಗ್ಯೂ ಈದಿನ ನಮ್ಮ ಪಾಠದಲ್ಲಿ ನಾವು ನೋಡುವ ವ್ಯಕ್ತಿ **ಯೆಹೂದ್ಯ ಅಲ್ಲ**. ನಿಕೊದೇಮನು ಒಬ್ಬ ಪುರುಷ; ಈದಿನ ನಾವು ನೋಡಲಿರುವ ವ್ಯಕ್ತಿ ಒಬ್ಬ ಸ್ತ್ರೀ. ನಿಕೊದೇಮನು ತುಂಬಾ ಧರ್ಮಶ್ರದ್ಧೆಯುಳ್ಳ ವ್ಯಕ್ತಿ, ಆದರೆ ಈ ಸ್ತ್ರೀ ಐದು ಗಂಡಂದಿರನ್ನು ಹೊಂದಿದ್ದ **ಒಬ್ಬ ದೊಡ್ಡ ಪಾಪಿ**. ಮನುಷ್ಯನ ದೃಷ್ಟಿಯಲ್ಲಿ, ಧಾರ್ಮಿಕ ನಾಯಕನಾಗಿದ್ದ ನಿಕೊದೇಮನು, ಈ ಅನೀತಿವಂತ ಸ್ತ್ರೀಗಿಂತ ಉತ್ತಮನಾಗಿದ್ದನು. ಆದರೆ ದೇವರು ಇದನ್ನು ಹಾಗೆ ನೋಡುವವನಲ್ಲ, ಯಾಕಂದರೆ ಆದಾಮನ ಎಲ್ಲಾ ಸಂತಾನದವರು ಅಂದರೆ ಧಾರ್ಮಿಕ ಜನರು ಮತ್ತು ಪಾಪಿಗಳು ಒಂದೇಯಾಗಿದ್ದು ಪಾಪದ ಆಳ್ವಿಕೆಯ ಕೆಳಗಿದ್ದಾರೆ. ಹಾಗಾಗಿಯೇ ಆದಾಮನ ಸಂತಾದವರೆಲ್ಲರೂ ಮೇಲಿನಿಂದ ಬರುವ ಶಕ್ತಿಯಿಂದ ಹೊಸದಾಗಿ ಹುಟ್ಟಬೇಕು.

ಈಗ ಸುವಾರ್ತೆಗೆ ಹಿಂದಿರುಗೋಣ ಮತ್ತು **ಯೇಸು ಸಮಾರ್ಯದ ಅನೀತಿವಂತ ಸ್ತ್ರೀಯೊಂದಿಗೆ ಮಾಡಿದ ಸಂಭಾಷಣೆಯನ್ನು ಕೇಳಿಸಿ –ಕೊಳ್ಳೋಣ.** ಸಮಾರ್ಯವು ಯೆಹೂದ್ಯರ ದೇಶದಲ್ಲಿ ಯೂದಾಯ ಮತ್ತು ಗಲಿಲಾಯದ ನಡುವೆ ಇರುವ ಪ್ರದೇಶವಾಗಿತ್ತು. ಅನೇಕ ಸಮಾರ್ಯದವರು ಅನ್ಯರಾಗಿದ್ದು ಯೆಹೂದ್ಯರು ಅವರನ್ನು ವಿಗ್ರಹಾರಾಧಕರೆಂದು ಅಭಿಪ್ರಾಯಪಟ್ಟಿದ್ದರು, ಇದರಿಂದ ಅವರೊಂದಿಗೆ ಹೊಂದಿಕೊಂಡಿರಲಿಲ್ಲ. ಆದಾಗ್ಯೂ, ಮೆಸ್ಸೀಯನಾದ ಯೇಸು ಪಕ್ಷಪಾತವನ್ನು ತೋರಿಸಲಿಲ್ಲ, ಯಾಕಂದರೆ ದೇವರು ಪಕ್ಷಪಾತವನ್ನು ತೋರಿಸುವದಿಲ್ಲ. **ಒಂದು ಹೊಸದಾದ ಮತ್ತು ಶುದ್ಧವಾದ ಹೃದಯವನ್ನು ಹೊಂದಿಕೊಳ್ಳುವದಕ್ಕೆ ಇಷ್ಟಪಡುವ ಪ್ರತಿಯೊಬ್ಬ ಪಾಪಿಯನ್ನು ಹುಡುಕಿ ರಕ್ಷಿಸುವದಕ್ಕೆ ಯೇಸು ಈ ಲೋಕಕ್ಕೆ ಬಂದನು.** ಆದದರಿಂದ ಐದು ಜನ ಗಂಡಂದಿರನ್ನು ಹೊಂದಿದ್ದ ಸಮಾರ್ಯದ ಸ್ತ್ರೀ –ಯೊಂದಿಗೆ ಮಾತಾಡುವದಕ್ಕೆ ಯೇಸು ನಾಚಿಕೊಳ್ಳಲಿಲ್ಲ.

ಈಗ ಯೋಹಾನನ ಸುವಾರ್ತೆಯ ನಾಲ್ಕನೆಯ ಅಧ್ಯಾಯದಲ್ಲಿ ಬರೆದಿರುವದನ್ನು ಕೇಳಿಸಿಕೊಳ್ಳೋಣ. ವಾಕ್ಯವು ಹೀಗೆ ಹೇಳುತ್ತದೆ;

ಆತನು ಸಮಾರ್ಯ ಸೀಮೆಯನ್ನು ಹಾದುಹೋಗಬೇಕಾಯಿತು. ಹೋಗುವಾಗ ಸಮಾರ್ಯಸೀಮೆಗೆ ಸೇರಿದ ಸುಖರೆಂಬ ಊರಿಗೆ ಬಂದನು. ಅದು ಯಾಕೋಬನು ತನ್ನ ಮಗನಾದ ಯೋಸೇಫನಿಗೆ ಕೊಟ್ಟ ಭೂಮಿಯ ಹತ್ತಿರದಲ್ಲಿತ್ತು; ಅಲ್ಲಿ ಯಾಕೋಬನು ತೆಗೆಸಿದ ಬಾವಿಯಿತ್ತು. ಯೇಸು ದಾರಿನಡೆದು ದಣಿದು ಆ ಬಾವಿಯ ಬಳಿಯಲ್ಲಿ ಹಾಗೆ ಕೂತುಕೊಂಡನು; ಹೆಚ್ಚು ಕಡಿಮೆ ಮಧ್ಯಾಹ್ನವಾಗಿತ್ತು. ಆತನ ಶಿಷ್ಯರು ಊಟಕ್ಕೆ ಬೇಕಾದದ್ದನ್ನು ಕೊಂಡುಕೊಳ್ಳುವದಕ್ಕಾಗಿ ಊರೊಳಗೆ ಹೋಗಿರಲು ಸಮಾರ್ಯದವಳಾದ ಒಬ್ಬ ಹೆಂಗಸು ನೀರು ಸೇದುವದಕ್ಕೆ ಬಂದಳು. ಯೇಸು ಆಕೆಯನ್ನು, **"ಅಮ್ಮಾ, ನೀರು ಕುಡಿಯುವದಕ್ಕೆ ಕೊಡು"** ಎಂದು ಕೇಳಿದನು. ಯೆಹೂದ್ಯರಿಗೂ

ಸಮಾರ್ಯದವರಿಗೂ ಬಳಕೆಯಿಲ್ಲದಿರಲಾಗಿ ಆ ಸಮಾರ್ಯದವಳು ಆತನಿಗೆ, **“ಯೆಹೂದ್ಯನಾದ ನೀನು** ಸಮಾರ್ಯದವಳಾದ ನನ್ನನ್ನು ನೀರು ಬೇಡುವದು ಹೇಗೆ” ಎಂದು ಹೇಳಿದಳು. ಅದಕ್ಕೆ ಯೇಸು, “ದೇವರು ಕೊಡುವ ವರವೇನೆಂಬದೂ ಕುಡಿಯುವಕ್ಕೆ ನೀರು ಕೊಡು ಎಂದು ನಿನಗೆ ಹೇಳಿದವನು ಯಾರೆಂಬದೂ ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿಕೊಳ್ಳುತ್ತಿದ್ದಿ, ಅವನು ನಿನಗೆ **ಜೀವಕರ –ವಾದ ನೀರನ್ನು** ಕೊಡುತ್ತಿದ್ದನು” ಅಂದನು. ಆ ಹೆಂಗಸು ಆತನಿಗೆ, “ಅಯ್ಯಾ, ಸೇದುವದಕ್ಕೆ ನಿನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ; ಹೀಗಿರುವಾಗ ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು? ನಮ್ಮ ಹಿರಿಯನಾದ ಯಾಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ ಬಾವಿಯನ್ನು ನಮಗೆ ಕೊಟ್ಟವನು; ಅವನೂ ಅವನ ಮಕ್ಕಳೂ ಅವನು ಸಾಕಿದೆಲ್ಲವು ಸಹಿತವಾಗಿ ಇದೇ ಬಾವಿಯ ನೀರು ಕುಡಿದರು ಅನ್ನಲು” ಯೇಸು ಆಕೆಗೆ, “ಈ ನೀರನ್ನು ಕುಡಿಯುವವರೆಲ್ಲರಿಗೆ ತಿರಿಗಿ ನೀರಡಿಕೆಯಾಗುವದು; **ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ;** ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟುಮಾಡುವದು” ಎಂದು ಹೇಳಿದನು. ಆ ಹೆಂಗಸು, “ಅಯ್ಯಾ, ನನಗೆ ಆ ನಿರನ್ನು ಕೊಡು; ಕೊಟ್ಟರೆ ಇನ್ನು ಮೇಲೆ ನನಗೆ ನೀರಡಿಕೆಯಾಗಲಿಕ್ಕಿಲ್ಲ; ನೀರು ಸೇದುವದಕ್ಕೆ ಇಷ್ಟು ದೂರ ಬರಬೇಕಾದದ್ದೂ ಇರುವದಿಲ್ಲ” ಅನ್ನಲು ಯೇಸು ಅವಳಿಗೆ, “ಹೋಗಿ ನಿನ್ನ ಗಂಡನನ್ನು ಇಲ್ಲಿಗೆ ಕರಕೊಂಡು ಬಾ” ಎಂದು ಹೇಳಿದನು. ಅದಕ್ಕೆ ಆ ಹೆಂಗಸು, “ನನಗೆ ಗಂಡನಿಲ್ಲ” ಅಂದಳು. ಯೇಸು ಆಕೆಗೆ, “ನನಗೆ ಗಂಡನಿಲ್ಲವೆಂದು ನೀನು ಹೇಳಿದ್ದು ಸರಿಯಾದ ಮಾತು; ನಿನಗೆ ಐದುಮಂದಿ ಗಂಡಂದಿರಿದ್ದರು, ಈಗ ಇರುವವನು ನಿನಗೆ ಗಂಡನಲ್ಲ; ನೀನು ಹೇಳಿದ್ದು ನಿಜವಾದ ಸಂಗತಿ” ಅಂದನು. ಆ ಹೆಂಗಸು ಆತನಿಗೆ, “ಅಯ್ಯಾ, ನೀನು **ಪ್ರವಾದಿಯೆಂದು** ನನಗೆ ಕಾಣು –ತ್ತದೆ. ನಮ್ಮ ಹಿರಿಯರು ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತಿದ್ದರು; ಆದರೆ ನೀವು ಆರಾಧನೆ ಮಾಡತಕ್ಕ ಸ್ಥಳವು ಯೆರೂಸ – ಲೇಮಿನಲ್ಲಿ ಅದೆ ಅನ್ನುತ್ತೀರಿ” ಎಂದು ಹೇಳಿದಾಗ, ಯೇಸು ಆಕೆಗೆ, “ಅಮ್ಮಾ, ನಾನು ಹೇಳುವ ಮಾತನ್ನು ನಂಬು; ಒಂದು ಕಾಲ ಬರುತ್ತದೆ. ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವದಿಲ್ಲ. ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೆ. ಆದದರಿಂದ ನಾವು ಅರಿತಿರುವದನ್ನೇ ಆರಾಧಿಸುವವರಾಗಿದ್ದೇವೆ; ನೀವು ಅರಿಯದೆ ಇರುವಂಥದನ್ನು ಆರಾಧಿಸುವವರು. ಅದಿರಲಿ; ಸತ್ಯಭಾವದಿಂದ ದೇವಾರಾಧನೆ ಮಾಡುವವರು ಆತ್ಮೀಯ ರೀತಿ – ಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ತಂದೆಯನ್ನು ಆರಾಧಿಸುವ ಕಾಲ ಬರುತ್ತದೆ; ಅದು ಈಗಲೇ ಬಂದಿದೆ; ತಂದೆಯು ತನ್ನನ್ನು ಆರಾಧಿಸು – ವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ. **ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮೀಯ ರೀತಿಯಲ್ಲಿ ಸತ್ಯಕ್ಕೆ ತಕ್ಕ ಹಾಗೆ ಆರಾಧಿಸಬೇಕು”** ಅಂದನು. ಆ ಹೆಂಗಸು ಆತನಿಗೆ, “ಮೆಸ್ಸೀಯನು ಅಂದರೆ ಕ್ರಿಸ್ತನು ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು” ಎಂದು ಹೇಳಲು ಯೇಸು ಆಕೆಗೆ, **“ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಆ ಮೆಸ್ಸೀಯನು”** ಎಂದು ಹೇಳಿದನು. (ಯೋಹಾನ–4:1-26)

ಅಷ್ಟರೊಳಗೆ ಆತನ ಶಿಷ್ಯರು ಬಂದು ಆತನು ಒಬ್ಬ ಹೆಂಗಸಿನ ಸಂಗಡ ಮಾತಾಡುತ್ತಿರುವದನ್ನು ಕಂಡು ಆಶ್ಚರ್ಯಪಟ್ಟರು. ಆದರೂ ನಿನಗೆ ಏನು ಬೇಕು? ಆಕೆಯ ಸಂಗಡ ಯಾಕೆ ಮಾತಾಡುತ್ತೀ? ಎಂದು ಒಬ್ಬರೂ ಕೇಳಲಿಲ್ಲ. ಆಗ ಆ ಹೆಂಗಸು ತನ್ನ ಕೊಡವನ್ನು ಅಲ್ಲೇ ಬಿಟ್ಟು ಊರೊಳಕ್ಕೆ ಹೋಗಿ ಜನರಿಗೆ, **“ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು; ಬಂದು ಅವನನ್ನು ನೋಡಿರಿ; ಬರತಕ್ಕ ಕ್ರಿಸ್ತನು ಅವನೇ ಏನೋ?”** ಎಂದು ಹೇಳಲು ಅವರು ಆತನ ಬಳಿಗೆ ಬರುವದಕ್ಕೆ ಊರೊಳಗಿಂದ ಹೊರಟರು. (ಯೋಹಾನ–4:27-30)

ನಾನು ಮಾಡಿದ್ದನ್ನೆಲ್ಲಾ ಆತನು ನನಗೆ ಹೇಳಿದನೆಂಬದಾಗಿ ಸಾಕ್ಷಿಕೊಡುತ್ತಿರುವ ಆ ಹೆಂಗಸಿನ ಮಾತಿನ ಮೇಲೆ ಆ ಊರಿನ ಸಮಾ – –ರ್ಯರಲ್ಲಿ ಅನೇಕರು ಆತನನ್ನು ನಂಬುವವರಾದರು. ಆದ್ದರಿಂದ ಆ ಸಮಾರ್ಯರು ಆತನ ಬಳಿಗೆ ಬಂದು, “ನೀನು ನಮ್ಮಲ್ಲಿ ಇರಬೇಕೆಂದು” ಆತನನ್ನು ಬೇಡಿಕೊಳ್ಳಲು ಆತನು ಎರಡು ದಿವಸ ಅವರಲ್ಲೇ ಇದ್ದನು. ಹೆಚ್ಚು ಜನರು ಆತನ ವಾಕ್ಯವನ್ನು ಕೇಳಿ ನಂಬಿ ಆ ಹೆಂಗಸಿಗೆ, **“ನಾವು ಆತನನ್ನು ನಂಬಿರುವದು ಇನ್ನು ನಿನ್ನ ಮಾತಿನ ಮೇಲೆ ಅಲ್ಲ; ನಾವು ಕಿವಿಯಾರೆ ಕೇಳಿ ಆತನು ಲೋಕ ರಕ್ಷಕನೇ ಹೌದೆಂದು ತಿಳುಕೊಂಡಿದ್ದೇವೆ”** ಎಂದು ಹೇಳಿದರು. (ಯೋಹಾನ–4:39-42)

ಇಲ್ಲಿಗೆ ಸಮಾರ್ಯ ಸ್ತ್ರೀಯ ಕತೆಯು ಮುಕ್ತಾಯವಾಗುತ್ತದೆ. ನಿಜವಾಗಿಯೂ ಇದು ಒಂದು ಮುಖ್ಯವಾದ ಕತೆಯಾಗಿದೆ, ಯಾಕಂದರೆ ದೇವರು ಭೂಮಿಗೆ ಕಳಿಸಿದ ಯೇಸುವನ್ನು ಒಬ್ಬ ಅನೀತಿವಂತ ಸ್ತ್ರೀ ಹೇಗೆ ರಕ್ಷಕನೆಂಬುದಾಗಿ ಕಂಡುಕೊಂಡಳೆಂಬುದನ್ನು ಇದು ತೋರಿ –ಸುತ್ತದೆ. ಆ ಕಂಡುಕೊಳ್ಳುವಿಕೆಯು ಅವಳ ಜೀವಿತವನ್ನು ಮಾರ್ಪಡಿಸಿತು. ಸಂಭಾಷಣೆಯ ಆರಂಭದಲ್ಲಿ, ತನ್ನೊಂದಿಗೆ ಮಾತಾಡು –ತ್ತಿರುವದು ಯಾರೆಂದು ಆ ಸ್ತ್ರೀಗೆ ಗೊತ್ತಿರಲಿಲ್ಲ. ಅನೇಕ ಯೆಹೂದ್ಯರೊಳಗೆ ಕೇವಲ ಯೇಸುವು **ಒಬ್ಬ ಯೆಹೂದ್ಯನೆಂಬುದಾಗಿ** ಅವಳು ದೃಷ್ಟಿಸಿದ್ದಳು. ಹೀಗಿದ್ದರೂ, ಸಂಭಾಷಣೆಯ ವೇಳೆಯಲ್ಲಿ, ಯೇಸು **ಒಬ್ಬ ಪ್ರವಾದಿಯಾಗಿದ್ದಾನೆ** ಎಂಬ ನಿರ್ಧಾರಕ್ಕೆ ಅವಳು ಬಂದಂತ, ಕೇವಲ ಒಬ್ಬ ಮನುಷ್ಯನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲದಂತ ಕೆಲವು ಸಂಗತಿಗಳನ್ನು ಯೇಸು ಅವಳಿಗೆ ತಿಳಿಸಿದನು. ಆದಾಗ್ಯೂ, ಕೊನೆಗೆ ಅವಳು ತನ್ನೊಂದಿಗೆ ಮಾತಾಡುತ್ತಿರುವ ಈ ಯೇಸು ಒಬ್ಬ **ಪ್ರವಾದಿಗಿಂತಲೂ ಹೆಚ್ಚಿನವನು** ಎನ್ನುವದನ್ನು ಆವಳು ಕಂಡು ಕೊಂಡಳು. ಈತನು, **ಪ್ರವಾದಿಗಳೆಲ್ಲರೂ ಯಾರ ಕುರಿತಾಗಿ ಪ್ರವಾದಿಸಿದ್ದರೋ ಆ ಮೆಸ್ಸೀಯನೂ, ಲೋಕದ ರಕ್ಷಕನು ಆಗಿದ್ದನು!**

ಬಾವಿಯ ಕಟ್ಟೆಯ ಮೇಲೆ ಕೂತುಕೊಂಡು ತನ್ನೊಂದಿಗೆ ಮಾತಾಡುತ್ತಿರುವವನು ಮೆಸ್ಸೀಯನು ಎಂಬುದನ್ನು ಒಂದು ಸಲ ಗುರುತಿ – ಸಿದ ಈ ಸ್ತ್ರೀ, ತನ್ನ ಕೊಡವನ್ನು ಅಲ್ಲಿಯೇ ಬಿಟ್ಟು ಊರೊಳಕ್ಕೆ ಓಡಿಹೋಗಿ, “ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು; ಬಂದು ಅವನನ್ನು ನೋಡಿರಿ; ಬರತಕ್ಕ ಕ್ರಿಸ್ತನು ಅವನೇ ಏನೋ?” ಎಂದಳು.

ಇದಾದ ನಂತರ, ಜನರು ಊರೊಳಗಿಂದ ಯೇಸುವಿದ್ದಲ್ಲಿಗೆ ಬಂದು, ತಮ್ಮಲ್ಲಿ ಇರಬೇಕೆಂದು ಆತನನ್ನು ಕೇಳಿಕೊಂಡರು. ಯೇಸು ಎರಡು ದಿವಸ ಅವರಲ್ಲಿ ಉಳಿದುಕೊಂಡು, ಅವರು ಹೇಗೆ ಒಂದು ಹೊಸದಾದ ಮತ್ತು ಶುದ್ಧವಾದ ಹೃದಯವನ್ನು ಹೊಂದಿಕೊಂಡು ದೇವರ ನಿಜವಾದ ಆರಾಧಕರು ಆಗುವದು ಹೇಗೆಂದು ಅವರಿಗೆ ಬೋಧಿಸಿದನು. ಹೀಗೆ, ವಾಕ್ಯವು ಹೇಳುವದೇನೆಂದರೆ;

"ಹೆಚ್ಚು ಜನರು ಆತನ ವಾಕ್ಯವನ್ನು ಕೇಳಿ ನಂಬಿ ಆ ಹೆಂಗಸಿಗೆ, ನಾವು ಆತನನ್ನು ನಂಬಿರುವದು ಇನ್ನು ನಿನ್ನ ಮಾತಿನ ಮೇಲೆ ಅಲ್ಲ; ನಾವು ಕಿವಿಯಾರೆ ಕೇಳಿ ಈತನು ಲೋಕರಕ್ಷಕನೇ ಹೌದೆಂದು ತಿಳುಕೊಂಡಿದ್ದೇವೆ ಎಂದು ಹೇಳಿದರು." (ಯೋಹಾನ–೪:೪೧,೪೨)

ಈಗ ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ ಯೇಸು ಸಮಾರ್ಯಕ್ಕೆ ಭೇಟಿಕೊಟ್ಟ ಕೆಲವು ದಿವಸಗಳ ನಂತರ ಏನು ಸಂಭವಿಸಿ – ತೆಂಬುದನ್ನು ನೋಡೋಣ. **ಪ್ರತಿಯೊಬ್ಬರೂ ಯೇಸುವನ್ನು ಲೋಕರಕ್ಷಕನೆಂಬುದಾಗಿ ಸ್ವೀಕರಿಸಲಿಲ್ಲ ಎಂಬುದನ್ನು ನಾವು ನೋಡು – ತ್ತೇವೆ.** ಲೂಕನ ಸುವಾರ್ತೆ ನಾಲ್ಕನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ತರುವಾಯ ಯೇಸು ಪವಿತ್ರಾತ್ಮನ ಶಕ್ತಿಯಿಂದ ಕೂಡಿದವನಾಗಿ ಗಲಿಲಾಯಕ್ಕೆ ಹೋದನು; ಆತನ ಸುದ್ದಿಯು ಸುತ್ತಲಿರುವ ಪ್ರಾಂತ್ಯದ – ಲ್ಲೆಲ್ಲಾ ಹಬ್ಬಿಕೊಂಡಿತು. ಆತನು ಅವರ ಸಭಾಮಂದಿರಗಳಲ್ಲಿ ಬೋಧಿಸುತ್ತಾ ಬಂದನು; ಎಲ್ಲರೂ ಆತನನ್ನು ಹೊಗಳಿದರು. ಹೀಗಿರ –ಲಾಗಿ **ಆತನು ತಾನು ಬೆಳೆದ ನಜರೇತಿಗೆ ಬಂದು** ತನ್ನ ವಾಡಿಕೆಯ ಪ್ರಕಾರ ಸಬ್ಬತ್ ದಿನದಲ್ಲಿ ಸಭಾಮಂದಿರಕ್ಕೆ ಹೋಗಿ ಓದುವದ – ಕ್ಕಾಗಿ ಎದ್ದು ನಿಂತನು. ಆಗ ಯೆಶಾಯನೆಂಬ ಪ್ರವಾದಿಯ ಗ್ರಂಥದ ಸುರಳಿಯನ್ನು ಆತನ ಕೈಗೆ ಕೊಡಲಾಗಿ ಆತನು ಆ ಸುರಳಿಯನ್ನು ಬಿಚ್ಚಿ ಮುಂದೆ ಹೇಳುವ ಮಾತು ಬರೆದಿರುವ ಸ್ಥಳವನ್ನು ಕಂಡು ಓದಿದನು; ಆ ಮಾತೇನಂದರೆ, "ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದ್ಧಿಪಡಿಸುವದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ ಕರ್ತನು ನೇಮಿಸಿರುವ ಶುಭ ವರ್ಷವನ್ನು ಪ್ರಚುರಪಡಿಸುವದಕ್ಕೂ ಆತನು ನನ್ನನ್ನು ಕಳುಹಿಸಿದ್ದಾನೆ" ಎಂಬದು. ಓದಿದ ಮೇಲೆ ಆತನು ಆ ಸುರಳಿಯನ್ನು ಸುತ್ತಿ ಸಭಾಮಂದಿರದ ಆಳಿನ ಕೈಗೆ ಕೊಟ್ಟು ಕೂತುಕೊಂಡನು. ಅಲ್ಲಿದ್ದವರೆಲ್ಲರ ಕಣ್ಣುಗಳು ಆತನ ಮೇಲೆಯೇ ಬಿದ್ದಿರಲಾಗಿ ಆತನು ಅವ – –ರಿಗೆ, **"ಈ ಹೊತ್ತು ನೀವು ನನ್ನ ಮಾತನ್ನು ಕೇಳುವಲ್ಲಿ ಈ ವೇದೋಕ್ತಿ ನೆರವೇರಿದೆ"** ಎಂದು ಹೇಳಿದನು. (ಲೂಕ–4:14-21)

ಏಳುನೂರು ವರ್ಷಗಳ ಮೊದಲೇ ಪ್ರವಾದಿಯಾದ ಯೆಶಾಯನು ಯಾರ ಕುರಿತಾಗಿ ಬರೆದಿದ್ದನೋ ಆ ಮೆಸ್ಸೀಯನೂ ಮತ್ತು ರಕ್ಷಕನೂ ತಾನೇ ಎನ್ನುವದನ್ನು ಯೇಸು ಈ ಮಾತುಗಳಿಂದ ಸ್ಪಷ್ಟವಾಗಿ ಹೇಳಿದನು. ಆದಾಗ್ಯೂ, ನಜರೇತಿನಲ್ಲಿ ವಾಸಿಸಿದ್ದ ಯೆಹೂ – ದ್ಯರು, ತಮ್ಮ ಮಧ್ಯದಲ್ಲಿ ಬೆಳೆದಿರುವ ಈ ಯೇಸು ಪರಲೋಕದಿಂದ ಕಳಿಸಲ್ಪಟ್ಟಿರುವ ರಕ್ಷಕನೆಂಬುದಾಗಿ ಒಪ್ಪಿಕೊಳ್ಳಲಿಲ್ಲ! ಅದರಿಂದಲೇ ಅವರು ತಾತ್ಸಾರದಿಂದ, "ಇವನು ಯೋಸೇಫನ ಮಗನಲ್ಲವೇ? ಎಂದು ಹೇಳಿದರು.

ದೇವರು ಅವರಿಗಾಗಿ ಕಳಿಸಿದ ಮೆಸ್ಸೀಯನನ್ನು ಕಡೆಗಣಿಸಬೇಡಿರಿ ಎಂದು ಯೇಸು ನಜರೇತಿನ ಜನರಿಗೆ ಹೇಗೆ ಎಚ್ಚರಿಸಿದನೆಂಬುದನ್ನು ವಾಕ್ಯವು ಹೇಳುತ್ತಾ ಹೋಗುತ್ತದೆ. ಆದರೆ ಅದೇ ಅವರ ಕೋಪವನ್ನು ಹೆಚ್ಚಿಸಿತು. ಹಾಗಾಗಿ, ವಾಕ್ಯ ಹೀಗೆ ಹೇಳುತ್ತದೆ:

ಸಭಾಮಂದಿರದಲ್ಲಿರುವವರೆಲ್ಲರು ಈ ಮಾತುಗಳನ್ನು ಕೇಳಿ ಬಹಳವಾಗಿ ಸಿಟ್ಟುಗೊಂಡು ಎದ್ದು ಆತನನ್ನು ಊರಹೊರಕ್ಕೆ ಅಟ್ಟಿ ತಮ್ಮ ಊರು ಕಟ್ಟಿದ್ದ ಗುಡ್ಡದ ಕಡಿದಾದ ಸ್ಥಳಕ್ಕೆ ನಡಿಸಿಕೊಂಡು ಹೋಗಿ ಅಲ್ಲಿಂದ ಕೆಳಕ್ಕೆ ದೊಬ್ಬಬೇಕೆಂದಿದ್ದರು. ಆದರೆ ಆತನು ಅವರ ಮಧ್ಯದಲ್ಲಿ ಹಾದು ಹೊರಟುಹೋದನು. (ಲೂಕ–4: 28-30)

ಹೀಗೆ ನಜರೇತಿನ ಜನರು ಯೇಸುವನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು! ಅವರು ಯಾಕೆ ಆತನನ್ನು ಕೊಲ್ಲುವದಕ್ಕೆ ಪ್ರಯತ್ನಿಸಿದರು? ಯಾಕಂದರೆ ದೇವರ ಎಲ್ಲಾ ಪ್ರವಾದಿಗಳು ಯಾರ ಕುರಿತಾಗಿ ಬರೆದಿದ್ದಾರೋ ಆ **ಮೆಸ್ಸೀಯನು** ತಾನೇ ಎಂದು ಯೇಸು ಅಧಿಕಾರ – ದಿಂದ ಹೇಳುತ್ತಿದ್ದನು. "ಸತ್ಯವು ಒಂದು ಸಿಟ್ಟಿನ ಮೆಣಸು" {ಉಲೂಫ್ ಗಾದೆ}. ಯೇಸುವಿನ ಸತ್ಯದ ಮಾತುಗಳು ನಜರೇತಿನ ಜನ – ರನ್ನು ಸಿಟ್ಟಿಗೆಬ್ಬಿಸಿ ಆತನನ್ನು ಕಡಿದಾದ ಸ್ಥಳದಿಂದ ದೊಬ್ಬುವದಕ್ಕೆ ಪ್ರಯತ್ನಿಸುವಂತೆ ಮಾಡಿತ್ತು. ಆದರೆ ಅವರು ಹಾಗೆ ಮಾಡುವದ – ಕ್ಕಾಗಲಿಲ್ಲ ಯಾಕಂದರೆ ಯೇಸು ಮರಣ ಹೊಂದುವದಕ್ಕೆ ದೇವರು ನೇಮಿಸಿದ ಸಮಯವು ಇನ್ನೂ ಬಂದಿರಲಿಲ್ಲ. ಉಲೂಫ್‌ನ ಜ್ಞಾನವು ಹೀಗೆ ಹೇಳುತ್ತದೆ: "ಮರಕಡಿಯುವವನು ಹಳ್ಳಿಯಲ್ಲಿರುವ ಮುಖ್ಯವಾದ ಮರವನ್ನು (ಯಾವುದರ ಕೆಳಗೆ ಮಂದೆಗಳು ಸಂಧಿಸುತ್ತವೋ ಅಂತಹ ಮರವನ್ನು) ಕಡಿಯುವದಿಲ್ಲ" ಮೆಸ್ಸೀಯನಾದ ಯೇಸು ದೇವರ "ಪ್ರಧಾನವಾದ ಮರವಾಗಿದ್ದಾನೆ!" ಲೋಕದ ರಕ್ಷಕನನ್ನಾಗಿ ಮತ್ತು ನ್ಯಾಯಾಧಿಪತಿಯನ್ನಾಗಿ ದೇವರು ನೇಮಿಸಿದವನನ್ನು "ಕಡಿದು ಹಾಕುವದಕ್ಕೆ" ಇಷ್ಟಪಡುವಂತ ಮನು –ಷ್ಯರು ಎಷ್ಟು ಮೂರ್ಖರು ಮತ್ತು ಕೆಟ್ಟವರೂ ಆಗಿದ್ದಾರೆ! ಮುಂದೆ ಜನರು ಆತನನ್ನು ಕೊಂದುಹಾಕಿದರು, ಆದರೆ ದೇವರು ಆತ – ನನ್ನು ಮೂರು ದಿನಗಳ ನಂತರ ಸತ್ತವರೊಳಗಿಂದ ಎಬ್ಬಿಸಿದನು. ಇದರ ಕುರಿತಾಗಿ ಇನ್ನೂ ಹೆಚ್ಚಿನದನ್ನು ನಾವು ಮುಂದಿನ ಪಾಠದಲ್ಲಿ ಕಲಿಯುತ್ತೇವೆ.

ಈಗ ಹಾಗಾದರೆ, ಈದಿನದ ನಮ್ಮ ಪಾಠವನ್ನು ನಾವು ಹೇಗೆ ಸಂಕ್ಷಿಪ್ತಗೊಳಿಸುವದು? ಎರಡು ರೀತಿಯ ಜನರ ಕುರಿತಾಗಿ ಎರಡು ವಿವರಣೆಗಳನ್ನು ನಾವು ಕೇಳಿಸಿಕೊಂಡೆವು. ಯೇಸು ಮೆಸ್ಸೀಯನೆಂಬುದಾಗಿ ಹಕ್ಕಿನಿಂದ ಹೇಳಿದ್ದನ್ನು ಎರಡು ಗುಂಪುಗಳು ಕೇಳಿಸಿ – ಕೊಂಡಿದ್ದವು, ಆದರೆ ಆತನ ಹೇಳಿಕೆಗೆ ಅವರ ಪ್ರತಿಕ್ರಿಯೆ ತುಂಬಾ ವ್ಯತ್ಯಾಸವುಳ್ಳದ್ದಾಗಿದ್ದವು.

1) ಮೊದಲನೆಯದಾಗಿ, ಬಾವಿಯ ಬಳಿಯಲ್ಲಿ ಯೇಸು ಭೇಟಿಮಾಡಿದ ಪಾಪಿಯಾದ ಸ್ತ್ರೀ ಮತ್ತು ಸಮಾರ್ಯದ ಜನರ ಕುರಿತಾಗಿ ನಾವು ಕೇಳಿಸಿಕೊಂಡೆವು. ಅವರು ಯೇಸುವಿನ ಮಾತುಗಳನ್ನು ಸಂತೋಷದಿಂದ ಸ್ವೀಕರಿಸಿ ಯೇಸುವನ್ನು ಲೋಕದ ರಕ್ಷಕನೆಂದು ಮತ್ತು ಮೆಸ್ಸೀಯನೆಂದು **ನಂಬಿದರು.**

2) ಆದಾಗ್ಯೂ, ನಮ್ಮ ಎರಡನೆಯ ವಿವರಣೆಯಲ್ಲಿ, ನಜರೇತಿನ ಧಾರ್ಮಿಕ ಜನರನ್ನು ನಾವು ನೋಡಿದೆವು. ಅವರು ಯೇಸುವಿನ ಮಾತುಗಳನ್ನು ಕಡೆಗಣಿಸಿದರು. ತಮ್ಮ ಪಟ್ಟಣದಲ್ಲಿ ಬೆಳೆದಂತ ಯೇಸು ಮೆಸ್ಸೀಯನೆಂಬುದನ್ನು ಅವರು **ನಂಬಲಿಲ್ಲ.**

ಸಂಕ್ಷಿಪ್ತವಾಗಿ ಹೇಳುವದಾದರೆ, ಸಮಾರ್ಯದಲ್ಲಿ ವಾಸಿಸುತ್ತಿದ್ದ ಪಾಪಿಗಳು ಯೇಸುವನ್ನು ಪರಲೋಕದಿಂದ ಕಳುಹಿಸಲ್ಪಟ್ಟ ರಕ್ಷಕನಂತೆ ಸ್ವೀಕರಿಸಿಕೊಂಡರು, ಆದರೆ ನಜರೇತಿನ ಧಾರ್ಮಿಕ ಜನರು ಆತನನ್ನು ಒಪ್ಪಿಕೊಳ್ಳಲಿಲ್ಲ.

ನಿಮ್ಮ ಕುರಿತು ಏನು? ಈ ಎರಡು ಗುಂಪುಗಳಲ್ಲಿ ನೀವು ಯಾವುದಕ್ಕೆ ಹೆಚ್ಚು ಸಮೀಪವಾಗಿ ಹೋಲಿಕೆಯಾಗುತ್ತೀರಿ? **ಯೇಸುವನ್ನು ತಮ್ಮ ಕರ್ತನೂ ಮತ್ತು ರಕ್ಷಕನೂ ಎಂದು ಅಂಗೀಕರಿಸಿಕೊಂಡ** ಸಮಾರ್ಯದ ಜನರ ಹಾಗೆ ನೀವಿದ್ದೀರಾ? ಅಥವಾ **ಯೇಸು ಅವರ ಪಾಪಗಳಿಂದ ಅವರನ್ನು ರಕ್ಷಿಸುವದಕ್ಕೆ ಪರಲೋಕದಿಂದ ಕಳಿಸಲ್ಪಟ್ಟ ಮೆಸ್ಸೀಯನಾಗಿದ್ದಾನೆ ಎಂದು ನಂಬುವದನ್ನು ತಿರಸ್ಕರಿಸಿದ** ನಜರೇತಿನ ಜನರ ಹಾಗಿದ್ದೀರೋ? ಪ್ರವಾದಿಗಳೆಲ್ಲರೂ ಬರೆದಿದ್ದ ವಿಮೋಚಕನೇ ಯೇಸು ಎಂಬುದನ್ನು ನೀವು ಗ್ರಹಿಸಿಕೊಂಡಿದ್ದೀರೋ? ಆತನನ್ನು ನೀವು ನಿಮ್ಮ ರಕ್ಷಕನನ್ನಾಗಿ ಸ್ವೀಕರಿಸಿಕೊಂಡಿದ್ದೀರೋ?

ಯೇಸು ಮೆಸ್ಸೀಯನೆಂಬುಕ್ಕೆ ಸಂಬಂಧಿಸಿದಂತೆ ಪರಿಶುದ್ಧ ವಾಕ್ಯಗಳು ಏನು ಹೇಳುತ್ತವೆ ಎಂಬುದನ್ನು ಕೇಳಿಸಿಕೊಳ್ಳೋಣ.

**"**ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ. . . .ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ಥಕ್ಕೆ ಬಂದನು; ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ. **ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ, ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು.** ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು!**"** (ಯೋಹಾನ–1;5, 10-13)

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು ದೇವರಿಂದ ಹುಟ್ಟಿದವರಾಗಿದ್ದೀರೋ? ನೀವು ನಿಜವಾಗಿಯೂ ಯೇಸುವನ್ನು ನಂಬುತ್ತೀರೋ? ನೀವು ಆತನನ್ನು ನಿಮ್ಮ ಕರ್ತನೂ ಮತ್ತು ರಕ್ಷಕನೂ ಎಂಬಂತೆ ಸ್ವೀಕರಿಸಿದ್ದೀರೋ?

ಈದಿನ ನಾವು ಇಲ್ಲಿಗೆ ನಿಲ್ಲಿಸುತ್ತೇವೆ. ಯೇಸು ತೋರಿಸಿದ ಸೂಚಕ ಕಾರ್ಯಗಳನ್ನು ನೋಡುವದಕ್ಕೆ ನಮ್ಮ ಮುಂದಿನ ಪಾಠದಲ್ಲಿ ನಮ್ಮನ್ನು ಸೇರಿಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ, ಇದರಿಂದ ಆತನೊಬ್ಬನೇ ಲೋಕದ ನಿಜ ರಕ್ಷಕನೆಂದು ಪ್ರತಿಯೊಬ್ಬರೂ ತಿಳಿದುಕೊಳ್ಳುವದಕ್ಕೆ ಶಕ್ತರಾಗಬಹುದು. . . .

ಯೇಸುವಿಗೆ ಸಂಬಂಧಿಸಿದಂತೆ ಸಮಾರ್ಯದವರು ಹೀಗೆ ಹೇಳುತ್ತಾ ಕೊಟ್ಟಿರುವ ಸಾಕ್ಷಿಯನ್ನು ನೀವು ಜ್ಞಾಪಕ ಮಾಡಿಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ,

**"ಈತನು ಲೋಕರಕ್ಷಕನೇ ಹೌದೆಂದು ತಿಳುಕೊಂಡಿದ್ದೇವೆ!"** (ಯೋಹಾನ–4:42)

ಪಾಠ 69

# ಯೇಸುವಿನ ಅಧಿಕಾರ

ಮತ್ತಾಯ 12; ಯೋಹಾನ 5

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಿಮ್ಮಲ್ಲಿ ಹೆಚ್ಚಿನವರು ತಿಳಿದಿರುವಂತೆ, ಈಗ ಸಧ್ಯಕ್ಕೆ, ಪರಿಶುದ್ಧ ವಾಕ್ಯಗಳ ಮುಖಾಂತರದ ನಮ್ಮ ಪ್ರಯಾಣದಲ್ಲಿ, ಮೆಸ್ಸೀಯನಾದ ಯೇಸುವಿನ ಕುರಿತಾದ ಶುಭ ಸಂದೇಶಕ್ಕೆ ಸಂಬಂಧಿಸಿದ ಸುವಾರ್ತೆಯ ಪುಸ್ತಕವನ್ನು ನಾವು ನೋಡಿಕೊಳ್ಳುತ್ತಿದ್ದೇವೆ. ಈತನು ರಕ್ಷಕ ನಾಗಿದ್ದು, ಸೈತಾನ, ಪಾಪ ಮತ್ತು ನಿತ್ಯವಾದ ನ್ಯಾಯತೀರ್ಪಿನಿಂದ ಆದಾಮನ ಸಂತತಿಯವರನ್ನು ಬಿಡುಗಡೆ ಮಾಡುವದಕ್ಕೆ ಲೋಕಕ್ಕೆ ಬಂದಂತವನಾಗಿದ್ದಾನೆ.

ಹಿಂದಿನ ಕೆಲವು ಕಾರ್ಯಕ್ರಮಗಳಲ್ಲಿ, ಯೇಸು ಹೇಗೆ ಯೆಹೂದ್ಯರ ಪ್ರದೇಶಗಳಾದ್ಯಂತ ಪ್ರಯಾಣಿಸಿ, ಜನರ ಗುಂಪಿಗೆ **ಬೋಧನೆ** ಮಾಡಿ, ಅವರ ರೋಗಗಳನ್ನು **ಸ್ವಸ್ಥಪಡಿಸಿದನೆಂಬುದನ್ನು** ನಾವು ನೋಡಿದ್ದೇವೆ. ಹಾಗಾಗಿ, ಜನರ ಒಂದು ದೊಡ್ಡ ಗುಂಪು ಆತನನ್ನು ಹಿಂಬಾಲಿಸುತ್ತಿತ್ತು. ಆದಾಗ್ಯೂ, ಅನೇಕ **ಧಾರ್ಮಿಕ ನಾಯಕರುಗಳು ಆತನ ವಿಷಯದಲ್ಲಿ ಹೊಟ್ಟೆಕಿಚ್ಚುಪಡುತ್ತಿದ್ದರು**, ಯಾಕಂದರೆ ಆತನು ಮಾತಾಡಿದಂತ ಜ್ಞಾನವನ್ನು ಖಂಡಿಸುವದಕ್ಕೆ, ಇಲ್ಲವೇ ಆತನು ಮಾಡಿದ ಅದ್ಭುತಗಳನ್ನು ಅಲ್ಲಗಳೆಯುವದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ.

ಈದಿನ ನಾವು ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ, **ವಿಶ್ರಾಂತಿ(ಸಬ್ಬತ್)ದಿನಕ್ಕೆ** ಸಂಬಂಧಿಸಿದಂತೆ **ಧಾರ್ಮಿಕ ನಾಯಕರುಗಳನ್ನು ಕರ್ತನಾದ ಯೇಸು ಹೇಗೆ ಎದುರಿಸಿದನೆಂಬುದನ್ನು** ನೋಡೋಣ. ಸಬ್ಬತ್ ಎನ್ನುವದು ವಾರದ ಏಳನೆಯ ದಿನವಾಗಿದ್ದು, ಆರು ದಿನ ಕೆಲಸ ಮಾಡಿದ ನಂತರ ಒಂದು ವಿಶ್ರಾಂತಿಯ ದಿನದಂತೆ ದೇವರು ಯೆಹೂದ್ಯರಿಗೆ ಇದನ್ನು ಕೊಟ್ಟಿದ್ದನು. ಆದಾಗ್ಯೂ, ಆ ಸಮಯದ ಧಾರ್ಮಿಕ ನಾಯಕರುಗಳಾದ ಫರಿಸಾಯರು, ಸಬ್ಬತ್ ದಿನವನ್ನು ಉಲ್ಲಂಘಿಸಿದನೆಂದು ಯೇಸುವನ್ನು ನಿಂದಿಸಿದರು, ಯಾಕಂದರೆ ಆತನು ಸಬ್ಬತ್ ದಿನದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದನು. ಆತನನ್ನು ಕಳಂಕಿತನನ್ನಾಗಿ ಮಾಡುವದಕ್ಕೆ ಇದನ್ನು ಒಂದು ನೆಪವಾಗಿ ಅವರು ಉಪಯೋಗಿಸಿದರು, ಯಾಕಂದರೆ ಆತನನ್ನು ನಿಂದಿಸುವಂತ ಬೇರೆ ಯಾವುದನ್ನು ಕಂಡುಕೊಳ್ಳುವದಕ್ಕೆ ಅವರಿಗೆ ಸಾಧ್ಯವಾಗಿರಲಿಲ್ಲ.

ಮತ್ತಾಯನ ಸುವಾರ್ತೆಯ ಹನ್ನೆರಡನೆಯ ಅಧ್ಯಾಯವನ್ನು ಓದಿಕೊಳ್ಳೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಆ ಕಾಲದಲ್ಲಿ ಯೇಸು **ಸಬ್ಬತ್ ದಿನದಲ್ಲಿ** ಪೈರಿನ ಹೊಲಗಳನ್ನು ಹಾದುಹೋಗುತ್ತಿರುವಾಗ ಆತನ ಶಿಷ್ಯರು ಹಸಿದು ತೆನೆಗಳನ್ನು ಮುರುಕೊಂಡು ತಿನ್ನುತ್ತಿದ್ದರು. ಫರಿಸಾಯರು ಅದನ್ನು ಕಂಡು, **"**ನೋಡು, ನಿನ್ನ ಶಿಷ್ಯರು ಸಬ್ಬತ್ ದಿನದಲ್ಲಿ ಮಾಡಬಾರದ ಕೆಲಸವನ್ನು ಮಾಡುತ್ತಾರೆ**"** ಎಂದು ಆತನಿಗೆ ಹೇಳಿದರು. ಆತನು ಅವರಿಗೆ, **"**ದಾವೀದನು ತಾನೂ ತನ್ನ ಸಂಗಡ ಇದ್ದವರೂ ಹಸಿದಾಗ ಏನು ಮಾಡಿದನೆಂಬುದನ್ನು ನೀವು ಓದಲಿಲ್ಲವೋ. ಅವನು ದೇವರ ಮಂದಿರದೊಳಕ್ಕೆ ಹೋಗಿ ಯಾಜಕರು ಮಾತ್ರವೇ ಹೊರತು ತಾನಾಗಲಿ ತನ್ನ ಸಂಗಡ ಇದ್ದವರಾಗಲಿ ತಿನ್ನಬಾರದಾಗಿದ್ದ ನೈವೇದ್ಯದ ರೊಟ್ಟಿಗಳನ್ನು ತಿಂದನಲ್ಲವೇ. ಇದಲ್ಲದೆ ಸಬ್ಬತ್ ದಿನದಲ್ಲಿ ಯಾಜಕರು ದೇವಾಲಯದಲ್ಲಿ ಸಬ್ಬತ್ ದಿನವನ್ನು ಮಿಕ್ಕಾದ ದಿನಗಳಂತೆ ಮಾಡಿದಾಗ್ಯೂ ಅವರು ತಪ್ಪಿಗೆ ಗುರಿಯಾಗುವದಿಲ್ಲ. ಇದನ್ನು ನೀವು ಧರ್ಮಶಾಸ್ತ್ರದಲ್ಲಿ ಓದಲಿಲ್ಲವೋ? ಆದರೆ ಇಲ್ಲಿ **ದೇವಾಲಯಕ್ಕಿಂತ ಹೆಚ್ಚಿನವನು ಇದ್ದಾನೆಂದು** ನಿಮಗೆ ಹೇಳುತ್ತೇನೆ. **ನನಗೆ ಯಜ್ಞವು ಬೇಡ, ಕರುಣೆಯೇ ಬೇಕು** ಎಂಬದರ ಅರ್ಥವನ್ನು ನೀವು ತಿಳಿದಿದ್ದರೆ ನಿರಪರಾಧಿಗಳನ್ನು ಅಪರಾಧಿಗಳೆಂದು ತೀರ್ಪು ಮಾಡುತ್ತಿದ್ದಿಲ್ಲ. **ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ"** ಎಂದು ಹೇಳಿದನು. (ಮತ್ತಾಯ–12:1-8)

ಪರಿಶುದ್ಧ ವಾಕ್ಯಗಳಲ್ಲಿ ಯೇಸು ನೂರಾರು ಹೆಸರುಗಳನ್ನೂ ಮತ್ತು ಬಿರುದುಗಳನ್ನೂ ಹೊಂದಿದ್ದಾನೆ. ಅವುಗಳಲ್ಲಿ ಆಗಾಗ್ಗೆ ಆತನು ಸ್ವತ: ಕರೆಯಲ್ಪಡುತ್ತಿದ್ದ ಬಿರುದು ಯಾವುದೆಂದರೆ ಅದು, **"ಮನುಷ್ಯ ಕುಮಾರನು"** ಎಂಬುದು. ಆದಾಮನ ಮಗನ ಒಂದು ರೂಪ –ವನ್ನು ಪಡೆದುಕೊಳ್ಳುವದಕ್ಕೆ ಮೆಸ್ಸೀಯನು ತನ್ನನ್ನು ತಗ್ಗಿಸಿಕೊಂಡನೆಂಬುದನ್ನು, ಮನುಷ್ಯ ಕುಮಾರನು ಎಂಬ ಈ ಬಿರುದು ನಮಗೆ ಜ್ಞಾಪಿಸುತ್ತದೆ. ಇದು ಆತನ ಮಹಿಮೆಯನ್ನೂ ಸಹ ಪ್ರಕಟಪಡಿಸುತ್ತದೆ, ಯಾಕಂದರೆ ಒಬ್ಬ ಮನುಷ್ಯನಾಗುವದರ ನಿಮಿತ್ತ ತನ್ನನ್ನು ತಗ್ಗಿಸಿಕೊಂಡ ಈ ಒಬ್ಬನೇ, ಆದಾಮನ ಎಲ್ಲಾ ಸಂತಾನದವರ ಮೇಲೆ ಎಲ್ಲಾ ಅಧಿಕಾರವನ್ನೂ ಮತ್ತು ಎಲ್ಲಾ ನ್ಯಾಯತೀರ್ಪನ್ನೂ ವಶ –ಪಡಿಸಿಕೊಂಡವನಾಗಿದ್ದಾನೆ. ಇದನ್ನು ಆಲೋಚಿಸಿರಿ! ದೇವರ ವಾಕ್ಯ, ಆತ್ಮ, ಬಲ ಮತ್ತು ಮಹಿಮೆ ಎಲ್ಲವೂ ಭೂಮಿಗೆ ಬಂದು ಮನುಷ್ಯನ ರೂಪವನ್ನು ಪಡೆದುಕೊಂಡಿತು! ಹೌದು, ಮನುಷ್ಯ ಕುಮಾರನಾದ ಯೇಸು ಕ್ರಿಸ್ತನು, ಸಬ್ಬತ್ ದಿನದ ಕರ್ತನೂ ಮತ್ತು ಎಲ್ಲದರ ಮೇಲಿನ ಕರ್ತನೂ ಆಗಿದ್ದಾನೆ. ಆದಾಗ್ಯೂ, ಯೇಸು ನಿಜವಾಗಿಯೂ ಏನಾಗಿದ್ದನೋ ಆ ರೀತಿಯಲ್ಲಿ ಫರಿಸಾಯರು ಆತ –ನನ್ನು ಒಪ್ಪಿಕೊಳ್ಳಲಿಲ್ಲ.

ಮುಂದೆ ಏನಾಯಿತೆಂಬುದನ್ನು ಕೇಳಿಸಿಕೊಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

ಆತನು ಅಲ್ಲಿಂದ ಹೊರಟು ಸಭಾಮಂದಿರಕ್ಕೆ ಹೋದಾಗ **ಅಲ್ಲಿ ಕೈಬತ್ತಿದವನೊಬ್ಬನಿದ್ದನು.** ಆಗ ಅವರು ಆತನ ಮೇಲೆ ತಪ್ಪುಹೊರಿಸ –ಬೇಕಂದು ಆತನನ್ನು, "ಸಬ್ಬತ್ ದಿನದಲ್ಲಿ ಸ್ವಸ್ಥಮಾಡುವದು ಸರಿಯೋ" ಎಂದು ಕೇಳಿದರು. ಅದಕ್ಕಾತನು, "ನಿಮ್ಮಲ್ಲಿ ಯಾರಿಗಾದರೂ ಒಂದೇ ಒಂದು ಕುರಿ ಇದ್ದು ಅದು ಸಬ್ಬತ್ ದಿದಲ್ಲಿ ಕುಣಿಯೊಳಗೆ ಬಿದ್ದರೆ ಅವನು ಅದನ್ನು ಹಿಡಿದು ಮೇಲಕ್ಕೆ ತೆಗೆಯದೆ ಇರುವನೇ? ಕುರಿಗಿಂತ ಮನುಷ್ಯನು ಎಷ್ಟೋ ಹೆಚ್ಚು. ಆದಕಾರಣ **ಸಬ್ಬತ್ ದಿನದಲ್ಲಿ ಒಳ್ಳೇ ಕೆಲಸ ಮಾಡುವದು ತಕ್ಕದ್ದೇ ಸರಿ"** ಎಂದು ಉತ್ತರ ಕೊಟ್ಟು ಆ ಮನುಷ್ಯನಿಗೆ, **"ನಿನ್ನ ಕೈ ಚಾಚು"** ಎಂದು ಹೇಳಿದನು. ಅವನು ಚಾಚಿದನು. ಅದು ಸಂಪೂರ್ಣವಾಗಿ ವಾಸಿಯಾಗಿ ಮತ್ತೊಂದರ ಹಾಗಾಯಿತು. ಆದರೆ ಫರಿಸಾಯರು ಹೊರಕ್ಕೆ ಹೋಗಿ ಇವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಆತ –ನಿಗೆ ವಿರೋಧವಾಗಿ ಆಲೋಚನೆ ಮಾಡಿಕೊಂಡರು. ಯೇಸು ಅದನ್ನು ತಿಳಿದು ಅಲ್ಲಿಂದ ಹೊರಟುಹೋದನು. ಅನೇಕರು ಆತನ ಹಿಂದೆ ಹೋದರು. ಆತನು ಅವರೆಲ್ಲರನ್ನು ಸ್ವಸ್ಥಮಾಡಿ. . . .(ಮತ್ತಾಯ–12:9-15)

ಯೇಸು ಅವರ ಸಂಪ್ರದಾಯಗಳನ್ನು ಗೌರವಿಸಲಿಲ್ಲ ಎಂಬ ಕಾರಣಕ್ಕಾಗಿ ಆತನು ತಪ್ಪು ಮಾಡುತ್ತಿದ್ದಾನೆಂಬುದಾಗಿ ಫರಿಸಾಯರು ಹೇಗೆ ಆತನ ಮೇಲೆ ಆರೋಪ ಮಾಡಿದರೆಂಬುದನ್ನು ನಾವು ನೋಡಿದೆವು. ಎಂತಹ ಕಪಟತನ! ಈ ಧಾರ್ಮಿಕ ನಾಯಕರುಗಳು ಹಸಿದವರ ಮತ್ತು ರೋಗಿಗಳ ವಿಷಯದಲ್ಲಿ ಕನಿಕರ ಇಲ್ಲದವರಾಗಿದ್ದರು, ಆದಾಗ್ಯೂ, ದೇವರಿಂದ ಬಂದಂತ, ಸಬ್ಬತ್ ದಿನದಲ್ಲಿ ಒಳ್ಳೆಯ ಕೆಲಸ –ಗಳನ್ನು ನಿಷೇಧಿಸುವಂತಹ ತಮ್ಮ ಸಂಪ್ರದಾಯಗಳನ್ನು ಜನರು ನಂಬುವಂತೆ ಮಾಡುವದಕ್ಕೆ ಇಷ್ಟಪಡುತ್ತಿದ್ದರು! ಹೀಗಿದ್ದರೂ, ಅವರ ಕೆಟ್ಟ ಹೃದಯಗಳನ್ನು ತಿಳಿದಿದ್ದ ಯೇಸು, ವಾಕ್ಯದಲ್ಲಿ ದೇವರು ಹೇಳಿರುವದನ್ನು ಅವರಿಗೆ ಜ್ಞಾಪಕಪಡಿಸಿದನು, ಅದೇನೆಂದರೆ, **"**ನನಗೆ ಯಜ್ಞವು ಬೇಡ, ಕರುಣೆಯೇ ಬೇಕು ಎಂಬದರ ಅರ್ಥವನ್ನು ನೀವು ತಿಳಿದಿದ್ದರೆ ನಿರಪರಾಧಿಗಳನ್ನು ಅಪರಾಧಿಗಳೆಂದು ತೀರ್ಪು ಮಾಡುತ್ತಿದ್ದಿಲ್ಲ. ಮನುಷ್ಯಕುಮಾರನು ಸಬ್ಬತ್ ದಿನಕ್ಕೆ ಒಡೆಯನಾಗಿದ್ದಾನೆ**"** ಎಂಬದು.

**ದೆವ್ವಹಿಡಿದು** ಕುರುಡನೂ ಮೂಕನೂ ಆಗಿರುವ ಒಬ್ಬನನ್ನು ಆತನ ಬಳಿಗೆ ಕರತಂದರು; ಆತನು ಅವನನ್ನು ಸ್ವಸ್ಥಮಾಡಲು ಆ ಮೂಕ –ನಿಗೆ ಬಾಯಿ ಕಣ್ಣು ಎರಡೂ ಬಂದವು. ಅದಕ್ಕೆ ಜನರೆಲ್ಲರೂ ಬೆರಗಾಗಿ, **"**ಈತನು ದಾವೀದಕುಮಾರನೇನು**"** ಎಂದು ಮಾತಾಡುತ್ತಿ –ದ್ದರು. ಆದರೆ ಫರಿಸಾಯರು ಅದನ್ನು ಕೇಳಿ, **"**ಇವನು ದೆವ್ವಗಳ ಒಡೆಯನಾದ ಬೆಲ್ಜೆಬೂಲನ ಸಹಾಯದಿಂದ ದೆವ್ವಗಳನ್ನು ಬಿಡಿಸು –ತ್ತಾನೇ ಹೊರತು ಬೇರೆ ರೀತಿಯಿಂದ ಬಿಡಿಸುವದಿಲ್ಲ ಅಂದರು. ಆತನು ಅವರ ಆಲೋಚನೆಗಳನ್ನು ತಿಳುಕೊಂಡು ಅವರಿಗೆ ಹೇಳಿ –ದ್ದೇನೆಂದರೆ, **"**ಯಾವ ರಾಜ್ಯವಾದರೂ ತನ್ನಲ್ಲಿ ಭೇದಹುಟ್ಟಿದರೆ ಹಾಳಾಗುವದು; ತನ್ನಲ್ಲಿ ಭೇದ ಹುಟ್ಟಿದ ಯಾವ ಪಟ್ಟಣವಾದರೂ ಮನೆಯಾದರೂ ನಿಲ್ಲದು. ಅದರಂತೆ ಸೈತಾನನು ಸೈತಾನನನ್ನು ಹೊರಡಿಸಿದರೆ ತನ್ನಲ್ಲಿ ಭೇದ ಹುಟ್ಟಿಸಿಕೊಂಡ ಹಾಗಾಯಿತು. ಹಾಗಾ –ದರೆ ಅವರ ರಾಜ್ಯವು ಹೇಗೆ ಉಳಿದೀತು? ನಾನು ಬೆಲ್ಜೆಬೂಲನ ಬಲದಿಂದ ದೆವ್ವಗಳನ್ನು ಬಿಡಿಸುವದಾದರೆ ನಿಮ್ಮವರು ಯಾರ ಬಲದಿಂದ ಬಿಡಿಸುತ್ತಾರೆ? ಆದದರಿಂದ ಅವರೇ ನಿಮಗೆ ನ್ಯಾಯತೀರಿಸುವವರಾಗುವರು. ನಾನು ದೇವರ ಆತ್ಮನ ಬಲದಿಂದಲೇ ದೆವ್ವ –ಗಳನ್ನು ಬಿಡಿಸುವದಾದರೆ ದೇವರ ರಾಜ್ಯವು ನಿಮ್ಮ ಹತ್ತರಕ್ಕೆ ಬಂತಲ್ಲಾ.**"** (ಮತ್ತಾಯ–12:22-28)

ಇದಾದ ಮೇಲೆ ಯೆಹೂದ್ಯರದೊಂದು ಜಾತ್ರೆ ಬಂದದರಿಂದ ಯೇಸು ಯೆರೂಸಲೇಮಿಗೆ ಹೋದನು. ಯೆರೂಸಲೇಮಿನಲ್ಲಿ ಕುರೀ ಅಗಸೆಬಾಗಲಿನ ಹತ್ತರದಲ್ಲಿ ಒಂದು ಕೊಳವಿದೆ; ಇದಕ್ಕೆ ಇಬ್ರಿಯ ಮಾತಿನಲ್ಲಿ ಬೇತ್ಸಥಾ ಎಂದು ಹೆಸರು. ಅಲ್ಲಿ ಐದು ಮಂಟಪಗಳಿವೆ; ಇವುಗಳಲ್ಲಿ ಬಹುಮಂದಿ ರೋಗಿಗಳೂ ಕುರುಡರೂ ಕುಂಟರೂ ಮೈಒಣಗಿದವರೂ ಬಿದ್ದುಕೊಂಡಿರುವರು. (ಯೋಹಾನ–5:1-4)

ಅಲ್ಲಿ ಮೂವತ್ತೆಂಟು ವರ್ಷದಿಂದ **ರೋಗಿಯಾಗಿದ್ದ** ಒಬ್ಬ ಮನುಷ್ಯನಿದ್ದನು. ಅವನು ಬಿದ್ದಿರುವದನ್ನು ಯೇಸು ಕಂಡು ಇವನು ಹೀಗಾಗಿ

ಬಹುಕಾಲವಾಗಿದೆ ಎಂದು ತಿಳಿದು,"ನಿನಗೆ ಸ್ವಸ್ಥವಾಗಲಿಕ್ಕೆ ಮನಸ್ಸುಂಟೋ?" ಎಂದು ಅವನನ್ನು ಕೇಳಿದ್ದಕ್ಕೆ ಆ ರೋಗಿಯು, "ಸ್ವಾಮೀ, ನೀರು ಉಕ್ಕುವಾಗ ನನ್ನನ್ನು ಕೊಳದೊಳಗೆ ಇಳಿಸುವವರು ಒಬ್ಬರೂ ಇಲ್ಲ; ನಾನು ಬರುವದರೊಳಗೆ ನನಗಿಂತ ಮುಂದಾಗಿ ಮತ್ತೊ –ಬ್ಬನು ಇಳಿಯುತ್ತಾನೆ" ಅಂದನು. ಯೇಸು ಅವನಿಗೆ, "ಎದ್ದು ನಿನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆ" ಎಂದು ಹೇಳಿದನು. ಆ ಕ್ಷಣವೇ ಆ ಮನುಷ್ಯನು ಸ್ವಸ್ಥನಾಗಿ ತನ್ನ ಹಾಸಿಗೆಯನ್ನು ಹೊತ್ತುಕೊಂಡು ನಡೆದನು. (5:5-9)

ಆದರೆ ಆ ದಿವಸ ಸಬ್ಬತ್ ದಿನವಾಗಿತ್ತು; ಹೀಗಿರುವದರಿಂದ ಯೆಹೂದ್ಯರು ಸ್ವಸ್ಥವಾದವನಿಗೆ, "ಈ ಹೊತ್ತು ಸಬ್ಬತ್ ದಿನವಾಗಿದೆ; ನೀನು ಹಾಸಿಗೆಯನ್ನು ಹೊರುವದು ಸರಿಯಲ್ಲವೆಂದು" ಹೇಳಿದ್ದಕ್ಕೆ ಅವನು, "ನನ್ನನ್ನು ಸ್ವಸ್ಥಮಾಡಿದವನೇ ನಿನ್ನ ಹಾಸಿಗೆಯನ್ನು ಹೊತ್ತು – ಕೊಂಡು ನಡೆ" ಎಂದು ನನಗೆ ಹೇಳಿದನು ಅಂದನು. ಹೊತ್ತುಕೊಂಡು ನಡೆ ಎಂದು ನಿನಗೆ ಹೇಳಿದ ಮನುಷ್ಯನು ಯಾರೆಂದು ಅವ –ನನ್ನು ಕೇಳಿದರು. ಆದರೆ ಅವನಾರೆಂಬದು ಸ್ವಸ್ಥವಾದವನಿಗೆ ತಿಳಿದಿರಲಿಲ್ಲ; ಆ ಸ್ಥಳದಲ್ಲಿ ಜನರ ಗುಂಪು ಇದ್ದದರಿಂದ ಯೇಸು ಸರಕೊಂಡು ಹೋಗಿದ್ದನು. (5:10-13)

ಇದಾದ ಮೇಲೆ ಯೇಸು ಅವನನ್ನು ದೇವಾಲಯದಲ್ಲಿ ಕಂಡುಕೊಂಡು, "ನಿನಗೆ ಸ್ವಸ್ಥವಾಯಿತಲ್ಲಾ; ಇನ್ನು ಮೇಲೆ ಪಾಪ ಮಾಡಬೇಡ; ನಿನಗೆ ಹೆಚ್ಚಿನ ಕೇಡು ಬಂದೀತು" ಅಂದನು. ಆ ಮನುಷ್ಯನು ಅಲ್ಲಿಂದ ಹೋಗಿ, ನನ್ನನ್ನು ಸ್ವಸ್ಥಮಾಡಿದವನು ಯೇಸುವೇ ಎಂದು ಯೆಹೂದ್ಯರಿಗೆ ತಿಳಿಸಿದನು. ಆದಕಾರಣ ಯೆಹೂದ್ಯರು, ಯೇಸು ಸಬ್ಬತ್ ದಿನದಲ್ಲಿ ಇಂಥ ಕೆಲಸಗಳನ್ನು ಮಾಡುತ್ತಾನಲ್ಲಾ ಎಂದು ಆತನನ್ನು ಹಿಂಸಿಸುವವರಾದರು. ಅದಕ್ಕೆ ಯೇಸು, "ನನ್ನ ತಂದೆಯು ಇಂದಿನವರೆಗೂ ಕೆಲಸ ಮಾಡುತ್ತಾನೆ, ನಾನೂ ಕೆಲಸ ಮಾಡು –ತ್ತೇನೆ" ಅಂದನು. **ಈ ಮಾತನ್ನು ಹೇಳಿದ್ದರಿಂದ ಆತನು ಸಬ್ಬತ್ ದಿನವನ್ನು ಅಲಕ್ಷ್ಯಮಾಡಿದ್ದಲ್ಲದೆ ದೇವರನ್ನು ತನ್ನ ತಂದೆ ಎಂದು ಹೇಳಿ ತನ್ನನ್ನು ದೇವರಿಗೆ ಸರಿಗಟ್ಟಿಕೊಂಡನೆಂದು ಯೆಹೂದ್ಯರು ಆತನನ್ನು ಕೊಲ್ಲುವದಕ್ಕೆ ಮತ್ತಷ್ಟು ಪ್ರಯತ್ನ ಮಾಡಿದರು.**(5:14-18)

ಇಲ್ಲಿಗೆ ನಿಲ್ಲಿಸೋಣ. ಧಾರ್ಮಿಕ ನಾಯಕರುಗಳು ಯೇಸುವಿಗೆ ತೊಂದರೆಕೊಟ್ಟು ಆತನನ್ನು ಕೊಲ್ಲುವದಕ್ಕೆ ಯಾಕೆ ಹುಡುಕುತ್ತಿದ್ದರು? ಆತನು ಸಬ್ಬತ್ ದಿನದಲ್ಲಿ ದುರ್ಬಲರನ್ನು ಸ್ವಸ್ಥಗೊಳಿಸಿದನೆಂಬುದು ಕಾರಣವಾಗಿತ್ತಾ? ಅದು ನಿಜವಾದ ಕಾರಣವಲ್ಲ. ಅವರು ಯೇಸು –ವನ್ನು ಕೊಲ್ಲುವದಕ್ಕೆ ಹುಡುಕುತ್ತಿದ್ದದ್ದು ಯಾಕಂದರೆ, **ದೇವರು ತನ್ನ ತಂದೆ ಎಂದು ಆತನು ಹೇಳಿದ್ದನು**. ದೇವರ ಸನ್ನಿಧಿಯಿಂದ ಬಂದವನಾಗಿದ್ದ ಯೇಸುವನ್ನು ಮೆಸ್ಸೀಯನೆಂದು ಅವರು ಒಪ್ಪಿಕೊಂಡಿರಲಿಲ್ಲ. ಹಾಗಾಗಿ ಅವರು ಯೇಸುವನ್ನು ದೇವದೂಷಕನೆಂದು ಆರೋಪಿಸಿ ಆತನನ್ನು ನಾಶಪಡಿಸುವದಕ್ಕೆ ಹುಡುಕುತ್ತಿದ್ದರು. ಆದರೆ ವಾಕ್ಯ ಹೀಗೆ ಹೇಳುತ್ತದೆ:

ಅದಕ್ಕೆ ಯೇಸು ಅವರಿಗೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ತಂದೆಯು ಮಾಡುವದನ್ನು ಕಂಡು **ಮಗನು** ಮಾಡುತ್ತಾನೆ ಹೊರತು ತನ್ನಷ್ಟಕ್ಕೆ ತಾನೇ ಏನೂ ಮಾಡಲಾರನು; ಆತನು ಮಾಡುವದನ್ನೆಲ್ಲಾ ಹಾಗೆಯೇ ಮಗನು ಮಾಡುತ್ತಾನೆ. ತಂದೆಯು ಮಗನ ಮೇಲೆ ಮಮತೆಯಿಟ್ಟು ತಾನು ಮಾಡುವವುಗಳನ್ನೆಲ್ಲಾ ಅವನಿಗೆ ತೋರಿಸುತ್ತಾನೆ. ಇದಲ್ಲದೆ ಇವುಗಳಿಗಿಂತ ದೊಡ್ಡ ಕೆಲಸಗಳನ್ನು ಅವನಿಗೆ ತೋರಿಸುವನು; ಅವುಗಳನ್ನು ನೋಡಿ ನಿಮಗೆ ಆಶ್ಚರ್ಯವಾಗುವದು. ತಂದೆಯು ಹೇಗೆ ಸತ್ತವರನ್ನು ಎಬ್ಬಿಸಿ ಬದುಕಿಸುತ್ತಾನೋ ಹಾಗೆಯೇ ಮಗನು ಸಹ ತನಗೆ ಬೇಕಾದವರನ್ನು ಬದುಕಿಸುತ್ತಾನೆಂದು ತಿಳುಕೊಳ್ಳಿರಿ. ಇದಲ್ಲದೆ ತಂದೆಯು ಯಾರಿಗೂ ತೀರ್ಪು ಮಾಡುವದೂ ಇಲ್ಲ; ತೀರ್ಪುಮಾಡುವ ಅಧಿಕಾರವನ್ನೆಲ್ಲಾ ಮಗನಿಗೆ ಕೊಟ್ಟಿದ್ದಾನೆ; ಎಲ್ಲರು ತನಗೆ ಮಾನ ಕೊಡುವ ಪ್ರಕಾರವೇ ಮಗ –ನಿಗೂ ಮಾನ ಕೊಡಬೇಕೆಂದು ತಂದೆಯು ಇಚ್ಛೈಸುತ್ತಾನೆ." (5:19-23)

**"ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳಿಹಿಸಿದಾತನನ್ನು ನಂಬುವವನು ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದಾಗಿ ಪಾರಾಗಿ ಜೀವಕ್ಕೆ ಸೇರಿದ್ದಾನೆ."** (5:24)

"ನನ್ನ ವಿಷಯವಾಗಿ **ನಾನೇ ಸಾಕ್ಷಿ** ಹೇಳಿಕೊಂಡರೆ ನನ್ನ ಸಾಕ್ಷಿ ನಿಜವಾಗದು. ನನ್ನ ವಿಷಯವಾಗಿ ಸಾಕ್ಷಿ ಹೇಳುವವನು ಮತ್ತೊಬ್ಬನಿ – ದ್ದಾನೆ; ಆತನು ನನ್ನ ವಿಷಯವಾಗಿ ಹೇಳುವ ಸಾಕ್ಷಿ ನಿಜವೆಂದು ಬಲ್ಲೆನು. ನೀವು **ಯೋಹಾನನ** ಬಳಿಯಲ್ಲಿ ಕೇಳಿಕೊಂಡು ಬರುವ –ದಕ್ಕೆ ಕಳುಹಿಸಿದಿರಿ; ಅವನು ಸತ್ಯಕ್ಕೆ ಸಾಕ್ಷಿ ಹೇಳಿದನು. ನಾನಂತು ನನಗೆ ಬೇಕಾದ ಸಾಕ್ಷಿಯನ್ನು ಮನುಷ್ಯರಿಂದ ತಕ್ಕೊಳ್ಳುವದಿಲ್ಲ; ಆದರೂ ನಿಮಗೆ ರಕ್ಷಣೆ ಆಗಬೇಕೆಂದು ಇದನ್ನು ಹೇಳಿದ್ದೇನೆ. ಯೋಹಾನನು ಉರಿಯುವ ದೀಪದೋಪಾದಿಯಲ್ಲಿ ಪ್ರಕಾಶಿಸಿದನು. ಅವನು ಕೊಡುವ ಬೆಳಕಿನಲ್ಲಿ ಸ್ವಲ್ಪಕಾಲ ವಿನೋದಗೊಳ್ಳುವದಕ್ಕೆ ಮನಸ್ಸುಮಾಡಿದಿರಿ. ನನಗಂತೂ ಯೋಹಾನನ ಸಾಕ್ಷಿಗಿಂತ ಹೆಚ್ಚಿನ ಸಾಕ್ಷಿ ಉಂಟು; ಹೇಗಂದರೆ ಪೂರೈಸುವದಕ್ಕೆ ತಂದೆ ನನಗೆ ಕೊಟ್ಟಿರುವ ಕೆಲಸಗಳು, ಅಂದರೆ **ನಾನು ಮಾಡುವ ಕೆಲಸಗಳೇ, ತಂದೆಯು** ನನ್ನನ್ನು ಕಳುಹಿಸಿಕೊಟ್ಟನೆಂಬದಾಗಿ ನನ್ನ ವಿಷಯದಲ್ಲಿ ಸಾಕ್ಷಿಕೊಡುತ್ತವೆ. ಇದಲ್ಲದೆ ನನ್ನನ್ನು ಕಳುಹಿಸಿಕೊಟ್ಟ ತಂದೆಯು ನನ್ನ ವಿಷಯ –ವಾಗಿ ಸಾಕ್ಷಿ ಹೇಳಿದ್ದಾನೆ. ನೀವು ಎಂದಾದರೂ ಆತನ ಧ್ವನಿಯನ್ನು ಕೇಳಿದ್ದೂ ಇಲ್ಲ, ಆತನ ರೂಪವನ್ನೂ ನೋಡಿದ್ದೂ ಇಲ್ಲ; ಆತನ ವಾಕ್ಯವು ನಿಮ್ಮಲ್ಲಿ ನೆಲೆಗೊಂಡದ್ದೂ ಇಲ್ಲ; ಆತನು ಕಳುಹಿಸಿಕೊಟ್ಟವನ ಮಾತನ್ನು ನೀವು ನಂಬದೆ ಇದ್ದೀರಷ್ಟೆ. ಶಾಸ್ತ್ರಗಳಿಂದ ನಿತ್ಯ

ಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; **ಅವುಗಳೂ** ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾ – ಗಿವೆ. ಆದರೂ ಜೀವ ಹೊಂದುವವದಕ್ಕಾಗಿ ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ. ನಾನು ಮನುಷ್ಯರಿಂದಾಗುವ ಮಾನವನ್ನು ಅಂಗೀಕರಿಸುವದಿಲ್ಲ. ಆದರೆ ನಿಮ್ಮನ್ನು ನಾನು ಬಲ್ಲೆನು, ದೇವರಲ್ಲಿ ನಿಮಗೆ ಪ್ರೀತಿಯಿಲ್ಲವೆಂದು ನನಗೆ ತಿಳಿದದೆ. ನಾನು ನನ್ನ ತಂದೆಯ ಹೆಸರಿನ ಮೇಲೆ ಬಂದಿದ್ದೇನೆ; ನನ್ನನ್ನು ನೀವು ಒಪ್ಪಿಕೊಳ್ಳುವದಿಲ್ಲ; ಮತ್ತೊಬ್ಬನು ಸ್ವಂತ ಹೆಸರಿನ ಮೇಲೆ ಬಂದರೆ ಅವನನ್ನು ಒಪ್ಪಿ – ಕೊಳ್ಳುವಿರಿ. ಒಬ್ಬನೇ ದೇವರಿಂದ ಬರುವಂಥ ಮಾನವನ್ನು ಅಪೇಕ್ಷಿಸದೆ ಒಬ್ಬರಿಂದೊಬ್ಬರು ಮಾನವನ್ನು ಅಂಗೀಕರಿಸುವವರಾದ ನೀವು ಹೇಗೆ ನಂಬೀರಿ? ನಾನು ತಂದೆಯ ಮುಂದೆ ನಿಮ್ಮ ಮೇಲೆ ತಪ್ಪುಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿ –ರುವ ಮೋಶೆಯೇ ನಿಮ್ಮ ಮೇಲೆ ತಪ್ಪುಹೊರಿಸುವವನು. ಅವನು ನನ್ನ ವಿಷಯವಾಗಿ ಬರೆದನು; ಆದದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ?" ಅಂದನು. (ಯೋಹಾನ–5:31-47)

ತನ್ನನ್ನು ಕೊಲ್ಲಬೇಕೆಂದಿದ್ದ ಫರಿಸಾಯರನ್ನು ಕರ್ತನಾದ ಯೇಸು ಹೇಗೆ ಖಂಡಿಸಿದನೆಂಬುದನ್ನು ನೀವು ಕೇಳಿಸಿಕೊಂಡಿರಾ? ಪರ – ಲೋಕದಿಂದ ಕಳಿಸಲ್ಪಟ್ಟ ಮೆಸ್ಸೀಯನನ್ನು ತಿರಸ್ಕರಿಸುವ ಯಾರಾದರೂ ಆತನ ಎಣೆಯಿಲ್ಲದ ಮಾತುಗಳ ಮತ್ತು ಕೆಲಸಗಳ ಸಾಕ್ಷಿಯನ್ನು ತಿರಸ್ಕರಿಸಿದ ಹಾಗೆ; ಅಂದರೆ ಅವನು ಪ್ರವಾದಿಯಾದ ಯೋಹಾನನ, ಪ್ರವಾದಿಯಾದ ಮೋಶೆಯ ಮತ್ತು ಶಾಸ್ತ್ರಗ್ರಂಥಗಳ ಸಾಕ್ಷಿಯನ್ನು ತಿರಸ್ಕರಿಸಿದ ಹಾಗೆ ಎಂದು ಆತನು ಅವರಿಗೆ ಹೇಳಿದನು. ಸಂಕ್ಷಿಪ್ತವಾಗಿ ಹೇಳುವದಾದರೆ, ಮೆಸ್ಸೀಯನನ್ನು ತಿರಸ್ಕರಿಸುವ ಯಾವನಾ –ದರೂ ಸ್ವತ: ದೇವರನ್ನೇ ತಿರಸ್ಕರಿಸುವವನಾಗಿದ್ದಾನೆ. ಮಗನಿಗೆ ಅಗೌರವ ತೋರಿಸುವವನು ಆತನನ್ನು ಕಳಿಸಿದ ತಂದೆಗೂ ಅಗೌರವ ತೋರಿಸುವವನಾಗಿದ್ದಾನೆ. ಯೇಸುವಿನ ಮಾತು ಮತ್ತು ಅಧಿಕಾರವನ್ನು ನಿರಾಕರಿಸುವದು ದೇವರ ಮಾತು ಮತ್ತು ಅಧಿಕಾರವನ್ನು ನಿರಾಕರಿಸಿದಂತೆ, ಯಾಕಂದರೆ ದೇವರು ಎಲ್ಲಾ ಅಧಿಕಾರವನ್ನೂ ಮತ್ತು ನ್ಯಾಯತೀರ್ಪನ್ನೂ ಒಪ್ಪಿಸಿಕೊಟ್ಟಂತ ಯೇಸುವೇ ನಿಜವಾದ ದೇವರ ವಾಕ್ಯವೂ ಮತ್ತು ವ್ಯಕ್ತಿಯೂ ಆಗಿದ್ದಾನೆ.

ದೇವರನ್ನು ಮತ್ತು ಆತನ ಪ್ರವಾದಿಗಳನ್ನು ನಿಜವಾಗಿಯೂ ನಂಬುವ ಯಾವನಾದರೂ ಪರಲೋಕದಿಂದ ಬಂದಂತಹ ಯೇಸುವೇ ಮೆಸ್ಸೀಯನೆಂಬುದಾಗಿ ಸಹ ನಂಬುತ್ತಾನೆ, ಯಾಕಂದರೆ ದೇವರ ಪ್ರವಾದಿಗಳೆಲ್ಲರೂ ಆತನ ವಿಷಯವನ್ನು ಸಾಕ್ಷಿಕೊಟ್ಟಿದ್ದಾರೆ. ಯಾರು ಪ್ರವಾದಿಗಳ ಬರವಣಿಗೆಗಳನ್ನು ತಿಳಿದುಕೊಂಡು ನಂಬುತ್ತಾರೋ ಅವರು, ಈ ಯೇಸುವು ಲೋಕದ ರಕ್ಷಕನೆಂಬುದಾಗಿ ದೇವರಿಂದ ಆರಿಸಲ್ಪಟ್ಟವನೂ, ಮರಿಯಳ ಮಗನೂ ಆಗಿದ್ದಾನೆಂದು ತಿಳಿದುಕೊಳ್ಳುತ್ತಾರೆ ಮತ್ತು ನಂಬುತ್ತಾರೆ. ಅದನ್ನೇ ಯೇಸು ಧಾರ್ಮಿಕ ನಾಯಕರುಗಳಿಗೆ ಹೇಳಿದ್ದು, ಅದೇನೆಂದರೆ,

"ಶಾಸ್ತ್ರಗಳಿಂದ ನಿತ್ಯಜೀವವು ದೊರೆಯುತ್ತದೆಂದು ನೀವು ನೆನಸಿ ಅವುಗಳನ್ನು ವಿಚಾರಿಸುತ್ತೀರಲ್ಲಾ; ಅವುಗಳೂ ನನ್ನ ವಿಷಯದಲ್ಲಿ ಸಾಕ್ಷಿಕೊಡುವವುಗಳಾಗಿವೆ. ಆದರು ಜೀವ ಹೊಂದುವದಕ್ಕಾಗಿ ನನ್ನ ಬಳಿಗೆ ಬರುವದಕ್ಕೆ ನಿಮಗೆ ಮನಸ್ಸಿಲ್ಲ. ನಾನು ತಂದೆಯ ಮುಂದೆ ನಿಮ್ಮ ಮೇಲೆ ತಪ್ಪು ಹೊರಿಸುವೆನೆಂದು ನೆನಸಬೇಡಿರಿ; ನೀವು ಆಶ್ರಯಿಸಿಕೊಂಡಿರುವ ಮೋಶೆಯೇ ನಿಮ್ಮ ಮೇಲೆ ತಪ್ಪು ಹೊರಿಸುವವನು. ಅವನು ನನ್ನ ವಿಷಯವಾಗಿ ಬರೆದನು; ಆದದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ?" (ಯೋಹಾನ–5:39,40, 45-47)

ಓಹ್, ನಾವು ಪ್ರತಿಯೊಬ್ಬರೂ ಈ ಮಾತುಗಳನ್ನು ಜಾಗ್ರತೆಯಿಂದ ಆಲೋಚಿಸಬೇಕಾಗುತ್ತದೆ, ಯಾಕಂದರೆ ದೇವರು ಅವುಗಳ ಪೂರ್ತಿ ಅರ್ಥದೊಳಗೆ ನಮಗೆ ವಿವೇಕವನ್ನು ಕೊಡುವದಕ್ಕೆ ಇಷ್ಟಪಡುತ್ತಾನೆ. ನಮ್ಮ ಹೃದಯಗಳಲ್ಲಿ ಸತ್ಯ ಇರಬೇಕೆಂದು ದೇವರು ಇಷ್ಟಪಡು – ತ್ತಾನೆ. ಪ್ರವಾದಿಗಳನ್ನು ನಂಬುತ್ತೇವೆಂದು ನಾವು ಹೇಳಿದರೆ, ಅವುಗಳು ಯಾರ ವಿಷಯವಾಗಿ ಸಾಕ್ಷಿ ಕೊಟ್ಟಿವೆಯೋ ಆತನನ್ನು ನಾವು ನಂಬಲೇಬೇಕು, ಆತನೇ ಮೆಸ್ಸೀಯನಾಗಿರುವ ಯೇಸು! ಸ್ನೇಹಿತರೇ, ಈ ಪ್ರಶ್ನೆಯೊಂದಿಗೆ ನಾವು ನಿಮ್ಮ ಬಿಡುತ್ತೇವೆ: ನೀವು ನಿಜ – ವಾಗಿಯೂ ಪ್ರವಾದಿಗಳನ್ನು ನಂಬುತ್ತೀರೋ? ಅನೇಕರು ಒಬ್ಬ ಮನುಷ್ಯನ ಸಾಕ್ಷಿಯನ್ನು ಶೀಘ್ರವಾಗಿ ನಂಬುತ್ತಾರೆ, ಆದರೆ ಆಶ್ಚರ್ಯ – ವೇನೆಂದರೆ, ಕೆಲವರು ಪರಿಶುದ್ದ ಗ್ರಂಥಗಳನ್ನು ಬರೆದಿರುವಂತ ಅನೇಕ ದೇವರ ಪ್ರವಾದಿಗಳ ಸಾಕ್ಷಿಯನ್ನು ದೃಢಪಡಿಸುತ್ತಾರೆ. ನಿಮ್ಮ ವಿಷಯವೇನು? "ನೀವು ಪ್ರವಾದಿಗಳನ್ನು ನಂಬುತ್ತೀರೋ?" (ಅಪೊ.ಕೃತ್ಯ–26:27)

ಜೊತೆ ಕೇಳುಗರೇ, ಈದಿನ ಇಲ್ಲಿಗೆ ನಾವು ನಿಮಗೆ ವಿದಾಯ ಹೇಳುತ್ತೇವೆ ಯಾಕಂದರೆ ನಮ್ಮ ಸಮಯವು ಮುಗಿಯಿತು. ಆದಾಗ್ಯೂ, ಮೆಸ್ಸೀಯನಾದ ಯೇಸುವಿನ ಅದ್ಭುತವಾದ ಕತೆಯನ್ನು ನಾವು ಮುಂದುವರಿಸುವಂತೆ ಮುಂಬರುವ ಅಧ್ಯಯನದಲ್ಲಿ ನಮ್ಮನ್ನು ಸೇರಿ – ಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. . . .ಕರ್ತನಾದ ಯೇಸು ಫರಿಸಾಯರಿಗೆ ಹೇಳಿರುವದನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಿ ನಿಮ್ಮೊಂದಿಗೆ ಮಾತಾಡಲಿ:

**"ಆದದರಿಂದ ನೀವು ಮೋಶೆಯ ಮಾತನ್ನು ನಂಬುವವರಾಗಿದ್ದರೆ ನನ್ನ ಮಾತನ್ನೂ ನಂಬುತ್ತಿದ್ದಿರಿ. ಅವನು ಬರೆದ ಮಾತುಗಳನ್ನು ನೀವು ನಂಬದಿದ್ದರೆ ನಾನು ಹೇಳುವ ಮಾತುಗಳನ್ನು ಹೇಗೆ ನಂಬೀರಿ?"** (ಯೋಹಾನ–5:47)

[ಪಾಠ 69: ಯೇಸುವಿನ ಅಧಿಕಾರ] [ಸಾರಾಂಶಗಳ ಪಟ್ಟಿ] [ಪಾಠ 71: ಮುಖ್ಯವಾದ ಸಾಮ್ಯಗಳು]

ಪಾಠ 70

# ಯೇಸುವಿನ ಶಕ್ತಿ

ಮಾರ್ಕ 4-6; ಮತ್ತಾಯ 9-10

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, **ದೇವರು ತನ್ನ ತಂದೆಯೆಂದು ಹಾಗಾಗಿ ದೇವರೊಂದಿಗೆ ತನ್ನನ್ನು ಸರಿಸಮಾನನೆಂದು ಯೇಸು ಹೇಳಿಕೊಳ್ಳುತ್ತಿದ್ದದರಿಂದ, ಧಾರ್ಮಿಕ ನಾಯಕರುಗಳು ಆತನನ್ನು ನಾಶಗೊಳಿಸುವದಕ್ಕೆ ಹುಡುಕುತ್ತಿದ್ದರೆಂಬುದನ್ನು** ನಾವು ನೋಡಿ –ಕೊಂಡೆವು. ಕರ್ತನಾದ ಯೇಸುವು ಹೋಗುವಲ್ಲೆಲ್ಲಾ ಜನರ ಒಂದು ದೊಡ್ಡ ಗುಂಪು ಆತನನ್ನು ಹಿಂಬಾಲಿಸುತ್ತಿತ್ತು. ಆ ಗುಂಪಿನಲ್ಲಿ ಕೆಲವರು ಯೇಸುವಿನ ಮಾತನ್ನು ನಂಬಿದರು ಮತ್ತು ಇತರರು ಆತನನ್ನು ನಂಬಲಿಲ್ಲ. ತನ್ನನ್ನು ನಂಬಿದವರೊಳಗಿಂದ ಯೇಸು ಹನ್ನೆರಡು ಜನ ಅಪೊಸ್ತಲರನ್ನು(ಸಂದೇಶಕರನ್ನು) ಆರಿಸಿಕೊಂಡನು, ಆದದರಿಂದ ಆತನು ಅವರೊಂದಿಗೆ ಇದ್ದುಕೊಂಡು ಅವರಿಗೆ ಬೋಧಿಸುತ್ತಾ ರಕ್ಷಣೆಯ ಶುಭ ಸಂದೇಶವನ್ನು ಸಾರುವದಕ್ಕೆ ಅವರನ್ನು ಕಳುಹಿಸಿಕೊಟ್ಟನು.

ಯೇಸು ಆರಿಸಿಕೊಂಡ ಹನ್ನೆರಡು ಅಪೊಸ್ತಲರ ಹೆಸರುಗಳು ಯಾವುವೆಂದರೆ, ಪೇತ್ರನೆಂದು ಕರೆಯಲ್ಪಡುವ ಸೀಮೋನ, ಇವನ ತಮ್ಮನಾದ ಅಂದ್ರೆಯ, ಜೆಬೆದಾಯನ ಮಗನಾದ ಯಾಕೋಬ, ಅವನ ತಮ್ಮನಾದ ಯೋಹಾನ, ಈ ನಾಲ್ಕು ಜನರು ಬೆಸ್ತರಾಗಿದ್ದರು. ಇತರ ಅಪೊಸ್ತಲರೆಂದರೆ, ಫಿಲಿಪ್ಪ, ಬಾರ್ತಲೋಮಾಯ, ತೋಮ, ಸುಂಕದ ಮತ್ತಾಯ, ಅಲ್ಫಾಯನ ಮಗನಾದ ಯಾಕೋಬ, ತದ್ದಾಯ, ಕಾನಾನ್ಯನಾದ ಸೀಮೋನ, ಯೇಸುವಿಗೆ ದ್ರೋಹ ಮಾಡುವದಕ್ಕಿದ್ದ ಇಸ್ಕರಿಯೋತ ಯೂದ, (ಮತ್ತಾಯ–10:2-4). ಯೇಸುವಿನ ಜೊತೆಗಿದ್ದ ಹನ್ನೆರಡು ಜನ ಶಿಷ್ಯರು ಇವರೇ. ಯೇಸು ಹೋದಲ್ಲೆಲ್ಲಾ **ಕೆಲವು ಸ್ತ್ರೀಯರೂ** ಸಹ ಆತನನ್ನು ಹಿಂಬಾಲಿಸು –ತ್ತಿದ್ದರು: ಯೇಸು ಏಳು ದೆವ್ವಗಳನ್ನು ಬಿಡಿಸಿದ್ದ ಮಗ್ದಲದ ಮರಿಯಳು, ಹೆರೋದನ ಮನೆವಾರ್ತೆಯವನಾದ ಕೂಜನ ಹೆಂಡತಿ ಯಾದ ಯೋಹಾನಳು, ಸುಸನ್ನಳು ಮತ್ತು ಇತರರು. ಇವರು ತಮ್ಮ ಆಸ್ತಿಯಿಂದ ಯೇಸುವಿಗೆ ಕೊಟ್ಟು ಉಪಚರಿಸುತ್ತಿದ್ದರು. (ಲೂಕ–8:2,3).

ನಾವು ಈಗಾಗಲೇ ನೋಡಿಕೊಂಡಂತೆ ಕರ್ತನಾದ ಯೇಸುವಿನ ಬೋಧನೆಯ ನಿಮಿತ್ತ ಜನರು ಆಶ್ಚರ್ಯಗೊಂಡಿದ್ದರು, ಯಾಕೆಂದರೆ ಆತನು ಅವರ ಧಾರ್ಮಿಕ ಬೋಧಕರುಗಳಂತೆ ಮಾತಾಡದೇ ಅಧಿಕಾರವಿದ್ದವನಂತೆ ಅವರಿಗೆ ಬೋಧಿಸುತ್ತಿದ್ದನು. ಯೇಸುವಿನ ಅಧಿ –ಕಾರವು ಕೇವಲ ಮಾತುಗಳಿಗೆ ಸೀಮಿತವಾಗಿರಲಿಲ್ಲ, ಆದರೆ ಆತನು ತನ್ನ ಶಕ್ತಿಯುತ ಕೆಲಸಗಳಿಂದ ಅದನ್ನು ರುಜುವಾತುಗೊಳಿಸು –ತ್ತಿದ್ದನು. ಅದಕ್ಕಾಗಿ ವಾಕ್ಯ ಹೀಗೆ ಹೇಳುತ್ತದೆ: **"ದೇವರ ರಾಜ್ಯವು ಮಾತಿನಲ್ಲಿ ಇಲ್ಲ, ಶಕ್ತಿಯಲ್ಲಿ ಆಧಾರಗೊಂಡದೆ"**(1ಕೊರಿಂಥ–4:20). **ಕರ್ತನಾದ ಯೇಸು** ಭೂಮಿಯ ಮೇಲಿನ ಪ್ರತಿಯೊಂದು ಬಲದ ಮೇಲೆ ಮತ್ತು ಪ್ರತಿಯೊಂದು ಸೃಷ್ಟಿಯ ಮೇಲೆ ಹೇಗೆ **ಬಲವನ್ನು ಮತ್ತು ಅಧಿಕಾರವನ್ನು ವಶಪಡಿಸಿಕೊಂಡಿದ್ದಾನೆಂಬುದನ್ನು** ಈದಿನದ ಪಾಠದಲ್ಲಿ ನಾವು ನೋಡಿಕೊಳ್ಳುತ್ತೇವೆ.

ಮಾರ್ಕನ ಸುವಾರ್ತೆಯ ನಾಲ್ಕನೆಯ ಅಧ್ಯಾಯದಲ್ಲಿ ಓದುವದನ್ನು ನಾವು ಪ್ರಾರಂಭಿಸುತ್ತೇವೆ. ವಾಕ್ಯ ಹೀಗೆ ಹೇಳುತ್ತದೆ:

ಆ ಹೊತ್ತು ಸಾಯಂಕಾಲವಾದಾಗ ಆತನು ಅವರಿಗೆ, **"ಆಚೆದಡಕ್ಕೆ ಹೋಗೋಣ"** ಎಂದು ಹೇಳಲು ಅವರು ಆ ಜನರ ಗುಂಪನ್ನು ಬಿಟ್ಟು ಆತನನ್ನು ಅದೇ ದೋಣಿಯಲ್ಲಿ ಹಾಗೆಯೇ ಕರಕೊಂಡು ಹೋದರು. ಬೇರೆ ದೋಣಿಗಳೂ ಆತನ ಸಂಗಡ ಇದ್ದವು. ತರು –ವಾಯ **ದೊಡ್ಡ ಬಿರುಗಾಳಿ ಎದ್ದು** ತೆರೆಗಳು ಆ ದೋಣಿಗೆ ಬಡಿದು ಒಳಗೆ ನುಗ್ಗಿದ್ದರಿಂದ ಆ ದೋಣಿ ಆಗಲೇ ತುಂಬುವದಕ್ಕೆ ಬಂದಿತ್ತು. ಆತನು ದೋಣಿಯ ಹಿಂಭಾಗದಲ್ಲಿ ತಲೆಗಿಂಬನ್ನು ಒರಗಿ ನಿದ್ದೆ ಮಾಡುತ್ತಿದ್ದನು. ಅವರು ಆತನನ್ನು ಎಬ್ಬಿಸಿ, **"ಗುರುವೇ,** ನಾವು ಮುಳುಗಿ ಹೋಗುವದರಲ್ಲಿ ನಿನಗೆ ಚಿಂತೆಯಿಲ್ಲವೇ**"** ಎಂದು ಕೇಳಲು ಆತನು ಎದ್ದು ಗಾಳಿಯನ್ನು ಗದರಿಸಿ ಸಮುದ್ರಕ್ಕೆ, **"ಸುಮ್ಮನಿರು ಮೊರೆಯಬೇಡ"** ಎಂದು ಅಪ್ಪಣೆ ಕೊಟ್ಟನು. ಕೊಡುತ್ತಲೇ ಗಾಳಿ ನಿಂತುಹೋಗಿ **ಎಲ್ಲಾ ಶಾಂತವಾಯಿತು.** ತರುವಾಯ ಆತನು ಅವರನ್ನು, **"**ಯಾಕೆ ಧೈರ್ಯಗೆಡುತ್ತೀರಿ? ಇನ್ನೂ ನಿಮಗೆ ನಂಬಿಕೆಯಿಲ್ಲವೇ**"** ಎಂದು ಕೇಳಲು ಅವರು ಬಹು ಭಯಪಟ್ಟು, **"ಈತನು ಯಾರಿರಬಹುದು? ಗಾಳಿಯೂ ಸಮುದ್ರವೂ ಸಹ ಈತನು ಹೇಳಿದ ಹಾಗೆ ಕೇಳುತ್ತವಲ್ಲಾ"** ಎಂದು ತಮ್ಮ ತಮ್ಮೊಳಗೆ ಮಾತಾಡಿ –ಕೊಂಡರು. (ಮಾರ್ಕ–4:35-41)

ಆಮೇಲೆ ಅವರು ಸಮುದ್ರದ ಆಚೇದಡಕ್ಕೆ ಗೆರಸೇನರ ಸೀಮೆಗೆ ಮುಟ್ಟಿದರು. ಆತನು ದೋಣಿಯಿಂದ ಇಳಿದುಬಂದ ಕೂಡಲೆ **ದೆವ್ವ ಹಿಡಿದವನೊಬ್ಬನು** ಸಮಾಧಿಯ ಗವಿಗಳೊಳಗಿಂದ ಆತನೆದುರಿಗೆ ಬಂದನು. ಅವನಿಗೆ ಸಮಾಧಿಯ ಗವಿಗಳೇ ವಾಸಸ್ಥಳವಾಗಿದ್ದವು. ಅವನನ್ನು ಅನೇಕ ಸಾರಿ ಬೇಡಿಗಳಿಂದಲೂ ಸರಪಣಿಗಳಿಂದಲೂ ಕಟ್ಟಿದ್ದರೂ ಅವನು ಸರಪಣಿಗಳನ್ನು ಕಿತ್ತು ಬೇಡಿಗಳನ್ನು ಮುರಿದು ಹಾಕಿದ್ದನು; ಅವನನ್ನು ಇನ್ನು ಯಾರೂ ಸರಪಣಿಯಿಂದಾದರೂ ಕಟ್ಟಲಾರದೆ ಹೋದರು; ಅವನನ್ನು ಹತೋಟಿಗೆ ತರುವದಕ್ಕೆ ಯಾರಿಂ –ದಲೂ ಆಗಲಿಲ್ಲ. ಅವನು ನಿತ್ಯ ರಾತ್ರಿ ಹಗಲು ಸಮಾಧಿಯ ಗವಿಗಳಲ್ಲಿಯೂ ಗುಡ್ಡಗಳಲ್ಲಿಯೂ ಆರ್ಭಟಿಸುತ್ತಾ ಕಲ್ಲುಗಳಿಂದ ತನ್ನನ್ನು ಕಡಿದುಕೊಳ್ಳುತ್ತಾ ಇದ್ದನು. ಅವನು ಯೇಸುವನ್ನು ದೂರದಿಂದ ಕಂಡು ಓಡಿಬಂದು ಆತನಿಗೆ ಅಡ್ಡಬಿದ್ದು ಮಹಾ ಶಬ್ದದಿಂದ ಆರ್ಭ – –ಟಿಸಿ, "ಯೇಸುವೇ, ಪರಾತ್ಪರನಾದ ದೇವರ ಮಗನೇ, ನನ್ನ ಗೊಡವೆ ನಿನಗೇಕೆ? ದೇವರಾಣೆ, ನನ್ನನ್ನು ಕಾಡಬೇಡ" ಎಂದು ಹೇಳಿ –ದನು. ಯಾಕಂದರೆ, "ಎಲಾ ದೆವ್ವ, ಇವನನ್ನು ಬಿಟ್ಟುಹೋಗು" ಎಂದು ಯೇಸು ಹೇಳಿದ್ದನು. ಮತ್ತು "ನಿನ್ನ ಹೆಸರೇನೆಂದು" ಅವನನ್ನು ಕೇಳಿದ್ದಕ್ಕೆ ಅವನು, "ನನ್ನ ಹೆಸರು ದಂಡು; ಯಾಕಂದರೆ ನಾವು ಬಹು ಮಂದಿ ಇದ್ದೇವೆ ಎಂದು ಹೇಳಿ, ನಮ್ಮನ್ನು ಈ ಸೀಮೆಯಿಂದ ಹೊರಡಿಸಬೇಡವೆಂದು" ಆತನನ್ನು ಬಹಳವಾಗಿ ಬೇಡಿಕೊಂಡನು. ಅಲ್ಲಿಯ ಗುಡ್ಡದಲ್ಲಿ ಹಂದಿಗಳ ದೊಡ್ಡ ಹಿಂಡು ಮೇಯುತ್ತಿತ್ತು. ಆ ದೆವ್ವಗಳು, "ಆ ಹಂದಿಗಳೊಳಗೆ ಸೇರಿಕೊಳ್ಳುವದಕ್ಕೆ ನಮ್ಮನ್ನು ಕಳುಹಿಸಿಕೊಡು" ಎಂದು ಬೇಡಿಕೊಂಡವು. ಆತನು, ಆಗಲಿ ಎಂದು ಅವುಗಳಿಗೆ ಅಪ್ಪಣೆಕೊಡಲು ಆ ದೆವ್ವಗಳು ಹೊರಗೆ ಬಂದು ಹಂದಿಗಳೊಳಗೆ ಹೊಕ್ಕವು; ಆ ಗುಂಪು ಓಡಿ ಕಡಿದಾದ ಸ್ಥಳದಿಂದ ಸಮುದ್ರದೊಳಗೆ ಬಿದ್ದು ಅಲ್ಲಿ ಉಸುರುಕಟ್ಟಿ ಸತ್ತಿತು. ಹೆಚ್ಚು ಕಡಿಮೆ ಎರಡು ಸಾವಿರ ಹಂದಿಗಳಿದ್ದವು. ಅವು – –ಗಳನ್ನು ಮೇಯಿಸುವವರು ಓಡಿಹೋಗಿ ಆ ಊರಲ್ಲಿಯೂ ಹಳ್ಳಿಗಳಲ್ಲಿಯೂ ತಿಳಿಸಲು **ಜನರು ನಡೆದ ಸಂಗತಿ ಏನೆಂದು ನೋಡುವ – ದಕ್ಕೆ ಹೊರಟು ಯೇಸುವಿದ್ದಲ್ಲಿಗೆ ಬಂದು ಆ ದೆವ್ವಹಿಡಿದಿದ್ದವನು ಅಂದರೆ ದೆವ್ವಗಳ ದಂಡಿನಿಂದ ಹಿಡಿಯಲ್ಪಟ್ಟಿದ್ದವನು ಬಟ್ಟೆಗಳನ್ನು ಹಾಕಿ – ಕೊಂಡು ಸ್ವಸ್ಥಬುದ್ಧಿಯಿಂದ ಕೂತಿರುವದನ್ನು ನೋಡಿ ಹೆದರಿದರು**. ನಡೆದ ಸಂಗತಿಯನ್ನು ನೋಡಿದ್ದವರು ಆ ದೆವ್ವ ಹಿಡಿದಿದ್ದವನಿಗೆ ಹೀಗೆ ಹೀಗಾಯಿತೆಂಬುದನ್ನೂ ಹಂದಿಗಳ ವಿಷಯವನ್ನೂ ಅವರಿಗೆ ವಿವರಿಸಲು ಅವರು ತಮ್ಮ ಸೀಮೆಯನ್ನು ಬಿಟ್ಟು ಹೋಗಬೇಕೆಂದು ಯೇಸುವನ್ನು ಬೇಡಿಕೊಂಡರು. ಆತನು ದೋಣಿಯನ್ನು ಹತ್ತುವಾಗ ಆ ದೆವ್ವಹಿಡಿದಿದ್ದವನು, "ನಾನು ನಿನ್ನ ಬಳಿಯಲ್ಲಿಯೇ ಇರುತ್ತೇ –ನೆಂದು" ಆತನನ್ನು ಬೇಡತೊಡಗಿದನು. ಆದರೆ ಆತನು ಅವನನ್ನು ಇರಗೊಡದೆ ಅವನಿಗೆ, "ನೀನು ನಿನ್ನ ಮನೆಗೂ ನಿನ್ನ ಜನರ ಬಳಿಗೂ ಹೋಗಿ ಸ್ವಾಮಿಯು ನಿನ್ನಲ್ಲಿ ಕರುಣೆಯಿಟ್ಟು ನಿನಗೆ ಎಂಥೆಂಥ ಉಪಕಾರಗಳನ್ನು ಮಾಡಿದ್ದಾನೋ ಅದನ್ನು ಹೇಳು" ಅಂದನು. ಅವನು ಹೊರಟುಹೋಗಿ ಯೇಸು ತನಗೆ ಮಾಡಿದ ಉಪಕಾರಗಳನ್ನು ದೆಕಪೊಲಿ ಎಂಬ ಸೀಮೆಯಲ್ಲಿ ಸಾರುವದಕ್ಕೆ ಪ್ರಾರಂಭಿಸಿದನು; **ಎಲ್ಲರೂ ಆಶ್ಚರ್ಯಪಟ್ಟರು**. (ಮಾರ್ಕ–5:1-20)

ಯೇಸು ತಿರಿಗಿ ದೋಣಿಯಲ್ಲಿ ಈಚೇದಡಕ್ಕೆ ಬಂದಾಗ ಜನರು ಬಹು ದೊಡ್ಡ ಗುಂಪಾಗಿ ಆತನ ಬಳಿಗೆ ಬಂದರು; ಆತನು ಸಮುದ್ರದ ದಡದಲ್ಲಿದ್ದನು. ಆಗ ಸಭಾಮಂದಿರದ ಅಧಿಕಾರಿಗಳಲ್ಲಿ ಒಬ್ಬನಾದ ಯಾಯೀರನೆಂಬವನು ಬಂದು ಯೇಸುವನ್ನು ಕಂಡು ಆತನ ಪಾದ –ಗಳಿಗೆ ಬಿದ್ದು, "ನನ್ನ ಚಿಕ್ಕ ಮಗಳು ಈಗ ಸಾಯುತ್ತಾಳೆ; ಆಕೆಯು ವಾಸಿಯಾಗಿ ಬದುಕಿಕೊಳ್ಳುವಂತೆ ನೀನು ಬಂದು ಆಕೆಯ ಮೇಲೆ ಕೈಯಿಡಬೇಕು" ಎಂದು ಆತನನ್ನು ಬಹಳವಾಗಿ ಬೇಡಿಕೊಂಡನು. ಆತನು ಅವನ ಸಂಗಡ ಹೋದನು; ಮತ್ತು ಬಹು ಜನರು ಆತ –ನನ್ನು ನೂಕಿಕೊಂಡು ಹಿಂದೆ ಹೋದರು. **ಆಗ ಹನ್ನೆರಡು ವರುಷದಿಂದ ರಕ್ತಕುಸುಮ ರೋಗವಿದ್ದ ಒಬ್ಬ ಹೆಂಗಸು ಬಂದಳು.** ಆಕೆಯು ಅನೇಕ ವೈದ್ಯರಿಂದ ಬಹು ಕಷ್ಟವನ್ನು ಅನುಭವಿಸಿ ಕೈಯಲ್ಲಿದ್ದದ್ದನ್ನೆಲ್ಲಾ ಕಳಕೊಂಡರೂ ರೋಗವು ಹೆಚ್ಚುತ್ತಾ ಬಂದದ್ದೇ ಹೊರತು ಯಾವ ಪ್ರಯೋಜನವನ್ನೂ ಹೊಂದಿರಲಿಲ್ಲ. ಆ ಹೆಂಗಸು ಯೇಸುವಿನ ಸಮಾಚಾರವನ್ನು ಕೇಳಿ, ನಾನು ಆತನ ಉಡುಪನ್ನು ಮುಟ್ಟಿ –ದರೆ ಸಾಕು, ನೆಟ್ಟಗಾಗುವೆನು ಎಂದು ಆಲೋಚಿಸಿ ಗುಂಪಿನಲ್ಲಿ ಹಿಂದಿನಿಂದ ಬಂದು **ಆತನ ಉಡುಪನ್ನು ಮುಟ್ಟಿದಳು.** ಮುಟ್ಟಿದ ಕೂಡಲೆ **ಆಕೆಗೆ ರಕ್ತ ಹರಿಯುವದು ನಿಂತುಹೋದದರಿಂದ** ಆಕೆಯು, ನನ್ನನ್ನು ಕಾಡಿದ ರೋಗವು ಹೋಗಿ ನನಗೆ ಗುಣವಾಯಿತು ಎಂದು ತನ್ನೊಳಗೆ ತಿಳುಕೊಂಡಳು. ಆ ಕ್ಷಣವೇ ಯೇಸು ತನ್ನಿಂದ ಶಕ್ತಿಯು ಹೊರಟಿತೆಂದು ತನ್ನಲ್ಲಿ ತಿಳುಕೊಂಡು ಗುಂಪಿನಲ್ಲಿ ತಿರುಗಿ, "ನನ್ನ ಉಡುಪನ್ನು ಯಾರು ಮುಟ್ಟಿದರು?" ಎಂದು ಕೇಳಲು ಆತನ ಶಿಷ್ಯರು ಆತನಿಗೆ, "ಜನರು ನಿನ್ನನ್ನು ನೂಕುವದನ್ನು ಕಂಡೂ ನನ್ನನ್ನು ಯಾರು ಮುಟ್ಟಿದರೆಂದು ಕೇಳುತ್ತೀಯಲ್ಲಾ" ಎಂದು ಹೇಳಿದರು. ಆದರೆ ಆತನು ಈ ಕೆಲಸವನ್ನು ಮಾಡಿದವ – ಳನ್ನು ಕಾಣಬೇಕೆಂದು ಸುತ್ತಲೂ ನೋಡುತ್ತಾ ಇರಲಾಗಿ ಆ ಹೆಂಗಸು ತನಗಾದದ್ದನ್ನು ತಿಳುಕೊಂಡು ಅಂಜಿ ನಡುಗುತ್ತಾ ಬಂದು ಆತನಿಗೆ ಅಡ್ಡಬಿದ್ದು ಇದ್ದ ಸಂಗತಿಯನ್ನೆಲ್ಲಾ ಹೇಳಿದಳು. ಆತನು ಆಕೆಗೆ, "ಮಗಳೇ, ನಿನ್ನ ನಂಬಿಕೆಯೇ ನಿನ್ನನ್ನು ಸ್ವಸ್ಥಮಾಡಿತು; ಸಮಾಧಾನದಿಂದ ಹೋಗು; ನಿನ್ನನ್ನು ಕಾಡಿದ ರೋಗವು ಹೋಗಿ ನಿನಗೆ ಗುಣವಾಗಲಿ" ಎಂದು ಹೇಳಿದನು. (ಮಾರ್ಕ–5:21-34)

ಆತನು ಇನ್ನೂ ಮಾತಾಡುತ್ತಿರುವಲ್ಲಿ ಸಭಾಮಂದಿರದ ಅಧಿಕಾರಿಯ ಕಡೆಯುವರು ಬಂದು, **"ನಿನ್ನ ಮಗಳು ತೀರಿಹೋದಳು"** ಇನ್ನೇಕೆ ಗುರುವಿಗೆ ತೊಂದರೆ ಕೊಡುವದು?" ಅಂದರು. ಅವರು ಆಡಿದ ಮಾತನ್ನು ಯೇಸು ಲಕ್ಷ್ಯಮಾಡದೆ ಸಭಾಮಂದಿರದ ಅಧಿಕಾರಿಗೆ, "ಅಂಜಬೇಡ, ನಂಬಿಕೆ ಮಾತ್ರ ಇರಲಿ" ಎಂದು ಹೇಳಿದನು. ಮತ್ತು ಆತನು ಪೇತ್ರ, ಯಾಕೋಬ, ಯಾಕೋಬನ ತಮ್ಮನಾದ ಯೋಹಾನ ಇವರನ್ನೇ ಹೊರತು ಬೇರೆ ಯಾರನ್ನೂ ತನ್ನೊಂದಿಗೆ ಬರಗೊಡಲಿಲ್ಲ. ಅವರು ಆ ಸಭಾಮಂದಿರದ ಅಧಿಕಾರಿಯ ಮನೆಗೆ ಬಂದಾಗ ಅತನು ಗದ್ದಲವನ್ನೂ ಕೆಲವರು ಬಹಳವಾಗಿ ಅಳುವದನ್ನೂ ಕಂಡನು. ಆತನು ಒಳಕ್ಕೆ ಹೋಗಿ, "ನೀವು ಗದ್ದಲಮಾಡು – –ವದೂ ಅಳುವದೂ ಯಾಕೆ? ಹುಡುಗಿ ಸತ್ತಿಲ್ಲ; ನಿದ್ದೆ ಮಾಡುತ್ತಾಳೆ" ಅನ್ನಲು ಅವರು ಆತನನ್ನು ಹಾಸ್ಯಮಾಡಿದರು. ಆದರೆ ಆತನು ಎಲ್ಲರನ್ನು ಹೊರಕ್ಕೆ ಕಳುಹಿಸಿ ಆ ಹುಡುಗಿಯ ತಂದೆತಾಯಿಗಳನ್ನೂ ತನ್ನೊಂದಿಗಿದ್ದವರನ್ನೂ ಹುಡುಗಿಯಿದ್ದಲ್ಲಿಗೆ ಕರಕೊಂಡು ಹೋಗಿ ಅವಳ ಕೈಹಿಡಿದು, "ತಲಿಥಾ ಕೂಮ್" ಅಂದನು. ಆ ಮಾತಿಗೆ, "ಅಮ್ಮಣ್ಣೀ, ಏಳನ್ನುತ್ತೇನೆ" ಎಂದರ್ಥ. ಕೂಡಲೆ ಆ ಹುಡುಗಿ ಎದ್ದು ನಡೆದಾಡಿದಳು; ಆಕೆಯು ಹನ್ನೆರಡು ವರುಷ ವಯಸ್ಸಿನವಳು. **ಅವರು ಬಹಳ ಆಶ್ಚರ್ಯದಿಂದ ಬೆರಗಾದರು.** ಆಮೇಲೆ ಆತನು ಅವ –ರಿಗೆ, ಇದು ಯಾರಿಗೂ ತಿಳಿಯಬಾರದೆಂದು ಬಹು ಖಂಡಿತವಾಗಿ ಹೇಳಿ ಆ ಹುಡುಗಿಗೆ ಊಟಮಾಡಿಸಿರಿ ಅಂದನು. (ಮಾರ್ಕ– 5:35-43)

ಯೇಸು ಅಲ್ಲಿಂದ ಹೋಗುವಾಗ **ಇಬ್ಬರು ಕುರುಡರು,** "ದಾವೀದನ ಕುಮಾರನೇ ನಮ್ಮನ್ನು ಕರುಣಿಸು" ಎಂದು ಕೂಗುತ್ತಾ ಆತನ ಹಿಂದೆ ಹೋದರು. ಆತನು ಮನೆಗೆ ಬಂದಾಗ ಆ ಕುರುಡರು ಆತನ ಬಳಿಗೆ ಬಂದರು. ಯೇಸು ಅವರನ್ನು, "ನಾನು ಇದನ್ನು ಮಾಡಬಲ್ಲೆನೆಂಬುದನ್ನು ನಂಬುತ್ತೀರೋ" ಎಂದು ಕೇಳಿದ್ದಕ್ಕೆ ಅವರು, "ಹೌದು, ಸ್ವಾಮೀ, ನಂಬುತ್ತೇವೆ" ಅಂದರು. ಆಗ ಆತನು ಅವರ ಕಣ್ಣುಗಳನ್ನು ಮುಟ್ಟಿ, "ನೀವು ನಂಬಿದಂತೆ ನಿಮಗಾಗಲಿ" ಅಂದನು. ಆಗ **ಅವರಿಗೆ ಕಣ್ಣು ಬಂದವು.** ಮತ್ತು ಯೇಸು ಅವ – ರಿಗೆ, "ಇದು ಯಾರಿಗೂ ತಿಳಿಯಬಾರದೆಂದು ನೋಡಿರಿ" ಎಂದು ಖಂಡಿತವಾಗಿ ಹೇಳಿದನು. ಆದರೆ ಅವರು ಹೊರಟು ಹೋಗಿ ಆ ದೇಶದೊಳಗೆಲ್ಲಾ ಆತನ ಸುದ್ಧಿಯನ್ನು ಹಬ್ಬಿಸಿದರು. (ಮತ್ತಾಯ–9:27-31)

ಅವರು ಹೊರಟುಹೋಗುತ್ತಿರುವಾಗ **ದೆವ್ವ ಹಿಡಿದ ಒಬ್ಬ ಮೂಕನನ್ನು ಆತನ ಬಳಿಗೆ ಕರತಂದರು.** ಆತನು ದೆವ್ವ ಬಿಡಿಸಿದ ಮೇಲೆ ಆ **ಮೂಕನು ಮಾತಾಡುವವನಾದನು.** ಅದಕ್ಕೆ ಆ **ಜನರು,** "ಇಸ್ರಾಯೇಲ್ ಜನರಲ್ಲಿ ಇಂಥ ಕಾರ್ಯವನ್ನು ಇದುವರೆಗೆ ಯಾರೂ ನೋಡ –ಲಿಲ್ಲವೆಂದು **ಬೆರಗಾದರು."** ಆದರೆ ಫರಿಸಾಯರು, "ಇವನು ದೆವ್ವಗಳ ಒಡೆಯನ ಸಹಾಯದಿಂದಲೇ ದೆವ್ವಗಳನ್ನು ಬಿಡಿಸುತ್ತಾನೆ" ಅಂದರು. (9:32-34)

ಆತನು ಅಲ್ಲಿಂದ ಹೊರಟು ತನ್ನ ಊರಿಗೆ ಬಂದನು; ಶಿಷ್ಯರು ಆತನ ಹಿಂದೆಯೇ ಬಂದರು. ಸಬ್ಬತ್ ದಿನ ಬಂದಾಗ ಆತನು ಸಭಾ ಮಂದಿರಕ್ಕೆ ಹೋಗಿ ಉಪದೇಶ ಮಡುವದಕ್ಕೆ ಪ್ರಾರಂಭಿಸಿದನು. ಎಲ್ಲರು ಕೇಳಿ ಅತ್ಯಾಶ್ಚರ್ಯಪಟ್ಟು, **"ಇವನಿಗೆ ಈ ಮಾತುಗಳು ಎಲ್ಲಿಂದ ಬಂದಿದ್ದಾವು? ಇವನು ಪಡೆದಿರುವ ಈ ಜ್ಞಾನವೇನು? ಇವನ ಕೈಯಿಂದ ಇಂತ ಮಹತ್ಕಾರ್ಯಗಳಾಗುವದೇನು?** ಇವನು ಆ ಬಡಗಿಯಲ್ಲವೇ. ಇವನು ಮರಿಯಳ ಮಗನಲ್ಲವೇ. ಯಾಕೋಬ ಯೋಸೆ ಯೂದ ಸೀಮೋನ ಇವರ ಅಣ್ಣನಲ್ಲವೇ" ಎಂದು ಮಾತಾಡಿಕೊಂಡು ಆತನ ವಿಷಯವಾಗಿ ಬೇಸರಗೊಂಡರು. ಯೇಸು ಅವರಿಗೆ, "ಪ್ರವಾದಿಯು ಬೇರೆ ಎಲ್ಲಿದ್ದರೂ ಅವನಿಗೆ ಮರ್ಯಾದೆ ಉಂಟು; ಆದರೆ ಸ್ವದೇಶದಲ್ಲಿಯೂ ಸ್ವಂತ ಜನರಲ್ಲಿಯೂ ಸ್ವಂತ ಮನೆಯವರಲ್ಲಿಯೂ ಮಾತ್ರ ಮರ್ಯಾದೆಯಿಲ್ಲ" ಎಂದು ಹೇಳಿದನು. ಆತನು ಅಲ್ಲಿ ಕೆಲವು ಮಂದಿ ರೋಗಿಗಳ ಮೇಲೆ ಕೈಯಿಟ್ಟು ಸ್ವಸ್ಥಮಾಡಿದ್ದೆ ಹೊರತು ಬೇರೆ ಯಾವ ಮಹ–ತ್ಕಾರ್ಯವನ್ನೂ ಮಾಡುವದಕ್ಕಾಗಲಿಲ್ಲ. **ಅವರು ತನ್ನನ್ನು ನಂಬದೆ ಹೋದದ್ದಕ್ಕೆ ಆತನು ಆಶ್ಚರ್ಯಪಟ್ಟನು.**(ಮಾರ್ಕ–6:1-6)

ಆತನು ಹಳ್ಳಿಪಳ್ಳಿಗಳನ್ನು ಸುತ್ತಿಕೊಂಡು ಉಪದೇಶ ಮಾಡುತ್ತಾ ಬಂದನು. ಮತ್ತು ಹನ್ನೆರಡು ಮಂದಿ ಶಿಷ್ಯರನ್ನು ಹತ್ತಿರಕ್ಕೆ ಕರೆದು ಅವರನ್ನು ಇಬ್ಬರಿಬ್ಬರಾಗಿ ಕಳುಹಿಸಲಾರಂಭಿಸಿದನು. ಕಳುಹಿಸುವಾಗ ಅವರಿಗೆ ದೆವ್ವಗಳ ಮೇಲೆ ಅಧಿಕಾರಕೊಟ್ಟು, "ಕೋಲು ಹೊರತು ದಾರಿಗೆ ಏನೂ ತಕ್ಕೊಂಡು ಹೋಗಬೇಡಿರಿ; ಬುತ್ತಿ, ಹಸಿಬೆ, ಹಮ್ಮೀಣಿಗಳಲ್ಲಿ ದುಡ್ಡು ಬೇಡ.(ಮಾರ್ಕ–6:7,8). ನೋಡಿರಿ **ತೋಳಗಳ ನಡುವೆ ಕುರಿಗಳನ್ನು ಹೊಗಿಸಿದಂತೆ** ನಾನು ನಿಮ್ಮನ್ನು ಕಳುಹಿಸಿಕೊಡುತ್ತೇನೆ. ಆದದರಿಂದ ಸರ್ಪಗಳಂತೆ ಜಾಣರೂ ಪಾರಿವಾಳಗಳಂತೆ ನಿಷ್ಕಪಟಿಗಳೂ ಆಗಿರ್ರಿ. ಇದಲ್ಲದೆ ಜನರ ವಿಷಯದಲ್ಲಿ ಎಚ್ಚರಿಕೆಯಾಗಿರ್ರಿ. ಅವರು ನಿಮ್ಮನ್ನು ನ್ಯಾಯವಿಚಾರಣೆಯ ಸಭೆಗಳಿಗೆ ಎಳ – ಕೊಂಡು ಹೋಗುವರು; ತಮ್ಮ ಸಭಾಮಂದಿರಗಳಲ್ಲಿ ನಿಮ್ಮನ್ನು ಕೊರಡೆಗಳಿಂದ ಹೊಡೆಯುವರು. ಇದಲ್ಲದೆ ದೇಹವನ್ನು ಕೊಂದು ಆತ್ಮವನ್ನು ಕೊಲ್ಲಲಾರದವರಿಗೆ ಹೆದರಬೇಡಿರಿ. ಆತ್ಮ ದೇಹ ಎರಡನ್ನೂ ಕೂಡ ನರಕದಲ್ಲಿ ಹಾಕಿ ನಾಶಮಾಡಬಲ್ಲಾತನಿಗೇ ಹೆದರಿರಿ. ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸು –ವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. ತಂದೆಯ ಮೇಲಾಗಲಿ ತಾಯಿಯ ಮೇಲಾ –ಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ. ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು, ಆಮೆನ್.(ಮತ್ತಾಯ–10:16, 17, 28, 34-37,39).

ಈ ಪ್ರಕಾರ, ಕರ್ತನಾದ ಯೇಸು ತನ್ನ ಮಾತುಗಳು ಮತ್ತು ತನ್ನ ಕೆಲಸಗಳು ಎರಡರಲ್ಲಿಯೂ ದೇವರ ಶಕ್ತಿಯಿಂದ ತುಂಬಿದ್ದನು ಎಂಬುದನ್ನು ನಾವು ನೋಡಿದೆವು. ಆತನನ್ನು ಹಿಂಬಾಲಿಸಿದ ಜನರು ಬೆರಗಾಗಿ, **"ಇವನಿಗೆ ಈ ಮಾತುಗಳು ಎಲ್ಲಿಂದ ಬಂದಿದ್ದಾವು? ಇವನು ಪಡೆದಿರುವ ಈ ಜ್ಞಾನವೇನು? ಇವನ ಕೈಯಿಂದ ಇಂತ ಮಹತ್ಕಾರ್ಯಗಳಾಗುವದೇನು?** ಎಂದು ಮಾತಾಡಿಕೊಂಡರು. (ಮಾರ್ಕ–6:2)

ಯೇಸು ತನ್ನ ಶಕ್ತಿಯನ್ನೂ ಮತ್ತು ಜ್ಞಾನವನ್ನು ಎಲ್ಲಿಂದ ಪಡಕೊಂಡನು? ಆತನು ಇದನ್ನು ಎಲ್ಲಿಂದಲಾದರೂ "ಪಡೆದುಕೊಂಡಿಲ್ಲ" ಯಾಕಂದರೆ ಆತನು ಸ್ವತ: ದೇವರ ಶಕ್ತಿಯೂ ಮತ್ತು ಜ್ಞಾನವೂ ಆಗಿದ್ದಾನೆ. **ಕರ್ತನಾದ ಯೇಸು ತಾನು ಯಾರು ಮತ್ತು ತಾನು ಎಲ್ಲಿಂದ ಬಂದವನೂ** ಎನ್ನುವದನ್ನು ಜನರಿಗೆ ತೋರಿಸುವದಕ್ಕೆ ಭೂಮಿಯ ಮೇಲೆ ದೇವರ ಎಲ್ಲಾ ಬಲವಾದ ಕಾರ್ಯಗಳನ್ನು ಮಾಡಿದನು. ಆತನು ಪ್ರತಿಯೊಂದು ಸೃಷ್ಟಿಗಳ ಮೇಲೆ ಅಧಿಕಾರವನ್ನು ಮತ್ತು ಪ್ರತಿಯೊಂದು ರೀತಿಯ ಬಲವನ್ನು ಹೊಂದಿದ್ದನು, ಯಾಕಂದರೆ ಆತನು **"ರೂಹ್ ಅಲ್ಲಾಹ್"** ಮತ್ತು **"ಕಾಲಿಮತ್ ಅಲ್ಲಾಹ್"**{ಅರೇಬಿಕ್} ಆಗಿದ್ದಾನೆ, ಅಂದರೆ: **ಆತನು ದೇವರ ಆತ್ಮನು ಮತ್ತು ದೇವರ ವಾಕ್ಯವೂ** ಆಗಿದ್ದಾನೆ ಎಂಬದು. ಹಾಗಾಗಿಯೇ ಯೇಸು, ಉಗ್ರವಾದ ಬಿರುಗಾಳಿಯನ್ನು ಶಾಂತಗೊಳಿಸಿದನು ಮತ್ತು ಸುಮ್ಮನೆ ಒಂದು ಮಾತಿನಿಂದ ದೆವ್ವ ಹಿಡಿದಿದ್ದ ಕ್ರೂರ ಮನುಷ್ಯನನ್ನು ಸ್ವಸ್ಥಪಡಿಸಿದನು. ದೇವರ ಎಲ್ಲಾ ಮಿತಿಯಿಲ್ಲದ ಶಕ್ತಿಯು ಕರ್ತನಾದ ಯೇಸುವಿನಲ್ಲಿ ನೆಲೆಗೊಂಡಿತ್ತು. ಇದೇ ಕಾರಣದಿಂದ, ಹನ್ನೆರಡು ವರ್ಷದಿಂದ ರಕ್ತಕುಸುಮ ರೋಗದಿಂದ ನರಳುತ್ತಿದ್ದ ಸ್ತ್ರೀಯನ್ನು ಆತನು ಗುಣಪಡಿ –ಸುವದಕ್ಕೆ ಸಾಧ್ಯವಾಯಿತು. ಈ ಸ್ತ್ರೀಯು ಅನೇಕ ವೈದ್ಯರುಗಳಿಗೆ ಮತ್ತು ಔಷಧಗಳಿಗೆ ತನ್ನ ಎಲ್ಲಾ ಹಣವನ್ನು ಕಳೆದುಕೊಂಡಿದ್ದಳು,

ಆದರೆ ಯೇಸುವಿನ ಬಟ್ಟೆಯ ಗೊಂಡೆಯನ್ನು ಮುಟ್ಟಿದ ಕೂಡಲೇ ಅವಳು ಸ್ವಸ್ಥಳಾದಳು. ಅದೇ ರೀತಿಯಲ್ಲಿ, ಯೇಸು ಇಬ್ಬರು ಕುರುಡ ವ್ಯಕ್ತಿಗಳ ಕಣ್ಣುಗಳನ್ನು ಮುಟ್ಟಿದಾಗ ತಕ್ಷಣವೇ ಅವರ ಕಣ್ಣುಗಳು ಗುಣವಾದವೂ. ಮತ್ತು ಜೀವಂತವಿರುವವರಿಗೆ ಯೇಸುವಿನ ಅಧಿಕಾರವು ಮಿತಿಯಲ್ಲಿರುವದಿಲ್ಲ. ಆತನು ಸತ್ತವರ ಮೇಲೆಯೂ ಸಹ ಅಧಿಕಾರವನ್ನು ಹೊಂದಿದ್ದಾನೆ! ಅದಕ್ಕಾಗಿಯೇ ಆತನು ಸತ್ತುಹೋಗಿದ್ದ ಹುಡುಗಿಯನ್ನು ಬದುಕಿಸುವದಕ್ಕೆ ಸಾಧ್ಯವಾಯಿತು. ಯೇಸುವಿನ ಶಕ್ತಿಯು ಕೇವಲ ಒಬ್ಬ ಪ್ರವಾದಿಯನ್ನು ಮೀರಿಸು – ವಂತಾದ್ದು, ಯಾಕಂದರೆ **ಆತನು ಸ್ವತ: ಒಂದು ಮಾನವ ದೇಹದಲ್ಲಿ ದೇವರ ವಾಕ್ಯವಾಗಿದ್ದನು.**

ಹೌದು, **ಎಲ್ಲಾ** ಬಲವೂ ಮತ್ತು **ಎಲ್ಲಾ** ಅಧಿಕಾರವೂ ಮೆಸ್ಸೀಯನಾದ ಯೇಸುವಿಗೆ ಕೊಡಲ್ಪಟ್ಟಿವೆ. ಅದಕ್ಕೋಸ್ಕರವೇ ನೀವು ನಿಮ್ಮ ಕರ್ತನೂ ಮತ್ತು ರಕ್ಷಕನೂ ಎಂಬಂತೆ ಯೇಸುವಿನಲ್ಲಿ ನಂಬಿಕೆಯಿಟ್ಟರೆ, ನೀವು ಎಂದಿಗೂ ಯಾವುದಕ್ಕೂ ಅಂದರೆ ಮರಣ, ಜೀವ, ದುಷ್ಟ ಆತ್ಮಗಳು, ಮಾಟಗಾರರು, ವರ್ತಮಾನ, ಇಲ್ಲವೇ ಭವಿಷ್ಯ ಇದ್ಯಾವುದಕ್ಕೂ ಭಯಪಡಬೇಕಾಗುವ ಅಗತ್ಯವಿರುವದಿಲ್ಲ! ನೀವು **ಎಂದಿಗೂ ಮೋಡಿ ಮಾಡುವವುಗಳನ್ನು ಧರಿಸಬೇಕಾಗಿರುವದಿಲ್ಲ** ಅಥವಾ ವ್ಯಕ್ತಿಗತವಾಗಿ ರಕ್ಷಿಸುವ ಆತ್ಮಕ್ಕೆ ಕಾಣಿಕೆಯನ್ನು ಸುರಿಯುವ ಅಗತ್ಯವೂ ಇರುವದಿಲ್ಲ ಯಾಕಂದರೆ **ಕರ್ತನಾದ ಯೇಸು ನಿಮ್ಮನ್ನು ರಕ್ಷಿಸುತ್ತಾನೆ.** ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: **"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ,** ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ. **ಆತನು ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸು!"** (ಕೊಲೊಸ್ಸೆ–2:9,10)

ಪ್ರಿಯ ಸ್ನೇಹಿತರೇ, "ಎಲ್ಲಾ ದೊರೆತನಗಳಿಗೂ ಅಧಿಕಾರಿಗಳಿಗೂ ಶಿರಸ್ಸಾಗಿರುವ" ಒಬ್ಬನಲ್ಲಿ ನೀವು ವಿಶ್ವಾಸವುಳ್ಳವರಾಗಿದ್ದೀರೋ? ಅಥವಾ ನೀವು ಇನ್ನೂ ಈ ಲೋಕದ ಕೆಳದರ್ಜೆಯ ಬಲಗಳನ್ನೂ ಮತ್ತು ಅಧಿಕಾರಗಳನ್ನೂ ಶಾಂತಪಡಿಸುವದಕ್ಕೆ ಪ್ರಯತ್ನಿಸು – ತ್ತಿದ್ದೀರೋ?

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮುಂದಿನ ಅಧ್ಯಯನದಲ್ಲಿ, ದೇವರ ಚಿತ್ತದಂತೆ, ಸುವಾರ್ತೆಯನ್ನು ಮುಂದುವರಿಸಿ ಸಾಮ್ಯಗಳ ಮೂಲಕವಾಗಿ ಯೇಸು ಹೇಗೆ ಜನರ ಗುಂಪಿಗೆ ಬೋಧಿಸಿದನೆಂಬುದನ್ನು ಕೇಳಿಸಿಕೊಳ್ಳೋಣ. . . .

ಮೆಸ್ಸೀಯನಿಗೆ ಸಂಬಂಧಿಸಿದಂತೆ ದೇವರು ಹೇಳಿರುವದರ ಆಳವಾದ ಅರ್ಥವನ್ನು ಆತನು ನಿಮಗೆ ಕಲಿಸಿ ನಿಮ್ಮನ್ನು ಆಶೀರ್ವದಿಸಲಿ:

**"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ!"** (ಕೊಲೊಸ್ಸೆ–2:9)

ಪಾಠ 71

# ಪ್ರಾಮುಖ್ಯವಾದ ಸಾಮ್ಯಗಳು

ಲೂಕ 8; ಮತ್ತಾಯ 13

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಮೆಸ್ಸೀಯನಾದ ಯೇಸು ಕೇವಲ ಒಬ್ಬ ಪ್ರವಾದಿಯ ಅಧಿಕಾರವನ್ನು ಮೀರಿಸುವಂತ ಅಧಿಕಾರವನ್ನು ಅಧೀನಪಡಿಸಿಕೊಂಡದ್ದನ್ನು ನಾವು ಕಂಡುಕೊಂಡೆವು. ಯೇಸು ದೇವರ ಪೂರ್ಣ ಬಲವುಳ್ಳವನಾಗಿದ್ದನು. **ಆತನು ಒಬ್ಬ ಮಾನವನ ದೇಹದಲ್ಲಿ ವಾಸ್ತವಿಕ ದೇವರ ಬಲವಾಗಿದ್ದನು!** ಅದಕ್ಕಾಗಿಯೇ ಆತನು ಬಿರುಗಾಳಿಯನ್ನು ಶಾಂತಗೊಳಿಸುವದಕ್ಕೆ, ದೆವ್ವಗಳನ್ನು ಬಿಡಿಸುವ –ದಕ್ಕೆ, ರೋಗಿಗಳನ್ನು ಮತ್ತು ಕುರುಡರನ್ನು ಸ್ವಸ್ಥಪಡಿಸುವದಕ್ಕೆ ಹಾಗೂ ಸತ್ತವರನ್ನು ಎಬ್ಬಿಸುವದಕ್ಕೂ ಸಹ ಶಕ್ತನಾಗಿದ್ದನು!

ಈದಿನ ನಾವು ಸುವಾರ್ತೆಯಲ್ಲಿರುವದನ್ನು {ಇಂಜಿಲ್} ಮುಂದುವರಿಸಿ, ಕರ್ತನಾದ ಯೇಸು **ಸಾಮ್ಯಗಳನ್ನು**(ಕತೆಗಳನ್ನು) ಉಪಯೋ –ಗಿಸಿ ಜನರ ಗುಂಪಿಗೆ ಹೇಗೆ ಬೋಧಿಸಿದನೆಂಬುದನ್ನು ಕೇಳಿಸಿಕೊಳ್ಳೋಣ. ಯೇಸು ಆಗಾಗ್ಗೆ ಸತ್ಯವನ್ನು ಸಾಮ್ಯಗಳಲ್ಲಿ ವ್ಯಕ್ತಪಡಿಸು – –ತ್ತಿದ್ದನು, ಯಾಕಂದರೆ ಆತನನ್ನು ಹಿಂಬಾಲಿಸುತ್ತಿದ್ದ ಜನರಲ್ಲಿ ಹೆಚ್ಚಿನವರು ದೇವರ ವಾಕ್ಯವನ್ನು ತಿಳಿದುಕೊಳ್ಳುವದಕ್ಕೆ ನಿಜವಾಗಿಯೂ ಇಷ್ಟಪಡುತ್ತಿರಲಿಲ್ಲ. ಯೇಸು ತಮ್ಮ ಶರೀರದ **ರೋಗಗಳನ್ನು** ಮಾತ್ರ ವಾಸಿಮಾಡಿದರೆ ಸಾಕೆಂದು ಅವರು ಇಷ್ಟಪಡುತ್ತಿದ್ದರು, ಆದರೆ ಪಾಪದ ತಮ್ಮ ಆತ್ಮವನ್ನು ಆತನು ಗುಣಪಡಿಸುವದು ಅವರಿಗೆ ಬೇಕಾಗಿರಲಿಲ್ಲ. ಹೈನಾಗಳ ಗುಂಪಿನ ಹಾಗೆ, ಯೇಸುವಿನ ಹಿಂದೆ ಅಂಟಿಕೊಂಡೇ ಇರುತ್ತಿದ್ದ ಧಾರ್ಮಿಕ ನಾಯಕರುಗಳು ಆತನನ್ನು ದೂಷಿಸುದಕ್ಕೆ ಒಂದು ಅವಕಾಶವನ್ನು ಕಂಡುಕೊಳ್ಳುವದಕ್ಕೆ ಮಾತ್ರ ಆತನ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದರು. ಅವರು ತನ್ನ ಸುತ್ತಲಿದ್ದಾಗ, ಯೇಸು ಜನರಿಗೆ ಸಾಮ್ಯಗಳ ರೂಪದಲ್ಲಿ ಮಾತಾಡುತ್ತಿದ್ದನು. ಆ ಸಾಮ್ಯಗಳ ಅರ್ಥವನ್ನು ವಿವರಿಸುವದಕ್ಕೆ ತನ್ನ ನಿಜ ಅನುಯಾಯಿಗಳೊಂದಿಗೆ ತಾನು ಒಂಟಿಯಾಗಿರುವದಕ್ಕೆ ಸಮಯ ಸಿಕ್ಕುವ – –ವರೆಗೆ ಆತನು ಕಾಯುತ್ತಿದ್ದನು.

ಪ್ರತಿಯೊಬ್ಬರೂ ಸತ್ಯವನ್ನು ತಿಳಿದುಕೊಂಡು ರಕ್ಷಿಸಲ್ಪಡಬೇಕೆಂದು ದೇವರು ಬಯಸುತ್ತಾನೆ, ಆದರೆ ನಮ್ಮ ಹೃದಯಗಳು ಮೊಂಡವಾಗಿ –ದ್ದರೆ, ಆತನು ಸತ್ಯವನ್ನು ನಮಗೆ ಪ್ರಕಟಪಡಿಸುವದಿಲ್ಲ. ಹೆಚ್ಚಿನ ಜನರು ಶ್ರೀಮಂತಿಕೆಯನ್ನು ಹುಡುಕುವ ಹಾಗೆ, ನಾವು ಸತ್ಯವನ್ನು ಹುಡುಕಬೇಕೆಂದು ದೇವರು ಬಯಸುತ್ತಾನೆ! ಪ್ರವಾದಿಯಾದ ಸೊಲೊಮೋನನು ಹೀಗೆ ಬರೆಯುತ್ತಾನೆ: **"ನೀನು ಬುದ್ಧಿಗಾಗಿ ಮೊರೆ –ಯಿಟ್ಟು ವಿವೇಕಕ್ಕಾಗಿ ಕೂಗಿಕೊಂಡು ಅದನ್ನು ಬೆಳ್ಳಿಯಂತೆಯೂ ನಿಕ್ಷೇಪದಂತೆಯೂ ಹುಡುಕು, ಆಗ ನೀನು ಯೆಹೋವನ ಭಯವನ್ನು ಅರಿತು ದೈವಜ್ಞಾನವನ್ನು ಪಡೆದುಕೊಳ್ಳುವಿ."** (ಜ್ಞಾನೋಕ್ತಿ–2:3-5)

ನಿಮ್ಮ ವಿಷಯವೇನು? ಹಣ ಅಥವಾ ಇನ್ನು ಬೇರೆ ರೀತಿಯ ಶ್ರೀಮಂತಿಕೆಗಿಂತಲೂ ನೀವು ಹೆಚ್ಚಾಗಿ **ದೇವರ ಸತ್ಯವನ್ನು** ಹೃದಯ – –ದಲ್ಲಿಟ್ಟುಕೊಂಡಿದ್ದೀರೋ? ನಿಮ್ಮ ಹೃದಯ ಮತ್ತು ಮನಸ್ಸಿನ ಹೆಚ್ಚು ಪ್ರಾಮುಖ್ಯವಾದ ಸ್ಥಳದಲ್ಲಿ ದೇವರ ನಿಜವಾದ ವಾಕ್ಯವು ಆವ –ರಿಸಿಕೊಂಡಿದೆಯೋ? ಬಹುಶ: ದೇವರ ಮುಂದೆ ನಿಮ್ಮ ಹೃದಯದ ನಿಜವಾದ ಸ್ಥಿತಿಯು ನಿಮಗೆ ಗೊತ್ತಿಲ್ಲ. ಹಾಗಾದರೆ ಕರ್ತನಾದ ಯೇಸುವಿನ **ಬಿತ್ತುವವನ ಸಾಮ್ಯವನ್ನು** ಜಾಗ್ರತೆಯಿಂದ ಕೇಳಿಸಿಕೊಳ್ಳಿರಿ.

ನಾವು ಲೂಕನ ಸುವಾರ್ತೆಯ ಎಂಟನೆಯ ಅಧ್ಯಾಯವನ್ನು ಓದುತ್ತಿದ್ದೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಬಹುಜನರು ಗುಂಪು ಕೂಡಿರುವಾಗ ಪಟ್ಟಣ ಪಟ್ಟಣದಿಂದ ಜನರು ಆತನ ಬಳಿಗೆ ಬರುತ್ತಿರಲು ಆತನು ಸಾಮ್ಯರೂಪವಾಗಿ ಹೇಳಿದ್ದೇ –ನೆಂದರೆ, **"ಬಿತ್ತುವವನು ಬೀಜವನ್ನು ಬಿತ್ತುವದಕ್ಕೆ ಹೊರಟನು**. ಅವನು ಬಿತ್ತುವಾಗ ಕೆಲವು ಬೀಜ ದಾರಿಯ ಮಗ್ಗುಲಲ್ಲಿ ಬಿದ್ದು ತುಳಿ –ಯಲ್ಪಟ್ಟವು; ಆಕಾಶದಲ್ಲಿ ಹಾರಡುವ ಹಕ್ಕಿಗಳು ಅವುಗಳನ್ನು ತಿಂದುಬಿಟ್ಟವು. ಬೇರೆ ಕೆಲವು ಬೀಜ ಬಂಡೆಯ ಮೇಲೆ ಬಿದ್ದವು; ಅವು ಕೊಳೆತು ತ್ಯಾವವಿಲ್ಲದ ಕಾರಣ ಒಣಗಿಹೋದವು. ಮತ್ತೆ ಕೆಲವು ಬೀಜ ಮುಳ್ಳುಗಿಡಗಳ ನಡುವೆ ಬಿದ್ದವು; ಅವುಗಳ ಸಂಗಡ ಮುಳ್ಳು – ಗಿಡಗಳು ಬೆಳೆದು ಅವುಗಳನ್ನು ಅಡಗಿಸಿಬಿಟ್ಟವು. ಇನ್ನು ಕೆಲವು ಬೀಜ ಒಳ್ಳೆಯ ನೆಲದಲ್ಲಿ ಬಿದ್ದು ಮೊಳೆತು ನೂರರಷ್ಟು ಫಲವನ್ನು ಕೊಟ್ಟವು. ಈ ಮಾತುಗಳನ್ನು ಹೇಳಿ ಆತನು, **"ಕೇಳುವದಕ್ಕೆ ಕಿವಿಯುಳ್ಳವನು ಕೇಳಲಿ"** ಎಂದು ಕೂಗಿದನು. (ಲೂಕ–8:4-8)

ಆತನ ಶಿಷ್ಯರು, ಈ ಸಾಮ್ಯದ ಅರ್ಥವೇನೆಂದು ಆತನನ್ನು ಕೇಳಿದಾಗ, ಆತನು "ಈ ಸಾಮ್ಯದ ಅರ್ಥವೇನೆಂದರೆ, ಆ **ಬೀಜವೆಂದರೆ** ದೇವರ ವಾಕ್ಯ. ಕೆಲವರು ವಾಕ್ಯವನ್ನು ಕೇಳಿದ ಕೂಡಲೆ ಸೈತಾನನು ಬಂದು ಅವರು ನಂಬಿ ರಕ್ಷಣೆ ಹೊಂದಬಾರದೆಂದು ವಾಕ್ಯವನ್ನು

ಅವರ ಹೃದಯದಿಂದ ತೆಗೆದುಬಿಡುತ್ತಾನೆ; ಇವರೇ **ದಾರಿಯ ಮಗ್ಗುಲಾಗಿರುವವರು.** ಕೆಲವರು ವಾಕ್ಯವನ್ನು ಕೇಳಿದಾಗಲೇ ಅದನ್ನು ಸಂತೋಷದಿಂದ ಅಂಗೀಕರಿಸುತ್ತಾರೆ; ಇವರಿಗೆ ಬೇರಿಲ್ಲದ ಕಾರಣ ಸ್ವಲ್ಪಕಾಲ ಮಾತ್ರವೇ ನಂಬಿಕೊಂಡಿದ್ದು ಶೋಧನೆಯ ಕಾಲದಲ್ಲಿ ಬಿದ್ದು ಹೋಗುತ್ತಾರೆ; ಇವರೇ **ಬಂಡೆಯ ನೆಲವಾಗಿರುವವರು.** ಬೇರೆ ಕೆಲವರು ವಾಕ್ಯವನ್ನು ಕೇಳಿದ ಮೇಲೆ ಬರಬರುತ್ತಾ ಈ ಜೀವಮಾನದಲ್ಲಿ ಆಗುವ ಚಿಂತೆ ಐಶ್ವರ್ಯ ಭೋಗಗಳಿಂದ ಅಡಗಿಸಲ್ಪಟ್ಟು ಫಲವನ್ನು ಮಾಗಿಸುವದಿಲ್ಲ; ಇವರೇ **ಮುಳ್ಳುಗಿಡಗಳಲ್ಲಿ** ಬೀಜ ಬಿದ್ದ ನೆಲವಾಗಿರುವವರು. ಮತ್ತೆ ಕೆಲವರು ವಾಕ್ಯವನ್ನು ಕೇಳಿ ಸುಗುಣವುಳ್ಳ ಒಳ್ಳೆಯ ಹೃದಯದಲ್ಲಿ ಇಟ್ಟುಕೊಂಡು ತಾಳ್ಮೆ–ಯಿಂದ ಫಲವನ್ನು ಕೊಡುತ್ತಾರೆ; ಇವರೇ ಬೀಜ ಬಿದ್ದ **ಒಳ್ಳೆಯ ನೆಲವಾಗಿರುವವರು.** (ಲೂಕ–8:9-15)

ಬಿತ್ತುವವನ ಸಾಮ್ಯದ ಅರ್ಥವನ್ನು ನೀವು ಗ್ರಹಿಸಿಕೊಂಡಿರಾ? ಈ ಸಾಮ್ಯದಲ್ಲಿ, ನಾವು ಬೀಜವನ್ನೂ ಮತ್ತು ಮಣ್ಣನ್ನೂ ನೋಡುತ್ತೇವೆ. ಬೀಜವು ಏನನ್ನು ವಿವರಿಸುತ್ತದೆ? ಕರ್ತನಾದ ಯೇಸು ಏನು ಹೇಳಿದ್ದಾನೆ? ಆತನು ಹೇಳಿರುವದೇನೆಂದರೆ: **ಬೀಜವು ದೇವರ ನಿಜ –ವಾದ ವಾಕ್ಯವನ್ನು ವಿವರಿಸುತ್ತದೆ.** ಮಣ್ಣಿನ ವಿಷಯವೇನು? ಇದು ಏನನ್ನು ವಿವರಿಸುತ್ತದೆ? **ಮಣ್ಣು ಮನುಷ್ಯನ ಹೃದಯವನ್ನು ವಿವರಿಸುತ್ತದೆ.**

ಹೌದು, ದೇವರ ವಾಕ್ಯವು ಒಳ್ಳೆಯ ಬೀಜದ ಹಾಗಿರುತ್ತದೆ, ಯಾಕಂದರೆ ಇದು ಸಜೀವವಾದದ್ದು ಮತ್ತು ನಿತ್ಯಜೀವವನ್ನು ಹಾಗೂ ನಿಮ್ಮ ಹೃದಯದಲ್ಲಿ ಮತ್ತು ನಿಮ್ಮ ಜೀವಿತದಲ್ಲಿ ನಿಜವಾದ ಆಶೀರ್ವಾದವನ್ನು ಉಂಟುಮಾಡುವಂತಾದ್ದು ಆಗಿದೆ. ಹೀಗಿದ್ದರೂ, ಮನು –ಷ್ಯನ ಹೃದಯವು ತುಂಬಾ ಕಠಿಣವಾದದ್ದು ಮತ್ತು ಒಣಗಿರುವಂತಾದ್ದು ಆಗಿರುವ ಮಣ್ಣಿನ ಹಾಗಿದೆ. ಇದರ ಕುರಿತು ಸ್ವಲ್ಪ ಆಲೋಚಿ –ಸೋಣ. ಈ ಸಾಮ್ಯದಲ್ಲಿ ಎಷ್ಟು ರೀತಿಯ ಮಣ್ಣನ್ನು ನಾವು ಕಾಣುತ್ತೇವೆ? ನಾಲ್ಕು ರೀತಿಯ ಮಣ್ಣಿನ ಮೇಲೆ ಬೀಜವು ಹೇಗೆ ಬಿದ್ದಿ –ತೆಂಬುದನ್ನು ನಾವು ನೋಡುತ್ತೇವೆ.

1. **ದಾರಿಯ ಮಗ್ಗುಲಲ್ಲಿ** ಬಿದ್ದಂತ ಬೀಜ.

2. **ಅನೇಕ ಬಂಡೆಗಳಿರುವ ಪ್ರದೇಶದಲ್ಲಿ** ಬಿದ್ದಂತ ಬೀಜ.

3. **ಮುಳ್ಳುಗಿಡಗಳಲ್ಲಿ** ಬಿದ್ದಂತ ಬೀಜ.

4. **ಒಳ್ಳೆಯ ನೆಲದಲ್ಲಿ** ಬಿದ್ದಂತ ಬೀಜ.

**ಮೊದಲನೆಯದಾಗಿ,** ಲೋಕದಲ್ಲಿ ಅನೇಕರು ಜನರು ನಡೆದಾಡುವಂತಹ **ಗಟ್ಟಿಯಾದ ದಾರಿಯ** ಹಾಗಿರುವ ಹೃದಯವನ್ನು ಹೊಂದಿರು –ತ್ತಾರೆ ಎಂದು ಯೇಸು ಬೋಧಿಸಿದನು. ಕೆಲವು ಜನರ ಹೃದಯ ಕಾಂಕ್ರೀಟ್‌ನಂತೆ ಗಟ್ಟಿಯಾಗಿರುತ್ತದೆ. ಬೀಜವು ಗಟ್ಟಿಯಾದ ನೆಲ –ದಲ್ಲಿ ಬಿದ್ದರೆ ಏನಾಗುತ್ತದೆ? ಇದು ಚಿಗುರಿ ಹಣ್ಣನ್ನು ಬಿಡುತ್ತದೋ? ಎಂದಿಗೂ ಇಲ್ಲ! ಇದು ಬೇರನ್ನೂ ಸಹ ಬಿಡುವದಿಲ್ಲ. ಜನರು ಇದರ ಮೇಲೆ ಸುಮ್ಮನೆ ಓಡಾಡುತ್ತಾರೆ, ಆಕಾಶದಲ್ಲಿ ಹಾರಾಡುವ ಹಕ್ಕಿಗಳು ಇದನ್ನು ತಿಂದುಬಿಡುತ್ತವೆ. ಅನೇಕರ ಹೃದಯವು ಇದೇ ರೀತಿ ಇರುತ್ತದೆ. ಗಟ್ಟಿಯಾದ ಮಣ್ಣಿನ ರೀತಿಯ ಹೃದಯವಿರುವ ಜನರು, **ಪ್ರವಾದಿಗಳು ಬರೆದಿರುವದಕ್ಕೆ ಗಮನಕೊಡದಿರುವವರಾಗಿ –ದ್ದಾರೆ** ಮತ್ತು ಇದರ ಪರಿಣಾಮವಾಗಿ ಅವರು ಯೇಸು ಲೋಕದ ರಕ್ಷಕನೆಂಬುದನ್ನು ನಂಬುವದಿಲ್ಲ. ಅವರು ಕೇವಲ ತಮ್ಮ ಸ್ವಂತ ಕಲ್ಪನೆಗಳ ಅಥವಾ ತಮ್ಮ ಪೂರ್ವಿಕರ ಸಂಪ್ರದಾಯಗಳ ಕುರಿತು ಚಿಂತಿಸುವವರಾಗಿರುತ್ತಾರೆ. ಗಟ್ಟಿಯಾದ ನೆಲದಲ್ಲಿ ಇದ್ದ ಬೀಜವು ಹೇಗೆ ಜೀವವನ್ನು ಉತ್ಪತ್ತಿ ಮಾಡುವದಿಲ್ಲವೋ ಹಾಗೆಯೇ, ನಿಜವಾದ ದೇವರ ವಾಕ್ಯವು ಅವರ ಹೃದಯಗಳಲ್ಲಿ ಜೀವವನ್ನು ಉತ್ಪತ್ತಿ ಮಾಡುವದಿಲ್ಲ.

**ಎರಡನೆಯದಾಗಿ,** ಅನೇಕ **ಬಂಡೆಗಳು ಮತ್ತು ತೆಳುವಾದ ಮಣ್ಣಿನ** ಕುರಿತು ಯೇಸು ಮಾತಾಡಿದ್ದು ಎರಡನೆಯ ರೀತಿಯ ಮಣ್ಣಾಗಿದೆ. ಕೆಲರು ದೇವರ ವಾಕ್ಯವನ್ನು ಕೇಳಿ ಅದನ್ನು ಸಂತೋಷದಿಂದ ಅಂಗೀಕರಿಸುತ್ತಾರೆ ಆದರೆ **ಅದು ಕೊನೆಯವರೆಗೆ ಉಳಿಯುವದಿಲ್ಲ,** ಯಾಕಂದರೆ ದೇವರ ವಾಕ್ಯವು ಅವರ ಹೃದಯಗಳಲ್ಲಿ ಆಳವಾಗಿ ಬೇರೂರಿರುವದಿಲ್ಲ ಎನ್ನುವದನ್ನು ಬಂಡೆಗಳಿರುವ ನೆಲದ ವಿವರಣೆ –ಯಾಗಿದೆ. ಈ ರೀತಿಯ ವ್ಯಕ್ತಿಗಳು ವಾಕ್ಯವನ್ನು ನಂಬುತ್ತಾರೆ, ಆದರೆ ಸತ್ಯದ ನಿಮಿತ್ತವಾಗಿ ಕೆಲವು ಕಷ್ಟಗಳು ಮತ್ತು ಹಿಂಸೆಗಳು ಬಂದಾಗ ಸತ್ಯದಿಂದ ವಿಮುಖರಾಗಿಬಿಡುತ್ತಾರೆ. ಅನೇಕರು ಈ ರೀತಿಯಾಗಿರುತ್ತಾರೆ. ಅವರ ಹೃದಯಗಳಲ್ಲಿ ದೇವರ ವಾಕ್ಯವು ಆಳ – –ವಾಗಿ ಬೇರೂರಿರುವದಿಲ್ಲ, ಯಾಕಂದರೆ ಅವರು ದೇವರನ್ನು ಸ್ತುತಿಸುವದಕ್ಕಿಂತಲೂ ಮನುಷ್ಯರ ಸ್ತುತಿಯನ್ನು ಆರಿಸಿಕೊಂಡಿರುತ್ತಾರೆ. ಇದರ ಪರಿಣಾಮವಾಗಿ, ಕೇವಲ ನಿಷ್ಪ್ರಯೋಜಕವಾದ ಬಂಡೆಯ ಸ್ಥಳದಲ್ಲಿ ಬಿದ್ದಂತಹ ಬೀಜದ ಹಾಗೆ ದೇವರ ವಾಕ್ಯವು ಅವರಿಗೆ ನಿಷ್ಪ್ರಯೋಜಕವಾಗಿರುತ್ತದೆ.

**ಮೂರನೆಯ** ರೀತಿಯ ಮಣ್ಣು **ಮುಳ್ಳುಗಳಿಂದ ತುಂಬಿದ್ದಾಗಿದೆ.** ಬೀಜವು ಮುಳ್ಳುಗಳಲ್ಲಿ ಬಿದ್ದರೆ ಏನಾಗುತ್ತದೆ? ಅದು ಫಲಿಸುತ್ತದೊ? ಇಲ್ಲ, ಅದು ಫಲಿಸುವದಿಲ್ಲ. ಅದು ಫಲ ಬಿಡುವದಕ್ಕಿಂತ ಮೊದಲೆ ಮುಳ್ಳುಗಳು ಅದರ ಉಸಿರುಕಟ್ಟಿಸುತ್ತವೆ. ಒಬ್ಬನು ದೇವರ ವಾಕ್ಯ

–ವನ್ನು ಕೇಳುತ್ತಾನೆ, ಆದರೆ **ಪ್ರಪಂಚದ ಚಿಂತೆಗಳು, ಮತ್ತು ಐಶ್ವರ್ಯದ ಭೋಗಗಳಿಂದ ಅಡಗಿಸಲ್ಪಟ್ಟು** ದೇವರ ವಾಕ್ಯವನ್ನು ಉಸಿರು – ಗಟ್ಟಿಸುತ್ತಾನೆ, ಇದರಿಂದ ಇದು ಫಲದಯಕವಾಗುವದಿಲ್ಲ. ಆದಾಮನ ಅನೇಕ ಮಕ್ಕಳು ಮುಳ್ಳುಗಳಂತಿರುವ ರೀತಿಯ ಹೃದಯವನ್ನು ಹೊಂದಿದ್ದಾರೆ, ಅವರು, **"ಹೌದು ಒಂದು ದಿನ ನಾವು ಪ್ರವಾದಿಗಳು ಬರೆದಿರುವದನ್ನು ನೋಡುವದಕ್ಕೆ ಆರಂಭಿಸುತ್ತೇವೆ. ನನಗೆ ಸಮಯವಿದ್ದಾಗ, ದೇವರ ವಾಕ್ಯವನ್ನು ಕೇಳಿಸಿಕೊಳ್ಳುತ್ತೇವೆ, 'ಇನ್ಶಾ ಅಲ್ಲಾಹ್!"** {ಅರೆಬಿಕ್‌ನಲ್ಲಿ: ದೇವರ ಚಿತ್ತವಿದ್ದರೆ} ಎಂದು ಅಂದು –ಕೊಳ್ಳುತ್ತಾರೆ. ಹೀಗಿದ್ದರೂ, ಅಂತಹ ಜನರು ದೇವರ ವಾಕ್ಯವನ್ನು ಅರ್ಥಮಾಡಿಕೊಳ್ಳುವದಕ್ಕೆ ಎಂದಿಗೂ ಸಮಯವನ್ನು ತೆಗೆದು – –ಕೊಳ್ಳುವದಿಲ್ಲ ಎಂದು ಸೈತಾನನು ತುಂಬಾ ಚೆನ್ನಾಗಿ ತಿಳಿದಿರುತ್ತಾನೆ. ಪ್ರತಿದಿನದ ಸಮಸ್ಯೆ ಮತ್ತು ಅಗತ್ಯತೆಗಳು ಅವರ ಹೃದಯ ಮತ್ತು ಮನಸ್ಸುಗಳ ಮೇಲೆ ಆಳ್ವಿಕೆನಡಿಸುತ್ತವೆ. ಅವರು ಕೆಲಸ ಮಾಡುವದು, ಹಣ ಸಂಪಾದನೆ, ಮಾರುಕಟ್ಟೆಗೆ ಹೋಗುವದು, ಮಾರು –ವದು, ಕೊಳ್ಳುವದು, ಅಧ್ಯಯನ ಮಾಡುವದು, ಮಲಗುವದು ಮುಂತಾದವುಗಳನ್ನು ಮಾಡುವವರಾಗಿರುತ್ತಾರೆ, ಇದು ನಿಮ್ಮ ಅನು – –ಭವವೋ? ನೀವು ಹೃದಯ ಪೂರ್ವಕವಾಗಿ ದೇವರ ಸತ್ಯವನ್ನು ಹುಡುಕುವದಕ್ಕೆ ಇನ್ನೂ ಸಮಯ ತೆಗೆದುಕೊಳ್ಳದಂತೆ ನಿಮ್ಮ ಜೀವಿತವು ಅಗತ್ಯತೆಗಳು ಮತ್ತು ಚಿಂತಿಸುವಿಕೆಯಿಂದ ತುಂಬಿಹೋಗಿದೆಯೋ? ಮರಣವು ಒಂದು ದಿನ ಇದ್ದಕ್ಕಿದ್ದಂತೆಯೇ ಬಂದು ನಿಮ್ಮನ್ನು ನಿತ್ಯತ್ವದೊಳಕ್ಕೆ ಪ್ರತಿಹಾರಿಯಾಗುತ್ತದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ. ಆ ದಿನದಲ್ಲಿ ನೀವು ಯಾವುದು ಸತ್ಯ ಮತ್ತು ಯಾವುದು ಸುಳ್ಳು ಎನ್ನುವದನ್ನು ತಿಳುಕೊಳ್ಳುವಿರಿ, ಆದರೆ ನಿಮ್ಮ ಜೀವಿತದ ವೇಳೆಯಲ್ಲಿ ನೀವು ಹುಡುಕದಿದ್ದ ಮತ್ತು ವಿಧೇಯವಾಗ – –ದಿದ್ದ ಸತ್ಯವನ್ನು ತಿಳಿಯುವದು ನಿಮಗೆ ಯಾವ ಮೌಲ್ಯವನ್ನು ತಂದುಕೊಡುವದಿಲ್ಲ, ಯಾಕಂದರೆ ಪಶ್ಚಾತ್ತಾಪದ ಸಮಯವು ಹೊರಟುಹೊಗಿರುತ್ತದೆ ಮತ್ತು ನೀವು ನಿತ್ಯವಾಗಿ ನಾಶವಾಗಿರುತ್ತೀರಿ!

**ನಾಲ್ಕನೆಯ** ರೀತಿಯ ಮಣ್ಣು ಅದು **ಒಳ್ಳೆಯ ಮಣ್ಣು.** ಒಳ್ಳೆಯ ಮಣ್ಣಿನಲ್ಲಿ ರೈತನು ಬಿತ್ತಿದ ಬೀಜವು, ಉತ್ತಮ ವ್ಯವಸಾಯದ ಮಣ್ಣಾ –ಗಿದ್ದು ಬೇರು ಬಿಟ್ಟು, ಬೆಳೆದು ಹೇರಳವಾದ ಬೆಳೆಯನ್ನು ಕೊಡುತ್ತದೆ, ಅದರಿಂದ ರೈತನು ತಾನು ಬಿತ್ತಿದ್ದಕ್ಕಿಂತಲೂ ನೂರು ಪಟ್ಟು ಹೆಚ್ಚಾಗಿ ಬೆಳೆಯನ್ನು ಕೊಯ್ಯುತ್ತಾನೆ. ದೇವರ ವಾಕ್ಯವನ್ನು ಕೇಳಿ, **ಯಥಾರ್ಥವಾದ ಹೃದಯದಲ್ಲಿ ಅದನ್ನು ಇಟ್ಟುಕೊಂಡು** ಈ ರೀತಿಯಲ್ಲಿ ನೀತಿಯನ್ನು ಮತ್ತು ನಿತ್ಯಜೀವವನ್ನೂ ಉತ್ಪಾದಿಸುವವನಿಗೆ, ಬೀಜ ಬಿತ್ತಲ್ಪಟ್ಟ ಒಳ್ಳೆಯ ಮಣ್ಣು ನಿದರ್ಶನವಾಗಿದೆ. ದೇವರ ವಾಕ್ಯವು ಜೀವಕರವಾದದ್ದೂ ಮತ್ತು ಬಲವುಳ್ಳದ್ದೂ ಆಗಿದೆ ಮತ್ತು ಒಂದು ದೀನತೆಯ ಮತ್ತು ಯಥಾರ್ಥವಾದ ಹೃದಯದಿಂದ ಇದನ್ನು ಯಾರು ಹೊಂದಿಕೊಳ್ಳುತ್ತಾರೋ ಅವರೆಲ್ಲರಲ್ಲಿ ಇದು ನಿತ್ಯ ಜೀವವನ್ನೂ ಹಾಗೂ ನೀತಿವಂತಿಕೆಯ ಜೀವಿತವನ್ನು ಉತ್ಪಾದಿಸುತ್ತದೆ.

ಸಂಕ್ಷಿಪ್ತವಾಗಿ ಇದು ಬಿತ್ತುವವನ ಸಾಮ್ಯದಲ್ಲಿ ಯೇಸು ಬೋಧಿಸಿದ ವಿಷಯವಾಗಿದೆ. ದೇವರ ವಾಕ್ಯವು ಒಂದು **ಒಳ್ಳೆಯ ಬೀಜದ** ಹಾಗಿದೆ, ಮತ್ತು ನಮ್ಮ ಹೃದಯಗಳು **ಗಟ್ಟಿಯಾದ ಮಣ್ಣಿನ** ಹಾಗಿವೆ. ಗಟ್ಟಿಯಾದ ಮಣ್ಣಿನೊಳಗೆ ಬೀಜವನ್ನು ಬಿತ್ತುವದಕ್ಕಿಂತ ಮೊದಲು ಏನು ಮಾಡಬೇಕು? ಒಬ್ಬ ರೈತನು ತಿಳಿದಿರುವಂತೆ, ಅದನ್ನು ಉಳಬೇಕು. ಹಾಗೆಯೇ, ದೇವರನ್ನು ಮೆಚ್ಚಿಸುವಂತಹ ಹೃದಯವು ಒಂದು ಮುರಿಯಲ್ಪಟ್ಟ ಮತ್ತು ನೊಂದುಬೆಂದ ಹೃದಯವಾಗಿರಬೇಕು, ಮತ್ತು ದೇವರ ವಾಕ್ಯವೆಂಬ ಒಳ್ಳೆಯ ಬೀಜವನ್ನು ಸ್ವೀಕರಿಸಿ – –ಕೊಳ್ಳುವದಕ್ಕೆ ಸಿದ್ಧವಾಗಿರಬೇಕು. ದೇವರನ್ನು ಮೆಚ್ಚಿಸುವಂತ ಹೃದಯವು ಆತನ ವಾಕ್ಯವನ್ನು ನಂಬಿಕೆ ಮತ್ತು ನಮ್ರತೆಯಿಂದ ಸ್ವೀಕರಿ –ಸುತ್ತದೆ. ಅದನ್ನೇ ವಾಕ್ಯವು ಹೇಳುವದೇನೆಂದರೆ: "ಪ್ರತಿಯೊಬ್ಬನು ಕಿವಿಗೊಡುವದರಲ್ಲಿ ತೀವ್ರವಾಗಿಯೂ ಮಾತಾಡುವದರಲ್ಲಿ ನಿಧಾನ –ವಾಗಿಯೂ ಇರಲಿ. ಕೋಪಿಸುವದರಲ್ಲಿಯೂ ನಿಧಾನವಾಗಿರಲಿ. ಆದಕಾರಣ ಎಲ್ಲಾ ನೀಚತನವನ್ನೂ ಎಲ್ಲಾ ದುಷ್ಟತನವನ್ನೂ ತೆಗೆದು –ಹಾಕಿ **ಮನಸ್ಸಿನೊಳಗೆ ಬೇರೂರಿರುವ ವಾಕ್ಯಕ್ಕೆ ನಮ್ರತೆಯಿಂದ ಎಡೆಗೊಡಿರಿ; ಅದು ನಿಮ್ಮ ಆತ್ಮಗಳನ್ನು ರಕ್ಷಿಸುವದಕ್ಕೆ ಸಾಮರ್ಥ್ಯವುಳ್ಳ – –ದ್ದಾಗಿದೆ."** (ಯಾಕೋಬ–1:19,21)

ನಿಮ್ಮ ಹೃದಯದ ಸ್ಥಿತಿ ಹೇಗಿದೆ? ನೀವು ನಮ್ರತೆಯ ಹೃದಯವನ್ನು ಹೊಂದಿದ್ದು, ದೇವರು ತನ್ನ ಪ್ರವಾದಿಗಳ ಮೂಲಕವಾಗಿ ಪರಿಶುದ್ದ ವಾಕ್ಯಗಳಲ್ಲಿ ಹೇಳಿರುವದನ್ನು ಒಪ್ಪಿಕೊಳ್ಳುವದಕ್ಕೆ ಸಿದ್ಧವಾಗಿದ್ದೀರೋ? ದೇವರ ವಾಕ್ಯವು ನಿಮ್ಮ ಹೃದಯಗಳಲ್ಲಿ ಬೆಳೆಯು – –ತ್ತಿದೆಯೋ? ಅಥವಾ ನೀವು ಒಂದು ಗಟ್ಟಿಯಾದ, ಬಂಡೆಯಂತಿರುವ ಮತ್ತು ಮುಳ್ಳುಗಳಿಂದ ತುಂಬಿದ ಮಣ್ಣಿನ ಹಾಗಿರುವ ಹೃದಯವನ್ನು ಹೊಂದಿದ್ದೀರೋ? ದೇವರ ವಾಕ್ಯವು ಒಳ್ಳೆಯ ಬೀಜವಾಗಿದೆ, ಆದರೆ ಯಾರು ಇದನ್ನು ನಂಬಿ ಇದಕ್ಕೆ ವಿಧೇಯರಾಗಿ –ರುತ್ತಾರೋ ಅವರ ಹೃದಯಗಳಲ್ಲಿ ಇದು ಜೀವವನ್ನು ಮತ್ತು ಆಶೀರ್ವಾದವನ್ನು ಮಾತ್ರ ಉತ್ಪಾದಿಸುತ್ತದೆ.

ಯೇಸು ಜನರಿಗೆ ಹೇಳಿದ ಇನ್ನೊಂದು **"ರೈತನ ಸಾಮ್ಯ"** ವನ್ನು ಈಗ ಕೇಳಿಸಿಕೊಳ್ಳೋಣ. ಅದು ಹಣಜಿಯ ಸಾಮ್ಯ. ವಾಕ್ಯ ಹೀಗೆ ಹೇಳುತ್ತದೆ:

ಅತನು ಮತ್ತೊಂದು ಸಾಮ್ಯವನ್ನು ಅವರಿಗೆ ಹೇಳಿದನು, ಅದೇನೆಂದರೆ, **"ಪರಲೋಕ ರಾಜ್ಯವು ಒಳ್ಳೆಯ ಬೀಜವನ್ನು ತನ್ನ ಹೊಲದಲ್ಲಿ ಬಿತ್ತಿದ್ದ ಒಬ್ಬ ಮನುಷ್ಯನಿಗೆ ಹೋಲಿಕೆಯಾಗಿದೆ. ಆದರೆ ಜನರು ನಿದ್ರೆ ಮಾಡುವ ಕಾಲದಲ್ಲಿ ಅವನ ವೈರಿಯು ಬಂದು ಗೋದಿಯ ನಡುವೆ ಹಣಜಿ ಬಿತ್ತಿ ಹೋದನು.** ಗೋದಿಯು ಬೆಳೆದು ಫಲಕ್ಕೆ ಬಂದಾಗ ಹಣಜಿ ಸಹ ಕಾಣಬಂತು. ಆಗ ಯಜಮಾನನ ಆಳುಗಳು ಅವನ

ಬಳಿಗೆ ಬಂದು, ಅಯ್ಯಾ ನೀನು ನಿನ್ನ ಹೊಲದಲ್ಲಿ ಒಳ್ಳೆಯ ಬೀಜ ಬಿತ್ತಿದಿಯಲ್ಲಾ ಹಣಜಿ ಎಲ್ಲಿಂದ ಬಂತು ಎಂದು ಕೇಳಲು ಅವನು, ಇದು ಒಬ್ಬ ವೈರಿ ಮಾಡಿದ ಕೆಲಸ ಅನ್ನಲಾಗಿ ಆಳುಗಳು ಅವನನ್ನು, ಹಾಗಾದರೆ ನಾವು ಅದನ್ನು ಆರಿಸಿ ತೆಗೆಯೋಣೋ ಎಂದು ಕೇಳಲು ಅವನು, ಬೇಡ, ಹಣಜಿಯನ್ನು ಆರಿಸಿ ತೆಗೆಯುವಾಗ ಅದರ ಸಂಗಡ ಗೋದಿಯನ್ನೆಲ್ಲಾದರೂ ಕಿತ್ತಿರಿ; ಸುಗ್ಗೀಕಾಲದ ತನಕ ಎರಡೂ ಕೂಡ ಬೆಳೆಯಲಿ; ಸುಗ್ಗೀಕಾಲದಲ್ಲಿ ನಾನು ಕೊಯ್ಯುವವರಿಗೆ ಮೊದಲು ಹಣಜಿಯನ್ನು ಆರಿಸಿತೆಗೆದು ಅದನ್ನು ಸುಡು –ವದಕ್ಕೆ ಹೊರೆಕಟ್ಟಿಹಾಕಿ, ಗೋದಿಯನ್ನು ನನ್ನ ಕಣಜಕ್ಕೆ ತುಂಬಿರಿ ಎಂದು ಹೇಳುವೆನು ಅಂದನು." (ಮತ್ತಾಯ–13:24-30)

ಆಗ ಯೇಸು ಜನರನ್ನು ಬಿಟ್ಟು ಮನೆಗೆ ಹೋದ ಮೇಲೆ ಆತನ ಶಿಷ್ಯರು ಬಂದು, ಹೊಲದಲ್ಲಿಯ ಹಣಜಿಯ ಸಾಮ್ಯದ ಅರ್ಥವನ್ನು ನಮಗೆ ಹೇಳು ಅಂದರು. ಅದಕ್ಕಾತನು, "ಒಳ್ಳೆಯ ಬೀಜವನ್ನು ಬಿತ್ತುವವನಂದರೆ **ಮನುಷ್ಯಕುಮಾರನು**; ಹೊಲವೆಂದರೆ **ಈ ಲೋಕ**; ಒಳ್ಳೆಯ ಬೀಜವೆಂದರೆ ಪರಲೋಕರಾಜ್ಯದವರು; ಹಣಜಿ ಅಂದರೆ **ಸೈತಾನನವರು**; ಅದನ್ನು ಬಿತ್ತುವ ವೈರಿ ಅಂದರೆ **ಸೈತಾನನು**; ಸುಗ್ಗೀ –ಕಾಲ ಅಂದರೆ **ಯುಗದ ಸಮಾಪ್ತಿ**; ಕೊಯ್ಯುವವರು ಅಂದರೆ **ದೇವದೂತರು**. ಹೀಗಿರಲಾಗಿ ಹೇಗೆ ಹಣಜಿಯನ್ನು ಆರಿಸಿತೆಗೆದು ಸುಟ್ಟುಬಿಡುತ್ತಾರೋ ಹಾಗೆಯೇ ಯುಗದ ಸಮಾಪ್ತಿಯಲ್ಲಿ ನಡೆಯುವದು. ಮನುಷ್ಯಕುಮಾರನು ತನ್ನ ದೂತರನ್ನು ಕಳುಹಿಸುವನು; ಅವರು ಆತನ ರಾಜ್ಯದೊಳಗಿಂದ ಎಲ್ಲಾ ಕಂಟಕರನ್ನೂ ಅಧರ್ಮಿಗಳನ್ನೂ ಕೂಡಿಸಿ ಬೆಂಕೀಕೊಂಡದಲ್ಲಿ ಹಾಕುವರು; ಅಲ್ಲಿ ಗೋಳಾ – –ಟವೂ ಕಟಕಟನೆ ಹಲ್ಲುಕಡಿಯೋಣವೂ ಇರುವವು. ಆಗ ನೀತಿವಂತರು ತಮ್ಮ ತಂದೆಯ ರಾಜ್ಯದಲ್ಲಿ ಸೂರ್ಯನಂತೆ ಪ್ರಕಾಶಿಸುವರು. **ಕಿವಿಯುಳ್ಳವನು ಕೇಳಲಿ** ಅಂದನು." (ಮತ್ತಾಯ–13:36-43)

ಹಣಜಿಯ ಸಾಮ್ಯದಲ್ಲಿ, ಕರ್ತನಾದ ಯೇಸು ಲೋಕವನ್ನು ಒಂದು ಗೋದಿಯ ಹೊಲಕ್ಕೆ ಹೋಲಿಸಿದ್ದಾನೆ. **ಬಿತ್ತುವವನು** ಮೆಸ್ಸೀಯ –ನಾದ ಯೇಸುವಿಗೆ ನಿದರ್ಶನವಾಗಿದ್ದಾನೆ. ದೇವರ ಮಕ್ಕಳ ನಂಬಿಕೆಯು ಮೆಸ್ಸೀಯನ ಶುಭಸಂದೇಶದಲ್ಲಿರುವದರಿಂದ ಹೊಲದಲ್ಲಿ ಬೆಳೆದ ಗೋದಿಯು **ದೇವರ ಮಕ್ಕಳಿಗೆ** ನಿದರ್ಶನವಾಗಿದೆ. ಗೋದಿಯ ನಡುವೆ ಹಣಜಿಯನ್ನು ಬಿತ್ತುವ **ವೈರಿ ಸೈತಾನನಾಗಿದ್ದಾನೆ. ಹಣಜಿ ಅಂದರೆ ದೇವರಿಗೆ ಸಂಬಂಧಪಡದಿರುವವರು**, ಯಾಕಂದರೆ ಅವರು ಮೆಸ್ಸೀಯನ ಶುಭಸಂದೇಶವನ್ನು ಸ್ವೀಕರಿಸಿರುವದಿಲ್ಲ. **ಸುಗ್ಗೀಕಾಲವು ದೇವರ ನ್ಯಾಯತೀರ್ಪಿನ ದಿನವಾಗಿದೆ. ಕಣಜದಲ್ಲಿ ತುಂಬಿದ ಗೋದಿಯು, ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ಜೀವಿಸುವ ಹಕ್ಕುಳ್ಳವ –ರಿಗೆ ನಿದರ್ಶನವಾಗಿದೆ.** ಹೇಗಾದರೂ, **ಸುಡುವದಕ್ಕೆ ಒಟ್ಟುಗೂಡಿಸುವ ಹಣಜಿಯು, ನಿತ್ಯವಾದ ಬೆಂಕಿಯೊಳಗೆ ಹಾಕಲ್ಪಡುವವರಿಗೆ ನಿದರ್ಶನವಾಗಿದೆ.**

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು ಹೇಗಿದ್ದೀರಿ? ನೀವು **ಗೋದಿಯ** ಹಾಗಿದ್ದೀರೋ? ಅಥವಾ **ಹಣಜಿಯ** ಹಾಗಿದ್ದೀರೋ? ನಿಮ್ಮ ಹೃದಯವನ್ನು ಪರೀಕ್ಷಿಸಿಕೊಳ್ಳಿರಿ. ನ್ಯಾಯತೀರ್ಪಿನ ದಿನವು ಬರುತ್ತಿದೆ! ನ್ಯಾಯಾಧಿಪತಿಯು ಬಾಗಿಲಲ್ಲಿದ್ದಾನೆ! ನ್ಯಾಯತೀರ್ಪಿನ ದಿನದಂದು ತೀರ್ಪನ್ನು ಎದುರಿಸುವದಕ್ಕೆ ನೀವು ಭರವಸೆಯುಳ್ಳವರಾಗಿದ್ದೀರೋ? ನಿಮ್ಮನ್ನು ನಿತ್ಯವಾದ ನರಕದಿಂದ ರಕ್ಷಿಸುವದಕ್ಕೆ ಬಂದವನ ಶುಭಸಂದೇಶವನ್ನು ನೀವು ನಿಮ್ಮ ಹೃದಯದಲ್ಲಿ ನಂಬಿದ್ದರೆ ಆ ದಿನಕ್ಕಾಗಿ ನೀವು ಭಯಪಡುವ ಅಗತ್ಯವಿರುವದಿಲ್ಲ. ನ್ಯಾಯ ತೀರ್ಪಿನ ದಿನಕ್ಕೆ ಸಂಬಂಧಿಸಿದಂತೆ ಮೆಸ್ಸೀಯನಾದ ಯೇಸುವು ಹೇಳಿರುವದನ್ನು ಕೇಳೋಣ. ಆತನು ಹೇಳಿರುವೇನೆಂದರೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು **ಕೇಳಿ** ನನ್ನನ್ನು ಕಳುಹಿಸಿದಾತನನ್ನು **ನಂಬುವವನು** ನಿತ್ಯಜೀವವನ್ನು ಹೊಂದಿದ್ದಾನೆ. ಅವನು **ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ** ಸೇರಿದ್ದಾನೆ." ಆಮೆನ್.(ಯೋಹಾನ–5:24)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು, ಮುಂದಿನ ಸಲ, ದೇವರ ಚಿತ್ತದಂತೆ, ಸುವಾರ್ತೆಯಲ್ಲಿರುವದನ್ನು ನಾವು ಮುಂದುವರಿಸಿ ಯೇಸು ಹೇಗೆ ಐದು ರೊಟ್ಟಿ ಎರಡು ಮೀನಿನಿಂದ ಐದುಸಾವಿರ ಗಂಡಸರಿಗಿಂತಲೂ ಹೆಚ್ಚು ಜನರಿಗೆ ಅದ್ಭುತಕರವಾಗಿ ಊಟಮಾಡಿಸಿದನು ಎನ್ನುವದನ್ನು ನೋಡಿಕೊಳ್ಳೋಣ. . . . .

ಕರ್ತನಾದ ಯೇಸುವಿನ ಮಾತನ್ನು ಜ್ಞಾಪಿಸಿಕೊಳ್ಳುವಂತೆ ಈ ದಿನ ನೀವು ಕೇಳಿಸಿಕೊಂಡಿದ್ದೆಲ್ಲದರೊಳಗೆ ದೇವರು ನಿಮಗೆ ವಿವೇಕವನ್ನು ಕೊಡಲಿ:

**"ಕಿವಿಯುಳ್ಳವನು ಕೇಳಲಿ!"** (ಮತ್ತಾಯ–13:43)

[ಪಾಠ 71: ಎರಡು ಪ್ರಾಮುಖ್ಯವಾದ ಸಾಮ್ಯಗಳು] [ಸಾರಾಂಶಗಳ ಪಟ್ಟಿ] [ಪಾಠ 73: ವಿಭಜನೆಗೆ ಯೇಸು ಕಾರಣ]

ಪಾಠ 72

# ಜೀವದ ರೊಟ್ಟಿ

ಮಾರ್ಕ 6: ಯೋಹಾನ 6

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ನಮ್ಮ ಪಾಠದಲ್ಲಿ, ಜನರ ಗುಂಪುಗಳಿಗೆ ಕರ್ತನಾದ ಯೇಸು ಮಾತಾಡಿದ್ದನ್ನು ನಾವು ನೋಡಿದೆವು. ನಿತ್ಯವಾದ ಸತ್ಯಗಳೊಂ –ದಿಗೆ ತುಂಬಿದ್ದ ಸಾಮ್ಯಗಳಲ್ಲಿ ಆತನು ತನ್ನ ಬೋಧನೆಯನ್ನು ಮಾಡುತ್ತಿದ್ದನು. ಹೀಗಿದ್ದರೂ, **ಗುಂಪಿನಲ್ಲಿದ್ದ ಹೆಚ್ಚಿನವರು ಸಾಮ್ಯಗಳ ಅರ್ಥವನ್ನು ಗ್ರಹಿಸಿಕೊಳ್ಳಲಿಲ್ಲ ಯಾಕಂದರೆ ಅವರ ಹೃದಯಗಳು ಕಠಿಣವಾಗಿದ್ದವು.** ಅವರು ಪರಲೋಕದ ಸಂಗತಿಗಳನ್ನು ಗೌರವಿಸದೇ ಭೂಲೋಕದ ಸಂಗತಿಗಳನ್ನು ಮಾತ್ರ ಗೌರವಿಸುತ್ತಿದ್ದರು. ಅನೇಕರು ಯೇಸುವನ್ನು ಹಿಂಬಾಲಿಸಲಿಲ್ಲ ಯಾಕಂದರೆ ಆತನು ಪಾಪಿಗಳ ರಕ್ಷಕನಾಗಿದ್ದನು, ಅವರು ಆತನಿಂದ ಕೇವಲ ಶಾರೀರಿಕ ಪ್ರಯೋಜನಗಳನ್ನು ಪಡೆದುಕೊಳ್ಳುವದಕ್ಕೆ ಮಾತ್ರ ಆತನ ಜೊತೆಯಿರುತ್ತಿದ್ದರು.

ಈದಿನ ನಾವು ಕರ್ತನಾದ ಯೇಸು ಮಾತಾಡಿದ ಇನ್ನೂ ಅನೇಕ ಮಾತುಗಳನ್ನು ಕೇಳಿಸಿಕೊಳ್ಳಲಿದ್ದೇವೆ. ಒಂದು ಅದ್ಭುತವಾದ ಸೂಚಕ ಕಾರ್ಯವನ್ನು ಮಾಡುವದರಿಂದ ಆತನು ತನ್ನ ಮಾತುಗಳನ್ನು ಹೇಗೆ ದೃಢಪಡಿಸಿದನೆಂಬುದನ್ನೂ ಸಹ ನಾವು ನೋಡಲಿದ್ದೇವೆ. ಈ ದಿನದ ನಮ್ಮ ಪಾಠವು **"ಜೀವದ ರೊಟ್ಟಿ"** ಎಂದು ಕರೆಯಲ್ಪಡುತ್ತದೆ. {ಉಲೂಫ್‌ನಲ್ಲಿ: ನಿತ್ಯಜೀವವನ್ನು ಕೊಡುವಂತಹ ಆಹಾರ}

ಈಗ ಮಾರ್ಕನ ಸುವಾರ್ತೆಯ ಆರನೆಯ ಅಧ್ಯಾಯವನ್ನು ಮುಂದುವರಿಸೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಇತ್ತಲಾಗಿ ಅಪೊಸ್ತಲರು ಆತನ ಬಳಿಗೆ ಕೂಡಿಬಂದು ತಾವು ಮಾಡಿದ್ದನ್ನೂ ಉಪದೇಶಿಸಿದ್ದನ್ನೂ ಎಲ್ಲಾ ಆತನಿಗೆ ತಿಳಿಸಲು ಆತನು ಅವರಿಗೆ, "ನೀವು ಮಾತ್ರ ವಿಂಗಡವಾಗಿ ಅಡವಿಗೆ ಬಂದು ಸ್ವಲ್ಪ ದಣುವಾರಿಸಿಕೊಳ್ಳಿರಿ" ಎಂದು ಹೇಳಿದನು. ಯಾಕಂದರೆ ಬಹಳ ಮಂದಿ ಬರುತ್ತಾ ಹೋಗುತ್ತಾ ಇದ್ದದರಿಂದ ಅವರಿಗೆ ಊಟಮಾಡುವದಕ್ಕೂ ಅವಕಾಶ ಸಿಕ್ಕಲಿಲ್ಲ. ಆಗ ಅವರು ದೋಣಿಯಲ್ಲಿ ಹೊರಟು ವಿಂಗಡವಾಗಿ ಅಡವಿಗೆ ಹೋದರು. ಅವರು ಹೋಗುವದನ್ನು ಬಹುಜನರು ಕಂಡು ಅವರ ಗುರುತನ್ನು ಹಿಡಿದು ಎಲ್ಲಾ ಊರುಗಳಿಂದ ಕಾಲುನಡಿಗೆಯಾಗಿ ಓಡಿ ಅವರಿಗಿಂತ ಮುಂಚೆ ಅಲ್ಲಿಗೆ ಸೇರಿದರು. ಆತನು ಹೊರಗೆ ಬಂದು ಬಹುಜನರ ಗುಂಪನ್ನು ಕಂಡು ಇವರು ಕುರುಬನಿಲ್ಲದ ಕುರಿಗಳ ಹಾಗಿದ್ದಾರಲ್ಲಾ ಎಂದು ಕನಿಕರಪಟ್ಟು ಅವರಿಗೆ ಬಹಳ ಉಪದೇಶ ಮಾಡುತ್ತಿದ್ದನು.
(ಮಾರ್ಕ–6:30-34)

ಅಷ್ಟರಲ್ಲಿ ಬಹಳ ಹೊತ್ತಾದ್ದರಿಂದ ಆತನ ಶಿಷ್ಯರು ಆತನ ಬಳಿಗೆ ಬಂದು, "ಇದು ಅಡವಿ, ಈಗ ಹೊತ್ತು ಬಹಳವಾಯಿತು; ಈ ಜನ –ರಿಗೆ ಅಪ್ಪಣೆಕೊಡು. ಇವರು ಸುತ್ತಲಿರುವ ಹಳ್ಳಿಪಳ್ಳಿಗಳಿಗೆ ಹೋಗಿ ತಮ್ಮ ಊಟಕ್ಕೆ ಏನಾದರೂ ಕೊಂಡುಕೊಳ್ಳಲಿ" ಅಂದದ್ದಕ್ಕೆ ಯೇಸು, "ನೀವೆ ಅವರಿಗೆ ಊಟಕ್ಕೆ ಕೊಡಿರಿ" ಎಂದು ಉತ್ತರಕೊಟ್ಟನು. ಅದಕ್ಕವರು, "ನಾವು ಹೋಗಿ ಇನ್ನೂರು ಹಣಕ್ಕೆ ರೊಟ್ಟಿ –ಯನ್ನು ಕೊಂಡುಕೊಂಡು ಅವರಿಗೆ ಊಟಕ್ಕೆ ಕೊಡಬೇಕೋ?" ಎಂದು ಕೇಳಲು ಆತನು, "ನಿಮ್ಮಲ್ಲಿ ಎಷ್ಟು ರೊಟ್ಟಿಗಳಿವೆ? ಹೋಗಿ ನೋಡಿಕೊಂಡು ಬನ್ನಿ" ಅಂದನು. ಅವರು ತಿಳುಕೊಂಡು ಬಂದು, "ಐದು ರೊಟ್ಟಿ ಎರಡು ಮೀನು" ಅಂದರು. ಆಗ ಆತನು ಅವರಿಗೆ, "ಎಲ್ಲರೂ ಹಸುರುಹುಲ್ಲಿನ ಮೇಲೆ ಪಂಕ್ತಿಪಂಕ್ತಿಯಾಗಿ ಕೂತುಕೊಳ್ಳಲಿ" ಎಂದು ಅಪ್ಪಣೆ ಕೊಟ್ಟಾಗ ಜನರು ಪಂಕ್ತಿಗೆ ನೂರ –ರಂತೆ ಐವತ್ತರಂತೆ ಸಾಲುಸಾಲಾಗಿ ಕೂತುಕೊಂಡರು. (6:35-40)

ಆ ಮೇಲೆ ಆತನು ಆ ಐದು ರೊಟ್ಟಿ ಎರಡು ಮೀನುಗಳನ್ನು ತೆಗೆದುಕೊಂಡು ಆಕಾಶದ ಕಡೆಗೆ ನೋಡಿ ದೇವರ ಸ್ತೋತ್ರ ಮಾಡಿ ಆ ರೊಟ್ಟಿಗಳನ್ನು ಮುರಿದು, "ನೀವು ಜನರಿಗೆ ಹಂಚಿರಿ"ಎಂದು ಶಿಷ್ಯರ ಕೈಗೆ ಕೊಟ್ಟು ಆ ಎರಡು ಮೀನುಗಳನ್ನೂ ಎಲ್ಲರಿಗೆ ಹಂಚಿಸಿದನು. **ಅವರೆಲ್ಲರೂ ಊಟಮಾಡಿ ತೃಪ್ತರಾದರು.** ರೊಟ್ಟಿತುಂಡುಗಳನ್ನೂ ಮೀನಿನ ತುಂಡುಗಳನ್ನೂ ಕೂಡಿಸಲಾಗಿ ಹನ್ನೆರಡು ಪುಟ್ಟಿ ತುಂಬಿತು. ಊಟಮಾಡಿದವರು **ಐದುಸಾವಿರ ಮಂದಿ** ಗಂಡಸರು. ಇದಾದ ಕೂಡಲೆ ಆತನು ತನ್ನ ಶಿಷ್ಯರಿಗೆ, "ನಾನು ಈ ಜನರ ಗುಂಪನ್ನು ಕಳುಹಿಸಿ ಬಿಡುವಷ್ಟರೊಳಗೆ ನೀವು ದೋಣಿಯನ್ನು ಹತ್ತಿ ಮುಂದಾಗಿ ಆಚೇದಡಕ್ಕೆ ಬೇತ್ಸಾಯಿದಕ್ಕೆ ಹೋಗಿರಿ" ಎಂದು ಬಲವಂತ ಮಾಡಿದನು. ಆತನು ಜನರಿಗೆ ಅಪ್ಪಣೆಕೊಟ್ಟ ನಂತರ ಪ್ರಾರ್ಥನೆ ಮಾಡುವದಕ್ಕಾಗಿ ಬೆಟ್ಟಕ್ಕೆ ಹೋದನು. ಹೊತ್ತು ಮುಳುಗಿದ ಮೇಲೆ ದೋಣಿಯು ಸಮುದ್ರದ ನಡುವೆ ಇತ್ತು; ಯೇಸು ಒಬ್ಬನೇ ದಡದಲ್ಲಿದ್ದನು. ಎದುರು ಗಾಳಿ ಬೀಸುತ್ತಿದ್ದದರಿಂದ ಶಿಷ್ಯರು ಹುಟ್ಟು ಹಾಕಿ

ಹಾಕಿ ಒದ್ದಾಡುವದನ್ನು ಆತನು ಕಂಡು ಹೆಚ್ಚುಕಡಿಮೆ ರಾತ್ರಿಯ ನಾಲ್ಕನೆಯ ಜಾವದಲ್ಲಿ ಸಮುದ್ರದ ಮೇಲೆ ನಡೆದು ಅವರ ಕಡೆಗೆ ಬಂದು ಅವರನ್ನು ದಾಟಿ ಹೋಗಬೇಕೆಂದಿದ್ದನು. ಸಮುದ್ರದ ಮೇಲೆ ನಡೆಯುವ ಆತನನ್ನು ಅವರು ಕಂಡು ಭೂತವೆಂದು ಭಾವಿಸಿ ಅಬ್ಬರಿಸಿ ಕೂಗಿದರು; ಅವರೆಲ್ಲರೂ ಆತನನ್ನು ನೋಡಿ ತತ್ತರಿಸಿದರು. ಆತನು ಕೂಡಲೆ ಅವರನ್ನು ಮಾತಾಡಿಸಿ ಅವರಿಗೆ, "ಧೈರ್ಯ –ವಾಗಿರಿ; ನಾನು; ಅಂಜಬೇಡಿರಿ" ಎಂದು ಹೇಳಿದನು. ತರುವಾಯ ಆತನು ದೋಣಿಯನ್ನು ಹತ್ತಿ ಅವರ ಬಳಿಗೆ ಬಂದ ಮೇಲೆ ಗಾಳಿ ನಿಂತುಹೋಯಿತು. ಆಗ ಅವರು ತಮ್ಮೊಳಗೆ ಬಹಳವಾಗಿ ಬೆರಗಾದರು. ಯಾಕಂದರೆ ಅವರು ರೊಟ್ಟಿಯ ವಿಷಯವಾದ ಮಹತ್ಕಾರ್ಯವನ್ನು ಗ್ರಹಿಸಲಿಲ್ಲ; ಅವರ ಮನಸ್ಸು ಕಲ್ಲಾಗಿತ್ತು. ಅವರು ಸಮುದ್ರವನ್ನು ದಾಟಿ ಗೆನೆಜರೇತ್ ದೇಶದ ದಡಕ್ಕೆ ಮುಟ್ಟಿ ದೋಣಿಯನ್ನು ಕಟ್ಟಿದರು. (6:41-53)

ಮರುದಿವಸ ಸಮುದ್ರದ ಆಚೇಕಡೆಯಲ್ಲಿ ನಿಂತುಕೊಂಡಿದ್ದ ಜನರು ಯೇಸುವನ್ನು ಹುಡುಕುತ್ತಿದ್ದರು; ಇಲ್ಲಿ ಒಂದೇ ಹಡಗು ಇದ್ದ ಹೊರತು ಬೇರೆ ದೋಣಿಯು ಇರಲಿಲ್ಲವೆಂದೂ ಶಿಷ್ಯರು ಮಾತ್ರ ಹೊರಟು ಹೋದದ್ದಲ್ಲದೆ ಯೇಸು ತನ್ನ ಶಿಷ್ಯರ ಸಂಗಡ ಹಡಗನ್ನು ಹತ್ತಲಿಲ್ಲವೆಂದೂ ಅವರಿಗೆ ತಿಳಿದಿತ್ತು. ಹೀಗಿರಲಾಗಿ ಯೇಸು ಇಲ್ಲಿ ಇಲ್ಲ, ಆತನ ಶಿಷ್ಯರೂ ಇಲ್ಲ ಎಂದು ಆ ಜನರು ನೋಡಿ ತಾವೇ ಆ ಸಣ್ಣ ದೋಣಿಗಳನ್ನು ಹತ್ತಿ ಯೇಸುವನ್ನು ಹುಡುಕುತ್ತಾ ಕಪೆರ್ನೌಮಿಗೆ ಬಂದರು. ಮತ್ತು ಸಮುದ್ರದ ಆಚೇ ಕಡೆಯಲ್ಲಿ ಆತನನ್ನು ಕಂಡುಕೊಂಡು, "ಗುರುವೇ, ಯಾವಾಗ ಇಲ್ಲಿಗೆ ಬರೋಣವಾಯಿತು?" ಎಂದು ಕೇಳಿದ್ದಕ್ಕೆ, ಯೇಸು ಅವರಿಗೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನೀವು ನನ್ನನ್ನು ಹುಡುಕುವದು ಸೂಚಕ ಕಾರ್ಯಗಳನ್ನು ನೋಡಿದ್ದರಿಂದಲ್ಲ, ಆ ರೊಟ್ಟಿ ತಿಂದು ಹೊಟ್ಟೆ ತುಂಬಿಸಿ ಕೊಂಡಿದ್ದರಿಂದಲೇ. **ದುಡಿಯಿರಿ; ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ;** ಇಂಥ ಆಹಾರವನ್ನು ಮನುಷ್ಯಕುಮಾರನು ನಿಮಗೆ ಕೊಡುವನು; ಇದಕ್ಕಾಗಿ ತಂದೆಯಾದ ದೇವರು ಆತನನ್ನು ನೇಮಿಸಿ ಮುದ್ರೆ ಹಾಕಿದ್ದಾನೆ" ಅಂದನು.(ಯೋಹಾನ–6:22, 24-27)

ಇಲ್ಲಿಗೆ ನಿಲ್ಲಿಸೋಣ. ಯೇಸು ಆ ಜನರ ಗುಂಪಿಗೆ, **"ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ"** ಎಂದು ಯಾಕೆ ಹೇಳಿದನು? ಅಂದರೆ ತಿನ್ನುವದಕ್ಕೆ ಏನಾದರೂ ಪಡೆಯುವ ಕ್ರಮಕ್ಕಾಗಿ ನಾವು ಕೆಲಸ ಮಾಡಬಾರದು ಎಂದು ಇದರ ಅರ್ಥವೋ? ಇಲ್ಲ, ಇದು ಆ ರೀತಿಯ ಅರ್ಥವಲ್ಲ, ಯಾಕಂದರೆ ದೇವರ ವಾಕ್ಯವೂ ಸಹ ಹೀಗೆ ಹೇಳುತ್ತದೆ: "ಕೆಲಸ ಮಾಡಲೊಲ್ಲದವನು ಊಟಮಾಡಬಾರದು." (2ಥೆಸ–3:10). ಹಾಗಾದರೆ ಯೇಸು ಯಾಕೆ, "ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ" ಎಂದು ಹೇಳಿದನು? ಯೇಸು ಹೇಳಿದ್ದೇನೆಂದರೆ: ನೀವು ಕೇವಲ ನಿಮ್ಮ ಹೊಟ್ಟೆಗಾಗಿ ಮಾತ್ರ ಕೆಲಸ ಮಾಡಿದರೆ, ಮತ್ತು ಕೇವಲ ಲೋಕದ ಸಂಗತಿಗಳನ್ನು ಹುಡುಕು – –ತ್ತಿದ್ದರೆ, ಕೊನೆಯಲ್ಲಿ ನೀವು ಎಲ್ಲವನ್ನೂ ಕಳೆದುಕೊಳ್ಳುತ್ತೀರಿ, ಯಾಕಂದರೆ ನಿಮ್ಮ ದೇಹವು ಸತ್ತು ಹೋಗುತ್ತದೆ ಮತ್ತು ಮಣ್ಣಿಗೆ ಹಿಂದಿ –ರುಗುತ್ತದೆ. ಹೀಗಿದ್ದರೂ, ಎಂದೂ ನಾಶವಾಗದಿರುವ ಒಂದು ಸಂಗತಿಯು ನಿಮ್ಮ ಶರೀರದಲ್ಲಿದೆ, ಅದು **ನಿಮ್ಮ ಆತ್ಮ**. ಮನುಷ್ಯನ ಆತ್ಮವು **ಪರಲೋಕ** ಎಂದು ಕರೆಯಲ್ಪಡುವ ಮಹಿಮೆಯುಳ್ಳ ಸ್ಥಳದಲ್ಲಿಯಾದರೂ ಅಥವಾ **ನರಕ** ಎಂದು ಕರೆಯಲ್ಪಡುವ ಭಯಂಕರ –ವಾದ ಸ್ಥಳದಲ್ಲಿಯಾದರೂ ಎಂದೆಂದಿಗೂ ಅಸ್ತಿತ್ವದಲ್ಲಿರುತ್ತದೆ. ಅದಕ್ಕಾಗಿಯೇ ಯೇಸು ಅವರಿಗೆ, "ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ!" ಎಂದು ಹೇಳಿದನು. ಹೀಗೆ ಯೇಸು ಜನರು ಕೇವಲ ನಾಶ – –ವಾಗುವಂತಹ ಆಹಾರಕ್ಕಾಗಿ ಹುಡುಕದೆ ಎಂದೆಂದಿಗೂ ಅಳಿದು ಹೋಗದಿರುವ ದೇವರ ವಾಕ್ಯವನ್ನು ಹುಡುಕುವವರಾಗಲಿ ಎಂದು ಜನರ ಗುಂಪಿಗೆ ಎಚ್ಚರಿಸಿದನು. ಯಾಕಂದರೆ "ಮನುಷ್ಯನು ರೊಟ್ಟಿ ತಿಂದ ಮಾತ್ರದಿಂದ ಬದುಕುವದಿಲ್ಲ, ಆದರೆ ದೇವರ ಬಾಯಿಂದ ಬರುವ ಪ್ರತಿಯೊಂದು ಮಾತಿನಿಂದ ಬದುಕುತ್ತಾನೆ." (ಮತ್ತಾಯ–4:4). ಕರ್ತನಾದ ಯೇಸು ಹೇಳಿದ್ದು ಇದನ್ನೇ.

ಬೇಸರವೇನೆಂದರೆ, ಯೇಸುವಿನ ಸುತ್ತಲಿದ್ದವರಲ್ಲಿ ಹೆಚ್ಚಿನವರು ದೇವರ ವಾಕ್ಯದ ಕುರಿತು ಗಮನವಿಲ್ಲದವರಾಗಿದ್ದರು, ಇಲ್ಲವೇ ದೇವರು ಕಳಿಸಿದ ಆ ಒಬ್ಬನಲ್ಲಿ ನಂಬಿಕೆಯಿಲ್ಲದವರಾಗಿದ್ದರು. ದೇವರ ನ್ಯಾಯತೀರ್ಪಿನಿಂದ ಅವರನ್ನು ರಕ್ಷಿಸುವಂತಹ ಸತ್ಯದಿಂದ ತಮ್ಮ ಹೃದಯ –ವನ್ನು ತುಂಬಿಸಿಕೊಳ್ಳುವದಕ್ಕಿಂತಲೂ ಆಹಾರದಿಂದ ತಮ್ಮ ಹೊಟ್ಟೆಯನ್ನು ತುಂಬಿಸಿಕೊಳ್ಳುವದು ಅವರಿಗೆ ಮುಖ್ಯವಾದುದಾಗಿತ್ತು. ಅದ –ಕ್ಕಾಗಿಯೇ ಯೇಸು ಅವರಿಗೆ, "ದುಡಿಯಿರಿ; ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ; ಅಂದನು. ಅವರು, "ದೇವರಿಗೆ ಮೆಚ್ಚಿಕೆಯಾದ ಕೆಲಸಗಳನ್ನು ನಾವು ನಡಿಸಬೇಕಾದರೆ ಏನು ಮಾಡಬೇಕೆಂದು" ಆತ – –ನನ್ನು ಕೇಳಿದ್ದಕ್ಕೆ, ಯೇಸು, **"ದೇವರು ಮೆಚ್ಚುವ ಕೆಲಸ ಯಾವದೆಂದರೆ ಆತನು ಕಳುಹಿಸಿಕೊಟ್ಟವನನ್ನು ನೀವು ನಂಬುವದೇ"** ಅಂದನು. (ಯೋಹಾನ–6:27-29)

ಯೇಸುವಿನ ಉತ್ತರವನ್ನು ನೀವು ಕೇಳಿಸಿಕೊಂಡಿರಾ? ಪಾಪದಲ್ಲಿ ಹುಟ್ಟಿದ ಆದಾಮನ ಒಂದು ಮಗು ಹೇಗೆ ದೇವರನ್ನು ಮೆಚ್ಚಿಸುವದ –ಕ್ಕಾಗುತ್ತದೆ? ದೇವರನ್ನು ಮೆಚ್ಚಿಸುವ ಕೆಲಸಗಳನ್ನು ನಾವು ಮಾಡಿ ಮುಗಿಸುವದಕ್ಕಾಗುತ್ತದೋ? ನಾವು ಸೈತಾನನ, ಪಾಪದ ಮತ್ತು ನರಕದ ಬಲದಿಂದ ನಮ್ಮನ್ನು ಹೇಗೂ ರಕ್ಷಿಸಿಕೊಳ್ಳುವದಕ್ಕೆ ನಮಗೆ ಸಾಧ್ಯವಿದೆಯೋ? ದೇವರಿಗೆ ಅಗತ್ಯವಿರುವ ಶುದ್ಧವಾದ ಮತ್ತು ಸಂಪೂರ್ಣವಾದ ಹೃದಯವನ್ನು ಉಂಟುಮಾಡುದಕ್ಕೆ ನಮಗೆ ಸಾಧ್ಯವೋ? ಎಂದಿಗೂ ಇಲ್ಲ! "ಒಂದು ವೇಳೆ ಒಂದು ಮರದ

ದಿಮ್ಮಿಯು ಬಹಳ ಸಮಯ ನೀರಿನಲ್ಲಿದ್ದರೆ ಅದು ಎಂದಿಗೂ ಒಂದು ಮೊಸಳೆಯಾಗುವದಿಲ್ಲ." {ಉಲೂಫ್‌ನ ಗಾದೆ} ಹಾಗಾದರೆ ಆದಾಮನ ಒಂದು ಸಂತಾನ ದೇವರನ್ನು ಮೆಚ್ಚಿಸುವದಕ್ಕೆ ಹೇಗೆ ಸಾಧ್ಯ? ಇದರ ಕುರಿತು ಕರ್ತನಾದ ಯೇಸು ಏನು ಹೇಳುತ್ತಾನೆ? ಆತನು ಹೇಳುವದೇನೆಂದರೆ, **"ಆತನು ಕಳಿಸಿದ ಒಬ್ಬನನ್ನು ನಂಬುವದೇ** ದೇವರು ಮೆಚ್ಚುವಂತ ಕೆಲಸವಾಗಿದೆ." ದೇವರು ಕಳಿಸಿದ ಪರಿಶುದ್ಧ ವಿಮೋಚಕನನ್ನು ಅವನು ಅಥವಾ ಅವಳು ನಂಬುವವರೆಗೆ ಯಾವ ವ್ಯಕ್ತಿಯೂ ಎಂದಿಗೂ ದೇವರನ್ನು ಮೆಚ್ಚಿಸಲು ಆರಂಭಿ–ಸುವದಕ್ಕೆ ಸಾಧ್ಯವಿಲ್ಲ.

ವಿಷಾದಕರವೆಂದರೆ, ಜನರ ಗುಂಪಿನಲ್ಲಿ ಅನೇಕರು ಯೇಸು ದೇವರ ಕಳಿಸಿದ ರಕ್ಷಕನೆಂಬುದನ್ನು ನಂಬಲಿಲ್ಲ. ಅದಕ್ಕಾಗಿಯೇ ಅವರು ಆತನಿಗೆ ಹೀಗೆ ಹೇಳುತ್ತಾರೆ:

ಹಾಗಾದರೆ ನಾವು ನೋಡಿ ನಿನ್ನ ಮಾತನ್ನು ನಂಬುವಂತೆ ಏನು ಸೂಚಕ ಕಾರ್ಯ ಮಾಡುತ್ತೀ? ನಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರು; 'ಪರಲೋಕದಿಂದ ರೊಟ್ಟಿಯನ್ನು ಅವರಿಗೆ ತಿನ್ನುವದಕ್ಕೆ ಕೊಟ್ಟನು' ಎಂದು ಶಾಸ್ತ್ರದಲ್ಲಿ ಬರೆದದೆಯಲ್ಲಾ. ನೀನು ಏನು ಕೆಲಸ ನಡಿಸುತ್ತೀ? ಎಂದು ಕೇಳಿದಾಗ ಯೇಸು ಅವರಿಗೆ, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಮೋಶೆಯು ನಿಮಗೆ ಪರಲೋಕದಿಂದ ರೊಟ್ಟಿ ಕೊಟ್ಟವನಲ್ಲ; ನನ್ನ ತಂದೆಯು ಪರಲೋಕದಿಂದ ಬರುವ ನಿಜವಾದ ರೊಟ್ಟಿಯನ್ನು ನಿಮಗೆ ಕೊಡುತ್ತಾನೆ. ದೇವರು ಕೊಡುವ ಆ ರೊಟ್ಟಿ ಯಾವದೆಂದರೆ ಪರಲೋಕದಿಂದ ಇಳಿದು ಬಂದು ಲೋಕಕ್ಕೆ ಜೀವವನ್ನು ಉಂಟುಮಾಡುವಂಥದೇ" ಎಂದು ಹೇಳಿದನು. ಆಗ ಅವರು, ಸ್ವಾಮೀ ರೋಟ್ಟಿಯನ್ನು ನಮಗೆ ಕೊಡು ಅನ್ನಲು ಯೇಸು ಅವರಿಗೆ, **"ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರು–ವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ"** ಅಂದನು.
(ಯೋಹಾನ–6:30-35)

ಆ ಮಾತುಗಳಿಂದ ಯೇಸು ಹೇಳಿದ್ದೇನೆಂದರೆ: ನಲವತ್ತು ವರ್ಷಗಳವರೆಗೆ ಇಸ್ರಾಯೇಲ್ ಜನರ ಊಟಕ್ಕಾಗಿ ದೇವರು ಪರಲೋಕ ––ದಿಂದ ಅಹಾರವನ್ನು ಕಳಿಸಿದನು ಆದದರಿಂದ ಅವರು ಅರಣ್ಯದಲ್ಲಿ ಸತ್ತುಹೋಗಲಿಲ್ಲ, ಅದರಂತೆಯೇ ದೇವರು ಆದಾಮನ ಎಲ್ಲಾ ಮಕ್ಕಳಿಗೆ ನಿತ್ಯಜೀವವನ್ನು ಕೊಡುವಂತಹ "ಆಹಾರವನ್ನು" ಕಳಿಸಿದ್ದಾನೆ, ಅದರಿಂದ ನಾವು ನಮ್ಮ ಪಾಪದಲ್ಲಿ ಸಾಯುವ ಸಾಧ್ಯತೆಯಿಲ್ಲ!

ಈ "ಆಹಾರ" ಎಲ್ಲಿದೆ? ನೀವು ಇದನ್ನು ತಿಂದು ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ಜೀವಿಸುವದಕ್ಕೆ ಸಾಧ್ಯವಾಗುವಂತಹ ಆಹಾ ––ರವು ಭೂಮಿಯ ಮೇಲಿದೆಯಾ? ಇಲ್ಲ, ಅಲ್ಲಿಲ್ಲ! ನಿತ್ಯಜೀವವನ್ನು ಕೊಡುವಂತಹ ಈ "ಆಹಾರ" ಯಾವುದು? ಕರ್ತನಾದ ಯೇಸು ಏನು ಹೇಳಿದನು? ಆತನು ಹೇಳಿದ್ದೇನೆಂದರೆ:

**"ಜೀವಕೊಡುವ ರೊಟ್ಟಿ ನಾನೇ;** ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ". ಆದರೆ ನೀವು ನನ್ನನ್ನು ನೋಡಿದ್ದರೂ ನಂಬದೇ ಇದ್ದೀರಿ ಎಂದು ನಿಮಗೆ ಹೇಳಿದೆನಲ್ಲವೇ. ತಂದೆಯು ನನಗೆ ಕೊಡುವಂಥವರೆಲ್ಲರು ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವನನ್ನು ನಾನು ತಳ್ಳಿಬಿಡುವದೇ ಇಲ್ಲ. ಮಗನನ್ನು ನೋಡಿ ಆತನನ್ನು ನಂಬುವ ಪ್ರತಿಯೊಬ್ಬನಿಗೆ ನಿತ್ಯಜೀವವು ಸಿಕ್ಕಬೇಕೆಂಬುದೇ ನನ್ನ ತಂದೆಯ ಚಿತ್ತವಾಗಿದೆ; ಮತ್ತು ನಾನು ಕಡೇದಿನ ––ದಲ್ಲಿ ಅವನನ್ನು ಎಬ್ಬಿಸುವೆನು ಎಂದು ಹೇಳಿದನು. (6:35-37,40)

ಆತನು ಪರಲೋಕದಿಂದ ಇಳಿದುಬಂದ ರೊಟ್ಟಿ ನಾನೇ ಎಂದು ಹೇಳಿದ್ದಕ್ಕೆ ಯೆಹೂದ್ಯರು ಆತನ ವಿಷಯವಾಗಿ ಗುಣಗುಟ್ಟಿ, ಇವನು ಯೋಸೇಫನ ಮಗನಾದ ಯೇಸು ಅಲ್ಲವೇ. ಇವನ ತಂದೆತಾಯಿಗಳನ್ನು ನಾವು ಬಲ್ಲೆವಲ್ಲವೇ. ಈಗ ಇವನು ಪರಲೋಕದಿಂದ ಇಳಿದು ಬಂದಿದ್ದೇನೆಂದು ಹೇಳುವದು ಹೇಗೆ? (6:41,42) ಅಂದರು.

ಅದಕ್ಕೆ ಯೇಸು ಅವರಿಗೆ, ನಿಮ್ಮ ನಿಮ್ಮೊಳಗೆ ಗುಣಗುಟ್ಟಬೇಡಿರಿ.. . . ಅವರೆಲ್ಲರು ದೇವರಿಂದ ಶಿಕ್ಷಿತರಾಗಿರುವರು ಎಂದು ಪ್ರವಾದಿಗಳ ಗ್ರಂಥದಲ್ಲಿ ಬರೆದದೆ. ತಂದೆಯಿಂದ ಕೇಳಿ ಕಲಿತವರೆಲ್ಲರು ನನ್ನ ಬಳಿಗೆ ಬರುತ್ತಾರೆ. ಯಾವನಾದರೂ ತಂದೆಯನ್ನು ನೋಡಿದ್ದಾನೆಂದು ತಿಳಿಯಬೇಡಿರಿ; ದೇವರ ಬಳಿಯಿಂದ ಬಂದವನೊಬ್ಬನೇ ತಂದೆಯನ್ನು ನೋಡಿದ್ದಾನೆ. ನಂಬಿರುವವನು ನಿತ್ಯಜೀವವನ್ನು ಹೊಂದಿದ್ದಾ–ನೆಂದು ನಿಮಗೆ ನಿಜನಿಜವಾಗಿ ಹೇಳುತ್ತೇನೆ. ಜೀವ ಕೊಡುವ ರೊಟ್ಟಿ ನಾನೇ. ನಿಮ್ಮ ಹಿರಿಯರು ಅಡವಿಯಲ್ಲಿ ಮನ್ನಾ ತಿಂದರೂ ಸತ್ತುಹೋದರು; ಪರಲೋಕದಿಂದ ಇಳಿದುಬರುವ ರೊಟ್ಟಿ ಎಂಥದೆಂದರೆ ಅದನ್ನು ತಿಂದವನು ಸಾಯುವದಿಲ್ಲ. **ಪರಲೋಕದಿಂದ ಇಳಿದುಬರುವ ಜೀವವುಳ್ಳ ರೊಟ್ಟಿಯು ನಾನೇ;** ಈ ರೊಟ್ಟಿಯನ್ನು ಯಾವನಾದರೂ ತಿಂದರೆ ಅವನು ಸದಾಕಾಲ ಬದುಕುವನು. ಮತ್ತು ನಾನು ಕೊಡುವ ರೊಟ್ಟಿ ನನ್ನ ಮಾಂಸವೇ; ಅದನ್ನು ಲೋಕದ ಜೀವಕ್ಕೋಸ್ಕರ ಕೊಡುವೆನು ಎಂದು ಹೇಳಿದನು. (6:43, 45-51)

ಆತನ ಶಿಷ್ಯರಲ್ಲಿ ಅನೇಕರು ಇದನ್ನು ಕೇಳಿ, ಇದು ಕಠಿನವಾದ ಮಾತು, ಇದನ್ನು ಯಾರು ಕೇಳಾರು? ಅಂದುಕೊಂಡರು. ಯೇಸು ತನ್ನ ಶಿಷ್ಯರು ಇದಕ್ಕೆ ಗುಣುಗುಟ್ಟುತ್ತಾರೆ ಎಂದು ತನ್ನಲ್ಲಿ ತಿಳುಕೊಂಡು ಅವರಿಗೆ, **"ಈ ಮಾತಿನಿಂದ ನಿಮಗೆ ಬೇಸರವಾಯಿತೋ?** ಹಾಗಾ–ದರೆ ಮನುಷ್ಯಕುಮಾರನು ತಾನು ಮೊದಲು ಇದ್ದಲ್ಲಿಗೆ ಏರಿಹೋಗುವದನ್ನು ನೀವು ನೋಡಿದರೆ ಏನನ್ನುವಿರಿ? ಬದುಕಿಸುವಂಥದ್ದು ಆತ್ಮವೇ; ಮಾಂಸವು ಯಾವದಕ್ಕೂ ಬರುವದಿಲ್ಲ. ನಾನು ನಿಮಗೆ ಹೇಳಿರುವ ಮಾತುಗಳೇ ಆತ್ಮವಾಗಿಯೂ ಜೀವವಾಗಿಯೂ ಅವೆ, ಆದರೆ ನಿಮ್ಮಲ್ಲಿ ಕೆಲವರು ನಂಬದವರಾಗಿದ್ದಾರೆ**"** ಅಂದನು. ನಂಬದವರು ಇಂಥವರು, ತನ್ನನ್ನು ಹಿಡುಕೊಡುವವನು ಇಂಥವನು ಎಂಬದು ಯೇಸುವಿಗೆ ಮೊದಲಿನಿಂದ ತಿಳಿದಿತ್ತು. (6:60-64)

ಅಂದಿನಿಂದ ಆತನ ಶಿಷ್ಯರಲ್ಲಿ ಅನೇಕರು ಹಿಂಜರಿದು ಆತನ ಕೂಡ ಸಂಚಾರ ಮಾಡುವದನ್ನು ಬಿಟ್ಟರು. ಯೇಸು ಇದನ್ನು ನೋಡಿ ತನ್ನ ಹನ್ನೆರಡು ಮಂದಿಯನ್ನು, **"**ನೀವು ಸಹ ಹೋಗಬೇಕೆಂದಿದ್ದೀರಾ?**"** ಎಂದು ಕೇಳಿದ್ದಕ್ಕೆ ಸೀಮೋನ್ ಪೇತ್ರನು, **"ಸ್ವಾಮೀ ನಿನ್ನನ್ನು ಬಿಟ್ಟು ನಾವು ಇನ್ನಾರ ಬಳಿಗೆ ಹೋಗೋಣ? ನಿನ್ನಲ್ಲಿ ನಿತ್ಯಜೀವವನ್ನುಂಟುಮಾಡುವ ವಾಕ್ಯಗಳುಂಟು; ನೀನು ದೇವರು ಪ್ರತಿಷ್ಠಿಸಿದವನೇ ಎಂದು ನಾವು ನಂಬಿದ್ದೇವೆ ಮತ್ತು ತಿಳಿದಿದ್ದೇವೆ"** ಅಂದನು. (6:66-69)

ಹೀಗೆ, ಅನೇಕ ಶಿಷ್ಯರು ಯೇಸುವಿನ ಕಷ್ಟಕರವಾದ ಬೋಧನೆಗಳ ನಿಮಿತ್ತವಾಗಿ ಆತನೊಂದಿಗೆ ಹೆಚ್ಚು ಸಮಯ ಜೊತೆಯಾಗಿರದೆ ಆತನನ್ನು ಬಿಟ್ಟು ಹೋದರು. ಆದಾಗ್ಯೂ, ಯೇಸುವನ್ನು ಹಿಂಬಾಲಿಸಿದವರಲ್ಲಿ ಕೆಲವರು ಆತನನ್ನು ಬಿಟ್ಟು ಹೋಗಲಿಲ್ಲ, ಯಾಕಂದರೆ ಅವರು ಯೇಸುವೆ ಮೆಸ್ಸೀಯನು, ದೇವರಿಂದ ಕಳಿಸಲ್ಪಟ್ಟ ಪರಿಶುದ್ದನು, **ಜೀವದ ರೊಟ್ಟಿ, ನಿತ್ಯಜೀವವನ್ನು ಕೊಡುವಂತಹ "ನಿಜವಾದ ಆಹಾರ"** ಎಂಬುದನ್ನು ಮನದಟ್ಟು ಮಾಡಿಕೊಂಡಿದ್ದರು!

ಹೌದು, ಇದು ಆ ರೀತಿಯಾಗಿರುವಂತದ್ದೇ. ನಿಜವಾಗಿಯೂ ಯೇಸು ಯಾರು ಮತ್ತು ಆತನು ಯಾವ ರೀತಿ ಇದ್ದಾನೆ ಹಾಗೂ ಆತನು ನಿಮಗಾಗಿ ಏನು ಮಾಡಿದ್ದಾನೆ ಎನ್ನುವದನ್ನು ಒಂದು ಸಲ ನೀವು ತಿಳಿದುಕೊಂಡರೆ ನೀವು ಬೇರೊಬ್ಬ ಯಜಮಾನನೊಂದಿಗೆ ಎಂದಿಗೂ ತೃಪ್ತಿಗೊಳ್ಳುವದಿಲ್ಲ! ಯೇಸು ಮಾತ್ರವೆ ನಿತ್ಯಜೀವದ ಮೂಲವಾಗಿದ್ದಾನೆ. ರಕ್ಷಣೆಯ ಭರವಸೆಗಾಗಿ ಮತ್ತು ದೇವರೊಂದಿಗೆ ಒಂದು ಆಪ್ತ ಸಂಬಂಧಕ್ಕಾಗಿ ಹಸಿವೆಗೊಳ್ಳುವ ಹೃದಯವನ್ನು ಆತನೊಬ್ಬನೇ ತೃಪ್ತಿಗೊಳಿಸುವದಕ್ಕೆ ಸಾಧ್ಯ.

ನಿಮ್ಮ ವಿಷಯವೇನು? ನೀವು ನಿತ್ಯಜೀವಕ್ಕಾಗಿ ಹಸಿವೆಯುಳ್ಳವರೂ ಮತ್ತು ದಾಹವುಳ್ಳವರೂ ಆಗಿದ್ದೀರೋ? ಭೂಮಿಯ ಮೇಲೆ ಮತ್ತು ಬರಲಿರುವ ಜೀವಿತದಲ್ಲಿ ದೇವರ ಮುಂದೆ ಭರವಸೆಯುಳ್ಳವರಾಗಿರುವದಕ್ಕೆ ಹಂಬಲವುಳ್ಳವರಾಗಿದ್ದೀರೋ? ಹಾಗಾದರೆ ಕರ್ತ––ನಾದ ಯೇಸು ಕ್ರಿಸ್ತನು ಹೇಳಿರುವ ಈ ಮಹತ್ವದ ಆಹ್ವಾನವನ್ನು ಆಲೋಚಿಸಿರಿ, **"ಎಲೈ, ಕಷ್ಟಪಡುವವರೇ, ಹೊರೆ ಹೊತ್ತವರೇ ನೀವೆ–ಲ್ಲರೂ ನನ್ನ ಬಳಿಗೆ ಬನ್ನಿರಿ, ನಾನು ನಿಮಗೆ ವಿಶ್ರಾಂತಿ ಕೊಡುವೆನು. . . . "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ!"** (ಮತ್ತಾಯ–11:28; ಯೋಹಾನ–6:35) ಆಮೆನ್.

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮುಂದಿನ ಸಲ, ದೇವರ ಚಿತ್ತದಂತೆ, ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ ಯೇಸುವಿನ ನಿಮಿತ್ತವಾಗಿ ಜನರ ಗುಂಪು ಹೇಗೆ ವಿಭಾಗವಾಯಿತೆಂಬುದನ್ನು ಕೇಳಿಸಿಕೊಳ್ಳೋಣ. . . .

ಕರ್ತನಾದ ಯೇಸುವಿನ ಈ ಮಾತುಗಳನ್ನು ನೀವು ಜ್ಞಾಪಿಸಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ!"** (ಯೋಹಾನ–6:35)

ಪಾಠ 73

# ವಿಭಜನೆಗೆ ಯೇಸು ಕಾರಣ

ಮತ್ತಾಯ 15, 16; ಯೋಹಾನ 7

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಕರ್ತನಾದ ಯೇಸು ಐದು ರೊಟ್ಟಿ ಎರಡು ಮೀನನ್ನು ಗಂಡಸರೇ ಐದು ಸಾವಿರಕ್ಕಿಂತ ಹೆಚ್ಚಾಗಿದ್ದ ಜನರ ಗುಂಪಿಗೆ ಹೇಗೆ ಊಟ ಕೊಟ್ಟನೆಂಬುದನ್ನು ನಾವು ನೋಡಿಕೊಂಡೆವು. ಮರುದಿವಸ, ಜನರ ಒಂದು ದೊಡ್ಡ ಗುಂಪು ಯೇಸು –ವನ್ನು ಸುತ್ತುವರಿದುಕೊಂಡಿತ್ತು, ಆದರೆ ಅವರ ಹೃದಯಗಳನ್ನು ತಿಳಿದಿದ್ದ ಯೇಸು ಅವರಿಗೆ, **"ನೀವು ನನ್ನನ್ನು ಹುಡುಕುವದು ಸೂಚಕ ಕಾರ್ಯವನ್ನು ನೋಡಿದ್ದರಿಂದಲ್ಲ, ಆ ರೊಟ್ಟಿ ತಿಂದು ಹೊಟ್ಟೆ ತುಂಬಿಸಿಕೊಂಡಿದ್ದರಿಂದಲೇ. ದುಡಿಯಿರಿ; ಕೆಟ್ಟುಹೋಗುವ ಆಹಾರಕ್ಕಾಗಿ ದುಡಿಯಬೇಡಿರಿ, ನಿತ್ಯಜೀವಕ್ಕೆ ಉಳಿಯುವ ಆಹಾರಕ್ಕಾಗಿ ದುಡಿಯಿರಿ! ಜೀವಕೊಡುವ ರೊಟ್ಟಿ ನಾನೇ;** ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ!" (ಯೋಹಾನ–6:26,27,35)

ವಿಷಾದವೇನೆಂದರೆ, ಅನೇಕ ಜನರು ಯೇಸುವನ್ನು ತಿರಸ್ಕರಿಸಿ ಆತನನ್ನು ಹಿಂಬಾಲಿಸುವದಕ್ಕೆ ಅಪೇಕ್ಷೆಪಡಲಿಲ್ಲ ಯಾಕಂದರೆ ತಮ್ಮ ಆತ್ಮಗಳನ್ನು ಪೋಷಿಸುವಂತ ಆಹಾರಕ್ಕಿಂತಲೂ ತಮ್ಮ ಶರೀರವನ್ನು ಪೋಷಿಸುವ ಆಹಾರಕ್ಕೆ ಅವರು ಬೆಲೆಕೊಟ್ಟರು. ಆದರೆ ಕೆಲವರು ಯೇಸುವನ್ನು ಹಿಂಬಾಲಿಸುವದನ್ನು ಮುಂದುವರಿಸಿದರು ಯಾಕಂದರೆ ಯೇಸು ದೇವರು ಕಳಿಸಿದ ಒಬ್ಬ ಪರಿಶುದ್ಧನೂ ಮತ್ತು ನಿತ್ಯಜೀವದ ಮೂಲವು ಆಗಿದ್ದಾನೆ ಎಂಬುದನ್ನು ಅವರು ತಮ್ಮ ಹೃದಯಗಳಲ್ಲಿ ನಂಬಿದ್ದರು.

ಈದಿನ ಪರಿಶುದ್ಧ ಸುವಾರ್ತೆಯಲ್ಲಿರುವದನ್ನು ಮುಂದುವರಿಸುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ ಮತ್ತು ಯೇಸು ಹೇಗೆ **ಯೆಹೂದ್ಯ ಧಾರ್ಮಿಕ ನಾಯಕರುಗಳಿಂದ ಎದುರಿಸಲ್ಪಟ್ಟನು** ಹಾಗೂ **ಯೇಸುವಿನ ನಿಮಿತ್ತವಾಗಿ ಯೆಹೂದ್ಯರು ಹೇಗೆ ವಿಭಜನೆಗೊಂಡರು** ಎನ್ನುವದನ್ನು ನಾವು ನೋಡಲಿದ್ದೇವೆ. ನಾವು ಪ್ರಾರಂಭಿಸುವದಕ್ಕಿಂತ ಮುಂಚೆ, ಫರಿಸಾಯರೆಂದು ಕರೆಯಲ್ಪಟ್ಟ ಧಾರ್ಮಿಕ ನಿಪುಣರು ಮತ್ತು ಯೆಹೂದ್ಯರಲ್ಲಿ ಹೆಚ್ಚಿನವರು, ತಾವು ಮತ್ತು ತಮ್ಮ ಪೂರ್ವಿಕರು ಸ್ಥಾಪಿಸಿದ್ದ ಸಂಪ್ರದಾಯಗಳನ್ನು ಅನುಸರಿಸುತ್ತಿದ್ದರು ಎನ್ನುವ –ದನ್ನು ತಿಳಿದುಕೊಳ್ಳುವದು ಸಹಾಯಕವಾಗುತ್ತದೆ. ಉದಾಹರಣೆಗಾಗಿ, ಅವರು ಒಂದು ಸಾರ್ವಜನಿಕ ಸ್ಥಳದಿಂದ ಹಿಂದಿರುಗಿದಾಗ, ಒಂದು ನಿರ್ಧಿಷ್ಟವಾದ ರೀತಿಯಲ್ಲಿ ತಮ್ಮನ್ನು ಶುಚಿಗೊಳಿಸಿಕೊಳ್ಳುವವರೆಗೆ ಅವರು ಊಟಮಾಡುತ್ತಿರಲಿಲ್ಲ. ಇನ್ನೂ ಅನೇಕ ಆಚಾರ – –ಗಳನ್ನೂ ಸಹ ಅವರು ಹೊಂದಿದ್ದರು, ಬಟ್ಟಲುಗಳನ್ನು, ನೀರಿನ ಮಡಕೆಗಳನ್ನು, ಮತ್ತು ಕೆಟಲ್‌ಗಳನ್ನು ಹೇಗೆ ತೊಳೆಯಬೇಕು, ಎಂಬಂತ ಆಚಾರಗಳನ್ನು ಹೊಂದಿದ್ದರು ಇದರಿಂದ ಅವರು **"ಶುದ್ಧರು"** ಅನ್ನಿಸಿಕೊಳ್ಳುತ್ತಿದ್ದರು.

ಮತ್ತಾಯನ ಸುವಾರ್ತೆ, ಹದಿನೈದನೆಯ ಅಧ್ಯಾಯದಲ್ಲಿ ಬರೆದಿರುವದನ್ನು ಕೇಳಿಸಿಕೊಳ್ಳೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಆಗ ಯೆರೂಸಲೇಮಿನಿಂದ ಫರಿಸಾಯರೂ ಶಾಸ್ತ್ರಿಗಳೂ ಯೇಸುವಿನ ಬಳಿಗೆ ಬಂದು, **"ನಿನ್ನ** ಶಿಷ್ಯರು ಹಿರಿಯರಿಂದ ಬಂದ ಸಂಪ್ರ – –ದಾಯವನ್ನು ಯಾಕೆ ಮೀರುತ್ತಾರೆ? ಅವರು ಕೈತೊಳಕೊಳ್ಳದೆ ಆಹಾರ ತೆಗೆದುಕೊಳ್ಳುತ್ತಾರಲ್ಲಾ" ಎಂದು ಕೇಳಿದ್ದಕ್ಕೆ ಆತನು ಅವರಿಗೆ ಉತ್ತರ ಕೊಟ್ಟದ್ದೇನೆಂದರೆ, **"ನೀವು ಸಹ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ಆಜ್ಞೆಯನ್ನು ಯಾಕೆ ಮೀರುತ್ತೀರಿ?** ಹೇಗಂದರೆ ತಂದೆ ತಾಯಿಗಳನ್ನು ಸನ್ಮಾನಿಸಬೇಕೆಂತಲೂ ತಂದೆಯನ್ನಾಗಲೀ ತಾಯಿಯನ್ನಾಗಲೀ ದೂಷಿಸುವವನಿಗೆ ಮರಣದಂಡನೆ ಆಗಬೇಕೆಂತಲೂ ದೇವರು ಹೇಳಿದ್ದಾನೆ. ನೀವೋ, ಯಾವನಾದರೂ ತನ್ನ ತಂದೆಯನ್ನಾಗಲೀ ತಾಯಿಯನ್ನಾಗಲೀ ನೋಡಿ, ನಾನು ನಿನ್ನ ಸಂರಕ್ಷಣೆಗಾಗಿ ಕೊಡತಕ್ಕದ್ದನ್ನು ದೇವರಿಗಾಗಿ ಇಟ್ಟಿದ್ದೇನೆ ಎಂದು ಹೇಳುವದಾದರೆ ಅವನಿಗೆ ತನ್ನ ತಂದೆತಾಯಿಗಳನ್ನು ಸನ್ಮಾನಿಸಬೇಕಾದದ್ದಿಲ್ಲ ಅನ್ನು– –ತ್ತೀರಿ. **ಹೀಗೆ ನಿಮ್ಮ ಸಂಪ್ರದಾಯದ ನಿಮಿತ್ತ ದೇವರ ವಾಕ್ಯವನ್ನು ನಿರರ್ಥಕ ಮಾಡಿದ್ದೀರಿ.** ಕಪಟಿಗಳೇ, ನಿಮ್ಮ ವಿಷಯದಲ್ಲಿ ಯೆಶಾ – ಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನೆಂದರೆ, **ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ ಮನಸ್ಸು ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ"** ಎಂಬದೇ. (ಮತ್ತಾಯ–15:1-9)

ಯೇಸು ಶಾಸ್ತ್ರಿಗಳ ಮತ್ತು ಫರಿಸಾಯರ ಕಪಟತನವನ್ನು ಪ್ರತಿಯೊಬ್ಬರ ಮುಂದೆ ಹೇಗೆ ತೋರಿಸಿದನೆಂಬುದನ್ನು ನೀವು ಗಮನಿಸಿದಿರಾ? ಶಾಸ್ತ್ರಗಳು ಮನುಷ್ಯರ ಮುಂದೆ ನೀತಿವಂತರಾಗಿರುವದಕ್ಕೆ ಪ್ರಯತ್ನಿಸುತ್ತಿದ್ದರು, ಆದರೆ ಅವರ ಹೃದಯಗಳಲ್ಲಿ ಏನಿದೆಯೆಂಬುದನ್ನು ಕರ್ತನಾದ ಯೇಸು ತಿಳಿದಿದ್ದನು. ಅವರ **ಕೈ ಕಾಲು ಮುಖಗಳು ಶುದ್ಧವಾಗಿರುತ್ತಿದ್ದವು**, ಆದರೆ ಅವರ **ಹೃದಯಗಳು** ಪಾಪದಿಂದ **ಮಲಿನಗೊಂಡಿದ್ದವು! ಶುದ್ಧವಾದ ಕೈಗಳಿಗಿಂತಲೂ ಒಂದು ಶುದ್ಧವಾದ ಹೃದಯವು ಹೆಚ್ಚು ಪ್ರಾಮುಖ್ಯವಾದುದಾಗಿದೆ**. ಶಿಷ್ಟಾಚಾರದ ತೊಳೆಯುವಿಕೆಗಳು ನಿಮ್ಮ ಹೃದಯವನ್ನು ಶುದ್ಧಗೊಳಿಸುವದಿಲ್ಲ. ಒಳಗೆ ಕೊಳೆಯಾಗಿರುವ ಅಡಿಗೆಯ ಮಡಿಕೆಯನ್ನು ನೀವು ಹೊರಗೆ ಮಾತ್ರ ತೊಳೆದರೆ ಆಗ ಆ ಮಡಿಕೆಯು ಶುದ್ಧವಾಗಿರುತ್ತದೋ? ಇಲ್ಲ, ಅದು ಶುದ್ಧವಾಗಿರುವದಿಲ್ಲ! ಹಾಗೆಯೇ, ಯೆಹೂದ್ಯರು ಅನು –
–ಸರಿಸುತ್ತಿದ್ದ ಧಾರ್ಮಿಕ ಶಿಷ್ಟಾಚಾರಗಳು ಅವರ ಹೃದಯಗಳಲ್ಲಿದ್ದ **ಪಾಪವನ್ನು** ತೆಗೆದುಹಾಕುವದಕ್ಕೆ ಸಾಧ್ಯವಿರಲಿಲ್ಲ. ಅದಕ್ಕಾಗಿಯೇ ಯೇಸು ಅವರಿಗೆ ಹೀಗೆ ಹೇಳಿದನು:

**"ಕಪಟಿಗಳೇ,** ನಿಮ್ಮ ವಿಷಯದಲ್ಲಿ ಯೆಶಾಯನು ವಿಹಿತವಾಗಿ ಪ್ರವಾದಿಸಿದ್ದಾನೆ; ಅವನು ಬರೆದದ್ದೇನೆಂದರೆ, ಈ ಜನರು ಮಾತಿನಿಂದ ನನ್ನನ್ನು ಸನ್ಮಾನಿಸುತ್ತಾರೆ, ಆದರೆ ಅವರ **ಮನಸ್ಸು** ನನಗೆ ದೂರವಾಗಿದೆ. ಮನುಷ್ಯರು ಕಲ್ಪಿಸಿದ ಕಟ್ಟಳೆಗಳನ್ನೇ ಅವರು ಬೋಧಿಸುವದ
–ರಿಂದ ನನಗೆ ಭಕ್ತಿ ತೋರಿಸುವದು ವ್ಯರ್ಥ." (ಮತ್ತಾಯ–15:7-9)

ಆ ಮೇಲೆ ಯೇಸು ಜನರ ಗುಂಪನ್ನು ಹತ್ತರಕ್ಕೆ ಕರೆದು ಅವರಿಗೆ, **"**ಕಿವಿಗೊಟ್ಟು ಕೇಳಿರಿ, ತಿಳುಕೊಳ್ಳಿರಿ. ಬಾಯೊಳಕ್ಕೆ ಹೋಗುವಂಥದ್ದು ಮನುಷ್ಯನನ್ನು ಹೊಲೆಮಾಡುವದಿಲ್ಲ; ಬಾಯೊಳಗಿಂದ ಹೊರಡುವಂಥದೇ ಮನುಷ್ಯನನ್ನು ಹೊಲೆಮಾಡುವದು ಎಂದು ಹೇಳಿದನು. ಆಗ ಶಿಷ್ಯರು ಬಂದು ಆತನನ್ನು, ಫರಿಸಾಯರು ಈ ಮಾತನ್ನು ಕೇಳಿ ಬೇಸರಗೊಂಡರೆಂದು ನಿನಗೆ ಗೊತ್ತಾಯಿತೋ ಎಂದು ಕೇಳಿ –
–ದರು. ಅದಕ್ಕೆ ಆತನು, ಪರಲೋಕದಲ್ಲಿರುವ ನನ್ನ ತಂದೆಯು ನೆಡದೇ ಇರುವ ಗಿಡಗಳೆಲ್ಲಾ ಬೇರಿನೊಂದಿಗೆ ಕಿತ್ತುಹಾಕಲ್ಪಡುವವು. ಅವರ ಮಾತನ್ನು ಬಿಡಿರಿ; ತಾವೇ ಕುರುಡರು, ಮತ್ತೊಬ್ಬರಿಗೆ ದಾರಿ ತೋರಿಸುವದಕ್ಕೆ ಹೋಗುತ್ತಾರೆ; **ಕುರುಡನು ಕುರುಡನಿಗೆ ದಾರಿ ತೋರಿಸಿದರೆ ಅವರಿಬ್ಬರೂ ಕುಣಿಯಲ್ಲಿ ಬೀಳುವರು"** ಅಂದನು. (15:10-14)

ಆಗ ಪೇತ್ರನು ಈ ಸಾಮ್ಯದ ಅರ್ಥವನ್ನು ನಮಗೆ ಹೇಳು ಅನ್ನಲು ಆತನು, "ನಿಮಗೂ ಇನ್ನು ಬುದ್ಧಿ ಇಲ್ಲವೇ? ಬಾಯೊಳಕ್ಕೆ ಹೋಗು
–ವಂಥದು ಹೊಟ್ಟೆಯಲ್ಲಿ ಸೇರಿ ಬಹಿರ್ದೆಶೆಗೆ ಹೋಗುತ್ತದೆಂದು ನಿಮಗೆ ತಿಳಿಯಲಿಲ್ಲವೋ? ಆದರೆ ಬಾಯೊಳಗಿಂದ ಹೊರಡುವಂಥ–
–ವುಗಳು ಮನಸ್ಸಿನೊಳಗಿಂದ ಬರುತ್ತವೆ; ಇವೆ ಮನುಷ್ಯನ್ನು ಹೊಲೆಮಾಡುವವು. ಹೇಗಂದರೆ ಮನಸ್ಸಿನೊಳಗಿಂದ ಕೆಟ್ಟ ಆಲೋಚನೆ ಕೊಲೆ ಹಾದರ ಸೂಳೆಗಾರಿಕೆ ಕಳ್ಳತನ ಸುಳ್ಳುಸಾಕ್ಷಿ ಬೈಗಳು ಹೊರಟು ಬರುತ್ತವೆ. **ಮನುಷ್ಯನನ್ನು ಕೆಡಿಸುವಂಥವುಗಳು ಇವೆ;** ಆದರೆ ಕೈತೊಳಕೊಳ್ಳದೆ ಊಟಮಾಡುವದು ಮನುಷ್ಯನನ್ನು ಕೆಡಿಸುವದಿಲ್ಲ**"** ಅಂದನು. (15:15-20)

ಯೇಸು ಅಲ್ಲಿಂದ ಹೊರಟು ಗಲಿಲಾಯ ಸಮುದ್ರದ ಬಳಿಗೆ ಬಂದು ಬೆಟ್ಟವನ್ನು ಹತ್ತಿ ಅಲ್ಲಿ ಕೂತುಕೊಂಡನು. ಆಗ ಜನರು ಗುಂಪು ಗುಂಪಾಗಿ ಆತನ ಬಳಿಗೆ ಬಂದು ಕುಂಟರು ಕುರುಡರು ಮೂಕರು ಕೈಕಾಲಿಲ್ಲದವರು ಈ ಮುಂತಾದ ಅನೇಕರನ್ನು ಕರತಂದು ಅವ –
–ರನ್ನು ಆತನ ಪಾದಗಳ ಬಳಿಯಲ್ಲಿ ಬಿಟ್ಟರು; ಆತನು ಅವರನ್ನು ವಾಸಿಮಾಡಿದನು. ಮೂಕರಾಗಿದ್ದವರು ಮಾತಾಡಿದ್ದನ್ನೂ ಕೈಕಾಲಿಲ್ಲ
–ದವರು ಸ್ವಸ್ಥವಾದದ್ದನ್ನೂ ಕುಂಟರಿಗೆ ಕಾಲುಬಂದದ್ದನ್ನೂ ಕುರುಡರಿಗೆ ಕಣ್ಣು ಬಂದದ್ದನ್ನೂ ಜನರು ಕಂಡು ಆಶ್ಚರ್ಯಪಟ್ಟು ಇಸ್ರಾ –
–ಯೇಲ್ ಜನರ ದೇವರನ್ನು ಕೊಂಡಾಡಿದರು. (15:29-31)

ತರುವಾಯ ಫರಿಸಾಯರೂ ಸದ್ದುಕಾಯರೂ ಬಂದು ಆತನನ್ನು ಪರೀಕ್ಷಿಸುವದಕ್ಕಾಗಿ, ನೀನು ಆಕಾಶದಲ್ಲಿ ಒಂದು ಸೂಚಕಕಾರ್ಯ –
–ವನ್ನು ತೋರಿಸಿಕೊಡಬೇಕೆಂದು ಕೇಳಿದರು. ಆತನು ಅವರಿಗೆ, **"**ಸಂಜೇ ವೇಳೆಯಲ್ಲಿ ನೀವು ಆಕಾಶವು ಕೆಂಪಾಗಿದೆ, ನಿರ್ಮಲದಿನ ಬರುವದು ಅನ್ನುತ್ತೀರಿ; ಬೆಳಿಗ್ಗೆ ಆಕಾಶವು ಮೋಡಮುಚ್ಚಿಕೊಂಡು ಕೆಂಪಾಗಿದೆ, ಈ ಹೊತ್ತು ಗಾಳಿಮಳೆ ಅನ್ನುತ್ತೀರಿ ಅಲ್ಲವೇ. ಆಕಾಶದ ಸ್ಥಿತಿಯನ್ನು ನೋಡಿ ಇದು ಹೀಗೆ ಅದು ಹಾಗೆ ಅನ್ನುವದಕ್ಕೆ ಬಲ್ಲಿರಿ; ಆದರೆ ಈ ಕಾಲದ ಸೂಚನೆಗಳನ್ನು ತಿಳುಕೊಳ್ಳಲಾರಿರಿ. ವ್ಯಭಿ–
–ಚಾರಿಣಿಯಂತಿರುವ ಈ ಕೆಟ್ಟ ಸಂತತಿಯು ಸೂಚಕಕಾರ್ಯವನ್ನು ನೋಡುವದಕ್ಕೆ ಅಪೇಕ್ಷಿಸುತ್ತದೆ; ಆದರೆ ಯೋನನಲ್ಲಿ ಆದ ಸೂಚಕ ಕಾರ್ಯವೇ ಹೊರತು ಬೇರೆ ಯಾವದೂ ಇದಕ್ಕೆ ಸಿಕ್ಕುವದಿಲ್ಲ**"** ಎಂದು ಉತ್ತರಕೊಟ್ಟು ಅವರನ್ನು ಬಿಟ್ಟುಹೋದನು. (16:1-4)

ಅಂದರೆ ಯೋನನು ಹೇಗೆ ಮೂರು ದಿನ ರಾತ್ರಿ ಹಗಲು ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದನೋ, ಹಾಗೆಯೇ ಮನುಷ್ಯಕುಮಾ –
–ರನು ಮೂರು ದಿನ ರಾತ್ರಿ ಹಗಲು ಭೂಗರ್ಭದೊಳಗೆ ಇರುವನು. ನ್ಯಾಯವಿಚಾರಣೆಯಲ್ಲಿ ನಿನವೆ ಪಟ್ಟಣದವರು ಈ ಸಂತತಿಯವ
–ರೊಂದಿಗೆ ನಿಂತು ಇವರನ್ನು ಅಪರಾಧಿಗಳೆಂದು ಹೇಳುವರು; ಅವರು ಯೋನನು ಸಾರಿದ ವಾಕ್ಯವನ್ನು ಕೇಳಿ ದೇವರಕಡೆ ತಿರುಗಿ ಕೊಂಡರು. ಆದರೆ ಇಲ್ಲಿ **ಯೋನನಿಗಿಂತ ಹೆಚ್ಚಿನವನಿದ್ದಾನೆ.** (ಮತ್ತಾಯ–12:40,41)

ಹೀಗೆ ಪ್ರವಾದಿಯಾದ ಯೋನನು ಮೂರು ದಿವಸ ದೊಡ್ಡ ಮೀನಿನ ಹೊಟ್ಟೆಯೊಳಗೆ ಇದ್ದಂತೆ, ಹಾಗೆಯೇ ಯೇಸು ಮೂರು ದಿವಸ ಸಮಾಧಿಯಲ್ಲಿರುತ್ತಾನೆ. ಮತ್ತು ಯೋನನು ಮೂರನೆಯ ದಿನದಲ್ಲಿ ಮೀನಿನ ಹೊಟ್ಟೆಯೊಳಗಿಂದ ಹೊರಬಂದಂತೆ ಯೇಸುವು ಮೂರ
–ನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬರುತ್ತಾನೆ ಎಂಬುದನ್ನು ಯೇಸು ಮುಂದಾಗಿ ತಿಳಿಸುತ್ತಾ, ಹೀಗೆ ಪಾಪ ಮರಣ ಮತ್ತು ನರಕದ ಬಲದಿಂದ ನಮ್ಮನ್ನು ರಕ್ಷಿಸುವದಕ್ಕೆ ಪರಲೋಕದಿಂದ ಬಂದ ಮೆಸ್ಸೀಯನು ತಾನೇ ಎಂಬುದಕ್ಕೆ ಅಲ್ಲಗಳೆಯಲಾಗದಂಥ ಒಂದು ರುಜುವಾತನ್ನು ಕೊಟ್ಟನು.

ಉಳಿದಿರುವ ಸಮಯದಲ್ಲಿ ಸುವಾರ್ತೆಯಲ್ಲಿರುವನ್ನು ಮುಂದುವರಿಸಿ, ನಿಪುಣರಾದ ಶಾಸ್ತ್ರಿಗಳು ತಮ್ಮ ಅಪನಂಬಿಕೆಯಲ್ಲಿ ಹೇಗೆ ದೃಢವಾಗಿ ನಿಂತಿದ್ದರೆನ್ನುವದನ್ನು ನೋಡೋಣ. ಯೋಹಾನನ ಸುವಾರ್ತೆ, ಏಳನೆಯ ಅಧ್ಯಾಯದಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಈ ಸಂಗತಿಗಳಾದ ಮೇಲೆ ಯೇಸು ಗಲಿಲಾಯದಲ್ಲಿ ಸಂಚಾರಮಾಡುತ್ತಿದ್ದನು; ಯೆಹೂದ್ಯರು ಆತನನ್ನು ಕೊಲ್ಲುವ ಪ್ರಯತ್ನದಲ್ಲಿದ್ದದ –ರಿಂದ ಆತನಿಗೆ ಯೂದಾಯದಲ್ಲಿ ಸಂಚಾಮಾಡುವ ಮನಸ್ಸಿರಲಿಲ್ಲ. ಪರ್ಣಶಾಲೆಗಳ ಹಬ್ಬವೆಂಬ ಯೆಹೂದ್ಯರದೊಂದು ಜಾತ್ರೆಯು ಸಮೀಪವಾದಾಗ ಆತನ ತಮ್ಮಂದಿರು ಆತನಿಗೆ, **"**ನೀನು ಮಾಡುವ ಕಾರ್ಯಗಳನ್ನು ನಿನ್ನ ಶಿಷ್ಯರು ಸಹ ನೋಡುವಂತೆ ಇಲ್ಲಿಂದ ಹೊರಟು ಯೂದಾಯಕ್ಕೆ ಹೋಗು; ಪ್ರಸಿದ್ಧಿಗೆ ಬರಬೇಕೆಂದಿರುವ ಯಾವನಾದರೂ ತಾನು ಮಾಡುವದನ್ನು ಮರೆಯಲ್ಲಿ ಮಾಡುವದಿಲ್ಲ –ವಲ್ಲಾ; ನೀನು ಇಂಥಾ ಕಾರ್ಯಗಳನ್ನು ಮಾಡುವವನಾದ್ದರಿಂದ ಲೋಕಕ್ಕೆ ತಿಳಿಯಪಡಿಸಿಕೋ**"** ಎಂದು ಹೇಳಿದರು. ಯಾಕಂದರೆ **ಆತನ ಸಹೋದದರು ಸಹ ಆತನನ್ನು ನಂಬದೆ ಇದ್ದರು.** (ಯೋಹಾನ–7:1-5)

ಯೇಸು ಅವರಿಗೆ, **"**ನನ್ನ ಸಮಯವು ಇನ್ನೂ ಬಂದಿಲ್ಲ; ನಿಮ್ಮ ಸಮಯವು ಯಾವಾಗಲೂ ಸಿದ್ಧವಾಗಿದೆ. ಲೋಕವು ನಿಮ್ಮನ್ನು ಹಗೆ ಮಾಡಲಾರದು; ಆದರೆ ನಾನು ಅದರ ಕ್ರಿಯೆಗಳು ಕೆಟ್ಟವುಗಳೆಂದು ಸಾಕ್ಷಿ ಹೇಳುವದರಿಂದ ನನ್ನನ್ನು ಹಗೆ ಮಾಡುತ್ತದೆ. ನೀವೇ ಜಾತ್ರೆಗೆ ಹೋಗಿರಿ; ನನ್ನ ಸಮಯವು ಇನ್ನೂ ಒದಗದೆ ಇರುವದರಿಂದ ನಾನು ಜಾತ್ರೆಗೆ ಹೋಗುವದಿಲ್ಲವೆಂದು ಹೇಳಿದನು. ಇದನ್ನು ಹೇಳಿ ಗಲಿಲಾಯದಲ್ಲಿಯೇ ನಿಂತನು. ಆದರೆ ಆತನ ಸಹೋದರರು ಜಾತ್ರೆಗೆ ಹೋದಮೇಲೆ ಆತನು ಸಹ ಹೋದನು; ಜನರಿಗೆ ಕಾಣುವಂತೆ ಹೋಗದೆ ಮರೆಯಾಗಿ ಹೋದನು. ಜಾತ್ರೆಯಲ್ಲಿ ಯೆಹೂದ್ಯರು, ಅವನು ಎಲ್ಲಿದ್ದಾನೆಂದು ಆತನನ್ನು ಹುಡುಕುತ್ತಿದ್ದರು. ಮತ್ತು ಜನರ ಗುಂಪುಗಳಲ್ಲಿ ಆತನ ವಿಷಯವಾಗಿ ಬಹಳ ಗುಜುಗುಜು ಮಾತು ನಡೆಯುತ್ತಿತ್ತು. ಕೆಲವರು, ಆತನು ಒಳ್ಳೆಯವನು ಅಂದರು; ಇನ್ನು ಕೆಲವರು ಅಲ್ಲ, ಜನರನ್ನು ತಪ್ಪಾದ ಮಾರ್ಗಕ್ಕೆ ಎಳೆಯುತ್ತಾನೆ ಅಂದರು. ಆದರೂ ಯೆಹೂದ್ಯರ ಭಯದಿಂದ ಯಾರೂ ಆತನ ವಿಷಯದಲ್ಲಿ ಧಾರಾಳವಾಗಿ ಮಾತಾಡಲಿಲ್ಲ. (7:6-13)

ಜಾತ್ರೆಯ ಮಧ್ಯಕಾಲದಲ್ಲಿ ಯೇಸು ದೇವಾಲಯಕ್ಕೆ ಹೋಗಿ ಬೋಧಿಸುತ್ತಿದ್ದನು. ಯೆಹೂದ್ಯರು ಅದಕ್ಕೆ ಆಶ್ಚರ್ಯಪಟ್ಟು, **"**ವಿದ್ಯಾಭ್ಯಾಸ ಮಾಡದಿರುವ ಈತನಿಗೆ ಶಾಸ್ತ್ರಗಳು ತಿಳಿದಿರುವದು ಹೇಗೆ**"** ಎಂದು ಹೇಳುತ್ತಿದ್ದರು. ಅದಕ್ಕೆ ಯೇಸು, **"**ನಾನು ಹೇಳುವ ಬೋಧನೆಯು ನನ್ನದಲ್ಲ, ನನ್ನನ್ನು ಕಳುಹಿಸಿದಾತನದು. ಆತನ ಚಿತ್ತದಂತೆ ನಡೆಯುವದಕ್ಕೆ ಯಾರಿಗೆ ಮನಸ್ಸದೆಯೋ ಅವರಿಗೆ ಈ ಬೊಧನೆಯು ದೇವರಿಂದ ಬಂದದ್ದೋ ನಾನೇ ಕಲ್ಪಿಸಿ ಹೇಳಿದ್ದೋ ಗೊತ್ತಾಗುವದು. . . . ಮೋಶೆಯು ನಿಮಗೆ ಧರ್ಮಶಾಸ್ತ್ರವನ್ನು ಕೊಟ್ಟಿದ್ದರೂ ನಿಮ್ಮಲ್ಲಿ ಒಬ್ಬನಾದರೂ ಧರ್ಮಶಾಸ್ತ್ರದಂತೆ ನಡೆಯುವದಿಲ್ಲವಲ್ಲಾ; ಯಾಕೆ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ?**"** ಎಂದು ಹೇಳಿದನು. (7:14-17,19)

ಅದಕ್ಕೆ ಆ ಜನರು, **"**ನಿನಗೆ ದೆವ್ವ ಹಿಡಿದದೆ; ಯಾರು ನಿನ್ನನ್ನು ಕೊಲ್ಲುವದಕ್ಕೆ ನೋಡುತ್ತಾರೆ?**"** ಅಂದರು. ಯೇಸು ಅವರಿಗೆ, **"**ಒಂದೇ ಕ್ರಿಯೆಯನ್ನು ಮಾಡಿದೆನು; ಅದಕ್ಕೆ ನೀವೆಲ್ಲರು ಬೆರಗಾಗಿದ್ದೀರಿ. ಮೋಶೆಯು ನಿಮಗೆ ಸುನ್ನತಿಯೆಂಬ ಸಂಸ್ಕಾರವನ್ನು ನೇಮಿಸಿದನು. ಅದು ಮೋಶೆಯಿಂದ ಬಂದದ್ದೆಂದು ನಾನು ಹೇಳುವದಿಲ್ಲ, ಮೂಲಪುರುಷರ ಕಾಲದಿಂದ ಬಂದದ್ದು. ಮತ್ತು ಆ ಸುನ್ನತಿಯನ್ನು ಸಬ್ಬತ್ ದಿನದಲ್ಲಿಯೂ ಮಾಡುತ್ತೀರಿ. ಮೋಶೆಯ ನೇಮವನ್ನು ಮೀರಬಾರದೆಂದು ಒಬ್ಬನು ಸಬ್ಬತ್ ದಿನದಲ್ಲಿ ಸುನ್ನತಿ ಮಾಡಿಸಿ – –ಕೊಳ್ಳುವದಾದರೆ ನಾನು ಸಬ್ಬತ್ ದಿನದಲ್ಲಿ ಒಬ್ಬ ಮನುಷ್ಯನನ್ನು ಸಂಪೂರ್ಣವಾಗಿ ಸ್ವಸ್ಥಮಾಡಿದ್ದಕ್ಕೆ ನನ್ನ ಮೇಲೆ ಕೋಪಗೊಳ್ಳು– –ತ್ತೀರೋ? **ಕಣ್ಣಿಗೆ ತೋರಿದ್ದರ ಮೇಲೆ ತೀರ್ಪು ಮಾಡಬೇಡಿರಿ; ನ್ಯಾಯವಾದ ತೀರ್ಪು ಮಾಡಿರಿ"** ಎಂದು ಹೇಳಿದನು. ಇದಕ್ಕಾಗಿ ಆತನನ್ನು ಹಿಡಿಯುವದಕ್ಕೆ ನೋಡುತ್ತಿದ್ದರು; ಆದರೆ ಆತನ ಕಾಲ ಇನ್ನೂ ಬಾರದೆ ಇದ್ದ ಕಾರಣ ಯಾರೂ ಆತನ ಮೇಲೆ ಕೈಹಾಕಲಿಲ್ಲ. **ಜನರಲ್ಲಿ ಅನೇಕರು ಆತನನ್ನು ನಂಬಿ, "ಕ್ರಿಸ್ತನು ಬಂದಾಗ ಈತನು ಮಾಡಿದ್ದಕ್ಕಿಂತ ಹೆಚ್ಚು ಸೂಚಕ ಕಾರ್ಯಗಳನ್ನು ಮಾಡಾನೋ"** ಎಂದು ಹೇಳಿದರು. ಜನರು ಆತನ ವಿಷಯವಾಗಿ ಗುಜುಗುಜು ಆಡಿದ ಈ ಮತುಗಳನ್ನು ಫರಿಸಾಯರು ಕೇಳಲು ಮಹಾಯಾಜಕರೂ ಫರಿಸಾಯರೂ ಆತನನ್ನು ಹಿಡಿಯುವದಕ್ಕೆ ಓಲೇಕಾರರನ್ನು ಕಳುಹಿಸಿದರು. (7:20-24, 30-32)

ಆ ಜಾತ್ರೆಯ ಮಹಾದಿವಸದ ಕಡೇ ದಿನದಲ್ಲಿ ಯೇಸು ನಿಂತುಕೊಂಡು, **"ಯಾವನಿಗಾದರೂ ನೀರಡಿಕೆಯಾಗಿದ್ದರೆ ಅವನು ನನ್ನ ಬಳಿಗೆ ಬಂದು ಕುಡಿಯಲಿ. ನನ್ನನ್ನು ನಂಬಿದವನ ಹೊಟ್ಟೆಯೊಳಗಿಂದ ಶಾಸ್ತ್ರದಲ್ಲಿ ಹೇಳಿರುವ ಪ್ರಕಾರ ಜೀವಕರವಾದ ನೀರಿನ ಹೊಳೆಗಳು ಹರಿಯುವವು"** ಎಂದು ಕೂಗಿ ಹೇಳಿದನು. ಜನರಲ್ಲಿ ಕೆಲವರು ಆ ಮಾತುಗಳನ್ನು ಕೇಳಿ, **"**ನಿಜವಾಗಿ ಈತನು ಬರಬೇಕಾದ ಪ್ರವಾದಿ**"** ಅಂದರು; ಮತ್ತು ಕೆಲವರು, **"**ಈತನು ಬರಬೇಕಾದ ಕ್ರಿಸ್ತನು**"** ಅಂದರು. ಇನ್ನೂ ಕೆಲವರು, **"**ಕ್ರಿಸ್ತನು ಗಲಿಲಾಯದಿಂದ ಬರುವದು ಹೇಗೆ? ದಾವೀದನ ಸಂತಾನದಿಂದಲೂ ದಾವೀದನು ಇದ್ದ ಬೇತ್ಲೆಹೇಮೆಂಬ ಗ್ರಾಮದಿಂದಲೂ ಕ್ರಿಸ್ತನು ಬರುವನು ಎಂಬದಾಗಿ ಶಾಸ್ತ್ರ –ದಲ್ಲಿ ಉಂಟಲ್ಲವೇ**"** ಎಂದು ಹೇಳಿದರು. ಹೀಗೆ ಜನರಲ್ಲಿ ಆತನನ್ನು ಕುರಿತು ಭೇದ ಉಂಟಾಯಿತು. ಅವರಲ್ಲಿ ಕೆಲವರು ಆತನನ್ನು ಹಿಡಿಯಬೇಕೆಂದಿದ್ದರೂ ಒಬ್ಬರೂ ಆತನ ಮೇಲೆ ಕೈ ಹಾಕಲಿಲ್ಲ. (7:37,38,40-44)

ಬಳಿಕ ಓಲೇಕಾರರು ಮಹಾಯಾಜಕರ ಮತ್ತು ಫರಿಸಾಯರ ಬಳಿಗೆ ಬಂದಾಗ ಇವರು, **"**ನೀವು ಯಾಕೆ ಅವನನ್ನು ಹಿಡತರಲಿಲ್ಲ?**"** ಎಂದು ಅವರನ್ನು ಕೇಳಿದ್ದಕ್ಕೆ ಆ ಓಲೇಕಾರರು, **"ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ"'** ಎಂದು ಉತ್ತರ ಕೊಟ್ಟರು. ಅದಕ್ಕೆ ಫರಿಸಾಯರು, **"**ನೀವೂ ಮರುಳಾದಿರಾ? ಹಿರೀಸಭೆಯವರಲ್ಲಿಯಾಗಲೀ ಫರಿಸಾಯರಲ್ಲಿಯಾಗಲೀ ಯಾರಾ –ದರೂ ಅವನನ್ನು ನಂಬಿದ್ದಾರೋ? ಧರ್ಮಶಾಸ್ತ್ರವನ್ನರಿಯದಂಥ ಈ ಹಿಂಡು ಶಾಪಗ್ರಸ್ತವಾದದ್ದೇ**"** ಅಂದರು. ಮುಂಚೆ ಯೇಸುವಿನ ಬಳಿಗೆ ಬಂದಿದ್ದ **ನಿಕೊದೇಮನು** ಅವರಲ್ಲಿ ಒಬ್ಬನಾಗಿದ್ದನು; ಅವನು ಅವರಿಗೆ, **"**ನಮ್ಮ ಧರ್ಮಶಾಸ್ತ್ರವು ಮೊದಲು ಒಬ್ಬನನ್ನು ವಿಚಾರಿಸಿ

ಅವನು ಮಾಡುವದೇನೆಂದು ತಿಳುಕೊಳ್ಳದೆ ಅವನ ವಿಷಯವಾಗಿ ತೀರ್ಪುಮಾಡುವದುಂಟೇ?" ಎಂದು ಹೇಳಿದ್ದಕ್ಕೆ ಅವರು, "ನೀನೂ ಗಲಿಲಾಯದವನೋ? ಗಲಿಲಾಯದಲ್ಲಿ ಪ್ರವಾದಿ ಹುಟ್ಟುವದೇ ಇಲ್ಲ, ವಿಚಾರಿಸಿ ನೋಡು" ಅಂದರು. ಎಲ್ಲರು ತಮ್ಮ ತಮ್ಮ ಮನೆಗೆ ಹೋದರು. (7:45-53)

ಈದಿನ ನಾವು ಇಲ್ಲಿಗೆ ಮುಗಿಸುತ್ತೇವೆ. ಮಹಾಯಾಜಕರೂ ಶಾಸ್ತ್ರಿಗಳೂ ಮತ್ತು ಫರಿಸಾಯರು ಯೇಸುವಿಗೆ ಹೇಗೆ ತೊಂದರೆ ಕೊಟ್ಟರು ಎನ್ನುವದನ್ನು ನಾವು ನೋಡಿದೆವು. ಅವರು ಆತನನ್ನು ಹಿಡಿದು ಸಾಯಿಸಬೇಕೆಂದಿದ್ದರು, ಆದರೆ ಆತನಿಗೆ ಏನೂ ಮಾಡುವದಕ್ಕೆ ಅವ –ರಿಂದಾಗಲಿಲ್ಲ, ಯಾಕಂದರೆ ಪಾಪಕ್ಕಾಗಿ ಒಂದು ಯಜ್ಞದಂತೆ ಯೇಸು ಸಾಯುವದಕ್ಕಾಗಿ ದೇವರು ನೇಮಿಸಿದ ಕಾಲವು ಇನ್ನೂ ಬಂದಿರಲಿಲ್ಲ.

ವಿಷಾದವೇನೆಂದರೆ, ಯೆಹೂದ್ಯ ಶಾಸ್ತ್ರಿಗಳಲ್ಲಿ ಹೆಚ್ಚಿನವರು **ಕಠಿಣ ಹೃದಯವುಳ್ಳವರಾಗಿದ್ದರು**. ಅವರು ಯೇಸುವನ್ನು ಕಡೆಗಣಿಸಿದರು ಮತ್ತು ಯಾವನಾದರೂ ಯೇಸುವನ್ನು ಮೆಸ್ಸೀಯನೆಂಬುದಾಗಿ ಒಪ್ಪಿಕೊಂಡರೆ ಅವನನ್ನು ಸಭಾಮಂದಿರದಿಂದ ಹೊರಹಾಕುತ್ತೇವೆಂದು ಹೆದರಿಸುತ್ತಿದ್ದರು. ಹೀಗೆ ಜನರ ಗುಂಪಿನಲ್ಲಿ ಯೇಸುವಿನ ನಿಮಿತ್ತವಾಗಿ **ಒಂದು ವಿಭಜನೆ** ಉಂಟಾಯಿತು. ಯೇಸುವಿನ ಕುರಿತಾಗಿ ಯಾರೊಬ್ಬರೂ ಮುಕ್ತವಾಗಿ ಏನೊಂದನ್ನೂ ಹೇಳುತ್ತಿರಲಿಲ್ಲ ಯಾಕಂದರೆ ಅವರಿಗೆ ಶಾಸ್ತ್ರಿಗಳ ಮತ್ತು ಮಹಾಯಾಜಕರುಗಳ ಭಯ – –ವಿತ್ತು. ರಹಸ್ಯವಾಗಿ, ಅವರೊಳಗೆ ಕೆಲವರು, "ಈತನು ಒಳ್ಳೆಯವನು" ಎಂದು ಪಿಸುಗುಟ್ಟಿದರು. ಇತರರು, "ಇಲ್ಲ, ಈತನು ಜನ – –ರನ್ನು ಮೋಸಗೊಳಿಸುತ್ತಾನೆ" ಎಂದರು. ಉಳಿದವರು ಆಶ್ಚರ್ಯಗೊಂಡು, "ಮೆಸ್ಸೀಯನು ಬಂದಾಗ ಇವನಿಗಿಂತಲೂ ಹೆಚ್ಚು ಅದ್ಭುತವಾದ ಸೂಚಕಕಾರ್ಯಗಳನ್ನು ಮಾಡುತ್ತಾನಲ್ಲವೇ?" ಎಂದು ಹೇಳುತ್ತಿದ್ದರು.

ಸ್ನೇಹಿತರೇ, ಯೇಸುವಿನ ಕುರಿತು **ನೀವು** ಏನು ಹೇಳುತ್ತೀರಿ? ಆತನ ಕುರಿತಾಗಿ **ನಿಮ್ಮ** ಆಲೋಚನೆ ಏನು? ಪ್ರವಾದಿಗಳೆಲ್ಲರೂ ಬರೆ –ದಿರುವಂತೆ ಯೇಸುವೆ ಮೆಸ್ಸೀಯನೆಂಬುದನ್ನು ನೀವು ನಂಬುತ್ತೀರೋ? ಅಥವಾ ಯೇಸು ಕೇವಲ ಪ್ರವಾದಿಗಳಲ್ಲಿ ಒಬ್ಬನು ಎನ್ನು – –ತ್ತೀರೋ? ಈ ವಿಷಯದಲ್ಲಿ ಯಾರೊಬ್ಬರೂ ನಿಮ್ಮನ್ನು ಮೋಸಗೊಳಿಸುವದಕ್ಕೆ ಬಿಡಬೇಡಿರಿ. ಇಲ್ಲಿಂದ ಮುಂದೆ ನಿಮ್ಮ ಗುರಿಯು **ಯೇಸು ನಿಜವಾಗಿಯೂ ಯಾರು ಎನ್ನುವದು ನಿಮಗೆ ಗೊತ್ತಾ**? ಎಂಬ ಈ ಪ್ರಶ್ನೆಯ ಮೇಲೆ ಅವಲಂಬಿತವಾಗಿರಬೇಕು! ಆತನು ಲೋಕಕ್ಕೆ ಯಾಕೆ ಬಂದನೆಂಬುದು ನಿಮಗೆ ತಿಳಿದಿದೆಯಾ? ಯೇಸು ತನ್ನ ಕುರಿತಾಗಿ ಹೇಳಿರುವದನ್ನು ಕೇಳಿಸಿಕೊಳ್ಳಿರಿ:

"ನಾನೇ ಮಾರ್ಗವೂ ಸತ್ಯವೂ ಜೀವವೂ **ಆಗಿದ್ದೇನೆ;** ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ. ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು, ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ. **ಸತ್ಯಪರರೆಲ್ಲರು ನನ್ನ ಮಾತಿಗೆ ಕಿವಿಕೊಡುತ್ತಾರೆ."** (ಯೋಹಾನ–14:6; 18:37)

ಪ್ರಿಯ ಸ್ನೇಹಿತರೇ, ನೀವು ಯಾರ ಕಡೆ ಇದ್ದೀರಿ? ನಿಮ್ಮ ಸ್ವಂತ ಕುಟುಂಬದವರು ನಿಮ್ಮನ್ನು ತಿರಸ್ಕರಿಸಿದರೂ ಸಹ ನೀವು ಸತ್ಯದ ಕಡೆಗೆ ಇರುವದಕ್ಕೆ ಇಷ್ಟವುಳ್ಳವರಾಗಿರುತ್ತೀರೋ? ಉಲೂಫ್ ಜ್ಞಾನೋಕ್ತಿಯು ಹೀಗೆ ಹೇಳುತ್ತದೆ, "ಜೇನುತುಪ್ಪವನ್ನು ಇಷ್ಟಪಡುವವರು ಜೇನುಹುಳುವಿನ ಧೈರ್ಯವುಳ್ಳವರಾಗಿರಬೇಕು." ಕರ್ತನಾದ ಯೇಸು ಹೇಳಿರುವದೇನೆಂದರೆ,

"ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವದಕ್ಕೆ ಬಂದೆನೆಂದು ನೆನಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವದಕ್ಕೆ ಬಂದೆನು. ಹೇಗಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ, ಭೇದ ಹುಟ್ಟಿ –ಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನೆಯವರೇ ವೈರಿಗಳಾಗುವರು. **ತಂದೆಯ ಮೇಲಾಗಲಿ ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ!"** (ಮತ್ತಾಯ–10:34-37)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಯೇಸು ಹುಟ್ಟು ಕುರುಡನನ್ನು ಹೇಗೆ ಗುಣಪಡಿಸಿದನೆಂಬುದನ್ನು ನೋಡುವದಕ್ಕೆ ಮುಂದಿನ ಸಲ ನಾವು ದೇವರ ಚಿತ್ತದಂತೆ ಸುವಾರ್ತೆಯಲ್ಲಿರುವದನ್ನು ಮುಂದುವರಿಸುವಾಗ ನೀವೂ ನಮ್ಮ ಜೊತೆಯಲ್ಲಿ ಸೇರಿಕೊಳ್ಳಿರಿ. . . .

ಮೆಸ್ಸೀಯನಾದ ಯೇಸುವಿನ ಈ ಮಾತುಗಳನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಸತ್ಯಪರರೆಲ್ಲರು ನನ್ನ ಮಾತಿಗೆ ಕಿವಿಕೊಡುತ್ತಾರೆ!"** (ಯೋಹಾನ–18:37)

ಪಾಠ 74

# ಲೋಕದ ಬೆಳಕು

ಯೋಹಾನ 8, 9

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಕಾರ್ಯಕ್ರಮದಲ್ಲಿ, ಮಹಾಯಾಜಕರುಗಳು, ಶಾಸ್ತ್ರಿಗಳು ಮತ್ತು ಫರಿಸಾಯರು ಹೇಗೆ **ಯೇಸುವಿಗೆ ತೊಂದರೆಕೊಟ್ಟು** ಆತನನ್ನು ಸಾಯಿಸಬೇಕೆಂಬ ಉದ್ದೇಶದಿಂದ ಆತನನ್ನು ಸೆರೆಹಿಡಿಯುವದಕ್ಕೆ ಪ್ರಯತ್ನಿಸಿದ್ದನ್ನು ನಾವು ನೋಡಿದೆವು. ಆದಾಗ್ಯೂ, ಯಾರೊಬ್ಬರೂ ಯೇಸುವನ್ನು ಹಿಡಿಯುವದಕ್ಕೆ ಸಾಧ್ಯವಾಗಲಿಲ್ಲ, ಯಾಕಂದರೆ ಪಾಪಕ್ಕಾಗಿ ಒಂದು ಯಜ್ಞದ ಹಾಗೆ ಆತನು ಸಾಯುವದಕ್ಕೆ ದೇವರು ನೇಮಿಸಿದ ಸಮಯವು ಇನ್ನೂ ಬಂದಿರಲಿಲ್ಲ. ಈದಿನ ನಾವು ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ, ತನ್ನನ್ನು ವಿರೋಧಿಸಿ – –ದವರನ್ನು ಯೇಸು ಹೇಗೆ ಆಕ್ಷೇಪಿಸಿದನೆಂಬುದನ್ನು ಮತ್ತು ಹುಟ್ಟು ಕುರುಡನಾದ ಒಬ್ಬ ಮನುಷ್ಯನನ್ನು ಆತನು ಹೇಗೆ ಗುಣಪಡಿಸಿದ –ನೆಂಬುದನ್ನು ಕೇಳಿಸಿಕೊಳ್ಳಲಿದ್ದೇವೆ. ಈದಿನದ ನಮ್ಮ ಪಾಠವು **"ಲೋಕದ ಬೆಳಕು"** ಎಂದು ಕರೆಯಲ್ಪಡುತ್ತದೆ.

ಯೋಹಾನನ ಸುವಾರ್ತೆಯಲ್ಲಿ, ಎಂಟನೆಯ ಅಧ್ಯಾಯವನ್ನು ನಾವು ಓದುತ್ತಿದ್ದೇವೆ:

ಯೇಸು ಎಣ್ಣೇಮರಗಳ ಗುಡ್ಡಕ್ಕೆ ಹೋದನು. ಬೆಳಿಗ್ಗೆ ಆತನು ತಿರಿಗಿ ದೇವಾಲಯಕ್ಕೆ ಬಂದಾಗ ಜನರೆಲ್ಲರು ಆತನ ಬಳಿಗೆ ಬಂದರು; ಆತನು ಕೂತುಕೊಂಡು ಅವರಿಗೆ ಉಪದೇಶ ಮಾಡುತ್ತಿರುವಲ್ಲಿ. . . .ಯೇಸು ತಿರಿಗಿ ಅವರ ಸಂಗಡ ಮಾತಾಡಲಾರಂಭಿಸಿ, **"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು"** ಎಂದು ಹೇಳಿದನು. ಇದನ್ನು ಕೇಳಿ ಫರಿಸಾಯರು ಆತನಿಗೆ, "ನಿನ್ನ ವಿಷಯವಾಗಿ ನೀನೇ ಸಾಕ್ಷಿ ಹೇಳಿಕೊಳ್ಳುತ್ತೀ; ನಿನ್ನ ಸಾಕ್ಷಿ ನಿಜವಾಗದು" ಎಂದು ಹೇಳಲು ಯೇಸು ಅವರಿಗೆ, "ನಾನು ಎಲ್ಲಿಂದ ಬಂದವನಾಗಿಯೂ ಎಲ್ಲಿಗೆ ಹೋಗುವವನಾಗಿಯೂ ಇದ್ದೇನೆಂಬುದು ನನಗೆ ಗೊತ್ತಿರುವದರಿಂದ ನನ್ನ ವಿಷಯವಾಗಿ ನಾನೇ ಸಾಕ್ಷಿ ಹೇಳಿಕೊಂಡರೂ ನನ್ನ ಸಾಕ್ಷಿ ನಿಜವಾಗಿರುವದು. ನೀವಾದರೋ ನಾನು ಎಲ್ಲಿಂದ ಬಂದವನು, ಎಲ್ಲಿಗೆ ಹೋಗುವವನು ಎಂಬುದನ್ನು ತಿಳಿಯದವರು. ನೀವು ಕೆಳಗಿನವರು, ನಾನು ಮೇಲಿನವನು; ನೀವು ಈ ಲೋಕ –ದವರು, ನಾನು ಈ ಲೋಕದವನಲ್ಲ. ಆದದರಿಂದ ನೀವು ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ನಿಮಗೆ ಹೇಳಿದೆನು; **ನನ್ನನ್ನು ಆತನೆಂದು ನೀವು ನಂಬದೇ ಹೋದರೆ ನಿಮ್ಮ ಪಾಪಗಳಲ್ಲಿಯೇ ಸಾಯುವಿರೆಂದು ಹೇಳಿದನು."** ಆಗ ಅವರು, ನೀನು ಯಾರು? ಅಂದಾಗ, ಯೇಸು ನಾನು ನಿಮಗೆ ಹೇಳಿದಂಥದೇ. . . .ನೀವು ಮನುಷ್ಯಕುಮಾರನನ್ನು ಎತ್ತರದಲ್ಲಿಟ್ಟಾಗ ಇವನೇ ಆತನೆಂದೂ ತನ್ನಷ್ಟಕ್ಕೇ ತಾನೇ ಏನೂ ಮಾಡದೆ ತಂದೆಯು ತನಗೆ ಬೋಧಿಸಿದ ಹಾಗೆ ಅದನ್ನೆಲ್ಲಾ ಮಾತಾಡಿದನೆಂದೂ ನನ್ನ ವಿಷಯವಾಗಿ ನಿಮಗೆ ತಿಳಿಯುವದು. ಆಗ ನೀವು ಸತ್ಯವನ್ನು ತಿಳಿದುಕೊಳ್ಳುವಿರಿ; ಮತ್ತು **ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು."** ಎಂದು ಉತ್ತರಿಸಿದನು. (ಯೋಹಾನ–8:2, 12-14, 23-25, 28, 32)

ಅದಕ್ಕವರು, "ನಾವು ಅಬ್ರಹಾಮನ ಸಂತಾದವರು; ನಾವು ಯಾರಿಗೂ ಎಂದೂ ದಾಸರಾಗಿಲ್ಲ; ನಿಮಗೆ ಬಿಡುಗಡೆಯಾಗುವದೆಂದು ನೀನು ಹೇಳುವದು ಹೇಗೆ?" ಅಂದರು. ಅದಕ್ಕೆ ಯೇಸು, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, **ಪಾಪಮಾಡುವವರೆಲ್ಲರು ಪಾಪಕ್ಕೆ ದಾಸ –ರಾಗಿದ್ದಾರೆ**. ದಾಸನು ಮನೆಯಲ್ಲಿ ಶಾಶ್ವತವಾಗಿ ಇರುವದಿಲ್ಲ; ಮಗನು ಶಾಶ್ವತವಾಗಿ ಇರುವನು; ಆದದರಿಂದ ಮಗನು ನಿಮ್ಮನ್ನು ಬಿಡುಗಡೆಮಾಡಿದರೆ ನಿಜವಾಗಿ ನಿಮಗೆ ಬಿಡುಗಡೆಯಾಗುವದು. ನೀವು ಅಬ್ರಹಾಮನ ಸಂತಾನದವರು ನಿಜ; ಆದರೂ ನನ್ನ ವಾಕ್ಯವು ನಿಮ್ಮಲ್ಲಿ ಸಾಗದೆ ಇರುವ ಕಾರಣ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ. ನಾನು ತಂದೆಯ ಬಳಿಯಲ್ಲಿ ನೋಡಿದ್ದನ್ನು ಹೇಳುತ್ತೇನೆ; ನೀವೂ ತಂದೆಯಿಂದ ಕೇ:ಳಿದ್ದನ್ನು ಮಾಡಿರಿ" ಅಂದನು. ಅದಕ್ಕವರು, "ನಮ್ಮ ತಂದೆಯು ಅಬ್ರಹಾಮನೇ" ಅಂದಾಗ ಯೇಸು ಅವರಿಗೆ, "ನೀವು ಅಬ್ರಹಾಮನ ಮಕ್ಕಳಾಗಿದ್ದರೆ ಅಬ್ರಹಾಮನು ಮಾಡಿದ್ದಂಥಹ ಕೃತ್ಯಗಳನ್ನು ಮಾಡುತ್ತಿದ್ದಿರಿ. ನೀವು ಹಾಗೆ ಮಾಡದೆ ದೇವರಿಂದ ಕೇಳಿದ ಸತ್ಯವನ್ನು ನಿಮಗೆ ಹೇಳಿದವನಾದ ನನ್ನನ್ನು ಕೊಲ್ಲುವದಕ್ಕೆ ನೋಡುತ್ತೀರಿ; ಅಬ್ರಹಾಮನು ಹೀಗೆ ಮಾಡಲಿಲ್ಲ. ನೀವು ನಿಮ್ಮ ತಂದೆಯ ಕೃತ್ಯಗಳನ್ನು ಮಾಡುತ್ತೀರಿ" ಅಂದನು. ಅದಕ್ಕವರು, "ನಾವು ಹಾದರಕ್ಕೆ ಹುಟ್ಟಿದವರಲ್ಲ; ನಮಗೆ ಒಬ್ಬನೇ ತಂದೆ, ಆತನು ದೇವರೇ" ಅಂದರು. (8:33-41)

ಯೇಸು ಅವರಿಗೆ, **"ದೇವರು ನಿಮ್ಮ ತಂದೆಯಾಗಿದ್ದರೆ, ನನ್ನನ್ನು ಪ್ರೀತಿಸುತ್ತಿದ್ದಿರಿ;** ಯಾಕಂದರೆ ನಾನು ದೇವರಿಂದಲೇ ಹೊರಟು ಲೋಕಕ್ಕೆ ಬಂದವನಾಗಿದ್ದೇನೆ; ನನ್ನಷ್ಟಕ್ಕೆ ನಾನೇ ಬರಲಿಲ್ಲ; ಆತನೇ ನನ್ನನ್ನು ಕಳುಹಿಸಿದ್ದಾನೆ. ನೀವು ನನ್ನ ಮಾತನ್ನು ಗ್ರಹಿಸದೇ ಇರುವದಕ್ಕೆ ಕಾರಣವೇನು? ನನ್ನ ಬೋಧನೆಗೆ ಕಿವಿಗೊಡಲಾರದೆ ಇರುವದೇ ಕಾರಣ. ಸೈತಾನನು ನಿಮ್ಮ ತಂದೆ; ನೀವು ಆ ತಂದೆಯಿಂದ

ಹುಟ್ಟಿದವರಾಗಿದ್ದು ನಿಮ್ಮ ತಂದೆಯ ದುರಿಚ್ಛೆಗಳನ್ನೇ ನಡಿಸಬೇಕೆಂದಿದ್ದೀರಿ. ಅವನು ಆದಿಯಿಂದಲೂ ಕೊಲೆಗಾರನಾಗಿದ್ದು ಸತ್ಯದಲ್ಲಿ ನಿಲ್ಲಲಿಲ್ಲ; ಅವನಲ್ಲಿ ಸತ್ಯವು ಇಲ್ಲವೇ ಇಲ್ಲ. ಅವನು ಸುಳ್ಳಾಡುವಾಗ ಸ್ವಭಾವಾನುಸಾರವಾಗಿ ಆಡುತ್ತಾನೆ; ಅವನು ಸುಳ್ಳುಗಾರನೂ ಸುಳ್ಳಿಗೆ ಮೂಲಪುರುಷನೂ ಆಗಿದ್ದಾನೆ. ನಾನು ಸತ್ಯವನ್ನು ಹೇಳುವವನಾದದರಿಂದ ನೀವು ನನ್ನನ್ನು ನಂಬುವದಿಲ್ಲ. ನನ್ನಲ್ಲಿ ಪಾಪವನ್ನು ತೋರಿಸಿಕೊಡುವವರು ನಿಮ್ಮೊಳಗೆ ಯಾರಿದ್ದಾರೆ? ನಾನು ಸತ್ಯವನ್ನು ಹೇಳುವವನಾಗಿರುವಲ್ಲಿ ನೀವು ನನ್ನ ಮಾತನ್ನು ನಂಬದೇ ಇರು –ವದು ಯಾಕೆ? ದೇವರಿಂದ ಹುಟ್ಟಿದವನು ದೇವರ ಮಾತುಗಳನ್ನು ಕೇಳುತ್ತಾನೆ. ನೀವು ದೇವರಿಂದ ಹುಟ್ಟದ ಕಾರಣ ಅವುಗಳನ್ನು ಕೇಳುವದಿಲ್ಲ" ಎಂದು ಹೇಳಿದನು. (8:42-47)

ಅದಕ್ಕೆ ಯೆಹೂದ್ಯರು, "ನೀನು ಸಮಾರ್ಯನೂ ದೆವ್ವಹಿಡಿದವನೂ ಆಗಿದ್ದೀ ಎಂದು ನಾವು ಹೇಳುವದು ಸರಿಯಲ್ಲವೋ" ಎಂದು ಹೇಳಲು ಯೇಸು, "ನಾನು ದೆವ್ವ ಹಿಡಿದವನಲ್ಲ, ನನ್ನ ತಂದೆಯನ್ನು ಸನ್ಮಾನಿಸುವವನಾಗಿದ್ದೇನೆ; ಆದರೂ ನೀವು ನನ್ನನ್ನು ಅವಮಾನ ಪಡಿಸುತ್ತೀರಿ. ನನಗೆ ಮಾನಬರಬೇಕೆಂದು ನಾನು ಅಪೇಕ್ಷಿಸುವದಿಲ್ಲ; ನನಗೆ ಮಾನಬರಬೇಕೆಂದು ಅಪೇಕ್ಷಿಸುವವನು ಒಬ್ಬನಿದ್ದಾನೆ; ಆತನೇ ನ್ಯಾಯತೀರಿಸುವವನು. ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಯಾವನಾದರೂ ನನ್ನ ವಾಕ್ಯವನ್ನು ಕೈಕೊಂಡು ನಡೆದರೆ ಅವನು ಎಂದಿಗೂ ಸಾವನ್ನು ಕಾಣುವದಿಲ್ಲ" ಅಂದನು. ಅದಕ್ಕೆ ಯೆಹೂದ್ಯರು, "ನೀನು ದೆವ್ವ ಹಿಡಿದವನೆಂದು ಈಗ ನಮಗೆ ತಿಳಿಯಿತು; ಅಬ್ರ –ಹಾಮನು ಸತ್ತನು, ಪ್ರವಾದಿಗಳೂ ಸತ್ತರು; ಆದರೆ ನೀನು, ನನ್ನ ವಾಕ್ಯವನ್ನು ಕೈಕೊಂಡು ನಡೆಯುವವನು ಎಂದಿಗೂ ಸಾವನ್ನು ಅನು –ಭವಿಸುವದಿಲ್ಲವೆಂದು ಹೇಳುತ್ತೀ. ನಮ್ಮ ಮೂಲಪುರುಷನಾದ ಅಬ್ರಹಾಮನಿಗಿಂತ ನೀನು ದೊಡ್ಡವನೋ? ಅವನೂ ಸತ್ತುಹೋದನು, ಪ್ರವಾದಿಗಳೂ ಸತ್ತುಹೋದರು; ನಿನ್ನನ್ನು ಯಾರೆಂತ ಮಾಡಿಕೊಳ್ಳುತ್ತೀ" ಎಂದು ಹೇಳಲು ಯೇಸು, "ನನ್ನನ್ನು ನಾನೇ ಮಹಿಮೆಪಡಿಸಿ –ಕೊಂಡರೆ ನನ್ನ ಮಹಿಮೆ ಹುರುಳಿಲ್ಲದ್ದು; ನನ್ನನ್ನು ಮಹಿಮೆಪಡಿಸುವವನು ನನ್ನ ತಂದೆಯೆ. ನೀವು ಆತನನ್ನು ನಮ್ಮ ದೇವರು ಅನ್ನು –ತ್ತೀರಿ; ಆದರೂ ನೀವು ಆತನನ್ನು ತಿಳಿಯದೆ ಇದ್ದೀರಿ. ನಾನಂತೂ ಆತನನ್ನು ಬಲ್ಲೆನು; ಆತನನ್ನು ಅರಿಯೆನೆಂದು ಹೇಳಿದರೆ ನಿಮ್ಮ ಹಾಗೆ ಸುಳ್ಳುಗಾರನಾಗುವೆನು; ಆದರೆ ಆತನನ್ನು ತಿಳಿದಿದ್ದೇನೆ, ಆತನ ವಾಕ್ಯವನ್ನು ಕೈಕೊಂಡು ನಡೆಯುತ್ತೇನೆ. ನಿಮ್ಮ ಮೂಲಪುರುಷ –ನಾದ ಅಬ್ರಹಾಮನು ನನ್ನ ದಿನವನ್ನು ತಾನು ನೋಡೇನೆಂದು ಉಲ್ಲಾಸಪಟ್ಟನು; ಅದನ್ನು ನೋಡಿ ಸಂತೋಷಗೊಂಡನು" ಅಂದನು. ಅದಕ್ಕೆ ಯೆಹೂದ್ಯರು, "ನಿನಗೆ ಇನ್ನೂ ಐವತ್ತು ವರುಷವಾಗಿಲ್ಲ; ಅಬ್ರಹಾಮನನ್ನು ನೋಡಿದ್ದೀಯಾ?" ಅಂದಾಗ ಯೇಸು, "ನಿಮಗೆ ನಿಜನಿಜವಾಗಿ ಹೇಳುತ್ತೇನೆ, **ಅಬ್ರಹಾಮನು ಹುಟ್ಟುವದಕ್ಕಿಂತ ಮುಂಚಿನಿಂದಲೂ ನಾನು ಇದ್ದೇನೆ"** ಅಂದನು. ಅವರು ಈ ಮಾತನ್ನು ಕೇಳಿ **ಆತನನ್ನು ಕೊಲ್ಲುವದಕ್ಕಾಗಿ ಕಲ್ಲುತಕ್ಕೊಳ್ಳಲು** ಯೇಸು ಅಡಗಿಕೊಂಡು ದೇವಾಲಯದೊಳಗಿಂದ ಹೊರಟು ಹೋದನು. (8:48-59)

ಯೇಸು ಹಾದುಹೋಗುತ್ತಿರುವಾಗ ಒಬ್ಬ **ಹುಟ್ಟುಕುರುಡನನ್ನು** ಕಂಡನು. ಆತನ ಶಿಷ್ಯರು, "ಗುರುವೇ, ಇವನು ಕುರುಡನಾಗಿ ಹುಟ್ಟಿರು –ವದಕ್ಕೆ ಯಾರು ಪಾಪ ಮಾಡಿದರು? ಇವನೋ? ಇವನ ತಂದೆತಾಯಿಗಳೋ?" ಎಂದು ಆತನನ್ನು ಕೇಳಿದ್ದಕ್ಕೆ ಯೇಸು, "ಇವನೂ ಪಾಪಮಾಡಲಿಲ್ಲ, ಇವನ ತಂದೆತಾಯಿಗಳು ಪಾಪಮಾಡಲಿಲ್ಲ; ದೇವರ ಕ್ರಿಯೆಗಳು ಇವನಲ್ಲಿ ತೋರಿಬರುವದಕ್ಕೆ ಇದಾಯಿತು. ನನ್ನನ್ನು ಕಳುಹಿಸಿದಾತನ ಕಾರ್ಯಗಳನ್ನು ನಾವು ಹಗಲಿರುವಾಗಲೇ ನಡಿಸಬೇಕು. ರಾತ್ರಿ ಬರುತ್ತದೆ, ಅದು ಬಂದ ಮೇಲೆ ಯಾರೂ ಕೆಲಸ ಮಾಡಲಾರರು. ನಾನು ಲೋಕದಲ್ಲಿರುವಾಗ ಲೋಕಕ್ಕೆ ಬೆಳಕಾಗಿದ್ದೇನೆ" ಅಂದನು. (9:1-5)

ಇದನ್ನು ಹೇಳಿ ನೆಲದ ಮೇಲೆ ಉಗುಳಿ ಆ ಉಗುಳಿನಿಂದ ಕೆಸರು ಮಡಿ ಆ ಕೆಸರನ್ನು ಅವನ ಕಣ್ಣುಗಳಿಗೆ ಹಚ್ಚಿ, "ನೀನು ಸಿಲೋವ ಕೊಳಕ್ಕೆ ಹೋಗಿ ತೊಳಕೋ" ಅಂದನು (ಸಿಲೋವ ಅಂದರೆ ಕಳುಹಿಸಲ್ಪಟ್ಟವನು ಎಂದರ್ಥ). ಅವನು ಹೋಗಿ ತೊಳಕೊಂಡು ಕಣ್ಣು ಹೊಂದಿದವನಾಗಿ ಬಂದನು. ಆಗ ನೆರೆಹೊರೆಯವರೂ ಅವನು ಭಿಕ್ಷುಗಾರನಾಗಿದ್ದನ್ನು ಮೊದಲು ನೋಡಿದವರೂ, "ಇವನು ಕೂತಿದ್ದ ಆ ಭಿಕ್ಷುಕನಲ್ಲವೇ" ಅಂದರು. ಕೆಲವರು "ಹೌದು ಅವನೇ" ಅಂದರು; ಇನ್ನೂ ಕೆಲವರು, "ಅವನಲ್ಲ ಅವನ ಹಾಗಿದ್ದಾನೆ" ಅಂದರು. ಅವನಾದರೆ, "ನಾನೇ ಅವನು" ಅಂದನು. ಆಗ ಅವರು "ನಿನಗೆ ಕಣ್ಣು ಹೇಗೆ ಬಂದವು?" ಎಂದು ಅವನನ್ನು ಕೇಳಿದ್ದಕ್ಕೆ ಇವನು, "ಯೇಸು ಎಂಬವನಿದ್ದಾನಲ್ಲಾ, ಅವನು ಕೆಸರುಮಾಡಿ ನನ್ನ ಕಣ್ಣಿಗೆ ಹಚ್ಚಿ ಸಿಲೋವ ಕೊಳಕ್ಕೆ ಹೋಗಿ ತೊಳಕೋ ಎಂದು ಹೇಳಿದನು; ನಾನು ಹೋಗಿ ತೊಳಕೊಂಡೆನು; ಕಣ್ಣು ಬಂದವು" ಅಂದನು. ಅವರು, ಅವನೆಲ್ಲಿದ್ದಾನೆ ಎಂದು ಅವನನ್ನು ಕೇಳಿದ್ದಕ್ಕೆ ಅವನು ನನಗೆ ಗೊತ್ತಿಲ್ಲ ಅಂದನು. (9:6-12)

ಮುಂಚೆ ಕುರುಡನಾಗಿದ್ದ ಇವನನ್ನು ಫರಿಸಾಯರ ಬಳಿಗೆ ಕರಕೊಂಡು ಹೋದರು. ಯೇಸು ಕೆಸರು ಮಾಡಿ ಅವನಿಗೆ ಕಣ್ಣು ಕೊಟ್ಟ ದಿವಸವು ಸಬ್ಬತ್ ದಿವಸವಾಗಿತ್ತು. ಆದಕಾರಣ ಈ ಫರಿಸಾಯರು ಸಹ ಅವನನ್ನು ವಿಚಾರಿಸಿ, "ನಿನಗೆ ಹೇಗೆ ಕಣ್ಣು ಬಂದವು" ಎಂದು ಕೇಳಿದರು. ಅವನು ಅವರಿಗೆ, "ಕೆಸರನ್ನು ನನ್ನ ಕಣ್ಣಿನ ಮೇಲೆ ಇಟ್ಟನು, ನಾನು ತೊಳಕೊಂಡೆನು, ಕಣ್ಣು ಕಾಣುತ್ತವೆ" ಎಂದು ಉತ್ತರ ಕೊಟ್ಟನು. ಆ ಫರಿಸಾಯರಲ್ಲಿ ಕೆಲವರು, "ಈ ಮನುಷ್ಯನು ದೇವರಿಂದ ಬಂದವನಲ್ಲ; ಅವನು ಸಬ್ಬತ್ ದಿವಸವನ್ನು ಲಕ್ಷ್ಯ ಮಾಡುವ –ದಿಲ್ಲವಲ್ಲಾ" ಅಂದರು. ಇನ್ನು ಕೆಲವರು, "ಇಂಥ ಮಹತ್ಕಾರ್ಯಗಳನ್ನು ಮಾಡುವದು ಭಕ್ತಿಹೀನನ ಕೈಯಿಂದ ಹೇಗಾದೀತು?" ಅಂದರು. ಹೀಗೆ ಅವರಲ್ಲಿ ಭೇದವಾಯಿತು. ಹೀಗಿರಲಾಗಿ ಅವರು ತಿರಿಗಿ ಆ ಕುರುಡನನ್ನು, "ಅವನು ನಿನಗೆ ಕಣ್ಣು ಕೊಟ್ಟದ್ದರಿಂದ ನೀನು ಅವನ ವಿಷಯವಾಗಿ ಏನು ಹೇಳುತ್ತೀ" ಎಂದು ಕೇಳಿದಾಗ ಅವನು "ಆತನು ಪ್ರವಾದಿ ಅನ್ನುತ್ತೇನೆ" ಎಂದು ಹೇಳಿದನು. (9:13-17)

ಆದರೆ ಕಣ್ಣು ಬಂದವನ ವಿಷಯವಾಗಿ ಆ ಯೆಹೂದ್ಯರು, ಇವನು ಕುರುಡನಾಗಿದ್ದು ಈಗ ಕಣ್ಣುಳ್ಳವನಾದನೆಂದು ನಂಬದೆ ಅವನ ತಂದೆತಾಯಿಗಳನ್ನು ಕರೆಯಿಸಿ, "ಕುರುಡನಾಗಿ ಹುಟ್ಟಿದನೆಂದು ನೀವು ಹೇಳುವಂಥ ನಿಮ್ಮ ಮಗನು ಇವನೋ? ಈಗ ಇವನಿಗೆ ಕಣ್ಣು ಹೇಗೆ ಬಂದವು" ಎಂದು ಅವರನ್ನು ಕೇಳಿದರು. ಅವನ ತಂದೆತಾಯಿಗಳು, ಇವನು ನಮ್ಮ ಮಗನೆಂದೂ ಕುರುಡನಾಗಿ ಹುಟ್ಟಿದನೆಂದೂ

ಬಲ್ಲೆವು; ಈಗ ಹೇಗೆ ಕಣ್ಣು ಬಂದವೋ ಅರಿಯೆವು; ಕಣ್ಣು ಕೊಟ್ಟವನು ಯಾರೋ ಅರಿಯೆವು; ಇವನನ್ನೇ ಕೇಳಿರಿ; ಪ್ರಾಯದವನಾಗಿ–
–ದ್ದಾನಲ್ಲಾ; ಇವನೇ ತನ್ನ ವಿಷಯವಾಗಿ ಹೇಳುವನು" ಎಂದು ಉತ್ತರ ಕೊಟ್ಟರು. ಅವನ ತಂದೆತಾಯಿಗಳು **ಯೆಹೂದ್ಯರಿಗೆ ಅಂಜಿದ** ಕಾರಣ ಈ ಪ್ರಕಾರ ಹೇಳಿದರು. ಯಾಕಂದರೆ ಯಾರಾದರೂ ಯೇಸುವನ್ನು ಕ್ರಿಸ್ತನೆಂದು ಒಪ್ಪಿಕೊಂಡು ಹೇಳಿದರೆ ಅಂಥವನಿಗೆ ಬಹಿಷ್ಕಾರ ಹಾಕಬೇಕೆಂದು ಯೆಹೂದ್ಯರು ಅದಕ್ಕೆ ಮುಂಚೆ ಗೊತ್ತುಮಾಡಿಕೊಂಡಿದ್ದರು. ಇವನು ಪ್ರಾಯದವನು, ಇವನನ್ನೇ ಕೇಳಿರಿ ಎಂದು ಅವನ ತಂದೆತಾಯಿಗಳು ಹೇಳಿದ್ದಕ್ಕೆ ಇದೇ ಕಾರಣ. (9:18-23)

ಆದಕಾರಣ ಅವರು ಕುರುಡನಾಗಿದ್ದ ಆ ಮನುಷ್ಯನನ್ನು ಎರಡನೆಯ ಸಾರಿ ಕರೆದು, "ನೀನು ದೇವರಿಗೆ ಮಾನಬರುವಂತೆ ಹೇಳು; ಆ ಮನುಷ್ಯನು ಭಕ್ತಿಹೀನನೆಂದು ನಾವು ಬಲ್ಲೆವು" ಎಂದು ಹೇಳಲು ಅವನು, "ಆತನು ಭಕ್ತಿಹೀನನೋ ಏನೋ ನಾನರಿಯೆ. **ಒಂದು ಮಾತ್ರ ಬಲ್ಲೆ, ಕುರುಡನಾಗಿದ್ದೆನು, ಈಗ ಕಣ್ಣು ಕಾಣುತ್ತವೆ"** ಅಂದನು. ಅವರು ಅವನನ್ನು, "ನಿನಗೆ ಏನು ಮಾಡಿದನು? ನಿನಗೆ ಹೇಗೆ ಕಣ್ಣು ಕೊಟ್ಟನು? ಎಂದು ಕೇಳಿದ್ದಕ್ಕೆ ಅವನು, "ನಿಮಗೆ ಆಗಲೇ ಹೇಳಿದೆನಲ್ಲಾ; ನೀವು ಕೇಳಲಿಲ್ಲ; ಯಾಕೆ ತಿರಿಗಿ ಕೇಳಬೇಕೆಂದಿದ್ದೀರಿ? ಆತನ ಶಿಷ್ಯರಾಗುವದಕ್ಕೆ ನಿಮಗೆ ಮನಸ್ಸದೆಯೋ?" ಅಂದನು. ಅದಕ್ಕೆ ಅವರ ಅವನನ್ನು ಬೈದು, "ನೀನು ಆ ಮನುಷ್ಯನ ಶಿಷ್ಯ; ನಾವು ಮೋಶೆಯ ಶಿಷ್ಯರು; ಮೋಶೆಯ ಸಂಗಡ ದೇವರು ಮಾತಾಡಿದನೆಂದು ನಾವು ಬಲ್ಲೆವು; ಆದರೆ ಇವನು ಎಲ್ಲಿಯವನೋ ಅರಿ
–ಯೆವು" ಅಂದರು. (9:24-29)

ಅದಕ್ಕೆ ಆ ಮನುಷ್ಯನು, **"ಆತನು ನನಗೆ ಕಣ್ಣುಕೊಟ್ಟರೂ ಆತನು ಎಲ್ಲಿಯವನೋ ನಿಮಗೆ ಗೊತ್ತಿಲ್ಲದೆ ಇರುವದು ಆಶ್ಚರ್ಯವಲ್ಲವೇ**. ಭಕ್ತಿಹೀನರ ಪ್ರಾರ್ಥನೆಯನ್ನು ದೇವರು ಕೇಳುವದಿಲ್ಲ; ಯಾವನು ಭಕ್ತನಾಗಿದ್ದು ಆತನ ಚಿತ್ತದಂತೆ ನಡೆಯುತ್ತಾನೋ ಅವನ ಪ್ರಾರ್ಥನೆ
–ಯನ್ನು ಕೇಳುತ್ತಾನೆಂದು ಬಲ್ಲೆವು. ಹುಟ್ಟುಕುರುಡನಿಗೆ ಯಾರಾದರೂ ಕಣ್ಣುಕೊಟ್ಟ ಸಂಗತಿಯನ್ನು ಲೋಕಾದಿಯಿಂದ ಒಬ್ಬರೂ ಕೇಳಿ
–ದ್ದಿಲ್ಲ; ಈತನು ದೇವರಿಂದ ಬಂದವನಲ್ಲದಿದ್ದರೆ ಏನೂ ಮಾಡಲಾರದೆ ಇರುತ್ತಿದ್ದನು" ಅಂದನು. ಈ ಮಾತಿಗೆ ಅವರು, "ನೀನು ಕೇವಲ ಪಾಪದಲ್ಲಿ ಹುಟ್ಟಿದವನು, ನಮಗೆ ಉಪದೇಶ ಮಾಡುತ್ತೀಯೋ" ಎಂದು ಹೇಳಿ ಅವನನ್ನು ಹೊರಗೆ ಹಾಕಿದರು.(9:30-34)

ಅವನನ್ನು ಹೊರಗೆ ಹಾಕಿದರೆಂದು ಯೇಸು ಕೇಳಿ ಅವನನ್ನು ಕಂಡುಕೊಂಡು, "ನೀನು ಮನುಷ್ಯಕುಮಾರನನ್ನು ನಂಬುತ್ತೀಯೋ" ಎಂದು ಕೇಳಿದನು. ಅದಕ್ಕವನು, "ಆತನು ಯಾರು, ಸ್ವಾಮೀ? ತಿಳಿಸಿದರೆ ಆತನನ್ನು ನಂಬುತ್ತೇನೆ" ಅಂದಾಗ ಯೇಸು, "ನೀನು ಅವ
–ನನ್ನು ಕಂಡಿದ್ದೀ; ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಅವನು" ಅಂದನು. **ಅವನು "ನಂಬುತ್ತೇನೆ ಸ್ವಾಮೀ" ಎಂದು ಹೇಳಿ ಆತನಿಗೆ ಅಡ್ಡಬಿದ್ದನು**. ಆಗ ಯೇಸು, "ನಾನು ನ್ಯಾಯತೀರ್ಪಿಗಾಗಿ ಈ ಲೋಕಕ್ಕೆ ಬಂದಿದ್ದೇನೆ; ಆ ತೀರ್ಪು ಏನೆಂದರೆ, ಕಣ್ಣಿಲ್ಲದವ –
ರಿಗೆ ಕಣ್ಣು ಬಂದವು, ಕಣ್ಣಿದ್ದವರು ಕುರುಡರಾಗುವರು" ಅಂದನು. ಇದನ್ನು ಆತನ ಸಂಗಡ ಇದ್ದ ಫರಿಸಾಯರು ಕೇಳಿ, "ನಾವೂ ಕುರುಡರೇನು?" ಎಂದು ಕೇಳಿದಾಗ ಯೇಸು ಅವರಿಗೆ, "ನೀವು ಕುರುಡರಾಗಿದ್ದರೆ ನಿಮಗೆ ಪಾಪವು ಇರುತ್ತಿರಲಿಲ್ಲ; ನಮಗೆ ಕಣ್ಣು ಕಾಣುತ್ತವೆ ಅನ್ನುತ್ತೀರಾದ್ದರಿಂದ ನಿಮ್ಮ ಪಾಪವು ಉಳಿದದೆ." (9:35-41)

ಹೀಗೆ ಕರ್ತನಾದ ಯೇಸು ಹುಟ್ಟುಕುರುಡನನ್ನು ಸ್ವಸ್ಥಪಡಿಸಿದನು ಮತ್ತು ಫರಿಸಾಯರ ಕುರುಡು ಮನಸ್ಸಿಗಾಗಿ ಅವರನ್ನು ಗದರಿಸಿದನು. ಈ ಧಾರ್ಮಿಕ ನಿಪುಣರು ಸಾಮಾನ್ಯ ಕುರುಡುತನಕ್ಕಿತಂಲೂ ಕೆಟ್ಟದಾದ ಕುರುಡತನವನ್ನು ಹೊಂದಿದ್ದರು. ಅವರಿಗೆ ನೋಡುವದಕ್ಕೆ ಸಾಧ್ಯವಿತ್ತು ಆದರೆ **ಅವರು ನೋಡುವದನ್ನು ಇಷ್ಟಪಡಲಿಲ್ಲ,** ಅದಕ್ಕಾಗಿಯೇ ಅವರು ಯೇಸುವಿನ ಮೇಲೆ ಎಸೆಯುವದಕ್ಕೆ ಕಲ್ಲುಗಳನ್ನು ತೆಗೆದುಕೊಂಡರು. ಈ ಧಾರ್ಮಿಕ ಮನುಷ್ಯರು ಯೇಸುವಿನ ಕುರಿತಾದ ಸತ್ಯಕ್ಕೆ ತಮ್ಮ ಕಣ್ಣುಗಳನ್ನು ಮುಚ್ಚಿಕೊಂಡಿದ್ದರು. ಆತನು ಮೆಸ್ಸೀಯನು ಮತ್ತು ಲೋಕದ ಬೆಳಕೂ ಎನ್ನುವದನ್ನು **ನಂಬುವದಕ್ಕೆ ಅವರು ಇಷ್ಟಪಡಲಿಲ್ಲ**. ಪ್ರವಾದಿಯಾದ ಅಬ್ರಹಾಮನಿಗಿಂತ ಮೊದಲೇ ಯೇಸು ಜೀವಿಸಿದ್ದನು ಎನ್ನುವದನ್ನು ನಂಬುವದಕ್ಕೆ ಅವರು ಇಷ್ಟಪಡಲಿಲ್ಲ; ಅಂದರೆ ಆದಿಯಲ್ಲಿ ಆತನು ವಾಕ್ಯವಾಗಿದ್ದನು ಮತ್ತು ಆ ವಾಕ್ಯವು ದೇವರ ಬಳಿಯಲ್ಲಿತ್ತು ಎಂಬದು. **ಸತ್ಯವನ್ನು ನೋಡುವದಕ್ಕೆ ಅವರು ಇಷ್ಟಪಡಲಿಲ್ಲ**.

ಈ ದಿನದ ಕತೆಯಲ್ಲಿ ನಾವು **ಎರಡು ರೀತಿಯ ಕುರುಡು ಜನರನ್ನು** ನೋಡಿದೆವು. **ಕಣ್ಣುಗಳಲ್ಲಿ** ಕುರುಡುತನವಿದ್ದವರು ಮತ್ತು **ಮನಸ್ಸಿ –
ನಲ್ಲಿ** ಕುರುಡರಾಗಿದ್ದವರು. ಕುರುಡು ಕಣ್ಣುಗಳ ಕತ್ತಲಿಗಿಂತಲೂ ಕುರುಡು ಮನಸ್ಸಿನ ಕತ್ತಲು ತೀರಾ ಕೆಟ್ಟದ್ದು. ನಿಮ್ಮ ಕಣ್ಣುಗಳು ಕುರು –
ಡಾಗಿದ್ದರೆ, ಲೋಕದ ಸಂಗತಿಗಳನ್ನು ನೀವು ನೊಡುವದಕ್ಕಾಗುವದಿಲ್ಲ, ಆದರೆ ನಿಮ್ಮ ಹೃದಯ ಮತ್ತು ಮನಸ್ಸು ಕುರುಡಾಗಿದ್ದರೆ ನೀವು ನಿತ್ಯತ್ವದ ಸಂಗತಿಗಳನ್ನು ನೋಡುವದಕ್ಕೂ ಅಥವಾ ಗ್ರಹಿಸಿಕೊಳ್ಳುವದಕ್ಕೂ ಆಗುವದಿಲ್ಲ!

ದೇವರ ವಾಕ್ಯವು ನಮಗೆ ಬೋಧಿಸುವದೇನೆಂದರೆ, ಆದಾಮನ ಮಕ್ಕಳೆಲ್ಲರೂ ಅವರ ಹೃದಯ ಮತ್ತು ಮನಸ್ಸುಗಳಲ್ಲಿ **ಹುಟ್ಟುಕುರುಡ ರಾಗಿದ್ದರು**. ಆದಾಮನ ಪಾಪದ ನಿಮಿತ್ತವಾಗಿ, ನಾವೆಲ್ಲರೂ ಪಾಪದ ಮತ್ತು ಅಜ್ಞಾನದ ಕತ್ತಲೆಯಲ್ಲಿ ಹುಟ್ಟಬೇಕಾಯಿತು. ನಮಗೆ ದೇವರ ತಿಳುವಳಿಕೆಯಿರಲಿಲ್ಲ ಮತ್ತು ಆತನ ಸತ್ಯದ ಸಾಮಾನ್ಯ ಆಶೆಯು ಇರಲಿಲ್ಲ. ದೀಪದ ಬೆಳಕು ಇಲ್ಲದಿದ್ದಾಗ ಜಿರಲೆಗಳು ಹರಡಿ
–ಕೊಳ್ಳುವ ರೀತಿಯಲ್ಲಿ ನಾವು ಕತ್ತಲೆಯಲ್ಲಿ ನಮ್ಮ ಜೀವಿತಗಳನ್ನು ಜೀವಿಸುವ ತೃಪ್ತಿಗಾಗಿ, ದೇವರ ವಾಕ್ಯವನ್ನು ದೂರವಿರಿಸಿದೆವು. ವಿಷಾದವೆಂದರೆ, ಆದಾಮನ ಹೆಚ್ಚಿನ ಸಂತಾನದವರು ಪಾಪ ಮತ್ತು ಅಜ್ಞಾನದ ಕತ್ತಲೆಯಲ್ಲಿಯೇ ಸತ್ತುಹೋದರು. ಉಲೂಫ್‌ನ ಜ್ಞಾನೋಕ್ತಿಯು ಹೇಗೆ ಹೇಳುತ್ತದೆ, "ನೀವು ತಿಳಿಯುವದಕ್ಕಿಂತ ಮೊದಲೇ ಅಜ್ಞಾನವು(ತಿಳುವಳಿಕೆಯ ಕೊರತೆ) ನಿಮ್ಮನ್ನು ಕೊಲ್ಲುತ್ತದೆ!" ಹಾಗೆಯೇ, ಪ್ರವಾದಿಯದ ಹೋಶೆಯನು ಹೀಗೆ ಬರೆಯುತ್ತಾನೆ: "ಇಸ್ರಾಯೇಲ್ಯರೇ ಯೆಹೋವನ ವಾಕ್ಯವನ್ನು ಕೇಳಿರಿ. . ನನ್ನ ಜನರು **ಜ್ಞಾನಹೀನರಾಗಿ ಹಾಳಾಗಿದ್ದಾರೆ**; ನೀವು ಜ್ಞಾನವನ್ನು ತಳ್ಳಿಬಿಟ್ಟದರಿಂದ ನಾನು ನಿಮ್ಮನ್ನು ತಳ್ಳಿಬಿಡುವೆನು.. . .(ಹೋಶೆಯ–4:1,6)

**ಶುಭ ಸಂದೇಶವೇನೆಂದರೆ,** ನಮ್ಮಲ್ಲಿ ಯಾರೋಬ್ಬರೂ ಪಾಪದ ಮತ್ತು ಅಜ್ಞಾನದ ಕತ್ತಲೆಯಲ್ಲಿ ನಾಶವಾಗುವದು ದೇವರ ಇಚ್ಛೆಯಾ –
–ಗಿರಲಿಲ್ಲ.  ಅದಕ್ಕೋಸ್ಕರವೇ ಆತನು ಕರ್ತನಾದ ಯೇಸು ಕ್ರಿಸ್ತನನ್ನು ನಮಗಾಗಿ ಕಳಿಸುವದರಿಂದ ನಮ್ಮ ಪ್ರಪಂಚವನ್ನು ಸಂಧಿಸಿದನು.
ಪ್ರವಾದಿಯಾದ ಜೆಕರ್ಯನು ಕರ್ತನಾದ ಯೇಸುವನ್ನು **"ಉದಯಿಸುತ್ತಿರುವ ರವಿ"** ಎಂದು ಹೇಳುತ್ತಾ, ದೇವರು "ಕತ್ತಲಲ್ಲಿಯೂ ಮರ
–ಣಾಂಧಕಾರದಲ್ಲಿಯೂ ವಾಸಿಸಿರುವವರಾದ ನಮಗೆ ಪ್ರಕಾಶ ಕೊಟ್ಟು ನಮ್ಮ ಕಾಲುಗಳನ್ನು ಸಮಾಧಾನದ **ಮಾರ್ಗದಲ್ಲಿ** ಸೇರಿಸಿ ನಡಿ
–ಸುವದಕ್ಕೆ" (ಲೂಕ–1:79) ಪರಲೋಕದಿಂದ ಆತನನ್ನು ಕಳಿಸಿದನು. ಪ್ರವಾದಿಗಳು ರಾತ್ರಿಯನ್ನು ಬೆಳಗುವ ನಕ್ಷತ್ರಗಳ ಹಾಗಿದ್ದಾರೆ,
ಆದರೆ ಯೇಸು ಕ್ರಿಸ್ತನು ತನ್ನಲ್ಲಿ ನಂಬಿಕೆಯನ್ನಿಡುವ ಎಲ್ಲರಿಗೆ ಜೀವವನ್ನೂ ಮತ್ತು ಬೆಳಕನ್ನೂ ತರುವಂತಹ ಉದಯಿಸುತ್ತಿರುವ
ರವಿಯ ಹಾಗಿದ್ದಾನೆ. ನಮ್ಮ ಪ್ರಪಂಚವನ್ನು ಬೆಳಗುವದಕ್ಕೆ ದೇವರು ಎಷ್ಟು ಸೂರ್ಯಗಳನ್ನು ಸೃಷ್ಟಿಸಿದನು? ಕೇವಲ ಒಂದನ್ನು ಮಾತ್ರ.
ನಿತ್ಯವಾದ ನರಕದಿಂದ ಮತ್ತು ಪಾಪದ ಕತ್ತಲೆಯಿಂದ ಪಾಪಿಗಳನ್ನು ಬಿಡುಗಡೆ ಮಾಡುವದಕ್ಕೆ ದೇವರು ಎಷ್ಟು ರಕ್ಷಕರುಗಳನ್ನು ಕಳಿಸಿ –
–ದನು? ಒಬ್ಬನನ್ನು ಮಾತ್ರ. ಹೀಗಿದ್ದರೂ, ತಾವಿನ್ನೂ ಪಾಪದ ಕತ್ತಲೆಯಲ್ಲಿ ಮುಗ್ಗರಿಸುತ್ತಿದ್ದೇವೆ ಎನ್ನುವದನ್ನು ಆದಾಮನ ಮಕ್ಕಳಲ್ಲಿ
ಹೆಚ್ಚಿನವರು ಗ್ರಹಿಸಿಕೊಳ್ಳಲಿಲ್ಲ.  ಅದನ್ನೇ ಕರ್ತನಾದ ಯೇಸು ಕ್ರಿಸ್ತನ ಕುರಿತಾಗಿ ವಾಕ್ಯಗಳು ಹೇಳುವದೇನೆಂದರೆ, "ಆ ಬೆಳಕು ಕತ್ತಲಲ್ಲಿ
ಪ್ರಕಾಶಿಸುತ್ತದೆ; **ಕತ್ತಲು ಅದನ್ನು ಮುಸುಕಲಿಲ್ಲ**. ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು;
ಆದರೂ **ಲೋಕವು ಆತನನ್ನು ಅರಿಯಲಿಲ್ಲ."** (ಯೋಹಾನ–1:5,10)

ಕೇಳಿಸಿಕೊಳ್ಳುತ್ತಿರುವ  ಸ್ನೇಹಿತರೇ, ಕರ್ತನಾದ ಯೇಸು ನಿಮ್ಮ ಹೃದಯ ಮತ್ತು ಮನಸ್ಸಿನ "ಕಣ್ಣುಗಳನ್ನು" ತೆರೆದಿದ್ದಾನೋ?  ಅಥವಾ
ನೀವು ಪಾಪದ ಮತ್ತು ಅಜ್ಞಾನದ ಕತ್ತಲೆಯಲ್ಲಿ ಇನ್ನೂ ಮುಗ್ಗರಿಸುತ್ತಿದ್ದೀರೋ?

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು.  ನಮ್ಮ ಮುಂದಿನ ಅಧ್ಯಯನದಲ್ಲಿ, ದೇವರ ಚಿತ್ತದಂತೆ, ಸುವಾರ್ತೆಯಲ್ಲಿರುವದನ್ನು ನಾವು ಮುಂದು
–ವರಿಸುತ್ತೇವೆ ಮತ್ತು ದೇವರ ಮಹಿಮೆಯು ಸೂರ್ಯನ ಹಾಗೆ ಯೇಸುವಿನಿಂದ ಹೇಗೆ ಪ್ರಕಾಶಿಸುತ್ತದೆ ಎನ್ನುವದನ್ನು ನೋಡಲಿದ್ದೇವೆ.

ಕರ್ತನಾದ ಯೇಸುವಿನ ಈ ಹೇಳಿಕೆಯನ್ನು ನೀವು ಗ್ರಹಿಸಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನಾನೇ ಲೋಕಕ್ಕೆ ಬೆಳಕು; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು."**
(ಯೋಹಾನ–8:12)

ಪಾಠ 75

## ಮಹಿಮೆಯ ಕರ್ತನು

ಮತ್ತಾಯ 16, 17

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಪಾಠದಲ್ಲಿ, ಸುವಾರ್ತೆಯಲ್ಲಿನ ನಮ್ಮ ಅಧ್ಯಯನದಲ್ಲಿ, ಕುಡುನಾಗಿ ಹುಟ್ಟಿದ ಒಬ್ಬ ಮನುಷ್ಯನ ಕಣ್ಣುಗಳನ್ನು ಮೆಸ್ಸೀಯನಾದ ಯೇಸು ಹೇಗೆ ತೆರೆದನೆಂಬುದನ್ನು ನಾವು ಕೇಳಿಸಿಕೊಂಡೆವು. ಯೇಸುವಿಗೆ ಯಾವುದೂ ಅಸಾಧ್ಯವಲ್ಲ ಯಾಕಂದರೆ ಆತನು ಒಬ್ಬ ಮನುಷ್ಯನಾಗಿ ಭೂಲೋಕದಲ್ಲಿ ಕಾಣಿಸಿಕೊಂಡ ದೇವರ ನಿಜವಾದ ವಾಕ್ಯವಾಗಿದ್ದಾನೆ. ಅದಕ್ಕೋಸ್ಕರವೇ ಗಾಳಿ, ಸಮುದ್ರ, ದುರಾತ್ಮ –
–ಗಳು, ರೋಗ ಮತ್ತು ಮರಣ ಮುಂತಾದ ಭೂಮಿಯ ಮೇಲಿರುವ ಪ್ರತಿಯೊಂದು ಶಕ್ತಿಯನ್ನೂ ಯೇಸು ನಿಯಂತ್ರಿಸುವದಕ್ಕೆ ಸಾಧ್ಯವಾಯಿತು. ಯೇಸು ಹೋದ ಪ್ರತಿಯೊಂದು ಕಡೆಯಲ್ಲೂ ಜನರ ಗುಂಪು ಆತನನ್ನು ಒತ್ತಿಕೊಂಡು ಬರುತ್ತಿತ್ತು ಆದೆ ಕೆವರು ಮಾತ್ರ ಆತನು ಯಾರೆಂಬುದನ್ನು ಗುರುತಿಸಿದ್ದರು. ಅವರು ಆತನನ್ನು ಒಬ್ಬ ಪ್ರವಾದಿಯೆಂಬುದಾಗಿ ಅಭಿಪ್ರಾಯಪಟ್ಟಿದ್ದರು, ಆದರೆ ದೇವರ ಎಲ್ಲಾ ಸರ್ವಸಂಪೂರ್ಣತೆಯು ಆತನಲ್ಲಿ ವಾಸವಾಗಿದೆಯೆಂಬುದನ್ನು ಅವರು ಗ್ರಹಿಸಿರಲಿಲ್ಲ. ಯೇಸು ಪರಲೋಕದಿಂದ ಬಂದಂತ ಮಹಿಮೆಯ ಕರ್ತನು ಎಂಬುದಾಗಿ ಅವರು ಅರ್ಥಮಾಡಿಕೊಳ್ಳಲಿಲ್ಲ. ಈದಿನದ ನಮ್ಮ ಪಾಠದಲ್ಲಿ, ದೇವರ ಚಿತ್ತದಂತೆ, ಕರ್ತನಾದ ಯೇಸು ದೇವರ ಮಹಿಮೆಯ ಬೆಳಕಿನಿಂದ ತುಂಬಿದ್ದನು ಎಂಬುದನ್ನು ಮತ್ತು ಆತನು ತನ್ನ ಮೂವರು ಶಿಷ್ಯರೊಂದಿಗೆ ಒಂದು ಬೆಟ್ಟದ ಮೇಲಿದ್ದಾಗ ಒಂದು ಕ್ಷಣಕ್ಕಾಗಿ ಇದನ್ನು ಹೇಗೆ ಪ್ರದರ್ಶಿಸಿದನೆಂಬುದನ್ನು ನಾವು ನೋಡಿಕೊಳ್ಳುತ್ತೇವೆ.

ಈಗ ಪರಿಶುದ್ಧ ಸುವಾರ್ತೆಗೆ ಹಿಂದಿರುಗೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಒಂದಾನೊಂದು ದಿವಸ ಆತನು ಏಕಾಂತವಾಗಿ ಪ್ರಾರ್ಥನೆ ಮಾಡುತ್ತಿರುವಾಗ ಆತನ ಶಿಷ್ಯರು ಆತನ ಸಂಗಡ ಇದ್ದರು. ಆತನು, "ನನ್ನನ್ನು ಸಾಮಾನ್ಯ ಜನರು ಯಾರು ಅನ್ನುತ್ತಾರೆ" ಎಂದು ಅವರನ್ನು ಕೇಳಿದ್ದಕ್ಕೆ ಅವರು, "ನಿನ್ನನ್ನು ಸ್ನಾನಿಕನಾದ ಯೋಹಾನನು ಅನ್ನುತ್ತಾರೆ; ಕೆಲವರು ಎಲೀಯನು ಅನ್ನುತ್ತಾರೆ; ಇನ್ನು ಕೆಲವರು ಪೂರ್ವದ ಪ್ರವಾದಿಗಳಲ್ಲಿ ಯಾವನೋ ಒಬ್ಬನು ಎದ್ದಿದ್ದಾನೆ" ಅನ್ನುತ್ತಾರೆ ಎಂದು ಹೇಳಿದರು. (ಲೂಕ–9:18). ಆದರೆ ಆತನು ಅವರನ್ನು, "ಆದರೆ ನೀವು ನನ್ನನ್ನು ಯಾರನ್ನುತ್ತೀರಿ ಎಂದು ಕೇಳ –ಲಾಗಿ ಸೀಮೋನ್ ಪೇತ್ರನು, "ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು" ಎಂದು ಉತ್ತರಕೊಟ್ಟನು. ಅದಕ್ಕೆ ಯೇಸು, "ಯೋನನ ಮಗನಾದ ಸೀಮೋನನೇ ನೀನು ಧನ್ಯನು; ಈ ಗುಟ್ಟು ನಿನಗೆ ತಿಳಿಸಿದವನು ನರಮನುಷ್ಯನಲ್ಲ, ಪರ – ಲೋಕದಲ್ಲಿರುವ ನನ್ನ ತಂದೆಯೇ ತಿಳಿಸಿದನು" ಅಂದನು (ಮತ್ತಾಯ–16:15-17)

ಇಲ್ಲಿಗೆ ನಿಲ್ಲಿಸೋಣ ಮತ್ತು ಒಂದು ದಿನ ಯೇಸು ತನ್ನ ಶಿಷ್ಯರೊಂಗಿದೆ ಏಕಾಂತದಲ್ಲಿರುವಗ ಕೇಳಿದ ಮುಖ್ಯವಾದ ಪ್ರಶ್ನೆಯನ್ನು ಆಲೋಚಿಸೋಣ. ಯೇಸು ಅವರಿಗೆ, "ಜನರು ನನ್ನನ್ನು ಯಾರು ಅನ್ನುತ್ತಾರೆ? ಎಂದು ಕೇಳಿದನು. ನೀನು ಪ್ರವಾದಿಗಳಲ್ಲಿ ಒಬ್ಬನು ಎಂಬುದಾಗಿ ಹೆಚ್ಚಿನ ಜನರು ಹೇಳುತ್ತಾರೆ ಎಂದು ಶಿಷ್ಯರು ಉತ್ತರಿಸಿದರು. ಆಗ ಯೇಸು ಮತ್ತೆ ಅವರಿಗೆ, "ಆದರೆ ನೀವು ನನ್ನನ್ನು ಯಾರನ್ನುತ್ತೀರಿ?" ಎಂದು ಕೇಳಿದಾಗ, ಶಿಷ್ಯರಲ್ಲಿ ಒಬ್ಬನಾದ ಸೀಮೋನ ಪೇತ್ರನು ಯೇಸುವಿಗೆ, **"ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು!"** ಎಂದು ಉತ್ತರಿಸಿದನು.

ನಿಜವಾಗಿಯೂ, ಯೇಸು ತನ್ನ ಶಿಷ್ಯರಿಗೆ ಯಾವ ಪ್ರಶ್ನೆಯನ್ನು ಕೇಳಿದ್ದನೋ ಅದು ನಾವು ಪ್ರತಿಯೊಬ್ಬರೂ ಉತ್ತರಿಸಬೇಕಾದಂತಹ ಪ್ರಾಮುಖ್ಯವಾದ ಪ್ರಶ್ನೆಯಾಗಿದೆ! ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ಯೇಸು ಯಾರಾಗಿದ್ದಾನೆಂದು ಅಭಿಪ್ರಾಯಪಡುತ್ತೀರಿ? ಆತನ ಕುರಿತು ನೀವು ಏನು ಆಲೋಚಿಸುತ್ತೀರಿ? ನೀವು ಆತನನ್ನು ಕೇವಲ ಪ್ರವಾದಿಗಳೊಂದಿಗೆ ವಿಂಗಡಿಸುತ್ತೀರೋ? ಅಥವಾ ಯೇಸುವನ್ನು, "ನೀನು ಬರಬೇಕಾಗಿರುವ ಕ್ರಿಸ್ತನು, ಜೀವಸ್ವರೂಪನಾದ ದೇವರ ಕುಮಾರನು"ಎಂಬ ಪೇತ್ರನ ಮಾತನ್ನು ಒಪ್ಪುತ್ತೀರೋ?

**ಯೇಸು ಯಾರೆಂಬುದಾಗಿ ನೀವು ಆಲೋಚಿಸುತ್ತೀರಿ?** ಬಹಳ ಹಿಂದೆ ನಮ್ಮ ಪೂರ್ವಿಕರಾದ ಆದಾಮ ಹವ್ವರು ಪಾಪ ಮಾಡಿದ ದಿನದಂದು ದೇವರು ವಾಗ್ದಾನ ಮಾಡಿದ ವಿಮೋಚಕನಾದ ಮೆಸ್ಸೀಯನೇ ಯೇಸು ಎಂಬುದನ್ನು ನೀವು ನಂಬುತ್ತೀರೋ? ಪರಲೋಕ –ದಿಂದ ಇಳಿದು ಬಂದಂತ ದೇವರ ವಾಕ್ಯವಾಗಿರುವ ಈ ಯೇಸು **"ಜೀವಸ್ವರೂಪನಾದ ದೇವರ ಕುಮಾರನು"** ಎಂಬುದನ್ನು ನೀವು ನಂಬುತ್ತೀರೋ?

ನಿಮಗೆ ಗೊತ್ತಿರುವಂತೆ, ಈ ವಾಸ್ತವ ದಿನದಲ್ಲಿ, **ಅನೇಕ ಜನರು ಯೇಸು ದೇವರ ಮಗನೆಂಬುದನ್ನು ಅಲ್ಲಗಳೆದರು**, ಯಾಕಂದರೆ ಒಬ್ಬ ವ್ಯಕ್ತಿ ಹೆಂಡತಿಯನ್ನು ತೆಗೆದುಕೊಂಡು ಆಕೆಯಿಂದ ಒಬ್ಬ ಮಗನನ್ನು ಪಡೆದನು ಎಂಬುದು ಈ ಹೆಸರಿನ ಅರ್ಥ ಎಂದು ಅವರು ಅಂದುಕೊಂಡಿದ್ದರು! ಆದರೆ ಇದು ಆ ರೀತಿಯ ಅರ್ಥವಲ್ಲ. ದೇವರ ಮಹಿಮೆಯು ಅದಕ್ಕಿಂತಲೂ ದೊಡ್ಡದು! ದೇವರು ಆತ್ಮ –ಸ್ವರೂಪನು ಮತ್ತು ಮನುಷ್ಯನ ಹಾಗೆ ಮಗುವನ್ನು ಪಡೆಯುವದಿಲ್ಲ, **ಆದರೆ ಅದು ಯೇಸುವನ್ನು ಆತನ ಮಗನೆಂಬುದಾಗಿ ಕರೆಯುವ –ದನ್ನು ತಡೆಯುವದಿಲ್ಲ**. ನಾವು ಇದನ್ನು ಈಗಾಗಲೇ ಈ ರೀತಿಯಲ್ಲಿ ಉದಾಹರಿಸಿದ್ದೇವೆ: ಒಂದುವೇಳೆ ನಾನು{ಸೆನೆಗಲ್‌ನ ರೇಡಿಯೋ ಸ್ಪೀಕರ್} ದೇಶದಿಂದ ಹೊರಗೆ ಹೋದರೆ, ಜನರು ನನ್ನನ್ನು "ಸೆನೆಗಲ್‌ನ ಮಗ" ಎಂದು ಕರೆಯುತ್ತಾರೆ, ಅಂದರೆ ಸೆನೆಗಲ್ ಒಬ್ಬ ಹೆಂಡತಿಯನ್ನು ತೆಗೆದುಕೊಂಡು ಒಬ್ಬ ಮಗನನ್ನು ಪಡೆಯಿತು ಎಂಬುದು ಇದರ ಅರ್ಥವಲ್ಲ! ಇಲ್ಲ, ನಾನು"ಸೆನೆಗಲ್‌ನ ಒಬ್ಬ ಮಗ" ಎಂದು ಕರೆಯಲ್ಪಡುತ್ತೇನೆ ಯಾಕಂದರೆ ನಾನು ಸೆನೆಗಲ್‌ನಿಂದ ಬಂದವನು.

ಅದಕ್ಕಾಗಿಯೇ ಇದು ಒಬ್ಬ ಕನ್ಯೆಯಲ್ಲಿ ಹುಟ್ಟಿದ ಮೆಸ್ಸೀಯನಾದ ಯೇಸುವಿಗೆ ಉಂಟಾಯಿತು. ಹುಟ್ಟುವದಕ್ಕಿಂತ ಮೊದಲು ಆತನು ಪರಲೋಕದಲ್ಲಿದ್ದನು. ಆತನು **"ಕಾಲಿಮತ್ ಅಲ್ಲಾಹ್"** ಮತ್ತು **"ರೂಹ್ ಅಲ್ಲಾಹ್"** ಅಂದರೆ ನಿಜವಾದ ವಾಕ್ಯ ಮತ್ತು ದೇವರ ಆತ್ಮ ಆಗಿದ್ದಾನೆ.{ಅರೆಬಿಕ್‌ನ ಈ ಶಬ್ದಗಳ ವಿವರಣೆಗಾಗಿ 61ನೆಯ ಪಾಠವನ್ನು ನೋಡಿರಿ} ಇದೊಂದು **ದೊಡ್ಡದಾದ ರಹಸ್ಯ**, ಆದರೆ ಅದ –ಕ್ಕಿಂತಲೂ ಇದು ಒಂದು **ದೊಡ್ಡದಾದ ಸತ್ಯವಾಗಿದೆ!** ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸುವದಕ್ಕೆ ಮಾತ್ರ ದೇವರು ತನ್ನ ಮಗನನ್ನು ಲೋಕಕ್ಕೆ ಕಳಿಸಲಿಲ್ಲ, ಆದರೆ ಆತನು ಯಾವ ರೀತಿಯಿದ್ದಾನೆ ಎಂಬುದನ್ನು ಸಹ ನಮಗೆ ತೋರಿಸುವದಕ್ಕೆ ಆತನನ್ನು ಕಳಿಸಿದನು. ಯೇಸು ದೇವರ ಮಗನೆಂಬುದಾಗಿ ಕರೆಯಲ್ಪಡುತ್ತಾನೆ ಯಾಕಂದರೆ **ಆತನು ದೇವರಿಂದ ಬಂದವನು** ಯಾಕಂದರೆ **ಆತನು ದೇವರ ಹಾಗಿದ್ದಾನೆ,** ಮತ್ತು ಯಾಕಂದರೆ **ಆತನು ನಿಜವಾದ ದೇವರ ವಾಕ್ಯವೂ ಮತ್ತು ದೇವರ ಆತ್ಮನೂ ಆಗಿದ್ದಾನೆ.** ಪ್ರೀತಿಯ ಸ್ನೇಹಿತರೇ, ನಾವು ಇದನ್ನು ನಂಬಿದರೂ ಅಥವಾ ಇದನ್ನು ನಂಬುವದನ್ನು ತಿರಸ್ಕರಿಸಿದರೂ ಸತ್ಯ ಮಾತ್ರ ಉಳಿದುಕೊಳ್ಳುತ್ತದೆ: ಅದೇನೆಂದರೆ **ಯೇಸು ಜೀವಸ್ವರೂಪನಾದ ದೇವರ ಮಗನು!**

ಈಗ ಮತ್ತಾಯನ ಸುವಾರ್ತೆಯಲ್ಲಿರುವದನ್ನು ಮುಂದುವರಿಸೋಣ ಮತ್ತು ಪೇತ್ರನು ಯೇಸುವನ್ನು ಬರಬೇಕಾದ ಮೆಸ್ಸೀಯನೂ ಜೀವಸ್ವರೂಪನಾದ ದೇವರ ಮಗನೂ ಎಂದು ಹೇಳಿದ ನಂತರ ಏನು ಸಂಭವಿಸಿತೆಂಬುದನ್ನು ಕೇಳಿಸಿಕೋಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

ಅಂದಿನಿಂದ ಯೇಸು ಕ್ರಿಸ್ತನು ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡಬೇಕೆಂದು ತನ್ನ ಶಿಷ್ಯರಿಗೆ ತಿಳಿಸುವದಕ್ಕೆ ಪ್ರಾರಂಭಮಾಡಿದನು. ಆಗ ಪೇತ್ರನು ಆತನ ಕೈ ಹಿಡಿದು, "ಸ್ವಾಮೀ, ದೇವರು ನಿನ್ನನ್ನು ಕಾಯಲಿ' ನಿನಗೆ ಹೀಗೆ ಎಂದಿಗೂ ಆಗ – –ಬಾರದು" ಎಂದು ಆತನನ್ನು ಗದರಿಸುವಕ್ಕೆ ಪ್ರಾರಂಭಿಸಲು ಆತನು ತಿರುಗಿಕೊಂಡು ಪೇತ್ರನಿಗೆ, "ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ" ಎಂದು ಹೇಳಿದನು. (ಮತ್ತಾಯ–16:21-23)

ಯೇಸು ತನ್ನ ಶಿಷ್ಯರಿಗೆ ಏನು ಹೇಳಿದನೆಂಬುದನ್ನು ಕೇಳಿಸಿಕೊಂಡಿರಾ? ತಾನು ಯೆರೂಸಲೇಮಿಗೆ ಹೋಗಿ ಅಲ್ಲಿ ಹಿರಿಯರಿಂದಲೂ ಮಹಾಯಾಜಕರಿಂದಲೂ ಶಾಸ್ತ್ರಿಗಳಿಂದಲೂ ಬಹು ಕಷ್ಟಗಳನ್ನನುಭವಿಸಿ ಕೊಲ್ಲಲ್ಪಟ್ಟು ಮೂರನೆಯ ದಿನದಲ್ಲಿ ಜೀವಿತನಾಗಿ ಎಬ್ಬಿಸಲ್ಪಡ –ಬೇಕೆಂದು ಯೇಸು ತನ್ನ ಶಿಷ್ಯರಿಗೆ ತಿಳಿಸಿದನು. ಹೀಗೆ ಯೇಸು ನಮ್ಮ ಪಾಪದ ಸಾಲಕ್ಕಾಗಿ ತನ್ನ ರಕ್ತವನ್ನು ಸುರಿಸಬೇಕೆನ್ನುವದನ್ನು ತಿಳಿಸಿದನು.

ಆದರೆ ಎಲ್ಲಾ ಬಲವನ್ನೂ ಮತ್ತು ಅಧಿಕಾರವನ್ನೂ ಹೊಂದಿರುವ ಕರ್ತನಾದ ಯೇಸುವನ್ನು ಹಿಡಿದು ಕಷ್ಟಗಳನ್ನು ಕೊಟ್ಟು ಆತನನ್ನು ಕೊಲ್ಲುವದಕ್ಕೆ ಯೆಹೂದ್ಯರ ಕೆಟ್ಟ ಅಧಿಕಾರಿಗಳಾದ ಹಿರಿಯರು ಮಹಾಯಾಜಕರು ಮತ್ತು ಶಾಸ್ತ್ರಿಗಳಿಗೆ ಅವಕಾಶ ಕೊಡುವದನ್ನು **ಪೇತ್ರನು ಒಪ್ಪಿಕೊಳ್ಳಲಿಲ್ಲ**. ಅದಕ್ಕಾಗಿಯೇ ಪೇತ್ರನು ಯೇಸುವಿಗೆ, "ಸ್ವಾಮೀ, ನಿನಗೆ ಹೀಗೆ ಎಂದಿಗೂ ಆಗಬಾರದು" ಎಂದು ಹೇಳಿದನು. ಆದಾಗ್ಯೂ, ಪಾಪವನ್ನು ನಿವಾರಿಸುವದಕ್ಕೆ ಒಂದು ಯಜ್ಞದಂತೆ ತನ್ನ ರಕ್ತವನ್ನು ಸುರಿಸುವದಕ್ಕೆ ಈ ಲೋಕಕ್ಕೆ ತಾನು ಬಂದಿದ್ದೇನೆ

ಎಂಬುದನ್ನು ಯೇಸು ತಿಳಿದಿದ್ದನು. ಅದಕ್ಕೆ ಯೇಸು ಪೇತ್ರನಿಗೆ, **"ಸೈತಾನನೇ, ನನ್ನ ಮುಂದೆ ನಿಲ್ಲಬೇಡ, ನಡೆ, ನನಗೆ ನೀನು ವಿಘ್ನ –ವಾಗಿದ್ದೀ; ನಿನ್ನ ಯೋಚನೆ ಮನುಷ್ಯರ ಯೋಚನೆಯೇ ಹೊರತು ದೇವರದಲ್ಲ"** ಎಂದು ಹೇಳುವದಕ್ಕೆ ಕಾರಣವಾಯಿತು.

ತಾನು ಲೋಕಕ್ಕೆ ಯಾಕೆ ಬಂದಿದ್ದೇನೆಂಬುದು **ಯೇಸುವಿಗೆ ತಿಳಿದಿತ್ತು.** ಬಹಳ ಹಿಂದೆಯೇ ದೇವರ ಪ್ರವಾದಿಗಳು ತಿಳಿಸಿದ ಹಾಗೆ ಪಾಪಿಗಳಿಗಾಗಿ ತನ್ನ ಪವಿತ್ರವಾದ ರಕ್ತವನ್ನು ಸುರಿಸುವದರಿಂದ ತನ್ನ ಜೀವವನ್ನು ಕೊಡುವದಕ್ಕೆ ಆತನು ಬಂದನು. ಯೇಸು ಬಂದದ್ದರಿಂದ ಯಜ್ಞದ ಕುರಿಯ ಗುರುತು ಆತನಲ್ಲಿ ನೆರವೇರುವದಕ್ಕೆ ಸಾಧ್ಯವಾಯಿತು. ಅಹ್, ಜೊತೆ ಕೇಳಿಗರೇ, ಒಂದುವೇಳೆ ನಾವು ಈದಿನದ ನಮ್ಮ ಪಾಠದಿಂದ ಒಂದು ಸಂಗತಿಯನ್ನು ಮಾತ್ರ ನೆನಪಿನಲ್ಲಿಡಬೇಕಾದರೆ, ಅದು ಇದಾಗಿರಲಿ: **ಮೆಸ್ಸೀಯನಾದ ಯೇಸು ನನ್ನ ಮತ್ತು ನಿನ್ನ ಪಾಪಕ್ಕಾಗಿ ದಂಡತೆರುವದಕ್ಕೆ ಒಂದು ಯಜ್ಞದಂತೆ ಮರಣಹೊಂದುವದಕ್ಕೆ ಲೋಕಕ್ಕೆ ಬಂದನು!** ಎಂಬದು. ದೇವರ ಚಿತ್ತವಾದರೆ, ಈಗಿನಿಂದ ಕೆಲವು ಪಾಠಗಳಲ್ಲಿ, ಯೇಸು ತನ್ನ ಮರಣ ಮತ್ತು ಪುನರುತ್ಥಾನಗಳ ಕುರಿತು ಯೆರೂಸಲೇಮಿನಲ್ಲಿ ಹೇಗೆ ಪ್ರವಾದಿಸಿದನೆಂಬುದನ್ನು ನಾವು ನೋಡುತ್ತೇವೆ. ಹಾಗೆಯೇ ಸ್ನೇಹಿತರೇ, ಬಹಳ ಹಿಂದೆ ಪ್ರವಾದಿಗಳು ಮತ್ತು ಕರ್ತನಾದ ಯೇಸು ಏನು ಪ್ರವಾದಿಸಿದ್ದಾರೋ ಅದರೊಂದಿಗೆ ಒಪ್ಪಿಗೆಯಾಗದಿರುವಂತಹ ಬೇರೊಂದು ಸಂದೇಶವನ್ನು ಕೆಲವರು ತಿಳಿಸಿದರೂ ಸಹ, ಯೇಸುವಿನ ಮರಣ ಪುನರುತ್ಥಾನಕ್ಕೆ ಸಂಬಂಧಿಸಿದಂತ ಸತ್ಯವು ಬದಲಾಗುವದಿಲ್ಲ. **ದೇವರು ಸ್ವತ: ಶಿಲುಬೆಯ ಮೇಲಿನ ಮೆಸ್ಸೀಯನ ಮರಣವನ್ನು ನಿರ್ಣಯಿಸಿದ್ದಾನೆ,** ಮತ್ತು ಯಾರೊಬ್ಬರೂ ದೇವರ ಈ ನಿರ್ಣಯವನ್ನು ಬದಲಾಯಿಸುವದಕ್ಕಾಗುವದಿಲ್ಲ! **ಯೇಸು ಒಂದು ಪ್ರಧಾನ ಯಜ್ಞದಂತೆ ಸಾಯುವದಕ್ಕೆ ಆಯ್ಕೆಯಾಗಿದ್ದನು.** ಆತನು ನಿನ್ನನ್ನು ಮತ್ತು ನನ್ನನ್ನು ಪ್ರೀತಿಸಿದನು ಮತ್ತು ನಾವು ನಾಶ – –ವಾಗುವದು ಆತನಿಗೆ ಇಷ್ಟವಿರಲಿಲ್ಲ ಆದದರಿಂದ ಆತನು ಇದನ್ನು ಮಾಡಿದನು.

ಯೆರೂಸಲೇಮಿನಲ್ಲಿ ತನ್ನ ಜೀವವನ್ನು ಸಮರ್ಪಿಸುತ್ತೇನೆಂದು ಯೇಸು ತನ್ನ ಶಿಷ್ಯರಿಗೆ ತಿಳಿಯುವಂತೆ ಮಾಡಿದ ಒಂದು ವಾರದ ನಂತರ ಏನಾಯಿತೆಂಬುದನ್ನು ಈಗ ನಾವು ನೋಡಿಕೊಳ್ಳೋಣ. ವಾಕ್ಯ ಹೀಗೆ ಹೇಳುತ್ತದೆ:

ಆರು ದಿವಸಗಳಾದ ಮೇಲೆ ಯೇಸು ಪೇತ್ರನನ್ನೂ ಯಾಕೋಬನನ್ನೂ ಇವನ ತಮ್ಮನಾದ ಯೋಹಾನನನ್ನೂ ಮಾತ್ರ ವಿಂಗಡವಾಗಿ ಕರಕೊಂಡು ಎತ್ತರವಾದ ಬೆಟ್ಟಕ್ಕೆ ಹೋದನು. ಅಲ್ಲಿ ಅವರ ಕಣ್ಣ ಮುಂದೆ **ಆತನ ರೂಪ ಬೇರೆಯಾಯಿತು; ಆತನ ಮುಖವು ಸೂರ್ಯನ –ಹಾಗೆ ಪ್ರಕಾಶಿಸಿತು; ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗಾದವು.** (ಮತ್ತಾಯ–17:1)

ಇದಲ್ಲದೆ ಇಬ್ಬರು ಪುರುಷರು ಆತನ ಸಂಗಡ ಮಾತಾಡುತ್ತಿದ್ದರು. ಅವರು ಯಾರೆಂದರೆ ಮೋಶೆಯೂ ಎಲೀಯನೂ. ಇವರು ವೈಭವದೊಡನೆ ಕಾಣಿಸಿಕೊಂಡು ಯೆರೂಸಲೇಮಿನಲ್ಲಿ ಆತನು ನೆರವೇರಿಸಬೇಕಾಗಿದ್ದ ಮರಣದ ವಿಷಯವಾಗಿ ಮಾತಾಡುತ್ತಿದ್ದರು. ಆಗ ಪೇತ್ರನು ಯೇಸುವಿಗೆ, **"**ಸ್ವಾಮೀ, ನಾವು ಇಲ್ಲೇ ಇರುವದು ಒಳ್ಳೇದು. ಅಪ್ಪಣೆಯಾದರೆ ಇಲ್ಲಿ ಮೂರು ಪರ್ಣಶಾಲೆಗಳನ್ನು ಕಟ್ಟುವೆನು; ನಿನಗೊಂದು, ಮೋಶೆಗೊಂದು ಎಲೀಯನಿಗೊಂದು**"** ಎಂದು ಹೇಳಿದನು. ಹೀಗೆ ಮಾತಾಡುತ್ತಿರುವಾಗಲೇ ಕಾಂತಿಯುಳ್ಳ ಮೋಡವು ಅವರ ಮೇಲೆ ಕವಿಯಿತು. ಇದಲ್ಲದೆ ಆ ಮೋಡದೊಳಗಿಂದ, **"ಈತನು ಪ್ರಿಯನಾಗಿರುವ ನನ್ನ ಮಗನು; ಈತನನ್ನು ನಾನು ಮೆಚ್ಚಿದ್ದೇನೆ; ಈತನ ಮಾತನ್ನು ಕೇಳಿರಿ!"** ಎಂಬ ಆಕಾಶವಾಣಿ ಆಯಿತು. ಶಿಷ್ಯರು ಇದನ್ನು ಕೇಳಿ ಬಹಳವಾಗಿ ಹೆದರಿ ಬೋರಲ ಬಿದ್ದರು. ಆದರೆ ಯೇಸು ಹತ್ತರಕ್ಕೆ ಬಂದು ಅವರನ್ನು ಮುಟ್ಟಿ, **"**ಏಳಿರಿ, ಹೆದರಬೇಡಿರಿ**"** ಅಂದನು. ಅವರು ಕಣ್ದೆರೆದು ನೋಡಿದಾಗ ಯೆಸುವನ್ನೇ ಹೊರತು ಮತ್ತಾರನ್ನೂ ಕಾಣಲಿಲ್ಲ. ಅವರು ಆ ಬೆಟ್ಟದಿಂದ ಇಳಿದು ಬರುತ್ತಿರುವಾಗ ಯೇಸು ಅವರಿಗೆ, **"**ನೀವು ಈಗ ಕಂಡ ದರ್ಶನವನ್ನು ಮನುಷ್ಯಕುಮಾರನು ಸತ್ತು ಜೀವಿತನಾಗಿ ಎಬ್ಬಿಸಲ್ಪಡುವತನಕ ಯಾರಿಗೂ ಹೇಳಬೇಡಿರೆಂದು**"** ಖಂಡಿತವಾಗಿ ಹೇಳಿದನು. (ಮತ್ತಾಯ–17:1,2; ಲೂಕ–9:30,31; ಮತ್ತಾಯ–17:4-9)

ಎತ್ತರವಾದ ಬೆಟ್ಟದ ಮೇಲೆ ಏನಾಯಿತೆಂಬುದು ನಿಮಗೆ ಚೆನ್ನಾಗಿ ಅರ್ಥವಾಯಿತಾ? ಇದೊಂದು ಆಶ್ಚರ್ಯವಾದ ಮತ್ತು ಅದ್ಭುತವಾದ ಘಟನೆಯಾಗಿತ್ತು! ಯೇಸುವಿನ ಹೊರಗಿನ ಕಾಣುವಿಕೆಯು ರೂಪಾಂತರಗೊಂಡಿತ್ತು, ಆತನ ಮುಖವು ಸೂರ್ಯನ ಹಾಗೆ ಪ್ರಕಾಶಿಸು – –ತ್ತಿತ್ತು ಮತ್ತು ಆತನ ಉಡುಪು ಬೆಳಕಿನಂತೆ ಬೆಳ್ಳಗಾದವು ಎನ್ನುವದನ್ನು ನಾವು ಓದಿದೆವು. ಗಂಭೀರವಾದ, ಕಣ್ಣುಕುಕ್ಕುವ ಬಿಳಿಯ ಬೆಳಕು ಪರಲೋಕದಲ್ಲಿ ದೇವರ ಸಿಂಹಾಸನವನ್ನು ಸುತ್ತುವರಿದು ದೇವರಿಂದ ಪ್ರಕಾಶಿಸುವ ಅದೇ ಬೆಳಕು ಈಗ ಯೇಸುವಿನಿಂದ ಪ್ರಕಾಶಿಸುತ್ತಿತ್ತು! ಅರಣ್ಯದಲ್ಲಿ ಮೋಶೆಯು ಮತ್ತು ಇಸ್ರಾಯೇಲ್ಯರು ಇದ್ದ ದಿನದಲ್ಲಿ ದೇವದರ್ಶನದ ಗುಡಾರದಲ್ಲಿ ಅತೀ ಪರಿಶುದ್ಧ ಸ್ಥಳವನ್ನು ಮಹಿಮೆಯ ಬೆಳಕು ತುಂಬಿರುತ್ತಿತ್ತು, ಅದೇ ಮಹಿಮೆ ಯೇಸುವಿನಲ್ಲಿತ್ತು, ಅದಾಗ್ಯೂ ಜನರು ಇದನ್ನು ನೋಡುವದಕ್ಕಾಗ – –ಲಿಲ್ಲ. ಆದರೆ ಸ್ವಲ್ಪ ಕ್ಷಣಿಕವಾದ ಕ್ಷಣಗಳಿಗಾಗಿ, ಯೇಸುವಿನ ಪ್ರಸನ್ನತೆಯಲ್ಲಿ ಮೂವರು ಶಿಷ್ಯರಿಗೆ, ಯೇಸುವಿನ ಶರೀರದಲ್ಲಿ ಬಚ್ಚಿಟ್ಟಿದ್ದ ತನ್ನ ಗಂಭೀರವಾದ ಮಹಿಮೆಯನ್ನು ದೇವರು ಅನಾವರಣ ಮಾಡಿದನು! ಅದೇ ಕ್ಷಣದಲ್ಲಿ, ಯೆರೂಸಲೇಮಿನಲ್ಲಿ ಯೇಸುವಿನ ಮರ –ಣಕ್ಕೆ ಸಂಬಂಧಿಸಿದಂತೆ ಆತನೊಂದಿಗೆ ಮಾತಾಡುವದಕ್ಕೆ ದೇವರು ಇಬ್ಬರು ಪ್ರವಾದಿಗಳನ್ನು ಅಂದರೆ ಮೋಶೆ ಮತ್ತು ಎಲೀಯನನ್ನು ಕೆಳಕ್ಕೆ ಕಳಿಸಿದನು. ಒಂದು ಹೊಳೆಯುವ ಮೋಡವು ಬೆಟ್ಟವನ್ನು ಮುಚ್ಚಿಕೊಂಡಿತು ಎಂಬುದನ್ನೂ ಸಹ ನಾವು ಓದಿಕೊಂಡೆವು ಮತ್ತು

ಸರ್ವಶಕ್ತನ ಸ್ವರವು ಮೋಡದೊಳಗಿಂದ **"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ, ಈತನ ಮಾತನ್ನು ಕೇಳಿರಿ!"** ಎಂದು ಆಕಾಶವಾಣಿ ಆಯಿತು.

ಇದೆಲ್ಲಾದಕ್ಕೂ ಕಾರಣವೇನಾಗಿತ್ತು? ದೇವರು ಈ ಎಲ್ಲಾ ಮಹಿಮೆಯುಳ್ಳ ಸಂಗತಿಗಳನ್ನು ಪೇತ್ರ, ಯೋಹಾನ ಮತ್ತು ಯಾಕೋಬರ ಎದುರಿನಲ್ಲಿ ಯಾಕೆ ಮಾಡಿದನು? ಇದಕ್ಕೆ ಕಾರಣವೇನೆಂದರೆ, ಯೇಸು ಪರಲೋಕದಿಂದ ಬಂದ ದೇವರ ನಿತ್ಯತ್ವದ ಮಗನು ಎಂಬ ಸತ್ಯವನ್ನು ಮತ್ತು ಅದಕ್ಕಾಗಿ ಎಲ್ಲರೂ ಆತನ ಮಾತನ್ನು ಕೇಳಬೇಕೆಂಬ ಬಲವಾದ ಸಾಕ್ಷಿಯನ್ನು ಈ ಮೂವರು ಕೊಡಬೇಕೆಂದು ದೇವರು ಅಪೇಕ್ಷಿಸಿದ್ದನು! ಅದಕ್ಕೋಸ್ಕರವೇ ವಾಕ್ಯವು ದೃಢವಾಗಿ ಹೇಳುವದೇನೆಂದರೆ:

"ಮಗನಿಗೆ ಮಾನ ಕೊಡದವನು ಅವನನ್ನು ಕಳುಹಿಸಿದ ಮಗನಿಗೂ ಮಾನಕೊಡದವನಾಗಿದ್ದಾನೆ." (ಯೋಹಾನ–5:243).
"ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು ಈ ಅಂತ್ಯದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ. ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿ–ದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವಾಗಿದ್ದು ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸಾರೂಢನಾದನು." (ಇಬ್ರಿಯ–1:1-3)

ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು ಯೇಸುವಿನ ಕುರಿತು ಏನು ಅಂದುಕೊಂಡಿದ್ದೀರಿ? ಆತನ ಕುರಿತು ಏನು ಹೇಳುತ್ತೀರಿ? ಯೇಸು ಪರಲೋಕದಿಂದ ಬಂದ ಮಹಿಮೆಯ ಕರ್ತನು ಎಂಬುದಾಗಿ ನೀವು ನಂಬುತ್ತೀರೋ? ಅಥವಾ ಲೋಕದಲ್ಲಿ ಅನೇಕ ಜನರು ಮಾಡುವ ಹಾಗೆ ಕೇವಲ ಈತನನ್ನು ಪ್ರವಾದಿಗಳೊಂದಿಗೆ ವಿಂಗಡಿಸುತ್ತೀರೋ? ಈದಿನ ನಾವು ನಿಮಗೆ ವಿದಾಯ ಹೇಳುವದಕ್ಕಿಂತ ಮುಂಚೆ, ಬೆಟ್ಟದ ತುದಿಯಲ್ಲಿ ಯೇಸುನಿಂದ ಹೊರಟ ದೇವರ ಮಹಿಮೆಯ ಬೆಳಕನ್ನು ನೋಡಿದ ಸುಮಾರು ವರ್ಷಗಳ ನಂತರ ಪರಿ–ಶುದ್ಧ ವಾಕ್ಯಗಳನ್ನು ಬರೆದಂತಹ ಯೇಸುವಿನ ಶಿಷ್ಯರಾದ ಪೇತ್ರ ಮತ್ತು ಯೋಹಾನರ ಕೆಲವು ಉದಾಹರಣೆಗಳನ್ನು ಕೇಳಿಸಿಕೊಳ್ಳುವ.

ಅಪೊಸ್ತಲನಾದ ಪೇತ್ರನು ಹೀಗೆ ಬರೆದಿದ್ದಾನೆ:

"ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಕ್ತಿಯನ್ನೂ ಪ್ರತ್ಯಕ್ಷತೆಯನ್ನೂ ನಿಮಗೆ ತಿಳಿಯಪಡಿಸಿದ್ದರಲ್ಲಿ ಚಮತ್ಕಾರದಿಂದ ಕಲ್ಪಿಸಿದ ಕಥೆಗಳನ್ನು ನಾವು ಅನುಸರಿಸುವವರಾಗಿರಲಿಲ್ಲ. **ಆತನ ಮಹತ್ತನ್ನು ಕಣ್ಣಾರೆ ಕಂಡವರಾಗಿಯೇ ತಿಳಿಯಪಡಿಸಿದೆವು.** ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ಮೆಚ್ಚಿದ್ದೇನೆ ಎಂಬಂಥ ವಾಣಿಯು ಸರ್ವೋತ್ಕೃಷ್ಟ ಪ್ರಭಾವದಿಂದ ಆತನಿಗೆ ಉಂಟಾದದ್ದರಲ್ಲಿ ಆತನು ತಂದೆ––ಯಾದ ದೇವರಿಂದ ಘನಮಾನಗಳನ್ನು ಹೊಂದಿದನಲ್ಲವೇ. ನಾವು ಪರಿಶುದ್ಧ ಪರ್ವತದ ಮೇಲೆ ಆತನ ಸಂಗಡ ಇದ್ದಾಗ ಆಕಾಶ–ದಿಂದ ಬಂದ **ಆ ವಾಣಿಯನ್ನು ನಾವೇ ಕೇಳಿದೆವು."** (2ಪೇತ್ರ–1:16-18)

ಅಪೊಸ್ತಲನಾದ ಯೋಹಾನನು ಹೀಗೆ ಬರೆದಿದ್ದಾನೆ:

"ನಾವು ನಿಮಗೆ ಪ್ರಸಿದ್ಧಿಪಡಿಸುವ ಜೀವವಾಕ್ಯವು ಆದಿಯಿಂದ ಇದ್ದದ್ದು. ನಾವು ಅದನ್ನು **ಕಿವಿಯಾರೆ ಕೇಳಿ ಕಣ್ಣಾರೆ ಕಂಡು** ಮನಸ್ಸಿಟ್ಟು ನೋಡಿ ಕೈಯಿಂದ ಮುಟ್ಟಿದ್ದೇವೆ. ಆ ಜೀವವು ಪ್ರತ್ಯಕ್ಷವಾಯಿತು; ತಂದೆಯ ಬಳಿಯಲ್ಲಿದ್ದು ನಮಗೆ ಪ್ರತ್ಯಕ್ಷವಾದಂಥ ಆ ನಿತ್ಯಜೀವವನ್ನು ನಾವು ಕಂಡು ಅದನ್ನು ಕುರಿತು ಸಾಕ್ಷಿಹೇಳಿ ಅದನ್ನು ನಿಮಗೆ ಪ್ರಸಿದ್ಧಿಪಡಿಸುತ್ತೇವೆ. ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯ–ದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿವನಾಗಿದ್ದನು."(1ಯೋಹಾನ–1:1,2; ಯೋಹಾನ–1:14)

ಯೋಹಾನನ ಸುವಾರ್ತೆಯ ಕೊನೆಯಲ್ಲಿ ಅವನು ಬರೆದಿರುವದೇನೆಂದರೆ,

"ಯೇಸು ಇನ್ನೂ ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. **ಆದರೆ ಯೇಸು ದೇವಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ, ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ.** (ಯೋಹಾನ–20:30,31)

ಇದೆಲ್ಲವೂ ಅರ್ಥಮಾಡಿಕೊಳ್ಳುವದಕ್ಕೆ ನಿಮಗೆ ಕಷ್ಟವಾಗಿದೆಯಾ? ಈ ಅದ್ಭುತವಾದ ಸತ್ಯಗಳಲ್ಲಿ ನಿಮಗೆ ವಿವೇಕವನ್ನು ಕೊಡುವದಕ್ಕೆ ದೇವರು ಇಷ್ಟಪಡುತ್ತಾನೆ. ವಾಕ್ಯ ಹೀಗೆ ಹೇಳುತ್ತದೆ:

**"**ಪ್ರಾಕೃತಮನುಷ್ಯನು ದೇವರಾತ್ಮನ ವಿಷಯಗಳನ್ನು ಬೇಡವೆನ್ನುತ್ತಾನೆ; ಅವು ಅವನಿಗೆ ಹುಚ್ಚು ಮಾತಾಗಿ ತೋರುತ್ತವೆ; ಅವು ಆತ್ಮ ವಿಚಾರದಿಂದ ತಿಳಿಯತಕ್ಕವುಗಳಾಗಿರಲಾಗಿ ಅವನು ಅವುಗಳನ್ನು ಗ್ರಹಿಸಲಾರನು. ಆದರೂ ಪ್ರವೀಣರಲ್ಲಿ ಜ್ಞಾನವನ್ನೇ ಹೇಳುತ್ತೇವೆ. ಅದು ಇಹಲೋಕದ ಜ್ಞಾನವಲ್ಲ, ಇಲ್ಲದೆ ಹೋಗುವ ಇಹಲೋಕಾಧಿಕಾರಿಗಳ ಜ್ಞಾನವೂ ಅಲ್ಲ. ಇದುವರೆಗೆ ಗುಪ್ತವಾಗಿದ್ದ ಸತ್ಯಾರ್ಥ ––ವನ್ನು ತಿಳಿಸುವಲ್ಲಿ ದೇವರ ಜ್ಞಾನವನ್ನೇ ಹೇಳುತ್ತೇವೆ. ಅದು ಯಾವದೆಂದರೆ **ದೇವರು** ನಮ್ಮ ಮಹಿಮೆಗಾಗಿ ಲೋಕೋತ್ಪತ್ತಿಗಿಂತ ಮೊದಲೇ ನೇಮಿಸಿ ಇದುವರೆಗೆ **ಮರೆಮಾಡಿದ ಜ್ಞಾನವೇ**. ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ.**"** (1ಕೊರಿಂಥ–2:14; 6-8)

ಈದಿನ ನಾವು ಓದಿರುವದನ್ನು ದೇವರು ಸ್ಪಷ್ಟಪಡಿಸಲಿ. . . .

ಕರ್ತನಾದ ಯೇಸುವಿನ ಕುರಿತು ಬೆಟ್ಟದ ಮೇಲೆ ಸರ್ವಶಕ್ತನಾದ ದೇವರು ಹೇಳಿದ್ದರ ಕುರಿತು ಮುಂದಿನ ಸಲದವರೆಗೆ ಆಲೋಚಿಸು ––ತ್ತಿರಿ. ಆತನು ಹೇಳಿರುವದೇನೆಂದರೆ;

**"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ, ಈತನ ಮಾತನ್ನು ಕೇಳಿರಿ!"** (ಮತ್ತಾಯ–17:5)

ಪಾಠ 76

# ಒಳ್ಳೇ ಕುರುಬನು

ಯೋಹಾನ 10

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಪಾಠದಲ್ಲಿ, **ತಾನು ಯೆರೂಸಲೇಮಿನಲ್ಲಿ ಮರಣಹೊಂದಿ ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬರುತ್ತೇನೆಂದು** ಕರ್ತ –ನಾದ ಯೇಸು ತನ್ನ ಶಿಷ್ಯರಿಗೆ ಹೇಳಿದ್ದನ್ನು ನಾವು ಕೇಳಿಸಿಕೊಂಡೆವು. ಪಾಪವನ್ನು ನಿವಾರಣೆ ಮಾಡುವದಕ್ಕೆ ಒಂದು ಯಜ್ಞದಂತೆ ತನ್ನ ರಕ್ತವನ್ನು ಸುರಿಸುವದಕ್ಕೆ ತಾನು ಲೋಕದಲ್ಲಿ ಹುಟ್ಟಿಬಂದಿದ್ದೇನೆಂಬುದನ್ನು ಯೇಸು ತಿಳಿದಿದ್ದನು. ತನ್ನ ಮೂವರು ಶಿಷ್ಯರೊಂದಿಗೆ ಬೆಟ್ಟದ ಮೇಲಿದ್ದಾಗ ತನ್ನ ಶ್ರೇಷ್ಠವಾದ ಮಹಿಮೆಯನ್ನು ಕರ್ತನಾದ ಯೇಸು ಪ್ರದರ್ಶಿಸಿದ್ದನ್ನೂ ಸಹ ನಾವು ಹಿಂದಿನ ಸಲ ನೋಡಿ – –ಕೊಂಡೆವು. ಯೇಸುವಿನ ಮುಖವು ಸೂರ್ಯನಂತೆ ಪ್ರಕಾಶಿಸುತ್ತಿತ್ತು ಮತ್ತು ಆತನ ವಸ್ತ್ರಗಳು ಬೆಳಕಿನಂತೆ ಬೆಳ್ಳಗೆ ಹೊಳೆಯುತ್ತಿದ್ದವು. ಹೀಗೆ ಯೇಸುವಿನಲ್ಲಿ ನೆಲೆಯಾಗಿದ್ದ ದೇವರ ಮಹಿಮೆಯು ತಾನಾಗಿಯೇ ಪ್ರಕಟಗೊಂಡಿತು.

ಈ ದಿನ ನಾವು ಪರಿಶುದ್ದ ಸುವಾರ್ತೆಯಲ್ಲಿರುವದನ್ನು ಮುಂದುವರಿಸುವದಕ್ಕೆ ಇಷ್ಟಪಡುತ್ತೇವೆ ಮತ್ತು ತನ್ನನ್ನು ಹಿಂಬಾಲಿಸಿದವರನ್ನು **ತೃಪ್ತಿಗೊಂಡ ಕುರಿಯೊಂದಿಗೆ** ಕರ್ತನಾದ ಯೇಸು ಹೇಗೆ ಹೋಲಿಸಿದನೆಂಬುದನ್ನು ಕೇಳಿಸಿಕೊಳ್ಳಲಿದ್ದೇವೆ. ದೇವರು ಆದಾಮನ ಸಂತತಿ –ಯನ್ನು ಕುರುಬನಿಲ್ಲದ **ಕಳೆದು ಹೋದ** ಕುರಿಗೆ ಪದೇ ಪದೇ ಹೋಲಿಸಿರುವದನ್ನು ಪ್ರವಾದಿಗಳ ಬರಹಗಳಲ್ಲಿ ನಾವು ಈಗಾಗಲೇ ನೋಡಿದ್ದೇವೆ. ಆದಾಗ್ಯೂ, ಕುರುಬನಿಲ್ಲದ ಕುರಿಯು ನಾಶವಾದ ಹಾಗೆ ಆದಾಮನ ಸಂತತಿಯು ನಾಶವಾಗುವದಕ್ಕೆ ದೇವರು ಅಪೇಕ್ಷಿಸ –ಲಿಲ್ಲ. ಅದೇ ಕಾರಣಕ್ಕಾಗಿ ಆತನು, ನಮ್ಮ ಕೆಟ್ಟ ವೈರಿಗಳಾದ ಸೈತಾನ, ಪಾಪ ಮರಣ ಮತ್ತು ನರಕದಿಂದ ನಮ್ಮನ್ನು ರಕ್ಷಿಸುವದಕ್ಕೆ ಮತ್ತು ಸಮಾಧಾನದ ಮಾರ್ಗದಲ್ಲಿ ನಮ್ಮನ್ನು ನಡೆಸುವದಕ್ಕೆ ಒಬ್ಬ ಶಕ್ತನಾದ ಕುರುಬನನ್ನು ಪರಲೋಕದಿಂದ ಕಳಿಸಿದನು. ಆದಾಮನ ಸಂತತಿಗೆ ದೇವರು ಕಳುಹಿಸಿದ **ಆ ಒಳ್ಳೇ ಕುರುಬನು ಯಾರೆಂದು ನಿಮಗೆ ಗೊತ್ತಾ?** ನಿಮಗೆ ಗೊತ್ತಿಲ್ಲದಿದ್ದರೆ, ಈ ದಿನದ ಪಾಠವನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ.

ನಾವು ಯೋಹಾನನ ಸುವಾರ್ತೆಯ ಹತ್ತನೆಯ ಅಧ್ಯಾಯವನ್ನು ಓದುತ್ತಿದ್ದೇವೆ, ಯೇಸು ತನ್ನ ಸುತ್ತಲೂ ಸೇರಿಬಂದಿದ್ದ ಜನರ ಗುಂಪಿಗೆ ಹೇಳಿದ್ದೇನೆಂದರೆ:

ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಕುರೀಹಟ್ಟಿಯೊಳಗೆ ಬಾಗಲಿಂದ ಬಾರದೆ ಮತ್ತೆಲ್ಲಿಂದಾದರೂ ಹತ್ತಿಬರುವವನು **ಕಳ್ಳನೂ ಸುಲು – ಕೊಳ್ಳುವವನೂ** ಆಗಿದ್ದಾನೆ. ಬಾಗಲಿಂದ ಒಳಗೆ ಬರುವವನು ಆ ಕುರಿಗಳ ಕುರುಬನು. . ..**ಈ ಉಪಮಾನವನ್ನು** ಯೇಸು ಅವರಿಗೆ ಹೇಳಿದನು; ಆದರೂ ಆತನ ಮಾತಿನ ಅರ್ಥವನ್ನು ಅವರು ಗ್ರಹಿಸಲಿಲ್ಲ. ಆದಕಾರಣ ಯೇಸು ಮತ್ತೂ ಅವರಿಗೆ, "ನಿಮಗೆ ನಿಜನಿಜ – –ವಾಗಿ ಹೇಳುತ್ತೇನೆ ಕುರಿಗಳಿಗೆ ನಾನೇ ಬಾಗಲಾಗಿದ್ದೇನೆ. **ನಾನೇ ಆ ಬಾಗಲು** ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು ಒಳಗೆ ಹೋಗುವನು, ಹೊರಗೆ ಬರುವನು, ಮೇವನ್ನು ಕಂಡುಕೊಳ್ಳುವನು. ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರ –ಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು. **ನಾನೇ ಒಳ್ಳೇ ಕುರುಬನು**; ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ ತನ್ನ ಪ್ರಾಣವನ್ನು ಕೊಡುತ್ತಾನೆ. ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಆಗಿರದೆ ತೋಳ ಬರುವದನ್ನು ಕಾಣುತ್ತಲೇ ಕುರಿ –ಗಳನ್ನು ಬಿಟ್ಟು ಓಡಿಹೋಗುತ್ತಾನೆ; ತೋಳವು ಅವುಗಳನ್ನು ಹಿಡುಕೊಂಡು ಹಿಂದನ್ನು ಚದರಿಸುತ್ತದೆ. ಅವನು ಕೂಲಿಯಾಳು; ಕುರಿಗಳ ಚಿಂತೆ ಅವನಿಗಿಲ್ಲ. ನಾನೇ ಒಳ್ಳೇ ಕುರುಬನು; ತಂದೆಯು ನನ್ನನ್ನು ನಾನು ತಂದೆಯನ್ನು ತಿಳಿದಿರುವಂತೆಯೇ ನಾನು ನನ್ನ ಕುರಿಗಳನ್ನು ತಿಳಿದಿದ್ದೇನೆ; ನನ್ನ ಕುರಿಗಳು ನನ್ನನ್ನು ತಿಳಿದವೆ; ಮತ್ತು ಕುರಿಗಳಿಗೋಸ್ಕರ ನನ್ನ ಪ್ರಾನವನ್ನು ಕೊಡುತ್ತೇನೆ. ನಾನು ತಿರಿಗಿ ಪಡಕೊಳ್ಳುತ್ತೇ– ನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ

ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವ –ದಕ್ಕೆ ನನಗೆ ಅಧಿಕಾರ ಉಂಟು; ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ ಅಂದನು." (ಯೋಹಾನ–10:1,2; 6-15; 17,18)

ಈ ಮಾತುಗಳ ದೆಸೆಯಿಂದ ಯೆಹೂದ್ಯರಲ್ಲಿ ತಿರಿಗಿ ಭೇದವಾಯಿತು. ಅವರಲ್ಲಿ ಅನೇಕರು, "ಅವನಿಗೆ ದೆವ್ವಹಿಡಿದದೆ, ಹುಚ್ಚು ಹಿಡಿದದೆ, ಯಾಕೆ ಅವನ ಮಾತು ಕೇಳುತ್ತೀರಿ?" ಅಂದರು. ಮತ್ತು ಕೆಲವರು, "ಇವು ದೆವ್ವ ಹಿಡಿದವನ ಮಾತುಗಳಲ್ಲ; ದೆವ್ವವು ಕುರುಡರಿಗೆ ಕಣ್ಣುಕೊಡಬಲ್ಲದೇ?" ಅಂದರು. (10:19-21)

ಯೆಹೂದ್ಯರು ಆತನನ್ನು ಸುತ್ತಿಕೊಂಡು, "ಇನ್ನು ಎಷ್ಟು ಕಾಲ ನಮ್ಮಲ್ಲಿ ಅನುಮಾನ ಹುಟ್ಟಿಸುತ್ತೀ? ನೀನು ಕ್ರಿಸ್ತನಾಗಿದ್ದರೆ ಅದನ್ನು ನಮಗೆ ಸ್ಪಷ್ಟವಾಗಿ ಹೇಳು" ಅಂದರು. ಅದಕ್ಕೆ ಯೇಸು, "ನಿಮಗೆ ಹೇಳಿದೆನು, ಆದರೆ ನೀವು ನಂಬದೇ ಇದ್ದೀರಿ; ನನ್ನ ತಂದೆಯ ಹೆಸರಿನಲ್ಲಿ ನಾನು ಮಾಡುವ ಕ್ರಿಯೆಗಳೇ ನನಗೆ ಸಾಕ್ಷಿಯಾಗಿವೆ. ಆದರೂ ನೀವು ನನ್ನ ಕುರಿಗಳಿಗೆ ಸೇರಿದವರಲ್ಲವಾದದರಿಂದ ನಂಬದೆ ಇದ್ದೀರಿ; ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ. ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು. ನನ್ನ ತಂದೆಯು ನನಗೆ ಕೊಟ್ಟದ್ದು ಎಲ್ಲಾದಕ್ಕಿಂತ ದೊಡ್ಡದು; ಅದನ್ನು ತಂದೆಯ ಕೈಯೊಳಗಿಂದ ಯಾರೂ ಕಸಕೊಳ್ಳ –ಲಾರರು. **ನಾನು ತಂದೆಯೂ ಒಂದಾಗಿದ್ದೇವೆ"** ಅಂದನು. ಯೆಹೂದ್ಯರು ಆತನನ್ನು ಹೊಡೆದು ಕೊಲ್ಲಬೇಕೆಂದು ತಿರಿಗಿ ಕಲ್ಲುಗಳನ್ನು ತೆಗೆದುಕೊಂಡು ಬರಲು ಯೇಸು ಅವರನ್ನು, "ತಂದೆಯ ಕಡೆಯಿಂದ ಒಳ್ಳೇ ಕ್ರಿಯೆಗಳನ್ನು ನಿಮಗೆ ತೋರಿಸಿದೆನು; ಅವುಗಳಲ್ಲಿ ಯಾವ ಕ್ರಿಯೆಯ ದೆಸೆಯಿಂದ ನನ್ನ ಮೇಲೆ ಕಲ್ಲೆಸೆಯುತ್ತೀರಿ?" (10:24-32)

ಯೆಹೂದ್ಯರು, "ನಾವು ನಿನ್ನ ಮೇಲೆ ಕಲ್ಲೆಸೆಯುವದು ಒಳ್ಳೇ ಕಾರ್ಯದ ದೆಸೆಯಿಂದಲ್ಲ, ದೇವದೂಷಣೆಯ ದೆಸೆಯಿಂದಲೂ ನೀನು ಮನುಷ್ಯನಾಗಿದ್ದು **ನಿನ್ನನ್ನು ನೀನೇ ದೇವರನ್ನಾಗಿ ಮಾಡಿಕೊಳ್ಳುವದರ** ದೆಸೆಯಿಂದಲೂ ನಿನ್ನ ಮೇಲೆ ಕಲ್ಲೆಸೆಯುತ್ತೇವೆ" ಅಂದರು. ಅದಕ್ಕೆ ಯೇಸು, "ನೀವು ದೇವರುಗಳೇ ಎಂದು ನಾನು ಹೇಳಿದೆನು ಎಂಬದಾಗಿ ನಿಮ್ಮ ಧರ್ಮಶಾಸ್ತ್ರದಲಿ ಬರೆದದೆಯಲ್ಲಾ; ಶಾಸ್ತ್ರ ಸುಳ್ಳಾಗಲಾರದಷ್ಟೆ; ಹಾಗಾದರೆ ದೇವರ ವಾಕ್ಯವನ್ನು ಹೊಂದಿದವರನ್ನು ದೇವರುಗಳೆಂದು ಆತನು ಹೇಳಿರುವಲ್ಲಿ ತಂದೆಯು ಪ್ರತಿಷ್ಠೆ – –ಮಾಡಿ ಲೋಕಕ್ಕೆ ಕಳುಹಿಸಿಕೊಟ್ಟವನಾದ ನಾನು ದೇವರ ಮಗನಾಗಿದ್ದೇನೆಂದು ಹೇಳಿದ್ದಕ್ಕೆ ನೀನು ದೇವದೂಷಣೆ ಮಾಡುತ್ತೀ ಅನ್ನು –ತ್ತೀರೋ? ನಾನು ನನ್ನ ತಂದೆಯ ಕ್ರಿಯೆಗಳನ್ನು ಮಾಡದಿದ್ದರೆ ನನ್ನ ಮಾತನ್ನು ನಂಬಬೇಡಿರಿ; **ಮಾಡಿದರೆ ನನ್ನ ಮಾತನ್ನು ನಂಬದೆ ಇದ್ದರೂ ಆ ಕ್ರಿಯೆಗಳ ಸಾಕ್ಷಿಯನ್ನಾದರೂ ನಂಬಿರಿ; ಆಗ ನನ್ನಲ್ಲಿ ತಂದೆಯು ಇದ್ದಾನೆಂತಲೂ ತಂದೆಯಲ್ಲಿ ನಾನು ಇದ್ದೇನೆಂತಲೂ ನೀವು ತಿಳುಕೊಂಡು ಮನನ ಮಾಡಿಕೊಳ್ಳುವಿರಿ"** ಅಂದನು. ಅವರು ತಿರಿಗಿ ಆತನನ್ನು ಹಿಡಿಯುವದಕ್ಕೆ ನೋಡಿದರು; ಆದರೆ ಅವರ ಕೈಗೆ ತಪ್ಪಿಸಿಕೊಂಡು ಹೋದನು. (10:33-39)

ಯೇಸು ಯೆಹೂದ್ಯರಿಗೆ ಹೇಳಿದ್ದನ್ನು ನೀವು ಕೇಳಿಸಿಕೊಂಡಿರಾ? ಯೇಸುವಿನ ಎಲ್ಲಾ ಮಾತುಗಳನ್ನು ಸವಿಸ್ತಾರವಾಗಿ ವಿವರಿಸುವದಕ್ಕೆ ಸಮಯವು ನಮಗೆ ಅನುಮತಿಸದಿರುವ ಕಾರಣ, ಯೇಸು ಸ್ವತ: ಉಲ್ಲೇಖಿಸಲ್ಪಡುವ **ಎರಡು ಹೆಸರುಗಳ** ಮೇಲೆ ನಮ್ಮ ಆಲೋಚನೆಗಳನ್ನು ನಾವು ಕೇಂದ್ರಿಕರಿಸೋಣ. ನೀವು ಅವುಗಳನ್ನು ಕೇಳಿದ್ದೀರೋ? **ಕುರಿಗಳಿಗೆ ಬಾಗಲು ಮತ್ತು ಒಳ್ಳೇ ಕುರುಬನು.**

ಮೊದಲನೆಯದಾಗಿ ನಾವು ಕೇಳಿದ್ದು, ಯೇಸು ಆದಾಮನ ಸಂತತಿಯವರನ್ನು ಕುರಿಗೆ ಹೋಲಿಸಿದ ನಂತರ, **"ಕುರಿಗಳಿಗೆ ನಾನೇ ಬಾಗ –ಲಾಗಿದ್ದೇನೆ.** . .ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿರುತ್ತಾನೆ" ಎಂದು ಜನರ ಗುಂಪಿಗೆ ಹೇಳಿ –ದನು. ಯೇಸು ನಾನೇ **"ಕುರಿಗಳಿಗೆ ಬಾಗಲಾಗಿದ್ದೇನೆ"** ಎಂದು ಯಾಕೆ ಕರೆದುಕೊಂಡನು? ಆ ದಿವಸಗಳಲ್ಲಿ, ಕುರುಬನು ಮುಳ್ಳಿನ ಕೊಂಬೆಗಳಿಂದ ಅಥವಾ ಕಲ್ಲುಗಳಿಂದ ಒಂದು ಬೇಲಿಯನ್ನು ಮಾಡಿ, ಕುರಿಮಂದೆಯು ಒಳಗೆ ಬರುವದಕ್ಕೆ ಒಂದೇ ಒಂದು ಬಾಗ – –ಲಿರುವ ಹಟ್ಟಿಯನ್ನು ಕಟ್ಟುತ್ತಿದ್ದನು. ಸಾಯಂಕಾಲವಾದಾಗ ಕುರಿಯು ಒಳಗೆ ಬರುತ್ತಿತ್ತು, ಕುರುಬನು ತಾನೇ ತನ್ನ ಕುರಿಯನ್ನು ಕಾಯುವದಕ್ಕೆ ಬಾಗಲಿನ ಬಳಿಯಲ್ಲಿ ಮಲಗುತ್ತಿದ್ದನು. ಹೀಗೆ, ಕಾಡುಮೃಗವು ಕುರಿಹಟ್ಟಿಯನ್ನು ಪ್ರವೇಶಿಸಿ ಕುರಿಯನ್ನು ಕೊಲ್ಲುವದಕ್ಕಿಂತ ಮೊದಲು, ಕುರುಬನು ಮಲಗಿರುವ ಬಾಗಲಿನ ಮೂಲಕವೇ ಒಳಗೆ ಬರಬೇಕಾಗುತ್ತಿತ್ತು. ಆ ಮೃಗವು ಕುರಿಗೆ ತೊಂದರೆ ಕೊಡುವದ – –ಕ್ಕಿಂತ ಮುಂಚೆ ಕುರುಬನು ಅದನ್ನು ಓಡಿಸುತ್ತಿದ್ದನು. ಈ ರೀತಿಯಾಗಿ ಕುರುಬನು ತಾನೇ "ಕುರಿಗೆ ಬಾಗಲಾಗಿದ್ದನು."

ಕರ್ತನಾದ ಯೇಸು ತಾನೇ**"ಕುರಿಗೆ ಬಾಗಲಾಗಿದ್ದೇನೆ."**ಎಂದು ಕರೆದುಕೊಂಡನು. ಯೇಸು ತನಗೆ ಸಂಬಂಧಪಟ್ಟವರೆಲ್ಲರನ್ನೂ ಲಕ್ಷಿಸುವ –ವನಾಗಿದ್ದನು ಎಂದು ಇದರ ಅರ್ಥ. ನೀವು ದೇವರ "ಮಂದೆಯ" ಒಂದು ಭಾಗವಾಗುವದಕ್ಕಿಂತ ಮೊದಲು **ನೀವು ಯೇಸುವಿನ ಮೂಲಕವೇ ಬರಬೇಕು** ಎಂಬುದೂ ಸಹ ಇದರ ಅರ್ಥವಾಗಿದೆ. ಸೈತಾನನ ಉರುಲಿನಿಂದ, ಪಾಪದ ದಂಡನೆಯಿಂದ, ಮರಣದ

ಬಲದಿಂದ ಮತ್ತು ನಿತ್ಯವಾದ ನರಕದ ಶಿಕ್ಷೆಯಿಂದ ರಕ್ಷಿಸಲ್ಪಡುವದಕ್ಕೆ ಯಾರು ಇಷ್ಟಪಡುತ್ತಾರೋ ಅವರು ಯೇಸುವಿನ ಮೂಲಕ ಹಾದುಹೋಗಲೇಬೇಕು. ಪಾಪಿಗಳನ್ನು ನಿತ್ಯಜೀವಕ್ಕೆ ಸೇರಿಸಿಕೊಳ್ಳುವ ಬಾಗಲು ಆತನೊಬ್ಬನೇ ಆಗಿದ್ದಾನೆ. ಅದಕ್ಕಾಗಿಯೇ ದೇವರ ವಾಕ್ಯವು ಹೀಗೆ ಹೇಳುತ್ತದೆ: **"**ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ."(ಅಪೊ.ಕೃತ್ಯ–4:12)ರಕ್ಷಣೆಗೆ ಯೇಸು ಒಬ್ಬನು ಮಾತ್ರವೇ ಬಾಗಲಾಗಿದ್ದಾನೆ.

ಸ್ವಲ್ಪ ಸಮಯದ ಹಿಂದೆ ಪ್ರವಾದಿಯಾದ ನೋಹ ಮತ್ತು ಜಲಪ್ರಳಯದ ಕುರಿತು ನಾವು ಓದಿಕೊಂಡದ್ದು ನಿಮಗೆ ನೆನಪಿದೆಯಾ? ಜಲಪ್ರಳಯದ ತೀರ್ಪಿನಿಂದ ತಪ್ಪಿಸಿಕೊಳ್ಳುವದಕ್ಕೆ ಇಷ್ಟಪಡುವವರೆಲ್ಲರಿಗೆ ಒಂದು ಆಶ್ರಯವಾಗುವಂಥ ಹಡಗಿನಲ್ಲಿ ಎಷ್ಟು ಬಾಗಿಲು –ಗಳನ್ನು ಇಡುವಂತೆ ದೇವರು ನೋಹನಿಗೆ ಅಪ್ಪಣೆಕೊಟ್ಟಿದ್ದನು? **ಕೇವಲ ಒಂದೇ ಬಾಗಿಲು.** ಪ್ರಳಯದಿಂದ ತಪ್ಪಿಸಿಕೊಳ್ಳುವದಕ್ಕೆ ಇಷ್ಟ –ಪಡುವವರು ಹಡಗಿನ ಆ ಒಂದು ಬಾಗಿಲಿನಿಂದ ಒಳಗೆ ಹೋಗಬೇಕಾಗಿತ್ತು. ಬಾಗಿಲಿನ ಮೂಲಕ ಒಳಗೆ ಹೋದವರೆಲ್ಲರೂ **ರಕ್ಷಿಸ –ಲ್ಪಟ್ಟರು**. ಬಾಗಿಲಿನಿಂದ ಒಳಗೆ ಹೋಗದವರು **ನಾಶವಾದರು!** ಅದರಂತೆಯೇ, ನ್ಯಾಯತೀರ್ಪಿನ ದಿನಕ್ಕೆ ಸಂಬಂಧಪಟ್ಟಂತೆ, ಆದಾ –ಮನ ಸಂತತಿಯವರಿಗಾಗಿ ದೇವರು ರಕ್ಷಣೆಯ ಒಂದೇ ಒಂದು ಬಾಗಿಲನ್ನು ತೆರೆದನು ಎಂಬುದನ್ನು ಪರಿಶುದ್ದ ವಾಕ್ಯಗಳು ನಮಗೆ ದೃಢಪಡಿಸುತ್ತವೆ. ಮೆಸ್ಸೀಯನು ತಾನೇ ಜನರನ್ನು ನಿತ್ಯಜೀವಕ್ಕೆ ಸೇರಿಸಿಕೊಳ್ಳುವಂತಹ ಆ ಬಾಗಿಲಾಗಿದ್ದಾನೆ. ಅದಕ್ಕಾಗಿಯೇ ಯೇಸು, **"ನಾನೇ ಆ ಬಾಗಲು; ನನ್ನ ಮುಖಾಂತರವಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು.**. . . . .ಕುರೀಹಟ್ಟಿಯೊಳಗೆ ಬಾಗ –ಲಿಂದ ಬಾರದೆ ಮತ್ತೆಲ್ಲಿಂದಾದರೂ ಹತ್ತಿಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ!**"** (ಯೋಹಾನ–10:9,1) ಎಂದು ಹೇಳಿದನು.

ಯೇಸು ತನ್ನನ್ನು ಸೂಚಿಸಿಕೊಂಡ ಎರಡನೆಯ ಹೆಸರು ಮೊದಲನೆಯದರ ತರಹವೇ ಇದೇ. ಯೇಸು **"**ಕುರಿಗಳಿಗೆ ಬಾಗಲು**"** ಮಾತ್ರವಲ್ಲ, ಆತನು **"**ಒಳ್ಳೇ ಕುರುಬನು**"** ಸಹ ಆಗಿದ್ದಾನೆ. ಯೇಸು ಒಳ್ಳೇಕುರುಬನು, ಯಾಕಂದರೆ ಆತನು ನಮ್ಮನ್ನು ಪ್ರೀತಿಸಿದನು ಮತ್ತು ನಮಗಾಗಿ ತನ್ನ ಜೀವವನ್ನು ಕೊಟ್ಟಿದ್ದಾನೆ. ಓಹ್, ಈತನು ಎಂತಹ ಅದ್ಭುತವಾದ ಕುರುಬನು! ಈತನಿಗೆ ಸಂಬಂಧಪಟ್ಟಂತೆ, ಪ್ರವಾದಿಯಾದ ದಾವೀದನು ಇಪ್ಪತ್ತ ಮೂರನೆಯ ಕೀರ್ತನೆಯಲ್ಲಿ {ಝಾಬುರ್} ಬರೆಯುತ್ತಾ ಹೀಗೆ ಹೇಳುತ್ತಾನೆ:

**"**ಯೆಹೋನು ನನಗೆ ಕುರುಬನು, ಕೊರತೆಪಡೆನು. ಆತನು ಹಸರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ, ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ. ನನ್ನ ಪ್ರಾಣವನ್ನು ಉಜ್ಜೀವಿಸ ಮಾಡಿ ತನ್ನ ಹೆಸರಿಗೆ ತಕ್ಕಂತೆ ನೀತಿಮಾರ್ಗದಲ್ಲಿ ನನ್ನನ್ನು ನಡಿಸುತ್ತಾನೆ. ನಾನು ಕಾರ್ಗತ್ತಲಿನ ಕಣಿವೆಯಲ್ಲಿ ನಡೆಯುವಾಗಲೂ ನೀನು ಹತ್ತಿರವಿರುವದರಿಂದ ಕೇಡಿಗೆ ಹೆದರೆನು; ನಿನ್ನ ದೊಣ್ಣೆಯೂ ನಿನ್ನ ಕೋಲೂ ನನಗೆ ಧೈರ್ಯ ಕೊಡುತ್ತವೆ. ವೈರಿಗಳ ಮುಂದೆಯೇ ನೀನು ನನಗೋಸ್ಕರ ಔತಣವನ್ನು ಸಿದ್ದಪಡಿಸುತ್ತೀ. ನನ್ನ ತಲೆಗೆ ತೈಲವನ್ನು ಹಚ್ಚಿಸುತ್ತೀ; ನನ್ನ ಪಾತ್ರೆಯು ತುಂಬಿ ಹೊರಸೂಸುತ್ತದೆ. ನಿಶ್ಚಯವಾಗಿ ನನ್ನ ಜೀವಮಾನದಲ್ಲೆಲ್ಲಾ ಶುಭವೂ ಕೃಪೆಯೂ ನನ್ನನ್ನು ಹಿಂಬಾಲಿಸುವವು. ನಾನು ಸದಾಕಾಲವೂ ಯೆಹೋವನ ಮಂದಿರದಲ್ಲಿ ವಾಸಿಸುವೆನು.**"** (ಕೀರ್ತನೆ–23)

ನಾವು ಅರ್ಥಮಾಡಿಕೊಳ್ಳಬೇಕಾದದ್ದೇನೆಂದರೆ ದಾವೀದನು ಬರೆದಿರುವಂತಹ ಒಳ್ಳೇ ಕುರುಬನು ಮೆಸ್ಸೀಯನು ತಾನೇ ಆಗಿದ್ದಾನೆ. ಅದ –ಕ್ಕಾಗಿಯೇ ಯೇಸು **"**ನಾನೇ ಒಳ್ಳೇ ಕುರುಬನು**"** ಮತ್ತು **"**ನಾನೂ ತಂದೆಯೂ ಒಂದಾಗಿದ್ದೇವೆ**"**ಎಂದು ಹೇಳುವದಕ್ಕೆ ಸಾಧ್ಯವಾಯಿತು. (ಯೋಹಾನ–10:11,30) ಹೀಗಿದ್ದರೂ, **ತಾನು ತಂದೆಯೊಂದಿಗೆ ಒಂದಾಗಿದ್ದೇನೆ** ಎಂದು ಯೇಸು ಹೇಳಿದಾಗ, ಆತನು ದೇವದೂಷಣೆ ಮಾಡುತ್ತಿದ್ದಾನೆಂದು ಯೆಹೂದ್ಯರು ಆತನನ್ನು ನಿಂದಿಸಿದರು ಮತ್ತು ಆತನ ಮೇಲೆ ಎಸೆಯುವದಕ್ಕೆ ಕಲ್ಲುಗಳನ್ನು ತಕ್ಕೊಂಡರು. ಯೇಸು ಮಾನವ ಶರೀರದಲ್ಲಿರುವ ದೇವರೆಂಬುದನ್ನು ಕಲ್ಪಿಸಿಕೊಳ್ಳುವದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ. ಈ ದಿನದವರೆಗೂ, ಅದಾಮನ ಸಂತತಿ –ಯವರಲ್ಲಿ ಹೆಚ್ಚಿನವರು ಯೇಸುವಿನ ಈ ಮಾತಗಳ ಮೇಲೆ ಮುಗ್ಗರಿಸಿದ್ದಾರೆ. ಯೇಸು ದೇವರೊಂದಿಗೆ ಒಬ್ಬನು ಎಂದರೆ ಇಬ್ಬರು ದೇವರುಗಳು ಎಂದು ಅರ್ಥ ಎಂಬುದಾಗ ಕೆಲವರು ತಪ್ಪಾಗಿ ಆಲೋಚಿಸಿ ಹೇಳುತ್ತಾರೆ. ಆದರೆ ಇದು ಆ ರೀತಿಯಲ್ಲಿಲ್ಲ, ದೇವರ ಅನ್ಯೋನ್ಯತೆಯನ್ನು ಪ್ರವಾದಿಗಳ ವಾಕ್ಯಗಳು ಸ್ಪಷ್ಟವಾಗಿ ಹೇಳುತ್ತವೆ, ಅದೇನೆಂದರೆ, **"**ನಮ್ಮ ದೇವರಾದ ಯೆಹೋವನು ಒಬ್ಬನೇ ದೇವರು!**"** (ಧರ್ಮೋ.ಕಾಂಡ–6:4). ಆದರೆ ಸತ್ಯವೇನೆಂದರೆ, **"**ಒಬ್ಬನೇ ದೇವರು**"** ಎನ್ನುವದು ದೇವರು ಒಬ್ಬ ಮನುಷ್ಯನಾಗಿ ಭೂ ಲೋಕದಲ್ಲಿ ಸ್ವತ: ಪ್ರಕಟಪಡಿಸಿಕೊಳ್ಳುವದರಿಂದ ಆತನನ್ನು ತಡೆಯಲಿಲ್ಲ.

ಬಹುಮಟ್ಟಿಗೆ ಒಂದು ಉದಾಹರಣೆ ಸಹಾಯಮಾಡುತ್ತದೆ. ಭೂಮಿಯ ಮೇಲೆ ಪ್ರಕಾಶಿಸುತ್ತ ನಮಗೆ ಬೆಳಕನ್ನು ಮತ್ತು ಶಾಖವನ್ನು ಕೊಡುವಂತಹ ಸೂರ್ಯನ ಕುರಿತು ಆಲೋಚಿಸಿರಿ. ಅಂತಹ ಎಷ್ಟು ಸೂರ್ಯಗಳನ್ನು ನಾವು ಹೊಂದಿದ್ದೇವೆ? ಕೇವಲ ಒಂದೇಒಂದು. ಇದು ಆಕಾಶದಲ್ಲಿ ದೂರದಲ್ಲಿದೆ, ಆದಾಗ್ಯೂ ಇದು ಭೂಮಿಗೂ ಸಹ ಹತ್ತಿರದಲ್ಲಿದ್ದು ತನ್ನ ಜೀವ ಕೊಡುವ ಸೂರ್ಯಪ್ರಕಾಶದಿಂದ ನಮ್ಮ ಜೀವಿತಗಳನ್ನು ಚುರುಕುಗೊಳಿಸುತ್ತಾ ಇದೆ. ಸುಡುವ ಸೂರ್ಯನೂ ಮತ್ತು ಬೆಚ್ಚಗಿನ ಸೂರ್ಯಪ್ರಕಾಶ ಎರಡೂ ಒಂದೇ.

ಅದರಂತೆಯೇ, ದೇವರು ಮತ್ತು ಯೇಸು ಇಬ್ಬರೂ ಒಂದೇ. **"ನಾನೂ ಮತ್ತು ತಂದೆಯಾದ ದೇವರೂ ಒಂದೇ ಆಗಿದ್ದೇವೆ"** ಎಂದು ಯೇಸು ಹೇಳಿದ್ದಾನೆ. ದೇವರ ಪ್ರೀತಿಯ ಬೆಳಕನ್ನೂ ಮತ್ತು ರಕ್ಷಣೆಯನ್ನೂ ನಮಗೆ ಸಂಪರ್ಕಿಸುವದಕ್ಕೆ ಕರ್ತನಾದ ಯೇಸು ಈ ಲೋಕಕ್ಕೆ ಬಂದನು. ದೇವರು ಮತ್ತು ಯೇಸುವಿನ ಕುರಿತಾಗಿ ಪರಿಶುದ್ಧ ವಾಕ್ಯಗಳು ಏನು ಹೇಳಿವೆ ಎಂಬುದನ್ನು ಕೇಳಿರಿ:

"ನಮ್ಮ ದೇವರು ದಹಿಸುವ ಅಗ್ನಿಯಾಗಿದ್ದಾನೆ.. . ಅಗಮ್ಯವಾದ ಬೆಳಕಿನಲ್ಲಿ ವಾಸಮಾಡುವವನೂ ಆಗಿದ್ದಾನೆ. . ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತ: ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು. ತಂದೆಯಾದ ದೇವರು ಆತನಲ್ಲಿ ತನ್ನ ಸರ್ವಸಂಪೂರ್ಣತೆಯು ವಾಸವಾಗಿರಬೇಕೆಂದು. . .ನಿಷ್ಕರ್ಷೆಮಾಡಿದನು. **ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ!"**(ಇಬ್ರಿಯ–12:29; 1ತಿಮೊ–6:16; ಯೋಹಾನ–1:18; ಕೊಲೊ–1:19; 2;9)

ಹೌದು, ಅದನ್ನೇ ದೇವರ ವಾಕ್ಯವು ಹೇಳುತ್ತದೆ: **"ಕ್ರಿಸ್ತನಲ್ಲಿಯೇ ದೇವರ ಸರ್ವ ಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ!"** (ಕೊಲೊ–2:9) ಹಾಗಾಗಿ, ಯೇಸು, "ನಾನೂ ತಂದೆಯೂ ಒಂದಾಗಿದ್ದೇವೆ!" ಎಂದು ಹೇಳಲು ಶಕ್ತನಾದನು. ಪರಲೋಕದಿಂದ ಬಂದ ಯೇಸುಕ್ರಿಸ್ತನು ಒಳ್ಳೇ ಕುರುಬನೂ, ಒಬ್ಬ ಮನುಷ್ಯನಾಗಿ ಭೂಲೋಕದಲ್ಲಿ ವಾಸಿಸಿದನು ಮತ್ತು ನಮ್ಮ ಪಾಪವು ತಂದಿದ್ದಂತಹ ಶಾಪದಿಂದ ನಮ್ಮನ್ನು ವಿಮೋಚಿಸುವದಕ್ಕೆ ತನ್ನ ಪರಿಶುದ್ಧ ಜೀವಿತವನ್ನು ಕೊಟ್ಟನು. ಈತನು ಸತ್ತವರೊಳಗಿಂದ ಎದ್ದು ಬಂದವನೂ ಸಹ ಆಗಿದ್ದು ಆತನನ್ನು ನಂಬುವವರೆಲ್ಲರಿಗೆ ನಿತ್ಯಜೀವವನ್ನು ಕೊಡುವವನಾಗಿದ್ದಾನೆ. ಅದಕ್ಕಾಗಿಯೇ ಯೇಸು ಹೀಗೆ ಹೇಳಲು ಶಕ್ತನಾದನು:

"ನಾನೇ ಒಳ್ಳೇ ಕುರುಬನು. . .ಕುರಿಗಳಿಗೋಸ್ಕರ ನನ್ನ ಪ್ರಾಣವನ್ನು ಕೊಡುತ್ತೇನೆ. . .ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ. ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೇ ನಾನೇ ಅದನ್ನು ಕೊಡುತ್ತೇನೆ. ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು; ಈ ಅಪ್ಪಣೆಯನ್ನು ನನ್ನ ತಂದೆಯಿಂದ ಹೊಂದಿದ್ದೇನೆ." (ಯೋಹಾನ–10:14,17,18)

ಎಲ್ಲಾ ಪ್ರಶ್ನೆಗಳನ್ನು ಮೀರಿ, ಯೇಸು, **"ಒಳ್ಳೇ ಕುರುಬನು"** ಯಾಕೆಂದರೆ ನಮಗಾಗಿ ತನ್ನ ಜೀವಿತವನ್ನು ಕೊಡುವಷ್ಟರ ಮಟ್ಟಿಗೆ ಆತನು ನಮ್ಮನ್ನು ಪ್ರೀತಿಸಿದನು!

ಈದಿನ ನಾವು ವಿದಾಯ ಹೇಳುವದಕ್ಕಿಂತ ಮೊದಲು, ಕರ್ತನಾದ ಯೇಸುವಿನ ಅದ್ಭುತವಾದ ಮಾತುಗಳನ್ನು ಇನ್ನೊಂದು ಸಾರಿ ಕೇಳಿಸಿಕೊಳ್ಳೋಣ. ಆತನು ಹೇಳಿದ್ದೇನೆಂದರೆ:

**ನಾನೇ ಆ ಬಾಗಲು;** ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು. . .ಆದರೆ ಕುರೀಹಟ್ಟಿಯೊಳಗೆ ಬಾಗಲಿಂದ ಬಾರದೆ ಮತ್ತೆಲ್ಲಿಂದಾದರೂ ಹತ್ತಿಬರುವವನು ಕಳ್ಳನೂ ಸುಲುಕೊಳ್ಳುವವನೂ ಆಗಿದ್ದಾನೆ. **ನಾನೇ ಒಳ್ಳೇ ಕುರುಬನು;** ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ **ತನ್ನ ಪ್ರಾಣವನ್ನು ಕೊಡುತ್ತಾನೆ.** ಕೂಲಿಯಾಳು ಕುರುಬನೂ ಕುರಿಗಳ ಒಡೆಯನೂ ಆಗಿರದೆ ತೋಳ ಬರುವದನ್ನು ಕಾಣುತ್ತಲೇ ಕುರಿಗಳನ್ನು ಬಿಟ್ಟು ಓಡಿಹೋಗುತ್ತಾನೆ. . ..ನಾನೇ ಒಳ್ಳೇ ಕುರುಬನು. . .**ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿ – –ಗೊಡುತ್ತವೆ; ನಾನು ಅವುಗಳನ್ನು ಬಲ್ಲೆನು; ಅವು ನನ್ನ ಹಿಂದೆ ಬರುತ್ತವೆ. ನಾನು ಅವುಗಳಿಗೆ ನಿತ್ಯಜೀವವನ್ನು ಕೊಡುತ್ತೇನೆ; ಅವು ಎಂದಿಗೂ ನಾಶವಾಗುವದೇ ಇಲ್ಲ; ಅವುಗಳನ್ನು ಯಾರೂ ನನ್ನ ಕೈಯೊಳಗಿಂದ ಕಸಕೊಳ್ಳರು.**(ಯೋಹಾನ–10: 9, 1, 11, 12, 14, 27)

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು ಯಾರನ್ನು ಹಿಂಬಾಲಿಸುತ್ತಿದ್ದೀರಿ? ನೀವು ಓಳೇ ಕುರುಬನನ್ನು ಹಿಂಬಾಲಿಸುತ್ತಿದ್ದೀರೋ? ಅಥವಾ ನೀವು ಬೇರೆ ಯಾರನ್ನಾದರೂ ಹಿಂಬಾಲಿಸುತ್ತಿದ್ದೀರೋ?
ಕೇಳಿಸಿಕೊಂಡಿದ್ದಕ್ಕೆ ನಾವು ನಿಮಗೆ ವಂದಿಸುತ್ತೇವೆ ಮತ್ತು ದೇವರ ಹೃದಯವನ್ನು ತುಂಬಿದ್ದಂತಹ ಕನಿಕರದ ಕುರಿತು ಯೇಸು ಏನು ಬೋಧಿಸಿದ್ದನೋ ಅದನ್ನು ಕೇಳುವದಕ್ಕೆ ಮುಂದಿನ ಕಾರ್ಯಕ್ರಮದಲ್ಲಿ ನಮ್ಮೊಂದಿಗೆ ಸೇರಿಕೊಳ್ಳಲು ನಾವು ನಿಮ್ಮನ್ನು ಆಹ್ವಾನಿಸುತ್ತೇವೆ.

ಮೆಸ್ಸೀಯನಾದ ಯೇಸು ತನ್ನ ಕುರಿತು ಹೇಳಿರುವದನ್ನು ನೀವು ಜ್ಞಾಪಿಸಿಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:
**"ನಾನೇ ಆ ಬಾಗಲು;** ನನ್ನ ಮುಖಾಂತರವಾಗಿ ಯಾವನಾದರೂ ಒಳಗೆ ಹೋದರೆ ಸುರಕ್ಷಿತವಾಗಿದ್ದು.. . . **ನಾನೇ ಒಳ್ಳೇ ಕುರುಬನು;** ಒಳ್ಳೇ ಕುರುಬನು ತನ್ನ ಕುರಿಗಳಿಗೋಸ್ಕರ **ತನ್ನ ಪ್ರಾಣವನ್ನು ಕೊಡುತ್ತಾನೆ."** (ಯೋಹಾನ–10:9,11)

[ಪಾಠ 76:ಒಳ್ಳೇ ಕುರುಬನು] [ಸಾರಾಂಶಗಳ ಪಟ್ಟಿ] [ಪಾಠ 78: ಪುನರುತ್ಥಾನ ಮತ್ತು ಜೀವ]

ಪಾಠ 77

# ದೇವರ ಹೃದಯ

ಲೂಕ 18, 15

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪ್ರವಾದಿಗಳ ಬರಹಗಳಲ್ಲಿನ ನಮ್ಮ ಅಧ್ಯಯನಗಳಾದ್ಯಂತ, ದೇವರು **ಪವಿತ್ರನೂ ಮತ್ತು ನೀತಿವಂತನೂ** ಆಗಿದ್ದಾನೆ, ಹಾಗಾಗಿ ಅವನು ಪಾಪವನ್ನು ಸಹಿಸಿಕೊಳ್ಳುವವನಲ್ಲ ಎನ್ನುವದನ್ನು ನಾವು ನೋಡಿದೆವು. ಆದಾಗ್ಯೂ, ಆತನು **ಕರುಣಾಮಯನೂ ಮತ್ತು ಸಹಾನುಭೂತಿ –**
**–ಯುಳ್ಳವನೂ** ಸಹ ಆಗಿದ್ದಾನೆ ಎನ್ನುವದನ್ನೂ ನಾವು ನೋಡಿದೆವು. ಅದು ನಮಗೆ ಒಂದು ಅದ್ಭುತವಾದ ಸಂದೇಶವಾಗಿದೆ, ಯಾಕಂದರೆ ನಾವೆಲ್ಲರೂ ದೇವರನ್ನು ದೊಡ್ಡದಾಗಿ ಮನನೋಯಿಸಿದಂದಿನಿಂದಲೂ ನಾವು ಹತಾಶೆಯುಳ್ಳವರಾಗಿ ಆತನ ಕರುಣೆಯ ಅಗತ್ಯವುಳ್ಳವರಾದೆವು. ನಮ್ಮ ಅತಿಕ್ರಮಗಳು ಮತ್ತು ನಮ್ಮ ಪಾಪಗಳು ದೇವರಿಗೆ ಅಸಹ್ಯವಾದವುಗಳಾಗಿದ್ದವು, ಮತ್ತು ಆತನು ನಮ್ಮ ಮೇಲೆ ಕರುಣೆ ತೋರಿಸದ ಹೊರತು ಅವು ನಮ್ಮನ್ನು ಎಂದೆಂದಿಗೂ ದೋಷಿಗಳನ್ನಾಗಿಸುತ್ತಿದ್ದವು! ಜನರ ಗುಂಪುಗಳಿಗೆ ಕರ್ತನಾದ ಯೇಸು ಹೇಳಿದ **ಎರಡು ಸಾಮ್ಯಗಳನ್ನು** ಈದಿನ ಓದುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ಈ ಎರಡು ಕುತೂಹಲವಾದ ಕತೆಗಳ ಮೂಲಕ **ದೇವರ ಹೃದಯದಲ್ಲಿ ತುಂಬಿದ್ದ ದೊಡ್ಡದಾದ ಕರುಣೆಯ** ಕುರಿತು ಮತ್ತು **ಆ ಕರುಣೆಯನ್ನು ಪಾಪಿಗಳು ಹೇಗೆ ಸ್ವೀಕರಿಸಿ**
**–ಕೊಳ್ಳಲು ಸಾಧ್ಯ** ಎಂಬುದನ್ನು ನಾವು ಕಲಿತುಕೊಳ್ಳಲಿದ್ದೇವೆ.

**ಮೊದಲನೆಯ ಸಾಮ್ಯದಲ್ಲಿ** ನಾವು **ಇಬ್ಬರು ಮನುಷ್ಯರನ್ನು** ನೋಡುತ್ತೇವೆ: ದೇವರ ಕರುಣೆಯನ್ನು ಹೊಂದಿಕೊಳ್ಳದ ಒಬ್ಬನು ಮತ್ತು ಅದನ್ನು ಹೊಂದಿಕೊಂಡವನು ಒಬ್ಬನು. ಒಬ್ಬನು ಫರಿಸಾಯರ ಮತಕ್ಕೆ ಸೇರಿದವನು, ಪ್ರಾರ್ಥನೆಯಲ್ಲಿ, ಉಪವಾಸದಲ್ಲಿ ಮತ್ತು ದಾನ ಧರ್ಮಗಳನ್ನು ಮಾಡುವದರಲ್ಲಿ ತುಂಬಾ ಆಸಕ್ತಿಯುಳ್ಳವನು. ಇವನು ಮನುಷ್ಯರ ದೃಷ್ಟಿಯಲ್ಲಿ ಅತ್ಯಂತ ಧರ್ಮಶ್ರದ್ಧೆಯುಳ್ಳವನಾಗಿದ್ದನು. ಇನ್ನೊಬ್ಬ ಮನುಷ್ಯನು ಸುಂಕ ವಸೂಲಿ ಮಾಡುವವನು, ಸುಂಕ ವಸೂಲಿ ಮಾಡುವವರಲ್ಲಿ ಹೆಚ್ಚಿನವರು ಮೋಸಗಾರರಾದ್ದರಿಂದ ಇವನು ಮನುಷ್ಯರ ದೃಷ್ಟಿಯಲ್ಲಿ ಒಬ್ಬ ದೊಡ್ಡ ಪಾಪಿಯೆನಿಸಿಕೊಂಡಿದ್ದನು.

ಫರಿಸಾಯನು ಮತ್ತು ಸುಂಕದವನ ಕತೆಯನ್ನು ಕೇಳಿಸಿಕೊಳ್ಳಿರಿ. ನಾವು ಲೂಕನ ಸುವಾರ್ತೆಯ ಹದಿನೆಂಟನೆಯ ಅಧ್ಯಾಯದಲ್ಲಿ ಓದುತ್ತಿದ್ದೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಇದಲ್ಲದೆ ತಾವೇ ನೀತಿವಂತರೆಂದು ತಮ್ಮಲ್ಲಿ ಭರವಸವಿಟ್ಟುಕೊಂಡು ಉಳಿದವರನ್ನು ಉದಾಸೀನ ಮಾಡುವಂಥ ಕೆಲವರಿಗೆ ಒಂದು ಸಾಮ್ಯವನ್ನು ಹೇಳಿದನು. ಅದೇನೆಂದರೆ, **"**ಪ್ರಾರ್ಥನೆ ಮಾಡಬೇಕೆಂದು **ಇಬ್ಬರು ಮನುಷ್ಯರು** ದೇವಾಲಯಕ್ಕೆ ಹೋದರು; ಒಬ್ಬನು ಫರಿಸಾಯನು ಒಬ್ಬನು ಸುಂಕದವನು. **ಫರಿಸಾಯನು** ನಿಂತುಕೊಂಡು **ತನ್ನೊಳಗೆ,** ದೇವರೇ, ಸುಲುಕೊಳ್ಳುವವರೂ, ಅನ್ಯಾಯ – ಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ; ವಾರಕ್ಕೆ ಎರಡಾವರ್ತಿ ಉಪವಾಸ ಮಡುತ್ತೇನೆ; ನಾನು ಸಂಪಾದಿಸುವ ಎಲ್ಲದರಲ್ಲಿಯೂ ಹತ್ತರಲ್ಲೊಂದು ಪಾಲು ಕೊಡುತ್ತೇನೆ ಅಂದುಕೊಂಡನು. ಆದರೆ ಆ **ಸುಂಕದವನು** ದೂರದಲ್ಲಿ ನಿಂತು ಆಕಾಶದ ಕಡೆಗೆ ಕಣ್ಣೆತ್ತಿ ನೋಡುವದಕ್ಕೂ ಮನಸ್ಸಿಲ್ಲದೆ ಎದೆಯನ್ನು ಬಡುಕೊಳ್ಳುತ್ತಾ, **ದೇವರೇ ಪಾಪಿಯದ ನನ್ನನ್ನು ಕರುಣಿಸು** ಅಂದನು. ಇವನು ನೀತಿವಂತನೆಂದು ನಿರ್ಣಯಿಸಲ್ಪಟ್ಟವನಾಗಿ ತನ್ನ ಮನೆಗೆ ಹೋದನು. ಆ ಫರಿಸಾಯನು ಅಂಥವನಾಗಿ ಹೋಗಲಿಲ್ಲ ಎಂದು ನಿಮಗೆ ಹೇಳುತ್ತೇನೆ. **ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು** ಅಂದನು.**"** (ಲೂಕ–18:9-14)

ಈ ಚಿಕ್ಕದಾದ ಸಾಮ್ಯದ ಮುಖಾಂತರ ಯೇಸು ನಮಗೆ ಏನು ಕಲಿಸುವದಕ್ಕೆ ಇಚ್ಚಿಸಿದ್ದಾನೆ? ಸಂಕ್ಷಿಪ್ತವಾಗಿ, ತನ್ನ ಮುಂದೆ ತಮ್ಮ ಅನೀತಿವಂತಿಕೆಯನ್ನು **ಒಪ್ಪಿಕೊಳ್ಳುವವರಿಗೆ** ದೇವರು ತನ್ನ ಕರುಣೆಯನ್ನು ತೋರಿಸುತ್ತಾನೆ ಮತ್ತು ತನ್ನ ಮುಂದೆ ತಮ್ಮನ್ನು ನೀತಿವಂತರು

ಎಂದು **ಕಲ್ಪನೆಮಾಡಿಕೊಳ್ಳುವವರನ್ನು** ಆತನು ಶಿಕ್ಷೆಗೆ ಗುರಿಪಡಿಸುತ್ತಾನೆ. ಅದಕ್ಕಾಗಿಯೇ ವಾಕ್ಯ ಹೇಳುವದೇನೆಂದರೆ; **"ದೇವರು ಅಹಂಕಾರಿಗಳನ್ನು ಎದುರಿಸುತ್ತಾನೆ; ದೀನಗಾದರೋ ಕೃಪೆಯನ್ನು ಅನುಗ್ರಹಿಸುತ್ತಾನೆ."** (1ಪೇತ್ರ–5:5) ಮನುಷ್ಯನು ಪರಿಗಣಿಸುವದನ್ನು ದೇವರು ಕಡೆಗಣಿಸುತ್ತಾನೆ. **"ನಾನು** ನೀತಿವಂತನೂ! **ನಾನು** ಪ್ರಾರ್ಥಿಸುವವನೂ! **ನಾನು** ಉಪವಾಸಮಾಡುವವನೂ! **ನಾನು** ದಾನ ಧರ್ಮಗಳನ್ನು ಮಾಡುವವನೂ! **ನಾನು** ಮಸೀದಿಗೆ ಹೋಗುತ್ತೇನೆ! **ನಾನು** ದೇವಾಲಯಕ್ಕೆ ಹೋಗುತ್ತೇನೆ! **ನಾನು** ಅದನ್ನು ಮಾಡುತ್ತೇನೆ ಇದನ್ನೂ ಮಾಡುತ್ತೇನೆ" ಎಂದು ಅಂದುಕೊಳ್ಳುತ್ತಾ ತಮ್ಮನ್ನು ಹೊಗಳಿಕೊಳ್ಳುವವರನ್ನು ದೇವರು ಒಪ್ಪಿಕೊಳ್ಳುವದಕ್ಕೆ ಸಾಧ್ಯವೋ? ಇದೆಲ್ಲವೂ, "ದೇವರಿಗೆ ಮೆಚ್ಚಿಕೆಯುಳ್ಳದ್ದೋ?" ಇಲ್ಲವೇ ಇಲ್ಲ! ಅಹಂಕಾರದಿಂದ ಉತ್ಪತ್ತಿಯಾದ ಕೆಲಸಗಳಿಂದ ದೇವರ ಹೃದಯವು ಸಂತೋಷಗೊಳ್ಳುವದಿಲ್ಲ.

ದೇವರು ಅಹಂಕಾರದ ಹೃದಯವನ್ನು ಅಸಹ್ಯಪಡುತ್ತಾನೆ. ತನ್ನ ಸ್ವಂತ ಪ್ರಯತ್ನಗಳಿಂದ ದೇವರ ಸಮೀಪಕ್ಕೆ ಬರುವದಕ್ಕೆ ಪ್ರಯತ್ನಿಸಿದ ಆದಾಮನ ಚೊಚ್ಚಲುಮಗನಾದ ಕಾಯಿನನ ನೆನಪಿದೆಯಾ? ದೇವರು ಅವನ ಯಜ್ಞವನ್ನು ಸ್ವೀಕರಿಸಿದನೋ? ಇಲ್ಲ, ದೇವರು ಅದನ್ನು ಸ್ವೀಕರಿಸಲಿಲ್ಲ. ಸ್ನೇಹಿತರೇ, ದೇವರು ಬದಲಾಗಿಲ್ಲ. ಈ ದಿನಕ್ಕೂ ದೇವರ ಹೃದಯವು ಮನುಷ್ಯನ ಸ್ವ–ಪ್ರಯತ್ನಗಳ ನಿಮಿತ್ತ ಸಂತೋಷಿ –ಸುವದಿಲ್ಲ, ಯಾಕಂದರೆ ನಮ್ಮ ಪ್ರಯತ್ನಗಳು ಆತನ ಮುಂದೆ ಸಂಪೂರ್ಣವಾದವುಗಳಲ್ಲ. **"ದೇವರೇ, ಪಾಪಿಯಾದ ನನ್ನನ್ನು ಕರು – –ಣಿಸು!"** ಎಂದು ಎದೆಬಡುಕೊಳ್ಳುತ್ತಾ ಹೇಳಿದ ಸುಂಕದವನ ಹಾಗೆ, **ನಮ್ಮ ಪಾಪದ ಸ್ಥಿತಿಯನ್ನು ನಾವು ಗ್ರಹಸಿಕೊಳ್ಳುವದನ್ನು** ದೇವರು ಅಪೇಕ್ಷಿಸುತ್ತಾನೆ. ಇದು ದೇವರು ಸಂತೋಷಿಸುವದಕ್ಕೆ ಕಾರಣವಾಗುವಂತಹ ಒಂದು ಮುರಿದ ಹೃದಯವಾಗಿದೆ. ಆದರೆ "ದೇವರೇ, ಸುಲುಕೊಳ್ಳುವವರೂ, ಅನ್ಯಾಯಗಾರರೂ ಹಾದರ ಮಾಡುವವರೂ ಆಗಿರುವ ಉಳಿದ ಜನರಂತೆ ನಾನಲ್ಲ, ಈ ಸುಂಕದವನಂತೆಯೂ ಅಲ್ಲ; ಆದದರಿಂದ ನಿನಗೆ ಸ್ತೋತ್ರ ಮಾಡುತ್ತೇನೆ" ಎಂದು ತಾನೇ ಹೇಳಿಕೊಂಡ ಫರಿಸಾಯನ ಹಾಗೆ, ತಮ್ಮ ಜೊತೆಯವರೊಂದಿಗೆ ತಮ್ಮನ್ನು ಹೋಲಿಸಿಕೊಳ್ಳುವವರನ್ನು ಆತನು ಅಸಹ್ಯಿಸುತ್ತಾನೆ.

ಪಾಪಿಗಳಾದ ನಮ್ಮ ಜೊತೆಯವರೊಂದಿಗೆ ದೇವರು ನಮ್ಮನ್ನು ಹೋಲಿಸುವದಿಲ್ಲ ಎನ್ನುವದನ್ನು ನ್ಯಾಯತೀರ್ಪಿನ ದಿನದಂದು ಗ್ರಹಿಸಿ –ಕೊಳ್ಳುವದಕ್ಕೆ ಫರಿಸಾಯನು ಸೋತುಹೋದನು. ಬದಲಾಗಿ, ಆತನು ತನ್ನ ಸ್ವಂತ ಪರಿಶುದ್ಧವಾದ ಮತ್ತು ಸಂಪೂರ್ಣವಾದ ಧರ್ಮಶಾಸ್ತ್ರದೊಂದಿಗೆ ನಮ್ಮನ್ನು ಹೋಲಿಸುತ್ತಾನೆ ಎಂದು ವಾಕ್ಯವು ತಿಳಿಸುತ್ತದೆ: "ಯಾಕಂದರೆ ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು ಒಂದೇ ಒಂದರಲ್ಲಿ ತಪ್ಪಿಹೋದರೆ ಅವನು ಎಲ್ಲಾ ವಿಷಯದಲ್ಲಿಯೂ ಅಪರಾಧಿಯಾಗುತ್ತಾನೆ." (ಯಾಕೋಬ–2:10) "ವ್ಯಭಿಚಾರ ಮಾಡಬಾರದು" ಮತ್ತು "ಸುಳ್ಳು ಹೇಳಬಾರದು" ಎಂದು ದೇವರು ಹೇಳಿದ್ದಾನೆ. ನೀವು ವ್ಯಭಿಚಾರ ಮಾಡದಿ – –ದ್ದರೂ ಸುಳ್ಳು ಹೇಳಿದರೆ ನೀವು ದೇವರ ಧರ್ಮಶಾಸ್ತ್ರವನ್ನು ಮೀರಿದ ಹಾಗಾಗುತ್ತದೆ. "ಅದರಲ್ಲಿ ಹೊಲೆಯಾದದ್ದೊಂದೂ ಸೇರುವ –ದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ" (ಪ್ರಕ–21:27) ಎಂದು ವಾಕ್ಯವು ಹೇಳಿರುವದರಿಂದ ನೀವು ಪರದೈಸನ್ನು, ದೇವರ ಸನ್ನಿಧಿಯನ್ನು ಸೇರುವದಕ್ಕಾಗುವದಿಲ್ಲ. ಅದಕ್ಕೋಸ್ಕರವೇ ಆದಾಮನ ಸಂತತಿಯವರಿಗೆ **ದೇವರ ಕರುಣೆಯ** ಅಗತ್ಯವಿದೆ. ಪ್ರೀತಿಯ ಸ್ನೇಹಿತರೇ, ನೀವು **ದೇವರ ಕರುಣೆಯನ್ನು** ಪಡೆದುಕೊಂಡಂತಹ ಸಾಮ್ಯದಲ್ಲಿರುವ ಸುಂಕದವನ ಹಾಗಿದ್ದೀರೋ? ಅಥವಾ ಫರಿಸಾಯನ ಹಾಗೆ **ನಿಮ್ಮ ಸ್ವಂತ ಶ್ರಮಗಳಿಂದ** ನೀತಿವಂತರಾಗುವದಕ್ಕೆ ಇನ್ನೂ ಪ್ರಯತ್ನಿಸುತ್ತಿದ್ದೀರೋ?

ಈಗ **ಎರಡನೆಯ ಸಾಮ್ಯವನ್ನು** ಓದಿಕೋಳ್ಳೋಣ, ತನ್ನ ಮಕ್ಕಳನ್ನು ಪ್ರೀತಿಸುವ ತಂದೆಯ ಹಾಗೆ ಪ್ರೀತಿ ಮತ್ತು ಕರುಣೆಯಿಂದ ತುಂಬಿ –ರುವ ದೇವರ ಹೃದಯವನ್ನು ತೋರಿಸುವಂತಹ ಸಾಮ್ಯ ಇದು. ಲೂಕನ ಸುವಾರ್ತೆಯ ಹದಿನೈದನೆಯ ಅಧ್ಯಾಯದಲ್ಲಿ ನಾವು ಓದುತ್ತಿದ್ದೇವೆ:

ಯೇಸುವಿನ ಉಪದೇಶವನ್ನು ಕೇಳಬೇಕೆಂದು ಎಲ್ಲಾ ಸುಂಕದವರೂ "ಪಾಪಿಗಳೂ" ಆತನ ಬಳಿಗೆ ಬರುತ್ತಾ ಇರಲು ಫರಿಸಾಯರೂ ಶಾಸ್ತ್ರಿಗಳು, "ಇವನು ಪಾಪಿಗಳನ್ನು ಸೇರಿಸಿಕೊಂಡು ಅವರ ಜೊತೆಯಲ್ಲಿ ಊಟಮಾಡುತ್ತಾನೆ" ಎಂದು ಹೇಳಿಕೊಂಡು ಗುಣುಗುಟ್ಟು – –ತ್ತಿದ್ದರು. ಆಗ ಆನು ಅವರಿಗೆ ಒಂದು ಸಾಮ್ಯವನ್ನು ಹೇಳಿದನು.. . .(ಲೂಕ–೧೫:೧–೩)

**ಒಬ್ಬಾನೊಬ್ಬ ಮನುಷ್ಯನಿಗೆ ಇಬ್ಬರು ಮಕ್ಕಳಿದ್ದರು.** ಅವರಲ್ಲಿ **ಕಿರಿಯವನು** ತಂದೆಗೆ, "ಅಪ್ಪಾ, ಆಸ್ತಿಯಲ್ಲಿ ನನಗೆ ಬರತಕ್ಕ ಪಾಲನ್ನು ಕೊಡು" ಎಂದು ಕೇಳಿಕೊಳ್ಳಲು ತಂದೆಯು ಬದುಕನ್ನು ಅವರಿಗೆ ಹಂಚಿಕೊಟ್ಟನು. ಸ್ವಲ್ಪ ದಿವಸದ ಮೇಲೆ ಕಿರೀಮಗನು ಎಲ್ಲಾ ಕೂಡಿಸಿ –ಕೊಂಡು ದೂರದೇಶಕ್ಕೆ ಹೊರಟುಹೋಗಿ ಅಲ್ಲಿ ಪಟಿಂಗನಾಗಿ ಬದುಕಿ ತನ್ನ ಆಸ್ತಿಯನ್ನು ಸೂರೆಮಾಡಿಬಿಟ್ಟನು. ಹೀಗೆ ಅವನು ಎಲ್ಲಾ ಹಾಳು ಮಾಡಿಕೊಂಡ ಮೇಲೆ ಆ ದೇಶದಲ್ಲೆಲ್ಲಾ ಘೋರವಾದ ಬರ ಬಂದು ಏನೂ ಗತಿಯಿಲ್ಲದವನಾದನು. ಆಗ ಅವನು ಹೋಗಿ ನಿವಾಸಿಗಳೊಳಗೆ ಒಬ್ಬನಲ್ಲಿ ಸೇರಿಕೊಂಡನು; ಆ ಮನುಷ್ಯನು ಹಂದಿಗಳನ್ನು ಮೇಯಿಸುವದಕ್ಕೆ ಅವನನ್ನು ತನ್ನ ಹೊಲಗಳಿಗೆ ಕಳಿಹಿಸಿ –ದನು. ಹೀಗಿರಲಾಗಿ ಅವನು ಹಂದಿ ತಿನ್ನುತ್ತಿದ್ದ ಕಾಯಿಗಳನ್ನಾದರೂ ತಿಂದು ಹಸಿವನ್ನು ತೀರಿಸಿಕೊಳ್ಳಬೇಕೆಂದು ಆಶೆಪಟ್ಟನು; ಆದರೂ ಯಾರೂ ಅವನಿಗೆ ಕೊಡಲಿಲ್ಲ. (15:11-16)

ಆಗ ಅವನಿಗೆ ಬುದ್ಧಿ ಬಂದು, 'ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವದೆ; ನಾನಾ –
–ದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ. ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ, ಅಪ್ಪಾ, ಪರಲೋಕಕ್ಕೆ ವಿರೋಧ –ವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು' ಅಂದುಕೊಂಡು ಎದ್ದು ತನ್ನ ತಂದೆಯ ಕಡೆಗೆ ಬಂದನು. ಅವನು ಇನ್ನೂ ದೂರದಲ್ಲಿರುವಾಗ **ಅವನ ತಂದೆಯು** ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಬಹಳ –ವಾಗಿ ಮುದ್ದಿಟ್ಟನು. ಆದರೂ ಮಗನು ಅವನಿಗೆ, "ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿ –ದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ" ಎಂದು ಹೇಳಲು ತಂದೆಯು ತನ್ನ ಆಳುಗಳಿಗೆ, "ಶ್ರೇಷ್ಠವಾದ ನಿಲು –ವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ; ಹಬ್ಬಮಾಡೋಣ, ಉಲ್ಲಾಸಪಡೋಣ. ಈ ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿಹೋಗಿದ್ದನು ಸಿಕ್ಕಿದನು" ಎಂದು ಹೇಳಿದನು. ಆಗ ಅವರು ಉಲ್ಲಾಸಪಡುವದಕ್ಕೆ ತೊಡಗಿದರು. (15:17-24)

ಆದರೆ ಅವನ **ಹಿರೀಮಗನು** ಹೊಲದಲ್ಲಿದ್ದನು. ಅವನು ಮನೆಯ ಹತ್ತಹತ್ತರಕ್ಕೆ ಬರುತ್ತಿರುವಾಗ ವಾದ್ಯನರ್ತನಗಳನ್ನು ಕೇಳಿ ಆಳುಗಳಲ್ಲಿ ಒಬ್ಬನನ್ನು ತನ್ನ ಬಳಿಗೆ ಕರೆದು, ಇದೇನು ಎಂದು ವಿಚಾರಿಸಿದನು. ಆಳು ಅವನಿಗೆ, "ನಿನ್ನ ತಮ್ಮ ಬಂದಿದ್ದಾನೆ; ಇವನು ಸುರಕ್ಷಿತವಾಗಿ ಬಂದದ್ದರಿಂದ ನಿನ್ನ ತಂದೆಯು ಆ ಕೊಬ್ಬಿಸಿದ ಕರುವನ್ನು ಕೊಯ್ಸಿದ್ದಾನೆ" ಎಂದು ಹೇಳಿದನು. ಇದನ್ನು ಕೇಳಿ ಅವನಿಗೆ ಸಿಟ್ಟುಬಂದು ಒಳಕ್ಕೆ ಹೋಗಲೊಲ್ಲದೆ ಇದ್ದನು. ಆಗ ಅವನ ತಂದೆಯು ಹೊರಗೆ ಬಂದು ಅವನನ್ನು ಬೇಡಿಕೊಂಡನು. ಆದರೆ ಅವನು ತನ್ನ ತಂದೆಗೆ, "ನೋಡು, ಇಷ್ಟು ವರುಷ ನಿನಗೆ ಸೇವೆ ಮಾಡಿದ್ದೇನೆ, ಮತ್ತು ನಾನು ನಿನ್ನ ಒಂದಪ್ಪಣೆಯನ್ನಾದರೂ ಎಂದೂ ಮೀರಲಿಲ್ಲ; ಆದರೂ ನಾನು ನನ್ನ ಸ್ನೇಹಿತರ ಸಂಗಡ ಉಲ್ಲಾಸಪಡುವದಕ್ಕಾಗಿ ನೀನು ಎಂದೂ ನನಗೆ ಒಂದು ಆಡನ್ನಾದರೂ ಕೊಡಲಿಲ್ಲ. ಆದರೆ ಸೂಳೆಯರನ್ನು ಕಟ್ಟಿಕೊಂಡು ನಿನ್ನ ಬದುಕನ್ನು ನುಂಗಿಬಿಟ್ಟ ಈ ನಿನ್ನ ಮಗನು ಬಂದಾಗ ಕೊಬ್ಬಿಸಿದ ಕರುವನ್ನು ಅವನಿಗೆ ಕೊಯ್ಸಿದಿ" ಎಂದು ಉತ್ತರಕೊಟ್ಟನು. ಅದಕ್ಕೆ ತಂದೆಯು, "ಕಂದಾ, ನೀನು ಯಾವಾಗಲೂ ನನ್ನ ಸಂಗಡ ಇದ್ದೀ, ಮತ್ತು ನನ್ನದೆಲ್ಲಾ ನಿನ್ನದೇ. ಆದರೆ ಉಲ್ಲಾಸಪಡುವದೂ ಸಂತೋಷಗೊಳ್ಳುವದೂ ನ್ಯಾಯವಾದದ್ದೇ; ಯಾಕಂದರೆ ಈ ನಿನ್ನ ತಮ್ಮನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿ ಹೋಗಿದ್ದನು ಸಿಕ್ಕಿದನು" ಎಂದು ಹೇಳಿದನು. (15:25-32)

ಅತ್ಯಂತ ಮನೋಹರವಾದ ಈ ಸಾಮ್ಯದ ಮೂಲಕ ದೇವರು ನಮಗೆ ಏನು ಕಲಿಸುವದಕ್ಕೆ ಇಷ್ಟಪಡುತ್ತಾನೆ? ಇದರಲ್ಲಿ, ನಾವು ಮೂರು ವ್ಯಕ್ತಿಗಳನ್ನು ನೋಡುತ್ತೇವೆ; ತಂದೆ, ಕಿರೀಮಗನು ಮತ್ತು ಹಿರೀಮಗನು.

**ತಂದೆಯು** ಈ ಕತೆಯಲ್ಲಿ **ದೇವರನ್ನು** ಪ್ರತಿನಿಧಿಸುತ್ತಾನೆ.
**ಕಿರೀಮಗನು,** ತಮ್ಮ ಪಾಪಗಳಿಗೆ ಪಶ್ಚಾತ್ತಾಪಪಟ್ಟು ದೇವರ ಕರುಣೆಗಾಗಿ **ಆತನ ಕಡೆಗೆ ತಿರುಗಿಕೊಳ್ಳುವ ಪಾಪಿಗಳಿಗೆ** ದೃಷ್ಟಾಂತವಾಗಿದ್ದಾನೆ.
**ಹಿರೀಮಗನು,** ತಾವು ದೇವರ ಮುಂದೆ ನೀತಿವಂತರೆಂದು ಆಲೋಚಿಸುವದರಿಂದ **ತಮ್ಮನ್ನು ಮೋಸಗೊಳಿಸಿಕೊಳ್ಳುವ ಧಾರ್ಮಿಕ ಜನರಿಗೆ** ದೃಷ್ಟಾಂತವಾಗಿದ್ದಾನೆ.

ಮೊದಲು, ದೂರದೇಶದಲ್ಲಿ ವಿಷಯಾಸಕ್ತ ಜೀವಿತದಲ್ಲಿ ತನ್ನ ಪಾಪದ ಸ್ವಭಾವವನ್ನು ಹಿಂಬಾಲಿಸಿದ **ಕಿರೀಮಗನ** ಕುರಿತು ಸ್ವಲ್ಪ ಆಲೋ –ಚಿಸೋಣ. ಅವನು ಏನಾದನು? ಕೊನೆಗೆ ತಾನು ದೇವರಿಗೂ ಮತ್ತು ಮನುಷ್ಯರಿಗೂ ಅಪರಾಧ ಮಾಡಿದ್ದೇನೆಂದು ಅವನು ಹೇಗೆ ಗ್ರಹಿಸಿಕೊಂಡನೆಂಬುದನ್ನು ನಾವು ನೋಡಿದೆವು. ಅವನು ತನ್ನ ಪಾಪಗಳ ನಿಮಿತ್ತವಾಗಿ ದು:ಖಪಡುತ್ತಿದ್ದನು ಮತ್ತು ಪಶ್ಚಾತ್ತಾಪಪಟ್ಟು, "ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗಿ ಅವನಿಗೆ, ಅಪ್ಪಾ, ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ **ಪಾಪ ಮಾಡಿದ್ದೇನೆ;** ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ; ನನ್ನನ್ನು ನಿನ್ನ ಕೂಲಿಯಾಳುಗಳಲ್ಲಿ ಒಬ್ಬನಂತೆ ಮಾಡು ಎಂದು ಹೇಳುವೆನು" ಎಂದು ಅಂದುಕೊಂಡನು. ಈ ಪ್ರಕಾರ, ಕಿರೀಮಗನು ಹಂದಿಯ ದೊಡ್ಡಿಯಿಂದ ತನ್ನ ತಂದೆಯ ಮನೆಗೆ ಹೇಗೆ ಹಿಂದಿರುಗಿ ಬಂದನೆಂಬುದನ್ನು ನಾವು ನೋಡಿದೆವು.

**ತಂದೆಯ** ವಿಷಯವೇನು, ಅವನು ಏನು ಮಾಡಿದನು? ತನ್ನ ಸಂಪತ್ತನ್ನು ಹಾಳುಮಾಡಿದ ಮಗನ ಮೇಲೆ ಅವನು ಕೋಪಗೊಂಡಿ –ದ್ದನೋ? ಅವನು ತನ್ನ ಮಗನನ್ನು ಕೇವಲ ಒಬ್ಬ ಗುಲಾಮನಂತೆ ಸೇರಿಸಿಕೊಂಡನೋ? ಇಲ್ಲ! ಯೇಸು ಹೇಳಿದ್ದೇನೆಂದರೆ,

ಅವನು ಇನ್ನೂ ದೂರದಲ್ಲಿರುವಾಗ **ಅವನ ತಂದೆಯು** ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಬಹಳವಾಗಿ ಮುದ್ದಿಟ್ಟನು. ತಂದೆಯು ತನ್ನ ಆಳುಗಳಿಗೆ, "ಶ್ರೇಷ್ಠವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ

ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ; ಹಬ್ಬಮಾಡೋಣ, ಉಲ್ಲಾಸ –ಪಡೋಣ. ಈ ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು; ಪೋಲಿ ಹೋಗಿದ್ದನು ಸಿಕ್ಕಿದನು!" ಎಂದು ಹೇಳಿದನು.

ಇದರಿಂದ ನಾವು ಏನು ಕಲಿಯುತ್ತೇವೆ? ದೇವರು ಖಂಡಿತವಾಗಿ ಕನಿಕರದಿಂದ ತುಂಬಿದ್ದ ತಂದೆಯ ಹಾಗೆಯೇ ಇದ್ದಾನೆಂಬುದನ್ನು ನಾವು ಕಲಿತುಕೊಳುತ್ತೇವೆ! **ದೇವರು ಪಾಪಿಗಳನ್ನು ಪ್ರೀತಿಸುತ್ತಾನೆ,** ಅವರಿಗೆ ಕನಿಕರ ತೋರಿಸುವದಕ್ಕೆ ಇಷ್ಟಪಡುತ್ತಾನೆ, ಆದರೆ ಪ್ರತಿಯೊಬ್ಬ ಪಾಪಿಯೂ ತನ್ನ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಆತನು ಸ್ಥಾಪಿಸಿರುವ ನೀತಿಯ ಮಾರ್ಗವನ್ನು ಅನುಸರಿಸಬೇಕೆಂದು **ಆತನು ಕಾಯು –ತ್ತಾನೆ.** ಹಿರೀಮಗನನ್ನು ಕುರಿತಂತೆ, ನಾವು ಒಂದು ಆಶ್ಚರ್ಯಕರವಾದ ಸಂಗತಿಯನ್ನು ನೋಡಿದೆವು. ಹಿರೀಮಗನು ತನ್ನ ತಂದೆ – –ಯಂತೆ ಕನಿಕರದ ಹೃದಯವುಳ್ಳವನಾಗಿರಲಿಲ್ಲ. ಬದಲಾಗಿ, ಅವನು ಕೋಪಗೊಂಡು ಮನೆಯೊಳಗೆ ಬರುವದನ್ನು ತಿರಸ್ಕರಿಸುತ್ತಾ ತನ್ನ ತಂದೆಗೆ, **"ನೋಡು, ಇಷ್ಟು ವರುಷ ನಿನಗೆ ಸೇವೆ ಮಾಡಿದ್ದೇನೆ,** ಮತ್ತು ನಾನು ನಿನ್ನ ಒಂದಪ್ಪಣೆಯನ್ನಾದರೂ ಎಂದೂ ಮೀರಲಿಲ್ಲ; ಆದರೂ ನಾನು ನನ್ನ ಸ್ನೇಹಿತರ ಸಂಗಡ ಉಲ್ಲಾಸಪಡುವದಕ್ಕಾಗಿ ನೀನು ಎಂದೂ ನನಗೆ ಒಂದು ಆಡನ್ನಾದರೂ ಕೊಡಲಿಲ್ಲ." ಅಂದನು. ಹಿರೀಮಗನು ಹೇಳಿದ್ದನ್ನು ನೀವು ಕೇಳಿಸಿಕೊಂಡಿರಾ? ಅವನು, "ನೋಡು ಇಷ್ಟು ವರುಷಗಳವರೆಗೆ ನಾನು **ಒಬ್ಬ ಗುಲಾ –ಮನ** ಹಾಗೆ ಕೆಲಸ ಮಾಡಿದ್ದೇನೆ!" ಎಂದು ಹೇಳಿದನು. ಏನೇ ಆದರೂ, ಒಬ್ಬ ಮಗನು ತನಗಾಗಿ ಒಬ್ಬ ಗುಲಾಮನ ಹಾಗೆ ಕೆಲಸ ಮಾಡುವದನ್ನು ತಂದೆಯು ಇಷ್ಟಪಡುವದಿಲ್ಲ ಎನ್ನುವದನ್ನು ಹಿರಿಮಗನು ಅರ್ಥಮಾಡಿಕೊಳ್ಳಲಿಲ್ಲ. ಮಗನು **ತನ್ನನ್ನು ಹೃದಯ ಪೂರ್ವ –ಕವಾಗಿ ಪ್ರೀತಿಸಿ** ತನ್ನ ಇಷ್ಟವನ್ನು ಮಾಡುವದರಲ್ಲಿ ಸಂತೋಷಪಡಬೇಕೆಂದು ತಂದೆಯು ಇಷ್ಟಪಟ್ಟಿದ್ದನು.

ಈ ದಿನದವರೆಗೂ, ಆದಾಮನ ಸಂತತಿಯರಲ್ಲಿ ಅನೇಕರು ಹಿರೀಮಗನ ಹಾಗಿದ್ದಾರೆ. ತಾವು "ದೇವರ ಗುಲಾಮರು" ಎನ್ನುವದಕ್ಕಿಂತ ಹೆಚ್ಚು ತಾವೇನೂ ಅಲ್ಲ ಎಂದು ಅಭಿಪ್ರಾಯಪಡುತ್ತಾರೆ. ಆದರೆ ನಾವು ಕೇವಲ ಗುಲಾಮರ ರೀತಿ ಇರುವದನ್ನು ದೇವರು ಇಷ್ಟಪಡು –ವದಿಲ್ಲ. ನಾವು ಆತನಿಗೆ ಮಗನೂ ಮತ್ತು ಮಗಳೂ ಆಗಿರಬೇಕೆಂದು ಆತನು ಇಷ್ಟಪಡುತ್ತಾನೆ. ಯೇಸುವನ್ನು ತಮ್ಮ ಕರ್ತನೂ ಮತ್ತು ರಕ್ಷಕನನ್ನಾಗಿ ಸ್ವೀಕರಿಸಿಕೊಂಡವರ ಕುರಿತು ಪರಿಶುದ್ಧ ವಾಕ್ಯಗಳು ಹೇಳುದೇನೆಂದರೆ, "ನೀವು ತಿರಿಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದವರಗಿದ್ದೀರಿ. ಈ ಭಾವದಿಂದ ನಾವು ದೇವರನ್ನು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ!" (ರೋಮಾ–8:15)

ಪ್ರಿಯ ಸ್ನೇಹಿತರೇ, ನೀವು ನಿಮ್ಮನ್ನು ದೇವರ ಗುಲಾಮರಂತೆ ಅಥವಾ ದೇವರ ಮಗನಂತೆ ದೃಷ್ಟಿಸಿತತೀರೋ? ನಾವು ಈಗತಾನೇ ಓದಿದ ಸಾಮ್ಯದಲ್ಲಿ ನಿಮ್ಮನ್ನು ನೀವು ಹೇಗೆ ನೋಡಿಕೊಳ್ಳುತ್ತೀರಿ? ತನ್ನ ಪಾಪವನ್ನು ಗ್ರಹಿಸಿಕೊಂಡು ತನ್ನ ತಂದೆಯ ಕನಿಕರವನ್ನು ಪಡೆ –ದುಕೊಂಡ ಕಿರೀಮಗನ ಹಾಗಿದ್ದೀರೋ? ಅಥವಾ ತನ್ನ ತಂದೆಗಾಗಿ ಒಬ್ಬ ಗುಲಾಮನಂತೆ ಕೆಲಸ ಮಾಡಿದ ಹಿರೀಮಗನ ಹಾಗಿ – ದ್ದೀರೋ? ತನ್ನ ಯಜಮಾನನಿಗೆ ಹೆದರುವ ಒಬ್ಬ ಗುಲಾಮನ ಹಾಗೆ ನೀವಿರಬೇಕೆಂದು ದೇವರು ಬಯಸುವದಿಲ್ಲ. ನೀವು ನಿಮ್ಮ ತಂದೆಯನ್ನು ಪ್ರೀತಿಸುವ ಒಬ್ಬ ಮಗನ ಹಾಗಿರಬೇಕು ಮತ್ತು ಆತನ ಚಿತ್ತವನ್ನು ಮಾಡುವದಕ್ಕೆ ಸಂತೋಷವುಳ್ಳವರಾಗಿರಬೇಕೆಂದು ದೇವರು ಬಯಸುತ್ತಾನೆ. ದೇವರು ನಿಮ್ಮನ್ನು ಪ್ರೀತಿಸುತ್ತಾನೆ ಮತ್ತು ನಿಮಗೆ ಕರುಣೆಯನ್ನು ತೋರಿಸುವದಕ್ಕೆ ಇಷ್ಟವುಳ್ಳನಾಗಿದ್ದಾನೆ, ಆದರೆ ನೀವು ಪಶ್ಚಾತ್ತಾಪಪಟ್ಟು ಆತನ ಕಡೆಗೆ ತಿರುಗಿಕೊಳ್ಳುವದಕ್ಕಾಗಿ ಆತನು ಕಾಯುತ್ತಿದ್ದಾನೆ. ಅದಕ್ಕಾಗಿಯೇ ಪ್ರವಾದಿಯಾದ ಯೆಶಾ –ಯನು ಹೀಗೆ ಬರೆದಿದ್ದಾನೆ, **"ಹೀಗಿರಲು ಯೆಹೋವನು ನಿಮಗೆ ಕೃಪೆ ತೋರಿಸಬೇಕೆಂದು ಕಾದಿರುವನು; ನಿಮ್ಮನ್ನು ಕರುಣಿಸಬೇಕೆಂದು ಉನ್ನತೋನ್ನತನಾಗಿ ಕಾಣಿಸಿಕೊಳ್ಳುವನು; ಯೆಹೋವನು ನ್ಯಾಯಸ್ವರೂಪನಾದ ದೇವರು; ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು!."** (ಯೆಶಾಯ–30:18)

**ಕರುಣೆಯುಳ್ಳವನು ಮತ್ತು ಕೃಪಾಭರಿತನೂ ಆಗಿರುವ ದೇವರು,** ಸಾಮ್ಯದಲ್ಲಿರುವ ತಂದೆಯು ತನ್ನ ಕಿರೀಮಗನು ತನ್ನ ಬಳಿಗೆ ಹಿಂದಿ – ರುಗಿ ಬರಬೇಕೆಂದು ಕಾಯುತ್ತಿದ್ದ ಹಾಗೆ **ನೀವು ಆತನ ಬಳಿಗೆ ಬರಬೇಕೆಂದು ದೇವರು ಕಾಯುತ್ತಾನೆ.** ನೀವು ಮುರಿದ ಮತ್ತು ದೀನತೆಯ ಹೃದಯದೊಂದಿಗೆ ಪಶ್ಚಾತ್ತಾಪಪಡಬೇಕೆಂದು ದೇವರು ಇಷ್ಟಪಡುತ್ತಾನೆ. ನೀವು ಈ ರೀತಿಯಲ್ಲಿ ದೇವರ ಬಳಿಗೆ ಬಂದು ಹೃದಯ ಪೂರ್ವಕವಾಗಿ ಆತನನ್ನು ಹುಡುಕಿದರೆ, ಆಗ ನೀವು ಕರುಣೆ ಮತ್ತು ಕೃಪೆಯಿಂದ ತುಂಬಿರುವ ಒಬ್ಬ ತಂದೆಯ ಹೃದಯವುಳ್ಳ ದೇವ –ರನ್ನು ಸಂಧಿಸಿದ್ದೀರೆಂಬುದನ್ನು ನಿಶ್ಚಿತಪಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆದರೆ ಯಾರು ಅಹಂಕಾರದಿಂದ ದೇವರ ದೊಡ್ಡದಾದ ಕನಿ –ಕರವನ್ನು ತಿರಸ್ಕರಿಸುತ್ತಾರೋ ಅವರು ಕನಿಕರವಿಲ್ಲದ ದೇವರ ನ್ಯಾಯತೀರ್ಪಿನ ಹೊರತು ಬೇರೆ ಏನನ್ನೂ ನಿರೀಕ್ಷಿಸುವದಕ್ಕೆ ಸಾಧ್ಯ – –ವಿಲ್ಲ. ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ದೇವರ ಚಿತ್ತದಂತೆ, ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ, ನಾಲ್ಕು ದಿನಗಳವರೆಗೆ ಸಮಾಧಿಯಲ್ಲಿದ್ದ ಒಬ್ಬ ಸತ್ತ ಮನುಷ್ಯನನ್ನು ಯೇಸು ಹೇಗೆ ಬದುಕಿಸಿದನೆಂಬುದನ್ನು ನೋಡಲಿ –ದ್ದೇವೆ. ಈದಿನ ನಾವು ಅಧ್ಯಯನ ಮಾಡಿದ್ದರೊಳಗೆ ದೇವರು ನಿಮಗೆ ವಿವೇಕವನ್ನು ಕೊಡಲಿ. ಮತ್ತು ಈ ವಾಕ್ಯವನ್ನು ನೆನಪಿನಲ್ಲಿ ಇಟ್ಟುಕೊಳ್ಳಿರಿ:

**"ದೇವರು ಅಹಂಕಾರಗಳನ್ನು ಎದುರಿಸುತ್ತಾನೆ, ಆದರೆ ದೀನರಿಗಾದರೋ ತನ್ನ ಕೃಪೆಯನ್ನು ಅನುಗ್ರಹಿಸುತ್ತಾನೆ."** (1ಪೇತ್ರ–5:5)

[ಪಾಠ 77: ದೇವರ ಹೃದಯ] [ಸಾರಾಂಶಗಳ ಪಟ್ಟಿ] [ಪಾಠ 79: ಯೇಸು ಯೆರೂಸಲೇಮನ್ನು ಪ್ರವೇಶಿಸಿದ್ದು]

ಪಾಠ 78

# ಪುನರುತ್ಥಾನವೂ ಮತ್ತು ಜೀವವೂ

ಯೋಹಾನ 11,12

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪರಿಶುದ್ಧ ಸುವಾರ್ತೆಯಲ್ಲಿನ {ಇಂಜಿಲ್} ನಮ್ಮ ಅಧ್ಯಯನದ ಈ ಅಂಶದವರೆಗೆ, ಮೆಸ್ಸೀಯನಾದ ಯೇಸು **ಅನೇಕ ಹೆಸರುಗಳನ್ನು** ಹೊಂದಿದ್ದಾನೆ ಎಂಬುದನ್ನು ನಾವು ನೋಡಿಕೊಂಡೆವು. ಆತನು ಯಾರೆಂದು ತಿಳಿದುಕೊಳ್ಳುವದಕ್ಕೆ ಈ ಹೆಸರುಗಳು ನಮಗೆ ಸಹಾಯ ಮಾಡುತ್ತವೆ. ಯೇಸು: ಆದಿಯಲ್ಲಿ ದೇವರ ಬಳಿಯಲ್ಲಿದ್ದಂತ ವಾಕ್ಯ, ಅತ್ಯುನ್ನತನ ಮಗನು, ಮನುಷ್ಯಕುಮಾರನು, ದೇವರ ಕುರಿಮರಿ, ಜೀವಕೊಡುವ ರೊಟ್ಟಿ, ಲೊಕದ ಬೆಳಕು, ಮಹಿಮೆಯ ಕರ್ತನು, ಕುರಿಹಟ್ಟಿಯ ಬಾಗಲು ಮತ್ತು ಒಳ್ಳೇ ಕುರುಬನು ಎಂದು ಕರೆಯ –ಲ್ಪಟ್ಟಿರುವದನ್ನು ನಾವು ಈಗಾಗಲೇ ಕೇಳಿಸಿಕೊಂಡಿದ್ದೇವೆ. ಈದಿನ ಯೇಸುವಿನ ಇನ್ನೆರಡು ಹೆಸರುಗಳನ್ನು ನೋಡಿಕೊಳ್ಳಲಿದ್ದೇವೆ, ಅವು: **"ಪುನರುತ್ಥಾನವೂ"** ಮತ್ತು **"ಜೀವವೂ"** ಎಂಬವು.

ಯೇಸು ಯೆಹೂದ್ಯರ ಪ್ರದೇಶದಲ್ಲೆಲ್ಲಾ ಬೋಧಿಸುತ್ತಾ, ಒಳ್ಳೆಯದನ್ನು ಮಾಡುತ್ತಾ, ರೋಗಿಗಳನ್ನು, ಕುರುಡರನ್ನು ಮತ್ತು ದೆವ್ವ ಹಿಡಿದವ –ರನ್ನು ಸ್ವಸ್ಥಮಾಡುತ್ತಾ ಹೇಗೆ ಸಂಚಾರ ಮಾಡಿದನೆಂಬುದನ್ನು ನಾವು ನೋಡಿದ್ದೇವೆ. ಜನರ ಒಂದು ದೊಡ್ಡ ಗುಂಪು ಆತನನ್ನು ಹಿಂಬಾಲಿಸುತ್ತಿತ್ತು. ಹೀಗಿದ್ದರೂ, ಧಾರ್ಮಿಕ **"**ನಿಪುಣರು**"** ಅಂದರೆ ಫರಿಸಾಯರು ಯೇಸುವಿನ ವಿಷಯದಲ್ಲಿ ಮಿತಿಮೀರಿದ ಮತ್ಸರ –ವುಳ್ಳವರಾಗಿದ್ದರು. ಆತನು ಮಾತಾಡಿದ **ಜ್ಞಾನವನ್ನು** ಅಲ್ಲಗಳೆಯುವದಕ್ಕೆ ಅಥವಾ ಆತನು ಮಾಡಿದ **ಅದ್ಭುತಗಳನ್ನು** ಅಲ್ಲಗಳೆಯು –ವದಕ್ಕೆ ಅವರಿಗೆ ಸಾಧ್ಯವಾಗಲಿಲ್ಲ.

ಈದಿನ ಸುವಾರ್ತೆಯಲ್ಲಿರುವದನ್ನು ಮುಂದುವರಿಸುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. **ತನ್ನಲ್ಲಿರುವ ದೇವರ ಮಹಿಮೆ –ಯನ್ನು ಪ್ರಕಟಪಡಿಸುವದಕ್ಕೆ ಮತ್ತು ಅದರಿಂದ ಜನರು ತನ್ನಲ್ಲಿ ನಂಬಿಕೆಯಿಡುತ್ತಾರೆ ಎನ್ನುವದಕ್ಕೆ ಯೇಸು ಇನ್ನೊಂದು ಅಲೌಕಿಕವಾದ ಅದ್ಭುತವನ್ನು ಹೇಗೆ ನಿರ್ವಹಿಸಿದನೆಂಬುದನ್ನು** ನಾವು ನೋಡಲಿದ್ದೇವೆ. ಯೋಹಾನನ ಸುವಾರ್ತೆಯ ಹನ್ನೊಂದನೆಯ ಅಧ್ಯಾಯದಲ್ಲಿ ನಾವು ಓದುತ್ತಿದ್ದೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಬೇಥಾನ್ಯದ **ಲಾಜರನೆಂಬವನು** ಅಸ್ವಸ್ಥನಾಗಿದ್ದನು. ಅದು **ಮಾರ್ಥಳು ಮರಿಯಳು** ಎಂಬ ಅಕ್ಕತಂಗಿಯರು ಇದ್ದ ಊರು. ಈ ಮರಿ –ಯಳು ಯೇಸುಸ್ವಾಮಿಗೆ ತೈಲವನ್ನು ಹಚ್ಚಿ ಆತನ ಪಾದಗಳನ್ನು ತನ್ನ ತಲೇಕೂದಲಿನಿಂದ ಒರಸಿದವಳು. ಈಕೆಯ ತಮ್ಮನಾದ ಲಾಜ –ರನೇ ಅಸ್ವಸ್ಥನಾಗಿದ್ದನು. ಹೀಗಿರಲಾಗಿ ಅವನ ಅಕ್ಕಂದಿರು, ಸ್ವಾಮೀ, ನಿನ್ನ ಪ್ರಿಯ ಮಿತ್ರನು ಅಸ್ವಸ್ಥನಾಗಿದ್ದಾನೆ ಎಂದು ಹೇಳಿಕಳುಹಿಸಿ– –ದರು. ಯೇಸು ಅದನ್ನು ಕೇಳಿ, ಈ ರೋಗವು ಮರಣಕ್ಕಾಗಿ ಬಂದದ್ದಲ್ಲ; ಇದರಿಂದ ದೇವರಕುಮಾರನಿಗೆ ಮಹಿಮೆ ಉಂಟಾಗು –ವಂತೆ ದೇವರ ಮಹಿಮೆಗೋಸ್ಕರ ಬಂದದ್ದು ಅಂದನು. ಮಾರ್ಥಳಲ್ಲಿಯೂ ಆಕೆಯ ತಂಗಿಯಲ್ಲಿಯೂ ಲಾಜರನಲ್ಲಿಯೂ ಯೇಸು ವಿಗೆ ಪ್ರೀತಿ ಇತ್ತು. ಆದರೂ ಲಾಜರನು ಅಸ್ವಸ್ಥನಾಗಿದ್ದಾನೆಂದು ಆತನು ಕೇಳಿದ ಮೇಲೆ ಎರಡು ದಿನ ತಾನಿದ್ದ ಸ್ಥಳದಲ್ಲೇ ನಿಂತನು. (ಯೋಹಾನ–11:1-6)

ಬಳಿಕ ಶಿಷ್ಯರಿಗೆ, **"**ತಿರಿಗಿ ಯೂದಾಯಕ್ಕೆ ಹೋಗೋಣ**"** ಎಂದು ಹೇಳಿದನು. ಶಿಷ್ಯರು, **"**ಗುರುವೇ, ಯೆಹೂದ್ಯರು ಆಗಲೇ ನಿನ್ನನ್ನು ಕಲ್ಲೆ –ಸೆದು ಕೊಲ್ಲಬೇಕೆಂದಿದ್ದರು; ತಿರಿಗಿ ಅಲ್ಲಿಗೆ ಹೋಗುತ್ತೀಯಾ?**"** ಅನ್ನಲು ಯೇಸು, **"**ಹಗಲಿಗೆ ಹನ್ನೆರಡು ತಾಸು ಉಂಟಲ್ಲವೇ. ಒಬ್ಬನು ಹಗಲಲ್ಲಿ ತಿರುಗಾಡಿದರೆ ಈ ಲೋಕದ ಬೆಳಕು ಕಾಣಿಸುವದರಿಂದ ಅವನು ಎಡವುವದಿಲ್ಲ. . .**"** ಈ ಮಾತುಗಳನ್ನು ಹೇಳಿದ ಮೇಲೆ ಅವರಿಗೆ, **"**ನಮ್ಮ ಮಿತ್ರನಾದ ಲಾಜರನು ನಿದ್ರೆಮಾಡುತ್ತಾನೆ; ನಾನು ಅವನನ್ನು ನಿದ್ರೆಯಿಂದ ಎಬ್ಬಿಸುವದಕ್ಕಾಗಿ ಹೋಗುತ್ತೇನೆ**"** ಎಂದು ಹೇಳಿದನು. ಅದಕ್ಕೆ ಶಿಷ್ಯರು, **"**ಸ್ವಾಮೀ, ಅವನು ನಿದ್ರೆಮಾಡುತ್ತಿದ್ದರೆ ಸ್ವಸ್ಥನಾಗುವನು**"** ಅಂದರು. ಯೇಸು ಅವನ ಮರಣವನ್ನು

ಸೂಚಿಸಿ ಅದನ್ನು ಹೇಳಿದ್ದನು; ಆದರೆ ಅವರು ನಿದ್ರೆಯ ವಿಶ್ರಾಂತಿಯನ್ನು ಕುರಿತು ಹೇಳುತ್ತಾನೆಂದು ನೆನಸಿದರು. ಆಗ ಯೇಸು ಸ್ಪಷ್ಟವಾಗಿ ಅವರಿಗೆ, **"ಲಾಜರನು ಸತ್ತು ಹೋದನು**; ಮತ್ತು ನಾನು ಅಲ್ಲಿ ಇಲ್ಲದೆ ಇದ್ದದ್ದಕ್ಕೆ ನಿಮ್ಮ ನಿಮಿತ್ತವಾಗಿ ಸಂತೋಷಪಡುತ್ತೇನೆ, ಯಾಕಂದರೆ ಅದರಿಂದ ನೀವು ನಂಬುವದಕ್ಕೆ ಮಾರ್ಗವಾಯಿತು; ಆದರೆ ಅವನ ಬಳಿಗೆ ಹೋಗೋಣ ಎಂದು ಹೇಳಿದನು.

ಯೇಸು ಬಂದಾಗ ಲಾಜರನನ್ನು ಸಮಾಧಿಯಲ್ಲಿಟ್ಟು **ನಾಲ್ಕು ದಿವಸ**ವಾಯಿತೆಂದು ಆತನಿಗೆ ತಿಳಿದುಬಂತು. ಬೇಥಾನ್ಯವು ಯೆರೂಸ –
–ಲೇಮಿಗೆ ಸಮೀಪವಾಗಿತ್ತು; ಇದಕ್ಕೂ ಅದಕ್ಕೂ ಹೆಚ್ಚುಕಡಿಮೆ ಒಂದು ಹರದಾರಿ ಅಂತರ. ಆದದರಿಂದ ಯೆಹೂದ್ಯರಲ್ಲಿ ಅನೇಕರು ಮಾರ್ಥಳ ಮತ್ತು ಮರಿಯಳ ಬಳಿಗೆ ಅವರನ್ನು ತಮ್ಮನ ವಿಷಯದಲ್ಲಿ ಸಂತೈಸಬೇಕೆಂದು ಬಂದಿದ್ದರು. ಹೀಗಿರುವಲ್ಲ ಮಾರ್ಥಳು ಯೇಸು ಬರುತ್ತಾನೆಂದು ಕೇಳಿ ಆತನನ್ನು ಎದುರುಗೊಳ್ಳುವದಕ್ಕೆ ಹೋದಳು; ಆದರೆ ಮರಿಯಳು ಮನೆಯಲ್ಲೇ ಕೂತುಕೊಂಡಿದ್ದಳು. ಮತ್ತು ಮಾರ್ಥಳು ಯೇಸುವಿಗೆ, "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ; ಈಗಲಾದರೂ ದೇವರನ್ನು ಏನು ಬೇಡಿಕೊಳ್ಳುತ್ತೀಯೋ ಅದನ್ನು ದೇವರು ನಿನಗೆ ಅನುಗ್ರಹಿಸುವನೆಂದು ಬಲ್ಲೆನು" ಎಂದು ಹೇಳಿದಳು. ಯೇಸು ಆಕೆಗೆ, **"ನಿನ್ನ ತಮ್ಮನು ಎದ್ದುಬರುವನೆಂದು"** ಹೇಳಿದನು. ಮಾರ್ಥಳು, "ಸತ್ತವರಿಗೆ ಕಡೇ ದಿನದಲ್ಲಿ ಪುನರುತ್ಥಾನವಾಗುವಾಗ ಅವನೂ ಎದ್ದು ಬರುವನೆಂದು ಬಲ್ಲೆನು" ಅಂದಳು. (11:17-24)

ಯೇಸು ಆಕೆಗೆ, **"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ; ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ; ಇದನ್ನು ನಂಬುತ್ತೀಯಾ?"** ಎಂದು ಹೇಳಿದನು. ಆಕೆ, "ಹೌದು, ಸ್ವಾಮೀ, ಲೋಕಕ್ಕೆ ಬರಬೇಕಾದ ದೇವಕುಮಾರನಾದ ಕ್ರಿಸ್ತನು ನೀನೇ" ಎಂದು ನಂಬಿದ್ದೇನೆ ಅಂದಳು. ಇದನ್ನು ಹೇಳಿ ಆಕೆ ಹೋಗಿ ತನ್ನ ತಂಗಿಯಾದ ಮರಿಯಳನ್ನು ಗುಪ್ತವಾಗಿ ಕರೆದು, "ಗುರುವು ಬಂದಿದ್ದಾನೆ, ನಿನ್ನನ್ನು ಕರೆಯುತ್ತಾನೆ" ಅಂದಳು. ಮರಿಯಳು ಇದನ್ನು ಕೇಳುತ್ತಲೇ ತಟ್ಟನೆ ಎದ್ದು ಆತನ ಬಳಿಗೆ ಹೋದಳು. . . .ಮರಿಯಳು ಯೇಸು ಇದ್ದಲ್ಲಿಗೆ ಬಂದು ಆತನನ್ನು ಕಂಡು ಆತನ ಪಾದಕ್ಕೆ ಬಿದ್ದು, "ಸ್ವಾಮೀ, ನೀನು ಇಲ್ಲಿ ಇರುತ್ತಿದ್ದರೆ ನನ್ನ ತಮ್ಮನು ಸಾಯುತ್ತಿರಲಿಲ್ಲ" ಅಂದಳು. (11:25-29, 32)

ಆಕೆ ಗೋಳಾಡುವದನ್ನೂ ಆಕೆಯ ಸಂಗಡ ಬಂದ ಯೆಹೂದ್ಯರು ಗೋಳಾಡುದನ್ನೂ ಯೇಸು ಕಂಡಾಗ ಆತ್ಮದಲ್ಲಿ ನೊಂದುಕೊಂಡು ತತ್ತರಿಸಿ, **"ಅವನನ್ನು ಎಲ್ಲಿ ಇಟ್ಟಿದ್ದೀರಿ"** ಎಂದು ಕೇಳಿದನು. ಅವರು, "ಸ್ವಾಮೀ, ಬಂದು ನೋಡು" ಅಂದರು. ಯೇಸು ಕಣ್ಣೀರು ಬಿಟ್ಟನು. ಯೆಹೂದ್ಯರು ನೋಡಿ, "ಆಹಾ, ಈತನು ಅವನ ಮೇಲೆ ಎಷ್ಟೋ ಮಮತೆ ಇಟ್ಟಿದ್ದನು" ಅಂದುಕೊಂಡರು. ಅವರಲ್ಲಿ ಕೆಲ
–ವರು, "ಈತನು ಆ ಕುರುಡನಿಗೆ ಕಣ್ಣು ಕೊಟ್ಟನಲ್ಲಾ; ಈ ಮನುಷ್ಯನನ್ನು ಸಾಯದ ಹಾಗೆ ಮಾಡಲಾರದೆ ಇದ್ದನೇ?" ಅಂದರು. ಯೇಸು ತನ್ನಲ್ಲಿ ತಿರಿಗಿ ನೊಂದುಕೊಳ್ಳುತ್ತಾ ಸಮಾಧಿಯ ಬಳಿಗೆ ಬಂದನು. ಅದು ಗವಿಯಾಗಿತ್ತು. ಅದರ ಬಾಯಿಗೆ ಒಂದು ಕಲ್ಲು ಆನಿಸಿತ್ತು. ಯೇಸು, **"ಆ ಕಲ್ಲನ್ನು ತೆಗೆದು ಹಾಕಿರಿ"** ಅನ್ನಲು ತೀರಿಹೋದವನ ಅಕ್ಕನಾದ ಮಾರ್ಥಳು, "ಸ್ವಾಮೀ, ಅವನು ಸತ್ತು ನಾಲ್ಕು ದಿವಸವಾಯಿತು; ಈಗ ನಾತ ಹುಟ್ಟಿದೆ" ಅಂದಳು. ಯೇಸು ಆಕೆಗೆ, **"ನೀನು ನಂಬಿದರೆ ದೇವರ ಮಹಿಮೆಯನ್ನು ಕಾಣುವಿ ಎಂದು ನಾನು ನಿನಗೆ ಹೇಳಿದೆನಲ್ಲವೇ"** ಎಂದು ಉತ್ತರ ಕೊಟ್ಟನು. ಆಗ ಕಲ್ಲನ್ನು ತೆಗೆದು ಹಾಕಿದರು. ಮತ್ತು ಯೇಸು ಕಣ್ಣೆತ್ತಿ ನೇಲಕ್ಕೆ ನೋಡಿ, "ತಂದೆಯೇ, ನೀನು ನನ್ನ ಪ್ರಾರ್ಥನೆಯನ್ನು ಕೇಳಿದ್ದಕ್ಕೆ ನಿನ್ನನ್ನು ಕೊಂಡಾಡುತ್ತೇನೆ; ನೀನು ಯಾವಾಗಲೂ ನನ್ನ ಪ್ರಾರ್ಥನೆಯನ್ನು ಕೇಳುವವನಾಗಿದ್ದೀ ಎಂದು ನನಗೆ ಗೊತ್ತೇ ಇದೆ; ಆದರೂ ನೀನೇ ನನ್ನನ್ನು ಕಳುಹಿಸಿಕೊಟ್ಟಿ ಎಂದು ಸುತ್ತಲು ಇರುವ ಜನರು ನಂಬು
–ವಂತೆ ಅವರಿಗೋಸ್ಕರ ಈ ಮಾತುಗಳನ್ನಾಡಿದೆನೆಂದು ಹೇಳಿದನು." ಅದನ್ನು ಹೇಳಿದ ಮೇಲೆ ದೊಡ್ಡ ಶಬ್ದದಿಂದ, **"ಲಾಜರನೇ, ಹೊರಗೆ ಬಾ"** ಎಂದು ಕೂಗಿದನು. ಸತ್ತಿದ್ದವನು ಹೊರಗೆ ಬಂದನು; ಅವನ ಕೈಕಾಲುಗಳು ಬಟ್ಟೆಗಳಿಂದ ಕಟ್ಟಿದ್ದವು, ಅವನ ಮುಖವು ಕೈಪಾವುಡದಿಂದ ಸುತ್ತಿತ್ತು. ಯೇಸು ಅವರಿಗೆ, **"ಅವನನ್ನು ಬಿಚ್ಚಿರಿ, ಹೋಗಲಿ"** ಎಂದು ಹೇಳಿದನು.

ಈ ಅದ್ಭುತವಾದ ಕತೆಯನ್ನು ಮುಗಿಸುವದಕ್ಕಿಂತ ಮೊದಲು, ಯೇಸು ಮಾಡಿದ ಈ ಬಲಯುತವಾದ ಅದ್ಭುತದ ಕುರಿತು ಸ್ವಲ್ಪ ಆಲೋಚಿಸುವದು ನಮಗೆ ಉತ್ತವೆಂದು ಕಾಣುತ್ತದೆ. ಲೋಕವು ಸೃಷ್ಟಿಯಾದ ದಿನದಿಂದ ಇಲ್ಲಿಯವರೆಗೆ, ಸಮಾಧಿಯಲ್ಲಿದ್ದು ಈಗಾಗಲೇ ನಾಲ್ಕು ದಿವಸಗಳಾಗಿದ್ದು, ಕೊಳೆಯುವದಕ್ಕೆ ಆರಂಭವಾಗಿದ್ದ ಒಂದು ಶವಕ್ಕೆ ಯಾವನಾದರೂ ಜೀವ ಕೊಟ್ಟಿದ್ದಾನೆಂದು ಯಾರೂ ಎಂದೂ ಕೇಳಿಲ್ಲ. ಹೀಗಿದ್ದರೂ, ಯೇಸು ಸತ್ತಂತ ಲಾಜರನನ್ನು ಎಬ್ಬಿಸಿದಾಗ ನಿಜವಾಗಿಯೂ ಆತನು ಇದನ್ನೇ ಮಾಡಿದ್ದು.

ಮರಣದ ಶಕ್ತಿಯು ಕರ್ತನಾದ ಯೇಸುವಿಗೆ ಒಂದು ಸಮಸ್ಯೆಯಾಗಿರಲಿಲ್ಲ, ಯಾಕಂದರೆ ಆತನು ದೇವರ ವಾಕ್ಯವಾಗಿದ್ದನು, ಪರ –
ಲೋಕದಿಂದ ಬಂದಂತ ದೇವರ ನಿಜವಾದ ಜೀವವಾಗಿದ್ದನು. ದೇವರು ತಾನೇ ಜೀವವಾಗಿರುವಂತೆ, ಮೆಸ್ಸೀಯನು ತನ್ನಲ್ಲಿ ಜೀವ–
–ವುಳ್ಳವನಾಗಿದ್ದನು. ದೇವರು ಸತ್ತ ದೇಹಗಳನ್ನು ಎಬ್ಬಿಸಿ ಅವುಗಳಿಗೆ ಜೀವ ಕೊಟ್ಟ ಹಾಗೆ, ಮೆಸ್ಸೀಯನು ಸಹ ಇಷ್ಟಪಡುವವರಿಗೆ ಜೀವವನ್ನು ಕೊಡಲು ಶಕ್ತನಾಗಿದ್ದಾನೆ, ಯಾಕಂದರೆ ಆತನು ತಾನೇ **ಜೀವದ ಮೂಲವಾಗಿದ್ದಾನೆ.** ಅದಕ್ಕಾಗಿಯೇ, ಯೇಸು ಲಾಜರ –
–ನನ್ನು ಹೊರಗೆ ಬಾ ಎಂದು ಕರೆದನು, ಶವವು ಜೀವವನ್ನು ಪಡೆದು ಎದ್ದು ಸಮಾಧಿಯಿಂದ ಹೊರಗೆ ಬಂದಿತು. ಅದನ್ನೇ ಯೇಸು

ಲಾಜರನ ಅಕ್ಕನಿಗೆ, **"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು; ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ!"** ಎಂದು ಹೇಳಿದ್ದನು.

ಈಗ ಈ ಕತೆಯನ್ನು ಮುಗಿಸೋಣ ಮತ್ತು ಯೇಸು ಲಾಜರನನ್ನು ಸಮಾಧಿಯಿಂದ ಎಬ್ಬಿಸಿದ ನಂತರ ಯೆಹೂದ್ಯರು ಏನು ಮಾಡಿ –
–ದರೆಂಬುದನ್ನು ನೋಡಿಕೊಳ್ಳೋಣ. ವಾಕ್ಯವು ಹೇಳುವದೇನೆಂದರೆ:

ಮರಿಯಳ ಬಳಿಗೆ ಬಂದ ಯೆಹೂದ್ಯರು ಆತನು ಮಾಡಿದ ಕಾರ್ಯವನ್ನು ನೊಡಿದಾಗ ಅವರಲ್ಲಿ ಅನೇಕರು ಆತನನ್ನು ನಂಬಿದರು; ಆದರೆ ಕೆಲವರು ಫರಿಸಾಯರ ಬಳಿಗೆ ಹೋಗಿ ಯೇಸು ಮಾಡಿದ್ದನ್ನು ಅವರಿಗೆ ತಿಳಿಸಿದರು. ಆಗ ಮಹಾಯಾಜಕರೂ ಫರಿಸಾಯರೂ ಹಿರೀಸಭೆಯನ್ನು ಕೂಡಿಸಿ, "ನಾವು ಮಾಡುವದು ಇದೇನು? ಈ ಮನುಷ್ಯನು ಬಹು ಸೂಚಕಕಾರ್ಯಗಳನ್ನು ಮಾಡುತ್ತಾನಲ್ಲಾ; ನಾವು ಅವನನ್ನು ಹೀಗೆಯೇ ಬಿಟ್ಟರೆ ಎಲ್ಲರೂ ಅವನನ್ನು ನಂಬಾರು; ಮತ್ತು ರೋಮ್ ರಾಜ್ಯದವರು ಬಂದು ನಮ್ಮ ಸ್ಥಾನವನ್ನೂ ಜನವನ್ನೂ ಸೆಳಕೊಂಡಾರು" ಅಂದರು. (11:45-48)

ಆದರೆ ಅವರಲ್ಲಿ **ಕಾಯಫನೆಂಬವನೊಬ್ಬನು** ಆ ವರುಷಕ್ಕೆ ಮಹಾಯಾಜಕನಾಗಿದ್ದು ಅವರಿಗೆ, **"ನಿಮಗೇನೂ ತಿಳಿಯುವದಿಲ್ಲ; ಜನವೆಲ್ಲಾ ನಾಶವಾಗುವದಕ್ಕಿಂತ ಒಬ್ಬ ಮನುಷ್ಯನು ಜನಕ್ಕೋಸ್ಕರ ಸಾಯುವದು ನಿಮಗೆ ಹಿತವೆಂದು ನೀವು ಆಲೋಚಿಸುವದೂ ಇಲ್ಲ" ಎಂಬದಾಗಿ ಹೇಳಿದನು. ಇದನ್ನು ಅವನು ತನ್ನಷ್ಟಕ್ಕೇ ತಾನೇ ಹೇಳಲಿಲ್ಲ; ಆದರೆ ತಾನು ಆ ವರುಷದ ಮಹಾಯಾಜಕನಾಗಿದ್ದದರಿಂದ ದೇವಪ್ರೇರಣೆ –**
**–ಯಿಂದ ಮಾತಾಡಿ ಯೇಸು ಆ ಜನಕ್ಕೋಸ್ಕರ ಸಾಯುವದಕ್ಕಿದ್ದನೆಂದು ಹೇಳಿದನು. ಯೇಸು ಜನಕ್ಕೋಸ್ಕರ ಮಾತ್ರವಲ್ಲದೆ ಚದರಿರುವ ದೇವರ ಮಕ್ಕಳನ್ನು ಒಟ್ಟುಗೂಡಿಸುವದಕ್ಕೆ ಸಹ ಸಾಯುವದಕ್ಕಿದ್ದನು.** ಆ ದಿನದಿಂದ ಆತನ್ನು ಕೊಲ್ಲುವದಕ್ಕೆ ಆಲೋಚಿಸುತ್ತಿದ್ದರು. ಹೀಗಿರ
–ಲಾಗಿ ಯೇಸು ಇನ್ನೂ ಯೆಹೂದ್ಯರೊಳಗೆ ಬಹಿರಂಗವಾಗಿ ತಿರುಗಾಡದೆ ಅಲ್ಲಿಂದ ಅಡವಿಯ ಹತ್ತಿರದ ಪ್ರದೇಶಕ್ಕೆ ಹೋಗಿ ಎಫ್ರಾ –
–ಯಿಮ್ ಎಂಬ ಊರಲ್ಲಿ ಶಿಷ್ಯರ ಸಂಗಡ ಇದ್ದನು. (11:49-54)

ಆಗ ಯೆಹೂದ್ಯರ ಪಸ್ಕ ಹಬ್ಬವು ಹತ್ತಿರವಾಗಿರಲಾಗಿ ಬಹು ಜನರು ತಮ್ಮನ್ನು ಶುದ್ಧಿಮಾಡಿಕೊಳ್ಳುವದಕ್ಕಾಗಿ ಹಬ್ಬಕ್ಕಿಂತ ಮುಂಚೆ ಯೆರೂಸಲೇಮಿಗೆ ಬಂದರು. ಅವರು ಯೇಸುವನ್ನು ಹುಡುಕುತ್ತಾ ದೇವಾಲಯದಲ್ಲಿ ನಿಂತುಕೊಂಡು, "ಅವನು ಹಬ್ಬಕ್ಕೆ ಬಾರದೆ ಇದ್ದಾನೋ? ನಿಮಗೆ ಹೇಗೆ ಕಾಣುತ್ತದೆ" ಎಂದು ತಮ್ಮಲ್ಲಿ ಮಾತಾಡಿಕೊಳ್ಳುತ್ತಾ ಇದ್ದರು. ಆದರೆ ಮಹಾಯಾಜಕರೂ ಫರಿಸಾಯರೂ ಆತನನ್ನು ಹಿಡಿಯಬೇಕೆಂಬದಾಗಿ ಯೋಚಿಸಿ ಅವನಿರುವ ಸ್ಥಳವು ಯಾರಿಗಾದರೂ ತಿಳಿದರೆ ಅದನ್ನು ತಮಗೆ ತಿಳಿಸಬೇಕೆಂದು ಅಪ್ಪಣೆಕೊಟ್ಟಿದ್ದರು. (11:55-57)

ಪಸ್ಕಹಬ್ಬವು ಇನ್ನೂ ಆರು ದಿವಸ ಮುಂದೆ ಇರಲಾಗಿ ಯೇಸು ಬೇಥಾನ್ಯಕ್ಕೆ ಬಂದನು. ಯೇಸುವು ಸತ್ತವರೊಳಗಿಂದ ಎಬ್ಬಿಸಿದ ಲಾಜ
–ರನು ಅಲ್ಲಿದ್ದನು. ಯೇಸುವಿಗೆ ಅಲ್ಲಿ ಔತಣಮಾಡಿಸಲು ಮಾರ್ಥಳು ನೆರವಾಗಿದ್ದಳು; ಲಾಜರನು ಆತನ ಸಂಗಡ ಊಟಕ್ಕೆ ಕೂತವ –
–ರಲ್ಲಿ ಒಬ್ಬನು. ಆಗ ಮರಿಯಳು ಬಹು ಬೆಲೆಯುಳ್ಳ ಅಚ್ಚ ಜಟಾಮಾಂಸಿ ತೈಲವನ್ನು ಒಂದು ಸೇರಷ್ಟು ತಂದು ಯೇಸುವಿನ ಪಾದ
–ಗಳನ್ನು ಒರಸಿದಳು. ಆ ತೈಲದ ಪರಿಮಳವು ಮನೆಯಲ್ಲೆಲ್ಲಾ ತುಂಬಿಕೊಂಡಿತು. ಆದರೆ ಆತನ ಶಿಷ್ಯರಲ್ಲಿ ಒಬ್ಬನು, ಅಂದರೆ ಆತ –
–ನನ್ನು ಹಿಡುಕೊಡುವದಕ್ಕಿದ್ದ ಇಸ್ಕರಿಯೋತ ಯೂದನೆಂಬವನು, "ಯಾಕೆ ಈ ತೈಲವನ್ನು ಮುನ್ನೂರು ಹಣಕ್ಕೆ ಮಾರಿ ಬಡವರಿಗೆ ಕೊಡಲಿಲ್ಲ" ಅಂದನು. ಅವನು ಬಡವರಿಗೋಸ್ಕರ ಚಿಂತಿಸಿ ಇದನ್ನು ಹೇಳಲಿಲ್ಲ; ಅವನು ಕಳ್ಳನಾಗಿದ್ದು ತನ್ನ ವಶದಲ್ಲಿದ್ದ ಅವರ ಹಣದ ಚೀಲದಲ್ಲಿ ಹಾಕಿದ್ದನ್ನು ತಕ್ಕೊಳ್ಳುವವನಾಗಿದ್ದದರಿಂದಲೇ ಹೇಳಿದನು. ಆಗ ಯೇಸು, "ಈಕೆಯನ್ನು ಬಿಡು; ನನ್ನನ್ನು ಹೂಣಿ –
–ಡುವ ದಿವಸಕ್ಕಾಗಿ ಅದನ್ನು ಇಟ್ಟುಕೊಳ್ಳಲಿ. ಬಡವರು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುತ್ತಾರೆ, ಆದರೆ ನಾನು ಯಾವಾಗಲೂ ನಿಮ್ಮ ಬಳಿಯಲ್ಲಿ ಇರುವದಿಲ್ಲ" ಅಂದನು. (12:1-8)

ಯೆಹೂದ್ಯರ ಜನಸಮೂಹವು ಆತನು ಅಲ್ಲಿ ಇದ್ದಾನೆಂದು ತಿಳಿದು ಯೇಸುವನ್ನು ನೋಡುವದಕ್ಕಾಗಿ ಮಾತ್ರವಲ್ಲದೆ ಆತನು ಸತ್ತವರೊ–
–ಳಗಿಂದ ಎಬ್ಬಿಸಿದ ಲಾಜರನನ್ನು ಸಹ ನೋಡಬೇಕೆಂಬದಾಗಿ ಬಂದರು. **ಆದರೆ ಮಹಾಯಾಜಕರು ಲಾಜರನನ್ನೂ ಕೊಲ್ಲಬೇಕೆಂದು ಆಲೋಚಿಸಿದರು. ಯಾಕಂದರೆ ಅವನ ದೆಸೆಯಿಂದ ಯೆಹೂದ್ಯರಲ್ಲಿ ಅನೇಕರು ಹೋಗಿ ಯೇಸುವನ್ನು ನಂಬುವವರಾದರು.** (12:9-11)

ನಮ್ಮ ಸಮಯವು ಮುಗಿಯುತ್ತಾ ಬಂತು, ಆದರೆ ನಾವು ವಿದಾಯ ಹೇಳುವದಕ್ಕಿಂತ ಮೊದಲು, ನಾವು ಆಲೋಚಿಸಬೇಕಾದ ಏನೋ ಒಂದು ಇದೆ. ಶಾಸ್ತ್ರಿಗಳು ಮತ್ತು ಫರಿಸಾಯರಿಗೆ ಯೇಸು ತೋರಿಸಿದ ಅದ್ಭುತಕರವಾದ ಸೂಚಕಕಾರ್ಯಕ್ಕೆ ಅವರು ಹೇಗೆ ಪ್ರತಿಕ್ರಿಯೆ ತೋರಿಸಿದರೆಂಬುದನ್ನು ನೀವು ನೋಡಿದಿರಾ? ಯೇಸು ಮಾಡಿದ ಅದ್ಭುತವನ್ನು ಅವರಲ್ಲಿ ಯಾರೊಬ್ಬರೂ ಅಲ್ಲಗಳೆಯುವದಕ್ಕೆ ಧೈರ್ಯಮಾಡಲಿಲ್ಲ, ಯಾಕಂದರೆ ಸತ್ತವರೊಳಗಿಂದ ಎಬ್ಬಿಸಲ್ಪಟ್ಟಂತಹ ವ್ಯಕ್ತಿಯನ್ನು ಅವರು ಪ್ರತಿಯೊಬ್ಬರೂ ಸ್ವತ: ನೋಡುತ್ತಿದ್ದರು!

ಆದರೆ ಮಹಾಯಾಜಕರೂ ಮತ್ತು ಇತರ ಯಾಜಕರುಗಳು ಏನು ಮಾಡಿದರು? ಅವರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ಯೇಸುವೇ ಪರಲೋಕದಿಂದ ಬಂದ ಮೆಸ್ಸೀಯನೆಂಬುದಾಗಿ ನಂಬಿದರೋ? **ಇಲ್ಲ, ಅವರು ಪಶ್ಚಾತ್ತಾಪಪಡಲಿಲ್ಲ!** ಯಾಜಕರುಗಳು ಮತ್ತು ಅವರ ಶಿಷ್ಯರುಗಳು ಪಶ್ಚತ್ತಾಪಪಟ್ಟು ಯೇಸುವನ್ನು ತಮ್ಮ ಕರ್ತನೂ ಮತ್ತು ರಕ್ಷಕನೆಂಬುದಾಗಿ ಅಂಗೀಕರಿಸಿಕೊಳ್ಳುವದಕ್ಕೆ ಯೇಸು ಮಾಡಿದ ಎಲ್ಲಾ ಅದ್ಭುತವಾದ ಸೂಚಕಕಾರ್ಯಗಳು ಕಾರಣವಾಗಲಿಲ್ಲ.

ಹಾಗಾದರೆ ಮಹಾಯಾಜಕರುಗಳು ಏನು ಮಾಡಿದರು? ಅವರು ಯೇಸುವನ್ನು ಇನ್ನೂ ಹೆಚ್ಚಾಗಿ ದ್ವೇಷಿಸಿದರು ಮತ್ತು ಆತನನ್ನು ಕೊಲ್ಲುವದಕ್ಕೆ ಒಂದು ಯೋಜನೆಯ ಸಂಚು ರೂಪಿಸಲು ಒಟ್ಟಾಗಿ ಒಳಸಂಚು ಮಾಡಿದರು! ಸತ್ತವರೊಳಗಿಂದ ಆಗತಾನೇ ಯೇಸು ಎಬ್ಬಿಸಿದ ಲಾಜರನನ್ನು ಸಹ ಕೊಲ್ಲುವದಕ್ಕೆ ಅವರು ಯೋಜನೆ ಮಾಡಿಕೊಂಡರು, ಯಾಕಂದರೆ ಯೆಹೂದ್ಯರಲ್ಲಿ ಅನೇಕರು ಅವರಿಂದ ದೂರವಾಗಿ ಯೇಸುವನ್ನು ಹಿಂಬಾಲಿಸುವದಕ್ಕೆ ಲಾಜರನು ಕಾರಣವಾಗಿದ್ದನು. ಆ ಧಾರ್ಮಿಕ ಆಡಳಿತಗಾರರ ಹೃದಯಗಳು ಎಷ್ಟೊಂದು ಅಪ್ರಮಾಣಿಕವಾದುದು ಮತ್ತು ದೇವರಿಂದ ದೂರವಾದುದು ಆಗಿದೆ! **ಆವರು ದೇವರನ್ನು ಅಥವಾ ಸತ್ಯವನ್ನು ಪ್ರೀತಿಸಲಿಲ್ಲ.** ಅವರ ಮುಂದೆ ಯೇಸು ಮಾಡಿದಂತಹ ಸ್ಪಷ್ಟವಾದ ರುಜುವಾತುಗಳನ್ನು(ಅನೇಕ ಅದ್ಭುತಗಳನ್ನು) ಅವರು ತಿರಸ್ಕರಿಸಿದರು. ಅವರು ಯೋಚಿಸಿದ್ದೆಲ್ಲವೂ ಅವರ ಸಂತೋಷ, ಅವರ ಸ್ವಂತ ಸ್ಥಾನ, ಅವರ ಸ್ವಂತ ಅನುಕೂಲತೆ, ಮತ್ತು ಹಣ ಮಾಡುವದರ ಕುರಿತಾಗಿತ್ತು. ಹಾಗಾಗಿ, ಅವರು ಯೇಸುವನ್ನು ಕೊಲ್ಲುವದಕ್ಕೆ ಒಳಸಂಚು ಮಾಡಿದರು, ಯಾಕಂದರೆ ಯೇಸುವನ್ನು ಮುಂದುವರಿಯುವದಕ್ಕೆ ಬಿಟ್ಟರೆ, ಯೆಹೂದ್ಯರೆಲ್ಲರೂ ಅವರಿಂದ ದೂರವಾಗಿ ಯೇಸುವನ್ನು ಹಿಂಬಾಲಿಸುತ್ತಾರೆಂದು ಅವರು ಹೆದರಿದರು.

ಆ ಧಾರ್ಮಿಕ ಆಡಳಿತಗಾರರ ಕುರಿತು ನೀವು ಏನು ಆಲೋಚಿಸುತ್ತೀರೀ? ಯೇಸುವನ್ನು ಕೊಲ್ಲುವ ಕಲ್ಪನೆಯನ್ನು ಅವರ ಮನಸ್ಸಿನಲ್ಲಿ ಯಾರು ಇಟ್ಟರು? ಸೈತಾನನು ಅವರನ್ನು ಮುನ್ನಡೆಸುತ್ತಿದ್ದನು, ಯಾಕಂದರೆ ಅವನು ದೇವರನ್ನು ಮತ್ತು ಮೆಸ್ಸೀಯನನ್ನು ದ್ವೇಷಿಸುತ್ತಿ –ದ್ದನು. ಯೆಹೂದ್ಯ ನಾಯಕರುಗಳು ಯೇಸುವನ್ನು ಸಾಯಿಸಿದರೆ, ನನ್ನ ಬಲದಿಂದ ಆದಾಮನ ಸಂತತಿಯನ್ನು ರಕ್ಷಿಸುವ ದೇವರ ಯೋಜನೆಯು ಸೋತುಹೋಗುತ್ತದೆ ಎಂಬುದು ಸೈತಾನನ ಆಲೋಚನೆಯಾಗಿತ್ತು. **ಮೆಸ್ಸೀಯನ ಮರಣವನ್ನು ಉಪಯೋಗಿಸಿಕೊಂಡು ಆದಾಮನ ಸಂತಾನವನ್ನು ಸೈತಾನನ ಬಲದಿಂದ ಬಿಡುಗಡೆಮಾಡುವ ದೇವರ ಯೋಜನೆಯನ್ನು ಸೈತಾನನು ಗ್ರಹಿಸಿಕೊಂಡಿರಲಿಲ್ಲ!** ಹಾಗೂ, ಮರಣದ ಬಲವು ಕರ್ತನಾದ ಯೇಸುವನ್ನು ಹಿಡಿದಿಟ್ಟುಕೊಳ್ಳುವದಕ್ಕಾಗುವದಿಲ್ಲ ಎನ್ನುವದನ್ನು ಸೈತಾನನು ಮತ್ತು ಅವನ ಹಿಂದೆ ಹೋದವರು ಗ್ರಹಿಸಿಕೊಂಡಿರಲಿಲ್ಲ. ಭೂಮಿಯು ಆತನನ್ನು ಕೊಳೆಯಿಸುವದಕ್ಕಾಗುವದಿಲ್ಲ(ತಿನ್ನುವದಕ್ಕೆ), ಯಾಕದಂರೆ **ಯೇಸು ಪುನ– –ರುತ್ಥಾನವೂ ಮತ್ತು ಜೀವವೂ ಆಗಿದ್ದಾನೆ.** ಅದಕ್ಕಾಗಿಯೇ ಯೇಸು ಲಾಜರನ ಅಕ್ಕನಿಗೆ, **"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ.** ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ. . . .ನೀನು ಇದನ್ನು ನಂಬುತ್ತೀಯಾ?**"** (ಯೋಹಾನ–11:25,26) ಎಂದು ಹೇಳುವದಕ್ಕೆ ಸಾಧ್ಯವಾಯಿತು.

ಈ ದಿನ ನಾವು ಇಲ್ಲಿಗೆ ಮುಗಿಸುತ್ತೇವೆ. ಮುಂದಿನ ನಮ್ಮ ಅಧ್ಯಯನದಲ್ಲಿ ನೀವು ಸೇರಿಕೊಳ್ಳುವಂತೆ ನಾವು ನಿಮ್ಮನ್ನು ಸ್ವಾಗತಿಸುತ್ತೇವೆ, ಅದರಲ್ಲಿ ನಾವು ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ ಯೇಸು ಕತ್ತೇಮರಿಯ ಮೇಲೆ ಕುಳಿತು ಯೆರೂಸಲೇಮನ್ನು ಪ್ರವೇಶಿಸಿ, ಈ ಪ್ರಕಾರ ದೇವರ ಪ್ರವಾದಿಗಳು ಮೆಸ್ಸೀಯನ ಕುರಿತಾಗಿ ಬಹಳ ಹಿಂದೆಯೇ ಬರೆದಂತದ್ದನ್ನು ಹೇಗೆ ನೆರವೇರಿಸಿದನೆಂಬುದನ್ನು ನಾವು ನೋಡಲಿದ್ದೇವೆ.

ಮೆಸ್ಸೀಯನಾದ ಯೇಸುವಿನ ಈ ಮಾತುಗಳ ಆಶೀರ್ವಾದಕರವಾದ ಅರ್ಥವನ್ನು ನೀವು ವಿಚಾರಮಾಡುವ ಹಾಗೆ ದೇವರು ತಾನೇ ನಿಮಗೆ ಬೋಧಿಸಲಿ:

**"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವ ಪ್ರತಿಯೊಬ್ಬನು ಎಂದಿಗೂ ಸಾಯುವದಿಲ್ಲ. . . .ನೀನು ಇದನ್ನು ನಂಬುತ್ತೀಯಾ?"** (ಯೋಹಾನ–11:25,26)

ಪಾಠ 79

# ಯೇಸು ಯೆರೂಸಲೇಮನ್ನು ಪ್ರವೇಶಿಸಿದ್ದು

ಲೂಕ 18-20 ಇತ್ಯಾದಿ.

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ನಾಲ್ಕು ದಿವಸಗಳಿಂದ ಸಮಾಧಿಯಲ್ಲಿದ್ದ ಒಂದು ಶವವನ್ನು ಕರ್ತನಾದ ಯೇಸು ಹೇಗೆ ಎಬ್ಬಿಸಿದನೆಂಬು – –ದನ್ನು ನಾವು ನೋಡಿದೆವು. ಮರಣದ ಬಲವು ಯೇಸುವಿಗೆ ಒಂದು ಸಮಸ್ಯೆಯಾಗಿರಲಿಲ್ಲ, ಯಾಕಂದರೆ ಆತನು ತಾನೇ ಪುನರು– –ತ್ಥಾನವೂ ಮತ್ತು ಜೀವವೂ ಆಗಿದ್ದಾನೆ. ಯೇಸು ತಾನು ಕೊಲ್ಲಲ್ಪಡಬೇಕಾಗಿದ್ದ ಯೆರೂಸಲೇಮಿಗೆ ಹೇಗೆ ಪ್ರವೇಶಿಸಿದನೆಂಬುದನ್ನು ನೋಡುವದಕ್ಕೆ ಸುವಾರ್ತೆಯಲ್ಲಿರುವದನ್ನು ಈದಿನ ಮುಂದುವರಿಸುವ ಏರ್ಪಾಟನ್ನು ನಾವು ಮಾಡಿಕೊಂಡಿದ್ದೇವೆ. ತನಗೆ ಸಂಭವಿಸು– –ವದಕ್ಕಿರುವ ಪ್ರತಿಯೊಂದು ಯೇಸುವಿಗೆ ತಿಳಿದಿತ್ತು. ಯೇಸುವನ್ನು ಹಿಂಸಿಸಿ ಶಿಲುಬೆಗೆ ಮೊಳೆಗಳಿಂದ ಜಡಿಯುದಕ್ಕಿದ್ದ ರೋಮ್ ಸಾಮ್ರಾಜ್ಯದವರ ಕಡೆಗೆ ತನ್ನನ್ನು ಯೆಹೂದ ಧರ್ಮದ ನಾಯಕರುಗಳು ತಿರುಗಿಸಿಬಿಡುತ್ತಾರೆ ಎಂಬದು ಯೇಸುವಿಗೆ ತಿಳಿದಿತ್ತು. ಆದಾಗ್ಯೂ, ಆ ತಿಳುವಳಿಕೆಯು ಆತನು ಯೆರೂಸಲೇಮಿಗೆ ಹೋಗುವದನ್ನು ತಡೆಯುವದಕ್ಕಾಗಲಿಲ್ಲ. ಇದರ ಕುರಿತಂತೆ, ಸುವಾರ್ತೆ ಹೇಳುವದೇನೆಂದರೆ, "ಯೇಸು ತಾನು ಪರಲೋಕವನ್ನೇರುವ ದಿವಸಗಳು ತುಂಬುತ್ತಾ ಬರುವಾಗ ಯೆರೂಸಲೇಮಿಗೆ ಹೋಗುವದಕ್ಕೆ ಮನಸ್ಸನ್ನು ದೃಢಮಾಡಿಕೊಂಡನು!" (ಲೂಕ–9:51) ಆತನು ಯೆರೂಸಲೇಮಿನ ಕಡೆಗೆ ನಡೆದು ಹೋಗುತ್ತಿರುವಾಗ, ಯಾಸು ತನ್ನ ಶಿಷ್ಯರಿಗೆ, "ನಾನು ಹೊಂದತಕ್ಕ ದೀಕ್ಷಾಸ್ನಾನ ಒಂದುಂಟು. ಅದು ನೆರವೇರುವ ತನಕ ನಾನು ಎಷ್ಟೋ ಬಿಕ್ಕಟ್ಟಿನಲ್ಲಿದ್ದೇನೆ!" (ಲೂಕ–12:50)

ಯೇಸು ದೃಢನಿಶ್ಚಯದೊಡನೆ ಯೆರೂಸಲೇಮಿನ ಕಡೆಗೆ ಯಾಕೆ ಹೊರಟನು? ತನ್ನನ್ನು ಕೊಲ್ಲುವದಕ್ಕೆ ಮನಸ್ಸು ಮಾಡಿರುವವರಿಗೆ ಸ್ವತ: ಒಪ್ಪಿಸಿಕೊಳ್ಳುವದಕ್ಕೆ ಆತನು ಇದನ್ನು ಮಾಡಿದನು. ಇದು ಆಶ್ಚರ್ಯಕರವಾದುದು! ಒಂದು ನಿರ್ದಿಷ್ಟವಾದ ಪಟ್ಟಣದಲ್ಲಿ ಜನರು ನಿಮ್ಮನ್ನು ಹಿಂಸಿಸಿ ಕೊಲ್ಲುವದಕ್ಕಿದ್ದಾರೆ ಎಂಬುದು ನಿಮಗೆ ಗೊತ್ತಿದ್ದರೆ, ನೀವು ದೃಢಸಂಕಲ್ಪದೊಂದಿಗೆ ಆ ಪಟ್ಟಣದ ಕಡೆಗೆ ಹೋಗು – –ತ್ತೀರಾ? ನಿಶ್ಚಯವಾಗಿ ಯೇಸು ಮಾಡಿದ್ದು ಅದನ್ನೇ. ಲೋಕದ ಪಾಪಗಳಿಗಾಗಿ ಒಂದು ಯಜ್ಞದ ಹಾಗೆ ಸಾಯುವದಕ್ಕಾಗಿಯೇ ತಾನು ಹುಟ್ಟಿರುವದಕ್ಕೆ ಕಾರಣವೆಂದು ಯೇಸುವಿಗೆ ತಿಳಿದಿತ್ತು. ಯೇಸು ತನ್ನ ಸ್ವಂತ ಸಂತೋಷವನ್ನು ಹುಡುಕುವದಕ್ಕೆ ಲೋಕಕ್ಕೆ ಬಂದವನಲ್ಲ, ಆದರೆ ತನ್ನ ಕುರಿತಾಗಿ ಬಹಳ ಹಿಂದೆಯೇ ಪ್ರವಾದಿಗಳು ಬರೆದಿರುವದನ್ನು ನೆರವೇರಿಸುವದಕ್ಕೆ ಆತನು ಬಂದದ್ದು: ಅಂದರೆ ಮೆಸ್ಸೀಯನು ಸಂಕಟವನ್ನು ಅನುಭವಿಸಿ, ಅಬ್ರಹಾಮನು ತನ್ನ ಮಗನಿಗೆ ಬದಲಾಗಿ ಯೆರೂಸಲೇಮಿನ ಹೊರಗಿರುವ ಯಾವ ಬೆಟ್ಟದ ಮೇಲೆ ಟಗರನ್ನು ಸಮರ್ಪಿಸಿದನೋ ಅದೇ ಬೆಟ್ಟದ ಮೇಲೆ ಆತನು ತನ್ನ ರಕ್ತವನ್ನು ಸುರಿಸಿದನು. ಯಜ್ಞದ ಟಗರಿನ ಚಿಹ್ನೆಯು ಯೇಸುವಿನಲ್ಲಿ ನೆರವೇರುವದು ಅಗತ್ಯವಾದುದಾಗಿತ್ತು. ಅದಕ್ಕೋಸ್ಕರವೇ ತಮ್ಮ ಬೇಟೆಗಾಗಿ ಕಾಯುತ್ತಿದ್ದ ಹಸಿದ ಸಿಂಹಗಳ ಗವಿಯಂತೆ ತನಗಿದ್ದ ಯೆರೂಸಲೇಮಿಗೆ ಯೇಸು ಹೋದನು.

ಈಗ ಸುವಾರ್ತೆಯಲ್ಲಿನ ನಮ್ಮ ಅಧ್ಯಯನವನ್ನು ಮುಂದುವರಿಸೋಣ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

"ಅವರು **ಯೆರೂಸಲೇಮಿನ ದಾರಿಯನ್ನು ಹಿಡಿದು** ಹೋಗುತ್ತಿರುವಾಗ ಯೇಸು ಅವರ ಮುಂದೆ ಮುಂದೆ ಹೋಗುತ್ತಿದ್ದನು. ಅವರು ನೋಡಿ ಬೆರಗಾದರು; ಆತನ ಹಿಂದೆ ಬರುವವರು ಭಯಪಡುವವರಾದರು. **ಆಗ ಆತನು ತನ್ನ ಹನ್ನೆರಡು ಮಂದಿ ಶಿಷ್ಯರನ್ನು ತಿರಿಗಿ ಕರೆದುಕೊಂಡು ಮುಂದೆ ತನಗಾಗುವದನ್ನು ಹೇಳುವದಕ್ಕೆ ತೊಡಗಿದನು."** (ಮಾರ್ಕ–10:32). "ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು **ಮನುಷ್ಯಕುಮಾರನ ವಿಷಯದಲ್ಲಿ ಪ್ರವಾದಿಗಳು ಬರೆದದ್ದೆಲ್ಲಾ ಅವನಲ್ಲಿ ನೆರವೇರುವದು."** (ಲೂಕ–18:31). "ನೋಡಿರಿ, ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ. ಮತ್ತು ಮನುಷ್ಯಕುಮಾರನನ್ನು ಮಹಾಯಾಜಕರ ಮತ್ತು ಶಾಸ್ತ್ರಿಗಳ ಕೈಗೆ

**ಹಿಡುಕೊಡುವರು. ಅವರು ಅವನಿಗೆ ಮರಣ ದಂಡನೆಯನ್ನು ವಿಧಿಸಿ ಅವನನ್ನು ಅನ್ಯರ ಕೈಗೆ ಒಪ್ಪಿಸುವರು.** ಇವರು ಅವನನ್ನು **ಅಪ –ಹಾಸ್ಯಮಾಡುವರು, ಅವನ ಮೇಲೆ ಉಗುಳುವರು, ಅವನನ್ನು ಕೊರಡೆಗಳಿಂದ ಹೊಡೆಯುವರು, ಕೊಂದಹಾಕುವರು. ಅವನು ಮೂರು ದಿನದ ಮೇಲೆ ಜೀವಿತನಾಗಿ ಎದ್ದು ಬರುವನು"** ಎಂದು ಹೇಳಿದನು. (ಮಾರ್ಕ–10:33,34)

**ಅವರು ಈ ಸಂಗತಿಗಳಲ್ಲಿ ಒಂದನ್ನಾದರೂ ಗ್ರಹಿಸಲಿಲ್ಲ** ಈ ಮಾತುಗಳು ಅವರಿಗೆ ಮರೆಯಾಗಿದ್ದವು, ಅವುಗಳ ಅರ್ಥ ಅವರಿಗೆ ಗೊತ್ತಾ –ಗಲಿಲ್ಲ. ಆತನು ಯೆರಿಕೋವಿನ ಸಮೀಪಕ್ಕೆ ಬಂದಾಗ ದಾರಿಯ ಮಗ್ಗುಲಲ್ಲಿ ಕೂತು ಭಿಕ್ಷೆ ಬೇಡುತ್ತಿದ್ದ ಒಬ್ಬ ಕುರುಡನು ಗುಂಪಾಗಿ ಹೋಗುತ್ತಿದ್ದ ಜನರ ಶಬ್ದವನ್ನು ಕೇಳಿ ಇದೇನು ಎಂದು ವಿಚಾರಿಸಿದನು. ಅವರು ಅವನಿಗೆ, **"ನಜರೇತಿನ ಯೇಸು ಈ ಮಾರ್ಗವಾಗಿ ಹೋಗುತ್ತಿದ್ದಾನೆಂದು"** ತಿಳಿಸಿದಾಗ ಅವನು, **"ಯೇಸುವೇ, ದಾವೀದನ ಕುಮಾರನೇ, ನನ್ನನ್ನು ಕರುಣಿಸು"** ಎಂದು ಕೂಗಿ ಕೇಳಿ –ಕೊಂಡನು. ಮುಂದೆ ಹೋಗುತ್ತಿದ್ದವರು ಸುಮ್ಮನಿರು ಎಂದು ಗದರಿಸಲು ಅವನು, **"ದಾವೀದನ ಕುಮಾರನೇ, ನನ್ನನ್ನು ಕರುಣಿಸು"** ಎಂದು ಮತ್ತಷ್ಟು ಕೂಗಿಕೊಂಡನು. ಆಗ ಯೇಸು ನಿಂತು ಅವನನ್ನು ತನ್ನ ಬಳಿಗೆ ಕರತರುವದಕ್ಕೆ ಅಪ್ಪಣೆಕೊಟ್ಟನು. ಅವನು ಹತ್ತರಕ್ಕೆ ಬಂದನು. ಆತನು ಅವನನ್ನು, **"ನಾನು ನಿನಗೆ ಏನು ಮಾಡಬೇಕೆಂದು ಕೋರುತ್ತೀ"** ಎಂದು ಕೇಳಲು ಅವನು, **"ನನಗೆ ಕಣ್ಣು ಬರು –ವಂತೆ ಮಾಡಬೇಕು, ಸ್ವಾಮೀ"** ಅಂದನು. ಯೇಸು ಅವನಿಗೆ, **"ನಿನಗೆ ಕಣ್ಣು ಬರಲಿ; ನಿನ್ನ ನಂಬಿಕೆಯೇ ನನ್ನನ್ನು ಸ್ವಸ್ಥಮಾಡಿ ಅದೆ"** ಎಂದು ಹೇಳಿದನು. ತಕ್ಷಣವೇ ಅವನಿಗೆ ಕಣ್ಣು ಬಂದವು; ಅವನು ದೇವರನ್ನು ಕೊಂಡಾಡುತ್ತಾ ಆತನ ಹಿಂದೆ ಹೋದನು. ಜನರೆಲ್ಲರು ನಡೆದ ಸಂಗತಿಯನ್ನು ನೋಡಿ ದೇವರನ್ನು ಸ್ತುತಿಸಿದರು. (ಲೂಕ–18:34-43)

ಅವರು ಯೆರೂಸಲೇಮಿಗೆ ಸಮೀಪಿಸಿ ಎಣ್ಣೆಯ ಮರಗಳ ಗುಡ್ಡದ ಬಳಿಯಲ್ಲಿರುವ ಬೇತ್ಫಗೆಗೆ ಬಂದಾಗ ಯೇಸು ಇಬ್ಬರು ಶಿಷ್ಯರನ್ನು ಕರೆದು, **"**ನಿಮ್ಮೆದುರಿಗಿರುವ ಹಳ್ಳಿಗೆ ಹೋಗಿರಿ; ಹೋದಕೂಡಲೆ ಅಲ್ಲಿ ಕಟ್ಟಿರುವ ಕತ್ತೆಯನ್ನೂ ಅದರ ಕೂಡ ಇರುವ ಮರಿಯನ್ನೂ ಕಾಣುವಿರಿ; ಅವುಗಳನ್ನು ಬಿಚ್ಚಿ ನನ್ನ ಹತ್ತರಕ್ಕೆ ಹಿಡುಕೊಂಡು ಬನ್ನಿರಿ. ಯಾವನಾದರೂ ನಿಮಗೆ ಏನಾದರು ಹೇಳಿದರೆ, ಇವು ಸ್ವಾಮಿ –ಯವರಿಗೆ ಬೇಕಾಗಿವೆ ಅನ್ನಿರಿ; ಕೂಡಲೆ ಅವುಗಳನ್ನು ಬಿಟ್ಟು ಕೊಡುವನು ಎಂದು ಹೇಳಿ ಕಳುಹಿಸಿದನು. **ಒಬ್ಬ ಪ್ರವಾದಿಯ ಮುಖಾಂ –ತರ ಹೇಳಿದ ಮಾತು ನೆರವೇರುವಂತೆ ಇದು ಆಯಿತು;** ಆ ಮಾತು ಏನೆಂದರೆ, **"**ಚೀಯೋನ್ ನಗರಿಗೆ, ನೋಡು ನಿನ್ನ ಅರಸು ನಿನ್ನ ಬಳಿಗೆ ಬರುತ್ತಾನೆ; ಆತನು ಶಾಂತಗುಣವುಳ್ಳವನಾಗಿಯೂ ಕತ್ತೆಯನ್ನು, ಹೌದು ಪ್ರಾಯದ ಕತ್ತೆಮರಿಯನ್ನು ಹತ್ತಿದವನಾಗಿಯೂ ಬರು –ತ್ತಾನೆಂದು ಹೇಳಿರಿ ಎಂಬದು. (ಮತ್ತಾಯ–21:1-5)

ಆಗ ಶಿಷ್ಯರು ಹೋಗಿ ಯೇಸು ತಮಗೆ ಅಪ್ಪಣೆ ಕೊಟ್ಟಂತೆಯೇ ಕತ್ತೆಯನ್ನೂ ಮರಿಯನ್ನೂ ತಂದು ಅವುಗಳ ಮೇಲೆ ತಮ್ಮ ಬಟ್ಟೆಗ – –ಳನ್ನು ಹಾಕಲು ಆತನು ಹತ್ತಿ ಕೂತುಕೊಂಡನು. ಆಗ ಜನರ ಗುಂಪಿನಲ್ಲಿ ಬಹಳ ಮಂದಿ ತಮ್ಮ ಬಟ್ಟೆಗಳನ್ನು ದಾರಿಯಲ್ಲಿ ಹಾಸಿ – –ದರು; ಬೇರೆ ಕೆಲವರು ಮರಗಳಿಂದ ಚಿಗುರುಗಳನ್ನು ಕೊಯಿದು ದಾರಿಯಲ್ಲಿ ಹರಡುತ್ತಿದ್ದರು. ಆತನ ಹಿಂದೆಯೂ ಮುಂದೆಯೂ ಗುಂಪಾಗಿ ಹೋಗುತ್ತಿದ್ದ ಜನರು, **"**ದಾವೀದನ ಕುಮಾರನಿಗೆ ಜಯ! ಕರ್ತನ ಹೆಸರಿಲ್ಲಿ ಬರುವವನಿಗೆ ಆಶೀರ್ವಾದ! ಮೇಲಣ ಲೋಕ –ಗಳಲ್ಲಿ ಜಯ! ಎಂದು ಆರ್ಭಟಿಸಿದರು.**"** (21:6-9)

ಆನರ ಗುಂಪಿನಲ್ಲಿದ್ದ ಫರಿಸಾಯರಲ್ಲಿ ಕೆಲವರು ಆತನಿಗೆ, **"ಬೋಧಕನೇ, ನಿನ್ನ ಶಿಷ್ಯರನ್ನು ಗದರಿಸು"** ಎಂದು ಹೇಳಿದ್ದಕ್ಕೆ ಆತನು, **"**ಇವರು ಸುಮ್ಮನಾದರೆ ಈ ಕಲ್ಲುಗಳೇ ಕೂಗುವವು ಎಂದು ನಿಮಗೆ ಹೇಳುತ್ತೇನೆ**"** ಅಂದನು. ತರುವಾಯ ಆತನು ಸಮೀಪಕ್ಕೆ ಬಂದಾಗ ಪಟ್ಟಣವನ್ನು ನೋಡಿ **ಅದರ ವಿಷಯವಾಗಿ ಅತ್ತು, "**ನೀನಾದರೂ ಸಮಾಧಾನಕ್ಕೆ ಬೇಕಾದದ್ದನ್ನು ಇದೇ ದಿನದಲ್ಲಿ ತಿಳುಕೊಂ– –ಡರೆ ಎಷ್ಟೋ ಒಳ್ಳೇದು. ಆದರೆ ಈಗ ಅದು ನಿನ್ನ ಕಣ್ಣಿಗೆ ಮರೆಯಾಗಿದೆ. **ದೇವರು ನಿನಗೆ ದರ್ಶನ ಕೊಟ್ಟ ಸಮಯವನ್ನು ನೀನು ತಿಳುಕೊಳ್ಳಲಿಲ್ಲವಾದದರಿಂದ. . . . .(ಲೂಕ–೧೯:೪೨–೪೪)**

ಆತನು ಯೆರೂಸಲೇಮನ್ನು ಸೇರಲು ಪಟ್ಟಣವೆಲ್ಲಾ ಗದ್ದಲವಾಗಿ, **ಈತನು ಯಾರು**? ಅಂದರು. ಅದಕ್ಕೆ ಆ ಜನರ ಗುಂಪಿನವರು, **"**ಈತನು ಆ ಪ್ರವಾದಿ, ಗಲಿಲಾಯದ ನಜರೇತಿನ ಯೇಸು**"** ಅಂದರು. ಬಳಿಕ ಯೇಸು ದೇವಾಲಯಕ್ಕೆ ಹೋಗಿ ಅದರಲ್ಲಿ ಮಾರುವ ಕೊಳ್ಳುವ ಎಲ್ಲರನ್ನೂ ಹೊರಡಿಸಿಬಿಟ್ಟು ಚಿನಿವಾರರ **ಮೇಜುಗಳನ್ನೂ** ಪಾರಿವಾಳ ಮಾಡುವವರ **ಕಾಲ್ಮಣೆಗಳನ್ನೂ ಕೆಡವಿ** ಅವರಿಗೆ **"ನನ್ನ ಆಲಯವು ಪ್ರಾರ್ಥನಾಲಯವೆನಿಸಿಕೊಳ್ಳುವದು ಎಂದು ಬರೆದದೆ; ಆದರೆ ನೀವು ಅದನ್ನು ಕಳ್ಳರ ಗವಿ ಮಾಡಿದ್ದೀರಿ"** ಎಂದು ಹೇಳಿದನು. (ಮತ್ತಾಯ–21:10-13)

ಆಗ ಕುರುಡರೂ ಕುಂಟರೂ ದೇವಾಲಯದಲ್ಲಿ ಆತನ ಬಳಿಗೆ ಬರಲು ಅವರನ್ನು ಸ್ವಸ್ಥಮಾಡಿದನು. ಆದರೆ ಮಹಾಯಾಜಕರೂ ಶಾಸ್ತ್ರಿಗಳೂ ಆತನು ಮಾಡಿದ ಆಶ್ಚರ್ಯಕರವಾದ ಕಾರ್ಯಗಳನ್ನೂ **ದಾವೀದನ ಕುಮಾರನಿಗೆ ಜಯಜಯವೆಂದು** ದೇವಾಲಯದಲ್ಲಿ ಕೂಗುತ್ತಿರುವ ಹುಡುಗರನ್ನೂ ನೋಡಿ ಸಿಟ್ಟುಗೊಂಡು, (ಅವರಿಗೆ ಕೋಪ ಯಾಕಂದರೆ, **"**ಹೋಸನ್ನ ಅಂದರೆ "ದೇವರು ನಮ್ಮನ್ನು

ರಕ್ಷಿಸುತ್ತಾನೆ" ಎಂದು ಅರ್ಥ, ಮತ್ತು ಇದು ದೇವರನ್ನು ಮಾತ್ರ ಸ್ತುತಿಸುವದಕ್ಕೆ ಉಪಯೋಗಿಸುವ ಶಬ್ದ) "ಇವರು ಹೇಳುವದನ್ನು ಕೇಳುತ್ತೀಯಾ" ಎಂದು ಹೇಳಲು ಯೇಸು, "ಹೌದು ಕೇಳುತ್ತೇನೆ, ಸಣ್ಣ ಮಕ್ಕಳ ಬಾಯಿಂದಲೂ ಸ್ತೋತ್ರವನ್ನು ಸಿದ್ಧಿಗೆ ತಂದಿ ಎಂಬ –ದನ್ನು ನೀವು ಎಂದಾದರೂ ಓದಲಿಲ್ಲವೋ" ಅಂದನು. (೨೧:೧೪–೧೬)

ಅದನ್ನು ಮಹಾಯಾಜಕರೂ ಶಾಸ್ತ್ರಿಗಳೂ ಕೇಳಿ ಅವನನ್ನು ಯಾವ ಉಪಾಯದಿಂದ ಕೊಲ್ಲೋಣ ಎಂದು ಸಂದರ್ಭ ನೋಡುತ್ತಿದ್ದರು; ಯಾಕಂದರೆ ಜನರೆಲ್ಲಾ ಆತನ ಉಪದೇಶವನ್ನು ಕೇಳಿ ಅತ್ಯಾಶ್ಚರ್ಯಪಟ್ಟದ್ದರಿಂದ ಅವರು ಆತನಿಗೆ ಹೆದರುತ್ತಿದ್ದರು. (ಮಾರ್ಕ–11:18)

ಆಗ ಯೇಸು ಅವರಿಗೆ ಉತ್ತರಕೊಟ್ಟು ಹೇಳಿದ್ದೇನೆಂದರೆ, "ಮನುಷ್ಯಕುಮಾರನು ತನ್ನ ಮಹಿಮೆಯ ಪದವಿಯನ್ನು ಹೊಂದುವ **ಸಮಯ ಬಂದದೆ.** ನಿಮಗೆ ನಿಜನಿಜವಾಗಿ ಹೇಳುತ್ತೇನೆ, ಗೋದಿಯ ಕಾಳು ಭೂಮಿಯಲ್ಲಿ ಬಿದ್ದು ಸಾಯದಿದ್ದರೆ ಒಂದೇಯಾಗಿ ಉಳಿಯುವದು; ಸತ್ತರೆ ಬಹಳ ಫಲಕೊಡುವದು. (ಯೋಹಾನ–12:23,24)

ಈಗ ನನ್ನ ಪ್ರಾಣವು ತತ್ತರಿಸುತ್ತದೆ; ಮತ್ತು ನಾನೇನು ಹೇಳಲಿ? ತಂದೆಯೇ, ಈ ಕಾಲದೊಳಗಿಂದ ನನ್ನನ್ನು ತಪ್ಪಿಸು. **ಆದರೆ ಇದಕ್ಕಾಗಿಯೇ ಈ ಕಾಲ ಸೇರಿದೆನು.** "ತಂದೆಯೇ, ನಿನ್ನ ಹೆಸರನ್ನು ಮಹಿಮೆಪಡಿಸಿಕೋ" ಅಂದನು. ಅದಕ್ಕೆ, "ಮಹಿಮೆಪಡಿಸಿದ್ದೇನೆ, ತಿರಿಗಿ ಮಹಿಮೆಪಡಿಸುವೆನು" ಎಂದು ಆಕಾಶವಾಣಿಯಾಯಿತು. ಅಲ್ಲಿ ನಿಂತುಕೊಂಡಿದ್ದ ಜನರು ಅದನ್ನು ಕೇಳಿ, ಗುಡುಗಿತು ಎಂದರು. ಇನ್ನು ಕೆಲವರು, ದೇವದೂತನು ಈತನ ಸಂಗಡ ಮಾತಾಡಿದನು ಅಂದರು. ಆದರೆ ಯೇಸು ಅವರಿಗೆ, "ಈ ಆಕಾಶವಾಣಿ ನನಗಾಗಿ ಆಗಲಿಲ್ಲ; ನಿಮಗಾಗಿ ಆಯಿತು. ಈಗ ಈ ಲೋಕಕ್ಕೆ ತೀರ್ಪು ಆಗುತ್ತದೆ; ಈಗ ಇಹಲೋಕಾಧಿಪತಿಯು ಹೊರಗೆ ನೂಕಲ್ಪಡುವನು. ಆದರೆ ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ್ಗೆಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು ಎಂದು ಹೇಳಿದನು. ಈ ಮಾತಿನಿಂದ **ತಾನು ಇಂಥ ಸಾವು ಸಾಯತಕ್ಕವನೆಂದು ಸೂಚಿಸಿದನು.** (12:27:33)

ಸಂಕ್ಷಿಪ್ತವಾಗಿ ಇಲ್ಲಿಗೆ ನಿಲ್ಲಿಸೋಣ. ಯೇಸು ಹೇಗೆ ಕತ್ತೇಮರಿಯ ಮೇಲೆ ಕೂತುಕೊಂಡು ಯೆರೂಸಲೇಮನ್ನು ಪ್ರವೇಶಿಸಿದನು, ಮತ್ತು ಯೆಹೂದ್ಯರ ಗುಂಪು ಆತನನ್ನು ಹೊಗಳುತ್ತಾ ಹೇಗೆ ಸ್ತುತಿಸಿದರು ಹಾಗೂ ಆತನನ್ನು ತಮ್ಮ ಅರಸನನ್ನಾಗಿ ಮಾಡಿಕೊಳ್ಳುವದಕ್ಕೆ ಇಷ್ಟ–ಪಟ್ಟರೆಂಬುದನ್ನು ನಾವು ನೋಡಿದೆವು. ಆದಾಗ್ಯೂ, ಯೇಸು ಯಾಕೆ ಯೆರೂಸಲೇಮನ್ನು ಪ್ರವೇಶಿಸಿದನೆಂಬುದನ್ನು ಜನರು ಅರ್ಥ ಮಾಡಿಕೊಳ್ಳಲಿಲ್ಲ. ಮುಂದೆ ಏನಾಗುತ್ತದೆಂಬುದನ್ನು ಯೇಸುವಿನ ಶಿಷ್ಯರೂ ಸಹ ಗ್ರಹಿಸಲಿಲ್ಲ. ಅವರ ವೈರಿಯಾಗಿದ್ದ ರೋಮನ್ನರ ಆಳ್ವಿಕೆಯಿಂದ ಯೇಸು ಯೆಹೂದ್ಯರನ್ನು ರಕ್ಷಿಸುತ್ತಾನೆಂಬುದನ್ನು ಅವರು ನಿರೀಕ್ಷಿಸಿದ್ದರು. ಆದರೆ ಯೇಸು ಅದಕ್ಕಾಗಿ ಲೋಕಕ್ಕೆ ಬಂದಿ–ರಲಿಲ್ಲ. **ಯೇಸು ರೋಮ್ ಸಾಮ್ರಾಜ್ಯವನ್ನು ನಾಶಗೊಳಿಸುವದಕ್ಕೆ ಬಂದಿರಲಿಲ್ಲ ಆದರೆ ಸೈತಾನನ ರಾಜ್ಯವನ್ನು ನಾಶಪಡಿಸುವದಕ್ಕೆ ಬಂದಿ–ದ್ದನು.** ಈ ಕೆಟ್ಟ ಪ್ರಪಂಚವನ್ನು ಬದಲಾಯಿಸುವದಕ್ಕೆ ಆತನು ಬಂದಿರಲಿಲ್ಲ, ಆದರೆ **ಜನರ ಹೃದಯವನ್ನು ಬದಲಾಯಿಸುವದಕ್ಕೆ ಬಂದ–ವನಾಗಿದ್ದನು.** ನಿಶ್ಚಯವಾಗಿ, ಒಂದು ದಿನ ಲೋಕದ ಜನರಿಗೆ ನ್ಯಾಯತೀರಿಸುವದಕ್ಕೆ ಮತ್ತು ಸೃಷ್ಟಿಸಲ್ಪಟ್ಟಿರುವ ಲೋಕವನ್ನು ಪುನ: ಸ್ಥಾಪಿಸುವದಕ್ಕೆ ಯೇಸು ಹಿಂದಿರುಗಿ ಬರುತ್ತಾನೆ. ಆದಾಗ್ಯೂ, ಆತನು ಮೊದಲ ಸಲ ಲೋಕಕ್ಕೆ ಬಂದಾಗ, **ಒಂದು ಯಜ್ಞದಂತೆ ಮರಣ ಹೊಂದುವದಕ್ಕೆ ಬಂದನು.** ಬಹಳ ಹಿಂದೆಯೇ ದೇವರು ತನ್ನ ಪ್ರವಾದಿಗಳ ಮುಖಾಂತರ ವಾಗ್ದಾನ ಮಾಡಿದಂತೆ, ಆದಾಮನ ಸಂತತಿ–ಯನ್ನು ಅವರ ಪಾಪದ ದಂಡನೆಯಿಂದ ರಕ್ಷಿಸುವದಕ್ಕೆ ಯೇಸು ಬಂದನು.

ಕತೆಯನ್ನು ಮುಂದುವರಿಸುತ್ತಾ ವಾಕ್ಯ ಹೀಗೆ ಹೇಳುತ್ತದೆ:

ಆತನು ದಿನಾಲು ದೇವಾಲಯದಲ್ಲಿ **ಉಪದೇಶ** ಮಾಡುತ್ತಿದ್ದನು. ಅಷ್ಟರಲ್ಲಿ ಮಹಾಯಾಜಕರೂ ಶಾಸ್ತ್ರಿಗಳೂ ಮತ್ತು ಪ್ರಜೆಗಳಲ್ಲಿ ಮುಖ್ಯ–ಸ್ಥರೂ ಆತನನ್ನು **ಕೊಲ್ಲುವದಕ್ಕೆ** ಸಂದರ್ಭನೋಡುತ್ತಿದ್ದರು. ಆದರೆ ಜನರೆಲ್ಲರು ಅತನನ್ನು ಅಂಟಿಕೊಂಡು ಉಪದೇಶವನ್ನು ಗಮನಿಸಿ ಕೇಳುತ್ತಿದ್ದದರಿಂದ ಏನು ಮಾಡಬೇಕೋ ತೋರಲಿಲ್ಲ. (ಲೂಕ–19:47,48)

ಆ ದಿವಸಗಳೊಳಗೆ ಒಂದು ದಿನ ಆತನು ದೇವಾಲಯದಲ್ಲಿ ಜನರಿಗೆ ಉಪದೇಶಮಾಡುತ್ತಾ ಸವಾರ್ತೆಯನ್ನು ಸಾರುತ್ತಿರಲಾಗಿ ಮಹಾ ಯಾಜಕರೂ ಶಾಸ್ತ್ರಿಗಳೂ ಸಭೆಯ ಹಿರಿಯರನ್ನು ಕೂಡಿಕೊಂಡು ಫಕ್ಕನೆ ಬಂದು, "ನೀನು ಯಾವ ಅಧಿಕಾರದಿಂದ ಇದನ್ನೆಲ್ಲಾ ಮಾಡುತ್ತೀ? **ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು,** ನಮಗೆ ಹೇಳು" ಎಂದು ಆತನನ್ನು ಕೇಳಲು ಆತನು ಅವರಿಗೆ, "ನಾನು ಸಹ ನಿಮ್ಮನ್ನು ಒಂದು ಮಾತು ಕೇಳುತ್ತೇನೆ, ನನಗೆ ಹೇಳಿರಿ. ದೀಕ್ಷಾಸ್ನಾನ ಮಾಡಿಸುವ ಅಧಿಕಾರವು ಯೋಹಾನನಿಗೆ ಪರಲೋಕದಿಂದ ಬಂತೋ ಮನುಷ್ಯರಿಂದ ಬಂತೋ" ಎಂದು ಅವರನ್ನು ಕೇಳಿದನು. ಆಗ ಅವರು, ಪರಲೋಕದಿಂದ ಬಂತೆಂದು ಹೇಳಿದರೆ ನೀವು ಅವನನ್ನು ಯಾಕೆ ನಂಬಲಿಲ್ಲ ಅಂದಾನು; ಮನುಷ್ಯರಿಂದ ಬಂತೆಂದು ಹೇಳಿದರೆ ಜನರೆಲ್ಲರೂ ಯೋಹಾನನನ್ನು ಪ್ರವಾದಿಯೆಂದು ನಂಬಿರುವದರಿಂದ ಅವರು ನಮ್ಮನ್ನು ಕಲ್ಲೆಸೆದು ಕೊಂದಾರು ಎಂಬದಾಗಿ ತಮ್ಮತಮ್ಮೊಳಗೆ ಮಾತಾಡಿಕೊಂಡು ಅದು ಎಲ್ಲಿಂದ

ಬಂತೋ ನಾವರಿಯೆವು ಎಂದು ಉತ್ತರ ಕೊಟ್ಟರು. ಆಗ ಯೇಸು ಅವರಿಗೆ, "ಇದನ್ನೆಲ್ಲ ಯಾವ ಅಧಿಕಾರದಿಂದ ಮಾಡುತ್ತೇನೋ ಅದನ್ನು ನಾನೂ ನಿಮಗೆ ಹೇಳುವದಿಲ್ಲ" ಎಂದು ಹೇಳಿದನು. (ಲೂಕ–20:1-8)

ಆಗ ಆತನು ಜನರಿಗೆ ಒಂದು ಸಾಮ್ಯವನ್ನು ಹೇಳುವದಕ್ಕೆ ತೊಡಗಿದನು. ಅದೇನೆಂದರೆ, **"ಒಬ್ಬ ಮನುಷ್ಯನು ಒಂದು ದ್ರಾಕ್ಷೆಯ ತೋಟ –ವನ್ನು** ಮಾಡಿ ಅದನ್ನು ಒಕ್ಕಲಿಗರಿಗೆ ಕೊಟ್ಟು ಬೇರೊಂದು ದೇಶಕ್ಕೆ ಹೋಗಿ ಅಲ್ಲಿ ಬಹುಕಾಲ ಇದ್ದನು. ಫಲಕಾಲ ಬಂದಾಗ ದ್ರಾಕ್ಷೆ ತೋಟದ ಹುಟ್ಟುವಳಿಯ ಪಾಲನ್ನು ತೆಗೆದುಕೊಳ್ಳುವದಕ್ಕಾಗಿ ಒಬ್ಬ ಆಳನ್ನು ಒಕ್ಕಲಿಗರ ಬಳಿಗೆ ಕಳುಹಿಸಿದನು. ಆದರೆ ಆ ಒಕ್ಕಲಿಗರು ಅವನನ್ನು ಹೊಡೆದು ಬರಿಗೈಲಿ ಕಳುಹಿಸಿಬಿಟ್ಟರು. ಆ ಧಣಿಯು ಬೇರೊಬ್ಬ ಆಳನ್ನು ಕಳಿಹಿಸಲಾಗಿ ಅವರು ಅವನನ್ನೂ ಹೊಡೆದು ಅವಮಾನಪಡಿಸಿ ಬರಿಗೈಲಿ ಕಳುಹಿಸಿಬಿಟ್ಟರು. ಆ ಮೇಲೆ ಮೂರನೆಯವನನ್ನು ಕಳುಹಿಸಲು ಅವರು ಅವನನ್ನೂ ಗಾಯವಾಗುವಷ್ಟು ಹೊಡೆದು ಹೊರಕ್ಕೆ ಅಟ್ಟಿದರು. ಆಗ ಆ ದ್ರಾಕ್ಷೆಯ ತೋಟದ ಧಣಿಯು, ನಾನೇನು ಮಾಡಲಿ, ನನ್ನ ಮುದ್ದುಮಗನನ್ನು ಕಳುಹಿಸುತ್ತೇನೆ, ಒಂದುವೇಳೆ ಅವನಿಗಾದರೂ ಮರ್ಯಾದೆ ತೋರಿಸಾರು ಅಂದುಕೊಂಡನು. ಆದರೆ ಆ ಒಕ್ಕಲಿಗರು ಅವನನ್ನು ಕಂಡು ಇವನೇ ಬಾಧ್ಯಸ್ಥನು; ಇವನನ್ನು ಕೊಂದುಹಾಕೋಣ, ಇವನ ಸ್ವಾಸ್ಥ್ಯ ನಮ್ಮದಾಗಲಿ ಎಂದು ಒಬ್ಬರ ಸಂಗಡಲೊಬ್ಬರೂ ಮಾತಾಡಿಕೊಂಡು ಅವ –ನನ್ನು ದ್ರಾಕ್ಷೆಯ ತೋಟದಿಂದ ಹೊರಕ್ಕೆ ದೊಬ್ಬಿ ಕೊಂದು ಹಾಕಿದರು. ಹಾಗಾದರೆ ದ್ರಾಕ್ಷೆಯ ತೋಟದ ಧಣಿಯು ಅವರಿಗೆ ಏನು ಮಾಡುವನು? ಅವನು ಬಂದು ಆ ಒಕ್ಕಲಿಗರನ್ನು ಸಂಹರಿಸಿ ತನ್ನ ತೋಟವನ್ನು ಬೇರೆ ಜನರಿಗೆ ಮಾಡುವದಕ್ಕೆ ಕೊಡುವನು" ಅಂದನು. ಇದನ್ನು ಜನರು ಕೇಳಿ, **"ಹಾಗಾಗಬಾರದು"** ಅಂದರು. ಆದರೆ ಆತನು ಅವರನ್ನು ದೃಷ್ಟಿಸಿ ನೋಡಿ, **"ಹಾಗಾದರೆ ಮನೇ ಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮುಖ್ಯವಾದ ಮೂಲೆಗಲ್ಲಾಯಿತು"** ಎಂದು ಬರೆದಿರುವ ಮಾತೇನು? **ಈ ಕಲ್ಲಿನ ಮೇಲೆ ಬೀಳುವ ಪ್ರತಿಯೊಬ್ಬನು ತುಂಡು ತುಂಡಾಗುವನು; ಇದು ಯಾರ ಮೇಲೆ ಬೀಳುವದೋ ಅವನನ್ನು ಪುಡಿಪುಡಿ ಮಾಡುವದು"** ಅಂದನು. ಶಾಸ್ತ್ರಿಗಳೂ ಮಹಾಯಾಜಕರೂ ಈ ಮಾತುಗಳನ್ನು ಕೇಳಿ **ತಮ್ಮನ್ನೇ ಕುರಿತು ಈ ಸಾಮ್ಯವನು ಹೇಳಿದನು ಎಂದು ತಿಳುಕೊಂಡು** ಅದೇ ಗಳಿಗೆಯಲ್ಲಿ ಆತನನ್ನು ಹಿಡಿಯುವದಕ್ಕೆ ಸಂದರ್ಭನೋಡಿದರು; ಆದರೆ ಜನರಿಗೆ ಭಯಪಟ್ಟರು. (20:9-19)

ಕೆಟ್ಟ ಒಕ್ಕಲಿಗರ ಸಾಮ್ಯದ ಮೂಲಕ, ಯೇಸು ತನ್ನನ್ನು ಕೊಲ್ಲುವದಕ್ಕೆ ಸಂಚುಮಾಡಿದವರನ್ನು ಎಚ್ಚರಿಸಿದನು. ಈ ಸಾಮ್ಯದ ಅಥವನ್ನು ನೀವು ಗ್ರಹಿಸಿಕೊಂಡಿರಾ? ಅನುವಾದಿಸುವದು ಕಷ್ಟವೇನಲ್ಲ. ಈ ಸಾಮ್ಯದಲ್ಲಿ, ಕರ್ತನಾದ ಯೇಸು, **ದೇವರನ್ನು** ತೊಟದ ಯಜ – –ಮಾನನಿಗೆ ಹೋಲಿಸುತ್ತಾನೆ. ದ್ರಾಕ್ಷೆಯ ತೋಟವು **ಇಸ್ರಾಯೇಲ್ ಜನಾಂಗ.** ಕೆಟ್ಟ ಒಕ್ಕಲಿಗರು **ಯೆಹೂದ್ಯ ನಾಯಕರುಗಳನ್ನು** ನಿದರ್ಶಿ –ಸುತ್ತಾರೆ. ಒಕ್ಕಲಿಗರು ತೊಂದರೆಪಡಿಸಿದ ದ್ರಾಕ್ಷೆಯ ಫಲವನ್ನು ತೆಎದುಕೊಂಡು ಬರುವದಕ್ಕೆ ಕಳುಹಿಸಲ್ಪಟ್ಟ ತೋಟದ ಯಜಮಾನನ ಆಳುಗಳೇ ಪ್ರವಾದಿಗಳಾಗಿದ್ದಾರೆ. ಒಕ್ಕಲಿಗರು ಕೊಂದುಹಾಕಿದ ತೋಟದ ಯಜಮಾನನ ಮಗನು ಮೆಸ್ಸೀಯನಾದ ಯೇಸುವನ್ನು ಪ್ರತಿನಿಧಿಸುತ್ತಾನೆ.

ಮಹಾಯಾಜಕರುಗಳು ಮತ್ತು ಶಾಸ್ತ್ರಿಗಳು ಯಾಕೆ ತುಂಬಾ ಕೋಪಗೊಂಡಿದ್ದರು ಎಂದು ನಾವು ಅರ್ಥಮಾಡಿಕೊಳ್ಳಬಹುದು. ಯೇಸು ತಮ್ಮ ಕುರಿತಾಗಿಯೇ ಮಾತಾಡುತ್ತಿದ್ದಾನೆ ಎಂಬುದನ್ನು ಅವರು ತುಂಬಾ ಚೆನ್ನಾಗಿ ತಿಳಿದಿದ್ದರು! ತೋಟದ ಯಜಮಾನನ ಆಳುಗಳನ್ನು ಹಿಂಸೆಪಡಿಸಿ ಕೊನೆಯಲ್ಲಿ ಅವನ ಮಗನನ್ನು ಕೊಂದುಹಾಕಿದ ಕೆಟ್ಟ ಒಕ್ಕಲಿಗರಿಗೆ ಯೇಸು ತಮ್ಮನ್ನು ಹೋಲಿಸುತ್ತಿದ್ದಾನೆ ಎಂಬುದನ್ನು ಅವರು ಗ್ರಹಿಸಿಕೊಂಡಿದ್ದರು. ಈ ಪ್ರಕಾರ ಯೇಸು, ಅವರು **ಪ್ರವಾದಿಗಳ ಮಾತುಗಳನ್ನು ತಿರಸ್ಕರಿಸುವವರಂತೆ** ಮತ್ತು **ಅತ್ಯುನ್ನತನ ಮಗನಾದ ಮೆಸ್ಸೀಯನ್ನು ಕೊಲ್ಲುವವರಂತೆ** ಎಂದು ಅವರನ್ನು ದೂಷಿಸಿದನು. ಯೇಸು ಅವರಿಗೆ ಸಾಮ್ಯವನ್ನು ಹೇಳಿದ್ದು ಮಾತ್ರವಲ್ಲ, ಆದರೆ ತನ್ನ ಕುರಿತಾಗಿ ಕೀರ್ತನೆಗಳಲ್ಲಿ ಬರೆದಿರುವದನ್ನೂ ಸಹ ಉಲ್ಲೇಖಿಸಿದನು. ಅದೇನೆಂದರೆ: **"ಮನೇಕಟ್ಟುವವರು ಬೇಡವೆಂದು ಬಿಟ್ಟ ಕಲ್ಲೇ ಮೂಲೆಗಲ್ಲಾಯಿತು.** ಈ ಕಲ್ಲಿನ ಮೇಲೆ ಬೀಳುವ ಪ್ರತಿಯೊಬ್ಬನು ತುಂಡು ತುಂಡಾಗುವನು; ಇದು ಯಾರ ಮೇಲೆ ಬೀಳುವದೋ ಅವನನ್ನು ಪುಡಿಪುಡಿ ಮಾಡುವದು" (ಲೂಕ–20:17,18; ಕೀರ್ತನೆ–118:22) ಹೀಗೆ ಯೇಸು ಧಾರ್ಮಿಕ ನಾಯಕರುಗಳು ತಿರಸ್ಕರಿಸಿ ಕೊಲ್ಲುವದಕ್ಕೆ ಯೋಜನೆ ಹಾಕಿಕೊಂಡ ಆ ರಕ್ಷಕನೇ ಕೊನೆಗೆ ಅವರ ನ್ಯಾಯಾಧಿಪತಿಯಾಗುತ್ತಾನೆಂದು ಅವರನ್ನು ಎಚ್ಚರಿಸಿದನು!

ಸ್ನೇಹಿತರೇ, ನಮ್ಮ ಸಮಯವು ಮುಗಿಯಿತು. ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ದೇವರ ಚಿತ್ತವಾದರೆ, ಮುಂದಿನ ಪಾಠದಲ್ಲಿ, ಯೇಸು –ವಿನ ಮತ್ತು ಧಾರ್ಮಿಕ ನಾಯಕರುಗಳ ಆಶ್ಚರ್ಯಕರವಾದ ಕತೆಯನ್ನು ಮುಂದುವರಿಸುತ್ತೇವೆ.

ಮೆಸ್ಸೀಯನ ಕುರಿತಾಗಿ ವಾಕ್ಯವು ಏನು ಹೇಳುತ್ತದೋ ಅದರ ಕುರಿತು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ."** (ಯೋಹಾನ–1:10)

ಪಾಠ 80

# ಕಠಿಣವಾದ ಮತ್ತು ಸತ್ಯವಾದ ಮಾತುಗಳು

ಮತ್ತಾಯ 22-25

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಅಧ್ಯಯನದಲ್ಲಿ, ಮೆಸ್ಸೀಯನಾದ ಯೇಸು, ತನ್ನನ್ನು ಕೊಲ್ಲುವದಕ್ಕೆ ಒಟ್ಟಾಗಿ ಒಳಸಂಚು ರೂಪಿಸುತ್ತಿರುವ ಮಹಾಯಾಜ –ಕರುಗಳು ಮತ್ತು ಫರಿಸಾಯರೂ ಯೆರೂಸಲೇಮಿನಲ್ಲಿ ಇದ್ದಾರೆ ಎಂಬುದು **ಪೂರ್ತಿಯಾಗಿ ತಿಳಿದಿದ್ದರೂ ಆತನು ಆ ಪಟ್ಟಣವನ್ನು** ಹೇಗೆ **ಪ್ರವೇಶಿಸಿದನೆಂಬುದನ್ನು** ನಾವು ನೋಡಿದೆವು. ತನಗೆ ಸಂಭವಿಸುವದಕ್ಕಿರುವ ಪ್ರತಿಯೊಂದನ್ನೂ ಯೇಸು ತಿಳಿದಿದ್ದನು, ಆದರೆ ಅದು ಆತನು ಯೆರೂಸಲೇಮಿಗೆ ಹೋಗುವದನ್ನು ನಿಗ್ರಹಿಸಲಿಲ್ಲ. ಲೋಕದ ಪಾಪಗಳಿಗಾಗಿ ಒಂದು ಯಜ್ಞದಂತೆ ಸಾಯುವ ಕ್ರಮವಾಗಿ ತಾನು ಹುಟ್ಟಿದವನೆಂದು ಆತನು ತಿಳಿದಿದ್ದನು. ಮಹಾಯಾಜಕರುಗಳು ಆತನನ್ನು ಹಿಡಿದು ಶಿಲುಬೆಗೆ ಜಡಿಯುವದಕ್ಕೆ ಕೇವಲ ಕೆಲವು ದಿವಸಗಳು ಮಾತ್ರ ಉಳಿದಿದ್ದವು.

ಆದಕಾರಣ ಜೊತೆ ಕೇಳುಗರೇ, ಈದಿನ ನೀವು ಎಲ್ಲೇ ಇದ್ದರೂ, ಕರ್ತನಾದ ಯೇಸು ಯೆಹೂದ್ಯರ ಧಾರ್ಮಿಕ ನಾಯಕರುಗಳಿಗೆ ಎಚ್ಚರಿಸಿ, ಅವರ ಕಪಟತನ ಮತ್ತು ದುಷ್ಟತನಕ್ಕಾಗಿ ಅವರಿಗೆ ಬುದ್ದಿ ಹೇಳಿರುವದನ್ನು ನೀವು ಜಾಗ್ರತೆಯಿಂದ ಗಮನಕೊಡಿರಿ ಎಂದು ನಿಮ್ಮನ್ನು ನಾವು ಕೇಳಿಕೊಳ್ಳುತ್ತೇವೆ. ಈದಿನ ನಾವು ಕೇಳಿಸಿಕೊಳ್ಳುವ **ಮಾತುಗಳು ಕಠಿನವಾದವು ಮತ್ತು ನಿಜವಾದವುಗಳು** ಆಗಿವೆ. ಸತ್ಯವನ್ನು ಕೇಳಿಸಿಕೊಳ್ಳುವದಕ್ಕೆ ಕೆಲವು ಸಲ ನೋವಾಗುತ್ತದೆ. ಈದಿನದ ಪಾಠವು ಅಂತಹ ನೋವಿನ ಮಾತುಗಳಿಂದ ತುಂಬಿದೆ. {ಉಲೂಫ್} ಜ್ಞಾನೋಕ್ತಿಯು ನಿಜ: **"ಸತ್ಯವು ಖಾರವಾದ ಮೆಣಸು!"**

ನಾವು ನಮ್ಮ ಹಿಂದಿನ ಪಾಠದಲ್ಲಿ ನೋಡಿದಂತೆ, ಯೇಸು ಯೆರೂಸಲೇಮನ್ನು ಪ್ರವೇಶಿಸಿದ ನಂತರ, ಪ್ರತಿದಿನ ಆತನು ದೇವಾಲಯಕ್ಕೆ ಹೋಗಿ ಜನರಿಗೆ ಬೋಧಿಸುತ್ತಿದ್ದನು. ಪ್ರತಿದಿನ ಮಹಾಯಾಜಕರು ಮತ್ತು ಶಾಸ್ತ್ರಿಗಳು, ಯೇಸು ಏನಾದರೂ ಹೇಳುವದರಲ್ಲಿ ಆತನನ್ನು ಹಿಡಿಯುವದಕ್ಕೆ ಅವಕಾಶವನ್ನು ಹುಡುಕುತ್ತಿದ್ದರು, ಅದರಿಂದ ಆತನನ್ನು ಮರಣಕ್ಕೆ ಗುರಿಪಡಿಸುವದಕ್ಕೆ ಅವರಿಗೆ ಒಂದು ನೆಪ ಸಿಕ್ಕುತ್ತಿತ್ತು. ಆದಾಗ್ಯೂ, ಯೇಸುವಿನ ಮಾತನ್ನು ಒಂದೇ ಒಂದು ಶಬ್ದವೂ ತಪ್ಪದಂತೆ ಗಮನಕೊಟ್ಟು ಕೇಳಿಸಿಕೊಳ್ಳುತ್ತಿದ್ದ ಜನರಿಗೆ ಅವರು ಹೆದರುತ್ತಿದ್ದರು.

ಲೂಕನ ಸುವಾರ್ತೆಯ ಇಪ್ಪತ್ತನೆಯ ಅಧ್ಯಾಯದಲ್ಲಿ ವಾಕ್ಯವು ಹೀಗೆ ಹೇಳುತ್ತದೆ:

ಆಮೇಲೆ ಅವರು ಯೇಸುವನ್ನು ಆಧಿಪತಿಯ ವಶಕ್ಕೂ ಅಧಿಕಾರಕ್ಕೂ ಒಪ್ಪಿಸಬೇಕೆಂದು ಹೊಂಚಿ ನೋಡುವವರಾಗಿ **ನೀತಿವಂತರಾಗಿ ನಟಿಸುತ್ತಿರುವ ಗೂಢಚಾರರನ್ನು ಆತನ ಮಾತಿನಲ್ಲಿ ಏನನ್ನಾದರೂ ಹಿಡಿಯುವದಕ್ಕೆ ಆತನ ಬಳಿಗೆ ಕಳುಹಿಸಿದರು.** ಇವರು, "ಬೋಧ –ಕನೇ, ನೀನು ಸರಿಯಾಗಿ ಮಾತಾಡುತ್ತಾ ಉಪದೇಶ ಮಾಡುತ್ತೀ, ನೀನು ಮುಖದಾಕ್ಷಿಣ್ಯವಿಲ್ಲದೆ ದೇವರ ಮಾರ್ಗವನ್ನು ಸತ್ಯವಾಗಿ ಬೋಧಿಸುವವನಾಗಿದ್ದೀ ಎಂದು ಬಲ್ಲೆವು. ಕೈಸರನಿಗೆ ಕಂದಾಯ ಕೊಡುವದು ಸರಿಯೋ ಸರಿಯಲ್ಲವೋ ಎಂದು ಆತನನ್ನು ಕೇಳಿ – –ದರು. ಆತನು ಅವರ ಕುಯುಕ್ತಿಯನ್ನು ಕಂಡುಕೊಂಡು ಅವರಿಗೆ, "ನನಗೆ ಒಂದು ಹಣವನ್ನು ತೋರಿಸಿರಿ. ಇದರಲ್ಲಿ ಯಾರ ತಲೆಯೂ ಮುದ್ರೆಯೂ ಅದೆ" ಎಂದು ಕೇಳಿದ್ದಕ್ಕೆ ಅವರು, "ಕೈಸರನದು" ಅಂದರು. ಆತನು ಅವರಿಗೆ, **"ಹಾಗಾದರೆ ಕೈಸರನದನ್ನು ಕೈಸರನಿಗೆ ಕೊಡಿರಿ, ದೇವರದನ್ನು ದೇವರಿಗೆ ಕೊಡಿರಿ"** ಎಂದು ಹೇಳಿದನು. ಆತನ ಮಾತಿನಲ್ಲಿ ಅವರು ಜನರ ಮುಂದೆ ಏನೂ ಹಿಡಿಯಲಾರದೆ ಆತನು ಕೊಟ್ಟ ಉತ್ತರಕ್ಕೆ ಆಶ್ಚರ್ಯಪಟ್ಟು ಸುಮ್ಮಗಾದರು. (ಲೂಕ–20:20-26)

ಅದೇದಿನದಲ್ಲಿ **ಸದ್ದುಕಾಯರು** ಆತನ ಬಳಿಗೆಬಂದರು. ಇವರು ಪುನರುತ್ಥಾನವಿಲ್ಲ ಅನ್ನುವವರು. ಇವರು ಆತನಿಗೆ ಪ್ರಶ್ನೆಮಾಡಿದ್ದೇನೆಂದರೆ

“ಬೋಧಕನೇ, ಒಬ್ಬನು ಮಕ್ಕಳಿಲ್ಲದೆ ಸತ್ತರೆ ಅವನ ಹೆಂಡತಿಯನ್ನು ಅವನ ತಮ್ಮನು ಮದುವೆ ಮಾಡಿಕೊಂಡು ತನ್ನ ಅಣ್ಣನಿಗೆ ಸಂತಾನ
–ವನ್ನು ಪಡೆಯಬೇಕೆಂದು ಮೋಶೆಯು ಹೇಳಿದನಷ್ಟೆ. ಆದರೆ ನಮ್ಮಲ್ಲಿ ಏಳು ಮಂದಿ ಅಣ್ಣತಮ್ಮಂದಿರಿದ್ದರು. ಮೊದಲನೆಯವನು
ಮದುವೆಯಾಗಿ ತೀರಿಹೋದನು. ಅವನಿಗೆ ಸಂತಾನಿಲ್ಲದ ಕಾರಣ ಹೆಂಡತಿಯನ್ನು ತಮ್ಮನಿಗೆ ಬಿಟ್ಟನು; ಅದರಂತೆ ಎರಡನೆಯವನೂ
ಮೂರನೆಯವನೂ ಮುಂತಾದವರು ಏಳನೆಯವನವರೆಗೂ ಮಾಡಿದರು. ಅವರೆಲ್ಲರು ಸತ್ತ ಮೇಲೆ ಆ ಹೆಂಗಸೂ ಸತ್ತಳು. ಹಾಗಾದರೆ
ಪುನರುತ್ಥಾನದಲ್ಲಿ ಆಕೆ ಆ ಏಳು ಮಂದಿಯಲ್ಲಿ ಯಾರ ಹೆಂಡತಿಯಾಗಿರುವಳು? ಆಕೆಯನ್ನು ಅವರೆಲ್ಲರೂ ಮದುವೆ ಮಾಡಿಕೊಂಡಿದ್ದ
–ರಲ್ಲಾ” ಅಂದರು. ಅದಕ್ಕೆ ಯೇಸು ಉತ್ತರವಾಗಿ ಅವರಿಗೆ, **“ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವ–**
**–ರಾಗಿದ್ದೀರಿ;”** (ಮತ್ತಾಯ–22:23-29) “ಈ ಲೋಕದ ಜನರು ಮದುವೆ ಮಾಡಿಕೊಳ್ಳುತ್ತಾರೆ, ಮದುವೆ ಮಾಡಿಕೊಡುತ್ತಾರೆ; ಆದರೆ
ಆ ಲೋಕವನ್ನೂ ಸತ್ತವರೊಳಗಿಂದ ಪುನರುತ್ಥಾನವನ್ನೂ ಪಡೆಯುವದಕ್ಕೆ ಯೋಗ್ಯರೆನಿಸಿಕೊಂಡಿರುವವರು ಮದುವೆ ಮಾಡಿಕೊಳ್ಳು –
–ವದು ಇಲ್ಲ, ಮಾಡಿಕೊಡುವದೂ ಇಲ್ಲ. ಅವರು ಇನ್ನು ಮರಣಕ್ಕೆ ಗುರಿಯಾಗುವದೇ ಇಲ್ಲ. ಪುನರುತ್ಥಾನವನ್ನು ಹೊಂದಿದವರಾ–
–ಗಿದ್ದು ದೇವದೂತರಿಗೆ ಸರಿಸಮಾನರೂ ದೇವರ ಮಕ್ಕಳೂ ಆಗಿದ್ದಾರೆ. ಸತ್ತವರು ಬದುಕಿ ಏಳುತ್ತಾರೆಂಬದನ್ನು ಮೋಶೆಯೂ
ಸೂಚಿಸಿದ್ದಾನೆ. ಅವನು ಪೊದೆಯ ಸಂಗತಿಯಿರುವ ಅಧ್ಯಾಯದಲ್ಲಿ ಕರ್ತನನ್ನು ಅಬ್ರಹಾಮನ ದೇವರು ಇಸಾಕನ ದೇವರು ಯಾಕೋ
–ಬನ ದೇವರು ಎಂದು ಹೇಳಿದ್ದಾನೆ. ದೇವರು ಜೀವಿತರಿಗೆ ದೇವರಾಗಿದ್ದಾನೆ ಹೊರತು ಜೀವವಿಲ್ಲದವರಿಗೆ ಅಲ್ಲ. ಆತನಿಗೆ ಎಲ್ಲರೂ
ಜೀವಿಸುವವರೇ” ಎಂದು ಹೇಳಿದನು. (ಲೂಕ–20:34-38)

ಜನರು ಅದನ್ನು ಕೇಳಿ ಆತನ ಬೋಧನೆಗೆ ಅತ್ಯಾಶ್ಚರ್ಯಪಟ್ಟರು. ಆತನು ಸದ್ದುಕಾಯರ ಬಾಯಿ ಕಟ್ಟಿದನೆಂದು **ಫರಿಸಾಯರು** ಕೇಳಿ
ಅಲ್ಲಿ ಕೂಡಿಬಂದರು. ಅವರಲ್ಲಿದ್ದ ಒಬ್ಬ ಧರ್ಮೋಪದೇಶಕನು ಆತನನ್ನು ಪರೀಕ್ಷೆ ಮಾಡಬೇಕೆಂದು, “ಗುರುವೇ, ಧರ್ಮಶಾಸ್ತ್ರದಲ್ಲಿ
ಯಾವ ಆಜ್ಞೆ ಮುಖ್ಯವಾದದ್ದು” ಎಂದು ಆತನನ್ನು ಕೇಳಿದ್ದಕ್ಕೆ ಆತನು, **“ನಿನ್ನ ದೇವರಾಗಿರುವ ಕರ್ತನನ್ನು ನಿನ್ನ ಪೂರ್ಣಹೃದಯದಿಂ –**
**–ದಲೂ ನಿನ್ನ ಪೂರ್ಣಪ್ರಾಣದಿಂದಲೂ ನಿನ್ನ ಪೂರ್ಣಬುದ್ಧಿಯಿಂದಲೂ ಪ್ರೀತಿಸಬೇಕು** ಎಂಬ ಆಜ್ಞೆಯೇ ಮುಖ್ಯವಾದದ್ದು ಮತ್ತು
ಮೊದಲನೆಯದು. ಇದಕ್ಕೆ ಸಮಾನವಾದ ಎರಡನೆಯ ಆಜ್ಞೆ ಒಂದು ಉಂಟು, ಅದು ಯಾವದಂದರೆ, ನಿನ್ನ ನೆರೆಯವನನ್ನು ನಿನ್ನಂ
–ತೆಯೇ ಪ್ರೀತಿಸಬೇಕು ಎಂಬದೇ. ಈ ಎರಡು ಆಜ್ಞೆಗಳು ಎಲ್ಲಾ ಧರ್ಮಶಾಸ್ತ್ರಕ್ಕೂ ಪ್ರವಾದನಾ ಗ್ರಂಥಕ್ಕೂ ಆಧಾರವಾಗಿವೆ” ಎಂದು
ಹೇಳಿದನು. (ಮತ್ತಾಯ–22:33-40)

ಫರಿಸಾಯರು ಕೂಡಿಬಂದಿರುವಗ ಯೇಸು ಅವರಿಗೆ, “ಬರಬೇಕಾದ ಕ್ರಿಸ್ತನ ವಿಷಯವಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ
ಮಗನು?” ಎಂದು ಪ್ರಶ್ನೆ ಹಾಕಿದ್ದಕ್ಕೆ ಅವರು ಆತನಿಗೆ, “ದಾವೀದನ ಮಗನು” ಎಂದು ಹೇಳಲು ಆತನು, “ಹಾಗಾದರೆ ನಾನು ನಿನ್ನ
ವಿರೋಧಿಗಳನ್ನು ನಿನ್ನ ಪಾದಗಳ ಕೆಳಗೆ ಹಾಕುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ
ನುಡಿದನು ಎಂಬ ಮಾತಿನಲ್ಲಿ ದಾವೀದನು ಪವಿತ್ರಾತ್ಮ ಪ್ರೇರಿತನಾಗಿ ಆತನನ್ನು ಒಡೆಯನೆಂದು ಹೇಳಿದ ಮೇಲೆ ಆತನು ಅವನಿಗೆ ಮಗ
–ನಾಗುವದು ಹೇಗೆ” ಅಂದನು. ಅದಕ್ಕೆ ಉತ್ತರವಾಗಿ ಯಾರೂ ಒಂದು ಮಾತಾದರೂ ಆತನಿಗೆ ಹೇಳಲಾರದೆ ಹೋದರು. ಇದಲ್ಲದೆ
ಅಂದಿನಿಂದ ಆತನನ್ನು ಇನ್ನೇನಾದರೂ ಕೇಳುವದಕ್ಕೆ ಯಾರಿಗೂ ಧೈರ್ಯ ಹುಟ್ಟಲಿಲ್ಲ. (22:41-46)

ತರುವಾಯ ಯೇಸು ಜನರ ಗುಂಪಿಗೂ ಮತ್ತು ತನ್ನ ಶಿಷ್ಯರಿಗೂ ಹೇಳಿದ್ದೇನೆಂದರೆ, “ಶಾಸ್ತ್ರಿಗಳೂ ಫರಿಸಾಯರೂ ಮೋಶೆಯ
ಪೀಠದಲ್ಲಿ ಕೂತುಕೊಂಡಿದ್ದಾರೆ; ಆದದರಿಂದ ವರು ನಿಮಗೆ ಏನೇನು ಹೇಳುತ್ತಾರೋ ಅದನ್ನೆಲ್ಲಾ ಮಾಡಿರಿ, ಕಾಪಾಡಿಕೊಳ್ಳಿರಿ; ಆದರೆ
ಅವರ ನಡತೆಯ ಪ್ರಕಾರ ನಡೆಯಬೇಡಿರಿ; **ಅವರು ಹೇಳುತ್ತಾರೆ ಹೊರತು ನಡೆಯುವದಿಲ್ಲ**. ಅವರು ಭಾರವಾದ ಹೊರೆಗಳನ್ನು ಕಟ್ಟಿ
ಜನರ ಹೆಗಲಿನ ಮೇಲೆ ಹೊರಿಸುತ್ತಾರೆ; ತಾವಾದರೋ ಬೆರಳಿನಿಂದಲಾದರೂ ಅವುಗಳನ್ನು ಮುಟ್ಟಲೊಲ್ಲರು. ಅವರು ತಮ್ಮ ಕೆಲಸಗಳ
–ನ್ನೆಲ್ಲಾ ಜನರಿಗೆ ಕಾಣಬೇಕೆಂದು ಮಾಡುತ್ತಾರೆ. ತಾವು ಕಟ್ಟಿಕೊಳ್ಳುವ ಜ್ಞಾಪಕ ಪಟ್ಟಿಯನ್ನು ಅಗಲಮಾಡುತ್ತಾರೆ, ಗೊಂಡೆಗಳನ್ನು ಉದ್ದ
ಮಾಡುತ್ತಾರೆ. ಇದಲ್ಲದೆ ಔತಣಪ್ರಸ್ಥಗಳಲ್ಲಿ ಪ್ರಥಮ ಸ್ಥಾನ, ಸಭಾಮಂದಿರಗಳಲ್ಲಿ ಮುಖ್ಯ ಪೀಠಗಳು, ಅಂಗಡೀ ಬೀದಿಗಳಲ್ಲಿ ನಮಸ್ಕಾರ
–ಗಳು, ಜನರಿಂದ ಬೋಧಕರನ್ನಿಸಿಕೊಳ್ಳುವದು, ಇವುಗಳೇ ಅವರಿಗೆ ಇಷ್ಟ. ಆದರೆ ನೀವು ಬೋಧಕರನ್ನಿಸಿಕೊಳ್ಳಬೇಡಿರಿ; ಒಬ್ಬನೇ ನಿಮ್ಮ
ಬೋಧಕನು, ನೀವೆಲ್ಲರೂ ಸಹೋದರರು. ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ; ಪರಲೋಕ
–ದಲ್ಲಿರುವಾತನೇ ನಿಮಗೆ ತಂದೆ. ಮತ್ತು ಗುರುಗಳು ಅನ್ನಿಸಿಕೊಳ್ಳಬೇಡಿರಿ; ಕ್ರಿಸ್ತನೊಬ್ಬನೇ ನಿಮಗೆ ಗುರುವು. ನಿಮ್ಮಲ್ಲಿ ಹೆಚ್ಚಿನವನು ನಿಮ್ಮ
ಸೇವಕನಾಗಿರಬೇಕು. ತನ್ನನ್ನು ಹೆಚ್ಚಿಸಿಕೊಳ್ಳುವವನು ತಗ್ಗಿಸಲ್ಪಡುವನು, ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು.” (23:1-12)

“**ಅಯ್ಯೋ**, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ಪರಲೋಕರಾಜ್ಯದ ಬಾಗಲನ್ನು ಮನುಷ್ಯರ ಎದುರಿಗೆ ಮುಚ್ಚಿಬಿಡುತ್ತೀರಿ;
ನೀವಂತೂ ಒಳಕ್ಕೆ ಹೋಗುವದಿಲ್ಲ, ಒಳಕ್ಕೆ ಹೋಗಬೇಕೆಂದಿರುವರನ್ನೂ ಹೋಗಗೊಡಿಸುವದಿಲ್ಲ.” (23:13)

“**ಅಯ್ಯೋ**, ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಒಬ್ಬನನ್ನು ನಿಮ್ಮ ಮತದಲ್ಲಿ ಸೇರಿಸಿಕೊಳ್ಳುವದಕ್ಕಾಗಿ ಭೂಮಿಯನ್ನೂ

ಸಮುದ್ರವನ್ನೂ ಸುತ್ತಿಕೊಂಡು ಬರುತ್ತೀರಿ; ಅವನು ಸೇರಿದಮೇಲೆ ಅವನನ್ನು ನಿಮಗಿಂತ ಎರಡರಷ್ಟಾಗಿ ನರಕ ಪಾತ್ರನಾಗ ಮಾಡು ತ್ತೀರಿ." (23:15)

**"ಅಯ್ಯೋ,** ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಮರುಗ ಸೋಪು ಜೀರಿಗೆಗಳಲ್ಲಿ ಹತ್ತರಲ್ಲೊಂದು ಪಾಲು ಕೊಡುತ್ತೀರಿ ಸರಿ, ಆದರೆ ಧರ್ಮಶಾಸ್ತ್ರದಲ್ಲಿ ಗೌರವವಾದದ್ದನ್ನು, ಅಂದರೆ ನ್ಯಾಯವನ್ನೂ ಕರುಣೆಯನ್ನೂ ನಂಬಿಕೆಯನ್ನೂ ಬಿಟ್ಟುಬಿಟ್ಟಿರಿ. ಇವುಗಳನ್ನು ಮಾಡಬೇಕಾಗಿತ್ತು; ಅವುಗಳನ್ನೂ ಬಿಡಬಾರದು. ದಾರಿತೋರಿಸುವ ಕುರುಡರೇ, ನೀವು ಸೊಳ್ಳೇ ಸೋಸುವವರೂ, ಒಂಟೇ ನುಂಗು –ವವರು." (23:23,24)

**"ಅಯ್ಯೋ,** ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪಂಚಪಾತ್ರೆ ಬಟ್ಟಲು ಇವುಗಳ ಹೊರಭಾಗವನ್ನು ಶುಚಿಮಾಡುತ್ತೀರಿ; ಆದರೆ ಅವು ಒಳಗೆ ಸುಲುಕೊಂಡವುಗಳಿಂದಲೂ ಇಹಭೋಗ ಪದಾರ್ಥಗಳಿಂದಲೂ ತುಂಬಿರುತ್ತವೆ. ಕುರುಡನಾದ ಫರಿಸಾಯನೇ, ಮೊದಲು ಪಂಚಪಾತ್ರೆ ಬಟ್ಟಲುಗಳ ಒಳಭಗವನ್ನು ಶುಚಿಮಾಡು. ಆಗ ಅವುಗಳ ಹೊರಭಾಗವೂ ಶುಚಿಯಾಗುವದು." (23:25,26)

**"ಅಯ್ಯೋ,** ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಸುಣ್ಣಾ ಹಚ್ಚಿದ ಸಮಾಧಿಗಳಿಗೆ ಹೋಲಿಕೆಯಾಗಿದ್ದೀರಿ; ಇವು ಹೊರಗೆ ಚಂದವಾಗಿ ಕಾಣುತ್ತವೆ. ಒಳಗೆ ನೋಡಿದರೆ ಸತ್ತವರ ಎಲುಬುಗಳಿಂದಲೂ ಎಲ್ಲಾ ಹೊಲಸಿನಿಂದಲೂ ತುಂಬಿರುತ್ತವೆ. ಹಾಗೆಯೇ ನೀವು ಸಹ ಹೊರಗೆ ಜನರಿಗೆ ಸತ್ಪುರಷರಂತೆ ಕಾಣಿಸಿಕೊಳ್ಳುತ್ತೀರಿ ಸರಿ, ಆದರೆ ಒಳಗೆ ಕಪಟದಿಂದಲೂ ಅನ್ಯಾಯದಿಂದಲೂ ತುಂಬಿದವ –ರಾಗಿದ್ದೀರಿ." (23:27,28)

**"ಅಯ್ಯೋ,** ಕಪಟಿಗಳಾದ ಶಾಸ್ತ್ರಿಗಳೇ, ಫರಿಸಾಯರೇ, ನೀವು ಪ್ರವಾದಿಗಳ ಸಮಾಧಿಗಳನ್ನು ಕಟ್ಟಿ, ನೀತಿವಂತರ ಗೋರಿಗಳನ್ನು ಅಲಂಕ –ರಿಸಿ, ನಾವು ನಮ್ಮ ಹಿರಿಯರ ಕಾಲದಲ್ಲಿ ಇರುತ್ತಿದ್ದರೆ ಪ್ರವಾದಿಗಳನ್ನು ಕೊಂದ ಪಾಪದಲ್ಲಿ ಪಾಲುಗಾರರಾಗುತ್ತಿರಲಿಲ್ಲ ಅನ್ನುತ್ತೀರಿ. ಹಾಗಾದರೆ ನೀವು ಪ್ರವಾದಿಗಳನ್ನು ಕೊಂದವರ ಮಕ್ಕಳೇ ಹೌದು ಎಂಬದಕ್ಕೆ ನಿಮಗೆ ನೀವೇ ಸಾಕ್ಷಿಗಳಾಗಿದ್ದೀರಿ. ಒಳ್ಳೇದು, ನೀವು ನಿಮ್ಮ ಹಿರಿಯರ ಪಾಪದ ಅಳತೆಯನ್ನು ಪೂರ್ತಿಮಾಡಿರಿ. ಹಾವುಗಳೇ, ಸರ್ಪಜಾತಿಯವರೇ, ನರಕದಂಡನೆಗೆ ಹೇಗೆ ತಪ್ಪಿಸಿ ಕೊಂಡೀರೀ?. . . .ಯೆರೂಸಲೇಮೇ, ಯೆರೂಸಲೇಮೇ, ಪ್ರವಾದಿಗಳ ಪ್ರಾಣ ತೆಗೆಯುವವಳೇ, ದೇವರು ನಿನ್ನ ಬಳಿಗೆ ಕಳುಹಿಸಿಕೊಟ್ಟ –ವರನ್ನು ಕಲ್ಲೆಸೆದು ಕೊಲ್ಲುವವಳೇ, ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ ಮಕ್ಕಳನ್ನು ಕೂಡಿಸಿಕೊಳ್ಳು –ವದಕ್ಕೆ ನನಗೆ ಎಷ್ಟೋಸಾರಿ ಮನಸ್ಸಿತ್ತು. ಆದರೆ ನಿಮಗೆ ಮನಸ್ಸಿಲ್ಲದೇ ಹೋಯಿತು." (23:29-33, 37)

ಆಮೇಲೆ ಯೇಸು ದೇವಾಲಯದಿಂದ ಹೊರಟು ಹೋಗುತ್ತಿರಲು ಆತನ ಶಿಷ್ಯರು ಆತನಿಗೆ ದೇವಾಲಯದ ಕಟ್ಟಣಗಳನ್ನು ತೋರಿಸುವ –ದಕ್ಕೆ ಹತ್ತರಕ್ಕೆ ಬಂದರು. ಆಗ ಆತನು, "ಇವುಗಳನ್ನೆಲ್ಲಾ ನೋಡುತ್ತೀರಲ್ಲವೇ, **ಇಲ್ಲಿ ಕಲ್ಲಿನ ಮೇಲೆ ಕಲ್ಲು ಉಳಿಯುವದಿಲ್ಲ, ಎಲ್ಲಾ ಕೆಡ –ವಲ್ಪಡುವದು** ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಅಂದನು. ಬಳಿಕ ಆತನು ಎಣ್ಣೆಯ ಮರಗಳ ಗುಡ್ಡದ ಮೇಲೆ ಕೂತಿದ್ದಾಗ ಶಿಷ್ಯರು ಆತನ ಬಳಿಗೆ ಪ್ರತ್ಯೇಕವಾಗಿ ಬಂದು, "ಅದು ಯಾವಾಗ ಆಗುವದು? ನೀನು ಪ್ರತ್ಯಕ್ಷನಾಗುವದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು? ಎಂದು ಕೇಳಿದರು. (24:1-3)

ಯೇಸು ಅವರಿಗೆ ಉತ್ತರವಾಗಿ ಹೇಳಿದ್ದೇನೆಂದರೆ, **"ಯಾರಾದರೂ ನಿಮ್ಮನ್ನು ಮೋಸಗೊಳಿಸಾರು ನೋಡಿಕೊಳ್ಳಿರಿ.** ಯಾಕಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು, ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು. ಇದ –ಲ್ಲದೆ ಯುದ್ಧಗಳಾಗುವದನ್ನೂ ಯುದ್ಧವಾಗುವ ಹಾಗಿದೆ ಎಂಬ ಸುದ್ಧಿಗಳನ್ನು ನೀವು ಕೇಳಬೇಕಾಗಿರುವದು. ಕಳವಳಪಡದಂತೆ ನೋಡಿ –ಕೊಳ್ಳಿರಿ; ಯಾಕಂದರೆ ಹಾಗಾಗುವದು ಅಗತ್ಯ. ಆದರೂ ಇದು ಇನ್ನೂ ಅಂತ್ಯಕಾಲವಲ್ಲ. ಜನಕ್ಕೆ ವಿರೋಧವಾಗಿ ಜನವೂ ರಾಜ್ಯಕ್ಕೆ ವಿರೋಧವಾಗಿ ರಾಜ್ಯವೂ ಏಳುವವು; ಮತ್ತು ಅಲ್ಲಲ್ಲಿ ಬರಗಳು ಬರುವವು, ಭೂಕಂಪಗಳು ಆಗುವವು; ಇವೆಲ್ಲಾ ನೂತನಕಾಲ ಹುಟ್ಟುವ ಪ್ರಸವವೇದನೆಯ ಪ್ರಾರಂಭ. ಆಗ ನಿಮ್ಮನ್ನು ಉಪದ್ರವಕ್ಕೆ ಒಪ್ಪಿಸಿ ಕೊಲ್ಲುವರು; ನನ್ನಹೆಸರಿನ ನಿಮಿತ್ತ ನಿಮ್ಮನ್ನು ಎಲ್ಲಾ ಜನಾಂಗಗಳವರು ಹಗೆಮಾಡುವರು. ಆಗ ಅನೇಕರು ಹಿಂಜರಿದು ಒಬ್ಬರನ್ನೊಬ್ಬರು ಹಿಡುಕೊಡುವರು; ಒಬ್ಬರ ಮೇಲೊಬ್ಬರು ದ್ವೇಷ ಮಾಡುವರು. **ಬಹು ಮಂದಿ ಸುಳ್ಳು ಪ್ರವಾದಿಗಳು ಸಹ ಎದ್ದು ಅನೇಕರನ್ನು ಮೋಸಗೊಳಿಸುವರು.** . .ಆಗ ಯಾರಾದರೂ ನಿಮಗೆ ಇಗೋ ಕ್ರಿಸ್ತನು ಇಲ್ಲಿದ್ದಾನೆ, ಅಗೋ ಅಲ್ಲಿದ್ದಾನೆ ಎಂದು ಹೇಳಿದರೆ ನಂಬಬೇಡಿರಿ. ಸುಳ್ಳುಕ್ರಿಸ್ತರೂ ಸುಳ್ಳುಪ್ರವಾದಿಗಳೂ ಎದ್ದು ಸಾಧ್ಯವಾದರೆ ದೇವರಾದುಕೊಂಡವ –ರನ್ನು ಸಹ ಮೋಸಗೊಳಿಸುವದಕ್ಕೋಸ್ಕರ ದೊಡ್ಡ ದೊಡ್ಡ ಸೂಚಕಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡಿ ತೋರಿಸುವರು. **ಇಗೋ, ನಿಮಗೆ ಮುಂದಾಗಿ ಹೇಳಿದ್ದೇನೆ.** ಆದಕಾರಣ ಯಾರಾದರೂ ನಿಮಗೆ ಅಗೋ ಕ್ರಿಸ್ತನು ಅಡವಿಯಲ್ಲಿ ಇದ್ದಾನೆಂದು ಹೇಳಿದರೆ ಹೊರಟು ಹೋಗಬೇಡಿರಿ; ಇಗೋ ಕೋಣೆಗಳಲ್ಲಿದ್ದಾನೆಂದು ಹೇಳಿದರೆ ನಂಬಬೇಡಿರಿ. ಹೇಗೆ ಮಿಂಚು ಮೂಡಣದಲ್ಲಿ ಹುಟ್ಟಿ ಪಡುವಣ

–ದಲ್ಲಿ ಕಾಣಿಸುತ್ತದೋ ಹಾಗೆಯೇ ಮನುಷ್ಯಕುಮಾರನ ಪ್ರತ್ಯಕ್ಷತೆಯು ಇರುವದು." (24:4-11; 23-27)

ಆ ದಿನಗಳ ಸಂಕಟವು ತೀರಿದ ಕೂಡಲೆ ಸೂರ್ಯನು ಕತ್ತಲಾಗಿ ಹೋಗುವನು, ಚಂದ್ರನು ಬೆಳಕುಕೊಡದೆ ಇರುವನು, ನಕ್ಷತ್ರಗಳು ಆಕಾಶದಿಂದ ಉದುರುವವು, ಆಕಾಶದ ಶಕ್ತಿಗಳು ಕದಲುವವು. ಆಗ ಮನುಷ್ಯಕುಮಾರನನ್ನು ಸೂಚಿಸುವ ಗುರುತು ಆಕಾಶದಲ್ಲಿ ಕಾಣ –ಬರುವದು. ಆಗ ಭೂಲೋಕದಲ್ಲಿರುವ ಎಲ್ಲಾ ಕುಲದವರು ಎದೆಬಡಕೊಳ್ಳುವರು, ಮತ್ತು **ಮನುಷ್ಯಕುಮಾರನು ಬಲದಿಂದಲೂ ಬಹು ಮಹಿಮೆಯಿಂದಲೂ ಆಕಾಶದ ಮೇಘಗಳ ಮೇಲೆ ಬರುವದನ್ನು ಕಾಣುವರು.** ಮತ್ತು ಆತನು ತುತೂರಿಯ ಮಹಾ ಶಬ್ದದಿಂದ ತನ್ನ ದೂತರನ್ನು ಕಳುಹಿಸುವನು. ಅವರು ಆತನು ಆದುಕೊಂಡವರನ್ನು ಆಕಾಶದ ಒಂದು ಕಡೆಯಿಂದ ಮತ್ತೊಂದು ಕಡೆಯವರೆಗೆ ನಾಲ್ಕೂ ದಿಕ್ಕುಗಳಿಂದ ಒಟ್ಟುಗೂಡಿಸುವರು." (24:29-31)

ಇದಲ್ಲದೆ ಮನುಷ್ಯಕುಮಾರನು ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿಬರುವಾಗ ತನ್ನ ಮಹಿಮೆಯ ಸಿಂಹಾಸನ – –ದಲ್ಲಿ ಕೂತುಕೊಳ್ಳುವನು; ಮತ್ತು ಎಲ್ಲಾ ದೇಶಗಳ ಜನರು ಆತನ ಮುಂದೆ ಕೂಡಿಸಲ್ಪಡುವರು. ಕುರುಬನು ಆಡುಗಳನ್ನೂ ಕುರಿಗ – –ಳನ್ನೂ ಬೇರೆಬೇರೆಮಾಡುವ ಪ್ರಕಾರ ಆತನು ಅವರನ್ನು ಬೇರೆ ಬೇರೆ ಮಾಡಿ ಕುರಿಗಳನ್ನು ತನ್ನ ಬಲಗಡೆಯಲ್ಲಿ ಆಡುಗಳನ್ನು ಎಡಗಡೆ –ಯಲ್ಲಿ ನಿಲ್ಲಿಸುವನು. ಆಗ ಅರಸನು ತನ್ನ ಬಲಗಡೆಯಲ್ಲಿರುವವರಿಗೆ, **"**ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. . ." ಆಮೇಲೆ ಆತನು ಎಡಗಡೆಯಲ್ಲಿರು – –ವವರಿಗೆ, **"**ಶಾಪಗ್ರಸ್ತರೇ ನನ್ನನ್ನು ಬಿಟ್ಟು ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ**"** ಅನ್ನುವನು. **ಇವರು ನಿತ್ಯಶಿಕ್ಷೆಗೂ ನೀತಿವಂತರೂ ನಿತ್ಯಜೀವಕ್ಕೂ ಹೋಗುವರು!"** (25:31-33, 41,46)

ಜೊತೆ ಕೇಳುಗರೇ, ಈದಿನ ನಾವು ಇಲ್ಲಗೆ ನಿಲ್ಲಿಸುತ್ತೇವೆ. ಧಾರ್ಮಿಕ ನಾಯಕರುಗಳ ಹೃದಯದ ಕಪಟತನ ಮತ್ತು ಕಠಿಣತನಕ್ಕಾಗಿ ಕರ್ತನಾದ ಯೇಸು ಅವರಿಗೆ **ಎಚ್ಚರಿಕೆ ಕೊಟ್ಟಿದ್ದನ್ನು** ನಾವು ಕೇಳಿಸಿಕೊಂಡೆವು. ತನ್ನ ಹಿಂದೆ ಬರುವಂತವರು ಪ್ರವಾದಿಗಳಂತೆ ನಟಿ – –ಸುತ್ತಾ ಅನೇಕ ಜನರನ್ನು ಮೋಸಗೊಳಿಸುತ್ತಿದ್ದವರ ಕುರಿತಾಗಿ ತನ್ನ ಶಿಷ್ಯರಿಗೆ **ಎಚ್ಚರಿಕೆ ಕೊಟ್ಟದ್ದನ್ನೂ** ಸಹ ನಾವು ಕೇಳಿಸಿಕೊಂಡೆವು. ಕೊನೆಗೆ, ಪಾಪಿಗಳ ರಕ್ಷಕನಾಗಿರುವ ಮೆಸ್ಸೀಯನ ಕುರಿತಾದ ದೇವರ ಶುಭ ಸಂದೇಶಕ್ಕೆ ವಿಧೇಯರಾಗುವದನ್ನು ತಿರಸ್ಕರಿಸಿದವರ ತೀರ್ಪು ಮಾಡುವದಕ್ಕೆ ತನ್ನ ಬಲಯುತ ದೂತರುಗಳೊಂದಿಗೆ ಪರಲೋಕದಿಂದ ಭೂಲೋಕಕ್ಕೆ ತಾನು ಒಂದು ದಿನ ಹಿಂದಿರುಗಿ ಬರುತ್ತೇನೆಂಬುದನ್ನು ಕರ್ತನಾದ ಯೇಸು **ಪ್ರಕಟಿಸಿದ್ದನ್ನು** ನಾವು ಕೇಳಿಸಿಕೊಂಡೆವು.

ಹೌದು, ಈದಿನ ನಾವು ಕೆಲವು **ಕಠಿಣವಾದ ಮಾತುಗಳನ್ನು** ಕೇಳಿಸಿಕೊಂಡೆವು, ಆದರೆ ಅವು **ಒಳ್ಳೆಯ ಮಾತುಗಳು** ಸಹ ಆಗಿದ್ದವು ಯಾಕಂದರೆ ಅವು **ಸತ್ಯವಾದ ಮಾತುಗಳಾಗಿದ್ದವು.** ನಂಬುವವರೆಲ್ಲರಿಗೆ ಅವು ಅದ್ಭುತವಾದ ಮಾತುಗಳಾಗಿದ್ದವು. ಯಾಕಂದರೆ ಕರ್ತನಾದ ಯೇಸು, **"**ನೀವು ಸತ್ಯವನ್ನು ತಿಳಿದುಕೊಳ್ಳುವಿರಿ, ಮತ್ತು **ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು!"** ಎಂದು ಹೇಳಿದ್ದಾನೆ. (ಯೋಹಾನ–8:32)

ಸ್ನೇಹಿತರೇ, ಕೇಳಿಸಿಕೊಂಡಿದಕ್ಕೆ ನಿಮಗೆ ವಂದನೆಗಳು. ಯೇಸುವನ್ನು ಕೊಲ್ಲಬೇಕೆಂದಿದ್ದವರ ಕೈಗೆ ಆತನನ್ನು ಹಿಡುಕೊಡುವ ಕ್ರಮಕ್ಕಾಗಿ ಮಹಾಯಾಜಕರ ಬಳಿಗೆ ಹೋದ ಯೇಸುವಿನ ಶಿಷ್ಯರಲ್ಲಿ ಒಬ್ಬನ ಕುರಿತಾಗಿ ಕಲಿತುಕೊಳ್ಳುವದಕ್ಕೆ ಮುಂದಿನ ಸಲ ನೀವು ನಮ್ಮೊಂದಿಗೆ ಸೇರಿಕೊಳ್ಳುವಂತೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. . . . .

ಕರ್ತನಾದ ಯೇಸು ಹೇಳಿರುವದನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ,

**"ನೀವು ಶಾಸ್ತ್ರವನ್ನಾದರೂ ದೇವರ ಶಕ್ತಿಯನ್ನಾದರೂ ತಿಳಿಯದೆ ತಪ್ಪುವವರಾಗಿದ್ದೀರಿ!" ಆದರೆ "ಸತ್ಯವು ನಿಮ್ಮನ್ನು ಬಿಡುಗಡೆ ಮಾಡುವದು!"** (ಮತ್ತಾಯ–22:29; ಯೋಹಾನ–8:32)

[ಪಾಠ 80: ಕಠಿಣವಾದ ಮತ್ತು ಸತ್ಯವಾದ ಮಾತುಗಳು] [ಸಾರಾಂಶಗಳ ಪಟ್ಟಿ] [ಪಾಠ 82: ಯೇಸು ಹಿಡಿಯಲ್ಪಟ್ಟದ್ದು]

ಪಾಠ 81

# ಕಡೆಯ ರಾತ್ರಿ ಭೋಜನ

ಮತ್ತಾಯ 26

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಿಮ್ಮಲ್ಲಿ ಹೆಚ್ಚಿನವರು ತಿಳಿದಿರುವಂತೆ, ಪರಿಶುದ್ಧವಾದ ವಾಕ್ಯಗಳ ಮೂಲಕವಾದ ನಮ್ಮ ಪ್ರಯಾಣದಲ್ಲಿ, ಮೆಸ್ಸೀಯನಾದ ಯೇಸುವಿನ ಕುರಿತಾದ ಶುಭ ಸಂದೇಶವನ್ನು ತಿಳಿಸುವಂತಹ ಪವಿತ್ರ ಪುಸ್ತಕವಾಗಿರುವ ಸುವಾರ್ತೆಯಲ್ಲಿ {ಇಂಜಿಲ್} ಪ್ರಸ್ತುತ ನಾವು ಅಧ್ಯಯನ ಮಾಡುತ್ತಿದ್ದೇವೆ. ಸೈತಾನನ ಆಳ್ವಿಕೆಯಿಂದ ಆದಾಮನ ಸಂತಾನವನ್ನು ಬಿಡುಗಡೆ ಮಾಡುವದಕ್ಕೆ ಲೋಕಕ್ಕೆ ಬಂದಂತ ಯೇಸು ಪರಿ –
–ಶುದ್ಧ ವಿಮೋಚಕನಾಗಿದ್ದಾನೆ. **ಇತರ ಎಲ್ಲಾ ಮನುಷ್ಯರಿಗಿಂತ ವಿಮೋಚಕನು ತುಂಬಾ ವ್ಯತ್ಯಾಸವುಳ್ಳವನಾಗಿದ್ದನು; ಈತನು ಆದಿಯಲ್ಲಿ ದೇವರ ಬಳಿಯಲ್ಲಿದ್ದ ವಾಕ್ಯವಾಗಿದ್ದು ಭೂಮಿಯ ಮೇಲೆ ಒಬ್ಬ ಮನುಷ್ಯನ ಹಾಗೆ ಕಾಣಿಸಿಕೊಂಡನು.** ಮನುಷ್ಯನಾದ ಯೇಸು ತನ್ನ **ಜನನ –ದಲ್ಲಿ** ಅದ್ವಿತೀಯನಾಗಿದ್ದನು, ಯಾಕಂದರೆ ಈತನು ದೇವರಾತ್ಮನ ಬಲದಿಂದ ಒಬ್ಬ ಕನ್ಯೆಯಲ್ಲಿ ಹುಟ್ಟಿದವನಾಗಿದ್ದನು. ಯೇಸು ತನ್ನ **ಗುಣಲಕ್ಷಣದಲ್ಲಿಯೂ** ಸಹ ಅದ್ವಿತೀಯನಾಗಿದ್ದನು, ಯಾಕಂದರೆ ಆತನು ಒಂದು ಪರಿಶುದ್ಧ ಸ್ವಭಾವದೊಂದಿಗೆ ಹುಟ್ಟಿದ್ದನು; ಆತನು ಎಂದಿಗೂ ಪಾಪ ಮಾಡಲಿಲ್ಲ. ಆತನ **ಕೆಲಸಗಳೂ** ಸಹ ಅದ್ವಿತೀಯವಾದವು; ಆತನು ಮಾಡಿದಂತ ಅದ್ಭುತಗಳನ್ನು ಯಾರೊಬ್ಬರೂ ಎಂದಿಗೂ ಮಾಡಲಿಲ್ಲ. ಕರ್ತನಾದ ಯೇಸು ಸೈತಾನ ಮತ್ತು ಅವನ ದುರಾತ್ಮಗಳ ಮೇಲೆ, ಗಾಳಿ ಮತ್ತು ಸಮುದ್ರ ಹಾಗೂ ರೋಗ ಮತ್ತು ಮರಣದ ಮೇಲೆ ಅಧಿಕಾರವನ್ನು ಹೊಂದಿದ್ದನು. "ಇವನ ಹಾಗೆ ಯಾರೂ ಎಂದೂ ಮಾತಾಡಿದ್ದಿಲ್ಲ"(ಯೋಹಾನ–7:46) ಎಂದು ಆತನ ವೈರಿಗಳು ಹೇಳಿದಾಗ್ಯೂ ಈತನ **ಬೋಧನೆಗಳೂ** ಸಹ ಸಾಟಿಯಿಲ್ಲದ್ದಾಗಿದ್ದವು.

ಹೌದು, ಯೇಸು ಕ್ರಿಸ್ತನು ತನ್ನ ಜನನ, ಗುಣಲಕ್ಷಣ, ಕೆಲಸಗಳು, ಮತ್ತು ತನ್ನ ಮಾತುಗಳಲ್ಲಿ ಅದ್ವಿತೀಯನಾಗಿದ್ದನು. ಆದರೆ ಅತನು ಪರ –ಲೋಕದಿಂದ ಬಂದ ರಕ್ಷಕನಾಗಿದ್ದಾನೆಂದು ಪ್ರತಿಯೊಬ್ಬರೂ ಗುರುತಿಸುವದಕ್ಕೆ ಅವು ಕಾರಣವಾಗಲಿಲ್ಲ. ಆದಾಮನ ಸಂತಾದವರಲ್ಲಿ ಹೆಚ್ಚಿನವರು ನಿಜವಾಗಿಯೂ ಯೇಸು ಯಾರೆಂಬುದನ್ನು ಗ್ರಹಿಸಿಕೊಳ್ಳಲಿಲ್ಲ. ಯೇಸು ಒಬ್ಬ ಪ್ರವಾದಿ ಎಂಬುದಾಗಿ ಅವರು ಅಭಿಪ್ರಾಯ –ಪಟ್ಟಿದ್ದರು, ಆದರೆ ದೇವರು ತಾನೇ ಸ್ವತ: ಅವರನ್ನು ಸಂಧಿಸುವದಕ್ಕೆ ಬಂದಿದ್ದಾನೆಂಬುದನ್ನು ಅವರು ಗ್ರಹಿಸಿಕೊಳ್ಳಲಿಲ್ಲ! ಯೆಹೂದ್ಯ ಧಾರ್ಮಿಕ ನಾಯಕರುಗಳಂತೆ, ಅವರು ಯೇಸು ಯಾರೆಂಬುದನ್ನು ಗ್ರಹಿಸಿಕೊಳ್ಳುವದರಲ್ಲಿ ಸೋತುಹೋಗಿರುವದು ಮಾತ್ರವಲ್ಲ, ಆದರೆ ಆತನನ್ನು ಸಾಯಿಸುವದಕ್ಕೂ ಒಟ್ಟಾಗಿ ಸಂಚು ಮಾಡಿದರು! ನಮ್ಮ ಹಿಂದಿನ ಪಾಠದಲ್ಲಿ, ಮಹಾಯಾಜಕರ ಮತ್ತು ಶಾಸ್ತ್ರಿಗಳ ಕಪಟತನ ಮತ್ತು ದುಷ್ಟತನಕ್ಕೆ ಯೇಸು ಅವರನ್ನು ಹೇಗೆ ಗದರಿಸಿದನೆಂಬುದನ್ನು ನಾವು ಕೇಳಿಸಿಕೊಂಡೆವು. ಆದರೆ ಯೇಸುವಿನ ಮಾತುಗಳು ಅವರು ಪಶ್ಚಾತ್ತಾಪಪಡುವದಕ್ಕೆ ಕಾರಣವಾಗಲೇ ಇಲ್ಲ. ನಿಜವಾಗಿಯೂ, ಧಾರ್ಮಿಕ ನಾಯಕರುಗಳ ಮನಸ್ಸನ್ನು ಆವರಿಸಿಕೊಂಡಿದ್ದ ಒಂದೇ ಆಲೋಚನೆಯೆಂದರೆ ಅದು: **ಯೇಸು ಸಾಯಲೇಬೇಕು!** ಎಂಬದು.

ತಾನು ಯೆರೂಸಲೇಮಿನಲ್ಲಿ ಸಾಯುವದಕ್ಕೆ ಹೋಗುತ್ತಿದ್ದೇನೆಂಬುದು ಮತ್ತು ಧಾರ್ಮಿಕ ನಾಯಕರುಗಳೇ ತನಗೆ ಮರಣ ದಂಡನೆ ವಿಧಿಸುತ್ತಾರೆಂಬುದು ಕರ್ತನಾದ ಯೇಸುವಿಗೆ ತಿಳಿದಿತ್ತು. ಹಾಗಾಗಿ, ಶಾಸ್ತ್ರಿಗಳು ಮತ್ತು ಮಹಾಯಾಜಕರು ತನ್ನನ್ನು ಸಾಯುವ ದಂಡನೆ –ಗೊಳಪಡಿಸಿತ್ತಾರೆಂದು ಯೇಸು ತನ್ನ ಶಿಷ್ಯರಿಗೆ ತಿಳಿಸಿದ್ದನ್ನು ನಾವು ನೋಡಿದೆವು. ಅವರು ಆತನನ್ನು ರೋಮನ್ನರ ಕಡೆಗೆ ತಿರುಗಿಸು –
–ತ್ತಾರೆ, ಆದ್ದರಿಂದ ಅವರು ತನ್ನನ್ನು ಹಾಸ್ಯಮಾಡಿ, ತನ್ನ ಮೇಲೆ ಉಗುಳಿ, ಹೊಡೆದು, ಮೊಳೆಗಳಿಂದ ತನ್ನನ್ನು ಶಿಲುಬೆಗೆ ಜಡಿಯು –
–ತ್ತಾರೆ. ಆದರೆ ಮೂರು ದಿವಸಗಳ ನಂತರ ತಾನು ಮತ್ತೆ ಎದ್ದು ಬರುತ್ತೇನೆ! ಹೀಗೆ ಯೇಸು ತನ್ನ ಶಿಲುಬೆಯ ಮರಣವನ್ನೂ ಮತ್ತು ಸಮಾಧಿಯಿಂದ ತನ್ನ ಪುನರುತ್ಥಾನವನ್ನು ಮುಂದಾಗಿ ತಿಳಿಸಿದ್ದನು. ಯೇಸು ತಾನು **ಹೇಗೆ** ಸಾಯುತ್ತೇನೆ ಮತ್ತು **ಎಲ್ಲಿ** ಸಾಯುತ್ತೇನೆ ಎನ್ನುವದನ್ನು ಮಾತ್ರ ಪ್ರಕಟಿಸಲಿಲ್ಲ, ಆದರೆ ಈದಿವಸ ನಮ್ಮ ಮುಂದಿರುವ ಅಧ್ಯಾಯದಲ್ಲಿ, ಯೇಸು ತಾನು **ಯಾವಾಗ** ಸಾಯುತ್ತೇನೆ ಎನ್ನುವದನ್ನೂ ಸಹ ಪ್ರಕಟಿಸಿರುವದನ್ನು ನಾವು ನೋಡುತ್ತೇವೆ!

ಈಗ ಮತ್ತಾಯನ ಸುವಾರ್ತೆ, ಇಪ್ಪತ್ತಾರನೆಯ ಅಧ್ಯಾಯವನ್ನು ಮುಂದುವರಿಸೋಣ, ಮತ್ತು ಯೇಸು ತನ್ನ ಶಿಲುಬೆಯ ಮರಣಕ್ಕೆ ಹೇಗೆ ಸಿದ್ಧನಾದನೆಂಬುದನ್ನು ಕೇಳಿಸಿಕೊಳ್ಳೋಣ. ದೇವರ ವಾಕ್ಯ ಹೀಗೆ ಹೇಳುತ್ತದೆ: ಯೇಸು ಈ ಮಾತುಗಳನ್ನೆಲ್ಲಾ ಆಡಿ ಮುಗಿಸಿದ ಮೇಲೆ ತನ್ನ ಶಿಷ್ಯರಿಗೆ, "ಎರಡು ದಿವಸಗಳಾದ ಮೇಲೆ ಪಸ್ಕಹಬ್ಬ ಬರುತ್ತದೆಂದು ಬಲ್ಲಿರಿ; ಆಗ ಮನುಷ್ಯಕುಮಾರನನ್ನು ಶಿಲುಬೆ ಹಾಕುವ –ದಕ್ಕೆ ಒಪ್ಪಿಸಿಕೊಡೋಣವಾಗುವದು" ಎಂದು ಹೇಳಿದನು. (ಮತ್ತಾಯ–26:1,2)

ಯೇಸು ತನ್ನ ಶಿಷ್ಯರಿಗೆ ಏನು ಹೇಳಿದನೆಂಬುದನ್ನು ನೀವು ಕೇಳಿಸಿಕೊಂಡಿರಾ? **ಪಸ್ಕಹಬ್ಬದ ದಿನದಂದು** ಆದಾಮನ ಸಂತಾನದವರು ತನ್ನನ್ನು ಶಿಲುಬೆಗೆ ಹಾಕುತ್ತಾರೆ ಎಂದು ಆತನು ತನ್ನ ಶಿಷ್ಯರಿಗೆ ಹೇಳಿದನು. ಇದು ತುಂಬಾ ಪ್ರಾಮುಖ್ಯವಾದುದು. ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಪಸ್ಕಹಬ್ಬದ ದಿನದ ಕುರಿತು ನಾವು ಕಲಿತಿದ್ದೇವೆ. ಯೆಹೂದ್ಯ ಕ್ಯಾಲೆಂಡರ್‌ನಲ್ಲಿನ ಮೊದಲ ತಿಂಗಳಿನಲ್ಲಿ ಅಂದರೆ ಮಾರ್ಚ್ ಮತ್ತು ಏಪ್ರಿಲ್ (ಈಸ್ಟರ್) ನಲ್ಲಿ ಪಸ್ಕಹಬ್ಬವು ನಡೆಯುತ್ತದೆ. ಮೋಶೆಯ ಕಾಲದಲ್ಲಿ ಇಸ್ರಾಯೇಲ್ಯರು ಕ್ರೂರ ಅರಸನಾದ ಫರೋಹನ ಕೆಳಗೆ ಗುಲಾಮರಾಗಿದ್ದಾಗ ಸಂಭವಿಸಿದ್ದನ್ನು ಯೆಹೂದ್ಯರು ಪ್ರತಿವರ್ಷವೂ, ಆ ಹಬ್ಬದಲ್ಲಿ, ನೆನಪು ಮಾಡಿಕೊಳ್ಳುತ್ತಾರೆ. ನಂತರ ಮತ್ತೆ ದೇವರು ತನ್ನ ನೀತಿಯ ನ್ಯಾಯತೀರ್ಪಿನಲ್ಲಿ ಮತ್ತು ದೊಡ್ಡ ಯೋಜನೆಯಲ್ಲಿ, ಐಗುಪ್ತದವರ ಪ್ರತಿಯೊಂದು ಚೊಚ್ಚಲು ಗಂಡುಮಕ್ಕಳನ್ನು ಮರಣಶಿಕ್ಷೆಗೊಳಪಡಿಸಿದನು. ಆದರೆ ದೇವರು ತನಗೆ ವಿಧೇಯರಾಗಿ ತನ್ನನ್ನು ನಂಬುವವರಿಗಾಗಿ ಬಿಡುಗಡೆಯ ಒಂದು ಮಾರ್ಗವನ್ನು ಸಹ ಒದಗಿಸಿದನು. ನಿಷ್ಕಳಂಕ ಕುರಿಯನ್ನು ಪ್ರತಿಯೊಂದು ಇಸ್ರಾಯೇಲ್ ಕುಟುಂಬವು ಯಜ್ಞವರ್ಪಿಸಿ ಅದರ ರಕ್ತವನ್ನು ಅವರ ಮನೆಗಳ ಬಾಗಲುಗಳ ಮೇಲೆ ಹಚ್ಚಬೇಕು ಎಂದು ದೇವರು ಆಜ್ಞಾಪಿಸಿದ್ದನು. ದೇವರು ಅವರಿಗೆ ವಾಗ್ದಾನಮಾಡಿ ಹೇಳಿದ್ದೇನೆಂದರೆ, **"ನಾನು ರಕ್ತವನ್ನು ನೋಡಿದಾಗ ನಿಮ್ಮನ್ನು ದಾಟಿ ಹೋಗುತ್ತೇನೆ!"** (ವಿಮೋ–12:13) ದೇವರು ತಮಗೆ ಆಜ್ಞಾಪಿಸಿ– –ದಂತೆಯೇ ಇಸ್ರಾಯೇಲ್ಯರು ಮಾಡಿದರು, ಇದರ ಪರಿಣಾಮವಾಗಿ, ದೇವರು ಅವರ ಚೊಚ್ಚಲು ಗಂಡುಮಕ್ಕಳನ್ನು ಮರಣದಿಂದ ಬಿಡುಗಡೆ ಮಾಡಿದನು. **ಒಂದು ಕುರಿಮರಿಯ ರಕ್ತದಿಂದ** ದೇವರು ಅವರನ್ನು ವಿಮೋಚಿಸಿದನು.

ಸಾವಿರದ ಐನೂರು ವರ್ಷಗಳವರಗೆ, ಯೆಹೂದ್ಯರು ಪ್ರತಿವರ್ಷ ಪಸ್ಕ ಹಬ್ಬದಂದು ಕುರಿಮರಿಗಳ ಯಜ್ಞವನ್ನು ಸಮರ್ಪಿಸುತ್ತಿದ್ದರು, ಐಗುಪ್ತ ದೇಶದ ಮೇಲೆ ಬಿದ್ದಂತ ಮರಣದ ಉಪದ್ರವದಿಂದ ದೇವರು ತಮ್ಮನ್ನು ಹೇಗೆ ರಕ್ಷಿಸಿದನೆಂಬುದನ್ನು ನೆನಪು ಮಾಡಿಕೊಳ್ಳುವ ಕ್ರಮಕ್ಕಾಗಿ ಅವರು ಇದನ್ನು ಮಾಡುತ್ತಿದ್ದರು. ಆದಾಗ್ಯೂ, ಅವರು ಸುಮ್ಮನೆ ಹಿಂದಕ್ಕೆ ತಿರುಗಿ ನೋಡಿ ಸಂಭವಿಸಿದ್ದನ್ನು ನೆನಪು ಮಾಡಿ –ಕೊಳ್ಳುವದನ್ನು ದೇವರು ಇಷ್ಟಪಡಲಿಲ್ಲ. ಆ ಯಜ್ಞದ ಕುರಿಮರಿಗಳ ಸಾಧನದಿಂದ, ಅವರು ಮುಂದಕ್ಕೆ ನೋಡಿ, ಶಿಲುಬೆಯ ಮೇಲೆ ಮೆಸ್ಸೀಯನು ರಕ್ತವನ್ನು ಸುರಿಸುವ ದಿನವನ್ನು ನಿರೀಕ್ಷಿಸುವದಕ್ಕೆ ದೇವರು ಇಷ್ಟಪಟ್ಟನು. ಮೆಸ್ಸೀಯನು ಸುರಿಸಲಿಕ್ಕಿರುವ ರಕ್ತವು ಇತರ ಯಾವುದೇ ಉಪದ್ರವಕ್ಕಿಂತಲೂ ಕೆಟ್ಟದಾದ ಉಪದ್ರವದಿಂದ ಅಂದರೆ ನರಕದ ನಿತ್ಯವಾದ ಬೆಂಕಿಯಿಂದ ಪಾಪಿಗಳನ್ನು ರಕ್ಷಿಸುವಂತ – –ದ್ದಾಗಿದೆ! ಶಿಲುಬೆಯ ಮೇಲಿನ ವಿಮೋಚಕನ ಮರಣವು, ದೇವರ ನೀತಿಯ ನಿಯಮಕ್ಕೆ ಅಗ್ಯವಿರುವಂತ ಸಂಪೂರ್ಣವಾದ ಮತ್ತು ಕೊನೆಯ ಯಜ್ಞವಾಗಿದೆ. ಪಸ್ಕಹಬ್ಬದ ದಿನದಂದು ವಿಮೋಚಕನು ತನ್ನ ರಕ್ತವನ್ನು ಶಿಲುಬೆಯ ಮೇಲೆ ಸುರಿಸುವಂತೆ ಮತ್ತು ಈ ಪ್ರಕಾರ **ಯಜ್ಞದ ಕುರಿಮರಿಯ ಗುರುತನ್ನು ನೆರವೇರಿಸುವಂತೆ** ದೇವರು ತನ್ನ ಜ್ಞಾನದಲ್ಲಿ ಯೋಜನೆ ಮಾಡಿಕೊಂಡಿದ್ದನು. ಹೀಗೆ, ದೇವರು ತನ್ನ ನೀತಿಯ ನ್ಯಾಯ ತೀರ್ಪಿನಿಂದ ಪಾಪಿಗಳನ್ನು ರಕ್ಷಿಸುವದಕ್ಕೆ ರಚನೆ ಮಾಡಿಕೊಂಡಂತ ಯೋಜನೆಯನ್ನು ವಿಮೋಚಕನಾದ ಯೇಸು ಮಾಡಿ ಮುಗಿಸಿದನು.

ಈಗ ಸುವಾರ್ತೆಗೆ ಹಿಂದಿರುಗೋಣ, ನಾವು ಈಗಾಗಲೇ ಓದಿದ ವಚನದೊಂದಿಗೆ ಪ್ರಾರಂಭಿಸೋಣ.

ಯೇಸು ಈ ಮಾತುಗಳನ್ನೆಲ್ಲಾ ಆಡಿ ಮುಗಿಸಿದ ಮೇಲೆ ತನ್ನ ಶಿಷ್ಯರಿಗೆ, **"ಎರಡು ದಿವಸಗಳಾದ ಮೇಲೆ ಪಸ್ಕಹಬ್ಬ ಬರುತ್ತದೆಂದು ಬಲ್ಲಿರಿ; ಆಗ ಮನುಷ್ಯಕುಮಾರನನ್ನು ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿಕೊಡೋಣವಾಗುವದು"** ಎಂದು ಹೇಳಿದನು. ಆ ಕಾಲದಲ್ಲಿ ಮಹಾಯಾಜ – –ಕರೂ ಪ್ರಜೆಯ ಹಿರಿಯರೂ ಕಾಯಫನೆಂಬ ಮಹಾಯಾಜಕನ ಮತಕ್ಕೆ ಕೂಡಿಬಂದು ಯೇಸುವನ್ನು ಉಪಾಯದಿಂದ ಹಿಡಿದು ಕೊಲ್ಲ –ಬೇಕೆಂಬುದಾಗಿ ಆಲೋಚನೆ ಮಾಡಿಕೊಂಡರು. ಆದರೂ ಹಬ್ಬದಲ್ಲಿ ಹಿಡಿಯಬಾರದು, ನಮ್ಮ ಜನರಲ್ಲಿ ಗದ್ದಲವಾದೀತು ಎಂದು ಮಾತಾಡಿಕೊಂಡರು. . . .ಆಮೇಲೆ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ ಇಸ್ಕರಿಯೋತ ಯೂದನೆಂಬವನು ಮಹಾಯಾಜಕರ ಬಳಿಗೆ ಹೋಗಿ, "ನಾನು ಅವನನ್ನು ನಿಮಗೆ ಹಿಡುಕೊಟ್ಟರೆ ನನಗೆ ಏನು ಕೊಡುತ್ತೀರಿ?" ಅಂದನು. ಅವರು ಅವನಿಗೆ ಮೂವತ್ತು ರೂಪಾಯಿ ತೂಗಿ ಕೊಟ್ಟರು. ಅಂದಿನಿಂದ ಅವನು ಆತನನ್ನು ಹಿಡುಕೊಡುವದಕ್ಕೆ ಅನುಕೂಲವಾದ ಸಮಯವನ್ನು ನೋಡುತ್ತಿದ್ದನು. (ಮತ್ತಾಯ–26:1-5, 14-16)

ಹುಳಿಯಿಲ್ಲದ ರೊಟ್ಟಿಯ ಹಬ್ಬದ ಮೊದಲನೆಯ ದಿವಸ ಅಂದರೆ ಪಸ್ಕದ ಕುರಿಮರಿಯನ್ನು ಕೊಯ್ಯುವ ದಿವಸ ಆತನ ಶಿಷ್ಯರು, "ನೀನು ಪಸ್ಕದ ಊಟವನ್ನು ಮಾಡುವಂತೆ ನಾವು ಎಲ್ಲಿ ಹೋಗಿ ಸಿದ್ಧಮಾಡಬೇಕೆನ್ನುತ್ತೀ" ಎಂದು ಆತನನ್ನು ಕೇಳಲು ಆತನು ತನ್ನ ಶಿಷ್ಯರಲ್ಲಿ ಇಬ್ಬರನ್ನು ಕರೆದು, "ನೀವು ಪಟ್ಟಣದೊಳಕ್ಕೆ ಹೋಗಿರಿ; ಅಲ್ಲಿ ಒಬ್ಬ ಮನುಷ್ಯನು ತುಂಬಿದ ಕೊಡವನ್ನು ಹೊತ್ತುಕೊಂಡು ನಿಮ್ಮೆದುರಿಗೆ

ಬರುವನು; ನೀವು ಅವನ ಹಿಂದೆ ಹೋಗಿರಿ; ಅವನು ಯಾವ ಮನೆಗೆ ಹೋಗುವನೋ ಆ ಮನೆಯ ಯಜಮಾನನಿಗೆ, "ನಮ್ಮ ಬೋಧಕನು ತನ್ನ ಶಿಷ್ಯರ ಸಂಗಡ ಪಸ್ಕದ ಊಟವನ್ನು ಮಾಡುವದಕ್ಕೆ ತನಗೆ ಭೋಜನಶಾಲೆ ಎಲ್ಲಿ ಎಂದು ಕೇಳುತ್ತಾನೆ ಎಂಬದಾಗಿ ಹೇಳಿರಿ. ಅವನು ತಕ್ಕ ಸಾಮಾನೆಲ್ಲಾ ಸಿದ್ಧವಾಗಿ ಇಟ್ಟಿರುವ ಮೇಲಂತಸ್ತಿನ ದೊಡ್ಡ ಕೊಠಡಿಯನ್ನು ನಿಮಗೆ ತೋರಿಸುವನು; ಅಲ್ಲಿ ನಮಗೆ ಸಿದ್ಧಮಾಡಿರಿ" ಎಂದು ಹೇಳಿ ಅವರನ್ನು ಕಳುಹಿಸಿ ಕೊಟ್ಟನು. ಶಿಷ್ಯರು ಹೊರಟು ಪಟ್ಟಣಕ್ಕೆ ಹೋಗಿ ಆತನು ತಮಗೆ ಹೇಳಿ –ದಂತೆ ಕಂಡು ಪಸ್ಕಕ್ಕೆ ಸೌರಿಸಿದರು. (ಮಾರ್ಕ–14:12-16)

**ಗಳಿಗೆ ಬಂದಾಗ** ಆತನು ತನ್ನ ಹನ್ನೆರಡು ಮಂದಿ ಅಪೊಸ್ತಲರ ಸಂಡ ಊಟಕ್ಕೆ ಕೂತುಕೊಂಡನು. ಆಗ ಆತನು ಅವರಿಗೆ, **"ನಾನು ಶ್ರಮೆ ಅನುಭವಿಸುವದಕ್ಕಿಂತ ಮುಂಚೆ ನಿಮ್ಮ ಸಂಗಡ ಈ ಪಸ್ಕದ ಊಟವನ್ನು ಮಾಡುವದಕ್ಕೆ ಕುತೂಹಲದಿಂದ ಅಪೇಕ್ಷಿಸಿದ್ದೇನೆ.** ನಾನು ನಿಮಗೆ ಹೇಳುತ್ತೇನೆ, ಇದು ದೇವರ ರಾಜ್ಯದಲ್ಲಿ ನೆರವೇರುವ ತನಕ ನಾನು ಇನ್ನು ಮೇಲೆ ಪಸ್ಕದ ಊಟವನ್ನು ಮಾಡುವದೇ ಇಲ್ಲ ಎಂದು ಹೇಳಿದನು. (ಲೂಕ–22:14-16). ಅವರು ಕೂತುಕೊಂಡು ಊಟಮಾಡುತ್ತಿರುವಾಗ ಯೇಸು, "ನಿಮ್ಮಲ್ಲಿ ಒಬ್ಬನು ನನ್ನನ್ನು ಹಿಡುಕೊಡುವನು, ಅವನು ನನ್ನ ಸಂಗಡ ಊಟಮಾಡುವವನೇ ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ" ಅಂದನು. ಆಗ ಅವರು ದು:ಖಿತರಾಗಿ, "ನಾನಲ್ಲವಲ್ಲಾ, ನಾನಲ್ಲವಲ್ಲಾ" ಎಂದು ಒಬ್ಬೊಬ್ಬರೂ ಆತನನ್ನು ಕೇಳತೊಡಗಿದರು. ಆತನು ಅವರಿಗೆ, "ಅವನು ನನ್ನ ಹನ್ನೆರಡು ಮಂದಿಯಲ್ಲಿ ಒಬ್ಬನು, ನನ್ನ ಸಂಗಡ ಬಟ್ಟಲಲ್ಲಿ ಕೈ ಅದ್ದುವವನೇ. ಮನುಷ್ಯಕುಮಾರನು ಹೊರಟು ಹೋಗುತ್ತಾನೆ ಸರಿ; ಹಾಗೆ ಆತನ ವಿಷಯವಾಗಿ ಬರೆದದೆಯಲ್ಲಾ. ಆದರೆ ಯಾವನು ಮನುಷ್ಯಕುಮಾರನನ್ನು ಹಿಡುಕೊಡುವನೋ ಅವನ ಗತಿಯನ್ನು ಏನು ಹೇಳಲಿ, ಆ ಮನುಷ್ಯನು ಹುಟ್ಟದಿದ್ದರೆ ಅವನಿಗೆ ಒಳ್ಳೇದಾಗಿತ್ತು" ಎಂದು ಹೇಳಿದನು. (ಮಾರ್ಕ–14:18-21). ಆಗ ಆತನನ್ನು ಹಿಡುಕೊಡಬೇಕೆಂದಿದ್ದ ಯೂದನು, "ಗುರುವೇ, ನಾನಲ್ಲವಲ್ಲ?" ಅನ್ನಲಾಗಿ ಯೇಸು ಅವನಿಗೆ, "ನೀನೇ ಹೇಳಿದ್ದೀ" ಎಂದು ಹೇಳಿದನು. (ಮತ್ತಾಯ–26:25). ಅವನು ಆ ತುತ್ತನ್ನು ತೆಗೆದುಕೊಂಡ ಕೂಡಲೇ ಹೊರಗೆ ಹೋದನು ಆಗ ರಾತ್ರಿಯಾಗಿತ್ತು. (ಯೋಹಾನ–13:30). ಅವರು ಊಟ ಮಾಡುತ್ತಿರುವಾಗ ಆತನು **ರೊಟ್ಟಿಯನ್ನು** ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು ಅವರಿಗೆ ಕೊಟ್ಟು, "ತಕ್ಕೊಳ್ಳಿರಿ; ಇದು ನನ್ನ ದೇಹ" ಅಂದನು. ಆ ಮೇಲೆ **ಪಾತ್ರೆಯನ್ನು** ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟನು; ಅವರೆಲ್ಲರೂ ಅದರಲ್ಲಿ ಕುಡಿದರು. ಮತ್ತು ಆತನು ಅವರಿಗೆ, "ಇದು ನನ್ನ ರಕ್ತ, ಇದು ಒಡಂಬಡಿಕೆಯ ರಕ್ತ; ಇದು ಬಹು ಜನರಿ –ಗೋಸ್ಕರ ಸುರಿಸಲ್ಪಡುವ ರಕ್ತ" ಅಂದನು. (ಮಾರ್ಕ–14:22-24)

ಪಾಪವನ್ನು ಅಳಿಸಿ ಹಾಕುವಂತ ಒಂದು ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕಿಂತ ಮುಂಚೆ ಯೇಸು ತನ್ನ ಶಿಷ್ಯರೊಂದಿಗೆ ಮಾಡಿದ ಕಡೇ ಭೋಜನದ ಕುರಿತು ಸುವಾರ್ತೆಯಲ್ಲಿ ಬರೆದಿರುವದು ಇದೇ. ಶಿಷ್ಯರಲ್ಲಿ ಒಬ್ಬನು ತನ್ನನ್ನು ಹಿಡುಕೊಡುತ್ತಾನೆಂಬುದನ್ನು ಯೇಸು ತನ್ನ ಶಿಷ್ಯರಿಗೆ ತಿಳಿಯುವಂತೆ ಮಾಡಿದನು. ಅವನು ಇಸ್ಕರಿಯೋತ ಯೂದನಾಗಿದ್ದನು. ಮನುಷ್ಯರ ದೃಷ್ಟಿಯಲ್ಲಿ, ಯೂದನು ಒಬ್ಬ ನಂಬಿಗಸ್ತ ಶಿಷ್ಯ, ಆದರೆ ಅವನು ತನ್ನ ಹೃದಯದಲ್ಲಿ ಹಣದ ಕುರಿತಾಗಿ ಮತ್ತು ಲೋಕದ ಸಂಗತಿಗಳ ಕುರಿತಾಗಿ ಮಾತ್ರ ಚಿಂತಿಸು –ವವನಾಗಿದ್ದನು. ಅದಕ್ಕಾಗಿಯೇ ಅವನು ಮಹಾಯಾಜಕರುಗಳ ಬಳಿಗೆ ಹೋಗಿ ಅವರಿಗೆ, "ನಾನು ಆತನನ್ನು ನಿಮಗೆ ಹಿಡುಕೊಟ್ಟರೆ ನೀವು ನನಗೆ ಏನು ಕೊಡುತ್ತೀರಿ?" ಎಂದು ಕೇಳಿದನು. ಹಾಗಾಗಿ ಅವರು ಮೂವತ್ತು ಬೆಳ್ಳಿಯ ನಾಣ್ಯಗಳನ್ನು ಎಣಿಸಿ ಅವನಿಗೆ ಕೊಟ್ಟರು. ಮೆಸ್ಸೀಯನು ಮೂವತ್ತು ಬೆಳ್ಳಿಯ ನಾಣ್ಯಗಳಿಗೆ ಹಿಡುಕೊಡಲ್ಪಡುತ್ತಾನೆ ಎಂಬುದಾಗಿ ಸಾವಿರಾರು ವರ್ಷಗಳ ಮೊದಲು ಪ್ರವಾ –ದಿಯಾದ ಜೆಕರ್ಯನು ಪ್ರವಾದಿಸಿದ್ದು ನೆರವೇರುವಂತೆ ಇದಾಯಿತು. (ಜೆಕರ್ಯ–11:12,13 ನ್ನು ನೋಡಿರಿ).

ಹೀಗಿದ್ದರೂ, ನಾವು ಈಗತಾನೇ ಓದಿದ್ದರಲ್ಲಿರುವ ಬಹು ಮುಖ್ಯವಾದ ಸಂಗತಿಯೆಂದರೆ, ಅದು ಯೇಸು ತನ್ನ ಶಿಷ್ಯರೊಂದಿಗೆ ರೊಟ್ಟಿ –ಯನ್ನೂ ಮತ್ತು ದ್ರಾಕ್ಷಾರಸವನ್ನೂ ಹಂಚಿಕೊಂಡಾಗ ಹೇಳಿದ್ದು. ಆತನು ಅವರಿಗೆ ಏನು ಹೇಳಿದನೆಂಬುದನ್ನು ನೀವು ಕೇಳಿದ್ದೀರಾ? ಇದನ್ನು ಮತ್ತೆ ಓದಿಕೋಳ್ಳೋಣ:

ಅವರು ಊಟ ಮಾಡುತ್ತಿರುವಾಗ ಆತನು **ರೊಟ್ಟಿಯನ್ನು** ತೆಗೆದುಕೊಂಡು ದೇವರ ಸ್ತೋತ್ರ ಮಾಡಿ ಮುರಿದು ಅವರಿಗೆ ಕೊಟ್ಟು, "ತಕ್ಕೊಳ್ಳಿರಿ; ಇದು ನನ್ನ **ದೇಹ"** ಅಂದನು. ಆ ಮೇಲೆ **ಪಾತ್ರೆಯನ್ನು** ತೆಗೆದುಕೊಂಡು ಸ್ತೋತ್ರಮಾಡಿ ಅವರಿಗೆ ಕೊಟ್ಟನು; ಅವರೆಲ್ಲರೂ ಅದರಲ್ಲಿ ಕುಡಿದರು. ಮತ್ತು ಆತನು ಅವರಿಗೆ, "ಇದು ನನ್ನ ರಕ್ತ, ಇದು ಒಡಂಬಡಿಕೆಯ **ರಕ್ತ;** ಇದು ಬಹು ಜನರಿಗೋಸ್ಕರ ಸುರಿಸಲ್ಪ –ಡುವ ರಕ್ತ" ಅಂದನು. (ಮಾರ್ಕ–14:22-24)

ಈ ಪ್ರಕಾರ ಯೇಸು ತನ್ನ ಶಿಷ್ಯರ ಮುಂದೆ ಹೇಗೆ **ಎರಡು ಗುರುತುಗಳನ್ನು** ಇಟ್ಟನೆಂಬುದನ್ನು ನಾವು ನೋಡಿದೆವು: **ರೊಟ್ಟಿ**ಯ ಗುರುತು ಮತ್ತು **ಪಾತ್ರೆ**ಯ ಗುರುತು. ಯೇಸು ಮುರಿದು ತನ್ನ ಶಿಷ್ಯರಿಗೆ ಕೊಟ್ಟಂತಹ ರೊಟ್ಟಿಯು ಆತನು ಯಜ್ಞದ ಹಾಗೆ ಕೊಡಲಿಕ್ಕಿರುವ ಆತನ ದೇಹವನ್ನು **ಸೂಚಿಸುವಂತದ್ದಾಗಿತ್ತು.** ದ್ರಾಕ್ಷಾರಸವಿದ್ದ ಪಾತ್ರೆಯು, ಆದಾಮನ ಸಂತಾನದವರು ಎಂದೆಂದಿಗೂ ದೇವರ ಸನ್ನಿಧಿಯಲ್ಲಿ

ಜೀವಿಸುವದಕ್ಕೆ ಶಕ್ತರಾಗುವಂತೆ ಅವರಿಗಾಗಿ ಪಾಪದ ಸಾಲವನ್ನು ತೀರಿಸುವದಕ್ಕೆ ವಿಮೋಚಕನಾದ ಯೇಸುವು ಸುರಿಸುವ ರಕ್ತವನ್ನು ಸೂಚಿಸುತ್ತದೆ.

ಈ ಪ್ರಕಾರ, **ರೊಟ್ಟಿಯ ಮತ್ತು ಪಾತ್ರೆಯ ಗುರುತುಗಳ ಮೂಲಕವಾಗಿ,** ತಾನು ಈ ಲೋಕಕ್ಕೆ ಬಂದ ಕಾರಣವು ತನ್ನ ಜೀವವನ್ನು ಕೊಡು–ವದಕ್ಕೆ ಅಂದರೆ ಪಾಪಿಗಳಿಗಾಗಿ ತನ್ನ ರಕ್ತವನ್ನು ಮತ್ತು ತನ್ನ ದೇಹವನ್ನು ಕೊಡುವದಕ್ಕೆ ಎನ್ನುವದನ್ನು ಯೇಸು ತನ್ನ ಶಿಷ್ಯರಿಗೆ ಬೋಧಿಸಿದನು. ಭೂಮಿಯ ಮೇಲಿರುವ ಪ್ರತಿಯೊಬ್ಬರೂ ಜೀವಂತವಾಗಿರುವದಕ್ಕೆ ಹೇಗೆ ಆಹಾರ ಮತ್ತು ನೀರನ್ನು **ತೆಗೆದುಕೊಳ್ಳು––ತ್ತಾರೋ,** ಹಾಗೆಯೇ, ಪರಲೋಕದಲ್ಲಿ ದೇವರೊಂದಿಗೆ ಎಂದೆಂದಿಗೂ ಜೀವಿಸುವದಕ್ಕೆ ಅಪೇಕ್ಷಿಸುವವರು, ತಮಗೆ ನಿತ್ಯಜೀವವನ್ನು ಕೊಡುವದಕ್ಕೆ ಯೇಸು ಕ್ರಿಸ್ತನು ತನ್ನ ದೇಹವನ್ನೂ ಮತ್ತು ರಕ್ತವನ್ನು ಕೊಟ್ಟನು ಎಂಬುದನ್ನು ನಂಬಬೇಕು. ಪಾಪವು ತಂದಂತಹ ಶಾಪ–ದಿಂದ ನಿನ್ನನ್ನೂ ಮತ್ತು ನನ್ನನ್ನೂ ವಿಮೋಚಿಸುವದಕ್ಕೆ ಕರ್ತನಾದ ಯೇಸು ಕ್ರಿಸ್ತನು ಮಾತ್ರವೇ ತನ್ನ ರಕ್ತವನ್ನು ಸುರಿಸುವದರಿಂದ ನಿತ್ಯಜೀವವನ್ನು ಕೊಡುವವನು ಎಂಬದು ದೇವರ ಪರಿಹಾರವಾಗಿತ್ತು.

ಜೊತೆ ಕೇಳುಗರೇ, ಈದಿನದ ಅಧ್ಯಯನದಿಂದ ನೀವು ಒಂದೇಒಂದು ಸಂಗತಿಯನ್ನು ನೆನಪಿನಲ್ಲಿಡುವದಾದರೆ, ಅದು ಇದಾಗಿರಲಿ: **ಯೇಸು ಕ್ರಿಸ್ತನು ನಿಮ್ಮ ಪಾಪದ ಭಾರವನ್ನು ಹೊತ್ತುಕೊಳ್ಳುವದಕ್ಕೆ ಲೋಕದೊಳಕ್ಕೆ ಬಂದನು** ಎಂಬದು. ಅದೇ ದೇವರ ಪ್ರವಾದಿಗಳ **ಸಂದೇ–ಶವಾಗಿದೆ.** ಅಬ್ರಹಾಮನು ತನ್ನ ಮಗನ ಬದಲಾಗಿ ಟಗರನ್ನು ಯಜ್ಞ ಅರ್ಪಿಸಿದ್ದುದರ **ಅರ್ಥವೂ** ಅದೇ ಆಗಿದೆ. ಕ್ಷಮಾಪಣೆಯ ಮಾರ್ಗವು ಸಂಪೂರ್ಣವಾದ ಯಜ್ಞದ ಮಾರ್ಗವಾಗಿದೆ. ನಿಮಗಾಗಿ ತನ್ನ ರಕ್ತವನ್ನು ಸುರಿಸಿದ ಪರಿಶುದ್ಧ ವಿಮೋಚಕನ ಯಜ್ಞದ ಮೂಲಕವಾಗಿ ದೇವರು ನಿಮ್ಮ ಪಾಪಗಳಿಗಾಗಿ ನಿಮ್ಮನ್ನು ಕ್ಷಮಿಸಿದನು. ಸಾವಿರಾರು ವರ್ಷಗಳವರೆಗೆ ದೇವರು ಪ್ರಾಣಿ ಯಜ್ಞವನ್ನು ಅಪೇಕ್ಷಿಸುವವನಾಗಿದ್ದನು, ಅದರಿಂದ ಅತನು ಆದಾಮನ ಸಂತಾನದವರ ಪಾಪಗಳನ್ನು ದಾಟಿಹೋಗುವದಕ್ಕೆ ಸಾಧ್ಯವಾಯಿತು. ಅದು ದೇವರು ತನ್ನ ಪ್ರವಾದಿಗಳಿಗೆ ಒಪ್ಪಿಸಿಕೊಟ್ಟಿದ್ದ ಹಳೆಯ ಒಡಂಬಡಿಕೆ. ಆದಾಗ್ಯೂ, ಮೆಸ್ಸೀಯನಾದ ಯೇಸುವು ಹೊಸದಾದ ಒಡಂಬ––ಡಿಕೆಯನ್ನು ತಂದವನಾಗಿದ್ದಾನೆ. ಆತನೇ **ಪ್ರಾಣಿ ಯಜ್ಞದ ಚಿಹ್ನೆಯನ್ನು ನೆರವೇರಿಸುವದಕ್ಕೆ ಬಂದವನಾಗಿದ್ದಾನೆ.** ಯೇಸು ಕ್ರಿಸ್ತನು ಸ್ವತ: ವಧಿಸಲ್ಪಟ್ಟ ಕೊನೆಯ ಪಸ್ಕದ ಕುರಿಮರಿಯಾಗಿದ್ದಾನೆ, ಆದದರಿಂದ ಆತನನ್ನು ನಂಬುವ ಯಾವನಾದರೂ ದೇವರ ನೀತಿಯ ನ್ಯಾಯ ತೀರ್ಪಿನಿಂದ ರಕ್ಷಿಸಲ್ಪಡುವದಕ್ಕೆ ಶಕ್ತನಾಗುತ್ತಾನೆ. ಅದಕ್ಕಾಗಿಯೇ ಪರಿಶುದ್ದ ವಾಕ್ಯವು ಹೀಗೆ ಹೇಳುತ್ತದೆ: **"ಪಸ್ಕದ ಯಜ್ಞದ ಕುರಿಯು** ಕೊಯಿದದೆ, ಅದಾವುದೆಂದರೆ ಯೇಸು ಕ್ರಿಸ್ತನೇ." (1ಕೊರಿಂಥ–5:7). **"ನಾವು ಆತನಲ್ಲಿ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು."**(2ಕೊರಿಂಥ–5:21)

ಯೇಸುವಿನ ರಕ್ತವು ಅಪಾರ ಬೆಲೆಯುಳ್ಳದ್ದಾಗಿದೆ. ಯೇಸುವಿನ ರಕ್ತದ ಶುದ್ಧಪಡಿಸುವ ಶಕ್ತಿಯ ಕುರಿತಾಗಿ ದೇವರ ವಾಕ್ಯವು ಹೇಳುವ ––ದನ್ನು ಕೇಳಿರಿ. ವಾಕ್ಯ ಹೇಳುವದೇನೆಂದರೆ:

**"ಯೇಸುಕ್ರಿಸ್ತನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ."** (1ಯೋಹಾನ–1:7). "ನಿಮ್ಮ ಹಿರಿಯರು ಕಲಿಸಿಕೊಟ್ಟ ವ್ಯರ್ಥವಾದ ನಡವಳಿಕೆಯಿಂದ ನಿಮಗೆ ಬಿಡುಗಡೆಯಾದದ್ದು ಬೆಳ್ಳಿಬಂಗಾರ ಮೊದಲಾದ ನಶಿಸಿಹೋಗುವ ವಸ್ತುಗಳಿಂದಲ್ಲ, **ಪೂರ್ಣಾಂಗವಾದ ನಿಷ್ಕಳಂಕ ಯಜ್ಞದ ಕುರಿಯ ರಕ್ತದಿಂದಲೋ ಎಂಬಂತೆ ಕ್ರಿಸ್ತನ ಅಮೂಲ್ಯವಾದ ರಕ್ತದಿಂದಲೇ** ಎಂದು ಬಲ್ಲಿರಲ್ಲವೇ. ಆತನು ಜಗದುತ್ಪತ್ತಿಗಿಂತ ಮೊದಲೇ ಗೊತ್ತುಮಾಡಲ್ಪಟ್ಟು ಅಂತ್ಯಕಾಲದಲ್ಲಿ ನಿಮಗೆ ಪ್ರತ್ಯಕ್ಷನಾದನು. ಆತನನ್ನು ಸತ್ತವರೊಳಗಿಂದ ಎಬ್ಬಿಸಿ ಆತನಿಗೆ ಪ್ರಭಾವವನ್ನು ಕೊಟ್ಟ ದೇವರಲ್ಲಿ ನೀವು ಆತನ ಮೂಲಕ ನಂಬಿಕೆಯಿಟ್ಟವರಾದಿರಷ್ಟೆ. ಹೀಗರಲಾಗಿ ನಿಮ್ಮ ನಂಬಿಕೆಯೂ ನಿರೀಕ್ಷೆಯೂ ದೇವರಲ್ಲಿಯೇ ನೆಲೆಗೊಂಡವೆ. (1ಪೇತ್ರ–1:18-21)

ಈದಿನ ನೀವು ಕೇಳಿಸಿಕೊಂಡದ್ದನ್ನು ಜಾಗ್ರತೆಯಿಂದ ಆಲೋಚಿಸಿರಿ, ಯಾಕಂದರೆ ಈ ಮಹತ್ವದ ಸತ್ಯಗಳೊಳಗೆ ನಿಮಗೆ ವಿವೇಕವನ್ನು ಕೊಡುವದಕ್ಕೆ ದೇವರು ಇಷ್ಟಪಡುತ್ತಾನೆ. ಮುಂಬರುವ ಅಧ್ಯಯನದಲ್ಲಿ ಕಡೇ ರಾತ್ರಿ ಭೋಜನದ ಕುರಿತಾದ ಕತೆಯನ್ನು ಪೂರ್ತಿಗೊಳಿ–ಸುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ ಮತ್ತು ಧಾರ್ಮಿಕ ನಾಯಕರುಗಳು ಆತನನ್ನು ಕೊಲ್ಲುವದಕ್ಕೆ ಶಕ್ತರಾಗಬಹುದೆಂದು ಆತನನ್ನು ಹೇಗೆ ಸೆರೆಹಿಡಿದರು ಎಂಬುದನ್ನು ನಾವು ನೋಡುತ್ತೇವೆ.

ದೇವರ ವಾಕ್ಯದ ಈ ವಚನದಲ್ಲಿ ಒಳಗೊಂಡಿರುವ ದೊಡ್ಡದಾದ ಆಶೀರ್ವಾದದ ಮತ್ತು ಆಳವಾದ ಅರ್ಥದ ಕುರಿತಾಗಿ ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ.

**"ಯೇಸುಕ್ರಿಸ್ತನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ."** (1ಯೋಹಾನ–1:7)

[ಪಾಠ 81: ಕಡೆಯ ರಾತ್ರಿ ಭೋಜನ] [ಸಾರಾಂಶಗಳ ಪಟ್ಟಿ] [ಪಾಠ 83: ಯೇಸು ದಂಡನೆಗೊಳಗಾದದ್ದು]

ಪಾಠ 82

# ಯೇಸು ಸೆರೆ ಹಿಡಿಯಲ್ಪಟ್ಟದ್ದು

ಯೋಹಾನ 14; ಮತ್ತಾಯ 26

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಕಾರ್ಯಕ್ರಮದಲ್ಲಿ, ಯೇಸು ತಾನು ಸಾಯುವದಕ್ಕಿಂತ ಮುಂಚೆ ತನ್ನ ಶಿಷ್ಯರೊಂದಿಗೆ ಊಟ ಮಾಡಿದ **ಕಡೇ ರಾತ್ರಿ ಭೋಜ – ನದ** ಕುರಿತು ನಾವು ಕಲಿತುಕೊಂಡೆವು. ತನ್ನ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನು ತನ್ನನ್ನು ಹಿಡಿದು ತನ್ನ ವೈರಿಗಳಿಗೆ ಒಪ್ಪಿಸುವನು ಎಂಬುದನ್ನು ಕರ್ತನಾದ ಯೇಸು ಅವರಿಗೆ ತಿಳಿಸಿದ್ದನ್ನು ನಾವು ಕೇಳಿಸಿಕೊಂಡೆವು. ಯೇಸು ರೊಟ್ಟಿಯನ್ನು ಮತ್ತು ಪಾತ್ರೆಯನ್ನು ತನ್ನ ಶಿಷ್ಯರಿಗೆ ಕೊಡುತ್ತಾ, ತಾನು ಮುರಿದ ಈ ರೊಟ್ಟಿಯು ತಾನು ಯಜ್ಞವಾಗಿ ಸಮರ್ಪಿಸಲಿಕ್ಕಿರುವ ತನ್ನ ದೇಹವನ್ನೂ ಮತ್ತು ದ್ರಾಕ್ಷಾರಸ ವನ್ನು ಒಳಗೊಂಡಿರುವ ಈ ಪಾತ್ರೆಯು ತಾನು ಸುರಿಸಲಿಕ್ಕಿರುವ ರಕ್ತವನ್ನೂ ಸೂಚಿಸುತ್ತವೆ ಎಂಬುದನ್ನು ಅವರಿಗೆ ತಿಳಿಸಿದನು. ಈ ಪ್ರಕಾರ, ಪಾಪವನ್ನು ತೆಗೆದುಹಾಕಿ ನಿತ್ಯಜೀವವನ್ನು ಕೊಡುವ ಒಂದು ಯಜ್ಞದಂತೆ ತನ್ನ ರಕ್ತವನ್ನು ಸುರಿಸುವದಕ್ಕೆ ಈ ಲೋಕಕ್ಕೆ ಬಂದಂತಹ ಕಾರಣವನ್ನು ತನ್ನ ಶಿಷ್ಯರಿಗೆ ಮತ್ತೆ ತೋರಿಸಿದನು.

ಈದಿನ ನಾವು ಸುವಾರ್ತೆಯಲ್ಲಿರುವದನ್ನು ಮುಂದುವರಿಸಿ, ದೇವಾಲಯದ ಕಾವಲುಗಾರರು ಆತನನ್ನು ಹಿಡಿಯುವದಕ್ಕೆ ಬಮದಂತಹ ರಾತ್ರಿಯಲ್ಲಿ ಕರ್ತನಾದ ಯೇಸು ಮಾತಾಡಿದಂತ ಅದ್ಭುತವಾದ ಮತ್ತು ಹೆಚ್ಚು ಅಗಾಧವಾದ ಮಾತುಗಳನ್ನು ಕೇಳಿಸಿಕೊಳ್ಳುವದಕ್ಕೆ ಏರ್ಪಾಟು ಮಾಡಿಕೊಂಡಿದ್ದೇವೆ. ನಾವು ಯೋಹಾನನ ಸುವಾರ್ತೆಯ ಹದಿನಾಲ್ಕನೆಯ ಅಧ್ಯಾಯದಲ್ಲಿ ಓದುತ್ತಿದ್ದೇವೆ. ತನ್ನ ಜೀವಿತ – –ವನ್ನು ಮುಗಿಸುವಂತ ತನ್ನ ಸಮಯವು ಬಂದಿದೆ ಎನ್ನುವದನ್ನು ತಿಳಿದಿದ್ದ ಯೇಸು ತನ್ನ ಶಿಷ್ಯರಿಗೆ ಅದನ್ನು ತಿಳಿಸುತ್ತಾ ಹೀಗೆ ಹೇಳಿದನು:

"ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; **ದೇವರನ್ನು** ನಂಬಿರಿ; ನನ್ನನ್ನೂ ನಂಬಿರಿ. **ನನ್ನ ತಂದೆಯ ಮನೆಯಲ್ಲಿ ಬಹಳ ಬಿಡಾರಗಳು ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; ನಿಮಗೆ ಸ್ಥಳವನ್ನು ಸಿದ್ಧಮಾಡುವದಕ್ಕೆ ಹೋಗುತ್ತೇನಲ್ಲಾ**. ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು. ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದದೆ" ಅಂದನು. (ಯೋಹಾನ–14:1-4)

ತೋಮನು ಆತನನ್ನು, "ಸ್ವಾಮೀ, ನೀನು ಎಲ್ಲಿಗೆ ಹೋಗುತ್ತೀಯೋ ನಮಗೆ ತಿಳಿಯದು; ಮಾರ್ಗವು ಹೇಗೆ ತಿಳಿದೀತು" ಎಂದು ಕೇಳಲು ಯೇಸು ಅವನಿಗೆ, **"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ**. ನೀವು ನನ್ನನ್ನು ಅರಿತಿದ್ದರೆ ನನ್ನ ತಂದೆಯನ್ನೂ ಅರಿಯುತ್ತಿದ್ದಿರಿ; ಈಗಿನಿಂದ ಆತನನ್ನು ಅರಿತುಕೊಂಡಿದ್ದೀರಿ;ಅತ –ನನ್ನು ನೋಡಿದ್ದಿರಲ್ಲ" ಎಂದು ಹೇಳಿದನು. ಫಿಲಿಪ್ಪನು ಸ್ವಾಮೀ, ನಮಗೆ ತಂದೆಯನ್ನು ತೋರಿಸು, ನಮಗೆ ಅಷ್ಟೇ ಸಾಕು" ಅಂದನು. ಯೇಸು ಅವನಿಗೆ, "ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ. **ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ.** ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? ನಾನು ತಂದೆಯಲ್ಲಿದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆ ಎಂದು ನೀವು ನಂಬುವದಿಲ್ಲವೋ? ನಾನು ನಿಮಗೆ ಹೇಳುವ ಮಾತುಗಳನ್ನು ನನ್ನಷ್ಟಕ್ಕೆ ನಾನೇ ಆಡು – –ವದಿಲ್ಲ; ತಂದೆಯು ನನ್ನಲ್ಲಿ ಇದ್ದುಕೊಂಡು ತನ್ನ ಕ್ರಿಯೆಗಳನ್ನು ನಡಿಸುತ್ತಾನೆ. ನಾನು ತಂದೆಯಲ್ಲಿ ಇದ್ದೇನೆ, ತಂದೆಯು ನನ್ನಲ್ಲಿ ಇದ್ದಾನೆಂಬುವ ನನ್ನ ಮಾತನ್ನು ನಂಬಿರಿ; ಇಲ್ಲದಿದ್ದರೆ ಆ ಕ್ರಿಯೆಗಳನ್ನೇ ನೋಡಿ ನನ್ನ ಮಾತನ್ನು ನಂಬಿರಿ." (14:5-11)

"ನೀವು ನನ್ನನ್ನು ಪ್ರೀತಿಸುವವರಾದರೆ ನನ್ನ ಆಜ್ಞೆಗಳನ್ನು ಕೈಕೊಂಡು ನಡೆಯುವಿರಿ. ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು;

ಆತನು ನಿಮಗೆ **ಬೇರೊಬ್ಬ ಸಹಾಯಕನನ್ನು** ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ **ಸತ್ಯದ ಆತ್ಮನೇ.** ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ ಆತನನ್ನು ಹೊಂದಲಾರದು. ನೀವು ಆತ –
–ನನ್ನು ಬಲ್ಲಿರಿ, ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ. ಇನ್ನು ಸ್ವಲ್ಪ ಕಾಲವಾದ ಮೇಲೆ ಲೋಕವು ನನ್ನನ್ನು ನೋಡುವದಿಲ್ಲ. ಆದರೆ ನೀವು ನನ್ನನ್ನು ನೋಡುವಿರಿ; ನಾನು ಬದುಕುವದರಿಂದ ನೀವೂ ಬದುಕುವಿರಿ. ನಾನು ನನ್ನ ತಂದೆಯಲ್ಲಿಯೂ ನೀವು ನನ್ನಲ್ಲಿಯೂ ನಾನು ನಿಮ್ಮ –
–ಲ್ಲಿಯೂ ಇರುವದನ್ನು ನೀವು ಆ ದಿನದಲ್ಲಿ ತಿಳಿದುಕೊಳ್ಳುವಿರಿ. ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನೂ ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿ
–ಕೊಳ್ಳುವೆನು ಎಂದು ಹೇಳಿದನು. . . . ಯಾರಾದರೂ ನನ್ನನ್ನು ಪ್ರೀತಿಸುವವನಾದರೆ ನನ್ನ ಮಾತನ್ನು ಕೈಕೊಂಡು ನಡೆಯುವನು; ಅವನನ್ನು ನನ್ನ ತಂದೆಯು ಪ್ರೀತಿಸುವನು, ಮತ್ತು ನಾವಿಬ್ಬರೂ ಅವನ ಬಳಿಗೆ ಬಂದು ಅವನ ಬಳಿಯಲ್ಲಿ ಬಿಡಾರವನ್ನು ಮಾಡಿಕೊಳ್ಳು
–ವೆವು. ನನ್ನನ್ನು ಪ್ರೀತಿಸದೆ ಇರುವವನು ನನ್ನ ಮಾತುಗಳನ್ನು ಕೈಕೊಂಡು ನಡೆಯುವದಿಲ್ಲ; ನೀವು ಆಲಿಸುವ ಮಾತು ನನ್ನದಲ್ಲ, ನನ್ನನ್ನು ಕಳುಹಿಸಿದ ತಂದೆಯ ಮಾತೇ. ಈ ಮಾತುಗಳನ್ನು ನಾನು ಇನ್ನೂ ನಿಮ್ಮ ಬಳಿಯಲ್ಲಿರುವಾಗ ನಿಮಗೆ ಹೇಳಿದ್ದೇನೆ. ಆದರೆ **ಆ ಸಹಾಯಕನು** ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ **ಪವಿತ್ರಾತ್ಮನು** ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ, ಹೆದರದಿರಲಿ." (14:15-21, 23-27)

ಈ ಪ್ರಕಾರ ಕರ್ತನಾದ ಯೇಸು ತನ್ನ ಶಿಷ್ಯರ ಹೃದಯಗಳನ್ನು ಸಂತೈಸಿದನು ಮತ್ತು ಮುಂದೆ ಸಂಭವಿಸುವದಕ್ಕಿರುವ ಸಂಗತಿಗಾಗಿ ಅವರನ್ನು ಸಿದ್ಧಗೊಳಿಸಿದನು. **ಸಮಾಲೋಚಕನ** (ಸಹಾಯಕನು) ಕುರಿತಾಗಿ ಯೇಸು ಅವರಿಗೆ ಏನು ಪ್ರಕಟಿಸಿದನೆಂಬುದನ್ನು ನೀವು ಕೇಳಿಸಿಕೊಂಡಿರಾ? ನೀವು ಇದನ್ನು ಅರ್ಥಮಾಡಿಕೊಳ್ಳುವಂತೆ ಇದು ಅತಿ ಮಹತ್ವದ್ದಾಗಿದೆ, ಯಾಕಂದರೆ ಈ ದಿವಸದಲ್ಲಿ ಕೆಲವು ಜನರು ಯೇಸುವಿನ ಮಾತುಗಳನ್ನು ವಿರೂಪಗೊಳಿಸಿ ಅಂದರೆ ಆತನು ಇನ್ನೊಬ್ಬ ಪ್ರವಾದಿಯ ಬರುವಿಕೆಯನ್ನು ಪ್ರಕಟಿಸುತ್ತಿದ್ದಾನೆಂದು ಹೇಳುತ್ತಾ ಮನುಷ್ಯರು ಅದನ್ನು ನಂಬುವಂತೆ ಮಾಡುತ್ತಾರೆ. ಆದರೆ ಯೇಸು ಸಹಾಯಕನ ಕುರಿತಾಗಿ ಹೇಳಿರುವದು ಒಬ್ಬ ಪ್ರವಾದಿ –
–ಯನ್ನು ಸೂಚಿಸುವಂತದ್ದಲ್ಲ, ಇಲ್ಲವೆ ಯಾವುದೇ ಮನುಷ್ಯನನ್ನು ಸೂಚಿಸುವಂತದ್ದಲ್ಲ, ಯಾಕಂದರೆ ಈ ಸಮಾಲೋಚಕನು ಅಂದರೆ ಸಹಾಯಕನು ಯೇಸುವಿನ ನಿಜವಾದ ಶಿಷ್ಯರೊಳಗೆ ವಾಸಿಸುವದಕ್ಕೆ ಬರಲಿರುವ ಒಬ್ಬ ಅದೃಶ್ಯ ಆತ್ಮನಾಗಿದ್ದನು.

ಈ ಸಮಾಲೋಚಕನು ಯಾರು? ಕರ್ತನಾದ ಯೇಸು ಈ ಸಮಾಲೋಚಕನು ಯಾರೆಂಬುದನ್ನು ಸರಳವಾಗಿ ನಮಗೆ ತಿಳಿಸುತ್ತಾನೆ. ಯೇಸು ಹೇಳಿರುವದನ್ನು ಮತ್ತೆ ಕೇಳಿಸಿಕೊಳ್ಳಿರಿ,

ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ **ಬೇರೊಬ್ಬ ಸಹಾಯಕನನ್ನು** ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡು –
–ವನು. ಆ ಸಹಾಯಕನು ಯಾರಂದರೆ **ಸತ್ಯದ ಆತ್ಮನೇ.** ಆತನು ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರುವನು. ನಾನು ನಿಮ್ಮನ್ನು ಅನಾಥರಾಗಿ ಬಿಡುವದಿಲ್ಲ; ನಿಮ್ಮ ಬಳಿಗೆ ಬರುತ್ತೇನೆ. **ಆ ಸಹಾಯಕನು** ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳು –
–ಹಿಸಿಕೊಡುವ **ಪವಿತ್ರಾತ್ಮನು** ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. (ಯೋಹಾನ–14:16-18,26)

ಮತ್ತೆ, ನಾವು ನಿಮಗೆ ಈ ಪ್ರಶ್ನೆಯನ್ನು ಕೇಳುತ್ತೇವೆ: ಯೇಸು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ ಆ ಸಹಾಯಕನು ಯಾರು? ಆತನು ದೇವರಿಂದ ಬಂದವನು ಮತ್ತು ಯೇಸುವಿನಲ್ಲಿ ಇದ್ದ **ಪವಿತ್ರಾತ್ಮನು.** ಈತನು ದೇವರ ಮತ್ತು ಯೇಸುವಿನ ಆತ್ಮನಾಗಿದ್ದಾನೆ. ಈತನು, ಯೇಸುವನ್ನು ತಮ್ಮ ಕರ್ತನೂ ಮತ್ತು ರಕ್ಷಕನೂ ಎಂದು ನಂಬುವಂತವರೆಲ್ಲರ ಹೃದಯಗಳಲ್ಲಿ ದೇವರು ಇಟ್ಟಿರುವಂತ ಪವಿತ್ರಾತ್ಮನಾಗಿ
–ದ್ದಾನೆ. ತಾನು ಮರಣ ಹೊಂದಿದ ನಂತರ ಮತ್ತೆ ಎದ್ದು ಬಂದು, ಪರಲೋಕಕ್ಕೆ ಹಿಂತಿರುಗಿ ಹೋಗಿ, ತನ್ನ ಪವಿತ್ರಾತ್ಮನನ್ನು ಅವರ ಹೃದಯಗಳೊಳಗೆ ಕಳಿಸಿಕೊಡುತ್ತೇನೆಂದು ಅದರಿಂದ ಆತನು ಅವರನ್ನು ಪುನರುಜ್ಜೀವಗೊಳಿಸಿ, ಅವರನ್ನು ಶುದ್ಧಪಡಿಸಿ, ಬಲಪಡಿಸಿ, "ಎಲ್ಲಾ ಸತ್ಯಕ್ಕೆ ಅವರನ್ನು ನಡಿಸುತ್ತಾನೆ"ಎಂದು ಯೇಸು ತನ್ನ ಶಿಷ್ಯರಿಗೆ ವಾಗ್ದಾನಮಾಡಿದನು.(ಯೋಹಾನ–16:13; ತೀತ–3:4-7). ಇಲ್ಲಿಂದ ಮುಂದೆ ಕೆಲವು ಪಾಠಗಳಿಂದ, ದೇವರ ಚಿತ್ತವಾದರೆ, ಯೇಸು ವಾಗ್ದಾನ ಮಾಡಿದಂತೆ, ಪವಿತ್ರಾತ್ಮನು ಇಳಿದುಬಂದು(ಯೇಸು ಪರಲೋಕಕ್ಕೆ ಏರಿಹೋದ ಹತ್ತು ದಿವಸಗಳ ನಂತರ) ಆತನ ಶಿಷ್ಯರುಗಳೆಲ್ಲರ ಹೃದಯಗಳಲ್ಲಿ ವಾಸಿಸುವದಕ್ಕೆ ಆರಂಭಿಸಿದಾಗ, ಯೆರೂ
–ಸಲೇಮಿನಲ್ಲಿ ನಿಜವಾಗಿಯೂ ಏನು ಸಂಭವಿಸಿತೆಂಬುದನ್ನು ನಾವು ನೋಡಲಿದ್ದೇವೆ.

ನಂತರದ ಕಾರ್ಯಕ್ರಮದಲ್ಲಿ, ಒಬ್ಬ ಸ್ವಾರ್ಥಿಯಾದ ಪಾಪಿಯನ್ನು ದೇವರನ್ನು ಪ್ರೀತಿಸುವ ಮತ್ತು ಆತನನ್ನು ಮೆಚ್ಚಿಸುವದಕ್ಕೆ ಬಯಸುವ

ವ್ಯಕ್ತಿಯನ್ನಾಗಿ ರೂಪಾಂತರಗೊಳಿಸಲು ಶಕ್ತನಾಗಿರುವ ಈ ಸಮಾಲೋಚಕನ, ಪವಿತ್ರಾತ್ಮನ ಕುರಿತಾಗಿ ನಾವು ಕಲಿತುಕೊಳ್ಳಲಿದ್ದೇವೆ. ಆದರೆ ಈಗ ಸುವಾರ್ತೆಗೆ ಹಿಂದಿರುಗಿ, ಯೇಸು ತನ್ನ ಶಿಷ್ಯರೊಂದಿಗೆ ಕಡೆಯ ರಾತ್ರಿ ಭೋಜನವನ್ನು ಮಾಡಿದ ನಂತರ ಆ ಅಸಾ –
–ಧಾರಣವಾದ ರಾತ್ರಿಯಲ್ಲಿ ಏನಾಯಿತೆಂಬುದನ್ನು ನೋಡಿಕೋಳೋಣ.

ಬಳಿಕ ಅವರು ಕೀರ್ತನೆಯನ್ನು ಹಾಡಿ ಎಣ್ಣೆಯ ಮರಗಳ ಗುಡ್ಡಕ್ಕೆ **ಹೊರಟುಹೋದರು**. ಆಗ ಯೇಸು ಅವರಿಗೆ, "ನೀವೆಲ್ಲರೂ ಈ ರಾತ್ರಿ ನನ್ನ ವಿಷಯದಲ್ಲಿ ದಿಗಿಲುಪಟ್ಟು ಹಿಂಜರಿಯುವಿರಿ. ಕುರುಬನನ್ನು ಹೊಡೆಯುವೆನು; ಹಿಂಡಿನ ಕುರಿಗಳು ಚದರಿಹೋಗುವವು ಎಂದು ಬರೆದದೆಯಲ್ಲಾ. ಆದರೆ ನಾನು ಜೀವಿತನಾಗಿ ಎದ್ದ ಮೇಲೆ ನಿಮ್ಮ ಮುಂದೆ ಗಲಿಲಾಯಕ್ಕೆ ಹೋಗುವೆನು" ಎಂದು ಹೇಳಿ –
–ದನು. ಪೇತ್ರನು ಆತನಿಗೆ, "ಎಲ್ಲರೂ ನಿನ್ನ ವಿಷಯುದಲ್ಲಿ ದಿಗಿಲುಪಟ್ಟು ಹಿಂಜರಿದರೂ ನಾನು ಎಂದಿಗೂ ಹಿಂಜರಿಯುವದಿಲ್ಲ" ಎಂದು ಉತ್ತರಕೊಡಲು ಯೇಸು, "ನಿನಗೆ ಸತ್ಯವಾಗಿ ಹೇಳುತ್ತೇನೆ, ಇದೇ ರಾತ್ರಿಯಲ್ಲಿ ಕೋಳಿಕೂಗುವದಕ್ಕಿಂತ ಮುಂಚೆ ನೀನು ನನ್ನ ವಿಷಯದಲ್ಲಿ, ಅವನನ್ನು ಅರಿಯೆನೆಂಬದಾಗಿ ಮೂರು ಸಾರಿ ಹೇಳುವಿ" ಅಂದನು. ಪೇತ್ರನು ಆತನಿಗೆ, "ನಾನು ನಿನ್ನ ಸಂಗಡ ಸಾಯ
–ಬೇಕಾದರೂ ನಿನ್ನನ್ನು ಅರಿಯೆನೆಂಬದಾಗಿ ಹೇಳುವದೇ ಇಲ್ಲ" ಎಂದು ಹೇಳಿದನು. ಅದರಂತೆ ಶಿಷ್ಯರೆಲ್ಲರೂ ಹೇಳಿದರು. (ಮತ್ತಾಯ–26:30-35)

ಅನಂತರ ಯೇಸು ತನ್ನ ಶಿಷ್ಯರ ಸಂಗಡ **ಗೆತ್ಸೇಮನೆ** ಎಂಬ ತೋಟಕ್ಕೆ ಬಂದು ಅವರಿಗೆ, "ಇಲ್ಲೇ ಕೂತುಕೊಳ್ಳಿರಿ, ನಾನು ಅತ್ತಲಾಗಿ ಹೋಗಿ ಪ್ರಾರ್ಥನೆ ಮಾಡಿ ಬರುತ್ತೇನೆ" ಎಂದು ಹೇಳಿ ಪೇತ್ರನನ್ನೂ ಜೆಬೆದಾಯನ ಇಬ್ಬರು ಮಕ್ಕಳನ್ನೂ ಕರಕೊಂಡು ಹೋಗಿ ದು:ಖ
–ಪಟ್ಟು ಮನಗುಂದಿದವನಾದನು. ಮತ್ತು ಅವರಿಗೆ, **"ನನ್ನ ಪ್ರಾಣವು ಸಾಯುವಷ್ಟು ದು:ಖಕ್ಕೆ ಒಳಗಾಗಿದೆ;** ನೀವು ಇಲ್ಲೇ ಇದ್ದು ನನ್ನ ಸಂಗಡ ಎಚ್ಚರವಾಗಿರ್ರಿ" ಎಂದು ಹೇಳಿ ಸ್ವಲ್ಪ ಮುಂದೆ ಹೋಗಿ ಬೋರಲಬಿದ್ದು, **"ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ"**ಎಂದು ದೇವರನ್ನು ಪ್ರಾರ್ಥಿಸಿದನು.(26:36-39)

ಇಲ್ಲಿಗೆ ಸ್ವಲ್ಪ ನಿಲ್ಲಿಸೋಣ. ಯೇಸು ಕುಡಿಯುವದಕ್ಕೆ ದಿಗಿಲುಪಟ್ಟ ಕಷ್ಟ ಅನುಭವಿಸುವ ಪಾತ್ರೆ ಯಾವುದು?ಯೇಸು ಮರಣ ಹೊಂದುವ ಸಮಯದಲ್ಲಿ ಯಾಕೆ ದು:ಖದಲ್ಲಿ ಮುಳುಗಿದ್ದನು? ಯೇಸು ಊಹಿಸಲಸಾಧ್ಯವಾದ ಮಾನಸಿಕ ದು:ಖದಲ್ಲಿದ್ದನು ಯಾಕಂದರೆ ಆದಾ –
–ಮನ ಸಂತದವರಿಗಾಗಿ ಪಾಪದ ಶಿಕ್ಷೆಯನ್ನು ಹೊತ್ತುಕೊಳ್ಳುವ ತನ್ನ ಸಮಯವು ಹತ್ತಿರದಲ್ಲಿದೆ ಎಂಬುದು ಯೇಸುವಿಗೆ ಗೊತ್ತಿತ್ತು! **ದೇವರ ಎಲ್ಲಾ ಪ್ರವಾದಿಗಳು ಪ್ರವಾದಿಸಿದ ಸಮಯವು ಬಂದಿತ್ತು!** ಜನರು ವಿಮೋಚಕನನ್ನು ಹಿಂಸಿಸಿ, ಮೊಳೆಗಳಿಂದ ಶಿಲುಬೆಗೆ ಜಡಿಯು
–ವವರಿದ್ದರು, ಆದರೆ ಯೇಸುವಿಗೆ ತುಂಬಾ ಭಯಂಕರವಾದ ಸಂಗತಿ ಯಾವುದಾಗಿತ್ತೆಂದು ತಿಳಿಯುವದಾದರೆ ಅದು, ಯೇಸು ಯಾರನ್ನು ಪ್ರೀತಿಸಿದನೋ, ಯೇಸುವನ್ನು ಯಾರು ಪ್ರೀತಿಸಿದರೋ ಆ ಪರಲೋಕದಲ್ಲಿರುವ ಆತನ ತಂದೆಯು ಇಡೀ ಲೋಕದ ಪಾಪಗಳ ಶಿಕ್ಷೆಯನ್ನು ಆತನ ಮೇಲೆ ರಾಶಿಹಾಕಿದ್ದಾನೆ! ಇದೇ ಕಾರಣಕ್ಕಾಗಿಯೇ ಯೇಸು ಪ್ರಾರ್ಥಿಸುತ್ತಾ ಹೀಗೆ ಹೇಳಿದ್ದು: **"ನನ್ನ ತಂದೆಯೇ, ಸಾಧ್ಯವಾಗಿದ್ದರೆ ಈ ಪಾತ್ರೆಯು ನನ್ನನ್ನು ಬಿಟ್ಟುಹೋಗಲಿ; ಹೇಗೂ ನನ್ನ ಚಿತ್ತದಂತಾಗದೆ ನಿನ್ನ ಚಿತ್ತದಂತೆಯೇ ಆಗಲಿ!"**

ಮುಂದೆ ವಾಕ್ಯವು ಹೀಗೆ ಹೇಳುತ್ತದೆ:
ಆಮೇಲೆ ಆತನು ಶಿಷ್ಯರ ಬಳಿಗೆ ಬಂದು ಅವರು ನಿದ್ದೆ ಮಾಡುವದನ್ನು ಕಂಡು ಪೇತ್ರನಿಗೆ, "ಹೀಗೋ? ಒಂದು ಗಳಿಗೆಯಾದರೂ ನನ್ನ ಸಂಗಡ ಎಚ್ಚರವಾಗಿರಲಾರಿರಾ? ಶೋಧನೆಗೆ ಒಳಗಾಗದಂತೆ ಎಚ್ಚರವಾಗಿದ್ದು ಪ್ರಾರ್ಥಿಸಿರಿ; ಮನಸ್ಸು ಸಿದ್ಧವಾಗಿದೆ ಸರಿ, ಆದರೆ ದೇಹಕ್ಕೆ ಬಲ ಸಾಲದು" ಎಂದು ಹೇಳಿದನು. **ತಿರಿಗಿ ಎರಡನೆಯ ಸಾರಿ** ಹೋಗಿ, "ನನ್ನ ತಂದೆಯೇ, ನಾನು ಕುಡಿದ ಹೊರತು ಈ ಪಾತ್ರೆ ಬಿಟ್ಟು ಹೋಗಕೂಡದಾಗಿದ್ದರೆ ನಿನ್ನ ಚಿತ್ತವೇ ಆಗಲಿ" ಎಂದು ಪ್ರಾರ್ಥನೆ ಮಾಡಿದನು. ಆತನು ತಿರಿಗಿ ಬಂದಾಗ ಅವರು ನಿದ್ದೆ ಮಾಡುವದನ್ನು ಕಂಡನು; ಅವರ ಕಣ್ಣುಗಳು ಭಾರವಾಗಿದ್ದವು. ಆಮೇಲೆ ತಿರಿಗಿ ಅವರನ್ನು ಬಿಟ್ಟುಹೋಗಿ ತಿರಿಗಿ ಅದೇ ಮಾತನ್ನು ಹೇಳುತ್ತಾ **ಮೂರನೆಯ ಸಾರಿ** ಪ್ರಾರ್ಥಿಸಿದನು. ತರುವಾಯ ಶಿಷ್ಯರ ಬಳಿಗೆ ಬಂದು ಅವರಿಗೆ, "ನೀವು ಇನ್ನೂ ನಿದ್ದೆಮಾಡಿ ದಣುವಾರಿಸಿ
–ಕೊಳ್ಳಿರಿ; ಇಗೋ, ಗಳಿಗೆ ಸಮೀಪಿಸಿತು, ಈಗ ಮನುಷ್ಯಕುಮಾರನು ದುರ್ಜನರ ಕೈಗೆ ಒಪ್ಪಿಸಲ್ಪಡುತ್ತಾನೆ. ಏಳಿರಿ, ಹೋಗೋಣ; ನನ್ನನ್ನು ಹಿಡುಕೊಡುವವನು ಹತ್ತಿರಕ್ಕೆ ಬಂದಿದ್ದಾನೆ ನೋಡಿರಿ" ಎಂದು ಹೇಳಿದನು. (26:40-46)

ಆತನು ಇನ್ನೂ ಮಾತಾಡುತ್ತಿರಲು ಇಗೋ ಹನ್ನೆರಡು ಮಂದಿ ಶಿಷ್ಯರಲ್ಲಿ ಒಬ್ಬನಾದ **ಯೂದನು** ಬಂದನು; ಮಹಾಯಾಜಕರು ಜನರ ಹಿರಿಯರು ಇವರ ಕಡೆಯಿಂದ ಬಹು ಜನರ ಗುಂಪು ಕತ್ತಿ ದೊಣ್ಣೆಗಳನ್ನು ಹಿಡುಕೊಂಡು ಅವನ ಸಂಗಡ ಬರತು. ಇದಲ್ಲದೆ ಆತ –
–ನನ್ನು ಹಿಡುಕೊಡುವವನು ಅವರಿಗೆ, "ನಾನು ಯಾರಿಗೆ ಮುದ್ದಿಡುತ್ತೇನೋ ಅವನೇ ಆತನು; ಅವನನ್ನು ಹಿಡಿಯಿರಿ" ಎಂದು ಗುರುತು ಹೇಳಿಕೊಟ್ಟನು. ಕೂಡಲೆ ಅವನು ಯೇಸುವಿನ ಬಳಿಗೆ ಹೋಗಿ, "ಗುರುವೇ, ನಮಸ್ಕಾರ" ಎಂದು ಹೇಳಿ ಆತನಿಗೆ ಮುದ್ದಿ –
–ಟ್ಟನು. ಯೇಸು ಅವನಿಗೆ, "ಗೆಳೆಯನೇ, ನೀನು ಬಂದ ಕೆಲಸ ಇದೇಯೋ?" ಎಂದು ಹೇಳಲು ಅವರು ಹತ್ತಿರಕ್ಕೆ ಬಂದು ಯೇಸು
–ವಿನ ಮೇಲೆ ಕೈಹಾಕಿ **ಆತನನ್ನು ಹಿಡಿದರು.** (26:47-50)

ಹಿಡಿಯುತ್ತಲೆ ಯೇಸುವಿನ ಸಂಗಡ ಇದ್ದವರಲ್ಲಿ ಒಬ್ಬನು ಕೈಚಾಚಿ ತನ್ನ ಕತ್ತಿಯನ್ನು ಹಿರಿದು ಮಹಾಯಾಜಕನ ಆಳನ್ನು ಹೊಡೆದು ಅವನ ಕಿವಿಯನ್ನು ಕಡಿದುಹಾಕಿದನು. (ಲೂಕ–22:50) ಆಗ ಯೇಸು ಅವನಿಗೆ, **"**ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿ–ಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು. ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೆಂದೂ ಬೇಡಿಕೊಂಡರೆ ಆತನು ನನಗೆ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವದಿಲ್ಲವೆಂದು ನೆನಸುತ್ತೀಯಾ? ಕಳುಹಿಸಿಕೊಟ್ಟರೆ ನನಗೆ ಇಂಥಿಂಥದು ಆಗಬೇಕೆಂಬುವ ಶಾಸ್ತ್ರದ ಮಾತುಗಳು ನೆರವೇರುವದು ಹೇಗೆ**"** ಎಂದು ಹೇಳಿದನು. (26:51-54)

ಅದೇ ಗಳಿಗೆಯಲ್ಲಿ ಯೇಸು ಗುಂಪುಗುಂಪಾಗಿ ಕೂಡಿದ್ದ ಜನರಿಗೆ, **"**ಕಳ್ಳನನ್ನು ಹಿಡಿಯುವದಕ್ಕೆ ಬಂದಂತೆ ಕತ್ತಿಗಳನ್ನೂ ದೊಣ್ಣೆಗಳನ್ನೂ ತೆಗೆದುಕೊಂಡು ನನ್ನನ್ನು ಹಿಡಿಯುವದಕ್ಕೆ ಬಂದಿರಾ? ನಾನು ದಿನಾಲು ದೇವಾಲಯದಲ್ಲಿ ಕೂತುಕೊಂಡು ಬೋಧಿಸುತ್ತಿದ್ದಾಗ ನೀವು ನನ್ನನ್ನು ಹಿಡಿಯಲಿಲ್ಲ; **ಆದರೆ ಪ್ರವಾದಿಗಳು ಬರೆದ ವಚನಗಳು ನೆರವೇರುವಂತೆ ಅದೆಲ್ಲಾ ಆಯಿತು"** ಎಂದು ಹೇಳಿದನು. ಆಗ ಶಿಷ್ಯರೆಲ್ಲರೂ ಆತನನ್ನು ಬಿಟ್ಟು ಓಡಿಹೋದರು. ಯೇಸುವನ್ನು ಹಿಡಿದವರು ಆತನನ್ನು ಮಹಾಯಾಜಕನಾದ ಕಾಯಫನ ಬಳಿಗೆ ತೆಗೆದು–ಕೊಂಡು ಹೋದರು. ಅಲ್ಲಿ ಶಾಸ್ತ್ರಿಗಳೂ ಹಿರಿಯರೂ ಕೂಡಿಬಂದಿದ್ದರು. (26:55-57)

ಈ ಪ್ರಕಾರ, ಯೇಸು ತನ್ನನ್ನು ಕೊಲ್ಲುವದಕ್ಕೆ ಅಪೇಕ್ಷಿಸಿದವರ ಕೈಯೊಳಗೆ ತಾನೇ ಸ್ವತ: ಹೇಗೆ ಸಿಕ್ಕುವಂತೆ ಮಾಡಿಕೊಂಡನೆಂಬುದನ್ನು ಈದಿನ ನಾವು ನೋಡಿಕೊಂಡೆವು. ಬಹುಶ: ಯಾರಾದರೂ, **"**ಯೇಸು ಯಾಕೆ ತಾನೇ ಸ್ವತ: ತನ್ನ ಶತೃಗಳ ಕೈಯೊಳಗೆ ಬೀಳುವದಕ್ಕೆ ಅವಕಾಶ ಮಾಡಿಕೊಂಡನು? ಬಿರುಗಾಳಿಯನ್ನು ನಿಲ್ಲಿಸಿದವನು, ದೆವ್ವಗಳನ್ನು ಓಡಿಸಿದವನು, ಕುರುಡರನ್ನು ಗುಣಪಡಿಸಿದವನು, ಸತ್ತವ–ರನ್ನು ಎಬ್ಬಿಸಿದವನು, ತನ್ನ ಶತೃಗಳಿಂದ ತನ್ನನ್ನು ತಾನೇ ಯಾಕೆ ರಕ್ಷಿಸಿಕೊಳ್ಳಲಿಲ್ಲ?**"** ಎಂದು ಕೇಳಬಹುದು. ಯಾಕೆ ಎಂದು ಯೇಸು ತಾನೇ ಹೇಳಿದ್ದಾನೆ. ಆತನ ಶಿಷ್ಯರಲ್ಲಿ ಒಬ್ಬನು ಆತನನ್ನು ಕಾಪಾಡುವದಕ್ಕೆ ಪ್ರಯತ್ನಿಸಿದಾಗ, ಯೇಸು ಅವನಿಗೆ, **"**ನಿನ್ನ ಕತ್ತಿಯನ್ನು ತಿರಿಗಿ ಒರೆಯಲ್ಲಿ ಸೇರಿಸು; ಕತ್ತಿಯನ್ನು ಹಿಡಿದವರೆಲ್ಲರೂ ಕತ್ತಿಯಿಂದ ಸಾಯುವರು. ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆ–ನೆಂದೂ ಬೇಡಿಕೊಂಡರೆ ಆತನು ನನಗೆ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವದಿಲ್ಲವೆಂದು ನೆನಸುತ್ತೀಯಾ? **ಕಳುಹಿಸಿಕೊಟ್ಟರೆ ನನಗೆ ಇಂಥಿಂಥದು ಆಗಬೇಕೆಂಬುವ ಶಾಸ್ತ್ರದ ಮಾತುಗಳು ನೆರವೇರುವದು ಹೇಗೆ**?**"** ಎಂದು ಹೇಳಿದನು. (ಮತ್ತಾಯ–26:52-54)

ಯೇಸು ಯಾಕೆ ತಾನೇ ತನ್ನ ಶತೃಗಳ ಕೈಯಿಂದ ಸೆರೆಹಿಡಿಯಲ್ಪಡುವದಕ್ಕೆ ಅವಕಾಶ ಮಾಡಿಕೊಟ್ಟನು? ಪಾಪವನ್ನು ನಿವಾರಣೆ ಮಾಡು–ವಂತ ಒಂದು ಯಜ್ಞದ ಹಾಗೆ ಮೆಸ್ಸೀಯನು ಸಂಕಟವನ್ನನುಭವಿಸಿ ತನ್ನ ರಕ್ತವನ್ನು ಸುರಿಸಬೇಕು ಎಂದು ಪದೇಪದೇ ಪ್ರವಾದಿಸಿರುವ **ಪ್ರವಾದಿಗಳ ವಾಕ್ಯಗಳನ್ನು ನೆರವೇರಿಸುವದಕ್ಕೆ** ಆತನು ಇದನ್ನು ಮಾಡಿದನು. ನಮ್ಮನ್ನು ದೇವರ ಕಡೆಗೆ ತರುವ ಕ್ರಮದಲ್ಲಿ ಅನೀತಿವಂತ–ರಿಗಾಗಿ ನೀತಿವಂತನಾದ ವಿಮೋಚಕನು ಸಾಯಬೇಕಾಗಿತ್ತು. ಮೆಸ್ಸೀಯನಾದ ಯೇಸು ಪ್ರವಾದಿಗಳ ಮಾತುಗಳನ್ನು ನೆರವೇರಿಸುವದಕ್ಕೆ ಈ ಲೋಕಕ್ಕೆ ಬಂದನು. ಯಜ್ಞದ ಕುರಿಯ ಅರ್ಥವನ್ನು ನೆರವೇರಿಸುವದಕ್ಕೆ ಆತನು ಬಂದನು. ನಿನ್ನನ್ನು ಮತ್ತು ನನ್ನನ್ನು ನಮ್ಮ ಪಾಪಗಳಿಂದ ರಕ್ಷಿಸುವದಕ್ಕೆ ಆತನು ಬಂದನು. ಅದಕ್ಕಾಗಿಯೇ ಆತನು ತಾನೇ ಸ್ವತ: ತನ್ನ ಶತೃಗಳಿಂದ ಸೆರೆಹಿಡಿಯಲ್ಪಡುವದಕ್ಕೆ ಅನು–ಮತಿಸಿಕೊಂಡನು. **ಯೇಸು ತನ್ನ ಜೀವವನ್ನು ನಿಮಗಾಗಿ ಮತ್ತು ನನಗಾಗಿ ಕೊಟ್ಟಿದ್ದಾನೆ**. ಅಂತಹ ಒಬ್ಬ ರಕ್ಷಕನನ್ನು ಕಳುಹಿಸಿಕೊಟ್ಟಿ–ದ್ದಕ್ಕೆ ದೇವರಿಗೆ ಸ್ತೋತ್ರ!

ಸ್ನೇಹಿತರೇ, ಈದಿನ ನಾವು ಇಲ್ಲಿಗೆ ನಿಲ್ಲಿಸುತ್ತೇವೆ. ಪ್ರವಾದಿಗಳ ಮಾತುಗಳು ನೆರವೇರುವ ಪ್ರಕಾರ, ಮಹಾಯಾಜಕರುಗಳು, ಯೆರೂಸ–ಲೇಮಿನ ಜನರೂ ಮತ್ತು ಅವರ ನಾಯಕರುಗಳು ಒಟ್ಟಾಗಿ ಸೇರಿಕೊಂಡು ಹೇಗೆ ಯೇಸುವಿಗೆ ತೀರ್ಪು ಮಾಡಿ ಆತನನ್ನು ಶಿಕ್ಷೆ–ಗೊಳಪಡಿಸುತ್ತಾರೆಂಬುದನ್ನು ನೋಡುವದಕ್ಕೆ ಮುಂದಿನ ಅಧ್ಯಯನದಲ್ಲಿ ಮತ್ತೆ ನಮ್ಮೊಂದಿಗೆ ನೀವು ಸೇರಿಕೊಳ್ಳುತ್ತೀರೆಂದು ನಾವು ನಿರೀಕ್ಷಿಸುತ್ತೇವೆ.

ಯೇಸು ತನ್ನ ಶಿಷ್ಯರಿಗೆ ಹೇಳಿರುವದನ್ನು ನೀವು ನೆನಪು ಮಾಡಿಕೊಳ್ಳುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ.

**"ನಾನು ತಿರಿಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ. . . .ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ!" (ಯೋಹಾನ–10:17,18**)

[ಪಾಠ 82: ಯೇಸು ಹಿಡಿಯಲ್ಪಟ್ಟದ್ದು] [ಸಾರಾಂಶಗಳ ಪಟ್ಟಿ] [ಪಾಠ 84: ಯೇಸು ಶಿಲುಬೆಗೆ ಜಡಿಯಲ್ಪಟ್ಟದ್ದು]

ಪಾಠ 83

# ಯೇಸು ದಂಡನೆಗೊಳಗಾದದ್ದು

ಮತ್ತಾಯ 26, 27; ಯೋಹಾನ 18, 19

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಿಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪರಿಶುದ್ಧ ವಾಕ್ಯಗಳ ಮೂಲಕವಾದ ನಮ್ಮ ಪ್ರಯಾಣದಲ್ಲಿ, ನಿತ್ಯವಾದ ಶಿಕ್ಷೆಯಿಂದ ಪಾಪಿಗಳನ್ನು ರಕ್ಷಿಸುವದಕ್ಕೆ ದೇವರು ರಚನೆಮಾಡಿದ್ದ **ರಕ್ಷಣೆಯ ಯೋಜನೆಯನ್ನು** ದೇವರ ಪ್ರವಾದಿಗಳು ಹೇಗೆ ಪ್ರಕಟಪಡಿಸಿದರೆಂಬುದನ್ನು ನಾವು ಕೇಳಿಸಿಕೊಂಡಿದ್ದೇವೆ. ರಕ್ಷಣೆಯ ಆ ಯೋಜನೆ ಯಾವುದು? ಅದು ಶಿಲುಬೆಯ ಮೇಲಿನ ಮೆಸ್ಸೀಯನ ಮರಣ. ನೀತಿವಂತನಾದ ಮೆಸ್ಸೀಯನು ಮರಣ ಹೊಂದುತ್ತಾನೆ, ಅನೀತಿವಂತರಿಗಾಗಿ ತನ್ನ ರಕ್ತವನ್ನು ಸುರಿಸುತ್ತಾನೆ, ಒಂದು ನಿಷ್ಕಳಂಕ ಯಜ್ಞದ ಕುರಿಯ ರೀತಿಯಲ್ಲಿ ನಮ್ಮ ಪಾಪಗಳಿಗಾಗಿ ನಮ್ಮ ಶಿಕ್ಷೆ–ಯನ್ನು ಹೊತ್ತುಕೊಳ್ಳುತ್ತಾನೆ ಎನ್ನುವದನ್ನು ದೇವರ ಪ್ರವಾದಿಗಳು ಸಾಕ್ಷಿಕೊಟ್ಟಿದ್ದರು. ದೇವರು ತನ್ನ ನೀತಿಯನ್ನು ಹೊಂದಾಣಿಕೆ ಮಾಡಿಕೊಳ್ಳದೇ ನನ್ನ ಪಾಪಗಳನ್ನು ಕ್ಷಮಿಸಿ ನಮ್ಮನ್ನು ನೀತಿವಂತರೆಂದು ತೀರ್ಪು ಮಾಡುವದಕ್ಕೆ ಇದೊಂದೇ ಮಾರ್ಗವಾಗಿತ್ತು. ಪರಿ–ಶುದ್ಧ ವಾಕ್ಯಗಳ ನಮ್ಮ ಕಾಲಾನುಕ್ರಮದ ಅಧ್ಯಯನದಲ್ಲಿ ಎಲ್ಲಕ್ಕಿಂತಲೂ ಹೆಚ್ಚು ಪ್ರಾಮುಖ್ಯವಾದ ಕತೆಗೆ ನಾವು ಹತ್ತಿರವಾಗಿದ್ದೇವೆ, ಅದೇನೆಂದರೆ, ಮೆಸ್ಸೀಯನ ಮರಣ ಮತ್ತು ಪುನರುತ್ಥಾನದ ಚಾರಿತ್ರಿಕ ವಿವರಣೆಯಾಗಿದೆ. ದೇವರ ಚಿತ್ತವಿದ್ದರೆ ಮುಂಬರುವ ಪಾಠ – –ಗಳಲ್ಲಿ, ಮೆಸ್ಸೀಯನಾದ ಯೇಸು ಲೋಕದ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ಹೇಗೆ ತನ್ನ ಜೀವಿತವನ್ನು ಸಮರ್ಪಿಸಿದನೆಂಬುದನ್ನು ನಾವು ನೋಡಿಕೊಳ್ಳಲಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಯೇಸು ಮತ್ತು ಆತನ ಶಿಷ್ಯರಿದ್ದ ಸ್ಥಳಕ್ಕೆ ತಮ್ಮನ್ನು ಕರೆದುಕೊಂಡು ಹೋಗುವದಕ್ಕೆ ಮಹಾಯಾಜಕರುಗಳು ಹೇಗೆ ಒಬ್ಬ ಹಿಡುಕೊಡುವವನನ್ನು ಕೊಂಡುಕೊಂಡರೆಂಬುದನ್ನು ನಾವು ನೋಡಿದೆವು. ಅವರು ಯೇಸುವನ್ನು ಹೇಗೆ **ಸೆರೆಹಿಡಿದು** ಆತ–ನನ್ನು ಕಟ್ಟಿ ಕರೆದುಕೊಂಡು ಹೋದರೆಂಬುದನ್ನು ನಾವು ನೋಡಿದೆವು. **ಅದ್ಭುತ!** ದೇವರ ಬಲದಿಂದ ತುಂಬಿದ್ದ ಯೇಸು ತನ್ನನ್ನು ಹಿಡಿಯುವದಕ್ಕೆ ತನ್ನ ಶತ್ರುಗಳಿಗೆ ಯಾಕೆ ಅವಕಾಶ ಕೊಟ್ಟನು? ಯಾಕಂದರೆ **ಆತನು ಪ್ರವಾದಿಗಳ ವಾಕ್ಯಗಳನ್ನು ನೆರವೇರಿಸಬೇಕಾಗಿತ್ತು,** ಅದೇನೆಂದರೆ, ಮೆಸ್ಸೀಯನು ಸಂಕಟವನ್ನನುಭವಿಸಿ ಸತ್ತು ಮೂರನೆಯ ದಿನದಲ್ಲಿ ಎದ್ದುಬರುತ್ತಾನೆ, ಆದದರಿಂದ ಆತನನ್ನು ನಂಬುವವ–ರೆಲ್ಲರೂ ಪಾಪಗಳ ಕ್ಷಮಾಪಣೆಯನ್ನು ಹೊಂದಿಕೊಳ್ಳುತ್ತಾರೆ ಎಂಬದು. ಪ್ರವಾದಿಗಳು ಪ್ರವಾದಿಸಿದಂತೆಯೇ, ಮೆಸ್ಸೀಯನು **"**ವಧ್ಯ – –ಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆ ಇದ್ದನು.**"** (ಯೆಶಾಯ–53:7)

ಧಾರ್ಮಿಕ ನಾಯಕರುಗಳು ಯೇಸುವನ್ನು ಸೆರೆಹಿಡಿದ ನಂತರ, ಆ ಕತ್ತಲೆಯ ರಾತ್ರಿಯಂದು ಏನು ಸಂಭವಿಸಿತೆಂಬುದನ್ನು ನೋಡುವ–ದಕ್ಕೆ ಈಗ ನಾವು ಸುವಾರ್ತೆಯಲ್ಲಿ ಮುಂದುವರಿಸೋಣ. ವಾಕ್ಯವು ಹೇಳುವದೇನೆಂದರೆ:

ಅಷ್ಟರಲ್ಲಿ **ಅವರು ಯೇಸುವನ್ನು ಮಹಾಯಾಜಕನ ಬಳಿಗೆ ತೆಗೆದುಕೊಂಡು ಹೋದರು. ಇವನ ಬಳಿಗೆ ಮಹಾಯಾಜಕರು ಹಿರಿಯರು ಶಾಸ್ತ್ರಿಗಳು ಇವರೆಲ್ಲರೂ ಕೂಡಿಬಂದರು.** ಮತ್ತು ಪೇತ್ರನು ದೂರದಿಂದ ಆತನ ಹಿಂದೆ ಹೋಗುತ್ತಾ ಮಹಾಯಾಜಕನ ಮನೆಯ ಅಂಗಳ–ದೊಳಗೂ ಬಂದು ಓಲೇಕಾರರ ಸಂಗಡ ಬೆಂಕಿಯ ಮುಂದೆ ಕೂತುಕೊಂಡು ಚಳಿಕಾಯಿಸಿಕೊಳ್ಳುತ್ತಿದ್ದರು. (ಮಾರ್ಕ–14:53-54)

ಆಗ ಮಹಾಯಾಜಕರೂ ಹಿರೀ ಸಭೆಯವರೆಲ್ಲರೂ ಯೇಸುವನ್ನು ಕೊಲ್ಲಿಸಬೇಕೆಂದು ಆತನ ಮೇಲೆ ಸಾಕ್ಷಿಯನ್ನು ಹುಡುಕಿದರು; **ಆದರೆ ಏನೂ ಸಿಕ್ಕಲಿಲ್ಲ.** ಬಹುಮಂದಿ ಬಂದು ಆತನ ಮೇಲೆ ಸುಳ್ಳುಸಾಕ್ಷಿ ಹೇಳಿದರೂ ಅವರಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ. ತರುವಾಯ ಕೆಲವರು ಎದ್ದು ನಿಂತು, **"ಕೈಯಿಂದ ಕಟ್ಟಿರುವ ಈ ದೇವಾಲಯವನ್ನು ನಾನು ಕೆಡವಿಬಿಟ್ಟು ಕೈಯಿಂದ ಕಟ್ಟದಿರುವ ಮತ್ತೊಂದನ್ನು ಮೂರು ದಿನಗಳಲ್ಲಿ ಕಟ್ಟುವೆನು ಎಂದು ಇವನು ಹೇಳಿದ್ದನ್ನು ನಾವು ಕೇಳಿದ್ದೇವೆ"** ಎಂಬದಾಗಿ ಆತನ ಮೇಲೆ ಸುಳ್ಳುಸಾಕ್ಷಿ ಹೇಳಿದರು.

ಹೀಗೆ ಹೇಳಿದರೂ ಅವರ ಸಾಕ್ಷಿ ಒಂದಕ್ಕೊಂದು ಸರಿಬೀಳಲಿಲ್ಲ. ಆಗ ಮಹಾಯಾಜಕನು ಎದ್ದು ನಡುವೆ ನಿಂತು, “ನೀನೇನೂ ಉತ್ತರ ಹೇಳುವದಿಲ್ಲವೋ” ಇವರು ನಿನ್ನ ಮೇಲೆ ಹೇಳುವ ಈ ಸಾಕ್ಷಿ ಏನು” ಎಂದು ಯೇಸುವನ್ನು ಪ್ರಶ್ನಿಸಿದನು. ಆದರೆ ಆತನು ಸುಮ್ಮನಿದ್ದು ಏನೂ ಉತ್ತರ ಹೇಳಲಿಲ್ಲ. ತಿರಿಗಿ ಮಹಾಯಾಜಕನು, “ಭಗವಂತನ ಕುಮಾರನಾದ ಕ್ರಿಸ್ತನೋ ನೀನು?” ಎಂದು ಆತನನ್ನು ಕೇಳಲಾಗಿ ಯೇಸು, **“ನಾನೇ,** ಇದಲ್ಲದೆ ಮನುಷ್ಯಕುಮಾರನು ಸರ್ವಶಕ್ತನ ಬಲಗಡೆಯಲ್ಲಿ ಆಸೀನನಾಗಿರುವದನ್ನೂ ಆಕಾಶದ ಮೇಘಗಳೊಂದಿಗೆ ಬರುವದನ್ನೂ ನೋಡುವಿರಿ” ಅಂದನು. ಇದನ್ನು ಕೇಳಿ ಮಹಾಯಾಜಕನು ತನ್ನ ಅಂಗಿಗಳನ್ನು ಹರಕೊಂಡು, “ನಮಗೆ ಸಾಕ್ಷಿಗಳು ಇನ್ನು ಯಾತಕ್ಕೆ ಬೇಕು?ಇವನು ಮಾಡಿದ ದೂಷಣೆಯನ್ನು ಕೇಳಿದಿರಲ್ಲಾ; ನಿಮಗೆ ಹೇಗೆ ಕಾಣುತ್ತದೆ” ಅನ್ನಲು ಅವರೆಲ್ಲರು,**“ಇವನು ಮರಣ ದಂಡನೆ ಹೊಂದತಕ್ಕವನು” ಎಂದು ತೀರ್ಪುಮಾಡಿದರು**. ಆಮೇಲೆ ಕೆಲವರು ಆತನನ್ನು ಉಗುಳಿ ಆತನ ಮುಖಕ್ಕೆ ಮುಸುಕು ಹಾಕಿ ಗುದ್ದಿ, “ಪ್ರವಾದನೆ ಹೇಳು” ಅನ್ನುತ್ತಿದ್ದರು. ಮತ್ತು ಓಲೇಕಾರರು ಆತನ ಕೆನ್ನೆಗೆ ಏಟು ಹಾಕುತ್ತಾ ತಮ್ಮ ವಶಕ್ಕೆ ತೆಗೆದುಕೊಂಡರು. (ಮಾರ್ಕ–14:55-65)

ಇತ್ತಲಾಗಿ **ಪೇತ್ರನು** ಅಂಗಳದಲ್ಲಿ ಇದ್ದಾಗ ಮಹಾಯಾಜಕನ ದಾಸಿಯರಲ್ಲಿ ಒಬ್ಬಳು ಬಂದು ಅವನು ಚಳಿಕಾಯಿಸಿಕೊಳ್ಳುತ್ತಿರುದನ್ನು ಕಂಡು ಅವನನ್ನು ನೋಡಿ, “ನೀನು ಸಹ ಆ ನಜರೇತಿನವನಾದ ಯೇಸುವಿನ ಕೂಡ ಇದ್ದವನು” ಅಂದಳು. ಅವನು, “ಅಲ್ಲ, ನೀನು ಏನನ್ನುತ್ತೀಯೋ ನನಗೆ ಗೊತ್ತಿಲ್ಲ, ತಿಳಿಯುವದಿಲ್ಲ” ಎಂದು ಹೇಳಿ ಹೊರಂಗಳಕ್ಕೆ ಹೋದನು. ಅಲ್ಲಿ ದಾಸಿಯು ಅವನನ್ನು ಕಂಡು ಹತ್ತಿರದಲ್ಲಿ ನಿಂತಿದ್ದವರಿಗೆ, “ಇವನೂ ಅವರಲ್ಲಿ ಒಬ್ಬನು” ಎಂದು ತಿರಿಗಿ ಹೇಳುವದಕ್ಕೆ ತೊಡಗಿದಳೂ. ಅವನು ತಿರಿಗಿ “ಅಲ್ಲ”ಅಂದನು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿ ನಿಂತವರು ಪೇತ್ರನಿಗೆ, “ನಿಶ್ಚಯವಾಗಿ ನೀನೂ ಅವರಲ್ಲಿ ಒಬ್ಬನು; ನೀನು ಗಲಿಲಾಯದವನಷ್ಟೆ” ಎಂದು ತಿರಿಗಿ ಹೇಳಿದರು. ಆದರೆ ಅವನು, “ನೀವು ಹೇಳುವ ಆ ಮನುಷ್ಯನನ್ನು ನಾನರಿಯೆನು” ಎಂದು ಹೇಳಿ ಶಪಿಸಿಕೊಳ್ಳುವದಕ್ಕೂ ಆಣೆ –ಯಿಟ್ಟುಕೊಳ್ಳುವದಕ್ಕೂ ಪ್ರಾರಂಭಿಸಿದನು. ಕೂಡಲೆ ಕೋಳಿ ಎರಡನೆಯ ಸಾರಿ ಕೂಗಿತು. ಆಗ ಪೇತ್ರನು, ಕೋಳಿ ಎರಡು ಸಾರಿ ಕೂಗು –ವದಕ್ಕಿಂತ ಮುಂಚೆ ಮೂರು ಸಾರಿ ನನ್ನ ವಿಷಯವಾಗಿ ಅವನನ್ನು ಅರಿಯೆನೆಂಬುದಾಗಿ ಹೇಳುವಿ ಎಂದು ಯೇಸು ತನಗೆ ಹೇಳಿದ ಮಾತನ್ನು ನೆನಪಿಗೆ ತಂದುಕೊಂಡು ಆ ವಿಷಯದಲ್ಲಿ ಯೋಚಿಸಿ ಅತ್ತನು. (14:66-72)

ಬೆಳಗಾಗಲು ಎಲ್ಲಾ ಮಹಾಯಾಜಕರೂ ಜನರ ಹಿರಿಯರೂ ಯೆಸುವನ್ನು ಕೊಲ್ಲಿಸಬೇಕೆಂದು ಆಲೋಚನೆ ಮಾಡಿಕೊಂಡು ಆತನನ್ನು ಕಟ್ಟಿಸಿತೆಗೆದುಕೊಂಡು ಹೋಗಿ ದೇಶಾಧಿಪತಿಯಾದ ಪಿಲಾತನಿಗೆ ಒಪ್ಪಿಸಿದರು. ಆಗ ಆತನನ್ನು ಹಿಡುಕೊಟ್ಟ **ಯೂದನು** ಆತನಿಗೆ ಮರಣದಂಡನೆಯ ತೀರ್ಪಾಯಿತೆಂದು ನೋಡಿ ಪಶ್ಚಾತ್ತಾಪಪಟ್ಟಡುಟು ಆ ಮೂವತ್ತು ರೂಪಾಯಿಗಳನ್ನು ಮಹಾಯಾಜಕರಿಗೂ ಹಿರಿ – –ಯರಿಗೂ ತಿರಿಗಿ ತಂದು, “ತಪ್ಪಿಲ್ಲದವನನ್ನು ಮರಣಕ್ಕೆ ಒಪ್ಪಿಸಿಕೊಟ್ಟು ಪಾಪ ಮಾಡಿದೆನು” ಅಂದನು. ಅದಕ್ಕವರು, “ಅದು ನಮ – –ಗೇನು? ನೀನೆ ನೋಡಿಕೋ” ಅಂದರು. ಆಗ ಅವನು ಆ ಹಣವನ್ನು ದೇವಾಲಯದೊಳಗೆ ಬಿಸಾಟುಬಿಟ್ಟು ಹೊರಟುಹೋಗಿ ಉರ್ಲು ಹಾಕಿಕೊಂಡು ಸತ್ತನು. (ಮತ್ತಾಯ–27:1-5)

ಆಮೇಲೆ **ಅವರು ಯೇಸುವನ್ನು ಕಾಯಫನ ಬಳಿಯಿಂದ ಅರಮನೆಗೆ ಕರಕೊಂಡು ಹೋದರು**. ಆಗ ಮುಂಜಾನೆ ಆಗಿತ್ತು. ಅವರು ತಮಗೆ ಮೈಲಿಗೆ ತಟ್ಟಿ ಪಸ್ಕದ ಊಟವನ್ನು ಮಾಡುವದಕ್ಕೆ ಅಡ್ಡಿಯಾದೀತೆಂದು ಅರಮನೆಯೊಳಕ್ಕೆ ಹೋಗಲಿಲ್ಲ. ಹೀಗಿರಲಾಗಿ **ಪಿಲಾತನು** ಹೊರಕ್ಕೆ ಅವರ ಬಳಿಗೆ ಬಂದು, “ಈ ಮನುಷ್ಯ ಮೇಲೆ ಏನು ದೂರು ತರುತ್ತೀರಿ” ಎಂದು ಕೇಳಿದನು. ಅವರು ಅವನಿಗೆ, “ಇವನು ದುಷ್ಕರ್ಮಿಯಲ್ಲದಿದ್ದರೆ ನಾವು ಇವನನ್ನು ನಿನಗೆ ಒಪ್ಪಿಸಿಕೊಡುತ್ತಿದ್ದಿಲ್ಲ” ಎಂದು ಉತ್ತರ ಕೊಟ್ಟರು. ಆಗ ಪಿಲಾತನು ಅವರಿಗೆ, “ನೀವೇ ಅವನನ್ನು ತಕ್ಕೊಂಡುಹೋಗಿ ನಿಮ್ಮ ಧರ್ಮಶಾಸ್ತ್ರದ ಪ್ರಕಾರ ಅವನಿಗೆ ತೀರ್ಪು ಮಾಡಿರಿ” ಎಂದು ಹೇಳಿದನು. ಅದಕ್ಕೆ ಯೆಹೂದ್ಯರು, “ಮರಣದಂಡನೆಯನ್ನು ವಿಧಿಸುವ ಅಧಿಕಾರವು ನಮಗಿಲ್ಲ” ಅಂದರು. ಇದರಿಂದ ಯೇಸು ತಾನು ಎಂಥಾ ಸಾವು ಸಾಯುವೆನೆಂದು ಸೂಚಿಸಿ ಹೇಳಿದ ಮಾತು ನೆರವೇರಿತು. (ಯೋಹಾನ–18:28-32)

ಆಗ ಪಿಲಾತನು ತಿರಿಗಿ ಅರಮನೆಯೊಳಕ್ಕೆ ಹೋಗಿ ಯೇಸುವನ್ನು ಕರೆದು ಆತನನ್ನು, “ನೀನು ಯೆಹೂದ್ಯರ ಅರಸನು ಹೌದೋ” ಎಂದು ಕೇಳಿದನು. ಯೇಸು, “ನಿನ್ನಷ್ಟಕ್ಕೆ ನೀನೇ ಇದನ್ನು ಹೇಳುತ್ತಿಯೋ? ಮತ್ತೊಬ್ಬರು ನನ್ನ ವಿಷಯದಲ್ಲಿ ನಿನಗೆ ಹೇಳಿದ್ದಾರೋ?” ಎಂದು ಕೇಳಲು ಪಿಲಾತನು, “ನಾನೇನು ಯೆಹೂದ್ಯನೇ? ನಿನ್ನ ಸ್ವಂತ ಜನವೂ ಮಹಾಯಾಜಕರೂ ನಿನ್ನನ್ನು ನನಗೆ ಒಪ್ಪಿಸಿದ್ದಾರೆ; ನೀನು ಏನು ಮಾಡಿದ್ದೀ” ಎಂದು ಕೇಳಿದ್ದಕ್ಕೆ ಯೇಸು, “ನನ್ನ ರಾಜ್ಯವು ಈ ಲೋಕದ್ದಲ್ಲ; ನನ್ನ ರಾಜ್ಯವು ಈ ಲೋಕದ್ದಾಗಿದ್ದರೆ ನಾನು ಯೆಹೂದ್ಯರ ಕೈಯಲ್ಲಿ ಬೀಳದಂತೆ ನನ್ನ ಪರಿವಾರದವರು ಕಾದಾಡುತ್ತಿದ್ದರು; ಆದರೆ ನನ್ನ ರಾಜ್ಯವು ಇಲ್ಲಿಯದಲ್ಲ” ಎಂದು ಉತ್ತರ ಕೊಟ್ಟನು. ಅದಕ್ಕೆ ಪಿಲಾತನು, “ಹಾಗಾದರೆ ನೀನು ಅರಸನು ಹೌದಲ್ಲವೇ” ಅಂದನು. ಯೇಸು ಅವನಿಗೆ, “ನನನ್ನು ಅರಸನೆಂದು ನೀನೇ ಹೇಳಿದ್ದೀ. ನಾನು ಸತ್ಯದ ವಿಷಯದಲ್ಲಿ ಸಾಕ್ಷಿ ಹೇಳುವದಕ್ಕೋಸ್ಕರ ಹುಟ್ಟಿದವನು, ಅದಕ್ಕೋಸ್ಕರವೇ ಈ ಲೋಕಕ್ಕೆ ಬಂದಿದ್ದೇನೆ. ಸತ್ಯಪರರೆಲ್ಲರೂ ನನ್ನ ಮಾತಿಗೆ ಕಿವಿಗೊಡುತ್ತಾರೆ” ಎಂದು ಉತ್ತರ ಕೊಟ್ಟನು. ಪಿಲಾತನು, “ಸತ್ಯವೆಂದೇನು?” ಅಂದನು ಇದನ್ನು ಹೇಳಿ ಪಿಲಾತನು ತಿರಿಗಿ ಯೆಹೂದ್ಯರ ಬಳಿಗೆ ಹೊರಕ್ಕೆ ಬಂದು, **“ನನಗೆ ಅವನಲ್ಲಿ ಯಾವ ಅಪರಾಧವೂ ಕಾಣಿಸುವದಿಲ್ಲ”** ಅಂದನು.

(18:33-38). ಅದಕ್ಕೆ ಅವರು, "ಗಲಿಲಾಯದಲ್ಲಿ ಪ್ರಾರಂಭಮಾಡಿ ಇಲ್ಲಿಯವರೆಗೂ ಯೂದಾಯ ಸೀಮೆಯಲ್ಲೆಲ್ಲಾ ಇವನು ಬೋಧನೆಮಾಡುತ್ತಾ ಜನರ ಮನಸ್ಸನ್ನು ಕದಲಿಸುತ್ತಾನೆ" ಎಂದು ಇನ್ನೂ ಒತ್ತಿ ಹೇಳಿದರು. ಇದನ್ನು ಪಿಲಾತನು ಕೇಳಿ, "ಈ ಮನು – –ಷ್ಯನು ಗಲಿಲಾಯದವನೋ ಎಂದು ವಿಚಾರಿಸಿ ಇವನು ಹೆರೋದನ ಅಧಿಕಾರಕ್ಕೆ ಒಳಪಟ್ಟವನು ಎಂದು ತಿಳುಕೊಂಡು ಆತನನ್ನು ಹೆರೋದನ ಬಳಿಗೆ ಕಳುಹಿಸಿದನು. ಹೆರೋದನು ಆ ದಿವಸಗಳಲ್ಲಿ ಯೆರೂಸಲೇಮಿನಲ್ಲೇ ಇದ್ದನು. (ಲೂಕ–23:5-7).

**ಹೆರೋದನು** ಯೇಸುವನ್ನು ನೋಡಿದಾಗ ಬಹಳ ಸಂತೋಷಪಟ್ಟನು; ಯಾಕಂದರೆ ಆತನ ವಿಷಯವಾಗಿ ಅನೇಕ ಸಂಗತಿಗಳನ್ನು ಕೇಳಿ –ದ್ದರಿಂದ ಆತನನ್ನು ಕಾಣಬೇಕೆಂದು ಬಹು ಕಾಲದಿಂದ ಅಪೇಕ್ಷಿಸಿದ್ದನು, ಆತನಿಂದ ಯಾವದಾದರೂ ಒಂದು ಸೂಚಕಕಾರ್ಯ – –ವಾಗುವದನ್ನು ನೋಡಬೇಕೆಂದು ನಿರೀಕ್ಷಿಸಿದನು. ಆದರೆ ಅವನು ಅನೇಕ ಮಾತುಗಳಿಂದ ಆತನನ್ನು ಪ್ರಶ್ನೆ ಮಾಡಿದಾಗ್ಯೂ ಆತನು ಅವನಿಗೆ ಏನೂ ಉತ್ತರ ಕೊಡಲಿಲ್ಲ. ಮಹಾಯಾಜಕರೂ ಶಾಸ್ತ್ರಿಗಳೂ ನಿಂತುಕೊಂಡು ಆತನ ಮೇಲೆ ಬಹು ಬಲವಾಗಿ ದೂರು ಹೇಳುತ್ತಿದ್ದರು. ಕಡೆಗೆ ಹೆರೋದನು ತನ್ನ ಸಿಪಾಯಿಗಳನ್ನು ಕೂಡಿಕೊಂಡು ಆತನನ್ನು ತಿರಸ್ಕರಿಸಿ ಹಾಸ್ಯಮಾಡಿ ಶೋಭಾಯಮಾನ – –ವಾದ ಉಡುಪನ್ನು ಹಾಕಿಸಿ ಪಿಲಾತನ ಬಳಿಗೆ ತಿರಿಗಿ ಕಳುಹಿಸಿಕೊಟ್ಟನು. ಅದೇ ದಿದಲ್ಲಿ ಹೆರೋದನೂ ಪಿಲಾತನೂ ಒಬ್ಬರಿಗೊಬ್ಬರು ಸ್ನೇಹಿತರಾದರು; ಅದಕ್ಕಿಂತ ಮೊದಲು ವೈರಿಗಳಾಗಿದ್ದರು. (23:8-12)

ತರುವಾಯ ಪಿಲಾತನು ಮಹಾಯಾಜಕರನ್ನೂ ಅಧಿಕಾರಿಗಳನ್ನೂ ಪ್ರಜೆಗಳನ್ನೂ ಒಟ್ಟಾಗಿ ಕರಿಸಿ ಅವರಿಗೆ,"ಈ ಮನುಷ್ಯನು ಪ್ರಜೆಗಳನ್ನು ತಿರುಗಿಬೀಳುವಂತೆ ಮಾಡುವವನು ಎಂದು ಇವನನ್ನು ನನ್ನ ಬಳಿಗೆ ತಂದಿರಲ್ಲಾ; ನೀವು ಇವನ ಮೇಲೆ ತಂದ ದೂರುಗಳ ವಿಷಯ – –ವಾಗಿ ನಾನು ನಿಮ್ಮ ಮುಂದೆಯೇ ವಿಚಾರಣೆ ಮಾಡಿದರೂ **ಇವನಲ್ಲಿ ಒಂದು ತಪ್ಪಾದರೂ ನನಗೆ ಕಾಣಲಿಲ್ಲ**. ಹೆರೋದನಿಗೂ ಕಾಣ – ಲಿಲ್ಲ; ಅವನು ಇವನನ್ನು ಹಿಂತಿರುಗಿ ನಮ್ಮ ಬಳಿಗೆ ಕಳುಹಿಸಿದನಲ್ಲಾ. ಇವನು ಮರಣದಂಡನೆಗೆ ಯೋಗ್ಯವಾದದ್ದೇನೂ ಮಾಡಿದವ– –ನಲ್ಲವೆಂದಾಯಿತು. (23:13-15). ಆದರೆ ಪಸ್ಕಹಬ್ಬದಲ್ಲಿ ನಾನು ಒಬ್ಬನನ್ನು ಬಿಟ್ಟುಕೊಡುವ ಪದ್ಧತಿ ಉಂಟಷ್ಟೆ; ನಾನು ಯೆಹೂ – ದ್ಯರ ಅರಸನನ್ನು ಬಿಟ್ಟುಕೊಡುವದು ನಿಮಗೆ ಇಷ್ಟವೋ" ಎಂದು ಅವರನ್ನು ಕೇಳಿದನು. ಅದಕ್ಕೆ ಅವರು, "ಇವನನ್ನು ಬೇಡ, **ಬರಬ್ಬ – –ನನ್ನು** ಬಿಟ್ಟುಕೊಡಬೇಕು" ಎಂದು ತಿರಿಗಿ ಕೂಗಿ ಹೇಳಿದರು!" (ಯೋಹಾನ–18:39-40). ಈ ಬರಬ್ಬನನ್ನು ಆ ಪಟ್ಟಣದಲ್ಲಿ ನಡೆದ ಒಂದಾನೊಂದು ದಂಗೆಯ ನಿಮಿತ್ತವಾಗಿಯೂ ಕೊಲೆಯ ನಿಮಿತ್ತವಾಗಿಯೂ ಸೆರೆಮನೆಯಲ್ಲಿ ಹಾಕಿದ್ದರು. ಪಿಲಾತನು ಯೇಸುವನ್ನು ಬಿಡಿಸಬೇಕೆಂದು ಮನಸ್ಸುಳ್ಳವನಾಗಿದ್ದು ತಿರಿಗಿ ಅವರ ಸಂಗಡ ಮಾತಾಡಿದನು. ಆದರೆ ಅವರು, "ಅವನನ್ನು **ಶಿಲುಬೆಗೆ ಹಾಕಿಸು, ಶಿಲು –ಬೆಗೆ ಹಾಕಿಸು**" ಎಂದು ಕೂಗುತ್ತಿದ್ದರು. ಅವನು ಮೂರನೆಯ ಸಾರಿ, "ಯಾಕೆ? ಕೆಟ್ಟದ್ದೇನು ಮಾಡಿದನು? ನಾನು ಇವನಲ್ಲಿ ಮರಣ ದಂಡನೆಗೆ ತಕ್ಕ ಅಪರಾದವೇನೂ ಕಾಣಲಿಲ್ಲ; ಆದದರಿಂದ ಇವನನ್ನು ಹೊಡಿಸಿ ಬಿಟ್ಟುಬಿಡುತ್ತೇನೆ" ಎಂದು ಅವರಿಗೆ ಹೇಳಿದನು. (ಲೂಕ–23:19-22)

ಆ ಮೇಲೆ ಪಿಲಾತನು ಯೇಸುವನ್ನು **ಕೊರಡೆಯಿಂದ ಹೊಡೆಸಿದನು.** ಮತ್ತು ಸಿಪಾಯಿಗಳು **ಮುಳ್ಳುಬಳ್ಳಿಯಿಂದ ಕಿರೀಟವನ್ನು** ಕೆಣೆದು ಆತನ ತಲೆಯ ಮೇಲೆ ಇಟ್ಟು ಕೆಂಪು ಒಲ್ಲಿಯನ್ನು ಆತನಿಗೆ ಹೊದಿಸಿ ಆತ ಬಳಿಗೆ ಬಂದು, "ಯೆಹೂದ್ಯರ ಅರಸನೇ, ನಿನಗೆ ನಮ – –ಸ್ಕಾರ!" ಎಂದು ಹೇಳಿ **ಆತನ ಕೆನ್ನೆಗೆ ಏಟು ಹಾಕಿದರು.** (ಆತನು ಮೇಲೆ ಉಗುಳಿ ಆ ಬೆತ್ತವನ್ನು ಕಸಕೊಂಡು ಆತನ ತಲೆಯ ಮೆಲೆ ಹೊಡೆದರು. ಮತ್ತಾಯ–27:30). ತರುವಾಯ ಪಿಲಾತನು ತಿರಿಗಿ ಹೊರಗೆ ಬಂದು ಯೆಹೂದ್ಯರಿಗೆ, "ನನಗೆ ಅವನಲ್ಲಿ ಯಾವ ಅಪರಾದವೂ ಕಾಣಿಸಲಿಲ್ಲವೆಂಬದು ನಿಮಗೆ ತಿಳಿಯುವಂತೆ ಅವನನ್ನು ನಿಮ್ಮ ಬಳಿಗೆ ಹೊರಗೆ ತರುತ್ತೆನೆ, ನೋಡಿರಿ," ಎಂದು ಹೇಳಿ – –ದನು. ಆಗ ಯೇಸು ಮುಳ್ಳಿನ ಕಿರೀಟವನ್ನೂ ಕೆಂಪು ಒಲ್ಲಿಯನ್ನೂ ಧರಿಸಿದವನಾಗಿ ಹೊರಕ್ಕೆ ಬಂದನು. ಪಿಲಾತನು ಅವರಿಗೆ, "ಇಗೋ, ಈ ಮನುಷ್ಯನು!" ಅಂದನು. ಮಹಾಯಾಜಕರೂ ಓಲೇಕಾರರೂ ಆತನನ್ನು ಕಾಣುತ್ತಲೇ, **"ಶಿಲುಬೆಗೆ ಹಾಕಿಸು, ಶಿಲುಬೆಗೆ ಹಾಕಿಸು"** ಎಂದು ಕೂಗಿದರು. ಪಿಲಾತನು ಅವರಿಗೆ, "ಬೇಕಾದರೆ ನೀವೇ ಅವನನ್ನು ತಕ್ಕೊಂಡುಹೋಗಿ ಶಿಲುಬೆಗೆ ಹಾಕಿಸಿರಿ; ನನಗೆ ಅವನಲ್ಲಿ ಅಪರಾಧವು ಕಾಣಿಸಲಿಲ್ಲವೆಂದು" ಹೇಳಿದನು. ಯೆಹೂದ್ಯರು ಅವನಿಗೆ, "ನಮಗೆ ಒಂದು ನೇಮ ಉಂಟು, ಆ ನೇಮದ ಪ್ರಕಾರ ಇವನು ಸಾಯತಕ್ಕವನು; ಯಾಕಂದರೆ ಅವನು ತನ್ನನ್ನು ದೇವರ ಮಗನಾಗಿ ಮಾಡಿಕೊಂಡಿದ್ದಾನೆ" ಎಂದು ಉತ್ತರ ಕೊಟ್ಟರು. (ಯೋಹಾನ–19:1-7)

ಪಿಲಾತನು ಈ ಮಾತನ್ನು ಕೇಳಿ ಮತ್ತಷ್ಟು ಹೆದರಿಕೊಂಡು ತಿರಿಗಿ ಅರಮನೆಯೊಳಕ್ಕೆ ಹೋಗಿ, **"ನೀನು ಎಲ್ಲಿಂದ ಬಂದವನು"** ಎಂದು ಯೇಸುವನ್ನು ಕೇಳಿದನು. ಆದರೆ ಯೇಸು ಅವನಿಗೆ ಉತ್ತರ ಕೊಡಲಿಲ್ಲ. ಪಿಲಾತನು, "ನನ್ನ ಸಂಗಡಲೂ ನೀನು ಮಾತಾಡುವದಿ – –ಲ್ಲವೋ? ನಿನ್ನನ್ನು ಬಿಡಿಸುವ ಅಧಿಕಾರವೂ ನಿನ್ನನ್ನು ಶಿಲುಬೆಗೆ ಹಾಕಿಸುವ ಅಧಿಕಾರವೂ ನನಗೆ ಉಂಟೆಂಬದು ನಿನಗೆ ಗೊತ್ತಿಲ್ಲವೋ" ಎಂದು ಕೇಳಿದನು. ಅದಕ್ಕೆ ಯೇಸು, "ಮೇಲಣಿಂದ ನಿನಗೆ ಕೊಡಲ್ಪಡದಿದ್ದ ನನ್ನ ಮೇಲೆ ನಿನಗೆ ಯಾವ ಅಧಿಕಾರವೂ ಇರುತ್ತಿರಲಿಲ್ಲ.

ಆದಕಾರಣ ನನ್ನನ್ನು ನಿನಗೆ ಒಪ್ಪಿದವನಿಗೆ ಹೆಚ್ಚಿನ ಪಾಪ ಉಂಟು" ಅಂದನು. ಈ ಮಾತಿನ ದೆಸೆಯಿಂದ ಪಿಲಾತನು ಆತನನ್ನು ಬಿಡಿ –ಸುವದಕ್ಕೆ ಪೇಚಾಡಿದನು. ಯೆಹೂದ್ಯರು, "ನೀನು ಇವನನ್ನು ಬಿಡಿಸಿದರೆ ನೀನು ಕೈಸರಿನಿಗೆ ಮಿತ್ರನಲ್ಲ; ತನ್ನನ್ನು ಅರಸನಾಗಿ ಮಾಡಿ –ಕೊಳ್ಳುವವನು ಕೈಸರನಿಗೆ ವಿರೋಧಿ" ಎಂದು ಕೂಗಿ ಹೇಳಿದರು. (19:8-12)

ಆಗ ಪಿಲಾತನು ತನ್ನ ಯತ್ನ ನಡೆಯುವದಿಲ್ಲ, ಗದ್ದಲ ಮಾತ್ರ ಹೆಚ್ಚಾಗುತ್ತದೆ ಎಂದು ತಿಳಿದು ನೀರು ತಕ್ಕೊಂಡು ಜನರ ಮುಂದೆ ಕೈ ತೊಳಕೊಂಡು, "ಈ ಪುರುಷನನ್ನು ಕೊಲ್ಲಿಸಿದ್ದಕ್ಕೆ ನಾನು ಸೇರಿದವನಲ್ಲ, ನೀವೇ ನೋಡಿಕೊಳ್ಳಿರಿ" ಅನ್ನಲಾಗಿ ಜನರೆಲ್ಲಾ, "ಅವನನ್ನು ಕೊಲ್ಲಿಸಿದ್ದಕ್ಕೆ ನಾವೂ ನಮ್ಮ ಮಕ್ಕಳೂ ಉತ್ತರ ಕೊಡುತ್ತೇವೆ" ಅಂದರು. (ಮತ್ತಾಯ–27:24,25). ಅದಕ್ಕೆ **ಪಿಲಾತನು ಜನರ ಮನ –ಸ್ಸನ್ನು ಸಮಾಧಾನಪಡಿಸಬೇಕೆಂದು ಬರಬ್ಬನನ್ನು ಅವರಿಗೆ ಬಿಟ್ಟುಕೊಟ್ಟು ಯೇಸುವನ್ನು ಕೊರಡೆಗಳಿಂದ ಹೊಡಿಸಿ ಶಿಲುಬೆಗೆ ಹಾಕುವದಕ್ಕೆ ಒಪ್ಪಿಸಿದನು.**

ಹೀಗೆ, ಪ್ರವಾದಿಯಾದ ಯೆಶಾಯನು ಸುಮಾರು ಏಳು ನೂರು ವರುಷಗಳ ಹಿಂದೆಯೇ ಮೆಸ್ಸೀಯನ ಕುರಿತಾಗಿ ಪ್ರವಾದಿಸಿ ಬರೆದಂತೆ ಪ್ರತಿಯೊಂದು ಸಂಭವಿಸಿತು: **"ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಿಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವನ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ."** (ಯೆಶಾಯ–53:7) ಯೆಶಾಯನು ಮೆಸ್ಸೀಯನ ಕುರಿತಾಗಿ ಈ ಮಾತುಗಳನ್ನು ಸಹ ಬರೆದಿದ್ದಾನೆ, "ಹೊಡೆಯುವವರಿಗೆ ಬೆನ್ನುಕೊಟ್ಟು ಕೂದಲು ಕೀಳುವವರಿಗೆ ಗಡ್ಡವನ್ನು ಒಡ್ಡಿದೆನು, ಉಗುಳಿಕೊಳ್ಳುವ ಅವಮಾನಕ್ಕೆ ನನ್ನ ಮುಖವನ್ನು ಮರೆಮಾಡಲಿಲ್ಲ. (ಯೆಶಾಯ–50:6).

ಯೆಹೂದ್ಯ ಧಾರ್ಮಿಕ ನಾಯಕರುಗಳು ಪರಿಶುದ್ಧನೂ ಮತ್ತು ನೀತಿವಂತನೂ ಆದ ಮೆಸ್ಸೀಯನನ್ನು ಹಿಂಸಿಸಿ ಬಾಧೆಗೊಳಪಡಿಸಿ ಮರಣದಂಡನೆಗೆ ಗುರಿಪಡಿಸಿ ಪ್ರವಾದಿಗಳ ಮಾತುಗಳನ್ನು ಹೇಗೆ ನೆರವೇರಿಸಿದರೆಂಬುದನ್ನು ಈದಿನ ನಾವು ನೋಡಿಕೊಂಡೆವು. ಧಾರ್ಮಿಕ ನಾಯಕರುಗಳು ಮೆಸ್ಸೀಯನಿಗೆ ಯಾಕೆ ಮರಣದಂಡನೆ ವಿಧಿಸಿದರು? ಯಾಕಂದರೆ ಅವರು ಬೆಳಕಿನ ಸತ್ಯವನ್ನು ಸಹಿಸಿ – –ಕೊಳ್ಳಲಿಲ್ಲ. ಯೇಸು ಅವರಿಗೆ ಸತ್ಯವನ್ನು ತಿಳಿಸಿದನು ಮತ್ತು ಆ ಸತ್ಯವು ಅವರ ಕಪಟತನವನ್ನೂ ಮತ್ತು ಕೆಟ್ಟತನವನ್ನೂ ಪ್ರಕಟಿ– –ಸಿತು. ಯೇಸು ತಾನೇ ಸತ್ಯವಾಗಿದ್ದನು! ಬೆಳಕು ಲೋಕಕ್ಕೆ ಬಂದಿತ್ತು, ಆದರೆ ಜನರು ತಮ್ಮ ಕೆಟ್ಟ ಕೆಲಸಗಳ ಕಾರಣದಿಂದ ಕತ್ತಲೆ – –ಯನ್ನೇ ಆಯ್ದುಕೊಂಡರು. ಮತ್ತು ಆದಾಮನ ಸಂತಾನವದವರು ಬೆಳಕನ್ನು ಸಹಿಸಿಕೊಳ್ಳದಿರುವ ಕಾರಣದಿಂದ, ಇದನ್ನು ನಾಶ ಮಾಡುವದಕ್ಕೆ ಪ್ರಯತ್ನಿಸುವದು ಮಾತ್ರ ಅವರ ಪರಿಹಾರವಾಗಿತ್ತು. ಅದಕ್ಕೋಸ್ಕರವೇ ವಾಕ್ಯ ಹೀಗೆ ಹೇಳುತ್ತದೆ:

"ಆ ಬೆಳಕು ಕತ್ತಲಿಲ್ಲ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ. . . .ಇದನ್ನು ಇಹಲೋಕಾಧಿಕಾರಿಗಳಲ್ಲಿ ಯಾರೂ ಅರಿಯಲಿಲ್ಲ; ಅರಿತಿದ್ದರೆ ಅವರು ಮಹಿಮೆಯುಳ್ಳ ಕರ್ತನನ್ನು ಶಿಲುಬೆಗೆ ಹಾಕಿಸುತ್ತಿರಲಿಲ್ಲ. ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ಥಾನಕ್ಕೆ ಬಂದನು; ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ. **ಯಾರಾರು ಆತನನ್ನು ಅಂಗೀಕರಿಸಿದರೋ, ಅಂದರೆ ಆತನ ಹೆಸರಿಲ್ಲಿ ನಂಬಿಕೆಯಿಟ್ಟರೋ ಅವರಿಗೆ ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು."** (ಯೋಹಾನ–1:5; 1ಕೊರಿಂಥ–2:8; ಯೋಹಾನ–1:10-12)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮೆಸ್ಸೀಯನ ಕುರಿತಾಗಿ ಕೀರ್ತನೆಗಳಲ್ಲಿ ಪ್ರವಾದಿಯಾದ ದಾವೀದನು, "ಅವರು ನನ್ನ ಕೈಕಾಲುಗಳನ್ನು ತಿವಿದಿದ್ದಾರೆ"(ಕೀರ್ತನೆ–22:16) ಎಂದು ಬರೆದಿರುವ ಮಾತುಗಳನ್ನು ಆದಾಮನ ಸಂತಾನದವರು ಹೇಗೆ ನೆರವೇರಿ– –ಸಿದರೆಂಬುದನ್ನು ನೋಡುವದಕ್ಕೆ ಮುಂದಿನ ಕಾರ್ಯಕ್ರಮದಲ್ಲಿ ನೀವು ನಮ್ಮೊಂದಿಗೆ ಸೇರಿಕೊಳ್ಳುತ್ತೀರೆಂದು ನಮಗೆ ನಿಶ್ಚಿತವಿದೆ.

ಮೆಸ್ಸೀಯನ ವೇದನೆಗಳ ಕುರಿತಾಗಿ ಪ್ರವಾದಿಯಾದ ಯೆಶಾಯನು ತುಂಬಾ ಹಿಂದೆಯೇ ಪ್ರವಾದಿಸಿರುವದನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಿಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸು –ವವನ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ."** (ಯೆಶಾಯ– 53:7)

[ಪಾಠ 83: ಯೇಸು ದಂಡನೆಗೊಳಗಾದದ್ದು] [ಸಾರಾಂಶಗಳ ಪಟ್ಟಿ] [ಪಾಠ 85: ಯೇಸು ಎದ್ದಿದ್ದಾನೆ]

ಪಾಠ 84

# ಯೇಸು ಶಿಲುಬೆಗೆ ಜಡಿಯಲ್ಪಟ್ಟದ್ದು

ಮತ್ತಾಯ 27; ಮಾರ್ಕ 15; ಲೂಕ 23; ಯೋಹಾನ 19

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಯೆಹೂದ್ಯ ಧಾರ್ಮಿಕ ಪ್ರಭುಗಳು ಯೇಸುವನ್ನು ಹೇಗೆ ಸೆರೆಹಿಡಿದು, ರಾತ್ರಿಯ ವೇಳೆಯಲ್ಲಿ ಆತನನ್ನು ಮಹಾಯಾಜಕನ ಬಳಿಗೆ ತೆಗೆದುಕೊಂಡು ಹೋಗಿ, ಸುಳ್ಳುಸಾಕ್ಷಿಗಳೊಂದಿಗೆ ಆತನನ್ನು **ವಿಚಾರಣೆ ಮಾಡಿ, ಶಿಕ್ಷೆಗೊಳಪಡಿಸಿ,** ದೇಶಾಧಿ –ಪತಿಯಾದ ಪಿಲಾತನ ಬಳಿಗೆ ಕರೆದುಕೊಂಡು ಹೋಗಿ, ಆತನನ್ನು ಶಿಲುಬೆಗೆ ಹಾಕುವದಕ್ಕೆ ಶಕ್ತರಾದರೆಂಬುದನ್ನು ನಾವು ನೋಡಿದೆವು. ಸೈನಿಕರುಗಳು ಯೇಸುವನ್ನು ಕ್ರೂರವಾಗಿ ಕೊರಡೆಗಳಿಂದ ಹೊಡೆದರು, ನಂತರ ಮುಳ್ಳಿನಿಂದ ಕಿರೀಟವನ್ನು ಮಾಡಿ ಆತನ ತಲೆಯ ಮೇಲಿಟ್ಟು ಆತನನ್ನು ಹಾಸ್ಯ ಮಾಡಿದರು, ಮುಖದ ಮೇಲೆ ಹೊಡೆದರು, ಆತನ ಮೇಲೆ ಉಗುಳಿದರು, ಕೋಲಿನಿಂದ ಆತನ ತಲೆಯ ಮೇಲೆ ಹೊಡೆದರು. **ಹೀಗೆ, ಆದಾಮನ ಸಂತಾನದವರು ಪರಲೋಕದಿಂದ ಬಂದಂತಹ ಮಹಿಮೆಯ ಕರ್ತನೂ, ನೀತಿವಂತನೂ ಆದವ –ನನ್ನು ನಿರಾಕರಿಸಿದರು.** ಯೇಸುವನ್ನು ಹಿಂಸಿಸಿದ ಜನರು ಪ್ರವಾದಿಗಳ ಮಾತುಗಳನ್ನು ತಿಳಿದಿರಲಿಲ್ಲ; ಆದಾಗ್ಯೂ, ಪಾಪಿಗಳ ಕೈಗಳಲ್ಲಿ ಮೆಸ್ಸೀಯನು ಈ ರೀತಿಯಲ್ಲಿ ಸಂಕಟವನ್ನನುಭವಿಸುತ್ತಾನೆಂದು ಅವರು ಪ್ರಕಟಿಸಿದ್ದ ಮಾತುಗಳನ್ನು ಅವರು ನೆರವೇರಿಸಿದರು.

ಈದಿನ ನಾವು ಸುವಾರ್ತೆಯಲ್ಲಿರುವದನ್ನು{ಇಂಜಿಲ್} ಮುಂದುವರಿಸಿ, ಬಹಳ ಹಿಂದೆ ತನ್ನ ಪ್ರವಾದಿಗಳು ಪ್ರಕಟಿಸಿದ್ದ **ರಕ್ಷಣೆಯ ದೊಡ್ಡ –ದಾದ ದೇವರ ಯೋಜನೆಯನ್ನು ನೆರವೇರಿಸುವ ಹಾಗೆ, ಮೆಸ್ಸೀಯನಾದ ಯೇಸು ಹೇಗೆ ಸಂಕಟವನ್ನನುಭವಿಸಿ ಶಿಲುಬೆಯ ಮೇಲೆ ಸತ್ತ – –ನೆಂಬುದನ್ನು** ನೋಡುತ್ತೇವೆ. ಈದಿನದ ಅಧ್ಯಯನವನ್ನು ಪ್ರಾರಂಭಿಸುವದಕ್ಕಿಂತ ಮುಂಚೆ, ಯೇಸು ಭೂಲೋಕದಲ್ಲಿ ಜೀವಿಸಿದ್ದಾಗ, ರೋಮ್ ಸಾಮ್ರಾಜ್ಯವು ನಿರ್ಧಿಷ್ಟ ಅಪರಾಧಿಗಳನ್ನು ಶಿಲುಬೆಯಾಕಾರದ ಕಂಬಗಳಿಗೆ ಅಥವಾ ಮರಗಳಿಗೆ ಜಡಿಯುವ ಮರಣದಂಡನೆ –ಯನ್ನು ವಿಧಿಸುತ್ತಿತ್ತು ಎನ್ನುವದನ್ನು ನೀವು ತಿಳಿದುಕೊಳ್ಳಬೇಕು. ಅಂತಹ ಒಂದು ಮರಣವು ಶಿಲುಬೆಯ ಮರಣ ಎಂದು ಕರೆಯಲ್ಪ –ಡುತ್ತಿತ್ತು. ಇದು ಅತೀ ಕೆಟ್ಟ ಅಪರಾಧಗಳಿಗಾಗಿ ಕಾದಿರಿಸಲ್ಪಟ್ಟ ಯಾತನಾಮಯವಾದ ನೋವಿನ ಮತ್ತು ಅವಮಾನಕರವಾದ ಮರಣ –ವಾಗಿತ್ತು.

ಇಂತಹ ಒಂದು ನೋವಿನ ಮತ್ತು ಅವಮಾನಕರವಾದ ಮರಣವನ್ನು ನೀತಿವಂತನಾದ ಮೆಸ್ಸೀಯನು ಹೊಂದುವಂತೆ ದೇವರು ಯಾಕೆ ವಿಧಿಸಿದನೆಂದು ನಿಮ್ಮಲ್ಲಿ ಕೆಲವರು ಬಹುಶ: ಆಶ್ಚರ್ಯಪಡಬಹುದು. ಯೇಸು ಇಂತಹ ಭಯಂಕರವಾದ ಮರಣವನ್ನು ಹೊಂದುವದಕ್ಕೆ ಕಾರಣವೇನೆಂದರೆ ಪಾಪವು ಅಂತಹ ಒಂದು ಭಯಂಕರವಾದ ಅಪರಾಧವಾಗಿತ್ತು. **ಪಾಪವು ಲೋಕದ ಸಮಸ್ಯೆ – –ಯಾಗಿದೆ.** ನಾವೆಲ್ಲರೂ ಪಾಪಿಗಳಾಗಿದ್ದು, ಪರಿಶುದ್ಧನೂ ಮತ್ತು ನೀತಿಯುಳ್ಳವನೂ ಆಗಿರುವ ದೇವರಿಗೆ ನಮ್ಮ ಪಾಪಗಳು ಒಂದು ಅಪರಾಧವಾಗಿವೆ! ಒಂದುವೇಳೆ ದೇವರು ತನ್ನ ನೀತಿಯನ್ನು ರಾಜಿ ಮಾಡಿಕೊಳ್ಳದೇ ನಿಮ್ಮ ಮತ್ತು ನನ್ನ ಪಾಪಗಳನ್ನು ಕ್ಷಮಿಸಿದರೆ, ಆಗ **ದೇವರು ಒಂದು ನ್ಯಾಯವಾದ ಮತ್ತು ಸಂಪೂರ್ಣವಾದ ತೀರ್ಪಿನೊಂದಿಗೆ ನಮ್ಮ ಪಾಪಗಳ ನ್ಯಾಯತೀರ್ಪು ಮಾಡಿದಂತಾಗುತ್ತದೆ.** ಆತನು ಕೇವಲ ಯಾವುದೋ ಒಂದು ರೀತಿಯಲ್ಲಿ ನಮ್ಮ ಪಾಪಗಳನ್ನು ಕ್ಷಮಿಸುವದಿಲ್ಲ. ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿ –ಯಾಗಿದ್ದು ಪ್ರತಿಯೊಂದು ಪಾಪವನ್ನು ಸರಿಯಾಗಿ ಶಿಕ್ಷಿಸುತ್ತಾನೆ. ಪಾಪದ ದಂಡನೆಯು ಮರಣ ಮತ್ತು ನರಕದ ನಿತ್ಯವಾದ ಬೆಂಕಿ – –ಯಾಗಿದೆ. ಈ ದಂಡನೆಯು **ಪೂರ್ತಿಯಾಗಿ** ಪಾವತಿಸಲ್ಪಡಬೇಕು. ನಮ್ಮ ಪಾಪಗಳ ಪೂರ್ತಿ ದಂಡನೆಯನ್ನು ಪಾವತಿಸುವದಕ್ಕೆ ದೇವರು ನಮಗಾಗಿ ಒಬ್ಬ ನೀತಿವಂತ ವಿಮೋಚಕನನ್ನು ಕಳಿಸಿದನೆಂಬುದು ಶುಭ ಸಂದೇಶವಾಗಿದೆ. ಯೇಸುವೆ ಆ ನೀತಿವಂತ ಮತ್ತು ಶಕ್ತನಾದ ವಿಮೋಚಕನಾಗಿದ್ದಾನೆ. ನಮ್ಮ ಪಾಪಗಳ ನಿಮಿತ್ತವಾಗಿ ನಮ್ಮ ಮೇಲೆ ಬೀಳಬೇಕಾಗಿದ್ದ ದೇವರ ಕೋಪದಿಂದ ನಮ್ಮನ್ನು ರಕ್ಷಿಸುವದಕ್ಕೆ ಆತನು ಬಂದನು.

ಈಗ ಪ್ರೀತಿಯ ಸ್ನೇಹಿತರೇ, ಯೇಸುವಿನ ಪವಿತ್ರವಾದ ಕತೆಯನ್ನು ಮತ್ತು ಶಿಲುಬೆಯ ಮೇಲಿನ ಆತನ ಮರಣವನ್ನು ನಾವು ಸುವಾ – –ರ್ತೆಯಿಂದ ಓದುವದನ್ನು ನೀವು ನಿಮ್ಮ ಮನಸ್ಸು ಮತ್ತು ಹೃದಯದಿಂದ ಕೇಳಿಸಿಕೊಳ್ಳುವಂತೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ವಾಕ್ಯವು ಹೇಳುವದೇನೆಂದರೆ:

**ಆಗ ಅವನು ಆತನನ್ನು ಶಿಲುಬೆಗೆ ಹಾಕಿಸುವದಕ್ಕೆ ಅವರ ವಶಕ್ಕೆ ಕೊಟ್ಟನು.** ಅವರು ಯೇಸುವನ್ನು ತೆಗೆದುಕೊಂಡು ಹೋದರು; ಆತನು ತನ್ನ ಶಿಲುಬೆಯನ್ನು ತಾನೇ ಹೊತ್ತುಕೊಂಡು ಕಪಾಲಸ್ಥಳವೆಂಬ ಸ್ಥಾನಕ್ಕೆ ಹೋದನು. ಇದಕ್ಕೆ ಇಬ್ರಿಯ ಮಾತಿನಲ್ಲಿ ಗೊಲ್ಗೊಥಾ ಎಂದು ಹೆಸರು. (ಯೋಹಾನ–19:16,17)

ಅವರು ಆತನನ್ನು ತೆಗೆದುಕೊಂಡು ಹೋಗುತ್ತಿರುವಾಗ ಹೊಲದಿಂದ ಬರುತ್ತಿದ್ದ ಕುರೇನೆಪಟ್ಟಣದ ಸೀಮೋನನೆಂಬವನನ್ನು ಹಿಡಿದು ಶಿಲುಬೆಯನ್ನು ಅವನ ಮೇಲೆ ಇಟ್ಟು ಯೇಸುವಿನ ಹಿಂದೆ ಹೊತ್ತುಕೊಂಡು ಬರುವ ಹಾಗೆ ಮಾಡಿದರು. ಜನರೂ ಸ್ತ್ರೀಯರೂ ದೊಡ್ಡ ಗುಂಪಾಗಿ ಆತನ ಹಿಂದೆ ಬಂದರು. ಆ ಸ್ತ್ರೀಯರು ಎದೆಬಡುಕೊಳ್ಳುತ್ತಾ ಆತನ ವಿಷಯದಲ್ಲಿ ಗೋಳಾಡುತ್ತಾ ಇದ್ದರು. . . .ಆತನ ಸಂಗಡ ಕೊಲ್ಲುವದಕ್ಕಾಗಿ ದುಷ್ಕರ್ಮಿಗಳಾಗಿದ್ದ ಬೇರೆ ಇಬ್ಬರನ್ನೂ ತೆಗೆದುಕೊಂಡು ಹೋದರು. ಅವರು ಕಪಾಲವೆಂಬ ಸ್ಥಳಕ್ಕೆ ಬಂದಾಗ ಅಲ್ಲಿ ಆತನನ್ನೂ ಆ ದುಷ್ಕರ್ಮಿಗಳನ್ನೂ ಶಿಲುಬೆಗೆ ಹಾಕಿದರು, ಒಬ್ಬನನ್ನು ಆತನ ಬಲಗಡೆಯಲ್ಲಿ ಒಬ್ಬನನ್ನು ಆತನ ಎಡಗಡೆಯಲ್ಲಿ ಹಾಕಿದರು. ಆಗ ಯೇಸು, **"ತಂದೆಯೇ, ಅವರಿಗೆ ಕ್ಷಮಿಸು; ತಾವು ಏನು ಮಾಡುತ್ತೇವೆಂಬದನ್ನು ಅರಿಯರು"** ಅಂದನು. . ಜನರು ನೋಡುತ್ತಾ ನಿಂತರು. ಇದಲ್ಲದೆ ಅಧಿಕಾರಿಗಳು ಹಾಸ್ಯಮಾಡಿ, "ಅವನು ಮತ್ತೊಬ್ಬರನ್ನು ರಕ್ಷಿಸಿದನು; ಅವನು ದೇವರಾರಿಸಿಕೊಂಡ ಕ್ರಿಸ್ತನು ಆಗಿದ್ದರೆ ತನ್ನನ್ನು ತಾನೇ ರಕ್ಷಿಸಿಕೊಳ್ಳಲಿ" ಅಂದರು. ಸಿಪಾಯಿಗಳು ಆತನನ್ನು ಹಾಸ್ಯ ಮಾಡಿದರು; ಅವರು ಆತನ ಹತ್ತಿರ ಬಂದು ಹುಳಿ ಮದ್ಯವನ್ನು ತೋರಿಸಿ, "ನೀನು ಯೆಹೂದ್ಯರ ಅರಸನಾಗಿದ್ದರೆ ನಿನ್ನನ್ನ ರಕ್ಷಿಸಿಕೋ" ಅಂದರು. (ಲೂಕ–23:26,27, 32-37)

ಇದಲ್ಲದೆ ಪಿಲಾತನು ಒಂದು ವಿಳಾಸವನ್ನು ಬರೆದು ಆತನ ಶಿಲುಬೆಯ ಮೇಲ್ಗಡೆ ಹಚ್ಚಿಸಿದನು. ಅದೇನೆಂದರೆ, "ನಜರೇತಿನ ಯೇಸು, ಯೆಹೂದ್ಯರ ಅರಸನು" ಎಂಬದೇ. ಅವರು ಯೇಸುವನ್ನು ಶಿಲುಬೆಗೆ ಹಾಕಿದ್ದ ಸ್ಥಳವು ಪಟ್ಟಣಕ್ಕೆ ಹತ್ತಿರವಾಗಿದ್ದದರಿಂದ ಯೆಹೂದ್ಯ –ರಲ್ಲಿ ಬಹಳ ಮಂದಿ ಆ ವಿಳಾಸವನ್ನು ಓದಿದರು. ಅದು ಇಬ್ರಿಯ ಗ್ರೀಕ್ ಲಾತಿನ್ ಭಾಷೆಗಳಲ್ಲಿ ಬರೆದಿತ್ತು. ಹೀಗಿರಲಾಗಿ ಯೆಹೂ – –ದ್ಯರ ಮಹಾಯಾಜಕರು ಪಿಲಾತನಿಗೆ, "ಯೆಹೂದ್ಯರ ಅರಸನು ಎಂದು ಬರೆಯದೆ, ನಾನು ಯೆಹೂದ್ಯರ ಅರಸನು ಎಂದು ಹೇಳಿದ –ವನು" ಎಂಬದಾಗಿ ಬರೆಯಬೇಕಂತ ಹೇಳಿದರು. ಅದಕ್ಕೆ ಪಿಲಾತನು, "ನಾನು ಬರೆದದ್ದು ಬರೆದಾಯಿತು" ಅಂದನು. ಸಿಪಾಯಿಗಳು ಯೇಸುವನ್ನು ಶಿಲುಬೆಗೆ ಹಾಕಿದ ಮೇಲೆ ಅವರು ಆತನ ಮೇಲು ಹೊದಿಕೆಗಳನ್ನು ತಕ್ಕೊಂಡು ನಾಲ್ಕು ಪಾಲು ಮಾಡಿ ಒಬ್ಬೊಬ್ಬ ಸಿಪಾ –ಯಿಗೆ ಒಂದೊಂದು ಪಾಲಿನ ಪ್ರಕಾರ ಹಂಚಿಕೊಂಡರು. ಆತನ ಒಳಂಗಿಯನ್ನು ಸಹ ತಕ್ಕೊಂಡರು; ಆದರೆ ಆ ಅಂಗಿಗೆ ಹೊಲಿಗೆ ಇರಲಿಲ್ಲ, ಅದು ಮೇಲಿನಿಂದ ಅಖಂಡವಾಗಿ ಹೆಣೆದದ್ದಾಗಿತ್ತು. ಅದನ್ನು ನೋಡಿ ಅವರು, "ನಾವು ಇದನ್ನು ಹರಿಯಬಾರದು; ಚೀಟು ಹಾಕಿ ಇದು ಯಾರಿಗೆ ಬರುವದೋ ನೋಡೋಣ" ಎಂದು ಮಾತಾಡಿಕೊಂಡರು. ಇದರಿಂದ, "ನನ್ನ ಬಟ್ಟೆಗಳನ್ನು ತಮ್ಮಲ್ಲಿ ಪಾಲು ಮಾಡಿಕೊಂಡರು, ನನ್ನ ಅಂಗಿಗೋಸ್ಕರ ಚೀಟು ಹಾಕಿದರು" ಎಂಬ **ಶಾಸ್ತ್ರದ ಮಾತು ನೆರವೇರಿತು**. ಸಿಪಾಯಿಗಳು ಇದನ್ನೆಲ್ಲಾ ಮಾಡಿ – ದರು. (ಯೋಹಾನ–19:19-24)

ತೂಗಹಾಕಿದ್ದ ಆ ದುಷ್ಕರ್ಮಿಗಳಲ್ಲಿ ಒಬ್ಬನು ಆತನನ್ನು ದೂಷಿಸಿ, "ನೀನು ಬರಬೇಕಾದ ಕ್ರಿಸ್ತನಲ್ಲವೇ, ನಿನ್ನನ್ನು ರಕ್ಷಿಸಿಕೋ, ನಮ್ಮನ್ನೂ ರಕ್ಷಿಸು" ಎಂದು ಹೇಳಿದ್ದಕ್ಕೆ ಎರಡನೆಯವನು ಅವನನ್ನು ಗದರಿಸಿ, "ನೀನು ಇದೇ ದಂಡನೆಯಲ್ಲಿರುವಾಗಲೂ ದೇವರಿಗೆ ಹೆದರುವ – –ದಿಲ್ಲವೋ? ನಾವಂತೂ ನ್ಯಾಯವಾಗಿ ದಂಡನೆಯಲ್ಲಿದ್ದೇವೆ, ನಾವು ಮಾಡಿದ್ದಕ್ಕೆ ತಕ್ಕ ಪ್ರತಿಫಲವನ್ನು ಹೊಂದುತ್ತಾ ಇದ್ದೇವೆ; ಈತ – –ನಾದರೋ ಅಲ್ಲದ್ದೇನೂ ಮಾಡಲಿಲ್ಲ" ಎಂದು ಹೇಳಿ, "ಯೇಸುವೇ, ನೀನು ನಿನ್ನ ರಾಜ್ಯವನ್ನು ಪಡೆದವನಾಗಿ ಬರುವಾಗ ನನ್ನನ್ನು ನೆನಸಿಕೋ" ಅಂದನು. ಅದಕ್ಕೆ ಯೇಸು, **"ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ ಎಂದು ನಿನಗೆ ಸತ್ಯವಾಗಿ ಹೇಳುತ್ತೇನೆ"** ಎಂದು ಉತ್ತರ ಕೊಟ್ಟನು. (ಲೂಕ–23:39-43)

ಮಧ್ಯಾಹ್ನವಾದಾಗ ದೇಶದ ಮೇಲೆಲ್ಲಾ ಕತ್ತಲೆ ಕವಿದು ಸಾಯಂಕಾಲ ಮೂರು ಗಂಟೆಯ ತನಕ ಇತ್ತು. ಮೂರು ಗಂಟೆಗೆ ಯೇಸು, "ಎಲೋಹಿ, ಎಲೋಹಿ, ಲಮಾ ಸಬಕ್ತಾನೀ ಅಂದರೆ ನನ್ನ ದೇವರೇ, ನನ್ನ ದೇವರೇ, ಯಾಕೆ ನನ್ನನ್ನು ಕೈಬಿಟ್ಟಿದ್ದೀ" ಎಂದು ಮಹಾ ಧ್ವನಿಯಿಂದ ಕೂಗಿದನು. ಹತ್ತಿರ ನಿಂತಿದ್ದವರಲ್ಲಿ ಕೆಲವರು ಅದನ್ನು ಕೇಳಿ, "ಎಲೀಯನನ್ನು ಕರೆಯುತ್ತಾನೆ ಕಾಣಿರೋ" ಅಂದರು. ಆಗ ಒಬ್ಬನು ಓಡಿಹೋಗಿ ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಕೋಲಿಗೆ ಸಿಕ್ಕಿಸಿ ಆತನಿಗೆ ಕುಡಿಯುವದಕ್ಕೆ ಕೊಟ್ಟು, "ಬಿಡಿರಿ, ಎಲೀ – –ಯನು ಇವನನ್ನು ಇಳಿಸುವದಕ್ಕೆ ಬರುವನೇನೋ ನೋಡೋಣ" ಅಂದನು. (ಮಾರ್ಕ–15:33-36) (ಜನರು ಹೀಗೆ ಹೇಳಲು ಕಾರಣವೇನೆಂದರೆ, ಯೇಸು ಹೇಳಿದ್ದನ್ನು ಅವರು ಅರ್ಥಮಾಡಿಕೊಂಡಿರಲಿಲ್ಲ, ಇಲ್ಲವೇ ಅಲ್ಲಿ ಏನು ನಡೆಯುತ್ತಿದೆ ಎನ್ನುವದು ಅವ – ರಿಗೆ ಅರ್ಥವಾಗಿರಲಿಲ್ಲ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ದೇಶವೆಲ್ಲಾ ಪೂರ್ಣವಾಗಿ ಕತ್ತಲಾಗಿತ್ತು. ಆ ಕತ್ತಲೆಯ ವೇಳೆಯಲ್ಲಿ **ದೇವರು ಆದಾಮನ ಸಂತಾನದವರೆಲ್ಲರ ಪಾಪಗಳ ಶಿಕ್ಷೆಯನ್ನು ಪರಿಶುದ್ಧ ವಿಮೋಚಕನ ಮೇಲೆ ರಾಶಿಹಾಕಿದನು,** ಆದ್ದರಿಂದ ಆತನನ್ನು ನಂಬುವ ಯಾವನಾದರೂ ಎಂದಿಗೂ ನಾಶವಾಗುವದಿಲ್ಲ! ನಮಗಾಗಿ ಯೇಸುವಿನ ಸಂಕಟಗಳ ತೀವ್ರತೆಯನ್ನು ಊಹಿಸಿಕೊಳ್ಳುವದಕ್ಕೂ ಸಹ ನಾವು ಪ್ರಾರಂಭಿಸಿಲ್ಲ.)

ಇದಾದ ಮೇಲೆ ಯೇಸು ಈಗ ಎಲ್ಲಾ ತೀರಿತೆಂದು ತಿಳಿದು ಶಾಸ್ತ್ರದ ಮಾತು ನೆರವೇರುವಂತೆ, **"ನನಗೆ ನೀರಡಿಕೆ ಆಗಿದೆ"** ಅಂದನು. ಅಲ್ಲಿ ಹುಳಿರಸ ತುಂಬಿದ ಗಡಿಗೆ ಇಟ್ಟಿರಲಾಗಿ ಅವರು ಸ್ಪಂಜನ್ನು ಹುಳಿರಸದಿಂದ ತುಂಬಿಸಿ ಹಿಸೋಪ್ ಗಿಡದ ಕೋಲಿಗೆ ಸಿಕ್ಕಿಸಿ ಆತನ ಬಾಯಿಗೆ ಮುಟ್ಟಿಸಿದರು. ಯೇಸು ಆ ಹುಳಿರಸವನ್ನು ತಕ್ಕೊಂಡ ಮೇಲೆ, **"ತೀರಿತು"** ಎಂದು ಹೇಳಿ ತಲೇಬಾಗಿಸಿ ಆತ್ಮವನ್ನು ಒಪ್ಪಿಸಿ ಕೊಟ್ಟನು. (ಯೋಹಾನ–19:28-30). ಆಮೇಲೆ ಯೇಸು, **"ತಂದೆಯೇ, ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸಿಕೊಡುತ್ತೇನೆ"** ಎಂದು ಮಹಾಧ್ವನಿಯಿಂದ ಕೂಗಿದನು. ಇದನ್ನು ಹೇಳಿದ ಮೇಲೆ ಪ್ರಾಣಬಿಟ್ಟನು. (ಲೂಕ–23:46)

ಆಗ ದೇವಾಲಯದ ತೆರೆಯು ಮೇಲಿಂದ ಕೆಳಗಿನವರೆಗೂ ಹರಿದು ಎರಡು ಭಾಗವಾಯಿತು. ಆತನ ಹತ್ತಿರ ಎದುರಿಗೆ ನಿಂತಿದ್ದ ಶತಾಧಿಪತಿಯು ನೋಡಿ, "ನಿಜವಾಗಿ ಈ ಮನುಷ್ಯನು ದೇವಕುಮಾನಾಗಿದ್ದನು" ಅಂದನು. ಇದಲ್ಲದೆ ಅಲ್ಲಿ ಸ್ತ್ರೀಯರು ಸಹ ದೂರ –ದಿಂದ ನೋಡುತ್ತಿದ್ದರು; ಇವರಲ್ಲಿ ಆತನು ಗಲಿಲಾಯದಲ್ಲಿದ್ದಾಗ ಆತನನ್ನು ಹಿಂಬಾಲಿಸಿ ಸೇವೆ ಮಾಡುತ್ತಿದ್ದವರಾದ ಮಗ್ದಲದ ಮರಿಯ, ಚಿಕ್ಕ ಯಾಕೋಬನ ಮತ್ತು ಯೋಸೆಯ ತಾಯಿಯಾದ ಮರಿಯ, ಸಲೋಮೆ ಎಂಬವರೂ ಆತನ ಸಂಗಡ ಯೆರೂಸ –ಲೇಮಿಗೆ ಬಂದಿದ್ದ ಇನ್ನೂ ಅನೇಕ ಸ್ತ್ರೀಯರೂ ಇದ್ದರು. (ಮಾರ್ಕ–15:38-41)

ಆ ಹೊತ್ತು ಸೌರಣೆಯ ದಿವಸವಾಗಿದ್ದದರಿಂದ ಯೆಹೂದ್ಯರು, ಸಬ್ಬತ್ ದಿನದಲ್ಲಿ ಶವಗಳು ಶಿಲುಬೆಯ ಮೇಲೆ ಇರಬಾರದೆಂದು ಪಿಲಾ –ತನನ್ನು, ಅವರ ಕಾಲುಗಳನ್ನು ಮುರಿಸಿ ಅವರನ್ನು ತೆಗೆಸಿಹಾಕಬೇಕೆಂಬುದಾಗಿ ಕೇಳಿಕೊಂಡರು; ಯಾಕಂದರೆ ಆ ಸಬ್ಬತ್ ದಿನವು ಬಹು ವಿಶೇಷವಾದದ್ದು. ಆದದರಿಂದ ಸಿಪಾಯಿಗಳು ಬಂದು ಮೊದಲನೆಯವನ ಕಾಲುಗಳನ್ನೂ ಅವನ ಜೊಎಯಲ್ಲಿ ಶಿಲುಬೆಗೆ ಹಾಕಿಸಿಕೊಂಡಿದ್ದ ಮತ್ತೊಬ್ಬನ ಕಾಲುಗಳನ್ನೂ ಮುರಿದರು. ಆದರೆ ಯೇಸುವಿನ ಬಳಿಗೆ ಬಂದಾಗ ಆತನು ಆಗಲೇ ಸತ್ತಿರುವದನ್ನು ಅವರು ಕಂಡು ಆತನ ಕಾಲುಗಳನ್ನು ಮುರಿಯಲಿಲ್ಲ. ಆದರೂ **ಸಿಪಾಯಿಗಳಲ್ಲಿ ಒಬ್ಬನು ಆತನ ಪಕ್ಕೆಯನ್ನು ತಿವಿದನು; ತಿವಿದ ಕೂಡಲೆ ರಕ್ತವೂ ನೀರೂ ಹೊರಟಿತು**. ಅದನ್ನು ಕಂಡವನೇ ಸಾಕ್ಷಿ ಹೇಳಿದ್ದಾನೆ, ಅವನ ಸಾಕ್ಷಿ ಸತ್ಯವೇ; ತಾನು ಹೇಳುವದು ಸತ್ಯವೆಂದು ಅವನು ಬಲ್ಲನು; ನೀವು ಸಹ ನಂಬಬೇಕೆಂದು ಇದನ್ನು ಹೇಳಿದ್ದಾನೆ. ಯಾಕಂದರೆ, "ಆತನ ಒಂದು ಎಲುಬನ್ನಾದರೂ ಮುರಿಯಕೂಡದು" ಎಂದು **ಶಾಸ್ತ್ರದಲ್ಲಿ ಬರೆದ ಮಾತು ನೆರವೇರುವಂತೆ ಇದಾಯಿತು**; ಮತ್ತು, "ಅವರು ತಾವು ಇರಿದವನನ್ನು ದಿಟ್ಟಿಸಿನೋಡುವರು" ಎಂದು ಶಾಸ್ತ್ರದಲ್ಲಿ ಮತ್ತೊಂದು ಮಾತು ಹೇಳಿ ಅದೆ. (ಯೋಹಾನ–19:31-37)

ಇದಾದ ಮೇಲೆ ಯೆಹೂದ್ಯರ ಭಯದಿಂದ ಗುಪ್ತವಾಗಿ ಯೇಸುವಿನ ಶಿಷ್ಯನಾಗಿದ್ದ **ಅರಿಮಥಾಯದ ಯೋಸೇಫನು, ಯೇಸುವಿನ ದೇಹವನ್ನು ತೆಗೆದುಕೊಂಡು ಹೋಗುವದಕ್ಕೆ ಅಪ್ಪಣೆಯಾಗಬೇಕೆಂದು ಪಿಲಾತನನ್ನು ಬೇಡಿಕೊಂಡನು**. ಪಿಲಾತನು ಅಪ್ಪಣೆ ಕೊಡಲಾಗಿ ಅವನು ಬಂದು ಆತನ ದೇಹವನ್ನು ತೆಗೆದುಕೊಂಡು ಹೋದನು. ಇದಲ್ಲದೆ ಮೊದಲು ಒಂದು ಸಾರಿ ರಾತ್ರಿವೇಳೆಯಲ್ಲಿ ಯೇಸುವಿನ ಬಳಿಗೆ ಬಂದಿದ್ದ ನಿಕೊದೇಮನು ಸಹ ರಕ್ತಬೋಳ ಅಗರುಗಳನ್ನು ಕಲಸಿದ ಚೂರ್ಣವನ್ನು ನೂರು ಸೇರಿನಷ್ಟು ತಕ್ಕೊಂಡು ಅಲ್ಲಿಗೆ ಬಂದನು. ಅವರು ಯೇಸುವಿನ ದೇಹವನ್ನು ತಕ್ಕೊಂಡು ಯೆಹೂದ್ಯರಲ್ಲಿ ಹೂಣಿಡುವ ಪದ್ಧತಿಯ ಪ್ರಕಾರ ಅದನ್ನು ಆ ಸುಗಂಧ ದ್ರವ್ಯಗಳ ಸಹಿತವಾಗಿ ನಾರುಬಟ್ಟೆಯಲ್ಲಿ ಸುತ್ತಿದರು. ಆತನನ್ನು ಶಿಲುಬೆಗೆ ಹಾಕಿದ ಸ್ಥಳದಲ್ಲಿ ಒಂದು ತೋಟವಿತ್ತು; ಆ ತೋಟದಲ್ಲಿ ಒಂದು ಹೊಸ ಸಮಾಧಿಯಿತ್ತು; ಅದರಲ್ಲಿ ಅದುವರೆಗೆ ಯಾರನ್ನೂ ಇಟ್ಟಿದ್ದಿಲ್ಲ. ಆ ದಿನವು ಯೆಹೂದ್ಯರ ಸೌರಣೆಯ ದಿನವಾದದ್ದರಿಂದ ಆ ಸಮಾಧಿ ಹತ್ತಿರವಿರುತ್ತದೆಂದು ಯೇಸುವನ್ನು ಅಲ್ಲೇ ಇಟ್ಟರು. (19:38-42)

ಸ್ನೇಹಿತರೇ, ಈ ದಿನದ ನಮ್ಮ ಓದುವಿಕೆಯನ್ನು ಇಲ್ಲಿಗೆ ನಾವು ನಿಲ್ಲಿಸುತ್ತೇವೆ, ಆದಾಗ್ಯೂ ಸಮಧಿಯೊಂದಿಗೆ ಯೇಸುವಿನ ಕತೆಯು ಮುಗಿಯುವದಿಲ್ಲ! **"ಯೇಸು ಎದ್ದಿದ್ದಾನೆ"** ಎಂದು ಕರೆಯಲ್ಪಡುವ ಮುಂದಿನ ನಮ್ಮ ಅಧ್ಯಯನದಲ್ಲಿ ನೀವು ನಮ್ಮೊಂದಿಗೆ ಸೇರಿಕೊಳ್ಳು – ವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುವದಕ್ಕೆ ನಾವು ಎಷ್ಟೊಂದು ಸಂತೋಷವುಳ್ಳವರಾಗಿದ್ದೇವೆ.

ಈದಿನ ನಾವು ಏನು ಕೇಳಿಸಿಕೊಂಡಿದ್ದೇವೋ ಅದು ನಿಜವಾಗಿಯೂ ದಿಗ್ಭ್ರಮೆಗೊಳಿಸುವಂತದ್ದಾಗಿದೆ! ಆದಾಮನ ಸಂತಾನದವರು ಜೀವದ ಕರ್ತನಾದ ಮೆಸ್ಸೀಯನನ್ನು ಹೇಗೆ ಹೀನೈಸಿ, ಶಿಲುಬೆ ಹಾಕಿ ಆತನನ್ನು ಕೊಂದರೆಂಬುದನ್ನು ನಾವು ನೋಡಿದೆವು. ಹೀಗಿದ್ದರೂ, ಮೆಸ್ಸೀಯನ ಮರಣವು ಲೋಕದ ಅಸ್ತಿತ್ವಕ್ಕಿಂತ ಮೊದಲೇ ದೇವರು ರಚನೆ ಮಾಡಿದಂತಹ ರಕ್ಷಣೆಯ ಯೋಜನೆಯ ನೆರವೇರಿಕೆ – –ಯಾಗಿದೆ ಎಂಬುದು ನಾವು ನೆನಪಿನಲ್ಲಿಡಬೇಕಾದ ಅಂಶವಾಗಿದೆ.

ಯೇಸು ತಾನು ಸಾಯುವದಕ್ಕಿಂತ ಸ್ವಲ್ಪ ಮೊದಲು ಶಿಲುಬೆಯ ಮೇಲಿಂದ ಆತನು ಹೇಲಿದ ಮಾತನ್ನು ನೀವು ಕೇಳಿಸಿಕೊಂಡಿರಾ? ಆತನು ಹೇಳಿದ್ದೇನೆಂದರೆ, **"ತೀರಿತು"**! ಎಂಬದು. "ತೀರಿತು" ಎಂದು ಯೇಸು ಯಾಕೆ ಹೇಳಿದನು? ಯಾಕಂದರೆ ರಕ್ಷಣೆಯ ಕಾರ್ಯ –ವನ್ನು ಆತನು ಪೂರ್ತಿಗೊಳಿಸಿದ್ದನು. ನಿಜವಾಗಿಯೂ, ಲೋಕದ ಧರ್ಮಗಳು "ತೀರಿತು" ಎಂಬುದಾಗಿ **ಹೇಳುವದಿಲ್ಲ!** "ಯಾವುದೂ ಮುಗಿದಿಲ್ಲ! ಎಂಬುದಾಗಿ ಅವು ಹೇಳುತ್ತವೆ. ನೀವು ನಿಮ್ಮ ಸ್ವಂತ ಒಳ್ಳೆಯ ಕೆಲಸಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳಬೇಕು! ನಿಮ್ಮ ಸ್ವಂತ

ಪಾಪಗಳನ್ನು ಅಳಿಸಿಹಾಕುವದಕ್ಕೆ ನೀವು ಕೆಲಸ ಮಾಡಬೇಕು! ಬನ್ನಿ, ಇದನ್ನು ಪಡೆದುಕೊಳ್ಳಿರಿ! ಕೆಲಸ ಮಾಡುತ್ತಿರ್ರಿ! ಯಾವುದೂ ಮುಗಿದಿಲ್ಲ! ನೀವು ಪರದೈಸಕ್ಕೆ ಹೋಗಬೇಕಾದರೆ ನೀವು ಕೆಲಸ ಮಾಡಲೇಬೇಕು, ಯಜ್ಞಗಳನ್ನು ಸಮರ್ಪಿಸಬೇಕು, ನಿಮ್ಮ ಧಾರ್ಮಿಕ ಕರ್ತವ್ಯಗಳನ್ನು ನೆರವೇರಿಸಬೇಕು, ಪ್ರಾರ್ಥನೆ, ಉಪವಾಸ, ದೇಹ ದಂಡನೆ, ಇತ್ಯಾದಿ ಇತ್ಯಾದಿ!" ಇದು ಧರ್ಮದ ಸಂದೇಶವಾಗಿದೆ!

ಆದರೆ ಮನುಷ್ಯನಿಗೆ ದೇವರ ಶುಭ ಸಂದೇಶವೇನೆಂದರೆ: **"ತೀರಿತು!!!"** ನಂಬಿರಿ ಮತ್ತು ರಕ್ಷಿಸಲ್ಪಡಿರಿ! ಮೆಸ್ಸೀಯನು ತನ್ನ ಸ್ವಂತ ರಕ್ತ –ದಿಂದ ನಿಮ್ಮ ಪಾಪದ ಸಾಲವನ್ನು ತೀರಿಸಿದ್ದಾನೆ! ಯೇಸುವಿನ ರಕ್ತವು ಪಾಪಿಗಳ ಕೆಟ್ಟತನವನ್ನು ತೊಳೆದು ಬದಲಾಯಿಸುತ್ತದೆ! ಅದ –ಕ್ಕಾಗಿಯೇ ಯೇಸು ಸಾಯುತ್ತಿದ್ದ ಪಶ್ಚಾತ್ತಾಪಪಟ್ಟ ಅಪರಾಧಿಗೆ, "ಈ ಹೊತ್ತೇ ನನ್ನ ಸಂಗಡ ಪರದೈಸಿನಲ್ಲಿರುವಿ." ಎಂದು ಹೇಳಿದನು. (ಲೂಕ–23:43).

ಪ್ರೀತಿಯ ಸ್ನೇಹಿತರೇ, ಪಾಪದ ದಂಡನೆಯಿಂದ ನಿಮ್ಮ ರಕ್ಷಿಸುವ ಕೆಲಸವು ಪೂರ್ತಿಯಾಗಿ ಮಾಡಲ್ಪಟ್ಟಿದೆ. ಯೇಸುವಿನ ತ್ಯಾಗದಿಂದ ದೇವರು ತೃಪ್ತಿಗೊಂಡಿದ್ದಾನೆ. ಮೆಸ್ಸೀಯನ ಕಾಲಕ್ಕಿಂತ ಮೊದಲು ಜೀವಿಸಿದ್ದ ನಮ್ಮ ಪೂರ್ವಿಕರು ಮಾಡುತ್ತಿದ್ದಂತ ಕುರಿಯ ಯಜ್ಞ – –ಗಳನ್ನು ನಾವು ಎಂದಿಗೂ ಸಮರ್ಪಿಸುವ ಅಗತ್ಯವಿಲ್ಲ. ಯೇಸು ಕ್ರಿಸ್ತನು ದೇವರ ಸಂಪೂರ್ಣವಾದ ಮತ್ತು ಕೊನೆಯ ಯಜ್ಞವಾಗಿ – –ದ್ದಾನೆ! ಮೆಸ್ಸೀಯನು ಮತ್ತು ಆತನ ತ್ಯಾಗದ ಕುರಿತಾಗಿ ದೇವರು ಕೊಟ್ಟಿರುವ ಸಾಕ್ಷಿಯನ್ನು ನಂಬುವುದರ ಹೊರತಾಗಿ, ನಮಗೆ ಮಾಡುವದಕ್ಕೆ ಯಾವುದೂ ಉಳಿದಿಲ್ಲ. **"ತೀರಿತು!"** ನೀತಿವಂತ ವಿಮೋಚಕನ ಸಂಕಟಗಳು ಮತ್ತು ಮರಣದ ಕುರಿತಾಗಿ ಪ್ರವಾದಿಗಳು ಮೊದಲೇ ತಿಳಿಸಿದ್ದಂತ ಎಲ್ಲವನ್ನೂ ಯೇಸು ನೆರವೇರಿಸಿದನು! ಯೇಸು ಈ ಲೋಕಕ್ಕೆ ಬರುವದಕ್ಕಿಂತ ಏಳುನೂರು ವರ್ಷಗಳ ಮೊದಲೇ ಪ್ರವಾದಿಯಾದ ಯೆಶಾಯನು ಹೀಗೆ ಬರೆದಿದ್ದಾನೆ:

"ಅವನು ಯಾವ ಅನ್ಯಾಯವನ್ನು ಮಾಡದಿದ್ದರೂ ಅವನ ಬಾಯಲ್ಲಿ ಯಾವ ವಂಚನೆಯು ಇಲ್ಲದಿದ್ದರೂ ಅವನು ಸತ್ತಾಗ ದುಷ್ಟರ ಮಧ್ಯೆ ಪುಷ್ಟರ ನಡುವೆ ಅವನನ್ನು ಹೂಣಿಟ್ಟರು. **ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; ನಮ್ಮೆ – –ಲ್ಲರ ದೋಷಫಲವನ್ನು ಯೆಹೋವನು ಅವನ ಮೇಲೆ ಹಾಕಿದನು!"** (ಯೆಶಾಯ–53:9,5,6)

ಈದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ನಿಜವಾಗಿಯೂ ಪ್ರವಾದಿಗಳನ್ನು ನಂಬುತ್ತೀರೋ? ದೇವರ ಪ್ರವಾದಿಗಳು ಬರೆದಿದ್ದಂತಹ ರಕ್ಷಣೆಯ ಕಾರ್ಯವನ್ನು ತೀರಿಸಿದ ಯೇಸುವನ್ನು ನೀವು ನಂಬುತ್ತೀರೋ? ಶಿಲುಬೆಯ ಮೇಲಿನ ನೀತಿವಂತ ವಿಮೋಚಕನ ಮರಣದ ಕಾರಣವನ್ನು ನೀವು ಈಗ ಅರ್ಥಮಾಡಿಕೊಂಡಿರಾ? ಅದಕ್ಕೆ ಕಾರಣ ನೀವು ಮತ್ತು ನಾನು! ನಮ್ಮ ಪಾಪಗಳ ನಿಮಿತ್ತವಾಗಿ ಆತನು ಒಂದು ನಿಷ್ಕಳಂಕ ಯಜ್ಞದ ಕುರಿಯ ರೀತಿಯಲ್ಲಿ ಸತ್ತನು. ನಾವು ನರಕದಲ್ಲಿ ನಿತ್ಯವಾದ ಶಿಕ್ಷೆಗೆ ಅರ್ಹರಾಗಿದ್ದೆವು, ಆದರೆ ದೇವರು ನಮ್ಮ ಮೇಲಿನ ತನ್ನ ದೊಡ್ಡದಾದ ಪ್ರೀತಿಯಿಂದ ಯೇಸುವನ್ನು ಕಳಿಸಿದನು (ತನ್ನ ಪ್ರೀತಿಯ ಮಗನೆಂದು ಆತನನ್ನು ಕರೆಯುತ್ತಿದ್ದನು), ಆದದರಿಂದ ಆತನು ನಮ್ಮ ಶಿಕ್ಷೆಯನ್ನು ಅನುಭವಿಸಿ ನಮ್ಮ ಪಾಪಗಳ ದಂಡನೆಯನ್ನು ಹೊತ್ತುಕೊಂಡನು. ಅದನ್ನೇ ಪರಿಶುದ್ಧ ವಾಕ್ಯ –ಗಳು ಹೀಗೆ ಹೇಳುತ್ತವೆ:

"ನೀತಿವಂತರಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪಕಾರಿಗೋಸ್ಕರ ಪ್ರಾಣಕೊಡುವದಕ್ಕೆ ಯಾವನಾದರೂ ಧೈರ್ಯಮಾಡಿದರೂ ಮಾಡಾನು. **ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ!"**(ರೋಮಾ–5:7,8). "ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿಸ್ವರೂಪಿ –ಗಳಾಗುವಂತೆ ದೇವರು ಪಾಪಜ್ಞಾನವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ ಮಾಡಿದನು." (2ಕೊರಿಂಥ–5:21)

ಕನಿಕರವೂ ದಯೆಯೂ ಉಳ್ಳ ದೇವರಿಗೆ ಮಹಿಮೆಯಾಗಲಿ. . . .**"ತೀರಿತು!"** ದೇವರು ಅಬ್ರಹಾಮನ ಯಜ್ಞದ ಚಿಹ್ನೆಯನ್ನು ನೆರವೇರಿ –ಸಿದನು {ಈದ್ ಅಲ್–ಅದ್ಹಾ}! ಅಬ್ರಹಾಮನು ತನ್ನ ಮಗನಿಗೆ ಬದಲಿಗೆ ಮುಗ್ಧ ಟಗರನ್ನು ಯಜ್ಞಮಾಡಿದ ಸ್ಥಳದಲ್ಲಿಯೇ, ಪಾಪ ರಹಿತ ವಿಮೋಚಕನಾದ ಯೇಸು, ನಮ್ಮ ಬದಲಿಗೆ ತಾನೇ ಯಜ್ಞವಾಗುವದಕ್ಕೆ ಒಪ್ಪಿಸಿಕೊಟ್ಟನು, **"ಆತನನ್ನು ನಂಬುವ ಒಬ್ಬನಾದರೂ** ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು!" (ಯೋಹಾನ–3:16)
ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಕರ್ತನಾದ ಯೇಸು ನಿಮಗಾಗಿ ಮಾಡಿದ ಈ ಸಂಪೂರ್ಣವಾದ ಯಜ್ಞದ ಕುರಿತಾಗಿ ನಿಮಗೆ ಏನಾದರೂ ಪ್ರಶ್ನೆಗಳಿದ್ದರೆ ನಮಗೆ ಬರೆಯಿರಿ. . . . ಯೇಸು ತಾನು ಸಾಯುವದಕ್ಕಿಂತ ಸ್ವಲ್ಪ ಮೊದಲು ಶಿಲುಬೆಯ ಮೇಲೆ ಹೇಳಿದ ಆಳವಾದ ಮತ್ತು ಶಕ್ತಿಯುತವಾದ ಮಾತನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ. ಆತನು ಹೇಳಿದ್ದು,
**"ತೀರಿತು!"** (ಯೋಹಾನ–19:30)

[ಪಾಠ 84: ಯೇಸು ಶಿಲುಬೆಗೆ ಜಡಿಯಲ್ಪಟ್ಟದ್ದು] [ಸಾರಾಂಶಗಳ ಪಟ್ಟಿ] [ಪಾಠ 86: ಯೇಸು ಪರಲೋಕಕ್ಕೆ ಏರಿಹೋದದ್ದು]

ಪಾಠ 85

# ಯೇಸು ಎದ್ದಿದ್ದಾನೆ!

ಮತ್ತಾಯ 28; ಲೂಕ 24; ಯೋಹಾನ 20

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, **ಮೆಸ್ಸೀಯನಾದ ಯೇಸು**, ಲೋಕದ ಪಾಪಗಳಿಗಾಗಿ ಮತ್ತು **ಪಾಪಿಗಳಿಗಾಗಿ ನಿತ್ಯ ಸಮಾಧಾನದ ಬಾಗಿಲನ್ನು ತೆರೆಯುವದಕ್ಕೆ** ದಂಡ ತೆರಲು ಶಿಲುಬೆಗೆ ಜಡಿಯಲ್ಪಟ್ಟು ಹೇಗೆ **ತನ್ನ ರಕ್ತವನ್ನು ಸುರಿಸಿದ**ನೆಂಬುದನ್ನು ನಾವು ನೋಡಿದೆವು. ದೇವರ ಪ್ರವಾದಿಗಳು ಮುಂತಿಳಿಸಿದಂತೆಯೇ ಪ್ರತಿಯೊಂದು ಸಂಭವಿಸಿತು: ಮೆಸ್ಸೀಯನು ಹಾಸ್ಯಗೊಳಗಾಗಿ, ಚಾಟಿ ಏಟು ತಿಂದು ಶಿಲುಬೆಗೆ ಜಡಿಯಲ್ಪಟ್ಟನು. ಅಬ್ರಹಾಮನ ಮಗನ ಸ್ಥಾನದಲ್ಲಿ ಮುಗ್ದ ಟಗರು ಮರಣ ಹೊಂದಿದಂತೆ, ಯೇಸು(ಪಾಪವಿಲ್ಲದ ವಿಮೋಚಕನು) ನಮ್ಮ ಸ್ಥಾನದಲ್ಲಿ ಮರಣ ಹೊಂದಿದನು. ಯೇಸು ಸಾಯುವದಕ್ಕಿಂತ ಮೊದಲು, **"ತೀರಿತು"** ಎಂದು ಕೂಗಿದನು. ದೇವರಿಗೆ ಸ್ತೋತ್ರ, ದೇವರ ರಕ್ಷಣೆಯ ಯೋಜನೆಯನ್ನು ಕರ್ತನಾದ ಯೇಸು ಪೂರ್ತಿಗೊಳಿಸಿದನು!

ಶಿಲುಬೆಯ ಮೇಲಿನ ಮೆಸ್ಸೀಯನ ಮರಣವು ಎಲ್ಲಾ ಪರಿಶುದ್ದ ವಾಕ್ಯಗಳಲ್ಲಿ ಬಹು ಪ್ರಾಮುಖ್ಯವಾದುದಾಗಿದೆ, ಯಾಕಂದರೆ ದೇವರು ತನ್ನ ನೀತಿಯನ್ನು ವಿರೋಧಿಸದೆ ನಮ್ಮ ಪಾಪಗಳನ್ನು ಕ್ಷಮಿಸುವದಕ್ಕೆ ಈ ಮರಣವು ಕಾರಣವಾಯಿತು. ಹೀಗಿದ್ದರೂ, ಮೆಸ್ಸೀಯನ ಮರಣವು **ಬಹು ಮುಖ್ಯವಾದ ಸಂದೇಶವಾಗಿದೆ**, ನಾವು ಈಗ ಅಧ್ಯಯನ ಮಾಡಲಿರುವದು **ತುಂಬಾ ಅದ್ಭುತವಾದ ಸಂದೇಶವಾಗಿದೆ**, ಯಾಕಂದರೆ **ದೇವರು ಯೇಸುವನ್ನು ಸತ್ತವರೊಳಗಿಂದ ಹೇಗೆ ಎಬ್ಬಿಸಿದನೆಂಬುದನ್ನು** ನಾವು ಈಗ ಕೇಳಿಸಿಕೊಳ್ಳಲಿದ್ದೇವೆ.

ನಾವು ಈಗಾಗಲೇ ಓದಿದಂತೆ, ಯೇಸು ಶಿಲುಬೆಯ ಮೇಲೆ ಸತ್ತ ನಂತರ, ಒಬ ಸಿಪಾಯಿ ಈಟಿಯನ್ನು ತೆಗೆದುಕೊಂಡು ಯೇಸುವಿನ ಪಕ್ಕೆಗೆ ತಿವಿದನು, ಕೂಡಲೆ ರಕ್ತವೂ ಮತ್ತು ನೀರೂ ಹೊರಟಿತು ಇದು ಆತನು ಸತ್ತಿದ್ದಾನೆಂಬುದನ್ನು ರುಜುವಾತುಪಡಿಸಿತು. ಮತ್ತು ಒಬ್ಬ ಶ್ರೀಮಂತ ವ್ಯಕ್ತಿ ಆತನ ದೇಹವನ್ನು ತೆಗೆದುಕೊಂಡು ಒಂದು ಹೊಸ ಸಮಾಧಿಯಲ್ಲಿಟ್ಟನು ಎಂಬುದನ್ನೂ ಸಹ ನಾವು ನೋಡಿ – –ದೆವು, ಅವನು ಇದನ್ನು ತಾನೇ ಬಂಡೆಯಲ್ಲಿ ಕೆತ್ತಿದ್ದನು. ಸಮಾಧಿಯ ಬಾಗಿಲಿಗೆ ಒಂದು ದೊಡ್ಡದಾದ ಕಲ್ಲು ಮುಚ್ಚಲ್ಪಟ್ಟಿತ್ತು. ದೇವರ ಪ್ರವಾದಿಗಳು ಇದನ್ನು ಮುಂತಿಸಿದ ಹಾಗೆಯೇ ಪ್ರತಿಯೊಂದು ಸಂಭವಿಸಿತು.

ಹೀಗೆ ಸುವಾರ್ತೆಯಲ್ಲಿ ಬರೆದಿರುವದೇನೆಂದರೆ:

ಮರುದಿನ ಅಂದರೆ ಸೌರಣೆಯ ದಿನ ಕಳೆದ ಮೇಲೆ ಮಹಾಯಾಜಕರೂ ಫರಿಸಾಯರೂ ಪಿಲಾತನ ಬಳಿಗೆ ಕೂಡಿಬಂದು, **"**ದೊರೆಯೇ, ಆ ಮೋಸಗಾರನು ಬದುಕಿದ್ದಾಗ ತಾನು **ಮೂರು ದಿನದ ಮೇಲೆ ಏಳುತ್ತೇನೆ** ಅಂತ ಹೇಳಿದ್ದು ನಮ್ಮ ನೆನಪಿಗೆ ಬಂತು; ಆದಕಾರಣ ಮೂರನೆಯ ದಿನದ ತನಕ ಸಮಾಧಿಯನ್ನು ಭದ್ರಮಾಡಿ ಕಾಯುವದಕ್ಕೆ ಅಪ್ಪಣೆ ಕೊಡಬೇಕು; ಇಲ್ಲದಿದ್ದರೆ ಅವನ ಶಿಷ್ಯರು ಬಂದು ಅವನನ್ನು ಕದ್ದುಕೊಂಡು ಹೋಗಿ ಸತ್ತವನು ಬದುಕಿ ಬಂದಿದ್ದಾನೆ ಎಂದು ಹೇಳಾರು; ಆಗ ಮೊದಲನೆಯ ಮೋಸಕ್ಕಿಂತ ಕಡೆಯ ಮೋಸವು ಕೆಡುಕಾದೀತು**"** ಅಂದರು. ಪಿಲಾತನು ಅವರಿಗೆ, **"**ಕಾವಲುಗಾರರನ್ನು ತಕ್ಕೊಳ್ಳಿ; ಹೋಗಿ ನಿಮಗೆ ತಿಳಿದ ಹಾಗೆ ಭದ್ರಮಾಡಿ ಕಾಯಿರಿ**"** ಎಂದು ಹೇಳಲಾಗಿ ಅವರು ಹೊರಟು ಕಾವಲುಗಾರರೊಂದಿಗೆ ಆ ಕಲ್ಲಿಗೆ ಮುದ್ರೆಹಾಕಿ ಸಮಾಧಿಯನ್ನು ಭದ್ರ ಮಾಡಿದರು. (ಮತ್ತಾಯ–27:62-66)

ಸಬ್ಬತ್ ದಿನ ಆದ ಮೇಲೆ **ವಾರದ ಮೊದಲನೆಯ ದಿವಸ** ಬೆಳಗಾಗುವಾಗ ಮಗ್ದಲದ ಮರಿಯಳೂ ಆ ಬೇರೆ ಮರಿಯಳೂ ಸಮಾ – ಧಿಯನ್ನು ನೋಡುವದಕ್ಕೆ ಬಂದರು. ಆಗ ಮಹಾ ಭೂಕಂಪವಾಯಿತು. **ಕರ್ತನ ದೂತನು ಆಕಾಶದಿಂದ ಇಳಿದು ಬಂದು ಆ ಕಲ್ಲನ್ನು ಬಾಗಿಲಿನಿಂದ ಉರುಳಿಸಿ ಅದರ ಮೇಲೆ ಕೂತುಕೊಂಡನು.** ಅವನ ಮುಖಭಾವವು ಮಿಂಚಿನಂತೆ ಇತ್ತು. ಅವನ ಉಡುಪು ಹಿಮದಂತೆ ಬೆಳ್ಳಗಿತ್ತು; ಕಾವಲುಗಾರರು ಅವನಿಗೆ ಹೆದರಿ ನಡುಗಿ ಸತ್ತವರ ಹಾಗಾದರು. (ಮತ್ತಾಯ–28:1-4)

ಸ್ತ್ರೀಯರು ಸಮಾಧಿಯ ಬಳಿಗೆ ಬಂದರು. ಸಮಾಧಿಗೆ ಮುಚ್ಚಿದ್ದ ಕಲ್ಲು ಅಲ್ಲಿಂದ ಉರುಳಿಸಲ್ಪಟ್ಟಿರುವದನ್ನು ಕಂಡು ಒಳಕ್ಕೆ ಹೋಗಿ ನೋಡುವಲ್ಲಿ ಯೇಸುಸ್ವಾಮಿಯ ದೇಹವು ಕಾಣಲಿಲ್ಲ. ಈ ವಿಷಯದಲ್ಲಿ ಅವರಿಗೆ ಗಲಿಬಿಲಿ ಉಂಟಾದಾಗ ಹೊಳೆಯುವ ಉಡುಪನ್ನು ಧರಿಸಿದ್ದ ಇಬ್ಬರು ಪುರುಷರು ಅಕಸ್ಮಾತ್ತಾಗಿ ಅವರ ಬಳಿಯಲ್ಲಿ ನಿಂತುಕೊಂಡರು. ಆ ಸ್ತ್ರೀಯರು ಭಯಹಿಡಿದವರಾಗಿ ತಮ್ಮ ಮುಖ –ಗಳನ್ನು ನೆಲದ ಕಡೆಗೆ ಬೊಗ್ಗಿಸಿಕೊಂಡಿರುವಾಗ ಪುರುಷರು ಅವರಿಗೆ, **"ಸತ್ತವರೊಳಗೆ ಬದುಕಿರುವವನನ್ನು ಹುಡುಕುವದೇನು? ಆತನು ಇಲ್ಲಿ ಇಲ್ಲ, ಎದ್ದಿದ್ದಾನೆ.** ಆತನು ಇನ್ನೂ ಗಲಿಲಾಯದಲ್ಲಿದ್ದಾಗ ಮನುಷ್ಯ ಕುಮಾರನು ಪಾಪಿಗಳಾದ ಮನುಷ್ಯರ ಕೈಗೆ ಒಪ್ಪಿಸಲ್ಪಟ್ಟು ಶಿಲುಬೆಗೆ ಹಾಕಲ್ಪಟ್ಟು ಮೂರನೆಯ ದಿನದಲ್ಲಿ ಎದ್ದು ಬರುವದು ಅಗತ್ಯವೆಂದು ನಿಮಗೆ ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಿರಿ" ಎಂದು ಹೇಳಿದರು. ಸ್ತ್ರೀಯರು ಆತನ ಮಾತುಗಳನ್ನು ನೆನಪಿಗೆ ತಂದುಕೊಂಡು ಸಮಾಧಿಯ ಬಳಿಯಿಂದ ಹಿಂತಿರುಗಿ ಹೋಗಿ ಆ ಸಂಗತಿ – –ಗಳನ್ನೆಲ್ಲಾ ಹನ್ನೊಂದು ಮಂದಿ ಶಿಷ್ಯರಿಗೂ ಉಳಿದವರೆಲ್ಲರಿಗೂ ತಿಳಿಸಿದರು. ಆ ಸ್ತ್ರೀಯರು ಯಾರಂದರೆ ಮಗ್ದಲದ ಮರಿಯಳು, ಯೋಹಾನಳು, ಯಾಕೋಬನ ತಾಯಿಯಾದ ಮರಿಯಳು ಇವರೇ. ಇವರ ಜೊತೆಯಲ್ಲಿದ್ದ ಬೇರೆ ಸ್ತ್ರೀಯರು ಸಹ ಅಪೊಸ್ತಲರಿಗೆ ಆ ಸಂಗತಿಗಳನ್ನು ಹೇಳಿದರು. ಅವರು ನಂಬಲಿಲ್ಲ; ಆ ಮಾತುಗಳು ಅವರಿಗೆ ಬರೀ ಹರಟೆಯಾಗಿ ತೋರಿದವು. (ಆತನು ಸತ್ತ ಮೇಲೆ ಜೀವದಿಂದೆದ್ದು ಬರಬೇಕೆಂಬದಾಗಿ ಶಾಸ್ತ್ರದಲ್ಲಿ ಬರೆದಿರುವ ಮಾತು ಅವರಿಗೆ ಇನ್ನೂ ತಿಳಿದಿರಲಿಲ್ಲ. ಯೋಹಾನ–20:9). ಆದರೆ ಪೇತ್ರನು ಎದ್ದು ಸಮಾಧಿಗೆ ಓಡಿಹೋಗಿ ಬೊಗ್ಗಿ ನೋಡಿ ನಾರುಬಟ್ಟೆಗಳನ್ನು ಮಾತ್ರ ಕಂಡು ನಡೆದ ಸಂಗತಿಗಳಿಗೆ ತನ್ನಲ್ಲಿ ಆಶ್ಚರ್ಯ– –ಪಡುತ್ತಾ ಹೊರಟುಹೋದನು. (ಲೂಕ–24:1-12)

ಅದೇ ದಿನದಲ್ಲಿ ಶಿಷ್ಯರಲ್ಲಿ ಇಬ್ಬರು ಯೆರೂಸಲೇಮಿಗೆ ಆರುವರೆ ಮೈಲು ದೂರದಲ್ಲಿದ್ದ ಎಮ್ಮಾಹು ಎಂಬ ಹಳ್ಳಿಗೆ ಹೋಗುತ್ತಾ ಸಂಭವಿ –ಸಿದ ಈ ಎಲ್ಲಾ ಕಾರ್ಯಗಳ ವಿಷಯವಾಗಿ ಸಂಭಾಷಣೆ ಮಾಡುತ್ತಿದ್ದರು. ಅವರು ಸಂಭಾಷಣೆಯಲ್ಲಿ ಚರ್ಚಿಸುತ್ತಿರುವಾಗ ಯೇಸು ತಾನೇ ಹತ್ತಿರಕ್ಕೆ ಬಂದು ಅವರ ಜೊತೆಯಲ್ಲಿ ಹೋದನು. ಆದರೆ ಅವರು ಅತನ ಗುರುತು ಹಿಡಿಯಲಿಲ್ಲ; ಅವರ ಕಣ್ಣು ಕಟ್ಟಿದ ಹಾಗಾ –ಯಿತು. (24:13-16)

ಆತನು ಅವರನ್ನು, "ನೀವು ಮಾರ್ಗದಲ್ಲಿ ಹೋಗುತ್ತಾ ಚರ್ಚಿಸಿ ಮಾತಾಡಿಕೊಳ್ಳುವ ಈ ಸಂಗತಿಗಳೇನು" ಎಂದು ಕೇಳಲು ಅವರು ದು:ಖದ ಮುಖವುಳ್ಳವರಾಗಿ ನಿಂತರು. ಅವರಲ್ಲಿ ಕ್ಲೆಯೋಫನೆಂಬವನು ಆತನನ್ನು, "ಯೆರೂಸಲೇಮಿಗೆ ಬಂದ ಪರಸ್ಥಳದವರೆಲ್ಲರಿಗೂ ಈದಿವಸಗಳಲ್ಲಿ ಅದರೊಳಗೆ ನಡೆದಿರುವ ಸಂಗತಿಗಳು ಗೊತ್ತಿರಲಾಗಿ ನಿನಗೆ ಮಾತ್ರ ಗೊತ್ತಿಲ್ಲವೋ" ಎಂದು ಕೇಳಲು ಆತನು ಅವರನ್ನು ಯಾವ ಸಂಗತಿಗಳು ಎಂದು ಕೇಳಿದನು. ಅದಕ್ಕೆ ಅವರು, "ನಜರೇತಿನವನಾದ ಯೇಸುವಿನ ಸಂಗತಿಗಳೇ; ಆತನು ದೇವರ ಮುಂದೆ ಮತ್ತು ಮನುಷ್ಯರ ಮುಂದೆ ಕೃತ್ಯದಲ್ಲಿಯೂ ಮಾತಿನಲ್ಲಿಯೂ ಸಮರ್ಥನಾದ ಪ್ರವಾದಿಯಾಗಿದ್ದನು. ಆತನನ್ನು ಮಹಾಯಾಜಕರೂ ನಮ್ಮ ಆಧಿಕಾರಿಗಳೂ ಮರಣದಂಡನೆಗೆ ಒಪ್ಪಿಸಿಕೊಟ್ಟು ಶಿಲುಬೆಗೆ ಹಾಕಿಸಿದರು. ನಾವಾದರೋ ಇಸ್ರಾಯೇಲ್ ಜನರನ್ನು ಬಿಡಿಸತಕ್ಕವನು ಆತನೇ ಎಂದು ನಿರೀಕ್ಷಿಸಿಕೊಂಡಿದ್ದೆವು. ಇದು ಮಾತ್ರವಲ್ಲದೇ ಆ ಕಾರ್ಯಗಳು ನಡೆದು ಈ ಹೊತ್ತು ಮೂರನೆಯ ದಿನ; ಆದರೂ ನಮ್ಮಲ್ಲಿ ಕೆಲವು ಮಂದಿ ಸ್ತ್ರೀಯರು ಬೆಳಗಾಗುವಾಗ ಸಮಾಧಿಯ ಬಳಿಯಲ್ಲಿ ಇದ್ದು ಆತನ ದೇಹವನ್ನು ಕಾಣದೆ ಅಲ್ಲಿಂದ ಬಂದು ತಮಗೆ ದೇವದೂತರ ದರ್ಶನವಾಯಿತೆಂತಲೂ ಆತನು ಬದುಕುತ್ತಾನೆಂದು ಅವರು ಹೇಳಿದರೆಂತಲೂ ತಿಳಿಸಿ ನಮಗೆ ಅತ್ಯಾಶ್ಚರ್ಯ – –ವನ್ನುಂಟು ಮಾಡಿದರು. ನಮ್ಮ ಸಂಗಡ ಇದ್ದವರಲ್ಲಿ ಕೆಲವರು ಸಮಾಧಿಗೆ ಹೋಗಿ ಆ ಸ್ತ್ರೀಯರು ಹೇಳಿದ ಪ್ರಕಾರವೇ ಕಂಡರು; ಆತನನ್ನು ಮಾತ್ರ ಕಾಣಲಿಲ್ಲ" ಎಂದು ಹೇಳಿದರು. ಆತನು ಅವರಿಗೆ, **"ಎಲಾ, ಬುದ್ಧಿಯಿಲ್ಲದವರೇ, ಪ್ರವಾದಿಗಳು ಹೇಳಿದ್ದೆಲ್ಲವನ್ನು ನಂಬು –ವದರಲ್ಲಿ ಮಂದಹೃದಯರೇ, ಕ್ರಿಸ್ತನು ಇಂಥ ಶ್ರಮಗಳನ್ನು ಅನುಭವಿಸಿ ತನ್ನ ಮಹಾಪದವಿಗೆ ಸೇರುವದು ಅಗತ್ಯವಾಗಿತ್ತಲ್ಲವೇ"** ಎಂದು ಹೇಳಿ ಮೋಶೆಯ ಮತ್ತು ಎಲ್ಲಾ ಪ್ರವಾದಿಗಳ ಗ್ರಂಥಗಳು ಮೊದಲುಗೊಂಡು ಸಮಸ್ತ ಗ್ರಂಥಗಳಲ್ಲಿ ತನ್ನ ವಿಷಯವಾಗಿರುವ ಸೂಚನೆ –ಗಳನ್ನು ಅವರಿಗೆ ವಿವರಿಸಿದನು. (24:17-27)

ಅವರು ಹೋಗುತ್ತಿರುವ ಹಳ್ಳಿಯ ಸಮೀಪಕ್ಕೆ ಬಂದಾಗ ಆತನು ಇನ್ನೂ ಮುಂದಕ್ಕೆ ಹೋಗುವವನಂತೆ ಕಾಣಿಸಿದನು. ಆದರೆ ಅವರು, "ನಮ್ಮ ಸಂಗಡ ಇರು, ಸಂಜೆಯಾಯಿತು, ಹೊತ್ತು ಇಳಿಯುತ್ತಾ ಬಂತು"ಎಂದು ಆತನಿಗೆ ಹೇಳಿ ಬಲವಂತ ಮಾಡಲು ಆತನು ಅವರ ಕೂಡ ಇರುವದಕ್ಕೆ ಊರೊಳಕ್ಕೆ ಹೋದನು. ಆತನು ಅವರ ಸಂಗಡ ಊಟಕ್ಕೆ ಕೂತುಕೊಂಡಾಗ ರೊಟ್ಟಿಯನ್ನು ತೆಗೆದು ಕೊಂಡು ದೇವರ ಸ್ತೋತ್ರ ಮಾಡಿ ಮುರಿದು ಅವರಿಗೆ ಕೊಡುತ್ತಿರಲಾಗಿ ಅವರ ಕಣ್ಣುಗಳು ತೆರೆದವು, ಅವರು ಆತನ ಗುರುತನ್ನು ಹಿಡಿದರು; ಆತನು ಅವರ ಕಣ್ಣಿಗೆ ಮಾಯವಾದನು. ಆಗ ಅವರು ಒಬ್ಬರಿಗೊಬ್ಬರು, "ಆತನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ" ಎಂದು ಹೇಳಿಕೊಂಡು ಅದೇ ಗಳಿಗೆಯಲ್ಲಿ ಎದ್ದು ಯೆರೂಸಲೇಮಿಗೆ ಹಿಂತಿರುಗಿ ಹೋದರು. ಅಲ್ಲಿ ಹನ್ನೊಂದು ಮಂದಿ ಶಿಷ್ಯರೂ ಅವರ ಸಂಗಡ ಇದ್ದವರೂ ಒಟ್ಟಾಗಿ ಕೂಡಿಕೊಂಡಿದ್ದು, **"ಸ್ವಾಮೀ ಎದ್ದದ್ದು ನಿಜ, ಆತನು ಸೀಮೋನನಿಗೆ ಕಾಣಿಸಿಕೊಂಡನು!"** ಎಂದು ಹೇಳುತ್ತಿದ್ದರು. ಇದನ್ನು ಕಂಡು ಅವರು ದಾರಿಯಲ್ಲಿ ನಡೆದ ಸಂಗತಿಯನ್ನೂ ರೊಟ್ಟಿ ಮುರಿಯುವದರಲ್ಲಿ ತಾವು ಆತನ ಗುರುತು ಹಿಡಿದೆವೆಂಬದನ್ನೂ ವಿವರಿಸಿದರು. (24:28-35)

ಅವರು ಈ ಸಂಗತಿಯನ್ನು ಕುರಿತು ಮಾತಾಡುತ್ತಿರುವಾಗ **ಆತನೇ ಅವರ ನಡುವೆ ನಿಂತು,** "ನಿಮಗೆ ಮನಶ್ಶಾಂತಿಯಾಗಲಿ" ಎಂದು ಅವರಿಗೆ ಹೇಳಿದನು. ಅವರು ದಿಗಿಲುಬಿದ್ದು ಭಯಹಿಡಿದವರಾಗಿ ತಾವು ಕಂಡದ್ದನ್ನು ಭೂತವೆಂದು ಭಾವಿಸಿದರು. ಆತನು ಅವರಿಗೆ, "ಯಾಕೆ ಕಳವಳಗೊಳ್ಳುತ್ತೀರಿ? ನಿಮ್ಮ ಹೃದಯದಲ್ಲಿ ಅನುಮಾನಗಳು ಹುಟ್ಟುವದೇಕೆ? **ನನ್ನ ಕೈಗಳನ್ನೂ ನನ್ನ ಕಾಲುಗಳನ್ನೂ ನೋಡಿರಿ,** ನಾನೇ ಅಲ್ಲವೆ. ನನ್ನನ್ನು ಮುಟ್ಟಿ ನೋಡಿರಿ, ನಿಮಗೆ ಕಾಣುವ ಪ್ರಕಾರ ನನಗೆ ಮಾಂಸವೂ ಎಲುಬುಗಳೂ ಉಂಟು; ಅವು ಭೂತಕ್ಕಿಲ್ಲ" ಎಂದು ಹೇಳಿದನು. ಆದರೆ ಅವರು ಸಂತೋಷದ ದೆಸೆಯಿಂದ ಇನ್ನೂ ನಂಬದೆ ಆಶ್ಚರ್ಯಪಡುತ್ತಿರಲಾಗಿ ಆತನು,"ತಿನ್ನತಕ್ಕ ಪದಾರ್ಥ –ವೇನಾದರೂ ಇಲ್ಲಿ ನಿಮಗುಂಟೋ" ಎಂದು ಅವರನ್ನು ಕೇಳಲು ಅವರು ಸುಟ್ಟ ಮೀನಿನ ಒಂದು ತುಂಡನ್ನು ಆತನಿಗೆ ಕೊಟ್ಟರು. ಆತನು ತಕ್ಕೊಂಡು ಅವರ ಮುಂದೆ ತಿಂದನು. (24:36-43)

ತರುವಾಯ ಆತನು, "ನಾನು ಇನ್ನೂ ನಿಮ್ಮ ಸಂಗಡ ಇದ್ದಾಗ ಇದೆಲ್ಲಾ ನಿಮಗೆ ತಿಳಿಸಲಿಲ್ಲವೇ? **ನನ್ನ ವಿಷಯವಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿಯೂ ಪ್ರವಾದಿಗಳ ಗ್ರಂಥಗಳಲ್ಲಿಯೂ ಕೀರ್ತನೆಗಳಲ್ಲಿಯೂ ಬರೆದಿರುವದೆಲ್ಲಾ ನೆರವೇರುವದು ಅಗತ್ಯವೆಂದು ನಿಮಗೆ ಹೇಳ –ಲಿಲ್ಲವೇ" ಅಂದನು. ಆ ಮೇಲೆ ಅವರು ಶಾಸ್ತ್ರವಚನಗಳನ್ನು ತಿಳುಕೊಳ್ಳುವಂತೆ ಆತನು ಅವರ ಬುದ್ಧಿಯನ್ನು ತೆರೆದು ಅವರಿಗೆ, "ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳ ಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವು –ಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿದ್ದೀರಿ."** (24:44-48)

ಯೇಸು ಬಂದಾಗ ಹನ್ನೆರಡು ಮಂದಿ ಶಿಷ್ಯರೊಳಗೆ ಒಬ್ಬನಾದ ದಿದುಮನೆನಿಸಿಕೊಳ್ಳುವ ತೋಮನು ಅವರ ಸಂಗಡ ಇರಲಿಲ್ಲ. ಆದದ –ರಿಂದ ಉಳಿದ ಶಿಷ್ಯರು, "ನಾವು ಸ್ವಾಮಿಯನ್ನು ನೋಡಿದ್ದೇವೆ" ಎಂದು ಅವನಿಗೆ ಹೇಳಿದರು. ಅದಕ್ಕೆ ಅವನು, "ನಾನು ಆತನ ಕೈ – –ಗಳಲ್ಲಿ ಮೊಳೆಗಳಿಂದಾದ ಗಾಯವನ್ನು ನೋಡಿ ಆ ಮೊಳೆಯ ಘಾಯದಲ್ಲಿ ನನ್ನ ಬೆರಳನ್ನು ಇಟ್ಟು ಆತನ ಪಕ್ಕೆಯಲ್ಲಿ ನನ್ನ ಕೈಯನ್ನು ಹಾಕಿದ ಹೊರತು ನಿಮ್ಮ ಮಾತನ್ನು ನಂಬುವದೇ ಇಲ್ಲ" ಅಂದನು. ಎಂಟು ದಿವಸಗಳಾದ ಮೇಲೆ ಆತನ ಶಿಷ್ಯರು ತಿರಿಗಿ ಒಳಗಿದ್ದಾಗ ತೋಮನೂ ಅವರ ಸಂಗಡ ಇದ್ದನು. ಬಾಗಿಲುಗಳು ಮುಚ್ಚಿದ್ದವು. ಆಗ ಯೇಸು ಬಂದು ನಡುವೆ ನಿಂತು, "ನಿಮಗೆ ಸಮಾಧಾನ –ವಾಗಲಿ" ಅಂದನು. ಆ ಮೇಲೆ ತೋಮನಿಗೆ, "ನಿನ್ನ ಬೆರಳನ್ನು ಈ ಕಡೆ ಚಾಚಿ ನನ್ನ ಪಕ್ಕೆಯಲ್ಲಿ ಹಾಕು; ನಂಬದವನಾಗಿರಬೇಡ, ನಂಬುವವನಾಗು" ಎಂದು ಹೇಳಿದನು. ತೋಮನು ಆತನಿಗೆ, **"ನನ್ನ ಸ್ವಾಮೀ, ನನ್ನ ದೇವರು!"** ಎಂದು ಹೇಳಿದನು. ಯೇಸು ಅವ –ನಿಗೆ, **"ನೀನು ನೋಡಿದ್ದರಿಂದ ನಂಬಿದ್ದೀ; ನೋಡದೆ ನಂಬಿದವರು ಧನ್ಯರು"** ಎಂದು ಹೇಳಿದನು. ಯೇಸು ಇನ್ನು ಎಷ್ಟೋ ಸೂಚಕ ಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. **ಆದರೆ ಯೇಸು ದೇವ ಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳುವಂತೆಯೂ ಇಷ್ಟೆಲ್ಲಾ ಬರೆದದೆ.**

ಈದಿನ ನಾವು ಎಂತಹ ಒಂದು ರೋಮಾಂಚಕಾರಿಯಾದ ಕತೆಯನ್ನು ಓದಿದೆವು! ಯೇಸು ಸತ್ತವರೊಳಗಿಂದ ಎದ್ದು ಬಂದನು! ಮನು –ಷ್ಯನ ಒಂದು ದೊಡ್ಡ ಶತೃವಾದ ಮರಣವನ್ನು ಆತನು ಜಯಿಸಿದನು. ಸಮಾಧಿಯು ಆತನನ್ನು ಹಿಡಿದಿಟ್ಟುಕೊಳ್ಳುವದಕ್ಕೆ ಆಗಲಿಲ್ಲ. ಚಿಟ್ಟೆಯು ತನ್ನ ಕೋಶಾವಸ್ಥೆಯ ಚಿಪ್ಪನ್ನು ಬಿಟ್ಟು ಬಿಡುವಂತೆ, ಮೂರನೆಯ ದಿನದಲ್ಲಿ, ಯೇಸು ತನ್ನ ಸಮಾಧಿಯ ಬಟ್ಟೆಗಳಲ್ಲಿಯೇ ನೇರವಾಗಿ ಹೊರಬಂದನು. ಯೇಸುವಿನ ದೇಹವನ್ನಿಟ್ಟಿದ್ದ ಸ್ಥಳದಲ್ಲಿ ಸಮಾಧಿಯ ಬಟ್ಟೆಗಳು ಮಾತ್ರ ಇದ್ದವು. ಕರ್ತನಾದ ಯೇಸು ಕ್ರಿಸ್ತನು ಮಹಿಮೆಯ ದೇಹದಲ್ಲಿ ಎದ್ದು ಬಂದನು ಅದೇ ರೀತಿ ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬರೂ ಒಂದು ದಿನ ಎದ್ದು ಬರು –ತ್ತಾರೆ! ಅದೇ ಕಾರಣಕ್ಕಾಗಿ ವಾಕ್ಯವು ಹೀಗೆ ಬರೆಯಲ್ಪಟ್ಟಿದೆ:

"ಆದರೆ ಕ್ರಿಸ್ತನು ಸತ್ತರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆ ಹೋದವರಲ್ಲಿ **ಪ್ರಥಮಫಲವಾದನು.** ಮನುಷ್ಯನ ಮೂಲಕ ಮರಣವು ಉಂಟಾದ ಕಾರಣ ಮನುಷ್ಯನ ಮೂಲಕ ಸತ್ತವರಿಗೆ ಪುನರುತ್ಥಾನವುಂಟಾಗುವದು. **ಯಾವ ಪ್ರಕಾರ ಆದಾಮನ ಸಂಬಂಧದಿಂದ ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ ಕ್ರಿಸ್ತನ ಸಂಬಂಧದಿಂದ ಎಲ್ಲರೂ ಜೀವಿತರಾಗುವರು."** (1ಕೊರಿಂಥ–15:20-22)

ತಾನು ಏನಾಗಿದ್ದೇನೆಂದು ಯೇಸು ಹಕ್ಕಿನಿಂದ ಹೇಳಿದ್ದನೋ ಅದನ್ನು ಆತನ ಪುನರುತ್ಥಾನವು ರುಜುವಾತುಗೊಳಿಸಿತು. ಯೇಸು ಹೇಳಿದ್ದು ನಿಮಗೆ ನೆನಪಿದೆಯೋ. **"ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ, ನನ್ನನ್ನು ನಂಬುವವನು ಸತ್ತರೂ ಬದುಕುವನು ಮತ್ತು ಬದುಕುತ್ತಾ ನನ್ನನ್ನು ನಂಬುವವನೂ ಎಂದಿಗೂ ಸಾಯುವದೇ ಇಲ್ಲ!"** (ಯೋಹಾನ–11:25). ತನ್ನನ್ನು ನಂಬುವವರೆಲ್ಲರಿಗೆ ನಿತ್ಯಜೀವ –ವನ್ನು ಕೊಡುತ್ತೇನೆಂದು ಯೇಸು ವಾಗ್ದಾನ ಮಾಡಿದ್ದನು, ಆದರೆ ಒಂದುವೇಳೆ ಆತನು ತಾನೇ ಮರಣವನ್ನು ಜಯಿಸದಿದ್ದಿದ್ದರೆ, ಪಾಪ, ಮರಣ, ಮತ್ತು ನರಕದ ಬಲದಿಂದ ಇತರರನ್ನು ರಕ್ಷಿಸುವದಕ್ಕೆ ಯಾರಿಗೆ ಸಾಧ್ಯವಾಗುತ್ತಿತ್ತು?

ಬಹುಶ: **ಒಂದು ನಿದರ್ಶನವು** ನಮಗೆ ಸಹಾಯವಾಗಬಹುದು. ಒಂದು ಮಗುವು ಸಮುದ್ರತೀರದಲ್ಲಿ ಅಲೆಗಳೊಂದಿಗೆ ಆಟವಾಡುತ್ತಿದೆ.

ಇದ್ದಕ್ಕಿದ್ದಂತೆಯೇ ಒಂದು ಬಲವಾದ ಅಲೆಯು ಆ ಮಗುವನ್ನು ಸಮುದ್ರದೊಳಕ್ಕೆ ಎಳೆದುಕೊಂಡಿತು. ಅದು ಹೊರಕ್ಕೆ ಬರುವದಕ್ಕೆ ಜೀವದ ಹಂಗು ತೊರೆದು ಪ್ರಯತ್ನಿಸುತ್ತಿತ್ತು ಆದರೆ ಆಗಲಿಲ್ಲ. ಯಾರೂ ರಕ್ಷಿಸದಿದ್ದರಿಂದ ಆ ಮಗುವು ಸತ್ತು ಹೋಯಿತು. ಮಗು ವನ್ನು ನೋಡುತ್ತಿದ್ದ ತೀರದಲ್ಲಿದ್ದ ಒಬ್ಬ ಮನುಷ್ಯನು ನೋವಿನಿಂದ, **"ಹೆದರಬೇಡ, ನಾನು ನಿನ್ನನ್ನು ಕಾಪಾಡುತ್ತೇನೆ!"** ಎಂದು ಕೂಗಿ ದನು. ಮತ್ತು ಅವನು ಮಗುವಿದ್ದಲ್ಲಿಗೆ ಈಜುತ್ತಾ ಹೋದನು, ಆದರೆ ಅಯ್ಯೋ, ಅಲೆಗಳು ಅವನಿಗೆ ತುಂಬಾ ಬಲವಾಗಿದ್ದವು. ಮಗು ಮತ್ತು ಅವನು ಇಬ್ಬರೂ ಮುಳುಗಿ ಹೋದರು. ಆ ಮನುಷ್ಯನು ಮಗುವನ್ನು ರಕ್ಷಿಸುವ ಉದ್ದೇಶವುಳ್ಳನಾಗಿದ್ದನು, ಆದರೆ ತನ್ನ ಉದ್ದೇಶ –ವನ್ನು ಕಾರ್ಯರೂಪಕ್ಕೆ ತರುವಲ್ಲಿ ಅವನಿಗೆ ಶಕ್ತಿಯ ಕೊರತೆಯಿತ್ತು. ಸಮುದ್ರದ ಅಲೆಗಳು ಅವನ ಶಕ್ತಿಗಿಂತ ತುಂಬಾ ಬಲವಾದವು –ಗಳಾಗಿದ್ದವು. ಹಾಗೆಯೇ, ತಮ್ಮನ್ನು ರಕ್ಷಕರೆಂದು ಹೇಳಿಕೊಂಡು, **"ನನ್ನನ್ನು ಹಿಂಬಾಲಿಸಿರಿ, ನನ್ನನ್ನು ನಂಬಿರಿ, ಆಗ ನೀವು ಪರ – –ದೈಸಕ್ಕೆ ಹೋಗುತ್ತೀರಿ"** ಎಂದು ಜನರಿಗೆ ಹೇಳುವದನ್ನು ನಾವು ಕೇಳಿದ್ದೇವೆ. ಅಂತಹ ವಾಗ್ದಾನಗಳನ್ನು ಮಾಡುವವರು ಒಳ್ಳೆಯ ಉದ್ದೇಶವುಳ್ಳವರಾಗಿರಬಹುದು, ಆದರೆ ಅವರು ತಾವು ವಾಗ್ದಾನ ಮಾಡಿದ್ದನ್ನು ನೆರವೇರಿಸುವದಿಲ್ಲ. ಅವರು ತಮ್ಮನ್ನೇ ಕಾಪಾಡಿಕೊಂಡಿ –ರುವದಿಲ್ಲ, ಯಾಕಂದರೆ ಅವರು ಪಾಪದ ಮತ್ತು ಮರಣದ ಬಲವನ್ನು ಜಯಿಸುವದಕ್ಕೆ ಸಂಪೂರ್ಣವಾಗಿ ಅಸಮರ್ಥರಾಗಿರುತ್ತಾರೆ. ಮರಣದ ಬಲವು ಅವರಿಗೆ ತುಂಬಾ ಶಕ್ತಿಯುಳ್ಳದ್ದಾಗಿರುತ್ತದೆ, ಅವರು ಮರಣ ಹೊಂದಿದಾಗ, ಅವರನ್ನು ಸಮಾಧಿ ಮಾಡುತ್ತಾರೆ, ಅವರ ದೇಹಗಳು ಕೊಳೆತುಹೋಗುತ್ತವೆ ಮತ್ತು ಅವರ ಆತ್ಮಗಳು ನ್ಯಾಯತೀರ್ಪಿನ ದಿನಕ್ಕಾಗಿ ಕಾಯುತ್ತಿರುತ್ತವೆ.

ಆದರೆ ಕರ್ತನಾದ ಯೇಸುವಿನ ರೀತಿಯು ಇದಾಗಿರಲಿಲ್ಲ. ತಾನು ಏನಾಗಿದ್ದೇನೆ ಎಂದು ಆತನು ಹೇಳಿದವನಾಗಿದ್ದನು! ಆತನು ಮುಂತಿಳಿಸಿದಂತೆಯೇ ಪ್ರತಿಯೊಂದು ಸಂಭವಿಸಿತು. ಪಾಪವನ್ನು ತೆಗೆದುಹಾಕುವ ಒಂದು ಯಜ್ಞದ ಹಾಗೆ ಯೇಸು ಸತ್ತನು, ಹೂಣ –ಲ್ಪಟ್ಟನು ಮತ್ತು ಮೂರನೆಯ ದಿನದಲ್ಲಿ ಸಮಾಧಿಯಿಂದ ಎದ್ದು ಹೊರಬಂದನು! ಪ್ರವಾದಿಗಳೊಳಗೆ ಯಾರೊಬ್ಬರೂ ಸತ್ತು ಹೂಣ – –ಲ್ಪಟ್ಟು ಸಮಾಧಿಯಿಂದ ಎದ್ದು ಬಂದು ಮತ್ತೆ ಎಂದಿಗೂ ಸಾಯದಿರುವವರು ಅಲ್ಲಿರಲಿಲ್ಲ! ಆದರೆ ಮೆಸ್ಸೀಯನಾದ ಯೇಸು ಅದನ್ನು ಮಾಡಿದ್ದನು! ಆತನು ಮರಣವನ್ನು ಮತ್ತು ಸಮಾಧಿಯನ್ನು ಸೋಲಿಸಿದ್ದನು! ಆತನು ಪಾಪ, ಸೈತಾನ, ಮರಣ ಮತ್ತು ನರಕವನ್ನು ಜಯಿಸಿದ್ದನು! ಇದೆಲ್ಲಾದರಲ್ಲಿ ಹೆಚ್ಚು ಅದ್ಭುತಕರವಾದ ಸಂಗತಿಯೆಂದರೆ ಅದು, ಯೇಸು ಕ್ರಿಸ್ತನ ಮರಣ ಪುನರುತ್ಥಾನಗಳ ಕುರಿತಾದ ಶುಭಸಂದೇಶವನ್ನು **ಯಾರು ನಿಜವಾಗಿಯೂ ನಂಬುತ್ತಾರೋ** ಅವರು ಆತನ ಮಹಿಮೆಯಲ್ಲಿ ಎಂದೆಂದಿಗೂ ಪಾಲುಗಾರರಾಗಿರುತ್ತಾರೆ! ಎಂಬದು. ಅದಕ್ಕಾಗಿಯೇ ಕರ್ತನಾದ ಯೇಸು ಮರಣದಿಂದ ಎದ್ದು ಬಂದ ನಂತರ ಹೀಗೆ ಹೇಳಿದನು, **"ಹೆದರಬೇಡ, ನಾನು ಮೊದಲನೆಯವನೂ ಕಡೆಯವನೂ ಸದಾ ಜೀವಿಸುವವನೂ ಆಗಿದ್ದೇನೆ. ಸತ್ತವನಾದೆನು, ಮತ್ತು ಇಗೋ ಯುಗಯುಗಾಂತರಗಳಲ್ಲಿಯೂ ಬದುಕುವವನಾಗಿದ್ದೇನೆ; ಮರಣದ ಮತ್ತು ಪಾತಾಳದ ಬೀಗದಕೈಗಳು ನನ್ನಲ್ಲಿ ಅವೆ."** (ಪ್ರಕ–1:17,18**)**

ದೇವರು ಯೇಸುವನ್ನು ಜೀವದಿಂದ ಎಬ್ಬಿಸಿದನು, ಆದದರಿಂದ ಈತನು ಖಂಡಿತವಾಗಿ ರಕ್ಷಕನೂ ಮತ್ತು ದೇವರಿಂದ ನೇಮಕಗೊಂಡ ಲೋಕದ ನ್ಯಾಯಾಧಿಪತಿಯೂ ಎಂಬುದನ್ನು ನೀವು ತಿಳಿದುಕೊಳ್ಳಲು ಶಕ್ತರಾಗಿದ್ದೀರಿ. ವಾಕ್ಯಗಳು ಅದನ್ನೇ ಹೇಳುತ್ತವೆ, ಏನೆಂದರೆ:

**"ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ,** ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂ – –ದಲೂ ನಮಗೆ ರಕ್ಷಣೆಯಾಗುವದಿಲ್ಲ!. . .ಯಾಕಂದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂ ಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. **ಅವನನ್ನು ಸತ್ತವರೊಳಗಿಂದ ಎಬ್ಬಿಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿದ್ದಾನೆ. . . .ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ ನಿನಗೆ ರಕ್ಷಣೆಯಾಗುವದು!. . .ಕರ್ತನ ನಾಮವನ್ನು ಹೇಳಿಕೊಳ್ಳು – –ವವರೆಲ್ಲರಿಗೆ ರಕ್ಷಣೆಯಾಗುವದು!"** (ಅಪೊ.ಕೃತ್ಯ–4:12; 17:31; ರೋಮಾ–10:9,13)

ಸ್ನೇಹಿತರೇ, ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ದೇವರ ಚಿತ್ತವಾದರೆ, ನಮ್ಮ ಮುಂದಿನ ಕಾರ್ಯಕ್ರಮದಲ್ಲಿ, ಕರ್ತನಾದ ಯೇಸು ತನ್ನ ಶಿಷ್ಯರಿಗೆ ನಲವತ್ತು ದಿವಸಗಳ ಅವಧಿಯಲ್ಲಿ ಕಾಣಿಸಿಕೊಂಡು ನಂಬಿಕೆಯನ್ನುಂಟುಮಾಡುವ ಅನೇಕ ರುಜುವಾತುಗಳಿಂದ ತಾನು ಜೀವಂತವಾಗಿರುವದನ್ನು ಅವರಿಗೆ ತೋರಿಸಿದ ನಂತರ ಆತನು ಹೇಗೆ ಪರಲೋಕಕ್ಕೆ ಏರಿ ಹೋದನೆಂಬುದನ್ನು ನೋಡುವದಕ್ಕೆ ಸುವಾ –ರ್ತೆಯಲ್ಲಿರುವದನ್ನು ಮುಂದುವರಿಸುತ್ತೇವೆ.

ಈ ದಿನ ನೀವು ಕೇಳಿಸಿಕೊಂಡ ಎಲ್ಲದರೊಳಗೆ, ಮತ್ತು ಆತನ ಪರಿಶುದ್ಧ ವಾಕ್ಯದಲ್ಲಿರುವ ಈ ವಚನವನ್ನು ನೀವು ಜಾಗ್ರತೆಯಿಂದ ಆಲೋಚಿಸುವಂತೆ ದೇವರು ನಿಮಗೆ ವಿವೇಕವನ್ನು ಕೊಡಲಿ.

**"ದೇವರು ಆತನನ್ನು ನಮ್ಮ ಅಪರಾಧಗಳ ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು ನಮಗೆ ನೀತವಂತರೆಂಬ ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು!"** (ರೋಮಾ–4:25)

ಪಾಠ 86

# ಯೇಸು ಪರಲೋಕಕ್ಕೆ ಏರಿ ಹೋದದ್ದು

ಮತ್ತಾಯ 28; ಲೂಕ 24; ಅಪೊ.ಕೃತ್ಯ 1

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ದೀರ್ಘ ಸಮಯದವರೆಗೆ, ನಾವು ಪರಿಶುದ್ಧ ಸುವಾರ್ತೆಯನ್ನು{ಇಂಜಿಲ್} ಅಂದರೆ ಸರ್ವಶಕ್ತ ರಕ್ಷಕನಾದ ಯೇಸು ಕ್ರಿಸ್ತನ ಕತೆಗಳನ್ನೊ –ಳಗೊಂಡಿರುವ ಪುಸ್ತಕವನ್ನು ಗಮನಿಸುತ್ತಾ ಇದ್ದೇವೆ. ನಾವು ಈಗಾಗಲೇ ನೋಡಿರುವಂತೆ, **ಯೇಸು** ಎಂದರೆ ದೇವರು ರಕ್ಷಿಸುತ್ತಾನೆ ಎಂದು ಅರ್ಥ. **ಕ್ರಿಸ್ತನು** ಎಂಬದು ಮೆಸ್ಸೀಯ ಎಂಬುದರ ಗ್ರೀಕ್ ಶಬ್ದವಾಗಿದ್ದು ದೇವರು ನೇಮಿಸಿದವನು ಎಂಬ ಅರ್ಥವುಳ್ಳದ್ದಾಗಿದೆ. ಯೇಸು ಕ್ರಿಸ್ತನು ಪಾಪದ ಆಳ್ವಿಕೆಯಿಂದ ಆದಾಮನ ಸಂತಾನವನ್ನು ರಕ್ಷಿಸುವದಕ್ಕೆ ದೇವರಿಂದ ನೇಮಕಗೊಂಡವನಾಗಿದ್ದಾನೆ.

ಏನೇ ಆದರೂ, **ಯೇಸು ನಿಜವಾಗಿಯೂ ಯಾರಾಗಿದ್ದಾನೆಂಬುದನ್ನು ಅನೇಕ ಜನರು ಗ್ರಹಿಸಲಿಲ್ಲ** ಎನ್ನುವದನ್ನು ನಾವು ನೋಡಿದ್ದೇವೆ. ಕೆಲವರು ಆತನನ್ನು ಒಬ್ಬ ಪ್ರವಾದಿ ಅಂದುಕೊಂಡರು, ಆದರೆ ಆತನು ಪರಲೋಕದಿಂದ ಬಂದು ಭೂಲೋಕದಲ್ಲಿ ಒಬ್ಬ ಮನುಷ್ಯನಾಗಿ ಕಾಣಿಸಿಕೊಂಡ ನಿಜವಾದ ದೇವರ ವಾಕ್ಯವಾಗಿದ್ದಾನೆ {ಕಾಲಿಮತ್ ಅಲ್ಲಾ} ಎಂಬುದನ್ನು ಅವರು ಅರ್ಥಮಾಡಿಕೊಳ್ಳಲಿಲ್ಲ. ಕೆಲವು ಮಹಾಯಾಜಕರುಗಳು ಮತ್ತು ಯೆಹೂದ್ಯ ಆಡಳಿತಗಾರರು ಆತನ ಮೇಲೆ ತುಂಬಾ ಹೊಟ್ಟೇಕಿಚ್ಚುಳ್ಳವರಾಗಿ ಕೊನೆಯಲ್ಲಿ ಆತನನ್ನು ಶಿಲುಬೆಗೆ ಜಡಿದು ಕೊಂದುಹಾಕಿದರು. ಹೀಗಿದ್ದರೂ, ಈ ಎಲ್ಲಾ ಘಟನೆಗಳ ಕುರಿತು ಮೊದಲೇ ತಿಳಿದಿದ್ದ ದೇವರು ಯೋಜನೆ ಮಾಡಿ –ಕೊಂಡಿದ್ದನು. ಶಿಲುಬೆಯ ಮೇಲಿನ ಮೆಸ್ಸೀಯನ ಮರಣವು, ದೇವರು ತನ್ನ ಪ್ರವಾದಿಗಳ ಮೂಲಕವಾಗಿ ಬಹಳ ಹಿಂದೆಯೇ ಪ್ರಕ –ಟಿಸಿದ್ದ ಆತನ ಯೋಜನೆಯೊಂದಿಗೆ ಒಂದು ಸಂಪೂರ್ಣವಾದ ಒಪ್ಪಂದವಾಗಿತ್ತು. ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ಮೂರನೆಯ ದಿನದಲ್ಲಿ ದೇವರು ಯೇಸುವನ್ನು ಮತ್ತೆ ಜೀವದಿಂದ ಎಬ್ಬಸಿದ್ದನ್ನು ನೋಡಿಕೊಂಡೆವು. ಪಾಪದ ಬಲದಿಂದ, ಮರಣದ ಭಯದಿಂದ ಮತ್ತು ನರಕದ ಶಿಕ್ಷೆಯಿಂದ ಆದಾಮನ ಸಂತಾನದವರನ್ನು ಬಿಡಿಸುವದಕ್ಕೆ ಒಂದು ಪೂರ್ತಿ ಸಂದಾಯದಂತೆ ಶಿಲುಬೆಯ ಮೇಲೆ ಯೇಸು ಸುರಿಸಿದ ರಕ್ತವನ್ನು ದೇವರು ಒಪ್ಪಿಕೊಂಡದ್ದೇ ಯೇಸುವಿನ ಪುನರುತ್ಥಾನವಾಗಿದೆ.

ಯೇಸು ಜೀವಂತನಾಗಿ ಬಂದ ಮೇಲೆ, ಆತನು ತನ್ನ ಶಿಷ್ಯರಿಗೆ ಕಾಣಿಸಿಕೊಂಡು ತನ್ನ ಕೈಕಾಲುಗಳಿಗೆ ಸೈನಿಕರುಗಳು ಮಾಡಿದಂತಹ ಗಾಯದ ಗುರುತುಗಳನ್ನು ಅವರಿಗೆ ತೋರಿಸಿದ್ದನ್ನು ನಾವು ನೋಡಿದೆವು. ತಾನು ನಿಜವಾಗಿಯೂ ಜೀವಂತನಾಗಿದ್ದೇನೆಂಬುದನ್ನು ಸಾಬೀತುಪಡಿಸುವದಕ್ಕೆ ಆತನು ಶಿಷ್ಯರೊಂದಿಗೆ ಊಟ ಮಾಡಿದ್ದನ್ನು ಸಹ ನಾವು ಓದಿಕೊಂಡೆವು. ಯೇಸು ನಲವತ್ತು ದಿವಸಗಳವರೆಗೆ ತನ್ನ ಶಿಷ್ಯರಿಗೆ ಕಾಣಿಸಿಕೊಂಡು ದೇವರ ರಾಜ್ಯದ ಕುರಿತಾಗಿ ಅವರೊಂದಿಗೆ ಹೇಗೆ ಮಾತಾಡಿದನೆಂಬುದನ್ನು ಸುವಾರ್ತೆಯ{ಇಂಜಿಲ್} ಪುಸ್ತಕವು ಹೇಳುತ್ತದೆ. ಒಂದು ಸಂದರ್ಭದಲ್ಲಿ, ಯೇಸು ಒಂದೇ ಸಲಕ್ಕೆ ಐದು ನೂರಕ್ಕಿಂತಲೂ ಹೆಚ್ಚು ಶಿಷ್ಯರಿಗೆ ಕಾಣಿಸಿಕೊಂಡನು (1ಕೊರಿಂಥ–15:6). ಏನೇ ಆದರೂ, ಸತ್ಯಾಂಶದಲ್ಲಿ ಯೇಸು ಈದಿನ ಜೀವಂತವಾಗಿದ್ದಾನೆ ಎನ್ನುವದಕ್ಕೆ ದೊಡ್ಡದಾದ ಸಾಕ್ಷಿ ಏನೆಂ – –ದರೆ, ಆತನನ್ನು ನಂಬುವವರ ಹೃದಯದೊಳಗೆ ಆತನು ಜೀವಿಸುತ್ತಾನೆ (ತನ್ನ ಪವಿತ್ರಾತ್ಮನಿಂದ) ಮತ್ತು ತನ್ನ ಅಧಿಕಾರಕ್ಕೆ ಅವರನ್ನು ಅಧೀನಪಡಿಸುತ್ತಾನೆ ಎನ್ನುವಂತದ್ದೇ.

ಈದಿನ ನಾವು ದೇವರ ಸಹಾಯದೊಂದಿಗೆ, **ದೇವರು ಕರ್ತನಾದ ಯೇಸುವಿಗೆ ಕೊಟ್ಟಂತ ಮಹತ್ವದ ಅಧಿಕಾರದ** ಕುರಿತಾಗಿ ಕೇಳಿಸಿಕೊಳ್ಳ –ಲಿದ್ದೇವೆ ಮತ್ತು **ಯೇಸು ಹೇಗೆ ತನ್ನ ಶಿಷ್ಯರಿಂದ ಪ್ರತ್ಯೇಕಗೊಂಡು ಪರಲೋಕಕ್ಕೆ ಏರಿಹೋದನೆಂಬುದನ್ನು** ನಾವು ನೋಡುತ್ತೇವೆ. ಈದಿನ ನಾವು ಮತ್ತಾಯನ ಸುವಾರ್ತೆಯ ಕೊನೆಯ ಅಧ್ಯಾಯದಲ್ಲಿ ನಮ್ಮ ಅಧ್ಯಯನವನ್ನು ಆರಂಭಿಸುತ್ತೇವೆ. ಅಲ್ಲಿ ವಾಕ್ಯ ಹೀಗೆ ಹೇಳುತ್ತದೆ:

ಬಳಿಕ ಹನ್ನೊಂದು ಮಂದಿ ಶಿಷ್ಯರು ಗಲಿಲಾಯಕ್ಕೆ ಹೋಗಿ ಯೇಸು ತಮಗೆ ಗೊತ್ತು ಮಾಡಿದ್ದ ಬೆಟ್ಟಕ್ಕೆ ಸೇರಿದರು. ಅಲ್ಲಿ ಆತನನ್ನು ಕಂಡು ಆತನಿಗೆ ಅಡ್ಡ ಬಿದ್ದರು; ಆದರೆ ಕೆಲವರು ಸಂದೇಹಪಟ್ಟರು. ಆಗ ಯೇಸು ಹತ್ತರಕ್ಕೆ ಬಂದು, "ಪರಲೋಕದಲ್ಲಿಯೂ ಭೂ – –ಲೋಕದಲ್ಲಿಯೂ **ಎಲ್ಲಾ ಅಧಿಕಾರವು** ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರ –ನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಜ್ಞಾಪಿಸಿದ್ದನ್ನೆಲ್ಲಾ

ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ" ಎಂದು ಹೇಳಿದನು. (ಮತ್ತಾಯ–28:16-20)

ಯೇಸು ತನ್ನ ಶಿಷ್ಯರಿಗೆ ಹೇಳಿದ್ದನ್ನು ನೀವು ಕೇಳಿದಿರಾ? ಆತನು ಅವರಿಗೆ ಹೇಳಿದ್ದೇನೆಂದರೆ, "ಪರಲೋಕದಲ್ಲಿಯೂ ಭೂಲೋಕ –ದಲ್ಲಿಯೂ **ಎಲ್ಲಾ ಅಧಿಕಾರವು ನನಗೆ** ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ." ಎಂಬದೇ. ಪರಲೋಕ ಮತ್ತು ಭೂಲೋಕದಲ್ಲಿ ಎಲ್ಲಾ ಅಧಿಕಾರವನ್ನು ನಾನು ಹೊಂದಿದ್ದೇನೆ ಎಂದು ಯೇಸು ಯಾಕೆ ಹೇಳಿದನು?

ಮೋಶೆಯ ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಮೊದಲನೆಯವನ ಮನುಷ್ಯನಾದ ಆದಾಮನನ್ನು ದೇವರು ಹೇಗೆ ಸೃಷ್ಟಿ ಮಾಡಿದ –ನೆಂಬುದನ್ನು ನಾವು ನೋಡಿದ್ದೇವೆ. ತಾನು ಸೃಷ್ಟಿಮಾಡಿದ ಪ್ರತಿಯೊಂದರ ಮೇಲೆ ಆಳ್ವಿಕೆ ನಡಿಸುವದಕ್ಕೆ ದೇವರು ಆದಾಮನಿಗೆ ಅಧಿ –ಕಾರವನ್ನು ಕೊಟ್ಟನೆಂಬುದನ್ನು ನಾವು ಓದಿದ್ದೇವೆ. ಆದಾಮನು ತನ್ನ ಜೊತೆಯಲ್ಲಿ ಜೀವಿಸಬೇಕು ಮತ್ತು ಎಂದೆಂದಿಗೂ ತನ್ನೊಂದಿಗೆ ಆಳ್ವಿಕೆ ನಡಿಸಬೇಕೆಂದು ದೇವರು ಇಷ್ಟಪಟ್ಟಿದ್ದನು. ಆದರೆ ಆದಾಮನು ದೇವರ ಆಜ್ಞೆಗೆ ಅವಿಧೇಯನಾಗಿ ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದ ದಿನದಂದು ಆ ಅಧಿಕಾರದ ಹಕ್ಕನ್ನು ಕಳೆದುಕೊಂಡನು. ಆದಾಮನು ನಮ್ಮ ಮೂಲಪಿತೃವಾದ– –ಂದಿನಿಂದ ಈವರೆಗೆ, "ಒಂದು ಸೋಂಕು ಉತ್ಪತ್ತಿಯಾದವರಿಂದ ಪ್ರತಿಬಂಧಿಸಲ್ಪಡುವದಿಲ್ಲ!"{ಉಲೂಫ್ ಗಾದೆ}, ಎಂಬಂತೆ ನಾವೂ ಸಹ ದೇವರೊಂದಿಗೆ ಆಳ್ವಿಕೆ ನಡೆಸುವ ಹಕ್ಕನ್ನು ಕಳೆದುಕೊಂಡಿದ್ದೇವೆ. ಆದಾಮನ ಹಾಗೆ, ನಾವೆಲ್ಲರೂ ಪಾಪಿಗಳೇ, ಪಾಪದ ರಾಜ್ಯ – –ದೊಳಗೆ ಹುಟ್ಟಿದವರು, ದೇವರಿಂದ ಮತ್ತು ಆತನ ಭವ್ಯವಾದ ಮಹಿಮೆಯಿಂದ ದೂರದಲ್ಲಿರುವವರು ಆಗಿದ್ದೇವೆ.

ಏನೇ ಆದರೂ, ನಾವು ದೇವರನ್ನು ಸ್ತುತಿಸುತ್ತೇವೆ, ಯಾಕಂದರೆ ಆದಾಮನ ಸಂತಾನದವರು ದೇವರ ಕಡೆಗೆ ಹಿಂತಿರುಗಿ ಬಂದು ಆತನ ಮಹಿಮೆಯಲ್ಲಿ ಮತ್ತು ರಾಜ್ಯದಲ್ಲಿ ಪಾಲುಗಾರರಾಗುವದಕ್ಕಾಗಿ ದೇವರು **ಒಂದು ಬಾಗಿಲನ್ನು** ತೆರೆಯುವದಕ್ಕೆ ಒಂದು ಯೋಜನೆ –ಯನ್ನು ರಚನೆ ಮಾಡಿದನು ಎಂದು ಪ್ರವಾದಿಗಳ ಬರವಣಿಗೆಗಳು ನಮಗೆ ತೋರಿಸುತ್ತವೆ. ಜನರ ಪಾಪಗಳನ್ನು ತೊಳೆಯುವದಕ್ಕೆ ಮತ್ತು ದೇವರ ಕಡೆಗೆ ಅವರನ್ನು ತರುವದಕ್ಕೆ ಒಂದು ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕೆ ಪರಲೋಕದಿಂದ ಬಂದ **ಪರಿ –ಶುದ್ಧ ಮೆಸ್ಸೀಯನೇ** ಆ **"ಬಾಗಿಲು"**. ಮೆಸ್ಸೀಯನಾದ ಯೇಸು ಆದಾಮನ ಹಾಗೆ ಪರೀಕ್ಷಿಸಲ್ಪಟ್ಟನು, ಆದರೆ ಯೇಸು ಪಾಪ ಮಾಡ – ಲಿಲ್ಲ. ದೇವರು ಸಂಪೂರ್ಣನೂ ಮತ್ತು ಪರಿಶುದ್ಧನೂ ಆಗಿದ್ದಂತೆಯೇ ಆತನು ಸಂಪೂರ್ಣನೂ ಮತ್ತು ಪರಿಶುದ್ಧನೂ ಆಗಿದ್ದನು. ದೇವರು ಆತನನ್ನು **ತನ್ನ ಮಗನೆಂಬುದಾಗಿ** ಕರೆಯುವದಕ್ಕೆ ನಾಚಿಕೊಳ್ಳದಿರುವದಕ್ಕೆ ಅದೇ ಕಾರಣವಾಗಿತ್ತು. ಹಾಗಾಗಿ ಪಾಪವನ್ನು ತೆಗೆದು ಹಾಕುವದಕ್ಕೆ ಒಂದು ಯಜ್ಞದಂತೆ ಯೇಸು ತನ್ನ ಜೀವವನ್ನು ಕೊಟ್ಟ ನಂತರ, ದೇವರು ಆತನನ್ನು ಮರಣದಿಂದ ಎಬ್ಬಿಸಿ, ಎಲ್ಲರ ಕರ್ತ –ನನ್ನಾಗಿ ಮಾಡಿ ಮತ್ತು "ಪರಲೋಕದಲ್ಲಿಯೂ ಮತ್ತು ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವನ್ನು" ಆತನಿಗೆ ಒಪ್ಪಿಸಿದನು.

ಬಹುಶ: ಯಾರಾದರೂ ಈ ಪ್ರಶ್ನೆಯನ್ನು ಕೇಳಬಹುದು, **"**ಒಂದುವೇಳೆ ಯೇಸು ಪ್ರತಿಯೊಂದರ ಕರ್ತನಾಗಿದ್ದಿದ್ದರೆ, ನಮ್ಮ ಪ್ರಪಂಚವು ಇನ್ನೂ ಯಾಕೆ ಪಾಪ ಮತ್ತು ತೊಂದರೆಯಿಂದ ತುಂಬಿದೆ?" ಪರಿಶುದ್ಧ ವಾಕ್ಯವು ಇದಕ್ಕೆ ಉತ್ತರವನ್ನು ಕೊಡುವಂತೆ ಹೀಗೆ ಹೇಳುತ್ತದೆ:

"ಯಾವ ಪ್ರಕಾರ **ಆದಾಮನ ಸಂಬಂಧದಿಂದ** ಎಲ್ಲರೂ ಸಾಯುವವರಾದರೋ ಅದೇ ಪ್ರಕಾರ **ಕ್ರಿಸ್ತನ ಸಂಬಂಧದಿಂದ** ಎಲ್ಲರೂ ಜೀವಿ –ತರಾಗುವರು. **ಆದರೆ ಪ್ರತಿಯೊಬ್ಬನು ತನ್ನ ತನ್ನ ತರಗತಿಯಲ್ಲಿರುವನು**. ಕ್ರಿಸ್ತನು ಪ್ರಥಮಫಲ; ತರುವಾಯ ಕ್ರಿಸ್ತನ ಪ್ರತ್ಯಕ್ಷತೆಯಲ್ಲಿ ಆತನವರು ಎದ್ದುಬರುವರು. ಆ ಮೇಲೆ ಆತನು ಬೇರೆ ಎಲ್ಲಾ ದೊರೆತನವನ್ನೂ ಲ್ಲಾ ಅಧಿಕಾರವನ್ನೂ ಬಲವನ್ನೂ ಒಪ್ಪಿಸಿಕೊಡುವಾಗ ಸಮಾಪ್ತಿ." (1ಕೊರಿಂಥ–15:22-24). **"ಆತನು** ಅವರ ಕಣ್ಣೀರನ್ನೆಲ್ಲಾ ಒರೆಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ಗೋಳಾ– –ಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು." (ಪ್ರಕ–21:4)

ಈ ವಚನಗಳಿಂದ ಮತ್ತು ದೇವರ ವಾಕ್ಯದಲ್ಲಿರುವ ಇನ್ನು ಬೇರೆ ವಾಕ್ಯಗಳಿಂದ, ದೇವರು ಎಲ್ಲಾ ಅಧಿಕಾರವನ್ನು ಯೇಸುವಿಗೆ ಒಪ್ಪಿಸಿ ಕೊಟ್ಟನು ಮತ್ತು ಇದರಿಂದ ಆತನು ಪ್ರತಿಯೊಂದರ ಮೇಲೆ ನಿಯಂತ್ರಣವನ್ನು ತೆಗೆದುಕೊಂಡು ಪ್ರತಿಯೊಂದನ್ನೂ ತೀರ್ಪುಮಾಡಲು ಶಕ್ತನಾದನು ಎನ್ನುವದನ್ನು ನಾವು ಕಲಿತುಕೊಳ್ಳುತ್ತೇವೆ. ಆತನು ಇನ್ನೂ ನಿಜವಾಗಿಯೂ ಪ್ರತಿಯೊಂದನ್ನು ನಿಯಂತ್ರಿಸುತ್ತಿಲ್ಲ, ಇಲ್ಲವೇ ಲೋಕದ ಜನರಿಗೆ ಇನ್ನೂ ತೀರ್ಪು ಮಾಡುತ್ತಿಲ್ಲ. ಒಂದು ದಿನ ಯೇಸು ಭೂಮಿಗೆ ಹಿಂದಿರುಗುತ್ತಾನೆ. ಆತನು ಹಿಂದಿರುಗಿ ಬಂದಾಗ, ಈ ಲೋಕದ ನಿಯಂತ್ರಣವನ್ನು ತೆಗೆದುಕೊಂಡು ಎಲ್ಲವನ್ನೂ ಮತ್ತೆ ಹೊಸದನ್ನಾಗಿ ಮಾಡುತ್ತಾನೆ.

ಆದಕಾರಣ, ನೀವು ಯಾರೇ ಆಗಲೀ ಮತ್ತು ನೀವು ಎಲ್ಲೇ ಇರಲಿ, ನೀವು ನಿಮ್ಮ ಪಾಪಗಳಿಗಾಗಿ **ಪಶ್ಚಾತ್ತಾಪಪಟ್ಟು,** ದೇವರ ಕಡೆಗೆ ತಿರುಗಿಕೊಂಡು ಕರ್ತನಾದ ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದ ಮೇಲೆ ಆಧಾರಗೊಂಡಿರುವ ರಕ್ಷಣೆಯ ಶುಭಸಂದೇಶವನ್ನು

**ನಂಬುವಂತೆ** ದೇವರು ನಿಮಗೆ ಆಜ್ಞಾಪಿಸುತ್ತಿದ್ದಾನೆ. ನೀವು ನಿಜವಾಗಿಯೂ ನಂಬಿದರೆ, ದೇವರು ಯೇಸುವಿನ ಹೆಸರಿನಲ್ಲಿ ನಿಮ್ಮ ಎಲ್ಲಾ ಪಾಪಗಳನ್ನು ಕ್ಷಮಿಸುತ್ತಾನೆ, ಪರಿಶುದ್ಧಾತ್ಮನ ಶಕ್ತಿಯಿಂದ ನಿಮ್ಮ ಹೃದಯವನ್ನು ಹೊಸದನ್ನಾಗಿ ಮಾಡುತ್ತಾನೆ, ಮತ್ತು ದೇವರೊಂದಿಗೆ ನಿಮಗೆ ಎಂದೆಂದಿಗೂ ಸಮಾಧಾನವನ್ನು ಕೊಡುತ್ತಾನೆ. ನೀವು ಕ್ರಿಸ್ತನನ್ನು ನಂಬಿದರೆ, ಆತನು ತನ್ನ ಪವಿತ್ರಾತ್ಮನಿಂದ ನಿಮ್ಮಲ್ಲಿ ಬಂದು **ನಿಮ್ಮ ಹೃದಯದಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುತ್ತಾನೆ.** ಯೇಸು ಕ್ರಿಸ್ತನು ಲೋಕಕ್ಕೆ ತೀರ್ಪು ಮಾಡುವದಕ್ಕೆ ವ್ಯಕ್ತಿಯಾಗಿ ಹಿಂತಿರುಗಿ ಬರು –ವವರೆಗೆ ಆತನು ಬದಲಾಗುವದಿಲ್ಲ. ಆದರೆ ಆತನು ಈದಿನ ನಿಮ್ಮನ್ನು ಬದಲಾಯಿಸುತ್ತಾನೆ! ನಿಮ್ಮ ಹೃದಯಗಳಲ್ಲಿ ತನ್ನ ರಾಜ್ಯವನ್ನು ಸ್ಥಾಪಿಸುವದಕ್ಕೆ ಆತನಿಗೆ ನೀವು ಅವಕಾಶ ಕೊಡುತ್ತೀರೋ?

ಪ್ರೀತಿಯ ಸ್ನೇಹಿತರೇ, ನಿಮ್ಮ ಪಾಪಗಳನ್ನು ನಿವಾರಿಸಿ ಶುದ್ಧವಾದ ಮತ್ತು ಹೊಸದಾದ ಒಂದು ಹೃದಯವನ್ನು ನಿಮಗೆ ಕೊಡುವದಕ್ಕೆ ದೇವರು ನಿಮಗಾಗಿ ಒಬ್ಬ ರಕ್ಷಕನನ್ನು ಕಳಿಸಿದ್ದಾನೆ. **ನೀವು** ಲೋಕದ ರಕ್ಷಕನಾದ ಯೇಸು ಕ್ರಿಸ್ತನ ಕುರಿತಾದ ಸತ್ಯವನ್ನು **ನಂಬಿದರೆ,** ನೀವು ಪರದೈಸಿನ ಮಹಿಮೆಯಲ್ಲಿ ದೇವರೊಂದಿಗೆ ನಿತ್ಯತ್ವವನ್ನು ಕಳೆಯುತ್ತೀರೆಂಬುದನ್ನು **ನೀವು ತಿಳಿಯಬೇಕು!** ಹೀಗಿದ್ದರೂ, ದೇವರು ಕಳಿಸಿದ ರಕ್ಷಕನನ್ನು ನೀವು ಅಲಕ್ಷಿಸಿದರೆ, ಅಂತಿಮವಾಗಿ ಆತನು ನಿಮ್ಮ ನ್ಯಾಯತೀರಿಸುವವನಾಗುತ್ತಾನೆ! ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತಾ ಮಾತಾಡುತ್ತದೆ, ಏನೆಂದರೆ:

"ಯೇಸು ಕರ್ತನು ತನ್ನ ಶಕ್ತಿಯನ್ನು ತೋರ್ಪಡಿಸುವ ದೇವೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷ –ನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ **ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡ– –ದವರಿಗೂ ಪ್ರತೀಕಾರವನ್ನು ಸಲ್ಲಿಸುವನು.** ಆ ದಿನದಲ್ಲಿ ಆತನು ತನ್ನ ಪವಿತ್ರರ ಮೂಲಕ ಪ್ರಭಾವ ಹೊಂದುವವನಾಗಿಯೂ ನಾವು ನಿಮಗೆ ಹೇಳಿದ ಸಾಕ್ಷಿಯನ್ನು ನಂಬಿದವರೆಲ್ಲರ ಮೂಲಕ ತನ್ನ ವಿಷಯದಲ್ಲಿ ಆಶ್ಚರ್ಯ ಹುಟ್ಟಿಸುವವನಾಗಿಯೂ ಬರುವಾಗ ಅಂಥ – –ವರು ಕರ್ತನ ಸಮ್ಮುಖಕ್ಕೂ ಅತನ ಪರಾಕ್ರಮದ ವೈಭವಕ್ಕೂ ದೂರವಾಗಿ ನಿತ್ಯನಾಶನವೆಂಬ ದಂಡನೆಯನ್ನು ಅನುಭವಿಸುವರು." (1ಥೆಸ–1:7-10)

ಸ್ನೇಹಿತರೇ, ದೇವರ ವಾಕ್ಯವು ಸ್ಪಷ್ಟವಾಗಿದೆ. ಶಿಲುಬೆಯ ಮೇಲಿನ ಯೇಸುಕ್ರಿಸ್ತನ ಮರಣ ಮತ್ತು ಮರಣದಿಂದ ಆತನ ಪುನರುತ್ಥಾನದ ಕುರಿತಾದ ಶುಭಸಂದೇಶವನ್ನು ನಿಜವಾಗಿಯೂ ನಂಬುವವರೆಲ್ಲರೂ ರಕ್ಷಿಸಲ್ಪಡುತ್ತಾರೆ ಎಂದು ಇದು ನಮಗೆ ತಿಳಿಸುತ್ತದೆ! ಹೀಗಿದ್ದರೂ, ನಂಬದಿರುವವರಿಗೆ ಇದು ತೀರ್ಪು ಮಾಡುತ್ತದೆ! ನಿಮ್ಮ ಪಾಪದ ಸಾಲವನ್ನು ಎಂದೆಂದಿಗೂ ತೀರಿಸುವಂತ ಒಂದು ಯಜ್ಞದಂತೆ ಯೇಸು ತನ್ನ ರಕ್ತವನ್ನು ಸುರಿಸಿದನು. ಆದರೆ ನೀವು ಇದನ್ನು ನಿಮ್ಮ ಹೃದಯದಲ್ಲಿ ನಂಬದೇ ಹೋದರೆ, ನಿಮಗಾಗಿ ಯೇಸು ಸುರಿ – –ಸಿದ ರಕ್ತವು ಮೌಲ್ಯವಿಲ್ಲದ್ದಾಗುತ್ತದೆ. ಆದದರಿಂದ ವಾಕ್ಯವು ಹೀಗೆ ಹೇಳುತ್ತದೆ:

"ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. **ಆತನನ್ನು ನಂಬುವ ಒಬ್ಬನಾದರೂ ನಾಶ –ವಾಗದೇ** ಎಲ್ಲರೂ ನಿತ್ಯ ಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. **ಆದರೆ ನಂಬದವನಿಗೆ** ದೇವರ ಒಬ್ಬನೇ ಮಗನ ಹೆಸರನ್ನು ನಂಬದೇ ಹೋದದರಿಂದ **ಆಗಲೇ ತೀರ್ಪು ಆಗಿಹೋಯಿತು."** (ಯೋಹಾನ–3:16,18)

ಹೌದು, ನೀವು ಯೇಸು ಕ್ರಿಸ್ತನ ಶುಭಸಂದೇಶವನ್ನು ನಂಬಿದರೆ, ನೀವು **ರಕ್ಷಿಸಲ್ಪಡುತ್ತೀರಿ,** ಆದರೆ ನೀವು ಇದನ್ನು ನಂಬದೇ ಹೋದರೆ, ನೀವು ನಿಮ್ಮ ಪಾಪಗಳಲ್ಲಿಯೇ **ನಾಶವಾಗುತ್ತೀರಿ.** ಅದೇ, ಆದಾಮನ ಮಕ್ಕಳಿಗಾಗಿ ದೇವರು ಕಳಿಸಿದ ರಕ್ಷಣೆಯ ವಾಕ್ಯವಾಗಿದೆ. ಅದೇ ಕಾರಣಕ್ಕಾಗಿ ಯೇಸು ತನ್ನ ಶಿಷ್ಯರಿಗೆ ಹೇಳುತ್ತಾ ಆಜ್ಞಾಪಿಸಿದ್ದೇನೆಂದರೆ, "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾ – –ರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟು ಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ!"(ಮತ್ತಾಯ–28:18,19)

ಈಗ ಕತೆಯನ್ನು ಮುಂದುವರಿಸೋಣ. ಯೇಸು ತಾನು ಸತ್ತು ಜೀವಿತನಾಗಿ ಎದ್ದ ನಂತರ ತನ್ನ ಶಿಷ್ಯರಿಗೆ ನಲವತ್ತು ದಿವಸಗಳವರೆಗೆ ಕಾಣಿಸಿಕೊಂಡನು. ವಾಕ್ಯವು ಹೀಗೆ ಹೇಳುತ್ತದೆ:

ಹೀಗಿರಲಾಗಿ ಆತನು ಅವರೊಂದಿಗೆ ಕೂಡಿದ್ದಾಗ್ಗೆ ಅವರಿಗೆ,"ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು. ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ **ಪವಿತ್ರಾತ್ಮದಲ್ಲಿ** ಸ್ನಾನವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ" ಎಂದು ಅಪ್ಪಣೆ ಕೊಟ್ಟನು. (ಅಪೊ.ಕೃತ್ಯ–1:4,5)

ಯೇಸು ಏನು ಹೇಳಿದನೆಂದು ನೀವು ಕೇಳಿಸಿಕೊಂಡಿರಾ? ಪರಲೋಕದಲ್ಲಿರುವ ತನ್ನ ತಂದೆಯು ಅವರಿಗಾಗಿ ಒಬ್ಬ ಸಹಾಯಕನನ್ನು

ಕಳಿಸುತ್ತಾನೆಂದು, ಆತನು ಅವರ ಹೃದಯಗಳಲ್ಲಿ ವಾಸಿಸುತ್ತಾ, ಅವರನ್ನು ಶುದ್ಧಪಡಿಸಿ, ಹೊಸಬರನ್ನಾಗಿ ಮಾಡಿ, ಅವರನ್ನು ಬಲಪಡಿಸಿ ಎಲ್ಲಾ ಸತ್ಯದೊಳಕ್ಕೆ ಅವರನ್ನು ನಡಿಸುತ್ತಾನೆಂದು ಯೇಸು ತನ್ನ ಶಿಷ್ಯರಿಗೆ ಹೇಗೆ ವಾಗ್ದಾನ ಮಾಡಿದ್ದನೆಂಬುದನ್ನು ನಾವು ಈಗಾಗಲೇ ಓದಿಕೊ ಆತನು ತನ್ನ ಶಿಷ್ಯರಿಗೆ ಹೇಗೆ ಆಜ್ಞಾಪಿಸಿದನೆಂಬುದನ್ನು ಈಗ ನಾವು ಕೇಳಿಸಿಕೊಂಡೆವು. ನಮ್ಮ ಮುಂದಿನ ಪಾಠದಲ್ಲಿ, ಯೇಸು ಆಜ್ಞಾಪಿಸಿದಂತೆಯೇ, ಯೇಸುವಿನ ಎಲ್ಲಾ ಶಿಷ್ಯರ ಹೃದಯಗಳನ್ನು ತುಂಬುವದಕ್ಕೆ ಪವಿತ್ರಾತ್ಮನು ಹೇಗೆ ಇಳಿದು ಬಂದನೆಂಬು –ದನ್ನು ನಾವು ನೋಡಲಿದ್ದೇವೆ.

ಈಗ ಯೇಸು ಹೇಗೆ ತನ್ನ ಶಿಷ್ಯರನ್ನು ಬಿಟ್ಟು ಪರಲೋಕಕ್ಕೆ ಏರಿ ಹೋದನೆಂಬುದನ್ನು ಓದೋಣ. ವಾಕ್ಯವು ಹೀಗೆ ಹೇಳುತ್ತದೆ:

ಕೂಡಿ ಬಂದವರು ಆತನನ್ನು, **"ಸ್ವಾಮೀ, ನೀನು ಇದೇ ಕಾಲದಲ್ಲಿ ಇಸ್ರಾಯೇಲ್ ಜನರಿಗೆ ರಾಜ್ಯವನು ತಿರಿಗಿ ಸ್ಥಾಪಿಸಿಕೊಡುವಿಯೋ?"** ಎಂದು ಕೇಳಲು, ಆತನು ಅವರಿಗೆ, **"ತಂದೆಯು ಸ್ವಂತ ಅಧಿಕಾರದಲ್ಲಿಟ್ಟುಕೊಂಡಿರುವ ಕಾಲಗಳನ್ನೂ ಸಮಯಗಳನ್ನೂ ತಿಳಿದುಕೊಳ್ಳು –ವದು ನಿಮ್ಮ ಕೆಲಸವಲ್ಲ. ಆದರೆ ಪವಿತ್ರಾತ್ಮನು ನಿಮ್ಮ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು"** ಅಂದನು.(1:6-8)

ಈ ಮಾತುಗಳನ್ನು ಹೇಳಿದ ಬಳಿಕ **ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು;** ಮೋಡವು ಆತನನ್ನು ಕವಿದುಕೊಂಡಿದ್ದ – –ರಿಂದ ಅವರ ಕಣ್ಣಿಗೆ ಮರೆಯಾದನು. ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರವಸ್ತ್ರ –ಧಾರಿಗಳಾದ ಇಬ್ಬರು ಪುರುಷರು ಫಕ್ಕನೆ ಅವರ ಹತ್ತಿರ ನಿಂತುಕೊಂಡು, **"**ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು**"** ಎಂದು ಹೇಳಿದರು. (1:9-11)

ಹೀಗೆ ಯೇಸು ಸುಮಾರು ಮೂವತ್ತ ಮೂರು ವರ್ಷಗಳ ಮೊದಲು ಎಲ್ಲಿಂದ ಬಂದಿದ್ದನೋ ಅಲ್ಲಿಗೆ ತನ್ನ ತಂದೆಯ ಮನೆಗೆ ಅಂದರೆ ಪರಲೋಕಕ್ಕೆ ಏರಿಹೋದನು. ತನ್ನ ಚಿಕ್ಕದಾದ ಶಿಷ್ಯರ ಗುಂಪಿನವರ ಕಣ್ಣುಗಳ ಮುಂದೆಯೇ ಆತನು ಪರಲೋಕದೊಳಕ್ಕೆ ಏರಿಹೋ– –ದಂತ ಆತನ ಹೊರಡುವಿಕೆಯು ಎಷ್ಟೊಂದು ಘನತೆಯುಳ್ಳದ್ದಾಗಿದೆ! ಯಾರ ಕುರಿತಾಗಿ ಪ್ರವಾದಿಗಳೆಲ್ಲರೂ ಮಾತಾಡಿದ್ದರೋ ಮತ್ತು ಶಿಷ್ಯರು ಮೂರು ವರ್ಷಗಳವರೆಗೆ ಹಿಂಬಾಲಿಸಿದ ನಿಜವಾದ ಮೆಸ್ಸೀಯನೇ ಈ ಯೇಸು ಎಂಬುದರಲ್ಲಿ ಯಾವ ಅನುಮಾನವಿರಲಿಲ್ಲ!' ತನ್ನ ಜನನ, ಜೀವನ, ಮರಣ, ಪುನರುತ್ಥಾನ ಮತ್ತು ದಿವಾರೋಹಣ– – ಹೀಗೆ ಕೀರ್ತನೆಗಳಲ್ಲಿ ಪ್ರವಾದಿಯಾದ ದಾವೀದನು ಪ್ರವಾ –ದಿಸಿರುವಂತೆ ಪರಲೋಕಕ್ಕೆ ಏರಿಹೋಗುವದನ್ನೂಳಗೊಂಡು ಪ್ರವಾದಿಗಳು ತನ್ನ ಕುರಿತಾಗಿ ಪ್ರವಾದಿಸಿದ್ದೆಲ್ಲವನ್ನೂ ನಜರೇತಿನ ಯೇಸು ನೆರವೇರಿಸಿದನು.

ಸ್ನೇಹಿತರೇ, ಈ ದಿನ ಕರ್ತನಾದ ಯೇಸು ಎಲ್ಲಿದ್ದಾನೆ ಎಂದು ನಿಮಗೆ ಗೊತ್ತಾ? ವಾಕ್ಯವು ನಮಗೆ ಹೇಳುವದೇನೆಂದರೆ, **"**ಯೇಸು ಕ್ರಿಸ್ತನು ಪರಲೋಕಕ್ಕೆ ಹೋಗಿ ದೇವರ ಬಲಗಡೆಯಲ್ಲಿದ್ದಾನೆ; ದೇವದೂತರೂ ಅಧಿಕಾರಿಗಳೂ ಮಹತ್ವಗಳೂ ಆತನ ಸ್ವಾಧೀನವಾಗಿವೆ.**"** (1ಪೇತ್ರ–3:22). ಹೌದು, ಯೇಸು ಪರಲೋಕದಲ್ಲಿ ದೇವರ ಬಲಗಡೆಯಲ್ಲಿದ್ದಾನೆ, ಅಲ್ಲಿ ಎಲ್ಲಾ ಸೃಷ್ಟಿಗಳು ಆತನ ಅಧೀನದಲ್ಲಿವೆ. ದೇವರ ನಿಜವಾದ ಪ್ರಜೆಗಳೆಲ್ಲರೂ ಕರ್ತನಾದ ಯೇಸು ಕ್ರಿಸ್ತನಿಗೆ ಅಧೀನವಾಗಿವೆ. ನಿಮ್ಮ ವಿಷಯವೇನು? ಲೋಕದ ರಕ್ಷಕನಂತೆ ಮತ್ತು ನ್ಯಾಯಧಿಪತಿಯಂತೆ ದೇವರಿಂದ ಆರಿಸಲ್ಪಟ್ಟ ಮೆಸ್ಸೀಯನಾದ ಯೇಸುವಿಗೆ ನಿಮ್ಮನ್ನು ಅಧೀನಪಡಿಸಿಕೊಂಡಿದ್ದೀರೋ?

ನಾವು ಈಗ ತಾನೇ ಓದಿದಂತೆ, ಕರ್ತನಾದ ಯೇಸು ಪರಲೋಕಕ್ಕೆ ಹಿಂತಿರುಗಿದ ನಂತರ, ಇಬ್ಬರು ದೂತರುಗಳು ಆತನ ಶಿಷ್ಯರುಗಳಿಗೆ ಕಾಣಿಸಿಕೊಂಡು ಅವರಿಗೆ, **"**ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? **ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿ– –ರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು"** ಎಂದು ಹೇಳಿದರು. ಹೌದು, ಒಂದು ದಿನ ಯೇಸು ಕ್ರಿಸ್ತನು ಮೋಡಗಳಲ್ಲಿ ಹಿಂದಿರುಗಿ ಬರುತ್ತಾನೆ. ಆತನ ಬರುವಿಕೆಗೆ ನೀವು ಸಿದ್ಧರಾಗಿದ್ದೀರಾ? **ಆ ದಿನದಲ್ಲಿ ಪ್ರತಿಯೊಬ್ಬರೂ ಆತನನ್ನು ನೋಡುತ್ತಾರೆ, ಮತ್ತು ಲೋಕದ ರಕ್ಷಕನೂ ಮತ್ತು ನ್ಯಾಯಾಧಿಪತಿಯಂತೆ ದೇವರು ಯಾರನ್ನು ನೇಮಿಸಿದ್ದಾನೋ ಅವರನೇ ಈತನು ಎಂಬುದಾಗಿ ಪ್ರತಿಯೊಬ್ಬರೂ ತಿಳಿದುಕೊಳ್ಳುತ್ತಾರೆ!** ಅದನ್ನೇ ವಾಕ್ಯಗಳು ದೃಢಪಡಿಸುತ್ತಾ ಹೇಳುವದೇ– –ನೆಂದರೆ:

ಕ್ರಿಸ್ತ ಯೇಸುವಿನಲ್ಲಿದ್ದಂಥ ಮನಸ್ಸು ನಿಮ್ಮಲ್ಲಿಯೂ ಇರಲಿ. ಆತನು ದೇವಸ್ವರೂಪನಾಗಿದ್ದರೂ ದೇವರಿಗೆ ಸರಿಸಮಾನನಾಗಿರುದೆಂಬ ಅಮೂಲ್ಯ ಪದವಿಯನ್ನು ಬಿಡಲೊಲ್ಲೆನು ಎಂದೆಣಿಸದೆ ತನ್ನನ್ನು ಬರಿದು ಮಾಡಿಕೊಂಡು ದಾಸನ ರೂಪವನ್ನು ಧರಿಸಿಕೊಂಡು ಮನುಷ್ಯರಿಗೆ ಸದೃಶನಾದನು. ಹೀಗೆ ಆತನು ಆಕಾರದಲ್ಲಿ ಮನುಷ್ಯನಾಗಿ ಕಾಣಿಸಿಕೊಂಡಿದ್ದಾಗ ತನ್ನನ್ನು ತಗ್ಗಿಸಿಕೊಂಡು ಮರಣವನ್ನು

ಅಂದರೆ ಶಿಲುಬೆಯ ಮರಣವನ್ನಾದರೂ ಹೊಂದುವಷ್ಟು ವಿಧೇಯನಾದನು.  ಈ ಕಾರಣದಿಂದ ದೇವರು ಆತನನ್ನು **ಅತ್ಯುನ್ನತ ಸ್ಥಾನಕ್ಕೆ ಏರಿಸಿ ಎಲ್ಲಾ ಹೆಸರುಗಳಿಗಿಂತ** ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದರಿಂದ ಸ್ವರ್ಗ ಮರ್ತ್ಯಪಾತಾಳಗಳ––ಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ **ಅಡ್ಡಬಿದ್ದು** ಯೇಸು ಕ್ರಿಸ್ತನನನ್ನು ಒಡೆಯನೆಂದು ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು. (ಫಿಲಿಪ್ಪಿ–2:5-11).

ಸ್ನೇಹಿತರೇ, ಈ ದಿನ ಇಲ್ಲಿಗೆ ನಾವು ಮುಗಿಸುತ್ತೇವೆ, ಆದರೆ ಯೇಸು ಕ್ರಿಸ್ತನನ್ನು ಯಾರು ತನ್ನ ಕರ್ತನೂ ಮತ್ತು ರಕ್ಷಕನೂ ಎಂದು ಅಂಗೀಕರಿಸಿಕೊಳ್ಳುತ್ತಾರೋ ಅಂತಹ ಪ್ರತಿಯೊಬ್ಬ ವ್ಯಕ್ತಿಯ ಹೃದಯದಲ್ಲಿ ಜೀವಿಸುವದಕ್ಕೆ ದೇವರು ಹೇಗೆ ಪವಿತ್ರಾತ್ಮನನ್ನು ಕಳಿಸಿಕೊಟ್ಟ––ನೆಂಬುದನ್ನು ಕಂಡುಹಿಡಿಯುವದಕ್ಕೆ ಮುಂದಿನ ಬಾನುಲಿ ಪ್ರಸಾರದಲ್ಲಿ ನೀವು ನಮ್ಮೊಂದಿಗೆ ಸೇರಿಕೊಳ್ಳುತ್ತೀರೆಂದು ನಾವು ನಿರೀಕ್ಷಿಸು––ತ್ತೇವೆ. . . .

ಇಬ್ಬರು ದೇವದೂತರುಗಳು ಶಿಷ್ಯರುಗಳಿಗೆ ಹೇಳಿರುವದನ್ನು ನೀವು ನೆನಪು ಮಾಡಿಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು."** (ಅಪೊ.ಕೃತ್ಯ–1:11)

ಪಾಠ 87

# ಪವಿತ್ರಾತ್ಮನು ಬಂದಿದ್ದಾನೆ!

ಅಪೊ.ಕೃತ್ಯ 1,2

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಸುವಾರ್ತೆಯಲ್ಲಿನ ನಮ್ಮ ಕೆಲವು ಅಧ್ಯಯನಗಳಲ್ಲಿ, **ಮೆಸ್ಸೀಯನ ಮರಣ ಮತ್ತು ಪುನರುತ್ಥಾನಗಳ ಕುರಿತಾಗಿ ದೇವರು ಪ್ರವಾದಿಗಳು ಬಹಳ ಹಿಂದೆಯೇ ಬರೆದಿದ್ದ ಎಲ್ಲಾ ಸಂಗತಿಗಳನ್ನು ಕರ್ತನಾದ ಯೇಸು ಹೇಗೆ ನೆರವೇರಿಸಿದನೆಂಬುದನ್ನು** ನಾವು ಕೇಳಿಸಿಕೊಂಡೆವು. ಆದಾಮನ ಮಕ್ಕಳಿಗಾಗಿ ಪಾಪದ ಸಾಲವನ್ನು ತೀರಿಸುವದಕ್ಕೆ ಯೇಸು ತಾನು ಜಡಿಯಲ್ಪಟ್ಟ ಶಿಲುಬೆಯ ಮೇಲೆ ತನ್ನ ಪರಿಶುದ್ಧವಾದ ರಕ್ತವನ್ನು ಸುರಿಸಿದನೆಂಬುದನ್ನು ನಾವು ಓದಿದೆವು. ಆತನನ್ನು ಶಿಲುಬೆಯ ಮೇಲಿಂದ ಇಳಿಸಿ ಸಮಾಧಿಯಲ್ಲಿಟ್ಟರೆಂಬುದನ್ನೂ ಸಹ ನಾವು ನೋಡಿದೆವು. ಹೀಗಿದ್ದರೂ, ಮೂರನೆಯ ದಿನದಲ್ಲಿ, ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು! ಯೇಸು ಎದ್ದ ನಂತರ, ತನ್ನ ಶಿಷ್ಯರಿಗೆ ನಲವತ್ತು ದಿವಸಗಳವರೆಗೆ ಕಾಣಿಸಿಕೊಂಡು ತಾನು ನಿಜವಾಗಿಯೂ ಜೀವಂತವಾಗಿದ್ದೇನೆಂಬುದನ್ನು ರುಜುವಾತುಪಡಿಸಿ–ದನು. ನಂತರ ನಮ್ಮ ಕೊನೆಯ ಪಾಠದಲ್ಲಿ, ಆತನ ಶಿಷ್ಯರು ನೋಡುತ್ತಿರುವಾಗಲೇ ಯೇಸು ಪರಲೋಕಕ್ಕೆ ಏರಿಹೋದದ್ದನ್ನು ನಾವು ನೋಡಿಕೊಂಡೆವು.

ಯೇಸು ಪರಲೋಕಕ್ಕೆ ಹೋಗುವದಕ್ಕಿಂತ ಮೊದಲು ತನ್ನ ಶಿಷ್ಯರಿಗೆ ಆಜ್ಞಾಪಿಸಿದ ಕೊನೆಯ ಸಂಗತಿ ನಿಮಗೆ ನೆನಪಿದೆಯಾ? ಆತನು ಹೇಳಿದ್ದನ್ನು ಮತ್ತೆ ಓದಿಕೊಳ್ಳೋಣ:

"ಯೋಹಾನನಂತೂ ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿದನು, ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ **ಪವಿತ್ರಾತ್ಮದಲ್ಲಿ ಸ್ನಾನವಾ–ಗುವದು.** ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟುಹೋಗದೆ **ತಂದೆ ಮಾಡಿದಂಥ** ನೀವು ನನ್ನಿಂದ ಕೇಳಿದಂಥ **ವಾಗ್ದಾನಕ್ಕೆ ಕಾದು–ಕೊಂಡಿರ್ರಿ"** ಎಂದು ಅಪ್ಪಣೆ ಕೊಟ್ಟನು. . . ."**ಪವಿತ್ರಾತ್ಮ ನಿಮ್ಮ ಮೇಲೆ ಬರಲು ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು"** ಅಂದನು. ಈ ಮಾತುಗಳನ್ನು ಹೇಳಿದ ಬಳಿಕ **ಅವರು ನೋಡುತ್ತಾ ಇದ್ದ ಹಾಗೆ ಆತನು ಏರಿಸಲ್ಪಟ್ಟನು;** ಮೋಡವು ಆತನನ್ನು ಕವಿದು ಕೊಂಡಿದ್ದರಿಂದ ಅವರ ಕಣ್ಣಿಗೆ ಮರೆಯಾದನು. ಆತನು ಹೋಗುತ್ತಿರುವಾಗ ಅವರು ಆಕಾಶದ ಕಡೆಗೆ ದೃಷ್ಟಿಸಿ ನೋಡುತ್ತಾ ಇರಲಾಗಿ ಶುಭ್ರವಸ್ತ್ರಧಾರಿ––ಗಳಾದ ಇಬ್ಬರು ಪುರುಷರು ಫಕ್ಕನೆ ಅವರ ಹತ್ತಿರ ನಿಂತುಕೊಂಡು,"ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶದೊಳಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ ಹೋಗಿರುವದನ್ನು ನೀವು ಕಂಡಿರೋ ಅದೇ ರೀತಿಯಲ್ಲಿ ಬರುವನು" ಎಂದು ಹೇಳಿದರು. (ಅಪೊ.ಕೃತ್ಯ–1:4,5,8-11)

ಹೀಗೆ ಯೇಸು ತನ್ನ ಶಿಷ್ಯರಿಂದ ಬೇರ್ಪಟ್ಟು, ತಾನು ಎಲ್ಲಿಂದ ಬಂದಿದ್ದನೋ ಅದೇ ಪರದೈಸಕ್ಕೆ ಹಿಂದಿರುಗಿ ಹೋಗಿ ತನ್ನ ತಂದೆಯ ಬಲಗಡೆಯಲ್ಲಿ ಕೂತುಕೊಂಡನು. ಈ ದಿನ ಆತನು ಅಲ್ಲಿಯೇ ಇದ್ದಾನೆ, ಮತ್ತು ನೀತಿಯಲ್ಲಿ ಈ ಲೋಕಕ್ಕೆ ತೀರ್ಪುಮಾಡುವದಕ್ಕೆ ಹಿಂದಿರುಗಿ ಬರುವ ಕ್ಷಣಕ್ಕಾಗಿ ಕಾಯುತ್ತಿದ್ದಾನೆ.

ಯೇಸು ತಾನು ಪರಲೋಕಕ್ಕೆ ಏರಿಹೋಗುವದಕ್ಕಿಂತ ಮೊದಲು ತನ್ನ ಶಿಷ್ಯರಿಗೆ ಏನು ಆಜ್ಞಾಪಿಸಿದನೆಂಬುದನ್ನು ನೀವು ಕೇಳಿಸಿ ––ಕೊಂಡಿರಾ? ಪರಲೋಕದಿಂದ ಬರುವ ಪವಿತ್ರಾತ್ಮನಿಂದ ಹೊದಿಸಲ್ಪಡುವ ತನಕ ಯೆರೂಸಲೇಮಿನಲ್ಲಿಯೇ ಅವರು ಉಳಿದುಕೊಳ್ಳು–ವಂತೆ ಆತನು ಅವರಿಗೆ ಆಜ್ಞಾಪಿಸಿದನು. ಬಹುಶ: ನಿಮ್ಮಲ್ಲಿ ಕೆಲವರು ಈಗಲೂ, **ಈ ಪವಿತ್ರಾತ್ಮನು ಯಾರು?** ಎಂದು ಆಶ್ಚರ್ಯಪಡ––ಬಹುದು. ಪವಿತ್ರಾತ್ಮನು, ದೇವರಾತ್ಮನೂ ಮತ್ತು ಯೇಸುವಿನ ಆತ್ಮನೂ ಆಗಿದ್ದಾನೆ. ಆತನು ತಂದೆಯಾದ ದೇವರಿಂದ ಮತ್ತು ಮಗನಾದ ಯೇಸುವಿನಿಂದ ಭಿನ್ನವಾಗಿದ್ದಾಗ್ಯೂ, ಆತನು ಅವರಲ್ಲಿ ಒಬ್ಬನಾಗಿದ್ದಾನೆ. ಆದಿಯಲ್ಲಿ ದೇವರು ಲೋಕವನ್ನು ಸೃಷ್ಟಿಸುವಾಗ ಈತನು ದೇವರೊಂದಿಗಿದ್ದನು. ಈತನು ಹಿಂದಿನ ಕಾಲದಲ್ಲಿ ದೇವರ ವಾಕ್ಯವನ್ನು ಬರೆದು ಅದನ್ನು ಪ್ರಕಟಿಸುವದಕ್ಕೆ ಪ್ರವಾದಿಗಳನ್ನು ಪ್ರೇರೇಪಿಸಿದ ಆತ್ಮನಾಗಿದ್ದಾನೆ. ಈತನು ಮರಿಯಳೆಂಬ ಹೆಸರಿನ ಒಬ್ಬ ಕನ್ಯೆಯ ಮೇಲೆ ಇಳಿದುಬಂದು ಆಕೆಯು ಗರ್ಭಧರಿಸಿ ಪವಿತ್ರ

ಮಗುವಾದ ಯೇಸುವಿಗೆ ಜನ್ಮ ಕೊಡುವಂತೆ ಅವಳನ್ನು ಶಕ್ತಳನ್ನಾಗಿಸಿದ ಉನ್ನತ ಆತ್ಮನಾದ ಪವಿತ್ರಾತ್ಮನಾಗಿದ್ದಾನೆ. ಈತನು ಮೆಸ್ಸೀಯ
–ನಾದ ಯೇಸುವಿನಲ್ಲಿದ್ದ ಆತ್ಮನಾಗಿದ್ದಾನೆ. ಹಾಗೂ, ಪವಿತ್ರಾತ್ಮನು, ಯೇಸು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ ಸಹಾಯಕನಾಗಿದ್ದಾನೆ.
ಯೇಸು ತನ್ನ ಶಿಷ್ಯರಿಗೆ ವಾಗ್ದಾನ ಮಾಡಿದ್ದೇನೆಂದರೆ;

"ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡು
–ವನು.  ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ.  ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದರಿಂದ
ಆತನನ್ನು ಹೊಂದಲಾರದು.  ನೀವು ಆತನನ್ನು ಬಲ್ಲಿರಿ, ಹೇಗಂದರೆ ನಿಮ್ಮ ಬಳಿಯಲ್ಲಿ ವಾಸಮಾಡುತ್ತಾನೆ ಮತ್ತು ನಿಮ್ಮೊಳಗೆ ಇರು –
–ವನು." (ಯೋಹಾನ–14:16,17)

ಈ ಸಹಾಯಕನ ಬರುವಿಕೆಯ ಕುರಿತಾಗಿ ಯೇಸು ತನ್ನ ಶಿಷ್ಯರಿಗೆ ಏನು ವಾಗ್ದಾನ ಮಾಡಿದ್ದನೋ ಅದನ್ನು ಅರ್ಥಮಾಡಿಕೊಳ್ಳುವದು
ನಮಗೆ ಪ್ರಾಮುಖ್ಯವಾದುದಾಗಿದೆ, ಯಾಕಂದರೆ ಇನ್ನೊಬ್ಬ ಪ್ರವಾದಿ ಬರುತ್ತಾನೆಂದು ಯೇಸು ಪ್ರಕಟಿಸಿದ್ದಾನೆ ಎಂದು ಜನರು ನಂಬು
–ವಂತೆ ಈ ದಿವಸಗಳಲ್ಲಿ ಕೆಲವರು ಮಾಡುತ್ತಿದ್ದಾರೆ. ಆದರೆ ಕರ್ತನಾದ ಯೇಸು ವಾಗ್ದಾನ ಮಾಡಿದ ಸಹಾಯಕನು ಒಬ್ಬ ಮಾನವ
ಜೀವಿಯಲ್ಲ, ಯಾಕಂದರೆ ಈ ಸಹಾಯಕನು **ಶುದ್ಧವಾದ ಆತ್ಮನಾಗಿದ್ದು, ಯಾರೂ ನೋಡುವದಕ್ಕೆ ಸಾಧ್ಯವಿಲ್ಲದ ಮತ್ತು ಕ್ರಿಸ್ತನ ಶಿಷ್ಯ –
–ರೊಳಗೆ ಎಂದೆಂದಿಗೂ ಜೀವಿಸುವವನಾಗಿದ್ದಾನೆಂದು** ಯೇಸು ಸ್ಪಷ್ಟವಾಗಿ ತಿಳಿಸಿದ್ದನು. ಆದದರಿಂದ ಈ ಪವಿತ್ರಾತ್ಮನು ಯಾರು?
ಈತನು ಮೆಸ್ಸೀಯನಲ್ಲಿ ನಂಬಿಕೆಯಿಡುವಂತವರೆಲ್ಲರ ಹೃದಯಗಳಲ್ಲಿ ದೇವರು ಇಟ್ಟಿರುವಂತಹ ಆತ್ಮನಾಗಿದ್ದಾನೆ. ಆತನು ಅವರನ್ನು
ಪುನರುಜ್ಜೀವಗೊಳಿಸುತ್ತಾನೆ {ಅವರು ಹೊಸದಾಗಿ ಹುಟ್ಟುವಂತೆ ಮಾಡುತ್ತಾನೆ}, ಶುದ್ಧಪಡಿಸುತ್ತಾನೆ, ಬಲಗೊಳಿಸುತ್ತಾನೆ, ಅವರನ್ನು ತನ್ನ
ಸ್ವಂತದವರೆಂದು ಗುರುತು ಮಾಡುತ್ತಾನೆ, ಮತ್ತು ಅವರಿಗೆ ತನ್ನ ಪರಿಶುದ್ಧ ಸನ್ನಿಧಿಯಲ್ಲಿ ಎಂದೆಂದಿಗೂ ಪಾಲು ಕೊಡುತ್ತಾನೆ.

**ಪಂಚಾಶತ್ತಮ** ದಿನದಂದು ಯೇಸುವಿನ ಶಿಷ್ಯರ ಮೇಲೆ ದೇವರು ತನ್ನ ಪವಿತ್ರಾತ್ಮನನ್ನು ಹೇಗೆ ಸುರಿಸಿದನೆಂಬುದನ್ನು ಈ ದಿನ ನಾವು
ನೋಡಲಿದ್ದೇವೆ.  ಪಂಚಾಶತ್ತಮ ದಿನವು, ಪ್ರವಾದಿಯಾದ ಮೋಶೆಯ ಕಾಲದಲ್ಲಿ ದೇವರು ಇಸ್ರಾಯೇಲ್ಯರಿಗಾಗಿ ಸ್ಥಾಪಿಸಿದ್ದ ಒಂದು
ಹಬ್ಬವಾಗಿದೆ.  ನೀವು ಇದನ್ನು ತೋರಾದಲ್ಲಿ ಓದಿಕೊಳ್ಳಬಹುದು.  ಈ ದಿನದಂದು ಇಸ್ರಾಯೇಲ್ಯರು, ದೇವರು ತಮಗೆ ಕೊಟ್ಟ ಗೋದಿ
ಬೆಳೆಯ ಸುಗ್ಗಿಯಲ್ಲಿನ ಅಭಿವೃದ್ಧಿಗಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದರು. ಹೀಗಿದ್ದರೂ, ಪಂಚಾಶತ್ತಮ ಹಬ್ಬಕ್ಕೆ ಇನ್ನೂ ಹೆಚ್ಚು
ಪ್ರಾಮುಖ್ಯವಾದ ಅರ್ಥವಿದೆ.  ಪಂಚಾಶತ್ತಮ ಹಬ್ಬವು, ಮೆಸ್ಸೀಯನಲ್ಲಿ ನಿಜವಾಗಿಯೂ ನಂಬಿಕೆಯಿಡುವಂತವರೆಲ್ಲರಲ್ಲಿ ಜೀವಿಸುವದಕ್ಕೆ
ಪವಿತ್ರಾತ್ಮನನ್ನು ಕಳಿಸುವದಕ್ಕೆ  ಬಹಳ ಹಿಂದೆಯೇ ದೇವರು ಆರಿಸಿಕೊಂಡ ದಿನವಾಗಿದೆ. ಪಸ್ಕ ಹಬ್ಬವಾಗಿ ಐವತ್ತು ದಿವಸಗಳ ನಂತರ
ನಡೆದಂತಹ ಪಂಚಾಶತ್ತಮ ಹಬ್ಬದಂತೆಯೇ, ಮೆಸ್ಸೀಯನಾದ ಯೇಸು ಮರಣ ಹೊಂದಿ ಎದ್ದು ಬಂದ ಐವತ್ತು ದಿವಸಗಳ ನಂತರ
ಪವಿತ್ರಾತ್ಮನನ್ನು ಕಳಿಸುವದಕ್ಕೆ ದೇವರು ಯೋಜನೆ ಮಾಡಿಕೊಂಡಿದ್ದನು.

ಯೇಸು ತನ್ನ ಶಿಷ್ಯರನ್ನು ಬಿಟ್ಟು ಹಿಂತಿರುಗಿದ ನಂತರ ಏನು ಸಂಭವಿಸಿತೆಂಬುದನ್ನು ನೋಡುವದಕ್ಕೆ ಈಗ ದೇವರ ವಾಕ್ಯದಲ್ಲಿರುವ –
–ದನ್ನು ಮುಂದುವರಿಸೋಣ.  ವಾಕ್ಯವು ಹೀಗೆ ಹೇಳುತ್ತದೆ:

**ಆಗ ಅವರು ಎಣ್ಣೇಮರಗಳ ತೋಪು ಎನಿಸಿಕೊಳ್ಳುವ ಗುಡ್ಡದಿಂದ ಯೆರೂಸಲೇಮಿಗೆ ಹಿಂತಿರುಗಿ ಬಂದರು**. ಆ ಗುಡ್ಡಕ್ಕೂ ಯೆರೂಸ –
ಲೇಮಿಗೂ ಸಬ್ಬತ್ ದಿನದಲ್ಲಿ ಪ್ರಯಾಣ ಮಾಡುವಷ್ಟು ದೂರ. ಅವರು ಅಲ್ಲಿಗೆ ಬಂದು, ತಾವು ಇರುತ್ತಿದ್ದ ಮೇಲಂತಸ್ತಿಗೆ ಹೋದರು;
ಯಾರಾರಂದರೆ, ಪೇತ್ರ, ಯೋಹಾನ, ಯಾಕೋಬ, ಅಂದ್ರೆಯ, ಫಿಲಿಪ್ಪ, ತೋಮ, ಬಾರ್ತೊಲೊಮಾಯ, ಮತ್ತಾಯ, ಅಲ್ಫಾಯನ
ಯಾಕೋಬ, ಮತಾಭಿಮಾನಿ ಅನ್ನಿಸಿಕೊಂಡ ಸೀಮೋನ, ಯಾಕೋಬನ ಯೂದ ಇವರೇ.  ಇವರೆಲ್ಲರು ಏಕಮನಸ್ಸಾಗಿ ದೇವರ
ಪ್ರಾರ್ಥನೆಯಲ್ಲಿ ನಿರತರಾಗಿದ್ದರು.  ಕೆಲವು ಮಂದಿ ಹೆಂಗಸರೂ ಯೇಸುವಿನ ತಾಯಿಯಾದ ಮರಿಯಳೂ ಆತನ ತಮ್ಮಂದಿರೂ
ಅವರ ಸಂಗಡ ಇದ್ದರು. (ಅಪೊ.ಕೃತ್ಯ–1:12-14)

**ಪಂಚಾಶತ್ತಮದಿನದ ಹಬ್ಬವು ಬಂದಿರಲಾಗಿ ಅವರೆಲ್ಲರು ಏಕಮನಸ್ಸಿನಿಂದ ಒಂದೇ ಸ್ಥಳದಲ್ಲಿ ಕೂಡಿದ್ದರು**. ಆಗ ಬಿರುಗಾಳಿ ಬೀಸುತ್ತದೋ
ಎಂಬಂತೆ ಫಕ್ಕನೆ ಆಕಾಶದೊಳಗಿಂದ ಒಂದು ಶಬ್ದವುಂಟಾಗಿ ಅವರು ಕೂತಿದ್ದ ಮನೆಯನ್ನೆಲ್ಲಾ ತುಂಬಿಕೊಂಡಿತು. ಅದಲ್ಲದೆ ಉರಿಯಂ
–ತ್ತಿದ್ದ ನಾಲಿಗೆಗಳು ವಿಂಗಡಿಸಿಕೊಳ್ಳುವ ಹಾಗೆ ಅವರಿಗೆ ಕಾಣಿಸಿ ಅವರಲ್ಲಿ ಒಬ್ಬೊಬ್ಬರ ಮೇಲೆ ಒಂದೊಂದಾಗಿ ಕೂತುಕೊಂಡವು.  ಆಗ
**ಅವರೆಲ್ಲರು ಪವಿತ್ರಾತ್ಮಭರಿತರಾಗಿ** ಆ ಆತ್ಮ ತಮತಮಗೆ ನುಡಿಯುವ ಶಕ್ತಿಯನ್ನು ಕೊಡುವ ಪ್ರಕಾರ ಬೇರೆಬೇರೆ ಭಾಷೆಗಳಿಂದ ಮಾತಾ
–ಡುವದಕ್ಕೆ ಪ್ರಾರಂಭಿಸಿದರು.  ಆಕಾಶದ ಕೆಳಗಿರುವ ಎಲ್ಲಾ ದೇಶದೊಳಗಿಂದ ಬಂದ ಸದ್ಭಕ್ತರಾದ ಯೆಹೂದ್ಯರು ಯೆರೂಸಲೇಮಿನಲ್ಲಿ
ವಾಸವಾಗಿದ್ದರು. ಆ ಸಪ್ಪಳವಾದಾಗ ಜನರು ಗುಂಪುಗುಂಪಾಗಿ ಕೂಡಿಬಂದು ಪ್ರತಿಯೊಬ್ಬರು ತಮ್ಮ ತಮ್ಮ ಭಾಷೆಯಲ್ಲೇ ಇವರು
ಮಾತಾಡುವದನ್ನು ಕೇಳಿ ಭ್ರಮೆಗೊಂಡರು. ಎಲ್ಲರು ಆಶ್ಚರ್ಯದಿಂದ ಬೆರಗಾಗಿ, "ಇಗೋ, ಮಾತಾಡುತ್ತಿರುವ ಇವರೆಲ್ಲರು ಗಲಿಲಾಯ–

–ದವರಲ್ಲವೇ.  ನಾವು ಪ್ರತಿಯೊಬ್ಬರು ನಮ್ಮ ನಮ್ಮ ಹುಟ್ಟು ಭಾಷೆಯಲ್ಲಿ ಇವರು ಮಾತಾಡುವದನ್ನು ಕೇಳುತ್ತೇವಲ್ಲಾ, ಇದು ಹೇಗೆ? ಪಾರ್ಥ್ಯರೂ, ಮೇದ್ಯರೂ, ಎಲಾಮ್ಯರೂ, ಮೆಸೊಪೊತಾಮ್ಯ, ಯೂದಾಯ, ಕಪ್ಪದೋಕ್ಯ, ಪೊಂತ, ಆಸ್ಯ, ಫ್ರುಗ್ಯ, ಪಂಫುಲ್ಯ, ಐಗುಪ್ತ, ಕುರೇನೆಯ ಮಗ್ಗುಲಲ್ಲಿರುವ ಲಿಬ್ಯ, ಈ ಸೀಮೆಗಳಲ್ಲಿ ವಾಸವಾಗಿರುವವರೂ, ರೋಮಾಪುರದಿಂದ ಬಂದು ಇಳಿದಿರುವ ಯೆಹೂ –ದ್ಯರೂ, ಯೆಹೂದ್ಯ ಮತಾವಲಂಬಿಗಳೂ, ಕ್ರೇತ್ಯರೂ, ಅರಬೀದೇಶದವರೂ ಆಗಿರುವ ನಾವು ನಮ್ಮ ನಮ್ಮ ಭಾಷೆಗಳಲ್ಲಿ ಇವರು ದೇವರ ಮಹತ್ತುಗಳ ವಿಷಯವಾಗಿ ಹೇಳುವದನ್ನು ಕೇಳುತ್ತೇವೆ ಅಂದುಕೊಂಡರು." ಎಲ್ಲರು ಬೆರಗಾಗಿ ಕಳವಳಗೊಂಡು, ಇದೇನಾಗಿರ –ಬಹುದು ಎಂದು ಒಬ್ಬರನ್ನೊಬ್ಬರು ಕೇಳುತ್ತಿದ್ದರು. ಕೆಲವರು, "ಇವರು ಮದ್ಯಪಾನಮಾಡಿ ಮತ್ತರಾಗಿದ್ದಾರೆಂದು" ಹಾಸ್ಯ ಮಾಡಿದರು. (ಅಪೊ.ಕೃತ್ಯ–2:1-13)

**ಆಗ ಪೇತ್ರನು ಹನ್ನೊಂದು ಮಂದಿ ಅಪೊಸ್ತಲರ ಸಹಿತ ಎದ್ದು ನಿಂತು ಗಟ್ಟಿಯಾದ ಧ್ವನಿಯಿಂದ ಅವರಿಗೆ ಹೀಗೆ ಪ್ರಸಂಗ ಮಾಡಿದನು. "ಯೆಹೂದ್ಯರೇ,** ಯೆರೂಸಲೇಮಿನಲ್ಲಿ ವಾಸವಾಗಿರುವ ಎಲ್ಲಾ ಜನರೇ, ಈ ಸಂಗತಿಯು ಏನೆಂದು ನಿಮಗೆ ಗೊತ್ತಾಗುವ ಹಾಗೆ ನನ್ನ ಮಾತಿಗೆ ಕಿವಿಗೊಡಿರಿ; ನೀವು ಭಾವಿಸಿದಂತೆ ಇವರು ಅಮಲೇರಿದವರಲ್ಲ; ಈಗ ಬೆಳಿಗ್ಗೆ ಒಂಭತ್ತು ಘಂಟೆಯಾಗಿದೆಯಷ್ಟೆ.  ಆದರೆ ಇದು ಪ್ರವಾದಿಯಾದ ಯೋವೇಲನ ಮೂಲಕವಾಗಿ ಹೇಳಿಸಿದ ಸಂಗತಿ. ಅದೇನೆಂದರೆ, "ಕಡೇ ದಿವಸಗಳಲ್ಲಿ ನಾನು ಎಲ್ಲಾ ಮನುಷ್ಯರ ಮೇಲೆ ನನ್ನ ಆತ್ಮವನ್ನು ಸುರಿಸುವೆನು; ನಿಮ್ಮಲ್ಲಿರುವ ಗಂಡಸರೂ ಹೆಂಗಸರು ಪ್ರವಾದಿಸುವರು; ನಿಮ್ಮ ಯೌವನಸ್ಥರಿಗೆ ದಿವ್ಯದರ್ಶನ –ಗಳಾಗುವವು; ನಿಮ್ಮ ಹಿರಿಯರಿಗೆ ಕನಸುಗಳು ಬೀಳುವವು. . . . .ಆದರೂ ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆ –ಯಾಗುವದೆಂದು ದೇವರು ಹೇಳುತ್ತಾನೆ" ಎಂಬದೇ.  "ಇಸ್ರಾಯೇಲ್ ಜನರೇ, ನನ್ನ ಮಾತುಗಳನ್ನು ಲಾಲಿಸಿರಿ. ನಜರೇತಿನ ಯೇಸು ಇದ್ದನಲ್ಲಾ, ದೇವರು ನಿಮಗೂ ತಿಳಿದಿರುವಂತೆ ಆತನ ಕೈಯಿಂದ ಮಹತ್ತುಗಳನ್ನೂ ಅದ್ಭುತಗಳನ್ನೂ ಸೂಚಕಕಾರ್ಯಗಳನ್ನೂ ನಿಮ್ಮಲ್ಲಿ ನಡಿಸಿ ಆತನನ್ನು ತನಗೆ ಮೆಚ್ಚಿಕೆಯಾದವನೆಂದು ನಿಮಗೆ ತೋರಿಸಿಕೊಟ್ಟನು. **ಆ ಯೇಸು ದೇವರ ಸ್ಥಿರಸಂಕಲ್ಪಕ್ಕೂ ಭವಿಷ್ಯದ್ಜ್ಞಾನಕ್ಕೂ ಅನುಸಾರವಾಗಿ ಒಪ್ಪಿಸಲ್ಪಟ್ಟಿರಲು ನೀವು ಅನ್ಯಜನರ ಕೈಯಿಂದ ಆತನನ್ನು ಶಿಲುಬೆಗೆ ಹಾಕಿಸಿ ಕೊಂದಿರಿ.  ಆತನನ್ನು ದೇವರು ಮರಣ ವೇದನೆಗಳಿಂದ ಬಿಡಿಸಿ ಎಬ್ಬಿಸಿದನು;** ಯಾಕಂದರೆ ಮರಣವು ಆತನನ್ನು ಹಿಡುಕೊಂಡಿರುವದು ಅಸಾಧ್ಯವಾಗಿತ್ತು." ಆತನ ವಿಷಯದಲ್ಲಿ ದಾವೀದನು; "ಕರ್ತನು ಯಾವಾಗಲೂ ನನ್ನೆದುರಿನಲ್ಲಿರುವದನ್ನು ನೋಡುತ್ತಿದ್ದೆನು. ನಾನು ಕದಲದಂತೆ ಆತನು ನನ್ನ ಬಲಗಡೆಯ –ಲ್ಲಿಯೇ ಇದ್ದಾನೆ. ಆದಕಾರಣ ನನ್ನ ಹೃದಯವು ಹರ್ಷಿಸಿತು; ನನ್ನ ನಾಲಿಗೆಯು ಉಲ್ಲಾಸ ಧ್ವನಿಯನ್ನು ಮಾಡಿತು. ನನ್ನ ಶರೀರವೂ ನಿರೀಕ್ಷೆಯಿಂದ ನೆಲೆಯಾಗಿರುವದು; ಯಾಕಂದರೆ ನೀನು ನನ್ನ ಜೀವಾತ್ಮವನ್ನು ಪಾತಾಳದಲ್ಲಿ ಬಿಡುವದಿಲ್ಲ, ನಿನ್ನ ಪ್ರಿಯನಿಗೆ ಕೊಳೆ –ಯುವ ಅವಸ್ಥೆಯನ್ನು ನೋಡಗೊಡಿಸುವದಿಲ್ಲ. . . . ." (2:14-27)

"ಸಹೋದರರೇ, ಮೂಲಪಿತೃವಾದ ದಾವೀದನ ವಿಷಯದಲ್ಲಿ ನಾನು ಧೈರ್ಯದಿಂದ ನಿಮ್ಮ ಸಂಗಡ ಮಾತಾಡಬಹುದು, ಏನೆಂದರೆ, ಅವನು ತೀರಿಹೋಗಿ ಹೂಣಲ್ಪಟ್ಟನು; ಅವನ ಸಮಾಧಿ ಈ ದಿನದವರೆಗೂ ನಮ್ಮಲ್ಲಿ ಅದೆ.  ಅವನು ಪ್ರವಾದಿಯಾಗಿದ್ದು, ನಿನ್ನ ಸಂತತಿ –ಯವರೊಳಗೆ ಒಬ್ಬನನ್ನು ನಾನು ಸಿಂಹಾಸನದ ಮೇಲೆ ಕುಳ್ಳಿರಿಸುವೆನೆಂದು ತನಗೆ ದೇವರು ಆಣೆಯಿಟ್ಟು ಹೇಳಿದ್ದನ್ನು ಬಲ್ಲವನಾಗಿ ಮುಂದಾಗುವದನ್ನು ಕಂಡು ಕ್ರಿಸ್ತನ ಪುನರುತ್ಥಾನವನ್ನೇ ಕುರಿತು, ಆತನು ಪಾತಾಳದಲ್ಲಿ ಬಿಡಲ್ಪಡಲಿಲ್ಲವೆಂತಲೂ ಆತನ ಶರೀರವು ಕೊಳೆ –ಯುವ ಅವಸ್ಥೆಯನ್ನು ಅನುಭವಿಸುವದಿಲ್ಲವೆಂತಲೂ ಹೇಳಿದನು. ಈ ಯೇಸುವನ್ನೇ ದೇವರು ಎಬ್ಬಿಸಿದನು; ಇದಕ್ಕೆ ನಾವೆಲ್ಲರೂ ಸಾಕ್ಷಿ –ಗಳಾಗಿದ್ದೇವೆ.  ಆತನು ದೇವರ ಬಲಗಡೆಯಿಂದ ಉನ್ನತಸ್ಥಾನಕ್ಕೆ ಏರಿಸಲ್ಪಟ್ಟು ವಾಗ್ದಾನವಾಗಿದ್ದ ಪವಿತ್ರಾತ್ಮವರವನ್ನು ತಂದೆಯಿಂದ ಹೊಂದಿ ನೀವು ನೋಡಿ ಕೇಳುವದನ್ನು ಸುರಿಸಿದ್ದಾನೆ. ದಾವೀದನು ಆಕಾಶಕ್ಕೆ ಏರಿಹೋಗಲಿಲ್ಲವಲ್ಲಾ. ತಾನೇ ಹೇಳುವ ಮಾತೇನೆಂದರೆ, ನಾನು ನಿನ್ನ ವಿರೋಧಿಗಳನ್ನು ನಿನ್ನ ಪಾದಗಳಿಗೆ ಪೀಠವಾಗ ಮಾಡುವ ತನಕ ನನ್ನ ಬಲಗಡೆಯಲ್ಲಿ ಕೂತುಕೊಂಡಿರು ಎಂದು ಕರ್ತನು ನನ್ನ ಒಡೆಯನಿಗೆ ನುಡಿದನು" ಎಂಬದೇ. (2:29-35)

**"ಆದದರಿಂದ ನೀವು ಶಿಲುಬೆಗೆ ಹಾಕಿಸಿದ ಈ ಯೇಸುವನ್ನೇ ದೇವರು ಒಡೆಯನನ್ನಾಗಿಯೂ ಕ್ರಿಸ್ತನನ್ನಾಗಿಯೂ ಮಾಡಿದ್ದಾನೆಂದೂ** ಇಸ್ರಾ –ಯೇಲ್ ಕುಲದವರಿಗೆಲ್ಲ ನಿಸ್ಸಂದೇಹವಾಗಿ ತಿಳಿದಿರಲಿ" ಎಂದು ಹೇಳಿದನು. ಇದನ್ನು ಅವರು ಕೇಳಿ ಹೃದಯದಲ್ಲಿ ಅಲಗುನೆಟ್ಟಂತಾಗಿ ಪೇತ್ರನನ್ನೂ ಉಳಿದ ಅಪೊಸ್ತಲರನ್ನೂ, "ಸಹೋದರರೇ, ನಾವೇನು ಮಾಡಬೇಕು ಎಂದು ಕೇಳಲು ಪೇತ್ರನು ಅವರಿಗೆ, **"ನಿಮ್ಮ ಪಾಪ –ಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮ ದಾನವನ್ನು ಹೊಂದುವಿರಿ;** ಆ ವಾಗ್ದಾನವು ನಿಮಗೂ ನಿಮ್ಮ ಮಕ್ಕಳಿಗೂ ದೂರವಾಗಿರುವವ –ರೆಲ್ಲರಿಗೂ ಅಂತೂ ನಮ್ಮ ದೇವರಾಗಿರುವ ಕರ್ತನು ತನ್ನ ಕಡೆಗೆ ಕರೆಯುವವರೆಲ್ಲರಿಗೆ ಮಾಡೋಣವಾಗಿದೆ" ಎಂದು ಹೇಳಿದನು. ಬೇರೆ ಅನೇಕವಾದ ಮಾತುಗಳಿಂದ ಅವನು ಖಂಡಿತವಾಗಿ ಸಾಕ್ಷಿನುಡಿದು, "ವಕ್ರಬುದ್ಧಿಯುಳ್ಳ ಈ ಸಂತತಿಯವರಿಂದ ತಪ್ಪಿಸಿಕೊಳ್ಳಿರಿ" ಎಂದು ಅವರನ್ನು ಎಚ್ಚರಿಸಿದನು. (2:36-40)

ಜೊತೆ ಕೇಳುಗರೇ,  ನೀವು ಪೇತ್ರನ ಪ್ರಸಂಗವನ್ನು ನಿಜವಾಗಿಯೂ ಕೇಳಿಸಿಕೊಂಡಿರಾ? ಸಂಕ್ಷಿಪ್ತವಾಗಿ  ಹೇಳುವದಾದರೆ, ಯೆರೂಸ –

–ಲೇಮಿನಲ್ಲಿ ಜನರ ಗುಂಪಿಗೆ ಆತನು ಹೇಳಿದ್ದೇನೆಂದರೆ, ದೇವರು ತನ್ನ ಪ್ರವಾದಿಗಳ ಮೂಲಕ ಬಹಳ ಹಿಂದೆಯೇ ವಾಗ್ದಾನಮಾಡಿ –
–ದಂತೆ ಮೆಸ್ಸೀಯನಾದ ಯೇಸುವನ್ನು ಆತನು ಕಳುಹಿಸಿಕೊಟ್ಟನು. ಪೇತ್ರನು ಅವರಿಗೆ: ಪರಲೋಕದಿಂದ ದೇವರು ಕಳಿಸಿದ ಆ ಮೆಸ್ಸೀ
–ಯನನ್ನು ನೀವು ಕಡೆಗಣಿಸಿದಿರಿ! ಆತನನ್ನು ಶಿಲುಬೆಗೆ ಹಾಕುವದರ ಮೂಲಕ ನೀವು ಕೊಲೆಮಾಡಿದಿರಿ, ಆದರೆ ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನು! ನಾವೆಲ್ಲರೂ ಅದಕ್ಕೆ ಸಾಕ್ಷಿಗಳಾಗಿದ್ದೇವೆ! ದೇವರು ಆತನನ್ನು ತನ್ನ ಬಲಗಡೆಯಲ್ಲಿ ಕೂರಿಸಿಕೊಂಡು ಆತನನ್ನು ಮಹಿಮೆಪಡಿಸಿದನು ಮತ್ತು ವಾಗ್ದಾನ ಮಾಡಿದಂತೆ ಪವಿತ್ರಾತ್ಮನನ್ನು ಕಳಿಸಿಕೊಟ್ಟನು! ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿ
–ಕೊಳ್ಳಿರಿ! ದೇವರ ಪ್ರವಾದಿಗಳ ಸಂದೇಶಗಳನ್ನು ನಂಬಿರಿ! ಲೋಕದ ರಕ್ಷಕನೂ ಮತ್ತು ನ್ಯಾಯಾಧಿಪತಿಯನ್ನಾಗಿ ದೇವರು ನೇಮಕ ಮಾಡಿರುವ ಯೇಸುವನ್ನು ನಂಬಿರಿ! **"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿದ್ದಾರೆ"** ಅಂದನು. (ಅಪೊ.ಕೃತ್ಯ–10:43)

ಹೀಗೆ ಅಪೊಸ್ತಲನಾದ ಪೇತ್ರನು ಮೆಸ್ಸೀಯನಾದ ಯೇಸುವಿನಲ್ಲಿರುವ ನಂಬಿಕೆಯ ಮೂಲಕ **ರಕ್ಷಣೆಯ ಶುಭ ಸಂದೇಶವನ್ನು** ಸಾರಿ –
–ದನು. ಪೇತ್ರನ ಮಾತುಗಳನ್ನು ಕೇಳಿದ ಜನರು, ತಾವು ಶಿಲುಬೆಗೆ ಹಾಕಿಸಿದ ನಜರೇತಿನ ಯೇಸುವೇ ಪರಲೋಕದಿಂದ ಬಂದ ಮಹಿ
–ಮೆಯ ಕರ್ತನೆಂಬುದಾಗಿ ಗುರುತುಹಿಡಿದಿದ್ದರಿಂದ ಅವರು ತಮ್ಮ ಹೃದಯಗಳಲ್ಲಿ ತುಂಬಾ ನೊಂದುಕೊಂಡರು! ಜನರಿಂದ ತಿರಸ್ಕಾರ ಮತ್ತು ದ್ವೇಷಕ್ಕೊಳಗಾಗಿದ್ದ ಈ ಯೇಸು, ದೇವರು ಬಹಳ ಹಿಂದೆ ತನ್ನ ಪ್ರವಾದಿಗಳ ಮೂಲಕವಾಗಿ ವಾಗ್ದಾನ ಮಾಡಿದ್ದ ಮೆಸ್ಸೀಯ –
–ನಾಗಿದ್ದನು. ಹಾಗಾಗಿ, ಆ ದಿನದಲ್ಲಿ ಅನೇಕರು ತಮ್ಮ ಪಾಪಗಳಿಗಾಗಿ ಪಶ್ಚಾತ್ತಾಪಪಟ್ಟು ದೇವರ ಕಡೆಗೆ ತಿರುಗಿಕೊಂಡು ಕರ್ತನಾದ ಯೇಸು ಕ್ರಿಸ್ತನ ಹೆಸರಿನ ಮೇಲೆ ನಂಬಿಕೆಯಿಟ್ಟರು. ಈ ಹೊಸ ವಿಶ್ವಾಸಿಗಳು, ಯೇಸು ಕ್ರಿಸ್ತನ ಮರಣ, ಹೂಣಿಡುವಿಕೆ ಮತ್ತು ಪುನರು–
–ತ್ಥಾನದಲ್ಲಿ ನಂಬಿಕೆಯಿಡುವದರಿಂದ ತಮ್ಮ ಪಾಪಗಳನ್ನು ತೊಳೆದುಕೊಂಡಿದ್ದೇವೆಂಬ ಸತ್ಯಕ್ಕೆ ಬಹಿರಂಗವಾಗಿ ಸಾಕ್ಷಿ ಕೊಡಲು ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡರು. ನೀರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವದು ಅಂದರೆ ಅವರ ಪಾಪಗಳು ತೊಳೆಯಲ್ಪಟ್ಟ ಹಾಗಲ್ಲ, ಆದರೆ ಇದು ಈಗಾಗಲೇ **ಒಳಗೆ** ನಡೆದಿರುವ ಶುದ್ಧತೆಯ **ಹೊರತೋರಿಕೆಯ** ಒಂದು ಗುರುತು ಮಾತ್ರವಾಗಿದೆ.

"ಅವನ ಮಾತಿಗೆ ಒಪ್ಪಿಕೊಂಡವರು ದೀಕ್ಷಾಸ್ನಾನ ಮಾಡಿಸಿಕೊಂಡರು. ಆ ದಿವಸ ಸುಮಾರು ಮೂರು ಸಾವಿರ ಜನರು ಅವರಲ್ಲಿ ಸೇರಿ
–ದರು. ಇವರು **ಅಪೊಸ್ತಲರ ಬೋಧನೆಯನ್ನು ಕೇಳುವದರಲ್ಲಿಯೂ ಸಹೋದರರ ಅನ್ಯೋನ್ಯತೆಯನಲ್ಲಿಯೂ ರೊಟ್ಟಿ ಮುರಿಯುವದರ–
–ಲ್ಲಿಯೂ ಪ್ರಾರ್ಥನೆಗಳಲ್ಲಿಯೂ ನಿರತರಾಗಿದ್ದರು.** ಶಿಷ್ಯರಾದವರು ಸಂತೋಷಪೂರ್ಣರೂ ಪವಿತ್ರಾತ್ಮಭರಿತರೂ ಆದರು."(ಅಪೊ.ಕೃ–
2:41 ,42; 13:52). ಹೀಗೆ, ಪಂಚಾಶತ್ತಮ ದಿನದಂದು, **ಸಭೆಯು** ಅಂದರೆ ಯೇಸು ಕ್ರಿಸ್ತನಲ್ಲಿ ನಂಬಿಕೆಯಿಟ್ಟ ಸಭೆಯು ಹುಟ್ಟಿತ್ತು. ಯೇಸುವಿನ ಸಭೆಯು ಒಂದು ಕಟ್ಟಡ ಅಥವಾ ಒಂದು ಧರ್ಮವಲ್ಲ. ಸಭೆಯೆಂದರೆ ಗ್ರೀಕ್‌ನಲ್ಲಿ "ಎಕ್ಲೇಸಿಯಾ" ಅಂದರೆ "ಕರೆಯಲ್ಪಟ್ಟವರು" ಎಂದು ಅರ್ಥ ಈ ದಿನ ಲೋಕದಲ್ಲಿ ನಿಜವಾದ ವಿಶ್ವಾಸಿಗಳು ಮತ್ತು ಸುಳ್ಳು ವಿಶ್ವಾಸಿಗಳು ಇರುವ ಹಾಗೆ ನಿಜವಾದ ಸಭೆ ಮತ್ತು ಸುಳ್ಳು ಸಭೆ ಎನ್ನುವದು ಸಹ ಇದೆ. ಯೇಸು ಕ್ರಿಸ್ತನ ನಿಜವಾದ ಸಭೆಯು, ಪಂಚಾಶತ್ತಮ ದಿನದಿಂದ ಮೊದಲುಗೊಂಡು, ಕ್ರಿಸ್ತನ ಸಂಪೂರ್ಣವಾದ, ಕೊನೆಗೊಳಿಸಲ್ಪಟ್ಟಿರುವ ಯಜ್ಞದಲ್ಲಿ ಯಥಾರ್ಥವಾದ ನಂಬಿಕೆಯಿಂದ **ಆದಾಮನ ಕುಟುಂಬದಿಂದ ಕ್ರಿಸ್ತನ ಕುಟುಂಬಕ್ಕೆ** ರೂಪಾಂತರಗೊಂಡಿರುವವರಿಂದ ರಚಿತವಾಗಿದೆ.

ಈದಿನ ನಾವು ಕೇಳಿಸಿಕೊಂಡ ಪಂಚಾಶತ್ತಮ ದಿನದ ಘಟನೆಯು ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಸಂಭವಿಸಿತ್ತು. "ಇದು ನನಗೆ ಸಂಬಂಧಿಸಿಲ್ಲ! ಮೆಸ್ಸೀಯನನ್ನು ಶಿಲುಬೆಗೆ ಹಾಕಿದವರಲ್ಲಿ ನಾನು ಒಬ್ಬನಾಗಿರಲಿಲ್ಲ! ಯೆಹೂದ್ಯರು ಮತ್ತು ರೋಮನ್ನರು ಇದನ್ನು ಮಾಡಿದರು! ಇದರೊಂದಿಗೆ ಮಾಡುವದಕ್ಕೆ ನನಗೆ ಯಾವ ಸಂಗತಿಯೂ ಇಲ್ಲ!" ಎಂದು ಯಾರಾದರೂ ಹೇಳುವದಕ್ಕೆ ಬಹುಶ: ಇದು ಕಾರಣವಾಗಬಹುದು. ಏನೇ ಆದರೂ, ದೇವರ ವಾಕ್ಯವು ನಮಗೆ ಹೀಗೆ ಹೇಳುತ್ತದೆ ಏನೆಂದರೆ, "ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು!" (ಯೆಶಾಯ–53:5). **ನಮ್ಮ ಪಾಪಗಳು** ಆತನ ಮರಣಕ್ಕೆ ಕಾರಣವಾದವು. ನಮ್ಮ ಪ್ರಿಯನೊಬ್ಬನನ್ನು ಶಿಲುಬೆಗೆ ಹಾಕುವದಕ್ಕೆ ದೇವರು ಮನುಷ್ಯನಿಗೆ ಅನುಮತಿಸುವದಕ್ಕೆ **ನಮ್ಮ ದ್ರೋಹಗಳು** ಕಾರಣವಾದವು! **ಮನುಷ್ಯನು ಯೇಸುವನ್ನು ಶಿಲುಬೆಗೇರಿಸಿದನು,** ಆದರೆ **ದೇವರು ನಂಬುವವರೆಲ್ಲರಿಗೆ ರಕ್ಷಕನನ್ನಾಗಿ** ಮತ್ತು **ನಂಬದವರಿಗೆ ತೀರ್ಪುಗಾರನನ್ನಾಗಿ ಆತನನ್ನು ಮರಣದಿಂದ ಎಬ್ಬಿಸಿದನು.** ಹಾಗಾಗಿ ವಾಕ್ಯವು ಹೇಳುವದೇನೆಂದರೆ:

"ಈಗಲಾದರೋ ಆತನು ನಾಲ್ಕು ದಿಕ್ಕಿನಲ್ಲಿರುವ ಮನುಷ್ಯರೆಲ್ಲರೂ ತನ್ನ ಕಡೆಗೆ ತಿರುಗಿಕೊಳ್ಳಬೇಕೆಂದು ಅಪ್ಪಣೆ ಕೊಡುತ್ತಾನೆ. ಯಾಕಂ
–ದರೆ ಆತನು ನಿಷ್ಕರ್ಷೆ ಮಾಡಿದ ಪುರುಷನ ಕೈಯಿಂದ ನೀತಿಗನುಸಾರವಾಗಿ ಭೂಲೋಕದ ನ್ಯಾಯವಿಚಾರಣೆ ಮಾಡುವದಕ್ಕೆ ಒಂದು ದಿವಸವನ್ನು ಗೊತ್ತು ಮಾಡಿದ್ದಾನೆ. ಅವನನ್ನು ಸತ್ತವರೊಳಗಿಂದ ಎಬ್ಬಸಿದ್ದರಲ್ಲಿ ಇದನ್ನು ನಂಬುವದಕ್ಕೆ ಎಲ್ಲರಿಗೂ ಆಧಾರ ಕೊಟ್ಟಿ ದ್ದಾನೆ! (ಅಪೊ.ಕೃತ್ಯ–17:30,31).

ಈ ಮಾತಿನ ಕುರಿತು ಜಾಗ್ರತೆಯಿಂದ ಆಲೋಚಿಸಿರಿ, ಯಾಕಂದರೆ ನೀವು ಇದಕ್ಕೆ ಹೇಗೆ ಪ್ರತಿಕ್ರಿಯಿಸುತ್ತೀರೋ ಅದರ ಮೇಲೆ ನಿಮ್ಮ ನಿತ್ಯತ್ವದ ಗುರಿಯು ಅವಲಂಬಿತವಾಗಿದೆ. ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . .ಅಪೊಸ್ತಲನಾದ ಪೇತ್ರನು ಹೇಳಿರುವದರ ಕುರಿತು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ. **"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕ ವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿಹೇಳಿದ್ದಾರೆ. . . .ಮತ್ತು ಪವಿತ್ರಾತ್ಮದಾನವನ್ನು ಹೊಂದುವಿರಿ!"** (ಅಪೊ.ಕೃತ್ಯ–10:43; 2:38)

[ಪಾಠ 87: ಪವಿತ್ರಾತ್ಮನು ಬಂದಿದ್ದಾನೆ] [ಸಾರಾಂಶಗಳ ಪಟ್ಟಿ] [ಪಾಠ 89: ಶುಭ ಸಂದೇಶ]

ಪಾಠ 88

# ಯೇಸು ಹಿಂತಿರುಗಿ ಬರುತ್ತಾನೆ

ಪ್ರಕಟನೆ 19-22

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

**ದೇವರ ವಾಕ್ಯದ ಕಾಲಗಣನೆಯ** ನಮ್ಮ ಅಧ್ಯಯನದಲ್ಲಿ ನಾವು ಈದಿನ 88ನೆಯ ಪಾಠಕ್ಕೆ ಬಂದಿದ್ದೇವೆ. ನಾವು ನೋಡಿದ ಹಾಗೆ, ಅನೇಕ ವರ್ಷಗಳ ಹಿಂದೆ ಪರಿಶುದ್ಧ ವಾಕ್ಯಗಳ ಮೊದಲ ಭಾಗವಾಗಿರುವ ತೋರಾ, ಕೀರ್ತನೆಗಳು ಮತ್ತು ಪ್ರವಾದಿಗಳ ಪುಸ್ತಕಗಳನ್ನು ಬರೆಯುವದಕ್ಕೆ ದೇವರಾತ್ಮನು ಮೂವತ್ತಕ್ಕಿಂತಲೂ ಹೆಚ್ಚು ಪ್ರವಾದಿಗಳನ್ನು ಪ್ರೇರೇಪಿಸಿದನು. ದೇವರ ಪುಸ್ತಕದ ಮೊದಲ ಭಾಗವು **ಹಳೆ ಒಡಂಬಡಿಕೆ** ಎಂದು ಕರೆಯಲ್ಪಡುತ್ತದೆ. ಆ ಭಾಗದಲ್ಲಿ, ಎಲ್ಲಾ ಪ್ರವಾದಿಗಳು ಒಂದು ಸಂದೇಶವನ್ನು ಹಂಚಿಕೊಂಡು, ದೇವರು ಪರಿಶುದ್ಧನೂ ಮತ್ತು ನೀತಿವಂತನೂ ಆಗಿರುವದರಿಂದ ಪ್ರತಿಯೊಂದು ಪಾಪವನ್ನು ಆತನು ತೀರ್ಪು ಮಾಡುತ್ತಾನೆ ಎಂದು ನಮಗೆ ಹೇಳುತ್ತಿದ್ದಾರೆ. ಹೀಗಿದ್ದರೂ, ದೇವರೂ ಸಹ ಕನಿಕರದಿಂದ ತುಂಬಿದವನೂ ಮತ್ತು ಆದಾಮನ ಸಂತತಿಯವರು ಅವರ ಪಾಪದಲ್ಲಿ ನಾಶವಾಗುವದನ್ನು ಇಷ್ಟಪಡದವನೂ ಆಗಿದ್ದಾನೆ. ಹಾಗಾಗಿ, ಒಬ್ಬ ಕನ್ಯೆಯಲ್ಲಿ ಹುಟ್ಟಿದವನು, ಪವಿತ್ರ ಜೀವಿತವನ್ನು ಜೀವಿಸಿ ನಂತರ ಆದಾಮನ ಸಂತಾನದವರ ಪಾಪಗಳಿಗಾಗಿ ಸಂದಾಯ ಮಾಡುವದಕ್ಕೆ ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿದ ಪರಿಶುದ್ಧ ಮೆಸ್ಸೀ –ಯನಾದ ವಿಮೋಚಕನನ್ನು ಕಳಿಸುವದಕ್ಕೆ ದೇವರು ಹೇಗೆ ತನ್ನ ಪ್ರವಾದಿಗಳ ಮೂಲಕವಾಗಿ ವಾಗ್ದಾನ ಮಾಡಿದನು ಎಂಬುದನ್ನು ನಾವು ನೋಡಿದ್ದೇವೆ. ಬರಲಿರುವ ಮೆಸ್ಸೀಯನ ಕುರಿತಾಗಿ ಹಳೆ ಒಡಂಬಡಿಕೆಯ ಪ್ರವಾದಿಗಳೆಲ್ಲರೂ ಬರೆದಿದ್ದಾರೆ.

ಪರಿಶುದ್ಧ ವಾಕ್ಯಗಳ ಎರಡನೆಯ ಭಾಗವಾಗಿರುವ **ಹೊಸ ಒಡಂಬಡಿಕೆಯ** ಸುವಾರ್ತಾ ಪುಸ್ತಕದಲ್ಲಿ, ನಾವು ನೋಡುವದೇನೆಂದರೆ, ದೇವರು ತನ್ನ ಪ್ರವಾದಿಗಳ ಮೂಲಕ ವಾಗ್ದಾನ ಮಾಡಿದಂತೆ ಲೋಕದ ರಕ್ಷಕನಾದ ಮೆಸ್ಸೀಯನನ್ನು ಕಳುಹಿಸಿ ಕೊಡುವ ಆತನ ಯೋಜನೆಯ ಸಮಯವು ಬಂದಿತ್ತು. ಮೆಸ್ಸೀಯನೇ ನಜರೇತಿನ ಯೇಸುವಾಗಿದ್ದು, ಎಂದೆಂದಿಗೂ ಜೀವಿಸಿದ್ದ ಒಬ್ಬನೇ ಸಂಪೂರ್ಣ –ನಾದ ಪರಿಶುದ್ಧ ವ್ಯಕ್ತಿಯಾಗಿದ್ದನು. ಯೇಸು ದೇವರ ಶಕ್ತಿಯಿಂದ ತುಂಬಿದವನಾಗಿದ್ದನು, ಯಾಕೆಂದರೆ ಆತನು ಮನುಷ್ಯ ಶರೀರದ – –ಲ್ಲಿದ್ದ ದೇವರ ನಿಜವಾದ ವಾಕ್ಯವಾಗಿದ್ದನು. ಆತನ ವಿಷಯದಲ್ಲಿ ದೇವರು, **"ಈತನು ಪ್ರಿಯನಾಗಿರುವ ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ!"** ಎಂದು ಹೇಳಿದ್ದಾನೆ (ಮತ್ತಾಯ–3:17). ಏನೇ ಆದರೂ, ನಮ್ಮ ಜೊತೆ ಮಾನವರು ಪರಿಶುದ್ಧನಾದ ಈತನನ್ನು ಶಿಲುಬೆಗೆ ಜಡಿದು ಕೊಂದುಹಾಕಿದರು. ಆದರೆ ದೇವರು ಈತನನ್ನು ಮೂರನೆಯ ದಿನದಲ್ಲಿ ಜೀವದಿಂದ ಎಬ್ಬಿಸಿದನು. ಅನಂತರ ಯೇಸು ಅನೇಕ ಸಾಕ್ಷಿಗಳಿಂದ ಕಂಡುಬಂದನು, ದೇವರು ಆತನನ್ನು ಪರಲೋಕದಲ್ಲಿ ಉನ್ನತ ಸ್ಥಾನದಲ್ಲಿ ಮಹಿಮೆಪಡಿಸಿದನು. ಆದರೆ ಕತೆಯು ಅಲ್ಲಿಗೆ ಮುಗಿಯುವದಿಲ್ಲ.

ದೇವರ ರಕ್ಷಣೆಯ ನೀತಿವಂತಿಕೆಯ ಮಾರ್ಗದ ಅದ್ಭುತವಾದಕತೆಯು ಒಂದು ಆರಂಭವನ್ನು ಮತ್ತು ಒಂದು ಅಂತ್ಯವನ್ನು ಹೊಂದಿದೆ; ಅಂದರೆ ಒಂದು ತಲೆ ಮತ್ತು ಒಂದು ಬಾಲವಿದ್ದಂತೆ. **ಈ ಕೆಟ್ಟದಾದ ಪ್ರಪಂಚವು ಮೆಸ್ಸೀಯನಾದ ಯೇಸುವಿನ ಮುಂದುವರಿಕೆಯನ್ನು ಇನ್ನೂ ನೋಡಿಲ್ಲ!** ದೇವರ ವಾಕ್ಯವು ನಮಗೆ ಹೇಳುವದೇನೆಂದರೆ, ಕರ್ತನಾದ ಯೇಸು, ಸೈತಾನನನ್ನೂ ಮತ್ತು ಅವನ ದೂತರನ್ನು ಬೆಂಕಿಯ ಕೆರೆಯೊಳಗೆ ದೊಬ್ಬುವದಕ್ಕೂ, ನ್ಯಾಯತೀರ್ಪಿನ ದಿನದಂದು ಆದಾಮನ ಸಂತಾನದವರಿಗೆ ತೀರ್ಪು ಮಾಡುವದಕ್ಕೂ, ಮತ್ತು ಈ ಹಳೆಯ ಪ್ರಪಂಚವನ್ನು ಪುನರ್ರಚಿಸುವದಕ್ಕೂ ಬರಲಿಕ್ಕಿದ್ದಾನೆ. ಈ ದಿನದ ನಮ್ಮ ಪಾಠವು **"ಯೇಸು ಹಿಂತಿರುಗಿ ಬರುತ್ತಾನೆ"** ಎಂದು ಕರೆಯಲ್ಪಡುತ್ತದೆ.

ಹೊಸ ಒಡಂಬಡಿಕೆಯ ಕೊನೆಯ ಭಾಗವಾದ **ಪ್ರಕಟನೆ** ಎಂದು ಕರೆಯಲ್ಪಡುವ ಪುಸ್ತಕದಿಂದ ನಾವು ಓದಲಿಕ್ಕಿದ್ದೇವೆ. ಪ್ರಕಟನೆಯು ಒಂದು ಅಗಾಧವಾದ ಮತ್ತು ಶಕ್ತಿಯುತವಾದ ಪುಸ್ತಕವಾಗಿದೆ, ಯಾಕಂದರೆ ಈ ಪ್ರಸ್ತುತ ಲೋಕವು ಕೊನೆಯಾಗುವ ಅಂತ್ಯದ ಸಮ– –ಯದಲ್ಲಿ ಏನು ಸಂಭವಿಸುತ್ತದೆ ಎಂಬುದನ್ನು ಇದು ಪ್ರಕಟಪಡಿಸುತ್ತದೆ. ಪ್ರಕಟನೆಯ ಪುಸ್ತಕವು ಇಪ್ಪತ್ತೆರಡು ಅಧ್ಯಾಯಗಳನ್ನು ಹೊಂದಿದ್ದು, ಈ ಅಧ್ಯಾಯಗಳು ನಂಬುವವರೆಲ್ಲರಿಗಾಗಿ ಒಂದು ಮಹಿಮೆಯುಳ್ಳ ವಿಜಯವನ್ನು ಘೋಷಿಸುತ್ತದೆ. ಆದರೆ ನಂಬದವ – –ರಿಗಾಗಿ ದೊಡ್ಡದಾದ ಭೀತಿಯನ್ನು ಈ ಅಧ್ಯಾಯಗಳು ಒಳಗೊಂಡಿವೆ, ಯಾಕಂದರೆ ಯೇಸು ಕ್ರಿಸ್ತನನ್ನು ನಿಮ್ಮ ರಕ್ಷಕನಂತೆ ನೀವು

ಅಂಗೀಕರಿಸದಿದ್ದರೆ, ಅಂತ್ಯದಲ್ಲಿ ಆತನು ನಿಮ್ಮ **ನ್ಯಾಯತೀರಿಸುವವನಾಗಿರುತ್ತಾನೆ** ಎಂದು ಪ್ರಕಟನೆಯ ಪುಸ್ತಕವು ಪ್ರಕಟಪಡಿಸುತ್ತದೆ. ನೀವು ದೇವರ ಕುರಿಮರಿಯನ್ನು ಅಂಗೀಕರಿಸದಿದ್ದರೆ, ನೀವು ದೇವರ ಸಿಂಹವನ್ನು ಸಂಧಿಸುತ್ತೀರಿ, ಯಾಕಂದರೆ ಕರ್ತನಾದ ಯೇಸು, ಪಾಪವನ್ನು ನಿವಾರಿಸುವದಕ್ಕೆ ಒಂದು **ಯಜ್ಞದ ಕುರಿಯಂತೆ** ಮರಣ ಹೊಂದಿದವನು, ತೀರ್ಪು ಮಾಡುವದಕ್ಕೆ ಒಂದು ಬಲಯುತ –
–ವಾದ **ದೇವರ ಸಿಂಹದಂತೆ** ಹಿಂತಿರುಗಿ ಬರುತ್ತಾನೆ! ಅದಕ್ಕಾಗಿಯೇ ವಾಕ್ಯಗಳು ಹೀಗೆ ಹೇಳುತ್ತವೆ: "ಯೇಸು ಕರ್ತನು ತನ್ನ ಶಕ್ತಿ –
–ಯನ್ನು ತೋರ್ಪಡಿಸುವ ದೇವದೂತರಿಂದ ಕೂಡಿದವನಾಗಿ ಉರಿಯುವ ಬೆಂಕಿಯಲ್ಲಿ ಆಕಾಶದಿಂದ ಪ್ರತ್ಯಕ್ಷನಾಗುವ ಕಾಲದಲ್ಲಿ ಅದನ್ನು ಕೊಡುವನು. ಆಗ ನಮ್ಮ ಕರ್ತನಾದ ಯೇಸುವು ದೇವರನ್ನರಿಯದವರಿಗೂ ತನ್ನ ಸುವಾರ್ತೆಗೆ ಒಳಪಡದವರಿಗೂ ಪ್ರತೀ –
–ಕಾರವನ್ನು ಸಲ್ಲಿಸುವನು." (2ಥೆಸ–1:7,8)

ಈಗ, ಪ್ರಕಟನೆ ಪುಸ್ತಕದಿಂದ ತೆಗೆದುಕೊಂಡಂತ ಉದಾಹರಣೆಗಳನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳೋಣ. ಕರ್ತನಾದ ಯೇಸು ಪರ
–ಲೋಕಕ್ಕೆ ಏರಿಹೋದ ನಂತರ, ಆತನು ತನ್ನ ದೂತನನ್ನು ಅಪೊಸ್ತಲನಾದ ಯೋಹಾನನ ಬಳಿಗೆ ಕಳಿಸಿ, ಲೋಕದ ಅಂತ್ಯದಲ್ಲಿ ಸಂಭವಿಸಲಿಕ್ಕಿರುವ ಘಟನೆಗಳನ್ನು ಅವನಿಗೆ ಪ್ರಕಟಪಡಿಸಿದನು. ಮೊದಲನೆಯ ಅಧ್ಯಾಯದಲ್ಲಿ ಯೋಹಾನನು ಬರೆದಿರುವದೇನೆಂದರೆ:

**ಯೇಸು ಕ್ರಿಸ್ತನ ಪ್ರಕಟನೆಯು. ಆತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನ ದಾಸರಿಗೆ ತೋರಿಸುವದಕ್ಕಾಗಿ ದೇವರಿಂದ ಈ ಪ್ರಕಟನೆಯನ್ನು ಹೊಂದಿದನು;** ಇದಲ್ಲದೆ ಆತನು ತನ್ನ ದೂತನನ್ನು ಕಳುಹಿಸಿ ಅವನ ಮೂಲಕ ಆ ಸಂಗತಿಗಳನ್ನು ತನ್ನ ದಾಸನಾದ ಯೋಹಾನನಿಗೆ ಸೂಚಿಸಿದನು. ಯೋಹಾನನು ತಾನು ಕಂಡದ್ದನೆಲ್ಲಾ ತಿಳಿಸುವವನಾಗಿ ದೇವರ ವಾಕ್ಯದ ವಿಷಯವಾಗಿಯೂ ಯೇಸು ಕ್ರಿಸ್ತನು ಹೇಳಿದ ಸಾಕ್ಷಿಯ ವಿಷಯವಾಗಿಯೂ ಸಾಕ್ಷಿ ಕೊಟ್ಟನು. ಈ ಪ್ರವಾದನಾ ವಾಕ್ಯಗಳನ್ನು ಓದುವಂಥವನೂ ಕೇಳುವಂಥವರೂ ಈ ಪ್ರವಾದನೆಯಲ್ಲಿ ಬರೆದಿರುವ ಮಾತುಗಳನ್ನು ಕೈಕೊಂಡು ನಡೆಯುವಂಥವರೂ ಧನ್ಯರು. ಅವು ನೆರವೇರುವ ಸಮಯವು ಸಮೀಪ
–ವಾಗಿದೆ. ಯೋಹಾನನಾದ ನಾನು ನಿಮಗೆ ಬರೆಯುವದೇನೆಂದರೆ, ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವಾತನಿಂದ ಮತ್ತು ಆತನ ಸಿಂಹಾಸನದ ಮುಂದಿರುವ ಏಳು ಆತ್ಮಗಳಿಂದ ಮತ್ತು ನಂಬತಕ್ಕ ಸಾಕ್ಷಿಯೂ ಸತ್ತವರೊಳಗಿಂದ ಮೊದಲು ಎದ್ದು ಬಂದವನೂ ಭೂರಾಜರ ಒಡೆಯನೂ ಆಗಿರುವ ಯೇಸುಕ್ರಿಸ್ತನಿಂದ ನಿಮಗೆ ಕೃಪೆಯೂ ಶಾಂತಿಯೂ ಆಗಲಿ. **ನಿಮ್ಮನ್ನು ಪ್ರೀತಿಸುವವನೂ ತನ್ನ ರಕ್ತದ ಮೂಲಕ ನಮ್ಮನ್ನು ಪಾಪಗಳಿಂದ ಬಿಡಿಸಿದವನೂ ನಮ್ಮನ್ನು ರಾಜ್ಯವನನಾಗಿಯೂ ತನ್ನ ತಂದೆಯಾದ ದೇವರಿಗೆ ಯಾಜಕರನ್ನಾ –
–ಗಿಯೂ ಮಾಡಿದವನೂ ಆಗಿರುವಾತನಿಗೆ ಯುಗಯುಗಾಂತರಗಳಲ್ಲಿಯೂ ಘನ ಮಹತ್ವಗಳಿರಲಿ. ಆಮೆನ್. ಇಗೋ, ಮೇಘಗಳೊಂದಿಗೆ ಬರುತ್ತಾನೆ; ಎಲ್ಲರ ಕಣ್ಣುಗಳು ಆತನನ್ನು ಕಾಣುವವು, ಆತನನ್ನು ಇರಿದವರೂ ಸಹ ಕಾಣುವರು; ಭೂಮಿಯಲ್ಲಿರುವ ಎಲ್ಲಾ ಕುಲದವರು ಆತನನ್ನು ನೋಡಿ ಎದೆ ಬಡುಕೊಳ್ಳುವರು. ಹೌದು, ಹಾಗೆಯೇ ಆಗುವದು. ಆಮೆನ್.** "ನಾನು ಆದಿಯು ಅಂತವೂ ವರ್ತಮಾನ ಭೂತ ಭವಿಷ್ಯತ್ಕಾಲಗಳಲ್ಲಿರುವವನೂ ಸರ್ವಶಕ್ತನೂ ಆಗಿದ್ದೇನೆ ಎಂದು ದೇವರಾದ ಕರ್ತನು ಹೇಳುತ್ತಾನೆ." (ಪ್ರಕಟನೆ–1:1-8)

ಹತ್ತೊಂಭತ್ತನೆಯ ಅಧ್ಯಾಯದಲ್ಲಿ ಯೋಹಾನನು ಹೀಗೆ ಬರೆದಿದ್ದಾನೆ:

ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು ಶಬ್ದವನ್ನು ಕೇಳಿದೆನು. ಅವರು, "ಹಲ್ಲೆ –
–ಲೂಯಾ. ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು; ಆತನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ." ಎಂದು ಹೇಳಿದರು. ತರುವಾಯ ಜನರ ದೊಡ್ಡ ಗುಂಪಿನ ಶಬ್ದದಂತೆಯೂ ಜಲಪ್ರವಾಹಘೋಷದಂತೆಯೂ ಗಟ್ಟಿಯಾದ ಗುಡುಗಿನ ಶಬ್ದದಂತೆಯೂ ಇದ್ದ ಒಂದು ಶಬ್ದವನ್ನು ಕೇಳಿದೆನು. ಅದು, "ಹಲ್ಲೆಲೂಯಾ; ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳು
–ತ್ತಾನೆ; **ಲೋಕದ ರಾಜ್ಯಾಧಿಕಾರವು ನಮ್ಮ ಕರ್ತನಿಗೂ ಆತನು ಅಭಿಷೇಕಿಸಿದವನಿಗೂ ಉಂಟಾಯಿತು; ಆತನು ಯುಗಯುಗಾಂತರ –
–ಗಳಲ್ಲಿಯೂ ರಾಜ್ಯವನ್ನಾಳುವನು."** (ಪ್ರಕ–19:1,2,6; 11:15)

ಪರಲೋಕವು ತೆರೆದಿರುವದನ್ನು ನಾನು ಕಂಡೆನು. ಆಗ ಇಗೋ, ಬಿಳೀ ಕುದುರೆಯು ನನಗೆ ಕಾಣಿಸಿತು; ಅದರ ಮೇಲೆ ಕೂತಿದ್ದವ –
–ನಿಗೆ **ನಂಬಿಗಸ್ತನೂ ಸತ್ಯವಂತನೂ** ಎಂದು ಹೆಸರು. ಆತನು ನೀತಿಯಿಂದ ನ್ಯಾಯವಿಚಾರಿಸುತ್ತಾನೆ, ನೀತಿಯಿಂದ ಯುದ್ಧಮಾಡುತ್ತಾನೆ; ಆತನ ಕಣ್ಣುಗಳು ಬೆಂಕಿಯ ಉರಿಯಂತಿವೆ; ಆತನ ತಲೆಯ ಮೇಲೆ ಅನೇಕ ಮಕುಟಗಳುಂಟು; ಆತನಿಗೆ ಒಂದು ಹೆಸರು ಬರೆದು ಕೊಟ್ಟಿದೆ. ಅದು ಆತನಿಗೇ ಹೊರತು ಮತ್ತಾರಿಗೂ ತಿಳಿಯದು. ಆತನು ರಕ್ತಪ್ರೋಕ್ಷಿತವಾದ ವಸ್ತ್ರವನ್ನು ಧರಿಸಿಕೊಂಡಿದ್ದನು. ಆತನಿಗೆ **ದೇವರ ವಾಕ್ಯವೆಂದು ಹೆಸರು.** ಪರಲೋಕದಲ್ಲಿರುವ ಸೈನ್ಯದವರು ಶುಭ್ರವಾಗಿಯೂ ನಿರ್ಮಲವಾಗಿಯೂ ಇರುವ ನಯವಾದ ನಾರು–
–ಮಡಿಯನ್ನು ಧರಿಸಿಕೊಂಡು ಬಿಳೀ ಕುದುರೆಗಳ ಮೇಲೆ ಹತ್ತಿದವರಾಗಿ ಆತನ ಹಿಂದೆ ಬರುತ್ತಿದ್ದರು. ಜನಾಂಗಗಳನ್ನು ಹೊಡೆಯುವದ
–ಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ. "ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು." ಆತನು ಸರ್ವ
–ಶಕ್ತನಾದ ದೇವರ ಉಗ್ರ ಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ. ಆತನ ತೊಡೆಯ ಮೇಲಣ ವಸ್ತ್ರದಲ್ಲಿ, **ರಾಜಾಧಿರಾಜನೂ ಕರ್ತರ ಕರ್ತನೂ** ಎಂಬ ಹೆಸರು ಬರೆದದೆ. (ಪ್ರಕ–19:11-16)

ಆಗ ಒಬ್ಬ ದೇವದೂತನು ಅಧೋಲೋಕದ ಬೀಗದ ಕೈಯನ್ನೂ ದೊಡ್ಡ ಸರಪಣಿಯನ್ನೂ ಕೈಯಲ್ಲಿ ಹಿಡಿದುಕೊಂಡು ಪರಲೋಕ –
–ದಿಂದ ಇಳಿದು ಬರುವದನ್ನು ಕಂಡೆನು. ಅವನು ಪಿಶಾಚನೂ **ಸೈತಾನನು** ಆಗಿರುವ ಪುರಾತನ ಸರ್ಪವೆಂಬ ಘಟಸರ್ಪನನ್ನು
ಹಿಡಿದು ಸಾವಿರ ವರುಷ ಬಂಧನದಲ್ಲಿಟ್ಟನು. ಆ ಸಾವಿರ ವರುಷ ತೀರುವ ತನಕ ಸೈತಾನನು ಇನ್ನೂ ಜನಗಳನ್ನು ಮುರುಳುಗೊಳಿ–
–ಸದ ಹಾಗೆ ದೇವದೂತನು ಅವನನ್ನು ಅಧೋಲೋಕದಲ್ಲಿ ದೊಬ್ಬಿ ಬಾಗಿಲು ಮುಚ್ಚಿ ಅದಕ್ಕೆ ಮುದ್ರೆ ಹಾಕಿದನು. ಆ ಸಾವಿರ ವರುಷ
–ಗಳಾದ ಮೇಲೆ ಅವನಗೆ ಸ್ವಲ್ಪ ಕಾಲ ಬಿಡುಗಡೆಯಾಗಬೇಕು. ತರುವಾಯ ಸಿಂಹಾಸನಗಳನ್ನು ಕಂಡೆನು. ಅವುಗಳ ಮೇಲೆ ಜನರು
ಕೂತಿದ್ದರು; ನ್ಯಾಯತೀರಿಸುವ ಅಧಿಕಾರವು ಅವರಿಗೆ ಕೊಡಲ್ಪಟ್ಟಿತು. ಇದಲ್ಲದೆ ಯೇಸುವಿನ ವಿಷಯವಾದ ಸಾಕ್ಷಿಯ ನಿಮಿತ್ತವಾಗಿಯೂ
ದೇವರ ವಾಕ್ಯದ ನಿಮಿತ್ತವಾಗಿಯೂ ತಲೆಹೊಯಿಸಿಕೊಂಡವರ ಆತ್ಮಗಳನ್ನೂ ಮೃಗಕ್ಕೂ ಅದರ ವಿಗ್ರಹಕ್ಕೂ ನಮಸ್ಕರಿಸದೆ ತಮ್ಮ
ಹಣೆಯ ಮೇಲೆ ಮತ್ತು ಕೈಯ ಮೇಲೆ ಗುರುತುಹಾಕಿಸಿಕೊಳ್ಳದೆ ಇರುವವರನ್ನೂ ಕಂಡೆನು. ಅವರು ಜೀವಿತರಾಗಿ ಎದ್ದು ಸಾವಿರ
ವರುಷ ಕ್ರಿಸ್ತನೊಂದಿಗೆ ಆಳಿದರು. (ಪ್ರಕ–20:1-4)

ಆ ಸಾವಿರ ವರ್ಷಗಳು ತೀರಿದ ಮೇಲೆ ಸೈತಾನನಿಗೆ ಸೆರೆಯಿಂದ ಬಿಡುಗಡೆಯಾಗುವದು. ಅವನು ಹೊರಗೆಬಂದು ಭೂಮಿಯ ನಾಲ್ಕು
ದಿಕ್ಕುಗಳಲ್ಲಿರುವ ಗೋಗ್ ಮಾಗೋಗ್ ಎಂಬ ಜನಾಂಗಗಳನ್ನು ಮರುಳುಗೊಳಿಸಿ ಅವರನ್ನು ಯುದ್ಧಕ್ಕೆ ಕೂಡಿಸುವನು; ಅವರ
ಸಂಖ್ಯೆಯು ಸಮುದ್ರದ ಮರಳಿನಷ್ಟಿರುವದು. ಅವರು ದೇಶದಲ್ಲೆಲ್ಲಾ ಹರಡಿಕೊಂಡು ದೇವಜನರ ದಂಡಿಗೂ ನಮ್ಮ ಪ್ರಿಯ ಪಟ್ಟಣಕ್ಕೂ
ಮುತ್ತಿಗೆಹಾಕಿದರು. ಆಗ ಪರಲೋಕದಿಂದ ಬೆಂಕಿ ಇಳಿದುಬಂದು ಅವರನ್ನು ದಹಿಸಿಬಿಟ್ಟಿತು. **ಇದಲ್ಲದೆ ಅವರನ್ನು ಮರುಳುಗೊಳಿಸಿದ
ಸೈತಾನನು ಬೆಂಕಿಗಂಧಕಗಳುರಿಯುವ ಕೆರೆಯಲ್ಲಿ ದೊಬ್ಬಲ್ಪಟ್ಟನು. ಅಲ್ಲಿ ಮೃಗವೂ ಸುಳ್ಳು ಪ್ರವಾದಿಯೂ ಕೂಡ ಇದ್ದಾರೆ; ಅವರು ಹಗಲಿ –
–ರುಳು ಯುಗಯುಗಾಂರಗಳಲ್ಲಿಯೂ ಯಾತನೆಪಡುತ್ತಿರುವರು.** (20:7-10)

ಆಮೇಲೆ **ಬೆಳ್ಳಗಿರುವ ಮಹಾ ಸಿಂಹಾಸನವನ್ನೂ** ಅದರ ಮೇಲೆ ಕೂತಿದ್ದಾತನನ್ನೂ ಕಂಡೆನು. ಆತನೆದುರಿನಿಂದ ಭೂಮ್ಯಾಕಾಶಗಳು
ಓಡಿಹೋಗಿ ಇನ್ನು ಕಾಣಿಸದ ಹಾಗಾದವು. ಇದಲ್ಲದೆ ಸತ್ತವರಾದ ದೊಡ್ಡವರೂ ಚಿಕ್ಕವರೂ ಸಿಂಹಾಸನದ ಮುಂದೆ ನಿಂತಿರುವದನ್ನು
ಕಂಡೆನು. ಆಗ ಪುಸ್ತಕಗಳು ತೆರೆಯಲ್ಪಟ್ಟವು; ಮತ್ತು ಜೀವಬಾಧ್ಯರ ಪಟ್ಟಿ ಎಂಬ ಇನ್ನೊಂದು ಪುಸ್ತಕವು ತೆರೆಯಲ್ಪಟ್ಟಿತು; ಆ ಪುಸ್ತಕ
–ಗಳಲ್ಲಿ ಬರೆದಿದ್ದ ಸಂಗತಿಗಳ ಆಧಾರದಿಂದ ಅವರವರ ಕೃತ್ಯಗಳ ಪ್ರಕಾರ ಸತ್ತವರಿಗೆ ನ್ಯಾಯತೀರ್ಪಾಯಿತು. ಸಮುದ್ರವು ತನ್ನೊಳಗಿದ್ದ
ಸತ್ತವರನ್ನು ಒಪ್ಪಿಸಿತು; ಮೃತ್ಯುವೂ ಪಾತಾಳವೂ ತಮ್ಮ ವಶದಲ್ಲಿದ್ದ ಸತ್ತವರನ್ನು ಒಪ್ಪಿಸಿದವು. ಅವರಲ್ಲಿ ಪ್ರತಿಯೊಬ್ಬನಿಗೆ ಅವನವನ
ಕೃತ್ಯಗಳ ಪ್ರಕಾರ ನ್ಯಾಯತೀರ್ಪಾಯಿತು. ಆಮೇಲೆ ಮೃತ್ಯುವೂ ಪಾತಾಳವೂ ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟವು; ಆ ಬೆಂಕಿಯ ಕೆರೆಯೇ
ಎರಡನೆಯ ಮರಣವು. **ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪ –
–ಟ್ಟನು.** (20:11-15)

ತರುವಾಯ **ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ** ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ
ಭೂಮಂಡಲವೂ ಇಲ್ಲದೆ ಹೋದವು; ಇನ್ನು ಸಮುದ್ರವೂ ಇಲ್ಲ. . . .ಇದಲ್ಲದೆ ಸಿಂಹಾಸನದೊಳಗಿಂದ ಬಂದ ಮಹಾ ಶಬ್ದವು ನನಗೆ
ಕೇಳಿಸಿತು. ಅದು, "ಇಗೋ, ದೇವರ ನಿವಾಸವು ಮನುಷ್ಯರಲ್ಲಿ ಅದೆ; ಆತನು ಅವರೊಡನೆ ವಾಸಮಾಡುವನು, ಅವರು ಆತನಿಗೆ ಪ್ರಜೆ
–ಗಳಾಗಿರುವರು; ದೇವರು ತಾನೇ ಅವರ ಸಂಗಡ ಇರುವನು, ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. **ಇನ್ನು ಮರಣವಿರುವದಿಲ್ಲ**,ಇನ್ನು
ದು:ಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" ಎಂದು ಹೇಳಿತು. ಆಗ ಸಿಂಹಾಸ
–ನದ ಮೇಲೆ ಕೂತಿದ್ದವನು, "ಇಗೋ, ಎಲ್ಲವನ್ನು ಹೊಸದು ಮಾಡುತ್ತೇನೆ" ಅಂದನು. ಮತ್ತು ಒಬ್ಬನು ನನಗೆ, "ಇದನ್ನು ಬರೆ; ಈ
ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳು ಆಗಿವೆ: ಎಂದು ಹೇಳಿದನು. ಆಗ ಸಿಂಹಾಸನದ ಮೇಲೆ ಕೂತಿದ್ದವನು, "ಎಲ್ಲಾ ನೆರ
–ವೇರಿತು; ನಾನೇ ಆದಿಯೂ ಅಂತವೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ. **ದಾಹವುಳ್ಳವನಿಗೆ ಜೀವಜಲದ ಬುಗ್ಗೆಯಲ್ಲಿ ಕ್ರಯವಿ –
–ಲ್ಲದೆ ಕುಡಿಯುವದಕ್ಕೆ ಕೊಡುವೆನು**. ಜಯಹೊಂದುವವನು ಇವುಗಳಿಗೆ ಬಾಧ್ಯನಾಗುವನು; **ನಾನು ಅವನಿಗೆ ದೇವರಾಗಿರುವೆನು, ಅವನು
ನನಗೆ ಮಗನಾಗಿರುವನು**. ಆದರೆ ಹೇಡಿಗಳು, ನಂಬಿಕೆಯಿಲ್ಲದವರು, ಅಸಹ್ಯವಾದದ್ದರಲ್ಲಿ ಸೇರಿದವರು, ಕೊಲೆಗಾರರು, ಜಾರರು, ಮಾಟ
–ಗಾರರು, ವಿಗ್ರಹಾರಾಧಕರು, ಎಲ್ಲಾ ಸುಳ್ಳುಗಾರರು **ಇವರಿಗೆ ಸಿಕ್ಕುವ ಪಾಲು** ಬೆಂಕಿ ಗಂಧಕಗಳುರಿಯುವ ಕೆರೆಯೇ; ಅದು ಎರಡನೆಯ
ಮರಣವು ಎಂದು ನನಗೆ ಹೇಳಿದನು. (21:1, 3-8)

ಆಮೇಲೆ ಅವನು ಸ್ಪಟಿಕಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು. ಅದು **ದೇವರ ಮತ್ತು ಯಜ್ಞದ
ಕುರಿಯಾದಾತನ ಸಿಂಹಾಸನದಿಂದ** ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತ್ತಿತ್ತು. ಆ ನದಿಯ ಉಭಯಪಾರ್ಶ್ವಗಳಲ್ಲಿ
ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲಗಳನ್ನು ಕೊಡುತ್ತದೆ. ಆ ಮರದ ಎಲೆಗಳು ಜನಾಂಗದವರನ್ನು ವಾಸಿಮಾಡುವಕ್ಕೆ
ಪ್ರಯೋಜನವಾಗಿವೆ. ಇನ್ನು ಶಾಪಗ್ರಸ್ತವಾದದ್ದು ಒಂದು ಇರುವದಿಲ್ಲ. ಆ ಪಟ್ಟಣದಲ್ಲಿ ದೇವರ ಮತ್ತು ಯಜ್ಞದ ಕುರಿಯಾದಾತನ
ಸಿಂಹಾಸನವಿರುವದು. ಆತನ ದಾಸರು ಆತನಿಗೆ ಯಾಜಕಸೇವೆ ಮಾಡುವರು; ಅವರಿಗೆ ಆತನ ಮುಖ ದರ್ಶನವಾಗುವದು; ಅವರ

ಹಣೆಗಳ ಮೇಲೆ ಆತನ ಹೆಸರು ಇರುವದು. ಇನ್ನು ರಾತ್ರಿ ಇರುವದಿಲ್ಲ; ಅವರಿಗೆ ದೀಪದ ಬೆಳಕೂ ಸೂರ್ಯನ ಬೆಳಕೂ ಬೇಕಾಗು –
–ವದಿಲ್ಲ; ದೇವರಾದ ಕರ್ತನೇ ಅವರಿಗೆ ಬೆಳಕನ್ನು ಕೊಡುವನು; ಅವರು ಯುಗಾಯುಗಾಂತರಗಳಲ್ಲಿಯೂ ಆಳುವರು. ಆಮೇಲೆ ಅವನು ನನಗೆ, **"ಈ ಮಾತುಗಳು ನಂಬತಕ್ಕವುಗಳೂ ಸತ್ಯವಾದವುಗಳೂ ಆಗಿವೆ; ಪ್ರವಾದಿಗಳ ಆತ್ಮಗಳನ್ನು ಪ್ರೇರೇಪಿಸುವ ದೇವರಾದ ಕರ್ತನು ಬೇಗನೆ ಸಂಭವಿಸಬೇಕಾಗಿರುವ ಸಂಗತಿಗಳನ್ನು ತನ್ನದಾಸರಿಗೆ ತಿಳಿಯಪಡಿಸುವದಕ್ಕಾಗಿ ತನ್ನ ದೂತನನ್ನು ಕಳುಹಿಸಿಕೊಟ್ಟನು."** (22:1-6)

**"ಇಗೋ, ಬೇಗ ಬರುತ್ತೇನೆ;** ನಾನು ಪ್ರತಿಯೊಬ್ಬನಿಗೆ ಅವನವನ ನಡತೆಯ ಪ್ರಕಾರ ಕೊಡತಕ್ಕ ಪ್ರತಿಫಲವು ನನ್ನ ಕೈಯಲ್ಲಿ ಅದೆ. ನಾನೇ ಆದಿಯೂ ಅಂತವೂ ಮೊದಲನೆಯವನೂ ಕಡೆಯವನೂ ಪ್ರಾರಂಭವೂ ಸಮಾಪ್ತಿಯೂ ಆಗಿದ್ದೇನೆ ತಮ್ಮ ನಿಲುವಂಗಿಗಳನ್ನು ತೊಳ –
–ಕೊಂಡವರು ಧನ್ಯರು; ಅವತರಿಗೆ ಜೀವವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಕ್ಕೆ ಸೇರುವರು. ನಾಯಿ
–ಗಳಂತಿರುವವರೂ ಮಾಟಗಾರರೂ ಜಾರರೂ ಕೊಲೆಗಾರರೂ ವಿಗ್ರಹಾರಾಧಕರೂ ಸುಳ್ಳಾದದ್ದನ್ನು ಪ್ರೀತಿಸಿ ನಡಿಸುವವರೆಲ್ಲರೂ ಹೊರ
–ಗಿರುವರು ಎಂದು ಹೇಳಿದನು. ಯೇಸುವೆಂಬ ನಾನು ನನ್ನ ಸಭೆಗಳ ಪ್ರಯೋಜನಾರ್ಥವಾಗಿ ಈ ಸಂಗತಿಗಳ ವಿಷಯದಲ್ಲಿ ನಿಮಗೆ ಸಾಕ್ಷಿ ಹೇಳುವದಕ್ಕೋಸ್ಕರ ನನ್ನ ದೂತನನ್ನು ಕಳುಹಿಸಿಕೊಟ್ಟೆನು. ನಾನು ದಾವೀದ ವಂಶವೆಂಬ ಬುಡದಿಂದ ಹುಟ್ಟಿದ ಚಿಗುರೂ ಅವನ ಸಂತತಿಯೂ ಉದಯಸೂಚಕವಾದ ಪ್ರಕಾಶವುಳ್ಳ ನಕ್ಷತ್ರವೂ ಆಗಿದ್ದೇನೆ." ಆತ್ಮನೂ ಮದಲಗಿತ್ತಿಯೂ **"ಬಾ"** ಅನ್ನುತ್ತಾನೆ. ಕೇಳುವ –
–ವನು, **"ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ."** (22:12-17)

ಈ ಪುಸ್ತಕದ ಪ್ರವಾದನಾ ವಾಕ್ಯಗಳನ್ನು ಕೇಳುವ ಪ್ರತಿಯೊಬ್ಬನಿಗೆ ನಾನು ಹೇಳುವ ಸಾಕ್ಷಿ ಏನೆಂದರೆ, ಇವುಗಳಿಗೆ ಯಾವನಾದರೂ ಹೆಚ್ಚು ಮಾತುಗಳನ್ನು ತಂದುಹಾಕಿದರೆ ದೇವರು ಅವನ ಮೇಲೆ ಈ ಪುಸ್ತಕದಲ್ಲಿ ಬರೆದಿರುವ ಉಪದ್ರವಗಳನ್ನು ತಂದು ಹಾಕುವನು. ಯಾವನಾದರೂ ಈ ಪ್ರವಾದನಾ ಪುಸ್ತಕದಲ್ಲಿರುವ ಮಾತುಗಳಲ್ಲಿ ಒಂದನ್ನಾದರೂ ತೆಗೆದುಬಿಟ್ಟರೆ ಈ ಪುಸ್ತಕದಲ್ಲಿ ಬರೆದಿರುವ ಪರಿ –
–ಶುದ್ಧ ಪಟ್ಟಣದಲ್ಲಿಯೂ ಜೀವವೃಕ್ಷದಲ್ಲಿಯೂ ಅವನಿಗಿರುವ ಪಾಲನ್ನು ದೇವರು ತೆಗೆದುಬಿಡುವನು. ಈ ವಿಷಯಗಳಲ್ಲಿ ಸಾಕ್ಷಿ ಹೇಳುವವನು, ನಿಜವಾಗಿ ಬೇಗ ಬರುತ್ತೇನೆ ಎಂದು ಹೇಳುತ್ತಾನೆ. **ಹಾಗೆಯೇ ಆಗಲಿ; ಕರ್ತನಾದ ಯೇಸುವೇ ಬಾ.** ಕರ್ತನಾದ ಯೇಸುವಿನ ಕೃಪೆಯು ಎಲ್ಲರೊಂದಿಗೆ ಇರಲಿ. ಆಮೆನ್. (22:18-21)

ಈ ಪ್ರಕಾರ, ದೇವರು ತನ್ನ ಅದ್ಭುತವಾದ ಪುಸ್ತಕವನ್ನು, ಮತ್ತು ಆದಾಮನ ಸಂತಾನದವರು ಶಿಲುಬೆಗೆ ಹಾಕಿದವನಾದ ಕರ್ತನಾದ ಯೇಸು ಭೂಲೋಕಕ್ಕೆ ಹಿಂತಿರುಗಿ ಬರುತ್ತಾನೆ ಎಂಬ ವಾಗ್ದಾನಗಳನ್ನು ಮುಕ್ತಾಯಗೊಳಿಸುತ್ತಾನೆ. ತನ್ನನ್ನು ನಂಬುವವರನ್ನು ತನ್ನೊಂ–
–ದಿಗೆ ಕರೆದುಕೊಂಡು ಹೋಗುವದಕ್ಕೆ ಮತ್ತು ನಂಬದವರಿಗೆ ತೀರ್ಪು ಮಾಡುವದಕ್ಕೆ ಆತನು ಹಿಂತಿರುಗಿ ಬರುತ್ತಾನೆ! ಪ್ರಿಯ ಸ್ನೇಹಿ
–ತರೇ, ಪರಲೋಕದಿಂದ ಹಿಂತಿರುಗಿ ಬರುವ ಕರ್ತನಾದ ಯೇಸುವಿನ ಎದುರು ನಿಲ್ಲುವಂತೆ ನೀವು ಭರವಸೆಯುಳ್ಳವರಾಗಿದ್ದೀರೋ? ಆತನನ್ನು ತಮ್ಮ ಕರ್ತನೂ ರಕ್ಷಕನೂ ಎಂದು ಸ್ವೀಕರಿಸಿಕೊಂಡವರಲ್ಲಿ ನೀವು ಸೇರಿದ್ದೀರೋ? ಆತನ ಮೂಲಕವಾಗಿ ದೇವರು ನಿಮ್ಮನ್ನು ನೀತಿವಂತರೆಂದು ಹೇಳುವ ಹಾಗೆ, ಎಂದಿಗೂ ಪಾಪ ಮಾಡದಿದ್ದ ಕರ್ತನಾದ ಯೇಸು ಕ್ರಿಸ್ತನ ಮೇಲೆ ದೇವರು ನಿಮ್ಮ ಪಾಪಗಳನ್ನು ಹೊರಿಸಿದನೆಂಬುದನ್ನು ನೀವು ನಿಮ್ಮ ಹೃದಯಗಳಲ್ಲಿ ನಂಬುತ್ತೀರೋ? **ನಿಮ್ಮ ಹೆಸರುಗಳು ಜೀವಬಾಧ್ಯರ ಪಟ್ಟಿಯಲ್ಲಿ ಬರೆಯಲ್ಪಟ್ಟಿ –**
**–ದೆಯೋ**? ಯೇಸು ಕ್ರಿಸ್ತನೊಂದಿಗೆ ನಿಮ್ಮ ಸಂಬಂಧವೇನು? ಆತನು ನಿಮ್ಮ **ರಕ್ಷಕನೋ**? ಅಥವಾ ಆತನು ನಿಮ್ಮ **ನ್ಯಾಯಾಧಿಪತಿಯೋ**?

ಕ್ರಿಸ್ತನ ಬರುವಿಕೆಗಾಗಿ ನೀವು ಸಿದ್ಧರಿದ್ದೀರೋ? ಈ ದಿನ ನೀವು ದೇವರ ಶಬ್ದಕ್ಕೆ ಕಿವಿಗೊಟ್ಟರೆ, ನಿಮ್ಮ ಹೃದಯಗಳನ್ನು ಕಠಿಣಪಡಿಸಿ –
–ಕೊಳ್ಳಬೇಡಿರಿ, ಯಾಕಂದರೆ ವಾಕ್ಯವು ಹೀಗೆ ಹೇಳುತ್ತದೆ:
"ಪ್ರಿಯರೇ, ದೇವರ ಎಣಿಕೆಯಲ್ಲಿ ಒಂದು ದಿನವು ಸಾವಿರ ವರುಷಗಳಂತೆಯೂ ಸಾವಿರ ವರುಷಗಳು ಒಂದು ದಿನದಂತೆಯೂ ಅವೆ ಎಂಬದನ್ನು ಮಾತ್ರ ಮರೆಯಬೇಡಿರಿ. ಕರ್ತನು ತನ್ನ ವಾಗ್ದಾನವನ್ನು ನೆರವೇರಿಸುವದಕ್ಕೆ ತಡಮಾಡುತ್ತಾನೆಂಬದಾಗಿ ಕೆಲವರು ಅರ್ಥ ಮಾಡಿಕೊಳ್ಳುವ ಪ್ರಕಾರ ಆತನು ತಡಮಾಡುವವನಲ್ಲ. ಯಾವನಾದರೂ **ನಾಶವಾಗುವದರಲ್ಲಿ** ಆತನು ಇಷ್ಟಪಡದೆ ಎಲ್ಲರೂ ತನ್ನ ಕಡೆಗೆ **ತಿರುಗಿಕೊಳ್ಳಬೇಕೆಂದು** ಅಪೇಕ್ಷಿಸುವವನಾಗಿದ್ದು ನಿಮ್ಮ ವಿಷಯದಲ್ಲಿ ದೀರ್ಘಶಾಂತಿಯುಳ್ಳವನಾಗಿದ್ದಾನೆ." (2ಪೇತ್ರ–3:8,9) "ಇದೇ ಆ ಸುಪ್ರಸನ್ನತೆಯ ಕಾಲ; ಇದೇ ಆ ರಕ್ಷಣೆಯ ದಿನ." (2ಕೊರಿಂಥ–6:2). **"ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿ –**
**–ದರೆ ತಪ್ಪಿಸಿಕೊಳ್ಳುವದು ಹೇಗೆ? ಇದು ಕರ್ತನಿಂದ ಮೊದಲು ಹೇಳಲ್ಪಟ್ಟಿತು; ಆತನಿಂದ ಕೇಳೊದವರು ಇದನ್ನು ನಮಗೆ ಸ್ಥಿರಪಡಿಸಿದರು."** (ಇಬ್ರಿಯ–2:3). ಮುಂದಿನ ಸಲದವರೆಗೆ, ಪರಿಶುದ್ಧ ವಾಕ್ಯಗಳಲ್ಲಿನ ಯೇಸುವಿನ ಕೊನೆಯ ಮಾತುಗಳನ್ನು ನೀವು ನೆನಪು ಮಾಡಿ –
–ಕೊಳ್ಳುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ. ಕರ್ತನಾದ ಯೇಸು ಹೇಳಿದ್ದೇನೆಂದರೆ:

**"ಹೌದು ನಾನು ಬೇಗನೇ ಬರುತ್ತೇನೆ!"** (ಪ್ರಕಟಣೆ–22:20)

[ಪಾಠ 88: ಯೇಸು ಹಿಂತಿರುಗಿ ಬರುತ್ತಾನೆ] [ಸಾರಾಂಶಗಳ ಪಟ್ಟಿ] [ಪಾಠ 90: ಮನುಷ್ಯನ ಪ್ರಶ್ನೆಗಳು; ದೇವರ ಉತ್ತರಗಳು(#1)]

ಪಾಠ 89

# ಶುಭ ಸಂದೇಶ

{ಪಾಠ 89ರ ಮೊದಲ ಕರಡುಪತ್ರವು ಉಲೂಫ್‌ನಲ್ಲಿ, "Yoonu Njub" ಗಾಗಿ ರೇಡಿಯೋ ಧ್ವನಿಯಾಗಿದ್ದ ಸೆನೆಗಲ್‌ನ ಒಬ್ಬ ಮನುಷ್ಯನಿಂದ ಬರೆಯಲ್ಪಟ್ಟಿದೆ. (ಮುನ್ನುಡಿಯನ್ನು ನೋಡಿರಿ}

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಇಂಜಿಲ್‌ನ (ಅರೇಬಿಕ್‌ಗಾಗಿ ಸುವಾರ್ತೆ ಅಥವಾ ಶುಭಸಂದೇಶ) ಪುಸ್ತಕದಲ್ಲಿನ ನಮ್ಮ ಅಧ್ಯಯನದಲ್ಲಿ, ಕರ್ತನಾದ ಯೇಸು ಪುನರುತ್ಥಾ–ನವಾಗಿ ಎದ್ದ ನಂತರ, ತನ್ನ ಶಿಷ್ಯರಿಗೆ ಆಜ್ಞಾಪಿಸುತ್ತಾ, "ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ." (ಮಾರ್ಕ–16:15) ಎಂದು ಹೇಳಿರುವದನ್ನು ನಾವು ಕೇಳಿಸಿಕೊಂಡೆವು. ಮತ್ತು ಯೇಸು ಪರಲೋಕಕ್ಕೆ ಏರಿಹೋದ ನಂತರ, ಪೌಲ–ನೆಂಬ ಹೆಸರುಳ್ಳ ಒಬ್ಬ ಮನುಷ್ಯನು (ಕ್ರೂರವಾದ ಧಾರ್ಮಿಕ ಮತಾಭಿಮಾನದಿಂದ ಕ್ರಿಸ್ತನ ಒಬ್ಬ ಧರ್ಮನಿಷ್ಠ ಅನುಯಾಯಿಯಾಗಿ ಪರಿವರ್ತನೆಗೊಂಡವನು) ಬರೆದಿರುವದೇನೆಂದರೆ:

"[ದೇವರು ನನ್ನನ್ನು ತನ್ನ ಅಪೊಸ್ತಲನಾಗುವದಕ್ಕೆ ಕರೆದನು, ಮತ್ತು ಆತನ **ಸುವಾರ್ತೆಯನ್ನು** ಸಾರುವದಕ್ಕೆ ನನ್ನನ್ನು ನೇಮಿಸಿದನು]. ಸುವಾರ್ತೆಯನ್ನು ಸಾರಿಹೇಳಿಸುತ್ತೇನೆಂದು ದೇವರು ಮುಂಚಿತವಾಗಿ ಪವಿತ್ರ ಶಾಸ್ತ್ರಗಳಲ್ಲಿ ತನ್ನ ಪ್ರವಾದಿಗಳ ಮೂಲಕ ನನಗೆ ಮಾತು ಕೊಟ್ಟನು. **ಸುವಾರ್ತೆಯ** ವಿಷಯದಲ್ಲಿ ನಾನು ನಾಚಿಕೊಳ್ಳುವವನಲ್ಲ. ಆ **ಸುವಾರ್ತೆಯು** ದೇವರ ಬಲಸ್ವರೂಪವಾಗಿದ್ದು ಮೊದಲು ಯೆಹೂದ್ಯರಿಗೆ ಆಮೇಲೆ ಗ್ರೀಕರಿಗೆ ಅಂತು ನಂಬುವವರೆಲ್ಲರಿಗೂ ರಕ್ಷಣೆ ಉಂಟುಮಾಡುವಂಥದ್ದಾಗಿದೆ. ಹೇಗಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದ್ದಾಗಿದೆ." (ರೋಮಾ–1:1,2,16,17).

**ಶುಭ ಸಂದೇಶ, ಶುಭ ಸಂದೇಶ ಶುಭ ಸಂದೇಶ!** ದೇವರ ವಾಕ್ಯವು ಮತ್ತೆ ಮತ್ತೆ ಹೇಳುತ್ತಿರುವ ಈ ಶುಭ ಸಂದೇಶ ಏನು? ಈ ದಿನ ದೇವರ ಸಹಾಯದಿಂದ, ಪರಿಶುದ್ಧ ವಾಕ್ಯಗಳಲ್ಲಿ ಸಾರಲ್ಪಟ್ಟಿರುವ ಈ ಶುಭ ಸಂದೇಶದ ಕುರಿತು ಮಾತಾಡುವದಕ್ಕೆ ನಾವು ಇಷ್ಟವುಳ್ಳವ–ರಾಗಿದ್ದೇವೆ. ಆದರೆ ಶುಭ ಸಂದೇಶದ ಕುರಿತಾಗಿ ನಾವು ಮಾತಾಡುವದಕ್ಕಿಂತ ಮುಂಚೆ, ಅಶುಭ ಸಂದೇಶವನ್ನು ನೆನಪು ಮಾಡಿ – –ಕೊಳ್ಳುವದು ನಮಗೆ ಅಗತ್ಯವಾಗಿದೆ.

ಈ **ಅಶುಭ ಸಂದೇಶ** ಯಾವುದು? ನೀವು ಅದನ್ನು ಜ್ಞಾಪಿಸಿಕೊಳ್ಳಿರಿ, ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಸೃಷ್ಟಿಸಿದ ನಂತರ, ದೇವರು ಆದಾಮ ಹವ್ವರನ್ನು ಪರದೈಸೆಂಬ ಭೂಲೋಕದ ಉದ್ಯಾನವನದಲ್ಲಿ ಇಟ್ಟನು. ಅವರು ಆತನನ್ನು ತಿಳಿದುಕೊಂಡು, ಆತನನ್ನು ಪ್ರೀತಿಸಿ, ಆತನಿಗೆ ವಿಧೇಯರಾಗಿ, ಎಂದೆಂದಿಗೂ ಆತನನ್ನು ಮಹಿಮೆಪಡಿಸಲು ಶಕ್ತರಾಗಿರುವದಕ್ಕೆ ದೇವರು ಅವರನ್ನು ಉಂಟುಮಾಡಿದನು. ಹೀಗಿದ್ದರೂ, ಅವರನ್ನು ಪರೀಕ್ಷಿಸುವದಕ್ಕಾಗಿ, ದೇವರು ಆದಾಮನಿಗೆ: **"**ತೋಟದ ಮಧ್ಯದಲ್ಲಿರುವ ಮರದ ಹಣ್ಣನ್ನು ಹೊರತುಪಡಿಸಿ ಇತರ ಎಲ್ಲಾ ಮರದ ಹಣ್ಣುಗಳನ್ನು ನೀವು ತಿನ್ನಬಹುದು. ಆ ಮರದ ಹಣ್ಣನ್ನು ನೀವು ತಿನ್ನಲೇಬಾರದು, ತಿಂದ ದಿನವೇ ನೀವು ಸಾಯುವಿರಿ!**"** ಎಂದು ಹೇಳಿದನು. ನಿಷೇಧಿಸಲ್ಪಟ್ಟ ಮರದ ಹಣ್ಣನ್ನು ತಿನ್ನುವದಕ್ಕೆ ಆದಾಮ ಹವ್ವರನ್ನು ಪ್ರಲೋಭನೆಗೊಳಪಡಿಸಿದ ಸರ್ಪಕ್ಕೆ ಅಂದರೆ ಸೈತಾನನಿಗೆ ಅವರು ಕಿವಿಗೊಟ್ಟರು ಎನ್ನುವದೇ ಅಶುಭ ಸಂದೇಶವಾಗಿದೆ. ಆದಾಮ ಹವ್ವರ ಪಾಪವು ಲೋಕದೊಳಕ್ಕೆ ಸಂಕಟವನ್ನೂ ಮತ್ತು ಮರಣವನ್ನೂ ತಂದಿತು, ಮತ್ತು ಅವರನ್ನೂ ಅವರ ಸಂತಾನವನ್ನು ಮಲಿನ–ಗೊಳಿಸಿತು. ನಾವು ಆಗಾಗ್ಗೆ ಕೇಳಿರುವಂತೆ: **"**ಒಂದು ಸಾಂಕ್ರಾಮಿಕವು ಯಾರಿಂದ ಉತ್ಪತ್ತಿಯಾಗಿರುತ್ತದೋ ಅವರನ್ನು ಮಲಿನಗೊಳಿ–ಸುವದಿಲ್ಲ!**"** ದೇವರ ವಾಕ್ಯವು ಇದನ್ನು ಹೇಳುತ್ತಾ ನಮಗೆ ಅಶುಭ ಸಂದೇಶವನ್ನು ತಿಳಿಸುತ್ತದೆ:

**"**ಒಂದೇ ಸಾರಿ ಸಾಯುವದೂ **ಆಮೇಲೆ ನ್ಯಾಯತೀರ್ಪು** ಮನುಷ್ಯನಿಗೆ ನೇಮಕವಾಗಿದೆ!. . . .ಆತನು ಎಲ್ಲರಿಗೆ ನ್ಯಾಯತೀರಿಸುವದಕ್ಕೂ ಭಕ್ತಿಹೀನರೆಲ್ಲರು ಮಾಡಿದ ಭಕ್ತಿಯಿಲ್ಲದ ಎಲ್ಲಾ ಕೃತ್ಯಗಳ ವಿಷಯವಾಗಿ ಮತ್ತು ಭಕ್ತಿಯಿಲ್ಲದ ಪಾಪಿಷ್ಠರು ತನ್ನ ಮೇಲೆ ಹೇಳಿದ ಎಲ್ಲಾ ಕಠಿನವಾದ ಮಾತುಗಳ ವಿಷಯವಾಗಿ ಅವರನ್ನು ಖಂಡಿಸುವದಕ್ಕೂ ಬಂದನು.**"** (ಇಬ್ರಿಯ–9:27; ಯೂದ–15)

ಆದದರಿಂದ, **ನಾವೆಲ್ಲರೂ ಪಾಪಿಗಳಾಗಿದ್ದೇವೆ ಮತ್ತು ನಾವು ದೇವರ ನೀತಿಯ ನ್ಯಾಯತೀರ್ಪನ್ನು ಎದುರಿಸಲೇಬೇಕು** ಎನ್ನುವದು **ಅಶುಭ ಸಂದೇಶವಾಗಿದೆ.**

ಏನೇ ಆದರೂ, ಸರಿಯಾಗಿ ಪರದೈಸಿನ ಉದ್ಯಾನವನದಲ್ಲಿ, ಕನಿಕರದಿಂದ ತುಂಬಿರುವ ದೇವರು, ಕನ್ಯೆಯಲ್ಲಿ ಹುಟ್ಟಿದ ಪಾಪದ ಕಲೆಯಿಲ್ಲದಿರುವ ಒಬ್ಬ ವ್ಯಕ್ತಿಯನ್ನು ಒಂದು ದಿನ ಆತನು ಲೋಕದೊಳಕ್ಕೆ ಕಳುಹಿಸುತ್ತೇನೆ ಎಂದು ಹೇಳಿರುವದೇ **ಶುಭ ಸಂದೇಶ ವಾಗಿದೆ.** ಈ ಪರಿಶುದ್ಧ ವ್ಯಕ್ತಿಯು, ಈ ನೀತಿಯುಳ್ಳ ವಿಮೋಚಕನು, ಆದಾಮನ ಮತ್ತು ಅವನ ಎಲ್ಲಾ ಸಂತಾನದವರ ಪಾಪಗಳಿಗಾಗಿ ದಂಡ ತೆರುವದಕ್ಕೆ ಒಂದು ಯಜ್ಞದಂತೆ ಕೊಲ್ಲಲ್ಪಡುವಕ್ಕೆ ತನ್ನನ್ನು ಸಮರ್ಪಿಸಿಕೊಂಡನು. ನಾವು ಅರ್ಹರಾಗಬೇಕಾಗಿದ್ದ ಪಾಪದ ಶಿಕ್ಷೆಯು ಪಾಪವಿಲ್ಲದವನಾದ ಈ ವಿಮೋಚಕನ ಮೇಲೆ ಬಿತ್ತು. ಆದಾಮ ಹವ್ವರು ಪಾಪ ಮಾಡಿದ ದಿನದಂದು ದೇವರು ಪ್ರಕಟಿಸಿದ ಶುಭ ಸಂದೇಶ ಇದೇ ಆಗಿದೆ.

**ಮೆಸ್ಸೀಯನೆಂಬುದಾಗಿ** ಸಹ ಕರೆಯಲ್ಪಟ್ಟಿದ್ದ ಈ ವಿಮೋಚಕನ ಬರುವಿಕೆಯನ್ನು ಪ್ರಕಟಿಸುವದಕ್ಕೆ ದೇವರು ಅನೇಕ ಜನರನ್ನು ಉಪ – –ಯೋಗಿಸಿದನು. ದೇವರ ಪ್ರತಿಯೊಬ್ಬ ಪ್ರವಾದಿಯು ಮೆಸ್ಸೀಯನ ಕುರಿತಾಗಿ ಏನಾದರೊಂದನ್ನು ಪ್ರಕಟಿಸಿದರು, ಅದರಿಂದ, ಆತನು ಬಂದಾಗ ದೇವರಿಂದ ನೇಮಕಗೊಂಡವನು ಈತನೇ ಎಂಬುದನ್ನು ಪ್ರತಿಯೊಬ್ಬರು ಗುರುತಿಸಿದರು. ಉದಾಹರಣೆಗಾಗಿ, ಪ್ರವಾದಿ – –ಯಾದ ಯೆಶಾಯನು, ಮೆಸ್ಸೀಯನಿಗಿಂತ ಏಳು ನೂರು ವರುಷ ಮೊದಲೇ ಇದ್ದವನು, ಮೆಸ್ಸೀಯನು ಹೇಗೆ ಹುಟ್ಟುತ್ತಾನೆಂಬುದಾಗಿ ಹೇಳುತ್ತಾನೆ: "ಇಗೋ ಒಬ್ಬ ಕನಿಕೆಯು ಗರ್ಭಿಣಿಯಗಿ ಮಗನನ್ನು ಹಡೆಯುವಳು, ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು. ದೇವರು ನಮ್ಮ ಕೂಡ ಇದ್ದಾನೆಂದು ಆ ಹೆಸರಿನ ಅರ್ಥ." (ಮತ್ತಾಯ–1:23; ಯೆಶಾಯ–7:14). ಮೀಕನೆಂಬ ಇನ್ನೊಬ್ಬ ಪ್ರವಾದಿ, ಮೆಸ್ಸೀಯನು ಪರಲೋಕದಿಂದ ಬಂದು ಭೂಲೋಕದಲ್ಲಿರುವ ಬೆತ್ಲೆಹೇಮೆಂಬ ಒಂದು ಗ್ರಾಮದಲ್ಲಿ ಹುಟ್ಟುತ್ತಾನೆ ಎಂದು ಪ್ರವಾದಿಸಿ – –ದನು. ಇದಕ್ಕೆ ಸರಿಯಾಗಿ ಮೆಸ್ಸೀಯನು ಅಲ್ಲಿಯೇ ಹುಟ್ಟಿದನು. ಆದಾಗ್ಯೂ ಮೀಕನು ಮೆಸ್ಸೀಯನು ಹುಟ್ಟುವದಕ್ಕಿಂತ ನೂರಾರು ವರ್ಷಗಳ ಮೊದಲೇ ಇದನ್ನು ಪ್ರವಾದಿಸಿದ್ದನು.

ಆದರೆ ಪ್ರವಾದಿಗಳು ಕೇವಲ ಮೆಸ್ಸೀಯನ ಜನನವನ್ನು ಮಾತ್ರ ಪ್ರಕಟಿಸಲಿಲ್ಲ, **ಮೆಸ್ಸೀಯನು** ಪಾಪಿಗಳ ಸ್ಥಾನದಲ್ಲಿ **ಸಂಕಟವನ್ನನು – – ಭವಿಸಿ ಮರಣ ಹೊಂದುತ್ತಾನೆಂಬದನ್ನೂ** ಸಹ ಅವರು ಪ್ರವಾದಿಸಿದರು. ಉದಾಹರಣೆಗಾಗಿ, ಜನರು ಮೆಸ್ಸೀಯನನ್ನು ಹೀನೈಸಿ ಆತನನ್ನು ಹಿಂಸಿಸಿ, ಆತನ ಕೈಕಾಲುಗಳಿಗೆ ಚುಚ್ಚಿ ಆತನನ್ನು ಕೊಲ್ಲುತ್ತಾರೆ ಎಂದು ಪ್ರವಾದಿಯಾದ ದಾವೀದನು, ಬರೆದಿದ್ದಾನೆ. ದಾವೀದನು ಮೆಸ್ಸೀಯನ ಮರಣವನ್ನು ಮಾತ್ರ ಪ್ರಕಟಿಸಿಲ್ಲ, ಆದರೆ **ದೇವರು ಮೆಸ್ಸೀಯನನ್ನು** ಮರಣದಿಂದ **ಎಬ್ಬಿಸುತ್ತಾನೆ,** ಹೀಗೆ ಪಾಪದ ದಂಡನೆ –ಯಿಂದ ಆದಾಮನ ಮಕ್ಕಳನ್ನು ರಕ್ಷಿಸುವದಕ್ಕೆ ದೇವರು ಕಳಿಸಿದ ಒಬ್ಬನೇ ಒಬ್ಬ ರಕ್ಷಕನು ಆತನೇ ಎನ್ನುವದನ್ನು ರುಜುವಾತುಗೊಳಿಸಿ –ದನು ಎಂಬುದನ್ನೂ ಸಹ ಅವನು ಬರೆದಿದ್ದಾನೆ.

ಮೆಸ್ಸೀಯನ ಜನನದ ಮೆಲೆ ಚಿಕ್ಕದಾದ ವಾದವು ಅಸ್ತಿತ್ವದಲ್ಲಿದೆ, ಆದರೆ ಅನೇಕರು ಆತನ ಮರಣ ಮತ್ತು ಪುನರುತ್ಥಾನದ ಮೇಲೆ ಮುಗ್ಗರಿಸಿದ್ದಾರೆ. ತಾನು ಕಳಿಸಿದ ಮೆಸ್ಸೀಯನನ್ನು ಮನುಷ್ಯರು ಅವಮಾನಗೊಳಿಸುವದನ್ನು ಸುಮ್ಮನೆ ನಿಂತುಕೊಂಡು ನೋಡುವದಕ್ಕೆ ದೇವರಿಗೆ ಹೇಗೆ ಸಾಧ್ಯ ಎಂಬುದನ್ನು ಅವರು ಗ್ರಹಿಸಿಕೊಂಡಿಲ್ಲ. ಗ್ರಹಿಸಿಕೊಳ್ಳುವದಕ್ಕೆ ಹೆಚ್ಚಿನ ಜನರು ಸೋತು ಹೋಗಿರುವದೇನೆಂದರೆ, ನಮ್ಮನ್ನು ಪ್ರೀತಿಸುವ ದೇವರು, ಅದೇ ಒಬ್ಬನು, ಮೆಸ್ಸೀಯನು **ನಮ್ಮ ಪಾಪಗಳಿಗಾಗಿ** ಆ ರೀತಿಯಲ್ಲಿ ಸಂಕಟಪಡಬೇಕೆಂದು ಉದ್ದೇಶಿ – –ಸಿದ್ದನು. ಆದಕಾರಣ ಪ್ರವಾದಿಗಳು ಹೀಗೆ ಹೇಳುತ್ತಾ ಸಾರಿದ್ದೇನೆಂದರೆ: "ಅವನನ್ನು ಜಜ್ಜುವದು ಯೆಹೋವನ ಸಂಕಲ್ಪವಾಗಿತ್ತು [ಮೆಸ್ಸೀಯನು **ಪಾಪಕ್ಕಾಗಿ ಕ್ರಯಕೊಡುವದಕ್ಕೆ** ಒಂದು ಯಜ್ಞದಂತೆ ಸಮರ್ಪಿತನಾಗುವದು]!"(ಯೆಶಾಯ–53:10).

ನಾವು ಪ್ರವಾದಿಗಳನ್ನು ನಂಬುತ್ತೇವೋ? ನಂಬುತ್ತೇವೆಂದು ನಾವು ಹೇಳುತ್ತೇವೆ. ನಿಜವಾಗಿಯೂ ನಾವು **ಪ್ರವಾದಿಗಳನ್ನು ನಂಬಿದರೆ, ಅವರು ಬರೆದಿರುವದನ್ನೂ ಸಹ ನಾವು ನಂಬಬೇಕು.** ಪ್ರವಾದಿಗಳು ತಮ್ಮ ಸ್ವಂತ ಕಲ್ಪನೆಗಳಿಂದ ಮಾತಾಡಿಲ್ಲವೆನ್ನುವದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅವರು ಏನು ಹೇಳಬೇಕೆನ್ನುವದನ್ನು ದೇವರು ಅವರ ಆತ್ಮದಲ್ಲಿ ಇಟ್ಟಿದ್ದನು. ಆದದರಿಂದ, ಆ ಪ್ರವಾದಿ – –ಗಳನ್ನು ನಂಬುವದಕ್ಕೆ ನಾವು ನಿರಾಕರಿಸಿದರೆ, ನಿಜವಾಗಿ ನಾವು ಯಾರನ್ನು ತಿರಸ್ಕರಿಸುತ್ತಿದ್ದೇವೆ? ನಾವು **ದೇವರನ್ನು** ತಿರಸ್ಕರಿಸುತ್ತಿ – –ದ್ದೇವೆ, ಯಾಕಂದರೆ ಪಾಪವನ್ನು ತೆಗೆದು ಹಾಕುವದಕ್ಕೆ ಒಂದು ಯಜ್ಞದ ಹಾಗೆ ಮೆಸ್ಸೀಯನು ಮರಣ ಹೊಂದುತ್ತಾನೆ ಎಂಬುದಾಗಿ ಪ್ರವಾದಿಸುವದಕ್ಕೆ ಪ್ರವಾದಿಗಳಿಗೆ ಪ್ರೇರೇಪಿಸಿದವನು ದೇವರೇ ಆಗಿದ್ದಾನೆ.

ದೇವರು ಲೋಕವನ್ನು ಪ್ರೀತಿಸಿದನು ಮತ್ತು ಒಬ್ಬನಾದರೂ ಪಾಪದಲ್ಲಿ ನಾಶವಾಗುವದನ್ನು ಆತನು ಇಷ್ಟಪಡಲಿಲ್ಲ ಯಾಕಂದರೆ ಆತನು ಮೆಸ್ಸೀಯನ ಮರಣದ ಯೋಜನೆ ಮಾಡಿಕೊಂಡಿದ್ದನು. ದೇವರ ನ್ಯಾಯತೀರ್ಪಿನಿಂದ ಅನೀತಿವಂತ ಜನರನ್ನು ರಕ್ಷಿಸುವದಕ್ಕೆ ಅವರಿ– –ಗಾಗಿ ಒಬ್ಬ ನೀತಿವಂತ ವ್ಯಕ್ತಿಯು ಸಾಯುವದು ಅವಶ್ಯವಾಗಿತ್ತು. ಅದಕ್ಕಾಗಿಯೇ ಹಿಂದಿನ ಕಾಲದಲ್ಲಿ ಕುರಿಯ ಮತ್ತು ಟಗರುಗಳ ಯಜ್ಞ ಸಮರ್ಪಣೆಯು ಗುರುತಾಗಿತ್ತು. ದೇವರ ಶಕ್ತಿಯಿಂದ ಕನ್ಯೆಯಲ್ಲಿ ಹುಟ್ಟಿದ್ದ **ಯೇಸು ಕ್ರಿಸ್ತನು,** ದೇವರು ಕೊಟ್ಟಂತಹ **ಸಂಪೂ – –ರ್ಣವಾದ ಮತ್ತು ಕೊನೆಯ ಯಜ್ಞವಾದನು.** ಉಲೂಫ್ ಗಾದೆಯು ಹೇಳುವ ಹಾಗೆ, "ಒಬ್ಬನು ನಿಮ್ಮ ಮುಂದೆ ನಿಂತಿರುವಾಗ (ಅವನಿ –ರುವಂತೆ ಚಿತ್ರಿಸುವದಕ್ಕೆ) ಒಬ್ಬ ಕುಳ್ಳನ ಚಿತ್ರ ಬರೆಯುವ ಅಗತ್ಯವಿಲ್ಲ." ಅದೇ ರೀತಿಯಲ್ಲಿ, ಪಾಪಗಳಿಗಾಗಿ ಒಂದು ಸಂಪೂರ್ಣ – ವಾದ ಮತ್ತು ಶಾಶ್ವತವಾದ ಒಂದು ಯಜ್ಞವನ್ನು ನಾವು ಈಗ ಹೊಂದಿರುವಾಗ, ಅಪೂರ್ಣವಾದ ಮತ್ತು ಪ್ರತೀಕದಂತಹ ಯಜ್ಞಗ – –ಳನ್ನು ಸಮರ್ಪಿಸುವ ಮುದುವರಿಕೆಯಿಂದ ನಾವೇ ಆಯಾಸಗೊಳ್ಳುವ ಅಗತ್ಯವಿಲ್ಲ. ಕರ್ತನಾದ ಯೇಸು ತಾನು ಶಿಲುಬೆಯ ಮೇಲೆ ಸಾಯುವದಕ್ಕಿಂತ ಮೊದಲು ಹೇಳಿದ ಮಾತು ನಿಮಗೆ ನೆನಪಿದೆಯೋ? ಆತನು ಹೀಗೆ ಹೇಳಿದನು, "ತೀರಿತು" ಎಂಬುದಾಗಿ (ಯೋಹಾನ–19:30). ಆತನು ನಮ್ಮ ಪಾಪದ ಸಾಲವನ್ನು ಒಂದೇ ಸಲಕ್ಕೆ ತೀರಿಸಿದನು. ನಾವು ಮಾಡುವದಕ್ಕೆ ಉಳಿದುಕೊಂಡಿರುವ ಒಂದೇ ಸಂಗತಿಯೆಂದರೆ ಅದು **ಇದನ್ನು ನಂಬುವದು!** ನಾವು ಈಗಾಗಲೇ ಓದಿದಂತೆ, ವಾಕ್ಯ ಹೇಳುವದೇನೆಂದರೆ, ಯೇಸು ಕ್ರಿಸ್ತನ

ಮರಣ ಮತ್ತು ಪುನುತ್ಥಾನದ ಶುಭ ಸಂದೇಶವೇನೆಂದರೆ, "ಆ ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ನಂಬುವವರೆಲ್ಲರಿಗೂ ರಕ್ಷಣೆಯನ್ನುಂಟುಮಾಡುವಂಥದ್ದಾಗಿದೆ." (ರೋಮಾ–1:16).

ವಿಷಾದಕರವೆಂದರೆ, ಯೇಸುವಿನ ಮರಣ ಮತ್ತು ಪುನರುತ್ಥಾನದ ಪೂರ್ತಿ ವಿಷಯದ ಕುರಿತು ಇದು ಕೇವಲ ಒಂದು ತಯಾರು ಮಾಡಿದ ಕತೆಯೆಂಬುದಾಗಿ ಹೇಳುತ್ತಾ ಅನೇಕರು ಆತನನ್ನು ನಂಬುವದಕ್ಕೆ ನಿರಾಕರಿಸಿದರು. ಆದಾಗ್ಯೂ ಸುವಾರ್ತೆಯನ್ನು ನಾವು ಅಧ್ಯಯನ ಮಾಡಿದಾಗ, ಮೆಸ್ಸೀಯನ ಕುರಿತಾಗಿ ಪ್ರವಾದಿಗಳು ಪ್ರವಾದಿಸಿದ ಪ್ರತಿಯೊಂದು ಯೇಸು ಕ್ರಿಸ್ತನಿಂದ **ನೆರವೇರಿಸಲ್ಪಟ್ಟಿತು** ಎಂಬುದನ್ನು ನಾವು ಕಂಡುಕೊಂಡೆವು. **ಪ್ರತಿಯೊಂದು**. . . .ಆತನ ಜನನ, ಆತನ ಮರಣ, ಆತನ ಪುರುತ್ಥಾನ ಮತ್ತು ಆತನ ದಿವಾರೋಹಣಕ್ಕೆ ಸಂಬಂಧಿಸಿದ್ದು. ಹಾಗಾಗಿ, ಸುವಾರ್ತೆ ಹೇಳುವದೇನೆಂದರೆ, "ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು." ಎಂಬದೇ. (1ಕೊರಿಂಥ–15:3,4) **ಪ್ರವಾದಿಗಳು ಮೊದಲೇ ತಿಳಿಸಿದಂತೆ ಪ್ರತಿಯೊಂದು ಸಂಭವಿಸಿತು.** ಯೇಸುವನ್ನು ದ್ವೇಷಿಸಿದವರು ಆತನನ್ನು ಹೀನೈಸಿ, ಹಿಂಸಿಸಿ ಕೊಂದುಹಾಕಿದರು, ಆತನನ್ನು ಪ್ರೀತಿಸಿದವರು ಆತನನ್ನು ಸಮಾಧಿ ಮಾಡಿದರು. ಆದರೆ ಸಮಾಧಿಯು ಆತನನ್ನು ಹಿಡಿದಿಟ್ಟುಕೊಳ್ಳುವದಕ್ಕಾಗಲಿಲ್ಲ. ಆತನ ಶಿಲುಬೆಯ ಮರಣದ ನಂತರ ಮೂರನೆಯ ದಿನದಂದು ಕೆಲವು ಮಂದಿ ಸ್ತ್ರೀಯರು ಮುಂಜಾನೆಯಲ್ಲಿ ಎದ್ದು ಯೇಸುವನ್ನು ಹೂಣಿಟ್ಟ ಸಮಾಧಿಯ ಬಳಿಗೆ ಹೋದರು, ಮತ್ತು ಸಮಾಧಿಯು ತೆರೆಯಲ್ಪಟ್ಟು ಖಾಲಿಯಾಗಿ –ರುವದನ್ನು ಕಂಡರು! ಎಂಬುದನ್ನು ನಾವು ನೋಡಿಕೊಂಡಿದ್ದೇವೆ. ಯೇಸು ಮರಣ ಹೊಂದಿ ಮತ್ತೆ ಎದ್ದು ಬಂದ ನಂತರ, ನಲವತ್ತು ದಿವಸಗಳಿಗಿಂತಲೂ ಹೆಚ್ಚಾಗಿ ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ಆತನ ಪುನರುತ್ಥಾನದ ನಂತರ ಐನೂರಕ್ಕಿಂತಲೂ ಹೆಚ್ಚು ಜನರು ಆತನನ್ನು ನೋಡಿದರು. ಇದು ನಿಜವಾಗಿತ್ತು! ಮನುಷ್ಯನ ದೊಡ್ಡ ಶತೃಗಳಲ್ಲಿ ಒಂದಾದ ಮರಣವನ್ನು ಮೆಸ್ಸೀಯನು ಜಯಿಸಿದ್ದನು! ಆದಾಮನ ಮಕ್ಕಳ ಪಾಪಗಳಿಗಾಗಿ ಒಂದು ಪೂರ್ತಿ ಸಂದಾಯದ ಹಾಗೆ ಯೇಸುವಿನ ತ್ಯಾಗವನ್ನು ದೇವರು ಒಪ್ಪಿಕೊಂಡನು ಎಂಬು –ದನ್ನು ಯೇಸುವಿನ ಪುನರುತ್ಥಾನವು ರುಜುವಾತುಪಡಿಸಿತು, ಆದದರಿಂದ ಆತನನ್ನು ನಂಬುವವರೆಲ್ಲರೂ ಆತನ ನಿತ್ಯಜೀವದಲ್ಲಿ ಪಾಲುಗಾರರಾಗಲು ಶಕ್ತರಾದರು.

ಅದೇ ಶುಭ ಸಂದೇಶವಾಗಿದೆ. **ಕರ್ತನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳನ್ನು ನಿವಾರಿಸುವದಕ್ಕೆ ಸತ್ತನು, ಮತ್ತು ನಿಮಗೆ ನಿತ್ಯ ಜೀವ – –ವನ್ನು ಕೊಡುವದಕ್ಕೆ ಮೂರನೆಯ ದಿನದಲ್ಲಿ ಆತನು ಸಮಾಧಿಯಿಂದ ಎದ್ದು ಬಂದನು**. ಇದನ್ನು ನಂಬುವವರೆಲ್ಲರನ್ನು ರಕ್ಷಿಸುವದೇ ಈ ಶುಭ ಸಂದೇಶದ ಉದ್ದೇಶವಾಗಿದೆ. ಆದದರಿಂದ, ನೀವು ಉತ್ತರಿಸಬೇಕಾದ ಪ್ರಶ್ನೆ ಏನೆಂದರೆ: **"ನೀವು ಇದನ್ನು ನಂಬುತ್ತೀರಾ**? ದೇವರ ವಾಕ್ಯವು ಹೀಗೆ ಹೇಳುತ್ತದೆ: "ಈ ದಿನವೇ ರಕ್ಷಣೆಯ ದಿನ! ನೀವು ಸುವಾರ್ತೆಗೆ ಕಿವಿಗೊಡುವದಾದರೆ, ನಿಮ್ಮ ಹೃದಯಗಳನ್ನು ಕಠಿಣ –ಪಡಿಸಿಕೊಳ್ಳಬೇಡಿರಿ! ನಂಬಿರಿ!" ರಕ್ಷಣೆಯು ನಾವು ಮಾಡಿದ ಕೆಲಸದ ಫಲವಲ್ಲ, ಯಾಕಂದರೆ **ಪರದೈಸನ್ನು ಸಂಪಾದಿಸಿಕೊಳ್ಳುವದಕ್ಕೆ ಯಾರೊಬ್ಬರೂ ಸಾಕಷ್ಟು ಕೆಲಸಗಳನ್ನು ಮಾಡುವದಿಲ್ಲ**. ದೇವರು ತನ್ನ ಮಹತ್ವದ ರಕ್ಷಣೆಯನ್ನು ಎಂದಿಗೂ **ಮಾರುವದಿಲ್ಲ;** ಆತನು ಅದನ್ನು ನಿಮಗೆ **ಕೊಡುವದಕ್ಕೆ** ಇಷ್ಟವುಳ್ಳವನಾಗಿದ್ದಾನೆ! ಒಳ್ಳೆಯ ಕೆಲಸಗಳು, ಪ್ರಾರ್ಥನೆಗಳು, ಉಪವಾಸ ಇವುಗಳು ನಿಮ್ಮೊಳಗೆ ಒಳ್ಳೆಯ ಅನುಭವಿಸುವಿಕೆಗಳನ್ನು ನಿಮಗೆ ಕೊಡಬಹುದು, ಆದರೆ ಅವು ದೇವರ ನೀತಿಯನ್ನು ತೃಪ್ತಿಪಡಿಸುವದಿಲ್ಲ! ದೇವರ ಪರದೈಸಿಗೆ ಪ್ರವೇಶಿ –ಸುವದಕ್ಕೆ ನಿಮಗೆ ಇರುವದು ಕೇವಲ ಒಂದೇ ಮಾರ್ಗ.

1) ಮೊದಲು, ನೀವು ಒಬ್ಬ ಪಾಪಿ ಮತ್ತು ದೇವರನ್ನು ಮೆಚ್ಚಿಸುವದಕ್ಕೆ ನಿಮಗೆ ಯಾವ ಬಲವಿಲ್ಲ ಎಂಬುದಾಗಿ ಗುರುತಿಸಿಕೊಳ್ಳಿರಿ.

2) ಅನಂತರ ನೀವು, ಯೇಸು ಕ್ರಿಸ್ತನು ನಿಮ್ಮ ರಕ್ಷಕನು, ನಿಮ್ಮ ಪಾಪಗಳನ್ನು ನಿವಾರಿಸಲು ಶಿಲುಬೆಯ ಮೇಲೆ ಮರಣ ಹೊಂದುವದಕ್ಕೆ ದೇವರಿಂದ ಕಳಿಸಲ್ಪಟ್ಟವನೂ ಮತ್ತು ನಿಮಗೆ ನಿತ್ಯಜೀವವನ್ನು ಕೊಡುವದಕ್ಕೆ ದೇವರು ಆತನನ್ನು ಮರಣದಿಂದ ಎಬ್ಬಿಸಿದನು ಎಂಬುದನ್ನು ನೀವು ನಂಬಬೇಕು.

ನೀವು ಈ ಶುಭ ಸಂದೇಶವನ್ನು ನಂಬಿದರೆ, ನೀವು ಸತ್ತ ನಂತರ ಪರದೈಸಿಗೆ ಒಯ್ಯಲ್ಪಡುತ್ತೀರಿ ಎಂಬುದು ನಿಮಗೆ ನಿಶ್ಚಿತವಾಗುತ್ತದೆ, ಯಾಕಂದರೆ ದೇವರು ತಾನೇ ತನ್ನ ವಾಕ್ಯದಲ್ಲಿ ನಮಗೆ ವಾಗ್ದಾನ ಮಾಡಿರುವದೇನೆಂದರೆ, ನಾವು ಕರ್ತನಾದ ಯೇಸು ಕ್ರಿಸ್ತನ ಹೆಸರನ್ನು ನಂಬಿದರೆ, ನಿತ್ಯಜೀವವನ್ನು ಪಡೆಯುತ್ತೇವೆಂಬುದನ್ನು ನಾವು ತಿಳಿದುಕೊಳ್ಳುತ್ತೇವೆ. (1ಯೋಹಾನ–5:9-13)

{ಮುಂದಿರುವದು ಮಾಲಿಕ್‌ರವರ ವ್ಯಯಕ್ತಿಕ ಸಾಕ್ಷಿ.} ನಾನು ಹೇಗೆ ಯೇಸು ಕ್ರಿಸ್ತನ ವಿಶ್ವಾಸಿಯಾದೆ ಎನ್ನುವದನ್ನು ನಿಮಗೆ ಹೇಳುವದಕ್ಕೆ ನನಗೆ ಅವಕಾಶ ಕೊಡಿರಿ. ಒಬ್ಬ ಯೌವನಸ್ಥನಾಗಿ ನಾನು ದಿನಕ್ಕೆ ಐದು ಸಲ ಪ್ರಾರ್ಥಿಸುವದರಲ್ಲಿ ಮತ್ತು ವರ್ಷದ ಉಪವಾಸವನ್ನು ಮಾಡುವದರಲ್ಲಿ ನಂಬಿಗಸ್ತನಾಗಿದ್ದೆ, ಆದರೆ ನಾನು ಸತ್ತ ನಂತರ ಎಲ್ಲಿಗೆ ಹೋಗುತ್ತೇನೆಂಬುದು ನನಗೆ ಗೊತ್ತಿರಲಿಲ್ಲ. ಇದರ ಕುರಿತು ಎಲ್ಲರನ್ನೂ ಕೇಳಿದೆ, ಆದರೆ ನನಗೆ ಒಂದು ಸ್ಪಷ್ಟವಾದ ಉತ್ತರ ಸಿಗಲಿಲ್ಲ. ಆದರೆ ನಾನು ಸುವಾರ್ತೆಯನ್ನು {ಇಂಜಿಲ್} ಓದಿದಾಗ, **ನಾನು ಸತ್ತ ನಂತರ ಎಲ್ಲಿಗೆ ಹೋಗುತ್ತೇನೆಂಬುದನ್ನು ನಾನು ತಿಳಿದುಕೊಳ್ಳುವದಕ್ಕೆ ನನಗೆ ಸಾಧ್ಯವಾಯಿತು**, ಯಾಕಂದರೆ ಮೆಸ್ಸೀಯನಾದ ಯೇಸು ತಾನೇ ಸುವಾರ್ತೆಯಲ್ಲಿ ಹೀಗೆ ಹೇಳಿದ್ದಾನೆ; "ನಿಮಗೆ ನಿಜನಿಜವಾಗಿ ಹೇಳುತ್ತೇನೆ, ನನ್ನ ವಾಕ್ಯವನ್ನು ಕೇಳಿ ನನ್ನನ್ನು ಕಳು – –ಹಿಸಿದಾತನನ್ನು ನಂಬುವವನು **ನಿತ್ಯಜೀವವನ್ನು ಹೊಂದಿದ್ದಾನೆ. ಅವನು ತೀರ್ಪಿಗೆ ಗುರಿಯಾಗುವದಿಲ್ಲ; ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದಾನೆ.**"(ಯೋಹಾನ–5:24). ಮತ್ತೂ ಆತನು ಹೇಳಿರುವದೇನೆಂದರೆ: "ನಾನೇ ಪುನರುತ್ಥಾನವೂ ಜೀವವೂ ಆಗಿದ್ದೇನೆ. ನನ್ನನ್ನು ನಂಬುವವನು ಸತ್ತರೂ ಬದುಕುವನು!" (ಯೋಹಾನ–11:25). ಹಾಗಾಗಿ, ನಾನು ನನ್ನನ್ನು ರಕ್ಷಿಸಿಕೊಳ್ಳುವದಕ್ಕೆ ಸ್ವಂತ ಪರಿಶ್ರಮದಿಂದ ಪಶ್ಚಾತ್ತಾಪಪಟ್ಟೆ ಮತ್ತು **"ಆತನಲ್ಲಿ ನಂಬಿಕೆಯಿಡುವ ಪ್ರತಿಯೊಬ್ಬನು ಆತನ ಹೆಸರಿನ ಮೂಲಕವಾಗಿ ಪಾಪ ಪರಿಹಾರವನ್ನು ಹೊಂದುವನು."**

(ಅಪೊ.ಕೃತ್ಯ–10:43) ಎಂದು ಎಲ್ಲಾ ಪ್ರವಾದಿಗಳು ಪ್ರವಾದಿಸಿರುವ ಮೆಸ್ಸೀಯನಲ್ಲಿ ನಾನು ನಂಬಿಕೆಯಿಟ್ಟೆ. ನಾನು ನನ್ನ ಎಲ್ಲಾ ನಿರೀಕ್ಷೆಯನ್ನು ತೆಗೆದುಕೊಂಡು ಕರ್ತನಾದ ಯೇಸು ಕ್ರಿಸ್ತನ ಮೇಲೆ ತೂಗು ಹಾಕಿದೆ. ಆ ಸಮಯದಿಂದ ಈವರೆಗೆ ದೇವರು ನನ್ನ ಆತ್ಮದಲ್ಲಿ ಸಮಾಧಾನವನ್ನು ತಂದಿದ್ದಾನೆ. ಇನ್ನು ಮುಂದೆ ನಾನು ತೊಂದರೆಗೊಳಗಾದ ಮನಸ್ಸಾಕ್ಷಿಯನ್ನು ಹೊಂದಿದವನಲ್ಲ. ಶಿಲು –ಬೆಯ ಮೇಲಿನ ಯೇಸುವಿನ ಕಾರ್ಯದಿಂದ ನನ್ನ ಭವಿಷ್ಯವು ಅದ್ಭುತಕರವಾಗಿ ಪ್ರಕಾಶಮಾನವಾದುದಾಗಿರುತ್ತದೆ. ಕ್ರಿಸ್ತನ ಒಬ್ಬ ಶಿಷ್ಯ –ನಂತೆ ನನ್ನ ಜೀವಿತದಲ್ಲಿ ಕೆಲವು ಸಲ ನಾನು ತೊಂದರೆಯನ್ನು ಮತ್ತು ದು:ಖವನ್ನು ಎದುರಿಸುತ್ತಿದ್ದೆ ಯಾಕಂದರೆ ನನ್ನ ಸ್ನೇಹಿತರ ಮತ್ತು ನನ್ನ ಸಂಬಂಧಿಕರ ಅಭಿಪ್ರಾಯದಿಂದ ನನ್ನ ನಂಬಿಕೆಯು ವ್ಯತ್ಯಾಸವುಳ್ಳದ್ದಾಗಿರುತ್ತಿತ್ತು, ಆದರೆ ನನಗೆ ಸಮಧಾನವಿತ್ತು. ದೇವರ ಸಮಾಧಾನವು ನನ್ನ ಮನಸ್ಸು ಮತ್ತು ಹೃದಯವನ್ನು ತುಂಬಿಕೊಂಡಿತ್ತು. ಇದನ್ನು ನನಗೆ ಕೊಟ್ಟ ಯೇಸು ಹೇಳುವದೇನೆಂದರೆ: **"**ಲೋಕವು ನಿಮ್ಮ ಮೇಲೆ ದ್ವೇಷಮಾಡುವದಾದರೆ ಅದು ಮೊದಲು ನನ್ನ ಮೇಲೆ ದ್ವೇಷಮಾಡಿತೆಂದು ತಿಳುಕೊಳ್ಳಿರಿ. . . ಶಾಂತಿಯನ್ನು ನಿಮಗೆ ಬಿಟ್ಟು ಹೋಗುತ್ತೇನೆ; ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ.**"** (ಯೋಹಾನ–15:18; 14:27) ಮತ್ತು ಸ್ನೇಹಿತರೇ, ಕರ್ತನು ನನಗೆ ಮತ್ತು ನನ್ನೊಳಗೆ ಏನು ಮಾಡಿದನೋ, ಅದನ್ನು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಮಾಡುತ್ತಾನೆ. ಆತನು ನಿಮ್ಮಿಂದ ಒಂದು ಸಂಗತಿಯನ್ನು ಕೇಳುತ್ತಾನೆ: **ನೀನು ನಿನ್ನ ಪೂರ್ಣ ಹೃದಯವನ್ನು ಆತನಿಗೆ ಕೊಡುತ್ತೀಯಾ**? ಎಂದು. ಉಳಿದದ್ದನ್ನು ಆತನು ಮಾಡುತ್ತಾನೆ. ಕರ್ತನಾದ ಯೇಸು ತಾನೇ ಹೇಳಿರುವಂತೆ, **"**ಎಲೈ ಕಷ್ಟಪಡುವವರೇ, ಹೊರೆ ಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು. ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ. ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು.**"** (ಮತ್ತಾಯ–11:28,29)

**ನೀವು ನಿಮ್ಮ ಪಾಪಗಳ ನಿಮಿತ್ತವಾಗಿ ಭಾರವುಳ್ಳವರೂ ಮತ್ತು ಆಯಾಸಗೊಂಡವರೂ ಆಗಿದ್ದೀರೋ**? ನಿಮ್ಮ ಆತ್ಮಗಳಿಗೆ ವಿಶ್ರಾಂತಿಯನ್ನು ಕಂಡುಕೊಳ್ಳುವದಕ್ಕೆ ನೀವು ಇಷ್ಟಪಡುತ್ತೀರೋ? ಮೆಸ್ಸೀಯನು ನಿಮ್ಮ ಪಾಪಗಳಿಗಾಗಿ ಸತ್ತನು ಹಾಗೂ ಮತ್ತೆ ಎದ್ದು ಬಂದನು ಎಂಬ ಶುಭ ಸಂದೇಶವನ್ನು ನೀವು ನಂಬಿದರೆ, ದೇವರು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ, ನೀವು ನೀತಿವಂತರೆಂದು ತೀರ್ಪುಮಾಡುತ್ತಾನೆ ಮತ್ತು ಜೀವಬಾಧ್ಯರ ಪುಸ್ತಕದಲ್ಲಿ ನಿಮ್ಮ ಹೆಸರನ್ನು ಬರೆಯಿಸುತ್ತಾನೆ. ನೀವು ಈ ಶುಭ ಸಂದೇಶವನ್ನು ನಂಬಿದರೆ, ದೇವರು ನಿಮ್ಮನ್ನು ತನ್ನ ಸ್ವಂತದವರೆಂದು ಗುರುತು ಮಾಡುತ್ತಾನೆ ಮತ್ತು ನಿಮ್ಮ ಹೃದಯದೊಳಗೆ ಯೇಸುವಿನ ಆತ್ಮವನ್ನು ಕಳಿಸುತ್ತಾನೆ. ನಿಮ್ಮಲ್ಲಿ ವಾಸಿಸಿ –ರುವ ಪವಿತ್ರಾತ್ಮನು, ನಿಮ್ಮ ಹೃದಯವನ್ನು, ನಿಮ್ಮ ಜೀವಿತವನ್ನು ಮತ್ತು ನಿಮ್ಮ ಜೀವನ ಕ್ರಮವನ್ನು ಬದಲಾವಣೆ ಮಾಡುತ್ತಾನೆ, ಯಾಕಂದರೆ ವಾಕ್ಯವು ಹೀಗೆ ಹೇಳುತ್ತದೆ: **"**ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು, ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**"** ಎಂಬುದಾಗಿ. (2ಕೊರಿಂಥ–5:17).

ಸ್ನೇಹಿತರೇ, ನೀವು ಎಲ್ಲೇ ಇರಲಿ, ನಿಮ್ಮ ಪರಿಸ್ಥಿತಿ ಏನೇ ಇರಲಿ, ನೀವು ಎಂತಹ ಒಬ್ಬ ಪುರುಷ ಅಥವಾ ಸ್ತ್ರೀಯಾಗಿರಲಿ, ಯೌವನಸ್ಥ ಅಥವಾ ವಯಸ್ಸಾದವರಾಗಿರಲಿ, **ನೀವು ಕರ್ತನಾದ ಯೇಸು ಕ್ರಿಸ್ತನನ್ನು ನಂಬುವದಾದರೆ** ಆತನು ನಿಮಗೆ ಒಂದು ಹೊಸ ಜೀವಿತವನ್ನು ಕೊಡುತ್ತಾನೆ. ಆತನು ನಿಮಗಾಗಿ ಸತ್ತನು ಆದದರಿಂದ ನೀವು ದೇವರೊಂದಿಗೆ ಎಂದೆಂದಿಗೂ ಜೀವಿಸುವದಕ್ಕೆ ಶಕ್ತರಾದಿರಿ. **ನೀವು ಈ ಶುಭ ಸಂದೇಶವನ್ನು ನಂಬುತ್ತೀರೋ**?

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . . .

ದೇವರು ನಿಮ್ಮನ್ನು ಆಶೀರ್ವದಿಸಲಿ. ದೇವರ ರಕ್ಷಣೆಯ ಶುಭ ಸಂದೇಶದಲ್ಲಿ ತಮ್ಮ ನಂಬಿಕೆಯನ್ನಿಟ್ಟಿರುವ ಎಲ್ಲರಿಗೂ ದೇವರು ಕೊಟ್ಟಿ –ರುವ ಅದ್ಭುತವಾದ ಭರವಸೆಯ ಕುರಿತು ಮಾತಾಡುವ ದೇವರ ವಾಕ್ಯದ ಈ ವಚನದೊಂದಿಗೆ ನಾವು ನಿಮ್ಮನ್ನು ಬಿಟ್ಟು ಹೋಗುತ್ತಿ – –ದ್ದೇವೆ:

**"ಆತನು ನಮ್ಮಲ್ಲಿ ಸುಕೃತ್ಯಗಳನ್ನು ನೋಡಿದ್ದರಿಂದಲ್ಲ, ತನ್ನ ಸಂಕಲ್ಪವನ್ನು ಅನುಸರಿಸಿ ಕೃಪೆಯಿಂದಲೇ ನಮ್ಮನ್ನು ರಕ್ಷಿಸಿ ಪರಿಶುದ್ಧರಾಗುವದಕ್ಕೆ ಕರೆದನು. ಆತನು ಅನಾದಿ ಕಾಲದಲ್ಲಿ ಆ ಕೃಪೆಯನ್ನು ಕ್ರಿಸ್ತ ಯೇಸುವಿನಲ್ಲಿ ನಮಗೆ ಅನುಗ್ರಹಿಸಿ ಈಗ ನಮ್ಮ ರಕ್ಷಕನಾದ ಕ್ರಿಸ್ತ ಯೇಸುವಿನ ಪ್ರತ್ಯಕ್ಷತೆಯ ಮೂಲಕ ಅದನ್ನು ಪ್ರಕಾಶಪಡಿಸಿದ್ದಾನೆ. ಈತನು ಮರಣವನ್ನು ನಿವೃತ್ತಿ ಮಾಡಿ ಸುವಾರ್ತೆಯ ಮೂಲಕ ಜೀವವನ್ನೂ ನಿರ್ಲಯತ್ವವನ್ನೂ ಪ್ರಕಾಶಗೊಳಿಸಿದನು."** (2ತಿಮೊಥೆ–1:9,10)

[ಪಾಠ 89: ಶುಭ ಸಂದೇಶ] [ಸಾರಾಂಶಗಳ ಪಟ್ಟಿ] [ಪಾಠ 91: ಮನುಷ್ಯನ ಪ್ರಶ್ನೆಗಳು; ದೇವರ ಉತ್ತರಗಳು (#2)]

ಪಾಠ 90

# ಮನುಷ್ಯನ ಪ್ರಶ್ನೆಗಳು ಮತ್ತು ದೇವರ ಉತ್ತರಗಳು

**ಭಾಗ 1**

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪ್ರಿಯ ಸ್ನೇಹಿತರೇ, ಪರಿಶುದ್ಧ ವಾಕ್ಯಗಳು ಬೋಧಿಸಿದ್ದರ ಕುರಿತು ಪ್ರಶ್ನೆಗಳೊಂದಿಗೆ ನಮಗೆ ಪತ್ರ ಬರೆದಂತಹ ಎಲ್ಲರಿಗೂ ನಾವು ವಂದನೆಗಳನ್ನು ತಿಳಿಸುತ್ತೇವೆ. ನಾವು ನಿಮಗೆ ಕಳಿಸಿದ ಪತ್ರಗಳು, ಪುಸ್ತಕಗಳು ಮತ್ತು ಕ್ಯಾಸೆಟ್‌ಗಳು ನಿಮಗೆ ಸಹಾಯಕವಾದವೆಂಬು–
–ದಾಗಿ ನಾವು ನಂಬುತ್ತೇವೆ. ನಮಗೆ ಪತ್ರ ಬರೆಯದಿದ್ದರೂ ನೀತಿವಂತಿಕೆಯ ಮಾರ್ಗ ಎಂಬ ಕಾರ್ಯಕ್ರಮವನ್ನು ನಂಬಿಗಸ್ತಿಕೆಯಿಂದ ಕೇಳಿಸಿಕೊಂಡವರಿಗೂ ಸಹ ನಾವು ವಂದನೆಗಳನ್ನು ತಿಳಿಸುತ್ತೇವೆ. ನಿಮ್ಮಲ್ಲಿ ಪ್ರತಿಯೊಬ್ಬರನ್ನೂ ದೇವರು ಆಶೀರ್ವದಿಸಲಿ ಮತ್ತು ಆತನು ಒದಗಿಸಿರುವ ರಕ್ಷಣೆಯ ನೀತಿಯುಳ್ಳ ಮಾರ್ಗವನ್ನು ನೀವು ಅರ್ಥಮಾಡಿಕೊಳ್ಳುವದಕ್ಕೆ ನಿಮಗೆ ಸಹಾಯ ಮಾಡಲಿ.

ಈದಿನ ಮತ್ತು ಮುಂದಿನ ಕಾರ್ಯಕ್ರಮದಲ್ಲಿ, ಸ್ವಲ್ಪ ವ್ಯತ್ಯಾಸವಾಗಿ ಏನಾದರೊಂದನ್ನು ಮಾಡುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿ
–ದ್ದೇವೆ. ನಮ್ಮ ಕೇಳುಗ ಸ್ನೇಹಿತರಾದ ನಿಮ್ಮಿಂದ ನಾವು ಪಡೆದಿರುವ ಕೆಲವು ಪ್ರಶ್ನೆಗಳನ್ನು ನಿಮ್ಮೊಂದಿಗೆ ಹಂಚಿಕೊಳ್ಳುವದಕ್ಕೆ ನಾವು ಇಷ್ಟಪಡುತ್ತೇವೆ. ಪ್ರತಿಯೊಂದು ಪ್ರಶ್ನೆಗೆ ಉತ್ತರಿಸುವದಕ್ಕೆ, ನಾವು ಕೇವಲ ಪರಿಶುದ್ಧ ವಾಕ್ಯಗಳನ್ನು ಮಾತ್ರ ಉಪಯೋಗಿಸುತ್ತೇವೆ, ಯಾಕಂದರೆ ದೇವರ ವಾಕ್ಯವು ಕತ್ತಲೆಯಲ್ಲಿ ನಮಗೆ ಮಾರ್ಗದರ್ಶನ ಮಾಡುವ ನಿಶ್ಚಿತವಾದ ಒಂದೇ ಬೆಳಕಾಗಿದೆ. ಕೀರ್ತನೆಗಳಲ್ಲಿ ಬರೆದಿರುವಂತೆ, **"**ನಿನ್ನ ವಾಕ್ಯವು ನನ್ನ ಕಾಲಿಗೆ ದೀಪವೂ ಮತ್ತು ನನ್ನ ದಾರಿಗೆ ಬೆಳಕೂ ಆಗಿದೆ**!"** (ಕೀರ್ತನೆ–119:105)

ಈಗ. . . .ನಿಮ್ಮ ಪ್ರಶ್ನೆಗಳು. ಈ ದಿನ ನಮಗೆ ಸಹಾಯ ಮಾಡುವದಕ್ಕೆ, ಪ್ರಶ್ನೆಗಳನ್ನು ಓದುವದಕ್ಕೆ ಸ್ಟುಡಿಯೋದಲ್ಲಿ ಒಬ್ಬ ಸ್ನೇಹಿತರು ನಮ್ಮೊಂದಿಗೆ ಇದ್ದಾರೆ.

1) ವಂದನೆಗಳು. ನಮಗೆ ಬಂದ ಪತ್ರಗಳಲ್ಲಿ ಮೊದಲ ಪ್ರಶ್ನೆ ಏನೆಂದರೆ: **ನೀತಿವಂತಿಕೆಯ ಮಾರ್ಗ ಎಂಬ ಕಾರ್ಯಕ್ರಮಗಳನ್ನು ತಯಾರಿಸಿದವರ ಧರ್ಮ ಯಾವುದು**?

ಬಹಳ ಹಿಂದೆ, **ಆತನ ಸತ್ಯವನ್ನು** ಹುಡುಕುವಂತಹ ಒಂದು ಸತ್ಯವನ್ನು ದೇವರು ನಮ್ಮ ಹೃದಯಗಳಲ್ಲಿ ಇಟ್ಟನು. ನಿಜವಾದ ಒಬ್ಬನೇ ದೇವರ ವಾಕ್ಯವನ್ನು ನಾವೇ ತಿಳಿದುಕೊಳ್ಳುವದಕ್ಕಾಗಿ ನಾವು ಇಷ್ಟಪಟ್ಟೆವು. ನಾವು ಸತ್ಯವೇದವನ್ನು (ತೋರಾ {ತೌರತ್}, ಕೀರ್ತನೆಗಳು {ಝಾಬುರ್} ಪ್ರವಾದಿಗಳ ಪುಸ್ತಕಗಳು ಮತ್ತು ಸುವಾರ್ತೆ {ಇಂಜಿಲ್ ಇವುಗಳನ್ನು ಒಳಗೊಂಡಿರುವದನ್ನು}) ಜಾಗ್ರತೆಯಿಂದ ಓದಿದೆವು. ಪ್ರವಾದಿಗಳೆಲ್ಲರೂ ಬರೆದಿರುವಂತಹ ಯೇಸು ಕ್ರಿಸ್ತನು ರಕ್ಷಕನೆಂಬುದಾಗಿ ನಾವು ಗುರುತಿಸಿದೆವು. ಆದಾಮನ ಮಕ್ಕಳ ಪಾಪದ ಸಾಲ –
–ವನ್ನು ಅಳಿಸಿಹಾಕುವದಕ್ಕೆ ದೇವರು ಕೊಟ್ಟಂತಹ ಸಂಪೂರ್ಣವಾದ ಮತ್ತು ಕೊನೆಯ ಯಜ್ಞವೇ ಯೇಸುವಾಗಿದ್ದನು, ಆದ್ದರಿಂದ ಆತ
–ನಲ್ಲಿ ನಂಬಿಕೆಯಿಡುವ ಯಾವನಾದರೂ ದೇವರ ಪ್ರಸನ್ನತೆಯಲ್ಲಿ ಎಂದೆಂದಿಗೂ ಜೀವಿಸುವದಕ್ಕೆ ಶಕ್ತನಾಗುತ್ತಾನೆ. ದೇವರಿಂದ ಬಂದಂ
–ತಹ ಯೇಸು ಕ್ರಿಸ್ತನು, ಮಾತ್ರವೇ ನಮ್ಮನ್ನು ದೇವರ ಕಡೆಗೆ ತರುವಂತವನಾಗಿದ್ದಾನೆ. ನಾವು ನಮ್ಮ ಎಲ್ಲಾ ಭರವಸೆಯನ್ನು ಆತನ ಮೇಲೆ ಜೋಡಿಸಿದ್ದೇವೆ.

ಹಾಗಾದರೆ ನಾವು ಯಾರು**?** **ನಾವು ಯೇಸು ಕ್ರಿಸ್ತನ ಶಿಷ್ಯರು**. ಖುರಾನ್ ನಮ್ಮನ್ನು **"**ಹಲ್ ಅಲ್–ಕಿತಾಬ್**"** ಅಂದರೆ ಪುಸ್ತಕದ ಜನರು ಎಂದು ಕರೆಯುತ್ತದೆ. ಇತರರು ನಮ್ಮನ್ನು ಕ್ರೈಸ್ತರು ಅಂದರೆ ಕ್ರಿಸ್ತನ ಜನರು ಎಂಬುದಾಗಿ ಕರೆಯುತ್ತಾರೆ. ನಾವು ಕ್ರೈಸ್ತರು ಎಂಬುದಾಗಿ ನಿಮಗೆ ಹೇಳುವದರಲ್ಲಿ, ನಾವು ನಿಮಗೆ ಜ್ಞಾಪಕಪಡಿಸುವದೇನೆಂದರೆ, ಅನೇಕರು ತಮ್ಮನ್ನು ಕ್ರೈಸ್ತರೆಂಬುದಾಗಿ ಕರೆದುಕೊಳ್ಳುತ್ತಾರೆ, ಆದರೆ ಅವರು ನಿಜವಾಗಿಯೂ ಕ್ರಿಸ್ತನ ಜನರೆಂಬುದಾಗಿ ಅದರ ಅರ್ಥವಲ್ಲ ಎಂಬುದು. ಕೇವಲ ನೀರಿನಲ್ಲಿ ನೆನಸಿಟ್ಟಿರುವ ಒಂದು ಮರದ ದಿಮ್ಮಿಯು ಒಂದು ಮೊಸಳೆಯಾಗುವದಿಲ್ಲ ಎಂಬಂತೆ (ಉಲೂಫ್ ಗಾದೆಯ ಮೇಲೆ ಅವಲಂಬಿತ), ಹಾಗೆಯೇ ಕೇವಲ ಕ್ರೈಸ್ತರು ಮಾಡುವಂತಹ ಕೆಲಸಗಳನ್ನು ಮಾಡುವದರಿಂದ ಒಬ್ಬ ವ್ಯಕ್ತಿಯು ಕ್ರೈಸ್ತನೆನಿಸಿಕೊಳ್ಳುವದಿಲ್ಲ. ಒಂದು ಧರ್ಮವನ್ನು ಅನುಸರಿಸುವಂ–
–ತಾದ್ದು ನಿಮಗೆ ದೇವರೊಂದಿಗೆ ಒಂದು ಸಂಬಂಧವನ್ನು ಕೊಡುವದಿಲ್ಲ. ಯೇಸು ಕ್ರಿಸ್ತನು ಮಾತ್ರವೇ ಒಬ್ಬ ವ್ಯಕ್ತಿಯನ್ನು ದೇವರ ಬಳಿಗೆ ತರುವವನಾಗಿದ್ದಾನೆ. ಕ್ರಿಸ್ತನನ್ನು ನಮ್ಮ ರಕ್ಷಕನೂ, ಕರ್ತನೂ ಮತ್ತು ಸ್ನೇಹಿತನಾಗಿ ಪಡೆದಿರುವ ನಾವು ಎಷ್ಟೊಂದು ಧನ್ಯರು! ಆತನು ದೇವರೊಂದಿಗೆ ನಮಗೆ ಒಂದು ಅದ್ಭುತವಾದ ಸಂಬಂಧವನ್ನು ಮತ್ತು ಮರಣವನ್ನು ಎದುರಿಸುವದರಲ್ಲಿ ಭರವಸೆಯನ್ನು ಕೊಟ್ಟಿದ್ದಾನೆ. ಪ್ರತಿದಿನವೂ ಆತನು ತನ್ನ ನಂಬಿಗಸ್ತಿಕೆಯನ್ನೂ ಮತ್ತು ತನ್ನ ಪ್ರೀತಿಯನ್ನೂ ನಮಗೆ ತೋರಿಸುತ್ತಾನೆ. ಕರ್ತನಾದ ಯೇಸು ಕ್ರಿಸ್ತನಲ್ಲಿ, ದೇವರು ನಮಗೆ ನಿತ್ಯಜೀವಕ್ಕೆ ಸಂಬಂಧಪಟ್ಟ ಪ್ರತಿಯೊಂದನ್ನೂ ಕೊಟ್ಟಿದ್ದಾನೆ! ನಮ್ಮ ಹೃದಯಗಳಿಗೆ ಅಗತ್ಯವಾಗಿ
–ರುವ ಪ್ರತಿಯೊಂದನ್ನು ನಾವು ಆತನಲ್ಲಿ ಹೊಂದಿದ್ದೇವೆ.

2) ವಂದನೆಗಳು. ಮುಂದಿನ ಪ್ರಶ್ನೆ ಮುಖ್ಯವಾದದು ಮತ್ತು ಒಂದು ಸ್ಪಷ್ಟವಾದ ಉತ್ತರಕ್ಕೆ ಅರ್ಹತೆಯುಳ್ಳದ್ದೂ ಆಗಿದೆ. ಈ ವ್ಯಕ್ತಿ ಬರೆಯುವದೇನೆಂದರೆ: **ಏನಾದರೊಂದು ನಿಜವಾಗಿಯೂ ನನ್ನನ್ನು ತೊಂದರೆಪಡಿಸುತ್ತದೆ. ಸತ್ಯವೇದದಲ್ಲಿರುವ ತೋರಾ ಮತ್ತು ಸುವಾರ್ತೆಯಂತಹ ಕೆಲವು ಪುಸ್ತಕಗಳನ್ನು ಎಲ್ಲಾ ಮುಸಲ್ಮಾನರು ನಂಬಬೇಕೆಂದು ಪ್ರವಾದಿಯಾದ ಮಹಮ್ಮದರು ಆಜ್ಞಾಪಿಸಿರುವದನ್ನು ನಾನು ಖುರಾನಿನಲ್ಲಿ ಓದಿದ್ದೇನೆ. ನಾನು ಸತ್ಯವೇದವನ್ನು ಗೌರವಿಸುತ್ತೇನೆ ಮತ್ತು ಇದನ್ನು ಓದುವದಕ್ಕೆ ಪ್ರಾರಂಭಿಸಿದ್ದೇನೆ. ಹೀಗಿದ್ದರೂ, ನಾವು ಬೈಬಲ್ಲನ್ನು ನಂಬಬಾರದು, ಯಾಕಂದರೆ ಇದು ಭ್ರಷ್ಟತೆಯುಳ್ಳದ್ದೂ ಮತ್ತು ಬದಲಾಗಿರುವಂತದ್ದು ಆಗಿದೆ ಎಂದು ನನ್ನ ಸ್ನೇಹಿತರು ನನಗೆ ಹೇಳಿದರು. ನಾನು ಓದುತ್ತಿರುವ ಬೈಬಲ್ ಮೂಲ ಬೈಬಲ್‌ಗಿಂತ ವ್ಯತ್ಯಾಸವುಳ್ಳದ್ದೆಂದು ಅವರು ಹೇಳುತ್ತಾರೆ. ಇದರ ಕುರಿತು ನೀವು ಏನು ಹೇಳುತ್ತೀರಿ?**

ಈ ಪ್ರಶ್ನೆಗೆ ಉತ್ತರಿಸುವದಕ್ಕಿಂತ ಮೊದಲು, ಪ್ರವಾದಿಗಳ ಪ್ರಾಚೀನ ಪುಸ್ತಕಗಳು "ಭ್ರಷ್ಟತೆಯುಳ್ಳದ್ದೂ ಮತ್ತು ಬದಲಾಗಿರುವಂತದ್ದು" ಎಂದು ಹೇಳುವಂತವರಿಗಾಗಿ ನಮ್ಮಲ್ಲಿ ಕೆಲವು ಪ್ರಶ್ನೆಗಳಿವೆ. ಸತ್ಯವೇದವು ಸುಳ್ಳೆಂದು ಸಾಧಿಸಿರುವ ಕಲ್ಪನೆಗೆ ಮೂಲ ಯಾವುದು? ಇಂತಹ ಒಂದು ಗಂಭೀರವಾದ ಆಪಾದನೆಗೆ ತಳಹದಿ ಯಾವುದು? ಸತ್ಯವೇದವು **ಯಾವಾಗ** ಬದಲಾಯಿತು? ಇದನ್ನು ಬದಲಾಯಿಸಿ –ದವರು **ಯಾರು**? ಇದು **ಎಲ್ಲಿ** ಬದಲಾಯಿಸಲ್ಪಟ್ಟಿತು? ಇದರಲ್ಲಿ **ಯಾವ** ಬದಲಾವಣೆಗಳಾಗಿವೆ? ನಮಗೆ ಹೇಳಿರಿ, ಪರಿಶುದ್ಧ ವಾಕ್ಯ –ಗಳು ಭ್ರಷ್ಟತೆಯುಳ್ಳವುಗಳೆಂಬುದಕ್ಕೆ ಯಾರಾದರೂ ಒಂದೇ ಒಂದು ಸಾಕ್ಷಿ ಕೊಡುತ್ತೀರಾ?

**ನೀವು ಸತ್ಯವೇದದ ಕುರಿತಾಗಿ ಪ್ರಾಮಾಣಿಕವಾಗಿ ಸತ್ಯಗಳನ್ನು ಹುಡುಕುವದಾದರೆ**, ಬರೆಯುವದಕ್ಕೆ ತನ್ನ ಪ್ರವಾದಿಗಳನ್ನು ಪ್ರೇರೇಪಿಸಿದಂ – –ತಹ ದೇವರು ತನ್ನ ಪರಿಶುದ್ಧವಾದ ವಾಕ್ಯಗಳನ್ನು ಕಾಪಾಡಿದ್ದಾನೆಂಬುದನ್ನು ನೀವು ಕಂಡುಹಿಡಿಯುತ್ತೀರಿ. ಸತ್ಯವೇದವು ಸುಳ್ಳೆಂದು ಹೇಳುವಂತವರು ಸುಮ್ಮನೆ ವದಂತಿಗಳನ್ನು ನಂಬುವವರಾಗಿದ್ದಾರೆ. ಸತ್ಯವೇದವು ಬದಲಾಯಿಸಲ್ಪಟ್ಟಟಿದೆ ಎನ್ನುವಂತಹ ಆಪಾದನೆ – –ಯನ್ನು ಬೆಂಬಲಿಸುವದಕ್ಕೆ ಯಾವ ಸಾಕ್ಷಿಯೂ ಇಲ್ಲ. ಏನೇ ಆದರೂ ಸತ್ಯವೇದವು **ಬದಲಾಯಿಸಲ್ಪಟ್ಟಿಲ್ಲ** ಎಂಬುದನ್ನು ರುಜುವಾತು –ಗೊಳಿಸುವದಕ್ಕೆ ಹೆಚ್ಚಾದ ಸಾಕ್ಷಿಗಳಿವೆ.

ಈ ದಿನ, ಪ್ರಪಂಚದ ದೊಡ್ಡ ಸಂಗ್ರಹಾಲಯಗಳಲ್ಲಿ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ, ಪೂರ್ತಿ ಹೊಸ ಒಡಂಬಡಿಕೆಯ ಮತ್ತು ಸುವಾ –ರ್ತೆಯ ಬರವಣಿಗೆಗಳ ಸಾವಿರಾರು ಪ್ರಾಚೀನ ಸುರುಳಿಗಳನ್ನು ಪಂಡಿತರು ಸುರಕ್ಷಿತವಾಗಿಟ್ಟಿದ್ದಾರೆ. ಹಳೆ ಒಡಂಬಡಿಕೆಯ ಸುರುಳಿಗಳು ಮಾಡಲ್ಪಟ್ಟಿರುವಂತೆ, ಇವುಗಳಲ್ಲಿ ಅನೇಕ ಸುರುಳಿಗಳು ಮಹಮ್ಮದನ ಕಾಲಕ್ಕಿಂತ ನೂರಾರು ವರ್ಷಗಳ ಮೊದಲೇ ಅಸ್ತಿತ್ವದಲ್ಲಿದ್ದವು. ಈ ದಿನ ನಮ್ಮ ಕೈಯಲ್ಲಿರುವ ಪುಸ್ತಕದೊಂದಿಗೆ ಹಳೆಯ ಪುಸ್ತಕಗಳನ್ನು ನೀವು ಹೋಲಿಸಿದರೆ, ದೇವರು ತನ್ನ ವಾಕ್ಯವನ್ನು ನಮಗಾಗಿ ಎಷ್ಟೊಂದು ಸರಿಯಾಗಿ ಜೋಪಾನ ಮಾಡಿದ್ದಾನೆ ಎಂಬುದನ್ನು ನೀವು ಕಂಡುಹಿಡಿಯುತ್ತೀರಿ. ಮಹಮ್ಮದನ ದಿನದಲ್ಲಿ ಅಸ್ತಿತ್ವದಲ್ಲಿದ್ದ ಅದೇ ಸತ್ಯವೇದವೇ ಈ ದಿನ ನಾವು ಓದುತ್ತಿರುವ ಸತ್ಯವೇದವಾಗಿದೆ.

ಪ್ರಾಣಿಗಳ ಚರ್ಮ ಅಥವಾ ಗಿಡದ ತೊಗಟೆಯಿಂದ ಮಾಡಲ್ಪಟ್ಟಂತಹ ಸುರುಳಿಗಳ ಮೇಲೆ ಪ್ರವಾದಿಗಳು ದೇವರ ವಾಕ್ಯಗಳನ್ನು ಬರೆದಿ –ದ್ದಾರೆ. ಯೆಹೂದ್ಯ ಬರಹಗಾರರು ದೇವರ ವಾಕ್ಯವನ್ನು ಹೊಸ ಸುರಳಿಗಳ ಮೇಲೆ ನಕಲು ಮಾಡಿದರು. ತರಬೇತಿಗೊಂಡ ಈ ಬರಹ –ಗಾರರು. **ಮೂಲ ಗ್ರಂಥದ ಹಾಗೆ ನಕಲು ಪ್ರತಿಗಳು ಇವೆ** ಎನ್ನುವದನ್ನು ಖಚಿತಗೊಳಿಸುವದಕ್ಕೆ ತುಂಬಾ ಜಾಗ್ರತೆಯುಳ್ಳವರಾಗಿದ್ದರು. ಒಂದು ಪುಸ್ತಕದಲ್ಲಿನ ಶಬ್ದಗಳ ಸಂಖ್ಯೆಯು ಎಣಿಕೆಯಾಗಿದ್ದವು ಮತ್ತು ಇದರ ಮಧ್ಯದ ಶಬ್ದವು, ಮೂಲದ ಹಾಗೆಯೇ ನಕಲು ಪ್ರತಿಯೂ ಸಹ ಇದೆ ಎಂಬುದನ್ನು ಖಚಿತಪಡಿಸುವದಕ್ಕೆ ಕೊಡಲ್ಪಟ್ಟಿದ್ದವು. ಒಂದು ತಪ್ಪು ಅಲ್ಲಿದ್ದರೆ, ಇಡೀ ಸುರುಳಿಯು ನಾಶವಾಗು– –ತ್ತಿತ್ತು! ದೇವರ ವಾಕ್ಯದ ಗೋಜಿಗೆ ಹೋಗುವಂತಾದ್ದು ದೇವರ ಗೋಜಿಗೆ ಹೋಗಿದ್ದು ಎಂದು ಈ ಯೆಹೂದ್ಯ ಬರಹಗಾರರು ನಂಬಿದ್ದರು! 1947 ರಲ್ಲಿ ಕಂಡುಹಿಡಿಯಲ್ಪಟ್ಟ ಪ್ರಸಿದ್ಧ ಸತ್ತ ಸಮುದ್ರದ ಸುರುಳಿಗಳ ಬಗ್ಗೆ ನೀವು ಕೇಳಿರಬಹುದು. ಈ ಹಳೆ ಒಡಂ – –ಬಡಿಕೆಯ ಸುರುಳಿಗಳು ಯೇಸು ಹುಟ್ಟುವದಕ್ಕಿಂತ ನೂರು ವರ್ಷಗಳ ಮೊದಲು ನಕಲು ಮಾಡಲ್ಪಟ್ಟಿದ್ದವು ಎಂಬುದು ನಿಮಗೆ ಗೊತ್ತಾ? ಆದಾಗ್ಯೂ ಈ ಪುರಾತನ ಸುರುಳಿಗಳು ಸಾವಿರ ವರ್ಷಗಳ ನಂತರ ನಕಲು ಮಾಡಲ್ಪಟ್ಟ ಸುರುಳಿಗಳೊಂದಿಗೆ ಏಕರೂಪವಾಗಿ ದ್ದವು! ಸತ್ಯವೇದವು ಬದಲಾಯಿಸಲ್ಪಟ್ಟಿಲ್ಲ!

ಯಾರೊಬ್ಬರೂ ನಿಜವಾಗಿಯೂ ಸತ್ಯವೇದವನ್ನು ಬದಲಾಯಿಸಲು ಸಾಧ್ಯವಿಲ್ಲ. ಒಂದುವೇಳೆ ಯಾರಾದರೂ ಸತ್ಯವೇದವನ್ನು ಬದಲಾ– –ಯಿಸುವದಕ್ಕೆ ಬಯಸಿದರೆ, ಅವರು ಸತ್ಯವೇದದ ಎಲ್ಲಾ ಪ್ರತಿಗಳನ್ನೂ ಬದಲಾಯಿಸಬೇಕಾಗುತ್ತದೆ. ಇದು ಅಸಾಧ್ಯ! ಕ್ರಿಸ್ತನ ಕಾಲದ ಅನಂತರದ ಅವಧಿಯಲ್ಲಿ ಪಂಡಿತರು ಸತ್ಯವೇದವನ್ನು ಹೀಬ್ರೂ, ಅರೆಮೀಕ್ ಮತ್ತು ಗ್ರೀಕ್‌ನ ಮೂಲ ಭಾಷೆಯಿಂದ **ಅನೇಕ ವಿವಿಧ ಭಾಷೆಗಳಿಗೆ** ಅನುವಾದಿಸುವದಕ್ಕೆ ಪ್ರಾರಂಭಿಸಿದರು. ಪ್ರಪಂಚದಾದ್ಯಂತ ಯಾರೊಬ್ಬರೂ ಯಾವ ಭಾಷೆಯ ಸತ್ಯವೇದವನ್ನು ಬದಲಾಯಿ –ಸುವದಕ್ಕೆ ಸಾಧ್ಯವಾಗಲಿಲ್ಲ! ಈ ದಿನ, ಸತ್ಯವೇದವು (ಭಾಗವಾಗಿ ಅಥವಾ ಪೂರ್ತಿಯಾಗಿ) ಎರಡು ಸಾವಿರಕ್ಕಿಂತಲೂ ಹೆಚ್ಚು ಭಾಷೆ – –ಗಳಲ್ಲಿ ಬರೆಯಲ್ಪಟ್ಟಿದೆ. {ಟಿಪ್ಪಣಿ: ಆಂಗ್ಲ ಭಾಷೆಯಲ್ಲಿ ಡಝನ್‌ಗಟ್ಟಲೆ ಅತ್ಯುತ್ತಮವಾದ ಅನುವಾದಗಳೊಂದಿಗೆ ನಾವು ಆಶೀರ್ವದಿಸ– –ಲ್ಪಟ್ಟಿದ್ದೇವೆ}. ದೇವರು ತನ್ನ ಪರಿಶುದ್ಧ ವಾಕ್ಯವನ್ನು ಸುರಕ್ಷಿತವಾಗಿಟ್ಟನು ಮತ್ತು ಆತನ ಸೇವಕರುಗಳು ಲೋಕದ ಜನರ ಭಾಷೆಗಳಲ್ಲಿ ಅದನ್ನು ಅನುವಾದ ಮಾಡಿದರು, ಯಾಕಂದರೆ ಪ್ರತಿಯೊಬ್ಬರೂ ತಮ್ಮ ಭಾಷೆಗಳಲ್ಲಿ ಇದನ್ನು ಕೇಳಿಸಿಕೊಳ್ಳಬೇಕು, ತಮ್ಮ ಸ್ವಂತ ಮನಸ್ಸಿ –ನಲ್ಲಿ ಇದನ್ನು ಅರ್ಥಮಾಡಿಕೊಳ್ಳಬೇಕು, ತಮ್ಮ ಸ್ವಂತ ಹೃದಯಗಳಲ್ಲಿ ಇದನ್ನು ಸ್ವೀಕರಿಸಿಕೊಳ್ಳಬೇಕು ಮತ್ತು ರಕ್ಷಿಸಲ್ಪಡಬೇಕೆಂಬುದು ದೇವರ ಅಪೇಕ್ಷೆಯಾಗಿತ್ತು.

ಕರ್ತನಾದ ಸರ್ವಶಕ್ತ ದೇವರು ತನ್ನ ವಾಕ್ಯವನ್ನು ಸೈತಾನನಿಂದ ಮತ್ತು ಇದನ್ನು ಬದಲಾಯಿಸುವದಕ್ಕೆ ಹಾಗೂ ಭ್ರಷ್ಟಗೊಳಿಸುವದಕ್ಕೆ ಇಚ್ಛಿಸಿದ್ದವರಿಂದ ಕಾಪಾಡುವದಕ್ಕೆ ಶಕ್ತನಾದನೋ? ಹೌದು, ಆತನು ಇದನ್ನು ಜೋಪಾನ ಮಾಡಲು **ಶಕ್ತನಾದನು** ಮತ್ತು ಇದನ್ನು

ಜೋಪಾನ **ಮಾಡಿದನು!** ಅಲ್ಲಾಹು ಅಕ್ಬರ್! ದೇವರು ದೊಡ್ಡವನು! ಸೈತಾನನು ಪ್ರಾರಂಭದಿಂದಲೂ ಈವರೆಗೆ ಜನರ ಮನಸ್ಸಿನಲ್ಲಿ ದೇವರ ವಾಕ್ಯವನ್ನು ಬದಲಾಯಿಸುವದಕ್ಕೆ ಪ್ರಯತ್ನಿಸುತ್ತಿದ್ದಾನೆ ಎನ್ನುವ ಅರಿವು ಖಂಡಿತವಾಗಿಯೂ ನಮಗಿರಬೇಕು. ಉದಾಹರಣೆಗೆ, ಸತ್ಯವೇದದ ಮೊದಲ ಪುಸ್ತಕದಲ್ಲಿ, ದೇವರು ಆದಾಮನಿಗೆ ಹೇಳಿದ್ದನ್ನು ನಾವು ಕೇಳಿದ್ದೇವೆ, "ಈ ಮರದ ಹಣ್ಣನ್ನು ತಿಂದ ದಿನ **ನೀನು ಸತ್ತೇ ಹೋಗುವಿ!"** ಎಂಬದು. ಆದರೆ "ನೀವು ಸಾಯುವಿರಿ" ಎಂದು ದೇವರು ಆದಾಮ ಹವ್ವರಿಗೆ ಹೇಳಿದ್ದನ್ನು ಸೈತಾನನು ನಿರಾಕರಿ–ಸಿದನು. ಹೀಗೆ, ಸೈತಾನನು ದೇವರ ವಾಕ್ಯವನ್ನು ಬದಲಾಯಿಸುವದಕ್ಕೆ ಪ್ರಯತ್ನಿಸಿದನು. ನೀವು ತಿಳಿದಿರುವಂತೆ, ಆದಾಮ ಹವ್ವರು ಸೈತಾನನ್ನು ನಂಬುವದಕ್ಕೆ ಆರಿಸಿಕೊಂಡು ನಿಷೇಧಿಸಲ್ಪಟ್ಟ ಹಣ್ಣನ್ನು ತಿಂದರು. ಇದರ ಫಲವಾಗಿ, ದೇವರು ಹೇಳಿದಂತೆಯೇ, ಅವರ ಆತ್ಮಗಳು ಸತ್ತುಹೋದವು ಮತ್ತು ಅವರ ಶರೀರಗಳು ಕಳೆಗುಂದಿ ಸತ್ತವು. ಪ್ರೀತಿಯ ಸ್ನೇಹಿತರೇ, ದೇವರ ವಾಕ್ಯವು ಖಂಡಿತವಾದುದು. ಸೈತಾನನು ಸುಳ್ಳುಗಾರನು ಮತ್ತು ಮೋಸಗಾರನು ಆಗಿದ್ದಾನೆ. ಸೈತಾನನು ಜನರನ್ನು ಮೋಸಗೊಳಿಸುವದಕ್ಕೆ ಬಯಸಿ ಸತ್ಯವೇದವು ಬದಲಾಯಿಸಲ್ಪಟ್ಟಿದೆ ಎಂದು ಜನರು ನಂಬುವಂತೆ ಮಾಡುತ್ತಾನೆ. ಆದರೆ ಕರ್ತನಾದ ಯೇಸು ಕ್ರಿಸ್ತನು ಹೇಳಿರುವದೇನೆಂದರೆ, "ಶಾಸ್ತ್ರವು ಸುಳ್ಳಾಗಲಾರದಷ್ಟೆ" (ಯೋಹಾನ–10:35). "ಭೂಮ್ಯಾಕಾಶಗಳು ಅಳಿದುಹೋಗುವವು, ಆದರೆ ನನ್ನ ಮಾತುಗಳು ಅಳಿದು ಹೋಗುವದೇ ಇಲ್ಲ." (ಮತ್ತಾಯ–24:35)

3) ಸ್ಪಷ್ಟವಾದ ಉತ್ತರಕ್ಕಾಗಿ ವಂದನೆಗಳು. ಈಗ, ಮೂರನೆಯ ಪ್ರಶ್ನೆ. ಯೇಸುವನ್ನು ನೀವು ದೇವರ ಮಗನೆಂಬುದಾಗಿ ಯಾಕೆ ಕರೆ – –ಯುತ್ತೀರಿ? ದೇವರು ಜನ್ಮ ಕೊಡಲಿಲ್ಲ ಮತ್ತು ದೇವರು ಹುಟ್ಟಿಯೂ ಬಂದಿಲ್ಲ, ಆದದರಿಂದ ಯೇಸು ಹೇಗೆ ಆತನ ಮಗನಾಗು –ತ್ತಾನೆ?

ಈ ಮುಖ್ಯವಾದ ಪ್ರಶ್ನೆಗೆ ನಾವು ಆಗಾಗ್ಗೆ ಉತ್ತರಿಸಿದ್ದೇವೆ, ಆದಾಗ್ಯೂ ಮತ್ತೆ ಸಂತೋಷದಿಂದ ಇದಕ್ಕೆ ಉತ್ತರಿಸುತ್ತೇವೆ. ಇಂತಹ ಮುಖ್ಯ –ವಾದ ಸಂಗತಿಯಲ್ಲಿ ಅಜ್ಞಾನವು ಮಾರಕವಾದುದಾಗಿದೆ! {ಉಲೂಫ್} ಗಾದೆಯು ಹೇಳುವ ಹಾಗೆ: "ನೀವು ಇದನ್ನು ತಿಳಿದುಕೊಳ್ಳು– –ವದಕ್ಕಿಂತ ಮುಂಚೆ, ಅಜ್ಞಾನವು ನಿಮ್ಮನ್ನು ಕೊಲ್ಲುತ್ತದೆ!" ಪ್ರಶ್ನೆ ಮಾಡಿದವರು ಕೇಳಿರುವದೇನೆಂದರೆ, ಯೇಸುವನ್ನು **ನೀವು** ದೇವರ ಮಗನೆಂಬುದಾಗಿ ಯಾಕೆ ಕರೆಯುತ್ತೀರಿ? ಎಂಬದು. ಮೊದಲನೆಯದಾಗಿ, ನಮ್ಮ ಕೇಳುಗರಿಗೆ ನಾವು ಜ್ಞಾಪಿಸಬೇಕಾದದ್ದೇನೆಂದರೆ, ನಾವು ಯೇಸುವಿಗೆ "ದೇವರ ಮಗನು" ಎಂಬ ಬಿರುದನ್ನು ಕೊಡಲಿಲ್ಲ. **ದೇವರೇ** ಯೇಸುವನ್ನು **ತನ್ನ ಮಗನೆಂಬುದಾಗಿ** ಕರೆದನು! ಎರಡನೆಯದಾಗಿ, "ದೇವರ ಮಗ" ಎಂಬುದು, ದೇವರು ಒಬ್ಬ ಹೆಂಡತಿಯನ್ನು ತೆಗೆದುಕೊಂಡು ಒಬ್ಬ ಮಗನನ್ನು ಪಡೆದನು ಎಂದು **ಇದರ ಅರ್ಥವಲ್ಲ!** ನಾವು ನೋಡಿದ ಹಾಗೆ, ಸತ್ಯವೇದದಲ್ಲಿ ಯೇಸುವು ನೂರಾರು ಹೆಸರುಗಳನ್ನು ಮತ್ತು ಬಿರುದುಗಳನ್ನು ಹೊಂದಿ– –ದ್ದಾನೆ. ಆತನು ಯಾರೆಂಬುದಾಗಿ ನಾವು ಚೆನ್ನಾಗಿ ತಿಳಿದುಕೊಳ್ಳುವದಕ್ಕೆ ಈ ಹೆಸರುಗಳು ನಮಗೆ ಸಹಾಯಕವಾಗಿವೆ. ಉದಾಹರ – –ಣೆಗೆ, ಆತನು **"ಬಾಗಲು"** ಎಂದು ಕರೆಯಲ್ಪಟ್ಟಿದ್ದಾನೆ, ಆದರೆ ಯೇಸುವು ಮರದ ಅಥವಾ ಲೋಹದ ತಗಡಿನಿಂದ ಮಾಡಲ್ಪಟ್ಟಿದ್ದಾನೆ ಎಂದು ಅದರ ಅರ್ಥವಲ್ಲ. ಆತನು **"ಜೀವಕೊಡುವ ರೊಟ್ಟಿ"** ಎಂಬುದಾಗಿ ಸಹ ಕರೆಯಲ್ಪಟ್ಟಿದ್ದಾನೆ, ಅದರೆ ನಾವು ಮೀನಿನೊಂದಿಗೆ ಅನ್ನವನ್ನು ತಿನ್ನುವಂತಹ ಆಹಾರದ ಹಾಗೆ ಯೇಸು ಇದ್ದಾನೆ ಎಂದು ಅದರ ಅರ್ಥವಲ್ಲ. ದೇವರ ಪ್ರವಾದಿಗಳು ಮೆಸ್ಸೀಯನನ್ನು **"ದೇವರ ಕುರಿ"** ಎಂಬುದಾಗಿ ಕರೆದಿದ್ದಾರೆ, ಆದರೆ ಯೇಸು ಒಂದು ಕುರಿ ಎಂದು ಅದರ ಅರ್ಥವಲ್ಲ. ಅದರಂತೆಯೇ, ದೇವರು ಯೇಸುವನ್ನು **ತನ್ನ ಮಗನು** ಎಂಬುದಾಗಿ ಕರೆದಾಗ, ದೇವರು ಒಬ್ಬ ಹೆಂಡತಿಯನ್ನು ಮಾಡಿಕೊಂಡು ಆಕೆಯಿಂದ ಒಂದು ಮಗು – –ವನ್ನು ಪಡೆದನೆಂದು ಅದರ ಅರ್ಥವಲ್ಲ ಎಂಬುದನ್ನು ನೀವು ತಿಳಿದುಕೊಳ್ಳಬೇಕು. ಅದು ದೇವದೂಷಣೆ! ನಾನು ದೇಶವನ್ನು ಬಿಟ್ಟು ಹೋದರೆ, ಅವರು ನನ್ನನ್ನು "ಸೆನೆಗಲ್‌ನ ಮಗ" ಎಂದು ಕರೆಯುತ್ತಾರೆ. ಯಾಕಂದರೆ ನಾನು ಸೆನೆಗಲ್‌ನಿಂದ ಬಂದವನು. ಆದರೆ ಸೆನೆಗಲ್ ಒಂದು ಹೆಂಡತಿಯನ್ನು ಮಾಡಿಕೊಂಡು ಅದರಿಂದ ಒಂದು ಮಗುವನ್ನು ಪಡೆಯಿತು ಎಂದು ಅದರ ಅರ್ಥವಲ್ಲ! ಅದೇ ರೀತಿಯಲ್ಲಿ, ದೇವರು ಮತ್ತು ದೂತರುಗಳು ಹಾಗೂ ಪ್ರವಾದಿಗಳು ಮೆಸ್ಸೀಯನನ್ನು "ದೇವರ ಮಗನು" ಎಂಬುದಾಗಿ ಕರೆದರು ಯಾಕ –ಂದರೆ ಆತನು ದೇವರಿಂದ ಬಂದವನಾಗಿದ್ದಾನೆ. ಯೇಸು ಒಬ್ಬ ಕನ್ಯೆಯಲ್ಲಿ ಹುಟ್ಟಿದವನು. ಆತನಿಗೆ ಭೂಲೋಕದ ತಂದೆಯಿಲ್ಲ. ಹುಟ್ಟುವದಕ್ಕಿಂತ ಮೊದಲು ಆತನು ಪರಲೋಕದಲ್ಲಿದ್ದನು, ಆದದರಿಂದ ಆತನು **"ಕಾಲಿಮತ್ ಅಲ್ಲಾಹ್"** ಅಂದರೆ ಆದಿಯಲ್ಲಿ ದೇವರ ಬಳಿಯಲ್ಲಿದ್ದ **ವಾಕ್ಯ** ಎಂಬದು. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ:

"ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು; ಆ ಮಹಿ –ಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವ –ನಾಗಿದ್ದನು. ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತ: ದೇವರೂ ಆಗಿದ್ದು ತಂದೆಯ ಎದೆಯಲ್ಲಿ– –ದ್ದಾನೋ ಆತನೇ ತಿಳಿಯಪಡಿಸಿದನು." (ಯೋಹಾನ–1:14;18)

ಯೇಸು, ಮಾನವ ಶರೀರದಲ್ಲಿ ಭೂಮಿಯ ಮೇಲೆ ಕಾಣಿಸಿಕೊಂಡ ದೇವರ ನಿತ್ಯತ್ವದ ಮಗನು, ಮತ್ತು ದೇವರ ವಾಕ್ಯವೂ ಆಗಿದ್ದಾನೆ.

ದೇವರ ವಾಕ್ಯ ಎಂದರೇನು? ದೇವರ ವಾಕ್ಯವು ಪರಿಶುದ್ಧ ಗ್ರಂಥವಾಗಿದ್ದು ಬರೆಯುವದಕ್ಕೆ ಪ್ರವಾದಿಗಳನ್ನು ದೇವರು ಪ್ರೇರೆಪಿಸಿದಂತದ್ದು ಎಂಬುದಾಗಿ ಬಹುಮಟ್ಟಿಗೆ ನೀವು ಉತ್ತರಿಸುತ್ತೀರಿ. ನಿಮ್ಮ ಉತ್ತರ ಸರಿ. ದೇವರಿಂದ ನಮಗೆ ಕಳಿಸಲ್ಪಟ್ಟ ಅಕ್ಷರಗಳ ಹಾಗೆ ದೇವರ ಪ್ರವಾದಿಗಳ ಬರಹಗಳು ನಮಗೆ ದೇವರ ವಾಕ್ಯವಾಗಿದೆ. ಆದರೆ ಇನ್ನೊಂದು ಪಟ್ಟಣದಲ್ಲಿರುವ ನಿಮ್ಮ ಒಳ್ಳೆಯ ಸ್ನೇಹಿತನ ಕುರಿತು ನಿಮ್ಮನ್ನು ಕೇಳುವದಕ್ಕೆ ನಮಗೆ ಅವಕಾಶ ಕೊಡಿರಿ. ನೀವು ಯಾವುದನ್ನು ಇಷ್ಟಪಡುತ್ತೀರಿ: ನಿಮ್ಮ ಸ್ನೇಹಿತನು ನಿಮಗೆ ಸುಮ್ಮನೆ ಕೆಲವು ಪತ್ರಗಳನ್ನು ಬರೆಯಬೇಕೆಂಬುದೋ ಅಥವಾ ಆತನೇ ಬಂದು ನಿಮ್ಮನ್ನು ಭೇಟಿಮಾಡಬೇಕೆಂಬುದೋ? ಖಂಡಿತವಾಗಿಯೂ, ಆತನೇ ಬರುವಂತದ್ದನ್ನು ನೀವು ಇಷ್ಟಪಡುತ್ತೀರಿ, ಅದರಿಂದ ನೀವು ಆತನೊಂದಿಗೆ ಮುಖಾ ಮುಖಿಯಾಗಿ ಮಾತಾಡುವದಕ್ಕೆ ಸಾಧ್ಯವಾಗುತ್ತದೆ.

ಅದರಂತೆಯೇ, ದೇವರು ದೊಡ್ಡವನಾದಾಗ್ಯೂ ಆತನಿಗೆ ಯಾವುದೂ ಅಸಾಧ್ಯವಲ್ಲ ಮತ್ತು ಆತನು ಹೇಗಿದ್ದಾನೆ ಮತ್ತು ನಮಗಾಗಿ ಆತನ ಚಿತ್ತವೇನೆಂಬುದನ್ನು ಜನರಿಗೆ ತಿಳಿಯುವಂತೆ ಮಾಡುವದಕ್ಕೆ ಆತನು ಇಷ್ಟಪಡುತ್ತಾನೆ, ಆತನು ಸುಮ್ಮನೆ ಕೆಲವು ಪತ್ರಗಳನ್ನು ನಮಗೆ ಕಳಿಸಲಿ ಅಥವಾ ಆತನೇ ಬಂದು ನಮ್ಮನ್ನು ಭೇಟಿಮಾಡಲಿ ಎಂದು ನೀವು ಅಂದುಕೊಳ್ಳುತ್ತೀರೋ? ಸ್ನೇಹಿತರೇ, **ಪಾಪಭರಿತ ಜನಾಂಗವನ್ನು ಭೇಟಿಮಾಡುವದಕ್ಕೆ ದೇವರು ತಾನೇ ಬರುತ್ತಾನೆ** ಎಂದು ಪ್ರವಾದಿಗಳು ಪ್ರಕಟಿಸಿರುವದೇ ಶುಭ ಸಂದೇಶವಾಗಿದೆ!

ಸುವಾರ್ತೆಯಲ್ಲಿ, ಜನರೊಳಗೆ ವಾಸಿಸುವದಕ್ಕೆ ದೇವರು ತನ್ನ ವಾಕ್ಯವನ್ನು ಒಂದು ಮನುಷ್ಯನಂತೆ ಲೋಕಕ್ಕೆ ಕಳಿಸಿಕೊಟ್ಟನೆಂಬುದನ್ನು ನಾವು ಕಂಡುಕೊಂಡಿದ್ದೇವೆ, ಅದರಿಂದ ಆತನು ನಮ್ಮನ್ನು ನಮ್ಮ ಪಾಪಗಳಿಂದ ರಕ್ಷಿಸಿದನು. ಪರಲೋಕದಿಂದ ಬಂದ ಆ ಮನುಷ್ಯನು ಯೇಸು ಕ್ರಿಸ್ತನು. ಯೇಸು ದೇವರ ಮಗನೆಂಬುದಾಗಿ ಕರೆಯಲ್ಪಡುವದಕ್ಕೆ ಯೋಗ್ಯನಾಗಿದ್ದನು, ಯಾಕಂದರೆ ಆತನು ಆದಿಯಲ್ಲಿ ದೇವ –ರೊಂದಿಗಿದ್ದ ವಾಕ್ಯವಾಗಿದ್ದನು. ಯೇಸು ದೇವರ ನಿತ್ಯತ್ವದ ಮಗನು, ದೇವರ ಗುಣಲಕ್ಷಣಗಳನ್ನು ಮನುಷ್ಯನಿಗೆ ಪ್ರಕಟಪಡಿಸಿದ ದೇವರ ಸಮಗ್ರ ಪ್ರತಿನಿಧಿಯಾಗಿದ್ದಾನೆ. ನಾವು ಆಗಾಗ್ಗೆ ಒಬ್ಬ ಯೌವನಸ್ಥ ಮನುಷ್ಯನಿಗೆ, "ಇವನು ತನ್ನ ತಂದೆಯ ಹಾಗಿದ್ದಾನೆ" ಎಂದು ಹೇಳುತ್ತೇವಲ್ಲಾ. ಹಾಗೆಯೇ ಯೇಸುವಿನ ವಿಷಯದಲ್ಲಿಯೂ ಸಹ. ಯೇಸು ದೇವರ ಸ್ವರೂಪವನ್ನು ಹೊತ್ತುಕೊಂಡಿದ್ದಾನೆ. ಯೇಸುವಿನ ಹೋಲಿಕೆಯನ್ನು ತಿಳಿಯುದಕ್ಕೆ, ದೇವರನ್ನು ತಿಳಿದುಕೊಳ್ಳಬೇಕು. ಹಾಗಾಗಿ ವಾಕ್ಯವು ಹೇಳುವದೇನೆಂದರೆ:

**"ಪುರಾತನ ಕಾಲದಲ್ಲಿ ನಮ್ಮ ಪಿತೃಗಳ ಸಂಗಡ ಪ್ರವಾದಿಗಳ ಬಾಯಿಂದ** ಭಾಗಭಾಗವಾಗಿಯೂ ವಿಧವಿಧವಾಗಿಯೂ ಮಾತಾಡಿದ ದೇವರು **ಈ ಅಂತ್ಯ ದಿನಗಳಲ್ಲಿ ನಮ್ಮ ಸಂಗಡ ಮಗನ ಮುಖಾಂತರ ಮಾತಾಡಿದ್ದಾನೆ.** ಈತನನ್ನು ಎಲ್ಲಕ್ಕೂ ಬಾಧ್ಯನನ್ನಾಗಿ ನೇಮಿಸಿ – –ದನು, ಈತನ ಮೂಲಕವೇ ಜಗತ್ತನ್ನು ಉಂಟುಮಾಡಿದನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿ ಮಾಡಿದ ಮೇಲೆ ಉನ್ನತ ಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾರೂಢನಾದನು." (ಇಬ್ರಿಯ–1:1-3)

ಕೊನೆಯ ಒಂದು ಮಾತು. ಆತನು ಯೇಸುವನ್ನು ಯಾಕೆ ತನ್ನ ಮಗನೆಂಬುದಾಗಿ ಕರೆದನೆಂಬುದನ್ನು ನೀವು ಪೂರ್ತಿಯಾಗಿ **ಗ್ರಹಿಸಿ– –ಕೊಳ್ಳಬೇಕೆಂದು** ದೇವರು ಹೇಳಲಿಲ್ಲ, ಆದರೆ ಕೇವಲ ನೀವು **ಇದನ್ನು ನಂಬಬೇಕು** ಅಷ್ಟೆ. ಕೀರ್ತನೆಗಳಲ್ಲಿ ಪ್ರವಾದಿಯಾದ ದಾವೀದ – ನಿಗೆ, **"ಮಗನಿಗೆ** ಮುದ್ದಿಡಿರಿ**"** ಎಂದು ಬರೆಯುವದಕ್ಕೆ ಪ್ರೇರಿಸಿದವನು ದೇವರೇ ಆಗಿದ್ದಾನೆಂಬುದನ್ನು ನೀವು ಜ್ಞಾಪಿಸಿಕೊಳ್ಳಿರಿ. **"**ಯೆಹೋವನನ್ನು ಭಯಭಕ್ತಿಯಿಂದ ಸೇವಿಸಿರಿ; ನಡುಗುತ್ತಾ ಉಲ್ಲಾಸಪಡಿರಿ. ಆತನ ಮಗನಿಗೆ ಮುದ್ದಿಡಿರಿ; ಇಲ್ಲವಾದರೆ ಆತನ ಕೋಪವು ಬೇಗನೆ ಪ್ರಜ್ವಲಿಸಲು ನೀವು ದಾರಿಯಲ್ಲೇ ನಾಶವಾದೀರಿ. ಆತನ ಮರೆಹೊಕ್ಕವರೆಲ್ಲರು ಧನ್ಯರು." (ಕೀರ್ತನೆ–2:11,12) ಸುವಾರ್ತೆಯಲ್ಲಿ ಅಪೊಸ್ತಲನಾದ ಯೋಹಾನನಿಗೆ ಬರೆಯುವದಕ್ಕೆ ಪ್ರೇರಿಸಿದವನು ಸಹ ದೇವರೇ ಆಗಿದ್ದಾನೆ:

"ಯೇಸು ಇನ್ನು ಎಷ್ಟೋ ಸೂಚಕಕಾರ್ಯಗಳನ್ನು ತನ್ನ ಶಿಷ್ಯರ ಮುಂದೆ ಮಾಡಿದನು. ಅವುಗಳು ಈ ಗ್ರಂಥದಲ್ಲಿ ಬರೆದಿರುವದಿಲ್ಲ. ಆದರೆ **ಯೇಸು ದೇಕುಮಾರನಾದ ಕ್ರಿಸ್ತನೆಂದು ನೀವು ನಂಬುವಂತೆಯೂ ನಂಬಿ ಆತನ ಹೆಸರಿನ ಮೂಲಕವಾಗಿ ಜೀವವನ್ನು ಪಡಕೊಳ್ಳು – ವಂತೆಯೂ ಇಷ್ಟೆಲ್ಲಾ ಬರೆದದೆ."** (ಯೋಹಾನ–20:30,31). **"ಆತನ ಮಗನನ್ನು ನಂಬುವವನಿಗೆ ನಿತ್ಯಜೀವ ಉಂಟು; ಮಗನಿಗೆ ಒಳಗಾಗ –ದವನು ಜೀವವನ್ನು ಕಾಣುವದೇ ಇಲ್ಲ; ದೇವರ ಕೋಪವು ಅವನ ಮೇಲೆ ನೆಲೆಗೊಂಡಿರುವದು."** (ಯೋಹಾನ–3:36)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ದೇವರ ಚಿತ್ತವಾದರೆ, ಮುಂದಿನ ಪ್ರಸಾರದಲ್ಲಿ, ಹೆಚ್ಚು ಪ್ರಶ್ನೆಗಳು ಮತ್ತು ಉತ್ತರಗಳೊಂದಿಗೆ ನಾವು ಮುಂದುವರಿಸುತ್ತೇವೆ. . . .

ಸತ್ಯವೇದದ ಈ ಹೇಳಿಕೆಯನ್ನು ನೀವು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ನರಜಾತಿಯೆಲ್ಲಾ ಹುಲ್ಲಿನ ಹಾಗಿದೆ, ಅದರ ಪ್ರಭಾವವೆಲ್ಲಾ ಹುಲ್ಲಿನ ಹೂವಿನಂತದೆ. ಹುಲ್ಲು ಒಣಿಹೋಗುವದು, ಹೂವು ಉದುರಿ ಹೋಗುವದು; ಕರ್ತನ ಮಾತೋ ಸದಾಕಾಲವೂ ಇರುವದು ಎಂದು ಹೇಳಿದೆಯಷ್ಟೆ. ಆ ಮಾತು ಯಾವದೆಂದರೆ ನಿಮಗೆ ಸಾರಲ್ಪಟ್ಟ ಸುವಾರ್ತಾ ವಾಕ್ಯವೇ."** (1ಪೇತ್ರ–1:24,25)

[ಪಾಠ 90:ಮನುಷ್ಯನ ಪ್ರಶ್ನೆಗಳು; ದೇವರ ಉತ್ತರಗಳು(#1)][ಸಾರಾಂಶಗಳ ಪಟ್ಟಿ][ಪಾಠ 92:ಕ್ರಿಸ್ತನ ಶಿಷ್ಯರು ಹೇಗೆ ಜೀವಿಸಬೇಕು]

ಪಾಠ 91

# ಮನುಷ್ಯನ ಪ್ರಶ್ನೆಗಳು; ದೇವರ ಉತ್ತರಗಳು

ಭಾಗ 2

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಕೇಳುಗರಾದ ನಿಮ್ಮಿಂದ ಪಡೆದುಕೊಂಡಂತಹ **ಪ್ರಶ್ನೆಗಳಿಗೆ** ಉತ್ತರ ಕೊಡುವದನ್ನು ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ಪ್ರಾರಂಭ ಮಾಡಿದ್ದೆವು, ಅದನ್ನು ಈದಿನ ಮುಂದುವರಿಸುತ್ತಿದ್ದೇವೆ. ನಮಗೆ ಪತ್ರಗಳನ್ನು ಕಳಿಸಿದ ಪ್ರತಿಯೊಬ್ಬರಿಗೂ ನಾವು ವಂದಿಸುವವರಾಗಿ –
–ದ್ದೇವೆ. ನಾವು ಪ್ರಾರಂಭಿಸುವದಕ್ಕಿಂತ ಮೊದಲು, ಸ್ಪಷ್ಟಪಡಿಸಿಕೊಳ್ಳಬೇಕಾದ ಒಂದು ಅಗತ್ಯವಾದ ಸಂಗತಿಯಿದೆ. ನಿಮ್ಮ ಪ್ರಶ್ನೆಗಳಿಗೆ ಉತ್ತರಿಸುವದಕ್ಕೆ, ನಾವು ನಮ್ಮ ಸ್ವಂತ ತಿಳುವಳಿಕೆ ಅಥವಾ ಇತರರ ತಿಳುವಳಿಕೆಯ ಮೇಲೆ ಅವಲಂಬಿಸುವದಕ್ಕೆ ಪ್ರಯತ್ನಿಸಿಲ್ಲ. ನಾವು **ದೇವರ ವಾಕ್ಯದ ಮೇಲೆ ಮಾತ್ರ** ಅವಲಂಬಿತರಾಗಿದ್ದೇವೆ. ನಿಮ್ಮ ಪ್ರಶ್ನೆಗಳಿಗೆ ನಮ್ಮಲ್ಲಿ ಉತ್ತರವಿಲ್ಲ, ಆದರೆ ಆ ಉತ್ತರಗಳು ದೇವರಲ್ಲಿವೆ ಮತ್ತು ಅವುಗಳು ಪರಿಶುದ್ದ ಗ್ರಂಥಗಳಲ್ಲಿ ನಮಗೆ ಕೊಡಲ್ಪಟ್ಟಿವೆ. ಸತ್ಯವೇದ ಹೀಗೆ ಹೇಳುತ್ತದೆ: "ದೇವರ ವಾಕ್ಯವು ಸಜೀವವಾದದ್ದು, ಕಾರ್ಯಸಾಧಕವಾದದ್ದು, ಯಾವ ಇಬ್ಬಾಯಿ ಕತ್ತಿಗಿಂತಲೂ ಹದವಾದದ್ದು, ಪ್ರಾಣ ಅತ್ಮಗಳನ್ನೂ ಕೀಲುಮಜ್ಜೆಗಳನ್ನೂ ವಿಭಾಗಿಸುವಷ್ಟು ಮಟ್ಟಿಗೂ ತೂರಿಹೋಗುವಂಥದು, ಹೃದಯದ ಆಲೋಚನೆಗಳನ್ನೂ ಉದ್ದೇಶಗಳನ್ನೂ ವಿವೇಚಿಸುವಂಥದು ಅಗಿದೆ." (ಇಬ್ರಿಯ–4:12). ಹಾಗಾದರೆ ಈಗ, ನಿಮ್ಮ ಪ್ರಶ್ನೆಗಳಿಗೆ ತಿರುಗೋಣ. ಮತ್ತೆ ಪ್ರಶ್ನೆಗಳನ್ನು ಓದುವದಕ್ಕೆ ಇಲ್ಲಿ ಒಬ್ಬ ಸ್ನೇಹಿತರನ್ನು ನಾವು ಹೊಂದಿ
–ರುವದಕ್ಕೆ ಸಂತೋಷಿಸುತ್ತೇವೆ.

೧. ವಂದನೆಗಳು. ಈ ಪತ್ರದಲ್ಲಿ ಒಬ್ಬ ಕೇಳುಗರು ಹೀಗೆ ಬರೆದಿದ್ದಾರೆ: **ಒಂದು ಕಾರ್ಯಕ್ರಮದಲ್ಲಿ ನೀವು ಹೀಗೆ ಹೇಳಿದ್ದೀರಿ, ಏನೆಂದರೆ: "ಕೆಟ್ಟದ್ದು ದೇವರಿಂದ ಬರುವದಿಲ್ಲ." ಎಂದು. ಇದನ್ನು ನಾನು ಒಪ್ಪುವದಿಲ್ಲ, ಯಾಕಂದರೆ ದೇವರು ಒಳ್ಳೆಯದನ್ನು ಮಾಡು –
–ವದಕ್ಕಿಂತ ಮೊದಲು ಕೆಟ್ಟದ್ದನ್ನು ಆತನು ಸೃಷ್ಟಿಮಾಡಿದನು ಎಂದು ನಾನು ನಂಬಿದ್ದೇನೆ.**

ಸತ್ಯವೇದದಲ್ಲಿ ಕಂಡುಬರುವ ಒಂದು ಪ್ರಶ್ನೆಯೊಂದಿಗೆ ಈ ಪ್ರಶ್ನೆಗೆ ಉತ್ತರ ಕೊಡುವದಕ್ಕೆ ನಮಗೆ ಅವಕಾಶ ಕೊಡಿರಿ. "ಊಟೆಯ ಒಂದೇ ಬಾಯಿಂದ ಸಿಹಿನೀರು ಕಹಿನೀರು ಎರಡೂ ಹೊರಡುವದುಂಟೇ? ಎಂದಿಗೂ ಇಲ್ಲ!" (ಯಾಕೋಬ–3:11). ಹೇಗೆ ಒಂದು ಊಟೆ (ಬುಗ್ಗೆ) ಅಥವಾ ಒಂದು ಬಾವಿಯು ಸಿಹಿನೀರು ಮತ್ತು ಕಹಿನೀರನ್ನು ಕೊಡುವದಿಲ್ಲವೋ ಹಾಗೆಯೇ ದೇವರು ಒಳ್ಳೆಯದು ಮತ್ತು ಕೆಟ್ಟದ್ದು ಎಂಬ ಎರಡರ ಮೂಲವಾಗಿಲ್ಲ. ಪರಿಶುದ್ಧ ವಾಕ್ಯಗಳು ಹೀಗೆ ಹೇಳುತ್ತವೆ:

"ದೇವರು **ಬೆಳಕಾಗಿದ್ದಾನೆ**; ಆತನಲ್ಲಿ ಎಷ್ಟು ಮಾತ್ರವೂ **ಕತ್ತಲೆ ಇಲ್ಲ!"** (1ಯೋಹಾನ–1;5). "ಯಾವನಾದರೂ ಪಾಪ ಮಾಡುವದಕ್ಕೆ ಪ್ರೇರೇಪಿಸಲ್ಪಡುವಾಗ ಈ ಪ್ರೇರಣೆಯು ನನಗೆ ದೇವರಿಂದ ಉಂಟಾಯಿತೆಂದು ಹೇಳಬಾರದು. **ದೇವರು ಕೆಟ್ಟದ್ದಕ್ಕೇನೂ ಸಂಬಂಧಪಟ್ಟ–
–ವನಲ್ಲ; ಆತನು ಯಾರನ್ನೂ ಪಾಪಕ್ಕೆ ಪ್ರೇರೇಪಿಸುವದಿಲ್ಲ**. ಆದರೆ ಪ್ರತಿಯೊಬ್ಬನೂ ತನ್ನಲ್ಲಿರುವ ಆಶಾಪಾಶದಿಂದ ಎಳೆಯಲ್ಪಟ್ಟು ಮರು
–ಳುಗೊಂಡವನಾಗಿ ಪ್ರೇರೇಪಿಸಲ್ಪಡುತ್ತಾನೆ. ನನ್ನ ಪ್ರಿಯ ಸಹೋದರರೇ, ಮೋಸಹೋಗಬೇಡಿರಿ. ಎಲ್ಲಾ **ಒಳ್ಳೇ ದಾನಗಳೂ ಕುಂದಿಲ್ಲದ ಎಲ್ಲಾ ವರಗಳೂ** ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲಕಾರಣನಾದವನಿಂದ ಇಳಿದುಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ. ಆತನು ತನ್ನ ಸುಚಿತ್ತದ ಪ್ರಕಾರ ಸತ್ಯಬೋಧನೆಯ ವಾಕ್ಯದಿಂದ ನಮ್ಮನ್ನು ಹುಟ್ಟಿಸಲಾಗಿ ನಾವು ಆತನ ಸೃಷ್ಟಿಗಳಲ್ಲಿ ಪ್ರಥಮಫಲದಂತಾದೆವು." (ಯಾಕೋಬ–1:13,14,16-18)

ದೇವರು ಪ್ರವಾದಿಯಾದ ಹಬಕ್ಕೂಕನು ಹೀಗೆ ಬರೆದಿದ್ದಾನೆ:"ನನ್ನ ದೇವರಾದ ಯೆಹೋವನೇ. . ..ನೀನು ಅನಾದಿಯಿಂದಿದ್ದೀಯಲ್ಲಾ. . .**ಕೇಡನ್ನು ನೋಡಲಾರದ** ಅತಿಪವಿತ್ರ ದೃಷ್ಟಿಯುಳ್ಳವನೇ, ಕೆಡುಕನ್ನು ಕಟಾಕ್ಷಿಸಲಾರವನೇ. . ."(ಹಬ–1:12,13). ಆದಕಾರಣ ದೇವರು **ಸಹಿಸಿಕೊಳ್ಳದಿದ್ದರೆ** ಕೆಟ್ಟದ್ದು ಯಾವುದು, ಕೆಟ್ಟದ್ದನ್ನು ದೇವರು ಸೃಷ್ಟಿಸಿದನೆಂಬುದನ್ನು ನಾವು ನಂಬಬಾರದು. ದೇವರು ಲೂಸಿಫರನೆಂಬ ಹೆಸರುಳ್ಳ ದೂತನನ್ನು ಸೃಷ್ಟಿಸಿದನು, ಆದರೆ ಲೂಸಿಫರನು ದೇವರಿಗೆ ವಿರುದ್ಧವಾಗಿ ತಿರುಗಿಬೀಳುವದನ್ನು ಆರಿಸಿಕೊಂಡು ದುರಾತ್ಮ –
ನಾದನು. ದೇವರು ಆದಾಮನನ್ನು ಉಂಟುಮಾಡಿದನು, ಆದರೆ ಆದಾಮನು ದೇವರಿಗೆ ಅವಿಧೇಯನಾಗುವದನ್ನು ಆಯ್ಕೆ ಮಾಡಿ –
–ಕೊಂಡು ಪಾಪಿಯಾದನು. ದುರಾತ್ಮ ಮತ್ತು ಮನುಷ್ಯನ ಹೃದಯದ ಅನೀತಿವಂತಿಕೆಯು ಕೆಟ್ಟದ್ದರ ಮೂಲವಾಗಿದೆ ಮತ್ತು ದೇವರು ಹಾಗೂ ಆತನ ವಾಕ್ಯವು ಒಳ್ಳೆಯದರ ಮೂಲವಾಗಿದೆ ಎಂದು ದೇವರ ವಾಕ್ಯವು ನಮಗೆ ಕಲಿಸುತ್ತದೆ.

೨.) ಮುಂದಿನ ಪ್ರಶ್ನೆ: **ದೇವರು ಪರಿಶುದ್ಧನೂ ಮತ್ತು ಕನಿಕರದಿಂದ ತುಂಬಿದವನಾಗಿದ್ದರೆ, ಜಗಳಗಳನ್ನು, ಯುದ್ಧಗಳನ್ನು, ಕೊಲೆ –ಗಳನ್ನು ಮತ್ತು ಪ್ರಪಂಚದ ದುಷ್ಟತನವನ್ನು ನೋಡುತ್ತಾ ಯಾಕೆ ಬೆಂಬಲವಾಗಿದ್ದಾನೆ? ಕಷ್ಟದಲ್ಲಿರುವ ಜನರಿಗೆ ಆತನು ಏನಾದರೂ ಸಹಾಯ ಮಾಡುವದಕ್ಕೆ ಸಾಧ್ಯವಾಗಲಿಲ್ಲವೋ**?

ನಿಜವಾಗಿಯೂ, ದೇವರು ಕನಿಕರದ ಕರ್ತನಾಗಿದ್ದು ಕಷ್ಟದಲ್ಲಿರುವ ಜನರಿಗೆ ಏನು ಸಹಾಯ ಮಾಡಬೇಕೋ ಅದನ್ನು **ಈಗಾಗಲೇ ಆತನು ಮಾಡಿದ್ದಾನೆ!** ಆತನು ಸ್ವತ: ಜನರನ್ನು ಸಂಧಾನ ಮಾಡುವದಕ್ಕೆ ಮತ್ತು ಜನರು ಲೋಕದ ಪಾಪಗಳಿಗಾಗಿ ಸಾಯುವದರಿಂದ ಪರಸ್ಪರ ಸಂಧಾನವಾಗುವದಕ್ಕೆ ಯೇಸು ಕ್ರಿಸ್ತನೆಂಬ ಪರಿಶುದ್ದ ವಿಮೋಚಕನನ್ನು ಕಳಿಸಿದನು. ಹೀಗಿದ್ದರೂ, ಜನರು ನಿಜವಾಗಿಯೂ ತಮ್ಮೊಳಗೆ ಸಂಧಾನವಾಗುವದಕ್ಕಿಂತ ಮೊದಲು, ದೇವರು ಕಳಿಸಿದ ಯೇಸುವನ್ನು ರಕ್ಷಕನೆಂದು ಮೊದಲು ನಂಬಬೇಕು ಮತ್ತು ಆತನಿಗೆ ಅಧೀನರಾಗಬೇಕು. ದೇವರೊಂದಿಗಿನ ನಮ್ಮ ಸಂಬಂಧವು ಯಾವಾಗ ಸರಿಯಾಗಿರುತ್ತದೋ, ಆಗ ಜನರೊಂದಿಗಿನ ನಮ್ಮ ಸಂಬಂಧವು ಸರಿಯಾಗಿರುತ್ತದೆ. ಆಗ ಮಾತ್ರ ನಿಜವಾದ ಸಮಾಧಾನವು ಇರುತ್ತದೆ. ದೇವರಿಗೆ **ನಮ್ಮ ಪ್ರತಿಕ್ರಿಯೆಯ** ಮೇಲೆ ಪ್ರತಿಯೊಂದು ಅವಲಂಬಿ –ತವಾಗಿರುತ್ತದೆ. ದೇವರು ಒದಗಿಸಿರುವ ಪರಿಹಾರವನ್ನು ನಾವು ತೆಗೆದುಕೊಳ್ಳಬೇಕು. ದೇವರು ಈ ಲೋಕದ ಕೆಟ್ಟತನಕ್ಕಾಗಿ ಇದಕ್ಕೆ ನ್ಯಾಯತೀರಿಸುತ್ತಾನೆ ಎಂಬುದನ್ನೂ ಸಹ ನೆನಪಿನಲ್ಲಿಟ್ಟುಕೊಳ್ಳಬೇಕು. ದೇವರ ವಾಕ್ಯವು ಹೇಳುವದೇನೆಂದರೆ, ಸತ್ಯ ಒಪ್ಪಿಕೊಳ್ಳುವದನ್ನು ಮತ್ತು ಅದಕ್ಕೆ ವಿಧೇಯರಾಗುವದನ್ನು ತಿರಸ್ಕರಿಸುವ ಪ್ರತಿಯೊಬ್ಬರನ್ನೂ ತೀರ್ಪುಮಾಡುವದಕ್ಕೆ ಯುಗದ ಅಂತ್ಯದಲ್ಲಿ ಕರ್ತನಾದ ಯೇಸು ಕ್ರಿಸ್ತನು ಹಿಂತಿರುಗಿ ಬರುತ್ತಾನೆ ಎಂಬುದು. ದೇವರ ವೈರಿಗಳೆಲ್ಲರನ್ನೂ ಕರ್ತನಾದ ಯೇಸು ನಾಶಪಡಿಸಿದ ಮೇಲೆ ಆತನು ಇಡೀ ಸೃಷ್ಟಿಯನ್ನು ನವೀಕರಿಸುತ್ತಾನೆ. ಅನಂತರ ವಾಕ್ಯದಲ್ಲಿ ಬರೆದಿರುವದು ನೆರವೇರುತ್ತದೆ, ಅದೇನೆಂದರೆ: **"ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ**. . . .ಇನ್ನು ಮರಣವಿರುವದಿಲ್ಲ, ಇನ್ನು ದು:ಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿ – –ದ್ದದ್ದೆಲ್ಲಾ ಇಲ್ಲದೆ ಹೋಯಿತು." (ಪ್ರಕ–22:3; 21:4)

3.) ಈದಿನದ ಮೂರನೆಯ ಪ್ರಶ್ನೆ ಇದು: **ಏನೋ ನನಗೆ ತೊಂದರೆ ಕೊಡುತ್ತಿದೆ. ನಾನು ಪಾಪ ಮಾಡಿದರೆ ಆ ಪಾಪವು ನನಗೆ ಪರಿಣಾಮ ಬೀರುತ್ತದೆ, ಆದರೆ ಇದು ನನ್ನ ಮಕ್ಕಳಿಗೆ ಪರಿಣಾಮ ಬೀರುವದಿಲ್ಲ ಯಾಕಂದರೆ ಅವರು ಈ ಪಾಪವನ್ನು ಮಾಡಿರುವದಿಲ್ಲ ಎಂದು ನಾನು ಯಾವಾಗಲೂ ನಂಬಿದವನಾಗಿದ್ದೇನೆ. ಆದರೆ ನಮ್ಮ ಪೂರ್ವಿಕನಾದ ಆದಾಮನು ಏದೆನ್ ತೋಟದಲ್ಲಿ ಮಾಡಿದ ಪಾಪವು ಅವನ ಸಂತನದವರಿಗೆಲ್ಲಾ ಹರಡಿತು ಮತ್ತು ಅದಕ್ಕಾಗಿ ದೇವರು ಅವರನ್ನು ಶಿಕ್ಷಿಸುತ್ತಾನೆ ಎಂದು ನೀವು ಹೇಳುತ್ತೀರಿ. ಇದು ಹೇಗೆ ಸಾಧ್ಯ**?

ಉಲೂಫ್ ಹೀಗೆ ಹೇಳುತ್ತದೆ: "ಒಂದು ಸಾಂಕ್ರಾಮಿಕವು ಯಾರಿಂದ ಉತ್ಪತ್ತಿಯಾಗಿರುತ್ತದೋ ಅವರನ್ನು ಮಲಿನಗೊಳಿಸುವದಿಲ್ಲ!" ಮತ್ತು "ಜಿಗಿದಾಡುವ ಜಿಂಕೆಯು ಬಿಲದಲ್ಲಿ ವಾಸಿಸುವಂತದ್ದಕ್ಕೆ ಜನ್ಮ ಕೊಡುವದಿಲ್ಲ." ಇದು ನಿಜವಲ್ಲವಾ? ನಿಮಗೆ ಒಂದು ಮಗುವಿ –ದ್ದರೆ, ಅದನ್ನು ನಿಮ್ಮ ಸ್ವಂತ ಮನೆಯಲ್ಲಿಯೇ ಬೆಳೆಸುತ್ತೀರಿ, ಅದು ತನ್ನ ಗುಣಲಕ್ಷಣವನ್ನು, ಒಳ್ಳೇದು ಕೆಟ್ಟದ್ದನ್ನು, ತನ್ನ ಪೋಷಕರಿಂದ ಪಡೆದುಕೊಳ್ಳುತ್ತದೆ ಎನ್ನುವದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ನೀವು ಮಾತಾಡುವ ರೀತಿ, ನಿಮ್ಮ ಜೀವನದ ರೀತಿ, ನಿಮ್ಮ ಆಲೋಚ –ನೆಯ ರೀತಿ ಮತ್ತು ಸಂತಿಗಳನ್ನು ಮಾಡುವ ನಿಮ್ಮ ರೀತಿಯನ್ನು ನಿಮ್ಮ ಮಗು ಪ್ರತಿಬಿಂಬಿಸುತ್ತದೆ. ನಾವೆಲ್ಲರೂ ಆದಾಮ ಮತ್ತು ಹವ್ವರ ಕುಟುಂಬಕ್ಕೆ ಸೇರಿದವರು. ದೇವರ ಆಜ್ಞೆಗೆ ಅವಿಧೇಯರಾದ ಸಂತಾನದವರಿಂದ ನಾವು ಬಂದವರಾಗಿದ್ದೇವೆ. ನಾವು ನಮ್ಮ ಪೂರ್ವಿಕರಂತೆ ಇಲ್ಲವೋ? ದೇವರ ಆಜ್ಞೆಗಳಿಂದ ಒಂದು ಸಲವೂ ಸಹ ನಾವು ಎಂದಿಗೂ ಬೇರೆಯಾಗಿಲ್ಲ ಎಂದು ನಮ್ಮೊಳಗೆ ಯಾರು ಹೇಳುವದಕ್ಕೆ ಸಾಧ್ಯ? ನಾವೆಲ್ಲರೂ ಅಪರಾಧಿಗಳು! ದೇವರ ಆಜ್ಞೆಗಳಿಗೆ ಅವಿಧೇಯರಾಗುವಂತಹ ಸ್ವಭಾವದೊಂದಿಗೆ ನಾವು ಹುಟ್ಟಿದವರಾಗಿದ್ದೇವೆ. ಈ ಅವಿಧೇಯತೆಯ ಸ್ವಭಾವವನ್ನು ನಾವು ಯಾರಿಂದ ಸ್ವಾಸ್ಥ್ಯವಾಗಿ ಹೊಂದಿದ್ದೇವೆ? **ಆದಾಮನಿಂದ**. ಒಂದು ಭಯಂಕರವಾದ ರೋಗದ ಹಾಗೆ, ಆದಾಮನ ಪಾಪವು ನಮ್ಮೆಲ್ಲರಲ್ಲಿ ಹರಡಿಕೊಂಡಿತು. ನಾವು ಇದನ್ನು ಇಷ್ಟಪಡಲಿ ಅಥವಾ ಇಷ್ಟ – –ಪಡದಿರಲಿ ಅದು ಇರುವದು ಇದೇ ರೀತಿಯಾಗಿ. ನಿಜವಾಗಿ ಅದನ್ನೇ ದೇವರ ವಾಕ್ಯ ಹೇಳುತ್ತದೆ, ಅದೇನೆಂದರೆ: **"ಒಬ್ಬ ಮನುಷ್ಯ –ನಿಂದಲೇ ಪಾಪವು ಪಾಪದಿಂದ ಮರಣವೂ** ಲೋಕದೊಳಗೆ ಸೇರಿದವು; **ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರ – –ಲ್ಲಿಯೂ ವ್ಯಾಪಿಸಿತು."** (ರೋಮಾ–5:12). ಏನೇ ಆದರೂ, ಎಲ್ಲಾ ಭರವಸೆಯು ಕಳೆದುಹೋಗಲಿಲ್ಲ, ಯಾಕಂದರೆ ದೇವರ ವಾಕ್ಯವು ಇದನ್ನೂ ಸಹ ಹೇಳಿದೆ, ಏನೆಂದರೆ: "ಹೀಗಿರಲಾಗಿ **ಒಂದೇ ಅಪರಾಧದ** ಮೂಲಕ ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ **ಒಂದೇ ಸತ್ಕಾರ್ಯದಿಂದ** ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವ – ವನ್ನು ಫಲಿಸುತ್ತದೆ." (ರೋಮಾ–5:18)

4.) ಮುಂದಿನ ಪ್ರಶ್ನೆ ಇದು: **ಸತ್ಯವೇದವು ಯಾಕೆ ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎಂದು ಎರಡು ಭಾಗಗಳಾಗಿ ಯಾಕೆ ವಿಭಾಗಿಸಲ್ಪಟ್ಟಿದೆ**?

ಸಂಕ್ಷಿಪ್ತವಾಗಿ ಹೇಳುವದಾದರೆ, ಹಳೆ ಒಡಂಬಡಿಕೆಯಲ್ಲಿ ಅಂದರೆ **ಮೊದಲನೆಯ ಒಡಂಬಡಿಕೆಯಲ್ಲಿ**, ಪ್ರವಾದಿಗಳು ಬರೆದಿರುವ ಪ್ರತಿ – –ಯೊಂದೂ, ಮೆಸ್ಸೀಯನು ಹುಟ್ಟುವದಕ್ಕಿಂತ **ಮೊದಲು** ಅವರು ಬರೆದಿರುವಂತದ್ದಾಗಿದೆ. **ಹೊಸ ಒಡಂಬಡಿಕೆಯಲ್ಲಿರುವ** ಪ್ರತಿಯೊಂದು ಮೆಸ್ಸೀಯನು ಹುಟ್ಟಿದ **ನಂತರ** ಬರೆದಿರುವಂತದ್ದು. ಹಾಗಾಗಿ, ಮೊದಲನೆಯ ಒಡಂಬಡಿಕೆಯಲ್ಲಿ ದೇವರ ಪ್ರವಾದಿಗಳು ಬರೆದಿದ್ದ ಸಂದೇಶವು ಏನೇಂದರೆ: "ದೇವರು ಮೆಸ್ಸೀಯನನ್ನು **ಕಳಿಸುತ್ತಾನೆ!"** ಎಂಬದು. ಆದಾಗ್ಯೂ, ಹೊಸ ಒಡಂಬಡಿಕೆಯ ಸಂದೇಶವೇ – –ನೆಂದರೆ: "ದೇವರು ತನ್ನ ಪ್ರವಾದಿಗಳ ಮೂಲಕ ವಾಗ್ದಾನ ಮಾಡಿದಂತೆಯೇ ಮೆಸ್ಸೀಯನನ್ನು **ಕಳಿಸಿದನು!"** ಮೊದಲ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎಂಬುದಾಗಿ ಸತ್ಯವೇದವು ಎರಡು ವಿಭಾಗಗಳನ್ನು ಹೊಂದಿರುವದಕ್ಕೆ ನಾವು ದೇವರಿಗೆ ವಂದನೆಗಳನ್ನು ತಿಳಿಸುತ್ತೇವೆ. ಬಹಳ ಹಿಂದೆ ದೇವರು ಯಾವುದನ್ನೂ ವಾಗ್ದಾನ ಮಾಡಿದ್ದನೋ ಅದನ್ನು ಆತನು ನೆರವೇರಿಸಿರುವದನ್ನು ಈ ಎರಡೂ

ವಿಭಾಗಗಳಲ್ಲಿ ನಾವು ನೋಡುತ್ತೇವೆ! ದೇವರು ತೋರಾದಲ್ಲಿ ಕೀರ್ತನೆಗಳಲ್ಲಿ ಮತ್ತು ಪ್ರವಾದಿಗಳ ಇತರ ಬರಹಗಳಲ್ಲಿ ನಮ್ಮ ಪೂರ್ವಿ –ಕರಿಗೆ ವಾಗ್ದಾನ ಮಾಡಿದಂತೆಯೇ ಆತನು ಯೇಸು ಕ್ರಿಸ್ತನೆಂಬ ಒಬ್ಬ ರಕ್ಷಕನನ್ನು ಕಳಿಸಿದನು. ನದಿಗಳು ಸಮುದ್ರಕ್ಕೆ ಹರಿದು ಹೋಗು –ವಂತೆ, ಪ್ರವಾದಿಗಳ ಗ್ರಂಥಗಳು ತಮ್ಮ ನೆರವೇರಿಕೆಯನ್ನು ಕ್ರಿಸ್ತನಲ್ಲಿ ಕಂಡುಕೊಂಡವು.

5.)ಇಲ್ಲಿ ಇನ್ನೊಂದು ಪ್ರಶ್ನೆಯಿದೆ: **ತಾನು ಪರಲೋಕಕ್ಕೆ ಹೋಗುತ್ತೇನೋ ಅಥವಾ ನರಕಕ್ಕೆ ಹೋಗುತ್ತೇನೋ ಎನ್ನುವದು ಮನುಷ್ಯನಿಗೆ ಗೊತ್ತಿಲ್ಲ ದೇವರೊಬ್ಬನಿಗೆ ಮಾತ್ರ ಇದು ಗೊತ್ತು ಎಂದು ಅನೇಕರು ಹೇಳುತ್ತಾರೆ. ಆದರೆ ಈ ದಿನ ನೀವು ಸತ್ತರೆ, ನೀವು ಪರಲೋಕಕ್ಕೆ ಹೋಗುತ್ತೀರಿ ಎಂದು ನೀವು ಹೇಳುತ್ತೀರಿ. ನೀವು ಯಾವ ಆಧಾರದ ಮೇಲೆ ಇದನ್ನು ಧೈರ್ಯವಾಗಿ ಹೇಳುತ್ತೀರಿ?**

ಇನ್ನೊಂದು ಪ್ರಶ್ನೆಯೊಂದಿಗೆ ಈ ಪ್ರಶ್ನೆಗೆ ಉತ್ತರಿಸೋಣ. ದೇವರು ತನ್ನ ಮಾತಿನಿಂದ ಹಿಂದೆ ಸರಿಯುತ್ತಾನೋ? ದೇವರು ತನ್ನ ಮಾತನ್ನು ಕಾಪಾಡಿಕೊಳ್ಳುವದರಲ್ಲಿ ನಂಬಿಗಸ್ತನಾಗಿದ್ದಾನೋ? ದೇವರ ವಾಕ್ಯ ಹೀಗೆ ಹೇಳುತ್ತದೆ: **ಆತನಲ್ಲಿ ನಂಬಿಕೆಯಿಡುವ ಪ್ರತಿಯೊ – –ಬ್ಬನು** ಆತನ ಹೆಸರಿನ ಮೂಲಕವಾಗಿ ಪಾಪಪರಿಹಾರವನ್ನು ಹೊಂದುವನೆಂದು ಆತನ ವಿಷಯದಲ್ಲಿ ಪ್ರವಾದಿಗಳೆಲ್ಲರು ಸಾಕ್ಷಿ ಹೇಳಿ– –ದ್ದಾರೆ."(ಅಪೊ.ಕೃತ್ಯ–10:43). ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ **ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ** ಈ ಮಾತುಗಳನ್ನು ಬರೆದಿದ್ದೇನೆ." (1ಯೋಹಾನ–5:13).

ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಿರಬೇಕೆಂದು ದೇವರು ತಾನೇ ತನ್ನ ವಾಕ್ಯದಲ್ಲಿ ಹೇಳಿರುವ ನಿಮಿತ್ತದಿಂದ, ಒಬ್ಬನು ತನ್ನ ನಿತ್ಯತ್ವವನ್ನು ಎಲ್ಲಿ ಕಳೆಯುತ್ತಾನೆಂಬುದು ಅವನಿಗೆ ಗೊತ್ತಿಲ್ಲವೆಂದು ಹೇಳುವದಕ್ಕೆ ನಾವು ಯಾರು? ಹೌದು ಪ್ರಿಯ ಸ್ನೇಹಿತರೇ, ಮರ – ಣದ ನಂತರ ನೀವು ಎಲ್ಲಿಗೆ ಹೋಗುತ್ತೀರಿ ಎನ್ನುವದನ್ನು **ನೀವು ತಿಳಿದುಕೊಳ್ಳಬಹುದು!** ಪ್ರಶ್ನೆ ಏನೆಂದರೆ: ನೀವು ಕರ್ತನಾದ ಯೇಸು ಕ್ರಿಸ್ತನಲ್ಲಿ ಮತ್ತು ಆತನ ಸಂಪೂರ್ಣವಾದ ತ್ಯಾಗದಲ್ಲಿ ನಿಜವಾಗಿಯೂ ನಂಬಿಕೆಯಿಟ್ಟವರಾಗಿದ್ದೀರೋ? ಅಥವಾ ನೀವು ನಿಮ್ಮ **"**ಸ್ವಂತ ಕೆಲಸಗಳಲ್ಲಿ**"** ನಂಬಿಕೆಯಿಟ್ಟಿದ್ದೀರೋ? ಕ್ರಿಸ್ತನಲ್ಲಿ ನಂಬಿಕೆಯಿಟ್ಟವರು ಮಾತ್ರ **"**ನಾನು ನಿತ್ಯಜೀವವನ್ನು ಹೊಂದಿದ್ದೇನೆಂದು **ನನಗೆ ಗೊತ್ತು"** ಎಂದು ಪ್ರಾಮಾಣಿಕವಾಗಿ ಹೇಳಬಹುದು.

6.)ವಂದನೆಗಳು. ಈ ಕೇಳುಗರು ಕೇಳುವದೇನೆಂದರೆ: **ತನ್ನ ನಂತರದಲ್ಲಿ ಸಹಾಯಕನು "Parakletos" ಬರುತ್ತಾನೆಂದು ಯೇಸು ಪ್ರಕಟಿಸಿದನು. ಯೇಸು ಯಾರ ಕುರಿತು ಮಾತಾಡಿದ್ದಾನೆ?**

**"**Parakletos" ಒಂದು ಗ್ರೀಕ್ ಶಬ್ದವಾಗಿದ್ದು ಸಮಾಲೋಚಕನು, ಸಹಾಯಕನು, ಅಥವಾ ವಕೀಲನು ಎಂದು ಇದರ ಅರ್ಥ. ವಾಕ್ಯದಲ್ಲಿ **"**Parakletos**"** ಎನ್ನುವದು ಯೇಸುವಿಗೆ ಮತ್ತು ಪವಿತ್ರಾತ್ಮನಿಗೆ ಇಬ್ಬರಿಗೂ ಉಪಯೋಗಿಸಲ್ಪಟ್ಟಿದೆ (1ಯೋಹಾನ–2:1 –ನ್ನು ನೋಡಿರಿ). ನಾವು ಸುವಾರ್ತೆಯಲ್ಲಿ ಓದುವ ಹಾಗೆ, ಕರ್ತನಾದ ಯೇಸು ಪರಲೋಕಕ್ಕೆ ಹಿಂತಿರುಗುವದಕ್ಕಿಂತ ಮೊದಲು ಆತನು ತನ್ನ ಶಿಷ್ಯರಿಗೆ ಹೀಗೆ ವಾಗ್ದಾನ ಮಾಡಿದನು:

**"**ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ **ಬೇರೊಬ್ಬ ಸಹಾಯಕನನ್ನು ಸದಾಕಾಲ** ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ **ಸತ್ಯದ ಆತ್ಮನೇ**. ಲೋಕವು ಆತನನ್ನು ನೋಡದೆಯೂ ತಿಳಿಯದೆಯೂ ಇರುವದ – –ರಿಂದ ಆತನನ್ನು ಹೊಂದಲಾರದು. ನೀವು ಆತನನ್ನು ಬಲ್ಲಿರಿ; ಹೇಗಂದರೆ ನಿಮ್ಮ ಬಳಿಯಲ್ಲಿ **ವಾಸಮಾಡುತ್ತಾನೆ** ಮತ್ತು **ನಿಮ್ಮೊಳಗೆ** ಇರುವನು.. . . .ಆದರೆ ಆ ಸಹಾಯಕನು ಅಂದರೆ ನನ್ನ ಹೆಸರಿನಲ್ಲಿ ತಂದೆಯು ಕಳುಹಿಸಿಕೊಡುವ ಪವಿತ್ರಾತ್ಮನೇ ನಿಮಗೆ ಎಲ್ಲವನ್ನು ಉಪದೇಶಿಸಿ ನಾನು ನಿಮಗೆ ಹೇಳಿದ್ದನ್ನೆಲ್ಲಾ ನಿಮ್ಮ ನೆನಪಿಗೆ ತರುವನು. . .ಆತನು ಬಂದು ಪಾಪ ನೀತಿ ನ್ಯಾಯತೀರ್ಪಿಕೆ ಈ ವಿಷಯ –ಗಳಲ್ಲಿ ಲೋಕಕ್ಕೆ ಅರುಹನ್ನು ಹುಟ್ಟಿಸುವನು. ಅವರು ನನ್ನನ್ನು ನಂಬದೆ ಇರುದರಿಂದ. . . . .ಯೋಹಾನನಂತೂ ನೀರಿನಲ್ಲಿ ದೀಕ್ಷಾ –ಸ್ನಾನ ಮಾಡಿಸಿದನು. ನಿಮಗಾದರೋ ಇನ್ನು ಸ್ವಲ್ಪ ದಿವಸಗಳೊಳಗಾಗಿ ಪವಿತ್ರಾತ್ಮದಲ್ಲಿ ಸ್ನಾನವಾಗುವದು. ಆದಕಾರಣ ನೀವು ಯೆರೂಸಲೇಮನ್ನು ಬಿಟ್ಟು ಹೋಗದೆ ತಂದೆ ಮಾಡಿದಂಥ ನೀವು ನನ್ನಿಂದ ಕೇಳಿದಂಥ ವಾಗ್ದಾನಕ್ಕೆ ಕಾದುಕೊಂಡಿರ್ರಿ. (ಯೋಹಾನ–14:16,17,26; 16:8,9; ಅಪೊ.ಕೃತ್ಯ–1:4,5).

ಸಹಾಯಕನು **ಒಬ್ಬ ಮನುಷ್ಯನಲ್ಲ** ಆದರೆ ಆತನು ಯಾರೂ ನೋಡಲು ಸಾಧ್ಯವಾಗದಂಥ ದೇವರ ಪರಿಶುದ್ಧ ಆತ್ಮನಾದ **ಒಬ್ಬ ಆತ್ಮ – –ನಾಗಿದ್ದಾನೆ** ಎಂದು ಕರ್ತನಾದ ಯೇಸು ಹೇಳಿದ್ದಾನೆ. ತಾನು ಪರಲೋಕಕ್ಕೆ ಹಿಂತಿರುಗಿ ಹೋದ ನಂತರ, ನಿಮ್ಮ ಹೃದಯಗಳಲ್ಲಿ ವಾಸಿಸುವದಕ್ಕೆ ದೇವರು ಪವಿತ್ರಾತ್ಮನನ್ನು ಕಳಿಸಿಕೊಡುತ್ತಾನೆ ಎಂದು ಯೇಸು ತನ್ನ ಶಿಷ್ಯರಿಗೆ ಹೇಳಿದನು. ಯೇಸು ಪರಲೋಕಕ್ಕೆ ಏರಿ ಹೋದ ಹತ್ತು ದಿವಸಗಳ ನಂತರ, ಪಂಚಾಶತ್ತಮ ದಿನದಂದು ನಿಶ್ಚಿತವಾಗಿ ಏನು ಸಂಭವಿಸಿತೆಂಬುದನ್ನು ಕೆಲವು ಕಾರ್ಯಕ್ರಮಗಳ ಹಿಂದೆ ನಾವು ಓದಿಕೊಂಡಿದ್ದೇವೆ.

ಸಂಕ್ಷಿಪ್ತವಾಗಿ ಹೇಳುವದಾದರೆ, ಸುವಾರ್ತೆಯನ್ನು ಅಂಗೀಕರಿಸಿಕೊಳ್ಳುವವರೆಲ್ಲರ ಹೃದಯಗಳಲ್ಲಿ ವಾಸಿಸುವದಕ್ಕೆ ಬಂದಂತಹ ಕ್ರಿಸ್ತನ ಆತ್ಮನೇ ಈ ಸಹಾಯಕನು. ನೀವು ಪ್ರಾಮಾಣಿಕವಾಗಿ ನಂಬುವದಾದರೆ, ಪವಿತ್ರಾತ್ಮನು ನಿಮ್ಮ ಹೃದಯಗಳನ್ನು ಶುದ್ಧಪಡಿಸಿ ನವೀಕರಿಸು –ತ್ತಾನೆ, ಮತ್ತು ನೀವು ದೇವರ ಮಗುವೆಂದು ಗುರುತು ಹಾಕುತ್ತಾನೆ, ಹಾಗೂ ಎಂದೆಂದಿಗೂ ದೇವರ ಸನ್ನಿಧಿಯಲ್ಲಿ ನಿಮಗೆ ಒಂದು ಪಾಲನ್ನು ಕೊಡುತ್ತಾನೆ. ಅದಕ್ಕಾಗಿಯೇ ದೇವರ ವಾಕ್ಯವು ಹೀಗೆ ಹೇಳುತ್ತದೆ:

"ನಿಮ್ಮ ರಕ್ಷಣೆಯೆಂಬ ವಿಷಯವಾದ ಸುವಾರ್ತೆಯೆಂಬ ಸತ್ಯವಾಕ್ಯವನ್ನು ಕೇಳಿ ಕ್ರಿಸ್ತನಲ್ಲಿ ನಂಬಿಕೆಯಿಟ್ಟವರಾದ ನೀವು ಸಹ ವಾಗ್ದಾನ ಮಾಡಲ್ಪಟ್ಟ ಪವಿತ್ರಾತ್ಮನೆಂಬ ಮುದ್ರೆಯನ್ನು ಹೊಂದಿದಿರಿ. ದೇವರು ಸಂಪಾದಿಸಿಕೊಂಡ ಜನರಿಗೆ ವಿಮೋಚನೆಯಾಗುದೆಂಬದಕ್ಕೆ ಪವಿ –ತ್ರಾತ್ಮನು ನಮ್ಮ ಬಾಧ್ಯತೆಗೆ ಸಂಚಕಾರವಾಗಿದ್ದಾನೆ. ಆ ವಿಮೋಚನೆಯು ದೇವರ ಮಹಿಮೆಗೆ ಎಷ್ಟೋ ಪ್ರಖ್ಯಾತಿಯನ್ನು ಉಂಟು ಮಾಡುವದು." (ಎಫೆಸ–1:13,14)

ನಂಬುವವರಾದ ನಮಗೆ, ಪವಿತ್ರಾತ್ಮನು ನಮ್ಮ ಸಹಾಯಕನು, ನಮ್ಮ ಮಾರ್ಗದರ್ಶಕನು, ನಮ್ಮ ಬಲವು, ನಮ್ಮ ಬೋಧಕನು, ಮತ್ತು ಇನ್ನೂ ಹೆಚ್ಚಾಗಿರುವವನೂ ಆಗಿದ್ದಾನೆ. ಎಲ್ಲವನ್ನೂ ವಿವರಿಸಿ ಹೇಳುವದಕ್ಕಾಗದಿರುವಷ್ಟು ಸಂಗತಿಗಳನ್ನು ಆತನು ನಮಗಾಗಿ ಮಾಡಿ – –ದ್ದಾನೆ. ಒಂದು ರೀತಿಯಾಗಿ ಆತನು ನಮ್ಮ ಪ್ರಾರ್ಥನೆಗಳಲ್ಲಿ ನಮಗೆ ಸಹಾಯ ಮಾಡುತ್ತಾನೆ. ನಿಜವಾಗಿ ದೇವರನ್ನು ಪ್ರಾರ್ಥಿಸುವದು ಮತ್ತು ಒಂದು ಪ್ರಾರ್ಥನೆಯನ್ನು ಕಂಠಪಾಠವಾಗಿ ಒಪ್ಪಿಸುವದು, ಇವೆರಡರಲ್ಲಿ ಒಂದು ದೊಡ್ಡ ವ್ಯತ್ಯಾಸವಿದೆ! ದೇವರಿಗೆ ನಿಜವಾದ ಪ್ರಾರ್ಥನೆಗಳನ್ನು ಮಾಡುವದಕ್ಕೆ ಪವಿತ್ರಾತ್ಮನು ನಮಗೆ ಸಹಾಯ ಮಾಡುತ್ತಾನೆ. ಬರೆಯಲ್ಪಟ್ಟಿರುವ ಹಾಗೆ: "ಪವಿತ್ರಾತ್ಮನು ಸಹ ನಮ್ಮ ಅಶಕ್ತಿಯನ್ನು ನೋಡಿ ಸಹಾಯ ಮಾಡುತ್ತಾನೆ. ಹೇಗಂದರೆ ನಾವು ತಕ್ಕ ಪ್ರಕಾರ ಏನು ಬೇಡಿಕೊಳ್ಳಬೇಕೋ ನಮಗೆ ಗೊತ್ತಿಲ್ಲದ್ದರಿಂದ ಪವಿತ್ರಾತ್ಮನು ತಾನೇ ಮಾತಿಲ್ಲದಂಥ ನರಳಾಟದಿಂದ ನಮಗೋಸ್ಕರ ಬೇಡಿಕೊಳ್ಳುತ್ತಾನೆ." (ರೋಮಾ–8:26). ಯೇಸುಕ್ರಿಸ್ತನ ಸುವಾ – ರ್ತೆಯಲ್ಲಿ ನಿಜವಾಗಿಯೂ ನಂಬಿಕೆಯಿಟ್ಟವರಾದ ಎಲ್ಲರ ಹೃದಯಗಳಲ್ಲಿ ಪರಲೋಕದ ಅತಿಥಿಯಾದ ಪವಿತ್ರಾತ್ಮನು ವಾಸಿಸುವವನಾಗಿ –ದ್ದಾನೆ. ವಾಕ್ಯವು ಹೀಗೆ ಹೇಳುತ್ತದೆ: **"ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ."** (ರೋಮಾ–8:9)

7.ಕೊನೆಯ ಪ್ರಶ್ನೆಯು ಹೀಗಿದೆ: **ಯೇಸು ಕ್ರಿಸ್ತನನ್ನು ನನ್ನ ರಕ್ಷಕನೆಂಬುದಾಗಿ ನಾನು ಸ್ವೀಕರಿಸಿಕೊಂಡರೆ ನಾನು ಪರಲೋಕಕ್ಕೆ ಹೋಗುತ್ತೇ –ನೆಂಬುದನ್ನು ನಿಮ್ಮ ಬೋಧನೆಗಳಿಂದ ನಾನು ಅರ್ಥಮಾಡಿಕೊಂಡೆ. ಹಾಗಾದರೆ ನಾನು ಇಷ್ಟಪಡುವಂತೆ ಜೀವಿಸಿ, ಕೆಟ್ಟ ಕೆಲಸಗಳನ್ನು ಮಾಡಿದರೂ ಸಹ ನಾನು ಸತ್ತ ನಂತರ ಪರಲೋಕಕ್ಕೆ ಹೋಗುವದಕ್ಕೆ ಸಾಧ್ಯ ಎಂದು ಇದರ ಅರ್ಥವೋ? ಸತ್ಯವೇದ ಏನು ಬೋಧಿಸುತ್ತದೆ?**

ರೋಮಾ ಪುಸ್ತಕದ ಆರನೆಯ ಅಧ್ಯಾಯದಲ್ಲಿ ಈ ಪ್ರಶ್ನೆಗೆ ವಾಕ್ಯವು ಸ್ಪಷ್ಟವಾಗಿ ಉತ್ತರಿಸುತ್ತದೆ, ಏನೆಂದರೆ, "ದೇವರ ಕೃಪೆಯು ಹೆಚ್ಚಲಿ ಎಂದು ನಾವು ಪಾಪದಲ್ಲಿ ಇನ್ನೂ ಇರಬೇಕೋ? ಎಂದಿಗೂ ಇರಬಾರದು. ಪಾಪದ ಪಾಲಿಗೆ ಸತ್ತವರಾದ ನಾವು ಇನ್ನೂ ಅದರಲ್ಲೇ ಬದುಕುವದು ಹೇಗೆ?"(ರೋಮಾ–6:1,2) ಶಿಲುಬೆಯ ಮೇಲಿನ ಮೆಸ್ಸೀಯನಾದ ಯೇಸು ಕ್ರಿಸ್ತನ ಮರಣವು ಮತ್ತು ಸಮಾಧಿಯಿಂದ ಆತನ ಪುರುತ್ಥಾನವು **ಪಾಪದ ದಂಡನೆಯಿಂದ** ಮಾತ್ರವಲ್ಲ, ಆದರೆ **ಪಾಪದ ಬಲದಿಂದ** ಸಹ **ಪಾಪಿಗಳನ್ನು ರಕ್ಷಿಸುವದಕ್ಕೆ** ದೇವರ ನೀತಿಯುಳ್ಳ ಯೋಜನೆಯಾಗಿದೆ. ಒಂದು ಪ್ರಾಮಾಣಿಕವಾದ ನಂಬಿಕೆಯಿಂದ ನೀವು ನಿಮ್ಮ ಹೃದಯಗಳಲ್ಲಿ ಸುವಾರ್ತೆಯನ್ನು ನಂಬಿ – –ದರೆ, ದೇವರ ವಾಕ್ಯವು ನಮಗೆ ಬೋಧಿಸುವದೇನೆಂದರೆ, ನೀವು ನಂಬಿದ ತಕ್ಷಣವೇ, ದೇವರು ಎರಡು ಕೆಲಸಗಳನ್ನು ನಿಮ್ಮಲ್ಲಿ ನೆರ –ವೇರಿಸುತ್ತಾನೆ:

**ಮೊದಲನೆಯದಾಗಿ, ದೇವರು** ತಾನು ವಾಗ್ದಾನ ಮಾಡಿದಂತೆ ಕ್ರಿಸ್ತನ ಹೆಸರಿನಲ್ಲಿ **ನಿಮ್ಮ ಎಲ್ಲಾ ಪಾಪಗಳನ್ನೂ ಕ್ಷಮಿಸಿಬಿಡುತ್ತಾನೆ.**

**ಎರಡನೆಯದಾಗಿ**, ಪವಿತ್ರಾತ್ಮನ ಬಲದಿಂದ **ದೇವರು ನಿಮ್ಮ ಹೃದಯಗಳನ್ನು ನವೀಕರಿಸುತ್ತಾನೆ.** ಆಗ ನೀವು ನೀತಿವಂತಿಕೆಯನ್ನು ಪ್ರೀತಿ – ಸುವದಕ್ಕೆ ಮತ್ತು ಕೆಟ್ಟದ್ದನ್ನು ದ್ವೇಷಿಸುವದಕ್ಕೆ ಪ್ರಾರಂಭಿಸುತ್ತೀರಿ, ಯಾಕಂದರೆ ದೇವರು ನಿಮ್ಮಲ್ಲಿ ತನ್ನ ಪರಿಶುದ್ಧವಾದ ಸ್ವಭಾವವನ್ನು ಇಟ್ಟಿರುತ್ತಾನೆ. ಹಾಗಾಗಿ, ವಾಕ್ಯವು ಹೇಳುವದೇನೆಂದರೆ:

"ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು; ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು." (2ಕೊರಿಂಥ–5:17) "ಆತನು ನಮ್ಮನ್ನು **ಸಕಲ ಅಧರ್ಮದಿಂದ** ವಿಮೋಚಿಸುವದಕ್ಕೂ **ಸತ್ಕ್ರಿಯೆಗಳಲ್ಲಿ ಆಸಕ್ತರಾದ** ಸ್ವಕೀಯ ಜನರನ್ನು ತನಗಾಗಿ **ಪರಿಶುದ್ಧ ಮಾಡುವದಕ್ಕೂ** ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು." (ತೀತ–2:14)

ಯಾರಾದರೂ ನಿಜವಾಗಿಯೂ ಕರ್ತನಾದ ಯೇಸು ಕ್ರಿಸ್ತನನ್ನು ನಂಬಿದರೆ, ಅವನು ಎಂದಿಗೂ ಕೆಟ್ಟ ಕೆಲಸ ಮಾಡುವದನ್ನು ಮುಂದು –ವರಿಸುವದಿಲ್ಲ, ಯಾಕಂದರೆ ದೇವರು **ತನ್ನ ಪವಿತ್ರಾತ್ಮನನ್ನು** ಅವನಲ್ಲಿ ಇಟ್ಟಿರುತ್ತಾನೆ. "ದೇವರಾತ್ಮನಿಂದ ಉಂಟಾಗುವ ಫಲವೇನೆಂ– –ದರೆ – ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ ಉಪಕಾರ ನಂಬಿಕೆ ಸಾಧುತ್ವ ಶಮೆದಮೆ." (ಗಲಾತ್ಯ–5:22)

ಈ ದಿನ ನಮ್ಮ ಸಮಯವು ಮುಗಿಯಿತು, ಆದರೆ ದೇವರ ಚಿತ್ತವಾದರೆ, ಮುಂದಿನ ಕಾರ್ಯಕ್ರಮದಲ್ಲಿ, ಕ್ರಿಸ್ತನನ್ನು ಅನುಸರಿಸುವವರು ಹೇಗೆ ಜೀವಿಸಬೇಕು ಎನ್ನುವ ಪ್ರಶ್ನೆಯಲ್ಲಿ ಇನ್ನೂ ಮುಂದಕ್ಕೆ ನಾವು ನೋಡಿಕೊಳ್ಳುವವರಿದ್ದೇವೆ. ದೇವರು ನಿಮ್ಮನ್ನು ಆಶೀರ್ವದಿಸಲಿ. ಪ್ರವಾದಿಯಾದ ದಾವೀದನ ಕೀರ್ತನೆಗಳಲ್ಲಿನ ಈ ವಚನದೊಂದಿಗೆ ನಾವು ನಿಮ್ಮನ್ನು ಬಿಟ್ಟು ಹೋಗುತ್ತಿದ್ದೇವೆ:

**"ದೇವರ ಮಾರ್ಗವು ಯಾವ ದೋಷವೂ ಇಲ್ಲದ್ದು; ಯೆಹೋವನ ವಚನವು ಶುದ್ಧವಾದದ್ದು. ಆತನು ಆಶ್ರಿತರೆಲ್ಲರಿಗೆ ಗುರಾಣಿಯಾಗಿದ್ದಾನೆ."** (ಕೀರ್ತನೆ–18:30)

[ಪಾಠ 91:ಮನುಷ್ಯನ ಪ್ರಶ್ನೆಗಳು; ದೇವರ ಉತ್ತರಗಳು(#2)] [ಸಾರಾಂಶಗಳ ಪಟ್ಟಿ] [ಪಾಠ 93: ಪುನರಾವರ್ತನೆ#1; ಆದಾಮ; ಪಾಪದ ಸಮಸ್ಯೆ]

ಪಾಠ 92

# ಕ್ರಿಸ್ತನ ಶಿಷ್ಯರು ಹೇಗೆ ಜೀವಿಸಬೇಕು?

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ ನಾವು ಮಾತು ಕೊಟ್ಟಂತೆ, **ದೇವರನ್ನು ಮೆಚ್ಚಿಸುವ ಕ್ರಮದಲ್ಲಿ ಯೇಸು ಕ್ರಿಸ್ತನನ್ನು ಹಿಂಬಾಲಿಸುವವರು ಹೇಗೆ ಜೀವಿಸಬೇಕು** ಎನ್ನುವದನ್ನು ನೋಡಿಕೊಳ್ಳುವದಕ್ಕೆ ಈದಿನ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ಒಬ್ಬ ಕ್ರಿಸ್ತನ ಶಿಷ್ಯನು ತನ್ನ ಹೃದಯದಲ್ಲಿ ಹೊಂದಿರುವ ನಂಬಿಕೆಯು ಅವನು/ಅವಳು ಆಲೋಚಿಸುವ ರೀತಿಯಲ್ಲಿ ಅಂದರೆ ಅವರು ಮಾತಾಡುವ ರೀತಿ, ಅವರು ಕ್ರಿಯೆ ಮಾಡುವ ರೀತಿ ಒಟ್ಟಿನಲ್ಲಿ ಅವರ ಜೀವಿತದ ಎಲ್ಲಾ ರೀತಿಗಳಲ್ಲಿ ಅದು ತೋರಿಬರಬೇಕು.

ಕ್ರಿಸ್ತನ ಒಬ್ಬ ಶಿಷ್ಯನು ಜೀವಿಸಬೇಕಾದ ರೀತಿಯನ್ನು ನಾವು ಆಲೋಚಿಸುವದಕ್ಕಿಂತ ಮೊದಲು, ಒಬ್ಬ ವ್ಯಕ್ತಿಯನ್ನು ಕ್ರಿಸ್ತನ ಒಬ್ಬ ನಿಜ ಶಿಷ್ಯನನ್ನಾಗಿ ಯಾವುದು ಮಾಡುತ್ತದೆ ಎನ್ನುವದನ್ನು ನಾವು ಪರಿಶೀಲಿಸಬೇಕು. ನಾವು ನೋಡಿಕೊಂಡಂತೆ, ಮೊದಲನೆಯದಾಗಿ, ಕ್ರಿಸ್ತನ ಶಿಷ್ಯನು ತಾನು ದೇವರ ಮುಂದೆ ಪಾಪಿ ಎಂಬುದನ್ನು ಮತ್ತು ತನ್ನ ಸ್ವಂತ ಪರಿಶ್ರಮಗಳಿಂದ ಪರದೈಸಿಗೆ ಹೋಗುತ್ತೇನೆಂಬ ನಿರೀಕ್ಷೆ ತನ್ನಲ್ಲಿ ಇಲ್ಲ ಎನ್ನುವದನ್ನು ಒಪ್ಪಿಕೊಳ್ಳಬೇಕು. ಎರಡನೆಯದಾಗಿ, ಆದಾಮನ ಮಕ್ಕಳ ಪಾಪಗಳನ್ನು ದೇವರು ತನ್ನ ಯಾವ ಯೋಜನೆ ಯಿಂದ ಕ್ಷಮಿಸುತ್ತಾನೆಂಬುದನ್ನು ದೇವರ ಪ್ರವಾದಿಗಳೆಲ್ಲರೂ ಪ್ರಕಟಿಸಿದ್ದಾರೋ ಅದನ್ನು ಅವನು ನಂಬಬೇಕು. ಶಿಲುಬೆಯ ಮೇಲಿನ ಯೇಸು ಕ್ರಿಸ್ತನ ಮರಣವೇ ಆ ಯೋಜನೆಯಾಗಿದೆ. ನಮ್ಮ ಪಾಪಗಳಿಗಾಗಿ ಮರಣದ ಮೇಲೆ ದೇವರು ಪಾಪರಹಿತನಾದ ವಿಮೋಚಕ –ನನ್ನು ಬಿಡುಗಡೆ ಮಾಡಿದನು ಮತ್ತು ಆತನನ್ನು ಜೀವದಿಂದ ಎಬ್ಬಿಸಿದನು ಇದರಿಂದ ಆತನು ನಮ್ಮನ್ನು ನೀತಿವಂತರನ್ನಾಗಿ ತೀರ್ಪು ಮಾಡುವದಕ್ಕೆ ಶಕ್ತನಾದನು.

ಸಂಕ್ಷಿಪ್ತವಾಗಿ, **ಯೇಸು ಕ್ರಿಸ್ತನ ಶಿಷ್ಯನು ಹೃದಯ ಪೂರ್ವಕವಾಗಿ ಮೆಸ್ಸೀಯನಾದ ಯೇಸುವಿನ ಸುವಾರ್ತೆಯನ್ನು ನಂಬಿದವನಾಗಿರುತ್ತಾನೆ** ಮತ್ತು ದೇವರು ತನ್ನ ವಾಕ್ಯದಲ್ಲಿ ವಾಗ್ದಾನ ಮಾಡಿದಂತೆ ತನ್ನ ಪಾಪಗಳೆಲ್ಲವೂ ಕ್ಷಮಿಸಲ್ಪಟ್ಟಿವೆ ಎಂಬುದನ್ನು ಖಂಡಿತವಾಗಿ ತಿಳಿದವ –ನಾಗಿರುತ್ತಾನೆ. ದೇವರು ಇಂತಹ ಒಬ್ಬ ವಿಶ್ವಾಸಿಯನ್ನು ತನ್ನ ಮಗುವನ್ನಾಗಿ ಆಯ್ದುಕೊಳ್ಳುತ್ತಾನೆ. ಹಾಗಾಗಿ ಸುವಾರ್ತೆಯಲ್ಲಿ ಹೀಗೆ ಬರದದೆ: **"**ಯಾರ್‍ಯಾರು ಆತನನ್ನು ಅಂಗೀಕರಿಸಿದರೋ ಅಂದರೆ ಆತನ ಹೆಸರಿನಲ್ಲಿ ನಂಬಿಕೆಯಿಟ್ಟರೋ ಅವರಿಗೆ **ದೇವರ ಮಕ್ಕಳಾಗುವ ಅಧಿಕಾರ ಕೊಟ್ಟನು**. ಇವರು ರಕ್ತಸಂಬಂಧದಿಂದಾಗಲಿ ಕಾಮದಿಂದಾಗಲಿ ಪುರುಷ ಸಂಕಲ್ಪದಿಂದಾಗಲಿ ಹುಟ್ಟಿದವರಲ್ಲ, ದೇವರಿಂದಲೇ ಹುಟ್ಟಿದವರು.**"** (ಯೋಹಾನ–1:12,13) ಪ್ರಿಯ ಸ್ನೇಹಿತರೇ, ಕ್ರಿಸ್ತನಲ್ಲಿ ಮತ್ತು ಆತನ ತ್ಯಾಗದಲ್ಲಿರುವ ನಂಬಿಕೆಯ ಮೂಲಕ ನೀವು ದೇವರ ಒಂದು ಮಗುವಾದರೆ, ನೀವು ಎಂದಿಗೂ ನಾಶವಾಗುವದಿಲ್ಲ ಮತ್ತು ನೀವು ಪರದೈಸಿನಲ್ಲಿ ಆತನ ಸನ್ನಿಧಿಯಲ್ಲಿ ಎಂದೆಂದಿಗೂ ಜೀವಿಸುವ ಹಕ್ಕನ್ನು ಆತನು ನಿಮಗೆ ಕೊಡುತ್ತಾನೆ ಎಂಬುದನ್ನು ನೀವು ತಿಳಿದುಕೊಳ್ಳಬೇಕೆಂದು ದೇವರು ಬಯಸುತ್ತಾನೆ!

ಬಹುಶ; ಕೆಲವರು ಹೀಗೆ ಹೇಳುತ್ತಾ: ಅಹ್, ಪರದೈಸಿಗೆ ಹೋಗುವದು ಕ್ರಿಸ್ತನ ಶಿಷ್ಯರಿಗೆ ಇಷ್ಟೊಂದು ಸುಲಭವಾಗಿರುವದಾದರೆ, ನ್ಯಾಯ ತೀರ್ಪಿನ ಯಾವ ಭಯವಿಲ್ಲದೆ ಅವನಿಗೆ ಮೆಚ್ಚಿಕೆಯಾಗುವ ಹಾಗೆ ಜೀವಿಸಬಹುದು, ಪಾಪಮಾಡಬಹುದು, ಯಾಕಂದರೆ ದೇವರು ಈಗಾಗಲೇ ಎಲ್ಲಾ ಪಾಪಗಳಿಂದ ಅವನನ್ನು ಕ್ಷಮಿಸಿದ್ದಾನಲ್ಲಾ! ಎಂಬುದಾಗಿ ವಾದ ಮಾಡಬಹುದು! ಸ್ನೇಹಿತರೇ, ಈ ಆಲೋಚನೆಯು **ಅಸಂಬದ್ಧವಾದುದು**. ಈ ರೀತಿಯಲ್ಲಿ ಆಲೋಚಿಸುವವರು ಪಾಪ ಏನಾಗಿದೆ ಎನ್ನುವದನ್ನಾಗಲಿ, ಇಲ್ಲವೆ ದೇವರು ಒಬ್ಬ ಪರಿಶುದ್ಧನು ಎನ್ನುವದನ್ನಾಗಲಿ ಇನ್ನೂ ತಿಳಿಯದವರಾಗಿರುತ್ತಾರೆ. ಪಾಪ ಎನ್ನುವದು ಒಂದು ಕೆಟ್ಟ ಸಂಗತಿಯಗಿದೆ. ಪಾಪದ ಆಳ್ವಿಕೆಯಿಂದ **ನಮ್ಮನ್ನು ಬಿಡುಗಡೆಗೊಳಿಸುವದಕ್ಕೆ** ಯೇಸು ಕ್ರಿಸ್ತನು ಬಂದನು; ಪಾಪದಲ್ಲಿ ನಾವು ಮುಂದುವರಿಯುವದಕ್ಕೆ ನಮ್ಮನ್ನು ಪ್ರೋತ್ಸಾಹಗೊಳಿ –ಸುವದಕ್ಕಾಗಿ ಆತನು ಬರಲಿಲ್ಲ! ಯಾರು ಆತನಲ್ಲಿ ನಂಬಿಕೆಯಿಡುತ್ತಾರೋ ಅವರು **ಇನ್ನೆಂದಿಗೂ ಪಾಪಕ್ಕೆ ದಾಸರಾಗಿರುವದಿಲ್ಲ**. ನಿಜ –ವಾಗಿಯೂ, ದುರಾತ್ಮನಿಗೆ ಒಳಗಾದವರು ಮಾತ್ರ ಪಾಪವನ್ನು ಸಂಪೂರ್ಣವಾಗಿ ಆನಂದಿಸುತ್ತಾರೆ. ದೇವರಿಂದ ರಕ್ಷಿಸಲ್ಪಟ್ಟ ಮತ್ತು ಕ್ಷಮಿಸಲ್ಪಟ್ಟ ವ್ಯಕ್ತಿಯು ಒಂದು ಬದಲಾದ ಹೃದಯವನ್ನು ಹೊಂದಿರುತ್ತಾನೆ. ದೇವರು ಅವನ ಹೃದಯವನ್ನು ತೊಳೆದು ಶುದ್ಧಪಡಿಸು ತ್ತಾನೆ. ಯಾವ ವ್ಯಕ್ತಿಗಾಗಿ ದೇವರು ಇದನ್ನು ಮಾಡಿರುತ್ತಾನೋ ಅದು ಎಲ್ಲಾ ಅಶುದ್ಧತ್ವವನ್ನು ತಡೆಯುತ್ತದೆ. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: **"**ಹೀಗಿರಲಾಗಿ, ಯಾವನಾದರೂ ಕ್ರಿಸ್ತನಲ್ಲಿದ್ದರೆ ಅವನು ನೂತನ ಸೃಷ್ಟಿಯಾದನು, ಇಗೋ ಪೂರ್ವ ಸ್ಥಿತಿ ಹೋಗಿ ಎಲ್ಲಾ ನೂತನವಾಯಿತು.**"** (2ಕೊರಿಂಥ–5:17)

ನೀವು ಶುದ್ಧವಾದ ಬಿಳಿಯ ಉಡುಪನ್ನು ಧರಿಸಿಕೊಂಡು ಕೊಳೆಯಿರುವಲ್ಲಿ ಹೋಗುವದಾಗಲಿ ಅಥವಾ ಕೂತುಕೊಳ್ಳುವದಾಗಲಿ ಮಾಡುತ್ತೀರಾ? ಇಲ್ಲ, ನಿಮ್ಮ ಬಟ್ಟೆಗಳಿಗೆ ಕಲೆಯನ್ನುಂಟುಮಾಡುವ ಯಾವುದನ್ನೇ ಆಗಲಿ ನೀವು ದೂರವಿರಿಸುತ್ತೀರಿ. ಇದು ದೇವರು

ಯಾರ ಪಾಪಗಳನ್ನು ಕ್ಷಮಿಸಿರುತ್ತಾನೋ ಅವರೆಲ್ಲರೊಂದಿಗೆ ಇದರಂತೆಯೇ ಇರುತ್ತದೆ. ದೇವರಿಗೆ ಮೆಚ್ಚಿಕೆಯಾಗಿಲ್ಲದಿರುವ ಯಾವುದ –ರೊಂದಿಗೂ ಜೊತೆಯಾಗಿ ಹೋಗುವದಕ್ಕೆ ನೀವು ಇಷ್ಟಪಡುವದಿಲ್ಲ. ನೀವು ಕರ್ತನನ್ನು ಮೆಚ್ಚಿಸುವದಕ್ಕೆ **ಇಷ್ಟಪಡುತ್ತೀರಿ.** ಹಣದ ಒಂದು ದೊಡ್ಡ ಸಾಲವನ್ನು ಯಾರಾದರೂ ನಿಮಗೆ ಕ್ಷಮಿಸಿಬಿಟ್ಟರೆ, ನೀವು ಉದ್ದೇಶಪೂರ್ವಕವಾಗಿ ಅವರನ್ನು ನೋಯಿಸುತ್ತೀರಾ? ಇಲ್ಲ, ಅವರನ್ನು ಮೆಚ್ಚಿಸುವದಕ್ಕೆ ಏನೆಲ್ಲಾ ಮಾಡಬೇಕೋ ಅದನ್ನು ನೀವು ಮಾಡುತ್ತೀರಿ. ಅದರಂತೆಯೇ, ಕರ್ತನಾದ ದೇವರು ಪಾಪದ ಒಂದು ದೊಡ್ಡ ಸಾಲವನ್ನು ನಿಮಗೆ ಕ್ಷಮಿಸಿದರೆ ಮತ್ತು ನಿತ್ಯವಾದ ಶಿಕ್ಷೆಯಿಂದ ನಿಮ್ಮನ್ನು ರಕ್ಷಿಸಿದರೆ, ನಿಮ್ಮ ಜೀವನದುದ್ದಕ್ಕೂ ಆತನಿಗೆ ಕೃತಜ್ಞತೆ ಹೇಳದೇ, ನಿಮ್ಮ ಮಾತಿನಲ್ಲಿ, ಕಾರ್ಯದಲ್ಲಿ, ಮತ್ತು ನಿಮ್ಮ ಆಲೋಚನೆಯಲ್ಲಿ ನೀವು ಆತನನ್ನು ಗೌರವಿಸುವದಿಲ್ಲವೋ?

ಕರ್ತನಾದ ಯೇಸುವಿಗೆ ಸಂಬಂಧಪಟ್ಟವರ ಕುರಿತು ಸುವಾರ್ತೆಯು ಹೇಳಿರುವದನ್ನು ಕೇಳಿಸಿಕೊಳ್ಳಿರಿ. ಅದು ಹೀಗೆ ಹೇಳುತ್ತದೆ:

"ನಾವು ಸಹ ಮೊದಲು ಅವಿವೇಕಿಗಳೂ ಅವಿಧೇಯರೂ ಮೋಸಹೋದವರೂ ನಾನಾ ವಿಧವಾದ ದುರಾಶೆಗಳಿಗೆ ಮತ್ತು ಭೋಗಗಳಿಗೆ ಅಧೀನರೂ ಕೆಟ್ಟತನ ಹೊಟ್ಟೇಕಿಚ್ಚುಗಳಲ್ಲಿ ಕಾಲಕಳೆಯುವವರೂ ಅಸಹ್ಯರೂ ಒಬ್ಬರನ್ನೊಬ್ಬರು ಹಗೆಮಾಡುವವರೂ ಆಗಿದ್ದೆವು. ಆದರೆ ನಮ್ಮ ರಕ್ಷಕನಾದ ದೇವರ ದಯೆಯೂ ಜನೋಪಕಾರವೂ ಪ್ರತ್ಯಕ್ಷವಾದಾಗ ನಾವು ಮಾಡಿದ ಪುಣ್ಯಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. ನಾವು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಕೃಪೆಯಿಂದ ನೀತಿವಂತ –ರೆಂದು ನಿರ್ಣಯಿಸಲ್ಪಟ್ಟು ನಿತ್ಯಜೀವದ ನಿರೀಕ್ಷೆಯನ್ನು ಪಡೆದು ಅದಕ್ಕೆ ಬಾಧ್ಯರಾಗುವಂತೆ ದೇವರು ಆತನ ಮೂಲಕ ಪವಿತ್ರಾತ್ಮನನ್ನು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿದನು. ಇದು ನಂಬತಕ್ಕ ಮಾತಾಗಿದೆ. (ತೀತ–3:3-7). ನೀವು ಮುಂಚೆ ಅಜ್ಞಾನಿಗಳಾಗಿದ್ದಾಗ ನಿಮಗಿದ್ದ ದುರಾಶೆಗಳನ್ನು ಅನುಸರಿಸಿ ನಡೆಯವವರಾಗಿರದೆ ನಿಮ್ಮನ್ನು ಕರೆದಾತನು ಪರಿಶುದ್ಧನಾಗಿರುವ ಪ್ರಕಾರವೇ ನೀವೂ ವಿಧೇಯ –ರಿಗೆ ತಕ್ಕಂತೆ ನಿಮ್ಮ ಎಲ್ಲಾ ನಡವಳಿಕೆಯಲ್ಲಿ ಪರಿಶುದ್ಧರಾಗಿರಿ. **ನಾನು ಪರಿಶುದ್ಧನಾಗಿರುವ ಪ್ರಕಾರ ನೀವು ಪರಿಶುದ್ದರಾಗಿರಬೇಕೆಂದು ಬರೆದದೆಯಲ್ಲಾ"** (1ಪೇತ್ರ–1:14,15)

ಕ್ರಿಸ್ತನ ಒಬ್ಬ ಶಿಷ್ಯನ ಜೀವಿತದ ರೀತಿಯನ್ನು ನಾವು ಹೇಗೆ ಸಂಕ್ಷಿಪ್ತಗೊಳಿಸಬಹುದು? ಬಹುಶ: ಈ ರೀತಿಯಲ್ಲಿ: ತನ್ನ ಮಕ್ಕಳು ತನ್ನ ನಡವಳಿಕೆಯನ್ನು ಭೂಮಿಯ ಮೇಲೆ ತೋರಿಸಿಕೊಡುವದಕ್ಕೆ ದೇವರು ಇಷ್ಟಪಡುತ್ತಾನೆ. ಸರಳವಾಗಿ ಹೇಳುವದಾದರೆ, **ತನ್ನ ಮಕ್ಕಳು ತನ್ನ ಹಾಗೆ ಇರಬೇಕೆಂದು ದೇವರು ಇಷ್ಟಪಡುತ್ತಾನೆ**. ಒಳ್ಳೇದು ಹಾಗಾದರೆ, ದೇವರು ಹೇಗಿದ್ದಾನೆ? ಪರಿಶುದ್ಧ ವಾಕ್ಯಗಳಲ್ಲಿನ ನಮ್ಮ ಅಧ್ಯಯನದಲ್ಲಿ ದೇವರ ಎರಡು ಪ್ರಾಮುಖ್ಯವಾದ ಗುಣಲಕ್ಷಣಗಳಾಗಿರುವ **ಪರಿಶುದ್ಧತೆ** ಮತ್ತು **ಪ್ರೀತಿ** ಇವುಗಳನ್ನು ನಾವು ನೋಡಿ – –ದ್ದೇವೆ. ದೇವರು ಪರಿಶುದ್ಧನೂ ಮತ್ತು ಆತನು ಪ್ರೀತಿಯುಳ್ಳ ದೇವರೂ ಸಹ ಅಗಿದ್ದಾನೆ. ಆದ್ದರಿಂದ ಆತನಿಗೆ ಸಂಬಂಧಪಟ್ಟವ – –ರಾದ ನಮ್ಮ ವಿಷಯದಲ್ಲಿ ಆತನ ಚಿತ್ತವೇನು? **ಆತನು ಪರಿಶುದ್ಧನಾಗಿರುವ ಪ್ರಕಾರ ನಾವೂ ಪರಿಶುದ್ಧರಾಗಿರಬೇಕು, ಮತ್ತು ಆತನು ನಮ್ಮನ್ನು ಪ್ರೀತಿಸಿದ ಹಾಗೆ ನಾವು ಒಬ್ಬರನ್ನೊಬ್ಬರು ಪ್ರೀತಿಸುವವರಾಗಿರಬೇಕು** ಎನ್ನುವದು ಆತನ ಚಿತ್ತವಾಗಿದೆ.

ಒಂದು ಪರಿಶುದ್ಧ ಜೀವಿತ ಮತ್ತು ಒಂದು ಪ್ರೀತಿಯ ಹೃದಯವು ದೇವರಿಗೆ ಸಂಬಂಧಿಸಿದವರು ಮತ್ತು ಸಂಬಂಧಿಸದವರ ವ್ಯತ್ಯಾಸ – –ವನ್ನು ತೋರಿಸುತ್ತದೆ. ಇದಕ್ಕೆ ಸಂಬಂಧಿಸಿದಂತೆ ದೇವರ ವಾಕ್ಯವು ಹೀಗೆ ಹೇಳುತ್ತದೆ:

ಇವರು ದೇವರ ಮಕ್ಕಳೆಂಬುದೂ ಅವರು ಸೈತಾನನ ಮಕ್ಕಳೆಂಬುದೂ ಇದರಿಂದ ವ್ಯಕ್ತವಾಗುತ್ತದೆ. ನೀತಿಯನ್ನು ಅನುಸರಿಸದವನೂ ತನ್ನ ಸಹೋದರನನ್ನು ಪ್ರೀತಿಸದವನೂ ದೇವರಿಂದ ಹುಟ್ಟಿದವರಲ್ಲ. (1ಯೋಹಾನ–3:10). ಯಾಕಂದರೆ ಎಲ್ಲಾ ಮನುಷ್ಯರಿಗೆ ರಕ್ಷಣೆ –ಯನ್ನುಂಟುಮಾಡುವ ದೇವರ ಕೃಪೆಯು ಪ್ರತ್ಯಕ್ಷವಾಯಿತು. **ನಾವು ಭಕ್ತಿಹೀನತೆಯನ್ನೂ ಲೋಕದ ಆಶೆಗಳನ್ನೂ ವಿಸರ್ಜಿಸಿ** ಭಾಗ್ಯಕರ –ವಾದ ನಿರೀಕ್ಷೆಯನ್ನು ಅಂದರೆ ಮಹಾದೇವರ ಮತ್ತು ನಮ್ಮ ರಕ್ಷಕನಾದ ಯೇಸುಕ್ರಿಸ್ತನ ಪ್ರಭಾವದ ಪ್ರತ್ಯಕ್ಷತೆಯನ್ನು ಎದುರು ನೋಡುತ್ತಾ ಇಹಲೋಕದಲ್ಲಿ ಸ್ವಸ್ಥಚಿತ್ತರಾಗಿಯೂ ನೀತಿವಂತರಾಗಿಯೂ ಭಕ್ತಿಯುಳ್ಳವರಾಗಿಯೂ **ಬದುಕಬೇಕೆಂದು ಅದು ನಮಗೆ ಬೋಧಿಸುತ್ತದೆ.** ಆತನು ನಮ್ಮನ್ನು ಸಕಲ ಅಧರ್ಮದಿಂದ ವಿಮೋಚಿಸುವದಕ್ಕೂ ಸತ್ಕ್ರಿಯೆಗಳಲ್ಲಿ ಆಸಕ್ತರಾದ ಸ್ವಕೀಯ ಜನರನ್ನು ತನಗಾಗಿ ಪರಿಶುದ್ಧ ಮಾಡುವದಕ್ಕೂ ನಮಗೋಸ್ಕರ ತನ್ನನ್ನು ಒಪ್ಪಿಸಿಕೊಟ್ಟನು.(ತೀತ–2:11-14)

ಆದಕಾರಣ **ಸುಳ್ಳಾಡುವದನ್ನು** ಬಿಟ್ಟುಬಿಟ್ಟು ಪ್ರತಿಯೊಬ್ಬನು ತನ್ನ ನೆರೆಯವನ ಸಂಗಡ ಸತ್ಯವನ್ನೇ ಆಡಲಿ; ಯಾಕಂದರೆ ನಾವು ಒಬ್ಬರಿ –ಗೊಬ್ಬರು ಅಂಗಗಳಾಗಿದ್ದೇವಲ್ಲಾ. ಕೋಪಮಾಡಬೇಕಾದರೂ ಪಾಪ ಮಾಡಬೇಡಿರಿ; ಸೂರ್ಯನು ಮುಳುಗವದಕ್ಕಿಂತ ಮುಂಚೆ ನಿಮ್ಮ ಸಿಟ್ಟು ತೀರಲಿ; ಸೈತಾನನಿಗೆ ಅವಕಾಶ ಕೊಡಬೇಡಿರಿ, ಕಳುವು ಮಾಡುವವನು **ಇನ್ನು ಮೇಲೆ ಕಳುವು ಮಾಡದೆ** ಕೈಯಿಂದ ಯಾವದೊಂದು ಒಳ್ಳೇ ಉದ್ಯೋಗವನ್ನು ಮಾಡಿ ದುಡಿಯಲಿ; ಆಗ **ಕಷ್ಟದಲ್ಲಿರುವವರಿಗೆ ಕೊಡುವದಕ್ಕೆ** ಅವನಿಂದಾಗುವದು. ನಿಮ್ಮ ಬಾಯೊಳಗಿಂದ ಯಾವ ಕೆಟ್ಟಮಾತೂ ಹೊರಡಬಾರದು; ಭಕ್ತಿಯನ್ನು ವೃದ್ಧಿ ಆಡುವಂಥ ಕಾಲೋಚಿತವಾದ ಮಾತು ಇದ್ದರೆ ಕೇಳು – –ವವರ ಹಿತಕ್ಕಾಗಿ ಅದನ್ನು ಆಡಿರಿ; **ದೇವರ ಪವಿತ್ರಾತ್ಮನನ್ನು ದುಖ:ಪಡಿಸಬೇಡಿರಿ;** ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿದ್ದೀರಲ್ಲಾ. ಎಲ್ಲಾ ದ್ವೇಷ ಕೊಪ ಕಲಹ ದೂಷಣೆ ಇವುಗಳನ್ನೂ **ಸಕಲವಿಧವಾದ ದುಷ್ಟತನವನ್ನೂ ನಿಮ್ಮಿಂದ ದೂರಮಾಡಿರಿ.** ಒಬ್ಬರಿಗೊಬ್ಬರು ಉಪಕಾರಿಗಳಾಗಿಯೂ ಕರುಣೆಯುಳ್ಳವರಾಗಿಯೂ ಕ್ಷಮಿಸುವವರಾಗಿಯೂ ಇರ್ರಿ. (ಎಫೆಸ–4:25-32)

ದೇವರು ನಿಮಗೆ ಕ್ರಿಸ್ತನಲ್ಲಿ ಕ್ಷಮಿಸಿದನಲ್ಲಾ; ಆದದರಿಂದ ದೇವರ ಪ್ರಿಯರಾದ ಮಕ್ಕಳಿಗೆ ತಕ್ಕ ಹಾಗೆ **ಆತನನ್ನು ಅನುಸರಿಸುವವರಾಗಿರಿ.** ಕ್ರಿಸ್ತನು ನಿಮ್ಮನ್ನು ಪ್ರೀತಿಸಿ ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ

ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ. ಜಾರತ್ವ ಯಾವ ವಿಧವಾದ ಬಂಡುತನ ದ್ರವ್ಯಾಶೆ **ಇವುಗಳ ಸುದ್ಧಿ –ಯಾದರೂ** ನಿಮ್ಮಲ್ಲಿ ಇರಬಾರದು; ಇವುಗಳಿಗೆ ದೂರವಾಗಿರುವದೇ ದೇವಜನರಿಗೆ ಯೋಗ್ಯವಾದದ್ದು. ಹೊಲಸು ಮಾತು ಹುಚ್ಚು ಮಾತು ಇವು ಬೇಡ, ಅಯುಕ್ತವಾಗಿವೆ; ಇವುಗಳನ್ನು ಬಿಟ್ಟು ದೇವರಿಗೆ ಉಪಕಾರಸ್ತುತಿ ಮಾಡುವದು ಉತ್ತಮ. ಜಾರರು ದುರಾಚಾರಿ–ಗಳು ವಿಗ್ರಹಾರಾಧಕರಂತಿರುವ ಲೋಭಿಗಳು ಇವರಲ್ಲಿ ಒಬ್ಬರಿಗಾದರೂ ಕ್ರಿಸ್ತನ ಮತ್ತು ದೇವರ ರಾಜ್ಯದಲ್ಲಿ ಬಾಧ್ಯತೆ ಇಲ್ಲವೇ ಇಲ್ಲ –ವೆಂದು ನೀವು ಚೆನ್ನಾಗಿ ಬಲ್ಲಿರಲ್ಲವೇ. ನೀವು ಹಿಂದಿನ ಕಾಲದಲ್ಲಿ ಕತ್ತಲೆಯಾಗಿದ್ದಿರಿ, ಆದರೆ ಈಗ ನೀವು ಕ್ರಿಸ್ತನಲ್ಲಿದ್ದು ಬೆಳಕಾಗಿದ್ದೀರಿ. **ಬೆಳಕಿನವರಂತೆ ನಡೆದುಕೊಳ್ಳಿರಿ.** (ಎಫೆಸ–5:1-5,8). ಪ್ರಿಯರೇ ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ. ಪ್ರೀತಿಯು ದೇವರಿಂದಾಗಿದೆ ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ. ಒಬ್ಬನು ತಾನು ದೇವರನ್ನು ಪ್ರೀತಿಸುತ್ತೇನೆಂದು ಹೇಳಿ ತನ್ನ ಸಹೋದರನನ್ನು ದ್ವೇಷಿಸಿದರೆ ಅವನು ಸುಳ್ಳುಗಾರನಾಗಿದ್ದಾನೆ. ತಾನು ಕಂಡಿರುವ ತನ್ನ ಸಹೋದರ –ನನ್ನು ಪ್ರೀತಿಸದವನು ತಾನು ಕಾಣದಿರುವ ದೇವರನ್ನು ಪ್ರೀತಿಸಲಾರನು. **ದೇವರನ್ನು ಪ್ರೀತಿಸುವವನು ತನ್ನ ಸಹೋದರನನ್ನೂ ಪ್ರೀತಿಸ –ಬೇಕೆಂಬ** ಆಜ್ಞೆಯನ್ನು ನಾವು ಆತನಿಂದ ಹೊಂದಿದ್ದೇವೆ. (1ಯೋಹಾನ–4:7,20,21)

ಯೇಸು ಕ್ರಿಸ್ತನನ್ನು ಹಿಂಬಾಲಿಸುವವರಿಗಾಗಿ ಜೀವಿತದ ರೀತಿಯ ಕುರಿತು ವಾಕ್ಯವು ಹೇಳುವದು ಇದನ್ನೇ. ಇದೆಲ್ಲದರ ಅರ್ಥವೇನೆಂ –ದರೆ, ಕ್ರಿಸ್ತನ ಶಿಷ್ಯರು ಇನ್ನೆಂದಿಗೂ ಪಾಪ ಮಾಡುವದಕ್ಕೆ ಸಾಧ್ಯವಿಲ್ಲ, ಅಥವಾ ಅವನು ತನ್ನನ್ನು ಪ್ರೀತಿಸಿಕೊಂಡಂತೆ ತನ್ನ ನೆರೆಯವ –ನನ್ನು ಯಾವಾಗಲೂ ಪ್ರೀತಿಸುತ್ತಾನೆ ಎಂಬದೋ? ಇಲ್ಲ! ಅವನು ಇನ್ನೂ ಪಾಪ ಮಾಡುತ್ತಾನೆ, ಆದರೆ ಅವನು ಇನ್ನು ಮುಂದೆ ಅದರಲ್ಲಿ ಕಾಲಹರಣ ಮಾಡುವದಿಲ್ಲ. ಅವನು ಪಾಪ ಮಾಡಿದಾಗ, ದೇವರ ವಾಕ್ಯದಲ್ಲಿ ಹೇಳಲ್ಪಟ್ಟಿರುವ ವಾಗ್ದಾನವನ್ನು ಉಪಯೋಗಿ –ಸುತ್ತಾನೆ: . . . .ಯೇಸುವಿನ ರಕ್ತವು ಸಕಲ ಪಾಪವನ್ನು ನಿವಾರಣೆ ಮಾಡಿ ನಮ್ಮನ್ನು ಶುದ್ಧಿ ಮಾಡುತ್ತದೆ. ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ ಮತ್ತು ಸತ್ಯವೆಂಬದು ನಮ್ಮಲ್ಲಿಲ್ಲ. **ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ** ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿ ಮಾಡುವನು. ಆಮೆನ್. (1ಯೋಹಾನ–7-9)

ಯೇಸು ಕ್ರಿಸ್ತನಿಗೆ ಸಂಬಂಧಿಸುವದೆಂದರೆ ಅದು ಕೇವಲ ಒಂದು **ಧರ್ಮವಲ್ಲ** ಆದರೆ ಅದು ಒಂದು **ಸಂಬಂಧವಾಗಿದೆ.** ಒಬ್ಬ ವ್ಯಕ್ತಿಯು ಕ್ರಿಸ್ತನಿಗೆ ಸಂಬಂಧಪಟ್ಟಾಗ, ಅವನು **ಪ್ರೀತಿಯ ಪರಿಶುದ್ದ ದೇವರೊಂದಿಗೆ ಅನ್ಯೋನ್ಯತೆಯಲ್ಲಿ** ತರಲ್ಪಡುತ್ತಾನೆ. ಪಾಪದ ನಿಮಿತ್ತದಿಂದ ಆದಾಮ ಹವ್ವರು ಕಳೆದುಕೊಂಡಂತಹ ದೇವರೊಂದಿಗಿನ ಆ ಆಪ್ತ ಸಂಬಂಧವು, ಶಿಲುಬೆಯ ಮೇಲೆ ಯೇಸು ಸುರಿಸಿದ ರಕ್ತದ ಮೂಲಕವಾಗಿ ನಮಗೆ ಪುನಃಕೊಡಲ್ಪಟ್ಟಿತು. ಪಾಪದ ನಮ್ಮ ಸಾಲವನ್ನು ಯೇಸು ನಮಗಾಗಿ ಸಲ್ಲಿಸಿರುವದರಿಂದ ದೇವರು ಇನ್ನು ಮುಂದೆ ನಮ್ಮ ಅಪರಾಧಗಳನ್ನು ನೆನಪು ಮಾಡಿಕೊಳ್ಳುವದಿಲ್ಲ. ಕ್ರಿಸ್ತನೊಂದಿಗಿನ ನಮ್ಮ ಸಂಬಂಧದ ಮೂಲಕವಾಗಿ, ದೇವರು ಪರ –ಲೋಕದ ನಮ್ಮ ತಂದೆಯಾದನು, ಮತ್ತು ನಾವು ಆತನ ಮಕ್ಕಳಾಗಿದ್ದೇವೆ. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತಾ ಮಾತಾಡುವ–ದೇನೆಂದರೆ: "ಆತನ ಮೂಲಕ ನಾವೂ ನೀವೂ ಒಬ್ಬ ಆತ್ಮನನ್ನೇ ಹೊಂದಿದವರಾಗಿ ತಂದೆಯ ಬಳಿಗೆ ಪ್ರವೇಶಿಸುವದಕ್ಕೆ ಮಾರ್ಗ –ವಾಯಿತು. ಹೀಗಿರಲಾಗಿ ನೀವು ಇನ್ನು ಮೇಲೆ **ಪರದೇಶದವರೂ ಅನ್ಯರೂ ಆಗಿರದೆ** ದೇವಜನರೊಂದಿಗೆ ಒಂದೇ ಸಂಸ್ಥಾನದವರೂ **ದೇವರ ಮನೆಯವರೂ** ಆಗಿದ್ದೀರಿ." (ಎಫೆಸ–2:18,19)

ಕ್ರಿಸ್ತನಿಗೆ ಸಂಬಂಧಿಸಿದವರು ಭೂಲೋಕದಲ್ಲಿ ದೇವರೊಂದಿಗೆ ಒಂದು ಆಪ್ತ ಸಂಬಂಧವನ್ನು ಆನಂದಿಸಬಹುದು ಮತ್ತು ಪರಲೋಕ –ದಲ್ಲಿ ಒಂದು ನಿತ್ಯವಾದ ಸ್ವಾಸ್ಥ್ಯವನ್ನು ಎದುರು ನೋಡಬಹುದಾಗಿದೆ. ಆದರೆ ಒಬ್ಬರು ಹೀಗೆ ಕೇಳಬಹುದು, ಕ್ರಿಸ್ತನ ಶಿಷ್ಯನು ತಾನು ಹೊಂದಿರುವ ದೇವರೊಂದಿಗಿನ ಈ ಸಂಬಂಧವನ್ನು ಭೂಲೋಕದಲ್ಲಿ ಹೇಗೆ ಆನಂದಿಸುವದಕ್ಕೆ ಸಾಧ್ಯ? ನಾವು ದೇವರೊಂದಿಗಿನ ನಮ್ಮ ಸಂಬಂಧದಲ್ಲಿ ಹೇಗೆ ಬೆಳೆಯಬಹುದು? ಇದಕ್ಕೆ ಸಂಬಂಧಿಸಿದಂತೆ, ದೇವರ ವಾಕ್ಯವು **ನಾಲ್ಕು ಜವಾಬ್ದಾರಿಗಳನ್ನು**(ಶಿಸ್ತುಗಳನ್ನು) ತಿಳಿಸುತ್ತದೆ, ಅವು ನಮಗೆ, ದೇವರ ಚಿತ್ತವನ್ನು ತಿಳಿದುಕೊಳ್ಳುವದಕ್ಕೆ ಮತ್ತು ದೇವರ ಮಕ್ಕಳಂತೆ ನಮ್ಮ ಸ್ಥಾನದೊಂದಿಗೆ ಅನುಗುಣವಾದ ಜೀವಿತವನ್ನು ಜೀವಿಸುವದಕ್ಕೆ ಸಹಾಯ ಮಾಡುತ್ತವೆ, ಆದರಿಂದ ನಾವು ಎಲ್ಲಾ ಸಂಗತಿಗಳಲ್ಲಿ ಆತನನ್ನು ಮೆಚ್ಚಿಸುವದಕ್ಕೆ ಮತ್ತು ದೇವರ ನಮ್ಮ ಜ್ಞಾನದಲ್ಲಿ ಹೆಚ್ಚಾಗುವದಕ್ಕೆ ಶಕ್ತರಾಗುತ್ತೇವೆ.

1.)ಕ್ರಿಸ್ತನ ಶಿಷ್ಯನ ಮೊದಲನೆ ಜವಾಬ್ದಾರಿ ಏನೆಂದರೆ, ಅವನು **ದೇವರ ವಾಕ್ಯದಲ್ಲಿ ಪೋಷಿಸಲ್ಪಡಬೇಕು**, ಪ್ರತಿದಿನ ಅದನ್ನು ಧ್ಯಾನಿಸ –ಬೇಕು ಮತ್ತು ಅದಕ್ಕೆ ವಿಧೇಯನಾಗುವ ಅಶೆಯೊಂದಿಗೆ ಅದನ್ನು ತನ್ನ ಹೃದಯದಲ್ಲಿ ಅಂಗೀಕರಿಸಿಕೊಳ್ಳಬೇಕು. ಪರಿಶುದ್ದ ವಾಕ್ಯಗಳು ದೇವರ ಚಿತ್ತವನ್ನು ಪ್ರಕಟಪಡಿಸುತ್ತವೆ. ದೇವರು ತನ್ನ ವಾಕ್ಯದ ಮೂಲಕವಾಗಿ ನಮ್ಮೊಂದಿಗೆ ಮಾತಾಡುತ್ತಾನೆ. ದೇವರ ವಾಕ್ಯವು ನಮ್ಮ ಆತ್ಮವನ್ನು ಪೋಷಿಸುವ ಮತ್ತು ಬಲಗೊಳಿಸುವ ಅಹಾರವಾಗಿದೆ. ಇದು ಅದ್ಭುತವಾದ ಆಹಾರವಾಗಿದೆ. ದೇವರನ್ನು ನಿಜವಾಗಿಯೂ ಪ್ರೀತಿಸುವವನು ದೇವರ ವಾಕ್ಯ ಓದುವದನ್ನು ಅಥವಾ ಕೇಳಿಸಿಕೊಳ್ಳುವದನ್ನು ಮುಂದೂಡುವದಿಲ್ಲ ಯಾಕಂದರೆ ಅವನು ಆಹಾರಕ್ಕಾಗಿ ಹಸಿವುಳ್ಳವನಂತೆ ವಾಕ್ಯಕ್ಕಾಗಿಯೂ ಹಸಿವುಳ್ಳವನಾಗಿರುತ್ತಾನೆ. ಪ್ರವಾದಿಯಾದ ಯೋಬನು ಹೀಗೆ ಹೇಳಿದ್ದಾನೆ, "ಆತನ ಬಾಯಿಂದ ಬಂದ ಮಾತುಗಳನ್ನು ಎದೆಯಲ್ಲಿ ನಿಧಿಯನ್ನಾಗಿ ಬಚ್ಚಿಟ್ಟುಕೊಂಡಿದ್ದೇನೆ." (ಯೋಬ–23:12)

2.)ಎರಡನೆಯ ಜವಾಬ್ದಾರಿ ಏನೆಂದರೆ, ಪರಲೋಕದಲ್ಲಿರುವ ನಮ್ಮ ತಂದೆಯಾದ **ದೇವರಿಗೆ ಪ್ರಾರ್ಥಿಸುವದು**. ದೇವರೊಂದಿಗೆ ತಾನು ಹೊಂದಿರುವ ಈ ಸಂಬಂಧದಲ್ಲಿ ಬೆಳೆಯುವದಕ್ಕೆ ಇಷ್ಟಪಡುವ ಯಾವನಾದರೂ ಆಗಾಗ್ಗೆ ಆತನೊಂದಿಗೆ ಮಾತಾಡುವದಕ್ಕೆ ಇಚ್ಛೆಯುಳ್ಳ –ವನಾಗಿರಬೇಕು. ನಿಮ್ಮ ಆಪ್ತ ಸ್ನೇಹಿತನೊಂದಿಗೆ ನೀವು ಮಾತಾಡುವ ಹಾಗೆ, ಕ್ರಿಸ್ತನ ಶಿಷ್ಯರಿಗಾಗಿ ಪ್ರಾರ್ಥನೆಯು ದೇವರೊಂದಿಗೆ ಮಾತಾಡುವಂತದ್ದಾಗಿದೆ. ನಾವು ಪ್ರಾರ್ಥನೆ ಮಾಡಬೇಕೆಂಬುದಕ್ಕೆ ಯಾವುದೇ ನಿರ್ಧಿಷ್ಟವಾದ ಸಮಯವಿಲ್ಲ. ಹಗಲು ಅಥವಾ ರಾತ್ರಿ

ಯಾವುದೇ ಸಮಯದಲ್ಲಾಗಲೀ ನಮ್ಮ ಪರಲೋಕದ ತಂದೆಯೊಂದಿಗೆ ನಾವು ಮಾತಾಡಬಹುದು! ಒಂದು ಕ್ಷಣವೂ ನಮ್ಮ ಮನಸ್ಸು ದೇವರ ಪ್ರಜ್ಞೆಯಲ್ಲಿಲ್ಲದಂತೆ ಇರಬಾರದು. ಆತನು ನಮಗೆ ಏನಾಗಿದ್ದಾನೆ ಮತ್ತು ನಮಗಾಗಿ ಏನು ಮಾಡಿದ್ದಾನೆ ಎನ್ನುವದಕ್ಕಾಗಿ ನಾವು ಸತತವಾಗಿ ಆತನಿಗೆ ವಂದಿಸುತ್ತ ಸ್ತುತಿಸಬೇಕೆಂದು ಆತನು ಇಷ್ಟಪಡುತ್ತಾನೆ. ನಮ್ಮ ಎಲ್ಲಾ ಚಿಂತನೆಗಳ ಕುರಿತು ಆತನಿಗೆ ಹೇಳಿಕೊಳ್ಳುವ –ದಕ್ಕೆ ಸಹ ಆತನು ನಮ್ಮನ್ನು ಆಹ್ವಾನಿಸುತ್ತಾನೆ. ಪ್ರಾರ್ಥನೆಯು ಶಕ್ತಿಯುಳ್ಳದ್ದು ಎನ್ನುವದನ್ನು ಕ್ರಿಸ್ತನ ಶಿಷ್ಯರು ತಿಳಿದಿದ್ದಾರೆ. ಕರ್ತನಾದ ಯೇಸು ತಾನೇ ತನ್ನ ಶಿಷ್ಯರಿಗೆ ವಾಗ್ದಾನ ಮಾಡಿರುವದೇನೆಂದರೆ:"ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು."(ಯೋಹಾನ–14:14). "ಯಾವ ಸಂಬಂಧವಾಗಿಯೂ ಚಿಂತೆಮಾಡದೇ ಸರ್ವವಿಷಯದಲ್ಲಿ ದೇವರ ಮುಂದೆ ಕೃತಜ್ಞತಾಸ್ತುತಿಯನ್ನೂ ಪ್ರಾರ್ಥನೆ ವಿಜ್ಞಾಪನೆಗಳನ್ನು ಮಾಡುತ್ತಾ ನಿಮಗೆ ಬೇಕಾದದ್ದನ್ನು ತಿಳಿಯಪಡಿಸಿರಿ." (ಫಿಲಿಪ್ಪಿ–4:6)

3.) ಮೂರನೆಯ ಜವಾಬ್ದಾರಿ ಏನೆಂದರೆ, ಕರ್ತನಾದ ಯೇಸು ಕ್ರಿಸ್ತನನ್ನು ನಂಬಿ ಪ್ರೀತಿಸುವವರೊಂದಿಗೆ **ಅನ್ಯೋನ್ಯತೆಯಲ್ಲಿರುವದು**. ಹೇಗೆ ಒಂದು ಇದ್ದಿಲು ಇತರ ಇದ್ದಿಲುಗಳೊಂದಿಗೆ ಬೆಂಕಿಯಲ್ಲಿರುವವರೆಗೂ ಕೆಂಡವಾಗಿರುತ್ತದೋ, ಹಾಗೆಯೇ ಇತರ ವಿಶ್ವಾಸಿಗಳ ಜೊತೆಯಲ್ಲಿನ ನಮ್ಮ ಅನ್ಯೋನ್ಯತೆಯು ಕ್ರಿಸ್ತನೊಂದಿಗೆ ಜೀವಿಸುವದಕ್ಕೆ ನಮಗೆ ಸಹಾಯಕವಾಗುತ್ತದೆ ಮತ್ತು ಇದೇ ರೀತಿ ಮಾಡು– –ವಂತೆ ಬೇರೆಯವರನ್ನು ಪ್ರೋತ್ಸಾಹಿಸುವದಕ್ಕೂ ಸಹ ಇದು ಸಹಾಯಕವಾಗುತ್ತದೆ. ದೇವರ ವಾಕ್ಯ ಹೀಗೆ ಹೇಳುತ್ತದೆ:

"ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ಸಭೆಯಾಗಿ ಕೂಡಿಕೊಳ್ಳುವದನ್ನು ಕೆಲವರು ರೂಢಿಯಾಗಿ ಬಿಟ್ಟಿರುವ ಪ್ರಕಾರ ನಾವು ಬಿಟ್ಟು ಬಿಡದೆ ಒಬ್ಬರನ್ನೊಬ್ಬರು ಎಚ್ಚರಿಸೋಣ. ಕರ್ತನ ಪ್ರತ್ಯಕ್ಷತೆಯ ದಿನವು ಸಮೀಪಿಸುತ್ತಾ ಬರುತ್ತದೆ ಎಂದು ನೀವು ನೋಡುವದರಿಂದ ಇದನ್ನು ಮತ್ತಷ್ಟು ಮಾಡಿರಿ." (ಇಬ್ರಿಯ–10:24,25)

4.)ನಾಲ್ಕನೆಯ ಜವಾಬ್ದಾರಿ ಏನೆಂದರೆ, ಕ್ರಿಸ್ತನ ಶಿಷ್ಯರು **ಆತನ ಸಾಕ್ಷಿಗಳಾಗಿರಬೇಕು**. ಯೇಸು ಪರಲೋಕಕ್ಕೆ ಏರಿಹೋಗುವದಕ್ಕಿಂತ ಮುಂಚೆ ತನ್ನ ಶಿಷ್ಯರಿಗೆ ಏನು ಹೇಳಿದನೆಂಬುದನ್ನು ಕೇಳಿಸಿಕೊಳ್ಳಿರಿ: "ಕ್ರಿಸ್ತನು ಶ್ರಮೆಪಟ್ಟು ಸತ್ತು ಮೂರನೆಯ ದಿನದಲ್ಲಿ ಜೀವಿತನಾಗಿ ಎದ್ದುಬರುವನೆಂತಲೂ ಪಾಪಪರಿಹಾರಕ್ಕೋಸ್ಕರ ದೇವರ ಕಡೆಗೆ ತಿರುಗಿಕೊಳ್ಳಬೇಕೆಂಬ ಮಾತು ಯೆರೂಸಲೇಮು ಮೊದಲುಗೊಂಡು ಸಮಸ್ತ ದೇಶದವರಿಗೂ ಆತನ ಹೆಸರಿನಲ್ಲಿ ಸಾರಲ್ಪಡುವದೆಂತಲೂ ಬರೆದದೆ. ಇವುಗಳ ವಿಷಯದಲ್ಲಿ ನೀವೇ ಸಾಕ್ಷಿ ಹೇಳುವವರಾಗಿ –ದ್ದೀರಿ." (ಲೂಕ–24:46-48). ಹೌದು, ಕ್ರಿಸ್ತನ ಶಿಷ್ಯರು, ಆತನನ್ನು ನಂಬುವವರೆಲ್ಲರಿಗೆ ಎಂದೆಂದಿಗೂ ದೇವರೊಂದಿಗಿನ ಒಂದು ಅದ್ಭುತವಾದ ಸಂಬಂಧವನ್ನು ಕೊಡುವದಕ್ಕೆ ಮರಣಹೊಂದಿದ ಯೇಸು ಕ್ರಿಸ್ತನ ಸುವಾರ್ತೆಯನ್ನು ವಿವರಿಸುತ್ತಾ ತಮ್ಮ ರಕ್ಷಕನ ಕುರಿ – –ತಾಗಿ ಇತರರಿಗೆ ಹೇಳಬೇಕು. ಖಂಡಿತವಾಗಿಯೂ, ನಮ್ಮ ಸಾಕ್ಷಿಯು ಕೇವಲ ಶಬ್ದಗಳಿಗೆ ಸಿಮಿತವಾಗಿರಬಾರದು, ಆದರೆ ಇದು ಪ್ರೀತಿ ಮತ್ತು ಪರಿಶುದ್ಧತೆಯ ಜೀವಿತದಿಂದ ಜೊತೆಗೂಡಿದ್ದಾಗಿರಬೇಕು. ಕ್ರಿಸ್ತನು ನಮ್ಮ ಜೀವಿತಗಳಲ್ಲಿ ಮಾಡಿರುವ ಈ ಬದಲಾವಣೆಯು ಸಂದೇಶವನ್ನು ಬಲಗೊಳಿಸಿ ದೃಢಪಡಿಸುವಂತದ್ದಾಗಿದೆ. ವಾಕ್ಯವು ಹೇಳುವದೇನೆಂದರೆ: "ದೇವರ ರಾಜ್ಯವು ಮಾತಿನಲ್ಲಿ ಇಲ್ಲ, ಶಕ್ತಿಯಲ್ಲಿ ಆಧಾರಗೊಂಡದೆ." (1ಕೊರಿಂಥ–4:20)

ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, ಯೇಸು ಕ್ರಿಸ್ತನೆಂಬ ರಕ್ಷಕನನ್ನು ನೀವು ಸಂಧಿಸಿದ ಒಂದು ದಿನವನ್ನು ಮತ್ತು ಆತನು ನಿಮ್ಮ ಪಾಪಗಳನ್ನು ಕ್ಷಮಿಸಿ ನಿಮ್ಮ ಹೃದಯವನ್ನು ನವೀಕರಿಸಿದ ದಿನವನ್ನು ನಿಮ್ಮ ಜೀವಿತದಲ್ಲಿ ಹೊಂದಿದ್ದೀರೋ? ನಿಮ್ಮ ಜೀವಿತವು ದೇವರ ಪರಿಶುದ್ಧತೆ ಮತ್ತು ಪ್ರೀತಿಯಿಂದ ತುಂಬಿದೆಯೋ? ನೀವು ಕರ್ತನಾದ ಯೇಸುವಿನ ನಿಜ ಶಿಷ್ಯರಾಗಿದ್ದೀರಾ?

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . .

ಪರಿಶುದ್ದ ವಾಕ್ಯಗಳು ಹೇಳಿರುವದನ್ನು ನೀವು ಆಲೋಚಿಸುವ ಹಾಗೆ ದೇವರು ನಿಮ್ಮನ್ನು ಆಶೀರ್ವದಿಲಿ:

**"ನಾವು ಆತನಿಂದ ಕೇಳಿ ನಿಮಗೆ ತಿಳಿಸುವ ವಾರ್ತೆ ಯಾವದೆಂದರೆ ದೇವರು ಬೆಳಕಾಗಿದ್ದಾನೆ; ಮತ್ತು ಆತನಲ್ಲಿ ಎಷ್ಟು ಮಾತ್ರವೂ ಕತ್ತಲೆಯಿಲ್ಲ ಎಂಬದೇ. ನಾವು ದೇವರ ಸಂಗಡ ಅನ್ಯೋನ್ಯತೆಯುಳ್ಳವರಾಗಿದ್ದೇವೆಂದು ಹೇಳಿ ಕತ್ತಲೆಯಲ್ಲಿ ನಡೆದರೆ ಸುಳ್ಳಾಡುವವರಾಗಿದ್ದೇವೆ, ಸತ್ಯವನ್ನನುಸರಿಸುವವರಲ್ಲ."** (1ಯೋಹಾನ–1:5,6)

[ಪಾಠ 92: ಕ್ರಿಸ್ತನ ಶಿಷ್ಯರು ಹೇಗೆ ಜೀವಿಸಬೇಕು?] [ಸಾರಾಂಶಗಳ ಪಟ್ಟಿ] [ಪಾಠ 94: ಪುನರಾವರ್ತನೆ #2]

ಪಾಠ 93

# ಪುನರಾವರ್ತನೆ 1:
# ಆದಾಮ: ಪಾಪದ ಸಮಸ್ಯೆ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ

ದೀರ್ಘ ಕಾಲದಿಂದ ನಾವು ಪ್ರವಾದಿಗಳ ಗ್ರಂಥಗಳನ್ನು ಅಧ್ಯಯನ ಮಾಡುತ್ತಿದ್ದೇವೆ. ದೇವರು ತನ್ನ ವಾಕ್ಯವನ್ನು ಬರೆಯುವದಕ್ಕಾಗಿ ನಲವತ್ತಕ್ಕಿಂತಲೂ ಹೆಚ್ಚು ಜನರಿಗೆ (ಸುಮಾರು ಸಾವಿರದ ಐನೂರು ವರ್ಷಗಳ ಅವಧಿಯಲ್ಲಿ) ಪ್ರೇರೇಪಿಸಿದನೆಂಬುದನ್ನು ನಾವು ನೋಡಿದ್ದೇವೆ, ಈ ಪುಸ್ತಕವು, ಪಾಪಿಗಳು ದೇವರ ಮುಂದೆ ನೀತಿವಂತರಾಗುವಂತಹ ನೀತಿಯ ಮಾರ್ಗವನ್ನು ಪ್ರಕಟಿಸುವಂತದ್ದಾಗಿದೆ. ದೇವರ ಎಲ್ಲಾ ನಿಜವಾದ ಪ್ರವಾದಿಗಳು ರಕ್ಷಣೆಯ ಮಾರ್ಗಕ್ಕೆ ಸಂಬಂಧಿಸಿದಂತ ಒಂದು ಸಂದೇಶವನ್ನು ಮತ್ತು ಒಂದು ಕಲ್ಪನೆ –ಯನ್ನು ಹಂಚಿಕೊಂಡಿದ್ದಾರೆಂಬುದನ್ನು ನಾವು ಕಂಡುಕೊಂಡಿದ್ದೇವೆ. ಅವರು ಏನು ಬರೆದಿದ್ದಾರೋ ಅದು ಅವರ ಸ್ವಂತ ಮನಸ್ಸಿ –ನಿಂದ ಹರಿದು ಬಂದಿರುವಂತದ್ದಲ್ಲ, ಆದರೆ ಅದು ದೇವರ ಆತ್ಮನಿಂದ ಬಂದಂತದ್ದಾಗಿದೆ. ದೇವರ ಸಹಾಯದೊಂದಿಗೆ, **ಈ ದಿನ ಮತ್ತು ಮುಂದಿನ ಮೂರು ಪ್ರಸಾರಗಳಲ್ಲಿ,** ನಾವು ಪರಿಶುದ್ಧ ವಾಕ್ಯಗಳಲ್ಲಿ ಅಧ್ಯಯನ ಮಾಡಿದ್ದೆಲ್ಲವನ್ನೂ **ಸಂಕ್ಷೇಪಿಸಿ ಪುನರಾವರ್ತಿಸುವ –ದಕ್ಕೆ** ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ಈ ದಿನದ ನಮ್ಮ ಪಾಠವು **"ಪಾಪದ ಸಮಸ್ಯೆ"** ಎಂದು ಕರೆಯಲ್ಪಡುತ್ತದೆ.

ದೇವರು ತನ್ನ ಪ್ರವಾದಿಯಾದ ಮೋಶೆಯ ಮನಸ್ಸಿನೊಳಗೆ ಇಟ್ಟಂತಹ **ತೋರಾ** ಎಂಬ ದೇವರ ವಾಕ್ಯದ ಮೊದಲ ಭಾಗವಾಗಿರುವ, **ದೇವರು ತಾನೇ ಹಾಕಿದಂತಹ ಬುನಾದಿಗೆ** ಈಗ ನಾವು ಹಿಂದಿರುಗೋಣ. ಮೊದಲನೆಯ ವಚನವನ್ನು ನೀವು ಜ್ಞಾಪಿಸಿಕೊಳ್ಳಬಹುದಾ? **"ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟು ಮಾಡಿದನು."** ಈ ವಚನದಲ್ಲಿ, ನಾವು ನೋಡುವದೇನೆಂದರೆ, ಪ್ರಾರಂಭ–ದಲ್ಲಿ ಲೋಕವು, ದೂತರುಗಳು ಮತ್ತು ಜನರು ಉತ್ಪತ್ತಿಯಾಗುವದಕ್ಕಿಂತ ಮುಂಚೆ, **ದೇವರು ಮಾತ್ರ ಅಸ್ತಿತ್ವದಲ್ಲಿದ್ದನು.** ದೇವರು ನಿತ್ಯ ಆತ್ಮನಾಗಿರುವ ನಿತ್ಯತ್ವದ ಕರ್ತನಾಗಿದ್ದಾನೆ. ಆತನಿಗೆ ಆದಿಯೂ ಇಲ್ಲ ಮತ್ತು ಅಂತ್ಯವೂ ಇಲ್ಲ. ಆತನು ಪ್ರತಿಯೊಂದನ್ನೂ ನೋಡು –ವಂತವನೂ ಮತ್ತು ಪ್ರತಿಯೊಂದನ್ನೂ ತಿಳಿದಿರುವಂತವನೂ ಆಗಿರುವ ಸರ್ವಶಕ್ತನಾಗಿದ್ದಾನೆ.

ಮೊದಲನೆಯ ಅಧ್ಯಾಯದಲ್ಲಿ, ದೇವರು ಆರು ದಿವಸಗಳಲ್ಲಿ ಆಕಾಶಗಳನ್ನೂ, ಭೂಮಿಯನ್ನೂ, ಸಾಗರಗಳನ್ನೂ, ಮತ್ತು ಅದರಲ್ಲಿರುವ –ದೆಲ್ಲವನ್ನೂ ಹೇಗೆ ಸೃಷ್ಟಿಸಿದನೆಂಬುದನ್ನು ನಾವು ಓದುತ್ತೇವೆ. ದೇವರು ತಾನು ಸೃಷ್ಟಿಸುವದಕ್ಕೆ ಯೋಜನೆ ಹಾಕಿಕೊಂಡಿದ್ದ ಮನುಷ್ಯನಿ –ಗಾಗಿ ಭೂಮಿಯನ್ನು ಸಿದ್ಧಪಡಿಸಿದನು. ಅದಕ್ಕಾಗಿಯೇ ಆರನೆಯ ದಿನದಲ್ಲಿ ದೇವರು ಹೇಳಿದ್ದೇನೆಂದರೆ,

"ನಮ್ಮ ಸ್ವರೂಪದಲ್ಲಿ ನಮ್ಮ ಹೋಲಿಕೆಗೆ ಸರಿಯಾಗಿ ಮನುಷ್ಯರನ್ನು ಉಂಟುಮಾಡೋಣ; ಅವರು ಸಮುದ್ರದಲ್ಲಿರುವ ಮೀನುಗಳ ಮೇಲೆಯೂ ಅಂತರಿಕ್ಷದಲ್ಲಿ ಹಾರಾಡುವ ಪಕ್ಷಿಗಳ ಮೇಲೆಯೂ ಪಶುಗಳ ಮೇಲೆಯೂ ನೆಲದ ಮೇಲೆ ಹರಿದಾಡುವ ಎಲ್ಲಾ ಕ್ರಿಮಿ ಕೀಟಗಳ ಮೇಲೆಯೂ ಎಲ್ಲಾ ಭೂಮಿಯ ಮೇಲೆಯೂ ದೊರೆತನ ಮಾಡಲಿ; ಹೀಗೆ ದೇವರು ಮನುಷ್ಯನನ್ನು ತನ್ನ ಸ್ವರೂಪದಲ್ಲಿ ಉಂಟುಮಾಡಿದನು. (ಆದಿ–1:26,27)

**ದೇವರು ಸೃಷ್ಟಿಮಾಡಿದ ಎಲ್ಲದರಲ್ಲಿ ಮನುಷ್ಯನು ತುಂಬ ಪ್ರಾಮುಖ್ಯವುಳ್ಳವನಾಗಿದ್ದನು.** ದೇವರು ಮನುಷ್ಯನನ್ನು ತನ್ನಸ್ವರೂಪದಲ್ಲಿ ಉಂಟು ಮಾಡಿದನು! ಮನುಷ್ಯನೊಂದಿಗೆ ಒಂದು ಆಳವಾದ ಮತ್ತು ಅದ್ಭುತವಾದ ಸಂಬಂಧವನ್ನು ಹೊಂದುವದಕ್ಕೆ ದೇವರು ಏರ್ಪಾಟು ಮಾಡಿಕೊಂಡಿದ್ದನು. ಅದಕ್ಕಾಗಿಯೇ ಆತನು ಮನುಷ್ಯನ ಮತ್ತು ಸ್ತ್ರೀಯ ಜೀವಾತ್ಮದಲ್ಲಿ **ಒಂದು ಆತ್ಮವನ್ನು** ಇರಿಸಿದನು, ಇದರಿಂದ ದೇವರನ್ನು ತಿಳಿದುಕೊಳ್ಳಲು ಅವರಿಗೆ ಸಾಧ್ಯವಾಯಿತು, ಅವರಿಗೆ ಒಂದು ಹೃದಯವನ್ನು ಕೊಟ್ಟನು ಇದರಿಂದ ದೇವರನ್ನು ಪ್ರೀತಿಸು –ವದಕ್ಕೆ ಅವರಿಗೆ ಸಾಧ್ಯವಾಯಿತು ಮತ್ತು ಒಂದು **ಸ್ವತಂತ್ರವಾದ ಚಿತ್ತವನ್ನು** ಅವರಿಗೆ ಒಪ್ಪಿಸಿಕೊಟ್ಟನು ಇದರಿಂದ ಅವರು ದೇವರಿಗೆ ವಿಧೇಯರಾಗುವದನ್ನು ಮತ್ತು ಅವಿಧೇಯರಾಗುವದನ್ನು ಆಯ್ಕೆ ಮಾಡಿಕೊಳ್ಳುವದಕ್ಕೆ ಅವರಿಗೆ ಸಾಧ್ಯವಾಯಿತು.

ಎರಡನೆಯ ಅಧ್ಯಾಯದಲ್ಲಿ, ಮೊದಲನೆಯ ಮನುಷ್ಯನಾದ ಆದಾಮನನ್ನು ದೇವರು ಹುಲುಸಾಗಿ ಬೆಳೆದ ತೋಟದಲ್ಲಿಟ್ಟನು, ಅದರಲ್ಲಿ ನೋಡುವದಕ್ಕೆ ಸುಂದರವಾಗಿಯೂ ತಿನ್ನುವದಕ್ಕೆ ಉತ್ತಮವಾಗಿಯೂ ಇದ್ದ ಹಣ್ಣುಗಳನ್ನು ಬಿಟ್ಟಿದ್ದ ಮರಗಳು ತುಂಬಿಕೊಂಡಿದ್ದವು. ದೇವರು ಆದಾಮನಿಂದ ತೆಗೆದ ಒಂದು ಪಕ್ಕೆ ಎಲುಬಿನಿಂದ ಒಬ್ಬ ಸ್ತ್ರೀಯನ್ನು ಉಂಟುಮಾಡಿ ಆಕೆಯನ್ನು ಅವನ ಮುಂದೆ ತಂದು ನಿಲ್ಲಿಸಿದನೆಂಬುದನ್ನು ಸಹ ನಾವು ನೋಡಿದ್ದೇವೆ. ಆದಾಮನು ಅವಳನ್ನು ಹವ್ವ ಎಂದು ಕರೆದನು. ದೇವರು ಅವರಿಬ್ಬರನ್ನೂ ಆಶೀರ್ವ –ದಿಸಿ ಅವರಿಗೆ ಅಗತ್ಯವಿರುವದನ್ನೆಲ್ಲಾ ಕೊಟ್ಟನು. ಆದಾಗ್ಯೂ ಅವರಿಂದ ಪಡೆದುಕೊಳ್ಳುವದಕ್ಕೆ ದೇವರು ಇಷ್ಟಪಟ್ಟಿದ್ದ ಏನೋ ಒಂದು ಇತ್ತು. ದೇವರು ತನ್ನ ಸ್ವಂತ ಸ್ವರೂಪದಲ್ಲಿ ಉಂಟುಮಾಡಿದ ಈ ಇಬ್ಬರಿಂದ ಯಾವುದನ್ನು ಇಷ್ಟಪಟ್ಟನು? ಅವರು ತನ್ನೊಂದಿಗೆ ಎಂದೆಂದಿಗೂ ಆಳವಾದ ಮತ್ತು ಅದ್ಭುತವಾದ ಸಂಬಂಧವನ್ನು ಹೊಂದಿಕೊಳ್ಳುವದಕ್ಕಾಗಿ, **ಅವರು ತನ್ನನ್ನು** ಪೂರ್ಣ ಮನಸ್ಸಿನಿಂದ, ಪೂರ್ಣ ಹೃದಯದಿಂದ, ಮತ್ತು ಪೂರ್ಣ ಚಿತ್ತದಿಂದ **ಪ್ರೀತಿಸಬೇಕೆಂಬುದನ್ನು** ಆತನು ಇಷ್ಟಪಟ್ಟಿದ್ದನು. ಇದರ ಪರಿಣಾಮವಾಗಿ, ಅವರ

ಹೃದಯಗಳಲ್ಲಿ ಏನಿದೆಯೆಂಬುದನ್ನು ಪ್ರಕಟಗೊಳಿಸುವದಕ್ಕಾಗಿ ದೇವರು ಅವರ ಮುಂದೆ ಒಂದು ಪರೀಕ್ಷೆ ಇಟ್ಟಿದ್ದನ್ನು ನಾವು ನೋಡಿ
–ದ್ದೇವೆ.  ದೇವರು ಆದಾಮನಿಗೆ ಈ ಆಜ್ಞೆಯನ್ನು ಕೊಟ್ಟನು: "ನೀನು ತೊಟದಲ್ಲಿರುವ ಎಲ್ಲಾ ಮರದ ಹಣ್ಣುಗಳನ್ನು ಯಥೇಚ್ಛವಾಗಿ
ತಿನ್ನಬಹುದು; ಒಳ್ಳೇದರ ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ಮಾತ್ರ ತಿನ್ನಬಾರದು; ತಿಂದ **ದಿನ ಸತ್ತೇ ಹೋಗುವಿ!"**
(ಆದಿ–2:16,17) ಈ ಪ್ರಕಾರ ದೇವರು ಆದಾಮನನ್ನು ಪರೀಕ್ಷೆಗೊಳಪಡಿಸಿ, ದೇವರ ನಿಯಮದಿಂದ ದೂರ ಹೋಗುವದರ ಪರಿ –
–ಣಾಮವು ದೇವರಿಂದ ಎಂದೆಂದಿಗೂ ಬೇರ್ಪಡುವಂತಹ ಮರಣವಾಗಿದೆ ಎಂಬುದಾಗಿ ಎಚ್ಚರಿಕೆ ಕೊಟ್ಟನು.

ಮೂರನೆಯ ಅಧ್ಯಾಯದಲ್ಲಿ, ಒಂದು ದಿನ ಸೈತಾನನು ಅಂದರೆ ದೇವರಿಗೆ ವಿರುದ್ಧವಾಗಿ ದಂಗೆ ಎದ್ದ ದೂತನು ಒಂದು ಯುಕ್ತಿಯುಳ್ಳ
ಸರ್ಪದಂತೆ ಆದಾಮ ಹವ್ವರ ಬಳಿಗೆ ಬಂದನು ಎನ್ನುವದನ್ನು ವಾಕ್ಯವು ವಿವರಿಸುತ್ತದೆ. ಅವನು ಸ್ತ್ರೀಗೆ ಹೀಗೆ ಹೇಳಿದನು:

"ಏನವ್ವಾ, ತೋಟದಲ್ಲಿರುವ ಯಾವ ಮರದ ಹಣ್ಣನ್ನೂ ನೀವು ತಿನ್ನಬಾರದೆಂದು ದೇವರು ಅಪ್ಪಣೆ ಕೊಟ್ಟಿರುವದು ನಿಜವೋ ಎಂದು
ಕೇಳಲು ಸ್ತ್ರೀಯು, ತೋಟದಲ್ಲಿರುವ ಮರಗಳ ಹಣ್ಣುಗಳನ್ನು ನಾವು ತಿನ್ನಬಹುದು; ಆದರೆ ತೋಟದ ಮಧ್ಯದಲ್ಲಿರುವ ಈ ಮರದ
ಫಲದ ವಿಷಯವಾಗಿ, ಇದನ್ನು ತಿನ್ನಲೂ ಕೂಡದು, ಮುಟ್ಟಲೂ ಕೂಡದು ತಿಂದರೆ ಸಾಯುವಿರಿ ಎಂದು ದೇವರು ಹೇಳಿದ್ದಾನೆ
ಅಂದಳು. ಆಗ ಸರ್ಪವು ಸ್ತ್ರೀಗೆ, ನೀವು ಹೇಗೂ ಸಾಯುವದಿಲ್ಲ; ನೀವು ಇದರ ಹಣ್ಣನ್ನು ತಿಂದಾಗಲೇ ನಿಮ್ಮ ಕಣ್ಣುಗಳು ತೆರಯುವವು;
ನೀವು ದೇವರಂತೆ ಆಗಿ ಒಳ್ಳೇದರ ಕೆಟ್ಟದ್ದರ ಭೇದವನ್ನು ಅರಿತವರಾಗುವಿರಿ; ಇದು ದೇವರಿಗೆ ಚೆನ್ನಾಗಿ ಗೊತ್ತುಂಟು ಅಂದಿತು."
(ಆದಿ–3:1-5)

ತಾನು ನಿಷೇಧಿಸಿದ ಮರದ ಹಣ್ಣನ್ನು ತಿಂದರೆ ಏನಾಗುತ್ತದೆಂದು ದೇವರು ಆದಾಮ ಹವ್ವರಿಗೆ ಹೇಳಿದ್ದನು? ಆತನು ಅವರಿಗೆ, "ನೀವು
**ಸತ್ತೇ ಹೋಗುವಿರಿ!"** ಎಂದು ಹೇಳಿದ್ದನು.  ಸೈತಾನನು ಅವರಿಗೆ ಏನು ಹೇಳಿದನು? "ನೀವು ಹೇಗೂ **ಸಾಯುವದಿಲ್ಲ"** ಎಂದು ಹೇಳಿ
–ದನು. ಆದಾಮ ಹವ್ವರು ನಂಬಿ ಅನುಸರಿಸುವದಕ್ಕೆ ಯಾರ ಮಾತನ್ನು ಆಯ್ಕೆ ಮಾಡಿಕೊಂಡರು? ಅವರು ದೇವರ ಮಾತನ್ನು ಆಯ್ಕೆ
ಮಾಡಿಕೊಂಡರೋ ಅಥವಾ ಸೈತಾನನ ಮಾತನ್ನೋ? **ಅವರು ದೇವರ ವೈರಿಯಾಗಿದ್ದ ಸೈತಾನನ ಮಾತನ್ನು ಆಯ್ಕೆ ಮಾಡಿಕೊಂಡರು!**

ಅದಾದ ನಂತರ, ದೇವರು ಏನು ಮಾಡಿದನು? ಆತನು ಸುಮ್ಮನೆ ಹಿಂದೆ ಕೂತುಕೊಂಡು ಆದಾಮ ಹವ್ವರನ್ನು ಗಮನಿಸುತ್ತಿದ್ದನೋ?
ಇಲ್ಲ. ಅವರಿಗೆ ತಾನು ಏನು ಮಾಡುತ್ತೇನೆಂದು ಎಚ್ಚರಿಕೆ ಕೊಟ್ಟಿದ್ದನೋ ಅದೇ ರೀತಿಯಾಗಿ ದೇವರು ಮಾಡಿದನು. ಆತನು ಅವರನ್ನು
ಕರೆಯಿಸಿ, ಅವರಿಗೆ ನ್ಯಾಯತೀರ್ಪು ಮಾಡಿ, ಅವರನ್ನು ಮತ್ತು ಭೂಮಿಯನ್ನೂ ಶಪಿಸಿ, ಅನಂತರ ಅವರಿಗಾಗಿ ಉಂಟುಮಾಡಿದ್ದ
ಸುಂದರವಾದ ತೋಟದ ಹೊರಗೆ ಅವರನ್ನಿಟ್ಟನು. ಆ ದು:ಖದ ದಿನದಂದು, ಆದಾಮ ಹವ್ವ ತಮ್ಮ ಆತ್ಮದಲ್ಲಿ ಸತ್ತು ಹೋದರು.
ಅವರು ಜೀವದ ಮೂಲವಾಗಿದ್ದ ದೇವರಿಂದ ಬೇರ್ಪಟ್ಟರು. ದೇವರು ಹೇಳಿದಂತೆ ಪಾಪದ ಸಂಬಳವು ನಿತ್ಯವಾದ ಮರಣವಾದುದ –
–ರಿಂದ, ಅವರು ಶಾರೀರಿಕವಾದ ಮರಣವನ್ನು ಮತ್ತು ನಿತ್ಯವಾದ ಶಿಕ್ಷೆಯನ್ನು ನಿರೀಕ್ಷಿಸುವದು ಮಾತ್ರವೇ ಈಗ ಅವರು ಮಾಡ
ಬೇಕಾದ ಒಂದೇ ಸಂಗತಿಯಾಗಿತ್ತು.

ನಿಜವಾಗಿಯೂ, ಪಾಪವು ಒಂದು ಭಯಂಕರವಾದ ವಿಪತ್ತಾಗಿದೆ. ಒಂದು ಪಾಪದಿಂದ ಆದಾಮನು ಮತ್ತು ಅವನ ಎಲ್ಲಾ ಸಂತತಿ –
–ಯವರು ದೇವರಿಂದ ಬೇರ್ಪಟ್ಟರು! ಪಾಪವು ಹೆಚ್ಚುಕಡಿಮೆ ಏಡ್ಸ್ ಎಂದು ಕರೆಯಲ್ಪಡುವ ರೋಗದ ರೀತಿ ಇದೆ. ನಿಮಗೆ ಗೊತ್ತಿರು
–ವಂತೆ, ಜನರು ತಮ್ಮೊಳಗೆ ಹರಡಿಕೊಳ್ಳುವಂತಹ ಕಾಯಿಲೆಯೇ ಈ ಏಡ್ಸ್. ಇದು ಪ್ರಪಂಚದಾದ್ಯಂತ ಇರುವ ಒಂದು ವಿಪತ್ತಾಗಿದೆ.
ಒಂದು ಸಲ ಏಡ್ಸ್‌ನ ವೈರಾಣು ಒಬ್ಬ ವ್ಯಕ್ತಿಯ ದೇಹದೊಳಗೆ ಹೋದರೆ ಅದು ಎಂದಿಗೂ ಅವನನ್ನು ಬಿಟ್ಟು ಹೋಗುವದಿಲ್ಲ. ಏಡ್ಸ್
ಕಾಯಲೆಯನ್ನು ಹೊಂದಿರುವವರು ಅದನ್ನು ತಮ್ಮ ಮಕ್ಕಳಿಗೆ ಹರಡಬಹುದು. ಏಡ್ಸ್ ಒಂದು ಕೊಲೆಗಾರನಾಗಿದ್ದು ಇದನ್ನು ಹೊಂದಿ
–ರುವವರೆಲ್ಲರೂ ನಾಶವಾಗುತ್ತಾರೆ. **ಪಾಪವು** ಇದರಂತೆಯೇ.  ಪಾಪ ಪ್ರತಿಯೊಂದು ಕಡೆ ಇದೆ, ಪ್ರತಿಯೊಬ್ಬರಲ್ಲಿದೆ ಮತ್ತು ಎಂದೆಂ –
–ದಿಗೂ ಜನರು ನಾಶವಾಗುವದಕ್ಕೆ ಕಾರಣವಾಗಿದೆ. ಆದರೆ ದೇವರಿಗೆ ಸ್ತೋತ್ರ, ಪಾಪದ ರೋಗ ಮತ್ತು ಏಡ್ಸ್‌ನ ರೋಗದ ನಡುವೆ
ಒಂದು ವ್ಯತ್ಯಾಸವಿದೆ.  ಏಡ್ಸ್ ರೋಗವನ್ನು ಗುಣಪಡಿಸುವದಕ್ಕೆ ಇನ್ನೂ ಯಾವ ಔಷಧವಿಲ್ಲ, ಆದರೆ ಪಾಪದಿಂದ ಸೋಂಕಿಗೊಳಗಾಗಿ
–ರುವ ಜನರಿಗಾಗಿ ಒಂದು ಗುಣಪಡಿಸುವಿಕೆ ಇದೆ!  ದೇವರು ತಾನೇ ಒಂದು ಪರಿಹಾರವನ್ನು ಒದಗಿಸಿದ್ದಾನೆ, ಅದನ್ನು ನಾವು ಉಪ
–ಯೋಗಿಸಿದರೆ ಅದು ಪಾಪದಿಂದ ನಮ್ಮನ್ನು ಎಂದೆಂದಿಗೂ ಶುದ್ದಪಡಿಸುತ್ತದೆ.

ಆದಾಮ ಹವ್ವ ಪಾಪ ಮಾಡಿದ ದಿನದಂದು ದೇವರು ಕೊಟ್ಟಂತಹ ಅದ್ಭುತವಾದ ವಾಗ್ದಾನವು ನಿಮಗೆ ಜ್ಞಾಪಕವಿದೆಯಾ?  ಹೌದು,
ಪಾಪವು ಲೋಕದೊಳಕ್ಕೆ ಪ್ರವೇಶಿಸಿದ ಅದೇ ದಿನದಂದು, ದೇವರು ಒಂದು ವಾಗ್ದಾನವನ್ನು ಮಾಡಿದನು, ಅದೇನೆಂದರೆ, ಪಾಪ ಮತ್ತು
ಸೈತಾನನ ನಾಶಕರವಾದ ಬಲದಿಂದ ಆದಾಮನ ಸಂತತಿಯವರನ್ನು ವಿಮೋಚಿಸುವ ಒಬ್ಬ ಪರಿಶುದ್ಧ ವಿಮೋಚಕನನ್ನು ಭೂಲೋಕಕ್ಕೆ
ಕಳಿಸುತ್ತೇನೆಂಬುದು. ಈ ವಿಮೋಚಕನು ಸರಿಸಾಟಿಯಿಲ್ಲದೆ ಒಬ್ಬ ಕನ್ಯೆಯಲ್ಲಿ ಜನಿಸುತ್ತಾನೆಂದು ದೇವರು ಪ್ರಕಟಿಸಿರುವದನ್ನು ಸಹ ನಾವು
ಓದುತ್ತೇವೆ, ಯಾಕಂದರೆ ಪಾಪದಿಂದ ಸೋಂಕಿಗೊಳಗಾಗಿರುವ ಆದಾಮನ ಸಂತಾನದವರಿಂದ ಪಾಪಿಗಳ ರಕ್ಷಕನು ಬರುವದಕ್ಕೆ
ಸಾಧ್ಯವಿಲ್ಲ.  ಆತನು ಶುದ್ಧವಾದ ಮತ್ತು ಪವಿತ್ರ ದೇವರ ಆತ್ಮನಿಂದ ಬರಬೇಕು.

ಹಾಗಾಗಿ ಸುವಾರ್ತೆಯಲ್ಲಿ (ಇಂಜಿಲ್) ನೋಡುವದೇನೆಂದರೆ, ರಕ್ಷಕನನ್ನು ಕಳಿಸುತ್ತೇನೆಂದು ದೇವರು ವಾಗ್ದಾನ ಮಾಡಿದ ಸಾವಿರಾರು
ವರ್ಷಗಳ ನಂತರ, ದೇವರು ನೇಮಕ ಮಾಡಿದ ಸಮಯ ಬಂದಾಗ, ಒಬ್ಬ ಸಂಪೂರ್ಣ ನೀತಿವಂತ ಮನುಷ್ಯನು ಲೋಕದೊಳಕ್ಕೆ
ಹುಟ್ಟಿ ಬಂದನು; ಆತನಿಗೆ ಭೂಲೋಕದ ತಂದೆಯಿಲ್ಲ; ಆತನು ಒಬ್ಬ ಕನ್ಯೆಯಲ್ಲಿ ಜನಿಸಿದನು. ಆತನ ಹೆಸರು ದೇವರು ರಕ್ಷಿಸುತ್ತಾನೆ
ಎಂಬ ಅರ್ಥವಿರುವ **ಯೇಸು** ಎಂಬದು.  ಹೌದು, ಆದಾಮ ಹವ್ವ ಪಾಪ ಮಾಡಿದ ದಿನದಂದು ದೇವರು ವಾಗ್ದಾನ ಮಾಡಿದ ಪವಿತ್ರ

ವಿಮೋಚಕನೇ ಯೇಸು ಕ್ರಿಸ್ತನು. ಒಬ್ಬನೇ ರಕ್ಷಕನಾದವನು ಈತನೇ.

ಪಾಪವು ಲೋಕದೊಳಕ್ಕೆ ಪ್ರವೇಶಿಸಿದ ದಿನದಂದು ಏನು ಸಂಭವಿಸಿತೆಂಬುದರ ಪುನರಾವರ್ತನೆಗೆ ಈಗ ನಾವು ಹಿಂತಿರುಗೋಣ. ಒಳ್ಳೇ –ದರ ಮತ್ತು ಕೆಟ್ಟದ್ದರ ಅರುಹನ್ನು ಹುಟ್ಟಿಸುವ ಮರದ ಹಣ್ಣನ್ನು ತಿಂದ ನಂತರ ಆದಾಮ ಹವ್ವ ಏನು ಮಾಡಿದರೆಂಬುದನ್ನು ನೀವು ನೆನಪು ಮಾಡಿಕೊಳ್ಳಲು ಸಾಧ್ಯವೋ? ಅವರಿಬ್ಬರೂ ಅಂಜೂರದ ಎಲೆಗಳನ್ನು ಹೊಲಿದು ತಮ್ಮ ಮಾನವನ್ನು ಮುಚ್ಚಿಕೊಳ್ಳುವ ಪ್ರಯತ್ನ –ದಲ್ಲಿ ಅದನ್ನು ತಮ್ಮ ಸೊಂಟದ ಸುತ್ತಲೂ ಉಟ್ಟುಕೊಂಡರು, ಯಾಕಂದರೆ ಅವರು ಪಾಪ ಮಾಡುವದಕ್ಕಿಂತ ಮೊದಲು ಬೆತ್ತಲೆ – –ಯಾಗಿದ್ದರೂ ಅವರು ನಾಚಿಕೊಂಡಿರಲಿಲ್ಲ. ಅವರು ತಾವೇ ಮಾಡಿಕೊಂಡ ಬಟ್ಟೆಗಳನ್ನು ದೇವರು ಒಪ್ಪಿಕೊಂಡನೋ? ಇಲ್ಲ! ಆ ಬಟ್ಟೆಗಳನ್ನು ದೇವರು ಯಾಕೆ ಒಪ್ಪಿಕೊಳ್ಳಲಿಲ್ಲ? ದೇವರ ಮುಂದೆ ತನ್ನ ಪಾಪದ ಅವಮಾನವನ್ನು ಮುಚ್ಚಿಕೊಳ್ಳುವದಕ್ಕೆ ಮನುಷ್ಯನಿಗೆ ಏನೂ ಇಲ್ಲ ಎನ್ನುವದನ್ನು ಅವರಿಗೆ ಕಲಿಸುವದಕ್ಕೆ ದೇವರು ಬಯಸಿದನು! ಏನೇ ಆದರೂ, ದೇವರು ಆದಾಮ ಹವ್ವರಿಗಾಗಿ ಏನೋ ಒಂದನ್ನು ಮಾಡಿದನು. ದೇವರು ಹೇಗೆ ಕೆಲವು ಮುಗ್ಧ ಪ್ರಾಣಿಗಳನ್ನು ಆರಿಸಿಕೊಂಡು, ಅವುಗಳನ್ನು ವಧಿಸಿ, ಅವುಗಳ ಚರ್ಮವನ್ನು ತೆಗೆದು, ಆದಾಮ ಹವ್ವರಿಗೆ ಬಟ್ಟೆಗಳನ್ನು ಮಾಡಿ ಅವರಿಗೆ ತೊಡಿಸಿದನೆಂಬುದನ್ನು ನಾವು ನೋಡಿದ್ದೇವೆ. ಈ ರೀತಿಯಲ್ಲಿ **ಪಾಪದ ಸಂಬಳ ಮರಣ** ಎಂಬುದನ್ನು ದೇವರು ಆದಾಮ ಹವ್ವರಿಗೆ ಕಲಿಸಿದನು! ದೇವರು ಪ್ರಾಣಿಗಳನ್ನು ಮಾತ್ರ ಯಜ್ಞ ಮಾಡಲಿಲ್ಲ, ಆದರೆ ದೇವರು ವಿಮೋಚಕನನ್ನು ಕಳಿಸುವ ಸಮಯದವರೆಗೆ, ಪಾಪವನ್ನು ಮುಚ್ಚುವದಕ್ಕೆ ಒಂದು ಯಜ್ಞದಂತೆ ನಿಷ್ಕಳಂಕವಾದ ಪ್ರಾಣಿಗಳನ್ನು ಯಜ್ಞಮಾಡುವಂತೆ ಸಹ ಆತನು ಆದಾಮ ಮತ್ತು ಅವನ ಸಂತಾನದವರಿಗೆ ಆಜ್ಞಾಪಿಸಿದನು.

ಈ ಪ್ರಕಾರ ದೇವರು ಅವರಿಗೆ **ನಿಷ್ಕಳಂಕವಾದ ಯಜ್ಞದ ರೀತಿಯೇ ರಕ್ಷಣೆಗಾಗಿ ಇರುವ ಒಂದೇ ಮಾರ್ಗ** ಎನ್ನುವದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟನು. ಪಾಪವನ್ನು ಮುಚ್ಚುವಂತಹ ಯಜ್ಞದ ಹಾಗೆ ಒಬ್ಬನು ನಿಷ್ಕಳಂಕವಾದ ಪ್ರಾಣಿಗಳನ್ನು ಆರಿಸಿಕೊಂಡು ಅವುಗಳನ್ನು ವಧಿಸಬೇಕೆನ್ನುವ ದೇವರ ಆಜ್ಞಾನಿರ್ಣಯವೇ ನೀತಿಯ ಮಾರ್ಗವಾಗಿದೆ. ಆದಾಮನ ಸಂತತಿಯವರಿಗಾಗಿ ಪಾಪದ ಸಾಲವನ್ನು ತೀರಿ –ಸುವದಕ್ಕಾಗಿ ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸುವದಕ್ಕೆ ಬರಲಿರುವ **ಪರಿಶುದ್ಧ ವಿಮೋಚಕನನ್ನು** ಈ ಯಜ್ಞಗಳು **ನಿದರ್ಶಿಸು– –ತ್ತವೆ.** ಹೀಗೆ, ಪಾಪವನ್ನು ತೆಗೆದು ಹಾಕುವದಕ್ಕೆ ಸಂಪೂರ್ಣವಾದ ಯಜ್ಞದ ಹಾಗೆ ಸಾಯುವದಕ್ಕಿದ್ದ ಮೆಸ್ಸೀಯನಾದ ಯೇಸುವಿನ ಒಂದು ಛಾಯೆಯನ್ನು ಆ ಪ್ರಾಣಿಯ ಯಜ್ಞಗಳಿಂದ ದೇವರು ಪಾಪಿಗಳ ಮುಂದಿಟ್ಟನು. ಈ ರೀತಿಯಲ್ಲಿ, ಆತನು ನೀತಿವಂತನೆಂಬು– –ದಾಗಿ ದೇವರು ಪ್ರದರ್ಶಿಸಿದನು, **"**ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪಿಯಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿ – –ದ್ದಾನೆ.**"** (ರೋಮಾ–3:26)

ಈ ಅಧ್ಯಾಯದಲ್ಲಿ ಮುಂದೆ ಬರುವ ಆದಾಮನ ಪಾಪದ ಕತೆ ಮತ್ತು ದೇವರು ವಿಮೋಚಕನನ್ನು ಕಳಿಸುವ ಅದ್ಭುತವಾದ ವಾಗ್ದಾನ, ಹಾಗೂ ಆದಾಮನ ಮೊದಲ ಇಬ್ಬರು ಮಕ್ಕಳಾದ ಕಾಯಿನ ಮತ್ತು ಹೇಬೇಲರ ಕುರಿತು ಓದುತ್ತೇವೆ. ದೇವರು ಆಜ್ಞಾಪಿಸಿದಂತೆ ಹೇಬೆ –ಲನು ನಿಷ್ಕಳಂಕವಾದ ಒಂದು ಕುರಿಯನ್ನು ವಧಿಸಿ ಪಾಪವನ್ನು ಮುಚ್ಚುವಂತಹ ಒಂದು ಯಜ್ಞದ ಹಾಗೆ ದೇವರಿಗೆ ಸಮರ್ಪಿಸಿದ್ದನ್ನು ನಾವು ನೋಡುತ್ತೇವೆ. ಕಾಯಿನನು ಶಾಪಗ್ರಸ್ತ ಭೂಮಿಯಲ್ಲಿ ತಾನು ಬೆಳೆದದ್ದನ್ನು ದೇವರಿಗೆ ಸಮರ್ಪಿಸಿ ತನ್ನ ಸ್ವಂತ ಪರಿಶ್ರಮದಿಂದ ದೇವರನ್ನು ತಲುಪುವದಕ್ಕೆ ಪ್ರಯತ್ನಿಸುತ್ತಾನೆ. ಹಾಗಾಗಿ ವಾಕ್ಯ ಹೀಗೆ ಹೇಳುತ್ತದೆ:**"**ಯೆಹೋವನು ಹೇಬೆಲನನ್ನು ಅವನ ಕಾಣಿಕೆಯನ್ನೂ ಮೆಚ್ಚಿ ಕಾಯಿನನ್ನು ಅವನ ಕಾಣಿಕೆಯನ್ನು ಮೆಚ್ಚಲಿಲ್ಲ.**"** (ಆದಿ–4:5) ದೇವರು ಕಾಯಿನನ ಕಾಣಿಕೆಯನ್ನು ಯಾಕೆ ಮೆಚ್ಚಲಿಲ್ಲ? ನಾವು ನೋಡಿದ ಹಾಗೆ, ದೇವರ ನಿರ್ಣಯವಾಗಿರುವಂತಹ ನೀತಿವಂತಿಕೆಯ ಮಾರ್ಗವು ಹೇಳುವದೇನೆಂದರೆ, **"ರಕ್ತಧಾರೆಯಿಲ್ಲದೆ ಪಾಪಪರಿ –ಹಾರವಿಲ್ಲ."** (ಇಬ್ರಿಯ–9:22) ಎಂಬುದು. ಹೀಗಿದ್ದರೂ, ಕಾಯಿನನು ದೇವರು ನೇಮಿಸಿದಂತಹ ಯಜ್ಞದ ರೀತಿಯನ್ನು ತಾತ್ಸಾರ ಮಾಡಿದನು. ಕಾಯಿನನು ದೇವರನ್ನು ನಂಬುವವನಂತೆ ನಟಿಸಿದನು, ಆದರೆ ಅವನ ಕೃತ್ಯಗಳು ಇದನ್ನು ಅಲ್ಲಗಳೆದವು, ಅದುದರಿಂದ ಅವನು ದೇವರಿಗೆ ಅಗತ್ಯವಾಗಿರುವ ರಕ್ತದ ಯಜ್ಞವನ್ನು ಸಮರ್ಪಿಸಲಿಲ್ಲ. ಅದಕ್ಕಾಗಿಯೇ ದೇವರು ಕಾಯಿನನನ್ನೂ ಮತ್ತು ಅವನ ಕಾಣಿಕೆಯನ್ನು ಮೆಚ್ಚಲಿಲ್ಲ. ಏನೇ ಆದರೂ, ದೇವರು ಹೇಬೆಲನ ಯಜ್ಞವನ್ನು ಮೆಚ್ಚಿಕೆಯಿಂದ ನೋಡಿದನು ಮತ್ತು ಅವನ ಎಲ್ಲಾ ಪಾಪಗಳನ್ನು ಕ್ಷಮಿಸಿದನು, ಯಾಕಂದರೆ ಹೇಬೆಲನು ದೇವರ ಮಾತನ್ನು ನಂಬಿ ಆತನಿಗೆ ಕುರಿಯ ರಕ್ತವನ್ನು ತಂದಿದ್ದನು.

ಪಾಪಗಳಿಗಾಗಿ ಕ್ರಯ ಕೊಡುವದಕ್ಕೆ ತನ್ನ ರಕ್ತವನ್ನು ಸುರಿಸಿದ ಮೆಸ್ಸೀಯನಾದ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ದೇವರು ನೀತಿ –ವಂತರೆಂಬುದಾಗಿ ತೀರ್ಪು ಮಾಡುವದರಿಂದ ಅಂತವರಿಗೆ ಹೇಬೆಲನು ನಿದರ್ಶನವಾಗಿದ್ದಾನೆ. ಪರಲೋಕದಿಂದ ದೇವರು ಕಳಿಸಿದ ವಿಮೋಚಕನ ಯಜ್ಞವನ್ನು ಒಪ್ಪಿಕೊಳ್ಳುವದಕ್ಕೆ ನಿರಾಕರಿಸಿ ತಮ್ಮ ಸ್ವಂತ ಶ್ರಮದಿಂದ ದೇವರ ಮುಂದೆ ನೀತಿವಂತರಾಗುವದಕ್ಕೆ ಪ್ರಯತ್ನಿ –ಸುವವರಿಗೆ ಕಾಯಿನನು ನಿದರ್ಶನವಾಗಿದ್ದಾನೆ. ಈ ದಿನದವರೆಗೆ, ಕೇವಲ **ಈ ಎರಡು ರೀತಿಗಳು** ಮಾತ್ರ ಇರುವದು ಯಾವುವೆಂದರೆ: ಹೇಬೆಲನ ರೀತಿ ಮತ್ತು ಕಾಯಿನನ ರೀತಿ. ನೀವು ಯಾವ ರೀತಿಯನ್ನು ಅನುಸರಿಸುತ್ತೀದ್ದೀರಿ? ಹೇಬೇಲನ ರೀತಿಯನ್ನು ಅಂದರೆ ದೇವರು ಕಳಿಸಿದ ಪರಿಶುದ್ಧ ವಿಮೋಚಕ ಯಜ್ಞದ ಮೇಲೆ ಕಂಡುಬರುವಂತಹ **ನೀತಿವಂತಿಕೆಯ ಮಾರ್ಗವನ್ನು** ನೀವು ಒಪ್ಪಿಕೊಂಡಿ – –ದ್ದೀರೋ? ಅಥವಾ ಧರ್ಮದ ಅವಶ್ಯಕತೆಗಳು ಮತ್ತು ಮನುಷ್ಯನ ಕೆಲಸಗಳ ಮೇಲೆ ಆಧಾರಗೊಂಡಿರುವಂತಹ **ಅನೀತಿವಂತಿಕೆಯ ಮಾರ್ಗವಾಗಿರುವ** ಕಾಯಿನನ ರೀತಿಯಲ್ಲಿಯೇ ನೀವು ಇನ್ನೂ ಹೋಗುತ್ತಿದ್ದೀರೋ?

ಜೊತೆ ಕೇಳುಗರೇ, **ದೇವರು ನೀತಿವಂತನು** ಮತ್ತು ಪಾಪವನ್ನು ಸಹಿಸಿಕೊಳ್ಳದವನು ಎಂಬುದನ್ನು ದಯವಿಟ್ಟು ತಿಳಿದುಕೊಳ್ಳಿರಿ! ದೇವರು ಆದಾಮ ಮತ್ತು ಹವ್ವರಿಗೆ, ಕಾಯಿನ ಮತ್ತು ಹೇಬೆಲರಿಗೆ, ಮತ್ತು ಅವರ ಎಲ್ಲಾ ಸಂತತಿಯವರಿಗೆ: **"**ನೀವು ಪಾಪ ಮಾಡಿದ್ದೀರೆಂದು ನನಗೆ ಗೊತ್ತು, ಆದರೆ ಅದು ಸರಿ! ಇದು ಒಂದು ದೊಡ್ಡ ವ್ಯವಹಾರವಲ್ಲ, ನೀವು ಯಾವಾಗಲೂ ಪಾಪ ಮಾಡುವದನ್ನು ನಾನು ಸುಮ್ಮನೆ ಮರೆತುಬಿಡುತ್ತೇನೆ!**"** ಎಂದು ಹೇಳಲಿಲ್ಲ. ದೇವರು ಆ ರೀತಿಯಲ್ಲಿ ಪಾಪವನ್ನು ಕ್ಷಮಿಸುವದಕ್ಕೆ ಸಾಧ್ಯವಾಗುತ್ತದೋ?

ಎಂದಿಗೂ ಇಲ್ಲ! ಒಂದುವೇಳೆ ದೇವರು ಹಾಗೆ ಮಾಡಿದರೆ ಪಾಪಿಗಳು ಹೇಗೆ ಆತನ ಪರಿಶುದ್ಧತೆಯನ್ನು ಗುರುತಿಸುತ್ತಾರೆ? ದೇವರು ಒಬ್ಬ ನೀತಿಯುಳ್ಳ ನ್ಯಾಯಾಧಿಪತಿ ಮತ್ತು ಪಾಪವನ್ನು ಶಿಕ್ಷಿಸುವವನು. ಪಾಪದ ಸಂಬಳವು ಮರಣ! ಅದಕ್ಕಾಗಿಯೇ ಪರಿಶುದ್ಧ ವಿಮೋ–ಚಕನು ನಮ್ಮ ಪಾಪಗಳಿಗಾಗಿ ಸತ್ತನು. ಆತನು ಶಿಲುಬೆಯ ಮೇಲೆ ಸತ್ತಾಗ ನನ್ನ ಮತ್ತು ನಿಮ್ಮ ಪಾಪಗಳಿಗಾಗಿ ದಂಡವನ್ನು ಕೊಟ್ಟನು.

ದೇವರು ವಿಧಿಸಿರುವ **ನೀತಿವಂತಿಕೆಯ ಮಾರ್ಗದ** ಕುರಿತಾಗಿ ಸುವಾರ್ತೆಯಲ್ಲಿ ಬರೆದಿರುವದನ್ನು ಕೇಳಿರಿ. ವಾಕ್ಯ ಹೀಗೆ ಹೇಳುತ್ತದೆ:

**"ಒಬ್ಬ ಮನುಷ್ಯನಿಂದ** ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ **ಎಲ್ಲರಲ್ಲಿ** ವ್ಯಾಪಿಸಿತು.**"** (ರೋಮಾ–5:12). **"ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೇ ಹೋಗಿದ್ದಾರೆ**. ಅವರು **ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತ ಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು**. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು. ದೇವರು ಹಿಂದಿನ ಕಾಲದ ಪಾಪಗಳನ್ನು ದಂಡಿಸದೆ ಸಹಿಸಿಕೊಂಡಿರಲಾಗಿ ತನ್ನ ನೀತಿಯನ್ನು ಈಗಿನ ಕಾಲದಲ್ಲಿ ಹೀಗೆ ತೋರಿಸಿ ತಾನು ನೀತಿಸ್ವರೂಪನಾಗಿಯೂ ಯೇಸುವಿನಲ್ಲಿ ನಂಬಿಕೆಯಿಡುವವರನ್ನು ನೀತಿವಂತರೆಂದು ನಿರ್ಣಯಿಸುವವನಾಗಿಯೂ ಕಾಣಿಸಿಕೊಂಡಿದ್ದಾನೆ.**"** (ರೋಮಾ–3:22-26). **"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು** ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ **ನಿತ್ಯಜೀವ."** (ರೋಮಾ–6:23)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ನಮ್ಮ ಮುಂದಿನ ಪಾಠದಲ್ಲಿ, ದೇವರ ಚಿತ್ತವಾದರೆ, ಪ್ರವಾದಿಗಳ ಸಂದೇಶದ ಪುನರಾವರ್ತನೆ ––ಯನ್ನು ಮುಂದುವರಿಸುತ್ತೇವೆ ಮತ್ತು ಲೋಕಕ್ಕೆ ರಕ್ಷಕನನ್ನು ಕಳಿಸುವ ತನ್ನ ಅದ್ಭುತವಾದ ಯೋಜನೆಯಲ್ಲಿ ಭಾಗವಾಗಿರುವದಕ್ಕೆ ದೇವರು ಹೇಗೆ ಅಬ್ರಹಾಮನನ್ನು ಕರೆದನೆಂಬುದನ್ನು ನೆನಪುಮಾಡಿಕೊಳ್ಳುತ್ತೇವೆ. . . .

ನಿಮ್ಮ ಜೀವಿತವನ್ನು ಬದಲಾಯಿಸುವಂತ ದೇವರ ವಾಕ್ಯದ ಈ ಹೇಳಿಕೆಯನ್ನು ನೀವು ಧ್ಯಾನ ಮಾಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿರುವ ನಿತ್ಯಜೀವ."** (ರೋಮಾ–6:23)

ಪಾಠ 94

# ಪುನರಾವರ್ತನೆ 2:

## ಅಬ್ರಹಾಮ: ನಂಬಿಕೆಯಿಂದ ನೀತಿವಂತನು

ಆದಿಕಾಂಡ 6-22, ಇತ್ಯಾದಿ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಈ ದಿನ ನಾವು ದೇವರ ಪ್ರವಾದಿಗಳ ಸಂದೇಶದ **ಪುನರಾವರ್ತನೆಯನ್ನು** ಮುಂದುವರಿಸುತ್ತೇವೆ. ಪ್ರವಾದಿಗಳ ಸಂದೇಶವು ಒಂದು ಕತೆ. . ..**ದೇವರ ಕತೆ.** . .ಪಾಪದಲ್ಲಿ ಕಳೆದುಹೋಗಿದ್ದ ಆದಾಮನ ಮಕ್ಕಳನ್ನು ಹುಡುಕಿ ರಕ್ಷಿಸುವದಕ್ಕೆ ದೇವರು ಏನು ಮಾಡಿದ್ದಾನೋ ಅದರ ಕುರಿತಾದ ಅದ್ಭುತವಾದ ಕತೆ. ಸಂಕ್ಷಿಪ್ತವಾಗಿ, **ಅನೀತಿವಂತ ಜನರು ದೇವರ ಮುಂದೆ ನೀತಿವಂತರಾಗಿ ಹೇಗೆ ಮಾಡಲ್ಪಡಲು ಸಾಧ್ಯ ಎನ್ನು –ವದರ ಕುರಿತಾದ ಶುಭ ಸಂದೇಶವೇ ದೇವರ ಪ್ರವಾದಿಗಳ ಸಂದೇಶವಾಗಿದೆ.** ನಮ್ಮ ಪುನರಾವರ್ತನೆಯ ಈ ದಿನದ ಪಾಠವು **"ನಂಬಿಕೆ –ಯಿಂದ ನೀತಿವಂತನು"** ಎಂದು ಹೆಸರಿಸಲ್ಪಟ್ಟಿದೆ.

ಪ್ರತಿಯೊಂದು ಕತೆಯ ಹಾಗೆಯೇ, ದೇವರ ಪುಸ್ತಕ ಒಳಗೊಂಡಿರುವ ಕತೆಯು ಒಂದು ಆರಂಭವನ್ನು ಮತ್ತು ಒಂದು ಅಂತ್ಯವನ್ನು ಹೊಂದಿದೆ. ನಮ್ಮ ಹಿಂದಿನ ಅಧ್ಯಯನದಲ್ಲಿ, ನಾವು ಕತೆಯ ಆರಂಭವನ್ನು ಪುನರಾವರ್ತಿಸಿ ಮೊದಲ ಮನುಷ್ಯನಾದ ಆದಾಮನು ಹೇಗೆ ದೇವರ ವೈರಿಯಾಗಿದ್ದ ಸೈತಾನನನ್ನು ಹಿಂಬಾಲಿಸುವದಕ್ಕೆ ಆಯ್ಕೆ ಮಾಡಿಕೊಂಡನೆಂಬುದನ್ನು ನೋಡಿದೆವು. ಆದಾಮನ ಒಂದು ಪಾಪವು ಅವನ ಎಲ್ಲಾ ಸಂತತಿಯವರು ನರಕದ ದಾರಿಯ ಮೇಲೆ ಪಾಪದಲ್ಲಿ ಹುಟ್ಟುವದಕ್ಕೆ ಕಾರಣವಾಯಿತು. ಕೆಲವರು ಇದನ್ನು ನಿರಾಕರಿಸುವದಕ್ಕೆ ಪ್ರಯತ್ನಿಸಿ: "ಆದಾಮನ ಪಾಪವು ಅವನ ಸ್ವಂತ ಸಮಸ್ಯೆ! ಇದು ನಮಗೆ ಪರಿಣಾಮ ಬೀರುವದಿಲ್ಲ!" ಹೇಳು – –ತ್ತಾರೆ ಆದರೆ ಇದನ್ನು ಹೇಳುವವರು ಪ್ರವಾದಿಗಳ ಗ್ರಂಥಗಳು ಹೇಳಿರುವದನ್ನು ಕಡೆಗಣಿಸುತ್ತಾರೆ: **"ಒಬ್ಬ ಮನುಷ್ಯನಿಂದ ಪಾಪವೂ ಪಾಪದಿಂದ ಮರಣವೂ ಲೋಕದೊಳಗೆ ಸೇರಿದವು**; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ **ಎಲ್ಲರಲ್ಲಿ** ವ್ಯಾಪಿಸಿತು.**"** (ರೋಮಾ–5:12).

ಉಲೂಫ್ ಹೀಗೆ ಹೇಳುತ್ತದೆ: **"**ಒಂದು ಸಾಂಕ್ರಾಮಿಕದ ಪರಿಣಾಮವು ಇದಕ್ಕೆ ಕಾರಣರಾದವರನ್ನು ಮಲಿನಗೊಳಿಸುವದಿಲ್ಲ!**"** ಹಾಗೆಯೇ, ಆದಾಮನ ಪಾಪದ ಶಾಪವು ಅವನೊಬ್ಬನೊಂದಿಗೆ ನಿಂತುಹೋಗಲಿಲ್ಲ, ಆದರೆ ಒಂದು ಸಾಂಕ್ರಾಮಿಕ ರೋಗದ ಹಾಗೆ ನಮ್ಮೆಲ್ಲರಲ್ಲಿ ಹರಡಿಕೊಂಡಿತು. ಎಲ್ಲಾ ಮನುಷ್ಯರು ಒಂದು ಪಾಪದ ಸ್ವಭಾವದೊಂದಿಗೆ ಹುಟ್ಟುವದಕ್ಕೆ ಆದಾಮನ ಮೂಲ ಪಾಪವು ಕಾರಣವಾಗಿದೆ. **"**ಒಂದು ಇಲಿಯು ಗುಂಡಿ ತೋಡುವದನ್ನು ಮಾತ್ರ ಹುಟ್ಟಿಸುತ್ತದೆ.**"** {ಉಲೂಫ್ ಗಾದೆ}. ಹಾಗೆಯೇ, ನಾವೆಲ್ಲರೂ ನಮ್ಮ ಪೂರ್ವಜನಾದ ಆದಾಮನ ಸ್ವಭಾವವನ್ನು ಸ್ವಾಸ್ಥ್ಯವಾಗಿ ಹೊಂದಿಕೊಂಡಿದ್ದೇವೆ. ಪೂರ್ಣ ನಿಶ್ಚಿತವಾದದ್ದು ಏನೇಂದರೆ, ದೇವರು ನಮಗಾಗಿ ಒಂದು ಪರಿಹಾರವನ್ನು ಒದಗಿಸುವದರ ಹೊರತಾಗಿ ನಮ್ಮಲ್ಲಿರುವ ಪಾಪದ ಸ್ವಭಾವವು ನಮ್ಮನ್ನು ಎಂದೆಂದಿಗೂ ಶಿಕ್ಷೆಗೆ ಗುರಿಮಾಡುತ್ತಿತ್ತು. ದೇವರಾದ ಕರ್ತನು **ಒಂದು ಪರಿಹಾರವನ್ನು** ಒದಗಿಸಿರುವದೇ ಶುಭ ಸಂದೇಶವಾಗಿದೆ. ತೋರಾದಲ್ಲಿ ನಾವು ಓದಿ – –ದಂತೆ, ಆದಾಮ ಹವ್ವ ಪಾಪ ಮಾಡಿದ ಅದೇ ದಿನದಂದು, ದೇವರು ತನ್ನ ಕನಿಕರದಲ್ಲಿ, ಒಂದು ವಾಗ್ದಾನವನ್ನು ಮಾಡಿದನು. ಒಬ್ಬ ಕನ್ಯೆಯಲಿ ಹುಟ್ಟಿ ಬರುವವನಾದ ಒಬ್ಬ ಪರಿಶುದ್ಧ ವಿಮೋಚಕನನ್ನು ಲೋಕಕ್ಕೆ ಕಳಿಸುವದಾಗಿ ದೇವರು ವಾಗ್ದಾನ ಮಾಡಿದನು. ಈ ವಿಮೋಚಕನು ಒಂದು ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸಿ ಅದನ್ನು ಆದಾಮನ ಮಕ್ಕಳ ಪಾಪಗಳ ಸಾಲದ ದಂಡವಾಗಿ ತೆರು – –ವವನಾಗಿದ್ದನು.

ಸುವಾರ್ತ {ಇಂಜಿಲ್} ಪುಸ್ತಕದಲ್ಲಿನ ನಮ್ಮ ಅಧ್ಯಯನದಲ್ಲಿ, ನಾವು ನೋಡುವದೇನೆಂದರೆ ದೇವರು ನೇಮಕ ಮಾಡಿದ ಸಮಯವು ಬಂದಾಗ, ತಾನು ವಾಗ್ದಾನ ಮಾಡಿದವನನ್ನು ಆತನು ಲೋಕಕ್ಕೆ ಕಳಿಸಿದನು. ದೇವರು ವಾಗ್ದಾನ ಮಾಡಿದ ಈ ರಕ್ಷಕನು ಯಾರು? ಆತನು ಸಂಪೂರ್ಣ ನೀತಿವಂತ ಮನುಷ್ಯನಾದ ಯೇಸು ಕ್ರಿಸ್ತನು. ಪಾಪ ಮಾಡಿದ ಆದಾಮ ಮತ್ತು ಪಾಪ ಮಾಡದ ಕ್ರಿಸ್ತನ ನಡುವೆಯಿರುವ ವ್ಯತ್ಯಾಸವನ್ನು ದೇವರ ವಾಕ್ಯವು ಹೇಗೆ ತೋರಿಸಿಕೊಡುತ್ತದೆ ಎನ್ನುವದನ್ನು ಕೇಳಿರಿ. ವಾಕ್ಯ ಹೀಗೆ ಹೇಳುತ್ತದೆ:

**"**ಒಬ್ಬನು ಮಾಡಿದ ಅಪರಾಧದಿಂದ **ಮರಣವು** ಉಂಟಾಗಿ ಆ ಒಬ್ಬನ ದೆಸೆಯಿಂದಲೇ ಆಳುವದಾದರೆ ದೇವರು ಧಾರಾಳವಾಗಿ ಅನು –ಗ್ರಹಿಸುವ ಕೃಪಾದಾನವನ್ನೂ ನೀತಿಯೆಂಬ ವರವನ್ನು ಹೊಂದಿದವರು ಯೇಸು ಕ್ರಿಸ್ತನೆಂಬ ಈ ಒಬ್ಬ ಪುರುಷನ ಮೂಲಕ ಜೀವಭರಿ –ತರಾಗಿ **ಆಳುವದು** ಮತ್ತೂ ನಿಶ್ಚಯವಲ್ಲವೇ. ಹೀಗಿರಲಾಗಿ ಒಂದೇ ಅಪರಾಧದ ಮೂಲಕ **ಎಲ್ಲಾ ಮನುಷ್ಯರಿಗೆ ಸಾಯಬೇಕೆಂಬ**

ನಿರ್ಣಯವು ಹೇಗೆ ಉಂಟಾಯಿತೋ ಹಾಗೆಯೇ ಒಂದೇ ಸತ್ಕಾರ್ಯದಿಂದ **ಎಲ್ಲಾ ಮನುಷ್ಯರಿಗೆ ನೀತಿವಂತರೆಂಬ ನಿರ್ಣಯವು ಉಂಟಾಗಿ ಜೀವವನ್ನು ಫಲಿಸುತ್ತದೆ**. ಒಬ್ಬನ ಅವಿಧೇಯತ್ವದಿಂದ ಎಲ್ಲರೂ ಹೇಗೆ **ಪಾಪಿಗಳಾದರೋ** ಹಾಗೆಯೇ ಒಬ್ಬನ ವಿಧೇಯತ್ವದಿಂದ ಎಲ್ಲರೂ **ನೀತಿವಂತರಾಗುವರು."** (ರೋಮಾ–5:17-19) ಅದನ್ನೇ ವಾಕ್ಯವು, **ಆದಾಮನಲ್ಲಿವವರ** ಮತ್ತು ಯಾರು **ಯೇಸು ಕ್ರಿಸ್ತನಲ್ಲಿರುವವರ** ಕುರಿತಾಗಿ ತಿಳಿಸುತ್ತದೆ.

ನಾವೆಲ್ಲರೂ ಆದಾಮನ ಹೋಲಿಕೆಯಲ್ಲಿ **ಹುಟ್ಟಿದ್ದೇವೆ.** ಆದರೆ ದೇವರು ಆದಾಮನ ಮಕ್ಕಳೆಲ್ಲರೂ ಅವರ ಹೃದಯಗಳಲ್ಲಿ **ಹೊಸದಾಗಿ ಹುಟ್ಟಬೇಕೆಂದು, ಆದಾಮನ ಹೋಲಿಕೆಯನ್ನು** ತೆಗೆದು ಹಾಕಿ **ಕ್ರಿಸ್ತನ ಹೋಲಿಕೆಯನ್ನು** ತೆಗೆದುಕೊಳ್ಳುವದಕ್ಕೆ ಕರೆಯುತ್ತಿದ್ದಾನೆ! ಇದು ಹೇಗೆ ಸಂಭವಿಸಲು ಸಾಧ್ಯ? ಇದು **ನಂಬಿಕೆಯಿಂದ** ಮಾತ್ರ ಸಾಧ್ಯವಾಗುತ್ತದೆ! ಕರ್ತನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳಿಗಾಗಿ ದಂಡವನ್ನು ತೆತ್ತಿದ್ದಾನೆ ಎಂಬುದನ್ನು ನೀವು ನಿಮ್ಮ ಹೃದಯದಲ್ಲಿ ನಂಬಿದರೆ, ನಿಮ್ಮ ಹೃದಯವನ್ನು ಶುದ್ಧಗೊಳಿಸುವದರಿಂದ ನೀವು ಹೊಸದಾಗಿ ಹುಟ್ಟುವದಕ್ಕೆ ಮತ್ತು ತನ್ನ ಪವಿತ್ರಾತ್ಮನ ಶಕ್ತಿಯಿಂದ ನಿಮ್ಮನ್ನು ನವೀಕರಿಸುವದಕ್ಕೆ ದೇವರು ಕಾರಣನಾಗುತ್ತಾನೆ. ನೀವು ಕ್ರಿಸ್ತನಲ್ಲಿ ಹೊಸ ಸೃಷ್ಟಿಗಳಾಗುತ್ತೀರಿ; ನೀವು ಇನ್ನು ಮುಂದೆ ನಿಮಗಾಗಿ ಜೀವಿಸುವದಿಲ್ಲ, ಆದರೆ ನಿಮಗಾಗಿ ಸತ್ತು ಮತ್ತೆ ಎದ್ದು ಬಂದಾತನಿಗಾಗಿ ಜೀವಿಸುತ್ತೀರಿ.

ಈಗ ತೋರಾಕ್ಕೆ ಹಿಂತಿರುಗೋಣ, ಮತ್ತು ಲೋಕದೊಳಕ್ಕೆ ವಿಮೋಚಕನನ್ನು ಕಳಿಸುವ **ತನ್ನ ಯೋಜನೆಯೊಂದಿಗೆ** ದೇವರು ಹೇಗೆ ಮುಂದುವರಿದನೆಂಬುದನ್ನು ಜ್ಞಾಪಿಸಿಕೊಳ್ಳುವದರಿಂದ ನಮ್ಮ ಪುನರಾವಲೋಕನವನ್ನು ಮುಂದುವರಿಸೋಣ. ನಮ್ಮ ಕಾಲಾನುಕ್ರಮ –
–ವಾದ ಪಾಠಗಳಲ್ಲಿ ಆದಾಮನ ಮೊದಲ ಇಬ್ಬರು ಮಕ್ಕಳಾದ ಕಾಯಿನ ಮತ್ತು ಹೇಬೆಲನನ್ನು ನೋಡಿಕೊಂಡೆವು. ಒಂದು ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸುವದಕ್ಕೆ ಬರಲಿರುವ ವಿಮೋಚಕನ ಕುರಿತು ದೇವರು ಮಾಡಿದ್ದ ವಾಗ್ದಾನವನ್ನು ಹೇಬೆಲನು ನಂಬಿದನು ಆದರೆ ಕಾಯಿನನು ಇದನ್ನು ನಂಬಿಲಿಲ್ಲ. ಕಾಯಿನನು ಪಶ್ಚಾತ್ತಾಪಪಡಬಹುದೆಂದು ದೇವರು ಇದರ ವಿವರಣೆಯನ್ನು ಕೇಳಲು ಕರೆದನು, ಆದರೆ ಕಾಯಿನನು ಕೇವಲ ಕೋಪಗೊಂಡು ತನ್ನ ತಮ್ಮನಾದ ಹೇಬೆಲನನ್ನು ಕೊಂದು ಹಾಕಿದನು.

ಅದಾದ ನಂತರ, ಆದಾಮನ ಮಕ್ಕಳಲ್ಲಿ ಹೆಚ್ಚಿನವರು ಕಾಯಿನನ ಹೆಜ್ಜೆಜಾಡನ್ನೇ ಹಿಂಬಾಲಿಸದರು, ಪಾಪದಲ್ಲಿ ಆನಂದಿಸುತ್ತಿದ್ದರು, ಅದಕ್ಕಾಗಿಯೇ ನಾವು ನೋಹನ ಕಾಲಕ್ಕೆ ಬಂದಾಗ, ವಾಕ್ಯವು ಹೀಗೆ ಹೇಳುತ್ತದೆ: "ಮನುಷ್ಯರ ಕೆಟ್ಟತನವು ಭೂಮಿಯ ಮೇಲೆ ಹೆಚ್ಚಾ
–ಗಿರುವದನ್ನೂ **ಅವರು ಹೃದಯದಲ್ಲಿ ಯೋಚಿಸುವದೆಲ್ಲವು ಯಾವಾಗಲೂ ಬರೀ ಕೆಟ್ಟದ್ದಾಗಿರುವದನ್ನೂ** ಯೆಹೋವನು ನೋಡಿದನು.**"** (ಆದಿ–6:5). ಜಲಪ್ರಳಯದಿಂದ ಆದಾಮನ ಮಕ್ಕಳನ್ನು ನಾಶಪಡಿಸುವದಕ್ಕೆ ದೇವರು ಹೇಗೆ ಉದ್ದೇಶಿಸಿದನೆಂಬದನ್ನು ನಾವು ನೋಡು
–ತ್ತೇವೆ. ಆ ಭ್ರಷ್ಟಾಚಾರದ ಮತ್ತು ಮೋಸದ ಕಾಲದಲ್ಲಿ, ನೋಹನು ಒಬ್ಬನು ಮಾತ್ರವೇ ವಿಮೋಚಕನ ಬರುವಿಕೆಯ ಕುರಿತಾಗಿ ದೇವರು ಮಾಡಿದ್ದ ವಾಗ್ದಾನವನ್ನು ನಂಬಿದವನಾಗಿದ್ದನು. ಇದರ ಪರಿಣಾಮವಾಗಿ, ನೋಹನ ಕುಟುಂಬದವರಿಗೂ ಮತ್ತು ಅನೇಕ ಪ್ರಾಣಿಗಳಿಗೂ ಒಂದು ಆಶ್ರಯ ಸ್ಥಳವಾಗುವಂತಹ ಒಂದು ದೊಡ್ಡ ನಾವೆಯನ್ನು ಕಟ್ಟುವಂತೆ ದೇವರು ನೋಹನಿಗೆ ಆಜ್ಞಾಪಿಸಿದನು. ನೋಹನು ನಾವೆಯನ್ನು ಕಟ್ಟುವ ಸಮಯದಲ್ಲಿ ದೇವರು ನೂರು ವರ್ಷಗಳವರೆಗೆ ಪಾಪಿಗಳನ್ನು ಸಹಿಸಿಕೊಂಡು ತಾಳ್ಮೆಯಿಂದಿದ್ದನು. ಹೀಗಿದ್ದರೂ, ನೋಹ ಮತ್ತು ಅವನ ಕುಟುಂಬದವರನ್ನು ಹೊರತುಪಡಿಸಿ ಯಾರೊಬ್ಬರೂ ಪಶ್ಚಾತ್ತಾಪಪಡಲಿಲ್ಲ ಮತ್ತು ದೇವರ ಮಾತನ್ನು ನಂಬಲಿಲ್ಲ. ಹಾಗಾಗಿ ಕೊನೆಯಲ್ಲಿ, ತನ್ನ ಮಾತಿನಲ್ಲಿ ನಂಬಿಗಸ್ತನಾಗಿರುವ ದೇವರು ತಾನು ವಾಗ್ದಾನ ಮಾಡಿದಂತೆಯೇ ಪ್ರತಿಯೊಂದನ್ನೂ ಮಾಡಿದನು, ಅವರಿಗಾಗಿ ಒದಗಿಸಿದ ಆಶ್ರಯಸ್ಥಳದೊಳಕ್ಕೆ ಬರಲು ನಿರಾಕರಿಸಿದವರೆಲ್ಲರನ್ನೂ ಅಳಿಸಿಹಾಕಿದನು.

ಅದಾದ ನಂತರ, ನೋಹನ ಮಕ್ಕಳು ದೇವರ ವಾಕ್ಯವನ್ನು ಕ್ರಮೇಣವಾಗಿ ಮರೆತುಬಿಟ್ಟರು, ಯಾಕಂದರೆ ಅವರೂ ಸಹ ಆದಾಮನ ಮಕ್ಕಳೂ ಮತ್ತು ಸ್ವಭಾವದಿಂದ ಪಾಪಿಗಳೂ ಆಗಿದ್ದರು. ಅನಂತರ ನಾವು ಬಾಬೆಲ್ ಗೋಪುರದ ಕುರಿತಾಗಿ ಓದುತ್ತೇವೆ, ಜನರು ದೇವರಿಗೆ ವಿರುದ್ಧವಾಗಿ ದಂಗೆಯೆದ್ದು ಒಂದು ದೊಡ್ಡ ಪಟ್ಟಣವನ್ನೂ ಮತ್ತು ಒಂದು ಎತ್ತರವಾದ ಗೋಪುರವನ್ನು ಕಟ್ಟುವದಕ್ಕೆ ಮತ್ತು ಲೋಕದ ಜನರನ್ನು ಒಂದು ಸ್ಥಳದಲ್ಲಿ ಒಟ್ಟುಗೂಡಿಸುವದಕ್ಕೆ ಹೇಗೆ ಪ್ರಯತ್ನಿಸಿದರೆಂಬುದನ್ನು ನಾವು ಓದುತ್ತೇವೆ. ಹೀಗಿದ್ದರೂ, ದೇವರು ಅವರ ಭಾಷೆಯನ್ನು ಗಲಿಬಿಲಿಗೊಳಿಸಿ ಇಡೀ ಭೂಲೋಕದ ಮೇಲೆಲ್ಲಾ ಅವರನ್ನು ಚದುರಿಸಿಬಿಡುವದರಿಂದ ಅವರಿಗೆ ತೀರ್ಪು ಮಾಡಿದನು.

ಮುಂದೆ, ನಾವು **ಪ್ರವಾದಿಯಾದ ಅಬ್ರಹಾಮನ** ಅದ್ಭುತವಾದ ಕತೆಗೆ ಬರುತ್ತೇವೆ. ನಿಜವಾಗಿಯೂ, ಪಾಪದ ಆಳ್ವಿಕೆಯಿಂದ ಆದಾಮನ ಸಂತತಿಯವರನ್ನು ವಿಮೋಚಿಸುವ ದೇವರ ಯೋಜನೆಯಲ್ಲಿ ಅಬ್ರಹಾಮನು ಒಂದು ತುಂಬಾ ಮುಖ್ಯವಾದ ಸ್ಥಾನವನ್ನು ಹೊಂದಿ –
–ದ್ದಾನೆ. ಅಬ್ರಹಾಮನ ತಂದೆಯು ಒಬ್ಬ ವಿಗ್ರಹಾರಾಧಕನಾಗಿದ್ದು ಅಬ್ರಹಾಮನು ಆದಾಮನ ಎಲ್ಲಾ ಸಂತತಿಯವರ ಹಾಗೆ ತಾನು ಒಬ್ಬ ಪಾಪಿಯಾಗಿದ್ದನು. ಹೀಗಿದ್ದರೂ, ದೇವರು ತನ್ನ ಅದ್ಭುತವಾದ ರಚನೆಯಲ್ಲಿ, ಅಬ್ರಹಾಮನಿಗೆ ಕಾಣಿಸಿಕೊಂಡು ಅವನು ತನ್ನ ತಂದೆಯ ಮನೆಯನ್ನೂ ಮತ್ತು ತನ್ನ ದೇಶವನ್ನೂ ಬಿಟ್ಟು ಹೊರಡುವಂತೆ ಆಜ್ಞಾಪಿಸಿದ್ದನ್ನು ನಾವು ನೋಡುತ್ತೇವೆ. ಅಬ್ರಹಾಮನನ್ನು ಒಂದು ಹೊಸ ಜನಾಂಗವನ್ನಾಗಿ ಮಾಡಿ ಅದರ ಮೂಲಕವಾಗಿ ಲೋಕದೊಳಕ್ಕೆ ಪರಿಶುದ್ಧ ವಿಮೋಚಕನನ್ನು ಬರಮಾಡುವ ಒಂದು ಯೋಜ
–ನೆಯನ್ನು ದೇವರು ಮಾಡಿಕೊಂಡಿದ್ದನು. ದೇವರು ಅಬ್ರಹಾಮನನ್ನು ಕರೆದು ಅವನಿಗೆ ಹೇಳಿದ್ದನ್ನು ತೋರಾದಲ್ಲಿ ಅಂದರೆ ಆದಿಕಾಂಡ ಪುಸ್ತಕದ ಹನ್ನೆರಡನೆಯ ಅಧ್ಯಾಯದಲ್ಲಿ ಅದನ್ನೇ ನಾವು ಓದುತ್ತೇವೆ:

"ನೀನು ಸ್ವದೇಶವನ್ನೂ ಬಂಧು ಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು. ನೀನು ಆಶೀರ್ವಾದ

ನಿಧಿಯಾಗುವಿ. ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು. ನಿನ್ನ **ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು."** (ಆದಿ–12:1-3)

**ದೇವರು ಅಬ್ರಹಾಮನಿಗೆ ಬೇರೊಂದು ದೇಶಕ್ಕೆ ಹೋಗುವಂತೆ ಯಾಕೆ ಆಜ್ಞೆ ಕೊಟ್ಟನು?**ದೇವರು ಅವನನ್ನು ಒಂದು ಹೊಸ ಜನಾಂಗವಾಗಿ ಮಾಡುವದಕ್ಕೆ ಇಷ್ಟಪಟ್ಟಿದ್ದನು. **ದೇವರು ಅಬ್ರಹಾಮನನ್ನು ಒಂದು ಹೊಸ ಜನಾಂವನ್ನಾಗಿ ಮಾಡುವದಕ್ಕೆ ಯಾಕೆ ಇಷ್ಟಪಟ್ಟನು?** ಆ ಜನಾಂಗದ ಮೂಲಕವಾಗಿ, ಪರಿಶುದ್ಧ ಗ್ರಂಥಗಳನ್ನು ಬರೆಯಬೇಕಾಗಿದ್ದ ಪ್ರವಾದಿಗಳನ್ನು ಎಬ್ಬಸುವದಕ್ಕೆ ದೇವರು ಯೋಜನೆ ಮಾಡಿ ಕೊಂಡಿದ್ದನು. ಅದೇ ಜನಾಂಗದ ಮೂಲಕವಾಗಿಯೇ, ದೇವರು ಲೋಕಕ್ಕೆ **ವಿಮೋಚಕನನ್ನು** ಕಳಿಸುವ ಉದ್ದೇಶವುಳ್ಳವನಾಗಿದ್ದನು. ಅದಕ್ಕೋಸ್ಕರವೇ ದೇವರು ಅಬ್ರಹಾಮನಿಗೆ ವಾಗ್ದಾನ ಮಾಡಿ, "ನೀನು ಆಶೀರ್ವಾದನಿಧಿಯಾಗುವಿ. . . ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವರಿಗೂ ಆಶೀರ್ವಾದವುಂಟಾಗುವದು." ಎಂದು ಹೇಳಿದನು.

**ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನೆರವೇರಿಸಿದನೋ?** ಹೌದು, ಆತನು ನೆರವೇರಿಸಿದನು! ಅಬ್ರಹಾಮನು ನೂರು ವರು–
–ಷದವನು ಮತ್ತು ಅವನ ಹೆಂಡತಿಯಾದ ಸಾರಳು ತೊಂಭತ್ತು ವರುಷದವಳಾಗಿದ್ದಾಗ, ದೇವರು ತಾನು ವಾಗ್ದಾನ ಮಾಡಿದಂತೆಯೇ ಅವರಿಗೆ ಇಸಾಕನೆಂಬ ಒಬ್ಬ ಮಗನನ್ನು ಕೊಟ್ಟನು. ಇಸಾಕನು ಯಾಕೋಬನನ್ನು ಪಡೆದನು, ಇವನ ಹನ್ನೆರಡು ಜನ ಮಕ್ಕಳು **ಇಸ್ರಾ–
–ಯೇಲೆಂಬ** ಹೊಸ ಜನಾಂಗವನ್ನು ರೂಪಿಸಿದರು. ಪರಿಶುದ್ಧ ಗ್ರಂಥಗಳನ್ನು ತಿಳಿದಿರುವ ನಿಮ್ಮಲ್ಲಿರುವವರು, ಇಸ್ರಾಯೇಲ್ ಜನಾಂಗದ ಮೂಲಕವಾಗಿ ವಿಮೋಚಕನು ಬಂದನು, ಯಾಕಂದರೆ ಮರಿಯಳು ಮತ್ತು ಯೋಸೇಫ ಇಬ್ಬರೂ ಅಬ್ರಹಾಮನ ಸಂತತಿಯವರೆಂಬು–
ದನ್ನು ತಿಳಿದಿರುತ್ತಾರೆ. ಹಾಗಾಗಿ, ಸುವಾರ್ತೆಯಲ್ಲಿನ ಮೊದಲ ವಚನವು ಹೀಗೆ ಹೇಳುತ್ತದೆ: "ಯೇಸು ಕ್ರಿಸ್ತನ ವಂಶಾವಳಿಯು. ಆತನು ದಾವೀದನ ವಂಶದವನು. ದಾವೀದನು **ಅಬ್ರಹಾಮನ ವಂಶದವನು."** (ಮತ್ತಾಯ–1:1) ಆತನ ಭೂಲೋಕದ ರೀತಿಗೆ ಸಂಬಂಧಿಸಿ –
ದಂತೆ, ಯೇಸು ಕ್ರಿಸ್ತನು ಅಬ್ರಹಾಮ, ಇಸಾಕ ಮತ್ತು ಯಾಕೋಬರ ಸಂತತಿಯ ಮೂಲಕವಾಗಿ ಬಂದವನು. ಆದರೆ ಆತನ ಪರಿಶುದ್ಧ ಆತ್ಮಕ್ಕೆ ಸಂಬಂಧಿಸಿದಂತೆ, ಆತನು ಭೂಲೋಕದಲ್ಲಿ ಹುಟ್ಟುವದಕ್ಕೆ ಪರಲೋಕದಿಂದ ಬಂದ ನಿಜ ದೇವರ ವಾಕ್ಯವಾಗಿರುವ {ಕಾಲಿಮತ್ ಅಲ್ಲಾಹ್} ಮಹೋನ್ನತ ದೇವರ ಮಗನಾಗಿದ್ದಾನೆ.

ಆದಾಗ್ಯೂ, ಅಬ್ರಹಾಮನ ಕತೆಗೆ ಹಿಂತಿರುಗೋಣ, ಯಾಕಂದರೆ ಆತನ ಕುರಿತಾಗಿ ಜ್ಞಾಪಕದಲ್ಲಿಟ್ಟುಕೊಳ್ಳುವಂತದ್ದು ಸ್ವಲ್ಪ ಇದೆ. ಆದಾ –
–ಮನ ಎಲ್ಲಾ ಮಕ್ಕಳಂತೆ ಅಬ್ರಹಾಮನೂ ಪಾಪದಲ್ಲಿ ಹುಟ್ಟಿದ್ದನು ಎಂಬುದನ್ನು ನಾವು ನೋಡಿದ್ದೇವೆ. ಆದಾಗ್ಯೂ, ಪರಿಶುದ್ಧ ವಾಕ್ಯ
–ಗಳು ನಮಗೆ ಹೇಳುವದೇನೆಂದರೆ, ಅಬ್ರಹಾಮನು ಈ ದಿನ ಪರಲೋಕದಲ್ಲಿ ಪರಿಶುದ್ಧನಾದ ದೇವರ ಸನ್ನಿಧಿಯಲ್ಲಿದ್ದಾನೆ, ಅವನು ಎಂದೆಂದಿಗೂ ಅಲ್ಲಿಯೇ ಇರುತ್ತಾನೆ! ಈಗ ನಾವು ಕೇಳುವದೇನೆಂದರೆ: **ದೇವರು ಅಬ್ರಹಾಮನ ಪಾಪಗಳನ್ನು ಕ್ಷಮಿಸಿ, ಅವನನ್ನು ನೀತಿವಂತನೆಂದು ನಿರ್ಣಯಿಸಿ, ಪರಲೋಕದೊಳಕ್ಕೆ ಅವನನ್ನು ಸ್ವಾಗತಿಸುವಂತೆ ಅಬ್ರಹಾಮನು ದೇವರಿಗಾಗಿ ಏನು ಮಾಡಿದನು?** ಇದರ ಕುರಿತಾಗಿ ವಾಕ್ಯವು ಏನು ಹೇಳುತ್ತದೆ? ಅದು ಹೇಳುವದೇನೆಂದರೆ: "ಅಬ್ರಹಾಮನು ಯೆಹೋವನನ್ನು **ನಂಬಿದನು;** ಯೆಹೋವನು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ **ನೀತಿಯೆಂದು** ಎಣಿಸಿದನು." (ಆದಿ–15:6)

ಅಬ್ರಹಾಮನು **ದೇವರನ್ನು** ನಂಬಿದನು, ಸ್ವತ: ದೇವರನ್ನು ನಂಬಿದನು. **ದೇವರು ತನಗೆ ಹೇಳಿದ್ದನ್ನು** ಅಬ್ರಹಾಮನು ನಂಬಿದನು. ಅದ –
ಕ್ಕಾಗಿಯೇ ದೇವರು ಅವನ ನಂಬಿಕೆಯನ್ನು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಿ ಅವನನ್ನು ನೀತಿವಂತನೆಂದು ನಿರ್ಣಯಿಸಿದನು. ಈ ದಿನ ಇದನ್ನು ಕೇಳಿಸಿಕೊಳ್ಳುತ್ತಿರುವ ನೀವು, **ಅಬ್ರಹಾಮನು ದೇವರ ವಾಕ್ಯವನ್ನು ನಂಬಿದ ಹಾಗೆ ನೀವು ನಂಬುತ್ತೀರೋ?** ದೇವರು ಜೀವಿ–
–ಸುತ್ತಿದ್ದಾನೋ ಅಥವಾ ಒಬ್ಬನೇ ದೇವರು ಎಂಬುದನ್ನು ನೀವು ನಂಬುತ್ತೀರ ಎಂದು ನಾವು ಕೇಳುತ್ತಿಲ್ಲ. ದೇವರು ಜೀವಿಸುತ್ತಿದ್ದಾನೆಂ
–ಬುದನ್ನು ದುರಾತ್ಮನು ಸ್ವತ: ತಿಳಿದಿದ್ದಾನೆ! ದೇವರು ತನ್ನ ರಕ್ಷಣೆಯ ಮಾರ್ಗಕ್ಕೆ ಸಂಬಂಧಿಸಿದ ನಿರ್ಣಯಗಳ ಕುರಿತು **ಆತನು ಹೇಳಿ–
ದ್ದನ್ನು** ಅಬ್ರಹಾಮನು ನಂಬಿದಂತೆ ನೀವು ನಂಬಬೇಕೆಂದು ದೇವರು ಬಯಸುತ್ತಾನೆ! ನಾವು ಯಾವುದನ್ನು ನಂಬಬೇಕೆಂದು ಅಬ್ರ –
–ಹಾಮನು ನಮಗೆ ಹೇಳಿದ್ದಾನೆ. ಅಬ್ರಹಾಮನು ತನ್ನ ಮಗನ ಬದಲಿಗೆ ಕುರಿಯನ್ನು ಅರ್ಪಿಸಿದ ದಿನ ಪ್ರಾಮುಖ್ಯತೆ ಪಡೆದ ಬೆಟ್ಟದ ಮೇಲೆ ಅಬ್ರಹಾಮನು ಪ್ರಕಟಿಸಿದ್ದನ್ನು ನೀವು ಜ್ಞಾಪಕಕ್ಕೆ ತಂದುಕೊಳ್ಳಬಹುದೋ? ಅವನು ಹೇಳಿದ್ದೇನೆಂದರೆ, **"ಹೋಮಕ್ಕೆ ಬೇಕಾದ** ಕುರಿಯನ್ನು ದೇವರೇ ಒದಗಿಸುವನು." (ಆದಿ–22:8). ಅವನು ಕುರಿಯನ್ನು ವಧಿಸಿದ ನಂತರ, ಅವನು ಆ ಬೆಟ್ಟವನ್ನು, ಯೆಹೋವ ಯೀರೆ ಅಂದರೆ ಯೆಹೋವನು ಒದಗಿಸುವನು (ಆದಿ–22:14) ಎಂದು ಕರೆದನು. ಅಬ್ರಹಾಮನು ಆ ಬೆಟ್ಟವನ್ನು **"ಯೆಹೋವನು ಒದಗಿಸುವನು"** ಎಂದು ಯಾಕೆ ಕರೆದನು, ದೇವರು ಈಗಾಗಲೇ ಯಜ್ಞದ ಕುರಿಯನ್ನು ಒದಗಿಸಿದ್ದನೋ? ಅಬ್ರಹಾಮನು ದೇವರ ಒಬ್ಬ ಪ್ರವಾದಿಯಾಗಿ ಇನ್ನೂ ಸಂಭವಿಸಬೇಕಾಗಿರುವದನ್ನು ಪ್ರಕಟಪಡಿಸಿದ್ದನು. **"ಯೆಹೋವನು ಒದಗಿಸುವನು"** ಎಂದು ಅಬ್ರಹಾಮನು ಹೇಳಿದಾಗ, ವೇದಿಯ ಮೇಲೆ ತನ್ನ ಮಗನ ಬದಲಾಗಿ ಕುರಿಯು ಇಡಲ್ಪಟ್ಟ ಆ ಬೆಟ್ಟದ ಮೇಲೆ ಏನು ಸಂಭವಿಸುತ್ತದೆಂಬುದನ್ನು ಅವನು ಮುಂದಾಗಿ ತಿಳಿಸಿದನು. ದೇವರ ನೀತಿಯ ತೀರ್ಪಿನಿಂದ **ಆತನನ್ನು ನಂಬುವ ಎಲ್ಲರನ್ನೂ ರಕ್ಷಿಸುವದಕ್ಕೆ** ಅದೇ ಬೆಟ್ಟದ ಮೇಲೆ ವಿಮೋಚಕನು ತನ್ನ ರಕ್ತವನ್ನು ಸುರಿಸಬೇಕಾದ ದಿನಕ್ಕಾಗಿ ಅವನು ಮುಂದಾಗಿಯೇ ಎದುರು ನೋಡುತ್ತಿದ್ದನು.

ಸುವಾರ್ತೆಯಲ್ಲಿನ ನಮ್ಮ ಅಧ್ಯಯನದಲ್ಲಿ, ಅಬ್ರಹಾಮನ ಪ್ರವಾದನೆಯನ್ನು ನೆರವೇರಿಸುವ ಕ್ರಮದಲ್ಲಿ ಅಬ್ರಹಾಮನ ನಂತರ ಸುಮಾರು ಎರಡು ಸಾವಿರ ವರ್ಷಗಳಲ್ಲಿ ಯೇಸು ಕ್ರಿಸ್ತನು ಲೋಕದೊಳಕ್ಕೆ ಬಂದನು ಎಂಬುದನ್ನು ನಾವು ನೋಡಿದೆವು. ಹೌದು, ಯೆರೂಸಲೇ –
–ಮಿನ ಹೊರಗೆ, ಅಬ್ರಹಾಮನು ತನ್ನ ಮಗನ ಬದಲಿಗೆ ಕುರಿಯನ್ನು ಯಜ್ಞಮಾಡಿದ ಬೆಟ್ಟದ ಮೇಲೆ, ವಿಮೋಚಕನಾದ ಯೇಸು ಆದಾಮನ ಮಕ್ಕಳನ್ನು ಬಿಡುಗಡೆಗೊಳಿಸುವದಕ್ಕೆ ತನ್ನ ರಕ್ತವನು ಸುರಿಸಿದನು. ಅದಕ್ಕಾಗಿಯೇ, ಅವರು ಯೇಸುವನ್ನು ಶಿಲುಬೆಗೆ ಜಡಿದ ನಂತರ, ಆತನು ಸಾಯುವದಕ್ಕಿಂತ ಮೊದಲು ಕೂಗಿ ಹೇಳಿದ ಮಾತನ್ನು ನಾವು ಕೇಳಿದ್ದೇವೆ, ಅದೇನೆಂದರೆ **"ತೀರಿತು"** ಎಂಬದು.

ತೀರಿತು ಎಂಬ ಶಬ್ದದ ಅರ್ಥ ಮುಗಿದಿದೆ ಎಂಬದು. **"ಮುಗಿದಿದೆ"** ಎಂದು ಯೇಸು ಯಾಕೆ ಹೇಳಿದನು? ಯಾಕಂದರೆ ತನ್ನ ಪ್ರವಾ–ದಿಗಳ ಮೂಲಕ ಬಹಳ ಹಿಂದೆಯೇ ದೇವರು ಪ್ರಕಟಿಸಿದ್ದ **ಶಿಲುಬೆಯ ಮೇಲಿನ ಆತನ ಮರಣವು ರಕ್ಷಣೆಯ ಯೋಜನೆಯನ್ನು ಮುಗಿ–ಸಿತ್ತು. ಯೇಸುವಿನ ಮರಣವು, ಅಬ್ರಹಾಮನ ಯಜ್ಞವನ್ನು ಮತ್ತು ಎಲ್ಲಾ ಪ್ರಾಣಿಗಳ ಯಜ್ಞಗಳ ಪ್ರತೀಕವನ್ನು ನೆರವೇರಿಸಿ ಮುಗಿಸಿತ್ತು!**

ಈ ದಿನ ಇದನ್ನು ಕೇಳಿಸಿಕೊಳುತ್ತಿರುವ ನೀವು, ಪರಲೋಕದಿಂದ ದೇವರು ಕಳಿಸಲ್ಪಟ್ಟವನಾದ ಯೇಸು ಕ್ರಿಸ್ತನು ಸ್ವತ: ಸಂಪೂರ್ಣವಾದ ಮತ್ತು ಕೊನೆಯ ಯಜ್ಞದ {ಇದ್–ಅಲ್–ಅದ್ಹಾ} ಕುರಿಯಾಗಿದ್ದಾನೆ ಎನ್ನುವದನ್ನು ನೀವು ನಂಬುತ್ತೀರಾ? ನೀವು ಅಬ್ರಹಾಮನ ನಂಬಿಕೆಯನ್ನು ವಶಪಡಿಸಿಕೊಂಡಿದ್ದೀರಾ? ಅಬ್ರಹಾಮನ ನಂಬಿಕೆಯ ಕುರಿತಾಗಿ ಸುವಾರ್ತೆಯು ಹೇಳುವದನ್ನು ಕೇಳಿರಿ:

**"**ಹಾಗಾದರೆ ವಂಶಾನುಕ್ರಮವಾಗಿ ನಮಗೆ ಮೂಲಪಿತೃವಾಗಿರುವ ಅಬ್ರಹಾಮನು ಏನು ಪಡಕೊಂಡನೆಂದು ಹೇಳಬೇಕು? ಅಬ್ರಹಾ––ಮನು ಪುಣ್ಯಕ್ರಿಯೆಗಳಿಂದಲೇ ನೀತಿವಂತನಾದ ಪಕ್ಷದಲ್ಲಿ ಹೊಗಳಿಕೊಳ್ಳುವದಕ್ಕೆ ಅವನಿಗೆ ಆಸ್ಪದವಿರುವದು; ಆದರೆ ದೇವರ ಮುಂದೆ ಹೊಗಳಿಕೊಳ್ಳುವದಕ್ಕೆ ಆಸ್ಪದವಿರುವದಿಲ್ಲ. ಇದರ ವಿಷಯದಲ್ಲಿ ಶಾಸ್ತ್ರವು ಹೇಳುವದನ್ನು ಆಲೋಚಿಸಿರಿ. **ಅಬ್ರಹಾಮನು ದೇವರನ್ನು ನಂಬಿ–ದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು** ಎಂದು ಹೇಳುತ್ತದೆ. ಆದುದರಿಂದ ಆ ನಂಬಿಕೆಯು ಅವನ ಲೆಕ್ಕಕ್ಕೆ ನೀತಿ–ಯೆಂದು ಎಣಿಸಲ್ಪಟ್ಟಿತೆಂಬದು **ಅವನಿಗೋಸ್ಕರ ಮಾತ್ರವಲ್ಲದೆ ನಮಗೋಸ್ಕರವೂ ಬರೆದಿರುವದು,** ನಮ್ಮ ಕರ್ತನಾದ ಯೇಸುವನ್ನು ಸತ್ತವರೊಳಗಿಂದ ಎಬ್ಬಸಿದ ದೇವರನ್ನು **ನಂಬುವ ನಮಗೂ** ನಂಬಿಕೆಯು ನೀತಿಯೆಂದು ಎಣಿಸಲ್ಪಡುವದು. ದೇವರು ಆತನನ್ನು **ನಮ್ಮ ಅಪರಾದಗಳ** ನಿಮಿತ್ತ ಮರಣಕ್ಕೆ ಒಪ್ಪಿಸಿಕೊಟ್ಟು **ನಮಗೆ ನೀತಿವಂತರೆಂಬ** ನಿರ್ಣಯವು ಉಂಟಾಗುವ ನಿಮಿತ್ತ ಜೀವದಿಂದ ಎಬ್ಬಿಸಿದನು.**"** (ರೋಮಾ–4:1-3, 22-25)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಮುಂದಿನ ಕಾರ್ಯಕ್ರಮಕ್ಕಾಗಿ ನೀವು ಮತ್ತೆ ನಮ್ಮನ್ನು ಸೇರಿಕೊಳ್ಳುತ್ತೀರೆಂದು ನಾವು ನಿರೀಕ್ಷಿಸುತ್ತೇವೆ. ದೇವರ ಚಿತ್ತವಾದರೆ, ಪ್ರವಾದಿಗಳ ಸಂದೇಶಗಳ ಪುನರಾವರ್ತನೆಯನ್ನು ನಾವು ಮುಂದುವರಿಸುತ್ತೇವೆ ಮತ್ತು ಲೋಕದ ರಕ್ಷಕನ ಬರುವಿಕೆಗಾಗಿ ಮಾರ್ಗವನ್ನು ಸಿದ್ಧಪಡಿಸುವದಕ್ಕೆ ದೇವರು ಆಯ್ಕೆಮಾಡಿದ ಇನೊಬ್ಬ ದೊಡ್ಡ ಪ್ರವಾದಿಯನ್ನು ನೋಡಲಿದ್ದೇವೆ. ಆ ಪ್ರವಾದಿಯೇ ಮೋಶೆ.

ದೇವರು ನಿಮ್ಮನ್ನು ಆಶೀರ್ವದಿಸಲಿ ಮತ್ತು ವಾಕ್ಯ ಏನು ಹೇಳಿದೆಯೋ ಅದರ ಸ್ಪಷ್ಟವಾದ ಗ್ರಹಿಸುವಿಕೆಯನ್ನು ನಿಮಗೆ ಕೊಡಲಿ:

**"ಅಬ್ರಹಾಮನು ದೇವರನ್ನು ನಂಬಿದನು; ಆ ನಂಬಿಕೆ ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು."** (ರೋಮಾ–4:3)

[ಪಾಠ 94: ಪುನರಾವರ್ತನೆ #2] [ಸಾರಾಂಶಗಳ ಪಟ್ಟಿ] [ಪಾಠ 96: ಪುನರಾವರ್ತನೆ #4]

ಪಾಠ 95

## ಪುನರಾವರ್ತನೆ 3:

## ಮೋಶೆ: ದೇವರ ಪವಿತ್ರ ಧರ್ಮಶಾಸ್ತ್ರ

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ದೇವರ ಮುಂದೆ ಪಾಪಿಗಳು ಹೇಗೆ ನಿತಿವಂತರಾಗಬಹುದು ಎನ್ನುವದನ್ನು ತೋರಿಸುವಂತಹ ಶುಭ ವಾರ್ತೆಯ ಅಂದರೆ ಪ್ರವಾದಿಗಳ ಸಂದೇಶದ ನಮ್ಮ ಪುನರಾವರ್ತನೆಯನ್ನು ಮುಂದುವರಿಸುವದಕ್ಕೆ ಈ ದಿನ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ತನ್ನ ಪ್ರವಾದಿ– –ಯಾದ ಮೋಶೆಯ ಮನಸ್ಸಿನಲ್ಲಿ ದೇವರು ಇಟ್ಟಂತಹ ಪುಸ್ತಕವಾಗಿರುವ ತೋರಾವನ್ನು ನಾವು ಇನ್ನೂ ಪುನರಾವರ್ತಿಸುತ್ತಿದ್ದೇವೆ. ನಾವು ನೋಡಿರುವಂತೆ, ಸತ್ಯವನ್ನು ತಿಳಿದುಕೊಳ್ಳುವವರಿಗೆಲ್ಲಾ ಮೋಶೆಯ ತೋರಾವು ದೊಡ್ಡ ಮೌಲ್ಯವುಳ್ಳದ್ದಾಗಿದೆ; ಇದು ದೇವರು ಸ್ಥಾಪಿಸಿರುವಂತಹ ತಳಹದಿಯಾಗಿದೆ, ಆದದರಿಂದ ನಾವು ಕೇಳಿಸಿಕೊಂಡ ಪ್ರತಿಯೊಂದೂ ದೇವರಿಂದ ಬಂದದ್ದೋ ಅಥವಾ ಅಲ್ಲವೋ ಎನ್ನುವದನ್ನು ಪರಿಶೀಲಿಸುವದಕ್ಕೆ ನಾವು ಶಕ್ತರಾಗಿದ್ದೇವೆ.

ತೋರಾದ ಆರಂಭದಲ್ಲಿ, ನಮ್ಮ ಪೂರ್ವಿಕನಾದ **ಆದಾಮನು** ಹೇಗೆ ಪಾಪ ಮಾಡಿದನೆಂಬುದನ್ನು ನಾವು ನೋಡುತ್ತೇವೆ. ಒಂದು ಅಂಟು ರೋಗದಂತೆ **ಅವನ ಪಾಪವು** ಅವನ ಸಂತತಿಯವರಿಗೆಲ್ಲಾ **ಹರಡಿಕೊಂಡಿತು,** ಮತ್ತು ದೇವರಾದ ಕರ್ತನು ಮೊದಲೇ ಎಚ್ಚರಿ –ಸಿದಂತೆ ಇದು ದು:ಖವನ್ನು, ಮರಣವನ್ನು ಮತ್ತು ನಿತ್ಯವಾದ ಶಿಕ್ಷೆಯನ್ನು ತಂದಿತು. ಆದರೆ ನಾವು ದೇವರಿಗೆ ವಂದಿಸುತ್ತೇವೆ ಯಾಕ –ಂದರೆ ವಾಕ್ಯ ಹೀಗೆ ಹೇಳುತ್ತದೆ: **"ಪಾಪವು ಹೆಚ್ಚಿದಲ್ಲೇ ಕೃಪೆಯು ಎಷ್ಟೋ ಹೆಚ್ಚಾಗಿ ಪ್ರಬಲವಾಯಿತು."**(ರೋಮಾ–5:20). ಹೌದು, ಆದಾಮ ಹವ್ವ ಪಾಪ ಮಾಡಿದ ದಿನದಂದೇ, ಆ ಪಾಪವು ತಂದಂತಹ ಶಾಪದಿಂದ ಆದಾಮನ ಮಕ್ಕಳನ್ನು ದೇವರು ತನ್ನ ಕೃಪೆಯಲ್ಲಿ ಬಿಡುಗಡೆ ಮಾಡುವದಕ್ಕೆ ಒಂದು ದಿನ **ಒಬ್ಬ ವಿಮೋಚಕನನ್ನು** ಲೋಕದೊಳಕ್ಕೆ ಕಳಿಸಿಕೊಡುತ್ತೇನೆಂದು ಆತನು ಪ್ರಕಟಿಸಿದನು.

ಪುನರಾವರ್ತನೆಯ ಹಿಂದಿನ ಪಾಠದಲ್ಲಿ, ದೇವರು **ಅಬ್ರಹಾಮನನ್ನು** ಕರೆದು ಎಲ್ಲಾ ಪ್ರವಾದಿಗಳು ಮತ್ತು ವಿಮೋಚಕನು ಎದ್ದು ಬರ ಬೇಕಾಗಿರುವ **ಒಂದು ಹೊಸ ಜನಾಂಗವನ್ನಾಗಿ** ಮಾಡುತ್ತೇನೆಂದು ಅವನಿಗೆ ವಾಗ್ದಾನ ಮಾಡಿದ್ದನ್ನು ನಾವು ನೋಡಿಕೊಂಡೆವು. ಹೀಗೆ ಅಬ್ರಹಾಮನು ಇಸಾಕನೆಂಬ ಮಗನನ್ನು ಪಡೆದನು, ಅವನು ಯಾಕೋಬನೆಂಬ ಮಗನನ್ನು ಪಡೆದನು, ಇವನು ಹನ್ನೆರಡು ಜನ ಗಂಡು ಮಕ್ಕಳನ್ನು ಪಡೆದನು ಅವರಿಂದ **ಇಸ್ರಾಯೇಲಿನ** ಹನ್ನೆರಡು ಕುಲಗಳು ಉಂಟಾದವು.

ದೇವರ ನೀತಿಯ ನ್ಯಾಯತೀರ್ಪಿನಿಂದ ತಪ್ಪಿಸಿಕೊಳ್ಳುವದಕ್ಕೆ ಪಾಪಿಗಳು ಯಾವ ದಾರಿಯನ್ನು ತೆಗೆದುಕೊಳ್ಳಬೇಕು ಮತ್ತು ದೇವರಾದ ಕರ್ತನು ಎಂಥವನಾಗಿದ್ದಾನೆ ಎನ್ನುವದನ್ನು ಮಾನವ ಜನಾಂಗಕ್ಕೆ ಬೋಧಿಸುವದಕ್ಕೆ ಅಬ್ರಹಾಮನ ಸಂತತಿಯರಾದ ಇಸ್ರಾಯೇಲ್ಯರನ್ನು ದೇವರು ಹೇಗೆ ಉಪಯೋಗಿಸಿದನೆಂಬುದನ್ನು ನಾವು ನೋಡಿಕೊಳ್ಳುವದಕ್ಕೆ ಈಗ ನಮ್ಮ ಪುನರಾವರ್ತನೆಯನ್ನು ಮುಂದುವರಿಸೋಣ. ಈ ದಿನದ ನಮ್ಮ ಪಾಠವು **"ದೇವರ ಪರಿಶುದ್ಧ ಧರ್ಮಶಾಸ್ತ್ರ"** ಎಂದು ಕರೆಯಲ್ಪಡುತ್ತದೆ.

ತೋರಾದಲ್ಲಿನ ನಮ್ಮ ಅಧ್ಯಯನದಲ್ಲಿ, ಬಹಳ ಹಿಂದೆ ದೇವರು ಅಬ್ರಹಾಮನಿಗೆ ತಿಳಿಸಿದಂತೆ ಇಸ್ರಾಯೇಲ್ ಜನರನ್ನು ನಾನೂರು ವರ್ಷಗಳವರೆಗೆ ಐಗುಪ್ತ ದೇಶದಲ್ಲಿ ಗುಲಾಮರಾಗುವಂತೆ ಅನುಮತಿಸಿದ್ದನ್ನು ನಾವು ನೋಡುತ್ತೇವೆ. ದೇವರಿಂದ ನೇಮಕಗೊಂಡ ಸಮಯವು ಬಂದಾಗ, ಆತನು **ಮೋಶೆಯನ್ನು** ಇಸ್ರಾಯೇಲ್ಯರಿಗೆ ಕಳಿಸಿಕೊಟ್ಟನು. ಮೋಶೆಯು ಇಸ್ರಾಯೇಲ್ಯನಾಗಿದ್ದು ಐಗುಪ್ತ್ಯರ ಕೆಟ್ಟ ಅರಸನಾಗಿದ್ದ ಫರೋಹನ ಮನೆಯಲ್ಲಿ ಬೆಳೆದು ಬಂದನು.

ದೇವರು ಮೋಶೆಯನ್ನು ಫರೋಹನ ಬಳಿಗೆ ಕಳಿಸಿ ಅವನಿಗೆ ಹೀಗೆ ಹೇಳುವಂತೆ ತಿಳಿಸಿದನು, **"ದೇವರಾದ ಯೆಹೋವನು ಇಂತೆನ್ನು –ತ್ತಾನೆ: ನನ್ನನ್ನು ಆರಾಧಿಸುವದಕ್ಕಾಗಿ ನನ್ನ ಜನರನ್ನು ದೇಶದಿಂದ ಹೊರಗೆ ಕಳಿಸು!"** ಎಂಬದಾಗಿ. ಆದರೆ ಫರೋಹನು, ತಿರಸ್ಕಾರದಿಂದ ಹಾಸ್ಯ ಮಾಡುತ್ತಾ "ಯೆಹೋವನು ಯಾರು? ಇಸ್ರಾಯೇಲ್ ಜನರು ಹೋಗುವದಕ್ಕೆ ನಾನು ಎಂದಿಗೂ ಬಿಡುವದಿಲ್ಲ!" ಅಂದನು.

ಹಾಗಾಗಿ, ದೇವರು ಇಸ್ರಾಯೇಲ್ಯರನ್ನು ಹೊರತುಪಡಿಸಿ ಐಗುಪ್ತ ದೇಶದ ಜನರೆಲ್ಲರ ಮೇಲೆ ಭಯಂಕರವಾದ ಒಂಭತ್ತು ಉಪದ್ರವದ ಸಾಧನದಿಂದ ಐಗುಪ್ತ್ಯರು ಮತ್ತು ಫರೋಹನು ತನ್ನ ಶಕ್ತಿಯನ್ನು ಮತ್ತು ಮಹಿಮೆಯನ್ನು ತಿಳುಕೊಳ್ಳುವಂತೆ ಮಾಡಿದನು. ಹೀಗಿದ್ದರೂ, ದೇವರು ಫರೋಹನ ಮುಂದೆ ಮಾಡಿದಂತಹ ಸೂಚಕ ಮತ್ತು ಅದ್ಭುತ ಕಾರ್ಯಗಳು, ಅವನು ಪಶ್ಚಾತ್ತಾಪಪಟ್ಟು ಮೋಶೆಯ ಮಾತಿಗೆ ವಿಧೇಯನಾಗುವದಕ್ಕೆ ಕಾರಣವಾಗಲಿಲ್ಲ. ದೇವರು ಮೋಶೆಗೆ, **"**ನಾನು ಇನ್ನೊಂದು ಉಪದ್ರವವನ್ನು ಫರೋಹನ ಮೇಲೆಯೂ ಮತ್ತು ಐಗುಪ್ತದ ಮೇಲೆಯೂ ಬರಮಾಡುವೆನು. ಅದಾದ ನಂತರ ಅವನು ನಿಮ್ಮನ್ನು ಹೋಗಗೊಡಿಸುವನು!" ಅಂದನು. ಆ ಉಪದ್ರವ ಯಾವುದೆಂಬುದು ನಿಮಗೆ ನೆನಪಿದೆಯಾ? ಹೌದು, ಅದು ಪ್ರತಿಯೊಂದು ಮನೆಯಲ್ಲಿನ **ಚೊಚ್ಚಲು ಮಕ್ಕಳ ಮರಣ.**

ಹೀಗೆ, ದೇವರು ಫರೋಹನ ಮತ್ತು ಐಗುಪ್ತದ ಎಲ್ಲಾ ಮನೆಗಳಲ್ಲಿನ ಚೊಚ್ಚಲು ಮಕ್ಕಳನ್ನು ಸಂಹಾರ ಮಾಡಿದ್ದನ್ನು ನಾವು ನೋಡು –
–ತ್ತೇವೆ. ಆದರೆ ಆತನು ಇಸ್ರಾಯಲ್ಯರ ಚೊಚ್ಚಲು ಮಕ್ಕಳನ್ನು ಕಾಪಾಡಿದನು,ಯಾಕಂದರೆ ಅವರು ದೇವರ ಆಜ್ಞೆಗೆ ವಿಧೇಯರಾಗುವಲ್ಲಿ **ಕುರಿಯ ರಕ್ತವನ್ನು** ತಮ್ಮ ಮನೆಗಳ ಬಾಗಿಲುಗಳಿಗೆ ಹಚ್ಚಿದ್ದರು. ದೇವರು ಸ್ವತ: ಹೀಗೆ ವಾಗ್ದಾನ ಮಾಡಿದ್ದನು:"ನೀವು ಬಾಗಿಲಿಗೆ ಹಚ್ಚಿದ ಆ ರಕ್ತವು ನೀವಿರುವ ಮನೆಗಳನ್ನು ಸೂಚಿಸುವದಾದ ಕಾರಣ **ನಾನು ಅದನ್ನು ಕಂಡು ನಿಮಗೆ ಯಾವ ನಷ್ಟವನ್ನೂ ಮಾಡದೆ ಮುಂದಕ್ಕೆ ದಾಟಿ ಹೋಗುವೆನು.** ನಾನು ಐಗುಪ್ತದವರನ್ನು ಸಂಹರಿಸುವಾಗ ನಿಮಗೆ ಯಾವ ಹಾನಿಯೂ ಉಂಟಾಗುವದಿಲ್ಲ." (ಆದಿ–12:13). ಹೀಗೆ, ಕುರಿಯ ರಕ್ತದ ನಿಮಿತ್ತವಾಗಿ ದೇವರು ಇಸ್ರಾಯೇಲ್ಯರ ಚೊಚ್ಚಲು ಮಕ್ಕಳನ್ನು ಸಂಹರಿಸಿದೆ ಅವರ ಮನೆಗಳನ್ನು ದಾಟಿ ಹೋದನು. ಈ ರೀತಿಯಲ್ಲಿ ದೇವರು ಇಸ್ರಾಯೇಲ್ಯರನ್ನು ಫರೋಹನ ಕೈಯಿಂದ ರಕ್ಷಿಸಿದನು.

ನಾವು ನೋಡಿದ ಹಾಗೆ, ಫರೋಹನ ಆಳ್ವಿಕೆಯಿಂದ ಇಸ್ರಾಯೇಲ್ಯರನ್ನು ಬಿಡುಗಡೆಗೊಳಿಸುವದಕ್ಕಿಂತಲೂ, ಪಸ್ಕದ ದಿನದ ಕತೆಯು **ಒಂದು ಆಳವಾದ ಅರ್ಥವನ್ನು** ಹೊಂದಿದೆ. ವಾಕ್ಯವು ಹೇಳುವದೇನೆಂದರೆ: "ಅವರಿಗೆ ಸಂಭವಿಸಿದ ಈ ಸಂಗತಿಗಳು ನಿದರ್ಶನ ರೂಪ
–ವಾಗಿವೆ; ಮತ್ತು ಯುಗಾಂತ್ಯಕ್ಕೆ ಬಂದಿರುವವರಾದ ನಮಗೆ ಬುದ್ಧಿವಾದಗಳಾಗಿ ಬರೆದವೆ." (1ಕೊರಿಂಥ–10:11). ಫರೋಹನಿಂದ ಮತ್ತು ಮರಣದಿಂದ ದೇವರು ತಮ್ಮ ಚೊಚ್ಚಲು ಮಕ್ಕಳನ್ನು ಕಾಪಾಡುವದಕ್ಕಾಗಿ ಇಸ್ರಾಯೇಲ್ಯರು ತಮ್ಮ ಮನೇ ಬಾಗಿಲುಗಳಿಗೆ ಹಚ್ಚಿದ ಕುರಿಯ ರಕ್ತದ ಕತೆಯು ಒಂದು ನಿದರ್ಶನವಾಗಿದೆ. ಫರೋಹನಿಗಿಂತಲೂ ಹೆಚ್ಚು ದುಷ್ಟನಾಗಿರುವ ಸೈತಾನನಿಂದ ಪಾಪಿಗಳನ್ನು ರಕ್ಷಿಸು
–ವದಕ್ಕೆ ದೇವರಿಂದ ಸ್ಥಾಪಿಸಲ್ಪಟ್ಟ **ರಕ್ಷಣೆಯ ಮಾರ್ಗವನ್ನು ಇದು ನಿದರ್ಶಿಸುತ್ತದೆ.**

ಆದಾಮನ ಎಲ್ಲಾ ಮಕ್ಕಳು **ಗುಲಾಮರಂತಿದ್ದಾರೆ** ಎಂದು ದೇವರ ವಾಕ್ಯವು ನಮಗೆ ತೋರಿಸುತ್ತದೆ. ಬಹುಶ: ನಿಮ್ಮಲ್ಲಿ ಕೆಲವರು, **"**ಹೌದು, ನಾವು ದೇವರ ಗುಲಾಮರಾಗಿದ್ದೇವೆ ಎಂಬದು ನಮಗೆ ಗೊತ್ತು**!"** ಎಂದು ಅಂದುಕೊಳ್ಳಬಹುದು. ಆದರೆ ಆ ಆಲೋಚ –
–ನೆಯು ಕರ್ತನಾದ ಯೇಸು ಸುವಾರ್ತೆಯಲ್ಲಿ ಹೇಳಿರುವದರೊಂದಿಗೆ ಒಪ್ಪಿಕೊಳ್ಳುವಂತದ್ದಲ್ಲ, ಏನೆಂದರೆ, **"**ನಾನು ನಿಮಗೆ ನಿಜನಿಜ –
–ವಾಗಿ ಹೇಳುತ್ತೇನೆ, ಪಾಪ ಮಾಡುವವರೆಲ್ಲರು **ಪಾಪಕ್ಕೆ ದಾಸರಾಗಿದ್ದಾರೆ."** (ಯೋಹಾನ–8:34). ಆದಾಮನ ಮಕ್ಕಳೆಲ್ಲರೂ ಪಾಪಕ್ಕೆ ದಾಸರಾಗಿರುವವರೆಗೂ, ಅವರು ಸೈತಾನನಿಗೂ ಸಹ ದಾಸರಾಗಿರುತ್ತಾರೆ, ಯಾಕಂದರೆ ಸೈತಾನನು ಪಾಪದ ಯಜಮಾನನು. ಪೂರ್ಣ ಖಚಿತವಾದುದೇನೆಂದರೆ, ಯಾರು ಸೈತಾನನ ದಾಸರಾಗಿದ್ದಾರೋ ಅವರು ಸ್ವತ; ಸ್ವತಂತ್ರರಾಗುವದಕ್ಕೆ ಅವರಿಗೆ ಯಾವ ಮಾರ್ಗವಿಲ್ಲ! ಒಬ್ಬ ಗುಲಾಮನು ತಾನೇ ಸ್ವತಂತ್ರನಾಗುವದಕ್ಕೆ ಸಾಧ್ಯವೋ? ತಾನು ಸ್ವತಂತ್ರನಾಗಿ ಹೋಗಲು ಬಿಡುವಂತೆ ಅವನು ತನ್ನ ಯಜಮಾನ
–ನಿಗೆ ಏನನ್ನಾದರೂ ಕೊಡುವದಕ್ಕೆ ಸಾಧ್ಯವೋ? ಅದು ಒಬ್ಬ ಒಳ್ಳೆಯ ಯಜಮಾನನಿಗೆ ಕೆಲಸ ಮಾಡಬಹುದು, ಆದರೆ ಸೈತಾನನಂತ ಒಬ್ಬ ಯಜಮಾನನಿಗೆ ಇದು ಏನೂ ಕೆಲಸ ಮಾಡುವದಿಲ್ಲ. ಫರೋಹನ ರೀತಿಯಲ್ಲಿಯೇ, ಸೈತಾನನು ತನ್ನ ಗುಲಾಮರನ್ನು ಸ್ವತಂತ್ರ –
–ವಾಗಿ ಹೋಗುವದಕ್ಕೆ ಎಂದಿಗೂ ಬಿಡುವದಿಲ್ಲ! ಎಂದಿಗೂ ಇಲ್ಲ! ಓಹ್, ಆದಾಮನ ಮಕ್ಕಳಾಗಿ ನಾವು ಎಷ್ಟೊಂದು ಶಾಪಗ್ರಸ್ತರು! ನಮ್ಮನ್ನು ತನ್ನ ಗುಲಾಮರನ್ನಾಗಿ ಮಾಡಿಕೊಂಡಿರುವ ಸೈತಾನನ ಆಳ್ವಿಕೆಯಿಂದ ನಮ್ಮನ್ನು ಬಿಡಿಸುವವರು ಯಾರಾದರೂ ಇದ್ದಾರೋ? ಹೌದು, ದೇವರಿಗೆ ಸ್ತೋತ್ರ, ಬಿಡುಗಡೆ ಮಾಡುವವನು ಒಬ್ಬನಿದ್ದಾನೆ! ನಮ್ಮನ್ನು ಸ್ವತಂತ್ರರನ್ನಾಗಿ ಮಾಡುವಂತಹ ಒಬ್ಬನನ್ನು ದೇವರು ಕಳಿಸಿಕೊಟ್ಟನು! ದೇವರ ಪ್ರವಾದಿಗಳೆಲ್ಲರೂ ಸಾಕ್ಷಿಕೊಟ್ಟಿರುವ, ಪರಲೋಕದಿಂದ ಬಂದ ಮೆಸ್ಸೀಯನಾದ ಯೇಸುವೇ ಆ ಶಕ್ತಿವಂತನೂ ಮತ್ತು ನೀತಿವಂತನೂ ಆದ ರಕ್ಷಕನು.

ಒಬ್ಬ ಕನ್ಯೆಯಲ್ಲಿ ಹುಟ್ಟುವವನಿದ್ದ ಪರಿಶುದ್ಧ ವಿಮೋಚಕನ ಮೂಲಕವಾಗಿ ಹೇಗೆ ಸೈತಾನನ ತಲೆಯನ್ನು ಜಜ್ಜುತ್ತೇನೆಂದು ದೇವರು ವಾಗ್ದಾನ ಮಾಡಿರುವದನ್ನು ನಾವು **ತೋರಾದಲ್ಲಿ** ಓದುತ್ತೇವೆ. ದೇವರು ತನ್ನ ಮಗನೆಂಬುದಾಗಿ ಕರೆದಿರುವ ಈ ವಿಮೋಚಕನು ಹೇಗೆ ಭಯಂಕರವಾದ ರೀತಿಯಲ್ಲಿ ಮರಣಕ್ಕೊಳಗಾಗುತ್ತಾನೆ, ಆತನು ಹಿಂಸಿಸಲ್ಪಡುತ್ತಾನೆ, ಆತನ ಕೈ ಕಾಲುಗಳು ಛೇದಿಸಲ್ಪಡುತ್ತವೆ ಎಂದು ಪ್ರವಾದಿಯಾದ ದಾವೀದನು **ಕೀರ್ತನೆಗಳಲ್ಲಿ** ಬರೆದಿರುವದನ್ನು ನಾವು ಕೇಳಿದ್ದೇವೆ. **ಸುವಾರ್ತೆಯ** ಪುಸ್ತಕದಲ್ಲಿ, ಈ ಅದ್ಭುತವಾದ ವಿಮೋಚಕನ ಕುರಿತು ನಾವು ಹೆಚ್ಚಾಗಿ ಓದುತ್ತೇವೆ. ಈತನು ಯೇಸು, ಮರಿಯಳ ಮಗನು, ಒಂದು ಸಂಪೂರ್ಣ ಜೀವಿತವನ್ನು ಜೀವಿಸಿ ನಂತರ ನಮ್ಮ ಪಾಪಗಳಿಗಾಗಿ ಶಿಲುಬೆಯ ಮೇಲೆ ಮರಣ ಹೊಂದಿ ಸಮಾಧಿಯಿಂದ ಮತ್ತೆ ಎದ್ದು ಬಂದವನು. ಹೌದು, ಬಹಳ ಹಿಂದೆಯೇ ದೇವರ ಪ್ರವಾದಿಗಳು ಪಾಪಿಗಳ ರಕ್ಷಕನ ಕುರಿತಾಗಿ ಬರೆದದ್ದನ್ನು ಯೇಸು ನೆರವೇರಿಸಿದವನಾದನು.

ಯೇಸು ಕ್ರಿಸ್ತನನ್ನು **"ದೇವರ ಕುರಿ"** ಎಂಬುದಾಗಿ ದೇವರ ವಾಕ್ಯವು ಕರೆಯುತ್ತದೆ. ಪಸ್ಕದ ದಿನದಂದು ಕುರಿಗಳು ವಧಿಸಲ್ಪಡುವ ಹಾಗೆ ನಮ್ಮನ್ನು ನ್ಯಾಯತೀರ್ಪಿನಿಂದ ರಕ್ಷಿಸುವದಕ್ಕೆ ಯೇಸು ತನ್ನ ರಕ್ತವನ್ನು ಸುರಿಸಿದನು. ಮೊದಲ ಪಸ್ಕದಲ್ಲಿ ಒಂದು ಕುರಿಯ ರಕ್ತದಿಂದ ದೇವರು ಇಸ್ರಾಯೇಲ್ಯರನ್ನು ಬಿಡುಗಡೆ ಮಾಡಿದ ಅಂದಾಜು ಸಾವಿರದ ಐನೂರ ವರ್ಷಗಳ ನಂತರ ಯೇಸುವನ್ನು, ನೀತಿಯುಳ್ಳ ಮೆಸ್ಸೀಯನನ್ನು ಶಿಲುಬೆಗೆ ಜಡಿಯುವಂತೆ ದೇವರು ಆದಾಮನ ಸಂತಾನದವರಿಗೆ ಅನುಮತಿಕೊಟ್ಟನು. ಮತ್ತು ಪಸ್ಕ ಹಬ್ಬದ ದಿನ–
–ದಂದೇ ಆತನು ಶಿಲುಬೆಗೆ ಜಡಿಯಲ್ಪಟ್ಟನು. ಹೀಗೆ, ಅಬ್ರಹಾಮನ ಯಜ್ಞದ ಚಿಹ್ನೆಯನ್ನು ಯೇಸು ನೆರವೇರಿಸಿದ ಹಾಗೆಯೇ, **ಯೇಸು ಪಸ್ಕದ ಕುರಿಯ ಚಿಹ್ನೆಯನ್ನು ಸಹ ನೆರವೇರಿಸಿದನು.** ಆ ದಿನದಂದು ಆತನನ್ನು ಶಿಲುಬೆಗೆ ಹಾಕಿದ ಜನರು ಅಜ್ಞಾನಿಗಳ ಕೆಲಸವನ್ನು

ಮಾಡಿದ್ದರು, ಆದರೆ ದೇವರು ಲೋಕವನ್ನು ಸೃಷ್ಟಿಸುವದಕ್ಕಿಂತ ಮೊದಲೇ ಮೆಸ್ಸೀಯನ ಯಜ್ಞವನ್ನು ಏರ್ಪಾಟು ಮಾಡಿದ್ದನು. (ಪ್ರಕ–13:8; ಅಪೊ.ಕೃತ್ಯ–3:17 ನ್ನು ನೋಡಿರಿ.)

ಯೇಸು ಪಾಪಕ್ಕಾಗಿ ಒಂದು ಸಂಪೂರ್ಣವಾದ ಮತ್ತು ಕೊನೆಯ ಯಜ್ಞವಾಗಿದ್ದಾನೆ. ಪಾಪದ ಆಳ್ವಿಕೆಯಿಂದ ಆದಾಮನ ಸಂತತಿಯವ –ರನ್ನು ಬಿಡುಗಡೆ ಮಾಡುವದಕ್ಕೆ **ಯೇಸುಕ್ರಿಸ್ತನ ರಕ್ತವು ನ್ಯಾಯವಾದ ಕ್ರಯದಂತೆ** ದೇವರಿಗೆ ಅಗತ್ಯವಾದುದಾಗಿತ್ತು. ಅದೇ ಪ್ರಕಾರ ವಾಕ್ಯವು ಹೇಳಿರುವದೇನೆಂದರೆ:

"ನಮ್ಮ ಪಸ್ಕದ ಯಜ್ಞದ ಕುರಿಯು ಕೊಯಿದದೆ; ಅದಾವುದೆಂದರೆ ಕ್ರಿಸ್ತನೇ." (1ಕೊರಿಂಥ–5:7). "ನಾವು ಅಶಕ್ತರಾಗಿದ್ದಾಗಲೇ ಕ್ರಿಸ್ತನು ನೇಮಿತ ಕಾಲದಲ್ಲಿ ಭಕ್ತಿಹೀನರಿಗೋಸ್ಕರ ಪ್ರಾಣಕೊಟ್ಟನು. ನೀತಿವಂತರಿಗೋಸ್ಕರ ಯಾರಾದರೂ ಪ್ರಾಣಕೊಡುವದು ಅಪರೂಪ. ಉಪ –ಕಾರಿಗೋಸ್ಕರ ಯಾವನಾದರೂ ಪ್ರಾಣಕೊಡುವದಕ್ಕೆ ಧೈರ್ಯ ಮಾಡಿದರೂ ಮಾಡಾನು. ಆದರೆ ನಾವು ಪಾಪಿಗಾಗಿದ್ದಾಗ್ಯೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ." (ರೋಮಾ–5:6-8)

ಪಸ್ಕದ ಕತೆಯನ್ನು ಬಿಟ್ಟು, ದೇವರು ಇಸ್ರಾಯೇಲ್ಯರಿಗೆ ನಂಬಿಕೆಯಿಂದ ವಹಿಸಿಕೊಟ್ಟ ಪರಿಶುದ್ಧ ಧರ್ಮಶಾಸ್ತ್ರಕ್ಕೆ ಸಂಬಂಧಿಸಿದಂತೆ ನಾವು ಏನು ಕಲಿತುಕೊಂಡಿದ್ದೇವೆ ಎನ್ನುವದನ್ನು ಈಗ ಜ್ಞಾಪಿಸಿಕೊಳ್ಳೋಣ.  ತೋರಾದಲ್ಲಿನ ನಮ್ಮ ಸಂಶೋಧನೆಯಲ್ಲಿ, ದೇವರು ಗುಡುಗು ಮಿಂಚು ಮತ್ತು ಬೆಂಕಿಯಲ್ಲಿ ಸೀನಾಯಿ ಪರ್ವತದ ಮೇಲೆ ಇಳಿದು ಬಂದು ಅರಣ್ಯದಲ್ಲಿ ಮೋಶೆಗೆ ಮತ್ತು ಇಸ್ರಾಯೇಲ್ಯರಿಗೆ ತನ್ನ ಪರಿ –ಶುದ್ಧತೆಯನ್ನೂ ಮತ್ತು ಮಹಿಮೆಯನ್ನೂ ಹೇಗೆ ಪ್ರಕಟಪಡಿಸಿಕೊಂಡನೆಂಬುದನ್ನು ನಾವು ನೋಡಿದ್ದೇವೆ. ಹೀಗೆ ದೇವರು ತನ್ನ ಹತ್ತು ಆಜ್ಞೆಗಳನ್ನು ಮತ್ತು ಇತರ ಅನೇಕ ಆಜ್ಞೆಗಳನ್ನು ಇಸ್ರಾಯೇಲ್ಯರಿಗೆ ಕೊಟ್ಟನು, ಇದು ಮೋಶೆಯ ಧರ್ಮಶಾಸ್ತ್ರ ಎಂದು ಕರೆಯಲ್ಪಟ್ಟಿತು. ದೇವರು ಹೀಗೆ ಹೇಳುತ್ತಾ ಅವರಿಗೆ ಆಜ್ಞಾಪಿಸಿದ್ದೆನೆಂದರೆ, **"ನೀವು ನಿಮ್ಮ ದೇವರಾದ ಯೆಹೋವನನ್ನು ಪೂರ್ಣ ಹೃದಯದಿಂದಲೂ, ಪೂರ್ಣ ಪ್ರಾಣದಿಂದಲೂ ಮತ್ತು ಪೂರ್ಣ ಮನಸ್ಸಿನಿಂದಲೂ ಪ್ರೀತಿಸಬೇಕು:** ನಾನಲ್ಲದೆ ನಿಮಗೆ ಬೇರೆ ದೇವರುಗಳು ಇರಬಾರದು! ನಿಮ –ಗಾಗಿ ವಿಗ್ರಹಗಳನ್ನು ಮಾಡಿಕೊಳ್ಳಬಾರದು! ನಿಮ್ಮ ದೇವರಾದ ಯೆಹೋವನ ಹೆಸರನ್ನು ಅಯೋಗ್ಯ ಕಾರ್ಯಕ್ಕಾಗಿ ಎತ್ತಬಾರದು! ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಿಸಬೇಕು! **ನಿಮ್ಮ ನೆರೆಯವರನ್ನು ನಿಮ್ಮಂತೆಯೇ ಪ್ರೀತಿಸಬೇಕು:** ನಿಮ್ಮ ತಂದೆ ತಾಯಿಗಳನ್ನು ಸನ್ಮಾನಿಸಬೇಕು! ನರಹತ್ಯ ಮಾಡಬಾರದು! ವ್ಯಭಿಚಾರ ಮಾಡಬಾರದು! ಕದಿಯಬಾರದು! ನಿಮ್ಮ ನೆರೆಯವರ ವಿರುದ್ಧ ಸುಳ್ಳು ಸಾಕ್ಷಿ ಹೇಳಬಾರದು! ನಿಮ್ಮ ನೆರೆಯವರ ಸೊತ್ತನ್ನು ಆಶಿಸಬಾರದು!" ಮತ್ತು ಈ ಪರಿಶುದ್ಧವಾದ ಆಜ್ಞೆಗಳಿಗೆ, ದೇವರು ಈ ಮಾತುಗಳನ್ನೂ ಸಹ ಕೂಡಿಸಿದನು: "ಯಾವನಾದರೂ ಧರ್ಮಶಾಸ್ತ್ರವನ್ನೆಲ್ಲಾ ಕೈಕೊಂಡು ನಡೆದು **ಒಂದರಲ್ಲಿ** ತಪ್ಪಿದರೆ ಅವನು ಎಲ್ಲಾ ವಿಷಯದಲ್ಲೂ ಅಪರಾಧಿಯಾಗುತ್ತಾನೆ." (ಯಾಕೋಬ–2:10). "ನೇಮನಿಷ್ಠೆಗಳನ್ನು ಆಧಾರ ಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗ –ಂದರೆ, ಧರ್ಮಗ್ರಂಥದೊಳಗೆ ಬರೆದಿರುವವುಗಳನ್ನೆಲ್ಲಾ **ನಿತ್ಯವೂ** ಕೈಕೊಳ್ಳದಿರುವ ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆ – –ದದೆ." (ಗಲಾತ್ಯ–3:10). ಅದನ್ನೇ ದೇವರು ಮೋಶೆಯ ವಶಕ್ಕೆ ಕೊಟ್ಟಂತಹ ಪರಿಶುದ್ದ ಧರ್ಮಶಾಸ್ತ್ರವು ಹೇಳುತ್ತದೆ!

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, **ನೀವು ಹುಟ್ಟಿದಂದಿನಿಂದ ಸಾಯುವವರೆಗೂ ಆಲೋಚನೆಯಲ್ಲಿ, ಮಾತಿನಲ್ಲಿ ಮತ್ತು ಕ್ರಿಯೆಯಲ್ಲಿ ನೀವು ಸಂಪೂರ್ಣವಾಗಿ ಪರಿಪೂರ್ಣರಾಗಿರುವದಕ್ಕೆ ಅಗತ್ಯವಾಗಿರುವಂತಹ ದೇವರ ಈ ಪರಿಶುದ್ಧ ಧರ್ಮಶಾಸ್ತ್ರವನ್ನು ಕಾಪಾಡಿಕೊಳ್ಳುತ್ತೀರಾ?** ಪ್ರತಿ ದಿನ ಮತ್ತು ಪ್ರತಿ ಗಂಟೆ ರಾತ್ರಿ ಹಗಲು, ನೀವು ನಿಮ್ಮ ದೇವರಾದ ಯೆಹೋವನನ್ನು **ಪೂರ್ಣ** ಹೃದಯದಿಂದಲೂ, **ಪೂರ್ಣ** ಪ್ರಾಣದಿಂದಲೂ ಮತ್ತು **ಪೂರ್ಣ** ಮನಸ್ಸಿನಿಂದಲೂ ಪ್ರೀತಿಸಬೇಕು. ಮತ್ತು, ನಿಮ್ಮ ನೆರೆಯವರನ್ನು **ನಿಮ್ಮಂತೆಯೇ** ಪ್ರೀತಿಸಬೇಕು! ನೀವು ಈ ಪರಿಶುದ್ಧವಾದ ಧರ್ಮಶಾಸ್ತ್ರವನ್ನು ನೆರವೇರಿಸಿದ್ದೀರೋ? **ನಾವು ಇದನ್ನು ನೆರವೇರಿಸಿಲ್ಲ** ಎಂಬುದು ನಿಮಗೂ ನನಗೂ ಗೊತ್ತು! ವಾಕ್ಯವು ಹೇಳುವದೇನೆಂದರೆ: "ನೀತಿವಂತನು ಇಲ್ಲ, ಒಬ್ಬನಾದರೂ ಇಲ್ಲ." (ರೋಮಾ–3:10). "ನಮ್ಮಲ್ಲಿ ಪಾಪವಿಲ್ಲವೆಂದು ನಾವು ಹೇಳಿದರೆ ನಮ್ಮನ್ನು ನಾವೇ ಮೋಸಪಡಿಸಿಕೊಳ್ಳುತ್ತೇವೆ, ಮತ್ತು ಸತ್ಯವೆಂಬುದು ನಮ್ಮಲ್ಲಿಲ್ಲ."(1ಯೋಹಾನ–1:8). ನಾವೆಲ್ಲರೂ ಪಾಪದ ಸ್ವಭಾವದೊಂದಿಗೆ ಹುಟ್ಟಿದವರಾಗಿರುವದರಿಂದ, ದೇವರಿಗೆ ಅಗತ್ಯವಾಗಿರುವ ಪ್ರತಿಯೊಂದನ್ನೂ ನಮ್ಮಲ್ಲಿ ಯಾರೊಬ್ಬರೂ ಎಂದಿಗೂ ನೆರವೇರಿಸಿಲ್ಲ.

ಬಹುಶ: ಯಾರಾದೊಬ್ಬರು ಹೀಗೆ ಕೇಳಬಹುದು: ನಮ್ಮಲ್ಲಿ ಯಾರೊಬ್ಬರಿಗೂ ಮೋಶೆಯ ಧರ್ಮಶಾಸ್ತ್ರವನ್ನು ನೆರವೇರಿಸುವದಕ್ಕೆ ಸಾಧ್ಯ –ವಿಲ್ಲದಿದ್ದರೆ, ಹಾಗಾದರೆ ದೇವರು ಇದನ್ನು ನಮಗೆ ಯಾಕೆ ಕೊಟ್ಟನು? ದೇವರು, ಪ್ರತಿಯೊಬ್ಬರೂ ನಾಶವಾಗುವದಕ್ಕೆ ಇಷ್ಟಪಡುವಂತ ದೇವರಾಗಿದ್ದಾನೋ? ಇಲ್ಲ. ದೇವರು ಪ್ರೀತಿಸ್ವರೂಪನೂ, ಮತ್ತು ಯಾರೊಬ್ಬರೂ ನಾಶವಾಗುವದನ್ನು ಇಷ್ಟಪಡದವನೂ ಆಗಿದ್ದಾನೆ! ಆಜ್ಞೆಗಳನ್ನು ಯಾರೊಬ್ಬರೂ ಕಾಪಾಡಿಕೊಳ್ಳುವದಿಲ್ಲ ಎಂದು ದೇವರಿಗೆ ಸಂಪೂರ್ಣವಾಗಿ ಗೊತ್ತಿದ್ದರೂ ಆತನು ಯಾಕೆ ತನ್ನ ಪರಿಶುದ್ಧ –ವಾದ ಆಜ್ಞೆಗಳನ್ನು ಪಾಪಿಗಳಿಗೆ ಕೊಟ್ಟನು? ಆ ಆಜ್ಞೆಗಳ ಉದ್ದೇಶವೇನಾಗಿತ್ತು? ದೇವರು ಹೀಗೆ ಹೇಳುತ್ತಾ ಆ ಪ್ರಶ್ನೆಗೆ ಉತ್ತರಿಸುತ್ತಾನೆ:

"ಯಾವನಾದರೂ ನೇಮನಿಷ್ಠೆಗಳನ್ನನುಸರಿಸಿ ದೇವರ ಸನ್ನಿಧಿಯಲೊಇ ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ. ಧರ್ಮಶಾಸ್ತ್ರದಿಂದ ಪಾಪದ ಅರುಹು ಉಂಟಾಗುತ್ತದಷ್ಟೆ." (ರೋಮಾ–3:20). "ಯೇಸು ಕ್ರಿಸ್ತನಲ್ಲಿ ನಂಬಿಕೆಯಿಡುವದರಿಂದ ಉಂಟಾಗುವ ಆ ವಾಗ್ದಾನದ ಫಲವು ನಂಬುವವರಿಗೇ ಕೊಡಲ್ಪಡಬೇಕೆಂದು ಶಾಸ್ತ್ರವು ಸಮಸ್ತವನ್ನು ಪಾಪಕ್ಕೊಳಗಾಗಿದೆಯೆಂದು ತೀರ್ಮಾನಿಸಿತು." (ಗಲಾತ್ಯ–3:22)

ಹಾಗಾಗಿ, ಪಾಪವು ತಂದಿದ್ದ ಶಾಪವನ್ನು ನಮಗಾಗಿ ಹೊತ್ತುಕೊಂಡ ಯೇಸುಕ್ರಿಸ್ತನಿಗಾಗಿ ನಮ್ಮ ಅಗತ್ಯವನ್ನು ತೋರಿಸುವದಕ್ಕೆ ಮತ್ತು ದೇವರ ಮುಂದಿರುವ ನಮ್ಮ ಅಪೂರ್ಣತೆಯನ್ನು ನಮಗೆ ತೋರಿಸುವದಕ್ಕೆ, ದೇವರು ತನ್ನ ಪರಿಶುದ್ಧವಾದ ಆಜ್ಞೆಗಳನ್ನು ಪಾಪಿಗಳಿಗೆ ವಹಿಸಿಕೊಟ್ಟನೆಂಬುದನ್ನು ನಾವು ಕಂಡುಕೊಂಡೆವು. ಮೋಶೆಗೆ ದೇವರು ವಹಿಸಿಕೊಟ್ಟಿದ್ದ ಪರಿಶುದ್ಧ **ಧರ್ಮಶಾಸ್ತ್ರವನ್ನು** ಮನುಷ್ಯರೊಳಗೆ, **ಕರ್ತನಾದ ಯೇಸು ಕ್ರಿಸ್ತನೊಬ್ಬನೇ ಕಾಪಾಡಿದವನಾಗಿದ್ದಾನೆ**. ನಾವು ನೋಡಿದಂತೆ, ಆದಾಮನ ಸಂತತಿಯರಿಂದ ಯೇಸು ತುಂಬಾ ವ್ಯತ್ಯಾ–ಸವುಳ್ಳವನಾಗಿದ್ದಾನೆ, ಯಾಕಂದರೆ ಆತನು ಅವರ ಪಾಪದ ಸ್ವಭಾವದಲ್ಲಿ ಪಾಲುಗಾರನಾಗಲಿಲ್ಲ. ಯೇಸು ಒಬ್ಬ ಕನ್ಯೆಯಲ್ಲಿ ಹುಟ್ಟುವ–ದಕ್ಕೆ ಪರಲೋಕದಿಂದ ಬಂದ ನಿತ್ಯತ್ವದ ದೇವರ ವಾಕ್ಯವಾಗಿದ್ದಾನೆ. ಯೇಸು ನಮ್ಮ ಹಾಗೆ ಶರೀರವನ್ನು ತೆಗೆದುಕೊಂಡನು, ಆದರೆ ನಮ್ಮ ದುಷ್ಟ ಸ್ವಭಾವವನ್ನು ತೆಗೆದುಕೊಳ್ಳಲಿಲ್ಲ. ಅದಕ್ಕಾಗಿಯೇ, ಆತನು ಭೂಲೋಕದಲ್ಲಿದ್ದಾಗ, "ನಾನು ಮೋಶೆಯ ಧರ್ಮಶಾಸ್ತ್ರವನ್ನಾ–ಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವದಕ್ಕೆ ಬಂದೆನೆಂದು ನೆನಸಬೇಡಿರಿ. ತೆಗೆದು ಹಾಕುವದಕ್ಕೆ ಬಂದಿಲ್ಲ; **ನೆರವೇರಿಸು–ವದಕ್ಕೆ** ಬಂದಿದ್ದೇನೆ."(ಮತ್ತಾಯ–5:17)ಎಂದು ಹೇಳಿದನು. ಯೇಸು ಹೇಳಿರುವದನ್ನು ನೀವು ಕೇಳಿದಿರಾ? ಇದು ಒಂದು ಆಳವಾದ ಮತ್ತು ಅದ್ಭುತವಾದ ಸತ್ಯವಾಗಿದೆ. ದೇವರು ಮೋಶೆಗೆ ವಹಿಸಿಕೊಟ್ಟ ಪರಿಶುದ್ಧ ಧರ್ಮಶಾಸ್ತ್ರವನ್ನು ನೆರವೇರಿಸುವದಕ್ಕೆ ತಾನು ಲೋಕಕ್ಕೆ ಬಂದಿರುವದು ಎಂದು ಯೇಸು ಹೇಳಿದನು! ಇದು ಏನು ಅರ್ಥ ಕೊಡುತ್ತದೆ ಎಂಬುದನ್ನು ನೀವು ಗ್ರಹಿಸಿದ್ದೀರಾ? **ಆದಾಮನ ಸಂತತಿ–ಯವರಾದ ನಾವು ಎಂದಿಗೂ ಯಾವುದನ್ನು ಮಾಡುವದಕ್ಕೆ ಸಾಧ್ಯವಿಲ್ಲದಿರುವದನ್ನು ಯೇಸು ನಮಗಾಗಿ ಮಾಡಿದನು**. ಆತನು **ದೇವರ ಧರ್ಮಶಾಸ್ತ್ರವನ್ನು ನೆರವೇರಿಸಿದನು**, ಅದಾದ ನಂತರ, **ಧರ್ಮಶಾಸ್ತ್ರದ ಶಾಪವನ್ನು ನಮಗಾಗಿ ಹೊತ್ತುಕೊಳ್ಳುವದಕ್ಕೆ** ಮತ್ತು ದೇವರ ನೀತಿಯ ನ್ಯಾಯತೀರ್ಪಿನಿಂದ ನಮ್ಮನ್ನು ರಕ್ಷಿಸುವದಕ್ಕೆ ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿದನು!

ಯೇಸು ಸಾಯುವದಕ್ಕೆ ತಕ್ಕವನಾಗಿರಲಿಲ್ಲ, ಯಾಕಂದರೆ ಆತನು ಎಂದಿಗೂ ಪಾಪ ಮಾಡಿರಲಿಲ್ಲ. ಆದಾಗ್ಯೂ, ಪ್ರವಾದಿಗಳ ಮೂಲಕ ದೇವರ ವಾಗ್ದಾನ ಮಾಡಿದಂತಹ ರಕ್ಷಣೆಯ ಯೋಜನೆಯನ್ನು ಪೂರ್ತಿಗೊಳಿಸುವದಕ್ಕೆ ಕರ್ತನಾದ ಯೇಸು ತನ್ನ ಸ್ವಂತ ಚಿತ್ತದಿಂದ ತನ್ನ ಜೀವವನ್ನು ನಮಗಾಗಿ ಕೊಟ್ಟನು. ಮತ್ತು ಪಾಪದ ನಮ್ಮ ಸಾಲವನ್ನು ತೆರುವದಕ್ಕೆ ಆತನು ತನ್ನ ರಕ್ತವನ್ನು ಸುರಿಸಿದ ನಂತರ, ಮೂರನೆಯ ದಿನದಲ್ಲಿ ದೇವರು ಆತನನ್ನು ಮರಣದಿಂದ ಎಬ್ಬಿಸಿದನು! ಇದಕ್ಕೆ ಸಂಬಂಧಿಸಿದಂತೆ ಪರಿಶುದ್ಧ ವಾಕ್ಯಗಳು ಹೇಳಿರುವ–ದನ್ನು ಕೇಳಿರಿ. ವಾಕ್ಯ ಹೀಗೆ ಹೇಳುತ್ತದೆ:

"**ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ**. . . . ಧರ್ಮಶಾಸ್ತ್ರವು ನಮ್ಮ ಶರೀರಾಧೀನಸ್ವಭಾವದ ನಿಮಿತ್ತ ನಿರ್ಬಲವಾಗಿ ಯಾವ ಕೆಲಸವನ್ನು ಮಾಡಲಾರದೆ ಇತ್ತೋ ಅದನ್ನು ದೇವರೇ ಮಾಡಿದನು. ಏನಂದರೆ ಆತನು ಪಾಪನಿವಾರಣೆಗಾಗಿ ತನ್ನ ಮಗನನ್ನು ಪಾಪಾಧೀನವಾದ ನರಭಾವದ ರೂಪದಲ್ಲಿ ಕಳುಹಿಸಿಕೊಟ್ಟು ನರಭಾವದಲ್ಲಿಯೇ ಪಾಪಕ್ಕೆ ಮರಣದಂಡನೆಯನ್ನು ವಿಧಿಸಿದನು." (ರೋಮಾ–೮:೧,೩)

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನೀವು ಯಾವುದರ ಮೇಲೆ ನಿಮ್ಮ ನಿರೀಕ್ಷೆಯನ್ನು ನೇಣು ಹಾಕಿದ್ದೀರಿ? ನಿಮ್ಮ ಪಾಪಗಳಿಗಾಗಿ ಶಿಕ್ಷೆಯನ್ನು ಹೊತ್ತುಕೊಳ್ಳುವವನಾದ ನೀತಿವಂತ ವಿಮೋಚಕನ ಕುರಿತಾದ ದೇವರ ಶುಭ ಸಂದೇಶದ ಮೇಲೆ ಆತುಕೊಂಡಿದ್ದೀರಾ? ಅಥವಾ ನೀವು ಇನ್ನೂ ನಿಮ್ಮ "ಒಳ್ಳೆಯ" ಕೆಲಸಗಳ ಮೇಲೆ ಆತುಕೊಂಡಿದ್ದೀರಾ? ದೇವರ ವಾಕ್ಯ ಹೇಳಿರುವದನ್ನು ಮರೆಯಬೇಡಿರಿ, ಅದು ಹೇಳುವದೇನೆಂದರೆ:

"ನೇಮನಿಷ್ಟೆಗಳನ್ನು ಆಧಾರ ಮಾಡಿಕೊಳ್ಳುವವರೆಲ್ಲರೂ ಶಾಪಾಧೀನರಾಗಿದ್ದಾರೆ. ಹೇಗಂದರೆ ಧರ್ಮಗ್ರಂಥದೊಳಗೆ **ಬರೆದಿರುವವುಗಳ –ನ್ನೆಲ್ಲಾ ನಿತ್ಯವೂ ಕೈಕೊಳ್ಳದಿರುವ** ಪ್ರತಿಯೊಬ್ಬನು ಶಾಪಗ್ರಸ್ತನೆಂದು ಶಾಸ್ತ್ರದಲ್ಲಿ ಬರೆದದೆ. ಕ್ರಿಸ್ತನು ನಮ್ಮ ನಿಮಿತ್ತವಾಗಿ ಶಾಪವಾಗಿ ಧರ್ಮ ಶಾಸ್ತ್ರದಲ್ಲಿ ಹೇಳಿರುವ ಶಾಪದೊಳಗಿಂದ **ನಮ್ಮನ್ನು ಬಿಡಿಸಿದನು**. ಆದ್ದರಿಂದ ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." (ಗಲಾತ್ಯ–3:10,13; ಯೋಹಾನ–3:16)

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . .

ಮುಂಬರುವ ಅಧ್ಯಯನಗಳಲ್ಲಿ, ದೇವರ ಚಿತ್ತವಾದರೆ, ನಾವು ಪ್ರವಾದಿಗಳ ಗ್ರಂಥಗಳ ನಮ್ಮ ಪುನರಾವರ್ತನೆಯನ್ನು ಮುಗಿಸುತ್ತೇವೆ ಮತ್ತು ಆದಾಮನ ಸಂತತಿಯವರಿಗಾಗಿ ಸಮಾಧಾನದ ಮತ್ತು ರಕ್ಷಣೆಯ ಒಂದು ಬಾಗಿಲನ್ನು ತೆರೆಯುವ ಹಾಗೆ ತನ್ನ ಕುರಿತಾಗಿ ಪ್ರವಾದಿಗಳು ಪ್ರವಾದಿಸಲ್ಪಟ್ಟಂತಹ ಪ್ರತಿಯೊಂದನ್ನೂ ಮೆಸ್ಸೀಯನಾದ ಯೇಸು ಹೇಗೆ ನೆರವೇರಿಸಿದನೆಂಬುದನ್ನು ನೋಡುತ್ತೇವೆ.

ಈ ದಿನ ನಾವು ಯಾವುದನ್ನು ಅಧ್ಯಯನ ಮಾಡಿದೆವೋ ಅದರೊಳಗೆ ದೇವರು ನಿಮಗೆ ವಿವೇಕವನ್ನು ಕೊಡಲಿ ಮತ್ತು ಆತನ ವಾಕ್ಯ–ದಲ್ಲಿರುವ ಈ ವಾಗ್ದಾನವನ್ನು ನೆನಪು ಮಾಡಿಕೊಳ್ಳುವದಕ್ಕೆ ನಿಮಗೆ ಸಹಾಯ ಮಾಡಲಿ:

"**ಕ್ರಿಸ್ತ ಯೇಸುವಿನಲ್ಲಿರುವವರಿಗೆ ಅಪರಾಧ ನಿರ್ಣಯವು ಈಗ ಇಲ್ಲವೇ ಇಲ್ಲ!**" (ರೋಮಾ–8:1)

[ಪಾಠ 95: ಪುನರಾವರ್ತನೆ #3] [ಸಾರಾಂಶಗಳ ಪಟ್ಟಿ] [ಪಾಠ 97: ನರಕ]

ಪಾಠ 96

# ಪುನರಾವರ್ತನೆ 4:

## ಯೇಸು ಕ್ರಿಸ್ತನು: "ತೀರಿತು!"

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಮೂರು ಕಾರ್ಯಕ್ರಮಗಳ ಹಿಂದೆ, ದೇವರ ಪ್ರವಾದಿಗಳ ಸಂದೇಶವನ್ನು ಪುನರಾವರ್ತಿಸುವದಕ್ಕೆ ನಾವು ಪ್ರಾರಂಭಿಸಿದ್ದೇವೆ. ಈ ದಿನ ದೇವರ ಸಹಾಯದೊಂದಿಗೆ, ನಮ್ಮ ಪುನರಾವರ್ತನೆಯನ್ನು ಮುಕ್ತಾಯಗೊಳಿಸುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ. ಈ ದಿನದ ನಮ್ಮ ಕಾರ್ಯಕ್ರಮವು **"ತೀರಿತು"** ಎಂಬ ಹೆಸರಿನದಾಗಿದೆ.

ನಾವು ನೋಡಿಕೊಂಡಂತೆ, ದೇವರು ತನ್ನ ಪುಸ್ತಕವನ್ನು ಹಳೆ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆ ಎಂದು **ಎರಡು ಮುಖ್ಯವಾದ ವಿಭಾಗಗಳನ್ನಾಗಿ** ಮಾಡಿದ್ದಾನೆ. ಹಳೆ ಒಡಂಬಡಿಕೆಯು, ದೇವರ ಅದ್ಭುತವಾದ ಪುಸ್ತಕದ ಮೊದಲನೆಯ ವಿಭಾಗವಾಗಿದೆ. ಇದು ತೋರಾ {ತೌರತ್}, ಕೀರ್ತನೆಗಳು {ಝಾಬುರ್}, ಮತ್ತು ಪ್ರವಾದಿಗಳ ಇತರ ಬರಹಗಳನ್ನು ಒಳಗೊಂಡಿದೆ. ದೇವರ ಪುಸ್ತಕದ ಈ ಮೊದಲನೆಯ ವಿಭಾಗದಲ್ಲಿ ನಮ್ಮ ಮೂಲ ಪಿತೃವಾದ ಆದಾಮನು ಹೇಗೆ ದೇವರಿಗೆ ಅವಿಧೇಯನಾದನು, ಅದರಿಂದ ತನ್ನ ಎಲ್ಲಾ ಸಂತತಿಯವರನ್ನು ಸೈತಾನನ ರಾಜ್ಯಗೊಳಗೆ ಹೇಗೆ ತಂದನೆಂಬುದನ್ನು ನಾವು ನೋಡುತ್ತೇವೆ. ಹೇಗೂ, ದೇವರು ಆದಾಮನ ಮಕ್ಕಳಿ –
–ಗಾಗಿ ಒಬ್ಬ ಶಕ್ತಿವಂತ ರಕ್ಷಕನನ್ನು ಕಳಿಸುವದಾಗಿ, ಮತ್ತು ನಂಬುವವರನ್ನು ರಕ್ಷಿಸಿ ಅವರನ್ನು ದೇವರ ರಾಜ್ಯದೊಳಗೆ ಹಿಂದಕ್ಕೆ ತರು –
–ವಂತಹ ವಾಗ್ದಾನ ಮಾಡಿದ್ದನ್ನು ಸಹ ನಾವು ಕಲಿತುಕೊಂಡೆವು. ಈ ಅದ್ಭುತವಾದ ವಾಗ್ದಾನವು ಹಳೆ ಒಡಂಬಡಿಕೆಯ ಒಂದು ಪ್ರಾಮುಖ್ಯವಾದ ಭಾಗವಾಗಿದೆ.

ರಕ್ಷಕನನ್ನು ಕೆಳಕ್ಕೆ ಕಳಿಸುವ **ತನ್ನ ಯೋಜನೆಯನ್ನು ಚಲನೆಯಲ್ಲಿಡುವದಕ್ಕೆ,** ದೇವರು ಅಬ್ರಹಾಮನನ್ನು ಅವನ ಹಿರಿಯ ವಯಸ್ಸಿನಲ್ಲಿ ಕರೆದು ಅವನಿಗೆ, "ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡುವೆನು. . . .ನಿನ್ನ ಮೂಲಕ ಭೂಲೋಕದ ಎಲ್ಲಾ ಕುಲದವ
–ರಿಗೂ ಆಶೀರ್ವಾದವುಂಟಾಗುವದು.**"** (ಆದಿ–12:2.3) ಎಂದು ಹೇಳಿದನು. ಈ ಪ್ರಕಾರ ದೇವರು ಅಬ್ರಹಾಮನನ್ನು ಹೇಗೆ ಇಸ್ರಾ
–ಯೇಲ್ ಜನಾಂಗಕ್ಕೆ ತಂದೆಯನ್ನಾಗಿ ಮಾಡಿದನೆಂಬುದನ್ನು ನಾವು ನೋಡುತ್ತೇವೆ. ಇದೇ ಜನಾಂಗಕ್ಕೆ ದೇವರು ಪ್ರವಾದಿಗಳ ಬರಹ
–ಗಳನ್ನು ಒಪ್ಪಿಸಿಕೊಟ್ಟನು. ಸಾವಿರದ ಐನೂರು ವರ್ಷಗಳವರೆಗೆ ದೇವರು ಪ್ರವಾದಿಯಾದ ಮೋಶೆಯಿಂದ ಹಿಡಿದು ಪ್ರವಾದಿಯಾದ ಯೋಹಾನನವರೆಗೆ ಬೇರೆ ಬೇರೆ ಅನೇಕ ಮನುಷ್ಯರ ಮನಸ್ಸಿನಲ್ಲಿ ಇಟ್ಟಿದ್ದಂತಹ ತನ್ನ ವಾಕ್ಯವನ್ನು ಅವರಿಗೆ ಕಳಿಸಿದನು. ಈ ಪ್ರವಾದಿ
–ಗಳ ಮೂಲಕವಾಗಿ, ಆದಾಮನ ಮಕ್ಕಳ ಅನೀತಿವಂತಿಕೆಯನ್ನು ಪುನ: ರುಜುವಾತುಪಡಿಸಿದನು ಮತ್ತು ಅವರ ಪಾಪದ ಸಾಲಕ್ಕೆ ದಂಡ ತೆರುವದಕ್ಕೆ ತನ್ನ ರಕ್ತವನ್ನು ಸುರಿಸುವ ನೀತಿವಂತ ವಿಮೋಚಕನ ಬರುವಿಕೆಯನ್ನು ಅವರಿಗೆ ಪ್ರಕಟಪಡಿಸಿದನು.

ನಾವು ನೋಡಿದಂತೆ, ಪಾಪಿಗಳೊಂದಿಗೆ ದೇವರು ಸ್ಥಾಪಿಸಿದಂತ ಹಳೆ ಒಡಂಬಡಿಕೆಯು, ಪ್ರಾಣಿಗಳ ಯಜ್ಞವನ್ನು ಅಪೇಕ್ಷಿಸಿತ್ತು. ಇದು ಹೇಳಿದ್ದೇನೆಂದರೆ, "ರಕ್ತಧಾರೆಯಿಲ್ಲದೆ ಪಾಪಪರಿಹಾರ ಇಲ್ಲ ಯಾಕಂದರೆ **ಪಾಪದ ಸಂಬಳ ಮರಣ!"** ಎಂಬುದಾಗಿ. ಆದರೆ ಅದೇ ಮೊದಲ ಜನಾಂಗದವರು ಮಾಡುತ್ತಿದ್ದ ಪ್ರಾಣಿಗಳ ಯಜ್ಞವು, ನಿಜವಾಗಿಯೂ ಪಾಪದ ದಂಡ ತೆರುವಂತದ್ದಾಗಿರಲಿಲ್ಲ, ಯಾಕಂದರೆ **ಒಂದು ಪ್ರಾಣಿಯ ಬೆಲೆಯು** ಮತ್ತು **ಮನುಷ್ಯನ ಬೆಲೆಯು** ಅಸಮವಾಗಿದ್ದವು. ಉದಾಹರಣೆಗೆ, ನಾನು ಒಂದು ಆಟದ ಕಾರನ್ನು ಹೊಂದಿದ್ದರೆ, ನಾನು ಕಾರು ಮಾರುವವನ ಬಳಿಗೆ ಹೋಗಿ ಒಂದು ನಿಜವಾದ ಕಾರಿನೊಂದಿಗೆ, ಹೀಗೆ ಹೇಳೋಣ, ಮರ್ಸಿಡಿಸ್ ಕಾರಿ
–ನೊಂದಿಗೆ ಇದನ್ನು ಬದಲಾಯಿಸಿ ಕೊಡು ಎಂದು ಕೇಳುವದಕ್ಕಾಗುತ್ತದೆಯೋ? ಖಂಡಿತವಾಗಿಯೂ ಇಲ್ಲ! ಯಾಕೆ? ಯಾಕಂದರೆ ನನ್ನ ಬಳಿಯಿರುವ ಆಟದ ಕಾರಿನ ಬೆಲೆಯೂ ಮತ್ತು ನಿಜವಾದ ಕಾರಿನ ಬೆಲೆಯೂ ಸಮಾನವಾಗಿಲ್ಲ! ಅದರಂತೆಯೇ, ಮೂಲ ಜನಾ
–ಂಗಗಳಿಂದ ದೇವರು ಅಪೇಕ್ಷಿಸಿದ ಪ್ರಾಣಿಗಳ ಯಜ್ಞವು, ಪಾಪವನ್ನು ಅಳಿಸುವದಕ್ಕೆ ಸಾಧ್ಯವಿರಲಿಲ್ಲ, ಯಾಕಂದರೆ ಒಂದು ಪ್ರಾಣಿಯ ಬೆಲೆಯು ಮತ್ತು ಒಬ್ಬ ಮನುಷ್ಯನ ಬೆಲೆಯು ಅಸಮಾನವಾಗಿತ್ತು. ನಾವು ನೋಡಿಕೊಂಡಂತೆ, ಪ್ರಾಣಿಗಳ ಯಜ್ಞಗಳು ಕೇವಲ ನಿದರ್ಶ
–ನಗಳಾಗಿದ್ದು (ಚಿಹ್ನೆಗಳು), ಹೊಸ ಒಡಂಬಡಿಕೆಯನ್ನು ತರುವ ನೀತಿವಂತ ವಿಮೋಚಕನೆಂಬ ನಿಜವಾದ ಯಜ್ಞವನ್ನು ದೇವರು ಕೆಳಕ್ಕೆ ಕಳಿಸುವ ಸಮಯಕ್ಕೆ ಕಾಯುತ್ತಿದ್ದವು. ಪ್ರಾಣಿಯ ಯಜ್ಞವು ಆ ಸಮಯಕ್ಕೆ ಮಾತ್ರ ಪಾಪವನ್ನು ಮುಚ್ಚುವಂತದ್ದಾಗಿತ್ತು; ಅವು ಪಾಪ –
–ವನ್ನು ಶಾಶ್ವತವಾಗಿ ತೆಗೆದು ಹಾಕುವಂತವುಗಳಾಗಿರಲಿಲ್ಲ.

ದೇವರ ಪುಸ್ತಕದ ಎರಡನೆಯ ಭಾಗವು **ಹೊಸಒಡಂಬಡಿಕೆ** ಅಥವಾ ಸುವಾರ್ತೆ{ಇಂಜಿಲ್}ಎಂದು ಕರೆಯಲ್ಪಡುತ್ತದೆ. ಪರಲೋಕದಿಂದ

ಬಂದ ವಿಮೋಚಕನ ರಕ್ತದ ಮೂಲಕ ಮನುಷ್ಯನೊಂದಿಗೆ ದೇವರು ಸ್ಥಾಪಿಸಿದಂತಹ ಒಡಂಬಡಿಕೆಯ (ಒಪ್ಪಂದದ) ಕುರಿತು ಇದು ನಮಗೆ ತಿಳಿಸುತ್ತದೆ. ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿದಾಗ **ಎಲ್ಲಾ ಪ್ರಾಣಿಯ ಯಜ್ಞಗಳ ಚಿಹ್ನೆಯನ್ನು ನೆರವೇರಿಸಿ,** ಪಾಪಗಳ ಕ್ಷಮಾಪಣೆಯನ್ನು ನಾವು ಹೊಂದಿಕೊಳ್ಳಲು ನಮ್ಮನ್ನು ಶಕ್ತರನ್ನಾಗಿಸಿದ ವಿಮೋಚಕನಾದ **ಯೇಸುವಿನ** ಕತೆಯಿರುವಂತದ್ದೇ ಈ ಸುವಾ –ರ್ತೆಯ ಪುಸ್ತಕವಾಗಿದೆ. ವಿಮೋಚಕನು ಯಾಕೆ ಪರಲೋಕದಿಂದ ಬರಬೇಕಾಯಿತು? ಸುಮ್ಮನೆ ಯಾಕಂದರೆ ಆದಾಮನ ಪ್ರತಿಯೊಬ್ಬ ಸಂತತಿಯವನು ಪಾಪದ ಭಾರವನ್ನು ಹೊತ್ತಿದ್ದನು. **ಒಬ್ಬ ಪಾಪಿಯು ಇನ್ನೊಬ್ಬ ಪಾಪಿಯನ್ನು ವಿಮೋಚಿಸುವದಕ್ಕಾಗುವದಿಲ್ಲ.** ಉದಾ –ಹರಣೆಗೆ, ಒಬ್ಬ ಸ್ತ್ರೀಯು ತನ್ನ ತಲೆಯ ಮೇಲೆ ಒಂದು ನೀರು ತುಂಬಿದ ಪಾತ್ರೆಯನ್ನು ಹೊತ್ತುಕೊಂಡಿರುವಾಗ ಇನ್ನೊಬ್ಬರ ನೀರು ತುಂಬಿದ ಪಾತ್ರೆಯನ್ನು ತನ್ನ ತಲೆಯ ಮೇಲೆ ಹೊತ್ತುಕೊಳ್ಳುವದಕ್ಕಾಗುತ್ತದೋ? ಇಲ್ಲ, ಹಾಗೆಯೇ, ಒಬ್ಬ ಪಾಪಿಯು ಇನ್ನೊಬ್ಬ ಪಾಪಿ –ಗಾಗಿ ಪಾಪದ ಶಿಕ್ಷೆಯನ್ನು ಹೊತ್ತುಕೊಳ್ಳುವದಕ್ಕಾಗುವದಿಲ್ಲ. ಏನೇ ಆದರೂ, ದೇವರಿಂದ ಕಳಿಸಲ್ಪಟ್ಟ ವಿಮೋಚಕನಾದ ಯೇಸು ಕ್ರಿಸ್ತನು, ಪಾಪದ ಯಾವ ಭಾರವನ್ನೂ ಹೊತ್ತಿರಲಿಲ್ಲ, ಯಾಕೆಂದರೆ ಆತನು ಶುದ್ಧ ಆತ್ಮವುಳ್ಳ ದೇವರ ಮಗನೂ ಮತ್ತು ಆದಿಯಲ್ಲಿ ದೇವರೊಂದಿಗಿದ್ದ ವಾಕ್ಯವೂ ಆಗಿದ್ದನು. ಆತನು ಒಬ್ಬ ಕನ್ಯೆಯಲ್ಲಿ ಹುಟ್ಟಿದನು. ಹಾಗಾಗಿ, ಆತನು ನಮ್ಮ ರೀತಿಯ ಒಂದು ದೇಹವನ್ನು ಹೊಂದಿದ್ದನು, ಆದರೆ ಆತನು ನಮ್ಮ ಕೆಟ್ಟ ಸ್ವಭಾವವನ್ನು ಹೊಂದಿರಲಿಲ್ಲ. ಆತನು ತನ್ನ ಮೇಲೆ ಪಾಪದ ಭಾರವನ್ನು ಹೊಂದಿದವ – –ನಾಗಿರಲಿಲ್ಲ. ಅದಕ್ಕೋಸ್ಕರವೇ ದೇವರು ನಮ್ಮೆಲ್ಲರ ಪಾಪದ ಭಾರವನ್ನು ಆತನ ಮೇಲೆ ಹೊರಿಸಿದನು. ಪರಿಶುದ್ಧನಾದ ಯೇಸು ನಮ್ಮ ಅತಿಕ್ರಮಗಳಿಗಾಗಿ ಸತ್ತನು. ನಂತರ ನಮಗೆ ಜೀವವನ್ನು ಕೊಡುವದಕ್ಕಾಗಿ ಮೂರು ದಿನಗಳ ತರುವಾಯ, ಆತನು ಸತ್ತವರೊಳಗಿಂದ ಎದ್ದನು. ಆತನು ಮರಣವನ್ನು, ಸಮಾಧಿಯನ್ನು, ಸೈತಾನನನ್ನು ಮತ್ತು ಪಾಪವನ್ನು ಜಯಿಸಿದನು!

ನಾವೆಲ್ಲರೂ ಪಾಪದ ಆಳವಾದ ಗುಂಡಿಯಲ್ಲಿ ಹುಟ್ಟಿದವರಾಗಿದ್ದೇವೆ, ಮತ್ತು ಮೇಲಿನಿಂದ ಬಂದ ಮೆಸ್ಸೀಯನ ಹೊರತಾಗಿ ನಮ್ಮನ್ನು ರಕ್ಷಿಸುವದಕ್ಕೆ ಯಾರೊಬ್ಬರೂ ಬರಲಿಲ್ಲ. ನೀವು ನಿಮ್ಮ ಭರವಸೆಯನ್ನು ಆತನ ಮೇಲಿಟ್ಟರೆ, ಆತನು ನಿಮ್ಮನ್ನು ಪಾಪದ ಗುಂಡಿಯೊ – ಳಗಿಂದ ಹೊರಕ್ಕೆಳೆಯುತ್ತಾನೆ. ಆದಾಮನ ಮಕ್ಕಳನ್ನು ಅವರ ಪಾಪಗಳಿಂದ ರಕ್ಷಿಸುವದಕ್ಕಾಗಿ ಆತನು ಪರಲೋಕದಿಂದ ಬಂದನು. ಮತ್ತು ಈಗ ಆತನು ತನ್ನನ್ನು ನಂಬುವವರಿಗಾಗಿ ಮಧ್ಯಸ್ಥಿಕೆ ವಹಿಸುವದಕ್ಕಾಗಿ ಪರಲೋಕಕ್ಕೆ ಹಿಂತಿರುಗಿ ಹೋಗಿದ್ದಾನೆ. ಅದನ್ನೇ ವಾಕ್ಯವು ಹೀಗೆ ಹೇಳುತ್ತದೆ:

**"**ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. . .**"**(1ತಿಮೊಥೆ–2:5,6). **"**ಇಂಥವನೇ ನಮಗೆ ಬೇಕಾದ ಮಹಾಯಾಜಕನು. ಈತನು ಪರಿಶುದ್ಧನೂ ನಿರ್ದೋಷಿಯೂ ನಿಷ್ಕಳಂಕನೂ ಪಾಪಿಗಳಲ್ಲಿ ಸೇರದೆ ಪ್ರತ್ಯೇಕವಾಗಿರುವವನೂ ಆಕಾಶ ಮಂಡಲಗಳಿಗಿಂತ ಉನ್ನತದಲ್ಲಿರುವವನೂ ಆಗಿರುವನು. ಈತನು ದೇವರ ಪ್ರಭಾವದ ಪ್ರಕಾಶವೂ ಆತನ ತತ್ವದ ಮೂರ್ತಿಯೂ ತನ್ನ ಶಕ್ತಿಯ ವಾಕ್ಯದಿಂದ ಸಮಸ್ತಕ್ಕೆ ಆಧಾರವೂ ಆಗಿದ್ದು ಪಾಪವಿಶುದ್ಧಿಮಾಡಿದ ಮೇಲೆ ಉನ್ನತಲೋಕದೊಳಗೆ ಮಹತ್ವವುಳ್ಳ ದೇವರ ಬಲಗಡೆಯಲ್ಲಿ ಆಸನಾ – –ರೂಢನಾದನು!**"** (ಇಬ್ರಿಯ–7:26; 1:3)

ನಾವು ಸುವಾರ್ತೆಯಲ್ಲಿ ನೋಡಿದಂತೆ, ಮೆಸ್ಸೀಯನಾದ ಯೇಸು ಭೂಲೋಕದಲ್ಲಿದ್ದಾಗ, ಕೆಲವರು ಆತನನ್ನು ನಂಬಿದರು. ಯೇಸು ಯಾರೆಂಬುದಾಗಿ ಗ್ರಹಿಸಿಕೊಂಡವರು ದೊಡ್ಡದಾಗಿ ಸಂತೋಷಿಸಿದರು. ಸಾವಿರಾರು ವರ್ಷಗಳವರೆಗೆ ದೇವರ ಪ್ರವಾದಿಗಳು ಮೆಸ್ಸೀಯನ ಬರುವಿಕೆಯ ಕುರಿತಾಗಿ ಪ್ರವಾದಿಸಿದ್ದನ್ನು ಅವರು ತಿಳಿದಿದ್ದರು; ಈಗ ಅವರು ತಮ್ಮ ಸ್ವಂತ ಕಣ್ಣುಗಳಿಂದ ಆತನನ್ನು ನೋಡುತ್ತಿದ್ದರು! ಯೇಸುವಿನ ಶಿಷ್ಯರೊಳಗೆ ಕೆಲವರು ತಮ್ಮ ಬಂಧುಗಳನ್ನು ಮತ್ತು ಸ್ನೇಹಿತರನ್ನು ಕಂಡುಕೊಂಡು ಅವರಿಗೆ, **"ಮೆಸ್ಸೀಯನು ನಮಗೆ ಸಿಕ್ಕಿ –ದನು. . .ಯಾರ ವಿಷಯವಾಗಿ ಮೋಶೆಯು ಧರ್ಮಶಾಸ್ತ್ರದಲ್ಲಿ ಬರೆದನೋ ಮತ್ತು ಪ್ರವಾದಿಗಳು ಬರೆದರೋ ಆತನು ನಮಗೆ ಸಿಕ್ಕಿದನು ಎಂದು ಹೇಳಿದರು."** (ಯೋಹಾನ–1:41,45)

ವಿಷಾದಕರವೆಂದರೆ, ಯೇಸುವಿನ ದಿನದಲ್ಲಿ ಜೀವಿಸಿದ್ದ ಅನೇಕರಿಗೆ **ನಿಜವಾಗಿಯೂ ಯೇಸು ಯಾರೆಂಬುದು ಗೊತ್ತಿರಲಿಲ್ಲ.** ಇದಕ್ಕನುಸಾರ –ವಾಗಿ ವಾಕ್ಯವು ಹೀಗೆ ಹೇಳುತ್ತದೆ:

**"**ಆ ವಾಕ್ಯವು ದೇವರಾಗಿತ್ತು. ಆ ವಾಕ್ಯವೆಂಬವನು ಆದಿಯಲ್ಲಿ ದೇವರ ಬಳಿಯಲ್ಲಿದ್ದನು. . .ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮಧ್ಯದಲ್ಲಿ ವಾಸಮಾಡಿದನು. . . .ಆ ಬೆಳಕು ಕತ್ತಲಲ್ಲಿ ಪ್ರಕಾಶಿಸುತ್ತದೆ; ಕತ್ತಲು ಅದನ್ನು ಮುಸುಕಲಿಲ್ಲ. . . .ಆತನು ಲೋಕದಲ್ಲಿ ಇದ್ದನು; ಮತ್ತು ಲೋಕವು ಆತನ ಮೂಲಕವಾಗಿ ಉಂಟಾಯಿತು; ಆದರೂ ಲೋಕವು ಆತನನ್ನು ಅರಿಯಲಿಲ್ಲ. ಆತನು ತನ್ನ ಸ್ವಾಸ್ಥ್ಯಕ್ಕೆ ಬಂದನು; ಆದರೆ ಸ್ವಂತ ಜನರು ಆತನನ್ನು ಅಂಗೀಕರಿಸಲಿಲ್ಲ!**"** (ಯೋಹಾನ–1:2,14,5,10,11)

ನಾವು ನೋಡಿದ ಹಾಗೆ, ಮೆಸ್ಸೀಯನು ಮಾಡಿದ ಅನೇಕ ಸೂಚಕ ಮತ್ತು ಅದ್ಬುತ ಕಾರ್ಯಗಳ ಕುರಿತು ಅನೇಕರು ಸಾಕ್ಷಿ ಕೊಟ್ಟಿದ್ದಾರೆ. ಯೇಸು ರೋಗಗಳನ್ನು, ಬಿರುಗಾಳಿಗಳನ್ನು, ದುರಾತ್ಮಗಳನ್ನು, ಪಾಪ ಮತ್ತು ಮರಣವನ್ನು ಜಯಿಸಿದಾಗ್ಯೂ ಸಹ, ಅನೇಕರು ಯೇಸು ಯಾರೆಂಬುದಾಗಿ ಗ್ರಹಿಸಿಕೊಳ್ಳಲಿಲ್ಲ ಯಾಕಂದರೆ ಸೈತಾನನು ಅವರ ಮನಸ್ಸುಗಳನ್ನು ಕುರುಡು ಮಾಡಿದ್ದನು. ಜನರ ಗುಂಪುಗಳು ಆತ –ನನ್ನು ಮುಟ್ಟಿದರು, ಆತನ ಮೇಲೆ ಒತ್ತರಿಸಿಕೊಂಡಿದ್ದರೂ ಆತನನ್ನು ನಿಜವಾಗಿಯೂ ತಿಳಿದುಕೊಳ್ಳಲಿಲ್ಲ! ಪ್ರವಾದಿಗಳಲ್ಲಿ ಈತನು ಒಬ್ಬ ಪ್ರವಾದಿ ಎಂಬುದಾಗಿ ಅವರು ಅಭಿಪ್ರಾಯಪಟ್ಟಿದ್ದರು, ಆದರೆ ಆತನಲ್ಲಿ ದೇವರ ಸಂಪೂರ್ಣತೆಯೆಲ್ಲವೂ ವಾಸಿಸಿದೆ ಎಂಬುದನ್ನು ಅವರು ನಂಬಲಿಲ್ಲ.

ಯೆಹೂದ್ಯ ಧಾರ್ಮಿಕ ನಾಯಕರುಗಳು ಸಹ, ಸಂಪೂರ್ಣವಾಗಿ ಯೇಸುವನ್ನು ತಿರಸ್ಕರಿಸಿದ್ದರು ಎನ್ನುವದನ್ನು ನಾವು ನೋಡಿದ್ದೇವೆ. ಅವರು ಬಹಳವಾಗಿ ಯೇಸುವಿನ ಮೇಲೆ ಹೊಟ್ಟೇಕಿಚ್ಚುಪಡುತ್ತಿದ್ದರು, ಕೊನೆಗೆ ಅವರು ಆತನನ್ನು ಶಿಲುಬೆಗೆ ಮೊಳೆಗಳಿಂದ ಜಡಿದು ಆತನನ್ನು ಕೊಂದು ಹಾಕಿದರು! ಆದರೆ ದೇವರು ಇದನ್ನು ಮೊದಲಿನಿಂದಲೇ ಯೋಜನೆ ಮಾಡಿಕೊಂಡಿದ್ದನು; ಅಂದರೆ ಬಹಳ ಹಿಂದೆಯೇ ತನ್ನ ಪ್ರವಾದಿಗಳ ಮೂಲಕ ಆತನು ಪ್ರಕಟಪಡಿಸಿದಂತಹ **ತನ್ನ ಪರಿಶುದ್ಧ ಯೋಜನೆಗೆ** ಅನುಸಾರವಾಗಿ ಶಿಲುಬೆಯ ಮೇಲಿನ ಮೆಸ್ಸೀಯನ ಮರಣವಾಯಿತು. ಅದಕ್ಕಾಗಿಯೇ, ಯೇಸುವನ್ನು ಮರಣಕ್ಕೆ ಒಪ್ಪಿಸುವದಕ್ಕಾಗಿ ಶಾಸ್ತ್ರಿಗಳು ಆತನನ್ನು ಸೆರೆಹಿಡಿದ ಆ ರಾತ್ರಿಯಂದು, ತನ್ನನ್ನು ಕಾಪಾಡುವದಕ್ಕೆ ಬಂದ ಪೇತ್ರನಿಗೆ ಯೇಸು, "ನಾನು ನನ್ನ ತಂದೆಯನ್ನು ಬೇಡಿಕೊಳ್ಳಲಾರೆನೆಂದೂ ಬೇಡಿ –ಕೊಂಡರೆ ಆತನು ನನಗೆ ಈಗಲೇ ಹನ್ನೆರಡು ಗಣಗಳಿಗಿಂತ ಹೆಚ್ಚು ಮಂದಿ ದೇವದೂತರನ್ನು ಕಳುಹಿಸಿಕೊಡುವದಿಲ್ಲವೆಂದೂ ನೆನಸು –ತ್ತೀಯಾ? **ಕಳುಹಿಸಿ ಕೊಟ್ಟರೆ ನನಗೆ ಇಂಥಿಂಥದು ಆಗಬೇಕೆಂಬುವ ಶಾಸ್ತ್ರದ ಮಾತುಗಳು ನೆರವೇರುವದು ಹೇಗೆ ಎಂದು ಹೇಳಿದನು."** (ಮತ್ತಾಯ–26:53,54)

ತಾನು ಯಾಕೆ ಲೋಕಕ್ಕೆ ಬಂದಿದ್ದೇನೆಂಬುದನ್ನು ಯೇಸು ತಿಳಿದಿದ್ದನು. ಪ್ರವಾದಿಗಳು ಬಹಳ ಹಿಂದೆ ಪ್ರಕಟಪಡಿಸಿದ ಹಾಗೆಯೇ, ಯೇಸು ಪಾಪಿಗಳಿಗಾಗಿ ತನ್ನ ರಕ್ತವನ್ನು ಸುರಿಸಿ ತನ್ನ ಜೀವವನ್ನು ಕೊಡುವದಕ್ಕೆ ಬಂದನು. ಯೇಸು ಬಂದನು ಅದರಿಂದ ಅಬ್ರಹಾ – –ಮನ ಯಜ್ಞದ ಕುರಿ ಮತ್ತು ಎಲ್ಲಾ ಪ್ರಾಣಿಗಳ ಯಜ್ಞಗಳ ಚಿಹ್ನೆಯು ಆತನಲ್ಲಿ ನೆರವೇರಿದವು. ಯೇಸು ಶಿಲುಬೆಯ ಮೇಲೆ ತನ್ನ ಆತ್ಮವನ್ನು ದೇವರಿಗೆ ಒಪ್ಪಿಸಿಕೊಡುವದಕ್ಕಿಂತ ಮೊದಲು ಹೇಳಿದ ಮಾತು ನಿಮಗೆ ನೆನಪಿದೆಯಾ? ಹೌದು, ಯೇಸು ಗಟ್ಟಿಯಾದ ಧ್ವನಿಯಿಂದ **"ತೀರಿತು"** ಎಂದು ಕೂಗಿ ಪ್ರಾಣ ಬಿಟ್ಟನು. ಆತನು ಸತ್ತಾಗ, ದೇವಾಲಯದ ಪರಿಶುದ್ಧ ಸ್ಥಳದ ತೆರೆಯು ಮೇಲಿನಿಂದ ಕೆಳಕ್ಕೆ ಹರಿದುಹೋಯಿತು. (ಯೋಹಾನ–19:30; ಮಾರ್ಕ–15:37,38). ಯೇಸು ಯಾಕೆ "ತೀರಿತು" ಎಂದು ಕೂಗಿದನು? ಮತ್ತು ದೇವಾಲಯದ ತೆರೆಯು ಅಂದರೆ ಪಾಪವನ್ನು ಮುಚ್ಚುವದಕ್ಕೆ ಪ್ರಾಣಿಯ ಯಜ್ಞದ ರಕ್ತವನ್ನು ಚಿಮುಕಿಸುತ್ತಿದ್ದ ಮಹಾಪರಿಶುದ್ದ ಸ್ಥಳ – –ದಲ್ಲಿದ್ದ ತೆರೆಯು ಯಾಕೆ ಎರಡು ಭಾಗವಾಗಿ ಹರಿಯಿತು? ದೇವರು ಆ ತೆರೆಯನ್ನು ಎರಡು ಭಾಗವಾಗಿ ಹರಿದನು ಮತ್ತು ಯೇಸು **"ತೀರಿತು"** ಎಂದು ಕೂಗಿದನು, **ಯೇಸುವಿನ ರಕ್ತದಿಂದ ದೇವರು** ಆದಾಮನ ಸಂತತಿಯವರ ಪಾಪಗಳನ್ನು **ಕ್ಷಮಿಸಿ** ಅವರಿಗೆ ದೇವರ ಪರಿಶುದ್ಧವಾದ ಸನ್ನಿಧಿಯಲ್ಲಿ ಎಂದೆಂದಿಗೂ ವಾಸಿಸುವ ಹಕ್ಕನ್ನು ಕೊಟ್ಟನು ಎಂಬುದನ್ನು ಇದರಿಂದ ಪ್ರತಿಯೊಬ್ಬರೂ ತಿಳಿದುಕೊಳ್ಳಲು ಶಕ್ತವಾಯಿತು.

**ತನ್ನ ಮರಣದಿಂದ, ಕರ್ತನಾದ ಯೇಸು ಪ್ರವಾದಿಗಳ ಮಾತುಗಳನ್ನೂ ಮತ್ತು ಪ್ರಾಣಿಗಳ ಯಜ್ಞದ ಚಿಹ್ನೆಯನ್ನು ನೆರವೇರಿಸಿದನು.** ಮತ್ತು ನಾವು ನೋಡಿಕೊಂಡ ಹಾಗೆ, ಪಾಪಕ್ಕಾಗಿ ಎಂದೆಂದಿಗೂ ದಂಡತೆರುವದಕ್ಕೆ **ಪೂರ್ಣ ಕ್ರಯದ** ಹಾಗೆ ಆತನ ಯಜ್ಞವನ್ನು ದೇವರು ಒಪ್ಪಿಕೊಂಡದ್ದಕ್ಕೆ ಮೂರನೆಯ ದಿನದ ಆತನ ಪುನರುತ್ಥಾನವು ಸ್ಪಷ್ಟವಾದ ರುಜುವಾತಾಗಿದೆ. ಯೇಸು ಕ್ರಿಸ್ತನು, ದೇವರು ಲೋಕದ ಜನರಿಗೆ ಕೊಟ್ಟಂತಹ ಸಂಪೂರ್ಣವಾದ ಯಜ್ಞವಾಗಿದ್ದಾನೆ, ಆದದರಿಂದ ಆತನಲ್ಲಿ ನಂಬಿಕೆಯಿಡುವ ಯಾವನಾದರೂ ನಾಶವಾಗುವ – –ದಿಲ್ಲ ಆದರೆ ನಿತ್ಯಜೀವವನ್ನು ಪಡೆಯುತ್ತಾನೆ!

ಹಾಗಾದರೆ ಈಗ, ಪ್ರವಾದಿಗಳ ಸಂದೇಶದ ಪುನರಾವರ್ತನೆಯನ್ನು ನಾವು ಮುಗಿಸುವದಕ್ಕೆ ಮೊದಲು, ಪಾಪಗಳಿಗಾಗಿ ಕ್ರಯಕೊಡು – –ವದಕ್ಕೆ ಶಿಲುಬೆಯ ಮೇಲೆ ತನ್ನ ರಕ್ತವನ್ನು ಸುರಿಸಿ ಮೆಸ್ಸೀಯನಾದ ಯೇಸು ಒಂದು ಸಂಪೂರ್ಣವಾದ ಮತ್ತು ಕೊನೆಯ ಯಜ್ಞ – –ವನ್ನು ಕೊಟ್ಟಿರುವದಕ್ಕೆ ಸಂಬಂಧಿಸಿದಂತೆ ದೇವರ ವಾಕ್ಯದಿಂದ ಕೆಲವು ಅಗಾಧವಾದ ಮತ್ತು ಅದ್ಭುತವಾದ ವಚನಗಳನ್ನು ಕೇಳಿಸಿ – –ಕೊಳ್ಳುವದಕ್ಕೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ. ವಾಕ್ಯವು ಹೀಗೆ ಹೇಳುತ್ತದೆ:

"ಧರ್ಮಶಾಸ್ತ್ರದಲ್ಲಿ **ಮುಂದೆ ಬರಬೇಕಾಗಿದ್ದ ಮೇಲುಗಳ ಛಾಯೆಯೇ ಹೊರತು ಅವುಗಳ ನಿಜ ಸ್ವರೂಪವಲ್ಲವಾದದರಿಂದ** ಆ ಧರ್ಮ ಶಾಸ್ತ್ರವು ವರುಷ ವರುಷಕ್ಕೆ ಪದೇ ಪದೇ ಅರ್ಪಿತವಾಗುವ ಒಂದೇ ವಿಧವಾದ ಯಜ್ಞಗಳನ್ನು ಅರ್ಪಿಸಿ ದೇವರ ಸಮೀಪಕ್ಕೆ ಬರುವವ –ರನ್ನು ಎಂದಿಗೂ ಸಿದ್ಧಿಗೆ ತರಲಾರದು. ತಂದಿದ್ದ ಪಕ್ಷದಲ್ಲಿ ಆ ಯಜ್ಞ ಸಮರ್ಪಣೆಯು ನಿಂತುಹೋಗುತ್ತಿತ್ತಲ್ಲಾ. ಯಾಕಂದರೆ ದೇವಾ –ರಾಧನೆ ಮಾಡುವವರು ಒಂದೇ ಸಾರಿ ಶುದ್ಧೀಕರಿಸಲ್ಪಟ್ಟ ಮೇಲೆ ಅವರಿಗೆ ಪಾಪವುಂಟೆಂದು ಅವರ ಮನಸ್ಸು ಇನ್ನೂ ಸಾಕ್ಷಿ ಕೊಡು– –ವದು ಹೇಗೆ? ಆದರೆ ಯಜ್ಞಗಳಿಂದ ಪ್ರತಿವರುಷದಲ್ಲಿಯೂ ಪಾಪಗಳ ಜ್ಞಾಪಕವಾಗುವದುಂಟು; **ಹೋರಿಗಳ ಮತ್ತು ಹೋತಗಳ ರಕ್ತ –ದಿಂದ ಪಾಪಗಳು ಪರಿಹಾರವಾಗುವದು ಅಸಾಧ್ಯವಾಗಿದೆಯಲ್ಲಾ."** (ಇಬ್ರಿಯ–10:1-4)

"ಆದದರಿಂದ ಕ್ರಿಸ್ತನು ಭೂಲೋಕದೊಳಗೆ ಬರುವಾಗ, ದೇವರೇ ಯಜ್ಞ ನೈವೇದ್ಯಗಳು ನಿನಗೆ ಇಷ್ಟವಾಗಿರಲಿಲ್ಲ, ನನಗೆ ದೇಹವನ್ನು ಸಿದ್ಧ ಮಾಡಿಕೊಟ್ಟೆ; ಸರ್ವಾಂಗ ಹೋಮಗಳಲ್ಲಿಯೂ ದೋಷಪರಿಹಾರಕ ಯಜ್ಞಗಳಲ್ಲಿಯೂ ನೀನು ಸಂತೋಷಪಡಲಿಲ್ಲ; ಆಗ ನಾನು, ಇಗೋ, ದೇವರೇ ನಿನ್ನ ಚಿತ್ತವನ್ನು ನೆರವೇರಿಸುವದಕ್ಕೆ ಬಂದಿದ್ದೇನೆ. ಗ್ರಂಥದ ಸುರುಳಿಯಲ್ಲಿ ನನ್ನನ್ನು ಕುರಿತು ಬರೆದದೆ ಎಂದು ಹೇಳಿ –ದೆನು. . .ಆತನು ಎರಡನೆಯದನ್ನು ಸ್ಥಾಪಿಸುವದಕ್ಕಾಗಿ ಮೊದಲನೆಯದನ್ನು ತೆಗೆದುಬಿಡುತ್ತಾನೆ. **ಯೇಸು ಕ್ರಿಸ್ತನು ಒಂದೇ ಸಾರಿ ದೇಹ ಸಮರ್ಪಣೆಮಾಡಿ ದೇವರ ಚಿತ್ತವನ್ನು ನೆರವೇರಿಸಿದ್ದರಿಂದಲೇ ನಾವು ಶುದ್ಧರಾದೆವು.** ಇದಲ್ಲದೆ ಆ ಯಾಜಕರೆಲ್ಲರೂ ದಿನಾಲು ಸೇವೆ ಮಾಡುತ್ತಾ ಎಂದಿಗೂ ಪಾಪನಿವಾರಣೆ ಮಾಡಲಾರದಂಥ ಒಂದೇ ವಿಧವಾದ ಯಜ್ಞಗಳನ್ನು ಪದೇಪದೇ ಸಮರ್ಪಿಸುತ್ತ ನಿಂತುಕೊಂ– –ಡಿರುವರು. ಆದರೆ ಈ ಯಾಜಕನು ಪಾಪನಿವಾರಣೆಗೋಸ್ಕರ ನಿರಂತರವಾಗಿ ನಿಲ್ಲುವ ಒಂದೇ ಯಜ್ಞವನ್ನು ಸಮರ್ಪಿಸಿ ದೇವರ ಬಲ –ಗಡೆಯಲ್ಲಿ ಕೂತುಕೊಂಡನು. ಅಂದಿನಿಂದ ತನ್ನ ವಿರೋಧಿಗಳು ತನ್ನ ಪಾದಪೀಠವಾಗಿ ಹಾಕಲ್ಪಡುವ ತನಕ ಆತನು ಕಾದಿರುವನು. **ಪವಿತ್ರರಾಗುತ್ತಿರುವವರನ್ನು ಒಂದೇ ಸಮರ್ಪಣೆಯಿಂದ ನಿರಂತರವಾಗಿ ಸಿದ್ಧಿಗೆ ತಂದಿದ್ದಾನಷ್ಟೆ.** ಪವಿತ್ರಾತ್ಮನು ಸಹ ನಮಗೆ ಸಾಕ್ಷಿ ಕೊಡುವ –ವನಾಗಿ, ಆ ದಿನಗಳು ಬಂದ ಮೇಲೆ ನಾನು ಅವರ ಸಂಗಡ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು, ನನ್ನ ಆಜ್ಞೆಗಳನ್ನು ಅವರ ಹೃದಯದಲ್ಲಿ ಇಡುವೆನು, ಅವರ ಮನಸ್ಸಿನ ಮೇಲೆ ಅವುಗಳನ್ನು ಬರೆಯುವೆನು ಎಂದು ಕರ್ತನು ನುಡಿಯುತ್ತಾನೆ ಎಂಬದಾಗಿ

ಹೇಳಿದ ಮೇಲೆ ಇನ್ನು, ಅವರ ಪಾಪಗಳನ್ನೂ ದುಷ್ಕೃತ್ಯಗಳನ್ನೂ ನನ್ನ ನೆನಪಿಗೆ ಎಂದಿಗೂ ತರುವದಿಲ್ಲ ಎಂದು ಹೇಳುತ್ತಾನೆ. ಪಾಪ–ಗಳು ಪರಿಹಾರವಾದಲ್ಲಿ ಇನ್ನೂ ಅವುಗಳ ವಿಷಯದಲ್ಲಿ ಸಮರ್ಪಣೆ ಮಾಡುವದು ಅವಶ್ಯವಿಲ್ಲ. (10:5-18)

ಹೀಗಿರುವಲ್ಲಿ ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ **ಆತನ ರಕ್ತದ ಮೂಲಕ** ಆತನ ಶರೀ–ರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಠನಾದ ಯಾಜಕನು ನಮಗಿದ್ದಾನೆ. ಆದಕಾರಣ. . **ಪರಿಪೂರ್ಣವಾದ ನಂಬಿಕೆಯುಳ್ಳವರಾಗಿಯೂ ಯಥಾರ್ಥ ಹೃದಯವುಳ್ಳವರಾಗಿಯೂ** ದೇವರ ಬಳಿಗೆ ಬರೋಣ. ನಮ್ಮ ನಿರೀಕ್ಷೆಯನ್ನು ಕುರಿತು ನಾವು ಮಾಡಿದ ಪ್ರತಿಜ್ಞೆಯನ್ನು ನಿಶ್ಚಂಚಲವಾಗಿ ಪರಿಗ್ರಹಿಸೋಣ; ವಾಗ್ದಾನ ಮಾಡಿದಾತನು ನಂಬಿಗಸ್ತನು. ನಾವು ಪರಸ್ಪರ ಹಿತಚಿಂತಕರಾಗಿದ್ದು ಪ್ರೀತಿಸುತ್ತಿರಬೇಕೆಂತಲೂ ಸತ್ಕಾರ್ಯ ಮಾಡಬೇಕೆಂತಲೂ ಒಬ್ಬರನ್ನೊಬ್ಬರು ಪ್ರೇರೇಪಿಸೋಣ. ಯಾಕಂದರೆ ಸತ್ಯದ ಪರಿಜ್ಞಾನವನ್ನು ನಾವು ಹೊಂದಿದ ಮೇಲೆ ಬೇಕೆಂದು ಪಾಪಮಾಡಿದರೆ ಪಾಪಪರಿಹಾರಕ್ಕಾಗಿ ಇನ್ನಾವ ಯಜ್ಞವೂ ಇರುವದಿಲ್ಲ; ಅತ್ಯಂತ ಭಯದಿಂದ ಎದುರು ನೋಡತಕ್ಕ ನ್ಯಾಯತೀರ್ಪೂ ದೇವರ ವಿರೋಧಿಗಳನ್ನು ದಹಿಸುವ ತೀಕ್ಷ್ಣವಾದ ಅಗ್ನಿಯೂ ಇವೇ ನಮ್ಮ ಮುಂದೆ ಇರುವವು. ಮೋಶೆಯ ವಿಧಿಗಳನ್ನು ಅಸಡ್ಡೆ ಮಾಡಿದವನಿಗೆ ಇಬ್ಬರು ಇಲ್ಲವೆ ಮೂವರು ಸಾಕ್ಷಿಗಳ ಮಾತಿನ ಮೇಲೆ ಕನಿಕರವಿಲ್ಲದೆ ಮರಣದಂಡನೆ ಆಗುತ್ತದಷ್ಟೆ. **ಯಾವನು ದೇವ ಕುಮಾರನನ್ನು ತುಳಿದು ಒಡಂಬಡಿಕೆಯನ್ನು ಸ್ಥಿರಪಡಿಸಿದಂಥ ತನ್ನನ್ನು ಪವಿತ್ರ ಮಾಡಿದಂಥ ರಕ್ತವನ್ನು ಅಶುದ್ಧವೆಂದೆಣಿಸಿ ದೇವರ ಕೃಪಾವರ–ವಾಗಿರುವ ಆತ್ಮನನ್ನು ತಿರಸ್ಕಾರ ಮಾಡಿದ್ದಾನೋ ಅವನು ಇನ್ನೂ ಎಷ್ಟೋ ಕ್ರೂರವಾದ ದಂಡನೆಗೆ ಪಾತ್ರನಾಗಬೇಕೆಂಬುದನ್ನು ಯೋಚಿಸಿರಿ.** ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ ನಾನೇ ಪ್ರತಿಫಲವನ್ನು ಕೊಡುವೆನೆಂದು ಹೇಳಿದಾತನನ್ನು ಬಲ್ಲೆವು; ಇದಲ್ಲದೆ **"**ಕರ್ತನು ತನ್ನ ಜನರ ನ್ಯಾಯವನ್ನು ವಿಚಾರಿಸುವನೆಂತಲೂ**"** ಹೇಳಿಯದೆ. ಜೀವಸ್ವರೂಪನಾದ ದೇವರ ಕೈಯಲ್ಲಿ ಸಿಕ್ಕಿ ಬೀಳುವದು ಭಯಂಕರ–ವಾದದ್ದು. (10:19-31)

**"ಇದನ್ನು ಕೇಳಿಸಿಕೊಂಡಿರುವ ನಾವು, ನಮ್ಮ ಮುಂದಿಟ್ಟಿರುವ ಈ ಅತ್ಯಂತ ವಿಶೇಷ ರಕ್ಷಣೆಯನ್ನು ನಾವು ಅಲಕ್ಷ್ಯ ಮಾಡಿದರೆ ತಪ್ಪಿಸಿಕೊಳ್ಳು–ವದು ಹೇಗೆ?"** (ಇಬ್ರಿಯ–2:3)

ಈ ಮಾತುಗಳೊಂದಿಗೆ, ಮೆಸ್ಸೀಯನಾದ ಯೇಸುವಿನ ರಕ್ತದಲ್ಲಿ ಕಂಡುಕೊಂಡಿರುವ ರಕ್ಷಣೆಯ ಒಂದೇ ಮಾರ್ಗವನ್ನು ಅಲಕ್ಷ್ಯ ಮಾಡ–ಬಾರದೆಂದು ಈದಿನ ದೇವರು ನಿಮ್ಮಲ್ಲಿ ಪ್ರತಿಯೊಬ್ಬರಿಗೂ ಎಚ್ಚರಿಸುತ್ತಿದ್ದಾನೆ. **ದೇವರು ಸ್ವತ: ಕೊಟ್ಟಿರುವಂತಹ ಯಜ್ಞವನ್ನು ಕಡೆಗಣಿ – –ಸುವ ಯಾವನಾದರೂ, ಪಾಪಗಳಿಗಾಗಿ ಇನ್ನಾವ ಯಜ್ಞವೂ ಇಲ್ಲ ಎಂಬುದನ್ನು ತಿಳಿದುಕೊಳ್ಳುವದು ಅಗತ್ಯ;** ಕನಿಕರವಿಲ್ಲದಂತ ದೇವರ ನ್ಯಾಯತೀರ್ಪಿನ ಹೊರತಾಗಿ ಬೇರೇನೂ ಉಳಿದಿರುವದಿಲ್ಲ! ಯೇಸು ಕ್ರಿಸ್ತನು, ದೇವರು ಸ್ವತ: ಕೊಟ್ಟಿರುವ ಒಂದು ಸಂಪೂರ್ಣವಾದ ಯಜ್ಞವಾಗಿದ್ದಾನೆ, ಆದದರಿಂದ **ಆತನನ್ನು ನಂಬುವ ಯಾವನಾದರೂ** ನಾಶವಾಗುವದಿಲ್ಲ ಆದರೆ ನಿತ್ಯಜೀವವನ್ನು ಹೊಂದುತ್ತಾನೆ. ಶಿಲುಬೆಯ ಮೇಲೆಯೇಸು **"**ತೀರಿತು**"** ಎಂದು ಹೇಳಿದನು, ಯೇಸು ದೇವರ ವಾಕ್ಯವಾಗಿರುವ ನಿಮಿತ್ತದಿಂದ, **"**ತೀರಿತು**"** ಎಂದು ಯೇಸು ಹೇಳಿದಾಗ, **"ತೀರಿತು"** ಎಂದು ದೇವರು ಸ್ವತ: ಹೇಳುತ್ತಿದ್ದಾನೆ. ಮೂರು ದಿವಸಗಳ ತರುವಾಯ ದೇವರು ಯೇಸುವನ್ನು ಜೀವದಿಂದ ಎಬ್ಬಿಸಿದನು, ಮತ್ತು ಪಾಪಕ್ಕಾಗಿ ಯೇಸುವಿನ ಯಜ್ಞದೊಂದಿಗೆ ತಾನು ಪೂರ್ತಿಯಾಗಿ ತೃಪ್ತಿಗೊಂಡಿದ್ದೇನೆಂಬುದನ್ನು ಲೋಕಕ್ಕೆ ಸಾಬೀತುಪಡಿಸಿದನು.

ಸ್ನೇಹಿತನೇ, ಯೇಸು ನಿನ್ನ ಪಾಪಗಳಿಗಾಗಿ ದಂಡ ತೆತ್ತಿದ್ದನೆಂಬುದನ್ನು ನೀನು ಗ್ರಹಿಸಿದ್ದೀಯಾ? ಯೇಸು ಕ್ರಿಸ್ತನು ನಿನಗಾಗಿ ರಕ್ಷಣೆಯ ಕಾರ್ಯವನ್ನು ಮುಗಿಸಿದ್ದಾನೆಂಬುದನ್ನು ನೀನು ನಂಬುತ್ತೀಯಾ? ಅಥವಾ ನೀನು ನಿನ್ನ ಸ್ವಂತ ಕೆಲಸಗಳಿಂದ ನಿನ್ನನ್ನು ರಕ್ಷಿಸಿಕೊಳ್ಳುವ–ದಕ್ಕೆ ಇನ್ನೂ ಪ್ರಯತ್ನಿಸುತ್ತಿದ್ದೀಯಾ?

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. . . .

ಮುಂದಿನ ಸಲದವರೆಗೆ, ದೇವರು ನಿಮ್ಮನ್ನು ಆಶೀರ್ವದಿಸಿ ಶಿಲುಬೆಯ ಮೇಲಿಂದ ಮೆಸ್ಸೀಯನ ವಿಜಯದ ಘೋಷಣೆಯ ಆಳವಾದ ಅರ್ಥವನ್ನು ನೀವು ಆಲೋಚಿಸುವಂತೆ ನಡಿಸಲಿ. ಆ ಘೋಷಣೆ ಏನೆಂದರೆ:

**"ತೀರಿತು!"** (ಯೋಹಾನ–19:30).

[ಪಾಠ 96: ಪುನರಾವರ್ತನೆ #4] [ಸಾರಾಂಶಗಳ ಪಟ್ಟಿ] [ಪಾಠ 98: ಪರದೈಸು]

ಪಾಠ 97

# ನರಕ!

ಲೂಕ 16

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಪರಿಶುದ್ಧ ಗ್ರಂಥವು ಹೀಗೆ ಹೇಳುತ್ತದೆ:

**"**ಹೇಡಿಗಳು, ನಂಬಿಕೆಯಿಲ್ಲದ್ವರು, ಅಸಹ್ಯವಾದದ್ದರಲ್ಲಿ ಸೇರಿದವರು. . . . .ಎಲ್ಲಾ ಸುಳ್ಳುಗಾರರು ಇವರಿಗೆ ಸಿಕ್ಕುವ ಪಾಲು **ಬೆಂಕಿ ಗಂಧಕಗಳುರಿಯುವ ಕೆರೆಯೇ."** (ಪ್ರಕ–21:8). **"**ಆ ರಾಜ್ಯದ ಬಾಧ್ಯಸ್ಥರು ಹೊರಗೆ ಕತ್ತಲೆಗೆ ಹಾಕಲ್ಪಡುವರು. . . ಅಲ್ಲಿ ಗೋಳಾಟವೂ ಕಟಕಟನೆ ಹಲ್ಲು ಕಡಿಯೋಣವೂ ಇರುವವು. . . . ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ ನಿತ್ಯ ಬೆಂಕಿಯೊಳಕ್ಕೆ ಹೋಗಿರಿ.. . .ಇವರು ನಿತ್ಯಶಿಕ್ಷೆಗೂ ನೀತಿವಂತರು ನಿತ್ಯಜೀವಕ್ಕೂ ಹೋಗುವರು.**"** (ಮತ್ತಾಯ–8:12; 25:41,46)

**ನರಕ!!** ಇದರ ಕುರಿತು ಮಾತಾಡುವದಕ್ಕೆ ಯಾರೊಬ್ಬರೂ ಇಷ್ಟಪಡುವದಿಲ್ಲ! ಇದರ ಕುರಿತು ಆಲೋಚಿಸುವದಕ್ಕೆ ನಮಗೂ ಸಹ ಇಷ್ಟ –ವಿಲ್ಲ! ಆದಾಗ್ಯೂ, ಈ ದಿನ ನರಕ ಎಂಬ ವಿಷಯವನ್ನು ಅಧ್ಯಯನ ಮಾಡುವದಕ್ಕೆ ನಾವು ಏರ್ಪಾಟು ಮಾಡಿಕೊಂಡಿದ್ದೇವೆ, ಯಾಕ –ಂದರೆ ಇದರ ಕುರಿತು ದೇವರು ಹೆಚ್ಚಾಗಿ ಹೇಳಿದ್ದಾನೆ. ಪರಿಶುದ್ಧ ವಾಕ್ಯಗಳಲ್ಲಿ, ದೇವರು ನೂರಾರು ಎಚ್ಚರಿಕೆಗಳನ್ನು ಕೊಟ್ಟಿದ್ದಾನೆ, ಅದರಿಂದ ಜನರು ಅಲ್ಲಿಗೆ ಹೋಗುವದಕ್ಕೆ ಸಾಧ್ಯವಾಗುವದಿಲ್ಲ. ಈ ದಿನದ ಮತ್ತು ಮುಂದಿನ ಪಾಠಗಳಲ್ಲಿ, ಪರಲೋಕ (ಪರದೈಸು) ಮತ್ತು ನರಕದ ಕುರಿತಾಗಿ ವಾಕ್ಯಗಳು ಏನು ಬೋಧಿಸುತ್ತವೆಯೋ ಅದನ್ನು ಮತ್ತು ನಾವು ಪರಲೋಕಕ್ಕೆ ಹೋಗುತ್ತೇವೆ ಮತ್ತು ನರಕಕಕ್ಕೆ ಕಳಿಸಲ್ಪಡುವದಿಲ್ಲ ಎನ್ನುವ ನಿಶ್ಚಿತತೆಯು ನಮಗೆ ಹೇಗೆ ಸಾಧ್ಯ ಎಂಬುದನ್ನು ಕಲಿತುಕೊಳ್ಳುವದಕ್ಕೆ ನಾವು ಯೋಜನೆ ಮಾಡಿಕೊಂಡಿ – –ದ್ದೇವೆ. ಇಲ್ಲಿಂದ ಮುಂದೆ ಏನು ಸಂಭವಿಸುತ್ತದೆ ಅಥವಾ ಅವರು ನಿತ್ಯತ್ವವನ್ನು ಎಲ್ಲಿ ಕಳೆಯುತ್ತಾರೆ ಎನ್ನುವದು ಯಾರೊಬ್ಬರಿಗೂ ತಿಳಿದಿಲ್ಲ ಎಂಬುದಾಗಿ ಅನೇಕ ಜನರು ಅಂದುಕೊಳ್ಳುತ್ತಾರೆ. ಅವರು ಹಾಗೆ ಅಂದುಕೊಳ್ಳುವದು ಯಾಕಂದರೆ ದೇವರು ಸ್ಥಾಪಿಸಿರುವ ರಕ್ಷಣೆಯನ್ನೂ ಇಲ್ಲವೆ ಒಂದು ಸಂದೇಹವಿಲ್ಲದ ಭರವಸೆಯನ್ನು ಕೊಡುವಂತಹ ದೇವರ ಅದ್ಭುತವಾದ ವಾಗ್ದಾನಗಳನ್ನು ಅವರು ತಿಳಿದುಕೊಂಡಿಲ್ಲ. ನಾವು ಪರಲೋಕಕ್ಕೆ ಹೋಗುತ್ತೇವೆ ಎನ್ನುವದು ಖಂಡಿತ ಎಂದು ನಾವು ಹೇಗೆ ತಿಳಿದುಕೊಳ್ಳಬಹುದೆಂದು ದೇವರ ವಾಕ್ಯ ನಮಗೆ ಹೇಳುತ್ತದೋ? ಖಂಡಿತವಾಗಿಯೂ! ದೇವರ ವಾಕ್ಯ ಹೀಗೆ ಹೇಳುತ್ತದೆ: **"**ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟವ –ರಾದ **ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ** ಈ ಮಾತುಗಳನ್ನು ಬರೆದಿದ್ದೇನೆ.**"** (1ಯೋಹಾನ–5:13)

ಕೇಳಿಸಿಕೊಳ್ಳುತ್ತಿರುವ ಸ್ನೇಹಿತ, ದೇವರ ವಾಕ್ಯವು ಘೋಷಿಸಿರುವ ನಿತ್ಯಜೀವವನ್ನು ನೀನು ಹೊಂದಿದ್ದೀ ಎಂಬುದು ನಿನಗೆ ಗೊತ್ತಾ? ನೀನು ಸತ್ತು ಹೋಗುವ ದಿನದಂದು, ನಿನ್ನ ಆತ್ಮ ಎಲ್ಲಿಗೆ ಹೋಗುತ್ತದೆಂದು ನಿನಗೆ ಗೊತ್ತಾ? ನೀನು ಪರಲೋಕವನ್ನು ಪ್ರವೇಶಿಸುತ್ತೀ ಮತ್ತು ನರಕಕ್ಕೆ ಕಳಿಸಲ್ಪಡುವದಿಲ್ಲ ಎನ್ನುವದು ನಿನಗೆ ನಿಶ್ಚಿತವಿದೆಯಾ? ಒಂದುವೇಳೆ ನಿನಗೆ ಆ ಭರವಸೆಯಿಲ್ಲದಿದ್ದರೆ, ಈ ದಿನದ ನಮ್ಮ ಪಾಠವು ನಿನಗೆ ಒಂದು ದೊಡ್ಡ ಆಸಕ್ತಿಯುಳ್ಳದ್ದಾಗಿರುತ್ತದೆ.

ನಾವು ಸುವಾರ್ತೆಯಲ್ಲಿ ನೋಡಿದ ಹಾಗೆ, ರಕ್ಷಕನಾದ ಯೇಸು ಭೂಲೋಕದಲ್ಲಿದ್ದಾಗ, ಆತನು ಆಗಾಗ್ಗೆ **ಪರಲೋಕ** ಎಂದು ಕರೆಯಲ್ಪ –ಡುವ ಸ್ಥಳ ಮತ್ತು **ನರಕ** ಎಂದು ಕರೆಯಲ್ಪಡುವ ಸ್ಥಳದ ಕುರಿತು ಜನರಿಗೆ ಬೋಧಿಸುತ್ತಿದ್ದನು. ಹೀಗಿದ್ದರೂ ಯೇಸು ಪರಲೋಕ – –ಕ್ಕಿಂತಲೂ ನರಕದ ಕುರಿತಾಗಿಯೇ ಹೆಚ್ಚು ಬೋಧಿಸಿದನು, ಯಾಕಂದರೆ ನರಕದ ಭಯಂಕರವಾದ ಶಿಕ್ಷೆಯ ಕುರಿತು ಆತನಿಗೆ ಗೊತ್ತಿತ್ತು ಮತ್ತು ಯಾರೊಬ್ಬರೂ ಅಲ್ಲಿಗೆ ಹೋಗುವದನ್ನು ಆತನು ಇಷ್ಟಪಡುತ್ತಿರಲಿಲ್ಲ. ಹಾಗಾದರೆ ಈಗ, ಸುವಾರ್ತೆಗೆ ನಾವು ಹಿಂತಿರು –ಗೋಣ, ಮತ್ತು ನರಕದ ಕುರಿತಾಗಿ ಯೇಸು ಜನರ ಗುಂಪಿಗೆ ಹೇಗೆ ಬೋಧಿಸಿದನೆಂಬುದನ್ನು ಕೇಳಿಸಿಕೊಳ್ಳೋಣ. ಸತ್ತುಹೋದ ಇಬ್ಬರು ವ್ಯಕ್ತಿಗಳ ಕುರಿತಾದ **ಈ ನಿಜವಾದ ಕತೆಯನ್ನು ಕೇಳಿರಿ**. ಲೂಕನ ಸುವಾರ್ತೆಯ ಹದಿನಾರನೆಯ ಅಧ್ಯಾಯದಲ್ಲಿ ಯೇಸು ಜನ –ರಿಗೆ ಮಾತಾಡುತ್ತಾ ಹೀಗೆ ಹೇಳುತ್ತಿದ್ದಾನೆ:

**"ಐಶ್ವರ್ಯವಂತನಾದ** ಒಬ್ಬ ಮನುಷ್ಯನಿದ್ದನು. ಅವನು ಸಕಲಾತಿ ನಯವಾದ ನಾರುಮಡಿ ಮುಂತಾದ ವಸ್ತ್ರಗಳನ್ನು ಧರಿಸಿಕೊಂಡು ಪ್ರತಿದಿನವೂ ವೈಭವದೊಡನೆ ಸುಖಸಂತೋಷಪಡುತ್ತಿದ್ದನು. ಅವನ ಮನೇ ಬಾಗಿಲಲ್ಲಿ **ಲಾಜನರನೆಂಬ ಒಬ್ಬ ಭಿಕ್ಷಗಾರನು** ಬಿದ್ದು ಕೊಂಡಿದ್ದನು. ಇವನು ಮೈತುಂಬಾ ಹುಣ್ಣೆದ್ದವನು; ಐಶ್ವರ್ಯವಂತನ ಮೇಜಿನಿಂದ ಬಿದ್ದ ಎಂಜಲನ್ನು ತಿಂದು ಹಸಿವು ತೀರಿಸಿಕೊಳ್ಳ

–ಬೇಕೆಂದಿದ್ದನು; ಇಷ್ಟು ಮಾತ್ರವಲ್ಲದೆ ನಾಯಿಗಳು ಸಹ ಬಂದು ಅವನ ಹುಣ್ಣುಗಳನ್ನು ನೆಕ್ಕುವವು." (ಲೂಕ–16:19-21)

"ಹೀಗಿರುವಲ್ಲಿ ಸ್ವಲ್ಪ ಕಾಲದ ಮೇಲೆ ಆ ಭಿಕ್ಷಗಾರನು ಸತ್ತನು; ದೇವದೂತರು ಅವನನ್ನು ತೆಗೆದುಕೊಂಡು ಹೋಗಿ ಅಬ್ರಹಾಮನ ಎದೆಗೆ ಒರಗಿಸಿದರು. ಆ ಐಶ್ವರ್ಯವಂತನು ಸಹ ಸತ್ತನು; ಅವನಿಗೆ ಉತ್ತರಕ್ರಿಯೆಗಳು ಆದವು. ಅವನು ಪಾತಾಳದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಇವನ ಎದೆಗೆ ಒರಗಿಕೊಂಡಿದ್ದ ಲಾಜರನನ್ನೂ ನೋಡಿದನು," (16:22,23)

ಇಲ್ಲಿಗೆ ನಿಲ್ಲಿಸೋಣ. ಐಶ್ವರ್ಯವಂತನಿಗೂ ಮತ್ತು ಭಿಕ್ಷಗಾರನಾದ ಲಾಜರನಿಗೂ ಏನಾಯಿತೆಂಬುದು ನಿಮಗೆ ಅರ್ಥವಾಯಿತಾ? ಭಿಕ್ಷ–ಗಾರನು ಸತ್ತ ನಂತರ ಎಲ್ಲಿಗೆ ಹೋದನು? ತಕ್ಷಣವೇ ಅವನ ಆತ್ಮವು, ಬಹಳ ಹಿಂದೆಯೇ ದೇವರ ಪ್ರವಾದಿಯಾದ ಅಬ್ರಹಾಮನು ಇದ್ದಂತಹ ದೇವರ ಸನ್ನಿಧಿಯಲ್ಲಿ **ಪರಲೋಕದಲ್ಲಿತ್ತು.** ಮತ್ತು ಐಶ್ವರ್ಯವಂತನು, ಅವನು ಎಲ್ಲಿಗೆ ಹೋದನು? ತಕ್ಷಣವೇ ಅವನ ಆತ್ಮವು, ಅವನು ಯಾತನೆಪಡುತ್ತಿದ್ದ **ನರಕದಲ್ಲಿತ್ತು.**

ಭಿಕ್ಷುಗಾರನಾಗಿದ್ದ ಲಾಜರನು ಯಾಕೆ ಪರಲೋಕಕ್ಕೆ ಹೋದನು ಮತ್ತು ಐಶ್ವರ್ಯವಂತ ಮನುಷ್ಯನು ಯಾಕೆ ನರಕಕ್ಕೆ ಹೋದನು? ಮೊದಲನೆಯದಾಗಿ, ತಿಳಿದುಕೊಳ್ಳಬೇಕಾದದ್ದೇನೆಂದರೆ, ಬಡವರಾಗಿದ್ದರೆ ನೀವು ರಕ್ಷಿಸಲ್ಪಡುತ್ತೀರಿ ಮತ್ತು ದೊಡ್ಡದಾದ ಸಂಪತ್ತುಗಳನ್ನು ಹೊಂದಿದ್ದರೆ ನೀವು ನಾಶವಾಗುತ್ತೀರಿ ಎಂದು ಅರ್ಥವಲ್ಲ! **ಬಡ ಮನುಷ್ಯನಾದ ಲಾಜರನು, ಪ್ರವಾದಿಗಳ ಬರಹಗಳಲ್ಲಿ ದೇವರು ಪ್ರಕ – –ಟಿಸಿದ್ದ ರಕ್ಷಣೆಯ ಮಾರ್ಗಕ್ಕೆ ಗಮನ ಕೊಟ್ಟನು** ಆದದರಿಂದ ಅವನು ಪರಲೋಕಕ್ಕೆ ಹೋದನು. ಹಾಗೆಯೇ **ಐಶ್ವರ್ಯವಂತ ಮನು – ಷ್ಯನು ದೇವರ ವಾಕ್ಯವನ್ನು ಅಲಕ್ಷಿಸಿದನು.** ಈ ದಿನದಲ್ಲಿ ಹೊರತೋರಿಕೆಯ ಅನೇಕ ಧಾರ್ಮಿಕ ವ್ಯಕ್ತಿಗಳ ಹಾಗೆ ಆ ಐಶ್ವರ್ಯವಂತ –ನಿದ್ದನು. ದೇವರು ಒಬ್ಬನೇ ಮತ್ತು ಪ್ರವಾದಿಗಳ ಬರಣಿಗೆಗಳು ಅಸ್ತಿತ್ವದಲ್ಲಿವೆ ಎಂಬುದು ಅವರಿಗೆ ಗೊತ್ತು, ಆದರೆ ಅವರು ನರಕದ ದಾರಿಯಲ್ಲಿರುತ್ತಾರೆ, ಯಾಕಂದರೆ ವಾಕ್ಯಗಳಲ್ಲಿ ದೇವರ ಪ್ರವಾದಿಗಳೆಲ್ಲರೂ ಸಾಕ್ಷಿ ಕೊಟ್ಟಿರುವಂತಹ ರಕ್ಷಣೆಯ ಮಾರ್ಗವನ್ನು ಅವರು ಎಂದಿಗೂ ನಂಬಿರುವದಿಲ್ಲ. ತಮ್ಮ ಆತ್ಮಗಳನ್ನು ರಕ್ಷಿಸುವಂತಹ ಸತ್ಯದ ವಾಕ್ಯಕ್ಕೆ ಕಿವಿಗೊಡುವದಕ್ಕಿಂತಲೂ, ನಮ್ಮ ಕತೆಯಲ್ಲಿನ ಐಶ್ವರ್ಯವಂತ ಮನುಷ್ಯನ ಹಾಗೆ, ಒಳ್ಳೆಯ ಸಮಯವನ್ನು ಮತ್ತು ಐಶ್ವರ್ಯವನ್ನು ಹೊಂದುವದೇ ಅವರಿಗೆ ಹೆಚ್ಚು ಪ್ರಾಮುಖ್ಯವಾದು –ದಾಗಿರುತ್ತದೆ.

ಈಗ ಕತೆಯನ್ನು ಮುಂದುವರಿಸೋಣ ಮತ್ತು ಪರದೈಸಿನಲ್ಲಿದ್ದ ಪ್ರವಾದಿಯಾದ ಅಬ್ರಹಾಮನೊಂದಿಗೆ ಸಂಕ್ಷಿಪ್ತವಾಗಿ ಸಂಭಾಷಿಸುವದಕ್ಕೆ ನರಕದಲ್ಲಿರುವ ಐಶ್ವರ್ಯವಂತ ಮನುಷ್ಯನಿಗೆ ದೇವರು ಹೇಗೆ ಅನುಮತಿಸಿದನೆಂಬುದನ್ನು ಕೇಳಿಸಿಕೊಳ್ಳೋಣ. ಕರ್ತನಾದ ಯೇಸು ಕತೆಯನ್ನು ಮುಂದುವರಿಸುತ್ತಾ ಹೀಗೆ ಹೇಳಿದನು,

"ಅವನು ಪಾತಾಳದೊಳಗೆ ಯಾತನೆಪಡುತ್ತಾ ಇರುವಲ್ಲಿ ಕಣ್ಣೆತ್ತಿ ದೂರದಿಂದ ಅಬ್ರಹಾಮನನ್ನೂ ಅವನ ಎದಗೆ ಒರಗಿಕೊಂಡಿದ್ದ ಲಾಜರನನ್ನು ನೋಡಿ, ತಂದೆಯೇ, ಅಬ್ರಹಾಮನೇ, ನನ್ನ ಮೇಲೆ ದಯವಿಟ್ಟು ಲಾಜರನನ್ನು ಕಳುಹಿಸು; ಅವನು ತನ್ನ ತುದಿಬೆರಳನ್ನು ನೀರಿನಲ್ಲಿ ಅದ್ದಿ ನನ್ನ ನಾಲಿಗೆಯನ್ನು ತಣ್ಣಗೆ ಮಾಡಲಿ; ಈ ಉರಿಯಲ್ಲಿ ಸಂಕಟಪಡುತ್ತೇನೆ" ಎಂದು ಕೂಗಿ ಹೇಳಿದನು.(16:23,24)

ಆದರೆ ಅಬ್ರಹಾಮನು, ಕಂದಾ ನೀನು ಆಶಿಸಿದ ಸುಖವನ್ನು ನಿನ್ನ ಜೀವಮಾನದಲ್ಲಿ ಹೊಂದಿದಿ; ಹಾಗೆಯೇ ಲಾಜರನು ಕಷ್ಟವನ್ನು ಹೊಂದಿದನು ಎಂಬದನ್ನು ನೆನಪಿಗೆ ತಂದುಕೋ. ಈಗಲಾದರೋ ಇಲ್ಲಿ ಇವನಿಗೆ ಸಮಾಧಾನ, ಆದರೆ ನಿನಗೆ ಸಂಕಟ. ಇದು ಮಾತ್ರ –ವಲ್ಲದೆ ನಮಗೂ ನಿಮಗೂ ನಡುವೆ ದೊಡ್ಡದೊಂದು ಡೊಂಗರ ಸ್ಥಾಪಿಸಿಯದೆ; ಆದಕಾರಣ ಈ ಕಡೆಯಿಂದ ನಿಮ್ಮ ಬಳಿಗೆ ಹೋಗ ಬೇಕೆಂದಿರುವವರು ಹೋಗಲಾರರು; ಮತ್ತು ಆ ಕಡೆಯಿಂದ ನಮ್ಮ ಬಳಿಗೆ ಯಾರೂ ದಾಟುವದಕ್ಕಾಗದು" ಅಂದನು. (25,26)

"ಆಗ ಅವನು, ಅಪ್ಪಾ, ಹಾಗಾದರೆ ಲಾಜರನನ್ನು ನನ್ನ ತಂದೆಯ ಮನೆಗೆ ಕಳುಹಿಸಬೇಕೆಂದು ನಿನ್ನನ್ನು ಬೇಡಿಕೊಳ್ಳುತ್ತೇನೆ. ನನಗೆ ಐದು ಜನ ಅಣ್ಣತಮ್ಮಂದಿರಿದ್ದಾರೆ; ಅವರು ಸಹ ಈ ಸ್ಥಳಕ್ಕೆ ಬಂದಾರು; ಬಾರದಂತೆ ಅವನು ತಾನು ಕಂಡದ್ದನ್ನು ಅವರಿಗೆ ಚೆನ್ನಾಗಿ ಹೇಳಲಿ ಅಂದನು." (27,28)

**"ಆದರೆ ಅಬ್ರಹಾಮನು, ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ ಅಂದನು."** (29)

"ಅವನು ತಂದೆಯೇ ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿ –ಕೊಳ್ಳುವರು ಅಂದನು." (30)

"ಅಬ್ರಹಾಮನು ಅವನಿಗೆ, **ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ** ಎಂದು ಹೇಳಿದನು." (31)

ಇಲ್ಲಿಗೆ ಐಶ್ವರ್ಯವಂತ ಮತ್ತು ಲಾಜರನ ಕತೆಯು ಮುಗಿಯುತ್ತದೆ. ನಿಜವಾಗಿಯೂ, ನರಕ ಎಂದು ಕರೆಯಲ್ಪಡುವ ಸ್ಥಳವು ಒಂದು ಭಯಂಕರವಾದ ಸ್ಥಳವಾಗಿದ್ದು, ಅಲ್ಲಿ ಕನಿಕರವಿಲ್ಲ. ನರಕದಲ್ಲಿ ಐಶ್ವರ್ಯವಂತನು ಯಾತನೆಯಲ್ಲಿದ್ದನು ಮತ್ತು ಯಾರೂ ಅವನಿಗೆ ಒಂದು ಹನಿ ನೀರನ್ನು ಕೊಟ್ಟು ಅವನ ಸಂಕಟವನ್ನು ಬಿಡಿಸುವದಕ್ಕೆ ಸಾಧ್ಯವಿರಲಿಲ್ಲ! ಇದಕ್ಕಿಂತಲೂ ಘೋರವಾದುದೇನೆಂದರೆ, ಇದೇ

ಐಶ್ವರ್ಯವಂತನು ಈ ದಿನ ಇನ್ನೂ ಅಲ್ಲಿದ್ದಾನೆ! ಅವನ ಶರೀರ ಮತ್ತು ಆತ್ಮ ಎರಡೂ **ಬೆಂಕಿಯ ಕೆರೆ** ಎಂದು ಕರೆಯಲ್ಪಡುವ ಜಾಗ –ದೊಳಕ್ಕೆ ಎಸೆಯಲ್ಪಟ್ಟಾಗ, ಅವನು ನರಕದಲ್ಲಿದ್ದು ನ್ಯಾಯತೀರ್ಪಿನ ದಿನಕ್ಕಾಗಿ ಕಾಯುತ್ತಿದ್ದಾನೆ. ಮೆಸ್ಸೀಯನಾದ ಯೇಸುವಿನ ಶುಭ ಸಂದೇಶವಾಗಿರುವ **ಪ್ರವಾದಿಗಳ ಸಂದೇಶಕ್ಕೆ ವಿಧೇಯರಾಗುವದನ್ನು ತಿರಸ್ಕರಿಸುವ ಪ್ರತಿಯೊಬ್ಬರೊಂದಿಗೆ** ಅವನು ಎಂದೆಂದಿಗೂ ಅಲ್ಲಿರು– –ತ್ತಾನೆ. ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ: **"**ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.. . .ಬೆಂಕಿಯಿಂದಲೂ ಗಂಧಕದಿಂದಲೂ ಯಾತನೆಪಡುವರು. ಅಂಥವರ ಯಾತನೆಯ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರುತ್ತಾ ಹೋಗುತ್ತದೆ. ಅಲ್ಲಿ ಹಗಲಿರುಳು ಉಪಶಮನವಿರುವದಿಲ್ಲ!" (ಪ್ರಕ–20:15; 14:10,11). ಇದರ ಕುರಿತು ಆಲೋಚಿಸಿರಿ! ದೇವರು ಸ್ಥಾಪಿಸಿರುವ ರಕ್ಷಣೆಯ ನೀತಿಯ ಮಾರ್ಗವನ್ನು ಅಲಕ್ಷ್ಯ ಮಾಡುವ ಪ್ರತಿಯೊಬ್ಬನೂ ನರ –ಕಕ್ಕೆ ಹೋಗುತ್ತಾನೆ, ಅಸ್ತಿತ್ವದಲ್ಲಿರುವದಕ್ಕೆ ವಿರಮಿಸುವದು **ಎಂದಿಗೂ ಇಲ್ಲ,** ಹೊರಬರುವದು **ಎಂದಿಗೂ ಇಲ್ಲ** ಮತ್ತು ಆ ಬೆಂಕಿಯು **ಎಂದಿಗೂ** ಆರಿಹೋಗುವದಿಲ್ಲ! **ಎಂದಿಗೂ ಇಲ್ಲ! ಎಂದಿಗೂ ಇಲ್ಲ! ಎಂದಿಗೂ ಇಲ್ಲ!**

ಪಾಪಿಗಳು ನರಕದಲ್ಲಿ ಸ್ವಲ್ಪ ಕಾಲ ಸಂಕಟಪಟ್ಟ ನಂತರ ಅವರು ಅಲ್ಲಿಂದ ಹೊರ ಬಂದು ಪರಲೋಕಕ್ಕೆ ಹೋಗುತ್ತಾರೆ ಎಂದು ಕೆಲ – –ವರು ಅಂದುಕೊಳ್ಳುತ್ತಾರೆ. ಆದರೆ ನರಕವನ್ನು **"ನಿತ್ಯವಾದ ಶಿಕ್ಷೆ"** (ಮತ್ತಾಯ–25:46)ಎಂದು ವಿವರಿಸಿರುವ ದೇವರ ವಾಕ್ಯದೊಂ– –ದಿಗೆ ಆ ಕಲ್ಪನೆಯು ಹೊಂದಿಕೆಯಾಗುವದಿಲ್ಲ. ಪರಿಣಾಮವಾಗಿ, ಸತ್ತವರಿಗಾಗಿ ಪ್ರಾರ್ಥನೆಗಳು ಪ್ರವಾದಿಗಳ ಬರಹಗಳಲ್ಲಿಲ್ಲ. ಸತ್ತವರಿ –ಗಾಗಿ ಪ್ರಾರ್ಥಿಸುವದು ಏಕೈಕವಾಗಿ ಮನುಷ್ಯನ ಸಂಪ್ರದಾಯಗಳಿಂದ ಬಂದಿರುವಂತದ್ದಾಗಿದೆ, ಆದರೆ ದೇವರ ವಾಕ್ಯದಿಂದ ಅಲ್ಲ, **"**ಒಂದೇ ಸಾರಿ ಸಾಯುವದೂ ಆಮೇಲೆ ನ್ಯಾಯತೀರ್ಪು ಮನುಷ್ಯನಿಗೆ ನೇಮಕವಾಗಿದೆ!**"** (ಇಬ್ರಿಯ–9:27)ಎಂದು ವಾಕ್ಯ ಹೇಳುತ್ತದೆ. ಸತ್ತವರಿಗಾಗಿ ಪ್ರಾರ್ಥಿಸುವದು ನರಕದಲ್ಲಿರುವವರ ಸಂಕಟಗಳನ್ನು ಬಿಡಿಸುವದಿಲ್ಲ, ಇಲ್ಲವೆ ಅವರನ್ನು ನ್ಯಾಯ ತೀರ್ಪಿನ ದಿನದಂದು ಕಾಪಾಡುವದಿಲ್ಲ. ಪರಲೋಕದಲ್ಲಿರುವವರಿಗೆ ಸಂಬಂಧಿಸಿದಂತೆ, ಅವರಿಗೆ ನಮ್ಮ ಪ್ರಾರ್ಥನೆಗಳ ಅವಶ್ಯಕತೆಯಿಲ್ಲ, ಯಾಕಂದರೆ ಅವರು ದೇವರ ಸನ್ನಿಧಿಯಲ್ಲಿ ಸಂಪೂರ್ಣ ಅತ್ಯಾನಂದದಲ್ಲಿರುತ್ತಾರೆ!

ಜೊತೆ ಕೇಳುಗರೇ, ಖಾಲಿಯಾದ ಶಬ್ದಗಳಿಂದ ನಿಮ್ಮನ್ನು ಮೋಸಗೊಳಿಸುವದಕ್ಕೆ ಯಾರಿಗೂ ಅವಕಾಶ ಕೊಡಬೇಡಿರಿ. ಕೆಲವರು, **"**ಅಹ್, ದೇವರು ಒಳ್ಳೆಯವನು! ಆತನು ತನ್ನ ಸೇವಕರುಗಳನ್ನು ಸೃಷ್ಟಿಮಾಡಿ ನಂತರ ಅವರನ್ನು ಸುಟ್ಟು ಹಾಕುವದಿಲ್ಲ! ಆತನಿಗೆ ನಮ್ಮೆ –ಲ್ಲರ ಮೇಲೆ ಕನಿಕರವಿದೆ ಮತ್ತು ನಮ್ಮನ್ನು ಪರಲೋಕಕ್ಕೆ ಬರಮಾಡಿಕೊಳ್ಳುತ್ತಾನೆ!**"** ಎಂದು ಹೇಳುತ್ತಾರೆ. ಈ ರೀತಿಯಲ್ಲಿ ಮಾತಾಡುವಂತವರು ತಮ್ಮ ಆಲೋಚನೆಗಳನ್ನು ದೇವರ ವಾಕ್ಯದ ಮೇಲೆ ಆಧಾರ ಮಾಡಿರುವದಿಲ್ಲ. ಅವರು ದೇವರು ಸ್ಥಾಪಿಸಿರುವ ರಕ್ಷಣೆಯ ಮಾರ್ಗವನ್ನು ಮೊಂಡತನದಿಂದ ಅಲಕ್ಷಿಸಿ ತಮ್ಮ ಮನಸ್ಸಾಕ್ಷಿಯನ್ನು ಸಮಾಧಾನಪಡಿಸುವದಕ್ಕೆ ಮಾತ್ರ ಹೀಗೆ ಹೇಳುತ್ತಾರೆ. ಅವರು ತಮ್ಮ ತಪ್ಪಾದ ಕಲ್ಪನೆಗಳನ್ನು ಬದಲಾಯಿಸಿಕೊಂಡು, ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಮೂಲಕ ನೀತಿಯ ಮಾರ್ಗವನ್ನು ನಂಬದಿದ್ದರೆ, ನಿಜವಾಗಿಯೂ ತಾವು ನರಕದಲ್ಲಿದ್ದೇವೆಂಬುದು ಒಂದು ದಿನ ಅವರಿಗೆ ಗೊತ್ತಾಗುತ್ತದೆ! ಆದರೆ ಆಗ ಪಶ್ಚಾತ್ತಾಪಪಡುದಕ್ಕೆ ತುಂಬಾ ತಡವಾಗಿರುತ್ತದೆ!

ಆ ಐಶ್ವರ್ಯವಂತನು ಅಬ್ರಹಾಮನಿಗೆ ಏನು ಕೇಳಿದನೆಂಬುದನ್ನು ನೀವು ಕೇಳಿಸಿಕೊಂಡಿರಾ? ತನ್ನ ಮನೆಯಲ್ಲಿರುವ ತನ್ನ ಐದು ಜನ ಸಹೋದರರು **"**ಸಹ ಈ ಯಾತನೆಯ ಸ್ಥಳಕ್ಕೆ ಬರಬಾರದು**"** ಆದದರಿಂದ ಅವರನ್ನು ಎಚ್ಚರಿಸುವದಕ್ಕೆ ಲಾಜರನನ್ನು ತನ್ನ ತಂದೆಯ ಮನೆಗೆ ಕಳಿಸಿಕೊಡು ಎಂದು ಕೇಳಿದನು. ಅಬ್ರಹಾಮನು ಅವನಿಗೆ ಹೇಗೆ ಉತ್ತರಿಸಿದನು? ಅವನು, **"ಮೋಶೆಯ ಧರ್ಮಶಾಸ್ತ್ರವೂ ಪ್ರವಾದಿಗಳ ಗ್ರಂಥಗಳೂ ಅವರಲ್ಲಿ ಅವೆ; ಅವುಗಳನ್ನು ಕೇಳಲಿ ಅಂದನು."** ಆದರೆ ಐಶ್ವರ್ಯವಂತನು, **"**ತಂದೆಯೇ ಅಬ್ರಹಾಮನೇ, ಹಾಗಲ್ಲ; ಸತ್ತವರ ಕಡೆಯಿಂದ ಒಬ್ಬನು ಅವರ ಬಳಿಗೆ ಹೋದರೆ ಅವರು ದೇವರ ಕಡೆಗೆ ತಿರುಗಿಕೊಳ್ಳುವರು ಅಂದನು.**"** ಅಬ್ರಹಾ – –ಮನು ಅವನಿಗೆ, **ಅವರು ಮೋಶೆಯ ಮಾತನ್ನೂ ಪ್ರವಾದಿಗಳ ಮಾತನ್ನೂ ಕೇಳದಿದ್ದರೆ ಸತ್ತುಹೋಗಿದ್ದವನೊಬ್ಬನು ಜೀವಿತನಾಗಿ ಎದ್ದರೂ ಅವರು ಒಪ್ಪುವದಿಲ್ಲ** ಎಂದು ಹೇಳಿದನು.**"**

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ನರಕದಿಂದ ನಿಮ್ಮನ್ನು ತಪ್ಪಿಸುವಂತಹ ದೇವರ ಪ್ರವಾದಿಗಳ ಶುಭ ಸಂದೇಶಗಳನ್ನು ನೀವು ತಿಳಿದು ಕೊಂಡಿದ್ದೀರಾ? ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮದಲ್ಲಿ ನೀವು ಕೇಳಿಸಿಕೊಳ್ಳುತ್ತಿರುವ ಸಂದೇಶವೇ ಆ ಶುಭ ಸಂದೇಶವಾಗಿದೆ. ಸಂಕ್ಷಿಪ್ತವಾಗಿ ಹೇಳುವದಾದರೆ, ನಿಮ್ಮ ಪಾಪಗಳಿಗಾಗಿ ದಂಡ ಕೊಡುವದಕ್ಕೆ ಶಿಲುಬೆಯ ಮೇಲೆ ಮರಣಹೊಂದಿ ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎಬ್ಬಿಸಲ್ಪಡುವದಕ್ಕೆ ದೇವರು ಕಳಿಸಿಕೊಟ್ಟ ಪರಿಶುದ್ಧ ವಿಮೋಚಕನ ಕುರಿತಾದ ಶುಭ ಸಂದೇ –ಶವೇ ಪ್ರವಾದಿಗಳ ಶುಭ ಸಂದೇಶವಾಗಿದೆ ಎಂಬುದನ್ನು ನಾವು ನೋಡಿದ್ದೇವೆ. **ಆತನು ನಿಮ್ಮ ಪಾಪಗಳಿಗಾಗಿ ಮರಣ ಹೊಂದಿದ – –ನೆಂಬುದನ್ನು ನೀವು ನಿಮ್ಮ ಹೃದಯದಲ್ಲಿ ನಂಬುವದಾದರೆ, ನೀವು ನರಕಕ್ಕೆ ಹೋಗುವದಿಲ್ಲ!** ಅದೇ ಶುಭ ಸಂದೇಶವು ದೇವರ ನೀತಿಯ ನ್ಯಾಯತೀರ್ಪಿನಿಂದ ನಿಮ್ಮನ್ನು ರಕ್ಷಿಸುವಂತದ್ದಾಗಿದೆ.

ನಾವು ನಮ್ಮ ಮೊದಲನೆಯ ಪಾಠಗಳಲ್ಲಿ ಕಂಡುಕೊಂಡಂತೆ, ದೇವರು ಮನುಷ್ಯನಿಗಾಗಿ ನರಕವನ್ನು ಸೃಷ್ಟಿಸಲಿಲ್ಲ, ಆದರೆ ಸೈತಾನನಿಗೂ ಮತ್ತು ಅವನ ದೂತರಿಗೂ ಇದನ್ನು ಸೃಷ್ಟಿಸಿದನು. ಹೀಗಿದ್ದರೂ, ನರಕಕ್ಕೆ ನಡಿಸುವಂತ ವಿಶಾಲವಾದ ದಾರಿಯ ಮೇಲೆ ಸೈತಾನನ ರಾಜ್ಯದಲ್ಲಿ ದೇವರಿಂದ ದೂರವಾಗಿ ನಾವೆಲ್ಲರೂ ಹುಟ್ಟುವದಕ್ಕೆ ನಮ್ಮ ಪೂರ್ವಿಕನಾದ ಆದಾಮನ ಪಾಪವು ಕಾರಣವಾಯಿತು. ಪಾಪದ ಸಂಬಳವು ಮರಣ ಮತ್ತು ನಿತ್ಯವಾದ ನರಕವಾಗಿರುವ ನಿಮಿತ್ತ, ದೇವರು ನಮಗಾಗಿ ಒಂದು **ಪರಿಹಾರವನ್ನು** ಒದಗಿಸದೇ ಹೋಗಿದ್ದರೆ, ಖಂಡಿತವಾಗಿಯೂ ನಮ್ಮಲ್ಲಿರುವ ಪಾಪದ ಸ್ವಭಾವವು ನಾವು ಎಂದೆಂದಿಗೂ **ನಾಶವಾಗುವದಕ್ಕೆ** ಕಾರಣವಾಗುತ್ತಿತ್ತು. ನಮ್ಮ ಸ್ವಂತ ಬಲ –ದಲ್ಲಿ, ನರಕದಿಂದ ತಪ್ಪಿಸಿಕೊಳ್ಳುವದಕ್ಕೆ ನಮಗೆ ಯಾವ ಮಾರ್ಗವಿಲ್ಲ! ಏನೇ ಆದರೂ, ದೇವರು ನಮ್ಮ ಪಾಪಗಳನ್ನು ಕ್ಷಮಿಸುವಂತ ಒಂದು ಯೋಜನೆಯನ್ನು ರಚಿಸಿದ್ದಕ್ಕಾಗಿ ನಾವು ಆತನಿಗೆ ವಂದಿಸುವವರಾಗಿದ್ದೇವೆ. ಆ ಯೋಜನೆ ಯಾವುದು? ಇದು **ಪರಿಶುದ್ಧ**

**ಮೆಸ್ಸೀಯನ ಮರಣ.** ಯೇಸು ಶಿಲುಬೆಯ ಮೇಲೆ ಸತ್ತಾಗ ದೇವರು ನಮ್ಮ ಪಾಪಗಳ ಶಿಕ್ಷೆಯನ್ನು ಆತನ ಮೇಲೆ ಹೊರಿಸಿದ್ದನು. ವಾಕ್ಯದಲ್ಲಿ ಬರೆಯಲ್ಪಟ್ಟಿರುವಂತೆ, **"ನಾವು ಆತನಲ್ಲಿ ದೇವರಿಗೆ ಸಮರ್ಪಕರಾದ ನೀತಿ ಸ್ವರೂಪಿಗಳಾಗುವಂತೆ ದೇವರು ಪಾಪಜ್ಞಾನ –**
**–ವಿಲ್ಲದ ಆತನನ್ನು ನಮಗೋಸ್ಕರ ಪಾಪ ಸ್ವರೂಪಿಯಾಗ** ಮಾಡಿದನು.**"** (2ಕೊರಿಂಥ–5:21)

ಜನರು ಯೇಸುವನ್ನು ಹೇಗೆ ಹಿಂಸಿಸಿದರೆಂಬುದನ್ನು ನಾವು ನೋಡುತ್ತೇವೆ, ಕೊರಡೆಗಳಿಂದ ಹೊಡೆದರು, ಆತನ ತಲೆಯ ಮೇಲೆ ಮುಳ್ಳಿನ ಕಿರೀಟವನ್ನಿಟ್ಟರು, ಮುಖದ ಮೇಲೆ ಗುದ್ದಿದರು, ಉಗುಳಿದರು ಮತ್ತು ಶಿಲುಬೆಗೆ ಆತನನ್ನು ಜಡಿದರು! ನಮ್ಮ ಪಾಪಗಳಿಗೆ ಅರ್ಹವಾಗಿದ್ದಂತ ಶಿಕ್ಷೆಯನ್ನು ತೋರಿಸಿಕೊಡುವ ಕ್ರಮದಲ್ಲಿ ಪಾಪವಿಲ್ಲದ ಮೆಸ್ಸೀಯನನ್ನು ಜನರು ಕೆಟ್ಟದಾಗಿ ನಡೆಸಿಕೊಳ್ಳುವಂತೆ ದೇವರು ಅವಕಾಶ ಕೊಟ್ಟನು. ಜನರು ಯೇಸುವಿಗೆ ಮಾಡಿದ ಪ್ರತಿಯೊಂದಕ್ಕೂ ನಾವು ನಮ್ಮ ಪಾಪಗಳ ನಿಮಿತ್ತ ಅರ್ಹರಾಗಿದ್ದೆವು. ಆದರೆ ದೇವರು, ನಮ್ಮ ಮೇಲೆ ಆತನಿಗಿದ್ದ ದೊಡ್ಡದಾದ ಪ್ರೀತಿಯ ಕಾರಣದಿಂದ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಪ್ರೀತಿಯ ನಿತ್ಯತ್ವದ ಮಗನಾದ ಪರಿಶುದ್ಧನಾದ ಮೆಸ್ಸೀಯನ ಮೇಲೆ ಹೊರಿಸಿದನು. ಮತ್ತು ಜನರು ಆತನಿಗೆ ಏನು ಮಾಡಿದರೋ ಅದಕ್ಕೆ ಶಿಲುಬೆಯ ಮೇಲಿನ ಯೇಸುವಿನ ಸಂಕಟಗಳು ಮಿತಿಯಿಲ್ಲದವುಗಳಾಗಿದ್ದವು ಎಂಬುದನ್ನು ಜ್ಞಾಪಕಕ್ಕೆ ತಂದುಕೊಳ್ಳಿರಿ. ಯೇಸು ಶಿಲುಬೆಯ ಮೇಲೆ ಸಂಕಟಪಡುವಾಗ ಮಾನವನ ಮನಸ್ಸು ತಿಳಿದುಕೊಳ್ಳಲಾರದಂತ ನೋವನ್ನು ದೇವರು ಸ್ವತ: ಆತನ ಮೇಲೆ ಹಾಕಿದ್ದನೆಂಬುದನ್ನು ಪ್ರವಾ
–ದಿಗಳ ಗ್ರಂಥಗಳು ನಮಗೆ ತೋರಿಸಿಕೊಡುತ್ತವೆ. ದೇವರು ನಮ್ಮ ಪಾಪದ ಸಂಬಳವನ್ನು ಅಂದರೆ **ನಮ್ಮ ನರಕವನ್ನು** ಯೇಸುವಿನ ಮೇಲೆ ಹೊರಿಸಿದನು. ಮೆಸ್ಸೀಯನು ತೀವ್ರವಾದ ಸಂಕಟಗಳನ್ನು ದೇವರಿಂದ ಅನುಭವಿಸಿದನು ಎಂಬುದನ್ನು ಪ್ರವಾದಿಯಾದ ಯೋಬನು ಮೊದಲೇ ತಿಳಿಸುತ್ತಾ ಹೀಗೆ ಬರೆದಿದ್ದಾನೆ: "ದೇವರು ನನ್ನನ್ನು ತುಂಟರಿಗೆ ಒಪ್ಪಿಸಿ ಕೆಟ್ಟವರ ಕೈಗೆ ಎಸೆದುಬಿಟ್ಟಿದ್ದಾನೆ. **ಆತನ ಸಿಟ್ಟು ನನ್ನನ್ನು ಸೀಳಿ ಹಿಂಸಿಸುತ್ತಿದೆ; ಆತನು ನನ್ನ ಮೇಲೆ ಹಲ್ಲು ಕಡಿದಿದ್ದಾನೆ."** (ಯೋಬ–16:11,9)

ಪಾಪದ ಸಂಬಳವು ಮರಣ ಮತ್ತು ದೇವರ ಕೋಪವನ್ನು ಎದುರಿಸುವದು ಹಾಗೂ ಸುವಾರ್ತೆಯನ್ನು ನಂಬುವದಕ್ಕೆ ತಿರಸ್ಕರಿಸಿದವ –
–ರೆಲ್ಲರನ್ನು ದೇವರು ರವಾನಿಸಿರುವ ನರಕದ ಕತ್ತಲೆಯೊಳಕ್ಕೆ ಹೋಗುವಂತದ್ದು ಆಗಿದೆ. ಹೀಗಿದ್ದರೂ, ಯೇಸು ದೇವರ ಕೋಪವನ್ನು ನಮಗಾಗಿ ಅನುಭವಿಸಿದನು, ಅದರಿಂದ ನಾವು ದೇವರ ಕೃಪೆಯನ್ನು ಪಡೆದುಕೊಂಡೆವು. ನಾವು ಓದಿದ ಹಾಗೆ, ಯೇಸು ಶಿಲುಬೆಯ ಮೇಲೆ ಸತ್ತಾಗ ನರಕದಲ್ಲಿದ್ದ ಹಾಗೆ ದೇಶದ ಮೇಲೆಲ್ಲಾ ಮಧ್ಯಾಹ್ನದಿಂದ ಮೂರು ಗಂಟೆಯ ತನಕ ಕಡುಕತ್ತಲೆ ತುಂಬಿಕೊಂಡಿತ್ತು. ಆ ಗಂಟೆಗಳ ಅವಧಿಯಲ್ಲಿ, ಯೇಸು **"ನನ್ನ ದೇವರೇ ನನ್ನ ದೇವರೇ ಯಾಕೆ ನನ್ನನ್ನು ಕೈಬಿಟ್ಟಿದ್ದೀ?"** ಎಂದು ಗಟ್ಟಿಯಾಗಿ ಕೂಗಿಕೊಂಡನು. ದೇವರು ತನ್ನ ಪ್ರಿಯನನ್ನು ಶಿಲುಬೆಯ ಮೇಲೆ ಯಾಕೆ ಕೈಬಿಟ್ಟನು? **ನೀವು ಮತ್ತು ನಾನು ಇದಕ್ಕೆ ಕಾರಣ!** ನಮ್ಮ ಪಾಪಗಳು ಇದಕ್ಕೆ ಕಾರಣ! ಯೇಸು ಶಿಲುಬೆಯ ಮೇಲಿದ್ದಾಗ, ದೇವರು ನಮ್ಮ ಪಾಪದ ಶಿಕ್ಷೆಯನ್ನು ಅಂದರೆ **ನಮ್ಮ ನರಕವನ್ನು** ಆತನ ಮೇಲೆ ಹೊರಿಸಿ
–ದ್ದನು. ಇದು ನಮ್ಮ ಮನಸ್ಸುಗಳು ಪೂರ್ತಿಯಾಗಿ ಗ್ರಹಿಸಿಕೊಳ್ಳಲಾರದಂಥ ಅಗಾಧವಾದ ಸತ್ಯವಾಗಿದೆ. ಆದಾಗ್ಯೂ, ಪೂರ್ಣ ನಿಶ್ಚಿತ
–ವಾದುದೇನೆಂದರೆ, **ನೀವು ನಿಜವಾಗಿಯೂ ಕರ್ತನಾದ ಯೇಸುವನ್ನು ನಂಬಿದರೆ, ನೀವು ರಕ್ಷಿಸಲ್ಪಡುತ್ತೀರಿ ಮತ್ತು ನೀವು ಎಂದಿಗೂ ನರಕಕ್ಕೆ ಹೋಗುವದಿಲ್ಲ,** ಯಾಕಂದರೆ ವಿಮೋಚಕನ ತ್ಯಾಗದ ಆಧಾರದ ಮೇಲೆ ದೇವರು ನಿಮ್ಮನ್ನು ನೀತಿವಂತರೆಂದು ಎಣಿಸಿರುತ್ತಾನೆ. ಅಬ್ರಹಾಮನ ಮಗನನ್ನು ಮರಣದಿಂದ ವಿಮೋಚಿಸಿದ ಯಜ್ಞದ ಕುರಿಯ ಹಾಗೆ, **ನರಕ** ಎಂದು ಕರೆಯಲ್ಪಡುವ ಸ್ಥಳದಲ್ಲಿ ಎಂದಿಗೂ ಕೊನೆಯಾಗದಿರುವಂತ ಮರಣದಿಂದ ನಿಮ್ಮನ್ನು ವಿಮೋಚಿಸುವದಕ್ಕೆ ಮೆಸ್ಸೀಯನಾದ ಯೇಸು ಮರಣ ಹೊಂದಿದನು!

ದೇವರು ನಿಮ್ಮ ನರಕವನ್ನು ಯೇಸುವಿನ ಮೇಲೆ ಹೊರಿಸಿದನು. **ನೀವು ಇದನ್ನು ನಂಬುತ್ತೀರಾ?** ನೀತಿವಂತನಾದ ಯೇಸು ಕ್ರಿಸ್ತನು ನಿಮ್ಮ ಪಾಪದ ಸಾಲವನ್ನು ದಂಡ ತೆತ್ತನೆಂಬುದನ್ನು ನೀವು ನಂಬುತ್ತೀರಾ? ಅಥವಾ ನಿತ್ಯತ್ವದುದ್ದಕ್ಕೂ ಪಾಪದ ನಿಮ್ಮ ಸ್ವಂತ ಸಾಲ –
–ವನ್ನು ತೀರಿಸುವದಕ್ಕೆ ನರಕಕ್ಕೆ ಹೋಗುತ್ತೀರೋ? **ಇದು ನಿಮಗೆ ಬಿಟ್ಟದ್ದು**. ನೀವು ಯಾವುದನ್ನು ಆರಿಸಿಕೊಳ್ಳುತ್ತೀರಿ? **ಪರಲೋಕ –**
**–ವನ್ನೋ?** ಅಥವಾ **ನರಕವನ್ನೋ?**

ಕೇಳಿಸಿಕೊಂಡಿದ್ದಕ್ಕೆ ವಂದನೆಗಳು. ಈ ದಿನ ನಾವು ಅಧ್ಯಯನ ಮಾಡಿದ್ದಕ್ಕಿಂತ ಪರಿಣಾಮಕಾರಕವಾಗಿ ವ್ಯತ್ಯಾಸವುಳ್ಳ ಒಂದು ವಿಷಯ
–ವನ್ನು ನೋಡಿಕೊಳ್ಳುವದಕ್ಕೆ ಮುಂದಿನ ಸಲ ನಮ್ಮನ್ನು ಸೇರಿಕೊಳ್ಳುವಂತೆ ನಾವು ನಿಮ್ಮನ್ನು ಆಹ್ವಾನಿಸುತ್ತೇವೆ, ಯಾಕಂದರೆ ದೇವರ ಚಿತ್ತವಾದರೆ, ಪರದೈಸು ಎನ್ನುವ ಒಂದು ಅದ್ಭುತವಾದ ಸ್ಥಳದ ಕುರಿತು ನಾವು ಅಧ್ಯಯನ ಮಾಡಲಿದ್ದೇವೆ. . . .

ದೇವರು ನಿಮ್ಮನ್ನು ಆಶೀರ್ವದಿಸಲಿ. ಕರ್ತನಾದ ಯೇಸುವಿನ ಗಂಭೀರವಾದ ಈ ಮಾತುಗಳೊಂದಿಗೆ ನಾವು ನಿಮಗೆ ವಿದಾಯ ಹೇಳುತ್ತೇವೆ:

**"ಇಕ್ಕಟ್ಟಾದ ಬಾಗಲಿನಿಂದ ಒಳಕ್ಕೆ ಹೋಗಿರಿ. ನಾಶಕ್ಕೆ ಹೋಗುವ ಬಾಗಲು ದೊಟ್ಟದು, ದಾರಿ ಅಗಲವು; ಅದರಲ್ಲಿ ಹೋಗುವವರು ಬಹು ಜನ. ನಿತ್ಯಜೀವಕ್ಕೆ ಹೋಗುವ ಬಾಗಲು ಇಕ್ಕಟ್ಟು, ದಾರಿ ಬಿಕ್ಕಟ್ಟು; ಅದನ್ನು ಕಂಡುಹಿಡಿಯುವವರು ಸ್ವಲ್ಪಜನ."** (ಮತ್ತಾಯ–7;13,14)

ಪಾಠ 98

# ಪರದೈಸು

ಪ್ರಕಟನೆ 21,22

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ನಮ್ಮ ಹಿಂದಿನ ಪಾಠದಲ್ಲಿ, ಶಿಕ್ಷೆಯು ಎಂದಿಗೂ ಮುಕ್ತಾಯವಾಗದ ಸ್ಥಳವಾಗಿರುವ **ನರಕದ** ಕುರಿತು ಆಲೋಚಿಸಿಕೊಂಡೆವು. ನರಕವು ಸೈತಾನನಿಗೂ ಮತ್ತು ಅವನ ದೂತರಿಗೂ ಸೃಷ್ಟಿಸಲ್ಪಟ್ಟಿರುವ ಭಯಂಕರವಾದ ಸ್ಥಳ. ದೇವರು ಸ್ಥಾಪಿಸಿರುವ ರಕ್ಷಣೆಯ ಮಾರ್ಗವನ್ನು ಅಲಕ್ಷ್ಯ ಮಾಡುವ ಪ್ರತಿಯೊಬ್ಬರೂ ದೇವರಿಂದ ಎಂದೆಂದಿಗೂ ಬೇರ್ಪಟ್ಟವರಾಗಿ ಅಲ್ಲಿಗೆ ಹೋಗುತ್ತಾರೆ! ಅದಕ್ಕಾಗಿಯೇ ಪವಿತ್ರ ಗ್ರಂಥವು ಹೀಗೆ ಹೇಳುತ್ತದೆ: **"**ಯಾವನ ಹೆಸರು ಜೀವಬಾಧ್ಯರ ಪಟ್ಟಿಯಲ್ಲಿ ಬರೆದದ್ದಾಗಿ ಕಾಣಲಿಲ್ಲವೋ ಅವನು ಬೆಂಕಿಯ ಕೆರೆಗೆ ದೊಬ್ಬಲ್ಪಟ್ಟನು.**"** (ಪ್ರಕ–20:15)

ಖಂಡಿತವಾಗಿಯೂ, ಮನುಷ್ಯನು ಆಲೋಚಿಸುವದಕ್ಕೆ ಸಾಧ್ಯವಾಗದಿರುವಂತ ಹೆಚ್ಚು ಭಯಂಕರವಾದ ವಿಷಯ ಈ ನರಕ ಎನ್ನುವದು. ಆದಾಗ್ಯೂ, ಮನುಷ್ಯನ ಆತ್ಮವು ಆಲೋಚಿಸುವದಕ್ಕೆ ಸಾಧ್ಯವಾದಂತ ಒಂದು ಅತೀ ಅದ್ಭುತವಾದ ಒಂದು ವಿಷಯವನ್ನು ನೋಡಿಕೊಳ್ಳು –ವದಕ್ಕೆ ಏರ್ಪಾಟು ಮಾಡಿಕೊಂಡಿದ್ದೇವೆ, ಅದು **ಪರದೈಸು** ಎಂಬುದಾಗಿ ಸಹ ಕರೆಯಲ್ಪಡುವ **ಪರಲೋಕ** ಎನ್ನುವ ವಿಷಯ.

ಎಂತಹ ವ್ಯಕ್ತಿಯು ಪರದೈಸನ್ನು ಪ್ರವೇಶಿಸುತ್ತಾನೆ ಎಂಬುದಾಗಿ ಮತ್ತು ಇದರ ಕುರಿತು ಇನ್ನೂ ವಿವಿಧ ರೀತಿಯ ಕಲ್ಪನೆಗಳನ್ನು ಜನರು ಹೊಂದಿದ್ದಾರೆ. ಉದಾಹರಣೆಗಾಗಿ, ಪೌರ್ವಾತ್ಯ ಧರ್ಮಗಳಿಗೆ ಸಂಬಂಧಪಟ್ಟವರು ನಂಬುವದೇನೆಂದರೆ, ವ್ಯತ್ಯಾಸವುಳ್ಳ ಮಟ್ಟಗಳ ಸಂತೋಷದೊಂದಿಗೆ ಅನೇಕ ಪರಲೋಕಗಳು (ಪರದೈಸುಗಳು) ಇವೆ ಮತ್ತು ಪ್ರತಿಯೊಬ್ಬ ವ್ಯಕ್ತಿಯು ತನ್ನ ತನ್ನ ಕೆಲಸಗಳಿಗನುಸಾರ – –ವಾಗಿ ಅಲ್ಲಿಗೆ ಹೋಗುತ್ತಾನೆ ಎಂಬದು. ಇತರರು ಆಲೋಚಿಸುವದೇನೆಂದರೆ, ಒಬ್ಬ ವ್ಯಕ್ತಿಯು ಮೊದಲು ನರಕವನ್ನು ಹಾದು ಹೋಗ –ಲೇಬೇಕು ಮತ್ತು ಅವನು ತನ್ನ ಪಾಪದ ಸಾಲವನ್ನು ಪಾವತಿಸಿದ ನಂತರ ಅವನು ಪರದೈಸಿಗೆ ವರ್ಗಾಯಿಸಲ್ಪಡುತ್ತಾನೆ ಎಂಬುದು. ಇನ್ನೂ ಕೆಲವರು, ಪರದೈಸು ಎನ್ನುವದು, ಯಾರು ತಮ್ಮ ಧಾರ್ಮಿಕ ಕರ್ತವ್ಯವನ್ನು ನಂಬಿಗಸ್ತಿಕೆಯಿಂದ ಮಾಡುತ್ತಾರೋ ಅಂತವರಿ– –ಗಾಗಿ ದೇವರು ಕಾದಿರಿಸಿರುವಂತ ಒಂದು ಸ್ಥಳ ಮತ್ತು ಜನರು ತಿನ್ನುವ, ಕುಡಿಯುವ ಮತ್ತು ಸಂತೋಷವನ್ನು ಹಿಂಬಾಲಿಸಿ ಹೋಗುವ ಒಂದು ಸ್ಥಳ ಎಂಬುದಾಗಿ ಅಂದುಕೊಳ್ಳುತ್ತಾರೆ. ಪರದೈಸಿನ ಕುರಿತಾಗಿ ಮತ್ತು ಅಲ್ಲಿಗೆ ಹೇಗೆ ಹೋಗಬೇಕೆನ್ನುವದರ ಕುರಿ– –ತಾಗಿ ಮನುಷ್ಯನು ನಿಶ್ಚಿತವಾಗಿ ಅನೇಕ ಕಲ್ಪನೆಗಳನ್ನು ಹೊಂದಿದ್ದಾನೆ. ಹೀಗಿದ್ದರೂ, ಪರದೈಸಿನ ಕುರಿತು **ಜನರು ಏನು ಅಂದುಕೊಂಡಿ –ದ್ದಾರೆ** ಎನ್ನುವದರ ಕುರಿತಾಗಿ ಅಲ್ಲ ಆದರೆ **ದೇವರು** ತನ್ನ ಪರಿಶುದ್ಧ ವಾಕ್ಯದಲ್ಲಿ ಇದರ ಕುರಿತು **ಏನು ಹೇಳಿದ್ದಾನೆ** ಎನ್ನುವದು ಈ ದಿನದ ನಮ್ಮ ಚಿಂತನೆಯಾಗಿದೆ!

ಪರದೈಸು ಎನ್ನುವ ಸ್ಥಳವು ಪ್ರವಾದಿಗಳ ಗ್ರಂಥಗಳಲ್ಲಿ ಅನೇಕ ಹೆಸರುಗಳನ್ನು ಹೊಂದಿದೆ. ಇದು ಪರಲೋಕ; ದೇವರ ಸಿಂಹಾಸನ; ದೇವರ ಸಾನಿಧ್ಯ; ದೇವರ ಮನೆ; ಪರಿಶುದ್ಧನಾದ ದೇವರು ವಾಸಿಸುವ ಸ್ಥಳ; ಪರಿಶುದ್ಧ ಪಟ್ಟಣ; ಜೀವಿಸುವ ದೇವರ ಪಟ್ಟಣ; ಪರ – –ಲೋಕದ ಯೆರೂಸಲೇಮು; ಪರಿಶುದ್ಧ ದೂತರುಗಳು ಮತ್ತು ಕುರಿಮರಿಯ ಮನೆ; ಕರ್ತನಾದ ಯೇಸುವಿನ ಮತ್ತು ಆತನ ಶ್ರೇಷ್ಠ – ವಾದ ಮಹಿಮೆಯ ಸನ್ನಿಧಿ; ಪರಲೋಕದಲ್ಲಿ ಹೆಸರುಗಳು ಬರೆಯಲ್ಪಟ್ಟಿರುವ ದೇವಜನರ ಮನೆ; ಎಂಬುದಾಗಿ ಕರೆಯಲ್ಪಟ್ಟಿದೆ. ಕರ್ತ –ನಾದ ಯೇಸು ಪರದೈಸನ್ನು **"**ನನ್ನ ತಂದೆಯ ಮನೆ**"** ಎಂಬುದಾಗಿ ಕರೆದಿದ್ದಾನೆ, ಯಾಕಂದರೆ ಆತನು ಭೂಲೋಕದಲ್ಲಿ ಹುಟ್ಟುವ – ದಕ್ಕಿಂತ ಮೊದಲು ಅಲ್ಲಿಯೇ ಇದ್ದನು.

ಸಂಕ್ಷಿಪ್ತವಾಗಿ ಹೇಳುವದಾದರೆ, ಪರದೈಸು **ದೇವರ ವಾಸಸ್ಥಳ**. ನಾವು ನೋಡಿದ ಹಾಗೆ, ದೇವರು ಎಲ್ಲಾ ಕಡೆಯೂ ಇದ್ದಾನೆ; ಆದಾಗ್ಯೂ, ಪರಿಶುದ್ಧವಾದ, ಪ್ರಕಾಶಮಾನವಾದ, ಸುಂದರವಾದ, ನಕ್ಷತ್ರಗಳಿಗಿಂತ ಬಹು ದೂರದಲ್ಲಿರುವ ಒಂದು ನಿರ್ದಿಷ್ಟವಾದ ಸ್ಥಳ –ದಲ್ಲಿ ದೇವರು ತನ್ನ ಮಹಿಮೆಯೊಂದಿಗೆ ವಾಸಿಸುತ್ತಾನೆ. ಅದು ಮಹೋನ್ನತನ ಮಗನಾಗಿರುವ ಯೇಸು, ಸರ್ವಶಕ್ತನ ಬಲಭಾಗದಲ್ಲಿ ತನ್ನ ಸಿಂಹಾಸನದಲ್ಲಿ ಕುಳಿತಿರುವ ಸ್ಥಳವಾಗಿದ್ದು, ತಾನು ಲೋಕಕ್ಕೆ ಹಿಂದಿರುಗಿ ಬಂದು ಅದಕ್ಕೆ ತೀರ್ಪುಮಾಡಿ ಅದನ್ನು ನವೀಕರಿಸುವ –ದಕ್ಕಾಗಿ ಕಾಯುತ್ತಾ ಕುಳಿತಿರುವ ಸ್ಥಳವಾಗಿದೆ. ಅದಲ್ಲದೆ ಪರದೈಸು, ಸಾವಿರಾರು ಸಾವಿರಾರು ದೂತರುಗಳು ಕರ್ತನಾದ ಯೇಸುಕ್ರಿಸ್ತ –ನೆಂಬ ಕುರಿಯಾದಾತನ ರಕ್ತದ ಮೂಲಕ ದೇವರು ತನಗಾಗಿ ವಿಮೋಚಿಸಿದ ಜನರ ದೊಡ್ಡ ಗುಂಪಿನೊಂದಿಗೆ ಒಟ್ಟಾಗಿ ಸಿಂಹಾಸನ – –ವನ್ನು ಸುತ್ತುವರಿದಿರುವ ಸ್ಥಳವಾಗಿದೆ.

ಸುವಾರ್ತೆಯ ಪುಸ್ತಕದ ಕೊನೆಯಲ್ಲಿ, ಪ್ರಕಟನೆ ಪುಸ್ತಕದ ಕೊನೆಯ ಎರಡು ಅಧ್ಯಾಯಗಳಲ್ಲಿ, ಜೀವಬಾಧ್ಯರ ಪಟ್ಟಿಯಲ್ಲಿ ಯಾರ ಹೆಸರುಗಳು ಬರೆಯಲ್ಪಟ್ಟಿದೆಯೋ ಅಂತವರಿಗಾಗಿ ಕರ್ತನು ಉಂಟುಮಾಡಿರುವ ಪರಿಶುದ್ಧ ಪಟ್ಟಣವಾದ ಪರದೈಸನ್ನು ತೋರಿಸುವ – –ದಕ್ಕೆ ದೇವರು ತನ್ನ ಅಪೊಸ್ತಲನಾದ ಯೋಹಾನನಿಗೆ ಒಂದು ದರ್ಶನವನ್ನು ಕೊಟ್ಟನು. ಪರದೈಸು ಎಂಬ ಪಟ್ಟಣದ ಕುರಿತಾಗಿ ವಾಕ್ಯವು ಹೇಳುವದನ್ನು ಕೇಳಿಸಿಕೊಳ್ಳಿರಿ.

“ದೇವರಾತ್ಮವಶನಾದ ನನ್ನನ್ನು ಆತನು ಎತ್ತರವಾದ ದೊಡ್ಡ ಬೆಟ್ಟಕ್ಕೆ ಎತ್ತಿಕೊಂಡು ಹೋಗಿ ಯೆರೂಸಲೇಮೆಂಬ **ಪರಿಶುದ್ದ ಪಟ್ಟಣವು ದೇವರ ತೇಜಸ್ಸುಳ್ಳದ್ದಾಗಿ** ಪರಲೋಕದೊಳಗಿಂದ ದೇವರ ಕಡೆಯಿಂದ ಇಳಿದು ಬರುವದನ್ನು ನನಗೆ ತೋರಿಸಿದನು. ಪಟ್ಟಣದ ಪ್ರಕಾ –ಶವು ಅಮೂಲ್ಯ ರತ್ನದ ಪ್ರಕಾಶಕ್ಕೆ ಸಮಾನವಾಗಿತ್ತು. ಥಳಥಳಿಸುವ ವಜ್ರವೋ ಎಂಬಂತೆ ಕಾಣಿಸಿತು. ಆ ಪಟ್ಟಣಕ್ಕೆ ಎತ್ತರವಾದ ದೊಡ್ಡ ಪ್ರಾಕಾರವಿತ್ತು; ಅದಕ್ಕೆ ಹನ್ನೆರಡು ಬಾಗಲುಗಳಿದ್ದವು; ಆ ಬಾಗಿಲುಗಳ ಬಳಿಯಲ್ಲಿ ಹನ್ನೆರಡು ದೇವದೂತರಿದ್ದರು. . .”
(ಪ್ರಕ–21:10-12)

“ಪಟ್ಟಣವು ಚಚ್ಚೌಕವಾಗಿದೆ; ಅದರ ಉದ್ದವು ಅದರ ಅಗಲದಷ್ಟಿದೆ. . . .ಪಟ್ಟಣದ ಪ್ರಾಕಾರದ ಅಸ್ತಿವಾರಗಳು ಸಕಲ ವಿಧವಾದ ರತ್ನ –ಗಳಿಂದ ಅಲಂಕೃತವಾಗಿದ್ದವು. . . .ಹನ್ನೆರಡು ಹೆಬ್ಬಾಗಿಲುಗಳು ಹನ್ನೆರಡು ಮುತ್ತುಗಳಾಗಿದ್ದವು. ಒಂದೊಂದು ಬಾಗಿಲು ಒಂದೊಂದು ಮುತ್ತಿನಿಂದ ಮಾಡಲ್ಪಟ್ಟಿತ್ತು. ಪಟ್ಟಣದ ಬೀದಿಯು ಸ್ವಚ್ಛವಾದ ಗಾಜಿನಂತಿರುವ ಸೋಸಿದ ಬಂಗಾರವಾಗಿತ್ತು. ಪಟ್ಟಣದಲ್ಲಿ ನಾನು ದೇವಾಲಯವನ್ನು ಕಾಣಲಿಲ್ಲ; ಯಾಕಂದರೆ ಸರ್ವಶಕ್ತನಾದ **ದೇವರಾಗಿರುವ ಕರ್ತನೂ ಯಜ್ಞದ ಕುರಿಯಾದಾತನೂ** ಅದರ ದೇವಾ – –ಲಯವಾಗಿದ್ದಾರೆ. ಪಟ್ಟಣಕ್ಕೆ ಬೆಳಕನ್ನು ಕೊಡುವದಕ್ಕೆ ಸೂರ್ಯನಾಗಲಿ ಚಂದ್ರನಾಗಲಿ ಬೇಕಾಗಿಲ್ಲ. ಅದಕ್ಕೆ **ದೇವರ ಪ್ರಭಾವವೇ** ಬೆಳ –ಕನ್ನು ಕೊಟ್ಟಿತು. ಯಜ್ಞದ ಕುರಿಯಾದಾತನೇ ಅದರ ದೀಪವು. ಅದರ ಬೆಳಕಿನಿಂದ ಸರ್ವಜನಾಂಗದವರು ಸಂಚಾರಮಾಡುವರು. . .ಅದರ ಬಾಗಿಲುಗಳನ್ನು ಹಗಲಿನಲ್ಲಿ ಮುಚ್ಚುವದೇ ಇಲ್ಲ; ರಾತ್ರಿಯಂತೂ ಅಲ್ಲಿಲ್ಲ. . . . **ಅದರಲ್ಲಿ ಹೊಲೆಯಾದದ್ದೊಂದೂ ಸೇರುವ – –ದಿಲ್ಲ. ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ; ಯಜ್ಞದ ಕುರಿಯಾದಾತನ ಜೀವಬಾಧ್ಯರ ಪಟ್ಟಿಯಲ್ಲಿ ಯಾರಾರ ಹೆಸರುಗಳು ಬರೆದವೆಯೋ ಅವರು ಮಾತ್ರ ಸೇರುವರು.”** (ಪ್ರಕ–21:16,19,21-25,27**)**

“ಆ ಮೇಲೆ ಅವನು ಸ್ಫಟಿಕದಂತೆ ಪ್ರಕಾಶಮಾನವಾಗಿದ್ದ ಜೀವಜಲದ ನದಿಯನ್ನು ನನಗೆ ತೋರಿಸಿದನು. ಅದು **ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನದಿಂದ** ಹೊರಟು ಪಟ್ಟಣದ ಬೀದಿಯ ಮಧ್ಯದಲ್ಲಿ ಹರಿಯುತಿತ್ತು. ಆ ನದಿಯ ಉಭಯ ಪಾರ್ಶ್ವ –ಗಳಲ್ಲಿ ಜೀವವೃಕ್ಷವಿತ್ತು; ಅದು ತಿಂಗಳು ತಿಂಗಳಿಗೆ ಫಲವನ್ನು ಫಲಿಸುತ್ತಾ ಹನ್ನೆರಡು ತರದ ಫಲಗಳನ್ನು ಕೊಡುತ್ತದೆ. . . ಇನ್ನು ಶಾಪಗ್ರಸ್ತವಾದದ್ದು ಒಂದೂ ಇರುವದಿಲ್ಲ. ಆ ಪಟ್ಟಣದಲ್ಲಿ **ದೇವರ ಮತ್ತು ಯಜ್ಞದ ಕುರಿಯಾದಾತನ ಸಿಂಹಾಸನವಿರುವದು.** ಆತನ ದಾಸರು ಆತನಿಗೆ ಯಾಜಕ ಸೇವೆ ಮಾಡುವರು; ಅವರಿಗೆ ಆತನ ಮುಖದರ್ಶನವಾಗುವದು, ಅವರ ಹಣೆಗಳ ಮೇಲೆ ಆತನ ಹೆಸರು ಇರುವದು. ಇನ್ನು ರಾತ್ರಿ ಅಲ್ಲಿರುವದಿಲ್ಲ; ಅವರಿಗೆ ದೀಪದ ಬೆಳಕೂ ಸೂರ್ಯನ ಬೆಳಕೂ ಬೇಕಾಗುವದಿಲ್ಲ; **ದೇವರಾದ ಕರ್ತನೇ** ಅವ –ರಿಗೆ ಬೆಳಕನ್ನು ಕೊಡುವನು; ಅವರು ಯುಗಯುಗಾಂತರಗಳಲ್ಲಿಯೂ ಆಳುವರು.” (22:1-5)

ಈ ಪ್ರಕಾರ ದೇವರು ತನ್ನ ರಕ್ಷಣೆಯ ಮಾರ್ಗವನ್ನು ಆಯ್ಕೆಮಾಡಿಕೊಳ್ಳುವವರಿಗಾಗಿ ಸಿದ್ಧಪಡಿಸಿರುವ ಪರಿಶುದ್ದ ಪಟ್ಟಣವನ್ನು ಯೋಹಾನನಿಗೆ ತೋರಿಸಿದನು. ಈ ದಿನ ನಾವು ಹೊರಡುವ ಸಮಯದಲ್ಲಿ, ಪರದೈಸಿಗೆ ನಡಿಸುವಂತಹ ಮಾರ್ಗದ ಕುರಿತು ದೇವರು ತನ್ನ ವಾಕ್ಯದಲ್ಲಿ ಏನು ಹೇಳಿದ್ದಾನೋ ಅದರ ಕುರಿತು ಆಲೋಚಿಸೋಣ. ನಾವು ಪರದೈಸಿಗೆ ಹೋಗುತ್ತೇವೆ ಆದರೆ ನರಕಕ್ಕೆ ಹೋಗುವದಿಲ್ಲ ಎನ್ನುವದನ್ನು ನಾವು ಹೇಗೆ ನಿಶ್ಚಿತಪಡಿಸಿಕೊಳ್ಳಲು ಸಾಧ್ಯ?

ಮೆಸ್ಸೀಯನಾದ ಯೇಸು ತನ್ನ ಶಿಷ್ಯರಿಗೆ ದೇವರ ಮನೆಗೆ ಸಂಬಂಧಿಸಿದಂತೆ ಮತ್ತು ಅಲ್ಲಿಗೆ ಮುನ್ನಡೆಸುವ ಮಾರ್ಗದ ಕುರಿತು ಹೇಳಿರು –ವದನ್ನು ನೀವು ಜ್ಞಾಪಿಸಿಕೊಳ್ಳುತ್ತೀರಾ? ಆತನು ಅವರಿಗೆ ಹೇಳಿದ್ದೇನೆಂದರೆ:

“ನಿಮ್ಮ ಹೃದಯವು ಕಳವಳಗೊಳ್ಳದೆ ಇರಲಿ; ದೇವರನ್ನು ನಂಬಿರಿ; ನನ್ನನ್ನೂ ನಂಬಿರಿ. ನನ್ನ ತಂದೆಯ ಮನೆಯಲ್ಲಿ **ಬಹಳ ಬಿಡಾರ – –ಗಳು** ಅವೆ; ಇಲ್ಲದಿದ್ದರೆ ನಿಮಗೆ ಹೇಳುತ್ತಿದ್ದೆನು; **ನಿಮಗೆ ಸ್ಥಳವನ್ನು ಸಿದ್ಧ ಮಾಡುವದಕ್ಕೆ ಹೋಗುತ್ತೇನಲ್ಲಾ.** ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು. ಮತ್ತು ನಾನು ಹೋಗುವ ಸ್ಥಳದ ಮಾರ್ಗವು ನಿಮಗೆ ತಿಳಿದದೆ. . . .ನಾನೇ ಮಾರ್ಗವೂ ಸತ್ಯವೂ ಜೀವವೂ **ಆಗಿದ್ದೇನೆ; ನನ್ನ ಮೂಲಕವಾಗಿ ಹೊರತು ಯಾರೂ ತಂದೆಯ ಬಳಿಗೆ ಬರುವದಿಲ್ಲ.”** (ಯೋಹಾನ–14:1-4,6)

ಇದನ್ನೇ ಮೆಸ್ಸೀಯನಾದ ಯೇಸು ಹೇಳಿದ್ದು. ಆತನು ಸ್ವತ: **ಮಾರ್ಗವಾಗಿದ್ದಾನೆ.** ಯಾವನಾದರೂ ಮಹೋನ್ನತ ದೇವರ ಮಗನ ಅಂದರೆ ಪರಿಶುದ್ಧ ವಿಮೋಚಕನ ಮೂಲಕವಾಗಿ ಬರದ ಹೊರತು ದೇವರ ಪರಿಶುದ್ಧ ಸನ್ನಿಧಿಗೆ ಪ್ರವೇಶಿಸುವದಕ್ಕಾಗುವದಿಲ್ಲ! **ಎಂದಿಗೂ ಇಲ್ಲ!** ಅದನ್ನೇ ವಾಕ್ಯವು ತಿಳಿಸುತ್ತದೆ, ಏನೆಂದರೆ:

“ಬರಬೇಕಾದ ರಕ್ಷಣೆಯು **ಇನ್ನಾರಲ್ಲಿಯೂ** ಸಿಕ್ಕುವದಿಲ್ಲ, ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿ – –ರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ.” (ಅಪೊ.ಕೃತ್ಯ–4:12).

"ದೇವರು ಒಬ್ಬನೇ; ದೇವರಿಗೂ ಮನುಷ್ಯರಿಗೂ **ಮಧ್ಯಸ್ಥನು ಒಬ್ಬನೇ**; ಆತನು ಮನುಷ್ಯನಾಗಿರುವ ಕ್ರಿಸ್ತ ಯೇಸುವೇ; ಆತನು ಎಲ್ಲರ ವಿಮೋಚನಾರ್ಥವಾಗಿ ತನ್ನನ್ನು ಒಪ್ಪಿಸಿಬಿಟ್ಟನು. . ." (1ತಿಮೊಥೆ–2:5,6)

ದೇವರಿಂದ ಬಂದಂತ ಮಧ್ಯಸ್ಥನಾಗಿರುವ ಯೇಸು ಕ್ರಿಸ್ತನು ಪರದೈಸಿಗೆ ನಡೆಸುವಂತ **ರಕ್ಷಣೆಯ ಮಾರ್ಗವಾಗಿದ್ದಾನೆ.** ಪಾಪಿಗಳನ್ನು ದೇವರ ಬಳಿಗೆ ಕರೆತರುವ ಕ್ರಮದಲ್ಲಿ, ಕ್ರಿಸ್ತನು ಲೋಕದಲ್ಲಿ ಹುಟ್ಟಿದನು, ಭೂಮಿಯ ಮೇಲೆ ಪರಿಶುದ್ಧ ಜೀವಿತವನ್ನು ಜೀವಿಸಿದನು, ಪಾಪಕ್ಕಾಗಿ ಸಂಪೂರ್ಣವಾದ ಯಜ್ಞದ ಹಾಗೆ ತನ್ನ ರಕ್ತವನ್ನು ಸುರಿಸಿದನು ಮತ್ತು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದು ಬಂದನು. ಆತನ ಮೂಲಕವಾಗಿ ಹೊರತು ದೇವರ ಬಳಿಗೆ ಯಾರೂ ಬರುವದಕ್ಕಾಗುವದಿಲ್ಲ. ನೀವು ಅದನ್ನು ನಂಬುತ್ತೀರಾ? ಮೆಸ್ಸೀ –ಯನಾದ ಯೇಸು ಪಾಪಿಗಳನ್ನು ದೇವರ ಸನ್ನಿಧಿಗೆ ತರುವಂತ **ಒಂದೇ ಮಾರ್ಗವಾಗಿದ್ದಾನೆ** ಎನ್ನುವದನ್ನು ನೀವು ನೋಡಿದಿರಾ? ಬಹುಶ: ನಾವು ಇದನ್ನು **ಒಂದು ಚಿಕ್ಕ ಕತೆಯಿಂದ** ಉದಾಹರಿಸಬಹುದು.

ಒಬ್ಬಾನೊಬ್ಬ ಮನುಷ್ಯನು ಒಂದು ಸಣ್ಣ ಹಳ್ಳಿಯಿಂದ ದೂರದಲ್ಲಿರುವ ಒಂದು ಪೊದೆಯಲ್ಲಿ ವಾಸಿಸುತ್ತಿದ್ದನು. ಇವನು ಬಟ್ಟೆಗಳನ್ನು ಧರಿಸದಿರುವ ಒಂದು ಬುಡಕಟ್ಟು ಜನರಿಗೆ ಸೇರಿದವನಾಗಿದ್ದನು. ಇವರು ತಮ್ಮ ಸೊಂಟದ ಸುತ್ತಲೂ ಒಂದು ರೀತಿಯ ಪಟ್ಟಿಯನ್ನು ಧರಿಸುತ್ತಿದ್ದರು. ಈ ಮನುಷ್ಯನಿಗೆ ಒಂದು ತುಂಡು ಭೂಮಿಯಿದ್ದು, ಅವನು ಅದನ್ನು ವ್ಯವಸಾಯ ಮಾಡುತ್ತಿದ್ದನು, ಆದರೆ ಇವನಿ – –ಗಿಂತ ಬಲಿಷ್ಠನಾಗಿದ್ದ ಯಾವನೋ ಒಬ್ಬನು ಬಂದು ಇವನ ಭೂಮಿಯನ್ನು ಕದ್ದುಕೊಂಡನು, ಇದರಿಂದ ಅವನಿಗೆ ವ್ಯವಸಾಯ ಮಾಡುವದಕ್ಕೆ ಜಾಗವಿಲ್ಲದಂತಾಯಿತು. ಇವನು ತನ್ನ ಭೂಮಿಯನ್ನು ಹಿಂದಕ್ಕೆ ಪಡೆದುಕೊಳ್ಳುವದಕ್ಕೆ ಯಾರೂ ಇವನಿಗೆ ಸಹಾಯ ಮಾಡಲಿಲ್ಲ ಯಾಕಂದರೆ ಅವರಿಗೆ ಕೊಡುವದಕ್ಕೆ ಅವನ ಬಳಿಯಲ್ಲಿ ಹಣವಿರಲಿಲ್ಲ.

ಒಂದು ದಿನ ಇವನಿಗೆ ಒಂದು ಕಲ್ಪನೆ ಬಂತು, ಏನೆಂದರೆ ಮುಖ್ಯ ಪಟ್ಟಣಕ್ಕೆ ಹೋಗಿ ಅಲ್ಲಿರುವ ದೇಶವನ್ನಾಳುವ ಅಧ್ಯಕ್ಷನನ್ನು ಕಂಡು, ತನಗೆ ಸಹಾಯ ಮಾಡುವಂತೆ ಕೇಳಿಕೊಳ್ಳಬೇಕು, ಯಾಕಂದರೆ ಆ ಅಧ್ಯಕ್ಷನು ಒಬ್ಬ ನ್ಯಾಯವಂತನೂ ಮತ್ತು ಕನಿಕರವುಳ್ಳ ಮನುಷ್ಯ – –ನೆಂಬುದನ್ನು ಇವನು ಕೇಳಿಸಿಕೊಂಡಿದ್ದನು. ಹಾಗಾಗಿ ಅವನು ಎದ್ದು ಬಹಳ ದೂರ ನಡೆದು ಆ ದೊಡ್ಡ ಪಟ್ಟಣಕ್ಕೂ ಮತ್ತು ಅಧ್ಯ – –ಕ್ಷೀಯ ಅರಮನೆಗೂ ಬಂದನು. ಓಹ್, ಎಂತಹ ದೊಡ್ಡದಾದ ಮತ್ತು ಸುಂದರವಾದ ಮನೆ ಅದು! ಕೊಳಕಾಗಿಯೂ ಮತ್ತು ಬೆತ್ತಲೆ –ಯಾಗಿಯೂ ಇದ್ದ ಅವನು ಆ ಮನೆಯ ಹೊರಬಾಗಿಲಿನ ಹತ್ತಿರಕ್ಕೆ ಬಂದು, **ಒಳಕ್ಕೆ ಹೋಗಲು ಪ್ರಯತ್ನಿಸಿದಾಗ,** ಅಲ್ಲಿದ್ದ ಒಬ್ಬ ಕಾವಲುಗಾರನು ಅವನಿಗೆ, "ಹೇ ಯಾರು ನೀನು! ಏನು ಮಾಡಲು ಪ್ರಯತ್ನಿಸುತ್ತಿರುವೇ?" ಎಂದು ಕೇಳಲು, ಅವನು, "ನಾನು ಅಧ್ಯಕ್ಷನನ್ನು ಕಾಣಬೇಕು" ಅಂದನು. ಅದಕ್ಕೆ ಆ ಕಾವಲುಗಾರನು, "ಹಾ! ಇಷ್ಟಬಂದವರೆಲ್ಲಾ ಇಲ್ಲಿ ಒಳಗೆ ಹೋಗಬಹುದೆಂದು ನೀನು ಯೋಚಿಸುತ್ತೀಯಾ? ನಿನ್ನನ್ನು ನೋಡಿಕೋ? ಕೊಳಕಾಗಿ ಮತ್ತು ಬೆತ್ತಲೆಯಾಗಿ ಇಲ್ಲಿಗೆ ಬರಬಾರದೆಂದು ನಿನಗೆ ಗೊತ್ತಿಲ್ಲವೋ? ಇಲ್ಲಿಂದ ದೂರವಿರು, ಇಲ್ಲದಿದ್ದರೆ ನಾನು ನಿನ್ನನ್ನು ಸೆರೆಯಲ್ಲಿ ಹಾಕುತ್ತೇನೆ!" ಅಂದನು.

ಹಾಗಾಗಿ, ಆ ಬಡ ಮನುಷ್ಯನು ಹಿಂತಿರುಗಿ ದೂರ ಹೋದನು, ಆದರೆ ಅವನು ನಿರಾಶನಾಗಲಿಲ್ಲ. ಅವನು ಮತ್ತೆ ಹೋಗಿ ಬೆಳಿಗ್ಗೆ – –ಯಿಂದ ಮಧ್ಯಾಹ್ನದವರೆಗೆ ಬೇಡಿಕೊಳ್ಳುತ್ತಲೇ ಇದ್ದನು. ಅನಂತರ ಅವನು ದುಬಾರಿಯಲ್ಲದ ಕೆಲವು ಬಟ್ಟೆಗಳನ್ನು ಕೊಂಡುತಂದನು, ಸ್ನಾನಮಾಡಿಕೊಂಡು, ಬಟ್ಟೆ ಧರಿಸಿ ಆ ಅಧ್ಯಕ್ಷನ ಅರಮನೆಗೆ ಹಿಂತಿರುಗಿ ಹೋದನು. ಅವನು ಹೊರಬಾಗಿಲಿನ ಹತ್ತಿರ ಬರುತ್ತಿದ್ದಂತೆ ಕಾವಲುಗಾರನು ಅವನಿಗೆ, "ನೀನು ಬಟ್ಟೆಯನ್ನು ಧರಿಸಿದ್ದೀ, ಆದರೆ ದೇಶದ ಅಧ್ಯಕ್ಷನ ಮುಂದೆ ಬರುವದಕ್ಕೆ ಅವಕಾಶ ಕೊಡುವಷ್ಟು ನಿನ್ನ ಬಟ್ಟೆಗಳು ಉತ್ತಮವಾಗಿಲ್ಲ. ಮತ್ತು ನಿನ್ನ ಉಡುಪು ಉತ್ತಮವಾಗಿದ್ದರೂ ಸಹ ನೀನು ಒಳಗೆ ಹೋಗುವದಕ್ಕಾಗುವದಿಲ್ಲ, ಯಾಕಂದರೆ ಅಧ್ಯಕ್ಷನ ಮನೆಯೊಳಗೆ ಹೋಗುವದಕ್ಕೆ **ಒಂದು ವಿಶೇಷವಾದ ಅನುಮತಿಯನ್ನು ನೀನು ಹೊಂದಿರಬೇಕು.** ಒಳಗೆ ಹೋಗು –ವದಕ್ಕೆ ನಿನಗೆ ಅಧಿಕಾರವಿಲ್ಲ! ಈಗ ಹೋಗು!" ಅಂದನು.

ಇದರಿಂದ ಆ ಮನುಷ್ಯನು ನಿರಾಶನಾದನು, ಮತ್ತು "ಏನು ಪ್ರಯೋಜನವಾಯಿತು? ಇಷ್ಟೆಲ್ಲಾ ತೊಂದರೆಗಳನ್ನು ಹಾದುಹೋದರು, ದೇಶದ ಅಧ್ಯಕ್ಷನ ಹತ್ತಿರ ಹೋಗಲಾಗಲಿಲ್ಲ!" ಅಂದುಕೊಂಡನು. ಅವನ ಭರವಸೆ ಹೊರಟುಹೋಯಿತು, ದಿಗಿಲುಗೊಂಡವನಾಗಿ ರಸ್ತೆಯ ಪಕ್ಕದಲ್ಲಿ ಕೂತುಕೊಂಡನು. ಹೇಗೂ, ಇದೆಲ್ಲಾ ನಡೆಯುತ್ತಿರುವ ವೇಳೆಯಲ್ಲಿ, ದೇಶದ ಅಧ್ಯಕ್ಷನು ಅವನನ್ನು ನೋಡಿದನು. ಆ ಅಧ್ಯಕ್ಷನ ಮಗನೂ ಸಹ ಅಲ್ಲಿದ್ದನು. ಅವನು ತನ್ನ ಮಗನಿಗೆ, "ಹೋಗಿ ಆ ಮನುಷ್ಯನಿಗೆ ಏನು ಬೇಕೆಂದು ವಿಚಾರಿಸು" ಎಂದು ಹೇಳಿದನು. ಆ ಮಗನು ಈ ಮನುಷ್ಯನ ಬಳಿಗೆ ಬಂದು, ಅವನ ಹತ್ತಿರ ಕೆಳಗೆ ಕೂತುಕೊಂಡು ಅವನಿಗೆ, "ಸರ್, ನಾನೇನಾದರೂ ನಿಮಗೆ ಸಹಾಯ ಮಾಡಲೋ? ನೀವು ಇಲ್ಲಿಗೆ ಯಾಕೆ ಬಂದಿದ್ದೀರಿ ಮತ್ತು ನೀವು ಯಾಕೆ ಬೇಸರಗೊಂಡಿದ್ದೀರಿ?" ಎಂದು ಕೇಳಿ – –ದನು. ಅದಕ್ಕೆ ಆ ಮನುಷ್ಯನು, ನಾನು ದೇಶದ ಅಧ್ಯಕ್ಷನನ್ನು ನೋಡಬೇಕು, ಆದರೆ ಅದು ಅಸಾಧ್ಯವಾಗಿದೆ. **ನನ್ನ ಎಲ್ಲಾ ಪ್ರಯತ್ನ – ಗಳು ವ್ಯರ್ಥವಾದವು!"** ಅಂದನು.

ಆ ಯೌವನಸ್ಥನು ಅವನಿಗೆ, "ನಾನು ದೇಶದ ಅಧ್ಯಕ್ಷನ ಮಗ, ಮತ್ತು ನಿಮಗೆ ಸಹಾಯ ಮಾಡುವದಕ್ಕೆ ನನ್ನ ತಂದೆಯು ನನ್ನನ್ನು ಇಲ್ಲಿಗೆ ಕಳಿಸಿದ್ದಾನೆ. ನನ್ನ ಜೊತೆ ಬನ್ನಿರಿ." ಅಂದನು. ಹಾಗಾಗಿ, ಆ ಮನುಷ್ಯನು ಆ ಮಗನ ಜೊತೆಯಲ್ಲಿ ಅಧ್ಯಕ್ಷನ ಅರಮನೆಯ ಹೊರಬಾಗಿಲಿನ ಹತ್ತಿರ ಬಂದನು. ಅವರು ಅಲ್ಲಿಂದ ಅರಮನೆಯೊಳಕ್ಕೆ ಹೋಗುವಾಗ ಈ ಮೊದಲು ಅವನನ್ನು ತಡೆದಿದ್ದ ಆ ಕಾವಲುಗಾರನು ಅವರಿಗೆ ದೊಡ್ಡ ಗೌರವದೊಂದಿಗೆ ವಂದಿಸಿದನು. ಆ ಅಧ್ಯಕ್ಷನ ಮಗನು ಅವನಿಗೆ ಧರಿಸಿಕೊಳ್ಳುವದಕ್ಕೆ ಸುಂದರವಾದ ಉಡುಪನ್ನು ಕೊಟ್ಟನು ಮತ್ತು ಅವರಿಬ್ಬರೂ ಒಟ್ಟಿಗೆ ಅರಮನೆಯೊಳಕ್ಕೆ ಬಂದರು. ಹೀಗೆ, **ಅಧ್ಯಕ್ಷನ ಮಗನ ಅಧಿಕಾರದ ಸಹಾಯದ ನಿಮಿತ್ತದಿಂದ** ಆ ಮನುಷ್ಯನು ಅಧ್ಯಕ್ಷನ ಅರಮನೆಯೊಳಕ್ಕೆ ಪ್ರವೇಶಿಸಿ ಆತನನ್ನು ಕಂಡನು.

ಸ್ನೇಹಿತರೇ, ರಾಜಾಧಿರಾಜನ ಅರಮನೆಯಾಗಿರುವ ಪರದೈಸಿಗೆ ಪ್ರವೇಶಿಸುವದಕ್ಕೆ ಇಷ್ಟಪಡುವವರಿಗೆ ಸಹ ಇದೇ ರೀತಿ ಆಗುತ್ತದೆ. ವಿಶ್ವವನ್ನು ಆಳುವ ದೇವರು ಉನ್ನತನೂ ಮತ್ತು ಪರಿಶುದ್ಧನೂ ಆಗಿದ್ದಾನೆ. ನಾವು ಯಾವುದೋ ಒಂದು ರೀತಿಯಲ್ಲಿ ಆತನ ಮಹಿಮೆ –ಯುಳ್ಳ ಸನ್ನಿಧಿಯೊಳಗೆ ಪ್ರವೇಶಿಸುವದಕ್ಕಾಗುವದಿಲ್ಲ! ನಮ್ಮ ಸ್ವಂತ ಪರಿಶ್ರಮಗಳು ಆತನ ಪ್ರಸನ್ನತೆಯೊಳಗೆ ಪ್ರವೇಶಾಧಿಕಾರವನ್ನು ಎಂದಿಗೂ ಸಂಪಾದಿಸಿಕೊಡುವದಿಲ್ಲ. ತನ್ನ ದುರ್ಬಲವಾದ ಸ್ವಂತ ಪರಿಶ್ರಮಗಳಿಂದ ಅಧ್ಯಕ್ಷನ ಮನೆಯೊಳಗೆ ಪ್ರವೇಶಿಸುವದಕ್ಕೆ ಪ್ರಯ –ತ್ನಿಸಿದಂತ ಆ ಬಡ ಮನುಷ್ಯನ ಹಾಗೆ ನಾವೆಲ್ಲರೂ ಇದ್ದೇವೆ. ವಾಕ್ಯ ಹೇಳುವದೇನೆಂದರೆ: "ನಾವೆಲ್ಲರೂ ಅಶುದ್ಧನ ಹಾಗಿದ್ದೇವೆ, ನಮ್ಮ ಧರ್ಮಕಾರ್ಯಗಳೆಲ್ಲಾ ಹೊಲೆಯ ಬಟ್ಟೆಯಂತಿವೆ." (ಯೆಶಾಯ–64:6). ಪರದೈಸು ಒಂದು ಪರಿಶುದ್ಧವಾದ ಸ್ಥಳ, "ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ, ಅಸಹ್ಯವಾದದ್ದನ್ನೂ ಸುಳ್ಳಾದದ್ದನ್ನೂ ನಡಿಸುವವನು ಸೇರುವದಿಲ್ಲ."(ಪ್ರಕ–21:27). **ಅಲ್ಲಿಂದ ಬಂದಿರುವ ಪರಿಶುದ್ಧನೊಬ್ಬನ ಹೊರತಾಗಿ ಬೇರೆ ಯಾರೂ ನಮ್ಮನ್ನು ಆ ಪರಿಶುದ್ಧವಾದ ಸ್ಥಳದೊಳಕ್ಕೆ ಸೇರಿಸುವದಿಲ್ಲ!** ಉನ್ನತದಲ್ಲಿರುವ ದೇವರ ನಿತ್ಯಪುತ್ರನೂ, ದೇವರ ಕುರಿಮರಿಯೂ, ಪರದೈಸಿನಿಂದ ಬಂದವನೂ, ಪಾಪವನ್ನು ತೆಗೆದು ಹಾಕುವದಕ್ಕೆ ಒಂದು ಯಜ್ಞದ ಹಾಗೆ ಮರಣ ಹೊಂದಿದವನೂ, ಮತ್ತು ಸತ್ತವರೊಳಗಿಂದ ಎದ್ದು ಬಂದು ಪರದೈಸಿಗೆ ಹಿಂತಿರುಗಿ ಹೋಗಿರುವ **ಯೇಸು ಕ್ರಿಸ್ತನೇ** ಆ ಪರಿಶುದ್ಧ ವ್ಯಕ್ತಿ!

ಹಾಗಾದರೆ, ಯಾರು ಪರದೈಸಿಗೆ ಹೋಗುತ್ತಾರೆ? ವಿಮೋಚಕನಾದ ಯೇಸುವಿನಲ್ಲಿರುವ ನಂಬಿಕೆಯ ಮೂಲಕ ಆತನು ಸುರಿಸಿದ ರಕ್ತದಲ್ಲಿ ಶುದ್ಧೀಕರಿಸಲ್ಪಟ್ಟವರು ಮಾತ್ರ ಅಲ್ಲಿಗೆ ಹೋಗುತ್ತಾರೆ! ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ:

"ದೇವರಿಂದಾಗುವ ಆ ನೀತಿಯು ಯಾವದೆಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು. ಹೆಚ್ಚು ಕಡಿಮೆ ಏನೂ ಇಲ್ಲ. ಎಲ್ಲರೂ ಪಾಪ ಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆ ಮೂಲಕವಾಗಿ ಆಗುವದು. ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು." (ರೋಮಾ–3:22-25). "ನಾವು ಮನುಷ್ಯರ ಸಾಕ್ಷಿಯನ್ನು ತೆಗೆದುಕೊಳ್ಳುತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನೆಂದರೆ, ಆತನು ತನ್ನ ಮಗನ ವಿಷಯದಲ್ಲಿ ಹೇಳಿದ್ದೇ. ದೇವರ ಮಗನಲ್ಲಿ ನಂಬಿಕೆಯಿಟ್ಟವನು ಆ ಸಾಕ್ಷಿ – –ಯನ್ನು ತನ್ನಲ್ಲೇ ಹೊಂದಿದ್ದಾನೆ. ದೇವರನ್ನು ನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ; ಹೇಗಂದರೆ ದೇವರು ತನ್ನ ಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆಯಿಡಲಿಲ್ಲ. **ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ. ಯಾವನು ದೇವರ ಮಗನನ್ನು ಅಂಗಿಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.** ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರು – –ವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ." (1ಯೋಹಾನ–5:9-13)

ಈ ದಿನ ನೀವು ಯಾರು ಇದನ್ನು ಕೇಳಿಸಿಕೊಳ್ಳುತ್ತಿದ್ದೀರೋ, ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ **ತಿಳಿದಿದೆಯಾ?** ನೀವು ಪರ – –ದೈಸಿಗೆ ಹೋಗುತ್ತೀರಿ ಮತ್ತು ಎಂದೆಂದಿಗೂ ದೇವರ ಸನ್ನಿಧಿಯಲ್ಲಿ ಉಲ್ಲಾಸಪಡುತ್ತೀರಿ ಎಂಬುದು ನಿಮಗೆ ನಿಶ್ಚಿತವಿದೆಯಾ? ನೀವು ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿದ್ದೀರೋ? ನಿಮ್ಮ ಹೆಸರು ಕುರಿಮರಿಯ ಜೀವಬಾಧ್ಯರ ಪುಸ್ತಕದಲ್ಲಿ ಬರೆದದೆಯೋ?

ದೇವರು ಇದೆಲ್ಲಾದರೊಳಗೆ ನಿಮಗೆ ವಿವೇಕವನ್ನು ಕೊಡುವದಕ್ಕೆ ಇಷ್ಟಪಡುತ್ತಾನಾದದರಿಂದ ಈ ದಿನ ನೀವು ಓದಿದ್ದರ ಕುರಿತು ಜಾಗ್ರತೆ –ಯಿಂದ ಆಲೋಚಿಸಿರಿ. . . .

ಆತನ ಪರಿಶುದ್ಧ ವಾಕ್ಯದಿಂದ ಈ ರೋಮಾಂಚಕಾರಿಯಾದ ವಚನವನ್ನು ಆಲೋಚಿಸುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿಕೇಳಲಿಲ್ಲ, ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ."** (1ಕೊರಿಂಥ–2:9)

ಪಾಠ 99

# ಯೇಸುವಿನ ಕುರಿತು ನೀವು ಏನು ಆಲೋಚಿಸುತ್ತೀರಿ?

## ಭಾಗ 1

{#99 ಮತ್ತು #100 ರ ರೇಡಿಯೋ ಕಾರ್ಯಕ್ರಮಗಳನ್ನು, ಉತ್ತರ ಆಫ್ರಿಕಾದ ಅನೇಕ ಅರೇಬಿಕ್ ನಾಡಭಾಷೆಗಳಲ್ಲಿ "ಇಂಜಿಲ್"ಅನ್ನು ಅನುವಾದಿಸುವದಕ್ಕೆ ಸಹಾಯ ಮಾಡಿದ ಸಿ.ಆರ್. ಮಾರ್ಷ್‌ರವರ ಒಂದು ಪ್ರಸಂಗದಿಂದ ಹೊಂದಿಸಿಕೊಳ್ಳಲಾಗಿದೆ}

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಬಹಳ ಸಮಯದವರೆಗೆ ನಾವು, ಪಾಪಿಗಳು ದೇವರ ಮುಂದೆ ನೀತಿವಂತರಾಗುವದಕ್ಕಾಗಿ ದೇವರಿಂದ ಸ್ಥಾಪಿಸಲ್ಪಟ್ಟಿರುವ ನೀತಿಯ ಮಾರ್ಗವನ್ನು ನೋಡುವದಕ್ಕೆ ಪ್ರವಾದಿಗಳ ಗ್ರಂಥಗಳನ್ನು ಪರೀಕ್ಷಿಸುತ್ತಿದ್ದೇವೆ. ದೇವರ ಪ್ರವಾದಿಗಳ ಮಾತುಗಳನ್ನು ಮೆಸ್ಸೀಯನಾದ ಯೇಸು ಹೇಗೆ ನೆರವೇರಿಸಿದನೆಂಬುದನ್ನು ನಾವು ನೋಡಿದ್ದೇವೆ. **ಈ ದಿನದ ಮತ್ತು ಮುಂದಿನ ಪಾಠಗಳಲ್ಲಿ**, ಪ್ರವಾದಿಗಳೆಲ್ಲರೂ ಮಾತಾ–ಡಿರುವ ಒಬ್ಬನ ಮಹಿಮೆಯನ್ನು ನಿಮ್ಮೊಂದಿಗೆ ಪುನರಾವಲೋಕನ ಮಾಡುವದಕ್ಕೆ ನಾವು ಉದ್ದೇಶಿಸಿದ್ದೇವೆ. ಹಾಗಾಗಿ ಪ್ರವಾದಿಗಳ ಗ್ರಂಥಗಳ ನಮ್ಮ ಕಾಲಾನುಕ್ರಮದ ಅಧ್ಯಯನದಲ್ಲಿ ನಮ್ಮ ಕೊನೆಯ ಎರಡು ಪಾಠಗಳು, **"ಯೇಸುವಿನ ಕುರಿತು ನೀವು ಏನು ಆಲೋ––ಚಿಸುತ್ತೀರಿ?"** ಎಂಬುದಾಗಿ ಹೆಸರು ಕೊಡಲ್ಪಟ್ಟಿದೆ.

ಸುವಾರ್ತೆಯಲ್ಲಿನ{ಇಂಜಿಲ್} ನಮ್ಮ ಅಧ್ಯಯನದಲ್ಲಿ, ಯೇಸು ಜನರಿಗೆ, **"ಬರಬೇಕಾದ ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು**? (ಮತ್ತಾಯ–22:42) ಎಂದು ಪ್ರಶ್ನೆ ಮಾಡಿದ್ದನ್ನು ನಾವು ಕೇಳಿದ್ದೇವೆ. ಜೀವನದಲ್ಲಿ ನಾವು ಪ್ರತಿಯೊಬ್ಬರೂ ಉತ್ತರಿಸಬೇಕಾದ ಅತೀ ಪ್ರಾಮುಖ್ಯವಾದ ಪ್ರಶ್ನೆ ಇದಾಗಿದೆ. ಈ ಪ್ರಶ್ನೆಗೆ ನಾವು ಕೊಡುವ ಉತ್ತರದ ಮೇಲೆ ಇಲ್ಲಿಂದ ಮುಂದಿನ ನಮ್ಮ ಗುರಿಯು ಅವಲಂಬಿತವಾಗಿದೆ! ಮೆಸ್ಸೀಯನಾದ ಯೇಸು ಹಿಂತಿರುಗಿ ಬಂದ ತಕ್ಷಣ, ತನ್ನ ಕಾಲದ ಜನರಿಗೆ ಕೇಳಿದ ಹಾಗೆಯೇ, "ನಿಮ್ಮ ವಿಷಯವೇನು, ನನ್ನ ಕುರಿತು ನೀವು ಏನು ಆಲೋಚಿಸುತ್ತೀರಿ?' ಎಂದು ನಿಮಗೆ ಪ್ರಶ್ನೆ ಮಾಡುತ್ತಾನೆ.

ಯೇಸು ನಿಜವಾಗಿಯೂ ಯಾರು ಎಂಬುದಾಗಿ ನೀವು ತಿಳಿದುಕೊಳ್ಳುವಂತೆ ಮಾಡುವದೇ ನಮ್ಮ ಗುರಿಯಾಗಿದೆ. ಈ ವಿಷಯದಲ್ಲಿ ಯಾರೂ ನಿಮ್ಮನ್ನು ದಾರಿ ತಪ್ಪಿಸಬಾರದು ಎನ್ನುವದೇ ನಮ್ಮ ದೊಡ್ಡ ಕಾಳಜಿಯಾಗಿದೆ. ಯೇಸು ಕ್ರಿಸ್ತನು ಕೇವಲ ಪ್ರವಾದಿಗಳಲ್ಲಿಒಬ್ಬನು ಅಥವಾ ಮನುಷ್ಯರಲ್ಲಿ ಒಬ್ಬ ಒಳ್ಳೇ ಮನುಷ್ಯನು ಎಂಬುದಾಗಿ ನೀವು ಸ್ವೀಕರಿಸಿಕೊಳ್ಳಬಾರದೆಂದು ನಾವು ನಿಮ್ಮನ್ನು ಒತ್ತಾಯಪಡಿಸು––ತ್ತೇವೆ. ಇಲ್ಲ, **ಆತನು ಅದ್ವಿತೀಯನು!** ಈ ಲೋಕದಲ್ಲಾಗಲೀ ಅಥವಾ ಮುಂಬರುವ ಲೋಕದಲ್ಲಾಗಲೀ ಆತನಿಗೆ ಸಮಾನರ್ಯಾರು ಇಲ್ಲ. ನೀವು ಆತನ ಕುರಿತು ಏನು ಆಲೋಚಿಸುತ್ತೀರಿ? ಮೆಸ್ಸೀಯನಾದ ಯೇಸುವಿನ ಕುರಿತು ಹತ್ತು ಪ್ರಶ್ನೆಗಳನ್ನು ನಿಮಗೆ ಕೇಳುವದಕ್ಕೆ ನಾವು ಇಷ್ಟಪಡುತ್ತೇವೆ, ಈ ಕಾರ್ಯಕ್ರಮದಲ್ಲಿ ಐದು ಮತ್ತು ಮುಂದಿನ ಕಾರ್ಯಕ್ರಮದಲ್ಲಿ ಐದು ಪ್ರಶ್ನೆಗಳನ್ನು ಕೇಳುತ್ತೇವೆ.

### 1.)ಮೊದಲನೆಯದಾಗಿ, ಆತನ ಆಶ್ಚರ್ಯಕರವಾದ ಜನನದ ಕುರಿತು ನೀವು ಏನು ಲೋಚಿಸುತ್ತೀರಿ?

ಆತನ ಹಾಗೆ ಹುಟ್ಟಿದವರು ಯಾರೂ ಇಲ್ಲ. ಆತನು ಮರಿಯಳ ಮಗನಾದ ಯೇಸು. ಯೋಹಾನನು ಜಕರೀಯನ ಮಗನು, ಸೊಲೊ–ಮೋನನು ದಾವೀದನ ಮಗನು, ಇಷ್ಮಾಯೇಲನು ಅಬ್ರಹಾಮನು ಮಗನು ಎಂಬುದು ನಿಮಗೆ ಗೊತ್ತು. ಪ್ರತಿಯೊಬ್ಬರು ತಮ್ಮ ಹೆಸ––ರಿಗೆ ತಮ್ಮ ತಂದೆಯ ಅಡ್ಡ ಹೆಸರನ್ನು ಇಲ್ಲವೇ ತಮ್ಮ ತಂದೆಯ ಹೆಸರನ್ನು ಸೇರಿಸಿಕೊಳ್ಳುತ್ತಾರೆ. ಆದರೆ ಯೇಸುವಿನ ಸಂಗತಿಯಲ್ಲಿ, ಆತನ ಹೆಸರಿಗೆ ಆತನ ತಾಯಿಯ ಹೆಸರು ಯಾಕೆ ಸೇರಿಸಲ್ಪಟ್ಟಿತು? ಯಾಕಂದರೆ ಆತನಿಗೆ ಭೂಲೋಕದ ತಂದೆಯಿರಲಿಲ್ಲ. ಆತನು ಒಬ್ಬ ಯೌವನಸ್ಥ ಕನ್ಯೆಯಲ್ಲಿ ಹುಟ್ಟಿದವನಾಗಿದ್ದನು. ಆತನು ದೇವರ ಶಕ್ತಿಯಿಂದ ಹುಟ್ಟಿದವನು. ಮೆಸ್ಸೀಯನು ಹುಟ್ಟುವದಕ್ಕಿಂತ ಏಳು ನೂರು ವರುಷಗಳಿಗಿಂತ ಮೊದಲೇ ಆತನು ಹೇಗೆ ಹುಟ್ಟುತ್ತಾನೆಂದಾಗಿ ಪ್ರವಾದಿಯಾದ ಯೆಶಾಯನು ಹೀಗೆ ಹೇಳುತ್ತಾ ಪ್ರವಾದಿಸಿ––ದ್ದನು, "ಇಗೋ, ಒಬ್ಬ **ಕನ್ನಿಕೆಯು** ಗರ್ಭಿಣಿಯಾಗಿ ಮಗನನ್ನು ಹಡೆಯುವಳು, ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ("ದೇವರು ನಮ್ಮ ಕೂಡ ಇದ್ದಾನೆಂದು" ಈ ಹೆಸರಿನ ಅರ್ಥ)!" (ಯೆಶಾಯ–7:14; ಮತ್ತಾಯ–1:23).

ದೇವರು ನೆಲದ ಮಣ್ಣಿನಿಂದ ನಮ್ಮ ಪೂರ್ವಿಕನಾದ ಆದಾಮನನ್ನು ಉಂಟುಮಾಡಿದನು. ಪ್ರವಾದಿಗಳ ಹಾಗೆ ನಾವೆಲ್ಲರೂ ಆದಾಮನ ಸಂತತಿಯವರು. ನಾವು ಭೂಲೋಕಕ್ಕೆ ಸಂಬಂಧಪಟ್ಟವರು. ಹೀಗಿದ್ದರೂ, ಕರ್ತನಾದ ಯೇಸು ಪರಲೋಕದಿಂದ ಬಂದನು. ನಮ್ಮ ಪಾಪದ ನಿಮಿತ್ತದಿಂದ ನಾವೆಲ್ಲರೂ ಕೊಳಕು ಮಣ್ಣಿನಂತಿದ್ದೆವು, ಆದರೆ ಯೇಸು ಪರಲೋಕದಿಂದ ಬಂದಂತಹ ಮಳೆಯ ಹಾಗಿದ್ದನು. ದೇವರ ಹಾಗೆಯೇ ಆತನು ನಿಷ್ಕಳಂಕನು ಮತ್ತು ಪರಿಶುದ್ಧನೂ ಆಗಿದ್ದನು. ಸುವಾರ್ತೆಯ ದಾಖಲೆಗಳು ಹೇಳುವದೇನೆಂದರೆ, **"ಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನು."** (1ತಿಮೊ–1:15). ಯೇಸು ಈ ಲೋಕಕ್ಕೆ ಬರುವದಕ್ಕಿಂತ ಮುಂಚೆ, ಆತನು ದೇವರ ಸನ್ನಿಧಿಯಲ್ಲಿದ್ದನು, ಯಾಕಂದರೆ ಆತನು ದೇವರ ವಾಕ್ಯವೂ ಮತ್ತು ದೇವರ ಆತ್ಮವೂ ಆಗಿದ್ದಾನೆ. ಆತನು ಮನುಷ್ಯನ ದೇಹವನ್ನು ಧರಿಸಿಕೊಂಡು ಈ ಲೋಕಕ್ಕೆ ಬಂದು ನಮ್ಮ ಪಾಪಗಳಿಂದ ನಮ್ಮನ್ನು ರಕ್ಷಿಸುವದನ್ನು ಆತನು ತಾನೇ ಆಯ್ಕೆ ಮಾಡಿಕೊಂಡನು. ಆತನು ಮೇಲಿನಿಂದ ಬಂದವನು.

ಇಬ್ಬರು ಮನುಷ್ಯರು ಆಳವಾದ ಬಾವಿಯಲ್ಲಿ ಬಿದ್ದರು ಎಂದು ಒಂದು ಕತೆಯು ಹೇಳುತ್ತದೆ. ಒಬ್ಬನು ಇನ್ನೊಬ್ಬನಿಗೆ, **"ಹೇ, ಈ ಕೆಟ್ಟ –ದಾದ ಸ್ಥಳದಿಂದ ನನ್ನನ್ನು ರಕ್ಷಿಸು! ಈ ಅಂಟಾದ ಕೆಸರಿನಿಂದ ನನ್ನನ್ನು ಹೊರಗೆ ತಾ!"** ಎಂದು ಕೇಳಿದನು. ಆಗ ಇನ್ನೊಬ್ಬನು ಅವನಿಗೆ, **"ಮೂರ್ಖ, ನಾವಿಬ್ಬರೂ ಇಲ್ಲೇ ಇರುವಾಗ ನಾನು ನಿನ್ನನ್ನು ಹೊರಗೆ ತರುವದು ಹೇಗೆ?"** ಎಂದು ಹೇಳಿದನು. ಅವರಿ – –ಬ್ಬರೂ ಒಂದೇ ಗುಂಡಿಯಲ್ಲಿದ್ದದರಿಂದ, ಒಬ್ಬನು ಇನ್ನೊಬ್ಬನನ್ನು ಹೊರಗೆ ತರುವದಕ್ಕೆ ಸಾಧ್ಯವಿಲ್ಲ. ನಂತರ ಮೇಲಿನಿಂದ ಯಾರೋ, ಬಾವಿಯೊಳಕ್ಕೆ ಒಂದು ಹಗ್ಗವನ್ನು ಬಿಟ್ಟಿದ್ದೇವೆ ಅದನ್ನು ಗಟ್ಟಿಯಾಗಿ ಹಿಡಿದುಕೊಳ್ಳಿರಿ ಎಂದು ಕೂಗುವದನ್ನು ಇವರು ಕೇಳಿಸಿಕೊಂಡರು. **ಬಾವಿಗೆ ಬೀಳದಿರುವ ಯಾರಾದರೂ ಮಾತ್ರ ಅವರಿಗೆ ಸಹಾಯ ಮಾಡುವದಕ್ಕೆ ಸಾಧ್ಯವಾಯಿತು.**

ಪ್ರವಾದಿಗಳಲ್ಲಿ ತುಂಬಾ ಉತ್ತಮರಾದವರು ಆಳವಾದ ಪಾಪದ ಗುಂಡಿಯೊಳಗಿಂದ ನಮ್ಮನ್ನು ರಕ್ಷಿಸುವದಕ್ಕೆ ಸಾಧ್ಯವಿಲ್ಲ, ಯಾಕಂದರೆ ಅವರೂ ಸಹ ಪಾಪಿಗಳೇ. ಹೀಗಿದ್ದರೂ, ಮನುಷ್ಯನಲ್ಲಿರುವ ಪಾಪದ ಸ್ವಭಾವವನ್ನು ಯೇಸು ಸ್ವಾಸ್ಥ್ಯವಾಗಿ ಪಡೆದುಕೊಳ್ಳಲಿಲ್ಲ. ಆತನು **ಮೇಲಿನಿಂದ ಬಂದವನು.** ಆತನು ಒಬ್ಬ ಕನ್ಯೆಯಲ್ಲಿ ಹುಟ್ಟಿದವನು. ಲೋಕದ ರಕ್ಷಕನೂ ಪರಿಶುದ್ಧ ಮೆಸ್ಸೀಯನ ಜನನವನ್ನು ಪ್ರಕಟಿಸು –ವದಕ್ಕೆ ದೇವರು ತನ್ನ ದೂತರನ್ನು ಕಳಿಸಿದ್ದನ್ನೂ ಮತ್ತು ಆಕಾಶದಲ್ಲಿ ಒಂದು ದೊಡ್ಡ ನಕ್ಷತ್ರ ಇಟ್ಟಿದ್ದನ್ನೂ ಸಹ ನಾವು ನೋಡಿದ್ದೇವೆ. ಇದೆಲ್ಲವೂ ಎಷ್ಟು ಅದ್ಭುತಕರವಾದುದಾಗಿತ್ತು! ಈ ಮನುಷ್ಯನ ಹಾಗೆ ಬೇರೆ ಯಾವ ಮನುಷ್ಯನೂ ಹುಟ್ಟಿಲ್ಲ. ಆತನು ತನ್ನ ಜನನದಲ್ಲಿ ಅದ್ವಿತೀಯನು. ಆತನು ಹೋಲಿಸಲಾಗದವನು! ಹೀಗಿದ್ದರೂ, ಯೇಸುವಿನ ಶ್ರೇಷ್ಠತೆಯು ಆತನ ಜನನದೊಂದಿಗೆ ಕೊನೆಯಾಗುವದಿಲ್ಲ. ಯೇಸು ತನ್ನ ಗುಣಲಕ್ಷಣದಲ್ಲಿಯೂ ಸಹ ಅದ್ವಿತೀಯನಾಗಿದ್ದಾನೆ. ಹಾಗಾಗಿ, ನಮ್ಮ ಎರಡನೆಯ ಪ್ರಶ್ನೆ ಏನೆಂದರೆ:

**2.)ಆತನ ಪರಿಶುದ್ಧ ಗುಣಲಕ್ಷಣದ ಕುರಿತಾಗಿ ನೀವು ಏನು ಅಲೋಚಿಸುತ್ತೀರಿ?**

ಯೇಸು ಸಂಪೂರ್ಣನಾಗಿದ್ದನು. ಆತನು ಎಂದಿಗೂ ಒಂದೇ ಒಂದು ಪಾಪವನ್ನಾದರೂ ಮಾಡಿದವನಲ್ಲ. ಆತನು ಎಂದಿಗೂ ಕ್ಷಮಾ –ಪಣೆಯನ್ನು ಕೇಳಲಿಲ್ಲ, ಯಾಕಂದರೆ ಆತನು ಎಂದಿಗೂ ಯಾರಿಗೂ ಅನ್ಯಾಯ ಮಾಡಲಿಲ್ಲ. ದೇವರಿಗೆ ಭಯಪಡುವ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪಾಪಕ್ಕಾಗಿ ಪಶ್ಚತ್ತಾಪಪಟ್ಟು ಕ್ಷಮಾಪಣೆಯನ್ನು ಕೇಳಿಕೊಳ್ಳುತ್ತಾನೆ. ಎಲ್ಲಾ ಪ್ರವಾದಿಗಳೂ ಇದನ್ನು ಮಾಡಿದರು. ಹೇಗೂ, ನೀವು ದೇವರ ವಾಕ್ಯವನ್ನು ಆರಂಭದಿಂದ ಕೊನೆಯವರೆಗೆ ಹುಡುಕಿದರೂ, {ಉಲೂಫ್‌ನಲ್ಲಿ: ನೀವು ಎಲ್ಲಿಂದ ಪ್ರಾರಂಭಿಸಿ – –ದ್ದೀರೋ ಅಲ್ಲಿಗೆ ಮುಟ್ಟುವತನಕ ಎಲ್ಲಾ ಕಡೆಗೂ ಹೋಗುತ್ತೀರಿ} ಕರ್ತನಾದ ಯೇಸು ಕ್ಷಮಾಪಣೆಯನ್ನು ಬೇಡಿಕೊಂಡನು ಎಂದು ಹೇಳುವಂತಹ ಒಂದೇ ಒಂದು ವಾಕ್ಯವನ್ನು ನೀವು ಕಂಡುಕೊಳ್ಳುವದಿಲ್ಲ. **ಆತನು ಎಂದೂ ಪಾಪ ಮಾಡದಿರುವದರಿಂದ** ಆತನಿಗೆ ಕ್ಷಮಾ –ಪಣೆಯ ಅಗತ್ಯವಿರಲಿಲ್ಲ. ಆತನ ಸ್ನೇಹಿತರು ಮತ್ತು ಆತನ ವೈರಿಗಳು ಎಲ್ಲರೂ ಹುಡುಕಿದರೂ ಆತನಲ್ಲಿ ಒಂದೇ ಒಂದು ತಪ್ಪನ್ನಾ – –ದರೂ ಕಂಡುಹಿಡಿಯುವದಕ್ಕೆ ಅವರಿಂದಾಗಲಿಲ್ಲ. ಸ್ನೇಹಿತರೇ, ಆತನ ಹೊರತಾಗಿ ಪಾಪವಿಲ್ಲದವರೂ ಒಬ್ಬರೂ ಇಲ್ಲ. ಕರ್ತನಾದ ಯೇಸು ಪ್ರವಾದಿಗಿಂತಲೂ ಹೆಚ್ಚಿನವನಾಗಿದ್ದಾನೆ. ಆತನು ಒಬ್ಬ ಮನುಷ್ಯನಾಗಿ ಭೂಮಿಯ ಮೇಲೆ ಕಾಣಿಸಿಕೊಂಡ ದೇವರ ನಿಜವಾದ ವಾಕ್ಯವಾಗಿದ್ದಾನೆ. ಹೌದು, ಯೇಸು ತನ್ನ ಗುಣದಲ್ಲಿ ಅದ್ವಿತೀಯನು. ಆತನು ಹೋಲಿಕೆಯಿಲ್ಲದವನು! ಆದರೆ ಗ್ರಹಿಸಿಕೊಳ್ಳುವದಕ್ಕೆ ಮುಖ್ಯವಾದದು ಸಹ ಇಲ್ಲಿದೆ. ಯೇಸು ತನ್ನ ಮಾತುಗಳಲ್ಲಿಯೂ ಸಹ ಅದ್ವಿತೀಯನು.

**3.)ಆತನ ಮಾತುಗಳ ಕುರಿತಾಗಿ ನೀವು ಏನು ಆಲೋಚಿಸುತ್ತೀರಿ?**

ಒಂದು ದಿನ ಆತನ ಶತೃಗಳು ಆತನನ್ನು ಸೆರೆ ಹಿಡಿಯುವದಕ್ಕೆ ಸೈನಿಕರುಗಳನ್ನು ಕಳಿಸಿದರು. ಅವರು ಆತನಿದ್ದಲ್ಲಿಗೆ ಬಂದಾಗ, ಆತನ ಬೋಧನೆಗಳನ್ನು ಕೇಳಿ, ಆತನನ್ನು ಸೆರೆಹಿಡಿಯದೇ ಹಾಗೆಯೇ ಹೊರಟು ಹೋದರು. ಅವರು ಆಶ್ಚರ್ಯಗೊಂಡು, **"ಈ ಮನುಷ್ಯನು ಮಾತಾಡುವ ರೀತಿಯಲ್ಲಿ ಯಾರೂ ಎಂದೂ ಮಾತಾಡಿದ್ದಿಲ್ಲ"** ಎಂದು ಹೇಳಿದರು. (ಯೋಹಾನ–7:46).

ಆತನು ತನ್ನ ಕುರಿತಾಗಿ ಏನು ಹೇಳಿದನೆಂಬುದನ್ನು ಆಲೋಚಿಸಿರಿ. **"ನಾನೇ ಲೋಕಕ್ಕೆ ಬೆಳಕು**; ನನ್ನನ್ನು ಅನುಸರಿಸುವವನು ಕತ್ತಲೆಯಲ್ಲಿ ನಡೆಯದೆ ಜೀವಕೊಡುವ ಬೆಳಕನ್ನು ಹೊಂದಿದವನಾಗಿರುವನು."(ಯೋಹಾನ–8:12). ಪ್ರವಾದಿಗಳು ಕತ್ತಲೆಯಲ್ಲಿ ಹೊಳೆಯುವ ಒಂದು ಬಲಹೀನ ಬೆಳಕಾದ ಚಂದ್ರ ಮತ್ತು ನಕ್ಷತ್ರಗಳ ಹಾಗಿದ್ದಾರೆ. ಆದರೆ ಯೇಸು ಸೂರ್ಯನ ಹಾಗಿದ್ದಾನೆ. ಒಂದು ಸಲ ಸೂರ್ಯ ಹುಟ್ಟಿದ ಮೇಲೆ ಚಂದ್ರ ನಕ್ಷತ್ರಗಳ ಬೆಳಕು ಯಾರಿಗೆ ಅಗತ್ಯವಿರುತ್ತದೆ? ಪ್ರವಾದಿಗಳು ಮೆಸ್ಸೀಯನನ್ನು,"ನೀತಿಯ ಸೂರ್ಯನು" ಎಂದು ಕರೆದಿದ್ದಾರೆ." (ಮಲಾಕಿ–4:2). ನಿಸ್ತೇಜ ಅರ್ಧಚಂದ್ರಾಕಾರದ ಚಂದ್ರನು ಪ್ರವಾದಿಗಳ ಹಾಗಿದ್ದಾನೆ. ಆದರೆ ಯೇಸು ಕ್ರಿಸ್ತನು ಸೂರ್ಯ –ನಾಗಿದ್ದಾನೆ. ಸೂರ್ಯನು ಕ್ಷೀಣವಾಗಿರುವದನ್ನು ನೀವು ಎಂದಾದರೂ ನೋಡಿದ್ದೀರಾ? ಇಲ್ಲ, ಇದು ಎಂದಿಗೂ ಕ್ಷೀಣವಾಗುವದಿಲ್ಲ.

ಇದು ಎಲ್ಲಾ ಖಂಡಗಳಿಗೂ ಬೆಳಕಾಗಿರುತ್ತದೆ. ಯೇಸು ಕ್ರಿಸ್ತನು ಸೂರ್ಯನ ಹಾಗೆ. ಆತನು ಎಂದಿಗೂ ಗತಿಸಿ ಹೋಗುವದಿಲ್ಲ. ಆತನು ಪ್ರಪಂಚದ ಪ್ರತಿಯೊಂದು ದೇಶಕ್ಕಾಗಿ ಇದ್ದಾನೆ.

ಯೇಸು, **"ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೇ"** (ಯೋಹಾನ–14:6) ಎಂಬುದಾಗಿ ಸಹ ಹೇಳಿದ್ದಾನೆ. "ಇದನ್ನು ಮಾಡಿರಿ, ಈ ಬೋಧನೆಯನ್ನು ಅನುಸರಿಸಿರಿ, ಇದೇ ನೀವು ನಡೆಯಬೇಕಾದ ಮಾರ್ಗ, ಈ ಆಜ್ಞೆಗಳನ್ನೆಲ್ಲಾ ಕೈಕೊಳ್ಳಿರಿ. . ." ಎಂದು ಆಜ್ಞೆಗಳನ್ನು ಕೊಡುವಂತಹ ಧಾರ್ಮಿಕ ನಾಯಕರುಗಳಿಗಿಂತ ಯೇಸು ತುಂಬಾ ವ್ಯತ್ಯಾಸವುಳ್ಳನಾಗಿದ್ದಾನೆ. ಕರ್ತನಾದ ಯೇಸು ಹೇಳಿ –ದ್ದೇನೆಂದರೆ, **"ನಾನೇ** ಮಾರ್ಗ. ನನ್ನನ್ನು ನಂಬಿರಿ, ನನ್ನ ಬಳಿಗೆ ಬನ್ನಿರಿ, ಮತ್ತು ನೀವು ದೇವರ ಸನ್ನಿಧಿಯಲ್ಲಿ ಎಂದೆಂದಿಗೂ ಜೀವಿ –ಸುವ ಹಕ್ಕನ್ನು ಪಡೆಯುತ್ತೀರಿ" ಎಂಬುದು. **ಯೇಸು ತಾನೇ ಮಾರ್ಗವಾಗಿದ್ದಾನೆ**. ಇದರ ಅರ್ಥವೇನೆಂಬುದನ್ನು ಉದಾಹರಿಸುವದಕ್ಕೆ ಪ್ರಯತ್ನಿಸೋಣ.

ಒಬ್ಬ ಚಿಕ್ಕ ಹುಡುಗ ಒಂದು ದೊಡ್ಡ ಪಟ್ಟಣದಲ್ಲಿ ಕಳೆದುಹೋಗಿದ್ದ. ತನ್ನ ಮನೆಯ ಹತ್ತಿರಕ್ಕೆ ಹಿಂತಿರುಗಿ ಹೋಗುವದಕ್ಕೆ ತನಗೆ ದಾರಿ –ಯನ್ನು ವಿವರಿಸುವಂತೆ ಆ ಹುಡುಗನು ಒಬ್ಬ ಪೋಲಿಸ್ ಆಫೀಸರ್‌ಗೆ ಕೇಳಿದನು. ಆ ಆಫೀಸರ್ ಅವನಿಗೆ, "ನೇರವಾಗಿ ಮುಂದೆ ಹೋಗು, ಎರಡನೆಯ ಮೂಲೆಯಲ್ಲಿ ಎಡಕ್ಕೆ ತಿರುಗು, ಮೂರನೆಯ ಮೂಲೆಯಲ್ಲಿ ಬಲಭಾಗಕ್ಕೆ ಹೋಗಿ, ಸೇತುವೆಯನ್ನು ದಾಟು, ಟ್ರಾಫಿಕ್ ವೃತ್ತಕ್ಕೆ ಹೋಗಿ ನಂತರ ಎರಡನೆಯ ಮುಖ್ಯ ರಸ್ತೆಯನ್ನು ಅನುಸರಿಸಿ. . . ." ಆ ಹುಡುಗನು ಜೋರಾಗಿ ಅಳುವದಕ್ಕೆ ಶುರುಮಾಡಿದನು. ಪೋಲಿಸ್ ಆಫೀಸರ್ ದಾರಿಯನ್ನು ವಿವರಿಸಿದನು, ಆದರೆ ಆ ಹುಡುಗನು ತುಂಬ ಗಲಿಬಿಲಿಗೊಂಡು ತನಗೆ ವಿವ –ರಿಸಲ್ಪಟ್ಟ ದಾರಿಯನ್ನು ಅನುಸರಿಸುವದಕ್ಕೆ ಹೆದರಿಕೊಂಡನು. ಆಗಲೇ ಸರಿಯಾಗಿ, ಅದೇ ಪಕ್ಕದ ಮನೆಯ ಒಬ್ಬ ಮನುಷ್ಯನು ಅಲ್ಲಿಗೆ ಬಂದನು. ಅವನು ಆ ಹುಡುಗನ ಕೈ ಹಿಡಿದು ಕರೆದುಕೊಂಡು ಹೋದನು. ಹುಡುಗನು ನಡೆಯುವದಕ್ಕೆ ಆಯಾಸಗೊಂಡಾಗ, ಆ ಮನುಷ್ಯನು ಮನೆಯತನಕ ಅವನನ್ನು ಎತ್ತಿಕೊಂಡು ಹೋದನು. ಪೋಲಿಸ್ ಆಫೀಸರ್ **ದಾರಿಯನ್ನು ವಿವರಿಸಿದನು**. ಆ ಇನ್ನೊಬ್ಬ ಮನುಷ್ಯನು **ದಾರಿಯಾಗಿದ್ದನು. ನಾನೇ ಮಾರ್ಗವಾಗಿದ್ದೇನೆ,** ದೇವರ ಮನೆಯಾಗಿರುವ ಪರಲೋಕಕ್ಕೆ ನಿಮ್ಮನ್ನು ಕರೆದುಕೊಂಡು ಹೋಗುವ ಮಾರ್ಗ ನಾನೇ ಆಗಿದ್ದೇನೆ ಎಂದು ಯೇಸು ಹೇಳಿದ್ದಾನೆ. "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ. ನನ್ನ ಹೊರತು ಯಾರೂ ತಂದೆಯ ಬಳಿಗೆ ಬರುವದಕ್ಕಾಗುವದಿಲ್ಲ." (ಯೋಹಾನ–14:6). ಕರ್ತನಾದ ಯೇಸು ಕ್ರಿಸ್ತನ ರೀತಿಯಲ್ಲಿ ಯಾರೂ ಮಾತಾಡಿಲ್ಲ! ಆತನು ಅದ್ವಿತೀಯನು. ಆತನು ಹೋಲಿಸಲಾಗದವನು! ಹೇಗೂ, ಯೇಸುವಿನ ಮಹಿಮೆಯು ಆತನ ಆತನ ಜನನ, ಗುಣಲಕ್ಷಣ ಮತ್ತು ಮಾತುಗಳಲ್ಲಿ ನಿಂತುಹೊಗುವದಿಲ್ಲ. ನಾವು ಇದನ್ನು ಆತನ ಕೆಲಸಗಳಲ್ಲಿಯೂ ಸಹ ನೋಡುವದಕ್ಕೆ ಸಾಧ್ಯ.

**4.)ಯೇಸುವಿನ ಬಲವಾದ ಕೆಲಸಗಳ ಕುರಿತು ನೀವು ಏನು ಆಲೋಚಿಸುತ್ತೀರಿ?**

ಆತನು ಯಾವುದನ್ನಾದರೂ ಮಾಡುವದಕ್ಕೆ ಶಕ್ತನಿದ್ದನು. ಎಲ್ಲಾ ಬಲವೂ ಮತ್ತು ಅಧಿಕಾರವೂ ಆತನಿಗೆ ಕೊಡಲ್ಪಟ್ಟಿದ್ದವು. ತಾನು ಯಾರು ಮತ್ತು ಎಲ್ಲಿಂದ ಬಂದವನೆಂಬುದನ್ನು ಜನರಿಗೆ ತೋರಿಸುವದಕ್ಕೆ ಕರ್ತನಾದ ಯೇಸು, ದೇವರು ಯಾವ ಕೆಲಸಗಳನ್ನು ಮಾಡಿದ್ದನೋ ಅವೆಲ್ಲವನ್ನೂ ಭೂಲೋಕದಲ್ಲಿ ಮಾಡಿದನು. **ದೇವರಲ್ಲದೆ** ಗಾಳಿಯನ್ನು ನಿಲ್ಲಿಸುವದಕ್ಕೆ ಯಾರಿಗೆ ಸಾಧ್ಯ? ಆದರೆ **ಯೇಸು** ಗಾಳಿಯನ್ನು ನಿಲ್ಲಿಸಿದನು. **ದೇವರ** ಹೊರತು ಸತ್ತವರನ್ನು ಜೀವದಿಂದ ಎಬ್ಬಿಸುವದಕ್ಕೆ ಯಾರಿಗೆ ಸಾಧ್ಯ? ಆದರೆ **ಯೇಸು** ಸತ್ತವರನ್ನು ಜೀವದಿಂದ ಎಬ್ಬಿಸಿದನು. **ದೇವರಲ್ಲದೆ** ಕುರುಡರ ಕಣ್ಣುಗಳನ್ನು ತೆರೆಯುವದಕ್ಕೆ ಯಾರಿಗೆ ಸಾಧ್ಯ? ಆದರೆ **ಯೇಸು** ಅದನ್ನೂ ಸಹ ಮಾಡಿದನು. ಆತನು ಪ್ರತಿಯೊಂದು ರೋಗವನ್ನು ಗುಣಪಡಿಸಿದನು. ಆತನ ಒಂದು ಮಾತಿಗೆ ದೆವ್ವಗಳು ಓಡಿ ಹೋದವು. ಆತನು ಅನೇಕ ಜನರ ಜೀವಿತಗಳನ್ನು ಬದಲಾಯಿಸಿದನು ಮತ್ತು ಪಾಪದಿಂದ ಅವರನ್ನು ರಕ್ಷಿಸಿದನು. ನಿಶ್ಚಿತವಾದ ಅದ್ಭುತಗಳನ್ನು ಮಾಡುವದಕ್ಕೆ ಆತನು ಕೆಲವು ಪ್ರವಾದಿಗಳಿಗೆ ಬಲವನ್ನು ಕೊಟ್ಟನು. ಆದರೆ ಕರ್ತನಾದ ಯೇಸು ತನ್ನ ಸ್ವಂತ ಅಧಿಕಾರ ಮತ್ತು ಬಲದಿಂದ ಅದ್ಭುತಗಳನ್ನು ಮಾಡಿದನು. ಈತನು, ಒಬ್ಬ ಪಾರ್ಶ್ವವಾಯು ಮನುಷ್ಯನು ಎದ್ದುನಿಲ್ಲಲು ಶಕ್ತನಾಗುವಂತೆ ಮಾಡಿ, ಅವನನ್ನು ದೃಷ್ಟಿಸಿ ನೋಡಿ, "ಎದ್ದು ನಿನ್ನ ಹಾಸಿಗೆಯನ್ನು ಎತ್ತಿಕೊಂಡು ಮನೆಗೆ ಹೋಗೆಂದು ನಿನಗೆ ಹೇಳುತ್ತೇನೆ!" ಅಂದನು. (ಲೂಕ–5:22) ಆ ಮನುಷ್ಯನು ಎದ್ದು ನಿಂತು ದೇವರನ್ನು ಸ್ತುತಿಸುತ್ತಾ ಮನೆಗೆ ಹೋದನು! ಯೇಸು ಔಷಧಿಗಳಿಂದ ಮತ್ತು ಮಂತ್ರ ವಿದ್ಯೆಯಿಂದ ಗುಣಪಡಿಸಲಿಲ್ಲ. ತನ್ನ ಮಾತಿನ ಬಲ ಮತ್ತು ಅಧಿಕಾರದಿಂದ ಮಾತ್ರದಿಂದಲೇ ಆತನು ರೋಗಿಯನ್ನು ಸ್ವಸ್ಥಪಡಿಸಿದನು.

ಲಾಜರನೆಂಬ ಹೆಸರುಳ್ಳ ಒಬ್ಬ ಮನುಷ್ಯನು ಸತ್ತು ಸಮಾಧಿಮಾಡಲ್ಪಟ್ಟಿದ್ದನು. ಯೇಸು ಲಾಜರನ ಬಳಿಗೆ ಬಂದಾಗ ಅವನನ್ನು ಸಮಾಧಿ ಮಾಡಿ ಆಗಲೇ ನಾಲ್ಕು ದಿವಸಗಳಾಗಿತ್ತು. ಯೇಸು ಅವನ ಸಮಾಧಿಯ ಹತ್ತಿರ ಹೋಗಿ, "ಲಾಜರನೇ ಎದ್ದು ಹೊರಗೆ ಬಾ! ಅಂದನು. (ಯೋಹಾನ–11:43). ಶವವು ಸಮಾಧಿಯಿಂದ ಹೊರಬಂತು. ಯೇಸು ಸತ್ತವರನ್ನು ಎಬ್ಬಿಸುವದಕ್ಕೆ ಅಧಿಕಾರವನ್ನು ಹೊಂದಿದ್ದನು, ಅದಕ್ಕಾಗಿಯೇ ಆತನು "ನಾನೇ **ಪುನರುತ್ಥಾನವೂ ಜೀವವೂ** ಆಗಿದ್ದೇನೆ!" (ಯೋಹಾನ–11:25) ಎಂದು ಹೇಳುವದಕ್ಕೆ ಶಕ್ತನಾಗಿದ್ದನು. ಸಮಾಧಿಗಳಲ್ಲಿರುವವರೆಲ್ಲರೂ ಆತನ ಧ್ವನಿಯನ್ನು ಕೇಳಿ ಆತನ ಮುಂದೆ ನಿಲ್ಲುವದಕ್ಕೆ ಎದ್ದುಬರುವ ದಿನವು ಬರುತ್ತದೆ. ಕೇಳಿಸಿಕೊಳ್ಳು– –ತ್ತಿರುವ ಸ್ನೇಹಿತ, ನೀನು ಸತ್ತು ಹೋಗಿದ್ದರೆ ನೀನೂ ಸಹ ಸಮಾಧಿಯಿಂದ ಎದ್ದು ಬರುತ್ತೀ. ಈಗಲೂ ಸಹ, ನೀನು ಆತನನ್ನು ನಿನ್ನ ಕರ್ತನೂ ಮತ್ತು ರಕ್ಷಕನೆಂಬುದಾಗಿ ನಂಬುವದಾದರೆ, ಕರ್ತನಾದ ಯೇಸು ನಿನಗೆ ಹೊಸ ಜೀವವನ್ನು ಕೊಟ್ಟು ಪರದೈಸಿನಲ್ಲಿ ಎಂದೆಂ– –ದಿಗೂ ಜೀವಿಸುವದಕ್ಕೆ ಅಧಿಕಾರವನ್ನು ಕೊಡುತ್ತಾನೆ. ಯೇಸು ಈಗಲೂ ಪ್ರಪಂಚದಾದ್ಯಂತ ಅನೇಕ ಜನರ ಜೀವಿತಗಳನ್ನು ರೂಪಾ – –ಂತರಗೊಳಿಸುತ್ತಿದ್ದಾನೆ. ಆತನು ನಿನ್ನ ಜೀವಿತನ್ನೂ ಸಹ ರೂಪಾಂತರಗೊಳಿಸುತ್ತಾನೆ. ಯೇಸುವಿನ ಕುರಿತು ನೀವು ಏನು ಆಲೋಚಿ – –ಸುತ್ತಿದ್ದೀಯಾ? ಆತನ ಕೆಲಸಗಳ ಕುರಿತು ಏನು ಆಲೋಚಿಸುತ್ತೀ? ಆತನು ಅದ್ವಿತೀಯನು ಆತನು ಸರ್ವಶಕ್ತನು. ಆತನು ಹೋಲಿಸ–

–ಲಾಗದವನು!  ಈದಿನ ನಾವು ಬಿಟ್ಟು ಹೋಗುವದಕ್ಕಿಂತ ಮೊದಲು, ಯೇಸುವಿನ ಕುರಿತು ಇನ್ನೊಂದು ಪ್ರಶ್ನೆಯನ್ನು ನಿಮಗೆ ಕೇಳುತ್ತೇವೆ.

**5.)ಆತನ ಹೆಸರುಗಳು ಮತ್ತು ಬಿರುದುಗಳ ಕುರಿತು ಏನು ಆಲೋಚಿಸುತ್ತೀರಿ?**

ಪ್ರವಾದಿಗಳ ಬರಹಗಳಲ್ಲಿ ನಾವು ನೋಡಿದಂತೆ, ಯೇಸುವು ನೂರಾರು ಹೆಸರುಗಳನ್ನು ಮತ್ತು ಬಿರುದುಗಳನ್ನು ಹೊಂದಿದ್ದಾನೆ. ಆತನು ಯಾರೆಂದು ನಾವು ಉತ್ತಮವಾಗಿ ತಿಳಿದುಕೊಳ್ಳುವದಕ್ಕೆ ಈ ಹೆಸರುಗಳು ನಮಗೆ ಸಹಾಯಕವಾಗಿವೆ.  ಆತನು: ಇಮ್ಮಾನು – –ವೇಲ್. . .ವಾಕ್ಯ. . .ಮನುಷ್ಯಕುಮಾರ. . .ದೇವರ ಕುರಿಮರಿ. . .ವಿಮೋಚಕ. . . .ರಕ್ಷಕ. . .ಜೀವದ ರೊಟ್ಟಿ. . .ನಿಜವಾದ ದ್ರಾಕ್ಷೆಬಳ್ಳಿ. . . ಒಳ್ಳೆ ಕುರುಬ. . .ಲೋಕದ ಬೆಳಕು. . .ಮಹಿಮೆಯ ಕರ್ತನು. . .ಪುನರುತ್ಥಾನವೂ. . .ಆಲ್ಫಾ ಮತ್ತು ಒಮೆಗಾ, ಮೊದಲನೆಯವನೂ ಮತ್ತು ಕೊನೆಯವನೂ, ಆದಿಯೂ ಮತ್ತು ಅಂತ್ಯವೂ. . . ಬಾಗಿಲು. . .ಮಾರ್ಗವೂ, ಸತ್ಯವೂ ಮತ್ತು ಜೀವವೂ.. .ಮತ್ತು **ದೇವರ ಮಗನು** ಎಂದು ಕರೆಯಲ್ಪಟ್ಟಿದ್ದಾನೆ!

ದೇವರ ಪ್ರವಾದಿಯಾಗಿರುವ ಮೋಶೆಯು ದೇವರ ಮನುಷ್ಯನೆಂದು ಕರೆಯಲ್ಪಟ್ಟಿರುವದನ್ನು ನಾವು ನೋಡಿದ್ದೇವೆ.  ಪ್ರವಾದಿಯಾದ ಅಬ್ರಹಾಮನು ದೇವರ ಸ್ನೇಹಿತನೆಂದು ಕರೆಯಲ್ಪಟ್ಟಿದ್ದಾನೆ.  ಆದರೆ ಒಬ್ಬ ವ್ಯಕ್ತಿಯು ಮಾತ್ರ **ದೇವರ ಮಗನೆಂಬುದಾಗಿ** ಕರೆಯಲ್ಪಟ್ಟಿ– –ದ್ದಾನೆ.  ಒಬ್ಬ ಮನುಷ್ಯ, ಸ್ನೇಹಿತ ಅಥವಾ ಮಗ ಇವರಲ್ಲಿ ಯಾರು ಹತ್ತಿರದ ಸಂಬಂಧವನ್ನು ಹೊಂದಿದವರೆಂಬುದನ್ನು ಹೇಳಿರಿ? ನಿಮ್ಮ ಹೃದಯದಲ್ಲಿರುವ ಸತ್ಯವನ್ನು ಮಾತಾಡಿರಿ. ಹೌದು, ಯೇಸು ದೇವರ ಮಗನೆಂಬುದಾಗಿ ಕರೆಯ್ಪಟ್ಟಿದ್ದಾನೆ. ಬೇರೆಯವರೆಲ್ಲರಿಂದ ಯೇಸುವನ್ನು ಪ್ರತ್ಯೇಕಿಸುವದಕ್ಕೆ ದೇವರು ಆತನನ್ನು ತನ್ನ ಮಗನೆಂದು ಕರೆದನು. ದೇವರು ಯೇಸುವನ್ನು ಕುರಿತು, **"ಈತನು ನನ್ನ ಮಗನು, ಈತನನ್ನು ನಾನು ಮೆಚ್ಚಿದ್ದೇನೆ. ಈತನ ಮಾತನ್ನು ಕೇಳಿರಿ!"**(ಮತ್ತಾಯ–17:5) ಎಂದು ಹೇಳಿರುವದನ್ನು ನಾವು ಸುವಾರ್ತೆ –ಯಲ್ಲಿ ಓದುತ್ತೇವೆ. ದೇವರ ಉದ್ದೇಶವೇನು? ಮಗನು ತಂದೆಯ ಛಾಯೆ ಎಂದು ನಾವು ಹೇಳುತ್ತೇವೆ. ಮಗನು ತಂದೆಯ ಸ್ವರೂಪ –ವನ್ನು ಪ್ರತಿಬಿಂಬಿಸುತ್ತಾನೆ. ದೇವರು ಹೇಗಿದ್ದಾನೆಂಬುದನ್ನು ಯೇಸು ನಮಗೆ ತೋರಿಸುತ್ತಾನೆ. ಅದಕ್ಕಾಗಿಯೇ ವಾಕ್ಯವು ಹೇಳುವದೇ – –ನೆಂದರೆ,**"**ದೇವರನ್ನು ಯಾರೂ ಎಂದೂ ಕಂಡಿಲ್ಲ; ಯಾವನು ಏಕಪುತ್ರನೂ ಸ್ವತ: ದೇವರೂ ಆಗಿದ್ದು ತಂದೆಯ ಎದೆಯಲ್ಲಿದ್ದಾನೋ ಆತನೇ ತಿಳಿಯಪಡಿಸಿದನು.**"** (ಯೋಹಾನ–1:18). ನೀವೂ ದೇವರನ್ನು ತಿಳಿದುಕೊಂಡು, ಆತನೊಂದಿಗೆ ಎಂದೆಂದಿಗೂ ಅದ್ಭುತ – –ವಾದ ಸಂಬಂಧವನ್ನು ಹೊಂದುವದಕ್ಕೆ ಇಷ್ಟಪಡುತ್ತೀರೋ? ಹಾಗಾದರೆ ದೇವರು, ತನ್ನ ಮಗನೆಂಬುದಾಗಿ ಕರೆದಿರುವ ಕರ್ತನಾದ ಯೇಸುವಿನ ಬಳಿಗೆ ಬನ್ನಿರಿ. ಒಬ್ಬ ಮಗನು ತನ್ನ ತಂದೆಯ ಹೆಸರಿನಲ್ಲಿ ಮಾತಾಡುವದಕ್ಕೆ ಸಾಧ್ಯ. ಯೇಸು ಮನುಷ್ಯರ ಜೊತೆಯಲ್ಲಿ – –ದ್ದಾಗ ಅದನ್ನೇ ಮಾಡಿದ್ದು. ಅದಕ್ಕಾಗಿಯೇ ಆತನು ಇಮ್ಮಾನುವೇಲ್ ಎಂದು ಕರೆಯಲ್ಪಟ್ಟನು, **ದೇವರು ನಮ್ಮೊಂದಿಗಿದ್ದಾನೆ** ಎಂಬದು ಇದರ ಅರ್ಥ.

ದೇವರು ಒಂದು ಮಾನವ ಶರೀರದಲ್ಲಿ ಭೂಮಿಯ ಮೇಲೆ ಕಾಣಿಸಿಕೊಳ್ಳುವದಕ್ಕಾಗುವದಿಲ್ಲ ಎಂದು ಕೆಲವರು ಊಹಿಸುತ್ತಾರೆ. ಹೇಗೂ, ಈ ರೀತಿಯಲ್ಲಿ ಅಂದುಕೊಳ್ಳುವವರು, ದೇವರು ಪಾಪಿಗಳನ್ನು ರಕ್ಷಿಸುವದಕ್ಕೆ ರಚಿಸಿದ ಯೋಜನೆಯನ್ನು ಇನ್ನೂ ಅರ್ಥಮಾಡಿ ಕೊಂಡಿಲ್ಲ.  ಆದಾಮನ ಸಂತತಿಯವರು ತನ್ನನ್ನು ತಿಳಿದುಕೊಳ್ಳುವಂತೆ ಮಾಡಿ, ಅವರನ್ನು ಸೈತಾನನ ಕೈಯೊಳಗಿಂದ ಬಿಡಿಸುವದಕ್ಕೆ ದೇವರ ನಿತ್ಯತ್ವದ ಮಗನು ಮಾನವ ಶರೀರಿಯಾಗಿ ಭೂಲೋಕದಲ್ಲಿ ಕಾಣಿಸಿಕೊಳ್ಳುವದು ಆತನ ಯೋಜನೆಗೆ ಅವಶ್ಯವಾಗಿತ್ತು. ಸ್ನೇಹಿ –ತರೇ, **ದೇವರು ದೊಡ್ಡವನು** ಮತ್ತು ಆತನು ಏನನ್ನಾದರೂ ಮಾಡುವದಕ್ಕೆ ಶಕ್ತನಾಗಿದ್ದಾನೆ. ಪ್ರತಿಯೊಬ್ಬರೂ ಆತನನ್ನು ತಿಳಿದುಕೊಳ್ಳು –ವದಕ್ಕೆ ದೇವರು ಇಷ್ಟಪಡುತ್ತಾನೆ. ಅದಕ್ಕಾಗಿಯೇ ಆತನು ಒಬ್ಬ ಮನುಷ್ಯನಾಗಿ ಭೂಲೋಕದಲ್ಲಿ ಜೀವಿಸಿದನು.

ಮೆಸ್ಸೀಯನಾದ ಯೇಸುವಿನ ಹೆಸರುಗಳ ಮತ್ತು ಬಿರುದುಗಳ ಕುರಿತು ನೀವು ಏನು ಅಭಿಪ್ರಾಯಪಡುತ್ತೀರಿ? ಆತನು ಹೋಲಿಸಲಾಗದ –ವನು. ಆತನ ಜನನ, ಗುಣಲಕ್ಷಣ, ಮಾತುಗಳು ಮತ್ತು ಕೆಲಸಗಳ ಕುರಿತು ನೀವು ಏನು ಆಲೋಚಿಸುತ್ತೀರಿ? ಆತನು ಯಾರೆಂಬು – –ದಾಗಿ ನೀವು ಅಭಿಪ್ರಾಯಪಡುತ್ತೀರಿ? **"**ಬರಬೇಕಾದ ಕ್ರಿಸ್ತನ ವಿಷಯವಾಗಿ ನಿಮಗೆ ಹೇಗೆ ತೋರುತ್ತದೆ? ಆತನು ಯಾರ ಮಗನು?**"** (ಮತ್ತಾಯ–22:42).

ಈ ದಿನದ ನಮ್ಮ ಸಮಯವು ಮುಗಿಯಿತು.  ದೇವರ ಚಿತ್ತವಾದರೆ, ಮುಂದಿನ ಅಧ್ಯಯನದಲ್ಲಿ ಯೆಸುವಿನ ಕುರಿತಾಗಿ ಇನ್ನೂ ಐದು ಪ್ರಶ್ನೆಗಳನ್ನು ನಿಮಗೆ ಕೇಳಿ ಉತ್ತರಿಸುತ್ತೇವೆ ಮತ್ತು ಪರಿಶುದ್ಧ ಗ್ರಂಥಗಳ ಮೂಲಕವಾದ ನಮ್ಮ ಪ್ರಯಾಣವನ್ನು ಪೂರ್ತಿಗೊಳಿಸುತ್ತೇವೆ.

ಗ್ರಂಥದ ಈ ವಚನವನ್ನು ನೀವು ವಿಚಾರಮಾಡುವಂತೆ ದೇವರು ನಿಮ್ಮನ್ನು ಆಶೀರ್ವದಿಸಲಿ:

**"ಕ್ರಿಸ್ತನಲ್ಲಿಯೇ ದೇವರ ಸರ್ವಸಂಪೂರ್ಣತೆಯು ಅವತರಿಸಿ ವಾಸಮಾಡುತ್ತದೆ ಮತ್ತು ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿದವರಾಗಿದ್ದೀರಿ."** (ಕೊಲೊಸ್ಸೆ–2:9,10)

[ಪಾಠ 99: ಯೇಸುವಿನ ಕುರಿತು ನೀವು ಏನು ಆಲೋಚಿಸುತ್ತೀರಿ?(#1)][ಸಾರಾಂಶಗಳ ಪಟ್ಟಿ] [ಪಾಠ 1: ದೇವರು ಮಾತಾಡಿದ್ದಾನೆ]

ಪಾಠ 100

# ಯೇಸುವಿನ ಕುರಿತು ನೀವು ಏನು ಆಲೋಚಿಸುತ್ತೀರಿ?

## ಭಾಗ 2

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಸಮಾಧಾನವು ನಿಮ್ಮೊಂದಿಗಿರಲಿ. ತಾನು ಸ್ಥಾಪಿಸಿದ ನೀತಿವಂತಿಕೆಯ ಮಾರ್ಗವನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡು ಅದಕ್ಕೆ ಅಧೀನರಾಗಿರಬೇಕೆಂದು ಮತ್ತು ಆತನೊಂದಿಗೆ ಎಂದೆಂದಿಗೂ ನಿಜವಾದ ಸಮಾಧಾನದಲ್ಲಿರಬೇಕೆಂದು ಇಷ್ಟಪಡುವ, ಸಮಾಧಾನದ ಕರ್ತನಾಗಿರುವ ದೇವರ ಹೆಸರಿನಲ್ಲಿ ನಾವು ನಿಮ್ಮನ್ನು ವಂದಿಸುತ್ತೇವೆ. ನೀತಿವಂತಿಕೆಯ ಮಾರ್ಗ ಎಂಬ ನಿಮ್ಮ ಕಾರ್ಯಕ್ರಮವನ್ನು ಪ್ರಸ್ತುತಪಡಿಸುವದಕ್ಕೆ ಈ ದಿನ ಹಿಂದಿರುಗಿ ಬರಲು ನಾವು ಶಕ್ತರಾಗಿರುವದಕ್ಕೆ ಸಂತೋಷವುಳ್ಳವರಾಗಿದ್ದೇವೆ.

ಹಿಂದಿನ ಕಾರ್ಯಕ್ರಮದಲ್ಲಿ ನಾವು **"ಯೇಸುವಿನ ಕುರಿತು ನೀವು ಏನು ಆಲೋಚಿಸುತ್ತೀರಿ?"** ಎಂಬ ವಿಷಯದ ಮೇಲೆ ಪ್ರಾರಂಭಿಸಿದ ಸಂಭಾಷಣೆಯೊಂದಿಗೆ ಈದಿನದ ಪಾಠವನ್ನು ಮುಂದುವರಿಸುತ್ತೇವೆ. ಈ ಪ್ರಶ್ನೆಯು ಹೆಚ್ಚು ಪ್ರಾಮುಖ್ಯವಾದುದಾಗಿದೆ, ಯಾಕಂದರೆ ಮೆಸ್ಸೀಯನಾದ ಯೇಸುವಿನ ಕುರಿತಾಗಿ ನಾವು ಏನು ಅಭಿಪ್ರಾಯಪಡುತ್ತೇವೋ ಅದರ ಮೇಲೆ ನಾವು ನಮ್ಮ ನಿತ್ಯತ್ವವನ್ನು ಎಲ್ಲಿ ಕಳೆ –
–ಯುತ್ತೇವೆ ಎನ್ನುವದು ಅವಲಂಬಿತವಾಗಿದೆ. ನಮ್ಮ ಹಿಂದಿನ ಕಾರ್ಯಕ್ರಮದಲ್ಲಿ, ನಾವು ನಿಮಗೆ, **ಆತನ ಅದ್ಭುತವಾದ ಜನನ, ಆತನ ಪವಿತ್ರ ಗುಣಲಕ್ಷಣ, ಆತನ ಅದ್ಭುತವಾದ ಮಾತುಗಳು, ಆತನ ಬಲಿಷ್ಠವಾದ ಶಕ್ತಿ ಮತ್ತು ಆತನ ಪ್ರತಿಷ್ಠೆಯ ಬಿರುದುಗಳ** ಕುರಿತಾಗಿ ನೀವು ಏನು ಆಲೋಚಿಸುತ್ತೀರಿ ಎಂದು ಕೇಳಿದ್ದೆವು. ಈದಿನ ಯೇಸುವಿನ ಕುರಿತು ಇನ್ನೂ ಐದು ಗಂಭೀರವಾದ ಪ್ರಶ್ನೆಗಳನ್ನು ನಿಮಗೆ ಕೇಳುತ್ತೇವೆ. ಮೊದಲನೆಯ ಪ್ರಶ್ನೆ ಏನೆಂದರೆ:

### 1.)ಆತನ ಮರಣದ ಕುರಿತು ನೀವು ಏನು ಲೋಚಿಸುತ್ತೀರಿ?

ನೀವು **ಎಲ್ಲಿ** ಸಾಯುತ್ತೀರಿ ಅಥವಾ **ಹೇಗೆ** ಸಾಯುತ್ತೀರೀ ಎಂಬುದು ನಿಮಗೆ ಗೊತ್ತಾ? ನೀವು **ಯಾವಾಗ** ಸಾಯುತ್ತೀರಿ ಎನ್ನುವದು ನಿಮಗೆ ಗೊತ್ತಾ? ಈ ಸಂಗತಿಗಳ ಕುರಿತು ನಮಗೆ ಏನೂ ಗೊತ್ತಿಲ್ಲ ಎನ್ನುವದನ್ನು ನೀವು ಮತ್ತು ನಾನು ಒಪ್ಪಿಕೊಳ್ಳಲೇಬೇಕು. ಆದರೆ ಯೇಸು ನಮ್ಮ ಹಾಗಲ್ಲ. ತಾನು ಎಲ್ಲಿ ಸಾಯುತ್ತೆನೆಂಬುದು ಆತನಿಗೆ ಗೊತ್ತಿತ್ತು ಮತ್ತು ಅದನ್ನು ಆತನು ಪ್ರಕಟಿಸಿದ್ದನು. ಆತನು ಯೆರೂ –ಸಲೇಮಿನಲ್ಲಿ ಸಾಯುವವನಿದ್ದನು. ತಾನು ಹೇಗೆ ಸಾಯುತ್ತೇನೆಂಬುದನ್ನೂ ಸಹ ಆತನು ಮೊದಲೇ ತಿಳಿಸಿದ್ದನು. ಆತನು ತನ್ನ ಶಿಷ್ಯ –ರಿಗೆ ಹೇಳಿದ್ದೇನೆಂದರೆ,

"ನಾವು ಯೆರೂಸಲೇಮಿಗೆ ಹೋಗುತ್ತಾ ಇದ್ದೇವೆ; ಮತ್ತು ಮನುಷ್ಯಕುಮಾರನ ವಿಷಯದಲ್ಲಿ ಪ್ರವಾದಿಗಳು ಬರೆದದ್ದೆಲ್ಲಾ ಅವನಲ್ಲಿ ನೆರವೇರುವದು. ಹೇಗಂದರೆ – ಅವನನ್ನು ಅನ್ಯರ ಕೈಗೆ ಒಪ್ಪಿಸುವರು, ಇವರು ಅವನನ್ನು ಅಪಹಾಸ್ಯ ಮಾಡುವರು, ಬೈಯುವರು, ಉಗುಳುವರು, ಕೊರಡೆಗಳಿಂದ ಹೊಡೆಯುವರು, ಕೊಂದುಹಾಕುವರು ಮತ್ತು ಮೂರನೆಯ ದಿನದಲ್ಲಿ ಅವನು ಜೀವಿತನಾಗಿ ಎದ್ದು ಬರುವನು." (ಲೂಕ–18:31-33)

ಪಸ್ಕ ಹಬ್ಬವನ್ನು ಆಚರಿಸುವದಕ್ಕೆ ಯೆಹೂದ್ಯರು ಕುರಿಯನ್ನು ವಧಿಸಿದ ಅದೇ ದಿನದಂದು ಆತನು ಸಾಯುವದಕ್ಕಿದ್ದನು, ಹಾಗಾಗಿ ತಾನು **ಯಾವಾಗ** ಸಾಯುತ್ತೇನೆಂಬುದನ್ನು ಆತನು ತನ್ನ ಶಿಷ್ಯರಿಗೆ ತಿಳಿಸಿದ್ದನು. ಲೋಕದ ಪಾಪವನ್ನು ನಿವಾರಿಸುವದಕ್ಕೆ ಒಂದು ಯಜ್ಞ –ದಂತೆ ದೇವರ ಕುರಿಮರಿಯಾಗಿ ಆ ದಿನದಂದು ಆತನು ಸಾಯಬೇಕಾಗಿತ್ತು.

ಇತರ ಎಲ್ಲರ ಮರಣಗಳಿಗಿಂದ ಯೇಸುವಿನ ಮರಣವು ವ್ಯತ್ಯಾಸವುಳ್ಳದ್ದಾಗಿದೆ, ಯಾಕಂದರೆ ಆತನು **ಮರಣ ಹೊಂದುವದನ್ನು ತಾನೇ ಆಯ್ಕೆಮಾಡಿಕೊಂಡಿದ್ದನು**. ಯೇಸು ಹೇಳಿರುವದನ್ನು ನಾವು ಕೇಳಿಸಿಕೊಂಡಿದ್ದೇವೆ, ಏನೆಂದರೆ, "ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು, ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರವುಂಟು, ಅದನ್ನು ತಿರಿಗಿ ಪಡಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು." (ಯೋಹಾನ–10:18). ಯೇಸು ಎಂದಿಗೂ ಪಾಪ ಮಾಡಲಿಲ್ಲ; ಅದಕ್ಕಾಗಿಯೇ ಆತನು ಮರಣವನ್ನು ಹಾದುಹೋಗಲು ಶಕ್ತನಾದನು. ಮರಣದ ಮೂಲಕ ಹಾದುಹೋಗದೆ ಆತನು ಎಲ್ಲಿಂದ ಬಂದಿದ್ದನೋ ಅದೇ ಪರಲೋಕಕ್ಕೆ ಸುಮ್ಮನೆ ಏರಿಹೋಗುವದಕ್ಕೆ ಆತನಿಗೆ ಸಾಧ್ಯವಿತ್ತು. ಆದರೆ ತನ್ನ ತಂದೆಗೆ ಆತನಲ್ಲಿದ್ದ ವಿಧೇಯತೆ ಮತ್ತು ಪಾಪಿಗಳಿಗಾಗಿ ಇದ್ದ ಪ್ರೀತಿಯ ನಿಮಿ– –ತ್ತದಿಂದ ಆತನು ಸಾಯುವದಕ್ಕೆ ಆಯ್ಕೆ ಮಾಡಿಕೊಂಡನು. ಜನರು ತನ್ನನ್ನು ಶಿಲುಬೆಗೆ ಮೊಳೆಗಳಿಂದ ಜಡಿಯುವದಕ್ಕೆ ಅನುಮತಿಸಿ ತನ್ನ ಜೀವವನ್ನು ನಮಗಾಗಿ ಕೊಟ್ಟನು. ಪಾಪಗಳ ಕ್ಷಮಾಪಣೆಯನ್ನು ಮತ್ತು ಪರದೈಸಿನಲ್ಲಿ ನಮಗಾಗಿ ಒಂದು ಸ್ಥಳದ ಖಚಿತತೆಯನ್ನು ಒದಗಿಸುವದಕ್ಕೆ ಆತನು ಮರಣ ಹೊಂದಿನು. ವಿಮೋಚಕನು ಯಾಕೆ ಮರಣ ಹೊಂದಲೇಬೇಕು ಎನ್ನುವದನ್ನು ಮೆಸ್ಸೀಯನು ಈ ಲೋಕಕ್ಕೆ ಬರುವದಕ್ಕಿಂತ ಏಳುನೂರು ವರ್ಷಗಳ ಮೊದಲೇ ದೇವರ ಪ್ರವಾದಿಯಾದ ಯೆಶಾಯನು ದೃಢವಾಗಿ ಹೇಳಿದ್ದಾನೆ:

**"ನಮ್ಮ ದ್ರೋಹಗಳ ದೆಸೆಯಿಂದ** ಅವನಿಗೆ **ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ** ಅವನು **ಜಜ್ಜಲ್ಪಟ್ಟನು;** ನಮಗೆ ಸುಕ್ಷೇಮವನ್ನು ಉಂಟು ಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. ನಾವೆಲ್ಲರೂ ಕುರಿಗಳಂತೆ ದಾರಿತಪ್ಪಿ ತೊಳಲುತ್ತಿದ್ದೆವು, ಪ್ರತಿಯೊಬ್ಬನೂ ತನ್ನ ತನ್ನ ದಾರಿಯನ್ನು ಹಿಡಿಯುತ್ತಿದ್ದನು; **ನಮ್ಮೆಲ್ಲರ ದೋಷಫಲವನ್ನು ಯೆಹೋವನು ಅವನ ಮೇಲೆ ಹಾಕಿದನು."** (ಯೆಶಾಯ–53:5,6)

ಮೆಸ್ಸೀಯನಾದ ಯೇಸು ಮರಣ ಹೊಂದಲು ನಾನು ಮತ್ತು ನೀವು ಕಾರಣ. ಆತನು ತನ್ನ ಕುರಿಗಳಿಗೋಸ್ಕರ ತನ್ನ ಜೀವವನ್ನು ಸ್ವ–ಇಚ್ಛೆಯಿಂದ ಕೊಟ್ಟಂತ ಒಳ್ಳೇ ಕುರುಬನು. ಆತನ ರೀತಿಯಲ್ಲಿ ಯಾವೊಬ್ಬ ಮನುಷ್ಯನೂ ಮರಣ ಹೊಂದಿಲ್ಲ. ಆತನು ಹೋಲಿಸ –ಲಾಗದವನು. ಮನುಷ್ಯರೊಳಗೆ ಆತನು ಅದ್ವಿತೀಯನು.

ಪ್ರತಿಯೊಬ್ಬರು ಪ್ರತಿಕ್ರಿಯಿಸಲೇಬೇಕಾದ ಇನ್ನೊಂದು ಮುಖ್ಯವಾದ ಪ್ರಶ್ನೆ ಏನೆಂದರೆ:

**7.)ಮರಣದ ಮೇಲಿನ ಆತನ ವಿಜಯದ ಅಂದರೆ ಆತನ ಪುನರುತ್ಥಾನದ ಕುರಿತು ನೀವು ಏನು ಆಲೋಚಿಸುತ್ತೀರಿ?**

ಯೇಸು ಸತ್ತು ಸಮಾಧಿ ಮಾಡಲ್ಪಟ್ಟನು. ಸಮಾಧಿಯನ್ನು ಕಾಯುವದಕ್ಕೆ ತಮಗೆ ಸಾಧ್ಯವಾದ ಪ್ರತಿಯೊಂದನ್ನೂ ಆತನ ವೈರಿಗಳು ಮಾಡಿಕೊಂಡಿದ್ದರು. ಅವರು ಸಮಾಧಿಗೆ ಒಂದು ದೊಡ್ಡ ಕಲ್ಲನ್ನು ಉರುಳಿಸಿ ಅದನ್ನು ಮುಚ್ಚಿ ಅದಕ್ಕೆ ಮುದ್ರೆ ಹಾಕಿದರು. ಸಮಾಧಿ – –ಯನ್ನು ಕಾಯುವದಕ್ಕೆ ಅವರು ಕಾವಲುಗಾರರನ್ನು ಇಟ್ಟರು. ಹೀಗಿದ್ದರೂ, ಸತ್ತವರೊಳಗಿಂದ ಎದ್ದು ಬರುವದಕ್ಕೆ ಅವರ ಯಾವ ಪರಿ ಶ್ರಮಗಳು ಯೇಸುವನ್ನು ತಡೆಯಲಿಲ್ಲ. ನಿಜವಾಗಿಯೂ, ಕರ್ತನಾದ ಯೇಸು ಮೂರನೆಯ ದಿನದಲ್ಲಿ ಸತ್ತವರೊಳಗಿಂದ ಎದ್ದುಬಂದು ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ಅದಾದ ನಂತರ, ಒಂದೇ ಸಲಕ್ಕೆ ಐನೂರಕ್ಕಿಂತಲೂ ಹೆಚ್ಚು ಸಾಕ್ಷಿಗಳಿಗೆ ಕಾಣಿಸಿಕೊಂಡನು. ಆತನ ಪುನರುತ್ಥಾನದ ನಂತರ ಆ ಜನರು ಆತನನ್ನು ನೋಡಿ, ಮುಟ್ಟಿ, ಆತನೊಂದಿಗೆ ಊಟಮಾಡಿದರು. ಆತನು ತನ್ನ ಕೈಗಳ, ಕಾಲುಗಳ ಮತ್ತು ಪಕ್ಕೆಯ ಗಾಯಗಳನ್ನು ಅವರಿಗೆ ತೋರಿಸಿದನು. ಹೌದು, ಆತನು ಮೊದಲೇ ತಿಳಿಸಿದ ಹಾಗೆ ಸರಿಯಾಗಿ ಸತ್ತವರೊಳಗಿಂದ ಎದ್ದುಬಂದಿದ್ದನು! ಪಾಪಗಳಿಗಾಗಿ ದಂಡ ತೆರುವಂತಹ ಸಂಪೂರ್ಣವಾದ ಮತ್ತು ಕೊನೆಯ ಯಜ್ಞದಂತೆ ಶಿಲುಬೆಯ ಮೇಲಿನ ಯೇಸುವಿನ ಕಾರ್ಯದೊಂದಿಗೆ ತಾನು ತೃಪ್ತನಾಗಿದ್ದೇನೆಂಬುದನ್ನು ಇಡೀ ಲೋಕಕ್ಕೆ ರುಜುವಾತುಪಡಿಸುವದಕ್ಕೆ ದೇವರು ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದನು.

ಮರಣವು ಒಂದು ದೊಡ್ಡ ಶತ್ರು. ನಮ್ಮ ಪೂರ್ವಿಕರು ಸತ್ತುಹೋದರು. ಪ್ರವಾದಿಗಳೂ ಸಹ ಸತ್ತುಹೋದರು, ಅವರ ಶವಗಳು ಸಮಾಧಿಗಳಲ್ಲಿ ಉಳಿದುಕೊಂಡಿವೆ. ಒಂದು ದಿನ ನಾವೂ ಸಹ ಸತ್ತು ಹೋಗುತ್ತೇವೆ. ಆದರೆ ದೇವರಿಗೆ ಸ್ತೋತ್ರ, **ಯೇಸು ಕಿಸ್ತನು ಮರಣವನ್ನು ಜಯಿಸಿದ್ದಾನೆ!** ಆತನು ಜೀವಿಸುವ ಒಬ್ಬ ರಕ್ಷಕನು ಮತ್ತು ಆತನ ಮೂಲಕವಾಗಿ ದೇವರ ಬಳಿಗೆ ಬರುವವರೆಲ್ಲರನ್ನೂ ರಕ್ಷಿಸುವವನಾಗಿದ್ದಾನೆ, ಯಾಕಂದರೆ ಆತನು ಜೀವಂತನಾಗಿದ್ದಾನೆ ಮತ್ತು ಆತನನ್ನು ನಂಬುವವರೆಲ್ಲರಿಗಾಗಿ ವಿಜ್ಞಾಪಿಸುತ್ತಿದ್ದಾನೆ. ಬೇರೆ ಯಾವ ಪ್ರವಾದಿಯಾದರೂ ಸತ್ತ ನಂತರ ಈ ದಿನ ಜೀವಂತವಾಗಿದ್ದಾನೋ? ಇಲ್ಲ, ಒಬ್ಬನೂ ಇಲ್ಲ. ಯೇಸು ಕ್ರಿಸ್ತನೊಬ್ಬನು ಮಾತ್ರವೇ ಸಮಾಧಿಯನ್ನು ಜಯಿಸಿದವನಾಗಿದ್ದಾನೆ. ಆತನು ಈದಿನ ಜೀವಂತನಾಗಿದ್ದಾನೆ, ಹಾಗಾಗಿ ಆತನಲ್ಲಿ ನಂಬಿಕೆಯಿಟ್ಟಿರುವ ನಾವು ಸಾಯು –ವದಕ್ಕೆ ಯಾಕೆ ಭಯಪಡಬೇಕು. ಸಾಯುವದೆಂದರೆ ಕೇವಲ ಮೇಲಿರುವ ನಮ್ಮ ಕರ್ತನೊಂದಿಗೆ ಇರುವದಕ್ಕೆ ಹೋಗುವದು ಅಷ್ಟೆ. ಹೌದು, ಯೇಸು ಅದ್ವಿತೀಯನೂ ಮತ್ತು ಹೋಲಿಸಲಾಗದವನು ಆಗಿದ್ದಾನೆ. ಪರಲೋಕದಲ್ಲಾಗಲೀ ಅಥವಾ ಭೂಮಿಯ ಮೇಲಾಗಲೀ ಆತನಿಗೆ ಯಾರೂ ಸಮಾನರಿಲ್ಲ. ಮರಣದ ಮೇಲಿನ ಆತನ ವಿಜಯದ ಕುರಿತು ನೀವು ಏನು ಆಲೋಚಿಸುತ್ತೀರಿ?
ಇನ್ನೊಂದು ಪ್ರಶ್ನೆ ಏನೆಂದರೆ:

**8.)ಪರಲೋಕಕ್ಕೆ ಆತನು ಆರೋಹಣವಾದುದರ ಕುರಿತು ನೀವು ಏನು ಆಲೋಚಿಸುತ್ತೀರಿ?**

ಕರ್ತನಾದ ಯೇಸು ಮರಣದಿಂದ ಎದ್ದ ನಂತರ, ಆತನು ನಲವತ್ತು ದಿವಸಗಳವರೆಗೆ ತನ್ನ ಶಿಷ್ಯರಿಗೆ ಕಾಣಿಸಿಕೊಂಡನು. ಅನಂತರ ನಾವು ನೋಡುವದೇನೆಂದರೆ, ಆತನು ಅವರಿಗೆ ವಿದಾಯವನ್ನು ಹೇಳಿ ಪರಲೋಕಕ್ಕೆ ಏರಿಹೋದನು, ಮತ್ತು ಪ್ರಧಾನ ಗೌರವದ ಸ್ಥಳ –ವಾಗಿರುವ ದೇವರ ಬಲಗಡೆಯಲ್ಲಿ ಕುಳಿತುಕೊಂಡನು, ಹಾಗಾಗಿ ಆತನು ದೇವದೂತರು, ಪ್ರವಾದಿಗಳು ಮತ್ತು ಎಲ್ಲಾ ಮಾನವರಿ – –ಗಿಂತ ದೊಡ್ಡವನೆಂಬುದನ್ನು ತೋರಿಸಿಕೊಟ್ಟನು! ಅದಕ್ಕಾಗಿಯೇ ವಾಕ್ಯವು ಹೀಗೆ ಹೇಳುತ್ತದೆ:

**"**ದೇವರು ಆತನನ್ನು **ಅತ್ಯುನ್ನತ ಸ್ಥಾನಕ್ಕೆ** ಏರಿಸಿ **ಎಲ್ಲಾ ಹೆಸರುಗಳಿಗಿಂತ** ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ. ಆದದ– –ರಿಂದ ಸ್ವರ್ಗ ಮರ್ತ್ಯಪಾತಾಳಗಳಲ್ಲಿರುವವರೆಲ್ಲರೂ ಯೇಸುವಿನ ಹೆಸರಿನಲ್ಲಿ ಅಡ್ಡಬಿದ್ದು ಯೇಸು ಕ್ರಿಸ್ತನನ್ನು **ಒಡೆಯನೆಂದು** ಪ್ರತಿಜ್ಞೆ ಮಾಡಿ ತಂದೆಯಾದ ದೇವರಿಗೆ ಘನವನ್ನು ಸಲ್ಲಿಸುವರು.**"** (ಫಿಲಿಪ್ಪಿ–2:9-11)

ಹೌದು ಯೇಸು ಅದ್ವಿತೀಯನು. ಆತನು ಹೋಲಿಸಲಾಗದವನು! ಇದಕ್ಕೆ ಸಂಬಂಧಪಟ್ಟಂತೆ, ನೀವು ಉತ್ತರಿಸಬೇಕಾದ ಇನ್ನೊಂದು ಪ್ರಶ್ನೆಯೆಂದರೆ:

**9.)ಆತನು ಭೂಲೋಕಕ್ಕೆ ಹಿಂತಿರುಗಿ ಬರುವದರ ಕುರಿತು ನೀವು ಏನು ಆಲೋಚಿಸುತ್ತೀರಿ?**

ಯೇಸು ಕ್ರಿಸ್ತನು ಹಿಂದಿರುಗಿ ಬರುವದಕ್ಕಾಗಿಯೇ ಹೋಗಿದ್ದನು. ಆತನು ಇದನ್ನು ದೃಢವಾಗಿ ಹೇಳಿದ್ದನು. ಪ್ರವಾದಿಗಳು ಇದನ್ನು ಪ್ರಕಟಿ–ಸಿದ್ದರು. ದೇವದೂತರುಗಳು ಸಹ ಇದನ್ನು ತಿಳಿಸಿದ್ದರು. ಕ್ರಿಸ್ತನ ಎಲ್ಲಾ ನಿಜ ಶಿಷ್ಯರುಗಳು ಆತನ ಹಿಂತಿರುಗುವಿಕೆಗಾಗಿ ಕಾಯುತ್ತಿದ್ದರು. ಆತನು ಹಿಂತಿರುಗಿ ಬಂದು ತನ್ನ ಜನರನ್ನು ಪರಲೋಕಕ್ಕೆ ಕರೆದುಕೊಂಡು ಹೋಗುತ್ತಾನೆ. ಆತನು ಲೋಕಕ್ಕೆ ನೀತಿಯಿಂದ ತೀರ್ಪು ಮಾಡುತ್ತಾನೆ ಮತ್ತು ಭೂಲೋಕವನ್ನೆಲ್ಲಾ ಆಳುತ್ತಾನೆ. ಆತನು ಲೋಕದ ಅರಸನಾಗುತ್ತಾನೆ. ಆತನ ಎಲ್ಲಾ ಶತೃಗಳು ಆತನ ಪಾದಕ್ಕೆ ತಲೆಬಾಗುವವರೆಗೆ ಸಾವಿರ ವರ್ಷಗಳ ತನಕ ಆತನು ಆಳ್ವಿಕೆ ನಡೆಸುತ್ತಾನೆ. ಹೌದು, ಆತನು ಬೇಗನೇ ಬರುತ್ತಾನೆ. ಆತನು ರಾಜಾಧಿ ರಾಜನು ಮತ್ತು ಕರ್ತರ ಕರ್ತನು ಎಂಬುದಾಗಿ ಪ್ರತಿಯೊಬ್ಬರೂ ಅರಿಕೆಮಾಡುತ್ತಾರೆ. ಆತನು ಬರುತ್ತಾನೆ ಮತ್ತು ಉನ್ನತ ನ್ಯಾಯಾಧಿ–ಪತಿಯ ಮುಂದೆ ನೀವು ನಿಲ್ಲುತ್ತೀರಿ. ನೀವು ಆತನಿಗೆ ಮುಖಾಮುಖಿಯಾಗುವ ದಿನದಂದು, ಆತನು ನಿಮ್ಮನ್ನು, **"ನನ್ನ ಕುರಿತು ನೀವು ಏನು ಆಲೋಚಿಸುತ್ತೀರಿ?"** ಎಂದು ಕೇಳುತ್ತಾನೆ. ನೀವು ಏನೆಂದು ಉತ್ತರಿಸುತ್ತೀರಿ? ನೀವು, "ನೀನು ಪ್ರವಾದಿಗಳಲ್ಲಿ ಒಬ್ಬನೆಂದು ನಾನು ಅಂದುಕೊಂಡಿದ್ದೇನೆ" ಎಂದು ಉತ್ತರಿಸಿದರೆ, ಆಗ ಆತನು, ನೀವು ಆತನನ್ನು ಯಾಕೆ ಪ್ರಾಮಾಣಿಕವಾಗಿ ನಂಬಲಿಲ್ಲ, ಎಂದು ಕೇಳು – –ತ್ತಾನೆ. ನೀವು ಶಿಕ್ಷೆಗೆ ಗುರಿಯಾಗುತ್ತೀರಿ, ಯಾಕಂದರೆ ಆತನು **ಪರಲೋಕದಿಂದ ಬಂದ ದೇವರ ಮಗನು, ಒಬ್ಬನೇ ರಕ್ಷಕನೂ** ಎಂದು ಆತನು ತಾನೇ ಹೇಳಿದ್ದನ್ನು ಇಲ್ಲವೇ ಪ್ರವಾದಿಗಳು ಆತನ ಕುರಿತು ಬರೆದಿದ್ದನ್ನು ನೀವು ನಂಬಲಿಲ್ಲ. ಆಳ್ವಿಕೆ ನಡೆಸುವದಕ್ಕೆ ಯಾರು ಹಿಂತಿರುಗಿ ಬರುತ್ತಾರೆ? ಅಬ್ರಹಾಮನೋ, ಮೋಶೆಯೋ, ದಾವೀದನೋ ಅಥವಾ ಬೇರೆ ಕೆಲವು ಪ್ರವಾದಿಗಳು ಆಳ್ವಿಕೆ ನಡೆಸುವದಕ್ಕೆ ಹಿಂತಿರುಗಿ ಬರುತ್ತಾರೋ? ಇಲ್ಲ. ಕರ್ತನಾದ ಯೇಸು ಕ್ರಿಸ್ತನು ಹಿಂತಿರುಗಿ ಬರುವವನಾಗಿದ್ದಾನೆ. ಆತನು **ನ್ಯಾಯಾಧಿಪತಿಯಾಗುತ್ತಾನೆ.** ಆತನನ್ನು ಮರಣದಿಂದ ಎಬ್ಬಿಸುವದರ ಮೂಲಕ ದೇವರು ಇದಕ್ಕೆ ಸಾಕ್ಷ್ಯ ಕೊಟ್ಟಿದ್ದಾನೆ. ಆತನು ಹಿಂತಿರುಗುತ್ತಾನೆ. ಪ್ರತಿಯೊಂದು ಕಣ್ಣುಗಳು ಆತನನ್ನು ನೋಡುತ್ತವೆ. ಪ್ರತಿಯೊಂದು ಮೊಣಕಾಲು ಬೊಗ್ಗುತ್ತವೆ. ಪ್ರತಿಯೊಂದು ನಾಲಿಗೆಯೂ "ಯೇಸು ಕ್ರಿಸ್ತನು ಒಡೆಯನೆಂಬುದಾಗಿ!" ಘೋಷಿಸುತ್ತವೆ.

ಈಗ ನಾವು ಕೊನೆಯ ಪ್ರಶ್ನೆಗೆ ಬಂದಿದ್ದೇವೆ:

**10.)ನಿಮ್ಮ ಮೇಲಿರುವ ಆತನ ಬೇಡಿಕೆಗಳ ಕುರಿತು ನೀವು ಏನು ಆಲೋಚಿಸುತ್ತೀರಿ?** {ನೀವು ಏನು ಮಾಡಬೇಕೆಂದು ಆತನ ಇಷ್ಟ}

ಕರ್ತನಾದ ಯೇಸು ಹೀಗೆ ಹೇಳಿದ್ದಾನೆ, "ಎಲೈ, ಕಷ್ಟಪಡುವವರೇ ಹೊರೆ ಹೊತ್ತವರೇ ನೀವೆಲ್ಲರೂ **ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿ ಕೊಡುವೆನು.** ನಾನು ಸಾತ್ವಿಕನೂ ದೀನಮನಸ್ಸುಳ್ಳವನೂ ಆಗಿರುವದರಿಂದ ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ. ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ ಸಿಕ್ಕುವದು." (ಮತ್ತಾಯ–11:28,29) ಇದೇ ದಿನ ಆತನು ನಿಮ್ಮನ್ನು ಕರೆ–ಯುತ್ತಿದ್ದಾನೆ. ತನ್ನನ್ನು ಹಿಂಬಾಲಿಸುವಂತೆ ಆತನು ಮೊದಲ ಶಿಷ್ಯರನ್ನು ಕರೆದಾಗ, ಅವರು ಪ್ರತಿಯೊಂದನ್ನೂ ಬಿಟ್ಟು ಅಂದರೆ, ತಮ್ಮ ಮನೆಗಳು, ಕುಟುಂಬಗಳು, ಮತ್ತು ಕೆಲಸ ಎಲ್ಲವನ್ನೂ ಬಿಟ್ಟು ಆತನನ್ನು ಹಿಂಬಾಲಿಸಿದರು. ನೀವು ಇದೇ ರೀತಿ ಮಾಡಬೇಕೆಂದು ಆತನು ಆಶಿಸುತ್ತಾನೆ. ಯೇಸುವನ್ನು ಹಿಂಬಾಲಿಸುವದಕ್ಕೆ ನೀವು ನಿಮ್ಮ ಮನೆಯನ್ನು ಮತ್ತು ನಿಮ್ಮ ಕೆಲಸವನ್ನು ಬಿಡಬೇಕೆಂದು ಇದರ ಅರ್ಥವಲ್ಲ, ಆದರೆ ನೀವು ನಿಮ್ಮ ಇಡೀ ಜೀವಿತವನ್ನು ಆತನಿಗೆ ಅಧೀನಪಡಿಸಬೇಕು ಮತ್ತು ನಿಮ್ಮ ಹೃದಯಗಳಲ್ಲಿ ಆತನಿಗೆ ಮೊದಲ ಸ್ಥಾನವನ್ನು ಕೊಡಬೇಕು. ನೀವು ಆತನಲ್ಲಿ ಭರವಸ ಇಡಬೇಕೆಂದು, ಆತನನ್ನು ನಂಬಬೇಕೆಂದು ಮತ್ತು ಆತನನ್ನು ನಿಮ್ಮ ರಕ್ಷಕನೂ ಹಾಗೂ ಯಜಮಾನನೆಂದು ಸ್ವೀಕರಿಸಿಕೊಳ್ಳಬೇಕೆಂದು ಆತನು ಇಷ್ಟಪಡುತ್ತಾನೆ. ಆತನು ನಿಮ್ಮ ಮನಸ್ಸು, ಹೃದಯ, ದೇಹ ಮತ್ತು ಆತ್ಮ ಎಲ್ಲವನ್ನೂ ಬಯಸುತ್ತಾನೆ. ಆತನು ಪ್ರತಿಯೊಂದರ ವಾರಸುದಾರನಾಗಿದ್ದರೆ, ಆಗ ಆತನು ಪ್ರತಿಯೊಂದನ್ನು ಹಕ್ಕಿನಿಂದ ಕೇಳುತ್ತಾನೆ ಎನ್ನುವದು ತರ್ಕವಾಗಿದೆ.

ನಾವು ನೋಡಿದಂತೆ, ಯೇಸು ಕ್ರಿಸ್ತನು ಅದ್ವಿತೀಯನೂ ಮತ್ತು ಯಾರೊಂದಿಗೂ ಹೋಲಿಸಲಾಗದವನು ಆಗಿದ್ದಾನೆ. ಆತನು ತನ್ನ **ಜನನದಲ್ಲಿ,** ತನ್ನ **ಗುಣಲಕ್ಷಣದಲ್ಲಿ,** ತನ್ನ **ಬೋಧನೆಗಳಲ್ಲಿ,** ತನ್ನ **ಕೆಲಸಗಳಲ್ಲಿ,** ತನ್ನ **ಹೆಸರುಗಳು** ಮತ್ತು **ಬಿರುದುಗಳಲ್ಲಿ,** ತನ್ನ **ಸಂಕಟ – ಗಳು** ಮತ್ತು **ಮರಣದಲ್ಲಿ,** ತನ್ನ **ಪುನರುತ್ಥಾನದಲ್ಲಿ,** ತನ್ನ **ದಿವಾರೋಹಣದಲ್ಲಿ,** ತನ್ನ **ಹಿಂತಿರುಗಿ ಬರುವಿಕೆಯಲ್ಲಿ,** ಮತ್ತು **ಆದಾಮನ ಮಕ್ಕಳ ಹೃದಯಗಳನ್ನು ಬದಲಾಯಿಸುವದರ ತನ್ನ ಶಕ್ತಿಯಲ್ಲಿ** ಅದ್ವಿತೀಯನಾಗಿದ್ದಾನೆ. ಆತನು ಈದಿನ ಜೀವಂತನಾಗಿದ್ದಾನೆ. ಆತನಲ್ಲಿ ನಂಬಿಕೆಯಿಡುವವರೊಂದಿಗೆ ಆತನು ಇದ್ದಾನೆ. ಬೇಗ ಆತನು ಹಿಂತಿರುಗಿ ಬರುತ್ತಾನೆ. ಪರಲೋಕದಲ್ಲಾಗಲೀ ಅಥವಾ ಭೂಲೋಕ – –ದಲ್ಲಾಗಲೀ ಆತನಂತೆ ಯಾರೂ ಇಲ್ಲ. ಅದಕ್ಕೋಸ್ಕರವೇ ಆತನು ನಿಮ್ಮ ಜೀವಿತದಲ್ಲಿ ಕರ್ತನಾಗಿಯೂ ಮತ್ತು ರಾಜನಾಗಿಯೂ ಇರು–ವದಕ್ಕೆ ಅಧಿಕಾರವನ್ನು ಹೊಂದಿದ್ದಾನೆ! ಕರ್ತನಾದ ಯೇಸು ಕ್ರಿಸ್ತನು ನಿಮ್ಮ ರಕ್ಷಕನೂ ಮತ್ತು ನಿಮ್ಮ ಕರ್ತನೂ ಆಗಿರುವದಕ್ಕೆ ಇಚ್ಛಿಸು–ತ್ತಾನೆ. ಅದಕ್ಕಾಗಿಯೇ ಆತನು ಶಿಲುಬೆಯ ಮೇಲೆ ಮರಣ ಹೊಂದಿ ಮತ್ತೆ ಜೀವದಿಂದ ಎದ್ದು ಬಂದನು! ನಿಮ್ಮ ಪಾಪಗಳನ್ನು ಹೊತ್ತುಕೊಳ್ಳುವದಕ್ಕೆ ಮತ್ತು ಎಂದೆಂದಿಗೂ ನಿಮಗೆ ದೇವರೊಂದಿಗೆ ಒಂದು ಆಳವಾದ ಮತ್ತು ಅದ್ಭುತವಾದ ಸಂಬಂಧವನ್ನು ಕೊಡು–ವದಕ್ಕೆ ಆತನು ಶಕ್ತಿಯುಳ್ಳವನಾಗಿದ್ದಾನೆ. ಆತನು ನಿಮಗೆ ಹೊಸ ಜೀವಿತವನ್ನು ಕೊಡುತ್ತಾನೆ, ನಿಮ್ಮ ಹೃದಯವನ್ನು ಶುದ್ಧಿಗೊಳಿಸು– –ತ್ತಾನೆ, ಮತ್ತು ಪರಿಶುದ್ಧಾತ್ಮನ ಬಲದಲ್ಲಿ ನಿಮ್ಮನ್ನು ಹೊಸಬರನ್ನಾಗಿ ಮಾಡುತ್ತಾನೆ, ಆದರೆ ನೀವು ಅತನಲ್ಲಿ ಮತ್ತು ಆತನ ತ್ಯಾಗದಲ್ಲಿ **ಭರವಸೆಯಿಡಬೇಕು** {ನಿಮ್ಮ ನಿರೀಕ್ಷೆಯನ್ನು ಆತನ ಮೇಲೆ ನೇತು ಹಾಕಬೇಕು}.

ದುರಂತವೇನೆಂದರೆ, ಯೇಸು ಕ್ರಿಸ್ತನು ಒಬ್ಬ ದೊಡ್ಡ ಪ್ರವಾದಿಯಾಗಲು ಬಹಳಷ್ಟು ಜನರು ಅಭಿಪ್ರಾಯಪಟ್ಟಿದ್ದರು, ಆದರೆ ಆತನನ್ನು ತಮ್ಮ ಕರ್ತನೂ ಮತ್ತು ರಕ್ಷಕನೂ ಎಂಬುದಾಗಿ ಎಂದಿಗೂ ಅವರು ಸ್ವೀಕರಿಸಲಿಲ್ಲ. ಯೇಸು ಒಬ್ಬ ದೊಡ್ಡ ಪ್ರವಾದಿ ಎಂದು ನಂಬಿದರೆ ಸಾಕಾಗುವದಿಲ್ಲ! **ಯೇಸು ನಿಮ್ಮ ಸ್ಥಳದಲ್ಲಿ ಶಿಲುಬೆಯ ಮೇಲೆ ಮರಣ ಹೊಂದಿದಾಗ ಆತನು ಎಲ್ಲರ ಕರ್ತನಾದನು ಎನ್ನುವದನ್ನು ನೀವು ದೇವರೊಂದಿಗೆ ಒಪ್ಪಿಕೊಳ್ಳಬೇಕು.** ಆದಾಮನ ಮಕ್ಕಳಾಗಿರುವ ನಾವೆಲ್ಲರೂ ಒಂದು ಗಂಭೀರವಾದ ಸಮಸ್ಯೆಯನ್ನು ಹೊಂದಿದ್ದೇವೆ: ಅದು **ಪಾಪ.** ದೇವರು ತನ್ನ ಮಹಾ ಕರುಣೆಯಲ್ಲಿ, ನಮ್ಮ ಸಮಸ್ಯೆಗಾಗಿ ಒಂದು ಪರಿಹಾರವನ್ನು ಒದಗಿಸಿದನು, ಆದರೆ **ನಾವು ಅದನ್ನು**

**ತೆಗೆದುಕೊಳ್ಳಬೇಕು**. ನನಗೆ ಕಾಯಿಲೆ ಬಂದರೆ ವೈದ್ಯರ ಬಳಿಗೆ ಹೋಗುತ್ತೇವೆ, ಅವರು ನನಗೆ ಒಂದು ಔಷಧದ ಚೀಟಿಯನ್ನು ಬರೆದು ಕೊಡುತ್ತಾರೆ. ಹಾಗಾಗಿ ನಾನು ಹೋಗಿ ಔಷಧವನ್ನು ಖರೀದಿಸಿ ಮನೆಗೆ ಬಂದು ನನ್ನ ಮೇಜಿನ ಮೇಲಿಟ್ಟು, ಔಷಧವನ್ನು ನಾನು ನೋಡುತ್ತೇನೆ ಮತ್ತು ಔಷಧ ನನ್ನನ್ನು ನೋಡುತ್ತಿರುತ್ತದೆ. ಇದು ನನ್ನನ್ನು ಗುಣಪಡಿಸುತ್ತದೋ? ಇಲ್ಲ! ನಾನು ಗುಣವಾಗಬೇಕಾದರೆ ವೈದ್ಯರು **ಬರೆದು ಕೊಟ್ಟಿರುವ** ಪ್ರಕಾರ ನಾನು ಔಷಧವನ್ನು **ತೆಗೆದುಕೊಳ್ಳಬೇಕು**. ದೇವರು ಕೊಟ್ಟಿರುವ ಔಷಧವೆಂದರೆ ಅದು ಕರ್ತ –
–ನಾದ ಯೇಸು ಕ್ರಿಸ್ತನು ಮತ್ತು ಆತನು ಶಿಲುಬೆಯ ಮೇಲೆ ಸುರಿಸಿದ ರಕ್ತ.

ಬಹುಶ: ಯಾರೋ ಹೀಗೆ ಕೇಳುತ್ತಿದ್ದರು, "ನನ್ನ ಪಾಪಕ್ಕಾಗಿ ನಾನು ಹೇಗೆ ದೇವರ ಪರಿಹಾರವನ್ನು ತೆಗೆದುಕೊಳ್ಳಬಹುದು?" ತುಂಬಾ ಸರಳ, ನೀವು ಒಬ್ಬ ಪಾಪಿ, ನಿನ್ನ "ಒಳ್ಳೆಯ ಕೆಲಸಗಳು" ಆತನ ಮುಂದೆ ಹೊಲಸು ಬಟ್ಟೆಯಂತಿವೆ, ಮತ್ತು ದೇವರ ನೀತಿಯ ನ್ಯಾಯ ತೀರ್ಪಿನಿಂದ ನಿನ್ನನ್ನು ನೀನೇ ರಕ್ಷಿಸಿಕೊಳ್ಳುವ ಯಾವ ಸಾಧನಗಳು ನಿನಗಿಲ್ಲ ಎನ್ನುವದನ್ನು ನೀವು **ದೇವರಿಗೆ ಅರಿಕೆ ಮಾಡಬೇಕು**. ನಂತರ ನೀವು ಕರ್ತನಾದ ಯೇಸು ಕ್ರಿಸ್ತನು ನಿಮ್ಮ ಪಾಪಗಳ ಶಿಕ್ಷೆಯನ್ನು ಹೊತ್ತುಕೊಂಡನು ಎಂಬುದನ್ನು **ನಿಮ್ಮ ಹೃದಯದಲ್ಲಿ ನಂಬ**
**–ಬೇಕು**. ಮೆಸ್ಸೀಯನಾದ ಯೇಸು, ನ್ಯಾಯತೀರ್ಪಿನ ದೇವರ ಪ್ರತಿಯೊಂದು ಬೇಡಿಕೆಯನ್ನೂ ಪೂರ್ತಿಯಾಗಿ ತೃಪ್ತಿಪಡಿಸಿದನು. ಕ್ರಿಸ್ತನು ನಿಮ್ಮನ್ನು ರಕ್ಷಿಸುವದಕ್ಕೆ ಮರಣ ಹೊಂದಿ ಮತ್ತೆ ಎದ್ದುಬಂದನೆಂಬುದನ್ನು ನೀವು ನಂಬಿದರೆ, ಆಗ ದೇವರು ನಿಮ್ಮ ಪಾಪಗಳನ್ನು ಕ್ಷಮಿಸುತ್ತಾನೆ, ಕ್ರಿಸ್ತನ ನೀತಿಯ ಉಡುಪನ್ನು ನಿಮಗೆ ಧರಿಸುತ್ತಾನೆ, ತನ್ನ ಪವಿತ್ರಾತ್ಮನನ್ನು ನಿಮ್ಮ ಹೃದಯದೊಳಗೆ ಕಳಿಸುತ್ತಾನೆ ಮತ್ತು ಎಂದೆಂದಿಗೂ ತನ್ನ ಸನ್ನಿಧಿಯಲ್ಲಿ ಜೀವಿಸುವಂತ ಹಕ್ಕನ್ನು ನಿಮಗೆ ಕೊಡುತ್ತಾನೆ! ದೇವರಿಗೆ ಮಹಿಮೆಯಾಗಲಿ, ನೀವು ನಂಬಿದರೆ ಈ ದಿನ ನೀತಿವಂತರಾಗಿ ನೀವು ಮಾಡಲ್ಪಡುತ್ತೀರಿ!

ಕೇಳಿಸಿಕೊಳ್ಳುತ್ತಿರುವ ಸ್ನೇಹಿತರೇ, ಪಾಪದ ರೋಗದಿಂದ ನಿಮ್ಮನ್ನು ಗುಣಪಡಿಸುವಂತಹ ಮತ್ತು ನರಕದ ನಿತ್ಯವಾದ ಬೆಂಕಿಯಿಂದ ನಿಮ್ಮನ್ನು ರಕ್ಷಿಸುವಂತಹ "ದೇವರ ಔಷಧವನ್ನು" ನೀವು ತೆಗೆದುಕೊಂಡಿರಾ? **ಯೇಸು ಸುರಿಸಿದ ರಕ್ತವೆಂಬ** ದೇವರ ಔಷಧವನ್ನು ಕಡೆ
–ಗಣಿಸುವ ಯಾರಾದರೂ, ನಿಮ್ಮ ಪಾಪವನ್ನು ಸ್ವಸ್ಥಪಡಿಸುವದಕ್ಕೆ **ಬೇರೆ ಯಾವ ಔಷಧವೂ** ಇಲ್ಲ ಎನ್ನುವದನ್ನು ನೀವು ತಿಳಿದುಕೊಳ್ಳ –
ಬೇಕು. ಯಾವುದೂ ಇಲ್ಲ! ಪಾಪಿಗಳನ್ನು ಶುದ್ಧಪಡಿಸಿ ತನ್ನ ಮುಂದೆ ಅವರನ್ನು ನೀತವಂತರನ್ನಾಗಿ ಮಾಡುವದಕ್ಕೆ ದೇವರಿಗೆ ಬೇರೆ ಯಾವ ಮಾರ್ಗವೂ ಇಲ್ಲ. ಪರದೈಸಿಗೆ **ಬೇರೆ ಯಾವ ಮಾರ್ಗವೂ ಇಲ್ಲ**.

ಪಾಪಿಗಳು ತನ್ನ ಮುಂದೆ ನೀತಿವಂತರಾಗಿ ಮಾಡಲ್ಪಡುವದಕ್ಕಾಗಿ ದೇವರು ಒದಗಿಸಿದಂತಹ ನೀತಿಯ ಏಕೈಕ ಮಾರ್ಗದ ಕುರಿತಾಗಿ ಪರಿಶುದ್ದ ಗ್ರಂಥವು ಹೇಳಿರುವದನ್ನು ಜಾಗ್ರತೆಯಿಂದ ಕೇಳಿಸಿಕೊಳ್ಳಿರಿ. ವಾಕ್ಯ ಹೇಳುವದೇನೆಂದರೆ:

"**ಯಾವನಾದರೂ** ನೇಮನಿಷ್ಠೆಗಳನ್ನು ಅನುಸರಿಸಿ ದೇವರ ಸನ್ನಿಧಿಯಲ್ಲಿ **ನೀತಿವಂತನೆಂದು ನಿರ್ಣಯಿಸಲ್ಪಡುವದಿಲ್ಲ**. . . .ಈಗಲಾದರೋ **ದೇವರಿಂದ ದೊರಕುವ ನೀತಿಯು** ಧರ್ಮಶಾಸ್ತ್ರ ನಿಯಮಗಳಿಲ್ಲದೆ ಪ್ರಕಟವಾಗಿದೆ. ಅದು ಮೋಶೆಯ ಧರ್ಮಶಾಸ್ತ್ರದಿಂದಲೂ ಪ್ರವಾದಿ
–ಗಳ ನುಡಿಗಳಿಂದಲೂ ಸಾಕ್ಷಿಗೊಂಡಿರುತ್ತದೆ. **ದೇವರಿಂದಾಗುವ ಆ ನೀತಿಯು ಯಾವದಂದರೆ ಯೇಸು ಕ್ರಿಸ್ತನನ್ನು ನಂಬುವದರಿಂದಲೇ ನಂಬುವವರೆಲ್ಲರಿಗೆ ದೊರಕುವಂಥದು**. ಹೆಚ್ಚುಕಡಿಮೆ ಏನೂ ಇಲ್ಲ. ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿ
–ದ್ದಾರೆ. ಅವರು ನೀತಿವಂತರೆಂದು ನಿರ್ಣಯ ಹೊಂದುವದು ದೇವರ ಉಚಿತಾರ್ಥವಾದ ಕೃಪೆಯಿಂದಲೇ **ಕ್ರಿಸ್ತ ಯೇಸುವಿನಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು**. ಹಾಗಾದರೆ ಹೊಗಳಿಕೊಳ್ಳುವದಕ್ಕೆ ಆಸ್ಪದವೆಲ್ಲಿ? ಅದು ಇಲ್ಲದೆ ಹೋಯಿತು. ಯಾವ ಪ್ರಮಾಣದಿಂದ? ಕರ್ಮಮಾರ್ಗವನ್ನು ಅನುಸರಿಸುವದರಿಂದಲೋ? ಅಲ್ಲ; **ವಿಶ್ವಾಸ ಮಾರ್ಗವನ್ನು** ಅನುಸರಿಸುವದರಿಂದಲೇ." (ರೋಮಾ–3:20-24,27)

"ನಂಬಿಕೆಯ ಮೂಲಕ **ಕೃಪೆಯಿಂದಲೇ** ರಕ್ಷಣೆ ಹೊಂದಿದವರಾಗಿದ್ದೀರಿ. **ಆ ರಕ್ಷಣೆಯು ನಿಮ್ಮಿಂದುಂಟಾದದ್ದಲ್ಲ, ಅದು ದೇವರ ವರವೇ**. ಅದು ಪುಣ್ಯ ಕ್ರಿಯೆಗಳಿಂದ ಉಂಟಾದದ್ದಲ್ಲ; ಆದದರಿಂದ ಹೊಗಳಿಕೊಳ್ಳುವದಕ್ಕೆ ಯಾರಿಗೂ ಆಸ್ಪದವಿಲ್ಲ." (ಎಫೆಸ–2:8,9). "ನೀನು ಯೇಸುವನ್ನೇ ಕರ್ತನೆಂದು ಬಾಯಿಂದ ಅರಿಕೆ ಮಾಡಿಕೊಂಡು ದೇವರು ಆತನನ್ನು ಸತ್ತವರೊಳಗಿಂದ ಎಬ್ಬಿಸಿದನೆಂದು ಹೃದಯದಿಂದ ನಂಬಿದರೆ **ನಿನಗೆ ರಕ್ಷಣೆಯಾಗುವದು. ಕರ್ತನ ನಾಮವನ್ನು ಹೇಳಿಕೊಳ್ಳುವವರೆಲ್ಲರಿಗೆ ರಕ್ಷಣೆಯಾಗುವದು**." (ರೋಮಾ–10:9,13)

ಪ್ರಿಯ ಸ್ನೇಹಿತ, ನೀನು ಕರ್ತನೆ ಹೆಸರಿನ ಮೇಲೆ ಕರೆಯಲ್ಪಟ್ಟಿದ್ದೀಯಾ? ದೇವರ ರಕ್ಷಣೆಯ ವರವನ್ನು ನೀನು ಸ್ವೀಕರಿಸಿದ್ದೀಯಾ? ಅಥವಾ ನಿನ್ನ ಸ್ವಂತ ಕೆಲಸಗಳಿಂದ ನಿನ್ನನ್ನು ರಕ್ಷಿಸಿಕೊಳ್ಳುವದಕ್ಕೆ ಇನ್ನೂ ಪ್ರಯತ್ನಿಸುತ್ತಿದ್ದೀಯ? ರಕ್ಷಣೆಯ ದೇವರ ನೀತಿವಂತಿಕೆಯ ಮಾರ್ಗವನ್ನು ತಿರಸ್ಕರಿಸಬೇಡವೆಂದು ನಾವು ನಿನ್ನನ್ನು ಬೇಡಿಕೊಳ್ಳುತ್ತೇವೆ. ದೇವರು ನಿನ್ನ ಹೃದಯವನ್ನು ತಿಳಿದಿದ್ದಾನೆ. ನೀನು ಒಬ್ಬ ಪಾಪಿ, ಮತ್ತು ಆತನ ಪವಿತ್ರ ನಿಯಮಗಳನ್ನು ನೀನು ಮುರಿದಿದ್ದಿ ಎಂಬುದನ್ನು ಆತನ ಮುಂದೆ ಒಪ್ಪಿಕೋ. ಆತನ ತೀಕ್ಷ್ಣವಾದ ನ್ಯಾಯತೀರ್ಪಿಗೆ ನೀನು ಅರ್ಹನಾಗಿದ್ದೀ ಎನ್ನುವದನ್ನು ನೀನು ತಿಳಿದಿದ್ದೀ ಎಂಬುದನ್ನು ಆತನಿಗೆ ಹೇಳು. ಅನಂತರ, ನಿನ್ನ ಸ್ಥಾನದಲ್ಲಿ ಸ್ವ ಇಚ್ಛೆಯಿಂದ ಕಷ್ಟವನ್ನು ಅನುಭವಿಸಿನಿನ್ನ ನಿತ್ಯವಾದ ಶಿಕ್ಷೆಯನ್ನು ಹೊತ್ತುಕೊಂಡು ನಂತರ ಸಮಾಧಿಯಿಂದ ಜಯಶೀಲನಾಗಿ ಎದ್ದು ಬಂದಂತಹ ಒಬ್ಬ ಪಾಪವಿಲ್ಲದ ರಕ್ಷಕನನ್ನು ನಿನಗಾಗಿ ಕಳಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸು.

ಮಿತ್ರನೇ, **ದೇವರು ಸ್ಥಾಪಿಸಿರುವ ನೀತಿಯ ಮಾರ್ಗದ ಮೂಲಕವೇ ನೀನು ಆತನ ಬಳಿಗೆ ಬರಬೇಕು**, ಇಲ್ಲವೇ ನೀನು ಆತನ ಬಳಿಗೆ ಬರಲು ಸಾಧ್ಯವಿಲ್ಲ. ನೀನು ಬರಬೇಕೆಂದು ಕನಿಕರವುಳ್ಳ ದೇವರು ನಿನ್ನನ್ನು ಆಹ್ವಾನಿಸುತ್ತಾನೆ. ಈ ದಿನವೇ ನೀನು ಆತನ ಬಳಿಗೆ ಬಂದು ರಕ್ಷಣೆಯನ್ನು ಹೊಂದಿಕೋ. "ಕರ್ತನಾದ ಯೇಸುವಿನ ಮೇಲೆ ನಂಬಿಕೆಯಿಡು, ಆಗ ನೀನು ರಕ್ಷಣೆ ಹೊಂದುವಿ, ನಿನ್ನ ಮನೆಯವರೂ

ರಕ್ಷಣೆ ಹೊಂದುವರು.” (ಅಪೊ.ಕೃತ್ಯ–16:31)

ಪ್ರವಾದಿಗಳೆಲ್ಲರೂ ಸಾಕ್ಷಿ ಕೊಟ್ಟಿರುವಂತಹ ಆ ಒಬ್ಬನಲ್ಲಿ ನೀವು ನಿಮ್ಮ ನಂಬಿಕೆಯನ್ನಿಡುವದಾದರೆ, ನಮಗೆ ಪತ್ರ ಬರೆದು ಅದರ ಕುರಿತು ತಿಳಿಸಿರಿ. . . .

ಪರಿಶುದ್ಧ ವಾಕ್ಯಗಳ ಮೂಲಕದ ನಮ್ಮ ಪ್ರಯಾಣದಲ್ಲಿ ಈ ದಿನ ಇದು ನೂರನೆಯ ಮತ್ತು ಕೊನೆಯ ಪಾಠವಾಗಿದೆ. ನಮ್ಮೊಂದಿಗೆ ಸೇರಿಕೊಂಡಿದ್ದಕ್ಕೆ ನಿಮಗೆ ವಂದನೆಗಳು. ದೇವರ ವಾಕ್ಯದಲ್ಲಿ ಕಂಡುಬರುವ ಈ ಅದ್ಭುತವಾದ ಪ್ರಾರ್ಥನೆಯೊಂದಿಗೆ ನಾವು ನಿಮಗೆ ವಿದಾಯ ಹೇಳುತ್ತೇವೆ:

**“ಎಡವಿಬೀಳದಂತೆ ನಿಮ್ಮನ್ನು ಕಾಪಾಡುವದಕ್ಕೂ ತನ್ನ ಪ್ರಭಾವದ ಸಮಕ್ಷಮದಲ್ಲಿ ನಿಮ್ಮನ್ನಜು ನಿರ್ದೋಷಿಗಳನ್ನಾಗಿ ಹರ್ಷದೊಡನೇ ನಿಲ್ಲಿಸುವದಕ್ಕೂ ಶಕ್ತನಾಗಿರುವ ನಮ್ಮ ರಕ್ಷಕನಾದ ಒಬ್ಬನೇ ದೇವರಿಗೆ ನಮ್ಮ ಕರ್ತನಾದ ಯೇಸುಸ ಕ್ರಿಸ್ತನ ಮೂಲಕ ಪ್ರಭಾವ ಮಹತ್ವ ಅಧಿಪತ್ಯ ಅಧಿಕಾರಗಳು ಎಲ್ಲಾ ಕಾಲಕ್ಕಿಂತ ಮೊದಲೂ ಇದ್ದ ಹಾಗೆ ಈಗಲೂ ಯಾವಾಗಲೂ ಇರಲಿ! ಆಮೆನ್.” (ಯೂದ–24,25)**

ದಯವಿಟ್ಟು ನಿಮ್ಮ ಪ್ರಶ್ನೆಗಳನ್ನು ಮತ್ತು ಅಭಿಪ್ರಾಯಗಳನ್ನು ಇದಕ್ಕೆ ಬರೆಯಿರಿ:

TWOR@iname.com

**“ನೀತಿಗೆ ಹಸಿದು ಬಾಯಾರಿದವರು ಧನ್ಯರು**

**ಅವರಿಗೆ ತೃಪ್ತಿಯಾಗುವದು.”**

(ಮತ್ತಾಯ–5:6)